ನವಯುಗ page

1)	5-9-1963	12	
2)	12-9-1963	12	
3)	19-9-1963	8	
4)	26-9-1963	8	
5)	3-10-1963	12	
6)	10-10-1963	12	
7)	17-10-1963	12	
8)	24-10-1963	12	
9)	31-10-1963	12	
10)	7-11-1963	8	
11)	14-11-1963	32	ದೀಪಾವಳಿ ಸ್ಪೆಷಲ್.
12)	21-11-1963	12	
13)	28 11-1963	12	
14)	5-12-1963	12	
15)	12-12-1963	16	
16)	19 12 1963	12	
17)	26-12-1963	12	
18)	2-1-1964	12	
19)	9-1-1964	12	
20)	16-1-1964	12	
		252	

		Pages
21)	23 & 30-1-1964	52
22)	6-2-1964	12
23)	13-2-1964	12
24)	20 2-1964	12
25)	27-2-1964	12
26)	5-3-1964	12
27)	12-3-1964	12
28)	19-3-1964	12
29)	26 3-1964	12
30)	2-4-1964	12
31)	9-4-1964	12
32)	16-4-1964	12
33)	23-4-1964	12
34)	30-4-1964	12
35)	7-5-1964	12
36)	14-5-1964	12
37)	21-5-1964	12
38)	4-6-1964	12
39)	11-6-1964	12
40)	18 6-1964	12
41)		
		280

41)	25 - 6 - 1964	12
42)	2 - 7 - 1964	12
43)	9 - 7 - 1964	12
44)	16 - 7 - 1964	12
45)	23 - 7 - 1964	12
46)	30 - 7 - 1964	12
47)	6 - 8 - 1964	12
48)	20 - 8 - 1964	44
49)	27 - 8 - 1964	12
		140

1) 252
2) 280
3) 140

672

ಪ್ರಸಿದ್ಧ ಕವಿ
ಎಸ್ ವೆಂಕಟರಾಜರ
ಕವಿತಾಕಾಮಿನಿ
ಕವಿತಾ ಸಂಕಲನ
'ಕಿರಿಯರ ಪ್ರಪಂಚ'ದ
ಅಪೂರ್ವ ಪ್ರಕಟಣೆ
ಬೆಲೆ: ರೂ. ಎರಡು
ನವಭಾರತ ಪುಸ್ತಕ ಭಂಡಾರ
ಉಡುಪಿ

ನವಯುಗ

Estd. 1921 ಸ್ಥಾಪನೆ
Regd. No. B.G. 176
Vol. 43 No. 1

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
NAVAYUGA— NATIONAL WEEKLY
ಉಡುಪಿ, 5—9—1963 ಗುರುವಾರ

13 ನ. ಪೈಸೆ
ವಾ. ಚಂದಾ ರೂ. 6-75
ಸಂಪುಟ ೪೩ ಸಂಚಿಕೆ ೧

ಯೋವತ್ತೂ
ಪ್ರಿಂಟಿಂಗ್ ಕೆಲಸಗಳನ್ನು
ಮಾಡಿಕೊಡಲಾಗುವುದು
ಕ್ಲಪ್ತ ಸಮಯದಲ್ಲಿ
ಮಿತ ದರದಲ್ಲಿ ಉತ್ತಮ
ಮುದ್ರಣ
ಕೆಲಸಗಳಾಗಬೇಕೆ?
ಸಂದರ್ಶಿಸಿರಿ ಯಾ ವಿಚಾರಿಸಿರಿ—
ನವಯುಗ ಪ್ರೆಸ್,
ನಾಲುಕೋಟೆ, ಉಡುಪಿ

ಶುದ್ಧೀಕರಣ ಪಥದಲ್ಲಿ

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್

'ಶ್ರೀ ರಾಮತನಯ', ಉಡುಪಿ

ಪಂಡಿತ ನೆಹರೂರವರು ಮನಸ್ಸುಮಾಡಿದರೆ ಅದ್ಭುತಗಳನ್ನು ಮಾಡಬಲ್ಲರು. ತಮ್ಮ ಮಂತ್ರಿಮಂಡಲದಲ್ಲಿ ಯಾರನ್ನು ಬಿಡಲಾರರೆಂದು ಜನ ನಿರೀಕ್ಷಿಸಿದ್ದರೋ ಅವರನ್ನೆಲ್ಲಾ ಪಕ್ಷದ ಸೇವೆಗೆಂದು ಬಿಟ್ಟುಕೊಟ್ಟು ತಮ್ಮ ಎದೆಗಾರಿಕೆಯನ್ನು ಎತ್ತಿ ತೋರಿಸಿದ್ದಾರೆ. ಯಾರನ್ನು ಬಿಟ್ಟರೂ ಲಾಲಬಹದ್ದೂರರನ್ನು ಬಿಡಲಾರರೆಂದು ನಿರೀಕ್ಷಿಸಲಾಗಿದ್ದರೂ ಅದೀಗ ಸುಳ್ಳಾಯಿತು. ಕೇಂದ್ರದಲ್ಲಿ ನಾಲ್ವರ ರಾಜೀನಾಮೆಯು ಖಚಿತವೆಂದು ಹೇಳಲಾಗುತ್ತಿತ್ತು. ಆದರೆ ಈ ಗುರುಜನರನ್ನು ಬಿಟ್ಟು ಕೊಟ್ಟಿದ್ದಾರೆ. ಗೋಪಾಲ ರೆಡ್ಡಿ, ಮತ್ತು ಕಾಶ್ಮೀರದ ಜನಪ್ರಿಯ ಪ್ರಧಾನಿ, ಭಕ್ಷಿ ಗುಲಾಂರವರ ಹೆಸರು ಕೇಳಿದೊಡನೆ ಎಲ್ಲರಿಗೂ ಬಹು ಅಚ್ಚರಿಯಾಗಿದೆ. ಇದರಲ್ಲಿ ಯಾವ ಗೂಢವಿದೆಯೋ ತಿಳಿಯದು. ಮೊದಲ ಕಂತಿನಲ್ಲೇ ನೆಹರೂರವರೀಗ ದೇಶದ ಗಮನವನ್ನು ತಮ್ಮತ್ತ ಆಕರ್ಷಿಸಿದ್ದಾರೆ.

ಸ್ವಪ್ನದಲ್ಲೂ ನೆನಸಿರಲಿಲ್ಲ

ಕೇಂದ್ರದಲ್ಲಿ ಮುರಾರ್ಜೀಯವರು ಇಷ್ಟು ಬೇಗ ತಮ್ಮ ಮಂತ್ರಿಹುದ್ದೆ ಬಿಟ್ಟು ಹೊರಡುವರೆಂದೂ ಯಾರೂ ಭಾವಿಸಿರಲಿಲ್ಲ. ಆದರೆ ಪಾಟೀಲರಿಗೆ ತಾವು ಹೋಗುವ ಸರದಿ ಬಂದಿದೆಯೆಂದು ಗೊತ್ತಿತ್ತು. ಆದರೆ ಗೋಪಾಲ ರೆಡ್ಡಿಯವರ ನಿರ್ಗಮನ ತುಂಬಾ ಆಶ್ಚರ್ಯವಾಗಿದೆ. ಶ್ರೀಮಾಲಿಯವರ ಮನಸ್ಸಿನಲ್ಲಿ ಏನಿತ್ತೋ ಗೊತ್ತಿಲ್ಲ. ಅವರೂ ಇದೀಗ ಒಮ್ಮಿಂದೊಮ್ಮೆಲೆ ಕಾಂಗ್ರೆಸ್ ಸಂಸ್ಥೆಯ ಸೇವೆಗೆ ಹೊರಟಿದ್ದಾರೆ. ಸ್ವಾತಂತ್ರ್ಯ ಸಿಕ್ಕಿದಂದಿನಿಂದಲೂ ಮಂತ್ರಿಯಾಗಿ ದಕ್ಷರೆನಿಸಿದ್ದ ಜಗಜ್ಜೀವನ ರಾಮರ ಹೆಸರು ಏನೇನೂ ಕೇಳಿಬರುತ್ತಿರಲಿಲ್ಲ. ಅವರು ಕಾಂಗ್ರೆಸ್ ಸಂಘಟನೆಯ ಮೇಲೆ ತಮ್ಮ ಸ್ಥಾನ ಬಿಡಬೇಕಾಗಿದೆ. ಇದವರ ಕೊನೆಯ ಕೆಲಸವಂತೆ. ಮತ್ತೆ ಅಧಿಕಾರದ ವ್ಯಾಮೋಹ ಮಾಡುವಂತಿಲ್ಲವಂತೆ. ಹೀಗೆ ನೆಹರೂರವರ ಉತ್ತರಾಧಿಕಾರಿಗಳಾಗುವ ಕನಸು ಕಾಣುತ್ತಿದ್ದವರೆಲ್ಲ ಹೀಗೆ ತಟ್ಟನೆ ಕೆಳಗಿಳಿಯಬೇಕಾದ ಪರಿಸ್ಥಿತಿ ಜನಮನವನ್ನು ಚಪ್ಪರಿಸುವಂತೆ ಮಾಡಿದೆ ಎಂದರೆ ಅತಿಶಯೋಕ್ತಿಯಾಗಲಾರದು.

ಕಾಮರಾಜರ ಸೂತ್ರದ ಮೊದಲನೇ ಅಂಕ

ಕಾಮರಾಜರ ಸೂತ್ರದಲ್ಲಿ ಇದು ಮೊದಲ ಅಂಕ. ನೆಹರೂರವರು ಆರು ಕೇಂದ್ರದ ಮಂತ್ರಿಗಳ ಮತ್ತು ಆರು ರಾಜ್ಯಗಳ ಮುಖ್ಯ ಮಂತ್ರಿಗಳ ರಾಜೀನಾಮೆಯನ್ನು ಸ್ವೀಕರಿಸಿ ಬಿಡುಗಡೆಗೊಳಿಸಿದ್ದಾರೆ. ಆದರಲ್ಲೂ ಭಕ್ಷಿಯವರ ಬಗ್ಗೆ ವಿಶೇಷವಾದ ಕಾರಣವಿರಬೇಕು. ಕಾಶ್ಮೀರದ ಒಡಲಲ್ಲಿ ಯಾವ ಬೇನೆ ಇದೆಯೋ? ಪಾಟ್ನಾಯಕರನ್ನು, ಮಂಡ್ಲೋಯಿರವರನ್ನು ಅಧಿಕಾರದಿಂದ ನಿವೃತ್ತಿಗೊಳಿಸಲು ಇದಕ್ಕಿಂತ ಒಳ್ಳೆಯ ಸಮಯ ನೆಹರೂರವರಿಗೆ ಸಿಗುತ್ತಿರಲಿಲ್ಲ. ಉತ್ತರ ಪ್ರದೇಶದ ರಾಜಕೀಯ ಜಗಳಕ್ಕೀಗ ಸಂಜೀವಿನಿ ಚಿಕಿತ್ಸೆಯೇ ಆದಂತಾಗಿದೆ. ಇವರೆಲ್ಲರ ಉತ್ತರಾಧಿಕಾರಿಗಳನ್ನು ನೆಹರೂ ಈಗಲೇ ನಿರ್ಧರಿಸಬೇಕು. ಅದು ನಿರ್ಧಾರವಾಗದೆ ನ್ಯಾಯ ನಿರ್ಧಾರವಾಗುವಂತಿಲ್ಲ.

ಮೈಸೂರು ಮುಖ್ಯ ಮಂತ್ರಿಗಳ ರಾಜೀನಾಮೆಯು ಅಂಗೀಕಾರದ ಅಗತ್ಯವಿಲ್ಲವೆಂದು ಈಗಾಗಲೇ ಸರ್ವಶ್ರುತವಾಗಿದೆ. ಯಾವ ಉದ್ದೇಶಕ್ಕಾಗಿ ಅವರು ಮುಖ್ಯ ಮಂತ್ರಿಪದವಿ ಬಿಡಬೇಕಾಗಿತ್ತೋ ಅದನ್ನು ಸಾಧಿಸಿಯೇ ಶ್ರೀ.ನಿಜಲಿಂಗಪ್ಪನವರು ಮುಖ್ಯ ಮಂತ್ರಿಯಾಗಿದ್ದಾರೆ. ಬಂಗಾಳದ ಪರಿಸ್ಥಿತಿಯೂ ಇದೇ ರೀತಿಯಿದೆ ಇನ್ನು ಆಂಧ್ರದ ಮುಖ್ಯ ಮಂತ್ರಿಯು ಪದವಿ ಬಿಡುವುದರಿಂದ ಏನಾಗುವುದು? ಇದು ತೂಗು ಉಯ್ಯಾಲೆಯಲ್ಲಿದೆ. ಸಂಜೀವ ರೆಡ್ಡಿಯವರಿಗೆ ಅಧಿಕಾರ ಬಿಡುವ ಮನಸ್ಸಿಲ್ಲದಿದ್ದರೆ ನೆಹರೂರವರಿಗೂ ಅಲ್ಲಿಯ ರಾಜಕೀಯವನ್ನು ಕೆಣಕುವ ಧೈರ್ಯವಿಲ್ಲ. ಅದು ಯಾರೊಬ್ಬರ ನಿಯಂತ್ರಣಕ್ಕೂ ಬಂದಿಲ್ಲ. ಪರಿಸ್ಥಿತಿಯೇ ಪರಿಸ್ಥಿತಿಯನ್ನು ನಿಯಂತ್ರಿಸುವಂತಹ ವಿಲಕ್ಷಣ ರಾಜಕೀಯ ಪರಿಸ್ಥಿತಿ ಆಂಧ್ರದಲ್ಲಿದೆ ಎನ್ನಬಹುದು.

ಕಾಂಗ್ರೆಸ್ಸಿನ ಚೇತನಕ್ಕೆ ಇದೇ ಕಾಲ!

ಇಡೀ ಕಾಂಗ್ರೆಸ್‌ನ ಸ್ಥಿತಿ ಮತ್ತು ಅಧಿಕಾರಿಗಳ ಅಧಿಕಾರದಾಹ—ಇವುಗಳಿಗೆ ಕಾಮರಾಜರ ಸೂತ್ರದಂತೆ ಪೂರ್ಣ ಚಿಕಿತ್ಸೆ ಮಾಡಲೇಬೇಕು. ಯಾರಿಗೂ ರಿಯಾಯತಿ ಕೂಡದು. ಇಂತಹ ಪವಾಡದ ಸಮಯ ದೇಶದಲ್ಲಿ ಎಂದೂ ಬಂದಿರಲಿಲ್ಲ. ಆಡಳಿತದ ದುಂದುವೆಚ್ಚ—ಕುಂದು ಕೊರತೆಗಳನ್ನು ತಿದ್ದಿಕೊಳ್ಳಲು ಇದೀಗ ಸುಸಮಯ ಬಂದಿದೆ. ಕಾಂಗ್ರೆಸ್ಸಿನ ಪುನಶ್ಚೇತನಕ್ಕೆ ಇದೀಗ ಸಮಯವಿಲ್ಲದಂತಾಗಿದೆ! ತೀರಾ ತಡವಾಗುತ್ತಿದೆ ಅದಕ್ಕೀಗಲೇ ನಾಂದಿಯಾಗಲಿ. ಆಳುವ ಪಕ್ಷ ಕಾಂಗ್ರೆಸ್ ಶುದ್ಧೀಕರಣ ಹೊಂದಿ ಆದರ್ಶ ಪಕ್ಷವಾಗುವ ಕಾರ್ಯಕ್ಕಿಂದೇ ಶ್ರೀಗಣೇಶವಾಗಲಿ.

ಸೂತ್ರದ ಸರ್ವಾಧಿಕಾರಿ

ಅಧಿಕಾರದ ಸಾಂಪ್ರದಾಯಿಕತೆಯಿಂದ ಜನಸಂಪರ್ಕವನ್ನು ಕಳೆದುಕೊಂಡ ಕಾಂಗ್ರೆಸ್ ತನ್ನ ದೊಡ್ಡ ಜೀವನವನ್ನೇ ಕಳೆದುಕೊಳ್ಳತೊಡಗಿತ್ತು. ಇಷ್ಟರೊಳಗೇ ನೆಹರೂ ಮೇಲೆದ್ದು ನಿಂತರು. ಕಾಮರಾಜರು ಅವರ ನೆರವಿಗೆ ಬಂದರು. ಸೂತ್ರದ ಮೂಲಪುರುಷ ಕಾಮರಾಜರಾದಂತೆಯೇ ಸೂತ್ರದ ಸರ್ವಾಧಿಕಾರಿಯಾಗಿ ನೆಹರೂರವರು. ಅಧಿಕಾರವನ್ನು ಬಿಟ್ಟು ಬರಬೇಕಾಗಿತ್ತು. ಈ ಮಾತು ಅವರ ಬಾಯಿಯಿಂದಲೇ ಈಗ ಬಂದಿದೆ. "I should have retired first" ಎಂದವರೇ ಹೇಳಿದ್ದಾರೆ. ಆದರೆ ಕಾಂಗ್ರೆಸ್ ಆದೇಶ ಅವರನ್ನು ಅಸ್ವತಂತ್ರರನ್ನಾಗಿ ಮಾಡಿ ಅವರ ಮನಸ್ಸಾಕ್ಷಿಗೆ ವಿರುದ್ಧ ಅವರನ್ನು ಪ್ರಧಾನಿಯಾಗಿಯೇ ಉಳಿಯಗೊಟ್ಟಿದೆ. ಈ ಸೂತ್ರವು ಪೂರ್ಣ ಕಾರ್ಯಕಾರಿಯಾಗಿ ಕೇಂದ್ರ ಮತ್ತು ರಾಜ್ಯದ ಮಂತ್ರಿಮಂಡಲಗಳೆಲ್ಲಾ ಪುನಾರಚಿಸಲ್ಪಟ್ಟ ಬಳಿಕ ನೆಹರೂರವರು ಕಾಂಗ್ರೆಸಿನ ಆದೇಶವನ್ನು ಮೀರಿ ತನ್ನ ಜಾಗಕ್ಕೊಬ್ಬರನ್ನು ಹುಡುಕಿ ತಾವು ತನ್ನ ಹಳೆಯ ಸಂಗಡಿಗರ ಭುಜಬಲವಾಗಿ ನಿಲ್ಲುವರೆಂಬ ನಂಬಿಕೆ ಈಗಲೂ ಕೆಲವರಲ್ಲಿದೆ.

ಈ ಸಂದರ್ಭದಲ್ಲಿ ಲಂಡನ್ನಿನ ಪತ್ರಿಕಾವಲಯಗಳು ಹೇಳಿರುವ ಬುದ್ಧಿವಾದವು ನಿಜವಾಗಿ ಸಮಯೋಚಿತವಾಗಿದೆ. ಇನ್ನು ಮುಂದೆ ನೆಹರೂ ಆಡಳಿತದಲ್ಲಿ ಹೆಚ್ಚು ವೇಳೆಯನ್ನು ಕಳೆಯದೆ ಸಂಸ್ಥೆಯ ಸೇವೆಯಲ್ಲಿ ಕಳೆಯಬೇಕೆಂದು ಹೇಳಿದ ಪತ್ರಿಕೆ ತನ್ನ ಅಭಿಪ್ರಾಯವನ್ನು ಹೀಗೆ ವ್ಯಕ್ತಪಡಿಸಿದೆ:—

"If he wise is Mr. Nehru will cut before the redcal. No one has suggested that he should, in the classic phrase, himself make way for a younger man It is hard to see upon whom the mentle of their apparent should fall."

ನೆಹರೂ ನಿವೃತ್ತಿಯನ್ನು ಕೆಣಕಿದ ಈ ಪ್ರಶ್ನೆ ಹಾಗೆ ಯುರೋಪಿನ ರಾಜಕಾರಣಿಗಳಿಗೆ ಇಂದು ವಯಸ್ಸು ಆಗಿರಬಹುದು. ಏನಿದ್ದರೂ ಹುಟ್ಟುವುದಕ್ಕೆ ಮುಂಚೆ ಸಾಯುವ ಸರಾಸರಿ ಆಯುರ್ಮಾನವುಳ್ಳ ದೇಶದಲ್ಲಿ ೩೭ ತೀರಾ ವೃದ್ಧಾಪ್ಯವೆನ್ನಬೇಕೆಂದು ಹೇಳಿ ಕೊನೆಗೆ—

"And therefore Nehru should now spend less of his energy on the work of Government, which he has seen notoriously relactuant to deligate, and devote,him self to the. Selection, training.and guidance of younger generation of Politicians."

ಯುವಕ ರಾಜಕಾರಣಿಗಳಿಗೆ ತರಬೇತಿ ಮತ್ತು ಮಾರ್ಗದರ್ಶನ ಕೊಟ್ಟು ಅವರನ್ನು ಒಳ್ಳೆಯ ರಾಜಕಾರಣಿ ಮತ್ತು ಒಳ್ಳೆಯ ಆಡಳಿತಗಾರರನ್ನಾಗಿ ಮಾಡುವವರಲ್ಲಿ ಹೆಚ್ಚು ವೇಳೆಯನ್ನು ನೆಹರೂ ಇನ್ನು ಮುಂದೆ ಕಳೆಯಬೇಕಾಗಿದೆ ಎಂಬ ಸೂಚನೆಯನ್ನು ಈ ಪತ್ರಿಕೆ ಮಾಡಿದೆ. ಈ ಸೂಚನೆ ನಿಜಕ್ಕೂ ಬಹು ಸ್ವಾಗತಾರ್ಹವಾಗಿಲ್ಲವೆ?

ಮಂತ್ರಿ ಮಂಡಲ ಚಿಕ್ಕದಾಗಲಿ

ಇನ್ನು ಹಿರಿಯರ ರಾಜೀನಾಮೆಗಳ ಅಂಗೀಕಾರದಲ್ಲಿ ಎಲ್ಲರ ನಿರೀಕ್ಷಣೆಯನ್ನು ಮೀರಿ ಮುನ್ನುಗ್ಗಿದ್ದಾರೆ. ಮೊದಲ ಹಂತದಲ್ಲೇ 'ದಾಪುಗಾಲನ್ನು' ಇಟ್ಟಿದ್ದಾರೆ ರಾಜ್ಯದ ಮಂತ್ರಿ ಮಂಡಲಗಳು ಸಣ್ಣದಾಗಿರಬೇಕೆಂಬ ಆಶಯವನ್ನು ವ್ಯಕ್ತಮಾಡಿ ಪುನರ್ ಘಟಿಸಲಾಗುವ ಮಂತ್ರಿಮಂಡಲಗಳ ಸಂಖ್ಯೆಯನ್ನು ಈಗಾಗಲೇ ನೆಹರೂ ನಿರ್ಧರಿಸಿದ್ದಾರೆ. ಅಂದ ಮೇಲೆ ಮುಖ್ಯ ಮಂತ್ರಿಗಳು ಬದಲಾಗದಿರುವ ಮಂತ್ರಿ ಮಂಡಲದ ಗಾತ್ರದ ಮೇಲೂ ನೆಹರೂ ಗದೆ ಎತ್ತುವ ಸಂಭವವೂ ಇದೆ. ಬಹು ದೊಡ್ಡದೆನಿಸಿಕೊಂಡ ಉತ್ತರ ಪ್ರದೇಶದ ಮಂತ್ರಿ ಮಂಡಲದ ಸಂಖ್ಯೆ ಎಷ್ಟಕ್ಕೆ ಇಳಿಯುವುದೆಂಬುವನ್ನು ನೋಡಿಕೊಂಡರೆ ಉಳಿದ ದೊಡ್ಡ ಮಂತ್ರಿ ಮಂಡಲಗಳು ತಮ್ಮಷ್ಟಕ್ಕೆ ತಾವೇ ಎಳೆಯದಾಗಬೇಕಾಗುತ್ತದೆ. ಮೈಸೂರು ಮಂತ್ರಿ ಮಂಡಲದ ಗಾತ್ರವೂ ಈಗಾಗಲೇ ಸಣ್ಣದಾಗುವುದೆಂಬ ಸುದ್ದಿ ಜನಜನಿತವಾಗುತ್ತಿದೆ.

ಉಪಸಂಹಾರ

ಅಧಿಕಾರ ತ್ಯಾಗದ ಆರಂಭ ಹೀಗೆ ಬಹು ಸೊಗಸಾಗಿಯೇ ಆಗಿದೆ. ಇತರರಿಗೆ ಅಧಿಕಾರದಲ್ಲಿರಬಾರದೆಂಬ ಪ್ರವೃತ್ತಿಯನ್ನು ಹುಟ್ಟಿಸಲು ಈ ಮೊದಲ ಕಂತು ಸಾಕಷ್ಟು ನೆರವಾಗಿದೆ. ಅಧಿಕಾರಕ್ಕಿಂತ ಕಾಂಗ್ರೆಸ್ಸಿನ ಸೇವೆಯೇ ಸ್ಥಿರವಾದುದು. ಪದವಿ ಅಧಿಕಾರ ಹಿತವಾದುದು, ಕೀರ್ತಿಕರ

(೫ನೇ ಪುಟ ನೋಡಿರಿ)

ಪ್ರಸಿದ್ಧ ಕವಿ
ಎಸ್ ವೆಂಕಟರಾಜರ
ಕವಿತಾಕಾಮಿನಿ
ಕವಿತಾ ಸಂಕಲನ
'ಸಿರಿಯರ ಪ್ರಪಂಚ'ದ
ಅಪೂರ್ವ ಪ್ರಕಟಣೆ
ಬೆಲೆ: ರೂ. ಎರಡು
ನವಭಾರತ ಪುಸ್ತಕ ಭಂಡಾರ
ಉಡುಪಿ

ನವಯುಗ

Estd. 1921 ಸ್ಥಾಪನೆ
ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
13 ನ. ಪೈಸೆ
Regd. No. B.G. 176
NAVAYUGA— NATIONAL WEEKLY
ವಾ. ಚಂದಾ ರೂ. 6–75
Vol. 43 No. 1
ಉಡುಪಿ, 5—9—1963 ಗುರುವಾರ
ಸಂಪುಟ ೪೩ ಸಂಚಿಕೆ ೧

ಯಾವತ್ತೂ
ಪ್ರಿಂಟಿಂಗ್ ಕೆಲಸಗಳನ್ನು
ಮಾಡಿಕೊಡಲಾಗುವುದು
ಕ್ಲಪ್ತ ಸಮಯದಲ್ಲಿ
ಮಿತ ದರದಲ್ಲಿ ಉತ್ತಮ
ಮುದ್ರಣ
ಕೆಲಸಗಳಾಗಬೇಕೆ?
ಸಂದರ್ಶಿಸಿರಿ ಯಾ ವಿಚಾರಿಸಿರಿ–
ನವಯುಗ ಪ್ರೆಸ್,
ಪಾಲುಕೋಟೆ, ಉಡುಪಿ

ಶುದ್ಧೀಕರಣ ಪಥದಲ್ಲಿ

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್

'ಶ್ರೀ ರಾಮತನಯ', ಉಡುಪಿ

ಪಂಡಿತ ನೆಹರೂರವರು ಮನಸ್ಸುಮಾಡಿದರೆ ಅದ್ಭುತಗಳನ್ನು ಮಾಡಬಲ್ಲರು. ತಮ್ಮ ಮಂತ್ರಿಮಂಡಲದಲ್ಲಿ ಯಾರನ್ನು ಬಿಡಲಾರರೆಂದು ಜನ ನಿರೀಕ್ಷಿಸಿದ್ದರೋ ಅವರನ್ನೆಲ್ಲಾ ಪಕ್ಷದ ಸೇವೆಗೆಂದು ಬಿಟ್ಟುಕೊಟ್ಟು ತಮ್ಮ ಎದೆಗಾರಿಕೆಯನ್ನು ಎತ್ತಿ ತೋರಿಸಿದ್ದಾರೆ. ಯಾರನ್ನು ಬಿಟ್ಟರೂ ಲಾಲಬಹದ್ದೂರರನ್ನು ಬಿಡಲಾರರೆಂದು ನಿರೀಕ್ಷಿಸಲಾಗಿದ್ದರೂ ಅದೀಗ ಸುಳ್ಳಾಯಿತು. ಕೇಂದ್ರದಲ್ಲಿ ನಾಲ್ವರ ರಾಜೀನಾಮೆಯು ಖಚಿತವೆಂದು ಹೇಳಲಾಗುತ್ತಿತ್ತು. ಆದರೆ ಈ ಗುರುಜನರನ್ನು ಬಿಟ್ಟುಕೊಟ್ಟದ್ದಾರೆ. ಗೋಪಾಲ ರೆಡ್ಡಿ, ಮತ್ತು ಕಾಶ್ಮೀರದ ಜನಪ್ರಿಯ ಪ್ರಧಾನಿ, ಭಕ್ಷಿ ಗುಲಾಂರವರ ಹೆಸರು ಕೇಳಿದೊಡನೆ ಎಲ್ಲರಿಗೂ ಬಹು ಅಚ್ಚರಿಯಾಗಿದೆ. ಇದರಲ್ಲಿ ಯಾವ ಗೂಢವಿದೆಯೋ ತಿಳಿಯದು. ಮೊದಲ ಕಂತಿನಲ್ಲೇ ನೆಹರೂರವರೀಗ ದೇಶದ ಗಮನವನ್ನು ತಮ್ಮತ್ತ ಆಕರ್ಷಿಸಿದ್ದಾರೆ.

ಸ್ವಪ್ನದಲ್ಲೂ ನೆನಸಿರಲಿಲ್ಲ

ಕೇಂದ್ರದಲ್ಲಿ ಮುರಾರ್ಜಿಯವರು ಇಷ್ಟು ಬೇಗ ತಮ್ಮ ಮಂತ್ರಿಹುದ್ದೆ ಬಿಟ್ಟು ಹೊರಡುವರೆಂದೂ ಯಾರೂ ಭಾವಿಸಿರಲಿಲ್ಲ. ಆದರೆ ಪಾಟೀಲರಿಗೆ ತಾವು ಹೋಗುವ ಸರದಿ ಬಂದಿದೆಯೆಂದು ಗೊತ್ತಿತ್ತು. ಆದರೆ ಗೋಪಾಲ ರೆಡ್ಡಿಯವರ ನಿರ್ಗಮನ ತುಂಬಾ ಆಶ್ಚರ್ಯವಾಗಿದೆ. ಶ್ರೀಮಾಲಿಯವರ ಮನಸ್ಸಿನಲ್ಲಿ ಏನಿತ್ತೋ ಗೊತ್ತಿಲ್ಲ. ಅವರೂ ಇದೀಗ ಒಮ್ಮಿಂದೊಮ್ಮೆಲೆ ಕಾಂಗ್ರೆಸ್ ಸಂಸ್ಥೆಯ ಸೇವೆಗೆ ಹೊರಟಿದ್ದಾರೆ. ಸ್ವಾತಂತ್ರ್ಯ ಸಿಕ್ಕಿದಂದಿನಿಂದಲೂ ಮಂತ್ರಿಯಾಗಿ ಪ್ರಸಿದ್ಧರೆನಿಸಿದ್ದ ಜಗಜ್ಜೀವನ ರಾಮರ ಹೆಸರು ಏನೇನೂ ಕೇಳಿಬರುತ್ತಿರಲಿಲ್ಲ. ಅವರು ಕಾಂಗ್ರೆಸ್ ಸಂಘಟನೆಯ ಮೇಲೆ ತಮ್ಮ ಸ್ಥಾನ ಬಿಡಬೇಕಾಗಿದೆ. ಇದುವರೆ ಕೊನೆಯ ಕಲಸವಂತೆ. ಮತ್ತೆ ಅಧಿಕಾರದ ವ್ಯಾಮೋಹ ಮಾಡುವಂತಿಲ್ಲವಂತೆ. ಹೀಗೆ ನೆಹರೂರವರ ಉತ್ತರಾಧಿಕಾರಿಗಳಾಗುವ ಕನಸು ಕಾಣುತ್ತಿದ್ದವರೆಲ್ಲ ಹೀಗೆ ತಟ್ಟನೆ ಕೆಳಗಿಳಿಯಬೇಕಾದ ಪರಿಸ್ಥಿತಿ ಜನಮನವನ್ನು ಚಕಿತಗೊಳಿಸುವಂತೆ ಮಾಡಿದೆ ಎಂದರೆ ಅತಿಶಯೋಕ್ತಿಯಾಗಲಾರದು.

ಕಾಮರಾಜರ ಸೂತ್ರದ ಮೊದಲನೇ ಅಂಕ

ಕಾಮರಾಜರ ಸೂತ್ರದಲ್ಲಿ ಇದು ಮೊದಲ ಅಂಕ. ನೆಹರೂರವರು ಆರು ಕೇಂದ್ರದ ಮಂತ್ರಿಗಳ ಮತ್ತು ಆರು ರಾಜ್ಯಗಳ ಮುಖ್ಯ ಮಂತ್ರಿಗಳ ರಾಜೀನಾಮೆಯನ್ನು ಸ್ವೀಕರಿಸಿ ಬೆರಗುಗೊಳಿಸಿದ್ದಾರೆ ಅದರಲ್ಲೂ ಭಕ್ಷಿಯವರ ಬಗ್ಗೆ ವಿಶೇಷವಾದ ಕಾರಣವಿರಬೇಕು. ಕಾಶ್ಮೀರದ ಒಡಲಲ್ಲಿ ಯಾವ ಬೇನೆ ಇದೆಯೋ? ಪಾಟ್ನಾಯಕರನ್ನು, ಮಂಡ್ಲಾಯರವರನ್ನು ಅಧಿಕಾರದಿಂದ ನಿವೃತ್ತಿಗೊಳಿಸಲು ಇದಕ್ಕಿಂತ ಒಳ್ಳೆಯ ಸಮಯ ನೆಹರೂರವರಿಗೆ ಸಿಗುತ್ತಿರಲಿಲ್ಲ. ಉತ್ತರ ಪ್ರದೇಶದ ರಾಜಕೀಯ ಜಗಳಕ್ಕೀಗ ಸಂಜೀವಿನಿ ಚಿಕಿತ್ಸೆಯೇ ಆದಂತಾಗಿದೆ. ಇವರೆಲ್ಲರ ಉತ್ತರಾಧಿಕಾರಿಗಳನ್ನು ನೆಹರೂ ಈಗಲೇ ನಿರ್ಧರಿಸಬೇಕು. ಅದು ನಿರ್ಧಾರವಾಗದೆ ನ್ಯಾಯ ನಿರ್ಧಾರವಾಗುವಂತಿಲ್ಲ.

ಮೈಸೂರು ಮುಖ್ಯ ಮಂತ್ರಿಗಳ ರಾಜೀನಾಮೆಯು ಅಂಗೀಕಾರದ ಅಗತ್ಯವಿಲ್ಲವೆಂದು ಈಗಾಗಲೇ ಸರ್ವಶ್ರುತವಾಗಿದೆ. ಯಾವ ಉದ್ದೇಶ್ಯಕ್ಕಾಗಿ ಅವರು ಮುಖ್ಯ ಮಂತ್ರಿಪದವಿ ಬಿಡಬೇಕಾಗಿತ್ತೋ ಅದನ್ನು ಸಾಧಿಸಿಯೇ ಶ್ರೀ.ನಿಜಲಿಂಗಪ್ಪನವರು ಮುಖ್ಯ ಮಂತ್ರಿಯಾಗಿದ್ದಾರೆ. ಬಂಗಾಳದ ಪರಿಸ್ಥಿತಿಯೂ ಇದೇ ರೀತಿಯಿದೆ ಇನ್ನು ಆಂಧ್ರದ ಮುಖ್ಯ ಮಂತ್ರಿಯು ಪದವಿ ಬಿಡುವುದರಿಂದ ಏನಾಗುವುದು? ಇದು ತೂಗು ಉಯ್ಯಾಲೆಯಲ್ಲಿದೆ. ಸಂಜೀವ ರೆಡ್ಡಿಯವರಿಗೆ ಅಧಿಕಾರ ಬಿಡುವ ಮನಸ್ಸಿಲ್ಲದಿದ್ದರೆ ನೆಹರೂರವರಿಗೂ ಅಲ್ಲಿಯ ರಾಜಕೀಯವನ್ನು ಕೆಣಕುವ ಧೈರ್ಯವಿಲ್ಲ. ಅದು ಯಾರೊಬ್ಬರ ನಿಯಂತ್ರಣಕ್ಕೂ ಬಂದಿಲ್ಲ. ಪರಿಸ್ಥಿತಿಯೇ ಪರಿಸ್ಥಿತಿಯನ್ನು ನಿಯಂತ್ರಿಸುವಂತಹ ವಿಲಕ್ಷಣ ರಾಜಕೀಯ ಪರಿಸ್ಥಿತಿ ಆಂಧ್ರದಲ್ಲಿದೆ ಎನ್ನಬಹುದು.

ಕಾಂಗ್ರೆಸ್ಸಿನ ಚೇತನಕ್ಕೆ ಇದೇ ಕಾಲ!

ಇಡೀ ಕಾಂಗ್ರೆಸ್‌ನ ಸ್ಥಿತಿ ಮತ್ತು ಅಧಿಕಾರಿಗಳ ಅಧಿಕಾರದಾಹ—ಇವುಗಳಿಗೆ ಕಾಮರಾಜರ ಸೂತ್ರದಂತೆ ಪೂರ್ಣ ಚಿಕಿತ್ಸೆ ಮಾಡಲೇಬೇಕು. ಯಾರಿಗೂ ವಿನಾಯತಿ ಕೂಡದು. ಇಂತಹ ಪವಾಡದ ಸಮಯ ದೇಶದಲ್ಲಿ ಎಂದೂ ಬಂದಿರಲಿಲ್ಲ. ಆಡಳಿತದ ದುಂದುವೆಚ್ಚ–ಕುಂದು ಕೊರತೆಗಳನ್ನು ತಿದ್ದಿಕೊಳ್ಳಲು ಇದೀಗ ಸುಸಮಯ ಬಂದಿದೆ. ಕಾಂಗ್ರೆಸ್ಸಿನ ಪುನಶ್ಚೇತನಕ್ಕೆ ಇದೀಗ ಸಮಯವಿಲ್ಲದಂತಾಗಿದೆ! ತೀರಾ ತಡವಾಗುತ್ತಿದೆ ಅದಕ್ಕೀಗಲೇ ನಾಂದಿಯಾಗಲಿ. ಆಳುವ ಪಕ್ಷ ಕಾಂಗ್ರೆಸ್ ಶುದ್ಧೀಕರಣ ಹೊಂದಿ ಆದರ್ಶ ಪಕ್ಷವಾಗುವ ಕಾರ್ಯಕ್ಕಿಂದೇ ಶ್ರೀಗಣೇಶವಾಗಲಿ.

ಸೂತ್ರದ ಸರ್ವಾಧಿಕಾರಿ

ಅಧಿಕಾರದ ಸಾಂಗ್ರಾಮಿಕತೆಯಿಂದ ಜನಸಂಪರ್ಕವನ್ನು ಕಳೆದುಕೊಂಡ ಕಾಂಗ್ರೆಸ್ ತನ್ನ ದೊಡ್ಡ ಜೀವವನ್ನೇ ಕಳೆದುಕೊಳ್ಳತೊಡಗಿತ್ತು. ಇಷ್ಟರೊಳಗೇ ನೆಹರೂ ಮೇಲೆದ್ದು ನಿಂತರು. ಕಾಮರಾಜರು ಅವರ ನೆರವಿಗೆ ಬಂದರು. ಸೂತ್ರದ ಮೂಲಪುರುಷ ಕಾಮರಾಜರಾದರೂ ತೆಯೇ ಸೂತ್ರದ ಸರ್ವಾಧಿಕಾರಿಯಾಗಿ ನೆಹರೂರವರು ಅಧಿಕಾರವನ್ನು ಬಿಟ್ಟುಬರಬೇಕಾಗಿತ್ತು. ಈ ಮಾತು ಅವರ ಬಾಯಿಯಿಂದಲೇ ಈಗ ಬಂದಿದೆ. "I should have retired first" ಎಂದವರೇ ಹೇಳಿದ್ದಾರೆ. ಆದರೆ ಕಾಂಗ್ರೆಸ್ ಆದೇಶ ಅವರನ್ನು ಅಸ್ವತಂತ್ರರನ್ನಾಗಿ ಮಾಡಿ ಅವರ ಮನಸ್ಸಾಕ್ಷಿಗೆ ವಿರುದ್ಧ ಅವರನ್ನು ಪ್ರಧಾನಿಯಾಗಿಯೇ ಉಳಿಯಗೊಟ್ಟಿದೆ. ಈ ಸೂತ್ರವು ಪೂರ್ಣ ಕಾರ್ಯಕಾರಿಯಾಗಿ ಕೇಂದ್ರ ಮತ್ತು ರಾಜ್ಯದ ಮಂತ್ರಿಮಂಡಲಗಳೆಲ್ಲಾ ಪುನಾರಚಿಸಲ್ಪಟ್ಟ ಬಳಿಕ ನೆಹರೂರವರು ಕಾಂಗ್ರೆಸಿನ ಆದೇಶವನ್ನು ಮೀರಿ ತನ್ನ ಜಾಗಕ್ಕೊಬ್ಬರನ್ನು ಹುಡುಕಿ ತಾವು ತನ್ನ ಹಳೆಯ ಸಂಗಡಿಗರ ಭುಜಬಲವಾಗಿ ನಿಲ್ಲುವರೆಂಬ ನಂಬಿಕೆ ಈಗಲೂ ಕೆಲವರಲ್ಲಿದೆ.

ಈ ಸಂದರ್ಭದಲ್ಲಿ ಲಂಡನ್ನಿನ ಪತ್ರಿಕಾವಲಯಗಳು ಹೇಳಿರುವ ಬುದ್ಧಿವಾದವು ನಿಜವಾಗಿ ಸಮಯೋಚಿತವಾಗಿದೆ. ಇನ್ನು ಮುಂದೆ ನೆಹರೂ ಆಡಳಿತದಲ್ಲಿ ಹೆಚ್ಚು ವೇಳೆಯನ್ನು ಕಳೆಯದೆ ಸಂಸ್ಥೆಯ ಸೇವೆಯಲ್ಲಿ ಕಳೆಯಬೇಕೆಂದು ಹೇಳಿದ ಪತ್ರಿಕೆ ತನ್ನ ಅಭಿಪ್ರಾಯವನ್ನು ಹೀಗೆ ವ್ಯಕ್ತಪಡಿಸಿದೆ:—

"If he wise is Mr Nehru will cut before the redeal. No one has suggested that he should, in the classic phrase, himself make way for a younger man It is hard to see upon whom the mentle of their apparent should fall."

ನೆಹರೂ ನಿವೃತ್ತಿಯನ್ನು ಕೆಣಕಿದ ಈ ಪ್ರಶ್ನೆ ಹಾಗೆ ಯುರೋಪಿನ ರಾಜಕಾರಣಿಗಳಿಗೆ ೩೭ರ ಪ್ರಾಯವು ಅಗಿರಬಹುದು. ಐವತ್ತು ಮುಟ್ಟುವುದಕ್ಕೆ ಮುಂಚೆ ಸಾಯುವ ಸರಾಸರಿ ಆಯುರ್ಮಾನವುಳ್ಳ ದೇಶದಲ್ಲಿ ೭೪ ತೀರಾ ವೃದ್ಧಾಪ್ಯವೆನ್ನಬೇಕೆಂದು ಹೇಳಿ ಕೊನೆಗೆ—

"And therefore Nehru should now spend less of his energy on the work of Government, which he has seen notoriously relactuant to deligate, and devote,him self to the, Selection, training,and guidance of younger generation of Politicians."

ಯುವಕ ರಾಜಕಾರಣಿಗಳಿಗೆ ತರಬೇತಿ ಮತ್ತು ಮಾರ್ಗದರ್ಶನ ಕೊಟ್ಟು ಅವರನ್ನು ಒಳ್ಳೆಯ ರಾಜಕಾರಣಿ ಮತ್ತು ಒಳ್ಳೆಯ ಆಡಳಿತಗಾರರನ್ನಾಗಿ ಮಾಡುವದರಲ್ಲಿ ಹೆಚ್ಚು ವೇಳೆಯನ್ನು ನೆಹರೂ ಇನ್ನು ಮುಂದೆ ಕಳೆಯಬೇಕಾಗಿದೆ ಎಂಬ ಸೂಚನೆಯನ್ನು ಈ ಪತ್ರಿಕೆ ಮಾಡಿದೆ. ಈ ಸೂಚನೆ ನಿಜಕ್ಕೂ ಬಹು ಸ್ವಾಗತಾರ್ಹವಾಗಿಲ್ಲವೆ?

ಮಂತ್ರಿ ಮಂಡಲ ಚಿಕ್ಕದಾಗಲಿ

ಇನ್ನು ಹಿರಿಯರ ರಾಜೀನಾಮೆಗಳ ಅಂಗೀಕಾರದಲ್ಲಿ ಎಲ್ಲರ ನಿರೀಕ್ಷಣೆಯನ್ನು ಮೀರಿ ಮುನ್ನುಗ್ಗಿದ್ದಾರೆ. ಮೊದಲ ಹಂತದಲ್ಲೇ 'ದಾಪುಗಾಲನ್ನು' ಇಟ್ಟಿದ್ದಾರೆ ರಾಜ್ಯದ ಮಂತ್ರಿ ಮಂಡಲಗಳು ಸಣ್ಣದಾಗಿರಬೇಕೆಂಬ ಆಶಯವನ್ನು ವ್ಯಕ್ತಮಾಡಿ ಪುನರ್ ಘಟಿಸಲಾಗುವ ಮಂತ್ರಿಮಂಡಲಗಳ ಸಂಖ್ಯೆಯನ್ನು ಈಗಾಗಲೇ ನೆಹರೂ ನಿರ್ಧರಿಸಿದ್ದಾರೆ. ಅಂದ ಮೇಲೆ ಮುಖ್ಯ ಮಂತ್ರಿಗಳು ಬದಲಾಗದಿರುವ ಮಂತ್ರಿ ಮಂಡಲದ ಗಾತ್ರದ ಮೇಲೂ ನೆಹರೂ ಗದೆ ಎತ್ತುವ ಸಂಭವವೂ ಇದೆ. ಬಹು ದೊಡ್ಡದೆನಿಸಿಕೊಂಡ ಉತ್ತರ ಪ್ರದೇಶದ ಮಂತ್ರಿ ಮಂಡಲದ ಸಂಖ್ಯೆ ಎಷ್ಟಕ್ಕೆ ಇಳಿಯುವುದೆಂಬುದನ್ನು ನೋಡಿಕೊಂಡರೆ ಉಳಿದ ದೊಡ್ಡ ಮಂತ್ರಿ ಮಂಡಲಗಳು ತಮ್ಮಷ್ಟಕ್ಕೆ ತಾವೇ ಇಳಿಯುದಾಗ ಬೇಕಾಗುವುದು. ಮೈಸೂರು ಮಂತ್ರಿ ಮಂಡಲದ ಗಾತ್ರವೂ ಈಗಾಗಲೇ ಸಣ್ಣದಾಗುವುದೆಂಬ ಸುದ್ದಿ ಜನಜನಿತವಾಗುತ್ತಿದೆ.

ಉಪಸಂಹಾರ

ಅಧಿಕಾರ ತ್ಯಾಗದ ಆರಂಭ ಹೀಗೆ ಬಹು ಸೊಗಸಾಗಿಯೇ ಆಗಿದೆ. ಇತರರಿಗೆ ಅಧಿಕಾರವಲ್ಲದಿರಬಾರದೆಂಬ ಪ್ರವೃತ್ತಿಯನ್ನು ಹುಟ್ಟಿಸಲು ಈ ಮೊದಲ ಕಂತು ಸಾಕಷ್ಟು ನೆರವಾಗಿದೆ. ಅಧಿಕಾರಕ್ಕಿಂತ ಕಾಂಗ್ರೆಸ್ಸಿನ ಸೇವೆಯೇ ಸ್ಥಿರವಾದುದು. ಸೇವೆ ಅಧಿಕಾರ ಹಿತವಾದುದು, ಕೀರ್ತಿಕರ

(೪ನೇ ಪುಟ ನೋಡಿ)

ಐತಿಹಾಸಿಕ ನಾಟಕ

ಗಜಪತಿ ನಂದಿನಿ

ಬರೆದವರು: "ನವಗಿರಿನಂದ"

ಅಂಕ—I

ದೃಶ್ಯ ೧. ಕೃಷ್ಣದೇವರಾಯನ ಒಡ್ಡೋಲಗ-ಸಭೆ (ರಾಯನು ಸಿಂಹಾಸನದಲ್ಲಿ ಕುಳಿತಿರುತ್ತಾನೆ. ಒಂದು ಬದಿಯಲ್ಲಿ ಮಂತ್ರಿ ತಿಮ್ಮರಸನೂ, ಇನ್ನೊಂದು ಬದಿಯಲ್ಲಿ ಸೇನಾಧಿಪತಿಗಳಾದ ಜಯರಾಮ, ರಾಮಲಿಂಗ ನಾಯಕರೂ ಕುಳಿತಿದ್ದಾರೆ. ತಿಮ್ಮಣ್ಣ ರಾಮಕೃಷ್ಣ ಕವಿಗಳು ಹಿರಿಯ ಪುಸ್ತಕಗಳನ್ನು ಹಿಡಿದುಕೊಂಡು ಇದಿರು ಬದಿಯಾಗಿ ಕುಳಿತಿದ್ದಾರೆ. ಸಭೆಯ ಉಭಯ ಪಾರ್ಶ್ವಗಳಲ್ಲಿ ವೈತಾಳಿಕರು ನಿಂತಿದ್ದಾರೆ ರಾಯನ ಸಿಂಹಾಸನದ ಅಕ್ಕಪಕ್ಕಗಳಲ್ಲಿ ಚಾಮರದವರು ನಿಂತುಕೊಂಡು ಗಾಳಿ ಬೀಸುತ್ತಿದ್ದಾರೆ. ಪರದೆ ಯೇಳುವಾಗ ಸುಪ್ರಭಾತ ಹಿನ್ನೆಲೆಯ ಧ್ವನಿಯಲ್ಲಿ ವೈತಾಳಿಕರು ರಾಯನನ್ನು ಕೀರ್ತಿಸುತ್ತಾರೆ.)

ವೈತಾಳಿಕರು—ಜಯತುಳು ವಂಶಾಬ್ಧಿ ಚಂದ್ರಾ! ಜಯ ವೀರ ಕ್ಷತ್ರಿಯ ಶ್ರೀ ಮನ್ನರಸ ರಾಜಕುಲದೀಪಕಪುತ್ರಾ! ಜಯ ವಿದ್ಯಾನಗರ ರತ್ನ ಸಿಂಹಾಸನಾಧೀಶ್ವರಾ! ಜಯ ಕರ್ನಾಟಕ ರಾಜ್ಯರಮಾರಮಣಾ! ಜಯ ಆಂಧ್ರಭೋಜಾ! ವಿಜಯನಗರ ವಿಸ್ತಾರ ಸಾಮ್ರಾಜ್ಯಸಾರ್ವಭೌಮಾ! ಜಯ ಜಯಾ!

ಕೃಷ್ಣದೇವರಾಯ—ತಿಮ್ಮರಸು ಮಂತ್ರೀಶರೆ, ನಮ್ಮ ಉತ್ಸಾಹಕ್ಕೆ ಹಿತಚಿಂತಕರ ಪ್ರೋತ್ಸಾಹವೂ, ನಿಮ್ಮ ಮಂತ್ರಾಲೋಚನೆಯ ಬೆಂಬಲವೂ ಎಲ್ಲಕ್ಕೂ ಮೇಲೆ ಶ್ರೀ ಪಂಪಾ ವಿರೂಪಾಕ್ಷನ ಕೃಪಾಕಟಾಕ್ಷವೂ ಸೇರಿದುದರ ಫಲವಾಗಿ ನಾವು ಕೈಕೊಂಡ ದಕ್ಷಿಣ ದಿಗ್ವಿಜಯವು ನೆರವೇರಿತು. ಕನ್ಯಾಕುಮಾರಿಯ ವರೆಗಿರುವ ದಕ್ಷಿಣಭಾರತವೆಲ್ಲವೂ ವಿಜಯನಗರ ಸಾಮ್ರಾಜ್ಯಕ್ಕೆ ಅಧೀನವಾದವು. ಇನ್ನು ನಾವು ಇಷ್ಟಕ್ಕೇ ತೃಪ್ತರಾಗಿ ಸುಮ್ಮನಿರಬೇಕೆ? ಅಥವಾ

ತಿಮ್ಮಣ್ಣ—ಸುಮ್ಮನಿರಬಾರದು ಪ್ರಭು. ಅಸಂತುಷ್ಟಾ ದ್ವಿಜಾ ನಷ್ಟಾಃ—

ರಾಮಕೃಷ್ಣ—ಹೌದೌದು. ಸಂತುಷ್ಟಾ ಇವ ಪಾರ್ಥಿವಾಃ—ಎಂದು ಹಿರಿಯರು ಮೊದಲೇ ಹೇಳಿಬಿಟ್ಟಿದ್ದಾರೆ.

ತಿಮ್ಮಣ್ಣ—ಅಂತೆಯೇ ಪ್ರಭುಗಳ ಮಾತನ್ನು ಕೇಳುವಾಗ ಮುಂದಿನ ಕಾರ್ಯವನ್ನು ಕುರಿತು ಅವರಿಗಿರುವ ಉತ್ಸಾಹವು ವ್ಯಕ್ತವಾಗುತ್ತದೆ.

ರಾಮಕೃಷ್ಣ—ಹೌದು. ಹೌದು. ಮುಂದಿನ ಕಾರ್ಯವೇನೆಂದು ಹಿಂದೆಯೇ, ರಾಯರ ಪಟ್ಟಾಭಿಷೇಕ ಕಾಲದಲ್ಲಿಯೇ ವ್ಯಕ್ತವಾಗಿ ಬಿಟ್ಟಿದೆ.

ತಿಮ್ಮಣ್ಣ—ಅದಕ್ಕೆ ತೀವ್ರ ಗಮನಕೊಡಲು ಇದುವೇ ಸರಿಯಾದ ಸಮಯ. ಅಲ್ಲವೇ ಮಂತ್ರೀಶರೆ?

ತಿಮ್ಮರಸು—(ಯೋಚಿಸುತ್ತ ತಲೆದೂಗಿ ಮುಗುಳ್ನಕ್ಕು ರಾಯನನ್ನು ನೋಡಿ) ರಾಜೇಂದ್ರಾ, ನಮ್ಮ ತಿಮ್ಮಣ್ಣ ರಾಮಕೃಷ್ಣರು ಸರಿಯಾದ ಸಮಯಕ್ಕೇ ಜ್ಞಾಪಿಸುತ್ತಿದ್ದಾರೆ. ಈ ಕನ್ನಡಾಂಧ್ರ ಕವಿಗಳು ಒಮ್ಮನಸ್ಸರಾಗಿರುವಂತೆ ಆಂಧ್ರ ಕರ್ನಾಟಕ ರಾಜ್ಯಗಳೂ ಸ್ನೇಹ ಸಂಬಂಧಗೊಳ್ಳಬೇಕೆಂಬುದೇ ನಮ್ಮ ಬಯಕೆ.

ಕೃಷ್ಣದೇವರಾಯ—ನಿಜ ಅಪ್ಪಾಜೀ, ಅಂದು ನಮ್ಮ ಪಟ್ಟಾಭಿಷೇಕ ಕಾಲದಲ್ಲಿ ನಮ್ಮ ಸಭೆಗೆ ಬಂದು ನನ್ನನ್ನೂ ನನ್ನ ಧರ್ಮಪತ್ನಿಯನ್ನೂ ಅವಮಾನ ಪಡಿಸಿ ಸಭೆಯಿಂದೆದ್ದು ಹೋದ ಆ ಪ್ರತಾಪರುದ್ರ ಗಜಪತಿಯ ಗರ್ವವನ್ನು ಇಳಿಸುವುದೀಗ ಪ್ರಥಮ ಕರ್ತವ್ಯ.

ತಿಮ್ಮಣ್ಣ—ಇದೀಗ ಉದಯಗಿರಿಯನ್ನು ವಶಪಡಿಸಿಕೊಂಡು, ವೀರರುದ್ರ ಗಜಪತಿಯನ್ನು ಕಾಡುಪಾಲು ಮಾಡಿದ್ದು ನೋಡಿಯೇ ಪ್ರತಾಪರುದ್ರನಿಗೆ ನಡುಕ ಪ್ರಾರಂಭವಾಗಿದ್ದೀತು.

ರಾಮ—ಇಲ್ಲ ತಿಮ್ಮಣ್ಣಾ, ಆಂಧ್ರವೀರರು ಅಷ್ಟು ಬೇಗ ಬಾಗಲಾರರು. ತನ್ನ ಕುಮಾರಿಯನ್ನು ನಮ್ಮ ರಾಯನಿಗೆ ವಿವಾಹಮಾಡಿಕೊಡಲು ಇನ್ನೂ ಒಪ್ಪಿಲ್ಲವಲ್ಲಾ!

ತಿಮ್ಮಣ್ಣ—ಆಂಧ್ರಕವಿ ರಾಮಕೃಷ್ಣಾ, ನಿನ್ನ ಆಂಧ್ರಾಭಿಮಾನಕ್ಕೆ ಧನ್ಯವಾದ. ಅವಕ್ಕ ನನ್ನ ಕನ್ನಡರಾಯನು ಇಷ್ಟಕ್ಕೇ ವಿರಮಿಸುವವನಲ್ಲ; ತಿಳಿದಿರಲಿ.

ರಾಮಕೃಷ್ಣ—ಜೀ ಹುರಾಕ್.

ಕೃಷ್ಣದೇವ—ಮಂತ್ರೀಶ ಅಪ್ಪಾಜೀ, ಇನ್ನೀಗ ಉತ್ಕಲ ಪ್ರಾಂತಕ್ಕೆ ನಮ್ಮ ಪೂರ್ಣ ಗಮನ ಹರಿಸಬೇಕು. ಹೇಗೆ ನಿಮ್ಮ ಕಾರ್ಯ ಪ್ರಣಾಳಿಕೆ?

ತಿಮ್ಮರಸು—ಪ್ರಭು, ದಂಡೋಪಾಯವಾದ ಯುದ್ಧವು ಅಂತ್ಯೋಪಾಯವಾಗಿರಲಿ. ಈಗ ಉತ್ಕಲೇಶನಿಗೆ ಒಂದು ಕೊನೆಯ ಪತ್ರವನ್ನು ಕಳುಹಿಸೋಣ. ಆತನ ಮಗಳು ಜಗನ್ಮೋಹಿನಿಯನ್ನು ವಿವಾಹ ಮಾಡಿಕೊಳ್ಳುವುದರ ಮೂಲಕ ಕರ್ನಾಟಾಂಧ್ರೈಕ್ಯಮತ್ಯಕ್ಕೆ ಆತನನ್ನು ಆಹ್ವಾನಿಸೋಣ.

ಕೃಷ್ಣದೇವ—ಉದ್ಧಟನಿಗೆ ವಿನಯ ಪತ್ರ ಬರೆಯುವುದೆ?

ತಿಮ್ಮರಸು—ವಿನಯದ ಪತ್ರದಲ್ಲಿ ವೀರತ್ವವು ತುಂಬಿರುತ್ತದೆ ಪ್ರಭು.

ತಿಮ್ಮಣ್ಣ—ಭಾವೀ ಮಾವನ್ಯನವರಲ್ಲಿ ವಿನಯ ಪ್ರದರ್ಶನವು ಭೂಷಣವಲ್ಲವೆ!

ರಾಮಕೃಷ್ಣ—ಅತಿ ಭೂಷಣವೇ ಸ್ವೈ. ವಿನಯಂ ವೀರಭೂಷಣಂ. ಹೇಗಾದರೂ ತಿಳಿಯಾದ ಆಂಧ್ರವು ಕರ್ನಾಟಕ ಕಸ್ತೂರಿಯ ಪರಿಮಳವನ್ನು ಹೊಂದಿ,

ತಿಮ್ಮಣ್ಣ—ನಾ ವಿಷ್ಣು! ಪೃಥಿವೀ ಪತೇ, ಎಂಬಂತೆ ಶ್ರೀ ದೇವಿ ಭೂ ದೇವಿಯರೊಡನೆ ಮೆರೆಯುವ ಕೃಷ್ಣನಂತೆ, ಪ್ರೇಮರಾಣಿ, ವಿಜಯರಾಣಿಯರೊಂದಿಗೆ ನಮ್ಮ ರಾಯನು ರಾರಾಜಿಸಲಿ!

ರಾಮಕೃಷ್ಣ—ತಥಾಸ್ತು ತಥಾಸ್ತು.

ದೃಶ್ಯ ೨ (ಸಂಜೀಕಾಲಯದ ಬಳಿಯ) ಒಂದು ಬೀದಿ. (ಸಮಯ ಸಂಜೆ ತಿಮ್ಮಣ್ಣ ಮತ್ತು ರಾಮಕೃಷ್ಣರು ತಾಳೆ-ಗ್ರಂಥಹಸ್ತರಾಗಿ ಮೇಲೆ ನೋಡಿಕೊಂಡು ವಿಚಾರ ಮಾಡುತ್ತಾ ಇದಿರು ಬದಿಯಾಗಿ ಪ್ರವೇಶಿಸಿ ಮಧ್ಯರಂಗದಲ್ಲಿ ಢಿಕ್ಕಿಹೊಡೆದುಕೊಳ್ಳುವರು. ಕೋಪದಿಂದ ಒಬ್ಬರನೊಬ್ಬರು ದುರದುರನೆ ನೋಡಿಕೊಳ್ಳುವರು).

ತಿಮ್ಮಣ್ಣ—ಏನೋ ಇದು ರಾಮಕೃಷ್ಣ?

ರಾಮಕೃಷ್ಣ—ನೀನೇನಯ್ಯ ಮತ್ತೆ ತಿಮ್ಮಣ್ಣ? ಎಲ್ಲಿಟ್ಟಿದ್ದಿ ನಿನ್ನ ತಲೆ?

ತಿಮ್ಮಣ್ಣ—ನಾನೊಂದು ಕಾವ್ಯದಲ್ಲಿ ತಲೆಹಾಕಿದ್ದೇನೆ.

ರಾಮಕೃಷ್ಣ—ನಾನೂ ತಲೆಯಲ್ಲಿ ಕಾವ್ಯ ಹಾಕಿದ್ದೇನೆ.

ತಿಮ್ಮಣ್ಣ—ನಿನ್ನ ಕಾವ್ಯದ ವಸ್ತು?

ರಾಮಕೃಷ್ಣ—ನಮ್ಮ ರಾಯರ ಕಾರ್ಯಕಲಾಪವೇ.

ತಿಮ್ಮಣ್ಣ—ಭಲೇ! ನನಗೂ ಅದೇ ವಸ್ತುವಪ್ಪಾ!

ರಾಮಕೃಷ್ಣ—ಭಲೇ! ನಾನೂ ನೀನೂ ಒಂದೇ ಹಾಗಾದರೆ!

("ಒಂದೇ ಒಂದೇ, ಭಲೇ ಭಲೇ" ಎಂದು ಒಬ್ಬರನ್ನೊಬ್ಬರು ಅಪ್ಪಿಕೊಳ್ಳುವರು ಒಬ್ಬರ ತಲೆಯನ್ನೊಬ್ಬರು ತಡವಿ "ನೋವು ಹೋಯಿತೆ?" "ಹೋಯಿತು" ಎಂದುಕೊಳ್ಳುವರು)

ರಾಮಕೃಷ್ಣ—(ತಲೆ ತುರಿಸಿಕೊಳ್ಳುತ್ತ) ಆದರೆ ಪರಿಣಾಮ ತಿಳಿಯದೆ ಕಾವ್ಯ ರಚನೆ ಮಾಡುವುದು ಹೇಗೆ?

ತಿಮ್ಮಣ್ಣ—(ತಲೆತುರಿಸಿ) ಹೌದ್ ಹೌದು. ರಾಯನ ಮನಸ್ಸೆಲ್ಲಾ ಇರುವುದು ಚಿನ್ನಾ ದೇವಿಯ ಮೇಲೆ. ಅವನ ಪ್ರೇಮ ಸಖಿ, ಧರ್ಮಪತ್ನಿ ಎಲ್ಲಾ ಅವಳೇ. ಅವಳ ಕುಲಗೋತ್ರ ಗೊತ್ತಾಗದಿರುವುದರಿಂದ ಪಟ್ಟದ ರಾಣಿಯಾಗಿ ಮಾಡಲಾಗುವುದಿಲ್ಲ. ಏನೋ ತಿಮ್ಮರಸರ ಒತ್ತಾಯಕ್ಕೇ ಜಗನ್ಮೋಹಿನಿಯನ್ನು ವರಿಸಲು ಒಪ್ಪಿಕೊಂಡಿದ್ದಾನೆ ರಾಯ.

ರಾಮಕೃಷ್ಣ—ಚಿನ್ನಾದೇವಿಯ ಹಸ್ತರೇಖೆಯೇನೋ ಅವಳು ರಾಣಿಯಾಗುತ್ತಾಳೆನ್ನುತ್ತಿದೆ. ಯಾವ ಚಕ್ರಾಧಿಪತ್ಯಕ್ಕೋ?

ತಿಮ್ಮಣ್ಣ—ರೇಖೆ ಅದನ್ನು ಹೇಳದಿದ್ದರೂ, ವಿಜಯನಗರ ಚಕ್ರಾಧಿಪತ್ಯಕ್ಕೆಂದೇ ನನ್ನ ಊಹೆ.

ರಾಮಕೃಷ್ಣ—ನಿನ್ನ ಊಹೆ ನಡೆಯದಂತೆ ತಿಮ್ಮರಸರು ಚಿನ್ನಾದೇವಿಯ ಮೇಲೆ ಹಾಕಲು ಕಲ್ಲು ಎತ್ತಿಕೊಂಡು ನಿಂತಿದ್ದಾರಲ್ಲ!

ತಿಮ್ಮಣ್ಣ—ರಾಯನು ತಿಮ್ಮರಸರನ್ನು ಪಿತೃ ಸಮಾನವಾಗಿ ಭಾವಿಸಿದ್ದರಿಂದಲೇ ತಿಮ್ಮರಸರ ಕೈ ಹಾಗೆ ಮೇಲೆ ನಿಂತಿದೆ.

ರಾಮಕೃಷ್ಣ—ಅಂತೂ ಪರಿಣಾಮ ತಿಳಿಯದೆ ಕಾವ್ಯವನ್ನು ಮುಂದುವರಿಸುವಂತಿಲ್ಲ ಬಿಡು.

ತಿಮ್ಮಣ್ಣ—ಬಿಡು ಸಖ್ಯ ರಾಮಕೃಷ್ಣ. ಪಂಪಾತೀರ್ಥಕ್ಕೆ ಹೋಗಿ ಒಂದಿಷ್ಟು ಸಂಧ್ಯಾವಂದನೆಯನ್ನಾದರೂ ಮಾಡೋಣ.

ರಾಮಕೃಷ್ಣ—ಒಂದಿಷ್ಟೇಕೆ? ಶಾಪ ಕಾಶಿಯಾಗಿ ತುಂಬಾ ಮಾಡಬಹುದು.

ಓಂ ಶುಕ್ಲಾಂಬರಧರ—

(ಅತ್ತ ನೋಡಿದ ತಿಮ್ಮಣ್ಣ ಥಕ್ಕನೆ ರಾಮಕೃಷ್ಣನ ಬಾಯಿ ಮುಚ್ಚಿ)

ತಿಮ್ಮಣ್ಣ—ಪುಶ್, ನಿಲ್ಲಿಸು. ನಮ್ಮ ಗುರು ತಿಮ್ಮರಸರು ಈ ಕಡೆಗೇ ಹೊರಟಿದ್ದಾರೆ.

ರಾಮಕೃಷ್ಣ—ಎಲ್ಲಿಗೋ ಸವಾರಿ? ಸಂಧ್ಯಾವಿಹಾರವೇನೊ?

ತಿಮ್ಮಣ್ಣ—ಮಹಾ ಮಂತ್ರಿಗೆ ವಿಹಾರವೆಲ್ಲಿ ಬಂತು? ಅವರು ಉಸಿರುಬಿಟ್ಟರೂ ಏನೋ ಕಾರ್ಯಕ್ಕಾಗಿಯೇ. ಈಗ ನಾವು ಅವರ ಕಣ್ಣಿಗೆ ಬಿದ್ದರೆ ನಮಗೆ ಮತ್ತೆ ಸ್ವೇಚ್ಛೆಯಿಲ್ಲ.

ರಾಮಕೃಷ್ಣ—ಅಡಗೋಣ. (ಇಬ್ಬರೂ ಈಚೆ ಬದಿಗೆ ಹೋಗುವರು.) ತಿಮ್ಮರಸು (ಯೋಚಿಸುತ್ತ ಪ್ರವೇಶಿಸಿ) ಹುಂ, ಇದಕ್ಕೆ ತಡೆ ಹಾಕಲೇ ಬೇಕು. ಯಾವ ಕೋ ಕುಲಗೋತ್ರಗಳಿಲ್ಲದ, ಆ ತಾಯಿ

(೧೨ನೇ ಪುಟ ನೋಡಿರಿ)

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್) ರೂ.
ಕಲಂ ಸೆಂಟಿಮೀಟರಿಗೆ 1-00
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ 1 50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾದಾರರನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚು ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3 ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3
(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.
(ಶೆಡ್ಯೂಲ್ಡ್ ಬ್ಯಾಂಕ್)
ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

[illegible]

ದಕ್ಷಿಣ ಕನ್ನಡಿಗರ ವಿಶಿಷ್ಟ ಪದ್ಧತಿಗಳು

[illegible]

[illegible] ... ಯೂನಿಯನ್ ಪಬ್ಲಿಕ್ ಸರ್ವಿಸ್ ಕಮಿಶನ್ (UPSC) ... [illegible]

ನಿಮ್ಮ ಉಳಿತಾಯಗಳ [illegible]

1-1-1963ರಿಂದ ಠೇವಣಾತಿಗಳ ಮೇಲೆ ಹೆಚ್ಚುವರಿ ಬಡ್ಡಿ ದರಗಳು

[illegible]

ದಿ ವಿಜಯಾ ಬ್ಯಾಂಕ್ ಲಿಮಿಟೆಡ್

[illegible]

[illegible]

ಐತಿಹಾಸಿಕ ನಾಟಕ

ಗಜಪತಿ ನಂದಿನಿ

ಬರೆದವರು: "ನವಗಿರಿನಂದ"

ಅಂಕ—I

ದೃಶ್ಯ ೧. ಕೃಷ್ಣದೇವರಾಯನ ಒಡ್ಡೋಲಗ. ಹಗಲು ಹೊತ್ತು. (ರಾಯನು ಸಿಂಹಾಸನದಲ್ಲಿ ಕುಂಡಿಸಿರುತ್ತಾನೆ. ಒಂದು ಬದಿಯಲ್ಲಿ ಮಂತ್ರಿ ತಿಮ್ಮರಸನೂ, ಇನ್ನೊಂದು ಬದಿಯಲ್ಲಿ ಸೇನಾಧಿಪತಿಗಳಾದ ಜಯರಾಮ, ರಾಮಲಿಂಗ ನಾಯಕರೂ ಕುಳಿತಿದ್ದಾರೆ. ತಿಮ್ಮಣ್ಣ ರಾಮಕೃಷ್ಣ ಕವಿಗಳು ಓಲೆಯ ಪುಸ್ತಕಗಳನ್ನು ಹಿಡಿದುಕೊಂಡು ಇದಿರು ಬದಿರಾಗಿ ಕುಳಿತಿದ್ದಾರೆ. ಸಭೆಯ ಉಭಯ ಪಾರ್ಶ್ವಗಳಲ್ಲಿ ವೈತಾಳಿಕರು ನಿಂತಿದ್ದಾರೆ ರಾಯನ ಸಿಂಹಾಸನದ ಅಕ್ಕಪಕ್ಕಗಳಲ್ಲಿ ಚಾಮರದವರು ನಿಂತುಕೊಂಡು ಗಾಳಿ ಬೀಸುತಿದ್ದಾರೆ. ಪರದೆ ಏಳುವಾಗ ಸುಶ್ರಾವ್ಯವಾದ ಹಿನ್ನೆಲೆಯ ಶ್ರುತಿಯಲ್ಲಿ ವೈತಾಳಿಕರು ರಾಯನನ್ನು ಕೀರ್ತಿಸುತ್ತಾರೆ.)

ವೈತಾಳಿಕರು—ಜಯತುಳು ವಂಶಾಬ್ಧಿ ಚಂದ್ರ! ಜಯ ವೀರ ಕ್ಷತ್ರಿಯ ಶ್ರೀ ಮನ್ನರಸ ರಾಜಕುಲದೀಪಕಪುತ್ರ! ಜಯ ವಿದ್ಯಾನಗರ ರತ್ನ ಸಿಂಹಾಸನಾಧೀಶ್ವರಾ! ಜಯ ಕರ್ನಾಟಕ ರಾಜ್ಯರಮಾರಮಣಾ! ಜಯ ಆಂಧ್ರಭೋಜಾ! ವಿಜಯನಗರ ವಿಸ್ತಾರ ಸಾಮ್ರಾಜ್ಯಸಾರ್ವಭೌಮಾ! ಜಯ ಜಯಾ!

ಕೃಷ್ಣದೇವರಾಯ—ತಿಮ್ಮರಸು ಮಂತ್ರೀಶರ, ನಮ್ಮ ಉತ್ಸಾಹಕ್ಕೆ ಹಿತಚಿಂತಕರ ಪ್ರೋತ್ಸಾಹವೂ, ನಿಮ್ಮ ಮಂತ್ರಾಲೋಚನೆಯ ಬೆಂಬಲವೂ ಎಲ್ಲಕ್ಕೂ ಮೇಲೆ ಶ್ರೀ ಸಂಪಾ ವಿರೂಪಾಕ್ಷನ ಕೃಪಾಕಟಾಕ್ಷವೂ ಸೇರಿದುದರ ಫಲವಾಗಿ ನಾವು ಕೈಕೊಂಡ ದಕ್ಷಿಣ ದಿಗ್ವಿಜಯವು ನೆರವೇರಿತು. ಕನ್ಯಾಕುಮಾರಿಯ ವರೆಗಿರುವ ದಕ್ಷಿಣಭಾರತವೆಲ್ಲವೂ ವಿಜಯನಗರ ಸಾಮ್ರಾಜ್ಯಕ್ಕೆ ಅಧೀನವಾದುವು. ಇನ್ನು ನಾವು ಇಷ್ಟಕ್ಕೇ ತೃಪ್ತರಾಗಿ ಸುಮ್ಮನಿರಬೇಕೆ? ಅಥವಾ

ತಿಮ್ಮಣ್ಣ—ಸುಮ್ಮನಿರಬಾರದು ಪ್ರಭು. ಅಸಂತುಷ್ಟಾ ದ್ವಿಜಾ ನಷ್ಟಾಃ—

ರಾಮಕೃಷ್ಣ—ಹೌದೌದು. ಸಂತುಷ್ಟಾ ಇವ ಪಾರ್ಥಿವಾಃ—ಎಂದು ಹಿರಿಯರು ಮೊದಲೇ ಹೇಳಿಬಿಟ್ಟಿದ್ದಾರೆ.

ತಿಮ್ಮಣ್ಣ—ಅಂತೆಯೇ ಪ್ರಭುಗಳ ಮಾತನ್ನು ಕೇಳುವಾಗ ಮುಂದಿನ ಕಾರ್ಯವನ್ನು ಕುರಿತು ಅವರಿಗಿರುವ ಉತ್ಸಾಹವು ವ್ಯಕ್ತವಾಗುತ್ತದೆ.

ರಾಮಕೃಷ್ಣ—ಹೌದು ಹೌದು. ಮುಂದಿನ ಕಾರ್ಯವೇನೆಂದು ಹಿಂದೆಯೇ, ರಾಯರ ಪಟ್ಟಾಭಿಷೇಕ ಕಾಲದಲ್ಲಿಯೇ ವ್ಯಕ್ತವಾಗಿ ಬಿಟ್ಟಿದೆ.

ತಿಮ್ಮಣ್ಣ—ಅದಕ್ಕೆ ತೀವ್ರಗಮನಕೊಡಲು ಇದುವೇ ಸರಿಯಾದ ಸಮಯ. ಅಲ್ಲವೇ ಮಂತ್ರೀಶರೆ?

ತಿಮ್ಮರಸು—(ಯೋಚಿಸುತ್ತ ತಲೆದೂಗಿ ಮುಗುಳ್ನಕ್ಕು ರಾಯನನ್ನು ನೋಡಿ) ರಾಜೇಂದ್ರಾ, ನಮ್ಮ ತಿಮ್ಮಣ್ಣ ರಾಮಕೃಷ್ಣರು ಸರಿಯಾದ ಸಮಯಕ್ಕೇ ಜ್ಞಾಪಿಸುತ್ತಿದ್ದಾರೆ. ಈ ಕನ್ನಡಾಂಧ್ರ ಕವಿಗಳು ಒಮ್ಮನಸ್ಕರಾಗಿರುವಂತೆ ಆಂಧ್ರ ಕರ್ನಾಟಕ ರಾಜ್ಯಗಳೂ ಸ್ನೇಹ ಸಂಬಂಧಗೊಳ್ಳಬೇಕೆಂಬುದೇ ನಮ್ಮ ಬಯಕೆ.

ಕೃಷ್ಣದೇವರಾಯ—ನಿಜ ಅಪ್ಪಾಜೀ, ಅಂದು ನಮ್ಮ ಪಟ್ಟಾಭಿಷೇಕ ಕಾಲದಲ್ಲಿ ನಮ್ಮ ಸಭೆಗೆ ಬಂದು ನನ್ನನ್ನೂ ನನ್ನ ಧರ್ಮಪತ್ನಿಯನ್ನೂ ಅವಮಾನ ಪಡಿಸಿ ಸಭೆಯಿಂದೆದ್ದು ಹೋದ ಆ ಪ್ರತಾಪರುದ್ರ ಗಜಪತಿಯ ಗರ್ವವನ್ನು ಇಳಿಸುವುದೀಗ ಪ್ರಥಮ ಕರ್ತವ್ಯ.

ತಿಮ್ಮಣ್ಣ—ಇದೀಗ ಉದಯಗಿರಿಯನ್ನು ವಶಪಡಿಸಿಕೊಂಡು, ವೀರರುದ್ರ ಗಜಪತಿಯನ್ನು ಕಾಡುಪಾಲು ಮಾಡಿದ್ದು ನೋಡಿಯೇ ಪ್ರತಾಪರುದ್ರನಿಗೆ ನಡುಕ ಪ್ರಾರಂಭವಾಗಿದ್ದೀತು.

ರಾಮ—ಇಲ್ಲ ತಿಮ್ಮಣ್ಣಾ, ಆಂಧ್ರವೀರರು ಅಷ್ಟು ಬೇಗ ಬಾಗಲಾರರು. ತನ್ನ ಕುಮಾರಿಯನ್ನು ನಮ್ಮ ರಾಯನಿಗೆ ವಿವಾಹಮಾಡಿಕೊಡಲು ಇನ್ನೂ ಒಪ್ಪಿಲ್ಲವಲ್ಲಾ!

ತಿಮ್ಮಣ್ಣ—ಆಂಧ್ರಕವಿ ರಾಮಕೃಷ್ಣಾ. ನಿನ್ನ ಆಂಧ್ರಾಭಿಮಾನಕ್ಕೆ ಧನ್ಯವಾದ. ಆದರೆ ನಮ್ಮ ಕನ್ನಡರಾಯನು ಇಷ್ಟಕ್ಕೇ ವಿರಮಿಸುವವನಲ್ಲ; ತಿಳಿದಿರಲಿ.

ರಾಮಕೃಷ್ಣ—ಜೀ ಹುಜೂರ್.

ಕೃಷ್ಣದೇವ—ಮಂತ್ರೀಶ ಅಪ್ಪಾಜೀ, ಇನ್ನೀಗ ಉತ್ಕಲ ಪ್ರಾಂತಕ್ಕೆ ನಮ್ಮ ಪೂರ್ಣ ಗಮನ ಹರಿಸಬೇಕು. ಹೇಗೆ ನಿಮ್ಮ ಕಾರ್ಯ ಪ್ರಣಾಳಿಕೆ?

ತಿಮ್ಮರಸು—ಪ್ರಭು, ದಂಡೋಪಾಯವಾದ ಯುದ್ಧವು ಅಂತ್ಯೋಪಾಯವಾಗಿರಲಿ. ಈಗ ಉತ್ಕಲೇಶನಿಗೆ ಒಂದು ಕೊನೆಯ ಪತ್ರವನ್ನು ಕಳುಹಿಸೋಣ. ಆತನ ಮಗಳು ಜಗನ್ಮೋಹಿನಿಯನ್ನು ವಿವಾಹ ಮಾಡಿಕೊಳ್ಳುವುದರ ಮೂಲಕ ಕರ್ನಾಟಾಂಧ್ರೈಕ್ಯಕ್ಕೆ ಆತನನ್ನು ಆಹ್ವಾನಿಸೋಣ

ಕೃಷ್ಣದೇವ—ಉದ್ಧಟನಿಗೆ ವಿನಯ ಪತ್ರ ಬರೆಯುವುದೆ?

ತಿಮ್ಮರಸು—ವಿನಯದ ಪತ್ರದಲ್ಲಿ ವೀರತ್ವವು ತುಂಬಿರುತ್ತದೆ ಪ್ರಭು.

ತಿಮ್ಮಣ್ಣ—ಭಾವೀ ಮಾವನವರಲ್ಲಿ ವಿನಯ ಪ್ರದರ್ಶನವು ಭೂಷಣವಲ್ಲವೆ!

ರಾಮಕೃಷ್ಣ—ಅತಿ ಭೂಷಣವೇ ಸ್ವೈ. ವಿನಯಂ ವೀರಭೂಷಣಂ. ಹೇಗಾದರೂ ತಿಳಿಯಾದ ಆಂಧ್ರವು ಕರ್ನಾಟಕ ಕಸ್ತೂರಿಯ ಪರಿಮಳವನ್ನು ಹೊಂದಿ,

ತಿಮ್ಮಣ್ಣ—ನಾ ವಿಷ್ಣು! ಪೃಥಿವೀ ಪತೇ, ಎಂಬಂತೆ ಶ್ರೀ ದೇವಿ ಭೂ ದೇವಿಯರೊಡನೆ ಮೆರೆಯುವ ಕೃಷ್ಣನಂತೆ, ಪಟ್ಟರಾಣಿ, ವಿಜಯರಾಣಿಯರೊಂದಿಗೆ ನಮ್ಮ ರಾಯನು ರಾರಾಜಿಸಲಿ!

ರಾಮಕೃಷ್ಣ—ತಥಾಸ್ತು ತಥಾಸ್ತು.

ದೃಶ್ಯ ೨ (ಪಂಪಾಲಯದ ಬಳಿಯ) ಒಂದು ಬೀದಿ. (ಸಮಯ ಸಂಜೆ ತಿಮ್ಮಣ್ಣ ಮತ್ತು ರಾಮಕೃಷ್ಣರು ಲೇಖನಿ-ಗ್ರಂಥಹಸ್ತರಾಗಿ ಮೇಲೆ ನೋಡಿಕೊಂಡು ವಿಚಾರ ಮಾಡುತ್ತಾ ಇದಿರು ಬದಿರಾಗಿ ಪ್ರವೇಶಿಸಿ ಮಧ್ಯ ರಂಗದಲ್ಲಿ ಢಿಕ್ಕಿಹೊಡೆದುಕೊಳ್ಳುವರು. ಕೋಪದಿಂದ ಒಬ್ಬರನೊಬ್ಬರು ದುರದುರನೆ ನೋಡಿಕೊಳ್ಳುವರು).

ತಿಮ್ಮಣ್ಣ—ಏನೋ ಇದು ರಾಮಕೃಷ್ಣ?

ರಾಮಕೃಷ್ಣ—ನೀನೇನಯ್ಯ ಮತ್ತೆ ತಿಮ್ಮಣ್ಣ? ಎಲ್ಲಿಟ್ಟಿದ್ದಿ ನಿನ್ನ ತಲೆ?

ತಿಮ್ಮಣ್ಣ—ನಾನೊಂದು ಕಾವ್ಯದಲ್ಲಿ ತಲೆಹಾಕಿದ್ದೇನೆ.

ರಾಮಕೃಷ್ಣ—ನಾನೂ ತಲೆಯಲ್ಲಿ ಕಾವ್ಯ ಹಾಕಿದ್ದೇನೆ.

ತಿಮ್ಮಣ್ಣ—ನಿನ್ನ ಕಾವ್ಯದ ವಸ್ತು?

ರಾಮಕೃಷ್ಣ—ನಮ್ಮ ರಾಯರ ಕಾರ್ಯಕಲಾಪವೇ.

ತಿಮ್ಮಣ್ಣ—ಭಲೇ! ನನಗೂ ಅದೇ ವಸ್ತುವಪ್ಪಾ!

ರಾಮಕೃಷ್ಣ—ಭಲೇ! ನಾನೂ ನೀನೂ ಒಂದೇ ಹಾಗಾದರೆ!

("ಒಂದೇ ಒಂದೇ, ಭಲೇ ಭಲೇ" ಎಂದು ಒಬ್ಬರನ್ನೊಬ್ಬರು ಅಪ್ಪಿಕೊಳ್ಳುವರು ಒಬ್ಬರ ತಲೆಯನ್ನೊಬ್ಬರು ತಡವಿ "ನೋವು ಹೋಯಿತೆ?" "ಹೋಯಿತು" ಎಂದುಕೊಳ್ಳುವರು)

ರಾಮಕೃಷ್ಣ—(ತಲೆ ತುರಿಸಿಕೊಳ್ಳುತ್ತ) ಆದರೆ ಪರಿಣಾಮ ತಿಳಿಯದೆ ಕಾವ್ಯರಚನೆ ಮಾಡುವುದು ಹೇಗೆ?

ತಿಮ್ಮಣ್ಣ—(ತಲೆತುರಿಸಿ) ಹೌದ್ ಹೌದು. ರಾಯನ ಮನಸ್ಸೆಲ್ಲಾ ಇರುವುದು ಚಿನ್ನಾ ದೇವಿಯ ಮೇಲೆ. ಅವನ ಪ್ರೇಮಶಕ್ತಿ, ಧರ್ಮಶಕ್ತಿ ಎಲ್ಲಾ ಅವಳೇ. ಅವಳ ಕುಲಗೋತ್ರ ಗೊತ್ತಾಗದಿರುವುದರಿಂದ ಪಟ್ಟದ ರಾಣಿಯಾಗಿ ಮಾಡಲಾಗುವುದಿಲ್ಲ. ಏನೋ ತಿಮ್ಮರಸರ ಒತ್ತಾಯಕ್ಕೇ ಜಗನ್ಮೋಹಿನಿಯನ್ನು ವರಿಸಲು ಒಪ್ಪಿಕೊಂಡಿದ್ದಾನೆ ರಾಯ.

ರಾಮಕೃಷ್ಣ—ಚಿನ್ನಾದೇವಿಯ ಹಸ್ತರೇಖೆಯೇನೋ ಅವಳು ರಾಣಿಯಾಗುತ್ತಾಳೆನ್ನುತ್ತಿದೆ. ಯಾವ ಚಕ್ರಾಧಿಪತ್ಯಕ್ಕೋ?

ತಿಮ್ಮಣ್ಣ—ದೇವಿ ಅದನ್ನು ಹೇಳದಿದ್ದರೂ, ವಿಜಯನಗರ ಚಕ್ರಾಧಿಪತ್ಯಕ್ಕೆಂದೇ ನನ್ನ ಊಹೆ.

ರಾಮಕೃಷ್ಣ—ನಿನ್ನ ಊಹೆ ನಡೆಯದಂತೆ ತಿಮ್ಮರಸರು ಚಿನ್ನಾದೇವಿಯ ಮೇಲೆ ಹಾಕಲು ಕಲ್ಲು ಎತ್ತಿಕೊಂಡು ನಿಂತಿದ್ದಾರಲ್ಲ!

ತಿಮ್ಮಣ್ಣ—ರಾಯನು ತಿಮ್ಮರಸರನ್ನು ಪಿತೃ ಸಮಾನವಾಗಿ ಭಾವಿಸಿದ್ದರಿಂದಲೇ ತಿಮ್ಮರಸರ ಕೈ ಹಾಗೆ ಮೇಲೆ ನಿಂತಿದೆ.

ರಾಮಕೃಷ್ಣ—ಅಂತೂ ಪರಿಣಾಮ ತಿಳಿಯದೆ ಕಾವ್ಯವನ್ನು ಮುಂದುವರಿಸುವಂತಿಲ್ಲ ಬಿಡು.

ತಿಮ್ಮಣ್ಣ—ಬಿಡು ಸದ್ಯ ರಾಮಕೃಷ್ಣ. ಪಂಪಾತೀರ್ಥಕ್ಕೆ ಹೋಗಿ ಒಂದಿಷ್ಟು ಸಂಧ್ಯಾವಂದನೆಯನ್ನಾದರೂ ಮಾಡೋಣ.

ರಾಮಕೃಷ್ಣ—ಒಂದಿಷ್ಟೇಕೆ? ನಾವ ಕಾಶಕಾಗಿ ತುಂಬಾ ಮಾಡಬಹುದು.

ಓಂ ಶುಕ್ಲಾಂಬರಧರ—

(ಅತ್ತ ನೋಡಿದ ತಿಮ್ಮಣ್ಣ ಥಕ್ಕನೆ ರಾಮಕೃಷ್ಣನ ಬಾಯಿ ಮುಚ್ಚಿ)

ತಿಮ್ಮಣ್ಣ—ಶ್ಶೂ, ನಿಲ್ಲಿಸು. ನಮ್ಮ ಗುರು ತಿಮ್ಮರಸರು ಈ ಕಡೆಗೇ ಹೊರಟಿದ್ದಾರೆ.

ರಾಮಕೃಷ್ಣ—ಎಲ್ಲಿಗೋ ಸವಾರಿ? ಸಂಧ್ಯಾವಿಹಾರವೇನೋ?

ತಿಮ್ಮಣ್ಣ—ಮಹಾ ಮಂತ್ರಿಗೆ ವಿಹಾರವೆಲ್ಲಿ ಬಂತು? ಅವರು ಉಸಿರುಬಿಟ್ಟರೂ ಏನೋ ಕಾರ್ಯಕ್ಕಾಗಿಯೇ. ಈಗ ನಾವು ಅವರ ಕಣ್ಣಿಗೆ ಬಿದ್ದರೆ ನಮಗೆ ಮತ್ತೆ ಸ್ವೇಚ್ಛೆಯಿಲ್ಲ.

ರಾಮಕೃಷ್ಣ—ಅಡಗೋಣ. (ಇಬ್ಬರೂ ತುಸ ಒಳಗೆ ಹೋಗುವರು.) ತಿಮ್ಮರಸು (ಯೋಚಿಸುತ್ತ ಪ್ರವೇಶಿಸಿ) ಹುಂ, ಇದಕ್ಕೆ ತಡೆ ಹಾಕಲೇ ಬೇಕು. ಯಾವ ಕೇ ಕುಲಗೋತ್ರಗಳಿಲ್ಲದ, ಆ ತಾಯಿ

(೧೧ನೇ ಪುಟ ನೋಡಿರಿ)

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಜಾಹೀರಾತು ದರಗಳು.
ನಿಯಮಿತ (ಕಂಟ್ರಾಕ್ಟ್) ರೂ.
ಕಲಂ ಸೆಂಟಿಮೀಟರಿಗೆ 1-00
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ 1 50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾ ಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮಾ ಮಾಡುವ ಸೌಕರ್ಯವಿರುವುದು.

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3 ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)
ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.
(ಶೆಡ್ಯೂಲ್ಡ್ ಬ್ಯಾಂಕ್)
ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ಆತ್ಮಶೋಧನೆಗೊಂದು ಅವಕಾಶ

ದಕ್ಷಿಣ ಕನ್ನಡಿಗರ ವಿಶಿಷ್ಟ ಪದ್ಧತಿಗಳು

ಶ್ರೀ ವಿ. ವಿ. ಶೆಟ್ಟಿ, ಪೂನಾ

ದಕ್ಷಿಣ ಕನ್ನಡವು ಮೈಸೂರು ರಾಜ್ಯಕ್ಕೆ ಸೇರಿದ, ಅರಬೀ ಸಮುದ್ರ ತೀರದ ಒಂದು ಚಿಕ್ಕ ಜಿಲ್ಲೆಯಾದರೂ ಇದರ ಹೆಸರು ನಮ್ಮ ದೇಶದ ಎಲ್ಲಾ ಕಡೆಗಳಲ್ಲಿ ಪ್ರಖ್ಯಾತಿಪಟ್ಟಿರುವುದಲ್ಲದೆ ಹಲವಾರು ಪರದೇಶಗಳಲ್ಲಿ ಕೂಡಾ ವ್ಯಾಪಿಸಿದೆಯೆಂದರೆ ಆಶ್ಚರ್ಯವಾಗಬಹುದು. ದಕ್ಷಿಣಕನ್ನಡ ಜಿಲ್ಲೆಯು ಇಷ್ಟೊಂದು ಪ್ರಸಿದ್ಧಿ ಪಡೆಯಲು ಮುಖ್ಯವಾಗಿ ಎರಡು ಕಾರಣಗಳು—ಮಂಗಳೂರು ಹಂಚು ಮತ್ತು ಉಡುಪಿ ಹೋಟೇಲು.

ನಮ್ಮ ದೇಶದಲ್ಲಿ ಹಂಚು ತಯಾರಿಯಲ್ಲಿ ಪಶ್ಚಿಮ ಕರಾವಳಿಯು ಪ್ರಥಮ ಸ್ಥಾನವನ್ನು ಗಳಿಸಿದೆ ಆದರಲ್ಲೂ ಮಂಗಳೂರು ಹಂಚಿನ ಹೆಸರನ್ನು ಕೇಳದವರು ವಿರಳ. ಭಾರತದಲ್ಲಿ ಮಾತ್ರವಲ್ಲದೆ ಆಫ್ರಿಕ, ಸಿಲೋನ್, ಆಸ್ಟ್ರೇಲಿಯಾ ಮೊದಲಾದ ಪರದೇಶಗಳಿಗೂ ಇಲ್ಲಿಯ ಹಂಚುಗಳು ಹಲವಾರು ವರ್ಷಗಳಿಂದ ಕಳುಹಿಸಲ್ಪಡುತ್ತಿದ್ದುವು. ಬೇರೆ ಕಡೆಗಳಲ್ಲಿ ತಯಾರಾಗುವ ಹಂಚುಗಳು ಕೂಡಾ ಮಂಗಳೂರ ಹೆಸರಿನಲ್ಲಿ ಮಾರಲ್ಪಡುತ್ತಿರುವುದು ಇದರ ಪ್ರಖ್ಯಾತಿಯನ್ನು ವ್ಯಕ್ತಪಡಿಸುತ್ತದೆ. ಆದರೂ ದಕ್ಷಿಣ ಕನ್ನಡ ಜಿಲ್ಲೆಗೆ ಬಂದ ಪ್ರಶಸ್ತಿ ತರಲು ಹಂಚಿಗಿಂತಲೂ ಹೋಟೇಲೇ ಮುಖ್ಯ ಕಾರಣವೆನ್ನಬಹುದು. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ "ಉಡುಪಿ ಹೋಟೇಲು" ತನ್ನದೇ ಆದ ಒಂದು ಸಾಮ್ರಾಜ್ಯವನ್ನು ಕಟ್ಟಿದೆಯೆಂದರೆ ಮೊಗಲ್ ಮಹಾರಾಜರಾದ ಅಕ್ಬರ್ ಮತ್ತು ಔರಂಗಜೇಬರೂ ಕೂಡಾ ತಲೆ ತಗ್ಗಿಸಬೇಕು. ನಾನೊಮ್ಮೆ ಯೂನಿಯನ್ ಪಬ್ಲಿಕ್ ಸರ್ವಿಸಿನ (UPSC) ಇಂಟರ್‌ವ್ಯೂನಿಗೆ ಹೋದಾಗ ನನ್ನ ಊರು ಉಡುಪಿಯೆಂದು ಹೇಳಿದ ಕೂಡಲೇ ಕಮಿಟಿಯ ಛೈಯರ್‌ಮೇನರು ಆಶ್ಚರ್ಯವನ್ನು ವ್ಯಕ್ತಪಡಿಸಿ ಬೇರಾವ ಪ್ರಶ್ನೆಯನ್ನೂ ಕೇಳದೆ "ಹೇಳಿ, ಈ ಉಡುಪಿ ಹೋಟೇಲಿನ ಗುಟ್ಟೇನು?" ಎಂದು ಕೇಳಿದ್ದರು. ಉಡುಪಿ ಹೋಟೇಲಿನ ಕುರಿತು ಹಲವಾರು ತಮಾಷೆಯ ಕಥೆಗಳು ಹುಟ್ಟಿವೆ.

ಟೇನ್‌ಸಿಂಗರು ಗೌರಿಶಂಕರ ಪರ್ವತದ ತುದಿಯನ್ನು ಏರಿದಾಗ ಅವರು ಅಲ್ಲಿ ಮೊದಲು ಕಂಡದ್ದು ಒಬ್ಬ ಉಡುಪಿ ಬ್ರಾಹ್ಮಣನು ಚಹಾ ಮಾಡುತ್ತಿರುವುದನ್ನಂತೆ. ಲಂಡನ್, ವಾಶಿಂಗ್‌ಟನ್ ಮೊದಲಾದ ಪಟ್ಟಣಗಳಲ್ಲಿ ಉಡುಪಿ ಹೋಟೇಲುಗಳು ಇತ್ತೀಚೆಗೆ ತಲೆಯೆತ್ತಿವೆಯೆಂದೂ ಇದರಿಂದಾಗಿ ಅಲ್ಲಿಯ ಜನರು ಇನ್ನು ಕಾಲಕ್ರಮೇಣ ತಮ್ಮ ದೇಶವು ಭಾರತದ ವಸಾಹತೆನ್ನುವ ಭಯವನ್ನು ವ್ಯಕ್ತಪಡಿಸುತ್ತಿದ್ದಾರೆನ್ನುವ ಕಥೆಗಳೂ ಕೇಳಿ ಬರುತ್ತಿವೆ.

ಈಗೀಗ ಇನ್ನೊಂದು ವಿಭಾಗದಲ್ಲಿ ಕೂಡಾ ದಕ್ಷಿಣ ಕನ್ನಡವು ಮುಂದೆ ಬಂದಿದೆ, ಇದು ಬೇಂಕು ವ್ಯವಹಾರದಲ್ಲಿ. ಇಲ್ಲಿ ಹುಟ್ಟಿ ಬಂದಷ್ಟು ಬೇಂಕುಗಳು ಬೇರಾವ ಜಿಲ್ಲೆಯಲ್ಲಿಯೂ ಉದ್ಭವಿಸಿರಲಿಕ್ಕಿಲ್ಲವೆಂದರೆ ತಪ್ಪಾಗದು. ಬರೇ ಸಂಖ್ಯೆಯಲ್ಲಿ ಮಾತ್ರವಲ್ಲದೆ ಅವುಗಳು ಒಳ್ಳೇ ರೀತಿಯಲ್ಲಿ ಬೆಳೆದು ಬರುತ್ತಿರುವುದು ಒಂದು ಹೆಮ್ಮೆಯ ವಿಷಯ. ಮುಖ್ಯವಾಗಿ ಕೆನರಾ ಬೇಂಕು ಮತ್ತು ಸಿಂಡಿಕೇಟ್ ಬೇಂಕುಗಳು ದಕ್ಷಿಣ ಹಿಂದೂದೇಶದ ಎಲ್ಲೆಡೆಗಳಲ್ಲಿ ತಮ್ಮ ಶಾಖೆಗಳನ್ನು ಸ್ಥಾಪಿಸಿ ಹೆಸರು ಗಳಿಸಿವೆ.

ಒಬ್ಬ ಮೈಸೂರಿನ ದೃಷ್ಟಿಯಲ್ಲಿ ನೋಡಿದರೆ ಇನ್ನೂ ಹಲವಾರು ರೀತಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯು ಹೆಸರು ಪಡೆದಿದೆ. ಇಲ್ಲಿಯ ವಿದ್ಯಾಮಟ್ಟವು ಬಹಳ ಮೇಲಿದೆ; ಇಲ್ಲಿದ್ದಷ್ಟು ಶಾಲಾ ಕಾಲೇಜುಗಳು ಬೇರೆ ಜಿಲ್ಲೆಗಳಲ್ಲಿಲ್ಲವೆನ್ನಬಹುದು. ಸರಕಾರಿ ನೌಕರಿಯಲ್ಲಿಯೂ ಸ್ವಂತ ಉದ್ಯೋಗದಲ್ಲಿಯೂ ಇಲ್ಲಿಂದ ಬೇರೆ ಕಡೆಗಳಿಗೆ ಹೋಗಿರುವ ಜನರು ಬಹಳ. ಉದಾಹರಣೆಗಾಗಿ ಕೆಲವು ವರ್ಷಗಳಿಂದ ದಕ್ಷಿಣ ಕನ್ನಡದಿಂದ ಮಲೆನಾಡಿಗೆ ಹೋಗಿ ಡಾಕ್ಟರರಾಗಿಯೋ, ವ್ಯಾಪಾರದಲ್ಲಿಯೋ ನೆಲೆಸುತ್ತಿರುವವರ ಸಂಖ್ಯೆ ಹೆಚ್ಚುತ್ತಿದೆ. ಇದನ್ನು ನೋಡಿ ಕೆಲವರಿಗೆ ಆಶ್ಚರ್ಯವಾದರೆ ಇನ್ನು ಕೆಲವರಿಗೆ ಅಸೂಯೆಯೂ ಉಂಟಾಗುವುದು ಸ್ವಾಭಾವಿಕ. ಯಾಕೆಂದರೆ ದಕ್ಷಿಣಕನ್ನಡದ ಜನರು ತಾವು ಹೊಂದಿಕೊಂಡ ಉದ್ಯೋಗದಲ್ಲಿ ಚೆನ್ನಾಗಿ ದುಡಿದು, ಹೆಸರನ್ನೂ ಹಣವನ್ನೂ ಗಳಿಸುತ್ತಾರೆ.

ಇದಕ್ಕೆಲ್ಲ ಕಾರಣವೇನಿರಬಹುದು? ದಕ್ಷಿಣಕನ್ನಡದ ಜನರು ತಮ್ಮ ಊರಿಗೆ ಬೇರೆಯವರನ್ನು ಬರಲು ಅವಕಾಶಕೊಡದೆ ಇತರ ಜಿಲ್ಲೆಗಳಿಗೋ ಪ್ರಾಂತಗಳಿಗೋ ಹೋಗಿ ದುಡಿದು ದುಡ್ಡು ಗಳಿಸುವ ವಸಾಹತುಗಾರರೇ ಅಥವಾ ನಾಗರಿಕತೆಯನ್ನು ಹೊಂದಿದ ದರೋಡೆಗಾರರೇ! ಇಲ್ಲಿಯ ಜನರು ಇತರ ಊರಿನವರಿಗಿಂತ ನಿಜವಾಗಿಯೂ ಕಷ್ಟಸಹಿಷ್ಣುಗಳೇ, ಬುದ್ಧಿವಂತರೇ ಅಥವಾ ಚಾಣಾಕ್ಷತೆ ಹೊಂದಿದ ಮೋಸಗಾರರೇ? ಈ ಪ್ರಶ್ನೆಗಳನ್ನು ನಮ್ಮಲ್ಲಿ ನಾವೇ ಕೇಳಿಕೊಳ್ಳುವುದು ಉತ್ತಮ. ಏಕೆಂದರೆ ನಮ್ಮಲ್ಲಿರುವ ಲೋಪದೋಷಗಳನ್ನು ತಿದ್ದಿಕೊಳ್ಳಲು ಅವು ಅವಕಾಶವನ್ನು ಕೊಡುತ್ತವೆ.

'ಎಲ್ಲವೂ ಹೊಟ್ಟೆಗಾಗಿ' ಎನ್ನುವಂತೆ ದಕ್ಷಿಣ ಕನ್ನಡಿಗರ ಎಲ್ಲಾ ಸಾಹಸಗಳೂ ಹೊಟ್ಟೆಯ ಹಸಿವನ್ನು ನೀಗಿಸಲಿಕ್ಕಾಗಿಯೆಂದರೆ ಅತಿಶಯೋಕ್ತಿಯಾಗಲಾರದು. ಕೇರಳದಂತೆ ಇಲ್ಲಿಯೂ ಜನಸಂಖ್ಯೆ ಬಹಳವಾಗಿದ್ದು ಭೂಮಿಯು ಕಡಿಮೆಯಿದ್ದುದರಿಂದ ಹಸಿದ ಹುಲಿಯು ಒಂದು ಕಾಡಿನಿಂದ ಇನ್ನೊಂದು ಕಾಡಿಗೆ ಬೇಟೆಯನ್ನು ಹುಡುಕಿ ಹೋಗುವಂತೆ ಇಲ್ಲಿಯ ಜನರು ಹೊಸ ಸ್ಥಳಗಳನ್ನೂ ಉದ್ಯೋಗಗಳನ್ನೂ ಹುಡುಕಿಕೊಂಡು ಹೋಗುತ್ತಿರುವುದು ಸಹಜವೆ. ಆದರೆ ಹಸಿದ ಪ್ರಾಣಿಗಳಲ್ಲಿಯೂ ಎರಡು ತೆರನಿರುತ್ತವೆ. ಒಂದು ತನ್ನ ಕೊಳ್ಳೆಯನ್ನು ಹುಡುಕಿಕೊಂಡು ಹೋಗುತ್ತದೆ. ಇನ್ನೊಂದು ಕೊಳ್ಳೆಯನ್ನೇ ಕಾದುಕೊಂಡು ಹಸಿದ ಹೊಟ್ಟೆಯನ್ನು ಒತ್ತಿಕೊಂಡು ಮಲಗುತ್ತದೆ. ದಕ್ಷಿಣ ಕನ್ನಡದ ಜನರು ಮೊದಲಿನ ಜಾತಿಗೆ ಸೇರಿದವರು—ಇದೇ ಅವರ ವೈಶಿಷ್ಟ್ಯ; ಇದರಿಂದಾಗಿಯೇ ಅವರು ಇಂದು ಮೇಲೇರುತ್ತಿದ್ದಾರೆ. ತನ್ನ ಕಾಡನ್ನು ಬಿಟ್ಟು ಬೇರೊಂದು ಕಡೆಗೆ ಹೋಗುವ ಪ್ರಾಣಿಗೆ ಧೈರ್ಯ ಬೇಕು. ಧೃಢತೆ ಬೇಕು!

ದಕ್ಷಿಣ ಕನ್ನಡಿಗರಿಗೆ ಧೈರ್ಯವಿದೆ, ಧೃಢತೆಯಿದೆ. ಆದರೆ ದುರ್ದೈವವಶಾತ್ ಅವರಿಗೆ ಹೆಮ್ಮೆಯೂ ಇದೆ. ತಾವು ಬುದ್ಧಿವಂತರೆಂಬುದು ಅವರ ತಲೆಗೆ ಹೊಕ್ಕಂತೆ ಕಾಣುತ್ತದೆ. ಇದು ಮಾತ್ರ ಒಳ್ಳೇ ಸೂಚನೆಯಲ್ಲ. ಇದರಿಂದಾಗಿ ಕೆಲವು ಕಡೆಗಳಲ್ಲಿ ಅವರು ಗಳಿಸಿದ ಒಳ್ಳೇ ಹೆಸರಿನ ಜೊತೆಗೆ ಕೆಟ್ಟ ಹೆಸರೂ ಬಂದಿದೆ. ಬೊಂಬಾಯಿಯಲ್ಲಿ ಕೆಲವರು ದಕ್ಷಿಣ ಕನ್ನಡದವರು ಗೂಂಡರೆನ್ನುವ ಅಭಿಪ್ರಾಯವನ್ನೂ ಹೊಂದಿದ್ದಾರೆ.

ಉಡಿಗೆ ತೊಡಿಗೆಯಲ್ಲಿ ಅಭಿರುಚಿ, ಸ್ವಚ್ಛತೆ ಮತ್ತು ಇವುಗಳಿಗೆ ದಕ್ಷಿಣಕನ್ನಡಿಗರು ಹೆಸರು ಪಡೆದಿದ್ದಾರೆ. ಅವರ ಇಂಗ್ಲೀಷಿನ ಮಟ್ಟ ಕೂಡಾ ಬಹಳ ಉತ್ತಮವಾದುದೆಂದು ಹೊರಗಿನವರು ಒಪ್ಪುತ್ತಾರೆ. ಅಂದ ಮಾತ್ರಕ್ಕೆ ಅದನ್ನು ವಿಪರೀತಕ್ಕೆಳೆಯಬಾರದು. ಮಂಗಳೂರು ಚಿಕ್ಕ ನಗರವಾದರೂ ಬೊಂಬಾಯಿಯಲ್ಲಿನ ವಸ್ತುಗಳನ್ನೂ ಫ್ಯಾಶನನ್ನೂ ಕಾಣಬಹುದು. ಚಿಕ್ಕದೊಂದು ಉದಾಹರಣೆ: ಏಳೆಂಟು ಲಕ್ಷ ಜನರಿರುವ ಪೂನಾ ನಗರದ ದೊಡ್ಡ ಹೋಟೇಲುಗಳಲ್ಲಿ ಕೂಡಾ ಕ್ಲೀನಿಂಗ್ ಮತ್ತು ಸಪ್ಲೈ ಕೆಲಸ ಒಬ್ಬನೆ ಮಾಡುತ್ತಾನೆ. ಇದು ಮಿತವ್ಯಯದ ದೃಷ್ಟಿಯಿಂದ ಹಿತಕರವಾಗಿಲ್ಲದಿರಬಹುದು, ಆದರೂ ಅನುಕೂಲತೆಯ ದೃಷ್ಟಿಯಿಂದ ಸರಿಯಾಗಿದೆ. ಮಂಗಳೂರಲ್ಲಿ ಮಾತ್ರ ಚಿಕ್ಕದೊಂದು ಹೋಟೇಲಿನಲ್ಲಿ ಕೂಡಾ ನೀರು ಕೊಡುವವನೇ ಬೇರೆ, ತಿಂಡಿ ಕೊಡುವ ಮಹಾನುಭಾವನೇ ಬೇರೆ ಮತ್ತು ಕಾಫಿ ಕೊಡುವ ಜನವೇ ಆತನ ಬಿಡುತ್ತು, ರೀತಿ ಇದ್ದು ಬೇರೆ. ಹೀಗಾಗಿ ಹಲವು ಸಮಯ ನಮಗೆ ಬೇಕಾದ ತಿಂಡಿ ತಿಂದು ನೀರಡಿಕೆ ಆದರೆ ಬಿಸಿ ಕಾಫಿಯೇ ಗತಿಯಾಗಿದೆ; ನೀರು ಸಿಗದು; ಅಥವಾ ಕೆಲವ ವೇಳೆ ಕಾಫಿ ಸಿಕ್ಕಿ ಹೋದರೂ ತಿಂಡಿ ಸಿಗಲಾರದು. ಇಷ್ಟು ಮಾತ್ರವಲ್ಲದೆ ಹೀಗೇಕೆಂದು ವಿಚಾರಿಸಿದರೆ ಉತ್ತರ ಕೂಡಾ ಸಿಗಲಾರದ! ಮೈಸೂರು ಪ್ರಾಂತದ ಇತರ ಕಡೆಯ ಜನರು ಎಷ್ಟು ವಿದ್ಯಾವಂತರಿದ್ದರೂ ಪರಿಚಿತರು ಅಥವಾ ಸಂಬಂಧಿಕರು ಒಟ್ಟು ಸೇರಿದಾಗ ಹೆಚ್ಚಾಗಿ ಕನ್ನಡದಲ್ಲೇ ಮಾತಾಡುತ್ತಾರೆ. ದಕ್ಷಿಣ ಕನ್ನಡಿಗರಿಗೆ ಇದು ಕೀಳು ನಡತೆಯಾಗಿ ತೋರುವದಿದೆ. ನಾವು ಮನೆಯಲ್ಲಿ ಅಣ್ಣ ತಮ್ಮಂದಿರು ಕೂಡಾ ಇಂಗ್ಲೀಷಿನಲ್ಲೇ ಸಂಭಾಷಿಸುತ್ತೇವೆ. ಇಂಗ್ಲೀಷು ಬಾರದ ನಮ್ಮೂರಿನ ಮುದುಕರೊಬ್ಬರು "This my son and this my thamma's son' ಎಂತ ಹೇಳಿದ್ದು ನಿಜವಿರಬೇಕು. ದಕ್ಷಿಣ ಕನ್ನಡಕ್ಕೆ ಮೈಸೂರು ಪ್ರಾಂತದಲ್ಲಿ ತನ್ನದೇ ಆದ ಒಂದು ಮುದ್ರೆ ಸ್ಥಾನವಿದೆ. ಇಲ್ಲಿಯ ಕನ್ನಡ ಬೇರೆ ಕಡೆಗಳಂತೆ ತೆಲುಗು, ತಮಿಳು ಅಥವಾ ಮರಾಠಿ ಬೆರಕೆಯಾಗದೆ ಬಹುಮಟ್ಟಿಗೆ ಶುದ್ಧವಾಗಿದೆಯೆನ್ನಬಹುದು. ಇಲ್ಲಿನ ಯಕ್ಷಗಾನ ಬಯಲಾಟಕ್ಕೆ ತಡವಾಗಿಯಾದರೂ ಈಗ ಹೊರಗಿನವರಿಂದ ಆದರವಾದ ಮನ್ನಣೆ ಸಿಗುತ್ತಿದೆ. ಇವು ಹೆಮ್ಮೆಯ ವಿಷಯವಾದರೂ ಇದರಿಂದ ನಾವು ಮೈಮರೆಯಬಾರದು. ಬೇರೆಯವರಿಂದ ನಾವೂ ಕಲಿಯತಕ್ಕ ವಿಷಯಗಳಿವೆಯೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳುವುದು ಆವಶ್ಯಕ. ಉದಾಹರಣೆಯಾಗಿ, ನಮ್ಮೂರ ಹೆಂಗಸರು ಅಡಿಗೆ ಕೆಲಸದಲ್ಲಿ ಇತರರಿಗಿಂತ ಮುಂದುವರಿದಿರಬಹುದು; ಆದರೆ ಮೈಸೂರು, ಬೆಂಗಳೂರು ಮೊದಲಾದ ಕಡೆಗಳಲ್ಲಿಯ ಹೆಂಗಸರ ಸಮ್ಮತಿ ಕಲಾ ಕಲೆಯ ಮೇಲಿನ ಪ್ರೇಮ ಮತ್ತು ಕೌಶಲ್ಯವನ್ನು ನಮ್ಮೂರ ಹೆಂಗಸರು ಕಲಿತುಕೊಳ್ಳಬೇಕು. ಪರ ಊರಲ್ಲಿರುವ ನಮ್ಮ ಜನರು ತಮ್ಮದೇ ಆದ ಚಿಕ್ಕ ಸಂಘ ಸಂಸ್ಥೆಗಳನ್ನು ಸ್ಥಾಪಿಸುವ ಬದಲು ಇತರರೊಡನೆ ಬೆರೆತು ಬಾಳಲು ಕಲಿಯುವುದು ಉತ್ತಮ.

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ.......
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ

1—1—1963ರಿಂದ ಠೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ

ನಿಮ್ಮ ಉಳಿತಾಯದ ಸೇವಿಂಗ್, ಫಿಕ್ಸೆಡ್, ರಿಕರಿಂಗ್ ಮತ್ತು ನಿರಖು ಠೇವಣಾತಿಗಳ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯವಿಟ್ಟು ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.



ಐತಿಹಾಸಿಕ ನಾಟಕ

ಗಜಪತಿ ನಂದಿನಿ

ಬರೆದವರು: "ನವಗಿರಿನಂದ'

ಅಂಕ—I

ದೃಶ್ಯ ೧. ಕೃಷ್ಣದೇವರಾಯನ ಒಡ್ಡೋಲಗ. ಹಗಲು ಹೊತ್ತು (ರಾಯನು ಸಿಂಹಾಸನದಲ್ಲಿ ಮಂಡಿಸಿರುತ್ತಾನೆ. ಒಂದು ಬದಿಯಲ್ಲಿ ಮಂತ್ರಿ ತಿಮ್ಮರಸನೂ, ಇನ್ನೊಂದು ಬದಿಯಲ್ಲಿ ಸೇನಾಧಿಪತಿಗಳಾದ ಜಯರಾಮ, ರಾಮಲಿಂಗ ನಾಯಕರೂ ಕುಳಿತಿದ್ದಾರೆ ತಿಮ್ಮಣ್ಣ ರಾಮಕೃಷ್ಣ ಕವಿಗಳು ಓಲೆಯ ಪುಸ್ತಕಗಳನ್ನು ಹಿಡಿದುಕೊಂಡು ಇದಿರು ಬದಿರಾಗಿ ಕುಳಿತಿದ್ದಾರೆ. ಸಭೆಯ ಉಭಯ ಪಾರ್ಶ್ವಗಳಲ್ಲಿ ವೈತಾಳಿಕರು ನಿಂತಿದ್ದಾರೆ ರಾಯನ ಸಿಂಹಾಸನದ ಅಕ್ಕಪಕ್ಕಗಳಲ್ಲಿ ಚಾಮರದವರು ನಿಂತುಕೊಂಡು ಗಾಳಿ ಬೀಸುತಿದ್ದಾರೆ ಪರದೆ ಯೇಳುವಾಗ ಸುಪ್ರಭಾತದ ಹಿನ್ನೆಲೆಯ ಶೃತಿಯಲ್ಲಿ ವೈತಾಳಿಕರು ರಾಯನನ್ನು ಕೀರ್ತಿಸುತ್ತಾರೆ.)

ವೈತಾಳಿಕರು—ಜಯತುಳು ವಂಶಾಬ್ಧಿ ಚಂದ್ರಾ! ಜಯ ವೀರ ಕ್ಷತ್ರಿಯ ಶ್ರೀ ನರಸರಸ ರಾಜಕುಲದೀಪಕಪುತ್ರಾ! ಜಯ ವಿದ್ಯಾನಗರ ರತ್ನ ಸಿಂಹಾಸನಾಧೀಶ್ವರಾ! ಜಯ ಕರ್ನಾಟಕ ರಾಜ್ಯರಮಾರಮಣಾ! ಜಯ ಆಂಧ್ರಭೋಜಾ! ವಿಜಯನಗರ ವಿಸ್ತಾರ ಸಾಮ್ರಾಜ್ಯಸಾರ್ವಭೌಮಾ! ಜಯ ಜಯಾ!

ಕೃಷ್ಣದೇವರಾಯ—ತಿಮ್ಮರಸು ಮಂತ್ರೀಶರೆ, ನಮ್ಮ ಉತ್ಸಾಹಕ್ಕೆ ಹಿತಚಿಂತಕರ ಪ್ರೋತ್ಸಾಹವೂ, ನಿಮ್ಮ ಮಂತ್ರಾಲೋಚನೆಯ ಬೆಂಬಲವೂ ಎಲ್ಲಕ್ಕೂ ಮೇಲೆ ಶ್ರೀ ಪಂಪಾ ವಿರೂಪಾಕ್ಷನ ಕೃಪಾಕಟಾಕ್ಷವೂ ಸೇರಿದುದರ ಫಲವಾಗಿ ನಾವು ಕೈಕೊಂಡ ದಕ್ಷಿಣ ದಿಗ್ವಿಜಯವು ನೆರವೇರಿತು. ಕನ್ಯಾಕುಮಾರಿಯವರೆಗಿರುವ ದಕ್ಷಿಣಭಾರತವೆಲ್ಲವೂ ವಿಜಯನಗರ ಸಾಮ್ರಾಜ್ಯಕ್ಕೆ ಅಧೀನವಾದುವು. ಇನ್ನು ನಾವು ಇಷ್ಟಕ್ಕೇ ತೃಪ್ತರಾಗಿ ಸುಮ್ಮನಿರಬೇಕೆ? ಅಥವಾ

ತಿಮ್ಮಣ್ಣ—ಸುಮ್ಮನಿರಬಾರದು ಪ್ರಭು. ಅಸಂತುಷ್ಟಾ ದ್ವಿಜಾ ನಷ್ಟಾಃ—

ರಾಮಕೃಷ್ಣ—ಹೌದೌದು. ಸಂತುಷ್ಟಾ ಇವ ಪಾರ್ಥಿವಾಃ—ಎಂದು ಹಿರಿಯರು ಮೊದಲೇ ಹೇಳಿಬಿಟ್ಟಿದ್ದಾರೆ.

ತಿಮ್ಮಣ್ಣ—ಅಂತೆಯೇ ಪ್ರಭುಗಳ ಮಾತನ್ನು ಕೇಳುವಾಗ ಮುಂದಿನ ಕಾರ್ಯವನ್ನು ಕುರಿತು ಅವರಿಗಿರುವ ಉತ್ಸಾಹವು ವ್ಯಕ್ತವಾಗುತ್ತದೆ.

ರಾಮಕೃಷ್ಣ—ಹೌದು. ಹೌದು. ಮುಂದಿನ ಕಾರ್ಯವೇನೆಂದು ಹಿಂದೆಯೇ, ರಾಯರ ಪಟ್ಟಾಭಿಷೇಕ ಕಾಲದಲ್ಲಿಯೇ ವ್ಯಕ್ತವಾಗಿ ಬಿಟ್ಟಿದೆ.

ತಿಮ್ಮಣ್ಣ—ಅದಕ್ಕೆ ತೀವ್ರಗಮನಕೊಡಲು ಇದುವೇ ಸರಿಯಾದ ಸಮಯ. ಅಲ್ಲವೇ ಮಂತ್ರೀಶರೆ?

ತಿಮ್ಮರಸು—(ಯೋಚಿಸುತ್ತ ತಲೆದೂಗಿ ಮುಗುಳ್ನಕ್ಕು ರಾಯನನ್ನು ನೋಡಿ) ರಾಜೇಂದ್ರಾ, ನಮ್ಮ ತಿಮ್ಮಣ್ಣ ರಾಮಕೃಷ್ಣರು ಸರಿಯಾದ ಸಮಯಕ್ಕೇ ಜ್ಞಾಪಿಸುತ್ತಿದ್ದಾರೆ. ಈ ಕನ್ನಡಾಂಧ್ರ ಕವಿಗಳು ಒಮ್ಮನಸ್ಸಿನವರಾಗಿರುವಂತೆ ಆಂಧ್ರ ಕರ್ನಾಟಕ ರಾಜ್ಯಗಳೂ ಸ್ನೇಹ ಸಂಬಂಧಗೊಳ್ಳಬೇಕೆಂಬುದೇ ನಮ್ಮ ಬಯಕೆ.

ಕೃಷ್ಣದೇವರಾಯ—ನಿಜ ಅಪ್ಪಾಜೀ, ಅಂದು ನಮ್ಮ ಪಟ್ಟಾಭಿಷೇಕ ಕಾಲದಲ್ಲಿ ನಮ್ಮ ಸಭೆಗೆ ಬಂದು ನನ್ನನ್ನೂ ನನ್ನ ಧರ್ಮಪತ್ನಿಯನ್ನೂ ಅವಮಾನ ಪಡಿಸಿ ಸಭೆಯಿಂದೆದ್ದು ಹೋದ ಆ ಪ್ರತಾಪರುದ್ರ ಗಜಪತಿಯ ಗರ್ವವನ್ನು ಇಳಿಸುವುದೀಗ ಪ್ರಥಮ ಕರ್ತವ್ಯ.

ತಿಮ್ಮಣ್ಣ—ಇದೀಗ ಉದಯಗಿರಿಯನ್ನು ವಶಪಡಿಸಿಕೊಂಡು, ವೀರರುದ್ರ ಗಜಪತಿಯನ್ನು ಕಾಡುಪಾಲು ಮಾಡಿದ್ದು ನೋಡಿಯೇ ಪ್ರತಾಪರುದ್ರನಿಗೆ ನಡುಕ ಪ್ರಾರಂಭವಾಗಿದ್ದೀತು.

ರಾಮ—ಇಲ್ಲ ತಿಮ್ಮಣ್ಣಾ, ಆಂಧ್ರವೀರರು ಅಷ್ಟು ಬೇಗ ಬಾಗಲಾರರು. ತನ್ನ ಕುಮಾರಿಯನ್ನು ನಮ್ಮ ರಾಯನಿಗೆ ವಿವಾಹಮಾಡಿಕೊಡಲು ಇನ್ನೂ ಒಪ್ಪಿಲ್ಲವಲ್ಲಾ!

ತಿಮ್ಮಣ್ಣ—ಆಂಧ್ರಕವಿ ರಾಮಕೃಷ್ಣಾ. ನಿನ್ನ ಆಂಧ್ರಾಭಿಮಾನಕ್ಕೆ ಧನ್ಯವಾದ ಆದರೆ ನಮ್ಮ ಕನ್ನಡರಾಯನು ಇಷ್ಟಕ್ಕೇ ವಿರಮಿಸುವವನಲ್ಲ; ತಿಳಿದಿರಲಿ.

ರಾಮಕೃಷ್ಣ—ಜೀ ಹಾಂ.

ಕೃಷ್ಣದೇವ—ಮಂತ್ರೀಶ ಅಪ್ಪಾಜೀ, ಇನ್ನೀಗ ಉತ್ಕಲ ಪ್ರಾಂತಕ್ಕೆ ನಮ್ಮ ಪೂರ್ಣ ಗಮನ ಹರಿಸಬೇಕು. ಹೇಗೆ ನಿಮ್ಮ ಕಾರ್ಯ ಪ್ರಣಾಳಿಕೆ?

ತಿಮ್ಮರಸು—ಪ್ರಭು, ದಂಡೋಪಾಯವಾದ ಯುದ್ಧವು ಅಂತ್ಯೋಪಾಯವಾಗಿರಲಿ. ಈಗ ಉತ್ಕಲೇಶನಿಗೆ ಒಂದು ಕೊನೆಯ ಪತ್ರವನ್ನು ಕಳುಹಿಸೋಣ. ಆತನ ಮಗಳು ಜಗನ್ಮೋಹಿನಿಯನ್ನು ವಿವಾಹ ಮಾಡಿಕೊಳ್ಳುವುದರ ಮೂಲಕ ಕರ್ನಾಟಾಂಧ್ರೀಯೈಕಮತ್ಯಕ್ಕೆ ಆತನನ್ನು ಆಹ್ವಾನಿಸೋಣ

ಕೃಷ್ಣದೇವ—ಉಗ್ಗಡಿಗೆ ವಿನಯ ಪತ್ರ ಒಪ್ಪುವುದೆ?

ತಿಮ್ಮರಸು—ವಿನಯದ ಪತ್ರದಲ್ಲಿ ವೀರತ್ವವು ತುಂಬಿರುತ್ತದೆ ಪ್ರಭು.

ತಿಮ್ಮಣ್ಣ—ಭಾವೀ ಮಾವಯ್ಯನವರಲ್ಲಿ ವಿನಯ ಪ್ರದರ್ಶನವು ಭೂಷಣವಲ್ಲವೆ!

ರಾಮಕೃಷ್ಣ—ಅತಿ ಭೂಷಣವೇ ಸೈ. ವಿನಯಂ ವೀರಭೂಷಣಂ. ಹೇಗಾದರೂ ತಿಳಿಯಾದ ಆಂಧ್ರವು ಕರ್ಣಾಟಕ ಕಸ್ತೂರಿಯ ಪರಿಮಳವನ್ನು ಹೊಂದಿ,

ತಿಮ್ಮಣ್ಣ—ನಾ ವಿಷ್ಣು! ಪೃಥಿವೀ ಪತೇ, ಎಂಬಂತೆ ಶ್ರೀ ದೇವಿ ಭೂ ದೇವಿಯರೊಡನೆ ಮೆರೆಯುವ ಕೃಷ್ಣನಂತೆ, ಪ್ರೇಮರಾಣಿ, ವಿಜಯರಾಣಿಯರೊಂದಿಗೆ ನಮ್ಮ ರಾಯನು ರಾರಾಜಿಸಲಿ!

ರಾಮಕೃಷ್ಣ—ತಥಾಸ್ತು ತಥಾಸ್ತು.

ದೃಶ್ಯ ೨ (ಪಂಪಾಲಯದ ಬಳಿಯ) ಒಂದು ಬೀದಿ. (ಸಮಯ ಸಂಜೆ ತಿಮ್ಮಣ್ಣ ಮತ್ತು ರಾಮಕೃಷ್ಣರು ಲೇಖಿನಿ-ಗ್ರಂಥಹಸ್ತರಾಗಿ ಮೇಲೆ ನೋಡಿಕೊಂಡು ವಿಚಾರ ಮಾಡುತ್ತಾ ಇದಿರು ಬದಿರಾಗಿ ಪ್ರವೇಶಿಸಿ ಮಧ್ಯ ರಂಗದಲ್ಲಿ ಢಿಕ್ಕಿಹೊಡೆದು ಕೊಳ್ಳುವರು. ಕೋಪದಿಂದ ಒಬ್ಬರನೊಬ್ಬರು ದುರದುರನೆ ನೋಡಿಕೊಳ್ಳುವರು).

ತಿಮ್ಮಣ್ಣ—ಏನೋ ಇದು ರಾಮಕೃಷ್ಣ?

ರಾಮಕೃಷ್ಣ—ನೀನೇನಯ್ಯಾ ಮತ್ತೆ ತಿಮ್ಮಣ್ಣ? ಎಲ್ಲಿಟ್ಟಿದ್ದಿ ನಿನ್ನ ತಲೆ?

ತಿಮ್ಮಣ್ಣ—ನಾನೊಂದು ಕಾವ್ಯದಲ್ಲಿ ತಲೆಹಾಕಿದ್ದೇನೆ.

ರಾಮಕೃಷ್ಣ—ನಾನೂ ತಲೆಯಲ್ಲಿ ಕಾವ್ಯ ಹಾಕಿದ್ದೇನೆ.

ತಿಮ್ಮಣ್ಣ—ನಿನ್ನ ಕಾವ್ಯದ ವಸ್ತು?

ರಾಮಕೃಷ್ಣ—ನಮ್ಮ ರಾಯರ ಕಾರ್ಯಕಲಾಪವೇ.

ತಿಮ್ಮಣ್ಣ—ಭಲೇ! ನನಗೂ ಅದೇ ವಸ್ತುವಪ್ಪಾ!

ರಾಮಕೃಷ್ಣ—ಭಲೇ! ನಾನೂ ನೀನೂ ಒಂದೇ ಹಾಗಾದರೆ!

("ಒಂದೇ ಒಂದೇ, ಭಲೇ ಭಲೇ" ಎಂದು ಒಬ್ಬರನ್ನೊಬ್ಬರು ಅಪ್ಪಿಕೊಳ್ಳುವರು ಒಬ್ಬರ ತಲೆಯನ್ನೊಬ್ಬರು ತಡವಿ "ನೋವು ಹೋಯಿತೆ?" "ಹೋಯಿತು" ಎಂದುಕೊಳ್ಳುವರು)

ರಾಮಕೃಷ್ಣ—(ತಲೆ ತುರಿಸಿಕೊಳ್ಳುತ್ತ) ಆದರ ಪರಿಣಾಮ ತಿಳಿಯದೆ ಕಾವ್ಯ ರಚನೆ ಮಾಡುವುದು ಹೇಗೆ?

ತಿಮ್ಮಣ್ಣ—(ತಲೆತುಂಬಿ) ಹೌದ್ ಹೌದ. ರಾಯನ ಮನಸ್ಸೆಲ್ಲಾ ಇರುವುದು ಚಿನ್ನಾ ದೇವಿಯ ಮೇಲೆ. ಅವನ ಪ್ರೇಮ ಪತ್ನಿ, ಧರ್ಮಪತ್ನಿ ಎಲ್ಲಾ ಅವಳೇ. ಅವಳ ಕುಲಗೋತ್ರ ಗೊತ್ತಾಗದಿರುವುದರಿಂದ ಪಟ್ಟದ ರಾಣಿಯಾಗಿ ಮಾಡಲಾಗುವುದಿಲ್ಲ. ಏನೋ ತಿಮ್ಮರಸರ ಒತ್ತಾಯಕ್ಕೇ ಜಗನ್ಮೋಹಿನಿಯನ್ನು ವರಿಸಲು ಒಪ್ಪಿಕೊಂಡಿದ್ದಾನೆ ರಾಯ.

ರಾಮಕೃಷ್ಣ—ಚಿನ್ನಾದೇವಿಯ ಹಸ್ತರೇಖೆಯೇನೋ ಅವಳು ರಾಣಿಯಾಗುತ್ತಾಳೆನ್ನುತ್ತಿದೆ. ಯಾವ ಚಕ್ರಾಧಿಪತ್ಯಕ್ಕೋ?

ತಿಮ್ಮಣ್ಣ—ರೇಖೆ ಅದನ್ನು ಹೇಳದಿದ್ದರೂ, ವಿಜಯನಗರ ಚಕ್ರಾಧಿಪತ್ಯಕ್ಕಂದೇ ನನ್ನ ಊಹೆ.

ರಾಮಕೃಷ್ಣ—ನಿನ್ನ ಊಹೆ ನಡೆಯದಂತೆ ತಿಮ್ಮರಸರು ಚಿನ್ನಾದೇವಿಯ ಮೇಲೆ ಹಾಕಲು ಕಲ್ಲು ಎತ್ತಿಕೊಂಡು ನಿಂತಿದ್ದಾರಲ್ಲ!

ತಿಮ್ಮಣ್ಣ—ರಾಯನು ತಿಮ್ಮರಸರನ್ನು ಪಿತೃ ಸಮಾನವಾಗಿ ಭಾವಿಸಿದ್ದರಿಂದಲೇ ತಿಮ್ಮರಸರ ಕೈ ಹಾಗೆ ಮೇಲೆ ನಿಂತಿದೆ.

ರಾಮಕೃಷ್ಣ—ಅಂತೂ ಪರಿಣಾಮ ತಿಳಿಯದೆ ಕಾವ್ಯವನ್ನು ಮುಂದುವರಿಸುವಂತಿಲ್ಲ ಬಿಡು.

ತಿಮ್ಮಣ್ಣ—ಬಿಡು ಸಧ್ಯ ರಾಮಕೃಷ್ಣ. ಪಂಪಾತೀರ್ಥಕ್ಕೆ ಹೋಗಿ ಒಂದಿಷ್ಟು ಸಂಧ್ಯಾವಂದನೆಯನ್ನಾದರೂ ಮಾಡೋಣ.

ರಾಮಕೃಷ್ಣ—ಒಂದಿಷ್ಟೇಕೆ? ಸಾವಕಾಶವಾಗಿ ತುಂಬಾ ಮಾಡಬಹುದು.

ಓಂ ಶುಕ್ಲಾಂಬರಧರ—

(ಅತ್ತ ನೋಡಿದ ತಿಮ್ಮಣ್ಣ ಥಟ್ಟನೆ ರಾಮಕೃಷ್ಣನ ಬಾಯಿ ಮುಚ್ಚಿ)

ತಿಮ್ಮಣ್ಣ—ಶ್ಶ್, ನಿಲ್ಲಿಸು. ನಮ್ಮ ಗುರು ತಿಮ್ಮರಸರು ಈ ಕಡೆಗೇ ಹೊರಟಿದ್ದಾರೆ.

ರಾಮಕೃಷ್ಣ—ಎಲ್ಲಿಗೋ ಸವಾರಿ? ಸಂಧ್ಯಾವಿಹಾರವೇನೊ?

ತಿಮ್ಮಣ್ಣ—ಮಹಾ ಮಂತ್ರಿಗೆ ವಿಹಾರವೆಲ್ಲಿ ಬಂತು? ಅವರು ಉಸಿರುಬಿಟ್ಟರೂ ಏನೋ ಕಾರ್ಯಕ್ಕಾಗಿಯೇ. ಈಗ ನಾವು ಅವರ ಕಣ್ಣಿಗೆ ಬಿದ್ದರೆ ನಮಗೆ ಮತ್ತೆ ಸ್ವೇಚ್ಛೆಯಿಲ್ಲ.

ರಾಮಕೃಷ್ಣ—ಅಡಗೋಣ. (ಇಬ್ಬರೂ ಈಚೆ ಬದಿಗೆ ಹೋಗುವರೆ) ತಿಮ್ಮರಸು (ಯೋಚಿಸುತ್ತ ಪ್ರವೇಶಿಸಿ) ಹುಂ, ಇದಕ್ಕೆ ತಡೆ ಹಾಕಲೇ ಬೇಕು. ಯಾವ ಕೋ ಕುಲಗೋತ್ರಗಳಿಲ್ಲದ, ಆ ತಾಯಿ

(೧೧ನೇ ಪುಟ ನೋಡಿರಿ)

ನವಯುಗ

ರಾಷ್ಟ್ರೀಯ ವಾರಪತ್ರಿಕೆ

ಉಡುಪಿ

ಜಾಹೀರಾತು ದರಗಳು:

ನಿಯಮಿತ (ಕಂಟ್ರಾಕ್ಟ್) ರೂ.
ಕಲಂ ಸೆಂಟಿಮೀಟರಿಗೆ 1-00
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ 1 50

ಚಂದಾ:

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾದಾರನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮಾ ಮಾಡುವ ಸೌಕರ್ಯವಿರುವುದು.

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕ್ಯಾಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3 ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ಆತ್ಮಶೋಧನೆಗೊಂದು ಅವಕಾಶ

ದಕ್ಷಿಣ ಕನ್ನಡಿಗರ ವಿಶಿಷ್ಟ ಪದ್ಧತಿಗಳು

ಶ್ರೀ ಪಿ. ವಿ. ಶೆಟ್ಟಿ, ಪೂನಾ

ದಕ್ಷಿಣ ಕನ್ನಡವು ಮೈಸೂರು ರಾಜ್ಯಕ್ಕೆ ಸೇರಿದ, ಅರಬೀ ಸಮುದ್ರ ತೀರದ ಒಂದು ಚಿಕ್ಕ ಜಿಲ್ಲೆಯಾದರೂ ಅದರ ಹೆಸರು ನಮ್ಮ ದೇಶದ ಎಲ್ಲಾ ಕಡೆಗಳಲ್ಲಿ ಪ್ರಖ್ಯಾತಿಪಟ್ಟಿರುವುದಲ್ಲದೆ ಹಲವಾರು ಪರದೇಶಗಳಲ್ಲಿ ಕೂಡಾ ವ್ಯಾಪಿಸಿದೆಯೆಂದರೆ ಆಶ್ಚರ್ಯವಾಗಬಹುದು. ದಕ್ಷಿಣಕನ್ನಡ ಜಿಲ್ಲೆಯು ಇಷ್ಟೊಂದು ಪ್ರಸಿದ್ಧಿ ಪಡೆಯಲು ಮುಖ್ಯವಾಗಿ ಎರಡು ಕಾರಣಗಳು—ಮಂಗಳೂರು ಹಂಚು ಮತ್ತು ಉಡುಪಿ ಹೋಟೇಲು.

ನಮ್ಮ ದೇಶದಲ್ಲಿ ಹಂಚು ತಯಾರಿಯಲ್ಲಿ ಪಶ್ಚಿಮ ಕರಾವಳಿಯು ಪ್ರಥಮ ಸ್ಥಾನವನ್ನು ಗಳಿಸಿದೆ ಆದರಲ್ಲೂ ಮಂಗಳೂರು ಹಂಚಿನ ಹೆಸರನ್ನು ಕೇಳದವರು ವಿರಳ. ಭಾರತದಲ್ಲಿ ಮಾತ್ರವಲ್ಲದೆ ಆಫ್ರಿಕ, ಸಿಲೋನ್, ಆಸ್ಟ್ರೇಲಿಯಾ ಮೊದಲಾದ ಪರದೇಶಗಳಿಗೂ ಇಲ್ಲಿಯ ಹಂಚುಗಳು ಹಲವಾರು ವರ್ಷಗಳಿಂದ ರಫ್ತಾಗಲ್ಪಡುತ್ತಿದ್ದವು. ಬೇರೆ ಕಡೆಗಳಲ್ಲಿ ತಯಾರಾಗುವ ಹಂಚುಗಳು ಕೂಡಾ ಮಂಗಳೂರ ಹೆಸರಿನಲ್ಲಿ ಮಾರಲ್ಪಡುತ್ತಿರುವುದು ಇದರ ಪ್ರಖ್ಯಾತಿಯನ್ನು ವ್ಯಕ್ತಪಡಿಸುತ್ತದೆ. ಅದರೂ ದಕ್ಷಿಣ ಕನ್ನಡ ಜಿಲ್ಲೆಗೆ ಹೆಚ್ಚಿನ ಪ್ರಶಸ್ತಿ ತರಲು ಹಂಚಿಗಿಂತಲೂ ಹೋಟೇಲೇ ಮುಖ್ಯ ಕಾರಣವೆನ್ನಬಹುದು. ಕಾಶ್ಮೀರದಿಂದ ಕನ್ಯಾಕುಮಾರಿಯ ವರೆಗೆ "ಉಡುಪಿ ಹೋಟೇಲು" ತನ್ನದೇ ಆದ ಒಂದು ಸಾಮ್ರಾಜ್ಯವನ್ನು ಕಟ್ಟಿದೆಯೆಂದರೆ ಮೊಗಲ್ ಮಹಾರಾಜರಾದ ಅಕ್ಬರ್ ಮತ್ತು ಔರಂಗಜೇಬರೂ ಕೂಡಾ ತಲೆ ತಗ್ಗಿಸಬೇಕು. ನಾನೊಮ್ಮೆ ಯೂನಿಯನ್ ಪಬ್ಲಿಕ್ ಸರ್ವಿಸಿಗೆ (UPSC) ಇಂಟರ್‌ವ್ಯೂವಿಗೆ ಹೋದಾಗ ನನ್ನ ಊರು ಉಡುಪಿಯೆಂದು ಹೇಳಿದ ಕೂಡಲೇ ಕಮಿಟಿಯ ಛೇರ್ಮನ್‌ರು ಆಶ್ಚರ್ಯವನ್ನು ವ್ಯಕ್ತಪಡಿಸಿ ಬೇರಾವ ಪ್ರಶ್ನೆಯನ್ನೂ ಕೇಳದೆ "ಹೇಳಿ, ಈ ಉಡುಪಿ ಹೋಟೇಲಿನ ಗುಟ್ಟೇನು?" ಎಂದು ಕೇಳಿದ್ದರು. ಉಡುಪಿ ಹೋಟೇಲಿನ ಕುರಿತು ಹಲವಾರು ತಮಾಷೆಯ ಕಥೆಗಳು ಹುಟ್ಟಿವೆ.

ತೇನ್‌ಸಿಂಗನು ಗೌರಿಶಂಕರ ಪರ್ವತದ ತುದಿಯನ್ನು ಏರಿದಾಗ ಅವನು ಅಲ್ಲಿ ಮೊದಲು ಕಂಡದ್ದು ಒಬ್ಬ ಉಡುಪಿ ಬ್ರಾಹ್ಮಣನು ಚಹಾ ಮಾಡುತ್ತಿರುವುದನ್ನಂತೆ! ಲಂಡನ್, ವಾಶಿಂಗ್‌ಟನ್ ಮೊದಲಾದ ಪಟ್ಟಣಗಳಲ್ಲಿ ಉಡುಪಿ ಹೋಟೇಲುಗಳು ಇತ್ತೀಚೆಗೆ ತಲೆಯೆತ್ತಿವೆಯೆಂದೂ ಇದರಿಂದಾಗಿ ಅಲ್ಲಿಯ ಜನರು ಸ್ವಲ್ಪ ಕಾಲ ಕ್ರಮೇಣ ತಮ್ಮ ದೇಶವು ಭಾರತದ ವಶವಾದೀತೆನ್ನುವ ಭಯವನ್ನು ವ್ಯಕ್ತಪಡಿಸುತ್ತಿದ್ದಾರೆನ್ನುವ ಕಥೆಗಳೂ ಕೇಳಿಬರುತ್ತಿವೆ.

ಈಗೀಗ ಇನ್ನೊಂದು ವಿಭಾಗದಲ್ಲಿ ಕೂಡಾ ದಕ್ಷಿಣ ಕನ್ನಡವು ಮುಂದೆ ಬಂದಿದೆ, ಅದು ಬೇಂಕು ವ್ಯವಹಾರದಲ್ಲಿ. ಇಲ್ಲಿ ಹುಟ್ಟಿ ಬಂದಷ್ಟು ಬೇಂಕುಗಳು ಬೇರಾವ ಜಿಲ್ಲೆಯಲ್ಲಿಯೂ ಉದ್ಭವಿಸಿರಲಿಕ್ಕಿಲ್ಲವೆಂದರೆ ತಪ್ಪಾಗದು. ಬರೀ ಸಂಖ್ಯೆಯಲ್ಲಿ ಮಾತ್ರವಲ್ಲದೆ ಅವುಗಳು ಒಳ್ಳೇ ರೀತಿಯಲ್ಲಿ ಬೆಳೆದು ಬರುತ್ತಿರುವುದು ಒಂದು ಹೆಮ್ಮೆಯ ವಿಷಯ. ಮುಖ್ಯವಾಗಿ ಕೆನರಾ ಬೇಂಕು ಮತ್ತು ಸಿಂಡಿಕೇಟ್ ಬೇಂಕುಗಳು ದಕ್ಷಿಣ ಹಿಂದೂದೇಶದ ಎಲ್ಲೆಡೆಗಳಲ್ಲೂ ತಮ್ಮ ಶಾಖೆಗಳನ್ನು ಸ್ಥಾಪಿಸಿ ಹೆಸರು ಗಳಿಸಿವೆ.

ಒರೇ ಮೈಸೂರಿನ ದೃಷ್ಟಿಯಲ್ಲಿ ನೋಡಿದರೆ ಇನ್ನೂ ಹಲವಾರು ರೀತಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯು ಹೆಸರು ಪಡೆದಿದೆ. ಇಲ್ಲಿಯ ವಿದ್ಯಾಮಟ್ಟವು ಬಹಳ ಮೇಲಿದೆ; ಇಲ್ಲಿದ್ದಷ್ಟು ಶಾಲಾ ಕಾಲೇಜುಗಳು ಬಹು ಜಿಲ್ಲೆಗಳಲ್ಲಿಲ್ಲವೆನ್ನಬಹುದು. ಸರಕಾರಿ ನೌಕರಿಯಲ್ಲಿಯೂ ಸ್ವಂತ ಉದ್ಯೋಗದಲ್ಲಿಯೂ ಇಲ್ಲಿಂದ ಬೇರೆ ಕಡೆಗಳಿಗೆ ಹೋಗಿರುವ ಜನರು ಬಹಳ. ಉದಾಹರಣೆಗಾಗಿ ಕೆಲವು ವರ್ಷಗಳಿಂದ ದಕ್ಷಿಣ ಕನ್ನಡದಿಂದ ಮುಂಬಯಿಗೆ ಹೋಗಿ ಡಾಕ್ಟರರಾಗಿಯೋ, ವ್ಯಾಪಾರದಲ್ಲಿಯೋ ನೆಲೆಸುತ್ತಿರುವವರ ಸಂಖ್ಯೆ ಹೆಚ್ಚುತ್ತಾ ಇದೆ. ಇದನ್ನು ನೋಡಿ ಕೆಲವರಿಗೆ ಆಶ್ಚರ್ಯವಾದರೆ ಇನ್ನು ಕೆಲವರಿಗೆ ಅಸೂಯೆಯೂ ಉಂಟಾಗುವುದು ಸ್ವಾಭಾವಿಕ. ಅನೇಕೆಂದರೆ ದಕ್ಷಿಣಕನ್ನಡದ ಜನರು ತಾವು ಹೊಂದಿಕೊಂಡ ಉದ್ಯೋಗದಲ್ಲಿ ಹೆಚ್ಚಾಗಿ ದುಡಿದು ಹೆಸರನ್ನೂ ಹಣವನ್ನೂ ಗಳಿಸುತ್ತಾರೆ.

ಇದಕ್ಕೆಲ್ಲ ಕಾರಣವೇನಿರಬಹುದು? ದಕ್ಷಿಣಕನ್ನಡದ ಜನರು ತಮ್ಮ ಊರಿಗೆ ಬೇರೆಯವರನ್ನು ಬರಲು ಅವಕಾಶಕೊಡದೆ ಇತರ ಜಿಲ್ಲೆಗಳಿಗೂ ಪ್ರಾಂತಗಳಿಗೂ ಹೋಗಿ ದಾಳಿ ಮಾಡಿ ದುಡ್ಡು ಗಳಿಸುವ ಸಾಹಸಿಗಳಾದರೇ ಅಥವಾ ನಾಗರಿಕತೆಯನ್ನು ಹೊಂದಿದ ದರೋಡೆಗಾರರೇ! ಇಲ್ಲಿಯ ಜನರು ಇತರ ಊರಿನವರಿಗಿಂತ ನಿಜವಾಗಿಯೂ ಕಷ್ಟಸಹಿಷ್ಣುಗಳೇ, ಬುದ್ಧಿವಂತರೇ ಅಥವಾ [illegible] ಹೊಂದಿದ ಮೋಸಗಾರರೇ? ಈ ಪ್ರಶ್ನೆಗಳನ್ನು ನಮ್ಮಲ್ಲಿ ನಾವೇ ಕೇಳಿಕೊಳ್ಳುವುದು ಉತ್ತಮ. ಏಕೆಂದರೆ ನಮ್ಮಲ್ಲಿರುವ ಲೋಪದೋಷಗಳನ್ನು ತಿದ್ದಿಕೊಳ್ಳಲು ಅದು ಅವಕಾಶವನ್ನು ಕೊಡುತ್ತದೆ.

'ಎಲ್ಲವೂ ಹೊಟ್ಟೆಗಾಗಿ' ಎನ್ನುವಂತೆ ದಕ್ಷಿಣ ಕನ್ನಡಿಗರ ಎಲ್ಲಾ ಸಾಹಸಗಳೂ ಹೊಟ್ಟೆಯ ಹಸಿವನ್ನು ನೀಗಿಸಲಿಕ್ಕಾಗಿಯೆಂದರೆ ಅತಿಶಯೋಕ್ತಿಯಾಗಲಾರದು. ಕೇರಳದಂತೆ ಇಲ್ಲಿಯೂ ಜನಸಂಖ್ಯೆ ಬಹಳವಾಗಿದ್ದು ಭೂಮಿಯು ಕಡಿಮೆಯಿದ್ದುದರಿಂದ ಹಸಿದ ಹುಲಿಯು ಒಂದು ಕಾಡಿನಿಂದ ಇನ್ನೊಂದು ಕಾಡಿಗೆ ಬೇಟೆಯನ್ನು ಹುಡುಕಿ ಹೋಗುವಂತೆ ಇಲ್ಲಿಯ ಜನರು ಹೊಸ ಸ್ಥಳಗಳನ್ನೂ ಉದ್ಯೋಗಗಳನ್ನೂ ಹುಡುಕಿಕೊಂಡು ಹೋಗುತ್ತಿರುವುದು ಸಹಜವೆ. ಆದರೆ ಹಸಿದ ಪ್ರಾಣಿಗಳಲ್ಲಿಯೂ ಎರಡು ತೆರನಿರುತ್ತವೆ. ಒಂದು ತನ್ನ ಕೊಳ್ಳೆಯನ್ನು ಹುಡುಕಿಕೊಂಡು ಹೋಗುತ್ತದೆ. ಇನ್ನೊಂದು ಕೊಳ್ಳೆ ಬರುವುದನ್ನೇ ಕಾದುಕೊಂಡು ಹಸಿದ ಹೊಟ್ಟೆಯನ್ನು ಒತ್ತಿಟ್ಟುಕೊಂಡು ಮಲಗುತ್ತದೆ. ದಕ್ಷಿಣ ಕನ್ನಡದ ಜನರು ಮೊದಲಿನ ಜಾತಿಗೆ ಸೇರಿದವರು—ಇದೇ ಅವರ ವೈಶಿಷ್ಟ್ಯ; ಇದರಿಂದಾಗಿಯೇ ಅವರು ಇಂದು ಮೇಲೇರುತ್ತಿದ್ದಾರೆ. ತನ್ನ ನಾಡನ್ನು ಬಿಟ್ಟು ಬೇರೊಂದು ಕಡೆಗೆ ಹೋಗುವ ಪ್ರಾಣಿಗೆ ಧೈರ್ಯ ಬೇಕು. ದೃಢತೆ ಬೇಕು!

ದಕ್ಷಿಣ ಕನ್ನಡಿಗರಿಗೆ ಧೈರ್ಯವಿದೆ, ದೃಢತೆಯಿದೆ. ಆದರೆ ದುರ್ದೈವವಶಾತ್ ಅವರಿಗೆ ಹೆಮ್ಮೆಯೂ ಇದೆ ತಾವು ಬುದ್ಧಿವಂತರೆಂಬುದು ಅವರ ತಲೆಗೆ ಹೊಕ್ಕಂತೆ ಕಾಣುತ್ತದೆ. ತಾವು ಮಾತ್ರ ಒಳ್ಳೇ ಯೋಚನೆಯುಳ್ಳ. ಇದರಿಂದಾಗಿ ಕೆಲವು ಕಡೆಗಳಲ್ಲಿ ಅವರು ಗಳಿಸಿದ ಒಳ್ಳೇ ಹೆಸರಿನ ಜೊತೆಗೆ ಕೆಟ್ಟ ಹೆಸರೂ ಬಂದಿದೆ. ಬೊಂಬಾಯಿಯಲ್ಲಿ ಕೆಲವರು ದಕ್ಷಿಣ ಕನ್ನಡದವರು ಜಂಬದವರೆನ್ನುವ ಅಭಿಪ್ರಾಯವನ್ನು ಹೊಂದಿದ್ದಾರೆ.

ಉಡಿಗೆ ತೊಡಿಗೆಯಲ್ಲಿ ಅಭಿರುಚಿ, ಸ್ವಚ್ಛತೆ ಅಗತ್ಯ ಮತ್ತು ಇವುಗಳಿಗೆ ದಕ್ಷಿಣಕನ್ನಡಿಗರು ಹೆಸರು ಪಡೆದಿದ್ದಾರೆ. ಅವರ ಇಂಗ್ಲೀಷಿನ ಮಟ್ಟ ಕೂಡಾ ಬಹಳ ಉತ್ತಮವಿದೆಯೆಂದು ಹೊರಗಿನವರು ಒಪ್ಪುತ್ತಾರೆ. ಅಂದ ಮಾತ್ರಕ್ಕೆ ಅದನ್ನು ವಿಪರೀತಕ್ಕೆಳೆಯಬಾರದು. ಮಂಗಳೂರು ಚಿಕ್ಕ ನಗರವಾದರೂ ಬೊಂಬಾಯಿಯಲ್ಲಿರುವ ವಸ್ತುಗಳನ್ನೂ ಫ್ಯಾಶನನ್ನೂ ಕಾಣಬಹುದು. ಚಿಕ್ಕದೊಂದು ಉದಾಹರಣೆ: ಏಳೆಂಟು ಲಕ್ಷ ಜನರಿರುವ ಪೂನಾ ನಗರದ ದೊಡ್ಡ ಹೋಟೇಲುಗಳಲ್ಲಿ ಕೂಡಾ ಕ್ಲೀನಿಂಗ್ ಮತ್ತು ಸಪ್ಲೈ ಕೆಲಸ ಒಬ್ಬನೆ ಮಾಡುತ್ತಾನೆ. ಇದು ರುಚಿತ್ವದ ದೃಷ್ಟಿಯಿಂದ ಹಿತಕರವಾಗಿಲ್ಲದಿರಬಹುದು. ಆದರೂ ಅನುಕೂಲತೆಯ ದೃಷ್ಟಿಯಿಂದ ಸರಿಯಾಗಿದೆ. ಮಂಗಳೂರಲ್ಲಿ ಮಾತ್ರ ಚಿಕ್ಕದೊಂದು ಹೋಟೇಲಿನಲ್ಲಿ ಕೂಡಾ ನೀರು ಕೊಡುವವನೇ ಬೇರೆ, ತಿಂಡಿ ಕೊಡುವ ಮಹಾನುಭಾವನೇ ಬೇರೆ ಮತ್ತು ಕಾಫಿ ಕೊಡುವ ಜನವೇ ಅವನ ಉಡುಪು, (ಬಿಲ್ ಇತ್ಯಾದಿ) ಬೇರೆ. ಹೀಗಾಗಿ ಹಲವು ಸಮಯ ನಿಮಗೆ ಬೇಕಾದ ತಿಂಡಿ ತಿಂದು ನೀರಡಿಕೆಯಾದರೆ ಬಿಸಿ ಕಾಫಿಯೇ ಗತಿಯಲ್ಲದೆ ನೀರು ಸಿಗದು; ಅಥವಾ ಕೆಲವು ವೇಳೆ ಕಾಫಿ ಸಿಕ್ಕಿ ಹೋತ್ತಾದರೂ ತಿಂಡಿ ಸಿಗಲಾರದು. ಇಷ್ಟು ಮಾತ್ರವಲ್ಲದೆ ಹೀಗೇಕೆಂದು ವಿಚಾರಿಸಿದರೆ ಉತ್ತರ ಕೂಡಾ ಸಿಗಲಾರದ! ಮೈಸೂರು ಪ್ರಾಂತದ ಇತರ ಕಡೆಯ ಜನರು ಎಷ್ಟು ವಿದ್ಯಾವಂತರಿದ್ದರೂ ಪರಿಚಿತರು ಅಥವಾ ಸಂಬಂಧಿಕರು ಒಟ್ಟು ಸೇರಿದಾಗ ಹೆಚ್ಚಾಗಿ ಕನ್ನಡದಲ್ಲೇ ಮಾತಾಡುತ್ತಾರೆ. ದಕ್ಷಿಣ ಕನ್ನಡಿಗರಿಗೆ ಇದು ಕೀಳು ನಡತೆಯಾಗಿ ತೋರುತ್ತದೆ. ನಾವು ಮನೆಯಲ್ಲಿ ಅಣ್ಣ ತಮ್ಮಂದಿರು ಕೂಡಾ ಇಂಗ್ಲೀಷಿನಲ್ಲೇ ಸಂಭಾಷಿಸುತ್ತೇವೆ. ಇಂಗ್ಲೀಷ್ ಬಾರದ ಸನ್ಯಾಸಿನ ಮುದುಕರೊಬ್ಬರು "This my son and this my thamma's son' ಎಂದ ಹೇಳಿದ್ದು ನಿಜವಿರಬೇಕು. ದಕ್ಷಿಣ ಕನ್ನಡಕ್ಕೆ ಮೈಸೂರು ಪ್ರಾಂತದಲ್ಲಿ ಕನ್ನಡದ ಬಗ್ಗೆ ಒಂದು ಉತ್ತಮ ಸ್ಥಾನವಿದೆ. ಇಲ್ಲಿಯ ಕನ್ನಡ ಬೇರೇ ಕಡೆಗಳಂತೆ ತೆಲುಗು, ತಮಿಳು ಅಥವಾ ಮರಾಠಿ ಭಾಷೆಗಳ ಜೊತೆ ಬೆರೆಯದೆ ಬಹುಮಟ್ಟಿಗೆ ಶುದ್ಧವಾಗಿದೆಯೆನ್ನಬಹುದು. ಇಲ್ಲಿನ ಯಕ್ಷಗಾನ ಬಯಲಾಟಕ್ಕೆ ತಡವಾಗಿಯಾದರೂ ಈಗೀಗ ಹೊರಗಿನವರಿಂದ ಆದರವಾದ ಮನ್ನಣೆ ಸಿಗುತ್ತಿದೆ. ಇವು ಹೆಮ್ಮೆಯ ವಿಷಯವಾದರೂ ಇದರಿಂದ ನಾವು ಮೈಮರೆಯಬಾರದು. ಬೇರೆಯವರಿಂದ ನಾವೂ ಕಲಿಯತಕ್ಕ ವಿಷಯಗಳು ಹಲವಿವೆಯೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳುವುದು ಅಗತ್ಯ. ಉದಾಹರಣೆಯಾಗಿ, ಮಹಾರಾಷ್ಟ್ರ ಹೆಂಗಸರು ಅಡಿಗೆ ಕೆಲಸದಲ್ಲಿ ಇತರರಿಗಿಂತ ಮುಂದುವರಿದವರು; ಆದರೆ ಮೈಸೂರು, ಬೆಂಗಳೂರು ಮೊದಲಾದ ಕಡೆಗಳಲ್ಲಿಯ ಹೆಂಗಸರ ಸಂಸ್ಕೃತಿ ಸಂಗೀತ ಕಲೆಯ ಮೇಲಿನ ಪ್ರೇಮ ಮತ್ತು ಕೌಶಲ್ಯವನ್ನು ನಮ್ಮೂರ ಹೆಂಗಸರು ಕಲಿತುಕೊಳ್ಳಬೇಕು. ಪರ ಊರಲ್ಲಿರುವ ನಮ್ಮ ಜನರು ತಮ್ಮದೇ ಆದ ಚಿಕ್ಕ ಸಂಘ ಸಂಸ್ಥೆಗಳನ್ನು ಸ್ಥಾಪಿಸುವ ಬದಲು ಇತರರೊಡನೆ ಬೆರೆತು ಬಾಳಲು ಕಲಿಯುವುದು ಉತ್ತಮ.

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ........
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ

1—1—1963ರಿಂದ ಠೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ

ನಿಮ್ಮ ಉಳಿತಾಯವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸಿರಿ.
ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯವಿಟ್ಟು ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.



ಸೆಕೆಂಡರಿ ಶಾಲೆಗಳಲ್ಲಿ

ಶಿಕ್ಷಣಮಟ್ಟವು ಇಳಿಮುಖವಾಗುತ್ತಿದೆಯೆ?

—ಶ್ರೀ ಪ್ರೇಮ ಕೃಪಾಳ್
(ಕೇಂದ್ರ ಸರ್ಕಾರದ ಶಿಕ್ಷಣ ಶಾಖಾ ಕಾರ್ಯದರ್ಶಿ)

ಸೆಕೆಂಡರಿ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಟ್ಟ ಬಹಳ ಕಡಿಮೆಯಾಗುತ್ತಿದೆ ಎಂಬ ಆಕ್ಷೇಪಣೆ ಇತ್ತೀಚೆಗಂತೂ ಹೆಚ್ಚು ಹೆಚ್ಚಾಗಿ ಕೇಳಿಬರುತ್ತಿದೆ ಶಾಲೆಗಳಲ್ಲಿ ಯಾವ ಒಂದೂ ವಿಶೇಷ ಸಮಾರಂಭವೇ ನಡೆಯಲಿ ಭಾಷಣ ಮಾಡಲು ಬರುವ ಮಹಾಶಯರು ಅಧ್ಯಾಪಕರನ್ನು ಹುರಿದುಂಬಿಸುವ ಅಥವಾ ವಿದ್ಯಾರ್ಥಿಗಳನ್ನು ಹರ್ಷಗೊಳಿಸುವ ನಾಲ್ಕು ಮಾತುಗಳನ್ನು ಆಡುವ ಬದಲು ವಿದ್ಯಾಭ್ಯಾಸ ಕೆಳಮಟ್ಟಕ್ಕೆ ಇಳಿಯುತ್ತಿರುವ ಬಗ್ಗೆ ಗೋಳಿಡುವ ಕಾರ್ಯಮಾಡಿ ಹೋಗುತ್ತಾರೆ ಆದರೆ ಹೀಗೆ ವಿದ್ಯಾಭ್ಯಾಸ ಮಟ್ಟ ಯಾವ ಸಮಯದಿಂದ ಕೆಳಗಿಳಿಯತೊಡಗಿತು ಎಂದು ಕೇಳಿದರೆ ಖಚಿತವಾದ ಉತ್ತರ ಯಾರಿಗೂ ತಿಳಿಯದು. ಅಭಿಪ್ರಾಯ ವ್ಯಕ್ತಪಡಿಸುವವರು ಒಂದು ತಮ್ಮದೇ ಆದ ಕಲ್ಪನೆಯನ್ನು ಇಟ್ಟುಕೊಂಡೇ ಮಾತನಾಡುತ್ತಾರೆ, ಅವರ ಕಾಲದಲ್ಲಿದ್ದ ಮಟ್ಟಕ್ಕಿಂತ ಇಂದು ವಿದ್ಯಾಭ್ಯಾಸದ ಮಟ್ಟ ಬಹಳ ಕಡಿಮೆಯಾಗಿ ಹೋಗಿದೆ ಎಂಬುದು ಅವರ ಕಲ್ಪನೆ. ಆದರೆ ಈ ವಿಚಾರದಲ್ಲಿ ವೈಜ್ಞಾನಿಕ ರೀತಿಯ ಅಧ್ಯಯನ ಮಾತ್ರ ನಡೆದಿರುವುದಿಲ್ಲ. ಅದಕ್ಕೆ ಬದಲಾಗಿ ಒಂದು ರೀತಿಯ ವಿಚಾರ ಗೊಂದಲಗಳು ಇಂತಹ ಅಭಿಪ್ರಾಯದ ಹಿನ್ನೆಲೆಯಲ್ಲಿವೆ

"ವಿದ್ಯಾಭ್ಯಾಸ ಮಟ್ಟ" ಎಂದರೇನು? ಇಂಗ್ಲಿಷ್, ಗಣಿತ ಶಾಸ್ತ್ರ ಮತ್ತು ವಿಜ್ಞಾನ ಇಂತಹ ಬೇರೆ ಬೇರೆ ವಿಷಯಗಳಲ್ಲಿ ವಿದ್ಯಾರ್ಥಿಗಳು ಪ್ರಶ್ನೆಪತ್ರಿಕೆಗಳಿಗೆ ಯಾವ ರೀತಿಯ ಉತ್ತರ ಒದಗಿಸಿದ್ದಾರೆ ಎಂಬುದರ ಆಧಾರದ ಮೇಲೆ ಇದನ್ನು ನಿರ್ಣಯಿಸಲಾಗುವುದೇ? ಅಥವಾ ವಿದ್ಯಾರ್ಥಿಗಳ ದೇಹದಾರ್ಢ್ಯತೆ ಹೇಗಿದೆ, ಅವರು ಯಾವ ರೀತಿ ನಡೆದುಕೊಳ್ಳುತ್ತಾರೆ ಮತ್ತು ಅವರ ನೈತಿಕ ಮಟ್ಟ ಹೇಗಿದೆ ಎಂಬುದರ ಆಧಾರದ ಮೇಲೆ ಅದನ್ನು ನಿರ್ಣಯಿಸಲಾಗುತ್ತದೆಯೇ? ಮತ್ತು ವಿದ್ಯಾಭ್ಯಾಸ ಮಟ್ಟವನ್ನು ನಾವು ನಿರ್ಧರಿಸುವಾಗ ವಿದ್ಯಾರ್ಥಿಗಳು ಎಷ್ಟರ ಮಟ್ಟಿಗೆ ಪೌರಪ್ರಜ್ಞೆ ಉಳ್ಳವರಾಗಿದ್ದಾರೆ ಮತ್ತು ಎಷ್ಟು ಮಟ್ಟದಲ್ಲಿ ಅವರು ಔದ್ಯೋಗಿಕ ಲಕ್ಷಣಗಳನ್ನು ಬೆಳೆಸಿಕೊಂಡಿದ್ದಾರೆ ಎಂಬುದನ್ನು ಗಮನಿಸಿ ನಿರ್ಧರಿಸುತ್ತೇವೆಯೇ? ದೆಹಲಿಯಲ್ಲಿ ಈ ವಿಚಾರವಾಗಿ ಒಂದು ವಿಶೇಷ ಅಧ್ಯಯನ ಗೋಷ್ಠಿಯನ್ನು ನಡೆಸಲಾಯಿತು. ಆದರೆ ಈ ಬಗ್ಗೆ ಯಾರನ್ನು ಕೇಳಿದರೂ ಅವರ ಮನಸ್ಸಿನಲ್ಲಿ ಈ ವಿಚಾರವಾದ ಸ್ಪಷ್ಟ ಕಲ್ಪನೆಯೇ ಇರಲಿಲ್ಲ. ಕೆಲವರು "ಏನು ಸ್ವಾಮಿ, ಇಂಗ್ಲಿಷ್ ವ್ಯಾಕರಣವೇ ಇವರ ತಲೆಗೆ ಹಿಡಿಯುವುದಿಲ್ಲವಲ್ಲಾ" ಎಂದರು. ಮತ್ತೆ ಕೆಲವರು ವಿದ್ಯಾರ್ಥಿಗಳು ವಾಕ್ಯರಚನೆಯಲ್ಲಿ ಹೇಗೆ ಹೆಜ್ಜೆ ಹೆಜ್ಜೆಗೂ ಎಡವಿ ಬೀಳುತ್ತಿದ್ದರು ಮತ್ತು ಅವರಿಗೆ ತಾವು ಬಳಸುವ ಶಬ್ದಗಳ ಸರಿಯಾದ "ಸ್ಪೆಲಿಂಗ್" ಕೂಡ ಬರುತ್ತಿರಲಿಲ್ಲ ಎಂದು ಹೇಳಿ ಗೋಳಿಟ್ಟರು ಇನ್ನು ಕೆಲವರು ನಮ್ಮ ವಿದ್ಯಾರ್ಥಿಗಳಿಗೆ ಮೂಲ ಧಾರ್ಮಿಕ ವಿಚಾರಗಳು ಅಥವಾ ನೀತಿ ಸೂತ್ರಗಳು ಗೊತ್ತೇ ಇಲ್ಲವಲ್ಲ ಎಂದು ಆಕ್ಷೇಪಿಸಿದರು. ಅನೇಕರು "ಪರೀಕ್ಷೆಗಳ ಫಲಿತಾಂಶ ನೋಡಿ ಸ್ವಾಮಿ" ಎಂದು ಮೂದಲಿಸಿದರು. ಪರೀಕ್ಷೆಯಲ್ಲಿ ಅಧಿಕ ಸಂಖ್ಯೆಯಲ್ಲಿ ಹುಡುಗರು ಫೇಲಾಗುತ್ತಿದ್ದುದೇ ಅವರ ಸಮಸ್ಯೆ

ಪರೀಕ್ಷೆಗಳ ಫಲಿತಾಂಶ

ಪರೀಕ್ಷಾ ಫಲಿತಾಂಶಗಳನ್ನೇ ಮೊದಲು ತೆಗೆದುಕೊಳ್ಳೋಣ. ಹೈಸ್ಕೂಲ್ ಪರೀಕ್ಷೆಗಳಲ್ಲಿ ತುಂಬಾ ಕಡಿಮೆ ಜನ ಉತ್ತೀರ್ಣರಾಗುತ್ತಿರುವುದು ಹೊಸ ವಿಷಯವೇನೂ ಅಲ್ಲ. ನಮ್ಮ ದೇಶದಲ್ಲಿ ಇದು ಹಳೆಯ ಕಥೆ. ಮುಂಬೈ ವಿಶ್ವವಿದ್ಯಾನಿಲಯದ ಪ್ರಪ್ರಥಮ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಕುಳಿತಿದ್ದ ಪ್ರತಿಯೊಬ್ಬ ವಿದ್ಯಾರ್ಥಿಯೂ ಫೇಲಾದ ಪ್ರಸಂಗವನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬಹುದು ೧೮೫೭ರಿಂದ ೧೯೦೨ರ ವರೆಗೆ ನಡೆದ ಪ್ರತಿ ವರ್ಷದ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರ ಸಂಖ್ಯಾ ಪ್ರಮಾಣ ಶೇ ೨೮ರಿಂದ ಶೇ. ೩೪ರ ವರೆಗೆ ಮಾತ್ರ ಇದ್ದಿತು. ಆ ನಂತರ ಒಂದು ವರ್ಷ ಈ ಸಂಖ್ಯಾ ಪ್ರಮಾಣ ಶೇ ೨೬ರಷ್ಟು ಕೆಳ ಮಟ್ಟಕ್ಕೆ ಹೋಗಿದ್ದರೆ, ಇನ್ನೊಂದು ವರ್ಷ ಶೇ ೫೪ರಷ್ಟು ಹೆಚ್ಚಿನ ಮಟ್ಟಕ್ಕೂ ಹೋಗಿರುವುದೂ ಕಂಡುಬರುತ್ತದೆ ಮದರಾಸ್ ವಿಶ್ವವಿದ್ಯಾನಿಲಯದಲ್ಲಿ ೫೦ ವರ್ಷಗಳಷ್ಟು ಹಿಂದೆ ಈಗಿನ ಪಂಜಾಬ್ ಗವರ್ನರ್ ಶ್ರೀ ತಾನು ಪಿಳ್ಳೆಯವರು ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಕುಳಿತುಕೊಂಡಿದ್ದಾಗ ಉತ್ತೀರ್ಣರಾದವರ ಸಂಖ್ಯೆ ಕೇವಲ ಶೇ ೨೯ರಷ್ಟಿತ್ತು. ಇತ್ತೀಚೆಗೆ ನಡೆಸಿದ ಒಂದು ಅಧ್ಯಯನದ ಫಲಿತಾಂಶವಾಗಿ ವರ್ಷದಿಂದ ವರ್ಷಕ್ಕೆ ಸೆಕೆಂಡರಿ ಶಿಕ್ಷಣ ಪರೀಕ್ಷೆಗಳ ಉತ್ತೀರ್ಣ ಪ್ರಮಾಣ ಅಂತಹ ಹೆಚ್ಚಿನ ವ್ಯತ್ಯಾಸ ತೋರಿಸುತ್ತಿಲ್ಲ ಎಂಬುದು ದೃಢಪಟ್ಟಿದೆ ಆದುದರಿಂದ ಸೆಕೆಂಡರಿ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಟ್ಟ ಇಳಿಮುಖವಾಗಿದೆ ಎನ್ನುವುದಕ್ಕೆ ಪರೀಕ್ಷಾ ಫಲಿತಾಂಶಗಳು ಒಂದು ಉದಾಹರಣೆಯಾಗಲಾರವು.

ದೆಹಲಿಯ ಅಧ್ಯಯನದ ಫಲಿತಾಂಶದ ಆಧಾರದ ಮೇಲೆ ಹೇಳುವುದಾದರೆ ಇಂಗ್ಲಿಷ್ ಶಿಕ್ಷಣದ ಬಗ್ಗೆ ಶಿಕ್ಷಣ ಮಟ್ಟ ಕಡಿಮೆಯಾಗುತ್ತಿರುವ ವಿಚಾರವಾಗಿದೆ ಜನಸಾಮಾನ್ಯವಾಗಿ ಕಾತರಗೊಂಡಿದ್ದಾರೆ. ಆದರ ಸೆಕೆಂಡರಿ ಶಾಲೆಯ ವಿದ್ಯಾರ್ಥಿ ಸಾಮಾನ್ಯವಾಗಿ ಯಾವತ್ತೂ ಇಂಗ್ಲಿಷ್ ವಿದ್ಯಾಭ್ಯಾಸ ಮಟ್ಟಿಗೆ ಅಂತಹ ಹೇಳಿಕೊಳ್ಳಬಹುದಾದ ಒಂದು ಉನ್ನತ ಮಟ್ಟದಲ್ಲಿ ಇರಲಿಲ್ಲ. ಬಹಳ ಹಿಂದಿನಿಂದಲೂ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಇಂಗ್ಲಿಷ್ ಒಂದರಲ್ಲಿಯೇ ಅನೇಕರು ಫೇಲಾಗುತ್ತಿದ್ದುದು ಕಂಡುಬಂದಿದೆ. ಮೆಟ್ರಿಕ್ಯುಲೇಷನ್ ಪರೀಕ್ಷೆಗಳ ಫಲಿತಾಂಶ ತುಂಬಾ ನಿರಾಶಾದಾಯಕವಾಗಿದ್ದುದಕ್ಕೆ ಇಂಗ್ಲಿಷ್ ಭಾಷೆಯ ಶಿಕ್ಷಣವೇ ಮುಖ್ಯವಾಗಿ ಕಾರಣವಾಗಿರುತ್ತಿತ್ತು. ಇಂಗ್ಲಿಷ್ ಶಿಕ್ಷಣಕ್ಕಾಗಿ ಮೂರನೆ ಒಂದು ಭಾಗದಷ್ಟು ಕಾಲವನ್ನು ವಿನಿಯೋಗಿಸಲಾಗುತ್ತಿದ್ದರೂ ವಿದ್ಯಾರ್ಥಿಗಳು ಕಾಲೇಜುಗಳಲ್ಲಿ ಸಾರ ಕ್ರಮಗಳನ್ನು ಅರ್ಥಮಾಡಿಕೊಳ್ಳಲು ಅಸಮರ್ಥರಾಗುತ್ತಿದ್ದರು ಎಂಬ ಅಂಶ ಕಳೆದ ಶತಮಾನದ ಕೊನೆಯ ಹೊತ್ತಿಗೆ ತುಂಬಾ ಸ್ಪಷ್ಟವಾಯಿತು. ಭಾರತೀಯ ವಿಶ್ವವಿದ್ಯಾನಿಲಯಗಳ ಅಧ್ಯಾಪಕರುಗಳು ಈ ಬಗ್ಗೆ ತಮ್ಮ ನಿರಾಸೆಯನ್ನು ಆಗ ವ್ಯಕ್ತಪಡಿಸತೊಡಗಿದ್ದರು.

ಶಾಲೆಗಳ ಮಟ್ಟ

ಇಲ್ಲಿ ಇನ್ನೊಂದು ವಿಷಯವನ್ನು ಗಮನಿಸಬೇಕು ಶಾಲೆಗಳೂ ಉತ್ತಮ ಮಟ್ಟದಲ್ಲಿ ನಡೆಯುತ್ತಿದೆಯೇ ಇಲ್ಲವೇ ಎಂಬುದು ಮುಖ್ಯ. ಅಲ್ಲದೆ ಒಂದು ಶಾಲೆಯ ಬಗ್ಗೆ ಜನರಲ್ಲಿ ವಿಶ್ವಾಸ ಮೂಡಿದೆಯೋ ಇಲ್ಲವೇ ಎಂಬುದು ಬಹಳ ಮುಖ್ಯ. ಇನ್ನೂ ಒಂದು ವಿಚಾರ. ಶಾಲೆಯಲ್ಲಿರುವ ವಿದ್ಯಾರ್ಥಿಗಳ ಮಾನಸಿಕ ಬೆಳವಣಿಗೆಯ ಮಟ್ಟವೂ ಮುಖ್ಯವಾಗಿ ಗಮನಕ್ಕೆ ಬರುತ್ತದೆ. ಕೆಲವರು ತುಂಬಾ ಬುದ್ಧಿಶಾಲಿಗಳಾಗಿರಬಹುದು. ಮತ್ತೆ ಕೆಲವರು ಅಷ್ಟೇ ದಡ್ಡರಾಗಿರಬಹುದು. ಬಹಳ ಉತ್ತಮ ಮಟ್ಟದಲ್ಲಿ ನಡೆಯುತ್ತಿದ್ದ ಶಾಲೆಗಳ ಮಟ್ಟ ಕಡಿಮೆಯಾದರೆ ಅದಕ್ಕನುಗುಣವಾಗಿ ವಿದ್ಯಾರ್ಥಿಗಳ ಜ್ಞಾನ ಮಟ್ಟ ಕೂಡ ತಾನಾಗಿಯೇ ಇಳಿಮುಖವಾಗುತ್ತದೆ ಶಾಲೆಯಲ್ಲಿ ಮೇಲ್ಮಟ್ಟದಲ್ಲಿರುವ ಶೇ. ೧೦ರಷ್ಟು ಜನ ವಿದ್ಯಾರ್ಥಿಗಳ ಜ್ಞಾನ ಮಟ್ಟವನ್ನು ಅಳೆದು ನೋಡುವುದರಿಂದ ಇದು ಸ್ಪಷ್ಟವಾಗುತ್ತದೆ. ತಜ್ಞರಾದವರು ಇದನ್ನು ವಿಚಾರ ಮಾಡಿ ನೋಡಿದ್ದಾರೆ ಅವರ ಅಭಿಪ್ರಾಯದ ಪ್ರಕಾರ ಅಂಥ ಒಂದು ಮೇಲ್ಮಟ್ಟದಲ್ಲಿ ಇರುವ ವಿದ್ಯಾರ್ಥಿಗಳ ಜ್ಞಾನ ಮಟ್ಟವನ್ನು ನೋಡಿದಾಗ ಶಿಕ್ಷಣ ಮಟ್ಟ ಕಡಿಮೆಯಾಗಿಲ್ಲವೆಂಬುದು ದೃಢಪಡುತ್ತದೆ. ಡಿಫೆನ್ಸ್ ಸರ್ವಿಸಸ್ ಅಂಡ್ ಎಂಜನಿಯರಿಂಗ್ ಕಾಲೇಜುಗಳೇ ಮೊದಲಾದ ಸಂಸ್ಥೆಗಳಿಗೆ ಪ್ರತಿವರ್ಷ ಸೇರುತ್ತಿರುವ ವಿದ್ಯಾರ್ಥಿಗಳ ಅಪಾರ ಸಂಖ್ಯೆಯನ್ನು ನೋಡಿದಾಗ ಈ ವಿದ್ಯಾರ್ಥಿಗಳು ಅವರ ಹಿಂದಿನವರಷ್ಟೇ ತಮ್ಮ ಅಧ್ಯಯನದ ದಿಶೆಯಲ್ಲಿ ದಕ್ಷರಾಗಿದ್ದಾರೆ ಎಂಬುದು ತಿಳಿಯುತ್ತದ

ನಿಜವಾದ ಕಾರಣ

ಶಿಕ್ಷಣ ಮಟ್ಟ ಇಳಿಮುಖವಾಗಿದೆ ಎನ್ನುವುದರ ಮೂಲದಲ್ಲಿರುವ ಒಂದು ಅಂಶವನ್ನು ಇಲ್ಲಿ ಗಮನಿಸಬಹುದು. ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ತುಂಬಾ ಹಿಂದುಳಿದ ಜನ ವರ್ಗಗಳಿಂದ ಅನೇಕ ಜನ ವಿದ್ಯಾರ್ಥಿಗಳು ಶಿಕ್ಷಣ ಪಡೆಯಲು ಮುಂದೆ ಬರುತ್ತಿದ್ದಾರೆ. ಹಿಂದೆ ಈ ವರ್ಗದ ಜನ ವಿದ್ಯಾಭ್ಯಾಸ ಪಡೆಯಲು ಮುಂದೆ ಬರುತ್ತಲೇ ಇರಲಿಲ್ಲ. ಹೆಚ್ಚು ಹೆಚ್ಚು ಜನರಿಗೆ ವಿದ್ಯಾಭ್ಯಾಸ ಸೌಕರ್ಯವನ್ನು ಒದಗಿಸುವ ಸಮಸ್ಯೆಯನ್ನು ಎದುರಿಸುವ ಪ್ರಯತ್ನದಲ್ಲಿ ಅನೇಕ ಹೊಸ ಶಾಲೆಗಳು ಹುಟ್ಟಿಕೊಂಡವು. ಇವುಗಳಲ್ಲಿ ಶಿಕ್ಷಣಕ್ಕೆ ಅವಶ್ಯಕವಾದ ಸಲಕರಣೆಗಳು ಅಥವಾ ಉತ್ತಮ ಅಧ್ಯಾಪಕ ವರ್ಗಗಳು ಇರುತ್ತಿರಲಿಲ್ಲ ಸೆಕೆಂಡರಿ ಮಟ್ಟದ ವಿದ್ಯಾಭ್ಯಾಸ ವ್ಯವಸ್ಥೆಯ ವಿಸ್ತರಣೆ

(೯ನೇ ಪುಟ ನೋಡಿರಿ)

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್

(೧ನೇ ಪುಟದಿಂದ)

ವಾದುದೆಂಬ ಭಾವನೆ ತೊಲಗಿ ಇನ್ನು ಇನ್ನೂ ಅನೇಕರ ರಾಜಿನಾಮೆ ಅಂಗೀಕಾರವಾಗಬೇಕಾಗಿದೆ. ಮುಂದಿನ ತಿಂಗಳುಗಳಲ್ಲಿ ಕಾಂಗ್ರೆಸ್ಸಿನಲ್ಲಿ ಇನ್ನೂ ಅನೇಕ ಅಚ್ಚರಿಗಳನ್ನೂ ಕಾಣಬಹುದಾಗಿದೆ. ಬಿಟ್ಟವರ ಜಾಗವನ್ನು ತುಂಬುವುದರಲ್ಲೂ ನೆಹರೂರವರು ಸ್ಫೂರ್ತಿ ಮೂಡುವಂಥ ಪಾತ್ರವನ್ನು ವಹಿಸಬೇಕಾದ ಅಗತ್ಯವಿದೆ. ಅಲ್ಲಿಯೂ ರಸ ಭಂಗ ಬರದಂತೆ ನೋಡಿಕೊಳ್ಳಬೇಕಾಗಿದೆ.

ಇದು ಮಂಗಳಕರವಾಗಿ ಕಾಂಗ್ರೆಸ್ಸಿಗೆ ಬೇಕಾಗಿರುವ ಸಂಜೀವಿನೀ ಶಕ್ತಿಯನ್ನು ಕೊಡುವಂತಾಗಿ ಕೊನೆಗೊಂಡರೆ ಇದರಲ್ಲಿ ನೆಹರೂರವರ ಪಾತ್ರ ಯಶಸ್ವಿಯಾಗಿ ಅವರ ಅಖಂಡ ನಾಯಕತ್ವಕ್ಕೆ ಪಟ್ಟಾಭಿಷೇಕವಾಗಿ ಭಾರತವು ಸಮಾಜವಾದತನ್ನ ಉನ್ನತ ಗುರಿಯನ್ನು ಸೇರಿ ಸರ್ವತೋಮುಖ ಅಭಿವೃದ್ಧಿಯನ್ನು ಹೊಂದಲು ಸಾಧ್ಯವಾಗುವುದೆಂದು ನಂಬಬಹುದು.

ಸುಲಭದಲ್ಲಿ ಉಳಿತಾಯ......................................
ಕೊರ್ಪೊರೇಶನ್ ಬೇಂಕ್
ಜನತಾ ಡಿಪ್ರೊಜಿಟ್ ಯೋಜನೆಯು
ಜನಸಾಮಾನ್ಯರಿಂದ ಹಿಡಿದು ಎಲ್ಲ ವರ್ಗದ ಜನರಿಗೂ ಸುಲಭದಲ್ಲಿ ಉಳಿತಾಯ ಮಾಡಲು ಸಹಕರಿಸುತ್ತದೆ.
ವಿವರಗಳಿಗಾಗಿ ಇಂದೇ ವಿಚಾರಿಸಿರಿ:
ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ರಿಜಿಸ್ಟರ್ಡ್ ಆಫೀಸು, ಉಡುಪಿ)
ಆಡಳಿತ ಆಫೀಸು: ಮಂಗಳೂರು

● ಕುಮಾರಿ ಬಿಲ್ಲೆಗಳು ●
(ರಿಜಿಸ್ಟರ್ಡ್ Regd.)
ಪ್ರಕೃತಿಯು ವಿಫಲಗೊಂಡಾಗ ಉಂಟಾಗುವ ಕಾತರ ನಿವಾರಣೆಗೆ ಸಮಯೋಚಿತವಾದ ಆಯುರ್ವೇದೀಯ ಮಿಶ್ರಣ!
ಟ್ಯೂಬ್ 1ರ ಸಾಮಾನ್ಯ ರೂ. 4/- ಮಧ್ಯಮ ರೂ. 6/ ಉತ್ತಮ ರೂ 9/-
P. Devee & Co (N J.) Calcutta—40-

ಶಿಕ್ಷಕರ ದಿನದ ವಿಶೇಷ ಲೇಖನ

ಗುರುಗಳ ಬಗ್ಗೆ ನಮ್ಮ ಕರ್ತವ್ಯ

ಲೇ: ಡಾ|| (ಶ್ರೀಮತಿ) ಟಿ. ಎಸ್. ಸೌಂದರಂ, ರಾಮಚಂದ್ರನ್
(ಭಾರತ ಸರ್ಕಾರದ ಶಿಕ್ಷಣ ಮಂತ್ರಿ ಶಾಖೆ ಉಪಮಂತ್ರಿಗಳು)

× × × ×

೧೯೬೩ ಸೆಪ್ಟೆಂಬರ್ ೫ರಂದು ರಾಷ್ಟ್ರದಾದ್ಯಂತ ಶಿಕ್ಷಕರ ದಿನವನ್ನು ಆಚರಿಸಲಾಗುವುದು. ರಾಷ್ಟ್ರಪತಿ ಡಾ|| ಎಸ್. ರಾಧಾಕೃಷ್ಣನ್‌ರ ಜನ್ಮದಿನದಂದೇ ಶಿಕ್ಷಕರ ದಿನಾಚರಣೆ ನಡೆಯುತ್ತಿರುವುದು ನಿಜಕ್ಕೂ ಒಂದು ಸಂತೋಷದಾಯಕ ಘಟನೆ. ನಮ್ಮಲ್ಲಿ ನಮ್ಮತನದ ಅರಿವು ಮೂಡಿಸಲು ಶ್ರಮಿಸಿದ ಗುರುಗಳಿಗೆ ಚಿರಋಣಿಯಾಗಿರುವ ನಾವು, ಅವರ ನಿಸ್ವಾರ್ಥ ಸೇವೆಗಾಗಿ ಅಂದು ಶ್ರದ್ಧಾಂಜಲಿ ಸಲ್ಲಿಸುತ್ತೇವೆ ಶ್ರೀಮತಿ ಸೌಂದರಂ ರಾಮಚಂದ್ರನ್ ಅವರು ತಮ್ಮ ಈ ಲೇಖನದಲ್ಲಿ ಗುರುಗಳ ವಿಷಯದಲ್ಲಿ ಪ್ರೇಮ-ಆದರಗಳನ್ನು ವ್ಯಕ್ತಪಡಿಸುವುದರ ಮೂಲಕ ಹಾಗೂ ಅವರ ಹಿತರಕ್ಷಣಾ ನಿಧಿಗೆ ಉದಾರವಾಗಿ ವಂತಿಗೆಗಳನ್ನು ನೀಡುವುದರ ಮೂಲಕ ಗುರುದಕ್ಷಿಣೆ ನೀಡಬೇಕೆಂದು ಹೇಳಿದ್ದಾರೆ.

× × × ×

ಅನಾದಿ ಕಾಲದಿಂದಲೂ ಕೇವಲ ಭಾರತದಲ್ಲಷ್ಟೇ ಅಲ್ಲ ವಿಶ್ವದ ಎಲ್ಲ ರಾಷ್ಟ್ರಗಳಲ್ಲಿಯೂ ಗುರುಗಳಿಗೆ ಸಮಾಜದಲ್ಲಿ ಉನ್ನತ ಸ್ಥಾನವಿತ್ತು. ಮುದ್ರಣ ಯುಗವು ಆರಂಭವಾಗುವ ಮೊದಲು ಗುರುಗಳೇ ರಾಷ್ಟ್ರದ ಜ್ಞಾನ ಭಂಡಾರವಾಗಿದ್ದರು. ಗುರು-ಶಿಷ್ಯ ಅಥವಾ ಶಿಕ್ಷಕರು—ವಿದ್ಯಾರ್ಥಿಗಳ ನಡುವೆ ಆಗ ಅತ್ಯಂತ ಉದಾತ್ತವಾದ ಹಾಗೂ ನಿಕಟವಾದ ಸಂಬಂಧವಿತ್ತು. ಸಂಸ್ಕೃತದಲ್ಲಿ 'ಮಾತಾ-ಪಿತಾ ಗುರುರ್ದೇವೋ" ಎಂಬ ಒಂದು ವಂದನಾ ಪದ್ಯವಿದೆ. ಗುರುಗಳಿಗೆ ದೇವರಿಗಿಂತಲೂ ಅಗ್ರಸ್ಥಾನವಿದೆಯೆಂದು ಈ ಪದ್ಯದ ಅಂತರಾರ್ಥ. ಭಾವನಾತ್ಮಕ ಹಾಗೂ ವಾಸ್ತವಿಕ ದೃಷ್ಟಿಯಿಂದ ಗುರುಗಳು ಆಗ ತಮ್ಮ ಶಿಷ್ಯನ ವ್ಯಕ್ತಿತ್ವ ನಿರ್ಮಾಣದಲ್ಲಿ ಹಾಗೂ ವಿದ್ಯಾರ್ಜನೆಯಲ್ಲಿ ಉತ್ತಮ ಮಾರ್ಗದರ್ಶಿಯಾಗಿದ್ದರು. ದೊರೆಗಳಿಗೆ ಸೂಕ್ತ ಸಲಹೆ ನೀಡುತ್ತಿದ್ದ, ಹಾಗೂ ಮಂತ್ರಿಮಂಡಲಕ್ಕೆ ಮಾರ್ಗದರ್ಶನ ಮಾಡುತ್ತಿದ್ದ ಅವರು ರಾಷ್ಟ್ರದ ನವಮಾರ್ಗದರ್ಶಿಗಳಾಗಿದ್ದರು.

ಇಂದು, ಗುರುಗಳನ್ನು ಕುರಿತಾದ ಪ್ರಾಚೀನ ವಿಚಾರ—ಸರಣಿಯಲ್ಲಿ ಬದಲಾವಣೆಯಾಗಿದೆ. ಗುರು-ಶಿಷ್ಯರ ನಡುವಣ ಸಂಬಂಧವನ್ನು ನಿಕಟಗೊಳಿಸುವ ಪ್ರಾಚೀನ ನೀತಿ ತತ್ವಗಳು ಗುರುಗಳಿಗಾಗಲೀ ಅಥವಾ ಶಿಷ್ಯರಿಗಾಗಲಿ ಈಗ ಅಷ್ಟೊಂದು ಅಮೂಲ್ಯವಾಗಿ ಕಂಡು ಬರುತ್ತಿಲ್ಲ. ಸಾರ್ವತ್ರಿಕ ಶಿಕ್ಷಣದ ಬೆಳವಣಿಗೆ ಹಾಗೂ ಪ್ರಜಾಸತ್ತಾತ್ಮಕ ರಾಷ್ಟ್ರದಲ್ಲಿ ಶಿಕ್ಷಣವು ರಾಷ್ಟ್ರದ ಪ್ರತಿಯೊಬ್ಬ ಪ್ರಜೆಯ ಮೂಲಭೂತ ಹಕ್ಕು ಎಂಬ ಸಿದ್ಧಾಂತದ ಅಂಗೀಕಾರವೂ ಬಹುಮಟ್ಟಿಗೆ ಇದಕ್ಕೆ ಕಾರಣವಾಗಿದೆಯೆಂದು ಹೇಳಲಾಗುತ್ತಿದೆ ಮಾನವ ಕುಲದ ಇತಿಹಾಸದಲ್ಲಿಯೇ ಇದೊಂದು ಅಪೂರ್ವ ಘಟನೆಯಾದರೂ ಇದರಿಂದ ಸ್ವಾಭಾವಿಕವಾಗಿಯೇ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಸಂಖ್ಯೆಯೂ ಅಷ್ಟೇ ತ್ವರಿತವಾಗಿ ಹೆಚ್ಚಿದೆ. ಫಲಸ್ವರೂಪವಾಗಿ ಗುರು-ಶಿಷ್ಯರ ನಡುವಣ ಸಂಬಂಧದಲ್ಲಿನ ಈ ಮೊದಲಿದ್ದ ವೈಯಕ್ತಿಕ ಅಂಶವೂ ಇಲ್ಲವಾಗುತ್ತದೆ. ಆದರಂತೆಯೇ ಗುರುಗಳಲ್ಲಿ ವಿದ್ಯಾರ್ಥಿಗಳ ವಿಷಯವಾಗಿ ಈ ಮೊದಲಿದ್ದ ವಾತ್ಸಲ್ಯ, ವಿದ್ಯಾರ್ಥಿಗಳ ಮೇಲಿನ ಅವರ ಪ್ರಭಾವ ಹಾಗೂ ಗುರುಗಳ ವಿಷಯವಾಗಿ ವಿದ್ಯಾರ್ಥಿಗಳಲ್ಲಿದ್ದ ಗೌರವಾದರಗಳು ಈಗ ಕ್ರಮಶಃ ಕಮ್ಮಿಯಾಗುತ್ತಾ ನಡೆದಿವೆ. ಶಿಕ್ಷಣದ ವಿಸ್ತರಣೆಯೊಂದಿಗೆ ಗುರು—ಶಿಷ್ಯರ ನಡುವಣ ನಿಕಟವಾದ ಹಾಗೂ ವಾತ್ಸಲ್ಯ ಪೂರ್ಣವಾದ ಸಂಬಂಧಕ್ಕೆ ಏಕೆ ಚ್ಯುತಿ ಬರಬೇಕು? ಎಂಬುದಕ್ಕೆ ಕಾರಣ ದೊರೆಯುತ್ತಿಲ್ಲ.

ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚುತ್ತ ನಡೆದಂತೆ, ಗುರು-ಶಿಷ್ಯರ ನಡುವೆ ಪ್ರಾಚೀನ ಕಾಲದಲ್ಲಿದ್ದ ನಿಕಟಸಂಬಂಧವನ್ನು ಪುನರುಜ್ಜೀವನಗೊಳಿಸಿ ಅದನ್ನು ಬಲಗೊಳಿಸಲು ನಾವು ಶಕ್ತರಾದರೆ ಪ್ರಜಾಪ್ರಭುತ್ವ ಹಾಗೂ ಸಾರ್ವತ್ರಿಕ ಶಿಕ್ಷಣ ಸರ್ವ ವಿಧದಲ್ಲಿಯೂ ಪ್ರಯೋಜನಕಾರಿಯಾಗಬಲ್ಲವು.

ವ್ಯಕ್ತಿತ್ವ ನಿರ್ಮಾಣ

ಸಾರ್ವಜನಿಕರು ಇತ್ತೀಚಿನ ವರ್ಷಗಳಲ್ಲಿ ವ್ಯಕ್ತಿತ್ವ ನಿರ್ಮಾಣದ ಅಗತ್ಯವನ್ನು ಮನವರಿಕೆಮಾಡಿಕೊಂಡಿದ್ದಾರೆ. ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವೆ ಪ್ರಾಚೀನ ಕಾಲದಲ್ಲಿದ್ದ ನೈತಿಕ ಹಾಗೂ ವೈಯುಕ್ತಿಕ ಸಂಬಂಧಗಳು ಪುನರುಜ್ಜೀವನಗೊಳ್ಳದವರೆಗೆ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನವಾಗಲಾರದೆಂಬ ಕಟು ಸತ್ಯವನ್ನು ಅವರು ಅರಿತುಕೊಂಡಿದ್ದಾರೆ. ಇದು ನಿಜಕ್ಕೂ ಒಂದು ಶುಭ ಸಂಕೇತವಾಗಿದೆ. ಪಾಲಕರು ಶಿಕ್ಷಕರ ವಿಷಯದಲ್ಲಿ ಪ್ರೇಮ ಹಾಗೂ ಆದರದ ಮನೋಭಾವ ಬೆಳೆಸಿಕೊಳ್ಳಬೇಕು. ಶಿಕ್ಷಕರ ಗೌರವಾದರಗಳು ಹೆಚ್ಚಿ ಸಮಾಜದಲ್ಲಿ ಅವರಿಗೆ ಉನ್ನತ ಸ್ಥಾನ ದೊರೆಯಬೇಕು ಶಿಕ್ಷಕರಾದರೂ ನಿಷ್ಠೆಯಿಂದ ಕರ್ತವ್ಯ ನಿರ್ವಹಿಸಿ ವಿದ್ಯಾರ್ಥಿಗಳ ಕಲ್ಯಾಣದಲ್ಲಿ ಆಸಕ್ತಿ ತಳೆಯಬೇಕು. ತನ್ಮೂಲಕ ಕೇವಲ ವಿದ್ಯಾರ್ಥಿ ವೃಂದದಲ್ಲಿ ಅಷ್ಟೇ ಅಲ್ಲ ಅವರ ಪಾಲಕರು ಹಾಗೂ ಸಮಗ್ರ ಸಮಾಜದಲ್ಲಿ ಗುರುಗಳ ಬಗೆಗೆ ವಾತ್ಸಲ್ಯ ಹಾಗೂ ಗೌರವದ ಮನೋಭಾವ ಉಂಟಾಗುವಂತೆ ಮಾಡಬೇಕು.

ಸಮಾಜದಲ್ಲಿ ಶಿಕ್ಷಕರ ಸ್ಥಾನ

ಸಮಾಜದಲ್ಲಿ ಶಿಕ್ಷಕರ ಸ್ಥಾನಮಾನಗಳನ್ನು ಹೆಚ್ಚಿಸಲು ಅವರಿಗೆ ಕನಿಷ್ಠ ಜೀವನ ಮಟ್ಟದ ಆಶ್ವಾಸನ ನೀಡುವುದೂ ಅಗತ್ಯ. ಬುದ್ಧಿ ಜೀವಿಗಳಿಗೆ ಬಡತನಶಪವೆಂಬ ಸಾಮಾನ್ಯವಾದ ನಂಬುಗೆಯು ಶಿಕ್ಷಕರ ಹಿತರಕ್ಷಣಾ ಕಾರ್ಯದಿಂದ ವಿಮುಖರಾಗಲು ಒಂದು ನೆಪವಾಗಿ ಪರಿಣಮಿಸಬಾರದು.

ಪ್ರಾಚೀನ ಸಮಾಜವು ಪ್ರತಿಯೊಂದು ವಿಧದಲ್ಲಿಯೂ ಗುರುಗಳ ಹಿತರಕ್ಷಣೆಗೆ ಶ್ರಮಿಸಿತು. ೨೦ನೇ ಶತಮಾನದಲ್ಲಿಯ ನವಸಮಾಜದ ವಿದ್ಯಾರ್ಥಿಗಳ ಪಾಲಕರು, ಶಿಕ್ಷಕರ ಹಿತರಕ್ಷಣೆ ಮಾಡುವುದು ತಮ್ಮ ಪವಿತ್ರ ಕರ್ತವ್ಯವೆಂದು ಭಾವಿಸಬೇಕು. ವೇತನದ ಪ್ರಮಾಣವೇ ಸಮಾಜದಲ್ಲಿ ಶಿಕ್ಷಕರ ಸ್ಥಾನಮಾನಗಳನ್ನು ನಿರ್ಧರಿಸುವ ಮಾನದಂಡವಾಗಬಾರದು. ಪಾಲಕರು ಶಿಕ್ಷಕರನ್ನು ಗೌರವಾದರಗಳಿಂದ ಕಾಣಬೇಕು. ಶಿಕ್ಷಕರಾದರೂ ಪಾಲಕರ ಈ ಗೌರವಾದರಗಳಿಗೆ ಪ್ರತಿಯಾಗಿ ತಮ್ಮ ಕರ್ತವ್ಯ ನಿಷ್ಠೆಯ ಜೊತೆಗೆ ವಿದ್ಯಾರ್ಥಿಗಳ ಹಿತರಕ್ಷಣೆಯ ಕಾರ್ಯದಲ್ಲಿಯೂ ಆಸಕ್ತಿ ವಹಿಸಬೇಕು.

ಡಾ|| ರಾಧಾಕೃಷ್ಣನ್ ಮತ್ತು ಡಾ|| ಝಕೀರ್ ಹುಸೇನ್ ಈ ಇಬ್ಬರು ಶ್ರೇಷ್ಠ ಪ್ರಾಧ್ಯಾಪಕರನ್ನು ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿಗಳೆಂದು ನಾವು ಆಯ್ಕೆ ಮಾಡಿದುದು ನಮ್ಮ ಒಂದು ಮಹಾ ಭಾಗ್ಯ. ಸಮಾಜದಲ್ಲಿನ ಪ್ರತಿಯೊಬ್ಬ ಶಿಕ್ಷಕನಿಗೆ ಸಮಾಜವು ತನ್ನನ್ನು ಗೌರವಿಸುತ್ತದೆ ಮತ್ತು ಪ್ರೇಮ ಭಾವದಿಂದ ಕಾಣುತ್ತಿದೆಯೆಂಬ ಹಾಗೂ ಭಾವೀಯುತ ಜನಾಂಗದ ಭವಿಷ್ಯ ರೂಪಿಸುವಲ್ಲಿ ತಾವು ಒಂದು ಮಹತ್ತರ ಪಾತ್ರ ನಿರ್ವಹಿಸಬೇಕಾಗಿದೆಯೆಂಬ ಭಾವನೆಯುಂಟಾಗಬೇಕು.

ಈ ವಿಧವಾದ ಭಾವನೆಯುಂಟು ಮಾಡುವುದಕ್ಕಾಗಿಯೇ ಮುಖ್ಯವಾಗಿ ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಶಿಕ್ಷಕರ ದಿನವು ರಾಷ್ಟ್ರಪತಿಗಳ ಜನ್ಮದಿನವೂ ಆಗಿದೆಯೆಂಬುದು ಇನ್ನೂ ಹೆಚ್ಚು ಸಂತೋಷದ ಸಂಗತಿ. ಈ ಪವಿತ್ರ ಸಂದರ್ಭದಲ್ಲಿ ಪ್ರತಿಯೊಬ್ಬ ಪಾಲಕ ಹಾಗೂ ಸಮಾಜದ ಪ್ರತಿಯೊಬ್ಬ ಸದಸ್ಯನೂ, ಶಿಕ್ಷಕರನ್ನು ಪ್ರೇಮ ಹಾಗೂ ಆದರಗಳಿಂದ ಕಾಣುವುದು ತಮ್ಮ ಆದ್ಯ ಕರ್ತವ್ಯವೆಂಬುದನ್ನು ಪುನಃ ಸ್ಮರಿಸಿಕೊಳ್ಳಬೇಕು. ಹೀಗೆ ಮಾಡುವುದರಿಂದ ಯುವ ಜನಾಂಗದಲ್ಲಿ ಶಿಕ್ಷಕರಬಗೆಗೆಗೌರವ ಆದರಗಳ ಮನೋಭಾವ ರೂಪಗೊಂಡು ನಾಳಿನ ಸಮಾಜ ನಿರ್ಮಾಣದಲ್ಲಿ ಶಿಕ್ಷಕರು ನಿರ್ವಹಿಸುತ್ತಿರುವ ಮಹತ್ವಪೂರ್ಣ ಪಾತ್ರದ ಬಗೆಗೆ ಮೆಚ್ಚುಗೆ ವ್ಯಕ್ತಪಡಿಸಲು ಹಾಗೂ ಅವರು ಶಿಕ್ಷಕರ ಹಿತರಕ್ಷಣಾ ನಿಧಿಗೆ ಉದಾರರಾಗಿ ವಂತಿಗೆ ನೀಡಲು ಸಾಧ್ಯವಾಗುವುದು.



ನಿಮ್ಮ ದೈನಂದಿನ ಉಳಿತಾಯಕ್ಕೆ
ಒಂದು ಪಂಚವಾರ್ಷಿಕ ಯೋಜನೆ—

ಹನಿ ಡಿಪಾಸಿಟ್ ಸ್ಕೀಮ್

ವಿಶೇಷ ಸೌಲಭ್ಯಗಳು

- ನೀವು ದಿನಂಪ್ರತಿ 0 25 ನಯಾಪೈಸೆಯಂತೆ ಠೇವಣಿ ಇಡಬಹುದು.
- ವಿಳಂಬದ ವಂತಿಗೆಗೆ ದಂಡವಿಲ್ಲ
- ಹನಿ ಡಿಪಾಸಿಟ್ ಭದ್ರತೆಯ ಮೇಲೆ ಸಾಲವೆತ್ತಬಹುದು.

ವಿವರಗಳಿಗೆ ನಿಮಗೆ ಸಮೀಪದ ಶಾಖೆಯೊಂದಿಗೆ ಸಂಪರ್ಕ ಬೆಳೆಸಿರಿ

31—7—63ರಂದು ಜುಮ್ಲಾ ಠೇವಣಾತಿಗಳು
ರೂ 3,40,00,000 ಮಿಕ್ಕಿವೆ

ದಿ ಕರ್ನಾಟಕ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು : ಮಂಗಳೂರು—3.

'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc No. 466 N/50 dated 2—12—1950 of the Director of Public Instruction Madras.

ಶಾಲೆಗಳಿಗೆ ಬೇಕಾಗುವ
ಯಾವತ್ತೂ ಫಾರ್ಮುಗಳೂ
ಹಾಜರು ರಿಜಿಸ್ಟರುಗಳೂ ಸಿಗುತ್ತವೆ.
ನವಯುಗ ಪ್ರೆಸ್ ಉಡುಪಿ.

NAVAYUGA
Kannada Weekly
UDIPI
Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ

ವರುಷ	ಉಡುಪಿ	ವಾರ
೪೩	೫–೯–೧೯೬೩	೧

ಅವಿಶಾಲ ತಳಹದಿ

ತೃತೀಯ ಸಾರ್ವತ್ರಿಕ ಚುನಾವಣಾನಂತರ ಭಾರತದ ಹೆಚ್ಚಿನ ರಾಜ್ಯಗಳಲ್ಲಿ ಮತ್ತು ಕೇಂದ್ರದಲ್ಲಿ ಕೂಡ "ವಿಶಾಲ ತಳಹದಿ"ಯ ಸಚಿವ ಸಂಪುಟಗಳು ನಿರ್ಮಾಣಗೊಂಡಿದ್ದುವು. ಈ ವಿಷಯವು ಆ ಸಮಯದಲ್ಲಿಯೇ ಸಾಕಷ್ಟು ಟೀಕೆಗೆ ಗುರಿಯಾಗಿದ್ದುದನ್ನು ನಾವು ಮರೆಯುವಂತಿಲ್ಲ. ಕಾಂಗ್ರೆಸ್ ವರಿಷ್ಠರು ಆ ಸಮಯದಲ್ಲಿಯೇ ಕಾಂಗ್ರೆಸಿಗರಲ್ಲಿರುವ ಅಧಿಕಾರ ಲಾಲಸೆ ಮತ್ತು ಗುಂಪಿನ ಮನೋವೃತ್ತಿಯನ್ನು ಸ್ವಲ್ಪ ಮಟ್ಟಿಗಾದರೂ ಕಂಡುಕೊಂಡಿದ್ದರು. ಆದರೆ ಇದನ್ನು ಯಾವ ಬಗೆಯಿಂದ ದೂರ ಮಾಡಬಹುದು ಎಂಬುದನ್ನು ಮಾತ್ರ ಅವರು ಹೆಚ್ಚಾಗಿ ವಿವೇಚಿಸದೆ, ವಿಧಾನ ಮಂಡಳಿಗಳಲ್ಲಿನ ಭಿನ್ನ ಮತೀಯರಿಗೆ ಕೂಡ ಸಚಿವ ಸಂಪುಟದಲ್ಲಿ ಸ್ಥಾನ ಕೊಡಿಸುವುದೊಂದೇ ಇದಕ್ಕೆ ಪರಿಹಾರವೆಂದು ಅಂದು ಕಂಡುಕೊಂಡು, ಈ ಬಗ್ಗೆ ನಿರೂಪವನ್ನೂ ಹೊರಡಿಸಿದಂತೆ ಕಂಡು ಬರುತಿತ್ತು. ಕರ್ನಾಟಕದಲ್ಲಿ ಜತ್ತಿ–ನಿಜಲಿಂಗಪ್ಪನವರ ಕತ್ತಿಕಾಳಗವೇ ಇದಕ್ಕೆ ನಿದರ್ಶನ. ರಾಜ್ಯದಲ್ಲಿ ತನ್ನ ಸಹಚರರನ್ನು ಆಯ್ದುಕೊಳ್ಳುವುದು ಮುಖ್ಯಮಂತ್ರಿಯ ವೈಯಕ್ತಿಕ ಹೊಣೆಗಾರಿಕೆಯಾದರೂ ಹೆಚ್ಚಿನೆಡೆಗಳಲ್ಲಿ ಆತನು ಅದನ್ನು ಯೋಗ್ಯ ರೀತಿಯಲ್ಲಿ ನಿರ್ವಹಿಸಲು ಅಸಮರ್ಥನಾದುದರಿಂದಲೋ ಅಥವಾ ಕಾಂಗ್ರೆಸ್ ವರಿಷ್ಠರ 'ಸಮಾಧಾನಪಡಿಸುವ' ನೀತಿಯಿಂದಲೋ ವಿಶಾಲ ತಳಹದಿಯು ರೋಗಗ್ರಸ್ತದ ಬಲಿಯಾಯಿತು. ಆದರೆ, ಭಿನ್ನಾಭಿಪ್ರಾಯಗಳು ಒಂದೆಡೆ ಸೇರಿದರೆ ಏನಾಗುವುದೆಂಬುದು ಕೆಲವು ದಿನಗಳಲ್ಲಿಯೇ ಪ್ರಕಟವಾಯಿತು. ಪ್ರತಿಯೊಂದು ರಾಜ್ಯದಲ್ಲಿಯೂ ಮಂತ್ರಿಮಂಡಳಿಯ ನಡುವೆ ತೀವ್ರ ಭಿನ್ನಾಭಿಪ್ರಾಯಗಳೆದ್ದು ಮಂತ್ರಿಗಳ ನಡುವೆಯೇ 'ಹೊಯ್‌ಕೈ' ನಡೆದ ಘಟನೆಗಳು ಅನಪೇಕ್ಷಣೀಯವಾಗಿಯಾದರೂ ಅಲ್ಲಲ್ಲಿ ನಡೆದು ಹೋದವು.

ಚೀನೀಯರ ಆಕ್ರಮಣಾನಂತರ ಭಾವೈಕ್ಯ ಹಾಗೂ ಐಕ್ಯಮನೋಭಾವನೆಯ ಆವಶ್ಯಕತೆಯು ಮತ್ತಷ್ಟು ಬೆಳೆದುದರಿಂದ ಸಚಿವ-ಸಚಿವರಲ್ಲಿ, ಸರಕಾರ-ಪಕ್ಷಗಳಲ್ಲಿ ಹೋರಾಟ ನಡೆಯುತ್ತಿರುವುದು ತೀವ್ರ ಬಿಕ್ಕಟ್ಟಿಗೆ ಪ್ರೇರಕ ಶಕ್ತಿಯಾಗುವುದರಿಂದ, ಇದರ ಪರಿಹಾರದ ಪ್ರಶ್ನೆಯು ಭೂತಾಕಾರವಾಗಿ ನಿಂತಿತು. ಇದಕ್ಕೆ ತಕ್ಕ ಚಿಕಿತ್ಸೆಯನ್ನು ಅರಸುವಲ್ಲಿ ಪ್ರಧಾನಿಯವರು ಯೋಚಿಸುತ್ತಲೇ ಇದ್ದರು. ಆವರ ಹೊತ್ತಿಗೆ ಸರಿಯಾಗಿ ಮದ್ರಾಸದ ಅಭಿಷಿಕ್ತ ದೊರೆ 'ಕಾಮರಾಜ ನಾಡಾರರ ಸೂತ್ರ'ವು ನೆರವಿಗೆ ಬಂತು. ಸಂಜೀವರೆಡ್ಡಿಯವರು ಅಂದು ವ್ಯಕ್ತಪಡಿಸಿದ ಸಲಹೆಯ ಬಗ್ಗೆ ನೆಹರು ಗಂಭೀರವಾಗಿ ಪರ್ಯಾಲೋಚನೆ ನಡೆಸಲಿಲ್ಲ; ನಿಜ. ಆದರೆ, ಅಂದು ಕಾಲವೂ ಅನುಕೂಲವಾಗದಿರುವುದು ಅದಕ್ಕೆ ಕಾರಣವಿದ್ದಿರಲೂ ಬಹುದು. ಇಂದು ಅನಿಲಾನಲ ಸಂಯೋಗವಾದಂತೆ ಕಾಮರಾಜ ಸೂಚನೆಯು ಸ್ವೀಕೃತವಾಯಿತು. ಪಕ್ಷದ ಸಂಘಟನೆಗೆಂದು ಕೆಲವು ಕೇಂದ್ರಮಂತ್ರಿಗಳೂ ರಾಜ್ಯದ ಮುಖ್ಯ ಮಂತ್ರಿಗಳೂ ಸೊಂಟ ಕಟ್ಟಿ ನಿಂತಿದ್ದಾರೆ. ಇನ್ನೂ ಕೆಲವರು ಇವರ ದಾರಿಯನ್ನು ಹಿಡಿಯುವ ನಿರೀಕ್ಷೆಯಿದೆ.

ಹೀಗೆ ನಿವೃತ್ತರಾದ ಮಂತ್ರಿಗಳ ಸ್ಥಾನಗಳನ್ನು ತುಂಬಿಸಿಕೊಳ್ಳದೆ, ಮಂತ್ರಿಮಂಡಳದ ಪರಿಮಾಣವನ್ನು ಚಿಕ್ಕದು ಮಾಡುವ ಆಲೋಚನೆಯನ್ನು ಪ್ರಧಾನಿಯವರು ಇಟ್ಟುಕೊಂಡಿರುತ್ತಾರೆ. ಹಾಗೂ ಮುಖ್ಯ ಮಂತ್ರಿಗಳ ರಾಜಿನಾಮೆಯಿಂದಾಗಿ ಮರಳಿ ರಚಿತವಾಗುವ ಸಚಿವ ಸಂಪುಟದ ಪ್ರಮಾಣವು ಚಿಕ್ಕದಾಗಿರಬೇಕೆಂದೂ ಈಗ ಉಳಿದಿರುವ ವಿಶಾಲ ತಳಹದಿಯ ಮಂತ್ರಿಮಂಡಳಗಳನ್ನಾದರೂ ಎಳೆಯದನ್ನಾಗಿಸಬೇಕೆಂದೂ ಸಲಹೆಯನ್ನು ಕಾಂಗ್ರೆಸ್ ವರಿಷ್ಠರು, ಮುಖ್ಯವಾಗಿ ಪ್ರಧಾನಿ ನೆಹರೂರವರು, ನೀಡಿದ್ದಾರೆ. ನಿಜಲಿಂಗಪ್ಪನವರು ಹೇಳುವಂತೆ ಅಂದು ಯಾರನ್ನು ತೆಗೆದುಕೊಳ್ಳಬೇಕೆಂಬ ಪ್ರಶ್ನೆ ಎದ್ದಂತೆಯೇ ಈಗ ಯಾರನ್ನು ಬಿಟ್ಟುಬಿಡಬೇಕೆಂಬ ಸಮಸ್ಯೆಯು ಮುಂದೆ ಬಂದಿದೆ. ಆದರೂ ಜಾಣ್ಮೆಯಿಂದ ಸಚಿವ ಸಂಪುಟದ ಪುನರ್ಘಟನೆಯನ್ನು ಮಾಡುವಲ್ಲಿ ಎಲ್ಲ ಮುಖ್ಯಮಂತ್ರಿಗಳೂ ಆಸಕ್ತಿ ತಳೆಯುವರೆಂದು ನಂಬಬಹುದು.

ಒಂದು ಸರಕಾರದ ಸಾಮರ್ಥ್ಯವಿರುವುದು ಅದರಲ್ಲಿರುವ ಮಂತ್ರಿಗಳ ಅಥವಾ ಅಧಿಕಾರಿಗಳ ಸಂಖ್ಯೆಯ ಮೇಲಲ್ಲ. ಯೋಗ್ಯರೂ ಸಮರ್ಥರೂ ಕ್ರಿಯಾಶೀಲಿಗಳೂ ಆದ ಬೆರಳೆಣಿಕೆಯ ಸಂಖ್ಯೆಯ ಮಂತ್ರಿಗಳಿರುವ ಕಾಲದಲ್ಲಿ ಸರಕಾರಗಳು ಸಮರ್ಪಕವಾಗಿ ನಡೆಯುತಿದ್ದುವೆಂಬುದನ್ನು ನಾವು ಅಲಕ್ಷಿಸುವಂತಿಲ್ಲ. ಭಾರತದ ರಾಜ್ಯಗಳಲ್ಲೆಲ್ಲ ಅತಿ ಶಾಂತವಾದ ಮದ್ರಾಸದಲ್ಲಿ ಪುಟ್ಟ ಸಂಪುಟವಿದೆ. ಅಲ್ಲಿನ ಸರಕಾರದ ಮೇಲೆ ದೋಷ ಹೊರಿಸುವ ಸಾಹಸವನ್ನು ಯಾರು ತಾನೇ ಮಾಡಬಲ್ಲರು? ಬದಲು ಉತ್ತರ ಪ್ರದೇಶವನ್ನು ನಾವು ತೆಗೆದುಕೊಳ್ಳುವುದಾದರೆ, ನಲುವತ್ತಕ್ಕೂ ಮಿಕ್ಕಿದ ಮಂತ್ರಿಗಳು ಪರಸ್ಪರ ಭಿನ್ನಾಭಿಪ್ರಾಯದಲ್ಲಿ ಹೊಡೆದಾಡಿದರು. ಬಿಹಾರ—ಪಂಜಾಬಗಳ ಮಾತಂತು ಲಂಚಗುಳಿತನಕ್ಕೆ ಹೆಸರಾಗಿದೆ. 'ವಿಶಾಲ ತಳಹದಿ'ಯ ಅಧಿಕ ಸಂಖ್ಯೆಯ ಮಂತ್ರಿಗಳಲ್ಲಿ ಒಮ್ಮನಸ್ಸನ್ನು ಹುಟ್ಟಿಸುವುದು ನಿಜಕ್ಕೂ ಕಷ್ಟಕರವಾದ ಕಾರ್ಯ. ಹಾಗಿರುವಾಗ, ಸರಕಾರವು ತನ್ನ ನೀತಿಯನ್ನು, ಪಕ್ಷವು ಇತ್ತ ಆದೇಶವನ್ನು ರೂಪಿಸುವುದು ಮತ್ತು ಕಾರ್ಯಗತಗೊಳಿಸುವುದು ಹೇಗೆ? ಅತಿ ದೀರ್ಘತೆಯು ನಿಜಕ್ಕೂ ಗುಣನಷ್ಟಕ್ಕೆ ಕಾರಣವಾಗುವುದು. ಎಂದರೆ, ಸರಕಾರದ ಸಂಪೂರ್ಣ ಹೊಣೆಗಾರಿಕೆಯು ಒಬ್ಬಿಬ್ಬರ ಸರ್ವಾಧಿಕಾರದಲ್ಲಿಯೇ ಉಳಿಯಬೇಕೆಂದು ಅರ್ಥವಲ್ಲ. ಅಥವಾ ಹಿಂದಿನ ಕಾಲದಂತೆ ತೀರ ಚಿಕ್ಕದಾದ ಮಂತ್ರಿಮಂಡಳಗಳಿರಬೇಕೆಂದೂ ಭಾವಿಸಬಾರದು. ಸ್ವಾತಂತ್ರ್ಯಾನಂತರ, ದೇಶದಲ್ಲಿ ಹಲವಾರು ಪ್ರಮುಖ ಶಾಖೆಗಳು ಹೊಸತಾಗಿ ತೆರೆಯಲ್ಪಟ್ಟಿವೆ. ಆದುದರಿಂದ; ಜನತಾ ಸರಕಾರದ ಕರ್ತವ್ಯ ಮತ್ತು ಹೊಣೆಗಾರಿಕೆಗಳೂ ಹೆಚ್ಚಾಗಿವೆ. ಹೀಗೆ ಅಧಿಕ ಕಾರ್ಯಗಳ ಜವಾಬ್ದಾರಿ ಹೊರಲು ಹೆಚ್ಚಿನ ಮಂತ್ರಿಗಳೂ ಅಧಿಕಾರಿಗಳೂ ಬೇಕು, ನಿಜ. ಆದರೆ, ಇದಕ್ಕೂ ಮಿತಿಯಿರಬೇಕು. ಸಚಿವ ಸಂಪುಟವು ತಾನು ಕೇವಲ ಸರಕಾರದ ನೀತಿಯನ್ನು ರೂಪಿಸುವುದು; ಅದನ್ನು ಅನುಷ್ಠಾನಕ್ಕೆ ತರುವ ಹೊಣೆ ಕಾರ್ಯಾಂಗದ್ದು, ಸಂಬಂಧಿತ ಅಧಿಕಾರಿಗಳದ್ದು. ಮಂತ್ರಿಗಳು ಕಾರ್ಯಾಂಗದಲ್ಲಿಯೂ ತಮ್ಮ ಮೀಸೆ ಹೊಗ್ಗಿಸುವ ಪ್ರಯತ್ನ ಕೆಲವೆಡೆ ನಡೆದಿದೆ. ಅವರೂ ಲಂಚ ರುಷುವತ್ತುಗಳ ಮುಂದೆ ತಲೆ ತಗ್ಗಿಸಿದ್ದಾರೆ. ಇದಕ್ಕಿಂತ ದೊಡ್ಡ ಅಪಮಾನ ಮತ್ತಾವುದಿದೆ? ಆದುದರಿಂದ, ಸರಕಾರದ ಕರ್ತವ್ಯ ಪಾಲನೆಗೆ ತೀರ ಅತ್ಯವಶ್ಯವೆನಿಸುವ ಪ್ರಮಾಣದಲ್ಲಿ ಕೇಂದ್ರದಲ್ಲಿಯೂ ರಾಜ್ಯಗಳಲ್ಲಿಯೂ ಮಂತ್ರಿಮಂಡಳಗಳ ಪುನರ್ಘಟನೆಯಾಗಬೇಕು. ಇಲ್ಲಿ ನಾಯಕರು ಯಾವ ದಾಕ್ಷಿಣ್ಯಕ್ಕೂ ಬಲಿ ಬೀಳಬಾರದು. ಕೆಚ್ಚೆದೆಯಿಂದ ಕಾರ್ಯಪ್ರವೃತ್ತರಾಗಬೇಕು.

ಸುಬಾಂಡ್ರಿಯೋ ವಿಶ್ವಾಸ

ಇಂಡೋನೇಶ್ಯಾದ ವಿದೇಶ ಮಂತ್ರಿ ಸುಬಾಂಡ್ರಿಯೋ ಕೆಂಪುಚೀನಾದ ಆಕ್ರಮಣದ ವಿಷಯದಲ್ಲಿ ವಿಲಕ್ಷಣ ಸುದ್ದಿಯೊಂದನ್ನು ಬಹಿರಂಗಪಡಿಸಿ ತುಸು ಗಲಿಬಿಲಿಯನ್ನುಂಟು ಮಾಡಿದ್ದಾರೆ. ಚೀನಾವು ಭಾರತದ ಮೇಲೆ ಎಂದಿಗೂ ಆಕ್ರಮಣ ನಡೆಸುವುದಿಲ್ಲವೆಂದೂ ಒಂದು ವೇಳೆ ಭಾರತವು ಅದರ ಮೇಲೆ ಧಾಳಿ ಮಾಡಿದರೆ, ಅದು ಕೊಲಂಬೋ ರಾಷ್ಟ್ರಗಳಿಗೆ ತಿಳಿಸುವುದೆಂದೂ ಪೀಕಿಂಗ್ ಅವರಿಗೆ ಭರವಸೆಯಿತ್ತಿದೆಯಂತೆ. ಆದರೆ, ಚೀನೀಯರು ಭಾರತದ ಗಡಿಪ್ರದೇಶದಲ್ಲಿ ಕೊಡುತ್ತಿರುವ ಕೀಟಲೆ ಮತ್ತು ಏರ್ಪಡಿಸುತ್ತಿರುವ ತಯಾರಿ ಹಾಗೂ ಓಡಿಸುತ್ತಿರುವ ಬೃಹತ್ ಸೇನೆ—ಸೈನಿಕೋಪಕರಣಗಳು ಈ ಮಾತನ್ನು ಸತ್ಯಸಿದ್ಧ ಮಾಡುತ್ತಿವೆಯೇ ಎಂಬುದು ಸಂದೇಹಾಸ್ಪದ. ಭಾರತವು ಸಂಧಾನಕ್ಕಾಗಿ ಸದಾಸಿದ್ಧವಾಗಿದ್ದರೂ ಕೊಲಂಬೋ ಸೂಚನೆಯನ್ನು ಒಪ್ಪದೆ ಸೈನ್ಯ ತಯಾರಿಯಲ್ಲಿಯೇ ಮಗ್ನವಾಗುತ್ತಿರುವ ಚೀನಾ ಮರಳಿ ಧಾಳಿ ಮಾಡುವುದಿಲ್ಲವೆಂಬ ಭಾವನೆಯನ್ನು ಭಾರತವು ತಾಳುವಂತಿಲ್ಲ. ಏಕೆಂದರೆ, ಒಮ್ಮೆ ನಾವು ಚೀನಾವನ್ನು ನಂಬಿ ಮೋಸ ಹೋಗಿದ್ದೇವೆ. ಹಾಗಾಗಿ, ಸುಬಾಂಡ್ರಿಯೋರವರು ಸತ್ಯ ಸಂಗತಿಯನ್ನೇ ಸ್ಫೋಟಿಸಿದ್ದಿದ್ದರೂ ನಾವು ಕೈಕಟ್ಟಿ ಕುಳಿತುಕೊಳ್ಳುವಂತಿಲ್ಲ. ನಮ್ಮ ಸೈನ್ಯ ಶಕ್ತಿ—ಸಾಂಪತ್ತಿಕ ಶಕ್ತಿಗಳ ಕೂಡಿಕೆಯಲ್ಲಿ ನಾವು ದ್ರುತಗತಿಯಿಂದ ಧಾವಿಸಿ ಕಾರ್ಯ ಪ್ರವರ್ತರಾಗಬೇಕು. ಚೀನಾವು ತನ್ನದೆಂದು ವಾದಿಸುವ ಕೆಲವೊಂದು ಭೂ ಭಾಗಗಳು ಭಾರತದ್ದೇ ಆಗಿರುವಾಗ; ಅಂತಹ ವಿವಾದಗ್ರಸ್ತ ನೆಲದಲ್ಲಿ ಚೀನೀಯರು ತಳವೂರಲು ಹವಣಿಸಿದರೆ, ಅದು ಆಕ್ರಮಣವೇ ಅಲ್ಲವೆ? ಲಡಾಖ ಪ್ರದೇಶದಲ್ಲಿ ಇನ್ನೂ ಆಕ್ರಮಣ ಉಳಿದಿಲ್ಲವೆ? ತಾನೇ ಘೋಷಿಸಿದ ಸಮರ ನಿಯಂತ್ರಣ ರೇಖೆಯನ್ನು ಕೆಂಪುಚೀನವೇ ಭಂಗಿಸಿರುವಾಗ ಭಾರತವು ಆಕ್ರಮಣ ಭೀತಿಯನ್ನು ಬಿಡುವುದಾದರೂ ಹೇಗೆ? ಚೀನಕ್ಕೆ ಭಾರತವನ್ನು ಆಕ್ರಮಿಸುವ ಉದ್ದೇಶವಿಲ್ಲವೆಂದಾದಲ್ಲಿ ಅದು ಗಡಿಯಲ್ಲಿ ಸೇನಾ ಚಟುವಟಿಕೆಗಳನ್ನು ಹೆಚ್ಚಿಸುತ್ತಿರುವುದಾದರೂ ಏಕೆ? ಇದಕ್ಕೆ ಯಾವ ಉತ್ತರವನ್ನು ಯಾರು ತಾನೇ ಹೇಳಬಲ್ಲರು? ಸುಬಾಂಡ್ರಿಯೋ ವಿಶ್ವಾಸವಿಟ್ಟರೂ ಭಾರತೀಯರ ಮಾನಸ್ಸಿಗೆ ನೆಮ್ಮದಿ ದೊರೆಯಬೇಕಾದರೆ ಚೀನಾ ಕೊಲಂಬೊ ಸಲಹೆಗಳನ್ನು ಇದ್ದಕ್ಕಿದ್ದಂತೆ ಒಪ್ಪಿ ಸೇನಾ ಚಟುವಟಿಕೆಗಳನ್ನು ಬರ್ಖಾಸ್ತುಗೊಳಿಸಬೇಕು.

ಚಂದಾದಾರರಲ್ಲಿ ವಿನಂತಿ

ಕಳೆದ ಆಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ 42ನೆಯ ವರ್ಷವು ಮುಗಿದು ಇದೇ ಸಪ್ಟಂಬರದಿಂದ 43ನೆಯ ಹೊಸ ವರ್ಷಾರಂಭವಾಗಿದೆ. ಈ ಅವಧಿಗೆ ಚಂದಾ ಅವಧಿ ಮುಗಿಯುವವರೂ ಚಂದಾಹಣ ಬಾಕಿ ಇರುವವರೂ ತಮ್ಮ ತಮ್ಮ ಬಾಕಿಯನ್ನು ದಯಮಾಡಿ ಆದಷ್ಟು ತ್ವರ್ಯ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ. ಚಂದಾಹಣವನ್ನು, "ಸಿಂಡಿಕೇಟ್ ಬ್ಯಾಂಕಿ"ನ ಯಾವದೇ ಶಾಖೆಯಲ್ಲಿ "ನವಯುಗ"ದ ಖಾತೆಗೆ ಯಾವ ಖರ್ಚೂ ಇಲ್ಲದೆ ಜಮಾವತಿ ಮಾಡಬಹುದು, ಇಲ್ಲವೆ ಮನಿಯಾರ್ಡರು ಮಾಡಬಹುದು. ವಿ. ಪಿ. ಮಾಡಿದರೆ 70 ನ. ಪೈಸೆಯಷ್ಟು ಹೆಚ್ಚಿಗೆ ಬೀಳುವುದರಿಂದ ಎಲ್ಲರೂ ಮುಂದಾಗಿ ಚಂದಾ ಕಳುಹಿಸಿ ಕೊಡುವಂತೆ ಬಿನ್ನವಿಸುತ್ತೇವೆ. ಅಂತೂ ತಾ. 10ರೊಳಗೆ ಚಂದಾ ಬಾರದಿದ್ದರೆ ಅನಿವಾರ್ಯವಾಗಿ ಬಾಕಿಗೆ ಕ್ರಮಶಃ ವಿ. ಪಿ. ಮಾಡಬೇಕಾಗುತ್ತದೆ.

— ಮೆನೇಜರ್.

ಕಾರ್ಕಳ ಡಿ. ಮು. ಕೋರ್ಟನಲ್ಲಿ

O. S. No. 261/1963

ಗೋಪಾಲ ಪ್ರಭು ಯವರ G. P. A. Holder ಶ್ರೀ H ವಾಸುದೇವ ಕಾಮತ್ ವಕೀಲ ಮಂಗಳೂರು —ವಾದಿ

ಪರಮೇಶ್ವರ ಪೂಜಾರಿ ಕೂಡಾ —ಪ್ರತಿವಾದಿರು

1. ಪರಮೇಶ್ವರ ಪೂಜಾರಿ, ಮುತ್ತು ಹೆಂಗ್ಸಿನ ಮಗ. 2. ಅಪ್ಪಿ ಹೆಂಗ್ಸು ತೋಮು ಹೆಂಗ್ಸಿನ ಮಗಳು—ಮಂಗಳೂರು ತಾಲ್ಲೂಕ ಹಳೆಯಂಗಡಿ ಗ್ರಾಮದಲ್ಲಿರುವವರು —ಪ್ರತಿವಾದಿರು.

ಸದ್ರಿ ಪ್ರತಿವಾದಿರವರ ನಿಮಗೆ ಈ ಮೂಲ್ಕ ತಿಳಿಸುವದೇನಂದ್ರೆ—

ನೀವು ವಾದಿಯವರಿಗೆ ಚಾಲಿಗೇಣಿ ಹಕ್ಕಿನಿಂದ ಅನುಭವಿಸಿ ಬರುವ ಆಸ್ತಿಯ ಬಾಬ್ತು ನಿಮ್ಮಿಂದ ವಾದಿಗೆ ತಾ. 31–3–1963ನೇ ವ್ಯಾದೆಗೆ ಬರತಕ್ಕ ಚಾಲಗೇಣಿ ಗೇಣಿ ಬಡ್ಡಿ ಕೂಡಾ ರೂ. 996.39ಕ್ಕೆ ವಾದಿಯು ದಾಕ್ಲು ಮಾಡಿದ ಸದ್ರಿ ದಾವೆಯು ತಾರೀಖು 12–9–1963ಕ್ಕೆ ನಿಮ್ಮ ಹಾಜ್ರಿ ಬಗ್ಗೆ ಇಟ್ಟಿದೆ. ಆಕ್ಷೇಪ ಇದ್ರೆ ಸದ್ರಿ ದಿನ ಬೆಳಿಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ನೀವು ಹಾಜ್ರಾಗಿ ಉದಾಹರಣೆ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ ಹಾಜ್ರಿಯಲ್ಲಿ ದಾವಾ ತೀರ್ಮಾನವಾಗುವದು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸಿಯದೆ.

K. V. Kamath
Advocate for Plaintiff

Karkala, 1—9—63

ಅಲ್ಲಲ್ಲಿಯ ಸುದ್ದಿಸಾರ

ಡೆವೆಲಪ್‍ಮೆಂಟ್ ಆಫೀಸರರ ಸಭೆ— ತಾ 26-8-63ರಂದು ಹಿರಿಯ ಡಿವಿಜನಲ್ ಮೆನೇಜರ್ ಶ್ರೀ ಟಿ. ಆರ್. ಎ ಪೈಗಳ ಅಧ್ಯಕ್ಷತೆಯಲ್ಲಿ ಉಡುಪಿ ರೀಜಾ ಡೆವಲಪ್‍ಮೆಂಟ್ ಆಫೀಸರರ ಸಭೆಯು ಉಡುಪಿಯ ಜೀವನ ವಿಮಾ ಆಫೀಸಿನಲ್ಲಿ ಜರಗಿತು

ಆರಂಭದಲ್ಲಿ ಬ್ರಾಂಚ್ ಮೆನೇಜರ್ ಶ್ರೀ ಟಿ. ಪಿ. ಎನ್. ನಂಬಿಯಾರರು ಸ್ವಾಗತಿಸಿದರು. ಮಾನ್ಯ ಅಧ್ಯಕ್ಷರು ತಮ್ಮ ಭಾಷಣದಲ್ಲಿ ವಿಮಾ ವ್ಯವಹಾರದ ಅಭಿವೃದ್ಧಿ ಹೇಗೆ ಸಾಧ್ಯವೆಂದು ತಿಳಿಸಿದರು ಅಸಿಸ್ಟೆಂಟ್ ಡಿವಿಜನಲ್ ಮೆನೇಜರ್ ಶ್ರೀ ಎಲ್. ಎಸ್. ಸಿ ವಾಜಿರವರು, ಪಾಲಿಸಿದಾರರಿಗೆ ಸಲ್ಲಿಸಬೇಕಾದ ಸೇವೆಯ ಬಗ್ಗೆ ತಿಳಿಸಿದರು ಅಂತ್ಯದಲ್ಲಿ ಅಸಿಸ್ಟೆಂಟ್ ಬ್ರಾಂಚ್ ಮೆನೇಜರ್ ಶ್ರೀ ಎಸ್ ಎ ಹೆಗ್ಡೆಯವರು ಧನ್ಯವಾದ ಸಮರ್ಪಿಸಿದರು

ಮಣಿಪಾಲದಲ್ಲಿ ಸಚಿವ ಶ್ರೀ ಕೆ ಮಲ್ಲಪ್ಪನವರು—ಆಲ್ ಇಂಡಿಯಾ ಮೆನ್ಯುಫೇಕ್ಚರರ್ಸ್ ಓರ್ಗನೈಸೇಶನ್ ಸ್ಟೇಟ್ ಬೋರ್ಡ್ ಕೆನರಾ ಕೌನ್ಸಿಲಿನ ಆಶ್ರಯದಲ್ಲಿ, ಮಣಿಪಾಲದಲ್ಲಿ, ಕಳೆದ ತಾ. ೨೬ರಂದು, ರಾಜ್ಯದ ಕೈಗಾರಿಕಾ ಸಚಿವ ಶ್ರೀ ಕೆ ಮಲ್ಲಪ್ಪನವರ ಅಧ್ಯಕ್ಷತೆಯಲ್ಲಿ, ಕೈಗಾರಿಕಾ ಉದ್ಯಮಿಗಳ ಸಭೆಯು ಜರಗಿತು.

ಆರಂಭದಲ್ಲಿ ಡಾ। ಟಿ ಮಾಧವ ಪೈಗಳು ಸ್ವಾಗತಿಸುತ್ತಾ, ವಿದ್ಯಾವಂತ ನಿರುದ್ಯೋಗಿಗಳ ಸಮಸ್ಯೆಗಳನ್ನು ವಿವರಿಸಿ, ಇದಕ್ಕೆ ಪರಿಹಾರೋಪಾಯವಾಗಿ, ಮಣಿಪಾಲದಲ್ಲಿ ಸರಕಾರೀ ಪದ್ಧತಿಯಲ್ಲಿ ಇಂಡಸ್ಟ್ರಿಯಲ್ ಎಸ್ಟೇಟಿನ ಸ್ಥಾಪನೆ ಅವಶ್ಯವೆಂದು ತಿಳಿಸಿ, ಅದಕ್ಕೆ ಸಹಾಯ ನೀಡುವೆನೆಂದ ಮಾನ್ಯ ಸಚಿವರಿಗೆ ಕೃತಜ್ಞತೆಗಳನ್ನರ್ಪಿಸಿದರು

ಮಾನ್ಯ ಸಚಿವರು ಮಾತಾಡುತ್ತಾ, ದ ಕ. ಜಿಲ್ಲೆಯಲ್ಲಿನ ಕೈಗಾರಿಕಾ ಪ್ರಗತಿಯನ್ನು ಪ್ರಶಂಸಿಸಿ ಅದರ ಪ್ರಗತಿ ಸಾಲದೆಂದೂ ಮಣಿಪಾಲದಲ್ಲಿ ಶೈಕ್ಷಣಿಕ ಅಭಿವೃದ್ಧಿಯ ಜೊತೆಗೆ ಕೈಗಾರಿಕಾ ಅಭಿವೃದ್ಧಿಯ ಕಾರ್ಯಗಳೂ ತೊಡಗಬೇಕೆಂದೂ ಇಂಡಸ್ಟ್ರಿಯಲ್ ಎಸ್ಟೇಟು ಸ್ಥಾಪನೆಯು ಶ್ಲಾಘನೀಯವೆಂದೂ ಅದಕ್ಕೆ ಬೇಕಾದ ಸವಲತ್ತುಗಳನ್ನೀಯಲು ತಾನು ಸದಾ ಸಿದ್ಧನಾಗಿರುವೆನೆಂದೂ ಇಂಡಸ್ಟ್ರಿಯಲ್ ಎಸ್ಟೇಟಿನ ಸ್ಥಾಪನೆಯಿಂದ ಸಮಾಜ ಸೇವೆಯ ಜೊತೆಗೆ ನಿರುದ್ಯೋಗಿಗಳ ಸಮಸ್ಯೆಯೂ ನಿವಾರಣೆಯಾಗುವುದೆಂದೂ ಹೇಳಿದರು.

ಇಲೆಕ್ಟ್ರೋನಿಕ್ ಕ್ಲಬ್ಬಿನ ಉದ್ಘಾಟನೆ— ರಾಜ್ಯ ಕೈಗಾರಿಕಾ ಸಚಿವ ಶ್ರೀ ಕೆ. ಮಲ್ಲಪ್ಪನವರು, ಕಳೆದ ತಾ. 29ರಂದು, ಮಣಿಪಾಲದ ಇಂಜಿನಿಯರಿಂಗ್ ಕಾಲೇಜಿನ ಇಲೆಕ್ಟ್ರೋನಿಕ್ ಕ್ಲಬ್ಬಿನ ಉದ್ಘಾಟನಾ ಸಮಾರಂಭವನ್ನು ನೆರವೇರಿಸಿದರು

ಪ್ರಾರಂಭದಲ್ಲಿ ಕ್ಲಬ್ಬಿನ ಅಧ್ಯಕ್ಷ ಪ್ರೊ. ಬಿ ಎ. ಮೂರ್ತಿಯವರು ಸ್ವಾಗತಿಸುತ್ತಾ ಡಾ ಮಾಧವ ಪೈಗಳ ಕಾರ್ಯಗಳನ್ನು ಶ್ಲಾಘಿಸಿ, ಈ ಕ್ಲಬ್ಬಿನ ಪ್ರಯೋಜನಗಳನ್ನು ವಿವರಿಸಿದರು. ಪ್ರಾಸ್ತಾವಿಕ ಭಾಷಣ ಮಾಡುತ್ತಾ ಪ್ರಿನ್ಸಿಪಾಲ್ ಶ್ರೀ ಪಿ ವೆಂಕಟರಮಣ ಭಟ್ಟರು, ಮಣಿಪಾಲದಲ್ಲಿ ಇಂಡಸ್ಟ್ರಿಯಲ್ ಎಸ್ಟೇಟಿನ ಸ್ಥಾಪನೆಯಿಂದ ವಿದ್ಯಾರ್ಥಿಗಳ ಪ್ರಯೋಗಿಕಾಭ್ಯಾಸಕ್ಕೆ ಸಹಾಯಕವಾಗುವುದು ಎಂದರು. ಮಾನ್ಯ ಸಚಿವರು ಉದ್ಘಾಟಿಸುತ್ತಾ, ಡಾ. ಪೈಗಳ ಸಾಧನೆಗಳಿಗೆ ತಮ್ಮ ಮೆಚ್ಚುಗೆ ಸೂಚಿಸಿ, ಇಲೆಕ್ಟ್ರೋನಿಕ್ ಕ್ಲಬ್ ಹಾಗೂ ಇಂಡಸ್ಟ್ರಿಯಲ್ ಎಸ್ಟೇಟುಗಳ ಪ್ರಯೋಜನಗಳನ್ನು ವಿವರಿಸಿದರು. ಅಧ್ಯಕ್ಷಸ್ಥಾನದಿಂದ ಮಾತಾಡುತ್ತಾ ಡಾ. ಮಾಧವ ಪೈಗಳು ವಿದ್ಯಾರ್ಥಿಗಳಲ್ಲಿ ಅಡಕವಾಗಿರುವ ಪ್ರತಿಭೆಗಳನ್ನು ಪ್ರಕಾಶಕ್ಕೆ ತರುವುದೇ ಈ ಕ್ಲಬ್ಬಿನ ಪ್ರಥಮ ಉದ್ದೇಶವಾಗಿದೆಯೆಂದೂ ಇದರಿಂದ ನಾವು ಪ್ರಗತಿಯ ಹಾದಿಯಲ್ಲಿ ವೇಗವಾಗಿ ಮುನ್ನಡೆಯಬಹುದೆಂದೂ ಹೇಳಿದರು ಅಂತ್ಯದಲ್ಲಿ ಕಾರ್ಯದರ್ಶಿ ಶ್ರೀ ಎಸ್. ಎಂ. ಪೀರನ್ ಧನ್ಯವಾದ ಸಮರ್ಪಿಸಿದರು.

ಕ್ಷಯಮಾಸ ಮತ್ತು ನವರಾತ್ರಿ

ಜ್ಯೋತಿಃ ಸಿದ್ಧಾಂತ ಪ್ರಕಾರ ಈ ವರ್ಷ ಆಶ್ವಯುಜ ಮಾಸವು ಎಂದಿನಂತೆ ಶುದ್ಧಮಾಸವೆ ಆಗಿದ್ದು ನಂತರದ ಕಾರ್ತಿಕ ಮಾಸವು ಸಂಸರ್ಪವೆನಿಸುವದು. ಈ ಚಾಂದ್ರಮಾಸದಲ್ಲಿ ಸಂಕ್ರಮಣವೆ ಇಲ್ಲದ್ದರಿಂದ ಇದು ಅಧಿಕ ಮಾಸವೆನಿಸುವದಾದರೂ ನಂತರದ ಚಾಂದ್ರಮಾಸದಲ್ಲಿ ಎರಡು ಸಂಕ್ರಾಂತಿಗಳು ಬಂದು ಆ ಮೂಲಕ ಅದು ಕ್ಷಯಮಾಸವೆನಿಸುತ್ತದೆ. ಕ್ಷಯಮಾಸವಿರುವ ಸಂವತ್ಸರದಲ್ಲಿ ಕ್ಷಯಮಾಸಕ್ಕಿಂತ ಮೊದಲು ಬರುವ ಸಂಕ್ರಾಂತಿ ರಹಿತ ಮಾಸವು ಸಂಸರ್ಪವೆಂದು ಹೇಳಲ್ಪಡುತ್ತದೆ ಅಂಥ ಸಂಸರ್ಪಮಾಸದಲ್ಲಿ ಧರ್ಮಕರ್ಮ ವ್ರತೋಪವಾಸಾದಿಗಳಿಗೆ ಅಧಿಕಮಾಸದಂತೆ ನಿಷಿದ್ಧವಿಲ್ಲ ಆಂದರೆ ಸಂಸರ್ಪಸಂಜ್ಞೆಯುಳ್ಳ ಈ ಕಾರ್ತಿಕಮಾಸವು ಗೋಪೂಜೆ, ಬಲಿಪೂಜೆ, ಚಾತುರ್ಮಾಸ್ಯ ಸಮಾಪ್ತಿ ಮುಂತಾದ ಕಾರ್ತಿಕಮಾಸೋಕ್ತ ಕರ್ಮಗಳನ್ನು ಮಾಡಲು ಯೋಗ್ಯವಾಗಿರುತ್ತದೆ

ಪರಹಿತ, ಗ್ರಹಲಾಘವ, ಸೂರ್ಯಸಿದ್ಧಾಂತ ಮುಂತಾದ ಹಳೆಕಾಲದ ದೃಗ್ಗಣಿತ ಪ್ರಕಾರ ಈ ವರ್ಷ ಆಶ್ವಯುಜ ಮಾಸವೆ ಸಂಸರ್ಪವೆನಿಸುವುದು ನಿಜವಾಗಿ, ಅಂಥ ಹಳೆಕಾಲದ ದೃಗ್ಗಣಿತಾನುಸಾರ ಇಂದು ಗ್ರಹರ ಸ್ಥಿತಿಗತಿಗಳಿಲ್ಲ. ಆದರಿಂದ ಹಳೆಗಣಿತ ಸೂತ್ರಗಳನ್ನನುಸರಿಸಿ ಗೊತ್ತುಪಡಿಸಲ್ಪಟ್ಟ ಗ್ರಹರ ಸ್ಥಾನಗಳು ಅವರ ನಿಜ ಸ್ಥಿತಿಗಿಂತ ವ್ಯತಿರಿಕ್ತವಾಗಿರುತ್ತವೆ. ಹಳದೃಗ್ಗಣಿತ ಪಂಚಾಂಗಕರ್ತರಾದರೂ ಗ್ರಾಹಕರ ವಿಶ್ವಾಸವನ್ನುಳಿಸಿಕೊಳ್ಳಲು ಗ್ರಹಣ, ಮೌಢ್ಯ, ಉದಯಾಸ್ತಘಂಟೆ ಮುಂತಾದ (ಎಲ್ಲರೂ ಸುಲಭವಾಗಿ ತಿಳಿದುಕೊಳ್ಳಬಹುದಾದ) ವಿಷಯಗಳನ್ನು ಹೊಸ ದೃಗ್ಗಣಿತ ಪ್ರಕಾರವೆ ತಮ್ಮ ತಮ್ಮ ಪಂಚಾಂಗಗಳಲ್ಲಿ ಬರಕೊಳ್ಳುತ್ತಾರೆ. ಅದರಂತೆ, ಅತಿ ಆವಶ್ಯಕವಾಗಿ ಪ್ರಾಪ್ತವಾದ ಈ ವರ್ಷದ ಸಂಸರ್ಪ ಕ್ಷಯ ಮಾಸಗಳನ್ನು ಕೂಡ ಹೊಸದೃಗ್ಗಣಿತ ಪ್ರಕಾರ ಅವರು ಬರಕೊಳ್ಳುತ್ತಿದ್ದರೆ ಈಗ ನವರಾತ್ರಿ ಮುಂತಾದ್ದರಲ್ಲಿ ಕಾಣಿಸಿಕೊಂಡ ಗೊಂದಲಕ್ಕೆಡೆಯಿದ್ದಿಲ್ಲ ಆದರಲಿ. ಹಳೆ ಅಶ್ವಯುಜದೃಗ್ಗಣಿತ ಪ್ರಕಾರ ಈವರ್ಷ ಸಂಸರ್ಪ ಆಶ್ವಯುಜ, ಹೀಗೆ ಎರಡು ಅಶ್ವಯುಜ ಮಾಸಗಳು ಬರುತ್ತವೆ ಧರ್ಮಕರ್ಮವ್ರತಾದಿಗಳಿಗೆ ಸಂಸರ್ಪ ಸಂಜ್ಞೆಯುಳ್ಳ ಮಾಸವು ನಿಷಿದ್ಧವಲ್ಲವೆಂದು ಧರ್ಮನಿಬಂಧಕಾರರೆಲ್ಲ ಮುಕ್ತಕಂಠವಾಗಿ ಘೋಷಿಸಿದ್ದಾರೆ. ಆದ್ದರಿಂದ ಮೊದಲು ಬಂದ ಕರ್ಮಾರ್ಹ ಮಾಸವನ್ನು ಕಡೆಗಣಿಸಿ ನವರಾತ್ರಿ ಮುಂತಾದ್ದನ್ನು ಒಂದು ತಿಂಗಳು ತಡಮಾಡಿ ಆಚರಿಸುವದು ಧರ್ಮಶಾಸ್ತ್ರಸಮ್ಮತವಲ್ಲ. ಏಕೆಂದರೆ, ಪರಹಿತ, ಸೂರ್ಯಸಿದ್ಧಾಂತ ಮುಂತಾದ ಹಳೆದೃಗ್ಗಣಿತ ಪ್ರಕಾರವೂ ಈಗಿನ ಪ್ರತ್ಯಕ್ಷ ಸಿದ್ಧವಾದ ದೃಕ್ಸಿದ್ಧಾಂತ ಪ್ರಕಾರವೂ ಈ ವರ್ಷ ಎಂದಿನಂತೆ ಕನ್ಯಾಮಾಸದಲ್ಲೆ (ಸಪ್ಟಂಬರ ತಿಂಗಳ ಕೊನೆಗೆ) ನವರಾತ್ರಿ ವಿಜಯದಶಮಿಗಳನ್ನಾಚರಿಸತಕ್ಕದ್ದು. ಒಂದು ತಿಂಗಳು ತಡಮಾಡಿ ಆಚರಿಸಲು ಜ್ಯೋತಿಃಶಾಸ್ತ್ರಗಳ ಪ್ರಮಾಣ ದೊರೆಯುವಂತಿಲ್ಲ. ಇನ್ನು "ಉತ್ತರೇ ಪೇಷಕಾರ್ಯಾಣಿ" ಎಂಬಿತ್ಯಾದಿ ವಚನವೆಲ್ಲ ಈ ತರದ ಸಂಸರ್ಪ ಕ್ಷಯ ಮಾಸಗಳ ಕುರಿತು ಅಲ್ಲವೆಂದಿಲ್ಲ.

ಭಾರತ ಸರಕಾರದ ಕಡೆಯಿಂದ 'ಪಂಚಾಂಗ ಸುಧಾರಣಾ ಸಮಿತಿಯು' ವರದಿಯನ್ನನುಸರಿಸಿ ಬೇರೆಬೇರೆ ಭಾಷೆಗಳಲ್ಲಿ ಪ್ರಕಟಗೊಳ್ಳುವ ರಾಷ್ಟ್ರೀಯ ಪಂಚಾಂಗದಲ್ಲಿ ಸಂಸರ್ಪ ಕ್ಷಯ ಮಾಸಗಳೂ ನವರಾತ್ರಿ, ವಿಜಯದಶಮಿ, ಸುಬ್ರಹ್ಮಣ್ಯ ಷಷ್ಠಿ, ದತ್ತ ಜಯಂತಿ ಮುಂತಾದ ವಿಶಿಷ್ಟ ದಿವಸಗಳೂ ಮೇಲ್ಕಾಣಿಸಿದ ಪ್ರಕಾರ ಸರಿಯಾದ ದಿನಗಳಲ್ಲಿ ಬರೆಯಲ್ಪಟ್ಟವೆ, ಅಲ್ಲದೆ ನಮ್ಮ ರಾಷ್ಟ್ರದ ಕೇಂದ್ರ ರಾಜ್ಯ ಸರಕಾರಗಳೂ ಆ ಪ್ರಕಾರವೆ ಸರಕಾರಿ ರಜಾ ದಿನಗಳನ್ನು ಪ್ರಕಟಪಡಿಸಿವೆ. ಆದರೆ ನಮ್ಮ ಮೈಸೂರು ಸರಕಾರವು ಇದರಿಂದ ತಪ್ಪಿಸಿಕೊಂಡು ಅಪ್ರತ್ಯಕ್ಷ ಗಣಿತಾನುಸಾರಿ ಪಂಚಾಂಗ ಕರ್ತರ ಕಡೆಗೊಲಿದದ್ದು ಆಶ್ಚರ್ಯ. ನಮ್ಮ ನೆರೆ ಮದ್ರಾಸಿನ ಮಹಾರಾಷ್ಟ್ರ ಆಂಧ್ರ ಕೇರಳ ಸರಕಾರಗಳು ರಾಷ್ಟ್ರೀಯ ಪಂಚಾಂಗವನ್ನು ಮನ್ನಿಸಿವೆ ಅಂತೂ, ಕರ್ನಾಟಕದಲ್ಲಿ ಪ್ರಸಿದ್ಧವಾದ ಮೈಸೂರು ನವರಾತ್ರಿ ದಸರಾಗಳು ಈ ವರ್ಷ ತುಲಾಮಾಸದಲ್ಲಾದರೆ ಸಮಸ್ತ ಭಾರತದಲ್ಲೇ ಪ್ರಖ್ಯಾತವಾದ ತಿರುಪತಿ ಕ್ಷೇತ್ರದ ನವರಾತ್ರಿ ಮಹೋತ್ಸವವು ಕನ್ಯಾಮಾಸದಲ್ಲಿ ಜರಗುವುದು ಭಾರತೈಕ್ಯಬೋಧಕವಾದ ನಮ್ಮ ರಾಜ್ಯಸೂತ್ರಧಾರರು ಇನ್ನು ಮುಂದಾದರೂ ಇಂಥ ಅನೈಕ್ಯಕ್ಕೆ ಎಡೆಗೊಡದಿರಲೆಂದು ಆಶಿಸುತ್ತೇನೆ

—ಶಾಸ್ತ್ರಸಿದ್ಧ ಶ್ರೀ ಕೃಷ್ಣಪಂಚಾಂಗ ಸಂಪಾದಕರು, ಪ್ರೋ. ಷಷ್ಟಿ ವಿಟ್ಲ ದ. ಕ.

ಮಹಾಸಭೆ—ಕೊರಂಗ್ರಪಾಡಿ ಸೇವಾ ಸಹಕಾರಿ ಸಂಘದ ವಾರ್ಷಿಕ ಮಹಾ ಸಭೆಯು ತಾ. 1-9-1963ರಂದು ಸಂಘದ ಅಧ್ಯಕ್ಷ ಶ್ರೀ ಕೆ. ದೇವಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು 1962-63ನೇ ವರ್ಷದ ವರದಿ 1961-62ನೇ ವರ್ಷದ ಆಡಿಟ್ ರಿಪೋರ್ಟನ್ನು ಸಭೆಯ ಮುಂದೆ ಓದಿ ಹೇಳಿ ಮಂಜೂರು ಮಾಡಲಾಯಿತು. 1963-64ನೇ ವರ್ಷಕ್ಕೆ ಬಜೆಟು ಮಂಜೂರಾತಿಯಾಗಿ ಆ ವರ್ಷಕ್ಕೆ ಶ್ರೀಗಳಾದ ಕೆ. ದೇವಯ್ಯ ಹೆಗ್ಡೆ, ವಿನ್‍ಸ್ಟನ್ ನಿಕೋಲಸ್ ಅಮ್ಮನ್ನ, ಅಬ್ರಾಹಮ್ ಕರ್ಕಡ, ಎಮ್. ರಾಮಕೃಷ್ಣಯ್ಯ, ಕೆ. ತುಕ್ರ ಪೂಜಾರಿಯವರು ಪಂಚಾಯತದಾರರಾಗಿ ಚುನಾಯಿಸಲ್ಪಟ್ಟರು. ಕೊ-ಓಪರೇಟಿವ್ ಸೊಸ್ಯಾಟಿಗಳ ಎಕ್ಸ್‌ಟೆನ್‍ಶನ್ ಆಫೀಸರ್ ಮತ್ತು ಗ್ರಾಮಸೇವಕರು ಸಂದರ್ಭೋಚಿತ ಮಾತಾಡಿದರು. ಅಧ್ಯಕ್ಷರ ಭಾಷಣದ ನಂತರ ಧನ್ಯವಾದ ಸಮರ್ಪಣೆಯಾಯಿತು

ನಿಧನ—ಜೋರ್ಡ ಹೈಸ್ಕೂಲಿನ ನಿವೃತ್ತ ಕನ್ನಡ ಪಂಡಿತ ಶ್ರೀ ಎಂ ಗೋವಿಂದ ರಾಯರು ಇದೇ ತಾ 3ರಂದು ಉಡುಪಿ ಕರ್ನಾಟಕದ ಸ್ವಗೃಹದಲ್ಲಿ ತಮ್ಮ 61ನೇ ಪ್ರಾಯದಲ್ಲಿ ಹೃದಯ ಸ್ತಂಭನದಿಂದ ನಿಧನರಾದುದು ವಿಷಾದಕರವಿದೆ

ಯಕ್ಷಗಾನದಲ್ಲಿ ಹಿರಿಯ ಸ್ಥಾನ ಗಳಿಸಿ, 'ಯಕ್ಷಗಾನ ಭಾಸ್ಕರ'ನೆಂದು ಪ್ರಸಿದ್ಧಿ ಪಡೆದ ದಿ। ಕವಿಭೂಷಣ ಕೆ ಪಿ. ವೆಂಕಪ್ಪ ಶೆಟ್ಟಿರ

ನವಕಾಲೋಚಿತವಾದ ಯಕ್ಷಗಾನ ಪ್ರಸಂಗಗಳು.

ಸಾಹಸ ಭೀಮ ವಿಜಯ (ಗದಾಯುದ್ಧ) ೦—೮—೦

ಯಕ್ಷಗಾನ ಪದ್ಧತಿಯಂತೆ ಆಟದ ಕ್ರಮಕ್ಕನುಸರಿಸಿ ಪಾಂಡವರ ಒಡ್ಡೋಲಗದ ದೃಶ್ಯವನ್ನು ದಿಗ್ದರ್ಶನ ಮಾಡಿ, ಮುಂದೆ ಕಥಾಭಾಗವನ್ನು ಮೂಲ ಕಾವ್ಯಕ್ಕನುಸರಿಸಿಯೇ ಕೊನೆಗೊಳಿಸಿದೆ.

ಭಾರತದ ಗುರುಕುಲ ೦—೬—೦

ಪಾಂಡವ, ಕೌರವ ಬಾಲ್ಯ ಕೇಳಿಗಳು, ವಿದ್ಯಾಭ್ಯಾಸ, ಪರೀಕ್ಷಾರಂಗದ ಕಾರ್ಯಗಳು, ಗುರುದಕ್ಷಿಣೆ ಮೊದಲಾದ ವಿಷಯಗಳನ್ನೊಳಗೊಂಡಿದೆ

ಅತ್ತಪಗಡೆ ೦—೬—೦

ಭಾರತದ ಸಭಾಪರ್ವದೊಳಗಣ ಚರಿತ್ರೆಗಳಿರುವ ನಾಲ್ಕು ದೃಶ್ಯಗಳೂ ಅರಣ್ಯಪರ್ವೋಕ್ತವಾದ ಕಿರ್ಮೀರ ವಧೆಯೆಂಬ ದೃಶ್ಯವೂ ಸೇರಿವೆ

ಭರತೇಶ ದಿಗ್ವಿಜಯ ೦—೮—೦

ರಾಜಕವಿ ರತ್ನಾಕರವರ್ಣಿಯ ಶೃಂಗಾರ ರಸಪ್ರಧಾನವಾದ ಭರತೇಶ ವೈಭವದೊಳಗಣ ದಿಗ್ವಿಜಯ ವಿಭಾಗದ ನೂತನ ಕಥಾವಸ್ತುಗಳನ್ನೊಳಗೊಂಡಿದೆ ಯಕ್ಷಗಾನ ಕಲಾಭಿಮಾನಿಗಳಿಗೆ ವಿವರವಾದ ಸೂಕ್ತ ಅನುಭವ ಸೂಚಿಯಿದೆ.

ವಾಲಿ ಸುಗ್ರೀವ (ಬಹುಮಾನಿತ) ೦—೮—೦

ವೀರ, ಕರುಣಾ ರಸಪ್ರಧಾನವಾದ ನವೀನ ರೀತಿಯಲ್ಲಿ ಮನಮೋಹಕವಾಗಿ ರಚಿಸಲಾದ ರಾಮಾಯಣಾಂತರ್ಗತ ಪ್ರಸಂಗ.

ಪುಸ್ತಕ ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಮುದ್ರಣ

ಸಣ್ಣದಿರಲಿ, ದೊಡ್ಡದಿರಲಿ, ಯಾವದೇ ತರದ ಕನ್ನಡ ಇಲ್ಲವೆ ಇಂಗ್ಲಿಷ್ ಮುದ್ರಣ ಕಾರ್ಯಗಳಿಗೆ

ವಿಚಾರಿಸಿರಿ —

ನವಯುಗ ಪ್ರೆಸ್

ಸಂತೆಕಟ್ಟೆ
ಉಡುಪಿ

ವಿವೇಚನೆ

ಭಾರತವು ಅಭಿವೃದ್ಧಿ ಹೊಂದುತ್ತಿದೆಯೆ?

— ಶ್ರೀ ಹಳೆನಾಡು ಸುಬ್ರಾಯ ಭಟ್ಟ, ಚೋನಾಳಿ.

೧೯೪೭ನೇ ಆಗೋಸ್ತು ೧೫ರಂದು ಭಾರತ ಪರದಾಸ್ಯ ಬಂಧನದಿಂದ ವಿಮೋಚನೆ ಹೊಂದಿ ಸ್ವತಂತ್ರತೆಯನ್ನು ಪಡೆಯಿತು. ಭಾರತ ಸ್ವತಂತ್ರವಾಗಲು ಅಂದು ಇಡೀ ದೇಶವೇ ಒಂದಾಗಿತ್ತು. ಪಂಥ ಪಂಗಡಗಳ ಭೇದವಿಲ್ಲದೆ ಎಲ್ಲರೂ ಒಮ್ಮತದಿಂದಲೇ ಹೋರಾಡಿದ್ದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ತಮ್ಮ ತನು-ವನ್ನು ತೆತ್ತವರೆಷ್ಟೋ ಮಂದಿ! ಜೈಲುವಾಸವನ್ನು ಅನುಭವಿಸಿದವರು ಅದೆಷ್ಟೋ ಮಂದಿ! ತಮ್ಮ ಸರ್ವಸ್ವವನ್ನೂ ಕಳೆದುಕೊಂಡವರು ಇನ್ನೆಷ್ಟೋ ಮಂದಿ! ಚಿತ್ರಹಿಂಸೆಗೊಳಗಾದವರು ಮತ್ತೆಷ್ಟೋ ಮಂದಿ! ಅಂದು ಪ್ರತಿಯೊಬ್ಬರ ಧ್ಯೇಯ ಘೋಷಣೆಗಳು ಒಂದೇ ಆಗಿತ್ತು. ಪ್ರತಿಯೊಬ್ಬರನ್ನೂ ಕಾಡುತ್ತಿದ್ದ ಸಮಸ್ಯೆ ಕೂಡಾ ಒಂದೇ ಆಗಿತ್ತು. ಇಡೀ ದೇಶದ ಸಮಸ್ಯೆಯೇ ಸ್ವಾತಂತ್ರ್ಯ ರತ್ನವನ್ನು ಸಂಪಾದಿಸಬೇಕೆಂಬುದಾಗಿತ್ತು.

ದೇಶದ ಮುಂದಾಳುಗಳು ಜನತೆಯನ್ನು ಎಚ್ಚರಿಸಿ ಅವಿಶ್ರಾಂತವಾಗಿ ದುಡಿದ ಪರಿಣಾಮವಾಗಿ ನಾವಿಂದು ಸ್ವತಂತ್ರರಾಗಿದ್ದೇವೆ. ಭಾರತ ಸ್ವತಂತ್ರತೆಯನ್ನು ಪಡೆದು ಇಂದಿಗೆ ಹದಿನಾರು ವರುಷಗಳು ಸಂದು ಹೋದುವು. ಈ ಹದಿನಾರು ವರುಷಗಳಲ್ಲಿ ಭಾರತ ಅದೆಷ್ಟೋ ಪ್ರಗತಿಯನ್ನು ಸಾಧಿಸಿದೆ. ಅದು ಭಾರತೀಯರಾದ ನಮಗೊಂದು ಹೆಮ್ಮೆಯಾಗಿದೆ. ಪೌರಾತ್ಯ ರಾಷ್ಟ್ರಗಳಲ್ಲಿಯೇ ಭಾರತದ ಸ್ಥಾನ ಹಿರಿದಾಗಿದೆ.

ಹದಿನಾರು ವರುಷಗಳ ಹಿಂದಿನದನ್ನು ಮತ್ತು ಇಂದಿನದನ್ನು ಯೋಚಿಸುವಾಗ ದೇಶದಲ್ಲಿ ಅಜಗಜಾಂತರ ವ್ಯತ್ಯಾಸ ಕಂಡು ಬರುತ್ತಿದೆ. ಇಂದು ಸಾರಿಗೆ ಸಂಪರ್ಕಗಳು ಹೆಚ್ಚಾಗಿವೆ. ಬೇಸಾಯದ ಅನುಕೂಲತೆಗಾಗಿ ಅದೆಷ್ಟೋ ಅಣೆಕಟ್ಟುಗಳನ್ನು ಕಟ್ಟಿ ನೀರಾವರಿ ಯೋಜನೆಗಳಾಗಿವೆ. ವಿದ್ಯುಚ್ಛಕ್ತಿ ಸರಬರಾಯಿ ತುಂಬಾ ಹೆಚ್ಚಾಗಿದೆ. ಎಷ್ಟೋ ಕಾರ್ಖಾನೆಗಳು ತಲೆ ಎತ್ತಿವೆ. ಸಾಕ್ಷರತೆ ಪ್ರಚಾರಕ್ಕಾಗಿ ಇಂದು ಶಾಲಾ ಕಾಲೇಜುಗಳು ಹೆಚ್ಚಾಗಿವೆ. ಪ್ರಾಥಮಿಕ ಶಿಕ್ಷಣ ಧರ್ಮಾರ್ಥವಾಗಿ ಎಲ್ಲಾ ಮಕ್ಕಳಿಗೂ, ೨,೪೦೦ ರೂಪಾಯಿ ಒಳಗಿನ ಆದಾಯವಿರುವವರ ಮಕ್ಕಳಿಗೆ ಧರ್ಮಾರ್ಥವಾಗಿ ಹೈಸ್ಕೂಲು ಶಿಕ್ಷಣ ಕೂಡಾ ಸಿಕ್ಕುತ್ತಲಿದೆ. ಜನತೆಗನುಕೂಲವಾಗಲು ಹಳ್ಳಿಗಳಲ್ಲಿ ಸಂಘ ಸಂಸ್ಥೆಗಳು ಬೆಳೆದು ನಿಂತಿವೆ.

ದೇಶದ ಏಳಿಗೆಗಾಗಿ ಜನತೆಯ ಸೌಕರ್ಯಕ್ಕಾಗಿ ಸರಕಾರ ದುಡಿದಿದೆ, ದುಡಿಯುತ್ತಲಿದೆ. ಆದರೆ ಜನತೆ ಕೂಡಾ ಸರಕಾರದತ್ತ ಕಣ್ಣರಳಿಸಿ ನೋಡಬೇಕಾಗಿದೆ. ಈ ವರೆಗೆ ಸರಕಾರ ವ್ಯಯಿಸಿದ ಹಣವೆಲ್ಲ ಸಂಪೂರ್ಣ ನಮ್ಮದಲ್ಲ. ಕೆಲವು ಅನ್ಯ ರಾಷ್ಟ್ರಗಳು ದಾನವಾಗಿತ್ತದ್ದು. ಇನ್ನು ಕೆಲವು ಅಲ್ಲಿಂದ ಸಾಲವಾಗಿ ತಂದದ್ದು.

ಅನ್ಯ ರಾಷ್ಟ್ರಗಳಿಂದ ಸಾಲಪಡೆವಾಗ "ದೇಶವನ್ನು ಅನ್ಯರಾಷ್ಟ್ರಗಳಿಗೆ ಮಾರಲು ತಯಾರಾಗಿದ್ದಾರೆ ನಮ್ಮ ಮಂತ್ರಿಗಳು" ಎಂದು ಅದೆಷ್ಟೋ ಮಂದಿ ಹೇಳಿದ್ದುಂಟು. ಆದರೆ ಪಡೆದ ಸಾಲವನ್ನು ಹಿಂದೆ ಕೊಡಲು ನ್ಯಾಯವಾದ ಕ್ರಮವನ್ನು ಯೋಚಿಸಿಯೇ ಸಾಲ ಪಡೆದಿರುತ್ತಾರೆ. ಹಾಗೆ ಸಾಲ ಪಡೆಯದೆ ಇದ್ದರೆ ದೇಶ ಇಷ್ಟೊಂದು ಮುನ್ನಡೆಯಲು ಅಸಾಧ್ಯವಾಗುತ್ತಿತ್ತು.

ಸ್ವಾತಂತ್ರ್ಯ ಪಡೆಯುವ ಮೊದಲು ದೇಶದ ಸಮಸ್ಯೆ ಒಂದಾಗಿದ್ದರೆ ಇಂದು ಹಲವಾರು ಇವೆ. ಅವುಗಳಲ್ಲಿ ೧) ಜನನ ಸಮಸ್ಯೆ ೨) ಆಹಾರ ಸಮಸ್ಯೆ ೩) ಆಕ್ರಮಣ ಸಮಸ್ಯೆ ೪) ಆರ್ಥಿಕ ಸಮಸ್ಯೆಗಳು ಮುಖ್ಯವಾಗಿವೆ. ಇನ್ನುಳಿದ ಸಾಮಾನ್ಯ ಸಮಸ್ಯೆಗಳು ಹಲವಾರು ಇವೆ.

ಇಂದು ದೇಶದಲ್ಲಿ ಹೆಚ್ಚುತ್ತಿರುವ ಜನನ ಸಮಸ್ಯೆಯನ್ನು ನಿವಾರಿಸಲು "ಜನನ ನಿಯಂತ್ರಣ" ಜಾರಿಗೆ ತಂದಿರುತ್ತಾರೆ. ಆದರೆ ಅದು ಯಶಸ್ವಿಯಾಗಬೇಕಾದರೆ ಅದಕ್ಕೆ ಜನತೆಯ ಸಹಕಾರ ಅಗತ್ಯ.

ದಿನದಿಂದ ದಿನಕ್ಕೆ ಏರುತ್ತಿರುವ ಜನಸಂಖ್ಯೆಯಿಂದಾಗಿ ಇಂದು ಆಹಾರ ಸಮಸ್ಯೆ ಉದ್ಭವಿಸಿದೆ. ಸರಕಾರವೇನೋ ಇಂದು ಕೃಷಿ ಉತ್ಪಾದನೆ ಹೆಚ್ಚಿಸುವುದಕ್ಕಾಗಿ ನೀರಾವರಿ ಯೋಜನೆ, ನೂತನ ಕೃಷಿಕ್ರಮ, ಕೃತಕ ಗೊಬ್ಬರ, ಉತ್ತಮವಾದ ಬೀಜ, ಮೊದಲಾದ ಕಾರ್ಯಗಳನ್ನು ಕೈಗೊಂಡಿದೆ. ಸರಕಾರ ಕೈಗೊಂಡಿರುವ ಕಾರ್ಯದಲ್ಲಿ ಜನತೆ ನೆರವಾಗಿ ಸಹಕರಿಸಿದರೇನೆ ಆ ಕಾರ್ಯ ಸಾರ್ಥಕವಾದೀತು.

ತಾನು ಆಕ್ರಮಿಸುವುದಿಲ್ಲ, ತನ್ನನ್ನು ಆಕ್ರಮಿಸಲು ಯಾರೂ ಬರುವಂತಿಲ್ಲ, ಎಂಬ ಧ್ಯೇಯವನ್ನಿಟ್ಟುಕೊಂಡ ಭಾರತ ಕಳೆದ ಅಕ್ಟೋಬರದಿಂದ ಆಕ್ರಮಣ ಸಮಸ್ಯೆಯನ್ನು ಕೂಡಾ ಎದುರಿಸಬೇಕಾಗಿ ಬಂತು. ಮದೋನ್ಮತ್ತ ರಾಷ್ಟ್ರವಾದ ಚೀನಾ ಬಲವಾದ ಸೇನೆಯೊಡನೆ ಭಾರತದ ಭೂಭಾಗವನ್ನು ಕಬಳಿಸಲು ಬಾಯ್ದೆರೆದು ನಿಂತಿದೆ. ತೆರೆದ ಬಾಯಿಗೆ ಭಾರತದ ಭೂಭಾಗದ ಬದಲು ಗುಂಡಿನ ಮಳೆಯನ್ನು ತುಂಬಿಸಲು ನಮ್ಮಲ್ಲಿಂದು ಸಶಕ್ತವಾದ ಸೈನ್ಯಬಲ ಬೇಕಾಗಿದೆ. ಅದಕ್ಕೀಗ ಯುವಕರು ಒಮ್ಮತದಿಂದ ಮುಂದಾಗಬೇಕಾಗಿದೆ. ರಾಷ್ಟ್ರದ ಶಕ್ತಿಯನ್ನು ಬಲಪಡಿಸಬೇಕಾಗಿದೆ.

ಆಕ್ರಮಣದೊಟ್ಟಿಗೆ ಆರ್ಥಿಕ ಸಮಸ್ಯೆ ಕೂಡಾ ಇಂದು ಭಯಂಕರ ರೂಪತಾಳಿದೆ. ಆಕ್ರಮಣ ಪೂರ್ವದಲ್ಲಿಯೇ ದೇಶಕ್ಕೆ ಆರ್ಥಿಕ ಅಭಾವವಿದ್ದಿತ್ತು. ಈಗ ಅದು ತುತ್ತ ತುದಿಯನ್ನೇರಿದೆ. ಆದ್ದರಿಂದ ಸರಕಾರ ಇಂದು ಹೊಸ ಹೊಸ ತೆರಿಗೆಗಳನ್ನು ಜಾರಿಗೆ ತಂದಿದೆ. ಉಳಿತಾಯ ಯೋಜನೆಯನ್ನು ಸಾರುತ್ತಿದೆ. ಉದಾರ ದಾನವನ್ನು ಯಾಚಿಸುತ್ತಲಿದೆ. ಅಷ್ಟು ಸಾಲದೆ ಹೊರ ದೇಶದತ್ತ ಸಾಲಕ್ಕಾಗಿ ಕೈನೀಡಿದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ದೇಶದ ಪ್ರತಿಯೊಬ್ಬ ಪ್ರಜೆಯೂ ಸಾಧ್ಯವಾದಷ್ಟು ಆರ್ಥಿಕ ನೆರವನ್ನು ಸರಕಾರಕ್ಕೀಯಬೇಕಾಗಿದೆ. ನ್ಯಾಯವಾದ ತೆರಿಗೆಗಳನ್ನು ಖಂಡಿಸದೆ ಸ್ವಾಗತಿಸಬೇಕಾಗಿದೆ. ಸರಕಾರದ ಪ್ರತಿಯೊಂದು ಕಾರ್ಯದಲ್ಲಿ ನೆರವಿತ್ತು ಸಹಕರಿಸಬೇಕಾಗಿದೆ.

ಆದರೆ ಇಂದು ಅಧಿಕಾರ ವರ್ಗದಲ್ಲಿ ಲಂಚಗುಳಿತನ, ಅಪ್ರಾಮಾಣಿಕತನ, ಬೇಜವಾಬ್ದಾರಿತನ, ಹೀನ ವರ್ತನೆ; ಅಲ್ಲಲ್ಲಿ ಕಂಡು ಬರುತ್ತಿವೆ. ನ್ಯಾಯವಾಗಿ ಖರ್ಚಾಗಬೇಕಾದ ಹಣ ಅಲ್ಲಲ್ಲಿ ಅನ್ಯಾಯವಾಗಿ ಪೋಲಾಗುತ್ತಿದೆ. ಆದ್ದರಿಂದ ಇಂದು ಸರಕಾರದ ಮೇಲೆ ಕಟುವಾದ ಟೀಕೆಗಳು ಬರಲಾರಂಭಿಸಿವೆ. ಜನರಲ್ಲಿ ಅಲ್ಲಲ್ಲಿ ಅವಿಶ್ವಾಸ ಮೂಡಲಾರಂಭಿಸಿದೆ.

ಅದನ್ನು ತೊಳೆಯಲು ಇಂದು ಸರಕಾರ ದೃಢವಾದ ನಿಲುವನ್ನು ತಳೆಯಬೇಕು. ತಪ್ಪುಗಳು ನಡೆಯದಂತೆ ಆದಷ್ಟು ಜಾಗೃತೆ ವಹಿಸಬೇಕು. ಅಂತಹ ತಪ್ಪುಗಳು ಕಂಡು ಬಂದಲ್ಲಿ ಹಣ; ಅಧಿಕಾರ; ಯೋಗ್ಯತೆ; ಪಂಗಡ, ಯಾವುದನ್ನೂ ಯೋಚಿಸದೆ ಕ್ರಮವಾದ ದಂಡನೆಯನ್ನು ವಿಧಿಸಲು ಮುಂದಾಗಬೇಕು. ಹಾಗೆ ಮಾಡಿದಲ್ಲಿ ಸರಕಾರದಲ್ಲಿ ಹಣ ಪೋಲಾಗದೆಂಬ ವಿಶ್ವಾಸವನ್ನು ಜನತೆ ಪಡೆಯುವುದು. ತಾವು ಕೊಡಬೇಕಾದ ಹಣವನ್ನು ಏನೊಂದೂ ಅಡ್ಡಿಯಿಲ್ಲದೆ ಕೊಡ ಬಯಸುವರು. ಆಗ ಸರಕಾರದ ಮೇಲೆ ಮಮತೆ ಜನತೆಯಲ್ಲಿ ಸ್ವಾಭಾವಿಕವಾಗಿಯೇ ಉಂಟಾಗುವುದು.

ಸರಕಾರದಲ್ಲಿ ಶಿಥಿಲತೆ ಎಂದೂ ಕಂಡು ಬರಬಾರದು. ಹೊರಡಿಸುವ ಕಾನೂನುಗಳು ಸ್ಪಷ್ಟವಾಗಿರಬೇಕು. ಅಲ್ಲದೆ ಕಾನೂನುಗಳನ್ನು ಹೊರಡಿಸುವಾಗ ಸಂಪೂರ್ಣ ಯೋಚಿಸಿಯೇ ಹೊರಡಿಸಬೇಕು. ಹೊರಡಿಸಿದ ಮೇಲೆ ಅವನ್ನು ಥಟ್ಟನೆ ಹಿಂತೆಗೆದುಕೊಳ್ಳಬಾರದು. ಹಾಗೆ ಮಾಡಿದಲ್ಲಿ ಆಡಳಿತ ಇನ್ನಷ್ಟು ಬಲಗೊಳ್ಳಬಹುದು.

ಭಾರತದಲ್ಲಿ ಹುಟ್ಟಿದ ರತ್ನಗಳು ಲೋಕವನ್ನೇ ಬೆಳಗಿಸಬಲ್ಲವು. ಉದಾಹರಣೆಗಾಗಿ ಸ್ವಾಮಿ ವಿವೇಕಾನಂದ, ಮಹಾತ್ಮ ಗಾಂಧಿ, ಜವಹರಲಾಲ ನೆಹರು ಮೊದಲಾದವರು. ಅವರನ್ನು ಅನುಕರಿಸಲು ದೃಢ ಪ್ರತಿಜ್ಞೆಯನ್ನು ತಳೆಯಬೇಕಾಗಿದೆ.

ಸ್ವತಂತ್ರ ಭಾರತ ಸ್ವತಂತ್ರವಾಗಿಯೇ ಉಳಿಯಬೇಕಿದ್ದರೆ; ದೇಶ ಸುಭದ್ರವಾಗಿರಬೇಕಿದ್ದರೆ ಇಂದಿನ ನಮ್ಮ ಪ್ರಧಾನಿ ಜವಾಹರಲಾಲ ನೆಹರೂರವರ ಆದರ್ಶವನ್ನು ಹಿಡಿಯಬೇಕಾಗಿದೆ. ಲೋಕವೇ ಅವರತ್ತ ಕಣ್ಣರಳಿಸಿ ನೋಡುತ್ತಿರುವಾಗ, ಸ್ನೇಹಯಾಚನೆಗಾಗಿ ಕೈನೀಡುತ್ತಿರುವಾಗ ಭಾರತೀಯರಾದ ನಾವಿಂದು ಸುಮ್ಮನುಳಿಯುವುದು ಯೋಗ್ಯವಲ್ಲ. ಇಂದು ಮನೆ ಮನೆಯಲ್ಲಿಯೂ ಅವರ ಭಾವ ಚಿತ್ರಗಳನ್ನು ಇಡಬೇಕಾಗಿದೆ. ದಿನಕ್ಕೊಮ್ಮೆಯೂ ವರೂ ಕೈಯೆತ್ತಿ ಕೃತಜ್ಞತೆಯನ್ನು ಸಲ್ಲಿಸಬೇಕಾಗಿದೆ. ಪ್ರತಿಯೊಬ್ಬರೂ ಇಂದು ಅವರಂತೆ ಕರ್ತವ್ಯನಿಷ್ಠರಾಗಿ ಸ್ವಾತಂತ್ರ್ಯ ರತ್ನವನ್ನು ಉಳಿಸಿಕೊಳ್ಳಬೇಕಾಗಿದೆ. ದೇಶದಲ್ಲಿ ತನ್ನ ಪಾಲಿನ ಕರ್ತವ್ಯವನ್ನು ಪ್ರತಿಯೊಬ್ಬ ಪ್ರಜೆಯೂ ಪೂರೈಸಬೇಕಾಗಿದೆ. ಆಲಸ್ಯ; ಅಂಧಕಾರ, ಮಾತ್ಸರ್ಯ, ಸ್ವಾರ್ಥ; ಅನೀತಿ; ಅನ್ಯಾಯ, ಅಹಂಭಾವ, ಮೊದಲಾದುವುಗಳನ್ನು ಹೊಡೆದೋಡಿಸಿ; ದೇಶಕ್ಕಾಗಿ "ದುಡಿಯಬೇಕು ಇಲ್ಲವೇ ಮಡಿಯಬೇಕು" ಎಂಬ ದೃಢವಾದ ನಿಲುವನ್ನು ತಳೆಯಬೇಕಾಗಿದೆ.

ಭಾರತದಿಂದಲೇ ಸಿಡಿದು ಹೋದ ಪಾಕಿಸ್ತಾನವಿಂದು, ಅನ್ಯಾಯ ಆಕ್ರಮಣಕಾರಿಯಾದ ಚೀನಾದ ಜೊತೆ ಸೇರಿರುವುದು ತುಂಬಾ ವಿಷಾದಕರವಾಗಿದೆ. ಈಗ ಪುನಃ ಗಡಿಯಲ್ಲಿ ಚೀನ ಸೈನ್ಯವನ್ನು ಶೇಖರಿಸುತ್ತಿರುವಾಗ ಪಾಕಿಸ್ತಾನ ಕೂಡಾ ಚೀನಾವನ್ನು ಸ್ವಾಗತಿಸುತ್ತಿರುವುದು, ತುಂಬಾ ಶೋಚನೀಯ ಸಂಗತಿಯಾಗಿದೆ. ಪರಕೀಯರನ್ನು ದೇಶದೊಳಕ್ಕೆ ಬಿಡುವುದು ಒಳಿತಲ್ಲವೆಂಬುದನ್ನು ಪಾಕಿಸ್ತಾನ ಮರೆತಂತಿದೆ. ಇನ್ನಾದರೂ ಪಾಕಿಸ್ತಾನ ಒಳಿತು ಕೆಡುಕುಗಳನ್ನು ಯೋಚಿಸಿ ಮುಂದಡಿ ಇಡುವುದಾದರೆ ಅದು ಎರಡೂ ರಾಷ್ಟ್ರಗಳ ಅಭ್ಯುದಯಕ್ಕೂ ಒಳಿತಾಗಬಹುದು.

ಇಂದು ಭಾರತೀಯರಾದ ನಾವೆಲ್ಲ ಒಂದಾಗಬೇಕು. ಮಾತೆ ಭಾರತೆಗಾಗಿ, ಸ್ವಾತಂತ್ರ್ಯ ರತ್ನವನ್ನು ಉಳಿಸಿಕೊಳ್ಳುವುದಕ್ಕಾಗಿ, ಅನ್ಯಾಯ ಅಧರ್ಮವನ್ನು ತಡೆಹಿಡಿಯುವುದಕ್ಕಾಗಿ ದೇಶದ ಪ್ರತಿಯೊಬ್ಬ ಪ್ರಜೆಯೂ ಮುಂದಾಗಬೇಕು. ಆರಾಧ್ಯ ಧ್ವಜದ ಸಾಕ್ಷಿಯಾಗಿ ದೃಢ ಪ್ರತಿಜ್ಞೆಯನ್ನು ಗೈಯ್ಯಬೇಕು. ಭಾರತ ಮಾತೆಗೆ ಜಯವಾಗಲಿ! ಚೀನೀ ರಕ್ಕಸರು ನಾಶವಾಗಲಿ!

ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ

14 CT ಚಿನ್ನದ ಆಭರಣಗಳಲ್ಲಿ 58⅓% ಶುದ್ಧ ಪುತ್ತಳಿ ಚಿನ್ನ ಇರುತ್ತದೆ

ಬೇಕಾದಲ್ಲಿ 1 ರೂ ಕಮ್ಮಿಯಲ್ಲಿ ಯಾವಾಗಲೂ ಬಜಾರು ಧಾರಣೆಗೆ ಪಡಕೊಳ್ಳುವ ಭರವಸೆ ಕೊಡುತ್ತೇವೆ.

ವಿ ಸೂ ಹಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡಕೊಳ್ಳುವರೆ ಸರಕಾರದ ಲೈಸನ್ಸ್ ಸಿಕ್ಕಿರುತ್ತದೆ

ಮದುವೆ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡಕೊಂಡು ಖಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು

ಶ್ರೀ ಕೃಷ್ಣಾ ಜ್ಯುವೆಲರಿ ಮಾರ್ಟ್

ತೆಂಕಪೇಟೆ — ಉಡುಪಿ

ಪ್ರೊಪ್ರೈಟರ್ ರಾಘವೇಂದ್ರ ಕೃಷ್ಣ ಭಟ್

ಫೋನ್ ನಂಬ್ರ. 66

ಸೂಚನೆ

'ನವಯುಗ'ದಲ್ಲಿ ಪ್ರಕಟನೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಲು ತಾವು ಸೈಜಿನ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಸುವಾಚ್ಯವಾಗಿಯೂ ಇರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ

—ಸಂ ನ

ಸೆಕೆಂಡರಿ ಶಾಲೆಗಳಲ್ಲಿ
ಶಿಕ್ಷಣ ಮಟ್ಟದ ಇಳಿಮುಖವಾಗುತ್ತಿದೆಯೆ?

(೪ನೇ ಪುಟದಿಂದ)

ಎಷ್ಟು ತೀವ್ರಗತಿಯಲ್ಲಿ ನಡೆಯುತ್ತಿದೆ ಎಂಬುದಕ್ಕೆ ೧೯೫೦—೫೧ರಿಂದ ಹೊಸದಾಗಿ ಹುಟ್ಟಿಕೊಂಡ ಶಾಲೆಗಳು ಮತ್ತು ಅವುಗಳ ಪ್ರವೇಶ ಸಂಖ್ಯೆಯನ್ನು ಒಂದಿಷ್ಟು ಗಮನಿಸಬಹುದಾಗಿದೆ.

ಶಿಕ್ಷಣದ ಮಟ್ಟವನ್ನು ಸುಧಾರಿಸಲು ಸಾಕಷ್ಟು ಹಣ ಬೇಕಾಗುತ್ತದೆ. ಇದರ ಕೊರತೆ ಇಂದು ತೀವ್ರವಾಗಿದೆ. ಸಾಧಿಸಬೇಕಾಗಿರುವ ಕಾರ್ಯ ಪ್ರಮಾಣಕ್ಕೆ ಅನುಗುಣವಾಗಿ ಹಣವು ಒದಗಿ ಬಂದರೆ ಮಾತ್ರ ಆ ಕಾರ್ಯ ಸುಲಭ ಸಾಧ್ಯವಾದೀತು. ಶಾಲೆಗಳ ಸ್ಥಳ ಸಂಕೋಚ ಸಮಸ್ಯೆ ನಿವಾರಣೆಯಾಗಬೇಕು. ಪುಸ್ತಕ ಭಂಡಾರ ಮತ್ತು ಪ್ರಯೋಗ ಶಾಲಾ ಸೌಕರ್ಯಗಳು ಹೆಚ್ಚು ಹೆಚ್ಚು ದೊರಕಬೇಕು. ಬೆಲೆಗಳು ಹೆಚ್ಚುತ್ತಿರುವ ಈ ಕಾಲದಲ್ಲಿ ಅದಕ್ಕನುಗುಣವಾಗಿ ಶಿಕ್ಷಕರ ಸಂಬಳ ಸಾರಿಗೆಗಳೂ ಕೂಡ ಹೆಚ್ಚಬೇಕು ಅದೂ ಸಾಧ್ಯವಾಗುತ್ತಿಲ್ಲ. ೧೯೬೦ರ ಅಂಕೆ ಅಂಶಗಳ ಪ್ರಕಾರ ಸೆಕೆಂಡರಿ ಶಾಲೆಯ ಅಧ್ಯಾಪಕರ ಸಂಬಳ ಸಾರಿಗೆಗಳು ಕೇವಲ ೧೪೦ ರೂ.ಗಳ ಸರಾಸರಿ ಪ್ರಮಾಣದಲ್ಲಿವೆ. ಇಷ್ಟು ಕಡಿಮೆ ಪ್ರಮಾಣದ ಸಂಬಳ ಅಧ್ಯಾಪಕ ವೃತ್ತಿಗೆ ಅರ್ಹ ಜನರನ್ನು ಆಕರ್ಷಿಸಲು ಸಮರ್ಥವಾಗುತ್ತಿಲ್ಲ. ಹೈಯರ್ ಸೆಕೆಂಡರಿ ಮತ್ತು ಇಂಟರ್ ಮೀಡಿಯೆಟ್ ಮಟ್ಟದಲ್ಲಿ ತುಂಬಾ ಬುದ್ಧಿವಂತರಾಗಿರುತ್ತಿದ್ದ ಹುಡುಗರು ಕೆಲವರು ಹಿಂದೆ ಅಧ್ಯಾಪಕ ವೃತ್ತಿಗೆ ಸೇರುತ್ತಿದ್ದರು. ಆದರೆ ಔದ್ಯೋಗಿಕ ಹಾಗೂ ತಾಂತ್ರಿಕ ತರಬೇತಿ ಕೋರ್ಸ್‌ಗಳಿಗೆ ಓದುವ ಅವಕಾಶಗಳು ಹೆಚ್ಚಿದಂತೆಲ್ಲಾ ಇವರು ತಮ್ಮ ಭವಿಷ್ಯದ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಮುಂದೆ ಅಂತಹ ಕೋರ್ಸ್‌ಗಳಿಗೆ ಹೊರಟು ಹೋಗುತ್ತಿದ್ದಾರೆ. ಇಂದು ಸಾಮಾನ್ಯ ಬಿ ಎಸ್. ಸಿ. ತರಗತಿಗಳಿಗೆ ಸೇರುವವರ ಸಂಖ್ಯೆ ಬಹಳ ಕಡಿಮೆಯಾಗಿದೆ.

ಶಿಕ್ಷಕರ ತರಬೇತಿ ಒದಗಿಸುವ ಸಂಸ್ಥೆಗಳ ಅಧ್ಯಾಪಕ ವರ್ಗವಾಗಲಿ, ಪಾಠಕ್ರಮಗಳಾಗಲಿ ಸಾಕಷ್ಟು ಉತ್ತಮಗೊಂಡಿಲ್ಲ. ಸೆಕೆಂಡರಿ ವಿದ್ಯಾಭ್ಯಾಸವನ್ನು ಒದಗಿಸುತ್ತಿರುವ ಅನೇಕ ಖಾಸಗಿ ಶಾಲೆಗಳಲ್ಲಿ ಅಂತಹ ಆಕರ್ಷಕ ಅಧ್ಯಾಪಕ ಸ್ಥಿತಿಗತಿಗಳೇನೂ ಇಲ್ಲ. ಕಡಿಮೆ ಸಂಬಳ ಒಂದು ಕೊರತೆಯಾದರೆ ಅಧ್ಯಾಪಕ ವರ್ಗಕ್ಕೆ ಸರಿಯಾದ ತರಬೇತಿಯೇ ಇಲ್ಲದಿರುವುದು ಇನ್ನೊಂದು ಕೊರತೆ. ಇಂತಹ ಕೊರತೆಗಳಿಗೆ ಒಳಗಾಗಿರುವ ಅಧ್ಯಾಪಕ ವರ್ಗ ನಿರಾಶೆಗೊಂಡಿರುವುದು ಸಹಜವೇ ಆಗಿದೆ. ಅಲ್ಲದೆ ಒಂದೊಂದು ತರಗತಿಯಲ್ಲಿಯೂ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಾ ಹೋಗುತ್ತಿರುವುದರಿಂದ ಹಿಂದೆ ಅಧ್ಯಾಪಕರೂ ಮತ್ತು ವಿದ್ಯಾರ್ಥಿಗಳ ಮಧ್ಯೆ ಇರುತ್ತಿದ್ದ ಒಂದು ನಿಕಟ ಸಂಬಂಧ ಇಂದು ಇಲ್ಲವಾಗಿದೆ. ಶಿಕ್ಷಣ ಮಟ್ಟ ಉತ್ತಮವಾಗಿರಬೇಕಾದರೆ ಇತರ ಎಲ್ಲಾ ವಿಷಯಗಳಿಗಿಂತ ಸಂಬಂಧ ಬಹಳ ಮುಖ್ಯ ಎಂಬುದನ್ನು ಗಮನಿಸಬೇಕು.

ನಮ್ಮ ಸೆಕೆಂಡರಿ ಶಾಲೆಗಳಲ್ಲಿ ಶಿಕ್ಷಣ ಮಟ್ಟ ಹಿಂದಿನಷ್ಟು ಉತ್ತಮವಾಗಿಲ್ಲ ಎಂಬ ಆಕ್ಷೇಪಣೆ ನಿರಾಧಾರವಾದುದಾದರೂ ದಿನೇದಿನೇ ಹೆಚ್ಚುತ್ತಿರುವ ಪ್ರವೇಶ ಸಂಖ್ಯೆ ಮತ್ತು ವಿದ್ಯಾ ಸೌಲಭ್ಯಗಳ ಕೊರತೆ ಈ ಕೆಲವು ಸಮಸ್ಯೆಗಳನ್ನು ನಾವು ಕೂಡಲೇ ಬಗೆಹರಿಸಬೇಕಾದ ಅಗತ್ಯವಿದೆ. ಇದನ್ನು ನಾವು ಮಾಡದೆ ಹೋದರೆ ವಿದ್ಯಾಭ್ಯಾಸ ವ್ಯವಸ್ಥೆಯಲ್ಲಿ ಭಾರಿ ಲೋಪದೋಷಗಳು ಉಂಟಾಗಿ ಅದರ ಅಡಿಪಾಯವೇ ಕುಸಿದು ಹೋಗಬಹುದು. ಹಿಂದಿನ ಮಟ್ಟದಷ್ಟೇ ಇಂದಿನ ಮಟ್ಟವೂ ತೃಪ್ತಿಕರವಾಗಿದೆ ಎಂದು ಹೇಳಿ ಸಮಾಧಾನ ಪಟ್ಟುಕೊಳ್ಳುವುದೂ ಉಚಿತವಾಗಲಾರದು. ನಮ್ಮ ವಿದ್ಯಾಭ್ಯಾಸ ಮಟ್ಟ ಇಳಿಯುತ್ತಿದೆ ಎಂದು ತಿಳಿದವರು ಹೇಳಿದಾಗ ಅವರ ಮನಸ್ಸಿನಲ್ಲಿ ಮುಖ್ಯವಾಗಿ ಇತರ ಮುಂದುವರಿದ ದೇಶಗಳಲ್ಲಿ ಇರುವ ವಿದ್ಯಾಭ್ಯಾಸದ ಉನ್ನತ ಮಟ್ಟದ ಅರಿವು ಇರುತ್ತದೆ. ಆ ಮಟ್ಟಕ್ಕೆ ನಮ್ಮ ದೇಶ ಇನ್ನೂ ಬಂದಿಲ್ಲವಲ್ಲ ಎಂಬ ಕೊರತೆ ಅವರ ಮಾತಿನ ಹಿಂದೆ ಇರುತ್ತದೆ. ಇಂದಿನ ಆಧುನಿಕ ಸಮಾಜದ ಅವಶ್ಯಕತೆಗಳಿಗನುಗುಣವಾಗಿ ಒಂದು ಹೊಸ ಬಗೆಯ ವಿದ್ಯಾಭ್ಯಾಸ ಕ್ರಮ ನಮ್ಮಲ್ಲಿ ಜಾರಿಗೆ ಬರಬೇಕು ಮತ್ತು ನಮ್ಮ ಸಾಧನೆಗಳ ಗುಣಮೌಲ್ಯ ಮುಖ್ಯವಾಗಬೇಕು. ಗುಣಮೌಲ್ಯಕ್ಕೆ ನಮ್ಮ ಕಾರ್ಯಯೋಜನೆಗಳಲ್ಲಿ ಇಂದು ಬಹಳ ದೊಡ್ಡ ಕೊರತೆ ಇದೆ. ಈ ಕೊರತೆಯನ್ನು ನಾವು ನಿವಾರಿಸಿಕೊಳ್ಳಬೇಕು

ಹೆಚ್ಚಿನ ಹಣ ಸೌಕರ್ಯ

ಸೆಕೆಂಡರಿ ವಿದ್ಯಾಭ್ಯಾಸವನ್ನು ಪಡೆಯಬಯಸುವ ಎಲ್ಲರಿಗೂ ಅದಕ್ಕೆ ಅವಶ್ಯಕವಾದ ಸೌಕರ್ಯಗಳನ್ನು ಸಮರ್ಪಕವಾಗಿ ಒದಗಿಸಬೇಕೆಂದಾದರೆ ಇಂದು ಹಣದ ಕೊರತೆ ತೀವ್ರವಾಗಿದೆ. ಈ ಬಾಬಿಗೆ ಹೆಚ್ಚು ಹಣವನ್ನು ಒದಗಿಸುವುದು ತುಂಬಾ ಅವಶ್ಯಕವಾಗಿದೆ. ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಕಾರ್ಯಯೋಜನೆಗಳಿಗೆ ಎಷ್ಟು ಹಣ ಬೇಕೋ ಅಷ್ಟು ಹಣ ಒದಗಿ ಬರುತ್ತಿಲ್ಲ. ಇದು ದುರ್ದೈವದ ಸಂಗತಿ. ನಮ್ಮ ರಾಷ್ಟ್ರೀಯ ವರಮಾನದಲ್ಲಿ ವಿದ್ಯಾಭ್ಯಾಸಕ್ಕೆಂದು ಮೀಸಲಿಡುತ್ತಿರುವ ಹಣದ ಪ್ರಮಾಣ ಬಹಳ ಕಡಿಮೆಯಾಗಿದೆ. ಪ್ರಪಂಚದ ಬೇರೆ ಯಾವ ಕಡೆಯಲ್ಲೂ ಇಷ್ಟು ಕಡಿಮೆ ಪ್ರಮಾಣವಿಲ್ಲ ಎಂದು ಹೇಳಬಹುದು.

ಸೆಕೆಂಡರಿ ವಿದ್ಯಾಭ್ಯಾಸಕ್ಕೆ ಅದರ ಮಟ್ಟವನ್ನು ಉತ್ತಮಗೊಳಿಸಲು ಬೇಕಾಗುವಷ್ಟು ಹಣವನ್ನು ನಾವು ಒದಗಿಸುವುದು ಸಾಧ್ಯವೇ ಎಂಬುದು ಮುಖ್ಯ ಪ್ರಶ್ನೆ. ಇಂದಲ್ಲ ನಾಳೆಯಾದರೂ ಇದು ಸಾಧ್ಯವಾಗಲೇ ಬೇಕು. ಇಂದಿನ ತುರ್ತು ಅಗತ್ಯದ ಮಟ್ಟಿಗೆ ಹೇಳುವುದಾದರೆ ಪರಿಸ್ಥಿತಿ ತುಂಬಾ ನಿರಾಶಾದಾಯಕವಾಗಿದೆ. ಪ್ರಸಕ್ತ ಯೋಜನೆಯ ಇನ್ನುಳಿದ ಕಾಲದಲ್ಲಿ ಇದಕ್ಕೆ ಒದಗಿ ಬರುವ ಹಣ ಬಹಳ ಕಡಿಮೆಯೆಂದೇ ಹೇಳಬೇಕು. ಇದಕ್ಕಾಗಿ ಖಾಸಗಿ ಪ್ರಯತ್ನವನ್ನು ನಾವು ಸಾಕಷ್ಟು ಹುರಿದುಂಬಿಸಬೇಕಾಗುತ್ತದೆ. ಮತ್ತು ಎಷ್ಟು ಹಣ ದೊರಕುತ್ತದೆಯೋ ಅಷ್ಟು ಹಣವನ್ನು ವಿವೇಕಯುತವಾಗಿ ಮತ್ತು ಹೆಚ್ಚು ಫಲದಾಯಕವಾಗಿ ಬಳಸಿಕೊಳ್ಳಬೇಕಾಗುತ್ತದೆ. ಆರ್ಥಿಕವಾಗಿ ಹಿಂದುಳಿದಿರುವ ರಾಷ್ಟ್ರಗಳಲ್ಲಿ ಜೀವನ ಮಟ್ಟವನ್ನು ಸುಧಾರಿಸುವುದಕ್ಕೆ ನೆರವಾಗುವ "ಅಭಿವೃದ್ಧಿ ದಶಕ" ಕಾರ್ಯಕ್ರಮವನ್ನು ವಿಶ್ವಸಂಸ್ಥೆ ಆರಂಭಿಸಿದೆ. ಅದೇ ಮಾದರಿಯಲ್ಲಿ ಶಾಲಾ ಸ್ಥಿತಿಗತಿಗಳ ಅಭಿವೃದ್ಧಿ ಕಾರ್ಯಕ್ರಮವೊಂದನ್ನು ನಮ್ಮ ರಾಷ್ಟ್ರೀಯ ಮಟ್ಟದಲ್ಲಿ ನಾವು ಆರಂಭಿಸಬಹುದಾಗಿದೆ. ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಸರಕಾರಿ ಹಾಗೂ ಖಾಸಗೀ ಪ್ರಯತ್ನವನ್ನು ಸಂಘಟಿಸಬಹುದಾಗಿದೆ. ವಿಶ್ವವಿದ್ಯಾನಿಲಯಗಳೂ ಸಾರ್ವಜನಿಕರೂ ಮತ್ತು ವಿದ್ಯಾರ್ಥಿಗಳ ತಂದೆತಾಯಿಗಳೂ ಈ ಕಾರ್ಯಕ್ರಮದಲ್ಲಿ ನಿಷ್ಠೆಯಿಂದ ಭಾಗವಹಿಸುವುದರ ಮೂಲಕ ಇಂದಿನ ವಿದ್ಯಾಭ್ಯಾಸ ವ್ಯವಸ್ಥೆಯಲ್ಲಿ ಇರುವ ಲೋಪದೋಷಗಳನ್ನು ನಿವಾರಿಸಲು ಪ್ರಯತ್ನಿಸಬಹುದು. ಅಲ್ಲದೆ ಶಾಲೆಗಳ ಸ್ಥಳ ಸಂಕೋಚ ಸಮಸ್ಯೆ ಹಾಗೂ ಪುಸ್ತಕ ಭಂಡಾರಗಳ ಕೊರತೆಯನ್ನು ನಿವಾರಿಸುವ ಕಾರ್ಯದಲ್ಲಿ ನೆರವಾಗಬಹುದು.

ವಿಶ್ವಮಾನವ

ಢಂ ಢಂ ಡಾಂ ಯಾಲ್ಲಾ-ಹೇರಾಮ್....
ಹೊಡೆವ ಗುಂಡಿನೊಡನೆ ಸ್ಫುರಣೆ
ಕಾಲ ಭಟನಿಗಿಹುದೆ ಕರುಣೆ?
ಸತ್ತರೋ ಸತ್ತರು! ನೆತ್ತರೋ ನೆತ್ತರು!!
ಅವನಿಗಿವನು ವೈರಿಯಂತೆ
ಅವನಿಗಾಗಿ ಪ್ರಾಣವಂತೆ
ಯಾರೋ ನುಡಿದ ಯಾರೊ ಮಾಡಿದ
ಮಂದ ಬುದ್ಧಿ ಮಂದಿಗಾಗಿ
ಯಾರು ಯಾರ ಹೊಡೆದರೋ,
ಯಾರು ಯಾರು ಮಡಿದರೋ
ಕಟ್ಟುಕತೆಯೇನು? ಹೀರೋ ಹೀವೂ!
ನಾಗಸಾಕಿಯೊಳಾದ ಮಾರಣ
ಹೋಮ
ಗೆಲುವೇನು? ಸೋಲೇನು?
ಜನ ಜನರ ಕೊಲ್ಲುವೊಡೆ?
ಬಲವೇನು? ಛಲವೇನು?
ಜಗ ದಯೆಯ ತಲ್ಲುವೊಡೆ?
ತಿಳಿವೇನ? ತಿಳಿದೇನು?
ಕುರುಡಾಗೆ ಶಾಂತಿ ಯೆಡೆ.
ಢಂ ಢಂ ಢಂ — ಯಾಲ್ಲಾ ಹೇರಾಮ್....
ಸೀಟೋ ಸೆಂಟೋ ನ್ಯಾಟೊ ಬಣವೂ
ಮಾನವ ಜೇಟಿಯ ಮಾರಿಬಲೆ
ಅಳುಕುವ ಮಂದಿ ಅಳಿದರಿಷ್ಟೆ
ದೇಶ ವಿದೇಶದಿ ಸೈನ್ಯನೆರೆ.
ಪೆಂಟಗಾನ್ ಜಲಜನ ಕಣೆ
ಬಾಂಬೋ
ಸ್ಪುಟ್ರೋ ಜನಿನ ಠೇಂಕಾರ
ಮಾನವ ಕುಲದಿ ನಾವು ಹಿರಿದೆಂಬೋ
ನಾಸ್ತಿಕ ವರ್ಗದ ಅಹಂಕಾರ.
ಢಂ, ಢಂ, ಢಂ — ಯಾಲ್ಲಾ ಹೇರಾಮ್,
ಒಪ್ಪಿದ ರೀತಿಯೋ ಗುರುವರನೆಂದು
ಜೀಸಸ್ ಬುದ್ಧನ ಮಹಮ್ಮದನ
ಓದಿದರೇಕೋ, ವೇದ ಕುರಾಣ
ಬೈಬಲ್ ಗೀತೆಯ ವ್ಯಾಕರಣ
ಆಡುವದೊಂದು, ಮಾಡುವದೊಂದು
ಹೇಡಿಗಳಾದರೊ ಜೀವಿತದಿ,
ಅರಿತಿಹುದೊಂದು ಅರಿಯುವರೊಂದು
ಸಾಗುವುದೆಲ್ಲಿಗೊ? ಜೀವನದಿ.
"ವಿಶ್ವಮಾತೆಯ ಮಕ್ಕಳು ನಾವೆಲ್ಲೊ"
ವಿಶ್ವಕುಟುಂಬದ ತಿರುಮಂತ್ರ
ವಿಶ್ವಮಾನವನಾಗುವದೊಂದೇ
ವಿಶ್ವವ ನುಳಿಸುವ ನಿಜತಂತ್ರ

— ಕೆ ಎಸ್. ಮಹಾಬಲ ಶೆಟ್ಟಿ,
ನಡುಮೊಗರು

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್. ಐತಾಳ, ಎಂ.ಬಿ ಬಿ.ಎಸ್)
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಮ್. ಎಸ್ ಸಿ

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

ಹಿಂದೀ ಸಾಹಿತ್ಯದ ಯುಗಪ್ರವರ್ತಕ

ರಾಜಕವಿ ಭಾರತೇಂದು ಹರಿಶ್ಚಂದ್ರ

ಕಾಶಿಯಲ್ಲಿ ಸೇಠ್ ಅಮೀರ್ ಚಂದರ ಮನೆತನವು ಬಹಳ ಹಿಂದಿನ ಕಾಲದಿಂದಲೂ ಶ್ರೇಷ್ಠ ಹಾಗೂ ಪ್ರಸಿದ್ಧವಾಗಿತ್ತು. ಇದೇ ಕುಲೀನ ಮನೆತನದಲ್ಲಿ ಶ್ರೀ ಗೋಪಾಲ ಚಂದ್ರರು ಜನಿಸಿದ್ದರು. ಗೋಪಾಲಚಂದ್ರರು ಹಿಂದಿಯ ಖ್ಯಾತ ಕವಿಯೂ ಆಗಿದ್ದರು. ಇವರ ಇನ್ನೊಂದು ಹೆಸರು ಗಿರಿಧರದಾಸ ಎಂದು. ಇವರಿಗೆ ಹುಟ್ಟಿದ ಒಂದು ಪುತ್ರರತ್ನ ಮುಂದೆ ಹಿಂದೀ ಸಾಹಿತ್ಯದಲ್ಲಿ ಧ್ರುವ ತಾರೆಯಂತೆ ಥಳಥಳಿಸಿತು. ಈ ಮಗುವಿನ ಹೆಸರೇ ಭಾರತೇಂದು ಹರಿಶ್ಚಂದ್ರ ಎಂದಾಗಿತ್ತು.

ತನ್ನ ಐದನೆಯ ವರ್ಷದಲ್ಲೇ ತಾಯಿಯಿಂದಲೂ ಹತ್ತನೇ ವರ್ಷದಲ್ಲಿ ತಂದೆಯಿಂದಲೂ ವಂಚಿತರಾದ ಇವರು ಬಾಲ್ಯದಲ್ಲೇ ಚಂಚಲ ಚಿತ್ತರಾದರೂ ಮೇಧಾವಿಗಳಾಗಿದ್ದರು. ಇಂಥ ಪ್ರಾಯದಲ್ಲೇ ಅವರು ಒಮ್ಮೆ ತಂದೆಯ ಒಂದು ಕವಿತೆಯ ಉತ್ತರಾರ್ಧವನ್ನು ಬರೆದಾಗ, ಗಿರಿಧರದಾಸರು ಆನಂದ ತುಂದಿಲರಾಗಿ ತನ್ನ ಪುತ್ರನಿಂದ ತನ್ನ ಕೀರ್ತಿ ವೃದ್ಧಿಸುವುದರಲ್ಲಿ ಸಂಶಯವಿಲ್ಲವೆಂದು ಹೇಳಿದ್ದರು.

ಧಾರ್ಮಿಕ ಪ್ರವೃತ್ತಿಯವರಾದ ಶ್ರೀ ಗಿರಿಧರದಾಸರು ತನ್ನ ಮಗನಿಗೆ ೧೩ ವರ್ಷದಲ್ಲೇ ಮದುವೆ ಮಾಡಿದರು. ಅದೇ ವರ್ಷ ಅವರು ಉತ್ತರ—ದಕ್ಷಿಣ ಭಾರತದ ಯಾತ್ರೆಮಾಡಿ ಅಪಾರ ಜ್ಞಾನವನ್ನು ಪಡೆದರು. ಅವರ ಬುದ್ಧಿ ಕುಶಾಗ್ರವಾಗಿತ್ತು. ಅವರು ಅತ್ಯಲ್ಪ ಸಮಯದಲ್ಲೇ ಬಹು ಭಾಷಾ ಪಾಂಡಿತ್ಯವನ್ನು ಶಾಲೆಯ ಶಿಕ್ಷಣವಿಲ್ಲದೆಯೇ ಗಳಿಸಿಕೊಂಡರು. ಆಗಲೇ ಅವರು ಸುಮಾರು ೩೨ ಭಾಷೆಗಳನ್ನು ಚೆನ್ನಾಗಿ ತಿಳಿದಿದ್ದರು. ಯಾತ್ರೆಯ ಸವಿ ಅನುಭವವನ್ನು ಸುಂದರ ಕವಿತೆಗಳಲ್ಲಿ ಅವರು ಬರೆದು ಇತರರಿಗೆ ಓದಿ ಹೇಳುತ್ತಿದ್ದರು. ಅವರ ಈ ಕಾವ್ಯಪ್ರತಿಭೆಗೆ ತಲೆದೂಗದವರ್‍ಯಾರೂ ಇರಲಿಲ್ಲ.

ದುಂಡಗಾದ ಇವರ ಉದ್ದವಾದ ಶರೀರ ನೋಡುವವರಿಗೆ ಆನಂದವನ್ನುಂಟು ಮಾಡುತ್ತಿತ್ತು. ಚಿಕ್ಕ ಕಣ್ಣುಗಳು, ಚಂದವಾದ ಮೂಗು, ಗುಂಗುರಾದ ಉದ್ದನೆಯ ದಪ್ಪವಾದ ಕೂದಲುಗಳು, ವಿಶಾಲ ಹಣೆ-ಇವೆಲ್ಲ ಅವರ ಗೌರವ ವರ್ಣದ ಶರೀರಕ್ಕೆ ತಕ್ಕುದಾಗಿದ್ದುವು. ಜನಸಾಮಾನ್ಯರೂ ಇವರ ಕವಿತೆ ಕೇಳಿ ತಲೆದೂಗುತ್ತಿದ್ದರು. ಅದಕ್ಕಿಂತಲೂ ಹೆಚ್ಚಾಗಿ ಇವರ ವಿನಯ, ಸೌಜನ್ಯಗಳಿಗೆ, ಶಿಸ್ತುಬದ್ಧ ಜೀವನಕ್ಕೆ ಬಹುವಾಗಿ ಆಕರ್ಷಿತರಾಗಿದ್ದರು. ಕೋಮಲ ಹೃದಯದವರಾದ ಇವರು ಇತರರ ಕಷ್ಟಗಳನ್ನು ಕಂಡು ಮಮ್ಮಲ ಮರುಗುವವರಾಗಿದ್ದರು. ಎಲ್ಲಿಯಾದರೂ ಬಿರುಗಾಳಿ-ಬರಗಾಲ ಬಂದು ಜನರು ಪೀಡಿತರಾದರೆ ಇವರ ಕೋಮಲ ಹೃದಯ ಮರುಗಿ-ಕೊರಗುತ್ತಿತ್ತು. ಅವರು ಒಡನೆ ಆ ಜನರಿಗೆ ಸಹಾಯ ಮಾಡಲು ಊರೆಲ್ಲ ಸುತ್ತಾಡಿ ಧನಸಂಗ್ರಹಿಸುತ್ತಿದ್ದರು. ಬಟ್ಟೆಯಿಲ್ಲದೆ ಚಳಿಯಿಂದ ನಡುಗುವವರನ್ನು ಕಂಡರೆ ತಮ್ಮ ಹೊದಿಕೆಯ ಶಾಲನ್ನೇ ದಾನ ಮಾಡುತ್ತಿದ್ದರು. ಇದರೊಡನೆ ಅವರೊಡನಿದ್ದ ಇನ್ನೊಂದು ಗುಣಮಣಿ ಎಂದರೆ ವಿದ್ವಾಂಸರ, ಗುಣಿಗಳ ಕವಿಗಳ ಮತ್ತು ವೃದ್ಧರ ಅತಿಥಿ ಸೇವೆ. ಒಮ್ಮೆ ಒಂದು ಸಾಹಿತ್ಯ ಸಮ್ಮೇಲನದಲ್ಲಿ "ಹನುಮಾನ್ ಪಂತ"ರು ತಮ್ಮ ಸುರಸವಾದ ಕವಿತೆಯನ್ನು ಓದಿದಾಗ ಭಾರತೇಂದ್ರರವರ ಹೃದಯ ಧ್ವನಿ ಅರಳಿತು. ತಾವು ಬಾಲ್ಯ ಪ್ರಾಯದ ಹುಡುಗ ಎಂಬುದನ್ನು ಮರೆತು ಮಾನ್ಯರೇ ತಾವು ಇನ್ನೊಮ್ಮೆ ಆ ಕವಿತೆಯನ್ನು ಓದಿರೆಂದು ಗಟ್ಟಿಯಾಗಿ ಹೇಳಿದಾಗ ಸಭೆಯ ಜನರ ಗಮನ ಇವರ ಕಡೆಗೆ ಹರಿಯಿತು. ಇಂಥ ಹಲವಾರು ಪ್ರಸಂಗಗಳು ಭಾರತೇಂದು ಹರಿಶ್ಚಂದ್ರರ ಬಾಲ್ಯಕಾಲದಲ್ಲಿ ಘಟಿಸಿದ್ದುವು.

ಭಾರತೇಂದ್ರರು ಎಷ್ಟು ಉದಾರಿಗಳೋ ಅಷ್ಟೇ ಸ್ವಾಭಿಮಾನಿಗಳೂ ಆಗಿದ್ದರು. ಸತ್ಯವಂತರಾದ ಅವರಿಗೆ ಸತ್ಯಹರಿಶ್ಚಂದ್ರ ನಾಟಕ ನೋಡುವುದೆಂದರೆ ಎಲ್ಲಿಲ್ಲದ ಆನಂದ. ಹರಿಶ್ಚಂದ್ರನ ಕುರಿತಾಗಿ ಆಗಲೇ ಅವರು ರಚಿಸಿದ ಕವಿತೆಯಿಂದ ಅವರೆಷ್ಟು ಕಠೋರ ಸತ್ಯ ಪ್ರೇಮಿ ಎಂಬುದನ್ನು ಎತ್ತಿ ತೋರಿಸುತ್ತಿದೆ ಆ ಪದ್ಯಸಾರವಿದು: "ಚಂದ್ರ, ಸೂರ್ಯ ಇನ್ನೇನ, ಜಗತ್ತೇ ಬದಲಾಗಲಿ, ಸತ್ಯವಿಚಾರವು ಮಾತ್ರ ಸ್ಥಿರವಾಗಿರುವುದು"

ಕುಲೀನ ಧನಿಕ ಮನೆತನದಲ್ಲಿ ಜನಿಸಿದ್ದರೂ ಹರಿಶ್ಚಂದ್ರರು ಅತ್ಯಂತ ಸಹೃದಯರೂ ಸರಳರೂ ಆಗಿದ್ದರು. ಸಾಹಿತ್ಯ ರಚನೆಯು ಅವರ ವಿಶಿಷ್ಟ ಪ್ರತಿಭೆಯು ಅವರಿಗೆ ಬಾಲ್ಯದಿಂದಲೇ ದೈವದತ್ತವಾಗಿ ಬಂದಿತ್ತು. ಯುಗಪ್ರವರ್ತಕ ಕಲಾಕಾರರಾಗಿ ಪತ್ರಿಕೆಗಳ ಸಂಪಾದನೆ ಮಾಡಿ ಹಿಂದೀ ಸಾಹಿತ್ಯವನ್ನು ವಿಕಾಸದತ್ತ ಕೊಂಡು ಹೋಗುವ ನಿರಂತರ ಪ್ರಯತ್ನ ಮಾಡಿದರು.

ಅವರ ವಿಶಿಷ್ಟವೂ ಸರ್ವಾಂಗ ಸುಂದರವೂ ಆದ ಗದ್ಯಶೈಲಿಯು ಜನ ಮನೋರಂಜಕ ಹಾಗೂ ಆಕರ್ಷಕವಾಗಿತ್ತು. ಅವರು ಬರೆದ ಕೃತಿಗಳು ಕೆಲವೇ ಆದರೂ ಅವೆಲ್ಲ ಒಂದೊಂದು ದೃಷ್ಟಿಯಿಂದ ಹಿಂದೀ ಸಾಹಿತ್ಯದ ಒಂದೊಂದು ವಿಭಾಗವನ್ನು ನವಕಾಂತಿ-ಶಕ್ತಿಗಳಿಂದ ತುಂಬಿದ ರತ್ನಮಣಿಗಳೇ ಆಗಿವೆ. ಇಂಥ ಮಹಾನ್ ಸಾಹಿತಿಯು ತನ್ನ ೩೪ನೇ ವರ್ಷದಲ್ಲಿ ಪಂಚತ್ವವನ್ನೈದಿದರೆನ್ನುವಾಗ ಯಾರಿಗೂ ದುಃಖವಾಗದಿರದು.

ಹರಿಶ್ಚಂದ್ರರು ಮಹಾನ್ ಸಮಾಜ ಸುಧಾರಕರಾಗಿದ್ದರು. ಸ್ವಾಮಿ ದಯಾನಂದ ಸರಸ್ವತಿ, ವಿದ್ಯಾಸಾಗರರ ಮಿತ್ರರಾದ ಅವರು ಬಾಲ್ಯವಿವಾಹ, ಜಾತಿ ಪದ್ಧತಿ, ಮದ್ಯಪಾನ, ಅಸ್ಪೃಶ್ಯತೆಗಳ ಕಠೋರ ವಿರೋಧಿಗಳಾಗಿದ್ದರು. ಸ್ತ್ರೀ ಶಿಕ್ಷಣದ ಸಮರ್ಥಕರಾಗಿ ಹಲವು ಶಿಕ್ಷಣಾಲಯಗಳನ್ನು ತೆರೆದರು ಹಲವು ಪತ್ರಿಕೆಗಳನ್ನು ಹೊರಡಿಸಿ ತಮ್ಮ ಭಾವನೆಗಳನ್ನು ಜನತೆ ಮುಟ್ಟಿಸಿ ಸಫಲರಾದರು. ಅಮೂಲ್ಯವಾದ ಹಲವು ಪುಸ್ತಕಗಳ ರಚನಾಕಾರರಾಗಿ ಇತರ ರಚನಾಕಾರರಿಗೆ ಹೃತ್ಪೂರ್ವಕವಾದ ಪ್ರೋತ್ಸಾಹವಿತ್ತರು. ಅವರು ರಾಜಮಹಾರಾಜರ, ಸಾಹಿತಿಗಳ, ಕವಿಗಳ ಮಹಾತ್ಮರ ಆತ್ಮೀಯ ಮಿತ್ರರಾಗಿದ್ದರು.

ಸಾಹಿತ್ಯದಲ್ಲಿ ಧರ್ಮ ಮತ್ತು ಭಕ್ತಿಗಳ ಪ್ರಚಾರಕ್ಕಾಗಿ ಹೋರಾಡಿದ ಇವರು ಭಾರತೀಯ ಸಂಸ್ಕೃತಿಯ ಘನವೆತ್ತ ಕವಿಗಳಾಗಿದ್ದಾರೆ. ಅವರು ಇಪ್ಪತ್ತನೇ ಶತಮಾನದಲ್ಲಿ ರೀತಿಕಾಲದ ಸಾಹಿತ್ಯದ ಧಾರೆಯನ್ನು ಬದಲಿಸಿ ಧರ್ಮ ಮತ್ತು ಭಕ್ತಿಯ ಕಡೆಗೆ ಹರಿಸಿದ ಯುಗಪ್ರವರ್ತಕರು. ಸಮಾಜ ಸುಧಾರಣೆಗೋಸ್ಕರ ತಮ್ಮ ಪ್ರಖರವಾದ ಜ್ಞಾನ ಭಂಡಾರವನ್ನು ಧಾರೆಯೆರೆದಂತೆಯೇ ವಿಪುಲವಾದ ತಮ್ಮ ಸಂಪತ್ತನ್ನೂ ತಾವಾಗಿಯೇ ದಾನಮಾಡಿದ್ದರು. ಕಾಶಿಯ ಮಹಾರಾಜರು ಭೋಪಾಲದ ರಾಜರು ಮತ್ತು ಉದಯಪುರದ ಅರಸರು ಇವರನ್ನು ಆಗಾಗ್ಗೆ ಕರೆಸಿ ಸತ್ಕಾರಮಾಡುತ್ತಿದ್ದರು. ಇವರನ್ನು ಅವರು ಅತಿಯಾಗಿ ಗೌರವಿಸುತ್ತಿರುವುದನ್ನು ಕಂಡ ಕೆಲವರಿಗೆ ಮತ್ಸರವೂ ಆಗುತ್ತಿತ್ತು. ಇಂಥ ಪ್ರಕಾಂಡ ವಿದ್ವಾಂಸರಾದ ಇವರನ್ನು "ಪ್ರಿನ್ಸ್ ಒಫ್ ವೇಲ್ಸರು" ಒಂದು ಸುವರ್ಣ ಪದಕವನ್ನು ಇತ್ತು ಗೌರವಿಸಿ ಅವರನ್ನು "ಭಾರತದ ರಾಜಕವಿ" ಎಂದು ಕರೆದರು. ಇದರಿಂದಲೇ ಅವರ ಹೆಸರು 'ಭಾರತೇಂದು' ಎಂದು ರೂಢಿಯಾಯಿತು.

ಕವಿ ಭಾರತೇಂದ್ರರು ತಮ್ಮ ರಚನೆಗಳಲ್ಲಿ ಭಾವಸೌಂದರ್ಯದ ಯೋಜನೆಯತ್ತ ಉಪಯುಕ್ತವಾದ ಗಮನಕೊಟ್ಟಿದ್ದಾರೆ. ಅವರ ಕವಿತೆಗಳಲ್ಲಿ ರಸಪ್ರವಾಹವು ನಿಚ್ಚಳವಾಗಿ ಪ್ರವಹಿಸುತ್ತಿದೆ. ಶೃಂಗಾರ ಶಾಂತ ಮತ್ತು ಹಾಸ್ಯರಸಗಳ ತ್ರಿವೇಣಿ ಸಂಗಮವನ್ನು ಅವರ ಕವಿತೆಗಳಲ್ಲಿ ನಾವು ಕಾಣಬಹುದು. ಪ್ರಕೃತಿ ಚಿತ್ರಣದಲ್ಲಿ ಇವರದ್ದು ಪಳಗಿದ ಕೈಯಾಗಿದೆ. ಅವರು ಶಾಂತ ಮತ್ತು ಶೃಂಗಾರ ರಸದಲ್ಲಿ ಬರೆ ಶ್ರೀಕೃಷ್ಣನ ಪ್ರೇಮ-ಭಕ್ತಿ ಗೀತೆ, ಗಂಗಾವರ್ಣನೆ, "ಯಮುನಾ ಛವಿ" ನಿಜಕ್ಕೂ ಪ್ರಶಂಸಾರ್ಹವಾಗಿವೆ. ಭಾರತೇಂದ್ರರು ಯಥಾರ್ಥವಾದ ಮತ್ತು ಆದರ್ಶವಾದದ ಓಜಸ್ವೀ ಪ್ರತಿಪಾದಕರಾಗಿದ್ದರು. ಇದರಿಂದ ಅವರು ದೇಶದ ಸಮಾಜದ ಉನ್ನತಿಗೋಸ್ಕರ ನಿರಂತರ ದುಡಿದ ನಿಷ್ಣಾತ ಸುಧಾರಕರೆಂದು ಅನ್ನಿಸಿಕೊಂಡರು. ಬ್ರಿಟಿಷರ ಶಾಸನದಲ್ಲಿ ನರಳುತ್ತಿದ್ದ ಭಾರತವನ್ನು ಅವರಿಗೆ ಕಾಣಲಾಗುತ್ತಿದ್ದಿಲ್ಲ. ಇಂಥ ಭಾರತದ ದುರ್ದಶೆಯನ್ನು ಕಂಡು ಅವರು ಹಾಡಿದರು.

ಇಂಥ ರಾಜಕವಿ ತನ್ನ ಕೊನೆ ಕಾಲದ ದಿನಗಳಲ್ಲಿ ಆರ್ಥಿಕ ಸಂಕಟದಿಂದ ಆರ್ತರಾಗಿದ್ದರು. ಈ ಸಮಯದಲ್ಲಿ ಅವರು ಬರೆದ ಕವಿತೆಯು ಹಿಂದೀ ಸಾಹಿತ್ಯ ಪ್ರೇಮಿಗಳ ಹೃದಯವನ್ನು ಕೊರೆಯುತ್ತದೆ.

ತನ್ನ ಜೀವನದ ಕೊನೆಯ ದಿನದ ವರೆಗೂ ಅತಿ ಉತ್ಸಾಹದಿಂದ ಹಿಂದೀ ಸಾಹಿತ್ಯದ ಸೇವೆಮಾಡಿದ ಶ್ರೀ ಭಾರತೇಂದು ಹರಿಶ್ಚಂದ್ರರು ಮಹಾನ್ ಯುಗ ಪ್ರವರ್ತಕರೆಂದು ಹೆಸರುವಾಸಿಯಾದರು. ಸಾಹಿತ್ಯದ ಈ ಮಹಾನ್ ಉಪಾಸಕ ರಾತ್ರಿ ಈ ನಶ್ವರವಾದ ಲೋಕವನ್ನು ಅಗಲಿದಾಗ ಇತ್ತ ಕೊನೆಯ ಸಂದೇಶವೆಂದರೆ—

"ಶ್ರೀಕೃಷ್ಣ, ರಾಧಾಕೃಷ್ಣ ಬರುತಿದ್ದಾನೆ, ಅತನಿಗೆ ಮುಖ ತೋರಿಸು" ಎಂಬುದೇ ಆಗಿತ್ತು.

ಶ್ರೀ ಬಿ ನಾರಾಯಣ ಜೋಗಿತ್ತಾಯ

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. No. 202/63.

ಸುಬ್ರಾಯ ಉಳ್ಳೂರ—ವಾದಿ

ಮತ್ತು

ಚೆನ್ನಂಮ ಶೆಡ್ತಿ ಕೂಡಾ—ಪ್ರತಿವಾದಿಗಳು,

ಉಡುಪಿ ತಾಲೂಕು ಬೇಳ್ಕಾಡಿ ಗ್ರಾಮದಲ್ಲಿರುವ ಪುಟ್ಟಂಮ ಶೆಡ್ತಿ ಮಕ್ಕಳು ಗೋವಿಂದ ಶೆಟ್ಟಿ (D2), ಭಾಗಿ ಯಾನೆ ಅಕ್ಕಯ್ಯ ಶೆಡ್ತಿ (D5) ಚೆನ್ನಂಮ ಶೆಡ್ತಿ ಮಕ್ಕಳು ಶೇಖರ ಶೆಟ್ಟಿ (D6) ಲಲಿತ ಶೆಡ್ತಿ (D7) ಕೂಡಾ ಇವರಿಗೆ—

ವಾದಿಯು ಮಾಡಿದ ಅಮೇಜ ವಗೈರೆ ವಸೂಲು ಕೇಳಿ ನಿಂಮ ಮೇಲೆ ಕೂಡಾ ದಾಖಲು ಮಾಡಿದ ಮೇಲ್ಕಂಡ ದಾವೆಯು ತಾರೀಖು 10—9—63ಕ್ಕೆ ಮುಟ್ಟಿಸಿ ಆ ದಿವಸ ಬೆಳಿಗ್ಗೆ 11 ಗಂಟೆಗೆ ಕೋರ್ಟ ಮುಂದೆ ಹಾಜರಾಗಿ ಉಪಾಹರಿಸುವರೆ ತಪ್ಪಿದಲ್ಲಿ ಸದ್ರಿ ದಾವೆಯು ನಿಂಮ ಗೈರ್ ಹಾಜರಿಯಲ್ಲಿ ತೀರ್ಮಾನಿಸಲ್ಪಡುವುದು

Sd V. G. Kodlaya,

ವಾದಿ ಕಡೆ ಎಡ್ವೋಕೇಟ್

ಉಡುಪಿ

ತಾ 28—8—63.

ವರ್ಗ — ಊಳಿಗ

ಮೊದಲಾದ ಯಾವತ್ತೂ ತರದ

ಎಕೌಂಟ್ ಪುಸ್ತಕಗಳು

ಶಾಲಾ ರಿಜಿಸ್ತ್ರಿಗಳು,

ಫಾರ್ಮುಗಳು

ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.

ಗಜಪತಿ ನಂದಿನಿ

(೨ನೇ ಪುಟದಿಂದ)

ಯ ಮಗಳು ಚಿನ್ನಾದೇವಿಯಲ್ಲಿ ರಾಯನು ಅತಿರೇಕ ಆಸಕ್ತನಾಗಿದ್ದಾನೆ. ಅವಳನ್ನು ಪಟ್ಟದ ರಾಣಿಯಾಗಿ ಮಾಡಬೇಕೆಂಬ ಹುಚ್ಚು ತಲೆಗೇರಿದೆ ಈಗ. ಅವಳನ್ನು ಪಟ್ಟದ ರಾಣಿ ಮಾಡಿಕೊಳ್ಳದೆ ಜಗನ್ಮೋಹಿನಿಯನ್ನು ವರಿಸಲಾರನೆಂದು ಬೇರೆ ಹೇಳುತಿದ್ದಾನೆ. ಛಿ! ಇದು ವಿದ್ಯಾನಗರ ರತ್ನಸಿಂಹಾಸನಾಧೀಶನಿಗೆ ಭೂಷಣವಲ್ಲ. ಗಜಪತಿ ನಂದಿನಿಯಾದ ಜಗನ್ಮೋಹಿನಿಯೇ ರಾಯನಿಗೆ ತಕ್ಕ ಪಟ್ಟದ ರಾಣಿ. ನೋಡೋಣ, ಈಗ ರಾಯನು ನಾಗಲಾಪುರದ ಚಿನ್ನಾದೇವಿಯ ತೋಟಕ್ಕೆ ಹೋಗಿದ್ದಾನೆ. ಅಲ್ಲಿ ಹೇಗೆ ವರ್ತಿಸುವನೆಂದು ತಾಳ ಮಾಡಿ ನೋಡುವೆನು. (ಹೋಗುವನು)

ದೃಶ್ಯ—೩
ನಾಗಲಾಪುರದ ಹೂದೋಟ

(ಆದೇ ಸಂಜೆ ಯುವತಿ ಚಿನ್ನಾದೇವಿ ಆಡಂಬರವಿಲ್ಲದ ಉಡುಗೆತೊಡುಗೆಗಳಿಂದ ಕೈಯಲ್ಲಿ ಒಂದು ಕಮಲ ಹೂವನ್ನು ಹಿಡಿದುಕೊಂಡು ಚಿಂತೆಯ ಭಾವದಿಂದ ಹಾಡುತ್ತಿರುವಳು)

ಚಿನ್ನಾ—ಎತ್ತೊ ಸಾರಸದಿಂದ ಮೊಂದು ಕಮಲಂ ಜಾಲಸ್ರವಾಹಕ್ಕೆ ಸಿಕ್ಕುತ್ತಂ ಮೂಲವ ಬಿಟ್ಟು ಸುತ್ತಿಸುಳಿಯೊಳ್ ಸುಕ್ಕಾಗಿ ಸಾಗುತ್ತಿರಲ್,

ಕೃಷ್ಣದೇವರಾಯ—(ಪ್ರವೇಶಿಸಿ) ಮತ್ತಾವಾರಿಯು ತೀರದಂ ಸೊಗದ ಸತ್ಸಾರಮಂ ಮಾಡಿಯಾ ಚಿತ್ತಮೋದದ ಪುಷ್ಪಮಂ ಆರಳಿಸಂ ನಿಕ್ಷಂ ಇನಂ ಬಾಡದೋಲ್‌॥

(ಹಾಡುತಿರುವಾಗ ಒಂದು ಮೂಲೆಯಲ್ಲಿ ತಿಮ್ಮರಸನು ಹೊಂಚಿನೋಡಿ ಅಡಗುವನು. ಆವನ ಹಿಂದೆ ತಿಮ್ಮಣ್ಣ ರಾಮಕೃಷ್ಣರು ಹೊಂಚಿಕೊಂಡು ನಿಲ್ಲುವರು. ಹಾಡು ಮುಗಿಯುವಾಗ ರಾಯನು ಚಿನ್ನಾದೇವಿಯ ಸಮೀಪಕ್ಕೆ ಹೋಗಿರುತ್ತಾನೆ. ಚಿನ್ನಾ ಎದ್ದು ನಿಂತು ರಾಯನ ಕಾಲಿಗೆರಗುವಳು. ರಾಯನು ಕಟ್ಟೆಯ ಮೇಲೆ ಕುಳಿತು ಚಿನ್ನಾದೇವಿಯನ್ನು ತನ್ನ ಪಾರ್ಶ್ವದಲ್ಲಿ ಕುಳ್ಳಿರಿಸಿ)

ಕೃಷ್ಣದೇವ—ಚಿನ್ನಾ, ನಿನ್ನ ಮುಖಕಮಲವು ಸದಾ ಬಾಡಿಕೊಂಡಿರುವುದೇಕೆ? ಅನರ್ಘ್ಯವಾದ ವಸ್ತ್ರಾಭರಣಗಳನ್ನು ಬಿಟ್ಟು, ವ್ಯಸನಸೂಚಕವಾದ ಈ ಸಾದಾ ಸೀರೆಯನ್ನೇ ಉಟ್ಟಿರುವೆಯಲ್ಲ?

ಚಿನ್ನಾ—ಇದು ನಾನು ತುಂಬಾ ಪ್ರೀತಿಸುವ ಸೀರೆಯಾಗಿ ಅಲ್ಲ? ನಾನು ಚಿಂತಿಸುತ್ತಿರುವ ವಿಷಯವೇನೂ ನನಗೆ ಗೊತ್ತಾಗುವುದಿಲ್ಲ. ಯಾವಾಗಲೂ ಚಿಂತಿಸುತ್ತಿರುವೆನಾದರೆ ಅದು ನನ್ನ ಹುಟ್ಟುಗುಣವೋ ಏನೊ

ಕೃಷ್ಣ—ಅದು ನಿಜ. ನಿನ್ನ ವಂಶದ ಹುಟ್ಟು ಗುಟ್ಟಾಗಿರುವುದರಿಂದಲೇ ನಿನಗೆ ಈ ಬಗೆಯ ಚಿಂತೆಯುಂಟಾಯಿತು. ಚಿನ್ನಾ, ನಿನ್ನ ತಾಯಿಯೊಡನೆ ತಂದೆ ಯಾರೆಂದು ನೀನು ಒತ್ತಾಯಮಾಡಿ ಕೇಳಬಾರದೇಕೆ?

ಚಿನ್ನಾ—ಅದನ್ನು ಕೇಳಿದೊಡನೆಯೇ ನನ್ನ ತಾಯಿ ಅತ್ತು ಬಿಡುತ್ತಾಳಲ್ಲ. ಕಡೆಗೂ ನನ್ನ ತಂದೆ ಒಬ್ಬ ಉತ್ತಮ ವಂಶದ ರಾಜೇಂದ್ರನೆಂದೇ ಹೇಳುವಳಲ್ಲದೆ ಇಂತಹರೆಂದು ಹೇಳುವುದಿಲ್ಲ.

ಕೃಷ್ಣ—ಅದೇನು ರಹಸ್ಯವೋ, ಪಾಪ! ನಿನ್ನ ತಾಯಿಯನ್ನು ನೋಡಿದಾಗಲೆಲ್ಲಾ ನನಗೂ ವ್ಯಸನವಾಗುತ್ತದೆ. ನೀನು ಉತ್ತಮ ವಂಶೀಯಳೆನ್ನಲು ನನಗೇನೂ ಸಂದೇಹವಿಲ್ಲ. ಮಿಂಚು ಆಕಾಶದಲ್ಲಿ ಹೊರತು ಕೀಳಾದ ಭೂಮಿಯಲ್ಲಿ ಹುಟ್ಟಲಾರದೆಂದು ಕಾಳಿದಾಸನು ಹೇಳಲಿಲ್ಲವೆ? ಅದು ದಾಗಲಿ ಚಿನ್ನಾ, ನಿನ್ನನ್ನು ಪಟ್ಟದ ರಾಣಿಯನ್ನಾಗಿ ಮಾಡಿಕೊಂಡೇ ತೀರುವುದೆಂದು ನಿಶ್ಚೈಸಿದ್ದೇನೆ. ನೀನೇನೂ ತಡೆಯಾಡಬೇಡ.

ಚಿನ್ನಾ—ಆಗದು ರಾಜೇಂದ್ರಾ, ಮಂತ್ರಿವರ್ಯರ ಮಾತನ್ನು ನೀವು ಮೀರಬಾರದೆಂದು ನನ್ನ ವಿನಂತಿ. ನನ್ನನ್ನು ಪಟ್ಟವೇರಿಸಿ ಸಿಂಹಾಸನವನ್ನು ಕಳಂಕಿಸಬಾರದು. ಇದು ಸಾಧ್ಯವಾಗದಿದ್ದರೆ ತಾವು ನನ್ನ ದರ್ಶನವನ್ನು ಆದಷ್ಟು ದೂರಮಾಡಿಕೊಳ್ಳಬೇಕೆಂದು ಬೇಡಿಕೊಳ್ಳುತ್ತೇನೆ. ಆಗೋ, ಕತ್ತಲು ಕವಿಯುತ್ತ ಬರುತ್ತಿದೆ. ಅಪ್ಪಣೆಕೊಡಿ ಪ್ರಭು (ಏಳುವಳು)

ಕೃಷ್ಣ—(ಅವಳ ಕೈಹಿಡಿದು) ಕತ್ತಲೆಯನ್ನೇ ಬೆಳಗಿಸುವಂತಿರುವಿ ಚಿನ್ನಾ. ನಿನ್ನ ಮಾತುಗಳು ನನ್ನ ಮನಸ್ಸನ್ನೆ ಬೆಳಗಿಸುತ್ತಿವೆ. ಚಿನ್ನಾ, ನಿಜವಾಗಿ ಪ್ರತಿಜ್ಞೆಮಾಡಿ ಹೇಳುತ್ತೇನೆ ಕೇಳು. ಅಪ್ಪಾಜಿ ಮಂತ್ರಿವರ್ಯರ ಒತ್ತಾಯಕ್ಕಾಗಿ ಗಜಪತಿ ನಂದಿನಿಯನ್ನು ವರಿಸಲು ಒಪ್ಪಿದೆ. ನಾನೀಗ ಆ ವಿಜಯ ಕಾರ್ಯದಲ್ಲಿ ಕಾರ್ಯೋನ್ಮುಖನಾಗಿರುವುದನ್ನೂ ನೀನು ಒಲ್ಲೆ. ಇಗೋ ಪ್ರತಿಜ್ಞೆ ಮಾಡುತ್ತೇನೆ. ಧರ್ಮಪತ್ನಿಯಾದ ನಿನ್ನನ್ನು ಪಟ್ಟದ ರಾಣಿಯಾಗಿ ಮಾಡಿಕೊಂಡ ಮೇಲೆಯೇ, ವಿಜಯ ವಧು ಜಗನ್ಮೋಹಿನಿಯನ್ನು ನಾನು ವರಿಸುವುದೆಂದು ತಿಳಿ. ಅವಳು ಮಾತ್ರ ಎಂದೂ ನನ್ನ ಪಟ್ಟದ ರಾಣಿಯಾಗಲಾರಳು. ಇದು ನಿಶ್ಚಯ!

(ಇದನ್ನು ಕೇಳಿ ಮರೆಯಲ್ಲಿರುವ ತಿಮ್ಮರಸ ಗಾಬರಿಯಾಗುವನು)

ಚಿನ್ನಾ—ಆದರೆ ರಾಜಚೂಡಾಮಣಿ ನನ್ನ ಪ್ರತಿಜ್ಞೆಯನ್ನೂ ಕೇಳಬೇಕು. ನನ್ನ ವಂಶವು ಬೆಳಕಿಗೆ ಬರುವ ವರೆಗೂ ನಾನು ಪಟ್ಟದ ರಾಣಿಯಾಗಲಾರೆ ಇದೂ ಖಂಡಿತ! (ಸರಸರನೆ ಹೊರಟು ಹೋಗುವಳು. ರಾಯನು ಆಶ್ಚರ್ಯದಿಂದ ನೋಡುವನು. ತಿಮ್ಮರಸು "ಛೇ" ಎಂದು ತಲೆಯೊಲಿಯುವನು. ತಿಮ್ಮಣ್ಣ ರಾಮಕೃಷ್ಣರೂ ಸ್ತಂಭೀಭೂತರಾಗಿ ನಿಲ್ಲುವರು. ರಾಯನಿಗೆ ತಿಳಿಯದಂತೆ ತಿಮ್ಮರಸನೂ, ತಿಮ್ಮರಸನಿಗೆ ತಿಳಿಯದಂತೆ ತಿಮ್ಮಣ್ಣ ರಾಮಕೃಷ್ಣರೂ ಜಾರಿಕೊಳ್ಳುವರು.)

(ಮುಂದುವರಿಯುವುದು.)

ಆದರ್ಶ ಚರಿತೆಗಳು ೧

ಗೋಸ್ವಾಮಿ ವಿಜಯಕೃಷ್ಣ

—ಎಸ್. ಎಂ. ಶೆಟ್ಟಿ ಶಿವಮುಂಜೆ ಪರಾರಿ

ಶ್ರೀ ಗೌರಾಂಗ ಮಹಾ ಪ್ರಭುವಿನ ಪರಿಜನರಲ್ಲಿ ಶ್ರೀ ಅದ್ವೈತಾಚಾರ್ಯರ ಸ್ಥಾನ ಪ್ರಮುಖವಾದುದು. ಮಹಾ ಪ್ರಭುವು ಆಚಾರ್ಯರನ್ನು ಬಹು ಸನ್ಮಾನಿಸುತ್ತಿದ್ದರು. ಆ ಅದ್ವೈತಾಚಾರ್ಯರ ವಂಶದಲ್ಲಿಯೇ ಗೋಸ್ವಾಮಿ ವಿಜಯ ಕೃಷ್ಣರು ಜನ್ಮತಳೆದರು.

ಗೋವಿಂದನೇ ವಿಜಯಕೃಷ್ಣರ ಮನೆತನದ ಮನೆ ದೇವರು. ಬಾಲ್ಯದಲ್ಲಿ ಈ ಕುಲದೇವತೆಯನ್ನು ಅವರು ತನ್ನೊಡನೆ ಆಡಲು ಕರೆಯುತ್ತಿದ್ದರು. ಬಾರದಿದ್ದಾಗ ಸಂಕಷ್ಟರಾಗಿ ಬೈದುಬಿಡುತ್ತಿದ್ದರು. ಬಾಲ್ಯದಿಂದಲೂ ಗೋವಿಂದನೊಡನೆ ಅವರ ಸಖ್ಯ ಭಾವನೆ ಬೆಳೆದಿತ್ತು.

ಚರ್ಚಿಸುವ ವಿಷಯದ ತಳಕ್ಕಿಳಿದು ಅದರಲ್ಲಿ ಮಗ್ನರಾಗಿ ಲೀನನಾಗಿ ಅದರಲ್ಲಿ ಗಂಭೀರ ರಹಸ್ಯಗಳನ್ನು ತಿಳಿಯುವುದು ಇವರ ಸ್ವಭಾವವಾಗಿತ್ತು. ಇಲ್ಲದಿದ್ದರೆ ಅವರಿಗೆ ಸಂತೋಷವಾಗುತ್ತಿದ್ದಿಲ್ಲ. ವೇದಾಂತ ತತ್ವಜ್ಞಾನದ ಕುರಿತು ಇವರು ಬರೇ ಚರ್ಚೆಯನ್ನು ಮಾತ್ರ ಮಾಡಿದ್ದಲ್ಲ. ಅದರ ಅಪರೋಕ್ಷ ಅನುಭವವನ್ನು ಗಳಿಸಿದರು.

ಬ್ರಹ್ಮ ಸಮಾಜವು ಆ ಸಮಯ ಪ್ರಬಲವಾಗಿತ್ತು. ಈ ನವೀನ ಧರ್ಮದ ಕುರಿತು ಸಮಾಜದಲ್ಲಿ ನಾನಾ ತರ್ಕ ವಿತರ್ಕ ನಡೆಯುತ್ತಿತ್ತು. ಮೊತ್ತ ಮೊದಲು ಗೋಸ್ವಾಮಿ ವಿಜಯಕೃಷ್ಣರಿಗೂ ಈ ಧರ್ಮದ ಮೇಲೆ ನಂಬುಗೆಯಿರಲಿಲ್ಲ. ಕಿಂತು ಬುಗುದಾಸ್ತಾನದಲ್ಲಿ ಕೇಶವಚಂದ್ರ ಸೇನ್ ಆವರು ಬ್ರಹ್ಮ ಸಭೆಯಲ್ಲಿ ಸಮ್ಮಿಲಿತರಾದಾಗ ಆ ಸಮಾಜದ ಕುರಿತು ಇವರಲ್ಲಿದ್ದ ಭ್ರಮಪೂರ್ಣ ವಿಚಾರಗಳು ನಾಶವಾದುವು. ಮನಃ ಹೃದಯದಲ್ಲಿ ಭಕ್ತಿ ಭಾವ ಉಕ್ಕಿ ಹರಿಯತೊಡಗಿತು. ಮಹರ್ಷಿ ದೇವೇಂದ್ರನಾಥರ ಈಶ್ವರ ಭಕ್ತಿಯ ಕುರಿತಾದ ಉಪದೇಶಗಳಿಂದ ಇವರು ಬಹಳವಾಗಿ ಪ್ರಭಾವಿತರಾದರು.

ಮುಂದೆ ಬ್ರಹ್ಮ ಸಮಾಜದಲ್ಲಿ ಧರ್ಮ ರಕ್ಷಣೆಯ ಅಭಾವವನ್ನು ಕಂಡು ಇವರ ಮನ ನೊಂದಿತು. ಅದೇ ಸಮಯದಲ್ಲಿ ದಕ್ಷಿಣೇಶ್ವರದಲ್ಲಿ ಶ್ರೀ ಪರಮಹಂಸ ರಾಮಕೃಷ್ಣರ ಪ್ರಭಾವದಿಂದ ಭಕ್ತಿ ಗಂಗೆಯು ನಿರ್ಮಲವಾಗಿ ಹರಿಯುತ್ತಿತ್ತು. ಶ್ರೀ ವಿಜಯ ಕೃಷ್ಣ ಗೋಸ್ವಾಮಿಯವರೂ ದಕ್ಷಿಣೇಶ್ವರ ಸಂತರ ಸಂಪರ್ಕಕ್ಕೆ ಬಂದ ಬಳಿಕ ಅದೇ ಪ್ರಕಾಶದಲ್ಲಿ ಇವರ ಪ್ರಭಾವವೂ ದೇದೀಪ್ಯಮಾನವಾಯಿತು.

ಅವರ ನಂತರ ಶ್ರೀ ವಿಜಯಕೃಷ್ಣ ಗೋಸ್ವಾಮಿಯವರ ಇಡೀ ಜೀವನವು ಭಕ್ತಿಮಯವಾಗಿ ಬಿಟ್ಟಿತು. ಅವರ ಉಪದೇಶ ಎಷ್ಟು ಪ್ರವಚನಗಳಲ್ಲಿಯೂ ಭಗವತ್ ಪ್ರೇಮದಲ್ಲಿ ಲೀನವಾಯಿತು. ಭಗವಂತನ ವಿಷಯವಾಗಿ ಉಪದೇಶ ಗೈಯುವಾಗ ತನ್ನ ವ್ಯಕ್ತಿಗತ ಅಭಿಮಾನ ಯಾ ಸಂಪ್ರದಾಯದ ಸಂಕೀರ್ಣತೆ ನುಳಿಯದಂತೆ ಅವರು ಸದಾ ಎಚ್ಚರವಿರುತ್ತಿದ್ದರು. ಅದುದರಿಂದಲೇ ಸಹಸ್ರಾರು ಶಿಷ್ಯರನ್ನು ಇವರು ಸಾಧನಪಥಕ್ಕೆ ಕೊಂಡೊಯ್ದರೂ ಇವರು ಯಾವೊಂದು ಹೊಸ ಸಂಪ್ರದಾಯವನ್ನೂ ರಚಿಸಲಿಲ್ಲ.

ಇಂತಹ ಮಹಾಪುರುಷರು ಸದಾ ಅಮರರಿತ್ತಾರೆ. ಅವರ ಚರಿತ್ರೆಯು ಸದಾ ಇತರರಿಗೆ ಪ್ರೇರಣೆಯೀಯುತ್ತಿರುತ್ತದೆ. ಅವರ ಉಪದೇಶವು ಭಕ್ತರ ಹೃದಯದಲ್ಲಿ ಭಗವತ್ ಪ್ರೇಮದ ತೃಷ್ಣೆಯನ್ನು ಹೆಚ್ಚಿಸುತ್ತದೆ.

(ಮೂಲ:— ಠಾಕೂರ್ ಸುದರ್ಶನ ಸಿಂಹ)

ವಿದ್ಯಾರ್ಥಿಗಳ 2 ಕೈಪಿಡಿಗಳು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ಡಾ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್
(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ 1-4-0 (1=25).

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ
0=25 NP ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು.
ಸವಪ್ಪುರದ ಪುಸ್ತಕ ಭಂಡಾರಕ್ಕೆ ಬರೆಯಿರಿ.

ಪ್ರತಿಗಳು— ಮಂಗಳೂರಿನಲ್ಲಿ ಶ್ರೀನಿವಾಸ್ ಬ್ರದರ್ಸ್, ಸ್ಕೂಲ್ ಬುಕ್ ಕೊ.,
ಕೆನರಾ ಕೊಟೇಜ್ ಬುಕ್ ಕೊ., ಇಂಡಿಯನ್ ಇಂಡಸ್ಟ್ರಿಯಲ್ಸ್ & ಪಬ್ಲಿಶರ್ಸ್ ಇವರ
ಲ್ಲಿಯೂ, ಪುತ್ತೂರಿನಲ್ಲಿ ಪಾಪ್ಯುಲರ್ ನ್ಯೂಸ್ ಏಜನ್ಸಿಯಲ್ಲಿಯೂ ದೊರೆಯುತ್ತವೆ.

NAVAYUGA 5—9—1963

REGD. No. B. G. 176
LICENCE No. 31
Licensed to Post without Prepayment

ಒಂದು ಸಲಹೆ

ನಿಮ್ಮ ನೆನಪು ಶಕ್ತಿಯನ್ನು ಹೆಚ್ಚಿಸಿರಿ

ನಿಜಕ್ಕೂ ಮನುಷ್ಯನಲ್ಲಿ ಹಲವಾರು ಅಕ್ಷಯವಾದ ಶಕ್ತಿಗಳ ಅದ್ಭುತವಾದ ಭಂಡಾರವಿದೆ. ಅವುಗಳಲ್ಲಿ ಸ್ಮರಣ ಶಕ್ತಿಯೂ ಒಂದು. ಆತ್ಮದ ಬಳಿಕ ಬುದ್ಧಿಯೇ ಪ್ರಥಮ ಹಾಗೂ ಶ್ರೇಷ್ಠ ತತ್ವವೆಂದು ಹೇಳಲಾಗಿದೆ. ಗೀತಾಧ್ಯಕ್ಷ ಭಗವಾನ್ ಶ್ರೀಕೃಷ್ಣನಂತೆ:

"ನೀನು ಇಂದ್ರಿಯಗಳನ್ನು ವಶದಲ್ಲಿರಿಸಿ ಕಾಮ ಎಂಬ ವೈರಿಯನ್ನು ಗೆಲ್ಲಲು ಶಕ್ತಿಯಿಲ್ಲ ಎನ್ನುವುದು ತಪ್ಪು. ಯಾಕೆಂದರೆ ಈ ಶರೀರದಿಂದ ಇಂದ್ರಿಯಗಳೂ, ಇಂದ್ರಿಯಗಳಿಗಿಂತ ಮನಸ್ಸೂ, ಮನಸ್ಸಿನಿಂದ ಬುದ್ಧಿಯೂ ಬುದ್ಧಿಯಿಂದಲೂ ಆತ್ಮವೂ ಶ್ರೇಷ್ಠ ಎಂಬುದಾಗಿ ತಿಳಿಯಬೇಕು."

ಇಂಥ ಬುದ್ಧಿಯು ಒಂದು ವಿಶಿಷ್ಟಶಕ್ತಿಯೇ ಸ್ಮರಣಶಕ್ತಿ. ಎಷ್ಟೆಷ್ಟು ಜ್ಞಾನ ಹೆಚ್ಚಾಗುತ್ತದೋ ಅಷ್ಟಷ್ಟು ಮಾನವ ಬುದ್ಧಿವಂತನಾಗುತ್ತಾನೆ. ಒಂದು ವಸ್ತುವನ್ನು ನೋಡಿ ಎಷ್ಟೆಷ್ಟು ವಿಷಯಗಳನ್ನು ಸುದೀರ್ಘವಾಗಿ ನೆನಪಿನಲ್ಲಿಟ್ಟುಕೊಳ್ಳುತ್ತೇವೋ ಅಷ್ಟಷ್ಟು ನಮ್ಮ ಸ್ಮರಣಶಕ್ತಿಯು ತೀವ್ರವಾಗುತ್ತದೆ. ಇಂಥ ಘನತರವಾದ ಈ ಸ್ಮರಣಾಶಕ್ತಿಯನ್ನು ನಮ್ಮ ಶರೀರಕ್ಕೆ ಬರುವ ವಿವಿಧ ರೋಗಗಳು ಮಂದಗೊಳಿಸುತ್ತವೆ.

ಇಂದು ಪ್ರಾಯ ಬೆಳೆದಂತೆ ಮನುಷ್ಯ ತನ್ನ ಆಲಸ್ಯ, ಅಕ್ರಮಣ್ಯತೆ,—ಮತ್ತು ಪ್ರಗತಿಯ ಕಡೆಗೆ ಹೋಗುವ ಪ್ರಯತ್ನ ಮಾಡುವುದರಲ್ಲಿ ಆಲಸ್ಯಮಾಡುವುದರಿಂದ ನಮ್ಮ ಜನರ ಸ್ಮರಣಶಕ್ತಿಯು ಮಂದವಾಗುತ್ತ ಬರುತ್ತಿದೆ. ನಮ್ಮ ಸ್ಮರಣಾಶಕ್ತಿಯು ತೀವ್ರವಾಗಬೇಕಾದರೆ ಶರೀರವು ನೀರೋಗಿಯಾಗಿ ಕ್ರಿಯಾಶೀಲವಾಗಿ ವಾಗಿರುವುದು ಅತ್ಯಗತ್ಯವಾಗಿದೆ.

ಮಿದುಳಿಗೆ ಅತ್ಯಧಿಕ, ವಿಶ್ರಾಮ ಕೊಡುವುದು ಅಗತ್ಯ. ಮಿದುಳಿನಲ್ಲಿ ಹಲವಾರು 'ಸೆಲ್ಸ್'ಗಳಿವೆ. ಇವುಗಳ ಹೆಚ್ಚಿನ ಭಾಗಗಳು ಸಜೀವ ಹಾಗೂ ಸಚೇತನವಾಗಿರುವುದರಿಂದ ಸ್ವಲ್ಪ ನೆನಪು ಮಾಡಿದರೆ ಸಂಹಲವು ದಶವರ್ಷಗಳ ಹಿಂದಿನ ವಿಚಾರ ಥಟ್ಟನೆ ನೆನಪಾಗುತ್ತದೆ. ಸ್ಮರಣಶಕ್ತಿಯು ತೀವ್ರವಾಗಬೇಕಾದರೆ ವೀರ್ಯ ಸಂಬಂಧಿಯಾದ ಯಾವೊಂದೂ ಕಾಹಿಲೆ ಇರಬಾರದು. ಸುಪ್ರಸಿದ್ಧ ವೈದ್ಯರಾದ ಡಾ| ಹರವೆಲರು ಒಮ್ಮೆ ಈ ಬಗ್ಗೆ ವಿಚಾರ ವ್ಯಕ್ತಪಡಿಸುತ್ತಾ "ನನ್ನ ಬಳಿಗೆ ಬರುತ್ತಿದ್ದ ರೋಗಿಗಳಲ್ಲಿ ೯೭ ಸೇ. ಜನರಿಗೆ ವೀರ್ಯ ಸಂಬಂಧಿಯಾದ ಕಾಹಿಲೆಯಿರುತ್ತಿತ್ತು." ಎಂದಿದ್ದಾರೆ. ಇದಕ್ಕೆ ವೀರ್ಯನಾಶವೇ ಕಾರಣವಾಗಿದೆ.

ಅಧಿಕ ಮೈಥುನದಿಂದಲೇ ಅಧಿಕ ವೀರ್ಯ ನಾಶವಾಗುತ್ತದೆ. ಇದರಿಂದ ಸ್ಮರಣಶಕ್ತಿಯು ಮಂದವಾಗುತ್ತವೆ. ಸ್ವಪ್ನದೋಷ, ಪ್ರಮೇಹ, ಶೀಘ್ರ-ಸ್ಖಲನ, ಮತ್ತು ಕೈಯಿಂದ ಜನನೇಂದ್ರಿಯದ ಸ್ಪರ್ಶ ಮೊದಲಾದ ಪ್ರಣೀತಕಾರ್ಯಗಳು ಇನ್ನಿತರ ವೀರ್ಯ ಸಂಬಂಧಿ ರೋಗ ಮತ್ತು ಕುಪ್ರವೃತ್ತಿಗಳು ಶರೀರ ಮನಸ್ಸುಗಳೆರಡನ್ನೂ ನಿರ್ಬಲಗೊಳಿಸಿ ಸ್ಮರಣಶಕ್ತಿಯನ್ನು ನಿರ್ಬಲವನ್ನಾಗಿ ಮಾಡುತ್ತವೆ. ಇಂಥ ಸಂದರ್ಭದಲ್ಲಿ ಅತ್ಯಗತ್ಯ ಹಾಗೂ ಅತ್ಯಮೂಲ್ಯವಾದ ಈ ಸ್ಮರಣಾ ಶಕ್ತಿಯನ್ನು ಅಭಿವೃದ್ಧಿಪಡಿಸುವ ಕೆಲವು ಪ್ರಾಕೃತಿಕ ಉಪಾಯಗಳನ್ನು ಕೆಳಗೆ ಹೇಳಲಾಗಿದೆ:—

(೧) ಪ್ರಪ್ರಥಮವಾಗಿ ನೀವು ನಿಮ್ಮ ಮನಸ್ಸಿನಲ್ಲಿರುವ (ಇದ್ದರೆ) "ತಾನು ಬಹುಮಂದಬುದ್ಧಿ ಯುವ ಎಂಬ" ಭಾವನೆಯನ್ನು ಹೊಡೆದೋಡಿಸಿರಿ. ತಮ್ಮಲ್ಲಿರುವ ಸ್ಮರಣಾ ಶಕ್ತಿಯು ಬಹು ತೀವ್ರ ಹಾಗೂ ತೀಕ್ಷ್ಣವಾಗಿದೆಯೆಂಬ ಆತ್ಮ ವಿಶ್ವಾಸ ನಿಮ್ಮಲ್ಲಿರಲಿ. ಇಂಥ ಭವ್ಯ ಮಾನಸಿಕ ಕಲ್ಪನೆಯಿಂದ ತಮ್ಮ ಜಿಜ್ಞಾಸಾ ಶಕ್ತಿ ಬೆಳೆದು ಸ್ಮರಣೆ ಶಕ್ತಿ ಹೆಚ್ಚಾಗಲು ಅನುಕೂಲವಾಗುತ್ತದೆ.

(೨) ಅಧಿಕ ಮಾನಸಿಕ ಪರಿಶ್ರಮ ಮಾಡಿದ ಬಳಿಕ ಶರೀರಕ್ಕೆ ಪೂರ್ಣ ವಿಶ್ರಾಮ ಕೊಡಿರಿ. ಮನಸ್ಸಿನ ಮನೋವಿಕಾರ, ಬೊಜ್ಜು, ಮೊದಲಾದವುಗಳುಂಟಾದರೆ ಶಾಂತವಾದ ವಾತಾವರಣದಲ್ಲಿ ಸೂರ್ಯೋದಯಕ್ಕಿಂತ ಮೊದಲು ಮತ್ತು ಸಾಯಂಕಾಲ ತಿರುಗಾಡುವ ಅಭ್ಯಾಸ ಮಾಡಿರಿ. ಮೈದಾನಿನ ಹಚ್ಚ ಹಸುರು ಹುಲ್ಲಿನಲ್ಲಿ ಕುಳಿತು ಆಕಾಶವನ್ನು ನೋಡುತ್ತಾ ಪ್ರಕೃತಿಯ ವಿವಿಧ ಲೀಲೆಗಳ ಬಗ್ಗೆ ಯೋಚಿಸಿರಿ. ನಿಶ್ಚಿಂತರಾಗಿ ಮನೆಗೆ ತೆರಳಿರಿ. ಚಿಂತೆಯಿಂದ ಇದ್ದರೆ ಸ್ಮರಣೆ ಶಕ್ತಿ ಕುಂದುವುದು.

(೩) ಇಸ್ಪೀಟಿನ ೫ ಎಲೆಗಳನ್ನು ತೆಗೆದುಕೊಂಡು ಒಮ್ಮೆ ಸರಿಯಾಗಿ ನೋಡಿ ಇದ್ದಕ್ಕಿದ್ದಂತೆಯೇ ಕವಚಿ ಹಾಕಿರಿ. ಆ ಮೇಲೆ ಸ್ವಲ್ಪ ಸಮಯದ ಬಳಿಕ ಬಂದು ಆ ಎಲೆಗಳು ಯಾವುವು—ಎಲ್ಲಿವೆ? ಎಂಬುದನ್ನು ಹೇಳಿರಿ. ನೀವು ಸರಿಯಾಗಿ ಹೇಳಿದರೆ ಇದು ಸ್ಮರಣೆ ಶಕ್ತಿಯನ್ನು ವೃದ್ಧಿ ಪಡಿಸುವುದು. ತಪ್ಪಿದರೆ ಪುನಃ ಅಂತೆಯೇ ಮಾಡುವುದರಿಂದ ಇನ್ನೂ ಸ್ಮರಣೆ — ಸ್ಮರಣೆ ಹೆಚ್ಚಾಗುಗುವುದರಲ್ಲಿ ಸಂಶಯವಿಲ್ಲ. ಮುಂದೆ ೭ ರಿಂದ ೧೦ ಎಲೆ ತೆಗೆದು ಅಂತೆಯೇ ಮಾಡಿರಿ.

(೪) ಒಂದು ಮಂಚದ ಮೇಲೆ ತುಂಬಾ ವಸ್ತುಗಳನ್ನಿಡಿರಿ. ಒಂದೆರಡು ಮಿನಿಟುಅವುಗಳನ್ನೆಲ್ಲ ಏಕಾಗ್ರತೆಯಿಂದ ನೋಡಿರಿ. ಆ ಮೇಲೆ ಇನ್ನೊಂದು ಕೋಣೆಗೆ ಹೋಗಿ ತಾವು ನೋಡಿದ ವಸ್ತುಗಳನ್ನು ನೆನಪುಮಾಡಿ ಬರೆಯಿರಿ. ಎಷ್ಟು ವಸ್ತುಗಳನ್ನು ನೀವು ಹೆಚ್ಚಾಗಿ ಬರೆಯುವಿರೋ ಅಷ್ಟು ನಿಮ್ಮ ಸ್ಮರಣಶಕ್ತಿ ವೃದ್ಧಿಯಾಗುತ್ತದೆ.

(೫) ಯಾವುದಾದರೊಂದು ಪುಸ್ತಕವನ್ನು ಓದಿದ ಬಳಿಕ ಅದರ ಬಗ್ಗೆ ನಿಮ್ಮ ಮನಸ್ಸಿನಲ್ಲಿ ಉಂಟಾಗುವ ವಿವಿಧ ಪ್ರಶ್ನೆಗಳಿಗೆ ಉತ್ತರ ಹುಡುಕುತ್ತಾ ಯೋಚಿಸಿರಿ.

(೬) ಬೆಳಗ್ಗೆ ಬ್ರಾಹ್ಮೀ ಮುಹೂರ್ತದಲ್ಲಿ ಏಳಿರಿ. ಒಂದು ಎರಡು ಕುಡ್ತೆ ಯಾವುದನ್ನು ನೀರು ಕುಡಿದು ಶೌಚಾದಿಗಳಿಂದ ನಿವೃತ್ತರಾಗಿರಿ. ಸ್ನಾನಮಾಡಿ ಪುನಃ ವಾಯುವಿಗೆ ಅನುಕೂಲವಾದ ಕೋಣೆಯಲ್ಲಿ ಆಸನ ಮಾಡಿರಿ. ದಂಡ, ಬಸ್ಕಿ, ಮಯೂರಾಸನ, ಮೊದಲಾದ ಆಸನಗಳನ್ನೂ ಪ್ರಾಣಾಯಾಮವನ್ನೂ ಮಾಡಿ ಸೂರ್ಯನನ್ನೇ ಎವೆಯಿಕ್ಕದೆ ನೋಡುತ್ತಾ ಅವನ ಪ್ರಭೆಯನ್ನು ನಿಮ್ಮಲ್ಲಿ ನೆಲೆಗೊಳಿಸಿರಿ. ೧೫ ಮಿನಿಟು ಹಾಗೆ ಧ್ಯಾನಮಾಡಿರಿ. ಇದರಿಂದ ನಿಮ್ಮ ಸ್ಮರಣ ಶಕ್ತಿ ಬಹು ಬೇಗನೆ ತೀವ್ರಗೊಳ್ಳುವುದು.

(೭) ವನಸ್ಪತಿಗಳ ಎಣ್ಣೆಯನ್ನು ತಲೆಯ ಮೇಲೆ ಹಾಕಿರಿ. ಬಾಚಣಿಗೆಯಿಂದ ತಲೆ ಬಾಚುವಾಗ ಅದರ ಮುಳ್ಳು ತಲೆಗೆ ಚೆನ್ನಾಗಿ ತಾಗಬೇಕು. ತಲೆಯನ್ನು ಮೆಲ್ಲಮೆಲ್ಲನೆ ಮಾಲಿಶು ಮಾಡಬೇಕು. ತಲೆಯಲ್ಲಿ ಕೂದಲು ಕಡಿಮೆಯೆಂದರೆ ೧ ಇಂಚು ಆದರೂ ಇರುವುದು ಅಗತ್ಯವಾಗಿದೆ.

(೮) ಸಾಯಂಕಾಲ ಮತ್ತು ಬೆಳಗ್ಗೆ ವಾಯು ಸೇವನೆಗಾಗಿ ಸಂಚಾರ ಮಾಡುವುದು ಅತ್ಯುತ್ತಮವಾಗಿದೆ. ಈ ರೀತಿ ತಿರುಗಾಡುವಾಗ ಹೆಚ್ಚು ಯೋಚನೆ ಮಾಡದೆ ನಿಶ್ಚಿಂತೆಯಿಂದಿರಬೇಕು.

(೯) ಸ್ಮರಣೆ ಶಕ್ತಿಯನ್ನು ಹೆಚ್ಚಿಸಲು ನಾವು ನಿಶ್ಚಿಂತರಾಗಿ ಸ್ವಪ್ನ ದೋಷವಿಲ್ಲದ ನಿದ್ರಾ ಸುಖವನ್ನು ಸವಿಯಬೇಕು. ಸ್ವಪ್ನವನ್ನು ತಡೆಗಟ್ಟಲು ಮಲಗುವ ಮೊದಲು ಒಂದೆರಡು (ಈ ರೀತಿ ಮಾಡಲು ಊಟಮಾಡಿ ೨ ಗಂಟೆಯಾದರೂ ಕಳೆದಿರಬೇಕು) ಮಿನಿಟು ಶೀರ್ಷಾಸನ ತಪ್ಪದೆ ಮಾಡಿರಿ. ಸ್ವಪ್ನದೋಷ ದೂರವಾಗಿ ಕುಂಭಕರ್ಣನ ನಿದ್ರೆಯ ಸುಖ ಸವಿಯುವ ಭಾಗ್ಯ ನಿಮ್ಮದಾಗುವುದರಲ್ಲಿ ಸಂಶಯವಿಲ್ಲ. ಶೀರ್ಷಾಸನವನ್ನು ದಿನಾಲೂ ತಪ್ಪದೆ ಕ್ರಮಯುಕ್ತವಾಗಿ ೧೦ ಮಿನಿಟುಗಳಷ್ಟು ಕಾಲಮಾಡಿದರೆ ನಮ್ಮ ರಕ್ತವು ಶುದ್ಧಿಗೊಂಡು ತನ್ಮೂಲಕ ಸ್ಮರಣೆ ಶಕ್ತಿ ಹೆಚ್ಚಲು ಮಹದುಪಕಾರವಾಗುತ್ತದೆ.

(ಆಧಾರ: 'ರಾಮತೀರ್ಥ')

ಪ್ರಗತಿ ಮತ್ತು ಭದ್ರತೆಗಳೆಡೆಗೆ
ಇನ್ನೊಂದು ಪ್ರಮುಖ ಹೆಜ್ಜೆ......

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿ.,

1965 ಅಗಸ್ಟ್ 31ರಿಂದ

ದಿ ಪೊಲ್ಲಾಚಿ ಟೌನ್ ಬ್ಯಾಂಕ್ ಲಿಮಿಟೆಡ್,
ಪೊಲ್ಲಾಚಿ.

ಇವರ ವ್ಯವಹಾರವನ್ನು ವಹಿಸಿಕೊಂಡಿದೆ ಎಂದು ತಿಳಿಸಲು ಬ್ಯಾಂಕಿನ ಡೈರೆಕ್ಟರ್ ಮಂಡಳಿಯವರು ಸಂತೋಷ ಪಡುತ್ತಾರೆ.

ವಿಶಾಲವಾಗಿ ಹಬ್ಬಿರುವ ಶಾಖೆಗಳ ಮತ್ತು ಪ್ರಪಂಚದಾದ್ಯಂತ ವಿರುವ ಏಜನ್ಸಿ ಸೌಕರ್ಯಗಳ ಮೂಲಕ ಸಿಂಡಿಕೇಟ್ ಬ್ಯಾಂಕ್ "ಅತ್ಯುತ್ತಮ ಬ್ಯಾಂಕಿಂಗ್ ಸೇವೆಯ" ಭರವಸೆಯನ್ನು ಪೊಲ್ಲಾಚಿ ಟೌನ್ ಬ್ಯಾಂಕಿನ ಗ್ರಾಹಕರಿಗೂ ನೀಡುವುದು.

ಡಾ| ಟಿ. ಯಂ. ಎ. ಪೈ.
(ಚೆಯರ್‌ಮ್ಯಾನ್)

ಟಿ. ಎ. ಪೈ.
(ಮ್ಯಾನೆಜಿಂಗ್ ಡೈರೆಕ್ಟರ್)

-ಸಿಂಡಿಕೇಟ್ ಬ್ಯಾಂಕ್-

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್,
ಹೆಡ್ ಆಫೀಸು: ಮುಕುಂದ ನಿವಾಸ,
ಉಡುಪಿ.

ಹೊಸ ಪುಸ್ತಕ—

ನಚಿಕೇತ'ರ,
ನವೀನ ಕಾದಂಬರಿ—

ಹಸುರು ಹಂಸ

ಇದೀಗ ಪ್ರಕಟವಾಗಿದೆ.

ಬೆಲೆ: ರೂ. ಎರಡು.

ವಿಚಾರಿಸಿರಿ.

ನವಯುಗ ಪ್ರೆಸ್, ಉಡುಪಿ.

Edited, Printed & Publish'd by K. H. Shetty. at the Navayuga Press, Udipi, S. India.

ಪ್ರಸಿದ್ಧ ಕವಿ
ಎಸ್. ವೆಂಕಟರಾಜರ
ಕವಿತಾಕಾಮಿನಿ
ಕವಿತಾ ಸಂಕಲನ
'ಶಿರಿಯರ ಪ್ರಪಂಚ'ದ
ಅಪೂರ್ವ ಪ್ರಕಟಣೆ
ಬೆಲೆ: ರೂ. ಎರಡು
ನವಭಾರತ ಪುಸ್ತಕ ಭಂಡಾರ
ಉಡುಪಿ

ನವಯುಗ

Estd. 1921 ಸ್ಥಾಪನೆ
Regd. No. B.G. 176
Vol. 43 No. 2

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
NAVAYUGA— NATIONAL WEEKLY
ಉಡುಪಿ, 12—9—1963 ಗುರುವಾರ

13 ನ ಪೈಸೆ
ವಾ. ಚಂದಾ ರೂ. 6-75
ಸಂಪುಟ ೪೩ ಸಂಚಿಕೆ ೨

ಯಾವತ್ತೂ
ಪ್ರಿಂಟಿಂಗ್ ಕೆಲಸಗಳನ್ನು
ಮಾಡಿಕೊಡಲಾಗುವುದು
ಕ್ಲುಪ್ತ ಸಮಯದಲ್ಲಿ
ಮಿತ ದರದಲ್ಲಿ ಉತ್ತಮ
ಮುದ್ರಣ
ಕೆಲಸಗಳಾಗಬೇಕೆ?
ಸಂದರ್ಶಿಸಿರಿ ಯಾ ವಿಚಾರಿಸಿರಿ-
ನವಯುಗ ಪ್ರೆಸ್,
ಪಾಲುಕೊಟ್ಟೆ, ಉಡುಪಿ

ಚೀನೀಯ ಸೇನೆಯ ಮೇಲೆ

ಮಾವೋರವರ ಸರ್ವಾಧಿಕಾರ

ಭಾರತದ ಗಡಿಯಗುಂಟ ಚೀನೀಯ ಸೇನೆಯು ಜಮೆಯಾಗುತ್ತಿರುವುದು, ಅದರ ಸೈನಿಕ ಚಟುವಟಿಕೆಗಳು ಬಲಿಯುತ್ತಿರುವುದು ಇಂದು ಜಗಜ್ಜನಿತ. ಆದರೆ, ಚೀನೀಯ ಸೇನೆಯ ಮೇಲೆ ಯಾರ ಅಧಿಕಾರವಿದೆ, ಯಾರ ಆಜ್ಞೆಯಲ್ಲಿ ನಡೆಯುತ್ತದೆ ಎಂಬುದು ಮಾತ್ರ ಅಂಧಕಾರಮಯ. ಆದರೂ ಚೀನೀಯ ಸೇನೆಯ ಮೇಲೆ ಅಲ್ಲಿನ ಕಮ್ಯುನಿಸ್ಟ್ ಪಕ್ಷವು ತನ್ನ ಸರ್ವಾಧಿಕಾರವನ್ನು ಹೇರುತ್ತಿದೆ. ಅದು ಬಯಸುವುದಾದರೆ, ಯಾರ ವಿರೋಧವನ್ನೂ ಗಮನಿಸದೆ ಅದು ಭಾರತದ ಮೇಲೆ ಮಾತ್ರವೇಕೆ, ರಶ್ಯದ ಮೇಲೆ ಕೂಡ ಆಕ್ರಮಣ ಮಾಡಬಲ್ಲುದು.

ಮಾರಣ ಹೋಮ

ಇದೇ ವರ್ಷ ಕಳೆದ ತಿಂಗಳ ಒನೆಯ ಗುರವಾರ ರಾತ್ರಿ. ಅದೂ ನಡುರಾತ್ರಿಯ ಸಮಯ. ಹಾಯಾಗಿ ಮಲಗಿದ್ದ ೨೨ ಜನ ಸೈನಿಕರನ್ನು ನಿದ್ದೆಯಿಂದ ಹೊಡೆದೆಬ್ಬಿಸಿ ವಧಾಸ್ಥಾನಕ್ಕೆ ಕರೆದುಕೊಂಡು ಹೋದರು. ಸ್ಥಾನೀಯ ಜನರು ನೋಡುನೋಡುತ್ತಿದ್ದಂತೆಯೇ ಅವರನ್ನು ಮರಣದಂಡನೆಗೆ ಗುರಿಮಾಡಿದರು. ಎಲ್ಲಿ ಮತ್ತು ಏಕೆ? ಇದು ನಡೆದುದು ಚೀನಾದ ಚೆಕಿಯಾಂಗ್ ಪ್ರಾಂತ್ಯದ ವ್ಯನ್ ಚೆಂಗ್ ಎಂಬ ಹಳ್ಳಿಯಲ್ಲಿ!

ತೀವ್ರ ಅಸಮಾಧಾನ

ಚೀನಾದಲ್ಲಿ ಇಂದು ಆಡಳಿತ ನಡೆಸುವ ಜನರು ಅಧಿಕಾರಗ್ರಹಣ ಮಾಡಿದ ದಿನದಿಂದಲೇ ಕಮ್ಯೂನಿಸ್ಟ್ ಪಕ್ಷ ಮತ್ತು ಸೈನಿಕ ಪಡೆಗಳ ನಡುವ ಭಿನ್ನಾಭಿಪ್ರಾಯ ಹುಟ್ಟಿ ಬಂದಿದೆ. ಎಂತಹ ಸಂದರ್ಭದಲ್ಲಾದರೂ ಸೇನೆಯು ತನ್ನ ಅಧೀನಕ್ಕೊಳಪಟ್ಟು ಕೆಲಸ ಮಾಡಬೇಕು ಎಂಬುದು ಪಕ್ಷದವಾದ, ಆದರೆ ಇದಕ್ಕೆ ಸೊಪ್ಪು ಹಾಕಲು ಸೇನೆಯ ಪ್ರಮುಖರು ನಿರಾಕರಿಸುತ್ತ ಬಂದಿದ್ದಾರೆ. ನಮ್ಮದು ಹೋರಾಟದ ಕೆಲಸ ಮಾತ್ರ; ಯುದ್ಧದಲ್ಲಿ ಬೇಕಾದರೆ ಹೋರಾಡುತ್ತೇವೆ; ಆದರೆ, ಪಕ್ಷದ ಆದೇಶಗಳಿಗೆ ತಲೆಬಾಗಿ ನಾವು ಹೋರಾಡುವುದಿಲ್ಲ—ಎನ್ನುತ್ತಾರೆ ಸೇನಾಪ್ರಮುಖರು. ಮಾವೋರವರ ಉದ್ಧಟತನದಿಂದಾಗಿ ಜಗತ್ತಿನ ಅತ್ಯಂತ ದೊಡ್ಡ ಸೈನ್ಯ (೨೫ ಮಿಲಿಯ)ದಲ್ಲಿ ಉಗ್ರ ಅಸಮಾಧಾನ ಮೂಡಿದೆ. ಇದರ ಪರಿಣಾಮವಾಗಿಯೇ ೧೯೬೦-೬೧ರಲ್ಲಿ ಚೀನಾದಲ್ಲಿ ಸೈನಿಕರು ದಂಗೆಯೆದ್ದರು. ಆಗ ಪಕ್ಷ—ಸೈನ್ಯಗಳ ನಡುವಿದ್ದ ಭಿನ್ನಾಭಿಪ್ರಾಯಗಳು ಬೆಳಕಿಗೆ ಬಂದುವು; ಇಂದಿಗೂ ಬಿಕ್ಕಟ್ಟು ಮುಗಿದಿಲ್ಲ.

ಮಾವೊ ಸಿದ್ಧಾಂತ ಅಗ್ರಾಹ್ಯ

ಆಧುನಿಕ ಯುದ್ಧ ವಿಧಾನದಂತೆ ಸೈನ್ಯವು ನಿರಾತಂಕವಾಗಿ ಮತ್ತು ಸಕಾಲದಲ್ಲಿ ಕಾರ್ಯಸಾಧಿಸಲು ಸಾಧ್ಯವೆನಿಸಬೇಕಾದರೆ, ಪಕ್ಷದ ರಾಜಕೀಯ ಕೈವಾಡಕ್ಕೆ ಎಂದೆಂದಿಗೂ ಅವಕಾಶವಿರಬಾರದು ಎಂದು ಅಲ್ಲಿನ ಸೈನಿಕ ಪ್ರಮುಖರು ಹೇಳುತ್ತಾರೆ ಏಕೆಂದರೆ, ಇಂತಹ ಹಸ್ತಕ್ಷೇಪದಿಂದ ಸೈನಿಕ—ಶಿಸ್ತಿಗೆ ಮತ್ತು ಕಾರ್ಯ ವಿಧಾನಕ್ಕೆ ಆತಂಕ ಬರುತ್ತದೆ ಎಂದವರ ಅಭಿಪ್ರಾಯ. ಆದರೆ, ಈ ವಾದವು ಕಮ್ಯೂನಿಸ್ಟ್ ಪಕ್ಷಕ್ಕೆ ಅರ್ಥವಾಗುವುದಿಲ್ಲ. ಅರ್ಥವಾಗುವ ಅಗತ್ಯವಾದರೂ ಅದಕ್ಕಿರುವುದಿಲ್ಲ. ಪಕ್ಷದ ನಾಯಕರು ಮಾವೊರವರ ಹೇಳಿಕೆ ಸೂತ್ರಗಳಿಗೇನೇ ಅಧಿಕ ಪ್ರಾಶಸ್ತ್ಯ ನೀಡುತ್ತಾರೆ. ತೋಪುಗಳ ಮೇಲಿನ ಅಧಿಕಾರ ಪಕ್ಷಕ್ಕಿರಬೇಕು ಎಂದವರ ವಾದಸರಣಿ. ಮಾವೊರವರ ಮೂಲ ಸಿದ್ಧಾಂತವೇ ಇದು. ಬಂದೂಕಿನ ಬ್ಯಾರಲ್‌ನಿಂದ ರಾಜಕೀಯ ಅಧಿಕಾರ ವೃದ್ಧಿಯಾಗುತ್ತಿರುವಾಗ ಆ ಅಧಿಕಾರವು ತನ್ನ ಕೈಯಲ್ಲಿರಬೇಕು; ಎಂಬ ಸಿದ್ಧಾಂತದ ಹಿನ್ನೆಲೆಯ ತತ್ವವನ್ನು ಗ್ರಹಿಸುವುದು ಹೇಗೆ? ವರ್ಗ ಹೋರಾಟವನ್ನು ಪ್ರಬಲಗೊಳಿಸುವುದು ಹೇಗೆ? ಮತ್ತು ತನ್ನ ವರ್ಗದ ಅಭಿಮಾನವನ್ನು ಕಾರ್ಮಿಕನು ಬೆಳೆಸಿಕೊಂಡು ತಾನೊಬ್ಬ ಕ್ರಾಂತಿಕಾರಿ ಸೇವಕನಾಗಬೇಕೆಂಬ ವಿಚಾರಕ್ಕೆ ಪ್ರಾಧಾನ್ಯತೆಯನ್ನು ಹೇಗೆ ಕೊಡಬೇಕು—ಈ ವಿಚಾರಗಳನ್ನು ಚೀನೀಯ ಯುವಕರು ಒಂದು ಸೇರಿ ಚರ್ಚಿಸಿದರು. ಊಹಾನ್ ಚಂಗ್‌ತು, ಸೆನಿಯಾಂಗ್—ಮೊದಲಾದೆಡೆಗಳಲ್ಲಿ ಕಮ್ಯುನಿಸ್ಟ್ ಯುದ್ಧಲೀಂಗ್ ಪ್ರತಿನಿಧಿ ಸಭೆಗಳು ನಡೆದವು

ದಂಡನಾಯಕ ನಿಯುಕ್ತಿ

ಕಳೆದ ಮಾರ್ಚ ೨೭ರಂದು ಸೇನೆಯ ಮೇಲೆ ತನ್ನ ಅಧಿಕಾರವನ್ನು ಪಕ್ಷವು ಘೋಷಿಸಿತು ಇದರಲ್ಲಿ ೧೯ ಸೂತ್ರಗಳಿದ್ದು, ಯಾವ ಸೂತ್ರದಂತೆ ಸೈನಿಕ ಪಡೆಗಳಲ್ಲಿ ರಾಜಕೀಯ ಚಟುವಟಿಕೆ ನಡೆಸಬೇಕು ಎಂಬ ವಿಚಾರವನ್ನು ಇದು ಪ್ರಸ್ತಾಪಿಸಿದೆ. ಈ ಸೂತ್ರಗಳು ಸೈನಿಕ ಶಿಸ್ತನ್ನು ಕಮ್ಯುನಿಸ್ಟ್ ಪಕ್ಷದ ಜನ ಎಷ್ಟು ಹಗುರವಾಗಿ ಕಂಡಿದ್ದಾರೆ ಎಂಬುದನ್ನು ಸೂಚಿಸುವುದಿಲ್ಲವೆ?

ಈ ಸೂತ್ರಗಳ ಪ್ರಕಾರ ಪಕ್ಷದ ಮಾರ್ಗದರ್ಶಕನೇ ಸೈನ್ಯದ ಮುಖ್ಯಾಧಿಕಾರಿ—ನಿಜವಾದ ದಂಡನಾಯಕ. ಇವನು ಯಾವ ವಿಷಯದಲ್ಲಾದರೂ ತಲೆ ಹಾಕಬಹುದು. ಸೈನಿಕ ಪಡೆಯಲ್ಲಿರುವ ಜನ ಕರ್ತವ್ಯವನ್ನು ನಿರ್ವಹಿಸುತ್ತಾರೆಯೇ ಇಲ್ಲವೇ ಎಂಬುದನ್ನು ತಿಳಿಯುವುದಷ್ಟೇ ಅವನ ಕೆಲಸವಲ್ಲ. ಪ್ರತಿಯೊಬ್ಬ ಸೈನಿಕನೂ ಮಾವೋತ್ಸೆ ತುಂಗ್‌ರವರ ವಿಚಾರಧಾಟಿಯನ್ನೇ ಹೊಂದಿದ್ದಾನೆಯೇ ಎಂಬುದನ್ನೂ ಅವನು ಮೊದಲು ಖಾತ್ರಿಮಾಡಿಕೊಳ್ಳಬಯಸುತ್ತಾನೆ ಮಾವೋ ವಿಚಾರಗಳ ಬಗ್ಗೆ ಚಕಾರ ಎತ್ತುವ ಅಧಿಕಾರ ಅಥವಾ ಸ್ವಾತಂತ್ರ್ಯ ಚೀಣೀ ಸೈನಿಕನಿಗೆ ಇರುವುದಿಲ್ಲ

ಇಂತಹ ಕಟುವಾದ ಸೂತ್ರಗಳನ್ನು ಚೀಣೀ ನಾಯಕರು ಸೈನಿಕ ಪಡೆಗೆ ಅನ್ವಯಿಸುವ ಪ್ರಯತ್ನ ಮಾಡುತ್ತಿದ್ದಾರೆ ಸೈನಿಕ ಪಡೆಗಳಿಗೆ ರಾಜಕೀಯ ಶಿಕ್ಷಣ ಒದಗಿಸುವ ಸೋಗು ಇಲ್ಲಿ ಎದ್ದು ಕಾಣುತ್ತದೆ. ಆದರೆ ಈ ಸೂತ್ರಗಳಲ್ಲಿ ಯಾವ ಹೊಸ ಅಂಶವೂ ಇಲ್ಲ. ವಾಸ್ತವಿಕವಾಗಿ ಹೇಳುವುದಾದರೆ ಇವು ಈ ನಾಯಕರು ಅಧಿಕಾರಕ್ಕೆ ಬಂದ ಸಮಯದಿಂದಲೂ ಜಾರಿಯಲ್ಲಿದೆ. ಹಾಗಾದರೆ ಇವುಗಳನ್ನು ಹೊಸದಾಗಿ ನಿರೂಪಿಸುವ ಅಗತ್ಯವಾದರೂ ಏನಿತ್ತು ಎಂದು ನೀವು ಕೇಳಬಹುದು. ಈ ಸೂತ್ರಗಳನ್ನು ವಿಧಿವತ್ತಾಗಿ ಜಾರಿಗೆ ತಂದಿರುವ ನಿಜವಾದ ಉದ್ದೇಶ ಸೈನಿಕ ಪಡೆಗಳ ಮೇಲೆ ಕಮ್ಯುನಿಸ್ಟ್ ಪಕ್ಷದ ಹಿಡಿತವನ್ನು ಇನ್ನಷ್ಟು ಬಿಗಿಗೊಳಿಸುವುದು ಮಾತ್ರ.

ಸೇನೆಯಿಂದ ಪ್ರತಿಭಟನೆ

ಕಮ್ಯೂನಿಸ್ಟ್ ಪಕ್ಷದ ನಾಯಕರು ತಮ್ಮ ಪ್ರಭಾವವನ್ನು ಸೈನಿಕ ಪಡೆಗಳ ಮೇಲೆ ಭದ್ರವಾಗಿ ಸ್ಥಾಪಿಸಲು ಇಷ್ಟೆಲ್ಲ ಪ್ರಯತ್ನ ನಡೆಸಿರುವುದಾದರೂ ಅದು ಅಷ್ಟು ಯಶಸ್ವಿಯಾಗಿಲ್ಲವೆಂದೇ ಹೇಳಬೇಕು. ಸೈನಿಕ ಪಡೆಯ ಪ್ರಮುಖರು ಈ ಪ್ರಯತ್ನಗಳ ಬಗ್ಗೆ ತಮ್ಮ ಪ್ರತಿಭಟನೆಯನ್ನು ಆಗಿಂದಾಗ್ಗೆ ವ್ಯಕ್ತಪಡಿಸುತ್ತಾ ಬಂದಿದ್ದಾರೆ.

ಪಕ್ಷದ ಕೈಯಲ್ಲಿ ಸೇನೆ

"ಜನತಾ ವಿಮೋಚನಾ ಪಡೆಯ ಸಾಮಾನ್ಯ ರಾಜಕೀಯ ವಿಭಾಗದ ಡೆಪ್ಯುಟಿ ಡೈರೆಕ್ಟರ್‌ರವರು, ಜನರಲ್ ಸಿಯಾಯೊ ಹುವಾರವರೂ ಮಾಡಿದ ಭಾಷಣವೊಂದರ ಕೆಲವು ಭಾಗಗಳನ್ನು ಪೀಕಿಂಗ್ ಪೀಪಲ್ಸ್ ಡೈಲಿ ಪತ್ರಿಕೆಯು ೧೯೬೩ ಎಪ್ರಿಲ್ ೧೯ರ ಸಂಚಿಕೆಯಲ್ಲಿ ಪ್ರಕಟಿಸಿದೆ ಭಾಷಣ ನಡೆದುದು ಸೈನಿಕ ಪಡೆಗಳಿಗೆ ಸಂಬಂಧಿಸಿದ ರಾಜಕೀಯ ಕಾರ್ಯ ಚಟುವಟಿಕೆಗಳ ಸಮ್ಮೇಳನದಲ್ಲೇ ಆಧುನಿಕ ಯುದ್ಧಕಲೆ ಎಷ್ಟು ಕಠಿಣ ಸ್ವರೂಪದ್ದಾಗಿದೆ ಎಂಬುದನ್ನು ಅವರು ವಿವರಿಸಿ ಸೈನಿಕನ ದಕ್ಷತೆ, ಧೈರ್ಯ—ಸ್ಥೈರ್ಯ, ಅವನ ತಾಂತ್ರಿಕ ಜ್ಞಾನ ಮತ್ತು ಪ್ರತ್ಯಕ್ಷ ಅನುಭವ ಇವು ಬಹಳ ಮುಖ್ಯವಾಗುತ್ತದೆ ಎಂದು ತಿಳಿಸಿದರು ಇಷ್ಟೆಲ್ಲ ಸಾಧ್ಯವಾಗಬೇಕಾದರೆ ಅವನಿಗೆ ರಾಜಕೀಯ ಶಿಕ್ಷಣವನ್ನು ಒದಗಿಸಬೇಕಾದುದು ಬಹಳ ಮುಖ್ಯವಾಗುತ್ತದೆಯೆಂದೂ ತಿಳಿಸಿದರು.

"ಒಂದು ಸೈನಿಕದಳ ತನ್ನ ಸ್ವಾತಂತ್ರ್ಯತೆಯನ್ನು ಮೂಲತಃ ಕಾಪಾಡಿಕೊಂಡು ಹೋಗಬೇಕು. ಯುದ್ಧ ಕ್ಷೇತ್ರದಲ್ಲಿ ಬಹಳ ಕಠಿಣ ಹೋರಾಟಕ್ಕೆ ಅದು ಸಿದ್ಧವಾಗಬೇಕು ಅಲ್ಲದೆ ಪಕ್ಷದ ಕಾಪಿ ನಡೆಸುವ ಪ್ರತ್ಯಕ್ಷ ಕಾರ್ಯ ಚಟುವಟಿಕೆಗಳು ಇದರಿಂದಲ್ಲಿ ತುಂಬಾ ಪರಿಣಾಮಕಾರಿಯಾಗುತ್ತದೆ," ಎಂದು ಅವರು ತಿಳಿಸಿದರಲ್ಲದೆ ಈ ಕಾರ್ಯ ಚಟುವಟಿಕೆಗಳು ಪ್ರಜಾಸತ್ತಾತ್ಮಕವಾಗಿರಬೇಕು, ಆಜ್ಞೆಗಳಿಗೆ ಕಾರ್ಯಕರ್ತರು ಕಿವಿಗೊಡಬೇಕು. ಸದಸ್ಯರ ಅಭಿಪ್ರಾಯಗಳನ್ನು ಅದರಲ್ಲೂ ಯುದ್ಧದಲ್ಲಿ ಹೋರಾಡಿರುವವರ ಅಭಿಪ್ರಾಯಗಳನ್ನೂ ಗಮನಕ್ಕೆ ತೆಗೆದುಕೊಂಡು ಕೆಲಸ ಮಾಡಬೇಕು ಎಂದು ತಿಳಿಸಿದರು.

ಇಲ್ಲಿ "ಯುದ್ಧದಲ್ಲಿ ಹೋರಾಡಿರುವವರ ಅಭಿಪ್ರಾಯಗಳನ್ನು ಮುಖ್ಯವಾಗಿ"— ಈ ಮಾತು ಗಮನಾರ್ಹ. ಆದರೆ ಸೇನಾತಜ್ಞರ ವಿಚಾರಗಳಿಗೆ ಬೆಲೆ ಕೊಡಬೇಕು ಎಂದು ಸೂಚಿಸುವ ಈ ಸಲಹೆಯನ್ನು ಕೇಳುವ ತಾಳ್ಮೆ ಪಕ್ಷಕ್ಕೆಲ್ಲಿ ಬರಬೇಕು? ತನ್ನ ಅಧಿಕಾರವನ್ನು ಸಂಪೂರ್ಣವಾಗಿ ಸ್ಥಾಪಿಸಿಕೊಳ್ಳಲು ಅದು ಪ್ರಯತ್ನಿಸುತ್ತಿದೆ ಎಂದೇ ಮಾವೋರವರು ಮೇಲಿಂದು ಸೈನಿಕ ಪಡೆಯ ಪೂರ್ಣಾಧಿಕಾರವನ್ನು ವಹಿಸಿಕೊಂಡರು.

ಚಂದಾದಾರರಲ್ಲಿ ವಿನಂತಿ

ಕಳೆದ ಆಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ 42ನೆಯ ವರ್ಷವು ಮುಗಿದು ಇದೇ ಸಪ್ಟಂಬರದಿಂದ 43ನೆಯ ಹೊಸ ವರ್ಷಾರಂಭವಾಗಿದೆ. ಈ ಅವಧಿಗೆ ಚಂದಾ ಅವಧಿ ಮುಗಿಯುವವರೂ ಚಂದಾಹಣ ಬಾಕಿ ಇರುವವರೂ ತಮ್ಮ ತಮ್ಮ ಬಾಕಿಯನ್ನು ದಯಮಾಡಿ ಆದಷ್ಟು ತ್ವರಿತ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ. ಚಂದಾಹಣವನ್ನು "ಸಿಂಡಿಕೇಟ್ ಬ್ಯಾಂಕಿ"ನ ಯಾವುದೇ ಶಾಖೆಯಲ್ಲಿ "ನವಯುಗ"ದ ಖಾತೆಗೆ ಯಾವ ಖರ್ಚು ಇಲ್ಲದೆ ಪಾವತಿ ಮಾಡಬಹುದು, ಇಲ್ಲವೆ ಮನಿಯಾರ್ಡರು ಮಾಡಬಹುದು. ವಿ. ಪಿ. ಮಾಡಿದರೆ 70 ನ. ಪೈಸೆಯಷ್ಟು ಹೆಚ್ಚಿಗೆ ಬೀಳುವುದರಿಂದ ಎಲ್ಲರೂ ಮುಂದಾಗಿ ಚಂದಾ ಕಳುಹಿಸಿ ಕೊಡುವಂತೆ ವಿನಂತಿ.

REGD. No. B. G. 176
LICENCE No. 31
Licensed to Post without Prepayment

ಒಂದು ಸಲಹೆ

ನಿಮ್ಮ ನೆನಪು ಶಕ್ತಿಯನ್ನು ಹೆಚ್ಚಿಸಿರಿ

ನಿಜಕ್ಕೂ ಮನುಷ್ಯನಲ್ಲಿ ಹಲವಾರು ಅಕ್ಷಯವಾದ ಶಕ್ತಿಗಳ ಅದ್ಭುತವಾದ ಭಂಡಾರವಿದೆ. ಅವುಗಳಲ್ಲಿ ಸ್ಮರಣ ಶಕ್ತಿಯೂ ಒಂದು. ಆತ್ಮದ ಬಳಿಕ ಬುದ್ಧಿಯೇ ಪ್ರಥಮ ಹಾಗೂ ಶ್ರೇಷ್ಠ ತತ್ವವೆಂದು ಹೇಳಲಾಗಿದೆ. ಗೀತಾಧ್ಯಕ್ಷ ಭಗವಾನ್ ಶ್ರೀಕೃಷ್ಣನಂದಂತೆ:

“ನೀನು ಇಂದ್ರಿಯಗಳನ್ನು ವಶದಲ್ಲಿರಿಸಿ ಕಾಮ ಎಂಬ ವೈರಿಯನ್ನು ಗೆಲ್ಲಲು ಶಕ್ತಿಯಿಲ್ಲ ಎನ್ನುವುದು ತಪ್ಪು. ಯಾಕೆಂದರೆ ಈ ಶರೀರದಿಂದ ಇಂದ್ರಿಯಗಳೂ, ಇಂದ್ರಿಯಗಳಿಗಿಂತ ಮನಸ್ಸೂ, ಮನಸ್ಸಿನಿಂದ ಬುದ್ಧಿಯೂ ಬುದ್ಧಿಯಿಂದಲೂ ಆತ್ಮವೂ ಶ್ರೇಷ್ಠ ಎಂಬುದಾಗಿ ತಿಳಿಯಬೇಕು.”

ಇಂಥ ಬುದ್ಧಿಯ ಒಂದು ವಿಶಿಷ್ಟಶಕ್ತಿಯೇ ಸ್ಮರಣಶಕ್ತಿ. ಎಷ್ಟೆಷ್ಟು ಜ್ಞಾನ ಹೆಚ್ಚಾಗುತ್ತದೋ ಅಷ್ಟಷ್ಟು ಮಾನವ ಬುದ್ಧಿವಂತನಾಗುತ್ತಾನೆ. ಒಂದು ವಸ್ತುವನ್ನು ನೋಡಿ ಎಷ್ಟೆಷ್ಟು ವಿಷಯಗಳನ್ನು ಸುದೀರ್ಘವಾಗಿ ನೆನಪಿನಲ್ಲಿಟ್ಟುಕೊಳ್ಳುತ್ತೇವೋ ಅಷ್ಟಷ್ಟು ನಮ್ಮ ಸ್ಮರಣಶಕ್ತಿಯು ತೀವ್ರವಾಗುತ್ತದೆ. ಇಂಥ ಘನತರವಾದ ಈ ಸ್ಮರಣಾಶಕ್ತಿಯನ್ನು ನಮ್ಮ ಶರೀರಕ್ಕೆ ಬರುವ ವಿವಿಧ ರೋಗಗಳು ಮಂದಗೊಳಿಸುತ್ತವೆ.

ಇಂದು ಪ್ರಾಯ ಬೆಳೆದಂತೆ ಮನುಷ್ಯ ತನ್ನ ಆಲಸ್ಯ, ಅಕ್ರಮಣ್ಯತೆ—ಮತ್ತು ಪ್ರಗತಿಯ ಕಡೆಗೆ ಹೋಗುವ ಪ್ರಯತ್ನ ಮಾಡುವುದರಲ್ಲಿ ಆಲಸ್ಯಮಾಡುವುದರಿಂದ ನಮ್ಮ ಜನರ ಸ್ಮರಣಶಕ್ತಿಯು ಮಂದವಾಗುತ್ತಾ ಬರುತ್ತಿದೆ. ನಮ್ಮ ಸ್ಮರಣಾಶಕ್ತಿಯು ತೀವ್ರವಾಗಬೇಕಾದರೆ ಶರೀರವು ನೀರೋಗಿಯಾಗಿ ಕ್ರಿಯಾಶೀಲವಾಗಿ ಇರುವುದು ಅತ್ಯಗತ್ಯವಾಗಿದೆ.

ಮಿದುಳಿಗೆ ಅತ್ಯಧಿಕ, ವಿಶ್ರಾಮಕೊಡುವುದು ಅಗತ್ಯ. ಮಿದುಳಿನಲ್ಲಿ ಹಲವಾರು ‘ಸೆಲ್ಸ್’ಗಳಿವೆ. ಇವುಗಳ ಹೆಚ್ಚಿನ ಭಾಗಗಳು ಸಜೀವ ಹಾಗೂ ಸಚೇತನವಾಗಿರುವುದರಿಂದ ಸ್ವಲ್ಪ ನೆನಪು ಮಾಡಿದರೆ ಸರಿಹಲವು ದಶವರ್ಷಗಳ ಹಿಂದಿನ ವಿಚಾರ ಥಟ್ಟನೆ ನೆನಪಾಗುತ್ತದೆ. ಸ್ಮರಣಶಕ್ತಿಯು ತೀವ್ರವಾಗಬೇಕಾದರೆ ವೀರ್ಯ ಸಂಬಂಧಿಯಾದ ಯಾವುದೂ ಕಾಹಿಲೆ ಇರಬಾರದು. ಸುಪ್ರಸಿದ್ಧ ವೈದ್ಯರಾದ ಡಾ| ಹರವೆಲರು ಒಮ್ಮೆ ಈ ಬಗ್ಗೆ ವಿಚಾರ ವ್ಯಕ್ತಪಡಿಸುತ್ತಾ “ನನ್ನ ಬಳಿಗೆ ಬರುತ್ತಿದ್ದ ರೋಗಿಗಳಲ್ಲಿ ೯೭ ಸೇ. ಜನರಿಗೆ ವೀರ್ಯ ಸಂಬಂಧಿಯಾದ ಕಾಹಿಲೆಯಿರುತ್ತಿತ್ತು.” ಎಂದಿದ್ದಾರೆ. ಇದಕ್ಕೆ ವೀರ್ಯನಾಶವೇ ಕಾರಣವಾಗಿದೆ.

ಅಧಿಕ ಮೈಥುನದಿಂದಲೇ ಅಧಿಕ ವೀರ್ಯ ನಾಶವಾಗುತ್ತದೆ. ಇದರಿಂದ ಸ್ಮರಣಶಕ್ತಿಯು ಮಂದವಾಗುತ್ತದೆ. ಸ್ವಪ್ನದೋಷ, ಪ್ರಮೇಹ, ಶೀಘ್ರ—ಪತನ, ಮತ್ತು ಕೈಯಿಂದ ಜನನೇಂದ್ರಿಯದ ಸ್ಪರ್ಶ ಮೊದಲಾದ ಪ್ರಚೋದಕಕಾರ್ಯಗಳು ಇನ್ನಿತರ ವೀರ್ಯ ಸಂಬಂಧಿ ರೋಗ ಮತ್ತು ಕುಪ್ರವೃತ್ತಿಗಳು ಶರೀರ ಮನಸ್ಸುಗಳೆರಡನ್ನೂ ನಿರ್ಬಲಗೊಳಿಸಿ ಸ್ಮರಣಶಕ್ತಿಯನ್ನು ನಿರ್ಬಲವನ್ನಾಗಿ ಮಾಡುತ್ತವೆ. ಇಂಥ ಸಂದರ್ಭದಲ್ಲಿ ಅತ್ಯಗತ್ಯ ಹಾಗೂ ಅತ್ಯಮೂಲ್ಯವಾದ ಈ ಸ್ಮರಣಾ ಶಕ್ತಿಯನ್ನು ಅಭಿವೃದ್ಧಿಪಡಿಸುವ ಕೆಲವು ಪ್ರಾಕೃತಿಕ ಉಪಾಯಗಳನ್ನು ಕೆಳಗೆ ಹೇಳಲಾಗಿದೆ:—

(೧) ಪ್ರಪ್ರಥಮವಾಗಿ ನೀವು ನಿಮ್ಮ ಮನಸ್ಸಿನಲ್ಲಿರುವ (ಇದ್ದರೆ) “ತಾನು ಬಹುಮಂದಬುದ್ಧಿ ಯವ ಎಂಬ” ಭಾವನೆಯನ್ನು ಹೊಡೆದೋಡಿಸಿರಿ. ತಮ್ಮಲ್ಲಿರುವ ಸ್ಮರಣಾ ಶಕ್ತಿಯು ಬಹು ತೀವ್ರ ಹಾಗೂ ತೀಕ್ಷ್ಣವಾಗಿದೆಯೆಂಬ ಆತ್ಮ ವಿಶ್ವಾಸ ನಿಮ್ಮಲ್ಲಿರಲಿ. ಇಂಥ ಭವ್ಯ ಮಾನಸಿಕ ಕಲ್ಪನೆಯಿಂದ ತಮ್ಮ ಜಿಜ್ಞಾಸು ಶಕ್ತಿ ಬೆಳೆದು ಸ್ಮರಣ ಶಕ್ತಿ ಹೆಚ್ಚಾಗಲು ಅನುಕೂಲವಾಗುತ್ತದೆ.

(೨) ಅಧಿಕ ಮಾನಸಿಕ ಪರಿಶ್ರಮ ಮಾಡಿದ ಬಳಿಕ ಶರೀರಕ್ಕೆ ಪೂರ್ಣ ವಿಶ್ರಾಮ ಕೊಡಿರಿ. ಮನಸ್ಸಿನ ಮನೋವಿಕಾರ, ಬೊಜ್ಜು, ಮೊದಲಾದುವುಗಳುಂಟಾದರೆ ಶಾಂತವಾದ ವಾತಾವರಣದಲ್ಲಿ ಸೂರ್ಯೋದಯಕ್ಕಿಂತ ಮೊದಲು ಮತ್ತು ಸಾಯಂಕಾಲ ತಿರುಗಾಡುವ ಅಭ್ಯಾಸ ಮಾಡಿರಿ. ಮೈದಾನಿನ ಹಚ್ಚ ಹಸುರು ಹುಲ್ಲಿನಲ್ಲಿ ಕುಳಿತು ಆಕಾಶವನ್ನು ನೋಡುತ್ತಾ ಪ್ರಕೃತಿಯ ವಿವಿಧ ಲೀಲೆಗಳ ಬಗ್ಗೆ ಯೋಚಿಸಿರಿ. ನಿಶ್ಚಿಂತರಾಗಿ ಮನೆಗೆ ತೆರಳಿರಿ. ಚಿಂತೆಯಿಂದ ಇದ್ದರೆ ಸ್ಮರಣ ಶಕ್ತಿ ಕುಂದುವುದು.

(೩) ಇಸ್ಪೀಟಿನ ೫ ಎಲೆಗಳನ್ನು ತೆಗೆದುಕೊಂಡು ಒಮ್ಮೆ ಸರಿಯಾಗಿ ನೋಡಿ ಇದ್ದಕ್ಕಿದ್ದಂತೆಯೇ ಕವಚಿ ಹಾಕಿರಿ. ಆ ಮೇಲೆ ಸ್ವಲ್ಪ ಸಮಯದ ಬಳಿಕ ಬಂದು ಆ ಎಲೆಗಳು ಯಾವುವು—ಎಲ್ಲಿವೆ? ಎಂಬುದನ್ನು ಹೇಳಿರಿ. ನೀವು ಸರಿಯಾಗಿ ಹೇಳಿದರೆ ಇದು ಸ್ಮರಣ ಶಕ್ತಿಯನ್ನು ವೃದ್ಧಿ ಪಡಿಸುವುದು. ತಪ್ಪಿದರೆ ಪುನಃ ಅಂತೆಯೇ ಮಾಡುವುದರಿಂದ ಇನ್ನೂ ಸ್ಮರಣೆ—ಸ್ಮರಣೆ ಹೆಚ್ಚಾಗುವುದರಲ್ಲಿ ಸಂಶಯವಿಲ್ಲ. ಮುಂದೆ ೭ ರಿಂದ ೧೦ ಎಲೆ ತೆಗೆದು ಅಂತೆಯೇ ಮಾಡಿರಿ.

(೪) ಒಂದು ಮಂಚದ ಮೇಲೆ ತುಂಬಾ ವಸ್ತುಗಳನ್ನಿಡಿರಿ. ಒಂದೆರಡು ಮಿನಿಟುಗಳವರೆಗೆ ಅವುಗಳನ್ನೆಲ್ಲ ಏಕಾಗ್ರತೆಯಿಂದ ನೋಡಿರಿ. ಆ ಮೇಲೆ ಇನ್ನೊಂದು ಕೋಣೆಗೆ ಹೋಗಿ ತಾವು ನೋಡಿದ ವಸ್ತುಗಳನ್ನು ನೆನಪುಮಾಡಿ ಬರೆಯಿರಿ. ಎಷ್ಟು ವಸ್ತುಗಳನ್ನು ನೀವು ಹೆಚ್ಚಾಗಿ ಬರೆಯುವಿರೋ ಅಷ್ಟು ನಿಮ್ಮ ಸ್ಮರಣಶಕ್ತಿ ವೃದ್ಧಿಯಾಗುತ್ತದೆ.

(೫) ಯಾವುದಾದರೊಂದು ಪುಸ್ತಕವನ್ನು ಓದಿದ ಬಳಿಕ ಅದರ ಬಗ್ಗೆ ನಿಮ್ಮ ಮನಸ್ಸಿನಲ್ಲಿ ಉಂಟಾಗುವ ವಿವಿಧ ಪ್ರಶ್ನೆಗಳಿಗೆ ಉತ್ತರ ಹುಡುಕುತ್ತಾ ಯೋಚಿಸಿರಿ.

(೬) ಬೆಳಗ್ಗೆ ಬ್ರಾಹ್ಮೀ ಮುಹೂರ್ತದಲ್ಲಿ ಏಳಿರಿ. ಒಂದು ಎರಡು ಕುಡ್ತೆ ಯಾವುವನ್ನು ನೀರು ಕುಡಿದು ಶೌಚಾದಿಗಳಿಂದ ನಿವೃತ್ತರಾಗಿರಿ. ಸ್ನಾನಮಾಡಿ ಪುನಃ ವಾಯುವಿಗೆ ಅನುಕೂಲವಾದ ಕೋಣೆಯಲ್ಲಿ ಆಸನ ಮಾಡಿರಿ. ದಂಡ, ಬಸ್ಕಿ, ಮಯೂರಾಸನ, ಮೊದಲಾದ ಆಸನಗಳನ್ನೂ ಪ್ರಾಣಾಯಾಮವನ್ನೂ ಮಾಡಿ ಸೂರ್ಯನನ್ನೇ ಎವೆಯಿಕ್ಕದೆ ನೋಡುತ್ತಾ ಅವನ ಪ್ರಭೆಯನ್ನು ನಿಮ್ಮಲ್ಲಿ ನೆಲೆಗೊಳಿಸಿರಿ. ೧೫ ಮಿನಿಟು ಹಾಗೆ ಧ್ಯಾನಮಾಡಿರಿ. ಇದರಿಂದ ನಿಮ್ಮ ಸ್ಮರಣ ಶಕ್ತಿ ಬಹು ಬೇಗನೆ ತೀವ್ರಗೊಳ್ಳುವುದು.

(೭) ವನಸ್ಪತಿಗಳ ಎಣ್ಣೆಯನ್ನು ತಲೆಯ ಮೇಲೆ ಹಾಕಿರಿ. ಬಾಚಣಿಗೆಯಿಂದ ತಲೆ ಬಾಚುವಾಗ ಅದರ ಮುಳ್ಳು ತಲೆಗೆ ಚೆನ್ನಾಗಿ ತಾಗಬೇಕು. ತಲೆಯನ್ನು ಮೆಲ್ಲಮೆಲ್ಲನೆ ಮಾಲಿಷು ಮಾಡಬೇಕು. ತಲೆಯಲ್ಲಿ ಕೂದಲು ಕಡಿಮೆಯೆಂದರೆ ೧ ಇಂಚು ಆದರೂ ಇರುವುದು ಅಗತ್ಯವಾಗಿದೆ.

(೮) ಸಾಯಂಕಾಲ ಮತ್ತು ಬೆಳಗ್ಗೆ ವಾಯು ಸೇವನೆಗಾಗಿ ಸಂಚಾರ ಮಾಡುವುದು ಅತ್ಯುತ್ತಮವಾಗಿದೆ. ಈ ರೀತಿ ತಿರುಗಾಡುವಾಗ ಹೆಚ್ಚು ಯೋಚನೆ ಮಾಡದೆ ನಿಶ್ಚಿಂತೆಯಿಂದಿರಬೇಕು.

(೯) ಸ್ಮರಣ ಶಕ್ತಿಯನ್ನು ಹೆಚ್ಚಿಸಲು ನಾವು ನಿಶ್ಚಿಂತರಾಗಿ ಸ್ವಪ್ನ ದೋಷವಿಲ್ಲದ ನಿದ್ರಾ ಸುಖವನ್ನು ಸವಿಯಬೇಕು. ಸ್ವಪ್ನವನ್ನು ತಡೆಗಟ್ಟಲು ಮಲಗುವ ಮೊದಲು ಒಂದೆರಡು (ಈ ರೀತಿ ಮಾಡಲು ಊಟಮಾಡಿ ೨ ಗಂಟೆಯಾದರೂ ಕಳೆದಿರಬೇಕು) ಮಿನಿಟು ಶೀರ್ಷಾಸನ ತಪ್ಪದೆ ಮಾಡಿರಿ. ಸ್ವಪ್ನದೋಷ ದೂರವಾಗಿ ಕುಂಭಕರ್ಣನ ನಿದ್ರೆಯ ಸುಖ ಸವಿಯುವ ಭಾಗ್ಯ ನಿಮ್ಮದಾಗುವುದರಲ್ಲಿ ಸಂಶಯವಿಲ್ಲ. ಶೀರ್ಷಾಸನವನ್ನು ದಿನಾಲೂ ತಪ್ಪದೆ ಕ್ರಮಯುಕ್ತವಾಗಿ ೧೦ ಮಿನಿಟುಗಳಷ್ಟು ಕಾಲಮಾಡಿದರೆ ನಮ್ಮ ರಕ್ತವು ಶುದ್ಧಿಗೊಂಡು ತನ್ಮೂಲಕ ಸ್ಮರಣ ಶಕ್ತಿ ಹೆಚ್ಚಲು ಮಹದುಪಕಾರವಾಗುತ್ತದೆ.

(ಆಧಾರ: ‘ರಾಮತೀರ್ಥ’)

ಪ್ರಗತಿ ಮತ್ತು ಭದ್ರತೆಗಳೆಡೆಗೆ
ಇನ್ನೊಂದು ಪ್ರಮುಖ ಹೆಜ್ಜೆ......

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿ,
1963 ಅಗಸ್ಟ್ 31ರಿಂದ
ದಿ ಪೊಲ್ಲಾಚಿ ಟೌನ್ ಬ್ಯಾಂಕ್ ಲಿಮಿಟೆಡ್,
ಪೊಲ್ಲಾಚಿ.
ಇವರ ವ್ಯವಹಾರವನ್ನು ವಹಿಸಿಕೊಂಡಿದೆ ಎಂದು ತಿಳಿಸಲು ಬ್ಯಾಂಕಿನ ಡೈರೆಕ್ಟರ್ ಮಂಡಳಿಯವರು ಸಂತೋಷ ಪಡುತ್ತಾರೆ.

ವಿಶಾಲವಾಗಿ ಹಬ್ಬಿರುವ ಶಾಖೆಗಳ ಮತ್ತು ಪ್ರಪಂಚದಾದ್ಯಂತವಿರುವ ಏಜನ್ಸಿ ಸೌಕರ್ಯಗಳ ಮೂಲಕ ಸಿಂಡಿಕೇಟ್ ಬ್ಯಾಂಕ್ “ಅತ್ಯುತ್ತಮ ಬ್ಯಾಂಕಿಂಗ್ ಸೇವೆಯ” ಭರವಸೆಯನ್ನು ಪೊಲ್ಲಾಚಿ ಟೌನ್ ಬ್ಯಾಂಕಿನ ಗ್ರಾಹಕರಿಗೂ ನೀಡುವುದು.

ಡಾ| ಟಿ. ಎಂ. ಎ. ಪೈ (ಚೆಯರ್‌ಮ್ಯಾನ್)
ಟಿ. ಎ. ಪೈ. (ಮ್ಯಾನೆಜಿಂಗ್ ಡೈರೆಕ್ಟರ್)

-ಸಿಂಡಿಕೇಟ್ ಬ್ಯಾಂಕ್-

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್,
ಹೆಡ್ ಆಫೀಸು: ಮುಕುಂದ ನಿವಾಸ,
ಉಡುಪಿ.

ಹೊಸ ಪುಸ್ತಕ—
ನಚಿಕೇತ'ರ,
ನವೀನ ಕಾದಂಬರಿ—
ಹಸುರು ಹಂಸ
ಇದೀಗ ಪ್ರಕಟವಾಗಿದೆ.
ಬೆಲೆ: ರೂ. ಎರಡು.
ಪ್ರಕಾಶಕರು,
ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty. at the Navayuga Press, Udipi, S. India.

ಪ್ರಸಿದ್ಧ ಕವಿ
ಎಸ್. ವೆಂಕಟರಾಜರ
ಕವಿತಾಕಾಮಿನಿ
ಕವಿತಾ ಸಂಕಲನ
'ಕಿರಿಯರ ಪ್ರಪಂಚ'ದ
ಅಪೂರ್ವ ಪ್ರಕಟಣೆ
ಬೆಲೆ: ರೂ. ಎರಡು
ನವಭಾರತ ಪುಸ್ತಕ ಭಂಡಾರ
ಉಡುಪಿ

ನವಯುಗ

Estd. 1921 ಸ್ಥಾಪನೆ | ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ | 13 ನ. ಪೈಸೆ
Regd. No. B.G. 176 | NAVAYUGA— NATIONAL WEEKLY | ವಾ. ಚಂದಾ ರೂ. 6-75
Vol. 43 No. 2 | ಉಡುಪಿ, 12—9—1963 ಗುರುವಾರ | ಸಂಪುಟ ೪೩ ಸಂಚಿಕೆ ೨

ಯಾವತ್ತೂ
ಪ್ರಿಂಟಿಂಗ್ ಕೆಲಸಗಳನ್ನು
ಮಾಡಿಕೊಡಲಾಗುವುದು
ಕ್ಲಪ್ತ ಸಮಯದಲ್ಲಿ
ಮಿತ ದರದಲ್ಲಿ ಉತ್ತಮ
ಮುದ್ರಣ
ಕೆಲಸಗಳಾಗಬೇಕೆ?
ಸಂದರ್ಶಿಸಿರಿ ಯಾ ವಿಚಾರಿಸಿರಿ-
ನವಯುಗ ಪ್ರೆಸ್,
ಪಾಲುಕೋಟೆ, ಉಡುಪಿ

ಚೀನೀಯ ಸೇನೆಯ ಮೇಲೆ

ಮಾವೋರವರ ಸರ್ವಾಧಿಕಾರ

ಭಾರತದ ಗಡಿಯಗುಂಟ ಚೀನೀಯ ಸೇನೆಯು ಜಮೆಯಾಗುತ್ತಿರುವುದು, ಅದರ ಸೈನಿಕ ಚಟುವಟಿಕೆಗಳು ಬಲಿಯುತ್ತಿರುವುದು ಇಂದು ಜಗಜ್ಜನಿತ. ಆದರೆ, ಚೀನೀಯ ಸೇನೆಯ ಮೇಲೆ ಯಾರ ಅಧಿಕಾರವಿದೆ, ಯಾರ ಆಜ್ಞೆಯಲ್ಲಿ ನಡೆಯುತ್ತದೆ ಎಂಬುದು ಮಾತ್ರ ಅಂಧಕಾರಮಯ. ಆದರೂ ಚೀನೀಯ ಸೇನೆಯ ಮೇಲೆ ಅಲ್ಲಿನ ಕಮ್ಯುನಿಸ್ಟ್ ಪಕ್ಷವು ತನ್ನ ಸರ್ವಾಧಿಕಾರವನ್ನು ಹೇರುತ್ತಿದೆ. ಅದು ಬಯಸುವುದಾದರೆ, ಯಾರ ವಿರೋಧವನ್ನೂ ಗಮನಿಸದೆ ಅದು ಭಾರತದ ಮೇಲೆ ಮಾತ್ರವೇಕೆ, ರಶ್ಯದ ಮೇಲೆ ಕೂಡ ಆಕ್ರಮಣ ಮಾಡಬಲ್ಲುದು.

ಮಾರಣ ಹೋಮ

ಇದೇ ವರ್ಷ ಕಳೆದ ತಿಂಗಳ ೮ನೆಯ ಗುರುವಾರ ರಾತ್ರಿ. ಅದೂ ನಡುರಾತ್ರಿಯ ಸಮಯ. ಹಾಯಾಗಿ ಮಲಗಿದ್ದ ೨೫ ಜನ ಸೈನಿಕರನ್ನು ನಿದ್ದೆಯಿಂದ ಹೊಡೆದೆಬ್ಬಿಸಿ ವಧಾಸ್ಥಾನಕ್ಕೆ ಕರೆದುಕೊಂಡು ಹೋದರು. ಸ್ಥಾನೀಯ ಜನರು ನೋಡುನೋಡುತ್ತಿದ್ದಂತೆಯೇ ಅವರನ್ನು ಮರಣದಂಡನೆಗೆ ಗುರಿಮಾಡಿದರು. ಎಲ್ಲಿ ಮತ್ತು ಏಕೆ? ಇದು ನಡೆದು ಚೀನಾದ ಚಿಕಿಯಾಂಗ್ ಪ್ರಾಂತ್ಯದ ವ್ಯನ್ ಚೆಂಗ್ ಎಂಬ ಹಳ್ಳಿಯಲ್ಲಿ!

ತೀವ್ರ ಅಸಮಾಧಾನ

ಚೀನಾದಲ್ಲಿ ಇಂದ ಆಡಳಿತ ನಡೆಸುವ ಜನರು ಅಧಿಕಾರಗ್ರಹಣ ಮಾಡಿದ ದಿನದಿಂದಲೇ ಕಮ್ಯುನಿಸ್ಟ್ ಪಕ್ಷ ಮತ್ತು ಸೈನಿಕ ಪಡೆಗಳ ನಡುವ ಭಿನ್ನಾಭಿಪ್ರಾಯ ಹುಟ್ಟಿ ಬಂದಿದೆ. ಎಂತಹ ಸಂದರ್ಭದಲ್ಲಾದರೂ ಸೇನೆಯು ತನ್ನ ಆಧೀನಕ್ಕೊಳಪಟ್ಟು ಕೆಲಸ ಮಾಡಬೇಕು ಎಂಬುದು ಪಕ್ಷದವಾದ, ಆದರೆ ಇದಕ್ಕೆ ಸೊಪ್ಪು ಹಾಕಲು ಸೇನೆಯ ಪ್ರಮುಖರು ನಿರಾಕರಿಸುತ್ತ ಬಂದಿದ್ದಾರೆ. ನಮ್ಮದು ಹೋರಾಟದ ಕೆಲಸ ಮಾತ್ರ; ಯುದ್ಧದಲ್ಲಿ ಬೇಕಾದರೆ ಹೋರಾಡುತ್ತೇವೆ; ಆದರೆ, ಪಕ್ಷದ ಆದೇಶಗಳಿಗೆ ತಲೆಬಾಗಿ ನಾವು ಹೋರಾಡುವುದಿಲ್ಲ—ಎನ್ನುತ್ತಾರೆ. ಸೇನಾಪ್ರಮುಖರು. ಮಾವೋರವರ ಉದ್ಧಟತನದಿಂದಾಗಿ ಜಗತ್ತಿನ ಅತ್ಯಂತ ದೊಡ್ಡ ಸೈನ್ಯ (೨೫ ಮಿಲಿಯ)ದಲ್ಲಿ ಉಗ್ರ ಅಸಮಾಧಾನ ಮೂಡಿದೆ. ಇದರ ಪರಿಣಾಮವಾಗಿಯೇ ೧೯೬೦-೬೧ರಲ್ಲಿ ಚೀನಾದಲ್ಲಿ ಸೈನಿಕರು ದಂಗೆಯೆದ್ದರು. ಆಗ ಪಕ್ಷ—ಸೈನ್ಯಗಳ ನಡುವಿದ್ದ ಭಿನ್ನಾಭಿಪ್ರಾಯಗಳು ಬೆಳಕಿಗೆ ಬಂದುವು; ಇಂದಿಗೂ ತಿಕ್ಕಾಟವು ಮುಗಿದಿಲ್ಲ.

ಮಾವೊ ಸಿದ್ಧಾಂತ ಅಗ್ರಾಹ್ಯ

ಆಧುನಿಕ ಯುದ್ಧ ವಿಧಾನದಂತೆ ಸೈನ್ಯವು ನಿರಾತಂಕವಾಗಿ ಮತ್ತು ಸಕಾಲದಲ್ಲಿ ಕಾರ್ಯಸಾಧಿಸಲು ಸಾಧ್ಯವೆನಿಸಬೇಕಾದರೆ, ಪಕ್ಷದ ರಾಜಕೀಯ ಕೈವಾಡಕ್ಕೆ ಎಂದೆಂದಿಗೂ ಅವಕಾಶವಿರಬಾರದು ಎಂದು ಅಲ್ಲಿನ ಸೈನಿಕ ಪ್ರಮುಖರು ಹೇಳುತ್ತಾರೆ. ಏಕೆಂದರೆ, ಇಂತಹ ಹಸ್ತಕ್ಷೇಪದಿಂದ ಸೈನಿಕ—ಶಿಸ್ತಿಗೆ ಮತ್ತು ಕಾರ್ಯ ವಿಧಾನಕ್ಕೆ ಆತಂಕ ಬರುತ್ತದೆ ಎಂದವರ ಅಭಿಪ್ರಾಯ. ಆದರೆ, ಈ ವಾದವು ಕಮ್ಯುನಿಸ್ಟ್ ಪಕ್ಷಕ್ಕೆ ಅರ್ಥವಾಗುವುದಿಲ್ಲ. ಅರ್ಥವಾಗುವ ಅಗತ್ಯವಾದರೂ ಅದಕ್ಕಿರುತ್ತದಿಲ್ಲ. ಪಕ್ಷದ ನಾಯಕರು ಮಾವೊರವರ ಹಳೆಯ ಸೂತ್ರಗಳಿಗೇನೇ ಅಧಿಕ ಪ್ರಾಶಸ್ತ್ಯ ನೀಡುತ್ತಾರೆ. ತೋಪುಗಳ ಮೇಲಿನ ಅಧಿಕಾರ ಪಕ್ಷಕ್ಕಿರಬೇಕು ಎಂದವರ ವಾದಸರಣಿ. ಮಾವೊರವರ ಮೂಲ ಸಿದ್ಧಾಂತವೇ ಇದು. ಬಂದೂಕಿನ ಬ್ಯಾರಲ್‌ನಿಂದ ರಾಜಕೀಯ ಅಧಿಕಾರ ವೃದ್ಧಿಯಾಗುತ್ತಿರುವಾಗ ಆ ಅಧಿಕಾರವು ತನ್ನ ಕೈಯಲ್ಲಿರಬೇಕು; ಎಂಬ ಸಿದ್ಧಾಂತದ ಹಿನ್ನೆಲೆಯ ತತ್ತ್ವವನ್ನು ಗ್ರಹಿಸುವುದು ಹೇಗೆ? ವರ್ಗ ಹೋರಾಟವನ್ನು ಪ್ರಬಲಗೊಳಿಸುವುದು ಹೇಗೆ? ಮತ್ತು ತನ್ನ ವರ್ಗದ ಅಭಿಮಾನವನ್ನು ಕಾರ್ಮಿಕನು ಬೆಳೆಸಿಕೊಂಡು ತಾನೊಬ್ಬ ಕ್ರಾಂತಿಕಾರಿ ಸೇವಕನಾಗಬೇಕೆಂಬ ವಿಚಾರಕ್ಕೆ ಪ್ರಾಧಾನ್ಯತೆಯನ್ನು ಹೇಗೆ ಕೊಡಬೇಕು—ಈ ವಿಚಾರಗಳನ್ನು ಚೀನೀಯ ಯುವಕರು ಒಂದು ಸೇರಿ ಚರ್ಚಿಸಿದರು. ಊಹಾನ್ ಚಂಗ್‌ತು, ಸೆನಿಯಾಂಗ್—ಮೊದಲಾದೆಡೆಗಳಲ್ಲಿ ಕಮ್ಯುನಿಸ್ಟ್ ಯುಥ್‌ಲೀಂಗ್ ಪ್ರತಿನಿಧಿ ಸಭೆಗಳು ನಡೆದುವು

ದಂಡನಾಯಕ ನಿಯುಕ್ತಿ

ಕಳೆದ ಮಾರ್ಚ್ ೨೭ರಂದು ಸೇನೆಯ ಮೇಲೆ ತನ್ನ ಅಧಿಕಾರವನ್ನು ಪಕ್ಷವು ಘೋಷಿಸಿತು. ಇದರಲ್ಲಿ ೧೧ ಸೂತ್ರಗಳಿದ್ದು, ಯಾವ ಸೂತ್ರದಂತೆ ಸೈನಿಕ ಪಡೆಗಳಲ್ಲಿ ರಾಜಕೀಯ ಚಟುವಟಿಕೆ ನಡೆಸಬೇಕು ಎಂಬ ವಿಚಾರವನ್ನು ಇದು ಪ್ರಸ್ತಾಪಿಸಿದೆ. ಈ ಸೂತ್ರಗಳು ಸೈನಿಕ ಶಿಸ್ತನ್ನು ಕಮ್ಯುನಿಸ್ಟ್ ಪಕ್ಷದ ಜನ ಎಷ್ಟು ಹಗುರವಾಗಿ ಕಂಡಿದ್ದಾರೆ ಎಂಬುದನ್ನು ಸೂಚಿಸುವುದಿಲ್ಲವೆ?

ಈ ಸೂತ್ರಗಳ ಪ್ರಕಾರ ಪಕ್ಷದ ಮಾರ್ಗದರ್ಶಕನೇ ಸೈನ್ಯದ ಮುಖ್ಯಾಧಿಕಾರಿ—ನಿಜವಾದ ದಂಡನಾಯಕ. ಇವನು ಯಾವ ವಿಷಯದಲ್ಲಾದರೂ ತಲೆ ಹಾಕಬಹುದು. ಸೈನಿಕ ಪಡೆಯಲ್ಲಿರುವ ಜನ ಕರ್ತವ್ಯವನ್ನು ನಿರ್ವಹಿಸುತ್ತಾರೆಯೇ ಇಲ್ಲವೇ ಎಂಬುದನ್ನು ತಿಳಿಯುವುದಷ್ಟೇ ಅವನ ಕೆಲಸವಲ್ಲ. ಪ್ರತಿಯೊಬ್ಬ ಸೈನಿಕನೂ ಮಾವೋತ್ಸೆ ತುಂಗ್‌ರವರ ವಿಚಾರಧಾಟಿಯನ್ನೇ ಹೊಂದಿದ್ದಾನೆಯೇ ಎಂಬುದನ್ನೂ ಅವನು ಮೊದಲು ಖಾತ್ರಿಮಾಡಿಕೊಳ್ಳಬಯಸುತ್ತಾನೆ. ಮಾವೋ ವಿಚಾರಗಳ ಬಗ್ಗೆ ಚಕಾರ ಎತ್ತುವ ಅಧಿಕಾರ ಅಥವಾ ಸ್ವಾತಂತ್ರ್ಯ ಚೀಣೀ ಸೈನಿಕನಿಗೆ ಇರುವುದಿಲ್ಲ.

ಇಂತಹ ಕಟುವಾದ ಸೂತ್ರಗಳನ್ನು ಚೀಣೀ ನಾಯಕರು ಸೈನಿಕ ಪಡೆಗೆ ಅನ್ವಯಿಸುವ ಪ್ರಯತ್ನ ಮಾಡುತ್ತಿದ್ದಾರೆ. ಸೈನಿಕ ಪಡೆಗಳಿಗೆ ರಾಜಕೀಯ ಶಿಕ್ಷಣ ಒದಗಿಸುವ ಸೋಗು ಇಲ್ಲಿ ಎದ್ದು ಕಾಣುತ್ತದೆ. ಆದರೆ ಈ ಸೂತ್ರಗಳಲ್ಲಿ ಯಾವ ಹೊಸ ಅಂಶವೂ ಇಲ್ಲ. ವಾಸ್ತವಿಕವಾಗಿ ಹೇಳುವುದಾದರೆ ಇವು ಈ ನಾಯಕರು ಅಧಿಕಾರಕ್ಕೆ ಬಂದ ಸಮಯದಿಂದಲೂ ಜಾರಿಯಲ್ಲಿದೆ. ಹಾಗಾದರೆ ಇವುಗಳನ್ನು ಹೊಸದಾಗಿ ನಿರೂಪಿಸುವ ಅಗತ್ಯವಾದರೂ ಏನಿತ್ತು ಎಂದು ನೀವು ಕೇಳಬಹುದು. ಈ ಸೂತ್ರಗಳನ್ನು ವಿಧಿವತ್ತಾಗಿ ಜಾರಿಗೆ ತಂದಿರುವ ನಿಜವಾದ ಉದ್ದೇಶ ಸೈನಿಕ ಪಡೆಗಳ ಮೇಲೆ ಕಮ್ಯುನಿಸ್ಟ್ ಪಕ್ಷದ ಹಿಡಿತವನ್ನು ಇನ್ನಷ್ಟು ಬಿಗಿಗೊಳಿಸುವುದು ಮಾತ್ರ.

ಸೇನೆಯಿಂದ ಪ್ರತಿಭಟನೆ

ಕಮ್ಯೂನಿಸ್ಟ್ ಪಕ್ಷದ ನಾಯಕರು ತಮ್ಮ ಪ್ರಭಾವವನ್ನು ಸೈನಿಕ ಪಡೆಗಳ ಮೇಲೆ ಭದ್ರವಾಗಿ ಸ್ಥಾಪಿಸಲು ಇಷ್ಟೆಲ್ಲ ಪ್ರಯತ್ನ ನಡೆಸಿರುವುದಾದರೂ ಅದು ಅಷ್ಟು ಯಶಸ್ವಿಯಾಗಿಲ್ಲವೆಂದೇ ಹೇಳಬೇಕು. ಸೈನಿಕ ಪಡೆಯ ಪ್ರಮುಖರು ಈ ಪ್ರಯತ್ನಗಳ ಬಗ್ಗೆ ತಮ್ಮ ಪ್ರತಿಭಟನೆಯನ್ನು ಆಗಿಂದಾಗ್ಗೆ ವ್ಯಕ್ತಪಡಿಸುತ್ತಾ ಬಂದಿದ್ದಾರೆ.

ಪಕ್ಷದ ಕೈಯಲ್ಲಿ ಸೇನೆ

"ಜನತಾ ವಿಮೋಚನಾ ಪಡೆಯ ಸಾಮಾನ್ಯ ರಾಜಕೀಯ ವಿಭಾಗದ ಡೆಪ್ಯೂಟಿ ಡೈರೆಕ್ಟರ್‌ರವರು, ಜನರಲ್ ಸಿಯಾಯೋ ಹುವಾರವರು ಮಾಡಿದ ಭಾಷಣವೊಂದರ ಕೆಲವು ಭಾಗಗಳನ್ನು ಪೀಕಿಂಗ್ ಪೀಪಲ್ಸ್ ಡೈಲಿ ಪತ್ರಿಕೆಯು ೧೯೬೩ ಎಪ್ರಿಲ್ ೧ರ ಸಂಚಿಕೆಯಲ್ಲಿ ಪ್ರಕಟಿಸಿದೆ. ಭಾಷಣ ನಡೆದುದು ಸೈನಿಕ ಪಡೆಗಳಿಗೆ ಸಂಬಂಧಿಸಿದ ರಾಜಕೀಯ ಕಾರ್ಯ ಚಟುವಟಿಕೆಗಳ ಸಮ್ಮೇಳನದಲ್ಲೇ. ಆಧುನಿಕ ಯುದ್ಧಕಲೆ ಎಷ್ಟು ಕಠಿಣ ಸ್ವರೂಪದ್ದಾಗಿದೆ ಎಂಬುದನ್ನು ಅವರು ವಿವರಿಸಿ ಸೈನಿಕನ ದಕ್ಷತೆ, ಧೈರ್ಯ—ಸ್ಥೈರ್ಯ, ಅವನ ತಾಂತ್ರಿಕ ಜ್ಞಾನ ಮತ್ತು ಪ್ರತ್ಯಕ್ಷ ಅನುಭವ ಇವು ಬಹಳ ಮುಖ್ಯವಾಗುತ್ತದೆ ಎಂದು ತಿಳಿಸಿದರು. ಇಷ್ಟೆಲ್ಲ ಸಾಧ್ಯವಾಗಬೇಕಾದರೆ ಅವನಿಗೆ ರಾಜಕೀಯ ಶಿಕ್ಷಣವನ್ನು ಒದಗಿಸಬೇಕಾದುದು ಬಹಳ ಮುಖ್ಯವಾಗುತ್ತದೆಯೆಂದೂ ತಿಳಿಸಿದರು.

"ಒಂದು ಸೈನಿಕದಳ ತನ್ನ ಸಮಗ್ರತೆಯನ್ನು ಮೂಲತಃ ಕಾಪಾಡಿಕೊಂಡು ಹೋಗಬೇಕು. ಯುದ್ಧ ಕ್ಷೇತ್ರದಲ್ಲಿ ಬಹಳ ಕಠಿಣ ಹೋರಾಟಕ್ಕೆ ಅದು ಸಿದ್ಧವಾಗಬೇಕು ಅಲ್ಲದೆ ಪಕ್ಷದ ಹಾದಿ ನಡೆಸುವ ಪ್ರತ್ಯಕ್ಷ ಕಾರ್ಯ ಚಟುವಟಿಕೆಗಳು ಈ ದಿಶೆಯಲ್ಲಿ ತುಂಬಾ ಪರಿಣಾಮಕಾರಿಯಾಗುತ್ತದೆ," ಎಂದು ಅವರು ತಿಳಿಸಿದರಲ್ಲದೆ ಈ ಕಾರ್ಯ ಚಟುವಟಿಕೆಗಳು ಪ್ರಜಾಸತ್ತಾತ್ಮಕವಾಗಿರಬೇಕು, ಅಕ್ಷೇಪಗಳಿಗೆ ಕಾರ್ಯಕರ್ತರು ಕಿವಿಗೊಡಬೇಕು. ಸದಸ್ಯರ ಅಭಿಪ್ರಾಯಗಳನ್ನು ಅವರೆಲ್ಲ ಯುದ್ಧದಲ್ಲಿ ಹೋರಾಡಿರುವವರ ಅಭಿಪ್ರಾಯಗಳನ್ನೂ ಗಮನಕ್ಕೆ ತೆಗೆದುಕೊಂಡು ಕೆಲಸ ಮಾಡಬೇಕು ಎಂದು ತಿಳಿಸಿದರು.

ಇಲ್ಲಿ "ಯುದ್ಧದಲ್ಲಿ ಹೋರಾಡಿರುವವರ ಅಭಿಪ್ರಾಯಗಳನ್ನು ಮುಖ್ಯವಾಗಿ"—ಈ ಮಾತು ಗಮನಾರ್ಹ. ಆದರೆ ಸೇನಾತಜ್ಞರ ವಿಚಾರಗಳಿಗೆ ಬೆಲೆ ಕೊಡಬೇಕು ಎಂದು ಸೂಚಿಸುವ ಈ ಸಲಹೆಯನ್ನು ಕೇಳುವ ತಾಳ್ಮೆ ಪಕ್ಷಕ್ಕೆಲ್ಲಿ ಬರಬೇಕು? ತನ್ನ ಅಧಿಕಾರವನ್ನು ಸಂಪೂರ್ಣವಾಗಿ ಸ್ಥಾಪಿಸಿಕೊಳ್ಳಲು ಅದು ಪ್ರಯತ್ನಿಸುತ್ತಿದೆ ಎಂದೇ ಮಾವೋರವರು ಮೇ ೮ರಂದು ಸೈನಿಕ ಪಡೆಯ ಪೂರ್ಣಾಧಿಕಾರವನ್ನು ವಹಿಸಿಕೊಂಡರು.

ಚಂದಾದಾರರಲ್ಲಿ ವಿನಂತಿ

ಕಳೆದ ಅಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ 42ನೆಯ ವರ್ಷವು ಮುಗಿದು ಇದೇ ಸಪ್ಟಂಬರದಿಂದ 43ನೆಯ ಹೊಸ ವರ್ಷಾರಂಭವಾಗಿದೆ. ಈ ಅವಧಿಗೆ ಚಂದಾ ಅವಧಿ ಮುಗಿಯುವವರೂ ಚಂದಾಹಣ ಬಾಕಿ ಇರುವವರೂ ತಮ್ಮ ತಮ್ಮ ಬಾಕಿಯನ್ನು ದಯಮಾಡಿ ಆದಷ್ಟು ತ್ವರ್ಯ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ. ಚಂದಾಹಣವನ್ನು, ಸಿಂಡಿಕೇಟ್ ಬೇಂಕಿ"ನ ಯಾವದೇ ಶಾಖೆಯಲ್ಲಿ "ನವಯುಗ"ದ ಖಾತೆಗೆ ಯಾವ ಖರ್ಚೂ ಇಲ್ಲದೆ ಪಾವತಿ ಮಾಡಬಹುದು, ಇಲ್ಲವೆ ಮನಿಯಾರ್ಡರು ಮಾಡಬಹುದು. ವಿ. ಪಿ. ಮಾಡಿದರೆ 70 ನ. ಪೈಸೆಯಷ್ಟು ಹೆಚ್ಚಿಗೆ ಬೀಳುವುದರಿಂದ ಎಲ್ಲರೂ ಮುಂದಾಗಿ ಚಂದಾ ಕಳುಹಿಸಿ ಕೊಡುವಂತೆ ವಿನಂತಿ.

ಐತಿಹಾಸಿಕ ನಾಟಕ

ಗಜಪತಿ ನಂದಿನಿ

ಬರೆದವರು: "ನವಗಿರಿನಂದ"

(ಕಳೆದ ಸಂಚಿಕೆಯಿಂದ ಮುಂದುವರಿದುದು)

ದೃಶ್ಯ—೪ ಪಂಪೇಶಾಲಯ ಬಳಿಯ ಬೀದಿ.

(ದೀಪ ಹಚ್ಚಿದ ಹೊತ್ತು. ತಿಮ್ಮಣ್ಣ-ರಾಮಕೃಷ್ಣರು ಒಟ್ಟಿಗೇ ಪ್ರವೇಶಿಸುತ್ತಾರೆ).

ರಾಮಕೃಷ್ಣ— ಭಳಿರೇ ಹಂಪೆತಿಮ್ಮ! ಇಂದಿನ ನಾಗಲಾಪುರದ ನೋಟ ಬಲು ಸ್ವಾರಸ್ಯ

ತಿಮ್ಮಣ್ಣ— ಸಂದೇಹವೇ ಇಲ್ಲ ತೆನಾಲಿ ಕಿಟ್ಟಾ! ಈ ಪ್ರತಿಜ್ಞಾ ಬಾಗವು.

ರಾಮಕೃಷ್ಣ— ಅವಶ್ಯವಾಗಿ ನಮ್ಮ ಕಾವ್ಯದಲ್ಲಿ ಬರಲೇಬೇಕು.

ತಿಮ್ಮಣ್ಣ - ಹೌದು ಕಿಟ್ಟಾ, ಈಗಲೇ ಗುರುತು ಮಾಡಿಕೊಳ್ಳಬೇಕು. (ಗ್ರಂಥವನ್ನು ಬಿಚ್ಚುವನು)

ರಾಮಕೃಷ್ಣ—ಹಂಪಣ್ಣ, ಹಂಪೇತಿಮ್ಮಣ್ಣ. ಹೌದು ಹೌದು. (ಲಗುಬಗನೆ ಗ್ರಂಥಗಳನ್ನು ಬಿಚ್ಚಿ ಗುರುತು ಮಾಡಿಕೊಂಡು) ಆದರೆ—

ತಿಮ್ಮಣ್ಣ— ಆದರೆ ತೆನಾಲಣ್ಣ,

ರಾಮಕೃಷ್ಣ— ಇದೇನೂ ಸಾಮಾನ್ಯವಾದ ಆದರೆ ಅಲ್ಲವೊ ಹಂಪಣ್ಣ ಗುಪ್ತದಂಥ ಆಪತ್ತಿ!

ತಿಮ್ಮಣ್ಣ—ಹೌದೋ ಹೌದು. ಗುರು ತಿಮ್ಮರಸರು ರಾಯನ ಪ್ರೇಮ ಪ್ರತಿಜ್ಞೆಯನ್ನು ಭಂಗಪಡಿಸಲು ಇನ್ನೇನು ತಂತ್ರ ಮಾಡುವರೋ!

ರಾಮಕೃಷ್ಣ — (ಹಾರಿ ತಿಮ್ಮಣ್ಣನ ಬಾಯಿ ಮುಚ್ಚಿ) ಶ್ಶ್! ಗುರುದೇವರು! ಬರುತ್ತಿದ್ದಾರೆ.

ತಿಮ್ಮಣ್ಣ—ಅಯ್ಯೋ! ಅವರ ಕಣ್ಣಿಗೆ ನಾವು ಬಿದ್ದರೆ—

ರಾಮಕೃಷ್ಣ —ಸುಮ್ಮನೇ ಬಿಡಲಾರರು. ಉಪಾಯ, ಅಪಾಯ ಎಂದು ನಮ್ಮ ಜುಟ್ಟನ್ನು ಹಿಂಡಿಬಿಡುತ್ತಾರೆ.

ತಿಮ್ಮಣ್ಣ—ಅದೂ ಅಲ್ಲದೆ ಅವರು ಕದ್ದ ನೋಟವನ್ನೇ ನಾವೂ ಕದ್ದುಕೊಂಡ ಕಳ್ಳರಾಯಿತಲ್ಲ!

ರಾಮಕೃಷ್ಣ—ಹೌದಪ್ಪೋ. ನಡೆ. ಆ ಬಂಡೆಯ ಮರೆಯಲ್ಲಿ ಅಡಗಿದ್ದು, ಆ ಮೇಲೆ ಇಳಿಯೋಣ ತುಂಗಭದ್ರೆಗೆ ಸಂಧ್ಯಾವಂದನೆಗೆ. (ಬಂಡೆಯ ಮರೆಯಲ್ಲಿ ಅಡಗುವರು. ಅವರ ಜುಟ್ಟುಗಳು ಕಾಣುತ್ತಿರುವುವು.)

ತಿಮ್ಮರಸು—(ಪ್ರವೇಶಿಸಿ, ಸ್ವಗತ) ಆಹಾ! ನನ್ನ ವಾದಕ್ಕೆ ಚಿನ್ನಾದೇವಿಯ ಸಹಕರಿಸುವದೊಂದು ಭಾಗ್ಯ. ರಾಯನ ಪ್ರತಿಜ್ಞೆಗೆ ಅವಳು ಮಾಡಿದ ಪ್ರತಿಪ್ರತಿಜ್ಞೆ! ಬಹಳ ಉದಾತ್ತ! ಒಟ್ಟಾರೆ, ನಿಷ್ಕಳಂಕವಾದ ವಿದ್ಯಾನಗರದ ಸಿಂಹಾಸನದ ಪಾವಿತ್ರ್ಯವನ್ನು ಕಾಯಲಿಕ್ಕಾಗಿ ನಾನೀಗ ಚಿನ್ನಾದೇವಿಯನ್ನು ರಾಯನ ಕಣ್ಮರೆ ಮಾಡಲೇ ಬೇಕು! ಹೇ! ಪಂಪಾಪತೇ! ಈ ಪವಿತ್ರ ಪ್ರೇಮ ಯುಗ್ಮಗಳನ್ನು ಅಗಲಿಸಿದ ದೋಷವು ನನಗೆ ತಟ್ಟದಿರಲಿ. ಆದರೆ ಇದಕ್ಕೆ ಏನು ಉಪಾಯ ಮಾಡಲಿ? (ಯೋಚಿಸುತ್ತಾ ಪರದೆಯ ಕಡೆಗೆ ನೋಡಿ) ಅದೇನು? ಎರಡು ಜುಟ್ಟುಗಳು! (ಹೋಗಿ ತಿಮ್ಮಣ್ಣ ರಾಮಕೃಷ್ಣರ ಜುಟ್ಟುಗಳನ್ನು ಹಿಡಿದು, ಅವರನ್ನು ಮಧ್ಯ ರಂಗಕ್ಕೆ ಎಳೆದು ತರುವನು)

ರಾಮಕೃಷ್ಣ— ಗುರುದೇವರುಗಳೇ! ಕ್ಷಮಿಸುವುದು! ಕ್ಷಮಿಸುವುದು.

ತಿಮ್ಮಣ್ಣ— ಕ್ಷಮಿಸಿರಿ ಗುರೂ! ಕ್ಷಮಿಸಿರಿ ಗುರೂ!

ತಿಮ್ಮರಸು— (ಇಬ್ಬರನ್ನೂ ಅಕ್ಕಪಕ್ಕಗಳಲ್ಲಿ ನಿಲ್ಲಿಸಿ) ಈ ಆಂಧ್ರ-ಕನ್ನಡ ಕವಿಗಳು ಅನ್ಯೋನ್ಯರಾಗಿರುವಂತೆ ಆಂಧ್ರ ಕನ್ನಡ ರಾಜರೂ ಅನ್ಯೋನ್ಯರಾದರಲ್ಲವೇ ನನಗೆ ತೃಪ್ತಿ? (ಇಬ್ಬರ ತಲೆಯನ್ನೂ ಢಿಕ್ಕೀ ಹೊಡೆಯಿಸುವನು)

ರಾಮಕೃಷ್ಣ — ಹಾ! ತಿಮ್ಮಾ! ಹಾಯ್!

ತಿಮ್ಮಣ್ಣ— ಹೋ! ರಾಮಾ! ಹೋಯ್! ನಾವು ಹಂದೆ ತಲೆಯಲ್ಲವೆಂಬ ಕೋಪ ಕಾಣೋ ರಾಮಕೃಷ್ಣಾ.

ರಾಮಕೃಷ್ಣ— ಹೌದಾದೋ! ಅದಕ್ಕೇ ನಮ್ಮ ಮಂಡೆಯೊಡೆಯುತ್ತಿದ್ದಾರೆ.

ತಿಮ್ಮಣ್ಣ— ಹಂಡೆಯ ಮೇಲಿನ ಸಿಟ್ಟನ್ನು ನಮ್ಮ ಬಡ ಮಂಡೆಗಳ ಮೇಲೆ ತೋರಿಸಬಹುದೇ ಗುರುದೇವಾ?

ತಿಮ್ಮರಸು — ನನಗೆ ಹಂಡೆಯೂ ಕಮ್ಮಿ ಕವಿಗಳೆ?

ತಿಮ್ಮಣ್ಣ — ಯಾಕೆಂದರೆ?

ರಾಮಕೃಷ್ಣ— ನಿಮಗೆ ಗೊತ್ತಿಲ್ಲವೆ?

ತಿಮ್ಮಣ್ಣ-ಅಷ್ಟರೊಳಗೇ ಮರೆತಿರಾ?

ತಿಮ್ಮರಸು—(ಗರ್ಜಿಸಿ) ಹೇಳಿ ಬೇಗ ಏಕೆಂದು.

ತಿಮ್ಮಣ್ಣ—ರಾಮಕೃಷ್ಣ—ಹೊ! ನಿಮ್ಮ ಈ ಮಂಡೆಯೊಳಗಿರುವ

ತಿಮ್ಮಣ್ಣ—ಹೊರಲಾರದ ಚಿಂತೆಗಾಗಿ ಒಂದು ಹಂಡೆಯನ್ನು ತರಲು ನಮಗೆ ಮರೆತು ಹೋಯಿತೆಂದು

ರಾಮಕೃಷ್ಣ - ಹೀಗೆ ನಮ್ಮನ್ನು ಶಿಕ್ಷಿಸುವಿರಾ ಗುರೂ?

ತಿಮ್ಮರಸು—ನನ್ನ ಮಂಡೆಯ ಚಿಂತೆಯನ್ನು ತುಂಬಿಸಲು ಹಂಡೆಯೇಕೆ? ನಿಮ್ಮ ಈ ಎರಡು ಕವಿ ಮಂಡೆಗಳು ಸಾಲವೆ?

ರಾಮಕೃಷ್ಣ—ಸರಿ. ತಿಮ್ಮಣ್ಣ. ನಾವು ಊಹಿಸಿದ್ದು ಸರಿ.

ತಿಮ್ಮಣ್ಣ— ಪೂರಾ ಸರಿ.

ತಿಮ್ಮರಸು—ಏನದು ನಿಮ್ಮ ಊಹೆ?

ತಿಮ್ಮಣ್ಣ—ನಿಮ್ಮ ಚಿಂತೆ ಖಂಡಿತವಾಗಿಯೂ ನಮ್ಮ ಮಂಡೆಗೊಳಗೇ ಬರುತ್ತದೆಂದು.

ತಿಮ್ಮರಸು—ನಿಜವಯ್ಯ. ಸದಾ ಸಪ್ಪರಿಸಿಕೊಂಡಿರುವ ನಿಮ್ಮ ಮಂಡೆಗಳೇ ನನಗೀಗ ಬೇಕಾಗಿದೆ.

ರಾಮಕೃಷ್ಣ—ನಿಮ್ಮ ದೊಡ್ಡ ಮುಂಡಾಸಿನ ತಲೆಯೊಳಗಿನ ವಿಚಾರಗಳು ನಮ್ಮ ಪುಟ್ಟ ಮಂಡೆಯೊಳಗೆ ಹಿಡಿದೀತೋ

ತಿಮ್ಮಣ್ಣ-- ಅದೇ ಅನುಮಾನ. ಒಂದು ಹಂಡೆಯೂ ಇದ್ದರೆ ಲೇಸೇ.

ತಿಮ್ಮರಸು ಅದು ಆಮೇಲೆನೋಡುವ. ನಿಮ್ಮನ್ನೂ ಸೇರಿಸಿಯೇ ಹಂಡೆಯೊಳಗೆ ಹಾಕೋಣ ಈಗ ನೀವು ಪುಟ್ಟದೊಂದು ಉಪಾಯವನ್ನು ನಿಮ್ಮ ತಲೆಯೊಳಗಿನಿಂದ ಈಚೆಗೆ ಬಿಸುಟರೆ ಸಾಕು.

ತಿಮ್ಮಣ್ಣ— (ಕೈಮುಗಿದು) ಅಪ್ಪಣೆಯಾಗಲಿ.

ರಾಮಕೃಷ್ಣ—(ತಲೆ ಸವರಿಕೊಂಡು) ಸಿದ್ಧವಾಗಿದೆ.

ತಿಮ್ಮರಸು— ಕೇಳಿರಿ, ಈಗ ನಮ್ಮ ರಾಯನಿಗೂ ನನಗೂ ಇರುವ ಸಮಸ್ಯೆ ನಿಮಗೆ ಗೊತ್ತು. ಈಗ ಚಿನ್ನದೇವಿಯನ್ನು ರಾಯನ ಕಣ್ಮರೆ ಮಾಡಿ ಬಿಡಬೇಕು.

ರಾಮಕೃಷ್ಣ— ಅಯ್ಯೋ ಪಾಪ!

ತಿಮ್ಮಣ್ಣ— (ರಾಮಕೃಷ್ಣನಿಗೆ) ಛಿ! ಸಾಕ್ಷಾತ್ ಚಕ್ರವರ್ತಿಯೇ ಮನ್ನಿಸುವ ಗುರುವರ್ಯರ ಮಾತಿಗೆ ಇದಿರಾಡಬೇಡವೋ ಮೂರ್ಖ!

ತಿಮ್ಮರಸು— ರಾಯನು ಚಿನ್ನಾದೇವಿಯನ್ನು ಕಣ್ಣೆತ್ತಿಯೂ ನೋಡದ ಹಾಗೆ ಮಾಡಿಬಿಡಬೇಕು ಉಪಾಯ ಹೇಳಿ.

ರಾಮಕೃಷ್ಣ— (ತಲೆಕೆರೆದು) ಗುರುದೇವಾ, ನನ್ನ ಉಪಾಯ ಕೇಳಿರಿ. ಚಿನ್ನಾದೇವಿ ಯಾವನೊಂದಿಗೋ ಓಡಿ ಹೋದಳೆಂಬಂತೆ ಅಪವಾದ ಹೂಡಿ ಬಿಡಬೇಕು

ತಿಮ್ಮಣ್ಣ— ಭಲೇ — ಚೆಲೋ ಉಪಾಯ!

ತಿಮ್ಮರಸು— ನಿಜ. ಅದೇ ಸರಿ. ಈ ದಿನ ರಾತ್ರಿಯೇ ಚಿನ್ನಾದೇವಿಯನ್ನು ಅವಳ ತಾಯಿಗೂ ತಿಳಿಯದಂತೆ ಗುತ್ತಿದುರ್ಗಕ್ಕೆ ಕಳುಹಿಸಿ ಕೊಡುವೆನು

ರಾಮಕೃಷ್ಣ— ಆಗಬಹುದು. ಅಲ್ಲಿ ತಮ್ಮ ಸಹೋದರರಾದ ಗೋವಿಂದ ರಾಜರು ಆ ದೇವಿಯನ್ನು ಸುರಕ್ಷಿತವಾಗಿ ಕಾಪಾಡುವರು.

ತಿಮ್ಮಣ್ಣ— ಹೌದು ಚಿನ್ನದೇವಿಯ ಉಡುಗೆ ತೊಡುಗೆಗಳನ್ನೂ ಸಾಗಿಸಿಬಿಟ್ಟರೆ ಆವಳು ಯಾವನೊಂದಿಗೋ ಓಡಿ ಹೋದಳೆಂಬ ಅಪಕೀರ್ತಿ ತಾನೇ ತಾನಾಗಿ ಹಬ್ಬುವುದು. ಆದರೆ ಆ ದೇವಿಗೂ ಅವಳ ತಾಯಿಗೂ ತಿಳಿಯದಂತೆ ಈ ಕಾರ್ಯ ಹೇಗಾಗುವುದು?

ತಿಮ್ಮರಸು —ಅದನ್ನು ಮಾದಕ ಔಷದ ಪ್ರಯೋಗದಿಂದ ನಾನು ಸಾಧಿಸುತ್ತೇನೆ.

(ತಿಮ್ಮಣ್ಣ ರಾಮಕೃಷ್ಣರು ತಮ್ಮೊಳಗೆ ಕಣ್ಸನ್ನೆ ಮಾಡಿಕೊಳ್ಳುವರು)

ತಿಮ್ಮಣ್ಣ—ಗುರುದೇವಾ, ನಮ್ಮ ಹೆಳೆಯಿಂದ ಉಪಾಯವಾಯಿತಷ್ಟೆ? ಇನ್ನು ನಮ್ಮ ಸಂಧ್ಯಾವಂದನೆಗೆ ಅಪ್ಪಣೆಕೊಡಿ.

ರಾಮಕೃಷ್ಣ—ಇಂದೇಕೋ ನೂರೆಂಟು ವಿಘ್ನ ನಮ್ಮ ಸಂಧ್ಯಾವಂದನೆಗೆ

ತಿಮ್ಮರಸು—ಹೋಗಿರಪ್ಪಾ. ಬಾಯಿ ಮಾತ್ರ ಬಿಟ್ಟೀರಿ! (ಹೋಗುವನು)

ರಾಮಕೃಷ್ಣ— ಬಾಯಿಬಿಡುವುದೇ? ಬಾಯಿಬಿಟ್ಟರೆ ಮೂಸಗೇಡು. ತಿಮ್ಮಣ್ಣ, ಮೂಗು ಹಿಡಿಯುವಾಗ ಬಾಯಿಯೂ ಮುಚ್ಚಿಕೊಳ್ಳಪ್ಪ.

ತಿಮ್ಮಣ್ಣ—ಏನು ಮುಚ್ಚಿಕೊಂಡರೂ ಅದೃಷ್ಟವನ್ನು ಅಳಿಸಲು ಯಾರಿಗೂ ಸಾಧ್ಯವಿಲ್ಲ ರಾಮಕೃಷ್ಣಾ. ಬಾ, ಹೋಗುವ.

ದೃಶ್ಯ, ೫, ವಿದ್ಯಾನಗರದ ಅರಮನೆಯ ಏಕಾಂತ ಕೊಠಡಿ

(ಹಗಲು ವೇಳೆ ಕೃಷ್ಣದೇವರಾಯನೂ, ತಿಮ್ಮರಸನೂ, ತಿಮ್ಮಣ್ಣ ರಾಮಕೃಷ್ಣರೂ ಕುಳಿತಿದ್ದಾರೆ.)

ಕೃಷ್ಣದೇವರಾಯ— ಅಪ್ಪಾಜೀ, ಚಿನ್ನಾದೇವಿ ರಾಣಿಯಾಗಿ ಹೋದುದಕ್ಕೆ

(೧೧ನೇ ಪುಟ ನೋಡಿರಿ)

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

25,000

ಪ್ರತಿಗಳಿಗೂ ಮಿಕ್ಕಿ ಈ ವರೆಗೆ ಕರ್ನಾಟಕದಲ್ಲೆಲ್ಲ ವಿಕ್ರಿತವಾಗಿರುವ

ಹೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

ಗೀತೆಯ ಸಮೂಲ ಭಾಷಾಂತರ ಇದೀಗ ಮೂರಾಟಕ್ಕೆ ಸಿದ್ಧವಾಗಿದೆ.

360 ಪುಟಗಳಿಗೂ ಮಿಕ್ಕಿದ ಪಾಕೆಟ್ ಎಡಿಶನ್!

ದಪ್ಪವಾದ ಬಿಳಿ ನುಣುಪು ಕಾಗದ!

ಬೆಲೆ: ಸಾದಾ ಪ್ರತಿ ರೂ. ೧-೦೦
ಉತ್ತಮ ಪ್ರತಿ ರೂ. ೧-೫೦
ಅಂಚೆ ವೆಚ್ಚ ರೂ. ೦-೫೦

ಖಂಡ ಪ್ರತಿಗಳ ವರಕ್ಕೆ ಬರೆಯಿರಿ:

ನವಯುಗ ಪ್ರೆಸ್, ಉಡುಪಿ, ದ. ಕ.

ಅಯೂಬರ ಅಜ್ಞಾನ

ಕುಡುಗೋಲು ಸುತ್ತಿಗೆಗಳೆಡೆ ಅರ್ಧಚಂದ್ರ ನಕ್ಷತ್ರ

ಶ್ರೀ ಶಿವಶಂಕರ, ಮುದ್ರಾಸು

ಆಗೋಸ್ಟ್ ಹದಿನೈದರಂದು ಅಶೋಕ ಚಕ್ರಾಂಕಿತ ತ್ರಿರಂಗಿ ರಾಷ್ಟ್ರಧ್ವಜವನ್ನು ರಾಷ್ಟ್ರದಾದ್ಯಂತ ಗೌರವ ಸಹಿತ ಮೇಲೇರಿಸುವದು ಪ್ರಚಲಿತ ಪದ್ಧತಿ. ಆದರೆ ಇಂದೂ ಕೆಲವರು ಬೇಕೆಂದೇ ಇತರ ಧ್ವಜ-ಚಿಹ್ನೆಗಳನ್ನಂಥ ಹಾರಾಡಿಸುವ ಚಟವನ್ನು ಬಿಟ್ಟುಕೊಟ್ಟಿರುವದಿಲ್ಲ. ಇತರ ಧ್ವಜ—ಚಿಹ್ನೆಗಳೆಂದರೆ ಇಲ್ಲಿರುವ ರಾಜಕೀಯ ಪಕ್ಷ-ಸಂಘಗಳ ಧ್ವಜಗಳಿಗಿಂತಲೂ ಅನ್ಯ ರಾಷ್ಟ್ರಗಳ, ರಾಜ್ಯಗಳ ಕುರಿತು ಹೇಳುತ್ತಿರುವದು. ಆ ಸುಖ ದುಃಖ ಮಿಶ್ರಿತ ಪರ್ವಕಾಲದಲ್ಲಿ, ಅದೂ ಭ್ರಾಂತ ಚಕ್ರವ್ಯೂಹದಲ್ಲಿ ಸಿಲುಕಿರುವಾಗ, ಅಂತಹ ಕೇತುಗಳನ್ನು ಹಾರಾಡಿಸುವದು ಯುಕ್ತವೇ? ಇಂತಹ ಪ್ರಶ್ನೆಗಳು ಅಸ್ಸಾಮಿನ ವಿಧಾನಸಭೆ ಹಾಗೂ ಭಾರತದ ಲೋಕಸಭೆಯಲ್ಲಿ ಕೇಳಿಬಂದಿವೆ. ಇದರಿಂದ ಭಾರತ ಸರಕಾರದ ಹಾಗೂ ಜನತೆಯ ಮಾನವರ ಮನೋಭಾವನೆ ಮನವರಿಕೆಯಾಗುತ್ತದೆ. ಹಾವಿಗೂ ಹಾಲೆರೆಯುವ ಸಂಸ್ಕೃತಿಯವರಲ್ಲವೇ ಈ ಮಣ್ಣಿನ ಮನುಷ್ಯರು? ಈ ದೇಶದಲ್ಲಿ ಅನ್ಯದೇಶೀಯರು ಹಾಗೂ ಅವರ ಸಂಬಂಧಿಕರಿಗೆ ಅಲ್ಲದೆ ಮತಸ್ಥರಿಗನೇ ಅಂತಹ ಕೇತುಗಳನ್ನು ಹಾರಾಡಿಸುವದಕ್ಕೂ ಸ್ವಾತಂತ್ರ್ಯವಿದೆ ಎಂಬುದು ಅದರಿಂದ ಸ್ಪಷ್ಟವಾಗುತ್ತದೆ. ಅಷ್ಟರವರೆಗೂ ಅವರಿಗೆ ಸ್ವಾತಂತ್ರ್ಯವಿದ್ದರೂ ಪಾಕಿಸ್ಥಾನದ ಸರ್ವಾಧಿಕಾರಿ ಅಯೂಬ ಅಸಂಬದ್ಧ ಕುಹಕನುಡಿಗಳನ್ನಾಡುತ್ತಿರುವದು ಸೋಜಿಗವೇ ಇದೆ. ಅವರು ಚೈನಾದ ಕಮ್ಯೂನಿಸಮಿಗಿಂತಲೂ ಭಾರತದ ಹಿಂದೂ ಜಾತೀಯತೆಯಿಂದ ಜಾಸ್ತಿ ಅಪಾಯವಿದೆಂದೇ ಆಗಾಗ ಆಡುತ್ತಿರುತ್ತಾರೆ. ಅಲ್ಲದೆ, ಭಾರತವು ಎಂದಾದರೂ ಒಂದು ದಿನ ಪಾಕಿಸ್ಥಾನದ ಮೇಲೆ ಆಕ್ರಮಣ ನಡೆಸಿ ಅಖಂಡ ಭಾರತ ಮಾತ್ರವಲ್ಲ, ಹಿಂದೂ ಸಾಮ್ರಾಜ್ಯವನ್ನೇ ಕಟ್ಟುವದೆಂದೂ, ಅದನ್ನೆದುರಿಸಲು ಪಾಕಿಸ್ಥಾನಕ್ಕೆ ಚೈನಾವು ಸ್ನೇಹಮಯ ಹಸ್ತವನ್ನೀಯುವದೆಂದೂ ಅವರು ಭವಿಷ್ಯ ನುಡಿದಿರುವರು. ಪಾಕಿಸ್ಥಾನಕ್ಕೆ ಪ್ರೀತಿಯಿಂದ ಪರೋಪಕಾರ ಮಾಡುತ್ತದೆನ್ನುವ ಚೈನಾವು ತನ್ನ ದೇಶದೊಳಗಿರುವ, ಆಡಳಿತದೊಳಗಿರುವ ಮುಸಲ್ಮಾನರನ್ನು ಆವ್ಯಾವ ರೀತಿಯಲ್ಲಿ ನೋಡಿಕೊಳ್ಳುತ್ತಿದೆ? ಈ ಕುರಿತ ಕೆಲ ವಿಷಯಗಳನ್ನು ಕಳೆದ ತಿಂಗಳ ದಿ. ೨೨ರ ಸಂಚಿಕೆಯಲ್ಲಿ ಪ್ರಕಟಿಸಲಾಗಿರುತ್ತದೆ.

ಚೈನಿ ತುರ್ಕಿಸ್ಥಾನದಲ್ಲಿ ಮುಸಲ್ಮಾನರು ರಷ್ಯನರ ಶಸ್ತ್ರಾಸ್ತ್ರಗಳ ಸಹಾಯದಿಂದ ದಂಗೆ ಏಳಲು ಹೂಡಿರುವ ಸಂಚಿನ ಸುದ್ದಿಯನ್ನು ಸ್ಥಳೀಯ ದೈನಿಕ ಪತ್ರಿಕೆಯು ಪ್ರಕಟಿಸಿರುತ್ತದೆ.

ಪತ್ರಿಕೆಯ ಪ್ರಕಟಣೆಯಂತೆ, ಸೋವಿಯತ್ ಗಡಿರೇಖಾ ಪ್ರದೇಶದ ಸಿಂಕಿಯಾಂಗಿನ ಕುಯಿಟ್ಸು ಟಾಚಾಂಗ್ ಪಟ್ಟಣದ ಕಝಕರು, ಉಯಿಗುರರು ಮತ್ತು ಉಝ್ಬೆಕರು (ಬಹುತೇಕ ಮುಸ್ಲಿಮರು) ಕಳೆದ ಮೇಯಲ್ಲಿ ಸೋವಿಯಟ್ ದೂತನಿವಾಸದೊಳಗೆ ಪ್ರವೇಶಿಸಿ ಚೈನೀಯರನ್ನು ಎದುರಿಸಲು ಶಸ್ತ್ರಸಹಾಯವನ್ನು ಯಾಚಿಸಿರುವರು.

ಸೋವಿಯಟ್ ಅಧಿಕಾರಿಗಳಾದರೋ ಅಸ್ತ್ರಗಳನ್ನೀಯದೆ, ಹಿಂತಿರುಗಿ ಹೋಗಿ, ಸ್ಥಳೀಯ ಚೈನಿ ಕಮ್ಯೂನಿಸ್ಟ್ ಅಧಿಕಾರಿಗಳಿಗೆ ಅಪ್ಪ ಬೇಳಲು ದಂಗೆಗಾರರಿಗೆ ಹೇಳಿದರು. ಹಾಗಿದ್ದರೂ ಮುಹಮ್ಮದೀಯರು ಮೌನವಾಗುಳಿಯಲಿಲ್ಲ. ಕೆಲ ಕಾಲದವರೆಗೆ ಬಾಲ ಬಿಚ್ಚಲು ಪ್ರಯತ್ನಿಸಿದರು. ಕೆಲವರ ಬಾಲ ತುಂಡಾದುದನ್ನು ಕಂಡು ಕೆಲವರು ರಷ್ಯಕ್ಕೆ ಓಡಿ ಹೋದರು. ಅಲ್ಲಿ ಅವರಿಗೆ ಉದ್ಯೋಗ—ಊಟ—ಉಡುಪುಗಳ ವ್ಯವಸ್ಥೆ ಮಾಡಲಾಗಿರುತ್ತದೆಂದೂ ವರದಿ ಸೂಚಿಸುತ್ತದೆ. ಕಝಕರು ಬಲಾಢ್ಯರಿರುವದರಿಂದ ಅವರಿಗೆ ಸ್ವಾಗತ ಸಿಕ್ಕಿತೆಂದೂ ಆ ವರದಿ ಹೇಳಿದೆ. ಅದು ಚೈನಿ ಕಮ್ಯೂನಿಸ್ಟರಿಗೆ ಗೊತ್ತಾದೊಡನೆ ಅವರು ಸಿಂಕಿಯಾಂಗಿನಲ್ಲಿದ್ದ ರಾಯಭಾರಿ ಕಛೇರಿಯನ್ನು ಮುಚ್ಚಲು ರಷ್ಯನರಿಗೆ ತಿಳಿಸಿ ಮುಚ್ಚಿಸಿದರೆಂದೂ ವರದಿ ವಿವರಿಸುತ್ತದೆ.

ಸಿಂಕಿಯಾಂಗ್ ಸಂಗತಿಯು ಚೈನಿ ಕಮ್ಯೂನಿಸ್ಟರಿಗೂ ಮುಸ್ಲಿಮರಿಗೂ ನಡೆದಿರುವ ಹೋರಾಟದ ಸುದ್ದಿಯನ್ನು ಬೆಳಕಿಗೆ ತಂದಿರುತ್ತದೆ. ಇದರಿಂದ ಮುಹಮ್ಮದೀಯ ಮತಸ್ಥರು ತಮ್ಮ ಮತೀಯ ಪ್ರಭಾವ ಪ್ರಕಟಿಸಲು ಹಾಗೂ ಕಮ್ಯೂನಿಸ್ಟ್ ಅಧಿಕಾರಿಗಳು ತಮ್ಮ ದರ್ಪ ಮತ್ತು ಅಧಿಕಾರದ ಬಲವನ್ನು ಮನಗಾಣಿಸಲು ಎದುರಾಗಿರುವದು ಸ್ಪಷ್ಟವಾಗುತ್ತದೆ.

ಕೇಂದ್ರ ಚೈನಾ ಹಾಗೂ ತ್ರಿವಿಷ್ಟಪವು ಕಮ್ಯೂನಿಸ್ಟ್ ಕುಡುಗೋಲು ಹಾಗೂ ಸುತ್ತಿಗೆಯ ನಡುವೆ ಸಿಲಿಕಿದ್ದು ಒದ್ದಾಡುತ್ತಿದ್ದಾಗಲೂ ವಾಯುವ್ಯ ಪ್ರದೇಶದ ಮುಸಲ್ಮಾನರು ತಮ್ಮ ಅಕ್ಷೋಪಣೆಯನ್ನು ಪ್ರಕಟಿಸಲು ಪ್ರಯತ್ನಿಸುತ್ತಿದ್ದರು. ಅದನ್ನು ಅತಿ ಸುಲಭವಾಗಿ ಸುತ್ತಿಗೆಯ ಒಂದೇ ಪೆಟ್ಟಿನಿಂದ ಪುಡಿ ಪುಡಿಮಾಡಿ ಬಿಡಬಹುದೆಂದೆಣಿಸಿದ್ದ ಕಮ್ಯೂನಿಸ್ಟರಿಗೆ ಸುತ್ತಿಗೆ ಅಲ್ಲದೆ ಕುಡುಗೋಲೂ ಪ್ರಯೋಜನಕ್ಕೆ ಬರುವದಿಲ್ಲ, ಮುಖಾಮುಖಿ—ಗುಂಡುಗಳೇ ಅಗತ್ಯವೆಂಬುದು ಅನುಭವಕ್ಕೆ ಬಂತು. ಅಂತೆಯೇ, ಮುಸ್ಲಿಂ ಗೊರಿಲ್ಲಾ ಪಡೆಗಳ ಹುಟ್ಟಡಗಿಸಲು ಶಸ್ತ್ರಸಜ್ಜಿತ ಸೇನೆಯೇ ಮುಂದರಿದು, ಕೊನೆಯ ಪಡೆಯನ್ನು ನಿರ್ನಾಮಗೈಯ್ಯಿತು. ಅಲ್ಲಿಗೇ, ಆಗ ಕಮ್ಯೂನಿಸ್ಟರಿಗೆ ಇದ್ದ ತಡೆಯ ಪರಿಹಾರವಾಯಿತು.

ಆದರೆ, ಅಷ್ಟರಿಂದಲೇ ಕಮ್ಯೂನಿಸ್ಟ್ ಆದಳಿತ ವರ್ಗ 'ಅಸ್ಮಯ್ಯ'ವೆಂದು ಸುಮ್ಮಗೆ ಕೂಡಲಿಲ್ಲ. ಅದು ಕ್ರಮಶಃ ಮುಹಮ್ಮದೀಯರ ಮನಸ್ಸನ್ನಾಕರ್ಷಿಸಿಕೊಳ್ಳಲು ಮುಂದೆ ಹೆಜ್ಜೆ ಇಟ್ಟಿತು. ಅದಕ್ಕಾಗಿ ಅದು ಅತಿ ಜಾಗರೂಕತೆಯಿಂದ ವರ್ತಿಸಿತು. ಅದು ಅನೇಕಾನೇಕ ವೇಷಗಳನ್ನು ಹಾಕಿಕೊಂಡಿತು; ಮುತ್ತೀಯುತ್ತಿರುವಂತೆಯೇ ಕತ್ತು ಹಿಸುಕುವದಕ್ಕೂ, ಆಲಿಂಗಿಸಿಕೊಳ್ಳುತ್ತಿರುವಂತೆಯೇ ಅವಸಾನ ಕಾಣಿಸುವದಕ್ಕೂ ಅಂಜಲಿಲ್ಲ, ಹಿಂಜರಿಯಲಿಲ್ಲ. ಅದು ಸಣ್ಣ ಪೆಟ್ಟುಗಳನ್ನ ಒಪ್ಪಿಸ್ಟಿಗೆನೇ ಕೊಂಡೊಯ್ಯಿತು. ಆರ್ಥಿಕ ಸುಧಾರಣೆ, ಬಂಡಾಯ ನಿವಾರಣೆ ಮುಂತಾದ ಆಕರ್ಷಣೀಯ ಹೆಸರುಗಳಿಂದ ಕಮ್ಯೂನಿಸ್ಟ್ ದಮನ ಚಕ್ರವನ್ನು ದಡದಡನೆ ಉರುಳಲು ದಾರಿ ಮಾಡಿಕೊಟ್ಟಿತು. ಹಾಗಿರುವಾಗಲೂ ಸೈನಿಕ ಶಕ್ತಿಯನ್ನದು ಮೂಲೆ ಪಾಲು ಮಾಡಿರಲಿಲ್ಲ.

ಚೈನಾದಲ್ಲಿ ಎಲ್ಲಾ ಮತಗಳೂ ಕಮ್ಯೂನಿಸ್ಟ್ ಕಾಲ್ಚೆಂಡುಗಳಾಗಿದ್ದವು. ಅದರಲ್ಲಿ ಮುಹಮ್ಮದೀಯ ಮತವನ್ನು ಹುಟ್ಟಡಗಿಸುವದು ಅಷ್ಟು ಸುಲಭ ಸಾಧ್ಯವಾಗಿರಲಿಲ್ಲ. ಚೈನಾದಲ್ಲಿ ಚೆನ್ನಾಗಿ ಇಸ್ಲಾಂ ಬೇರು ಬಿಟ್ಟಿತ್ತು. [ಚೆಂಗೀಜಖಾನ್]

ಸುಮಾರು ಕ್ರಿಸ್ತ ಶಕ ೭೫೦ರಲ್ಲಿ ಚೈನಾದೊಳಗೆ ಮುಸಲ್ಮಾನರು [ಅರಬ್ಬರು] ವ್ಯಾಪಾರಕ್ಕಾಗಿ ಮೆಲ್ಲಮೆಲ್ಲಗೆ ಪ್ರವೇಶಿಸಿದರು. ಅವರು ಗಡಿ ಪ್ರದೇಶದಿಂದ ಹಾಗೆಯೇ ಅನೇಕ ವೇಷಗಳಲ್ಲಿ ಕೇಂದ್ರ ಚೈನಾದತ್ತ ಕಾಲು ಹಾಕಿದರು. ಹಾಗೆ ಹೋಗುತ್ತಿದ್ದಂತೆ ದಾರಿಯುದ್ದಕ್ಕೂ ಅವರು ತಂಗಿಕೊಂಡಿದ್ದಲ್ಲಿ ಮಸೀದಿಗಳನ್ನು ಕಟ್ಟುತ್ತ ಹೋದರು.

ಎರಡು ಪ್ರದೇಶಗಳಲ್ಲಿ ಅವರು ಕೇಂದ್ರೀಕೃತವಾಗಿ ವಾಸಮಾಡುತ್ತಿರುವರು. ಉತ್ತರ-ಮಧ್ಯ ಚೈನಾದಲ್ಲಿ ಸಾಧಾರಣ ೩೫,೫೦,೦೦೦ ಹೂಯಿ ಮುಸಲ್ಮಾನರು ಇದ್ದಾರೆ. ಹೂಯಿ ಮುಹಮ್ಮದೀಯರೆಂದರೆ ಚೈನಿ ಹಾಗೂ ತುರ್ಕಿ ಹಿರಿಯರ ಮಿಶ್ರ ಸಂತತಿಯವರು. ಅವರು ನಿಂಗ್ಸಿಯಾ ಹೂಯಿ ಸ್ವಾತಳಿತ ಪ್ರದೇಶದಲ್ಲಿರುವರು. ಚೈನಾದ ಹೆಚ್ಚಿನ ಮುಹಮ್ಮದೀಯರು ದೂರದ ವಾಯುವ್ಯ ಪ್ರದೇಶದಲ್ಲಿ ಸಿಂಕಿಯಾಂಗ್ ಉಗೂರ್ ಸ್ವಾಡಳಿತ ಪ್ರದೇಶದಲ್ಲಿ ವಾಸಮಾಡುತ್ತಿದ್ದಾರೆ.

ಆದರೆ ಸಿಂಕಿಯಾಂಗಿನ ಮುಹಮ್ಮದೀಯರು ಹಾಗಲ್ಲ. ಅವರು ಚೈನಿಯರೊಂದಿಗೆ ರಕ್ತ ಬೆರೆಸಿಕೊಂಡಿರುವದಿಲ್ಲ ಅಷ್ಟೇ ಅವರಲ್ಲಿ ಅನೇಕರಿಗೆ ಚೈನಿ ಭಾಷೆಯೂ ಬರುವದಿಲ್ಲ. ಅವರು ಕೇಂದ್ರೀಯ ಏಷ್ಯ ತುರ್ಕಿಯ ವರ್ಣ ಹಾಗೂ ಕಲಾಚಾರವನ್ನು ಭಿನ್ನವಾಗಿ ಕಾಪಾಡಿಕೊಂಡಿರುವರು. ಅವರ ಜನಸಂಖ್ಯೆಯಾದರೋ ಹೂಯಿಗಳದಕ್ಕಿಂತ ಸಾಧಾರಣ ಇಮ್ಮಡಿ ಇದೆ. ಸಿಂಕಿಯಾಂಗ್ ಹಾಗೂ ನಿಂಗ್ಸಿಯಾದಲ್ಲಿರುವ ಮುಸಲ್ಮಾನರನ್ನು ಕಮ್ಯೂನಿಸ್ಟ್ ಶಾಸಕವರ್ಗ ಅಲ್ಪ ಸಂಖ್ಯಾಕರೆಂದು ಪರಿಗಣಿಸಿರುತ್ತದೆ.

ಬಹು ಅಂದರೆ ಚೈನಾದ ಮೇಲೆ ಕಮ್ಯೂನಿಸ್ಟ್ ಆಡಳಿತ ಗದ್ದುಗೆಯಲ್ಲಿ ಬಂದಂದಿನಿಂದಲೇ ಕಮ್ಯೂನಿಸ್ಟರಿಗೆ ಈ ಅಲ್ಪ ಸಂಖ್ಯಾತರೊಂದು ತಲೆ ನೋವಾಗಿದ್ದಾರೆ. ಅವರಿಗೆ ಎಲ್ಲಾ ಕಡೆಗಳಲ್ಲೂ ಬಲಾತ್ಕಾರ ಕೃಷಿಪದ್ಧತಿಯನ್ನು ಬಳಕೆಗೆ ತರಲು ಅಲ್ಪಸಂಖ್ಯಾಕರು ಅಡ್ಡ ಇದ್ದಾರೆ. ಕಷ್ಟವೆಂದು ಕಮ್ಯೂನಿಸ್ಟ್ ಶಾಸಕ ವರ್ಗ ತಿಳಿದಂತೆ ಸುಮ್ಮಗೆ ಕುಳಿತುಕೊಳ್ಳಲಿಲ್ಲ. ಅದು ಕ್ರಮಶಃ ಮುಸಲ್ಮಾನರಿಗೆ ಸುತ್ತಿಗೆ ಪೆಟ್ಟಿನ ರುಚಿ ತೋರಿಸಿಕೊಡುತ್ತಿತ್ತು. ಆದರೆ ಅದಕ್ಕೆಲ್ಲಾ ಎಲ್ಲೂ ಪ್ರಚಾರ ಸಿಗದಂತೆ, ಸುದ್ದಿ ಹಬ್ಬದಂತೆ, ಒಳಗೊಳಗೇ ಜಾಗರೂಕತೆಯಿಂದ ನೋಡಿಕೊಳ್ಳಲಾಗುತ್ತದೆ. ಅಲ್ಲದೆ ಮುಹಮ್ಮದೀಯರಿಗೆ ಯಾರ ತಮ್ಮ ಹಂಚಿಕೆ ಏನೆಂಬುದನ್ನು ಅವರು ಅರುಹಿರುವದಿಲ್ಲ ಮತ್ತು ಅವರ ಕಲಾಚಾರ—ಸಂಸ್ಕೃತಿ ಸಂವರ್ಧನೆಗೆ ಸಹಾಯಮಾಡುವದಾಗಿ ಸೂಚಿಸುತ್ತ ಬಂದಿರುವರು.

ಒತ್ತಡ, ತತ್ವಪ್ರಚಾರ ಹಾಗೂ ಮನಒಲಿಸುವಿಕೆ ಮೊದಲಾದ ಮಾರ್ಗಗಳಿಂದ

(೧೦ನೇ ಪುಟ ನೋಡಿರಿ)

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ........
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ
1-1-1963ರಿಂದ ಠೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ
ನಿಮ್ಮ ಉಳಿತಾಯವು ಸೇವಿಂಗ್, ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.
ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.
ದಿ ವಿಜಯ ಬ್ಯಾಂಕ್ ಲಿಮಿಟೆಡ್,
ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ಸಾಹಿತ್ಯಾವಲೋಕನ

ಜೈಮಿನಿ ಭಾರತದಲ್ಲಿ ವೀರರಸ

—ಶ್ರೀ ಹೆನ್ನಿಗೆ ದೇಶಿಕಾಚಾರ್ಯ.

ಲಕ್ಷ್ಮೀಶನ ಜೈಮಿನಿ ಭಾರತದ ವಸ್ತು ಧರ್ಮವೀರನಾದ ಯುಧಿಷ್ಠಿರನು ಆಚರಿಸಿದ ಅಶ್ವಮೇಧ ಯಜ್ಞದ ಕಥೆ. ಮಹಾಭಾರತ ಯುದ್ಧದಲ್ಲಿ ಬಂಧುಬಾಂಧವರ ಮತ್ತು ಗುರುಹಿರಿಯರ ಕೊಲೆಗೆ ಕಾರಣನಾದುದರಿಂದ ಮಹತ್ತರವಾದ ಪಾತಕವು ತನಗೆ ಉಂಟಾಯಿತೆಂದು ಸಂತಪಿಸಿ ಕೊರಗುತ್ತಿದ್ದ ಧರ್ಮಜನಿಗೆ ಪಾಪ ಪರಿಹಾರಕ್ಕಾಗಿಯೂ ಸಂತಾಪಶಮನಕ್ಕಾಗಿಯೂ ವತ್ಸಲರಾದ ವ್ಯಾಸ ಮಹರ್ಷಿಗಳು ಉಪದೇಶಿಸಿದ್ದು ಈ ಯಜ್ಞದ ಆಚರಣೆ. ಈ ಬಗೆಯ ಪ್ರೇರಣೆಯೇ ಒಂದು ಚೋದ್ಯವೆನಬಹುದು. ಇರಲಿ! ಅಶ್ವಮೇಧವೆಂದರೆ ದೇಶವಿದೇಶಗಳಲ್ಲಿ ನೆಲೆಗೊಂಡ ನೂರಾರು ಜನ ಕ್ಷತ್ರಿಯ ವೀರರನ್ನು ಕುರಿತು ಕೂಗಿ ಕೆಣಕಿ “ಛಾತಿಯಿದ್ದರೆ ಯುದ್ಧಕ್ಕೆ ಬನ್ನಿ; ಇಲ್ಲವಾದರೆ ಶರಣೆನ್ನಿ” ಎಂದು ಭುಜತಟ್ಟಿ ಕರೆದು ಮುಡಿಗೆಯಿಕ್ಕಿದಂತೆ. ಇದರಿಂದ ಹಲವಾರು ಮಹಾ ವೀರರ ಅಭಿಮಾನವು ಕೆರಳಿ ಇದಿರು ಬೀಳುವ ಸನ್ನಿವೇಶ ಬಹಳ ಮತ್ತು ಅನಿವಾರ್ಯ ಪ್ರತಿಭಟಿಸಿದವರನ್ನು ಬಗ್ಗುಬಡಿದು ಯಜ್ಞೋದ್ದೇಶವನ್ನು ನೆರವೇರಿಸಿಕೊಳ್ಳಲು ಯಜ್ಞಕರ್ತೃವು ಮೊದಲೇ ಸಿದ್ಧನೂ ಸಮರ್ಥನೂ ಆಗಿರಬೇಕಾಗಿದೆ. ಅಸಹಾಯ ಶೂರನೂ ಅಪ್ರತಿಮ ಉತ್ಸಾಹಶಾಲಿಯೂ ಅಲ್ಲದವನಿಗೆ ಆ ಯಜ್ಞದ ಚಿಂತನೆ ಕೂಡ ಶಕ್ಯವಲ್ಲ. ಕಥಾ ಸಂದರ್ಭ ಹೀಗಾದುದರಿಂದ ವೀರರಸದ ಹೆದ್ದೊರೆಯೇ ಅಲ್ಲಿ ಹರಿಯಬೇಕಾಗಿದೆ. ಕೃತಕ ಜೋಡಣೆಯ ಆಗತ್ಯವಿಲ್ಲದಂತೆ ಪ್ರಾಸಂಗಿಕವಾಗಿ ಹತ್ತಾರು ಮಹಾ ವೀರರ ಪ್ರಭಾವದ್ಯೋತಕವಾದ ಜೀವನ ಚರಿತ್ರೆಗಳು ಅಲ್ಲಲ್ಲಿ ಉಪನದಿಗಳಾಗಿ ಬಂದು ಸೇರಲು ಅವಕಾಶವುಂಟು. ಸ್ವಾಭಿಮಾನಧನರಾಗಿ ಪ್ರತಿಭಟಿಸಿದ ಪ್ರತಿ ನಾಯಕರು ಯುದ್ಧವೀರರು ಮಾತ್ರವಲ್ಲದೆ, ಧರ್ಮವೀರರೂ ದಯಾವೀರರೂ ದಾನವೀರರೂ ಭಕ್ತಿವೀರರೂ ಆಗಿದ್ದುದರಿಂದ ಆ ಮಹಾನುಭಾವರ ಜೀವನ ಚಿತ್ರಣದಿಂದ ಕಾವ್ಯವು ನವರಸಮಯವಾಗಿ ಚಿನ್ನದ ಗಣಿಯಲ್ಲಿ ರತ್ನಗಳೂ ದೊರಕುವಂತೆ ಆಗಿದೆ. ಕವಿ ಚೂತವನ ಚೈತ್ರನಿಗೆ ಸಂಸ್ಕೃತಿ ಸಾಮರ್ಥ್ಯಗಳಲ್ಲಿ ಬಡತನವಿಲ್ಲ. ಚೈತ್ರ ಬಂದರೆ ಮಾವು ಮಾತ್ರವಲ್ಲ ಚಿಗುರುವುದು!

ಅಶ್ವಮೇಧದ ಕುದುರೆಯನ್ನು ಒದಗಿಸಿಕೊಳ್ಳುವುದೇ ಒಂದು ಅಗಾಧವಾದ ಕೆಲಸ. ಸರ್ವಾಂಗ ಸ್ವಚ್ಛಧವಳವಾಗಿ ಪುಚ್ಛ ಮಾತ್ರ ಹಳದಿಯಾಗಿ ಒಂದು ಕಿವಿ ನೀಲವಾಗಿ ನಿರ್ದೋಷವಾಗಿರಬೇಕು ಆ ಕುದುರೆ. ಇಂಥ ಕುದುರೆ ತನ್ನಲ್ಲಿಲ್ಲದವನು ಇರುವಲ್ಲಿಂದ ತರಬೇಕು. ಯಜ್ಞ ಮಾಡಬೇಕಾದವನು ಕ್ಷತ್ರಿಯ. ಬೇಡುವುದು ಆತನಿಗೆ ಸಲ್ಲದು. ಯುದ್ಧದಿಂದಲೇ ಅದನ್ನು ತರಬೇಕು. ಕೆಚ್ಚಿಲ್ಲದಿದ್ದರೆ ತೆಪ್ಪಗೆ ಕೂರಬೇಕು. ಆದುದರಿಂದ ಕವಿ ಧರ್ಮಜನ ಯಜ್ಞೋತ್ಸಾಹಕ್ಕೆ ಕಾರಣವಾದ ಭೀಮಾದಿಗಳ ಸಾಮರ್ಥ್ಯೋತ್ಸಾಹ ಚಿತ್ರಣದಿಂದಲೇ ತನ್ನ ವೀರರಸ ನಿರೂಪಣೆಯ ಚದುರನ್ನು ಆರಂಭಿಸಿದ್ದಾನೆ. ಯಾಗಕ್ಕಾಗಿ ಪ್ರೇರಿಸಿದ ವ್ಯಾಸರು ಯಜ್ಞಯೋಗ್ಯವಾದ ಕುದುರೆ ಭದ್ರಾವತಿ ಎಂಬಲ್ಲಿ ಯೌವನಾಶ್ವನೆಂಬ ವೀರ ರಾಜನ ಬಳಿಯಲ್ಲಿರುವುದೆಂದೂ ಶೌರ್ಯವಿದ್ದರೆ ಅದು ದೊರೆಯದೆ ಇರದೆಂದೂ ಹೇಳಿ ಪ್ರೋತ್ಸಾಹಿಸುವರು. ಯುಧಿಷ್ಠಿರನು ಭೀಮಸೇನನ ಮುಖವನ್ನು ನೋಡಿದನು. ಇಂಗಿತಜ್ಞನಾದ ಭೀಮನಿಗೆ ಹಸಿದವನಿಗೆ ಹಬ್ಬದೂಟ ಸಿಕ್ಕಿದಂತೆ ಆಯಿತು. “ಆ ಯೌವನಾಶ್ವನಂ ಗೆಲ್ದು ಅವನ ಸೇನಾನಿಕಾಯಮಂ ತರಿದು ಆ ಸುವಾಜಿಯಂ ತಂದು ಮುಖಕೀಯದೊಡೆ ಪರಲೋಕಬಾಹಿರನಪ್ಪೆನು” ಎಂದು ಆತನು ಪ್ರತಿಜ್ಞೆ ಮಾಡುವನು. ಆತನ ನೆರೆಯಲ್ಲಿದ್ದ, ಅಭಿಮನ್ಯುವಿಗೆ ಪರಾಕ್ರಮದಲ್ಲಿ ಸರಿನೊರಿಯೆನಿಸಿದ ಕರ್ಣಪುತ್ರ ವೃಷಕೇತು ಸ್ಪರ್ಧೆಯಿಂದ ಎದ್ದು ನಿಂತು ಕೈ ಮುಗಿದು: “ತಾತ, ಕೊಡು ತನಗನುಜ್ಞೆಯಂ, ಪವನತನಯ ನಾಡಿದ ನುಡಿಗವಜ್ಞೆ ಬಂದೊಡೆ ರವಿ ಕುಮಾರಂಗೆ ಜನಿಸಿಬೆನೆ? ನೋಡೆನ್ನದಟನು” ಎಂದು ವೀರವಾಣಿಯನ್ನಾಡುತ್ತಾನೆ. ಎಳೆಯನಾದ ವೃಷಕೇತುವಿನ ನುಡಿಗೆ ನಲಿದುಬ್ಬಿದ ಯುಧಿಷ್ಠಿರನು ಆತನನ್ನು ಬಿಗಿದಪ್ಪಿ ಮುದ್ದಾಡುತ್ತಿರಲು ಘಟೋತ್ಕಚ ಕುಮಾರನಾದ ಮೇಘನಾದನು ಬಹುಶಃ ಸ್ವಲ್ಪ ಈರ್ಷ್ಯೆಯಿಂದಲೇ ಮುಂದೆ ಬಂದು ಧರ್ಮಜನ ಚರಣ ಪ್ರದೇಶಕ್ಕೆ ಕಿರೀಟವನ್ನು ಚಾಚಿ “ನಾನು ಅಹಂಕರಿಸಿ ಈ ವೀರರ ಮುಂದೆ ಮಾತನಾಡಲಾರೆ, ಅಪ್ಪಣೆಯಿತ್ತರೆ ಕುದುರೆಯನ್ನು ತರುವ ಭಾರ ನನಗಿರಲಿ” ಎನ್ನುತ್ತಾನೆ. ಕರ್ತವ್ಯ ಕಾರ್ಯದಲ್ಲಿ ಇಂತಹ ಉತ್ಸಾಹ ಯಾರಿಗೆ ಸಂತೋಷ ಕೊಡುವುದಿಲ್ಲ? ಧರ್ಮಜನು ಹಿಗ್ಗಿ ಮೂವರನ್ನೂ ಆಶೀರ್ವದಿಸಿ ಕುದುರೆಯನ್ನು ತರಲು ಕಳುಹುತ್ತಾನೆ.

ಹತ್ತು ಅಕ್ಷೋಹಿಣಿ ಸೈನ್ಯದ ಕಾವಲಿದ್ದ ಕುದುರೆಯನ್ನು ತರಲು ಹೋದವರು ಈ ಮೂವರು ಎಂದ ಮೇಲೆ ಅವರ ಪರಾಕ್ರಮಕ್ಕೆ ಬೇರೆ ಸಾಕ್ಷಿಗಳು ಬೇಕೆ? ಲಕ್ಷ್ಮೀಶನ ವೀರರಸದ ಬೋಣಿ ಇಲ್ಲಿ ಆರಂಭವಾಗುತ್ತದೆ. ಕಥಾರಂಭದಲ್ಲಿಯೇ ಅದ್ಭುತೋತ್ಸಾಹದ ನಿರೂಪಣೆಯಿಂದ ಆತನು ಓದುಗರನ್ನು ಕಥಾ ಸರಣಿಯ ಇಳಿಜಾರಿನಲ್ಲಿ ನೇರವಾಗಿ ನೂಕಿ, ವೀರರಸದ ಮಡುವಿನಲ್ಲಿ ಅದರ ಪ್ರವಾಹದ ಸೆಳೆತಕ್ಕೆ ಸಿಕ್ಕಿ ಮುಳುಗಿ ಮೈಮರೆಯುವಂತೆ ಮಾಡಿಬಿಡುತ್ತಾನೆ.

ಕುದುರೆಗಾಗಿಯೂ ಯುದ್ಧಕ್ಕಾಗಿಯೂ ಆತುರಗೊಂಡು ನಡೆದ ಭೀಮನ ಮನಸ್ಸು ಕ್ಷಣಯು ಕಲಹದೊಳ್ ಮುನಿದ ಕಾಂತೆಯ ಕುಪಿತ ವದನಾರವಿಂದದೊಳ್ ಎಳೆ ನಗೆ ಮಿನುಗಿ ತೋರುವನ್ನೆಗಂ ಕುದಿವ ನಾಗರಿಕನ ಮನಸ್ಸಿನಂತೆ ಇದ್ದಿತಂತೆ! ಉತ್ಸಾಹ ಹೀಗಿದ್ದರೆ ಯಾವ ಗೆಲುವು ದುಸ್ಸಾಧ್ಯ? ಮುಂದೆ ಈ ಮೂವರೂ ಕುದುರೆಯನ್ನು ತಂದ ರೀತಿಯೇ ರೀತಿ. ಮೇಘನಾದನು ಕುದುರೆಯ ಕಾವಲಿನವರ ನಡುವೆ ಮಾಯೆಯಿಂದ ಬರಸಿಡಿಲೆರಗುವಂತೆ ಎರಗಿ ಸುತ್ತಿನವರನ್ನು ಬಡಿದು ಸಗೋವರ ದತ್ತಣಿಂ ಬೆಳ್ದಾವರೆಯ ನಳ್ತಿಯಿಂ ಕಿತ್ತು ನಭ ಕೇಳ್ವ ಹಂಡೆಯಂತೆ ಆ ಬಿಳಿಯ ಕುದುರೆಯೊಡನೆ ಗಗನಕ್ಕೆ ನೆಗೆದನು. ಆತನ ಸಾಹಸಕ್ಕೆ ವೃಷಕೇತು ಭೀಮಸೇನರೇ ಬೆರಗಾದರು. ತಡೆ, ತಡೆ, ನಿಲ್ಲು ನಿಲ್ಲು, ಎಲ್ಲಿ ಹೋಗುವೆ? ಎಂದು ಹಿಂದಟ್ಟಿ ಕವಿವ ಸೈನ್ಯಕ್ಕೆ ಮೇಘನಾದನ ಮೊದಲೆಯ ಉತ್ತರ—“ಜೀವಮಂ ಕೊಂಡೊಯಿ ಕಾಲನಂ ಪೆಣನಟ್ಟುವಂತಾಯ್ತು”—ಎಂದು ಹಿಂದಟ್ಟಿದವರನ್ನು ಕ್ಷಣಮಾತ್ರದಲ್ಲಿ ಸದೆಬಡೆದು ಮೇಘನಾದನು ಭೀಮಸೇನನ ಬಳಿ ಕುದುರೆಯೊಡನೆ ಬಂದು ನಿಂತನು. ಆದರೆ ಯೌವನಾಶ್ವನ ಮಗನಾದ ಸುವೇಗನೆಂಬುವನು ಎಂಟುಸಾವಿರ ಮಹಾರಥರೊಡನೆ ಅವರಿಡೆಗೆ ಧಾವಿಸಿ ಬಂದನು. ಕುದುರೆಯ ಕಾಪಿಗೆ ಮೇಘನಾದನನ್ನು ನಿಲ್ಲಿಸಿ ಭೀಮಸೇನನು ಮಹಾವಾತಕ್ಕೆ ಕುಲಪರ್ವತವು ಅಡ್ಡವಾದಂತೆ ಆ ಸೈನ್ಯಕ್ಕೆ ಇದಿರಾದನು. ಸ್ವಯಂ ಯೌವನಾಶ್ವನೇ ಭೇರೀಪಟಹಾದಿ ವಾದ್ಯಗಳ ರಭಸದಿಂದ ಮೊರೆಯುತ್ತಾ ಅನುಸರಿಸುತ್ತಿದ್ದ ಮಹಾಸೈನ್ಯದೊಡನೆ ಬರುತ್ತಿದ್ದರೆ ಭಗೀರಥನ ಹಿಂದೆ ವೇಗೋನ್ಮತ್ತಳಾಗಿ ಅಹಂಕರಿಸಿ ಮೊರೆದು ಬರುತ್ತಿದ್ದ ಗಂಗೆಯತ್ತಿತಂತೆ ಆ ಸೈನ್ಯ. ವೃಷಕೇತು ಅದನ್ನು ನೋಡಿದ ನೋಟ ಜಹ್ನು ಮುನಿ ಗಂಗೆಯನ್ನು ನೋಡಿದ ನೋಟದಂತೆ ಇತ್ತಂತೆ. ಸಾಲದೆ ಧ್ವನಿ! ತನಗೆ ಇದಿರಾದ ಎಳೆಯ ವೃಷಕೇತುವನ್ನು ನೋಡಿ ಯೌವನಾಶ್ವನು, ‘ಆರು ನೀನೆಲವೊ ನಮ್ಮಲ್ಲಿ ಸೆಣಸಿದ, ನೋಡಿದೊಡೆ ಬಾಲಕಂ ನಿನ್ನೊಳೊಲ್ಲೆ ನಾಹವಕೆ” ಎಂದರೆ “ಅರಾದೊಡೇನು, ಅಶ್ವಮಂ ಬಿಡುವನಲ್ಲ, ಮದವಾರಣಂ ಕಿರಿದಾದೊಡೆ ಎಳೆಸಿಂಗಮುಂಜಿ ಕೆಲಸಾರುವುದೆ? ನಿನ್ನ ತನುವಿನ ತೋರದಾಯತಕೆ ಕಲಿಗಳಿಗೆ ಕಾತರಿಪುದೆ, ಎಂದ ವೃಷಕೇತು. ಎಚ್ಚು ಕೈಗೆಡನಾಂ ನೃಪಾಲಂ ಆ ಕಣೆಗಳಂ ಕೊಚ್ಚಿಬೇಸರನಾ ವೃಷಧ್ವಜಂ.

ತರಿ ತರಿದು ಕತ್ತರಿಸಿ ಚುಚ್ಚಿ ನಟ್ಟುಚ್ಚ
ಳಿಸಿ | ಕೊರೆದರೆದು ಕಡಿದಿಂದು ಬಗಿ
ದುಗಿದು ಗಬ್ಬರಿಸಿ | ಪರಿದು ಸೀಳ್ದೊತ್ತ
ರಿಸಿ ಕೆತ್ತಿ ಖಂಡಿಸಿ ಬಳಿಸಿ ತಿವಿದುಕ್ಕಿ|
ಎರಗಿ ಕವಿದಿಡಿಗೊತ್ತಿ ಕದಕಿ ಕೀಲಿಸಿ-
ಕೊಯ್ದು ಪೊಯ್ದು | ತುರುಗಿ
ತುಂಡಿಸಿ ತುಳುಕಿ ನಾಂಟಿ ಮರುವೊ
ನೆಗೊಂಡು | ನೆರೆ ಪೊರಳ್ಚಿದುವು ಅರಿ
ಚತುರ್ಬಲನ ನೆಲಮಂ ಕರ್ಣಜನಿಸು
ವ ಕಣೆಗಳು|

ಯೌವನಾಶ್ವನು ಪೆಟ್ಟಿಗೆ ತಾಳಲಾರದೆ ಮೂರ್ಛಿಸಿದಾಗ ವೃಷಕೇತು ಅವನಿಗೆ ಶೈತ್ಯೋಪಚಾರವನ್ನು ನಡೆಸಿ ಉಸಿರನಾಕೈದು ‘ಸತ್ತ್ವ ಮೊಸಗುಂಟಾದೊಡೆ ಅಂಧೀರನಾದೊಡೆ ಅದಿತ್ಯಂಗೆ ಪೌತ್ರನಾದೆ

(೯ನೇ ಪುಟ ನೋಡಿರಿ)

ಓದಲೇ ಬೇಕಾಗಿರುವ ನವೀನ ಪುಸ್ತಕಗಳು!

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು

೧. ಚಂದ್ರಲೋಕಕ್ಕೆ ಪ್ರಯಾಣ

ಲೇಖಕರು: ಉ. ರಾಘವೇಂದ್ರ ಆಚಾರ್ಯ, ಎಂ. ಎ.

ಆಧುನಿಕ ಪ್ರಪಂಚದ ಮಹತ್ತರವಾದ ಆಂದೋಲನಗಳು, ಪ್ರಪಂಚವನ್ನೆಲ್ಲಾ ಅಲುಗಾಡಿಸುತ್ತಿರುವ ಆರ್ಥಿಕ, ರಾಜಕೀಯ ಚಳುವಳಿಗಳು, ಅವುಗಳ ಹಿಂದಿರುವ ತತ್ವಗಳು, ಅವುಗಳಿಗೆ ಮಾನವನ ಪ್ರತಿಕ್ರಿಯೆ ಇವನ್ನೆಲ್ಲಾ ಗಮನಿಸಿ ರಚಿಸಿರುವ, ನಮ್ಮಲ್ಲಿ ವಿಚಾರಶಕ್ತಿ ಬೆಳೆಯಲು ನೆರವಾಗುವ ವೈಜ್ಞಾನಿಕ ಗ್ರಂಥ.

೨. ಸಾಮಾನ್ಯ ರೋಗಗಳು

ಲೇಖಕರು: ಡಾ| ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಅತ್ಯುಪಯುಕ್ತ ಪುಸ್ತಕ.

೩. ಭೌತಿಕ ದರ್ಶನ

ಲೇಖಕರು: ಬಡೆಕ್ಕಿಲ ಕೃಷ್ಣ ಭಟ್ಟ, ಎಲ್‌ಎಲ್.ಬಿ.

ಸಜ್ಜನರ, ವಿದ್ವಜ್ಜನರ, ವಿಜ್ಞಾನಿಗಳ ಅಭಿಮತವನ್ನು ಸಂಗ್ರಹಿಸಿ ಬರೆದ ಭೌತಿಕ ದರ್ಶನದ ಸ್ಥೂಲ ಪರಿಚಯ.

ಪ್ರತಿಯೊಂದು ಪುಸ್ತಕದ ಬೆಲೆ ಬರೀ ಒಂದು ರೂಪಾಯಿ.

ರೂ. ೩=೨೫ನ್ನು ಮನಿಯಾರ್ಡರು ಮಾಡಿದರೆ ಮೂರೂ ಪುಸ್ತಕಗಳನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.

ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಸವಲತ್ತುಗಳಿವೆ.

ವಿಚಾರಿಸಿರಿ:

ನವಭಾರತ ಪುಸ್ತಕ ಭಂಡಾರ, ಉಡುಪಿ.

ಮಗು ತುಂಬಾ ಪೋಕ್ರಿ ಎನ್ನುತ್ತೀರಾ?

ನಿಮ್ಮ ನಿಮ್ಮ ಡೊಂಕನ್ನು ತಿದ್ದಿಕೊಳ್ಳಿರಿ

ಅಸಾಧಾರಣ ಉಪದ್ರವಕಾರಕ ಪ್ರವೃತ್ತಿಯು ಕಂಡುಬರುವುದೂ ಒಂದು ಬಗೆಯ ರೋಗವೆಂದು ಮಾನಸ ಚಿಕಿತ್ಸಕರು ಹೇಳುತ್ತಾರೆ. ಆದುದರಿಂದ ಜ್ವರಾದಿ ಕಾಯಿಲೆಗಳಿಗೆ ಚಿಕಿತ್ಸೆ ನಡೆಸುವಂತೆಯೇ ಈ ರೋಗಕ್ಕೂ ಉಪಚಾರ ಬೇಕೆನ್ನುತ್ತಾರೆ ಇವರು.

ಯಾವುದೇ ರೋಗಕ್ಕೆ ಚಿಕಿತ್ಸೆಯನ್ನು ತೊಡಗುವುದಕ್ಕೆ ಮೊದಲು ಅದರ ಮೂಲಕಾರಣವನ್ನು ಶೋಧಿಸುವುದು ಅಗತ್ಯ. ನಮ್ಮ ದೇಶದಲ್ಲಿ ಬಾಲಕರನ್ನು ಕಾಡುತ್ತಿರುವ 'ಅಸಾಧಾರಣ ಉಪದ್ರವಕಾರಕ ಪ್ರವೃತ್ತಿ' ರೋಗಕ್ಕೆ ಪರಿಹಾರವರಸುವಲ್ಲಿ ಯಾವ ಶೋಧನೆಯೂ ನಡೆದಿಲ್ಲ. ನಮ್ಮ ವೈದ್ಯ ಬಳಗದವರಾದರೂ ಈ ಸಂಬಂಧದಲ್ಲಿ ಹೆಚ್ಚಿನ ಕಾಳಜಿ ವಹಿಸಿದಂತೆ ತೋರಿಬರುವುದಿಲ್ಲ. ಹೆತ್ತ ತಾಯ್ತಂದೆಯರು ಕೂಡ 'ಹುಡುಗ ಮಹಾ ಪೋಕರಿ' ಎಂದು ಗೊಣಗಿ ಸುಮ್ಮನಾಗುತ್ತಾರೆ. ಆದರೆ ಈ ಬಗೆಯ ವಿಚಿತ್ರ ರೋಗಪೀಡಿತ ಮಕ್ಕಳು ವಿಕಾಸ ಹೊಂದುವುದಿಲ್ಲ.

ಅಮೇರಿಕೆಯು ಸಂಪನ್ನ ದೇಶ. ಅಲ್ಲಿ ನಾಲ್ಕರಿಂದ ಹದಿನೈದು ವರ್ಷ ವರೆಗಿನ ಪ್ರಾಯದ ಮಕ್ಕಳ ಆರೋಗ್ಯದತ್ತ ವಿಶೇಷ ಗಮನ ಹರಿಸುತ್ತಾರೆ. ಅಲ್ಲಿನ ಡೆನ್ವರ ವಿಶ್ವವಿದ್ಯಾಲಯದಲ್ಲಿ ಇದಕ್ಕಾಗಿಯೇ ದೊಡ್ಡದಾದ ಭವನವೊಂದಿದೆ. ಅಲ್ಲಿನ ಒಂದು ಕೋಣೆಯಲ್ಲಿ ಅನೇಕ ಆಟಿಕೆಗಳು ಬಿದ್ದಿರುತ್ತವೆ. ಈ ವಿಚಿತ್ರ ರೋಗಗ್ರಸ್ತ ಬಾಲಕರನ್ನು ಹೆತ್ತವರು ತಂದಾಗ ಅವರನ್ನು ಸ್ವೇಚ್ಛೆಯಾಗಿ ಆಡಿಕೊಂಡಿರುವಂತೆ ಈ ಕೋಣೆಯಲ್ಲಿ ಬಿಟ್ಟುಬಿಡುತ್ತಾರೆ. ವೈದ್ಯನು ಕೋಣೆಯ ಹೊರಗಣ ಒಂದು ಕಿಟಕಿಯ ಮೂಲಕ ಈ ಆಟವನ್ನು ಪರಿಶೀಲಿಸುತ್ತಿರುತ್ತಾನೆ. ಇದರಿಂದಾತ ಮಗುವಿನ ಉಪದ್ರಕಾರಕ ಪ್ರವೃತ್ತಿ ರೋಗಕ್ಕೆ ಉಚಿತ ಚಿಕಿತ್ಸೆಯನ್ನು ಶೋಧಿಸುತ್ತಾನೆ.

ಒಂದೊಮ್ಮೆ ಏಳು ವರ್ಷದ ಬಾಲಿಕೆಯೊಬ್ಬಾಕೆ ಇಲ್ಲಿಗೆ ಬಂದಳು. ಆಕೆಯು ಸಕ್ಕರೆಯ ಪಾತ್ರೆಯನ್ನು ಒಡೆಯುತ್ತಿದ್ದಳು; ಆಳುವಾಗ ನಿಃಶಬ್ದವಾಗಿ ಕೂಗಾಡುತ್ತಿದ್ದಳು; ಬಹಳ ಹೊತ್ತು ಮಲಗುತ್ತಿದ್ದರೂ ನೆರೆಯವರನ್ನು ಹೊಡೆದು ಬಡಿದು ಪೀಡಿಸುತ್ತಿದ್ದಳು. "ನನ್ನ ಬುದ್ಧಿಗೇನೂ ನಿಲುಕುವುದಿಲ್ಲ. ಆಕೆ ಹಾಗೆ ಏಕೆ ಮಾಡುತ್ತಾಳೋ? ಆದಕ್ಕೆ ಚಿಕಿತ್ಸೆಯೇನೋ! ಬುದ್ಧಿಗಿದ್ದಿಯೇನೂ ಕಟ್ಟಿಲ್ಲ ತಾನೆ?" ಇದು ಆಕೆಯ ಪಾಲಕರ ಸಮಸ್ಯೆಯಾಗಿತ್ತು.

ಈ ಹುಡುಗಿಯನ್ನೂ ಆಟಿಕೆ ಕೋಣೆಯೊಳಗೆ ಬಿಟ್ಟರು. ಆಕೆ ಒಳ ಹೊಕ್ಕೊಡನೆಯೇ ಒಂದು ಗೊಂಬೆಯನ್ನೆತ್ತಿ ಅದನ್ನು ಹೊಡೆಯುತ್ತ "ಇದು ನನ್ನ ಅಮ್ಮ" ಎಂದು ಉದ್ಗರಿಸಿದಳು. ಹತ್ತಿರದ ಇನ್ನೊಂದು ಪುಟ್ಟ ಗೊಂಬೆಯನ್ನೂ ಹೊಡೆದು, ಇದು ತಮ್ಮ ಎಂದಳು; ಮತ್ತದನ್ನು ಎತ್ತಿ ಕಸದ ಡಬ್ಬಿಯಲ್ಲಿ ಎಸೆದು ಬಿಟ್ಟಳು.

ವೈದ್ಯರು ಇವೆಲ್ಲವನ್ನೂ ಗಮನಿಸಿದ ಬಳಿಕ ಆಕೆಯ ತಾಯಿಯನ್ನು ಕುರಿತೆಂದರು—"ನಿಮ್ಮ ಮಗಳದೇನೂ ತಪ್ಪಿಲ್ಲ; ಆದರೆ, ನಿಮ್ಮದಿದೆ. ಈಕೆಯ ರೋಗಕ್ಕೆ ಕಾರಣೀಭೂತರು ನೀವೇ. ನೀವೂ ನಿಮ್ಮ ಪತಿಯೂ ಮಗಳನ್ನು ಉಪೇಕ್ಷಿಸಿದಿರಿ. ಒಬ್ಬ ತಮ್ಮ ಜನಿಸಿದ ಮೇಲೆ ಈಕೆಯನ್ನು ಸಂಪೂರ್ಣ ಮರೆತುಬಿಟ್ಟಿರಿ. ಆ ಗಳಿಗೆಯಿಂದಲೇ ಈ ಹುಡುಗಿ ಉದ್ದಂಡಿಯಾಗಿದ್ದಾಳೆ"

ಈ ಬಗೆಯ ಉಪೇಕ್ಷೆಯಿಂದಾಗಿಯೇ ಉಪದ್ರವಿಗಳಾದ ಮಕ್ಕಳು ಅಮೇರಿಕೆಯಲ್ಲಿಯೇ ಸುಮಾರು ೫ ಲಕ್ಷವಿರಬಹುದೆಂದು ಅಮೆರಿಕನ್ ವೈದ್ಯರು ಹೇಳುತ್ತಾರೆ. ಇವರೆಲ್ಲರೂ ೪ರಿಂದ ೧೫ರ ವರೆಗಿನ ವಯಸ್ಸಿನವರು. ಆದರೆ, ಶರೀರ ಪೀಡಿತ ಶಿಶುಗಳನ್ನು ತಜ್ಞ ವೈದ್ಯರಲ್ಲಿಗೊಯ್ಯುತ್ತಾರೆ; ಆದರೆ, ಈ ಬಗೆಯ ರೋಗಕ್ಕೆ ನಿದಾನ ಅವರಿಗೂ ಗೊತ್ತಿಲ್ಲ; ವೈದ್ಯರಾದರೂ ಅರಿತಿಲ್ಲ. ಇದರಿಂದಾಗಿಯೇ ಬೆಳೆದು ಬಂದ ಬಳಿಕ ಮಕ್ಕಳು ಅಪರಾಧಿಗಳಾಗುತ್ತಾರೆ; ಅಥವಾ ಅವರ ಕಾರ್ಯಶಕ್ತಿಯು ಕುಂದಿ, ಉಪಯೋಗಿ ಕಾರ್ಯ ಮಾಡಲು ಅಸಮರ್ಥರಾಗುತ್ತಾರೆ. ಗೌರವಂತ ನಾಗರಿಕರೆನಿಸುವ ಅವಕಾಶವೇ[?]ಇ[illegible]



ಕಸಿಗ್ರಹದತ್ತ ನೆಗೆಯಲು ಸಿದ್ಧವಾಗುತ್ತಿರುವ [illegible]
ಎಫ್ ೧ ರಾಕೆಟ್ [illegible]

ವರಿಗೆ ಸಿಗುತ್ತಿಲ್ಲ.

ಸಾನ್ ಫ್ರಾನ್ಸಿಸ್ಕೊವಿನ ಪ್ರಸಿದ್ಧ ಮಾನಸ ಚಿಕಿತ್ಸಕ ಡಾ। ಮಾಯಿಕಲ್ ಪೆಂಕೇಜರು ಈ ಬಗೆಯ ಬಾಲರೋಗಿಗಳನ್ನು ಗೊತ್ತು ಹಚ್ಚಲು ಕೆಲವು ಲಕ್ಷಣಗಳನ್ನು ತಿಳಿಸಿದ್ದಾರೆ:

ಹೊಸ ಮಿತ್ರರನ್ನು ಸಂಪಾದಿಸುವಲ್ಲಿ ಅಯೋಗ್ಯತೆ, ಒಬ್ಬ ಮಿತ್ರನಲ್ಲಿಯೇ ಅತ್ಯಂತ ಗಾಢತನ; ಯಾವಾಗಲೂ ಅಕಾರಣವಾಗಿ ಸುಳ್ಳು ಹೇಳುವ ಅಭ್ಯಾಸ, ಕತ್ತಲೆಯೆಂದರೆ ಅಸಾಧಾರಣ ಭಯ, ಇನ್ನಾವುದೇ ಒಂದು ವಿಷಯದ ಮೇಲೆ ಧ್ಯಾನ ಏಕಾಗ್ರತಗೊಳಿಸುವಲ್ಲಿ ಅಸಮರ್ಥತೆ, ಶಾರೀರಿಕ ವ್ಯಾಯಾಮದ ಬಗ್ಗೆ ಸರ್ವಥಾ ಉದಾಸೀನತೆಗಳು ಇಂತಹವಿರುವುವು

ಕೇವಲ ಬಾಹ್ಯ ಚೇಷ್ಟೆಗಳಿಂದಲೇ ಹುಡುಗರ ಭಾವನಾತ್ಮಕ ವಿಷಮತೆಯು ಅಭಿವ್ಯಕ್ತವಾಗುತ್ತದೆ ಎಂದೇನಿಲ್ಲ. ಕೆಲವೊಮ್ಮೆ ಇದು ಶಾರೀರಿಕ ರೋಗಗಳ ರೂಪದಲ್ಲಿಯೂ ಸ್ಫೋಟವಾಗುವುದುಂಟು. ಮಾನಸಿಕ ರೋಗವು ಹಲವು ಬಾರಿ ಎಗ್ಸಿಮಾ, ತಲೆಸಿಡಿತ ಮೊದಲಾದುವುಗಳ ರೂಪವನ್ನು ಧರಿಸುವುದುಂಟು.

ಕೆಲವು ಬಾರಿ ಭಾವಾವೇಶಗಳನ್ನು ವಿರೋಧಿಸುವುದರಿಂದ ಮಗು ಅಸಾಮಾನ್ಯ[illegible]

[illegible]

(ಉಳಿದ ಭಾಗ [illegible])

ನವಯುಗ

ರಾಷ್ಟ್ರೀಯ ವಾರಪತ್ರಿಕೆ

ಉಡುಪಿ

ಜಾಹೀರಾತು ದರಗಳು:

ನಿಯಮಿತ (ಕಂಟ್ರಾಕ್ಟ್) ರೂ. ಕಲಂ ಸೆಂಟಿಮೀಟರಿಗೆ 1-00

ಅನಿಯಮಿತ (ಕೆಜುವಲ್) ಕಲಂ ಸೆಂಟಿಮೀಟರಿಗೆ 1 50

ಚಂದಾ:

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75

ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ವಿಖ್ಯಾತ ಗ್ರಂಥ ಕರ್ತರಾದ

ಶ್ರೀ ಎ. ಎಸ್. ಪಂಚಾಪಕೇಶ ಅಯ್ಯರ್

ಎಂ. ಎ, ಐ. ಸಿ. ಯಸ್, ಬಾರ್-ಎಟ್-ಲಾ., ಎಫ್. ಆರ್. ಎಸ್. ಎಲ್.

ಇವರು ಇಂಗ್ಲೀಷಿನಲ್ಲಿ ಬರೆದ—

TALES OF IND

ಕಥಾವಳಿಯ ಕನ್ನಡ ಅನುವಾದ

ಭಾರತೀಯ ಕಥೆಗಳು

ಚಿಕ್ಕ ಚೊಕ್ಕ ೧೫- ಕಥೆಗಳು ಬೆಲೆ ರೂ. 1—75 ನ ಪೈ.

ಅನುವಾದಕರು: ದಿ। ಕೊರಡ್ಕಲ್ ಶ್ರೀನಿವಾಸ ರಾವ್,

ಸಿಗುವ ಸ್ಥಳ:—

ನವಭಾರತ ಪುಸ್ತಕ ಭಂಡಾರ, ಉಡುಪಿ.

NAVAYUGA
Kannada Weekly
UDIPI
Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ

ವರುಷ	ಉಡುಪಿ	ವಾರ
೪೩	೧೨-೯-೧೯೬೩	–

ಸರಸ್ವತಿಯ ಆರಾಧನೆ

ಕರ್ನಾಟಕದ ಶಿಕ್ಷಣ ಸಚಿವ ಶಿವಪ್ಪ ರುದ್ರಪ್ಪ ಕಂಠಿಯವರು ಕನ್ನಡಿಗರಿಗೊಂದು ಕರೆ ನೀಡಿ, ಆಧುನಿಕ ದೇವಾಲಯಗಳನ್ನು ನಿರ್ಮಿಸುವಲ್ಲಿ ಹೆಚ್ಚಿನ ಆಸಕ್ತಿ ತಳೆಯಬೇಕೆಂದು ಕೇಳಿಕೊಂಡಿದ್ದಾರೆ. ಹಿಂದೆ ದೇವಾಲಯಗಳನ್ನು ಕಟ್ಟಿಸಲು ಮುಂದೆ ಬಂದಂತೆಯೇ ಇಂದು ಶಿಕ್ಷಣ ಸಂಸ್ಥೆಗಳಿಗಾಗಿ ಕಟ್ಟಡಗಳನ್ನು ರಚಿಸಿಕೊಡಲು ಸಾರ್ವಜನಿಕರು ಮುಂದೆ ಬರಬೇಕು—ಎಂಬುದು ಅವರ ಅಭಿಪ್ರಾಯ. ಇಂದು ನಮ್ಮ ಶೈಕ್ಷಣಿಕ ಸಮಸ್ಯೆಗಳಲ್ಲಿ ಅತಿ ಮುಖ್ಯವಾದುದು ಈ ಭವನ ನಿರ್ಮಾಣದ ಕಾರ್ಯವೆಂಬುದು ಸರ್ವಮಾನ್ಯ. ಆದುದರಿಂದ ಇದು ಯಶಸ್ವಿಯಾಗಿ ಪರಿಹರಿಯಿತೆಂದರೆ, ನಾವು ಶಿಕ್ಷಣದ ಕ್ಷೇತ್ರದಲ್ಲಿ ಸಾಧಿಸಬೇಕಾದುದನ್ನು ಸಾಧಿಸಿದೆವೆಂದು ತೃಪ್ತಿಪಡಬಹುದೆಂದು ಅಭಿಪ್ರಾಯ. ಆದರೆ, ಇಂತಹುದರಿಂದ ನಾವು ತೃಪ್ತಿಪಡುವುದು ಸಾಧ್ಯವೆ? ಎಂಬುದನ್ನೂ ತುಸು ಪರ್ಯಾಲೋಚಿಸಬೇಕು.

ಎಲ್ಲರೂ ತಿಳಿದಿರುವಂತೆ ಶಾಲಾ ಕಟ್ಟಡಗಳ ಅಭಾವ, ಇದ್ದಲ್ಲಿಯೂ ಸ್ಥಳಾಭಾವವೆಂದು ಎಲ್ಲೆಡೆಯೂ ಗೋಚರವಾಗುತ್ತಿದೆ. ಕೇವಲ ಕಟ್ಟಡ ಮಾತ್ರವಲ್ಲ, ಪೀಠೋಪಕರಣಗಳು, ಬೋಧನೋಪಕರಣಗಳು, ಆಟದ ಮೈದಾನ ಮತ್ತು ಮುಖ್ಯವಾಗಿ ಅಧ್ಯಾಪಕರ ಅಭಾವಗಳು ಎಲ್ಲೆಡೆಯೂ ಇದ್ದಂತೆ ಭಾಸವಾಗುತ್ತಿದೆ. 'ಸರತಿ' ಪದ್ಧತಿಯಲ್ಲಿಯೂ ಶಾಲೆ ನಡೆಯಬೇಕು ಎಂಬವಾದಕ್ಕೆ ಕೆಲವೆಡೆ ಪುಷ್ಟಿದೊರೆಯುತ್ತಿದೆ. ಇದನ್ನು ಎಲ್ಲೆಡೆಯೂ ಅನುಷ್ಠಾನಕ್ಕೆ ತರುವುದು ಸಾಧ್ಯವಿಲ್ಲ. ಹಳ್ಳಿಗಳೇ ಹೆಚ್ಚಾಗಿರುವ ನಮ್ಮ ದೇಶದಲ್ಲಿ, ಮುಖ್ಯವಾಗಿ ಪ್ರಾಥಮಿಕ ತರಗತಿಗಳನ್ನು ಈ ಪದ್ಧತಿಯಂತೆ ನಡೆಸುವುದು ನಿಜಕ್ಕೂ ಸಾಧ್ಯವಿರುವುದಿಲ್ಲ. ೩೦೦ ಜನ ವಸತಿಯಿರುವ ಪ್ರತಿಹಳ್ಳಿಗೂ ಇಂದು ಒಂದು ಶಾಲೆಯನ್ನು ಸರಕಾರ ಕೊಡಮಾಡಿದೆ. ಕಡ್ಡಾಯ ಶಿಕ್ಷಣದ ಉದ್ದೇಶವನ್ನು ವ್ಯವಸ್ಥೆಗೊಳಿಸಲು ಈ ರೀತಿ ಉದ್ದೇಶಿಸಲಾಗಿದೆ, ನಿಜ. ಆದರೆ, ಹೀಗೆ ತೆರೆಯಲಾದ ಶಾಲೆಗಳಲ್ಲಿ ಸಾಕಷ್ಟು ವಿದ್ಯಾರ್ಥಿ ಸಂಖ್ಯೆಯಿಲ್ಲವೆಂದು ಕೆಲವನ್ನಾದರೂ ಮುಚ್ಚಿದ ಸಂದರ್ಭಗಳೂ ಇಲ್ಲದಿಲ್ಲ. ಇಂದು ನಮ್ಮ ರಾಜ್ಯ ಸರಕಾರವು ಹೇಳುವಂತೆ ಸುಮಾರು ೨೫ ಸಾವಿರ ಶಾಲೆಗಳಿವೆ. ಇವುಗಳಲ್ಲಿ ೮೫ ಸಾವಿರ ಉಪಾಧ್ಯಾಯರು ದುಡಿಯುತ್ತಿದ್ದಾರೆ. ಇನ್ನು ಪ್ರತಿ ೩೦೦ ಜನರಿಗೊಂದು ಪ್ರಾಥಮಿಕ ಶಾಲೆಯನ್ನು ಕೊಡುವ ಗುರಿಯು ಸರಕಾರದ್ದಿದೆ—ಇದು ಪ್ರಶಂಸನೀಯ. ಆದರೆ, ಕೇವಲ ಶಾಲೆಗಳನ್ನಷ್ಟೇ ಮಂಜೂರು ಮಾಡುತ್ತ ಹೋಗುವುದರಿಂದ ಯಾವ ಪ್ರಯೋಜನವೂ ದೊರೆಯಲಾರದು; ಅವುಗಳನ್ನು ಸುಯೋಗ್ಯ ರೀತಿಯಲ್ಲಿ ನಡೆಸಿಕೊಂಡು ಹೋಗುವುದರ ಕಡೆಗೂ ತೀವ್ರಾಸಕ್ತಿ ತಳೆದು ಲೋಪದೋಷಗಳನ್ನು ಸರಿಪಡಿಸುವುದು ಅಗತ್ಯವಲ್ಲವೆ? ಡಾಕ್ಟರುಗಳಿಲ್ಲದ ಔಷಧಿಗಳಿಲ್ಲದ, ಸೌಲಭ್ಯವಿಲ್ಲದ ಆಸ್ಪತ್ರೆಗಳಂತೆಯೇ ಸಾಕಷ್ಟು ಶಿಕ್ಷಕರಿಲ್ಲದ, ಉಪಕರಣವಿಲ್ಲದ, ಸ್ಥಳಾವಕಾಶವಿಲ್ಲದ ಶಾಲೆಗಳು ಕೂಡ ಸಮಾಜಕ್ಕೊಂದು ಕಳಂಕ, ಅದೊಂದು ಹೊರೆ ಮಾತ್ರ. ಅಂತಹವುಗಳಿಂದ ಯಾರಿಗೂ ಲಾಭವಿಲ್ಲ; ಅಂಕೆಸಂಖ್ಯೆಗಳ ಹೆಚ್ಚಳದಲ್ಲಿ ಮಾತ್ರ ಪ್ರಗತಿಯಾದೀತು. ಬಣ್ಣದ ಬದನೆಯಂತೆ ಇವೂ ಪರಿಣಮಿಸಿಯಾವು.

ಶಿಕ್ಷಣದ ಕ್ಷೇತ್ರ ಅತಿ ವಿಸ್ತಾರವಾದುದು. ಇಷ್ಟು ದೊಡ್ಡ ಶಾಖೆಯೊಂದನ್ನು ನಡೆಸಿಕೊಂಡು ಹೋಗುವುದು ಮಹಾ ಸಮಸ್ಯೆ. ಕೆಲವೊಂದು ಅಕ್ರಮಗಳು ನಡೆಯುವುದು ಸಾಮಾನ್ಯ ಆದರೆ, ಇಂದಿನ ಪರಿಸ್ಥಿತಿಯನ್ನು ನಾವು ನೋಡುವುದಾದಲ್ಲಿ ಅಕ್ರಮ—ಅನಾಚಾರಗಳೇ ತುಂಬಿವೆ; ವಾತಾವರಣವನ್ನು ಕಲುಷಿತಗೊಳಿಸಿವೆ. ಇವನ್ನು ತಿದ್ದುವ ಶಕ್ತಿ ಸರಕಾರಿ ಯಂತ್ರದಲ್ಲಿಲ್ಲವೆಂದೂ ಹೇಳಲೇ ಬೇಕಾಗುತ್ತದೆ. ಪ್ರಾಥಮಿಕ ಶಿಕ್ಷಣದ ಹೊಣೆಗಾರಿಕೆಯನ್ನು ಸರಕಾರವೇ ಹೊತ್ತುಕೊಂಡಿರುವಾಗ, ಈ ಬಗ್ಗೆ ಸೂಕ್ತ ಗಮನ ಹರಿಸುವುದು ಅತ್ಯಗತ್ಯವಲ್ಲವೆ? ಅದರ ಪರಮ ಕರ್ತವ್ಯವಲ್ಲವೆ? ಸರಕಾರವು ಶಾಲೆ ತೆರೆದರೆ, ಅಲ್ಲಿಗೆ ತನ್ನ ಕರ್ತವ್ಯ ಸಂದಿತು ಎಂದು ಸುಮ್ಮನುಳಿದರೆ, ಅವುಗಳ ಬೇಕುಗಳನ್ನು ಒದಗಿಸದೆ ಹೋದರೆ, ಬರುವ ಪುರುಷಾರ್ಥವಾದರೂ ಏನು? ಕಟ್ಟಿದ ಅಣೆಕಟ್ಟಿನಲ್ಲಿ ನೀರೇ ನಿಲ್ಲದೆ ಹೋದರೆ, ಅದರಿಂದ ಪ್ರಯೋಜನವೇನು? ಶಿಕ್ಷಣದ ಮಟ್ಟವನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡದೆ ಕೇವಲ ಶಾಲೆತೆರೆದರೆ ಸಾಕೆ? ಓ ಬಲೆಯನ್ನಾದರೂ ಸಮರ್ಪಕವಾಗಿ ಕಲಿಸುವ ಅವಕಾಶ ಶಾಲಾ ಅಧ್ಯಾಪಕನಿಗೆ ದೊರೆಯದಂತಾದರೆ, ಅದರಿಂದ ನಾವು ಯಾವ ಪುರುಷಾರ್ಥವನ್ನು ಸಾಧಿಸಿದ ಹಾಗಾಯಿತು?

ಶಿಕ್ಷಣದ ಮಟ್ಟವು ಇಳಿಮುಖವಾಗುತ್ತಿದೆಯೆಂಬುದು ವ್ಯರ್ಥಾಲಾಪವೆನ್ನುತ್ತಾರೆ. ಇದ್ದರೂ ಇರಬಹುದು. ಸಾಮೂಹಿಕ ಶಿಕ್ಷಣದ ಈ ಕಾಲದಲ್ಲಿ ಮಟ್ಟವು ಇಳಿಯುವುದಾದರೂ ಅಸ್ವಾಭಾವಿಕವಲ್ಲ. ಆದರೆ, ಸುಯೋಗ್ಯ ಶಿಕ್ಷಣದ ವ್ಯವಸ್ಥೆಗೆ ಚಿಕ್ಕ ತರಗತಿ— ಪ್ರತಿಭಾವಂತ ಅಧ್ಯಾಪಕರ ಅಗತ್ಯ ತುಂಬಾ ಇದೆ. ಇಂದು ನಮ್ಮಲ್ಲಿ ಕಡಿಮೆಯಾಗಿರುವುದಾದರೂ ಇವೇ. ಆರ್ಥಿಕ ಪರಿಸ್ಥಿತಿಯಿಂದ ಜಗ್ಗಬೇಕಾದ ಸಾಕಷ್ಟು ಅಧ್ಯಾಪಕ ಪೂರೈಕೆಯ ಪ್ರಶ್ನೆ ಎದುರು ನಿಲ್ಲುತ್ತದೆ. ಹಾಗಾಗಿ ಪ್ರಾಥಮಿಕ ತರಗತಿಗಳು ಬಹಳ ದೊಡ್ಡದಾಗಿರುವುದರಿಂದ, ಅಧ್ಯಾಪಕ ಸಮರ್ಥ ರೀತಿಯಲ್ಲಿ ತನ್ನ ಕರ್ತವ್ಯವನ್ನು ಪಾಲಿಸಲಾರನು. ಇಲ್ಲ ಸಮರ್ಥರಾದವರಂತಿರಲಿ, ಅಧ್ಯಾಪಕ ವೃತ್ತಿಗೆಂದು ಬರುತ್ತಿರುವವರ ಸಂಖ್ಯೆಯೂ ಕಡಿಮೆಯಾಗಿ ಎಲ್ಲೆಂದರಲ್ಲಿ ಅವರ ಕೊರತೆಯಿದೆ. ಇದಕ್ಕೆ ವೇತನ–ಪ್ರಮಾಣ ಸೇವಾ ನಿಯಮಗಳೇ ಮೂಲಕಾರಣ. ಅಧ್ಯಾಪಕರ ಸ್ಥಿತಿಗತಿಗಳನ್ನು ಉನ್ನತೀಕರಿಸುವ ಮಾತುಗಳು ಕೇಳಿಬರುತ್ತಿದ್ದರೂ, ಅವುಗಳಲ್ಲಿ ಕಾರ್ಯರೂಪಕ್ಕೆಷ್ಟು ಬಂದಿವೆ? ಎಲ್ಲರಿಗೂ ಕೊಟ್ಟು ..ಳಿದುದನ್ನು ಇವರಿಗೆ ಹಂಚುವ ನೀತಿಯು ಸಾಧುವಾದುದಲ್ಲ. ಈ ಪರಿಸ್ಥಿತಿ ಉಳಿಯುವಷ್ಟು ದಿನ ಆಧುನಿಕ ದೇವಾಲಯಗಳಲ್ಲಿ ಸರಸ್ವತಿಯು ಖಂಡಿತಕ್ಕೂ ನಿಲ್ಲಲಾರಳು. ಖಾಸಗಿ ಕ್ಷೇತ್ರದ ಸರಸ್ವತಿ ಮಂದಿರಗಳನ್ನು ಕೆಡೆದುರುಳಿಸಿ, ಸರಕಾರಿ ಮಂದಿರಗಳನ್ನು ಸ್ಥಾಪಿಸುವ ಸರಕಾರದ ಗುರಾಲೋಚನೆಯು ನಿಲ್ಲದೆ, ಸಾರ್ವಜನಿಕರಲ್ಲಿಯೂ ಶಿಕ್ಷಣದ ಮೌಲ್ಯಗಳ ಪರಿವೆಯಾಗುವಂತೆ ಏರ್ಪಡಿಸದೆ ಹೀಗೆಯೇ ಮುಂದುವರಿದರೆ, ಸರಸ್ವತಿಯ ಮಂದಿರವು ಜಾತ್ರೆಯ ಗೊಂದಲಗಳಿಗೆ ಎಡೆ ನೀಡೀತು ಆದುದರಿಂದ ಜನತಾ ಸರಕಾರವು ತನ್ನ ಹೊಣೆಗಾರಿಕೆಯನ್ನು ಕರ ತೆರುವವರ ಮೇಲೆಯೇ ಹೊರಿಸಲು ಮುಂದೆ ಬರುವುದು ನ್ಯಾಯವಿಲ್ಲ. ಏಕೆಂದರೆ, ಇಂದು ಶ್ರೀಮಂತರ ಸಂಖ್ಯೆ ಅತ್ಯಲ್ಪ. ಇವರಲ್ಲಿಯಾದರೂ ದಾನ ಮನೋವೃತ್ತಿಯಿರುವವರು ತೀರ ಅಪರೂಪ. ಇಲ್ಲದೆ ಇದ್ದವರು ಕೊಡುವುದಾದರೂ ಏನನ್ನು? ಆಧುನಿಕ ದೇವಾಲಯ ರಚನೆಯಲ್ಲಿ ಸಾರ್ವಜನಿಕರು ಸಹಕಾರ ನೀಡಬೇಕೆಂದು ಕೇಳುವಂತೆಯೇ ಆಂತರಿಕ ಅಶಾಂತಿಯನ್ನು ನೀಗಿಸುವಲ್ಲಿ ಹೆಚ್ಚಿನ ಕಾರ್ಯವಾಗಬೇಕು. ಇದಕ್ಕಾಗಿಯೇ ಸರಕಾರದ ನೀತಿಯು ಅತಿ ಉದಾರವಾಗಿರಬೇಕು. ಖಾಸಗಿ ಶಿಕ್ಷಣಾಲಯಗಳಿಗೆ ಅಧಿಕಾಧಿಕ ನೆರವನ್ನು ಸರ್ವ ರೀತಿಯಿಂದಲೂ ನೀಡಬೇಕು ಇಲ್ಲವಾದರೆ, ದೇವನಿಲ್ಲದ ಪೂಜಾರಿಯಿಲ್ಲದ ಪೂಜೆಯಿಲ್ಲದ ಸರಸ್ವತಿಯ ಮಂದಿರ ಅಶಾಂತಿ ಅತೃಪ್ತಿಯ ಬೀಡಾಗಿ ಸಮಾಜ ಶಿಕ್ಷಕವೆನಿಸುವ ಬದಲು ಅದು ಸಮಾಜ ಭಂಜಕವೆನಿಸುವುದು.

ಅಯೂಬರಿಗೆ ಸವಾಲು

ಚೀನೀಯ ಚೌವರೊಡನೆ ಮೈತ್ರಿಯ ಹಸ್ತಾಂದೋಲನ ನೀಡಿ ಕಮ್ಯುನಿಸ್ಟರೊಡನೆ ನಿಕಟ ಮಿತ್ರರಂತೆ ನಡೆದುಕೊಳ್ಳುತ್ತಿರುವ ಪಾಕಿಸ್ತಾನದ ಅಧ್ಯಕ್ಷ ಅಯೂಬ ಖಾನರಿಗೆ ಅಮೆರಿಕೆಯ ಅಧ್ಯಕ್ಷ ಜಾನ್ ಕೆನ್ನೆಡಿಯವರಿಂದ ಎಚ್ಚರಿಕೆಯ ಪತ್ರವೊಂದು ಬಂದಿದೆಯೆಂದೂ ಇದನ್ನು ಉತ್ತರಿಸುತ್ತ ಅಯೂಬರು ತಮ್ಮ ಹಾಗೂ ಚೀನಾದ ನಡುವೆ ಅಂತಹ ಸಂಬಂಧ ಬೆಳೆದು ಬಂದಿರುವುದಿಲ್ಲವೆಂದು ಮನದಟ್ಟು ಮಾಡಿರುವರೆಂದೂ ವರದಿಯಾಗಿದೆ. ಪಾಕಿಸ್ತಾನವು ಚೀನದೊಡನೆ ಸಲುಗೆಯಿಂದ ವರ್ತಿಸುತ್ತಿದೆಯೆಂದು ಹೇಳಲು ಹಿಂಜರಿಯುವುದಿಲ್ಲವಾದರೂ ಅಮೆರಿಕನ್ ರಾಜಕಾರಣ ಪಟುಗಳು ಅದು ಸಂಪೂರ್ಣ ಚೀನೀಯ ಪರವಾಗಿಯೇ ಇದೆ ಎಂಬುದನ್ನು ಒಪ್ಪಿಕೊಳ್ಳುವುದಿಲ್ಲ. ಹಾಗಾದರೆ, ಈ ಬಗೆಯ ಎಚ್ಚರಿಕೆಯ ಪತ್ರ ಬಂದುದರ ಉದ್ದೇಶವಾದರೂ ಏನು? ಭಾರತದ ಮನಸ್ಸಿಗೆ ಸಮಾಧಾನವನ್ನು ನೀಡುವ ಸಲುವಾಗಿಯೇ ಇರಬಹುದೆ, ಅಥವಾ, ಕೆನ್ನೆಡಿಯವರ ಅಂತರ್ಯದಲ್ಲಿಯೇ ಅಯೂಬ ವರ್ತನೆಯ ಬಗ್ಗೆ ಕಳವಳವೆದ್ದಿದೆಯೋ ಎಂಬುದನ್ನು ಸ್ಪಷ್ಟವಾಗಿ ಹೇಳುವುದು ಅಶಕ್ಯ. ಅಯೂಬರು ತನ್ನ ಭಾರತ ವಿರೋಧಿ ನೀತಿಯನ್ನು ಸಮರ್ಥಿಸುತ್ತಿರುವ ಚೀನಾದೊಂದಿಗೆ ಈ ಉದ್ದೇಶ ಮಾತ್ರದಿಂದ ಸಂಬಂಧ ಇಟ್ಟುಕೊಂಡಿದ್ದರೆ, ಅದನ್ನು ಕೂಡ ಸಾಧುವೆನ್ನುವಂತಿಲ್ಲ. ಚೀನಾ ಮತ್ತು ಪಾಕಿಸ್ತಾನಗಳು ತಮ್ಮ ಸೈನಿಕ ಶಕ್ತಿ ಬಣಗಳನ್ನು ಬಲ ಪಡಿಸುತ್ತ ಏಕಕಾಲದಲ್ಲಿ ಭಾರತವನ್ನು ಅಂಜಿಸಿ ತಮ್ಮ ಬೇಳೆ ಬೇಯಿಸಲು ಮುಂದಾದವೆಂದರೆ, ಅವುಗಳ ಉದ್ದೇಶ ಪೂರ್ತಿಯಾದಂತಾಗುವುದು. ಆದರೆ; ಭಾರತ ಎಂತಹ ಗಂಡಾಂತರ ಬಂದರೂ ಎದುರಿಸಲು ಸರ್ವಸಿದ್ಧತೆಯನ್ನು ಮಾಡಿಕೊಳ್ಳುತ್ತಿದೆ. ಕೆನ್ನೆಡಿಯವರ ಗುಪ್ತ ಸಂದೇಹವನ್ನು ದೂರಮಾಡಿ, ತಾನು ಕಮ್ಯುನಿಸ್ಟವಿರೋಧಿಯೆಂಬುದನ್ನೀಗ ಅಯೂಬಖಾನರು ತೋರಿಸಿಕೊಡಲೇಬೇಕಾಗಿದೆ. ಅಯೂಬಖಾನರು ಈ ರೀತಿ ನಡೆಕೊಳ್ಳುವರೆ? ಅಥವಾ ಚೀನಾದಂತೆ ಅವರಿಗೂ ಲತ್ತೆ ಕೊಡುವರೆ?

ನಾಗಮಂಗಲದಲ್ಲಿ ಬ್ಯಾಂಕಿನ ಶಾಖೆ

ಪಾಂಗಾಳ ನಾಯಕ್ ಬ್ಯಾಂಕಿನ ಹೊಸ ಶಾಖೆಯೊಂದು ಮಂಡ್ಯಾ ಜಿಲ್ಲೆಯ, ನಾಗಮಂಗಲದಲ್ಲಿ ದಿನಾಂಕ 2.9.63ನೇ ಸೋಮವಾರ ತೆರೆಯಲ್ಪಟ್ಟಿತು. ಊರಿನ ಅನೇಕ ಅಧ್ಯ ಮಹನೀಯರೂ, ವರ್ತಕರೂ, ಈ ಶುಭ ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಬ್ಯಾಂಕಿನ ಚೇರ್ಮನರಾದ ಶ್ರೀ ಪಾಂಗಾಳ ರಾಮದಾಸ ನಾಯಕರು ಮತ್ತು ಜನರಲ್ ಮೆನೇಜರ್ ಶ್ರೀ ಕೆ. ಎಸ್. ಕಾಮತರು ಆಹ್ವಾನಿತರನ್ನು ಹಾರ್ದಿಕವಾಗಿ ಸ್ವಾಗತಿಸಿ, ಊರಿನ ಆರ್ಥಿಕ ಭದ್ರತೆ ಹಾಗೂ ವ್ಯವಸ್ಥೆಗಳಲ್ಲಿ ಹೆಚ್ಚಿನ ಸೇವೆ, ಸವಲತ್ತುಗಳನ್ನು ಜನರಿಗೆ ಒದಗಿಸಲು, ಸಂಸ್ಥೆಯು ಶ್ರಮಿಸುವುದಾಗಿ ಆಶ್ವಾಸನೆಯಿತ್ತರು. ಇದು ಬ್ಯಾಂಕಿನ ೨೦ನೆಯ ಶಾಖೆಯಾಗಿದೆ.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. 16/1963

1. ಕೆ. ಶ್ರೀನಿವಾಸ ಮಂಜ
2. ಕೆ. ನರಸಿಂಹ ಮಂಜ
3. ಕೆ. ರಾಮಕೃಷ್ಣ ಮಂಜ
4. ಕೆ. ಮೀನಾಕ್ಷಿ
5. ನಾಗವೇಣಿ

} ಅರ್ಜಿದಾರರು.

ಈ ಮೂಲಕ ಸರ್ವರಿಗೂ ತಿಳಿಯ ಪಡಿಸುವುದೇನೆಂದರೆ, 1ರಿಂದ 4ನೇ ವರೆಗಿನ ಅರ್ಜಿದಾರರ ತಂದೆ ಮ 5ನೇ ಅರ್ಜಿದಾರಳ ಗಂಡ, ಮೃತ ಕಾಜಾಡಿ ಶಂಕರ ಮಂಜರ ಹಕ್ಕಿನ ಬಾಬ್ತು ಶೇರ್ಸುಗಳ ಮ ಅವುಗಳ ಡಿವಿಡೆಂಡು ಮತ್ತು ಕೆನರಾ ಬೇಂಕಿನಲ್ಲಿರುವ ಹಣವನ್ನು ಪಡೆಯುವರೆ ತಾವು ಹಕ್ಕುದಾರರಾದ್ದರಿಂದ ಆ ಬಾಬಿನಲ್ಲಿ ತಮಗೆ ವಾರೀಸು ಸರ್ಟಿಫಿಕೇಟು ಕೊಡಿಸಬೇಕಾಗಿ ಮೇಲಿನ ಅರ್ಜಿದಾರರು ಸದ್ರಿ ಅರ್ಜಿಯನ್ನು ಮಾಡಿರುತ್ತಾರೆ ಸದ್ರಿ ಅರ್ಜಿಯನ್ನು ಮೇಲ್ಕಂಡ ಕೋರ್ಟಿನಲ್ಲಿ ತಾ 23.9.1963ಕ್ಕೆ ಇಡಲಾಗಿರುತ್ತದೆ. ಸದ್ರಿ ಅರ್ಜಿ ಕುರಿತು ಯಾರಿಗಾದರೂ ಆಕ್ಷೇಪಣೆ ಇದ್ದಲ್ಲಿ ಸದ್ರಿ ಕೋರ್ಟಿನಲ್ಲಿ ಸದ್ರಿ ದಿವಸ 11 a. m ಗೆ ಹಾಜರಾಗಿ ಜಾಹೀರು ಮಾಡಿಕೊಳ್ಳಬಹುದು.

K. S. V. Udpa
Advocate for the Petitioners.
ಕುಂದಾಪುರ, ತಾ 9-9-1963

ಸಂಸ್ಮರಣೆ

ರಾಷ್ಟ್ರಕವಿ ಗೋವಿಂದ ಪೈ

ಕಾವ್ಯರ್ಷಿ ಮಂಜೇಶ್ವರ ಗೋವಿಂದ ಪೈಯವರು ತಾ. ೬ರಂದು ಪರಂಧಾಮವನ್ನೈದಿದ ಸುದ್ದಿಯಿಂದಾಗಿ ಕನ್ನಡಿಗರು ಅತೀವ ಶೋಕ ಪೀಡಿತರಾದರು. ಉದ್ದಾಮ ಸಂಶೋಧಕರೂ ನವ ನವೀನ ಪ್ರಯೋಗ ನಿರತರೂ ವಿದ್ವಾಂಸರೂ ಸಾಹಿತ್ಯಕಾರರೂ ಆದ ಗೋವಿಂದ ಪೈಯವರ ಮನೆಯೆಂಬುದು ಸರಸ್ವತೀ ಮಂದಿರವೇ ಆಗಿತ್ತು.

ಗೋವಿಂದ ಪೈಯವರು ೧೮೮೩ನೆ ಇಸವಿ ಮಾರ್ಚ ತಿಂಗಳ ೨೩ನೆ ದಿನಾಂಕದಂದು ಮಂಗಳೂರಲ್ಲಿ ಜನಿಸಿದ್ದರು. ಮಂಗಳೂರಿನಲ್ಲಿ ತಮ್ಮ ಶಿಕ್ಷಣದ ಬಹು ಭಾಗವನ್ನು ಪಡೆದ ಬಳಿಕ ಅವರು ಮದ್ರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ಉನ್ನತ ಶಿಕ್ಷಣವನ್ನು ಗಳಿಸಿದರು. ಇಂಗ್ಲಿಷ್ ಭಾಷೆಯಲ್ಲಿ 'ಆಷ್ಟನ್" ಸುವರ್ಣ ಪದಕವನ್ನೂ ಇವರು ಸಂಪಾದಿಸಿದ್ದರು. ನಮ್ಮ ರಾಷ್ಟ್ರಪತಿ ಡಾ| ರಾಧಾಕೃಷ್ಣನ್ ಪೈಯವರ ಸಹಪಾಠಿಗಳಾಗಿದ್ದರು.

ವಿದ್ಯಾರ್ಥಿ ದೆಸೆಯಲ್ಲಿ ಕಂಡ ಕನಸುಗಳನ್ನು ನನಸಾಗಿಸುವ ಸಲುವಾಗಿಯೋ ಎಂಬಂತೆ ಅವರು ಮಂಜೇಶ್ವರದಲ್ಲಿ ನೆಲಸಿ ತನ್ನ ಕಾರ್ಯ ಪ್ರವಾಹದಲ್ಲಿ ದುಮುಕಿದರು. ಬಹು ಭಾಷಾ ಪಂಡಿತರಾದ ಪೈಯವರಿಗೆ ಇಂಗ್ಲಿಷ್, ಸಂಸ್ಕೃತ, ಕನ್ನಡಗಳಲ್ಲಿ ಪರಿಶ್ರಮವಿತ್ತು; ಜರ್ಮನ್, ಲ್ಯಾಟಿನ್, ಗ್ರೀಕ್, ಬಂಗಾಳಿ, ಪರ್ಶಿಯನ್, ಪಾಲಿ ಮೊದಲಾದ ಸಂವೃದ್ಧ ಭಾಷಾಜ್ಞಾನವೂ ಅವರಿಗಿತ್ತು. ತಮ್ಮ ಅಸಾಧಾರಣ ಪರಿಶ್ರಮ ಮತ್ತು ಆಸಕ್ತಿಯಿಂದ ಕಲಿತುಕೊಂಡ ಭಾಷಾಜ್ಞಾನವನ್ನು ಅವರು ಕೊಳೆಯಬಿಡದೆ, ಆಯಾ ಭಾಷೆಗಳ ಸವಿಯ ಪರಿಚಯವನ್ನು ಕನ್ನಡಿಗರಿಗೆ ಮಾಡಿಕೊಡಲು ಹಲವು ಉತ್ತಮ ಸಾಹಿತ್ಯ ರತ್ನಗಳನ್ನು ಕನ್ನಡಿಸಿದರು. ಅವರ ವ್ಯಾಸಂಗ ಪಾಂಡಿತ್ಯಕ್ಕೆ ಈ ಕೃತಿರತ್ನಗಳು ಕಲಶಪ್ರಾಯವಾಗಿ ನಿಂತಿವೆ.

ಗೋವಿಂದ ಪೈಯವರ ಸಾಹಿತ್ಯ ಪ್ರೇಮವನ್ನು ಕಂಡ ಅವರ ತಾಯಿ ಅಂಜಿಹೋಗಿದ್ದರಂತೆ. ಏಕೆಂದರೆ, ಆ ಸಮಯದಲ್ಲಿ ಅವರ ಮನೆಯ ಸಂಸ್ಥಿತಿಯು ನೆಮ್ಮದಿಯಿಂದಿರಲಿಲ್ಲ. ಮನೆಯ ಹೆದರಿಕೆಯೊಂದೆಡೆ, ಸಾಹಿತ್ಯಾಸಕ್ತಿಯೊಂದೆಡೆಯಿಂದ ಅವರ ಮನಸ್ಸನ್ನೆಳೆಯುತಿತ್ತು. ಇಂತಹ ಕರ್ತರೀಕ್ರಮುಖ ಸ್ಥಿತಿಯನ್ನು ಕುರಿತು ಕವಿಗಳು ಹೀಗೆ ಹೇಳಿಕೊಂಡಿದ್ದಾರೆ: "ಮನೆಯಲ್ಲಿ ಕವನಿಸಲಾರದೆ, ನಿದ್ದೆ ಬಂದರೆ ಗದ್ದೆಯಲ್ಲಿ ಮಲಗಬಹುದು ಎಂದು ಮರಮರಕ್ಕೆ ತೊಟ್ಟಿಲು ಕಟ್ಟುತ್ತ ತಿರುಗುವ ತಿರುಕೆಯಂತೆ, ನಡೆದಾಡುವಾಗ ಬೀದಿಯಲ್ಲೂ ಬಿಡುವಾದಾಗ ಶಾಲೆಯಲ್ಲೂ ಕವನಿಸುತಿದ್ದೆ."

ಎಳೆಯ ಹರೆಯದಲ್ಲಿಯೇ ಪೈಗಳಲ್ಲಿ ಸಾಹಿತ್ಯಾಸಕ್ತಿಯು ತಾನಾಗಿಯೇ ಹುಟ್ಟಿಬಂದಿತ್ತು. ಅದು ಜನ್ಮಸಿದ್ಧ ಪ್ರತಿಭೆ. ಅವರು ಇನ್ನೂ ೧೫ರ ಪ್ರಾಯದಲ್ಲಿರುವಾಗಲೇ ಶೇಕ್ಸ್‌ಪಿಯರನ 'ಹನ್ನೆರಡನೆಯ ರಾತ್ರಿ'ಯ ಕೆಲವಂಶಗಳನ್ನು ಅನುವಾದ ಮಾಡಿದ್ದರು. ಆಗ ತಾನೇ ಸಾಹಿತ್ಯದಲ್ಲಿ ಕ್ರಾಂತಿಕಾರನೆನಿಸಿದ ಕವಿವರ ಮುದ್ದಣನೊಡನೆ ಇವರು ಸಂಪರ್ಕ ವಿವರಿಸಿಕೊಂಡಿದ್ದು, ಆತನಿಗೆ ಈ ಅನುವಾದವನ್ನು ನೋಡಲು ಕಳಿಸಿಕೊಟ್ಟಿದ್ದರಂತೆ. ಕನ್ನಡದ ಸಣ್ಣ ಕಥೆಗಳ ಜನಕರೆಂದೂ ಹೊಸಗನ್ನಡದ ಪ್ರವರ್ತಕರೆಂದು ಹೆಸರಾದ ಪಂಜೆ ಮಂಗೇಶರಾಯರು ಗೋವಿಂದ ಪೈಯವರ ಕನ್ನಡ ಗುರುಗಳಾದರು. ಕನ್ನಡ ಛಂದಸ್ಸಿನಲ್ಲಿ ಅನಾದಿಯಿಂದಲೂ ಅಗ್ರಸ್ಥಾನಗಳಿಸಿಗೊಂಡು ಬಂದಿರುವ 'ಪ್ರಾಸ'ವನ್ನು ಬಿಟ್ಟು ಕವಿತೆ ಬರೆಯುವಲ್ಲಿ ಪ್ರಪ್ರಥಮರಾದ ಪೈಯವರು ನಿಜಕ್ಕೂ ಆ ಕಾಲದ ಕ್ರಾಂತಿ ಪುರುಷರಾದರು.

ನಿಯೋಜಿಸಿದ ಪ್ರಾಸವಿಲಂಘನವು ೧೯೧೧ರಲ್ಲಿ ಕಾರ್ಯಕೃತವಾಯಿತು. ರವೀಂದ್ರ ಕವೀಂದ್ರ, ಶೇಖ್ ಇಕ್ಬಾಲರ ಗೀತೆಗಳನ್ನು ಪ್ರಾಸ ಕೆಡಿಸಿ ಅನುವಾದಿಸಿದ ಪೈಯವರು ಅಂದಿನ ಸಾಹಿತ್ಯ ಶಾಸ್ತ್ರಿಗಳ ಪ್ರಕೋಪಕ್ಕೆ ಗುರಿಯಾದರು. 'ಯತಿ ವಿಲಂಘನ'ದಿಂದಷ್ಟೆ ಕನ್ನಡವು ಅರಿವೆಂದು ಕೇಶಿರಾಜ ಸಾರಿ ಪ್ರಾಸದ ಸ್ಥಾನವನ್ನು ಮತ್ತಷ್ಟು ಭದ್ರಗೊಳಿಸಿದ್ದನು. ಅತನನ್ನೇ ಕನ್ನಡದ ಕವಿಗಳು ಅನೂಚಾನವಾಗಿ ಹಿಂಬಾಲಿಸಿಕೊಂಡು ಬಂದಿದ್ದರು. ಆದರೆ, ಗೋವಿಂದ ಪೈಯವರು ಇದಕ್ಕೇನೂ ಬಗ್ಗಲಿಲ್ಲ. 'ಕನ್ನಡಕ್ಕೇನೂ ಪ್ರಾಸವು ವೇದ ವಾಕ್ಯವಲ್ಲ" ಎಂದವರು ಪ್ರತಿರೋಧವನ್ನು ಎದುರಿಸಿದರು. 'ಪುರಾಣ ಮಿತ್ಯೇವ ನ ಸಾಧು ಸರ್ವಂ' ಎಂದು ಕವಿಕುಲಗುರು ದತ್ತಕ ನಿಷ್ಠಕ ಕಾಳಿದಾಸನೇ ಹೇಳಿರುವಾಗ, ಹೊಸದೊಂದು ಪ್ರಯೋಗ ಕನ್ನಡದಲ್ಲೇಕಾಗಬಾರದು? ಎಂಬ ವಾದ ಪೈಯವರದು.

ಪ್ರಾಸ ಕೆಡಿಸಿದ ಪೈಯವರು ಪ್ರಾಸಬದ್ಧ ಕವಿತೆಯನ್ನೂ ಬರೆದಿದ್ದಾರೆ ೧೯೩೭ರಲ್ಲಿ ಅವರ ಪತ್ನಿ ಕೃಷ್ಣಾಬಾಯಿಯವರ ನೆನಪಿಗಾಗಿ ಅವರು ಬರೆದ 'ಗೊಮ್ಮಟ ಸ್ತುತಿ'ಯು ಪ್ರಾಸಬದ್ಧವಾದ ೩೨ ವೃತ್ತಗಳ ಕೃತಿ ಹೊರ ಬಂತು. 'ಗಿಳಿವಿಂಡು' ಪೈಯವರ ಕವಿತಾ ಸಂಕಲನ; 'ಗೊಲ್ಗೊಥಾ" ಒಂದು ಸೀಳ್ಗವನ. 'ಹೆಬ್ಬೆರಳು' ಜಪಾನಿನ ನೋ ನಾಟಕ ಮಾದರಿಯವಾದರೆ, ವೈಶಾಖಿ, ಕುಮಾರನ ಹಸಗೆ, ಮೊದಲಾದುವೂ ಉತ್ತಮ ಭಾಷಾಂತರ ಕೃತಿಗಳು. 'ಚಿತ್ರಭಾನು' ಅವರ ಏಕ ಮಾತ್ರ ಗದ್ಯ ನಾಟಕ.

(೧೩ನೇ ಪುಟ ನೋಡಿರಿ)

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. P. No. 35/1963

ತಾಮಿ ಹೆಂಗ್ಸು, ಸೋಮಪ್ಪ ಪುತ್ರನ್‌ರವರ ವಿಧವೆ—ಮಂಗಳೂರು ತಾಲ್ಲೂಕು ಬಪ್ಪನಾಡ ಗ್ರಾಮ ಮುಲ್ಕಿ ವಡೇರಬೆಟ್ಟು

—ಅರ್ಜಿದಾರಳು

ಮತ್ತು

ಜಯ ಎಸ್. ಕಾಂಚನ್, ಸೋಮಪ್ಪ ಪುತ್ರನ್ ಮಗ, ಬೊಂಬಾಯಿಯಲ್ಲಿರುವವ

—ಎದ್ರಿ

ಸದರಿ ಎದ್ರಿಗೆ—

ಅರ್ಜಿದಾರಳ ಗಂಡ ವ ನಿಮ್ಮ ತಂದೆಯವರೂ ಆದ ಸೋಮಪ್ಪ ಪುತ್ರನ್‌ರವರಿಗೆ Policy No. 61477 of Unit Asian Life Insurance Corporation of India ಯವರ ಬಾಬ್ತು Life Insurance Corporation of India ಯಿಂದ ಬರಬೇಕಾದ ರೂಪಾಯಿ 1300ರ ಪಾಲಿಸಿಯ ಬಗ್ಗೆ ಅರ್ಜಿದಾರಳ ಗುಣಕ್ಕೆ ಅಥವಾ ನಿಮ್ಮ ವ ಅರ್ಜಿದಾರಳ ಗುಣಕ್ಕೆ ವಾರೀಸು ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರಳು ಮಾಡಿದ ಮೇಲ್ಕಂಡ ಅರ್ಜಿಯು ಮೇಲ್ಕಂಡ ಕೋರ್ಟಿನ ಮುಂದೆ ತಾ. 4–10–1963ಕ್ಕೆ ಬೆಳಿಗ್ಗೆ 10 ಗಂಟೆಗೆ ತನಿಖೆಗೆ ಇಡಲಾಗಿಯದೆ. ಆ ವಿಷಯದಲ್ಲಿ ನಿಮ್ಮ ಆಕ್ಷೇಪಣೆಯು ಇರುವಲ್ಲಿ ನೀವು ಸದರಿ ತಾರೀಕಿನಲ್ಲು ಸ್ವತಃ ಅಥವಾ ವಕೀಲರ ಮುಖಾಂತರ ಹಾಜರಾಗಿ ವ್ಯಾಜ್ಯ ಮಾಡಿಕೊಳ್ಳಬಹುದಾಗಿಯೂ, ತಪ್ಪಿದಲ್ಲಿ ಸದರಿ ಅರ್ಜಿಯು ನಿಮ್ಮ ಗೈರುಹಾಜರಿಯಲ್ಲಿ ತೀರ್ಮಾನಿಸಲ್ಪಡುತ್ತದಾಗಿಯೂ ಈ ಮೂಲಕ ನಿಮಗೆ ತಿಳಿಯಪಡಿಸಲಾಗುತ್ತದೆ

A. N. S. Achar
Advocate for Petitioner

Karkal, 9—9—1963

ಅಲ್ಲಲ್ಲಿಯ ಸುದ್ದಿಸಾರ

ಕನ್ನಡ ಪ್ರೇಮಿ ಮಂಡಳಿಯ ಉದ್ಘಾಟನೆ— ಮುಂಬಯಿಯ ಖಾಲ್ಸಾ ಕಾಲೇಜಿನ ಕನ್ನಡ ಪ್ರೇಮಿ ಮಂಡಳಿಯ ಉದ್ಘಾಟನಾ ಸಮಾರಂಭವು ತಾ. 31.8.63ರಂದು ಆ ಕಾಲೇಜಿನ ಪ್ರೊ| ಶ್ರೀ ಎಸ್. ಎಸ್. ರಂಗನಾಥರಾಯರ ಮುಖ್ಯ ಆತಿಥ್ಯದಲ್ಲಿ ನೆರವೇರಿತು. ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಎಲ್ ಜಿ ಪೇಡೇಕರರು ಅಧ್ಯಕ್ಷಸ್ಥಾನ ವಹಿಸಿದ್ದರು.

ಪ್ರಾರಂಭದಲ್ಲಿ ಪ್ರಧಾನ ಕಾರ್ಯದರ್ಶಿ ಶ್ರೀ ರಾಜಕರ ಪಕ್ಕಳರು ಸ್ವಾಗತಿಸಿ, ಮಂಡಳಿಯ ಗತ ವರ್ಷದ ಕಾರ್ಯಕಲಾಪಗಳನ್ನು ವಿವರಿಸಿದರು. ಪ್ರೊ| ಬಿ. ವಿ. ಕುಲಕರ್ಣಿ ಇವರು ಮುಖ್ಯ ಅತಿಥಿಗಳ ಪರಿಚಯ ಮಾಡಿಕೊಟ್ಟರು. ಮುಖ್ಯ ಅತಿಥಿಗಳು "ಪ್ರಜಾಪ್ರಭುತ್ವದ ಕೆಲವು ಸಮಸ್ಯೆಗಳು" ಎಂಬ ಕುರಿತು ಭಾಷಣಗೈಯುತ್ತ ಪ್ರಜಾಪ್ರಭುತ್ವ ಸಮರ್ಪಕವಾಗಿ ನಡೆಯಬೇಕಾದರೆ ಅಕ್ಷರಸ್ಥರ ಸಂಖ್ಯೆ ಹೆಚ್ಚಾಗಬೇಕು, ಅದಕ್ಕಿಂತಲೂ ಹೆಚ್ಚಾಗಿ ರಾಷ್ಟ್ರ ಶ್ರೀಮಂತವಾಗಿರಬೇಕು, ಬಡ ರಾಷ್ಟ್ರದಲ್ಲಿ ಪ್ರಜಾಪ್ರಭುತ್ವವಿದ್ದರೆ, ಅದರಲ್ಲೂ ಅನಕ್ಷರಸ್ಥರ ಸಂಖ್ಯೆ ಹೆಚ್ಚಿದ್ದರೆ ಅಲ್ಲಿ ಪ್ರಜಾ ಪ್ರಭುತ್ವವು ಯಶಸ್ವಿಯಾಗದು. ಹಳ್ಳಿಯ ಏನೊಂದೂ ತಿಳಿಯದ ಮುಗ್ಧ ಜನವನ್ನು ಮೋಸಗೊಳಿಸಿ ಓಟು ಪಡೆಯುವ ಅದೆಷ್ಟು ಕುತಂತ್ರ ಕುಯುಕ್ತಿಗಳನ್ನು ನಾವು ಕಂಡಿಲ್ಲ; ಕೇಳಿಲ್ಲ" ಎಂದರು. ಅನಂತರ ಕಳೆದ ವರ್ಷ ಬಿ ಎ. ಪರೀಕ್ಷೆಯಲ್ಲಿ ಇಡೀ ವಿಶ್ವವಿದ್ಯಾಲಯಕ್ಕೇನೇ ಸಂಸ್ಕೃತದಲ್ಲಿ ಪ್ರಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದ ಕುಮಾರಿ ಶಾಂತ ಐತಾಳ ಇವರಿಗೆ ಪುರಸ್ಕಾರವನ್ನಿತ್ತು, ಮಂಡಳಿಯು ಅಭಿನಂದಿಸಿತು. ಕುಮಾರಿ ಫರಿದಾ ಶೇಖ್ ಇವರು ಮುಖ್ಯ ಅತಿಥಿಗಳಿಗೆ ಹಾಗೂ ಅಧ್ಯಕ್ಷರಿಗೆ ಪುಷ್ಪಹಾರಾರ್ಪಣೆಗೈದರು. ಅಧ್ಯಕ್ಷರ ಭಾಷಣದ ಬಳಿಕ ಜತೆಕಾರ್ಯದರ್ಶಿ ಸಿ. ಬಿ. ಬಳ್ಳಾರಿಯವರು ವಂದನಾರ್ಪಣೆಗೈದರು.

ಹೋಟೆಲ್ ದಾಸಪ್ರಕಾಶದಲ್ಲಿ ಬೆಳದಿಂಗಳೂಟದ ಶತಮಾನೋತ್ಸವ

ಮದ್ರಾಸ್ ಹೋಟೆಲ್ ದಾಸಪ್ರಕಾಶದಲ್ಲಿ ಬೆಳದಿಂಗಳೂಟದ ಶತಮಾನೋತ್ಸವವು ತಾ. 25.8.63ರಂದು ಜರಗಿತು. ಅಂದಿನ ಮುಖ್ಯ ಅತಿಥಿಗಳಾದ ಮದ್ರಾಸಿನ ಹಣಕಾಸಿನ ಮತ್ತು ವಿದ್ಯಾ ಖಾತೆಯ ಮಂತ್ರಿ ಶ್ರೀ ಎಮ್. ಭಕ್ತವತ್ಸಲಂ ಅಧ್ಯಕ್ಷಸ್ಥಾನವನ್ನಲಂಕರಿಸಿದ್ದರು. ಶ್ರೀ ಸೀತಾರಾಮರಾಯರ ಪುತ್ರರಾದ ಶ್ರೀ ಬಾಲಕೃಷ್ಣರಾಯರು ಸಂದೇಶಗಳನ್ನು ಓದಿದರು. ಶ್ರೀ ಸೀತಾರಾಮರಾಯರು ಸ್ವಾಗತ ಭಾಷಣ ಮಾಡಿದರು. ಗಗನ ಛಾವಣಿಯ ಮತ್ತು ಅದರ ಸುಂದರ ಉದ್ಯಾನವನ್ನು, ಮದ್ರಾಸಿನ ವಿಧಾನ ಮಂಡಳದ ಸ್ಪೀಕರ್‌ರಾದ ಶ್ರೀ ಚೆಲ್ಲ ಪಾಂಡ್ಯನ್‌ರವರು ಉದ್ಘಾಟಿಸಿದರು. 'ಸೊದನಿಯರ್' ಮತ್ತು 'ಪ್ರಯೋಜಕರ ಕೈಪಿಡಿ" ಎಂಬ ಸ್ಮಾರಕ ಪುಸ್ತಕವನ್ನು ಶ್ರೀ ಕೆ. ಕೆ. ಬಾಲಸುಬ್ರಹ್ಮಣ್ಯ ಅಯ್ಯರ್ ಎಂ. ಎಲ್. ಎ. ಇವರು ಉದ್ಘಾಟಿಸಿದರು. ಶ್ರೀ ಪಿ. ಅನಂತರಾಯರು ಧನ್ಯವಾದಗಳನ್ನರ್ಪಿಸಿದರು. ಬಳಿಕ ವೀಣಾ ವಾದನ ಜರಗಿತು.

"ಅಮೇರಿಕಾದಲ್ಲಿ ವಿದ್ಯಾಭ್ಯಾಸ"– ಅಖಿಲ ಲೋಕ ಸೇವಾವೃಂದದ ವತಿಯಲ್ಲಿ, ಲೋಕಸೇವಾ ಹೈಸ್ಕೂಲಿನ ಪಠಾರದಲ್ಲಿ ತಾ. 3–9–1963ರಂದು ಸಂಯುಕ್ತ ಅಮೇರಿಕಾ ದೇಶದ ವಾಶಿಂಗ್ಟನ್ ವಿಶ್ವವಿದ್ಯಾನಿಲಯದಲ್ಲಿ "ಮಾನವ ವಿಜ್ಞಾನ"ದ ಪ್ರಾಧ್ಯಾಪಕರಾಗಿರುವ ಡಾಕ್ಟರ್ (ಮಿಸ್) ಲೂಯಿಸ್ ಕೆಲಿನ್ ಪಾಫರ್ ಎಂಬವರು "ಅಮೇರಿಕಾದಲ್ಲಿ ವಿದ್ಯಾಭ್ಯಾಸ" ಎಂಬ ಕುರಿತು ಉಪನ್ಯಾಸವಿತ್ತರು. ಶ್ರೀ ಎಮ್. ನಾರಾಯಣ ಭಟ್ಟರು ಅತಿಥಿಗಳನ್ನು ಸ್ವಾಗತಿಸಿದ್ದಲ್ಲದೆ, ಅವರ ಉಪನ್ಯಾಸವನ್ನು ಕನ್ನಡಕ್ಕೆ ಅನುವಾದಿಸಿದರು.

ಆಡಳಿತ ಭಾಷೆ

ಕನ್ನಡ ರಾಜ್ಯೋದಯವಾದ ಇಷ್ಟು ವರ್ಷಗಳ ನಂತರವಾದರೂ ಕರ್ನಾಟಕ ರಾಜ್ಯವು ಕನ್ನಡವನ್ನು ರಾಜ್ಯಭಾಷೆಯನ್ನಾಗಿ ಸ್ವೀಕರಿಸಿ, ಅದನ್ನು ವ್ಯವಹಾರದಲ್ಲಿ ಬಳಸುವ ಅವಕಾಶವನ್ನು ಮಾಡಿಕೊಳ್ಳಲು ಮುಂದಾಗಿದೆ ಅಧಿಕೃತ ಭಾಷಾ ವಿಧೇಯಕವನ್ನು ವಿಧಾನ ಸಭೆಯಲ್ಲಿ ಸ್ವೀಕರಿಸಿಯಾಯಿತೆಂದ ಮೇಲೆ ಅದಿನ್ನು ವ್ಯವಹೃತವಾಗಲು ಹೆಚ್ಚು ತಡವಾಗಲಾರದು. ಮುಖ್ಯ ಮಂತ್ರಿ ನಿಜಲಿಂಗಪ್ಪನವರು ಈ ದಿಸೆಯಲ್ಲಿ ಮುಂದುವರಿದು ಕನ್ನಡಿಗರ ಸುಪ್ರೀತಿಗೆ ಪಾತ್ರರಾದರು; ಇದನ್ನು ಮುಂದೆಯೂ ಅವರು ಉಳಿಸಿಕೊಳ್ಳಬೇಕು. ಸರಕಾರಿ ಭಾಷೆಯು ಪ್ರಾದೇಶಿಕವಾಗಿರಬೇಕೆಂಬುದು ಇಂದು ನಿನ್ನಿನ ಚಳವಳಿಯಲ್ಲ. ಪ್ರಜಾಪ್ರಭುತ್ವದಲ್ಲಿ ಜನರ ಭಾಷೆಯಲ್ಲಿಯೇ ಸರಕಾರದ ಕಾರ್ಯಭಾರಗಳು ನಡೆಯುವುದು ಜನತೆಗೊಂದು ವರದಾನ ಮಾತ್ರವಲ್ಲ; ಸರಕಾರಕ್ಕಾದರೂ ಆಡಳಿತವು ಅತಿ ಸುಲಭವೆನಿಸುವುದು.

ಇಬ್ರಾಹಿಮರು ರಾಜ್ಯಪಾಲರೆ?

ಕಾಂಗ್ರೆಸ್‌ನ ಮುಖಾಪರಿವರ್ತನೆಗೆ ಸೂತ್ರಪ್ರಾಯವಾದ ಅಮ್ರೋಹಾ ಉಪಚುನಾವಣೆಯಲ್ಲಿ ಸೋತ ಹಫೀಜ ಮಹಮ್ಮದ ಇಬ್ರಾಹಿಂ ಕೇಂದ್ರ ನೀರಾವರಿ ಮಂತ್ರಿಯಾಗಿ ಕರ್ನಾಟಕಕ್ಕೆ ಅಪಚಾರವೆಸಗಿದ್ದರೂ ಎಲ್ಲರಿಗೂ ಬೇಕಾದವರೆನಿಸಿರುವವರು. ಪ್ರಧಾನಿಯವರಿಗೂ ಇಬ್ರಾಹಿಮರ ಮೇಲೆ ಆಸಕ್ತಿಯಿದೆ. ಚುನಾವಣೆಯಲ್ಲಿ ಸೋತ ಮೇಲೆ ಅನಿವಾರ್ಯವಾಗಿ ಮಂತ್ರಿ ಪದವಿ ಬಿಡಬೇಕಾಗಿ ಬಂತು. ಆದರೆ ಇಬ್ರಾಹಿಮರನ್ನು ದೂರವಿಡುವುದಕ್ಕೆ ಪ್ರಧಾನಿಯವರು ಸಿದ್ಧರಿಲ್ಲ. ಒಂದಲ್ಲ ಒಂದು ರೀತಿಯಿಂದ ಅವರ ಸೇವೆಯನ್ನು ದೇಶ ಪಡೆಯಬೇಕು. ಅದಕ್ಕೆಂದೇ ರಾಜ್ಯಪಾಲರಾಗಿ ಅವರನ್ನು ನಿಯುಕ್ತ ಮಾಡುವ ಮಾತುಕೇಳಿ ಬರುತ್ತಿದೆ. ಚುನಾವಣೆಗಳಲ್ಲಿ ಗೆದ್ದವರನ್ನು ಈ ಹುದ್ದೆಗೆ ನೇಮಿಸುವ ಪರಿಪಾಠ ಮಸಳಿ ಬದಲಾಗುವಂತಿದೆ.

ರಕ್ಷಣಾನಿಧಿಗೆ
ಉದಾರ
ಸಹಾಯ ಸಲ್ಲಿಸಿರಿ.

ಭವಿಷ್ಯದ ಬಗ್ಗೆ ಭರವಸೆ

ಕಲಿಯುವಾಗ ಗಳಿಸಲೂ ಬಹುದು

ವಿದೇಶಗಳಿಂದ ಜರ್ಮನಿಗೆ ಶಿಕ್ಷಣ ಪಡೆಯಲು ಹೋಗುವ ವಿದ್ಯಾರ್ಥಿಗಳಿಗಾಗಿ, ಅವರ ಭವಿಷ್ಯದ ಬಗ್ಗೆ ಭರವಸೆಯನ್ನು ನೀಡುವ ಸಲುವಾಗಿ ಹ್ಯಾಂಬರ್ಗ್ ಸಂಸ್ಥೆಯೊಂದು ಕೆಲಸ ಮಾಡುತ್ತಿದೆ. ಕ್ರಮವಾಗಿ ವಿದೇಶೀ ಅಭ್ಯರ್ಥಿಗಳ ಸಂಖ್ಯೆಯೂ ಏರುತ್ತಲೇ ನಡೆದಿದೆ. ಇಲ್ಲಿನ ವಿದ್ಯಾರ್ಥಿಗಳು ಕಲಿಕೆಯ ಕಾಲದಲ್ಲಿಯೇ ಗಳಿಸಲೂ ಬಹುದು.

ಜರ್ಮನಿಯ ಪ್ರಖ್ಯಾತ ವ್ಯಾಪಾರಿ ಹಾಗೂ ನಿರ್ಯಾತ ಕೇಂದ್ರವಾದ ಹ್ಯಾಂಬರ್ಗ್ ನಗರದಲ್ಲಿರುವ ವ್ಯಾಪಾರೀ ಸಂಸ್ಥೆಗಳಲ್ಲಿಯೂ, ಹಸ್ತಕೌಶಲ್ಯ ಸಂಸ್ಥೆಗಳಲ್ಲಿಯೂ, ಬಂದರು ನಿರ್ಮಾಣಕಾರ್ಯದಲ್ಲಿಯೂ, ವಿಮಾನ ಕಾರ್ಖಾನೆಗಳಲ್ಲಿಯೂ, ಮತ್ತು ಇನ್ನಿತರೇ ಪ್ರಮುಖ ಕೈಗಾರಿಕಾ ಸಂಸ್ಥೆಗಳಲ್ಲಿಯೂ ಸೇರಿ ಸುಮಾರು ೬೦೦ ಮಂದಿ ಕೆಲಸ ಕಲಿಯುತ್ತಿದ್ದಾರೆ.

ಈ ರೀತಿ, ಶಿಕ್ಷಣವನ್ನು ಕಲಿಯಲು ಬಂದಿರುವವರಿಗಾಗಿ ಇಲ್ಲಿ ಬೇಕಾದಂತೆ ಅನುಕೂಲ ಮಾಡಿಕೊಡಲಾಗಿದೆ. ಪಶ್ಚಿಮ ಜರ್ಮನಿಯ ಹೆಬ್ಬಾಗಿಲು ಎಂದು ಹೆಸರು ಗಳಿಸಿರುವ ಈ ಪಟ್ಟಣದಲ್ಲಿ ಶಿಕ್ಷಣ ನೀಡುವ ೪೭ ಸಂಸ್ಥೆಗಳಿವೆ; ಅನೇಕ ಔದ್ಯೋಗಿಕ ಸಂಘಗಳೂ, ಇಂಥವರಿಗೆ ಬೇಕಾದಂತಹ ಪುಸ್ತಕಗಳನ್ನು ಹೊಂದಿರುವ ಪುಸ್ತಕ ಭಂಡಾರಗಳೂ ಇವೆ.

ಇಂಡೋನೇಷಿಯಾ ಮತ್ತು ಸುತ್ತಮುತ್ತಲಿನವರಿಗೆ ಅವರ ಭಾಷೆಯಲ್ಲಿಯೇ ಬೋಧಿಸುವ ಸಂಸ್ಥೆಗಳೂ ಇವೆ. ಉಷ್ಣವಲಯದ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಹರಡುವ ವ್ಯಾಧಿಗಳ ಬಗ್ಗೆ, ಅವುಗಳ ನಿವಾರಣೆಯ ಬಗ್ಗೆ ಬೆಳಕು ನೀಡುವ ಸಂಸ್ಥೆಗಳೂ ಇಲ್ಲಿವೆ.

ಹೊರ ದೇಶಗಳಿಂದ ಶಿಕ್ಷಣ ಪಡೆಯಲು ಬಂದಿರುವವರಿಗೆ ಸಹಾಯ ನೀಡಲು ಅನೇಕ ಅಂತಾರಾಷ್ಟ್ರೀಯ ಸಂಸ್ಥೆಗಳಿವೆ. ಅವುಗಳಲ್ಲಿ ಆಫ್ರಿಕಾ ಅಸೋಸಿಯೇಷನ್, ಇಬಿರೋ ಅಮೇರಿಕಾ ಅಸೋಸಿಯೇಷನ್, ಮಧ್ಯ ಪ್ರಾಚ್ಯದ ಅಸೋಸಿಯೇಷನ್, ಪೂರ್ವ ಏಷಿಯಾ ಅಸೋಸಿಯೇಷನ್ ಮುಂತಾದವು ಮುಖ್ಯವಾದವು. ಆಯಾ ದೇಶಗಳ ಬಗ್ಗೆ ಯಾವುದೇ ವಿಷಯಗಳ ಬಗ್ಗೆ ತಿಳಿಯಲಿಚ್ಛಿಸಿದಲ್ಲಿ, ಈ ಸಂಸ್ಥೆಗಳು ಸಂಪೂರ್ಣ ಮಾಹಿತಿಯನ್ನು ನೀಡುವುವು.

ಜರ್ಮನಿಯಲ್ಲಿ ಶಿಕ್ಷಣ ಪಡೆಯಲು ಹೋಗುವವರು ಮೊದಲು ಎಂಟುವಾರಗಳ ಶಾಲೆಯೊಂದರಲ್ಲಿ ಜರ್ಮನ್ ಭಾಷೆಯನ್ನು ಕಲಿಯಬೇಕು. ಅನಂತರ, ಈ ವಿದ್ಯಾರ್ಥಿಗಳಿಗೆ ಅವರ ಕೆಲಸಕ್ಕನುಗುಣವಾಗಿ ಸಂಭಾವನೆಯನ್ನು ಕೊಡುವುದಲ್ಲದೆ, ತಿಂಗಳಿಗೆ ನಾಲ್ಕು ನೂರು ಮಾರ್ಕ್‌ಗಳ ವಿದ್ಯಾರ್ಥಿವೇತನವನ್ನೂ ನೀಡಲಾಗುವುದು. ಅಭ್ಯರ್ಥಿಗಳು ಇಚ್ಛಿಸಿದ ವಿಭಾಗದಲ್ಲಿ ಅವರಿಗೆ ತರಬೇತಿಯನ್ನು ನೀಡಲಾಗುವುದು.

ಈ ಅಭ್ಯರ್ಥಿಗಳ ಸಹಾಯಕ ಸಂಸ್ಥೆಯು ದ್ಯೂಷ್ ಒಗ್ ಸಂಸ್ಥೆಯು ಯಾವುದೇ ನಿರ್ದಿಷ್ಟ ಆಶಯವೂ ಇಲ್ಲದೆ, ಆಫ್ರಿಕಾ, ಏಷ್ಯಾಗಳಿಂದ ಬರುವ ವಿದ್ಯಾರ್ಥಿಗಳು ನೇರವಾಗಿ ಇಲ್ಲಿಗೇ ಬರುತ್ತಾರೆ. ಒಂದು ಜಾಗೆಯಲ್ಲಿ ಇದರ ನಿಯಮವನ್ನು ಮಾಡಿ, ಕೊಟ್ಟ ಕೆಲಸದಲ್ಲಿ ಅವರು ನಾಕಷ್ಟು ನಿಷ್ಣಾತರೆಂದು ತಿಳಿದು ಬಂದಾಗ ವಿದ್ಯಾರ್ಥಿ ವೇತನವನ್ನು ನೀಡಲಾಗುವುದು. ಹೀಗೆ ಬರುವವರ ಸಂಖ್ಯೆಯು ಈಚೆಗೆ ಬಹಳವಾಗಿ ಹೆಚ್ಚುತ್ತಿರುವುದರಿಂದ ಈ ಸಂಸ್ಥೆಯು ಅಭ್ಯರ್ಥಿಗಳನ್ನು ಆರಿಸುವ ವಿಷಯದಲ್ಲಿ ಕೊಂಚ ಬಿಗಿಯಾಗಿಯೇ ವರ್ತಿಸುತ್ತಿದೆ.

ಇವರ ವಸತಿ ಪ್ರಶ್ನೆಯೂ ಒಂದು! ಅನೇಕ ಜರ್ಮನ್ ಸಂಸಾರಗಳು ಇವರಿಗೆ ಜಾಗಕೊಟ್ಟಿರುವವಲ್ಲದೆ, ಇವರಿಗೆಂದೇ ನ ಸಜ್ಜಿತವಾದ ಹಾಸ್ಟೆಲುಗಳನ್ನೂ ನಿರ್ಮಿಸಲಾಗಿದೆ. ಇವೆಲ್ಲಾ ರೀತಿಗಳಿಂದ ಜರ್ಮನಿಯು ವಿದೇಶೀ ವಿದ್ಯಾರ್ಥಿಗಳ ಉತ್ಕರ್ಷದ ಹಾದಿ ಮಾಡುತ್ತಿದೆ.

ಕುಂದಾಪುರ ಡಿ ಮು. ಕೋರ್ಟಿನಲ್ಲಿ

O. S. No. 132/1960
R. E. P 348/1963

ವಾದಿ ಕೆ. ರಾಮಕೃಷ್ಣ ಶ್ಯಾನುಭಾಗ

ಪ್ರತಿವಾದಿಗಳು — ಚಂದಮ್ಮ ಸೆಟ್ಟಿ ಪೌತಿ ಕೂಡಾ,

3. ನುಂಜಯ್ಯ ಸೆಟ್ಟಿ, 4. ಮಹಾಬಲ ಸೆಟ್ಟಿ, ಚಂದಮ್ಮ ಸೆಟ್ಟಿ ಮಕ್ಕಳು ಕುಂದಾಪುರ ತಾಲೂಕು ವಡೇರ ಹೋಬಳಿ ಗ್ರಾಮದಲ್ಲಿರುವವರು—ಇವರಿಗೆ,

ವಾದಿಯು ಸದ್ರಿ O. S 132/1960ನೇ ಡಿಕ್ರಿ ಮೇಲೆ ಸದ್ರಿ ಅಮಲುಜಾರಿ ನಡಿಸಿ 1ನೆ ಪ್ರತಿವಾದಿಯ ವಾರಿಸ್‌ದಾರರನ್ನಾಗಿ ನಿಮ್ಮನ್ನು ಸೇರಿಸಿರುವದರಿಂದ ಆ ಅಮಲುಜಾರಿ ಯಾಕೆ ನಡೆಸ ಕೂಡದು ಎಂಬ ಬಗ್ಗೆ ಸಬಬು ತೋರಿಸುವರೆ ತಾ 27–9–1963ನೇ ದಿವಸ ಹಗಲು 11 ಗಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರ್ಮಾಡಿಕೊಳ್ಳತಕ್ಕದ್ದು ಎಂಬದನ್ನು ಕೋರ್ಟಿನ ಹುಕುಂ ಪ್ರಕಾರ ಈ ಮೂಲಕ ತಿಳಿಸೋಣಾಗುತ್ತದೆ.

By Order of the Court
K. Raghunath Shenai
Advocate
Coondapoor, 7—9—1963

ನಿಮ್ಮ ನಿಮ್ಮ ಡೊಂಕನ್ನು ತಿದ್ದಿಕೊಳ್ಳಿರಿ

(೫ನೇ ಪುಟದಿಂದ)

ಪ್ರೀತಿಸುವ ಯಾವ ವಸ್ತುವನ್ನಾದರೂ ಆತ ತನ್ನ ಶತ್ರುವೆಂದು ತಿಳಿಯುತ್ತಾನೆ."

ಅನಂತರ ಆ ವೈದ್ಯರು ತಾಯಿಯನ್ನು ಮೂರು ತಿಂಗಳುಗಳ ವರೆಗೆ ಮಾನಸಿಕ ರೋಗ ನಿದಾನ ಚಿಕಿತ್ಸಾಲಯಕ್ಕೆ ಕರೆಸಿಕೊಂಡು ಮೊದಲು ಆಕೆಯ ರೋಗವನ್ನು ದೂರ ಮಾಡಿದರು. ಸ್ವಚ್ಛತೆ ಮತ್ತು ಕ್ರಮಬದ್ಧತೆಯ ಹೆಸರಿನಲ್ಲಿ ನಡೆಯುವ ಯಾವ ಕೆಲಸದಲ್ಲೇ ಇರಲಿ, ಸ್ವಚ್ಛತೆ ಅಥವಾ ಕ್ರಮಬದ್ಧತೆಗಳಿರುವುದಿಲ್ಲ. ಅದರಲ್ಲಿ ತನ್ನ ವ್ಯಕ್ತಿ ಪ್ರತಿಷ್ಠೆ ಮತ್ತು ಶುಷ್ಕ ಆಡಂಬರಗಳು ಮಾತ್ರವಿವೆ. ಇವನ್ನು ಮರೆಮಾಡುವುದರಲ್ಲೇ ನಮ್ಮ ಎಲ್ಲ ಸಮಯ ಕಳೆಯುತ್ತದೆ— ಎಂದು ತಿಳಿಸಿ ಹೇಳಿದರು ತಾಯಿಗೆ ಇದು ಸರಿಯೆಂದೆನಿಸಿತು. ವೈದ್ಯರ ನಿರಂತರ ಪ್ರಯತ್ನ ಸಫಲವಾಗಿ ತಾಯಿಯು ಸರಿಯಾದಳು; ಮಗುವಿನ ಮನೋಸ್ಥಿತಿಯೂ ಸರ್ವಸಾಧಾರಣವಾಗುತ್ತ ಬಂತು.

ಹತ್ತು ವರ್ಷದ ಮತ್ತೊಬ್ಬ ಹುಡುಗನನ್ನು ಚಿಕಿತ್ಸೆಗೆಂದು ತಂದರು. ಅವನು ಯಾವುದೇ ವಿಷಯದ ಬಗ್ಗೆ "ಇಲ್ಲ"ವೆಂಬ ಉತ್ತರವನ್ನು ಕೇಳಲಾರದೆ, ಕೂಗಿಕೊಂಡು ದಿನವಿಡಿ ಉದಾಸೀನ ಪ್ರವೃತ್ತಿಯಿಂದಿರುತ್ತಿದ್ದನು

ತನ್ನ ಹೆತ್ತವರಿಗಾತ ಒಬ್ಬನೇ ಒಬ್ಬ ಮಗನಾಗಿದ್ದನು. ಎಲ್ಲರೂ ಅವನ ಮಾತುಗಳನ್ನು ಮನ್ನಿಸುತಿದ್ದರು; ಎಂತಲೇ ಬಹು ಪ್ರೀತಿ ಪಾತ್ರನಾಗಿದ್ದನು. ಆದರೆ, ಕಾಲಕ್ರಮೇಣ, ಆತನ ಇಚ್ಛೆಗಳು ಅಸೀಮವಾದುವು. ಆಗ ತಾಯ್ತಂದೆಗಳು 'ಇಲ್ಲ'ವೆನ್ನಲೇ ಬೇಕಾಯ್ತು. ಇದನ್ನಾತ ಸಹಿಸಲಾರದಾದನು. ಆ ಹುಡುಗನು ಕೆಲ ಸಮಯ ಡಾಕ್ಟರರ ಬಳಿ ಉಳಿದ ಮೇಲೆ ಹೆತ್ತವರ ದುಃಖ ದೂರವಾಯ್ತು. ಡಾಕ್ಟರಲ್ಲಿ ಹುಡುಗನು ೭ ಗಡಿಯಾಟದ ರಾಜನನ್ನು ಕಂಡನು. ಈ ಆಟದಲ್ಲಿ ಆತನ ಆಸಕ್ತಿ ಬೆಳೆಯಿತು. ಆಡುತ್ತ ಆಡುತ್ತಲೇ ಸೋಲು—ಗೆಲವುಗಳನ್ನು ಶಾಂತಿಯಿಂದ ಅನುಭವಿಸುವುದು ಆತನಿಗೆ ಒಗ್ಗಿಹೋಯಿತು

ಸಾಮಾನ್ಯವಾಗಿ ಇಂತಹ ವಿಲಕ್ಷಣ ಮಕ್ಕಳು ಮನೆಯಲ್ಲಿ ತಂದೆತಾಯಿಗಳೊಡನಿದ್ದರೆ, ಜೀವನದ ಸತ್ಯಗಳನ್ನು ಅನುಭವ ಮಾಡಿಕೊಳ್ಳುವುದಿಲ್ಲ. ಅವರೊಡನಿರುವಾಗ, ತನ್ನ ಒಳಿತು ಕೆಡುಕುಗಳ ಎಲ್ಲ ಭಾರವನ್ನೂ ಅವರ ಮೇಲೆ ಹೊರಿಸಿ, ತಾವು ನಿಶ್ಚಿಂತರಾಗಿ ಉಳಿಯುವುದು ಮಕ್ಕಳಿಗೆ ಅಭ್ಯಾಸಗತವಾಗಿ ಬಂದಿರುತ್ತದೆ.

ಆದುದರಿಂದ ಈ ಮಕ್ಕಳಿಗೆ ಮನೋರೋಗ ವಿಶೇಷಜ್ಞರ ಮಾರ್ಗದರ್ಶನದ ಆವಶ್ಯಕತೆಯಿದೆ. ಅವರು ಮಕ್ಕಳನ್ನು ತಮ್ಮ ಮಿತ್ರರನ್ನಾಗಿಸಿ ಕೊಡಬಲ್ಲ ಸಲಹೆಗಳನ್ನು ತಾಯ್ತಂದೆಯರು ನೀಡಲಾರರು. ತಾಯ್ತಂದೆಯರೊಡನೆ ಮಕ್ಕಳು ಅತಿ ಪರಿಚಿತರಾಗುತ್ತಾರೆ. ಅವರಲ್ಲಿರುವ ದೌರ್ಬಲ್ಯತೆಗಳೂ ಮಕ್ಕಳ ಮುಂದೆ ಪ್ರದರ್ಶಿತವಾಗುತ್ತಿವೆ, ಮುಖ್ಯವಾಗಿ ಇಂದಿನ ಕಲಹಪ್ರಿಯ ದಂಪತಿಗಳು ತಮ್ಮ ಮಕ್ಕಳಿಗೆ ಯಾವ ಆದರ್ಶವನ್ನು ನೀಡಬಲ್ಲರು?

ನಾಲ್ಕರಿಂದ ಹದಿನೈದು ವರ್ಷಗಳ ನಡುವಿನ ಮಕ್ಕಳಲ್ಲಿ ಕೆಳಗೆ ಸೂಚಿಸಿದ ಲಕ್ಷಣಗಳು ಉಗ್ರವಾಗಿ ವ್ಯಕ್ತವಾಗುವುದಾದರೆ, ತಾಯ್ತಂದೆಯರು ಅವನ್ನು ಸುಮ್ಮನೆ ಬಿಡಬಾರದು. ಉಚಿತ ರೀತಿಯಲ್ಲಿ ಉಪಚರಿಸಬೇಕು. ಇಲ್ಲವಾದರೆ, ಮಕ್ಕಳ ಭವಿಷ್ಯ ಜೀವನವು ನಷ್ಟವಾಗಿ ಹೋಗುವುದು.

೧ ಮಗುವು ತನ್ನ ಸಹಪಾಠಿಯವರೊಡನೆ ಅಥವಾ ಸ್ನೇಹಿತರೊಡನೆ ಬಹಳವಾಗಿ ಜಗಳ ಕಾಯುವುದು.

೨. ಓದು ಬರಹದಲ್ಲಿ ಮನಸ್ಸು ಕಿಂಚಿತ್ತೂ ನಿಲ್ಲದಿರುವುದು.

೩. ಏಕಾಕಿಯಾಗಿದ್ದು ತನ್ನೊಳಗೇನೇ ಗೊಣಗಿಕೊಳ್ಳುವುದು, ಮತ್ತು

೪. ತನ್ನನ್ನು ತಾನೇ ಉಪಹಾಸಾಸ್ಪದನನ್ನಾಗಿ ಮಾಡಿ ಪರರನ್ನು ಪ್ರಸನ್ನಗೊಳಿಸುವ ಪ್ರಯತ್ನ ಮಾಡುತ್ತಿರುವುದು.

ಯಕ್ಷಗಾನದಲ್ಲಿ ಹಿರಿಯ ಸ್ಥಾನ ಗಳಿಸಿ, 'ಯಕ್ಷಗಾನ ಭಾಸ್ಕರ'ನೆಂದು ಪ್ರಸಿದ್ಧಿ ಪಡೆದ ದಿ| ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ಟರ

ನವಕಾಲೋಚಿತವಾದ ಯಕ್ಷಗಾನ ಪ್ರಸಂಗಗಳು.

ಸಾಹಸ ಭೀಮ ವಿಜಯ (ಗದಾಯುದ್ಧ) ೦—೮—೦
ಯಕ್ಷಗಾನ ದರಂಪರಾದದ ಆಟದ ಕ್ರಮಕ್ಕನುಸರಿಸಿ ಪಾಂಡವರ ಒಡ್ಡೋಲಗದ ದೃಶ್ಯವನ್ನು ದಿಗ್ದರ್ಶನ ಮಾಡಿ, ಮುಂದೆ ಕಥಾಭಾಗವನ್ನು ಮೂಲ ಕಾವ್ಯಕ್ಕನುಸರಿಸಿಯೇ ಕೊನೆಗೊಳಿಸಿದೆ.

ಭಾರತದ ಗುರುಕುಲ ೦—೬—೦
ಪಾಂಡವ, ಕೌರವ ಬಾಲ್ಯ ಕೇಳಿಗಳು, ವಿದ್ಯಾಭ್ಯಾಸ, ಪರೀಕ್ಷಾರಂಗದ ಕಾರ್ಯಗಳು, ಗುರುದಕ್ಷಿಣೆ ಮೊದಲಾದ ವಿಷಯಗಳನ್ನೊಳಗೊಂಡಿದೆ.

ಲತ್ತಪಗಡೆ ೦—೬—೦
ಭಾರತದ ಸಭಾಪರ್ವದೊಳಗಣ ಚರಿತ್ರೆಗಳಿರುವ ನಾಲ್ಕು ದೃಶ್ಯಗಳೂ ಅರಣ್ಯಪರ್ವೋಕ್ತವಾದ ಕಿರ್ಮೀರ ವಧೆಯೆಂಬ ದೃಶ್ಯವೂ ಸೇರಿವೆ.

ಭರತೇಶ ದಿಗ್ವಿಜಯ ೦—೮—೦
ರಾಜಕವಿ ರತ್ನಾಕರವರ್ಣಿಯ ಶೃಂಗಾರ ರಸಪ್ರಧಾನವಾದ ಭರತೇಶ ವೈಭವದೊಳಗಣ ದಿಗ್ವಿಜಯ ವಿಭಾಗದ ನೂತನ ಕಥಾವಸ್ತುಗಳನೊಳಗೊಂಡಿದೆ. ಯಕ್ಷಗಾನ ಕಲಾಭಿಮಾನಿಗಳಿಗೆ ವಿವರವಾದ ಸೂಕ್ತ ಅನುಭವ ಸೂಚಿಯಿದೆ.

ವಾಲಿ ಸುಗ್ರೀವ (ಬಹುಮಾನಿತ) ೦—೮—೦
ವೀರ, ಕರುಣಾ ರಸಪ್ರಧಾನವಾದ ನವೀನ ರೀತಿಯಲ್ಲಿ ಮನಮೊಪ್ಪುವಂತೆ ರಚಿಸಲಾದ ರಾಮಾಯಣಾಂತರ್ಗತ ಪ್ರಸಂಗ.

ಪುಸ್ತಕ ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ನವಭಾರತ ಪುಸ್ತಕ ಭಂಡಾರ, ಉಡುಪಿ.

ವರ್ಗ—ಊಳಿಗ
ಮೊದಲಾದ ಯಾವತ್ತೂ ತರಹ.
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಿಗಳು,
ಫಾರ್ಮುಗಳು
ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

ಜೈಮಿನಿ ಭಾರತದಲ್ಲಿ ವೀರರಸ

(೪ನೇ ಪುಟದಿಂದ)

ದೆ ಈ ನೃಪತಿ ಜೀವಿಸಲಿ, ಎಂದು ಹಾರೈಸುತ್ತಾನೆ. ಅಂತು ಕುದುರೆ ವಶವಾಯಿತು, ಶ್ರೀ ಕೃಷ್ಣನನ್ನು ಆಹ್ವಾನಿಸಿದ್ದಾಯಿತು, ಅನುಗ್ರಹದ ಬೆಂಬಲವಾಯಿತು. ಕುದುರೆಯ ಪೂಜಾದಿಗಳು ನಡೆಯುವ ಸನ್ನಿವೇಶದಲ್ಲಿಯೇ ಅನುಸಾಲ್ವನೆಂಬವನು ಹಗೆತನದಿಂದ ಮೇಲೆಬಿದ್ದು ಕುದುರೆಯನ್ನು ಕಟ್ಟಿ ಪ್ರತಿಭಟಿಸಿದ ಕೃಷ್ಣಪುತ್ರ ಪ್ರದ್ಯುಮ್ನನು ಆತನಿಗಿದಿರಾಗಿ ನಡೆದು ಸೋತು ಹಿಂತಿರುಗಿದಾಗ ಶ್ರೀ ಕೃಷ್ಣನು ಆತನನ್ನು ಕಾಲ್ದುದಿಯಿಂದ ಒದ್ದು ದ್ವಾರಕೆಯನೆಂತು ಆಬಲೆಯರ ಮುಂದೆ ಹುಗುವೆ, ಎಂದು ಮೂದಲಿಸುತ್ತಾನೆ. ಒಳಿಕ ಹಗೆಯನ್ನು ಸದೆಬಡಿಯಲು ಭೀಮನು ಮುಂದೆ ಬರಲು ವೃಷಕೇತು ಸ್ಪರ್ಧಿಸಿ 'ತಾತ, ಬಾಲಾಭಿಲಾಷೆಯ ಸಲಿಗೆ ಪಿತರೆಳಸುವರೆ? ಈ ಸಮರಂ ತನಗೆ ಮೀಸಲು ಲೋಭದಿಂ ನೀಂ ಬರ್ಪುದೆ, ಎಂದು ನುಡಿದು ನಲಿಸಿ ಆತನ ಅನುಮತಿಯಿಂದ ತಾನು ರಣಕ್ಕೆ ಇದಿರಾಗುತ್ತಾನೆ ಆತನ ಯುದ್ಧ ಹೇಗಿತ್ತು— ಮಂಡಲಾಕೃತಿಯಪ್ಪಿದಿರದು ಕೋದಂಡಂ ಅಂಬುಗಿಪ ಹೂಡುವ ಬಿಡುವ ಭೇದಮಂ ಕಂಡವರದಾರ? ಅಸ್ತ್ರಮಯವಾದ ಎಚ್ಚನೆಗಳು. ಅನುಸಾಲ್ವನಳವಳಿದನು ದಿಂಡುರುಳಿ ತಾಪತನ ಚತುರ್ಬಲಂ ಬಳಿಕ ಕೋಪಂದವಂ ಕೊಂಡವನ ರಥದೆಡೆಗೆ ಬಂದು ಎಳೆದುಕೊಂಡು ಕೃಷ್ಣನ ಪದಾಂಬುಜದೆ ಹೊರೆಗಾಗಿ ನಡೆತಂದಿಳುಹಿ ಕೈಮುಗಿದನು ಇದನ್ನು ಮೆಚ್ಚಿದ ಜನರು ಉಂಡಾಡಿಗಳ್ ಪಲಬರಿರ್ದೊಡೇನಹುದು. ಇಪನೇಗಗಂಡು ಆಡಿಪುರ ಭಾಷೆಗೆ ಅರಿತಿರಂಗಳಂ ಚೆಂಡಾಡಿ ಪಗೆವನಂ ಪಿಡಿದೊಪ್ಪಿಸಿದನು ಎಂದು ಶ್ಲಾಘಿಸಿದರು. ಬೇರೊಂದು ಕಡೆ ಖತಿಗೊಂಡ ಭೀಮಸೇನನು ಹಗೆಯ ರಥವನ್ನು ಗದೆಯಿಂದ ಅಪ್ಪಳಿಸಲು ಮುಗ್ಗಿದುದು ಕುದುರೆ, ಸಾರಥಿ ಮಡಿದಂ, ಆ ರಥಂ ನುಗ್ಗಿದುದು, ತಗ್ಗಿದುದ ದಿಗ್ದಂತಿ, ಘೋರಾಂಜನ ಕೊರಲ್ ಕುಗ್ಗಿದುದು, ಧರಣಿತಲ ಮಿಟ್ಟಾಗವಾಗಿ ಸಲೆ ಹಿಗ್ಗಿದುದು ಕಾದಿ ದಂಡುಗಬಡದ ಮುನ್ನಮೇ ತನ್ನಳವಿಗೈದಿದಂತದ ಭಟರ ತೇರ್ಗಳಂ ತೆಗೆದಿಳೆಗೆ ನೋದಿದಂ, ಕೊಂದಂ, ಅಡಗೆಡಹಿದಂ, ಸದೆದಂ, ಒದೆದಂ, ಪಿಡಿದು ಸಂಡಿಲ್ಗಳಂ ಸೇದಿ ದಂತಿಗಳ ನೀಡಾದಿದಂ, ರುಧಿರದಿಂ ನಾದಿದಂ ಧರೆಯ, ಉಸಿಗಾಳಿಯಿಂ ಪಾರಲೂದಿದಂ ಭಟರಂ, ರಣದೊಳ್ ಪೆಣದ ರಾಶಿ ಮಾಡಿದಂ ಪರಬಲದೊಳಾ ಭೀಮನು --- ಈ ಪೀರಿಕೆ ನಡೆದ ವೇಳೆ ಶ್ರೀ ಕೃಷ್ಣನು ಮತಿಯಿಂದ ಯುಧಿಷ್ಠಿರನು ಯಜ್ಞದೀಕ್ಷಿತನಾದನು ಖಡ್ಗಧಾರಾವ್ರತಿಯಾದನು ವಸಂತದ ಹುಣ್ಣಿವೆಯಂದು ಕುದುರೆಯನ್ನು ಪೂಜಿಸಿ ಅದರ ಹಣೆಗೆ ಸುವರ್ಣ ಫಲಕವಟ್ಟಿ ಇದು ಧರ್ಮಜನ ಯಜ್ಞಾಶ್ವ, ಯಾರು ಬೇಕಾದರೂ ಕಟ್ಟಿ ನಿತ್ತರಿಸಿಕೊಳ್ಳಬಹುದು." ಎಂದು ಬರೆದು ಅಳವಡಿಸಿ ಸ್ವೇಚ್ಛೆಯಿಂದ ಹರಿಯಲು ಬಿಟ್ಟು ಬೆಂಗಾವಲು ನಡೆವಿತ್ತು. ಕುದುರೆಯನ್ನು ಕಟ್ಟಿದ ವೀರರು ನೀಲಧ್ವಜ, ಹಂಸಧ್ವಜ, ತಾಮ್ರಧ್ವಜ, ಪ್ರಮೀಳೆ, ಬಭ್ರುವಾಹನ, ಮುಂತಾದ ಮಹಾವೀರರು ಅವರೊಡನೆ ಯುದ್ಧ ಮಾಡಿ ಕೇವಲ ಕೃಷ್ಣಾನುಗ್ರಹದಿಂದ ನಿಸ್ತರಿಸಿದವನು ಮೂರು ಲೋಕದ ಗಂಡನೆನಿಸಿದ ಮಹಾವೀರ ಪಾರ್ಥನು ಕೇವಲ ಅರ್ಜುನನ ಅಹಂಕಾರ ಖಂಡನೆಗಾಗಿಯೇ ಏರ್ಪಾಡಾಯಿತೋ ಈ ಅಶ್ವಮೇಧ ಎಂಬಂತೆ ನಡೆಯುತ್ತದೆ ಯುದ್ಧ ವೈಖರಿ. ಈ ನಡುವೆ ಶ್ರೀ ರಾಮಾಶ್ವಮೇಧದ ಲವಕುಶರ ಕಾಳಗದ ಪ್ರಸಕ್ತಿ ಭೂಷಣವಾಗಿ ಬರುತ್ತದೆ

ವೀರ ಲವಕುಮಾರನ ಶೌರ್ಯವನ್ನು ಕವಿ ಹೀಗೆ ವರ್ಣಿಸುತ್ತಾನೆ —

ಜಾನಕಿಯ ಸುತನ ಬಾಣಾವಳಿಯ
ಹಾವಳಿಯ
ನೇನೆಂಬೆನಹಿತರಂ ಕವರಿದುವು
ಸವರಿದುವು
ಜಾನೆಡೆಯೊಳಿಟ್ಟಣಿಸಿ ಹಾರಿದುವು
ತೂರಿದುವು
ಕೊಂದುವರೆದುವು ಪರಿದವು.
ಆನೆಕುದುರೆಗಳನುರೆ ಸೀಳಿದುವು
ತೂಳಿದುವು
ನಾನಾಪ್ರಕಾರದಿಂ ಕೆಡಹಿದುವು
ಕೊಡಹಿದುವು
ಸೈನಿಕರೊಡಲ್ಗಳಂ ಸೇನೆಗಳೊಡಲ್ಗ
ಳು ಹಚ್ಚಿದುವು
ಕೊಚ್ಚಿದುವ ತಲೆಗಳಂ ತಕ್ಷಣದೊಳು
ಕರ್ಕಶದೊಳೆಂದು ರಾವಣ ಕುಂಭ
ಕರ್ಣಾದಿ ರಕ್ಕಸರ
ನಂದು ತಿರುಗಿ ಬಹ ಕಣೆಗಳಿಕ್ಕಡಿ
ಗಳಾಗಿ
ಬಿದ್ದುವು ಕೂಡೆ ಬಾಲಕರ ಸುಗಿ
ಮೆಂಕ್ಯಬರೆ

ಕವಿಜೂತವನ ಚೈತ್ರನ ಕಾವ್ಯ ವೀರಾಗ್ಭುತವಾಗಿ ಹರಿದು ಹಾಸ್ಯ ತರಂಗಗಳಿಂದ ಕೂಡಿ ಶೃಂಗಾರ ಸರೋರುಹಾಲಂಕೃತವಾಗಿ ಅಶ್ವಮೇಧ ಸಮಾರಂಭದ ಶಾಂತಿ ಜಲಧಿಯಲ್ಲಿ ವಿಶ್ರಾಂತವಾಗುತ್ತದೆ.

(ಸೌಜನ್ಯ, ಆಕಾಶವಾಣಿ, ಬೆಂಗಳೂರು)

ಆದರ್ಶ ಚರಿತೆಗಳು ೨

ಪ್ರಭು ಜಗದ್ಬಂಧು

–ಎಸ್ ಎಂ ಶೆಟ್ಟಿ ಶಿವಪುಂಜೆ ಪರಾರಿ

ಮುರ್ಶಿದಾಬಾದ್ (ಬಂಗಾಲ) ಡಾಹಪಾರಾ ಗ್ರಾಮದ ಒಂದು ಬ್ರಾಹ್ಮಣ ಪರಿವಾರದಲ್ಲಿ ೧೮೭೧ರಲ್ಲಿ ಶ್ರೀ ಜಗದ್ಬಂಧು ಅವರ ಜನ್ಮವಾಯಿತು. ಬೆಳೆಯ ಗುಣ ಮೊಳಕೆಯಲ್ಲೇ ತೋರಿ ಬರುತ್ತದೆಂಬಂತೆ, ಮಹಾ ಪುರುಷರ ಬಾಲ್ಯವೂ ಅವರ ಮುಂದಿನ ಜೀವನದ ಸಂಕೇತವಾಗಿರುತ್ತದೆ ೧೬—೧೭ ವರ್ಷ ಪ್ರಾಯದಲ್ಲಿಯೇ ಇವರಲ್ಲಿ ಭಗವತ್ ಭಕ್ತಿ, ದಯಾಭಾವ, ವೈರಾಗ್ಯಗಳು ತುಂಬಿತ್ತು. ಆಗಲೇ ಗ್ರಾಮದ ಜನರು ಇವರನ್ನು ಸಂತರೆಂದೇ ಕರೆಯುತ್ತಿದ್ದರು. ಸಾವಿರಾರು ಜನರು ಇವರ ಕೀರ್ತನೆಯಲ್ಲಿ ಭಾಗವಹಿಸಲು ಬರುತ್ತಿದ್ದರು ದೂರ ದೂರದಿಂದ ಶ್ರದ್ಧಾಳು ಭಕ್ತರು ಇವರ ಉಪದೇಶ ಶ್ರವಣಗೈಯಲು ಬರುತ್ತಿದ್ದರು

ಜಗದ್ಬಂಧು ಅವರು ಬಂಗಾಲದಲ್ಲೆಲ್ಲಾ ತಿರುಗಿ ಕೀರ್ತನೆಯ ಪ್ರಚಾರಗೈದರು ಇವರ ಶರೀರದಿಂದ ಹೊರಡುವ ದಿವ್ಯ ತೇಜವೊಂದು ಇತರರ ಕಣ್ಣು ಕುಕ್ಕಿಸುವಂತಿತ್ತು ಎಂದು ಹೇಳುತ್ತಾರೆ ಆದುದರಿಂದಲೇ ಇವರು ಯಾವಾಗಲೂ ತನ್ನ ಶರೀರವನ್ನು ವಸ್ತ್ರದಿಂದ ಮುಚ್ಚಿಡುತ್ತಿದ್ದರಂತೆ ತಾನು ಸ್ನಾನಾದಿಗಳನ್ನು ಗೈಯುವಾಗ ಅಪ್ಪಿತಪ್ಪಿಯಾದರೂ ಯಾರೂ ಅತ್ತ ಸುಳಿಯಬಾರದೆಂದು ಅವರು ಕಟ್ಟಪ್ಪಣೆ ಮಾಡಿದ್ದರು, ಆಜ್ಞೆಯನ್ನು ಉಲ್ಲಂಘಿಸಿ ಕೆಲವು ಜನರು ಅವರು ಸ್ನಾನ ಮಾಡುವಾಗ ನೋಡಲು ಹೋದರು ಹಾಗೂ ನೋಡುತ್ತಲೇ ಮೂರ್ಛೆ ಹೋದರು ಎಂದು ಅನ್ನುತ್ತಾರೆ

ಒಂದೊಮ್ಮೆ ಅವರ ಶರೀರವು ರೋಗಗ್ರಸ್ತವಾಗಿತ್ತು ಆಗಲೂ ಆ ದಿವ್ಯ ಜ್ಯೋತಿಯ ಪ್ರಭಾವ ಕಡಿಮೆಯಾಗಿರಲಿಲ್ಲ. ಇವರ ಸುತ್ತಲೂ ಯಾವಾಗಲೂ ಹರಿಕೀರ್ತನೆ ನಡೆಯುತ್ತಿತ್ತು. ಜೀವನವಿಡೀ ಇವರು ಭಗವನ್ನಾಮ ಕೀರ್ತನೆಯ ಪ್ರಚಾರಗೈದರು. ಒಂಬತ್ತು ದಿನಗಳ ಒಳಿಕ ಅದೇ ಸ್ಥಾನದಲ್ಲಿ ಅವರ ಸಮಾಧಿಸ್ಥೆಯಲಾಯಿತು

ಅವರ ಜೀವನ ಕಾರ್ಯವು ಇನ್ನೂ ಪೂರ್ಣವಾಗಿಲ್ಲ ಎಂದು ಅವರ ಶಿಷ್ಯರು ಬಲವಾಗಿ ನಂಬಿದ್ದಾರೆ. ಪ್ರಭು ಜಗದ್ಬಂಧು ಪುನಃ ಅದೇ ಶರೀರದಿಂದ ಪ್ರಕಟವಾಗುತ್ತಾರೆ ಹಾಗೂ ತನ್ನ ಅಪೂರ್ಣ ಕಾರ್ಯವನ್ನು ಪೂರ್ಣಗೈಯುತ್ತಾರೆ. ಎಂಬುದು ಅವರ ವಿಶ್ವಾಸವಾಗಿದೆ ಇದೇ ವಿಶ್ವಾಸದಿಂದ ಗ್ವಾಲಚಾ ಶ್ರೀ ಅಂಗನ ಮಠ (ಫರೀದಪುರ ಸ್ಟೇಶನಿನ ಬಳಿ) ಎಂಬಲ್ಲಿ ಶ್ರೀ ಜಗದ್ಬಂಧು ಅವರು ಯಾವಾಗಲೂ ಮಲಗುತ್ತಿದ್ದ ಸ್ಥಳದಲ್ಲಿ ಅವರ ಶರೀರವನ್ನು ಸುರಕ್ಷಿತವಾಗಿಡಲಾಗಿದೆ.

ಹರಿನಾಮದಿಂದಲೇ ದೇಶ ನಿರ್ಮಾಣವಾಗುತ್ತದೆ ಕೀರ್ತನೆಯಿಂದಲೇ ದೇಹ ನಿರ್ಮಾಣವಾಗುತ್ತದೆ ಶ್ರೀಕೃಷ್ಣನ ಆವಿರ್ಭಾವವಾಗುತ್ತದೆ, ಎಂದವರು ಉಪದೇಶಿಸುತ್ತಿದ್ದರು ಈ ವಾಣಿಗನುಸಾರವಾಗಿ ಅವರ ಭಕ್ತರಾದ ಮಹೇಂದ್ರಜೀಯವರು ೧೯೩೧ನೇ ಅಕ್ಟೋಬರ ೧೯ರಿಂದ ಮಹಾ ಪ್ರಭುವಿನ ಮಹಾ ಜಾಗರಣೆಯಾಗುವ ತನಕ ಅಖಂಡ ನಾಮ ಸಂಕೀರ್ತನೆ ಗೈಯುವ ವ್ರತ ಹಿಡಿದಿರುವರು. ಅಲ್ಲಿ ದಿನ ರಾತ್ರಿ ಸಂಕೀರ್ತನೆ ನಡೆಯುತ್ತಿರುತ್ತದೆ, ಕೆಲವು ಶ್ರದ್ಧಾಳುಗಳು ತ್ಯಾಗೀ ಮಹೇಂದ್ರಜೀಯವರ ಈ ಕಾರ್ಯದಲ್ಲಿ ಸಹಯೋಗವೀಯುತ್ತಿರುವರು. ಭಿಕ್ಷೆ ಬೇಡಿ ಜೀವನ ನಿರ್ವಹಣೆ ಮಾಡಿ ಈ ಜನರು ನಾಮ ಸಂಕೀರ್ತನೆಯಲ್ಲಿ ತೊಡಗಿದ್ದಾರೆ.

(ಮೂಲ: ಠಾಕೂರ್ ಸುದರ್ಶನಸಿಂಹ)

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ
ಅತ್ಯಂತ ಪ್ರಯೋಜನಕಾರಿ ಪುಸ್ತಕ—
ಮನೆ-ಮದ್ದು
(HOME REMEDIES)
ಬರೆದವರು ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ ಎಮ್
ಮಕ್ಕಳ, ಹೆಂಗಸರ ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ತಯಾರಿಕೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ ಬೆಲೆ ರೂ. ಎರಡು
ನವಭಾರತ ಪುಸ್ತಕ ಭಂಡಾರ, ಉಡುಪಿ.

• ಕುಮಾರಿ ಬಿಲ್ಲೆಗಳು •
(ರಿಜಿಸ್ಟರ್ಡ್ Regd)
ಸ್ತ್ರೀಯರ ಎಲ್ಲ ರೋಗಗಳಿಗೂ ಉಪಯೋಗವಾದ ಕಾತರ ನಿವಾರಣೆಗೆ
ಸಮಯೋಚಿತವಾದ ಆಯುರ್ವೇದೀಯ ಚಿಕಿತ್ಸೆ!
ಬೆಲೆ ೩೦ ಸಾಮಾನ್ಯ ರೂ. ೪/ ಮಧ್ಯಮ ರೂ ೬/
ಉತ್ತಮ ರೂ ೨/-
P Devee & Co (N J) Calcutta—40.

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ
ಅಮೆರಿಕದ
ಆರು ಕತೆಗಳು
ಅಮೆರಿಕದ ಗ್ರಾಮಜೀವನದ ಸುಂದರ ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ
ಅನುವಾದಿಸಿದವರು.
ಕು. ಶಿ ಹರಿದಾಸ ಭಟ್ಟ, ಎಂ ಎ.
ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ.
ಬೆಲೆ. ರೂ 1=75, ಬಿಳಿ ಕಾಗದ
ರೂ. ೩ನ್ನು M O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು
ವ್ಯಾಪಾರಿಗಳಿಗೆ ಧಾರಾಳ ಕಮಿಷನ್
ಪ್ರತಿಗಳು ಸಿಗುವ ಸ್ಥಳಗಳು.
ನವಯುಗ ಪ್ರೆಸ್ ಉಡುಪಿ
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಕುಡುಗೋಲು ಸುತ್ತಿಗೆಗಳೆಡೆ ಅರ್ಧಚಂದ್ರ ನಕ್ಷತ್ರ

(೩ನೇ ಪುಟದಿಂದ)

ಮುಸ್ಲಿಂ ಅಲ್ಪ ಸಂಖ್ಯಾಕರನ್ನು ತಮ್ಮ ದಾರಿಗೆ ತರಲು ಅವರು ಅಹೋರಾತ್ರಿ ಬಿಡದೆ ಪ್ರಯತ್ನಿಸುತ್ತಿದ್ದರು. ಅವರನ್ನು ಒಡೆದು ಆಳುವ ಇನ್ನೊಂದು ರೀತಿಯ ಹಂಚಿಕೆಯನ್ನು ಹೂಡಲಾಯಿತು. ಅವರನ್ನು ಅನೇಕಾನೇಕ ಕುಲಗಳಿಗೆ ಸೇರಿದವರೆಂದು ವಿಂಗಡಿಸಿ, ಭಿನ್ನತೆಗೆಡೆಕೊಡಲು ಸ್ವಾಡಳಿತದ ಜಿಲ್ಲೆ ಹಾಗೂ ಊರುಗಳನ್ನು ರಚಿಸಲಾಗಿರುತ್ತದೆ ಆ ರೀತಿ ಸ್ವಾಡಳಿತ ಪ್ರದೇಶಗಳನ್ನು ರಚಿಸಿದೊಡನೆ ಮಹಮ್ಮದೀಯರು ದೂರು ಕೊಡಲು ಆರಂಭಿಸಿದರು. ಅದಕ್ಕೆ ಕಾರಣವೆಂದರೆ, ಆ ರೀತಿ ಪ್ರದೇಶಗಳನ್ನಾಗಿ ವಿಂಗಡಿಸಿದ್ದರೂ, ಅದರ ಆಡಳಿತದ ಅಂಗುಲೀಯು ಕಮ್ಯುನಿಸ್ಟರ ಕೈಯಲ್ಲೇ ಇದ್ದು ಆ ಪ್ರದೇಶಗಳ ರಚನಾ ಪಡೆಗಳಿಂದು ಕಮ್ಯುನಿಸ್ಟ್ ಸೈನ್ಯವನ್ನು ಅಲ್ಲಿ ನಿಲ್ಲಿಸಲಾಗಿರುತ್ತದೆ. ಅಲ್ಲದೆ ಅವರ ಸಂಖ್ಯೆಯ ಬಲವನ್ನು ಬುಡ ಸಹಿತ ಕಿತ್ತೊಗೆಯುವದಕ್ಕಾಗಿ ಇತರೆಡೆಗಳಿಂದ ಚೈನಿಯರನ್ನು ತರಿಸಿ ಅಲ್ಲಿ ತಂಗಲು ತಾವು ಮಾಡಿಕೊಡಲಾಗುತ್ತಿದೆ.

ಅಲ್ಪ ಸಂಖ್ಯಾಕರನ್ನು 'ನವೀನ ಚೈನಾ'ದ ದಾರಿಗೆ ತರಲು ಆ ರೀತಿ ರಂಗಭೂಮಿಯನ್ನು ಸಜ್ಜುಗೊಳಿಸಲಾಗಿರುತ್ತದೆ. ಮುಖಾಭಿಮುಖಿ ಮಹಮ್ಮದೀಯರ ಬಹಿರಂಗ ಪ್ರತೀಕಾರವನ್ನೆದುರಿಸಲು ಸಿದ್ಧವಾಗುತ್ತಿದ್ದ ಕಮ್ಯುನಿಸ್ಟ್ ಬಲ ಹಾಗೂ ಅಧಿಕಾರ ಆಗಲೇ ಪರಿಚಯವಾಗಿ ಬಿಟ್ಟಿತ್ತು. ಬಹುಶಃ ಚೈನಾದಲ್ಲಿ ಇನ್ನಾವ ಮತಕ್ಕಿಂತಲೂ ಮಹಮ್ಮದೀಯ ಮತವು ಅದರ ಅನುಯಾಯಿಗಳ ದೈನಂದಿನ ಜೀವನದಲ್ಲಿ ಜಾಸ್ತಿ ವ್ಯಾಪಿಸಿಕೊಂಡಿರುತ್ತದೆ ಮತ್ತು ಅವರನ್ನು ಮತೀಯ ಮಡುವಿನಲ್ಲಿ ಮುಳುಗಿಸಿಕೊಂಡಿರುತ್ತದೆ. ಅವರು ಅದ್ಯಾವ ಆಹಾರ ಸ್ವೀಕರಿಸಬಹುದು. ಯಾವದನ್ನು ತಿನ್ನಬಾರದು, ಯಾವಾಗ ಪ್ರಾರ್ಥನೆ ಮಾಡಬೇಕು ಮುಂತಾದ ದೈನಂದಿನ ಜೀವನದ ವಿಷಯಗಳನ್ನು ಕೊರಾನ್ ವಿವರಿಸುತ್ತದೆ ಸಾಮೂಹಿಕ-ಬಲಾತ್ಕಾರ ಕೃಷಿ ಪದ್ಧತಿಯು ಅವರ ದೈನಂದಿನ ಜೀವನದ ಮೇಲೆ ಹತೋಟಿ ಇಟ್ಟುಕೊಳ್ಳುವದರಿಂದ ತನ್ನ ಸಾಮೂಹಿಕ ಕಾರ್ಯಕ್ರಮದಂತೆ ಎಲ್ಲೆಡೆಗಳಲ್ಲೂ ಬಲಾತ್ಕಾರ ಕೃಷಿಪದ್ಧತಿಯನ್ನು ಪ್ರಚಾರಕ್ಕೆ ತರಲು ಕಮ್ಯೂನಿಸ್ಟರು ಪ್ರಯತ್ನಿಸಿದಾಗ ಮಹಮ್ಮದೀಯರು ಅದನ್ನೆದುರಿಸಿದರು. ಮುಸಲ್ಮಾನರಿಗೆ ಬಂದಿಸಿಕೂ ಕಷ್ಟಕೊಡಲು ತಮಗೆ ಮನಸ್ಸಿಲ್ಲವೆಂದು ಕಮ್ಯೂನಿಸ್ಟರು ಸತತ ಸಾರುತ್ತ ಬರುತ್ತಿದ್ದುತೆ, ಅವರ ರಾಜಕೀಯ ಕಾರ್ಯಕ್ರಮದ ಚಕ್ರವು ಚಲಿಸುತ್ತಲಿತ್ತು.

ಕಮ್ಯೂನಿಸ್ಟರು ಮುಂಜಾಗರೂಕತೆ ವಹಿಸಿಕೊಂಡು ಉಪಾಯದಿಂದ ಬಲತ್ಕಾರ ಹಾಗೂ ಸಾಮೂಹಿಕ ಕೃಷಿಪದ್ಧತಿಯನ್ನು ಬಳಕೆಗೆ ತಂದೇ ಬಿಟ್ಟರು. ಅಲ್ಲಿ ಮುಸಲ್ಮಾನರು ಮುಸಲ್ಮಾನೇತರರೊಂದಿಗೆ ಕುಳಿತುಕೊಂಡು ತಿನ್ನಬೇಕಾಗುತ್ತಿತ್ತು. ಅಲ್ಲದೆ ಕೊರಾನ್ ತಿನ್ನಕೂಡದೆಂದು ತಿಳಿಸಿರುವುದನ್ನೂ ತಿನ್ನಬೇಕಾಗುತ್ತಿತ್ತು. ಇನ್ನೊಂದು ತಮಾಷೆಯ ವಿಷಯವೆಂದರೆ, ಶುಕ್ರವಾರ ಮಸೀದಿಗೆ ಹೋಗುವದಾಗಲೀ ದಿನಂಪ್ರತಿ ಪ್ರಾರ್ಥನೆಮಾಡುವುದಾಗಲೀ, ತಪ್ಪೆಂದು ಕಮ್ಯೂನಿಸ್ಟ್ ಸರಕಾರ ಪ್ರಕಟಿಸಲಿಲ್ಲ. ಆದರೆ ಬಲತ್ಕಾರ ಕೃಷಿ ಪದ್ಧತಿಯ ಕಾರ್ಯಕ್ರಮದಲ್ಲಿ ಅದಕ್ಕಾಗಿ ಸಮಯ ಮೀಸಲಾಗಿಟ್ಟಿರಲಿಲ್ಲ. ಸಮಯ ಸಿಕ್ಕಿದ್ದಲ್ಲಿ ಮಸೀದಿಗೆ ಹೋಗುವುದಿರಲಿ ಇದ್ದಲ್ಲೇ ಆದರೂ, ಪ್ರಾರ್ಥನೆಮಾಡುವುದು ಹೇಗೆ ಸಾಧ್ಯ? ಇಮಾಮರಂತಹ ಅವರ ಮತೀಯ ಮುಖಂಡರು ಕೂಡಾ ವಾರದಲ್ಲಿ ಏಳುದಿನವೂ ಗದ್ದೆಗಳಲ್ಲಿ ದುಡಿಯ ಬೇಕಾಗಿರುತ್ತದೆ. ಕಮ್ಯೂನಿಸ್ಟ್ ಅಧಿಕಾರಿಗಳಿಗೆ ಕೂಡಾ ಗದ್ದೆಯ ಕೆಲಸವಿಲ್ಲದಿದ್ದರೂ ವಾರದಲ್ಲಿ ಏಳುದಿನವೂ ಮೇಲ್ವಿಚಾರಣೆಯ ಕೆಲಸವನ್ನು ನೋಡಿಕೊಳ್ಳಬೇಕಾಗಿರುತ್ತದೆ. ಅಪವಾದಕ್ಕೆ ಅಲ್ಲಿ ಆಶ್ರಯವೇ ಇಲ್ಲ.

ಗದ್ದೆಯ ಜೀವನಕ್ಕೆ ಬಗ್ಗಿಕೊಳ್ಳಲಾರದ ಮುಸಲ್ಮಾನರು ಆಗಾಗ ದಂಗೆ ಏಳುವದು ಸಹಜವೇ ಇದೆ. ಸಾವಿರಾರು ಮಹಮ್ಮದೀಯರನ್ನು ಕಾರಾಗೃಹಕ್ಕೆ ಕಳುಹಿಸಲಾಯಿತು. ಅನೇಕರಿಗೆ ಅಮಾನುಷ ಹಿಂಸೆಯನ್ನೀಯಲಾಯಿತು ಈ ದಂಗೆಯ ಸುದ್ದಿಯನ್ನು ಚೈನಾದ ವಾರ್ತಾಸಂಸ್ಥೆಯು ಹೊರಗೆಡಹಿಲ್ಲ. ಅಲ್ಲಿಂದ ಅದೆಂತಾದರೂ ತಲೆ ತಪ್ಪಿಸಿಕೊಂಡು ಬಂದಿರುವವರು ತಮ್ಮ ಅನುಭವಗಳನ್ನು ಹೊರದೇಶಗಳಲ್ಲಿ ವಿವರಿಸಿರುವರು. ೧೯೫೦—೫೨ರ ಮಧ್ಯಕಾಲದಲ್ಲಿ ನಿಂಗ್ಸಿಯಾದಲ್ಲಿ ಭೀಕರ ದಂಗೆ ನಡೆದಿರುವುದನ್ನು ೧೯೫೩ರ ವರೆಗೂ ಯಾವ ಚೈನಿ ಪತ್ರಿಕೆಯೂ ಪ್ರಕಟಿಸಿರುವುದಿಲ್ಲ ೧೯೫೭ರಲ್ಲಿ ಸಿಂಕಿಯಾಂಗಿನಲ್ಲಿ ನಡೆದ ಪ್ರಬಲ ಬಂಡಾಯ ಕಮ್ಯುನಿಸ್ಟರಿಗೆ ದೊಡ್ಡ ಕಿರುಕುಳವೇ ಆಗಿತ್ತು. ಅದನ್ನು ನೊಂದಿಸಲು ಅವರಿಗೆ ಕೆಲ ತಿಂಗಳುಗಳೇ ಬೇಕಾದುವು, ಮುಸ್ಲಿಂ ಗೊರಿಲ್ಲಾಗಳನ್ನು ಸದೆಬಡಿಯಲು ಅವರಿಗೆ 'ಅಮ್ಮಯ್ಯ' ಎನಿಸಿತ್ತು. ಬಂಡಾಯಗಾರರನ್ನು ಬಡಿದು ಬೀಳಿಸಿದ ಮೇಲೆ ಮುಸಲ್ಮಾನರ ಮೇಲೆ ಭಯಾನಕ ಕ್ರೂರಕ್ರಮವನ್ನು ಕೈಕೊಳ್ಳಲಾಯಿತು ಸಾಧಾರಣ ಒಂದು ವರ್ಷದ ವರೆಗೂ ಯಾವ ಚೈನಿ ಪತ್ರಿಕೆಯೂ ಅದನ್ನು ಪ್ರಕಟಿಸಿರುವುದಲ್ಲ ಒಂದು ವರ್ಷದ ನಂತರ ಕೇವಲ ಕೆಲ ಸಂಗತಿಗಳನ್ನು ಮಾತ್ರ ಹೊರಗೆಡಹಿರುತ್ತದೆ

ಚೈನಾದೊಳಗೆದ್ದಿರುವ ಬಂಡಾಯದ ಶಬ್ದಕ್ಕೆ ಅನ್ಯ ಮುಸ್ಲಿಂ ರಾಷ್ಟ್ರಗಳಲ್ಲಿ (ಅದರಲ್ಲೂ ಪಕ್ಕದ) ಪ್ರತಿಧ್ವನಿ ಉಂಟಾಗ ಕೂಡದೆಂದು ಕಮ್ಯೂನಿಸ್ಟರು ಚೆನ್ನಾಗಿ ಮುಂಜಾಗರೂಕತೆ ವಹಿಸಿಕೊಂಡಿರುವವರು. ಅವರು ಅನ್ಯ ಮುಸ್ಲಿಂ ರಾಷ್ಟ್ರಗಳೊಂದಿಗೆ ಸ್ನೇಹ ಸಂಪರ್ಕವನ್ನಿಟ್ಟುಕೊಂಡಿರುವರು. ಅದಕ್ಕಾಗಿ ಅವರು ಚೈನಾದಲ್ಲಿ ಎರಡು ಇಸ್ಲಾಂ ಸಂಸ್ಥೆಗಳನ್ನು ಸ್ಥಾಪಿಸಿರುವರು ಅವರು ೧೯೫೩ರಲ್ಲಿ 'ಚೈನಾ ಇಸ್ಲಾಮಿಯಾ ಸಂಘ'ವನ್ನು ರಚಿಸಿರುವರು ಅದರಲ್ಲಿ ಅನೇಕ ಮಹಮ್ಮದೀಯ ಪಂಗಡಗಳ ಪ್ರತಿನಿಧಿಗಳು ಸದಸ್ಯರಾಗಿರುವರು. ಅಲ್ಲೂ ಅಧಿಕಾರದ ಬೀಗದ ಕೈ ಆಡಳಿತ ವರ್ಗದ ಬಳಿಯೇ ಇದೆ. ಇನ್ನೊಂದು ಸಂಸ್ಥೆ—'ಇಸ್ಲಾಮಿಯಾ ಪಾರಮಾರ್ಥಿಕ ಜ್ಞಾನ ಸಂಸ್ಥೆ'—ಇದೆ. ಅದನ್ನು ೧೯೫೫ರಲ್ಲಿ ರಚಿಸಲಾಗಿರುತ್ತದೆ. ಮಸೀದಿಗಳಲ್ಲಿರುವ ಇಮಾಮರ ಮೂಲಕ ಕಮ್ಯೂನಿಸ್ಟ್ ಸಿದ್ಧಾಂತಗಳನ್ನು ಪ್ರಕಟಿಸುವದೇ ಈ ಸಂಸ್ಥೆಯ ಉದ್ದೇಶವಿದೆ.

ಅನ್ಯ ಇಸ್ಲಾಂ ರಾಷ್ಟ್ರಗಳಿಂದ ಯಾರಾದರೂ ಬಂದಲ್ಲಿ ಹಾರತುರಾಯಿಗಳನ್ನರ್ಪಿಸಲು 'ಇಸ್ಲಾಮಿಯಾ ಸಂಘ" ಮುಂದೆ ಬರಬೇಕು. ೧೯೫೭ರಲ್ಲಿ ಇಂಡೋನೇಶ್ಯದಿಂದ ಡಾ| ಅಲಿ ಸಸ್ಟ್ರೋ ಅಲ್ಲಿಗೆ ಹೋಗಿದ್ದರು. ಅವರು ಹಿಂತಿರುಗಿ ಬರುತ್ತಿದ್ದಾಗ ಸಿಂಗಪುರದಲ್ಲಿ ಹೇಳಿರುವ ಮಾತು ಈ ರೀತಿ ಇವೆ. "ಅಲ್ಲಿ ನಮಗೆ ಬೇಕಾದವರ ಬಳಿ ಮಾತಾಡಲು ಬಿಟ್ಟಿರುವದಿಲ್ಲ." ತಮ್ಮ ಪ್ರತಿನಿಧಿಗಳಿಗೆ ಸೌಕರ್ಯಮಾಡಿಕೊಟ್ಟಿಲ್ಲವೆಂದೂ ಅವರು ಆರೋಪಿಸಿರುವರು.

ಹಾಂಗ್‌ಕೊಂಗಿನಿಂದ ವಿಶೇಷ ಪ್ರತಿನಿಧಿಯು ಹಿಂದೂಸ್ಥಾನ ಸ್ಟೇಂಡಾರ್ಡಿಗೆ ಕಳುಹಿಸಿರುವ ಸುದ್ದಿಗಳಿಂದ ಆರಿಸಿ ಕೆಲವನ್ನು ಮೇಲೆ ಕೊಡಲಾಗಿರುತ್ತದೆ. ಚೈನಾದಲ್ಲಿರುವ ಮಹಮ್ಮದೀಯ ಮತದ ಮೂಲವನ್ನೇ ನಾಶಗೈಯ್ಯಲು ಕಮ್ಯೂನಿಸ್ಟ್ ಶಾಸಕ ಯಂತ್ರ ಎಡೆಬಿಡದೆ ಪ್ರಯತ್ನಿಸುತ್ತಿರುವುದರ ಕೇವಲ ಕೆಲವು ಉದಾಹರಣೆಗಳವು ಹಾಗಿದ್ದರೂ ಕಮ್ಯೂನಿಸಮಿಗಿಂತಲೂ ಹಿಂದೂ ಜಾತೀಯತೆಯು ಜಾಸ್ತಿ ಅಪಾಯಕಾರಿಯೆಂದು ಪಾಕಿಸ್ಥಾನದ ಸರ್ವಾಧಿಕಾರಿ ಅಯೂಬ ಆಗಾಗ ಯದ್ವಾತದ್ವಾ ಗಡಬಡಿಸುತ್ತಿದ್ದಾರೆ.

ಇದೀಗ ಪ್ರಕಟವಾಗಿರುವ ಸುದ್ದಿಯಂತೆ ಸಿಂಕಿಯಾಂಗಿನಿಂದ ಸಹಸ್ರಾರು ಮಹಮ್ಮದೀಯರು ರಷ್ಯಾಕ್ಕೆ ಓಡಿ ಹೋಗಿರುವರು. ಸಿಂಕಿಯಾಂಗಿನಲ್ಲಿ ಮುಸ್ಲಿಮರ ದಂಗೆಯನ್ನಡಗಿಸಲು ಸೇನಾ ಸಮೂಹವೇ ಅಲ್ಲಿ ರಾಶಿ ಬೀಳುತ್ತಿದೆ. ಆದುದರಿಂದ ಸಿಂಕಿಯಾಂಗಿನ ಗೋಧಿ ಕಣಜ ಇಂದು ಕ್ಷಾಮದ ನರಕವಾಗಿದೆ. ಸಿಕ್ಕಿದ ಗೋಧಿ ಸೈನ್ಯಕ್ಕೇನೇ ಸಾಕಾಗುತ್ತಿರುವದಿಲ್ಲ, ಹಾಗಿರುವಾಗ ಜನರಿಗೆ ಕೊಡುವದಾದರೂ ಎಲ್ಲಿಂದ?

ಅಯೂಬರ ಮಾತು ಒತ್ತಟ್ಟಿಗಿರಲಿ. ಇತರ ಕಮ್ಯೂನಿಸ್ಟ್ ರಾಷ್ಟ್ರಗಳು ಚೈನಾದ ಕುರಿತು ಅದೇನು ಹೇಳುತ್ತಿವೆಯೆಂಬುದನ್ನು ನೋಡೋಣ. ಜೆಕೊಸ್ಲೋವೇಕಿಯಾ—ಚೈನಾ ಸಂಬಂಧದ ಕುರಿತು ಪ್ರತ್ಯೇಕ ಲೇಖನವೇ ಪ್ರಕಟವಾಗಿರುತ್ತದೆ.

ಪೋಲೇಂಡಿನ ಕಮ್ಯುನಿಸ್ಟ್ ಪಕ್ಷದ ಮುಖ ಪತ್ರಿಕೆ—ಟ್ರೈಬ್ಯುನಾಲುಡು ಇತ್ತೀಚಿಗೆ ಪ್ರಕಟಿಸಿರುವ ಸುದ್ದಿ ಈ ರೀತಿ ಇದೆ ಚೈನಾವು ಲೆನಿನ್‌ವಾದವನ್ನು ಬಿಟ್ಟು ದಾರಿ ತಪ್ಪಿ ಹೋಗುತ್ತಿದೆ. ಸಮಾಜ ವಾದವನ್ನು ಬಳಕೆಗೆ ತರಲು ಪ್ರಯತ್ನಿಸುವ ಇತರ ರಾಷ್ಟ್ರಗಳ ಉಪಾಯ ಹಾಗೂ ದಾರಿಗೆ ವಿರುದ್ಧವಾಗಿ ತಪ್ಪು ಭಾವನೆಗಳಿಂದ ಚೈನಾ ಕಾಲು ಹಾಕುತ್ತಿದ. ಅದು ಸಹ ಅಸ್ತಿತ್ವ ತತ್ವದ ಬುಡಕ್ಕೆ ಕೊಡಲಿ ಪೆಟ್ಟನ್ನು ಹಾಕಿರುತ್ತದೆ.

ಹಾಗೆಯೇ ಹಂಗೇರಿಯಾದ ಕಮ್ಯುನಿಸ್ಟರ ಪ್ರಮುಖ ಪತ್ರಿಕೆ ನೆಪ್‌ಸ್ಜಬಾಡ್ಸಾಗ್-ಕೂಡಾ ಕಟು ಶಬ್ದಗಳಿಂದ ಟೀಕಿಸಿರುತ್ತದ.

ಅಲ್ಲದೆ ಲಂಡನಿನ ಜನತಾ(ಪೀಪಲ್) ಪತ್ರಿಕೆಯೂ ಅಮೇರಿಕದ ಯು ೨ ರೀತಿಯ ಮಾಂಡ್ರೇಕ್ ವಿಮಾನಗಳನ್ನು ಕಳುಹಿಸಿ ರಷ್ಯಾವು ಚೈನಾದೊಳಗೆ ಏನು ನಡೆಯುತ್ತಿದೆಂಬುದನ್ನು ಕದ್ದು ತಿಳಿದುಕೊಳ್ಳುತ್ತಿದೆಂದು ಪ್ರಕಟಿಸಿರುತ್ತದೆ.

ಹಾಗಿದ್ದರೂ ಅಯೂಬರು 'ಭಾರತವು ತಮ್ಮ ಶತ್ರು ಕಮಾಂಕ ಒಂದೆಂದು ಪುನಃ ಪುನಃ ಬೊಬ್ಬೆ ಹಾಕುತ್ತಿದ್ದಾರೆ. ಅಲ್ಲದೆ ಭಾರತವು ಅಫಘಾನಿಸ್ಥಾನದಿಂದ ಇಂಡೋನೇಶ್ಯದ ವರೆಗೂ ಹಿಂದೂ ಸಾಮ್ರಾಜ್ಯವನ್ನು ಸ್ಥಾಪಿಸಲು ಕನವರಿಸುತ್ತ

(೧೧ನೇ ಪುಟ ನೋಡಿರಿ)

ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ.
14 CT ಚಿನ್ನದ ಆಭರಣಗಳಲ್ಲಿ 58⅓% ಶುದ್ಧ ಪುತ್ತಳಿ ಚಿನ್ನ ಇರುತ್ತದೆ.
ಬೇಡದಿದ್ದಲ್ಲಿ 1 ರೂ ಕಮ್ಮಿಯಲ್ಲಿ ಯಾವಾಗಲೂ ಬಜಾರು ಧಾರಣೆಗೆ ಪಡಕೊಳ್ಳುವ ಭರವಸೆ ಕೊಡುತ್ತೇವೆ.
ವಿ ಸೂ ಹಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡಕೊಳ್ಳುವರಿ ಸರಕಾರದ ಲೈಸನ್ಸ್ ಸಿಕ್ಕಿರುತ್ತದೆ
ಮದುವೆ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡಕೊಂಡು ಖಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು

ಶ್ರೀ ಕೃಷ್ಣಾ ಜ್ಯುವೆಲರಿ ಮಾರ್ಟ್

ತೆಂಕಪೇಟೆ — ಉಡುಪಿ.
ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.
ಫೋನ್ ನಂಬ್ರ: 66

In the Court of the District Munsif of Udipi.

O. S. No. 179/1955
R. E. P. No. 538/1962

The Canara Industrial & Banking Syndicate Limited Udipi, Shirva Branch, by its Recovery Officer M. S. Bhandari — Petitioner,

against

Muddu Shetty, son of Naganna Shetty, residing at Manchakal of Shirva Village of Udipi Taluk.
— Respondent.

To.

The respondent,

Please take notice that the above Execution petition is posted to 4—10—1963 for settling the terms of sale proclamation. If you fail to appear before the said Court at 11 A. M. on the day mentioned above, the same will be decided in your absence.

K. Varadaraya Pai
Advocate for Petitioner.

Udipi. Dated 4—9—1963.

ಗಜಪತಿ ನಂದಿನಿ

(೨ನೇ ಪುಟದಿಂದ)

ನಾನು ಹೆಚ್ಚು ಚಿಂತೆ ಮಾಡುತ್ತಿಲ್ಲ. ಅವಳು ಯಾರಿಗೂ ತಿಳಿಸದೆ ಸ್ವೇಚ್ಛೆಯಾಗಿ ಹಾಗೆ ಹೋಗಬಾರದಿತ್ತು. ಅವಳ ತಾಯಿ ಮಗಳ ಅಗಲಿಕೆಯ ದುಃಖದಿಂದ ಹುಚ್ಚಳಂತೆ ಎಲ್ಲಿಗೋ ಹೋಗಿ ಬಿಟ್ಟಳೆಂದು ಕೇಳುವಾಗ ಬೇಸರವಾಗುತ್ತದೆ. ಸ್ತ್ರೀಯರು ಮಾತೃಪ್ರೇಮವನ್ನು ಕಳೆದುಕೊಳ್ಳುತ್ತಾರೆಂಬುದು ಆಸಹನೀಯ ವಿಷಯ!

(ಕವೀಶ್ವರರೂ, ತಿಮ್ಮರಸನೂ ಪರಸ್ಪರ ನೋಡಿಕೊಳ್ಳುತ್ತ ತಲೆಯಲುಗಿಸಿಕೊಳ್ಳುವರು. ದೂತನು ಪ್ರವೇಶಿಸಿ)

ದೂತ— ಜಯವಾಗಲಿ ಕರ್ಣಾಟಕ ಚಕ್ರವರ್ತಿಗೆ!

ತಿಮ್ಮರಸು — ಉತ್ಕಲದ ಗಜಪತಿರಾಜರು ಏನೆಂದು ಹೇಳಿದ್ದಾರೆ?

ದೂತ – ನಮ್ಮ ಕೋರಿಕೆಯನ್ನು ನಿರಾಕರಿಸಿದ್ದಾರೆ. ಉತ್ಕಲ ಕುಮಾರಿ ಪ್ರತ್ಯುತ್ತರ ರೂಪವಾಗಿ ಈ ಪತ್ರವನ್ನು ಒಪಿಸು ಕಳುಹಿದ್ದಾರೆ (ಗದ್ದಿಗೆಯ ಮುಂದೆ ಪತ್ರದ ಥೈಲಿಯನ್ನಿರಿಸುವನು.)

ಕೃಷ್ಣದೇವ — ಗಜರಾಜನಂದಿನಿ ಪತ್ರವನ್ನು ಬರೆದಳೆ? ವಿಚಿತ್ರ!

ತಿಮ್ಮರಸು— ಗಜಪತಿರಾಜರು ಏನೆಂದರು?

ದೂತ— (ಸಂಕೋಚದಿಂದ) ಏನೋ ಒಂದೆರಡು ಅಪ್ರಿಯವಾದ ವಚನಗಳನ್ನು ಹೇಳಿದರು ಪ್ರಭು.

ಕೃಷ್ಣದೇವ— ಭಯಪಡಬೇಡ. ಯಥಾರ್ಥವನ್ನು ತಿಳಿಸು.

ದೂತ— ಏನೋ ಆಡಬಾರದ ಮಾತು. ವಂಶ, ಕುಲ, ಗೋತ್ರಗಳ ನಿಂದನೆ. ಕುಮಾರಿಯನ್ನು ಎಂದೆಂದೂ ಕೊಡಲಾಗುವುದಿಲ್ಲವೆಂಬ ತೀರ್ಮಾನ. ಸಂಗ್ರಾಮವಾದರೂ ಸರಿಯೇ ಎಂದಿದ್ದಾರೆ ಕಡೆಗೆ

ರಾಮಕೃಷ್ಣ — (ಮೆಲ್ಲನೆಯಿಂದ) ನೋಡಿದಿಯಾ ತಿಮ್ಮಣ್ಣ! ಆಂಧ್ರ ರಕ್ತದ ಬಿಸಿ?

ತಿಮ್ಮಣ್ಣ— ಅವಸರಪಡಬೇಡ. ಬಿಸಿಯೊಂದಿಗೆ ಹಸಿಯೂ ಇದ್ದೀತು. ಗಜರಾಜನಂದಿನಿಯೇ ಪತ್ರ ಬರೆದಿದ್ದಾಳೆಂದರೆ ಹಿಂದಿನದಾಗಿಯೂ ಪ್ರೇಮಪತ್ರವಿದ್ದೀತು.

(ಕೃಷ್ಣದೇವರಾಯನು ಪತ್ರವನ್ನೋದುತ್ತಾ ಕೋಪೋದ್ರಿಕ್ತನಾಗುತ್ತಿರುವನು.)

ರಾಮಕೃಷ್ಣ — ಅಲ್ಲಪ್ಪಾ! ನೋಡು ರಾಯನ ಮುಖಭಾವ. ಅದೇನೋ ಬಿದಿಯುವ ಪತ್ರವೇ ಸರಿ.

ಕೃಷ್ಣದೇವರಾಯ— (ಪತ್ರವನ್ನು ಹಿಸುಕುತ್ತ) ಏನು ಗರ್ವ ಆ ಹುಡುಗಿಗೆ! ನಾನು ಕೊಳ್ಳೆಗಾರನಂತೆ! ಕುಲಗೆಟ್ಟವಳ ಮಗನಂತೆ! ಕುಲವಿಲ್ಲದವಳ ಗಂಡನಂತೆ! ವೀರ ಕ್ಷತ್ರಿಯ ಪುತ್ರಿಯಾದ ಇವಳು ನನಗೆ ನೃತ್ಯವನ್ನೆ ಪಥ್ಯವಾಗಿ ಮಾಡಿಸಲಿದ್ದಾಳಂತೆ! ಆಶ್ಚರ್ಯ! ಜಗನ್ಮೋಹಿನಿಯೆಂದು ಪ್ರಖ್ಯಾತಳಾಗಿರುವ ಆವಳ ರೂಪದಲ್ಲಿ ಇಷ್ಟೊಂದು ಕಾಠಿಣ್ಯವಡಗಿದೆಯೋ! ನಾನು ನಿಜವಾದ ಕ್ಷಾತ್ರ ವೀರನಾದರೆ ಈ ಗರ್ವಿಷ್ಠೆಯನ್ನು ಹಿಡಿದು ಬಂಧಿಸಿ –

ತಿಮ್ಮರಸು— ಪ್ರಭೂ, ಸೈರಿಸಿಕೋ. ಕೋಪದಿಂದ ದುಡುಕಿ ಬಿಡಬಾರದು.

ಕೃಷ್ಣದೇವ –(ಕಟಿಯಿಂದ ಕರವಾಲವನ್ನು ಸೆಳೆದು) ಈ ಭುವನೇಶ್ವರೀ ಖಡ್ಗದಾಣೆ! ಪ್ರತಿಜ್ಞೆ ಮಾಡುತ್ತೇನೆ

ತಿಮ್ಮರಸು— (ರಾಯನ ಕೈಯನ್ನು ಹಿಡಿದು) ರಾಜೇಂದ್ರಾ, ಕೋಪಾವೇಶದಲ್ಲಿ ವ್ಯವಹರಿಸಿ ಏನಾದರೂ ಪ್ರತಿಜ್ಞೆ ಮಾಡಿ ಬಿಡಬಾರದು ಆ ಮೇಲೆ ಪಶ್ಚಾತ್ತಾಪಪಡಬೇಕಾದೀತು.

ಕೃಷ್ಣದೇವ— ಇಲ್ಲ ಅಪ್ಪಾಜೀ.

ತಿಮ್ಮರಸು— ತಾಳು ರಾಜಾ, ಈ ಪತ್ರವನ್ನು ಆ ಮುಗ್ಧೆ ತಂದೆಗೆ ತಿಳಿಯದೆ ಬರೆದಿರಬಹುದು. ಮುಗ್ಧ ಸ್ತ್ರೀಯ ಮೇಲೆ ರಾಜಾಧಿರಾಜನಾದ ನೀನು ಆಗ್ರಹವಹಿಸಕೂಡದು.

ಕೃಷ್ಣದೇವ—ಇಲ್ಲ ಅಪ್ಪಾಜೀ, ಈ ಪತ್ರ ಲೇಖಕಳು ಮುಗ್ಧೆಯಲ್ಲ, ಮಹಾ ವಿದಗ್ಧೆ! ಅಪ್ಪಾಜೀ, ಈ ಒಂದು ವಿಷಯದಲ್ಲಿ ಮಾತ್ರ ನಾನು ಮಾತನ್ನು ಮೀರಿಯೇ ತೀರುವೆನು ನಾನು ವೀರಕ್ಷತ್ರಿಯ ಪವಿತ್ರ ರಾಜಕುಮಾರನು ಸತ್ಯವಾದರೆ, ಆ ಮನೋನ್ಮತ್ತೆ ಜಗನ್ಮೋಹಿನಿಯನ್ನು ಹಿಡಿದು ಒಬ್ಬ ತಪ್ಪಲಿಗಿತ್ತು ಲೋಕವರಿಯುವಂತೆ ವಿವಾಹಮಾಡಿಸುತ್ತೇನೆ.

ತಿಮ್ಮರಸು—ಹಾ! ಸಂಬ-ಶಿವ!

ಕೃಷ್ಣದೇವ ಹಾದು. ಶಂಭಾಪತಿಯಾಣೆ!

ತಿಮ್ಮರಸು—ಅಯ್ಯೋ!

(ತಿಮ್ಮಣ್ಣ ರಾಮಕೃಷ್ಣರೂ ಭಯ ಪ್ರದರ್ಶನ ಮಾಡಿಕೊಳ್ಳುವರು)

ಕೃಷ್ಣದೇವ—ಯಾರಲ್ಲಿ?

ದೂತ—(ಓಡಿ ಬಂದು ನಮಸ್ಕರಿಸುವನು.)

ಕೃಷ್ಣದೇವ— ಸರ್ವ ಸೇನಾಧ್ಯಕ್ಷ ರಾಮಲಿಂಗ ನಾಯಕರನ್ನು ಬರುವಂತೆ ಹೇಳು.

(ದೂತನು ಹೋಗುವನು) ಅಪ್ಪಾಜಿ ಈ ಒಂದು ವಿಷಯದಲ್ಲಿ ತಮ್ಮ ಮಾತನ್ನು ಮೀರಿದ್ದೇನೆ ನನ್ನ ಪ್ರೇಮ ಪತ್ನಿ ಚಿನ್ನಾದೇವಿಯ ವಿಷಯದಲ್ಲಿ ಕೂಡ ನಿಮ್ಮ ಮಾತು ಮೀರಿದವನಲ್ಲ ಇನ್ನು ಇದಕ್ಕೆ ಸಹಾಯ ಮಾಡುವುದೂ ಬಿಡುವುದೂ ನಿಮ್ಮ ಇಚ್ಛೆ.

ತಿಮ್ಮರಸು—ಹಾಗೆ ತಿಳಿಯಬೇಡ ರಾಜಾ ಸಿಂಹಾಸನದ ಸೇವಕರಾದ ನಾವು ಸಿಂಹಾಸನಾಧಿಷ್ಠಿತನ ಸೇವಕರೂ ಆಗಿದ್ದೇವೆ ಆದುದರಿಂದ ಹೋಯಿತು. ಇನ್ನು ಈ ಪ್ರತಿಜ್ಞೆ ಕೊನೆಗಾಣುವ ವರೆಗೆ ಈ ಪ್ರತಿಜ್ಞೆಯ ವಿಷಯ ನಮ್ಮಷ್ಟು ಮಂದಿಯ ಹೊರತು ಬೇರೆಯಾರಿಗೂ ತಿಳಿಯದಿದ್ದರೆ ಸಾಕು.

ತಿಮ್ಮಣ್ಣ—ನಿಜ ನಿಜ. ಈ ವಿಷಯ ಒಯಲಾಯಿತೆಂದರೆ ಆಂಧ್ರ ಕುಮಾರಿಯ ಉಗುರು ಕೂಡಾ ಸಿಗಲಾರದು

ತಿಮ್ಮರಸು— ಆದುದರಿಂದ, ರಾಜಾ, ಆವಳನ್ನು ನೀನು ವರಿಸಿಕೊಳ್ಳುವ ನೆವನದಲ್ಲಿಯೇ ಕಾರ್ಯವನ್ನು ಮುಂದುವರಿಸಬೇಕು.

ರಾಮಲಿಂಗ ನಾಯಕ— (ಪ್ರವೇಶಿಸಿ ನಮಸ್ಕರಿಸುತ್ತ, ಸೇವಕನು ತಂದಿಟ್ಟ ಆಸನದಲ್ಲಿ ಕುಳಿತು) ಜಯವಾಗಲಿ ಮಹಾರಾಜರಿಗೆ. ಅಪ್ಪಣೆಯಾಗಬೇಕು.

ಕೃಷ್ಣದೇವ—ಸೇನಾಧೀಶ್ವರಾ, ನಾಳೆ ಮುಂಜಾನೆ ಉತ್ಕಲ ದೇಶದ ಮೇಲೆ ದಂಡಯಾತ್ರೆ ಹೊರಡಬೇಕು. ನಮ್ಮ ದಳವು ಉತ್ಕಲದ ಮಹಾದ್ವಾರದಂ... ಕೊಂಡ ವೀಡಿಗೆ ಮುತ್ತಿಗೆ ಹಾಕುವುದಕ್ಕೆ ಸಿದ್ಧವಾಗಿರಲಿ.

ರಾಮಲಿಂಗ—ಅಪ್ಪಣೆ ಮಹಾರಾಜ.

(ಮುಂದುವರಿಯುವುದು)

ಸುಸ್ವಾಗತಮ್

(೧)

ಸ್ವಾಗತಂ ಸ್ವಾಗತಮ್
ಸಂತ ವಿನೋಬಾಜಿಗೆ।
ಗಾಂಧಿ ಗುರುವಿನ ಶಿಷ್ಯವರ
ಸ್ವಾಗತಂ ನಿನಗೆ ॥

(೨)

'ಬ್ರಹ್ಮ ಸತ್ಯವು ಜಗವು ಸ್ಫೂರ್ತಿಯು
ಜೀವನವೆ ಸತ್ಯದ ಶೋಧನ'
ಸತ್ಯದೇವನ ಕಾಣಲೋಸುಗ
ಕರ್ಮಯೋಗವೆ ಸಾಧನ ॥

(೩)

ಸಮತೆ ಸಾಧಿಸಲೆಂದು ಮಾಡಿದ
ಭೂಮಿದಾನದ ಯಜ್ಞವು
ಗ್ರಾಮದಾನದಿ ಜನರ ಮನವನು
ಗೆಲಿಸಲೆಂಬುದೆ ಸೂಜ್ಞವು ।

( )

ಪ್ರೇಮದಿಂದಲಿ ಜನರ ಹೃದಯವ
ಗೆದ್ದು ನಿಂತಿಹ ಧೀರನೆ
ಶಾಂತಿ ಸ್ಥಾಪನೆಗಾಗಿ ದುಡಿಯುವ
ಶಾಂತಿ ಸೇನೆಯ ವೀರನೆ ॥

(೫)

ನಾಡಕೊಳೆಯನು ತೊಳೆಯಲೋಸುಗ
ಪಾದಯಾತ್ರೆಯ ಮಾಡುತ ।
ಭರತಖಂಡವ ಸುತ್ತುತಿರುವೆಯೊ
ಜನಕೆ ಅರಿವನು ನೀಡುತ ॥

(೬)

ಮಧ್ಯದೇಶದ ಕಲ್ಯಾಣಕರಸ್ಥಿ
ಕಳೆದೆಯೊ ಮಾನವ ।
ಅವರ ಹೃದಯವ ಗೆದ್ದು ಕಳೆದೆಯೊ
ಕಳೆ ಮಾನವ ರೂಪವ ॥

(೭)

ಶಾಂತಿಯ ಕ್ರಾಂತಿ ಕ್ರಾಂತಿಯೊಳಾ
ತತ್ವ ಸಾರಿದ ಯೋಗಿಯೆ ।
ಸರ್ವರುದಯಕೆ ನಿಂದ ಕಾರಣ
ಮನವ ನಿಸ್ಪೃಹ ತ್ಯಾಗಿಯೆ ॥

(೮)

ಗಾಂಧಿಕಾರ್ಯದ ಫಲವೆ ನಿನ್ನಯ
ಜೀವನ ಮಹೆ ಒಲಿದ ॥
ನಿನ್ನ ಗೆಯ್ಮೆಯ ಫಲವೆ ಜನತೆಯು
ತೋರುತಿಹ ಬಲವು ।

(೯)

ಸ್ವಾಗತಂ ಸುಸ್ವಾಗತಮ್
ಸಂತ ವಿನೋಬಾಜಿಗೆ ।
ಗಾಂಧಿ ಗುರುವಿನ ಶಿಷ್ಯವರ
ಸ್ವಾಗತಂ ನಿನಗೆ ॥

—ದಿಗಂಬರ ಜೋಶಿ,
ಬೆಳಗಾವಿ.

ವಿದ್ಯಾರ್ಥಿಗಳ 2 ಕೈಪಿಡಿಗಳು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ ಎರಡು ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗುವ ೭೫ ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ
ಬೆಲೆ ರೂ 1-4-0 (1=25).

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 NP ಸೇರಿಸಿ ಮನಿಯಾರ್ಡರು ಮಾಡಿದವ ಪುಸ್ತಕ ರವಾನಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರತಿಗಳು— ಮಂಗಳೂರಲ್ಲಿ ಶ್ರೀನಿವಾಸ್ ಬ್ರದರ್ಸ್, ಸ್ಕೂಲ್ ಬುಕ್ ಕೊ., ಕೆನರಾ ಕೊಟಿಬ ಬುಕ್ ಕೊ, ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್ ಇವರ ಕ್ರಯಾ, ಪುತ್ತೂರಲ್ಲಿ ಮೊಬ್ಬಲರ್ ನ್ಯೂಸ್ ಏಜನ್ಸಿಯಲ್ಲಿಯೂ ದೊರೆಯುತ್ತವೆ



REGD. No. B. G. 176
LICENCE No. 31
Licensed to Post without Prepayment

ಕುಡುಗೋಲು ಸುತ್ತಿಗೆಗಳೆಡೆ ಅರ್ಧಚಂದ್ರ ನಕ್ಷತ್ರ

(೧ನೇ ಪುಟದಿಂದ)

ದೆಂದೂ ಆಡುತ್ತಿರುವರು. ಅವರ ಮಾತಿಗೆ ಸರಿಯಾಗಿಯೋ ಎಂಬಂತೆ 'ಆಧುನಿಕ ಚೈನಾದ ಸಂಕ್ಷಿಪ್ತ ಚರಿತ್ರೆ' ಎಂಬ ಪುಸ್ತಕದಲ್ಲಿ ಚೈನಾ ಪ್ರಕಟಿಸಿರುತ್ತದೆ. ಅದನ್ನು ಕಮ್ಯೂನಿಸ್ಟ್ ಸರಕಾರವೇ ಪ್ರಕಟಿಸಿರುತ್ತದೆ. ಅದರಲ್ಲಿ ಭಾರತವನ್ನು, ಸಿಕ್ಕಿಂ, ಭೂತಾನ್, ಬರ್ಮ್ಮ, ಮಲಯಾ, ಸಿಂಗಪುರ, ತಾಯಿಲೆಂಡ್, ಉತ್ತರ ಹಾಗೂ ದಕ್ಷಿಣ ವಿಯೆಟ್ನಾಂ, ದಕ್ಷಿಣ ಕೊರಿಯಾ ಮುಂತಾದ ಏಸ್ಯದ ದೇಶಗಳನ್ನು ಚೈನಾದ ಭೂಭಾಗವನ್ನಾಗಿ ಸೂಚಿಸುವ ಭೂಪಟವಿದೆ. ಇದರಿಂದ ವಿಸ್ತಾರವಾದಿಗಳು ಯಾರೆಂಬುದು ಗೊತ್ತಾಗುತ್ತದೆ. ಆದರೆ ತಮಗೂ ಪಾಲು ಸಿಗಬಹುದೆಂಬ ದುರಾಶೆಯಿಂದ ಆಯೂಬ ಮಾವನ ಬೆನ್ನುಹಿಡಿದಿದ್ದೆನ್ನುವದಕ್ಕೆ ಬೇರೆ ನಿದರ್ಶನ ಬೇಕಾಗಿರುವದಿಲ್ಲ.

ಈ ರೀತಿ ಜನತೆಯ ಸಾಮೂಹಿಕ ಹತ್ಯೆಯನ್ನು ಕಮ್ಯೂನಿಸ್ಟ್ ಚೈನಾ ಏತಕ್ಕಾಗಿ ನಡೆಸುತ್ತಿದೆ? ಇದು ಕೇವಲ ಕಮ್ಯೂನಿಸ್ಟೇತರರ ಕುಪ್ರಚಾರವೆಂದು ಕಮ್ಯೂನಿಸ್ಟ್ ಚೈನಿ ಚೇಲಾಗಳು ಮುಗ್ಧ ಮಾನವರ ಬಳಿ ಹಲ್ಲು ಕಿರಿಯಬಹುದು. ಸಾವಿರಾರು ಸಂಖ್ಯೆಯಲ್ಲಿ ಭಾರತೀಯ ಸೈನಿಕರನ್ನು, ಮುಸ್ಲಿಂ ವಸಾಹತುಗಾರರನ್ನು, ಭಾರತೀಯ ಜನತೆಯನ್ನು ಅಲ್ಲದೆ ಸ್ವತಃ ಚೈನೀಯರನ್ನೇ ಕೊಂದ ಚೈನಾ ಏನು ಮಾಡುತ್ತಿರಬಹುದು? ಅದರ ಉತ್ತರವೂ ಪ್ರಕಟವಾಗುತ್ತದೆ.

ಚೈನಾವು ಪಿಂಗಾಣಿ ಪಾತ್ರೆಗಳಿಗೆ ಪ್ರಖ್ಯಾತವಿದೆ. ಅದು ಕಳುಹಿಸಿ ಕೊಟ್ಟ ಕಚ್ಚಾ ಪಿಂಗಾಣಿಗೆ ಭಾರತದಲ್ಲಿ ಸರಕಾರದ ಹಿಡಿತದಲ್ಲಿರುವ ಬೆಂಗಾಲ ಸಿರಮಿಕ್ ಇನ್‌ಸ್ಟಿಟ್ಯೂಟ್ ಕೊನೆಯ ಸ್ಪರ್ಶವನ್ನೀಯುತ್ತದೆ. ಇತ್ತೀಚಿನ ಪಾತ್ರೆಗಳನ್ನು ಕಂಡು ಒಬ್ಬ ತಜ್ಞರಿಗೆ ಸಂದೇಹ ಬಂದು ಅವರು ಅದನ್ನು ಪರೀಕ್ಷಿಸಿನೋಡಿದರು. ಅದರಲ್ಲಿ ಎಲುಬಿನ ಅಂಶವಿರುವದನ್ನು ಕಂಡು ಹಿಡಿದಿರುವರು. ದ್ರವ ಚೈನಿ ಆವೆ ಮಣ್ಣಿನೊಂದಿಗೆ ಸಿದ್ಧಗೊಳಿಸಿದ ಎಲುಬಿನ ಹುಡಿಯನ್ನು ಬೆರಸಿ ಭೂಗತ ಕೆರೆಗೆ ಕಳುಹಿಸಿ ಅದನ್ನು ಸಾಧಾರಣ ೧೨೫೦-೩೦೦ ಟಾನ್ಸ್ ಒತ್ತಡದಲ್ಲಿ ಒಂದು ರೀತಿಯ ದೋಸೆಯ ಹಾಗೆ ರಚಿಸುತ್ತಾರೆ. ಈ ರೀತಿ ಚೈನಾವು ಎಲುಬಿನಿಂದಲೂ ಪ್ರಯೋಜನ ಪಡೆಯುತ್ತಿರುವಾಗ ಅದು ಸತ್ತ ಚೈನೀಯರಿಗಾಗಿ ಕಣ್ಣೀರು ಸುರಿಸುವದುಂಟೇ? ಅಲ್ಲದೆ ಅದೆಷ್ಟು ಮಹಮ್ಮದೀಯರು ಸತ್ತರೂ ಅದರಿಗೆ ಬೇಜಾರಿದೆಯೇ? ಬದಲು ಸಂತೋಷವೇ ಆದೀತು. ಅದು ಭಾರತೀಯರನ್ನು 'ಪುರಾಣ ಕಾಲದ ಋಷಿ' ಸಂತಾನವನ್ನಾಗಿ ಮಾಡಿರುತ್ತದೆ!

ನವಯುಗಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ

ರಾಷ್ಟ್ರಕವಿ ಗೋವಿಂದ ಪೈ

(೭ನೇ ಪುಟದಿಂದ)

ಸಾಹಿತ್ಯಕಾರರು ಮಾತ್ರವಲ್ಲದೆ ಉನ್ನತ ಸಂಶೋಧಕರೂ ಹೌದು ಗೋವಿಂದ ಪೈ. ಪಾರ್ಶ್ವಸುಬ್ಬ, ಗುಮ್ಮಟ, ನಮ್ಮ ಹಿರಿಯರು, ತುಳುನಾಡು, ಭಗವಾನ್ ಬುದ್ಧ ಮುಂತಾದ ಸಂಶೋಧನಾ ಕೃತಿಗಳು ಅವರ ಪ್ರತಿಭೆ ಮತ್ತು ಅಭ್ಯಾಸಕ್ಕೆ ಜ್ವಲಂತ ನಿದರ್ಶನ. ಇವಲ್ಲದೆ ಹಲವಾರು ಸಂಶೋಧನಾತ್ಮಕ ಬರಹಗಳನ್ನೂ ಅವರು ಆಗಾಗ ಬರೆದು ಕನ್ನಡದ ಪತ್ರಿಕೆಗಳಲ್ಲಿ ಪ್ರಸಿದ್ಧಿಸಿದ್ದರು. ತಮ್ಮ ವೃದ್ಧಾಪ್ಯದಲ್ಲಿ ಕೂಡ ಅವರು ಬರೆಯುವ ಅಭ್ಯಾಸವನ್ನು ಬಿಡಲಿಲ್ಲ.

ಗೋವಿಂದ ಪೈಯವರು ಕವಿತೆಗಳಲ್ಲಿ ಬಳಸುವ ಪದಗಳದೂ ಕ್ರಾಂತಿಕಾರಿ ಪ್ರಯೋಗ. ಪ್ರಕಟವಾದ ಅವರ ಕವಿತೆಗಳ ಪದಗಳ ಅರ್ಥವನ್ನೂ ಅವರು ಕೊಡುತ್ತಿದ್ದರು. ಹೊಸಗನ್ನಡದ ಕಾಲಗರ್ಭದಲ್ಲಿ ಸಮಾವೇಶಗೊಂಡ ಪದಗಳನ್ನು ಮತ್ತೆ ಹೊರತೆಗೆಯುವಲ್ಲಿ, ಹೊಸಹೊಸ ಪದಗಳನ್ನು ಸೃಷ್ಟಿಸಿಕೊಳ್ಳುವಲ್ಲಿ ಪೈಯವರಿಗೆ ಪೈಯವರೇ ಸರಿಸಾಟಿ.

ಕಾವ್ಯವು ಯಶಸ್ಸು ಅರ್ಥ ಪ್ರಾಪ್ತಿಗಳಿಗೂ ಮಾರ್ಗವೆಂದು ಸಾರಿದ ಆಲಂಕಾರಿಕರ ಮಾತನ್ನೊಪ್ಪದ ಪೈ ತಾನು 'ಸ್ವಾಂತ ಸುಖಾಯ" ಬರೆಯುತಿದ್ದೇನೆಂದು ಹೇಳುತಿದ್ದರು. ನಿಷ್ಕಾಮಕರ್ಮಿಯೂ ಅಜಾತಶತ್ರುವೂ ಆದ ಈ ಪ್ರತಿಭಾನ್ವಿತ ವ್ಯಕ್ತಿಯನ್ನು ೧೯೪೯ರಲ್ಲಿ ರಾಷ್ಟ್ರಕವಿ ಪ್ರಶಸ್ತಿಯಿತ್ತು ಮದ್ರಾಸು ಸರಕಾರವು ಗೌರವಿಸಿತು. ೧೯೫೦ರಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನವು ಮುಂಬಯಿಯಲ್ಲಿ ಸೇರಿದಾಗ, ಅದರ ಅಧ್ಯಕ್ಷ ಪಟ್ಟದ ಗೌರವ ಸ್ಥಾನವಿತ್ತು ಕನ್ನಡಿಗರು ಈ ಸರಸ್ವತಿಯ ಪುತ್ರನನ್ನು ಸಮ್ಮಾನಿಸಿದರು.

ಭಾರತೀಯತೆ-ಕನ್ನಡಿಗತೆಗಳು ಬೇರೆಯಲ್ಲ; ಅವು ಅಭಿನ್ನ; ಇವೆರಡೂ ಹಾಸುಹೊಕ್ಕಾಗಿ ಅವರ ಜೀವನವನ್ನು ಸತ್ಯಪಥದಲ್ಲಿ ನಡೆಸಿವೆ. ಅವರ ಕಾವ್ಯಕಾವ್ಯವು ಈ ಅದ್ವೈತ ವಾದವನ್ನು ಪ್ರತಿಬಿಂಬಿಸುತ್ತಿದೆ. "ಧೀರ ಗಂಭೀರವಾಗಿ ಬರುವ ಭಾಷಾ ಪ್ರೌಢಿಮೆ, ರಸಗಂಗೆಯಂತೆ ಉಕ್ಕಿ ಹರಿಯುವ ಭಾವನಾವೇಶ, ಆದಿತ್ಯನ ಪ್ರಚಂಡ ಪ್ರಕಾಶದಂತೆ ಪ್ರಜ್ವಲಿಸುವ ಸತ್ಯಪ್ರಭೆ—ಅವರ ಕಾವ್ಯದ ಜೀವಾಳ". ಕನ್ನಡದ ಶ್ರೇಷ್ಠ ಸಾಹಿತಿ ಅ. ನ. ಕೃ ಉದ್ಗರಿಸಿದ ಈ ಮಾತು ನಿಜಕ್ಕೂ ಸತ್ಯ; ಅನತಿಶಯೋಕ್ತಿ. ಜನಸಾಮಾನ್ಯರು ಪೈಯವರ ಕೃತಿಗಳನ್ನು ಓದಿ ಅರ್ಥ ಮಾಡಿಕೊಳ್ಳಬಾರರು; ಆದರೆ, ಅವರ ನಿರಹಂಕಾರ, ನಿಗರ್ವ, ಮೃದುಲ ಹೃದಯ, ನಿರ್ಮಲಾಂತಃಕರಣ, ವಿನಯವಾಣಿಗಳು ಯಾರನ್ನಾದರೂ ಅವಶ್ಯ ಮುಗ್ಧಗೊಳಿಸಲೇಬೇಕು;

ದಕ್ಷಿಣ ಕನ್ನಡದಿಂದ ಕಾಸರಗೋಡನ್ನು ಪ್ರತ್ಯೇಕಿಸಿ ಕೇರಳಕ್ಕೆ ಸೇರಿಸಿದ ರಾಜಕೀಯ ಪುಢಾರಿಗಳ ಕುತಂತ್ರದಿಂದ ನೊಂದವರು ಪೈ. "ಕರ್ನಾಟಕ ರಾಜ್ಯೋದಯ"ದ ದಿನದ ವಿಶೇಷ ಸಂಚಿಕೆಯೊಂದನ್ನು "ವಿಶಾಲ ಮೈಸೂರು" ರಚನೆಯ ಸಂಚಿಕೆಯನ್ನಾಗಿ ಹೊರಡಿಸಲು ನಿರ್ಧರಿಸಿದ ಒಬ್ಬರು ಅವರಿಂದೊಂದು ಕವಿತೆ ಬಯಸಿ ಬರೆದಾಗ ಅವರಿತ್ತ ಉತ್ತರವು ಅವರ ಅಂತರ್ಯದಿಂದ ಹೊರ ಬಂದುದು. "ಕರ್ನಾಟಕ ರಾಜ್ಯೋದಯವಾಗಿಲ್ಲ; ವಿಶಾಲ ಮೈಸೂರು ಆಗುತ್ತಿರುವುದು ಶೋಚನೀಯ. ಆದುದರಿಂದ ಆ ದಿನದ ವಿಶೇಷ ಸಂಚಿಕೆಗೆ ಬರೆಯಬಾರದೆಂದು ನೊಂದ ಹೃದಯ ನಿರ್ಧರಿಸಿದೆ" ಎಂದಿದ್ದರು ಅವರು.

ಅಪ್ರತಿಮ ಪ್ರತಿಭಾಸಂಪನ್ನರೂ ಪಾಂಡಿತ್ಯವಂತರೂ ಉಜ್ವಲ ಕನ್ನಡ ಪ್ರೇಮಿಗಳೂ ಕನ್ನಡ ಸಾರಸ್ವತಾಕಾಶೋದಿತ ಚಂದ್ರಮರೂ ಆದ ಗೋವಿಂದ ಪೈಯವರ ನಿಧನದಿಂದ ಕನ್ನಡಿಗರು ಹತಪ್ರಭರಾಗಿದ್ದಾರೆ. ಅವರ ರಿಕ್ತ ಸ್ಥಾನವನ್ನು ತುಂಬುವ ಅರ್ಹರಿಂದು ನಮ್ಮ ಬಳಿಯಿಲ್ಲವಲ್ಲಾ ಎಂದು ನಾವು ಮರುಗುವಂತಾಗಿದೆ. ಆದರೂ ಅವರು ತೋರಿದ ದಾರಿಯಲ್ಲಿ ಬೆಳಗಿದ ದೀಪದಲ್ಲಿ ಮುಂದುವರಿಯುವ ಧೀರರು ನಮಗಿಂದು ಬೇಕು. ಅವರು ಮುಂದೆ ಬರಬೇಕು.

ಕನ್ನಡದ ಗೋವುಗಳನ್ನು ಸಂರಕ್ಷಿಸಿದ ಗೋವಿಂದ ಪೈಯವರ ನೆನಪು ಸದಾ ಉಳಿಯುವಂತೆ, ಅದರಿಂದ ಪ್ರೇರಣೆ ದೊರೆಯುವಂತೆ ಅವಶ್ಯಕ ಕ್ರಮ ಕೈಗೊಳ್ಳಬೇಕು.

ಮತ್ತೊಂದು ಮಹಿಳಾ ಶಾಖೆ...

ಮಹಿಳೆಯರಲ್ಲಿ ಉಳಿತಾಯ
ಪ್ರವೃತ್ತಿಯನ್ನು ಹೆಚ್ಚಿಸಿ,
ಉಳಿತಾಯ ಮನೋವೃತ್ತಿಯನ್ನು
ಬೆಳೆಸಲು—

ಸಿಂಡಿಕೇಟ್ ಬ್ಯಾಂಕಿನ

ಶಾಖೆಯೊಂದು
ಮದ್ರಾಸಿನ ತ್ಯಾಗರಾಜ ನಗರದಲ್ಲಿ
ಇದೇ ಸಪ್ಟೆಂಬರ್ 6 ರಂದು
ತೆರೆಯಲ್ಪಟ್ಟಿತು.

ಮದ್ರಾಸ್ ನಗರದಲ್ಲಿ ಮೊತ್ತಮೊದಲನೆಯ ಮಹಿಳಾ ಶಾಖೆ ತೆರೆಯುವುದರ ಮೂಲಕ ಸಿಂಡಿಕೇಟ್ ಬ್ಯಾಂಕ್ 4 ಮಹಿಳಾ ಶಾಖೆಗಳನ್ನು ಹೊಂದಿದಂತಾಗುವುದು.

ಡಾ| ಟಿ. ಎಂ. ಎ. ಪೈ, ಚೆಯರ್‌ಮ್ಯಾನ್.
ಟಿ. ಎ. ಪೈ, ಮೆನೇಜಿಂಗ್ ಡೈರೆಕ್ಟರ್.

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. No, 248/1963

ಉಡುಪಿ ಮುನ್ಸಿಪಾಲಿಟಿ — by its Commissioner Sri I. Joshva —ವಾದಿ.

ಮತ್ತು

ಸೋಫಿಯಾ ಕರ್ಕಡ—ತಿದೋರ ಕರ್ಕಡನ ಹೆಂಡತಿ—ಉಡುಪಿ ಶಹರ ಬಂಟ್ಸ್ ಹೊಸ್ಟೆಲ್‌ರೋಡ್ ಬಳಿ —ಪ್ರತಿವಾದಿಳು

ಇವರೊಳಗೆ

ಸದ್ರಿ ಪ್ರತಿವಾದಿಳಿಗೆ ಯಾ ಮಾಲ್ಯ ತಿಳಿಸುವದೇನೆಂದರೆ—

ಮೇಲ್ಕಂಡ ವಾದಿಗೆ ಪ್ರತಿವಾದಿಳಿಂದ ಬರತಕ್ಕ ಪ್ರೊಪರ್ಟಿ Tax ಆಯುವೆಟಿಗೆ ದಾಖಲು ಮಾಡಿದ ಮೇಲ್ಕಂಡ ದಾವೆ ತಾರೀಕು 28—9—63ಕ್ಕೆ ತನಿಖೆ ಬಗ್ಗೆ ಮುದ್ದತಾಗಿಯದೆ. ಆ ಕುರಿತು ಪ್ರತಿವಾದಿಳಿಗೆ ಆಕ್ಷೇಪ ಹೇಳತಕ್ಕದ್ದುಂಟಾದ್ರೆ ಸದ್ರಿ ದಿವಸ ಬೆಳಿಗ್ಗೆ 11 ಗಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು ಯೆಂಬ ಸಂಗ್ತಿ ತಿಳಿಸೋಣಾಗಿಯದೆ.

N. V. Kamath
Advocate for Plaintiff

ಉಡುಪಿ, 7-9-1963

ಶಾಲೆಗಳಿಗೆ ಬೇಕಾಗುವ
ಯಾವತ್ತೂ ಫಾರ್ಮುಗಳೂ
ಹಾಜರಿ ರಿಜಿಸ್ಟ್ರಗಳೂ ಸಿಗುತ್ತವೆ.
ನವಯುಗ ಪ್ರೆಸ್ ಉಡುಪಿ.

Edited, Printed & Published by K. H. Shetty, at the Navayuga Press, Udipi, S. India.

ಪ್ರಸಿದ್ಧ ಕವಿ
ಎಸ್ ವೆಂಕಟರಾಜರ
ಕವಿತಾಕಾಮಿನಿ
ಕವಿತಾ ಸಂಕಲನ
'ಕಿರಿಯರ ಪ್ರಪಂಚ'ದ
ಅಪೂರ್ವ ಪ್ರಕಟಣೆ
ಬೆಲೆ. ರೂ ಎರಡು
ನವಭಾರತ ಪುಸ್ತಕ ಭಂಡಾರ
ಉಡುಪಿ

ನವಯುಗ

Estd. 1921 ಸ್ಥಾಪನೆ
Regd. No. B.G. 176
Vol. 43 No 3

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
NAVAYUGA— NATIONAL WEEKLY
ಉಡುಪಿ, 19—9—1963 ಗುರುವಾರ

13 ನ ಪೈಸೆ
ವಾ. ಚಂದಾ ರೂ 6-75
ಸಂಪುಟ ೪೩ ಸಂಚಿಕೆ ೩

ಯಾವತರಹ
ಪ್ರಿಂಟಿಂಗ್ ಕೆಲಸಗಳನ್ನು
ಮಾಡಿಕೊಡಲಾಗುವುದು
ಕ್ಲಪ್ತ ಸಮಯದಲ್ಲಿ
ಮಿತ ದರದಲ್ಲಿ ಉತ್ತಮ
ಮುದ್ರಣ
ಕೆಲಸಗಳಾಗಬೇಕೆ?
ಸಂದರ್ಶಿಸಿರಿ ಯಾ ವಿಚಾರಿಸಿರಿ-
ನವಯುಗ ಪ್ರೆಸ್,
ಪಾಲುಕೋಟೆ, ಉಡುಪಿ

ಪ್ರಚಲಿತ ಪ್ರಸಂಗ

ಭಾರತ - ಪಾಕ್ ಸಂಬಂಧ ತಿಳಿಯಾಗಬೇಕು

ಚೀನೀಯರು ಭಾರತದ ಮೇಲೆ ಕಳೆದ ವರ್ಷ ಬೃಹತ್ ಪ್ರಮಾಣದಲ್ಲಿ ಆಕ್ರಮಣವನ್ನು ಮಾಡಿದ ನಂತರ ಪಾಕಿಸ್ತಾನದ ವರ್ತನೆಯಲ್ಲಿ ಅದರ ನೀತಿಯಲ್ಲಿ ಗಮನೀಯ ಪರಿವರ್ತನೆಯಾಗಿದೆ. ಇದನ್ನು ಜಗತ್ತಿನ ಕಣ್ಣುಗಳಿಂದ ಬಚ್ಚಿಡುವುದು ಅಧ್ಯಕ್ಷ ಅಯೂಬಖಾನರಿಗೆ ಸಾಧ್ಯವಾಗಲಿಲ್ಲ. ಚೀನೀಯರ ಅನ್ಯಾಯದ ಆಕ್ರಮಣವನ್ನೆದುರಿಸಲು ಅಮೇರಿಕೆ ಮತ್ತು ಬ್ರಿಟನ್ನುಗಳು ಹಾಗೂ ಮತ್ತಿತರ ಭಾರತೀಯ ಮಿತ್ರ ರಾಷ್ಟ್ರಗಳು ಸೈನಿಕ ಹಾಗೂ ಇನ್ನಿತರ ಸಹಾಯವನ್ನು ನೀಡಲು ಮುಂದಾದಾಗಲೇ ಅಯೂಬಖಾನರು ತುಟಿ ಮೀರಿದ ಮಾತುಗಳಿಂದ ಜಗಜ್ಜನರ ಮುಂದೆ ತಮ್ಮ ನಿಜರೂಪವನ್ನು ಪ್ರದರ್ಶಿಸತೊಡಗಿದರು. ಚೀನೀಯರು ಆಕ್ರಮಣ ಮಾಡಲಿಲ್ಲವೆಂದೂ ಗಡಿ ತಂಟೆಯು ತೀರ ಅಲ್ಪ ಪ್ರಮಾಣದ್ದೆಂದೂ ಅದನ್ನೇ ಭಾರತವು ದೊಡ್ಡದು ಮಾಡಿ ವಿಶ್ವದ ಜನರ ಕಣ್ಣಿಗೆ ಮಣ್ಣೆರಚಿ ತನ್ನ ಸ್ವಾರ್ಥ ಸಾಧನೆಗೆ ನೆಲ ಹಯನು ಮಾಡುತ್ತಿದೆಯೆಂದೂ ಮೊತ್ತ ಮೊದಲು ಆರೋಪಿಸಿದ ದೇಶವೆಂದರೆ ಪಾಕಿಸ್ತಾನ. ವಿದೇಶೀಯರು ಭಾರತಕ್ಕೆ ನೀಡುತ್ತಿರುವ ಸೈನಿಕೋಪಕರಣ ಸಹಾಯದ ಬಗ್ಗೆ ಶತ್ರು ಚೀನೀಯರೂ ವಹಿಸದೆ ಇರುವ ಆಸಕ್ತಿಯನ್ನು ಪಾಕಿಸ್ತಾನವು ತೋರಿಸಿದೆಯೆಂದರೆ, ಅದರ ಮನೋವಾಂಛಿತದ ಮೇಲೆ ಕ್ಷಕಿರಣ ಬೀಳಬಹುದು.

ಪಾಕಿಸ್ತಾನಕ್ಕೆ ಸೈನಿಕ ನೆರವು

ಪಾಕಿಸ್ತಾನವು ಹಲವು ವರ್ಷಗಳಿಗೆ ಮೊದಲೇ ಅಮೇರಿಕೆಯಿಂದ ಶಸ್ತ್ರಾಸ್ತ್ರ ಪಡೆಯುವ ಬಗ್ಗೆ ಕರಾರು ಮಾಡಿಕೊಂಡಿದೆ; ಆದರೆ, ಈ ಸಹಾಯವು ಕಮ್ಯೂನಿಸ್ಟ್ ಆಕ್ರಮಣದ ವಿರುದ್ಧ ಮಾತ್ರ ಅನ್ವಯವಾಗುವುದು. ಆಗಿನ ಜಾಗತಿಕ ಪರಿಸ್ಥಿತಿಯನ್ನು ವಿವೇಚಿಸುವುದಾದರೆ, ಅಂದು ಕಮ್ಯೂನಿಸ್ಟರ ಆಕ್ರಮಣದ ಭೀತಿಯೇನೂ ಇರಲಿಲ್ಲ. ಆದುದರಿಂದಲೇ ಭಾರತವು ಅಂದು ಈ ಬಗೆಯ ಒಡಂಬಡಿಕೆಯನ್ನು ಬೆಂಬಲಿಸಲಿಲ್ಲ. ಭಾರತವು ಬಯಸುತ್ತಿದ್ದರೆ, ಅದೇ ಮಾದರಿಯ ಇಲ್ಲವೇ ಇನ್ನಿತರ ರೀತಿಯ ಸೈನಿಕ ಸಹಾಯವನ್ನು ಪಡೆಯಬಹುದಾಗಿತ್ತು. ಅದು ಯಾವುದೇ ರೀತಿಯ ಸೈನಿಕ ಒಡಂಬಡಿಕೆಗಳಲ್ಲಿ ತನ್ನನ್ನು ಸಿಲುಕಿಸಿಕೊಳ್ಳುವುದು ತನ್ನ ತಟಸ್ಥ ನೀತಿಗೆ ಹಾಗೂ ಪಂಚಶೀಲ ತತ್ವಗಳಿಗೆ ಪ್ರತಿಕೂಲವಾಗುವುದೆಂದು ತಿಳಿಯಿತು; ಪಾಕಿಸ್ತಾನದಲ್ಲಿ ಸೈನಿಕ ಶಕ್ತಿಯು ನಿರರ್ಥಕವಾಗಿ ಬೆಳೆಯುವುದರಿಂದ, ಭಾರತದ ಭದ್ರತೆಗೂ ಗಂಡಾಂತರ ಒದಗುವುದೆಂದು ಪ್ರಧಾನಿ ನೆಹರು ಆಗಲೇ ಅಂದಿದ್ದರು, ಅಮೇರಿಕೆಗೂ ತಿಳಿಸಿ ಹೇಳಿದ್ದರು. ಆದರೆ, ತಾವು ನೀಡುವ ಸಹಾಯವು ಭಾರತದ ಮೇಲೆ ಆಕ್ರಮಣ ಮಾಡಲು ನೆರವಾಗದು; ಅದು ಕಮ್ಯುನಿಸ್ಟ್ ಆಕ್ರಮಣದ ಬಗೆಗೆ ಮಾತ್ರ ಸೀಮಿತವಾಗಿರುವುದು ಎಂದು ಭಾರತಕ್ಕೆ ಸಮಾಧಾನ ಹೇಳಲಾಯಿತು.

ಸಂಧಾನದ ನಾಟಕ

ಅವರೆ, ಅಂದು ನೆಹರು ವ್ಯಕ್ತಪಡಿಸಿದ್ದ ಅಭಿಪ್ರಾಯಗಳಿಗೆ ಇಂದು ಮನ್ನಣೆ ದೊರೆಯುವಂತಾಗಿದೆ. ಕುಹಕಿಗಳಾದ ಪಾಕಿಸ್ತಾನಿಗಳು ಭಾರತ ಮೇಲಾದ ಕಮ್ಯುನಿಸ್ಟ್ ಆಕ್ರಮಣದಿಂದ ದುರ್ಲಾಭ ಪಡೆಯುವ ಹವಣಿಕೆಯಲ್ಲಿರುವುದನ್ನು ಸ್ವಯಂ ಅಮೇರಿಕೆಯೂ ಇಂದು ಕಂಡುಕೊಂಡಿದೆ. ಭಾರತವನ್ನು ಚೀನೀಯರು ಆಕ್ರಮಿಸಿ, ತೋರಿಸಿದ ಭಯವು ಕೇವಲ ಭಾರತಕಲ್ಲ, ಪಾಕಿಸ್ತಾನವೂ ಸೇರಿರುವ ಭಾರತೀಯ ಉಪಖಂಡಕ್ಕೆ ಎಡತಾಕಿದ ಗಂಡಾಂತರ. ಆದುದರಿಂದ ಇವೆರಡೂ ದೇಶಗಳು ತಮ್ಮತಮ್ಮ ಭಿನ್ನಾಭಿಪ್ರಾಯಗಳನ್ನು ತಿಳಿಗೊಳಿಸಿ, ಒಂದಾಗಿ ಈ ಕಮ್ಯೂನಿಸ್ಟ ಸಂಥಾಹ್ವಾನವನ್ನು ಎದುರಿಸಬೇಕೆಂದು ಒತ್ತಿ ಹೇಳಿದರು. ಆದಕ್ಕೆ ಪಾಕ್ ನಾಯಕರು ಸಂಧಾನದ ನಾಟಕವನ್ನು ಆಡಿ ತಮ್ಮ ಬೆನ್ನನ್ನು ತಾವೇ ತಟ್ಟಿಕೊಂಡರು. ಇನ್ನೊಬ್ಬರ ಅಭಿಪ್ರಾಯವನ್ನು ಎಳ್ಳಷ್ಟೂ ಮನ್ನಿಸಲು ಸಿದ್ಧರಿಲ್ಲದ ಅವರು ಸಂಧಾನ ಮಾಡುವುದಾದರೂ ಹೇಗೆ? ಎಂತಲೇ ಅದು ವಿಫಲವಾಯಿತು.

ಮೂರ್ಖನ ಅಗ್ನಿಸ್ಪರ್ಶ

ಈ ನಡುವೆ ಪಾಕಿಸ್ತಾನವು ಮಾಡಿದ ಕುತಂತ್ರಗಳನ್ನು ಜಗತ್ತಿಂದು ಕಂಡುಕೊಂಡಿದೆ. ಭಾರತದ ಶತ್ರು ಚೀನೀಯರೊಡನೆ ತನಗಿಲ್ಲದ ಗಡಿ ಒಡಂಬಡಿಕೆಯನ್ನದು ಮಾಡಿಕೊಂಡಿತು; ತನಗಧಿಕಾರವಿಲ್ಲದ ಕಾರ್ಯವೆಸಗುವ ದಾರ್ಷ್ಟ್ಯವನ್ನದು ತೋರಿಸಿತು. ಈ ಸಮಯದಲ್ಲಿ ಅಯೂಬಖಾನರು ಇಂತಹ ಒಡಂಬಡಿಕೆಗೆ ಮುಂದುವರಿಯ ಬಾರದೆಂದು ಅಮೇರಿಕೆಯೂ ತಿಳಿಸಿ ಹೇಳಿತ್ತು; ಅವಸರ ಮಾಡಬಾರದೆಂದು ಎಚ್ಚರಿಸಿತ್ತು; ಭಾರತವಂತೂ ಅದು ಅನ್ಯಾಯದ್ದೆಂದು ಸಾರುತ್ತ ಬಂತು. ಆದರೂ ಅಯೂಬಖಾನರು ತಮ್ಮ ವಿದೇಶ ಸಚಿವ ಭುಟ್ಟೋರವರನ್ನು ಪೀಕಿಂಗಿಗೆ ಕಳಿಸಿದರು, ಒಡಂಬಡಿಕೆಯನ್ನು ಸಾಧಿಸಿಬಿಟ್ಟರು. ಆದರೊಡನೆ ಅನಾಕ್ರಮಣ ಒಪ್ಪಂದವನ್ನೂ ಅವರು ಮಾಡಿಕೊಂಡಿದ್ದಾರೆ. ಚೀನೀಯ ಪ್ರಧಾನಿ ಚೌ ಎನ್ ಲಾಯಿಯವರು ಭಾರತದೊಡನೆಯೂ ಇಂತಹುದೇ ಒಪ್ಪಂದವನ್ನು ಮಾಡಿಕೊಂಡಿದ್ದರು; ಮತ್ತದನ್ನು ಸಮಯ ಬಂದಾಗ ಗಾಳಿಗೆ ತೂರಿದರು. ಇದನ್ನು ತಿಳಿದೂ ಪಾಕ್ ನಾಯಕರು ಚೀನಾದೊಡನೆ ಸ್ನೇಹ ಹಸ್ತ ನೀಡಲು ಮುಂದಾದುದೆಂದರೆ, ಅದು ಮೂರ್ಖನು ಮಾಡಿದ ಅಗ್ನಿಸ್ಪರ್ಶವೆಂದು ಯಾರೂ ಹೇಳಬಲ್ಲರು.

ನಮ್ಮಲ್ಲಿ ದುಸ್ಥಿತಿಯಿಲ್ಲ

ಪಾಕ್-ಭಾರತದ ಗಡಿಪ್ರದೇಶದಲ್ಲಿ ಪಾಕ್ ಸೈನಿಕರು ಜಮೆಯಾಗುತ್ತಿದ್ದಾರೆ; ಅತ್ತ ಉತ್ತರದ ಸೀಮೆಯಲ್ಲೂ ಚೀನೀಯರ ಪಡೆಯ ಚಲನವಲನಗಳು ಹೆಚ್ಚಿವೆ. ಇವೆರಡೂ ಕೂಡಿಯೇ ಭಾರತವನ್ನು ಬೆದರಿಸುವ ಹವಣಿಕೆಯಲ್ಲಿರುವಂತೆ ಭಾಸವಾಗುತ್ತದೆ. ಆಕ್ರಮಣವನ್ನೆದುರಿಸಲು ಭಾರತವೂ ಸಾಕಷ್ಟು ಸಿದ್ಧತೆಗಳನ್ನು ಮಾಡಿಕೊಂಡಿದೆ; ಮಾಡಿಕೊಳ್ಳುತ್ತಿದೆ. ಅವು ಬೆದರಿಸಿ, ಭಯ ತೋರಿಸಿ, ಭಾರತವನ್ನು ಮಣಿಸುವಂತೆ ಮಾಡುವ ಕುಹಕೋಪಾಯವನ್ನು ಕೈಗೊಂಡಿರಲೂ ಬಹುದು. ಆದರೆ, ಆತ್ಮರಕ್ಷಣೆಯನ್ನು ಮಾಡಿಕೊಳ್ಳಲು ಭಾರತವಿಂದು ಸಮರ್ಥವಿದೆ; ಆದುದರಿಂದ ನಮ್ಮ ಶತ್ರುಗಳ ಇಂಗಿತವೇನೆಂದು ಸರಿಯಾಗಿ ತಿಳಿಯದೆ ಹೋದರೂ ಅವರ ಕುತಂತ್ರದಿಂದ ಮೋಸಹೋಗುವ ದುಸ್ಥಿತಿಯಲ್ಲಿ ನಾವಿಂದು ಇರುವುದಿಲ್ಲ.

ಎರಡು ಕರ್ತವ್ಯಗಳು

ಪಾಕಿಸ್ತಾನವು ಕಮ್ಯುನಿಸ್ಟ ಶಕ್ತಿಗಳೊಡನೆ ಸರಸವಾಡುತ್ತ ತನ್ನ ತಲೆಯನ್ನು ಅವರ ಕರಗಳಿಗೆ ಒಪ್ಪಿಸುತ್ತ ಒಂದೆಡೆ ಅನ್ಯಾಯ ಮಾಡುತ್ತಿದೆ, ಮತ್ತೊಂದೆಡೆ ಇದನ್ನು ಬಚ್ಚಿಡುವ ಪ್ರಯತ್ನವನ್ನೂ ಮಾಡಿ ಪಾಶ್ಚಾತ್ಯ ಮಿತ್ರರ ಬಲವನ್ನು ಉಳಿಸಿಕೊಳ್ಳಲು ತವಕಪಡುತ್ತಿದೆ. ಪಾಕಿಸ್ತಾನವಾಡುತ್ತಿರುವ ಡೊಂಬರಾಟವನ್ನು ಅಮೇರಿಕೆಯು ಅರಿತುಕೊಂಡಿತು; ಮತ್ತು ಚೀನಾದೊಡನೆ ಸಂಸಾಟ ಕೂಡದು ಎಂದು ಸಲಹೆಯನ್ನೂ ಇತ್ತಿತು. ಆದರೆ, ಅಯೂಬರು ತನ್ನಾಟ ನಿಲ್ಲಿಸಲಿಚ್ಛಿಸಲಿಲ್ಲ, ತಮ್ಮೊಳಗೆ ಅಂತಹ ಗಾಢವಾದ ಮೈತ್ರಿಯಿಲ್ಲವೆಂದು ಮಾತು ಹಾರಿಸಿದರು. ಅಮೇರಿಕೆಯ ಉಪವಿದೇಶ ಮಂತ್ರಿ ಶ್ರೀ ಜಾರ್ಜ ಬೌಲ್ ಇತ್ತೀಚೆಗೆ ಅಯೂಬಖಾನರನ್ನು ಕಂಡು ಈ ಸಂಬಂಧದಲ್ಲಿ ತುಂಬ ಮಾತಾಡಿದರು. ಈ ಭೆಟ್ಟಿಯ ನಂತರವೇ ಪಾಕಿಸ್ತಾನದ ಹೃದಯ ದುರುದ್ದೇಶದಿಂದ ಕೂಡಿದೆ ಎಂಬುದು ಅವರಿಗೆ ಮನವರಿಕೆಯಾಯಿತು. ಪ್ರಧಾನಿ ನೆಹರು ಈ ವಿಷಯದಲ್ಲಿ ವ್ಯಕ್ತಪಡಿಸಿದ್ದ ವಿಚಾರಗಳು ಸಮರ್ಪಕವಾದುವೆಂಬುದವರ ಗಮನಕ್ಕೆ ಬಂತು. ಆದುದರಿಂದಾಗ ಅಮೇರಿಕೆಯು ಪಾಲಿಗೆ ತನ್ನ ನೀತಿಯನ್ನು ನಿರ್ಧರಿಸುವುದು ಅಗತ್ಯವಾಗಿದೆ. ಅದನ್ನು ಅದರ ಇಚ್ಛೆಯಂತೆ ನಡೆಯಲು ಬಿಟ್ಟು, ಅದಕ್ಕನುಸಾರ ತನ್ನ ಪಾಕ್ ನೀತಿಯನ್ನು ಪುನರ್ವಿಮರ್ಶಿಸುವುದೊಂದು; ಇಲ್ಲವೇ ಅದನ್ನು ಚೀನೀಯ ಪ್ರಭಾವದಿಂದ ದೂರವುಳಿಯುವಂತೆ ಪ್ರಯತ್ನಿಸಿ ಜಯಶೀಲವಾಗುವುದಿನ್ನೊಂದು.

ಕಾಶ್ಮೀರ ಪ್ರಶ್ನೆ

ಇವುಗಳಲ್ಲಿ ಎರಡನೆಯದನ್ನು ಮೊದಲು ಮಾಡಬೇಕಾಗಿದೆ, ಅದರಲ್ಲಿ ಅಪಸಲವಾದರೆ ಮಾತ್ರ ಮೊದಲನೆಯ ದಾರಿ. ಆದುದರಿಂದ ಪಾಕಿಸ್ತಾನವು ಚೀನೀಯರೊಡನೆ ಸ್ನೇಹ ಬೆಳೆಸಲು ಇರುವ ಮುಖ್ಯ ಕಾರಣ ಯಾವುದು ಎಂದವರು ಯೋಚಿಸಿ, ಕಾಶ್ಮೀರ ಪ್ರಶ್ನೆಯೊಂದು ಬಗೆಹರಿದರೆ, ಎಲ್ಲವೂ ಸುಗಮವಾಗುವುದೆಂದು ತಿಳಿದು, ಆ ಬಗ್ಗೆ ಮರಳಿ ಭಾರತದ ಮೇಲೆ ಒತ್ತಾಯ ಹೇರತೊಡಗಿದ್ದಾರೆ. ತಾವು ನೀಡುವ ನೆರವಿಗೂ ಈ ಪರಿಹಾರಕ್ಕೂ ಯಾವ ಸಂಬಂಧವನ್ನವರು ಕಲ್ಪಿಸಿಕೊಂಡಿಲ್ಲವಾದರೂ ವಿವಾದ ಪರಿಹೃತವಾಯಿತೆಂದರೆ, ನೆರವು ನೀಡಲು ಮಾರ್ಗ ಸುಗಮವಾಗುವುದೆಂದೂ ಪಾಕ್—ಭಾರತಗಳಲ್ಲಿ ಒಮ್ಮನಸ್ಸು ಇದ್ದರೆ ಕಮ್ಯುನಿಸ್ಟ ಆಕ್ರಮಣವನ್ನು ಸುಲಭವಾಗಿ ಮತ್ತು ಯಶಸ್ವಿಯಾಗಿ ಎದುರಿಸುವುದು ಸಾಧ್ಯವೆಂದೂ ಅವರ ಅಂಬೋಣ.

ಬೆಕ್ಕಿನ ಕುತ್ತಿಗೆಗೆ ಗಂಟೆ

ಇದನ್ನು ತಳ್ಳಿಗಳೆಯುವುದು ಅಶಕ್ಯ. ಈ ದಿಸೆಯಲ್ಲಿ ಭಾರತವು ಸಾಕಷ್ಟು ಉದಾರತೆಯನ್ನೇ ತೋರಿಸಿತ್ತು. ಆದರೆ, ಪಾಕ್ ಮೊಂಡುವಾದದಿಂದಾಗಿ ಅದು ನಡೆ

(೩ನೇ ಪುಟ ನೋಡಿ)

ಐತಿಹಾಸಿಕ ನಾಟಕ

ಗಜಪತಿ ನಂದಿನಿ

ಬರೆದವರು: "ನವಗಿರಿನಂದ"

(ಕಳೆದ ಸಂಚಿಕೆಯಿಂದ ಮುಂದುವರಿದುದು)

ದೃಶ್ಯ ೩ ಬೀದಿ
ಸಮಯ ಮುಂಜಾನೆ
ಬಿಸಿಲೇರುತ್ತಾ ಬರುತ್ತಿದೆ.

ತಿಮ್ಮಣ್ಣ—(ಕೈಯಲ್ಲಿ ದೊಣ್ಣೆ, ಕಂಕುಳಿನಲ್ಲಿ ಗಂಟುಗಳೊಂದಿಗೆ ಪ್ರವೇಶಿಸಿ, ತೆರೆಯ ಕಡೆಗೆ ನೋಡಿ) ಎಲೋ ತೆನಾಲಿ! ರಾಮಕೃಷ್ಣ! ಎಲ್ಲಿದ್ದಾನೋ ಈ ಮಹಾರಾಯ

ರಾಮಕೃಷ್ಣ—ಇಗೋ ತಿಮ್ಮಣ್ಣಾ, ಬಂದೆ ಬಂದೆ.

ತಿಮ್ಮಣ್ಣ—ಹೀಗೆ ಬಂದ ಮಂದ ಮಾಡಿದರೆ ಹೇಗಪ್ಪಾ ಇಷ್ಟು ದೂರ ಸಾಗುವುದು?

ರಾಮಕೃಷ್ಣ—ಮಂದವಲ್ಲವಯ್ಯಾ ಹಂಪೆ ತಿಮ್ಮಾ ವಿನೋದವಾಗಿ ದಾರಿ ಸಾಗುವಂತೆ ಗಂಟಿನಿಂದ ನನ್ನ ಪಾಂಡುರಂಗ ಮಹಾತ್ಮ್ಯೆಯನ್ನು ತೆಗೆಯೋಣವೆಂದು ಸ್ವಲ್ಪ ನಿಂತೆನು. ಅಷ್ಟರಲ್ಲಿ ನೀನು ಕರೆದು ಬಿಟ್ಟೆ

ತಿಮ್ಮಣ್ಣ—ಪಾಂಡುರಂಗ ಮಹಾತ್ಮ್ಯವಂತೆ. ಹುಚ್ಚ ಕಿಟ್ಟ! ಆ ತಿಮ್ಮರಸರ ಮಂತ್ರದಲ್ಲಿ ಸಿಕ್ಕಿ ತಂತ್ರದಿಂದ ಸುತ್ತಾಡುವ ನಮಗೆ ಇನ್ನು ಪಾಂಡಿತ್ಯ ಪ್ರದರ್ಶನಕ್ಕೆ ಎಡೆಯೆಲ್ಲ್ಯೋ!

ರಾಮಕೃಷ್ಣ—ಹಾಗಾದರೆ ನೀನು ನಿನ್ನ ಭಾರತವನ್ನು ಸಂಗಡ ತರಲಿಲ್ಲವೇನ?

ತಿಮ್ಮಣ್ಣ—ಏನ? ಅದನ್ನು ಹಂಪೆಯಲ್ಲಿಯೇ ಬಿಟ್ಟು ಬಂದಿದ್ದೇನೆ. ಪ್ರಸ್ತುತ ಈ ಕೃಷ್ಣ ಚರಿತ್ರೆ ಹೇಗೆ ಕೊನೆಗಾಣುವುದೆಂದು ತಿಳಿಯದೆ ಭಾರತವನ್ನು ಕಟ್ಟಿಕೊಂಡು ಮಾಡುವುದೇನ?

ರಾಮಕೃಷ್ಣ—ಹಾಗಿರಲಿ, ನಾವೀಗ ಹೇಗೆ ಸಂಧಾನ ಮಾಡುವುದು ಈ ಕೃಷ್ಣನಿಗೆ?

ತಿಮ್ಮಣ್ಣ—ಹಾಗೆ ಬಾರಯ್ಯ ಪ್ರಸ್ತುತ ದಾರಿಗೆ. ಕಾವ್ಯದ ನಿಷ್ಠೆಯನ್ನು ಈಗ ಓಡಿಸಬೇಕು. ಸ್ವಲ್ಪ ಸಾಮಾನ್ಯ ಜನರಂತೆ ಆಗಬೇಕು.

ರಾಮಕೃಷ್ಣ—ಹಾಗಾದರೆ ಸ್ವಲ್ಪ ಕುಳಿತು ವೇಷಗಳ ಹಾಕಿ....(ಗಂಟು ಕೆಳಗಿಳಿಸುವನು)

ತಿಮ್ಮಣ್ಣ—ವೇಷ ಹಾಕಲಿಕ್ಕೆ ಈಗಾಗಲೇ ಅವಸರವೇನಪ್ಪ? ವಿಜಯ ನಗರದ ಗಡಿ ದಾಟಿದ ಮೇಲೆ ನೋಡೋಣ.

ರಾಮಕೃಷ್ಣ—ಅದು ನನಗೂ ಗೊತ್ತಪ್ಪಾ. ಇಂಥಿಂಥಾ ವೇಷ ಹಾಕಿಕೊಳ್ಳಬೇಕೆಂದು ಈಗಿಂದಲೇ ಯೋಚನೆ ಮಾಡಿಕೊಳ್ಳ ಬೇಕೋ ಬೇಡವೊ?

ತಿಮ್ಮಣ್ಣ—ಅದು ನಿಜವಪ್ಪ—

ರಾಮಕೃಷ್ಣ—ಮತ್ತೆ ನೋಡೋಣ ಬಾ—(ಗಂಟು ಕೆಳಗಿಟ್ಟು ಕುಳಿತು ತಿಮ್ಮಣ್ಣನನ್ನು ಎಳೆಯುವನು)

ತಿಮ್ಮಣ್ಣ—ಅದಕ್ಕೆ ಗಂಟು ಬಿಚ್ಚಬೇಕೆ? ಕಟ್ಟಿಕೊಂಡವರಿಗೆ ಗೊತ್ತಿಲ್ಲವೆ? ಹೂಂ, ಮುಖ್ಯ ನಡೆನಡೆದು ಕಾಲು ನೋಯುತ್ತದಪ್ಪ. ಅಯ್ಯೋ! ಅಮ್ಮಮ್ಮ! ಹುಂ! (ಕೂಡುವನು)

ರಾಮಕೃಷ್ಣ—ನಾನಲ್ಲಿ ಹೇಳಿದೆ ಹಾಗೆ? ತಮಗೆ ಸಾಕಾಗಿ ಹೋಗಿದೆ. ಹುಂ, ಹಾಗೆ ಕೂಡಿ.

ತಿಮ್ಮಣ್ಣ—ಸರಿ ಸರಿ ಯಾವ ಯಾವ ವೇಷಗಳುಂಟು ನಿನ್ನ ಗಂಟಿನಲ್ಲಿ?

ರಾಮಕೃಷ್ಣ—(ಒಂದೊಂದೇ ತೆಗೆದು ತೋರಿಸುತ್ತ) ಇಗೋ ನೋಡು, ಕಳ್ಳನ ವೇಷ, ಪುರಕನ ವೇಷ, ಹುಚ್ಚನ ವೇಷ, ಮುದುಕನ ವೇಷ, ಇದು ಯೋಗಿ, ಇದು ಶಿಷ್ಯ, ಇದು ದೂತ, ಇದು ಚಾಂಡಾಲ.....

ತಿಮ್ಮಣ್ಣ—ಅಯ್ಯೋ! ನಿನ್ನ ಹಣೆ ಬರಹವೇ ಏನು ಕರ್ಮ ಬಂತಪ್ಪಾ ನಿನಗೆ ಚಾಂಡಾಲನಾಗಲಿಕ್ಕೆ.

ರಾಮಕೃಷ್ಣ—ಹಣೆಬರಹವಲ್ಲದಿದ್ದರೆ ನಾವೀದಾರಿಯಲ್ಲಿಳಿಯುತ್ತಿದ್ದೆವೆ?

ತಿಮ್ಮಣ್ಣ—ಸರಿ, ಇವುಗಳಲ್ಲಿ ನೀನು ಧರಿಸಿಕೊಳ್ಳುವ ವೇಷ ಯಾವುದು?

ರಾಮಕೃಷ್ಣ—ಅದು ನಾವಿಬ್ಬರೂ ಒಟ್ಟಿಗೇ ನಿಶ್ಚಯಿಸಬೇಕಾದ್ದು. ಈಗ ನಿನ್ನ ಗಂಟು ಹಾಗೇ ಮುಚ್ಚಿಟ್ಟು ನನ್ನನ್ನು ಮಾತ್ರ ಕೇಳುವಿಯಲ್ಲಾ?

ತಿಮ್ಮಣ್ಣ—ನನ್ನ ವಿಷಯ ಮೊದಲೇ ನಿಶ್ಚಯಮಾಡಿ ಬಿಟ್ಟಿದ್ದೇನೆ. ಇನ್ನು ಹೊರಡು. ಈ ರಾಜಬೀದಿಯಲ್ಲಿ ಹೀಗೆ ಗಂಟು ಬಿಚ್ಚಿ ಕುಳಿತರೆ ಏನಾದರೂ ಮೋಸ ಬಂದೀತು. (ಏಳುವನು)

ರಾಮಕೃಷ್ಣ—ಮೋಸಕ್ಕೆ ತಕ್ಕ ಮೋಸಮಾಡುವುದರಲ್ಲೇ ಮನುಷ್ಯರ ಬುದ್ಧಿವಂತಿಕೆಯಿದೆ. ಅಲ್ಲೋ ತಿಮ್ಮಣ್ಣಾ, ನಾವಿಬ್ಬರೂ ಒಂದೇ ಕಾರ್ಯಕ್ಕೆ ಅಪ್ಪಣೆ ಪಡೆದು ಹೊರಟಿರುವಾಗ ಒಂದೇ ರೀತಿಯ ಭಾವನೆಯುಳ್ಳವರಾಗಿರ ಬೇಡವೆ? ನೀನೇನೋ ಗುಟ್ಟುಮಾಡಿಕೊಂಡು ಮೋಸ ತೋರಿಸುವಿಯಲ್ಲಾ? ಈಗಲೇ ಹೀಗಾದರೆ—

ತಿಮ್ಮಣ್ಣ—(ರಾಮಕೃಷ್ಣನ ಬೆನ್ನು ತಟ್ಟುತ್ತಾ) ಹಾಗಲ್ಲವೋ ರಾಮಕೃಷ್ಣಾ ಈ ರಾಜಬೀದಿಯಲ್ಲಿ ಗುಟ್ಟು ರಟ್ಟುಮಾಡಿದರೆ, ಯಾರಾದರೂ ದಾರಿಹೋಕರು ಬರುವುದು, ನಮ್ಮ ಮಾತು ಕೇಳುವುದು—

ರಾಮಕೃಷ್ಣ—ಯಾರೂ ಇಲ್ಲ (ಸುತ್ತಮುತ್ತ ನೋಡಿ) ಊಹುಂ, ಒಬ್ಬರೂ ಕಾಣೆ. ನನ್ನಾಣೆ ಹಂಪೆ ತಿಮ್ಮ, ಹೇಳಿಬಿಡು, ನೀನು ಯಾವ ವೇಷ ಕೈಕೊಳ್ಳಬೇಕೆಂದಿರುವಿ?

ತಿಮ್ಮಣ್ಣ—ಹೇಳಲೇ ಬೇಕೇನು?

ರಾಮಕೃಷ್ಣ—ಹೇಳದಿದ್ದರೆ ನಾನಿಲ್ಲಿಂದ ಕದಲುವುದೇ ಇಲ್ಲ.

ತಿಮ್ಮಣ್ಣ—ಹಾಗಾದರೆ ಕೇಳು. ನಾನು ಹಾಕುವುದು, ಯಾವ ವೇಷದಿಂದ ಎಲ್ಲಾ ಜನರನ್ನೂ ನನ್ನ ಕಾಲಡಿಗೆ ಬಾಗಿಸಲಾಗುವುದೋ ಅಂಥಾ ವೇಷ. ಮಹಾಯೋಗಿಯ ವೇಷ ಹೂಂ, ಇನ್ನು ಹೊರಡು.

ರಾಮಕೃಷ್ಣ—(ಗಟ್ಟಿಯಾಗಿ ನಿಂತು) ಊಹೂಂ.

ತಿಮ್ಮಣ್ಣ—ಏಕಯ್ಯಾ ತೆನಾಲಿ?

ರಾಮಕೃಷ್ಣ—ಅಲ್ಲಾ, ನೀನೇನೋ ಒಳ್ಳೆ ಶ್ರೇಷ್ಠವಾದ ವೇಷವನ್ನು ಗಟ್ಟಿಮಾಡಿಬಿಟ್ಟೆ. ಅದಕ್ಕೆ ತಕ್ಕವೇಷ ನಾನೂ ಗಟ್ಟಿಮಾಡಬೇಕಾಯಿತಲ್ಲಾ?

ತಿಮ್ಮಣ್ಣ—ಅಷ್ಟೂ ತಿಳಿಯದೆ, ನೀನು ನನ್ನ ಶಿಷ್ಯನಯ್ಯಾ, ಪ್ರಿಯ ಶಿಷ್ಯ. (ಬೆನ್ನುತಟ್ಟುವನು)

ರಾಮಕೃಷ್ಣ—(ತಲೆಯಾಡಿಸುತ್ತ) ಬಲು ಚೆನ್ನಾಗಿದೆಯಪ್ಪ.

ತಿಮ್ಮಣ್ಣ—ಒಮ್ಮೊಮ್ಮೆ ದೂತನ ವೇಷವನ್ನೂ ನೀನು ಹಾಕಬೇಕಾದೀತು.

ರಾಮಕೃಷ್ಣ—ಬಹಳ ಚೆನ್ನಾಗಿದೆ.

ತಿಮ್ಮಣ್ಣ—ಇನ್ನೇನು ಹೊರಡು.

ರಾಮಕೃಷ್ಣ—ದೂತ ಏಕಯ್ಯಾ?

ತಿಮ್ಮಣ್ಣ—ನಮ್ಮ ತಂತ್ರಗಳನ್ನು ಆಗಾಗ ತಿಮ್ಮರಸು ಮಂತ್ರಿಗಳಿಗೆ ತಿಳಿಸುತ್ತಿರಲಿಕ್ಕೆ.

ರಾಮಕೃಷ್ಣ—ಭೇಷ್! ಭೇಷ್! ನೀನು ಮಾತ್ರ ಮಹಾ ಪೂಜ್ಯ ಗುರು! ನಾನು ಶಿಷ್ಯ, ದೂತ! ಥೂ! ಒಳ್ಳೇ ಮರ್ಯಾದೆ ಮಾಡುತ್ತಿ ನನಗೆ!

ತಿಮ್ಮಣ್ಣ—ಅಯ್ಯೋ ಮಹಾರಾಯ! ತೆಗೆದೆಯಾ ನಿನ್ನ ಕುಂಟು ಮಾತು! ಮರ್ಯಾದೆ ನೀನು ನನಗೆ ಮಾಡಿದರುಂಟು, ಇಲ್ಲದಿದ್ದರಿಲ್ಲ. ಅಯ್ಯೋ! ರಾಮಾ! ನಮ್ಮ ಕಪಟ ವೇಷಗಳಿಗೆ ಮರ್ಯಾದೆ ಬೇರೆ ಬೇಕೆ?

ರಾಮಕೃಷ್ಣ—ಹಾಗಾದರೆ ನಾನು ಗುರುವಾಗುತ್ತೇನೆ, ನೀನು ಶಿಷ್ಯನಾಗು. ದೂತನೂ ಆಗು, ಮತ್ತೆ ಯಾರಾದರೂ ನೀನೇ ಆಗು.

ತಿಮ್ಮಣ್ಣ—ಆಗ ಬಹುದು. ಆದರೆ—

ರಾಮಕೃಷ್ಣ—ಏನಾದರೆ? ಆದೇನು?

ತಿಮ್ಮಣ್ಣ—ಕಟಕ ಪುರವು ಸಂಪೂರ್ಣವಾಗಿ ಆಂಧ್ರ ದೇಶ. ನನಗಾದರೋ ತೆಲುಗು ಭಾಷೆಯಲ್ಲಿ ಹೆಚ್ಚು ಅನುಭವವಿಲ್ಲ. ನೀನಾದರೋ ಆಂಧ್ರಭಾಷಾ ಪ್ರವೀಣ. ಶಿಷ್ಯ, ದೂತ ಕಾರ್ಯಗಳಿಗೆ ಹೆಚ್ಚಾಗಿ ಆಂಧ್ರ ಭಾಷೆಯಲ್ಲಿ ಮಾತಾಡಬೇಕಾಗುತ್ತದೆ ಯೋಗಿಯ ವೇಷಕ್ಕಾದರೋ ಮೌನ ಮುದ್ರೆಯೇ ಬೇಕಾದ್ದು. ಆದಕ್ಕಾಗಿಯೇ ತೆಲುಗು ಬಾರದ ನಾನು ಯೋಗಿಯಾಗುತ್ತೇನೆಂದೆ. ಇನ್ನು ನಿಶ್ಚಿಂತ. ಜಗಳ ಮಾತ್ರ ಬೇಡ.

ರಾಮಕೃಷ್ಣ—(ತಲೆತುರಿಸುತ್ತ) ಓ... ಹೋ! .... ನಿಜ....ನಿಜ.

ತಿಮ್ಮಣ್ಣ—ಅದರೇನಪ್ಪಾ, ಕಾರ್ಯಸಾಧನೆಯ ಕೆಲಸಗಳೆಲ್ಲವೂ ನಿನ್ನ ಮೂಲಕವೇ ಆಗಬೇಕಾದ್ದರಿಂದ, ಕಾರ್ಯಸಾಧನೆಯ ಕೀರ್ತಿ ಸಂಪೂರ್ಣ ನಿನಗೇ. ಹೆಚ್ಚೇನು?-ನನ್ನ ಜೀವವನ್ನ ನಿನ್ನ ಕೈಯಲ್ಲಿ ಕೊಟ್ಟು, ನಾನು ಕುಳಿತು ಬಿಡುತ್ತೇನೆ. ನನ್ನನ್ನು ಕೊಲ್ಲುವುದೂ ಕಾಯುವುದೂ ನೀನೇ. ನೀನು ತಿನಿಸಿದರೆ ತಿಂದು ಬದುಕೀತು ಈ ಜೀವ ನೀನು ಒಣಗಿಸಿದರೆ ಹೀಗೇ ಹೋಯಿತು. ಗುರುವಿಗಿಂತ ಶಿಷ್ಯನೇ ಮೇಲು ಅಷ್ಟರೊಳಗೆ ನಾನು ಚೆನ್ನಾಗಿ ತೆಲುಗು ಕಲಿತು ಬಿಟ್ಟರೆ ನೀನೇ ಗುರುವಾಗು.

ರಾಮಕೃಷ್ಣ—ಇಲ್ಲ ಯಿಲ್ಲ. ನೀನೇ ಗುರುವಾಗು. ನಾನೇ ನಿನ್ನ ಶಿಷ್ಯ. ಹೋಗೋಣನಡೆ ನಮ್ಮರಾಯನು ಅಲ್ಲಿಗೆ ತಲುಪುವುದರೊಳಗೆ ನಾವು ಜಾಪೆ ಹಾಸಿ ಸಿದ್ಧಮಾಡಿಡಬೇಕು. ನಡನಡೆ. (ಗಬಗಬನೆ ಗಂಟು ಕಟ್ಟಿಕೊಳ್ಳುವನು.)

(ತಿಮ್ಮಣ್ಣ ತಲೆಯಾಡಿಸಿ ನಗುವನು. ಇಬ್ಬರೂ ಹೋಗುವರು.)

(ಮುಂದುವರಿಯುವುದು)

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕ್ಯಾಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3 ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ನವಯುಗಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ

ರಾಜನೀತಿ ವಿಚಕ್ಷಣ

ಚಾಣಕ್ಯನು ನೇಯ್ದ ತಂತ್ರಜಾಲ

ಭಾರತದ ಸರ್ವಶ್ರೇಷ್ಠ ಮಹಾರಾಜರಲ್ಲಿ ಅಶೋಕನ ಹೆಸರು ವಿಶ್ವೇತಿಹಾಸದಲ್ಲಿ ಅಜರಾಮರವಾಗಿ ಉಳಿಯುವುದು. ಆತನು ಸಾಮ್ರಾಜ್ಯ ದಾಹದಿಂದ ಮಾಡಿದ ಕಳಿಂಗ ಯುದ್ಧ ಮತ್ತು ಅದರ ಅದ್ಭುತ ಪರಿಣಾಮಗಳು ಅವನ ಮನಃ ಪರಿವರ್ತನಕ್ಕೆ ಕಾರಣವಾದವು. ನಾವಿಂದು ಅಶೋಕನನ್ನು ಕೇವಲ ಮಹಾರಾಜನೆಂದು ಗೌರವಿಸುವುದಿಲ್ಲ. ಬೌದ್ಧಭಿಕ್ಷುವಿನಂತೆ ನಿಸ್ಪೃಹ ಜೀವನವನ್ನು ಬಾಳಿ ತನ್ನ ಪ್ರಜೆಗಳನ್ನು ಮಕ್ಕಳಂತೆ ಪರಿಪಾಲಿಸಿದ ಆತನ ನೀತಿಗಾಗಿ, ಶಾಂತಿ-ಅಹಿಂಸೆಗಳಿಗೆ ಆಗರವೆನಿಸಿದ ಬೌದ್ಧಧರ್ಮ ಪ್ರಚಾರಕ್ಕಾಗಿ ಆತನು ಮಾಡಿದ ಅಪ್ರತಿಮ ಸಾಹಸಕ್ಕಾಗಿ ಆದರಿಸುತ್ತೇವೆ. ಈತನ ಅಜ್ಜ ಚಂದ್ರಗುಪ್ತ ಮೌರ್ಯನು ಪಾಟಲೀಪುರದ ರಾಜಸಿಂಹಾಸನವನ್ನು ಪಡೆಯಲು ಪಟ್ಟ ಬವಣೆಗಳನ್ನು ಕೆಂಪು ನಾರಾಯಣನು ತನ್ನ 'ಮುದ್ರಾ ಮಂಜೂಷ'ದಲ್ಲಿ ಸವಿವರವಾಗಿ ವರ್ಣಿಸಿರುವನು.

ಚಂದ್ರಗುಪ್ತನ ಮಲತಾಯಿಯ ಮಕ್ಕಳು ನವನಂದರು. ಮೌರ್ಯರು ತಮಗಿಂತ ಹೆಚ್ಚೆ ಹೆಚ್ಚೆಗೂ ಮುಂದೆ ಬರುತ್ತಿರುವುದನ್ನು ಕಂಡ, ಅಮಾತ್ಯ ರಾಕ್ಷಸನ ಮತ್ತು ತಂದೆ ಸರ್ವಾರ್ಥಸಿದ್ಧಿಯ ಹಿತವಚನಗಳನ್ನು ಕಡೆಗಣಿಸಿ, ಅವರನ್ನು ಮೋಸದಿಂದ ಸಂಹರಿಸಿದರು. ಆದರೂ ಸುದೈವದಿಂದ ಚಂದ್ರಗುಪ್ತನೊಬ್ಬನುಳಿದನು. ಅವನು ಶತ್ರು ಶೇಷನೆಂದು ಮುನ್ನರಿಕೆಯಾದರೂ ಏಕಾಂಗಿಯಿಂದ ಯಾವ ಅಪಾಯವೂ ಸಂಭವಿಸದೆಂಬ ಆತ್ಮ ವಿಶ್ವಾಸದಿಂದ ಬಿಡುಗಡೆ ಮಾಡಿ ಅನ್ನ ಸತ್ರದ ಮೇಲ್ವಿಚಾರಣೆಗೆ ನೇಮಿಸಿದರು. ಇದುವೇ ನಂದರ ಪತನಕ್ಕೆ ನಾಂದಿಯೆನಿಸಿತು.

ಅನ್ನ ಸತ್ರದಲ್ಲಿರುವಾಗ ಮಹಾತಪೋಧನ ಚಾಣಕ್ಯನ ದರ್ಶನ ಚಂದ್ರಗುಪ್ತನಿಗಾಯಿತು. ಅವನ ತನ್ನ ದುರವಸ್ಥೆಯನ್ನೂ ನಂದರ ದುರ್ವರ್ತನೆಯನ್ನೂ ಸವಿಸ್ತರವಾಗಿ ಮನವಿ ಮಾಡಲು, ಚಾಣಕ್ಯನು ತನ್ನ ತಂತ್ರಜಾಲವನ್ನು ನೇಯ ತೊಡಗಿದನು. ಅನ್ನ ಸತ್ರದ ಉನ್ನತಾಸನದಲ್ಲಿ ನಂದರು ಬರುವ ವೇಳೆ ಮಂಡಿಸಿ, ಅವರಿಂದ ಅಪಮಾನಿತನಾದ ಚಾಣಕ್ಯನು ನಂದಸಂಹಾರದ ಮಹಾ ಪ್ರತಿಜ್ಞೆಯನ್ನುಗೈದನು.

ಅನಂತರ ಚಾಣಕ್ಯನ ರಾಜತಂತ್ರವು ಪ್ರಾರಂಭವಾಗುವುದು. ನಂದನಿಗ್ರಹಕ್ಕಾಗಿ ಅವನು ಹಲವಾರು ತಂತ್ರಗಳನ್ನು ಬಳಸಿಕೊಳ್ಳಲುಪಕ್ರಮಿಸಿದನು. ನಂದರ ಶತ್ರು ಪರ್ವತ ರಾಜನನ್ನು ಉಪಾಯಾಂತರದಿಂದ ಒಳಗು ಮಾಡಿಕೊಂಡನು. ತನ್ನ ಸಹಪಾಠಿ ಮಿತ್ರನಾತನ ವಿಶ್ವಂದಿರ ಸಹಾಯವನ್ನು ಪಡೆದು ಪಾಟಲೀಪುರದ ರಾಜಸ್ಥಾನದ ಸಕಲ ರಹಸ್ಯಗಳನ್ನು ತಿಳಿದುಕೊಂಡು ಅದಕ್ಕೆ ತಕ್ಕಂತೆ ತನ್ನ ಜಾಲವನ್ನು ನೇಯತೊಡಗಿದನು. ಪರ್ವತ ರಾಜನು ತಮ್ಮ ಮೇಲೆ ದಂಡೆತ್ತಿ ಬರುವನೆಂದು ಸುದ್ದಿ ದೊರೆತೊಡನೆಯೇ ನಂದರು ಅಮಾತ್ಯನಿಗೆ ಆತನನ್ನು ನಿಗ್ರಹಿಸುವ ಹೊಣೆಗಾರಿಕೆಯನ್ನು ಅರ್ಪಿಸಿ ತಾವು ನಿಶ್ಚಿಂತರಾದರು. ಚಾಣಾಕ್ಷ ರಾಕ್ಷಸನು ತನ್ನ ಸ್ವಾಮಿಗೆ ಹಿತವನ್ನುಂಟುಮಾಡಲು ತನಗೆ ಅಪ್ರಿಯವಾದ ಚಂದ್ರಗುಪ್ತ ಸಂಹಾರದ ಕಾರ್ಯಕ್ಕೆ ಮನಸ್ಸಂದು, ತನ್ನ ಮಿತ್ರರೆಲ್ಲರಿಗೂ ಚಂದ್ರಗುಪ್ತ ಸಂಹಾರ ಕಾರ್ಯದಲ್ಲಿ ಸಹಾಯವನ್ನು ನೀಡುವಂತೆ ರಹಸ್ಯ ಪತ್ರಗಳನ್ನು ಬರೆಯಿಸಿದನು. ಆದರೆ, ಈ ರಹಸ್ಯವೂ ಚಾಣಾಕ್ಯನ ಗುಪ್ತಚಾರರಿಂದ ಸ್ಫೋಟಗೊಂಡು ಅಮಾತ್ಯನ ಆಲೋಚನೆಯು ನಿಷ್ಫಲವಾಯಿತು.

ನಂದರು ಅಮಾತ್ಯರ ರಕ್ಷಣೆಯಲ್ಲಿರುವಷ್ಟು ದಿನ ಅವರನ್ನು ಸಂಹರಿಸುವುದು ದುಷ್ಕರವೆಂಬುದನ್ನು ಚಾಣಕ್ಯನು ಅರಿತುಕೊಂಡಿದ್ದನು. ಪ್ರತಿಪಕ್ಷ ಲಕ್ಷವನ್ನಾದರೂ ಗೆದೆಯುವ ಪೌರುಷ ಆತನದು ಎಂಬುದನ್ನಾತ ತಿಳಿದುಕೊಂಡಿದ್ದನು. ಆದುದರಿಂದ ನಂದರನ್ನು ಅಮಾತ್ಯದಿಂದ ಬೇರ್ಪಡಿಸಿ ತನ್ನ ಇಷ್ಟಾರ್ಥವನ್ನು ಸಾಧಿಸುವ ಉಪಾಯವೊಂದನ್ನು ಆತನು ಹೂಡಿದನು. ಅಮಾತ್ಯನಲ್ಲಿಯೂ ನಿಕ್ಷಿತ ಸೇನಾ ಪ್ರಮುಖರಲ್ಲಿಯೂ ಆತನ ಗುಪ್ತಚಾರರು ನಾನಾ ವೇಷಗಳಲ್ಲಿ ಹಾಸುಹೊಕ್ಕಾಗಿದ್ದರು. ಅವರ ಸಹಾಯದಿಂದ ಶತ್ರು ಪಲಾಯನ ಜಪಕ್ಕಾಗಿ ಸರಯೂ ನದೀ ತೀರದಲ್ಲಿ ಜಪಶಾಲೆಯೊಂದನ್ನು ರಚಿಸುವಂತೆಯೂ ಅಲ್ಲಿ ತನ್ನ ಸಹಕಾರಿಗಳೇ ಜಪ ನಡೆಸುತ್ತಿರುವಂತೆಯೂ ಏರ್ಪಡಿಸಿದನು. ರಾಕ್ಷಸನೂ ನಂದರೂ ಈ ಜಪಕ್ಕೆ ಸಮ್ಮತಿಸಿದರು. ಏಕೆಂದರೆ, ಇದರಿಂದ ಅವರ ಅಭೀಷ್ಟವು ಈಡೇರುವುದಿತ್ತು. ಜಪಶಾಲೆಯ ಹೋಮದ ಪೂರ್ಣಾಹುತಿಯನ್ನು ನೋಡುವ ಸದವಸರವನ್ನು ಕಳೆದುಕೊಳ್ಳಬಾರದೆಂದು ನಂದರಿಗೆ ಜಪಕರು ಹೇಳಿದ ಕಾರಣ, ಶಾಲೆಯ ಪಾವಿತ್ರ್ಯ ಮತ್ತು ಶಾಂತತೆಗಳಿಗೆ ಕುಂದೊದಗದಂತೆ ನಿರಾಯುಧರಾಗಿ ಮಿತ ಉಚ್ಚ ವರ್ಣದ ಪರಿಜನರೊಡನೆ ನಂದರು ಅಮಾತ್ಯನಿಂದ ಬೇರೆಯಾಗಿ ಜಪಶಾಲೆಯನ್ನು ಹೊಕ್ಕರು.

ಅತ್ತ ಚಾಣಕ್ಯನು ಪರ್ವತರಾಜನಿಂದ ಕಾಶೀರಾಜನಿಗೊಂದು ಪತ್ರವನ್ನು ಬರೆಸಿ ತನ್ನ ಕಾರ್ಯದಲ್ಲಿ ನೆರವು ನೀಡುವಂತೆ ಕೇಳಿಕೊಂಡನು. ಕಾಶೀ ರಾಜನಾದರೂ ನಂದ ಭಕ್ತ; ಅಮಾತ್ಯನ ಬಂಟ. ಆತನು ಈ ಸಂಗತಿಯನ್ನು ಅಮಾತ್ಯನಿಗೆ ತಿಳಿಸಲು, ಅವನು ಇದೂ ತನಗೆ ಅನುಕೂಲವಾಗುವುದೆಂದು ಬಗೆದು ಕಾಶೀರಾಜನನ್ನು ಇದಿರ್ಗೊಳ್ಳಲು ಬರುವವನು ಚಂದ್ರಗುಪ್ತನಾದರೆ, ಆತನನ್ನು ವಧಿಸಬೇಕೆಂದೂ ಬದಲು ಪರ್ವತೇಶನ ಮಗ ಮಲಯಕೇತುವಾದರೆ, ಬಂಧಿಸಬೇಕೆಂದೂ ನಿರ್ದೇಶಿಸಲು ಕಾಶೀರಾಜನು ಪರ್ವತರಾಜನ ಸಹಾಯಕ್ಕೆ ಬರುವುದಾಗಿ ತಿಳಿಸಿದನು. ಆದರೆ, ರಾಜದೂತ ಕಮಲಪೀಠನ ಜಾಣ್ಕ್ಷತೆಯಿಂದಾಗಿ ಈ ಎಲ್ಲ ಸಂಚು ಚಾಣಾಕ್ಯನಿಗೆ ತಿಳಿಯಿತು. ಇದಕ್ಕಾಗಿ ಅವನು ಪ್ರತಿ ಸಂಚನ್ನು ಹೂಡಿದನು.

ತನ್ನ ರಾಜ್ಯವನ್ನು ಮನ್ನಿಸಿ ಸಹಾಯಕ್ಕೆಂದು ಬರುವ ಕಾಶೀರಾಜನನ್ನು ಇದಿರ್ಗೊಳ್ಳಲು ಕೃತಕ ಮಲಯಕೇತುವನ್ನು ಸೃಷ್ಟಿಸಿದನು. ತನ್ನ ಸೈನಿಕರಲ್ಲಿಯೇ ಕೆಲವರಿಗೆ ಕಾಶೀಪತಿಯ ಸೈನಿಕರ ವೇಷ ತೊಡಿಸಿದನು. ಅತ್ತ ಕಾಶೀರಾಜನ ಪ್ರಯಾಣಕ್ಕೆ ಬೇಕೆಂದೇ ವಿಲಂಬ ಮಾಡಿದನು. ಕೃತಕ ಮಲಯಕೇತುವನ್ನು ಕೃತಕ ಸೈನಿಕರಿಂದ ಸೆರೆ ಹಿಡಿಸಿ, ಜಪಶಾಲೆಯಲ್ಲಿ ಹೋಮಕುಂಡ ಪ್ರದಕ್ಷಿಣೆ ಬರುತ್ತಿದ್ದ ನಂದರ ಮುಂದೆ ಇರಿಸುವಂತೆ ಮಾಡಿದನು. ತಾವು ರಾಕ್ಷಸನ ಅಪ್ಪಣೆಯಂತೆ ಮಲಯಕೇತುವನ್ನು ಬಂಧಿಸಿರುವುದಾಗಿ ಆ ಕೃತಕ ಸೇನಾನಿಗಳು ಹೇಳಲು ನಂದರು ನಿಜಕ್ಕೂ ಹಿಗ್ಗಿ ಹೀರೇಕಾಯಿಯಾದರು. ಆದರೆ, ಮಲಯಕೇತುವು ಶಸ್ತ್ರ ಹಿರಿದು ಯುದ್ಧಕ್ಕೆ ತೊಡಗಿದಾಗ ನಿರಾಯುಧರಾದ ನಂದರು ಬೆಂದ ಬದನೆಕಾಯಿಯಾದರು. ಆದರೂ ಇದೆಲ್ಲವೂ ಮೋಸವೆಂದು ತಿಳಿದು ಅವರು ತಮ್ಮವರ ಬಳಿಯಿದ್ದ ಶಸ್ತ್ರಗಳನ್ನು ಹಿರಿದು ಹೋರಾಟಕೊಟ್ಟರು. ಪೂರ್ವಸಂಕೇತದಂತೆ ಜಪಶಾಲೆಗೆ ಅಗ್ನಿಯಿಟ್ಟೊಡನೆಯೇ ಎಲ್ಲೆಲ್ಲೂ ಹಾಹಾಕಾರವೆದ್ದಿತು; ರಣರಂಗದಲ್ಲಿ ಶತ್ರುಗಳ ಚಾತ್ಕಾರಕ್ಕೆ ಪ್ರಾರಂಭವಾಯಿತು. ನವನಂದರ ಶಿರಚ್ಛೇದನವಾಯಿತು. ಅವರ ರುಂಡಗಳನ್ನು ಅಮಾತ್ಯ ಪತ್ನಿಯರಿಗೆ ಕಳುಹಿಸಿ, ಮುಂಡವನ್ನು ಹೋಮ ಕುಂಡಕ್ಕೆ ಪೂರ್ಣಾಹುತಿಯಾಗಿ ಚಾಣಕ್ಯನು ಅರ್ಪಿಸಿದನು. ಅಷ್ಟಾಗುವ ವರೆಗೂ ರಾಕ್ಷಸನಿಗೆ ಯಾವ ವಿಶೇಷ ವಾರ್ತೆಯೂ ತಲುಪಿರಲಿಲ್ಲ. ಆತನಿಗೆ ಸುದ್ದಿ ಮುಟ್ಟಿದಾಗ, ಕಾರ್ಯ ಮಿಂಚಿ ಹೋಗಿತ್ತು. ಆತನು ತನ್ನ ಆಶ್ರಿತರಿಗಾದ ದುರಂತಕ್ಕಾಗಿ ಪಶ್ಚಾತ್ತಾಪದಗ್ಧ ಹೃದಯನಾಗಿ, ಅರಮನೆಯವರು ಚಂದ್ರಗುಪ್ತನನ್ನು ಸ್ವಾಗತಿಸುವುದೇ ಕ್ಷೇಮಕರವೆಂದು ತಿಳಿದು ಅಂತೆಯೇ ತಿಳಿಸಿ ಹೇಳಿ ತಾನು ಮೈಮರೆಸಲು ಉದ್ಯೋಗಿಸಿದನು. ಚಂದ್ರಗುಪ್ತನು ಪಾಟಲೀಪುರಕ್ಕೆ ಅಧಿಪತಿಯಾದನು.

ಚಾಣಕ್ಯನು ತನ್ನ ಉದ್ದೇಶಗಳಲ್ಲೊಂದಾದ ನಂದನಿಗ್ರಹವನ್ನು ಮಾಡಿ, ಚಂದ್ರಗುಪ್ತನಿಗೆ ರಾಜ್ಯವನ್ನು ಒದಗಿಸಿಕೊಟ್ಟ ವಿಧಾನವು ರಾಜಕೀಯ ತಂತ್ರಜಾಲಗಳಿಂದ ಕೂಡಿದೆ, ಅವುಗಳಲ್ಲಿ ಆತನ ಗುಪ್ತಚಾರ ದಳ ಪಾತ್ರವು ಅತಿ ಮಹತ್ವಪೂರ್ಣವಾದುದು. ಎಲ್ಲೆಂದರಲ್ಲಿ ಸರ್ವರೊಬ್ಬರಿಗೂ ಯಾವ ವಿಧದಲ್ಲೂ ಸಂದೇಹ ಹುಟ್ಟದಂತೆ ಅವರು ನಡೆದುಕೊಂಡ, ಚಾಣಕ್ಯನ ಕೈಮನಗಳಿಗೆ ಹೊಂದಿಕೊಂಡು ಕಾರ್ಯತತ್ಪರರಾದುದರಿಂದಲೇ ಆತನ ತಂತ್ರಜಾಲದಲ್ಲಿ ನವನಂದರು ಸಿಕ್ಕಿಬಿದ್ದರು. ಅಂತೆಯೇ ಚಾಣಕ್ಯನು ದಾನದ ಆಸೆಯಿಂದ ಪರ್ವತರಾಜನನ್ನೂ ಭೇದೋಪಾಯದಿಂದ ಕುಲೂತಪತಿಯೇ ಮೊದಲಾದವರನ್ನೂ ದಂಡೋಪಾಯದಿಂದ ನಂದರನ್ನೂ ತನ್ನ ಹಿಡಿತದಲ್ಲಿರಿಸಿ, ತನ್ನ ಇಷ್ಟಾರ್ಥವನ್ನು ಸಾಧಿಸಿಕೊಂಡನು. ರಾಜಕಾರಣದಲ್ಲಿ ಚತುರುಪಾಯಗಳು ಅತ್ಯವಶ್ಯವೆಂಬುದನ್ನು ಭಾರತೀಯರು ಅತಿ ಪೂರ್ವದಲ್ಲಿಯೇ ಕಂಡುಕೊಂಡಿದ್ದರು. ಇಂದಿಗಾದರೂ ಈ ಉಪಾಯಗಳು ತ್ಯಾಜ್ಯವೆಂದು ಹೇಳುವಂತಿಲ್ಲ.

ಕಮ್ಯುನಿಸ್ಟ್ ಚೀನಾ ಮತ್ತು ಅತ್ತ ಒಲಿದಿರುವ ಪಾಕಿಸ್ತಾನಗಳ ಗೂಢಚಾರರು ಭಾರತದಲ್ಲಿ ಸುಳಿದಾಡಿಕೊಂಡು, ಇಲ್ಲಿನ ಸನ್ನಿವೇಶಗಳನ್ನು ಬಯಲುಮಾಡುತ್ತಿರುತ್ತಾರೆ ಎಂಬುದೀಗ ಸಾಕಷ್ಟು ಬೆಳಕಿಗೆ ಬಂದಿದೆ. ವಿದೇಶೀಯ ಗೂಢಚರ್ಯಕ್ಕೆ ನಮ್ಮ ದೇಶದ ರಾಷ್ಟ್ರದ್ರೋಹಿಗಳೂ ನೆರವಾಗುತ್ತಿದ್ದಾರೆ ಎಂದೂ ಈಗ ಗೊತ್ತಾಗಿದೆ. ಕಳೆದ ವರ್ಷ ನೇಫಾ-ಲಡಾಖಗಳ ಮೇಲೆ ಚೀನೀಯರು ಪ್ರಬಲವಾಗಿ ಆಕ್ರಮಣ ನಡೆಸುವುದಕ್ಕೆ ಮೊದಲು, ಅನಂತರವೂ ಅವರಿಗೆ ನಮ್ಮ ಕಮ್ಯೂನಿಸ್ಟರೂ ಒತ್ತಾಸೆ ನೀಡಿರುವರೆಂಬುದಕ್ಕೆ ಪುರಾವೆಗಳೂ ದೊರೆತಿವೆ. ಹಾಗೆಯೇ ಚಲಚ್ಚಿತ್ರ ಉದ್ದಿಮೆಯಲ್ಲಿ ತೊಡ

(೫ನೇ ಪುಟ ನೋಡಿರಿ)

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ........
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ

1—1—1963ರಿಂದ ಠೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ

ನಿಮ್ಮ ಉಳಿತಾಯವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ಸ್ಥಿರ ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ಉಡುಪಿ ಡಿ. ಮು. ಕೋರ್ಟಿನಲ್ಲಿ
ಕ್ರಮ ಸಂಖ್ಯೆ 269/63

ಪುಟ್ಟಯ್ಯ ಹೆಗ್ಡೆ — ವಾದಿ
ಮತ್ತು
ಪದ್ದಕ್ಕ ಶೆಡ್ತಿ ಕೂಡಾ — ಪ್ರತಿವಾದಿಯು.
ಯಾವರೊಳಗೆ

2ನೆ ಪ್ರತಿವಾದಿ ಭುಜಂಗ ಶೆಟ್ಟಿ, 4ನೆ ಪ್ರತಿವಾದಿಳು ರಾಜೀವಿ ಶೆಡ್ತಿ, ಪದ್ದಕ್ಕ ಶೆಡ್ತಿಯ ಮಕ್ಕಳು, ಉಡುಪಿ ತಾಲ್ಲೂಕು, ಚೇರ್ಕಾಡಿ ಗ್ರಾಮದ ಗಂಗಾಡಿಯಲ್ಲಿರುವವರು. — ಯಾವರಿಗೆ

ಮೇಲ್ಕಂಡ ವಾದಿಯು ತಾ 27-4-60ರ ವಿಭಾಗಪತ್ರ ಪ್ರಕಾರ ನಿಮ್ಮ ವಗೈರೆ ಅವರಿಂದ ಬರಬೇಕಾದ [illegible], ಬ್ಲಕ್, ಸುಖ ಕೃತು ಸಂವತ್ಸರಗಳ ಕೊಡುವಿಕೆ ವಗೈರೆ ವಸೂಲು ಕೇಳಿ ಹೂಡಿರುವ ದಾವಾ ನಿಮಗೆ ನೋಟೀಸಿಗೆಂತ ತಾ 4-10-63ಕ್ಕಿಟ್ಟಿದೆ. ಆ ದಿವಸ ನೀವು ಬೆಳಗ್ಗೆ 10 ಗಂಟೆಗೆ ಕೋರ್ಟು ಮುಂದೆ ಹಾಜರಾಗಲು ತಪ್ಪಿದರೆ ನಿಮ್ಮನ್ನು ಎಕ್ಸ್ಪಾರ್ಟಿ ಮಾಡಿ ದಾವಾ ತೀರ್ಮಾನಿಸಲ್ಪಡುವದು.

(By order of Court)

Narayana Rao K.
Advocate for Plaintiff

ಉಡುಪಿ, 11-9-1963.

NAVAYUGA
Kannada Weekly
UDIPI
Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ

ವರುಷ	ಉಡುಪಿ	ವಾರ
೪೩	೧೯-೯-೧೯೬೩	೩

ಟಿ. ಟಿ. ಕೆ. ಯ ಮುಂದೆ ಸಮಸ್ಯೆ

ಕೇಂದ್ರ ಸಚಿವ ಸಂಪುಟದಲ್ಲಿ ಮುರಾರ್ಜಿಯವರ ನಿರ್ಗಮನವೊಂದು ಎಲ್ಲರ ಗಮನವನ್ನೂ ತನ್ನತ್ತ ಸೆಳೆದಿದೆ. ಇವರಿಗೆ ಮೊದಲು ಅರ್ಥಮಂತ್ರಿಯಾಗಿ ಮುಂಧ್ರಾ ಪ್ರಕರಣದಿಂದಾಗಿ ರಾಜೀನಾಮೆಯಿತ್ತು ಹೊರ ಹೋಗಿದ್ದ ಟಿ. ಟಿ. ಕೆ. ಯವರು ಮರಳಿ ತನ್ನ ಕಳೆದುಕೊಂಡ ಖಾತೆಯನ್ನು ಪಡೆದಿದ್ದಾರೆ. ಇದರಿಂದ ಮಧ್ಯಮ ವರ್ಗದ ಜನತೆ ತುಸು ಹಗುರವಾದ ಉಸಿರನ್ನು ಬಿಡುವಂತಾಯಿತು. ಟಿ. ಟಿ. ಕೆ. ಯವರ ಮುಂದೆ ಹಲವಾರು ಸಮಸ್ಯೆಗಳಿವೆ. ಚೀನೀಯ ಆಕ್ರಮಣವನ್ನೆದುರಿಸಲು ಸೈನಿಕ ತಯಾರಿಗಾಗಿ ಸುಮಾರು ೮೦೦ ಕೋಟಿ ರೂಪಾಯಿಗಳನ್ನು ತೆಗೆದಿರಿಸಿದುದರಿಂದ ದೇಶದ ಮುಂಗಡ ಪತ್ರದಲ್ಲಿ ದೊಡ್ಡ ಕೊರತೆಯು ಕಂಡು ಬಂದಿತ್ತು. ಇದನ್ನು ತುಂಬಿಸಿಕೊಳ್ಳಲು ಮತ್ತಷ್ಟು ಕರವನ್ನು ಮುರಾರ್ಜಿಯವರು ಹೇರಿದ್ದುದರಿಂದ, ಸಾಮಾನ್ಯ ಜನತೆಯು ಕಂಗೆಟ್ಟಿದೆ. ಹಾಗೆಯೇ ಚಿನ್ನ ನಿಯಂತ್ರಣ ಆಜ್ಞೆ ಮತ್ತು ಖಡ್ಡಾಯ ಉಳಿತಾಯ ಯೋಜನೆಗಳೂ ಜನ ನಯನಗಳಿಗೆ ಕುಕ್ಕುತ್ತಿವೆ. ಇವೆಲ್ಲವೂ ಮುರಾರ್ಜಿಯ ನೀತಿಯಲ್ಲ; ಸರಕಾರದ ನೀತಿಯಾಗಿದ್ದರೂ ಅವುಗಳ ಮೇಲೆ ಮುರಾರ್ಜಿ ಪ್ರಭಾವವು ಅಧಿಕವೆಂದು ಮಾತ್ರ ಹೇಳಬಹುದು. ಈಗ ಟಿ. ಟಿ. ಕೆ. ಯವರು ಈ ಯೆಲ್ಲ ನೀತಿಗಳಿಂದ ಅತೃಪ್ತವಾದ ಜನತೆಯನ್ನು ತೃಪ್ತಿಗೊಳಿಸುವ ಪ್ರಯತ್ನ ಮಾಡಬೇಕಾಗಿದೆ.

ಇದುವರೆಗೆ ತಿಳಿದು ಬಂದಂತೆ, ಮೂರು ಮುಖ್ಯ ವಿಚಾರಗಳಲ್ಲಿಯೂ ಮಹತ್ವದ ಬದಲಾವಣೆಯಾಗುವ ನಿರೀಕ್ಷೆಯಿದೆ. ಅಪ್ರತ್ಯಕ್ಷ ಕರಾಕರಣೆಯಿಂದ ಬಡಜನರ ಮೇಲೆ ಹೊರೆಯು ಬಹಳವಾಗಿ ಬೀಳುವುದು; ಅದಕ್ಕೆ ಪ್ರತಿಯಾಗಿ ಪ್ರತ್ಯಕ್ಷವಾಗಿಯೇ ಕರಗಳನ್ನು ಹೇರುವುದು ಉಪಯುಕ್ತವಾದೀತು. ಇದರಿಂದ ಸ್ವಲ್ಪ ಸಮಾಧಾನವೂ ಉಂಟಾದೀತು. ಖಡ್ಡಾಯ ಉಳಿತಾಯ ಯೋಜನೆಯು ಸದ್ಯ ಎಲ್ಲರಿಗೂ ಅನ್ವಯವಾಗುವುದಿಲ್ಲ. ಕೇವಲ ನಿಶ್ಚಿತ ವೇತನ ಪಡೆಯುವ ನೌಕರರ ಮಟ್ಟಿಗೆ ಮಾತ್ರವೀಗ ಸೀಮಿತವಾಗುತ್ತದೆ. ಈ ಯೋಜನೆಯನ್ನು ಕಾಲ ಕ್ರಮದಲ್ಲಿ ವಿಸ್ತರಿಸಬೇಕಾಗಿದ್ದರೂ ಈ ವಿಷಯದಲ್ಲಿ ಹೆಚ್ಚಿನ ಅಧ್ಯಯನ ಅಗತ್ಯವೆಂದು ಟಿ. ಟಿ. ಕೆ. ತಿಳಿದುಕೊಂಡಂತಿದೆ. ಆದುದರಿಂದಲೇ ಅವರು ಇದರ ಯಶಸ್ಸಿನ ಕುರಿತಾಗಿ ರಾಜ್ಯ ಸರಕಾರಗಳೊಡನೆ ಅಭಿಪ್ರಾಯವನ್ನೂ ಸಲಹೆಯನ್ನೂ ಕೇಳಿದ್ದಾರೆಂದು ಗೊತ್ತಾಗಿದೆ. ಈ ಯೋಜನೆಯನ್ನು ಪ್ರತಿಭಟಿಸಿ ಅಲ್ಲಲ್ಲಿ ಸಭೆ ಮೆರವಣಿಗೆ, ಮತ ಪ್ರದರ್ಶನೆಗಳು ನಡೆದುದನ್ನೂ ಇತ್ತೀಚೆಗೆ ನಡೆದ ಬೊಂಬಾಯಿ ನಗರ ಸಭಾ ಮಜೂರರು ತಮ್ಮ ಮುಷ್ಕರದ ಕಾರಣಗಳಲ್ಲಿ ಇದನ್ನೂ ಒಂದನ್ನಾಗಿಸಿದುದನ್ನೂ ನಾವು ನೆನಪಿಸಿಕೊಳ್ಳಬಹುದು. ಆರ್ಥಿಕವಾಗಿಯಾದರೂ ಈ ಯೋಜನೆಯು ಲಾಭದಾಯಕವೇ ಎಂಬುದರ ಬಗ್ಗೆ ಅಧ್ಯಯನ ನಡೆಸಬೇಕು. ಆಗ ಇಂದಿನ ಸರಕಾರದ ಕರಾಕರಣೆಯ ನೀತಿಯಲ್ಲಿ ಖಡ್ಡಾಯ ಉಳಿತಾಯ ಯೋಜನೆಯು ನಷ್ಟವಷ್ಟೆ ಕೆಲಸವಾದರೆ, ಅದನ್ನು ಬಿಟ್ಟುಕೊಟ್ಟರೂ ತಪ್ಪಾಗಲಾರದು. ಇದಕ್ಕೆ ಬದಲಾಗಿ, ಜನತೆಯಲ್ಲಿ ಉಳಿತಾಯ ಪ್ರವೃತ್ತಿಯನ್ನು ಹುಟ್ಟಿಸುವ ಇನ್ನಿತರ ಸರಳ ವಿಧಾನಗಳನ್ನು ರೂಪಿಸುವತ್ತ ಮನಸ್ಸು ಹಾಯಿಸಬಹುದು.

ಎಲ್ಲಕ್ಕಿಂತ ಹೆಚ್ಚಿನವರ ಅತೃಪ್ತಿಗೆ ಕಾರಣವಾದುದು ಚಿನ್ನ ನಿಯಂತ್ರಣ ನೀತಿ. ದೇಶಕ್ಕೆ ಬನ್ನ ಬಂದಾಗಲೇ ಈ ಚಿನ್ನದ ನೀತಿಯನ್ನು ಅನುಷ್ಠಾನಕ್ಕೆ ತರಲಾಯಿತು. ಈ ನೀತಿಯ ಬಾಣವು ಹಿಂದೆಯೇ ಸರಕಾರದ ಬತ್ತಳಿಕೆಯಲ್ಲಿತ್ತೆಂದು ಆ ಮೇಲೆ ಹೇಳಲಾಯಿತು. ಇದರ ಉದ್ದೇಶಗಳಲ್ಲಿ ಮೊದಲನೆಯದು ಬಂಗಾರದ ಕಳ್ಳಪೇಟೆಯನ್ನು ತಡೆಯುವುದು. ಮತ್ತೆರಡನೆಯದು ಬಂಗಾರವು ಅಷ್ಟೊಂದು ಮೋಹಕ ವಸ್ತುವಾಗಬಾರದು ಎಂದು. ರಾಷ್ಟ್ರ ಪುನಾರಚನೆಯ ಯೋಜನೆಗಳಿಗೆ ಚಿನ್ನವು ಉಪಯುಕ್ತವಿರುವುದು ನಿಜ. ಇದಕ್ಕಾಗಿಯೇ ಸರಕಾರವು ಬಂಗಾರದ ಬಾಂಡುಗಳನ್ನು ಹೊರಗೆ ಹಾಕಿತು. ಇದು ಯಶಸ್ವಿಯಾಗಿಲ್ಲವೆಂದೇ ಹೇಳಬೇಕು. ಏಕೆಂದರೆ, ಗಂಡಾಂತರವನ್ನೆದುರಿಸಲು ಚಿನ್ನವನ್ನು ಜನತೆಯು ಸ್ವೇಚ್ಛೆಯಿಂದಲೇ ನೀಡಿತ್ತು. ಹೀಗೆ ಸಂಗ್ರಹವಾದ ಚಿನ್ನದ ಪ್ರಮಾಣವು ಬಾಂಡುಗಳ ಮೂಲಕ ಕೂಡಿಸಲಾದುದಕ್ಕಿಂತ ಅಧಿಕವೆನ್ನುವಾಗ, ನಮ್ಮ ಶ್ರೀಮಂತ ವರ್ಗದವರಲ್ಲಿ ಬಂಗಾರದ ಮೋಹವೆಷ್ಟಿದೆಯೆಂಬುದು ಮನವರಿಕೆಯಾಗುವುದು. ೧೪ ಕ್ಯಾರೆಟ್ಟಿಗಿಂತ ಹೆಚ್ಚು ಪರಿಶುದ್ಧತೆಯುಳ್ಳ ಆಭರಣಗಳನ್ನು ಮಾಡಬಾರದೆಂದು ನಿಯಂತ್ರಣವಿರುವುದಾದರೂ, ಈ ಬಗೆಯ ಬಂಗಾರದ ಬೆಲೆಯಲ್ಲಿ ಇಳಿವರಿಯಾಗಿಲ್ಲ. ಇದು ಬಂಗಾರದ ಮೋಹವನ್ನೇ ಸೂಚಿಸುವುದಿಲ್ಲವೆ? ಹಾಗೆಯೇ ಕಳ್ಳ ವ್ಯಾಪಾರವನ್ನು ತಡೆಗಟ್ಟುವುದು ಈ ಶಾಸನದಿಂದಾಗಿ ಸಾಧ್ಯವಾಗಿಲ್ಲವೆಂದು ಸರಕಾರವೇ ಒಪ್ಪಿಕೊಂಡಿದೆ. ಚಿನ್ನ ನಿಯಂತ್ರಣ ಮಂಡಳಿಯ ಅಧಿಕಾರಿಗಳೂ ಅದೆಷ್ಟು ಸಾಹಸ ಮಾಡಿದರೂ ಶುದ್ಧ ಚಿನ್ನದ ವ್ಯವಹಾರವು ನಿಂತಿಲ್ಲ. ಈ ನೀತಿಯು ಇನ್ನೂ ಮುಂದುವರಿದರೆ ಅದು ಪ್ರೊಹಿಬಿಷನ್ ಕಾಯಿದೆಯಂತೆಯೇ ಆಗುವುದು ಎಂಬ ಭೀತಿಯೂ ಮೂಡುತ್ತಿದೆ. ಅಕ್ಕಸಾಲಿಗರ ದೊಡ್ಡ ಸಂಖ್ಯೆಯನ್ನು ತೃಪ್ತಿಪಡಿಸುವುದು ಹೇಗೆ ಸಾಧ್ಯ? ಅವರಿಗೆ ಪರಿಹಾರ ಒದಗಿಸಲು ತಗಲುವ ವೆಚ್ಚವೆಷ್ಟು? ಜನತೆಗೆ ಬೇಡವಾದ ಈ ನಿಯಂತ್ರಣ ಶಾಸನವನ್ನು ತಿದ್ದಿ, ಅಪ್ರತ್ಯಕ್ಷವಾಗಿ ಚಿನ್ನದ ಮೇಲೆ ಮೋಹವನ್ನು ಕಡಿಮೆ ಮಾಡುವ ಪ್ರಯತ್ನವನ್ನು ಮಾಡಬೇಕು. ಮನೆಯಲ್ಲಿ ಬಂಗಾರವಿರುವುದೆಂದರೆ, ಶಾಶ್ವತ ನಿಧಿಯಿದ್ದಂತೆ. ಬ್ಯಾಂಕುಗಳಲ್ಲಿ ಇದರ ಒತ್ತೆಯ ಮೇಲೆ ಸಾಲವು ಆಪತ್ತಿನಲ್ಲಿ ದೊರೆಯುವ ಆಸೆಯಿಂದ ಮಧ್ಯಮ ವರ್ಗದವರು ಇದಕ್ಕೆ ಬಲಿ ಬಿದ್ದಿದ್ದಾರೆ. ಇದನ್ನು ಅಸಾಧುವೆನ್ನುವುದು ಸಾಧ್ಯವಿಲ್ಲ. ಬ್ಯಾಂಕುಗಳಲ್ಲಿ ಚಿನ್ನಾಭರಣಗಳ ಮೇಲೆ ಸಾಲದೊರೆಯುವ ಅವಕಾಶವಿಲ್ಲವಾದರೆ ಇವರ ಮನವತ್ತ ಒಲಿಯಲಾರದು. ಆದರೆ, ಶ್ರೀಮಂತರ ವರ್ಗದ ಕತೆಯೇನು? ಇವೆಲ್ಲವನ್ನೂ ಪರಿಶೀಲಿಸಿ ಟಿ. ಟಿ. ಕೆ. ಹೊಸ ನೀತಿಯನ್ನು ಘೋಷಿಸುವ ನಿರೀಕ್ಷೆಯಿದೆ. ೧೪ ಕ್ಯಾರೆಟಿನ ಆಭರಣಗಳಿಗೆ ಹಣತೆತ್ತು ಅಸಮಾಧಾನದಿಂದ ಪ್ರತಿಕೂಲ ಮನೋವೃತ್ತಿಯವರಾಗುವುದಕ್ಕಿಂತ ದೊಡ್ಡ ಗಂಡಾಂತರ ಬೇರೆಯಿಲ್ಲ. ಇವಕ್ಕೆ ತಕ್ಕಂತ ಬದಲಾವಣೆಗಳನ್ನು ಜನರು ನಿರೀಕ್ಷಿಸುತಿದ್ದಾರೆ.

ಚೀನಕ್ಕೆ ಮಂಗಳಾರತಿ

ನಿಕೋಸಿಯಾದಲ್ಲಿ ಸೇರಿದ ಆಫ್ರೋ ಏಶ್ಯನ್ ಐಕ್ಯ ಪರಿಷತ್ತು ಚೀನೀಯರ ಮುಖಕ್ಕೆ ಮಸಿ ಬಳಿದು ಮಂಗಳಾರತಿಯನ್ನು ಎತ್ತಿತು. ಅಲ್ಲಿ ಸೇರಿದ್ದ ಪ್ರತಿನಿಧಿಗಳೆಲ್ಲರೂ ಭಾರತ—ಚೀನಾ ಗಡಿವಿವಾದವನ್ನು ಪರಿಹರಿಸಲು ಕೊಲಂಬೋ ಸೂಚನೆಗಳನ್ನು ಭಾರತದಂತೆಯೇ ಸ್ವೀಕರಿಸಿ, ಪ್ರಯತ್ನಶೀಲವಾಗಬೇಕೆಂದು ಚೀನಾವನ್ನು ಕೇಳಿಕೊಂಡರು. ಉದ್ವಿಗ್ನ ಪರಿಸ್ಥಿತಿಯಲ್ಲಿಯೂ ಭಾರತವು ಉಳಿಸಿಕೊಂಡಿರುವ ಉನ್ನತ ನೈತಿಕ ಮಟ್ಟವನ್ನು ಅವರು ಪ್ರಶಂಸಿಸಿದರು. ಚೀನೀಯ ಪ್ರತಿನಿಧಿಯೊಬ್ಬನು ಮಾತ್ರ ಗಡಿತಂಟೆಯನ್ನು ತನ್ನ ಸರಕಾರದ ಸಂದಿಗ್ಧ ನೀತಿಯಂತೆಯೇ ವರ್ಣಿಸಿದನು. ತನ್ನ ದೇಶವು ಯಾವ ಶರ್ತವನ್ನೂ ಹೇರದೆ ನೇರವೂ ಸಮಸ್ಯೆಯ ಪರಿಹಾರಕ್ಕೆ ಭಾರತವನ್ನು ಆಹ್ವಾನಿಸುತ್ತಿರುವುದಾದರೂ ಅದು ಅದನ್ನು ನಿರಾಕರಿಸಿ ವಿಘ್ನವನ್ನು ತಂದೊಡ್ಡುತ್ತಿದೆಯೆಂದು ಆತನು ಆಪಾದಿಸಿದನು. ಆದರೆ, ಆತನ ಈ ವಂಚನೆಯ ವಾಗ್ಜಾಲಕ್ಕೆ ಯಾರೂ ಬಲಿಬೀಳಲಿಲ್ಲ. ಭಾರತದ ನೀತಿಯು ಎಲ್ಲರಿಗೂ ಮೆಚ್ಚುಗೆಯಾಯಿತು. ಇದರಿಂದ ಒಂದು ವಿಷಯ ಸಿದ್ಧವಾಗುತ್ತದೆ: ಆಫ್ರೋ-ಏಶ್ಯಗಳು ಭಾರತವನ್ನು ಗಡಿ ವಿವಾದದಲ್ಲಿ ಸಂಪೂರ್ಣವಾಗಿ ಬೆಂಬಲಿಸುತ್ತಿವೆಯೆಂದು. ಈ ಸಂಬಂಧದ ಚೀನೀಯ ಅಪಲಾಪವು ವ್ಯರ್ಥವೆಂದೂ, ಅದರತ್ತ ಗಮನ ಕೊಡುವವರು ಯಾರೂ ಇಲ್ಲವೆಂದೂ ಗೊತ್ತಾಗುವುದು. ಹೀಗೆ ಅನ್ಯಾಯವಾದ ಆಕ್ರಮಣವನ್ನು ನಡೆಸಿ, ಮತ್ತು ತನ್ನ ಮೊಂಡು ವಾದವನ್ನೇ ಮುಂದೆ ಮಾಡುವ ಚೀನಾವು ಇಡಿಯ ಜಗತ್ತಿನಿಂದ ಬಹಿಷ್ಕೃತವಾಗುವ ದಿನವೂ ಸಮೀಪಿಸುತ್ತಿದೆಯೆಂದರೆ, ವಿಸ್ಮಯ ಪಡಬೇಕಾಗಿಲ್ಲ. ನಿಕೋಸಿಯಾದ ಐಕ್ಯ ಸಮ್ಮೇಳನ ಈ ಸಂದೇಶವನ್ನೇ ಲೋಕಕ್ಕೆ ನೀಡಿದೆಯೆನ್ನಬಹುದ?

ವಾರ್ತಾವೇದಿಕೆ

ಜವಾಹರಲಾಲ

ಕಮ್ಯೂನಿಸ್ಟ ಕುಚೋದ್ಯದಿಂದ ಪ್ರಧಾನಿ ನೆಹರುರವರೂ ಅಪ್ರತಿಭರಾಗುವಂತಾಗಿದೆ. ನವದೆಹಲಿಯಲ್ಲಿ ಕಟ್ಟಿದ ಅತಿಥಿ ಸ್ವಾಗತ ಕಮಾನುಗಳ ಮೇಲೆ ಕೆಂಪು ಧ್ವಜಗಳನ್ನು ಹಾರಾಡಿಸಿದರು ಕೆಲವು ಕುಹಕಿಗಳು. ತತ್‍ಕ್ಷಣ ಚೀನೀ ರಾಯಭಾರ ಕಚೇರಿಯ ಕಾರು ಅಲ್ಲಿಗೆ ಬಂದು ಅದರ ಚಿತ್ರ ತೆಗೆದು ಕೊಂಡು ಹೋಯಿತು. ಈ ಕಾಕತಾಳೀಯದ ಹಿಂದೆ ಕಿಡಿಗೇಡಿಗಳ ಕೈವಾಡ ಅವಶ್ಯವಿದೆ. ಕಮ್ಯೂನಿಸ್ಟ್ ಮತ್ತು ಚೀನೀ ರಾಯಭಾರಿಗಳು ಸಂಯುಕ್ತವಾಗಿ ಇಂತಹ ಕಾರ್ಯಾಚರಣೆಯಲ್ಲಿ ಆಸಕ್ತರಾಗಿ ಅದಾವುದೋ ಕಾಣದ ಪುರುಷಾರ್ಥವನ್ನು ಪಡೆಯುವ ಹವಣಿಕೆಯಲ್ಲಿದ್ದಾರೆ. ಇಂತಹ ಕುತಂತ್ರಗಳು ನಡೆಯದಂತೆ ಪ್ರಧಾನಿ ನೆಹರುರವರು ಎಚ್ಚರಿಕೆ ವಹಿಸಬೇಕಾಗಿದೆ.

ಚೆಸ್ಟರ್ ಬೌಲ್ಸ್

ಭಾರತೀಯನಿಗೂ ಅಮೆರಿಕನನಿಗೂ ಒಂದು ಅಂತರವಿದೆ. ದಾನ ಪಡೆದವನು ದಾನಿಗೆ ಕೃತಜ್ಞನಾಗಿರಬೇಕು ಭಾರತದಲ್ಲಿ; ಆದರೆ ಅಲ್ಲಿ ದಾನಿಯೇ ದಾನ ಪಾತ್ರನಿಗೆ ಧನ್ಯವಾದ ಸಮರ್ಪಿಸುತ್ತಾನೆ. 'ಕೇರ್', ಸಂಸ್ಥೆಯವರು ಕೊಡಮಾಡಿದ ಶಾಲಾಮಕ್ಕಳಿಗೆ ಉಚಿತ ಮಧ್ಯಾಹ್ನ ಊಟ ವ್ಯವಸ್ಥೆಯನ್ನು ಈ ವರ್ಷದಿಂದ ಕರ್ನಾಟಕ ರಾಜ್ಯವೂ ಸ್ವೀಕರಿಸಿತು. ಅಮೆರಿಕನ್ ರಾಯಭಾರಿ ಚೆಸ್ಟರ್ ಬೌಲ್ಸ್ ಇದನ್ನು ಉದ್ಘಾಟಿಸಿದರು. ಮತ್ತು ಈ ಕೊಡುಗೆಯನ್ನು ಸ್ವೀಕರಿಸಿದ ರಾಜ್ಯವನ್ನು ಅಭಿನಂದಿಸಿದರು. ಶಿಷ್ಟಾಚಾರ ಕ್ರಮವೇನೇ ಇರಲಿ, ಕರ್ನಾಟಕದ ಮಕ್ಕಳು "ಕೇರ್" ಸಂಸ್ಥೆಯು ತಮ್ಮ ಮೇಲೆ ಇರಿಸಿದ 'ಕೇರ್'ಗಾಗಿ ನಿಜಕ್ಕೂ ಮೂಕವಾಗಿಯೇ ಕೃತಜ್ಞತೆಯನ್ನು ಅರ್ಪಿಸುತ್ತಾರೆ.

ಎಸ್. ಎ. ಡಾಂಗೆ

ಭಾರತೀಯ ಕಮ್ಯುನಿಸ್ಟ್ ಪಕ್ಷದ ಅಧ್ಯಕ್ಷ ಎಸ್. ಎ. ಡಾಂಗೆಯವರು ರಾಷ್ಟ್ರೀಯ ವಾದಿಗಳಾದರೂ ಅವರ ಪಕ್ಷದಲ್ಲಿಯೇ ಅಂತಾರಾಷ್ಟ್ರೀಯರೂ ತುಂಬಿಕೊಂಡಿದ್ದಾರೆ. ಚೀನೀಯರ ವಿರುದ್ಧ ತುಟಿ ಬಿಚ್ಚುವ ಸಾಹಸವನ್ನು ಕಮ್ಯುನಿಸ್ಟರು ಮಾಡಿದ್ದಾದರೆ, ಅದಕ್ಕೆ ಡಾಂಗೇ ಕಾರಣ. ಈಗವರು ಸುಮಾರು ಒಂದು ಕೋಟಿ ಅಂಕಿತವಿರುವ ಜನತಾ ಮನವಿಯನ್ನು ಅರ್ಪಿಸಿ, ಅದರಲ್ಲಿ ಕರಗಳಲ್ಲಿ ಪರಿಹಾರ, ಒತ್ತಾಯ ಕಡ್ಡಾಯ ಯೋಜನೆಯನ್ನು ಮರಳಿ ಪಡೆಯುವುದು, ಬೆಲೆಯೇರಿಕೆಯ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವುದು ಅಗತ್ಯವೆಂದು ಅಭೂತ ಪ್ರದರ್ಶನ ಮಾಡಿದರು. ಡಾಂಗೆಯವರ ಸಲಹೆಗಳು ಜನತೆಯನ್ನು ಆಕರ್ಷಿಸುತ್ತವೆ ನಿಜ; ಆದರೆ, ಒದಗಿದ ಕೊರತೆಯನ್ನು ತುಂಬಿಕೊಳ್ಳಲು ಸಲಹೆ ಮಾತ್ರ ಇಲ್ಲ. ಯಜಮಾನನ ಕಷ್ಟ ಆತನ ಆಳಿಗೆ ತಿಳಿದೀತೆ?

ವಿನಂತಿ

ಕಾಗದದ ಕೊರತೆಯಿಂದಾಗಿ ಈ ಬಾರಿ ೮ ಪುಟಗಳನ್ನಷ್ಟೇ ಕೊಡಲಾಗಿದೆ. ಮುಂದಿನ ಒಂದೆರಡು ವಾರಗಳಲ್ಲಿ ಕೂಡ ಇದೇ ಪರಿಸ್ಥಿತಿ ಮುಂದರಿಯಬಹುದು. ಈ ಬಗ್ಗೆ ವಾಚಕರು ಮನ್ನಿಸಬೇಕಾಗಿ ವಿನಂತಿ.

ಗೋಪ ರಾಜ್ಯದಲ್ಲಿ
ಸಿರಿಮಾವೋ ಪ್ರಥಮ ಸುಧಾರಣೆ

'ಏನಂತೆ, ಮಹಾರಾಜರು ಇಂದು ದರ್ಶನ ನೀಡುವಾಗ ತಡವಾಯ್ತು?'

'ಯಾವ ಮಹಾರಾಜರೋ?'

'ಮತ್ತ್ಯಾರು ನಮ್ಮ ಮಹಾರಾಜರನ್ನೇ ಕುರಿತು ಹೇಳ್ತಾ ಇರೋದು'

'ಓ....ನನ್ನನ್ನೇ? ಏನೋ ಸ್ವಲ್ಪ ತಡವಾಯ್ತಣ್ಣ....'

'ಅದು ಗೊತ್ತಿದೆ ತಾನೆ? ಆದ್ರೆ ಯಾಕೆ ತಡವಾಯ್ತೂಂತ ಕೇಳ್ದೆ, ಅಷ್ಟೆ.'

'ಅಂದ್ರೆ ಮಹಾರಾಜ್ರನ್ನೂ ವಿಚಾರ್ಸಿ ಕೊಳ್ಳೋರು ನೀನೊಬ್ನ'

'ನಿಮ್ಮನ್ನ ನಾನು ವಿಚಾರಸದೆ ಇದ್ರೆ ಮತ್ತ್ಯಾರು ವಿಚಾರಿಸ್ತಾರೆ?'

'ನನ್ನನ್ನು ನೀನು ವಿಚಾರಿಸೋದು ಮತ್ತೆ ನಿನ್ನನ್ನು....'

'ಇದ್ದೇ ಇದೆಯಲ್ಲ...ನೀವು....'

'ಒಳ್ಳೇ ಕೆಲ್ಸಕೊಟ್ಟೆಯಲ್ಲಾ ನೀನು?'

'ಏಕೆ, ಏನಾಯ್ತು? ಹೀಗೆ ಅಂದೆ ಇನ್ನು ಏನೇನೂ ತಿಳ್ಕೋಬೇಡಿ ಮತ್ತೆ ....

ಅಯ್ಯೋ ನೀನೇ ಪಾಪ! ಅಷ್ಟಕ್ಕೂ ಹೆದ್ರೋಳ ನೀನು. ನೋಡು ಈದಿನ ಒಂದು ವಿಚಿತ್ರ ಸಂಗ್ತಿ ಕೇಳ್ದೆ; ಕೇಳ್ತಾ ನಿತ್ಕೊಂಡೆ ಹೊತ್ತು ಹೋದದ್ದಾಗಲೀ ರಾತ್ರೆ ಆದದ್ದಾಗಲೀ ಒಂದೂ ಗೊತ್ತಾಗ್ಲಿಲ್ಲ'

'ಮತ್ತೆ ನಿಮ್ಗೇನು ಕೆಲ್ಸಾಂತ? ನಡುರಾತ್ರೆಯಾದ್ರೂ ಬರೋವರ್ಗೆ ಕಾದುಕುಳಿತಿರೋ ನಾನಿರುವಾಗ, ನಿಮಗೆ ಗೊತ್ತಾದ್ರೂ ಏಕೆ ಆಗ್ಬೇಕೂಂತ...'

'ನೋಡ್ತಿಯೇನೇ, ಅಜ್ಜಿ, ನಿನ್ನ ಮುಖಾನ್ನೊಮ್ಮೆ ಒಳಗಡೆ ಕನ್ನಡಿಯಲ್ಲಿ ನೋಡ್ಕೊಳ್ಳೋಂದ್ರೆ....'

'ಸಾಕು ಬಿಡೀಂದ್ರೆ... ನಿಮಗೆ ಯಾವಾಗ್಴ೂ ಹೀಗೆ. ಇನ್ನೂ ನನ್ನ ಕೆಣಕೋದನ್ನು ಬಿಡೋಲ್ಲ.'

'ನೋಡು, ನಾನಾದ್ರೂ ನಿನ್ನ ಕೆಣಕದೆ ಮತ್ತ್ಯಾರನ್ನೇ ಮಾತಾಡಿಸ್ಬೇಕು?'

'ಅಯ್ಯೋ ಬೇಡೀಂದ್ರೆ. ಅದಲ್ಲಿಗೇ ಮುಗಿಯಲಿ. ಏನೋ ವಿಶೇಷಾಂತ ಹೇಳಿದ್ರಲ್ಲ ಏನದು ಹೇಳ್ಬಿಡಿ.'

'ಹೇಳ್ತೀನಿ ತಡಿ. ನೋಡು, ಈ ಕೊಡೆಯನ್ನ ಗೋಡೆಗೆ ಒರಗಿಟ್ಟು ಬಾ. ಮತ್ತೆ ಲ್ಲಾದ್ರೂ ಮರೆತುಗಿರೆತು ಹೊರಗಡೇ ಇಟ್ಟುಬಿಟ್ಟು ತಲೆ ಚಚ್ಚಿಕೊಳ್ಳೋ ಕತೆ ಬರ್ಬಾರ್ದು.'

'ಏನೂಂತಂದ್ರೆ? ಯಾಕೆ ನೀವಿಂದು ಹೀಗೆಲ್ಲಾ ಮಾತಾಡ್ತೀರಾ?'

'ಏನೋ ನಾನು ಅಂಥಾದ್ದು ಆದ್ಕೊಂಡೆ?'

'ಏನಿಲ್ಲ ಬಿಡೀ ಅನ್ನಿ. ಏನೋ ವಿಶೇಷವಿತ್ತು, ಅದ್ಕೇ ತಡವಾಯ್ತು ಅಂದ್ರಲ್ಲ? ಏನದು ನಾನು ಕೇಳ್ಬಾರ್ದೆ?'

'ಕೇಳ್ದೇ ಏನು, ಆದ್ರಲ್ಲೂ ನೀನು? ಹೇಳ್ತೀನಿ. ನೋಡು ಇನಷ್ಟು ಸಂಜೆ ಅಂತೆ...'

'ಹ್ಞಾಂ...'

'ಸುಮಾರು ೬||-೭ ಘಂಟೆಯ ಹೊತ್ತಂತೆ....?'

'ಹ್ಞಾಂ...'

'ಇಲ್ಲೇ ಕೆಳಪೇಟೇಲಂತೆ....'

'ಎಂತದಿಗೂಂದ್ರೆ? ಚಿಕ್ಕ ಮಕ್ಕಳಿಗೆ ಕಥೆ ಹೇಳೋ ಹಾಗೆ ಹೇಳ್ತಾ ಇದ್ದೀರಾ? ಬೇಗ ಬೇಗ ಹೇಳ್ಬಾರ್ದೆ ಮತ್ತೆ....'

'ಮತ್ತೆ ನೋಡು, ಅಜ್ಜಿ ಕಥೆಗೆ ಹೂಂಗುಟ್ಟುವಂತೆ ನೀನೂ ಹ್ಞಾಂ ಅನ್ತಾ ಕೂತ್ರೆ ಏನ್ಮಾಡ್ಬೇಕು ಹೇಳು...'

'ಸಾಕೊಂದ್ರೆ. ಬೇಗ ಹೇಳಿ. ಇಂದು ಸಾಯಂಕಾಲ ಕೆಳಪೇಟೇಲಿ ಏನಾಯ್ತೂಂತ...?'

'ಆಗೋದೇನು, ಒಬ್ಬಾಕೆ ಚೆಲುವೆ ದೇವಸ್ಥಾನದ ಮನೆಗೆ ಬರುತಿದ್ಳಂತೆ.'

'ಅದೇನು ಮಹಾ? ಇಂದಂತೂ ಶುಕ್ರವಾರ ನೂರಾರು ಜನ ಬರ್ತಾರೆ, ಹೋಗ್ತಾರೆ.'

'ಅದ ಹೌದೂನ್ನು. ಇದ ಹಾಂಗಲ್ಲ. ಬಂದದ್ದು ಹೌದು, ಆದ್ರೆ ಇನ್ನೂ ಹೋಗ್ಲಿಲ್ಲ ಮನೆಗೆ....'

'ಹ್ಞಾಂ ಏಕೆ ಏನಾಯಿತಂತೆ?'

'ಅದನ್ನೇ ನಾನು ಹೇಳುತ್ತಿರುವುದು. ಬಹಳ ಸ್ವಾರಸ್ಯವಾದ ವಿಚಾರಾಂತ.'

'ಅಯ್ತೂಂದ್ರೆ. ಹೇಳಿಬಿಡಿ ಬೇಗ....!

'ಬೇಗ ಬೇಗ ಅಂದ್ರೆ ಬೇಗ ತಪ್ಪಿ ಹೋಗುತ್ತೆ

'ಹೋಗ್ಲಿ ಬಿಡಿ ಬೇಗ ಮತ್ತೆ. ಏನಾಯ್ತು?'

ಆಗೋದೇನ? ಆಕೆ ತುಂಬ ಹಾರಗಳನ್ನು ತೊಟ್ಟಿದ್ದಳಂತೆ. ಯಾರೋ ಒಬ್ಬ ಹಿಂಗಡೆಯಿಂದ ಬಂದು ಕತ್ತಿಗೆ ಕೈಹಾಕಿಯೇ...'

ಹ್ಞಾಂ · · ಏನಂತೆ ? ಹೆಚ್ಚ ಹಗಲಿಗೆ! ಅದೂ ಕೆಳ ಪೇಟೆಯಲ್ಲಿ!'

'ಹೌದೌದು. ಅಲ್ಲೇ, ಆಗಲೇ · !

'ಅಂತೂ ನಿಮ್ಮ ಗಂಡಸ್ರು ಜಾತೀನೇ ಹೀಗೇನ್ರಿ! ಮತ್ತೆ...,

'ಆಕೆ ಅರಚಿಕೊಂಡಳು ಆಸುಪಾಸಿನವರೆಲ್ಲ ಬಂದ್ರು. ಕೈ ಹಾಕಿದವ ಓಡಿಹೋದ....

'ಕುತ್ತಿಗೆ ಚಿನ್ನಾಭರಣ ..?'

'ಅವನೇನೋ ಎಳೆದ ನಿಜ. ಆದರೆ, ಓಡಿ ಹೋಗೋ ರಭಸದಲ್ಲಿ ಅದೆಲ್ಲೋ! ಆತನಂತೂ ಕೆಳ ಬೈಲಲ್ಲಿ ತಪ್ಪಿಸಿಕೊಂಡ.'

'ಪಾಪ, ಅದೆಷ್ಟು ಪವನಿದ್ದೋ! ಅದೂ ನಿಮ್ಮ ಟೋಪೀ ಸರ್ಕಾರದ ಚಿನ್ನವಿರಲಾರ್ದು! ಇನ್ನು ಸಿಕ್ಕುತ್ತೇ? ಒಮ್ಮೆ ಇದ್ದದ್ದನ್ನೇ ಕರಗಿಸಿ ಮಾಡಿಸಲು ಇಲ್ಲಾಂತಿರುವಾಗ ಮತ್ತೆ ಹೊಸತು ಮಾಡಿಸುವುದು ಸಾಧ್ಯವೇನೊ! ಇನ್ನ ತಂದೆ ತಾಯ್ಗಳು ಎಷ್ಟು ಬಯ್ತಾರೊ!'

'ಚಿನ್ನಕ್ಕೇನೂ ತೊಂದ್ರೆ ಆಗ್ಲಿಲ್ಲ. ಅದು ಸಿಕ್ಕಿ ಬಿಡ್ತೂನ್ನು...'

'ಹ್ಞಾಂ.... ಎಲ್ಲಿ'

'ಅಲ್ಲೇ ಕೆಳಗೆ ಬಿದ್ದಿತಂತೆ ಹುಡುಕಿದಾಗ ಸಿಗ್ತಂತೆ!'

'ಅಯ್ಯಮ್ಮ! ಒಪ್ಪಲಕ್ಕೆ ಉಳಿದುಕೊಂಡ್ತು.'

'ಅವಳೇನೋ ಉಳಿದುಕೊಂಡ್ಳೂನ್ನು. ಜತೆಗೆ ಕಳ್ಳನೂ ಉಳ್ಕೊಂಡು ಬಿಟ್ಟ ನೋಡು.'

'ಅವನನ್ನು ಹುಡುಕೋಕೆ ಪ್ರಯತ್ನ ಮಾಡ್ಲಿಲ್ವೆ?'

'ಮಾಡಿದ್ರೂನ್ನು. ಆದ್ರೆ ಅಷ್ಟು ದೊಡ್ಡ ಬೈಲಲ್ಲಿ ಎಲ್ಲಿ ಅಡಗಿದನೆಂದು ಯಾರು ಪತ್ತೆ ಮಾಡ್ಬೇಕು?'

'ಯಾರು ಯಾಕೆ ಮಾಡ್ತಾರೆ? ಪೋಲಿಸ್ನೋರು ಮಾಡ್ಬೇಕು'

'ಅವರೂ ಬಂದ್ರೂನ್ನು...'

'ಏನು ಮಾಡಿದ್ರು?'

'ಮಾಡೋದೇನ? ಬ್ಯಾಟ್ರಿ ಹಿಡಿದು ಮೂರು ಸುತ್ತು ಸುತ್ತಿದ್ರು. ಯಾರೂ ಸಿಗ್ಲಿಲ್ಲ ಮತ್ತೆ ಮಡಗಿ ಬೆ? ಬಂದ್ರು ಯಾರವನ, ಎಲ್ಲಿಯವನು, ಹೇಗಿದ್ದವನು, ಆತನನ್ನು ಹಿಡಿದು ತಂದ್ರೆ ಗುರ್ತ ಹೇಳಬಲ್ಲೆಯಾ?.... ಇನ್ನೂ ಏನೇನೋ ಕೇಳಿದ್ರು.'

'ಮತ್ತೆ...'

'ಅಷ್ಟರಲ್ಲಿ ಹತ್ತಾರು ಜನರೂ ಸೇರಿದ್ರು. ಅವನು ಕುತ್ತಿಗೆ ಚೈನಿಗೆ ಕೈ ಹಾಕುವಾಗ ಹೀಗೆ ಬಲವಾಗಿ ಕೈಹಿಡಿದು ಜಗ್ಗಬೇಕಿತ್ತು. ಪಕ್ಕದ ಮನೆಗಾದ್ರೂ ಓಡಿ ಹೋಗ್ಬೇಕಿತ್ತು...ಇತ್ಯಾದಿ ಸಲಹೆಗಳನ್ನ ಕೊಡ ತೊಡಗಿದರು.'

'ಅದೆಲ್ಲಾ ಬಿಡೀಂದ್ರೆ. ಅದರಿಂದೆಲ್ಲಾ ಏನುಪಯೋಗ? ಪೋಲೀಸ್ನೋರು ಏನಂದ್ರು ಹೇಳಿ'

'ಹೇಳೋದೇನ? ಕೇಸ್ ಎಂಟರ್ ಆಯ್ತು. ಮುಂದಿನ ತಪ್ಪಿ ನಡೆಯಬಾರ್ದೆಂದು ಹೇಳಿ ಬಿಟ್ರೂನ್ನು.'

'ಅಂತಹ ಅದೆಷ್ಟು ಕೇಸ್ ಎಂಟರ್ ಮಾಡಿದ್ದಾರೋ ಅವರು. ಕಳೆದ ಬಾರಿ ಹೀಗೇ ಆಯ್ತು ನೋಡಿ ಆದ್ರೆ ಕಳ್ಳರು ಮಾತ್ರ ಸಿಕ್ಕಿಲ್ಲ. ಈಗೀಗ, ನಮ್ಮ ಟೋಪೀ ಸರ್ಕಾರ ಬಂದ್ಮೇಲೆ ಕೊಲೆ, ಸುಲಿಗೆ, ಕಳವುಗಳು ನಡೆಯೋದೂ ಹೆಚ್ಚು, ಕೇಸು ಬಿಟ್ಟು ಹೋಗೋದು ಹೆಚ್ಚು. ಹಿಂದೆ ರಾಣಿಕಾಲದಲ್ಲಾದ್ರೆ ಹೀಗೆಲ್ಲಾ ಇರ್ಲಿಲ್ಲ.'

'ಏನ್ಮಾಡೋದು ಹೇಳು? ನಮ್ಮನ ದಿನದಿಂದ ದಿನಕ್ಕೆ ಕತ್ತೆಗಳಾಗ್ತಾ ಬರುವಾಗ ಯಾರನ್ನು ಬಯ್ದು ಏನು ಪ್ರಯೋಜನ?'

'ಏನು ಪ್ರಯೋಜನಾಂತಂದ್ರೆ ? ಮತ್ತೆ ನಮ್ಮಂತವರು ಮನೆಯಿಂದ ಹೊರಗೆ ಬರ್ಲೇಕೂಡದೆನ್ನುತ್ತೀರಾ?'

ಹಾಗೆಯಾರನ್ತಾರೆ? ತುಸು ಜಾಗ್ರತೆಯಿರ್ಬೇಕೂಂತಂದ್ರೆ ಏನೇನೋ ತಿಳ್ಕೋತೀಯ.'

'ಹಚ್ಚಹಗಲಲ್ಲಿಯೂ ದರೋಡೆಯೆಂದ್ರೆ ಆಂಜಕತೇಂತ ಅರ್ಥ. ಕಲಿಯುಗ ಬಂದು ಹೋಯಿತು. ಮನುಷ್ಯ ಮನುಷ್ಯನನ್ನೆ ಸುಲಿಯುವುದಕ್ಕೆ ತೊಡಗಿಯಾಯ್ತು. ಇನ್ನು ಸುಲಿದು ತಿನ್ನುವುದೊಂದು ಮಾತ್ರ ಬಾಕಿ.'

'ಅದೂ ಪ್ರಾರಂಭವಾಗುತ್ತೇನೋಡು. ಜೀವನೋಪಯೋಗಿ ವಸ್ತುಗಳ ಬೆಲೆ ವಿಪರೀತ ಹಾರುತ್ತಿರೋವಾಗ, ಮತ್ತೇನ್ನೇನಾಗುತ್ತೆ.'

'ಅದನ್ನೆಲ್ಲಾ ಯೋಚಿಸುವಾಗ ಮೈನವಿರೇಳುತ್ತೆ !

'ಅದಕ್ಕೇನಂತೆ? ನೀನು ಯೋಚಿಸೋದೇ ಬೇಡ. ಉತ್ತರ ಐಯುವ ಹೇಳ್ಲಿವೆ.

'ಅದನೊಬ್ಬ ಹೇಳೋಕೆಬಾಕಿ. ಇಲ್ಲಿ ಏನಂದಿದ್ದ'

'ನಿನ್ನೆ ಸತ್ತಿದೆ, ನಾಳೆ ಹುಟ್ಟಿಲ್ಲ. ಆದುದರಿಂದ ಇಂದಿನ ಬಗ್ಗೆ ನೀನು ಚಿಂತಿಸೂಂತ.'

'ಅಂದ್ರೆ ನಮ್ಮ ಯೋಚನೆಯನ್ನು ಹೆಚ್ಚು ಮುಂದಕ್ಕೆ ಎಳೆಯೋದೂಂತ. ಅಲ್ವೆ'

'ಸರಿ. ಒಪ್ಕೊಂಡೆ.'

'ಆದ್ರೆ ಇರುವೆಗಳಿಗೂ ನಾಳೆಯ ಚಿಂತೆ ಇದೆ; ನಿಮ್ಗೆ ಬೇಡವೇ, ಎಂತ ಕೇಳ್ತಾರಲ್ಲಾ ಎಲ್ಲ. ಭವಿಷ್ಯದ ಆಶೆಯು ಮೇಲೆಯೇ ನಾವಿಂದು ಎಲ್ಲ ಕಷ್ಟಗಳನ್ನು ಸಹಿಸುತಿದ್ದೇವೆಂತ.'

'ಎಲ್ಲಾ ಸರಿ. ಹಾಗಾದ್ರೆ ಏನೂಂತ ನಿನ್ನ ಮಾತು'

'ತಪ್ಪಿಗೆ ಕಠಿಣ ಸಜೆ'

'ಅಂದ್ರೆ ಪಿನಲ್ ಕೋಡನ್ನು ತಿದ್ದುಪಡಿ ಮಾಡಬೇಕೂನ್ನು'

'ಆಗಲಿ, ನಾನು ಬೇಡ ಅಂದೆನೆ'

'ನೀನಿನ್ನು ಸಿರಿಮಾವೋ ಆಗುವಾಗ ಮೊದಲದನ್ನೇ ಮಾಡು. ಯಾರು ನಿನ್ನ ತಡೀತಾರೆ?'

'ಸಾಕೂಂದ್ರೆ ನಿಮ್ಮ ತಮಾಷೆ. ಬನ್ನಿ ಕಾಲಿಗೆ ನೀರೆರೆದು ಕೊಳ್ಳಿ, ಬತ್ತಲು ಮನೆಗೆ ಹೋಗಿ. ನಾನು ಎಲೆ ಹಾಕುತ್ತೇನೆ.'

'ಅಂತೂ ಗ್ರಾಸಕ್ಕೆ ಗ್ರಹಣ ಹಿಡೀಲಿಲ್ಲಾಂತಾಯ್ತು.'

'ಹಿಡಿಯುತ್ತೆ ಅದಕ್ಕೂ ಒಂದು ದಿನ.

'ಆದಿನ ಬಂದಾಗ ನೋಡೋಣ ಅಲ್ಲವೆ?'

'ನಿಮಗದೇ ಚಿಂತೆ. ಬನ್ನಿ ಬನ್ನಿ.'

'ಹ್ಞಾಂ....'

—ಗೋರಾ.

ಇದೀಗ ಪ್ರಕಟವಾಗಿದೆ

ಕನ್ನಡದ ಯುವಜನರ ಉತ್ಸಾಹದ ಪ್ರತೀಕ

ನುರಿತ ಲೇಖನಿಯು ಜನಮನಕ್ಕೆ ನೀಡಿದ ಕಾಣಿಕೆ—

ದತ್ತ ಪುತ್ರ

—ಎನ್. ನಾರಾಯಣ ಬಲ್ಲಾಳರ ಅನುಪಮ ಕೃತಿ

ಬೆಲೆ. ಒಂದು ರೂಪಾಯಿ

ಅಚ್ಚಿನಲ್ಲಿದೆ: ನಂಜೂರು ಶ್ರೀ ವ್ಯಾಸರಾಯರ ಮತ್ತೊಂದು ಜನಪ್ರಿಯ ಗ್ರಂಥ

ಕುಂಕುಮ

ವಿವರಗಳಿಗೆ: ರೇಖಾ ಪ್ರಕಾಶನ, ತೆಂಕಪೇಟೆ, ಉಡುಪಿ.

ನೆನೆಗುದಿಗೆ ಬಿದ್ದಿರುವ
ಬುಕಾರೊವಿನ ಉಕ್ಕಿನ ಕಾರಖಾನೆ

ಭಾರತವು ಸರಕಾರಿ ವಲಯದಲ್ಲಿ ಕಟ್ಟಬೇಕೆಂದು ನಿರ್ಧರಿಸುವ ಬುಕಾರೋ ಉಕ್ಕಿನ ಕಾರಖಾನೆಯ ಸಂಬಂಧದಲ್ಲಿ ನಾನಾ ವಾದ ಪ್ರತಿವಾದಗಳು ನಡೆಯುತ್ತಲಿರುವುದರಿಂದ ಇದರ ಸ್ಥಾಪನೆಯ ಬಗ್ಗೆ ಸಂದೇಹವನ್ನು ಕೂಡ ವ್ಯಕ್ತಪಡಿಸುವವರಿದ್ದಾರೆ. ಇದಕ್ಕೆ ಕಾರಣವಾದರೂ ಇಲ್ಲದಿಲ್ಲ. ಮೊತ್ತ ಮೊದಲಿಗೆ ಭಾರತವು ಈ ಕಾರಖಾನೆಯ ಬಗ್ಗೆ ಅಮೆರಿಕೆಯ ಸಂಪೂರ್ಣ ನೆರವನ್ನು ಕೇಳಿಕೊಂಡಿತ್ತು. ಅಮೆರಿಕೆಯಿಂದ ಬಂದ ತಜ್ಞ ಮಂಡಳಿಯು ನೀಡಿದ ವರದಿಯನ್ನೂ ಮತ್ತು ಅಲ್ಲಿನ ರಾಜಕೀಯ ಪರಿಣಾಮವಾಗಿ ತಾನು ನೆರವನ್ನು ನೀಡಬೇಕೇ ಬೇಡವೇ ಎಂಬುದನ್ನು ಪ್ರಕಟಿಸಲು ಹಿಂಜರಿಯಿತು. ಸ್ವಾತಂತ್ರ್ಯ ರಾಯಭಾರಿ ಗಾಲ್‌ಬ್ರೈತರು ಅಮೆರಿಕನ್ ಸಹಾಯದ ಭರವಸೆಯನ್ನು ನೀಡುತ್ತಿದ್ದಂತೆಯೇ, ಅಧ್ಯಕ್ಷ ಕೆನ್ನೆಡಿಯವರು ನೆರವು ನೀಡುತ್ತದೆ ಅವಶ್ಯವೆಂದು ಹೇಳುತ್ತ ಬರುತ್ತಿದ್ದಂತೆಯೇ ಅಮೆರಿಕನ್ ಕಾಂಗ್ರೆಸ್ ಈ ವರ್ಷ ಸಹಾಯ ನೀಡಬಾರದೆಂಬ ನಿರ್ಧಾರಕ್ಕೆ ಬಂದಿತು. ಹೇಗಿದ್ದರೂ ಭಾರತವು ತನ್ನ ಕೇಳಿಕೆಯನ್ನು ಹಿಂಪಡೆದುಕೊಳ್ಳಲಿಲ್ಲ. ಇದರಿಂದಾಗಿ ಅಧ್ಯಕ್ಷ ಕೆನ್ನೆಡಿಯವರು ತುಸು ಕಂಗಾಲಾಗುವಂತಾಯಿತು. ಅವರು ಅಸಹಾಯಕ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬಂತು. ಸಾರ್ವಜನಿಕ ಕ್ಷೇತ್ರದಲ್ಲಿ ಬುಕಾರೊ ಕಾರಖಾನೆಯು ನಿಲ್ಲುವುದೆಂಬುದೇ ಅಮೆರಿಕೆಯಲ್ಲಿ ಕಂಡು ಬಂದ ಮೊದಲ ಪ್ರತಿಕೂಲಾಭಿಪ್ರಾಯ. ಹಾಗೆಯೇ ತನ್ನ ಮಿತ್ರ ರಾಷ್ಟ್ರ ಪಾಕಿಸ್ತಾನದೊಡನೆ ಕಾಶ್ಮೀರ ವಿಷಯದ ಮಾತುಕತೆ ನಡೆಸಿದರೂ ಅದು ಯಶಸ್ವಿಯಾಗುವಂತೆ ಸಹಕರಿಸಲಿಲ್ಲವೆಂಬ ರಾಜಕೀಯ ಅಭಿಪ್ರಾಯವೂ ಭಾರತಕ್ಕೆ ಅನುಕೂಲವಾಗಲಿಲ್ಲ. ಕಮ್ಯೂನಿಸ್ಟ ವಿರೋಧಿಯೂ ದ ಭಾರತದ ಹೃದಯವನ್ನು ಅಮೆರಿಕನ್ನರು ಸರಿಯಾಗಿ ಅರ್ಥಮಾಡಿಕೊಳ್ಳಲಿಲ್ಲ. ಇದರಿಂದಾಗಿ-ವಿಧಾಯಕ ಪ್ರವೃತ್ತಿಗೆ ಸಿಕ್ಕಿದ ಕೆನ್ನೆಡಿಯವರನ್ನು ಸುಧಾರಿಸುವಂತೆ ಮಾಡಲು ಪ್ರಧಾನ ಮಂತ್ರಿ ನೆಹರೂ ತಾವು ಮುಂದಿಟ್ಟಿದ್ದ ವಿನಂತಿಯನ್ನು ಮರಳಿ ಪಡೆದುಕೊಂಡರು; ಅದರ ಜತೆಗೇನೇ ಅಮೆರಿಕನ್ ಸಹಾಯವಿಲ್ಲದೆ ಹೋದರೂ ಬುಕಾರೋ ಕಾರಖಾನೆಯು ರಚನೆಯಾಗುವುದೆಂದು ಮತ್ತೊಮ್ಮೆ ದೃಢಪಡಿಸಿದರು.

ಉಕ್ಕಿನ ಕಾರಖಾನೆಯ ರಚನೆಯೆಂದರೆ, ಕುಲಭದ ಕಾರ್ಯವಲ್ಲ. ಇದರ ನಿರ್ಮಾಣಕಾರ್ಯಕ್ಕೆ ಕಾಲಾವಧಿಯೂ ದೀರ್ಘವಾಗಿರಬೇಕು; ಅವಶ್ಯಕ ಯಂತ್ರೋಪಕರಣಗಳು ಮಾತ್ರವಲ್ಲ, ತಂತ್ರಜ್ಞರ ಸಹಾಯ ಕೂಡ ಹೊರಗಿನಿಂದ ಬರಬೇಕಾಗುವುದು. ದುರ್ಗಾಪುರ, ರಾಂಚಿ ಮತ್ತು ಭಿಲ್ಯಾಗಳ ಕಾರಖಾನೆಗಳು ಇಂದು ಸುವ್ಯವಸ್ಥಿತವಾಗಿ ನಿಲ್ಲಬೇಕಾದುದಕ್ಕೆ ವಿದೇಶೀಯರ ಮುಕ್ತ ಹಸ್ತದ ಸಹಾಯವೇ ಕಾರಣವೆಂಬುದನ್ನು ನಾವು ಮರೆಯಬಾರದು. ಸಂಪೂರ್ಣವಾಗಿ ಅಮೇರಿಕೆಯನ್ನೇ ನಿರೀಕ್ಷಿಸಿದ್ದ ಬುಕಾರೋವಿನ ಅನ್ವೇಷಕರು ತನ್ನ ದೃಷ್ಟಿಯನ್ನು ಅನ್ಯತ್ರ ಹಾಯಿಸಲೇ ಬೇಕಾಗಿದೆ. ಏಕೆಂದರೆ, ನಮಗಿಂದು ಉಕ್ಕಿನ ಅವಶ್ಯಕತೆಯು ಎಷ್ಟೆಂದು ಹೇಳುವಂತಿಲ್ಲ.

ಅತೀವ ವೆಚ್ಚ ಬರುವ ಈ ಕಾರಖಾನೆಯನ್ನು ಅಮೆರಿಕೆಯನ್ನುಳಿದು ಯಾವ ದಾದರೂ ಒಂದೇ ರಾಷ್ಟ್ರದ ಸಹಾಯದಿಂದ ಕಟ್ಟುವುದು ಸಾಧ್ಯವಿಲ್ಲದಂತಾಗಿದೆ. ಹೀಗಾಗಿ ಹಲವು ದೇಶಗಳ ನೆರವನ್ನು ಪಡೆದಾದರೂ ಇದನ್ನು ಕಾರ್ಯರೂಪಕ್ಕೆ ಇಳಿಸಬೇಕು ಎಂಬುದು ಉಕ್ಕು ಮತ್ತು ಗಣಿಉದ್ದಿಮೆಗಳ ಮಂತ್ರಿ ಸುಬ್ರಹ್ಮಣ್ಯಂರವರ ವಿಚಾರ. ಇದಕ್ಕಾಗಿ ಈ ಕಾರಖಾನೆಗಳಲ್ಲಿ ಯಾರು ಯಾರು ಆಸಕ್ತಿ ತಳೆದಿದ್ದಾರೆ ಎಂಬುದರ ಬಗ್ಗೆ ಪರಿಶೀಲನೆ ಮತ್ತು ವಿಚಾರ ಮಂಥನ ನಡೆಯುತ್ತಿದೆ. ಇದು ಸ್ವಾಭಾವಿಕ. ಕಟ್ಟಿದ ಒಂದು ಮನೆ ಮುರಿದು ಬಿದ್ದಿತೆಂದರೆ, ಬೇರೆಯೊಂದನ್ನು ಕಟ್ಟುವುದು ಅತ್ಯಗತ್ಯ ತಾನೆ?

ಉತ್ಸಾಹ ಪ್ರದರ್ಶಕರ ಸಾಲಿನಲ್ಲಿ ಆಸ್ಟ್ರಿಯಾ ಮತ್ತು ಜಪಾನಗಳು ಮುಂದೆ ನಿಲ್ಲುತ್ತವೆ. ತನ್ನ ಸರಕಾರದ ವಿರೋಧವಿಲ್ಲವೆಂದಾದರೆ, ಬ್ರಿಟನಿನ ಕೆಲವು ಉದ್ದಿಮೆದಾರರು ಬುಕಾರೋವಿಗೆ ಸಾಧನೋಪಕರಣಗಳನ್ನು ಪೂರೈಸುವ ಇರಾದೆಯುಳ್ಳವರು. ಅಮೆರಿಕೆಯಿಂದ ತನ್ನ ಬೇಡಿಕೆಯನ್ನು ಭಾರತವು ಮರಳಿ ಪಡೆದ ಮೇಲೆ ಸೋವಿಯಟ್ ರಶ್ಯ ಕೂಡ ಈ ಸಂಬಂಧದಲ್ಲಿ ತುಸು ಕಳಕಳಿ ತೋರಿಸುತ್ತಿದೆ. ಅಮೆರಿಕೆ—ಭಾರತಗಳ ನಡುವಣ ವ್ಯಕ್ತಿಗತ ಭಾವನೆಯು ಕೆಡಬಾರದು; ಅದು ಹಾಗೆಯೇ ಮುಂದುವರಿಯಬೇಕು. ಎಂಬುದದರ ಅಭಿಪ್ರಾಯ. ಅಣ್ವಸ್ತ್ರ ಸಂಬಂಧದಲ್ಲಿ ಆಂಶಿಕ ಒಡಂಬಡಿಕೆಯಾದ ನಂತರ, ಅಮೆರಿಕೆ—ರಶ್ಯಗಳ ನಡುವಣ ಸಂಬಂಧವು ಸುಧಾರಿಸ ಹತ್ತಿದೆ. ಇನ್ನು ಅಮೆರಿಕೆ ಕೂಡ ಸಾಧ್ಯವಾದ ಸಾಮೂಹಿಕ ಸಹಕಾರವನ್ನು ನೀಡುವಲ್ಲಿ ಹಿಂದುಳಿಯಲಾರದೆಂದು ತಿಳಿಯುತ್ತದೆ.

ಅಮೆರಿಕನ್ ತಜ್ಞರು ಬಂದು ಬುಕಾರೋ ಕಾರಖಾನೆಯ ಸಂಬಂಧದಲ್ಲಿ ನಡೆಸಿದ ಅಧ್ಯಯನದಲ್ಲಿ ನಿರೀಕ್ಷಿಸಿದ ವೆಚ್ಚಕ್ಕಿಂತ ಸುಮಾರು ಅರ್ಧಾಂಶದಲ್ಲಿ ಅದನ್ನು ಕಟ್ಟುವುದು ಸಾಧ್ಯವೆಂದೀಗ ಗೊತ್ತಾಗಿದೆ. ಶಕ್ಯವೆನಿಸಿದಷ್ಟು ಆಂತರಿಕ ಶಕ್ತಿಯನ್ನು ಬಳಸಿ, ಉಳಿದ ವೆಚ್ಚಕ್ಕೆ ಹೊರಗಿನ ಕೈ ಚಾಚುವುದು ಮತ್ತು ಅದನ್ನು ಪಡೆಯುವುದು ಪ್ರಯೋಜನವೆನಿಸಲಾರದು ಎಂದೀಗ ಹೇಳಲಾಗುತ್ತಿದೆ. ಅದುದರಿಂದಲೇ ಅಮೆರಿಕನ್ ನೆರವಿನ ನಿರೀಕ್ಷೆಯು ಸುಳ್ಳಾದರೂ ಈ ಕಾರಖಾನೆಯನ್ನು ಕಟ್ಟುವಲ್ಲಿ ಭಾರತವು ಮುಂದುವರಿಯ ಬಹುದಾಗಿದೆ.

ವಿದೇಶಗಳಿಂದ ಪಡೆಯುವ ಸಹಾಯವು ಯಾವ ತೆರದ್ದಿರಬಹುದು? ಮುಖ್ಯವಾಗಿ ಯಂತ್ರೋಪಕರಣಗಳ ಪ್ರಶ್ನೆ ಮುಕ್ತ. ಇದಕ್ಕಾಗಿ ವಿದೇಶ ವಿನಿಮಯದ ಸವಾಲು ಮುಂದೆ ಬರುತ್ತದೆ. ರಶ್ಯ, ಬ್ರಿಟನ್, ಜಪಾನ್, ಅಮೆರಿಕೆ, ಪಶ್ಚಿಮ ಜರ್ಮನಿಗಳು ಭಾರತದ ತೃತೀಯ ಪಂಚವಾರ್ಷಿಕ ಯೋಜನೆಗೆ ಸಹಾಯದ ಭರವಸೆಯನ್ನು ನೀಡಿವೆ; ಆ ಮೇಲಾದರೂ ಇವುಗಳ ಸಹಾಯವು ದೊರೆತೇ ದೊರೆಯುವುದೆಂಬ ನಿರೀಕ್ಷೆಯೂ ಇದೆ. ಹಾಗಾಗಿ ಬುಕಾರೋ ಕಾರಖಾನೆಗೆ ಅತ್ಯವಶ್ಯವಿರುವ ಉಪಕರಣಗಳನ್ನು ಹೊಸತಾಗಿ ಸಹಾಯ ಒಡಂಬಡಿಕೆಯನ್ನು ಮಾಡಿ ಪಡೆ ಪಡೆದುಕೊಳ್ಳ ಬಹುದಾಗಿದೆ. ಸಾಮೂಹಿಕವಾಗಿ ದಲೇ ಸಹಕರಿಸುವ ಸಾಧ್ಯವಾಗಬಹುದು. ಭಾರತದಿಂದ ನಿರೀಕ್ಷಿಸುವ ಸಹಾಯದ ರೂಪ ಇದಕ್ಕಿಂತ ಬೇರೆಯಿಲ್ಲ.

ದೇಶದಲ್ಲಿ ದಿನ ದಿನಕ್ಕೆ ಬೆಳೆಯುತ್ತಿರುವ ಉದ್ದಿಮೆಗಳಿಗೆ ಅವಶ್ಯವಾದಷ್ಟು ಪ್ರಮಾಣದಲ್ಲಿ ಉಕ್ಕನ್ನು ಒದಗಿಸುವುದು ಅತ್ಯಗತ್ಯ. ಅಭಿವೃದ್ಧಿ ಮತ್ತು ಔದ್ಯೋಗಿಕ ರಂಗದಲ್ಲಿ ಕ್ರಾಂತಿಕಾರಕ ಪ್ರಗತಿ ಪಡೆದಿರುವ ಭಾರತವು ಪ್ರತಿ ವಿಷಯದಲ್ಲೂ ಸ್ವಯಂಪೂರ್ಣವಾಗುವುದು ಅಗತ್ಯವಿದೆ. ಅದಕ್ಕಾಗಿ ದೇಶದಲ್ಲಿ ಹೊಸ ಹೊಸ ಉಕ್ಕಿನ ಕಾರಖಾನೆಗಳು ಬೇಕೇಬೇಕು. ಯಾವ ಕಷ್ಟಗಳು ಬಂದರೂ 'ಬುಕಾರೋ'ವಿನ ಕಾರ್ಯಗಳು ಶೀಘ್ರದಲ್ಲಿಯೇ ಪ್ರಾರಂಭವಾಗುವುದೆಂದು ನಂಬಬಹುದು. ದೇಶದ ಆಂತರಿಕ ಮತ್ತು ಬಹಿರ್ಗತ ಪರಿಶ್ರಮದಿಂದ ಈ ಕಾರಖಾನೆಯು ಶೀಘ್ರದಲ್ಲಿ ರೂಪುಗೊಳ್ಳುವಂತಾಗಬೇಕು.

ಚಾಣಾಕ್ಯನು ನೇಯ್ದ ತಂತ್ರಜಾಲ

(೩ನೇ ಪುಟದಿಂದ)

ಗಿರುವ ಮೆಕ್‌ಬೆಥ್ ಮೊದಲಾದ ಕೆಲವರು ಪಾಕಿಸ್ತಾನದ ಪರವಾಗಿ ಗೂಢಚರ್ಯ ನಡೆಸುತ್ತಿದ್ದಾರೆಂಬ ಸಂದೇಹವೂ ಬಲವಾಗಿದೆ. ಈ ಬಗೆಯಲ್ಲಿ ವಿದೇಶೀಯರಿಗೆ ಮುಖ್ಯವಾಗಿ ನಮ್ಮ ಶತ್ರುಗಳಿಗೆ ಒತ್ತಾಸೆ ನೀಡುವವರನ್ನು ಹುಡುಕುವುದು ಪ್ರಯೋಜನಕಾರಿ. ನಾವು ಈ ಬಗ್ಗೆ ವಿಶೇಷ ಗಮನ ಹರಿಸಬೇಕಾಗಿದೆ.

ರಾಜಕಾರಣದಲ್ಲಿ ಗುಪ್ತಚರ್ಯೆ ಅದ ಪ್ರಚಾರಗಳು ಅನಾದಿಯೆಂದು ಹೇಳುವಂತಿಲ್ಲ ರಾಜಕೀಯವೇ ಕಪಟ ತಂತ್ರಗಳ ಜಾಲ. ಅದುದರಿಂದ ದೇಶದ ಭದ್ರತೆಗಂ ಡಾಂತರಕಾರಕವೆನಿಸುವ ಈ ವಿದೇಶೀ ನಿಷ್ಠರ ಮತ್ತು ಗುಪ್ತಚರರ ಬಗೆಗೆ ವಿಶೇಷ ಲಕ್ಷ್ಯ ಹರಿಸಬೇಕಾಗಿದೆ. ರಹಸ್ಯದ ಸುದ್ದಿಗಳನ್ನು ಅಡಗಿಕೊಳ್ಳುವುದು; ಕೌಟಿಲ್ಯ ನಂತಹ ಪ್ರಾಚೀನ ರಾಜತಂತ್ರಿಕ ವಿಚಾರಗಳ ಮೇಲೆ ಅಧ್ಯಯನಪೂರ್ಣ ವ್ಯಾಖ್ಯಾನ ನೀಡುವುದು—ಇವು ಅದನ್ನು ಕಡಿಮೆಯಾಗಬೇಕು ರಾಷ್ಟ್ರದ ರಾಜಕಾರಣಕ್ಕೆ ವ್ಯರ್ಥ ಪ್ರಸಿದ್ಧಿಯನ್ನು ಕೊಡುವುದು ಕೂಡ ಕೆಲವೊಮ್ಮೆ ಗಂಡಾಂತರಕ್ಕೆ ನಾಂದಿಯಾಗುವುದು. ಬಿತ್ತಿದ ಬೀಜವು ವಿಷವೃಕ್ಷಕ್ಕೆ ಕಾರಣವಾಗುವುದೆಂದು ತಿಳಿದೊಡನೆಯೇ ಅದನ್ನು ಕಿತ್ತು ಒಗೆಯುವುದು ಅತ್ಯಗತ್ಯ. ಅದುದರಿಂದ 'ವೆಚ್ಚ ಅದಬೇಡ' ಎಂಬ ಧ್ಯೇಯವಾಕ್ಯವನ್ನು ನಮ್ಮದಾಗಿಸುವ ಕಾಲವಿದು; ಚಾಣಕ್ಯನ ರಾಜತಂತ್ರವೂ ಆತ್ಮರಕ್ಷಣೆಯ ಪವಿತ್ರ ಕರ್ತವ್ಯದಲ್ಲಿ ನಮಗೆ ಮಾರ್ಗದರ್ಶನ ಮಾಡಬಲ್ಲುದು. 'ಗೋ'

ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ.
14 CT ಚಿನ್ನದ ಆಭರಣಗಳಲ್ಲಿ 58⅓% ಶುದ್ಧ ಪುತ್ಥಳಿ ಚಿನ್ನ ಇರುತ್ತದೆ.
ಬೇಡದಿದ್ದಲ್ಲಿ 1 ರೂ ಕಮ್ಮಿಯಲ್ಲಿ ಯಾವಾಗಲೂ ಬಜಾರು ಧಾರಣೆಗೆ ಪಡೆಕೊಳ್ಳುವ ಭರವಸೆ ಕೊಡುತ್ತೇವೆ.
ವಿ. ಸೂ ಹಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡೆಕೊಳ್ಳುವರೆ ಸರಕಾರದ ಲೈಸನ್ಸ್ ಸಿಕ್ಕಿರುತ್ತದೆ.
ಮದುವೆ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡೆಕೊಂಡು ಖಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.

ಶ್ರೀ ಕೃಷ್ಣಾ ಜ್ಯುವೆಲರಿ ವರ್ಕ್ಸ್
ತೆಂಕಪೇಟೆ — ಉಡುಪಿ.
ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.
ಫೋನ್ ನಂಬ್ರ: 66

● ಕುಮಾರಿ ಬಿಲ್ಲೆಗಳು ●
(ರಿಜಿಸ್ಟರ್ಡ್ Regd.)
ಪ್ರಕೃತಿಯ ನಿಯಮಗಳಿಂದಾಗ ಉಂಟಾಗುವ ಕಾತರ ನಿವಾರಣೆಗೆ ಸಮಯೋಚಿತವಾದ ಆಯುರ್ವೇದೀಯ ಮಿಶ್ರಣ!
ಟ್ಯೂಬ್ 10 ಬಿಲ್ಲೆಗಳು ರೂ. 4/. ಮಧ್ಯಮ ರೂ. 6/ ಉತ್ತಮ ರೂ.9/.
P. Devee & Co. (N. J.) Calcutta—10·
ಸ್ಟಾಕಿಸ್ಟರು — ರಾಜಾ ಮೆಡಿಕಲ್ ಹಾಲ್, ಬೆಂಗಳೂರು ಕಂಟೋನ್ಮೆಂಟ್; ಕುವೆಂಪು ಫಾರ್ಮಸಿ, ಕುವೆಂಪು (ಉ. ಕ.)

NOTICE

IN THE COURT OF THE DISTRICT MUNSIF OF UDIPI

S. C. No. 228/1963

Between

Ananthayya Bairi —Plaintiff

and

Apraya Naika —Defendant

To

Apraya Naik son of Srinivasa Naika, Chigribettu No. 34 Kudi Village, Udipi Taluk.

Please take notice that the above suit field against you, stands posted to 25—9—1963 in the above court and if you fail to appear on that day at 11 A. M. before the said court you will be set Expartee and the case will be decided on merits.

By Order

N. Ramachandra Bhat,

Advocate for Plaintiff

Udipi, 8—9—1963.

ಆದರ್ಶ ಚರಿತೆಗಳು ೩

ರಮಣ ಮಹರ್ಷಿ

ಶ್ರೀ ಎಸ್. ಎಂ. ಶೆಟ್ಟಿ,
ಶಿವಮಂಜೆಪರಾರಿ.

ದಕ್ಷಿಣ ಭಾರತದ 'ತಿರುಚ್ಚಿ' ಎಂಬ ಊರಿನ ಸರ್ವಮಾನ್ಯ ವಕೀಲರಾದ ಸುಂದರಂ ಅಯ್ಯರರ ನಡುವಣ ಪುತ್ರನ ಹೆಸರೇ ವೆಂಕಟರಮಣ ಎಂದು. ಇವರೇ ಮುಂದೆ ರಮಣ ಮಹರ್ಷಿಯ ಹೆಸರಿನಿಂದ ಲೋಕ ವಿಖ್ಯಾತರಾದರು.

೩೦ ದಶಂಬರ ೧೮೭೯ ರಂದು ರಾತ್ರಿ ಇವರ ಜನನವಾಯಿತು. ೧೬ ವರ್ಷ ಪ್ರಾಯದ ತರುಣ ವೆಂಕಟರಮಣರ ಜೀವನವು ಆಧ್ಯಾತ್ಮಿಕದಲ್ಲಿ ಕಳೆಯಿತು. ಬಾಲ್ಯದಲ್ಲಿಯೇ 'ಅರುಣಾಚಲಂ' ಎಂಬ ಹೆಸರನ್ನು ಕೇಳುತ್ತಲೇ ಅವರಲ್ಲಿ ಅದ್ಭುತ ಪ್ರಭಾವವಾಗುತ್ತಿತ್ತು. ಅಲ್ಲಿಗೆ ಒಮ್ಮೆ ಹೋಗಲೇಬೇಕೆಂಬ ಹಂಬಲ ಅಂದೇ ಅವರ ಮನಸ್ಸಿನಲ್ಲಿ ಬೇರೂರಿತ್ತು. ಒಂದು ದಿನ ಅಕಾರಣವಾಗಿಯೇ ತಾನು ಸಾಯುತ್ತಿರುವೆನು ಎಂದು ತಿಳಿದು ಅವರು ಭಯಭೀತರಾದರು. ಅವರು ಮಲಗಿಕೊಂಡು ಸತ್ತ ಮೇಲೆ ಏನಾಗುವುದೆಂದು ಯೋಚಿಸತೊಡಗಿದರು. ಇದರ ಫಲ ಸ್ವರೂಪವಾಗಿ ಅವರು ಅನ್ನ ಜಲಗಳ ಮೇಲೆ ನಿರಾಸಕ್ತಿ ತಳೆದರು. ಸ್ವಭಾವದಲ್ಲಿ ಅದ್ಭುತ ನಮ್ರತೆಯು ಆಗಮಿಸಿತು. ಅದರೊಡನೆಯೇ ಭಗವತ್ ಭಕ್ತಿಯು ಜಾಗೃತವಾಯಿತು.

ಒಂದು ದಿನ ಒಮ್ಮಿಂದೊಮ್ಮೆಲೆ ಇವರು ಮನೆಯಿಂದ ಅದೃಶ್ಯರಾದರು. ಅನೇಕಾನೇಕ ಕಷ್ಟಗಳನ್ನು ಸಹಿಸಿ ಇವರು 'ಅರುಣಾಚಲಂ'ಗೆ ಬಂದರು. ಅಲ್ಲಿಯೂ ಈ ಬಾಲಯೋಗಿಯು ನಾನಾ ರೀತಿಯ ಕಷ್ಟಗಳನ್ನು ಸಹಿಸಬೇಕಾಯಿತು. ಕೆಲವು ದುಷ್ಟ ಪ್ರಕೃತಿಯ ಜನರೂ, ಬಾಲಕರೂ ಅವರಿಗೆ ತೊಂದರೆ ಕೊಡುತ್ತಿದ್ದರು. ಆದರೆ ಇವರು ಮೌನ ವ್ರತ ಹಿಡಿದು ಬಿಟ್ಟಿದ್ದರು. ಶರೀರ ತಪಸ್ಸಿಗೆ ಮುಡಿಪು ಇವರ ಅಭೀಷ್ಟವಾಗಿತ್ತು. ಅರುಣಾಚಲಂಗೆ ಬರುತ್ತಲೇ ಇವರು [illegible] ವಸ್ತ್ರಗಳನ್ನು ತ್ಯಜಿಸಿ ಕೌಪೀನವನ್ನು ಧರಿಸಿದರು

ಅರುಣಾಚಲದ ಪಾತಾಳ ಲಿಂಗದ ಭೂಗರ್ಭ ಗೃಹದಲ್ಲಿ ಇವರು ತಪಸ್ಸಿಗೆ ಕುಳಿತಿದ್ದಾಗ ಆ ಅಂಧಕಾರ ಪೂರ್ಣ ಸ್ಥಳದಲ್ಲಿಯ ವಿಷಜಂತುಗಳು ಇವರ ಶರೀರವನ್ನು ಛಿದ್ರವಿಛಿದ್ರಗೊಳಿಸಿದವು. ಏಕಾಂತ ಸಾಧನೆಗಾಗಿ ಹತ್ತಿರದ ಮಂದಿರಗಳಲ್ಲಿಯೂ ಆಗಾಗ ರಮಣ ಮಹರ್ಷಿಯವರು ಇರುತ್ತಿದ್ದರು. ಅರುಣಾಚಲದಲ್ಲಿ ಅವರ ತಪದ ಖ್ಯಾತಿ ಹಬ್ಬಿದಾಗ, ಇವರ ಮನೆಯವರಿಗೂ ಇವರ ಇರುವಿಕೆ ತಿಳಿಯಿತು. ಚಿಕ್ಕ ತಂದೆ, ತಾಯಿ, ಸಹೋದರರೆಲ್ಲರೂ ಬಂದು ಇವರನ್ನು ಮನೆಗೆ ಹಿಂತಿರುಗುವಂತೆ ಆಗ್ರಹಿಸಿದರು. ಆದರೆ ಮನೆಯ ಮಮತೆಯನ್ನೇ ತೊರೆದು ಸಾಧುವಾದ ಅವರು ಯಾವ ಮನೆಯನ್ನೂ ಸ್ವೀಕರಿಸಲು ಸಿದ್ಧರಿರಲಿಲ್ಲ.

ಮೆಲ್ಲಮೆಲ್ಲನೆ ರಮಣ ಮಹರ್ಷಿಯ ಯಶಸ್ಸು ವಿಸ್ತಾರವಾಯಿತು. ಅನೇಕಾನೇಕ ಪ್ರಖ್ಯಾತ ಜನರು ಇವರಿಗೇ ಶರಣು ಬಂದರು. ಇವರ ಸಮೀಪಕ್ಕೆ ಆಗಮಿಸುತ್ತಲೇ ಜನರು ಅಪೂರ್ವ ಸೌಖ್ಯವನ್ನು ಅನುಭವಿಸುತ್ತಿದ್ದರು. ಕಾವ್ಯಕಂಠ ಗಣಪತಿ ಶಾಸ್ತ್ರಿಯವರೇ ಇವರ ಪ್ರಥಮ ಕೃಪಾಪಾತ್ರರು. ಅವರೇ ಈ 'ಗಿರಿನಿವಾಸಿಸ್ವಾಮಿ'ಯನ್ನು "ರಮಣ ಮಹರ್ಷಿ" ಯೆಂದು ಕರೆದರು. ಮುಂದೆ ಅದೇ ಹೆಸರು ವಿಖ್ಯಾತವಾಯಿತು. ಗಣಪತಿ ಶಾಸ್ತ್ರಿಯ ಮೇಲೆ ಕೃಪೆಗೈದ ನಂತರವೇ ಜನರಿಚ್ಛೆಯಂತೆ ಮೌನವನ್ನು ಮುರಿದು ಉಪದೇಶಗೈಯತೊಡಗಿದರು.

ರಮಣ ಮಹರ್ಷಿಯವರು ವಿರೂಪಾಕ್ಷ ಗುಹೆಯಲ್ಲಿಯೇ ಉಪದೇಶವೀಯಲು ಪ್ರಾರಂಭಿಸಿದರು. ಭಕ್ತರ ಸಂಖ್ಯೆಯು ಹೆಚ್ಚಿತು. ಮಹರ್ಷಿಯವರ ತಪಃಶಕ್ತಿಯ ಅನೇಕ ಚಮತ್ಕಾರಗಳು ಅಲ್ಲಿ ವ್ಯಕ್ತವಾಗುವು. ಅನಂತರ ಇವರು ವಿರೂಪಾಕ್ಷ ಗುಹೆಯನ್ನು ಬಿಟ್ಟು ಸ್ಕಂದಾಶ್ರಮದಲ್ಲಿರತೊಡಗಿದರು. ಇಲ್ಲಿಯೇ ಮೆಲ್ಲ ಮೆಲ್ಲನೆ 'ಶ್ರೀ ರಮಣಾಶ್ರಮ' ಬೆಳೆಯಿತು.

ಸಮಸ್ತ ಪ್ರಾಣಿಗಳ ಬಗ್ಗೆ ಆತ್ಮಭಾವವೇ ರಮಣ ಮಹರ್ಷಿಯವರ ಉಪದೇಶದ ಸಾರ. ಪಶು ಪಕ್ಷಿಗಳೊಡನೆ ಇವರಿಗೆ ಗಾಢ ಮೈತ್ರಿಯಿತ್ತು. ಒಮ್ಮೆ ಕೆಲವು ಕಳ್ಳರು ಆಶ್ರಮಕ್ಕೆ ನುಗ್ಗಿದರು. ಆಶ್ರಮವಾಸಿಗಳೆಲ್ಲರನ್ನು ಅವರು ಹಿಂಸಿಸಿದರು. ಯಾರೂ ಕಳ್ಳರೊಡನೆ ಹೋರಾಡದಂತೆ ಆಶ್ರಮವಾಸಿಗಳನ್ನು ರಮಣ ಮಹರ್ಷಿಯವರು ತಡೆದರು. ಕಳ್ಳರು ಒಂದು ದೊಣ್ಣೆಯನ್ನೆತ್ತಿ ರಮಣ ಮಹರ್ಷಿಯವರ ಕಾಲಿಗೆ ಬಲವಾಗಿ ಹೊಡೆದರು. ಅವರ ಕಾಲಿನಲ್ಲಿ ಒಂದು ದೊಡ್ಡ ಗಾಯವಾಗಿ ರಕ್ತಸ್ರಾವವಾಯಿತು. ಮಹರ್ಷಿಯವರು ಈ ವಿಷಯವಾಗಿ "ದೇವರೇ ಕಳ್ಳನ ರೂಪದಲ್ಲಿ ಬಂದನು. ಅವನ ಪೂಜೆ ನಾನೂ ಸುಮ್ಮನೆ [illegible] ಮಾಡಲಿಲ್ಲ. ನನಗೂ ಪ್ರಸಾದ ಸಿಕ್ಕಿತು" ಎಂದು ನಕ್ಕರು.

೧೪ ಏಪ್ರಿಲ್ ೧೯೫೦ ರಂದು ಈ ಕಾಲದ ಮಹಾನ್ ತಪಸ್ವಿ ತತ್ವದರ್ಶಿ ಸಂತರೊಬ್ಬರು ಕಣ್ಮರೆಯಾದರು

ಮೂಲ: ಠಾಕೂರ್ ಸುದರ್ಶನ ಸಿಂಹ

25,000
ಪ್ರತಿಗಳಿಗೂ ಮಿಕ್ಕಿ
ಈ ವರೆಗೆ ಕರ್ನಾಟಕದಲ್ಲೆಲ್ಲ
ವಿಕ್ರಯವಾಗಿರುವ
ಹೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

ಗೀತೆಯ ಸಮೂಲ ಭಾಷಾಂತರ ಇದೀಗ ಮಾರಾಟಕ್ಕೆ ಸಿದ್ಧವಾಗಿದೆ.
360 ಪುಟಗಳಿಗೂ ಮಿಕ್ಕಿದ
ಪಾಕೆಟ್ ಎಡಿಶನ್!
ದಪ್ಪವಾದ ಬಿಳಿ ನುಣುಪು ಕಾಗದ!
ಬೆಲೆ: ಸಾದಾ ಪ್ರತಿ ರೂ. ೧-೦೦
ಉತ್ತಮ ಪ್ರತಿ ರೂ. ೧-೫೦
ಅಂಚೆ ವೆಚ್ಚ ರೂ. ೦-೫೦
೧೦ ಪ್ರತಿಗಳ ವರೆಗೆ ಬರೆಯಿರಿ:
ನವಯುಗ ಪ್ರೆಸ್ ಉಡುಪಿ, ದ. ಕ.

ವಿದ್ಯಾರ್ಥಿಗಳ 2 ಕೈಪಿಡಿಗಳು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ 1-1-0 (1=25)

ವಿ. ಸೂ.—ಅಂಚೆಯ ಖರ್ಚು [illegible]
0 =25 NP [illegible] ಮನಿಯಾರ್ಡರು ಮಾಡಿದರೆ ಪುಸ್ತಕ [illegible]

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರತಿಗಳು— ಮಂಗಳೂರಲ್ಲಿ ಶ್ರೀನಿವಾಸ್ ಬ್ರದರ್ಸ್, ಸ್ಕೂಲ್ ಬುಕ್ ಕೊ., ಕೆನರಾ ಕಾಲೇಜು ಬುಕ್ ಕೊ., ಇಂಡಿಯನ್ [illegible] & [illegible] ಇವರ ಲ್ಲಿಯೂ, ಪುತ್ತೂರಲ್ಲಿ ಪೊಪ್ಯುಲರ್ ನ್ಯೂಸ್ [illegible] ದೊರೆಯುತ್ತವೆ

ಶಾಸ್ತ್ರಿಗಳಿಗೆ ಶ್ರದ್ಧಾಂಜಲಿ!

ಇನ್ನಿಲ್ಲ ಗೋವಿಂದ ಪೈಗಳಿನ್ನಿಲ್ಲ
ಕನ್ನಡದ ಕನ್ನಡ [illegible]!
ಮಂಗಳೂರಿನ [illegible]
[illegible]
ಕನ್ನಡದ ಸಾಹಿತ್ಯ[illegible]
[illegible]
[illegible]
ಸಂಪ್ರದಾಯದ [illegible]
[illegible]
[illegible]
ಅದರ!
ಭಾರತಂ ಸ್ವಾತಂತ್ರ್ಯ[illegible]
[illegible]
'ರಾಷ್ಟ್ರಕವಿ' [illegible]
[illegible]
ಸಾಹಿತ್ಯ [illegible]
[illegible]
[illegible]
[illegible]
ರಾಷ್ಟ್ರಕವಿ [illegible]
[illegible]
ಕನ್ನಡದ ಸಾಹಿತ್ಯ [illegible]
[illegible]
ಕನ್ನಡ [illegible]
[illegible]
[illegible]
ಕನ್ನಡದ [illegible]
[illegible]
ಕನ್ನಡದ [illegible]
[illegible]
ಗೋವಿಂದ [illegible]
[illegible]
[illegible]
[illegible]
ಕನ್ನಡ [illegible]
[illegible]
[illegible]!
ಎಂದಿತ್ತು [illegible]
[illegible]
ಕನ್ನಡಕ್ಕಾಗಿ [illegible]
ವಿಧಿ [illegible]
[illegible]
ಕಾಲ [illegible]
[illegible]
[illegible]
[illegible]
ಶಾಸ್ತ್ರಿಗಳಿಗಿದೋ ನಮ್ಮ
ಶ್ರದ್ಧಾಂಜಲಿಯು!

ಎಸ್. ತಿರುಮಲೇಶ್ವರ ಭಟ್,
ಮಂಗಳೂರು.

ಅಸ್ತಮಾ ಪೀಡಿತರ ಗಮನಕ್ಕೆ
[illegible]
Shri Mahatma [illegible]
P. O. [illegible]

ಐತಿಹಾಸಿಕ ನಾಟಕ

ಗಜಪತಿ ನಂದಿನಿ

ಬರೆದವರು: "ನವಗಿರಿನಂದ"

(ಕಳೆದ ಸಂಚಿಕೆಯಿಂದ ಮುಂದುವರಿದುದು)

ದೃಶ್ಯ—೭ ಮುದಗಲ್ ದುರ್ಗ ಮಂದಿರ.

(ಸುಮಯ ರಾತ್ರಿ. ಸುಂದರವಾದ ಶಯ್ಯಾಗಾರದಲ್ಲಿ ಸೈಯದ್ ಮರ್ಕಾರನು ಅತ್ತಿತ್ತ ತಿರುಗಾಡುತ್ತಿರುವನು)

ಸೈಯದ್—ಎಷ್ಟು ಹೊತ್ತಾಯಿತು? ಇನ್ನೂ ಪ್ರಿಯದೋಸ್ತ್ ಕರೀಂಬೇಗ್ ಯಾಕೆ ಬರಲಿಲ್ಲ? ಹುಂ ಒಳ್ಳೇ ಬೇಟೆ ಸಿಕ್ಕಿರಬಹುದು ಇವತ್ತು. (ಅತ್ತಿತ್ತ ಎಡತಾಕುವನು)

ಗುಲ್ರುಬಿ—(ಮೆಲ್ಲನೆ ಪ್ರವೇಶಿಸುವಳು)

ಸೈಯದ್- ಯಾರು? ಸೈತಾನ್ ನೀನೆ?

ಗುಲ್ರುಬಿ- ಸೈತಾನ್ ಅಲ್ಲ ಪ್ರಭೂ. ನಿಮ್ಮ ಪತ್ನಿ ಗುಲ್ರುಬಿ.

ಸೈಯದ್—ನಿನ್ನನ್ನು ಯಾರು ಇಲ್ಲಿಗೆ ಬರ ಹೇಳಿದರು? ನಡೆ ನಿನ್ನ ಕೋಣೆಗೆ.

ಗುಲ್ರುಬಿ—ಪತ್ನಿಯನ್ನು ಗಂಡನ ಬಳಿಗೆ ಬರ ಹೇಳ ಬೇಕೆ? ನನಗೆ ಕರ್ತವ್ಯ ತಿಳಿಯದೆ? ಇಷ್ಟು ಹೊತ್ತು ಎಡತಾಕುತಿದ್ದೀರಿ ಏನೋ ಯೋಚನೆ ಮಾಡಿಕೊಂಡು. ಕಾಲಿಷ್ಟು ನೋಯುತ್ತೋ ಏನೋ, ಬನ್ನಿ, ಸ್ವಲ್ಪ ನಾನು ನಿಮ್ಮ ಕಾಲೊತ್ತುತ್ತೇನೆ.

ಸೈಯದ್- ಛೆಕ್ ಅಧಿಕ ಪ್ರಸಂಗಿ! ನಡೆಯಾಚೆ.

ಸೇವಕ—(ಪ್ರವೇಶಿಸಿ) ಹುಜೂರ್, ಕರೀಂಬೇಗ್......

ಸೈಯದ್—(ಆತುರದಿಂದ) ಬಂದರೆ? ಬಾ ಅನ್ನು (ಸೇವಕನು ಹೋಗುವನು. ಸೈಯದ್ ಗುಲ್ರುಬಿಯನ್ನು ಮತ್ತೊಮ್ಮೆ ಹೋಗೆಂದು ಅಟ್ಟುವನು. ಅವಳು ಹೋಗುವಳು. ಕರೀಂಬೇಗ್ ಪ್ರವೇಶಿಸಿ ಕುರ್ನಿಸು ಮಾಡುವನು. ಸೈಯದ್ ಆತನನ್ನು ಆಲಂಗಿಸಿ) ನಿನಗಾಗಿಯೇ ಕಾದಿದ್ದೇನೆ ಪ್ರಿಯ ದೋಸ್ತ್ ಕರೀಂಬೇಗ್. ಹೊಸಾ ಹೊಸ ಬೇಟೆ ತಂದಿದ್ದೀಯಾ? (ತನ್ನ ಕಕ್ಷದಲ್ಲೆ ಮಂಚದ ಮೇಲೆ ಆತನನ್ನು ಕೂಡಿಸಿಕೊಳ್ಳುವನು.)

ಕರೀಂಬೇಗ್— ಅಂಥ ಬೇಟೆ ಸಿಕ್ಕಿದ್ದರೆ ಹಾರಿಕೊಂಡು ಬರಲಾರೆನೆ?

ಸೈಯದ್—ಯಾವುದೂ ಇಲ್ಲವೇ ಈ ದಿನ?

ಕರೀಂಬೇಗ್— ಹುಜೂರ್, ತಮ್ಮ ಸಂತೋಷಕ್ಕಾಗಿ ಈ ಮುದಗಲ್ ಪ್ರಾಂತ್ಯದ ಸುಂದರಿಯರೆಲ್ಲಾ ಆಗಿಹೋಯಿತಷ್ಟೆ? ತಂದುದನ್ನೆ ತರುವುದು ಏನು ಚಂದಾ? ಆದಕ್ಕೇ ಈ ದಿನ ಹೊಸ ದಿಕ್ಕಿಗೆ ಹೊರಟಿದ್ದೆ. ಹಣ್ಣು ಕೈಸೇರದಿದ್ದರೂ ಬಹು ಸವಿಯಾದ ಸುದ್ದಿಯೊಂದಿಗೆ ಬಂದಿದ್ದೇನೆ ಹುಜೂರು. ಬಲು ಚಲೋ ಗಮ್ಮತ್ ಸುದ್ದಿ.

ಸೈಯದ್—ಅದೇನು?

ಕರೀಂಬೇಗ್—ಬಹದೂರ್ ಸೈಯದ್ ಮರ್ಕಾರ್ ಸಾಹೇಬರಿಗೆ ಸರಿಯಾದ ಶಿಕಾರ್ ಒಂದು ತಯಾರಿದೆ

ಸೈಯದ್— ಆ! ಮೇರಿ ಪ್ಯಾರೀ, ಭಲೇ ಸುಂದರಿಯೋ?

ಕರೀಂಬೇಗ್—ಸುಂದರಿಯೆಂದರೆ ಅಂಥಿಂಥಾ ಸುಂದರಿಯಲ್ಲ ಒಳ್ಳೇ ಒಳ್ಳೇ— ನಾನು ಹೇಗೆ ಬಣ್ಣಿಸಲಿ? ಒಳ್ಳೇಯ ಝೂಕ್ ಫಕ್ ಸುಂದರಿ.

ಸೈಯದ್—ಅಹಾ! ಮೇರೀ ಪ್ಯಾರೀ! ದೋಸ್ತ್ ಕರೀಂಬೇಗ್ (ಅಪ್ಪಿಕೊಂಡು) ನನ್ನ ಅಂತರಂಗದ ಮಿತ್ರ! ಎಲ್ಲಿರುವಳು ಆ ಸುಂದರಿ? ಯಾವಾಗ ತೋರಿಸುವಿ?

ಕರೀಂಬೇಗ್—ಸೈರಿಸಿಕೊಳ್ಳಿ ಸರ್ಕಾರ್. ಇಲ್ಲಿಯಿಲ್ಲ; ಅವಳು ಗುತ್ತಿದುರ್ಗದಲ್ಲಿದ್ದಾಳೆ.

ಸೈಯದ್—ಓಹೋ! ಗುತ್ತೀದುರ್ಗಾ! ಯಾ ನಿನಗೆ ಹೇಗೆ ಗೊತ್ತಾಯಿತು?

ಕರೀಂಬೇಗ್—ಹುಜೂರ್, ತಮ್ಮ ಕೆಲಸಕ್ಕಾಗಿ ಖುದಾನು ನನಗೆ ಹದ್ದಿನ ದೃಷ್ಟಿ ಕೊಟ್ಟಿದ್ದಾನೆ.

ಸೈಯದ್—ಶಾಭಾಸ್!

ಕರೀಂಬೇಗ್—ಎಲ್ಲಿಂದಲೋ ನಾಲ್ವರು ಬೋಯಿಗಳು ಆ ಸುಂದರಿಯನ್ನು ಕೊಂಡೊಯ್ದು ಗುತ್ತಿದುರ್ಗದೊಳಗೆ ಅಡಗಿಸಿಟ್ಟದ್ದನ್ನು ನಾನು ಕಣ್ಣಾರೆ ಕಂಡೆ.

ಸೈಯದ್—ಹೇಗೆ?

ಕರೀಂಬೇಗ್ — ಚೆಲೋ ಚೆಲೋ ಹುಡುಗಿಯರನ್ನು ತರಿಸುವ ಕಾರ್ಯಕ್ಕೇ ತಾವು ನನ್ನನ್ನು ಇಟ್ಟಿರುವಾಗ ಹೇಗೆ ಅಂದರೇನು. ಹೇಳುವುದು? ಕಣ್ಣು ಬಿಟ್ಟುಕೊಂಡಿರುತಿದ್ದ ನನಗೆ ಸಂದೆಯ ಬಂದು ಬಿಟ್ಟಿತು. ಆ ಸಣ್ಣ ದುರ್ಗದ ಕಾವಲುಗಾರನೊಬ್ಬನಿಗೆ ಲಂಚಕೊಟ್ಟು ಮನಲಾಯಿಸಿ ಗುಟ್ಟೆಲ್ಲಾ ತಿಳಿದು ಬಿಟ್ಟೆ.

ಸೈಯದ್—ಆ ಸುಂದರಿಯ ಹೆಸರು?

ಕರೀಂಬೇಗ್— ಅದನ್ನು ತಿಳಿಯಲು ಎಷ್ಟೋ ಪ್ರಯತ್ನ ಪಟ್ಟರೂ ಗೊತ್ತಾಗಲಿಲ್ಲ.

ಸೈಯದ್— ಓಹೋ! ಅಷ್ಟು ರಹಸ್ಯವೇ!

ಕರೀಂಬೇಗ್—ರಹಸ್ಯದಲ್ಲೆ ಮಜಾ ಯಿದೇ ಹುಜೂರ್!

ಸೈಯದ್- ಅಚ್ಛಾ, ಅವಳ ಹೆಸರು ತಿಳಿಯುವ ವರೆಗೆ ನಾವು ಸುಂದರಿಯೆಂದೇ ಹೆಸರಿಟ್ಟರಾಯಿತು. ಸರಿ. ಅವಳನ್ನು ನಾವು ಪಡೆಯುವ ವಿಧಾನ ಹೇಗೆ ಹೇಳು ಹೇಳು.

ಕರೀಂಬೇಗ್—ಬರೇ ಅವಳನ್ನು ಮಾತ್ರವಲ್ಲ ಹುಜೂರ್. ಆ ಗುತ್ತಿದುರ್ಗವನ್ನೆ ನಮ್ಮ ಆದಿಲ್‌ಶಾಹೀ ಸರಕಾರಕ್ಕೆ ಸೇರಿಸಿಬಿಡಬಹುದು. ಇಂಥ ಸಮಯ ಮತ್ತೆ ಸಿಕ್ಕಲಿಕ್ಕಿಲ್ಲ.

ಸೈಯದ್—ಅಷ್ಟು ಸುಲಭವೆ?

ಕರೀಂಬೇಗ್—ಆ ಕಾಫರ್ ರಾಯನು ಈಗ ಓಡ್ರ ದೇಶದ ಮೇಲೆ ಹೊರಟಿದ್ದಾನೆ ಆದ್ದರಿಂದ ಗುತ್ತೀ ದುರ್ಗದ ಸುದ್ದಿ ಅವನ ಕಿವಿಗೆ ಬೀಳುವುದರೊಳಗೆ, ನಾವು ಗುಳುಂಕರಿಸಿ ಜೀರ್ಣಿಸಿಯೂ ಬಿಡಬಹುದು

ಸೈಯದ್—(ಹೆದರಿ) ಆ ಕೃಷ್ಣದೇವನೆಂದರೆ ನನಗೆ ಭಯವಾಗುತ್ತಯ್ಯಾ. ನಾನು ಅವನ ಕೈಯಿಂದ ನಲುವತ್ತು ಸಾವಿರ ವರಹಗಳನ್ನು ಗುಳಂಕರಿಸಿದ ಕಳ್ಳನಾದ್ದರಿಂದ—

ಕರೀಂಬೇಗ್—ಆ, ಇದೇನು ಮಹಾ ಗುಳಂಕರಿಸಿದ ಧೀರರಿನ್ನಿ ಹುಜೂರ್. ಈ ಗಂತೂ ಆ ಕಾಫರ್ ರಾಯ ಕೊಂಡವೀಡನ್ನು ಜಯಿಸಿದ ಸಂತೋಷದಿಂದ ನೈತ್ಯ ಮರೆತು ಹೋಗಿದ್ದಾನೆ ಬೆಲ್ಲಂಗೊಂಡದ ಕಡೆಗೆ ಹೊರಟಿದೆ ಆವನ ಪ್ರಯಾಣ. ನಾವು ಆವನಿಗೆ ತಿಳಿಯದಂತೆಯೇ ಕೆಲಸವಾಗಿಸುವಾ.

ಸೈಯದ್—ಅಚ್ಛಾ. ಈ ವಿಷಯವನ್ನು ಆದಿಲ್ ಷಹರಿಗೆ ಬರೆದು ಕಳುಹಿಸಿಬಿಡೋಣ. ಆದರೆ ಆ ಸುಂದರಿಯ ಸುದ್ದಿ ಮಾತ್ರ ಅವರಿಗೆ ತಿಳಿಸಕೂಡದು. ನಾವು ನಾಳೆಯೇ ಸೇನೆಯನ್ನು ತೆಗೆದುಕೊಂಡು ಗುತ್ತಿಯ ಕಡೆಗೆ ಹೊರಡೋಣ.

ಕರೀಂಬೇಗ್—ಅಚ್ಛಾ ಸರಕಾರ್.

ಗುಲ್ರುಬಿ— (ಪ್ರವೇಶಿಸಿ) ಬೇಡ ಪ್ರಭು! ಈ ಬಗೆಯ ದುರಾಲೋಚನೆಯನ್ನು ಬಿಟ್ಟು ಬಿಡಬೇಕು. ಬೇಡಿಕೊಳ್ಳುತ್ತಿದ್ದೇನೆ. (ಮುಂದುಗಾಗಿ ಬರುವಳು)

ಸೈಯದ್—ಅರೇ, ಪುನಃ ಬಂದಿಯಾ ಸೈತಾನ್. ಇದು ನಮ್ಮ ಮಾತೆಲ್ಲವನ್ನೂ ಕೇಳಿದಂತಿದೆಯಲ್ಲಾ!

ಗುಲ್ರುಬಿ—ಹೌದು ಜಹಾಂಪನಾ! ಈ ದುಷ್ಟ ಕರೀಂಬೇಗನು ನಿಮಗೆ ಬೋಧಿಸಿದ ದುರ್ಬೋಧನೆಗಳನ್ನೆಲ್ಲಾ ಕೇಳಿದೆ. ಬೇಡ, ಈ ದುಷ್ಟನ ಸಹವಾಸ ನಿಮಗೆ ಬೇಡ

(ಕರೀಂಬೇಗ್ ಏಳುವನು)

ಸೈಯದ್— (ಆತನ ಕೈ ಹಿಡಿದು ಕೂಡಿಸಿ) ನಡೆಯಾಚೆ ಈ ನನ್ನ ಪ್ರಾಣಸ್ನೇಹಿತನನ್ನು ದೂರಿದಿಯಾ ನಿನ್ನ ನಾಲಗೆ ಸೀಳಬಿಡುತ್ತೇನೆ. ಹೆಂಗಸರಿಗೇಕೆ ರಾಜಕೀಯ? ನಡೆ ಬೇಗ

ಗುಲ್ರುಬಿ—ಇದು ರಾಜಕೀಯವಲ್ಲ ಮಹಾರಾಜ್ಯ ನ ಶನ ವಿಚಾರ. ಈ ನೀಚ ಕರಿಮನಿಂದಾಗಿ ಎಷ್ಟು ಮಂದಿ ಸೋದರಿಯರು ಹಾಳಾಗಿ ಬಿಡುಕುತ್ತಿರುವರೋ! ನಿಮ್ಮನ್ನು ಕಾಪಾಡಿ ಜಾ ಮನ ನಾ ಪ್ರೇಮಿಸಿರುವ ಈ ಹೆಂಡತಿ ಗುಲ್ರುಬಿಯ ಕಣ್ಣೆದುರೇ ಹೀಗೆ ಮಾಡಬಾರದು. ಬೇಡ, ಈ ವಿಚಾರಬಿಟ್ಟು ಬಿಡಿ. (ತಲೆ ಬಾಗಿಸುವಳು)

ಸೈಯದ್— ಛೀ ಸೈತಾನ್! ಹೋಗಾಚೆ. (ಆಚೆಗೆ ದೂಡುವನು)

(ಮುಂದೆ ಪರಿಯುವುದು)

ಉಡುಪಿ ಡಿ. ಮು. ಕೋರ್ಟಿನಲ್ಲಿ

S. C. 173/1963.

ಕೃಷ್ಣಯ್ಯ ಶೆಟ್ಟಿ — ವಾದಿ.

ಮತ್ತು

1 ರಾಮು ಹೆಂಗ್ಸು - ಬಸವ ಮಡಿವಾಳನ ಹೆಂಡ್ತಿ—

2. ದುರ್ಗ ಮಡಿವಾಳ 3. ಕೃಷ್ಣ ಮಡಿವಾಳ- 1ನೇ ಯವಳ ಮಕ್ಕಳು-

ಉಡುಪಿ ತಾಲೂಕು ನಂಬ್ರ 34ನೇ ಕುಡಿ ಗ್ರಾಮದಲ್ಲಿರುವವರು ... ಪ್ರತಿವಾದೀರು-

ಇವರೊಳಗೆ—

ಸದ್ರಿ ಪ್ರತಿವಾದಿರಿಗೆ ಈ ಮೂಲಕ ತಿಳಿಯ ಪಡಿಸುವದೇನಂದ್ರೆ—

ನೀವು ವಾದಿಗೆ ತಾರೀಕು 29-3-1960 ರಲ್ಲು ರೂಪಾಯಿ 110/-ಕ್ಕೆ ಬರಕೊಟ್ಟ ಡಿಮಾಂಡು ನೋಟಿನ ಅಸಲು ಬಡ್ಡಿ ಅವೇಜನ್ನು ಬರಮಾಡಿ ಕೊಳ್ಳುವರೆ ವಾದಿಯು ದಾಖಲು ಮಾಡಿದ ಸದ್ರಿ ದಾವೆಯು ತಾರೀಕು 25—9—1963ಕ್ಕೆ ಯಿಟ್ಟಿದೆ. ಆ ಕುರಿತು ಉದಾಹರಿಸುವಂಥಾದ್ದಿದ್ದರೆ ಆ ದಿವಸ ಪೂರ್ವಾಹ್ನ 11 ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜಾಹೀರುಮಾಡಿಕೊಳ್ಳಬಹುದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವುದು—

K Balachandra Rao

Advocate for Plaintiff

Udipi, 18—9—1963.

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮುದ್ದತಿಯ ಕ್ಯಾಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5

2, ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ

3 ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ವಿಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ವರ್ಗ—ಊಳಿಗ

ಮೊದಲಾದ ಯಾವತ್ತೂ ತರದ.

ಎಕೌಂಟ್ ಪುಸ್ತಕಗಳು

ಶಾಲಾ ರಿಜಿಸ್ತ್ರಿಗಳು,

ಫಾರ್ಮುಗಳು

ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.

ಮಾವೋ ವರ್ತನೆಗೆ

ಪಂಚಮ ದಳದ ಬೀಭತ್ಸ ಕುಕೃತ್ಯ

—ಶ್ರೀ ಶಿವಶಂಕರ

ಮಾವೊ ತ್ಸೆ-ಟುಂಗೆಯವರ ಚೈನಾಕ್ಕೆ ತನ್ನದೇ ಆದ ದೊಡ್ಡಸ್ಥಿಕೆಯಲ್ಲಿ ಶಕ್ತ ಭ್ರಾಂತಿಮಯ ನಂಬಿಕೆ ಇದೆ. ಅದರ ಆಳಿಕ ವರ್ಗವೂ ತಮ್ಮ ದೇಶವನ್ನು ಅದೇ ಸ್ವ-ರಚಿತ ದೊಡ್ಡಸ್ಥಿಕೆಯ ಪ್ರತಿಬಿಂಬವನ್ನೇ ಸತತ ನೋಡುತ್ತಿರುತ್ತದೆ. ಅವರು ಮಾಡುವ ಕಾರ್ಯ ಪಾತಕವೇ ಇರಲಿ ಆಕ್ರಮಣವೇ ಆಗಲಿ, ದರೋಡೆಯೇ ಇರಲಿ...ಅದು ಏನಾದರೂ ಸರಿ; ಗುರಿ ಮುಟ್ಟಲೇ ಬೇಕು. ತಮ್ಮ ದೇಶವನ್ನು ಪ್ರಬಲ ವಿಶಾಲ ರಾಷ್ಟ್ರವನ್ನಾಗಿ ರಚಿಸುವ ಕನಸನ್ನು ಅವರು ಕಾಣುತ್ತಿದ್ದಾರೆ. ಬಲಶಾಲೀ ಚೈನಾದ ನಿರ್ಮಾಣವೇ ಅವರ ಗುರಿ. ಅದಕ್ಕಾಗಿ ಅವರೆಲ್ಲದಕ್ಕೂ ಸಿದ್ಧರಿದ್ದಾರೆ.

ತಾನು ಮಹಾರಾಜನೆಂದಾಗ ಬೇಕಾದಲ್ಲಿ ತನ್ನ ಹಿಂದುಗಡೆ 'ಜೈ' ಹಾಕುವ ಕೆಲ ರಾಜ್ಯ ಇರಬೇಕಾಗುತ್ತದೆ. ಅದಕ್ಕಾಗಿ ಚೈನಾವು ಆಫ್ರೋ—ಏಷ್ಯಾದ ರಾಷ್ಟ್ರಗಳತ್ತ ದೃಷ್ಟಿ ಹಾಯಿಸಿರುತ್ತದೆ ಅಲ್ಲಿ ಅದು ತನ್ನ ಪ್ರಭಾವವನ್ನು ಬೀರಲು ಪ್ರಯತ್ನಿಸುತ್ತಿದೆ. ಈ ದಾರಿಯಲ್ಲಿ ಚೈನಾ ಮುನ್ನಡೆಯುತ್ತಿದೆನ್ನುವದಕ್ಕೆ ಬೇಕಾದಷ್ಟು ಪುರಾವೆಗಳಿವೆ.

ಚೈನಾದ ಮಹತ್ವಾಕಾಂಕ್ಷೆಯ ಪ್ರಕಾರ ಆಫ್ರೋ—ಏಷ್ಯಾದ ಚಿಕ್ಕ ಪುಟ್ಟ ರಾಷ್ಟ್ರಗಳೆಲ್ಲವೂ ಅದರ ಆನನದತ್ತವೇ ನೋಡುತ್ತಿರಬೇಕು. ಈ ಧಮನ-ಚಕ್ರದ ಚಲನೆಗೆ ಭಾರತವು ಬಹುದೊಡ್ಡ ತಡೆ ಬಂಡೆಯಂತಿದೆ. ಸ್ವತಂತ್ರ-ಭಾರತ, ಸಾರ್ವಭೌಮತ್ವದಲ್ಲಿ ನಂಬಿಕೆ ಇರುವ ನಾಡು, ಪ್ರಜಾಧಿಪತ್ಯದಂತೆ ನಡೆಯುತ್ತಿರುವ ದೇಶ, ಸಮಾನತಾ ಸಹ-ಅಸ್ತಿತ್ವವನ್ನು ಅನುಸರಿಸುತ್ತಿರುವ ರಾಷ್ಟ್ರ, ಅಲ್ಲದೆ ಸ್ವಾತಂತ್ರ್ಯವನ್ನು ಬಯಸುತ್ತಿರುವ ರಾಷ್ಟ್ರಗಳಿಗೆ ದಾರಿ ದೀಪದಂತಿರುವ ಮಹಾನ್ ರಾಷ್ಟ್ರದತ್ತ ಚಿಕ್ಕ ಪುಟ್ಟ ರಾಷ್ಟ್ರಗಳು ಗಮನ ಹರಿಸಿ ಮುಖ್ಯತ್ವವನ್ನೀಯುವದು ಸ್ವಾಭಾವಿಕ. ಚೈನಾ ಅದೆಂತಹ ವೇಷ ಹಾಕಿಕೊಂಡರೂ ನೈಸರ್ಗಿಕ ಆಕರ್ಷಣೆ ಭಾರತದತ್ತ ಇರುವದು ಸಹಜವೇ. ಅದನ್ನೆಂತು ಮಹತ್ವಾಕಾಂಕ್ಷಿ ಚೈನಾ ಸಹಿಸಿಕೊಂಡೀತು? ಮಾವೊ ತ್ಸೆ-ಟುಂಗೆ ಮಾನವನಾಗಿರುವದಾದರೂ ಹೇಗೆ?

ಈ ಪರಿಸ್ಥಿತಿಗನುಸಾರವಾಗಿ ಚೈನಾವು ಭಾರತವನ್ನು ಭಯಂಕರ ಎದುರಾಳಿ ರಾಷ್ಟ್ರವೆಂದು ಪರಿಗಣಿಸುತ್ತದೆ. ಪ್ರಪಂಚದಲ್ಲಿ ಅತ್ಯಧಿಕ ಜನಸಂಖ್ಯೆಯುಳ್ಳ ದೇಶವೆಂದರೆ ಚೈನಾ; ಎರಡನೆಯ ರಾಷ್ಟ್ರ ಭಾರತ. ಚೈನಾದಂತೆ ಭಾರತಕ್ಕೂ ಪ್ರಾಚೀನ ಇತಿಹಾಸವಿದೆ; ಪ್ರಾಚೀನ ನಾಗರಿಕತೆ ಇದೆ. ಅಷ್ಟು ಮಾತ್ರವಲ್ಲ, ಭಾರತೀಯ ಭವ್ಯ ಸಂಸ್ಕೃತಿ ಅಖಿಲ ಜಗತ್ತಿನ ಮೇಲೆಯೇ ಬೆಳಕನ್ನು ಬೀರುತ್ತದೆ.

ಭಾರತವು ಬ್ರಿಟಿಷರನ್ನೋಡಿಸಿದ ಎರಡು ವರ್ಷಗಳಲ್ಲೇ ಮಾವೊ ತ್ಸೆ-ಟುಂಗೆಯು ಚೈನಾದಲ್ಲಿ ಅಧಿಕಾರ ಆಟ್ಟವನ್ನೇರಿದರು. ಅಂದಿನಿಂದಲೇ ಅವರು ವಿವಿಧ ಆರ್ಥಿಕ ಹಾಗೂ ಸಾಮಾಜಿಕ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಭಾರತ ತನ್ನ ವಿಶಿಷ್ಟ ಕಲಾಚಾರಕ್ಕನುಸಾರವಾಗಿ ವಿವಿಧ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದೆ. ಅದರ ಈಗಿನ ಗುರಿಯೂ ಸಮಾಜವಾದ ರೀತಿಯ ರಾಷ್ಟ್ರ ರಚನೆಯೇ ಇದೆ. ತನ್ನ ಐತಿಹಾಸಿಕ ಗೌರವದಂತೆ ಅದು ಸಹ-ಅಸ್ತಿತ್ವದಲ್ಲೇ ವಿಶ್ವಾಸವನ್ನಿಟ್ಟ ಘೋಷಣೆಯನ್ನು ಮಾಡಿರುತ್ತದೆ. ಅದನ್ನು ಸಹಿಸಿಕೊಳ್ಳಲು ಚೈನಾಕ್ಕೆ ಸಾಧ್ಯವಾಗುವದಾದರೂ ಹೇಗೆ?

ಭಾರತವು ತನ್ನ ಐತಿಹಾಸಿಕ ಗುಣಕ್ಕನುಸಾರವಾಗಿ ಎಲ್ಲರತ್ತವೂ ಸ್ನೇಹಮಯ ಹಸ್ತವನ್ನು ನೀಡಿತು. ಅದು ಭೇದಭಾವವನ್ನೆಣಿಸದೆ ಚೈನಾದತ್ತವೂ ನೀಡಿತು; ಅಲ್ಲದೆ ಚೈನಾವನ್ನು ಸ್ವತಂತ್ರ ಜಗತ್ತಿಗೆ, ಅದರಲ್ಲೂ ಆಫ್ರೋ-ಏಷ್ಯಾದ ರಾಷ್ಟ್ರಗಳಿಗೆ ಪರಿಚಯ ಮಾಡಿಸಿಕೊಟ್ಟಿತು. ತನ್ನ ಕೊನೆಯ ಗುರಿಯನ್ನು ಮುಟ್ಟುವ ಚೈನಾ ಅಂದಾಜಿಗೆ ಆದ್ಯಾವ ರೀತಿಯಲ್ಲಿ ವ್ಯತ್ಯಾಸ ಗೊತ್ತಾಗಲಿಲ್ಲ. ಬಂಡವಾಳಶಾಹಿ ಅಥವಾ ಸಮಾಜವಾದಿ, ಆಕ್ರಮಣಕಾರಿ ಅಥವಾ ಆಕ್ರಮಣಕಾರೇತರದು....ಇದರಲ್ಲಿ ವ್ಯತ್ಯಾಸವನ್ನು ಕಾಣುವ ಸ್ಥಿತಿಯಲ್ಲಿ ಚೈನಾ ಇಲ್ಲ. ಅದಕ್ಕೆ ಕಂಡು ಬಂದದ್ದು ಭಾರತದ ಒಂದೇ ಒಂದ, ಅಪೂರ್ವ ನೈಸರ್ಗಿಕ ಗುಣ. ಅದರ ಕಣ್ಣಿಗೆ ಆಕರ್ಷಕವಾಗಿ ಕಂಡು ಬಂದದ್ದು ಭಾರತದ ವಿಶಾಲ ಭೂಪ್ರದೇಶ ಹಾಗೂ ಪ್ರವರ್ಧಿಸುತ್ತಿರುವ ಪ್ರಜಾಸಂಖ್ಯೆ ಮತ್ತು ಅಖಿಲ ಜಗತ್ತು ಕಂಡುಕೊಳ್ಳುತ್ತಿರುವ ಅದರ ಆವಶ್ಯಕತೆ. ಅಧಿಕಾರ,ಬಲ ಹಾಗೂ ನೇತೃತ್ವದತ್ತ ನಿತ್ಯ ನೇತ್ರ ಹರಿಸುವ ಚೈನಾವು ಭಾರತವನ್ನು ತನ್ನ ಪ್ರಗತಿಪಥದಲ್ಲಿ ಪ್ರಬಲ ಆಹ್ವಾನವನ್ನಾಗಿ ಭಾವಿಸಿಕೊಂಡಿತು. ಮಾವೊ ಅಧಿಕಾರದ ಬೀಗದ ಕೈಯನ್ನು ಕಸಿದುಕೊಂಡಂದಿನಿಂದ ಆಕ್ರಮಣಕ್ಕೆ ಅನುದಿನವೂ ಸಿದ್ಧತೆ ನಡೆಸುತ್ತಿದ್ದರು. ಆದರೆ ಭಾರತ ಹಾಗಲ್ಲ. ಆದುದರಿಂದ ಅದು ಸೈನಿಕ ಶಕ್ತಿಯ ದೃಷ್ಟಿಯಲ್ಲಿ ನಿರ್ಬಲ ರಾಷ್ಟ್ರವಾಗುಳಿಯಿತು. ನಿರ್ಣಯಿಸಿದ್ದಂತೆ ಚೈನಾವು ಆಕ್ರಮಣದ ಅಡಿಯನ್ನು ಮುಂದಿಟ್ಟಿತು. ಅದು ಆತ್ಮಸಾಕ್ಷಿಯನ್ನು ಪರಿಗಣಿಸಲಿಲ್ಲ. ಗೌರವದ ವಿಷಯವೂ ಎದುರಾಗಲಿಲ್ಲ; ಎದುರಿಗಿರುವುದು ಒಂದೇ ಒಂದು ಗುರಿ.

ಈ ಕುಕೃತ್ಯಗಳಿಗೆ ಮಾವೊ ಎರಡು ರೀತಿಯ ವಾದಗಳನ್ನು ಮುಂದಿಡಬಹುದು. ಒಂದು, ಅನ್ಯದಲ್ಲಿ ಭಾರತದ ಮೂರ್ತಿಯನ್ನು ಛಿನ್ನ ಭಿನ್ನ ಗೊಳಿಸಿದಲ್ಲಿ ಮಾತ್ರ ತಮ್ಮ ವಿಗ್ರಹವನ್ನು ನಿಲ್ಲಿಸಲು ಸಾಧ್ಯ. ಇನ್ನೊಂದು-ಒಂದೋ ಭಾರತವು ಕಮ್ಯುನಿಸ್ಟ್ ರಾಷ್ಟ್ರಗಳ ಕರಹಿಡಿಯಬೇಕು. ಇಲ್ಲವೇ ಪಾಶ್ಚಿಮಾತ್ಯರ ಪಕ್ಷದಲ್ಲಿ ನಿಲ್ಲಬೇಕು. ಅವರ ವಾದದಂತೆ ಆಗ ಬಡುಕ್ತಿ ದೃಷ್ಟಿ ಅನ್ಯದಲ್ಲೆಲ್ಲಾ ಚೈನಾವು ಚೆನ್ನಾಗಿ ಜಯಭೇರಿಯನ್ನು ಬಾರಿಸುತ್ತಿತ್ತು. ಆಗ ಅಕ್ಕ ಪಕ್ಕದ ಚಿಕ್ಕ ಪುಟ್ಟ ರಾಷ್ಟ್ರಗಳು ಸುಲಭವಾಗಿ ಚೈನಾದ ಕಾಲ್ತುಳಿತಕ್ಕೆ ಸಿಕ್ಕಿ ಬೀಳುತ್ತಿದ್ದುವು.

ಭಾರೀ ಪ್ರಮಾಣದ ಆಕ್ರಮಣ ಹಾಗೂ ಅನಂತರದ ಒಮ್ಮುಖ ಹಿಂತಿರುಗುವಿಕೆಯಿಂದ ಚೈನಾವು ಆದ್ಯಾವ ರೀತಿಯಲ್ಲಿ ತನ್ನ ಗುರಿಯನ್ನು ಮುಟ್ಟುವ ಪಥದಲ್ಲಿ ಜಯವನ್ನು ಪಡೆದಿದೆನ್ನುವದನ್ನು ಚರಿತ್ರೆಯು ಸ್ಪಷ್ಟ ಪಡಿಸುತ್ತದೆ. ಸೈನಿಕ ದಕ್ಷತೆಯ ದೃಷ್ಟಿಯಿಂದ ಭಾರತಕ್ಕೆ ಭಾರೀ ಸೋಲಾಗಿರಬಹುದು. ಆದರೆ ತನ್ನ ದೌರ್ಜನ್ಯದಿಂದ ಭಾರತವನ್ನು ನಗೆಪಾಟಲುಗೊಳಿಸಲು ಕಮ್ಯುನಿಸ್ಟರಿಂದ ಸಾಧ್ಯವಾಗಿರುವದಿಲ್ಲ ನೈತಿಕ ನೋಟದಲ್ಲಿ, ಆಫ್ರೋ—ಏಷ್ಯಾದ ರಾಷ್ಟ್ರಗಳಲ್ಲಿ ಹೆಚ್ಚಿನವು ಭಾರತದ ಹಿಂದೆ ನಿಂತಿವೆ.

ಮಾವೊನ ಮಾನಸಿಕತೆಗೆ ಅವರು ಕೆಲ ಕಾರಣಗಳನ್ನು ಕೊಡಬಹುದು; ರಷ್ಯಾ—ಭಾರತದ ನಡುವಣ ಸೌಹಾರ್ದತೆಯನ್ನು ಚೈನಾಕ್ಕೆ ಸಹಿಸಿಕೊಳ್ಳಲಾಗಲಿಲ್ಲವೆಂಬುದೊಂದು. ರಷ್ಯಾ ಭಾರತ ಮೈತ್ರಿಯನ್ನು ಚೈನಾ ಇಚ್ಛಿಸದಿರಬಹುದು. ಭಾರತಕ್ಕೆ ಯಾಂತ್ರಿಕ ಹಾಗೂ ಆರ್ಥಿಕ ಸಹಾಯ ನಿಲ್ಲಿಸುವದಾಗಿ ರಷ್ಯಾ ಪ್ರಕಟಿಸದುದರಿಂದ ಚೈನಾಕ್ಕೆ ಹೊಟ್ಟೆ ಕಿಚ್ಚುಂಟಾಗಿದೆಂದ ಹೇಳಬಹುದು. ಈ ಸ್ನೇಹ ಸಂಬಂಧವನ್ನು ಕಡಿದೊಗೆಯಲು ಕಮ್ಯುನಿಸ್ಟ್ ಚೈನಾವು ಚೆಂಗನೆ ಹಿಮಾಲಯದ ಮೇಲೆ ಹಾರುತ್ತದೆ

ತಾವು ನಡೆಸುವ ಆಕ್ರಮಣದಿಂದಾಗಿ ಭಾರತವು ರಷ್ಯ ಸಹಾಯಕ್ಕೆ ಅತ್ತ ಇತ್ತ ಧಾವಿಸಬಹುದು ಆಗ ಅದು, ಬಾಯಿಯಲ್ಲಿ ಸಮ-ಮನೋಭಾವನೆಯ ಮಾತನಾಡುತ್ತಿದೆಯಾದರೂ ಸಹಾಯಕ್ಕಾಗಿ ಬಂಡವಾಳಶಾಹಿ ರಾಷ್ಟ್ರಗಳತ್ತ ದೈನ್ಯದ ದೃಷ್ಟಿ ಬೀರುತ್ತದೆ. ಆಗ ಪೇಕಿಂಗಿಗೆ ಒಂದು ಉತ್ತಮ ಸಂದರ್ಭ ಸಿಗುತ್ತದೆ—ಅದು ರಷ್ಯಾದತ್ತ ಕೈತೋರಿಸಿ ಕರೆದು, ಇದೋ ನಿನ್ನ ಪ್ರೀತಿಯ ಸಮ-ಮನೋಭಾವನೆಯ 'ಬಾಯಿ' ಭಾರತವಲ್ಲಿದೆಂದು ನೋಡು... ಈ ರೀತಿ ಹೇಳಬಹುದೆಂದು ಚೈನಾ ಭಾವಿಸಿಕೊಂಡಿತ್ತು. ಆದರೆ ಈ ಎಲ್ಲಾ ಲೆಕ್ಕಾಚಾರವು ತಲೆ ಕೆಳಗಾಯಿತು. ಈಗ ಚೈನಾವು ಪ್ರತ್ಯೇಕ ದೇಶವಾಗಿ ಬಿಟ್ಟಿದೆ. ಆಲ್ಬೇನಿಯಾ ಹಾಗೂ ಉತ್ತರ ಕೊರಿಯಾಗಳಲ್ಲದೆ ಆದ್ಯಾವ ಕಮ್ಯುನಿಸ್ಟ್ ರಾಷ್ಟ್ರವೂ ತನ್ನ ಬೆನ್ನು ತಟ್ಟಲು ಬಾರದಿಲ್ಲವೆಂಬುದು ಚೈನಾಕ್ಕೆ ಚೆನ್ನಾಗಿ ತಿಳಿಯುವಂತಾಗಿದೆ.

ಇನ್ನೊಂದು ಮುಖ್ಯ ವಿಷಯವೆಂದರೆ ಮಾವೊನ ಅಮಾನುಷ ದುಷ್ಕೃತ್ಯಗಳಿಂದಾಗಿ ಅಲ್ಲಿ ಆಂತರಿಕ ಕಲಹದ ಕತ್ತಿ ಮಸೆಯಲಾರಂಭವಾಗಿದೆ. ಅದರ ಹರಿತವನ್ನು ಕಮ್ಮಿಗೊಳಿಸಲು ಮಾವನಿಗೆ ಉಪಾಯ ಹುಡುಕ ಬೇಕಾಗಿತ್ತು. ಆದಕ್ಕಾಗಿ ಅವರು ಹುಲ್ಲು-ಮುಳ್ಳು ಬೆಳೆಯದ ಹಿಮಾಲಯ ಪ್ರದೇಶದತ್ತ ಗಮನ ಹರಿಸಿದವರು. ಖಾದ್ಯಾನ್ನ ಹಾಗೂ ಪ್ರಗತಿಪರ ಭಾರತದತ್ತ, ಕ್ರಾಂತಿಕಾರರಿಗೆ ಕೈ ತೋರಿಸಲು ಅವರು ಇಚ್ಛಿಸಿದ್ದರು.

ಇತ್ತೀಚಿನ ಘಟನೆಗಳಿಂದ ಮಾವನ ಆಲೋಚನೆಗಳ ಬುಡ ಅಲ್ಲಾಡಿರುವದು ಸ್ಪಷ್ಟವಾಗಿ ಗೊತ್ತಾಗುತ್ತದೆ. ನಿರ್ಬಲ ಹಾಗೂ ನಿಂಗದನಾ ಮನೋಭಾವನೆಯವರುಳ್ಳ ಅಲ್ಲದೆ, ನನ್ನ ಆಗಮನವನ್ನು ಆಮಂತ್ರಿಸಲು ಪಂಚಮದಳವನ್ನಿರುವ ಭಾರತದಲ್ಲಿ ತನಗೆ ಜಯ ಕಟ್ಟಿಟ್ಟಿದ್ದೆಂದು ಅವರು ಕಾಣುತ್ತಿದ್ದ ಗಾಳಿಗೋಪುರ ಇಂದು ಇಲ್ಲವಾಗಿದೆ.

ಚೈನಾ ಮುಂದೇನು ಮಾಡೀತು? ಅದರ ಉತ್ತರಕ್ಕೆ ಜಗತ್ತು ಬಹಳ ದಿನ ಕಾದು ನೋಡಬೇಕಾಗಿಲ್ಲವೆಂದು ಶ್ರೀ ರಾಜಹಂಸರು 'ದಿ ಹಿಂದೂ'ವಿನಲ್ಲಿ ಲೇಖನದ ಮೂಲಕ ಸ್ಪಷ್ಟವಾಗಿ ಸೂಚಿಸಿರುವರು.

ಶ್ರೀ ರಾಜಹಂಸರು ಸೂಚಿಸಿರುವ 'ಪಂಚಮದಳ'ಕ್ಕೆ ಉದಾಹರಣೆಗಾಗಿ ಇತ್ತೀಚಿನ ಘಟನೆಗಳು ನಮ್ಮ ಕಣ್ಣೆದುರೇ ಬಂದು ನಿಲ್ಲುತ್ತವೆ

ಸಪ್ಟಂಬರ ಹದಿಮೂರರಂದು ದೇಶದ ನಾನಾ ಭಾಗಗಳಿಂದ ಪೂರ್ವ ಯೋಜಿತವಾಗಿ ಕೂಡಿರುವ ಹಂಚಿಕೆಯಿಂದ ಸಾವಿರಾರು ಜನರು ಕಮ್ಯುನಿಸ್ಟರ ಮಾತಿಗೆ ಬಲಿಯಾಗಿ ಬಂದು ಪ್ರಜಾಪ್ರತಿನಿಧಿ ಸಭಾಭವನದ ಬಳಿ ಸಿಕ್ಕಿ ಬಿದ್ದರು. ಕಮ್ಯುನಿಸ್ಟರ ಕಾರಸ್ಥಾನ ಅವರಿಗೆ ತಿಳಿದಿರಲಿಕ್ಕಿಲ್ಲ. ಊಟ-ಉಡಿಗೆ, ಬೆಲೆ ಕಮ್ಮಿಗೊಳಿಸುವದು, ಕಡ್ಡಾಯ ಉಳಿತಾಯ ಕಾನೂನಿನ ರದ್ದು, ಬಂಗಾರ ಬಂದಿ ಮುಂತಾದ ನಾಟಕೀಯ ಆಕರ್ಷಕ ಘೋಷಣೆಗಳನ್ನು ಹಾಕಿ ಜನರನ್ನು ಉಪಾಯದಿಂದ ಸೇರಿಸಿ ಅಲ್ಲಿ ಕಮ್ಯುನಿಸ್ಟ್ ಚಿಹ್ನೆಗಳನ್ನು ಹಾರಿಸಿದರು. ಒಡನೆ ಚೈನಿ ಕಮ್ಯುನಿಸ್ಟ್ ದೂತಾವಾಸದ ವಾಹನ ಬಂದು ಅಲ್ಲಿನ ಭಾವಚಿತ್ರಗಳನ್ನು ತೆಗೆದುಕೊಂಡು ಸ್ವಸ್ಥಾನಕ್ಕೆ ತೆರಳಿತು. ಚೈನಾಕ್ಕೆ ಪರರಾಷ್ಟ್ರಗಳಲ್ಲಿ ಪ್ರಚಾರಕ್ಕೆ ಇದೊಂದು ಉತ್ತಮ ಸಾಧನ. ಅನಂತರ ಅಲ್ಲಿ ಈ ಕಮ್ಯುನಿಸ್ಟ್ ಪಡೆ ದ್ರೋಹಿಗಳು ಮಾಡಿದ್ದಾದರೂ ಏನು?

(೬ನೇ ಪುಟ ನೋಡಿರಿ)

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಆವಶ್ಯಕತೆಗಳಿಗೆ........
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ

1—1—1963ರಿಂದ ಠೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ

ನಿಮ್ಮ ಉಳಿತಾಯವು ಸೇವಿಂಗ್, ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸಿರಿ.
ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯವಿಟ್ಟು ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

NAVAYUGA

Kannada Weekly

UDIPI

Founder:

Late Sri A. B. Shetty

Former Minister for Public Health, Govt. of Madras & Govt. of Mysore.

ನವಯುಗ

ವರುಷ	ಉಡುಪಿ	ವಾರ
೪೩	೨೬-೯-೧೯೬೩	೪

ಜನಾಭಿಪ್ರಾಯಕ್ಕೆ ಬೆಲೆ

ಪ್ರಜಾಪ್ರಭುತ್ವದಲ್ಲಿ ಪ್ರಜಾಭಿಪ್ರಾಯವು ಮನ್ನಿಸಲ್ಪಡಬೇಕು. ಪ್ರಜಾಜನರ ಸಂಕಷ್ಟಗಳನ್ನು ಸರಕಾರ ಅರಿತುಕೊಂಡು ಅವನ್ನು ದೂರವಿರಿಸುವ ಕ್ರಮಗಳನ್ನು ಕೈಗೊಳ್ಳಬೇಕು. ಯಾವುದೇ ಒಂದು ನಿಯಮ ಅಥವಾ ಶಾಸನವು ಜನತೆಗೆ ಬೇಡವೆಂದಾದಲ್ಲಿ ಅದನ್ನು ಸರಕಾರವು ಹಿಂತೆಗೆದುಕೊಳ್ಳಬೇಕಾಗುತ್ತದೆ. ಭಾರತವು ಜನತಂತ್ರ ವ್ಯವಸ್ಥೆಯಲ್ಲಿ ಜನತೆಯ ಅಭಿಪ್ರಾಯವನ್ನು ಸರಕಾರವು ಹೇಗೆ ಸ್ವೀಕರಿಸುತ್ತದೆಯೆಂಬುದಕ್ಕೆ ಚಿನ್ನ ನಿಯಂತ್ರಣ ಆಜ್ಞೆ ಮತ್ತು ಖಡ್ಡಾಯ ರೇವಣಾತಿ ಯೋಜನೆಗಳಲ್ಲಿ ಘೋಷಿಸಲಾದ ತಿದ್ದುಪಡಿಗಳೇ ಜ್ವಲಂತ ನಿದರ್ಶನ. ಜನತೆಯಲ್ಲಿ ಚಿನ್ನಾಭರಣಗಳ ಮೋಹವನ್ನು ಹ್ರಾಸಗೊಳಿಸುವುದು ಮತ್ತು ಬಂಗಾರದ ಕಳ್ಳ ಪೇಟೆಯನ್ನು ನಿಲ್ಲಿಸುವುದು ಸರಕಾರಕ್ಕೆ ಬೇಕಿತ್ತು. ಮತ್ತದು ಇದಕ್ಕಾಗಿ ಚಿನ್ನ ನಿಯಂತ್ರಣ ಆಜ್ಞೆಯನ್ನು ತಂದಿತು. ಇದರಿಂದ ಉಂಟಾಗುವ ಹಲವು ಸಮಸ್ಯೆಗಳ ಮನವರಿಕೆ ಸರಕಾರಕ್ಕಿದ್ದು, ಅದು ಆ ವಿಷಯದಲ್ಲಿ ಕೆಲವೊಂದು ಕ್ರಮಗಳನ್ನು ಕೈಗೊಳ್ಳಲೂ ನಿರ್ಧರಿಸಿತ್ತು. ಆದರೆ, ನಿರುದ್ಯೋಗಿಗಳಾದ ಅಕ್ಕಸಾಲಿಗರ ಪುನರ್ನಿವೇಶನವು ನಿರೀಕ್ಷಿತ ಪ್ರಮಾಣದಲ್ಲಿ ಯಶಸ್ವಿಯಾಗಲಿಲ್ಲ. ಇದರಿಂದಾಗಿ, ಕೆಲವಾರು ಅಕ್ಕಸಾಲಿಗರು ಆತ್ಮಹತ್ಯೆ ಮಾಡಿಕೊಂಡದ್ದು; ಇನ್ನು ಹಲವರು ಮತ ಪ್ರದರ್ಶನಾದಿಗಳಲ್ಲಿ ತೊಡಗಿದ್ದು, ಮತ್ತೆ ಕೆಲವರು ನಿರುದ್ಯೋಗಿಗಳಾಗಿ ಬನ್ನವಡುತ್ತಿರುವುದು ಎಲ್ಲರಿಗೂ ತಿಳಿದ ಸಂಗತಿ. ಇದು ಮಾತ್ರವಲ್ಲ, ಕಳ್ಳ ಚಿನ್ನವನ್ನು ತಡೆಹಿಡಿಯುವಲ್ಲಿಯೂ ಸರಕಾರಕ್ಕೆ ಸಂಪೂರ್ಣ ಯಶಸ್ಸು ದೊರೆಯಲಿಲ್ಲ; ಜನತೆಯಲ್ಲಿ ಆಭರಣದ ಮೋಹವೂ ಕಡಿಮೆಯಾಗಲಿಲ್ಲ. ಹಾಗಿರುವಾಗ, ನಿಯಂತ್ರಣಾಜ್ಞೆಯ ಮೂಲೋದ್ದೇಶಗಳಿಗೆ ಚ್ಯುತಿಯೊದಗದಂತೆ, ಅವನ್ನು ತೀವ್ರವಾಗಿ ಕಾರ್ಯಾಚರಣೆಗಿಳಿಸುವ ಉಗ್ರ ನೀತಿಯ ಬದಲು ತುಸು ಸೌಮ್ಯ ನೀತಿಯನ್ನೀಗ ಸರಕಾರ ಕೈಗೊಂಡಿದೆ. ನಿಧಾನವಾಗಿಯಾದರೂ ಈ ಆಜ್ಞೆಯು ಹೊಂದಿರುವ ಉದ್ದೇಶಗಳನ್ನು ಸಾಧಿಸುವ ಆಶೆಯನ್ನದು ಇಟ್ಟುಕೊಂಡಿದೆ.

ಇದೀಗ ಮಾಡಲಾದ ತಿದ್ದುಪಡಿಯಿಂದ ನಿಯಂತ್ರಣಾಜ್ಞೆಯ ತಲೆ ಕೆಳಗಾಗುವುದಿಲ್ಲ. ೧೪ ಕ್ಯಾರೆಟ್ಟಿನ ಬಂಗಾರವನ್ನಿನ್ನು ಲೈಸನ್ಸ್ ಪಡೆದ ಅಕ್ಕಸಾಲಿಗರಲ್ಲಿರೂ ತಮ್ಮಲ್ಲಿಟ್ಟುಕೊಳ್ಳಬಹುದು. ಹಳೆಯ ಆಭರಣಗಳನ್ನು ಕರಗಿಸಿ ಅವುಗಳಷ್ಟೇ ಬಣ್ಣದ ಹೊಸವನ್ನು ಮಾಡಿಸಬಹುದು. ಆದರೆ, ಶುದ್ಧ ಚಿನ್ನದ ಮೇಲೆ ಸಂಪೂರ್ಣ ಹತೋಟಿಯನ್ನು ಸರಕಾರವೇ ಇಟ್ಟುಕೊಳ್ಳುವುದು. ಆಗ, ಜನತೆಯು ಸದ್ಯ ತನ್ನಲ್ಲಿರುವ ಆಭರಣಗಳನ್ನು ಕರಗಿಸಿಕೊಂಡು ಹೊಸ ಆಭರಣಗಳನ್ನು ತಯಾರಿಸಲು ಮುಂದಾಗಬಹುದು; ಮತ್ತು ಹೀಗಾದರೆ, ಅಕ್ಕಸಾಲಿಗರಿಗೆ ಸ್ವಲ್ಪ ಮಟ್ಟಿನ ಉದ್ಯೋಗವು ಸಿಗುವುದು. ಆದರೆ, ಶುದ್ಧ ಚಿನ್ನದ ಮಾರಾಟವಾಗದಂತೆ ಭಗೀರಥ ಪ್ರಯತ್ನವನ್ನು ಸರಕಾರ ಕೈಗೊಳ್ಳದೆ ಹೋದರೆ, ಈಗ ದೊರೆತ ಸೌಲಭ್ಯದ ದುರುಪಯೋಗವಾಗುವ ಸಂದರ್ಭಗಳೇ ಹೆಚ್ಚೆಂದು ಅನಿವಾರ್ಯವಾಗಿ ಹೇಳಲೇಬೇಕಾಗುತ್ತದೆ. ಚಿನ್ನದ ಅಧಿಕಾರಿಗಳನ್ನು ನೇಮಿಸಿದ ಬಳಿಕ ನಿಯಂತ್ರಣ ಮಂಡಳಿಯು ರದ್ದಾಗುವುದರಿಂದ ನೇಮಿತರಾಗುವ ಅಧಿಕಾರಿಗಳು ಪ್ರಾಮಾಣಿಕರಿರುವಂತೆ ನೋಡಿಕೊಳ್ಳುವುದು ಅಗತ್ಯವೆನಿಸುತ್ತದೆ. ಚಿನ್ನವೆಂಬುದು ಮಾನವನು ತಿಳಿದಿರುವಷ್ಟು ಮೋಹಕವಾದ ಪದಾರ್ಥವಲ್ಲವೆಂಬುದನ್ನೂ ಅದು ಮೃತ ಭಂಡವಾಳವೆಂಬುದನ್ನೂ ಜನತೆಗೆ ತಿಳಿಸಿ ಹೇಳಬೇಕಾಗಿದೆ. ಆಭರಣಗಳಲ್ಲಿ ಧನವನ್ನು ತೊಡಗಿಸುವುದು ಚಂಚಲೆಯಾದ ಲಕ್ಷ್ಮಿಯನ್ನು ಬಂಧಿಸಲು ಪ್ರಯತ್ನಿಸಿದಂತೆ. ಆದರೆ, ಲಕ್ಷ್ಮಿಯು ಯಾರೊಬ್ಬರ ಬಂಧನದಲ್ಲೂ ಬಹುಕಾಲ ನಿಲ್ಲುವವಳಲ್ಲವೆಂಬುದನ್ನು ನಾವು ಮನವರಿಕೆಮಾಡಿಕೊಳ್ಳಬೇಕು. ಸರಕಾರವು ಸದ್ಯ ನೀಡಿದ ಸೌಲಭ್ಯವು ಕೇವಲ ತಾತ್ಕಾಲಿಕವಾಗಿವೆಯೆಂದು ಹೇಳಬೇಕಾಗುತ್ತದೆ. ಜನ ಮನವು ತನಗನುಕೂಲವಾದಾಗ ಮರಳಿ ಈ ಸಂಬಂಧದ ಕ್ರಾಂತಿಕಾರಿ ಶಾಸನ ಮಾಡಿದರೂ ಅದು ಸ್ವಾಗತಾರ್ಹವಾಗಬಹುದು.

ಸಾಕಷ್ಟು ವಿರೋಧವನ್ನು ಸರ್ವತ್ರ ಎದುರಿಸಬೇಕಾದ ಶಾಸನವೆಂದರೆ, ಖಡ್ಡಾಯ ಉಳಿತಾಯ ಯೋಜನೆ. ಈ ಯೋಜನೆಯನ್ನು ಮೊದಲೇ ಕೆಲವೊಂದು ಅಪವಾದ ನಿಯಮಗಳಿಂದ ಸಡಿಲುಗೊಳಿಸಲಾಗಿತ್ತು. ಆದರೆ, ಇದೀಗ ಅದನ್ನು ಆದಾಯಕರ ತೆರುವವರ ಮಟ್ಟಿಗೆ ಮಾತ್ರ ಇರಗೊಳಿಸಲಾಗಿದೆ. ಇದರಿಂದ ಉಂಟಾಗುವ ಕೊರತೆಯನ್ನು ಚಿಕ್ಕ ಉಳಿತಾಯ ಯೋಜನೆಯನ್ನು ಮತ್ತಷ್ಟು ಜನಪ್ರಿಯಗೊಳಿಸಿ ತುಂಬಿಸುವ ಆಶಯವನ್ನು ಸರಕಾರವು ಇಟ್ಟುಕೊಂಡಿದೆ. ಇತರೆಲ್ಲ ವರ್ಗಗಳಿಗೂ ಅನ್ವಯಿಸದೆ ಕೇವಲ ಆದಾಯಕರ ತೆರುವವರ ವಿಷಯದಲ್ಲಿ ಮಾತ್ರ ಇದನ್ನು ಇರಗೊಟ್ಟುದು ಏಕೆಂದು ಅರ್ಥವಾಗುವುದಿಲ್ಲ. ಒಂದು ಬಾರಿ ತೊಡಗಿದ ಕಾಯಿದೆಯನ್ನು ಸಂಪೂರ್ಣವಾಗಿ ಮರಳಿ ಪಡೆದುಕೊಳ್ಳುವುದು ಸತ್ ಸಂಪ್ರದಾಯವಲ್ಲವೆಂಬುದು ಸರಕಾರದ ವಿಚಾರವಾದರೆ ಅದನ್ನು ಒಪ್ಪುವುದು ಸಾಧ್ಯವಿಲ್ಲ. ಮಾರಾಟಕರ ತೆರುವವರಿಗೆ ಅನ್ವಯಿಸದ ಈ ಕಾನೂನು ಆದಾಯಕರ ತೆರುವವರಿಗೆ ಮಾತ್ರ ಏಕೆ ಅನ್ವಯಿಸಬೇಕೋ ತಿಳಿಯುವುದಿಲ್ಲ. ಸರ್ವಸಾಮಾನ್ಯವಾಗಿ ಹೇಳುವುದಾದರೆ, ಈ ವರ್ಗಕ್ಕೆ ಸೇರಿದವರು ಸುಶಿಕ್ಷಿತರೇ ಇರುತ್ತಾರೆ. ಅವರಿಗೆ ಉಳಿತಾಯ ಪ್ರವೃತ್ತಿಯ ಬಗ್ಗೆ ಪಾಠ ಹೇಳಿಕೊಡಬೇಕಾದ ಅಗತ್ಯವಿರುವುದಿಲ್ಲ. ಆದುದರಿಂದ ಶಾಸನವನ್ನು ತಿದ್ದುವ ಕಾಲದಲ್ಲಿ ಉಳಿದೆಲ್ಲರಿಗೂ ಅನ್ವಯಿಸದಂತೆ ತಿದ್ದುಪಡಿ ಮಾಡಿದ ಸರಕಾರ ಇನ್ನೂ ಸ್ವಲ್ಪ ಉದಾರತೆ ತೋರಿಸಿ, ಖಡ್ಡಾಯ ಉಳಿತಾಯವನ್ನು ಹಿಂತೆಗೆದುಕೊಂಡು ಸ್ವೇಚ್ಛೆಯ ಉಳಿತಾಯಕ್ಕೆ ಪ್ರೋತ್ಸಾಹ ಕೊಟ್ಟರೆ, ಅದು ತಪ್ಪಾಗಲಾರದು, ನಷ್ಟವೂ ಆಗಲಿಕ್ಕಿಲ್ಲ.

ಶ್ರೀ ಕೃಷ್ಣಮಾಚಾರಿಯವರು ಅರ್ಥಖಾತೆಯನ್ನು ವಹಿಸಿಕೊಳ್ಳುವಾಗಲೇ ಜನಾಭಿಪ್ರಾಯವು ಸರಕಾರಕ್ಕೆ ಮನವರಿಕೆಯಾಗಿತ್ತು. ಆದರೆ, ಮುರಾರ್ಜಿಯವರು ದೃಢ ನಿಲುಮೆಯಿಂದ ವಿಚಲಿತರಾಗಲಿಲ್ಲ. ಆಯ ವ್ಯಯಗಳ ಎರಡು ಬಾಯಿಗಳನ್ನು ಒಂದುಗೂಡಿಸುವುದೂ ಬಹು ಚಾಣಾಕ್ಷತೆ. ಟಿ. ಟಿ. ಕೆ. ಯವರು ತಮ್ಮ ಪೂರ್ವಾಧಿಕಾರಿಗಳ ನೀತಿಯಲ್ಲಿ ಬದಲಾವಣೆ ಮಾಡಿದರು ಎಂದರೆ ಅದು ತಪ್ಪು. ಸರಕಾರದ ನೀತಿಯು ಸಂಬಂಧಿತ ಮಂತ್ರಿಯೊಬ್ಬನ ಅಭಿಮತವಲ್ಲ; ಇಡಿಯ ಸಂಪುಟದ ಅಭಿಪ್ರಾಯ. ಅನುಭವದಿಂದ ಈ ತಿದ್ದುಪಡಿಗಳು ಅಗತ್ಯವಾಗಿ ಕಂಡು ಬಂದುದರಿಂದ ಅವನ್ನು ಮಾಡಲಾಯಿತಷ್ಟೆ. ಇನ್ನೊಂದು ವಿಚಾರವನ್ನು ನಾವು ಮರೆಯಬಾರದು. ಈಗ ಘೋಷಿಸಲಾದ ತಿದ್ದುಪಡಿಗಳು ಸರಕಾರದ ಸೋಲನ್ನು ತೋರಿಸುವುದಿಲ್ಲ; ಆದರ ಅಪಯಶಸ್ಸನ್ನು ಸಾರುವುದಿಲ್ಲ. ಬದಲು ಭಾರತದಲ್ಲಿ ಜನಾಭಿಪ್ರಾಯಕ್ಕಿರುವ ಮಾನ್ಯತೆಯೆಷ್ಟೆಂಬುದನ್ನು ಸಾರುತ್ತದೆ. ಪ್ರಜಾಸತ್ತೆಯಲ್ಲಿ ತನಗೆ ಬೇಕಾದಂತಹ ಶಾಸನಗಳನ್ನು ನಿರ್ಮಿಸುವ ಹಾಗೂ ಬೇಡವಾದುದನ್ನು ಕಿತ್ತು ಹಾಕುವ ಅಧಿಕಾರ ಪ್ರಜೆಗಳ ಕೈಗಳಲ್ಲಿದೆ. ಎಂತಲೇ ಅದು ತಾನು ಬಯಸುವಂತಹ ಸರಕಾರವನ್ನು ನಿರ್ಮಿಸಬಲ್ಲುದು. ಸದ್ಯ ಟಿ. ಟಿ. ಕೆ. ಯವರ ಘೋಷಣೆಯಿಂದ ಸರಕಾರದ ಮೇಲೆ ಜನತೆಯ ಭರವಸೆ ಅಧಿಕವಾಗುವಂತಾಯಿತು.

ಮುರಾರ್ಜಿಯ ಮರ್ಜಿ

ಕೇಂದ್ರದ ಮಾಜಿ ಅರ್ಥಮಂತ್ರಿ ಮುರಾರ್ಜಿ ಭಾಯಿಯವರು ಲೋಕ ಸಭಾ ಸದಸ್ಯರಾಗಿ ಉಳಿದಿರುವರಾದರೂ ಅವರು ಮಂತ್ರಿತನದಿಂದ ಮುಕ್ತರಾದ ಬಳಿಕ ಒಂದು ದಿನವೂ ಸಭೆಗೆ ಹಾಜರಾಗಲಿಲ್ಲ. ಅವರು ಸಭೆಗೆ ಬರುವುದು ಅಥವಾ ಬಿಡುವುದು ಪರ್ವತದಂತಹ ವಿಷಯವಲ್ಲ; ಆದರೆ, ಅವರ ಗೈರುಹಾಜರಿಯ ಸಂಬಂಧದಲ್ಲಿ ನಡೆದ ಊಹಾಪೋಹಗಳು ಮಾತ್ರ ನಿಜಕ್ಕೂ ಗಂಡಾಂತರಕಾರಿ. ಕಾಮರಾಜ ಸೂತ್ರವನ್ನು ಜ್ಯಾರಿಗೆ ತಂದುದರಿಂದ ಆಡಳಿತದ ಮೇಲೆ ದುಷ್ಪ್ರಭಾವವು ಬೀಳುವುದೆಂದು ಮಾಜಿ ಆಹಾರ ಸಚಿವ ಎಸ್. ಕೆ. ಪಾಟೀಲರು ಒಂದೆಡೆ ಹೇಳಿದ್ದಾರೆ. ಅದಕ್ಕಿಂತ ಹೆಚ್ಚಿನ ಮಾತುಗಳನ್ನು ಅವರೂ ಹೇಳಲಿಲ್ಲ; ಬೇರೆ ಯಾರೂ ತುಟಿ ಬಿಚ್ಚಲಿಲ್ಲ. ಮುರಾರ್ಜಿಯವರು ಮಾತ್ರ ಕಾಮರಾಜ ಸೂತ್ರದಲ್ಲಿ ತನಗೆ ವಿಶ್ವಾಸವಿಲ್ಲವೆಂಬುದನ್ನು ಪ್ರಧಾನ ಮಂತ್ರಿಯವರಿಗೆ ಸ್ಪಷ್ಟವಾಗಿ ಹೇಳಿದ್ದರೆಂದೀಗ ಗೊತ್ತಾಗಿದೆ. ಮತ್ತೀಗ, ಈ ಸೂತ್ರವು ಯಶಸ್ವಿಯಾಗದಂತೆ ನೋಡಿಕೊಳ್ಳುವುದರಲ್ಲಿ ಮಿತಿಮೀರಿ ಆಸಕ್ತಿ ವಹಿಸುತಿದ್ದಾರಂತೆ. ಇದು ನಿಜವಾದರೂ ಅದರಲ್ಲಿ ಅತಿಶಯೋಕ್ತಿಯಿಲ್ಲ. ಮುರಾರ್ಜಿಯವರು ಅಧಿಕಾರದಲ್ಲಿ ಉಳಿದುಕೊಂಡೂ ಪಕ್ಷವನ್ನು ಸಂಘಟಿಸಲು ಸಮರ್ಥರು; ಕೆಚ್ಚೆದೆಯವರು; ಯಾರ ಮಾತಿಗೂ ಸುಲಭದಲ್ಲಿ ಮಣಿಯುವವರಲ್ಲ. ಇದರ ಮೇಲೆ, ಅವರು ಇಟ್ಟುಗೊಂಡಿದ್ದ ಆಸೆಯಾದರೂ ದೊಡ್ಡದೇ. ನೆಹರೂರವರು ಪಕ್ಷದ ನಾಯಕನಾಗಿರುವಾಗ, 'ಉಪನಾಯಕ'ನ ಪಟ್ಟದ ಕುರಿತಾಗಿ ನಡೆದ ವಾದ ವಿವಾದಗಳಿಗೆ ಕಾರಣರೂ ಇವರೇ. ಅದರ ಪರಿಣಾಮವಾಗಿಯೋ ಎಂಬಂತೆ ಈ ಸ್ಥಾನವು ತನ್ನ ಮೊದಲಿದ್ದ ಗೌರವ-ಘನತೆಗಳನ್ನು ಕಳೆದುಕೊಂಡಿತು. ವಿದೇಶಗಳಲ್ಲಿ ನೆಹರೂರವರ ಉತ್ತರಾಧಿಕಾರಿಗಳೆಂದು ಸಂಭಾವಿತರಾದವರು ಮುರಾರ್ಜಿ. ಮೆನನ್ನರು ಮಂತ್ರಿ ಮಂಡಳಿಯಿಂದ ನಿರ್ಗಮಿಸಿದ ಬಳಿಕ ತನ್ನ ದಾರಿಯನ್ನು ತುಸು ಪ್ರಶಸ್ತಗೊಳಿಸುತ್ತಲೇ ಇವರು ಬಂದಿದ್ದರು. ಆದರೆ, ಕಾಮರಾಜ ಸೂತ್ರವು ಬಂಧಿಸಿದ ಹಿರಿಯರಲ್ಲಿ ಇವರೇ ಮೊದಲಿಗರಾಗಬೇಕಾಯಿತು. ದೇಸಾಯಿ ಮತ್ತು ಪಾಟೀಲರಿಬ್ಬರಲ್ಲೂ ವಿಚಾರ ಸಾಮ್ಯತೆ ತುಂಬ ಇದೆ. ಗಂಡಾಂತರ ಪರಿಸ್ಥಿತಿಯಲ್ಲಿಯೂ ಗುರುತರ ಹೊಣೆಯಿರುವ ತಂತಮ್ಮ ಖಾತೆಗಳನ್ನು ಸುಯೋಗ್ಯವಾಗಿ ನಿರ್ವಹಿಸಿ ಜನರನ್ನು ಮೆಚ್ಚಿಸಿ ಬಿಡಬೇಕೆಂಬ ಆಕಾಂಕ್ಷೆಯೂ ಅವರಲ್ಲಿತ್ತು. ಪ್ರಾಯಃ ತನ್ನ ನಿರೀಕ್ಷೆಗಳು ಹುಸಿಯಾದುದರಿಂದ ಮುರಾರ್ಜಿಯಲ್ಲಿ ಅನಾಸಕ್ತಿ ಮೂಡಿರಲೂಬಹುದು. ಪ್ರತೀಕಾರವೆಸಗುವ ಪರಪ್ರವೃತ್ತಿಗಳಿಗೆ ಮುರಾರ್ಜಿ ಖಂಡಿತಕ್ಕೂ ಇಳಿಯಬಾರದು; ಇಳಿಯಲಾರರು.

ನವರಾತ್ರಿ ಪೂಜಾ ನಿರ್ಣಯ

ನವರಾತ್ರಿ ಪೂಜಾ ಆಚರಣೆಯ ವಿಷಯದಲ್ಲಿ ಪಂಚಾಂಗ ಕರ್ತರಲ್ಲಿ ಎರಡು ಅಭಿಪ್ರಾಯಗಳು ಬಂದ ಪ್ರಯುಕ್ತ ಈ ಸಂಶಯ ನಿವಾರಣಾರ್ಥವಾಗಿ ಮಂಗಳೂರು ಶ್ರೀ ಕಾಳಿಕಾಂಬಾ-ವಿಶ್ವಕರ್ಮೇಶ್ವರ ದೇವಳದ ಧರ್ಮಾಧಿಕಾರಿಗಳು ಘನವಿದ್ವಾಂಸರಾದ ಪೂನೆಯ ಶ್ರೀ ವಿದ್ಯಾಭೂಷಣ ಪದ್ಮಾಕರ ಶಾಸ್ತ್ರಿಬಾಳ ಶಾಸ್ತ್ರಿಗಳವರನ್ನು ವಿನಂತಿಸಿಕೊಳ್ಳಲಾಗಿ, ಶ್ರೀಯುತರು ಕೆಲವೊಂದು ಪಂಚಾಂಗ ಕರ್ತರು "ಸಂಸರ್ಪ" ಆಶ್ವೀಜವೆಂದು ಪ್ರಕಟಿಸಿದ ನಿಮಿತ್ತದಿಂದ ನವರಾತ್ರಿ ಪೂಜೆಯನ್ನು ಒಂದು ತಿಂಗಳ ನಂತರ ಆಚರಿಸುವುದು ಶಾಸ್ತ್ರವಿರುದ್ಧವೆಂತ ಆದೇಶವಿತ್ತ ಮೇರೆಗೆ ಶ್ರೀ ಸನ್ನಿಧಿಯಿಂದ ತಲುಪಿದ ಆಜ್ಞಾನುಸಾರವಾಗಿ "ಶ್ರೀ ವಿಶ್ವ ಬ್ರಾಹ್ಮಣ ಸಮಾಜಾಭ್ಯುದಯ ಸಭಾ, ಉಡುಪಿ" ಇದರ ಆಡಳಿತಾ ಮಂಡಳಿಯ ಸಭೆಯೊಂದು ತಾ. 15-9-63ರಂದು ಶ್ರೀ ಎಚ್. ವೆಂಕಟರಮಣಾಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಈ ವರ್ಷದ ನವರಾತ್ರಿ ಪೂಜೆಯನ್ನು ಇದೇ ಆಶ್ವೀಜ ಶು ೧, ತಾ. 19-9-63 ಮೊದಲ್ಗೊಂಡು ಆಚರಿಸತಕ್ಕದೆಂತಲೂ, ನವರಾತ್ರಿ ಪೂಜೆಯ ನಾಂದಿಯಾಗಿ ಮಹಾಲಯ ಅಮಾವಾಸ್ಯಾದಿನ ಶ್ರೀ ವಿಶ್ವಕರ್ಮ ಪೂಜೆಯನ್ನು ಸಾಮೂಹಿಕವಾಗಿ ವರ್ಷಂಪ್ರತಿ ಭಕ್ತಿಪೂರ್ವಕವಾಗಿ ಜರಗಿಸತಕ್ಕದ್ದೆಂತಲೂ ನಿರ್ಣಯಿಸಲಾಯಿತು.

ವಿನಂತಿ

ಇನ್ನೂ ಚಂದಾ ಹಣವನ್ನು ಕಳುಹಿಸಿಕೊಡದಿರುವ ನಮ್ಮ ಚಂದಾದಾರರಿಗೆ ಮುಂದಿನ ಸಂಚಿಕೆಯನ್ನು ಅನಿವಾರ್ಯವಾಗಿ ವಿ. ಪಿ. ಯಿಂದ ಕಳುಹಿಸಬೇಕಾಗುತ್ತದೆ. ಅಂತವರು ದಯಮಾಡಿ ಅದನ್ನು ಸ್ವೀಕರಿಸಿ, ಸಹಕರಿಸುವಂತೆ ವಿನಂತಿ.

— ಮೆನೇಜರ್.

ವಾರ್ತಾವೇದಿಕೆ

ಜವಾಹರಲಾಲ

ಕಾಂಗ್ರೆಸಿಗೆ ಅಧಿಕಾರ ಮೋಹವಿಲ್ಲವೆಂಬುದನ್ನು ಜನತೆಗೆ ತೋರಿಸಲು ಮತ್ತು ಪಕ್ಷದ ಸಂಘಟನೆಯನ್ನು ಬಿಗಿಗೊಳಿಸಲು ಪ್ರಧಾನಿ ನೆಹರು ಕಾಮರಾಜ ಸೂತ್ರವನ್ನು ಒಪ್ಪಿದರು; ಅನುಷ್ಠಾನಕ್ಕೆ ತಂದರು. ಆದರೆ, ಇದ್ದೊಬ್ಬನ ಬದಲಿಗೆ ಇಬ್ಬರು-ಮೂವರು ಉಮೇದ್ವಾರರಾಗಿ ಹೊಯ್-ಕೈಗೆ ಸಿದ್ಧರಾಗುತ್ತಿರುವುದನ್ನು ಕಂಡು ನಗಬೇಕೋ ಅಳಬೇಕೋ ಅವರಿಗೇನೇ ಅರಿಯದು. ಆದರೆ, ತನ್ನ ಜೀವಮಾನವನ್ನೇ ಜನಸೇವೆಗೆಂದು ಮುಡುಪಿಟ್ಟ ಅವರ ಮನಸ್ಸು ಕಾಂಗ್ರೆಸಿಗರ ಈ ವರ್ತನೆಯಿಂದ ನೊಂದಿದೆ. ಇದೇ ಪರಿಸ್ಥಿತಿಯು ಇನ್ನೂ ಮುಂದುವರಿದರೆ, ತಾನೇ ಅಧಿಕಾರದಿಂದ ಹೊರಗಿರುವ ವಿಷಯದಲ್ಲಿ ಅವರೊಂದು ನಿರ್ಧಾರಕ್ಕೆ ಬರಲೇಬೇಕಾದೀತು. ಅಂತಹ ವಿಷಗಳಿಗೆಯನ್ನು ನಾವು ತಂದುಕೊಳ್ಳಬೇಕು.

ಸುಚೇತಾ ಕೃಪಲಾನಿ

ಆಚಾರ್ಯ ಕೃಪಲಾನಿಯವರ ಪತ್ನಿ ಸುಚೇತಾ ಕೃಪಲಾನಿಯವರು ಉತ್ತರ ಪ್ರದೇಶದ ಮುಖ್ಯ ಮಂತ್ರಿಯಾಗಿ ಆಯ್ಕೆಯಾದುದು ವಿಸ್ಮಯಕರ ಮಾತ್ರವಲ್ಲ ಇತಿಹಾಸದಲ್ಲಿ ಮುಖ್ಯವಾದುದು. ಭಾರತದ ಮೊತ್ತಮೊದಲ ಮಹಿಳಾ ಮುಖ್ಯ ಮಂತ್ರಿಯೀಕೆ. ಅತ್ತ ಮಾಜಿ ಮುಖ್ಯ ಮಂತ್ರಿ ಗುಪ್ತಾ ತನ್ನ ಮನಸ್ಸಿಗೆ ವಿರುದ್ಧವಾಗಿಯೇ ಆ ಪದವಿಯನ್ನು ಬಿಟ್ಟುಕೊಡಬೇಕಾಗಿ ಬಂದರೂ ತನ್ನವರರೊಬ್ಬರ ಬಗೆಗೆ ತುಂಬ ಪ್ರಯತ್ನ ನಡೆಸಿದರು. ಸ್ವತಃ ಕಾಮರಾಜರೇ ಲಕ್ನೋಗೆ ತೆರಳಿ ಈ ಆಯ್ಕೆಯನ್ನು ಘೋಷಿಸಿ ಬಂದರು. ಮಧ್ಯ ಪ್ರದೇಶ ಮತ್ತು ಒಡಿಸ್ಸಗಳನ್ನು ಬಿಟ್ಟರೆ, ಮತ್ತೆಲ್ಲಿಯೂ ಈ ಬಗ್ಗೆ ಚಕಮಕಿ ನಡೆಯುತ್ತಿಲ್ಲವೆನ್ನಬಹುದು. ಸುಚೇತಾ ನಾಯಕತ್ವ ಸುಚೇತನವೆನಿಸುವುದೆಂದು ಜನ ನಂಬಿದೆ.

ದಾಸಪ್ಪ

ಕರ್ನಾಟಕದ ಎಚ್. ಸಿ. ದಾಸಪ್ಪನವರು ತಮ್ಮ ಯೋಗ್ಯತೆಯಿಂದ ಎಂದೋ ಮಂತ್ರಿಯಾಗಬೇಕಿತ್ತು. ಆದರೆ, ರೆಡ್ಡಿಯವರನ್ನು ಬಿಡಲಾಗದ ನೆಹರುರವರು ಇದೀಗ ಕರ್ನಾಟಕಕ್ಕೆ ಪ್ರಾತಿನಿಧ್ಯವಿಲ್ಲದ ಸಂದರ್ಭದ ವರೆಗೆ ಕಾಯ ಬೇಕಾಯ್ತು. ಹಣಕಾಸಿನ ಆಯೋಗ ದಂತಹ ಹಲವಾರು ಸಮಿತಿಗಳಲ್ಲಿ ಕಾರ್ಯತತ್ಪರರಾಗಿ ತಮ್ಮ ಕರ್ತವ್ಯವನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿದ ಕೀರ್ತಿ ದಾಸಪ್ಪನವರದು. ರೈಲ್ವೆ ಮಂತ್ರಿಯಾಗಿ ಸದ್ಯ ನಿಯುಕ್ತರಾದ ದಾಸಪ್ಪನವರು ತಮ್ಮ ಮೇಲೆ ದೊಡ್ಡ ಹೊರೆಯನ್ನು ಹೊತ್ತುಕೊಂಡಿದ್ದಾರೆ. ದಕ್ಷಿಣದ ರಾಜ್ಯಗಳಿಗೆ, ಮುಖ್ಯವಾಗಿ ಕರ್ನಾಟಕಕ್ಕೆ, ರೈಲುದಾರಿಗಳನ್ನು ಕೊಡುವಲ್ಲಿ ಕೇಂದ್ರವು ಪಕ್ಷಪಾತ ಮಾಡುತ್ತಿದೆಯೆಂಬ ಮಾತಿಗೆ ದಾಸಪ್ಪನವರ ನೇಮಕವು ಉತ್ತರವಾಗಿರಲೂ ಬಹುದು.

ಅಬ್ದುಲ್ ರಹಮಾನ್

ತಡವಾಗಿಯಾದರೂ ಮಲೇಶ್ಯದ ರಚನೆಯಾಯ್ತು. ಆದರೆ, ಇಂಡೋನೇಶ್ಯ—ಮಲೇಶ್ಯಗಳ ನಡುವೆ ವೈಮನಸ್ಸು ಅಧಿಕಾಧಿಕವಾಗಿದೆ. ಅಧ್ಯಕ್ಷ ಸುಕರ್ನೊರು ತನ್ನ ದೇಶವನ್ನು ಮಲೇಶ್ಯದಲ್ಲಿ ಸೇರ್ಪಡೆಗೊಳಿಸಲು ಪ್ರಾರಂಭದಲ್ಲಿ ಉತ್ಸಾಹ ವಹಿಸಿದ್ದರೂ ಇಂದು ಹಿಂಜರಿಯುತ್ತಾರೆ. ಮಲೇಶ್ಯನ್ ಪ್ರಧಾನಿ ಟಂಕು ಅಬ್ದುಲ್ ರಹಮಾನ್ ಈಗ ತನ್ನ ಸೇನೆಯನ್ನು ಎಚ್ಚರಿರುವಂತೆ ಆಜ್ಞಾಪಿಸಿ ಹೇಳುತ್ತಾರೆ. 'ನಿಜವಾಗಿಯೂ ನಾನು ಲಕ್ಷಿಸುವುದಿಲ್ಲ. ಸುಕರ್ನೊರ ಪ್ರತಿಕ್ರಿಯೆಯ ಬಗ್ಗೆ ವ್ಯಾಕುಲನಾಗುವುದನ್ನು ಬಿಟ್ಟಿದ್ದೇನೆ. ಶಾಂತಿಯನ್ನು ಬೇಡಿ ನಾನು ಅವರ ಬಳಿಗೆ ಹೋದಾಗ ಜಗತ್ತಿನ ಕಣ್ಣಿನಲ್ಲಿ ನನ್ನನ್ನು ಕಿರಿಯನನ್ನಾಗಿಸಿಕೊಂಡೆ. ಅವರನ್ನು ಸಮಾಧಾನ ಪಡಿಸಲು ನಾನು ಮಾಡಬಹುದಾದುದನ್ನೆಲ್ಲಾ ಮಾಡಿದ್ದೇನೆ; ಇನ್ನೇನನ್ನೂ ಮಾಡಲಾರೆ"—ಈ ಉದ್ಗಾರಗಳಲ್ಲಿ ನೊಂದ ಹೃದಯದ ಅಳಲು ಇಲ್ಲವೆ?

ಜಾನ್ ಕೆನ್ನಡಿ

ರಶಿಯ ಅಮೇರಿಕಗಳ ನಡುವೆ ಅಣ್ವಸ್ತ್ರ ಸಂಬಂಧದಲ್ಲಾದ ಆಂಶಿಕ ಒಡಂಬಡಿಕೆಯಿಂದ ಎರಡೂ ರಾಜ್ಯಗಳ ನಡುವೆ ಹೆಚ್ಚಿನ ತಿಳುವಳಿಕೆಗಳು ಮೂಡುವಂತಾಗಿದೆ. ಅಧ್ಯಕ್ಷ ಕೆನ್ನೆಡಿಯವರು ಸಂ. ರಾ. ಸಂಘದ ಸಾಮಾನ್ಯ ಸಭೆಯಲ್ಲಿ ಮಾತಾಡುತ್ತ ಈ ತಿಳುವಳಿಕೆಗಳು ಮತ್ತಷ್ಟು ಹೆಚ್ಚುವ ಅಗತ್ಯವನ್ನು ಪ್ರಸ್ತಾಪಿಸಿದರು. ಆಕಸ್ಮಾತ್ತಾಗಿ ಅಥವಾ ತಪ್ಪು ಲೆಕ್ಕಾಚಾರದಿಂದಾಗುವ ಯುದ್ಧವನ್ನು ತಡೆಯುವುದು, ಅನಿರೀಕ್ಷಿತ ದಾಳಿಯ ವಿರುದ್ಧ ರಕ್ಷಣೆ, ಅಣ್ವಸ್ತ್ರ ಸ್ಪರ್ಧೆಗೆ ತಡೆ, ಶಾಂತಿಗಾಗಿ ಅಣುಶಕ್ತಿಯ ಉಪಯೋಗ, ಭೂಗರ್ಭ ಅಣ್ವಸ್ತ್ರ ಪ್ರಯೋಗ ಪ್ರತಿಬಂಧ- ಈ ಐದು ಉದ್ದೇಶಗಳೇ ಅಗತ್ಯವಾದುವುಗಳೆಂದೂ ಇವುಗಳನ್ನು ಕಾರ್ಯರೂಪಕ್ಕೆ ತರಲು ರಶಿಯಾವು ತನ್ನೊಡನೆ ಸಹಕರಿಸಬೇಕೆಂದೂ ಕೆನ್ನಡಿ ಹೇಳುತ್ತಾರೆ.

ನಿಕೀಟಾ ಕ್ರುಶ್ಚೇವ

ಭಾರತ—ಚೀನಾ ಗಡಿಯ ಮೇಲೆ ಚೀನವೇ ಆಕ್ರಮಣ ಮಾಡಿರುವುದರಿಂದ ಅದು ಕೊಲಂಬೊ ಸೂಚನೆಗಳನ್ನು ನಿಶ್ಶರ್ತವಾಗಿ ಮನ್ನಿಸಿ ಶಾಂತಿಪಥದ ಮಾರ್ಗವನ್ನು ತೆರೆಯಬೇಕು ಎಂದು ಚೀನಾವನ್ನು ರಶಿಯಾವು ಕೇಳಿಕೊಂಡಿದೆ. ಈ ವಿವಾದದಲ್ಲಿ ಆಕ್ರಮಣಗಾರರು ಯಾರು ಎಂದು ರಶಿಯ ಇದು ವರೆಗೆ ಹೇಳಿದ್ದಿಲ್ಲ. ಈಗ ಅದನ್ನು ಸ್ಪಷ್ಟ ಹೇಳಿದೆ. ಕಾಶ್ಮೀರದ ವಿಷಯವಲ್ಲಾದರೂ ಭಾರತವನ್ನು ಬೆಂಬಲಿಸುವ ತನ್ನ ಹಿಂದಿನ ನೀತಿಯಲ್ಲಿ ಯಾವ ಪರಿವರ್ತನೆಯನ್ನೂ ಅದು ಮಾಡಿಲ್ಲ. ಹೀಗೆ ನಿಕೀಟಾ ಕ್ರುಶ್ಚೇವರು ಪ್ರತ್ಯಕ್ಷವಾಗಿ ಭಾರತಕ್ಕೆ ಬೆಂಬಲ ಕೊಡುವ ಸೂಚನೆಗಳು ಕಂಡು ಬರುತ್ತಿರುವುದರಿಂದ ಈ ಸಂಬಂಧದ ವಾತಾವರಣ ಬದಲಾಗಲೂಬಹುದು.

ಅಲ್ಲಲ್ಲಿಯ ಸುದ್ದಿ ಸಾರ

ಮಹಾಸಭೆ—ಶ್ರೀ ಶಾರದಾ ಭಜನಾ ಮಂಡಳಿ ಪರ್ಕಳ, ಇದರ ಮಹಾಸಭೆಯು ತಾ. 6–9–63 ರಂದು ಮಂಡಳಿಯ ಮಂದಿರದಲ್ಲಿ ಶ್ರೀ ಪಿ. ಗುರುರಾಜ ಜೋಯಿಸರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಆನಂದ ಶೆಟ್ಟರು ಸ್ವಾಗತ ಭಾಷಣ ಮಾಡಿದರು. ವರದಿ ಓದಲ್ಪಟ್ಟ ನಂತರ ಮುಂದಿನ ವರ್ಷಕ್ಕೆ ಮಂಡಳಿಯ ಆಡಳಿತಾಧಿಕಾರಿಗಳನ್ನು ಆರಿಸಲಾಯಿತು. ಶ್ರೀ ಎಸ್. ನಾಗಪ್ಪ ಶ್ಯಾನುಭೋಗರ ಹಿತಸೂಚನೆಗಳಾದ ಬಳಿಕ ಅಧ್ಯಕ್ಷರು ಮಂಡಳಿಯ ಕೆಲಸಗಳನ್ನು ಪ್ರಶಂಸಿಸಿ, ಮುಂದಿನ ಕರ್ತವ್ಯವನ್ನು ವಿವರಿಸಿ ಮಾತನಾಡಿದರು.

ಮುಲ್ಕಿಯಲ್ಲಿ ಸತ್ಕಾರ ಕೂಟ- ತಾ. 21—9—63ರಲ್ಲಿ ಸ್ಥಳೀಯ ಫಿಶರೀಸ್ ಹಾಸ್ಟೆಲು ಕಟ್ಟಡದಲ್ಲಿ, ಶ್ರೀ ಎಂ. ಮಧ್ವರಾಜ್ ಬಿ. ಎ., ಎಂ. ಎಲ್. ಎ. ರವರು ತಮ್ಮ ವಿದೇಶ ಪ್ರವಾಸವನ್ನು ಮುಗಿಸಿಕೊಂಡು ಬಂದ ಪ್ರಯುಕ್ತ ಸದ್ರಿಯವರ ಗೌರವಾರ್ಥವಾಗಿ ಮುಲ್ಕಿ ಫಿಶರ್‌ಮೆನ್ಸ್ ಸಹಕಾರಿ ಸಂಘದವರು ಏರ್ಪಡಿಸಿದ ಸತ್ಕಾರ ಕೂಟವು ಸಿಂಡಿಕೇಟ್ ಬ್ಯಾಂಕಿನ ಮೆನೆಜಿಂಗ್ ಡೈರೆಕ್ಟರ್ ಶ್ರೀ ಟಿ. ಎ. ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಎಕ್ಸ್ ಒಫಿಶಿಯೊ ಅಧ್ಯಕ್ಷ ಶ್ರೀ ಎಂ. ಬಿ. ಅಬ್ದುಲ್ ಖಾದರ್ ಮೊಗ್ರಾಲ್‌ರವರು ಸ್ವಾಗತ ಭಾಷಣ ಮಾಡಿದರು. 400ಕ್ಕೂ ಮಿಕ್ಕಿ ನೆರೆದಿದ್ದ ಸಭಿಕರಲ್ಲಿ ಶ್ರೀಗಳಾದ ಎಸ್. ಎ. ಶೂಂಜ, ಪದ್ಮನಾಭ ಶೆಟ್ಟಿ, ಡಾ. [illegible], ಡಾ. ಬಿ. ಎಸ್. ಕಲ್ಯಾಣ್, ಡಾ. ಯು. ಬಿ. ಆಚಾರ್ಯ, [illegible] ಮುಂತಾದವರು ಮುಖ್ಯ ಅತಿಥಿಗಳ ಗುಣಗಾನ ಗೈದು ನಮ್ಮ ಊರಿನ ಅಭಿವೃದ್ಧಿಗೆ ಅನಿವಾರ್ಯವಾಗ ಬಹುದಾದ ಕಾರ್ಯ ಸಾಧನೆಗಳ ವಿಷಯವಾಗಿ ಮಾತನಾಡಿದರು. ನಂತರ ಶ್ರೀ ಮಧ್ವರಾಜರು ತಮ್ಮ ವಿದೇಶ ಪ್ರವಾಸದ ಅನುಭವದ ಕುರಿತಾಗಿ ಸವಿವರ ಭಾಷಣ ಮಾಡಿದರು. ಅಧ್ಯಕ್ಷರು ದೇಶದ ಏಳಿಗೆಗೆ ಪ್ರತಿ ಒಬ್ಬರೂ ಇನ್ನೊಬ್ಬರನ್ನು ಹೊಂದಿಕೊಂಡು ತಂತಮ್ಮ ಕಾರ್ಯ ನಿರ್ವಹಣೆಗಾಗಿ ದೃಢ ಮನಸ್ಸಿನಿಂದ ದುಡಿದು ಬರುವುದರಿಂದ ದೇಶದ ಅಭ್ಯುದಯವು ತಾನಾಗಿಯೆ ಆಗುವುದರಲ್ಲಿ ತಮ್ಮ ವಿಶ್ವಾಸವನ್ನು ತಮ್ಮ ವಿಚಾರ ಪೂರಿತ ಭಾಷಣದಲ್ಲಿ ವಿವರಿಸಿದರು. ಸಂಘದ ಕಾರ್ಯದರ್ಶಿ ಶ್ರೀ ಆರ್. ಸಿ. ಕರ್ಕೇರರವರು ಧನ್ಯವಾದ ಸಮರ್ಪಿಸಿದರು.

ಜಿಲ್ಲಾ ಮಟ್ಟದ ಪಂದ್ಯಾಟಗಳು- ಉಡುಪಿ ಲಾ ಕಾಲೇಜಿನ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ನವರಾತ್ರೋತ್ಸವದ ಉತ್ಸವದ ಸಂಬಂಧವಾಗಿ ಇದೇ ಅಕ್ಟೋಬರ ತಿಂಗಳ ಎರಡನೆಯ ವಾರದಲ್ಲಿ ಈ ಕೆಳಗಿನ ಆಟಗಳಲ್ಲಿ ಪಂದ್ಯಾಟಗಳು ನಡೆಯಲಿವೆ. ಪುರುಷರಿಗಾಗಿ: ವಾಲಿಬಾಲ್, ಷಟಲ್ ಬ್ಯಾಡ್ಮಿಂಟನ್ ಸಿಂಗಲ್ಸ್ ಮತ್ತು ಡಬ್ಬಲ್ಸ್, ಟೇಬಲ್ ಟೆನ್ನಿಸ್ ಸಿಂಗಲ್ಸ್ ಮತ್ತು ಡಬ್ಬಲ್ಸ್; ಚೆಸ್; ಮಹಿಳೆಯರಿಗಾಗಿ:— ಟೆನ್ನಿಕ್ವಾಯಿಟ್ ಡಬ್ಬಲ್ಸ್ ಮತ್ತು ಟೇಬಲ್ ಟೆನ್ನಿಸ್ (ಸಿಂಗಲ್ಸ್) ಪಂದ್ಯಾಟಗಳಿಗೆ ಪ್ರವೇಶವು ದ. ಕ. ಜಿಲ್ಲೆಯ ಶಾಲೆ, ಕಾಲೇಜು ಮತ್ತು ಇತರ ಸಂಸ್ಥೆಗಳಿಗಾಗಿ ತೆರೆಯಲಾಗಿದೆ. ಸ್ಪರ್ಧೆಗೆ ಪ್ರವೇಶ ಧನವಿದ್ದು ವಿಜಯಿಗಳಿಗೆ ಆಕರ್ಷಕ ಬಹುಮಾನಗಳನ್ನು ನೀಡಲಾಗುವುದು. ಭಾಗವಹಿಸಬಿಚ್ಛಿಸುವವರು ಪ್ರವೇಶ ಧನ ಸಹಿತ ತಮ್ಮ ಹೆಸರನ್ನು ಸಪ್ಟಂಬರ್ 28ರೊಳಗಾಗಿ ಕ್ರೀಡಾ ಕಾರ್ಯದರ್ಶಿ, ಉಡುಪಿ ಲಾ ಕಾಲೇಜು ವಿದ್ಯಾರ್ಥಿ ಸಂಘ, ಉಡುಪಿ ಇವರಿಗೆ ಕಳುಹಿಸಬಹುದು. ಹೆಚ್ಚಿನ ವಿವರಗಳನ್ನು ಕ್ರೀಡಾ ಕಾರ್ಯದರ್ಶಿಯವರ ಮೂಲಕ ಪಡೆಯಬಹುದು.

ಬೀಳ್ಕೊಡುವ ಸಮಾರಂಭ— ಉಡುಪಿ ಆಯುರ್ವೇದ ಕಾಲೇಜಿನಲ್ಲಿ ಮೂರು ವರ್ಷಗಳಿಂದ ರೆಕ್ಟರರಾಗಿ ಸೇವೆ ಸಲ್ಲಿಸಿರುವ ನಿವೃತ್ತ ಡಾಕ್ಟರರಾದ ಎಸ್. ವಿ. ಜನಾರ್ದನರನ್ನು ಬೀಳ್ಕೊಡುವ ಸಮಾರಂಭವು ತಾರೀಕು 20—9—63ರಂದು ಪ್ರಿನ್ಸಿಪಾಲ್ ಶ್ರೀ ಜಿ. ಬಿ. ಸವಣೂರರ ಅಧ್ಯಕ್ಷತೆಯಲ್ಲಿ ಜರಗಿತು.

ಕಾಲೇಜ್ ಯೂನಿಯನ್ನಿನ ಪರವಾಗಿ ಶ್ರೀಮಾನ್ ಜನಾರ್ದನರಿಗೆ ಉಡುಗೊರೆ ಅರ್ಪಿಸಿದ ತರುವಾಯ ವಿದ್ಯಾರ್ಥಿಗಳೂ ಅಧ್ಯಾಪಕರೂ ಜನಾರ್ದನರ ಕಾರ್ಯದಕ್ಷತೆಯ ಕುರಿತು ಮಾತಾಡಿದರು. ಶ್ರೀ ಮಾನ ಜನಾರ್ದನರು ಆಯುರ್ವೇದದ ಇಂದಿನ ಪರಿಸ್ಥಿತಿಯನ್ನು ವಿವರಿಸಿ, ವಿದ್ಯಾರ್ಥಿಗಳ ಹೊಣೆಯನ್ನು ನೆನಪಿಸಿದರು. ಕಾರ್ಯದರ್ಶಿ ಶ್ರೀ ಗೋಪಾಲಕೃಷ್ಣ ಭಟ್ಟರು ಧನ್ಯವಾದ ಸಮರ್ಪಿಸಿದರು.

ಪ್ರವಾಸ ಭಾಷಣ- ದಿನಾಂಕ 20.9.63 ರಂದು ಅಲೆಕ [illegible] ಸೇವಾ ಹೈಸ್ಕೂಲ್ ಮತ್ತು ಪಾ. ಎ. ಶಾಲೆಗಳ ಜಂಟಿ ಸಭೆಯಲ್ಲಿ ಭಾರತದ ಕೆಲವು ಭಾಗಗಳನ್ನು ಪ್ರತಿನಿಧೀಕರಿಸಲ್ಪಟ್ಟ ರಾಷ್ಟ್ರೀಯ ಯೂಥ್ ಕ್ಲಬ್ ಎಸೋಸಿಯೇಶನ್ ಆಶ್ರಯದಲ್ಲಿ ಅಮೆರಿಕ ಮತ್ತು ಯುರೋಪ್ ದೇಶಗಳ ಪ್ರವಾಸ ಮಾಡಿ ಬಂದ ಶ್ರೀಮಾನ್ ಕೆ. ಎಸ್. ಮಹಾಬಲ ಶೆಟ್ಟಿಯವರು, ತಮ್ಮ 10 ತಿಂಗಳ ಪ್ರವಾಸದ ಅನುಭವವನ್ನು ಭಾರತದ ಹಾಗೂ ವಿದೇಶಗಳ ಹೋಲಿಕೆಯ ದೃಷ್ಟಿಯಿಂದ ಸುಂದರವಾಗಿ ತಿಳಿಸಿದರು. ಶ್ರೀ ನಾರಾಯಣ ಭಟ್ಟರು ಅಧ್ಯಕ್ಷತೆ ವಹಿಸಿದ್ದ ಈ ಸಭೆಯಲ್ಲಿ ಶ್ರೀ ಕೆ ಯು. ಕೃಷ್ಣ ಭಟ್ಟರು ಸ್ವಾಗತ ಭಾಷಣ ಮಾಡಿದರು. ಅಧ್ಯಕ್ಷರ ಭಾಷಣಾನಂತರ ಕುಮಾರ ಪಿ ರಾಮ ಭಟ್ಟರಿಂದ ಧನ್ಯವಾದ ಸಮರ್ಪಣೆಯಾಯಿತು.

ಸೇನೆಯಲ್ಲಿ ವ್ಯಾಯಾಮ ಶಿಕ್ಷಣ ನಿರ್ದೇಶಕರು

ಶತ್ರುವನ್ನು ಎದುರಿಸಿ ಹೋರಾಡುವ ಯೋಧನು ದೃಢಕಾಯನಾಗಿರಬೇಕು. ಇದೇ ಕಾರಣದಿಂದಾಗಿ ಸೇನೆಯಲ್ಲಿ ವ್ಯಾಯಾಮ ಶಿಕ್ಷಣ ಕಾರ್ಯಕ್ರಮಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗಿದೆ. ವ್ಯಾಯಾಮ ಶಿಕ್ಷಣ ನಿರ್ದೇಶಕರು ಹೊಸದಾಗಿ ಸೇನೆಯನ್ನು ಸೇರಿದವರಿಗೆ ಮೊದಲು ವ್ಯಾಯಾಮ ಶಿಕ್ಷಣ ಸಂಬಂಧವಾಗಿಯೂ ನಂತರ ಯುದ್ಧ ಕೌಶಲ್ಯದ ಸಂಬಂಧವಾಗಿಯೂ ತರಬೇತಿ ನೀಡುತ್ತಾರೆ.

ವ್ಯಾಯಾಮ ಶಿಕ್ಷಣ ತರಬೇತಿಯಿಂದ ಯೋಧನ ದೇಹ ದಾರ್ಢ್ಯತೆ ಹೆಚ್ಚುತ್ತದೆ. ಯುದ್ಧ ಕೌಶಲಕ್ಕೆ ಸಂಬಂಧಿಸಿದ ತರಬೇತಿಯು ಅವನಲ್ಲಿ ತಾಳ್ಮೆ, ಜಾಗರೂಕತೆ; ದೃಢ ಸಂಕಲ್ಪದಂತಹ ಶ್ರೇಷ್ಠ ಗುಣಗಳನ್ನು ಅಭಿವೃದ್ಧಿಗೊಳಿಸುತ್ತದೆ.

ವ್ಯಾಯಾಮ ಶಿಕ್ಷಣ ವಿಷಯದಲ್ಲಿ ಯೋಧರಿಗೆ ತರಬೇತಿ ನೀಡುವ ಶಿಕ್ಷಕರು ಸ್ವಯಂ, ಪುಣೆಯಲ್ಲಿನ ವ್ಯಾಯಾಮ ಶಿಕ್ಷಣ ಕೇಂದ್ರದಲ್ಲಿ ಹಾಗೂ ಪೂರ್ವ, ಪಶ್ಚಿಮ ಮತ್ತು ದಕ್ಷಿಣ ಕಮ್ಯಾಂಡ್‌ಗಳ ಪ್ರಧಾನ ಕಚೇರಿಯಲ್ಲಿರುವ ಪೂರ್ವಭಾವೀ ತರಬೇತಿ ಕೇಂದ್ರಗಳಲ್ಲಿ ತರಬೇತಿ ಪಡೆಯುತ್ತಾರೆ. ಹೀಗೆ ತರಬೇತಿ ಪಡೆದ ನಂತರವೇ ಯೋಧರಿಗೆ ತರಬೇತಿ ಕೊಡುತ್ತಾರೆ.

ಪೂರ್ವಭಾವೀ ತರಬೇತಿ ಕೇಂದ್ರಗಳು ಸೂಕ್ತ ಅಭ್ಯರ್ಥಿಗಳನ್ನು ಆರಿಸುತ್ತವೆ. ಈ ಅಭ್ಯರ್ಥಿಗಳು ಪುಣೆಯಲ್ಲಿ ಸಹಾಯಕ ವ್ಯಾಯಾಮ ಶಿಕ್ಷಣ ನಿರ್ದೇಶಕರ ವರ್ಗದಲ್ಲಿ ತರಬೇತಿ ಪಡೆಯುತ್ತಾರೆ. ಪೂರ್ವಭಾವೀ ವ್ಯಾಯಾಮ ಶಿಕ್ಷಣ ಕೇಂದ್ರದಲ್ಲಿ ಆರು ವಾರಗಳ ಅವಧಿಯ ನಾಲ್ಕು ತರಬೇತಿ ಶಿಕ್ಷಣ ವರ್ಗಗಳು ನಡೆಯುತ್ತವೆ.

ವರ್ಗದ ಪಾಠ್ಯಕ್ರಮವನ್ನು ವಿಸ್ತೃತವಾಗಿ ಸಿದ್ಧಗೊಳಿಸಲಾಗಿದ್ದು ಅದು ಅನೇಕ ವ್ಯಾಯಾಮ ಕಾರ್ಯಕ್ರಮಗಳನ್ನು ಒಳಗೊಂಡಿದೆ. ತರಬೇತಿದಾರರಿಗೆ ಅನೇಕ ವಿಷಯಗಳಿಗೆ ಸಂಬಂಧಪಟ್ಟಂತೆ ಇರುವ ಮೂಲಭೂತ ನಿಯಮ ನಿಬಂಧನೆಗಳ ಬಗೆಗೆ ತಿಳುವಳಿಕೆ ಮಾಡಿಕೊಡಲಾಗುತ್ತದೆ. ಭಾವಿ ವ್ಯಾಯಾಮ ನಿರ್ದೇಶಕನು ಸ್ವಯಂ ತನ ಪರೀಕ್ಷೆಯನ್ನಲ್ಲದೆ ದೈಹಿಕ ಕ್ಷಮತೆ ಹಾಗೂ ನಾಯಕತ್ವ ಪರೀಕ್ಷೆಯನ್ನೂ ಪಾಸಾಗಬೇಕಾಗುತ್ತದೆ.

ಶಾಲೆಗಳಿಗೆ ಬೇಕಾಗುವ
ಯಾವತ್ತೂ ಫಾರ್ಮುಗಳೂ
ಹಾಜರಿ ರಿಜಿಸ್ಟ್ರಗಳೂ ಸಿಗುತ್ತವೆ.
ನವಯುಗ ಪ್ರೆಸ್ ಉಡುಪಿ.

ಪಂಚಮ ದಳದ ಭೀಭತ್ಸ ಕುಕೃತ್ಯ

(೪ನೇ ಪುಟದಿಂದ)

ಮೇಲಿನ ಮೊದಲಾ ಭಾಗದಿಂದಲೇ ಬೆಪ್ಪಾಗಿ ಹೋಗಿದ್ದ ಜನತೆಯ ಮೇಲೆ ದಂಗಾಗುವಂತೆ ಡಾಂಗೆಯವರು ಕಮ್ಯೂನಿಸ್ಟ್ ಲಾವಾರಸವನ್ನು ಹರಿಸಿಬಿಟ್ಟರು. ಅವರೇನೋ ಬಹಳ ಗಟ್ಟಿಯಾಗಿ ಮಾತಾಡಿರುವರು. ಅವರ ಮಾತಿನ ಅಂತರಾರ್ಥವಾದರೂ ಏನು? 'ಚೈನಾ ಅಥವಾ ಪಾಕಿಸ್ತಾನ ಇಲ್ಲವೇ ಇನ್ಯಾವುದೇ ದೇಶವಾಗಲೀ ಭಾರತದ (ಇಂಡಿಯಾದ) ಮೇಲೆ ಆಕ್ರಮಣ ನಡೆಸಿದಲ್ಲಿ ಇಂಡಿಯನ್ ಕಮ್ಯೂನಿಸ್ಟರು ತಮ್ಮ ಕಾರ್ಯಾಲಯವನ್ನು ರಕ್ಷಿಸಲು ಹಾಗೂ ಆಕ್ರಮಣಗಾರರನ್ನು ಪ್ರತೀಕರಿಸಲು ಮುಂದೆ ಬರುತ್ತಾರೆ.' ಇದು ಡಾಂಗೆಯವರ ಡಂಗುರ ವಾಕ್ಯ! ಪೌರುಷವೇನೋ ಇದರಲ್ಲಿ ಕಂಡುಬರಬಹುದು? ಆದರೆ ಯಾರಿಗೆ ಈ ಮೋಸ? ಯಾತಕ್ಕೆ ಈ ದ್ರೋಹದಾಟ? 'ಭಾರತದ ಮೇಲೆ ಆಕ್ರಮಣ ನಡೆಸಿದಲ್ಲಿ' ಎಂದರೆ ಇಷ್ಟರ ವರೆಗೆ ಚೈನಾವಾಗಲೀ ಪಾಕಿಸ್ತಾನವಾಗಲೀ ಆಕ್ರಮಣ ನಡೆಸಿಲ್ಲವೇನು? ಮತ್ತಾರು, ಶಾಂತಿಪ್ರಿಯ, ಸಹ-ಅಸ್ತಿತ್ವ ಬೋಧಕ ಭಾರತ ಆಕ್ರಮಣ ಮಾಡಿರುವನೇನು? ಆ ಭೂಪ್ರದೇಶಕ್ಕೆ ಸ್ವಾತಂತ್ರ್ಯ ದೀಪ ತೋರಿಸಲು ಕಮ್ಯೂನಿಸ್ಟರು ಮುಂದೆ ಬರುವದಿಲ್ಲ—ಅಂದರೆ ಅಡ್ಡ ಬರುತ್ತಾರೆಂಬುದು ಸ್ಪಷ್ಟವಾಯಿತು. ಯಾಕೆಂದರೆ ಅದು ಭಾರತದ ಭೂಭಾಗ ಇರುವುದಿಲ್ಲ! ಬೆನ್ನಿನಲ್ಲಿರಿಯಲು ಪಳಗಿರುವ ಕಾಪುರುಷರ ಕಜ್ಜಾಯಮಾತು!

ಇದೇ ಸಮಯದಲ್ಲಿ ಅವರ ಇನ್ನೊಬ್ಬ ಅಧ್ವರ್ಯು ನಂಬೂದರಿಪಾದರು 'ರಷ್ಯಾಕ್ಕೆಂದು ಇಲ್ಲಿಂದ ಹೋಗಿ, ಅಲ್ಲಿಂದ ಚೈನಾಕ್ಕೆ ಹೋಗಿರುವ ಸಮಾಚಾರ ಪ್ರಕಟವಾಗಿರುತ್ತದೆ. ಚೈನಾ ಆಕ್ರಮಣ ನಡೆಸಿಲ್ಲವೆಂದು ಸಾರುತ್ತ ಬಂದವರಲ್ಲಿ ನಂಬೂದರಿಪಾದರೂ ಒಬ್ಬರು. ಅವರು ಚೈನಾದಲ್ಲಿ ಆದ್ಯಾವ ಮಾತುಕತೆ ನಡೆಸಿಯಾರೆಂಬುದಕ್ಕೆ ಸಾಕ್ಷಿಯ ಆವಶ್ಯಕತೆ ಇರುವುದಿಲ್ಲ.

ಇವುಗಳಿಂದ ಪಂಚಮದಳದವರು ಬಹಳ ಉಪಾಯದಿಂದ ಕಾರ್ಯ ಪ್ರವೃತ್ತರಾಗಿದ್ದಾರೆಂಬುದು ಸ್ಪಷ್ಟವಾಗುತ್ತದೆ. ತೆರಿಗೆ ಏರುಪಕ್ಕೆ, ದರ ಹೆಚ್ಚಳ ಮುಂತಾದವುಗಳ ವಿರುದ್ಧ—ಚೈನಾ—ಪಾಕಿಸ್ತಾನ ಆಕ್ರಮಣದ ವಿರುದ್ಧವಲ್ಲ—ಬೃಹತ್ ಸಭೆ ಸೇರಿಸಿ, ಅದರ ಭಾವಚಿತ್ರಗಳು ಚೈನಿ ಕಮ್ಯೂನಿಸ್ಟರಿಗೆ ದೊರೆಕುವಂತೆ ಒಂದೆಡೆ ಹಂಚಿಕೆ ಹೂಡಲಾಗಿದೆಯಾದಲ್ಲಿ, ಇನ್ನೊಂದೆಡೆ ಅದೇ ಸಮಯದಲ್ಲಿ ಅವರ ಮುಂದಾಳು ನೇತ ಕಮ್ಯೂನಿಸ್ಟ್ ಚೈನಾದೊಳಗೆ ಹೋಗಿ ಮಾತುಕತೆಯಾಡುತ್ತಿದ್ದಾರೆ. ಈ ದೇಶ ದ್ರೋಹ 'ಪಂಚಮದಳ'ದವರ ಭೀಭತ್ಸ ಕುಕೃತ್ಯಗಳಿಗೆ ಬೇರೆ ಉದಾಹರಣೆ ಬೇಕೇನು?

ಡಾಂಗೆಯವರು ಆಗಾಗ ಕೆಲವು ಸಲ ಚೈನಿ ಆಕ್ರಮಣದ ಕುರಿತು ಲಘು ಟೀಕೆ ಮಾಡುತ್ತಿದ್ದುದರಿಂದ ಅವರನ್ನು ಕೆಲವರು ನಂಬಿಕೊಂಡಿದ್ದರು. ಇದೀಗ ಆ ಪುಟ್ಟ ವಿಶ್ವಾಸವೂ ಹಾರಿಹೋಗದೆ ಇರಲಿಕ್ಕಿಲ್ಲ. ಡಾಂಗೆಯವರು ಕೂಡಾ ಚೈನಿಯರಾಗಲೀ ಪಾಕಿಸ್ತಾನಿಗಳಾಗಲೀ ಆ

ಪಕ್ಷಬಲ ಸಂವರ್ಧನೆಯಲ್ಲಿ

ಸಂಘಟಿಕರ ಪ್ರಥಮ ಕರ್ತವ್ಯ

ಕಾಮರಾಜ ಸೂತ್ರವು ಮುಂದೆ ಬಂದಾಗ ಆಳುವ ಕಾಂಗ್ರೆಸಿಗೆ ಕಾಯಕಲ್ಪ ಚಿಕಿತ್ಸೆಯಾದೀತೆಂದು ಎದ್ದಿದ್ದ ಕಲ್ಪನೆಗಳೀಗ ಬುಡ ಮೇಲಾಗುವಂತಹ ವಾರ್ತೆಗಳು ಕೇಳಿ ಬರುತ್ತಿವೆ. ಅಂದರೆ, ಅದರಿಂದ ಹೆಚ್ಚಿನ ಪ್ರಯೋಜನವನ್ನು ನಿರೀಕ್ಷಿಸುವುದು ತುಸು ಪ್ರಯಾಸವೇ ಎಂದು ಅನಿಸಹತ್ತಿದೆ. ಪಕ್ಷದ ಹಿತಾಸಕ್ತಿಯನ್ನು ಅನುಲಕ್ಷಿಸಿ ಮಂತ್ರಿ ಮಂಡಳದಿಂದ ಹೊರ ಬಂದ ಹಿರಿಯ ಕಾಂಗ್ರೆಸಿಗರು ಒಳ್ಳೆಯ ಕಾರ್ಯವನ್ನು ಮಾಡಿದರು ನಿಜ; ಕಾಂಗ್ರೆಸಿಗರಿಗೆ ಅಧಿಕಾರದಲ್ಲಿ ಮೋಹವಿಲ್ಲ; ಕುರ್ಚಿಗಂಟಿಕೊಳ್ಳುವ ಪ್ರವೃತ್ತಿ ಅವರಲ್ಲವೆಂಬುದನ್ನವರು ಪ್ರತ್ಯಕ್ಷ ಸಿದ್ಧಮಾಡಿಕೊಟ್ಟರು ಹೌದು. ಆದರೆ, ಮತ್ತೆ ಅಧಿಕಾರ ಗದ್ದುಗೆಗೇರುವ ಹೋರಾಟ ಕಟ್ಟಿಕೊಂಡವರೂ ಅನೇಕ ಮಂದಿಯಿದ್ದಾರೆಂಬ ವರ್ತಮಾನವು ಕಾಮರಾಜ ಸೂತ್ರಕ್ಕೇನೇ ಕುಠಾರಪ್ರಾಯವಾಗಲಾರದೆ?

ಸದ್ಯ, ಮದ್ರಾಸ ರಾಜ್ಯದಲ್ಲಿ ಸರಕಾರವನ್ನು ಸ್ಥಾಪಿಸುವ ನಾಯಕನ ಆಯ್ಕೆಗೆ ಹೆಚ್ಚಿನ ಪ್ರತಿಸ್ಪರ್ಧೆ ಇಲ್ಲ. ಅಲ್ಲಿ ಹಿಂದೆಯೂ ಇರಲಿಲ್ಲ. ಭಾರತದ ಪ್ರಶಾಂತ ಸರಕಾರಗಳ ಗಣನೆಯಾಗುವಾಗ, ಮೊತ್ತ ಮೊದಲು ನಿಲ್ಲುತ್ತದೆ ಮದ್ರಾಸು. ಅತ್ಯಲ್ಪ ಪರಿಮಾಣದ ಮಂತ್ರಿ ಮಂಡಲವೇ ಅಲ್ಲಿ ಅತ್ಯುತ್ತಮ ರೀತಿಯಲ್ಲಿ ಆಡಳಿತೆಯನ್ನು ನಿರ್ವಹಿಸುತ್ತ ಬಂದಿದೆ. ಅದರ ಮೇಲೆ ಯಾರೊಬ್ಬರ ಆರೋಪವೂ ಇಲ್ಲ. ಆದರೆ, ಉಳಿದ ರಾಜ್ಯಗಳ ಪರಿಸ್ಥಿತಿ ಇದಕ್ಕಿಂತ ತೀರ ವ್ಯತಿರಿಕ್ತವಾದಂತೆ ಭಾಸವಾಗುತ್ತಿದೆ. ಸದ್ಯದ ನಾಯಕರತ್ತ ರಾಜಿನಾಮೆಯು ಒಮ್ಮೆ ಶಾಂತವಾಗಿದ್ದ ವಾತಾವರಣವನ್ನು ಮತ್ತೊಮ್ಮೆ ಕಲುಷಿತಗೊಳಿಸಲು ಕಾರಣವಾಗುತ್ತಿದೆಯೋ ಎಂಬ ಭೀತಿ ಹುಟ್ಟುವಂತಾಗಿದೆ.

ಒಂದೆರಡು ತಿಂಗಳುಗಳಿಗೆ ಮೊದಲು ತೀವ್ರ ಬಿಕ್ಕಟ್ಟಿಗೊಳಗಾದ ಉತ್ತರ ಪ್ರದೇಶವನ್ನು ನಾವು ತೆಗೆದುಕೊಳ್ಳುವುದಾದರೆ, ಅಲ್ಲಿನ ಮುಖ್ಯ ಮಂತ್ರಿ ಚಂದ್ರಭಾನು ಗುಪ್ತರ ವರ್ತನೆಯಿಂದ ನೊಂದವರು—ಮುಖ್ಯವಾಗಿ ಅಲಗುರಾಯ್ ಶಾಸ್ತ್ರಿಯವರ ರಾಜಿನಾಮೆಯಿಂದ—ಮರಳಿ ತಲೆಯೆತ್ತ ತೊಡಗಿದ್ದಾರೆ. ಗುಪ್ತರು ಸದ್ಯ ಪಕ್ಷ ಸಂಘಟನೆಯಲ್ಲಿ ತೊಡಗಲಿರುವರು; ಆದರೆ, ಸರಕಾರದ ಸೂತ್ರಧಾರತನವನ್ನು ತನಗೆ ಬೇಕಾದವರ ಹಸ್ತಗಳಿಗೊಪ್ಪಿಸಬೇಕೆಂದು ಅವರ ಮನೀಷೆ. ಪ್ರತಿಸ್ಪರ್ಧಿಗಳು ಇದನ್ನು ಒಪ್ಪದೆ ಆತಂಕವನ್ನು ತಂದೊಡ್ಡುತಿದ್ದಾರೆ. ಇದೇ ಮಾದರಿ ಮಧ್ಯ ಪ್ರದೇಶದಲ್ಲಿ ಕೂಡ ಇದೆ. ನಾಯಕನ ಚುನಾವಣೆಗೆ ಸ್ಪರ್ಧೆ, ಅದು ಸೌಮ್ಯರೂಪದ್ದಾದರೂ ಏಕಿರಬಾರದು? ಅನಿವಾರ್ಯವೆನ್ನುವಂತಾಗಿದೆ.

ಒಡಿಸ್ಸಾದ ವಿಜಯಾನಂದ ಪಟ್ನಾಯಕರು ಹೊರ ಬರುತ್ತಾರೆ. ತನ್ನ ಹಿಂದೆ ಅವರು ವೀರೇನ್ ಮಿತ್ರರನ್ನು ಆ ಪೀಠದಲ್ಲಿ ಅಲಂಕರಿಸಲು ನಿರ್ಧರಿಸಿದ್ದಾರೆ. ಪಟ್ನಾಯಕರ ಅನುಯಾಯಿಗಳಲ್ಲಿ ಕೂಡ ಮಿತ್ರರ ಬಗ್ಗೆ ಸದಭಿಪ್ರಾಯ ಮೂಡಿಬಂದಿದೆ. ಮಧ್ಯ ಪ್ರದೇಶಕ್ಕೆ ಡಾ| ಕೈಲಾಸನಾಥ ಕಟ್ಜು ಬರುವ ಸಂಚು ಹೂಡಿದಂತೆ ಹರಿಕೃಷ್ಣ ಮೆಹತಾಬರು ಮರಳಿ ಒಡಿಸ್ಸಾಗೆ ಬರುವರೇ ಎಂದು ಹೇಳುವಂತಿಲ್ಲ. ಡಾ| ಮೆಹತಾಬರಿಗೆ ಕೇಂದ್ರದಲ್ಲಿಯೂ ಸಟ್ಟ ಭದ್ರ ಸ್ಥಾನವೇನೂ ದೊರಿತಿರುವುದಿಲ್ಲ. ಮಾತ್ರವಲ್ಲ, ಮಿತ್ರರು ಸಿರಾಜುದ್ದೀನ ಪ್ರಕರಣದಲ್ಲಿ ಸಿಲುಕಿಕೊಂಡವರು; ಅವರು ಇನ್ನೂ ದೋಷಸತ್ವದಿಂದ ಮುಕ್ತಿ ಹೊಂದಿಲ್ಲ. ಈ ಪ್ರಕರಣವು ವಿಚಾರಣೆಗೆ ಯೋಗ್ಯವೇ ಎಂಬ ನಿರ್ಧಾರ ಇಷ್ಟರಲ್ಲಿಯೇ ಹೊರಬರಲಿದೆ. ಈ ನಿರ್ಧಾರ ಮಿತ್ರರಿಗೆ ಪ್ರತಿಕೂಲವಾದರೂ ಆಗಬಹುದು.

ಬಿಹಾರದಲ್ಲಿ ವಿನೋದಾನಂದರು ತಮ್ಮ ಉತ್ತರಾಧಿಕಾರಿಯ ಹೆಸರನ್ನೂ ಸೂಚಿಸದೆ ವಿನೋದವಾಡುತ್ತಲೇ ಇದ್ದಾರೆ. ಯಾರನ್ನಾದರೂ ಒಮ್ಮತದಿಂದ ನಾಯಕನಾಗಿ ಆರಿಸುವ ಕಾರ್ಯಕ್ಕೆ ತಕ್ಕ ವಾತಾವರಣವನ್ನು ನಿರ್ಮಿಸಲು ಅವರು ಪ್ರಯತ್ನಿಸುತ್ತಿದ್ದಾರೆ ಆದರೂ ಅಲ್ಲಿ ಹಿಂದುಳಿದವರು ಮತ್ತು ಹರಿಜನರು ಕಾಂಗ್ರೆಸ್‌ನಲ್ಲಿ ಬಹುಸಂಖ್ಯಾಕ ಗುಂಪಿನವರು. ಇವರದೇ ಮೇಲುಗೈ ಆದರೂ ಆಗಬಹುದು. ಆದುದರಿಂದಲೇ ಇಲ್ಲಿನ ಯಾವ ಬುದ್ಧಿಗೂ ಸರಿಯಾದ ಪುಷ್ಟಿಯಿಲ್ಲ. ಪ್ರಾಯಃ ಸ್ಪರ್ಧೆ ನಡೆದೇ ತೀರುವ ಸಂಭವ ಹೆಚ್ಚು

ಗುಜರಾಥದ ಜೀವರಾಜ ಮೆಹತ ಮತ್ತು ಬಲವಂತ ರಾಯ್ ಮೆಹತರ ನಡುವೆ ಮೊದಲೂ ಪೈಪೋಟಿಯಿತ್ತು. ಆದರೆ, ವರಿಷ್ಠರ ಕೃಪಾದೃಷ್ಟಿ ಜೀವರಾಜರ ಮೇಲಿದ್ದುದರಿಂದ ಬಲವಂತರು ಅಂದು ನಿರ್ಬಲರಾದರು. ಆದರೆ, ಮರಳಿ ಬಲಿಯಾಗುವ ಲಕ್ಷಣಗಳಿವೆ. ಏಕೆಂದರೆ, ಅಲ್ಲಿ ಮುರಾರ್ಜಿ ಭಾಯಿಯವರ ಮೇಲಣ ಅಭಿಮಾನವಿನ್ನೂ ಕುಂದಿಲ್ಲ. ಭಾಯಿಯವರನ್ನು ಹೆಸರಿಸುತ್ತಾರೋ ಅವರು ಸುರಿಸಿದ ಜೊಲ್ಲು ಸಾರ್ಥಕವಾಗುವುದು ಸ್ವಾಭಾವಿಕ. ಮುರಾರ್ಜಿಯವರ ಒಲವು ಬಲವಂತರ ಕಡೆಗೇನೇ ಇರುವುದರಿಂದ, ಅಲ್ಲಿ ಅವಿರೋಧವಾಗಿಯೇ ಇವರು ಆಯ್ಕೆಗೊಳ್ಳುವ ನಿರೀಕ್ಷೆ ಹೆಚ್ಚು, ಮತ್ತದು ಸ್ವಾಭಾವಿಕ ಕೂಡ ಹೌದು. ಆದರೂ ಇದಕ್ಕೆ ತುಸುವಾದರೂ ಪರಿಶ್ರಮ ಆಗತ್ಯವೆನಿಸ ಬಹುದು.

ಪಂಜಾಬದ ಅನಭಿಷಿಕ್ತ ದೊರೆ ಪ್ರತಾಪಸಿಂಹ ಕೈರಾನರು ಕೂಡ ತಮ್ಮ ಹುದ್ದೆಯನ್ನು ಬಿಟ್ಟುಕೊಡುವರೆಂದು ವದಂತಿಯಿದೆ. ಆರೋಪಗಳ ಮೇಲೆ ಆರೋಪಗಳ ಮಾಲೆಯನ್ನೇ ತೊಟ್ಟು ಕೊಂಡ ಕೈರಾನರು ನೆಹರೂರವರ ಕೃಪೆಯನ್ನು ಸಂಪೂರ್ಣ ಸಂಪಾದಿಸಿದ್ದಾರೆ. ಅವರ ಮೇಲಿನ ಎಲ್ಲ ಆರೋಪಗಳನ್ನೂ ತಾನೇ ಸ್ವಯಂ ವಿಚಾರಿಸುವ ಹೊಣೆಗಾರಿಕೆಯನ್ನು ನೆಹರು ಹೊತ್ತು ಕೊಂಡಿರುವಾಗ, ಅವರು ಕೈರಾನರ ನಿರ್ಗಮನಕ್ಕೆ ಒಲಿದಂತೆ ಭಾಸವಾಗುವುದಿಲ್ಲ. ಆದುದರಿಂದಲೇ ಕೈರಾನರ ಬಲಗೈಬಂಟರು ತುಸು ಧೈರ್ಯತಾಳಿದ್ದಾರೆ. ಆದರೂ ಆರೋಪಕ್ಕೊಳಗಾದವರನ್ನು ಅದು ದೊಡ್ಡದಿರಲಿ, ಚಿಕ್ಕದೇ ಇರಲಿ, ಮತ್ತೂ ಮತ್ತೂ ಅಧಿಕಾರದಲ್ಲಿರಿಸುವುದು ಸರಿಯೇ ಎಂದು ಹೇಳಬಾರದು. ಹಲವಾರು ಬಾರಿ ವಿಧಾನ ಸಭೆಯ ವಿಶ್ವಾಸವನ್ನು ಪಡೆದ ಕೈರಾನರು ಇನ್ನೊಂದು ಬಾರಿಯೂ ವಿಶ್ವಾಸ ಮತ ಪಡೆಯಲೂ ಬಹುದು.

ಕಾಶ್ಮೀರದ ಭಕ್ಷಿ ಗುಲಾಂ ಮಹಮ್ಮದರ ರಾಜಿನಾಮೆಯು ಅಲ್ಲಿ ಕೆಲವೊಂದು ಬದಲಾವಣೆಗಳಿಗೆ ಪ್ರೇರಕವಾಗ ಬಹು

(೮ನೇ ಪುಟ ನೋಡಿರಿ)

ಕ್ರಮಣವನ್ನೇ ನಡೆಸಿಲ್ಲವೆಂಬುದನ್ನೂ ಅಪರೋಕ್ಷವಾಗಿ ಆಡಿರುವದರಿಂದ ವಿಶ್ವಾಸಕ್ಕೆ ಎಡೆಯೇ ಇರುವುದಿಲ್ಲ.

ಮಾವೊ ವರ್ತನೆಯ ರಹಸ್ಯದಲ್ಲಿ ಇಲ್ಲಿಯ ಕಮ್ಯೂನಿಸ್ಟರ ಪಾತ್ರ ಇದರಿಂದ ಸ್ಪಷ್ಟವಾಗುತ್ತದೆ. ಚೈನಾ ಮುಂದೇನು ಮಾಡೀತೆಂಬುದಕ್ಕೆ ಅಮೇರಿಕದ ಅಧ್ಯಕ್ಷ ಕೆನೆಡಿ ಕೂಡಾ ಉತ್ತರ ಕೊಟ್ಟಿದ್ದಾರೆ.



● ಕುಮಾರಿ ಬಿಲ್ಲೆಗಳು ●

(ರಿಜಿಸ್ಟರ್ಡ Regd.)

ಪ್ರಕೃತಿಯು ವಿಫಲಗೊಂಡಾಗ ಉಂಟಾಗುವ ಕಾತರ ನಿವಾರಣೆಗೆ ಸಮಯೋಚಿತವಾದ ಆಯುರ್ವೇದೀಯ ಮಿಶ್ರಣ!

ಟ್ಯೂಬ್ 1ರ ಸಾಮಾನ್ಯ ರೂ. 4/- ಮಧ್ಯಮ ರೂ. 6/ ಉತ್ತಮ ರೂ. 9/-

P. Devee & Co. (N. J.) Calcutta—40.

ನಿಷ್ಪಿಕಿಸ್ವರು— ರಾಜಾ ಮೆಡಿಕಲ್ ಹಾಲ್, ಬೆಂಗಳೂರು ಕಂಟೋನ್‌ಮೆಂಟ್; ಕುಮ್ಟಾ ಫಾರ್ಮಸಿ, ಕುಮ್ಟಾ (ಉ. ಕ.)

25,000

ಪ್ರತಿಗಳಿಗೂ ಮಿಕ್ಕಿ
ಈ ವರೆಗೆ ಕರ್ನಾಟಕದಲ್ಲೆಲ್ಲ
ವಿಕ್ರಿತವಾಗಿರುವ

ಹೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

ಗೀತೆಯ ಸಮೂಲ ಭಾಷಾಂತರ ಇದೀಗ ಮಾರಾಟಕ್ಕೆ ಸಿದ್ಧವಾಗಿದೆ.

360 ಪುಟಗಳಿಗೂ ಮಿಕ್ಕಿದ
ಪಾಕೆಟ್ ಎಡಿಶನ್!

ದಪ್ಪವಾದ ಬಿಳಿ ನುಣುಪು ಕಾಗದ!

ಬೆಲೆ: ಸಾದಾ ಪ್ರತಿ ರೂ. ೧-೦೦
ಉತ್ತಮ ಪ್ರತಿ ರೂ. ೧-೫೦
ಅಂಚೆ ವೆಚ್ಚ ರೂ. ೦-೫೦

ರಿಯಾಯಿತಿ ಪ್ರತಿಗಳ ದರಕ್ಕೆ ಬರೆಯಿರಿ:

ನವಯುಗ ಪ್ರೆಸ್ ಉಡುಪಿ, ದ. ಕ.

ಗೇಹರಾಜ್ಯದಲ್ಲಿ
ನವರಾತ್ರಿಯ ಆಚರಣೆ

ಇಲ್ಲಿ ಕೇಳಿಂದ್ರೆ....

ಹ್ಞಾಂ...ಏನೆಂದೆ?

ಅಲ್ಲಾ, ಸ್ವಲ್ಪ ಇಲ್ಲಿ ಕೇಳೀಂದೆ...

ಹ್ಞೂಂ...ಅದಕ್ಕೇನಂತೀ? ಕೇಳ್ತಾ ಇದ್ದೇನಲ್ಲಾ....

ನೋಡಿ ಇವತ್ತು ನಮ್ಮ ಸರ್ಸ್ವ ಮನೇಲಿ ಶಾರದಾ ಪೂಜೆ ಅಂತೆ. ಒಂದ್ಸಲಗೆ ಹೋಗಿ ಬರ್ಲೇಂತ ...

ಹೋಗ್ಬಿಟ್ಟು ಬಂದ್ಬಿಡು. ಅದಕ್ಕೇನು? ನೆರೆಮನೆಯವ್ರು ಕರೀವಾಗ ಹೋಗೋದ್ಬೇಡ್ವೆ?...ಹ್ಞಾಂ ...ನೋಡು, ಯಾವಾ ಗಂತೆ ಪೂಜೆ?

ಈವತ್ತು ಹತ್ತು ಗಂಟೆಗೆ ಬಂದ್ಬಿಡ; ಮಧ್ಯಾಹ್ನ ಊಟಾನೂ ಮುಗ್ಸಿ ಸಂಜೆ ಹೋಗಬಹುದೂಂತ ಹೇಳಿದ್ಳು. ನಿಮ್ಗೆ ಶಾರದಾ ಪೂಜೇನೂ ಯಾವಾಗಾಂತ ಗೊತ್ತಿಲ್ಲಲ್ವಾ? ಅಬ್ಬಾ ನೀವೇ...

ಏನಿದು ಸುರುವಾಯ್ತು ಬೆಳಿಗ್ಗಿನ ಕಾಫೀಯೊಂದಿಗೇನೇ ರಾದ್ಧಾಂತ?

ಅಲ್ಲಾ, ಬ್ರಹ್ಮಚಾರಿಯಾಗಿ ಹುಟ್ಟಿದ್ರೂ ಶಾರದಾ ಪೂಜೆ ಯಾವಾಗಾಂತ ಮರ್ತ್ಹೋಯ್ತಲ್ಲಾಂತ....

ನೋಡು, ಈಗ ಹೇಗದು ಶಾರದಾ ಪೂಜೆ ಮಾಡ್ತಾರೆ? ಯಾರೋ ಹೇಳಿದ್ರು ಮುಂದಿನ ತಿಂಗ್ಳ ೨೩ ತಾರೀಕೂಂತ.'

ಇವರೊಬ್ರು ಏನಂತಾರಂತೀ? ಈವತ್ತೂಂತ ಸರಿಯಾಗಿಯೇ ಹೇಳಿದ್ಳು ನಿನ್ನೆ.

ಅಲ್ವೆ, ಏನೋ ಪಂಚಾಂಗದಲ್ಲಿ ಮುಂದಿನ ತಿಂಗ್ಳೂಂತ ಬರೆದಿದ್ದಾರಂತೆ...

ಅಯ್ಯೋ ಹಾಗಾ ಉಂಟೆ?

ಅಲ್ಲಿ, ಪಿತೃ ಪಕ್ಷ ಕಳೆದ ಕೂಡ್ಲೆ ಬರುತ್ತೆ ನವರಾತ್ರಿ. ಆದರೆ, ಈ ವರ್ಷ ಅಮಾಸ್ಯೆ ಕಳೆಯುತ್ಲೂ ಅಧಿಕ ಅಶ್ವಯುಜ ಮಾಸ ಬರುತ್ತಾ ಇಂದ, ಅಲ್ಲಿ ಯಾವ ಶುಭಕಾರ್ಯವನ್ನು ಮಾಡ ಬಾರದೂಂತ ಉಡುಪಿ ಪಂಚಾಂಗದಲ್ಲಿ ಮುಂದಿನ ಸಂಸರ್ಷ ನಿಜ ಅಶ್ವಯುಜದಲ್ಲೇ ನವರಾತ್ರಿ ದಿಗಳನ್ನು ಆಚರಿಸ ಬೇಕೂಂತ ಬರೆದಿಯಂತೆ ನಿನ್ನೆ ರಾತ್ರಿ ರಾಮು ಹೇಳ್ತಿದ್ದ....

ಅಂದ್ರೆ, ಈ ಬಾರಿ ಅಪ್ಪಮಿಯಂತೆಯೇ ಎರಡು ನವರಾತ್ರೀಂತ ಅಲ್ವೆ?

ನವರಾತ್ರಿ ಎರಡಾಗೋದುಂಟೆ?ಅಥ್ವಾ ಎರಡು ರಾತ್ರಿಗಳನ್ನು ನವರಾತ್ರೀಂತ ಅನ್ನಾರೆಯೆ?

ಸುರುವಾಯ್ತು ಇವರದ್ದೊಂದು ಕೊಂಕು. ಎರಡು ಬಾರಿ ನವರಾತ್ರಿ ಆಚರ್ಸ ಬೇಕಾಯ್ತೂಂತಂದ್ರೆ...

ಯಾರೇ ಹಾಗೆಂದವರು? ನೀನು ಹೇಳಿದಾಗೆ ಅನ್ರೆ, ಪಾರ್ಥ ಎರಡು ಬಾರಿ ಕುರುಕ್ಷೇತ್ರ ಯುದ್ಧ ಮಾಡಿದ ಅಂದಾಯ್ತಲ್ಲ?

ಶ್ರೀ ಕೃಷ್ಣನೇ ಎರಡು ಬಾರಿ ಹುಟ್ಟಿದ ಅಂದಾಗ, ಮತ್ತೆ ಅರ್ಜುನನ ಗತಿಯೇನು?

ಪರ್ವಾಯಿಲ್ಲ ಕಣೆ ನೀನು. ಮಾತ್ನಾಡ್ಲು ಚೆನ್ನಾಗಿ ಕಲ್ತುಕೊಂಡೆ. ಅಲ್ಲ, ಅಆ ಇ ಈ ಬಾರದೆ ಇರೋಳು ನೀನು ಇಷ್ಟೆಲ್ಲಾ ಕಲ್ತುಕೊಂಡದ್ದು ಯಾವಾಗಾಂತ? ಮಹಿಳಾ ಸಮಾಜಕ್ಕೆ ಹೋಗಿ ಎಲ್ರೂ ಕಷ್ಟಗಳಾಗೇ ಆಗ್ತಿರೋವಾಗ...

ಸಾಕು ಬಿಡೀಂದ್ರೆ ಪಾಪ, ಯಾರೋ ಒಬ್ಬಿಬ್ಬರು ಒದಗಿದ ಅವಕಾಶವನ್ನ ಉಪಯೋಗಿ ಕೊಂಡ್ರೆ, ಎಲ್ರನ್ನೂ ಯಾಕೆ ಹಾಗಂತೀರಾ ನೀವು? .

ಅಂದ್ರೆ, ನೀನು ಓದು ಬರಹ ಕಲ್ತೆ ಅನ್ನು....

ಗೊತ್ತಾಗೋದಿಲ್ವೆ ನಿಮ್ಗೆ?....

ಗೊತ್ತಾಗಿಯೇ ಕೇಳಿದ್ದು. ಅಂತೂ ನಮ್ಮ ಸರ್ಕಾರದ ಒಂದು ಯೋಜನೆ ಸಫಲವಾಗುತ್ತಾನ್ನು.... .

ಸುರುವಾಯ್ತು ನಿಮ್ಮ ಟೋಪಿ ಸರ್ಕಾರದ ಪ್ರಶಂಸೆ.... .

ಏನೇ ಅದು, ನೀನು ಸರ್ಕಾರಾಂತಂದ್ರೆ ಏರಿ ಹೋಗುತ್ತಿ ? .

ಮತ್ತೇನೂಂತ, ನೀವು ಅದ್ರ ಹೆಸ್ರು ಹೇಳಿ ಉಬ್ಬಿ ಹೋಗೂದೂಂತ.

ನೋಡು, ನಿನ್ನಂತಹ ಅಕ್ಷರಗೇಡಿಗೆ ಅಕ್ಷರ ಕಲಿಸಿ ಉದ್ಧಾರ ಮಾಡಿದ್ರೋಗ, ಅದನ್ನ ಹೊಗಳಿದ್ರೆ ತಪ್ಪೆ?

ತಪ್ಪೂಂತ ಯಾರು ಹೇಳಿದ್ರೀಗ ಸರಿಯೆ ಅನ್ನಿ !

ಮತ್ತೆ ಯಾಕೆ ರೇಗುತ್ತೀಯ?

ಅಲ್ಲಾ, ಇಷ್ಟೆಲ್ಲಾ ಮಾಡಿದ ನಿಮ್ಮ ಟೋಪಿ ಸರ್ಕಾರಕ್ಕೆ ಎರಡು ಬಾರಿ ಹುಟ್ಟಿದ ಕೃಷ್ಣನನ್ನ ಉದ್ಧಾರ ಮಾಡ್ಲಿಕ್ಕಾಗ್ಲಿಲ್ಲಾಂತ ಬೇಜಾರು. ಹಾಗೆಯೇ ಮಹಿಷಾಸುರನೂ ಪಾಪ, ಎರಡುಬಾರಿ ಸಾಯು ಬೇಕಾಯ್ತಲ್ಲ? ಚಾಮುಂಡಿಗೆ ಸುಮ್ಮನೆ ಶ್ರಮವಾಯ್ತಲ್ಲಾಂತ....

ನೀವು..ಅತ್ತು ಬಿಡೇ ಸ್ವಲ್ಪ....ಅತ್ತು ಬಿಡೇ....ಏನ, ನೀರು ಬರೋಲ್ವೆ ಮೆಣ್ಸಿನ ಪುಡಿ ತರ್ಲೇನು....

ಅಯ್ಯಯ್ಯ್ಯಾ....ನಿಮ್ಮ ದಮ್ಮಯ್ಯ. ಸ್ವಲ್ಪ ಸುಮ್ನಿರಿ ಸದ್ಯ. ಯಾರಾದ್ರೂ ನೋಡಿದ್ರೆ....

ನೋಡಿದ್ರೇನಂತೆ? ನಿನ್ನ ಅಳೋ ಭಂಗಿ ಹೋಗಿದೇಂತ ತೋರುತ್ತೆ. ಇಲ್ಲಾದ್ರೆ, ಹುಟ್ಟಿದವ್ರು ಯಾರೋ ಸತ್ತವರು ಯಾರೋ, ನಾಯಿಸಿದವ್ರು ಯಾರೋ ಅವರ ಬಗ್ಗೆ ಅಳುತ್ತೀಯ ಲ್ಲ....

ಪಾಪ, ಹೆಂಗಸರಿಗೆ ಕರೂದೂಂತಂದ್ರೆ ಪುನರ್ಜನ್ಮಾಂತ ಹೇಳ್ತಾರೆ ಹಾಗಿರೋವಾಗ ಈ ವರ್ಷ ದೇವಕಿ ಒಬ್ಬ ಕೃಷ್ಣನಿಗೆ ಎರಡುಬಾರಿ ಜನ್ಮ ಕೊಟ್ಳು ಅಂದ್ರೆ ....ಹಾಗೇನೇ...

ಸಾಕು ಬಿಡೇ ನಿನ್ನ ಪುರಾಣ. ಏನೋ ಶಾಸ್ತ್ರಿಗಳು ಗುಣಿಸಿ ಭಾಗಿಸಿ ಕೂಡಿಸಿ ಕಳೆದು ಮಾಡಿದ್ದಾರೆ. ನಿನ್ಗೆ ಯಾವಾಗ ಬೇಕಂದ್ರೂ ನೀನು ಆಚರ್ಸೂಂತ ಅಯ್ಕೆಗೆ ಬಿಟ್ಟಿದ್ದಾರೇನ್ನು. ಮತ್ತೆ ನೀನ್ಯಾಕೆ ಹೊಡ್ದಾಡ್ತೀಯೋ ಈಗ.

ನಾನೆಲ್ಲಿ ಹೊಡ್ದಾಡಿದೆ ನಿಮ್ಮ ಟೋಪಿ ಸರ್ಕಾರ ಎಲ್ಲದಕ್ಕೂ ಕೈ ಹಾಕುತ್ತೆ. ಹಾಗಿರುವಾಗ, ಈ ಶಾಸ್ತ್ರಿಗಳಿಗೂ ಸ್ವಲ್ಪ ತಿಳಿಹೇಳ್ಬಹುದಲ್ಲಾಂತಂದ್ರೆ...

ನೋಡು, ಧಾರ್ಮಿಕ ದೇಶದಲ್ಲಿ ಧರ್ಮಾಚರಣೆ ಸ್ವಾತಂತ್ರ್ಯ ಇದೆಯಲ್ಲ ನಿಗ್ಗೆ ಯಾವಾಗ ಬೇಕು ಆಗ ಆಚರ್ಸಿಬಿಡು ಅದಕ್ಕೇನಂತೆ ಅದ್ಕೆಲ್ಲಾ ಸರ್ಕಾರಾನ ಯಾಕೆ ಎಳೆದು ಹಾಕೋದು

ಅದು ಸರಿಯೇ ಅನ್ನಿ....ನಮ್ಗೆ ಯಾವಾಗ ಏನು ಆಗ್ಬೇಕು ಹಾಗೇನೇ ಮಾಡೋದು ಉತ್ತಮ ಅಲ್ವೆ?

ಮತ್ತೆ ಮಾಡೋದೇನು? ಯಾರ ಅಪ್ಪ ಯಾವಾಗ ಸತ್ತಾಂತ ತಿಥಿಕೂಡ ಸರ್ಕಾರ ಮಾಡಿಕೊಡ್ಬೇಕೇ

ಬೇಡಕಣ್ರಿ. ಅದೆಲ್ಲ, ಆ ಕೆಂಪಿನವರ ದೇಶದಲ್ಲೇ ಇರ್ಲಿ. ನಮ್ಗೇಕೆ?

ಹ್ಞಾಂ ಹಾಗೆ ಬಾದಾರೀಗೆ. ಈಗ ಹೇಳು ನೀನು ಯಾವಾಗ ಶಾರದಾ ಪೂಜೆ ಮಾಡ್ತೀಂತ..

ಹಾಗಾದ್ರೆ ಒಂದು ಪ್ಲಾನು ಮಾಡೋಣ ಇವತ್ತು ಹೇಗೂ ಸರ್ಸ್ವ ಮನೇಲಿ ಇದೆ. ನಾವ್ಯಾಕೆ ಇಟ್ಕೊಳ್ಳೇಕೂಂತ ಅಲ್ವೆ? ನೀವು ಹೇಳಿದಾಗೆ ಮುಂದಿನ ಸಂವತ್ಸರವೊ ವಿಷ ಸರ್ಗವೋ ಇದೆಯಲ್ಲಾ, ಅಗ್ಲೇ ನಾವು ಮಾಡೋಣ ಆಗ್ದೆ?

ಆಗ್ದೇ ಏನಂತೆ. ಹಾಗೆಯೇ ಅಲ್ಲ. ಅಂದ ಹಾಗೆ ಮಧ್ಯಾಹ್ನ ಗಸ್ತ್ರಿಸ ಮಾಡಿಟ್ಟು ಹೋಗು ಮತ್ತೆ.

ಹ್ಞೂಂ....

—ಗೋರಾ.

ಆದರ್ಶ ಚರಿತೆಗಳು-೪
ಯೋಗಿರಾಜ ಅರವಿಂದ

ಎಸ್. ಎಂ. ಶೆಟ್ಟಿ ಶಿವಮೊಂಜೆ ಪರ್ಕಾರಿ

೧೫ನೆಯ ಆಗಸ್ಟ ೧೮೭೨ರಂದು ಕಲ್ಕತ್ತೆಯಲ್ಲಿ ಅರವಿಂದರ ಜನನವಾಯಿತು. ಏಳು ವರ್ಷದವರಿರುವಾಗ ಇವರ ಇಬ್ಬರು ಸಹೋದರರು ವಿದ್ಯಾರ್ಜನೆಗಾಗಿ ಇಂಗ್ಲೆಂಡಿಗೆ ಹೊರಟಿದ್ದರು. ಅರವಿಂದರೂ ಅವರೊಡನೆ ಇಂಗ್ಲೆಂಡಿಗೆ ಹೋದರು. ಇಂಗ್ಲೆಂಡಿನ ಒಂದು ಆಂಗ್ಲ ಪರಿವಾರ ದಲ್ಲಿ ರವಿಂದರ ಪಾಲನೆ ಪೋಷಣೆ ನಡೆಯಿತು. ಅಲ್ಲಿಯೇ ಇವರು ವಿದ್ಯಾರ್ಜನೆಗೈದರು. ಇಂಗ್ಲೆಂಡಿನಲ್ಲಿದ್ದಾಗ ಇವರು ಆಂಗ್ಲಭಾಷೆಯನ್ನು ಮಾತ್ರವಲ್ಲದೆ, ಗ್ರೀಕ್, ಲ್ಯಾಟಿನ್, ಫ್ರೆಂಚ್, ಜರ್ಮನ್ ಮತ್ತು ಇಟಾಲಿಯನ್ ಭಾಷೆಗಳನ್ನು ಕಲಿತರು.

೧೮೯೩ರಲ್ಲಿ ಅರವಿಂದರು ಭಾರತಕ್ಕೆ ಹಿಂತಿರುಗಿ ಬಡೋದಾ ರಾಜ್ಯದಲ್ಲಿ ವಿಭಿನ್ನ ಸ್ಥಾನದಲ್ಲಿ ಸುಮಾರು ೧೩ ವರ್ಷಗಳ ಕಾಲ ದುಡಿದರು. ಇದೇ ಸಮಯದಲ್ಲಿ ಅವರು ಸಂಸ್ಕೃತ ಮತ್ತು ಕೆಲವು ಭಾರತೀಯ ಭಾಷೆಗಳನ್ನು ಕಲಿತರು. ಹಾಗೂ ಅನೇಕ ಕಾವ್ಯ ಗ್ರಂಥಗಳ ನಿರ್ಮಾಣಗೈದರು.

೧೯೦೬ರಲ್ಲಿ ಬಡೋದೆಯನ್ನು ಬಿಟ್ಟು ಕಲ್ಕತ್ತೆಗೆ ಹಿಂತಿರುಗಿದರು. ಅಲ್ಲಿ ಅವರು 'ಬಂಗಾಲ ನ್ಯಾಶನಲ್ ಕಾಲೇಜಿನ, ಪ್ರಿನ್ಸಿಪಾಲರಾದರು. ದೇಶದಲ್ಲಿ ಆಗ ಸ್ವಾತಂತ್ರ್ಯ ಪ್ರಾಪ್ತಿಯ ಪ್ರಯತ್ನ ನಡೆಯುತಿತ್ತು. ವಂಗಭಂಗ ಆಂದೋಲನವು ಅವನ್ನ ಮತ್ತಷ್ಟು ತೀವ್ರಗೊಳಿಸಿತು. ಮಹಾರಾಷ್ಟ್ರದಲ್ಲಿ ಲೋಕಮಾನ್ಯ ತಿಲಕರು ತರುಣವರ್ಗವನ್ನು ಪ್ರೋತ್ಸಾಹಿಸುತ್ತಿದ್ದರು ಶ್ರೀ ಅರವಿಂದರು ಅದೇ ಸಮಯ 'ವಂದೇ ಮಾತರಂ, ಎಂಬ ಪತ್ರಿಕೆಯನ್ನು ತೆರೆದರು. ಈ ಪತ್ರಿಕೆಯಲ್ಲಿ ವಿದೇಶೀ ಸರಕಾರದ ತೀವ್ರ ಆಲೋಚನೆ ಗೈದುದರಿಂದ ಅರವಿಂದರು ಜೇಲಿಗೆ ಹೋಗಬೇಕಾಯಿತು ಆದರೆ ಅನಂತರ ಅವರನ್ನು ಸರಕಾರದವರು ಬಿಟ್ಟು ಬಿಟ್ಟರು

ಸೂರತ್ ಕಾಂಗ್ರೆಸಿನ ಸಮಯದಲ್ಲಿ ತೀವ್ರದಳದ ಸಭಾಪತಿ ಶ್ರೀ ಅರವಿಂದರೇ ಆಗಿದ್ದರು, ಕ್ರಾಂತಿಕಾರೀ ಕಾರ್ಯಗಳಲ್ಲಿ ಭಾಗವಹಿಸುತ್ತಿದ್ದರೆಂಬ ಆರೋಪದ ಮೇಲೆ ಅರವಿಂದರನ್ನು ಪುನಃ ಬಂಧಿಸಲಾಯಿತು. ಆದರೆ ಇದಕ್ಕೆ ಯಾವೊಂದೂ ಪ್ರಮಾಣವು ದೊರೆಯದರಿಂದ ಒಂದು ವರ್ಷದ ಬಳಿಕ ಅಂದರೆ ೧೯೦೯ರಲ್ಲಿ ಇವರನ್ನು ಜೇಲಿನಿಂದ ಬಿಡಲಾಯಿತು. ತನ್ನ ಜೇಲಿನ ವಾಸದ ಸಮಯದಲ್ಲಿ ಅರವಿಂದರು ಯೋಗಾಭ್ಯಾಸ ನಡೆಸಿದರು. ಅಲ್ಲಿಂದ ಹೊರಬಂದ ಬಳಿಕ 'ಧರ್ಮ, ಮತ್ತು, ಕರ್ಮಯೋಗಿ, ಎಂಬೆರಡು ಪತ್ರಿಕೆಗಳನ್ನು ಅರವಿಂದರು ಪ್ರಕಟಿಸಿದರು. ಆದರೆ ಅವರ ಮನಸ್ಸು ರಾಜನೀತಿಯಲ್ಲಿ ಆಸಕ್ತಿ ತಳೆಯುತ್ತಿರಲಿಲ್ಲ. ಏಕಾಂತದಲ್ಲಿ ಯೋಗಾಭ್ಯಾಸಗೈಯಲಿಕ್ಕಾಗಿ ಇವರು ೧೯೧೦ ರಲ್ಲಿ ಚಂದ್ರನಗರಕ್ಕೆ ಹೋಗಿ ಅಲ್ಲಿಂದ ಸಮುದ್ರ ಮಾರ್ಗವಾಗಿ ಪಾಂಡಿಚೇರಿಗೆ ಹೋದರು ಪಾಂಡಿಚೇರಿಗೆ ಅವರು ಬರುತ್ತಲೇ ಪೂರ್ಣವಾಗಿ ಯೋಗಸಾಧನೆಯಲ್ಲಿ ನಿರತರಾದರು. ೧೯೧೪ರ ತನಕ ಏಕಾಂತ ಸೇವನೆ ಹಾಗೂ ಯೋಗಾಭ್ಯಾಸ ನಡೆಸಿದ ಬಳಿಕ ಅರವಿಂ



ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ.
14 CT ಚಿನ್ನದ ಆಭರಣಗಳಲ್ಲಿ 58⅓% ಶುದ್ಧ ಪುತ್ಥಳಿ ಚಿನ್ನ ಇರುತ್ತದೆ
ಬೇಡದಿದ್ದಲ್ಲಿ 1 ರೂ ಕಮ್ಮಿಯಲ್ಲಿ ಯಾವಾಗಲೂ ಬಜಾರು ಧಾರಣೆಗೆ ಪಡಕೊಳ್ಳುವ ಭರವಸೆ ಕೊಡುತ್ತೇವೆ.
ಹಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡಕೊಳ್ಳುವರೆ ಸರಕಾರದ ಲೈಸನ್ಸು ಸಿಕ್ಕಿರುತ್ತದೆ
ಮದುವೆ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡಕೊಂಡು ಖಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.

ಶ್ರೀ ಕೃಷ್ಣಾ ಜ್ಯುವೆಲರಿ ಮಾರ್ಟ್
ತೆಂಕಪೇಟೆ — ಉಡುಪಿ.
ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.
ಫೋನ್ ನಂಬ್ರ: 66

REGD. No. B. G. 176
LICENCE No. 31
Licensed to Post without Prepayment

ದರು ತತ್ವಜ್ಞಾನದ ವಿಷಯದಲ್ಲಿ “ಆರ್ಯ” ಎಂಬ ಮಾಸಿಕವನ್ನು ಪ್ರಕಟಿಸಿದರು. ಇದೇ ಪತ್ರಿಕೆಯಲ್ಲಿ ಅವರ ಅದೆಷ್ಟೋ ಮಹತ್ವಪೂರ್ಣ ಗ್ರಂಥಗಳು ಧಾರಾವಾಹಿಯಾಗಿ ಹೊರಬಂದವು.

ಆರಂಭದಲ್ಲಿ ಪಾಂಡಿಚೇರಿಯಲ್ಲಿ ಅರವಿಂದರೊಡನೆ ಬರೇ ನಾಲ್ಕೈದು ಜನ ಶ್ರದ್ಧಾಳುಗಳು ಮಾತ್ರ ಇದ್ದರು. ಅನಂತರ ಅವರ ಆಧ್ಯಾತ್ಮಿಕ ಪಥದರ್ಶನುಸರಣೆಗಾಗಿ ದೂರ ದೂರದಿಂದ ಜನರು ಬರತೊಡಗಿದರು. ಸಾಧಕರ ಸಂಖ್ಯೆ ಹೆಚ್ಚತೊಡಗಿತು ಶ್ರೀ ಅರವಿಂದಾಶ್ರಮ ಸಾಧಕರ ಪಾವನ ತೀರ್ಥವಾಗಿ ಬಿಟ್ಟಿತು.

ಎನೆಯ ದಶಂಬರ ೧೯೫೦ ರಂದು ಶ್ರೀ ಅರವಿಂದರು ದೇಹವನ್ನು ತ್ಯಜಿಸಿದರು. ಆದರೆ ಈ ಸಮಯದೊಳಗಾಗಿಯೇ ವಿಶ್ವದಲ್ಲಿ ಅರವಿಂದಾಶ್ರಮವು ಆಧ್ಯಾತ್ಮಿಕ ಕೇಂದ್ರದ ರೂಪದಲ್ಲಿ ಸುವಿಖ್ಯಾತವಾಗಿತ್ತು.

ಸರ್ವಾತ್ಮ ಪ್ರಭುವಿನ ಸಮ್ಮುಖದಲ್ಲಿ ಪೂರ್ಣ ಆತ್ಮ ಸಮರ್ಪಣೆ ತನ್ನ ಇಚ್ಛೆ ಯೋಜನೆಗಳನ್ನೆಲ್ಲಾ ಬಿಟ್ಟು ಪ್ರಭುವಿನಲ್ಲಿ ನಿರ್ಭರರಾದರೆ ಆವನ ದಿವ್ಯ ಚೇತನ ಸತ್ವವು ನಿಮ್ಮಲ್ಲಿ ಆವಿರ್ಭವಿಸಿ ನಿಮ್ಮ ಪ್ರತಿಯೊಂದು ಕಾರ್ಯವೂ ಸಿದ್ಧಾರ್ಥವಾಗಿ ಪೂರ್ಣವಾಗುತ್ತದೆ ಎಂಬುದೇ ಶ್ರೀ ಯೋಗಿರಾಜ ಅರವಿಂದರ ಉಪದೇಶವಾಗಿತ್ತು.

(ಮೂಲ:–ಠಾಕುರ್ ಸುದರ್ಶನ ಸಿಂಹ)

ಪಂಚಮ ದಳದ ಭೀಭತ್ಸ ಕುಕೃತ್ಯ

(೩ನೇ ಪುಟದಿಂದ)

ದು. ಅಲ್ಲಿರುವ ಸರಕಾರಿ ಪಕ್ಷ ಪ್ರಜಾಪರಿಷತ್ತನ್ನು ಕಾಂಗ್ರೆಸ್ಸಿನಲ್ಲಿ ವಿಲೀನಗೊಳಿಸುವುದು, ಪ್ರಧಾನ ಮಂತ್ರಿಯನ್ನು ಮುಖ್ಯಮಂತ್ರಿ ಯೆಂದೂ ಸದರ್–ಇ–ರಿಯಾಸತರನ್ನು ರಾಜ್ಯಪಾಲರೆಂದೂ ಹೆಸರಿಸುವುದರಿಂದ ಕಾಶ್ಮೀರವನ್ನು ಭಾರತದ ಇತರ ರಾಜ್ಯಗಳ ಮಟ್ಟಕ್ಕೆ ತರುವಲ್ಲಿ ಪ್ರಯೋಜನವಾಗುವುದೆಂದೂ ಕೆಲವರ ಅಭಿಪ್ರಾಯ. ಇದರಿಂದ ಅನಾವಶ್ಯಕವಾದ ಕೆಲವೊಂದು ಸಂದಿಗ್ಧ ಪರಿಸ್ಥಿತಿಗಳು ದೂರವಾದರೂ ಆಗಬಹುದು. ಭಕ್ಷಿಯವರ ನಿರ್ಗಮನಕ್ಕೆ ಅಲ್ಲಿನ ಜನತೆ ವಿರೋಧ ಸೂಚಿಸಿದ್ದರೂ, ಕಾಶ್ಮೀರಿಗಳ ಇಚ್ಛೆ ಪೂರೈಸಲು ಇದು ಹೆಚ್ಚಿನ ಅನುಕೂಲವಾದೀತು.

ಕೇರಳದ ನಾಯಕತ್ವದ ಬಗ್ಗೆಯೂ ಊಹಾಪೋಹಗಳು ನಡೆದಿವೆ. ಆರ್. ಶಂಕರರ ಮೇಲೆ ಗಂಭೀರ ಸ್ವರೂಪದ ಲಂಚಾಪ್ಯಾದನ ಮತ್ತು ಹರಡಿರುವುದರಿಂದ, ಅದವರನ್ನು ಕಬಳಿಸಿದರೂ ಕಬಳಿಸಬಹುದು. ಯಾವ ನಿರ್ಧಾರವನ್ನಾದರೂ ಇಷ್ಟರಲ್ಲೇ ಹೇಳುವುದು ಸಾಧ್ಯವಿಲ್ಲ.

ಹೀಗೆ ಹೆಚ್ಚಿನ ರಾಜ್ಯಗಳಲ್ಲಿ ಪುನಃ ತಲೆದೋರಿದೆ ಗುಂಪುಗಾರಿಕೆ. ಈ ಗುಂಪುಗಾರಿಕೆಯನ್ನು ಅಳಿಸುವುದು ಸಾಧ್ಯವಿಲ್ಲವೆ? ಇದರಿಂದಾಗಿಯೇ ಕಾಂಗ್ರೆಸ್ಸು ಇಂದು ಅಶಕ್ತವಾಗಿದೆ. ಇದಕ್ಕೆ ಕಾಯಕಲ್ಪ ಚಿಕಿತ್ಸೆ ನಡೆಸುವ ಶಕ್ತಿಯುಳ್ಳ ‘ಕಾಮರಾಜ ಸೂತ್ರವು ಈಗ ನಿಷ್ಫಲವೆನಿಸಿದರೆ ಮುಂದೆ’ ದೆಂದೂ ಚೇತರಿಸಿಕೊಳ್ಳಲಾರದು. ಗುಂಪುಗಾರಿಕೆಯನ್ನು ತೀವ್ರವಾಗಿ ಪ್ರತಿಭಟಿಸಿ, ಯೋಗ್ಯ ಪ್ರತಿಭಾವಂತರನ್ನು ತಮ್ಮ ನಾಯಕರೆಂದು ಆರಿಸಿಕೊಳ್ಳುವ ಅಧಿಕಾರ ಶಾಸಕರಿಗಿದೆ. ದೇಶ ಹಿತ ದೃಷ್ಟಿಯಿಂದ ಶಾಸಕರು ತಮ್ಮ ಕರ್ತವ್ಯವನ್ನು ಪೂರೈಸಲು ವಿಶೇಷ ಆಸಕ್ತಿ ತಾಳುವುದು ಅಗತ್ಯವಿಗೆ.

ಇದಕ್ಕಿಂತಲೂ ಭಿನ್ನವಾದ ಸಮಸ್ಯೆ ಉಳಿದ ರಾಜ್ಯಗಳದ್ದು. ಮಂತ್ರಿಗಳ ಸಂಖ್ಯೆಯು ಹಿರಿಯದಾಗಿದ್ದಲ್ಲಿ, ಅದರ ಪ್ರಮಾಣವನ್ನು ಕನಿಷ್ಠಕ್ಕೆ ಇಳಿಸುವುದು ಅತ್ಯಂತಾವಶ್ಯಕ. ನಮ್ಮ ಕರ್ನಾಟಕವಾದರೂ ಇದಕ್ಕಿಂತ ದೂರನಿಲ್ಲಲಾರದು. ಆದರೆ, ಇಂತಹ ರಾಜ್ಯಗಳಲ್ಲಿನ ಮುಖ್ಯ ಮಂತ್ರಿಗಳು ಮತ್ತೊಂದು ವಿಲಕ್ಷಣ ಸಮಸ್ಯೆಯನ್ನೆದುರಿಸ ಬೇಕಾಗುತ್ತದೆ ಮಂತ್ರಿ ಆಪೇಕ್ಷೆಯಂತೆ ವಿಶಾಲ ತಳಹದಿಯ ಸಂಪುಟವನ್ನವರು ನಿರ್ಮಿಸಿಕೊಂಡಿದ್ದರು. ಈಗ ಇವರಲ್ಲಿ ಯಾರನ್ನು ಕೈಬಿಡಬೇಕು ಎಂಬುದು ಮಹಾ ಯಕ್ಷಪ್ರಶ್ನೆ. ಇದಕ್ಕೆ ಉತ್ತರವೀಯುವ ಕೆಚ್ಚು ಯಾರು ತಾನೇ ಪ್ರದರ್ಶಿಸಿಯಾರು?

ಅಂತೂ ಈ ಯೆಲ್ಲಾ ಬಗೆಯ ಗೊಂದಲಗಳಿಗೊಂದು ನಿಯಂತ್ರಣವಿರಬೇಕೆನಿಸುತ್ತದೆ. ಆಳುವ ಪಕ್ಷದಲ್ಲಿ ಛಿದ್ರಗಳು ಎಂದೆಂದಿಗೂ ಮೂಡದಂತೆ ಅದರ ಸಂಘಟನೆಯಾಗ ಬೇಕಾಗುತ್ತದೆ. ಅಧಿಕಾರದ ಅಮಿಷಕ್ಕೆ ಬಲಿಯಾಗದಂತಹ ಕರ್ತವ್ಯ ನಿಷ್ಠೆಯನ್ನು ಕಾಂಗ್ರೆಸಿಗರಲ್ಲಿ ಮೂಡಿಸಬೇಕಾಗುತ್ತದೆ ಪಕ್ಷದ ಮುಂದೆ ವ್ಯಕ್ತಿ ಕಿರಿದು ಎಂಬುದರಲ್ಲೂ ಸತ್ಯಾಂಶವಿಲ್ಲವೆ? ಪಸನ್ನೋ ಭವಿಷ್ಯದಲ್ಲಿ ಪಕ್ಷ ಸಂಘಟನೆಗೆ ಬದ್ಧ ಕಂಕಣರಾದ ಹಿರಿಯರು ಈ ಆಶಯವನ್ನು ಕಾರ್ಯರೂಪಕ್ಕೆ ತರುವಲ್ಲಿ ಯಶಸ್ವಿಯಾಗುತ್ತಾರೆಯೆ? ಆದರೆಂದರೆ, ಅದೊಂದು ಅತ್ಯಂತಾದ್ಭುತ ಮಹತ್ವದ ನೆಯೆನಿಸದೆ?

NOTICE.

In the Court of the Subordinate Judge of Udipi, S. K.

R. E. P No. 40/1963.
in O. S. No. 172/1951.
(Sub-Court, Mangalore)

Between

Amruthavathi & others. —Petitioners.

and

Saraswathi & others. —Respondents.

To

(3) 3rd Respondent—Nabhiraja Padivala, Son of Saraswathi, C/o Laxmi Nivas, Budhavarapet, Poona.

4th Respondent.- Dharmaraja Padivala, Son of Saraswathi, C/o The Raja Laxmi Pictures, Vijayawada, Andhra Pradesh

Please take notice that in the above execution petition, the immovable properties belonging to you and set out in the shedule annexed to the execution petition have been ordered to be attached by the Court. Hense you are hereby prohibited from alienating or encumbring those properties in any manner, whatsoever. If you have any objection to the said order of attachment, you are to appear before the above Court at 10 A.M. on 9-10-1963 failing which the execution will proceed in your absence.

(By order of the Court)

Vishwanatha Hegde, K.
Advocate for Petitioners.
Udipi, S. K. 19-9-1963.

ವಿದೇಶ ವಿನಿಮಯ ಖಾತೆ

ಸಿಂಡಿಕೇಟ್ ಬ್ಯಾಂಕ್ ತನ್ನ 188 ಶಾಖೆಗಳ ಮೂಲಕ ಎಲ್ಲಾ ತರದ ಬ್ಯಾಂಕಿಂಗ್ ಸವಲತ್ತನ್ನು ತನ್ನ ಗಿರಾಕಿಗಳಿಗೆ ಕೊಡುತ್ತಿದೆ.

ಅದಲ್ಲದೆ, ತನ್ನ ವಿದೇಶ ವಿನಿಮಯ ಖಾತೆಯ ಮೂಲಕ ನಿಮ್ಮ ಸಕಲ ಅಂತರ್‍ರಾಷ್ಟ್ರೀಯ ವ್ಯವಹಾರಕ್ಕೂ ಸಿಂಡಿಕೇಟ್ ಬ್ಯಾಂಕ್ ಸಹಕರಿಸುತ್ತಿದೆ.

ಅತ್ಯುತ್ತಮ ಶೀಘ್ರ ಬ್ಯಾಂಕಿಂಗ್ ಸೇವೆಗೆ

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

..........ಸಮಾನ ಸೇವೆ ——— ಸರಿಯಾದ ಭದ್ರತೆ..........

ಉಡ್ಪಿ ಸಬ್ ಜಡ್ಜರ ಕೋರ್ಟಿನಲ್ಲಿ

O. S. No. 74/63

I M. ಅನಸೂಯ ಕೂಡಾ —ವಾದಿರು

ಮತ್ತು

ಮಹಾಬಲ ಶೆಟ್ಟಿ —ಪ್ರತಿವಾದಿ

ಯವರೊಳಗೆ

ಕೋರ್ಟಿನ ಫಾರ್ಮ ಪ್ರಕಾರ

ಮಹಾಬಲ ಸೆಟ್ಟಿ—ಬಿ. ಮಂಜಯ ಸೆಟ್ರ ಮಗ—ಕುಂದಾಪುರ ತಾಲ್ಲೂ ಕಂದಾವರ ಗ್ರಾಮದ ಮೂಡ್ಲಕಟ್ಟೆ ದೊಡ್ಡ ಮನೆಯಲ್ಲಿ ಯಿರುವವ ಯಿವರಿಗೆ ತಿಳಿಯಪಡಿಸುವದು

ವಾದಿಯರು ನಿಂಮ ಮೇಲೆ ತಂಮ ಜೀವನಾಂಶದ ಬಾಕಿಯಂನು ವಸೂಲು ಕೇಳಿ ಮಾಡಿದ ದಾವೆಯು ತಾರೀಕು 14–10–63ಕ್ಕೆ 3ನೆ ನೋಟ್ಸಿಗೆ ಯಿಟ್ಟದೆ. ನಿಂಮ ಆಕ್ಷೇಪಣೆ ಯಿದ್ದ ಸದ್ರಿ ದಿವಸ 11 ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಹೇಳಿಕೊಳ್ಳಬೇಕು. ಯಿಲ್ಲವಾದ್ರೆ ಏಕಪಕ್ಷವಾಗಿ ನಂಬ್ರವು ತೀರ್ಮಾನಿಸಲ್ಪಡುವುದು.

P. Padmanabha Rao
Vakil for Plaintiffs.
Udipi, 20—9—63

ಉಡುಪಿ ಡಿ. ಮು. ಕೋರ್ಟಿನಲ್ಲಿ

S. C. 69/1963.

ದಿ ಬಾಂಗಾಳ್ ನಾಯಕ್ ಬೇಂಕ್ ಲಿಮಿಟೆಡ್.ಯಿದ, ಟೌನ್‌ಬ್ರಾಂಚ್ ಎಜಂಟ— K. ರಾಮಚಂದ್ರ ಕಾಮತ —ವಾದಿ

ಮತ್ತು

1) M. ಕುನ್ನಿರಾಮನ್.A. ಚಿತಾಲಿ ಮಗ 2) ಕೃಷ್ಣ ಪೂಜಾರಿ-ದೂಮ ಪೂಜಾರಿ ಮಗ ಉಡ್ಪಿ ಕ್ಸಬಾ ಹೆಡ್ ಪೋಸ್ಟು ಆಫೀಸು ಉಡ್ಪಿ ಟೌನ್ —ಪ್ರತಿವಾದಿರು

ಸದ್ರಿ ಪ್ರತಿವಾದಿರಿಗೆ ಈ ಮೂಲಕ ತಿಳಿಪಡಿಸುವುದೇನೆಂದ್ರೆ –

ಪ್ರತಿವಾದಿರು ವಾದಿ ಬೇಂಕಿಗೆ ತಾರೀಕು 13—6—1960ರಲ್ಲಿ ರೂಪಾಯಿ 120|-ಕ್ಕೆ ಬರಕೊಟ್ಟ ಡಿಮಾಂಡು ನೋಟಿನ ಅಸಲು ಬಡ್ಡಿ ಅವೇಜು ಕೇಳಿ ವಾದಿಯು ದಾಕ್ಲು ಮಾಡಿದ ಸ್ಮೋಲ್ಕಾಂಡ ದಾವೆಯು ತಾ. 30-9-63 ಕ್ಕೆ ಯಿಟ್ಟದೆ. ಆ ದಿವ್ಸ ಹಗಲು ಗಂಟೆ 11 ಕ್ಕೆ ಸರಿಯಾಗಿ ನಿಮ್ಮ ಉದಾಹರಣೆಯಿದ್ದರೆ ಬ್ಯಾಹೀರು ಮಾಡಿಕೊಳ್ಳುವುದು ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲ್ಪಡುವುದು.

(By Order of the Court)

H Ramanath Pai
Advocate for Plaintiff.
Udipi, Dated 16—9—1963

READ & ADVERTISE IN NAVAYUGA WEEKLY

Edited, Printed & Published by K. H. Shetty. at the Navayuga Press, Udipi, S. India.

ಪ್ರಸಿದ್ಧ ಕವಿ
ಎಸ್ ವೆಂಕಟರಾಜರ
ಕವಿತಾಕಾಮಿನಿ
ಕವಿತಾ ಸಂಕಲನ
'ಕಿರಿಯರ ಪ್ರಪಂಚ'ದ
ಅಪೂರ್ವ ಪ್ರಕಟಣೆ
ಬೆಲೆ: ರೂ. ಎರಡು
ನವಭಾರತ ಪುಸ್ತಕ ಭಂಡಾರ
ಉಡುಪಿ

ನವಯುಗ

Estd. 1921 ಸ್ಥಾಪನೆ
Regd. No. B.G. 176
Vol. 43 No. 5

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
NAVAYUGA— NATIONAL WEEKLY
ಉಡುಪಿ, 3—10—1963 ಗುರುವಾರ

13 ನ. ಪೈಸೆ
ವಾ. ಚಂದಾ ರೂ. 6-75
ಸಂಪುಟ ೪೩ ಸಂಚಿಕೆ ೫

ಯಾವತ್ತೂ
ಪ್ರಿಂಟಿಂಗ್ ಕೆಲಸಗಳನ್ನು
ಮಾಡಿಕೊಡಲಾಗುವುದು
ಕ್ಲಪ್ತ ಸಮಯದಲ್ಲಿ
ಮಿತ ದರದಲ್ಲಿ ಉತ್ತಮ
ಮುದ್ರಣ
ಕೆಲಸಗಳಾಗಬೇಕೆ?
ಸಂದರ್ಶಿಸಿರಿ ಯಾ ವಿಚಾರಿಸಿರಿ—
ನವಯುಗ ಪ್ರೆಸ್,
ಪಾಲುಕೋಟೆ, ಉಡುಪಿ

ಮಲೇಶ್ಯಾದೊಡನೆ

ಸುಕರ್ಣರ ವ್ಯರ್ಥ ಭಿನ್ನಾಭಿಪ್ರಾಯ

ಆಗ್ನೇಯ ಏಶ್ಯಾ ಕೊನೆಗಾದರೂ ಎಚ್ಚತ್ತಿತು. ಆದರೆ, ಅದಿನ್ನೂ ಜಗತ್ತಿನ ಇತಿಹಾಸದಿಂದ ಪಾಠ ಕಲಿತುಕೊಂಡಂತೆ ತೋರುವುದಿಲ್ಲ. ಏಶ್ಯಾದಲ್ಲಿ, ಮುಖ್ಯವಾಗಿ ಮಧ್ಯ ಮತ್ತು ದೂರಪ್ರಾಚ್ಯದಲ್ಲಿ ಜನಜಾಗ್ರತಿ ಯಾಯಿತೇನೋ ನಿಜ. ಈ ಜಾಗ್ರತಿಯು ಸರಿಯಾದ ದಾರಿಯನ್ನು ಮುಟ್ಟದಿರುವುದು ಶೋಚನೀಯವಲ್ಲವೆ? ಒಂದು ಕಾಲದಲ್ಲಿ ಪಾಶ್ಚಾತ್ಯರ ವಸಾಹತುಶಾಹಿಯಾಗಿ ಉಳಿದಿದ್ದ ಏಶ್ಯದ ಈ ಭಾಗ ಜಾಗ್ರತಿಯ ಕಾರಣದಿಂದಲೇ ಸ್ವತಂತ್ರವಾಯಿತು. ವಸಾಹತುವಾದವು ಅಳಿಯುತ್ತ ಬಂದು ಅದೀಗ ನಾಮಾವಶೇಷವಾಯಿತು. ಆದರೆ, ಈ ಪ್ರದೇಶದ ರಾಷ್ಟ್ರ-ರಾಷ್ಟ್ರಗಳ ನಡುವೆ ಸಹ ಅಸ್ತಿತ್ವದ ಕಲ್ಪನೆಯು ಇನ್ನೂ ಹುಟ್ಟಿಕೊಂಡಿಲ್ಲದ ಕಾರಣ ಅವುಗಳ ನಡುವೆಯೇ ಭಿನ್ನ ಮತಗಳು ತಲೆದೋರಿದ್ದು, ಇದರ ಪರಿಣಾಮ ಯಾವ ರೀತಿಯಲ್ಲಿ ಕೊನೆಗೊಂಡೀತೆಂದು ಈಗಲೇ ಹೇಳುವುದು ಸಾಧ್ಯವಿಲ್ಲ. ಭಾರತ-ಪಾಕಿಸ್ತಾನಗಳ ಹೊಯ್ದಾಟವನ್ನೂ ಮೀರಿ ಇದೀಗ ಮಲೇಶ್ಯಾ ಮತ್ತು ಇಂಡೋನೇಶ್ಯಾಗಳ ತೀವ್ರ ಬಿಕ್ಕಟ್ಟು ಆಗ್ನೇಯ ಏಶ್ಯಾದ ಭದ್ರತೆಗೊಂದು ಪಂಥಾಹ್ವಾನವಾಗಿ ನಿಂತಿದೆ.

ಸುಕರ್ಣರಲ್ಲಿ ವಿಶ್ವಾಸ

ಇಂಡೋನೇಶ್ಯದ ಅಧ್ಯಕ್ಷ ಸುಕರ್ಣರ ಮೇಲೆ ಅಲ್ಲಿನ ಜನತೆ ತುಂಬ ನಂಬುಗೆಯಿಟ್ಟಿದೆ. ಸ್ವಸಾರ್ವಭೌಮತೆಯನ್ನು ಉಳಿಸಿಕೊಳ್ಳಲು ಇವರೇ ಸರ್ವಸಮರ್ಥರು; ತಮ್ಮ ಉದ್ಧಾರಕ್ಕೆ ಇವರೇ ಮಾರ್ಗದರ್ಶಕರು ಎಂದು ನಂಬಿದ್ದ ಅಲ್ಲಿನ ಪ್ರಜಾಕೋಟಿ ಅವರ ಜೀವಾವಧಿಯವರೆಗೆ ಅಧ್ಯಕ್ಷರನ್ನಾಗಿ ಆರಿಸಿತು. ಜಗತ್ತಿನ ಯಾವ ದೇಶದಲ್ಲಿಯೂ ಇಲ್ಲದ ಅತಿ ವಿಲಕ್ಷಣ ಸಂಪ್ರದಾಯವನ್ನು ಸ್ಥಾಪಿಸಿತು. ಸುಕರ್ಣರಾದರೂ ದೇಶದ ಮುಂದಿರುವ ಹತ್ತು ಹಲವು ಸಮಸ್ಯೆಗಳನ್ನು ಬಿಡಿಸುವ ಹೊಣೆಗಾರಿಕೆಯನ್ನು ಧೈರ್ಯವಾಗಿ ಹೊತ್ತು ಯಶಸ್ವಿಯ ದಾರಿಯಲ್ಲಿ ಮುಂದುವರಿದರು.

ಆದರ್ಶ ಕಲ್ಪನೆ

ಮಲಯಾ-ಸಿಂಗಾಪುರ-ಇಂಡೋನೇಶ್ಯ ಮತ್ತು ಫಿಲಿಪ್ಪಾಯಿನ್ ದ್ವೀಪಗಳ ನಡುವೆ ಹೊಂದಾಣಿಕೆಯನ್ನು ಸ್ಥಾಪಿಸುವ ಸದುದ್ದೇಶದಿಂದ ಅವುಗಳೆಲ್ಲವೂ ಒಂದಾಗಿ ಮಲೇಶಾ ರಚನೆಯಲ್ಲಿ ಆಸಕ್ತಿ ತಾಳತೊಡಗಿದವು. ಐಗುಪ್ತ ಮತ್ತು ಸಿರಿಯಾಗಳ ಸಂಯುಕ್ತ ಅರಬ ಪ್ರಜಾರಾಜ್ಯ ನಿರ್ಮಾಣದಿಂದ ಈ ಪ್ರೇರಣೆ ಬಂದು ದೊರೆತಿರಲೂಬಹುದು. ಆದರೆ, ಸಂ. ಅ. ಪ್ರಜಾರಾಜ್ಯವು ಕನಸಿನ ಮಂಡಿಗೆಯಾಗಿ ಪರಿಣಮಿಸಿದುದರ ಪ್ರಭಾವವು 'ಮಲೇಶ್ಯಾ'ದ ಕಲ್ಪನೆಯ ಮೇಲೆ ಬಿತ್ತೆಂದು ಭಾವಿಸಿದರೆ ತಪ್ಪಾಗಲಾರದು. ಇದೀಗ, ಇಂಡೋನೇಶ್ಯವು ಮಲೇಶ್ಯಾದಲ್ಲಿ ಸಮಾವೇಶಗೊಳ್ಳುವುದನ್ನು ಸುತರಾಂ ಮೆಚ್ಚುವುದಿಲ್ಲ. ಮೂಲಭೂತ ತತ್ವಗಳಲ್ಲಿಯೇ ಎಂದೂ ಕಾಣದ ತೀಕ್ಷ್ಣ ವಾತಾವರಣವು ಹಬ್ಬಿರುವಾಗ, ಅದು ಒಪ್ಪುವುದಾದರೂ ಹೇಗೆ? ಈ ಭಿನ್ನಾಭಿಪ್ರಾಯವು ಕೊನೆಗೊಳ್ಳದ ಹಂತಕ್ಕೆ ಬಂದು ಮುಟ್ಟಿದೆ ಎಂದು ಪ್ರಚಲಿತ ಘಟನೆಗಳೇ ಸಾಕ್ಷಿ ಹೇಳುತ್ತವೆ

ದೋಷ ಯಾರದು?

ಮೊದಲು ಆಸಕ್ತಿ ತೋರುತಿದ್ದ ಸುಕರ್ಣರೇ ಇಂದು ಕತ್ತಿ ಹಿರಿಯಲು ಮುಂದಾಗಿದ್ದಾರೆ. ಯುದ್ಧ ಸಿದ್ಧತೆಯನ್ನು ಮಾಡುತಿದ್ದಾರೆ. ಸರವಾಕ ಮತ್ತು ಉತ್ತರ ಬೋರ್ನಿಯೊಗಳಿಗೆ ಸೈನ್ಯವನ್ನು ಕಳಿಸುತಿದ್ದಾರೆ. ಮಲೇಶ್ಯಾಕ್ಕೆ ಆರ್ಥಿಕ ದಿಗ್ಬಂಧನವನ್ನು ಹೇರಿದ್ದಾರೆ. ಎರಡು ದೇಶಗಳ ನಡುವಣ ವ್ಯಾಪಾರ ಸಂಬಂಧವನ್ನು ಕಡಿದು ಹಾಕಿದ್ದಾರೆ. ಇಂತಹ ಉಗ್ರ ಕಾರ್ಯಾಚರಣೆಯಿಂದ ಮಲೇಶ್ಯಾದ ಆರ್ಥಿಕ ಪರಿಸ್ಥಿತಿಯು ತೀರ ಕೆಟ್ಟು ಹೋಗುವಂತೆ ಮಾಡಿದ್ದಾರೆ. ಇಷ್ಟೊಂದು ತೀವ್ರತೆಯನ್ನು ಸುಕರ್ಣರು ಏಕೆ ಕೈಗೊಂಡರು ಎಂಬ ಪ್ರಶ್ನೆಗೆ ಸೂಕ್ತ ಉತ್ತರವು ದೊರೆಯುವುದಿಲ್ಲ. ಮಲೇಶ್ಯಾದಿಂದ ಏನಾದರೂ ತಪ್ಪುಗಳಾಗಿದ್ದರೆ ಅದರ ಪ್ರಧಾನಿ ಟೆಂಕು ಅಬ್ದುಲ್ ರಹಮಾನರು ಒಪ್ಪಿಕೊಳ್ಳಲು ಸಿದ್ಧರಾಗಿಯೇ ಇದ್ದರು. ಅಥವಾ ಯಾವುದೇ ವಿವಾದಗ್ರಸ್ತ ವಿಷಯವಿದ್ದರೆ, ಅದನ್ನು ಶಾಂತಿಯುತ ಮಾತುಕತೆಗಳಿಂದ ಬಗೆಹರಿಸಲು ಅವರು ಅಭಿರುಚಿ ವಹಿಸಿದ್ದರು; ಇನ್ನೂ ಹೇಳುವುದಾದರೆ, ಸುಕರ್ಣರ ಮುಂದೆ ಮೊಣಕಾಲೂರಿ ಬೇಡಿಕೊಂಡಿದ್ದರು. ಇಂತಹ ಪರಿಸ್ಥಿತಿಯಲ್ಲೂ ವಜ್ರ ಸಮ ಕಠೋರ ಹೃದಯವು ಕರಗಲಿಲ್ಲವೆಂದಾದರೆ, ಅದರಲ್ಲಿ ರಹಮಾನರ ತಪ್ಪಿಗಿಂತ ಹೆಚ್ಚಾಗಿ ಸುಕರ್ಣರ ದೋಷವೇ ಮಿಗಿಲೆನ್ನಲೇ ಬೇಕಾಗುತ್ತದೆ.

ಉಚಿತ ಕೆಲಸವಿದಲ್ಲ

ಸಮಾವೇಶದ ಸಂಬಂಧದಲ್ಲಿ ಮಾತುಕತೆಯು ವಿಫಲವಾದಾಗ ಸುಕರ್ಣರು ಕೆರಳಿದ್ದರು. ಇದು ಅವರ ಅಹಂಕಾರದ ವಿಶ್ವರೂಪ. ಮಲೇಶ್ಯಾದ ಮೇಲೆ ಪ್ರತೀಕಾರ ಭಾವನೆಯನ್ನು ಅವರು ಇಟ್ಟುಕೊಂಡು ಸಮರ ಸನ್ನಾಹವನ್ನೇ ಮಾಡಿದರು. ಆಡಿದ ನಾಟಕದಲ್ಲಿ ತನಗೆ ಬಹುಮಾನ ಸಿಗಲಿಲ್ಲವೆಂಬ ವ್ಯಸನದಿಂದ ಸಿಟ್ಟಿಗೇಳುವ ಪಾತ್ರಧಾರಿಯಂತೆ ಅವರು ಹಾರಾಡಿದರು. ಇವರ ಈ ತೆರನ ವರ್ತನೆಯ ಬಗ್ಗೆ ರಹಮಾನರ ಪ್ರತಿಕ್ರಿಯೆಯೇನು? 'ಸುಕರ್ಣರ ಯಾವ ಕ್ರಮವನ್ನೂ ನಾವು ಗಮನಿಸುವುದಿಲ್ಲ. ಅದರ ಬಗ್ಗೆ ವ್ಯಾಕುಲನಾಗುವುದನ್ನು ನಾನು ಸಂಪೂರ್ಣ ಬಿಟ್ಟುಬಿಟ್ಟಿದ್ದೇನೆ. ಶಾಂತಿಯನ್ನು ಬೇಡಿ ಅವರ ಬಳಿಗೆ ಹೋದಾಗ, ಜಗತ್ತಿನ ದೃಷ್ಟಿಯಲ್ಲಿ ನನ್ನನ್ನು ಸಣ್ಣವನನ್ನಾಗಿ ಮಾಡಿಕೊಂಡೆ. ಅವರನ್ನು ಸಮಾಧಾನಪಡಿಸಲು ಏನೇನೆಲ್ಲ ಮಾಡಬಹುದೋ ಅದನ್ನೆಲ್ಲಾ ಮಾಡಿದ್ದೇನೆ. ಇನ್ನೇನನ್ನೂ ಮಾಡುವ ಪರಿಸ್ಥಿತಿಯಲ್ಲಿ ನಾನಿಲ್ಲ. ಈ ವಿಷಯದಲ್ಲಿ ನಾನು ಅಸಹಾಯಕ' ಈ ಉದ್ಗಾರಗಳಲ್ಲಿ ದಾರ್ಷ್ಟ್ಯವಡಗಿದೆಯೆನ್ನಬಹುದು; ಆದರೆ, ರಹಮಾನರು ಮಾಡಿದ ಪ್ರಯತ್ನಗಳನ್ನು ಬಲ್ಲವರು ಸುಕರ್ಣರ ನಿರ್ಧಾರ ಮತ್ತು ಅವರು ತಳೆದ ನೀತಿಯನ್ನು ಸರ್ವಥಾ ಮೆಚ್ಚಲಾರರು. ಪ್ರಧಾನಿ ರಹಮಾನರು ವಿಫಲ ಮನೋರಥರಾದಾಗ ಅವರ ಹೃದಯದ ಆಳದಿಂದ ಎದ್ದು ಬಂದ ನುಡಿಗಳವು. ಮೊಣಕಾಲೂರಿ ಆಹಾರವನ್ನು ಬೇಡಿದಾಗ ಕಲ್ಲುಗಳನ್ನು ಎಸೆಯತೊಡಗಿದರೆ, ಎಂತಹ ಕಂಗಾಲಿನವನಾದರೂ ಚೈತನ್ಯದ ಸೆಲೆ ಕಾಣಿಸಿಕೊಳ್ಳುವುದಿಲ್ಲವೆ? ಶರಣಾಗತನಾದಾಗಲೂ ಭರ್ಚಿಯಿಂದ ತಿವಿಯುವುದು ವಿವೇಚಿತ ಕರ್ಮವಲ್ಲ.

ಮೂಲಕಾರಣವಾವುದು?

ಭಿನ್ನಾಭಿಪ್ರಾಯವನ್ನು ದೂರ ಮಾಡಲಿರುವ ವಿಧಾನಗಳು ಒಂದೇ. ಶಾಂತಿ ಇಲ್ಲವೇ ಕ್ರಾಂತಿ. ಸರಸ್ವತಿಯ ಆರಾಧನೆಯೊಂದು, ಶಕ್ತಿಯ ಉಪಾಸನೆ ಮತ್ತೊಂದು. ಒಂದು ವೇಳೆ ಸರಸ್ವತಿಯ ವರಪ್ರಸಾದವು ದೊರೆಯದೆ ಹೋದರೆ ಮತ್ತೆ ಶಕ್ತಿಯ ಆಶ್ರಯ ಪಡೆಯುವುದು ಸಹಜ. ರಶ್ಯ—ಅಮೇರಿಕೆಯಂತಹ ಬಲಾಢ್ಯ ಶಸ್ತ್ರಾಸ್ತ್ರ ಸುಸಜ್ಜಿತ ದೇಶಗಳೇ ಶಾಂತಿಯುತ ಮಾತುಕತೆಗಳಿಂದ ಎಂತಹ ವಿವಾದವನ್ನಾದರೂ ಪರಿಹರಿಸುತ್ತಿರುವುದು ಸಾಧ್ಯವೆಂದು ನಂಬುತ್ತಿರುವ ಈ ಕಾಲದಲ್ಲಿ ಸುಕರ್ಣರೇಕೆ ಒಡಂಬಡಲಿಲ್ಲವೆಂಬ

(೬ನೇ ಪುಟ ನೋಡಿರಿ)

ಆದರ್ಶ ಮಾರ್ಗದರ್ಶಕ—ರಾಷ್ಟ್ರಪಿತ—ಅಮರ ಬಾಪು.

ಐತಿಹಾಸಿಕ ನಾಟಕ

ಗಜಪತಿ ನಂದಿನಿ

ಬರೆದವರು: "ನವಗಿರಿನಂದ"

(ಕಳೆದ ಸಂಚಿಕೆಯಿಂದ ಮುಂದುವರಿದುದು)

ದೃಶ್ಯ—೮

ಗುತ್ತಿಯಲ್ಲಿ ಒಂದು ಬೀದಿ

(ರಾತ್ರಿ. ಸೈಯದ್ ಮುಕರ್ರರನೂ ಕೆಲ ಮಂದಿ ತುರುಕ ಸಿಪಾಯಿಗಳೂ ಪ್ರವೇಶಿಸುವರು)

ಸೈಯದ್— ಸೈನಿಕರೆ, ನಮ್ಮ ಕರೀಂಬೇಗ್ ಬರುವ ವರೆಗೆ ಇಲ್ಲಿಯೇ ಅಡಗಿಕೊಳ್ಳಿರಿ.

ಸೈನಿಕರು— ಜೀಹಾಂ (ತೆರೆಯಲ್ಲಿ ಅಡಗುವರು)

ಕರೀಂಬೇಗ್— (ಪ್ರವೇಶಿಸಿ) ಸರ್ಕಾರ್!

ಸೈಯದ್— ಏನಾಯಿತು?

ಕರೀಂಬೇಗ್— ಎಲ್ಲಾ ಸರಿಯಾಯಿತು. ಲಂಚದಿಂದ ಗುತ್ತಿ ದುರ್ಗದ ಕಾವಲುಗಾರನು ಹಿಂದಿರುಗುವ ಗುಪ್ತ ಮಾರ್ಗವನ್ನು ತೋರಿಸಿಬಿಟ್ಟನು ಇನ್ನು ದುರ್ಗದೊಳಗೆ ಹೋಗಲು ವಿಶೇಷ ತಡೆಯೇನಿಲ್ಲ

ಸೈಯದ್— ಹಾಗಾದರೆ ಸಾಮಾನ್ಯ ತಡೆಯೇನಾದರೂ—

ಕರೀಂಬೇಗ್— ಹಾ, ಹಾ, ರಹಸ್ಯ ಮಾರ್ಗವು ಸೈನಿಕರ ರಾಣ್ಯದ ಹತ್ತಿರವೇ ಹಾದುಹೋಗುವುದು ಆದ್ದರಿಂದ ನಾವು ಆದಷ್ಟು ಜಾಗರೂಕತೆಯಿಂದಿರಬೇಕು.

ಸೈಯದ್ ಅನ್ವೇತಾನೇ ಕಳ್ಳ ಬೆಕ್ಕಿಗೆ ಸದ್ದಿಲ್ಲದೆ ನಡೆಯಲು ಕಲಿಸಬೇಕೆ? ಮತ್ತೇನು?

ಕರೀಂಬೇಗ್—ಅಲ್ಲಿಂದ ಇನ್ನೂ ನಾಲ್ಕು ಕಿಲ್ಲೆಗಳನ್ನು ದಾಟಿ ಮೇಲಕ್ಕೇರಬೇಕು. ದ್ವಾರಪಾಲಕರ ಒಡೆಯನೇನೋ ನಮ್ಮ ವಶನಾಗಿದ್ದಾನೆ. ಬೆಳಗಾದರೆ ಎಲ್ಲಾ ಕಾವಲುಗಾರರೂ ನಮಗೆ ದಾರಿಯನ್ನೂ ಬಿಟ್ಟುಕೊಡುವರು.

ಸೈಯದ್—ಶಹಭಾಸ್. ಸೈನಿಕರೆ, ಬನ್ನಿ, ಹೊರಡಿ ಹುಶ್ಯಾರ್ (ಅಡಗಿದ್ದ ಸೈನಿಕರು ಹೊರಗೆ ಬರುವರು. "ಆದಿಲ್ ಷಾ ಕೀ ಜೈ!", ಎಂದು ಜಯಘೋಷ ಹೋಗುವರು)

ದೃಶ್ಯ ೯

ಗುತ್ತಿ ದುರ್ಗದ ಅಂತಃಪುರ.

(ರಾತ್ರಿ ಗೋವಿಂದ ರಾಜನು ಮಂಚದಲ್ಲಿ ನಿದ್ರಿಸಿರುವನು ಗೋಡೆಯಲ್ಲಿ ಈಟಿ, ಕತ್ತಿ ಢಾಲುಗಳಿವೆ ಕಾಲುದೀಪವೊಂದು ಮಂದವಾಗಿ ಉರಿಯುತ್ತಿದೆ. ಸೈಯದ್ ಮುಕರ್ರರ್, ಕರೀಂಬೇಗ್, ಮತ್ತೆ ಕೆಲವು ತುರುಕ ಸೈನಿಕರು ಮೆಲ್ಲ ಮೆಲ್ಲನೆ ಬರುವರು. ಒಬ್ಬನ ಕೈಯಲ್ಲಿ ಹಗ್ಗದ ಸುರುಳಿಯಿದೆ. ಅವರಿಗೆ ದಾರಿ ತೋರಿಸುತ್ತ ಒಬ್ಬ ಹಿಂದೂ ಸೈನಿಕನೂ ಇದ್ದಾನೆ)

ಕರೀಂಬೇಗ್—ಶಹಬ್ಬಾಸ್ ಸರಕಾರ್, ಗೋವಿಂದ ರಾಜನಿಗೆ ಗಾಢ ನಿದ್ರೆ.

ಸೈಯದ್—ಇಲ್ಲೇ ಬಿಗಿದು ಬಿಡಿರಿ. (ಸೈನಿಕರಿಗೆ ಸನ್ನೆ ಮಾಡುವನು. ಅನೇಕ ಮಂದಿ ಸೈನಿಕರು ಒಮ್ಮೆಗೇ ಗೋವಿಂದರಾಜನ ಮೇಲೆಬಿದ್ದು ಹಗ್ಗದಿಂದ ಬಿಗಿಯುವರು)

ಗೋವಿಂದರಾಜ— ಹಾ! ಏ! ಯಾರು — ಏನು — ಹೋ! ಮೋಸ! ಹೇ ಭುವನೇಶ್ವರೀ, ಮೋಸ! ಮೋಸ! (ಮಂಚಕ್ಕೆ ಸೇರಿಸಿ ಬಿಗಿಯಲ್ಪಡುವನು) ನೀಚರೇ! ಯಾರು ನೀವು?

ಸೈಯದ್—ಆದಿಲ್‌ಷಾಹೀ ವೀರರು!

ಗೋವಿಂದ— ನಾಚಿಗೆಗೆಟ್ಟ ವೀರರೇ! ನಿದ್ರೆಯಲ್ಲಿದ್ದ ನನ್ನನ್ನು ಕಟ್ಟಿದರೆ ವೀರ ಕೃತ್ಯವಾಯಿತೆ? ವೀರರಾದರೆ ನನ್ನ ಕಟ್ಟುಗಳನ್ನು ಬಿಚ್ಚಿ ನೋಡಿ.

ಕರೀಂಬೇಗ್— ಅಯ್ಯೋ ಪಾಪ, ನಿದ್ರೆಯಲ್ಲಿರುವ ನಿನಗೆ ಏಕೆ ಕಷ್ಟ ಕೊಡಬೇಕೆಂತಲೇ ಇಷ್ಟು ಸುಲಭವಾಗಿ ಕೆಲಸ ಮಾಗಿಸಿದ್ದು.

ಸೈಯದ್— ಅಚ್ಛಾ, ಬಹುತ್ ಖೇಷ್ (ಕರೀಂಬೇಗನ ಭುಜ ತಟ್ಟಿ) ಆದಿಲ್ ಷಹಾಕೀ ಜೈ!

ಸೈನಿಕರು—ಆದಿಲ್ ಷಹಾಕೀ ಜೈ!

ಚಿನ್ನಾದೇವಿ— (ಭಯದಿಂದ ಪ್ರವೇಶಿಸಿ) ಹಾ! ಅಪ್ಪಾಜೀ, ಏನು — ಏನಾಯಿತು?

ಗೋವಿಂದ— ಮೋಸ! ಮೋಸ!

ಸೈಯದ್— (ಭಯಂಕರವಾಗಿ ನಗುವನು)

ಕರೀಂಬೇಗ್— (ಚಿನ್ನಾದೇವಿಯನ್ನು ಸೈಯದ್ ಮುಕರ್ರರನಿಗೆ ತೋರಿಸುತ್ತ) ಇವಳೇ ಅವಳು ಸರ್ಕಾರ್! ಆ ಸುಂದರಿ.

ಸೈಯದ್—ಅಚ್ಛಾ ಬಹುತ್ ಅಚ್ಛಾ! ಅರೇ, ಈ ಛೋಕ್ರೀನ ಮೆಲ್ಲನೆ ಕಟ್ಟಿ ಹಾಕಿ.

(ಚಿನ್ನಾದೇವಿ ತಟಕ್ಕನೆ ಗೋಡೆಯಿಂದ ಕತ್ತಿಯನ್ನೆತ್ತಿ ಸೈನಿಕರ ಮೇಲೆ ಬೀಳುವಳು. ಆಗಲೇ ಕೆಲವು ಹಿಂದೂ ಸೈನಿಕರು "ಜೈ ಭುವನೇಶ್ವರೀ" ಎಂದು ಗರ್ಜಿಸುತ್ತ ಕತ್ತಿಗಳನ್ನು ಝಳಪಿಸಿಕೊಂಡು ಬರುವರು. ಯುದ್ಧವಾಗುತ್ತಿರಲು ಚಿನ್ನಾದೇವಿ ಗೋವಿಂದರಾಜನ ಕಟ್ಟುಗಳನ್ನು ಬಿಚ್ಚುವಳು)

ಗೋವಿಂದರಾಜ—ಶಾಭಾಸ್! ವೀರ ರಮಣಿ ಚಿನ್ನಾ! (ಎದ್ದು ಹಾರಿ ಕತ್ತಿಯನ್ನೆತ್ತಿಕೊಂಡು ಶತ್ರುಗಳ ಮೇಲೆ ಬೀಳುವನು. ಕರೀಂಬೇಗ್ ಅವನ ಕತ್ತಿಗೆ ಆಹುತಿಯಾಗುವನು. ಮತ್ತೊಂದೇಟಿಗೆ ದ್ರೋಹಿಯಾದ ಹಿಂದುವೂ ಅಯ್ಯೋ! ನನ್ನ ಕರ್ಮಕ್ಕೆ ಪ್ರಾಯಶ್ಚಿತ್ತ! ಆ! ಎಂದು ಕೂಗುತ್ತಾ ಮಡಿದು ಬೀಳುವನು)

ಸೈಯದ್—ಬನ್ನಿ. ಹುಡುಗಿಯನ್ನು ಬಿಡಬೇಡಿ ಓಡುವಾ ಬಾಗಿಲು ಹಾಕಿಬಿಡಿ. (ಓಡುತ್ತಾ ಚಿನ್ನಾದೇವಿಯನ್ನು ದರದರನೆ ಎಳೆದುಕೊಂಡು ಹೊರಗೆ ಹೋಗಿ ಬಾಗಿಲು ಹಾಕಿ ಬಿಡುವನು. ಒಳಗೆ ಉಳಿದಿದ್ದವರು ಮೂವರು ತುರುಕ ಸೈನಿಕರೊಂದಿಗೆ ಹೋರಾಡುತ್ತಾ ಗೋವಿಂದರಾಜನು ಅವರಲ್ಲಿ ಒಬ್ಬೊಬ್ಬರನ್ನಾಗಿ ನೆಲಕ್ಕುರುಳಿಸುವಾಗ ಅರೇ! ನಮ್ಮನ್ನು ಬಿಟ್ಟು ಎಲ್ಲರೂ ಪಾರಾದರಲ್ಲಾ! ಅಲ್ಲಾ! ಖುದಾ! ಮರಗಯಾ!" ಎಂದು ಕೂಗುತ್ತಾ ಬೀಳುವರು ಹೊರಗೆ ಚಿನ್ನಾದೇವಿಯ ಕೂಗು "ಅಯ್ಯೋ! ಅಪ್ಪಾ! ಮೋಸ! ಮೋಸ! ಎಂಬ ಅವಳ ಕೂಗು ದೂರ ದೂರವಾಗುತ್ತಾ ಹೋಗುತ್ತದೆ. ಗೋವಿಂದರಾಜನು ಶತ್ರುಗಳನ್ನೆಲ್ಲ ಕೊಂದು ಬಾಗಿಲು ಬಡಿಯುತ್ತ ಏ ಏ! ಯಾರಲ್ಲಿ? ಬಾಗಿಲು ತೆರೆಯಿರಿ! ಎಂದು ಕೂಗುತ್ತ ಚಡಪಡಿಸುವನು.)

ದೃಶ್ಯ ೧೦

ಗೊಂಡಡವಿಯ ಕಾಲುದಾರಿ

(ಸಂಜೆಯ ಹೊತ್ತು. ತುರುಕ ಸೈನಿಕರು ಓ! ಓ! ಅನ್ನುತ್ತ ಒಂದು ಪಲ್ಲಕಿ ಹೊತ್ತುಕೊಂಡು ಬರುವರು. ಸೈಯದ್ ಮುಕರ್ರರನೂ ಆ ಗುಂಪಿನಲ್ಲಿದ್ದಾನೆ. ಪಲ್ಲಕಿ ಮುಂದೆ ಸಾಗಿದಾಗ ಸೈಯದ್ ಮುಕರ್ರರ್ ಒಬ್ಬನನ್ನು ಕರೆದು)

ಸೈಯದ್—ಅರೆ! ಓ ಅಲ್ಲಿ ಒಂದು ಬಂಡೆಗಲ್ಲಿನ ಗವಿ ಕಾಣುತ್ತದಷ್ಟೆ? ಅದು ಚಲೋ ಸ್ಥಳ ತಾನೆ?

ಸೈನಿಕ— ಅಚ್ಛಾ ಹುಜೂರ್.

ಸೈಯದ್— ಅಲ್ಲಿ ಪಲ್ಲಕ್ಕಿಯನ್ನಿಳಿಸಿಟ್ಟು ನೀವೆಲ್ಲಾ ದೂರ ಹೋಗಿ.

ಸೈನಿಕ— ಅಚ್ಛಾ ಹುಜೂರ್ (ಹೋಗುವನು)

ಸೈಯದ್— ಆಹಾ! ನನ್ನ ಪ್ರಿಯ ದೋಸ್ತ್ ಕರೀಂಬೇಗ್ ನನಗಾಗಿ ತನ್ನ ಪ್ರಾಣವನ್ನೇ ಕೊಟ್ಟುಬಿಟ್ಟ ಅಯ್ಯೋ! ಇನ್ನಾರು ಸಿಕ್ಕಿಯಾರು ನನಗೆ ಅವನಂಥವ. ಈ ಸುಂದರಿ ನನ್ನ ಕೈಸೇರಿಯೂ ನನಗೇನೂ ಮಜಾ ಕಾಣುವುದಿಲ್ಲ. ಛೇ ಛೇ. ...ಹೂಂ. ಏನು ಮಾಡುವುದು. ಸರಿಯಾಗಿ ಅವಳನ್ನು ನೋಡಿಯಾದರೂ ಬಿಡಬೇಕು. (ಹೋಗುವನು).

ಗುಲ್ರುಬಿ— (ತುರುಕ ಸೈನಿಕ ವೇಷದಲ್ಲಿ ಪ್ರವೇಶಿಸಿ) ಖುದಾನ ಕರುಣೆ ಹೇಗೋ! ಆ ದುಷ್ಟ ಸ್ನೇಹಿತನು ತೀರಿ ಹೋಗುದರಿಂದ ನನ್ನ ಪತಿ ನನ್ನ ಕೈಗೆ ಸಿಕ್ಕಿದಂತಾಯಿತು. ಇನ್ನು ಇವರನ್ನು ಸನ್ಮಾರ್ಗದಲ್ಲಿ ನಡೆಸುವುದು ನನ್ನ ಕೆಲಸ. ಈ ಕಾರ್ಯದಲ್ಲಿ ನನ್ನ ಪ್ರಾಣವೂ ಹೋಗಿಬಿಟ್ಟರೆ ಸಾರ್ಥಕವಾಯಿತು ನನ್ನ ಜನ್ಮ. ಅದೋ ಆ ಗುಹೆಯಲ್ಲಿ ಪಲ್ಲಕಿಯನ್ನಿಳಿಸುತ್ತಿದ್ದಾರೆ ಪಾಪ, ಆ ಸಹೋದರಿಯನ್ನು ಕಾಪಾಡಬೇಕಾದ್ದು ನನ್ನ ಕರ್ತವ್ಯ. (ಹೋಗುವಳು).

(ಮುಂದುವರಿಯುವುದು)

ನವಯುಗ

ರಾಷ್ಟ್ರೀಯ ವಾರಪತ್ರಿಕೆ

ಉಡುಪಿ

ಜಾಹೀರಾತು ದರಗಳು:

ನಿಯಮಿತ (ಕಂಟ್ರಾಕ್ಟ್) ರೂ
ಕಲಂ ಸೆಂಟಿಮೀಟರಿಗೆ 1-00

ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ 1-50

ಚಂದಾ:

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ 6-75

ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5

2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ

3 ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ. 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ಜನಪ್ರಿಯವಾದ

ಹೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

ಗೀತೆಯ ಸಮೂಲ ಭಾಷಾಂತರ ಇದೀಗ ಮಾರಾಟಕ್ಕೆ ಸಿದ್ಧವಾಗಿದೆ.

360 ಪುಟಗಳಿಗೂ ಮಿಕ್ಕಿದ ಪಾಕೆಟ್ ಎಡಿಶನ್!

ದಪ್ಪವಾದ ಬಿಳಿ ನುಣುಪು ಕಾಗದ!

ಬೆಲೆ: ಸಾದಾ ಪ್ರತಿ ರೂ. ೧-೦೦
ಉತ್ತಮ ಪ್ರತಿ ರೂ. ೧-೫೦
ಅಂಚೆ ವೆಚ್ಚ ರೂ ೦-೫೦

ರಖಂ ಪ್ರತಿಗಳ ದರಕ್ಕೆ ಬರೆಯಿರಿ:

ನವಯುಗ ಪ್ರೆಸ್ ಉಡುಪಿ, ದ. ಕ.



ಭಾರತೀಯ ಮತ್ತು ಚೀನೀಯ

ಸರಕಾರಗಳೆರಡರ ಸಾಮ್ಯಾಂತರ

—ಶ್ರೀ ಶಿವಶಂಕರ

ಭಾರತವು ದುರ್ದೈವವಶಾತ್ ಇಬ್ಭಾಗವಾಗಿ ಇಂಡಿಯಾ—ಪಾಕಿಸ್ಥಾನವಾಗಿ, ಕಾಂಗ್ರೆಸ್-ಮುಸ್ಲಿಂ ಲೀಗ್ ಅಧಿಕಾರಕ್ಕೆ ಬಂದ ಕೆಲವಾರು ತಿಂಗಳುಗಳಲ್ಲೇ ಚೈನಾದಲ್ಲಿ [ಮಾವೋಸೇನಾ ಬಿಟ್ಟು] ಕಮ್ಯೂನಿಸ್ಟ್‌ಶಾಹಿ ಅಧಿಕಾರ ಗದ್ದುಗೆಯನ್ನೇರಿತು. ಇಂಡಿಯಾ ಉಳಿದಿರುವ ಭಾರತವು—ಕ್ರಮಾಶಃ ತನ್ನ ಗುರಿಯು ಸಮಾಜವಾದ ರೀತಿಯ ಸಮಾಜ ರಚನೆಯೆಂದು ಸಾರುತ್ತ ಬಂದಿದೆ. ಆದರೆ ಅದು ಒಂದು ವಿಶಿಷ್ಟ ನಮೂನೆಯ ಸಮಾಜವಾದವೆಂದು ಸರಕಾರದ ಲಗಾಮ್ ಹಿಡಿದುಕೊಂಡಿರುವ ಸಾರಥಿಗಳು ಹೇಳುತ್ತಿರುವರು. ಪಾಕಿಸ್ಥಾನವಾದರೋ ಇಸ್ಲಾಮಿ ದೇಶವೆಂದು ಪ್ರಕಟಪಡಿಸಿರುತ್ತದೆ, ಚೈನಾದಲ್ಲಿ ಮಾತ್ರ ಪೂರ್ಣ ಕಮ್ಯೂನಿಸಂ ಅಥವಾ ಸಮತಾವಾದ ಬಳಕೆಗೆ ಬರುತ್ತಿದೆ. ಭಾರತ ಹಾಗೂ ಚೈನಾದಲ್ಲಿ ಸ್ವಲ್ಪ ಮಟ್ಟಿಗೆ ಒಂದೇ ರೀತಿಯ ಸಂಸ್ಕಾರಗಳಿದ್ದರೂ ಅವುಗಳ ನಡುವೆ ವೈಷಮ್ಯ ಹುಟ್ಟಲು ಕಾರಣವೇನು? ಸಂಯುಕ್ತ ರಾಷ್ಟ್ರ ಸಂಘದಲ್ಲಿ ಕಮ್ಯೂನಿಸ್ಟ್ ಚೈನಾಕ್ಕೆ ಸ್ಥಾನ ಸಿಗಬೇಕೆಂದು ಭಾರತ ಪ್ರಯತ್ನ ನಡೆಸುತ್ತಿದೆಯಾದರೂ ಆಕ್ರಮಣಕ್ಕೆ ಚೈನಾ ಮುಂದಾಗಲು ಕಾರಣವೇನು? ಅವುಗಳ ನಡುವೆ ಇರುವ ಸಾಮ್ಯತೆಯಾದರೂ ಏನು?

ಕಳೆದ ತಿಂಗಳಾಂತ್ಯದಲ್ಲಿ ಭಾರತದ ರಾಜ್ಯಸಭೆಯಲ್ಲಿ ಸದಸ್ಯರೊಬ್ಬರು ಗೃಹಖಾತೆಗೆ ಒಂದು ಪ್ರಶ್ನೆ ಕೇಳಿ ಭಾರತ ಸರಕಾರದ ಜ್ಞಾನಸಮಿತಿಯನ್ನೂ ಹಾಗೂ ಭಾರತ ಸರಕಾರದ ಘೋಷಣೆಯನ್ನೂ ಸಂಬಂಧಪಟ್ಟವರು ಸ್ಪಷ್ಟಪಡಿಸಲು ಸಹಾಯ ಮಾಡಿರುವರು. ಆ ಪ್ರಶ್ನೆಗೆ ಗೃಹ ಖಾತೆಯಲ್ಲಿ ಮಂತ್ರಿಯಾಗಿರುವ ಹಜಾರ್ ನವೀಸ್‌ರು ಬರೆದು "ಆಧುನಿಕ ಚೈನಾದ ಸಂಕ್ಷಿಪ್ತ ಚರಿತ್ರೆ" ಎಂಬ ಪುಸ್ತಕವನ್ನು ಚೈನಾದಲ್ಲಿ ಸರಕಾರ ನಿಯಂತ್ರಿತ ಪ್ರಚಾರ ಶಾಖೆಯು ಹೊರಗೆಡಹಿರುತ್ತದೆ. ಅದರಲ್ಲಿ ಒಂದು ಭೂಪಟವಿದೆ. ಅಸ್ಸಾಂ, ನೇಫಾ, ನಾಗಲೇಂಡ್, ಸಿಕ್ಕಿಂ, ಭೂತಾನ, ಬರ್ಮಾ, ಮಲಯಾ, ಸಿಂಗಪುರ, ಥಾಯಿಲೇಂಡ್, ಉತ್ತರ ಮತ್ತು ದಕ್ಷಿಣ ವಿಯೆಟ್ನಾಮ್, ಲಾವೋಸ್, ಕೆಂಬೋಡಿಯಾ ಹಾಗೂ ಉತ್ತರ ಮತ್ತು ದಕ್ಷಿಣ ಕೊರಿಯಾಗಳನ್ನು ಚೈನಾದ ಭೂಪ್ರದೇಶವನ್ನಾಗಿ ಸೂಚಿಸಲಾಗಿರುತ್ತದೆ. ಅದರಲ್ಲಿ ಸೀಮಾ ಪ್ರದೇಶಗಳನ್ನು ತಪ್ಪಾಗಿ ಸೂಚಿಸಿರುವದರಿಂದ ಪುಸ್ತಕದ ಪ್ರತಿಗಳು ಭಾರತಕ್ಕೆ ಬರದಂತೆ ಸರಕಾರ ಎಚ್ಚರಿಕೆ ವಹಿಸಿದೆಯೆಂದು ಉತ್ತರದಲ್ಲಿ ತಿಳಿಸಲಾಗಿರುತ್ತದೆ.

ಹೀಗಿದ್ದರೂ ಚೈನಾವೇ ಭಾರತವನ್ನು ವಿಸ್ತಾರವಾದಿಯೆಂದು ಹೇಳುತ್ತ ಆಕ್ರಮಣ ಮುಂದುವರಿಸುತ್ತಿದೆ. ಅವರಿಗೆ ಪಕ್ಕ ಬಲವಾಗಿ ಪಾಕಿಸ್ಥಾನಿ ಸರ್ವಾಧಿಕಾರಿಗಳು ನಿಂತಿದ್ದಾರೆ. ಪರಿಸ್ಥಿತಿ ಹೀಗಿರುವಾಗ ನಮ್ಮ ಸರಕಾರ ತಳೆದಿರುವ ಧೋರಣೆ ಹೇಗಿದೆ? ಅದು ಕಮ್ಯುನಿಸ್ಟ್ ಚೈನಾದ ಕಪಿ ಚೇಷ್ಟೆಗೂ ಪಾಕಿಸ್ಥಾನದ ಪೈಶಾಚಿಕ ಪೀಡೆಗೂ ಕೈಕಾಲು ಬಿಡುವಂತಿಲ್ಲ. ಹಿಂದೂಸಾಗರ ಅಷ್ಟು ಶಾಂತ ಸಾಗರವಿದೆ. ಅದನ್ನು ಅಲುಗಾಡಿಸಲು ಚೈ-ನಿ-ಪಾಕ್ ಯುಕ್ತಿಯಿಂದ ಸಾಧ್ಯವಾಗಲಿಕ್ಕಿಲ್ಲ.

ಇದು ಅಂತಾರಾಷ್ಟ್ರೀಯ ಆಗುಹೋಗು ನಾಣ್ಯದ ಒಂದು ಮುಖ. ಇನ್ನೊಂದು ಮುಖ ಅದಕ್ಕಿಂತಲೂ ಶಾಂತವಾಗಿದೆ. ಅನ್ಯ ರಾಷ್ಟ್ರಗಳ ಮೇಲೆ ನಾವು ಆಕ್ರಮಣ ನಡೆಸುವದು ಹಾಗಿರಲಿ, ಅವುಗಳನ್ನು ನಮ್ಮ ದೇಶದ ಭೂಭಾಗವನ್ನಾಗಿ ತೋರಿಸುವ ನೀಚ ಕೃತ್ಯದ ಮಾತು ಒತ್ತಟ್ಟಿಗಿರಲಿ; ಆ ದೇಶದ ಹೆಸರುಗಳನ್ನು ನಮ್ಮ ದೇಶೀಯ ಸಂಪರ್ಕಕ್ಕನುಕೂಲವಾಗಿ ಕರೆಯಲಿಕ್ಕೆ ಮುನ್ನಡೆದು ಧಾವಿಸಲೂ ನಾವು ಸಿದ್ಧವಿರುವದಿಲ್ಲ. ಅದನ್ನು ಸ್ಪಷ್ಟಪಡಿಸುವದಕ್ಕಾಗಿ, ಅಂದರೆ ಎರಡು ಸರಕಾರಗಳ ನಡುವಣ ಸಾಮ್ಯತೆಯನ್ನು ಎತ್ತಿ ತೋರಿಸುವದಕ್ಕಾಗಿ ಕೆಲ ವಿಷಯಗಳನ್ನು ಕೆಳಗೆ ಕೊಡಲಾಗಿರುತ್ತದೆ. ಆ ವಿಷಯಗಳನ್ನು ಓದಿದೊಡನೆ ನಮಗೂ ಅನ್ಯ ರಾಷ್ಟ್ರಗಳಿಗೂ ಇದ್ದ ಸಂಪರ್ಕದ ಅನುಭವವಾಗುತ್ತದೆ. ನಾವು ಕೂಪಮಂಡೂಕಗಳಾಗಿದ್ದಿಲ್ಲ. ಸಂಚಾರೀ ನಾರದ ಮಹರ್ಷಿಗೆ ಜನ್ಮವಿತ್ತಿದ್ದ ಭಾರತ ಮಾತೆಯು ವೀರಪುತ್ರರಿದ್ದೇವೆಂಬುದು ಗೊತ್ತಾಗುತ್ತದೆ. ನಮ್ಮ ಜ್ಞಾನವಾಯು ಹಿಮಾಲಯವನ್ನು ದಾಟಿ ಆತ್ತ ಪಸರಿಸಿರುವದು ಅದರಿಂದ ಸ್ಪಷ್ಟವಾಗುತ್ತದೆ. ಅದನ್ನು ಮಹಾತ್ಮ ಡಾ| ರಘುವೀರರ ಲೇಖನಗಳಿಂದ ಅರಿಯಲಾಗಿರುತ್ತದೆ. ಅನ್ಯ ರಾಷ್ಟ್ರಗಳಲ್ಲಿ ಕಾಲಿಟ್ಟು ಕೊಳ್ಳೆ ಹೊಡೆದುಕೊಂಡು ಹೋದವರು ಚಿನ್ನ-ವಜ್ರಾದಿಗಳನ್ನೂ ಸ್ತ್ರೀಯರನ್ನೂ ಗುಲಾಮರನ್ನೂ ತೆಗೆದುಕೊಂಡು ಹೋಗಿರುವರಾದಲ್ಲಿ ಡಾ| ರಘುವೀರರು ಆಯಾಯ ರಾಷ್ಟ್ರಗಳಿಂದ ಅನುಭವ ಜ್ಞಾನವನ್ನು ತೆಗೆದುಕೊಂಡು ಬಂದಿದ್ದಾರೆನ್ನುವದು ಹಾಸ್ಯದ ಮಾತಾದರೂ ಅವರ ಪ್ರಚಂಡ ಜ್ಞಾನಭಂಡಾರದ ಪರಿಚಯ ಮಾಡಿಕೊಡುತ್ತದೆ.

ಲಂಕೆ, ಶ್ರೀಲಂಕೆ, ಅಮರ ದ್ವೀಪ, ಸಿಂಹಳ ದ್ವೀಪ...ಇವೆಲ್ಲಾ ಬಹಳ ಚಂದದ ಹಾಗೂ ಕಿವಿಗೆ ಇಂಪಾಗಿರುವ ಪದಗಳಿವೆ, ಉತ್ತಮ ಹೆಸರುಗಳಿವೆ

ಬರ್ಮಾ ಹಾಗೂ ಮಲಯ ಮತ್ತು ಆಚೆಗಿನ ದೇಶಗಳನ್ನು ಒಟ್ಟಿಗೆ ಸುವರ್ಣ ದ್ವೀಪಗಳೆಂದು ನಮ್ಮ ಚರಿತ್ರೆ ಹೆಸರಿಸಿರುತ್ತದೆ. ಆ ದೇಶಗಳಲ್ಲಿ ಕೆಲವೊಮ್ಮೆ ನೆಲದ ಮೇಲೆಯೇ ಗಟ್ಟಿಗಳ ರೂಪದಲ್ಲಿ-ಸಂಸ್ಕೃತದಲ್ಲಿ ಜಾತರೂಪವೆನ್ನುತ್ತಾರೆ—ಚಿನ್ನವು ಸಿಗುತ್ತಿತ್ತೆಂದು ಹೇಳಲಾಗುತ್ತಿತ್ತು.

ಇಂಡೋನೇಶ್ಯವು ಇತ್ತೀಚಿಗಿನ ಹೆಸರಿದೆ. ಮೂರು ಶತಮಾನಗಳಿಂದ ಡಚ್ಚರು ಆ ರೀತಿ ಕರೆಯಲಾರಂಭಿಸಿರುವರು. ಅವರು ಡಚ್ಚ—ಇಂಡೀಸ್‌ವೆಂಬ ಇನ್ನೊಂದು ಹೆಸರನ್ನು ಸದಾ ಉಪಯೋಗಿಸುತ್ತಿದ್ದರು. ಇಂಡೋ—ನೇಶ್ಯವೆಂಬುದು ಗ್ರೀಕ್ ಪದ. ಇಂಡೋ ಮತ್ತು ನೆಸ್ಸೋಸ್ ಎಂಬುವು ಮೂಲ ಪದಗಳು. ನೆಸ್ಸೋಸ್ ಅಂದರೆ ದ್ವೀಪಗಳು. ಇಂಡೋನೇಶ್ಯವೆಂದರೆ ಭಾರತೀಯ ದ್ವೀಪಗಳೆಂದಾಗುತ್ತದೆ. ಆದರೆ ಇಂಡೋನೇಶ್ಯದ ಪ್ರಾಚೀನ ಸಾಹಿತ್ಯಗಳಲ್ಲಿ ಆ ಹೆಸರು ಕಂಡು ಬರುವದಿಲ್ಲ. ಅಲ್ಲಿ ದ್ವೀಪಾಂತರ, ದೇಶಾಂತರ ಮತ್ತು ಭೂಮ್ಯಂತರಗಳೆಂಬ ಹೆಸರುಗಳಿವೆ. ಅಂತರ ಅಂದರೆ ಸಮುದಾಯ (ಕೂಟ). ಡಾ| ರಾಂಬಾ ರಾಣಿಯವರು ಏಳು ವರ್ಷಗಳ ಹಿಂದೆ ಶ್ಲೋಕಾಂತರವೆಂಬ ('ಶಲ್ಲೋ' ಅಂತರ ಅಂದರೆ ಸಂಕಲನ) ಹಳೆಯ ಇಂಡೋನೇಶ್ಯದ ಪುಸ್ತಕವೊಂದನ್ನು ಪ್ರಕಟಿಸಿರುವರು. ದ್ವೀಪಾಂತರ ಪದವನ್ನು ಸಂಸ್ಕೃತ ಸಾಹಿತ್ಯದಲ್ಲಂತೂ ಚೆನ್ನಾಗಿ ಬಳಸಿಕೊಂಡಿದ್ದಾರೆ. ಇಂದೂ ಕೆಲವೊಮ್ಮೆ ಇಂಡೋನೇಶ್ಯವೆಂಬ ಹೆಸರನ್ನು ಹಿಂದೀ ಹಾಗೂ ಇತರ ಭಾರತೀಯ ಭಾಷೆಗಳಲ್ಲಿ ಹಿಂದ್-ಏಶ್ಯವೆಂದು ತಪ್ಪಾಗಿ ಭಾಷಾಂತರಿಸಲಾಗುತ್ತದೆ. ಈ ದೋಷ ನಿವಾರಣೆಗಾಗಿ, ದ್ವೀಪಾಂತರವೆಂಬ ಪದವನ್ನು ಜ್ಞಾಪಕದಲ್ಲಿಟ್ಟುಕೊಂಡು ಪೂರ್ವ ಸ್ಥಿತಿಗೆ ತರುವದು ಐತಿಹಾಸಿಕ ನಿಷ್ಠೆಯನ್ನು ಪ್ರಕಟಿಸುತ್ತದೆ. ಇಂಡೋನೇಶ್ಯವೆಂಬುದನ್ನು ಭಾಷಾಂತರಿಸುವದಾದಲ್ಲಿ ಭಾರತ—ದ್ವೀಪವೆಂದಾಗಬೇಕು.

ಆದರೆ ದ್ವೀಪಾಂತರವೆಂಬ ಪದ ನಮಗೆ ಚರಿತ್ರೆಯಲ್ಲಿ ದೊರಕುತ್ತಿರುವದರಿಂದ ಆ ಹೆಸರನ್ನು ನಾವು ಉಪಯೋಗಿಸಬಹುದು. ಇಂಡೋನೇಶ್ಯ ಅಥವಾ ಇತರ ಭಾಷಾಂತರ ಪದಗಳನ್ನು ಬಳಸಿಕೊಳ್ಳುವದರಿಂದ ನಮ್ಮ ಚಾರಿತ್ರಿಕ ಸಂಬಂಧವು ಕೇಂದ್ರ ಬಿಂದುವಿನಿಂದ ಹೊರಗೆ ಸೋದೀತು. ದ್ವೀಪಾಂತರ ಹೆಸರನ್ನುಪಯೋಗಿಸುವದರಿಂದ ಸಂಬಂಧವು ಒಂದೆಡೆ ಬೆಸೆಯುತ್ತದೆ.

ಜಾವಾವು ಹಿಂದಿನ ಯವ ದ್ವೀಪವಿದೆ. ಹಾಗಿರುವದರಿಂದ ಜಾವಾ ದ್ವೀಪದೊಂದಿಗೆ ಯವ ದ್ವೀಪ ಪದವನ್ನು ಪ್ರಚಾರಕ್ಕೆ ತರಬಹುದು. ಸಿಲ್‌ಬಿಸ್ ದ್ವೀಪವು ಶೂಲವೇತಿ ಎಂದೇ ಆ ಊರಿನಲ್ಲಿ ಕರೆಯಲ್ಪಡುತ್ತದೆ. ಬೋರ್ನಿಯೋವನ್ನು ಕಾಲಿಮಂಥನವೆಂದು ಕರೆಯುತ್ತಾರೆ. ನಾವೂ ಅವುಗಳನ್ನುಪಯೋಗಿಸಿಕೊಳ್ಳಬಹುದು. ಆ ಹೆಸರುಗಳು ನಮ್ಮ ಮನಸ್ಸಿನಲ್ಲಿ ಆ ದ್ವೀಪಗಳೊಂದಿಗಿನ ಅನ್ಯೋನ್ಯತೆಯನ್ನು ಸೂಚಿಸುತ್ತವೆ. ಆದರೆ ಸಿಲೆಬಿಸ್ ಮತ್ತು ಬೋರ್ನಿಯೋ ಪದಗಳು ನಮಗೆ ಅನ್ಯ ಹಾಗೂ ಕಠಿಣ ಪದಗಳಿವೆ.

ಜಾವ ಅಥವಾ ಯವ ದ್ವೀಪದ ಬಳಿ ಇರುವ ಒಂದು ಪುಟ್ಟ ದ್ವೀಪವನ್ನು ಮದೋರಾವೆಂದು ಗುರುತಿಸಲಾಗಿರುತ್ತದೆ. ಅದು ಮಥುರಾವಲ್ಲದೆ ಬೇರಿನ್ನೇನಿರಲು ಸಾಧ್ಯ?

ಥಾಯಿಲೇಂಡನ್ನು ಶ್ಯಾಮ (ಸಯಾಮ) ವೆಂಬ ಹೆಸರಿನಿಂದ ಕರೆಯಲಾಗುತಿತ್ತು. ಪ್ರದೇಶ ಥಾಯಿ ಎಂಬುದನ್ನು ಆಂಗ್ಲೇಯರು ಒಪ್ಪುವದಿಲ್ಲ. ಅದನ್ನು ಅವರು ಥಾಯಿಲೇಂಡೆಂದೇ ಕರೆಯುತ್ತಾರೆ. ಆದರೆ ನಮಗೆ ಪ್ರದೇಶ ಥಾಯಿ ಸರ್ವವಿಧಗಳಲ್ಲೂ ಸ್ವೀಕಾರಾರ್ಹವಿದೆ.

ಥಾಯಿಯ ಪ್ರಜೆಗಳು ಹಾಗೂ ಅವರ ಆಕ್ಕಪಕ್ಕದ ಲಾವೋಸ್ ಮತ್ತು ಕೆಂಬೋಡಿಯವರು ಉಪಯೋಗಿಸುತ್ತಿರುವ ಹಲವಾರು ಚಾರಿತ್ರಿಕ ಹೆಸರುಗಳನ್ನು ಹಾಗೂ ಪದಗಳನ್ನು ಅವರದೇ ಲಿಪಿಯಲ್ಲಿ, ಮೂಲ ರೀತಿಯಲ್ಲೇ ಬರೆಯಲಾಗುತ್ತಿದೆಯಾದರೂ ಅವುಗಳನ್ನು ಗುರುತಿಸಲ ಸಾಧ್ಯವಾಗಿರುವ ವಿಧದಲ್ಲಿ ಉಚ್ಚರಿಸಲಾಗುತ್ತಿದೆ. ಇಂಗ್ಲಿಷ್ ಹಾಗೂ ಫ್ರೆಂಚ್ ಭಾಷೆಗಳಲ್ಲಿ ಜನರು ಮೂಲ ಅಕ್ಷರಗಳನ್ನು ನಿರ್ಲಕ್ಷಿಸಿದ್ದಾರೆ. ಹಾಗೆ ಮಾಡಿ ಐತಿಹಾಸಿಕ ವಿಷಯಗಳನ್ನು ಅಚ್ಚಳಿಸಿಬಿಟ್ಟಿದ್ದಾರೆ. ಆಂಗ್ಲೇಯ ಭಾಷೆಯಲ್ಲಿ ಕೆಂಬೋಡಿಯಾವೆಂದು ಯಾವದನ್ನು ಬರೆಯಲಾಗುತ್ತದೋ ಅದನ್ನು ಅಲ್ಲಿಯ ಮೂಲ ಕೆಂಬೋಡಿಯಾ ಲಿಪಿಯಲ್ಲಿ ಕಾಂಬೋಜವೆಂದು ಬರೆಯಲಾಗಿರುತ್ತದೆ. ನಗರದ ವಿಷಯ ತೆಗೆದುಕೊಂಡರೆ ಪರದೇಶದವರು ಮಾತ್ರ ಬೆಂಗ್ಕೋಕ್ ಎನ್ನುತ್ತಾರೆ. ಅಲ್ಲಿಯ ಸ್ಥಳೀಯ ಜನರು ಅದನ್ನು ವಂಗ

(೧೧ನೇ ಪುಟ ನೋಡಿರಿ)

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ.......
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ

1—1—1963ರಿಂದ ಠೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ

ನಿಮ್ಮ ಉಳಿತಾಯವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವದನ್ನು ಕಂಡು ಸಂತೋಷಿಸುವಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ಮುದ್ರಣ

ಸಣ್ಣದಿರಲಿ, ದೊಡ್ಡದಿರಲಿ, ಯಾವದೇ ತರದ ಕನ್ನಡ ಇಲ್ಲವೆ ಇಂಗ್ಲಿಷ್ ಮುದ್ರಣ ಕಾರ್ಯಗಳಿಗೆ ವಿಚಾರಿಸಿರಿ –

ನವಯುಗ ಪ್ರೆಸ್

ಸಂತೆಕಟ್ಟೆ
ಉಡುಪಿ

ಸೋವಿಯತ್ ದೃಷ್ಟಿಯಲ್ಲಿ

ಚೀಣೀಯರಿಂದ ಭಾರತಕ್ಕೆ ಅಪರಾಧ

'ಪ್ರಾವ್ದ' ಪತ್ರಿಕೆಯು ತನ್ನ ತಾ. ೧೯—೯—೬೩ ರ ಸಂಚಿಕೆಯಲ್ಲಿ ಏಶಿಯದಲ್ಲಿ ಅಪಾಯಕರ ಉದ್ರಿಕ್ತ ಸ್ಥಾನ ಎಂಬ ಶೀರ್ಷಿಕೆಯಲ್ಲಿ ವಿಶ್ವಶಾಂತಿಗೆ ಚೀಣಾ ಭಾರತ ಗಡಿ ತಿಕ್ಕಾಟದ ವಿಪತ್ಕರ ಪರಿಣಾಮಗಳ ಕುರಿತು ಒಂದು ದೀರ್ಘ ಲೇಖನವನ್ನು ಪ್ರಕಟಿಸಿದೆ.

ಇತ್ತೀಚೆಗೆ ಚೀಣೀ ಪತ್ರಿಕೆಗಳಲ್ಲಿ ಅಚ್ಚಾಗಿರುವ ಅನೇಕ ಪ್ರಕಟಣೆಗಳು, ಈ ಗಡಿ ವಿವಾದದಲ್ಲಿ ಜನತಾ ಚೀನ ಸರಕಾರವು ಕೈಗೊಂಡ ಸಕಲ ಚರ್ಯೆಗಳನ್ನೂ ಸಮರ್ಥಿಸಿವೆ ಮತ್ತು ಇತರ ರಾಜ್ಯಗಳ ನೀತಿಯನ್ನು ನಿಂದಿಸಿವೆ. ಚೀಣಾ-ಭಾರತ ತಿಕ್ಕಾಟದ ಬಗ್ಗೆ ಸೋವಿಯತ್ ಸರಕಾರ ವಹಿಸಿದ ನಿಲುವೆಯ ಕುರಿತು ಅಪನಿಂದೆಯ ಅನೇಕ ಸ್ವಪ್ನನೆಗಳು ಈ ಪ್ರಕಟನೆಗಳಲ್ಲಿ ತುಂಬಿವೆ.

ಹಿಮಾಲಯದಲ್ಲಿ ನಡೆದ ತಿಕ್ಕಾಟಗಳು ಜಾಗತಿಕ— ಸಾರ್ವಜನಿಕಾಭಿಪ್ರಾಯವನ್ನು ತುಂಬಾ ಗಾಬರಿಗೊಳಪಡಿಸಿವೆ. ಸೋವಿಯೆತ್ ನಾಡಿನ ಮತ್ತು ಇತರ ಸಮಾಜವಾದೀ ರಾಜ್ಯಗಳ ಜನತೆಗಳಿಗೆ ಇದು ವಿಶೇಷ ಕಳವಳದ ಸುದ್ದಿಯಾಗಿತ್ತು. ಹಿಮಾಲಯ ಕ್ಷೇತ್ರದಲ್ಲಿ ಪ್ರಕ್ಷುಬ್ಧ ಸ್ಥಿತಿಯನ್ನು ಕೊನೆಗಾಣಿಸಬೇಕೆಂದೂ, ಪರಸ್ಪರ ಅಂಗೀಕಾರಾರ್ಹವಾದ ಬುನಾದಿಯ ಮೇಲೆ ಸಂಘರ್ಷವನ್ನು ಬಗೆಹರಿಸಬೇಕೆಂದೂ ಸೋವಿಯತ್ ಸರಕಾರವು ಪುನಃ ಪುನಃ ಕರೆ ಕೊಟ್ಟಿತು. ಈ ತಿಕ್ಕಾಟದಿಂದ ಸಾಮ್ರಾಜ್ಯವಾದದ ಮತ್ತು ಪ್ರತಿಗಾಮಿ ಧೋರಣೆಯ ಶಕ್ತಿಗಳಿಗೆ ಮಾತ್ರವೇ ಪ್ರಯೋಜನವೆಂದೂ, ಅಂತಾರಾಷ್ಟ್ರೀಯ ಪ್ರಕ್ಷುಬ್ಧತೆಯ ಪೀಡೆಗಳನ್ನು ಶಾಶ್ವತಗೊಳಿಸುವುದರಲ್ಲೇ ಅವುಗಳಿಗೆ ಆಸಕ್ತಿಯಿದೆಯೆಂದೂ ಸೋವಿಯತ್ ನಾಡು ನಂಬುತ್ತ ಬಂದಿದೆ ಮತ್ತು ನಂಬುತ್ತಿದೆ.

ಆದರೆ ಚೀಣೀ ಧುರೀಣರು ಸೋವಿಯತ್ ಒಕ್ಕೂಟದ ಶಾಂತಿಯುತ ನಿಲುವೆಯಿಂದ ಅತೃಪ್ತರಾಗಿದ್ದಾರೆ. ಭಾರತದೊಡನೆಯ ಗಡಿ ವಿವಾದವನ್ನು ಸೈನಿಕ ಸಾಧನಗಳ ಮೂಲಕ ಬಗೆಹರಿಸಬೇಕೆಂದು ಬಯಸಿ ಈ ವಿಷಯದಲ್ಲಿ ಸೋವಿಯತ್ ಸಹಾಯ ಪಡೆಯುವ ಆಸೆಯನ್ನು ಅವರು ಇಟ್ಟುಕೊಂಡಿದ್ದರೆ ಪೆಕಿಂಗ್ ನಾಯಕರು ಬಯಸಿದುದು ಇದೇ ಆದರೆ, ಅವರು ಸಿಟ್ಟಿಗೇಳಲು ಕಾರಣವಿದೆ. 'ಆದರೆ ಪೆಕಿಂಗ್‌ನಲ್ಲಿ ಏನೇ ಹೇಳಲಾದರೂ ಕೂಡ, ಸೋವಿಯೆತ್ ಸರಕಾರವು ಲೆನಿನ್‌ವಾದೀ ಶಾಂತಿ ನೀತಿಗೆ ಕರ್ತವ್ಯನಿಷ್ಠೆಯಿಂದ, ಅಂತಾರಾಷ್ಟ್ರೀಯ ಪ್ರಕ್ಷುಬ್ಧತೆಯ ಸ್ಥಾನಗಳನ್ನು ತೀರಿಸಲು (ಅವುಗಳನ್ನು ಕೆದಕುವುದಕ್ಕೆ ಅಲ್ಲ)— ಸರ್ವ ಪ್ರಯತ್ನಗಳನ್ನೂ ಸದಾ ಮಾಡುತ್ತ ಬಂದಿದೆ ಮತ್ತು ಮುಂದೆಯೂ ಮಾಡುವುದು; ಶಾಂತಿ ರಕ್ಷಣೆಗಾಗಿಯೂ, ಕ್ರೋಢೀಕರಣಕ್ಕಾಗಿಯೂ ಅತ್ಯಂತ ದೃಢನಿಷ್ಠೆಯಿಂದ ಅದು ಕಾಣಿಕೆಯನ್ನು ನೀಡುವುದು. ಭಾರತ ಮತ್ತು ಚೀಣ ದೇಶಗಳ ಮಧ್ಯೆ ಗಡಿ ತಿಕ್ಕಾಟಕ್ಕೆ ಕಾರಣಗಳಿರಲಿಲ್ಲವೆಂದು ನಾವು ಯಾವಾಗಲೂ ನಂಬಿದ್ದೆವು; ಈಗಲೂ ಅದಕ್ಕೆ ಕಾರಣವಿಲ್ಲವೆಂದೂ ನಾವು ನಂಬುತ್ತೇವೆ. ತಿಕ್ಕಾಟವನ್ನು ಸಾಯುಧ ಸಂಘರ್ಷಕವಾಗಿ ಬದಲಾಯಿಸುವುದಕ್ಕಂತೂ ಈ ಮಾತು ಇನ್ನೂ ಹೆಚ್ಚಾಗಿ ಅನ್ವಯಿಸುತ್ತದೆ.

ಹಿಮಾಲಯದ ಗಡಿ ತಿಕ್ಕಾಟದಿಂದ ಏಶಿಯ ಮತ್ತು ಆಫ್ರಿಕ ಖಂಡಗಳ ಎಳೆಯ ರಾಜ್ಯಗಳಿಗೆ ವಿಶೇಷ ಗಾಬರಿಯುಂಟಾಗಿದೆ. ಹೊಸ ಸ್ವತಂತ್ರ ರಾಜ್ಯಗಳ ಐಕಮತ್ಯವನ್ನು ಬಲಹೀನಗೊಳಿಸುವುದರಿಂದಲೂ, ಅವುಗಳ ನಡುವಣ ಜಗಳಗಳಿಂದಲೂ, ವಿವಾದಗಳಿಂದಲೂ, ಸಾಮ್ರಾಜ್ಯವಾದಿಗಳ ಮತ್ತು ವಸಾಹತುವಾದಿಗಳ ಇಚ್ಛೆಯಂತೆ ವರ್ತಿಸಿದಂತಾಗುತ್ತದೆಯೆಂಬುದನ್ನು ಅವು ಸ್ವಾನುಭವದಿಂದ ತಿಳಿದಿವೆ.

ಕೊಲಂಬೊ ಸಮ್ಮೇಲನದ ಪ್ರಸ್ತಾಪಗಳು, ಗಡಿ ವಿವಾದದ ಬಗ್ಗೆ ಪರಸ್ಪರ ಅಂಗೀಕಾರಾರ್ಹವಾದ ಇತ್ಯರ್ಥ ಸಾಧಿಸಲು ಅಂತಃಕರಣಪೂರ್ವಕವಾಗಿ ಪ್ರಯತ್ನಿಸುತ್ತಿರುವ ರಾಜ್ಯಗಳ ಸ್ನೇಹಪೂರ್ವಕವಾದ ಶಿಫಾರಸುಗಳಲ್ಲದೆ ಬೇರೇನೂ ಅಲ್ಲ. ದುರ್ಭಾಗ್ಯವಶಾತ್, ಆಫ್ರೋ—ಏಶಿಯನ್ ಜನತೆಗಳ ಸಂಕಲ್ಪವನ್ನು ವ್ಯಕ್ತಪಡಿಸುವ ನ್ಯಾಯೋಚಿತವಾದ ಧ್ವನಿಗೆ ಪೆಕಿಂಗನಲ್ಲಿ ಮನ್ನಣೆ ದೊರೆಯುತ್ತಿಲ್ಲ.

ಏನು ಸಂಗತಿ? ತಿಕ್ಕಾಟವು ಶಾಂತಿಯುತವಾಗಿ ಬಗೆಹರಿಯುವುದಕ್ಕೆ ಅಡ್ಡಿಯಾದರೂ ಏನು? ಶಾಂತಚಿತ್ತದಿಂದ, ಸ್ಥಿಮಿತ ಮನೋಭಾವದಿಂದ ತಮ್ಮ ಪರಸ್ಪರ ವಾದಗಳನ್ನು ಪಕ್ಷಪಾತವಿಲ್ಲದೆ ಚರ್ಚಿಸಲು ಎರಡೂ ಪಕ್ಷಗಳು ಒಂದೆಡೆ ಮೇಜಿನ ಬಳಿ ಕುಳಿತ ಪಕ್ಷದಲ್ಲಿ, ಈ ತಿಕ್ಕಾಟವನ್ನು ಈ ಮೊದಲೇ ಎಂದೋ ಬಗೆಹರಿಸಬಹುದಾಗಿತ್ತು. ಆಗ ಜಗತ್ತಿನ ಈ ಭಾಗದಲ್ಲಿ ಪ್ರಕ್ಷುಬ್ಧಕ್ಷೇತ್ರವನ್ನು ಎಂದೋ ಕೊನೆಗಾಣಿಸಲಾಗುತ್ತಿತ್ತು ಎಂಬುದರಲ್ಲಿ ಸಂದೇಹವೇ ಇಲ್ಲ. ಅದೇ ವೇಳೆಯಲ್ಲಿ ಭಾರತ ಸರಕಾರವು ಕೊಲಂಬೋ ಸಮ್ಮೇಲನದ ಪ್ರಸ್ತಾಪಗಳಿಗೆ ಗುಣಾತ್ಮಕ ಪ್ರತಿಕ್ರಿಯೆ ನೀಡಿ, ಯಾವ ಮಾನಸಿಕ ಅಭ್ಯಂತರವೂ ಇಲ್ಲದೆ ಅವುಗಳನ್ನು ಸಂಪೂರ್ಣವಾಗಿ ಸ್ವೀಕರಿಸಿ, ಈ ಪ್ರಸ್ತಾಪಗಳ ಬುನಾದಿಯ ಮೇಲೆ ಚೀಣದ ಜನಗಣತಂತ್ರದೊಡನೆ ಮಾತುಕತೆಗಳನ್ನು ಪ್ರಾರಂಭಿಸಲು ಸಿದ್ಧತೆಯನ್ನು ವ್ಯಕ್ತಪಡಿಸಿತೆಂಬ ವಾಸ್ತವಾಂಶದ ಕಡೆಗೆ ಅನೇಕ ದೇಶಗಳ ವಾರ್ತಾಪತ್ರಿಕೆಗಳು ಗಮನವನ್ನು ಸೆಳೆದುವು. ಚೀಣದ ಜನಗಣತಂತ್ರ ಸರಕಾರವು ಇನ್ನೂ ಸ್ನೇಹೀ ತಟಸ್ಥವಾದೀ ರಾಜ್ಯಗಳ ಪ್ರಸ್ತಾಪಗಳನ್ನು ಸ್ವೀಕರಿಸಿಲ್ಲ ಮತ್ತು ಸೂಚಿತ ಬುನಾದಿಯ ಮೇಲೆ ಮಾತುಕತೆಗಳನ್ನು ನಡೆಸುವ ಸಿದ್ಧತೆಯನ್ನು ವ್ಯಕ್ತಪಡಿಸಿಲ್ಲ. ಈ ಪ್ರಸ್ತಾಪಗಳನ್ನು 'ತತ್ವಶಃ' ಒಪ್ಪುವುದಾಗಿ ಪ್ರಕಟನೆಯೊಂದನ್ನು ಮಾತ್ರವೇ ನೀಡುವುದು ಸಾಧ್ಯವೆಂದು ಚೀಣದ ಜನಗಣತಂತ್ರ ಸರಕಾರವು ಭಾವಿಸಿತು. ಇದನ್ನು ಅನುಸರಿಸಿ ಯಾವ ರಚನಾತ್ಮಕ ಚರ್ಯೆಗಳನ್ನೂ ಚೀಣೀ ಜನಗಣತಂತ್ರ ಸರಕಾರವು ಕೈಗೊಳ್ಳಲಿಲ್ಲ.

ಅಲಿಪ್ತ ರಾಷ್ಟ್ರಗಳ ಉಪಕ್ರಮವನ್ನು ಪ್ರತಿಯೊಂದು ರೀತಿಯಲ್ಲಿಯೂ ಹೊಗಳುತ್ತ, ಅವುಗಳ ಸತ್ಸೇವೆಗಳಿಗೆ ತಾನು 'ಬೆಲೆ ಕೊಡುತ್ತದೆಯೆಂದೂ' ಮತ್ತು, ಕಾಣಿಕೆ ನೀಡುತ್ತದೆಯೆಂದೂ ಹೇಳಿಕೊಳ್ಳುತ್ತ ಚೀಣೀ ಗಣತಂತ್ರವು ವಸ್ತುತಃ ಈ ಪ್ರಯತ್ನಗಳನ್ನು ಕಡೆಗಣಿಸುತ್ತದೆ ಮತ್ತು ಕೊಲಂಬೋದಲ್ಲಿ ಕರಡಾಗಿ ತಯಾರಿಸಲಾದ ಪ್ರಸ್ತಾಪಗಳಿಂದ ಲಾಭ ಪಡೆಯುವ ಇಚ್ಛೆಯನ್ನು ಪ್ರದರ್ಶಿಸುತ್ತಿಲ್ಲ—ಎಂದು ಅನೇಕ ಜನರು ಈಗ ಹೇಳುತ್ತಿರುವುದಕ್ಕೆ ಕಾರಣವಿಲ್ಲದಿಲ್ಲ.

ಆಫ್ರೋ—ಏಶಿಯನ್ ಸಾರ್ವಜನಿಕಾಭಿಪ್ರಾಯವು ಗಡಿನಾಡಿನ ಸಮಸ್ಯೆಯ ಕುರಿತು ಚೀಣೀಜನಗಣತಂತ್ರ ನಾಯಕರ ನೀತಿಯನ್ನು ಅಂತಾರಾಷ್ಟ್ರೀಯ ಸಂಬಂಧಗಳ ವಿಸ್ತೃತ ಕ್ಷೇತ್ರದಲ್ಲಿ ಅವರು ವಹಿಸುವ ನಿಲುವೆಯೊಂದಿಗೆ ಕೂಡಿಸುತ್ತ ಆ ಬಗ್ಗೆ ಯೋಗ್ಯ ತೀರ್ಮಾನಕ್ಕೆ ಬರುತ್ತದೆ.

ಚೀಣಾ-ಭಾರತ ಗಡಿ ವಿವಾದವು ಶಾಂತಿಯ ಸಲುವಾಗಿ ರಾಷ್ಟ್ರೀಯ ವಿಮೋಚನೆಗಾಗಿಯೂ, ಸಾಮ್ರಾಜ್ಯವಾದ ಮತ್ತು ವಸಾಹತುವಾದಗಳ ವಿರುದ್ಧವಾಗಿಯೂ ಹೋರಾಡುತ್ತಿರುವ ಜನತೆಗಳ ಐಕಮತ್ಯದ ಮತ್ತು ಏಕೀಭಾವದ ಉದ್ದೇಶ ಸಾಧನೆಗೆ ವಿಶೇಷ ಗಂಡಾಂತರವನ್ನು ಒಡ್ಡುತ್ತದೆಯೆಂಬ ವಾಸ್ತವಾಂಶದ ಕುರಿತು ಲೇಖನವು ವಿಶೇಷ ಗಾಬರಿಯನ್ನು ವ್ಯಕ್ತಪಡಿಸುತ್ತದೆ. ಚೀಣದ ಜನತಾ ಗಣತಂತ್ರ ಸರಕಾರದ ನೀತಿಯು ಭಾರತವನ್ನು ಏಶಿಯಾ ಮತ್ತು ಆಫ್ರಿಕ ಖಂಡಗಳ ಇತರ ದೇಶಗಳ ವಿರುದ್ಧವಾಗಿ ಎತ್ತಿಕಟ್ಟುವ ಇಚ್ಛೆಯನ್ನೂ ತೋರಿಸುತ್ತದೆಯೆಂಬುದನ್ನು ಅವರು ಕಾಣದಿರಲಾರರು—

ನೆಹರೂ ಸರಕಾರವು ಸಾಮ್ರಾಜ್ಯವಾದಿಯೂ ಮತ್ತು ವಿಸ್ತರಣವಾದಿಯೂ ಆಗಿದೆಯೆಂದೂ, ಅದು ಬ್ರಿಟಿಷ್ ಸಾಮ್ರಾಜ್ಯಕ್ಕಿಂತಲೂ ದೊಡ್ಡದಾದ ಬೃಹತ್ ಸಾಮ್ರಾಜ್ಯವನ್ನು ನಿರ್ಮಿಸಲು ಪ್ರಯತ್ನಿಸುತ್ತಿದೆಯೆಂದೂ ಆಪಾದಿಸಿ ಅದನ್ನು ರುಜುವಾತುಪಡಿಸಲು ಚೀಣೀ ಧುರೀಣರು ಇತ್ತೀಚೆಗೆ ವಿಸ್ತೃತ ಪ್ರಚಾರ ಚಳವಳಿಯನ್ನು ಪ್ರಾರಂಭಿಸಿದ್ದಾರೆಂಬ ವಾಸ್ತವಾಂಶವು ಗಮನಾರ್ಹವಾದುದು, ಇಂತಹ ವಾದಗಳ ಮುಂದೆ, ಭಾರತದೊಡನೆಯ ಗಡಿ ವಿವಾದದ ಶಾಂತಿಯುತ ಇತ್ಯರ್ಥವನ್ನು ಸಾಧಿಸಲು ತಾವು ಪ್ರಯತ್ನಿಸುತ್ತಿರುವುದಾಗಿ ಆಶ್ವಾಸನೆಗಳನ್ನು ನೀಡುತ್ತಿರುವ ಚೀಣೀ ಧುರೀಣರು ಅಂತಃಕರಣಪೂರ್ವಕವಾಗಿ ಮಾತನಾಡುತ್ತಿದ್ದಾರೆಂದು ನಂಬುವುದು ಕಷ್ಟ. ತಿಕ್ಕಾಟವು ಈ ಗಾಗಲೇ ಜನತೆಗಳಿಗೆ ವಿಶೇಷ ಹಾನಿಯನ್ನುಂಟುಮಾಡಿದೆ ಮತ್ತು ಉಂಟುಮಾಡುತ್ತಿದೆ. ಭಾರತ ಚೀನಾ ತಿಕ್ಕಾಟದ ಕಾಲದಲ್ಲಿ ರಾಷ್ಟ್ರೀಯತೆಯ ಮತ್ತು ದೇಶಾಹಂಕಾರದ ವಿಷಜೀವಾಣುಗಳು ಸಕ್ರಿಯಗೊಂಡು ಬೇಗ ಬೆಳೆದುವು. ಚೀಣೀ ವಿರೋಧೀ ಮನೋಭಾವವು ಭಾರತದಲ್ಲಿ ಹಬ್ಬಲಾರಂಭಿಸಿತು; ಮತ್ತು ಚೀಣದಲ್ಲಿ ಭಾರತ ವಿರೋಧೀ ಮನೋಭಾವವೂ ಹಬ್ಬಲಾರಂಭಿಸಿತು. ಪ್ರಸ್ತುತ ಪರಿಸ್ಥಿತಿಯಿಂದ ಎರಡೂ ದೇಶಗಳಲ್ಲಿ ಪರಸ್ಪರ ಹಗೆತನದ ಅಧಿಕ ಬೆಳವಣಿಗೆಗೆ ವಸ್ತುತಃ ಮಾರ್ಗವುಂಟಾಗುತ್ತದೆ.

ಇತ್ತೀಚೆಗೆ ಈ ವಿಷಯವು ತುಂಬಾ ದೂರದವರೆಗೆ ಹೋಗಿದೆ. ವಿಭಿನ್ನ ಅಂತಾರಾಷ್ಟ್ರೀಯ ಸಭೆಗಳಲ್ಲಿ ವಾತಾವರಣವನ್ನು ವಿಷಮಯಗೊಳಿಸಲು ಈ ತಿಕ್ಕಾಟವನ್ನು ಬಳಸಿಕೊಳ್ಳಲಾಗುತ್ತಿದೆ.

ಭಾರತ—ಚೀನಾ ಗಡಿತಿಕ್ಕಾಟದಿಂದ ಈಗಾಗಲೇ ಗಂಭೀರ ಸ್ವರೂಪದ ಕೆಟ್ಟ ಪರಿಣಾಮಗಳುಂಟಾಗಿವೆ ಯೆಂಬುದನ್ನು

(೧೨ನೇ ಪುಟ ನೋಡಿರಿ)

ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ.
14 CT ಚಿನ್ನದ ಆಭರಣಗಳಲ್ಲಿ 58¼% ಶುದ್ಧ ಪುತ್ಥಳಿ ಚಿನ್ನ ಇರುತ್ತದೆ.
ಬೇಡದಿದ್ದಲ್ಲಿ 1 ರೂ. ಕಮ್ಮಿಯಲ್ಲಿ ಯಾವಾಗಲೂ ಬಜಾರು ಧಾರಣೆಗೆ ಪಡಕೊಳ್ಳುವ ಭರವಸೆ ಕೊಡುತ್ತೇವೆ.
ವಿ. ಸೂ ಹಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡಕೊಳ್ಳುವರೆ ಸರಕಾರದ ಲೈಸನ್ಸ್ ಸಿಕ್ಕಿರುತ್ತದೆ.
ಮದುವೆ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡಕೊಂಡು ಖಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.

ಶ್ರೀಕೃಷ್ಣಾ ಜ್ಯುವೆಲರಿ ಮಾರ್ಟ್

ತೆಂಕಪೇಟೆ — ಉಡುಪಿ.
ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.
ಫೋನ್ ನಂಬ್ರ: 66

● ಕುಮಾರಿ ಬಿಲ್ಲೆಗಳು ●
(ರಿಜಿಸ್ಟರ್ಡ್ Regd.)
ಪ್ರಕೃತಿಯು ವಿಫಲಗೊಂಡಾಗ ಉಂಟಾಗುವ ಕಾತರ ನಿವಾರಣೆಗೆ ಸಮಯೋಚಿತವಾದ ಆಯುರ್ವೇದೀಯ ಮಿಶ್ರಣ!
ಟ್ಯೂಬ್ 1ರ ಸಾಮಾನ್ಯ ರೂ. 4/- ಮಧ್ಯಮ ರೂ. 6/ ಉತ್ತಮ ರೂ. 9/-
P. Devee & Co. (N. J.) Calcutta—40.
ಸ್ಟಾಕಿಸ್ಟರು— ರಾಜಾ ಮೆಡಿಕಲ್ ಹಾಲ್, ಬೆಂಗಳೂರು ಕೆಂಟೋನ್‌ಮೆಂಟ್; ಕುಮಟಾ ಫಾರ್ಮಸಿ, ಕುಮಟಾ (ಉ. ಕ.)

ಸೋವಿಯತ್ ದೃಷ್ಟಿಯಲ್ಲಿ

ಚೀಣೀಯರಿಂದ ಭಾರತಕ್ಕೆ ಅಪರಾಧ

'ಪ್ರಾವ್ದ' ಪತ್ರಿಕೆಯು ತನ್ನ ತಾ. ೧೯—೯—೬೩ ರ ಸಂಚಿಕೆಯಲ್ಲಿ ಏಶಿಯದಲ್ಲಿ ಅಪಾಯಕರ ಉದ್ರಿಕ್ತ ಸ್ಥಾನ ಎಂಬ ಶೀರ್ಷಿಕೆಯಲ್ಲಿ ವಿಶ್ವಶಾಂತಿಗೆ ಚೀಣಾ ಭಾರತ ಗಡಿ ತಿಕ್ಕಾಟದ ವಿಪತ್ಕರ ಪರಿಣಾಮಗಳ ಕುರಿತು ಒಂದು ದೀರ್ಘ ಲೇಖನವನ್ನು ಪ್ರಕಟಿಸಿದೆ.

ಇತ್ತೀಚೆಗೆ ಚೀಣೀ ಪತ್ರಿಕೆಗಳಲ್ಲಿ ಅಚ್ಚಾಗಿರುವ ಅನೇಕ ಪ್ರಕಟಣೆಗಳು, ಈ ಗಡಿ ವಿವಾದದಲ್ಲಿ ಜನತಾ ಚೀನ ಸರಕಾರವು ಕೈಗೊಂಡ ಸಕಲ ಚರ್ಯೆಗಳನ್ನೂ ಸಮರ್ಥಿಸಿವೆ ಮತ್ತು ಇತರ ರಾಜ್ಯಗಳ ನೀತಿಯನ್ನು ನಿಂದಿಸಿವೆ. ಚೀಣಾ-ಭಾರತ ತಿಕ್ಕಾಟದ ಬಗ್ಗೆ ಸೋವಿಯತ್ ಸರಕಾರ ವಹಿಸಿದ ನಿಲುವೆಯ ಕುರಿತು ಅಪನಿಂದೆಯ ಅನೇಕ ಸೃಷ್ಟನೆಗಳು ಈ ಪ್ರಕಟನೆಗಳಲ್ಲಿ ತುಂಬಿವೆ.

ಹಿಮಾಲಯದಲ್ಲಿ ನಡೆದ ತಿಕ್ಕಾಟಗಳು ಜಾಗತಿಕ— ಸಾರ್ವಜನಿಕಾಭಿಪ್ರಾಯವನ್ನು ತುಂಬಾ ಗಾಬರಿಗೊಳಪಡಿಸಿವೆ. ಸೋವಿಯೆತ್ ನಾಡಿನ ಮತ್ತು ಇತರ ಸಮಾಜವಾದೀ ರಾಜ್ಯಗಳ ಜನತೆಗಳಿಗೆ ಇದು ವಿಶೇಷ ಕಳವಳದ ಸುದ್ದಿಯಾಗಿತ್ತು. ಹಿಮಾಲಯ ಕ್ಷೇತ್ರದಲ್ಲಿ ಪ್ರಶ್ನಿತ ಸ್ಥಿತಿಯನ್ನು ಕೊನೆಗಾಣಿಸಬೇಕೆಂದೂ, ಪರಸ್ಪರ ಅಂಗೀಕಾರಾರ್ಹವಾದ ಬುನಾದಿಯ ಮೇಲೆ ಸಂಘರ್ಷವನ್ನು ಬಗೆಹರಿಸಬೇಕೆಂದೂ ಸೋವಿಯತ್ ಸರಕಾರವು ಪುನಃ ಪುನಃ ಕರೆ ಕೊಟ್ಟಿತು. ಈ ತಿಕ್ಕಾಟದಿಂದ ಸಾಮ್ರಾಜ್ಯವಾದದ ಮತ್ತು ಪ್ರತಿಗಾಮಿ ಘೋರಣೆಯ ಶಕ್ತಿಗಳಿಗೆ ಮಾತ್ರವೇ ಪ್ರಯೋಜನವೆಂದೂ, ಅಂತರಾಷ್ಟ್ರೀಯ ಪ್ರಶ್ನಿತತೆಯ ಸೀರೆಗಳನ್ನು ಶಾಶ್ವತಗೊಳಿಸುವುದರಲ್ಲೇ ಅವುಗಳಿಗೆ ಆಸಕ್ತಿಯಿದೆಯೆಂದೂ ಸೋವಿಯತ್ ನಾಡು ನಂಬುತ್ತ ಬಂದಿದೆ. ಮತ್ತು ನಂಬುತ್ತಿದೆ.

ಆದರೆ ಚೀಣೀ ಧುರೀಣರು ಸೋವಿಯತ್ ಒಕ್ಕೂಟದ ಶಾಂತಿಯುತ ನಿಲುವೆಯಿಂದ ಅತೃಪ್ತರಾಗಿದ್ದಾರೆ. ಭಾರತದೊಡನೆಯ ಗಡಿ ವಿವಾದವನ್ನು ಸೈನಿಕ ಸಾಧನೆಗಳ ಮೂಲಕ ಬಗೆಹರಿಸಬೇಕೆಂದು ಬಯಸಿ ಈ ವಿಷಯದಲ್ಲಿ ಸೋವಿಯತ್ ಸಹಾಯ ಪಡೆಯುವ ಆಸೆಯನ್ನು ಅವರು ಇಟ್ಟುಕೊಂಡಿದ್ದರೆ? ಪೆಕಿಂಗ್ ನಾಯಕರು ಬಯಸಿದುದು ಇದೇ ಆದರೆ, ಅವರು ಸಿಟ್ಟಿಗೇಳಲು ಕಾರಣವಿದೆ. 'ಆದರೆ ಪೆಕಿಂಗ್‌ನಲ್ಲಿ ಏನೇ ಹೇಳಲಾದರೂ ಕೂಡ, ಸೋವಿಯೆತ್ ಸರಕಾರವು ಲೆನಿನ್‌ವಾದೀ ಶಾಂತಿ ನೀತಿಗೆ ಕರ್ತವ್ಯನಿಷ್ಠೆಯಿಂದ, ಅಂತರಾಷ್ಟ್ರೀಯ ಪ್ರಶ್ನಿತತೆಯ ಸ್ಥಾನಗಳನ್ನು ತೀರಿಸಲು (ಅವುಗಳನ್ನು ಕೆದಕುವುದಕ್ಕೆ ಅಲ್ಲ)— ಸರ್ವ ಪ್ರಯತ್ನಗಳನ್ನೂ ಸದಾ ಮಾಡುತ್ತ ಬಂದಿದೆ ಮತ್ತು ಮುಂದೆಯೂ ಮಾಡುವುದು; ಶಾಂತಿ ರಕ್ಷಣೆಗಾಗಿಯೂ, ಕ್ರೋಢೀಕರಣಕ್ಕಾಗಿಯೂ ಅತ್ಯಂತ ದೃಢನಿಷ್ಠೆಯಿಂದ ಅದು ಕಾಣಿಕೆಯನ್ನು ನೀಡುವುದು. ಭಾರತ ಮತ್ತು ಚೀಣ ದೇಶಗಳ ಮಧ್ಯೆ ಗಡಿ ತಿಕ್ಕಾಟಕ್ಕೆ ಕಾರಣಗಳಿರಲಿಲ್ಲವೆಂದು ನಾವು ಯಾವಾಗಲೂ ನಂಬಿದ್ದೆವು; ಈಗಲೂ ಅದಕ್ಕೆ ಕಾರಣವಿಲ್ಲವೆಂದೂ ನಾವು ನಂಬುತ್ತೇವೆ. ತಿಕ್ಕಾಟವನ್ನು ಸಾಯುಧ ಸಂಘರ್ಷಕವಾಗಿ ಬದಲಾಯಿಸುವುದಕ್ಕಂತೂ ಈ ಮಾತು ಇನ್ನೂ ಹೆಚ್ಚಾಗಿ ಅನ್ವಯಿಸುತ್ತದೆ.

ಹಿಮಾಲಯದ ಗಡಿ ತಿಕ್ಕಾಟದಿಂದ ಏಶಿಯ ಮತ್ತು ಆಫ್ರಿಕ ಖಂಡಗಳ ಎಳೆಯ ರಾಜ್ಯಗಳಿಗೆ ವಿಶೇಷ ಗಾಬರಿಯುಂಟಾಗಿದೆ. ಹೊಸ ಸ್ವತಂತ್ರ ರಾಜ್ಯಗಳ ಐಕಮತ್ಯವನ್ನು ಬಲಹೀನಗೊಳಿಸುವುದರಿಂದಲೂ, ಅವುಗಳ ನಡುವಣ ಜಗಳಗಳಿಂದಲೂ, ವಿವಾದಗಳಿಂದಲೂ, ಸಾಮ್ರಾಜ್ಯವಾದಿಗಳ ಮತ್ತು ವಸಾಹತುವಾದಿಗಳ ಇಚ್ಛೆಯಂತೆ ವರ್ತಿಸಿದಂತಾಗುತ್ತದೆಯೆಂಬುದನ್ನು ಅವು ಸ್ವಾನುಭವದಿಂದ ತಿಳಿದಿವೆ.

ಕೊಲಂಬೊ ಸಮ್ಮೇಲನದ ಪ್ರಸ್ತಾಪಗಳು, ಗಡಿ ವಿವಾದದ ಬಗ್ಗೆ ಪರಸ್ಪರ ಅಂಗೀಕಾರಾರ್ಹವಾದ ಇತ್ಯರ್ಥ ಸಾಧಿಸಲು ಅಂತಃಕರಣಪೂರ್ವಕವಾಗಿ ಪ್ರಯತ್ನಿಸುತ್ತಿರುವ ರಾಜ್ಯಗಳ ಸ್ನೇಹಪೂರ್ವಕವಾದ ಶಿಫಾರಸುಗಳಲ್ಲದೆ ಬೇರೇನೂ ಅಲ್ಲ. ದುರ್ಭಾಗ್ಯವಶಾತ್, ಆಫ್ರೋ—ಏಶಿಯನ್ ಜನತೆಗಳ ಸಂಕಲ್ಪವನ್ನು ವ್ಯಕ್ತಪಡಿಸುವ ನ್ಯಾಯೋಚಿತವಾದ ಧ್ವನಿಗೆ ಪೆಕಿಂಗಿನಲ್ಲಿ ಮನ್ನಣೆ ದೊರೆಯುತ್ತಿಲ್ಲ.

ಏನು ಸಂಗತಿ? ತಿಕ್ಕಾಟವು ಶಾಂತಿಯುತವಾಗಿ ಬಗೆಹರಿಯುವುದಕ್ಕೆ ಅಡ್ಡಿಯಾದರೂ ಏನು? ಶಾಂತಚಿತ್ತದಿಂದ, ಸ್ತಿಮಿತ ಮನೋಭಾವದಿಂದ ತಮ್ಮ ಪರಸ್ಪರ ವಾದಗಳನ್ನು ಪಕ್ಷಪಾತವಿಲ್ಲದೆ ಚರ್ಚಿಸಲು ಎರಡೂ ಪಕ್ಷಗಳು ಒಂದೆಡೆ ಮೇಜಿನ ಬಳಿ ಕುಳಿತ ಪಕ್ಷದಲ್ಲಿ, ಈ ತಿಕ್ಕಾಟವನ್ನು ಈ ಮೊದಲೇ ಎಂದೋ ಬಗೆಹರಿಸಬಹುದಾಗಿತ್ತು. ಆಗ ಜಗತ್ತಿನ ಈ ಭಾಗದಲ್ಲಿ ಪ್ರಶ್ನಿತ ಕ್ಷೇತ್ರವನ್ನು ಎಂದೋ ಕೊನೆಗಾಣಿಸಲಾಗುತ್ತಿತ್ತು ಎಂಬುದರಲ್ಲಿ ಸಂದೇಹವೇ ಇಲ್ಲ. ಅದೇ ವೇಳೆಯಲ್ಲಿ ಭಾರತ ಸರಕಾರವು ಕೊಲಂಬೋ ಸಮ್ಮೇಲನದ ಪ್ರಸ್ತಾಪಗಳಿಗೆ ಗುಣಾತ್ಮಕ ಪ್ರತಿಕ್ರಿಯೆ ನೀಡಿ, ಯಾವ ಮಾನಸಿಕ ಅಭ್ಯಂತರವೂ ಇಲ್ಲದೆ ಅವುಗಳನ್ನು ಸಂಪೂರ್ಣವಾಗಿ ಸ್ವೀಕರಿಸಿ, ಈ ಪ್ರಸ್ತಾಪಗಳ ಬುನಾದಿಯ ಮೇಲೆ ಚೀಣದ ಜನಗಣತಂತ್ರದೊಡನೆ ಮಾತುಕತೆಗಳನ್ನು ಪ್ರಾರಂಭಿಸಲು ಸಿದ್ಧತೆಯನ್ನು ವ್ಯಕ್ತಪಡಿಸಿತೆಂಬ ವಾಸ್ತವಾಂಶದ ಕಡೆಗೆ ಅನೇಕ ದೇಶಗಳ ವಾರ್ತಾಪತ್ರಿಕೆಗಳು ಗಮನವನ್ನು ಸೆಳೆದುವು. ಚೀಣದ ಜನಗಣತಂತ್ರ ಸರಕಾರವು ಇನ್ನೂ ಸ್ನೇಹೀ ತಟಸ್ಥವಾದೀ ರಾಜ್ಯಗಳ ಪ್ರಸ್ತಾಪಗಳನ್ನು ಸ್ವೀಕರಿಸಿಲ್ಲ ಮತ್ತು ಸೂಚಿತ ಬುನಾದಿಯ ಮೇಲೆ ಮಾತುಕತೆಗಳನ್ನು ನಡೆಸುವ ಸಿದ್ಧತೆಯನ್ನು ವ್ಯಕ್ತಪಡಿಸಿಲ್ಲ. ಈ ಪ್ರಸ್ತಾಪಗಳನ್ನು 'ತತ್ವಶಃ' ಒಪ್ಪುವುದಾಗಿ ಪ್ರಕಟನೆಯೊಂದನ್ನು ಮಾತ್ರವೇ ನೀಡುವುದು ಸಾಧ್ಯವೆಂದು ಚೀಣದ ಜನಗಣತಂತ್ರ ಸರಕಾರವು ಭಾವಿಸಿತು. ಇದನ್ನು ಅನುಸರಿಸಿ ಯಾವ ರಚನಾತ್ಮಕ ಚರ್ಯೆಗಳನ್ನೂ ಚೀಣೀ ಜನಗಣತಂತ್ರ ಸರಕಾರವು ಕೈಗೊಳ್ಳಲಿಲ್ಲ.

ಅಲಿಪ್ತ ರಾಷ್ಟ್ರಗಳ ಉಪಕ್ರಮವನ್ನು ಪ್ರತಿಯೊಂದು ರೀತಿಯಲ್ಲಿಯೂ ಹೊಗಳುತ್ತ, ಅವುಗಳ ಸತ್ಸೇವೆಗಳಿಗೆ ತಾನು 'ಬೆಲೆ ಕೊಡುತ್ತದೆಯೆಂದೂ' ಮತ್ತು, ಕಾಣಿಕೆ ನೀಡುತ್ತದೆಯೆಂದೂ ಹೇಳಿಕೊಳ್ಳುತ್ತ ಚೀಣೀ ಗಣತಂತ್ರವು ವಸ್ತುತಃ ಈ ಪ್ರಯತ್ನಗಳನ್ನು ಕಡೆಗಣಿಸುತ್ತದೆ ಮತ್ತು ಕೊಲಂಬೋದಲ್ಲಿ ಕರಡಾಗಿ ತಯಾರಿಸಲಾದ ಪ್ರಸ್ತಾಪಗಳಿಂದ ಲಾಭ ಪಡೆಯುವ ಇಚ್ಛೆಯನ್ನು ಪ್ರದರ್ಶಿಸುತ್ತಿಲ್ಲ—ಎಂದು ಅನೇಕ ಜನರು ಈಗ ಹೇಳುತ್ತಿರುವುದಕ್ಕೆ ಕಾರಣವಿಲ್ಲದಿಲ್ಲ.

ಆಫ್ರೋ—ಏಶಿಯನ್ ಸಾರ್ವಜನಿಕಾಭಿಪ್ರಾಯವು ಗಡಿನಾಡಿನ ಸಮಸ್ಯೆಯ ಕುರಿತು ಚೀಣೀ ಜನಗಣತಂತ್ರ ನಾಯಕರ ನೀತಿಯನ್ನು ಅಂತಾರಾಷ್ಟ್ರೀಯ ಸಂಬಂಧಗಳ ವಿಶ್ವಾಪಕ ಕ್ಷೇತ್ರದಲ್ಲಿ ಅವರು ವಹಿಸುವ ನಿಲುವೆಯೊಂದಿಗೆ ಕೂಡಿಸುತ್ತ ಅಬಗ್ಗೆ ಯೋಗ್ಯ ತೀರ್ಮಾನಕ್ಕೆ ಬರುತ್ತದೆ.

ಚೀಣಾ-ಭಾರತ ಗಡಿ ವಿವಾದವು ಶಾಂತಿಯ ಸಲುವಾಗಿ ರಾಷ್ಟ್ರೀಯ ವಿಮೋಚನೆಗಾಗಿಯೂ, ಸಾಮ್ರಾಜ್ಯವಾದ ಮತ್ತು ವಸಾಹತುವಾದಗಳ ವಿರುದ್ಧವಾಗಿಯೂ ಹೋರಾಡುತ್ತಿರುವ ಜನತೆಗಳ ಐಕಮತ್ಯದ ಮತ್ತು ಏಕೀಭಾವದ ಉದ್ದೇಶ ಸಾಧನೆಗೆ ವಿಶೇಷ ಗಂಡಾಂತರವನ್ನು ಒಡ್ಡುತ್ತದೆಯೆಂಬ ವಾಸ್ತವಾಂಶದ ಕುರಿತು ಲೇಖನವು ವಿಶೇಷ ಗಾಬರಿಯನ್ನು ವ್ಯಕ್ತಪಡಿಸುತ್ತದೆ. ಚೀಣದ ಜನತಾ ಗಣತಂತ್ರ ಸರಕಾರದ ನೀತಿಯು ಭಾರತವನ್ನು ಏಶಿಯಾ ಮತ್ತು ಆಫ್ರಿಕ ಖಂಡಗಳ ಇತರ ದೇಶಗಳ ವಿರುದ್ಧವಾಗಿ ಎತ್ತಿಕಟ್ಟುವ ಇಚ್ಛೆಯನ್ನೂ ತೋರಿಸುತ್ತದೆಯೆಂಬುದನ್ನು ಅವರು ಕಾಣದಿರಲಾರರು—

ನೆಹರೂ ಸರಕಾರವು ಸಾಮ್ರಾಜ್ಯವಾದಿಯೂ ಮತ್ತು ವಿಸ್ತರಣವಾದಿಯೂ ಆಗಿದೆಯೆಂದೂ, ಅದು ಬ್ರಿಟಿಷ್ ಸಾಮ್ರಾಜ್ಯಕ್ಕಿಂತಲೂ ದೊಡ್ಡದಾದ ಬೃಹತ್ ಸಾಮ್ರಾಜ್ಯವನ್ನು ನಿರ್ಮಿಸಲು ಪ್ರಯತ್ನಿಸುತ್ತಿದೆಯೆಂದೂ ಆಪಾದಿಸಿ ಅದನ್ನು ರುಜುವಾತುಪಡಿಸಲು ಚೀಣೀ ಧುರೀಣರು ಇತ್ತೀಚೆಗೆ ವಿಸ್ತೃತಪ್ರಚಾರ ಚಳವಳಿಯನ್ನು ಪ್ರಾರಂಭಿಸಿದ್ದಾರೆಂಬ ವಾಸ್ತವಾಂಶವು ಗಮನಾರ್ಹವಾದುದು. ಇಂತಹ ವಾದಗಳ ಮುಂದೆ, ಭಾರತದೊಡನೆಯ ಗಡಿ ವಿವಾದದ ಶಾಂತಿಯುತ ಇತ್ಯರ್ಥವನ್ನು ಸಾಧಿಸಲು ತಾವು ಪ್ರಯತ್ನಿಸುತ್ತಿರುವುದಾಗಿ ಆಶ್ವಾಸನೆಗಳನ್ನು ನೀಡುತ್ತಿರುವ ಚೀಣೀ ಧುರೀಣರು ಅಂತಃಕರಣಪೂರ್ವಕವಾಗಿ ಮಾತನಾಡುತ್ತಿದ್ದಾರೆಂದು ನಂಬುವುದು ಕಷ್ಟ. ತಿಕ್ಕಾಟವು ಈ ಗಾಗಲೇ ಜನತೆಗಳಿಗೆ ವಿಶೇಷ ಹಾನಿಯನ್ನುಂಟುಮಾಡಿದೆ ಮತ್ತು ಉಂಟುಮಾಡುತ್ತಿದೆ. ಭಾರತ ಚೀನಾ ತಿಕ್ಕಾಟದ ಕಾಲದಲ್ಲಿ ರಾಷ್ಟ್ರೀಯತೆಯ ಮತ್ತು ದೇಶಾಹಂಕಾರದ ವಿಷಜೀವಾಣುಗಳು ಸಕ್ರಿಯಗೊಂಡು ಬೇಗ ಬೆಳೆದುವು. ಚೀಣೀ ವಿರೋಧೀ ಮನೋಭಾವವು ಭಾರತದಲ್ಲಿ ಹಬ್ಬಲಾರಂಭಿಸಿತು; ಮತ್ತು ಚೀಣದಲ್ಲಿ ಭಾರತ ವಿರೋಧೀ ಮನೋಭಾವವೂ ಹಬ್ಬಲಾರಂಭಿಸಿತು. ಪ್ರಸ್ತುತ ಪರಿಸ್ಥಿತಿಯಿಂದ ಎರಡೂ ದೇಶಗಳಲ್ಲಿ ಪರಸ್ಪರ ಹಗೆತನದ ಅಧಿಕ ಬೆಳವಣಿಗೆಗೆ ವಸ್ತುತಃ ಮಾರ್ಗವುಂಟಾಗುತ್ತದೆ.

ಇತ್ತೀಚೆಗೆ ಈ ವಿಷಯವು ತುಂಬಾ ದೂರದವರೆಗೆ ಹೋಗಿದೆ. ವಿಭಿನ್ನ ಅಂತಾರಾಷ್ಟ್ರೀಯ ಸಭೆಗಳಲ್ಲಿ ವಾತಾವರಣವನ್ನು ವಿಷಮಯಗೊಳಿಸಲು ಈ ತಿಕ್ಕಾಟವನ್ನು ಬಳಸಿಕೊಳ್ಳಲಾಗುತ್ತಿದೆ.

ಭಾರತ—ಚೀನಾ ಗಡಿತಿಕ್ಕಾಟದಿಂದ ಈಗಾಗಲೇ ಗಂಭೀರ ಸ್ವರೂಪದ ಕೆಟ್ಟ ಪರಿಣಾಮಗಳುಂಟಾಗಿವೆ ಯೆಂಬುದನ್ನು

(೧೨ನೇ ಪುಟ ನೋಡಿರಿ)

ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ. 14 CT ಚಿನ್ನದ ಆಭರಣಗಳಲ್ಲಿ 58$\frac{1}{2}$% ಶುದ್ಧ ಪುತ್ಥಳಿ ಚಿನ್ನ ಇರುತ್ತದೆ. ಬೇಡದಿದ್ದಲ್ಲಿ 1 ರೂ ಕಮ್ಮಿಯಲ್ಲಿ ಯಾವಾಗಲೂ ಬಜಾರು ಧಾರಣೆಗೆ ಪಡಕೊಳ್ಳುವ ಭರವಸೆ ಕೊಡುತ್ತೇವೆ.

ವಿ. ಸೂ ಹಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡಕೊಳ್ಳುವರೆ ಸರಕಾರದ ಲೈಸನ್ಸ್ ಸಿಕ್ಕಿರುತ್ತದೆ.

ಮದುವೆ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡಕೊಂಡು ಖಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.

ಶ್ರೀ ಕೃಷ್ಣಾ ಜ್ಯುವೆಲರಿ ಮಾರ್ಟ್

ತೆಂಕಪೇಟೆ — ಉಡುಪಿ.

ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.

ಫೋನ್ ನಂಬ್ರ: 66



ಕುಮಾರಿ ಬಿಲ್ಲೆಗಳು

(ರಿಜಿಸ್ಟರ್ಡ್ Regd.)

ಪ್ರಕೃತಿಯು ವಿಫಲಗೊಂಡಾಗ ಉಂಟಾಗುವ ಕಾತರ ನಿವಾರಣೆಗೆ ಸಮಯೋಚಿತವಾದ ಆಯುರ್ವೇದೀಯ ಮಿಶ್ರಣ!

ಟ್ಯೂಬ್ 1ರ ಸಾಮಾನ್ಯ ರೂ. 4/- ಮಧ್ಯಮ ರೂ. 6/ ಉತ್ತಮ ರೂ.9/-

P. Devee & Co. (N. J.) Calcutta—40.

ಸ್ಟಾಕಿಸ್ಟರು— ರಾಜಾ ಮೆಡಿಕಲ್ ಹಾಲ್, ಬೆಂಗಳೂರು ಕೆಂಟೋನ್‌ಮೆಂಟ್; ಕುಮಟಾ ಫಾರ್ಮಸಿ, ಕುಮಟಾ (ಉ. ಕ.)

ಗೇಹ ರಾಜ್ಯದಲ್ಲಿ

ಸರ್ವಂ ಕಲ್ಪನಾಮಯಂ ಜಗತ್

'ಕೇಳಿದಿಯೇನ್ರೆ

'ಏನಂತೆ?

'ಚೀನಾದವರು ಅಣ್ವಸ್ತ್ರಗಳನ್ನು ತಯಾರಿಸಿದ್ದಾರಂತೆ.

ಅಯ್ಯೋ, ಹಾಗಾದರೆ ಇನ್ನು ನಮ್ಮ ಗತಿ...?

ಯಾಕೆ ಹಾಗೆ ಬೆಚ್ಚಿ ಬೀಳ್ತೀಯ ನೀನು?

ಏನೂಂದ್ರೆ ಇದು ? ಚೀನೀಯರು ನಮ್ಮ ಶತ್ರುಗಳು ಎಂದು ಲೋಕವೇ ಹೇಳ್ತದೆಯಲ್ಲ?

ಅದು ಸರೀನ್ನು ಆದರೆ ಅವರಿಗಿಂತ್ಲೂ ದೊಡ್ಡ ವೈರಿಗಳು ನಮ್ಮಲ್ಲಿಯೇ ಇದ್ದಾರೆ ನೋಡು...

ಹೌದು, ಅಂದು ನೀವೇ ಹೇಳ್ತಿದ್ರಲ್ಲಾ....

ಏನೂಂತ?

ನಮ್ದೇಶದ ಕೆಂಪಿನವರೆಲ್ಲಾ ಚೀನೀಯರ ಚೇಲರೆಂದು; ಮತ್ತು ಅವರ ಏಜಂಟರಂತೆ ಕೆಲಸ ಮಾಡ್ತಿದಾರೆಂದ ...

ಸಾಕು ಕಣೇ ನಿನ್ನ ಜ್ಞಾಪಕಶಕ್ತಿ.... ಕೊಡ್ಬೇಕು ಅದ್ಕೆ ಒಂದು ಸರ್ಟಿಫಿಕೇಟು....

ನನಗೆ ನಿಮ್ಮ ಹೊಗಳಿಕೆಯೂ ಬೇಡ ತೆಗಳಿಕೆಯೂ ಬೇಡ. ಮತ್ತೆ ಸರ್ಟಿಫಿಕೇಟು ಯಾಕೇಂತ...?

ಇಲ್ಲಿ ಬಿಡೀ ತೆಗೆದುಕೋ ಒಂದನ್ನ....

ಅಲ್ಲಾ ನೋಡೀಂದ್ರೆ....ನನಗೆ ಸರ್ಟಿಫಿಕೇಟು ಕೊಡುವುದ್ರ ಬದ್ಲು ನಿಮ್ಗೇನೆ ಒಂದು ಇಂಕ್ರಿಮೆಂಟು ಕೊಡ್ಲಿ...

ಇಂಕ್ರಿಮೆಂಟ್? ಅದೂ ನಿನ್ನ ಸರ್ಟಿಫಿಕೇಟಿನ ಬದ್ಲು ...

ಯಾಕಾಗ್ಬಾರ್ದೂಂತ? ನಾನು ನಿಮ್ಮ ಅರ್ಧಾಂಗಿಯಲ್ಲವೆ? ನನ್ನ ಸರ್ಟಿಫಿಕೇಟಿನ ಮೇಲೆ ನಿಮಗ್ಗೂ ಅಧಾಧಿಕಾರವಿಲ್ವೆ?

ಇಲ್ಲಾಂತ ನಾನೇ ಯಾಕೆ ಬಾಯ್ಬಿಟ್ಟು ಹೇಳ್ಬೇಕು? ಅಲ್ಲ, ಹೆಚ್ಚಿನ ಇಂಕ್ರಿಮೆಂಟು ಹಾಗೇನೇ ಇರ್ಲಿ. ಈಗ ಹೆಚ್ಚಿದ ಡಿ. ಎ. ನಾದ್ರೂ ಕೊಟ್ಟು ಬಿಡ್ಲೀಂತ ಮೊರೆಯಿಡೋ ಗತಿ ಬಂತು ಕಣೇ....

ಯಾಕೆ? ಏನಾಯ್ತು? ಇನ್ನೂ ಕೊಡ್ಲಿಲ್ವೆ?

ಕೊಡ್ತಿದ್ರೆ ಕೊಡ್ಲೀಂತ ಹೇಳುತಿದ್ನೇ ನಾನು?

ಯಾಕಂತೆ ಕೊಡ್ಲಿಲ್ಲಂವ್ರೆ?

ಸರ್ಕಾರದ ಆರ್ಡರ್ ಕ್ರಿಯರ್ ಇಲ್ಲಾಂತ ಮ್ಯಾನೇಜ್‌ಮೆಂಟನವ್ರು ಹಿಂದೆ ಮುಂದೆ ನೋಡ್ತಿದಾರೆ ...

ಅಯ್ಯೋ, ಮೊನ್ನೆ ನಮ್ಮ ಮಂಜು ಹೇಳ್ತಿದ್ಲು. ಅವರ ಕೈ ಸೇರಿ ತಿಂಗ್ಳು ಎರಡಾಯ್ತೂಂತ

ಅವನಿರೋದು ಸರ್ಕಾರಿ ನೌಕರಿಯಲ್ಲಿ ಅಲ್ವೇ

ಹೌದ್ರಿ....ಆದ್ರೆ ನಿಮ್ಗೆಲ್ಲಾನೂ ಸರ್ಕಾರಿದರವಲ್ಲೇ ಶಾನೇ ಸಂಬ್ಳ ನಡೆಯೋದು?

ಸರೀನ್ನು. ಆದ್ರೂ ಸರ್ಕಾರದ ನಿಶ್ಚಿತ ಆರ್ಡರ್ ಬಾರದೆ ಹಾಗೆಲ್ಲಾ ಕೊಡೋಕಾಗೋದಿಲ್ಲ.

ಯಾಕಂತೆ?

ಅದೇ ಮತ್ತೆ ಗ್ರಾಂಟು ಕೊಡ್ದೆ ಹೋದ್ರೆ....

ಅಂದ್ರೆ ಗ್ರಾಂಟಿನ ಮೇಲೆಯೇ ನಿಮ್ಮ ಶಾಲೆ ನಡಿಯೋದೂನ್ನಿ

ಮತ್ತಾವುದ್ರ ಮೇಲೇಂತ ತಿಳ್ಕೊಂಡಿದಿಯ?

ಅಲ್ಲಾ, ಹತ್ತಿಪ್ಪತ್ತು ವರ್ಷ ಹಿಂದೆ ಶಾಲೆಯವ್ರು ಗ್ರಾಂಟನ್ನೇ ನಂಬಿ ಕೂತ್ರೆ, ಗ್ರಾಂಟೇ ಇಲ್ಲದೆ ಈ ವರ್ಷ ಪ್ರಾರಂಭವಾದ ಶಾಲೆಗಳಲ್ಲಿ ಮಾಷ್ಟ್ರಿಗೆ ಸಂಬ್ಳವೇ ಇಲ್ವೆ ಮತ್ತೆ?

ಇಲ್ದೇ ಎಲ್ಲಿ ಹೋಗುತ್ತೆ? ಮೊನ್ನೆ ಸರ್ಕಾರ ಹಾಗೆ ಹೇಳಿದೆ. ಬದ್ಲಿಂದ ಶಾಕತ್ತು ಇದ್ದವ್ರು ಮಾತ್ರ ಪ್ರೈಸ್ಕೂಲ್ ತೆರೀಬೇಕು....

ಅಥ್ವಾ ಆ ಶಾಲೆಯಲ್ಲಿ ಕೆಲ್ಸಕ್ಕೆ ಸೇರಿಸ್ಕೊಳ್ಬೇಕೂನ್ನಿ.

ಎರಡೂ ಸರಿಯನ್ನು.

ಅದೆಲ್ಲಾ ಸಾಯ್ಲಿ. ಈಗ ನಿಮ್ಗೆ ಯಾವಾಗ ಕೊಡ್ತಾರಂತೆ? ಒಂದೈದು ರೂಪಾಯಿನಾದ್ರು ಬೇಗ ಸಿಕ್ತಿದ್ರೆ ಮಗುವಿಗೆ ಹಣ್ಣಾದ್ರೂ ತಂದು ಕೊಡ್ಬಹುದಿತ್ತು.

ಬಹುದಿತ್ತು. ಆದ್ರೆ ಸದ್ಯ ಗಂಜಿ ಕುಡಿಯೋದೇ ಕಷ್ಟವಾಗಿರುವಾಗ ಮತ್ತೆ ನಿನ್ನ ಹಣ್ಣುಗಿಣ್ಣು....

ನೋಡೀಂದೆ...ಇವತ್ತು ಹೊಸ್ಮನೆ ಸಿದ್ದು ಬಂದಿದ್ನು...ಅವಳಲ್ಲಿ ಒಂದು ದನ ವಿದೆಯಂತೆ ..

ಹಾಲಿನ ದುಡ್ಡೇ ಕೊಡೋಕಿಲ್ಲ. ಇನ್ನು ದನದ ಮಾತು ಯಾಕೇಂತ?

ಅಲ್ಲ, ತಂದ್ರೆ ಹಾಲಿಗೆ ಕೊಡೋ ದುಡ್ನಿಂದ...

ಅದೆಲ್ಲಾ ಆಗೊಲ್ಲಕಣೇ. ನಮ್ಮ ಏಯರ್ಸ್ ಬಂದ ವೇಳೆಗಲ್ಲಾ ಆ ಕತೆ. ಈಗ ಯಾಕೇಂತ

ಅಂತೂ ನಮ್ಮ ಪಾಡು ಹೀಗೇ ಆಯ್ತೂನ್ನಿ.

ಆಯ್ತೂನ್ನಿ ಎಂದೇನ ಸಂದೇಹ? ಆಯ್ತು. ನಿಜಕ್ಕೂ ಆಯ್ತು.

ಒಂದು ಮಾತು. ಏನಾದ್ರೂ, ಬೇಜಾರ ಮಾಡಿಕೊಳ್ಳೊದಿಲ್ಲಾಂತಂದ್ರೆ ಕೇಳ್ತೀನೆ.

ಅಯ್ಯೊ ಚಿನ್ನಿ, ನನ್ಗೂ ಬೇಸರ್ವಾ? ಅದೂ ನಿನ್ನ ಮೇಲೆ....

ಖಂಡಿತ ಬೇಳಿ ಮಾಡೋದಿಲ್ಲಾಂತ...

ಇಲ್ಲ ಕಣೇ ಖಂಡಿತಕ್ಕೂ ಇಲ್ಲ. ಎಲ್ಲ. ತಿಳಿಯಿತೆ? ಏನು ಕೇಳ್ಬೇಕೂಂತಿದೀಯೊ ಅದನ್ನು ಕೇಳ್ಬಿಡು.

ಕೇಳಲೆ?

ಕೇಳೂಂತಂದ್ನಲ್ಲಾ....

ಖಂಡಿತಕ್ಕೂ...

ಅಯ್ಯೋ, ಯಾಕೆ ಹೀಗೆ ಸತಾಯಿಸ್ತೀಯ ನನ್ನ...

ಇಲ್ಲ ನೊಂದ್ಕೊಳ್ಬೇಡಿ ಮತ್ತೆ...

ಹ್ಞಂ....ಏನಂತೆ ಅಂತಹ ಮಾತು...

ಮತ್ತೇನಿಲ್ಲ...ಅಲ್ಲಾ, ನಮ್ಮ ಸಂಕಷ್ಟದಿಂದ ನಮಗೆ ಬಿಡುಗಡೆಯೇ ಇಲ್ವೇಂತ....

ಅಯ್ಯೋ ಹುಚ್ಚಿ, ಯಾರು ಹೇಳಿದ್ರೆ ನಿನ್ಗೆ?

ಯಾರೂ ಇಲ್ಲ. ಹೀಗೇ ನನ್ಗೇ ಒಂದು ಯೋಚ್ನೆ ಬಂತು –

ಯಾರು ಇಲ್ಲಾಂತಾರೆ? ಇದೆ. ಖಂಡಿತಕ್ಕೂ ಇದೆ ಅಲ್ಲಾ ನಮಗೆ ಕಷ್ಟಾಂತ ದೇಶಿದವ್ರುಯಾರೂಂತ

ಯಾರ್ಯಾರ ಮಾತು ನಂಗೇಕೆ? ಹೀಗೇ ಬಂದು ಯೋಚ್ನೆ ಬಂತು. ಕೇಳ್ಬಿಟ್ಟೆ. ತಪ್ಪಾದ್ರೆ ಕ್ಷಮಿಸಿ ಬಿಡಿ ..

(೮ ನೇ ಪುಟ ನೋಡಿರಿ)

14ನೇ ಟಿಬಿ ಮುದ್ರೆ ಮಾರಾಟ ಚಳವಳ

(ನವ ದೆಹಲಿಯಲ್ಲಿರುವ ಕ್ಷಯರೋಗ ಸಂಸ್ಥೆಯಿಂದ ನಡೆಸಲ್ಪಡುವಂಥಾದ್ದು)

1963ನೇ ಅಕ್ಟೋಬರ 2ರಿಂದ ಮಾರಾಟಕ್ಕಿರುವ ಟಿ ಬಿ ಮುದ್ರೆ

ಈ ಮುದ್ರೆ ಮಾರಾಟ ಚಳವಳವು, ಕ್ಷಯರೋಗ ನಿರೋಧ ಚಟುವಟಿಕೆಗಳಿಗೆ ನಿಧಿ ಸಂಗ್ರಹಿಸುವುದು ಮಾತ್ರವಲ್ಲದೆ ಈ ರೋಗದ ಮತ್ತು ಅದರ ಪ್ರತಿಬಂಧಕದ ಕುರಿತಾಗಿ ಜನರಿಗೆ ತಿಳುವಳಿಕೆಯನ್ನೂ ಕೊಡುತ್ತದೆ. ಟಿ ಬಿ ಮುದ್ರೆಗಳನ್ನು ಕೊಂಡುಕೊಂಡು ಅವನ್ನು ನಿಮ್ಮ ಪತ್ರ, ಪೆಕೇಟು ಮತ್ತು ಉಡುಗೊರೆಗಳ ಮೇಲೆ ಉಪಯೋಗಿಸಿರಿ. ಒಂದು ಮುದ್ರೆಯ ಬೆಲೆ 10 ನ. ಪೈಸೆ ಮಾತ್ರ.

ಕ್ಷಯರೋಗದ ವಿರುದ್ಧ ಹೋರಾಡುವ ಜನತಾ ಚಳವಳಿಗೆ ಇದು ನಿಮ್ಮ ನೇರ ಸಹಾಯವಾಗಿದೆ.

ಮುದ್ರೆಗಳು – ದಕ್ಷಿಣ ಕನ್ನಡ ಜಿಲ್ಲಾ ಕ್ಷಯರೋಗ ಸಮಿತಿ, ಸರಕಾರಿ ವೆನ್‌ಲೋಕ್ ಆಸ್ಪತ್ರೆ, ಮಂಗಳೂರು, ಮತ್ತು ಇತರ ವಿವಿಧ ಏಜನ್ಸಿಗಳಲ್ಲಿ ದೊರೆಯುತ್ತವೆ.

ಈ ಸ್ಥಳದ ದಾತೃಗಳು:

Messrs. Willcox (Buckwell—India) Private Ltd.,
New Delhi.

NAVAYUGA
Kannada Weekly
UDIPI
Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ

ವರುಷ	ಉಡುಪಿ	ವಾರ
೪೩	೩-೧೦-೧೯೬೩	೫

ವೆರ್ವರ್ಡರ ನೀತಿ

ಕಾಮನ್‌ವೆಲ್ತಿನಿಂದ ಹೊರಬಂದ ದಕ್ಷಿಣ ಆಫ್ರಿಕೆಯು ಈಗ ಸಂಯುಕ್ತ ರಾಷ್ಟ್ರ ಸಂಘದಿಂದಲೂ ದೂರ ನಡೆಯುವ ಏದಿಗಾರಿಕೆಯನ್ನು ಪ್ರದರ್ಶಿಸುತ್ತಿದೆ. ಏಕೆಂದರೆ, ಇತ್ತೀಚೆಗೆ ನಡೆದ ಆಫ್ರೋ-ಏಶ್ಯ ಐಕ್ಯ ಸಮ್ಮೇಳನದಲ್ಲಿ, ವರ್ಣಭೇದ ನೀತಿಯಿಂದ ಎಳ್ಳಷ್ಟೂ ವಿಚಲಿತವಾಗಲೊಪ್ಪದ ಮತ್ತು ಜಗತ್ತಿನಲ್ಲಿಯೇ ಇಲ್ಲದ ಅನ್ಯಾಯದ ಧೋರಣೆಯನ್ನು ಬಿಟ್ಟುಕೊಡಲು ಸಿದ್ಧವಿಲ್ಲದ ದಕ್ಷಿಣ ಆಫ್ರಿಕೆಯನ್ನು ಸಂಪೂರ್ಣವಾಗಿ ಬಹಿಷ್ಕರಿಸಬೇಕೆಂಬ ವಿಷಯದಲ್ಲಿ ಒಮ್ಮತವು ಕಂಡು ಬಂದಿತ್ತು. ಈ ಸಲ ಸಂ. ೧೭ ಸಂಸ್ಥೆಯಲ್ಲಿಯೂ ಈ ಪ್ರಶ್ನೆಯನ್ನು ಎತ್ತುವ ಸಾಧ್ಯತೆಯಿದೆ ಹೀಗಿದ್ದರೂ ಯಾವ ದಿಗ್ಬಂಧನಕ್ಕೂ ಅಂಜದ ಅಳುಕದೆ ಯುಗವಾಣಿಯನ್ನು ಮರೆತು ಅಥವಾ ಅಲಕ್ಷಿಸಿ ತನ್ನದನ್ನೇ ನ್ಯಾಯವೆಂದು ಹೇಳಿಕೊಳ್ಳುತ್ತಿರುವ ಅಲ್ಲಿನ ವೆರ್ವರ್ಡ್ ಸರಕಾರವು ಬಿಳಿಯೇತರರನ್ನು ಯಾವ ರೀತಿಯಿಂದ ಮುಂದೆ ನೋಡಿಕೊಳ್ಳುವುದೆಂದು ನಿಗದಿಯಾಗಿ ಹೇಳುವಂತಿಲ್ಲ ಇತ್ತೀಚೆಗೆ ವೆರ್ವರ್ಡರು ಮಾತನಾಡುತ್ತ ದಕ್ಷಿಣ ಆಫ್ರಿಕೆಯಲ್ಲಿರುವ ಭಾರತೀಯ ಬುಡಕಟ್ಟಿನವರ ಮೇಲೆ ಯಾವ ಕ್ರಮ ಕೈಗೊಳ್ಳುವುದೆಂಬುದರ ಬಗ್ಗೆ ನಿರ್ಧಾರವನ್ನು ತೆಗೆದುಕೊಳ್ಳಲಾಗಿಲ್ಲವೆಂಬುದನ್ನು ಹೊರಗೆಡಹಿದರು. ಅವರ ಈ ಉದ್ಗಾರದಲ್ಲಿ ಯಾವ ಹೊಸತನವಿಲ್ಲವೆಂಬುದನ್ನು ನಾವು ಗಮನಿಸಬಹುದು. ನಿಜ, ಆದರೆ ಅದೇ ವೇಳೆಗೆ ಅಲ್ಲಿನ ಭಾರತೀಯರ ಬಗೆಗೆ, ಅವರ ಹಿತರಕ್ಷಣೆಯ ಬಗೆಗೆ ಭಾರತೀಯರು ಜಾಗ್ರತರಿರಬೇಕಾದುದು ಅತ್ಯಗತ್ಯ.

ವೆರ್ವರ್ಡರು ತನ್ನ ರಾಷ್ಟ್ರದಲ್ಲಿರುವ ಭಾರತೀಯ ಮೂಲದವರನ್ನು ಭಾರತ ಇಲ್ಲವೇ ಪಾಕಿಸ್ತಾನಗಳಿಗೆ ಮರಳಿ ಹೋಗುವಂತೆ ಆದೇಶ ನೀಡಬಹುದು ಅವರು. ಇದರಿಂದ ಭಾರತ ಮೇಲೆ ಅವರಿಗಿದ್ದ ಭಿನ್ನಾಭಿಪ್ರಾಯದ ಪರಿಣಾಮವನ್ನು ಸ್ವೇಚ್ಛೆಯಿಂದ ಬೀರುವುದು ಸಾಧ್ಯವೆನಿಸದು ಆದುದರಿಂದ ಅವರನ್ನು ನಾನಾ ರೀತಿಯಿಂದ ನೋಯಿಸುವ ಮತ್ತು ಅವರ ಚಟುವಟಿಕೆಗಳ ಮೇಲೆ ಅತಿರೇಕ ಆತಂಕ ತಂದೊಡ್ಡುವ ಹವಣಿಕೆ ಮಾಡಬಹುದು ಅಂದರೆ, ವಿಶ್ವದ ಬೇರೆ ಬೇರೆ ದೇಶಗಳಲ್ಲಿರುವ ಭಾರತೀಯರಿಗಿಂತ ಹೆಚ್ಚಾಗಿ ದಕ್ಷಿಣ ಆಫ್ರಿಕೆಯಲ್ಲಿರುವ ಭಾರತೀಯರು ದೊಡ್ಡ ಗಂಡಾಂತರವನ್ನು ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸಬೇಕಾಗಬಹುದು. ಇಂದು ಬಿಳಿಯರದೆಂದ ಹೇಳಲ್ಪಡುವ ದಕ್ಷಿಣ ಆಫ್ರಿಕೆಯಲ್ಲಿನ ಮೂಲ ನಿವಾಸಿಗಳು ಬಿಳಿಯರಲ್ಲವೆಂದೆಲ್ಲರೂ ಬಲ್ಲರು. ಹಾಗಿದ್ದರೂ ಅವರಿಂದು ಎಲ್ಲರ ಮೇಲೆ ಸವಾರಿ ಮಾಡುವ ಅಧಿಕಾರ ಸ್ಥಾನದಲ್ಲಿ ಮಂಡಿಸಿದ್ದಾರೆ ವಸ್ತುತಃ ಅಲ್ಲಿನ ವರ್ಣಭೇದ ನೀತಿಯ ವಿರೋಧಿಗಳು ಬಿಳಿಯರ ಬಗೆಗೆ ಯಾವ ದ್ವೇಷ ಇರಿಸಿಕೊಂಡಿಲ್ಲ. ಒಂದು ದೇಶದಲ್ಲಿ ಕಲಕಲಾಂತರಗಳಿಂದ ನೆಲಸಿ ಬಂದವರಿಗೆ ಅಲ್ಲಿನ ರಾಷ್ಟ್ರೀಯತೆಯನ್ನು ನೀಡಿ ಬಿಳಿಯರಂತೆಯೇ ಏಕನೀತಿಯಿಂದ ನಡೆಸಿಕೊಳ್ಳಬೇಕೆಂದು ಅವರೆನ್ನುತ್ತಾರೆ. ವೆರ್ವರ್ಡರ ವರ್ಣನೀತಿಯನ್ನು ಪ್ರಬಲವಾಗಿ ವಿರೋಧಿಸುವ ರಾಷ್ಟ್ರಗಳಲ್ಲಿ ಭಾರತವೂ ಒಂದು. ಶತಮಾನಗಳಿಗೆ ಮೊದಲು ಅಲ್ಲಿ ಹೋಗಿ ನಲೆನಿಂತ ಭಾರತೀಯ ಮೂಲದವರು ಅಲ್ಲಿರುತ್ತಾರೆ ಈ ಶತಮಾನದ ಪ್ರಥಮದಲ್ಲಿ ಮಹಾತ್ಮಾ ಗಾಂಧಿಯವರು ಇದೇ ನೀತಿಯ ಬಗ್ಗೆ ಅಸಮಾಧಾನವನ್ನು ತಳೆದು ಅಲ್ಲಿ ಸತ್ಯಾಗ್ರಹವನ್ನೂ ಹೂಡಿದ್ದರೆಂಬ ಮಾತನ್ನು ನಾವು ಅಲ್ಲಗಳೆಯುವುದು ಶಕ್ಯವಿಲ್ಲ ಅಂದದು ತುಸು ಶಾಂತವೆನಿಸಿದರೂ ಇಂದದು ಮರಳಿ ಪ್ರಜ್ವಲಿಸಬಹುದು. ಆದುದರಿಂದಲೇ ಅಲ್ಲಿರುವ ಭಾರತೀಯರು ಎಚ್ಚರಿಕೆಯಿಂದಿರಬೇಕಾಗಿದೆ; ತಾವು ಬಿಳಿಯೇತರರೊಡನೆಲ್ಲಾ ಸೌಹಾರ್ದದ ಭಾವನೆಯನ್ನಿಟ್ಟುಕೊಂಡು ಜಾಗ್ರತೆಯಿಂದ ಒಮ್ಮನಸ್ಸಿನಿಂದ ಕೂಡಿಕೊಂಡು ಬಾಳಿ ಬರುವುದಗತ್ಯವಿದೆ ದಕ್ಷಿಣ ಆಫ್ರಿಕೆಯು ಉಗ್ರ ಪ್ರತೀಕಾರ ಭಾವನೆಯನ್ನು ತಳೆಯದೆ ಹೋದರೆ, ಇತರರ ಮೇಲೆ ಸಹೃದಯತೆಯನ್ನು ಪ್ರದರ್ಶಿಸುವುದಾದರೆ, ಅದು ಬಿಳಿತನದ ಸರ್ಟಿಫಿಕೇಟುಗಳನ್ನೂ ಅವರಿಗೆ ನೀಡಬಹುದು. ಅಲ್ಲಿ ನೆಲಸಿದ್ದ ಹಲಜಾರು ಜಪಾನಿಗಳಿಗೆ ಇಂತಹ ಪತ್ರಗಳನ್ನು ನೀಡಿರುವುದನ್ನು ನಾವಿಲ್ಲಿ ನೆನಪಿಸಿಕೊಳ್ಳಬಹುದು. ಆದರೆ, ಇಂದು ಪ್ರಾಯಃ ಈ ಪರಿಸ್ಥಿತಿಯು ಉಳಿದಿರುವುದಿಲ್ಲ. ಏಕೆಂದರೆ, ತನ್ನ ನೀತಿ ಖಂಡಕ ದೇಶಗಳವರನ್ನು ಅದು ಚಿತ್ರಹಿಂಸೆಮಾಡಬಹುದು ಆದುದರಿಂದಲೇ ಭಾರತೀಯರು ತಮ್ಮ ತಮ್ಮಲ್ಲಿ ಐಕ್ಯವಾದರೆ ಮಾತ್ರ ಸಾಲದು, ಶ್ವೇತೇತರರೊಡನೆಯೂ ಒಕ್ಕಟ್ಟಿನಿಂದ ಕೂಡಿಕೊಂಡಿರಬೇಕು.

ದಕ್ಷಿಣ ಆಫ್ರಿಕೆಯಲ್ಲಿ ಭಾರತೀಯರಿಗಿಂತಲೂ ಅಸೌಕರ್ಯಕ್ಕೆ ಒಳಗಾಗಬಹುದಾದವರು ಜ್ಯೂಗಳು. ಇವರು ಅಲ್ಲಿನ ಸಂಪನ್ನ ಪಂಗಡಗಳಲ್ಲಿ ಸೇರಿಕೊಂಡವರು ತರುಣ ಯೆಹೂದಿಗಳು ವೆರ್ವರ್ಡರಿಗೆ ಸಹಾನುಭೂತಿಯನ್ನು ಪ್ರದರ್ಶಿಸುವುದಿಲ್ಲ; ಅವರು ಅವರ ನಾಜಿ ತತ್ವಗಳನ್ನು ಮುಸುಕಿದ ರಾಷ್ಟ್ರೀಯ ಹೋರಾಟಕ್ಕೆ ಬಹಿರಂಗವಾಗಿ ಸಹಾನುತಾಪ ವ್ಯಕ್ತಪಡಿಸಿದ್ದಾರೆ ಆಫ್ರೋ-ಏಶ್ಯದ ಹೆಚ್ಚಿನ ರಾಷ್ಟ್ರಗಳ ಬೆಂಬಲದೊಡನೆ ಇಸ್ರಾಯೇಲ್ ವರ್ಣಭೇದ ನೀತಿಗೆ ತನ್ನ ಪ್ರತಿಭಟನೆಯನ್ನು ತೋರಿಸಿದೆ ದಕ್ಷಿಣ ಆಫ್ರಿಕೆಯು ಕೆಲವರಿಗೆ ಬಿಳಿಯ ತನದ ಪತ್ರವನ್ನು ದಾನ ಮಾಡಿ ಶ್ವೇತೇತರರನ್ನೂ ಒಡೆದು ಆಳುವ ನೀತಿಗೆ ಜೋತುಬಿದ್ದಿದೆ; ಮತ್ತಿದರಿಂದ ಅವರಲ್ಲಿ ಅನಿಶ್ಚಿತತೆಯನ್ನೂ ವಿಸ್ಮಯ ಮತ್ತು ಗೊಂದಲಗಳನ್ನೂ ಉಂಟುಮಾಡುವಲ್ಲಿ ವ್ಯಸ್ತವಾಗಿದೆ ಆದುದರಿಂದಲೇ ಉಳಿದವರಲ್ಲಿ ವೆರ್ವರ್ಡರೊಡನೆ ಕೂಡಿ ಬಾಳವುದು ಸಾಧ್ಯವೆಂಬ ಹೆಬ್ಬಿಕೆಯನ್ನಿಟ್ಟುಕೊಂಡಿರುವರು ಇದಕ್ಕೆ ಕಾರಣವೂ ಇಲ್ಲದಿಲ್ಲ. ಏಕೆಂದರೆ ಇವರು ಬಹುಕಾಲದಿಂದಲೇ ಅಲ್ಲಿ ನೆಲೆಸಿದವರು. ಈಗ ಅವುಗಳೊಡನೆ ಕೈತೊಳೆದುಕೊಳ್ಳಲು ಅವರು ಸಿದ್ಧರಿರುವುದಿಲ್ಲ ತಮ್ಮ ದೇಶಗಳಿಗೆ ಭಿಕಾರಿಗಳಂತೆ ಮರಳುವುದಕ್ಕಿಂತ ಏನಾದರೂ ಇಲ್ಲಿಯೇ ಸುಖಿಗಳಿಸಬಹುದು—ಎಂಬ ಬಯಕೆಯವರಲ್ಲಿದೆ ಆದರೆ, ಒಂದು ಮಾತು ಮಾತ್ರ ನಿಜ; ಅವರು ಪ್ರಧಾನಿ ವೆರ್ವರ್ಡರ ಸ್ನೇಹವನ್ನು ಸಂಪಾದಿಸಿ ತಾವು ಸುಖಿಯಾದೇವೆಂದು ನಂಬುವುದು ಉಚಿತವಲ್ಲ ಎಲ್ಲರೂ ಪ್ರತಿಭಟಿಸವದ ಆಫ್ರಿಕೆಯ ನೀತಿಯನ್ನು ವಿರೋಧಿಸಿ, ಏಕ ಜಗತ್ತಿನ ನಿರ್ಮಾಣ ಕಾರ್ಯದಲ್ಲಿ ತಮ್ಮ ಪಾಲಿನ ಸೇವೆಯನ್ನು ನಿರ್ವಿಕಲ್ಪ ಮನಸ್ಸಿನಿಂದ ಮಾಡಬೇಕು ಹೀಗೆ ಅವರು ನಡೆದರೆಂದರೆ, ವೆರ್ವರ್ಡ್ ಮಹಾಶಯರು ಅದೆಷ್ಟೇ ಪ್ರಯತ್ನಪಟ್ಟರೂ ತನ್ನ ವಿಭಜಿಸಿ ಆಳುವ ನೀತಿಯನ್ನು ಯಶಸ್ವಿಗೊಳಿಸಲಾರರು. ಆದುದರಿಂದ ಶ್ವೇತೇತರರು ಈ ಕಡೆಗೆ ಗಮನಿಸಬೇಕು; ಎಲ್ಲರೂ ಒಂದಾಗಿ ವೆರ್ವರ್ಡರ ನೀತಿಯ ವಿರುದ್ಧ ಪ್ರತೀಕಾರ ಶಸ್ತ್ರವೆತ್ತಲೇಬೇಕು. ಏಕೆಂದರೆ, ಯುಗವಾಣಿಯ ಕಡೆಗೆ ಕಿವಿಗೊಡದ ಅವರ ದಾರ್ಷ್ಟ್ಯವನ್ನು ಪ್ರತಿಯೊಬ್ಬನೂ ಎದುರಿಸಲೇ ಬೇಕು.

ನೆನೆಗುದಿಯಲ್ಲಿ

ಕಾಂಗ್ರೆಸ್ ಸರಕಾರವು ಭೂಸುಧಾರಣೆಯನ್ನು ವ್ಯವಸ್ಥಿತಗೊಳಿಸುವುದರಲ್ಲಿ ಆಸಕ್ತಿ ವಹಿಸಿದ್ದರೂ ಅದನ್ನು ಕಾರ್ಯರೂಪಕ್ಕೆ ತರುವಲ್ಲಿ ವಿಲಂಬವಾಗುತ್ತಿರುವುದರಿಂದ, ರೈತನಲ್ಲಿ ನಿರಾಸೆಯೇ ಕವಿಯುವಂತಾಗಿದೆ. ಈ ಸುಧಾರಣೆಗಳು ಅಖಿಲ ಭಾರತೀಯ ಮಟ್ಟದಲ್ಲಿರಬೇಕೆಂದೂ ಏಕರೂಪದ ಕಾಯಿದೆಯು ಇರಬೇಕೆಂದೂ ಹಲವರ, ಮುಖ್ಯವಾಗಿ ಯೋಜನಾ ಆಯೋಗದ ಆಶಯ. ಆದರೆ, ಇದನ್ನು ಹೆಚ್ಚಿನ ರಾಜ್ಯಗಳು ಒಪ್ಪುವುದಿಲ್ಲ. ಪರಮಾವಧಿ ಹಿಡುವಳಿಯಂತೂ ಒಂದೊಂದು ರಾಜ್ಯವೂ ತನ್ನ ಇಷ್ಟದಂತೆ ನಡೆದು ಗೊತ್ತುಗುರಿಯಿಲ್ಲದೆ ವಿಶ್ವರೂಪ ತಳೆಯುತ್ತಿದೆ. ಹಾಗಿರುವಾಗ, ಭೂಸುಧಾರಣೆಯ ಉದ್ದೇಶವೇ ಭಂಗವಾಗುವ ಭಯ ಗೋಚರವಾಗುತ್ತದೆ ಕರ್ನಾಟಕದಲ್ಲಿಯೂ ಹಿಂದಿನ ಮಂತ್ರಿ ಕಡಿದಾಳ ಮಂಜಪ್ಪನವರ ಪರಿಶ್ರಮ ಮತ್ತು ಸಾಹಸಗಳಿಂದ ಭೂಸುಧಾರಣಾ ಸಂಬಂಧಿ ಕಾಯಿದೆಯು ಮಂಜೂರಾಯಿತು. ಆದರೆ, ರೈತವಾರಿ ಪದ್ಧತಿಯ ಭೂಮಿಗೆ ಇದು ಅನ್ವಯವಾಗಲಾರದಾದುದರಿಂದ, ಸುಪ್ರೀಂ ಕೋರ್ಟಿನ ನಿರ್ಣಯದಂತೆ ಅದು ಸ್ಥಗಿತಗೊಂಡಿತು, ಇದೀಗ ಸಂವಿಧಾನದ ೧೭ನೆಯ ನಿಬಂಧನೆಗೆ ತಿದ್ದುಪಡಿಮಾಡುವ ಬಗ್ಗೆ ಮಸೂದೆಯು ಲೋಕ-ರಾಜ್ಯ ಸಭೆಗಳ ಪರಿಶೀಲನೆಗೊಳಪಟ್ಟಿದೆ ಈ ತಿದ್ದುಪಡಿಯು ಮಂಜೂರಾಯಿತೆಂದರೆ ವ್ಯಕ್ತಿಗತ ಹಿತಾಸಕ್ತಿಗಳಿಗೆ ಸಂಪೂರ್ಣ ಮಟ್ಟಗೋಲು ಬೀಳುವುದರಿಂದ ಈ ಬಗ್ಗೆ ತೀವ್ರವಾದ ಭಿನ್ನಾಭಿಪ್ರಾಯ—ಪ್ರತಿಭಟನೆಗಳು ನಡೆಯುತ್ತಿವೆ. ಭೂಸುಧಾರಣೆಯನ್ನು ಪ್ರಾರಂಭದಿಂದಲೂ ವಿರೋಧಿಸಿ ಅದರ ಉನ್ಮೂಲನೆಗೆಂದೇ ಜನ್ಮತಳೆದ ಸ್ವತಂತ್ರ ಪಕ್ಷವು ಈಯೆಲ್ಲ ಪ್ರತಿಭಟನೆಗಳ ಅಧ್ವರ್ಯುವಾಗುವಂತಿದೆ. ಹಾಗಿರುವಾಗ ಭೂಸುಧಾರಣೆಯನ್ನು ಇಡಿಯ ದೇಶದಲ್ಲಿ ಜ್ಯಾರಿಗೊಳಿಸಬೇಕಾದರೆ, ಪ್ರಾಯಃ ಇನ್ನೂ ಒಂದೆರಡು ಚುನಾವಣೆಗಳು ಕಳೆಯಬೇಕಾದೀತೋ ಏನೋ! ಹೀಗಾಗುವುದು ನ್ಯಾಯೋಚಿತವೆ? ಎಂಬುದನ್ನು ನಾವು ಯೋಚಿಸಬೇಕು. ಜಮೀನುದಾರಿ, ಇನಾಮದಾರಿಗಳನ್ನು ನಿರ್ನಾಮ ಮಾಡಿ, 'ಉಳುವವನೇ ಹೊಲದೊಡೆಯ' ಎಂದು ಸಾರುವ ನಮ್ಮ ಉತ್ಸಾಹದ ಸೆಲೆ ಅರ್ಧದಲ್ಲೇ ನಿಂತು ಬಿಡುವುದು ಮತ್ತು ರೈತ-ಜಮೀನುದಾರರಿಬ್ಬರನ್ನೂ ಅನಿರ್ದಿಷ್ಟತೆಯ ಉಯ್ಯಾಲೆಯಲ್ಲಿ ತೂಗುವುದು ಎಂದೆಂದಿಗೂ ಸಮಂಜಸವಲ್ಲ ಹಾವು ಸಾಯಬಾರದು; ಕೋಲು ಮುರಿಯಬಾರದು ಎಂಬ ನೀತಿ ಒಂದು ಕಾಲದಲ್ಲಿ ಸರಿಯಿದ್ದಿರಬಹುದಾದರೂ ಇಂದು ಕಡ್ಡಿ ಮುರಿದು ಹೇಳುವ ಅಗತ್ಯವಿದೆ. ಇಲ್ಲದೆ ಹೋದಲೇ ಕಾಂಗ್ರೆಸು ಇಕ್ಕಡೆಯವರ ಅಸಮಾಧಾನವನ್ನು ಎದುರಿಸಬೇಕಾಗುವುದು.

ವಾರ್ತಾವೇದಿಕೆ

ರಾಧಾಕೃಷ್ಣನ್

ಸ್ವಾತಂತ್ರ್ಯವೆಂದರೆ ಸ್ವೈರವಲ್ಲ. ಪರರನ್ನೂ ತನ್ನಂತೆಯೇ ಕಾಣುವುದು. ತಾನೂ ಇದ್ದು ಇತರರನ್ನು ಇರಗೊಡುವುದು ಸ್ವಾತಂತ್ರ್ಯದ ಪ್ರಥಮ ಸೂತ್ರ. ಆದುದರಿಂದ ಸ್ವಾತಂತ್ರ್ಯವನ್ನು ಉಳಿಸಿಕೊಂಡು ಬರಬೇಕಾದರೆ, ಜೀವನದಲ್ಲಿ ನಿಯಮಪಾಲನೆಯನ್ನು ಮಾಡಲೇ ಬೇಕಾಗುತ್ತದೆ. ಅನಿಯಮಿತ ಬದುಕು ಅನ್ಯಾಯಕ್ಕೆ ನಾಂದಿ. ಇದನ್ನೇ ನಮ್ಮ ರಾಷ್ಟ್ರಪತಿ ಡಾ| ರಾಧಾಕೃಷ್ಣನ್ ನಮಗೆ ತಿಳಿಸಿ ಹೇಳಿದ್ದಾರೆ ಪ್ರಜೆ ಪ್ರಜೆಯೂ ಈ ಜೀವನ ನಿಯಮಗಳನ್ನು ತಪ್ಪದೆ ಅನುಸರಿಸಿದರೆ, ದೇಶ ರಾಮರಾಜ್ಯವಾಗುವುದು. ಪ್ರಜಾಶಕ್ತಿ ಯಶಸ್ವಿಯಾಗುವುದು. 'ಕಾನೂನಿನ ಆಡಳಿತ'ವು ನಿಯಮ ಪಾಲನೆಗೆ ಪ್ರೇರಕ ಶಕ್ತಿಯಾಗಬಲ್ಲುದು, ಏಕೆಂದರೆ, ನ್ಯಾಯಾಂಗವು ನಿರ್ವೈರ ಮತ್ತು ನಿಷ್ಪಕ್ಷಪಾತಿಯಾಗಿ ಕೆಲಸ ಮಾಡುತ್ತದೆ. ಮಾಡಲೇ ಬೇಕು.

ಶ್ರೀನಿವಾಸ ರಾವ್

ಕರ್ನಾಟಕದ ಮಂತ್ರಿಗಳು ಕನ್ನಡದಲ್ಲಿ ಮಾತನಾಡಲು ಹೇಸುತಿದ್ದ ಅಥವಾ ಹೆದರುತಿದ್ದ ಕಾಲವೊಂದಿತ್ತು; ಇಂದಿಗೂ ಆ ಕಾಲ ಸಂಪೂರ್ಣ ದೂರವಾಗಿಲ್ಲ. ಆದರೆ, ಹಂಗಾಮಿ ರಾಜ್ಯಪಾಲ ನಿಟ್ಟೂರು ಶ್ರೀನಿವಾಸರಾಯರು ಕನ್ನಡದಲ್ಲಿಯೇ ಭಾಷಣ ನೀಡುವ ಪರಿಪಾಠವನ್ನು ಹಾಕಿಕೊಂಡಿದ್ದಾರೆ ಅವರು ಹೈಕೋರ್ಟಿನ ನ್ಯಾಯಾಧೀಶರಾದರೂ ಮಾನವತೆಯನ್ನು ಮರೆತವರಲ್ಲ. ದೇಶದ ಆಗುಹೋಗುಗಳನ್ನು ಅವಗಣಿಸಿದವರಲ್ಲ. ಸಮೃದ್ಧ ಭಾರತವನ್ನು ಕಟ್ಟುವುದು ನಮ್ಮ ಗುರಿ, ಔದ್ಯಮೀಕರಣ ಈ ದಾರಿಯ ಒಂದು ಮೈಲುಗಲ್ಲು. ಉದ್ದಿಮೆಗಳಲ್ಲಿ ಒಡೆಯ-ನೌಕರರಲ್ಲಿ ಸೌಹಾರ್ದವು ಇದ್ದರೆ ಮಾತ್ರ ದಾರಿ ಸುಗಮವಾದೀತು. ಇಂತಹ ಸೌಹಾರ್ದಮಯ ವಾತಾವರಣ ನಿರ್ಮಿಸಲು ಪ್ರಯತ್ನಿಸುವುದು, ಎಲ್ಲರ

ಕರ್ತವ್ಯ; ಇದನ್ನು ರೋಟರಿ ಕ್ಲಬ್ಬುಗಳು ಪಾಲಿಸಬೇಕೆನ್ನುತ್ತಾರೆ ಅವರು.

ಅಯೂಬಖಾನ್

ಚೀನಾದ ತಂತ್ರ ಜಾಲಗಳ ಬಗೆಗೆ ಈಗ ಪಾಕಿಸ್ತಾನದಲ್ಲಿ ಮೊತ್ತಮೊದಲ ಬಾರಿಗೆ ತುಸು ಸಂದೇಹ ವ್ಯಕ್ತಪಡಿಸಲಾಗುತ್ತಿದೆ. ಅಲ್ಲಿನ ಒಂದು ಪತ್ರಿಕೆಯು ಬರೆಯುತ್ತ ಚೀನಾವು ಭಾರತದೊಡನೆ ವರ್ತಿಸಿದ ನೀತಿಯಿಂದ ಮತ್ತು ಮಂಚೂರಿಯ ಸಂಬಂಧದಲ್ಲಿ ರಶ್ಯ—ಚೀನಾಗಳ ನಡುವೆ ಗಡಿ ವಿವಾದವಿದೆಯೆಂದು ಬಹಿರಂಗಗೊಂಡುದರಿಂದ ಚೀನೀಯ ನೆರೆಹೊರೆಯ ಪುಟ್ಟ ರಾಷ್ಟ್ರಗಳು ದಿಗ್ಭ್ರಮೆಗೊಂಡಿವೆಯೆಂದು ಹೇಳಿದೆ. ಪಾಕಿಸ್ತಾನವು ಚೀನಾದತ್ತ ವಾಲುತ್ತ ಮುಂದುವರಿಯುವುದರ ಬಗ್ಗೆ ಅದರ ಪಾಶ್ಚಾತ್ಯ ಮಿತ್ರರಲ್ಲಿ ಅಸಮಾಧಾನ ಹುಟ್ಟಿದುದರಿಂದ, ಅತ್ತ ಬೀಸಿದ ಗಾಳಿಯ ಮುಖವನ್ನು ತಿರುಗಿಸಲು ಅಯೂಬ ಖಾನರು ಏನಾದರೂ ತಂತ್ರ ಹೂಡವರರು; ಈ ರಾಗ ಆ ತಂತ್ರದ್ದೇ ಏಕಾಗಿರಬಾರದು?

ಜವಾಹರಲಾಲ

ಕಾಮರಾಜ ಸೂತ್ರದ ಬಗ್ಗೆ ಅಸಮಾಧಾನಗೊಂಡವರು ಯಾರು ಎಂದು ಕೇಳಿದರೆ, ಮುರಾರ್ಜಿ ಭಾಯಿ ಮತ್ತು ಎಸ್. ಕೆ. ಪಾಟೀಲ್ ಎಂದು ಕೆಲವರು ಅನ್ನುತ್ತಿದ್ದರು. ಇದಕ್ಕೆ ಏನು ಕಾರಣವೋ ತಿಳಿದಿಲ್ಲ. ಪತ್ರಿಕೆಗಳಲ್ಲಂತೂ ಇವರು ಸೂತ್ರವನ್ನು ಬಹುವಾಗಿ ಮೆಚ್ಚಿಲ್ಲ; ಸಮಸ್ಯಾ ಪರಿಹಾರಕ್ಕೆ ಈ ಸೂತ್ರವು ಕಾರಣವಾಗಲಾರದು ಎಂದಿವರು ಹೇಳಿದರೆಂದು ವರದಿ ಮಾಡಿವೆ. ಆದರೆ, ಈಗ ಈ ಮಹನೀಯರಿಬ್ಬರೂ ದೃಢವಾಗಿ ಹೇಳುತ್ತಾರೆ. ಕಾಮರಾಜ ಸೂತ್ರವು ಯಶಸ್ವಿಯಾಗುತ್ತದೆ; ಹೀಗೆ ಮಾಡಲು ಎಲ್ಲರೂ ಬೆಂಬಲ ಕೊಡಬೇಕು. ಪಕ್ಷದ ಬಲಹೆಚ್ಚಿಸಲು ಹೋಗಿ ಸರಕಾರವು ದುರ್ಬಲವಾಗದಂತೆ ನೋಡಿಕೊಳ್ಳಬೇಕೆಂದೂ ಒಂದು ಅಭಿಪ್ರಾಯ. ಹೀಗೆ ಪಕ್ಷ—ಸರಕಾರಗಳ ಬಲವನ್ನು ಸಮತೂಕದಲ್ಲಿ ಮುಂದುವರಿಸಿಕೊಂಡು ಹೋಗುವಲ್ಲಿ ಪ್ರಧಾನಿ ನೆಹರೂ ಸಮರ್ಥರಾಗುವರೆ?

ಹೆರಾಲ್ಡ್ ಮ್ಯಾಕ್ಮಿಲನ್

ಮ್ಯಾಕ್ಮಿಲನ್ ಸರಕಾರವು ಬ್ರಿಟನ್ನಿನಲ್ಲಿ ಬಿರುಗಾಳಿಯನ್ನು ಎದುರಿಸಬೇಕಾಗಿ ಬಂದ ಪ್ರೊಫ್ಯೂಮೋ ಪ್ರಕರಣದಲ್ಲಿ ಲಾರ್ಡ್ ಡೆನ್ನಿಂಗ್ ವರದಿಯು ಮ್ಯಾಕಮಿಲರನ್ನು ನಿರ್ದೋಷಿಯೆಂದು ಸಾರಿತು. ಇದರಿಂದ ಮುಂದಿನ ಸಾರ್ವತ್ರಿಕ ಚುನಾವಣೆಗಳ ವರೆಗೂ ಅವರ ಸರಕಾರವು ಮುಂದುವರಿಯಲು ಯಾವ ಆತಂಕವೂ ಇರುವುದಿಲ್ಲ ಆದರೆ, ಅದುವರೆಗೆ ತಾನು ಕನ್ಸರ್ವೇಟಿವ್ ಪಕ್ಷದ ಧುರೀಣನಾಗಿ ಮುಂದುವರಿಯಬೇಕೇ ಬೇಡವೇ ಎಂಬುದರ ಬಗ್ಗೆ ಈ ನಿರ್ಣಯ ಪ್ರಬಲವಿರಲಾರದೆಂದೂ ಅವರು ಹೇಳುತ್ತಾರೆ. ಇದಕ್ಕೂ ಹೆಚ್ಚಾಗಿ ಅವರೆಂದ -ನಿರಪರಾಧಿಗೆ ಶಿಕ್ಷೆ ವಿಧಿಸುವುದಕ್ಕಿಂತಲೂ ಅಪರಾಧಿಯನ್ನು ಬೇಗನೇ ಬಿಡುಗಡೆ ಮಾಡುವುದು ಒಳ್ಳೆಯದು. ನಿರಪರಾಧಿಯೊಬ್ಬನ ಜೀವನವನ್ನು ಹಾಳು ಮಾಡುವುದಕ್ಕಿಂತಲೂ ತಪ್ಪು ಮಾಡಿದ ಹೊಣೆಯನ್ನು ಹೊರಲು ನಾನು ಸಿದ್ಧನಿದ್ದೇನೆ' ಎಂದ ಉದ್ಗಾರ ನಿಜಕ್ಕೂ ಉದಾರ, ಅತಿ ಉದಾರ.

ಅಲ್ಲಲ್ಲಿಯ ಸುದ್ದಿ ಸಾರ

ಪುರಂದರದಾಸರ ನಾಲ್ಕು ನೂರನೆಯ ವರ್ಷದ ಆರಾಧನೋತ್ಸವ

ಉಡುಪಿ ಸಂಗೀತ ಸಭೆಯವರ, ಕಾರ್ಯಕಲಾಪಗಳು

ಕರ್ನಾಟಕದ ದಾಸಪರಂಪರೆಯಲ್ಲಿ ಅಗ್ರಸ್ಥಾನ ಪಡೆದು ಕವಿ ಸಂತರೆಂದೂ, ಕರ್ನಾಟಕ ಸಂಗೀತ ಪಿತಾಮಹರೆಂದೂ ಹೆಸರು ಪಡೆದ ಶ್ರೀ ಪುರಂದರದಾಸರು ವೈಕುಂಠ ಸಾನ್ನಿಧ್ಯ ಪಡೆದ 400ನೆಯ ವರ್ಷದ ಸಂದರ್ಭದಲ್ಲಿ ಅವರ ಆರಾಧನೋತ್ಸವವನ್ನು ಉಡುಪಿಯಲ್ಲಿ ವಿಜೃಂಭಣೆಯಿಂದ ಆಚರಿಸಲು ಸಿದ್ಧತೆಗಳು ನಡೆಯುತ್ತಿವೆ. ಉತ್ಸವದ ಹೊಣೆಯನ್ನು ಹೊತ್ತ ಉಡುಪಿಯ ಸಂಗೀತ ಸಭೆಯು ಈ ಕೆಳಗಿನ ಕಾರ್ಯಕಲಾಪಗಳನ್ನು ರೂಪಿಸಿದ್ದು ಅವಶ್ಯಕವಾದ ಸನ್ನಾಹವನ್ನು ಇಷ್ಟರಲ್ಲೇ ಮಾಡಿಕೊಂಡಿದೆ.

ಮೂರು ದಿನಗಳ ತನಕ ಜರಗುವ ಈ ಉತ್ಸವದಲ್ಲಿ ಕರ್ನಾಟಕದ ದಾಸಸಂಘದ ಹಿರಿಯ ವಿದ್ವಾಂಸರ ಉಪನ್ಯಾಸಗಳನ್ನೂ ವಿಚಾರಗೋಷ್ಠಿಯನ್ನೂ ಏರ್ಪಡಿಸಲಾಗುವುದು. ಪುರಂದರ ದಾಸರ ತೈಲಚಿತ್ರವೊಂದನ್ನು ಅವರ ಸಮಕಾಲೀನರ ವರ್ಣನೆಗೆ ಅನುಗುಣವಾಗಿ ಚಿತ್ರಿಸಲಾಗಿದ್ದು ಅದರ ಅನಾವರಣ ಸಮಾರಂಭವು ಈ ಸಂದರ್ಭದಲ್ಲಿ ಜರಗಲಿದೆ. ಉತ್ಸವದ ಮೂರು ದಿನಗಳಲ್ಲಿ ಸಂಗೀತ, ನೃತ್ಯ, ನಾಟಕ, ಹರಿಕೀರ್ತನೆ ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕೈಕೊಳ್ಳಲಾಗುವುದು. ದಾಸರ ಕೀರ್ತನೆಗಳನ್ನು ಹಾಡುವವರಲ್ಲಿ ನಿಸ್ಸೀಮರೆನಿಸಿದ ಗಾನ ವಿಶಾರದ ಶ್ರೀ ಬಿ. ದೇವೇಂದ್ರಪ್ಪನವರನ್ನು ಆಮಂತ್ರಿಸಲಾಗಿದೆ ಹರಿಕೀರ್ತನೆಗಾಗಿ ಬೆಂಗಳೂರಿನ ಪ್ರಸಿದ್ಧ ಹರಿದಾಸರನ್ನು ಕರೆಸಲಾಗುವುದು ಪುರಂದರದಾಸರ ಜೀವನವನ್ನು ನಿರೂಪಿಸುವ ನಾಟಕವೊಂದನ್ನು ಸಿದ್ಧಪಡಿಸಲಾಗಿದ್ದು ಅದನ್ನು ಯೋಗ್ಯ ನಟರಿಂದ ಆಡಿಸಲಾಗುವುದು.

ಉತ್ಸವದ ಅಂಗವಾಗಿ ದಾಸಸಾಹಿತ್ಯದ ಪ್ರದರ್ಶನವೊಂದನ್ನು ಏರ್ಪಡಿಸಲಾಗುವುದು. ಪುರಂದರ ದಾಸರ ಕುರಿತಾದ ಪ್ರಬಂಧ ಸ್ಪರ್ಧೆಯೊಂದನ್ನೂ, ದಾಸಕೀರ್ತನೆಗಳನ್ನು ಹಾಡುವ ಸ್ಪರ್ಧೆಯನ್ನೂ ಜರಗಿಸಲಾಗುವುದು. ಉತ್ಸವದ ಕೊನೆಯ ದಿನ ಅಖಂಡ ಪುರಂದರದಾಸರ ಕೀರ್ತನಾ ಕಾರ್ಯಕ್ರಮವನ್ನು ಇಡಲಾಗಿದ್ದು ಸಂಭ್ರಮದ ಮೆರವಣಿಗೆಯನ್ನು ತೆಗೆಯಲಾಗುವುದು. ಬೃಹತ್ ಪ್ರಮಾಣದಲ್ಲಿ ನಡೆಸಲಾಗುವ ಶ್ರೀ ಪುರಂದರದಾಸರ ಆರಾಧನೋತ್ಸವದ ಉದ್ಘಾಟನೆಯನ್ನು ನಡೆಸಲು ಬಿಹಾರದ ಮಾಜಿ ರಾಜ್ಯಪಾಲರಾದ ಶ್ರೀ ಆರ್. ಆರ್. ದಿವಾಕರರನ್ನು ಕೇಳಿಕೊಳ್ಳಲಾಗಿದೆ.

ಉತ್ಸವದ ಕಾರ್ಯಕ್ರಮಗಳ ರೇಡಿಯೋ ರಿಲೇ ನಡೆಸಲು ಬೆಂಗಳೂರಿನ ಆಕಾಶವಾಣಿ ನಿಲಯದವರು ಬರುವ ನಿರೀಕ್ಷೆಯಿದೆ.

ಉತ್ಸವವನ್ನು ಡಿಸೆಂಬರ ತಿಂಗಳ ಕೊನೆಯ ವಾರದಲ್ಲಿ ನಡೆಸುವ ಯೋಜನೆಯಿದ್ದು ಅದಕ್ಕೆ ಬೇಕಾದ ಸಿದ್ಧತೆಗಳು ಭರದಿಂದ ನಡೆಯುತ್ತಿವೆ. ಉಡುಪಿಯ ಸಂಗೀತ ಸಭೆಯ ಅಧ್ಯಕ್ಷರಾದ ಶ್ರೀ ಕೆ. ಕೆ. ಪೈಯವರು ನಾಡಿನ ಎಲ್ಲಾ ಭಾಗಗಳ ಜನರು ಈ ಸಮಾರಂಭಕ್ಕೆ ತಮ್ಮಿಂದಾದ ಸಹಾಯ ಸಹಕಾರಗಳನ್ನು ನೀಡಿ ದಾಸವರೇಣ್ಯರ ಸಂಸ್ಮರಣೆಗಾಗಿ ನಡೆಸುವ ಈ ಉತ್ಸವವನ್ನು ಯಶಸ್ವಿಗೊಳಿಸಬೇಕಾಗಿ ಮನವಿ ಮಾಡಿಕೊಂಡಿದ್ದಾರೆ.

ಪುರಂದರ ದಾಸರ ನಾಲ್ಕನೆಯ ಶತಮಾನೋತ್ಸವದ ಕೀರ್ತನ ಸ್ಪರ್ಧೆ—ಉಡುಪಿ ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನಲ್ಲಿ ಶ್ರೀ ಪುರಂದರದಾಸರ ನಾಲ್ಕನೆಯ ಶತಮಾನೋತ್ಸವವನ್ನು ಬಹಳ ವಿಜೃಂಭಣೆಯಿಂದ ಆಚರಿಸಲು ಕಾಲೇಜು ಯೂನಿಯನಿನವರ ನಿರ್ಧಾರ.

ಇದೇ ಡಿಸೆಂಬರ ತಿಂಗಳಲ್ಲಿ ಆಚರಿಸಲಾಗುವ ಶ್ರೀ ಪುರಂದರದಾಸರ ನಾಲ್ಕನೆಯ ಶತಮಾನೋತ್ಸವದ ಅಂಗವಾಗಿ ಪುರಂದರದಾಸ ಕೀರ್ತನ ಸ್ಪರ್ಧೆಯನ್ನು ಏರ್ಪಡಿಸಲು ಕಾಲೇಜು ಯೂನಿಯನಿನವರು ನಿರ್ಧರಿಸುತ್ತಾರೆ. ಇದೇ ನವಂಬರ ತಾ 9ರಲ್ಲಿ ಜರಗಿಸಲಾಗುವ ಈ ಸ್ಪರ್ಧೆಯಲ್ಲಿ ದಕ್ಷಿಣಕನ್ನಡ ಜಿಲ್ಲೆಯ ಎಲ್ಲಾ ಕಾಲೇಜುಗಳೂ ಭಾಗವಹಿಸುವಂತೆ ಆಮಂತ್ರಿಸಲಾಗಿದ್ದು ಗವರ್ನಮೆಂಟ್ ಟ್ರೈನಿಂಗ್ ಕಾಲೇಜು, ಎಲೋಶಿಯಸ್ ಕಾಲೇಜು, ಕಸ್ತೂರ್ಬಾ ಮೆಡಿಕಲ್ ಕಾಲೇಜು, ಕರ್ನಾಟಕ ಇಂಜಿನಿಯರಿಂಗ್ ಕಾಲೇಜು, ಮಣಿಪಾಲ ಇಂಜಿನಿಯರಿಂಗ್ ಕಾಲೇಜು, ಪೂರ್ಣಪ್ರಜ್ಞ ಕಾಲೇಜು, ವಿಜಯ ಕಾಲೇಜು, ಭಂಡಾರ್ಕಾರ್ಸ್ ಕಾಲೇಜು, ಲಾ ಕಾಲೇಜು ಮುಂತಾದ ಕಾಲೇಜಿನ ಮುಖ್ಯಾಧಿಕಾರಿಗಳು ತಮ್ಮ ಒಪ್ಪಿಗೆಯನ್ನು ಸೂಚಿಸಿದ್ದಾರೆ. ಒಂದೊಂದು ಕಾಲೇಜಿನಿಂದ ಇಬ್ಬರು ವಿದ್ಯಾರ್ಥಿಗಳು ಈ ಸ್ಪರ್ಧೆಯಲ್ಲಿ ಭಾಗವಹಿಸುವರು. ಪ್ರತಿಯೊಬ್ಬ ಸ್ಪರ್ಧಾಳುವಿಗೆ ಸ್ಪರ್ಧೆಯಲ್ಲಿ ಹತ್ತು ನಿಮಿಷಗಳ ಅವಕಾಶವಿದ್ದು ಪುರಂದರದಾಸರ ಕೀರ್ತನವನ್ನು ಅವರು ಬಾಯಿಪಾಠದಿಂದ ಮಾತ್ರ ಹಾಡುವರು. ಜಿಲ್ಲೆಯ ಪ್ರಸಿದ್ಧ ಸಂಗೀತ ವಿದ್ವಾಂಸರು ಇದರಲ್ಲಿ ನಿರ್ಣಾಯಕರಾಗಿ ಭಾಗವಹಿಸುವರು. ಸ್ಪರ್ಧೆಯಲ್ಲಿ ಪ್ರಥಮ ದ್ವಿತೀಯ, ಮತ್ತು ತೃತೀಯ ಬಹುಮಾನಗಳನ್ನು ಏರ್ಪಡಿಸಲಾಗಿದ್ದು ಸಮಾರಂಭದ ಕೊನೆಯಲ್ಲಿ ಜಿಲ್ಲೆಯ ಪ್ರಸಿದ್ಧ ಸಾಹಿತಿಗಳು ಬಹುಮಾನ ವಿತರಣೆ ಮಾಡಲಿರುವರು ಜಿಲ್ಲೆಯ ಎಲ್ಲಾ ಕಾಲೇಜುಗಳು ಈ ಉತ್ಸವದಲ್ಲಿ ಪಾಲ್ಗೊಂಡು ಸಹಕರಿಸುವುದು ಮಾತ್ರವಲ್ಲದೆ ಸಕಲ ಮಹಾ ಜನರೂ ಉಪಸ್ಥಿತರಿದ್ದು ಸಮಾರಂಭವನ್ನು ಯಶಸ್ವಿಗೊಳಿಸುವರಾಗಿ ಅಪೇಕ್ಷಿಸಲಾಗಿದೆ.

ಉಡುಪಿ ತಾಲೂಕು ಕಾಂಗ್ರೆಸ್ ಸಮಿತಿಗೆ ಹೊಸತಾಗಿ ಆಯ್ಕೆ ಹೊಂದಿದ ಅಧ್ಯಕ್ಷ ಶ್ರೀ ಟಿ. ರಮೇಶ ಪೈಯವರು ಶ್ರೀಗಳಾದ ಬಿ ಆನಂದಕುಂದಹೆಗ್ಡೆ (ಉಪಾಧ್ಯಕ್ಷ) ಎ. ಜೆ. ಆಳ್ವ (ಕಾರ್ಯದರ್ಶಿ) ಎಸ್. ದೇವೇಂದ್ರ ನಾಡತ್ತಾಯ (ಜತೆ ಕಾರ್ಯದರ್ಶಿ) ಕೆ. ನರಹರಿ ಕಾಮತ್ (ಕೋಶಾಧಿಕಾರಿ) ಎನ್. ಕೆ. ಕಾಂತಪ್ಪ, ಪಿ. ಗೋವಿಂದರಾಜ ಹೆಗ್ಡೆ, ನೀಲಕಂಠ ನಾಯ್ಕ, ಕೆ. ಪ್ರಭಾಕರ ಪೈ, ಟಿ ವೆಂಕಟ್ರಮಣರಾವ್, ಮಹಾಬಲ ಶೆಟ್ಟಿ, ಅನಂತ ನಾರಾಯಣ ಐತಾಳ, ಎ. ಉಮಾನಾಥ ಹೆಗ್ಡೆ, ಎಲ್. ಮೆಂಡನ್ (ಸದಸ್ಯರು) ಆಗಿ ಆರಿಸಿ ಸಮಿತಿ ರಚಿಸಿರುವರು. ಅಲ್ಲದೆ ಶ್ರೀಗಳಾದ ಬಿ. ಕಾಳಪ್ಪ ಶೆಟ್ಟಿ, ಬಿ. ಜಗಜ್ಜೀವನದಾಸ್ ಶೆಟ್ಟಿ, ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆ, ಎಮ್. ಮಧ್ವರಾಜ್, ಎಂ. ಎಲ್. ಎ., ಎಸ್. ಡಿ. ಸಾಮ್ರಾಜ್ಯ, ಪಾಂಗಾಳ ಜನಾರ್ದನ ನಾಯಕ್, ಪಿ. ಎಸ್. ಆಚಾರ್, ಯಜ್ಞ ನಾರಾಯಣರಾವ್, ಪಿ ಆರ್. ವೈದ್ಯ, ಡಾ! ಪಿ. ಜಿ ಆಚಾರ್ ಇವರನ್ನು ಕಾಯಂ ಆಮಂತ್ರಿತರಾಗಿ ಆರಿಸಿದ್ದಾರೆ

ನವರಾತ್ರಿ ಕಾರ್ಯಕ್ರಮಗಳು— ಉಡುಪಿ ಶ್ರೀ ಲಕ್ಷ್ಮೀ ವೆಂಕಟೇಶ ದೇವಸ್ಥಾನದಲ್ಲಿ ನವರಾತ್ರಿ ದಸರಾಮಹೋತ್ಸವದ ಅಂಗವಾಗಿ ತಾರೀಕು 1—10—63ರಿಂದ 30—10 . 63ರ ವರೆಗೆ ಪುರಾಣ, ಭಾಗವತ ವಾಚನ, ಸಂಗೀತ, ಭಜನೆ, ಯಕ್ಷಗಾನ, ಬಯಲಾಟ, ನಾಟಕ, ನೃತ್ಯ ಮೊದಲಾದ ಕಾರ್ಯಕ್ರಮಗಳು ಊರ ಮತ್ತು ಪರಊರ ಕಲಾವಿದರಿಂದ ನಡೆಯಲಿರುವವು. ತಾರೀಖು 25—10 . 63ರಲ್ಲಿ ಶ್ರೀಂಗೇರಿಯ ನೀಲಕಂಠ ಭಟ್ ಮತ್ತು ಪಾರ್ಟಿಯವರಿಂದ ಸಂಗೀತ ಕಚೇರಿ ಜರಗುವುದು.

ಬೊಂಬಾಯಿಯ ಅಪಾದಿತರ ಬಿಡುಗಡೆ—ಮಂಗಳೂರು ಅಸಿಸ್ಟಂಟ್ ಸೆಶನ್ಸ್ ಜಡ್ಜರ ಕೋರ್ಟಿನಲ್ಲಿ ನ್ಯಾಯಾಧೀಶರಾದ ಶ್ರೀ ಡಿ. ಎಂ. ಹಂಗರಕ್ಕಿ ಎಂಬವರು ಸುಂದರಿ ಬಾಯಿ ಎಂಬವರ ಮೇಲೆ ಹಿರಿಯಡ್ಕ ಪೋಲಿಸಿನವರು ಇಂಡಿಯನ ಪಿನಲ್ ಕೋಡಿನ ಪ್ರಕಾರ ಸೆಕ್ಷನ್ 120-B, 366A ಮತ್ತು 373ಗಳ ಅಪಾದನೆಯನ್ನು ಹೊರಿಸಿದ್ದರು. ಸದ್ರಿ ಅಪಾದನೆಯನ್ನು ಸರಿಯಾದ ರುಜುವಾತುಗಳಿಲ್ಲವೆಂದು, ತಾ. 27-8-63 ರಂದು ಬಿಡುಗಡೆಗೊಳಿಸಿದ್ದಾರೆ.

ಅಪಾದಿತರ ಪರವಾಗಿ ಉಡುಪಿಯ ಎಡ್ವಕೇಟ್ ಶ್ರೀ ಪಿ. ಶಿವಾಜಿ ಸೆಟ್ಟಿಯವರೂ ಪ್ರೋಸಿಕ್ಯೂಶನ್ ಪರವಾಗಿ ಪಬ್ಲಿಕ್ ಪ್ರೋಸಿಕ್ಯೂಟರ್ ಶ್ರೀ ಆಚಾರ್ಯರೂ ವಾದಿಸಿದ್ದರು

ಮೈಸೂರಲ್ಲಿ ಶ್ರೀ ಸತ್ಯಸಾಯಿ ಬಾಬಾರವರಿಂದ ಶಂಕುಸ್ಥಾಪನೆ— ಮೈಸೂರಿನ ಜಯ ಲಕ್ಷ್ಮೀಪುರದಲ್ಲಿ ಮಹಾಜನ ಹೈಸ್ಕೂಲಿನ ಬಳಿ ಹಾಕಿದ ಭವ್ಯ ಸಭಾಂಗಣದಲ್ಲಿ ಭಗವಾನ್ ಶ್ರೀ ಸತ್ಯಸಾಯಿ ಬಾಬಾ ಮಹಿಳಾ ಮತ್ತು ಮಕ್ಕಳ ಕೂಟ ಟ್ರಸ್ಟ್ (ರಿಜಿಸ್ಟರ್ಡ್) ಇದರ ಶಂಕುಸ್ಥಾಪನೆಯನ್ನು ತಾ. 15 9-63ರಲ್ಲಿ ಭಗವಾನ್ ಶ್ರೀ ಸತ್ಯಸಾಯಿ ಬಾಬಾರವರು ನೆರವೇರಿಸಿದರು. ಮೈಸೂರು ಸರಕಾರದ ಮಾಜಿ ವಿದ್ಯಾ ಸಚಿವರಾದ ಶ್ರೀ ಎಸ್. ಆರ್. ಕಂಠಿಯವರು ಸಭಾ ಅಧ್ಯಕ್ಷತೆ ವಹಿಸಿದ್ದರು.

'ನರನೆಂದರೆ ನಾರಾಯಣನ ಪ್ರತಿಬಿಂಬ. ಆದ್ದರಿಂದ ನರರ ಸೇವೆಯಲ್ಲೇ ನಾರಾಯಣನ ಸೇವೆಯನ್ನು ಕಾಣಬೇಕು ಸತ್ಯವೆಂಬ ವಿದ್ಯುತ್ ಪ್ರವಾಹವನ್ನು ಶಾಂತಿಯೆಂಬ ವಿದ್ಯುದ್ವಾಹಕ ಸರಿಗೆಯಲ್ಲಿ ಹರಿಸಿ, ಧರ್ಮವೆಂಬ ವಿದ್ಯುದ್ದೀಪದಲ್ಲಿ ಪ್ರೇಮವೆಂಬ ಜ್ಯೋತಿಯನ್ನು ಬೆಳಗಬೇಕು. ಕರ್ತವ್ಯ ಧರ್ಮವರಿತು, ಫಲಾಪೇಕ್ಷೆ ಬಿಟ್ಟು ಭಗವತ್ ಚಿಂತನೆ ಮಾಡುತ್ತಾ ಕರ್ಮವೆಸಗಬೇಕು. ಭಾರತವೆಂದರೆ ಜಗತ್ತಿಗೆಲ್ಲಾ ಆಧ್ಯಾತ್ಮದ ದೀಪಸ್ತಂಭ. ಆದ್ದರಿಂದ ಭಾರತೀಯರೆಲ್ಲಾ ಭಾರತದ ಈ ಮಹತ್ವವನ್ನರಿತು, ಕ್ಷಣಿಕ ಸುಖದ ವ್ಯಾಮೋಹಗಳನ್ನು ತೊಲಗಿಸಿ, ಶಾಶ್ವತವಾದ ಆತ್ಮನ ಅರಿವಿಗಾಗಿ, ಆತ್ಮನ ಆನಂದವನ್ನು ದೊರಕಿಸಿಕೊಳ್ಳುವುದಕ್ಕಾಗಿ ದುಡಿಯಬೇಕು. ಭಾರತೀಯರು ಈ ನಿರ್ದಿಷ್ಟ ಪಥವನ್ನು ಬಿಟ್ಟದ್ದರಿಂದಲೇ ಭಾರತಕ್ಕೆ ಇಂದಿನ ಈ ದುಸ್ಥಿತಿ ಬಂತು. ಅನ್ಯದೇಶಗಳು ಮೃತ್ಯುವನ್ನು ಆರಾಧಿಸುತ್ತಿವೆ ಭಾರತವು ಹಿಂದಿನಿಂದಲೂ ಮೃತ್ಯುಂಜಯನನ್ನು ಆರಾಧಿಸುತ್ತಿದೆ. ಆದ್ದರಿಂದ ಭಾರತಕ್ಕೆ ಭಯವಿಲ್ಲ. ಯಜ್ಞ ಯಾಗಾದಿಗಳ, ಜಪ ತಪಾದಿಗಳ, ವೇದೋಪನಿಷತ್ತುಗಳ ನೆಲೆ ವೀಡಾದ ಭಾರತವೇ ಪ್ರಪಂಚದ ವಿವಿಧ ದೇಶಗಳೆಂಬ ರೈಲು ಬಂಡಿಗಳನ್ನು ಸುರಕ್ಷಿತವಾಗಿ ಮುಂದೆ ಕೊಂಡೊಯ್ಯುತ್ತಿರುವ ರೈಲ್ವೇ ಎಂಜಿನು. ಈ ಮಹತ್ವವನ್ನರಿತು ಸತ್ಯ, ಧರ್ಮ, ಶಾಂತಿ, ಪ್ರೇಮಗಳ ದಾರಿಯನ್ನು ಅನುಸರಿಸುವವರೇ ಧನ್ಯರು' ಎಂದಿತ್ಯಾದಿಯಾಗಿ ಬಾಬಾರವರು ಒಂದು ಗಂಟೆ ಕಾಲ ಉಜ್ವಲವಾಗಿ ಉಪನ್ಯಾಸವಿತ್ತು ನೆರೆದ ಜನಸ್ತೋಮವನ್ನು ಆಧ್ಯಾತ್ಮದ ಸ್ವರ್ಗೀಯ ಸುಖದ ಪಂತಕ್ಕೆ ತಂದು ನಿಲ್ಲಿಸಿದರು.

ಅಧ್ಯಕ್ಷ ಸ್ಥಾನದಿಂದ ಮಾತನಾಡುತ್ತಾ ಶ್ರೀ ಕಂಠಿಯವರು, ಈ ಸಂಸ್ಥೆ ಮಾಡುತ್ತಿರುವ ಸೇವಾಕಾರ್ಯವನ್ನು ಶ್ಲಾಘಿಸಿ, ಇದರ ಶಂಕುಸ್ಥಾಪನೆ ಮಾಡಲು ಶ್ರೀ ಸತ್ಯ ಸಾಯಿ ಬಾಬಾರಂತಹ ಮಹರ್ಷಿಗಳನ್ನು ಬರಮಾಡಿದ್ದಕ್ಕೆ ಆನಂದ ವ್ಯಕ್ತಪಡಿಸಿದರು. ಸತ್ಯ ಸಾಯಿ ಬಾಬಾರಂತಹ ಮಹರ್ಷಿಗಳು ನಮ್ಮ ಮಧ್ಯೆ ಇದ್ದಾಗ ನಮ್ಮ ದೇಶವು ಆಧ್ಯಾತ್ಮ ಮತ್ತು ಇತರ ಎಲ್ಲಾ ರಂಗದಲ್ಲೂ ಅತ್ಯುಚ್ಚ ಸ್ಥಿತಿಗೆ ಬರುವುದರಲ್ಲಿ ಸಂಶಯವಿಲ್ಲ ಎಂದಿತ್ಯಾದಿಯಾಗಿ ಭಾಷಣವಿತ್ತರು.

ಸಂಸ್ಥೆಯ ಪ್ರಮುಖ ಸ್ಥಾಪಕಿ ರೂಪದ ಶ್ರೀಮತಿ ಸುನಂದಮ್ಮನವರಿಂದ ಸ್ವಾಗತ ಭಾಷಣವಾದ ಮೇಲೆ ಭಗವಾನ್ ಬಾಬಾರವರು ತಮ್ಮ ಸೌಮ್ಯ ಹಸ್ತಗಳಿಂದ ಅಮೃತ ಶಿಲೆಯ ಶಂಕು ಸ್ಥಾಪನೆಗೈದರು.

ಅಶೋಕ ಮೆಹತಾ

ಯೋಜನಾ ಆಯೋಗದ ಉಪಾಧ್ಯಕ್ಷತೆಯನ್ನು ಸ್ವೀಕರಿಸಲು ಪ್ರಸಮಾ ಪಕ್ಷದ ಅಶೋಕ ಮೆಹತಾರು ಒಪ್ಪಿದುದರಿಂದ ಒಂದೆಡೆ ಸಂತೋಷ ಮತ್ತೊಂದೆಡೆ ದುಃಖ ತಲೆದೋರಿವೆ. ನಮ್ಮ ಆರ್ಥಿಕ ಯೋಜನೆಗಳನ್ನು ಪುನರ್ವಿಮರ್ಶಿಸಬೇಕೆಂದು ಅಲ್ಲಲ್ಲಿ ತಜ್ಞರ ಅಭಿಪ್ರಾಯ ಕೇಳಿಯಲ್ಲಿ ಕೇಳಿಬರುತ್ತಿರುವಾಗ, ಮೆಹತಾರಂತಹ ಮೇಧಾವೀ ಬುದ್ಧಿಜೀವಿಗಳು. ಯೋಜನಾ ಆಯೋಗದಲ್ಲಿ ಮಹತ್ವದ ಸ್ಥಾನ ಪಡೆಯುವುದು ಸ್ವಾಗತಾರ್ಹ. ಆದರೆ, ಪ್ರಸಮಾ ಪಕ್ಷ ಮಾತ್ರ ಇದರಿಂದ ನೊಂದಿದೆ. ಮೆಹತಾರು ಕೇಂದ್ರ ಸಚಿವ ಸಂಪುಟದಲ್ಲಿ ಸೇರಿಕೊಳ್ಳುವರು ಎಂಬ ಮೂರು ತಿಂಗಳ ಹಳೆಯ ವಾರ್ತೆಯು ಈ ಪ್ರಕಟಣೆಯೊಂದಿಗೆ ಪರಿಪೂರ್ಣವಾಯಿತಲ್ಲವೆ?

ಸರ್ವಂ ಕಲ್ಪನಾಮಯಂ ಜಗತ್

(೫ನೇ ಪುಟದಿಂದ)

ಕ್ಷಮಿಸೋದು. ಅದೂ ನಾನು ನಿನ್ನನ್ನ! ಎಲ್ಲಾದ್ರೂ ಉಂಟೇ ಮತ್ತೆ?

ಬೇಡ ಕಣೇ ಬೇಡ. ಕಣ್ಣೀರು ಸುರಿಸ್ಬೇಡ. ಯಾರು ಹೇಳ್ತಾರೆ, ಕಾಲ ಬಂಜೆಯೇನು? ಒಂದಲ್ಲ ಒಂದು ದಿನ ಬರುತ್ತೆ ಖಂಡಿತ ಬರುತ್ತೆ. ಆಗ ನಮ್ಗೂನೂ ಹಬ್ಬ ಆಗಿಯೇ ಆಗುತ್ತೆ.

ಅದ್ರೆ ಆ ದಿನ ಬರೋ ವರೆಗೆ....

ಚಿಂತೆ ಮಾಡ್ಬೇಡ. ಭವಿಷ್ಯತ್ಕಾಲದ ಆಸೆಯೇ ಇಂದಿನ ನಿಂತೆಯ ರೋಗಕ್ಕೆ ಔಷಧಿ

ಹಾಗೇಂತ ಸಮಾಧಾನ ಪಡ್ಬೇಕಲ್ಲ?

ಲೋಕದ ನಿಯಮ ವೇ ಹಾಗೆ. ತಾಳಿದವ ಬಾಳಿಯಾನು ಎಂದಲ್ಲವೇ ಹಿರಿಯರು ಹೇಳೋದು?

ಭವಿಷ್ಯದ ಫಲ ವರ್ತಮಾನ ಕಾಲದ ಬೆಳೆಯನ್ನು ಕಂಡ್ರೆ ಗೊತ್ತಾಗುತ್ತಾವೇಂತಂತಾರಲ್ಲ....?

ಸರಿ ಹೋಯ್ತು ಬಿಡು. ಅವ್ರು ಹಾಗೂ ಹೇಳ್ತಾರ, ಹೀಗೂ ಹೇಳ್ತಾರೆ. ಅದಕ್ಕೇ ಇರ್ಬೇಕು ಕಾಳಿದಾಸ ಹೇಳಿದ್ದು ಹಳೇದನ್ನೆಲ್ಲಾ ನಂಬೋದೇಂತ.

ಹಾಗಾದ್ರೆ ಈಗ ಸಮಾಧಾನ?

ಸಮಾಧಾನವೇನು ಮತ್ತೆ? ಅನುಭವವೇ ಅಲ್ವೆ? ಹಿಂದೆ ಹೀಗೆ ಇದ್ದಿಲ್ಲ; ಏನೋ ಇಂದು ಹೀಗೆ ಆಗಿದೆ ಮುಂದೆ ಹೀಗೆ ಇರ್ಲ್ಲಾರ್ದು. . .

ನಿಮ್ಮದೆಲ್ಲಾ ಹೀಗೇ ಕಲ್ಪನೆಯಲ್ಲೇ ಆಯ್ತು.

ಮತ್ತೆ, ಕಲ್ಪನೆಯಿಲ್ಲದೆ ಈ ಪ್ರಪಂಚ ನಡೆಯುತ್ತೆ? ಎಲ್ಲವೂ ಕಲ್ಪನೆಯ ಗೀಟಿನೊಳಗೇನೇ ನಡೆಯುತ್ತೆ.

ಏನೋ, ನಿಮ್ಮ ವೇದಾಂತ ನನಗೊಂದೂ ಅರಿವಾಗೋಲ್ಲ. ಹಾಗೇ ನೋಡಿ—

ಏನು?

ಅದೇ ನೀವಂದ್ರಲ್ಲಾ, ಆ ಕೆಂಪಿನವ್ರು ಯುದ್ಧ ಮಾಡೋದಿಲ್ಲಾಂತ—

ಹೌದು, ಅವ್ರು ಹಾಗ ಹೇಳ್ಕೋತ್ತಾರೆ ಮತ್ತೆ ಅಣ್ವಸ್ತ್ರ ತಯಾರಿಸಿದ್ರೂಂತಂದ್ರಿ.

ಅದೂ ಸರಿ. ಅವ್ರೇ ಹೇಳ್ಕೋತಾರೆ ಅದ್ರೆ ರಷ್ಯ ಹೇಳ್ತಿದೆ, ಅದು ಸುಳ್ಳು ಬರೀ ಕಲ್ಪನೇಂತ.

ನೀವೂ ಹೇಳಿದ್ರಲ್ಲಾ ಕೆಂಪಿನವರೆಲ್ಲಾ ಕಲ್ಪನೆಯ ಕನಸು ಕಾಣುವುದಂಲ್ಲಿ ನಿಸ್ಸೀಮರೂಂತ....

ಸತ್ಯ ಹೇಳ್ಲಿ ನಾನು? ಅದೂ ಕಲ್ಪನೆನೇ

ಅಂದ್ರೆ, ನನ್ನ ಹೆದರಿಕೇನೂ ಕಲ್ಪನೇಂತನ್ನಿ....

ಪ್ರಪಂಚವೇ ಮಾಯೆ ಅಂದ್ರೆ ಶುದ್ಧ ಕಲ್ಪನೇಂತ ಶಂಕರಾಚಾರ್ಯರು ಅನ್ನಲಿಲ್ಲವೇ?

ಎಲ್ಲಾ ಕಲ್ಪನೇಂತ ತಿಳಿದಿದ್ರೂ ಯಾರೂ ಅದನ್ನ ತೋರ್ಪಡಿಸುವುದಿಲ್ಲ. ನೋಡಿ

ಅದೂ ನಿನ್ನ ಕಲ್ಪನೇನೇ...

ಅಂದ್ರೆ?

ಅಂದ್ರೆ ಎಂದ್ರೆ ಎಲ್ಲಾ ತೊಂದ್ರೆ

ಬಿಡಿಸಿ ಹೇಳೀಂದ್ರೆ

ಏನಪ್ಪಾ ಹೇಳೋದು?

ಮತ್ತೆ ಒಗಟಿನಂತೆ ಹೇಳಿದ್ರೆ ಹೇಗೆ? ಎಲ್ಲಾ ಬಿಡಿಸಿ ಹೇಳೀಂದ್ರೆ...?

ಹೇಳ್ಲೇ ಬೇಕೇನು? ಕೇಳಮ್ಮಾ ನಾರೀಮಣಿ

ಕೇಳುತ್ತಾ ಇದ್ದೇನೆ ಶಿರೋಮಣಿ ..

ಚೀನೀಯರು ಅಣ್ವಸ್ತ್ರ ತಯಾರಿಸಿದ್ದೂ ಕಲ್ಪನೆ. ಅವರು ಯುದ್ಧಕ್ಕೆ ತೊಡಗುತ್ತಾರೆಂಬುದೂ ಕಲ್ಪನೆ ಈ ಪ್ರಪಂಚವಿರುವುದು, ಅದರಲ್ಲಿ ನಾನು ನೀನು ಇರೋದು ಎಲ್ಲಾ ಕಲ್ಪನೆ ಮತ್ತೆ ನನ್ನ ನಿನ್ನ ಮದುವೆಯಾದದ್ದೂ ಕಲ್ಪನೆ.

ಹಾಗಾದರೆ, ನನ್ನ ನಿಮ್ಮ ಮದುವೆಯಾಗದೆ ಇದ್ದರೆ, ಅದೂ ಕಲ್ಪನೆನೇ ಅನ್ನಿ

ಸರಿಹೋಯ್ತು ಬಿಡು. ನೋಡು ರಾತ್ರಿ ತಾಸು ಹನ್ನೊಂದಾಯ್ತು.

ಅದೂ ಕಲ್ಪನೇನಾ?

ಅಂದ್ರೆ ?

ಅಂದ್ರೆ ಮತ್ತೇನಿಲ್ಲ, ಸರ್ವಂಕಲ್ಪನಾಮಯಂ ಜಗತ್. ಸರಿಯಾಯ್ತು ಬಿಡಿ.

ಬಿಟ್ಬಿಟ್ಟೆ ಎಲ್ಲಾ ಹೂಂ, ಹೋಗುವ ಇನ್ನು ಹೂಂ,

— ಗೋರಾ

ಸುಕರ್ಣರ ವ್ಯರ್ಥ ಭಿನ್ನಾಭಿಪ್ರಾಯ

(೧ನೇ ಪುಟದಿಂದ)

ಬಗ್ಗೆ ಸಂದೇಹವೆದ್ದಿದೆ. ಇವರಲ್ಲಿ ಅದಾವುದೋ ಒಳತೋಕು ಇರಬೇಕೆಂದು ಭಾವಿಸುವಂತಾಗಿದೆ. ಸಹ ಅಸ್ತಿತ್ವ ಮತ್ತು ಸಹಜೀವನದ ಸಿದ್ಧಾಂತದಲ್ಲಿ ನೋಡಲು ವಿಶ್ವಾಸವಿರಿಸಿದ್ದ ಸುಕರ್ಣರೀಗ ತಮ್ಮ ನಂಬುಗೆಯನ್ನು ಕಳೆದುಕೊಂಡಿದ್ದಾರಾದರೂ ಏತಕ್ಕಾಗಿ? ಈ ಪ್ರಶ್ನೆಗೆ ನಿಕಟ ಭವಿಷ್ಯದಲ್ಲಿ ಉತ್ತರ ಹೇಳುವುದು ಕಷ್ಟ

ಕತ್ತಿಯನ್ನೇ ಮಸೆಯು ಬೇಕೆ?

ಟಂಕು ಅಬ್ದುಲ್ ರಹಮಾನರನ್ನು ಕೆಲವು ಪತ್ರಿಕಾ ಪ್ರತಿನಿಧಿಗಳು ಕೇಳಿದರ: ಮಲೇಶ್ಯಾ— ಇಂಡೊನೇಶ್ಯ — ಫಿಲಿಪ್ಪಾಯಿನ್‌ಗಳ ಶೃಂಗ ಸಭೆಯೊಂದು ಜರಗಿ ಸಮಸ್ಯೆಗೊಂದು ಪರಿಹಾರವನ್ನು ಅರಸಬಾರದೇಕೆ? ಎಂದು ಅದರೆ, ಈ ಸಭೆಯು ವ್ಯರ್ಥವೆನ್ನುತ್ತಾರೆ ರಹಮಾನರು. ಇನ್ನೊಬ್ಬರ ಮಾನಾಪಮಾನಗಳ ಗೊಡವೆಯನ್ನು ಗಣಿಸದವರೊಡನೆ ಮಾತುಕತೆಯಾದರೂ ಏನು ಪ್ರಯೋಜನ? ನೆರೆಯ ಒಪ್ಪಂದದ ಸಭೆಯಲ್ಲಿ ಬಿಚ್ಚು ಮನಸ್ಸಿನ ಮಾತುಕತೆಗಳು ನಡೆದು ಯಾವುದಾದರೊಂದು ಅಂತಿಮ ತೀರ್ಮಾನಕ್ಕೆ ಬರುವ ನಿರೀಕ್ಷೆಯಿದ್ದರೆ ಮಾತ್ರ ಇಂತಹ ಮಿಲನದಿಂದ ಲಾಭ ದೊರಯಬಹುದು. ರಹಮಾನರು ಹೇಳುವಂತೆ ಅಂತಹ ತೀರ್ಮಾನವು ಹೊರಡುವ ಭರವಸೆಯೆಲ್ಲವನ್ನೂ ಕಳೆದುಕೊಳ್ಳುವಂತೆ ಸುಕರ್ಣರು ಯುದ್ಧ ಸಿದ್ಧತೆಯಲ್ಲಿ ವ್ಯಗ್ರರಾಗಿರುವಾಗ ಲಭಿಸುವ ಪ್ರಯೋಜನವಾದರೂ ಏನು?

ಉಪಸಂಹಾರ

ಎಂತಹ ವಿಪತ್ತು ಬಂದರೂ ಅವನ್ನು ಎದುರಿಸುವ ವಿಲಕ್ಷಣ ಎದೆಗಾರಿಕೆಯೊಂದು ಮಲೇಶ್ಯಾಕ್ಕೆ ಬಂದಿದೆ ಎಂತಲೇ ಅದೂ ತನ್ನ ಸೇನೆಗೆ ಸಿದ್ಧವಾಗಿರುದಂತೆ ಎಚ್ಚರಿಕೆಯಿತ್ತಿದೆ. ಒಂದು ವೇಳೆ ಯುದ್ಧವೇ ಸಂಭವಿಸಿತಾದರೂ ತಮಗೇನೂ ತೊಂದರೆಯಾಗದೆಂಬ ಆತ್ಮವಿಶ್ವಾಸ ಟಂಕು ಅಬ್ದುಲ್ ರಹಮಾನರಲ್ಲಿದೆ. ಆದರೆ, ಇದರಿಂದ ಲೋಕದ ಕಣ್ಣಿಗೆ ಬೀಳುವುದು ಸುಕರ್ಣರು. ಇಂತಹ ಅಸಭ್ಯ ವರ್ತನೆಗೆ ಕಾರಣಪುರುಷರಾಗುವುದರಿಂದ ಇದುವರೆಗೆ ತಾನು ಗಳಿಸಿದ್ದ ಸಚ್ಚರಿತ್ರೆಯನ್ನು ಅವರೇಕೆ ಕಳೆದುಕೊಳ್ಳಬೇಕೋ ತಿಳಿಯದು. ಇದೀಗ ಸ್ನೇಹ ತೋರಿಸುವ ಉದಾರತೆಯನ್ನು ಅವರು ಪ್ರದರ್ಶಿಸಿದರೆ, ಲೋಕದ ಕಣ್ಣಿನಲ್ಲಿ ಅವರು ಸಜ್ಜನರಾಗುವರು ಇಂತಹ ಅಮೂಲ್ಯ ಅವಕಾಶವನ್ನು ಅವರು ವ್ಯರ್ಥವಾಗಗೊಡಬಾರದ— ಆದರೆ, ಅದು ಸಂಭವನೀಯವೆ?



ಆಸಾಮು ರಾಜ್ಯದ ನೂನಮತಿಯ ಕಾರಖಾನೆಯಲ್ಲಿರುವ ತೈಲಶುದ್ಧೀಕರಣ ಯಂತ್ರ

ನಿಮಗೆ ಇದು ಗೊತ್ತೆ?

ಸಿಡುಬು ರೋಗದಿಂದ ೧೯೫೨ರಲ್ಲಿ ೩೫,೭೫೭ ಮಂದಿ ಮತ್ತು ೧೯೫೮ರಲ್ಲಿ ೩೯,೧೭೪ ಮಂದಿ ಮರಣಹೊಂದಿದರು.

ಸಿಡುಬು ರೋಗವು ಸಾಂಕ್ರಾಮಿಕ ರೋಗ ಸಮಾಜದಲ್ಲಿ ದೇವಿ ಹಾಕಿಸಿಕೊಳ್ಳದೆ ಇದ್ದವರಿಗೆ ಇದು ಬೇಗ ತಗಲುತ್ತದೆ.

ಸಿಡುಬು ರೋಗದಿಂದ ಸ್ವಾಭಾವಿಕವಾಗಿ ಯಾರೂ ಮುಕ್ತರಾಗಿಲ್ಲ

ಈ ರೋಗದಿಂದ ಮರಣ ಹೊಂದಿದವರಲ್ಲಿ ೧ರಿಂದ ೧೦ ವರ್ಷದೊಳಗಿನ ದೇವಿ ಹಾಕಿಸಿಕೊಳ್ಳದಿದ್ದ ಮಕ್ಕಳ ಸಂಖ್ಯೆಯೇ ಹೆಚ್ಚು.

ಮಕ್ಕಳು ಮೂರು ತಿಂಗಳ ವಯಸ್ಸಿನವು ಇದ್ದಾಗಲೇ ಅವುಗಳಿಗೆ ದೇವಿ ಹಾಕಿಸಬೇಕು.

ದೇವಿ ಹಾಕಿಸಿಕೊಳ್ಳುವುದು ಸರಳವಾದ ಮತ್ತು ಸುರಕ್ಷಿತವಾದದ್ದು.

ದೇವಿ ಹಾಕಿಸಿಕೊಂಡರೆ ಅದು ಅನೇಕ ವರ್ಷಗಳ ವರೆಗೆ ರೋಗ ಪ್ರತಿಬಂಧಕ ಶಕ್ತಿಯನ್ನು ನೀಡುತ್ತದೆ ಆದ್ದರಿಂದ ಪ್ರತಿ ೩-೫ ವರ್ಷಗಳಿಗೊಮ್ಮೆ ದೇವಿ ಹಾಕಿಸಿಕೊಳ್ಳುವುದು ಒಳ್ಳೆಯದು.

ನಿಮ್ಮ ಮನೆಯ ಹತ್ತಿರವಿರುವ ದೇವಿ ಹಾಕುವ ಕೇಂದ್ರಕ್ಕೆ ಅಥವಾ ನಿಮ್ಮ ಮನೆಗೆ, ಶಾಲೆಗೆ, ದೇವಿ ಹಾಕುವ ತಂಡಗಳು ಬಂದಾಗ ಮತ್ತು ಪ್ರಸೂತಿಕಾ ಹಾಗೂ ಮಕ್ಕಳ ಆರೋಗ್ಯ ಕೇಂದ್ರಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ನೀವು ಉಚಿತವಾಗಿ ದೇವಿಹಾಕಿಸಿಕೊಳ್ಳಬಹುದು.

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಅತ್ಯಂತ ಪ್ರಯೋಜನಕಾರಿ ಪುಸ್ತಕ—

ಮನೆ-ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್. ಐ. ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೇಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸೂಚನೆ

'ನವಯುಗ"ದಲ್ಲಿ ಪ್ರಕಟನೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ ಇವು ಚಿಕ್ಕದಿರಬೇಕಲ್ಲದೆ ಕಾಲು ತಾವು ಸೈಜಿನ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಸುವಾಚ್ಯವಾಗಿಯೂ ಇರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ.

— ಸಂ ನ

ವಿವೇಚನೆಗೊಂದು ಸವಾಲು

ಏಶಿಯಾದಲ್ಲಿ ಏಕನಾಯಕತನ

೧

ಕಳೆದ ವರ್ಷ ಒಬ್ಬ ಅಮೆರಿಕನ್ ಪತ್ರಿಕಾಕರ್ತನು ಭಾರತೀಯ ಪ್ರಧಾನ ಮಂತ್ರಿ ನೆಹರೂರವರ ನಂತರ ಅವರ ಉತ್ತರಾಧಿಕಾರಿಗಳಾಗಿ ಯಾರು ಅಧಿಕಾರ ಪದಕ್ಕೇರುವರೆಂಬ ಬಗ್ಗೆ ಊಹನೆ ಮಾಡಿ ಹತ್ತು ಜನರನ್ನು ಆಯ್ದುಕೊಂಡು ಒಂದು ಪುಸ್ತಕವನ್ನು ಬರೆದನು. ಈ ಹತ್ತು ಮಹನೀಯರಲ್ಲಿ ಒಬ್ಬ ಮೇಜರ್ ಜನರಲ್‌ನ ಹೆಸರು ಕೂಡಾ ಇತ್ತು. ಇದನ್ನು ಓದಿದ ಭಾರತೀಯ ವಾಚಕರು ತಲೆತುರಿಸಿಕೊಳ್ಳಹತ್ತಿದರು. ಈ ಮೇಜರ್ ಜನರಲನ ಹೆಸರು ಸೂಚಿಯಲ್ಲಿ ಕೊಟ್ಟ ಕೊನೆಯಲ್ಲಿತ್ತು. ಆದರೆ ಕಾಲಚಕ್ರವು ತಿರುಗುತ್ತಿದ್ದಂತೆಯೇ ಈತನು ಬಹು ಸಮಯಕ್ಕೆ ಮೊದಲೇ ಸೇನೆಯಿಂದ ನಿವೃತ್ತನಾಗಿ ಹೋಗಬೇಕಾಯ್ತು.

ಯಾವನೊಬ್ಬನ ಅದೃಷ್ಟವನ್ನೂ ನಾವು ಉಪೇಕ್ಷಿಸುವುದು ಸಾಧ್ಯವಿಲ್ಲ ಆದರೂ ಭಾರತದಲ್ಲಿ ಸೈನಿಕ ಪ್ರಭುತ್ವವು ಸ್ಥಾಪನೆಗೊಳ್ಳಲಾರದೇ ಎಂಬ ಪ್ರಶ್ನೆಯು ಎಲ್ಲ ಭಾರತೀಯರ ಆಸಕ್ತಿಯನ್ನು ಕೆರಳಿಸಬಲ್ಲುದು. ಈ ಪ್ರಶ್ನೆಗೆ ಉತ್ತರ ಕೊಡುವುದೇನೂ ಸುಲಭವಲ್ಲ ಸ್ವಾನುಭವ, ಸ್ವಾಧ್ಯಯನ ಮತ್ತು ಸ್ವಆಸ್ಥೆಗಳಿಗನುವಾಗಿಯೇ ನಾವು ನಮ್ಮ ಉತ್ತರವನ್ನು ಕೊಡಬಲ್ಲೆವು ನಮ್ಮ ಅಭಿಪ್ರಾಯವು ಯಾವ ರೀತಿಯದೇ ಆಗಿರಲಿ, ಏಷ್ಯಾ ಖಂಡದ ರಾಜಕೀಯ ಚಿತ್ರದತ್ತ ದೃಷ್ಟಿಹರಿಸುವುದು ನಿಜಕ್ಕೂ ಲಾಭಪ್ರದವಿದೆ.

ಏಷ್ಯಾದ ಹೆಚ್ಚಿನ ಭೂಭಾಗದ ಮೇಲೆ ಒಂದಲ್ಲ ಒಂದು ರೀತಿಯ ಏಕತಂತ್ರದ ಆಡಳಿತೆಯಿದೆ. ಸಾಮ್ಯವಾದಿ ದೇಶಗಳಲ್ಲಿ ಸರ್ವಾಧಿಕಾರಿಯ ಪ್ರಭುತ್ವವಿದೆ. ಕೆಲವು ದೇಶಗಳು ಅಬಾಧಿತ ರಾಜತಂತ್ರದ ಕೆಳಗೆ ಪುಡಿಯಾಗಿವೆ. ಇನ್ನೂ ಕೆಲವೆಡೆ ಹೆಸರಿಗೇನೋ ಪ್ರಜಾತಂತ್ರವಿದೆ; ಆದರೆ, ಪರದೆಯ ಹಿಂದೆ ಸೇನೆಯೇ ಆಡಳಿತೆಯನ್ನು ನಿರ್ವಹಿಸುತ್ತದೆ. ಬೇರೆ ಕೆಲವು ದೇಶಗಳಲ್ಲಿ ನೇರವಾಗಿಯೇ ಸೇನೆಯು ಅಧಿಕಾರವನ್ನು ತನ್ನ ಕೈಗಳಲ್ಲಿ ತೆಗೆದುಕೊಂಡಿದೆ, ಈ ವಿಶಾಲ ಮರುಭೂಮಿಯಲ್ಲಿ ಎದ್ದು ತೋರುವ ಓಯಸಿಸ್‌ನಂತೆ ವಿಶಾಲ ಏಶ್ಯಾದಲ್ಲಿ ಭಾರತದಲ್ಲಿ ಮಾತ್ರ ಪರಿಶುದ್ಧ ಲೋಕತಂತ್ರವಿದೆ ಇಸ್ರಾಯೇಲ್, ಜಪಾನ್, ಮಲಯಾ ಮತ್ತು ಸಿಂಹಳಗಳಲ್ಲಿ ಕೂಡ ಪ್ರಜಾತಂತ್ರದ ನೌಕೆಯು ಬಿರುಗಾಳಿಗೆ ಸಿಲುಕಿದ್ದರೂ ಉಳಿದುಕೊಂಡಿದೆ

ಸೈಬೇರಿಯಾ ಮತ್ತು ಮಧ್ಯ ಏಶ್ಯಾದ ಸೋವಿಯತ್ ಗಣರಾಜ್ಯಗಳನ್ನು ಉಳಿದರೆ ಏಶ್ಯಾದಲ್ಲಿ ನಾಲ್ಕು ಸಾಮ್ಯವಾದಿ ದೇಶಗಳು ಉಳಿಯುತ್ತವೆ: ಮಂಗೋಲಿಯಾ, ಚೀನ, ಉತ್ತರ ಕೊರಿಯಾ ಮತ್ತು ಉತ್ತರ ವಿಯತನಾಮ. ಸಾಮ್ಯವಾದವನ್ನು ವಿಶುದ್ಧ ಸೈನಿಕ ತಂತ್ರವೆಂದು ಹೇಳವುದು ಸಾಧ್ಯವಿಲ್ಲ ಆದರೆ, ಏಶ್ಯಾದಲ್ಲಿ ಸಾಮ್ಯವಾದ ಅಥವಾ ಕಮ್ಯುನಿಜಂನ ಪ್ರಚಾರ ಕಾರ್ಯದಲ್ಲಿ ಸೇನೆಯು ನಿಕಟ ಸಂಬಂಧ ವಿರಿಸಿಕೊಂಡಿದೆ—ಇದು ಮಾತ್ರ ಸತ್ಯ

ದ್ವಿತೀಯ ಲೋಕ ಸಮರಕ್ಕೆ ಮೊದಲೇ ಚೀನಾದಲ್ಲಿ ಸಾಮ್ಯವಾದಿ ಮತ್ತು ರಾಷ್ಟ್ರೀಯವಾದಿಗಳ ನಡುವೆ ಸಂಘರ್ಷ ಹುಟ್ಟಿಕೊಂಡಿತ್ತು. ಇದು ಸೈನಿಕ ಕ್ರಾಂತಿಯ ರೂಪವನ್ನೂ ಹೊಂದಿತ್ತು. ಜಪಾನನ್ನು ಸೋಲಿಸುವ ಉದ್ದೇಶದಿಂದ ಈ ಎರಡು ಪಂಗಡಗಳೂ ಸ್ವಲ್ಪ ಕಾಲ ಒಂದಾಗಿರುವಂತೆ ಭಾಸವಾಯಿತು. ಆದರೆ, ಜಪಾನದಿಂದ ಭಯವಿಲ್ಲವೆಂದಾದ ಕೂಡಲೇ ಚೀನಾದಲ್ಲಿ ಗೃಹ ಕಲಹವು ಮರಳಿ ಸಿಡಿಯಿತು ಸಾಮ್ಯವಾದಿ ಸೈನಿಕರು ರಶ್ಯದಿಂದ ಪಡೆದಿದ್ದ ಅಥವಾ ಜಪಾನದಿಂದ ಅಪಹರಿಸಿದ್ದ ಶಸ್ತ್ರಾಸ್ತ್ರಗಳನ್ನು ಬಳಸಿಕೊಂಡರು.

ಚಿಯಾಂಗ್ ಕೈ ಶೇಕರು ಸ್ವಯಂ ಸೈನಿಕ ಷಡ್ಯಂತ್ರದ ಮೂಲಕ ಅಧಿಕಾರ ಪಡೆದಿದ್ದರು. ಅವರ ಆಡಳಿತಾವಧಿಯಲ್ಲಿ ಸೈನಿಕರು ಮತ್ತು ಒಂಡನಳಗಾರರ ದರ್ಬಾರು ನಡೆದಿತ್ತು ಲಂಚವು ತಾಂಡವವಾಡುತಿತ್ತು. ಪ್ರಶಾಸನದ ಮೂಲವೇ ಸಿಂಡರಿಸಿ ಹೋಗಿತ್ತು. ಅಮೆರಿಕೆಯಿಂದ ಅಪಾರ ನೆರವು ದೊರೆಯುತಿತ್ತು. ಆದರೆ, ಅಮೆರಿಕೆಯ ಆಯುಧಗಳು ಸಾಮ್ಯವಾದಿಗಳ ಕೈಸೇರುತಿತ್ತು; ಹಾಗೆಯೇ ಅಮೆರಿಕನ್ ಡಾಲರ್‌ಗಳು ರಾಜಕಾರಣಿಗಳು ಇಲ್ಲವೇ ಅಧಿಕಾರಿಗಳ ಜೇಬನ್ನು ಸೇರುತಿದ್ದುವು. ಸಾಮ್ಯವಾದಿಗಳು ಮತ್ತು ಚಿಯಾಂಗರ ಸೈನಿಕ ನಿರಂಕುಶಾಧಿಕಾರಿಗಳ ಹೊರತು ಮತ್ತಾರೂ ಜನತೆಗೆ ಗೋಚರಿಸುತ್ತಿರಲಿಲ್ಲ. ಕೊನೆಗಾದರೂ ಸಾಮ್ಯವಾದಿಗಳ ಕೈಯೇ ಮೇಲಾಯಿತು ಚಿಯಾಂಗ ಕೈ ಶೇಕರು ಫಾರ್ಮೋಸಾದಲ್ಲಿ ಉಳಿಯಬೇಕಾಯಿತು.

ಮಂಗೋಲಿಯಾವು ರಶ್ಯ ಮತ್ತು ಚೀನಾಗಳ ನಡುವೆ ಸಿಲುಕಿದ ರೊಟ್ಟಿಯಂತಿದೆ. ಇದು ೧೯೪೫ರಿಂದ ಸ್ವತಂತ್ರವಾಗಿದೆ. ಆದರೆ, ಇಲ್ಲಿರುವುದು ರಶ್ಯನ್ ನೀತಿ ಸಮರ್ಥಕ ಸರಕಾರ. ಉತ್ತರ ಕೊರಿಯಾ ಮತ್ತು ಉತ್ತರ ವಿಯತನಾಮಗಳು ಚೀನಾದ ಸಂಕ್ಷಿಪ್ತ ಸಂಸ್ಕರಣಗಳು. ೧೯೧೦ರಿಂದ ಕೊರಿಯಾವು ಜಪಾನದ ವಸಾಹತಾಗಿತ್ತು. ೧೯೪೫ರಿಂದ ಅದು ಅದರ ಮುಷ್ಟಿಯಿಂದ ಬಿಡುಗಡೆ ಹೊಂದಿತು ನಿಜ; ಆದರೆ ಎರಡು ಭಾಗಗಳಾಗಿಯೂ ಒಡೆಯಿತು. ೩೮ನೆ ಅಕ್ಷಾಂಶ ರೇಖೆಯ ಉತ್ತರದ ಭಾಗವು ರಶ್ಯದ ಅಧೀನಕ್ಕೆ, ದಕ್ಷಿಣವು ಅಮೆರಿಕೆಯ ತೋಪುಗಳ ನೆರಳಿನಲ್ಲಿ ಸಿಗ್ಮನ್ ರೀಯವರ ನಾಮಮಾತ್ರ ಪ್ರಜಾತಂತ್ರ ಸರಕಾರದಡಿಗೆ ಬಂದುವು.

ಚಂದ್ರಗ್ರಹ ಯಾತ್ರಾ ವಿಧಾನವನ್ನು ಅಮೆರಿಕೆಯ ಕೇಪ್ ಕೆನೆವರಲ್ ವಾರ್ತಾಧಿಕಾರಿ ಜಾಕ್ ಕಿಂಗರು ನೈಜೀರಿಯಾ, ಜಪಾನ್, ಭಾರತದ ಪತ್ರಿಕಾ ಪ್ರತಿನಿಧಿಗಳಿಗೆ ವಿವರಿಸುತ್ತಿರುವುದು.

೧೯೫೦ರಲ್ಲಿ ಅಮೆರಿಕೆ—ರಶ್ಯಗಳ ಪ್ರಚ್ಛನ್ನ ಸಮರವು ವಿಕಟರೂಪವಾಂತಾಗ ಉತ್ತರ ಕೊರಿಯಾದ ಸಾಮ್ಯವಾದಿ ಸೇನೆಗಳು ದಕ್ಷಿಣದ ಮೇಲೆ ಲಗ್ಗೆಯೇರಿದುವು ಅಮೆರಿಕನ್ ನಾಯಕತ್ವದಲ್ಲಿ ವಿಶ್ವಸಂಸ್ಥೆಯ ೧೬ ರಾಷ್ಟ್ರಗಳು ಅವನ್ನು ಎದುರಿಸಿದುವು, ಅಮೆರಿಕನ್ ಸೇನೆಗಳು ೩೮ನೆಯ ಅಕ್ಷಾಂಶ ರೇಖೆಯನ್ನು ದಾಟಿ ಯಾಲೂ ನದೀತಟದಲ್ಲಿ ವಿಶ್ರಮಿಸಿದುವು. ಚೀನವು ಸಮರಾಕರದಲ್ಲಿ ನೆಗೆಯಿತು; ವಿಶ್ವಸಂಗ್ರಾಮವು ಸಿಡಿಯುವ ಅವಕಾಶವೂ ಎದುರು ಬಂತು ಒಂದು ವರ್ಷದ ವರೆಗೆ ಕತ್ತಿಗಳು ಚಕಮಕಿಸಿದುವು. ಮತ್ತೆರಡು ವರ್ಷಗಳ ವರೆಗೆ ಶಾಂತಿಯ ಹೆಸರಿನಲ್ಲಿ ವಾಗ್ಯುದ್ಧಗಳು ನಡೆದುವು. ಕೊನೆಯಲ್ಲಿ ೩೮ನೆಯ ಅಕ್ಷಾಂಶ ರೇಖೆಯನ್ನೇ ಉತ್ತರ ದಕ್ಷಿಣ ಕೊರಿಯಾಗಳ ಸೀಮಾರೇಖೆಯೆಂದು ಮನ್ನಿಸಲಾಯ್ತು, ಇದರ ಇಕ್ಕಡೆಗಳಲ್ಲಿ ಮರಳಿ ನಿರಂಕುಶಾಡಳಿತೆ ತಾಂಡವವಾಡತೊಡಗಿತು. ಹೇಗೆ ಹೇಗೋ ದಕ್ಷಿಣಕೊರಿಯಾವು ಸಿಗ್ಮನ್ ರೀಯವರಿಂದ ಮುಕ್ತವಾಯಿತು. ಆದರೆ, ಆಗಲೂ ಸೇನೆಯ ಬಂದೂಕು ಪ್ರಜೆಗಳನ್ನು ಕಂಗೆಡಿಸುತಿತ್ತು

ವಿಯತನಾಮದ ಇತಿಹಾಸವಾದರೂ ಇದಕ್ಕಿಂತ ಬೇರೆಯಲ್ಲ ದ್ವಿತೀಯ ಜಾಗತಿಕ ಯುದ್ಧಕ್ಕೆ ಮೊದಲು ಇಡಿಯ ಇಂಡೋಚೀನವು ಫ್ರಾನ್ಸದ ಕೈಗಳಲ್ಲಿತ್ತು. ಯುದ್ಧಕಾಲದ ಅದು ಜಪಾನದ ಕೈವಶವಾಯಿತು. ಜಪಾನೀಯರು ಹಿಂಜರಿದೊಡನೆಯೇ ಮರಳಿ ಕಾಲೂರಿದರು ಫ್ರೆಂಚರು. ಆದರೆ, ಜನತೆಯಿದನ್ನು ವಿರೋಧಿಸಿತು. ಉತ್ತರದಲ್ಲಿ ಸಾಮ್ಯವಾದಿಗಳು ಈ ಗುಂಪಿನ ನಾಯಕರಾಗಿದ್ದರು ಚೀನಾವು ಇವರಿಗೆ ಸಹಾಯ ಮಾಡುತ್ತಲಿತ್ತು ಫ್ರಾನ್ಸ್ ಅಮೆರಿಕೆಯ ನೆರವು ಪಡೆದಿತ್ತು. ಸ್ಥಳೀಯ ಜನರ ಅಸಹಕಾರದಿಂದಾಗಿ ಸಾಕಷ್ಟು ರಕ್ತಪಾತ ನಡೆದ ಬಳಿಕ ಫ್ರಾನ್ಸ್ ಅಪಮಾನಿತವಾಯಿತು. ೧೯೫೪ರ ಜಿನೇವಾ ಸಮ್ಮೇಳನಾನಂತರ ಕಂಬೋಡಿಯಾ ಮತ್ತು ಲಾವೋಸ್‌ಗಳು ಸ್ವತಂತ್ರಗೊಂಡವು ವಿಯತನಾಮವು ವಿಭಜಿತವಾಯಿತು. ಉತ್ತರ ವಿಯತನಾಮವು ವಿಭಜಿತವಾಯಿತು ಉತ್ತರ ವಿಯತನಾಮದಲ್ಲಿ ಡಾ| ಹೋ ಚಿ ಮಿನ್ನರ ನೇತೃತ್ವದಲ್ಲಿ ಸಾಮ್ಯವಾದೀ ಸರಕಾರವು ನಿರ್ಮಾಣಗೊಂಡಿತು. ದಕ್ಷಿಣದಲ್ಲಿ ರೋಮನ್ ಕೆಥೋಲಿಕ್ ರಾಷ್ಟ್ರಪತಿ ಎನಗೋ ಡಿಎಮರ ಸರಕಾರವು ಅಮೆರಿಕನ್ ಡಾಲರ್ ಮತ್ತು ಬಂದೂಕುಗಳ ಬಲದಿಂದ ಸ್ಥಿರದಿಂದಿರತೊಡಗಿತು. ಹೇಳುವುದಕ್ಕಿದು ಜನತಂತ್ರವಾಗಿತ್ತು, ಆದರೆ, ಧರ್ಮ ಸ್ವಾತಂತ್ರ್ಯವಾದರೂ ಎಲ್ಲಿರಲಿಲ್ಲ. ಸತ್ಯ ಹೇಳುವುದಾದರೆ, ಅಲ್ಲಿ ಸರ್ವಾಧಿಕಾರಿತನವು ನಗ್ನ ನೃತ್ಯವಾಡುತಿತ್ತು.

ಲಾವೋಸಿನಲ್ಲಿ ನೈಧಾನಿಕ ರಾಜತಂತ್ರವಿದೆ. ರಾಜಕುಮಾರ ಸುವರ್ಣ ಫೂಮಾರವರು ಸಾಮ್ಯವಾದಿ ಪಾಥೇಟ್ ಲಾವೋ ಮತ್ತು ಅಮೆರಿಕನ್ ಸಮರ್ಥಿತ ಪ್ರಜಾತಂತ್ರವಾದಿಗಳ ನಡುವೆ ಹೊಂದಾಣಿಸಿಕೊಂಡು ಹೇಗಾದರೂ ರಾಜತಂತ್ರ ನಿರ್ವಹಿಸುವ ಪ್ರಯತ್ನ ಮಾಡುತಿದ್ದಾರೆ. ಕಂಬೋಡಿಯಾದಲ್ಲಿ ರಾಜಕುಮಾರ ನರೋಮೆಯ ಸಿಂಹಾನುಕರ ಅಧ್ಯಕ್ಷತೆಯಲ್ಲಿ ಪ್ರಜಾತಂತ್ರದ ಪರಿಶೀಲನೆ ನಡೆಯುತ್ತಿದೆ. ಆದರೆ, ಚೀನಾದ ಮರ್ಜಿಯನ್ನೇ ಈ ಎರಡೂ ದೇಶಗಳು ಬಹುಮಟ್ಟಿಗೆ ಹೊಂದಿಕೊಂಡಿವೆ.

ಇದಿಷ್ಟು ಪೂರ್ವ ಏಶ್ಯಾದ ಮಾತಾಯಿತು. ಇನ್ನು ವಿಶಾಲ ಹಿಂದೂ ಸಾಗರದ ದ್ವೀಪಗಳಲ್ಲಿ ಹರಡಿರುವ ಸಾಮ್ರಾಜ್ಯಗಳ ಬಗೆಗೆ ಪರ್ಯಾಲೋಚಿಸಬಹುದು. ಮುಂದಿನ ವಾರ ತಿಳಿದ ಕೊಳ್ಳೋಣ.

(ಕ್ರಮಶಃ)



ಸರಕಾರಗಳೆರಡರ ಸಾಮ್ಯಾಂತರ

(೩ನೇ ಪುಟದಿಂದ)

ಕವೆಂದು ಕರೆಯುತ್ತಾರಾದರೂ ವರಸಾಕೊಂ ಎಂದು ಉಚ್ಚರಿಸುತ್ತಾರೆ. ನಾವು ಕೂಡಾ ವರ ನಗರವೆಂದೇ ಬರೆಯಲಾರಂಭಿಸಿದಲ್ಲಿ ಅಲ್ಲಿಯ ಜನರಲ್ಲಿ ಅನ್ಯೋನ್ಯತಾ ಆನಂದದ ಕಂಪನ ಉಂಟಾದೀತು.

ಮೂಲದಲ್ಲಿ ಲಾಪೋರ್‌ನ್ನು ಲವವೆಂದೇ ಬರೆಯಲಾಗಿರುತ್ತದೆ. ಶಾಯಿಲೇಂಡಿನ ಉತ್ತರದಲ್ಲಿ ಲವಪುರಿ ಎಂಬ ಖ್ಯಾತ ಐತಿಹಾಸಿಕ ಪಟ್ಟಣವಿದೆ. ಅದನ್ನು ಆಂಗ್ಲೇಯ ಭಾಷೆಯಲ್ಲಿ ಲೋವಪುರಿ ಎಂದು ಬರೆಯಲಾಗಿರುತ್ತದೆ ಅಯೋಧ್ಯೆಯ ಜ್ಞಾಪಕ ಇಲ್ಲಿ ಬರುತ್ತದೆ. ಅಯೋಧ್ಯೆ, ಲವಪುರಿ ಮತ್ತು ಪ್ರದೇಶಲವ .ಇವೆಲ್ಲವೂ ನಮ್ಮ ಆಕ್ಕೆ ಸಾಕ್ಷಿಯ ಕೇಂದ್ರದಲ್ಲಿ ಸ್ಥಾನವನ್ನು ಪಡೆಯುತ್ತವೆ.

ಮಂಚೂರಿಯವು ಐರೋಪ್ಯ ನಾಮಧೇಯವಿದೆ. ಚೈನೀಯರದನ್ನು ಮಂಜು ಎಂದು ಕರೆಯುತ್ತಾರೆ ಅಲ್ಲಿಯ ಭಾಷೆಯ ಹೆಸರೂ ಮಂಜು ಅವರು ಕೂಡಾ ಅದೇ ಪದವನ್ನುಪಯೋಗಿಸುತ್ತಾರೆ ಅವರು ಮಂಜುಪ್ರೀಯ ಆರಾಧಕರಿದ್ದಾರೆ ನಾವು ಕೂಡಾ ಆ ಪ್ರದೇಶವನ್ನು ಮಂಜುದೇಶವೆಂದೂ ಅಲ್ಲಿಯ ಜನರನ್ನು ಮಂಜುಗಳೆಂದು ಕರೆದಲ್ಲಿ ಚೆನ್ನಾಗಿರುತ್ತದ.

ಆಂಗ್ಲೇಯ ಭಾಷೆಯಲ್ಲಿರುವ ಇತ್ತೀಚೆಗಿನ ಭೂಗೋಲ ಪುಸ್ತಕಗಳ ಮೂಲಕ ಸೈಬಿರಿಯಾವು ನಮಗೆ ಪರಿಚಿತವಾಗಿರುತ್ತದೆ ಇದು ಬಹಳ ವಿಶಾಲ ಪ್ರದೇಶವಿದ. ಉರಾಲ್ ಪರ್ವತಾವಳಿಯಿಂದ ಆಲಸ್ಕಾದ ವರೆಗೆ ವಿಸ್ತಾರವಾಗಿದೆ ಆಂಗ್ಲೇಯರು ಹಾಗೂ ಅಮೇರಿಕನರು ಹೆಚ್ಚಾಗಿ ಸೈಬಿರಿಯಾ ಪದವನ್ನುಪಯೋಗಿಸುತ್ತಾರೆ. ಅದನ್ನು ರಷ್ಯನರು ಸಂಘಂರಣವಾಗಿ ಸಿಬಿರವೆಂದೇ ಕರೆಯುತ್ತಾರೆ ಅಲ್ಲಿ ವಾಸಿಸುವ ಜನರು, ಅದರಲ್ಲೂ ಮಂಗೋಲರು ಅದನ್ನು ಶಿಬಿರ ಎಂದೇ ಬರೆಯುತ್ತಾರಲ್ಲದೆ ಉಚ್ಚರಿಸುವದೂ ಹಾಗೆಯೇ ಅಲ್ಲಿಯ ನಿವಾಸಿಗಳು ಸಂಚಾರಿಗಳಿದ್ದಾರೆ. ಅಲ್ಲಿ ವಾಸಿಸುವುದು ಶಿಬಿರಗಳಲ್ಲಿ (ಡೇರೆಗಳಲ್ಲಿ) ನಮಗೆ ಕೂಡಾ ಅದೇ ಪದವನ್ನು ಬರಹ ಹಾಗೂ ಮಾತಿನಲ್ಲಿ ಪುನರುಪಯೋಗಿಸಿಕೊಳ್ಳಲು ಸಾಧ್ಯವೇ ಇಲ್ಲವೇನು?

ಮಧ್ಯ ಏಶ್ಯದಲ್ಲೂ ಇಂತಹ ಹೆಸರುಗಳ ಪರಿಚಯ ಮಾಡಿಕೊಳ್ಳಬಹುದು ಅಲ್ಲಿ ಸ್ವಿತ್ ನದಿವೆ ಇದೆ ನಿಜವಾಗಿ ಅದು ಸುವಾಸ್ತು ಆಗಿರಬೇಕು ಗೋಮಾಲ್ ನದಿ ಎಂದಿಗೆ ಅದು ನಿಜವಾಗಿ ಗೋಮತಿಯಾಗಿರಬೇಕು, ಕಾಬೂಲ್ ನದಿ ಇದೆ. ಅದು ಪ್ರಾಚೀನ ಸೀತಾ ನದಿಯೇ ಇದೆ.

ಭೂಪಟದಲ್ಲಿ ಓಕ್ಸಸ್ ಎಂಬ ಹೆಸರಿದೆ ಅದನ್ನು ಗ್ರೀಕರೇ ವೊಕಸ್ ಎಂದುಚ್ಚರಿಸುತ್ತಾರೆ ಅದನ್ನು ಪ್ರಾಕೃತ ವಾಕುವಿನಿಂದ ತೆಗೆದುಕೊಳ್ಳಲಾಗಿರುತ್ತದೆ

ಏಶ್ಯದಲ್ಲಿ ಅಲ್ಲಿಯ ಜನರಿಗೂ ಭಾರತೀಯರಿಗೂ ನಡುವೆ ಇದ್ದ ಐತಿಹಾಸಿಕ ಸಂಬಂದವನ್ನು ಜ್ಞಾಪಿಸಿಕೊಳ್ಳುತ್ತ ಅಲ್ಲಿ ಸತ್ತಾಡುತ್ತಿದ್ದಲ್ಲಿ, ಪರ್ವತ ಹಾಗೂ ಸಾಗರಗಳಾಚೆ ಇರುವ ಆ ಪ್ರದೇಶದ ಪ್ರಜೆಗಳೊಂದಿಗೆ ಸ್ನೇಹ ಮತ್ತು ಪ್ರೀತಿಯ ಹೊಸ ಸಂಬಂದ ಬೆಳೆದೀತು ಉಜ್ಬೆಕಿಸ್ಥಾನದ ರಾಜಧಾನಿ ತಾಶ್ಕಂಡ ಅಥವಾ ತಾಶ್ಕಂಡವನ್ನು ಜ್ಞಾಪಿಸಿಕೊಂಡಲ್ಲಿ ನಮಗೆ ಒಡನೆ ಪಾಣಿನಿ ಕಣ್ಮುಂದೆ ಬರುತ್ತಾನೆ ಅವನು ಅದನ್ನು ದಾಕ್ಷಿಕಂಥವೆಂದು ಹೆಸರಿಸಿರುವನು, ಹಾಗೆಯೇ ಯಾರ್ಕಂಡವನ್ನು ಆಷ್ವರಕಂಧವೆಂದೂ ಬರೆದಿರುವನು, ತಾಶ್ಕಂಡ, ಯಾರ್ಕಂಡ ಹಾಗೂ ಉತ್ತರ ಮತ್ತು ಪಶ್ಚಿಮ ವಲಯಗಳು ಸಂಸ್ಕೃತಿ, ಕಲಾಚಾರ ಹಾಗೂ ವ್ಯಾಪಾರ ವಹಿವಾಟಿನ ಕೇಂದ್ರ ಸ್ಥಳಗಳಾಗಿದ್ದುವು. ಈ ಪ್ರದೇಶಗಳಲ್ಲೇ ಹಲವಾರು ಸಂಸ್ಕೃತ ಕೃತಿಗಳು ಬೆಳಕು ಕಂಡು ಪ್ರಸಾರವಾಗಿರುತ್ತವೆ ಭೂಮಿಯ ಯಾವ ಭಾಗದಲ್ಲೇ ಆಗಲಿ, ಒಂದಿಷ್ಟು ಅಗೆದಲ್ಲಿ ನಮಗೆ ಅಲ್ಲಿ ಭಾರತೀಯ ದೇಗುಲ, ವಿಗ್ರಹ ಹಾಗೂ ಸಾಹಿತ್ಯಗಳು ಚಿಕ್ಕ ಪ್ರಮಾಣದಲ್ಲೇ ಆಗಲಿ ಅದವಾ ಭಿನ್ನ ಭಿನ್ನ ರೂಪದಲ್ಲೇ ಆಗಲಿ ಗೋಚರವಾಗದಿರದು

ಅದೆಲ್ಲಾದರೂ ಚೈನಿ ಹೆಸರು ಇದ್ದಲ್ಲಿ ಚೈನೀಯರು ಅದನ್ನೇ ಚೆನ್ನಾಗಿ ಉಪಯೋಗಿಸುತ್ತಾರೆ? ಯುರೋಪಿಯನರು ಕೂಡಾ ಹಾಗೆಯೇ. ನಮ್ಮ ಗಡಿಯಲ್ಲೇ ಇರುವ ಒಂದು ಊರನ್ನು ಗ್ರೀಕ್ ರೂಪವಾಗಿರುವ ತಕ್ಸಿಲಾ ಎಂಬ ಹೆಸರಿನಿಂದಲೇ ಯುರೋಪಿಯನರು ಕರೆಯುತ್ತಾರಲ್ಲದೆ ಭಾರತೀಯ ರೂಪವಿರುವ ತಕ್ಷಶಿಲಾ ಎಂಬ ಹೆಸರನ್ನುಪಯೋಗಿಸಿ ಕರೆಯುವದಿಲ್ಲ. ಪರ್ಷಿಯಾದಲ್ಲಿ ಅವರು ಶಿರಜ್ ಎಂಬ ಪದವನ್ನುಪಯೋಗಿಸುತ್ತಾರಲ್ಲದೆ ಪ್ರಾಚೀನ ಪರ್ಷಿಯಾದ ಅಥವಾ ಭಾರತೀಯ ಶಬ್ದ ಕುರು ಎಂಬುದನ್ನುಪಯೋಗಿಸುವದೇ ಇಲ್ಲ

ಒಂದು ರೀತಿಯಲ್ಲಿ ಅದು ಸ್ವಾಭಾವಿಕವೇ ಇದೆ. ಇದೇ ರೀತಿಯಲ್ಲಿ ನಮ್ಮ ಚರಿತ್ರೆಯಲ್ಲಿ ದೊರಕುವ ಹೆಸರುಗಳನ್ನು ನಾವು ಉಪಯೋಗಿಸಿಕೊಳ್ಳಬೇಕಾಗಿರುವದು ಸಹಜವೇ ಇದೆ ಆದರೆ ಅಲ್ಲಿ ಅಡ್ಡ ಗೋಡೆ ಒಂದು ಇದೆ. ಕಳೆದ ಶತಮಾನದಲ್ಲಿ ನಾವು ಗುಲಾಮರಂತೆ ಇದ್ದುದರಿಂದ ಅದು ಸಾಧ್ಯವಾಗಿರಲಿಲ್ಲ ಈಗಲಾದರೋ ಅದೇ ಗುಲಾಮ ಪದ್ಧತಿಯಲ್ಲಿ ಬೆಳೆದು ಬಂದಿರುವ ಪ್ರತಿಭಾವಂತರಿಗೋ ಆ ಹಳೆಯ ಅಥವಾ ಸನಾತನ ಸಂಪ್ರದಾಯದತ್ತ ಸರಿಯಲು ಒಪ್ಪದಿರುವದಲ್ಲ. ಅವರಿಗೆ ಪ್ರಾಚೀನ ವೈಭವಪೂರ್ಣ ಭವ್ಯ ಭಾರತದ ಚಾರಿತ್ರಿಕ ಸ್ಥಳಗಳು ಕೇವಲ ಪ್ರಾಚೀನ ವಸ್ತು ಪ್ರದರ್ಶನಾಲಯದ ಕೇಂದ್ರಗಳಾಗಿ ಬಿಟ್ಟವೆ.

ಹೊರದೇಶಗಳ ಸಂಪರ್ಕವನ್ನು ನಾವೆಂದೆಂದೂ ಕಡಿದುಕೊಂಡದ್ದೆಂಬುದೇ ಇಲ್ಲ ಇತ್ತೀಚಿಗ ಸಂಘಂರಣ ಹತ್ತು ಶತಮಾನಗಳಿಂದ ಈ ದುಃಸ್ಥಿತಿ ಬಂದೊದಗಿರುತ್ತದೆ ಐರೋಪ್ಯರು ಸಾಗರದ ಮೇಲಣ ಪ್ರಭುತ್ವವನ್ನು ಗಟ್ಟಿಸಿಕೊಂಡಂದಿನಿಂದ ಈ ಸಂಪರ್ಕಕ್ಕೆ ಧಕ್ಕೆ ಬಂದೊದಗಿರುತ್ತ ಅದರಲ್ಲೂ ಹತ್ತೊಂಭತ್ತನೇ ಶತಮಾನದ ನಂತರವಂತೂ ಪರಿಸ್ಥಿತಿ ಶೋಚನೀಯವಾಗಿ ಹದಗೆಟ್ಟಿರುತ್ತದೆ

ಆಗೋಸ್ಟ್ ಹದಿನೈದು ೧೯೪೭ರ ನಂತರ ನಾವು ಪುನಃ ಆ ಪಥದಲ್ಲಿ ಸಿಂಹಾವಲೋಕನ ಮಾಡಬೇಕಾಗಿತ್ತು ಇದೀಗ ರಾಜಕೀಯ ಹಾಗೂ ಆರ್ಥಿಕ ಸಂಬಂಧಕ್ಕಾಗಿ ಪ್ರಯತ್ನಿಸಲಾಗುತ್ತದೆ ಐತಿಹಾಸಿಕ ಸ್ಮರಣೆಯೂ ಈ ಸಂಬಂಧವನ್ನು ಇನ್ನಷ್ಟು ವೃದ್ಧಿಗೊಳಿಸುತ್ತದೆ ಶತಮಾನದ ಪ್ರಯತ್ನದ ದಾರಿಯನ್ನು ಸುಗಮಗೊಳಿಸುತ್ತದೆ

ತಮ್ಮತನವನ್ನು ಸೂಚಿಸುವ ಹೆಸರಿನಿಂದ ಅನ್ಯದೇಶಗಳನ್ನು ಕರೆಯಲು ಭಾರತ ಹಿಂಜರಿಯುತ್ತಿರುವದಕ್ಕೆ ಸರಿಯಾಗಿ ವಿರುದ್ಧವಾಗಿ ಇತರ ರಾಷ್ಟ್ರಗಳನ್ನೂ ರಾಷ್ಟ್ರೀಯರನ್ನೂ ತಮ್ಮ ಹೆಸರಿನಿಂದ ಕರೆಯುವುದರಲ್ಲಿ ಚೈನಾ ಉತ್ಸಾಹ ತೋರಿಸುತ್ತದೆ. ಅಂದರೆ ಹುತಾತ್ಮ ಡಾ| ರಘುವೀರ ತಿಳಿಸಿರುವಂತೆ ಚೈನಾವು ಹೆಸರು ಸಿಕ್ಕಿದಲ್ಲಿ ಮಾತ್ರ ಚೈನಿ ಹೆಸರಿನಿಂದ ಕರೆಯುವುದಲ್ಲ, ಚೈನಿ ಹೆಸರನ್ನಿಟ್ಟು ಕರೆಯುವಷ್ಟು ಪ್ರಗತಿಯನ್ನು ಸಾಧಿಸಿರುತ್ತದೆ ಅದು ನೇಪಾಲದೊಂದಿಗೆ ಹಿಮಾಲಯದ ಕುರಿತು ತಕರಾರು ಮಾಡುತ್ತಿತ್ತು. ಗೌರಿಶಂಕರ ಶಿಖರದ ಉತ್ತರ ಭಾಗವನ್ನು ಮೌಂಟ್ ಟುಂಗಿ ಶಿಖರವೆಂದು ಕರೆಯುವ ಯೋಜನೆಯಲ್ಲಿ ಚೈನಾ ಇದೆಯೆಂಬ ಸಮಾಚಾರ ಪತ್ರಿಕೆಗಳಲ್ಲಿ ಪ್ರಕಟವಾಗಿರುತ್ತದೆ ಭಾರತದ ಅನೇಕ ಸ್ಥಳಗಳನ್ನು ಚೈನಿ ಹೆಸರಿನಿಂದ ಗುರುತಿಸಿಕೊಂಡಿರುವದನ್ನು ಯಾರೂ ಇಷ್ಟು ಬೇಗನೆ ಮರೆಯಲಿಕ್ಕಿಲ್ಲ.

ಇದು ಭೂಪ್ರದೇಶದ ವಿಷಯವಾದಲ್ಲಿ ಜನರ ವಿಷಯದಲ್ಲಿ ಹಾಗೆಯೇ ಇದೆ. ತ್ರಿವಿಷ್ಟಪದಲ್ಲಿ ಹುಟ್ಟಿದ ಮಕ್ಕಳಿಗೆ ಅವುಗಳ ತಾಯಿ ತಂದೆಯರು ನಾಮಕರಣ ಮಾಡುವಂತಿಲ್ಲ ಅದನ್ನು ಚೈನಿ ಕಮ್ಯೂನಿಸ್ಟ್ ಶಾಸಕ ತಂಡ ಮುಗಿಸಿ ಬಿಡುತ್ತದೆ. ಇದೀಗ ಈ ಪ್ರಯೋಗವನ್ನು ಭಾರತೀಯರ ಮೇಲೂ ನಡೆಸಲು ಕಮ್ಯೂನಿಸ್ಟರು ಆರಂಭಿಸಿದ್ದಾರೆ ಅಲ್ಲಿರುವ ಭಾರತೀಯರಿಗೆ ಬಲಾತ್ಕಾರವಾಗಿ ಚೈನಿ ಹೆಸರುಗಳನ್ನಿಡಲಾಗಿರುತ್ತದೆ ಡಾ| ಕೋಟ್ನಿಸ್‌ರಂತೆ ಇವರು ಸಂತೋಷದಿಂದ ಡಾ| ಕೊ ಟಿ ಹೊ ಎಂಬಿತ್ಯಾದಿ ಹೆಸರುಗಳನ್ನಿಟ್ಟುಕೊಂಡಿರದಿದ್ದಲ್ಲಿ ಹೊರ ಜಗತ್ತಿಗೆ ಇವರು ಸ್ವಸಂತೋಷದಿಂದ ಚೈನಿ ಹೆಸರುಗಳನ್ನಿಟ್ಟುಕೊಂಡಿದ್ದಾರೆಂದು, ಭಾರತದಲ್ಲಿ ಚೈನಿಯರಿಗೆ ಹಿಂಸೆ ಕೊಡಲಾಗುತ್ತಿದೆಂದೂ ಅವರು ಅಪಪ್ರಚಾರ ಅವ್ಯಾಹತವಾಗಿ ನಡೆಸುತ್ತಿದ್ದಾರೆ. ಇತ್ತೀಚೆಗೆ ಅವರು ಒಂದು ಕಥೆಯನ್ನು ಪಿಕಿಂಗ್ ಆಕಾಶವಾಣಿಯ ಮೂಲಕ ಹಬ್ಬಿಸಿರುವರು—ಒಬ್ಬ ಭಾರತೀಯನು ಸ್ವ-ಸಂತೋಷದಿಂದ ಹೊ ಟ ಆಪೊಶೆಂಗ್ ಎಂಬ ಹೆಸರನ್ನಿಟ್ಟುಕೊಂಡಿದ್ದನು ಒಮ್ಮೆ ಅವನಿಗೆ ಜಾಡ್ಯ ಬಂದು ಅವನು ಆಸ್ಪತ್ರೆ ಸೇರಿದನು. ವೈದ್ಯಕೀಯ ಖರ್ಚು ಎಂಭತ್ತು ಯೋನ್‌ಗಳನ್ನು ಸಲ್ಲಿಸಲು ಅವನ ಬಳಿ ಹಣವಿರಲಿಲ್ಲ ಆಗ ಚೈನಿ ಕಾರ್ಮಿಕರು ಆ ಹಣವನ್ನು ಸಲ್ಲಿಸಿದರಂತೆ!

ಇದು ಕಮ್ಯೂನಿಸ್ಟ್ ಚೈನಾದೊಳಗೆ ನಡೆಯುವ ಕರುಣಾಜನಕ ಕಥೆಯಾಗಿದ್ದಲ್ಲಿ ಈ ಚೈನಿ ಕಮ್ಯೂನಿಸ್ಟರು ಅನೇಕ ವೇಷಗಳಲ್ಲಿ ಹಲವಾರು ಪರ ರಾಷ್ಟ್ರಗಳಲ್ಲಿ ಹೋಗಿ ನೆಲೆಸಲಾರಂಭಿಸಿರುವರು. ಅಲ್ಲಿಗೆ ಹೋಗಿ ಇಸ್ಲಾಂ ಮತಕ್ಕೆ ಪರಿವರ್ತನೆಯಾದ ನಾಟಕವನ್ನಾಡಿ ಆ ಊರಿ ಬಲವಾಗಿ ನಿಲ್ಲಲು ಹವಣಿಸುತ್ತಿದ್ದಾರೆ ಅವರ ಪಿತಾಮಹ ಚೆಂಗೀಸಖಾನ ಆಡಿದ್ದ ನಾಟಕವನ್ನೇ ಅವರೂ ಆಡುತ್ತಿದ್ದಾರೆ

ಈ ಕೆಲ ಉದಾಹರಣೆಗಳಿಂದ ಭಾರತ ಸರಕಾರದ ಧೋರಣೆಗೂ ಕಮ್ಯೂನಿಸ್ಟ್ ಚೈನಾದ ಕೃತಿಗೂ ಇರುವ ಅಂತರ ಸ್ಪಷ್ಟವಾಗಿ ತಿಳಿಯುತ್ತದೆ

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಿಗಳು,
ಫಾರ್ಮುಗಳು
ದೊರೆಯುತ್ತವೆ
ನವಯುಗ ಪ್ರೆಸ್, ಉಡುಪಿ



'NAVAYUGA' WEEKLY

is in the list of periodicals and Newspapers approved for use in Secondary Schools as per proceedings Roc No. 466 N/50 dated 2—12—1950 of the Director of Public Instruction Madras

ಆದರ್ಶ ಚರಿತೆಗಳು-೫

ಸ್ವಾಮಿ ಯೋಗಾನಂದ

ಎಸ್. ಎಂ. ಶೆಟ್ಟಿ ಶಿವಮುಂಜೆ ಪರಾರಿ

ಪರಮಹಂಸ ಯೋಗಾನಂದರು ಗೋರಖಪುರದ ಒಂದು ಬಂಗಾಲೀ ಕುಟುಂಬದಲ್ಲಿ ಜನ್ಮ ತಳೆದರು ಇವರ ತಂದೆ ಬಾಬೂ ಭಗವತೀ ಚರಣ ಘೋಷ್ ಅವರು ಒಬ್ಬ ಸತ್ಯನಿಷ್ಠ ನ್ಯಾಯಪ್ರಿಯ ವ್ಯಕ್ತಿಯಾಗಿದ್ದರು ರಾಮಾಯಣ ಮಹಾಭಾರತಗಳಲ್ಲಿ ಅತಿಶಯ ಶ್ರದ್ಧೆಯಿದ್ದ ಇವರ ತಾಯಿಯು ತುಂಬಾ ಉದಾರ ಪ್ರಕೃತಿಯವರೂ ಆಗಿದ್ದರು. ಬಂಗಾಳದ ಸುಪ್ರಸಿದ್ಧ ಸಂತರಾದ 'ಸಂತ ಲಿಹಾಡಿ'ಯವರು ಭಗವತೀ ಚರಣರ ಗುರುಗಳಾಗಿದ್ದರು. ಯೋಗಾನಂದರ ತಾಯಿಯೂ ಅವರ ಶಿಷ್ಯೆಯಾಗಿದ್ದರು, ಅಲ್ಲದೆ ಸತಿಪತಿಯರಿಬ್ಬರೂ ಯೋಗಾನಂದರಿಗಾಗಿ ಅವರಿಂದ ಆಶೀರ್ವಾದವನ್ನು ಪಡೆದಿದ್ದರು

ಕೆಲವು ದಿನಗಳ ನಂತರ ಭಗವತೀ ಚರಣರಿಗೆ ಲಾಹೋರಿಗೆ ವರ್ಗವಾಯ್ತು. ಲಾಹೋರಿನಲ್ಲಿ ಅವರು ಇರುವಾಗ ಒಬ ಸಾಧು ಆಗಮಿಸಿ ಯೋಗಾನಂದರ ತಾಯಿಯವರಿಗೆ, ನಾಳೆ ನೀನು ಪೂಜೆ ಮಾಡುವಾಗ ನಿನ್ನ ಕೈಗೊಂದು ಯಂತ್ರ ಸಿಗುವುದು ಅದನ್ನು ನಿನ್ನ ಬಳಿ ಜೋಪಾನವಾಗಿಟ್ಟುಕೊಂಡು, ಮರಣೋನ್ಮುಖಳಾದಾಗ ದೊಡ್ಡ ಮಗನ ಕೈಯಲ್ಲಿ ಇಟ್ಟು ನೀನು ಸತ್ತ ಒಂದು ವರ್ಷದ ಬಳಿಕ ಯೋಗಾನಂದನಿಗೆ ಕೊಡುವಂತೆ ತಿಳಿಸು ಎಂದಿದ್ದನಂತೆ. ಯೋಗಾನಂದನ ಬಳಿಯಲ್ಲಿದ್ದ ಕೆಲಕಾಲದ ನಂತರ ಆ ತಾಯಿತವು ಲುಪ್ತವಾಗುವುದು ಎಂದು ಅವನು ಸೂಚಿಸಿದ್ದನಂತೆ ಆ ಬಳಿಕ ಸಾಧು ಅಂದಂತೆಯೇ ಎಲ್ಲಾ ಘಟನೆಗಳೂ ಘಟಿಸಿದವು ಆ ತಾಯಿತವು ತಾಯಿಯ ಮರಣಾನಂತರ ಯೋಗಾನಂದರ ಕೈಸೇರುತ್ತಲೇ ಹಲವಾರು ಯೋಗಸಿದ್ಧಿಗಳು ಅವರ ಕೈವಶವಾದುವಂತೆ ಇವರ ಜನನ ಕಾಲದಿಂದಲೇ ಅಂತರಿಕ್ಷಸ್ಥಿತ ಯೋಗಿ ಮಹಾತ್ಮರು ಇವರ ಜೀವನ ರಥದ ಸಂಚಾಲನೆಗೈಯುತ್ತಿದ್ದರು ಎಂಬುದು ಇದರಿಂದ ತಿಳಿಯುವಂತಿದೆ.

ಉಪರೋಕ್ತ ತಾಯಿತವು ಲುಪ್ತವಾಗುತ್ತಲೇ ಇವರ ಆಧ್ಯಾತ್ಮಿಕ ಗುರು ಶ್ರೀ ಯುಕ್ತೇಶ್ವರಾನಂದರು ಒಂದು ದಿನ ಕಾಶಿಯ ಮಾರ್ಗದಲ್ಲಿ ಸಿಕ್ಕಿದರು ಹಾಗೂ ಅವರನ್ನು ಕಲಕತ್ತೆಯ ಹತ್ತಿರವಿರುವ ಶ್ರೀರಾಮಪುರದಲ್ಲಿಯ ತನ್ನ ಆಶ್ರಮದಲ್ಲಿ ಇರಲು ಆಜ್ಞಾಪಿಸಿದರು,

೧೯೧೪ರ ಜುಲಾಯಿ ತಿಂಗಳಲ್ಲಿ ಶ್ರೀ ಯುಕ್ತೇಶ್ವರಾನಂದರು ಇವರಿಗೆ ಸಂನ್ಯಾಸ ದೀಕ್ಷೆಯನ್ನಿತ್ತರು ಕೆಲಸಮಯದ ಬಳಿಕ ಗುರುವಿನ ಆಜ್ಞೆಯಂತೆ ಇವರು ರಾಂಚಿಯಲ್ಲಿ ಒಂದು ಬ್ರಹ್ಮಚರ್ಯ ವಿದ್ಯಾಲಯವನ್ನು ಸ್ಥಾಪಿಸಿ ಯೋಗ್ಯತಾಪೂರ್ವಕವಾಗಿ ಸಂಚಾಲನೆಗೈಯ ತೊಡಗಿದರು. ಈ ವಿದ್ಯಾಲಯವು ಇಂದೂ ನಡೆಯುತ್ತಿದೆಯಲ್ಲದೆ ಒಂದು ಪ್ರಖ್ಯಾತ ಸಂಸ್ಥೆಯಾಗಿದೆ ಈ ಸಂಸ್ಥೆಯಲ್ಲಿ ಆಧುನಿಕ ಪಠ್ಯಕ್ರಮದೊಡನೆ ಯೋಗ್ಯ ಶಿಕ್ಷಣವನ್ನೀಯಲಾಗುತ್ತದೆ

ಇದೇ ವಿದ್ಯಾಲಯದಲ್ಲಿ ಅವರು ಧ್ಯಾನಸ್ಥರಾಗಿದ್ದಾಗ ಅವರಿಗೆ ಅಮೇರಿಕಾಕ್ಕೆ ಹೋಗಲು ಪ್ರೇರಣೆಯಾಯಿತು ೧೯೨೦ನೆಯ ಇಸವಿಯಲ್ಲಿ ಅವರು ಅಮೇರಿಕಕ್ಕೆ ಮೊದಲ ಬಾರಿ ಹೋಗಿ ಸುಮಾರು ೧೫ ವರ್ಷಗಳ ಕಾಲ ಅಲ್ಲಿಯೇ ನೆಲೆನಿಂತರು ಅಮೇರಿಕಾದ ವಿಭಿನ್ನ ಸ್ಥಾನಗಳಲ್ಲಿ ಇವರ ಭಾಷಣಗಳು ನಡೆದುವು. ಜನರು ಇವರ—ಕ್ರಿಯಾಯೋಗದಿಂದ ಪ್ರಭಾವಿತರಾದರು ಅಲ್ಲಿಯೇ ಇವರೊಂದು ಆಶ್ರಮವನ್ನು ತೆರೆದರು ಸನ್ ೧೯೩೫ರಲ್ಲಿ ಇವರು ಭಾರತಕ್ಕೆ ಒಂದು ಒಂದು ವರ್ಷದ ನಂತರ ಪುನಃ ಅಮೇರಿಕಾಕ್ಕೆ ಹಿಂತಿರುಗಿ ಹೋದರು ಈಗ ಅಮೇರಿಕಾದಲ್ಲಿ ಹಲವಾರು ಕಡೆ ಇವರ ಆಶ್ರಮಗಳಿವೆ. ಆಂಗ್ಲ ಭಾಷೆಯಲ್ಲಿ ಈ ಸಂಸ್ಥೆಯು ಒಂದು ಸುಂದರ ಮಾಸಿಕವೂ ಹೊರಡುತ್ತಿದೆ.

೧೯೫೨ನೇ ಇಸವಿಯಲ್ಲಿ ತನ್ನ ೫೯ನೇ ವರ್ಷ ಪ್ರಾಯದಲ್ಲಿ ಶ್ರೀ ಯೋಗಾನಂದರು ಅಮೇರಿಕಾದಲ್ಲಿಯೇ ನಿರ್ವಾಣರಾದರು.

(ಮೂಲ ಠಾಕುರ್ ಸುದರ್ಶನ ಸಿಂಹ)

READ & ADVERTISE IN NAVAYUGA WEEKLY



ಕಲಕತ್ತೆಯ ಟೆಲಿಫೋನ್ ಎಕ್ಸ್‌ಚೇಂಜಿನಲ್ಲಿ ಕಾರ್ಯನಿರತರಾದ ಆಪರೇಟರುಗಳು.

ಮಧು ಬಿಂದು

ಸದಾ ಯುದ್ಧಕ್ಕೆ ಸಿದ್ಧವಾಗಿರುವದು ಶಾಂತಿಯನ್ನು ಉಳಿಸಿಕೊಳ್ಳುವ ಪರಿಣಾಮಕಾರಕ ದಾರಿ.

೦ ೦ ೦

ಯುದ್ಧ ಸಮಯದಲ್ಲಿ ಬೇಕಾಗುವದನ್ನು ಶಾಂತಿಯ ಸಮಯದಲ್ಲಿ ಕೂಡಿಕೊಡಬೇಕು.

೦ ೦ ೦

ದೇಶದ ಪ್ರಸಿಡೆಂಟನಾಗುವದಕ್ಕಿಂತಾ ಮಾತಿನ ಸತ್ಯತ ಉಳಿಸಿಕೊಳ್ಳುವದು ಹಿರಿದು.

೦ ೦ ೦

ಪ್ರತಿಯೊಂದರ ಕ್ರಯ ತಿಳಿದಿದ್ದು ಯಾವುದೊಂದರ ಬೆಲೆ ತಿಳಿಯದವ ತಿಳಿಗೇಡಿ.

೦ ೦ ೦

ತನ್ನ ಹೆಗ್ಗಳಿಕೆಯಲ್ಲಿ ತಲ್ಲೀನವಾದ ಅಹಂಕಾರವು ತಿರಸ್ಕಾರದ ಮಡುವಿನಲ್ಲಿ ಕೊಳೆಯಬೇಕಾಗುವುದು

೦ ೦ ೦

ಅನ್ಯಾಯವಾಗಿ ಒಬ್ಬನನ್ನು ಸೆರೆಮನೆಗೆ ತಳ್ಳುವ ರಾಜ್ಯದಲ್ಲಿ ನ್ಯಾಯವಾದಿಗೆ ಸೆರೆಮನೆಯೇ ನಿಜವಾದ ಸ್ಥಳ

೦ ೦ ೦

ನ್ಯಾಯವೆಂಬ ಕಲ್ಲಿನ ಸಹಾಯದಿಂದ ಸೆರೆಮನೆ ಕಟ್ಟಲ್ಪಟ್ಟಿದೆ ಧರ್ಮವೆಂಬ ಇಟ್ಟಿಗೆಯಿಂದ ವೇಶ್ಯಾ ಗೃಹ ನಿರ್ಮಿತವಾಗಿದೆ

೦ ೦ ೦

ನಮ್ಮ ಬಯಕೆಯಂತೆ ನಾವು ಭರವಸೆ ಕೊಡುತ್ತೇವೆ ನಮ್ಮ ಭಯದಂತೆ ಅದನ್ನು ಸಲ್ಲಿಸುತ್ತೇವೆ

೦ ೦ ೦

ಭರವಸೆ ಕೊಡಲು ಹಿಂದು ಮುಂದು ನೋಡುವವನೇ ಭರವಸೆಯನ್ನು ಸರಿಯಾಗಿ ಸಲ್ಲಿಸುತ್ತಾನೆ.

೦ ೦ ೦

ಸಿರಿತನ ಮತ್ತು ಅಧಿಕಾರದಿಂದ ಬರುವ ಕುರುಡ ತನವನ್ನು ಗೆಲ್ಲಲು ಅತೀ ದೃಢ ಹಾಗೂ ಜಾಗರೂಕ ಶರೀರ ಪ್ರಕೃತಿ ಬೇಕು.

೦ ೦ ೦

ಗುರುಹತ್ತದವನಿಗೆ ಮುಂದಿಂದ ಬೀಳುವ ಭಯವಿಲ್ಲ ಗೆಲ್ಲಲು ಪ್ರಯತ್ನಿಸದವನಿಗೆ ಸೋಲುವ ಹೆದರಿಕೆ ಇಲ್ಲ.

೦ ೦ ೦

ಕನ್ನಡಿ ಮನೆಯಲ್ಲಿ ಜೀವಿಸುವವರು ಇತರರ ಮನೆಗೆ ಕಲ್ಲೆಸೆಯಬಾರದು

೦ ೦ ೦

ಸಾರ್ವಜನಿಕರು ಎಂದು ಹೇಳುವ ಪ್ರಾಣಿಗಿಂಥಾ ಕೃಪಣ, ತಿಳಿಗೇಡಿ, ಕನಿಕರವಿಲ್ಲದ, ಕಿಚ್ಚಿನ, ಕೃತಘ್ನ ಪ್ರಾಣಿ ಬೇರಿಲ್ಲ

೦ ೦ ೦

ಹಣ ಸಾಲ ಪಡೆದು ಕೊಡದಿರುವುದು ಹೇಗೆ ಮೋಸವೋ, ಅದೇ ರೀತಿ ನಿಶ್ಚಿತ ಸಮಯಕ್ಕೆ ಬಾರದೆ ಸಮಯ ಹಾಳು ಮಾಡುವುದೂ ಮೋಸವೆ!

ವಿದ್ಯಾರ್ಥಿಗಳ 2 ಕೈಪಿಡಿಗಳು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ ರೂ ಎರಡು ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವೂ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ
ಬೆಲೆ ರೂ 1-4-0 (1=25)

ವಿ ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ
0 =25 NP ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರತಿಗಳು— ಮಂಗಳೂರಲ್ಲಿ ಶ್ರೀನಿವಾಸ್ ಬ್ರದರ್ಸ್, ಸ್ಕೂಲ್ ಬುಕ್ ಕೊ, ಕೆನರಾ ಕೊಲೆಜ ಬುಕ್ ಕೊ, ಇಂಡಿಯನ್ ಇಂಡಸ್ಟ್ರಿಯಲ್ಸ್ & ಪಬ್ಲಿಷರ್ಸ್ ಇವರಲ್ಲಿಯೂ ಪುತ್ತೂರಲ್ಲಿ ಪೊಪ್ಯುಲರ್ ನ್ಯೂಸ್ ಏಜನ್ಸಿಯಲ್ಲಿಯೂ ದೊರೆಯುತ್ತವೆ

REGD. No. B. G. 176
LICENCE No. 31
Licensed to Post without Prepayment

ಚೀಣೀಯರಿಂದ ಭಾರತಕ್ಕೆ ಅಪರಾಧ

(೪ನೇ ಪುಟದಿಂದ)

ಈ ವಾಸ್ತವಾಂಶಗಳೆಲ್ಲವೂ ತೋರಿಸಿಕೊಡುತ್ತವೆ. ತಿಕ್ಕಾಟವನ್ನು ಬಗೆಹರಿಸಲು ನಿಜವಾದ ಯಾವ ಪ್ರಯತ್ನಗಳೂ ಇಲ್ಲದಿರುವ ಸ್ಥಿತಿ ಮಾತ್ರವಷ್ಟೇ ಅಲ್ಲದೆ, ತಿಕ್ಕಾಟವನ್ನು ಪುನಃ ಪದಗೆಡಿಸಲಾಗಬಹುದೆಂಬ ಬಗ್ಗೆ ನಿದರ್ಶನಗಳೂ ಹೆಚ್ಚು ಹೆಚ್ಚಾಗಿ ಕಂಡುಬರುತ್ತಿರುವ ಸ್ಥಿತಿಯು ಈ ಸಂದರ್ಭದಲ್ಲಿ ವಿಶೇಷತಃ ಗಾಬರಿಯ ವಿಷಯವಾಗಿದೆ.

ಚೀನಾ—ಭಾರತ ಗಡಿಯ ಮೇಲೆ ಮುಂದುವರಿಯುತ್ತಿರುವ ಪ್ರಕ್ಷುಬ್ಧ ಸ್ಥಿತಿಯು ಗಂಭೀರವಾದ ದುಷ್ಪರಿಣಾಮಗಳು ಸಂಭವಿಸುವ ಭೀತಿಯಿಂದ ತುಂಬಿದೆ. ರಾಷ್ಟ್ರಗಳ ನಡುವಣ ಶಾಂತಿ ಸ್ನೇಹವನ್ನು ಅಂತಃಕರಣಪೂರ್ವಕವಾಗಿ ಬಯಸುವವರೆಲ್ಲರೂ ಈ ಸದಾಶಯದ ಮನೋರಥದ ಹಕ್ಕನ್ನು ಹೊಂದಿದ್ದಾರೆ. ಈ ತಿಕ್ಕಾಟವು ಬಗೆಹರಿಯುವುದಕ್ಕೆ ನಿಜವಾಗಿಯೂ ಯಾರನ್ನು ಅವಲಂಬಿಸಬೇಕಾಗುತ್ತದೆಯೋ ಅವರು ಔಪಚಾರಿಕ ಪ್ರತಿಷ್ಠೆ ವಿಚಾರಗಳನ್ನು ಬಿಟ್ಟು ಕೊಟ್ಟು ಸಮ್ಮೇಲನದ ಮೇಜಿನ ಮುಂದೆ ಕುಳಿತುಕೊಳ್ಳುವರೆಂದೂ, ಮತ್ತು ತಿಕ್ಕಾಟದ ಬಗ್ಗೆ ಪರಸ್ಪರ ಅಂಗೀಕಾರಾರ್ಹವಾದ ಇತ್ಯರ್ಥವನ್ನು ಕಂಡುಹಿಡಿಯುವರೆಂದೂ, ಆಸೆ ಪಡುವ ಹಕ್ಕು ಅವರಿಗೆ ಇದೆ.

ಚೀನಾ—ಭಾರತ ವಿವಾದದ ಶಾಂತಿಯುತ ಇತ್ಯರ್ಥವು ಭಾರತೀಯ ಮತ್ತು ಚೀನಾ ಜನತೆಗಳಿಗೆ ಅನುಕೂಲವಾಗಿರುವುದು, ಅದು ಈ ಅಪಾಯಕರ ಪ್ರಕ್ಷುಬ್ಧ ಸ್ಥಿತಿಯನ್ನು ತೊಡೆದು ಹಾಕುವುದು. ಏಶಿಯದಲ್ಲಿಯೂ ಮತ್ತು ಇಡೀ ಜಗತ್ತಿನಲ್ಲಿಯೂ ಶಾಂತಿಯ ಉದ್ದೇಶ ಸಾಧನೆಗೆ ಸೇವೆಯನ್ನು ಸಲ್ಲಿಸುವುದು.

ಏಶಿಯದ ಎರಡು ಪ್ರಮುಖ ರಾಜ್ಯಶಕ್ತಿಗಳಾದ ಚೀನಿ ಜನಗಣತಂತ್ರ ಮತ್ತು ಭಾರತ ಗಣತಂತ್ರಗಳ ಮಧ್ಯೆ ಒಳ್ಳೆಯ ನೆರೆಹೊರೆಯ ಸಂಬಂಧಗಳನ್ನು ಪುನಃ ಸ್ಥಾಪಿಸಬೇಕೆಂದು ಸೋವಿಯತ್ ಜನತೆಯು ಬಯಸುತ್ತದೆ. ಗಡಿ ವಿವಾದಗಳ ಪ್ರಶ್ನೆಗಳಲ್ಲಿ ನಾವು ಲೆನಿನ್‌ವಾದೀ ಅಭಿಪ್ರಾಯಗಳನ್ನು ಅನುಸರಿಸುತ್ತೇವೆ. ಮಾತುಕತೆಗಳ ಮೂಲಕ, ರಕ್ತಪಾತವಿಲ್ಲದೆಯೇ ಶಾಂತಿಯುತವಾಗಿ ಬಗೆಹರಿಸಲು ಸಾಧ್ಯವಾಗದ ಸಮಸ್ಯೆಗಳು ಯಾವುವೂ ಇಲ್ಲವೆಂದು ನಮಗೆ ಮನವೊಪ್ಪಿಗೆಯಾಗಿದೆ. ಚೀನೀ—ಭಾರತೀಯ ಗಡಿಯ ಮೇಲಿನ ಘಟನೆ ಬಗ್ಗೆ ಸೋವಿಯತ್ ಜನತೆಯು ನಿರ್ದಿಷ್ಟವಾಗಿ ಈ ನಿಲುವೆಗಳಿಂದಲೇ ಮೌಲ್ಯ ನಿರ್ಣಯ ಮಾಡುತ್ತಾರೆ. ಸೋವಿಯತ್ ಒಕ್ಕೂಟದ ಮಟ್ಟಿಗೆ ಹೇಳುವುದಾದರೆ, ತನ್ನ ಗಡಿಯ ಬಳಿಯಲ್ಲಿರುವ ದೇಶಗಳೊಡನೆ ಅದು ಗೌರವದಿಂದ ವ್ಯವಹರಿಸುತ್ತದೆ. ಒಳ್ಳೆಯ ನೆರೆಹೊರೆಯ ಸ್ಥಿತಿಯು ರಾಜ್ಯಗಳ ನಡುವಣ ಗಡಿಗಳನ್ನು ಗೌರವಿಸಿದಾಗ ಮಾತ್ರವೇ ಸಾಧ್ಯವಾಗುತ್ತದೆಯೆಂಬುದನ್ನು ಸೋವಿಯತ್ ನಾಡು ತಿಳಿದುಕೊಂಡಿದೆ.

ಪ್ರಾವ್ಡ ಪತ್ರಿಕೆಯ ಈ ಲೇಖನವು ಚೀನಾ-ಭಾರತ ಗಡಿ ವಿವಾದದಲ್ಲಿ ಭಾರತವು ಅನುಸರಿಸಿದ ನೀತಿಯನ್ನು ಸಮರ್ಥಿಸುವುದಲ್ಲದೆ ಚೀಣೀಯ ನೀತಿಯನ್ನು ನಿಂದಿಸುತ್ತದೆ. ಸೋವಿಯತ್—ಚೀಣಾಗಳ ಸಂಬಂಧವು ಇದೀಗ ಸಂಪೂರ್ಣ ಕೆಟ್ಟು ಹೋಗಿದೆ ಎಂದು ಇದರಿಂದ ತಿಳಿಯಬಹುದೆ?

ಪುಸ್ತಕ ವಿಮರ್ಶೆ

[ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ. —ಸಂ. ನ.]

ದೂರ ಸರಿದರು: ಲೇಖಕರು: ಶ್ರೀ ಎಸ್. ಎಲ್. ಭೈರಪ್ಪ, ಎಂ. ಎ., ಪ್ರಕಾಶಕರು: ಸಾಹಿತ್ಯ ಭಂಡಾರ, ಹುಬ್ಬಳ್ಳಿ ಪುಟಗಳು: ೩೩೩. ಬೆಲೆ: ಸಾದಾ ಪ್ರತಿ ರೂ. ೪-೪೦; ಕ್ಯಾಲಿಕೋ ಪ್ರತಿ ರೂ. ೫-೫೦.

ವಿಶ್ವವಿದ್ಯಾಲಯದ ಪರಿಸರದಲ್ಲಿ ನಡೆಯಬಹುದಾದ ಸರಸ-ವಿರಸಗಳನ್ನು ವಿವೇಚಿಸುವ ಸ್ವತಂತ್ರ ಸಾಮಾಜಿಕ ಕಾದಂಬರಿಯಿದು. ಸಾಮಾಜಿಕ ಸ್ಥಿತ್ಯಂತರ ಮತ್ತು ಸಂಸ್ಕೃತಿಯ ಬೆರಕೆಯ ಪರಿಣಾಮವಾಗಿ ಒದಗುವ ಸಂಕಟ ಮತ್ತು ಅದಕ್ಕೆ ವೈಚಾರಿಕ ಪರಿಹಾರವನ್ನು ಧರ್ಮಶ್ರೀಯಲ್ಲಿ ಮುಂದಿಟ್ಟಿದ್ದ ಭೈರಪ್ಪನವರು 'ವೈಚಾರಿಕ ವಿಷಯ'ಕ್ಕೇನೇ ಅಗ್ರಪ್ರಾಶಸ್ತ್ಯವಿತ್ತು ರಚಿಸಿದ್ದಾರೆ, ಈ ಕಾದಂಬರಿಯನ್ನು. ಇಲ್ಲಿ ಹಲವಾರು ಪಾತ್ರಗಳು ಜೋಡಿಗಳು ಬರುತ್ತವೆ; ಇವೆಲ್ಲರೂ ವಿದ್ಯಾವಂತರು, ಸುಶಿಕ್ಷಿತರು, ಬುದ್ಧಿಜೀವಿಗಳು. ಇವರ ಮಾನಸಿಕ ಸಂಘರ್ಷವೇ ಇಲ್ಲಿನ ಕಥಾವಸ್ತು. ವ್ಯಕ್ತಿ-ವ್ಯಕ್ತಿಗಳ ಸಮಸ್ಯೆ, ಅವರ ಒಳ ತೋಟಿ ಭಿನ್ನಭಿನ್ನವಾಗಿದೆ. ವಸಂತ-ಉಮೆ, ಸಚ್ಚಿದಾನಂದ ವಿನುತೆ, ವಾಸನ್-ವಿಜಯಾ ಇವರ ಪ್ರೇಮಲತೆಯು ಚಿಗುರಿತಾದರೂ ವೈಚಾರಿಕ ದಾಂಧಲೆಗೆ ಕಟ್ಟುಬಿದ್ದ ವಸಂತ ವಿದೇಶಯಾತ್ರೆಗೆ ತೊಡಗಿ ತನ್ನ ಜಂಜಾಟದಿಂದ ದೂರವುಳಿದ; ಸಚ್ಚಿದಾನಂದನು ಸಾಮಾಜಿಕ ಅಡಚಣೆಯಿಂದ ಅನಿವಾರ್ಯವಾಗಿ ಸೀತಾಲಕ್ಷ್ಮಿಯ ಕೈಹಿಡಿದ; ವಾಸನ್ ಮಾತ್ರ ಯಾವ ಹೆಚ್ಚಿನ ಗೊಂದಲಗಳಲ್ಲೂ ಸಿಕ್ಕಿ ಬೀಳದೆ ದಾಂಪತ್ಯ ಜೀವನವನ್ನು ತೊಡಗಲು ಸಮರ್ಥನಾದ. ಇವರ ಪಾತ್ರಗಳಿಗೆ ಮೆರಗು ತರುವಂತೆ ವಿನುತೆ, ವಿಜಯಾರ ತಾಯಿ ಸರೋಜಮ್ಮನ ಬಾಹ್ಯಾಡಂಬರ—ಕುಲ ಗೌರವದ ಅಭಿಮಾನ, ಪತಿಯೇ ಪರದೈವವೆಂದು ನಂಬಿದ ಸೀತಾಲಕ್ಷ್ಮಿಯ ವ್ಯಕ್ತಿತ್ವ, ಸ್ನೇಹಿತೆಗಾಗಿ ಜೀವ ತೆರಲೂ ಸಿದ್ಧಳಾದ ಜಗದಂಬಾಳ ನಿಸ್ವಾರ್ಥ ಪ್ರೇಮಗಳು ಕಾದಂಬರಿಯಲ್ಲಿ ಎದ್ದು ತೋರುತ್ತವೆ. ಮನಸ್ಸಿನಲ್ಲಿ ವರಿಸಿದ ಪತಿಯ ಮರಣದಿಂದ ಆದರ್ಶ ಸತಿಯ ಸ್ಥಾನಕ್ಕಡರಿದ ಪ್ರೊ| ವರದಮ್ಮಳ ಚರಿತ್ರೆ ಒಂದು ತೆರವಾದರೆ, ಸುಲಭದಲ್ಲಿ ಬೀಸಿದ ಬಲೆಗೆ ಸಿಲುಕಿ ನವೆದ ರಮಾಳದು ಇನ್ನೊಂದು ತೆರ. ತಾನು ಸಂಪ್ರದಾಯವಾದದಲ್ಲಿ ಮುಳುಗಿದ್ದರೂ ಅದರ ಉಚಿತಾನುಚಿತತೆಯನ್ನು ಅರಿತು ನಡೆಯುವ ಕರ್ಮಯೋಗಿನಿ ಸಚ್ಚಿದಾನಂದನ ತಾಯಿ ಗೌರಮ್ಮಳ ಪಾತ್ರ ವಿಲಕ್ಷಣ—ಆದರೆ ಆದರ್ಶ. ರಂಗೇಗೌಡನ ಅಸಹಾಯಕತೆಯೂ ಜೀವಂತ ಚಿತ್ರ—ಹೀಗೆ ಕಾದಂಬರಿಯ ಒಂದೊಂದು ಪಾತ್ರವೂ ಸ್ಫುಟವಾಗಿದೆ; ತಿಳಿಯಾಗಿದೆ, ತುಂಬಿ ಬಂದಿದೆ. ವೈಚಾರಿಕ ಶಕ್ತಿಗೆ ಒಂದೊಂದು ಸವಾಲಿನಂತೆಯೇ ಬೆಳೆದು ಬಂದಿದೆ.

ಇಡಿಯ ಕಾದಂಬರಿಯನ್ನು ಓದಿ ಮುಗಿಸಿದ ಮೇಲೆ, ವಿವಿಧ ಪಾತ್ರಗಳ ಬಗೆಗೆ—ಅವುಗಳ ತಾಕಲಾಟದಿಂದ ಮುಕ್ತಿ ದೊರೆತ ವಿಷಯದಲ್ಲಿ—ಇದಕ್ಕಿಂತ ಉತ್ತಮ ಪರಿಣಾಮ ಬರಬಾರದಾಗಿತ್ತೇ ಎಂದು ಪ್ರಶ್ನೆ ಏಳಬಹುದು. ಆದರೆ, ಲೇಖಕರು ಸಂಘರ್ಷವನ್ನು ಒಂದು ರೀತಿಯಲ್ಲಿ ಕೊನೆಗೊಳಿಸಿದರು. ಈ ವಿಚಾರದಲ್ಲಿ ಅನುಸರಿಸಿದ ಧೋರಣೆಯು ಆಯಾ ಪಾತ್ರಕ್ಕೆ ಅವಾಸ್ತವವೆನ್ನುವಂತಿಲ್ಲ ತಾಕಲಾಟವೆದ್ದ ಮೇಲೆ ಅದನ್ನು ಕೊನೆಮುಟ್ಟಿಸುವುದೂ ಅತ್ಯಗತ್ಯ. ಇಲ್ಲಿನ ಕೊನೆಯೂ ಜೀವನದ ಒಂದು ಮುಖ; ಅದನ್ನು ಅಲ್ಲಗಳೆಯುವುದು ಕಷ್ಟ.

ಶ್ರೀ ಭೈರಪ್ಪನವರು 'ದೂರ ಸರಿದರು' ಕಾದಂಬರಿಯಲ್ಲಿ ವೈಚಾರಿಕ ವಿಷಯಕೆ ಹೆಚ್ಚಿನ ಪ್ರಾಧಾನ್ಯವಿತ್ತಿದ್ದಾರೆ. ಪಾತ್ರ—ಪಾತ್ರದಲ್ಲೂ ಒಂದೊಂದು ವಿಚಾರಧಾರೆ ತಾಂಡವವಾಡುತ್ತದೆ. ಇದರಿಂದಲೇ ಸಂಘರ್ಷ ನಡೆಯುತ್ತದೆ; ಒಂದು ಅಂತಿಮ ನಿರ್ಧಾರಕ್ಕೆ ಬರಲು ಆತಂಕವೊಡ್ಡುತ್ತದೆ. ಇಂತಹ ಸಂಘರ್ಷಕ್ಕೆ ಗುರಿಯಾಗದ ಏಕಮೇವ ಪಾತ್ರವಿರುವುದಾದರೆ, ಅದು ಗೌರಮ್ಮನದು. ಎಂತಲೇ ಸಾಮಾನ್ಯ ಓದುಗನಿಗೆ ಅದು ಹಿಡಿಸೀತು. ಉಳಿದವುಗಳನ್ನು ಅರಿತುಕೊಳ್ಳಲು ವಾಚಕನೂ ಪಾತ್ರಗಳಂತೆಯೇ ಸುಶಿಕ್ಷಿತನಿರಬೇಕು; ಜೀವನದ 'ಸಿಹಿ-ಕಹಿ ಅನುಭವ'ಗಳನ್ನು ಪಡೆದಿರಬೇಕು. ಭಾವನಾ ಪ್ರಧಾನ್ಯತೆ ಇಲ್ಲಿ ಕಡಿಮೆ. ತಲಕಾಡಿನ ಕಾಡಿನಲ್ಲಿ ಅನಂತ-ವಿನುತೆಯರು ಪತಿಪತ್ನಿಯರಾಗಿ ನಡೆದ ಒಂದು ಸನ್ನಿವೇಶ ಮಾತ್ರ ಇದಕ್ಕೆ ನಿದರ್ಶನ. ವಿಚಾರಕ್ಕೆ ತಕ್ಕಂತೆ ಶೈಲಿ ಭಾವಕ್ಕೆ ತಕ್ಕಂತೆ ನಿರೂಪಣಾಕ್ರಮ ಭೈರಪ್ಪನವರಿಗೆ ಕರಗತವಾಗಿದೆ; ಅವರ ಲೇಖನಿಯಲ್ಲಿ ಕಸುವಿದೆ; ವಿಚಾರದಲ್ಲಿ ಹೊಸತನವಿದೆ. ಎಂತಲೇ ದೂರ ಸರಿದರು, ಕಾದಂಬರಿ ಕನ್ನಡ ಸಾಹಿತ್ಯಕ್ಕೊಂದು ಅಪೂರ್ವ ಕಾಣಿಕೆ. ಜನತೆಯ ಮನೋಸ್ತರ ಉನ್ನತವಾಗಬೇಕಾದರೆ, ಇಂತಹ ಕೃತಿಗಳು ಹೆಚ್ಚಬೇಕು; ಜನ ಅವನ್ನು ಅರ್ಥಮಾಡಿಕೊಳ್ಳುವ ಮಟ್ಟಕ್ಕೇರಬೇಕು.

ಕಾದಂಬರಿಗೆ ಇಟ್ಟ ಹೆಸರು ವಿಲಕ್ಷಣವೆನ್ನಿಸಬಹುದು; ಇದಕ್ಕೂ ಸುಲಕ್ಷಣವಾದುದನ್ನು ಆರಿಸಲು ಲೇಖಕರು ಅದೇಕೆ ಹಿಂಜರಿದರೋ ಊಹನಾತೀತ.

—ಗೋರಾ

ಅತ್ಯುತ್ತಮ ಸೇವೆಗಾಗಿ ಸಮಾವೇಶ . . .

ಕೊಯಮುತ್ತೂರು ಕನ್ನಿಕಾ ಪರಮೇಶ್ವರಿ ಬ್ಯಾಂಕ್ ● ಸಿಂಡಿಕೇಟ್ ಬ್ಯಾಂಕ್

ದಿ ಕೊಯಮುತ್ತೂರು ಕನ್ನಿಕಾ ಪರಮೇಶ್ವರಿ ಬ್ಯಾಂಕ್ ಲಿಮಿಟೆಡ್, ಕೊಯಮುತ್ತೂರು, ಇದರ ಬ್ಯಾಂಕಿಂಗ್ ವ್ಯವಹಾರವನ್ನು ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಉಡುಪಿ, ಇವರು ಶೀಘ್ರದಲ್ಲಿಯೇ ವಹಿಸಿಕೊಳ್ಳುವರು. ಸಿಂಡಿಕೇಟ್ ಬ್ಯಾಂಕಿನೊಡನೆ ಈ ವರೆಗೆ ಸೇರ್ಪಗೊಂಡ ಬ್ಯಾಂಕುಗಳಲ್ಲಿ ಇದು ಹದಿನೈದನೆಯದು. ನಮ್ರ, ಸುಭದ್ರ, ಸಮರ್ಥ ಹಾಗೂ ಸೌಜನ್ಯಶೀಲ ಸೇವೆಯನ್ನು ಕೊಯಮುತ್ತೂರು ಕನ್ನಿಕಾ ಪರಮೇಶ್ವರಿ ಬ್ಯಾಂಕಿನ ಗಿರಾಕಿಗಳೂ ಪಡೆಯುವರೆಂಬ ಸದಾಶೆಯು ನಮಗಿದೆ.

ಡಾ| ಟಿ. ಯಂ. ಎ. ಪೈ.
ಚೇರ್‌ಮ್ಯಾನ್

ಟಿ. ಎ. ಪೈ.
ಮ್ಯಾನೆಜಿಂಗ್ ಡೈರೆಕ್ಟರ್

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್,

ಒಟ್ಟು ಶಾಖೆಗಳು 128. ಚಲಾವಣಾನಿಧಿ **45** ಕೋಟಿಗೂ ಮಿಕ್ಕಿದೆ.

ಅಖಿಲ ಕರ್ನಾಟಕದ
ಪ್ರಸಿದ್ಧ ಕತೆಗಾರರ
ಮಧುವನ
ಕಥಾ ಸಂಕಲನ
ಕಿರಿಯರ ಪ್ರಪಂಚ'ದ
ಅಪೂರ್ವ ಪ್ರಕಟಣೆ
ಬೆಲೆ: ರೂ. ಮೂರು
ಭಾರತ ಪುಸ್ತಕ ಭಂಡಾರ
ಉಡುಪಿ

ನವಯುಗ

Estd. 1921 ಸ್ಥಾಪನೆ
Regd. No. B.G. 176
Vol. 43 No. 6

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
NAVAYUGA— NATIONAL WEEKLY
ಉಡುಪಿ, 10—10—1963 ಗುರುವಾರ

13 ನ ಪೈಸೆ
ವಾ. ಚಂದಾ ರೂ. 6-75
ಸಂಪುಟ ೪೩ ಸಂಚಿಕೆ ೬

ಯಾವತ್ತೂ
ಪ್ರಿಂಟಿಂಗ್ ಕೆಲಸಗಳನ್ನು
ಮಾಡಿಕೊಡಲಾಗುವುದು
ಕ್ಲಪ್ತ ಸಮಯದಲ್ಲಿ
ಮಿತ ದರದಲ್ಲಿ ಉತ್ತಮ
ಮುದ್ರಣ
ಕೆಲಸಗಳಾಗಬೇಕೆ?
ಸಂದರ್ಶಿಸಿರಿ ಯಾ ವಿಚಾರಿಸಿರಿ-
ನವಯುಗ ಪ್ರೆಸ್,
ಪಾಲುಕಟ್ಟೆ, ಉಡುಪಿ

ವಿವಾದ ಪರಿಹಾರಕ್ಕೆ
ನೂತನ ಮಾರ್ಗ ಶೋಧವೆ?

ಚೀನಾ ಮತ್ತು ರಶ್ಯಗಳ ತಾತ್ವಿಕ ಭಿನ್ನಾಭಿಪ್ರಾಯವು ರಾಜಕಾರಣದ ಮಟ್ಟವನ್ನೇರಿದ ಮೇಲೆ ಅವುಗಳ ನಡುವೆ ತೀವ್ರವಾದ ಆರೋಪ ಪ್ರತ್ಯಾರೋಪಗಳು ನಡೆಯ ತೊಡಗಿವೆ. ಎರಡು ಕಮ್ಯುನಿಸ್ಟ ರಾಷ್ಟ್ರಗಳ ನಡುವೆ ನಡೆಯುತ್ತಿರುವ ಈ ವಾಗ್ವಾದಗಳು ಜಗತ್ತಿನ ಕಮ್ಯುನಿಸ್ಟೇತರ ಮಾತ್ರವಲ್ಲ ಕಮ್ಯುನಿಸ್ಟ ರಾಷ್ಟ್ರಗಳಲ್ಲಿಯೂ ಆಸಕ್ತಿ ಕೆರಳಿಸಿವೆ ಚೀನಾವು ಭಾರತದೊಡನೆ ಗಡಿ ವಿವಾದವನ್ನು ಮುಂದಿಟ್ಟು ಪ್ರತ್ಯಕ್ಷವಾಗಿ ಬೃಹತ್ಪ್ರಮಾಣದಲ್ಲಿ ಆಕ್ರಮಣವನ್ನು ನಡೆಸುವುದಕ್ಕೆ ಬಹಳಷ್ಟು ಪೂರ್ವಭಾವಿಯಾಗಿಯೇ ರಶ್ಯವು ಅದನ್ನು ಎಚ್ಚರಿಸಿತ್ತು ಎಂಬ ಸತ್ಯವೀಗ ಹೊರಪಟ್ಟುದರಿಂದ ಭಾರತ-ಚೀನಾ ಗಡಿ ವಿವಾದವು ಶಾಂತರೂಪದಲ್ಲಿಯೇ ಪರಿಹಾರಗೊಳ್ಳಬೇಕೆಂಬ ಆದರ ಪ್ರತ್ಪೂರ್ವಕ ಆಶಯದೊಡನೆ ಅದರ ನಿಲುಮೆಯನ್ನೂ ಸೂಕ್ಷ್ಮವಾಗಿ ಪ್ರತಿಬಿಂಬಿಸಲಾಗಿದೆಯೆಂದು ಹೇಳ ಬಹುದು. ಕಾಶ್ಮೀರ ತಂಟೆಯ ವಿಷಯವಾಗಿ ರಶ್ಯವು ಭಾರತದ ನಿಲುಮೆಯನ್ನು ಹಿಂದೆ ಸಮರ್ಥಿಸಿದ ನೀತಿಯನ್ನೇ ಇಂದಿಗೂ ಮುಂದುವರಿಸುವ ಆಶ್ವಾಸನವನ್ನು ಮರಳಿ ಉಚ್ಚರಿಸಿದೆ.ಅಂತೆಯೇ ಚೀನಾವು ಭಾರತದ ಮೇಲೆ ಆಕ್ರಮಣಮಾಡಿದೆ ಎಂದು ಅದು ಘೋಷಿಸುವ ದಿನವಿನ್ನು ಬಹಳ ದೂರವಿರಲಾರದು. ರಶ್ಯವು ಇಂತಹ ಉದ್ಗಾರವನ್ನು ಹೊರಡಿಸಿತೆಂದರೆ, ಕೊಲಂಬೊ ರಾಷ್ಟ್ರಗಳೂ ಕೂಡದ ಸಾಹಸವನ್ನದು ಪ್ರದರ್ಶಿಸಿದಂತಾಗುವುದು. ಆದರೆ, ಸೋವಿಯಟ್ ದೇಶ ಅಷ್ಟು ಮುಂದುವರಿಯುವುದೆ?

ಚೀನೀಯ ಚಿಕ್ಕಿನ ಬಿಡಾರ

ರಶ್ಯ ಮತ್ತು ಚೀನಗಳ ನಡುವಣ ತೀವ್ರತೆಯು ಪರಾಕಾಷ್ಠೆಯನ್ನು ಮುಟ್ಟುತ್ತಿದೆಯೆಂಬುದಕ್ಕೀಗ ಮತ್ತೊಂದು ನಿದರ್ಶನ ದೊರೆತಿದೆ ಕೆಲವು ಸಮಯಕ್ಕೆ ಮೊದಲು ಜಕಾರ್ತಾದಲ್ಲಿ ಆಫ್ರೋ ಏಶ್ಯನ್ ಪತ್ರಿಕೋದ್ಯಮಿಗಳ ಸಮ್ಮೇಳನವು ನಡೆದಾಗ ಅಲ್ಲಿ ರಶ್ಯಕ್ಕೆ ಪ್ರವೇಶ ದೊರಕಿರಲಿಲ್ಲ. ಏಕೆಂದರೆ, ಆ ಸಮ್ಮೇಳನದಲ್ಲಿ ಚೀನೀಯ ಸರಕಾರದ ಕೈವಾಡವು ತುಂಬ ಇತ್ತು. ಈಗ ಅದಕ್ಕಿಂತಲೂ ದೊಡ್ಡದಾದ ಆಗ ಪತ್ರಿಕೋದ್ಯಮಿಗಳ ಸಮ್ಮೇಳನವನ್ನು ಸಂಯುಕ್ತ ಅರಬ ರಾಜ್ಯದ ರಾಜಧಾನಿ ಕೈರೋವಿನಲ್ಲಿ ರಶಿಯವು ಸಂಘಟಿಸಿದೆ ಇದು ತನಗೆ ಮಾಡಿದ ಅಪಮಾನವೆಂದು ತಿಳಿದ ಚೀನಾವು ತನ್ನ ಪ್ರತಿನಿಧಿಗಳಿಗೆ ಸಮ್ಮೇಳನವನ್ನು ಬಹಿಷ್ಕರಿಸುವಂತೆ ಆದೇಶವಿತ್ತಂತಿದೆ. ಎಂತಲೇ ಚೀನೀಯ ಪತ್ರಿಕೋದ್ಯಮಿಗಳು ಈ ಮಹಾ ಸಮ್ಮೇಳನಕ್ಕೆ ಹಾಜರಾಗುವುದಿಲ್ಲ. ಚೀನಾದ ಈ ಕೃತಿಯು ತನ್ನ ಪ್ರತ್ಯೇಕತೆಯನ್ನು, ಜಗತ್ತಿನಿಂದಬೇರೆಯಾಗಿ ಏಕೈಕವಾಗಿರುವ ತನ್ನ ಸ್ಥಿತಿಯನ್ನು ಪ್ರದರ್ಶಿಸುವುದಿಲ್ಲವೆ? ಜಾಗತಿಕ ರಾಜಕಾರಣದಲ್ಲಿ ಮಾತ್ರವಲ್ಲ ಸರ್ವಸಮಯದಲ್ಲೂ ತನಗೆ ಸ್ಥಾನವಿಲ್ಲವೆಂಬುದನ್ನು ತಾನಾಗಿಯೇ ಒಪ್ಪಿಕೊಂಡಂತಾಗಲಿಲ್ಲವೆ?

ಕೆಂಪು ಕನ್ನಡಕದ ನೋಟ

ಸಂಯುಕ್ತ ಪ್ರಜಾರಾಜ್ಯದ ಅಧ್ಯಕ್ಷ ಅಬ್ದುಲ್ ಗಮಾಲ್ ನಸ್ಸೇರರು ಭಾರತ ಚೀನಾ ಗಡಿ ವಿವಾದದಲ್ಲಿ ಮೊದಲಿನಿಂದಲೂ ಆಸಕ್ತಿಯನ್ನು ವಹಿಸಿದರು. ಚೀನಾವು ಭಾರತದ ಮೇಲೆ ಅನ್ಯಾಯವಾಗಿ ಆಕ್ರಮಣ ನಡೆಸಿದಾಗ, ವಿವಾದವನ್ನು ಪರಿಹರಿಸಲು ನಾಲ್ಕು ಸೂಚನೆಗಳನ್ನು ಮೊತ್ತಮೊದಲು ಮುಂದಿರಿಸಿದವರು ಅವರು. ಚೀನಾವು ಈ ಸೂಚನೆಗಳನ್ನು ಅಂದೇ ಮನ್ನಿಸಿದ್ದರೆ, ಪ್ರಾಯಃ ವಿವಾದವು ಯಾವಾಗಲೋ ತೀರ್ಮಾನವಾಗುತ್ತಿತ್ತು. ಆದರೆ, ಸಾಮ್ರಾಜ್ಯವಾದದ ಕನಸು ಕಾಣುತ್ತಿರುವ ಚೀನಾವು ತಾನು ಟಿಬೇಟಿನ ಮೇಲೆ ಹೇರಿದ ಸರ್ವಾಧಿಕಾರವನ್ನು ಖಂಡಿಸಿದ ನಸ್ಸೇರರ ಮಾತನ್ನು ಒಪ್ಪಲಿಲ್ಲ; ಪ್ರತಿಬಾರಿಯೂ ತನ್ನ ತಳೆದ ನಿಲುಮೆಯನ್ನೇ ಸಮರ್ಥಿಸಿಕೊಳ್ಳುವ ಕೆಂಪು ಕನ್ನಡಕದ ಏಕ ನಾಯಕರು ಪೀಕಿಂಗದಲ್ಲಿ ನಸ್ಸೇರ ವಿರೋಧಿ ಮತ ಪ್ರದರ್ಶನಕ್ಕೆ ಆಸ್ಪದವನ್ನು ಕೊಡುತ್ತಿರಲಿಲ್ಲ. ಆರು ತಟಸ್ಥ ರಾಷ್ಟ್ರಗಳು ಉದಾರವಾಗಿ ರೂಪಿಸಿದ ಸಲಹೆಗಳನ್ನೂ ಒಪ್ಪಿಕೊಳ್ಳಲು ಮೀನಮೇಷ ಎಣಿಸುವ ಚೀನೀಯ ಅಧಿನಾಯಕರು ನಸ್ಸೇರರೊಬ್ಬರ ಮಾತನ್ನು ಕಡೆಗಣಿಸಿದುದು ಆಶ್ಚರ್ಯವೆನಿಸುವುದಿಲ್ಲ.

ಹೊಸ ಮಾರ್ಗ ಶೋಧನೆ

ಇದೀಗ ಅಧ್ಯಕ್ಷ ನಸ್ಸೇರರು ಈ ವಿವಾದದ ಬಗ್ಗೆ ಮತ್ತೊಮ್ಮೆ ಮಾತುಕತೆಯ ಮಾರ್ಗವನ್ನು ತೆರೆಯಲು ಯೋಚಿಸುತಿದ್ದಾರೆ. ಇಷ್ಟರಲ್ಲಿಯೇ ಕೊಲಂಬೊ ಸಮ್ಮೇಳನದ ಸೂತ್ರಧಾರಿಣಿ ಸಿಂಹಳದ ಪ್ರಧಾನ ಮಂತ್ರಿಣಿ ಸಿರಿಮಾವೊ ಭಂಡಾರ ನಾಯಿಕೆಯವರು ಕೈರೋವಿಗೆ ಭೆಟ್ಟಿ ಕೊಡಲಿದ್ದಾರೆ. ಅವರ ಸಂಗಡ ಈ ಪ್ರಶ್ನೆ ಚರ್ಚಿಸಲ್ಪಡುವುದಾಗಿ ಅವರು ಅಂದಿದ್ದಾರೆ ಕೊಲಂಬೊ ಸಮ್ಮೇಳನವು ಬಹಳ ಪ್ರಯಾಸದಿಂದ ರೂಪಿಸಿದ ಸಂಧಾನದ ಸೂತ್ರಗಳನ್ನು ಚೀನಾವು ತಿರಸ್ಕರಿಸಿತೆಂಬುದು ವಿಷಾದಕರವಾದರೂ ಸತ್ಯ ಈ ಸೂತ್ರಗಳನ್ನು ಒಪ್ಪಿಕೊಳ್ಳುವುದರಿಂದ ಚೀನಾವು ತನ್ನದೆಂದು ವಾದಿಸುವ ಪ್ರದೇಶದ ಮೇಲೆ ಅದರ ಸ್ವತ್ವವು ಹಾರಿ ಹೋಗುವುದಿಲ್ಲವೆಂದು ತಿಳಿಸಿ ಹೇಳಿದರೂ ಚೀನೀಯ ಸರಕಾರವು ಅದಕ್ಕೆ ಕಿವಿಗೊಡಲಿಲ್ಲ. ಭಾರತವು ಮಾತ್ರ, ತನ್ನ ಇಚ್ಛೆಗದು ಸಮೀಪಗತವಿದ್ದುದರಿಂದ, ಶಾಂತ ಪರಿಹಾರವರಸುವ ತೀವ್ರಾಸೆಯಿಂದ ಇಷ್ಟಕ್ಕಿದ್ದಂತೆ ಒಪ್ಪಿಕೊಂಡಿತು ಇದೀಗ ಅಧ್ಯಕ್ಷ ನಸ್ಸೇರರು ಕೊಲಂಬೊ ರಾಷ್ಟ್ರಗಳು ಮತ್ತೊಮ್ಮೆ ಸಭೆ ಸೇರಿ, ವಿವಾದ ಪರಿಹಾರಕ್ಕೆ ಹೊಸತಾಗಿ ಪ್ರಯತ್ನ ಮಾಡುವ ಅವಶ್ಯಕತೆಯಿದೆಯೆಂದೂ ಈ ದಿಸೆಯಲ್ಲಿ ಅವು ಕಾರ್ಯಪ್ರವೃತ್ತವಾಗಬೇಕೆಂದೂ ಬಯಸುತ್ತಾರೆ.

ಆಸೆಯ ಅಂಕುರ

ಚೀನಾವು ಕೊಲಂಬೊ ಸೂಚನೆಗಳ ಸಂಬಂಧದಲ್ಲಿ ಕೆಲವು ನಿಬಂಧನೆಗಳನ್ನು ಹಾಕಿತ್ತು. ಅಂದರೆ, ವಿವಾದವನ್ನು ಬಗೆಹರಿಸುವ ಇಚ್ಛೆಯನ್ನು ಪ್ರದರ್ಶಿಸುತ್ತ, ಅದನ್ನು ಮತ್ತಷ್ಟು ಬೆಳೆಸುವುದೇ ಅದರ ಗುರಿ ಮತ್ತು ಉದ್ದೇಶವಿತ್ತು. ಆದರೆ, ಮುಂದೆ, ಕಳೆದ ಎಪ್ರಿಲ್ ತಿಂಗಳಲ್ಲಿ ಸಂ. ಅ. ಪ್ರಜಾ ರಾಜ್ಯದ ಪ್ರಧಾನ ಮಂತ್ರಿ ಅಲಿಸಾಬ್ರಿಯವರು ಪೀಕಿಂಗಿಗೆ ಭೆಟ್ಟಿಕೊಟ್ಟಾಗ,ಈ ನಿಬಂಧನೆಗಳನ್ನು ಮರಳಿ ತೆಗೆದುಕೊಳ್ಳುವ ಆಶ್ವಾಸನವನ್ನಿತ್ತಿತ್ತು. ನುಡಿದ ಮಾತನ್ನು, ಇತ್ತ ಭರವಸೆಯನ್ನು ನಡೆಸಿಕೊಡುವ ಪರಿಪಾಠವೇ ಇಲ್ಲದ ಚೀನವು ಈ ವಿಷಯವಾಗಿ ಸುಮ್ಮನಿದ್ದರೆ, ಅದನ್ನು ತಪ್ಪೆಂದು ಹೇಳುವಂತಿಲ್ಲ. ಹೀಗಿದ್ದರೂ ಯಾವುದಾದರೊಂದು ಹೊಸ ಸೂತ್ರವನ್ನು ಕಂಡುಹಿಡಿದು, ಅದರ ಸಹಾಯದಿಂದ ತಂಟೆಯನ್ನು ಶಾಂತಿಯಿಂದ ಬಿಡಿಸುವುದು ಸಾಧ್ಯವಾದರೂ ಆಗಬಹುದೆಂಬ ಆಶೆಯನ್ನು ಅಧ್ಯಕ್ಷ ನಸ್ಸೇರರು ತಾಳಿದಂತಿದೆ ಇದನ್ನು ಅನ್ಯಾಯದ್ದೆಂದು ಹೇಳಲಾಗದು. ಜಾಗತಿಕ ಶಾಂತಿ ಸ್ಥಾಪನೆಯ ಪ್ರಯತ್ನವು ಒಂದೆಡೆ ನಡೆಯುತ್ತಿರುವಾಗ, ಯುದ್ಧದ ಕಾರ್ಮೋಡಗಳು ಏಳುತ್ತಿರುವುದನ್ನು ಕಂಡೂ ಅದನ್ನು ಚದರಿಸುವ ಅಂತಿಮ ಪ್ರಯತ್ನ ಮಾಡುವುದು ಶಾಂತಿಪ್ರಿಯ ತಟಸ್ಥ ರಾಷ್ಟ್ರಗಳ ಕರ್ತವ್ಯ.

ಅಶಕ್ಯವಾಗಲಾರದೆ?

ಅಧ್ಯಕ್ಷ ನಸ್ಸೇರರು ಶಾಂತಯುತ ಪರಿಹಾರ ವರಸುವ ಹೊಸ ಪ್ರಯತ್ನವನ್ನು ಮಾಡುವ ಅವಶ್ಯಕತೆಯನ್ನು ಹೊರಗೆಡಹಿದರು. ಅವರ ಈ ಅಭಿಪ್ರಾಯವನ್ನು ಸಹಜವಾಗಿ ಶಾಂತಿ ಬಯಸುವ ಭಾರತವು ನಿಜಕ್ಕೂ ಸ್ವಾಗತಿಸುತ್ತದೆ. ಬಹಿರಂಗವಾಗಿ ಶಾಂತಿಯ ಹೆಸರಿನಲ್ಲಿ ಅಶಾಂತಿಯ ಜ್ವಾಲೆಯುರಿಸುತ್ತಿರುವ ಚೀನಾವೂ ಇದನ್ನು ಅನುಮೋದಿಸಬಹುದು. ಆದರೆ, ಅದರ ಅನುಮೋದನೆಯು ಲಭಿಸಿದರೂ ತನ್ನ ಇಚ್ಛೆಗೆ ವಿರುದ್ಧವಾದ ಅಂದರೆ, ಆಕ್ರಮಿತ ಪ್ರದೇಶವನ್ನು ಯಾವರೀತಿಯಿಂದಾದರೂ ಬಿಟ್ಟುಕೊಡುವ ಯಾವ ಸೂತ್ರವೇ ಮುಂದೆ ಬಂದರೂ ಅ

(೧೩ನೇ ಪುಟ ನೋಡಿರಿ)

ಗಗನ ಯಾತ್ರಿಗೆ ಉಪಯುಕ್ತವಾದ ಈ ಉಡುಗೆ ತೊಡುಗೆಗಳು ಸಾಕಷ್ಟು ತೃಪ್ತಿಕರವೆಂದು ಕಂಡುಬಂದಿವೆ.

ಐತಿಹಾಸಿಕ ನಾಟಕ

ಗಜಪತಿ ನಂದಿನಿ

ಬರೆದವರು: "ನವಗಿರಿನಂದ"

(ಕಳೆದ ಸಂಚಿಕೆಯಿಂದ ಮುಂದುವರಿದುದು)

ದೃಶ್ಯ — ೧೧

ಅಡವಿಯಲ್ಲಿ ಬಂಡೆಗಳು

(ಸಮೀಪದಲ್ಲಿ ಪಲ್ಲಕ್ಕಿ. ಅದರ ಬಳಿಯಲ್ಲಿ ಚಿನ್ನಾದೇವಿ ನಿಂತಿದ್ದಾಳೆ ಅಚೆ ಈಚೆ ನೋಡುತ್ತಾ. ತಪ್ಪಿಸಿಕೊಂಡು ಹೋಗಲು ಒಂದು ಬದಿಗೆ ಹೋದಾಗ ಸೈಯದ್ ಮರ್ಕಾರ್ ಇದಿರಾಗುವನು. ಬೆದರಿ ನಿಲ್ಲುವಳು. ಹಿಂಜರಿಯುವಳು.)

ಸೈಯದ್— (ಮುಗುಳ್ನಗುವಿನೊಡನೆ ಮುಂದೆ ಮುಂದೆ ಬರುತ್ತ) ಆ ಹಾ ಹಾ! ಏನು ಚಂದ! ಏನು ಚಂದ! ಸುಂದರೀಮಣಿ! ನಿನ್ನ ಹೆಸರು ಚಿನ್ನಾದೇವಿಯೆ?

ಚಿನ್ನಾದೇವಿ— ಹೇಡಿಯಾಗಿ ಓಡಿಬಂದು ಆದಿಲ್‌ಷಹರ ಕೀರ್ತಿಗೆ ಕಳಂಕ ತರುವವನಾದ ನಿನಗೆ ಏನಾದರೂ ಹೆಸರಿಟ್ಟಿದ್ದಾರೆಯೇ ನಿನ್ನ ತಂದೆತಾಯಿಗಳು?

ಸೈಯದ್— ಮುದಗಲ್ ದುರ್ಗಾಧೀಶ್ ಜಂಗ್ ಬಹದೂರ್ ಸೈಯದ್ ಮರ್ಕಾರ್ ಎಂಬುದು ನನ್ನ ಹೆಸರು.

ಚಿನ್ನಾದೇವಿ— ಮುದಗಲ್ ದುರ್ಗಾಧಿಪತ್ಯಕ್ಕೂ, ನನ್ನನ್ನು ಹೀಗೆ ಅಪಹರಿಸಿಕೊಂಡು ಬರುವುದಕ್ಕೂ ಏನಪ್ಪಾ ಸಂಬಂಧ?

ಸೈಯದ್— ವಿವಾಹ ಸಂಬಂಧ ಅನ್ನು. ಮುದಗಲ್ ದುರ್ಗದ ರಾಣಿ ನೀನಾಗುವಿ.

ಚಿನ್ನಾದೇವಿ— ನಾನು ಈ ಮೊದಲೇ ಬೇರೊಬ್ಬರ ರಾಣಿಯಾಗಿರುವ ವಿಷಯ ಗೊತ್ತೇ ನಿನಗೆ?

ಸೈಯದ್— ರಾಣಿಯಾದವಳು ಬಡಗುತ್ತಿ ದುರ್ಗದೊಳಗೆ ರಹಸ್ಯವಾಗಿ ಬಂದು ಹುದುಗುವಳೆ? ಇದೆಲ್ಲಾ ಇರಲೀ. ಈ ಸೈಯದ್ ಮರ್ಕಾರನಿಗೆ ಏನೂ ಪರವಾಯಿಲ್ಲ. (ಅವಳ ಹತ್ತಿರ ಸಾಗುವನು)

ಚಿನ್ನಾ— ನಿಲ್ಲು. ಅಲ್ಲೇ ನಿಲ್ಲು. ಇನ್ನು ಮುಂದೆ ಬಂದರೆ ನನ್ನ ಮುಷ್ಟಿಯಿಂದ ನಿನ್ನ ಮುಖವು ಚೂರ್ಣವಾದೀತು.

ಸೈಯದ್— ಎಲ್ಲಿ ಆ ಮುಷ್ಟಿಗಳನಿತ್ತ ನೀಡು! ಅದೆಷ್ಟು ಗಟ್ಟಿಯಿರುವುದೋ ಮುಟ್ಟಿ ನೋಡುತ್ತೇನೆ.

ಚಿನ್ನಾದೇವಿ— ಜೇಡಾ, ನನ್ನೊಡನೆ ತುಂಟತನ ಕಾಣಿಸಬೇಡ. ನನ್ನನ್ನು ಸ್ವೇಚ್ಛೆಯಾಗಿ ಬಿಟ್ಟುಬಿಡುವುದೇ ನಿನಗೆ ಕ್ಷೇಮ. ಹೂಂ, ಬಿಡು ದಾರಿ.

ಸೈಯದ್— ಊ ಹೂಂ. (ಅಡ್ಡಗಟ್ಟುವನು.)

ಚಿನ್ನ— ಹೇಡಿಯೇ, ಹೋಗಲಿ, ನೀನು ವೀರನೆನ್ನುವಿ. ಕಟಿಯಲ್ಲಿ ಕತ್ತಿಯಿದೆ. ನನಗೊಂದು ಕತ್ತಿಯನ್ನು ಕೊಡಿಸು. ಅಲ್ಲಿ ಯಾರೋ ಮೋಸದಿಂದ ನನ್ನ ಕೈಯ ಕತ್ತಿಯನ್ನು ಕಸಿದುಕೊಂಡು ಬಿಟ್ಟರು. ನೀನು ಮೋಸಗಾರನಲ್ಲವಾದರೆ ಕೊಡಿಸು ನನಗೆ ಕತ್ತಿ.

ಸೈಯದ್— (ಗಡಗಡನೆ ನಕ್ಕು) ಅಯ್ಯೋ! ಹುಚ್ಚು ಹುಡುಗೀ! ನಿನ್ನ ಕಣ್ಣುಗಳೇ ಹೃದಯವನ್ನು ಭೇದಿಸುವಂಥ ಕತ್ತಿಗಳಾಗಿರುವಾಗ ಬೇರೆ ಕತ್ತಿಯೇಕೆ? ಎಲ್ಲಿ, ಆ ಕಣ್‌ಕತ್ತಿಗಳಿಂದ ಸರಿಯಾಗಿ ತಿವಿ ನನ್ನ ಮುಖವನ್ನು! (ಮುಂದೆ ಹೋಗುವಾಗ, ಸಿಪಾಯಿ ವೇಷದ ಗುಲ್ರುಬಿ ಹಿಂದಿನಿಂದ ಬಂದು, ಅವನ ಕೈಹಿಡಿದು ಹಿಂದಕ್ಕೆಳೆಯುವಳು)—ಹಾ! ಸೈತಾನ್! ನೀನೇ!

ಗುಲ್ರುಬಿ— ಹೌದು ಮಿಯಾ! ನಿಮ್ಮ ಪತ್ನಿ ಗುಲ್ರುಬೀ.

ಸೈಯದ್— ಯಾರು ನಿನ್ನನ್ನಿಲ್ಲಿಗೆ ಬರ ಹೇಳಿದರು?

ಗುಲ್ರುಬಿ— ನಿಮ್ಮ ಮೇಲಿನ ಪ್ರೇಮ ನನಗೆ ಹೇಳಿತು ಪ್ರಭು. ನಿಮ್ಮನ್ನು ಕಾಪಾಡಲು ಆ ಕರೀಂಬೇಗ್ ಒಬ್ಬನೇ ಸಾಲದೆಂದು ನಾನೂ ಹೊರಟೆ. ಈಗಾ ನಿಮ್ಮ ಪ್ರಾಣಮಿತ್ರ ಕರೀಂಬೇಗ್ ಎಲ್ಲಿದ್ದಾನೆ? ಅಂತೆಯೇ ನಾನು ಬಂದದ್ದು ಎಷ್ಟು ಒಳ್ಳೆಯದಾಯಿತು! (ಚಿನ್ನಾದೇವಿಯನ್ನು ನೋಡಿ) ತಾಯಿ! ತೇಜಸ್ವಿನೀ! ನನ್ನ ಪತಿಯ ಅಪರಾಧವನ್ನು ಮನ್ನಿಸು. ಹೋಗು ತಾಯಿ, ಸ್ವೇಚ್ಛೆಯಾಗಿ ಹೊರಟು ಹೋಗಮ್ಮ. ನಿನ್ನ ಆತ್ಮ ರಕ್ಷಣೆಗೆ ಇಗೋ ನನ್ನ ಕತ್ತಿ. (ಒರೆಯಿಂದ ಕತ್ತಿಯನ್ನು ಸೆಳೆದು ಚಿನ್ನಾದೇವಿಯ ಕಡೆಗೆ ನೀಡುವಳು. ಚಿನ್ನಾದೇವಿ ಆ ಕತ್ತಿಯನ್ನು ತೆಗೆದುಕೊಂಡಾಗ,)

ಸೈಯದ್— ಸೈತಾನ್! ನನ್ನ ಪ್ರತಿ ಕಾರ್ಯಕ್ಕೂ ಮುಳ್ಳಾಗಿ ಬರುವಿಯಾ? (ಗುಲ್ರುಬಿಯನ್ನು ದೂಡುವನು. ಗುಲ್ರುಬಿಯ ತಲೆ ಗವಿಯ ಬಂಡೆಗೆ ತಾಗಿ ರಕ್ತ ಬರುವುದು.)

ಗುಲ್ರುಬಿ— ಅಯ್ಯೋ!

ಸೈಯದ್— ಬಿದ್ದಿಯಾ! ಸಾಯಲಿಲ್ಲವೆ? ಇಕೋ ಸಾಯು! (ಗುಲ್ರುಬಿಯ ಮೇಲೆ ಕತ್ತಿ ಎತ್ತುವನು)

ಚಿನ್ನಾದೇವಿ— (ಅವನ ಕತ್ತಿಗೆ ತನ್ನ ಕತ್ತಿಯಿಂದ ಹೊಡೆಯಲು ಅವನ ಕತ್ತಿ ಕೆಳಗೆ ಬೀಳುವುದು) ಛೀ, ಹೇಡಿಯೇ, ನಿರಾಯುಧಳಾಗಿ ಬಿದ್ದ ಸ್ತ್ರೀಯ ಮೇಲೆ ಮೇಲಾಗಿ ತನ್ನ ಧರ್ಮ ಪತ್ನಿಯ ಮೇಲೆ ಕತ್ತಿಯೆತ್ತುವಿಯಾ! ಇನ್ನೊಮ್ಮೆ ಎತ್ತಿದರೆ ನಿನ್ನ ಕೈಯೇ ಮುರಿದು ಬಿದ್ದೀತು.

ಗುಲ್ರುಬಿ— (ಗಟ್ಟಿಯಾಗಿ) ಅಯ್ಯೋ! ಯಾರಾದರೂ ಇತ್ತ ಬನ್ನಿ! ಕಾಪಾಡಿ! ಕಾಪಾಡಿ!

ಕೃಷ್ಣದೇವರಾಯ— (ಬೇಟೆಯ ವೇಷದಲ್ಲಿ ಖಡ್ಗ ಹಸ್ತನಾಗಿ ಜೋರಿನಿಂದ ಪ್ರವೇಶಿಸಿ) ಯಾರದು ಏನಾಯಿತು! ಅರೆ! ಚಿನ್ನಾ! ನೀನು ಇಲ್ಲಿಗೆ ಹೇಗೆ ಬಂದೆ? ಇವನಾರು? ಓ! ಸೈಯದ್ ಮರ್ಕಾರ್! ಕುದುರೆಗಳನ್ನು ತಂದು ಕೊಡುವೆನೆಂದು ಹೇಳಿ ನನ್ನಿಂದ ನಲುವತ್ತು ಸಾವಿರ ವರಹಗಳನ್ನು ಅಪಹರಿಸಿಕೊಂಡು ಹೋದ ಕಳ್ಳ! ಇಲ್ಲಿ ಅನಾಚಾರವೆಸಗುವೆಯಾ? ಹುಂ ಒಳ್ಳೆಯ ಮಾತಿನಲ್ಲಿ ಕತ್ತಿಯನ್ನು ಬಿಸುಟು ಶರಣು ಬಾ!

(ಸೈಯದ್ ಮರ್ಕಾರ್ ತಲೆತಗ್ಗಿಸಿ ಕತ್ತಿಯನ್ನು ಕೆಳಗೆ ಹಾಕುವನು. ಕೃಷ್ಣದೇವರಾಯನು ಅವನ ಬಟ್ಟೆಯಿಂದಲೇ ಅವನ ಕೈಗಳನ್ನು ಸೇರಿಸಿ ಕಟ್ಟುವನು.)

ಗುಲ್ರುಬಿ— (ರಾಯನ ಬಳಿಗೆ ಬಂದು ಮಂಡಿಯೂರಿ) ಕರ್ನಾಟಕ ಧರ್ಮರಾಜಾ, ದಯಾಳೂ! ನನ್ನ ಪತಿಯನ್ನು ಕ್ಷಮಿಸೋಣಾಗಲಿ. ನನಗೆ ಪತಿಭಿಕ್ಷೆ ದಯಪಾಲಿಸಿ! ನಿಮ್ಮ ಸಾಲವನ್ನು ಮುಟ್ಟಿಸುವುದು ನನ್ನ ಹೊಣೆ

ಕೃಷ್ಣದೇವ— ಸೋದರೀ, ಇವನು ನಿನ್ನ ಪತಿಯೆ?

ಗುಲ್ರುಬಿ— ಹೌದು ರಾಜೇಂದ್ರಾ. ಇವರು ದುಷ್ಟ ಸಹವಾಸದಿಂದ ಹೀಗೆ ಕೆಟ್ಟು ಹೋದರು. ಈಗ ಆ ಸ್ನೇಹಿತನಿಲ್ಲ. ತನ್ನ ದುಷ್ಟತನದಿಂದಲೇ ತಾನು ಸತ್ತ.

ಚಿನ್ನಾದೇವಿ— ಸಾರ್ವಭೌಮಾ! ಈ ಸಾಧ್ವೀಮಣಿಯ ಕೋರಿಕೆಯನ್ನು ಈಡೇರಿಸಿಕೊಡಿ. ಇವಳು ತನ್ನ ಪತಿಯನ್ನು ಸನ್ಮಾರ್ಗಕ್ಕೆಳೆಯಲು ತುಂಬಾ ಶ್ರಮಿಸುತ್ತಾಳೆ. ನಿಮ್ಮ ಈ ಪ್ರೇಮರಾಣಿಯ ಕೋರಿಕೆಯನ್ನು ಈಡೇರಿಸಲಾರಿರಾ?

ಗುಲ್ರುಬಿ— (ಚಿನ್ನಾದೇವಿಗೆ) ಏನು! ನೀವು ಕರ್ಣಾಟಕದ ರಾಣಿಯೆ? (ಎದ್ದು ಚಿನ್ನಾದೇವಿಯ ಕಾಲು ಹಿಡಿದು) ನನ್ನ ಪತಿಯಿಂದ ಎಂತಹ ಅಪರಾಧವಾಯಿತು. ಅದನ್ನು ಮರೆತು ಕ್ಷಮೆ ಕೊಡಿಸಿ.

ಚಿನ್ನಾ— ಹಾಗನ್ನಬೇಡ ತಾಯಿ ಜಾತಿ ವ್ಯತ್ಯಾಸವಿದ್ದರೂ ಮನುಷ್ಯತ್ವವು ಒಂದು ತಾನೇ. ನಾನೂ ನೀನೂ ಈ ಭೂಮಾತೆಯ ಸಹೋದರಿಯರೇ. (ಗುಲ್ರುಬಿಯನ್ನು ಆಲಿಂಗಿಸುವಳು)

ಗುಲ್ರುಬಿ— ಇಂತಹ ಸೋದರೀ ಪ್ರೇಮವು ಮುಸಲ್ಮಾನ ಹಿಂದೂ ಸಹೋದರಿಯರಲ್ಲಿ ಚೆನ್ನಾಗಿ ಬೆಳೆಯಲಿ.

ಕೃಷ್ಣದೇವ— (ಸೈಯದನ ಕಟ್ಟುಬಿಚ್ಚಿ) ಅರೇ ಸೈಯದ್. ನಿನ್ನ ಪತ್ನಿಗಾಗಿ ನಿನ್ನನ್ನು ಬಿಟ್ಟು ಬಿಟ್ಟಿದ್ದೇನೆ. ಹೋಗು.

(ಸೈಯದ್ ಮರ್ಕಾರ್ ತಲೆ ತಗ್ಗಿಸಿಕೊಂಡು ಹೋಗುವನು. ಗುಲ್ರುಬಿ ಅವನ ಹಿಂದೆ ಹೋಗುತ್ತ)

ಗುಲ್ರುಬಿ— ಕಾಂತಾ, ಈ ಮಹಾರಾಜನಿಗೆ ಕೃತಜ್ಞತೆಯನ್ನೇ ಹೇಳದೆ ಹೋಗಬಹುದೆ?

ಕೃಷ್ಣದೇವ— ಪಾಪ, ನಾಚಿಗೆಯಿಂದ ಅವನ ಬಾಯಿಯೇ ಬಿದ್ದು ಹೋಗಿದೆ.

ಗುಲ್ರುಬಿ— ಅವರ ಪರವಾಗಿ ನಾನೇ ಕೇಳುತ್ತೇನೆ. ಕರ್ಣಾಟಕ ರಾಜರಾಣಿಯರೇ ನಿಮಗೆ ನಾವು ಆಜನ್ಮ ಕೃತಜ್ಞರಾಗಿರುತ್ತೇವೆ.

(ಹೋಗುವಳು)

ಚಿನ್ನಾ— ಎಂತಹ ಸಾಧ್ವಿ ಇವಳು.

ಕೃಷ್ಣದೇವ— ಇದಿರಲಿ, ಚಿನ್ನಾ. ನೀನು ಈ ಅಧಮನ ಕೈಗೆ ಬಿದ್ದ ಬಗೆ ಹೇಗೆ?

ಚಿನ್ನಾ— ಎಲ್ಲವೂ ನಿಮ್ಮ ಮಂತ್ರಿಪ್ರವರರಾದ ತಿಮ್ಮರಸರ ಮಾಯೆ. ನಮ್ಮಿಬ್ಬರ ಪ್ರೇಮವನ್ನು ಬತ್ತಿಸಬೇಕೆಂದು, ಅಂದು ನನ್ನನ್ನು ಔಷಧ ಪ್ರಯೋಗದಿಂದ ಮೂರ್ಛೆಗೊಳಿಸಿ ಗುತ್ತಿದುರ್ಗಕ್ಕೆ ಕಳುಹಿ

(೧೧ನೇ ಪುಟ ನೋಡಿರಿ)

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. No. 266/1963

ಚಿಕ್ಕಿ ಸೆಡ್ತಿ — ವಾದಿಳು

ಮತ್ತು ಜೋನ್ ಹರ್ಬರ್ಟ್ ಸೋನ್ಸ್— ಪ್ರತಿವಾದಿ

ಜೋನ್ ಹರ್ಬರ್ಟ್ ಸೋನ್ಸ್, ಎಲಿಯಾಬ್ ಸೋನ್ಸರ ಮಗ, ಉಡುಪಿ ತಾಲೂಕು ನಂಬ್ರ 70ನೇ ಬಡಗಬೆಟ್ಟು ಗ್ರಾಮದಲ್ಲಿರುವವ.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ—

ವಾದಿಯು ನಿಮ್ಮ ಮೇಲೆ ಈದಿನ ಅಸಲು ಬಡ್ಡಿ ಬಾಬ್ತಿಗೆ ಮಾಡಿದ ಮೇಲಿನ ದಾವೆಯು ನಿಮ್ಮ ಹಾಜರಾತಿ ಬಗ್ಗೆ ತಾ 28—10—1963 ರಲ್ಲು ಮೇಲ್ಕಂಡ ಕೋರ್ಟಿನಲ್ಲಿ ತಿಕ್ಕಿಗೆ ಇಟ್ಟಿರುತ್ತದೆಂಬ ಸಂಗ್ತಿ ನಿಮಗೆ ಈ ಮೂಲಕ ತಿಳಿಸೋಣಾಗಿಯದೆ.

By Order of the Court

B. Ananda Shetty,

Advocate for the petitioner.

Udipi, Dated 4—10—1963.

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ **5**
2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ **5¼** ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ **3**

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ವಿಶಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ನವಯುಗ

ರಾಷ್ಟ್ರೀಯ ವಾರಪತ್ರಿಕೆ

ಉಡುಪಿ

ಜಾಹೀರಾತು ದರಗಳು:

ನಿಯಮಿತ (ಕಂಟ್ರಾಕ್ಟ್) ರೂ. ಕಲಂ ಸೆಂಟಿಮೀಟರಿಗೆ 1-00

ಅನಿಯಮಿತ (ಕೆಜುವಲ್) ಕಲಂ ಸೆಂಟಿಮೀಟರಿಗೆ 1-50

ಚಂದಾ:

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75

ಬಿಡಿಪ್ರತಿ ರೂ 0-13

ಚಂದಾ ಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ವಿವೇಚನೆಗೊಂದ ಸವಾಲು

ಏಶಿಯಾದಲ್ಲಿ ಸರ್ವಾಧಿಕಾರತನ

೧

ಪೂರ್ವ ಏಶ್ಯಾದಲ್ಲಿನ ದೇಶಗಳಲ್ಲಿ ಏಕನಾಯಕತ್ವವು ಯಾವ ರೀತಿಯಲ್ಲಿ ಬೆಳೆದು ಬಂದಿತು ಎಂಬುದನ್ನು ಹಿಂತಿನ ವಾರ ನಾವು ನೋಡಿದ್ದೇವೆ ಈಗ ಶಾಂತ ಸಾಗರ ಮತ್ತು ಹಿಂದೂ ಸಾಗರದ ದ್ವೀಪವರ್ತಿ ರಾಷ್ಟ್ರಗಳ ಕಡೆಗೆ ತುಸು ಗಮನ ಹರಿಸೋಣ.

ಅತಿ ವಿಚಿತ್ರ ಮಾದರಿಯಲ್ಲಿ ಸ್ಥಾಪಿತವಾಗಿದೆ ಜಪಾನದ ಪ್ರಜಾತಂತ್ರ ೧೯೦೪-೦೫ರಲ್ಲಿ ಸಾಮ್ರಾಜ್ಯವಾದಿ ರಷ್ಯವನ್ನು ಜಪಾನವು ಮಣ್ಣುಮುಕ್ಕಿಸಿತು ಆ ಸಮಯದಲ್ಲಿಯೇ ಜಪಾನದ ರಾಜನೀತಿಯಲ್ಲಿ ಸೇನಾಪ್ರಭುತ್ವವು ಸಮಾವೇಶಗೊಂಡಿತು. ತೋರ್ಪಡಿಕೆಗಾಗಿ ಮಟ್ಟಿಗೆ ಅಲ್ಲಿ ಆಡಳಿತೆಯು ನಾಗರಿಕ ನೇತಾರರ ಹಸ್ತಗಳಲ್ಲಿತ್ತು; ಆದರೆ ವಸ್ತುತ. ಅಲ್ಲಿನ ಪರಿಸ್ಥಿತಿಯು ನಪುಂಸಕನಂತಿತ್ತು. ಸೇನೆಯೇ ದ್ವಿತೀಯ ಲೋಕ ಸಮರಕ್ಕೆ ಜಪಾನವನ್ನು ಎಳೆದು ತಂದಿತು.

ಜನರಲ್ ಮೆಕಾರ್ಥರ್ ಪರಾಜಿತ ಜಪಾನದ ಮೇಲೆ ಪ್ರಜಾತಂತ್ರೀಯ ಸಂವಿಧಾನವನ್ನು ಹೊದಿಸಿದರು. ಜಪಾನವು ಯಾವ ಕಾಲದಲ್ಲಾದರೂ ಆಕ್ರಮಣೋದ್ದೇಶದಿಂದ ಶಸ್ತ್ರಸಜ್ಜಿತವಾಗದು ಎಂಬುದು ಈ ಸಂವಿಧಾನದ ಒಂದು ಅನುಚ್ಛೇದ ಅಲ್ಲಿನ ಸೈನಿಕ ಪ್ರಶಾಸನ ಪರಂಪರೆಯನ್ನು ವಿದೇಶೀ ಸೇನೆಯು ಕಿತ್ತು ಹಾಕಿತು. ಇಂದಿನವರೆಗೂ ಜಪಾನದಲ್ಲಿ ಪ್ರಜಾತಂತ್ರದ ಪಾದಗಳು ಭದ್ರವಾಗಿ ನೆಲೆಯೂರಿಲ್ಲ ಆದರೂ ಐತಿಹಾಸಿಕ ಅನುಭವ ಮತ್ತು ಆರ್ಥಿಕ ಸಮೃದ್ಧಿಗಳು ಜಪಾನದ ಜನಮನವನ್ನು ಪ್ರಜಾತಂತ್ರದ ಕಡೆಗೆ ವಾಲಿರುವಂತೆಸಗಿವೆ.

ಆಗ್ನೇಯ ಏಶ್ಯ ಖಂಡದಲ್ಲಿ ನೂರಾರು ದ್ವೀಪಗಳಲ್ಲಿ ಹರಡಿದ ಫಿಲಿಪ್ಪಾಯಿನ್ ದ್ವೀಪಸ್ತೋಮವಿದೆ. ೧೮೯೮ರಲ್ಲಿ ಸ್ಪೇನಿನ ಕಪಿಮುಷ್ಟಿಯಿಂದ ಹೊರಬಂದ ಬಳಿಕ, ೧೯೪೬ರ ವರೆಗೆ ಇದು ಅಮೇರಿಕೆಯ ಕೈಕೆಳಗಿತ್ತು. ಅಲ್ಲಿರುವ ಮ್ಯಾಕಾಪಗಾಲ್‌ರ ಶಾಸನವನ್ನು ಶುದ್ಧ ಪ್ರಜಾತಂತ್ರವೆಂದು ಹೇಳುವುದು ಸಾಧ್ಯವಿಲ್ಲ. ಮಲೇಶ್ಯಾದಲ್ಲಿ ಸೇರ್ಪಡೆಗೊಳ್ಳುವ ವಿಷಯದಲ್ಲಿ ಫಿಲಿಪ್ಪಾಯಿನ್ ತಳೆದಿರುವ ಭಿನ್ನಾಭಿಪ್ರಾಯಗಳಿಗೆ ಇದುವೇ ಮೂಲ ಕಾರಣವಾಗಿರಲೂಬಹುದು.

ಏಶ್ಯಾದಲ್ಲಿ ಪಾಶ್ಚಾತ್ಯರ ಅಧೀನಕ್ಕೊಳಪಡದ ದೇಶವೊಂದಿದ್ದರೆ, ಅದು ಥ್ಯಾಯ್‌ಲ್ಯಾಂಡ್ ಮಾತ್ರ. ಅಲ್ಲಿನ ಸಂಸ್ಕೃತಿಯು ರಾಮಾಯಣದ ಆಧಾರದ ಮೇಲೆ ನಿಂತಿದ್ದರೂ ಜನತೆಯು ಬೌದ್ಧ ಧರ್ಮಾವಲಂಬಿಯಾಗಿದೆ ರಾಜನ ಹೆಸರಿನಲ್ಲಿ ಅಲ್ಲಿ ಸೇನೆಯು ಆಡಳಿತೆಯನ್ನು ನಡೆಸುತ್ತದೆ. ಮೊದಲು ಅಲ್ಲಿ ಫೀಲ್ಡ್ ಮಾರ್ಶಲ್ ಪಿಬುಲ್ ಸಂಗ್ರಾಮರು ಸರ್ವಾಧಿಕಾರ ನಡೆಸುತ್ತಿದ್ದರು. ಇಂದೀಗ ಫೀಲ್ಡ್ ಮಾರ್ಶಲ್ ಸರಿತ ಥನಾರಾತರ ಹೆಸರಿನಲ್ಲಿ ವಾದ್ಯ ಮೊಳಗುತ್ತಿದೆ ಪ್ರಜಾ ತಂತ್ರವು ಬೇರೆ ಹೊಗಿಸುವಷ್ಟು ಅವಕಾಶವಿನ್ನೂ ಅಲ್ಲಿ ದುರ್ಲಭವೆನಿಸಿದೆ

ಇಂಡೋನೇಶಿಯಾವು ಭಾರತೀಯ ಸ್ವಾತಂತ್ರ್ಯ ಸಂಗ್ರಾಮದಿಂದ ಪ್ರೇರಣೆ ಪಡೆದಿತ್ತು. ಭಾರತವಾದರೂ ಸಂಯುಕ್ತ ರಾಷ್ಟ್ರ ಸಂಘದಲ್ಲಿ ಅದರ ವಿಮುಕ್ತಿ ಆಂದೋಲನವನ್ನು ಬಲವಾಗಿ ಸಮರ್ಥಿಸಿತ್ತು. ಡಾ ಸುಕರ್ಣರ ನೇತೃತ್ವದಲ್ಲಿ ಅಲ್ಲಿ ಪ್ರಜಾತಂತ್ರವು ಉತ್ತಮ ರೀತಿಯಲ್ಲಿ ಮೊಳೆಯುವುದೆಂದು ಹೆಚ್ಚಿನವರು ನಿರೀಕ್ಷಿಸಿದ್ದರು ಆದರೆ, ಹೊಲ್ಲೆಂಡು ಹದಿನಾಲ್ಕು ವರ್ಷ ಪರ್ಯಂತ ಪಶ್ಚಿಮ ಇರಿಯಾನನ್ನು ಬಿಟ್ಟುಕೊಡಲಿಲ್ಲ; ಪಾಶ್ಚಾತ್ಯ ದೇಶಗಳು ಕೂಡ ಹೊಲ್ಲೆಂಡಿನ ನೀತಿಯನ್ನೇ ಸಮರ್ಥಿಸುತ್ತ ಬಂದುವು. ಉಗ್ರ ಸಾಂಪ್ರದಾಯಿಕ ದಳವಾದ ದರೂಲ್ ಇಸ್ಲಾಮವು ಉದ್ರಿಕ್ತವಾಯಿತು. ಸುಮಾತ್ರಾ ಮತ್ತು ಸಿಲೆಬಸ್‌ಗಳಲ್ಲಿ ವಿದ್ರೋಹವೂ ಕಾಣಿಸಿಕೊಂಡಿತು ಅಮೇರಿಕೆಯು ತನ್ನ 'ಡಾಲರ'ಗಳ ಬಲದಿಂದ ಇಂಡೋನೇಶ್ಯವನ್ನು 'ಸೀಟೋ'ದಲ್ಲಿ ಹೊಗಿಸಲು ಪ್ರಯತ್ನಿಸಿತು. ರಾಜನೈತಿಕ ಅಶಾಂತಿಯೊಡನೆ ಆರ್ಥಿಕ ಪರಿಸ್ಥಿತಿಯು ಭಯಂಕರ ರೂಪವನ್ನು ಪಡೆಯಿತು ಹಾಗಿದ್ದರೂ ಬಹಳಷ್ಟು ಪ್ರಯತ್ನದಿಂದಾಗಿ ಸುಕರ್ಣರು ಇಂಡೋನೇಶ್ಯದ ಐಕ್ಯವನ್ನು ಉಳಿಸಿಕೊಂಡರು.

ಇದೇ ಸಂದರ್ಭದಲ್ಲಿ ಡಾ| ಸುಕರ್ಣರು ಚೀನಕ್ಕೆ ತೆರಳಿದರು ಸಾಮ್ಯವಾದಿ ಸರ್ವಾಧಿಕಾರದಲ್ಲಿ ಚೀನವು ಸಾಧಿಸಿದ ಭೌತಿಕ ಪ್ರಗತಿಯು ಇವರ ಮೇಲೆ ಸಾಕಷ್ಟು ಪ್ರಭಾವ ಬೀರಿತು. ಅಲ್ಲಿಂದ ಮರಳಿ ಬಂದ ಸುಕರ್ಣರು ತನ್ನ ಆಡಳಿತದ ರೂಪರೇಖೆಯನ್ನೇ ಬದಲಿಸಿದರು. ಪ್ರಜಾತಂತ್ರದ ರೆಕ್ಕೆಯನ್ನು ತುಂಡರಿಸಿ ಬಿಟ್ಟರು ಈಗ ಡಾ| ಸುಕರ್ಣರು ಜೀವಾವಧಿ ರಾಷ್ಟ್ರಪತಿಯಾಗಿ ಆಯ್ಕೆಗೊಂಡಿದ್ದಾರೆ ಪ್ರಧಾನ ಸೇನಾಪತಿ ಜನರಲ್ ನಸೂತಿಸ್‌ರವರು ಸುಕರ್ಣರ ಬಲಗೈಯಂತಿದ್ದಾರೆ ಇಂಡೊನೇಶ್ಯವು ಮಲೇಶ್ಯಾದಲ್ಲಿ ಸೇರದಿರುವುದಕ್ಕೆ ಇದೇ ಕಾರಣವಿರಬಹುದು

ಇಂಡೋನೇಶ್ಯದ ನೆರೆಯಲ್ಲಿ ಮಲಯಾ ಇದೆ ಇದು ಸಿಂಗಾಪುರ, ಸರವಾಕ ಮತ್ತು ಉತ್ತರ ಬೋರ್ನಿಯೊಗಳೊಡನೆ ಕೂಡಿ ಮಲೇಶ್ಯಾ ರಚಿಸಿಕೊಳ್ಳಲು ಉತ್ಸಾಹಿತವಾಗಿದೆ. (ಮಲಯಾ ಮತ್ತು ಸಿಂಗಾಪುರಗಳು ಈಗಲೇ ಒಂದಾಗಿವೆ. ಒಂದು ಗಿನೆ ಉಳಿದೆರಡೂ ಸದ್ಯದಲ್ಲೇ ಸೇರುವ ನಿರೀಕ್ಷೆಯಿದೆ.) ಸುಕರ್ಣರೂ ಇತರ ಸಾಮ್ಯವಾದಿಗಳೂ ಏನಾದರೂ ಹೇಳಲಿ, ಇಲ್ಲಿನ ಪ್ರಧಾನ ಮಂತ್ರಿ ಟೆಂಕು ಅಬ್ದುಲ್ ರಹಮಾನರ ನೇತೃತ್ವದಲ್ಲಿ ಇಲ್ಲಿ ಪ್ರಜಾತಂತ್ರ ಸ್ಥಾಪನೆಯು ಯಶಸ್ವಿಯಾಗುವುದು ಖಂಡಿತ.

ಇನ್ನು ನಾವು ಬರ್ಮಾದತ್ತ ಹೊರಳಬಹುದು. ಇಲ್ಲಿನ ಪ್ರಜಾತಂತ್ರದ ಬಗ್ಗೆ ಕಲಾಕಾರ ರವೀಂದ್ರನ್‌ನವರೊಂದು ವ್ಯಂಗ್ಯ ಚಿತ್ರ ಬರೆದಿದ್ದಾರೆ. ಬುದ್ಧ ಮೂರ್ತಿಯು ಪ್ರಜಾತಂತ್ರವನ್ನು ಸೂಚಿಸುವುದಾದರೆ, ಅದನ್ನು ಇಕ್ಕಡೆಯಿಂದಲೂ ಆಕ್ರಮಿಸಿರುವ ಬಂದೂಕುಗಳು ಅಲ್ಲಿನ ಆಡಳಿತವನ್ನು ಪ್ರತಿನಿಧಿಸುತ್ತವೆ. ಸ್ವಾತಂತ್ರ್ಯ ಪಡೆದೊಡನೆಯೇ ಬರ್ಮಾದ ಅಧಿಕಾಂಶ ಜನನಾಯಕರು ಮೃತ್ಯುವನ್ನಪ್ಪಿದರು. ಪ್ರಧಾನ ಮಂತ್ರಿ ಯೂ-ನೂರವರು ಶುದ್ಧ ಪ್ರಜಾತಂತ್ರ ಮತ್ತು ತಟಸ್ಥ ವಿದೇಶ ನೀತಿಯಲ್ಲಿ ವಿಶ್ವಾಸವಿಟ್ಟವರು. ಇದರಿಂದಾಗಿಯೇ ವಿದೇಶೀ ಸಹಾಯ ಪಡೆಯುವುದಕ್ಕೂ ಅವರು ಹಿಂಜರಿಯುತ್ತಿದ್ದರು ಆದರೆ, ಕಾರೆನ್, ಕಚೀನ್, ಛಿನ್, ಕಾಥಿನ್ ಮೊದಲಾದ ಅಲ್ಪ ಸಂಖ್ಯಾಕರೂ ಸಾಮ್ಯವಾದಿಗಳೂ ಕೇಂದ್ರ ಸರಕಾರದ ಪ್ರಭುತ್ವವನ್ನು ಒಪ್ಪಿಕೊಳ್ಳಲಿಲ್ಲ. ಆಡಳಿತ ಪಕ್ಷವಾಗಿದ್ದ ಏಂಟೀ ಫ್ಯಾಸಿಸ್ಟ್ ಪೀಪಲ್ಸ್ ಲೀಗ್‌ನಲ್ಲಿ ಬಿರುಕು ಕಾಣಿಸಿಕೊಂಡಿತು. ಯೂ-ನೂರವರು ೧೯೫೮ರಲ್ಲಿ ಪ್ರಧಾನ ಸೇನಾಪತಿ ನೇ-ವಿನ್ನರ ಹಸ್ತಗಳಿಗೆ ರಾಜ್ಯ ಸೂತ್ರಗಳನ್ನು ಒಪ್ಪಿಸಿದರು ಸೇನೆಯು ಪ್ರಶಾಸನ ಯಂತ್ರವನ್ನು ಶುದ್ಧ ಮಾಡಿತು. ೧೯೬೦ರಲ್ಲಿ ಸಾರ್ವತ್ರಿಕ ಚುನಾವಣೆಗಳನ್ನು ನಡೆಸಿ, ಅಧಿಕಾರ ಸೂತ್ರವನ್ನು ಮರಳಿ ಯೂ-ನೂರವರಿಗೆ ಕೊಟ್ಟಿತು ಇದು ವಿಶ್ವೇತಿಹಾಸದಲ್ಲಿಯೇ ಅಸ್ವಾದೃಶ ಘಟನೆ

ಆದರೆ, ಕೆಲಸಮಯದಲ್ಲಿಯೇ ಯೂ-ನೂರವರನ್ನು ಪದಚ್ಯುತಗೊಳಿಸಿ ನೇ-ವಿನ್ನರು ಸರ್ವಾಧಿಕಾರ ವಹಿಸಿದರು. ದೇಶದಲ್ಲಿ ಸಮಾಜವಾದ ಸ್ಥಾಪನೆಗಾಗಿ ಇದು ಅತ್ಯಗತ್ಯವಿತ್ತು ಎಂದವರು ವಾದಿಸುತ್ತಾರೆ. ಉದ್ದಿಮೆ ಮತ್ತು ಬ್ಯಾಂಕುಗಳನ್ನು ಅವರು ರಾಷ್ಟ್ರೀಕರಿಸಿದರು ಸಮಾಜವಾದದ ಆರ್ಥಿಕ ಕಾರ್ಯಕ್ರಮಗಳಲ್ಲಿ ತಮಗಿರುವ ಆಸ್ಥೆಯನ್ನವರು ಈ ಮೂಲಕ ತೋರ್ಪಡಿಸಿದ್ದಾರೆ.

(೧೦ನೇ ಪುಟ ನೋಡಿರಿ)

ಎನ್ ಸಿ. ಸಿ. ದಳದ ನೌಕಾ ಸೇನಾ ವಿಭಾಗದ ಪರೇಡ್‌ವೊಂದರಲ್ಲಿ ಕಮೋಡಾರ್ ಕೆ. ಆರ್ ನಾಯರ್ ಅವರು ಕೆಡೆಟ್ ಒಬ್ಬಾತನೊಂದಿಗೆ ಸಂಭಾಷಿಸುತ್ತಿರುವುದನ್ನು ಚಿತ್ರದಲ್ಲಿ ಕಾಣಬಹುದು.

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ......
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ

1—1—1963ರಿಂದ ಠೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ

ನಿಮ್ಮ ಉಳಿತಾಯವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ
ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ಕುಮಾರಿ ಬಿಲ್ಲೆಗಳು

(ರಿಜಿಸ್ಟರ್ಡ್ Regd.)

ಪ್ರಕೃತಿಯು ವಿಫಲಗೊಂಡಾಗ ಉಂಟಾಗುವ ತೊಂದರೆ ನಿವಾರಣೆಗೆ ಸಮಯೋಚಿತವಾದ ಆಯುರ್ವೇದೀಯ ಮಿಶ್ರಣ।
ಬ್ಯಾಟ್ ೧ರ ಸಾಮಾನ್ಯ ರೂ. 4/. ಮಧ್ಯಮ ರೂ. 6/ ಉತ್ತಮ ರೂ 9/-

P. Devee & Co. (N J.) Calcutta—40.

ಸ್ಟಾಕಿಸ್ಟರು — ರಾಜಾ ಮೆಡಿಕಲ್ ಹಾಲ್, ಬೆಂಗಳೂರು ಕೆಂಟೋನ್ಮೆಂಟ್;
ಕುಮಟಾ ಫಾರ್ಮಸಿ, ಕುಮಟಾ (ಉ. ಕ.)

ಅಸ್ತಮಾ ರೋಗಿಗಳ ತಿಳುವಳಿಕೆಗೆ

ರಿಜಿಸ್ಟ್ರಿಯಾದ ಚಿತ್ರಕೋಟ್ ಅಸ್ತಮಾ ನಿವಾರಕ ಬೂಟಿಯನ್ನು ತಾ 1-11-63ನೇ ಹುಣ್ಣಿಮೆ ರಾತ್ರಿ ಖೀರಿನೊಂದಿಗೆ ಸೇವಿಸುವುದರಿಂದ ಅಸ್ತಮಾ, ದಮ್ಮು, ಕೆಮ್ಮು, ನೆಗಡಿ ನಿವಾರಣೆಯಾಗುತ್ತದೆ. ಕೂಡಲೇ ಹುಣ್ಣಿಮೆಯ ಮೊದಲೇ ಬರೆಯಿರಿ.

Manager, Shri Mahatma Naga
Baba Ayurvedashram,
P O. Chitrakot U. P.

ಆಪತ್ಕಾಲದಲ್ಲಿ

ನಮ್ಮ ಸಂಸ್ಕೃತಿಗೊಂದು ಪ್ರತಿಭಟನೆ

—ಮದ್ರಾಸದ ಮುಖ್ಯ ನ್ಯಾಯಾಧೀಶ ಎಸ್. ರಾಮಚಂದ್ರ ಅಯ್ಯರ್.

ಒಬ್ಬ ಭಾರತೀಯನ ಮನಃಪ್ರವೃತ್ತಿಯು ಕೇವಲ ಗತವೈಭವವನ್ನು ಹೊಗಳುವುದಾಗಿದೆಯೆಂದು ಹೇಳಲಾಗುತ್ತಿದೆ. ಈ ದೂಷಣೆಯು ಉಚಿತ ಮತ್ತು ನಿಜವಾಗಿರುವುದರ ಬದಲು ನನ್ನ ಮನಸ್ಸಿಗೆ ಹೆಚ್ಚಾಗಿ ದೋಷೈಕ ದೃಷ್ಟಿಯ ಸ್ವಭಾವದ್ದಾಗಿದೆ.

ನಮ್ಮ ರಾಷ್ಟ್ರವು ತನ್ನ ನಾಗರಿಕರಿಗೆ ಅನೇಕ ವಿಷಯಗಳಲ್ಲಿ ಅಸಾಮಾನ್ಯವಾದ ಕೆಲವು ಮೂಲ ಹಕ್ಕುಗಳ ಭದ್ರತೆಯುಳ್ಳ ಒಂದು ಘಟನೆಯನ್ನು ಮಾಡಿಕೊಂಡು ಕೂಡಲೇ ಅದಕ್ಕೆ ಹೊಂದಿಕೊಂಡಿದೆ. ಅನೇಕ ರಾಷ್ಟ್ರಗಳು ಬಹು ಸಮಯ ಪ್ರಯೋಗಿಸಲು ಅನುಮಾನಿಸಿರುವ ವಯಸ್ಕ ಮತದಾನಾಧಿಕಾರವುಳ್ಳ ಸಾರ್ವಭೌಮ ಪ್ರಜಾ ಸರಕಾರವನ್ನು ಸ್ಥಾಪಿಸಿದೆ. ಧೈರ್ಯದಿಂದ ವಿಶಾಲವಾದ ದೇಶದಲ್ಲಿ ಸೋಶಿಯಲಿಷ್ಟ ಮಾದರಿಯ ಸಮಾಜವನ್ನು ಸ್ಥಾಪಿಸಲು ಯತ್ನಿಸಿದೆ. ಇಂತಹ ಒಂದು ರಾಷ್ಟ್ರವು ಗತವೈಭವವನ್ನು ಮೆರೆಯಿಸಿ ತೃಪ್ತಿಪಡುವ ರಾಷ್ಟ್ರವೆಂದು ಹೇಳುವುದು ಸಾಧ್ಯವಿಲ್ಲ.

ಒಂದು ತ್ವರಿತ ಪರಿಸ್ಥಿತಿಯಲ್ಲಿ ಕೂಡ ತಮ್ಮ ಆದರ್ಶದ ಕಡೆಗೆ, ಮತ್ತು ಆ ಮಾರ್ಗದಲ್ಲಿ ತಾವು ಮಾಡುವ ಯತ್ನಗಳನ್ನು ತಾತ್ಕಾಲಿಕವಾಗಿಯೂ ನಿಲ್ಲಿಸಲಾರದಷ್ಟು ನಮ್ಮ ಜನರ ಆಂತರಿಕ ಶಕ್ತಿಯು ಪ್ರಬಲವಾಗಿದೆ. ರಾಜಕೀಯ ಆದರ್ಶವಾದಿತ್ವ, ಆರ್ಥಿಕ ಪ್ರಗತಿ ಮತ್ತು ವೈಜ್ಞಾನಿಕ ಹಾಗೂ ವಿವಿಧ ಕಲಾಕ್ಷೇತ್ರಗಳಲ್ಲಿ ಅಭಿವೃದ್ಧಿ ಇವುಗಳು ಸಾಂಪ್ರದಾಯಿಕತೆ ಮತ್ತು ಧರ್ಮವನ್ನು ಬಿಟ್ಟುಬಿಡುವ ಆವಶ್ಯಕತೆಯನ್ನು ನಮ್ಮ ರಾಷ್ಟ್ರಕ್ಕೆ ಉಂಟು ಮಾಡಲಾರವು.

ಅದಕ್ಕೆ ವಿಪರೀತವಾಗಿ ಅವುಗಳ ಮಧುರ ಸಮ್ಮೇಳನವು ನಿಃಸಂಶಯವಾಗಿ ಈಗಿರುವುದಕ್ಕಿಂತ ಹೆಚ್ಚು ಉತ್ತಮವಾದ ಪ್ರಪಂಚವನ್ನು ರೂಪಿಸಬಲ್ಲುದು.

ಧರ್ಮವು ನಮ್ಮನ್ನು ವಾಸ್ತವಿಕ ಸತ್ಯಕ್ಕೆ ಒಯ್ಯುವ ಉದ್ದೇಶವುಳ್ಳದಾಗಿದೆ. ವಿಜ್ಞಾನದ ಗುರಿಯೂ ಅದೇ ಆಗಿರುತ್ತದೆ. ಆದರೆ ಅದು ಹೆಚ್ಚಾಗಿ ಲೌಕಿಕವಾಗಿದೆ. ಧರ್ಮವು ಮನುಷ್ಯನ ಮನಸ್ಸು ಮತ್ತು ಭಾವನೆಗಳನ್ನು ಪವಿತ್ರಗೊಳಿಸುತ್ತದ. ಆಧುನಿಕ ವಿಜ್ಞಾನವು ಇದರಲ್ಲಿ ಸ್ಪಷ್ಟವಾಗಿ ತಪ್ಪಿ ಹೋಗಿದೆ.

ಇದಕ್ಕೆ ವಿಪರೀತವಾಗಿ ವಿಜ್ಞಾನದ ಪ್ರಗತಿಯಲ್ಲಿ ಮಾನವ ವರ್ಗಕ್ಕೆ ದೌರ್ಬಲ್ಯದ ಅಧಃಪಾತವನ್ನು ತರುವ ಬೆದರಿಕೆಯನ್ನುಂಟುಮಾಡುತ್ತಿದೆ ಅದು ಅದರ ಪೂರ್ಣ ಪ್ರಳಯದ ಬೆದರಿಕೆಯನ್ನೂ ತೋರಿಸುತ್ತಿದೆ.

ವೈಜ್ಞಾನಿಕ ವಿಚಾರಗಳು ಹೆಚ್ಚಿನವಟ್ಟಿಗೆ ಎಲ್ಲಾ ದಿಕ್ಕುಗಳಲ್ಲಿ ಕಳೆದ ಕೆಲವು ವರ್ಷಗಳಿಂದ ತೋರಿಕೆಯ ಪ್ರಗತಿಯನ್ನು ನಿಃಸಂಶಯವಾಗಿ ಮಾಡಿವೆ. ಔಷಧದಲ್ಲಿ, ಚಿಕಿತ್ಸಾ ವಿಧಾನದಲ್ಲಿ, ವಿವಿಧ ಕಲಾಕ್ಷೇತ್ರದಲ್ಲಿ ಮತ್ತು ಬಾಹ್ಯಾಂತರಿಕ್ಷದ ರಹಸ್ಯಗಳನ್ನು ಭೇದಿಸುವ ಯತ್ನದಷ್ಟು ಹೆಚ್ಚಿನ ವಿಷಯದಲ್ಲಿ ಸಾಧಿಸಿದ ಪ್ರಗತಿಯು ಗಣನೀಯವಾಗಿದೆ.

ಅವುಗಳ ಜೊತೆಗೆ, ಕೆಲವು ವೇಳೆ ಅವುಗಳನ್ನು ಬಿಟ್ಟು ಹೆಚ್ಚಾಗಿಯೇ, ಸಾಮೂಹಿಕ ವಿನಾಶಕ್ಕೆ ಕಾರಣವಾದ ಆಯುಧಗಳನ್ನು ಉತ್ಪಾದಿಸುವುದರಲ್ಲಿ ಅದು ಮುಂದುವರಿದಿದೆ. ಈ ದಾರಿಯ ಪ್ರಗತಿ ಮತ್ತು ಆಡುವ ನಿಶ್ಚಿಂತೆಯ ಮಾತು ಭಯಂಕರವಾಗಿದೆ.

ಕೆಲವು ವರ್ಷಗಳ ಹಿಂದೆ ಒಂದು ತಮಿಳ್ ವಾರ ಪತ್ರಿಕೆಯು ಒಂದು ವ್ಯಂಗ್ಯ ಚಿತ್ರವನ್ನು ಪ್ರಕಟಿಸಿತ್ತು. ಅದರಲ್ಲಿ ಒಂದು ನಾಯಿಯು ತನ್ನ ಮರಿಯನ್ನು ಒಂದು ಪ್ರದರ್ಶನಾಲಯಕ್ಕೆ ಕೊಂಡು ಹೋಗುವ ಹಾಗೆ ಚಿತ್ರಿತವಾಗಿತ್ತು. ಅವೆರಡೂ ಒಂದು ಗೂಡಿನೊಳಗಿಟ್ಟ ಮನುಷ್ಯನ ಅಸ್ಥಿಪಂಜರದ ಬಳಿಗೆ ಬಂದುವು. ಸಣ್ಣ ಮರಿಗೆ ಆ ಅಸ್ಥಿಪಂಜರವು ಅಪರಿಚಿತವಾಗಿತ್ತು. ಇದೇನೆಂದು ಅದು ಕೇಳಿದಾಗ ಅದರ ತಾಯಿ ನಾಯಿಯು ಹೀಗೆ ಅದನ್ನು ವರ್ಣಿಸಿತು:— "ಇದೊಂದು ಎರಡು ಕಾಲುಗಳುಳ್ಳ ಪ್ರಾಣಿ. ಒಂದು ಕಾಲದಲ್ಲಿ ಇದು ಕೇವಲ ಬುದ್ಧಿಬಲದಿಂದ ಶಕ್ತಿಯನ್ನು ಮೆರೆಯಿಸಿತು. ಅದು ಅದೇ ಬುದ್ಧಿಬಲದಿಂದ ಒಂದನ್ನೊಂದು ಸಾಯಗೊಳಿಸಿ ಈಗ ಸಂಪೂರ್ಣ ನಾಶವಾಗಿದೆ.

ನಮ್ಮ ಪುರಾಣಗಳಲ್ಲಿ ಇದೇ ಅಭಿಪ್ರಾಯದ ನೀತಿಯನ್ನು ಕಲಿಸುವ ಕಥೆಗಳು ಇರುತ್ತವೆ ಇಂತಹ ಅನಾಹುತದಿಂದ ಮಾನವ ವರ್ಗವನ್ನು ಕಾಪಾಡಬಲ್ಲುದು ಯಾವುದು? ಮನುಷ್ಯನ ಮಾರ್ಗವನ್ನು ಸರಿಯಾದ ದಿಕ್ಕಿನಲ್ಲಿ ಹೋಗಗೊಡುವ ಧೈರ್ಯದ ಯತ್ನವೇ ಅದಾಗಿದೆ.

ಈ ತನಕ ಧರ್ಮವು ಈ ಉದ್ದೇಶವನ್ನು ಎಲ್ಲಾ ದೇಶಗಳಲ್ಲಿ ಮತ್ತು ಎಲ್ಲಾ ಕಾಲಗಳಲ್ಲಿ ಪೂರಯಿಸಿದೆ. ನಾವು ಅದನ್ನು ಕೇವಲ ಸಾಂಪ್ರದಾಯಿಕತೆಯೆಂದು ಅಲಕ್ಷಿಸುವುದಕ್ಕೆ ಕಾರಣವಿಲ್ಲ.

ನಮ್ಮ ಪೂರ್ವಿಕರು ನಮಗೆ ಅಮೂಲ್ಯವಾದ ಸಂಸ್ಕೃತಿಯು ಮತ್ತು ನಾಗರಿಕತೆಯ ಒಂದು ಸಂಪತ್ತನ್ನು ಬಿಟ್ಟುಹೋಗಿರುತ್ತಾರೆ ಅವುಗಳನ್ನು ನಾವು ಕೇವಲ ಕಾಪಾಡಿಕೊಂಡರೆ ಬಹುದೊಡ್ಡ ಕಾರ್ಯವನ್ನು ಮಾಡಿದ ಹಾಗಾಗುವುದು.

ಆದರೆ ನಾವು ಈ ದೊಡ್ಡ ವಿಚಾರಗಳ ಕುರಿತು ಮಾತನಾಡುವ ಮೊದಲು ನಮ್ಮ ಬಾಗಿಲ ಬಳಿಯಲ್ಲಿ ಏನು ನಿಂತಿದೆಯೆಂಬುದಕ್ಕೆ ಗಮನಕೊಡಬೇಕು. ಅನೇಕ ವರ್ಷಗಳ ಪರದೇಶೀಯರ ಆಳಿಕೆ ಮತ್ತು ಶೋಷಣೆಯು ನಮ್ಮನ್ನು ಸಾಕಷ್ಟು ಪೋಷಣೆಯೂ ಬೆಳೆವಣಿಗೆಯೂ ಇಲ್ಲದ ದುರ್ಬಲ ಜನಾಂಗವನ್ನಾಗಿ ಮಾಡಿದೆ. ಕೊಳೆ, ರೋಗ, ಬಡತನ ಮತ್ತು ನಿರುದ್ಯೋಗಗಳು ದೇಶದಲ್ಲಿ ನಿರರ್ಗಳವಾಗಿದ್ದವು. ಮೊದಲು ನಮ್ಮನ್ನು ಆಳಿದವರ "ವಿಭಾಗಿಸು ಮತ್ತು ಆಳು" ಎಂಬ ನೀತಿಯು ಭಾಷಾವಾರು, ಪ್ರಾಂತವಾರು ಮತ್ತು ಕೋಮುವಾರು ವಿವಾದಗಳ ದಾಯವನ್ನು ನಮಗೆ ಬಿಟ್ಟುಹೋಗಿದೆ. ನಮ್ಮ ದೇಶಕ್ಕೆ ಅವುಗಳು ಅಪರಿಚಿತವಾಗಿದ್ದವು. ಮತ್ತು ನಿಜವಾಗಿ ನಮ್ಮ ಸಂಸ್ಕೃತಿಗೆ ವಿರುದ್ಧವಾಗಿದ್ದವು. ಇವುಗಳು ನಮ್ಮ ಮುಖಂಡರಿಗೆ ಒಂದು ಪ್ರತಿಭಟನೆಯಾದವು. ಅವರು ಅವುಗಳನ್ನು ಧೈರ್ಯದಿಂದಲೂ ದೃಢ ನಿರ್ಧಾರದಿಂದಲೂ ಎದುರಿಸಿದ್ದಾರೆ. ಅದಾ ಫಲಿಂತಾರ್ಥವಾಗಿ ತುಲನೆ ಮಾಡುವಾಗ ಅಲ್ಪವೆನಿಸುವ ಸಾಮಾನ್ಯ ೧೫ ವರ್ಷಗಳ ಕಾಲದಲ್ಲಿ ಸರ್ವತೋಮುಖವಾದ ಪ್ರಗತಿಯನ್ನು ನಾವು ಕಾಣುತ್ತೇವೆ.

ಆ ಪ್ರಗತಿಯ ಮಹತ್ಕಾರ್ಯವನ್ನು ಪೂರ್ತಿಗೊಳಿಸುವುದಕ್ಕೆ ಶಕ್ಯವಾಗುವ ಮೊದಲು ನಮ್ಮ ದೇಶಕ್ಕೆ ದುರಾಶೆಯ ನೆರೆರಾಷ್ಟ್ರದಿಂದ ಬಂದ ಒಂದು ಗಂಡಾಂತರವನ್ನು ಪ್ರತಿಭಟಿಸಬೇಕಾಗಿ ಬಂದಿದೆ. ಅದರ ರಾಜಕೀಯ ತತ್ವವೇ ನಾವು ಈಗ ಪವಿತ್ರವೆಂದೆಣಿಸುವುದಕ್ಕೆಲ್ಲಾ ಮತ್ತು ಬಹು ಪುರಾತನ ಕಾಲದಿಂದ ಪವಿತ್ರವೆಂದೆಣಿಸುತ್ತ ಬಂದಿರುವದಕ್ಕೆಲ್ಲಾ ಅಪಾಯವನ್ನುಂಟುಮಾಡುವಂತಹದಾಗಿದೆ. ಚೀನೀಯರು ಮಾಡಿದ ಅತಿ

(೯ನೇ ಪುಟ ನೋಡಿರಿ)

ರಾಷ್ಟ್ರಪತಿ ಕಚೇರಿಯಲ್ಲಿದಲು ಜಾನ್ ಕೆನ್ನೆಡಿಯವರು ಅಬ್ರಹಾಂ ಲಿಂಕನ್ನರ ತೈಲಚಿತ್ರವೊಂದನ್ನು ಸಂತೋಷದಿಂದ ಸ್ವೀಕರಿಸಿದರು.

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಅತ್ಯಂತ ಪ್ರಯೋಜನಕಾರಿ ಪುಸ್ತಕ—

ಮನೆ-ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್. ಐ. ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಕೆಂಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನವಭಾರತ ಪುಸ್ತಕ ಭಂಡಾರ, ಉಡುಪಿ.

ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ.

14 CT ಚಿನ್ನದ ಆಭರಣಗಳಲ್ಲಿ 58⅓% ಶುದ್ಧ ಪುತ್ತಳಿ ಚಿನ್ನ ಇರುತ್ತದೆ. ಬೇಕಾದಿದ್ದಲ್ಲಿ 1 ರೂ. ಕಮ್ಮಿಯಲ್ಲಿ ಯಾವಾಗಲೂ ಬಜಾರು ಧಾರಣೆಗೆ ಪಡಕೊಳ್ಳುವ ಭರವಸೆ ಕೊಡುತ್ತೇವೆ.

ವಿ. ಸೂ. ಹಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡಕೊಳ್ಳುವರೆ ಸರಕಾರದ ಲೈಸನ್ಸ್ ಸಿಕ್ಕಿರುತ್ತದೆ.

ಮದುವೆ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡಕೊಂಡು ಖಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.

ಶ್ರೀ ಕೃಷ್ಣಾ ಜ್ಯುವೆಲರಿ ಮಾರ್ಟ್

ತೆಂಕಪೇಟೆ — ಉಡುಪಿ.

ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.

ಫೋನ್ ನಂಬ್ರ: 66

ಕೆನೆಡಿ ಹೇಳುತ್ತಾರೆ

ಶಾಂತಿಗಾಗಿ ಸರ್ವಪ್ರಯತ್ನ

ಎಲ್ಲ ರಾಷ್ಟ್ರಗಳಿಗೂ—ಅವು ಚಿಕ್ಕ ರಾಷ್ಟ್ರಗಳಿರಲಿ ದೊಡ್ಡ ರಾಷ್ಟ್ರಗಳಿರಲಿ—ನ್ಯಾಯಯುತ, ಶಾಶ್ವತ ಶಾಂತಿಯ ನಿರ್ಮಾಣದ ಹೊಣೆಗಾರಿಕೆಯಿದೆ, ವಿಳಂಬವಿಲ್ಲದೆ ಈ ಕಾರ್ಯದಲ್ಲಿ ಮುನ್ನಡೆಯಬೇಕಾಗಿದೆ. ಪರಸ್ಪರ ವಿರುದ್ಧವಾಗಿರುವ ಜಾಗತಿಕ ಹಿತಾಸಕ್ತಿಗಳು ಹಾಗೂ ವಿಚಾರ ಪ್ರಣಾಲಿಗಳಿರುವ ಅಮೆರಿಕ ಮತ್ತು ರಷ್ಯಗಳಿಗೆ ಉಭಯ ಸಮಾನ ಆಸಕ್ತ ಹಾಗೂ ಒಡಂಬಡಿಕೆಯ ಕ್ಷೇತ್ರಗಳನ್ನು ಕಂಡುಹಿಡಿಯಲು ಸಾಧ್ಯವಾಗಿದೆ, ಇದರಂತೆ ಪ್ರಾದೇಶಿಕ ಘರ್ಷಣೆಗಳಲ್ಲಿ, ಜನಾಂಗಿಕ ಪ್ರಶ್ನೆಗಳಲ್ಲಿ ಅಥವಾ ವಸಾಹತು ಶಾಹಿಯ ನಿರ್ಮೂಲನಗಳಲ್ಲಿ ತೊಡಗಿಕೊಂಡಿರುವ ಇತರ ರಾಷ್ಟ್ರಗಳಿಗೂ ಇಂಥ ಒಡಂಬಡಿಕೆ ಖಂಡಿತವಾಗಿ ಸಾಧ್ಯವಾಗಬಹುದು.

ಈ ಅಸೆಂಬ್ಲಿಯ ಕಾರ್ಯಕ್ರಮದಲ್ಲಿರುವ ಅನೇಕ ವಿವಾದಗಳನ್ನು ಚರ್ಚಾವೇದಿಕೆಯಿಂದ ತೆಗೆದು ಸಂಧಾನಗೋಷ್ಠಿಯ ಮೇಜಿನಲ್ಲಿಡಬೇಕಾದ ಕಾಲ ಸನ್ನಿಹಿತವಾಗಿದೆ, ಇದು ಅವಶ್ಯ.

ಚಿಕ್ಕ ಹಾಗೂ ದೊಡ್ಡ ರಾಷ್ಟ್ರಗಳೆಲ್ಲವುಗಳ ಮುಖಂಡರ ಮೇಲೆ ಶಾಂತಿ ನಿರ್ಮಾಣದ ಹೊಣೆಗಾರಿಕೆಯಿದೆ. ಏಕೆಂದರೆ ಕಲಹ ಅಥವಾ ಮಹತ್ವಾಕಾಂಕ್ಷೆ ದೊಡ್ಡ ರಾಷ್ಟ್ರಗಳ ಗುತ್ತಿಗೆಯೇನೂ ಅಲ್ಲ. ಪ್ರಚ್ಛನ್ನ ಯುದ್ಧವು ಈ ಪ್ರಪಂಚದಲ್ಲಿ ಘರ್ಷಣೆಯ ಏಕಮಾತ್ರ ಪ್ರಕಟಣೆಯೇನೂ ಅಲ್ಲ—ಪರಮಾಣು ಸ್ಪರ್ಧೆಯೊಂದೇ ಶಸ್ತ್ರ ಸ್ಪರ್ಧೆಯಲ್ಲ.

ಚಿಕ್ಕ ಯುದ್ಧಗಳೂ, ಈ ಪರಮಾಣು ಜಗತ್ತಿನಲ್ಲಿ ಅಪಾಯಕರವಾಗಿವೆ. ಶಾಂತಿ ಸಾಧನೆಯ ದೀರ್ಘ ಪರಿಶ್ರಮವು ಎಲ್ಲ ರಾಷ್ಟ್ರಗಳು ಕೈಗೊಳ್ಳಬೇಕಾದ ಕಾರ್ಯ—ಈ ಪ್ರಯತ್ನದಲ್ಲಿ ನಮಗಾರಿಗೂ ತಟಸ್ಥರಾಗಿರಲು ಸಾಧ್ಯವಿಲ್ಲ. ಈ ಗುರಿಯ ಸಾಧನೆಯಲ್ಲಿ ನಮಗಾರಿಗೂ ನಿರ್ಲಿಪ್ತರಾಗಿರಲು ಸಾಧ್ಯವಿಲ್ಲ. ಜಾಗತಿಕ ಬಿಕ್ಕಟ್ಟಿನ ಉಪಶಮನವು, ಸಂಕುಚಿತ ಸ್ವಾರ್ಥಸಾಧನೆಗೆ ನೆಪವಾಗಬಾರದು.

೧೭ ವರ್ಷಗಳ ಪ್ರಯತ್ನದಲ್ಲಿ, ಈಗ ಮೊದಲಬಾರಿಗೆ ನ್ಯೂಕ್ಲಿಯರ್ ಶಸ್ತ್ರ ಸ್ಪರ್ಧೆಯನ್ನು ತಡೆಯಲು ಒಂದು ನಿರ್ದಿಷ್ಟ ಕ್ರಮವನ್ನು—ವಾತಾವರಣದಲ್ಲಿ, ನೀರಿನಡಿಯಲ್ಲಿ ಮತ್ತು ಹೊರ ಅಂತರಿಕ್ಷದಲ್ಲಿ ನ್ಯೂಕ್ಲಿಯರ್ ಶಸ್ತ್ರ ಪ್ರಯೋಗಗಳನ್ನು ನಿಷೇಧಿಸುವ ಪರಿಮಿತ ವ್ಯಾಪ್ತಿಯ ಒಡಂಬಡಿಕೆಯನ್ನು—ಕೈಗೊಳ್ಳಲಾಗಿದೆ. ಸೋವಿಯತ್ ರಷ್ಯ, ಅಮೆರಿಕ ಮತ್ತು ಅವುಗಳ ಮಿತ್ರ ರಾಷ್ಟ್ರಗಳು ಇನ್ನೂ ಅನೇಕ ಒಡಂಬಡಿಕೆಗಳನ್ನು ಸಾಧಿಸಬಲ್ಲವು. ಆಕಸ್ಮಿಕವಾಗಿ ಅಥವಾ ತಪ್ಪೆಣಿಕೆಯಿಂದ ಯುದ್ಧವಾಗದಂತೆ ತಡೆಯುವ ಕ್ರಮಗಳ ಬಗೆಗೆ ಒಡಂಬಡಿಕೆ ಸಾಧಿಸುವ ಪ್ರಯತ್ನಗಳಲ್ಲಿ ನಾವು ಮುಂದುವರಿಯಬೇಕು. ಅಚ್ಚರಿಯ ದಾಳಿಗಳ ವಿರುದ್ಧ ಒಡಂಬಡಿಕೆ ಸಾಧಿಸುವ ನಮ್ಮ ಪ್ರಯತ್ನವನ್ನು ನಾವು ಮುಂದುವರಿಸಬೇಕು. ಮುಖ್ಯ ಸ್ಥಳಗಳಲ್ಲಿ ವೀಕ್ಷಣಾ ಕೇಂದ್ರಗಳಿರಬೇಕಾದುದು ಈ ಒಡಂಬಡಿಕೆಯ ಅಂಗವಾಗಿರಬೇಕು.

ನ್ಯೂಕ್ಲಿಯರ್ ಶಸ್ತ್ರಗಳ ಹಸ್ತಾಂತರವನ್ನು ಹತೋಟಿಗೊಳಪಡಿಸುವುದರ ಮೂಲಕ, ವಿದಳಸೀಯ ವಸ್ತುಗಳನ್ನು ಶಾಂತಿಯುತ ಉದ್ದೇಶಗಳಿಗೆ ಪರಿವರ್ತಿಸುವುದರ ಮೂಲಕ ಮತ್ತು ಸಾಕಷ್ಟು ಮೇಲ್ವಿಚಾರಣೆಯೊಡನೆ ಭೂಗತ ಪ್ರಯೋಗಗಳನ್ನು ನಿಷೇಧಿಸುವುದರ ಮೂಲಕ ನಾವು ನ್ಯೂಕ್ಲಿಯರ್ ಶಸ್ತ್ರ ಸ್ಪರ್ಧೆಯನ್ನು ತಡೆಯುವ ಇನ್ನೂ ಹೆಚ್ಚಿನ ಕ್ರಮಗಳ ಬಗೆಗೆ ಒಡಂಬಡಿಕೆ ಸಾಧಿಸುವ ಪ್ರಯತ್ನಗಳನ್ನು ಮುಂದುವರಿಸುತ್ತಿರಬೇಕು. ನಾವು ಸಾಮೂಹಿಕ ವಿನಾಶದ ಅಸ್ತ್ರಗಳನ್ನು ಹೊರ ಅಂತರಿಕ್ಷದಿಂದ ದೂರವಿರಿಸುವ ವ್ಯವಸ್ಥೆಯ ಬಗೆಗೆ ಒಡಂಬಡಿಕೆ ಸಾಧಿಸುವ ಪ್ರಯತ್ನವನ್ನು ಮುಂದುವರಿಸಬೇಕು.

ಅಮೆರಿಕ ಮತ್ತು ರಷ್ಯಗಳು ಅಂತರಿಕ್ಷ ಪರಿಶೋಧನೆಯಲ್ಲಿ, ಈ ದಶಕದಲ್ಲಿ ತಮ್ಮ ಗಗನಯಾನಿಗಳನ್ನು ಚಂದ್ರಮಂಡಲಕ್ಕೆ ಕಳುಹಿಸಲು ಜಂಟಿ ಪ್ರಯತ್ನವಾದುದರಲ್ಲಿ ಸಹಕರಿಸಬಲ್ಲವು. ಶಾಂತಿಯುತ ಸಹಕಾರದತ್ತ ಇತರ ಕ್ರಮಗಳನ್ನು ಕೈಗೊಳ್ಳಲು ಸಾಧ್ಯವಾಗಬಹುದು, ಹೆಚ್ಚಿನ ಕ್ರಮಗಳಿಗೆ, ಅಮೆರಿಕದ ಮಿತ್ರ ರಾಷ್ಟ್ರಗಳೊಡನೆ 'ಪೂರ್ಣ ಸಮಾಲೋಚನೆ' ಬೇಕಾಗುವುದು. "ಇದರಲ್ಲಿ ನಮ್ಮ ಹಿತಾರ್ಥಗಳಿರುವಷ್ಟೇ ಅವರದೂ ಇವೆ. ಅವರಿಗೆ ಬಾಧಕವಾಗುವಂಥ ಯಾವ ಒಡಂಬಡಿಕೆಯನ್ನೂ ನಾವು ಕಾರ್ಯಗತ ಮಾಡಲಾರೆವು.

ಮಾನವ ಕುಲದ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳನ್ನು ಉತ್ತಮಗೊಳಿಸುವ ಕಾರ್ಯವು ಎಲ್ಲ ರಾಷ್ಟ್ರಗಳ ಹೊಣೆಯಾಗಿರುವುದರಿಂದ, ಆಧುನಿಕ ವಿಜ್ಞಾನ ಮತ್ತು ಕೈಗಾರಿಕೆಯ ಫಲಗಳ ಹಂಚಿಕೆಯಲ್ಲಿ ವಿಶ್ವಸಂಸ್ಥೆಗೆ ಹೊಣೆಗಾರಿಕೆಯನ್ನು ಒಪ್ಪಿಸಬೇಕಾದುದು ಅನಿವಾರ್ಯ. ಜಾಗತಿಕ ಆರೋಗ್ಯ ವೈದ್ಯಕೀಯದಲ್ಲಿ ಸಂಶೋಧನೆ ಮತ್ತು ಹೊಸ ರಾಷ್ಟ್ರಗಳಿಗೆ ವಿಜ್ಞಾನಿಗಳನ್ನು ಮತ್ತು ವೈದ್ಯರನ್ನು ತರಬೇತಿ ಮಾಡುವಿಕೆ, ನೈಸರ್ಗಿಕ ಸಂಪನ್ಮೂಲಗಳ ಶೇಖರಣೆ ಮತ್ತು ಹೊಲದ ಉತ್ಪಾದಕತೆ, ಆಹಾರದ ಹಂಚಿಕೆ ಮುಂತಾದ ಕ್ಷೇತ್ರಗಳಲ್ಲಿ ಇನ್ನೂ ಹೆಚ್ಚಿನ ಪ್ರಗತಿ ಸಾಧಿಸಬಹುದು."

ಅಮೆರಿಕವು ಸ್ವದೇಶಗಳಲ್ಲಿ ಮತ್ತು ಇತರ ಎಲ್ಲೆಡೆಗಳಲ್ಲೂ ಜನಾಂಗಿಕ ಮತ್ತು ಮತೀಯ ದಬ್ಬಾಳಿಕೆ, ಹಿಂಸಾಚರಣೆಗಳಿಗೆ ವಿರೋಧಿಯಾಗಿದೆ ನಾವು ನಮ್ಮ ರಾಷ್ಟ್ರದ ತಪ್ಪುಗಳನ್ನು ಸರಿಪಡಿಸಲು ಶ್ರಮಿಸುತ್ತಿದ್ದೇವೆ.

"ದೀರ್ಘಕಾಲದ ಶಿಕ್ಷಣದಲ್ಲಿ, ವಸತಿ ಸೌಕರ್ಯದಲ್ಲಿ, ನಾಗರಿಕತೆಯಲ್ಲಿ, ಉದ್ಯೋಗ ಕ್ಷೇತ್ರದಲ್ಲಿ, ಸಿವಿಲ್ ಸರ್ವಿಸಿನಲ್ಲಿ, ಮನೋರಂಜನಾ ಕಾರ್ಯಗಳಲ್ಲಿ ಮತ್ತು ಸಾರ್ವಜನಿಕ ಸೌಕರ್ಯದ ಸ್ಥಳಗಳಲ್ಲಿ ರೂಢವಾಗಿರುವ ಭೇದಾಚರಣೆಯನ್ನು ನಮ್ಮ ರಾಷ್ಟ್ರದಿಂದ ನಿರ್ಮೂಲಿಸಲು, ನಮ್ಮ ಸರಕಾರವು ಶಾಸನಗಳ ಮತ್ತು ಕಾರ್ಯಾಂಗದ ಕ್ರಮಗಳ ಮೂಲಕ, ನೈತಿಕ ಮತ್ತು ಕಾನೂನಿನ ಕಟ್ಟುಪಾಡುಗಳ ಮೂಲಕ ದೃಢನಿರ್ಧಾರದ ಪ್ರಯತ್ನವನ್ನು ಮಾಡಿದೆ. ಆದುದರಿಂದ ನಮ್ಮ ಸ್ನೇಹಿತರು ಅಥವಾ ಶತ್ರುಗಳು ಈ ರೀತಿಯಲ್ಲಿ ಅಥವಾ ಇತರ ರೀತಿಗಳಲ್ಲಿ ಜನಾಂಗಿಕ ಅಥವಾ ಮತೀಯ ಅನ್ಯಾಯಗಳನ್ನು ಆಚರಿಸಿದರೆ ಅಥವಾ ಅಂಥ ಅನ್ಯಾಯಗಳಿಗೆ ಸಮ್ಮತಿಸಿದರೆ, ನಾವು ಖಂಡಿಸಲು ಹಿಂಜರಿಯಲಾರೆವು.

"ನಮ್ಮ ರಾಷ್ಟ್ರವಷ್ಟೇ ಅಲ್ಲ, ಎಲ್ಲ ಬಹು ಜನಾಂಗಿಕ ಸಮಾಜಗಳೂ, ಸತ್ಯ, ನ್ಯಾಯಗಳ ಈ ಈ ಮಟ್ಟಗಳನ್ನು ಅನುಸರಿಸಿಯಾವು ಎಂದು ನಾನು ಆಶಿಸುತ್ತೇನೆ. ನಾವು ವರ್ಣಭೇದ ಮತ್ತು ಎಲ್ಲ ರೀತಿಯ ಮಾನವೀ ದಬ್ಬಾಳಿಕೆಗಳಿಗೆ ಬದ್ಧ ವಿರೋಧಿಗಳಾಗಿರುತ್ತೇವೆ ನಾವು ಶ್ವೇತ ಆಫ್ರಿಕನರನ್ನು ಓಡಿಸುವ ಉದ್ದೇಶದಿಂದ, ಕಪ್ಪು ಆಫ್ರಿಕನರ ಹಕ್ಕುಗಳನ್ನು ಪ್ರತಿಪಾದಿಸುತ್ತಿಲ್ಲ. ನಮ್ಮ ಕಳಕಳಿಯಿರುವುದು ಎಲ್ಲ ಮಾನವರಿಗೆ ಸಮಾನ ರಕ್ಷಣೆ ಹಾಗೂ ಅವಕಾಶವಿರುವ ಹಕ್ಕು ಇರಬೇಕೆಂಬ ವಿಷಯದ ಬಗೆಗೆ ಮಾನವರ ಹಕ್ಕುಗಳು ಅವಿಭಾಜ್ಯವಾಗಿರುವುದರಿಂದ, ಯಾವುದೇ ಸದಸ್ಯ ರಾಷ್ಟ್ರವು ಈ ಹಕ್ಕುಗಳನ್ನು ದುರುಪಯೋಗಗೊಳಿಸಿದರೆ ಅಥವಾ ಅಲಕ್ಷಿಸಿದರೆ, ಈ ಸಂಸ್ಥೆಯು ಸುಮ್ಮನಿರಲಾರದು.

೧೫ ವರ್ಷಗಳ ಹಿಂದೆ ವಿಶ್ವಸಂಸ್ಥೆ ಪ್ರಕಟಿಸಿದ ಮಾನವ ಹಕ್ಕುಗಳ ಘೋಷಣೆಯನ್ನು "ಪೂರ್ಣ ಸಾರ್ಥಕಗೊಳಿಸಲು" ಹೊಸ ಪ್ರಯತ್ನಗಳು ಅವಶ್ಯ. ಶಾಂತಿಪಾಲನೆಯ ಕಾರ್ಯದಲ್ಲಿ ವಿಶ್ವಸಂಸ್ಥೆಯ ಕಾರ್ಯನಿರ್ವಹಣೆಯು ಪ್ರಶಂಸನೀಯ. ಆದರೆ ವಿಶ್ವಸಂಸ್ಥೆಯ ಕಾರ್ಯಕಲಾಪಗಳು ಪ್ರಯತ್ನವಿಲ್ಲದೆ ಮುಂದುವರಿಯುವುವು ಎಂದು ಭಾವಿಸಬಾರದು

ಅದಕ್ಕೆ ಸರಿಯಾದ ಹಣದ ವ್ಯವಸ್ಥೆಯಾಗಬೇಕು—ಕೆಲವು ಸದಸ್ಯರು ತಾವು ಕೊಡಬೇಕಾದ ಚಂದಾಗಳನ್ನು ಕೊಡದಿದ್ದರೆ ಅದಕ್ಕೆ ಅಡ್ಡಿಯಾಗುವುದು. ಇಲ್ಲಿ ಮತದಾನ ನಿರ್ವಹಿಸುವವರೆಲ್ಲರೂ ವಿಶ್ವಸಂಸ್ಥೆಗೆ ಬೆಂಬಲ ಕೊಡಬೇಕು, ಕೊನೆಯವರೆಗೆ ಅದರ ಕಾರ್ಯಕಲಾಪಗಳಿಗೆ ಬೆಂಬಲವೀಯಬೇಕು.

ಕಾಂಗೋದಲ್ಲಿ ವಿಶ್ವಸಂಸ್ಥೆ ಸಾಧಿಸಿದ ಅಸಾಧಾರಣ ಪ್ರಯೋಜನಗಳಿಗೆ ವಿಘ್ನ ಒದ್ದದಿರಬೇಕಾದುದು ಅತ್ಯವಶ್ಯ. ವಿಶ್ವಸಂಸ್ಥೆಯಲ್ಲಿಯೂ ಸೈನ್ಯಗಳನ್ನಿಟ್ಟುಕೊಳ್ಳಬೇಕು ಎಂಬ ಇತ್ತೀಚಿನ ಸಲಹೆಗೆ ವಿಸ್ತೃತ ಬೆಂಬಲ ದೊರೆಯಬೇಕು. ಸೈನ್ಯ ಚಲನೆಗೆ ಸಂಬಂಧಿಸಿದ ಮತ್ತು ಇತರ ಭೌತಿಕ ಸಹಾಯವನ್ನು ಒದಗಿಸಲು ಈ ರಾಷ್ಟ್ರ ಸಿದ್ಧವಿದೆ.

ವಿಶ್ವಸಂಸ್ಥೆಯು ಸ್ಥಾಯಿಸಂಸ್ಥೆಯಾಗಿರದೆ, ಅದರ ಹೊಣೆಗಾರಿಕೆಗಳು ಹೆಚ್ಚುತ್ತಿರುವುದರಿಂದ, ಅದರ ಪ್ರಣಾಳಿಕೆಯನ್ನು ಹಾಗೂ ಸಂಪ್ರದಾಯಗಳನ್ನು ಬದಲಾಯಿಸಬೇಕಾಗಿದೆ. ಇದರ ಪ್ರಣಾಳಿಕೆ ಸದಾ ಸ್ಥಗಿತವಾಗಿರಬೇಕೆಂಬುದು ಪ್ರಣಾಳಿಕೆಯ ಕರ್ತರ ಉದ್ದೇಶವಾಗಿರಲಿಲ್ಲ.

ಶಾಂತಿಯ ವ್ಯವಸ್ಥೆಗಳು, ಯುದ್ಧದ ಸಂಶೋಧನೆಗಳನ್ನು ಮೀರಿ ಮುಂದುವರಿಯಬೇಕು. ತನ್ನ ವಿಜಯಗಳಿಂದ ಅಭಿವೃದ್ಧಿಗೊಂಡು, ತನ್ನ ಸೋಲುಗಳಿಂದ ಪಾಠ ಕಲಿತು ವಿಶ್ವಸಂಸ್ಥೆಯು ವಾಸ್ತವವಾದ ಪ್ರಪಂಚ ಭದ್ರತಾ ಸಂಸ್ಥೆಯಾಗಿ ರೂಪುಗೊಳ್ಳಬೇಕು.

(ಅಧ್ಯಕ್ಷ ಕೆನ್ನಡಿಯವರು ವಿಶ್ವ ಸಂಸ್ಥೆಯಲ್ಲಿ ಮಾಡಿದ ಭಾಷಣ)

ಯುನೈಟೆಡ್ ರಾಷ್ಟ್ರ ಸಂಘದ ಸಭೆಯಲ್ಲಿ ಭಾಷಣ ಮಾಡುತ್ತಿರುವ ಅಮೇರಿಕಾಧ್ಯಕ್ಷ ಜಾನ್. ಎಫ್. ಕೆನೆಡಿ.

ನವಯುಗಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ

NAVAYUGA
Kannada Weekly
UDIPI
Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ

ವರುಷ	ಉಡುಪಿ	ವಾರ
೪೩	೧೦-೧೦-೧೯೬೩	೬

ಸಮಸ್ಯೆಗೆ ತೊಡಕು

ಕಾಶ್ಮೀರಿಗಳು ತಮ್ಮ ರಾಜ್ಯವನ್ನು ಭಾರತದಲ್ಲಿ ಸೇರಿಸಿ ಅದರ ಅವಿಭಾಜ್ಯ ಅಂಗವೆಂದು ಸಾರಿ, ಹಲವಾರು ವರ್ಷಗಳು ಗತಿಸಿದುವು. ತಮ್ಮ ಸಂವಿಧಾನದಲ್ಲಿ ಈ ವಿಷಯುವನ್ನವರು ದೃಢಪಡಿಸಿದ್ದಾರೆ, ಮತ್ತು ಈ ಮನೋಭಾವನೆಯಿಂದಲೇ ಭಾರತದೊಡನೆ ವರ್ತಿಸುತಿದ್ದಾರೆ. ಭಾರತವು ತಾನು ಏರ್ಪಡಿಸಿಕೊಂಡಿದ್ದ ವಲಯಗಳಲ್ಲಿ ಉತ್ತರದೊಡನೆ ಕಾಶ್ಮೀರವನ್ನೂ ಸೇರಿಸಿತ್ತು; ಈ ಕೃತಿಯನ್ನು ಪಾಕಿಸ್ತಾನವು ವಿರೋಧಿಸಿಯೂ ಇತ್ತು. ಕಾಶ್ಮೀರಿಗಳ ಇಚ್ಛೆಯ ಮೇರೆಗೆ ಭಾರತವು ತನ್ನ ಸರ್ವೋಚ್ಚ ನ್ಯಾಯಾಲಯ ಮತ್ತು ಚುನಾವಣಾ ನಿಯಂತ್ರಕರ ಅಧಿಕಾರ ಮಿತಿಯನ್ನು ಕಾಶ್ಮೀರಕ್ಕೂ ವಿಸ್ತರಿಸಿತು. ಇವೆಲ್ಲವೂ ಕಾಶ್ಮೀರವು ಪ್ರತ್ಯೇಕ ಸಂವಿಧಾನವನ್ನು ಹೊಂದಿರುವುದಾದರೂ ಅದು ಭಾರತದೊಡನೆ ಸಂಪೂರ್ಣವಾಗಿ ಸಮಾವೇಶಗೊಂಡಿರುವುದೆಂಬುದನ್ನು ಲೋಕಕ್ಕೆ ತಿಳಿಸಿ ಹೇಳುವುದಕ್ಕೆ ನೆರವಾದುವು ಹೇಗಿದ್ದರೂ ಪಾಕಿಸ್ತಾನವು ಕಾಶ್ಮೀರದ ಜನತೆಯ ಅಭಿಪ್ರಾಯಕ್ಕೆ ವಿರುದ್ಧವಾಗಿ ಅದನ್ನು ಕಬಳಿಸುವ ಹೇರಾಸೆಯಿಂದ ಅಲ್ಲಸಲ್ಲದ ಅಪಪ್ರಚಾರಗಳನ್ನು ಮಾಡಿ ಭಾರತದ ಬಗ್ಗೆ ಮತ್ತು ಕಾಶ್ಮೀರದ ಮೇಲೆ ಹಲವಾರು ತಪ್ಪಭಿಪ್ರಾಯ ಹುಟ್ಟಿಸುವ ವ್ಯರ್ಥ ಸಾಹಸವನ್ನು ಮಾಡುತ್ತಿದೆ. ಇದಕ್ಕಾಗಿ 'ಕಾಶ್ಮೀರ'ವು ಸಮಸ್ಯೆಯ ರಾಜ್ಯವೇ ಅಲ್ಲವೆಂಬುದನ್ನು ತೋರಿಸಿಕೊಡಬೇಕಾದುದು ಮತ್ತು ಅದು ಭಾರತದ ಇತರ ರಾಜ್ಯಗಳಂತೆಯೇ ಒಂದು ರಾಜ್ಯ ಮಾತ್ರವೆಂದು ಘೋಷಿಸುವುದು ಅಪೇಕ್ಷಣೀಯವೆಂಬ ಅಭಿಪ್ರಾಯಗಳು ಸುಮಾರು ಎರಡು ವರ್ಷಗಳಿಗೆ ಮೊದಲೊಮ್ಮೆ ಬಂದಿದ್ದುವು. ಅಂದು ಸೂಚನಾರೂಪದಲ್ಲಿದ್ದ ಸಲಹೆಯೀಗ ಸ್ವಲ್ಪ ಮಟ್ಟಿಗೆ ಕಾರ್ಯರೂಪಕ್ಕೆ ಬರುವಂತಾಗಿದೆ.

ವಿಶಿಷ್ಟ ಪರಿಸ್ಥಿತಿಗಳಿಂದ ಕೂಡಿದ ಕಾಶ್ಮೀರಕ್ಕೆ ಪ್ರತ್ಯೇಕವಾದ ಒಂದು ಘಟನೆಯಿದೆ. ಭಾರತೀಯ ಸಂವಿಧಾನದಲ್ಲಿಯೂ ಕಾಶ್ಮೀರಕ್ಕೆ ಸಂಬಂಧಿಸಿದಂತೆ ವಿಶೇಷ ನಿಯಮಾವಳಿಗಳಿವೆ. ಇವೆಲ್ಲವನ್ನು ತಿದ್ದುಪಡಿ ಮಾಡಿ, ಭಾರತದ ಒಕ್ಕೂಟದ ಒಂದು ರಾಜ್ಯಕ್ಕಿರುವ ಸ್ಥಾನಮಾನಗಳನ್ನು ಕೊಡುವುದು ಪ್ರಯೋಜನಕರವಲ್ಲ. ಆದರೆ, ಇಂತಹ ಸಲಹೆಗಳು ಕಾಶ್ಮೀರಿಗಳಿಂದಲೇ ಬರಬೇಕು. ಸದ್ಯ ಮುಖ್ಯ ಮಂತ್ರಿ ಪದದಿಂದ ನಿವೃತ್ತರಾದ ಬಕ್ಷಿ ಗುಲಾಂ ಮಹಮ್ಮದರು ಈ ವಿಷಯಕ್ಕೆ ಸಂಬಂಧಪಟ್ಟಂತೆ ನೀಡಿದ ಕೇಳಿಕೆಯು ಈ ದೆಸೆಯಲ್ಲೊಂದು ದಿಟ್ಟತನದ ಹೆಜ್ಜೆಯೆನ್ನಬೇಕು. ಭಾರತದ ಇತರ ರಾಜ್ಯಗಳಲ್ಲಿರುವಂತೆಯೇ ಕಾಶ್ಮೀರದ ಸದರ-ಇ-ರಿಯಾಸತರನ್ನು ರಾಜ್ಯಪಾಲರೆಂದೂ ಪ್ರಧಾನ ಮಂತ್ರಿಯನ್ನು ಮುಖ್ಯಮಂತ್ರಿಯೆಂದೂ ಕರೆಯುವ ನಿರ್ಧಾರವನ್ನವರು ಘೋಷಿಸಿದರು. ಅಲ್ಲಿನ ರಾಜಕೀಯ ಪಕ್ಷ ಪ್ರಜಾಪರಿಷತ್ತನ್ನು ಕಾಂಗ್ರೆಸಿನಲ್ಲಿ ವಿಲೀನಗೊಳಿಸುವ ಆಶಯವನ್ನವರು ಪ್ರಕಟಿಸಿದರು. ಈ ಸಂಬಂಧದಲ್ಲಿ ಕೆಲವೇ ಸಮಯದಲ್ಲಿ ಆವಶ್ಯಕ ತಿದ್ದುಪಡಿಗಳನ್ನು ಮಾಡಿ ವಿಲೀನೀಕರಣದ ಪಥದಲ್ಲಿ ಅಗ್ರಸರರಾಗಲು ಗುಲಾಂ ಮಹಮ್ಮದರು ಆಸಕ್ತರಾಗಿದ್ದಾರೆ. ಆಗ, ಕಾಶ್ಮೀರವು ಭಾರತಕ್ಕಿಂತ ಪ್ರತ್ಯೇಕವಾಗಿದೆಯೆಂದು ಹುಯ್ಯಲಿಡುವ ಪಾಕ್ ತಿರುಬೊಬ್ಬೆಗೊಂದು ಅಂಕುಶ ದೊರೆತಂತಾಗುವುದು. ಕಾಶ್ಮೀರದ ಭವಿಷ್ಯವನ್ನು ಕಾಶ್ಮೀರಿಗಳು ಎಂದೋ ನಿರ್ಧರಿಸಿಕೊಂಡಿದ್ದಾರೆಂಬ ಐತಿಹಾಸಿಕ ಸತ್ಯವನ್ನೂ ಅಹ್ವಾನಿಸುವ ಪಾಕ್ ಕಾಶ್ಮೀರ ನೀತಿಯು ಮುಂದೆ ತಲೆಯೆತ್ತದಂತಾಗುವುದು. ಆದರೆ, ಒಂದು ಮಾತನ್ನು ಇಲ್ಲಿ ಹೇಳಲೇ ಬೇಕಾಗುತ್ತದೆ. ಕಾಶ್ಮೀರದ ವರಿಷ್ಠರನ್ನು ರಾಜ್ಯಪಾಲರೆಂದು ಅಥವಾ ಪ್ರಧಾನಿಯವರನ್ನು ಮುಖ್ಯ ಮಂತ್ರಿಯೆಂದು ಕರೆದ ಮಾತ್ರಕ್ಕೆ ಸಮಸ್ಯೆಗೆ ಪೂರ್ಣವಿರಾಮ ಬೀಳುವುದೆಂದು ನಂಬಲಾಗದು. ಮುಖ್ಯಮಂತ್ರಿ ಮತ್ತು ರಾಜ್ಯಪಾಲರ ಅಧಿಕಾರ ವ್ಯಾಪ್ತಿ, ನೇಮಕದ ನಿಯಮಗಳೆಲ್ಲವೂ ಏಕಸಮವಾಗಬೇಕು. ಇದಕ್ಕಾಗಿ ತುಸು ಶ್ರಮಪಡಬೇಕಾಗುತ್ತದೆ ಕಾಶ್ಮೀರಿಗಳು ಇಂತಹ ಅಲ್ಪ ಪ್ರಮಾಣದ ಶ್ರಮಪಡುವುದರಲ್ಲಿ ಸಂದೇಹವಿಲ್ಲ; ಏಕೆಂದರೆ, ಅವರು ಭಾರತದೊಡನಿರುವುದರಿಂದಲೇ ತಮ್ಮ ಏಳಿಗೆಯೆಂಬುದನ್ನು ಇದುವರೆಗೆ ಅನುಭವ ಮಾಡಿಕೊಂಡಿದ್ದಾರೆ; ತಮ್ಮ ಸಂವಿಧಾನದಲ್ಲಿಯೂ ಈ ಅಂಶವನ್ನು ಎತ್ತಿ ಹೇಳಿದ್ದಾರೆ ಭಾರತದಲ್ಲಿ ಸದ್ಯ ಇರುವ ರಾಜ್ಯಗಳ ಅಧಿಕಾರ—ಶಾಸನ ಪ್ರಣಾಳಿ ಮತ್ತಿತರ ವೈಧಾನಿಕ ರೂಪರೇಷೆಗಳು ಕಾಶ್ಮೀರದಲ್ಲಿ ಸಂಪೂರ್ಣ ಬರುವುದಕ್ಕೆ ತುಸು ಸಮಯ ತಗಲಬಹುದು ಆದರೂ ಕಾಶ್ಮೀರಿ ಜನತೆಯು ಈ ಕಾರ್ಯವನ್ನು ಶೀಘ್ರಾತಿಶೀಘ್ರವಾಗಿ ಕೈಗೊಳ್ಳುವುದೆಂದೆಲ್ಲರೂ ವಿಶ್ವಾಸವಿಡುತ್ತಾರೆ.

ಭಾರತದೊಡನೆ ತನಗಿರುವ ಮತಭೇದಗಳಿಗೆಲ್ಲಾ ಕಾಶ್ಮೀರದ ಸಮಸ್ಯೆಯೊಂದೇ ಪ್ರಬಲ ಕಾರಣವೆಂದು ಪಾಕ್ ಸರಕಾರವು ಆರೋಪಿಸುತ್ತ ಬಂದಿದೆ. ಅಲ್ಲಿನ ವಿದೇಶ ಮಂತ್ರಿ ಭುಟ್ಟೋರವರು ಸದ್ಯ ವಾಶಿಂಗಟನ್ನಿನಲ್ಲಿ ತನ್ನ ಊದುವ ರಾಗವನ್ನಷ್ಟೇ ಮರಳಿ ಊದಿದ್ದಾರೆ. ಕಾಶ್ಮೀರದ ಸಮಸ್ಯೆ ಮತ್ತು ಚೀನೀಯ ಆಕ್ರಮಣದಿಂದ ಸಂರಕ್ಷಣಾ ಕಾರ್ಯಕ್ಕೆಂದು ಅದು ನೀಡುವ ಸೈನಿಕ ಸಹಾಯಗಳ ನಡುವೆ ಶರ್ತವನ್ನು ಹೇರಿ ಭಾರತವನ್ನು ದಂಗುಬಡಿಸುವ ಅವರ ಪ್ರಯತ್ನ ಸಫಲವಾಗಲಿಲ್ಲ. ಅವಕ್ಕೆಂದೇ ಎಲ್ಲ ಪಾಕ್ ನಾಯಕರೂ ಬಕ್ಷಿಯವರ ಹೇಳಿಕೆಯಿಂದ ಅಧೀರರಾಗಿರುವರು. ಪಾಕ್ ಆಕ್ರಮಿತ ಆಜಾದ ಕಾಶ್ಮೀರದ ಅಧ್ಯಕ್ಷ ಖಾನ್ ಸಾಹೇಬರು ಇನ್ನೂ ಮುಂದೆ ಹೋಗಿದ್ದಾರೆ. ಅವರ ಸರಕಾರವನ್ನೇ ಇಡಿಯ ಕಾಶ್ಮೀರದ ಸರಕಾರವೆಂದು ಪರಿಗಣಿಸಬೇಕಂತೆ! ಇದು ಸರ್ವಾಧಿಕಾರವನ್ನು ಪ್ರದರ್ಶಿಸುತ್ತಿರುವುದರ ದ್ಯೋತಕವಲ್ಲವೆ? ಯಾರು ಏನನ್ನೇ ಹೇಳಲಿ, ಕಾಶ್ಮೀರದ ಜನತೆಯು ಭವಿಷ್ಯ ಲೇಖಕರು ಅಲ್ಲಿಯ ಜನತೆ ಅವರ ಅಭಿಪ್ರಾಯಕ್ಕೆ ಮನ್ನಣೆ ನೀಡುವುದು ನಮ್ಮ ಕರ್ತವ್ಯ. ಅವರು ಈ ವಿಲೀನೀಕರಣವನ್ನು ದಿನಗಳೆದಂತೆ ಮತ್ತೂ ದೃಢಗೊಳಿಸುತ್ತ ಬಂದು, ಅದು ಸಾಂವಿಧಾನಿಕವಾಗಿ ಒಂದಾಗಲಿ ಎಂದು ಬಯಸುತ್ತೇವೆ.

ತ್ಯಾಗದ ಪಾಠ

ಪಕ್ಷ ಸಂಘಟನೆಗೆ ಉತ್ತಮೋತ್ತಮ ವ್ಯಕ್ತಿಗಳನ್ನು ಪೂರ್ಣಾವಧಿಯ ವರೆಗೆ ಮೀಸಲಿಡುವುದೀಗ ಕಾಮರಾಜ ನಾಡಾರರ ಸೂಚನೆಯ ಹಿಂದಿದ್ದ ಮೂಲ ಸೂತ್ರ ಆದರೆ, ಇದಕ್ಕೆ ಬೇರೆ ಬೇರೆ ಅರ್ಥಗಳನ್ನೂ ಕಟ್ಟಿಕೊಂಡವರಿದ್ದಾರೆ. ಪ್ರಧಾನಿ ನೆಹರುರವರು ತನಗೆ ಬೇಡವಾದವರನ್ನು ಸಚಿವ ಸಂಪುಟದಿಂದ ಹೊರಹಾಕಲು ಕಾಮರಾಜರ ಮೂಲಕ ಪ್ರಯತ್ನ ನಡೆಸಿದರು—ಎಂಬ ಮಾತು ಕೇಳಿ ಬರುತ್ತಿದೆ. ಆದರೆ, ಈ ಮಾತನ್ನು ನೆಹರು ಸಂಪೂರ್ಣ ಅಲ್ಲಗಳೆದಿದ್ದಾರೆ. ಸರಕಾರದಲ್ಲಿ ನೇರಿಕೊಂಡ ಮೇಧಾವಿಗಳು ಈ ವಿಷಯಲ್ಲಿ ತುಸು ಊಹಾ ಪೋಹೆಗಳನ್ನು ಎಬ್ಬಿಸಿರಬಹುದು. ಆದರೆ, ಮಹಾತ್ಮಾಗಾಂಧೀಜಿಯವರು ನಮಗೆ ಉಪದೇಶಿಸಿದ ತ್ಯಾಗ ಮತ್ತು ಸೇವೆಗಳ ಪಾಠವನ್ನು ಮರಳಿ ಮಾಡಿಸಿ ಕೊಡುವುದೇ ಕಾಮರಾಜ ಸೂತ್ರದ ಉದ್ದೇಶವೆಂಬುದು ನೂರಕ್ಕೆ ನೂರರಷ್ಟು ಸತ್ಯ. ಇಂದು ಅಧಿಕಾರವನ್ನೇ ಬಯಸಿ, ಪಕ್ಷದ ಬಲವನ್ನು ಮುರಿಯುವುದಕ್ಕೂ ಹೇಸದ ದ್ರೋಹಿಗಳನ್ನು ಹತ್ತಿಕ್ಕಿ ಸುದೃಢವಾಗಿ ಪಕ್ಷವನ್ನು ಕಟ್ಟಿ, ತನ್ಮೂಲಕ ಆದರ್ಶ ಸೇವೆಯನ್ನು ಜನತೆಗೆ ಸಲ್ಲಿಸುವ ಸದುದ್ದೇಶದಿಂದ ಈ ಯೋಜನೆ ಕೂಡಿದೆ. ಅದು ಎಷ್ಟರ ಮಟ್ಟಿಗೆ ಫಲಕಾರಿಯಾಗಿದೆಯೆಂದು ಯಾರಾದರೂ ಪ್ರಶ್ನಿಸಬಹುದು. ಇದಕ್ಕೆ ಸಮಾಧಾನವಿಷ್ಟೆ. ಕೆಲವು ಸಮಯ ಕಾದು ನೋಡಬೇಕು ಎಂದು. ಆದರೂ ಅಧಿಕಾರ ತ್ಯಾಗ ಮಾಡಿ ಮುಖ್ಯ ಮಂತ್ರಿಗಳು ಹೋಗೆ ಬಂದ ರಾಜ್ಯಗಳಲ್ಲಿ ಮರಳಿ ನಾಯಕನ ಸ್ಥಾನವನ್ನು ತುಂಬಿಸಲು ನಡೆದ ಹಗರಣವನ್ನು ಕಾಣುವಾಗ, ಈ ಸೂತ್ರದ ಜೀವಂತ ಸಮಾಧಿ ಮಾಡಲಾಗಿದೆಯೇ ಎಂಬ ಸಂದೇಹವೇಳುತಿತ್ತು. ಈ ಯೋಜನೆಯು ರಾತ್ರಿ ಬೆಳಗಾಗುವುದರಲ್ಲಿ ಫಲಕಾರಿಯಾಗುವಂತಿಲ್ಲ. ಅಧಿಕಾರವೆಂಬುದು ಹೆಚ್ಚಿನವರು ತಿಳದುಕೊಂಡಂತೆ ಒಂದು ಮಂತ್ರದ ಕಡ್ಡಿಯಲ್ಲ; ಮೋಹಕವಸ್ತುವಲ್ಲ. ಆದುದರಿಂದ ಕಾಮರಾಜ ಸೂತ್ರದ ಕಾರ್ಯಾಚರಣೆಯಲ್ಲಿ ನಿಷ್ಠೆಯನ್ನು ತೋರ್ಪಡಿಸಿ, ದೇಶಕ್ಕಾಗಿ ನಮ್ಮ ಸರ್ವಸ್ವವನ್ನು ಅರ್ಪಿಸಿ ಕೊಡುವ ಉಚ್ಚ ಸಂಪ್ರದಾಯವನ್ನು ನಾವು ಹಾಕಿಕೊಡಬೇಕು. ಆಗತಾನೇ ಸೂತ್ರದ ಪರಿಣಾಮದ ಸ್ವರೂಪವು ವ್ಯಕ್ತವಾಗತೊಡಗುವುದು.

ಜಗತ್ಪರ್ಯಟನ

ಜವಾಹರಲಾಲ

ಕೆಲವರು ಏನು ಹೇಳಿದರೂ ಮಾತಾಗಿ ಬಿಡುತ್ತದೆ. ೧೯೬೧ರಲ್ಲಿ ಸಂ. ರಾ. ಸಂಘದ ಸಾಮಾನ್ಯ ಸಭೆಯಲ್ಲಿ ಪ್ರಧಾನಿ ನೆಹರುರವರು ೧೯೬೫ನೆಯ ವರ್ಷವನ್ನು ಅಂತಾರಾಷ್ಟ್ರೀಯ ಸಹಕಾರ ವರ್ಷವೆಂದು ಮಾನ್ಯ ಮಾಡಿ ಎಲ್ಲ ರಾಷ್ಟ್ರಗಳೂ ಪರಸ್ಪರ ಸೌಹಾರ್ದಭಾವದಿಂದ ಹತ್ತಿರ ಬರುವಂತೆ ಯುಕ್ತ ಕ್ರಮ ಕೈಗೊಳ್ಳಬೇಕು ಎಂಬುದಾಗಿ ಸೂಚಿಸಿದ್ದರು. ಇದಕ್ಕೀಗ ಮನ್ನಣೆ ದೊರೆತಿದೆ ಅಸ್ಯಾದ ಜನನಾಯಕರಲ್ಲಿ ಅಗ್ರೇಸರರಾದ ಜವಾಹರಲಾಲರು ಅಂದು ಈ ರೀತಿಯ ಸಲಹೆ ಮಾಡಿದ್ದರು ನಿಜ ಆದರೆ, ತನ್ನ ಗಡಿಯುದ್ದಕ್ಕೆ ಶತ್ರುಸೇನೆಯನ್ನಿರಿಸಿಕೊಂಡು ಅವರು ಸಹಕಾರ ವರ್ಷವನ್ನು ಹೇಗೆ ಆಚರಿಸುವರು ಎಂದು ಯಾರಾದರೂ ಅಚ್ಚರಿಪಡಬಹುದು. ಮಹಾಭಾರತದ ಕುರುಕ್ಷೇತ್ರ ರಣರಂಗದ ನಡುವೆಯೇ ಭಗವದ್ಗೀತೆ ನಿರ್ಮಾಣ ಮಾಡಿದ ಭಾರತದಲ್ಲಿ ಇದು ಅಸಾಧ್ಯವೆ? ಅದೂ ಜವಾಹರರಂತಹವರಿಗೆ!

ಜನ್. ಎ ಭುಟ್ಟೋ

ಹೊಗಳುವುದು ಅಥವಾ ತೆಗಳುವುದು, ಉಪಚಾರ ಮಾಡುವುದು ಇಲ್ಲವೇ ಅಪಚಾರ ಮಾಡುವುದು ಇಲ್ಲವೇ ಅಪಚಾರವೆಸಗುವುದ —ಎಲ್ಲವಕ್ಕೂ ಒಂದು ಕ್ರಮವಿದೆ. ಈಕ್ರಮ ಬಾಹಿರನಾದರೆ, ಅತನನ್ನು ಎಲ್ಲರೂ ನಿರ್ಲಕ್ಷ್ಯಿಸುವವರೇ. ಭಾರತದ ಬಗ್ಗೆ ಬಾಯಿಗೆ ಬಂದಂತೆ ಅರಚಿ ಅದನ್ನು ಅಂತಾರಾಷ್ಟ್ರೀಯವಾಗಿ ಹೀನಾಯಗೊಳಿಸುವ ಇರಾದೆಯಿಂದ ಪಾಕ್ ವಿದೇಶ ಮಂತ್ರಿ ಭುಟ್ಟೋ ಅಪಪ್ರಚಾರದ ಮಾರ್ಗವನ್ನು ಉದ್ಘಾಟಿಸಿದರು. ಅವರಿಗೆ ಚ್. ಎನ್. ಲಾಯ್ ಜತೆ ಕೊಟ್ಟಿದ್ದಾರೆ. ಇವರನ್ನು ಹಿ ಬಾಲಿಸಿ ಮಾತ್ರ ಯಾರೂ ಬರಲಿಲ್ಲ. ಭಾರತಕ್ಕೆ ಇನ್ನೂ ಹೆಚ್ಚಿನ ಶಸ್ತ್ರಾಸ್ತ್ರಗಳನ್ನು ಕೊಡದಿರುವಂತೆ ಮತ್ತು ಒಂದು ವೇಳೆ ಕೊಡುವುದಾದರೂ ಕಾಶ್ಮೀರ ಪ್ರಶ್ನೆಯನ್ನು ಇತ್ಯರ್ಥಗೊಳಿಸುವ ಶರ್ತವನ್ನು ಹೇರುವಂತೆ ಅಮೆರಿಕೆಯ ಮನಸ್ಸನ್ನು ಒಲಿಸಿ ತನ್ನ ಬೇಳೆ ಬೇಯಿಸಲು ಹೋದ ಭುಟ್ಟೋ ಅಪಜಯ ವಧುವಿನೊಡನೆ ಮರಳಿ ಬರುವಂತಾಯಿತು.

ಲಾರ್ಡ್ ಹೋಮ್

ಬ್ರಿಟಿಷ್ ವಿದೇಶ ಕಾರ್ಯದರ್ಶಿ ಲಾರ್ಡ್ ಹೋಂ ರವರು, ಅಮೆರಿಕೆ ಮತ್ತು ರಶ್ಯನ್ ಪ್ರತಿನಿಧಿಗಳ ಸಂಗಡ ಪೌರ್ವಾತ್ಯ-ಪಾಶ್ಚಾತ್ಯ ಸಂಬಂಧದಲ್ಲಿ ಅಣ್ವಸ್ತ್ರ ವಿಷಯಕ ಚರ್ಚೆ ನಡೆಸಿ ಸಮಾಧಾನದ ಉಸಿರು ಬಿಟ್ಟಿದ್ದಾರೆ. ರಶ್ಯವೀಗ ತನ್ನ ಹಿಂದಿನ ಬಿಗು ಧೋರಣೆಯನ್ನು ಬಿಟ್ಟು ಕೊಟ್ಟು ಸಹಕರಿಸುವಲ್ಲಿ ತುಂಬಾ ಉತ್ಸಾಹವನ್ನು ತೋರಿಸಿದೆ. ಇತ್ತೀಚೆಗೆ ಆಂಶಿಕ ಅಣ್ವಸ್ತ್ರ ನಿಷೇಧದ ಬಗೆಗೂ ಒಪ್ಪಂದವಾಗಿತ್ತು. ಸೋವಿಯತ್ತಿನ ಪ್ರತಿನಿಧಿ ಗ್ರೊಮಿಕೋರವರು ರಶ್ಯವು ಕಳೆದ ಉದಾರ ನಿಲುವಿನಂತೆ ಮಾತುಕತೆ ಯಾಡಿದ್ದಾರೆ. ಇದೇ ಸೌಹಾರ್ದ ಭಾವನೆಯು ಮುಂದೆಯೂ ಉಳಿದುಕೊಂಡರೆ, ಅಣ್ವಸ್ತ್ರ ಪ್ರಯೋಗದಲ್ಲಿ ಸಂಪೂರ್ಣ

ಪ್ರತಿಬಂಧವೂ ಪೂರ್ವ ಪಶ್ಚಿಮಗಳ ನಡುವೆ ಮಾನಸೀಯ ಸಂಪರ್ಕವೂ ಉಂಟಾಗುವುದರಲ್ಲಿ ಸಂದೇಹವಿಲ್ಲ. ಲಾರ್ಡ್ ಹೋಂರು ಇಟ್ಟುಕೊಂಡ ಆಶಾವಾದ ಅವರದ್ದು ಮಾತ್ರವಲ್ಲ, ಎಲ್ಲರದ್ದು.

ಅತುಲ್ಯ ಘೋಷ್

ಪಶ್ಚಿಮ ಬಂಗಾಲದ ಮುಖ್ಯ ಮಂತ್ರಿ ಅತುಲ್ಯ ಘೋಷರು ಮುಂದಿನೆರಡು ವರ್ಷಗಳೊಳಗೆ ಕಾಂಗ್ರೆಸ್ ಅಧ್ಯಕ್ಷರಾಗುತ್ತಾರೆಂದು ಸದೋಬಾ ಪಾಟೀಲರು ಭವಿಷ್ಯ ನುಡಿದಿದ್ದಾರೆ. ಕಾಮರಾಜ ಸೂತ್ರದನ್ವಯ ಪಕ್ಷ ಸಂಘಟನೆಗಾಗಿ ಸಚಿವ ಸಂಪುಟದಿಂದ ಹೊರಬಂದ ಪಾಟೀಲರು ಇಂತಹ ಭವಿಷ್ಯವಾಣಿಯನ್ನು ಯಾವ ಆಧಾರದಿಂದ ಹೇಳಿದರೋ ತಿಳಿಯದು. ಘೋಷರು ಇನ್ನೂ ನಡು ಹರೆಯದವರು, ಉತ್ಸಾಹಿಗಳು, ಹೊಸ ರಕ್ತದವರೂ ಎಂದರೆ ಅತಿಶಯೋಕ್ತಿಯಲ್ಲ. ಕಾಂಗ್ರೆಸ್ಸಿನಲ್ಲಿ ನವಚೇತನ ತುಂಬುವುದು ಅಗತ್ಯವಾದ ಈ ಕಾಲದಲ್ಲಿ ಕಾಂಗ್ರೆಸ್ ಅಧ್ಯಕ್ಷ ಪದವಿಯಲ್ಲೂ ಅಂಥವನೇ ಇರಬೇಕಾಗುತ್ತದೆ. ಹಾಗಾಗಿ ಅತುಲ್ಯ ಘೋಷರಂತಹ ಉತ್ಸಾಹಿಗಳು ಅಂತಹ ಸ್ಥಾನ ಪಡೆದರೆ, ವಿಸ್ಮಯವೆಲ್ಲಿ ಬಂತು? ಆದರೆ, ಪಾಟೀಲರೇಕಿಂತು ಆಡಿದ್ದಾರೆ ಎಂಬುದಕ್ಕೆ ಉತ್ತರವಿಲ್ಲ.

ನಿಜಲಿಂಗಪ್ಪ

ಕರ್ನಾಟಕದ ಖಾದಿ ಬೋರ್ಡಿನಲ್ಲಿ ಕಾಣೆಯಾದ ಲೆಕ್ಕ ಪತ್ರಗಳಿಗೆ ಯಾರು ಹೊಣೆಯೆಂಬ ವಿಚಾರದಲ್ಲಿ ಅಧ್ಯಕ್ಷ ಶ್ರೀ ಎಚ್. ಸಿದ್ಧವೀರಪ್ಪ ಮತ್ತು ಕೈಗಾರಿಕೆಯ ಮಂತ್ರಿ ಕೆ ಮಲ್ಲಪ್ಪನವರ ನಡುವೆ ಮಾತಿನ ಜಗಳವಾಗ ತೊಡಗಿದೆ. ಇಬ್ಬರು ಮಹನೀಯರೂ ತಮ್ಮ ತಮ್ಮ ಪಾಲಿನ ಜವಾಬ್ದಾರಿಯನ್ನು ತಪ್ಪಿಸಿಕೊಂಡು ನುಸುಳುವ ಹವಣಿಕೆಯಲ್ಲಿದ್ದಾರೆ. ಅವರಾಗಲೀ ಇವರಾಗಲೀ ಬೇಜವಾಬುದಾರಿಯಿಂದ ಲಕ್ಷಾಂತರ ರೂಪಾಯಿಗಳು ಪೋಲು ಹೋದುದು ಮಾತ್ರ ನಿಜ. ಖಾದಿ ಬೋರ್ಡಿನ ಲೆಕ್ಕಪತ್ರಗಳ ಬಗೆಗೆ ಇಂತಹ ಮಾತನ್ನಾಡಿ ಪ್ರಯೋಜನವಿಲ್ಲ. ಬೋರ್ಡಿನ ನಿಯಮಾವಳಿಯಂತೆ ಇದು ಯಾರ ಜವಾಬ್ದಾರಿಗೆ ಸೇರಿದೆಯೋ ಅವರ ಮೇಲೆ ಕ್ರಮ ಕೈಗೊಳ್ಳಲು ನಿಜಲಿಂಗಪ್ಪನವರು ಹಿಂದೆ ಮುಂದೆ ನೋಡಬಾರದು. ಮತ್ತು ಮೆಚ್ಚಿನ ಆರೋಪಪ್ರತ್ಯಾರೋಪಗಳಿಗೆ ಅವಕಾಶ ಕಲ್ಪಿಸಿಕೊಡಬಾರದು.

-: ನೋಟಿಸು :-

ಉಡುಪಿ ತಾಲೂಕು ಕೊಡವೂರು ಗ್ರಾಮದ ಕೊಪ್ಪ ತೋಟದಲ್ಲಿರುವ ದಿ ತನ್ಯ ಪೂಜಾರಿ ಅಳಿಯ ಚಂದು ಪೂಜಾರಿಯು ಈ ಮೂಲಕ ಸರ್ವರಿಗೂ ತಿಳಿಸುವುದೇನೆಂದರೆ: —

ನನ್ನ ಮನೆಯಲ್ಲಿ ಮೂವಂದಿರ ಕಾಲದಿಂದಲೂ ನನ್ನ ಸಂಸಾರದೊಂದಿಗೆ ನನ್ನ ಮೂಲಗೇಣಿ ಆಸ್ತಿಯ ರಕೋಲೆಯನ್ನು ಮಾಡಿಕೊಂಡು ಬರುತ್ತಿರುವ ಸಂಗತಿ ನಿಮಗೆಲ್ಲರಿಗೂ ತಿಳಿದಿರುತ್ತದೆ. ಹೀಗಿರುತ್ತಾ ನನ್ನ ತಂಗಿ ಅಕ್ಕಿ ಪೂಜಾರ್ತಿಯು ಕೆಲವರ ದುರ್ಬೋಧನೆಯಿಂದ ನನ್ನನ್ನು ಮೋಸಗೊಳಿಸಿ ನೀರಿನ ಪೈಸೆಟ್ಟಿನ ಬಗ್ಗೆಯೆಂದು ಕೆಲವು ಸಹಿಗಳ ಪಡೆದಿರುತ್ತಾಳೆ. ಈ ರೀತಿ ವಂಚನೆಯಿಂ ಆಸ್ತಿ ಮಾರಾಟ ಮಾಡುವ ವಿಚಾರ ಈಗ ರಿಯವರಿಂದ ಕೇಳಿಬರುತ್ತದೆ.

ಅದುದರಿಂದ ನನ್ನ ಒಪ್ಪಿಗೆಯಿಲ್ಲದೆ ಆಸ್ತಿಯನ್ನು ಪಡೆದುಕೊಂಡಲ್ಲಿ ಅಥವಾ ಆಸ್ತಿಯ ಮೇಲೆ ಸಾಲ ಕೊಟ್ಟಲ್ಲಿ ನಾನು ಜವಾಬ್ದಾರನಲ್ಲ. ಅಲ್ಲದೆ ಕೋರ್ಟಿನಲ್ಲಿ ಆಗಬಹುದಾದ ಯಾವ ಕಷ್ಟ ನಷ್ಟಗಳಿಗೆ ನೀವು ಗುರಿಯಾಗಬೇಕಾದೀತು. ಮತ್ತು ಅವಳಿಗೆ ಸಂತತಿ ಇಲ್ಲದಿರುವುದರಿಂದ ಅವಳ ಮುದಿ ಪ್ರಾಯದಲ್ಲಿ ಅವಳ ಆರೈಕೆಯನ್ನು ನನ್ನ ಮಕ್ಕಳೇ ನೋಡಬೇಕಾಗುತ್ತದೆ. ಅದುದರಿಂದ ನನ್ನ ಸಂತತಿಯಲ್ಲಿ ಈ ಆಸ್ತಿಯು ನನ್ನ ಮಕ್ಕಳಿಗೆ ಸಿಗಬೇಕೆನ್ನು.

— ಚಂದು ಪೂಜಾರಿ ರುಜು

ಅಲ್ಲಲ್ಲಿಯ ಸುದ್ದಿ ಸಾರ

ಎಂ. ಜಿ ಎಂ. ಕಾಲೇಜಿನಲ್ಲಿ ಮ. ಗಾಂಧಿಯವರ ಜನ್ಮ ದಿನಾಚರಣೆ— ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರ ಜನ್ಮ ದಿನವನ್ನು ಇದೇ ತಾ 2ರಂದು ಉಡುಪಿಯ ಎಂ. ಜಿ. ಎಂ. ಕಾಲೇಜಿನ ವಿದ್ಯಾರ್ಥಿ ಸಂಘವು ಸಂಭ್ರಮದಿಂದ ಆಚರಿಸಿತು. ಪ್ರಾರಂಭದಲ್ಲಿ ಯೂನಿಯನ್ ಅಧ್ಯಕ್ಷ ಕೃಷ್ಣ ಸುಧೀರರು ಅತಿಥಿಗಳಾಗಿ ಬಂದಿದ್ದ ಡಾ. ಗೊಲ್ಲರಕೇರಿ ಎಂ. ಡಿ. ಮತ್ತು ಶ್ರೀ ಯು. ರಾಮಚಂದ್ರ ರಾವ್ ಇವರನ್ನು ಸ್ವಾಗತಿಸಿದರು. ಡಾ. ಗೊಲ್ಲರಕೇರಿಯವರು ಗಾಂಧೀಜಿಯವರ ಕುರಿತು ಮಾತನಾಡುತ್ತ ಪಾಶ್ಚಾತ್ಯ ದೇಶಗಳಲ್ಲಿ ಅವರ ಜೀವನ ಮತ್ತು ತತ್ವಗಳ ಬಗ್ಗೆ ಆಸಕ್ತಿ ಹೆಚ್ಚುತ್ತ ಹೋದಂತೆ ನಮ್ಮ ಯುವ ಜನಾಂಗವು ಅವುಗಳ ಕುರಿತಾಗಿ ಯಾವ ಜಿಜ್ಞಾಸೆಯನ್ನು ಮಾಡದಿರುವುದು ನಮ್ಮ ದೌರ್ಭಾಗ್ಯವೆಂದು ಹೇಳಿದರು. ಮುಖ್ಯವಾಗಿ ಗಾಂಧೀಜಿಯವರ ಗ್ರಂಥಗಳ ಅಭ್ಯಾಸದ ಉಪಯುಕ್ತತೆಯನ್ನು ಅವರು ಒತ್ತಿ ಹೇಳುತ್ತಾ ಅವು ನಮಗೆ ಸಂಸ್ಕೃತಿಯ ಯಥಾರ್ಥ ಸ್ವರೂಪವನ್ನು ತೋರಿಸಿ ಕೊಡುತ್ತವೆಂದರು. ಆ ಬಳಿಕ ಮಾತನಾಡಿದ ಶ್ರೀ ರಾಮಚಂದ್ರರಾಯರು ಬಾಪೂಜಿಯವರು ತೋರಿಸಿಕೊಟ್ಟ ಸತ್ಯಾಗ್ರಹದ ವೈಶಿಷ್ಟ್ಯವನ್ನು ಸರಳವಾಗಿ ವಿವರಿಸಿ ಹೇಳಿದರು. ಕೊನೆಗೆ ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರರಾಯರು ಮಾತನಾಡುತ್ತ ಗಾಂಧೀಜಿಯವರ ಕುರಿತಾದ ವ್ಯಾಸಂಗ ಕೂಟವೊಂದನ್ನು ಎಂ. ಜಿ ಎಂ. ಕಾಲೇಜಿನಲ್ಲಿ ಪ್ರಾರಂಭಿಸುವ ಯೋಜನೆಯನ್ನು ಸಭೆಯ ಮುಂದಿಟ್ಟರು. ಆ ಬಳಿಕ ಕಾಲೇಜಿನ ವಿದ್ಯಾರ್ಥಿ ವಿದ್ಯಾರ್ಥಿನಿಯರು ಬಾಪೂಜಿಯ ಕುರಿತಾದ ಹಾಡುಗಳನ್ನು ಹಾಡಿದರು. ಕಾರ್ಯದರ್ಶಿ ಪ್ರಭಾಕರ ಹೆಗ್ಡೆ ಇವರು ಧನ್ಯವಾದಗಳನ್ನು ಅರ್ಪಿಸಿದರು.

ಮಧ್ಯಾಹ್ನ ಭೋಜನ ಯೋಜನೆ ಉದ್ಘಾಟನೆ—ಉಡುಪಿ ಮಿಷನ್ ಶಾಲಾ ಕಟ್ಟಡದಲ್ಲಿ ಇದೇ ತಾ 2ರಂದು, ಉಡುಪಿ ತಾಲೂಕಿನ ಶಾಲೆಗಳಲ್ಲಿ ಕೇರ್ ಸಂಸ್ಥೆಯ ನೆರವಿನಿಂದ ಮಕ್ಕಳಿಗೆ ಮಧ್ಯಾಹ್ನ ಉಪ್ಪಿಟ್ಟು ಮತ್ತು ಹಾಲನ್ನು ಒದಗಿಸುವ ಯೋಜನೆಯ ಉದ್ಘಾಟನೆಯು ಶ್ರೀ ಎಂ. ಮಧ್ವರಾಜ ಎಂ. ಎಲ್. ಎ. ಅವರಿಂದ ನೆರವೇರಿತು. ನಗರ ಸಭಾಪತಿ ಶ್ರೀ ಪಿ. ಆರ್. ಶೆಣೈಯವರು ಸಭಾಧ್ಯಕ್ಷತೆ ವಹಿಸಿದ್ದರು.

ಪ್ರಾರಂಭದಲ್ಲಿ ಶಾಲಾ ಇನ್ಸ್‌ಪೆಕ್ಟರ್ ಶ್ರೀ ವಿ. ನರಸಿಂಹಯ್ಯನವರು ಸ್ವಾಗತಿಸುತ್ತಾ ಯೋಜನೆಯ ರೂಪರೇಷೆಗಳನ್ನು ವಿವರಿಸಿ, ಸಹಾಯ ಕೋರಿದರು.

ಶ್ರೀ ಮಧ್ವರಾಜರು ತಮ್ಮ ಉದ್ಘಾಟನಾ ಭಾಷಣದಲ್ಲಿ, ಪರದೇಶದ ಮಕ್ಕಳ ಬೆಳವಣಿಗೆಯ ಎದುರು ನಮ್ಮ ದೇಶದ ಮಕ್ಕಳ ಬೆಳವಣಿಗೆ ಏನೂ ಸಾಲದೆಂದೂ ಈ ಯೋಜನೆಗೆ ತನ್ನಿಂದಾದಷ್ಟು ಸಹಾಯ ಒದಗಿಸುತ್ತೇನೆಂದೂ ಹೇಳಿದರು.

ಶ್ರೀ ಎ. ಜಿ. ಅಲ್ವೆಯವರು ಮಾತಾಡುತ್ತಾ ಜನತೆಯ ಬೆಂಬಲ ಕೋರಿದರು. ಅಧ್ಯಕ್ಷರ ಭಾಷಣದ ಬಳಿಕ ಶ್ರೀ ಕೃಷ್ಣರಾಯರು ಧನ್ಯವಾದ ಸಮರ್ಪಿಸಿದರು.

ಕಸ್ತೂರ್ಬಾ ಆಸ್ಪತ್ರೆಯಲ್ಲಿ ಧರ್ಮಾರ್ಥ ಚಿಕಿತ್ಸೆ — ತಾ. 4.10-63 ರಂದು, ಲೋಕ ಸಭೆಯ ಡೆಪ್ಯುಟಿ ಸ್ಪೀಕರರಾದ ಶ್ರೀ ಎಸ್ ವಿ ಕೃಷ್ಣ ಮೂರ್ತಿರಾಯರು, ಮಣಿಪಾಲದ ಕಸ್ತೂರ್ಬಾ ಜನರಲ್ ಹಾಸ್ಪಿಟಲಿನ ಧರ್ಮಾರ್ಥ ಡಿಸ್ಪೆನ್ಸರಿ ಮತ್ತು ಧರ್ಮಾರ್ಥ ವಾರ್ಡಿನ ಉದ್ಘಾಟನಾ ಸಮಾರಂಭವನ್ನು ನೆರವೇರಿಸಿದರು.

ಡಾ. ಟಿ. ಮಾಧವ ಪೈಗಳು ಸ್ವಾಗತ ಭಾಷಣ ಮಾಡಿದ ಬಳಿಕ ಶ್ರೀ ಎಸ್. ವಿ. ಕೃಷ್ಣಮೂರ್ತಿರಾಯರು ಮಾತನಾಡುತ್ತಾ ಮಣಿಪಾಲದ ಅಗಾಧ ಪ್ರಗತಿಯನ್ನು ಶ್ಲಾಘಿಸಿ, ಡಾ. ಪೈಗಳ ಮಹಾನ ಸದ್ಧರ ಕಾರ್ಯವನ್ನು ಕೊಂಡಾಡಿ ಸಹಕಾರವಿತ್ತ ಜನತೆಯನ್ನು ಅಭಿನಂದಿಸಿದರು.

ಅಂತ್ಯದಲ್ಲಿ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಡೀನ್ ಡಾ ಕೆ. ಕೃಷ್ಣರಾಯರು ಧನ್ಯವಾದ ಸಮರ್ಪಿಸುತ್ತಾ ಜನತೆಯ ಬೆಂಬಲ ಕೋರಿದರು.

ಯೂನಿಯನ್ ಉದ್ಘಾಟನಾ ಸಮಾರಂಭ—ಉಡುಪಿ ಆಯುರ್ವೇದ ಕಾಲೇಜ್ ಯೂನಿಯನ್ ಉದ್ಘಾಟನಾ ಸಮಾರಂಭವು ತಾ 4—10—63ರಂದು ಉಡುಪಿ ಮುನಿಸಿಪಾಲಿಟಿಯ ಕಮಿಶನರ್ ಐ. ಜೋಶ್ವರವರ ಅಧ್ಯಕ್ಷತೆಯಲ್ಲಿ ಶ್ರೀ ಮಾಧವ ನಾಯ್ಕರವರಿಂದ ನೆರವೇರಿಸಲ್ಪಟ್ಟಿತು. ಯೂನಿಯನ್ ಪ್ರೆಸಿಡೆಂಟ್ ಕರುಣಾಕರ ಶೆಟ್ಟಿಯವರು ಪರಿಚಯ ಮಾಡಿಕೊಟ್ಟ ಮೇಲೆ ಯೂನಿಯನ್ ಗವರ್ನರರಾದ ಜಿ. ಬಿ. ಸವಣೂರರು ಸ್ವಾಗತಿಸಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಕಾಲೇಜಿನ ವಿದ್ಯಾರ್ಥಿಗಳು ಮಹತ್ತರವಾದ ಸಾಮೂಹಿಕ ಶಕ್ತಿಯನ್ನು ಸದುಪಯೋಗ ಮಾಡಿಕೊಳ್ಳಬೇಕೆಂದರು. ಯೂನಿಯನ್ನಿನ ಕಾರ್ಯದರ್ಶಿ ಶ್ರೀ ಪಿ. ಗೋಪಾಲಕೃಷ್ಣ ಭಟ್ಟರು ಧನ್ಯವಾದವನ್ನರ್ಪಿಸಿದರು.

ಶ್ರೀಮತಿ ಶಾರದಾ ಆರ್. ಅಡ್ಯಂತಾಯರವರ ಅವಿರೋಧ ಆಯ್ಕೆ—ಶ್ರೀಮತಿ ಶಾರದಾ ಆರ್. ಅಡ್ಯಂತಾಯರವರು ಕುಂದಾಪುರ ತಾಲೂಕು ಬೋರ್ಡಿಗೆ ಮೆಂಬರರಾಗಿ ಅವಿರೋಧದಿಂದ ಆಯ್ಕೆಗೊಂಡಿರುವರು. ಶ್ರೀಮತಿಯವರ ಆಯ್ಕೆಯು ಈ ಮೊದಲ ತಾಲೂಕು ಬೋರ್ಡ್ ಅಧ್ಯಕ್ಷರಾದ ಶ್ರೀ ವೆಂಕಪ್ಪ ಶೆಟ್ಟರು ರಾಜಿಕೊಟ್ಟ ಸ್ಥಳಕ್ಕಾಗಿರುತ್ತದೆ. ಶ್ರೀಮತಿಯವರು ಕಾವ್ರಾಡಿ ಪಂಚಾಯತದ ಮೆಂಬರಾಗಿಯೂ, ಕಂಡ್ಲೂರು ಮಹಿಳಾ ಸಮಾಜದ ಅಧ್ಯಕ್ಷರಾಗಿಯೂ ಕುಂದಾಪುರ ತಾಲೂಕು ಸ್ಕಾಲರ್ ಶಿಪ್ ಕಮಿಟಿಯ ಮೆಂಬರರಾಗಿಯೂ ಇರುವದಲ್ಲದೆ ಬೈಂದೂರ್ ಕ್ಷೇತ್ರದ ಕೋಆರ್ಡಿನೇಟೆಡ್ ವಿಮೆನ್ ವೆಲ್‌ಫೇರ್ ಪ್ರೊಜೆಕ್ಟಿನ ಮಾಜಿ ಸಹ ಅಧ್ಯಕ್ಷರಾಗಿಯೂ ಇದ್ದರು.

ಅಲೆವೂರು ಕೆಮ್ತೂರು ರಸ್ತೆ ಉದ್ಘಾಟನೆ—ಸ್ಥಳೀಯ ಯುವಕ ಮಂಡಳಿಯ ನೇತೃತ್ವದಲ್ಲಿ ಗ್ರಾಮಸ್ಥರು ಶ್ರಮದಾನದಿಂದ ವಾಹನ ಸಂಚಾರಕ್ಕೆ ಅನುಕೂಲವಾಗುವಂತೆ ದುರಸ್ತಿ ಪಡಿಸಿದ ಅಲೆವೂರಿಂದ ಕೆಮ್ತೂರಿಗೆ ಹೋಗುವ ಮುಕ್ಕಾಲು ಮೈಲು ಉದ್ದದ ರಸ್ತೆಯ ಉದ್ಘಾಟನೆಯನ್ನು ತಾ. 2—10—63ರಂದು ತಾಲೂಕು ಕಾಂಗ್ರೆಸಿನ ಅಧ್ಯಕ್ಷ ಶ್ರೀ ಟಿ. ರಮೇಶ ಪೈಗಳು ನೆರವೇರಿಸಿದರು. ಶ್ರೀ ಎಚ್. ವಿಠ್ಠಲ ಶೆಟ್ಟರು ಸ್ವಾಗತಿಸಿದ ಬಳಿಕ ಶ್ರೀ ಟಿ. ರಮೇಶ ಪೈಗಳು ಮಾತಾಡುತ್ತಾ ಸ್ಥಳೀಯ ಯುವಕ ಮಂಡಳಿಯವರನ್ನೂ ಗ್ರಾಮಸ್ಥರನ್ನೂ ಅಭಿನಂದಿಸಿ, ಇಂತಹ ಕಾರ್ಯಗಳು ಸ್ವಯಂ ಪ್ರೇರಿತವಾಗಿ ನಡೆದರೆ ಮಾತ್ರ ಗ್ರಾಮೀಣ ಅಭಿವೃದ್ಧಿ ಸಾಧ್ಯವೆಂದರು. ಸಭಿಕರಲ್ಲಿ ಶ್ರೀ ಎ. ಕೊರಗಪ್ಪ, ಡಾ. ಶ್ಯಾಮ ಶೆಟ್ಟಿ, ಎಸ್. ನೇರಾಡಿಗ ಮತ್ತು ಶ್ರೀ ಎಸ್. ಎಲ್. ನಾರಾಯಣ ಭಟ್ಟರು ಭಾಷಣ ಮಾಡಿದರು ಶ್ರೀ ಚಂದ್ರಶೇಖರ ಶೆಟ್ಟರು ಧನ್ಯವಾದ ಸಮರ್ಪಿಸಿದರು.

ಇದೇ ರೀತಿ ಶ್ರಮದಾನದಿಂದ ರಚಿಸಲಾದ ಕೊರಂಗ್ರಪಾಡಿ ಪಿಲ್ಯಂದಿ ರಸ್ತೆಯ ಉದ್ಘಾಟನೆಯನ್ನು ತಾ| ಬೋರ್ಡ್ ಸದಸ್ಯ ಶ್ರೀ ಬಿ. ಕಾಳಪ್ಪ ಶೆಟ್ಟರು ನೆರವೇರಿಸಿದರು.

ಕಲ್ಯಾಣಪುರ—ತಾ. 25.1.63ರಲ್ಲಿ ತಿಮ್ಮಣ್ಣ ಕುದ್ರುವಲ್ಲಿ ಸುಂದರಿ ಎಂಬಾಕೆಯು ತನ್ನ ನಾಲ್ಕು ತಿಂಗಳ ಮಗುವನ್ನು ಕೊಂದು ತನ್ನ ಪ್ರಾಣ ಹತ್ಯೆ ಮಾಡಿಕೊಳ್ಳುವರೆ ಪ್ರಯತ್ನಿಸಿದಳೆಂಬ ಆಪಾದನೆಯ ಮೇರೆಗೆ ಚಾರ್ಜ್‌ಶೀಟಿನ ಪ್ರಕಾರ ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕಂ ಮೆಜಿಸ್ಟ್ರೇಟರು ಮಂಗಳೂರು ಡಿಸ್ಟ್ರಿಕ್ಟ್ ಸೆಶ್ಶನ್ ಜಡ್ಜರ ಕೋರ್ಟಿಗೆ ಕಮಿಟ್ ಮಾಡಿಸಟ್ರ ಆಪಾದಿತಳ ನಂಬ್ರ ಮಂಗಳೂರು ಡಿಸ್ಟ್ರಿಕ್ಟ್ ಸೆಶ್ಶನ್ ಜಡ್ಜರಾದ ಶ್ರೀ ಎಂ. ಎಂ. ತಿರ್ಸ್ಮಾಲ್ ಇವರ ಮುಂದೆ ತನಿಖೆಗೆ ಬಂದು ಎರಡೂ ಪ್ರಕರಣಗಳು ನಿರಾಧಾರವಾಗಿದೆಯೆಂಬ ತೀರ್ಪನ್ನು ಕೊಟ್ಟು ಆಪಾದಿತಳನ್ನು ಬಿಡುಗಡೆ ಮಾಡಿರುತ್ತಾರೆ. ಪ್ರೊಸೆಕ್ಯೂಶನಿನ ಪರವಾಗಿ ಪಬ್ಲಿಕ್ ಪ್ರೊಸಿಕ್ಯೂಟರ್, ಎಡ್ವೋಕೇಟ್ ಇಂಬ್ರಡಿ ಆನಂದ ಶೆಟ್ಟರೂ ಆಪಾದಿತಳ ಪರವಾಗಿ ಉಡುಪಿಯ ವಕೀಲರಾದ ಶ್ರೀ ಪಿ ಶಿವಾಜಿ ಶೆಟ್ಟಿಯವರೂ ವಾದಿಸಿದ್ದರು.

ಪುರಂದರದಾಸರ ಚತುರ್ಥ ಶತಮಾನೋತ್ಸವವನ್ನು ಉಡುಪಿಯಲ್ಲಿ ದಶಂಬರ ತಿಂಗಳ ಅಂತ್ಯದಲ್ಲಿ ಜರಗಿಸುವ ನಿರ್ಧಾರವನ್ನು ಸ್ಥಳೀಯ ಸಂಗೀತ ಸಭೆಯು ಮಾಡಿದ್ದು, ಈ ಬಗ್ಗೆ ಕಾರ್ಯಕ್ರಮಗಳನ್ನು ನಿರ್ಧರಿಸುವ ಕುರಿತು ಇದೇ ತಾ. 6ರಂದು ಪ್ರಭಾಕರ ಕಟ್ಟಡದಲ್ಲಿ ಪುರಜನರ ಸಭೆಯೊಂದು ಶ್ರೀ ಕೆ ಕೆ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿ ವಿಚಾರವಿನಿಮಯ ನಡೆದ ಬಳಿಕ ಮುಂದಿನ ವ್ಯವಸ್ಥೆಗಾಗಿ ಶ್ರೀ ಪಿ. ರಂಗನಾಥ ಶೆಣೈಯವರು ಅಧ್ಯಕ್ಷರಾಗಿರುವ ಸಮಿತಿಯೊಂದು ರಚಿಸಲ್ಪಟ್ಟಿತು.

ಧರ್ಮಾರ್ಥ ನೇತ್ರ ಚಿಕಿತ್ಸಾ ಶಿಬಿರ

ಪದ್ಮಶ್ರೀ ಡಾ. ಎಮ್. ಸಿ. ಮೋದಿಯವರ ನೇತ್ರ ಚಿಕಿತ್ಸಾ ಶಿಬಿರವು ಉಡುಪಿಯಲ್ಲಿ ನವಂಬರ 2ನೇ ವಾರದಲ್ಲಿ ಜರಗಲಿದೆ. ಈ ಬಗ್ಗೆ ಅವರಿಗೆ ಆತ್ಯಾವಶ್ಯಕ ಸೌಕರ್ಯವೊದಗಿಸುವ ಹಾಗೂ ಕಾರ್ಯಕ್ರಮ ರೂಪಿಸುವ ಕುರಿತು ಪುರಜನರ ಸಭೆಯೊಂದು ವಸಂತಮಹಲಿನಲ್ಲಿ ತಾ. 6ರಂದು ಪರ್ಯಾಯ ಶ್ರೀ ಶ್ರೀರೂರು ಮಠದ ಲಕ್ಷ್ಮೀ ಮನೋಜ್ಞ ತೀರ್ಥ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಕನ್‌ವೀನರ್ ಶ್ರೀ ಪಿ. ಆರ್. ಶೆಣೈಯವರು ಸ್ವಾಗತಿಸಿ ಕಾರ್ಯಕ್ರಮವನ್ನು ವಿವರಿಸಿ ಸಹಕಾರ ಕೋರಿದ ಮೇಲೆ ಪರ್ಯಾಯ ಮಠದ ಶ್ರೀಪಾದಂಗಳವರು ಅಧ್ಯಕ್ಷರಾಗಿರುವ ಸಮಿತಿಯೊಂದು ರಚಿಸಲ್ಪಟ್ಟಿತು. ಶಿಬಿರವು ಸ್ಥಳೀಯ ಬೋರ್ಡ್ ಹೈಸ್ಕೂಲಿನಲ್ಲಿ ನಡೆಯಲಿದ್ದು ರೋಗಿಗಳ ಭೋಜನ ವ್ಯವಸ್ಥೆಯನ್ನು ಅಧ್ಯಕ್ಷ ಪರ್ಯಾಯ ಸ್ವಾಮಿಯವರೇ ವಹಿಸಿಕೊಳ್ಳಲಿರುವರು.

ಮರ್ಣೆ— ಕಳೆದ ತಾ. 22ರಂದು ಮರ್ಣೆ ಶಾಲೆಯಲ್ಲಿ ಶ್ರೀ ಬಿ. ರಮಾನಂದ ರಾಯರ ಅಧ್ಯಕ್ಷತೆಯಲ್ಲಿ ಮರ್ಣೆ ಮಣಿಪುರ ಪಂಚಾಯತಿನ ವತಿಯಿಂದ ಮಹಿಳಾ ಸಮಾಜ ತೆರೆಯುವ ಕುರಿತು ಸಭೆ ಜರಗಿತು. ಮಹಿಳಾ ಸಮಾಜದ ಉದ್ದೇಶವನ್ನು ಮುಖ್ಯ ಸೇವಿಕೆಯವರು ವಿವರಿಸಿದ ಬಳಿಕ ಶ್ರೀಗಳಾದ ಗೋವಿಂದ ಶೆಟ್ಟಿ, ಎಮ್. ಸದಾನಂದ ಶೆಟ್ಟಿ ಇವರು ಮಾತಾಡಿ ಮಹಿಳಾ ಸಮಾಜ ಅಗತ್ಯವೆಂದರು. ಅಧ್ಯಕ್ಷರ ಭಾಷಣದ ಬಳಿಕ ಗ್ರಾಮಸೇವಿಕೆಯರು ಧನ್ಯವಾದ ಸಮರ್ಪಿಸಿದರು.

ಆಸ್ಪತ್ರೆಯಲ್ಲಿ ಮದ್ದು — ಆಹಾರ ಕಡಿತ ಮಾಡಕೂಡದು — ಉಡುಪಿ ತಾಲೂಕು ಕಾಂಗ್ರೆಸ್ ಸಮಿತಿಯ ಕಾರ್ಯಕಾರೀ ಮಂಡಳಿಯ ಸಭೆಯು ಇತ್ತೀಚೆಗೆ ಅಧ್ಯಕ್ಷ ಶ್ರೀ ಟಿ. ರಮೇಶ ಪೈಗಳ ಅಧ್ಯಕ್ಷತೆಯಲ್ಲಿ ಜರಗಿ ತುರ್ತುಪರಿಸ್ಥಿತಿಯ ನೆಪದಿಂದ ಸ್ಥಳೀಯ ಸರಕಾರಿ ಆಸ್ಪತ್ರೆಯಲ್ಲಿ ಮದ್ದು ಮತ್ತು ಆಹಾರದ ಕಡಿತ ಮಾಡಕೂಡದೆಂದು ಸರಕಾರವನ್ನು ಕೇಳಿಕೊಂಡಿದೆ. ಅಲ್ಲದೆ ಅಜ್ಜರಕಾಡಿನಲ್ಲಿ ನಿರ್ಮಾಣವಾಗುತ್ತಿರುವ ಆಸ್ಪತ್ರೆಯ ಕಟ್ಟಡವನ್ನು ಶೀಘ್ರ ಪರಿಪೂರ್ಣಗೊಳಿಸಬೇಕೆಂದೂ ಕೇಳಿಕೊಂಡಿದೆ.

‘ಕರ್ನಾಟಕ ಸಂಗೀತಕ್ಕೆ ಪುರಂದರ ದಾಸರ ಕೊಡುಗೆ’ ಎಂಬ ಕುರಿತು ತಾ. 3-10_63ರಂದು ಉಡುಪಿಯ ವರದೇಂದ್ರ ಕಲಾಮಂದಿರದಲ್ಲಿ ದೆಹಲಿ ಯುನಿವರ್ಸಿಟಿಯ ಕರ್ನಾಟಕ ಸಂಗೀತ ಪ್ರೊಫೆಸರಾದ ಶ್ರೀ ಪಿ. ವಿ. ಸನಗೋಪಾಲನ್‌ರವರು ಭಾಷಣ ಮಾಡಿದರು. ಸಭಾಧ್ಯಕ್ಷತೆಯನ್ನು ಲೋಕಸಭೆಯ ಉಪಸ್ಪೀಕರ್ ಶ್ರೀ ಎಸ್. ವಿ. ಕೃಷ್ಣಮೂರ್ತಿಯವರು ವಹಿಸಿದ್ದರು.

ಆರಂಭದಲ್ಲಿ ಶ್ರೀ ಕೆ. ಕೆ. ಪೈಗಳು ಸ್ವಾಗತಿಸಿದರು. ಅಂತ್ಯದಲ್ಲಿ ಶ್ರೀ ಪಿ. ಆರ್. ಶೆಣೈಯವರು ಧನ್ಯವಾದ ಸಮರ್ಪಿಸಿದರು.

ಗೇಹ ರಾಜ್ಯದಲ್ಲಿ

ನಾನೂ ರಿಟ್ ಫೈಲ್ ಮಾಡುತ್ತಿದ್ದರೆ……

ಕೇಳಿದಿಯೇನೇ ಸುದ್ದೀನ?

ಏನಂತೆ?

ಅದೇ, ನಮ್ಮ ಕರ್ನಾಟಕದಲ್ಲಿ, ಅಲ್ಲ ಅಲ್ಲ ಮೈಸೂರ್ನಲ್ಲಿ ಮತ್ತೇನು ಈ ಸಮ್ಯದಲ್ಲಿ ವಿಶೇಷ?

ಈ ಸಮಯದಲ್ಲಿ .... ದಸರಾ ... ಜಂಬೂಸವಾರಿ ....

ಛೀ, ಛೀ .... ಅದೆಲ್ಲಾ ಈಗಲ್ಲ, ಇನ್ನೂ ಕೆಲದಿನಯಿದೇಂತ ಹೇಳಿ ವಾರ ಮೂರಾಗ್ಲಿಲ್ಲಾ ....

ಹಾಗಾದ್ರೆ, ಏನಂತೆ? ...

ನೀನು ಅಷ್ಟು ಜಾಣೆ ಆದ್ರೆ ಹೇಳು ನೋಡೋಣ ....

ಮತ್ತೇನಂತೆ? ನಿಜಲಿಂಗಪ್ಪನವ್ರು ಪಕ್ಷ ಕಟ್ಲಿಕ್ಕೆ ಹೋಗ್ತಾರಂತೇನೂ?....

ಅಲ್ಲಾ, ಅಲ್ಲಾ ಅಲ್ಲ. ಅದೂ ಅಲ್ಲ.

ಅವರ ಮಂತ್ರಿ ಮಂಡ್ಳ ಚಿಕ್ದು ಮಾಡ್ತಾರಂತೇನು?

ಅದೂ ಅಲ್ಲಾಂಡೆ. ಅದ್ಕೆಲ್ಲಾ ಇನ್ನೂ ಕಾಲ ಪಕ್ವ ಆಗಿಲ್ಲ. ಆಗೋ ಕಾಲಕ್ಕೆ ಆಗುತ್ತೆ; ಇಲ್ಲ, ಹೋಗೋಕಾಲಕ್ಕೆ ತಾನಾಗಿಯೇ ಹೋಗುತ್ತೆ.

ಮತ್ತೇನಂತೆ ಹೇಳ್ಬಾರ್ದೇ?

ನಾನು ಸೋತೇಂತ ಹೇಳು ...

ಅಬ್ಬಾ ನೀನೆ? ಹೀಗೆ ನನ್ನನ್ನ ಗೋಳಾಡಿಸೋದ್ರಲ್ಲೇ ಹೋಯ್ತು ನಿಮ್ಜೀವನ ...

ಗೋಳಾಡಿಸೋದಂತೆ. ಅದೂ ನಾನು! ಅಲ್ಲಾ ಮಾತಿಗೆ ಹೇಳ್ತೀನೆ; ಸಿಟ್ಟು ಮಾಡಿಕೊಳ್ಬೇಡ ಮತ್ತೆ. ನೋಡು ನಾನು ನಿನ್ನನ್ನಲ್ದೆ ಮತ್ತಾರನ್ನೇ ಗೋಳಾಡಿಸ್ಬೇಕು?

ಸಾಕು ಸುಮ್ನಿರೀಂದ್ರೆ ನಿಮ್ಮ ಮಾತನ್ನ ನಿಮ್ಮ ರೂಪವನ್ನ ಯಾರಾದ್ರೂ ಹೊಸಬ್ರು ಕಂಡೇನೇ ಮೂರುದ್ದ ಹಾರಿಬಿಡ್ಬೇಕು. ನಾನಾದ್ರಿಂದ ನೋಡ್ಕೊಂಡು ಸುಮ್ಮನಿದ್ದೇನೆ.

ಇರ್ಲಿ ಬಿಡು; ಸದ್ಯ ನೀನಾದ್ರೂ ಸುಮ್ನಿದ್ದೀ ತಾನೇ! ತುಂಬಾ ಸಂತೋಷ!

ಇನ್ನಾದ್ರೂ ಹೇಳಿ ನೋಡ್ವಾ ವರ್ತಮಾನವೇನೂಂತ?

ಅಲ್ಲಾ, ಮತ್ತೇನೂ ಇಲ್ಲ. ಅದೇ ಹೈಕೋರ್ಟು ತೀರ್ಪಿನ ಸುದ್ದೀಂತಂದೆ.

ಬಿಡ ಸುಮ್ನೆ. ಎಷ್ಟೋ ಕೇಸು ನಡೆಯುತ್ತೆ; ತೀರ್ಪು ಹೊರ ಬೀಳುತ್ತೆ. ಅದ್ಕೇಕೆ ನಾವು ತಲೆ ಕೆಡ್ಸಿಕೊಳ್ಬೇಕೂಂತ?

ಅಲ್ವೆ, ಇದು ತಲೆಬಿಸಿಯಾಗೋ ವಿಚಾರಲ್ಲ ನೋಡು ಕಾಸು ಖರ್ಚಿಲ್ಲದೆ ಎಂಟರ್‌ಟೈನ್ ಮೆಂಟ್.

ಏನಂತೆ ಗೊಂಬೆಯಾಟ ಶುರುಮಾಡ್ತಾರಂತೇನು? ಎಲ್ಲಿಯಂತೆ? ಪ್ರೈಮರಿ ಸ್ಕೂಲಲ್ಲಿಯೋ ಆಥ್ವಾ....

ಮಾತ್ನಲ್ಲಿ ಸೋಟೆಯಾದ್ರೂ ಬುದ್ಧಿಯಲ್ಲಿ ಆಗ್ನಿಲ್ಲಾಂತಂದ್ರೆ....

ನೀವು ಮತ್ತೆ ಉದ್ದುರುಟು ಮಾಡಿ ಹೇಳ್ತಬಂದ್ರೆ, ಹೇಗೇಂತ...ಸರಿ ಹೇಳಿ. ನೋಡೋಣ.

ಅಲ್ಲಾ, ಸರ್ಕಾರ ಮೆಡಿಕಲ್ ಮತ್ತು ಇಂಜನಿಯರಿಂಗ್ ಕಾಲೇಜುಗಳ ಪ್ರವೇಶದ ವಿಷ್ಯದಲ್ಲಿ ಆಜ್ಞೆ ಹೊರಡಿಸಿತ್ತು ನೋಡು.

ಸರಿ, ಅದೀಗ ಕಾರ್ಯರೂಪಕ್ಕೆ ಬಂದೂ ಆಯ್ತು ನೋಡಿ.

ಬಂತೂಂತಂದ್ಕೋ. ಆದ್ರೆ ಕೋರ್ಟಿನ ಪ್ರಕಾರ ಆ ಆಜ್ಞೆಗೂ ಮಂಗಳಾರತಿ ಯಾಯ್ತು.

ಮತ್ತೆ ನೀವು ಹೇಳೋದೇನು? ಮಾಡೋದೇನು? ಎಲ್ರಿಗೂ ನ್ಯಾಯ ದೊರಕಿಸಿಕೊಡುವ ಉದಾರತೆಯಿಂದ ಹೊರಡಿಸಿದ ಆಜ್ಞೆಯನ್ನು ಅನ್ಯಾಯದ್ದೆಂದು ಅವರು ಸಾರಲೂ ಮುಂದಾದರು ಅಲ್ವೆ?

ಹಾಗೇನೂ ಸರಿಯಾಗಿ ಹೇಳ್ಲಿಲ್ಲ. ಆದ್ರೆ, ಆಯ್ಕೆ ಸಮಿತಿಯು ಮರಳಿ ಇಂಟರ್‌ವ್ಯೂ ಮಾಡಬೇಕೂಂತ ಅದು ಹೇಳಿ ಬಿಟ್ಟಿತಂತೆ!

ಅಯ್ಯೋ ಎಲ್ಲಾದ್ರೂ ಉಂಟೆ?

ಇಲ್ಲದೆ ಇದ್ರೆ ಈಗ ಆಯ್ತಲ್ಲಾ?

ಅಂತೂ ಏನೋ ಅಪ್ಪ,ನಿಮ್ಮ ಟೋಪಿ ಸರ್ಕಾರ ಏನೇನು ಮಾಡುತ್ತೋ ಇನ್ನು!

ಏನೇ ಇದು, ಆಯ್ಕೆ ಸಮಿತಿ ಅನ್ಯಾಯ ಮಾಡಿದೇಂತ ಹೇಳಿದ್ರೆ ಸರ್ಕಾರವನ್ನು ಟೀಕಿಸುವುದು? ನಿನ್ನ ಕರ್ಮ.

ಅಲ್ಲಾ ಆ ಸಮಿತಿಯನ್ನು ನೇಮಿಸಿದವರು ಯಾರು?

ಸರ್ಕಾರದವರು

ಸರಿಯಾಯ್ತು ಬಿಡಿ ಇನ್ನು. ಈಗ್ಲಾದರೂ ಒಪ್ಪಿದಿರಾ....

ಅದೆಲ್ಲಾ ಹೋಗ್ಲಿ ಬಿಡು. ಈ ತೀರ್ಪನ್ನು ಮಾಡುವಾಗ, ನಮ್ಮ ಗಣಪನೂ ಸರವಾಗಿ ಸೂ ರಿಟ್ ಇಡಬಹುದಿತ್ತು ಎನಿಸುತ್ತೆ.

ರಿಟ್ ಯಾಕೆ? ಹೇಗೂ ಇನ್ನೊಂದ್ಸಲ ಹೋದ್ರೆ ಸರಿಯಾಗುತ್ತಲ್ಲಾ?

ಎಲ್ಲಿಗೆ ಹೋದ್ರೆ....

ಅದೇ ಮೈಸೂರಿಗೋ, ಬೆಂಗಳೂರಿಗೋ....

ಅದು ಹೇಗಾಗುತ್ತೆ? ಇನ್ನು ನಡೀಬೇಕಾದ್ದು ರಿಟ್ ಇಟ್ಟವರ ಇಂಟರ್‌ವ್ಯೂ ಮಾತ್ರ.

ಅದು ಹೇಗೆ ಹಾಗೆ? ಮಾಡಿದ ಇಂಟರ್-ವ್ಯೂ ಅನ್ಯಾಯದ್ದೆಂದ ಮೇಲೆ ಮರಳಿ ಎಲ್ರನ್ನೂ ಕರೀಬೇಕಲ್ಲ ...

ಹೇಗೂ ಇಲ್ಲಿ ಸಿಕ್ಕಿ ಬಿದ್ದೆ, ನೋಡು. ರಿಟ್ ತೀರ್ಮಾನ ರಿಟ್ ಹಾಕಿದವರಿಗೆ ಮಾತ್ರ, ಉಳಿದವರಿಗಲ್ಲಿಂದೆ? ಅಷ್ಟೇ ಕೇಳಿದ್ದು, ನಾವೂನೂ ರಿಟ್ ಹಾಕ್ತಿದ್ರೆ .... ಸಿಕ್ತಿತ್ತೋ ಏನೋ!

ಹಾಕ್ಬಹುದಿತ್ತಲ್ಲ ಒಂದು ....

ಇತ್ತು; ಆದ್ರೆ ಹಣಕ್ಕೆ ಎಲ್ಲಿ ಹೋಗಲೀಂತ ಸುಮ್ನೆ ಕೂತಿದ್ದೆ. ಹೀಗೆ ತೀರ್ಮಾನ ಬರುತ್ತೇಂತ ಗೊತ್ತಾಗಿದ್ರೆ ಖಂಡಿತಕ್ಕೂ ಏನಾದರೂ ಮಾಡಬಹುದಿತ್ತೂಂತ ಈಗ ಅನ್ನಿಸ್ತೆ.

ಈಗ ಏನೂ ಮಾಡಾಕಾಗೋಲ್ಲ ತಾನೆ? ಒಟ್ನೊ ನಮ್ಮದೃಷ್ಟ.

ಅದು ಹೌದೂನ್ನು. ನಮ್ಮಾಣಿ ಹಣೇಲಿ ಮೆಡಿಕಲೇ ಬರಿಯದಿದ್ರೆ ಹೇಗಪ್ಪಾ ಬರ್ಬೇಕು?

ಇದು ಒಳ್ಳೇ ಸಮಾಧಾನವಾಯ್ತಲ್ಲ…

ಅಲ್ಲ ನಾನು ಹೀಗಂದ್ರೆ ನೀನೇ ಬೈತೀರಿ. ಅದ್ರಿಂದ ...

ನನ್ನ ಬೈಗಳೂಂತಂದ್ರೆ ನಿನ್ಗೆ ಮೈಸೂರು ಸರ್ಕಾರಕ್ಕೆ ಕೋರ್ಟು ತೀರ್ಮಾನವಿದ್ದ ಹಾಗೆ!

ಹೋಗ್ಲಿ ಬಿಡಿ ಅದು. ಈಗ ಏನಂತೆ, ಗಣಪಾಗೆ ಏನಾದ್ರೂ ಚಾನ್ಸ್ ಸಿಗಬಹುದೆ?

ಅವನು ರಿಟ್ ಹಾಕಿಲ್ಲ; ಸೀಟು ಸಿಗುವುದೂ ಇಲ್ಲ

ಒಂದು ವರ್ಷ ಹಾಳಾಯ್ತೂನ್ನಿ, ಹಾಗಾದ್ರೆ....

ಹಾಳೇನು ಬಂತು? ಹೇಗೂ ತಿಂದ ಅನ್ನ ಕರಗಿಸೋಕೆ ತಿರುಗಾಡ್ತಾನೆ ತಾನೆ? ಚೆನ್ನಾಗಿ ಜೀರ್ಣವಾಗತ್ತೆ.

ಅದು ಸರಿ. ಜೀರ್ಣಶಕ್ತಿ ಸರಿಯಿದ್ರೆ ಯಾವ ರೋಗಾನೂ ಬರೋಲ್ಲಾಂತೆ; ನಿನ್ನೆ ಡಾಕ್ಟ್ರು ಸರ್ದ್ನಾಗಂದಿದ್ರಂತೆ.

ಹಾಗಾದ್ರೆ ಸರಿಯಾಯ್ತು ಬಿಡು....!

ಯಾಕೆ ನಗ್ತೀರಿ? ಏನಾಯ್ತು? ಏನು ಸರಿಯಾಯ್ತು....

ಮತ್ತೇನೂ ಇಲ್ಲ. ತಿರುಗಾಡಿದ್ರೆ ಜೀರ್ಣ ಆಗುತ್ತೆ....ಜೀರ್ಣ ಆದ್ರೆ ರೋಗ ದೂರವಾಗುತ್ತೆ. ಮತ್ತೆ ಡಾಕ್ಟ್ರುಯಾಕೇಂತ....

ಅಯ್ಯಯ್ಯ ನೀವೊಂದು...

ಅಲ್ಲ ನೋಡು ನೀನು...ಹೀಗೇನೆ ಇನ್ನೂ ಒಂದಾರು ವರ್ಷ ಹೋಗುವಾಗ, ತಿರುಗಾಡೋರ ಸಂಖ್ಯೆ ಹೆಚ್ಚಾಗುತ್ತೆ. ಒಂದ್ವೇಳೆ ನಮ್ಮ ಗಣಪನೂ ಡಾಕ್ಟ್ರಾಗಿ ಬಂದಾಂತನ್ನು, ಆಗ ರೋಗಿಗಳೇ ಇಲ್ದೆ ಹೋದ್ರೆ ಮತ್ತವ ಏನ್ಮಾಡ್ಬೇಕೂಂತ ಅಲ್ವೆ....?

ಸಾಕು ಬಿಡೀಂದ್ರೆ. ನಿಮ್ದು ಯಾವಾಗ್ಲೂ ಹೀಗೆ? ಪ್ರತಿಯೊಂದಕ್ಕೂ ಒಂದೊಂದು ಗೋಪುರ ಕಟ್ಟೋದು ಗಾಳಿಯಲ್ಲಿ....

ಸರೀನ್ನು. ಭೂಮಿಯಲ್ಲಿ ಕಟ್ಟಿದ ಗೋಪುರಕ್ಕಿಂತ ಗಾಳಿಗೋಪುರ ಬಹಳ ಚಂದ, ಬಹಳ ಚಂದ. ತಾಜಮಹಾಲಿಗೂ ಚಂದ.

ಹೌದು; ಹಾಗೇ ಉರುಳುವುದೂ ಬಹು ಬೇಗ.

ಸರಿ ಸರಿ, ಪಾರಿಜಾತ ಹೂವಿದ್ದಹಾಗೆ.

ಓ, ನಿಲ್ಲಿ, ಬಂದೆ. ನಮ್ಮ ನೀಲಮ್ಮ ಮಕ್ಳಿಗೆ ತಂದು ಕೊಟ್ಟಿದ್ದು; ಅದನ್ನ ಹೊರಗೆ ಇಟ್ಟು ಬರ್ತೀನೆ; ಸ್ವಲ್ಪ ಹಾಯಾಗಾದ್ರೂ ಇರ್ಲಿ ಅದು. ಇಲ್ವಾದ್ರೆ ನಾಳೆಗೆಲ್ಲಾ ಕಪ್ಪಾಗಿ ಹೋಗುತ್ತೆ...

ಅಂತೂ ನಿನಗೆ ಸಾಕಾಯ್ತೂನ್ನು....

ಸಾಕಷ್ಟು ಈವತ್ತಿಗೆ. ನಾಳೆ ನೋಡುವ ಆಗದೆ?

ನೋಡೋಣ ಏನಾಗುತ್ತೇಂತ. ನಡಿ, ಈಗ್ಲೆ ಗಂಟೆ ಹನ್ನೊಂದು ಮೀರಿತು. ಹ್ಞಾಂ...ಎಲ್ಲಿ ಏಳುಬೇಗ...

ಹೂಂ...

—ಗೋರಾ.

ಅಸ್ಥಮಾ ಪೀಡಿತರ ಗಮನಕ್ಕೆ

ಹಿಮಾಲಯದ ಪ್ರಸಿದ್ಧ ಅಸ್ತಮಾ ನಿವಾರಕ ಮೂಲಿಕೆಯನ್ನು ದಿ. 1—11—63 ಹುಣ್ಣಿಮೆಯ ರಾತ್ರಿ ಹಾಲು ಮತ್ತು ಅಕ್ಕಿಯಿಂದ ತಯಾರಿಸಿದ ಖೀರಿನಲ್ಲಿ ತೆಗೆದುಕೊಳ್ಳುವುದರಿಂದ ಅಸ್ತಮಾ, ಗೂರಲು, ಕೆಮ್ಮು, ಉಬ್ಬಸ, ಮೇಲುಸಿರು ಮತ್ತು ಶ್ವಾಸ ಕಟ್ಟುವಿಕೆ ಇವುಗಳು ನಿವಾರಿಸಲ್ಪಡುತ್ತವೆ. ಕೂಡಲೇ ಇಂಗ್ಲಿಷಿನಲ್ಲಿ ಬರೆಯಿರಿ:

Shri Mahatma Sidh Baba Sewa Ashram
P. O. Chitrakot. (Uttar Pradesh).

ಯಕ್ಷಗಾನದಲ್ಲಿ ಹಿರಿಯ ಸ್ಥಾನ ಗಳಿಸಿ, 'ಯಕ್ಷಗಾನ ಭಾಸ್ಕರ'ನೆಂದು ಪ್ರಸಿದ್ಧಿಪಡೆದ ದಿ| ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ಟರ

ನವಕಾಲೋಚಿತವಾದ ಯಕ್ಷಗಾನ ಪ್ರಸಂಗಗಳು.

ಸಾಹಸ ಭೀಮ ವಿಜಯ (ಗದಾಯುದ್ಧ) ೦—೮—೦

ಯಕ್ಷಗಾನ ದಶಾವತಾರದ ಆಟದ ಕ್ರಮಕ್ಕನುಸರಿಸಿ ಪಾಂಡವರ ಒಡ್ಡೋಲಗದ ದೃಶ್ಯವನ್ನು ದಿಗ್ದರ್ಶನ ಮಾಡಿ, ಮುಂದೆ ಕಥಾಭಾಗವನ್ನು ಮೂಲ ಕಾವ್ಯಕ್ಕನುಸರಿಸಿಯೇ ಕೊನೆಗೊಳಿಸಿದೆ.

ಭಾರತದ ಗುರುಕುಲ ೦—೬—೦

ಪಾಂಡವ, ಕೌರವ ಬಾಲ್ಯ ಕೇಳಿಗಳು, ವಿದ್ಯಾಭ್ಯಾಸ, ಪರೀಕ್ಷಾರಂಗದ ಕಾರ್ಯಗಳು, ಗುರುದಕ್ಷಿಣೆ ಮೊದಲಾದ ವಿಷಯಗಳನ್ನೊಳಗೊಂಡಿದೆ.

ಲಕ್ಷ್ಮಸಗಡೆ ೦—೬—೦

ಭಾರತದ ಸಭಾಪರ್ವದೊಳಗಣ ಚರಿತ್ರೆಗಳಿರುವ ನಾಲ್ಕು ದೃಶ್ಯಗಳೂ ಅರಣ್ಯಪರ್ವೋಕ್ತವಾದ ಕಿರ್ಮೀರ ವಧೆಯೆಂಬ ದೃಶ್ಯವೂ ಸೇರಿವೆ.

ಭರತೇಶ ದಿಗ್ವಿಜಯ ೦—೮—೦

ರಾಜಕವಿ ರತ್ನಾಕರವರ್ಣಿಯ ಶೃಂಗಾರ ರಸಪ್ರಧಾನವಾದ ಭರತೇಶ ವೈಭವದೊಳಗಣ ದಿಗ್ವಿಜಯ ವಿಭಾಗದ ನೂತನ ಕಥಾವಸ್ತುಗಳನೊಳಗೊಂಡಿದೆ. ಯಕ್ಷಗಾನ ಕಲಾಭಿಮಾನಿಗಳಿಗೆ ವಿವರವಾದ ಸೂಕ್ತ ಅನುಭವ ಸೂಚಿಯಿದೆ.

ವಾಲಿ ಸುಗ್ರೀವ (ಬಹುಮಾನಿತ) ೦—೮—೦

ವೀರ, ಕರುಣಾ ರಸಪ್ರಧಾನವಾದ ನವೀನ ರೀತಿಯಲ್ಲಿ ಮನವೊಪ್ಪುವಂತೆ ರಚಿಸಲಾದ ರಾಮಾಯಣಾಂತರ್ಗತ ಪ್ರಸಂಗ.

ಪುಸ್ತಕ ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ನವಭಾರತ ಪುಸ್ತಕ ಭಂಡಾರ, ಉಡುಪಿ.

READ & ADVERTISE IN
NAVAYUGA WEEKLY

ನಮ್ಮ ಸಂಸ್ಕೃತಿಗೊಂದು ಪ್ರತಿಭಟನೆ

(೫ನೇ ಪುಟದಿಂದ)

ಕ್ರಮಣಗಳು ನಮ್ಮ ಕೇವಲ ಅಸ್ತಿತ್ವವನ್ನೂ, ನಮ್ಮ ಧ್ಯೇಯಗಳನ್ನೂ ಮತ್ತು ನಾವು ಹೊಂದಿಕೊಂಡಿರುವ ಜೀವನ ಕ್ರಮವನ್ನೂ ಅಪಾಯಕ್ಕೆ ಗುರಿ ಮಾಡಿವೆ. ಈ ಬೆದರಿಕೆಯು ಕೇವಲ ಪ್ರಭಾವ ಪ್ರದರ್ಶನವೆನ್ನುವುದಕ್ಕಿಂತಲೂ ಹೆಚ್ಚಾಗಿ ವಿಶ್ವಾಸ ಘಾತಕವಾಗಿದೆ. ಅದು ವ್ಯಕ್ತಿ ಸ್ವಾತಂತ್ರ್ಯಕ್ಕೆ ಒಂದು ಅಜ್ಞಾತ ಸಮೂಹವು ಮಾಡುವ ಪೀಡನೆಯ ಬೆದರಿಕೆಯಾಗಿದೆ. ಮತ್ತು ನಿಶ್ಚಯವಾಗಿ ಮನುಷ್ಯನ ವಿಚಾರ ಮತ್ತು ವ್ಯಕ್ತಿತ್ವವನ್ನು ದಮನಗೊಳಿಸುವುದರಲ್ಲಿ ಫಲಿಸುವಂತಹುದಾಗಿದೆ.

ಆದಕ್ಕೆ ನಮ್ಮ ಉತ್ತರವೇನೆಂಬುದರಲ್ಲಿ ಸಂಶಯವಿರಲಾರದು. ಹಾಗೆಯೇ ನಿಶ್ಚಯವಾಗಿ ಈ ಹೋರಾಟದ ಫಲಿತಾಂಶವೇನಾಗುವುದೆಂಬುದರಲ್ಲೂ ಸಂಶಯವಿರಲಾರದು. ವಿವಿಧ ಭಾಷೆ ಮತ್ತು ಧರ್ಮಗಳಿಂದ ಕೂಡಿದ ಸಮಗ್ರ ರಾಷ್ಟ್ರವೇ ಚರಿತ್ರೆಯಲ್ಲೇ ಅಸಾಧಾರಣವಾದ ಒಂದು ಭಾವೈಕ್ಯದ ಉನ್ನತ ತರಂಗವನ್ನು ಸ್ವಯಂವಾಗಿಯೂ ಸಹಜವಾಗಿಯೂ ಎತ್ತಿ ತೋರಿಸಿಕೊಟ್ಟಿದೆ.

ಅಂತಿಮ ಜಯವು ನಮ್ಮದಾಗುವುದೆಂಬುದರಲ್ಲಿ ಸಂಶಯವಿಲ್ಲ. ಅದಕ್ಕೆ ಆವಶ್ಯಕವಾದ ಎದೆಗಾರಿಕೆಯು ನಮ್ಮಲ್ಲಿದೆ. ಇತ್ತೀಚೆಗೆ ನಡೆದ ಘಟನೆಗಳು ಈ ಉದ್ದೇಶದ ಕುರಿತು ನಮ್ಮಲ್ಲಿ ಒಮ್ಮತದ ಆಕಾಂಕ್ಷೆಯಿದೆ ಎಂದು ತೋರಿಸಿಕೊಟ್ಟಿವೆ. ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಒಂದು ಆದರ್ಶ ರಾಜ್ಯಭಾರದ ಕುರಿತು ಶ್ರೀ ರಾಮನು ಭರತನಿಗೆ ಕೆಲವು ಪ್ರಶ್ನೆಗಳನ್ನು ಹಾಕುತ್ತಾನೆ. ಅವನು ಕೇಳುತ್ತಾನೆ:

ಕಚ್ಚಿತ್ಸರ್ವೇ ನುರಕ್ತಾಸ್ತ್ವಾಂ ಕುಲ
ಪುತ್ರಾಃ ಪ್ರಧಾನತಃ।
ಕಚ್ಚಿತ್ಪ್ರಾಣಾಂಸ್ತ್ವದರ್ಥೇಷು |
ಸಂತ್ಯಜಂತಿ ಸಮಾಹಿತಾಃ ॥

"ರಾಜನಾದ ನಿನಗೆ ಎಲ್ಲಾ ಜನರೂ, ವಿಶೇಷವಾಗಿ ಕುಲಪುತ್ರರು ಅನುರಕ್ತರಾಗಿರುತ್ತಾರೋ?

ನಿನ್ನ ಕಾರ್ಯಕ್ಕಾಗಿ ಅವರು ತಮ್ಮ ಪ್ರಾಣಗಳನ್ನು ಸಮಾಧಾನದಿಂದ ಅರ್ಪಿಸಲು ಸಿದ್ಧರಾಗಿದ್ದಾರೋ?"

ಈ ಪ್ರಶ್ನೆಯು ವಿಶ್ವಕ್ಕೆ ಸಂಬಂಧಪಟ್ಟದು. ಮತ್ತು ಆಧುನಿಕ ವಿದ್ಯಮಾನಗಳ ಸಂದರ್ಭದಲ್ಲಿ ಎದ್ದು ನಿಲ್ಲುವುದು. ಇದಕ್ಕೆ ನಮ್ಮೆಲ್ಲರ ಉತ್ತರವು "ಅಹುದು" ಎಂಬುದಾಗಿದೆ. ಎನ್ನುವುದರಲ್ಲಿ ನನಗೆ ಸಂಶಯವಿಲ್ಲ

ಪ್ರಥಮತಃ ಮುಖ್ಯವಾಗಿ ನಮ್ಮ ನಿಷ್ಠೆಯು ನಮ್ಮ ರಾಷ್ಟ್ರದ ಕಡೆಗೆ ಅಂದರೆ ಭಾರತದ ಕಡೆಗೆ, ನಮ್ಮ ಘಟನೆಯ ಕಡೆಗೆ ಇರತಕ್ಕದೆಂದು ಅದು ತೋರಿಸುತ್ತದೆ.

ಎಲ್ಲಿ ಪ್ರತಿಯೊಬ್ಬನೂ ಮಾನವನ ಉನ್ನತ ಭಾಗ್ಯವನ್ನು ಪೂರಯಿಸಬಹುದೆಂದು ಹಾರೈಸಲಾಗುವುದೋ ಅಂತಹ ಕಲ್ಯಾಣ ರಾಜ್ಯವನ್ನು ಸ್ಥಾಪಿಸುವುದರಲ್ಲಿ ನಮ್ಮ ಸರಕಾರವು ಮಾಡುವ ಎಲ್ಲಾ ಕಾರ್ಯಗಳಿಗೆ ನಾವು ಮನಃಪೂರ್ವಕ ಸಹಾಯವನ್ನು ಕೊಡಬೇಕು ಮತ್ತು ನಮ್ಮ ದೇಶವು ಸಾಧಿಸುತ್ತಿರುವ ಉದ್ದೇಶಕ್ಕಾಗಿ, ಮತ್ತು ಅದು ಈಗ ಯಾವುದನ್ನು ಉಳಿಸಿಕೊಂಡು ಕಾಪಾಡಲು ತೊಡಗಿರುವುದೋ ಅದಕ್ಕಾಗಿ ನಮ್ಮ ಪ್ರಾಣವನ್ನಾದರೂ ಅರ್ಪಿಸಲಿಕ್ಕೆ ನಾವು ತಯಾರಾಗಿರಬೇಕು.

ಆಪತ್ಕಾಲಗಳು ಮನುಷ್ಯನ ಯೋಗ್ಯತೆಯನ್ನು ಪರೀಕ್ಷಿಸುತ್ತವೆ.

ಅನುವಾದಕ: ಕೆ ನಾರಾಯಣಾಚಾರ್, ಶಿರೋಮಣಿ, ವಿದ್ವಾನ್, ಕಣ್ವತೀರ್ಥ.

ಆಧ್ಯಾತ್ಮ್ಯ ವಿಚಾರ

ಸಾತ್ವಿಕ ಗುಣಸಂಪನ್ನ—ಸಾಧಕ

ಶ್ರೀ ಎಂ. ಬಿ. ಶಂಕರ ರಾವ್

ಸಾಧಕನಿಗೆ ಸಾತ್ವಿಕ ಕರ್ಮಗಳೇ ಉಪಯುಕ್ತವಾದ ಕರ್ಮಗಳು. ರಾಜಸ, ತಾಮಸ ಕರ್ಮಗಳು ನಿರಂತರ ಉಪಟಳಗಳನ್ನು ಕೊಡುವುದು ರೂಢಿಯು. ಸಾತ್ವಿಕ ಕರ್ಮಗಳಲ್ಲಿ ಕೆಲವು ಬಾರಿ ದೋಷಗಳು ತೋರಿ ಬಂದರೂ ಅಂತ್ಯದಲ್ಲಿ ಜಯಲಾಭವಾಗುವುದು ನಿಶ್ಚಯವು. ಕರ್ಮಗಳ ಆಸಕ್ತಿಯು ಚಿತ್ತದ ಮೇಲೆ ಆಧರಿಸಿಕೊಂಡಿದೆ. ಶುದ್ಧ ಮನಸ್ಸಿನವರು ಸಾತ್ವಿಕ ಕರ್ಮಗಳ ಮೂಲಕವೇ ತಮ್ಮ ಉದ್ದೇಶಗಳನ್ನು ಸಾಧಿಸಿಕೊಳ್ಳುವರು. ಕೆಲವು ಬಾರಿ ಸಾತ್ವಿಕ ಕರ್ಮಗಳ ಜೊತೆಯಲ್ಲಿ ನ್ಯಾಯ ರೂಪದಿಂದ ರಾಜಸ, ತಾಮಸ ಕರ್ಮಗಳೂ ಜನಿಸುವವು. ಆ ರೀತಿ ಜನಿತವಾದ ರಾಜಸ, ತಾಮಸ ಕರ್ಮಗಳು ಕೂಡ ಸಾತ್ವಿಕ ಸ್ವಭಾವವನ್ನೇ ಅಂತ್ಯದಲ್ಲಿ ತಾಳುವವು. ಸ್ವಧರ್ಮದಲ್ಲಿಯೂ, ಸ್ವದೇಶದಲ್ಲಿಯೂ ಸಾತ್ವಿಕ ರೀತಿಯಿಂದ ವರ್ತಿಸುವವರಿಗೆ ಯಾವಾಗಲೂ ಕ್ಷೇಮವಿದೆ—ಕರ್ಮ ಶಕ್ತಿಯು ಬಲವತ್ತರವಾದಂತೆ ಮಾನವನಿಂದ ಸಮಾಜ ಸೇವೆಯು ತಾನಾಗಿಯೇ ನಡೆಯುವುದು. ಮಾನವನು ವಿವೇಕಿಯೂ, ಜ್ಞಾನಿಯೂ ಆಗದೆ ಆತನಿಂದ ಸಮಾಜ ಸೇವೆಯು ಸಾಧಕತನವು ಸಾಧ್ಯವಾಗದು.

ಫಲಾಪೇಕ್ಷೆಯ ಕಲ್ಪನೆಯನ್ನು ಅಳಿಸುತ್ತ ಹೋಗುವ ಉತ್ಸಾಹಿ ಮಾನವನ ಸಾತ್ವಿಕ ಕರ್ಮಗಳನ್ನು ಮರೆತು ಬಿಟ್ಟು ರಾಜಸ, ತಾಮಸ ಕರ್ಮಗಳಿಗೆ ಅವಕಾಶವೀಯುವನು. ಆಕ್ಷಣ ಆತನಲ್ಲಿ ಅಹಂಕಾರವು ಅಂಕುರಿಸುವುದು ರೂಢಿ. ಸತತ ಫಲಾಪೇಕ್ಷೆಯಿಂದ ಕರ್ಮಗಳನ್ನು ಮಾಡುವವನು ಚಂಚಲ ಮನಸ್ಕನಾಗುವನು. ಸೌಮ್ಯತೆಯ ಭಾವವನ್ನು ತೊಲಗಿಸಿಕೊಂಡಾಗ ಆತನ ಸಕಲ ಕ್ರಿಯೆಗಳಲ್ಲಿಯೂ ವಕ್ರತನವೂ ಬಂದು ಕ್ರಿಯಾ ಸಾಧನವು ಕಷ್ಟಮಯವಾಗುವುದು. ಸಾಧುತ್ವ ಲೋಪದಿಂದ ಕರ್ಮವು ಭಂಗವಾದಾಗ ಧರ್ಮ ವೃಕ್ಷವು ಬಾಗಿ ಹೋಗುವುದು.

ಸಾಧಕನಿಗೆ ಪ್ರಕೃತಿಯು ಸದಾ ಕಾಲ ಅನಂತಾನಂತ ಸಹಾಯವನ್ನು ಒದಗಿಸುತ್ತಲಿದೆ. ಮಳೆ ಬಂದಾಗ ಬೆಳೆ ಬೆಳೆಯುವುದು; ಹೊಳೆನೀರು ತುಂಬುವುದು, ಬಾವಿ ಬತ್ತಿದಾಗ ಮಳೆಯು ನೀರು ಆಧಾರವನ್ನು ಕೊಟ್ಟು ಜೀವನಾಧಾರವಾಗುವುದು, ಬಿಸಿಲು ಬಂದಾಗ ದುಷ್ಟ ಕ್ರಿಮಿಗಳು ಸತ್ತು ಹೋಗಿ ವಾತಾವರಣವು ಶುದ್ಧವಾಗುವುದು ಇದೇ ರೀತಿ ಪ್ರಕೃತಿಯು ತನ್ನ ಪ್ರಭಾವದಿಂದ ಮಾನವ ಜೀವನವನ್ನು ಸಸಾರ್ಥಕಗೊಳಿಸುವುದು. ಸಾತ್ವಿಕ ಕರ್ಮಕ್ಕೆ ಹುಳುಹಿಡಿದರೆ ಮಾತ್ರ

ಧರ್ಮಕ್ಕೆ ಲೋಪವು ಬರುವುದು. ಧರ್ಮವು ಕ್ಷಯಿಸುವಾಗ ರಾಜಸ, ತಾಮಸ ಕ್ರಿಯೆಗಳು ವೃದ್ಧಿಯಾಗುವವು. ಅವು ವೃದ್ಧಿಯಾದಂತೆ ಮಾನವ ಕೋಟಿಗೆ ಶೋಕವು ಪ್ರಾಪ್ತವಾಗಬಹುದು. ಆದು ಕಾರಣ ನಿರಂಹಕಾರಮಯ ವಿವೇಕಿಯು ತನ್ನ ಜ್ಞಾನಸಂಪಾದನೆಯಿಂದ ಲಭಿಸಿದ ಶುದ್ಧಚಿತ್ತವನ್ನು ಸಾತ್ವಿಕ ಕರ್ಮಗಳ ದ್ವಾರ ಇನ್ನೂ' ಇನ್ನೂ ಪರಿಶುದ್ಧಗೊಳಿಸಿದಾಗ ಜನರು ಆತನಲ್ಲಿ ಸಂಪೂರ್ಣ ವಿಶ್ವಾಸವಿಟ್ಟು ಆತನಲ್ಲಿ ಪರಮಾತ್ಮನ ಸ್ವರೂಪವನ್ನು ನೋಡುವರು. ಆತನು 'ಪುರುಷೋತ್ತಮ' ನಾಗುವನು.

ಸಾಧಕನಲ್ಲಿ ಸಿದ್ಧಿಯು ಸೇವಕನಾಗಿ ನಿಲ್ಲುವುದು. ದಾರಿಯಲ್ಲಿ ನಡೆವಾಗಲೂ ಆತನಿಗೆ ಮನೆಯ ಸುಖವೂ ಲಭಿಸುವುದು ಆತನಿಗೆ ವಿಶ್ರಾಂತಿಯ ಆವಶ್ಯಕವೇ ಇಲ್ಲ ಆತನಿಗೆ ಎಲ್ಲವೂ ಶಾಂತಿಮಯ ಸುಖದುಃಖಗಳು ಏಕ ಸಮಾನವು ಆತನಲ್ಲಿ ಕೆಡುಕೂ ಒಳ್ಳಿತವೂ ಎರಡೂ ಒಂದೇ ರೀತಿಯಾಗಿ ಕಂಡು ಬಂದು ಕಟ್ಟಕಡೆಗೆ ಆತನು ನಿಷ್ಕಾಮ ಕರ್ಮಯೋಗಿ ಯಾಗುವನು ಕರ್ಮತ್ಯಾಗ ಮಾಡುವ ಯೋಗವು ಒದಗಿದಾಗ ಪರಮಾತ್ಮನ ಸಂಪೂರ್ಣಭಕ್ತನಾಗಿ, ತರ್ಕವಿತರ್ಕಗಳಿಗೆ ಎಡಗೊಡದೆ ತನ್ನ ಸ್ವಧರ್ಮವನ್ನು ಅನುಸರಿಸಿ ದೇಶಸೇವೆಯನ್ನು, ಸಮಾಜ ಸೇವೆಯನ್ನು ತನ್ನ ರುದ್ರಶಕ್ತಿಯಿಂದಲೂ ಮೌನ ವಿಧಾನದಲ್ಲಿ ನಡೆಸಿಯೇ ಬಿಡುವನು. ಅಕ್ರಿಯಾವಸ್ಥೆಯಲ್ಲಿ ಕೂಡ ಆತನ ಭಾವನಾತರಂಗಗಳು ಮೋಕ್ಷವನ್ನು ಸೇರಿ ಕರ್ಮಯೋಗಿಗಳ ಮನಸ್ಸಿಗೆ ತಗಲಿ ಕರ್ಮಯೋಗಿಗಳ ಸಾಧನೆಗಳನ್ನು ಕೂಡ ಕೈಗೂಡಿಸಬಹುದು. ಅರವಿಂದ ಘೋಷ, ಶ್ರೀರಾಮಕೃಷ್ಣ ಪರಮ ಹಂಸ, ಸಾಯಿ ಬಾಬಾ ಮೊದಲಾದವರು ಈ ವಿಧದ ಸಾಧಕರಲ್ಲಿ ಕೆಲವರು. ಸಾಧಕರಲ್ಲಿ ಕೆಲವರು ಕುಹಕಿಗಳು ಇರಬಹುದು. ಆದರೆ ವಿಶಾಲವಾದ ಈ ಭೂಮಂಡಲದಲ್ಲಿ—ಅಂತಹ ಕುಹಕಿಗಳಿಗೂ ಒಂದು ಸ್ಥಾನವಿರಬಹುದು. ಆದರೆ ಕುಹಕಿಗಳ ಭೀಭತ್ಸಮಯವಾದ ಕ್ರಿಯೆಗಳ ಸರದಲ್ಲಿ ಅಂತಿಮ ಸ್ಥಿತಿಯು ಬಂದುದು ನಾವು ಆಗಾಗ್ಗೆ ಕಾಣುತ್ತಲೇ ಇದ್ದೇವೆ. ನಿರ್ಮಲವಾದ ಸಾತ್ವಿಕ ಗುಣದ ಸಾಧಕರಿಗೆ ಯಾವ ಕಾಲದಲ್ಲೂ ಅಪಜಯವಿಲ್ಲ.

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!
ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)
ಬರೆದವರ: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.
ಬೆಲೆ: ರೂ. ೧—೮—೦ (1 = 50)
ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.
ದೊರೆವ ಸ್ಥಳ.
ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೇರಿಕದ ಆರು ಕತೆಗಳು

ಅಮೇರಿಕದ ಗ್ರಾಮಜೀವನದ ಸುಂದರ ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ
ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ.ಎ.
ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ
ಬೆಲೆ: ರೂ. 1=75; ಬಿಳಿ ಕಾಗದ
ರೂ. 2ನ್ನು M O ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು
ವ್ಯಾಪಾರಿಗಳಿಗೆ ಧಾರಾಳ ಕಮಿಷನ್
ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್ ಉಡುಪಿ.
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಏಶಿಯಾದಲ್ಲಿ ಸರ್ವಾಧಿಕಾರತನ

(೧ನೇ ಪುಟದಿಂದ)

ನಮ್ಮ ನೆರೆಯ ಪಾಕಿಸ್ತಾನವು ವಿಲಕ್ಷಣ ಸನ್ನಿವೇಶದಲ್ಲಿಯೇ ಸ್ಥಾಪಿತವಾಯಿತು ಸಾಂಪ್ರದಾಯಿಕತೆ ಮತ್ತು ಧಾರ್ಮಿಕ ಅಸಹಿಷ್ಣುತೆಗಳಂತಹ ಘೋರ ಸ್ವಾತಂತ್ರ್ಯ ವಿರೋಧಿ ಭಾವನೆಗಳ ಆಧಾರದ ಮೇಲೆಯೇ ಅದು ನಿಲ್ಲುವಂತಾಯಿತು ಮುಸ್ಲಿಂ ಲೀಗು ಎಂದಾದರೂ ಸಾಮಾಜಿಕ ಮತ್ತು ಆರ್ಥಿಕ ಕಾರ್ಯಕ್ರಮಗಳನ್ನು ಕೈಗೊಂಡದ್ದೇ ಇಲ್ಲ ಇದರ ಮೇಲೆ ಜಿನ್ನಾ ಮತ್ತು ಲಿಯಾಕತ ಅಲೀಖಾನರಂತಹ ಸಮರ್ಥ ನಾಯಕರು ಬೇಗನೇ ಪರಲೋಕ ಯಾತ್ರೆ ಮಾಡಿದರು, ಅಥವಾ ಮಾಡಿಸಿಕೊಂಡರು ಸಿದ್ಧಾಂತಹೀನ ಸ್ವಾರ್ಥೀ ರಾಜನೀತಿಜ್ಞರು ಉದಿಸಿಕೊಂಡರು. ಸರಕಾರದ ಮೇಲೆ ಸರಕಾರ ನಿರ್ಮಿತವಾಯಿತು; ಉರುಳಿ ಹೋಯಿತು ಭಾರತದ ಬಗ್ಗೆ ವಿರೋಧಾಭಿಪ್ರಾಯವನ್ನು ಎತ್ತಿಹಿಡಿಯುತ್ತ ಜನರ ಅಸಂತೋಷವನ್ನು ಅದುಮಿಡುವ ಪ್ರಯತ್ನ ನಡೆಯಿತು. ಅಮೇರಿಕನ್ ಸೈನಿಕ ಸಂಘಟನೆಯಲ್ಲಿ ಸೇರಿಕೊಂಡು ದೇಶದ ಸ್ವಾತಂತ್ರ್ಯದ ಮೇಲೆ ಕಲ್ಲು ಹೊತ್ತು ಹಾಕಲಾಯಿತು.

ಜನರಲ್ ಇಸ್ಕಂದರ್ ಮಿರ್ಜಾರು ೧೯೫೮ರಲ್ಲಿ ಪ್ರಧಾನ ಮಂತ್ರಿ ನೂನರವರನ್ನು ಪದಚ್ಯುತಗೊಳಿಸಿ ಶಾಸನಾಧಿಕಾರವನ್ನು ತಾವೇ ಇಟ್ಟುಕೊಂಡರು ಮಿರ್ಜಾರು ಹಳೆಯ ಆಂಗ್ಲ ಸರಕಾರದ ಕೃಪಾಪಾತ್ರರಾಗಿದ್ದರು 'ಬಿರುಕು ಎಬ್ಬಿಸು, ಅಥವಾ ಅಧಿಕಾರ ಚಲಾಯಿಸು' ನೀತಿಯಲ್ಲಿ ಪಾರಂಗತರು. ಆದರೆ, ಪ್ರಧಾನ ಸೇನಾಪತಿ ಅಯ್ಯೂಬ ಖಾನರಿಗೆ ಇವರ ಕಾರ್ಯವು ತೊಳಸಂಬಟ್ಟೆಯಂತೆ ಕಂಡಿತು ಮಿರ್ಜಾರನ್ನು ಗದ್ದುಗೆಯಿಂದಿಳಿಸಿ ತಾನೇ ಸೈನಿಕಾಧಿಕಾರವನ್ನು ಚಲಾಯಿಸತೊಡಗಿದರು ಈಗ ಅದರ ಮೇಲೆ 'ಮೂಲ ಪಂಚಾಯತ'ನ ಪರದೆ ತೊಡಿಸಿದರು ಚುನಾವಣೆಯ ನಾಟಕದ ನಾಂದಿ ಫೀಲ್ಡ್ ಮಾರ್ಶಲ್ ಅಯೂಬ ಖಾನರು ತನ್ನನ್ನು ತಾನೇ ಆಜೀವನ ರಾಷ್ಟ್ರಪತಿಯನ್ನಾಗಿ ಚುನಾಯಿಸಿಕೊಂಡರು ಜನತೆಯ ಅಂಧ ಧಾರ್ಮಿಕತೆ ಮತ್ತು ನಾಯಕರ ಸಿದ್ಧಾಂತ ಹೀನತೆಯನ್ನು ಕಾಣುವಾಗ, ಇನ್ನೂ ಬಹುಕಾಲದವರೆಗೆ ಪ್ರಜಾತಂತ್ರವು ಪಾಕಿಸ್ಥಾನದ ಬಾಗಿಲನ್ನು ಪ್ರವೇಶಿಸಲಾರದು, ಎನಿಸುತ್ತದೆ.

ಸಂಸದೀಯ ಪ್ರಜಾತಂತ್ರವನ್ನು ಸಾಕಷ್ಟು ಸಫಲ ರೀತಿಯಲ್ಲಿ ನಡೆಸಿಕೊಂಡು ಬರುವ ನಮ್ಮ ಏಕ ಮಾತ್ರ ನೆರೆಹೊರೆಯ ದೇಶವೆಂದರೆ ಸಿಂಹಳ. ಸಂಪನ್ನ ಆರ್ಥಿಕ ಸ್ಥಿತಿಗತಿ ಮತ್ತು ಶಿಕ್ಷಣ ಪ್ರಚಾರವು ಪ್ರಾಯ. ಇದಕ್ಕೆ ಪ್ರೇರಕ ಶಕ್ತಿಯಾಗಿರಬೇಕು

ನಮ್ಮ ನೆರೆಯ ಚಿಕ್ಕ ಪರ್ವತರಾಜ್ಯ ನೇಪಾಳವು ಒಂದು ಶತಮಾನದ ವರೆಗೆ ರಾಣಾಗಳ ಸರ್ವಾಧಿಕಾರದಡಿ ಪುಡಿಯಾದ ಬಳಿಕ ಅಲ್ಲಿ ವೈಧಾನಿಕ ರಾಜತಂತ್ರವು ಅಂಕುರಿಸಿತು. ಆದರೆ, ಪ್ರಜಾಪ್ರಭುತ್ವವಾದಿ ಪಕ್ಷಗಳಲ್ಲಿನ ಆಂತರಿಕ ಮತ್ತು ಪಾರಸ್ಪರಿಕ ಜಗಳ ಮತ್ತು ರಾಜಾ ಮಹೇಂದ್ರ ವೀರ ವಿಕ್ರಮ ಶಹರ ಮಹತ್ವಾಕಾಂಕ್ಷೆಗಳು ದೇಶವನ್ನು ಅನಿಯಂತ್ರಿತ ರಾಜತಂತ್ರದಲ್ಲಿ ಪರಿಣತ ಗೊಳಿಸಿವೆಯೆಂದರೆ ತಪ್ಪಾಗದು.

ಮುಂದಿನ ವಾರ ಪಶ್ಚಿಮ ಏಶ್ಯನ್ ರಾಷ್ಟ್ರಗಳ ಕಡೆಗೆ ಗಮನ ಹರಿಸುವ.

(ಕ್ರಮಶಃ)

ಪುಸ್ತಕ ವಿಮರ್ಶೆ

[ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ —ಸಂ ನ]

ನೊರೆ— ಲೇಖಕರು: ಶ್ರೀ ಶೇಷನಾರಾಯಣ ಪ್ರಕಾಶಕರು ಪ್ರತಿಭಾ ಗ್ರಂಥಮಾಲೆ, ಧಾರವಾಡ ಪುಟಗಳು: ೨೮೪ ಬೆಲೆ. ರೂ ೨—೫೦.

ಅನಾಥನಾಗಿದ್ದ ಬೀರ ಪ್ರೇಯಸಿ ಕೆಂಪಿಯನ್ನು ಬಿಡಲಾಗದೆ ಆಕೆಗಾಗಿ ತನ್ನ ಬದುಕನ್ನ ಕೇವಲ ನೊರೆಯಾಗಿಸಿದ ಹೃದಯಸ್ಪರ್ಶಿ ಇತಿವೃತ್ತಕವಾದ ಕಾದಂಬರಿಯಿದು ಬದುಕು ಬೇವು—ಬೆಲ್ಲ ಯುಕ್ತವಾದುದು. ಎಲ್ಲರೂ ಬಯಸುವುದು ಬೆಲ್ಲವನ್ನು, ಆದರೆ ಹೆಚ್ಚಿನವರಿಗೆ ಲಭಿಸುವುದು ಬೇವೇ ಈ ಕಹಿಯನ್ನುಂಡ ರೈತರ ಮಗ ಬೀರ ಕೆಂಪಿಯ ಆಸೆಯನ್ನು ಬಿಟ್ಟು ಹೋಗಿದ್ದರೆ, ಬೆಲ್ಲದ ಸವಿಯನ್ನು ಉಣ್ಣುತಿದ್ದನೋ ಏನೋ! ಕಾದಂಬರಿಯು ಮೂರು ಭಾಗಗಳಾಗಿ ವಿಭಾಜಿತವಾಗಿದೆ ಎರಡು ಭಾಗಗಳಲ್ಲಿಯೇ ಬೆಳೆದ ಬೀರ ಕೆಂಪಿಗೆ ಮೂರು ಹೋಟ, ತತ್ಪರಿಣಾಮವಾಗಿ ಅತ ಎಲ್ಲರನ್ನೂ ತೊರೆದು, ಅವರೊಡನೆ ನಿಷ್ಠುರ ಕಟ್ಟಿ ಆಕೆಯೊಡನೆ ಕಾಫೀ ತೋಟಕ್ಕೂ ಓಡಿ ಹೋದ ಆದರೆ, ಅಲ್ಲಿನ ಕಹಿಯನು ಭವವುಂಡ ಬಳಿಕ ಊರು ಸೇರಿದಾಗ, ಅತನು ನಿಜಕ್ಕೂ ಭಾಗ್ಯಶಾಲಿಯೆನಿಸಿದ ಇದು ಅರೋಹಣ ಮುಂದೆ ಬರುತ್ತದೆ ಅವರೋಹಣ ಬರಗಾಲದ ದುಸ್ಥಿತಿ, ಕೆಂಪಿಯ ಅನಾರೋಗ್ಯ-ಬೀರನ ಸಂಪತ್ತು ಕರಗಿ ನೀರಾಗಲು ಕಾರಣವಾಯ್ತು. ಆತ ಸಂಪೂರ್ಣ ಇಳಿದುಹೋದ ಒಂದರ ಮೇಲೊಂದು ಗಂಡಾಂತರ ಬಂತು ಮಳೆ ಸುರಿದು, ಬೆಳೆಕೊಡಲು ಭೂಮಿ ಮರಣಶಯ್ಯೆಗಾಗ ಬೀರನ ಜೀವನದ ಹಾಡು ಮುಗಿದಿತ್ತು—ಕೇವಲ ಸದ್ದು ಮಾತ್ರ ಕೇಳಬರುತಿತ್ತು

ಕಥಾನಾಯಕ ಬೀರನ ನಾಯಿಕೆ ಕೆಂಪಿಯವರ ಪಾತ್ರವು ಉತ್ತಮವಾಗಿಯೇ ಮೂಡಿ ಬಂದಿದೆ. ಅತನ ಅಳಿಯ ರಂಗನು ಮಾವನಿಗೆ ತಕ್ಕವನು; ತನ್ನ ಭವಂದಿರನ್ನು ಕಳೆದುಕೊಂಡರೂ ಬೀರನ ಬದುಕು ನೆರೆಯಾಗಲು ಶ್ರಮಿಸಿದವನು ಬೀರನ ಆಶ್ರಯದಾತರಾದ ಮಂಗಯರು ಅವರ ಪತ್ನಿ ಪುತ್ರಿಯರು ಹಾಗೂ ಕೆಂಪಿಯ ತಾಯಿಯಂದ ತಂಗಿಯರು ಸಾಹುಕಾರ ಶಿವನಂಜಪ್ಪ—ಆತನ ಮೂರನೆಯ ಹೆಂಡತಿ ಗೌರಮ್ಮ ಇವರು ಕಥೆಯಲ್ಲಿ ಬರುವ ಇತರ ಕೆಲವು ಪಾತ್ರಗಳು ಬೀರನ ಅಂತರ್ಯದ ತಾಕಲಾಟಗಳು ಮತ್ತಾತನು ಕೈಕೊಂಡ ನಿರ್ಧಾರ, ಕೆಂಪಿಗಾಗಿ ಅವನು ಪಟ್ಟ ಬವಣೆಗಳು ಮಧುರ ದಾಂಪತ್ಯ ಪ್ರೇಮವನ್ನು ಪ್ರತಿಬಿಂಬಿಸುತ್ತವೆ. ಪ್ರಾದೇಶಿಕ ಹಿನ್ನೆಲೆಯಲ್ಲಿ ನಿರ್ಮಿತವಾದ ಈ ಕಾದಂಬರಿಯಲ್ಲಿ ಅಲ್ಲಲ್ಲಿ ಪ್ರಾದೇಶಿಕ ನುಡಿಗಳೂ ಬಂದು ಭಾಷೆಗೆ ಕಳೆಕಟ್ಟಿವೆ

ಲೇಖಕರು ಮುನ್ನುಡಿಯಲ್ಲಿ"ಆಧುನಿಕ ಸೌಲಭ್ಯಗಳನ್ನು ಇನ್ನೂ ಪಡೆಯದೆ ಮೇಲಿನ ಮುಗಿಲನ್ನು ನಂಬಿ ಮಣ್ಣಿನೊಂದಿಗೆ ಹೋರಾಡುತ್ತಿರುವವರು ಭಾರತದಲ್ಲಿ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ ಕೋಟಿ ಕೋಟಿ ದ್ರವ್ಯವನ್ನು ನೀರಾವರಿಯ ಒಂದು ಸೌಲಭ್ಯಕ್ಕಾಗಿ ನೀರಿನಂತೆ ಚೆಲ್ಲಿರುವ ನಮ್ಮ ಸರಕಾರದ ಯೋಜನೆಯ ಹಂತವೆಂದೆ ಈ ರೈತ ಮಕ್ಕಳ ದುಡಿಮೆ ಶ್ರಮಗಳಿಗೆ ಫಲಕಾರಿಯಾಗಲು ನೆರವಾಗುತ್ತದೋ ಕಾದುನೋಡೋಣ"ವೆಂದುಬರೆದಿದ್ದಾರೆ ಬೀರನ ಜೀವನವು ಅವರೋಹಣವಾಗಲು ಬರಗಾಲವೇ ಕಾರಣವೆಂಬುದನ್ನು ಅದೇ ಕಾಲದಲ್ಲಿ ಸುತ್ತ ಬಂದಿತೆಂಬುದನ್ನು ಕಾದಂಬರಿ ಉಲ್ಲೇಖಿಸುತ್ತದೆ ಅದರೊಡನೆ 'ಆದರ್ಶ ಪ್ರೇಮ'ದ ಹಾದಿಯನ್ನೂ ಇದು ಮಾಡಿಕೊಡುತ್ತದೆ ಎರಡನೆಯದು ಹೊಸತಲ್ಲ, ಇದಕ್ಕೆ ಅನುಕೂಲವಾಗಿನೊದಲ ಪರಿಸ್ಥಿತಿಯುದ್ಧರಿಸುತ್ತಿದ್ದರೆ, ಬಂಗಾರದ ವ್ಯಕ್ತಿಗಳಾದ ಬೀರ—ಕೆಂಪಿಯವರ ಬದುಕು ಬಂಗಾರವಾಗುತಿತ್ತು ಎಂಬ ಸೂಚನೆಯಿಲ್ಲಿದೆ

ಕನ್ನಡಿಗರಿಗೆ ಈಗಾಗಲೇ ಪರಿಚಿತರಾಗಿರುವ ಶೇಷನಾರಾಯಣರ ಸರಳ ಗಂಭೀರ ನುಡಿನೆರೆಯು ಅವ್ಯಾಹತವಾಗಿ ಸಾಗಿದೆ. ವಸ್ತುವಿನಲ್ಲೂ ಪ್ರಯೋಜನದಲ್ಲೂ ಹೊಸತನವಿಲ್ಲದ ಬೀರನ ಜೊಯ್ಯಾಟ, ಕೆಂಪಿ-ಬೀರರ ಪಲಾಯನ, ಚಿನ್ನ ಮತ್ತವನ ಮಕ್ಕಳ ಅಕಾಲ ಮೃತ್ಯು ಮೊದಲಾದೆಡೆಯಲ್ಲಿ ಭಾವ ವ್ಯಂಜಕತೆಯೂ ಇದೆ 'ನೊರೆ' ಕಾದಂಬರಿಯು ನಮ್ಮ ವೈಚಾರಿಕ ಶಕ್ತಿಯನ್ನು ಪ್ರೇರಿಯಾಗಿಸುತ್ತದ; ನೆರೆಯಾಗಿ ಅದನ್ನು ಬಳಿದುಕೊಂಡು ಹೋಗುವುದಿಲ್ಲ

Deficit Financing - ನಾಗರಕೋಯಿಲ್‌ನ ಎಸ್ ಟಿ ಹಿಂದೂ ಕಾಲೇಜಿನ ಅರ್ಥಶಾಸ್ತ್ರ ಮತ್ತು ಇತಿಹಾಸದ ಪ್ರಾಧ್ಯಾಪಕ ಶ್ರೀ ಓ ಎ ಸಾಲ್ವಾನ್ನರವರು ಈ ಪುಸ್ತಿಕೆಯಲ್ಲಿ ಕೊರತೆ ಧನ ವಿನಿಯೋಗದ ಬಗ್ಗೆ ಆಳವಾದ ವಿವೇಚನೆಯನ್ನು ಮಾಡಿದ್ದಾರೆ. ಅಭಿವೃದ್ಧಿ ಯೋಜನೆಗಳನ್ನು ರೂಪಿಸುತ್ತಿರುವ ಮತ್ತು ಅದಕ್ಕಾಗಿ ಬಹಳಷ್ಟು ಸಂಪತ್ತನ್ನು ಕೂಡಿಹಾಕಬೇಕಾದ ಭಾರತದಂತಹ ದೇಶದಲ್ಲಿ ಈ ವಿನಿಯೋಗವು ಅವಶ್ಯಕವೆಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ ಆದರೆ, ಕೈಗೆ ದೊರೆಯುವ ಸಂಪತ್ತಿಗನುವಾಗಿ ಯೋಜನೆಯನ್ನು ರೂಪಿಸಬೇಕೆನ್ನುತ್ತಾರೆ ಲೇಖಕರು. ಏಕೆಂದರೆ, ಕೊರತೆ ಧನ ವಿನಿಯೋಗದಿಂದ ದೇಶದಲ್ಲಿ ಅತಿಸ್ಫೀತಿಯೇ ಮುಂತಾದ ಅನಿಷ್ಟ ಪರಿಣಾಮಗಳು ತಲೆದೋರಬಹುದು. ಈ ಎಲ್ಲಾ ವಿಚಾರಗಳನ್ನು ಅನುಭವಿಪ್ರಾಧ್ಯಾಪಕರಾದ ಶ್ರೀ ಸಾಲ್ವಾನ್ನರವರು ಕೂಲಂಕಷವಾಗಿ ನಮ್ಮ ಮುಂದಿರಿಸಿದ್ದಾರೆ ಈ ಪುಸ್ತಿಕೆಯ ಬೆಲೆ: ರೂ. ೧—೦೦ ಸಿಂಡಿಕೇಟ್ ಬ್ಯಾಂಕಿನ ಮೆನೇಜಿಂಗ್ ಡೈರೆಕ್ಟರ್ ಶ್ರೀ ಟಿ ಎ. ಪೈಯವರು ಗ್ರಂಥಕ್ಕೆ ಮುನ್ನುಡಿಯಿಟ್ಟಿದ್ದಾರೆ.

—ಗೋರಾ

ಓದಲೇ ಬೇಕಾಗಿರುವ ನವೀನ ಪುಸ್ತಕಗಳು!
ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು
೧. ಚಂದ್ರಲೋಕಕ್ಕೆ ಪ್ರಯಾಣ
ಲೇಖಕರು. ಉಡುಪಿ ರಾಘವೇಂದ್ರ ಆಚಾರ್ಯ, ಎಂ ಎ.
ಆಧುನಿಕ ಪ್ರಪಂಚದ ಮಹತ್ತರವಾದ ಆಂದೋಲನಗಳು, ಪ್ರಪಂಚವನ್ನೆಲ್ಲಾ ಅಲುಗಾಡಿಸುತ್ತಿರುವ ಆರ್ಥಿಕ, ರಾಜಕೀಯ ಚಳುವಳಿಗಳು ಅವುಗಳ ಹಿಂದಿರುವ ತತ್ವಗಳು, ಅವುಗಳಿಗೆ ಮಾನವನ ಪ್ರತಿಕ್ರಿಯೆ ಇವನ್ನೆಲ್ಲಾ ಗಮನಿಸಿ ರಚಿಸಿರುವ, ನಮ್ಮಲ್ಲಿ ವಿಚಾರಶಕ್ತಿ ಬೆಳೆಯಲು ನೆರವಾಗುವ ವೈಜ್ಞಾನಿಕ ಗ್ರಂಥ.
೨. ಸಾಮಾನ್ಯ ರೋಗಗಳು
ಲೇಖಕರು. ಡಾ| ಕೆ. ಎಲ್ ಐತಾಳ, ಎಂ. ಬಿ ಬಿ ಎಸ್
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಅತ್ಯುಪಯುಕ್ತ ಪುಸ್ತಕ.
೩. ಭೌತಿಕ ದರ್ಶನ
ಲೇಖಕರು ಬಡೆಕ್ಕಿಲ ಕೃಷ್ಣ ಭಟ್ಟ, ಎಲ್ಎಲ್.ಬಿ
ಸಜ್ಜನರ, ವಿದ್ವಜ್ಜನರ, ವಿಜ್ಞಾನಿಗಳ ಅಭಿಮತವನ್ನು ಸಂಗ್ರಹಿಸಿ ಬರೆದ ಭೌತಿಕ ದರ್ಶನದ ಸ್ಥೂಲ ಪರಿಚಯ
ಪ್ರತಿಯೊಂದು ಪುಸ್ತಕದ ಬೆಲೆ ಬರೀ ಒಂದು ರೂಪಾಯಿ.
ರೂ ೩—೫೦ನ್ನು ಮನಿಯಾರ್ಡರು ಮಾಡಿದರೆ ಮೂರೂ ಪುಸ್ತಕಗಳನ್ನು ಬುಕ್ ಪೋಸ್ಟ್‌ನಿಂದ ಕಳಿಸಬಹುದು.
ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಸವಲತ್ತುಗಳಿವೆ
ವಿಚಾರಿಸಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ವರ್ಗ—ಊಳಿಗ
ಮೊದಲಾದ ಎಲ್ಲಾ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಿಗಳು,
ಫಾರ್ಮುಗಳು
ದೊರೆಯುತ್ತವೆ
ನವಯುಗ ಪ್ರೆಸ್, ಉಡುಪಿ

ಗಜಪತಿ ನಂದಿನಿ

(೨ನೇ ಪುಟದಿಂದ)

ಸಿ ಬಿಟ್ಟರು. ಈಗ ನನ್ನ ತಾಯಿಯ ಗತಿ ಏನಾಗಿರುವುದೋ!

ಕೃಷ್ಣದೇವ— ನಿನ್ನ ಅಗಲಿಕೆಯ ಶೋಕದಿಂದ ಅವಳು ಆವೆಲ್ಲಿಗೋ ಹೋಗಿ ಬಿಟ್ಟಿದ್ದಾಳೆ. ಅದಿರಲಿ, ಮತ್ತೆ?

ಚಿನ್ನಾ—ಮತ್ತೇನು? ನಾನು ಗುತ್ತಿ ದುರ್ಗದಲ್ಲಿ ಗೋವಿಂದರಾಜರ ಆಶ್ರಯದಲ್ಲಿದ್ದೇನಷ್ಟೆ? ಆ ಸೈಯದನು ಮೋಸದಿಂದ ದುರ್ಗವೊಳಗೆ ಪ್ರವೇಶಿಸಿ ನನ್ನನ್ನು ಮಾತ್ರ ಸೆರೆಹಿಡಿದುಕೊಂಡು ಬಂದು ಬಿಟ್ಟ. ಇಲ್ಲಿ ಈ ಗವಿಯಲ್ಲಿ ಆತ ತನ್ನ ನೀಚತನವನ್ನು ತೋರಿಸಲೆತ್ನಿಸಿದಾಗ ಅವನ ಪತ್ನಿ ಅಡ್ಡ ಬಂದಳು. ಈಗ ತಾವೂ ಬಂದಿರಿ. ಇನ್ನೇಕೆ ಆ ವಿಚಾರ? ಹೋಗಲಿ ಹಾಳಾಗಿ.

ಕೃಷ್ಣದೇವ—ಓಹೋ! ಹಾಗಾದರೆ ಅವನನ್ನು ಸುಮ್ಮನೇ ಬಿಟ್ಟದ್ದು ಮೋಸವಾಯಿತು. ಚಿನ್ನಾ—ಇನ್ನು ನೀನೇನೂ ಚಿಂತೆ ಪಡಬೇಡ. ನನ್ನೊಂದಿಗೆ ನನ್ನ ಪಟ್ಟದ ರಾಣಿಯಾಗಿದ್ದು ಬಿಡು. ಈ ವಿಷಯದಲ್ಲಿಯೂ ನಾನು ತಿಮ್ಮರಸರ ಮಾತನ್ನು ಮೀರಿಬಿಡುತ್ತೇನೆ.

ಚಿನ್ನಾ—ಏನು? ಬೇರೊಂದು ವಿಷಯದಲ್ಲಿ ತಿಮ್ಮರಸರ ಮಾತನ್ನು ಮೀರಿದ್ದೀರಾ?

ಕೃಷ್ಣದೇವ—ಹೌದು. ದುರ್ವಿದಗ್ಧೆಯಾದ ಜಗನ್ಮೋಹಿನಿಯನ್ನು ಹಿಡಿದು ಸಾಮಾನ್ಯನೊಬ್ಬನಿಗೆ ವಿವಾಹ ಮಾಡಿಸುವೆನೆಂದು ಅವರ ಮಾತನ್ನು ಮೀರಿಯೇ ಪ್ರತಿಜ್ಞೆ ಮಾಡಿದ್ದೇನೆ. ಅದಕ್ಕೇ ಹೊರಟಿದ್ದೇನೆ ಈಗ.

ಚಿನ್ನಾದೇವಿ-ನೀವೊಬ್ಬರೇ ಇಲ್ಲಿಗೆ ಹೇಗೆ ಬಂದಿರೊ?

ಕೃಷ್ಣದೇವರಾಯ—ಇತ್ತ ಕಡೆ ಒಂದು ಚಿರತೆ ಓಡಿ ಬಂತು. ಅದನ್ನಟ್ಟಿಕೊಂಡು ಹೀಗೆ ಬಂದೆ. ಆ ಚಿರತೆಯನ್ನೂ ನನ್ನನ್ನೂ ನೋಡಿ ಅನೇಕ ತುರುಕ ಸಿಪಾಯಿಗಳು ಆ ಕಡೆಗೆ ಓಡಿದರು. ಇಲ್ಲಿ ಏನೋ ಶಬ್ದ ಕೇಳಿಸಲು ನಾನು ಇಲ್ಲಿ ಬಂದೆ.

ಚಿನ್ನಾದೇವಿ—ಹಾಗಾದರೆ ನಿಮ್ಮ ಅಂಗರಕ್ಷಕರು?

ಕೃಷ್ಣದೇವ— ತಪ್ಪಿಹೋಗಿದ್ದಾರೆ.

ಚಿನ್ನಾದೇವಿ— ಹೋಗಿರಿ ಪ್ರಭು! ನಿಮ್ಮ ಪರಿವಾರವನ್ನು ಸೇರಿಕೊಳ್ಳಿ.

ಕೃಷ್ಣದೇವ-ಹೋಗುವ, ನೀನೂ ಬಾ.

ಚಿನ್ನಾದೇವಿ— ಅಗದು ಪ್ರಭು. ತಿಮ್ಮರಸರ ಕಟ್ಟಳೆಗಳನ್ನು ನೀವು ಮೀರಿದರೂ ನಾನು ಮೀರಲಾರೆ. ನಾನೂ ಒಂದು ಪ್ರತಿಜ್ಞೆ ಮಾಡಿದ್ದು ನಿಮಗೆ ನೆನಪಿರಬಹುದು. ಅದು ನೆರವೇರದೆ ನಾನು ನಿಮ್ಮ ಪಟ್ಟದ ರಾಣಿಯಾಗಲಾರೆ. ಹಾ! ಕತ್ತಲಾಯಿತು ನಡೆಯಿರಿ ಪ್ರಭು. ಆ ಸೈಯದನನ್ನ ನಂಬುವಂತಿಲ್ಲ. ತಮಗೇನಾದರೂ ಅಪಾಯ ಸಂಭವಿಸಿದರೇನು ಗತಿ. ನಿಮ್ಮ ಹಿಂದೆಯೇ ನಾನೂ ಇದ್ದೇನೆ. (ಕೃಷ್ಣದೇವರಾಯನು ಮುಂದೆ ಹೋಗಲು ಚಿನ್ನಾದೇವಿ ತಪ್ಪಿಸಿಕೊಂಡು)

ಚಿನ್ನಾದೇವಿ— ನಾನೀಗ ತಪ್ಪಿಸಿಕೊಳ್ಳಬೇಕು. ನನ್ನ ದರ್ಶನದಿಂದ ರಾಜಮಂತ್ರಿಗಳೊಳಗೆ ವಿಷಮತೆಯುಂಟಾಗುತ್ತದೆ. (ಇನ್ನೊಂದು ಕಡೆಗೆ ಹೋಗುವಳು. ಕತ್ತಲಾಗಿದೆ. ಆಕಾಶದಲ್ಲಿ ಚಂದ್ರ)

ಕೃಷ್ಣದೇವ— (ಚಿನ್ನಾ-ಎಂದು ಕರೆಯುತ್ತಾ ಪ್ರವೇಶಿಸಿ ಅತ್ತಿತ್ತ ನೋಡಿ) ಚಿನ್ನಾ! ಎಲ್ಲಿ ಹೋದಿ? ಚಿನ್ನಾದೇವಿ! ಮಿಂಚಿನಂತೆ ಹೊಳೆದು ಮಾಯವಾದಿಯೊ? ಇನ್ನೂ ಎಷ್ಟೋ ನಿನ್ನೊಡನೆ ಮಾತಾಡಬೇಕೆಂದಿದ್ದೆ. ಈ ಕತ್ತಲೆಯಲ್ಲಿ ಒಬ್ಬಂಟಿಗಳಾಗಿ ಎಲ್ಲಿಗೆ ಹೋದೆಯೋ! (ಅತ್ತಿತ್ತ ಎಡತಾಕುವಾಗ, ವೀರ ರುದ್ರಗಜಪತಿ, ಸಂನ್ಯಾಸೀ ವೇಷದಲ್ಲಿ, ಕತ್ತಿ ಎತ್ತಿಕೊಂಡು ಕೃಷ್ಣದೇವರಾಯನ ಹಿಂದೆ ಹಿಂದೆ ಹೊಂಚಿಕೊಂಡು ಬರುವನು. ಅವನು ಕೃಷ್ಣದೇವರಾಯನನ್ನು ಹಿಂದಿನಿಂದ ಹೊಡೆಯಲಿರುವಾಗ,)

ಚಿನ್ನಾದೇವಿ— (ಥಕ್ಕನೆ ಪ್ರವೇಶಿಸಿ ತನ್ನ ಕತ್ತಿಯಿಂದ ಗಜಪತಿ ಸಂನ್ಯಾಸಿಯ ಕತ್ತಿಯ ಕೈಗೆ ಹೊಡೆದು) ಘಾತಕ ಸಂನ್ಯಾಸೀ! ಇದೆಂತಹ ನೀಚ ಕೃತ್ಯ! (ಸಂನ್ಯಾಸಿ "ಹ !"ಎಂದು ಪ್ರಲಾಪಿಸುತ್ತ ತನ್ನ ಕೈಯನ್ನು ಇನ್ನೊಂದು ಕೈಯಿಂದ ಹಿಡಿದುಕೊಳ್ಳುವನು. ಅವನ ಕತ್ತಿ ಕೆಳಗೆ ಬೀಳುವುದು. ಸಂನ್ಯಾಸಿಯೂ ನೆಲದಲ್ಲಿ ಬೀಳುವನು.)

(ಮುಂದುವರಿಯುವುದು)

ಆದರ್ಶ ಚರಿತೆಗಳು—೩

ಮಹಾತ್ಮಾ ಜರಥುಷ್ಟ್ರ

—ಶ್ರೀ ಎಸ್. ಎಂ. ಶೆಟ್ಟಿ,
ಶಿಮುಂಜೆಪರಾರಿ.

ಪಾರಸೀ ಧರ್ಮ ಪ್ರವರ್ತಕನಾದ ಮಹಾತ್ಮಾ ಜರಥುಷ್ಟ್ರನು, ಇರಾನಿನ 'ರೇ' ಎಂಬ ನಗರದಲ್ಲಿ ಜನ್ಮ ತಳೆದನು. ಇವನ ತಂದೆ ಪೌರುಶಸ್ಪ ಆವರ ರಾಜಕುಲದಲ್ಲಿ ಜನಿಸಿದ ವಿದ್ವಾನ್, ಸದಾಚಾರೀ—ಈಶ್ವರ ಭಕ್ತರಿದ್ದರು. ಜರಥುಷ್ಟ್ರನ ತಾಯಿ ದೋಗ್ದೋ ಕೂಡಾ ಪತಿಪರಾಯಣೆ ಸಾಧ್ವೀ ಮಹಿಳೆಯಾಗಿದ್ದಳು.

ತಾಯಿ ತಂದೆಯರು ಮೊದಲು ಈ ಬಾಲಕನಿಗೆ 'ಸ್ಪಿತಂ' ಎಂದು ಹೆಸರಿಟ್ಟಿದ್ದರು. ಜರಥುಷ್ಟ್ರನು ಹುಟ್ಟುವ ಮೊದಲೇ ಅತ್ಯಾಚಾರಿ ಬಾದಶಹನಿಗೆ ಹಾಗೂ, ಅನಾಚಾರಿಗಳಾದ ಸರದಾರರಿಗೆ ಅಪಶಕುನಗಳು ಗೋಚರಿಸಿದುದರಿಂದ ಅವರು ಭಯಭೀತರಾಗಿದ್ದರು. ಅವರು ಬಾಲಕ 'ಸ್ಪಿತಂ'ನ ಮೇಲೆ ನಾನಾ ರೀತಿಯ ಅತ್ಯಾಚಾರ ಗೈದರು, ಅವನನ್ನು ಕೊಲ್ಲಲು ಅನೇಕ ಪ್ರಯತ್ನಗಳನ್ನು ಗೈದರು, ಆದರೆ ಅವರ ಯಾವ ಯತ್ನವೂ ಫಲಪ್ರದವಾಗಲಿಲ್ಲ!

ತನ್ನ ೧೫ನೇ ವರ್ಷ ವಯಸ್ಸಿನಲ್ಲಿ ಕಾಡಿಗೆ ಹೊರಟು ಹೋದ 'ಸ್ಪಿತಂ', ಸುಮಾರು ೧೫ ವರ್ಷಗಳ ಕಾಲ ಅಲ್ಲಿಯೇ ತಪವನ್ನಾಚರಿಸಿದನು. ತಪಸ್ಸನ್ನು ಪೂರ್ಣಗೊಳಿಸಿ ಅವನು ಹಿಂತಿರುಗಿದಾಗ, ಅವನನ್ನು 'ಜರಥುಷ್ಟ್ರ' ಎಂದು ಕರೆಯಲಾಯ್ತು. 'ಜರಥುಷ್ಟ್ರ" ಎಂದರೆ 'ಸ್ವರ್ಣಿಮ ಪ್ರಕಾಶದವನು" ಎಂಬರ್ಥ.

ಜ್ಞಾನ ಕಾಂತಿಗಳ ಅನುಭಾವವನ್ನು ಪಡೆದು 'ಸ್ಪಿತಂ'ನು 'ಜರಥುಷ್ಟ್ರ'ನಾಗಿ ಹಿಂತಿರುಗಿ ಮನೆಗೆ ಬಂದನು. ಅನಂತರ ಅವನು ಜನರಿಗೆ ನಿಜವಾದ ಧರ್ಮ ಯಾವುದು? ಎಂದು ವಿವರಿಸತೊಡಗಿದನು. "ಪರೋಪಕಾರ ಗೈಯಿರಿ, ಭಗವಂತನ ಭಜನೆ ಗೈಯಿರಿ" ಎಂದು ಅವನು ಉಪದೇಶಿಸುತ್ತಿದ್ದನು. ಮೊದಮೊದಲು ಅವನ ಉಪದೇಶದತ್ತ ಯಾರೂ ಗಮನವೀಯಲಿಲ್ಲ. ಆದರೆ 'ಬಲ್ಖ'ದ ಬಾದಶಹನು 'ಜರಥುಷ್ಟ್ರ'ನನ್ನು ತನ್ನ ಅರಮನೆಗೆ ಕರೆದು ತಂದು ಅವನ ಉಪದೇಶಗಳನ್ನು ಸ್ವೀಕರಿಸಿದ ಬಳಿಕ ಜನರ ಮನಸ್ಸು ಇವನತ್ತ ಹರಿಯಿತು. ಅವನ ಗಂಭೀರ ಉಪದೇಶಗಳನ್ನು ಜನರು ಶ್ರದ್ಧೆಯಿಂದ ಸ್ವೀಕರಿಸಿದರು.

ಮಹಾತ್ಮಾ ಜರಥುಷ್ಟ್ರನು ಏಸುಕ್ರಿಸ್ತನಿಗಿಂತ ಎಷ್ಟೋ ಸಮಯದ ಹಿಂದೆಯೇ ಜನ್ಮ ತಾಳಿದ್ದನು. "ಈಶ್ವರನು ಒಬ್ಬನೇ! ಎಲ್ಲಾ ಸೃಷ್ಟಿಯು ಅವನಿಂದಲೇ ಆಗುತ್ತದೆ, ಅವನಲ್ಲಿಯೇ ಲೀನವಾಗುತ್ತದೆ! ಈಶ್ವರನೇ ಎಲ್ಲರ ಒಡೆಯನು. ಅವನು ಮಾತ್ರ ಪೂರ್ಣನು, ಅವನ ನಾಮ ಸ್ಮರಣೆಯಿಂದ ಮಾತ್ರ ಜೀವನವು ಸಂಪೂರ್ಣತೆಯನ್ನು ಪಡೆಯಬಲ್ಲದು" ಎಂಬುದೇ ಜರಥುಷ್ಟ್ರನ ಉಪದೇಶ.

"ಧರ್ಮದ ಮುಖ್ಯ ರೂಪವೇ ಪರೋಪಕಾರ! ತನ್ನಿಂದ ಆದಷ್ಟು ತನ್ನ ಶಕ್ತಿಗನುಸಾರವಾಗಿ ಪ್ರತಿಯೊಬ್ಬನೂ ಮತ್ತೊಬ್ಬನಿಗೆ ಉಪಕಾರಗೈಯಬೇಕು, ಸೇವೆಗೈಯಬೇಕು. ಇದರಿಂದಲೇ ಮಾನವನ ಶ್ರಮ ಸಾಮಗ್ರಿಯು ಹಾಗೂ ಶಕ್ತಿಯು ಸಫಲವಾಗಬಲ್ಲುದು." ಎಂದು ಜರಥುಷ್ಟ್ರನು ಯಾವಾಗಲೂ ಬೋಧಿಸುತ್ತಿದ್ದನು.

ಮೂಲ: ಠಾಕುರ್ ಸುದರ್ಶನ ಸಿಂಹ

ಸೂಚನೆ

'ನವಯುಗ"ದಲ್ಲಿ ಪ್ರಕಟನೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಲು ತಾವು ಸೈಜಿನ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಸುವಾಚವಾಗಿಯೂ ಇರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ ನ.

ವಿದ್ಯಾರ್ಥಿಗಳ 2 ಕೈಪಿಡಿಗಳು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ವಿ. ಸೂ.—ಆಯಾ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0 =25 NP ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರತಿಗಳು— ಮಂಗಳೂರಲ್ಲಿ ಶ್ರೀನಿವಾಸ್ ಬ್ರದರ್ಸ್, ಸ್ಕೂಲ್ ಬುಕ್ ಕೊ., ಕೆನರಾ ಕೊಲೆಜ್ ಬುಕ್ ಕೊ, ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್ ಇವರ ಲ್ಲಿಯೂ, ಪುತ್ತೂರಲ್ಲಿ ಪೊಪ್ಯುಲರ್ ನ್ಯೂಸ್ ಏಜನ್ಸಿಯಲ್ಲಿಯೂ ದೊರೆಯುತ್ತವೆ.

ಹೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

ಜನಪ್ರಿಯವಾದ

ಗೀತೆಯ ಸಮೂಲ ಭಾಷಾಂತರ
ಇದೀಗ ಮಾರಾಟಕ್ಕೆ ಸಿದ್ಧವಾಗಿದೆ.
360 ಪುಟಗಳಿಗೂ ಮಿಕ್ಕಿದ
ಪಾಕೆಟ್ ಎಡಿಶನ್!
ದಪ್ಪನಾದ ಬಿಳಿ ನುಣುಪು ಕಾಗದ!
ಬೆಲೆ: ಸಾದಾ ಪ್ರತಿ ರೂ. ೧-೦೦
ಉತ್ತಮ ಪ್ರತಿ ರೂ. ೧-೩೦
ಅಂಚೆ ವೆಚ್ಚ ರೂ. ೦-೫೦
ರಿಯಾಯಿತಿ ಪ್ರತಿಗಳ ದರಕ್ಕೆ ಬರೆಯಿರಿ:
ನವಯುಗ ಪ್ರೆಸ್, ಉಡುಪಿ, ದ. ಕ.

REGD. No. B. G. 176
LICENCE No. 31
Licensed to Post without Prepayment

ನೂತನ ಮಾರ್ಗ ಶೋಧವೆ?

(೧ನೇ ಪುಟದಿಂದ)

ದು ಅದೆನ್ನೆಂದಿಗೂ ಒಪ್ಪಲಾರದು. ತನ್ನ ಸಾಮ್ರಾಜ್ಯ ಶಾಹಿ ನೀತಿಗೆ ವ್ಯತಿರೇಕವಾದ ಸೂತ್ರವನ್ನದೆಂದಿಗೂ ಸ್ವೀಕರಿಸಲಾರದು. ಶಾಂತಿಯ ಪವಿತ್ರ ನಾಮವನ್ನುಚ್ಚರಿಸುತ್ತ ಅದರ ನೆರಳಿನಲ್ಲಿ ಕ್ರಾಂತಿಯ ತಯಾರಿ ನಡೆಸುತ್ತಿರುವ ಚೀನೀಯರ ಕುತಂತ್ರವೀಗ ನಿಗಜ್ಜಾಹೀರಾಗಿದೆ. ಅದುದರಿಂದಲೇ ಭಾರತ ಹೇಳುತ್ತದೆ— ಶೂವ ಪ್ರಯತ್ನ ಮುಂದುವರಿಕೆ ಬೇಕಾದರೆ, ಚೀನಾವು ಕೊಲಂಬೊ ದೇಶಗಳು ಮುಂದಿಟ್ಟ ಸಲಹೆಗಳನ್ನು ಮೊದಲು ಒಪ್ಪಿಕೊಳ್ಳಬೇಕು; ಮತ್ತು ಅದರಂತೆ ನಡೆಯಬೇಕು ಎಂದು. ಇದು ಖಂಡಿತವಾಗಿಯೂ ವಿಸ್ತರಣಾವಾದಿಗಳಾದ ಚೀನೀಯ ಸರಕಾರ ವರಿಷ್ಠರಿಗೆ ಅಪಥ್ಯವಾಗದಿರಲಾರದು.

ವಿಶ್ವಾಮಿತ್ರ ಚೀನ

ಭಾರತದಂತಹ ಬೃಹತ್ ದೇಶದೊಡನೆ ಮಿತ್ರದ್ರೋಹಾತ್ಮಕ ಕಾರ್ಯಗಳನ್ನು ಕೈಗೊಂಡ ಚೀನೀಯರು ತಮ್ಮ ನೀತಿಯಿಂದಾಗಿಯೇ ಪ್ರಪಂಚದಿಂದ ದೂರವಾಗುತಿದ್ದಾರೆ. ಪಾಶ್ಚಾತ್ಯರಲ್ಲಿ ಚೀನಾದ ಬಗೆಗೆಂದೂ ಸದ್ಭಾವನೆಯು ಮೂಡಿರುವುದಿಲ್ಲ. ಆಫ್ರೇಶ್ಯನ್ ದೇಶಗಳು ಕೂಡ ಚೀನಾದೊಡನಿರುವ ತಮ್ಮ ತಮ್ಮ ಸಂಪರ್ಕವನ್ನು ಕಡಿಮೆಮಾಡಿಕೊಳ್ಳಹತ್ತಿವೆ. ಮುಖ್ಯವಾಗಿ ಆಫ್ರಿಕದ ರಾಷ್ಟ್ರಗಳು ಮತ್ತು ಚೀನದ ನಡುವೆ ಒಂದಲ್ಲ ಹಲವು ವಿಷಯಗಳಲ್ಲಿ ಭಿನ್ನಾಭಿಪ್ರಾಯಗಳಿದ್ದಿವೆ. ಇದರ ಪರಿಣಾಮವಾಗಿಯೇ ವಿವಿಧ ಆಫ್ರಿಕನ್ ರಾಷ್ಟ್ರಗಳು ಚೀನಕ್ಕೆ ಕಳುಹಿಸುತಿದ್ದ ಪ್ರತಿನಿಧಿಮಂಡಲಗಳ ಸಂಖ್ಯೆಯಲ್ಲಿ ಗಣನೀಯ ಇಳುವರಿಯಾಗಿದೆ. ೧೯೬೦ ರಲ್ಲಿ ೧೩೧ ಶಿಷ್ಟ ಮಂಡಳಗಳು ಚೀನವನ್ನು ಸಂದರ್ಶಿಸಿದ್ದರೆ, ೧೯೬೨ ರಲ್ಲಿ ಈ ಸಂಖ್ಯೆಯು ೩೧ಕ್ಕೆ ಇಳಿದಿದೆಯೆಂಬುದು ಇದಕ್ಕೆ ಜ್ವಲಂತ ನಿದರ್ಶನ.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S. C. ನಂಬ್ರ 247/63

ಸಂಜೀವ ಸೆಟ್ಟಿ— ವಾದಿ

1. ದುರ್ಗಿ ಸೆಡ್ತಿ—ಸೀನಪ್ಪ ಸೆಟ್ಟಿ ಹೆಂಡ್ತಿ
2. ರಾದಮ್ಮ ಸೆಡ್ತಿ } ದುರ್ಗಿ ಸೆಡ್ತಿ
3. ಚಂದಮ್ಮ ಸೆಡ್ತಿ } ಮಕ್ಕಳು

ಉಡುಪಿ ತಾಲ್ಲೂಕ ಕೆಂಜೂರು ಗ್ರಾಮದಲ್ಲಿರುವವರು — ಪ್ರತಿವಾದಿರು

ಸದ್ರಿ ಪ್ರತಿವಾದಿರಿಗೆ ಈ ಮೂಲಕ ತಿಳಿಸುವುದೇನೆಂದ್ರೆ:

ಮೃತ ಸೀನಪ್ಪ ಸೆಟ್ಟಿಯು ವಾದಿಗೆ ತಾ. 28—5—60ರಲ್ಲು ರೂಪಾಯಿ 100ಕ್ಕೆ ಬರೆಕೊಟ್ಟ ಡಿಮಾಂಡ್ ನೋಟಿನ ಪೂರಾ ಅಸ್ಲು ಬಡ್ಡಿ ಹಣ ಬರಮಾಡಿಕೊಳ್ಳುವರೆ ವಾದಿಯು ನಿಮ್ಮ ಮೇಲೆ ಮಾಡಿದ್ದ ವ್ಯಾಜ್ಯವು ತಾ. 14—10-63ಕ್ಕೆ ತನಿಖೆಗೆ ಇಟ್ಟದೆ. ಆದ್ರಿಂದ ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ನೀವು ಸದ್ರಿ ದಿವಸ ಕೋರ್ಟಿನಲ್ಲಿ ಬೆಳಿಗ್ಗೆ 11 ಗಂಟೆಗೆ ಹಾಜರಾಗತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲಾದೀತು.

K. L. Aithal,
Vakil for Plaintiff.

ಉಡುಪಿ, 25—9—63.

ಸುತ್ತಲೂ ಲತ್ತೆಕೊಡುವ ಶಕ್ತಿ

ಕಮ್ಯುನಿಸ್ಟರು ಟಿಬೇಟದಲ್ಲಿ ದಬ್ಬಾಳಿಕೆ ನಡೆಸಿದ್ದು, ಇದು ಜಗತ್ತಿನ ಎಲ್ಲ ಪ್ರಜಾಸತ್ತಾತ್ಮಕ ರಾಷ್ಟ್ರಗಳ ಟೀಕೆಗೂ ಗುರಿಯಾಗಿತ್ತು. ಆ ಸಮಯದಲ್ಲಿ ನಡೆದ ದಬ್ಬಾಳಿಕೆಯನ್ನು ಭಾರತವು ಸ್ಪಷ್ಟವಾಗಿ ಖಂಡಿಸಲಿಲ್ಲ; ಏಕೆಂದರೆ, ಟಿಬೇಟದ ಮೇಲೆ ಚೀನಾಕ್ಕೆ ಸಾರ್ವಭೌಮಾಧಿಕಾರವಿದೆಯೆಂದೂ ಅಲ್ಲಿನ ಘಟನೆಗಳು ಕೇವಲ ಆಂತರಿಕವೆಂದೂ ಅದು ತಿಳಿದಿತ್ತು. ಆದರೆ, ಸಂ. ಅ. ಪ್ರಜಾರಾಜ್ಯದಲ್ಲಿ ಪತ್ರಿಕೆಗಳು ಇದನ್ನು ಉಗ್ರವಾಗಿ ಟೀಕಿಸಿದ ಬಳಿಕ ಚೀನವು ಅದರೊಡನೆ ತನ್ನ ಸಂಬಂಧವನ್ನು ಶಿಥಿಲಗೊಳಿಸಿತು. ಕಾಲಕ್ರಮದಲ್ಲಿ ದ್ವೇಷವು ಮತ್ತೂ ಹೆಚ್ಚಿತು, ಯೆಮನ್‌ನಲ್ಲಿ ಒಕ್ಕೂಟ ಪ್ರಶಾಸನವು ಸಂಸ್ಥಾಪಿತವಾದಂದಿನಿಂದ ಚೀನಾದೊಡನಿದ್ದ ಸಂಪರ್ಕವನ್ನದು ಕಡಿದು ಹಾಕಿತು. ಗಿನಿಯಲ್ಲಿಯೂ ಅಧ್ಯಕ್ಷ ಸೇಕೋಟೋರೆವರು ಆರ್ಥಿಕ ಮತ್ತು ತಾಂತ್ರಿಕ ಸಹಾಯದ ಹೆಸರಿನಲ್ಲಿ ಕಮ್ಯೂನಿಜಂ ಪ್ರಚಾರ ಕಾರ್ಯದಲ್ಲಿ ಆಸಕ್ತರಾದ ಚೀನೀಯರ ಮೇಲೆ ಉಗ್ರಕ್ರಮ ಕೈಗೊಂಡರು ಕ್ಯಾಮರೋನದ ಎಡ ಪಕ್ಷಕ್ಕೆ ಚೀನಾವು ನೆರವು ನೀಡಲು ಹವಣಿಸಿದ್ದುದರಿಂದ, ಈ ರಹಸ್ಯ ಸ್ಫೋಟನ ಪರಿಣಾಮವಾಗಿ ಅಲ್ಲಿಯೂ ಚೀನೀಯರು ಬಹಿಷ್ಕೃತರಾಗಿದ್ದಾರೆ. ಅಲ್ಜೀರಿಯೂ ಚೀನೀಯ ವಿಷ ಸರ್ಪದೊಡನೆ ಸ್ನೇಹವಿದೂರವಾಗಿದೆ. ಹೀಗೆಯೇ ಉಳಿದ ಆಫ್ರಿಕನ್ ಮತ್ತು ಏಶ್ಯನ್ ದೇಶಗಳಿಂದಲೂ ನೈತಿಕವಾಗಿ ಮತ್ತು ರಾಜಕೀಯವಾಗಿ ಚೀನಾವು ಪ್ರತ್ಯೇಕವಾಗುತ್ತಾ ನಡೆದಿದೆ.

ಉಪಸಂಹಾರ

ಭಾರತವು ಯಾರೊಡನೆಯೂ ದ್ವೇಷವನ್ನು ಕಟ್ಟಿಕೊಳ್ಳಲು ಬಯಸುವುದಿಲ್ಲ. ಆದರೆ, ತನ್ನ ಮಾನಾಪಮಾನಗಳ ಪ್ರಶ್ನೆ ಬಂದಾಗ ಅದು ಕೈಕಟ್ಟಿರುವುದು ಸಾಧ್ಯವಿಲ್ಲ. ತನ್ನ ಸಾರ್ವಭೌಮತೆಯನ್ನು, ಪ್ರಾದೇಶಿಕ ಸಮಗ್ರತೆಯನ್ನು ಪಣವಿಟ್ಟಾದರೂ ಸಂರಕ್ಷಿಸಿಕೊಳ್ಳುವುದು ಒಂದು ಸ್ವತಂತ್ರ ದೇಶದ ಪರಮ ಕರ್ತವ್ಯ. ಈ ಕರ್ತವ್ಯದಿಂದ ಭಾರತನೆಂದಿಗೂ ಪರಾಙ್ಮುಖವಾಗಬಾರದು; ಆಗಲಾರದು. ಸಮಸ್ಯೆಯು ಇಷ್ಟೊಂದು ಗಂಭೀರವಾಗಿರುವುದಾದರೂ ನಾವು ಚೀನಾದೊಡನೆ ನೇರ ಮಾತುಕತೆಗೆ ತೊಡಗಲು ಸಿದ್ಧರಿದ್ದೇವೆ; ಆದರದು ಕೊಲಂಬೊ ಸಲಹೆಗಳನ್ನು ನಿಶ್ಶರ್ತವಾಗಿ ಒಪ್ಪಿಕೊಂಡು, ಅದರಂತೆ ನಡೆಯಬೇಕು. ಇದು ಸಂಭವನೀಯವೆನಿಸೀತೆ? ತನ್ನ ಏಕ ಪಕ್ಷೀಯ ಸಮರವಿರಾಮ ನೀತಿಯನ್ನೇ ಗಾಳಿಗೆ ತೂರಿದ ನಮ್ಮ ಕೆಂಪು ಭಾಯಿಗಳು ಬೇರೆಯವರ ಮಾತನ್ನು ನಂಬುವುದು ಸಾಧ್ಯವಾದೀತೆ? ಆದರೂ ಕೆಲವೊಮ್ಮೆ ಅಸಾಧ್ಯವಾದುದೂ ಸಾಧ್ಯವಾಗುತ್ತದೆಯೆಂಬುದಕ್ಕೆ ಅನುಭವವೇ ಸಾಕ್ಷಿ ಹೇಳುವುದೂ ಉಂಟು.

ಕೆಲವು ವರುಷಗಳನಂತರ . . .

- ನೀವು ಕೆಲಸದಿಂದ ನಿವೃತ್ತರಾದಾಗ, ವ ದುಡಿದು ಉಣ್ಣಲು ಅಶಕ್ತರಾದಾಗ, ನಿಮ್ಮ ಜೀವನದ ಹೊಣೆ ಹಗುರವಾಗಲಿಕ್ಕೆ.
- ನಿಮ್ಮ ಅಭಿರುಚಿಯ ಅಥವಾ ಆವಶ್ಯಕತೆಯ ಯಾವುದಾದರೊಂದು ಕಾರ್ಯಕ್ರಮದ ಪೂರೈಕೆಗೆ,
- ನಿಮ್ಮ ಮಗಳ ಮದುವೆಯ ಅಥವಾ ಮಗನ ವಿದ್ಯಾಭ್ಯಾಸದ ಸಮಸ್ಯೆಯ ಸುಲಭ ಪರಿಹಾರಕ್ಕೆ

ಸಿಂಡಿಕೇಟ್ ಬ್ಯಾಂಕಿನಲ್ಲಿ
ಕ್ಯುಮುಲೇಟಿವ್ ಡಿಪಾಜಿಟನ್ನು
ಪ್ರಾರಂಭಿಸುವುದು ಉತ್ತಮ.

ಸಿ. ಡಿ.

ಕ್ಯುಮುಲೇಟಿವ್ ಡಿಪಾಜಿಟ್ ಯೋಜನೆ ಸ್ಯುವಸ್ಥಿತವಾದ ಉಳಿತಾಯಕ್ಕೆ ಕೈಗಂಬವಾಗಿದೆ.

ಸಿಂಡಿಕೇಟ್ ಬ್ಯಾಂಕ್

ಶಾಖೆಗಳು: 189   ಸ್ಥಾಪನೆ: 1925

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಉಡುಪಿ.

ಪ್ರೇಮ ಮರೀಚಿ

ನಿನ್ನ ಚಿಂತದವೆನ್ನ ಚೇತನ—
ದಾತ್ಮಲೋಕವ ತುಂಬಿತು
ಆಸೆಯೊತ್ತುವ ಒಲವಿನಾತುರ
ನಾಕದೆಲ್ಲೆಯದಾಟಿತು..
ಬುದ್ಧಿಗೆಟುಕದ ಶಕ್ತಿ ಈ ವಿಧ
ಮನದಬೇಟೆಯನಾಡಿದೆ
ಎನ್ನ ಯೌವನ ಎನ್ನ ಜೀವನ
ನಿನ್ನ ಪದತಲದಲ್ಲಿದೆ.
ಬಾಹು ಬಂಧನದಲ್ಲಿ ಶಾಂತಿಯು
ಪ್ರೇಮರಕ್ಷೆಯನುಗ್ರಹ
ಹೃದಯದಾಗ್ರಹಕಿಲ್ಲ ನಿಗ್ರಹ
ಎಲ್ಲಿ? ನಿನ್ನ ಪರಿಗ್ರಹ.

\+ \+   \+ \+   \+ \+

ಬೆಳಕು ಹರಿಯದ ಎನ್ನ ಕಣ್ಣಿಗೆ
ನಿನ್ನ ಪ್ರಣಯದ ಕತ್ತಲೆ
ದೀಪವಾರಿದ ಮೇಲೆ ಕಂಡಿದ್ದು
ಮೃತ್ಯು ಇನಿಯಳ ಬತ್ತಲೆ.

—"ಸಾಗರ್"

ಅನುಭವ

— ವೇಷವೇ ಭೂಷಣ? —

ಬಸ್ಸ್ ಸ್ಟ್ಯಾಂಡಿನಲ್ಲಿ ಬಸ್ಸಿಗಾಗಿ ಕಾದು ಕಾದು ಬೇಸರ ಬಂದಿತ್ತು, ಬೇಡ ಬೇಡವೆಂದರೂ ನೋಟ ತಾನಾಗಿಯೇ ಬಸ್ ಕಾಯುತ್ತಿದ್ದ ಬಗೆ ಬಗೆಯ ಬೇರೆ ಬೇರೆ ರೀತಿ ನೀತಿಯ ಜನರತ್ತ ಹರಿಯುತಿತ್ತು. ಬಳಿಯಲ್ಲೇ ಆಧುನಿಕ ರೀತಿಯ ವೇಷಭೂಷಣದ ಮಹಿಳೆಯೊಬ್ಬಳು ಕುಳಿತಿದ್ದಳು.

ಕಣ್ಣಿಗೆ ಕನ್ನಡಕ, ನೈಲಾನ್ ಸೀರೆ, ಕೊರಳಲ್ಲಿ ನೆಕ್‌ಲೇಸ್ ಕೈಯಲ್ಲಿ ರಿಸ್ಟ್ ವಾಚು. ವಿದ್ಯಾವತಿಯ ಲಕ್ಷಣಗಳೆಲ್ಲವೂ ಇದ್ದುವು. ಸುತ್ತಲಿನ ಅನೇಕರ ದೃಷ್ಟಿ ಅಪಹರಿಸಿದ ಆ ಅತ್ಯಾಧುನಿಕ ಶೃಂಗಾರದ ಮಹಿಳೆಯತ್ತ ನನ್ನ ದೃಷ್ಟಿಯೂ ಹರಿಯಿತು.

"ಟ್ಯಾಮ್ ಎಷ್ಟಾಯ್ತ್ರೀ?"

ಅವಳ ಕೈಗಡಿಯಾರದತ್ತ ದಿಟ್ಟಿಸುತ್ತ ವಿದ್ಯಾವತಿಯೊಬ್ಬಳು ಪ್ರಶ್ನಿಸಿದಳು.

"ಟ್ಯಾಮು ಇದು ಸರೀ ನಡೆಯೋಲ್ಲ. ಕಾಲಿತಿದ್ದಾ ಕೆ ತಡವರಿಸುತ್ತಾ ತಬ್ಬಿಬ್ಬಾಗಿ ನುಡಿದಳು.

ವಾಚು....ಶೃಂಗಾರ ಸಾಧನವೋ ಇಲ್ಲವೇ ಅಥವಾ ಗಂಟೆ ನಂಯೂಗಿ ನೋಡಲಾರದವರಿಗೂ ಕೈಗಡಿಯಾರವೋ ಇಲ್ಲವೇ ಅತ್ಯಾಧುನಿಕ ರೀತಿ ನೀತಿಯ ಅನಿವಾರ್ಯ ಸಂಪತ್ತೋ....

ಯಾವುದು ತಿಳಿಯದ ನನಗೆ ನಗು ಬಂತು.

—ಶ್ರೀಮತಿ ಯಶೋದ ಎನ್. ಜಪ್ಪಿ.

'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No. 466 N/50 dated 2—12—1950 of the Director of Public Instruction Madras.

Edited, Printed & Published by K. H. Shetty, at the Navayuga Press, Udipi, S. India.

ಅಖಿಲ ಕರ್ನಾಟಕದ
ಪ್ರಸಿದ್ಧ ಕತೆಗಾರರ
ಮಧುವನ
ಕಥಾ ಸಂಕಲನ
'ಕಿರಿಯರ ಪ್ರಪಂಚ'ದ
ಅಪೂರ್ವ ಪ್ರಕಟಣೆ
ಬೆಲೆ: ರೂ. ಮೂರು
ನವಭಾರತ ಪುಸ್ತಕ ಭಂಡಾರ
ಉಡುಪಿ

ನವಯುಗ

Estd. 1921 ಸ್ಥಾಪನೆ — ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ — 13 ನ. ಪೈಸೆ
Regd. No. B.G. 176 — NAVAYUGA— NATIONAL WEEKLY — ವಾ. ಚಂದಾ ರೂ. 6_75
Vol. 43 No. 7 — ಉಡುಪಿ, 17—10—1963 ಗುರುವಾರ — ಸಂಪುಟ ೪೩ ಸಂಚಿಕೆ ೭

ಯಾವತ್ತೂ
ಪ್ರಿಂಟಿಂಗ್ ಕೆಲಸಗಳನ್ನು
ಮಾಡಿಕೊಡಲಾಗುವುದು
ಕ್ಲಪ್ತ ಸಮಯದಲ್ಲಿ
ಮಿತ ದರದಲ್ಲಿ ಉತ್ತಮ
ಮುದ್ರಣ
ಕೆಲಸಗಳಾಗಬೇಕೆ?
ಸಂದರ್ಶಿಸಿರಿ ಯಾ ವಿಚಾರಿಸಿರಿ-
ನವಯುಗ ಪ್ರೆಸ್,
ವಾಲುಕೋಟೆ, ಉಡುಪಿ

ಶುದ್ಧೀಕರಣ ಕಾರ್ಯದಲ್ಲಿ

ಕಾಮರಾಜರ ದೊಡ್ಡ ಹೊಣೆಗಾರಿಕೆ

ದೇಶವಿದೇಶಗಳಲ್ಲಿಯೂ ಊಹೆ—ಪ್ರಶ್ನೆಗಳಿಗೆ ಎಡೆಮಾಡಿ ಕೋಲಾಹಲದ ಪ್ರಸಂಗವನ್ನು ಹುಟ್ಟಿಸಿದ ಕಾಮರಾಜ ಯೋಜನೆಯು ಇದೀಗ ಕಾರ್ಯಗತವಾಗುತ್ತ ಬರತೊಡಗಿದೆ. ಈ ಸೂತ್ರದನ್ವಯ ಮಂತ್ರಿ ಮಂಡಳಿಯ ಸೂತ್ರದಿಂದ ಉರುಳಿ ಹೋದ ವರಿಷ್ಠ ವರ್ಗದವರು ಆದಾವ ರೀತಿಯಲ್ಲಿ ಪಕ್ಷದ ಸಂಘಟನೆಯನ್ನು ಸಾಧಿಸುವರು ಎಂಬುದನ್ನು ಮಾತ್ರ ಕಾದು ನೋಡಬೇಕು. ಕಾಮರಾಜ ಸೂತ್ರವನ್ನು ಹುಸಿ ಹುಟ್ಟಿನ ಅವಜ್ಞೆಯಿಂದ ಕಾಣುತ್ತಿರುವರೆಂದು ಆರೋಪಿತರಾದ ಕೆಲವು ಮಹಾ ನಾಯಕರೂ ಈಗ ಪ್ರತ್ಯಕ್ಷವಾಗಿ ಸೂತ್ರವು ಉಪಯುಕ್ತವಾದುದೆಂದು ಒಪ್ಪಿಕೊಳ್ಳತೊಡಗಿದ್ದಾರೆ. ಪಕ್ಷಪ್ರಿಯತೆಯು ಅವರಲ್ಲಿದೆಯೆಂಬುದೀಗ ವ್ಯಕ್ತವಾಗುತ್ತಿದೆ. ಮುರಾರ್ಜಿ ಭಾಯಿ ಮತ್ತು ಎಸ್. ಕೆ. ಪಾಟೀಲರಂತಹ ನೇತಾರರೂ ಈಗ ಕಾಮರಾಜ ಸೂತ್ರದ ಆದ್ಯ ಪುರಸ್ಕರ್ತರ ಸಾಲಿನಲ್ಲಿ ಸೇರುವಂತಾಗಿದ್ದಾರೆ.

ಪಕ್ಷದ ವರ್ಚಸ್ಸು

ಸರಕಾರಿ ವಲಯದಿಂದ ನಾಯಕರ ನಿರ್ಗಮನವು ಆಡಳಿತೆಯ ಮೇಲೆ ತೀವ್ರ ಪರಿಣಾಮ ಬೀರುತ್ತದೆಂಬ ಮಾತು ಸ್ವಲ್ಪ ಮಟ್ಟಿಗೆ ನಿಜವಿದ್ದರೂ ಇರಬಹುದು. ಆದರೆ, ಒಂದು ಪಕ್ಷದ ನಿಯಂತ್ರಣಕ್ಕೆ ಸರಕಾರವು ಒಳಗಾಗುವುದರಿಂದ ಪಕ್ಷವು ಬಲಾಢ್ಯವೂ ಶಕ್ತಿಸಂಪನ್ನವೂ ಆಗಿದ್ದರೆ, ಆಡಳಿತವು ಕುಸಿಯುವುದೆಂಬುದರಲ್ಲಿ ವಿಶ್ವಾಸ ಹುಟ್ಟುವುದಿಲ್ಲ. ಹಿರಿಯ ಕಾಂಗ್ರೆಸಿಗರು ಪಕ್ಷದ ಮಾರ್ಗದರ್ಶನ ಮಾಡಿ, ಆಡಳಿತೆಯ ರೂಪರೇಷೆಗಳನ್ನು ರೂಪಿಸಿ, ಆಡಳಿತಕ್ಕೆ ಸಹಾಯಕರಾಗಿ ನಿಂತರೆ, ಅದೇಕೆ ಇಳಿಮುಖವಾಗಬೇಕು? ಆದುದರಿಂದ ಇಂತಹ ಕಲ್ಪನೆಯೇನಾದರೂ ಇದ್ದರೆ, ಅದು ಆಧಾರರಹಿತವೆನ್ನಲೇಬೇಕಾಗುತ್ತದೆ. ಇದಕ್ಕೆ ಅನುಗುಣವಾಗಿಯೇ ಇಂದು ರೂಪಗೊಳ್ಳಬೇಕು, ಪಕ್ಷದ ವರ್ಚಸ್ಸು ಮತ್ತು ಸಂಘಟನೆ

ಶಕ್ತಿಹ್ರಾಸಕ್ಕೆ ಕಾರಣವೇನು?

ಪಕ್ಷ ಮತ್ತು ಸರಕಾರಗಳ ನೀತಿಗಳು ಒಂದಾಗಿರುವುದು ಪಕ್ಷೀಯ ಆಡಳಿತೆಯಲ್ಲಿ ಅನಿವಾರ್ಯ. ಇದಕ್ಕೆಂದೇ ಪಕ್ಷದ ವರ್ಚಸ್ಸು ಮತ್ತು ಸರಕಾರದ ಪರಿಷ್ಕಾರ ನಡುವೆ ಹೊಂದಾಣಿಕೆ ಅವಶ್ಯ. ಯಾವ ಸಮಯದಲ್ಲಿ ಇಂತಹ ಏಕ ಭಾವನೆಗೆ ಚ್ಯುತಿ ಬರುವುದೋ ಆಗ ಪಕ್ಷ ಮತ್ತು ಆಡಳಿತೆಗಳ ನಡುವೆ ಬಿಕ್ಕಟ್ಟಿಕ್ಕೆ ಪ್ರಾರಂಭವಾಗುವುದು. ಪುರುಷೋತ್ತಮದಾಸ ಟಂಡನರು ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ, ಅವರಿಗೂ ಪ್ರಧಾನಿ ನೆಹರೂರವರಿಗೂ ಭಿನ್ನಾಭಿಪ್ರಾಯವಿದ್ದುದನ್ನು, ತತ್ಕಾರಣವಾಗಿ, ನೆಹರೂರವರೇ ಒಂದೆರಡು ವರ್ಷ ಅಧ್ಯಕ್ಷ ಪೀಠವನ್ನು ಏರಬೇಕಾದುದನ್ನೂ ನಾವು ನೆನಪಿಸಿಕೊಳ್ಳಬೇಕು. ಅಂದಿನಿಂದ ದೇಶದ ಆಡಳಿತೆಯಲ್ಲಿ ಹೊಸ ಪರಿವರ್ತನೆಯಾಯಿತೆಂಬುದನ್ನು ನಾವು ಮರೆಯಬಾರದು. ಪ್ರಧಾನಿ ನೆಹರೂರವರು ರೂಪಿಸುವ ಧೋರಣೆಗಳನ್ನು ಕಾಂಗ್ರೆಸ್ಸು ಒಪ್ಪಿಗೆಯ ಮುದ್ರೆಯೊತ್ತಿ ಸ್ವೀಕರಿಸತೊಡಗಿತು. ನೆಹರೂರವರಿಗೆ ಯಾವುದು ಹಿತವಾಗುತ್ತಿಲ್ಲವೋ ಅದನ್ನು ಪಕ್ಷವಾದರೂ ಎತ್ತಿ ಹಿಡಿಯುತ್ತಿಲ್ಲ. ಇದನ್ನು ನೆಹರೂರವರ ನಾಯಕತ್ವದಲ್ಲಿ ದೇಶದ ಜನರು ಹಾಗೂ ಕಾಂಗ್ರೆಸ್ಸು ಇಟ್ಟಿರುವ ವಿಶ್ವಾಸದ ಪ್ರತೀಕವೆಂದು ಕರೆಯಬಹುದಾದರೂ ಇಂತಹ ಸಂಪ್ರದಾಯವು ಪಕ್ಷದ ಶಕ್ತಿಯನ್ನು, ಅದರ ಅಧಿಕಾರವನ್ನು ಹ್ರಾಸಗೊಳಿಸುವುದಿಲ್ಲವೇ ಎಂಬ ಸಂದೇಹವೇಳುವುದು ಸಹಜ. ಪ್ರಾಯಶಃ ಇದೇ ಸಂಪ್ರದಾಯವು ಅನೂಚಾನವಾಗಿ ಕೆಲವು ವರ್ಷಗಳ ತನಕ, ಈಗಲೂ ಕೂಡ, ನಡೆದು ಬರುತ್ತಿರುವುದೇ ಕಾಂಗ್ರೆಸ್‌ನ ಶಕ್ತಿಹ್ರಾಸಕ್ಕೆ ಕಾರಣವಾಗಿರಬಹುದು?

ನವಮನ್ವಂತರಾರಂಭ

ದೇಶದಲ್ಲಿ ಸಾರ್ವಜನಿಕ ನಾಯಕತ್ವವಿರಬೇಕು ಎಂಬ ವಾದವೇಳುವುದಕ್ಕೂ ಈ ಸಂಪ್ರದಾಯಕ್ಕೂ ಸಂಬಂಧವಿಲ್ಲವೇ? ಪಕ್ಷದ ಸ್ಥಾನಮಾನಗಳು ಇದರಿಂದ ಇಳಿಮುಖವಾಗಿ ಕಾಂಗ್ರೆಸ್ ಅಧ್ಯಕ್ಷ ಪದವಿಯು ಕೇವಲ ಆಲಂಕಾರಿಕವೆಂಬ ಭಾವನೆಗೆ ಇದು ಪ್ರೇರಕವಾಗಲಿಲ್ಲವೇ— ಎಂದು ಮುಂತಾಗಿ ಯೋಚಿಸುವ ಕಾಲವೀಗ ಪರಿಪಕ್ವವಾಗಿದೆ. ಆದಕ್ಕೆಂದೇ ಅನಿರೀಕ್ಷಿತವಾಗಿ ಎದ್ದು ಬಂದ ಕಾಮರಾಜ ಸೂತ್ರವು ಕಾಂಗ್ರೆಸ್ ಪಕ್ಷದಲ್ಲಿ —ಆಡಳಿತೆಯಲ್ಲಿ ನವಮನ್ವಂತರವನ್ನು ತೆರೆದಿಡಲು ಸಮರ್ಥವಾಗಿದೆಯೇ? ಅದನ್ನು ಕಾರ್ಯರೂಪಕ್ಕೆ ತರುವಲ್ಲಿ ಉತ್ಸಾಹವನ್ನು ಕಾಂಗ್ರೆಸಿಗರು ತೋರುವರೆ? ಅಧಿಕಾರದಿಂದ ಕೆಲವರಂತೂ ಹೊರಬಂದರು. ಇನ್ನು ಯಾವ ಮಂತ್ರಿಯೂ ಕೇಂದ್ರದಿಂದ ಹೊರಬರುವುದಿಲ್ಲವೆಂಬ ದೃಢ ವಚನವೂ ಹೊರಗೆ ಬಂತು. ರಾಜ್ಯಗಳಲ್ಲಿಯಾದರೂ ಎಲ್ಲ ಪ್ರಕಾರದ ಗೊಂದಲಗಳೀಗ ನಿಂತು ಎಂತಾದರೂ ಸಚಿವಮಂಡಳಿಯು ರೂಪಗೊಂಡಿತು. ಇನ್ನುಳಿದಿರುವುದೆಂದರೆ, ಪಕ್ಷಕ್ಕೆ ಕಾಯಕಲ್ಪದ ಚಿಕಿತ್ಸೆ. ಹತೋತ್ಸಾಹಗೊಂಡ ಶರೀರದಲ್ಲಿ ನವೋತ್ಸಾಹ ಪ್ರತಿಷ್ಠಾಪನೆ. ಇದನ್ನು ಮಾಡಬೇಕಾದವರು ಅಧ್ಯಕ್ಷರು; ನೆರವೀಯುವವರು ವರಿಷ್ಠ ನಾಯಕರೊಡನೆ ಎಲ್ಲ ಕಾಂಗ್ರೆಸಿಗರು.

ವೈದ್ಯನಿಗೇನೇ ಗದ್ದುಗೆ

ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ಅಧ್ಯಕ್ಷಪದವಿಯನ್ನು ಯಾರೇರುವರು ಎಂಬುದರ ಬಗ್ಗೆ ಹಲವಾರು ಮಹನೀಯರ ಹೆಸರುಗಳು ಮುಂದೆ ಬಂದುವು. ಎಸ್. ಕೆ. ಪಾಟೀಲ, ಲಾಲಬಹದ್ದೂರ ಶಾಸ್ತ್ರಿ ಮತ್ತು ಇಂದಿರಾ ಗಾಂಧಿಯವರು ಮುಂದೆ ಬಂದರು; ಅಂತೆಯೇ ಹಿಂದೆ ಹೋದರು. ಬಂಗಾಳದ ಅತುಲ್ಯ ಘೋಷರನ್ನೆತ್ತಿ ಕಟ್ಟಿದರು; ಅವರೂ ಎದ್ದು ನಿಲ್ಲಲಿಲ್ಲ. ಪಕ್ಷದ ಹಿತೋದ್ದೇಶದಿಂದ ಆಡಳಿತೆಯ ರಂಗದಿಂದ ಹೊರಬಂದ ಕಾಮರಾಜರೇ ತಮ್ಮ ಸೂತ್ರದನ್ವಯ ಪಕ್ಷವನ್ನು ಕಟ್ಟುವಲ್ಲಿ ಯಶಸ್ವಿಯಾಗಬಹುದು ಎಂದು ನಂಬಿದ ಕಾಂಗ್ರೆಸಿಗರು ಅವರ ಕೊರಳಿಗೇನೇ ಹೂಮಾಲೆಯಿಕ್ಕಿದರು, ಬಹುಶಃ ನಾಡಾರರ ಮನಸಾರ ಇದನ್ನು ನಿರೀಕ್ಷಿಸಿರಲಾರರು; ಆದರೂ ಪಕ್ಷದ ಹಿತದೃಷ್ಟಿಯಿಂದ ಅವರು ಅದನ್ನು ಹೊರುವುದಕ್ಕೂ ಸಿದ್ಧರಾಗಿದ್ದಾರೆ. ಮದ್ರಾಸದಲ್ಲಿ ತಮಿಳುನಾಡು ಕಾಂಗ್ರೆಸ್‌ನ ಅಧ್ಯಕ್ಷ ಪದವಿಯಲ್ಲಿ ಹಲವಾರು ವರ್ಷಗಳ ಕಾಲ ದುಡಿದು ಹಲವಾರು ದುಷ್ಟಶಕ್ತಿಗಳೊಡನೆ ಕಾದಾಡಿ ವಿಜಯಿಗಳಾದ ನಾಡಾರರು ಅಖಿಲ ಭಾರತ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಅದಕ್ಕೆ ಸೂಕ್ತ ಚಿಕಿತ್ಸೆಯನ್ನು ಮಾಡಲು ಸಮರ್ಥರೆಂದು ಎಲ್ಲರೂ ನಂಬಿದ್ದಾರೆ.

ಚಿಕಿತ್ಸೆಯ ವಿಧಾನ

ಕಾಮರಾಜ ಸೂತ್ರದ ಹಿನ್ನೆಲೆಯಲ್ಲಿ ಮುಖ್ಯವಾಗಿ ಎರಡು ಉದ್ದೇಶಗಳಿದ್ದುವು. ಮೊದಲನೆಯದಾಗಿ, ಅಧಿಕಾರಕ್ಕೆ ಅಂಟಿಕೊಳ್ಳುವುದು ಕಾಂಗ್ರೆಸಿಗರ ಅಂಟು ರೋಗವೆಂದು ಜಗದ್ವ್ಯಾಪಿಯಾಗಿರುವಾಗ, ಅವರು ಅಧಿಕಾರ ತ್ಯಾಗಕ್ಕೂ ಸಿದ್ಧರು— ಅವರಿಗೆ ಅಧಿಕಾರದಲ್ಲಿ ವ್ಯಾಮೋಹವಿಲ್ಲವೆಂಬುದನ್ನು ತೋರಿಸುವುದು. ಮತ್ತು ಎರಡನೆಯದಾಗಿ, ದುರ್ಬಲವಾಗುತ್ತಿರುವ ಪಕ್ಷದ ಸಂಘಟನೆಯನ್ನು ಬಲಪಡಿಸಿ ಅದನ್ನು ನಿತ್ಯ ನೂತನವಾಗಿ ಕಟ್ಟುವುದು ಮತ್ತು ತ್ಯಾಗ ಹಾಗೂ ಸೇವೆಯ ಪಾಠವನ್ನು ಕಾಂಗ್ರೆಸಿಗರಿಗೆ ಕಲಿಸುವುದು; ತನ್ಮೂಲಕ ದೇಶದ ಅಜೇಯ ಶಕ್ತಿಯನ್ನಾಗಿ ಅದನ್ನು ರೂಪಿಸುವುದು- ಇವುಗಳಲ್ಲಿ ಮೊದಲನೆಯದನ್ನು ಕಾರ್ಯಗತಗೊಳಿಸುತ್ತಿರುವಾಗಲೇ ತಲೆದೋರಿದ ದುರಂತಗಳನ್ನು ನಾವು ಗಮನಿಸದಿರುವುದು ಸಾಧ್ಯವಿಲ್ಲ. ಮುಖ್ಯವಾಗಿ ಉತ್ತರ ಪ್ರದೇಶದ ಮಂತ್ರಿ ಮಂಡಳಿಯ ಬಿಕ್ಕಟ್ಟನ್ನು ಪರಿಹರಿಸಲು ಚಂದ್ರಭಾನುಗುಪ್ತರನ್ನು ರಾಜಿನಾಮೆ ಕೊಡುವಂತೆ ಒಲಿಸಲಾಯಿತು. ಇದರಿಂದ ಸಮಸ್ಯೆ ಪರಿಹಾರವಾಯಿತೆ? ವಿಧಾನ ಸಭೆಯ ಎರಡೂ ಗುಂಪುಗಳು ತಂತಮ್ಮ ಮೇಲಾಟಕ್ಕೆ ತೊಡಗಿದವು. ಈಗ ಅಲ್ಲಿ ಸಚಿವ ಸಂಪುಟ ರಚಿತವಾಗಿರುವುದಾದರೂ, ಅಲ್ಲಿನ ವಾತಾವರಣದಲ್ಲಿ ಕ್ಷೋಭವಿಲ್ಲವೆಂದು ಧೈರ್ಯವಾಗಿ ಹೇಳುವುದು ಸಾಧ್ಯವಿಲ್ಲ. ವಿಶಾಲ ತಳಹದಿಯ ರೋಗದಿಂದ ಸುಚೇತಾ ಕೃಪಲಾನಿ ದೂರವಾಗುವುದು ಅಸಾಧ್ಯವೆನಿಸಿತು. ಹಾಗೆಯೇ ಇನ್ನು ಕೆಲವೆಡೆಯಲ್ಲಿ ದೊಡ್ಡ ಮಂಡಳಿಗಳನ್ನು ವಿಸರ್ಜಿಸುವ ಇಚ್ಛೆಯಿದ್ದರೂ ಇದರಿಂದ ತಲೆದೋರುವ ಸಮಸ್ಯೆಗಳನ್ನು ಎದುರಿಸುವುದಕ್ಕೆ ಅಲ್ಲಲ್ಲಿನ ಮುಖ್ಯ ಮಂತ್ರಿಗಳಿಗೆ ಧೈರ್ಯವಿಲ್ಲ. ತನ್ನ ಮಂಡಳಿಯಲ್ಲಿ ಎಷ್ಟು ಜನ ಮಂತ್ರಿಗಳಿರಬೇಕು ಅವರಿಗೆ ಯಾವ ಯಾವ ಖಾತೆಗಳನ್ನು ಕೊಡಬೇಕು ಎಂಬ ವಿಚಾರವು ಮುಖ್ಯ ಮಂತ್ರಿಯ ಹೊಣೆಗಾರಿಕೆಗೆ ಸೇರಿದ್ದು ನಿಜವಾದರೂ ಅದು ಪಕ್ಷದ ಆದೇಶಗಳನ್ನು ಮೀರಿ ನಡೆಯುವುದು ಪಕ್ಷೀಯ ಪದ್ಧತಿಯ ಆಡಳಿತೆಯಲ್ಲಿ ಅಸಮಂಜಸವಾಗುವುದು. ಆದುದರಿಂದಲೇ ಕಾಮರಾಜರು ಕಾಂಗ್ರೆಸ್ ಅಧ್ಯಕ್ಷರಾಗಿ ಬಹು ಜಾಗರೂಕತೆಯಿಂದ ತಮ್ಮ ಸೂತ್ರದ ಮೂಲಭೂತ ಸಿದ್ಧಾಂತವನ್ನು ವ್ಯವಸ್ಥಿತಗೊಳಿಸಬೇಕು. ತಮ್ಮ ರಾಜ್ಯದಲ್ಲಿನ ದ್ರಾವಿಡ ಮುನ್ನೇತ್ರ ಕಳಗಂನಂತಹ ಪಕ್ಷಗಳ ದೇಶದ್ರೋಹಿ ಚಟುವಟಿಕೆಗಳನ್ನು ನಿಗ್ರಹಿಸಬೇಕು. ದೇಶದ ಸಂರಕ್ಷಣೆಯ ಆವಶ್ಯಕತೆ ಹೆಚ್ಚಾಗಿರುವ ಈ ಸಂಕ್ರಮಣ ಕಾಲದಲ್ಲಿ ಭಾವೈಕ್ಯಕ್ಕೆ ಭಂಗ ತರುವಂತಹ ಒಳಜಗಳಗಳಿಂದ ಕಾಂಗ್ರೆಸ್ ಭ್ರಷ್ಟವಾಗದಂತೆ ಉಳಿದವರಿಗೆ ಮಾರ್ಗದರ್ಶನ ಮಾಡಬೇಕು. ದುಷ್ಟಶಕ್ತಿಗಳು ತಲೆಯೆತ್ತದಂತೆ ಪಕ್ಷವು ಅಂತರಂಗದಲ್ಲಿಯೂ ಬ

([illegible]ನೇ ಪುಟ ನೋಡಿರಿ)

ಐತಿಹಾಸಿಕ ನಾಟಕ

ಗಜಪತಿ ನಂದಿನಿ

ಬರೆದವರು: "ನವಗಿರಿನಂದ"

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಕೃಷ್ಣದೇವ –(ತಿರುಗಿನೋಡಿ) ಹಾ! ಇದೇನಿ? ಇದಾರು? ಚಿನ್ನಾ!

ಚಿನ್ನಾ— ರಾಜೇಂದ್ರಾ! ಇವನಾರೋ ಮತ್ತೊಬ್ಬ ಘಾತಕ. ಈ ಅಡವಿಯಲ್ಲಿ ಹೊಂಚಾಡಿಕೊಂಡು ನಿಮ್ಮನ್ನು ಮೋಸದಿಂದ ಆಕ್ರಮಿಸಲು ಬಂದನು. ಪುಣ್ಯವಶಾತ್ ನನ್ನ ಕಣ್ಣಿಗೆ ಬಿದ್ದುದರಿಂದ ಹೀಗಾಯಿತು. ಇಂತಹ ಗೊಂಡಡವಿಯಲ್ಲಿ ಇನ್ನೆಷ್ಟು ಮಂದಿ ವೈರಿಗಳು ತಿರುಗಾಡುತಿರುವರೋ ಯಾರು ಬಲ್ಲರು?

ಕೃಷ್ಣ— ಹಾ! ಚಿನ್ನಾ! ನನ್ನ ಪ್ರಾಣವನ್ನಿಂದು ನೀನು ಕಾಪಾಡಿದಿ.

ಚಿನ್ನಾ— ನನ್ನ ಪ್ರಾಣಕ್ಕೂ ತಾವು ಮಿಗಿಲಾಗಿದ್ದೀರಿ ಪ್ರಭು.

ಕೃಷ್ಣದೇವ— ಯಾರೀ ಘಾತಕ ಸಂನ್ಯಾಸೀ (ನೋಡಿ) ಗತವೀರನಾದ ಹೇಡಿಯೇ! ಯಾರು ನೀನು?

ವೀರರುದ್ರ— (ಮೆಲ್ಲ ಎದ್ದು) ನಾನೇ? ಕೇಳು ರಾಯಾ. ನಾನು ಉದಯಗಿರಿಯ ರಾಜಾ ವೀರರುದ್ರ ಗಜಪತಿ ಕಟಕದ ಪ್ರತಾಪರುದ್ರನ ಬಂಧು. ನನ್ನ ರಾಜ್ಯವನ್ನು ಸೆಳೆದು, ನನ್ನ ಹೆಂಡತಿ ಮಕ್ಕಳನ್ನು ಸೆರೆಯಲ್ಲಿಟ್ಟು ನನ್ನನ್ನು ಹೀಗೆ ಕಾಡುಪಾಲು ಮಾಡಿದ ನಿನ್ನ ಮೇಲೆ ಸೇಡು ತೀರಿಸಬೇಕೆಂದು ಮೃತ್ಯುವಿನ ಹಾಗೆ ನಿನ್ನ ಬೆಂಬಿಡದೆ ತಿರುಗುತ್ತಿದ್ದೆನು. ಈ ದಿನ ನೀನು ಚಿರತೆಯನ್ನಟ್ಟಿಕೊಂಡು ಏಕಾಂಗಿಯಾಗಿ ಬಂದದ್ದು ನೋಡಿದೆ. ಹೀಗೆ ಹೇಡಿಯಂತೆ ಕೊಲೆಗೈಯಲೆಳಸಿದೆ. ಆದರೆ ನಿನ್ನ ಅಂಗರಕ್ಷಿಣಿಯಾಗಿ ಶ್ರೀ ಭುವನೇಶ್ವರೀ ದೇವಿಯೇ ಬಂದ ಹಾಗೆ ಈ ದೇವಿ ಖಡ್ಗಘಾತದಿಂದ ನನಗೆ ಜ್ಞಾನಾಂಜನವನ್ನಿತ್ತಳು. ಇದುವರೆಗೆ ಕಪಟ ಸಂನ್ಯಾಸಿಯಾಗಿದ್ದ ನಾನು ಈಗ ನಿಜವಾದ ಸಂನ್ಯಾಸಿಯಾದೆ. ಕೃಷ್ಣ ಸಾರ್ವಭೌಮಾ! ನನ್ನನ್ನು ಕ್ಷಮಿಸಿ ನನಗೆ ಸ್ವಾತಂತ್ರ್ಯವನ್ನು ದಯಪಾಲಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. (ಕೈ ಮುಗಿಯುವನು. ಇವನ್ನು ಮಾತಾಡುವಾಗ ಚಿನ್ನಾದೇವಿ ಹೊರಟು ಹೋಗುವಳು)

ಕೃಷ್ಣದೇವ—ತಾವು ಹೀಗೆ ಬೇಡಕೂಡದು. ನಿಮಗೆ ನಿಜವಾದ ಪಶ್ಚಾತ್ತಾಪವಾಗಿದ್ದರೆ ಪಂಪಾಪತಿಯೇ ನಿಮ್ಮನ್ನು ಕ್ಷಮಿಸುವನು. ಆದರೆ ಗಜಪತಿ ಮಹಾರಾಜರೆ, ನಾವು ಉದಯಗಿರಿಯನ್ನು ಗೆದ್ದರೂ ಅಲ್ಲಿಯ ಸಿಂಹಾಸನವು ನಿಮಗಾಗಿ ಕಾದಿದೆ. ನಿಮ್ಮ ಪತ್ನಿ ನಮ್ಮ ಆಶ್ರಯದಲ್ಲಿ ಸ್ವತಂತ್ರರಾಗಿದ್ದಾರೆ. ತಮ್ಮ ಕುಮಾರನು ಅರಿಪತ್ರ ರಾಜ್ಯವನ್ನು ಸ್ವೀಕರಿಸಲು ಒಪ್ಪದ ಕಾರಣ ನಾವು ಅವನನ್ನು ಗೌರವದಿಂದ ನೋಡಿಕೊಳ್ಳುತಿದ್ದೇವೆ. ನೀವು ತಪ್ಪಿಸಿಕೊಂಡು ಕಣ್ಮರೆಯಾದುದರಿಂದಲೇ ಈ ವಿಷಯವಾವುದೂ ನಿಮಗೆ ಗೊತ್ತಿಲ್ಲ.

ವೀರರುದ್ರ— ಅದು ಹೇಗಾದರೂ ಹೋಗಲಿ. ನಾನೀಗ ಎಲ್ಲಾ ಮೋಹವನ್ನೂ ಬಿಟ್ಟಿದ್ದೇನೆ. ನನಗೆ ಅಪ್ಪಣೆಯನ್ನು ಕೊಡು. (ವಂದಿಸಿ ಹೊರಟು ಹೋಗುವನು).

ಕೃಷ್ಣದೇವ— ಎಲ! ಹೊರಟೇ ಹೋದನಲ್ಲ. ಹುಂ, ಹೋಗಲಿ. ಚಿನ್ನಾ, (ಅತ್ತಿತ್ತ ನೋಡಿ) ಚಿನ್ನಾದೇವಿ! ಚಿನ್ನಾ! ಚಿನ್ನಾ! (ಅತ್ತಿತ್ತ ಹುಡುಕುವಾಗ, ಸೇನಾಧೀಶ ರಾಮಲಿಂಗನಾಯಕನು ಕೆಲವು ಸೈನಿಕರೊಂದಿಗೆ ಬರುವನು).

ರಾಮಲಿಂಗ— ಜೈ ಕರ್ಣಾಟಕ ಸಾರ್ವಭೌಮ!

ಕೃಷ್ಣದೇವ— ಜೈ ಶ್ರೀ ಭುವನೇಶ್ವರಿ!

ರಾಮ— ಪ್ರಭೂ. ನಮ್ಮ ಅಪರಾಧ ಕ್ಷಮಿಸಬೇಕು. ತಾವು ಚಿರತೆಯನ್ನಟ್ಟಿಕೊಂಡು ಮಹಾ ವೇಗದಿಂದ ನಮ್ಮ ಕಣ್ಮರೆಯಾಗಿ ಬಿಟ್ಟಿರಿ. ಸನ್ನಿಧಾನವನ್ನು ಹುಡುಕಿಕೊಂಡು ಬರಲು ಇಷ್ಟು ತಡವಾಯಿತು.

ಕೃಷ್ಣದೇವ— ಒಳ್ಳೆಯದು. ಹೋಗೋಣ, ನಡೆಯಿರಿ.

ರಾಮಲಿಂಗ— ಆ ಚಿರತೆ ಬಲಿಯಾಯಿತೆ?

ಕೃಷ್ಣದೇವ— ಆ, ಚಿರತೆ ಜೀವದಾನ ಪಡೆದುಕೊಂಡು ಹೋಯಿತು. ಇನ್ನೊಂದು ಚಿರತೆಯನ್ನು ಹಣ್ಣೊಂದು ಸಾಧು ಮಾಡಿತು. ಎಲ್ಲಾ ಮಾಯ!

(ರಾಮ ಲಿಂಗನು ಬೆಪ್ಪಾಗಿ ನಿಲ್ಲುವನು) ನಡೆಯಿರಿ ಹೋಗೋಣ. (ಒಂದು ದೀರ್ಘ ಶ್ವಾಸಬಿಟ್ಟು, ಗಂಭೀರವಾಗಿ ಹೋಗುವನು. ಎಲ್ಲರೂ ಹೋಗುವರು.)

ದೃಶ್ಯ—೧೨

ಗೊಂಡಡವಿಯ ಕಾಲುದಾರಿ.

(ದೂರದಲ್ಲಿ ಒಂದು ಗುಡಿಯ ಭಾಗವಿರಬಹುದು)

(ರಾತ್ರಿ, ಚಂದ್ರಪ್ರಭೆ ವೀರರುದ್ರ ಗಜಪತಿ ಪ್ರವೇಶಿಸಿ ಬಲಗೈಯ ಪಟ್ಟನ ಭಾಗವನ್ನು ಇನ್ನೊಂದು ಕೈಯಿಂದ ಹಿಡಿದುಕೊಂಡು)

ವೀರರುದ್ರ— ಆ! ನನಗೆ ಖಡ್ಗಘಾತದಿಂದ ಜ್ಞಾನ ಮುದ್ರೆಯನ್ನಿತ್ತ ಆ ದೇವಿ ಯಾರೋ! ಆ ರಾಯನ ಕೀರ್ತಿಲಕ್ಷ್ಮಿಯೋ ಅಥವಾ—

ಚಿನ್ನಾದೇವಿ— (ಪ್ರವೇಶಿಸಿ) ಅಲ್ಲ ಸ್ವಾಮೀ ನಾನು ಅಂತಹ ಮಹಾತ್ಮಳೇನೂ ಅಲ್ಲ. ಒಬ್ಬಳು ತಬ್ಬಲಿ. (ಗಜಪತಿಯ ಬಳಿಗೆ ಬರುವಳು)

ವೀರರುದ್ರ— ಹಾ! ಇಲ್ಲೇ ಇರುವಿಯಾ? ಅಲ್ಲಮ್ಮಾ; ಮಹಾ ತೇಜಸ್ವಿನಿಯಾದ ನೀನು ತಬ್ಬಲಿಯಲ್ಲ.

ಚಿನ್ನಾ— ನಿಜವಾಗಿಯೂ ನಾನು ಈ ಗೊಂಡಡವಿಯ ಪಾಲಿನವಳು.

ವೀರರುದ್ರ— (ಅವಳ ಮುಖವನ್ನು ದಿಟ್ಟಿಸಿ ನೋಡಿ) ನಿನ್ನ ವೃತ್ತಾಂತವೇನಮ್ಮಾ?

ಚಿನ್ನಾ— ನನ್ನ ವೃತ್ತಾಂತ ನನಗೇ ತಿಳಿಯದು ತಾತಾ. ನೀವು ಕೃಷ್ಣದೇವರಾಯರ ಮುಂದೆ ಹೇಳಿದ ಮಾತಿನಿಂದ ನಿಮ್ಮ ವೃತ್ತಾಂತವು ಗೊತ್ತಾಯಿತು. ನೀವು ಪಶ್ಚಾತ್ತಾಪದಿಂದ ನಿಜವಾದ ಮಹಾತ್ಮರಾದಿರೆಂದು ಅರಿತೆ. ನಾನು ತಂದೆಯನ್ನೂ ಕಂಡವಳಲ್ಲ, ನಿಮ್ಮನ್ನೇ ತಂದೆಯಂತೆ ಭಾವಿಸಿ, ನಿಮ್ಮ ಸೇವಾ ಶುಶ್ರೂಷೆಗಳಿಂದ ನನ್ನ ಜೀವನವನ್ನು ತಳ್ಳಬೇಕೆಂದಿದ್ದೇನೆ. ನಿಮ್ಮನ್ನು ನೋಯಿಸಿದ ನನ್ನ ತಪ್ಪನ್ನು ಕ್ಷಮಿಸಿ.

ವೀರರುದ್ರ— ನೀನು ಹಾಗೆ ಮಾಡದಿದ್ದರೆ ನಾನು ಘನ ಘೋರ ಪಾಪಿಯಾಗಿ ಬಿಡುತ್ತಿದ್ದೆ. ನೀನು ನನಗೆ ವಿವೇಕ ಮಾಡಿಸಿದ ಗುರುದೇವಿ.

ಚಿನ್ನಾ— ನಾನು ಚಿಕ್ಕವಳು ಸ್ವಾಮಿ ನಿಮ್ಮ ಮಗಳ ಹಾಗೆ.

ವೀರರುದ್ರ— ಅಹಾ! ನಿನ್ನಂಥ ಮಗಳನ್ನು ಪಡೆಯಬೇಕಾದರೆ ನಾನೆಷ್ಟು ಭಾಗ್ಯವಂತನೋ! (ಚಿನ್ನದೇವಿಯ ಗಲ್ಲವನ್ನೆತ್ತಿ ಹಿಡಿದು) ಆ! ಏನಿದು? ಈ ಮುಖ ಎಲ್ಲೋ ಕಂಡ ಹಾಗಿದೆ ಓ! ಓ! ನನ ಯೌವನ ಕಾಲದಲ್ಲಿ! ಇಂತಹುದೇ ಮುಖ! ಆ! ಆ! ನನ್ನ ಪಟ್ಟದ ರಾಣಿ ಸುಭದ್ರಾ ದೇವಿಯ ಮುಖವಿದು! ಅಯ್ಯೋ ಸುಭದ್ರಾದೇವಿ! ಒಬ್ಬ ಕುಹಕಿಯ ದೆಸೆಯಿಂದ ತುಂಬಿದ ಗರ್ಭಿಣಿಯಾದ ನಿನ್ನನ್ನು ತ್ಯಜಿಸಿದ ಮಹಾ ಪಾಪಿ ನಾನು! ಅಯ್ಯೋ! ಸುಭದ್ರಾದೇವೀ! ಸುಭದ್ರಾದೇವಿ

ಸಂನ್ಯಾಸಿನಿಯಾದ ಸುಭದ್ರಾದೇವಿ— (ಗುಡಿಯ ಕಡೆಯಿಂದ ಬಂದು) ಯಾರದೂ? ಇಲ್ಲಿ ಈ ರಾತ್ರಿಯಲ್ಲಿ ನನ್ನನ್ನು ಸುಭದ್ರಾದೇವೀ ಎಂದು ಕರೆಯುವವರು ಯಾರದು?

ಚಿನ್ನಾದೇವಿ— (ಆತುರದಿಂದೆದ್ದು ಅವಳ ಕಡೆ ನೋಡಿ) ಅಮ್ಮಾ! ಅಮ್ಮಾ ನೀನು ಇಲ್ಲಿರುವಿಯಾ? ಹೇ ದೇವಾ! (ಆಲಿಂಗಿಸುವಳು.)

ಸುಭದ್ರಾ— ಮಗಳೇ ಚಿನ್ನಾ! ಬಿದ್ದೆಯಾ ನನ್ನ ಕಣ್ಣಿಗೆ! ಹಳೆಯ ಗುಡಿಯಲ್ಲಿಯೂ ದೇವರಿದ್ದಾನೆ! ಇದ್ದಾನೆ! ನನ್ನ ನಂಬಿಗೆ ಫಲಿಸಿತು! (ವೀರರುದ್ರನು ಬೆರಗಾಗಿ ನೋಡುವನು.)

ಚಿನ್ನಾ— ಅಮ್ಮಾ, ನೀನು ಇಲ್ಲಿಗೆ ಹೇಗೆ ಬಂದೆ?

ಸುಭದ್ರಾ— ವಿಜಯನಗರದಲ್ಲಿ ಫಕ್ಕನೆ ನೀನು ಮನೆಯಿಂದ ಮಾಯವಾದಿ. ನನಗೆ ದಿಕ್ಕೇ ತೋರಲಿಲ್ಲ. ಹುಚ್ಚಳ ಹಾಗೆ ಅಲೆದಾಡಿದೆ. ಇಗೋ, ಅಲ್ಲಿ ಕಾಣುವ ಆ ಹಾಳು ಗುಡಿ ನನಗೇನೋ ಶಾಂತಿ ನೀಡಿತು. ಅಲ್ಲಿ ಇಲ್ಲದ ದೇವರನ್ನೇ ನಂಬಿ ಧ್ಯಾನ ಮಾಡುತ್ತ ಕುಳಿತೆ. ನಾನೊಬ್ಬಳು ಮಹಾತ್ಮಳೆಂದು ಭಾವಿಸಿ ಹಳ್ಳಿಯವರು ನನಗೇನಾದರೂ ತಿನ್ನಲಿಕ್ಕೆ ತಂದು ಕೊಡುತ್ತಾರೆ. ಮಗಳೇ, ನೀನೀಗ ಮತ್ತೊಮ್ಮೆ ನನ್ನ ಹೊಟ್ಟೆಯಲ್ಲಿ ಹುಟ್ಟಿದ ಹಾಗಾಯಿತು.

(೧೧ನೇ ಪುಟ ನೋಡಿರಿ)

In the Court of the Dt. Munsif Udipi

O. S No. 205/63

Mothi Souza — Plaintiff.

Vs

1. Appi alias Bastyan Souza
2. Paul Souza
3. Mary Souza Bai
4. Mark Souza — Defendants.

Notice

is hereby given to the 2nd defendant named above that the above suit filed by the Plaintiff for Partition is posted to 5—11—63. The 2nd defendant is directed to appear in the said Court on that day at 11 a. m. either in person or by pleader, failing which the matter will be decided in his absence.

K. L. Aithal,
Vakil for Plaintiff.

Udipi, 9—10—63.

ಅಸ್ತಮಾ ಪೀಡಿತರ ಗಮನಕ್ಕೆ

ಹಿಮಾಲಯದ ಪ್ರಸಿದ್ಧ ಅಸ್ತಮಾ ನಿವಾರಕ ಮೂಲಿಕೆಯನ್ನು ದಿ. 1—11—63 ಹುಣ್ಣಿಮೆಯ ರಾತ್ರಿ ಹಾಲು ಮತ್ತು ಅಕ್ಕಿಯಿಂದ ತಯಾರಿಸಿದ ಖೀರಿನಲ್ಲಿ ತೆಗೆದುಕೊಳ್ಳುವುದರಿಂದ ಅಸ್ತಮಾ, ಗೂರಲು, ಕೆಮ್ಮು, ಉಬ್ಬಸ, ಮೇಲುಸಿರು ಮತ್ತು ಶ್ವಾಸ ಕಟ್ಟುವಿಕೆ ಇತ್ಯಾದಿಗಳು ನಿವಾರಿಸಲ್ಪಡುತ್ತವೆ. ಕೂಡಲೇ ಇಂಗ್ಲಿಷಿನಲ್ಲಿ ಬರೆಯಿರಿ:

Shri Mahatma Sidh Baba Sewa Ashram
P. O. Chitrakot. (Uttar Pradesh).

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ **5**
2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ **5½** ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ **3**

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ಗೇಹ ರಾಜ್ಯದಲ್ಲಿ

ಅವಿಶ್ವಾಸ ಗೊತ್ತುವಳಿ

ಕೇಳಿದಿರಾ....?

ಏನಂತೆ ವಿಶೇಷ?

ನೀವು ಕೇಳ್ಳಿಲ್ವೇಂತ?

ಯಾವುದನ್ನೂಂತ!

ಅದೇ ನಿಮ್ಮ ನಿಜಲಿಂಗಪ್ಪನವ್ರ ಸರ್ಕಾರದ ಮೇಲೆ....

ಓ....ಅವಿಶ್ವಾಸ ಠರಾವು ಅಲ್ವೆ?

ಹ್ಞಾಂ....

ಅದರಲ್ಲೇನು ಬಂತೆ? ಠರಾವು ತಂದವ್ರು ಮತ್ತೆ ಮನಿ ಬಳ್ಕೊಳ್ತಾರೆ....

ಅಂದ್ರೆ, ಸರ್ಕಾರಿ ಪಕ್ಷದ ಸದಸ್ಯರೆಲ್ಲಾ ಒಂದಾಗ್ತಾರೆನ್ನಿ.

ಈ ಸಮಯದಲ್ಲಿಯಲ್ದೆ ಮತ್ತಾವಾಗ್ಲೆ ಅವ್ರೆಲ್ಲಾ ಒಂದಾಗೋದು....?

ಸರಿ ಹೋಯ್ತು ಬಿಡಿ...

ಏನು?

ಏನಿಲ್ಲಾ. ಥಕ್ಕನೆ ಧರ್ಮರಾಯ ಹೇಳ್ದ ಮಾತೊಂದು ನೆನ್ಪಿಗೆ ಬರುತ್ತೆ...

ಏನದೂಂತ...

ಅದೇ....ಅಂ....ನೋಡಿ, ಧರ್ಮರಾಯನವ್ರು ವನವಾಸಕ್ಕೆಂದು ಹೋದ್ರಲ್ಲ...

ಹೋಗಿದ್ರೂಂತನ್ನಿ.

ಹಾದು; ಹೋಗಿದ್ರು. ಅಲ್ಲಿ ದುರ್ಯೋಧನ ಅವರ ಚೆಂದ ನೋಡ್ಲಿಕ್ಕೇಂತ ಹೋದ....

ಚಂದ ಅಲ್ವೆ; ಅವನ ಬನ್ನವನ್ನ....

ಬದಾ ಸರೀನ್ನಿ. ಅವ್ರುಬನ್ನ ನೋಡಿ ತಾನು ಪ್ರಸನ್ನನಾಗೋದಕ್ಕೆ...

ಯಾಕೋ ಹೋಗ್ಲಿ. ಏನಾಯ್ತೂಂತೆ? ಆಗ ಯಾರೋ ಅವ್ನ ಪೂರ್ವಜನ್ಮದ ವೈರಿ....

ಸರಿ ಸರಿ...ಚಿತ್ರಸೇನ....

ಅವ್ನು ಅವನನ್ನ ಎತ್ತಿ ಆಕಾಶಕ್ಕೆತ್ತಿಕೊಂಡು ಹೋದ...

ಹ್ಞಾಂ....

ಆಗ ಕರ್ಣ ದುಶ್ಶಾಸನ ಮಿಕಿಮಿಕಿ ನೋಡ್ತಿದ್ರು. ಪಾಪ ಅವ್ನ ಹೆಂಡ್ತಿ ಭಾವನಲ್ಲಿ ಬಂದು ತನ್ನ ಪತಿಯ ಜೀವ ಬದುಕಿಸಿಕೊಡುವಂತೆ ಪತಿಭಿಕ್ಷೆ ಬೇಡಿದ್ಳಂತೆ...

ಹೌದು. ಅವನೂ ಕೊಟ್ಟು ಬಿಟ್ಟನ್ನಿ.

ಅವ್ನು ಕೊಟ್ಟದ್ದಕ್ಕಿಂತ್ಲೂ ಒಂದು ಮಾತು ಕೇಳ್ದ...

ಏನಂತೆ ಮಾತು?

ಹೇಳಿ ನೋಡೋಣ ನೀವು....

ಅಯ್ಯೋ, ಬಿಡೂಂತೀನಿ. ಆ ಭಾರತ ರಾಮಾಯಣ ಎಲ್ಲ ಓದೋಕೆ ತಿಳಿದು ...ಳ್ಳೋಕೆ ಪುರ್ಸೊತ್ತೆಲ್ಲಿದೆ? ನೀನೇ ...ಳಿಬಿಡು ನೋಡೋಣ.

ಸರಿ ಹೋಯ್ತು ಬಿಡಿ. ಇನ್ನಾದ್ರೂ ...ೋಲೊಪ್ಪಿಕೋತೀರಾ? ಗಂಡೂಂತ ...ಸೆ ತಿಕ್ತಾ ಜಂಭ ಕೊಚ್ಕೋದನ್ನ ...ತ್ತೀರಾ?

ಅಯ್ಯೋ ಮಹರಾಯ್ತಿ! ನಾನೇ ನಿನ್ನ ...ರುಳಿಗೆ ಸಿಕ್ಕಿಬಿದ್ದೆಲ್ಲಾ ...

ಇಷ್ಟು ದಿನ ನೀವು ತಾಕ್ತಿದ್ರಿ. ಇಂದು ...ಮ್ಮರುಳಿಗೆ ನೀವೇ ಸಿಕ್ಕಿಬಿದ್ರಿ...

ಸಾಕು ಬಿಡೇ, ನಿನ್ನ ನಂಜು. ಅಲ್ಲಾ, ...ರೊಡ್ನೆ ಮಾತಾಡೋದಂತ್ಲೂ ಗವನ ಬೇಡ್ವೆ ನಿಂಗೆ? ಅದೆಲ್ಲಾ ಹೋಗ್ಲಿಬಿಡು. ಏನಂದ್ನಂತೆ ಧರ್ಮರಾಯ?

ಸೋತೇಂತ ಒಪ್ಕೊಳ್ಳಿ....

ಎಲಾ ಇವಳ...ಪರ್ವಾಗಿಲ್ಲಾ ಕಣೇ ನೀನು. ನಿನ್ನಂತೆಯೇ ಎಲ್ಲಾ ಹೆಂಡಿರೂ ಗಂಡಂದಿರನ್ನ ಹೀಗೆ ಸತಾಯಿಸೋಕೆ ತೊಡಗಿದ್ರೆ ಗಂಡ ಹೊಂಡ ಕಂಡ ಅಂದ್ಹಾಗಾದೀತು....ಹೇಳೇ ಏನಂತೆ ಆವನಿಗೆ?

ಯಾರಿಗೆ .ಧರ್ಮರಾಯನಿಗೆ ತಾನೇ? ಸೋತೇಂತನ್ನಿ ಹೇಳ್ತೀನೆ.

ಅಂತೂ ನನ್ನ ಸೋಲಿಸ್ಬೇಕೂಂತ ಆಸೆ ಅಲ್ವೆ? ಆಗ್ಲಿ. ಹಾಗೂ ಹೇಳ್ತೆನೆ...

ಹೇಗೆ? ಹೇಳಿ ಮತ್ತೆ....

ಅಯ್ಯೋ, ಕಣ್ಮಣಿ, ನನ್ಗೊತ್ತಿಲ್ಲ, ಸೋತೆ, ಇನ್ನ ಸತಾಯಿಸ್ಬೇಡ.

ನೋಡಿ, ನಮಗೂ ನಿಮಗೂ ವೈಮನಸ್ಯವಿರ್ಬಹುದು; ಆದರೆ, ಪರಕೀರರ ಮುಂದೆ ನಾವು ಐವರಲ್ಲ. ನೀವು ನೂರ್ವರಲ್ಲ; ನಾವೆಲ್ಲ ಒಟ್ಟು ನೂರೈವರು ಎಂತ.

ಇಷ್ಟೇನೇಯೆ? ಇದ್ರಲ್ಲೇನಿದೆ ಮಹಾ? ಎಲ್ರಿಗೂ ಗೊತ್ತಿರೋದನ್ನ ಅವ್ನೂ ಹೇಳಿದಾನ್ನು...

ಅಬ್ಬಬ್ಬಾ, ಈಗ ಬಾಯ್ಬೀಲು ಮಾಡ್ತಾರೆ ಮತ್ತೆ. ಆಗ ಗೊತ್ತಿಲ್ಲಾಂತಿದ್ರು; ಈಗ....

ಸಾಕು ಬಾಯ್ಬಿಡಬೇಡ್ವೆ, ಈ ಮಾತು ಗೊತ್ತಿದೆಯೇಂತ ಕೇಳಿದ್ರೆ ಹೇಳ್ತಿದ್ದೆ.

ನಿಮ್ಮ ಗಂಡಸರ ಜಾತೀನೇ ಹಿಂಗೆ.

ಅಂದ ಹಾಗೆ,ಆವನಂದು ಹೇಳಿದ್ದು....

ಇಂದು ನಿಮ್ಮ ಟೋಪಿಯವರಿಗೆ ಸರಿ ಹೋಯ್ತು.

ಪರ್ವಾಗಿಲ್ಲಾ ಕಣೆ ನೀನು. ಎಷ್ಟಾದ್ರೂ ಗಿಡ ನೋಡಿ ಬಳ್ಳಿ ನೆಟ್ಟ ನಿನ್ನಪ್ಪನವ್ರ ನಿಜಕ್ಕೂ ಬುದ್ಧಿವಂತ್ರು ಕಣೆ...

ಶುರುವಾಯ್ತು ಇನ್ನು ಅವ್ಳ ಅಪ್ಪನ ವಂಶಾಟಕ್ಕೆ. ನಿಮ್ಮ ನಿಜಲಿಂಗಪ್ಪನವ್ರ ಬಗ್ಗೆ ಹೇಳಿ ಮತ್ತೆ....

ನೋಡು, ಅವಿಶ್ವಾಸ ಠರಾವು ಬಂದದ್ದೇ ತಡ, ಕಾಂಗ್ರೆಸಿಗರಲ್ಲಿ ಎಂತಹ ಬಲ ಮೂಡಿದೆ ಗೊತ್ತೇ ನಿನಗೆ?

ಈ ಹುಚ್ಚು ಬಲದಿಂದ್ಲೇ ತಾನೆ ಮತ್ತೆ ಕುರುಕ್ಷೇತ್ರ ಪ್ರಾರಂಭವಾಗೋದು...

ಕುರುಕ್ಷೇತ್ರವೋ ಮತ್ತೆ ತಿರುಕ್ಷೇತ್ರವೋ... ಈಗ್ಲೇ ಹೇಳೋಕ್ಕಾಗೋಲ್ಲಾಂದೆ.

ನೀವೇನೂ ಹೇಳ್ಬೇಡಿ ಮತ್ತೆ; ಕುರುಕ್ಷೇತ್ರವೇ ಆಗುತ್ತೆ.

ನೀನು ಜಾಣೆ ಕಣೇ. ಕಣಿ ಹೇಳಿದಾಗೆ ಅಂದುಬಿಟ್ಟೆಯಲ್ಲಾ! ಅಲ್ಲಾ ನಿನ್ನ ಕಿವಿಯಲ್ಲಿ ಆದಾವ ಯಕ್ಷಿಣಿ ದೇವಿಯು ಬಂದು ಹೇಳಿಹೋಯಿತೆ?

ಇದನ್ನೆಲ್ಲಾ ಹೇಳೋಕೆ ಯಾವ ಭವಿಷ್ಯಾನು ಬೇಡ. ಅನುಭವಾನೇ ಸಾಕು ಎಂದಿದ್ರಲ್ಲ ನೀವೇ ಮೊದಲು...

ಅದು ಹಂಯೆನ್ನು. ಆದ್ರೂ....

ನೋಡು ನಮ್ಮ ಸುಚೇತಾ ಕೃಪಲಾನಿಯಿದ್ದಾರಲ್ಲಾ....

ಓ...ಹೋ...ಹೋ.... ಇಷ್ಟು ಬೇಗ ಅವರು 'ನಮ್ಮ' ಆಗಿ ಹೋದ್ರೇನೋ? ಜಗತ್ತಿನ ಅಷ್ಟಮಾಶ್ಚರ್ಯವಿದು. ಅಲ್ಲ, ಈಗ ತಾನೇ ಟೋಪಿ, ಸರ್ಕಾರ ಟೋಪಿ ಸರಾರಾಂತ ದೂರೊಕ್ಕೊಂಡ್ಬಿಟ್ಟು ಈಗ ಏಕಾಏಕಿ ನಮ್ಮ ಸುಚೇತ ಆದೆಯಲ್ಲಾ? ಏನಂತೀಯ?

ಮತ್ತೇನು ಮಾಡೋದು? ನಿಮ್ಮವ್ರೆಲ್ಲಾ ಒಟ್ಸೇರಿ ಅವರಿಗೂ ಟೋಪಿಯಿಟ್ಟಿರೋವಾಗ....

ಅಂತೂ ತಪ್ಪು ನಮ್ಮದು; ಟೋಪಿ ಇಡುವವರಂತೂ ಇಲ್ಲಿ ಬಿಡು; ಇಡಿಸೋದವರಾದ್ರೂ....

ಅದೇ ನೋಡಿ ಕುರುಕ್ಷೇತ್ರ ನಡೆದ ಮೇಲೆ ಏನಾದರೂ ಸ್ವಲ್ಪ ಶಾಂತಿಯಾಗ್ಲೀಂತೆ ಬಯಸಿಯೇ ತಾನೇ ಶ್ರೀಕೃಷ್ಣ ಚಕ್ರ ಹಿಡ್ದದ್ದು...

ಶಾಂತಿಯೋ ಕ್ರಾಂತಿಯೋ ನಾನೇನೂ ಅರಿಯೆ. ಆದ್ರೆ ಸದ್ಯ ನಿನ್ನ ಕೃಪಲಾನಿಯವರು ಹೇಗೆ ಗೆದ್ದು ಬರ್ತಾರೇಂತ ಕಾಯ್ಬೇಕು.

ನೋಡಿ ಮತ್ತೆ ನಿಮ್ಮ ನಿಜಲಿಂಗಪ್ಪನವರ ಮೇಲೆ ಬಂದ ಅವಿಶ್ವಾಸ....

ಹೋಗು ಬಿಡೇ. ಮಂತ್ರಿಯೊಬ್ಬರೇ ಅಂದಿದ್ರಲ್ಲಾ ಶ್ವಾನ ಬೊಗಳಿದರೆ ಆನೆ ಕಾಣಿಸಿಕೊಳ್ಳುವುದೆ? ಮತ್ತು ಒಬ್ಬ ಸದಸ್ಯರಂದಿದ್ರು ನೋಡಿ: ಪುಟಿದೆದ್ದು ಎದ್ದು ನಿಲ್ಲಲಿ; ಇಲ್ಲವಾದ್ರೆ ಬಿದ್ದು ಹೋಗಲೀಂತ.

ಅದಕ್ಕೇನಂತೆ ಸದ್ಯ ಈ ಧೈರ್ಯವಿರುವುದರಿಂದಲೇ ನಿಮ್ಮ ಟೋಪಿಯವ್ರು ಕಾರ್ಬಾರು ನಡಸ್ತಾರೆ.

ಏನೂಂತನ್ನೋದು ನೀನು? ಅದೂ ಇರ್ಬಹುದೂಂತ್ಲೆ?

ಇಲ್ಲ ಬಿಡಿ. ನಮಗೇನಂತೆ? ಅವ್ರು ನಮ್ಮ ಚಿಂತೆ ಯಾರು ಕೇಳ್ತಾರೆ: ಯಾರದರ ರಾದರೇನಂತೆ, ಬೇಳು ನಮಗೇನದರ ಚಿಂತೆ ಯೆಂದು ಒಬ್ಬ ಕವಿ ಹಾಡಿದನಂತೆ.

ಪಾಪ, ಯಾರೋ ಬಹು ದೀನಹೀನ ಕರುಣಾಪಾತ್ರ ದರಿದ್ರ ಕವಿಯಿರಬೇಕು. ಆದ್ರೆ ನೀನು ಈಗ್ಲೆ ಹೀಗೆಲ್ಲಾ ಹಾಡ್ಬಿಟ್ಟೆ.

ಏನೂಂತ?

ಅಲ್ಲ ಯಾವ ದುಃಖಾನೂ ಇಲ್ದೆ ಇರೋ ನೀನೇ ಇಷ್ಟು ನಿರಾಶಳಾದರೆ, ಇನ್ನು ನಾನು? ನಮ್ಮ ನಾಯಕರು?

ಅಂದ್ರೆ ನಿಮ್ಮ ಮೇಲೂ ಅವಿಶ್ವಾಸ ಗೊತ್ತುವಳಿ ಇಡಬೇಕೆ?

ಇಡು ಬಿಡು. ಲೋಕನಾಯಕ ನೆಹರೂರವರನ್ನೂ ಅದು ಬಿಡ್ಲಿಲ್ಲಾಂದ್ಮೇಲೆ; ನನ್ನದೇನು ಮಹಾ...

ಓಹೋ, ಸರಿ, ಸರಿ. ಹಾಗಾದ್ರೆ ಖಂಡಿತಕ್ಕೂ ಇಡೋಲ್ಲ.

ಯಾಕೆ? ಇಟ್ಬಿಡಲ್ಲ ಮತ್ತೆ.

ಮಹಾರಾಜರು ನೀವು. ನೆಹರು ಮತ್ತು ನಿಮ್ಮ ಯೋಗ್ಯತೆ ಸಮಾನೆ ಅಲ್ವೆ? ಅಬ್ಬಾ ನಿಮ್ಮ ಸೊಕ್ಕೆ?

ಸೊಕ್ಕು! ಯಾರಿಗೆ ನನ್ಗೆ? ಖಂಡಿತಕ್ಕೂ ಇಲ್ಲ. ಸದ್ಯ ಇದ್ರೆ ಅದು ದ್ವಾರಕಾ ಪ್ರಸಾದ ಮಿಶ್ರರಿಗೆ.

ಯಾರಂದ್ರೆ ಅವ್ರು?

ಅದೇ ಮಧ್ಯಪ್ರದೇಶದ ಮುಖ್ಯಮಂತ್ರಿ.

ಯಾಕೆ ಹಾಗಂತೀರ, ಏನು ಕಥೆ?

ಪಾಪ, ಅವರು ಸುಮುಹೂರ್ತದಲ್ಲಿ ಅಧಿಕಾರ ಪಡೆದರು ನಿಜ. ಆದರೆ, ಅವರ ನಿವಾಸ ಮಾರಿಯ ಗುಡಿಯಂತೆ.

(ಆನೇ ಪುಟ ನೋಡಿರಿ)

ನಮ್ಮ ಗ್ರಾಹಕರಿಗೆ ಇನ್ನೂ ಹೆಚ್ಚಿನ ಸೌಲಭ್ಯ

ದಿನಕ್ಕೆ ಒಂದು ಬಾರಿ 10,000 ರೂಪಾಯಿಗಳ ವರೆಗೆ ಮೇಲ್ ಟ್ರಾನ್ಸ್‌ಫರ್ ಮಾಡಲು ತಗಲುವ ವೆಚ್ಚ ಉಚಿತ

ಈ ಸೌಲಭ್ಯ ನಮ್ಮ ಕರೆಂಟ್ ಅಕೌಂಟ್ ದಾರರಿಗೆಲ್ಲಾ ಉಂಟು.

ಎಷ್ಟೇ ಹಣಕ್ಕಾದರೂ ನಮ್ಮ ಯಾವುದೇ ಶಾಖೆಯ ಚೆಕ್ಕುಗಳಿಗೆ ಖರ್ಚಿಲ್ಲದೆ, ಚೆಕ್ಕಿನಲ್ಲಿ ನಮೂದಿಸಿದ ಪೂರ್ತಾ ಹಣಕ್ಕೆ ಪಾವತಿಯನ್ನು ಪಡೆಯಬಹುದು.

ಈ ಸೌಲಭ್ಯ ನಮ್ಮ ಸೇವಿಂಗ್ಸ್ ಬ್ಯಾಂಕ್ ಖಾತೆ ಮತ್ತು ಕರೆಂಟ್ ಅಕೌಂಟ್ ದಾರರಿಗೆಲ್ಲಾ ಉಂಟು.

ಇಂದೇ ನಿಮ್ಮ ಖಾತೆಯನ್ನು ನಮ್ಮ ಶಾಖೆಯಲ್ಲಿ ತೆರೆಯಿರಿ.

ಹೆಚ್ಚಿನ ವಿವರಗಳನ್ನು ನಿಮ್ಮ ಸಮೀಪದ ಶಾಖೆಯಲ್ಲಿ ಪಡೆಯಿರಿ.

ಕೆನರಾ ಬ್ಯಾಂಕ್ ಲಿ.

ಸಮಗ್ರ ಸೇವೆ ಸ್ಥಾಪನೆ 1906 ಶ್ರೀ ಸಂಪೂರ್ಣ ಭದ್ರತೆ

ರಿಜಿಸ್ಟರ್ಡ್ ಆಫೀಸ್ : ಮಂಗಳೂರು ಆಡಳಿತ ಕಛೇರಿ : ಬೆಂಗಳೂರು

ವರ್ಕಿಂಗ್ ಫಂಡ್ಸ್ ರೂ. 55 ಕೋಟಿಗೂ ಮೀರಿದೆ

ಏಶಿಯಾದಲ್ಲಿ ಏಕನಾಯಕತನ

ಅರಬ ರಾಜ್ಯಗಳ ಪ್ರಯೋಗಶಾಲೆ

ಭಾರತಕ್ಕೆ ಪಶ್ಚಿಮದಲ್ಲಿರುವ ಹೆಚ್ಚಿನ ದೇಶಗಳು ಅರಬ ಜನಾಂಗಕ್ಕೆ ಸೇರಿದವುಗಳು. ಅಫಘಾನಿಸ್ಥಾನವು ರಾಜ ತಂತ್ರ. ಅಲ್ಲಿನ ರಾಜ ಜಹೀದರು ಪ್ರಗತಿಶೀಲ ವಿಚಾರದ ಚತುರ ರಾಜನಾಯಕರು. ಸೇನೆಯು ರಾಜರೊಡನೆ ವಿಶ್ವಾಸದಿಂದ ವರ್ತಿಸುತ್ತಿದೆ. ಪಖ್ತೂನಿಸ್ಥಾನ ರಚನೆಯ ಪ್ರಶ್ನೆಯ ಮೇಲೆ ಪಾಕಿಸ್ತಾನದೊಡನೆ ಹೋರಾಡುವ ರಾಜರ ನಿಲುವಿಗೆ ಸೇನೆಯ ಸಹಾಯವೂ ಇದೆ. ರಶ್ಯದಿಂದ ಹಣಕಾಸಿನ ನೆರವನ್ನು ತೆಗೆದುಕೊಳ್ಳುವ ಸಾಹಸವನ್ನು ಈ ಬಲದಿಂದಲೇ ರಾಜರು ಕೈಗೊಂಡಿದ್ದಾರೆ.

ಇರಾನ ಇಲ್ಲವೇ ಪರ್ಸಿಯಾದ ಸೇನೆಯೂ ಅಲ್ಲಿನ ರಾಜ ರಜಾಶಹ ಪಹಲವೀಯವರೊಡನೆ ಕೂಡಿಕೊಂಡೇ ನಡೆಯುತ್ತಿದೆ. ಆದರೆ, ಇರಾನವು ಸೆಂಟೋ ಒಡಂಬಡಿಕೆಯ ರಾಷ್ಟ್ರ. ಎಣ್ಣೆ ಕಂಪನಿಗಳು, ಜಮೀಂದಾರರು, ಮತ್ತು ಸೇನಾಪತಿಗಳು ಇರಾಣದ ರಾಜನೀತಿಯ ಮೇಲೆ ಸಾಕಷ್ಟು ಪ್ರಭಾವ ಬೀರುವ ಸ್ಥಾನದಲ್ಲಿದ್ದಾರೆ. ಡಾ। ಮುಸಾದಿಕರು ದೇಶವನ್ನು ಸಾಮಂತವಾದ ಮತ್ತು ಎಣ್ಣೆ ಕಂಪನಿಗಳ ಕಪಿಮುಷ್ಟಿಯಿಂದ ಮುಕ್ತಗೊಳಿಸುವ ಪ್ರಯತ್ನ ನಡೆಸಿದರು. ಇದರ ಪರಿಣಾಮವಾಗಿ ಅವರು ರಾಜರ ವಕ್ರದೃಷ್ಟಿಗೆ ಬಿದ್ದರು. ಇಲ್ಲಿನ ಸೇನೆಯು ಅಮೆರಿಕೆಗೆ ಮಾರಿಹೋಗಿದೆ ಎಂದರೆ ಅತಿಶಯೋಕ್ತಿಯಲ್ಲ. ಇದರ ಬಲದಿಂದಲೇ ರಾಜರು ಪ್ರಧಾನ ಮಂತ್ರಿಯವರನ್ನು ಕಾರಾಗೃಹಕ್ಕೆ ಕಳಿಸಿದರು. ಪ್ರಜಾತಂತ್ರಕ್ಕೆ ದೀರ್ಘ ಕಾಲಾವಧಿಯ ವಿರಾಮ ನೀಡಿದರು.

ತುರ್ಕಿಯ ಕಥೆಯಾದರೂ ಇದಕ್ಕಿಂತ ಭಿನ್ನವಾಗಿಲ್ಲ. ನಿಜವಾದ ಪ್ರಜಾತಂತ್ರವು ಇಲ್ಲಿ ಪ್ರವೇಶ ಮಾಡಿದ್ದೇ ಇಲ್ಲ. ಖಲೀಫರನ್ನು ಗದ್ದುಗೆಯಿಂದಿಳಿಸಿದ ಕಮಾಲಿ ಅತಾತುರ್ಕರು ಒಬ್ಬ ಸೈನಿಕಾಧಿಕಾರಿಯಾಗಿದ್ದರು. ಸೇನಾಶಕ್ತಿಯ ಬಲದಿಂದಲೇ ಅತಾತುರ್ಕರು ಆಡಳಿತೆಯನ್ನು ನಡೆಸಿದರು. ದ್ವಿತೀಯ ಜಾಗತಿಕ ಸಮರದ ನಂತರ ರಾಷ್ಟ್ರಪತಿ ಸೇಲಾಲ ಬಯಾರ್ ಮತ್ತು ಪ್ರಧಾನ ಮಂತ್ರಿ ಮೆಂದರೇಜರು ಜತೆಯಾಗಿಯೇ ಇಲ್ಲಿ ಸರ್ವಾಧಿಕಾರ ನಡೆಸಿದರು. ಇವರಿಗೆ ಅಮೆರಿಕೆಯು ಹಿಂದಿನಿಂದ ಸಹಾಯವನ್ನೂ ಮಾಡಿತ್ತು. ೧೯೬೦ರಲ್ಲಿ ಸೇನಾ ಬಂಡಾಯವೆದ್ದಿತು; ಮುದಿ ಬಯಾರರನ್ನು ಜೇಲಿಗಟ್ಟಲಾಯಿತು. ಮೆಂದರೇಜರು ಗಲ್ಲಿಗೇರಿಸಲ್ಪಟ್ಟರು. ಜನರಲ್ ಗರ್ಸೆಲರು ರಾಷ್ಟ್ರಪತಿಯೆನಿಸಿದರು. ಆದರೆ, ಸೆಂಟೊ ಸಂಬಂಧವನ್ನು ಕಡಿದುಕೊಳ್ಳಲಿಲ್ಲ; ಪ್ರಜಾತಂತ್ರದಲ್ಲಿ ಮತ್ತೆ ಶೋಧನೆಯೂ ನಡೆಯಲಿಲ್ಲ

ಏಶ್ಯದಲ್ಲಿನ ಅರಬ ರಾಜ್ಯಗಳ ಇತಿಹಾಸದ ಮೇಲೆ ತಾ. ೨೯-೮-೬೩ರ ಸಂಚಿಕೆಯಲ್ಲಿ ದೃಷ್ಟಿ ಹರಿಸಿದ್ದೇವೆ. ಪ್ರಥಮ ಮಹಾಯುದ್ಧದ ವರೆಗೆ ತುರ್ಕಿಯ ಖಲೀಫರ ಪಾದಗಳಡಿ ದಮನಗೊಂಡ ಬಳಿಕ ಇವುಗಳಲ್ಲಿ ಹಲವು ದೇಶಗಳು ವಿಶ್ವಸ್ಥ ಪ್ರದೇಶಗಳ ರೂಪದಲ್ಲಿ ಇಂಗ್ಲಿಷರು ಮತ್ತು ಫ್ರೆಂಚರ ಅಧೀನಕ್ಕೆ ಬಂದುವು. ಇರಾಕ ಮತ್ತು ಜೋರ್ಡಾನಗಳಲ್ಲಿ ಹೊಸ ರಾಜಮನೆತನಗಳು ಸ್ಥಾಪನೆಗೊಂಡವು. ಕೊನೆಗೆ ಸ್ವಾತಂತ್ರ್ಯವೂ ಲಭಿಸಿತು. ಹಾಗಿದ್ದರೂ ಪ್ರಜಾತಂತ್ರವು ತಲೆಯೆತ್ತುವುದಕ್ಕೂ ಇಲ್ಲಿ ಅವಕಾಶ ದೊರೆಯಲಿಲ್ಲವೆನ್ನುವಾಗ ಅದು ಬೆಳೆಯುವ ಮಾತೆಲ್ಲಿ ಉಳಿಯಿತು.

ಇಂದಿಗಾದರೂ ಸಂಪೂರ್ಣ ಅರಬ ಪರ್ಯಾಯ ದ್ವೀಪವು ಎಣ್ಣೆ ಕಂಪನಿಗಳೊಡೆಯರು, ಶೇಖರು ಮತ್ತು ನಿರಂಕುಶ ರಾಜರ ಮುಷ್ಟಿಯೊಳಗಿದೆ. ಕಳೆದ ವರ್ಷ ಯಮನದಲ್ಲಿ ರಾಜ್ಯ ವಿಪ್ಲವ ನಡೆಯಿತು; ಜನರಲ್ ಸೆಲಾಲರ ನೇತೃತ್ವದಲ್ಲಿ ಸೈನಿಕ ಶಾಸನವು ಪ್ರಾರಂಭವಾಯ್ತು. ಉಳಿದೆಡೆಗಳಲ್ಲಿ ಸೇನಾಡಳಿತೆಗೂ ಭಯಾನಕವಾದ ಸರ್ವಾಧಿಕಾರವು ಬಲಿಯುತ್ತಿದೆ.

ಇರಾಕದಲ್ಲಿ ೧೯೫೮ರಲ್ಲಿ ರಾಜತಂತ್ರವು ಕೊನೆಗೊಂಡಿತು. ಆದರೆ, ಜನರಲ್ ಕಾಸೀಮರು ಮೆಲ್ಲಮೆಲ್ಲನೆ ತನ್ನ ಏಕನಾಯಕತನವನ್ನು ಜಮಾಯಿಸಿದರು. ಆರು ತಿಂಗಳುಗಳಿಗೆ ಮೊದಲು ಸಂಭವಿಸಿದ ಗಲಭೆಯಲ್ಲಿ ಕಾಸಿಮರು ಕೊನೆಗಾಣಬೇಕಾಯಿತು; ಆದರೇನು? ಆರೀಫರ ನೇತೃತ್ವದಲ್ಲಿ ಸೈನಿಕ ಶಾಸನವು ಮರಳಿ ಪ್ರಾರಂಭವಾಯ್ತು.

ಜೋರ್ಡಾನಿನ ರಾಜ ಹುಸೇನರು ಇದ್ದವರಲ್ಲಿ ಭಾಗ್ಯಶಾಲಿಗಳು ಸೇನೆಯು ಅವರ ವಿಶ್ವಾಸಕ್ಕೆ ಪಾತ್ರವಾಗಿದೆ; ಆಂಗ್ಲೇಯರ ಸಹಾಯವೂ ಸದಾಸಿದ್ಧವಿದೆಯವರಿಗೆ. ಆದರೆ, ಅರಬ ರಾಷ್ಟ್ರವಾದದ ಬಿರುಗಾಳಿ ಎಂದವರನ್ನು ಪದಚ್ಯುತಗೊಳಿಸುವುದೆಂದು ಹೇಳಬರುವುದಿಲ್ಲ.

ಸಿರಿಯಾದಲ್ಲಿ ಋತು ಪರಿವರ್ತನೆಯೊಂದಿಗೆ ಸರಕಾರವೂ ಬೇರೆಯಾಗುತ್ತ ಬರುವಂತಿದೆ. ಮಹಾಯುದ್ಧಾನಂತರ ಸೇನೆಯು ಆಡಳಿತ ಹಿಡಿದುಕೊಂಡಿತು. ಮುಂದೆ ಅರಬ ರಾಷ್ಟ್ರವಾದ ಮತ್ತು ಬಾಥ್ ಸಮಾಜವಾದಗಳು ಅದನ್ನ ಬಿಗಿಯತೊಡಗಿದವು. ಹೀಗಿದ್ದರೂ ಅಲ್ಲಿ ಸ್ಥಾಯಿ ಸರಕಾರ ನಿರ್ಮಾಣವಾಗುವುದಿಲ್ಲ; ಪ್ರಜಾತಂತ್ರವು ತನ್ನ ಬೇರು ಹರಡಿಸುವುದಕ್ಕೂ ಅವಕಾಶ ದೊರೆಯುತ್ತಿಲ್ಲ.

ಪಶ್ಚಿಮ ಏಶ್ಯಾದಲ್ಲಿ ಲೆಬನಾನ್ ಸರ್ವಾಧಿಕ ಸಂಪನ್ನ ಮತ್ತು ಜಾಗ್ರತ ರಾಷ್ಟ್ರ. ಅಲ್ಲಿ ಕ್ರೈಸ್ತ-ಮುಸ್ಲಿಮರ ನಡುವೆ ದೀರ್ಘ ಹೋರಾಟ ನಡೆದ ಮೇಲೆ ಸೇನೆಯ ಒಬ್ಬ ಜನರಲ್ ರಾಷ್ಟ್ರಪತಿಯೆಂದು ನಿಯುಕ್ತರಾದರು. ಆದುದರಿಂದ ಅಲ್ಲಿರುವುದು ಶುದ್ಧ ಪ್ರಜಾಸತ್ತೆಯೆನ್ನುವುದು ಸಾಧ್ಯವಿಲ್ಲವಾದರೂ ಅಲ್ಲಿನದು ಸೈನಿಕ ಶಾಸನವೂ ಅಲ್ಲ.

ಶುದ್ಧ ಪ್ರಜಾತಂತ್ರವು ಪಶ್ಚಿಮ ಏಶ್ಯದಲ್ಲಿರುವುದಾದರೆ, ಕೇವಲ ಇಸ್ರಾಯೇಲ್‌ನಲ್ಲಿ ಮಾತ್ರ. ಆರ್ಥಿಕ ವಿಕಾಸದಲ್ಲಿ ಅತ್ಯಂತ ವಿಸ್ಮಯಕಾರಿ ಉದಾಹರಣೆಯನ್ನದು ಮುಂದಿಟ್ಟಿದೆ.

ವಸ್ತುತಃ ಇಡಿಯ ಪಶ್ಚಿಮ ಏಶ್ಯದ ರಾಜನೀತಿಯು ಅರಬ ರಾಷ್ಟ್ರವಾದ, ಯೆಹೂದಿ ಸಮಸ್ಯೆ ಮತ್ತು ಪೆಟ್ರೋಲುಗಳ ತತ್ವಗಳ ಮೇಲೆ ನಿಂತಿದೆ. ಸಮಾಜವಾದವಿಲ್ಲಿ ಅವಶ್ಯ ಚೆಂತು ಪ್ರವೇಶ ಮಾಡಿದೆ; ಆದರೆ, ಅದು ಪ್ರಜಾತಂತ್ರದ ತತ್ವಗಳೊಡನೆ ಹೊಂದಿಕೊಂಡು ನಡೆಯುತ್ತಿಲ್ಲ.

ಏಶ್ಯನ್ ರಾಷ್ಟ್ರಗಳ ಸಂಬಂಧದಲ್ಲಿ ಇಷ್ಟೆಲ್ಲವನ್ನೂ ತಿಳಿದುಕೊಂಡ ಮೇಲೆ ಹಲವಾರು ಪ್ರಶ್ನೆಗಳೇಳುವುದು ಸಹಜ. ಏಶ್ಯದ ಹವಾಮಾನವು ಪ್ರಜಾತಂತ್ರಕ್ಕೆ ಪ್ರತಿಕೂಲವಾಗಿದೆಯೆ? ಭಾರತ, ಸಿಂಹಳ, ಮಲಯಾ ಮತ್ತು ಜಪಾನಗಳಲ್ಲಿ ಪ್ರಜಾತಂತ್ರವು ತನ್ನ ಆಂತರಿಕ ಶಕ್ತಿಯಿಂದಾಗಿ ನಿಂತಿದೆಯೆ ಅಥವಾ ಕೇವಲ ಪರಿಸ್ಥಿತಿಯ ಒತ್ತಡದಿಂದಾಗಿಯೆ? ಸ್ವಾತಂತ್ರ್ಯದ ನವೋತ್ಸಾಹವು ಇಳಿದ ಬಳಿಕ ಈ ದೇಶಗಳು 'ಯಾರರಸರಾದರೇನಂತೆ? ನಮಗೇಕೆ ಬೇಕದರ ಚಿಂತೆ?' ಎಂಬ ಮನೋವೃತ್ತಿಯನ್ನು ತಳೆಯುವುವೆ? ಪ್ರಜಾತಂತ್ರ ರಥದಿಂದುರುಳಿದ ಏಶ್ಯನ್ ದೇಶಗಳು ಮರಳಿ ರಥಾರೋಹಣಗೆಯ್ಯುವ ಸಾಹಸ ಮಾಡಿಯಾವೆ, ಮತ್ತದರಲ್ಲಿ ಯಶಸ್ವಿಯಾದಾವೆ?—ಈಯೆಲ್ಲ ಪ್ರಶ್ನೆಗಳಿಗೆ ನಾವೇ ಉತ್ತರವರಸಿಕೊಳ್ಳಬೇಕಾಗಿದೆ.

ಯಾವುದೇ ಒಂದು ಪ್ರಜಾತಂತ್ರವು ಸಫಲವಾಗಬೇಕಾದರೆ, ಕೆಲವೊಂದು ಆವಶ್ಯಕತೆಗಳಿವೆ; ಪ್ರಜೆಗಳಲ್ಲಿ ರಾಜನೈತಿಕ ಮತ್ತು ನೈತಿಕ ಜಾಗ್ರತಿ; ಜೀವನ ಮಟ್ಟವನ್ನು ಎತ್ತರಿಸಲು ನೈಜ ಮತ್ತು ಸಫಲ ಪ್ರಯತ್ನ, ಎಲ್ಲ ಧರ್ಮ, ಜಾತಿ ಮತ್ತು ಭಾಷೆಗಳ ಜನರಿಗೆ ಸಮಾನಾಧಿಕಾರ ಪ್ರಾಪ್ತಿ; ನಿಶ್ಚಿತ ಆರ್ಥಿಕ ಸಾಮಾಜಿಕ ಕಾರ್ಯಕ್ರಮವಿರುವ ಎರಡು ಮೂರು ಸುಸಂಘಟಿತ ರಾಜಕೀಯ ಪಕ್ಷಗಳು ಮತ್ತು ಇವುಗಳ ಮೂಲಕ ರಾಜನೈತಿಕ ಶಿಷ್ಟಾಚಾರದ ಪಾಲನೆ; ನಿಸ್ವಾರ್ಥ ಮತ್ತು ಅಧಿಕಾರದಲ್ಲಿ ಅನಾಸಕ್ತರಾದ ರಾಷ್ಟ್ರ ಸೂತ್ರಧಾರಿಗಳು; ಸಿದ್ಧಾಂತ ಮತ್ತು ಜನಹಿತಾಸಕ್ತರಾದ ಅಧಿಕಾರಿಗಳು, ನಾಗರಿಕ ಶಾಸನದಲ್ಲಿ ಸೇನೆಗೆ ವಿಶ್ವಾಸ, ಕಾರ್ಯದಕ್ಷತೆಯಿರುವ ಅಧಿಕಾರ ಯಂತ್ರ; ಅಧಿಕಾರ ಸಂಪನ್ನರ ಕರ್ತವ್ಯನಿಷ್ಠೆ; ಲಂಚ ರುಷುವತ್ತುಗಳ ನಿರ್ಮೂಲನೆ, ನಿಷ್ಪಕ್ಷಪಾತಿ ಸಮರ್ಥ ನ್ಯಾಯಾಲಯ; ವಿದೇಶೀ ಹಸ್ತಕ್ಷೇಪದ ಅಭಾವ; ಇವೆಲ್ಲಕ್ಕೂ ಮಿಗಿಲಾಗಿ ಇಡಿಯ ರಾಷ್ಟ್ರದ ಐಕ್ಯದಲ್ಲಿ ಆಸಕ್ತಿ.

ಈ ತತ್ವಗಳನ್ನು ಬೆಳೆಸಿಕೊಂಡು ಮತ್ತು ಉಳಿಸಿಕೊಂಡು ಬರುವಲ್ಲಿ ನಾವು ಮಾಡುವ ಪ್ರಯತ್ನವನ್ನೇ ಅವಲಂಬಿಸಿದೆ ನಮ್ಮ ಭಾರತೀಯ ಪ್ರಜಾತಂತ್ರದ ಭವಿಷ್ಯ.

(ಮುಗಿದುದು)

ಪುತ್ತೂರು ಡಿ. ಮುನ್ಸಿಫ ಕೋರ್ಟಿನಲ್ಲಿ

O. S. 277/1963

ಅನಿರುದ್ಧ ಭಟ್ಟ — ವಾದಿ

ರಾಮಚಂದ್ರ ಭಟ್ಟ ಕೂಡಾ—ಪ್ರತಿವಾದಿರು.

1. ರಾಮಚಂದ್ರ ಭಟ್ಟ, 3 ರಂಗನಾಥ ಭಟ್ಟ } ಬಲ್ಲಾಳ ಪದ್ಮನಾಭ ಭಟ್ಟರ ಮಕ್ಕಳು

1ನೆ ಪ್ರತಿವಾದಿ, ಬೆಳ್ತಂಗಡಿ ತಾಲ್ಲೂ, ಕಲ್ಮಂಜ ಗ್ರಾಮದ ಕುಡೆಂಚಿಗುಳಿ ಗದ್ದೆ ಎಂಬಲ್ಲಿ — 3ನೆ ಪ್ರತಿವಾದಿ, ಮೂಡುಗೆರೆ ತಾಲ್ಲೂ, ಮೇಗೂರು ಎಂಬಲ್ಲಿ— Post ವಾಸ.

1 — 3ನೆ ಪ್ರತಿವಾದಿರಿಗೆ

ವಾದಿಯು ದಾವಾ ಆಸ್ತಿಯ ½ ಅಂಶದ ಪಾಲಿಗೆ ಮಾಡಿದ ದಾವೆಯಲ್ಲಿ 1—3ನೆ ಪ್ರತಿವಾದಿರಿಗೆ ಕೈಪೀತು ನೋಟೀಸಿನ ವ್ಯಾದೆ ತಾ. 28-10-1963ಕ್ಕೆ ಇಟ್ಟಿರುವುದರಿಂದ ಪ್ರತಿವಾದಿರು ಆ ವ್ಯಾದೆ ದಿನ ತಮ್ಮ ಆಕ್ಷೇಪಗಳೇನಾದರೂ ಹೇಳುವದಿದ್ದರೆ 11 ಘಂಟೆಗೆ ಹಾಜರ್ಾಗತಕ್ಕದ್ದು. ಇದಕ್ಕೆ ತಪ್ಪಿದರೆ ಪ್ರತಿವಾದಿರನ್ನು ಶಿವಾಯ ಎಂತ ಮಾಡಿ ಮುಂದಿನ ತಕ್ಷಿಯಿಂದ ಈ ದಾವೆಯು ತೀರ್ಮಾನಿಸೋಣಾಗುತ್ತದೆ ಎಂತ ಈ ಕೋರ್ಟು ಹುಕುಂ ಪ್ರಕಾರ ಈ ನೋಟೀಸು ಮಾಡಿಯದೆ.

(Sd) B Ramachandra Rao,
M. A , B. L ,
Pleadei for Plaintiff.

Puttur, S. K,
ತಾ. 9.10-62.

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ........
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ

1—1—1963ರಿಂದ ಠೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ

ನಿಮ್ಮ ಉಳಿತಾಯವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.
ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, **ಮಂಗಳೂರು—3.**

• ಕುಮಾರಿ ಬಿಲ್ಲೆಗಳು •

(ರಿಜಿಸ್ಟರ್ಡ್ Regd.)
ಪ್ರಕೃತಿಯು ವಿಫಲಗೊಂಡಾಗ ಉಂಟಾಗುವ ಕಾತರ ನಿವಾರಣೆಗೆ
ಸಮಯೋಚಿತವಾದ ಆಯುರ್ವೇದೀಯ ಮಿಶ್ರಣ!
ಟ್ಯೂಬ್ 1ರ ಸಾಮಾನ್ಯ ರೂ. 4/. ಮಧ್ಯಮ ರೂ. 6/
ಉತ್ತಮ ರೂ. 9/.

P. Devee & Co. (N. J.) Calcutta—40.

ಸ್ಟಾಕಿಸ್ಟರು — ರಾಜಾ ಮೆಡಿಕಲ್ ಹಾಲ್, ಬೆಂಗಳೂರು ಕೆಂಟೋನ್ಮೆಂಟ್;
ಕುಮ್ಟಾ ಫಾರ್ಮಸಿ, ಕುಮ್ಟಾ (ಉ. ಕ.)

ಸಂರಕ್ಷಣಾ ಕಾರ್ಯದಲ್ಲಿ

ವೈಮಾನಿಕ ವೀಕ್ಷಣಾ ಠಾಣೆಗಳು

ಶತ್ರುಗಳಿಗೆ ಸುಳಿವು ಹತ್ತದಂತಹ ಬಣ್ಣವನ್ನು ಲೇಪಿಸಲಾದ ಆಸ್ಟರ್ ವಿಮಾನವೊಂದು ಮರಗಳ ತುದಿಗಳಿಗೆ ತಗಲಿಯೂ ತಗಲದಂತೆ ಹಾರಿಬಂದು ಮುಂಚೂಣಿ ಪ್ರದೇಶದಲ್ಲಿನ ವಿಮಾನ ನಿಲ್ದಾಣವೊಂದರಲ್ಲಿ ಇಳಿಯಲು ಯತ್ನಿಸುತ್ತದೆ. ಕ್ರಿಕೆಟ್ ಆಟದ ಬಯಲಿನಷ್ಟು ದೊಡ್ಡದಾಗಿರಬಹುದಾದ ಈ ನಿಲ್ದಾಣ, ಅಸ್ಸಾಮಿನ ನಿಬಿಡವಾದ ಅರಣ್ಯದಲ್ಲಿದೆ. ವಿಮಾನವು ಶೀಘ್ರವಾಗಿ ಕೆಳಗಿಳಿಯುವುದಕ್ಕಾಗಿ ನಿಲ್ದಾಣದ ಮೇಲೆ ಒಂದು ಸಲ ಸುತ್ತು ಹಾರುತ್ತದೆ. ಅನಂತರ ನಿಲ್ದಾಣದ ಕೊನೆಯ ಅಂಚಿನಲ್ಲಿ ಭೂಸ್ಪರ್ಶಮಾಡಿ ನಿಲ್ದಾಣದ ಮಧ್ಯ ಭಾಗದ ವರೆಗೂ ಹೋಗಿ ನಿಲ್ಲುತ್ತದೆ. ನಿಂತ ಬಳಿಕ ಅದರಿಂದ ಓರ್ವ ವಿಮಾನ ಚಾಲಕರು ಕೆಳಗಿಳಿದು ಬರುತ್ತಾರೆ.

ವಿಮಾನ ಚಾಲಕರ ಎದೆಯ ಮೇಲೆ ಹೊಂಬಣ್ಣದ ಮತ್ತು ನೀಲಿ ಬಣ್ಣದ ರೆಕ್ಕೆಗಳಿವೆ (ವಿಂಗ್ಸ್) ಈ ಬಣ್ಣಗಳು ವಿಮಾನ ಚಾಲಕನ ಸ್ಥಾನಮಾನಗಳನ್ನು ಸೂಚಿಸುತ್ತವೆ. ಅವರು ವಾಯು ಸೇನೆಯಲ್ಲಿ ಆಳವಾದ ತರಬೇತಿ ಪಡೆದ ವೈಮಾನಿಕ ನಿರೀಕ್ಷಣಾ ಠಾಣ್ಯದ ಅಧಿಕಾರಿಗಳಾಗಿದ್ದು, ಶತ್ರುವಿನ ವಿಮಾನಕ್ಕೆ ಗುಂಡಿಕ್ಕುವ ಕಾರ್ಯದಲ್ಲಿ ನೆರವಾಗುವುದೇ ಅವರ ಮುಖ್ಯ ಕರ್ತವ್ಯವಾಗಿದೆ.

ವೈಮಾನಿಕ ವೀಕ್ಷಣಾ ಠಾಣ್ಯೆಯು ಫಿರಂಗಿದಳದ ಒಂದು ವಿಶಿಷ್ಟ ಶಾಖೆಯಾಗಿದೆ. ಈ ಶಾಖೆಯು ತನ್ನ ಕಾರ್ಯಗಳಿಗಾಗಿ ಹಗುರಾದ ವಿಮಾನಗಳನ್ನು ಬಳಸುತ್ತದೆ. ವಿಮಾನ ನಿರೋಧಕ ಫಿರಂಗಿ ದಳದ ಗುರಿ ಸರಿಯಾಗಿದೆಯೋ ಇಲ್ಲವೋ ಎಂಬುದನ್ನು ಕಂಡುಹಿಡಿದು ತಿಳಿಸುವುದು ಹಾಗೂ ಈ ಸಂಬಂಧದಲ್ಲಿ ಅಗತ್ಯವಾದ ನಿರ್ದೇಶನಗಳನ್ನು ನೀಡುವುದು ಶಾಖೆಯ ಮುಖ್ಯ ಕೆಲಸ.

ವೈಮಾನಿಕ ವೀಕ್ಷಣಾ ಠಾಣ್ಯದ ವಿಮಾನ ಚಾಲಕರಿಗೆ ವೈಮಾನಿಕ ವೃತ್ತಿಯಲ್ಲಿಯೂ ಮೂಲಭೂತ ತರಬೇತಿ ನೀಡಲಾಗುವುದಲ್ಲದೆ, ವಿಮಾನಗಳನ್ನು ಭೂಮಿಗೆ ಸಮೀಪವಾಗಿ ಹಾರಿಸಲು ಮತ್ತು ಹಗುರಾದ ವಿಮಾನಗಳನ್ನು ಅಷ್ಟೊಂದು ಸುಸ್ಥಿತಿಯಲ್ಲಿಲ್ಲ ಅಥವಾ ವಿಮಾನ ನಿಲ್ದಾಣಗಳಿಲ್ಲದ ಪ್ರದೇಶಗಳಲ್ಲಿ ಇಳಿಸುವ ವಿಷಯದಲ್ಲಿಯೂ ಅಗತ್ಯವಾದ ತರಬೇತಿ ಕೊಡಲಾಗುವದು. ಮುಂಚೂಣಿ ಪ್ರದೇಶದಲ್ಲಿನ ಇಂತಹ ವಿಮಾನ ನಿಲ್ದಾಣಗಳಿಗೆ ಹಾಸ್ಯಕ್ಕಾಗಿ "ಅಂಚೆ ಚೀಟಿ" (ಪೋಸ್ಟೇಜ್ ಸ್ಟ್ಯಾಂಪ್) ವಿಮಾನ ನಿಲ್ದಾಣಗಳೆಂದು ಕರೆಯಲಾಗುತ್ತದ.

ವೈಮಾನಿಕ ವೀಕ್ಷಣಾ ಠಾಣ್ಯಕ್ಕೆ ಸೇರಿದ ವಿಮಾನಗಳು ಸಾಮಾನ್ಯವಾಗಿ ಮಂದಗತಿಯಿಂದ ಹಾರುತ್ತವೆ. ಶತ್ರುಗಳ ವಿಮಾನಕ್ಕೆ ಗುರಿಯಿಟ್ಟು ಹಾರಿಸಲಾದ ಗುಂಡು ಗುರಿಯನ್ನು ಮುಟ್ಟಬೇಕಾದರೆ ಅದೂ ಅಷ್ಟು ನಿಧಾನವಾಗಿ ಹೋಗಲೇಬೇಕಾಗುತ್ತದೆ. ಎಷ್ಟೋ ಸಲ ಈ ವಿಮಾನಗಳು ಭೂಮಿಯಿಂದ ೫೦ ಅಡಿಗಿಂತಲೂ ಹೆಚ್ಚು ಎತ್ತರದಲ್ಲಿ ಹಾರಬೇಕಾಗುತ್ತದೆ. ಅವು ಮಂದಗತಿಯಿಂದ ಹಾರಾಡುವುವಲ್ಲದೆ, ಶತ್ರುಗಳ ವಿಮಾನಗಳಿಂದ ರಕ್ಷಿಸಿಕೊಳ್ಳಲು ಕೆಳಮಟ್ಟದಲ್ಲಿ ಅವು ಹಾರಬೇಕಾಗುತ್ತದೆ.

ವೀಕ್ಷಣಾ ಠಾಣ್ಯೆಯ ವೈಮಾನಿಕರು ಕಷ್ಟಸಾಧ್ಯವಾದ ಅನೇಕ ಕಾರ್ಯಗಳನ್ನು ನಿರ್ವಹಿಸುತ್ತಾರೆ. ಶತ್ರುವಿಮಾನದ ಅಂತರವನ್ನು ಅಂದಾಜು ಮಾಡುವುದು ಮತ್ತು ವಿಮಾನ ನಿರೋಧಕ ಫಿರಂಗಿ ದಳದವರಿಗೆ ಅದನ್ನು ಉರುಳಿಸಲು ಸೂಕ್ತ ನಿರ್ದೇಶನಗಳನ್ನು ನೀಡುವುದು ಅವರ ಮುಖ್ಯ ಕೆಲಸವಾಗಿದೆ.

ವೀಕ್ಷಣಾ ಠಾಣ್ಯಗಳ ವಿಮಾನಗಳು ಅಂತರರಾಷ್ಟ್ರೀಯ ಸಹಕಾರದ ಮಾದರಿಯಾಗಿವೆ. ಈ ವಿಮಾನಗಳು ವಾಯು ಸೇನೆಗೆ ಸೇರಿದ ವಿಮಾನಗಳಾಗಿದ್ದು ವೀಕ್ಷಣಾ ಕಾರ್ಯ ನಿರ್ವಹಣೆಗೆ ಅಗತ್ಯವಿದ್ದ ಸಿಬ್ಬಂದಿಯನ್ನೂ ಅಧಿಕಾರಿಗಳನ್ನೂ ಭೂ ಸೇನೆಯು ಒದಗಿಸುತ್ತದೆ. ಇದರಿಂದಾಗಿ ವಾಯು ಸೇನೆಯ ಸಿಬ್ಬಂದಿ ಮತ್ತು ಭೂ ಸೇನೆಯ ಸಿಬ್ಬಂದಿಗಳ ನಡುವೆ ಸಹಕಾರ ಮತ್ತು ಪರಸ್ಪರ ತಿಳಿವಳಿಕೆ ಹೆಚ್ಚಲು ಸಾಧ್ಯವಾಗುತ್ತದೆ. ಭೂಸೇನೆಯ ಹಸಿರು ಬಣ್ಣದ ಸಮವಸ್ತ್ರಧಾರಿಗಳು, ವಾಯು ಸೇನೆಯ ಖಾಕಿ ಸಮವಸ್ತ್ರಧಾರಿಗಳು ಈ ಕಾರ್ಯದಲ್ಲಿ ಅತ್ಯಂತ ಸಹಕಾರದಿಂದ, ಹೆಗಲಿಗೆ ಹೆಗಲು ಹಚ್ಚಿ ಕೆಲಸ ಮಾಡುತ್ತಾರೆ.

ಮಹಿಳೆಯರಿಗೆ ಸೂಚನೆ

ಗೃಹಿಣಿಯರೇ ಎಚ್ಚರಿಕೆಯಿಂದಿರಿ!

ಒಲೆ ಹೊತ್ತಿಸುವಾಗ ಸೀರೆಗೆ ಬೆಂಕಿ ತಗುಲಿ ಕೋಟಿಪತ್ನಿಯ ಮರಣ, ಏಣಿಯಿಂದ ಕೆಳಗೆ ಬಿದ್ದು ಕಾಲು ಮುರಿಯಿತು, ಅಡಿಗೆಯಲ್ಲಿ ಹಲ್ಲಿ ಬಿದ್ದುದರ ಪರಿಣಾಮ ಹಲವರ ಸಾವು..... ಇಂತಹ ಕಳವಳಕಾರಕ ಸುದ್ದಿಗಳನ್ನು ನಾವು ನಮ್ಮ ಪತ್ರಿಕೆಗಳಲ್ಲಿ ದಿನವೂ ನೋಡುತ್ತಲೇ ಇರುತ್ತೇವೆ.

ಎಲ್ಲಾ ದೇಶಗಳಲ್ಲಿಯೂ ಇದೇ ಪಾಡು. ಈ ರೀತಿ, ಗೃಹದೊಳಗೇ ನಡೆದ ಆಕಸ್ಮಿಕಗಳಲ್ಲಿ ಜರ್ಮನಿಯಲ್ಲಿ ಕಳೆದ ವರ್ಷ ಮಡಿದವರ ಸಂಖ್ಯೆಯು ೮,೦೦೦ವೆಂದು ತಿಳಿದು ಬಂದಿದೆ. ಈ ಸಂಖ್ಯೆಯು ರಸ್ತೆಗಳಲ್ಲಾದ ಅಪಘಾತಗಳ ಅರ್ಧದಷ್ಟಿದೆ. ಗನಿ, ಕಾರ್ಖಾನೆಗಳಲ್ಲಿ ನಡೆದ ಅವಘಡಗಳಿಗಿಂತ ಮನೆಗಳೊಳಗೆ ನಡೆದವೇ ಹೆಚ್ಚಾಗಿವೆ.

ದಿನೇ ದಿನೇ ಹೆಚ್ಚುತ್ತಿರುವ ಈ ದುರಂತಗಳನ್ನು ಕಂಡು, ಇವುಗಳನ್ನು ತಗ್ಗಿಸುವ ಉದ್ದೇಶದಿಂದ ಅಪಘಾತ ವಿಮಾ ಕಂಪನಿಗಳು ತಿಳುವಳಿಕೆಯನ್ನು ನೀಡುವ ಸಂಘಗಳನ್ನು ಆರಂಭಿಸಿವೆ. 'ಕ್ಷೇಮಗೃಹ' ಎಂಬ ಅಭಿದಾನದ ಚಳುವಳಿಯನ್ನು ಅವು ಈಚೆಗೆ ಪ್ರಾರಂಭಿಸಿದ್ದು ಮನೆಯ ನಾಲ್ಕು ಗೋಡೆಗಳೊಳಗೇ ಎಂತೆಂತಹ ದುರಂತಗಳು ನಡೆಯಬಹುದು ಎಂದು ಜನರಿಗೆ ತಿಳಿಸಿ ಜಾಗ್ರತಿಯನ್ನುಂಟು ಮಾಡಲು ಯತ್ನಿಸುತ್ತಿವೆ. ಇದಕ್ಕಾಗಿ ೧೦೦,೦೦೦ಕ್ಕೂ ಹೆಚ್ಚಿನ ಭಿತ್ತಿಪತ್ರಗಳನ್ನು ಮ್ಯೂನಿಚ್ ನಗರವೊಂದರಲ್ಲೇ ಹಂಚಲಾಯಿತು.

ಮುಕ್ಕಾಲು ಪಾಲು ಇಂತಹ ಅನಾಹುತಗಳೆಲ್ಲಾ ಅಜಾಗರೂಕತೆ, ಅಲಕ್ಷ್ಯ ಮತ್ತು ಅವಿವೇಕಗಳಿಂದಲೇ ನಡೆಯುತ್ತಲಿವೆ. ವಿದ್ಯುದ್ಯಂತ್ರಗಳಲ್ಲಿನ ಲೋಪದೋಷಗಳು ಸರಿಯಾದ ಆಧಾರವಿಲ್ಲದೆ, ಸಿಕ್ಕಿದೆ ಜಾರುವ ಜಾಗದ ಮೇಲಿನ ಏಣಿಯ ಮೇಲೆ ನಿಂತು ಮಾಡುವ ಕೆಲಸಗಳು, ಅರಿಸ್ಪ್ರಿಯಲ್ಲಿ ಒಲೆ ಹೊತ್ತಿಸುವಿಕೆ—ಇವೇ ಮುಂತಾದವು ಅಪಘಾತಗಳು ನಡೆಯಲು ಕಾರಣಗಳು.

ವಯೋಧಿಕ್ಯವೂ ಅಜಾಗ್ರತೆಗೆ ಒಂದು ಕಾರಣ. ಹೋದ ವರ್ಷ ಮೃತರಾದವರಲ್ಲಿ ೬೦೦೦ಕ್ಕೂ ಹೆಚ್ಚಿನವರಿಗೆ ೬೦ ವಯಸ್ಸು ಆಗಿತ್ತು. ಸುಮಾರು ೧೨೦೦ ದುರಂತಗಳು ಎಳೆಯರಿಗೆ ಸಂಬಂಧಿಸಿದವು.

ಇಂತಹ ಅವಘಡಗಳಲ್ಲಿ ಹೆಚ್ಚಿನವು ಸೋಮವಾರ ಮತ್ತು ಶುಕ್ರವಾರಗಳಲ್ಲಿಯೇ ನಡೆದಿವೆ. ಅದಕ್ಕೆ ಕಾರಣವಿಲ್ಲದಿಲ್ಲ. ವಾರಾಂತ್ಯದ ರಜೆಯಲ್ಲಿ ಅಸ್ತವ್ಯಸ್ತವಾಗಿ ಬಿದ್ದವುಗಳನ್ನು ಓರಣವಾಗಿಡುವುದೂ, ಅಥವಾ ಮರುದಿನದ ರಜೆಗಾಗಿ ಮನೆಯನ್ನು ಓರಣಗೊಳಿಸುವುದೂ ಆ ಎರಡು ದಿನಗಳಲ್ಲೇ ನಡೆಯುವವು.

'ಕ್ಷೇಮ ಗೃಹ' ಚಳುವಳಿಯಿಂದ ಜನತೆ ತಿಳುವಳಿಕೆಯು ಜಾಸ್ತಿಯಾದೀತೆಂದು ಆಶಿಸಲಾಗಿದೆ. ಇಂತಹ ನಿವಾರಿಸಬಹುದಾದ ಅಪಾಯಗಳ ಬಗ್ಗೆ ಇಷ್ಟರಲ್ಲಿಯೇ ಶೈಕ್ಷಣಿಕ ಚಿತ್ರಗಳ ಮೂಲಕ ಬೋಧನೆಯನ್ನು ಕೈಗೊಳ್ಳಲಾಗುವುದು.

ದಿ ವಿಜಯ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಕಚೇರಿ: ಲೈಟ್‌ಹೌಸ್ ಹಿಲ್ ರೋಡ್, ಮಂಗಳೂರು-3

ಮತ್ತು

ದಿ ದೇವಾಂಗ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಕಚೇರಿ: 5, ಕೆಂಪೇಗೌಡ ರೋಡ್, ಬೆಂಗಳೂರು-9

ಇವರುಗಳು ಹರ್ಷದಿಂದ ಪ್ರಕಟಿಸುವುದೇನೆಂದರೆ

1949ನೇ ಬ್ಯಾಂಕಿಂಗ್ ಕಂಪೆನೀಸ್ ಆಕ್ಟಿನ 44-ಎ ಸೆಕ್ಷನ್ ಅನುಸಾರ, ಈ ಎರಡು ಬ್ಯಾಂಕುಗಳು ಸಮ್ಮಿಳಿತಗೊಳ್ಳುವ ಯೋಜನೆಯನ್ನು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ತಾರೀಖು 5ನೇ ಅಕ್ಟೋಬರ್ 1963ರ ಆರ್ಡರ್ ಮೂಲಕ ಮಂಜೂರು ಮಾಡಿರುತ್ತದೆ

ಈ ಯೋಜನೆಯು ತಾರೀಖು 21ನೇ ಅಕ್ಟೋಬರ್ 1963ರಿಂದ ಜಾರಿಗೆ ಬರುತ್ತದೆ ನಂ 5, ಕೆಂಪೇಗೌಡ ರೋಡ್ ಬೆಂಗಳೂರು-9, ಇಲ್ಲಿ ಮತ್ತು ದೊಡ್ಡಬಳ್ಳಾಪುರ ಮೈನ್ ರೋಡ್‌ನಲ್ಲಿರುವ ದೇವಾಂಗ ಬ್ಯಾಂಕ್ ಲಿಮಿಟೆಡ್‌ನ ಕಚೇರಿಗಳು ಆ ತಾರೀಖಿನಿಂದ ವಿಜಯ ಬ್ಯಾಂಕ್ ಲಿಮಿಟೆಡ್‌ನ ಕಚೇರಿಗಳಾಗಿ ವ್ಯವಹಾರ ನಡೆಸುತ್ತವೆ.

ದೇವಾಂಗ ಬ್ಯಾಂಕ್ ಲಿಮಿಟೆಡ್‌ನ ಚೇರ್ಮನ್ ಮತ್ತು ಬೋರ್ಡ್ ಡೈರೆಕ್ಟರುಗಳು ತಮ್ಮ ಎಲ್ಲಾ ಷೇರುಹೋಲ್ಡರುಗಳು, ಠೇವಣಿದಾರರು ಮತ್ತು ಸಾರ್ವಜನಿಕರಿಗೂ ಇಷ್ಟು ವರ್ಷಗಳವರೆಗೂ ಅವರು ನೀಡಿರುವ ಸಹಕಾರ ಮತ್ತು ಪ್ರೋತ್ಸಾಹಕ್ಕಾಗಿ ಕೃತಜ್ಞತೆಯನ್ನು ಅರ್ಪಿಸುತ್ತಾರಲ್ಲದೆ, ತ್ವರಿತ, ದಕ್ಷ ಮತ್ತು ಸವಿನಯ ಸೇವೆಯ ಭರವಸೆಯನ್ನು ನೀಡಿರುವ ವಿಜಯ ಬ್ಯಾಂಕ್ ಲಿಮಿಟೆಡ್‌ನವರಿಗೆ, ಇತೋಪ್ಯತಿಶಯವಾಗಿ ಪ್ರೋತ್ಸಾಹಿಸುವರೆಂದು ನಂಬುತ್ತಾರೆ.

ರಾಜಸೇವಾಸಕ್ತ ಬಿ. ಸಿ. ಸುಬ್ಬರಾಯಪ್ಪ,
ಚೇರ್ಮನ್
ದಿ ದೇವಾಂಗ ಬ್ಯಾಂಕ್ ಲಿಮಿಟೆಡ್
ಬೆಂಗಳೂರು-9

ಎಂ. ಸುಂದರರಾಮಶೆಟ್ಟಿ,
ಚೇರ್ಮನ್
ದಿ ವಿಜಯ ಬ್ಯಾಂಕ್ ಲಿಮಿಟೆಡ್
ಮಂಗಳೂರು-3

ನವಯುಗಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ

NAVAYUGA
Kannada Weekly
UDIPI
Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ

ವರುಷ	ಉಡುಪಿ	ವಾರ
೪೩	೧೭-೧೦-೧೯೬೩	೭

ಗೆಳೆತನವಿಲ್ಲದ ಗೆಳೆಯರು

ಸಂಯುಕ್ತ ರಾಷ್ಟ್ರ ಸಂಘದಲ್ಲಿ ಭಾರತೀಯ ಪ್ರತಿನಿಧಿ ಮಂಡಳಿಯ ನೇತೃತ್ವ ವಹಿಸಿದ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಚೀನಾ ಮತ್ತು ಪಾಕಿಸ್ತಾನಗಳೊಡನೆ ಭಾರತವು ವರ್ತಿಸಲು ಇಚ್ಛಿಸುವ ನೀತಿಯನ್ನು ಮತ್ತೊಮ್ಮೆ ಸ್ಪಷ್ಟೀಕರಿಸಿದರು. ಸಂ. ರಾ. ಸಂಘದ ಸಾಮಾನ್ಯ ಸಭೆಯಲ್ಲಿ ಈ ಎರಡು ದೇಶಗಳೊಡನೆ ಭಾರತವು ಶಾಂತಿ ಮತ್ತು ಸೌಹಾರ್ದಮಯ ಸಂಬಂಧವನ್ನೇ ಬಯಸುತ್ತಿರುವುದಾದರೂ ಅವುಗಳು ಮಾತ್ರ ಭಾರತ ವಿರೋಧೀ ನೀತಿಯನ್ನೇ ಅನುಸರಿಸುತ್ತ ಬರುತ್ತಿರುವುದನ್ನು ವಿಶೇಷವಾಗಿ ಅವರು ಉಲ್ಲೇಖಿಸಿದರು. ಭಾರತದೊಡನೆ ದ್ವೇಷವನ್ನು ಬೆಳೆಸಿಕೊಳ್ಳುವುದೇ ಪಾಕಿಸ್ತಾನದ ಉದ್ದೇಶವಿದೆ. ಅಂತೆಯೇ ವಿಶ್ವಶಾಂತಿಯನ್ನು ಪ್ರತಿಪಾದಿಸುವ ಭಾರತದೊಡನೆ ಕಟುವಾಗಿಯೇ ವರ್ತಿಸಿ, ವಿವಾದ ಪರಿಹಾರಕ್ಕೆ ಯುದ್ಧವೇ ಸಾಧನವೆಂದು ತಿಳಿದು ಚೀನಾವು ಅದರ ಪ್ರತಿಪಾದನೆ ಮಾಡುತ್ತ ಬರುತ್ತಿದೆಯೆಂಬ ಅವರ ಅಭಿಪ್ರಾಯವು ಸತ್ಯಕ್ಕೆ ದೂರವಿಲ್ಲವೆಂದೆಲ್ಲರೂ ಬಲ್ಲರು.

ಇಂದು ಚೀನಾವು ಗಡಿ ವಿವಾದದ ಬಗ್ಗೆ ತಳೆದಿರುವ ಆಸಕ್ತಿಗಿಂತ ಹೆಚ್ಚಾಗಿ ಭಾರತವು ತನ್ನ ಪಾಶ್ಚಾತ್ಯ ಮಿತ್ರರಿಂದ ಸೈನಿಕ ನೆರವನ್ನು ಪಡೆಯುತ್ತಿರುವುದರಿಂದ ಕಳವಳಕ್ಕೀಡಾಗಿದೆ. ಅತ್ತ ರಷ್ಯದೊಡನೆಯೂ ತನ್ನ ಸಂಬಂಧವು ಬಿಗಡಾಯಿಸುತ್ತ ಬರುತ್ತಿರುವುದರಿಂದ, ಭಾರತದ ಮೇಲೆ ಆಕ್ರಮಣ ಮಾಡಲು ಅದು ಪ್ರೋತ್ಸಾಹ-ಸಹಾಯಗಳನ್ನು ನೀಡದಿರುವುದರಿಂದ ಚೀನಾವೀಗ ಏಕಾಂಗಿಯಾಗಿದೆ. ಹಾಗಾಗಿ, ಅದರ ಸಮರೇಚ್ಛೆಯನ್ನು ಪೂರೈಸಿಕೊಳ್ಳಲು ಭಾರತವು ಕೈಗೊಳ್ಳುತ್ತಿರುವ ಸಂರಕ್ಷಣಾ ಸಿದ್ಧತೆಯು ಅದಕ್ಕೆ ಅಡ್ಡಿ ಬರುತ್ತಿದೆ; ಎಂತಲೇ ಈ ರೀತಿಯ ಆಪಾದನೆಯನ್ನದು ತೊಡಗಿದೆ. ಭಾರತವು ಪಾಶ್ಚಾತ್ಯ ಪ್ರಭಾವಕ್ಕೆ ಬಲಿಯಾಗುತ್ತಿದೆಯೆಂದು ಮರುಗುವ, ಕಳವಳಗೊಳ್ಳುವ ಚೀನಾವು ಪಾಶ್ಚಾತ್ಯರೊಡನೆ ಕೂಡಿಕೊಂಡು, ಸೈನಿಕ ಒಡಂಬಡಿಕೆಗಳಿಗೆ ಸಹಿ ಮಾಡಿದ ಪಾಕಿಸ್ತಾನದೊಡನೆ ಸಖ್ಯವನ್ನು ತೋರಿಸುವುದೇಕೆ? ಇದಕ್ಕೆ ಉತ್ತರವೆಂದರೆ, ತನ್ನಂತೆಯೇ ಪಾಕಿಸ್ತಾನವೂ ಭಾರತದ ಪ್ರಗತಿಯನ್ನು, ಅದರ ನಾಯಕರ ಮುತ್ಸದ್ದಿತನವನ್ನು, ಅವರ ಜಗನ್ಮಾನ್ಯತೆಯನ್ನು ಕಂಡು ಕರುಬುತ್ತ ಭಾರತ ವಿದ್ವೇಷಿಯಾದ ರಾಷ್ಟ್ರವೆಂಬ ಏಕಮೇವ ಉದ್ದೇಶದಿಂದ ಸಮಾನಶೀಲತೆಯು ಇಬ್ಬರಲ್ಲಿರುವುದರಿಂದಲೇ ಅವರು ಒಂದಾಗಿದ್ದಾರೆ—ಇದು ಇಂದು ಜನಜನಕ್ಕೆ ಮನವರಿಕೆಯಾಗಿದೆ. ಚೀನೀಯ ಪ್ರಧಾನಿಯವರು ತಾವು ಪಂಚಶೀಲವನ್ನು ಆಗ್ರಹದಿಂದ ಪರಿಪಾಲಿಸುವವರೆಂದೂ ಭಾರತವು ಚೀನೀಯ ವಶದಲ್ಲಿರುವ ಭೂಮಿಯ ಮೇಲೆ ಆಕ್ರಮಣ ಮಾಡದಿದ್ದರೆ, ಚೀನಾವು ಆಕ್ರಮಣಕ್ಕೆ ತೊಡಗುವುದಿಲ್ಲವೆಂದೂ ವಿವಾದ ಪರಿಹಾರದ ಸಂಬಂಧದಲ್ಲಿ ಯಾವ ಪೂರ್ವ ಶರ್ತವೂ ಇಲ್ಲದಂತೆ ಮಾತುಕತೆ ನಡೆಸಲು ತಾವೇ ದೆಹಲಿಗೆ ಬರಲು ಸಿದ್ಧರಿರುವರೆಂದೂ ಮತ್ತೊಮ್ಮೆ ಗರ್ಜಿಸಿದ್ದಾರೆ. ಒಂದಲ್ಲ ಒಂದು ದಿನ ಉಭಯತರ ನಡುವಣ ವಿವಾದವು ಶಾಂತ ರೂಪದಲ್ಲಿಯೇ ಯಾರಿಗೂ ಅನ್ಯಾಯವಾಗದಂತೆ ಪರಿಹಾರವಾಗುವುದೆಂಬ ಆತ್ಮವಿಶ್ವಾಸ ತಮಗಿರುವುದೆಂದೂ ಅವರು ಉಗ್ಗಡಿಸಿದ್ದಾರೆ. ಅನ್ಯಾಯವಾಗಿ ಆಕ್ರಮಣಕ್ಕೆ ತೊಡಗಿದ ಚೀನಾವು ಇಂತಹ ಬಣ್ಣಬಣ್ಣದ ಮಾತುಗಳಿಂದ ಭಾರತವನ್ನೂ ಅದರ ಮಿತ್ರ ರಾಷ್ಟ್ರಗಳನ್ನೂ ವಂಚಿಸುವ ಸಾಹಸ ಮಾಡುತ್ತಿದೆಯೆನ್ನಬಹುದು. ಆದರೆ, ಅವರ ಮಾತುಗಳ ಮೇಲೆ ವಿಶ್ವಾಸವಿಡುವುದು ಮಾತ್ರ ಇಂದು ಅಶಕ್ಯ. ಆದುದರಿಂದಲೇ ಭಾರತವಿಂದಿಗೂ ಚೀನಾಕ್ಕೆ ಕರೆಯೀಯುತ್ತಿದೆ; ಕೊಲಂಬೊ ಸಲಹೆಗಳ ಹಿನ್ನೆಲೆಯಲ್ಲಿ ಮಾತುಕತೆ ನಡೆಸಲು ತಾನು ಸಿದ್ಧವೆಂದು. ಆದರೆ, ಚೀನಾ ಮಾತ್ರ ಇದಕ್ಕೆ ಸಿದ್ಧವಿಲ್ಲ—ಎಂದರೆ, ಅದರ ಅಂತರ್ಯವೇನೆಂಬುದನ್ನು ನಾವು ಗಮನಿಸಬಹುದು.

ಚೀನಾದೊಡನೆ ಅನ್ಯಾಯವಾಗಿ ಸೀಮಾ ಒಡಂಬಡಿಕೆಯನ್ನು ಮಾಡಿಕೊಂಡ ಪಾಕಿಸ್ತಾನ ಮ್ಯಕಮಹೋನ ರೇಖೆಯನ್ನೂ ಮನ್ನಿಸದ ಮೂರ್ಖತನವನ್ನು ಪ್ರದರ್ಶಿಸಲಾರಂಭಿಸಿದೆ. ಯುಕ್ತ ರಾಷ್ಟ್ರ ಸಂಘದಲ್ಲಿ ಅದು ಮ್ಯಕಮಹೋನ ರೇಖೆಯ ಸಂಬಂಧದಲ್ಲಿ ಸಂದೇಹ ವ್ಯಕ್ತಪಡಿಸಿತು. ಈ ರೇಖೆಯು ಭಾರತವನ್ನು ವಸಾಹತುಶಾಹಿಯನ್ನಾಗಿ ಕಟ್ಟಿದ ಬ್ರಿಟಿಷ್ ಸರಕಾರದಿಂದ ಮಾನ್ಯತೆ ಪಡೆದಿದೆ. ಆ ಸರಕಾರದ ಉತ್ತರಾಧಿಕಾರಿಗಳಾಗಿವೆ, ಭಾರತ ಮತ್ತು ಪಾಕಿಸ್ತಾನೀ ಸರಕಾರಗಳು. ಹಾಗಿರುವಾಗ ಈ ರೇಖೆಯನ್ನು ಒಪ್ಪಿಕೊಳ್ಳುವುದು ಭಾರತದಂತೆಯೇ ಪಾಕಿಸ್ತಾನದ ಕರ್ತವ್ಯವೂ ಹೌದು. ಆದರೆ, ನ್ಯಾಯನಿಷ್ಠೆಯಿಲ್ಲದೆ ಅಂತಾರಾಷ್ಟ್ರೀಯ ವ್ಯವಸ್ಥೆಯನ್ನು ಕೆಡಿಸಿ ಭಾರತ ವಿರೋಧವನ್ನೇ ತನ್ನ ಮುಖ್ಯ ಧ್ಯೇಯವನ್ನಾಗಿ ಮಾಡಿಕೊಂಡಿರುವುದು ಪಾಕಿಸ್ತಾನದ ಕಾಪಟ್ಯದ ದ್ಯೋತಕವೆಂದು ಧೈರ್ಯವಾಗಿ ಹೇಳಬಹುದು. ಅದು ಭಾರತ—ಚೀನಾಗಳ ನಡುವಣ ಮ್ಯಕಮಹೋನ ರೇಖೆಯನ್ನು ಒಪ್ಪುವುದಿಲ್ಲವೆಂದಾದರೆ, ದುರಂಡ ರೇಖೆಯನ್ನು ಒಪ್ಪಿಕೊಳ್ಳುವ ಆವಶ್ಯಕತೆಯಾದರೂ ಏನಿದೆ? ಸ್ವಾತಂತ್ರ್ಯ ಪೂರ್ವದಲ್ಲಿ ಭಾರತ ಉಪಖಂಡದಲ್ಲಿ ಆಳುತ್ತಿದ್ದ ಬ್ರಿಟಿಷರು ಮಾಡಿಕೊಂಡಿರುವ ಎಲ್ಲ ಏವಾರ್ಡು ಒಡಂಬಡಿಕೆಗಳನ್ನು ಮನ್ನಿಸುವುದು ಭಾರತದ ಕರ್ತವ್ಯವಿದ್ದಂತೆಯೇ ಪಾಕಿಸ್ತಾನದ ಜವಾಬ್ದಾರಿಯೂ ಇದೆ. ಈ ಹೊಣೆಗಾರಿಕೆಯಿಂದ ಅದು ತಪ್ಪಿಸಿಕೊಳ್ಳುವುದೆಂದರೆ, ಅಂತಾರಾಷ್ಟ್ರೀಯ ನ್ಯಾಯವನ್ನಲ್ಲಗಳೆದಂತೆ.

ಆದುದರಿಂದ ವಿಜಯಲಕ್ಷ್ಮಿ ಪಂಡಿತರು ಹೇಳುವಂತೆ ಪಾಕ್ ಮತ್ತು ಚೀನಾಗಳು ಭಾರತದೊಡನೆ ಮಿತ್ರತ್ವವನ್ನು ಬಯಸುವುದಾದರೆ, ಪರಸ್ಪರ ವಿವಾದಗಳನ್ನು ಶಾಂತಿಯಿಂದಲೇ ಬಗೆಹರಿಸಲೆಳಸುವುದಾದರೆ, ಅನರ್ಥಕಾರಕವಾದ ಹೇಳಿಕೆಗಳನ್ನು ನೀಡುವುದನ್ನೂ ಅನಾವಶ್ಯಕವಾಗಿ ಗೊಂದಲಮಯ ಪರಿಸ್ಥಿತಿಗಳನ್ನು ನಿರ್ಮಿಸುವುದನ್ನೂ ಭಾರತದ ಆದರ ನಾಯಕರ ಮೇಲೆ ನಿರಾಧಾರವಾದ ಆರೋಪಗಳನ್ನು ಹೊರಿಸುವುದನ್ನೂ ಬಿಟ್ಟುಗೊಡಬೇಕು. ಶಾಂತ ವಿಧಾನಗಳಿಂದಲೇ ಸದ್ಭಾವನೆ ಬೆಳೆಸಲು ಭಾರತವು ಕಟಿಬದ್ಧವಾಗಿರುವಾಗ, ಅವು ಅಶಾಂತಿಯ ಅಲೆಗಳನ್ನೇಕೆ ಎಬ್ಬಿಸಬೇಕು? ಸಹಅಸ್ತಿತ್ವದ ತಳಹದಿಯಲ್ಲಿ ನಿಂತ ಭಾರತವು ಯಾರಿಗಾದರೂ ಅಪಚಾರವೆಸಗದು. ಆದರೆ, ತನಗೆ, ತನ್ನ ಸಾರ್ವಭೌಮತೆಗೆ ಮಾಡಿದ ಅಪಚಾರ ಮತ್ತು ನೀತಿ—ಧರ್ಮಗಳಿಗೆ ಗೆಯ್ದ ಅಪಮಾನಗಳನ್ನದು ಎಂದೆಂದಿಗೂ ಸಹಿಸಲಾರದು. ಇವಕ್ಕೆ ಬಂದ ಅಥವಾ ಬರಬಹುದಾದ ಆಹ್ವಾನವನ್ನು ಭಾರತೀಯರು ಅವಶ್ಯ ಸ್ವೀಕರಿಸಿಯೇ ತೀರುವರು. ಭಾರತದ ಜನಜನವೂ ಇದಕ್ಕಾಗಿ ಸಿದ್ಧವಿದೆ. ಚೀನಾವು ಈಗ್ಗೆ ಆಡಿದಂತಹ ಮಾತು ವಿಶ್ವಾಸಪಾತ್ರವಿದೆಯೆನ್ನುವುದು ಕಷ್ಟ. ಈ ಹಿಂದೆಯೂ ಅವರ ನಾಯಕರು ಬೆಣ್ಣೆಯಂತೆ ನುಣ್ಣಗೆ ಮಾತನಾಡಿ, ಭಾರತವನ್ನು ಅಸಹಾಯಕವೆನಿಸುವ ಪ್ರಯತ್ನ ಮಾಡಿದ್ದಾರೆ, ಆದುದರಿಂದ ಅದಕ್ಕೆ ಇನ್ನು ಮುಂದೆ ಯಾರೂ ಬಲಿಬೀಳಬಾರದು.

ಕರ್ನಾಟಕ ಮತ್ತು ರೇಲ್ವೆ

ಕರ್ನಾಟಕದ ಶ್ರೀ ಹೆಚ್. ಸಿ. ದಾಸಪ್ಪನವರು ಕೇಂದ್ರ ಸಚಿವ ಸಂಪುಟದಲ್ಲಿ ಸೇರಿಕೊಂಡುದು, ರೇಲ್ವೆಯಂತಹ ಒಂದು ಪ್ರಮುಖ ಶಾಖೆಯೇ ಅವರ ಕೈ ಸೇರಿದುದು ಇಂದು ಹಳೆಯ ಮಾತು. ಕರ್ನಾಟಕದಲ್ಲಿ ರೇಲ್ವೆ ರಚನೆಯು ಬಹಳ ಹೀನ ಸ್ಥಿತಿಯಲ್ಲಿದೆಯೆಂಬುದನ್ನು ದಾಸಪ್ಪನವರು ಅರಿಯದವರಲ್ಲ. ಆದುದರಿಂದಲೇ ದಾಸಪ್ಪನವರು ರೇಲ್ವೆ ಮಂತ್ರಿಯಾದರೆಂಬುದು ಕನ್ನಡಿಗರಿಗೆ ತುಂಬ ಸಂತೋಷದ ಸುದ್ದಿಯಾಗಿತ್ತು. ಮಂತ್ರಿಯಾದವನು ಇಡಿಯ ದೇಶದ ಹಿತವನ್ನು ಗಮನದಲ್ಲಿಟ್ಟು ಕಾರ್ಯಪ್ರವೃತ್ತನಾಗಬೇಕಾಗುತ್ತದೆ; ತನ್ನ ಹಿಂದಿನವರು ಹಾಕಿಕೊಟ್ಟ ದಾರಿಯನ್ನು ಅನುಸರಿಸಿಕೊಂಡೇ ಹೋಗಬೇಕಾಗುತ್ತದೆ. ಆದುದರಿಂದಲೇ ದಾಸಪ್ಪನವರು ಹೇಳಿದರು: ಈಗ ಆಲೋಚಿಸಿರುವ ಸೇಲಂ—ಬೆಂಗಳೂರು, ಹಾಸನ—ಮಂಗಳೂರು, ಹೊಸಪೇಟೆ — ಗುಂತಕಲ್ ಮೊದಲಾದ ಮಾರ್ಗಗಳಿಗೆ ಮೊದಲು ಗಮನ ಕೊಡೋಣ; ಆ ಮೇಲೆ ಇತರ ಮಾರ್ಗಗಳ ಬಗೆಗೆ ಯೋಚಿಸೋಣವೆಂದು ದಾಸಪ್ಪನವರು ಈ ರೀತಿಯಾಗಿ ಸ್ಪಷ್ಟವಾಗಿ ನುಡಿದುದರಿಂದ ಕನ್ನಡಿಗರಿಗೆ ನಿರಾಶೆಗಿಂತಲೂ ಆಶೆಯೇ ಹೆಚ್ಚಾಗಿದೆ. ಏಕೆಂದರೆ, ಮೇಲೆ ಸೂಚಿಸಲಾದ ಮೂರು ರೇಲ್ವೆಗಳ ಬಗೆಗೂ ತುಂಬ ಸಂದೇಹವಿದ್ದಿತ್ತು. ಅವುಗಳಿಗೆ ಮನ್ನಣೆ ದೊರೆಯುವುದೆಂದು ಈಗ ಖಚಿತವಾಯಿತು. ವಿಧಾನ ಪರಿಷತ್ತಿನಲ್ಲಿ ಕೂಡ ಶ್ರೀ ಎಂ. ಪಿ. ಎಲ್. ಶಾಸ್ತ್ರಿಗಳು ಸರಕಾರೇತರ ಗೊತ್ತುವಳಿಯೊಂದನ್ನು ತಂದು ಕರ್ನಾಟಕದ ರೇಲು ದಾರಿಗಳ ಅಭಾವವನ್ನು ತಿಳಿಸಲು, ಅಧಿಕಾಧಿಕ ಮಾರ್ಗರಚನೆಯಲ್ಲಿ ತೊಡಗಬೇಕು ಎಂದು ಕೇಂದ್ರವನ್ನು ರಾಜ್ಯವು ಒತ್ತಾಯಿಸಬೇಕೆಂಬ ಗೊತ್ತುವಳಿಯಾದರೂ ಅವಿರೋಧವಾಗಿಯೇ ಮಂಜೂರಾದುದನ್ನು ನಾವು ಲಕ್ಷಿಸಬೇಕು. ತನ್ನ ರಾಜ್ಯದ ಆವಶ್ಯಕತೆಗಳನ್ನು ಪೂರೈಸಲು ರಾಜ್ಯವು ಕೇಂದ್ರವನ್ನು ಒತ್ತಾಯಿಸುವುದು ತಪ್ಪಲ್ಲ. ಮೊದಲೇ ಹೇಳಿದಂತೆ ಇಡಿಯ ದೇಶದ ದೃಷ್ಟಿಯನ್ನಿಟ್ಟು ರಾಜ್ಯ ರಾಜ್ಯಗಳಿಗೆ ನ್ಯಾಯವಾಗಿ ದೊರೆಯಬೇಕಾದ ದಾರಿಗಳನ್ನು ನಿರ್ಮಿಸುವಂತೆ ಮಾಡುವುದು ಅಗತ್ಯ. ಸದ್ಯದಲ್ಲಿಯೇ ಹಾಸನ—ಮಂಗಳೂರು ರೇಲ್ವೆ ದಾರಿಯ ಕಾರ್ಯ ಪ್ರಾರಂಭವಾಗಲಿದೆ. ಇದುವರೆಗೆ ಅಲಕ್ಷ್ಯದಿಂದ ಕಂಡ ಕರ್ನಾಟಕದತ್ತ ಇನ್ನಾದರೂ ದೃಷ್ಟಿ ಬೀಳಲಿ ಎಂದು ಬಯಸಿದರೆ, ಅದು ಅನುಚಿತವಾಗಲಾರದು. ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿಯೇ ನಿಯೋಜಿತ ದಾರಿಗಳು ಸಂಪೂರ್ಣವಾಗಿ ಜನತೆಗೆ ಉಪಯೋಗಕ್ಕೆ ದೊರೆಯುವಂತಾಗಲಿ ಎಂದು ಹಾರೈಸಬೇಕಾಗಿದೆ

ಜಗತ್ಪರ್ಯಟನ

ಜನನಾಯಕ ನೆಹರು

ಸೂರ್ಯನನ್ನು ಗೂಗೆ ಚಂದ್ರನನ್ನು ನಿಶಾಚರನು ಶಪಿಸುವುದು ನೈಸರ್ಗಿಕ. ಉನ್ನತ ಪದವಿಯಲ್ಲಿದ್ದವನ ಕಾರ್ಯನೀತಿಯನ್ನು ಟೀಕಿಸುವುದೂ ಸುಲಭ. ತನ್ನಿಂದ ಮಾಡಲಸಾಧ್ಯವಾದರೂ ಮಾಡಿದ ಕಾರ್ಯಗಳಲ್ಲಿ ದೋಷವರಸುವುದು ಅನ್ಯಾಯವೆನ್ನುವಂತಿಲ್ಲ. ಪ್ರಧಾನಿ ನೆಹರುರವರ ಕಟ್ಟಾವಿರೋಧಿ ಡಾ|| ರಾಮಮನೋಹರ ಲೋಹಿಯಾ ಈಗ ನೆಹರೂರವರ ಮೇಲೆ ಮರಳಿ ನಂಜಿ ಕಾರತೊಡಗಿದ್ದಾರೆ. ಮೂರು ವರ್ಷಗಳಲ್ಲಿ ಎರಡು ಲಕ್ಷ ರೂಪಾಯಿಯ ಜಮಖಾನ ಮೆಟ್ಟಿದ ಪ್ರಧಾನಿಯವರು ತಮ್ಮ ಸಂಬಂಧಿಗಳಿಗೂ ಮಿತ್ರರಿಗೂ ಅನೇಕ ವಿಧದಲ್ಲಿ ಮುಂದೆ ಬರುವ ಮತ್ತು ಉನ್ನತ ಹುದ್ದೆಗಳನ್ನು ಹೊಂದುವ ಅವಕಾಶ ಒದಗಿಸಿದ್ದಾರಂತೆ. ಇಂತಹ ಆರೋಪದಿಂದ ವಿಮುಕ್ತರಾಗಿರುವ ನೆಹರು ಪುತ್ತಳಿಯಂತೆಯೇ ತೋರುತಿದ್ದಾರೆ.

ಟಿ ಟಿ ಕೆ

ಅರ್ಥಮಂತ್ರಿ ಟಿ. ಟಿ. ಕೆ. ಯವರು ಈ ಶಾಖೆಯಲ್ಲಿ ಹಳಗಿನವರು; ಮಧ್ಯಮ ಮತ್ತು ನಿಮ್ನ ವರ್ಗದ ಜನತೆಗೆ ತುಸುವಾದರೂ ಉಸುರು ಬಿಡಲು ಬಿಡುವವರು ಎಂಬ ಮಾತು ಪ್ರಚಾರದಲ್ಲಿದೆ. ಸಮಾಜವಾದ ಮಾದರಿಯ ಸಮಾಜ ರಚನೆಯನ್ನು ಪೂರ್ಣಗೊಳಿಸುವ ದಾರಿಯಲ್ಲಿ ಭಾರತ ಮುನ್ನಡೆಯುತ್ತಿರುವಾಗ, ಆರ್ಥಿಕ ನೀತಿಯನ್ನು ಪುನರ್ ಪರಿಶೀಲಿಸುವ ಅಗತ್ಯವಿದೆಯೆಂಬವರು ಹೇಳುತ್ತಾರೆ. ನಮಗಿಂದು ಸರ್ವತೋಮುಖ ಆರ್ಥಿಕಾಭಿವೃದ್ಧಿಯು ಬೇಕಾಗಿದೆ. ಎಲ್ಲ ಉತ್ಪಾದಕ

ಉದ್ದಿಮೆಗಳ ಬೇಡಿಕೆಯನ್ನು ಪೂರೈಸ ಲು ಅನುಕೂಲವಾದ ಉದಾತ್ತ ಮತ್ತು ಕ್ರಿಯಾತ್ಮಕ ಆರ್ಥಿಕ ನೀತಿಯನ್ನು ರಿಜರ್ವ್ ಬ್ಯಾಂಕು ಅನುಸರಿಸುವುದು ಅಗತ್ಯವಿದೆ. ಈ ನೀತಿಯು ಸಮಾಜವಾದ ಸ್ವರೂಪದ ಸಮಾಜ ನಿರ್ಮಾಣಕ್ಕೆ ಪ್ರತಿಕೂಲವಾಗಬಾರದು. ಟಿ ಟಿ. ಕೆ. ಈ ಉದ್ದೇಶ ಸಾಧನೆಗೆ ಸೊಂಟಕಟ್ಟಿದ್ದಾರೆ.

ದೇಶಮುಖ

ಮಾಜಿ ಅರ್ಥಮಂತ್ರಿ ಹಾಗೂ ಸುವಿಖ್ಯಾತ ಅರ್ಥಶಾಸ್ತ್ರಜ್ಞರಾದ ಡಾ। ಸಿ. ಡಿ. ದೇಶಮುಖರು ಕರ್ನಾಟಕ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭದಲ್ಲಿ ನೂತನ ಪದವೀಧರರನ್ನು ಕುರಿತು ಆಡಿದ ಮಾತುಗಳು ಮನನೀಯ. ದೇಶಮುಖರು ತಪ್ಪುಂತೆಯೇ ಆವರಾಗಬೇಕೆಂದು ಬಯಸುವುದು ಅವರ ಸಟಿಕ್ಷೆಯ ದ್ಯೋತಕ. ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿ ಪ್ರವೇಶಕ್ಕೆ ಮಿತಿ ಹೇರಬೇಕು; ಪದವಿಗೆ ಮೊದಲು ೧೬ ವರ್ಷಗಳ ಶಿಕ್ಷಣ ದೊರೆಯಬೇಕು; ಹಿರಿಯರೇ ಸರ್ವಜ್ಞರಲ್ಲವೆಂಬುದನ್ನು ಹಿಂಪೆಯೇ ಒಪ್ಪಿಕೊಂಡಿದ್ದ ಭಾರತದಲ್ಲಿ ಇಂದಿನ ಪದವೀಧರರು ಗುರುಗಳು ತೋರಿಸಿದ ದಾರಿಯಲ್ಲಿ ಮುಂದುವರಿದು ಗುರಿ ಸೇರಬೇಕು ಎಂದರು ಅವರು. ಅವರ ಅಭಿಮತ ಸ್ವಯೋಚಿತ; ಅವರ ಸಾಧನೆಯನ್ನು ಕೆಲವರಾದರೂ ಮಾಡಿ ನಾಡಿನ ಕೀರ್ತಿಯನ್ನು ಬೆಳಗಿಸ ಬೇಡವೆ?

ಸುಚೇತಾ

ಮಂತ್ರಿ ಮಂಡಳಿಯ ರಚನೆಯಲ್ಲಿ ಅಡ್ಡಹಾಗಿದ್ದ ಗಂಡಾಂತರಗಳೆಲ್ಲವನ್ನೂ ನಿವಾರಿಸಿ ಪರಿಷ್ಕಾರ ಕೃಪಾತ್ರಯದಲ್ಲಿ ಉತ್ತರ ಪ್ರದೇಶದ ಸುಚೇತಾ ಕೃಪಲಾನಿ ಮಂಡಳಿಯ ರಚನೆಯನ್ನು ಮಾಡಿ ಮುಗಿಸಿದರು. ತ್ರಿಪುರಿ ಗುಪ್ತ ಗುಂಪುಗಳ ಹೋರಾಟದ ಪರಿಣಾಮವಾಗಿ, ಹೈಕಮಾಂಡು ತನ್ನ ನೀತಿಯನ್ನು ಬದಲಿಸಿ ಮಂತ್ರಿಗಳ ಸಂಖ್ಯೆಯನ್ನು ಹೆಚ್ಚಿಸಲು ಅನುಮತಿಯಿತ್ತಿತು. ಕೃಪಲಾನಿಯವರು ಇನ್ನೂ ಆಡಳಿತದ ಪ್ರಾರಂಭದಲ್ಲಿದ್ದಾರೆ; ಮುಂದೆ ಇನ್ನೂ ಅನೇಕಾನೇಕ ಎಡರು ತೊಡರುಗಳು ಬರುವುದು ಸ್ವಾಭಾವಿಕ;

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R. I. A 2140/62 (O. S. 100/62)

B.K. ನಾರಾಯಣ ರಾವ್—ಅರ್ಜಿದಾರ

ಬೋಗಿ ಗೌಡ ಸಿದಾ —ಎದ್ರಿರು

8ನೇ ಎದ್ರಿ:— ಬಾಬು ಗೌಡ-ವೆಂಕಪ್ಪ ಗೌಡರ ಮಗ-ಮಿತ್ತಬಾಗಿಲು ಗ್ರಾಮದ ಹೊಳವಳ್ಳಿ.

ಸದ್ರಿ 8ನೇ ಎದ್ರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ತಾ. 15—6—62ರಲ್ಲು ಆದ ಪ್ರಿಲಿಮನರಿ ಡಿಕ್ರಿ ಪ್ರಕಾರ, ಪ್ರಿಲಿಮನರಿ ಡಿಕ್ರಿಗೆ ಬಾಬ್ತು ರಿಯಿರುವ ಸ್ಥಿರಾಸ್ತಿ ಮಾರಾಟದಿಂದ ಡಿಕ್ರಿ ಹಣ ವಸೂಲು ಪಡೆಯುವ ಕುರಿತು ಫೈನಲ್ ಡಿಕ್ರಿಗೆ ಹುಕುಂ ಆಗಬೇಕಾಗಿ ಕೊಟ್ಟ ಅರ್ಜಿ ತಾರೀಕು 28—10—63ಕ್ಕೆ ಇಟ್ಟಿರುತ್ತದೆ. ಸದ್ರಿ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉಪಯರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಪ್ಪಾಯಾದಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

(*Sd*) M. Sadashiva Rao

Vakil for petitioner

ಪುತ್ತೂರು, ತಾ. 15—10—63

ಉತ್ತರ ಪ್ರದೇಶದ ರಾಜಕಾರಣವು ಗುಂಪುಗಾರಿಗೆಗೆ ಹಿಂದಿನಿಂದಲೂ ಸುಪ್ರಸಿದ್ಧವಿದೆ. ೪೪ ಇದ್ದ ಮಂತ್ರಿ ಸಂಖ್ಯೆಯು ೨೦ಕ್ಕೆ ಇಳಿಯಿತು ಎಂದು ತಾತ್ಕಾಲಿಕ ಸಂತೋಷಪಡುವುದಕ್ಕಿಂತ ಹೆಚ್ಚಿನ ಸಾಧನೆ ಉತ್ತರ ಪ್ರದೇಶದಲ್ಲಿ ನಡೆದಿಲ್ಲ.

ಗಮಾಲ್ ನಸ್ಸೇರ್

ಸಂಯುಕ್ತ ಅರಬ ಪ್ರಜಾರಾಜ್ಯದ ಅಧ್ಯಕ್ಷ ಅಬ್ದುಲ್ ಗಮಾಲ್ ನಸ್ಸೇರರು ಭಾರತ—ಚೀನ ಗಡಿ ವಿವಾದ ಪರಿಹಾರ ಸೂಚನೆಗಳಲ್ಲಿ ಹೊಸ ಚೇತನ ಮೂಡುವಂತೆ ಮಾಡಲು ಹವಣಿಸುತ್ತಿದ್ದಾರೆ. ಸಿರಿಮಾವೊ ಭಂಡಾರ ನಾಯಿಕೆಯವರು ಕೈರೋವಿಗೆ ದರ್ಶನ ನೀಡಿದಾಗ, ಅಲ್ಲಿ ಉಭಯ ನಾಯಕರೊಳಗೆ ಮಾತುಕತೆ ನಡೆಯಿತೆಂದೂ ಸೌಹಾರ್ದಮಯ ವಾತಾವರಣದಲ್ಲಿಯೇ ಸಮಸ್ಯೆಯನ್ನು ದೂರಗೊಳಿಸುವ ಬಗ್ಗೆ ತಮ್ಮಾಲಿಕ ಆಫ್ರೋ ಏಶ್ಯನ್ ಏಕತೆಯನ್ನು ಬಲಪಡಿಸುವ ಕುರಿತು ಮಾತುಕತೆ ನಡೆಸಿರುವರೆಂದೂ ಗೊತ್ತಾಗಿದೆ. ಭಾರತವೇ ಚೀನಾದೊಡನೆ ದೀರ್ಘಕಾಲದ ಪ್ರಶ್ನೆನ್ನ ಸಮರಹೂಡಲು ಬಯಸುತ್ತಿದೆಯೆಂಬ ಚೀನೀಯರ ಆರೋಪವು ನಿರಾಧಾರ ಮಾತ್ರವಲ್ಲ ಚೀನದ ನಡವಳಿಕೆಯನ್ನೇ ಪ್ರದರ್ಶಿಸುವುದು. ಆಕ್ರಮಣವನ್ನು ಮಾತ್ರ ಮರಳಿ ತೆಗೆದುಕೊಂಡರೆ ಸರಿ, ಭಾರತವು ಮಾತಿಗೆ ಸಿದ್ಧ.

ನಿಜಲಿಂಗಪ್ಪ

ಅವಿಶ್ವಾಸ ಗೊತ್ತುವಳಿಯನ್ನು ವಿಧಾನಸಭೆಯಲ್ಲಿ ಕೈಗೆಗೊಳಿಸಿದ ಕರ್ನಾಟಕದ ಮುಖ್ಯ ಮಂತ್ರಿ ನಿಜಲಿಂಗಪ್ಪನವರು. ನಿರಪರಾಧಿಗಳೆಂದು ಯಾರೂ ಹೇಳಿಲ್ಲ; ಅವರೂ ಸಮರ್ಥಿಸಲಿಲ್ಲ. ಶರಾವತಿಯ ಪ್ರಕರಣದಲ್ಲಿ 'ಅಷ್ಟೇನೂ' ಅನ್ಯಾಯ ನಡೆದಿಲ್ಲ; ಎಂದ ಅವರು ಅನ್ಯಾಯ ನಡೆದೇ ಇಲ್ಲ ಎಂದು ಹೇಳಲಿಲ್ಲ. ವಿರೋಧಿ ಪಕ್ಷದವರು ಈ ಗೊತ್ತುವಳಿಯನ್ನು ಮಂಡಿಸಿ ತಮ್ಮಾಲಿಕ ಕೆಲವಾರು ದಿನಗಳ ವೆಚ್ಚವನ್ನು ವ್ಯರ್ಥವಾಗಿ ಮಾಡಿಸಿಕೊಂಡರು, ಇದೂ ಅನ್ಯಾಯವಲ್ಲವೆ? ಎಂದು ಕೇಳುವವರೂ ಇದ್ದಾರೆ. ನಿಜಲಿಂಗಪ್ಪನವರು ಎರಡು ಮುಖ್ಯ ಕಾರ್ಯಗಳನ್ನು ಮಾಡಬೇಕು. ಮೊದಲನೆಯದಾಗಿ ಆಡಳಿತೆಯಲ್ಲಿ ಕಸುವನ್ನು ತುಂಬಬೇಕು; ಅದರಿಂದ ಲಂಚಾದಿ ದುಷ್ಟ ಶಕ್ತಿಗಳು ತಮಗೆ ತಾವಾಗಿಯೇ ಹೇಳ ಹೆಸರಿಲ್ಲದಂತಾಗುವುವು; ಎರಡನೆಯದಾಗಿ ತನ್ನ ಸಹ ಮಂತ್ರಿಗಳ ಸಂಖ್ಯೆಯಲ್ಲಿ ಕಡಿತ ಮಾಡಿಕೊಳ್ಳಬೇಕು.

ರಂಗಾಚಾರ್ಯ

ಕರ್ನಾಟಕದ ನಾಟಕಕಾರರಲ್ಲಿ ತನ್ನದೇ ಆದ ಸ್ಥಾನವನ್ನು ಪಡೆದುಕೊಂಡವರು ಆದ್ಯ ರಂಗಾಚಾರ್ಯರು. ಅವರ ಅರುವತ್ತನೆಯ ಹುಟ್ಟು ಹಬ್ಬವನ್ನು ಧಾರವಾಡದಲ್ಲಿ ಆಚರಿಸಿದಾಗ, ನಾಟಕ ರಚನೆ–ಮತ್ತು ಅದರ ಯಶಸ್ಸಿನ ಬಗೆಗೆ ಮಾಡಿದ ಅವರ ಉದ್ಗಾರಗಳು ಸ್ವಾಗತಾರ್ಹ. ನೆರೆಯ ರಾಜ್ಯಗಳಲ್ಲಿ ನಾಟಕಗಳು ಜಯಭೇರಿಯನ್ನು ಬಾರಿಸುತ್ತಿರುವಾಗ, ನಮ್ಮ ಕನ್ನಡದ ನಾಟಕಗಳೇಕೆ ಬಾಡಬೇಕು ಎಂದು ಪ್ರಶ್ನಿಸುತ್ತಾರೆ ಅವರು. ತರುಣರಿಗೆ ಉತ್ತಮ ನಾಟಕಕಾರರಾಗುವುದಕ್ಕೆ ಉತ್ತೇಜನವಿತ್ತು ಇತರತ್ರ ನಡೆದ ನಾಟಕ ಪ್ರಯೋಗಗಳಿಗೆ ಸರಿಸಮ ವೆನಿಸುವಂತೆ ನಮ್ಮ ನಾಟಕ ಪ್ರಯೋಗಗಳು ನಡೆಯುಂತಾಗಬೇಕು. ಉಚ್ಚ ಮಟ್ಟದ ನಾಟಕ ರಚನೆಯನ್ನು ಯುವ ಜನಾಂಗವು ಮಾಡೀತೆ'

ಅಲ್ಲಲ್ಲಿಯ ಸುದ್ದಿ ಸಾರ

ಉದ್ಘಾಟನಾ ಸಮಾರಂಭ-ಉಡುಪಿಯ ಜೋನ್ ಬೋಸ್ಕೋ ಕ್ಲಬ್ಬಿನವರು ಪ್ರಕಟಿಸಿದ ವೈವಿಧ್ಯಪೂರ್ಣವಾದ ಸಮರ್ಪಣಾಂಕದ ಉದ್ಘಾಟನಾ ಸಮಾರಂಭವು ಇದೇ ತಾ. 13ರಂದು ಎಲ್ ಐ ಸಿ ಯ ಸೀನಿಯರ್ ಡಿವಿಜನಲ್ ಮೆನೇಜರ್ ಶ್ರೀ ಟಿ ಆರ್. ಎ ಪೈಗಳಿಂದ ಸ್ಥಳೀಯ ಮಹಾತ್ಮಾ ಗಾಂಧಿ ಮೆಮೋರಿಯಲ್ ಹಾ. ಎ. ಶಾಲೆಯಲ್ಲಿ ನೆರವೇರಿಸಲ್ಪಟ್ಟಿತು. ಶಾಸನ ಸಭಾ ಸದಸ್ಯರಾದ ಶ್ರೀ ಎಂ. ಮಧ್ವರಾಜರು ಅಧ್ಯಕ್ಷತೆ ವಹಿಸಿದ್ದರು. ಉಪಹಾರವಾದ ಬಳಿಕ ರೆ ಫಾ ಜೆ ನೊರೊನ್ಹರು ಸ್ವಾಗತ ಭಾಷಣ ಮಾಡಿದರು. ಕ್ಲಬ್ಬಿನ ಅಧ್ಯಕ್ಷ ರೆ. ಫಾ. ಸಿಲ್‌ವೆಸ್ಟರ್ ಡಿ'ಸೋಜರು, ಕ್ಲಬ್ಬಿನ ಸಂಕ್ಷೇಪ ವರದಿಯನ್ನೊಪ್ಪಿಸುತ್ತಾ ಸನ್ನವೇ ಚರ್ಚ್ ಕಂಪಾಂಡಿನಲ್ಲಿ ಪೂರ್ತಿಯಾಗುವ ಡೋನ್ ಬೋಸ್ಕೋ ಸಭಾ ಸದನವು ಸರ್ವರ ಉಪಯೋಗಕ್ಕೂ ದೊರೆಯುವುದೆಂದು ಮಹಾಜನರ ಸಹಕಾರ ಕೋರಿದರು. ಶ್ರೀ ಪೈಗಳು ಸಮೆಸಂಚಿಕೆಯನ್ನು ಉದ್ಘಾಟಿಸುತ್ತಾ ಇಂದು ಜನರಲ್ಲಿ ಬೇಕು ಎಂಬ ಲಪಲಪಿಕೆ ಹೆಚ್ಚಾಗಿದೆಯೆಂದೂ ಸ್ಥಿರತೆಯಿಂದ ಕಡಿಮೆಯಾಗಿದೆಯೆಂದೂ ಸ್ಥಿರತೆಯಿಂದ ಪ್ರಯತ್ನಿಸಿದರೆ ಏನನ್ನೂ ಸಾಧಿಸಬಹುದೆಂಬುದಕ್ಕೆ ಈ ಕ್ಲಬ್ಬು ಉದಾಹರಣೆಯಾಗಿದೆಯೆಂದೂ ಹೇಳಿ ಅದರ ಚಟುವಟಿಕೆಗಳಿಗೆ ಮೆಚ್ಚುಗೆ ಸೂಚಿಸಿದರು. ಅಧ್ಯಕ್ಷ ಶ್ರೀ ಮಧ್ವರಾಜರು ಮಾತಾಡುತ್ತಾ ದಕ್ಷಿಣ ಕನ್ನಡದಲ್ಲಿ ಕಥೋಲಿಕರು ಮತ್ತು ಮಿತನರಿಗಳು ಸೈಕ್ಷಣಿಕ ರಂಗದಲ್ಲಿ ಮಾಡಿರುವ ಅಗಾಧ ಸೇವೆಯನ್ನು ಪ್ರಸ್ತಾಪಿಸಿ ತಾನು ಇತ್ತೀಚೆಗೆ ಪ್ರವಾಸ ಮಾಡಿದ ಬೇರೆ ಬೇರೆ ವಿದೇಶಗಳ ಜನ ಜೀವನಗಳನ್ನು ವಿವರಿಸಿ ನಮ್ಮಲ್ಲಿ ಪ್ರಾಮಾಣಿಕವಾಗಿ ಶ್ರಮ ವಹಿಸಿ ದುಡಿಯುವ ಪ್ರವೃತ್ತಿ ಬೆಳೆದರೆ ರಾಷ್ಟ್ರಾಭಿವೃದ್ಧಿ ತೀವ್ರಗತಿಯಿಂದಾಗಿತೆಂದು ಹೇಳಿ ಕ್ಲಬ್ಬಿನ ಚಟುವಟಿಕೆಗಳನ್ನು ಶ್ಲಾಘಿಸಿದರು. ಅಂತ್ಯದಲ್ಲಿ ಕಾರ್ಯದರ್ಶಿ ಶ್ರೀ ಮೌರಿಸ್ ಡಿಸೋಜರು ಧನ್ಯವಾದವನ್ನು ಅರ್ಪಿಸಿದರು. ನಡುನಡುವೆ ಶ್ರೀ ಟಿ ಸಿ. ರೇಗೊ ಮತ್ತು ಗೆಳೆಯರಿಂದ ಗಾಯನವಿತ್ತು.

ಕಟಪಾಡಿ ಮಹಿಳಾ ಮಂಡಳಕ್ಕೆ ವಿದ್ಯುತ್ ದೀಪ— ಶ್ರೀಮತಿ ಸುನಂದಾ ಬಾಳಿಗಾರವರ ಅಧ್ಯಕ್ಷತೆಯಲ್ಲಿ, ಕಟಪಾಡಿ ಮಹಿಳಾ ಮಂಡಳಕ್ಕೆ ಶ್ರೀ ಕೆ. ವಾಸುದೇವ ಕಿಣಿಯವರು ಒದಗಿಸಿ ಕೊಟ್ಟಿರುವ ವಿದ್ಯುದ್ದೀಪಗಳು ಹಾಗೂ ಮಣಿಪಾಲದ ಏಕಾಡಮಿಯ ಲಲಿತಕಲಾ ಮತ್ತು ಸಂಗೀತ ವಿಭಾಗದ ಕೇಂದ್ರ ಇವುಗಳ ಉದ್ಘಾಟನಾ ಸಮಾರಂಭವು ಶ್ರೀಮತಿ ಒಕ್ಟೇವಿಯಾ ಅಲ್ಬುಕರ್ಕ್ ಹಾಗೂ ಡಾ. ಟಿ. ಮಾಧವ ಪೈಗಳಿಂದ ನೆರವೇರಿತು.

ಆರಂಭದಲ್ಲಿ ಮಹಿಳಾ ಮಂಡಳದ ಅಧ್ಯಕ್ಷೆ ಶ್ರೀಮತಿ ಶಾರದಾ ಕಿಣಿಯವರು ಸ್ವಾಗತಿಸುತ್ತಾ ತಮ್ಮ ಮಂಡಳದ ಚಟುವಟಿಕೆಗಳನ್ನು ವಿವರಿಸಿ ಶ್ರೀ ಕಿಣಿಯವರಿಗೂ ಏಕಾಡಮಿಯವರಿಗೂ ಅಭಿನಂದನೆಗಳನ್ನರ್ಪಿಸಿದರು.

ಬೆಂಗರೆ ಶಾಲಾ ಹೊಸ ಕಟ್ಟಡದ ಉದ್ಘಾಟನೆ—ಇದೇ ತಾ. 11ರಂದು ಮಂಗಳೂರು ಬೆಂಗರೆಯ ಫಿಶರೀಸ್ ಹ್ಯಾಯರ್ ಎಲಿಮೆಂಟರಿ ಶಾಲೆಯ ಹೊಸ ಕಟ್ಟಡದ ಉದ್ಘಾಟನಾ ಸಮಾರಂಭವು ಶ್ರೀ ಟಿ. ಎ. ಪೈಗಳ, ಅಧ್ಯಕ್ಷತೆಯಲ್ಲಿ, ಶ್ರೀ ಎಂ. ಮಧ್ವರಾಜ ಎಂ. ಎಲ್. ಎ. ಅವರಿಂದ ನೆರವೇರಿತು.

ಶ್ರೀ ಮಧ್ವರಾಜರು ತಮ್ಮ ಉದ್ಘಾಟನಾ ಭಾಷಣದಲ್ಲಿ, ಸಹಕಾರ ಹಾಗೂ ವೃತ್ತಿಪ್ರೇಮ ಬೆಳೆದರೆ ಮಾತ್ರ ಮೀನುಗಾರರ ಪ್ರಗತಿ ಸಾಧ್ಯವೆಂದು, ತಿಳಿಸಿದರು.

ಸಭಿಕರ ಪರವಾಗಿ ಶ್ರೀಗಳಾದ ಎಚ್. ಕೆ. ತಿಂಗಳಾಯರೂ ಜೆ ಎ ಬ್ರಿಟೋರವರೂ ಮಾತಾಡಿದರು. ಶ್ರೀ ಟಿ. ಎ ಪೈಗಳು ಮಾತಾಡುತ್ತಾ ಮತ್ಸ್ಯಕೈಗಾರಿಗೆಯ—ಅಭಿವೃದ್ಧಿಯ ಮೇರೆ, ನಮ್ಮ ದೇಶದ ಔದ್ಯೋಗಿಕ ಪ್ರಗತಿಯು ಬಹಳವಾಗಿ ಹೊಂದಿಕೊಂಡಿದೆಯೆಂದೂ ನಮ್ಮ ಜನರೆಲ್ಲರೂ ಏಕತಾಭಾವ ಮೂಡಿಲ್ಲವೆಂದೂ ರಾಷ್ಟ್ರದ ಪ್ರಗತಿ ಜನರ ಸಹಕಾರದ ಮೇರೆ ಹೊಂದಿದೆಯೆಂದೂ ಹೇಳಿದರು.

ಡಾ. ಕೆ.ಬಿ ಶೆಟ್ಟರ ಭಾಷಣ—ಮಂಗಳೂರಿನ ಡಾ. ಕೆ ಬಿ. ಶೆಟ್ಟರು, "ಸಿಡುಬು ರೋಗ" ಎಂಬ ಕುರಿತು ಸೈಂಟ್ ಫಿಲೋಮಿನಾಸ್ ಕಾಲೇಜಿನ ಆಶ್ರಯದಲ್ಲಿ ವಿಲ್ಲಿಗ್ರಿನ್ ಹಾಲಿನಲ್ಲಿ ತಾ 8ರಂದು, ಭಾಷಣವಿತ್ತರು. ಪ್ರಾರಂಭದಲ್ಲಿ ಕಾರ್ಯದರ್ಶಿ ಶ್ರೀ ಶ್ರೀಪತಿರಾವ ಸಭಿಕಾಕಾರರು ಸ್ವಾಗತಿಸಿದರು. ಕೊನೆಯಲ್ಲಿ ಕುಮಾರಿ ಬಲಿರಾಡಾ ಪಿರೇರಾರವರು ಧನ್ಯವಾದಗಳನ್ನರ್ಪಿಸಿದರು.

ಎಮ್. ಜಿ. ಎಮ್. ಕಾಲೇಜಿನಲ್ಲಿ ಪ್ರತಿಭಾ ಪ್ರದರ್ಶನ ದಿನಾಚರಣೆಯು—ತಾ. 11ರಂದು ಡಾ. ವಿ. ಎಸ್. ಶೆಟ್ಟಿ, ಎಮ್. ಡಿ, (ಬೆಳ್ಳಂಪ್ಪುರಂ) ಇವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಆರಂಭದಲ್ಲಿ ಕಾಲೇಜ್ ಯೂನಿಯನ್ನಿನ ಕಾರ್ಯದರ್ಶಿ ಶ್ರೀ ವಿಠ್ಠಲ ಕೆ. ಶೆಟ್ಟಿಯ ಸ್ವಾಗತಿಸಿ ಅಧ್ಯಕ್ಷರ ಪರಿಚಯ ಮಾಡಿಕೊಟ್ಟರು. ಅಧ್ಯಕ್ಷ ಡಾ ಶೆಟ್ಟರು ಭಾಷಣ ಮಾಡುತ್ತಾ ಭಾರತವು ಸ್ವತಂತ್ರವಾದ ಮೇಲೆ ವಿದ್ಯಾ ಸಂಸ್ಥೆಗಳು ಕೆಲವಟ್ಟಿಗೆ ಹೆಚ್ಚಾದರೂ ಇನ್ನೂ ಅಧಿಕವಾಗುವ ಅಗತ್ಯವಿದೆಯೆಂದೂ ಬೆಳೆಯುತ್ತಿರುವ ಜನಸಂಖ್ಯಾ ಪ್ರಮಾಣದಂತೆ ವಿದ್ಯಾ ಸಂಸ್ಥೆಗಳು ಬೆಳೆದಿಲ್ಲವೆಂದೂ ಹೇಳಿ, ದೇಶ ವಿದೇಶಗಳ ಜನಜೀವನದ ತುಲನಾತ್ಮಕ ವಿವರಗಳನ್ನಿತ್ತರು. ಅನಂತರ ಕಾಲೇಜ್ ವಿದ್ಯಾರ್ಥಿ ವಿದ್ಯಾರ್ಥಿನಿಯರಿಂದ ವಿವಿಧ ಕಲಾ ಪ್ರತಿಭಾ ಪ್ರದರ್ಶನವು ಯಶಸ್ವಿಯಾಗಿ ನಡೆಯಿತು.

ತಾ. 14—11—63ರ

'ನವಯುಗ'ವು



ದೀಪಾವಳಿ ಸಂಚಿಕೆಯಾಗಿ

ವಿಶಿಷ್ಟ ತರದಲ್ಲಿ

ಪ್ರಕಟವಾಗುವುದು.

3 ದಿನ ಮುಂಚಿತವಾಗಿಯೇ

ಸಂಚಿಕೆ ತಯಾರಾಗುವುದರಿಂದ

ಜಾಹೀರಾತುದಾರರು ತ್ವರೆ

ಮಾಡುವಂತೆ ವಿನಂತಿ.

Read & Advertise in

NAVAYUGA

DEEPAVALI ISSUE

ಪುಸ್ತಕ ವಿಮರ್ಶೆ

[ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ —ಸಂ. ಸ.]

ಮ್ಯಾಕ್ಬೆಥ್— ನಿವೇದಕರ: ವರದರಾಜ ಹುಮಿಲಗೋಳ, ಎಂ. ಎ., ಬಿ. ಟಿ. ಪ್ರಕಾಶಕರ: ರಾಮಾಶ್ರಯ ಬುಕ್ ಡಿಪೊ, ಸುಭಾಸ ರೋಡ, ಧಾರವಾಡ. ಪುಟಗಳು: ೪೨. ಬೆಲೆ. ರೂ. ೦—೫೦.

ಸುಪ್ರಸಿದ್ಧ ಆಂಗ್ಲ ನಾಟಕಕಾರನೆಂದು ಹೆಸರಾಂತ ಶೇಕ್ಸ್‌ಪಿಯರನ ಇದೇ ಹೆಸರಿನ ನಾಟಕದ ಕಥಾರೂಪವಿದು. ಆಂಗ್ಲ ಸಾಹಿತ್ಯದ ಪರಿಚಯವಿಲ್ಲದವರು ಮತ್ತು ಪರಿಚಯ ಮಾಡಿಕೊಳ್ಳಲು ಅಸಮರ್ಥರಾದವರು ಅದರಲ್ಲಿರುವ ಸರಸ ಸಾಹಿತ್ಯದ ರಸವನ್ನಾದರೂ ಹೀರಬೇಕೆಂಬ ಸದುದ್ದೇಶದಿಂದ ಈ ಪುಸ್ತಕವು ಪ್ರಕಟವಾಗಿದೆ. ಮುಖ್ಯವಾಗಿ ಪ್ರೌಢ ಪ್ರಾಥಮಿಕ ವಿದ್ಯಾರ್ಥಿಗಳಲ್ಲಿ ಓದಿನ ಆಸಕ್ತಿಯನ್ನು ಹುಟ್ಟಿಸುವುದಕ್ಕೆ ಮತ್ತು ಅವರಲ್ಲಿ ಸಾಹಿತ್ಯದ ಮೇಲೆ ಅಭಿಮಾನ—ಗೌರವ ಭಾವನೆಯುಂಟಾಗುವಂತೆ ಇಂತಹ ಕೃತಿಗಳು ಕನ್ನಡದಲ್ಲಿ ಹೆಚ್ಚಾಗಿ ಪ್ರಕಟವಾಗಬೇಕು. ನಿವೇದಕರ ಸರಳ ಲಲಿತ ಭಾಷೆಯು ನಿಜಕ್ಕೂ ಓದುಗರ ಭಾಷಾ ಮಟ್ಟವನ್ನು ಎತ್ತರಿಸಬಲ್ಲುದು, ಶುದ್ಧಗೊಳಿಸಬಲ್ಲುದು.

ಸುಬೋಧ ಪರೀಕ್ಷಾರ್ಥಕ— ಮೈಸೂರು ಸರಕಾರವು ಗೊತ್ತು ಮಾಡಿದ ಏಳನೆಯ ದರ್ಜೆಯ ಕನ್ನಡ ಪಠ್ಯ ಪುಸ್ತಕದ ಟಿಪ್ಪಣಿಯಿದು. ಕಠಿನ ಪುಸ್ತಕಗಳನ್ನು ಜೀರ್ಣಿಸಿಕೊಳ್ಳುವುದು ವಿದ್ಯಾರ್ಥಿಗಳಿಗೆ ಕಷ್ಟವಾದಾಗ ಇಂತಹ ಟಿಪ್ಪಣಿಗಳು ಉಪಯುಕ್ತವಾಗುತ್ತವೆ. ಆದರೆ, ಇತ್ತೀಚೆಗೆ ಟಿಪ್ಪಣಿಗಳು ಲೋಪದೋಷಗಳಿಂದ ಕೂಡಿರುವುದೂ ಅದರಿಂದಾಗಿ ವಿದ್ಯಾರ್ಥಿಗಳನ್ನು ಮಾತ್ರವಲ್ಲದೆ ಅಧ್ಯಾಪಕರನ್ನೂ ತಪ್ಪುದಾರಿಗೆಳೆಯುವುದೂ ಕಂಡು ಬರುತ್ತಿದೆ. ವಿದ್ಯಾರ್ಥಿಗಳು ಟಿಪ್ಪಣಿ ಪುಸ್ತಕಗಳನ್ನೇ ಅವಲಂಬಿಸಿ ಪಾಠವನ್ನು ಅಲಕ್ಷ್ಯದಿಂದ ಕಾಣುವುದಕ್ಕೂ ಇವು ಪ್ರೇರಕವಾಗುತ್ತಿವೆ. ಆದುದರಿಂದ ಸಾಧ್ಯವಾದಷ್ಟು ಮಟ್ಟಿಗೆ ಟಿಪ್ಪಣಿ ಪುಸ್ತಕಗಳ ಪ್ರಕಟಣೆಯು ನಿಲ್ಲುವುದು ಶಿಕ್ಷಣ ಮಟ್ಟದ ಏರಿಕೆಗೆ ಕಾರಣವಾಗಬಹುದೇನೋ!

ಪ್ರಕೃತ ಟಿಪ್ಪಣಿಯಾದರೂ ದೋಷವಿದೂರವೆನ್ನುವಂತಿಲ್ಲ. ನಾಮಪದಗಳು ಐದು ವಿಧವೆಂದು ಹೇಳಿದ್ದರೂ ಭಾವನಾಮವನ್ನು ಉಲ್ಲೇಖಿಸಲಿಲ್ಲ. ಉತ್ತಮ ಪುರುಷ ಸರ್ವನಾಮ ಪದಗಳು ನಾನು, ನಾವು ಇತ್ಯಾದಿಯೆಂದೂ ಮಧ್ಯಮ ಪುರುಷ ಸರ್ವನಾಮಗಳು ನೀನು, ನೀವು ಇತ್ಯಾದಿಯೆಂದೂ ಹೇಳಿರುವುದು ಸಮಂಜಸವೆ? 'ಕರ್ಮಧಾರೆಯ ಸಮಾಸವು ಉತ್ತರಪದ ಪ್ರಧಾನವಾಗಿದ್ದು ಪೂರ್ವಪದವು ವಿಶೇಷಣವಾಗಿರುವುದು; ದ್ವಂದ್ವವು ಎರಡೂ ಪದಗಳು ಸಮಾನ ಎಂಬ ಲಕ್ಷಣಗಳು ನಿರ್ದೋಷವೆ? ಪ್ರತಿಪಾದದ ಎರಡನೆ ಅಕ್ಷರವು ಪ್ರಾಸವೆನಿಸುವುದೆ?—ಎಂದು ಮುಂತಾದ ಸಂದೇಹಗಳಿಗೆ ಇಲ್ಲಿ ಆಸ್ಪದವಿದೆ. ದಿಗ್ದರ್ಶನಕ್ಕೆ ಮಾತ್ರ ಇಷ್ಟನ್ನು ಎತ್ತಿ ಹೇಳಿದೆ. ಇವೇ ಮಾದರಿಯ ಲೋಪದೋಷಗಳು ಇನ್ನೂ ಇವೆ. ಪಠ್ಯದಲ್ಲಿಯೇ ತಪ್ಪುಗಳಿರುವಾಗ ಮತ್ತೆ ಟಿಪ್ಪಣಿಯಲ್ಲೇನು? 'ಏನೂ ಇಲ್ಲವೆಂಬುದಕ್ಕಿಂತ ಏನಾದರೂ ಇರಲಿ' ಎಂಬುದಾದರೆ, ಗೈಡುಗಳ ಯುಗದಲ್ಲಿ ಈ ಗೈಡಿಗೂ ಸ್ಥಾನವಿದೆ. ಅತ್ಯಂತಾವಶ್ಯಕತೆಯಿರುವವರು ಮಾತ್ರ ಕೊಂಡುಕೊಳ್ಳಬಹುದು ಪುಸ್ತಕದ ಬೆಲೆ: ರೂ. ೦—೭೫; ಪ್ರಕಾಶಕರು: ಸುಬೋಧ ಪಾರ ಮಾಲೆ, ಹಿರಿಯಡಕ; ದ. ಕ.

ನಿಬಂಧ ಸಂಗ್ರಹ— ಲೇಖಕರು-ಪ್ರಕಾಶಕರು ಪಂ. ಶ್ರೀ ಕೆ. ಭುಜಬಲಿ ಶಾಸ್ತ್ರಿ; ಮೂಡುಬಿದ್ರೆ, ದ. ಕನ್ನಡ. ಪುಟಗಳು: ೨೪. ಬೆಲೆ: ೦—೩೭.

ಜೈನ ಧರ್ಮ ಮತ್ತು ಕರ್ಮ ಶಾಸ್ತ್ರಗಳಿಗೆ ಸಂಬಂಧಿಸಿದ ೮ ಪುಟ್ಟ ನಿಬಂಧಗಳನ್ನು ನಾವಿಲ್ಲಿ ಕಾಣಬಹುದು. ಆಚಾರವೇ ಸ್ವರ್ಗವೆಂದು ಸಾರಿದವರು ನಮ್ಮ ಪೂರ್ವಜರು; ಕರ್ಮಫಲ ಬೆನ್ನಬಿಡದೆಂದು ನಂಬಿದವರು ನಾವು,—ಇವುಗಳ ಸ್ವರೂಪಗಳಿಗೆ ಸಂಬಂಧಿಸಿದ ಎರಡು ನಿಬಂಧಗಳಿಲ್ಲಿವೆ. ದರ್ಶನ ಶಾಸ್ತ್ರ, ಸಮಾಧಿ ಮರಣ, ದಶಲಕ್ಷಣ ಪರ್ವ, ಸ್ಯಾದ್ವಾದ ಮತ್ತು ಸಪ್ತಭಂಗಿ,—ಇವು ಜೈನ ಸಂಸ್ಕೃತಿ ವಿಷಯಕವಾದರೂ ಭಾರತೀಯತೆಗೆ ವಿರೋಧವಲ್ಲದ ನಿಬಂಧಗಳು. ದೀಪಾವಳಿ ಮತ್ತು ಮಹಾವೀರ ನಿರ್ವಾಣಕ್ಕೆ ಆಧಾರಪೂರ್ವಕ ಸಂಬಂಧ ತೋರಿಸಿ ರಚಿಸಿದ್ದಾರೆ ಇನ್ನೊಂದು ನಿಬಂಧ; ಹಾಗೆಯೇ ಶಿಕ್ಷಣದ ಪ್ರಗತಿ ತ್ತು ಮಹಿಳೆಯರು ಎಂಬ ವಿಷಯದ ಮೇಲೆ ಲಿಖಿಸಿದ್ದಾರೆ ಮತ್ತೊಂದನ್ನು.

'ದಯೊದ್ಧರ್ಮ'ವೆಂದು ಹೆಸರಾದ ಜೈನ ಮತದ ತತ್ವಗಳಲ್ಲಿ ಹಿಂದೂ ಧರ್ಮದಲ್ಲಿಂದು ಸಮಾವೇಶಗೊಂಡವುಗಳೆಷ್ಟೋ! ಆದುದರಿಂದಲೇ 'ಭಾರತೀಯ ಧರ್ಮ' ಎಲ್ಲ ಮತ—ಧರ್ಮಗಳ ಸಾರ ಹೀರಿ ಸಿದ್ಧವಾಗಿದೆ. ಇದನ್ನು ಯಾರೂ ನಿರ್ಮಿಸಲಿಲ್ಲ; ತಾನಾಗಿಯೇ ಅದು ರೂಪಿತವಾಗಿದೆ. ಆದುದರಿಂದ ಪಂ| ಶಾಸ್ತ್ರಿಗಳ ನಿಬಂಧ ಸಂಕಲನವಿಂದು ಭಾರತೀಯತೆಗೆ ಸಂಬಂಧಪಟ್ಟಿದ್ದು. ಕನ್ನಡ ಬಲ್ಲವರೆಲ್ಲರೂ ಓದಿ ತಿಳಿದುಕೊಳ್ಳುವ ಅದರಲ್ಲಿ ನಿರೂಪಿತವಾದಂತೆ ನಡೆಯುವ ಪ್ರಯತ್ನ ಮಾಡಬೇಕು. ಸರ್ವಸಾಧಾರಣವಾಗಿ ಪ್ರೌಢವಾಗಿಯೇ ಇರುವ ಶಾಸ್ತ್ರಿಗಳ ವಾಕ್‌ಶೈಲಿ ಇಲ್ಲಿ ಜನಸಾಮಾನ್ಯನಿಗೂ ನಾಟುವಂತಹ ಸರಳ ರೂಪ ಗ್ರಹಿಸಿದೆ. ಇವರಿಂದ ವಿಷಯದ ವಜ್ರವನ್ನು ಕುಂದಣದಲ್ಲಿರಿಸಿದಂತಾಗಿದೆ.

— ಗೋರಾ.

ಕಾಮರಾಜರ ದೊಡ್ಡ ಹೊಣೆಗಾರಿಕೆ

(೧ನೇ ಪುಟದಿಂದ)

ಹಿರಂಗದಲ್ಲಿಯೂ ಪರಿಶುದ್ಧವಿರುವಂತೆ ಮಾಡಬೇಕು ಹದಗೆಟ್ಟ ಆಡಳಿತ ಯಂತ್ರವನ್ನು ಮಿತಿಮೀರಿದ ಭ್ರಷ್ಟಾಚಾರ—ದುರ್ನೀತಿಗಳನ್ನು ತಡೆದು ಕಾಂಗ್ರೆಸ್ ಪಕ್ಷದಲ್ಲಿಯೂ ಆಡಳಿತೆಯಲ್ಲಿಯೂ ಜನತೆ ವಿಶ್ವಾಸ ಪಡುವಂತೆ ಮಾಡಬೇಕು. ಪಕ್ಷದಲ್ಲಿಯೂ ಆಡಳಿತೆಯಲ್ಲಿಯೂ ಸಾಕಷ್ಟು ಪಳಗಿದ ಕಾಮರಾಜರು ಇವೆಲ್ಲವುಗಳನ್ನು ಉಚಿತ ರೀತಿಯಲ್ಲಿ ಸಾಧಿಸುವರೆಂದು ನಂಬಬಹುದು

ಉಪಸಂಹಾರ

ಕಾಂಗ್ರೆಸಿಗರಿಗೆ ತ್ಯಾಗದ ಪಾಠವನ್ನು ಬೋಧಿಸುವುವವರಲ್ಲಿ ಕಾಮರಾಜರೇ ಮೊದಲಿಗರಲ್ಲ. ಪ್ರಧಾನಿ ನೆಹರೂರವರು ಈ ಹಿಂದೆಯೇ ಅನೇಕ ಬಾರಿ ಹೇಳಿದ್ದಾರೆ, ಅಧಿಕಾರ ಪದವಿಗೆ ಅಂಟಿಕೊಳ್ಳುವ ಹವ್ಯಾಸವನ್ನು ಕಾಂಗ್ರೆಸಿಗರು ಬಿಟ್ಟುಕೊಟ್ಟು ಪಕ್ಷದ ಸಂಘಟನೆಯಲ್ಲಿ ಆಸಕ್ತರಾಗಬೇಕು—ಎಂದು. ಹೇಳಿದವರೇ ಮಾಡಿ ತೋರಿಸಬೇಕು ನಿಜ. ಪ್ರಧಾನಿಯವರು ಪರಿಸ್ಥಿತಿವಶದಿಂದಾಗಿ, ತಾನೆಂದಂತೆ ಮಾಡಿ ತೋರಿಸಲು ಅಸಮರ್ಥರಾಗಿದ್ದರು, ಇಂದಿಗೂ ಅವರಿಗೆ ಅಧಿಕಾರ ತ್ಯಾಗ ಮಾಡುವ ತಹತಹವಿದ್ದರೂ ಅದು ಅಸಾಧ್ಯವೇ ಆಗಿದೆ. ಆದುದರಿಂದ, ಕಾಮರಾಜರು ಯೋಜನೆಯನ್ನು ರೂಪಿಸಿ, ತಾವೇ ಮೊದಲು ಹೊರ ಬಂದು ಪಕ್ಷ ಸಂಘಟನೆಯ ದೀಕ್ಷೆ ತೊಟ್ಟಾಗ, ಅವರನ್ನೇ ಈ ಕಾರ್ಯಕ್ಕೆ ಅಧ್ವರ್ಯವನ್ನಾಗಿ ಆಯ್ದುಕೊಂಡುದು ಸಮಂಜಸ ಕಾಮರಾಜರು ತಹ ನಿಸ್ಪೃಹ ವ್ಯಕ್ತಿಯಿಂದು ಅಂತಾರಾಷ್ಟ್ರೀಯ ರಾಜಕಾರಣದಲ್ಲಿಯೂ ತನ್ನ ಹೆಸರನ್ನು ಚಿರಸ್ಥಾಯಿಗೊಳಿಸಿದರು. ಇವರ ಯಶಸ್ಸಿನಲ್ಲಿ ಕಾಂಗ್ರೆಸ್ಸಿನ ಭವಿಷ್ಯ, ದೇಶದ ಹಿತವಡಗಿದೆ ತಾನು ಹೊರಬೇಕಾಗಿರುವ ಹೊಣೆಗಾರಿಕೆಯ ಅರಿವು ಕಾಮರಾಜರಿಗೆ ಸಂಪೂರ್ಣವಾಗಿದೆ; ಅದನ್ನು ನಿರ್ವಹಿಸುವ ಶಕ್ತಿ, ಅನುಭವಗಳೂ ಅವರಿಗಿವೆ. ಕಾಂಗ್ರೆಸಿಗರ ಹೃತ್ಪೂರ್ವಕ ಸಹಾಯ—ಸಹಕಾರ ಮಾತ್ರ ಅವರಿಗೆ ದೊರಕಿರುವುದು ಅಗತ್ಯವಿದೆ. ಇದೂ ಲಭಿಸುವುದೆಂದು ವಿಶ್ವಾಸವಿಡಬಹುದಲ್ಲವೆ?

ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ.

14 CT ಚಿನ್ನದ ಆಭರಣಗಳಲ್ಲಿ 58⅓% ಶುದ್ಧ ಪುತ್ಥಳಿ ಚಿನ್ನ ಇರುತ್ತದೆ.

ಬೇಡದಿದ್ದಲ್ಲಿ 1 ರೂ ಕಮ್ಮಿಯಲ್ಲಿ ಯಾವಾಗಲೂ ಬಜಾರು ಧಾರಣೆಗೆ ಪಡೆ ಕೊಳ್ಳುವ ಭರವಸೆ ಕೊಡುತ್ತೇವೆ.

ವಿ. ಸೂ ಹಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡೆಕೊಳ್ಳುವರೆ ಸರಕಾರದ ಲೈಸನ್ಸ್ ಸಿಕ್ಕಿರುತ್ತದೆ.

ಮದುವೆ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡೆ ಕೊಂಡು ಖಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.

ಶ್ರೀ ಕೃಷ್ಣಾ ಜ್ಯುವೆಲರಿ ಮಾರ್ಟ್

ತೆಂಕಪೇಟೆ — ಉಡುಪಿ.

ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.

ಫೋನ್ ನಂಬ್ರ: 66

ಅವಿಶ್ವಾಸ ಗೊತ್ತುವಳಿ

(೩ನೇ ಪುಟದಿಂದ)

ಯಾಕಂತೆ?

ನೋಡು, ಅಲ್ಲಿ ಹೊಕ್ಕ ರವಿಶಂಕರ ಶುಕ್ಲರು ಮಾರಿಗೀಡಾದರು; ಮತ್ತಿಬ್ಬರು ಅಕಾಲದಲ್ಲೇ ಪದಚ್ಯುತರಾದರು; ಹಿಂದಿನ ಮಂಡಲೋಯಿಯವರನ್ನು ಕಾಮರಾಜ ಸೂತ್ರ ಎಳೆದುಕೊಂಡಿತು. ಇನ್ನು ತನ್ನ ಗತಿ...

ಓ....ಹಾಗೂ ಇದೆ ಅಲ್ವೆ? ಅದ್ರೆ ಮಾರಿ ಗೀರಿ ಏನೂ ಇಲ್ಲಾಂತನ್ನೋವರಿಗೂ ಇದೇಂತಾಯ್ತು!

ನೋಡು, ಇಲ್ಲಾಂತನ್ನೋರು ಇಲ್ಲ ಅಂದ್ರಾ ಇರೋದು ಸುಳ್ಳೆ? ಇಲ್ಲದ ಬೇಕಿಲ್ಲಾ ಅಂದ ಹಾಗೆ?

ಸರಿ ಹಾಗಾದರೆ, ನೀನಂತೂ ಇದೆಯೆನ್ನುತ್ತೀರಲ್ಲಾ; ಇಂದಾದ್ರು ಒಪ್ಪಿಕೊಂಡಲ್ಲ ಹಾಗೆ?

ಅದೆಲ್ಲಾ ನೋಡು ಅವರವರ ನಂಬುಗೆ. ನನ್ನ ನಂಬುಗೆ ನನಗೆ ಹೆಚ್ಚು; ನಿನ್ನದು ನಿನ್ಗೆ.

ಪುನಃ ಶುರುವಾಯ್ತು ನಿನ್ನ ಉದ್ದರುಟು.

ಅದ್ರಿಂದ ಮಾತನ್ನು ಇಲ್ಲಿಗೇ ನಿಲ್ಲಿಸಿಬಿಡೋದು ಚಂದಾಂತ ಕಾಣುತ್ತೆ.

ಹೋಗ್ಲಿ ಬಿಡಿ. ಊರ ಮೇರೆ ಊಬಿದ್ರೆ.

ಹಾಗೆಲ್ಲಾ ಹೇಳೋಬಾರ್ದು. ಮತ್ತೆ ನೀನು ಹಾಗಂದ್ರೆ ನಾನು ಸುಮ್ನಿರೋದಾಗೋಲ್ಲ.

ಬೇಡಿ, ಬೇಡಿ ಬನ್ನಿ ರಾತ್ರೆ ಊಟ ಸಮಯಾಯ್ತು.

ಹ್ಞಾಂ ಹಾಗೆ ಹೇಳು ಮತ್ತೆ.

—ಗೋರಾ

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. S. No. 444/1963

The Canara Industrial and Banking Syndicate Ltd Udipi ಯದರ ರಿಕವರಿ ಆಫೀಸರ್ — M S. ಭಂಡಾರಿ, — ವಾದಿ

ಮತ್ತು

1. H. ಶ್ರೀನಿವಾಸ ಪೈ 2. H. ವಿಠೋಬ ಪೈ, 3. H. ಪುಂಡಲೀಕ ಪೈ ನರಸಿಂಹ ಪೈಗಳ ಮಕ್ಕಳು ಕಾರ್ಕಳ ತಾಲ್ಲೂಕು ಹೆಬ್ರಿ ಕಸಬಾ ಕೆಳಪೇಟೆ —ಪ್ರತಿವಾದಿರ

ಇವರೊಳಗೆ

ಸದ್ರಿ ಬೇಂಕಿಗೆ, ನಿಮ್ಮಿಂದ ದಾವಾ ಮೊಂಡ ಪ್ರೊಮಿಸರಿ ನೋಟು ಪ್ರಕಾರ ಬಹ ಅಸಲು ಬಡ್ಡಿ ರೂಪಾಯಿ 3810/69ನ್ನು ಕ್ಯಾರಿಟ ಮೊರ್ಗೇಜ್ ಡೀಡಿಗೆ ಕಾರಣವಾದ ಆಸ್ತಿಯ ಮಾರಾಟದಿಂದ ಕೂಡಾ ಬರಮಾಡಿಕೊಳ್ಳುವ ಕುರಿತು ಸದ್ರಿ ಬೇಂಕಿನವರು ನಿಮ್ಮ ಮೇಲೆ ಮಾಡಿದ ಈ ದಾವಾ ಮೇಲ್ಕಂಡ ಕೋರ್ಟಿನಲ್ಲಿ ತಾರೀಕು 31-10-63ರಲ್ಲು ಬೆಳಿಗ್ಗೆ 10ಗಂಟೆಗೆ ತಸ್ಕಿಗೆ ಇಟ್ಟಿರುವದರಿಂದ ಸದರಿ ವಾದಿಯ ವಿಷಯದಲ್ಲಿ ಉದಾಸೀನತೆಯು ಇರುವಲ್ಲಿ ನೀವು ಸದರಿ ತಾರೀಕಿನಲ್ಲಿ ಸ್ವತಹ ಅಥವಾ ವಕೀಲರ ಮುಖಾಂತರ ಹಾಜರಾಗಿ ಸದರಿ ತಾರೀಕಿನಲ್ಲು ಜವಾಬು ಮಾಡಿಕೊಳ್ಳಬೇಕಾಗಿಯೂ, ತಪ್ಪಿದರೆ ಸದರಿ ದಾವೆಯು ನಿಮ್ಮ ಗೈರಹಾಜರಿಯಲ್ಲಿ ತೀರ್ಮಾನಿಸಲ್ಪಡುತ್ತದೆಂಬುದಾಗಿಯೂ, ಈ ಮೂಲಕ ನಿಮಗೆ ತಿಳಿಯಪಡಿಸೋಣಾಗುತ್ತದೆ.

A. N S. Achar

Advocate for Plaintiff

Karkala, 14—10—1963

ಶಾಲೆ, ಕೊಲೇಜು, ಪಂಚಾಯತ ಮೊದಲಾದ ಯೂವತ್ತೂ ವಾಚನ ಭಂಡಾರಗಳಿಗೆ ಯೋಗ್ಯವಾದ—
ಉಡುಪಿಯ ನವಭಾರತ ಪುಸ್ತಕ ಭಂಡಾರದಲ್ಲಿ ಲಭ್ಯವಿರುವ
ಕತೆ, ಕಾದಂಬರಿ, ನಾಟಕ, ಜೀವನ ಚರಿತ್ರೆ ಇತ್ಯಾದಿ ವಿವಿಧ ಪುಸ್ತಕಗಳು

ಕತೆಗಳು

ಅನ್ನಪೂರ್ಣಾ	ನಿರಂಜನ	1	00
ರೂಪಾ	ಸರೋಜಿನಿ ಮಹಿಷಿ	1	00
ಕನಕ ಮಹಿಮಾದರ್ಶ	ಭೀಮಾಚಾರ್ಯ	1	00
ಸಿಟ್ಟ್ಯಾಕೊ ರಾಯ ನನಮ್ಯಾಲ	ಬೆಳಗಲಿ	1	00
ಹುಚ್ಚರ ರಾಜ್ಯ	ಶಿವಕುಮಾರ	0	75
ಪೆದ್ದಂ ಕತೆಗಳು	ವಿ. ಜಿ. ಭಟ್ಟ	1	00
ಆಣೆಕಲ್ಲು (ಸಂಕಲನ-೧)		0	75
ಪುಟ್ಟ ಮಲ್ಲಿಗೆ	ಗೊರೂರು	1	20
ಸನ್ಯಾಸಿ ದಿಬ್ಬ	ಸಿಂಪಿ. ಲಿಂಗಣ್ಣ	0	75
ಮೃತ್ಯು ಮಂಥನ	ಕೆ. ಎಲ್. ಅಂಣಿಗೇರಿ	0	75
ಹಂಬಲ	ಕೃಷ್ಣಮೂರ್ತಿ ಕಿತ್ತೂರ	1	00
ಚಿತ್ರ ಪಲ್ಲವ	ಕೊಟ್ಟಲಗಿ ರಾಮಚಂದ್ರ	1	37
ಬಲವಂತದ ಮದುವೆ	ಗೋರೂರು	0	50
ಮಾನವನ ಅವತಾರ	ಪ್ರಕಾಶ ಬುರ್ಡೆ	0	80
ದೇಶಭಕ್ತ	ಹೆಗಡೆ	0	50
ಪ್ರಣಯ ಕತೆಗಳು	(ನಾಡಿಗೇರ)	0	50
ಕಪಾಳ ಮೋಕ್ಷ	ಸಿಂಪತಿ	2	00
ಮಹಾತ್ಮಾ	ಜಿ. ಆರ್. ಹೆಗಡೆ	1	25
ಮಾರ್ಗದರ್ಶಕ ಎಂ. ವಿ	ಸೀತಾರಾಮಯ್ಯ	1	50
ಬೃಂದಾವನ	ಶ್ರೀವಿಕ್ರಮ	0	75
ಹಗಾರದಾಕೆ	ಭೀ ಗ. ಮ. ದೇಸಾಯಿ	0	75
ವಿಜಯಶ್ರೀ	ಮಿರ್ಜಿ ಅಣ್ಣಾರಾಯ	1	00
ಆದರ್ಶ ಚಿತ್ರಗಳು	ಸಂಕಲನ	1	50
ನಾಲ್ಕು ಕಥೆಗಳು	ಬಿ ಈಶ್ವರ ಭಟ್ಟ	1	00
ನಾಟಕ ಕಥೆಗಳು	ಬಿ. ಎಮ್. ಶರ್ಮ	0	75
ಪ್ರವಾದಿ	ದೇಶಾಯಿದತ್ತಮೂರ್ತಿ	1	25
ಮಹಾಪತಿ	ನರದಂರಾಜ ರಾವ್	1	25
ಕಾಂಪೂಷನ ಚರಿತ್ರೆ	M. S ಪುಟ್ಟಣ್ಣ	0	63
ಕಾಂಗ್ರೆಸ್ಸಿನ ಇತಿಹಾಸ	ಗುರುನಾಥ ಜೋಶಿ	0	75
ಮೈಸೂರು ನಿರ್ಮಾಪಕರು	ರಾಜಾರಾವ್	1	00
ಅವಿವಾಹಿತೆ	ಶ್ರೀನಿವಾಸ ಹಾವನೂರ	1	25
ಬುದ್ಧ ದೇವ	ಸ. ಶ್ರೀನಿವಾಸ ಆಚಾರ್	0	50
ಮಣಿ ಮೇಖಲೆ	ಬಿ ಶಂಕರ ಭಟ್ಟ	0	75
ಮಾರ್ಟಿನನ ಸಾಹಸ	,,	0	75
ವಿಶಾಖಾ ಮೃಗರ ಮಾತೆ	ಬಿ ಎಮ್. ಶರ್ಮ	0	60
ಮಂಗಳ ಗೌರಿ	ಎಸ್. ಗುರು ರಾವ್	0	38
ಹತೀಮ್ ತಾಯಿ ಭಾಗ ೧	ಅಯ್ಯಂಗಾರ್	0	31
,, ,, ೨	,,	0	37
ಕಲ್ಪನಾ ವಿಲಾಸ	ಪಿ. ವೇಣುಗೋಪಾಲ	0	75
ಗಾಯದ ನೋವು	ಪಿ. ವೆಂಕೋಬಾಚಾರ್ಯ	1	25
ಮೋಪಾಸನ ಓಲೆಗಳು	,,	1	25
ಬದುಕಿನ ಚಿತ್ರಗಳು	ಎನ್. ವಿ. ರಾವ್	1	00
ಕೊನೆಯ ಹಾಡು	ಎಂ. ಎಸ್. ಶೆಟ್ಟಿ	1	50
ಗಾಯ್ ಡಿ. ಮೋಪಾಸನ ಕತೆಗಳು	ಚುಳಕಿ	1	00
ನಮ್ಮ ಬದುಕು	ಆನಂದ ಕಂದ	0	88
ವೃಷ್ಟಿ ಧಾರೆ	ಧನ್ವಂತ	0	75
ಸೈಮನನ ತಂದೆ	ಸಂಕಲನ	1	75
ಉರ್ದೂ ಕಥಾವಲಿ	ಗುರುನಾಥ ಜೋಶಿ	0	50
ಬೇಟಿ ಮತ್ತು ಇತರ ಚಿತ್ರಗಳು	ಎನ್. ಸೂರಪ್ಪ	0	75
ನ್ಯಾಯ ಕ್ಷಮೆ	ಟಿ ಆರ್. ಭಾಗವತ	0	50
ಮುದ್ದಿನ ಕಣಿ	ಗೊ. ವೆಂ. ಚುಳಕಿ	0	75
ರೂಪರಾಶಿಗಳ ಸಂತೆ	ಎಂ. ಬಿ. ಮಂಕಿಣಿ	0	94
ತ್ರಿ ಚಿತ್ರಯ	ಸಂಕಲನ	0	38
ಬಾಳಿನ ಬೆಳೆ	ಯಶೋದಾಬಾಯಿ	0	75
ಅತಿ ದೂರದ ಜಗತ್ತಿನಲ್ಲಿ (ಹೆಗಡೆ ಬಂಧುಗಳು)		0	75
ಮುಂದೇನು	ದೇವುಡು	0	50
ದೆವ್ವದ ಕಥೆಗಳು	ಎಮ್. ಜಿ ಅಡಿಗ	0	50
ವಾರದ ಹುಡುಗ	ನಿರಂಜನ	1	25
ಮಹಾತ್ಮಾ	ಮಹಾಬಲ ಭಟ್ಟ	0	38
ನೆರಳು	ಎಕ್ಕುಂಡಿ	1	00
ರಾಗವಿರಾಗ	ಪಂಢರಿನಾಥಾಚಾರ್ಯ	1	75
ಕಲ್ಪನೆಯ ಕನಸು	ಕೆ. ಜಿ. ಶೆಟ್ಟಿ	0	62
ಅಂತರಂಗದ ಕತೆಗಳು	ಸಂಕಲನ	1	25
ಕಥಾ ಕೌಮುದಿ	ಎಸ್. ಗೋಪಿಚಂದ್ರರಾವ್	1	50
ಗೀ ವಿಜಯ ಮುಖ್ಯಪ್ರಾಣ	ಉಪಾಧ್ಯಾಯ	0	50
ಅಮೇರಿಕದ ಆರು ಕತೆಗಳು	ಕು. ಶಿ. ಹ ಭಟ್ಟ	1	75
ರವೀಂದ್ರರ ಕಿರುಕತೆಗಳು	ಮಾಂಚ್ರೇಕರ	0	95
ನ್ಯಾಯ ದೇವತೆಯ ಮಂದಿರದಲ್ಲಿ	ತಲಚೇರಕರ	1	20
ಕಸ್ತೂರಿ	ಶ್ರೀಮತಿ ವಾಣಿ	0	25
ನಾಡ ಕತೆಗಳು	ಸಂಕಲನ	0	25
ಮಧುವನ	,,	3	00
ನಂದಾದೀಪ	ಕೊರಡ್ಕಲ್	0	87
ಭಾರತೀಯ ಕಥೆಗಳು	,,	1	12
ನಾರೀ ಹೃದಯ	ಸುಬ್ರಹ್ಮಣ್ಯಂ	1	50
ನಗೆ ನೋಟಗಳು	ಕೆ. ವಿ. ಶೆಣೈ	1	25
ಅನ್ನದೇವರು ಮತ್ತು ಇತರ ಕಥೆಗಳು	ತ್ರೈ	1	25
ಆಕಾಶ ಗಂಗೆ	ಎಸ್. ವೆಂಕಟರಾಜ	1	75
ದಶಾಪರಾಧಗಳು	ಎಮ್. ವಿ. ಹೆಗ್ಡೆ	0	57
ಕದಂಬ	ರಾಜವಾಡೆ	1	25
ಸಪ್ತ ಸಾಗರ	ಎಸ್. ವೆಂಕಟರಾಜ	0	75
ಚಿಗುರು	ಸಂಕಲನ	0	62
ನನ್ನ ಕಥೆಗಳು	ಕೆ ವಿ. ಆಚಾರ್ಯ	0	62
ನಕ್ಕರೂ ನಗಬಹುದು	ದೇವಕಿ ಎಂ. ಶೆಟ್ಟಿ	0	62
ಮದವೆ ಸೀರೆ	ಸ. ಬ್ರಹ್ಮಣ್ಯಂ	1	00
ಸೀತಿ ವಿನೋದ ಕತೆಗಳು	ವೀರಪ್ಪ ಯಗಟಿ	1	00
ಪ್ರೇಮ ಪ್ರವಾಹ	ಸಂಕಲನ	0	50
ದಡೆವಂತ ದೊಡ್ಡಣ್ಣ	ರಾ. ಅಯ್ಯಂಗಾರ್	0	50

ಕಾದಂಬರಿಗಳು

ಮೂರು ಮುಖ	ನಾರಾಯಣ	1	50
ಎಲೆ ಮರೆಯ ಹೂ	ಸ ರಾಮರಾಯ	1	15
ನಂಬಿಕೆಯ ನೆರಳು	ವೈ ಮಹಾಲಿಂಗ ಭಟ್ಟ	1	25
ಪಡೆದು ಬಂದ ಭಾಗ್ಯ	ಉಷಾದೇವಿ	2	00
ವೃಂದ	ಪಿ. ವೆಂಕೋಬಾಚಾರ್ಯ	1	50
ಶಕುಂತಲಾ	ನಾ.ಸಿ ಫಡಕೆ	2	75
ಮಾಘ ಮಾಸ	ಡಾ ರಾಜಾರಾಮರಾವ್	3	00
ಅವಳಿ ಸಹೋದರರು	ರಮೇಶ	1	25
ಬೆಳ್ಳಿ ಮೋಡದ ಮುಂಜಾವು	ಮೇಘರಾಜ	1	25
ಆಶ್ರಮ ವಾಸಿ	ಬಸವರಾಜ ಕಟ್ಟೀಮನಿ	1	50
ಪದ್ಮಾ ನದಿಯ ನಾವಿಕ	ಶಿವಾನಂದ ಜೋಶಿ	1	50
ಮೃಗಜಲ	ಪಿ. ಸದಾಶಿವ ಭಟ್ಟ	1	75
ದೇವರ ಸಾಮ್ರಾಜ್ಯ	ಕೆ. ಎಸ್. ಪುತ್ತೂರು	2	00
ಬಂಗಾರದ ಹೆಣ್ಣು	ಎಮ್. ದಸ್ತಗೀರ್	0	87
ರಾಧಾರಾಣಿ	ಮುಲ್ಕಾರಿ	0	37
ಯಮದೂತ	ರಾ. ವೋ. ವಿಶ್ವಾಮಿತ್ರ	1	25
ಈ ಬುವಿ ಈಬಾಳು	ಹಾ. ವೆಂ. ರಾಮಸ್ವಾಮಿ	1	50
ಜೀವದಾನ	ನಾರಾಯಣ ಹುಲಗಿ	1	00
ಹತ್ತು ಹೆಡೆಯ ಹಾವು	ದು ನಿಂ ಬೆಳಗಲಿ	1	50
ಅವಳೇ ನನ್ನ ಪ್ರೇಯಸಿ	ಕೆ. ಎಲ್. ಅಂಣಿಗೇರಿ	0	75
ನರ ಭಕ್ಷಕಗಳು	ಜೆ. ಹೆಚ್. ಪೀಟರ್ ಸನ್	0	80
ಮಂಗಲಾ	ಎಮ್. ದಸ್ತಗೀರ್	1	50
ಕುಮಾರಿ ಸುನೇತ್ರ	ತಲಚೇರಿಕರ	0	75
ಬಿಳಿ ಕೊಕ್ಕರೆ	ಗೌರೀಶ ಕಾಯ್ಕಿಣಿ	1	25
ರಾಕ್ಷಸನ ನೆರಳು	ಲಿಂಗಣ್ಣಯ್ಯ	1	50
ಹೊನ್ನಿನ ಹಂಬಲ	ಐಯ್ಯಂಗಾರ್	2	75
ಶಾಂತಿ ಸದನ	ನಾಗೇಶ ಶ್ಯಾನುಭಾಗ	1	50
ಕಾಂತಾಪುರದ ವಜ್ರ	ಎಸ್ ಎನ್. ಕೋಡಕಣಿ	1	00
ಕೊಕ್ಕೊರೆಕೋ	ಡಿ. ವಿ. ರಾಘವೇಂದ್ರ	1	00
ಸಿದ್ಧಾರ್ಥ ಬಿ. ಎಸ್. ಆರ್.	ಐಯ್ಯಂಗಾರ್	2	00
ಅವಳ ಋಣ	ಮುರಲೀಧರ	1	50
ಮಾಲತೀ ಮಂದಿರ	ಹೊ. ಗುಡ್ಡಪ್ಪ	2	00
ತರಲಾ	ಸ್ವಾಮಿ ಸತ್ಯ ಭಕ್ತರು	1	00
ಬಿರುಗಾಳಿ ಭಾಗ ೧	ನಾ. ಸೀ. ಫಡಕೆ	1	50
ವೈಕುಂಠನ ಮೃತ್ಯು ಪತ್ರ	ಶರತ್	1	00
ಮನ್ನಾ ಮದುವೆ	ಎಂ. ಜಿ. ವೆಂಕಟೇಶಯ್ಯ	2	00
ಬೆಂದ ಜೀವಿ	ರುದ್ರ ಮುನಿಸ್ವಾಮಿ	1	75
ಗುಣ	ಪಿ ವೆಂಕೋಬಾಚಾರ್ಯ	1	38
ಪುನರಾಗಮನ	ಧನ್ವಂತ	1	25
ಬಂಧನ ಬಾಂಧವ್ಯ	ಸೇವ ನಮಿರಾಜಮಲ್ಲ	1	00
ಜ್ಞಾನ ಪ್ರಭಾ	ಧನ್ವಂತ	1	00
ಇನೆತ್	ಪಿ. ವೆಂಕೋಬಾಚಾರ್ಯ	1	75
ಮಾಧವ ಲೀಲೆ	ವೆಂಕಟೇಶಯ್ಯ	1	50
ಹೊಸ ಹೆಜ್ಜೆ	ಭಾರ್ಗವ	0	63
ಯಾತ್ರಿಕ	ಪ್ರ. ಕು ಸನ್ಯಾಲ	1	50
ಪ್ರಿಯತಮೆಯ ಪಿಕೂರಿ	ಎನ್. ಗುಂಡ ಶಾಸ್ತ್ರಿ	1	50
ದ್ವೀಪ ರಹಸ್ಯ	ಚರಣ	1	00
ಪರಿಹಾರ	ದತ್ತಾತ್ರೇಯ ಕುಲಕರ್ಣಿ	2	00
ಕೈವಾಂಸ	ಜನಾರ್ಧನ ಗುರ್ಕಾರ	1	50
ತಿರುಗಿದ ಕುರ್ಚಿ	ಬಾಲಚಂದ್ರ	2	00
ಅಧ್ಯಕ್ಷರ ಮಗಳು	ಎನ್. ನರಸಿಂಹ	2	00
ಸೇತುವೆಯಲ್ಲಿ ಮರಣ ಕಾದಿತ್ತು	ಸೇ. ನ. ಮಲ್ಲ	1	25
ಅಂತಃಕರಣ	ಅಯ್ಯಂಗಾರ	1	00
ಕೃಪಾನಿಧಿ	,,	1	00
ಜೀವನ ಜೋಕಾಲಿ	ಎಂ. ದಸ್ತಗೀರ್	1	50
ಜ್ವಾಲಾಮುಖಿ	ಡಿ ವಿ. ರಾಘವೇಂದ್ರ	0	63
ಭೀಮಕಾಯ	ಎಸ್. ಎಲ್. ಭೈರಪ್ಪ	2	50
ಗುರುಕುಲ	ಶ್ರೀಕೃಷ್ಣ ಪಾಟೀಲ	1	00
ಕಾಂಚನ ಮೃಗ	ವಿ ಸ. ಖಾಂಡೇಕರ	3	00
ಕಾಂಚನಾ	ಜೆ. ಬಿ. ಪಾಟೀಲ	1	50
ಗೆದ್ದ ಹೆಣ್ಣು	ನವಗಿರಿನಂದ	1	25
ಅಜ್ಞಾತವಾಸ	ಎಚ್. ಎಂ. ವೀರಭದ್ರಪ್ಪ	1	50
ಬದುಕಿನ ಸುಳಿಯಲ್ಲಿ	ಸೇವ ನಮಿರಾಜ ಮಲ್ಲ	2	00
ಕರಿಚರ್ಮ	ಸೇವ ನಮಿರಾಜ ಮಲ್ಲ	2	50
ಪತ್ತೇದಾರನ ಪರಾಜಯ (ವಿಕ್ರಮರಾಯ)		1	75
ಅಪರಿಶುದ್ಧರು	ನವಗಿರಿನಂದ	1	50
ಅಳಿದ ಮೇಲೆ	ಕಾರಂತ	2	75
ಗೋಳಿನ ಬಾಳು	ಪಿ ಡಿ. ನಾಯಕ್	0	50
ಮಂಗಳ ಗ್ರಹದ ಮಾಯಾಂಗನೆ	ಕಿದಿಯೂರು	0	75
ಕೋಭಾರಾಣಿ	ಆರ್. ಯು. ಪಾಟೀಲ	0	75
ನಗ್ನ ನೃತ್ಯ	ಪ. ಲೊ. ಬಂಕಾಪುರ	0	75
ಮಾಲಿನಿ	ಶೀಲಾ ರಾವ್ ಕಿದಿಯೂರು	0	50
ಹೆಣ್ಣು ಹೃದಯ	ಎಚಾರೈ	0	50
ವಿಲಾಸಿನಿ	ಹ. ರಾ. ಕಿದಿಯೂರು	0	50
ಹುಚ್ಚು ಪ್ರಣಯ	,,	0	60
ಆತ್ಮ ಗೆದ್ದಿತು	ಶೀಲಾರಾವ್ ಕಿದಿಯೂರು	0	50
ಮಿಲನ	ಪಿ. ಚಿನ್ನಬಸವನ್	0	75
ಹೆಸರು ಹಂಸ	ನಚಿಕೇತ	2	00
ಯಾರು ಲಕ್ಷಿಸುವರು?	ಕಾರಂತ	6	00
ಭಾಣ ಭಟ್ಟನ ಆತ್ಮ ಕಥೆ	ಕೃಷ್ಣಮೂರ್ತಿ	3	50
ನಡು ಹಗಲಿನ ಕಗ್ಗತ್ತಲೆ	ಕು. ಶಿ ಹರಿ ಭಟ್ಟ	2	50
ಮೋಹದ ಮಹಾಜಾಲ	ವೀರಪ್ಪ ಯಗಟಿ	1	75
ಭಾವಾರ್ಚನೆ	ನಚಿಕೇತ	1	25
ಋಣ ಯಾತ್ರೆ	do	1	50
ಹಸುರು ಹಂಸ	do.	2	00
ಹೃದಯ ವಿದ್ರಾವಕ ಛಾಯಾಪತಿ		0	28
ಸನ್ಯಾಸಿಯ ಸೆರೆಗಿನಲ್ಲಿ	ಕೆ. ಕೆ. ಶೆಟ್ಟಿ	0	75
ಜಮಿನ್ದಾರ	ಹೊಸ ಮನೆ	1	50
ಬಾಳಿನ ಬೆಡಗು	ನಾರಾಯಣ ಭಟ್ಟ	1	25
'ಲೋಪಾ ಮುದ್ರೆ	ರಂಗನಾಥ	1	00
ಕುಲವಿಲ್ಲದ ಹೆಣ್ಣು	ಪಿ. ವೆಂಕೋಬಾಚಾರ್ಯ	1	50

ಘಂಟಿನಾದ	ಕು. ಶಿ. ಹರಿದಾಸ ಭಟ್ಟ	2	00
ಶವಗಳ ನಾಗಾಟ	ಸುಬ್ರಾಯಕೃಷ್ಣ ಹೆಗಡೆ	0	62

ಜೀವನ ಚರಿತ್ರೆಗಳು

ಜವಾಹರಲಾಲ್ ನೆಹರು	ಎ. ಕೆ. ಪುಟ್ಟರಾಮು	1	00
,,	ನಾರಾಯಣ ಶರ್ಮ	0	25
ಅಬ್ರಹಾಂ ಲಿಂಕನ್	ಅನಂತನಾರಾಯಣ	1	50
ಮಹಾತ್ಮಾ ಗಾಂಧಿ	ಎನ್. ವಿ. ನಾ. ರಾವ್	2	25
ಭಾರತೀಯ ಮಹಾ ಪುರುಷರು	ಗೋರಾ	1	50
ಜಾರ್ಜ್‌ವಾಶಿಂಗ್‌ಟನ್	ಯು. ಎಲ್. ಆಚಾರ್ಯ	1	25
ವಿಖ್ಯಾತ ಜೀವಿಗಳು	ಕವಲಿ	0	75
ಮಹಾತ್ಮಾ ಗಾಂಧಿಜಿ	,,	0	37
ಸರೋಜಿನಿ ನಾಯ್ಡು	,,	0	37
ಅಬ್ದುಲ್ ಕಲಂ ಅಜಾದ್	ಶರ್ಮ	0	25
ಈಶ್ವರಚಂದ್ರ ವಿದ್ಯಾಸಾಗರ	ಕವಲಿ	0	25
ರವೀಂದ್ರರು	ಶರ್ಮ	0	25
ರಾಮಮೋಹನರಾಯ್	ಕವಲಿ	0	40
ದಾದಾಬಾಯಿ ನೌರೋಜಿ	,,	0	40
ಝಾಂಸಿಯ ಲಕ್ಷ್ಮೀಬಾಯಿ	,,	0	40
ರಾಧಾಕೃಷ್ಣನ್	,,	0	40
ಸುಭಾಸ್‌ಚಂದ್ರ ಭೋಸ್	,,	0	40
ಕಸ್ತೂರ್ ಬಾ ಗಾಂಧಿ	,,	0	40
ಅಶೋಕ	ಶರ್ಮ	0	40
ಬುದ್ಧ	ಸಿಂಪಿ ಲಿಂಗಣ್ಣ	0	25
ಭರತನ ಬಂಧು ಪ್ರೇಮ	ಕವಲಿ	0	40
ನಾಗಾನಂದ	,,	0	45
ಮರೆಯದ ಮಹಾರಾಣಿ	,,	0	40
ಛತ್ರಪತಿ	,,	0	40
ಕೆಚ್ಚೆದೆಯ ಕರ್ಣ	,,	0	40
ಅಭಿಮನ್ಯು	,,	0	40
ಭೀಮಸೇನ	,,	0	37
ಡಾ. ಅನ್ನಿ ಬಿಸೆಂಟ್	,,	0	40
ವಿದ್ಯಾರಣ್ಯರು	ಚಿದಂಬರಾನಂದ	0	40
ವಿವೇಕಾನಂದ	ಕವಲಿ	0	40
ಚಿತ್ತರಂಜನದಾಸ್	,,	0	40
ಭೀಷ್ಮಾಚಾರ್ಯ	ಹೂಜಾರ	0	31
ಸಾವರಕರ್	ಇಂದಿರಾ ಬಾಯಿ	1	25
ಎಂ. ಎನ್. ರಾಯ್	ಎನ್. ಎನ್. ಚಂದೂರ್	0	37

ಇತರ ಪುಸ್ತಕಗಳು

ಪರಮಾಣು - ಇಂದು ನಾಳೆ	ಶಿವರಾಮ ಕಾರಂತ	3	00
ನವರತ್ನ	ಬಿ. ಎಚ್. ಶ್ರೀಧರ	2	50
ಜನಪದ ಕಥನ ಗೀತೆಗಳು	ಕ. ರಾ. ಕೃ	8	50
ನೆನಪಿಗಾಗಿ	ಸಂಕಲನ	2	00
ಜ್ಞಾನ ಕೋಶ	ಹ. ರಾ. ಕಿದಿಯೂರು	5	00
ಸಂಸ್ಕೃತಿ	ಸಿ. ಆರ್. ಹೊಸಳ್ಳಯ್ಯ	2	00
ಜ್ಯೋತಿರ್ಗನ್ನಡಿ	ರಮಾಕಾಂತ	2	50
ಕಾವ್ಯ ಮಿಮಾಂಸೆ	ಶಂಕರ ಮೊಕಾಶಿ	1	00
ಸಾಹಿತ್ಯ ಶೈಲಿ	ಬಿ. ಎಚ್. ಶ್ರೀಧರ	1	25
ಯಕ್ಷ—ಯಕ್ಷಿ	ಅಂಬಿಕಾತನಯದತ್ತ	1	50
ಸಾಹಿತ್ಯ ಸಮೀಕ್ಷೆ	ಧಾರವಾಡಕರ್	1	50
ಸುಲಭದಲ್ಲಿ ಪ್ರಶ್ನೆ ಪದ್ಧತಿ	ಕೇಶವ ಶರ್ಮ	1	00
ಸಂಸ್ಥಾನಿಕರು	ಗೋವಿಂದಮೂರ್ತಿ	1	50
ಬ್ರಹ್ಮಚರ್ಯವೇ ಜೀವನ	ಶಿವಾನಂದ	3	00
ಉದರದ ಆರೋಗ್ಯ	ಶಿವಾನಂದ	2	00
ಕಾಮ ಶಿಕ್ಷಣ	ಡಾ. ವೆಂಕಟಗಿರಿ ರಾವ್	1	00
ಹಾರ್ಮೋನಿಯಂ ಬೋಧನ ಕ್ರಮ		2	00
ಆಧುನಿಕ ಕೃಷಿ ಭಾಗ ೧	ಅಕಳವಾಡಿ	0	75
do. ಭಾಗ ೨	do.	0	75
ನಮ್ಮ ನೂತನ ರಾಜ್ಯ ಘಟನೆ	ರಾವ್	0	50
ಭಾರತದ ರಾಜ್ಯಘಟನೆ-ನಾಡಿಗೇರ ಶಿವರಾಮು		1	50
ಮೈಸೂರು ರಾಜ್ಯ	ಅಕಳವಾಡಿ	0	87
ಭಾರತೀಯರ ಚರಿತ್ರೆ	ಕವಲಿ	0	50
ತಾಲೂಕು ಬೋರ್ಡುಗಳ ನಿಯಮಗಳು		1	25
ಕುಟುಂಬ ಯೋಜನೆ	,,	0	20
ಸಜೀವಿಗಳ ಸಮಸ್ಯೆ	ರಾವ್	1	50
ಗ್ರಾಮ ಪಂಚಾಯತಿಗಳು	ಅಯ್ಯಂಗಾರ್	0	10
ಕೊಲಿಗೆಯ ಶಿಕ್ಷಣ	ಕುಲಕರ್ಣಿ	1	00
ಭಾರತದಲ್ಲಿ ರಾಜಕೀಯಪಕ್ಷ-ರಾಜಗೋಪಾಲ		0	62
ಭೌತಿಕ ದರ್ಶನ	ಬಡೆಕ್ಕಿಲ ಕೃಷ್ಣಭಟ್ಟ	1	00
ಚಂದ್ರಲೋಕಕ್ಕೆ ಪ್ರಯಾಣ	ರಾ. ಆಚಾರ್ಯ	1	00
ಸಾಮಾನ್ಯ ರೋಗಗಳು	ಡಾ| ಐತಾಳ	1	00
ಮನೆಮದ್ದು	ಡಾ| ಕೊರಡ್ಕಲ್	2	00
ಸುಲಭದಲ್ಲಿ ಇಂಗ್ಲಿಷ್ (ಸಾದಾ)	ಕೊರಡ್ಕಲ್	2	00
Letter writing made Easy (an Experienced Teacher)		1	25
ಇಂದಿನ ವಿಜ್ಞಾನ ಮತ್ತು ಇಂದಿನಮಾನವ	U. L. ಆಚಾರ್	1	50
ಶಿಕ್ಷಣದ ಧ್ಯೇಯಗಳು (ಸಾದಾ ಪ್ರತಿ)	K. B. ಆರ್. ರಾವ್ & U. L ಆಚಾರ್	2	25
ಸ್ವಾತಂತ್ರ್ಯ ಮತ್ತು ಸಂಸ್ಕೃತಿ	ಕು. ಶಿ ಭಟ್ಟ	2	00
ಹಿರೋಶಿಮಾದಿಂದ ಜೀನೆವಾ	ರಾ. ಆಚಾರ್ಯ	1	50
ಭಾರತದ ಅಂಗ–ಕಾಶ್ಮೀರ	ರಘುನಂದನರಾವ್	0	31
ಏಶಿಯಾದ ಸಂಪತ್ತು	ಕು. ಶಿ. ಹರಿದಾಸ ಭಟ್ಟ	2	00
do ಉತ್ತಮ ಪ್ರತಿ	,,	2	50
ಹರಿಭಕ್ತಿ ಸಾರ		0	19
ವೈಯಕ್ತಿಕ ಆರೋಗ್ಯ	ವಿನಾಯಕ ರಾವ್	0	15
ಕನ್ ಫ್ಯೂಶಿಯಸ್	ಶಿವರಾಮರಾವ್	0	40
ವ್ಯಾಪಾರದಲ್ಲಿ ಹೆಚ್ಚು ಹಣಗಳಿಸುವ ಗುಟ್ಟು	ಬಾಪು ಕಿರಹಟ್ಟಿ	1	50
ನಾಲ್ವಡಿ ಕೃಷ್ಣನ ಮೈಸೂರು	ಶ್ರೀನಾಥ	0	37
ಜ್ಞಾನ ಜ್ಯೋತಿ	ನಾರಾಯಣದಾಸರು	0	50
ವೇದಾಂತರಹಸ್ಯೋಪನ್ಯಾಸಗಳು	ಚಿದಾನಂದ	0	50
ತತ್ತ್ವೋಪನ್ಯಾಸಗಳು	ಸ್ವಾಮಿ ವಿಜಯೀಂದ್ರ	2	00
ಗಾಂಧಿಯ ಆರ್ಥಿಕವಾದ	ನಾರಾಯಣರಾವ್	0	25
ನಮ್ಮ ಶರೀರದ ರಚನೆ	ಎಚ್ಚೆಸ್ಕೆ	0	85
ಸತ್ಯರೂಪ ನಿತ್ಯಾನಂದ	ಮೂಲಮೀಯ	0	50
ಹಣದ ವಿನಿಮಯದ ಬೆಲೆ	ಜಿ. ಆರ್. ರೆಡ್ಡಿ	1	50
ಗೀತಾ ಧ್ವನಿ	ಕೆ. ನಾರಾಯಣ ಸ್ವಾಮಿ	1	50
ವಿಚಿತ್ರ ವಿಶ್ವ(ಸಂಗ್ರಹ)	ಹ. ರಾ. ಕಿದಿಯೂರು	1	50
ಗಾಂಧಿ ತತ್ವದರ್ಶನ	ಹ. ರಾ. ಕಿದಿಯೂರು	1	00
ಗುಣ ನಿರೂಪಣೆ	ಚಿದಂಬರಯ್ಯ	0	75
ಕಾದಂಬರಿ	ಕವಲಿ	0	45
ಗುರು ಪೀಠಗಳ ಅವನತಿ	ಶಂಕರ ಜೋಯಿಸ	0	50
ನಿಶ್ಚಯ ಜ್ಞಾನ	ಮುದ್ದಣ್ಣ ಬಲ್ಲಾಳ	0	50
ಭಾರತದಲ್ಲಿ ಜಾತಿ ಭೇದ	ಸುಬ್ರಹ್ಮಣ್ಯಂ	1	00
ಜೀವನ ಕಲೆ	ಗ. ನಾ. ಪಂಡಿತ	0	62
ಹೀಗಿದೆ ಜಗತ್ತು	ಸಂಚಾರಿ	1	00
ಬಾಳಿನ ಹದ	ಎಚ್. ಎಸ್. ನೆಗಳೂರ	0	50
ಯಶೋಧರ ಚರಿತೆ	ಕೆ. ಪಿ. ವೆಂಕಪ್ಪ ಶೆಟ್ಟಿ	1	50
ಸತ್ಯಂರಾಜಾಪೂರ್ವದೇಶ ಯಾತ್ರೆಗಳು	ರಾ. ರಾ.	0	50
ಮುಂದಿನ ದೇವರು	ಕೆ. ಕೆ. ಶೆಟ್ಟಿ	0	25
ಗ್ರಾಮೋದ್ಧಾರ	ಪಣಕಲ್ಲ	0	75
ಕನ್ನಡದಲ್ಲಿ ವಿಡಂಬನ ಸಾಹಿತ್ಯ	ಸ್ವಾಮಿ	0	37
ಬರೆಯೋ ನನ್ನಾ ಜಾಣ	ಕೈಲಾಸಂ	0	50
ಅಪರೋಕ್ಷಾನುಭೂತಿ	ಗೊ. ಅ. ಮಾ. ಶಾಸ್ತ್ರಿ	0	50
ವೇದಾಂತರೂಪರೇಖೆ	ಚಿದಂಬರಯ್ಯ	0	75
ಗಾಂಧಿ ಮಾರ್ಗ	ಹ. ರಾ. ಕಿದಿಯೂರು	0	50
ಗಾಂಧೀ ರೀತಿ	ಹ. ರಾ. ಕಿದಿಯೂರು	0	50
ಮಾನವನ ಸನಾತನ ಧರ್ಮ	)ಭಟ್ಟಾಚಾರ್ಯ	0	25
ಯುದ್ಧರಂಗದಿಂದ	ಆರ್. ಎ. ರಾವ್	1	25
ಅರವಿಂದ ದರ್ಶನ	ಆರ್. ಕೆ. ಜೋಶಿ	4	00
ಗೀತಾ ಸಾರೋಕ್ತಿ	ಅನಂತ ಅಪಟೆ	0	75
ಅಳಿಯ ಸಂತಾನ ಕಾನೂನು	—	0	50
Aliyasanthana Act	—	0	75
ಗಾಂಧೀಜಿ ಜೀವನ ಕಾವ್ಯ	ಜಾನಕಿ	0	06
ಗೀತೆಯ ಕೈಗನ್ನಡಿ	ಚಿದಂಬರಯ್ಯ	1	00

ಕಾವ್ಯಗಳು

ಆಲಾಪನೆ	ಧನ್ವಂತ	0	50
ವಿಜಯನಾದ	ಅಮರವಾಣಿ	0	50
ಅಮರನಾದ್ಯ ತಂದೆ	ಪ. ಸು. ಭಟ್ಟ	1	25
ನೂರು ಪುಟಾಣಿ	ಜಿ. ಪಿ. ರಾಜರತ್ನಂ	0	25
ವಿಜ್ಞಾನ ವಿಶ್ವಾಮಿತ್ರ	ಎಸ್. ವೀರಪ್ಪ	0	50
ಹೂಗಂಪು	ಶ್ರೀಧರ ಖಾನೋಳಕರ	0	75
ಮೋಕೆಡಾಟು	ಎನ್. ಎಸ್. ವೀರಪ್ಪ	0	75
ತಾನ ತರಂಗ	ಬಾಳೇಕುಂದ್ರಿ	0	50
ಅವರ ನೆನೆದೇವು	ಪರಮಶಿವಯ್ಯ	1	25
ತಾರಾ ಸಖ	ಸಿ. ಪಿ. ಕೆ.	0	25
ಹಕ್ಕಿ ಹಾಡು	ಸುರೇಶ	0	25
ಸ್ವಾತಂತ್ರ್ಯಗೀತೆ	ಪುಟ್ಟರಾಮು	0	06
ಬಾಲರ ಬಂಧು	ಕೆ. ಜಿ. ಶೆಟ್ಟಿ	0	30
ಮುಗುಳು	ಕೆ. ಹೊನ್ನಯ್ಯ ಶೆಟ್ಟಿ	0	37
ಮುತ್ತುರತ್ನ	ಬಿ. ಎಚ್. ಶ್ರೀಧರ	0	60
ನಾವು ನಮ್ಮವರು	ಸಂಕಲನ	1	50
ಬಾಡದ ಹೂ.	ಅನಂತನಾರಾಯಣ	1	00
ಕವಿತಾ ಕಾಮಿನಿ	ಎಸ್. ವೆಂಕಟರಾಜ	2	00

ನಾಟಕಗಳು

ಗಜರಾ	ನಾರಾಯಣ	1	00
ನಳಪಾಕ	ಶ್ರೀವತ್ಸ	0	75
ಮನೋರಾಜ್ಯ	ರಂ. ಶ್ರೀಮುಗುಳಿ	1	75
ಸರಸ್ವತಿ	ಮಾಧವಾಚಾರ್ಯ	0	75
ನಾಗಾನಂದ	ಹ. ರಾ. ಕಿದಿಯೂರು	0	25
ಡೈವೋರ್ಸ್	ಕೆ. ನರಸಯ್ಯ	0	63
ಬಾಲ ತಪಸ್ವಿನಿ	ಉಳುವೀಶ	0	38
ನೌಕರಿಯ ಹುಚ್ಚು	ಬಿಂದುರಾವ	0	38
ಅಳಬೇಕೋ ನಗಬೇಕೊ	ಬಾ. ಹೊಸಮನಿ	0	38
ಅಪದ್ದಕ್ಕಪ್ಪಣೆ	ಜ್ಯೋತಿವರ್ಮ	0	50
ಎರಡು ಧ್ರುವ	ಎ. ಎಸ್. ಮೂರ್ತಿ	0	75
ಬರೀ ಅವಾಂತರ	ರಘುಸುತ	0	75
ಅವಾಂತರದ ಅಳಿಯ	ಎ. ಎಸ್. ಮೂರ್ತಿ	1	00
ಪಾಪ—ಪುಣ್ಯ	ಈಶ್ವರಚಂದ್ರ ಚಿಂತಾಮಣಿ	1	50
ಆರೋಗ್ಯ ಪ್ರತಾಪ	ಕೊರಡ್ಕಲ್	0	63
ಶಂಭೂಕ ವಧೆ	ಎನ್. ಎಸ್. ಜೈನಿ	0	13
ಭಾಗ್ಯ ಲಕ್ಷ್ಮಿ	ಬಿ. ಲಕ್ಷ್ಮಣರಾವ್	1	00
ಶಿಲ್ಪಿ	ಕಾಳೆ ತಿಮ್ಮಪ್ಪ	1	50
ಪ್ರತಿಜ್ಞಾಪೂರ್ತಿ	ಕೃಷ್ಣ ಹೆಗಡೆ	0	75
ಸೇವಾಪಥ	ಎಸ್. ಎಲ್. ಸುಬ್ರಹ್ಮಣ್ಯಂ	0	50
ಚಿತ್ರಾಂಗದೆ	ಕೆ. ಕೆ. ಶೆಟ್ಟಿ	0	60
ವಿಲ್ಲಿನ ರಹಸ್ಯ	ಚ. ಕೆ. ಮೂರ್ತಿ	1	00
ಮುದ್ರಾರಾಕ್ಷಸ	ಕವಲಿ	0	45
ಸ್ವಪ್ನವಾಸವದತ್ತ	,,	0	45
ಮಾಲತೀ–ಮಾಧವ	,,	0	45
ಪ್ರತಿಮಾ	,,	0	45
ವೇಣಿ ಸಂಹಾರ	,,	0	45
ಕುಮಾರ ಸಂಭವ	,,	0	45
ಅಭಿಜ್ಞಾನ ಶಾಕುಂತಲ	,,	0	45
ಸ್ವತಂತ್ರ ಜೀವನೋಪಾಯ	ಕೆ. ಎಚ್. ಶೆಟ್ಟಿ	0	25
ಸಂಶಯ ಪಿಶಾಚಿ	ಕೆ. ಕೆ. ಶೆಟ್ಟಿ	0	62
ಕುಶಲವ	,,	0	50
ವ್ಯಭಿಚಾರಿಣಿ ಯಾರು	,,	1	00
ಪುರುಷ ವಧು	,,	0	25
ಹೆಂಡ್ತಿ ಗಂಡನಾದರೆ	,,	0	25
ದೇಶಭಕ್ತ	,,	1	25
ಪ್ರೇಮ ವಿಜಯ	,,	1	00
ರಂಗಭೂಮಿ	ಎಸ್. ವೆಂಕಟರಾಜ	0	62
ಪ್ರಕಾಶ	ಸರಸ್ವತಿ ಬಾಯಿ ರಾಜವಾಡೆ	2	50
ಮೂರು ಪ್ರಹಸನಗಳು	ಕೊರಡ್ಕಲ್	1	25
ಜೀವನ ಸಂಗ್ರಾಮ	ಪಿ. ಶೀನ ಸೆಟ್ಟಿ	1	50
ಸ್ವರಾಜ್ಯ ವಿಜಯ	ಎಮ್. ವಿ. ಹೆಗ್ಡೆ	0	50
ಧರ್ಮ ಸಂಕಟ	ಕೊರಡ್ಕಲ್	0	37

ಇನ್ನೂ ಅನೇಕ ಪುಸ್ತಕಗಳು ದೊರೆಯುತ್ತವೆ. ವಿಚಾರಿಸಿರಿ:

ನವಭಾರತ ಪುಸ್ತಕ ಭಂಡಾರ(ರಿಜಿಸ್ಟರ್ಡ್ ಪಬ್ಲಿಷರ್ಸ್)
ಉಡುಪಿ ದ. ಕ.

NAVABHARAT BOOK DEPOT, UDIPI, S.K.

ಗಜಪತಿ ನಂದಿನಿ

(೨ನೇ ಪುಟದಿಂದ)

ಚಿನ್ನಾದೇವಿ— ಅಮ್ಮಾ, ನಿನ್ನ ಹೆಸರು ಸುಭದ್ರಾದೇವಿಯೆಂದು ಇದುವರೆಗೂ ನನಗೆ ಹೇಳಲಿಲ್ಲವೇಕಮ್ಮಾ?

ಸುಭದ್ರೆ— ಆ! ಆ! ಹೌದು. ಈಗ ನನ್ನ ಕಿವಿಗೆ ಬಿತ್ತು ಆ ಹೆಸರು. ಆದಾರು ನನ್ನನ್ನು ಕರೆದವರು? (ನೋಡಿ) ಯಾರೀ ಮಹಾತ್ಮರು?

ಚಿನ್ನಾದೇವಿ— ಹೇಳುತ್ತೇನಮ್ಮಾ, ಈ ದಿನ ಭಗವಂತನು ನಮ್ಮ ಮೇಲೆ ಕಾರುಣ್ಯದ ಮಳೆಯನ್ನೇ ಕರೆಯುತಿದ್ದಾನೆ. ಒಳ್ಳೆಯ ಮಳೆಗೆ ಭಯಂಕರ ಗಾಳಿ, ಕರ್ಕಶ ಸಿಡಿಲು, ಕೋಳ್ಮಿಂಚುಗಳು ಕಾರಣವಾಗುವಂತೆ ಈ ದಿವ್ಯ ಯೋಗಕ್ಕೆ ದುರುಳರೂ ಕಾರಣರಾದರು ನೀನು ಉದಯಗಿರಿಯ ರಾಣಿ. ವೀರರುದ್ರ ಗಜಪತಿಯವರು ನನ್ನ ತಂದೆ. ನೋಡಮ್ಮಾ, ಇವರೇ ವೀರರುದ್ರ ಗಜಪತಿಯವರು! ನನ್ನ ತಂದೆ!

ವೀರರುದ್ರ— ಹಾ! ಸಾಧ್ವೀ ಸುಭದ್ರಾ! ನಿನ್ನ ಈ ಪಾಪಿ ಗಂಡನನ್ನು ಕ್ಷಮಿಸು. ದುಷ್ಟನ ಚಾಡಿ ಕೇಳಿ ವಿಚಾರವಿಲ್ಲದೆ ಗರ್ಭಿಣಿಯಾಗಿದ್ದ ನಿನ್ನನ್ನು ತ್ಯಜಿಸಿದ ಈ ಅಧಮ ಗಂಡನನ್ನು ಕ್ಷಮಿಸು (ಮುಂಬರಲು)

ಸುಭದ್ರಾ— ಸ್ವಾಮೀ, ಕ್ಷಮಿಸುವವಳು ನಾನಲ್ಲ, ವಿಧಿ. ವಿಧಾತನು ಈ ದಿನ ಕ್ಷಮಿಸಿದ್ದಾನೆ. (ಗಜಪತಿಗೆ ನಮಸ್ಕರಿಸುವಳು) ಬನ್ನಿರಿ ಆ ಗುಡಿಯಲ್ಲಿ ಅಗೋಚರನಾಗಿರುವ ದೇವರಿಗೆ ಮೊದಲು ವಂದಿಸಿ ಅನಂತರ ಎಲ್ಲಾ ವಿಷಯ ಮಾತಾಡೋಣ.

ವೀರರುದ್ರ— ಹೋಗೋಣ (ನಡುವೆ ಚಿನ್ನಾದೇವಿ ಅವಳೆರಡು ಕೈಗಳನ್ನು ಹಿಡಿದುಕೊಂಡು ವೀರರುದ್ರ ಸುಭದ್ರಾದೇವಿಯರೂ ಮೆಲ್ಲಮೆಲ್ಲನೆ ಹೋಗುವರು)

ದೃಶ್ಯ—೧೩

ಮುದಗಲ್ ದುರ್ಗದ ಬಳಿ ಒಂದು ಬೀದಿ

(ಸಂನ್ಯಾಸಿ, ಸಂನ್ಯಾಸಿನೀ ವೇಷದಲ್ಲಿ ವೀರರುದ್ರ ಸುಭದ್ರಾ ದೇವಿಯರೂ, ವೀರ ಯುವಕನ ವೇಷದಲ್ಲಿ ಚಿನ್ನಾದೇವಿಯೂ ಪ್ರವೇಶಿಸುವರು. ಹಗಲು ಹೊತ್ತು)

ಚಿನ್ನಾ— ಅಪ್ಪಾ, ನನ್ನ ಈ ವೇಷವೇನೋ ಚೆನ್ನಾಗಿದೆಯೆಂದಿರಿ. ಇದಕ್ಕೆ ತಕ್ಕ ಹೆಸರನ್ನಿಡಬೇಡವೇ ನೀವು?

ಸುಭದ್ರಾ— ಏನು ಹೆಸರಿಡಲಿ? ನನ್ನ ಹೆಣ್ಣುಮಗಳೂ ಗಂಡು ಮಗನೂ ನೀನಾಗಿರುವೆ ಚಿನ್ನಾ. ಕರ್ನಾಟಕ ಸಾಮ್ರಾಟನ ಪಟ್ಟದ ರಾಣಿಯಾಗಲು ತಕ್ಕವಳಾದರೂ ಆದಕ್ಕಿರುವ ಇನ್ನೊಂದು ತಡೆಯನ್ನು ಪರಿಹರಿಸಲು ಗಂಡುಗಲಿಯಂತೆ ಸಾಹಸಕ್ಕೆ ಹೊರಟಿರುವೆ ಏನೋ! ದೇವರೇ ನಿನ್ನನ್ನು ಕಾಪಾಡಲಿ. ಹೆಚ್ಚಿನ ಅಪಾಯಕ್ಕೆ ತಲೆಹಾಕ ಬಾರದು ಮಗಳೆ.

ಚಿನ್ನಾ— ಇಲ್ಲಮ್ಮಾ. ದೇವರು ನಮ್ಮ ಬೆಂಬಲಕ್ಕಿದ್ದಾನೆಂದು ನಂಬು.

ಸುಭದ್ರಾ— ಒಂದು ವೇಳೆ ಈ ಪುರುಷ ವೇಷವು ಬಯಲಾದರೆ ನೀನೇನು ಮಾಡುತ್ತೀ?

ಚಿನ್ನಾ— ಭುವನೇಶ್ವರಿಯ ಕೃಪೆಯಿಂದ ಹಾಗಾಗುವುದಿಲ್ಲವೆಂದು ನನಗೆ ಸಂಪೂರ್ಣ ನಂಬುಗೆಯುಂಟು. ನನ್ನ ಸ್ವರ ಪರಿವರ್ತನೆಯ ಕಲೆಯೂ ನಿನಗೆ ಗೊತ್ತಿದೆ. ಆ ನಾಗಲಾಪುರದ ತೋಟದಲ್ಲಿ ನಾನಾ ಜಾತಿಯ ಪಕ್ಷಿಗಳ ನಿನಾದವನ್ನು ಅನುಸರಿಸಿ ಅನುಸರಿಸಿ ನನ್ನ ಕಂಠವು ನನ್ನಿಷ್ಟಾನುಸಾರವಾಗಿದೆ. ನೀನೇ ಎಷ್ಟೋ ಬಾರಿ ನನ್ನ ಸ್ವರದಿಂದ ಮೋಸ ಹೋಗಿದ್ದಿ? ಅಮ್ಮಾ! (ಸ್ವರ ಬದಲಾಯಿಸಿ) ಈಗ ರಾಯರು ಸೈಯದ್ ಮರ್ಕಾರನ ಮೇಲಿನ ಸಿಟ್ಟಿನಿಂದ ಮುದಗಲ್ ದುರ್ಗಕ್ಕೆ ಮುತ್ತಿಗೆ ಹಾಕಿದ್ದಾರೆ. ಆ ಸೈಯದ್ ಅವನ ಸಾಧ್ವೀ ಪತ್ನಿಯನ್ನು ಕೊಲೆಮಾಡಿದ ಮಹಾ ಪಾತಕಿ. ಅವನಿಗೆ ತಕ್ಕ ಶಿಕ್ಷೆಯನ್ನು ವಿಧಿಸುವುದೀಗ ನನಗೂ ಕರ್ತವ್ಯ.

ವೀರರುದ್ರ— ರಾಯನು ಮುದಗಲ್ ದುರ್ಗವನ್ನು ಸ್ವಲ್ಪ ಸೈನ್ಯದೊಂದಿಗೆ ಮುತ್ತಿಗೆ ಹಾಕಿದ್ದಾನೆ. ಸೈನ್ಯದ ದೊಡ್ಡ ಭಾಗವು ಉತ್ಕಲದ ಮೇಲೆ ಸಾಗಿದೆ. ಈ ಸ್ವಲ್ಪ ಸೈನ್ಯದಿಂದ ಮುದಗಲ್ ವಿಜಯವು ಅಸಂಭವವೆಂದೇ ತೋರುತ್ತದೆ.

ಚಿನ್ನಾ— ಅದಕ್ಕೇ ಅಪ್ಪಾ ನನ್ನ ಈ ವೇಷ ಮೋಸಗಾರರ ಮುಂದೆ ಧರ್ಮಯುದ್ಧವು ಸಲ್ಲದು. ಅಪ್ಪಾ, ನನಗೊಂದು ಹೆಸರಿಟ್ಟು ಆಶೀರ್ವದಿಸಿ ಕಳುಹಿಸಿ. (ನಮಸ್ಕರಿಸುವಳು.)

ವೀರರುದ್ರ— ರೂಪಸಿಂಗ್— ನಿನ್ನ ಸುಂದರ ರೂಪಕ್ಕಾಗಿ, ಆಗಬಹುದೇ ಸುಭದ್ರಾ?

ಸುಭದ್ರಾ— ಆಗಬಹುದು. ಯಂತ್ರೋದ್ಧಾರಕ ಹನುಮಂತನು ನಿನಗೆ ವಿಜಯವನ್ನೀಯಲಿ. (ಇಬ್ಬರೂ ಹಿಡಿದೆಬ್ಬಿಸುವರು. ಚಿನ್ನಾದೇವಿ ಹೊರಟು ಹೋಗುವಳು.)

ವೀರರುದ್ರ— ಬಾ ಸುಭದ್ರಾದೇವಿ. ನಾವು ನಮ್ಮ ಗುಡಿಸಲಿನಲ್ಲಿ ಮಂಗಳ ಕಾಲವನ್ನು ನಿರೀಕ್ಷಿಸಿ ಕೊಂಡಿರೋಣ. (ಹೋಗುವರು)

(ಮುಂದುವರಿಯುವುದು)

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್) ರೂ.
ಕಲಂ ಸೆಂಟಿಮೀಟರಿಗೆ 1-00
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ 1-50

— ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾ ಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಆದರ್ಶ ಚರಿತೆಗಳು—೭

ಹಜರತ್ ಮೂಸ

ಶ್ರೀ ಎಸ್. ಎಂ. ಶೆಟ್ಟಿ,
ಶಿಮುಂಜೆಪರಾರಿ.

ಜಲಪ್ರಳಯದ ನಂತರ ಯಹೂದಿಯರು ಇಜಿಪ್ಟಿನಲ್ಲಿ ನೆಲೆನಿಂತರೆಂದು ಪ್ರತೀತಿಯಿದೆ. ಯಹೂದಿಯರ ಧರ್ಮಗುರು 'ಯುಸುಫ್' ಅವರು ಸ್ವಪ್ನ ವಿದ್ಯಾ ಪ್ರವೀಣರಾಗಿದ್ದರಂತೆ. ಈ ವಿದ್ಯೆಯಿಂದಾಗಿಯೇ ಅವರು ಇಜಿಪ್ಟಿನ ಸಮ್ರಾಟ 'ಫೇರೋ'ನಿಂದ ಸತ್ಕಾರ ಪಡೆದಿದ್ದರು. ಆ ಕಾಲದಲ್ಲಿ ಯಹೂದೀ ಸಮಾಜದಲ್ಲಿ ಯಂತ್ರ ತಂತ್ರ ವಿದ್ಯೆಗಳು ತುಂಬಾ ಪ್ರಚಲಿತವಿದ್ದುವು. ಇದರಿಂದಾಗಿ ಇಜಿಪ್ಟಿನ ಜನತೆ ಯಹೂದಿ ಜನತೆಯ ಮೇಲೆ ಅಸಂತುಷ್ಟವಾಗಿತ್ತು; ಮಾತ್ರವಲ್ಲ ಸಾಧ್ಯವಿದ್ದಷ್ಟು ಅವರಿಗೆ ಕಿರುಕುಳಗಳನ್ನೂ ಕೊಡುತ್ತಿದ್ದರು. ಇಂತಹ ವಿಕಟ ಪರಿಸ್ಥಿತಿಯಲ್ಲಿಯೇ 'ಹಜರತ್ ಮೂಸ'ರ ಜನನವಾಯಿತು.

ಮೂಸರು ದೊಡ್ಡವರಾದ ನಂತರ 'ಸಿನಾಯೀ' ಪರ್ವತದ ಮೇಲೆ ನಲ್ವತ್ತು ದಿನಗಳ ವರೆಗೆ ಭಗವತ್ ದರ್ಶನಕ್ಕಾಗಿ ನಿರಾಹಾರ ತಪಗೈದರು. ಯುವಾವಸ್ಥೆಯಲ್ಲಿಯೇ ಇವರಿಗೆ 'ಜ್ಯೋತಿರ್ಲಿಂಗ' (ದೀಪಸ್ತಂಭ)ದ ರೂಪದಲ್ಲಿ ಭಗವತ್ ದರ್ಶನವಾಗಿತ್ತು. 'ಸಿನಾಯೀ' ಪರ್ವತದಲ್ಲಿ ಅವರಿಗೆ ಮತ್ತೊಮ್ಮೆ ದರ್ಶನವಾಯಿತು. ಭಗವಂತನ ಆದೇಶದಂತೆ ಇವರು ಯಹೂದೀ ಸಮಾಜಕ್ಕಾಗಿ ನ್ಯಾಯ ಶಾಸ್ತ್ರವನ್ನು ರಚಿಸಿದ್ದಲ್ಲದೆ, ಮೂಲಸಿದ್ಧಾಂತವನ್ನೂ ಘೋಷಿಸಿದರು. ಉಪಾಸನೆ ಹೇಗೆ ಮಾಡಬೇಕು? ಮಂದಿರವನ್ನು ಹೇಗೆ ರಚಿಸಬೇಕು? ಮುಂತಾದ ರೀತಿ ನೀತಿಗಳನ್ನವರು ನಿರ್ಧರಿಸಿದರು.

ಇಜಿಪ್ತದ ಸಮ್ರಾಟ ಫೇರೋನ ಮುಂದೆ ಮೂಸರು ಅನೇಕ ಚಮತ್ಕಾರಗಳ ಮಾಡಿ ತೋರಿಸಿದರು. ಯಹೂದೀ ಸಮಾಜವನ್ನೇ ಕೊಂಡೊಯ್ದು ಕೆಂಪು ಸಮುದ್ರದ ಬಳಿ ಇಡುವಂತೆ ಅವರಿಗೆ ಭಗವಂತನ ಅಪ್ಪಣೆಯಾಯಿತು. ಒಂದು ದೇಶದಲ್ಲಿ ಸ್ಥಾಯಿಯಾಗಿ ನೆಲೆನಿಂತ ಒಂದು ಸಮಾಜವನ್ನು, ಅಲ್ಲಿಂದ ತೆಗೆದು ಬೇರೊಂದೆಡೆ ಕೊಂಡು ಹೋಗುವುದು ಅಷ್ಟು ಸರಳ ಕಾರ್ಯವಲ್ಲ. ಅವರೆ ತಮ್ಮ ಪವಾಡಗಳಿಂದ ಜನತೆಯನ್ನು ಆಕರ್ಷಿಸಿ, ಬೇರೊಂದೆಡೆ ಹೋಗಲಿಕ್ಕಾಗಿ ಅವರನ್ನು ಸಿದ್ಧಗೊಳಿಸಿದರು. ಅನಂತರ ಮೂಸರು ಇಡೀ ಯಹೂದೀ ಸಮಾಜವನ್ನೇ ತನ್ನ ಸಂಗಡ ಕರೆದುಕೊಂಡು ಹೋಗಿ ಕೆಂಪು ಸಮುದ್ರದ ಬಳಿ ಬೀಡು ಬಿಟ್ಟರು. ಇದರಿಂದಾಗಿ ಯಹೂದಿಯರು ಇಜಿಪ್ತೀ ಜನರ ದೈನಂದಿನ ಕಿರುಕುಳಗಳಿಂದ ತಪ್ಪಿಕೊಂಡರು. ಅವರ ನಿತ್ಯದ ಉತ್ಪೀಢನೆಯು ಕೊನೆಗೊಂಡಿತು.

ತನ್ನ ಸುದೀರ್ಘ ಆಯುಕಾಲ ಪೂರ್ಣವಾದಾಗ ಮೂಸರು ಪೃಥ್ವಿಯಿಂದ ಪರಂಧಾಮಕ್ಕೆ ಹೋಗಲು ನಿಶ್ಚೈಸಿದರು. ಅವರ ಕಾರ್ಯವು ಪೂರ್ಣವಾಗಿತ್ತು. ಯಹೂದಿಯರಲ್ಲಿ ನ್ಯಾಯ ಸ್ಥಾಪನೆಯಾಗಿತ್ತು; ದೇವರ ಉಪಾಸನೆಯೂ ವ್ಯವಸ್ಥಿತವಾಗಿ ನಡೆಯುತ್ತಲಿತ್ತು. ಹಜರತ್ ಮೂಸರು ತನ್ನ ಹಿರಿಯ ಶಿಷ್ಯನಾದ ಜೋಶುವಾ'ನನ್ನು ಬಳಿಗೆ ಕರೆದು, ಆತನ ಮಸ್ತಕದ ಮೇಲೆ ಕೈಯಿಟ್ಟು ಅಂತರ್ಹಿತರಾದರು.

ಹಜರತ್ ಮೂಸರನ್ನು ಪ್ರಧಾನ ಪೈಗಂಬರರೆಂದು ತಿಳಿಯಲಾಗುತ್ತದೆ. ಕ್ರೈಸ್ತ, ಇಸ್ಲಾಮೀಯರೆಲ್ಲರೂ ಅವರನ್ನು ಪೈಗಂಬರರೆಂದು ಸನ್ಮಾನಿಸುತ್ತಾರೆ. ಸಮಯ ಸಮಯಕ್ಕನುಗುಣವಾಗಿ ವಿಭಿನ್ನ ಸ್ಥಾನದಲ್ಲಿ, ವಿಭಿನ್ನ ಸಮಾಜಗಳಲ್ಲಿ, ಅಲ್ಲಿಯ ಜನರ ಉದ್ಧಾರಕ್ಕಾಗಿ, ಭಗವಂತನ ಮಂಗಳಮಯ ದರ್ಶನ ಮಾಡಿಕೊಡಲಿಕ್ಕಾಗಿ ಇಂತಹ ಲೋಕೋತ್ತರ ಮಹಾಪುರುಷರ ಜನ್ಮವಾಗುತ್ತದೆ. ಮೂಸರು ಯಹೂದಿ ಧರ್ಮದಲ್ಲಿ ಭಗವತ್ ಭಕ್ತಿಯ ಪ್ರೇರಣೆಯನ್ನು ಜಾಗೃತಗೊಳಿಸಿ, ಆ ಜಾತಿಯ ಸಂಘಟನೆಯ ಮಹಾ ಮಂತ್ರವನ್ನು ಘೋಷಿಸಿದರು.

(ಮೂಲ: ಠಾಕೂರ್ ಸುದರ್ಶನ ಸಿಂಹ)

ಅಸ್ತಮಾ ರೋಗಿಗಳ ತಿಳುವಳಿಕೆಗೆ

ರಿಜಿಸ್ಟ್ರಿಯಾದ ಚಿತ್ರಕೋಟ್ ಅಸ್ತಮಾ ನಿವಾರಕ ಬೂತಿಯನ್ನು ತಾ. 1-11-63ನೇ ಹುಣ್ಣಿಮೆ ರಾತ್ರಿ ಖೀರಿನೊಂದಿಗೆ ಸೇವಿಸುವುದರಿಂದ ಅಸ್ತಮಾ, ಶ್ವಾಸ, ಕೆಮ್ಮು, ನೆಗಡಿ ನಿವಾರಣೆಯಾಗುತ್ತದೆ. ಕೂಡಲೇ ಹುಣ್ಣಿಮೆಯ ಮೊದಲೇ ಬರೆಯಿರಿ.

Manager, Shri Mahatma Naga
Baba Ayurvedashram,
P. O. Chitrakot U. P.



READ & ADVERTISE IN NAVAYUGA WEEKLY

REGD. No. B. G. 176
LICENCE No. 31
Licensed to Post without Prepayment

ಆಫ್ರಿಕನ್ ದೇಶಗಳಲ್ಲಿ

ಭಾರತೀಯ ಉದ್ದಿಮೆಗಳು

ಆಫ್ರಿಕೆಯ ಮಾರುಕಟ್ಟೆಯಲ್ಲಿ ಭಾರತೀಯ ಸರಕುಗಳಿಗೆ ಬೇಡಿಕೆಯಿರುವುದರಿಂದ ಇವುಗಳನ್ನು ಯಥೋಚಿತವಾಗಿ ಪೂರೈಸಲು ಅನುಕೂಲವೆನಿಸುವ ದಾರಿಯನ್ನು ಅರಸಬೇಕಾಗಿದೆ. ಸರಕಾರ ವಲಯವು ಈ ವಿಚಾರದಲ್ಲಿ ತುಂಬ ಆಸಕ್ತಿಯನ್ನೂ ತಾಳಿದೆ ಭಾರತೀಯ ಸರಕುಗಳ ಸ್ಥಿತಿಗತಿಗಳನ್ನು ಉನ್ನತವಾಗಿದುವುದಕ್ಕೆ ಅಲ್ಲಿಯೇ ಉದ್ದಿಮೆಗಳನ್ನು ಸ್ಥಾಪಿಸಲು ಭಾರತೀಯ ಉದ್ಯಮೆದಾರರನ್ನು ಪ್ರೋತ್ಸಾಹಿಸುವುದು ಉತ್ತಮವೆಂಬ ಅಭಿಪ್ರಾಯವೀಗ ಮುಂದೆ ಬಂದಿದೆ ಈ ಉದ್ದಿಮೆಗಳನ್ನು ತೊಡಗಲು ಆಫ್ರಿಕನ್ ರಾಷ್ಟ್ರ ಸರಕಾರಗಳ ಅನುಮತಿಯು ಬೇಕಾಗುತ್ತದಾದರೂ ಅದು ಸುಲಭದಲ್ಲಿಯೇ ಸಿಗುವ ನಿರೀಕ್ಷೆಯಿದೆ. ಭಾರತೀಯ ಉದ್ದಿಮೆದಾರರ ತಾವು ಸ್ವತಂತ್ರ ರೂಪದಲ್ಲಿಯೇ ಅಲ್ಲಿ ಉದ್ದಿಮೆ ಸ್ಥಾಪಿಸಬಹುದು; ಇಲ್ಲವೇ ಆಯಾ ರಾಷ್ಟ್ರಗಳ ಉದ್ದಿಮೆದಾರರ ಅಥವಾ ಮತ್ತಿತರರ ಸಹಕಾರವನ್ನು ಪಡೆಯಲೂ ಬಹುದು

ಇತ್ತೀಚೆಗಿನ ಪರಿಸ್ಥಿತಿಯನ್ನು ನಾವು ನೋಡುವುದಾದರೆ, ಭಾರತೀಯ ಉದ್ದಿಮೆದಾರರು ತಮ್ಮ ದೇಶಗಳಲ್ಲಿ ಉದ್ದಿಮೆಗೆ ತೊಡಗಲು ಬಯಸುವುದಾದರೆ, ಆಫ್ರಿಕನ್ ರಾಷ್ಟ್ರಗಳು ತುಂಬು ಹೃದಯದಿಂದ ಅವರನ್ನು ಸ್ವಾಗತಿಸುವವು. ಈಗಾಗಲೇ ಇಂತಹ ಸ್ವಾಗತವು ಲಭಿಸಿರುವುದು ಇದಕ್ಕೆ ಸಾಕ್ಷೀಭೂತವಾಗಿದೆ. ಒಬ್ಬಿಬ್ಬರು ಉದ್ದಿಮೆದಾರರು ಇಥಿಯೋಪಿಯಾ ಮತ್ತು ಟೆಂಗನೀಕ ಮೊದಲಾದ ದೇಶಗಳಲ್ಲಿ ಬಟ್ಟೆ ಗಿರಣಿಗಳನ್ನು ಸಂಸ್ಥಾಪಿಸಲು ತೊಡಗಿದ್ದಾರೆ; ಅಥವಾ ತೊಡಗುತ್ತಲಿದ್ದಾರೆ. ಇವರಂತೆಯೇ ಉಳಿದ ದೇಶಗಳೂ ಭಾರತೀಯ ಉದ್ದಿಮೆದಾರರ ಸಹಕಾರವನ್ನು ನಿರಾಕರಿಸಲಾರವು

ಯಾಂತ್ರಿಕ ಮತ್ತು ತಾಂತ್ರಿಕ ಉದ್ದಿಮೆಗಳ ಭಾರತೀಯ ಉತ್ಪನ್ನಗಳು ಆಫ್ರಿಕೆಯ ದೇಶಗಳಲ್ಲಿ ಇನ್ನು ತಾನೇ ಸ್ಥಾಪನೆಗೊಳ್ಳಬೇಕು. ಹತ್ತಿಬಟ್ಟೆ, ಸೆಣಬು, ಮತ್ತು ಸಂಬಾರ ಜಿನಸುಗಳೇ ಇಂದಿಗೂ ಭಾರತದಿಂದ ಆಫ್ರಿಕೆಗೆ ನಿರ್ಯಾತವಾಗುವ ಪ್ರಧಾನ ಸರಕುಗಳು. ವಿದ್ಯುತ್ ಬೀಸಣಿಗೆ ಮತ್ತು ಹೊಲಿಗೆ ಯಂತ್ರಗಳಂತಹ ಚಿಕ್ಕಪುಟ್ಟ ಯಾಂತ್ರಿಕ ವಸ್ತುಗಳ ಬಗೆಗಾದರೂ ಭಾರತವು ಬ್ರಿಟನ್ ಮತ್ತು ಫ್ರಾನ್ಸುಗಳ ಪೈಪೋಟಿಯನ್ನು ಬಲವಾಗಿ ಎದುರಿಸಬೇಕಾಗುತ್ತದೆ. ವಸಾಹತುಶಾಹಿಯುಳ್ಳಿರ ವಾಗ ಆಫ್ರಿಕನ್ ದೇಶಗಳು ಬ್ರಿಟನ್ ಮತ್ತು ಫ್ರಾನ್ಸ್‌ಗಳೊಡನೆ ಹಾಸುಹೊಕ್ಕಾಗಿದ್ದುದರಿಂದ ಈ ನಿಕಟ ಸಂಪರ್ಕವನ್ನು ತಪ್ಪಿಸುವುದಾಗಲೀ ಪೈಪೋಟಿಯಲ್ಲಿ ಯಶಗಳಿಸುವುದಾಗಲೀ ತುಂಬ ಪ್ರಯಾಸ. ದೊಡ್ಡ ಯಂತ್ರೋಪಕರಣಗಳನ್ನು ಅಥವಾ ಲೋಹೋಪಕರಣಗಳನ್ನು ಆಫ್ರಿಕೆಯಲ್ಲಿ ಮಾರುವಂತಾಗ ಬೇಕಾದರೆ, ಭಾರತೀಯ ಉದ್ದಿಮೆದಾರರು ಆಫ್ರಿಕನ್ ದೇಶಗಳಲ್ಲಿಯೇ ಉತ್ಪಾದನೆಗೆ ತೊಡಗಬೇಕಾಗುತ್ತದೆ. ಅದಕ್ಕೆ ಬೇಕಾದ ಯಂತ್ರ ತಂತ್ರಜ್ಞರನ್ನು ಇಲ್ಲಿಂದಲೇ ಕರೆದುಕೊಂಡು ಹೋಗಬೇಕಾಗುತ್ತದೆ.

ಐಗುಪ್ತವನ್ನು ಸೇರಿಸಿ ಆಫ್ರಿಕನ್ ರಾಷ್ಟ್ರಗಳಿಗೆ ಭಾರತವು ೧೯೬೨-೬೩ನೆಯ ವರ್ಷದಲ್ಲಿ ಸುಮಾರು ೫೦ ಕೋಟಿ ರೂಪಾಯಿ ಬೆಲೆಯ ಸರಕುಗಳನ್ನು ನಿರ್ಯಾತ ಮಾಡಿದೆ. ಅದಕ್ಕೆ ಹಿಂದಿನ ವರ್ಷ ಈ ಮೊತ್ತ ಕೇವಲ ರೂ. ೬ ಕೋಟಿಯಿತ್ತು. ಆಫ್ರಿಕನ್ ದೇಶಗಳಿಂದ ಭಾರತವು ೬೨-೬೩ರಲ್ಲಿ ರೂ ೫೬ ಕೋಟಿಯಷ್ಟು ಬೆಲೆಯ ಒಡವೆಗಳನ್ನು ಆಯಾತ ಮಾಡಿಕೊಂಡಿರುವುದರಿಂದ ರೂ. ೬ ಕೋಟಿಯ ವ್ಯಾಪಾರ ಪ್ರತಿಕೂಲತೆಯು ತೋರಿಬಂದಂತಾಯಿತು ಆದುದರಿಂದ ಭಾರತದಿಂದ ಆ ದೇಶಗಳು ಹೆಚ್ಚಿನ ಬೆಲೆಯ ಸರಕುಗಳನ್ನು ಕೊಂಡುಕೊಳ್ಳನೆ ಹೋದರೆ, ಮುಂದಿನ ಕೆಲವು ವರ್ಷಗಳ ವರೆಗಾದರೂ ಭಾರತದ ಹಿತ ದೃಷ್ಟಿಯಲ್ಲಿ ವ್ಯಾಪಾರದ ತೂಕದಲ್ಲಿ ಸಮತೆಯುಳಿಸಿಕೊಳ್ಳುವುದು ಕಷ್ಟವಾಗುವುದು.

ಭಾರತವು ನಿರ್ಯಾತ ಮಾಡಿದ ಸರಕುಗಳ ಒಟ್ಟು ಬೆಲೆಯಲ್ಲಿ ರೂ. ೩೭ ಕೋಟಿಯಷ್ಟನ್ನು ಆರು ದೇಶಗಳೇ ಪಡೆದಿವೆ. ಇವುಗಳಲ್ಲಿ ಕೆನ್ಯಾ, ಟೆಂಗನೀಕ ಮತ್ತು ಉಗಾಂಡಗಳು ಪೂರ್ವ ಆಫ್ರಿಕೆಯಲ್ಲಿದ್ದು ಇವು ರೂ. ೯ ಕೋಟಿಯಷ್ಟವನ್ನು ಕೊಂಡಿವೆ. ಐಗುಪ್ತವು ರೂ ೧೩ ಕೋಟಿ ಬೆಲೆಯ ಸರಕುಗಳನ್ನೂ ಸುಡಾನವು ರೂ. ೯ ಕೋಟಿಯ ಒಡವೆಗಳನ್ನೂ ನೈಜೀರಿಯಾವು ರೂ. ೬ ಕೋಟಿಯ ವಸ್ತುಗಳನ್ನೂ ಪಡೆದುಕೊಂಡಿವೆ. ಸುಮಾರು ಒಂದು ಕೋಟಿ ರೂ.ವಿನ ವ್ಯಾಪಾರವನ್ನು ಇಥಿಯೋಪಿಯಾ, ಘಾನಾ, ಮಾರಿಷಿಯಸ್ ಮತ್ತು ದಕ್ಷಿಣ ರೊಡೇಶಿಯಾಗಳು ಮಾಡಿವೆ. ಈ ಎಲ್ಲವುಗಳಲ್ಲಿ ಸುಡಾನದೊಡನೆ ವ್ಯಾಪಾರವು ನಮಗೆ ತುಂಬ ಪ್ರತಿಕೂಲವಾಗಿದೆ ಏಕೆಂದರೆ, ಸುಡಾನಕ್ಕೆ ಭಾರತದ ನಿರ್ಯಾತವು ರೂ. ೯ ಕೋಟಿಯದಾದರೆ, ಅಲ್ಲಿಂದ ಆಯಾತವು ೧೭॥ ಕೋಟಿ ರೂ.ಯಷ್ಟಿದೆ. ಈ ಮೊತ್ತದಲ್ಲಿ ಕಚ್ಚಾ ಹತ್ತಿಯೇ ರೂ. ೧೭ ಕೋಟಿ ಬೆಲೆಯಷ್ಟು. ಹಾಗಾಗಿ ಭಾರತವು ರೂ. ೮ ಕೋಟಿಯಷ್ಟು ಹಣವನ್ನು ಹತ್ತಿಗಾಗಿ ಹೆಚ್ಚು ಖರ್ಚು ಮಾಡಿದಂತಾಯಿತು.

ಇತ್ತೀಚೆಗೆ ನೈಜೀರಿಯಾದೊಡನೆ ಇಲೆಕ್ಟ್ರಿಕಲ್ ಕೇಬಲ್ ಮತ್ತು ವಯರ್‌ಗಳ ಉದ್ದಿಮೆ ತಯಾರಕರೊಬ್ಬರು 'ಓವರ್ ಹೆಡ್ ಟ್ರಾನ್ಸ್ಮಿಶನ್ ಲೈನ್'ಗಳ ಪೂರೈಕೆಯ ಸಂಬಂಧದಲ್ಲಿ ಒಡಂಬಡಿಕೆ ಮಾಡಿಕೊಂಡರು. ಐರೋಪ್ಯರನ್ನೂ ಈ ದಿಸೆಯಲ್ಲಿ ಹಿಮ್ಮೆಟ್ಟಿಸಿದರು. ಆದುದರಿಂದಲೇ ಇದು ಉತ್ತೇಜಕವಿರುತ್ತದೆ. ಘನ ವಿದ್ಯುದುಪಕರಣ ಉದ್ದಿಮೆಯ ಅಭಿವೃದ್ಧಿ ಮಂಡಳವು ಇದೇ ಬಗೆಯ ಒಪ್ಪಂದವನ್ನು ಇನ್ನಿತರ ಆಫ್ರಿಕನ್ ದೇಶಗಳೊಡನೆಯೂ ಸಾಧಿಸುವ ಪ್ರಯತ್ನ ನಡೆಸುತ್ತಿದೆ. ಇದಕ್ಕಾಗಿ ನಿರ್ಯಾತಗಾರರಿಗೆ ಸಾಲದ ಸೌಕರ್ಯವನ್ನು ಒದಗಿಸಿ ಕೊಡುವುದಕ್ಕೂ ಮಂಡಳವು ಮುಂದೆ ಬಂದಿದೆ.

ದಕ್ಷಿಣ ಆಫ್ರಿಕೆಯೊಡನೆ ಭಾರತದ ವ್ಯಾಪಾರವಿರುವುದಿಲ್ಲ. ಆದರೂ ಅಂಚೆಯ ಮೂಲಕ ಪಾರ್ಸೆಲುಗಳನ್ನು ಕಳಿಸಬಹುದಾದುದರಿಂದ ಸಣ್ಣ ಪ್ರಮಾಣದ ನಿರ್ಯಾತವು ದಾಖಲಾಗಿದೆ. ಕೆಲವು ಲಕ್ಷ ರೂಪಾಯಿ ಬೆಲೆ ಬಾಳುವ ಫಿಲ್ಮ್‌ಗಳನ್ನು ಭಾರತದಿಂದ ಕಳಿಸಲಾಗಿತ್ತು. ಆದರೆ ಈಗ ಅದು ಸಂಪೂರ್ಣ ನಿಂತಿದೆ. ಈಗ ಭಾರತದಿಂದ ದ. ಆಫ್ರಿಕೆಗೆ ಅಂಚೆಯಲ್ಲಿ ಹೋಗುವ ವಸ್ತುಗಳೆಂದರೆ, ಅಲ್ಲಿ ನೆಲೆನಿಂತಿರುವ ಭಾರತೀಯರ ಆವಶ್ಯಕತೆಯಾದ ಜಟ್ಟಿ, ಉಪ್ಪಿನಕಾಯಿ, ಮಸಾಲೆ ಮತ್ತು ಆಯುರ್ವೇದ ಔಷಧಿಗಳು.

ಹೀಗೆ ಭಾರತದ ನಿರ್ಯಾತವನ್ನು ಹೆಚ್ಚಿಸುವುದು ಆರ್ಥಿಕ ಅಭಿವೃದ್ಧಿಯ ಮೈಲುಗಲ್ಲೆನ್ನುವುದರಿಂದ ಆದಕ್ಕಿರುವ ಅವಕಾಶವನ್ನು ದೇಶದ ಉದ್ದಿಮೆದಾರರು ಕಳೆದುಕೊಳ್ಳಬಾರದು. ರಾಜ್ಯ ಮತ್ತು ಕೇಂದ್ರ ಸರಕಾರಗಳೂ ದೇಶದ ಉದ್ದಿಮೆದಾರರಿಗೆ ಈ ವಿಷಯದಲ್ಲಿ ಉತ್ತೇಜನವನ್ನೂ ಧೈರ್ಯವನ್ನೂ ಸಹಾಯವನ್ನೂ ನೀಡಬೇಕು.

ಸೂಚನೆ

'ನವಯುಗ'ದಲ್ಲಿ ಪ್ರಕಟನೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ, ಕಾಲು ತಾವು ಸ್ವಚ್ಛನ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಸುವಾಚ್ಯವಾಗಿಯೂ ಇರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ ನ

ಉತ್ತಮ ಭದ್ರತೆ
ಮತ್ತು
ಯೋಗ್ಯ ಬಡ್ಡಿ

ಸೇವಿಂಗ್ಸ್ ಬ್ಯಾಂಕ್ 3%
ಬಡ್ಡಿಯನ್ನು ಆರು ತಿಂಗಳಿಗೊಮ್ಮೆ ಜಮೆ ಮಾಡಲಾಗುವುದು.

$5\frac{1}{8}$% ಕಾಯಂ ಠೇವಣಾತಿ
5 ವರುಷಗಳ ಅವಧಿಗೆ

ಹೆಚ್ಚಿನ ಮಾಹಿತಿಗೆ
ನಮ್ಮ 189 ಶಾಖೆಗಳಲ್ಲೊಂದರೊಡನೆ ವ್ಯವಹರಿಸಿರಿ
ಸಿಂಡಿಕೇಟ್ ಬ್ಯಾಂಕ್
ಸಮಾನ ಸೇವೆ — ಸರಿಯಾದ ಭದ್ರತೆ
ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

Edited, Printed & Published by K. H.Shetty, at the Navayuga Press, Udipi, S. India.

ಅಖಿಲ ಕರ್ನಾಟಕದ
ಪ್ರಸಿದ್ಧ ಕತೆಗಾರರ
ಮಧುವನ
ಕಥಾ ಸಂಕಲನ
'ಕಿರಿಯರ ಪ್ರಪಂಚ'ದ
ಅಪೂರ್ವ ಪ್ರಕಟಣೆ
ಬೆಲೆ: ರೂ. ಮೂರು
ನವಭಾರತ ಪುಸ್ತಕ ಭಂಡಾರ
ಉಡುಪಿ

ನವಯುಗ

Estd. 1921 ಸ್ಥಾಪನೆ
Regd. No. B.G. 176
Vol. 43 No. 8

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
NAVAYUGA— NATIONAL WEEKLY
ಉಡುಪಿ, 24—10—1963 ಗುರುವಾರ

13 ನ. ಪೈಸೆ
ವಾ. ಚಂದಾ ರೂ. 6–75
ಸಂಪುಟ ೪೩ ಸಂಚಿಕೆ ೮

ಯಾವತ್ತೂ
ಪ್ರಿಂಟಿಂಗ್ ಕೆಲಸಗಳನ್ನು
ಮಾಡಿಕೊಡಲಾಗುವುದು
ಕ್ಲಪ್ತ ಸಮಯದಲ್ಲಿ
ಮಿತ ದರದಲ್ಲಿ ಉತ್ತಮ
ಮುದ್ರಣ
ಕೆಲಸಗಳಾಗಬೇಕೆ?
ಸಂದರ್ಶಿಸಿರಿ ಯಾ ವಿಚಾರಿಸಿರಿ
ನವಯುಗ ಪ್ರೆಸ್,
ಪಾಲುಕೋಟೆ, ಉಡುಪಿ

ಗಡಿವಿವಾದ ಪರಿಹಾರಕ್ಕೆ

ಮಿತ್ರರಾಷ್ಟ್ರಗಳ ದಿಟ್ಟ ಹೆಜ್ಜೆ

ರಾಷ್ಟ್ರಗಳೆರಡರ ವರಿಷ್ಠರು ಪರಸ್ಪರ ಭೆಟ್ಟಿಯಾಗುವುದು ಮತ್ತು ವಿಚಾರ ವಿನಿಮಯ ಮಾಡುವುದು ಸಂಪ್ರದಾಯವೆಂಬಂತೀಗ ನಡೆದು ಬರುತ್ತಿರುವುದಾದರೂ ಸಿಂಹಳದ ಭಂಡಾರನಾಯಿಕೆ ಮತ್ತು ಸಂಯುಕ್ತ ಅರಬ ಪ್ರಜಾಪ್ರಭುತ್ವದ ಗಮಾಲ್ ನಸ್ಸೇರರ ಭೆಟ್ಟಿಯು ಕುತೂಹಲಕಾರಿಯಿತ್ತು. ಭಾರತ—ಚೀನಾ ಗಡಿ ವಿವಾದವನ್ನು ಶಾಂತಪೂರ್ಣವಾಗಿ ಪರಿಹರಿಸುವಲ್ಲಿ ಅಪ್ರತಿಹತ ಪ್ರಯತ್ನ ಮಾಡಿದ ಕೊಲಂಬೊ ರಾಷ್ಟ್ರಗಳ ಸಾಲಿನಲ್ಲಿ ಇವೆರಡು ದೇಶಗಳು ಅಗ್ರಮಾನ್ಯವಾಗಿವೆ. ಚೀನಾವು ಕೊಲಂಬೊ ಸಲಹೆಗಳನ್ನು ಕಡೆಗಣಿಸಿದ ಕಾರಣದಿಂದ, ವಿವಾದಪರಿಹಾರದ ನಡುವೆ ಬಂಡೆಯಡ್ಡ ನಿಂತಂತಾಯಿತು. ಆದುದರಿಂದ ಈ ಬಂಡೆಯನ್ನು ದೂರಸರಿಸಿ ಮಾತುಕತೆಯ ದಾರಿಯನ್ನು ನಿಷ್ಕಂಟಕಗೊಳಿಸುವ ಪ್ರಯತ್ನವನ್ನು ತಾವು ಮಾಡುವುದಾಗಿಯೂ ಸಿಂಹಳದ ಪ್ರಧಾನಿಯೊಡನೆ ತಾವೀ ವಿಚಾರವನ್ನು ಸಮಾಲೋಚಿಸುವುದಾಗಿಯೂ ನಸ್ಸೇರರು ಮೊದಲೇ ಉದ್ಗರಿಸಿರುವುದರಿಂದ ಈ ಸಂದರ್ಶನವು ಸೌಹಾರ್ದಮಯವಾದರೂ ಲೋಕದ ಮನಸ್ಸನ್ನು ಆಕರ್ಷಿಸಿತ್ತು. ಎಂತಲೇ ಕೈರೋದ ಮಾತುಕತೆಯ ಮೇಲೆ ವಿಶೇಷ ಆಸಕ್ತಿಯನ್ನು ತಳೆಯುವಂತೆ ಮಾಡಿತ್ತು.

ಲಾಯರ ಹೊಸ ಸಂಚು

ನಸ್ಸೇರರ ಹೇಳಿಕೆಯಿಂದ ಭಾರತದ ನಾಗರಿಕರು ಸಮಾಧಾನದ ನಿಟ್ಟುಸಿರು ಬಿಟ್ಟರೆ, ಚೀನೀಯ ನಾಯಕರು ಗಾಬರಿಗೊಂಡರು. ಭಾರತೀಯರು ಯುದ್ಧವನ್ನು ಬಯಸುವುದಿಲ್ಲ; ಅದರ ಲವಲವಿಕೆಯೂ ಇಲ್ಲ. ವಿವಾದವನ್ನು ಶಾಂತ ರೀತಿಯಲ್ಲಿ ಪರಿಹರಿಸುವ ಆಕಾಂಕ್ಷೆಯು ನಮ್ಮಲ್ಲಿದೆ; ಅದಕ್ಕಾಗಿ ನಡೆಯುವ ಸರ್ವ ಪ್ರಯತ್ನವನ್ನೂ ನಾವು ಸ್ವಾಗತಿಸುತ್ತೇವೆ. ಆದರೆ, ಚೀನಾದ ನಾಯಕರ ವರ್ತನೆಯು ಇದಕ್ಕೆ ಪ್ರತಿಕೂಲವಾಗಿದೆ. ಕೈರೋ ಮಾತುಕತೆಗಳು ತೊಡಗುತ್ತಿವೆಯೆನ್ನುವಾಗ, ಚೌ-ಎನ್-ಲಾಯ್‌ರವರು ಒಂದು ಹೇಳಿಕೆ ಹೊರಡಿಸಿ, ತಾವು ಯಾವ ಪೂರ್ವ ಶರ್ತಗಳೂ ಇಲ್ಲದೆ ಭಾರತದೊಡನೆ ಮಾತುಕತೆಗೆ ಸಿದ್ಧರು ಎಂಬ ಹಳೆಯ ರಾಗವನ್ನು ಮರಳಿ ಹೊರಡಿಸಿದ್ದಾರೆ. ಅಲ್ಲದೆ ಅತ್ತ ಇನ್ನೊಂದು ಬಾಡುಂಗದ ಸಮ್ಮೇಳನವನ್ನು ಕರೆಯುವಂತೆಸಗುವ ಪ್ರಯತ್ನವನ್ನೂ ತೆರೆಯ ಮರೆಯಲ್ಲಿ ಮಾಡತೊಡಗಿದ್ದರು. ಆದರೆ, ವಿವಾದದಲ್ಲಿ ಸಿಕ್ಕಿಕೊಂಡಿರುವ ಒಂದು ದೇಶದ ಬೆಂಬಲ ಮತ್ತು ಒತ್ತಾಸೆಯಿರುವ ಸಮ್ಮೇಳನದಿಂದ ವಿವಾದ ಪರಿಹಾರವು ಹೇಗೆ ತಾನೇ ಸಾಧ್ಯವಾದೀತು?-- ಈ ಕಾರಣದಿಂದಲೇ ಭಾರತವು ಅಂತಹ ಸಮ್ಮೇಳನವನ್ನು ಸೇರಿಸುವ ಪ್ರಯತ್ನವನ್ನು ವಿರೋಧಿಸಿತು.

ಅಲಿಪ್ತರ ಸಮ್ಮೇಳನ

ಚೀನಾದ ಹಿಂಬದಿಯಲ್ಲಿರುವ ರಹಸ್ಯವನ್ನು ಸಿರಿಮಾವೋ ಮತ್ತು ನಸ್ಸೇರರು ತಿಳಿಯದೆ ಹೋಗಲಿಲ್ಲ. ಆದುದರಿಂದಲೇ ಅವರು ಬಾಡುಂಗ ಸಮ್ಮೇಳನವನ್ನು ಸೇರಿಸುವ ಪ್ರಯತ್ನವನ್ನು ಪುರಸ್ಕರಿಸದೆ ಬೆಲ್ಗ್ರೇಡ ಮಾದರಿಯ ಸಮ್ಮೇಳನವನ್ನು ಬೆಂಬಲಿಸಿದರು. ಚೀನಾಕ್ಕೆ ಬುದ್ಧಿ ಹೇಳುವುದರಲ್ಲಿ ಇನ್ನೇನೂ ಔಚಿತ್ಯವಿಲ್ಲ; ಏಕೆಂದರೆ, ಮೊದಲೇ ಅತಿ ಉದಾರವಾದ ಸೂಚನೆಗಳನ್ನು ಮುಂದಿಟ್ಟಿದ್ದರೂ ಅವುಗಳನ್ನು ಒಪ್ಪದೆ ತನ್ನದೊಂದು ವಾದವನ್ನೇ ಬಂಡುತನದಿಂದ ನೆಮ್ಮಿ ಹಿಡಿದ ಕೆಂಪು ಚೀನಾವನ್ನು ನೇರವಾಗಿ ಖಂಡಿಸುವುದಾಗಲೀ ದಾರಿಗೆ ತರುವುದಾಗಲೀ ಅತಿ ಕಷ್ಟಸಾಧ್ಯವೆಂದು ತಿಳಿದು ಅದಕ್ಕೆ ಬುದ್ಧಿ ಹೇಳುವುದೆಂದರೆ, ಅದು ಹುಚ್ಚುತನವೆಂದು ಕಂಡುಕೊಂಡಿತು. ಆದುದರಿಂದಲೇ ಇವರಿಬ್ಬರೂ ಹೊಸತಾದ ವಿಚಾರವೊಂದಕ್ಕೆ ಮನದಂದು ಅಲಿಪ್ತ ರಾಷ್ಟ್ರಗಳ ಸಮ್ಮೇಳನವನ್ನು ಕರೆಯಲು ನಿರ್ಧರಿಸಿದರು. ಬಾಡುಂಗ ಸಮ್ಮೇಳನದಲ್ಲಿ ಚೀನಕ್ಕೆ ಸ್ಥಾನವಿದೆ. ಆದರೆ ಇನ್ನು ಮುಂದೆ ಸೇರಲಿರುವ ಅಲಿಪ್ತ ರಾಷ್ಟ್ರಗಳ ಸಮ್ಮೇಳನದಲ್ಲಿ ಚೀನಕ್ಕೆ ಪ್ರವೇಶವಿಲ್ಲ; ಆದುದರಿಂದ ಅದಕ್ಕೆ ಏಕೆ ಹೆದರಬೇಕು? ನಿರ್ಲಿಪ್ತನೆಂದು ಹೇಳಿ, ಪಂಚಶೀಲವನ್ನು ಹಾಡಿ ಆಕ್ರಮಣ ಮಾಡುವ ಧೂರ್ತತೆಯನ್ನು ತೋರಿದ ಚೀನಾದ ನೀತಿಯು ಇಂತಹ ಸಮ್ಮೇಳನದಲ್ಲಿ ಖಂಡಿತವೂ ಅವಹೇಳನಕ್ಕೆ ಗುರಿಯಾಗುವುದು ಮತ್ತು ಆಕ್ರಮಣಕ್ಕೆ ಗುರಿಯಾದ ಭಾರತದ ನೀತಿಯು ಪ್ರಶಂಸೆ ಪಡೆಯುವುದು ಸ್ವಾಭಾವಿಕ.

ಲಾಯರ ಹಳೆಯ ರಾಗ

ಕೊಲಂಬೋ ರಾಷ್ಟ್ರಗಳ ಸಲಹೆಯನ್ನು ನಿರಾಕರಿಸಿದರೂ ಚೀನಾವು ಭಾರತದೊಡನೆ ನೇರ ಮಾತುಕತೆಗೆ ಸಿದ್ಧವಿದೆಯೆಂದು ಹೇಳುತ್ತದೆ. ಪ್ರಧಾನಿ ನೆಹರುರವರು ಪೀಕಿಂಗಿಗೆ ಬರಲು ಅನನುಕೂಲವಾದರೆ, ತಾವೇ ನವದೆಹಲಿಗೆ ಬರಲು ಸಿದ್ಧರಿದ್ದೇವೆಂದು ಚೌ ಎನ್ ಲಾಯ್ ಹೇಳಿದ್ದಾರೆ. ಆದರೆ, ಅವರ ಆಗಮನವಾಗಲೀ ನಿಶ್ಶರ್ತವಾಗಿ ಮಾತುಕತೆಯನ್ನು ಆರಂಭಿಸುವುದಾಗಲೀ ನಿಷ್ಪ್ರಯೋಜಕ. ಏಕೆಂದರೆ, ಲಾಯ್‌ಯವರು ಈ ಮೊದಲೇ ದಿಲ್ಲಿಯಲ್ಲಿ ಕುಳಿತು ಪಂಚಶೀಲಗಳನ್ನು ಘೋಷಿಸಿದ್ದರು. ಆದರೆ, ಅವೇ ಪಂಚಶೀಲಗಳಿಗೆ ತಾವೇ ಕೊಲವಿಟ್ಟರು. ಅದರ ಮೇಲೆ ಭಾರತವೇನೂ ಶರ್ತವನ್ನು ಹೊರಿಸಿಲ್ಲ. ಇಕ್ಕಡೆಯವರ ಹಿತಚಿಂತಕ ರಾಷ್ಟ್ರಗಳು ಒಮ್ಮತದಿಂದ ಮಾಡಿದ ಸೂಚನೆಗಳನ್ನು ಎರಡೂ ಕಡೆಯವರು ಒಪ್ಪುವುದು ಅಗತ್ಯವೆಂದು ಭಾರತವು ಹೇಳಿದರೆ, ಅದನ್ನು ಪೂರ್ವಶರ್ತವೆನ್ನುವುದು ನ್ಯಾಯವಿಲ್ಲ. ಭಾರತವೇ ತಾನಾಗಿ ಯಾವುದಾದರೂ ಶರ್ತವನ್ನು ಹೇರಿದ್ದರೆ, ಆಗ ಚೀನಾದ ವಾದದಲ್ಲಿ ಹುರುಳಿರುತಿತ್ತು. ಮಾತುಕತೆಗೆ ತಳಹದಿಯಾವುದಾದರೂ ಬೇಕು ಎಂಬುದರಿಂದ ಭಾರತವು ತಳೆದ ನಿಲುವೊಂದು ಎಲ್ಲೆಡೆಯೂ ಸಮರ್ಥನೆ ಗೊಂಡಿದೆ.

ಇರು, ಇರಗೊಡು

ಅಲಿಪ್ತ ರಾಷ್ಟ್ರಗಳು ಭಾರತದ ಮೇಲೆ ಚೀನಾವು ಮಾಡಿದ ಆಕ್ರಮಣದಿಂದ ಕಂಗಾಲಾಗುವಂತಿವೆ. ಆದುದರಿಂದ ತಾವು ಕೆದರಿ ಜಗಳ ಕರೆಯುವ ಆಕ್ರಮಣಶೀಲರಿಂದ ಉಳಿದುಕೊಳ್ಳಬೇಕಾದರೆ, ಅಲಿಪ್ತತೆಯು ಸತ್ವವನ್ನು ಮರಳಿ ಉಜ್ಜೀವನಗೊಳಿಸಬೇಕು. ಇದರಿಂದ ಇಂತಹ ದೇಶಗಳು ತಮ್ಮ ತನವನ್ನು ಉಳಿಸಿಕೊಂಡು ಆಕ್ರಮಣಶೀಲರ ದುಷ್ಕೃತ್ಯಗಳಿಂದ ಕಂಗೆಡಲಾರವು. ಶಾಂತಿಯಲ್ಲಿ ವಿಶ್ವಾಸವಿಲ್ಲದ ಚೀನಾ ಇಂದು ಭಾರತಕ್ಕೆ ಮಾತ್ರವಲ್ಲ ಅದರ ನೆರೆಹೊರೆಯವರಿಗೂ ಭಯದಾಯಕ. ತನ್ನ ವಿಶಾಲೋದರದಲ್ಲಿ ಸಮಾವೇಶಗೊಳಿಸುವ ಇಚ್ಛೆಯಿಂದ ಹೊಸ ಹೊಸ ರಾಷ್ಟ್ರಗಳನ್ನೇ ಅದು ಹೊಂಚು ಹಾಕುತ್ತಿದೆ. ಇದರಿಂದ ತಟಸ್ಥ ರಾಷ್ಟ್ರಗಳು ತಮ್ಮ ಶಕ್ತಿಯನ್ನು ಸಂಯುಕ್ತಗೊಳಿಸಬೇಕು; ಒಂದಾಗಿ ಆಕ್ರಮಣಕಾರರನ್ನು ಪ್ರತಿಭಟಿಸಬೇಕು; ಒಬ್ಬರಿಗೊಬ್ಬರು ನೆರವಾಗಲು ಸಿದ್ಧರಾಗಬೇಕು. 'ಇರು ಇರಗೊಡು' ನೀತಿಯ ವಿವರಣೆಯೇ ತಟಸ್ಥ ನೀತಿಯ ಮೂಲ. ಇದನ್ನು ಅಲ್ಲಗಳೆಯುವ ಸಾಹಸವನ್ನು ಮಾಡುವವರು ತಟಸ್ಥ ನೀತಿಯನ್ನು ತ್ಯಜಿಸಿ ಯಾವುದಾದರೂ ಗುಂಪಿನಲ್ಲಿ ಸೇರಿಕೊಳ್ಳಲೇ ಬೇಕಾಗುತ್ತದೆ. ಇದರಿಂದ ಜಗತ್ತು ಇಬ್ಭಾಗವಾಗಿ ಮಾರಣ ಹೋಮಗಳಿಗೆ ನಾಂದಿಯಾಗುವುದು ಖಂಡಿತ. ಹೀಗಾಗಿ ಬಾಡುಂಗ, ಬೆಲ್ಗ್ರೇಡ ಸಮ್ಮೇಳನಗಳ ಮಾದರಿಯಲ್ಲಿಯೇ ತಟಸ್ಥ ರಾಷ್ಟ್ರಗಳು ಒಂದಾಗುವುದು ಇಂದಿನ ದಿನಗಳಲ್ಲಿ ಬಹಳಷ್ಟು ಅಪೇಕ್ಷಣೀಯವಿದೆ.

ವಿಲಕ್ಷಣ ಪಾರ

ದಕ್ಷಿಣ ಆಫ್ರಿಕೆಯ ವರ್ಣಭೇದ ನೀತಿಯನ್ನು ಖಂಡಿಸಿ, ಅದು ಆ ನೀತಿಯನು ಬಿಡಲು ಸಿದ್ಧವಾಗದೆ ಇದ್ದುದರಿಂದ ಕಾಮನ್‌ವೆಲ್ತಿನಿಂದಲೇ ಹೊರ ನಡೆಯಬೇಕಾಯಿತು. ಆಫ್ರೀಕನ್ನಾ ನಾಗರಿಕರ ಇಚ್ಛೆಗೆ ಪ್ರತಿಕೂಲವಾಗಿ ಶ್ವೇತೇತರರನ್ನು ಕಡೆಗಣಿಸುವ, ಅವರಿಗೆ ಅಪಮಾನ, ಅವರ ಮೇಲೆ ಅತ್ಯಾಚಾರ ನಡೆಸುವ ವೆರ್ವರ್ಡ ಸರಕಾರದೊಡನೆ ಸಂಪರ್ಕವನ್ನು ಕಡಿದುಕೊಳ್ಳುವಂತಹ ಪರಿಸ್ಥಿತಿಯು ಬಂತು. ಆದರೂ ವೆರ್ವರ್ಡರು ತಲೆತಗ್ಗಿಸಲಿಲ್ಲ. ಶ್ವೇತೇತರರನ್ನು ಬಗ್ಗುಬಡೆಯುವ 'ಸಂಚನ್ನೇ' ಅವರು ಹೊಂಚು ಹಾಕುತಿದ್ದಾರೆ. ಶ್ವೇತವರ್ಣೀಯರ ಮಕ್ಕಳು ಅವರಿಗಾಗಿಯೇ ಮೀಸಲಿರಿಸಿದ ಬಸ್ಸುಗಳಲ್ಲಿ ಹತ್ತಿ ಶಾಲೆಗೆ ಬರಬೇಕಲ್ಲದೆ ಸಾರ್ವಜನಿಕ ಬಸ್ಸುಗಳಲ್ಲಿಯಲ್ಲವೆಂದು ಒಂದು ಶಾಲೆಯ ಮುಖ್ಯೋಪಾಧ್ಯಾಯರು ಆಜ್ಞೆ ಹೊರಡಿಸಿ, ಬಸ್ ಸ್ಟಾಪುಗಳನ್ನು ಕಾಯ ತೊಡಗುವಷ್ಟು ಅಲ್ಲಿನ ಪರಿಸ್ಥಿತಿ ಮುಂದುವರಿದಿದೆ. ಆದರೆ ಒಂದು ಮಾತನ್ನು ನಾವು ಮರೆಯುವಂತಿಲ್ಲ. ಇಂದು ವರ್ಣಭೇದ ನೀತಿಗೆ ಜಾಗತಿಕ ಅಭಿಪ್ರಾಯವು ಪ್ರತಿಕೂಲವಾಗಿ ನಿಂತಿದೆ. ಆದುದರಿಂದಲೇ ಎಲ್ಲೆಡೆಯೂ ಇದಕ್ಕೆ ಪ್ರತಿಭಟನೆ ತೋರುತ್ತಿದೆ. ಜಗತ್ತಿನ ಹೆಚ್ಚಿನ ರಾಷ್ಟ್ರಗಳು ದ. ಆಫ್ರಿಕೆಯೊಡನೆ ವ್ಯವಹಾರವನ್ನು ಸ್ಥಗಿತಗೊಳಿಸುತ್ತಲಿವೆ. ಆದರೂ ದ. ಆಫ್ರಿಕೆಯೇಕೆ ಮಣಿಯುತ್ತಿಲ್ಲ? ಪಾಶ್ಚಾತ್ಯ ರಾಷ್ಟ್ರಗಳು ಸ್ವಯಂ ವರ್ಣಭೇದವನ್ನು ವಿರೋಧಿಸುತ್ತಿರುವವಾದರೂ ದ. ಆಫ್ರಿಕೆಯೊಡನಿರುವ ಸಂಬಂಧವನ್ನು ಒಂದೇ ಸಲ ಬಿಟ್ಟು ಬಿಡಲು ಸಿದ್ಧರಿಲ್ಲ. ಆದುದರಿಂದಲೇ ವಿಶ್ವಸಂಸ್ಥೆಯಲ್ಲಿಯೇ ದ ಆಫ್ರಿಕೆಗೆ ಬಹಿಷ್ಕಾರ ಹಾಕುವ ಪ್ರಯತ್ನ ನಡೆಯುತ್ತಿದೆ; ಇಂದದು ತುಸು ಪ್ರಯಾಸವಾಗಬಹುದು; ಆದರೆ, ನಿಕಟ ಭವಿಷ್ಯದಲ್ಲಿಯೇ ಅದು ಸಾಧ್ಯವಾಗುವುದು ಸುನಿಶ್ಚಿತ.

ಉಪಸಂಹಾರ

ಜಗತ್ತಿನಲ್ಲಿ ಆಕ್ರಮಣದ ವಿರುದ್ಧವಿಂದು ಜನಾಭಿಪ್ರಾಯ ಮೂಡುತ್ತಿದೆ. ರಶ್ಯವು ಕೂಡ ಚೀನಾದ ನೀತಿಯನ್ನು ಪ್ರತಿಭಟಿಸುವಾಗ, ಚೀನಾದ ಕೈವಾರಿಗಳು ಯಾರು? ನಸ್ಸೇರ ಮತ್ತು ಸಿರಿ

(೧೨ನೇ ಪುಟ ನೋಡಿರಿ)

ಐತಿಹಾಸಿಕ ನಾಟಕ

ಗಜಪತಿ ನಂದಿನಿ

ಬರೆದವರು: "ನವಗಿರಿನಂದ"

(ಕಳೆದ ಸಂಚಿಕೆಯಿಂದ ಮುಂದುವರಿದುದು)

ದೃಶ್ಯ ೧೪

ಮುದಗಲ್ ದುರ್ಗದ ಬಳಿ ಇನ್ನೊಂದು ಬೀಡು.

(ಜಯರಾಮ ಸೇನಾನಾಯಕನೊಡನೆ ರೂಪಸಿಂಗ್ ಬೈರಾಗಿಯ ವೇಷದಲ್ಲಿ ಕೃತಕ ಗಡ್ಡವನ್ನು ಕೈಯಲ್ಲಿ ಹಿಡಿದುಕೊಂಡು ಪ್ರವೇಶ.)

ರೂಪ— ಜಯರಾಂಜೀ! ನಮ್ಮ ಶ್ರೀಕೃಷ್ಣ ರಾಜೇಂದ್ರರ ರಾಜನೀತಿ ನೈಪುಣ್ಯವು ಎಷ್ಟು ಮೇಲಾಗಿದೆ!

ಜಯ - ಸಂದೇಹವುಂಟೇ? ರೂಪಸಿಂಗಜೀ. ತಮ್ಮ ಮೇಲೆ ಅವರಿಗೆ ವಿಶ್ವಾಸ ಹುಟ್ಟಿದರೂ....

ರೂಪ— ಅದೇ ನಾನು ಹೇಳುತಿರುವೆನು. ಒಮ್ಮೆಗೆ ನನ್ನನ್ನು ಸ್ವಸೈನ್ಯದಲ್ಲಿ ಸೇರಿಸದೆ, ನಿಮ್ಮ ಸೈನ್ಯದಲ್ಲಿರಬೇಕೆಂದು ಆಜ್ಞಾಪಿಸಿದ್ದಾರೆ.

ಜಯ— ಆದರೆ ರೂಪಸಿಂಗಜೀ, ತಾವು ಸ್ವಲ್ಪ ದುಡುಕಿದಿರೆಂದು ನನಗೆ ತೋರುತ್ತದೆ.

ರೂಪ— ಏನೇನು?

ಜಯ— ತಾವು ಆರೇ ದಿನಗಳೊಳಗೆ ಮುದಗಲ್ ವಿಷಯ ಸಾಧಿಸಿಕೊಡುವೆನೆಂದು ಪ್ರತಿಜ್ಞೆ ಮಾಡಬಾರದಾಗಿತ್ತು.

ರೂಪ— ಮಾತು ಮಾತಿಗೆ ಪ್ರತಿಜ್ಞೆ ಮಾಡಿ ಬಿಡುವವರಾಯಿತಲ್ಲಾ ನಮ್ಮ ರಾಯರು! ಅವರ ಮನಸ್ಸು ಪ್ರಸನ್ನವಾಗಲೆಂದು ಮಾಡಿಬಿಟ್ಟೆ. ಈಗ ಮುದಗಲ್ ದುರ್ಗವನ್ನು ಕಾಪಾಡಲಿಕ್ಕಾಗಿ ಆದಿಲ್‌ಷಹನೇ ಹೊರಟು ಬರುತಿದ್ದಾನಲ್ಲಾ! ಎಲ್ಲಿಯ ವರೆಗೆ ಬಂದಿದ್ದಾನೆ?

ಜಯ— ಕೃಷ್ಣಾ ನದಿಯ ಸಮೀಪಕ್ಕೆ ಬರುತ್ತಿರುವನೆಂದು ಗೂಢಚಾರರು ತಿಳಿಸಿರುತ್ತಾರೆ

ರೂಪ— ಅಷ್ಟೇ ತಾನೇ? ಚಿಂತೆಯಿಲ್ಲ. ದೈವ ಸಹಾಯವಿದ್ದರೆ ನಾಳೆ ಮುಂಜಾನೆಯ ಸೂರ್ಯನೊಂದಿಗೆ, ಕರ್ನಾಟಕದ ವರಾಹಾಂಕಿತ ಧ್ವಜವು ಮುದಗಲ್ ದುರ್ಗದಲ್ಲಿ ಮೇಲಕ್ಕೆದ್ದು ರಾರಾಜಿಸೀತು. ಆದಿಲ್‌ಷಹನು ಕೃಷ್ಣಾ ನದಿಯನ್ನು ದಾಟುವಾಗ ಅವನನ್ನು ಮರ್ದನಮಾಡಿ ಓಡಿಸುವುದು ಬಲು ಸುಲಭ.

ಜಯ— ಶಾಭಾಸ್, ತಾವು ನಡು ವಯಸ್ಕರಾಗಿದ್ದರೂ, ತಮ್ಮ ಬುದ್ಧಿ ಚಾತುರ್ಯವು ಮಂತ್ರೀಶ್ವರ ತಿಮ್ಮರಸರನ್ನೆ ಮೀರಿಸುವಂತಿದೆ

ರೂಪ— ಇದಿರಲಿ, ಜಯರಾಂಜೀ, ನಾನೀಗ ಬೈರಾಗಿಯ ವೇಷದಿಂದ ಮುದಗಲ್ಲಿನೊಳಗೆ ಪ್ರವೇಶ ಮಾಡುವೆನು. ನಡುರಾತ್ರಿಯ ಸಮಯಕ್ಕೆ ತಾವೊಂದು ಸಣ್ಣ ಸೈನ್ಯದೊಡನೆ ನನ್ನ ಸಂಕೇತವನ್ನು ಕಾಯುತ್ತ ಇಲ್ಲಿಯೇ ಇರಿ. (ಕೃತಕ ಗಡ್ಡವನ್ನು ಕಟ್ಟಿಕೊಳ್ಳುವನು.

ಜಯ - ತಾವು ದುರ್ಗದೊಳಗೆ ತುಂಬಾ —

ರೂಪ— ಜಾಗ್ರತನಾಗಿರುತ್ತೇನೆ. ಧೈರ್ಯಂ ಸರ್ವತ್ರ ಸಾಧನಂ. ತಿಳಿಯಿತೇ ಜಯರಾಂ? ಇಂದು ರಾತ್ರಿ, ಈ ಸ್ಥಳದಲ್ಲಿ.

ಜಯ— ಅಪ್ಪಣೆ!

ರೂಪ— ಅಪ್ಪಣೆ! (ರೂಪಸಿಂಗನು ಆಚೆಗೂ, ಜಯರಾಂ ಈಚೆಗೂ ಹೋಗುವರು.)

ದೃಶ್ಯ ೧೫

ಮುದಗಲ್ ದುರ್ಗದೊಳಗೆ ಸೈಯದ್‌ಮರ್ಕಾರನ ಮಂದಿರ

(ಸೈಯದ್‌ಮರ್ಕಾರ್ ಮತ್ತು ಗುಲಾಂ ಆಲೀ ಗಾಂಜಾ ಸೇದುತ್ತ ಮಾತಾಡುತಿರುವರು)

ಸೈಯದ್— (ಜುರಿಕೆ ಸೇದಿ) ಗುಲಾಂ ಆಲೀಜೀ, ನೀವೆಷ್ಟೇ ಧೈರ್ಯ ಹೇಳಿದರೂ ನನಗೇನೋ ದಿಗಿಲಾಗಿದೆ.

ಗುಲಾಂ— ಏಕೆ ಹುಜೂರ್! ಈ ದುರ್ಗವು ಎಷ್ಟು ಬಲವಾದುದೆಂದರೆ, ಈ ಕೃಷ್ಣದೇವನಲ್ಲ ಇವನ ಅಪ್ಪ ನರಸರಾಜನೇ ಸೈತಾನನಾಗಿ ಬಂದು ಬಡಿದರೂ ಒಡೆಯುವಂಥಾದ್ದಲ್ಲ.

ಸೈಯದ್— ನಮಗೆ ಸಹಾಯವಾಗಿ ಆದಿಲ್ ಷಹರ ಸೈನ್ಯವು ಎಲ್ಲಿಯ ವರೆಗೆ ಬಂತೋ?

ಗುಲಾಂ— ಇನ್ನೆರಡೇ ದಿನಗಳಲ್ಲಿ ಕೃಷ್ಣಾನದಿ ದಡಿಗೆ ಬರುತ್ತಾರೆ. ನದಿ ದಾಟಿದರೆ ಮುಗಿಯಿತು ರಾಯನ ಗತಿ!

ಸೇವಕ— (ಬಂದು ಕುರ್ನೀಸು ಮಾಡುತ್ತಾನೆ)

ಸೈಯದ್— ಕ್ಯಾರೆ?

ಸೇವಕ— ಸರ್ಕಾರ್ ಆಪ್ ಕೀ ಮುಲಾಖತ್ ಕೊ, ಏಕ್ ಬೈರಾಗಿ ಆಯಾ ಹುವಾ ಹೈ.

ಸೈಯದ್— ಏಕ್ ಬೈರಾಗೀ? ಅಂದರ್ ಭೇಜ್ ದೋ. (ದೂತನು ಹೋಗುವನು.) ಗುಲಾಂ ಆಲೀಜೀ; ಯಾರಾಗಿರಬಹುದು?

ಗುಲಾಂ— (ಗಡ್ಡ ಸೀವುತ್ತ) ಯಾರೋ. ರಾಯನ ಸೇನೆ ದುರ್ಗವನ್ನು ಮುತ್ತಿರುವಾಗ ಈ ಬೈರಾಗಿ ಹೇಗೆ ಹೊಕ್ಕ?

ಸೈಯದ್— ಶತ್ರುವಿನ ಗೂಢಚಾರ ತಾನೆ?

ಗುಲಾಂ— ಸಂದೇಹವಿಲ್ಲ. ಬಂದ ಕೂಡಲೇ ಬಿಸ್‌ಮಿಲ್ಲಾ ಮಾಡಿ ಬಿಡೋಣ.

ರೂಪ— (ಬೈರಾಗಿ ವೇಷದಲ್ಲಿ ಬಂದು) ನಾವಿಾ! ಸಾಹೇಬ್‌ದೇವ್ರು, ಪಾದ ಕ್ಬಿದ್ದೇ. ನಮಸ್ಕಾರ. (ಕೈ ಮುಗಿಯುವನು.)

ಗುಲಾಂ— ರೇ! ನಿನ್ನ ಮೆಣಸ್ಕಾರಾನ ಬೆಂಕೀಗೆ ಹಾಕು. ಕುರ್ನಿಸ್ ಮಾಡು.

ಬೈರಾಗಿ— ತಪ್ಪಾತೆ? ಕುರ್ನಿಸ್! ಕುರ್ನೀಸ್! (ನಮಸ್ಕಾರವನ್ನೆ ಮಾಡುವರು. ಸೈಯದ್ ಗುಲಾಮರು ಪರಸ್ಪರ ನೋಡಿಕೊಂಡು ನಗುವರು.)

ಸೈಯದ್— ಇದೊಂದು ಪ್ರಾಣಿ—ಲೇ! ಯಾರೋ ನೀನು? ಟಕ್ಕು ಬೈರಾಗೀ ತಾನೆ?

ಬೈರಾಗಿ— (ಬೆದರಿ) ಹಾ! ಗುಟ್ಟು ತಿಳಿದೇ ಬಿಟ್ತೆ? ಹೂಂ ಬುದ್ದೀ ಬುದ್ದಿ. ಸತ್ಯಕ್ಕೂ ನಾನೊಬ್ಬ ಸುಳ್ಳು ಬೈರಾಗೀನೆ ಸಕ್ರಿ.

ಗುಲಾಂ— ಯಾಕೆ ಬಂದೆ? ಏನು ಕೆಲ್ಸ?

ಬೈರಾಗಿ— ಬುದ್ದೀ, ಈ ಸಾಹೇಬ್ ದೇವ್ರನ್ನ ಮಾತಾಡ್ಲಿ (ಮೆಲ್ಲಗೆ ಮುಖವನ್ನು ಸೈಯದನ ಮುಖದ ಬಳಿಗೊಯ್ದು) ತಮ್ಮ ಕೈತಪ್ಪಿಹೋದ ಹುಡ್ಗೀನ (ಗಟ್ಟಿಯಾಗಿ) ಸಂಪಾದಕ್ಕೊಸ್ಪಿವೋಗ್ಬೇಕಂತ ಈ ಟಕ್ಕು ವೇಷಾಕ್ಕೊಂಡು ಬಂದೇ. ನಾನು ಬೆಲ್ಲಂಗೊಂಡದ ಗೊಂಡಾಗ್ರಾಮದ ಬಡ ರೈತಾ ಬುದ್ದಿ. ಸ್ವಾಮಿಪ್ಪ ದೇವ್ರೇ! ಈ ರಾಯ್ನ ಆಪ್ನೀ ಸಾಕಪ್ಪರಾಯ್ತಪ್ಪಾ! ದೇವ್ರು.

ಗುಲಾಂ— ಈ ವೇಷಾಹಾಕ್ಕೊಂಡು ಹೇಗೆ ಬಂದಿ ಇಲ್ಲಿ? ಈ ದುರ್ಗದ ಸುತ್ತಾ ವಿಜಯ ನಗರದ ಸೈನ್ಯ ಮುತ್ತಿಕೊಂಡಿದೆಯಲ್ಲಾ?

ಬೈರಾಗಿ— ಅದಕ್ಕಾಗಿ ತಾನೇ ಈ ಯೇಸಾ? ಆ ವಿಜಯ ನಗರದರಸನ ಹತ್ರ ಪೋಗಿ, ಈ ಬೈರಾಗೀ ಯೇಸದಿಂದ ದುರ್ಗದೊಳಗಿನ ಗುಟ್ಟು ತಿಳಕೊಂಡು ಬಂದು ಏಳ್ತೀನಂತಯೇಳಿ ಇಲ್ಲಿಗೆ ಬಂದು ಬಿಟ್ಟೆ ಬುದ್ಧಿ.

ಗುಲಾಂ— ನಂಬಿದ್ರಾ ನಿನ್ನ?

ಬೈರಾಗಿ— ಓ!

ಸೈಯದ್— ಯಾವುದೋ ಹುಡುಗಿ ವಿಚಾರ ಹೇಳಿದಿಯಲ್ಲಾ?

ಬೈರಾಗಿ— ಹೌದು ಬುದ್ದಿ. ಹೌದ್ಂದು ಅದಕ್ಕೇ ಬಂದೆ. ಕೆಲವು ದಿನಗಳ ಕೆಳಗೆ ಬೆಲ್ಲಂಗೊಂಡದ ಅಡವೀಲಿ ಒಬ್ಬಳು ಸುಂದರಿ ನಿಮ್ಮ ಕೈ ತಪ್ಪೀಹೋದಳಲ್ಲಾ?

ಸೈಯದ್— ಆ ಆ! ಅವಳ ಹೆಸರು!

ಬೈರಾಗಿ— ಚಿನ್ನಾದೇವೀಂತೆ.

ಸೈಯದ್— ಆ! ಹುಂ. ಅವಳು ರಾಯನೊಂದಿಗೆ ಹೋಗಿಲ್ಲ?

ಬೈರಾಗಿ— ಇಲ್ಲಾ ಬುದ್ದಿ ನಾನೆಲ್ಲಾ ಆ ಅಡವೀಲಿ ಅಡಗಿದ್ದು ನೋಡ್ತಾಯಿದ್ದೆ. ಆ ಯೆಣ್ಣು ನಿಮಗೆ ಮೋಸಕೊಟ್ಟ ಹಾಗೇ ಅವರಿಗೂ ಮೋಸಕೊಟ್ಟು ತಪ್ಪಿಸಿಕೊಂಡು ಹೋಡಿದಳು. ಬಹಾಳ ಚುರುಕು ಯೆಣ್ಬುದ್ದಿ. ಆಗ ನಾನು ಮೆಲ್ಲ ಅವಳ ಹತ್ರ ಹೋಗಿ ಅವಳನ್ನು ಕಾಪಾಡುವವನಾಗೆ ನಟನೆಮಾಡಿ ಮೋಸದ ಬುಟ್ಟೀವೊಳಗೆ ಆಕೆ ಮುಚ್ಚಿಟ್ಬುಟ್ಟೆ.

ಸೈಯದ್— ಶಾಭಾಸ್ರೇ! ಎಲ್ಲಿದ್ದಾಳೀಗ?

ಬೈರಾಗಿ— ಅವಳನ್ನ ಯಾರಾದ್ರೂ ಧನವಂತ್ರೀಗೆ ಮಾರಿಬಿಡಬೇಕಂತ ಇದ್ದೇನೆ ಕೃಷ್ಣದೇವರಾಯ ಪೈಸಾ ಕೊಡೋವನಲ್ಲ. ಆದ್ರಿಂದ್ಲೇ ತಮ್ಮ ಬಳೀಗ್ಬಂದೆ.

ಗುಲಾಂ— ಓ! ನಮ್ಮ ಹುಜೂರ್ರು ಚೀಲ ತುಂಬಾ ಕೊಟ್ಬಾರಪ್ಪ.

ಬೈರಾಗಿ— ಸಾಹೇಬ್‌ದೇವ್ರು, ಏನಾದ್ರೂ ತಾವು ಧಾರಾಳ ಮನಸ್ಸುಮಾಡಿ ಬೌಮಾನಾ—

ಸೈಯದ್— ಅಚ್ಛಾ ಅಚ್ಛಾ. ಬಡಾ ಬಹುಮಾನಾ ಕೊಡ್ತೇವೇ. ಎಲ್ಲಿದ್ದಾಳೀಗ?

ಬೈರಾಗಿ— ಈ ದುರ್ಗದ ಪಕ್ಕದಾಗೇ ಒಂದು ಮುರುಕು ಶಿವನ ಗುಡೀಲಿ ಅಡಗಿಸಿಟ್ಟದೇನೆ. ಈ ದಿನ ರಾತ್ರೀನೇ ನೀವು ಅವಳ್ನ ಕರಿಕೋಬೋದು. ಆದರೆ ನಾನು ಇನ್ನು ವಿಜಯ ನಗರದವರ ಕಣ್ಣಿಗೆ ಬಿದ್ರೆ ನನ್ನ ಸುಟ್ಬೀ ಆಕ್ತಾರು.

ಸೈಯದ್— ನಿನ್ನನ್ನ ಗುಪ್ತ ಮಾರ್ಗದಿಂದ ಹೊರಗೆ ಕಳಿಸುವಾ. ಹೆದರಬೇಡ.

ಗುಲಾಂ— ಸರ್ಕಾರ್, ಆಗ ಇವನ ಜತೇಲೇ ನಾಲ್ವರು ಸೇವಕರನ್ನೂ ಕಳಿಸುವಾ. ಆ ಹುಡುಗಿಯನ್ನು ಆ ಸೇವಕರು ಇಲ್ಲಿಗೆ ಹೊತ್ತುಕೊಂಡು ಬರಲಿ.

ಸೈಯದ್— ಅಚ್ಛಾ. ಸುಳ್ಳು ಬೈರಾಗಿ, ಕತ್ತಲಾಗುವ ವರೆಗೆ ಆ ಕೋಣೇಲಿ ವಿಶ್ರಮಿಸು.

ಬೈರಾಗಿ— ಅಪ್ಪಣೆ ಬುದ್ದಿ. (ಹೋಗುವನು.)

(೧೧ನೇ ಪುಟ ನೋಡಿರಿ)

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕ್ಯಾಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5

2. ಕರೆ, ಚಿಕ್ಕ ಮ್ಯಾದೆ, ಸಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ

3 ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ಜಗತ್ಪ್ರಳಯಕ್ಕೆ

ಕಮ್ಯೂನಿಸ್ಟ್ ಚೀನಾದಲ್ಲಿ ಅಣುಗುಂಡು

ಕೆಲ ವರ್ಷಗಳ ಭಾರತೀಯ ಸಂಸದ್ ಸದಸ್ಯರ ತಂಡವೊಂದು ಚೈನಾಕ್ಕೆ ಹೋಗಿ, ತಿರುಗಾಡಿಕೊಂಡು, ಮರಳಿ ಬಂದಿತ್ತು. ಅದರಲ್ಲಿ ಬಹು ಭಾಷಾತಜ್ಞ ಹಾಗೂ ಪ್ರಖಾಂಡ ಮೇಧಾವಿ ಡಾ| ರಘುವೀರ ಓರ್ವ ಸದಸ್ಯರಾಗಿದ್ದರು. ಆಗ ಅವರು ಕಾಂಗ್ರೆಸ್ಸಿನಲ್ಲೇ ಇದ್ದು, ರಾಜ್ಯ ಸಭೆಯ ಸದಸ್ಯರಾಗಿದ್ದರು. ಭಾರತಕ್ಕೆ ಹಿಂತಿರುಗಿ ಬಂದ ಮೇಲೆ ಅವರು ಒಂದು ವಿಷಯವನ್ನು ಬಹಿರಂಗಗೊಳಿಸಿದರು. ಅದು ಚೈನಾದಲ್ಲಿ ಅಣುಗುಂಡು ತಯಾರಿಕೆಗೆ ಸಿದ್ಧತೆಯಾಗುತ್ತಿದೆ ಹಾಗೂ ಆ ದಿಸೆಯಲ್ಲಿ ಚೈನಾವು ರಷ್ಯನರ ಸಹಾಯದಿಂದ ಮುಂದುವರಿಯುತ್ತಿದೆಂದು. ಆದರೆ, ಕಮ್ಯೂನಿಸ್ಟ್ ಚೈನಾವನ್ನು ಶಾಂತಿಪ್ರಿಯ ರಾಷ್ಟ್ರವೆಂದು ಜಗತ್ತಿಗೆ ಪರಿಚಯ ಮಾಡಿಕೊಡುವದರಲ್ಲೇ ಉತ್ಸಾಹದಿಂದಿದ್ದ ಇಲ್ಲಿಯ ಅಧಿಕಾರೀಗಣ ಅವರ ಮಾತಿಗೆ ಕಿವಿಗೊಡದೆ ಅವರ ಬಾಯಿ ಮುಚ್ಚಿಸಲು ಪ್ರಯತ್ನಿಸಿದರು. ಅವರ ಮಾತಿಗೆ ಅರ್ಥವಿಲ್ಲವೆಂದು ಪ್ರಚಾರ ಮಾಡಲಾಯಿತು ಆಗ.

ಇತ್ತೀಚೆಗೆ ಬ್ರಿಟನು ಅಣ್ವಸ್ತ್ರ ತಯಾರಿಸುವ ಯಂತ್ರಗಳ ಕೆಲ ಭಾಗಗಳನ್ನು, ಉಪಕರಣಗಳನ್ನು ಕಮ್ಯೂನಿಸ್ಟ್ ಚೈನಾಕ್ಕೆ ಮಾರಿದ್ದಾಗ ಭಾರತದ ಸಂಸದ್-ಸಭೆಯಲ್ಲಿ ಅನೇಕ ಸದಸ್ಯರು ಎದ್ದು ನಿಂತು ಬ್ರಿಟನ್ ಆ ರೀತಿ ಮಾಡುವದು ಸರಿಯೇ, ಅದನ್ನು ತಡೆಯಲು ಸಾಧ್ಯ ಇಲ್ಲವೇನು.. ಹೀಗೆ ಪ್ರಶ್ನೆಗಳ ಸುರಿಮಳೆಯನ್ನೇ ಸುರಿಸಿದರು. ಅರೆ! ಅನ್ಯ ರಾಷ್ಟ್ರವೊಂದು ಇನ್ನೊಂದು ರಾಷ್ಟ್ರದೊಂದಿಗೆ ವ್ಯಾಪಾರ ಮಾಡುವಾಗ ತಡೆಯುವವರು ನಾವ್ಯಾರು? ಅದು ಮಾರಿದ್ದು ಕೆಲ ಸಲಕರಣೆಗಳನ್ನು ಮಾತ್ರ.

ಈ ಎರಡು ಘಟನೆಗಳನ್ನು ನೋಡುವಾಗ ಮತ್ತು ಚೈನಾವು ಭಾರತದ ಮೇಲೆಯೇ ಆಕ್ರಮಣ ನಡೆಸಿರುವದರ ಕುರಿತು ಯೋಚಿಸುವಾಗ, ನಿಜವಾಗಿ ಚೈನಾದ ಬಳಿ ಅಣ್ವಸ್ತ್ರಗಳಿವೆಯೇ? ಎನ್ನುವ ಪ್ರಶ್ನೆ ಸ್ವಾಭಾವಿಕವಾಗಿ ಬರುತ್ತದೆ.

ಕೆಲವಾರು ತಿಂಗಳುಗಳ ಹಿಂದೆ ಅಮೇರಿಕದಲ್ಲಿ ಒಂದು ದೂರದೃಶ್ಯ ಕಾರ್ಯಕ್ರಮ ನಡೆಯಿತು. ಆ ಕಾರ್ಯಕ್ರಮದಲ್ಲಿ ಭಾಗವಹಿಸಿದವರು ಪ್ರಖ್ಯಾತ ಪತ್ರಿಕೋದ್ಯಮಿಗಳು, ಪ್ರಾಧ್ಯಾಪಕರು ಹಾಗೂ ಆಡಳಿತಾಧಿಕಾರಿಗಳು. ಅವರು ಅಲ್ಲಿ ಕೆಲ ಘಂಟೆಗಳ ಕಾಲ 'ಚೈನಾ ಮತ್ತು ಅಣುಗುಂಡು' ಎಂಬ ವಿಷಯದ ಮೇಲೆ ಚರ್ಚೆ ನಡೆಸಿದರು. ಇದೆಲ್ಲವನ್ನೂ ಮುದ್ರಾಸಿನ ಆಂಗ್ಲ ದೈನಿಕ 'ದಿ ಮೆಯಿಲ್'ನ ಸುದ್ದಿಗಾರ ಶ್ರೀ ಆನಂದ ಮೋಹನರವರು ತಮ್ಮ ಪತ್ರಿಕೆಗೆ ಸುದ್ದಿ ಕೊಟ್ಟಿದ್ದರು. ಅದನ್ನು 'ನವಯುಗ'ದ ವಾಚಕವೃಂದದ ಮುಂದಿಡಲು ಇಲ್ಲಿ ಪ್ರಯತ್ನಿಸಲಾಗಿರುತ್ತದೆ.

ಚೈನಾ—ರಷ್ಯಾಗಳ ನಡುವಣ ವೈಷಮ್ಯತೆ ವಿಶಾಲವಾಗುತ್ತಿರುವಂತೆ, ಅಣು ಪರೀಕ್ಷೆ ವಿರೋಧ ಒಪ್ಪಂದ ಮಾಡಿಕೊಳ್ಳುವ ಆಶೆಯಿಂದ ರಷ್ಯಾ ಹಾಗೂ ಪಾಶ್ಚಾತ್ಯ ಶಕ್ತಿಗಳು ಸಮೀಪಕ್ಕೆ ಬರುತ್ತಿರುವುದರಿಂದ ಎಲ್ಲರ ಗಮನವೂ ಈಗ ಚೈನಾದತ್ತ ತಿರುಗಿರುತ್ತದೆ.

ಈಗ ದೊರಕುತ್ತಿರುವ ಪ್ರಮಾಣಗಳ ಪ್ರಕಾರ, ಈ ವರ್ಷ ಚೈನಾವು ಅಣುಗುಂಡು ಪರೀಕ್ಷೆ ನಡೆಸುತ್ತದೆ, ಹಾಗೂ ೧೯೭೦ರ ಸಮಯದಲ್ಲಿ ಅಣುಗುಂಡನ್ನು ನಿರ್ಮಿಸಿ ೧೯೮೦ರ ಸಮಯ ಪ್ರಬಲ ಶಕ್ತಿಯಾಗುತ್ತಿದೆಂದು ಗೊತ್ತಾಗುತ್ತದೆ.

ಇದಕ್ಕೆ ಆಧಾರವೂ ಇದೆ. ಚೈನಾದಲ್ಲಿ ಪ್ರಕಟವಾಗಿರುವ ಲೇಖನವೇ ಅದಕ್ಕೆ ಸಾಕ್ಷಿ. ಕೆಂಪು ಚೈನಾದ ಖಾಯುಪಡೆಯ ಅಧಿಕಾರಿ ಲ್ಯು-ಯಾ—ಲೋ ೧೯೫೮ರ ನವೆಂಬರ್ನಲ್ಲಿ ಚೈನಾ ಕೆಂಪು ಸೈನ್ಯದ ಸರಕಾರೀ ವಾರ್ತಾಪತ್ರಿಕೆ ಜೆಪ್-ಫಾಂಗ್ ಚುನ್ ಪೋದಲ್ಲಿ ಒಂದು ಲೇಖನ ಬರೆದಿದ್ದರು. ಚೈನಾವು ಅಣ್ವಸ್ತ್ರ ತಯಾರಿಕೆಯಲ್ಲಿ ಮುಂದುವರಿಯುತ್ತಿದೆಯೆಂದು ಅದರಲ್ಲಿ ಅವರು ಬರೆದಿದ್ದರು. ಅಣ್ವಸ್ತ್ರ ಅಭಿವೃದ್ಧಿಯಲ್ಲಿ ಪೂರ್ವಯೋಜಿತ ನಿಶ್ಚಯದಂತೆ ತಾವು ಮುಂದುವರಿಯುವುದಾಗಿ ೧೯೬೧ ಅಕ್ಟೋಬರಿನಲ್ಲಿ ಚೈನಾದ ಪ್ರಧಾನಿ ಚೌ-ಎನ್-ಲೈ ಹೇಳಿದರು. ಅಣ್ವಸ್ತ್ರ ಸಂಶೋಧನೆಗಾಗಿ ಅನೇಕ ವಿಜ್ಞಾನಿಗಳು ಪ್ರಯತ್ನ ಪಡುತ್ತಿದ್ದಾರೆಂಬುದನ್ನು ಚೈನಾದ ಅಂತಾರಾಷ್ಟ್ರೀಯ ಖಾತೆಯ ಸಚಿವ ಚೆನ್-ಈ ೧೯೬೨ರಲ್ಲಿ ಒಪ್ಪಿಕೊಂಡಿರುವರು. ಇವೆಲ್ಲವೂ ಆಡಳಿತ ವರ್ಗದವರಿಂದ ಹೇಳಲ್ಪಟ್ಟಿರುವ ನಿರ್ಧಾರಿತ ಮಾತುಗಳು.

ಪೆಕಿಂಗಿನಲ್ಲಿರುವ ಸೈನಿಕ ಅಣ್ವಸ್ತ್ರ ವಿಭಾಗದ ಮೂಲಾಧಿಕಾರಿಯನ್ನಾಗಿ ಮಾರ್ಶಲ್ ಯು ಚೆನ್-ಯಿಂಗ್‌ನನ್ನು ೧೯೫೮ ಮಾರ್ಚಿನಲ್ಲಿ ನೇಮಿಸಲಾಗಿರುತ್ತದೆ ಅಂದಿನಿಂದ ಮೂರು ಸಂಸ್ಥೆಗಳು ಆ ದಕ್ಕಾಗಿ ದುಡಿಯುತ್ತಿವೆ. ವು-ಹಾನ್, ಉರುಮುಚಿ ಮತ್ತು ಪೆಕಿಂಗ್‌ನಲ್ಲಿ ಆ ಮೂರು ಸಂಸ್ಥೆಗಳಿವೆ. ಅಣು ಭೌತಿಕ ಶಾಸ್ತ್ರದ ವಿಭಾಗವನ್ನು ಹಲವಾರು ವಿಶ್ವವಿದ್ಯಾನಿಲಯಗಳಲ್ಲೀಗ ತೆರೆಯಲಾಗಿರುತ್ತದೆ.

ಲೊಸ್ ಅಲಾಮೊಸ್ ಹಾಗೂ ಔಕ್ ರಿಜೆ ಮುಂತಾದೆಡೆಗಳಲ್ಲಿ ಸಂಯುಕ್ತ-ರಾಷ್ಟ್ರಗಳ ಅಣುಗುಂಡು ಸಿದ್ಧತೆಯಲ್ಲಿ ಕೆಲಸ ಮಾಡುತ್ತಿದ್ದ ಅಣು ಭೌತಿಕ ಶಾಸ್ತ್ರಜ್ಞ ಅರ್ನೋಲ್ಡ್ ಕ್ರೆಮಿಶನು ಕನಿಷ್ಟ ಪಕ್ಷ ಸಾಧಾರಣ ಅಣುಗುಂಡು ತಯಾರಿಕೆಯ ಕುರಿತು ಗೊತ್ತಿಲ್ಲದಿರುವವರು ಇಂದು ಬಹಳ ವಿರಳವೆಂದೂ, ಇಂದು ಅದರಲ್ಲೇನೂ ರಹಸ್ಯವಡಗಿರುವದಿಲ್ಲವೆಂದೂ ಹೇಳಿರುವನು. ಅವನ ಅಭಿಪ್ರಾಯದಂತೆ ಚೈನಾದ ಬಳಿ ಅಣುಗುಂಡು ಇದೆಯೋ, ಅ

(೧೦ನೇ ಪುಟ ನೋಡಿರಿ)

ನಿಮಗೆ ಕ್ಷಯರೋಗ ತಗಲುವುದು ಹೇಗೆ?

ಕ್ಷಯರೋಗವು ಒಬ್ಬರಿಂದ ಇನ್ನೊಬ್ಬರಿಗೆ ಹಲವು ರೀತಿಗಳಲ್ಲಿ ಹರಡುತ್ತದೆ.

(1) ಟಿ ಬಿ ಕ್ರಿಮಿಗಳಿಂದ ಕೂಡಿದ ಉಸಿರಾಟದ ಗಾಳಿಯಿಂದ:

(ಕ್ಷಯರೋಗವುಳ್ಳವರು ಕೆಮ್ಮುವುದರಿಂದ ಯಾ ಉಗುಳುವುದರಿಂದ ಕ್ರಿಮಿಗಳನ್ನು ಹರಡಬಹುದು) ಇದು ಸಾಮಾನ್ಯವಾಗಿ ಸರಿಯಾಗಿ ಗಾಳಿ ಬೆಳಕು ಇಲ್ಲದ ಕೋಣೆಗಳಲ್ಲಿ ನಡೆಯುತ್ತದೆ.

(2) ಎಲ್ಲರೂ ಉಪಯೋಗಿಸುವ ವಸ್ತುಗಳಿಂದ:

ಅಂದರೆ ಕುಡಿಯುವ ಲೋಟಾಗಳು, ಉಣ್ಣುವ ಬಟ್ಟಲುಗಳು, ಹಾಸಿಗೆಯ ವಸ್ತ್ರಗಳು, ಅಂಗವಸ್ತ್ರಗಳು, ಮತ್ತು ಕ್ಷಯರೋಗಿಯು ಉಪಯೋಗಿಸಿದ ಸಾಮಾನು, ಇಲ್ಲವೆ ಅವನ ಎಂಜಲು ಯಾ ಉಗುಳಿನಿಂದ ಕೂಡಿದ ವಸ್ತುಗಳನ್ನು ಉಪಯೋಗಿಸುವುದರಿಂದ.

ಕ್ಷಯರೋಗ ಮೊಹರು ಮಾರಾಟ ಚಳವಳವು, ಕ್ಷಯರೋಗದ ಕುರಿತು, ಅದರ ಸ್ವಭಾವ, ಅದನ್ನು ತಡೆಗಟ್ಟುವ ವಿಧಾನ, ಮತ್ತು ಚಿಕಿತ್ಸೆಯ ರೀತಿ ಇವುಗಳನ್ನು ಜನರಿಗೆ ತಿಳಿಯ ಹೇಳುವ ಉದ್ದೇಶಗಳಿಂದ ಕೂಡಿದೆ ಈ ಚಳವಳವನ್ನು ಜಯಶೀಲಗೊಳಿಸಲು ದಯಮಾಡಿ ಟಿ ಬಿ ಮೊಹರುಗಳನ್ನು ಕೊಂಡುಕೊಂಡು ನಿಮ್ಮ ರಾಜ್ಯದ ಟಿ ಬಿ ಸಂಘಗಳಿಗೆ ಅವುಗಳ ಚಟುವಟಿಕೆಗಳನ್ನು ಮುಂದೊತ್ತಲು ಸಹಾಯ ಮಾಡಿರಿ.

ಒಂದು ಟಿ ಬಿ ಮೊಹರಿನ ಬೆಲೆ
ಹತ್ತು ನಯೇಪೈಸೆ ಮಾತ್ರ

ಮೊಹರುಗಳು ಸಿಗುವ ಸ್ಥಳಗಳು: ಮೈಸೂರು ರಾಜ್ಯದ ಟಿ ಬಿ ಸಮಿತಿ, ಸರಕಾರಿ ಟಿ ಬಿ ಸೆನಟೋರಿಯಂ, ಹಳೆ ಮದ್ರಾಸು ರಸ್ತೆ, ಬೆಂಗಳೂರು. 2. ದಕ್ಷಿಣ ಕನ್ನಡ ಜಿಲ್ಲಾ ಟಿ ಬಿ ಸಮಿತಿ, ಸರಕಾರಿ ವೆನ್‌ಲೊಕ್ ಆಸ್ಪತ್ರೆ, ಮಂಗಳೂರು ಮತ್ತು ಅವರ ವಿವಿಧ ಏಜನ್ಸಿಗಳಲ್ಲಿ.

ಹದಿನಾಲ್ಕನೇ ಟಿ ಬಿ ಮುದ್ರೆ ಮಾರಾಟ ಚಳವಳಿ

(ನವ ದೆಹಲಿಯಲ್ಲಿರುವ ಭಾರತದ ಕ್ಷಯರೋಗ ಸಮಿತಿಯಿಂದ ನಡೆಸಲ್ಪಡುವಂಥಾದ್ದು)

ಈ ಸ್ಥಳದ ದಾತೃಗಳು:

Consolidated Coffee Estates (1943) Limited,
Pollibetta.

ಕುಷ್ಠದ ವಿರುದ್ಧ ಹೋರುವ

ಕರುಣಾಸೇತು

ಪದ್ಮಶ್ರೀ ಜಗದೀಶನ್

ಆರ್ಕಾಟು ಮದ್ರಾಸ ರಾಜ್ಯದ ಒಂದು ಪುಟ್ಟ ಪಟ್ಟಣ. ಅಲ್ಲಿ ಪಬ್ಲಿಕ್ ಗಾರ್ಡನ್ ಎಂಬ ಒಂದು ಚಿಕ್ಕ ತೋಟವಿದೆ. ಈ ಉದ್ಯಾನದಲ್ಲಿ ಜಿಲ್ಲಾ ಬೋರ್ಡು ಇರಿಸಿರುವ ಸಾರ್ವಜನಿಕ ರೇಡಿಯೊವಿದೆ. ಇಂದಿಗೆ ಮೂವತ್ತು ವರ್ಷಗಳಿಗೆ ಮೊದಲು ಒಬ್ಬ ಯುವಕ ನಿತ್ಯ ಅಲ್ಲಿಗೆ ಬರುತ್ತಿದ್ದನು. ಏಕಾಂಗಿ ಯಾಗಿಯೇ ಅವನು ಬರುತ್ತಿದ್ದನು; ಒಬ್ಬನೇ ಕೂತಿರುತ್ತಿದ್ದನು. ಆತನ ಮುಖದಲ್ಲಿ ಸದಾಕಾಲ ಆಲಸ್ಯವು ಮನೆ ಮಾಡಿರುತ್ತಿತ್ತು. ಯಾರಾದರೂ ಆತನೊಡನೆ ಮಾತಾಡುವ ಆತುರವನ್ನು ತೋರಿಸಿದರೆಂದರೆ, ಅವನು ಅವರೆಡೆಗೆ ನೋಡುವ ಭಾವವು 'ತಮ್ಮಾ, ನನ್ನನ್ನು ಸುಮ್ಮಸುಮ್ಮನೆ ಕೆರಳಿಸಬೇಡ' ಎಂದು ಹೇಳುವಂತಿರುತಿತ್ತು.

ಎಂದಿನಂತೆ ಒಂದು ದಿನವಾತ ಉಪವನಕ್ಕೆ ಆಗಮಿಸಿದಾಗ ಅಲ್ಲಿ ಜನಜಂಗುಳಿಯೊಂದಿತ್ತು. ಆತನು ಮರಳಿ ಹೋಗಲು ತಿರುಗಿದನು; ಆದರೆ, ರೇಡಿಯೋದಿಂದ ಹೊರಬಂದ ಮಾತು ಆತನನ್ನು ತಡೆದು ನಿಲ್ಲಿಸಿತು. ಪೇರಿ ಬರ್ಗಸ್‌ರವರ ಪ್ರಸಿದ್ಧ ಪುಸ್ತಕ 'ಹೂ ವಾಕ್ ಎಲೋನ್' ಎಂಬುದರ ಸಮೀಕ್ಷೆಯನ್ನು ರೇಡಿಯೋವಿನಲ್ಲಿ ಒಬ್ಬ ಆಂಗ್ಲ ವೈದ್ಯರು ಮಾಡುತ್ತಿದ್ದರು.

ಪೇರಿ ಬರ್ಗಸರು ಅಮೇರಿಕೆಯ ಪ್ರಸಿದ್ಧ ಲಿಯೋನಾರ್ಡ್ ವುಡ್ ಲೆಪ್ರೊಸಿ ಫೌಂಡೇಶನ್‌ನ ಕಾರ್ಯದರ್ಶಿಯಾಗಿದ್ದರು. ಅವರು 'ಹೂ ವಾಕ್ ಎಲೋನ್' ಗ್ರಂಥದಲ್ಲಿ ಕುಷ್ಠ ರೋಗಿಗಳ ಮಾನಸಿಕ ಯಾತನೆಯನ್ನು ಹೃದಯಸ್ಪರ್ಶಿಯಾಗಿ ವರ್ಣಿಸಿದ್ದರು. ಸಮಾಜವು ಕುಷ್ಠ ರೋಗಿಗಳೊಡನೆ ಎಂತಹ ನಿಷ್ಠುರವಾಗಿ ವ್ಯವಹರಿಸುತ್ತದೆಯೆಂಬುದನ್ನು ಡಾಕ್ಟರರು ಗ್ರಂಥ ಭಾಗವನ್ನು ಉದ್ಧರಿಸಿ ಹೇಳುತ್ತಿದ್ದರು.

ಆ ಯುವಕನೂ ಒಬ್ಬ ಕುಷ್ಠರೋಗಿ. ಆತನು ಭಾಷಣವನ್ನು ಕೇಳುತ್ತಿದ್ದನು. ಆತನ ಮನಸ್ಸಿನಲ್ಲಿ ನವ ಪ್ರಕಾಶವೊಂದು ಮಿಂಚಿತು, ನವಸಂಕಲ್ಪ ಜಾಗ್ರತವಾಯಿತು. ತನ್ನ ಅಂತರಂಗದಲ್ಲಿ ಅಕ್ಷಣ್ಣ ಆತ್ಮಬಲವು ಮೂಡಿದುದು ಆತನಿಗೆ ಭಾಸವಾಯಿತು. ಮನೆಗೆ ಹೋದವನೇ ಆ ಆಂಗ್ಲ ವೈದ್ಯರಿಗೆ ಪತ್ರ ಬರೆದನು. ತನ್ನ ಜೀವನವನ್ನು ಕುಷ್ಠ ರೋಗಿಗಳ ಸೇವೆಗಾಗಿ ಮುಡಿಪಿಡುವ ನಿರ್ಧಾರವನ್ನಾತ ಆ ಪತ್ರದಲ್ಲಿ ತಿಳಿಸಿದನು.

ಈ ಯುವಕನ ಹೆಸರು ಜಗದೀಶನ್ ಮತ್ತು ವೈದ್ಯರದು ಡಾ| ಆರ್. ಜಿ. ಕೊಕ್ರೇನ್. ಡಾ| ಕೊಕ್ರೇನ್ ಲಂಡನ್ನಿನ ಬ್ರಿಟಿಷ್ ಎಂಪೈರ್ ಲೆಪ್ರೊಸಿ ರಿಲೀಫ್ ಎಸೋಸಿಯೇಶನ್ನಿನ ಚಿಕಿತ್ಸಾ ಕಾರ್ಯದರ್ಶಿ. ಆ ಸಮಯ, ಅಂದರೆ, ೧೯೨೨ರಲ್ಲಿ ಅವರು ಕಲಕತ್ತೆಯಲ್ಲಿ ನಡೆಯಲಿದ್ದ ಆಲ್ ಇಂಡಿಯಾ ಇನ್ಸ್ಟಿಟ್ಯೂಟ್ ಆಫ್ ಹೈಜೀನ್ ಎಂಡ್ ಪಬ್ಲಿಕ್ ಹೆಲ್ತ್‌ನ ಅಧಿವೇಶನದಲ್ಲಿ ಭಾಗವಹಿಸಲು ಬಂದಿದ್ದರು.

ಡಾ| ಕೊಕ್ರೇನರು ಅಧಿವೇಶನಾನಂತರ ದಕ್ಷಿಣಕ್ಕೆ ಬಂದಾಗ ಜಗದೀಶನ್ ಅವರನ್ನು ಕಾಣಲು ಹೋದನು. ಡಾಕ್ಟರರು ಆತನಿಂದ ಪ್ರಭಾವಿತರಾದರು. ಈ ಭಾರತೀಯ ಯುವಕನ ತೀವ್ರ ಬುದ್ಧಿ ಮತ್ತು ಪ್ರಾಂಜಲ ಆಂಗ್ಲ ಭಾಷೆಯು ಅವರನ್ನು ಮುಗ್ಧಗೊಳಿಸಿತು. ಯುವಕನು ಜನ್ಮಜಾತ ವಕ್ತೃವಾಗಿದ್ದನು. ಅವರು ಯುವಕನಲ್ಲಿ ಧೈರ್ಯ ತುಂಬಿದರು, ಆತನ ಚಿಕಿತ್ಸೆಗೂ ತೊಡಗಿದರು. ತಾನು ದಕ್ಷಿಣದಲ್ಲಿದ್ದಷ್ಟು ಕಾಲ ಆತನನ್ನು ತನ್ನ ಬಳಿಯಿರಿಸಿಕೊಂಡರು.

ಆ ಸಮಯದಲ್ಲಿ ಭಾರತದಲ್ಲಿ ಕುಷ್ಠ ರೋಗಿಗಳ ಆಸ್ಪತ್ರೆಯು ಬಹಳ ಕಡಿಮೆಯಿತ್ತು. ಇದ್ದವುಗಳ ವ್ಯವಸ್ಥೆಯಾದರೂ ಅಸ್ತವ್ಯಸ್ತವಾಗಿತ್ತು. ಡಾ| ಕೊಕ್ರೇನರು ಈ ಆಸ್ಪತ್ರೆಗಳಿಗೆ ಹೋದರು. ಅವರು ಕುಷ್ಠರೋಗ ನಿವಾರಣೆಯ ಕಾರ್ಯಕ್ರಮವನ್ನು ರಾಷ್ಟ್ರವ್ಯಾಪಿ ಆಂದೋಲನದ ರೂಪದಲ್ಲಿ ಕೈಗೊಳ್ಳಬೇಕೆಂಬ ಸಲಹೆಯಿತ್ತರು. ಜಗದೀಶನ್ ಈ ಸಮಯ ಅವರೊಂದಿಗಿದ್ದನು. ಈ ಕಾರ್ಯಕ್ಕಾಗಿಯೇ ತನ್ನ ಜೀವನವನ್ನು ಅರ್ಪಿಸುವ ಸಂಕಲ್ಪವನ್ನವನು ಮಾಡಿದನು.

ಇಂದು ಪ್ರೊ| ಟಿ. ಎನ್. ಜಗದೀಶನ್ ಭಾರತದಲ್ಲಿ ಮಾತ್ರವಲ್ಲ, ಇಡಿಯ ಪ್ರಪಂಚದಲ್ಲಿಯೇ ಕುಷ್ಠರೋಗ ನಿವಾರಣಾಂದೋಲನದ ಅಧ್ವರ್ಯುಗಳ ಸಾಲಿನಲ್ಲಿ ಸೇರಿದ್ದಾರೆ.

ಚಿದಂಬರಂದ ಸಮೀಪದ ಒಂದು ಹಳ್ಳಿಯಲ್ಲಿ ೧೯೦೨ರ ಅಕ್ಟೋಬರ ೨ರಂದು ಜಗದೀಶನ್ ಜನ್ಮತಾಳಿದರು. ಗಾಂಧೀಜಯಂತಿಯಂದೇ ಹುಟ್ಟಿದ ಜಗದೀಶನ್ ಗಾಂಧೀಜಿಯನ್ನೇ ತನ್ನ ಧ್ರುವತಾರೆಯೆಂದು ಮುಂದೆ ತಿಳಿದರು. ಮೇಧಾವಿ ವಿದ್ಯಾರ್ಥಿಗಳ ಸಾಲಿನಲ್ಲಿಯೇ ಅವರು ನಿಲ್ಲುತ್ತಿದ್ದರು. ಓದಿನಲ್ಲಿ ಅವರ ಅಭಿರುಚಿ ಅದಮ್ಯ. ಅತ್ರಪ್ಯ ಇವರ ತಂದೆ ನರೇಶ ಶಾಸ್ತ್ರಿಯವರು ಸಂಸ್ಕೃತದ ಪ್ರಗಲ್ಭ ಪಂಡಿತರು; ಮಗನ ಬೌದ್ಧಿಕ ವಿಕಾಸದಲ್ಲಿ ಬಹಳ ಆಸಕ್ತಿ ತಳೆಯುತ್ತಿದ್ದರು. ಜಗದೀಶನ್ ಸಾಹಿತ್ಯ ರಸಿಕರಾದರು. ಅಣ್ಣಾಮಲೈ ವಿಶ್ವವಿದ್ಯಾಲಯದಲ್ಲಿ ಓದುತ್ತಿರುವಾಗ ಅವರು ತಮ್ಮ ಪ್ರೊಫೆಸರರ ಬಳಿಗೊಂದು ಅರ್ಜಿ ಕಳಿಸಿದ್ದರು. „ಸ್ವಾಮಿ, ಇಂದು ನಾನು ಟಾಮಸ್ ಹಾರ್ಡಿಯ 'ಟೆಸ್' ಕಾದಂಬರಿಯನ್ನು ಓದುತ್ತಿದ್ದೇನೆ, ಆದುದರಿಂದ ದಯಮಾಡಿ ಒಂದು ದಿನದ ರಜೆಯನ್ನು ಕೊಡಿರಿ'

ವಿದ್ಯಾರ್ಥಿ ದೆಸೆಯಲ್ಲಿರುವಾಗಲೇ ಜಗದೀಶನ್ ಕುಷ್ಠರೋಗಕ್ಕಾಹುತಿ ಯಾದರು. ಪ್ರಭಾವ ಶಾಲಿ ಯುವಕನೊಬ್ಬನಿಗೆ ಇದಕ್ಕಿಂತ ದೌರ್ಭಾಗ್ಯ ಯಾವುದಿದೆ? ಅವರು ಹದಿನಾಲ್ಕನೆಯ ವರ್ಷದಲ್ಲಿಯೇ ವಿವಾಹಿತರೂ ಆಗಿದ್ದರು. ಪತ್ನಿಯು ಬಹಳ ಉದಾತ್ತ ಪ್ರಕೃತಿಯವರಾದುದು ಅವರ ಸೌಭಾಗ್ಯ. ಅಧ್ಯಯನವು ಅವರಿಗೆ ಸಾಂತ್ವನೆ ಮತ್ತು ಸಮಾಧಾನದ ದೊಡ್ಡ ಸ್ರೋತವಾಗಿತ್ತು. ಭಾಷಣ ಕಲೆಯು ಇನ್ನೊಂದು ಸಾಧನ. ತನ್ನ ಸಮಯದ ಶ್ರೇಷ್ಠ ಭಾಷಣಕಾರ ಶ್ರೀನಿವಾಸ ಶಾಸ್ತ್ರಿಯವರನ್ನು ತನ್ನ ಗುರುವೆಂದು ಮನ್ನಿಸುತ್ತಿದ್ದರು.

೧೯೨೦ರಲ್ಲಿ ಜಗದೀಶನ್ ಪ್ರಥಮ ಶ್ರೇಣಿಯಲ್ಲಿ ಬಿ. ಎ. (ಆನರ್ಸ್) ಪಾಸು ಮಾಡಿದರು. ಶ್ರೀನಿವಾಸ ಶಾಸ್ತ್ರಿಗಳು ಅಣ್ಣಾಮಲೈ ವಿಶ್ವವಿದ್ಯಾಲಯದ ಉಪಕುಲಪತಿಯಾದಾಗ, ಜಗದೀಶನ್ ಅಲ್ಲಿ ಆಂಗ್ಲ ಪ್ರಾಧ್ಯಾಪಕರಾದರು. ಎರಡು ವರ್ಷಗಳ ತನಕ ಅವರಲ್ಲಿ ವಿದ್ಯಾರ್ಥಿಗಳಿಗೆ ಆಂಗ್ಲ ಸಾಹಿತ್ಯವನ್ನು ಕಲಿಸಿದರು. ಆದರೆ, ೧೯೩೮—೪೦ರಲ್ಲಿ ಅವರ ಜೀವನದಲ್ಲಿ ಪರಿವರ್ತನೆಯಾಯಿತು. ಈ ವೇಳೆಯೊಳಗೆ ಜಗದೀಶನ್ ಡಾ| ಕೊಕ್ರೇನರ ಪ್ರಭಾವಕ್ಕೊಳಗಾಗಿದ್ದರು. ಕುಷ್ಠ ರೋಗಿಗಳ ಸೇವೆಯಲ್ಲಿ ಆಸಕ್ತಿ ತಳೆಯುತ್ತಿದ್ದರು. ತಮ್ಮ ಗುರು ಮತ್ತು ಉದ್ಧಾರಕ ಡಾ| ಕೊಕ್ರೇನರ ಮಾರ್ಗದರ್ಶನದಲ್ಲಿ ಕುಷ್ಠರೋಗ, ಅದರ ಚಿಕಿತ್ಸೆ ಮತ್ತು ಸಾಮಾಜಿಕ ಸಮಸ್ಯೆಗಳ ಎಲ್ಲ ಉಪಲಬ್ಧ ಸಾಹಿತ್ಯವನ್ನು ಓದಿ ಮುಗಿಸಿದ್ದರು.

೧೯೪೦ರಲ್ಲಿ ಅವರು ವಿಶ್ವವಿದ್ಯಾಲಯದಿಂದ ಬೇರೆಯಾದರು. ಎರಡು ವರ್ಷದ ನಂತರ ಅವರ ಏಕಮಾತ್ರ ಪುತ್ರ ಮೃತ್ಯುವನ್ನಪ್ಪಿದನು. ಅನಂತರ ತನ್ನ ಎಲ್ಲ ಸಮಯವನ್ನು ಕುಷ್ಠ ಸೇವೆಗಾಗಿ ಮುಡುಪಿಟ್ಟರು. ಆಗಾಗ, ವಾರ್ಧಾದ ಮಹಾರೋಗಿ ಸೇವಾಮಂಡಲದ ಕಾರ್ಯದರ್ಶಿ ಶ್ರೀ ಮನೋಹರ ದೀವಾನರೊಡನೆ ಪತ್ರ ವ್ಯವಹಾರ ಮಾಡುತ್ತಿದ್ದರು.

೧೯೪೪ರಲ್ಲಿ ಕಸ್ತೂರ್ಬಾ ಟ್ರಸ್ಟ್ ಸ್ಥಾಪಿತಗೊಂಡಾಗ, ಕುಷ್ಠ ಪೀಡಿತ ಹೆಂಗಸು ಮಕ್ಕಳಿಗಾಗಿ ಕುಷ್ಠ ನಿವಾರಣಾ ನಿಲಯ ಪ್ರಾರಂಭಿಸುವ ವಿಚಾರ ಬಂತು. ಈ ಸಂಬಂಧದಲ್ಲಿ ಗಾಂಧೀಜಿಯವರನ್ನು ಕಾಣಲು ಡಾ| ಕೊಕ್ರೇನರೊಡನೆ ಜಗದೀಶನರೂ ಸೇವಾ ಗ್ರಾಮಕ್ಕೆ ಹೋದರು; ಹತ್ತು ದಿನಗಳ ತನಕ ಅವರಲ್ಲಿದ್ದರು.

(೯ನೇ ಪುಟ ನೋಡಿರಿ)

ಹೈದರಾಬಾದಿನಲ್ಲಿ ಎನ್. ಸಿ. ಸಿ. ಕೆಡೇಟ್‌ಗಳ ಪೆರೇಡ್

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ... ...
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ

1—1—1963ರಿಂದ ಠೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ

ನಿಮ್ಮ ಉಳಿತಾಯವು ಸೇವಿಂಗ್, ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ
ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, **ಮಂಗಳೂರು—3.**

ಪ. ಜರ್ಮನಿಯ ಪ್ರಶ್ನೆ

ಆಡೆನ್ಯೂರರು ನಿವೃತ್ತರಾಗುವರೆ?

ಡಾ| ಕೊನ್‌ರಾಡ್ ಆಡೆನ್ಯೂರರು ಪಶ್ಚಿಮ ಜರ್ಮನಿಯ ಛಾನ್ಸೆಲರ್ ಪದವಿಗೆ ರಾಜಿನಾಮೆಯಿತ್ತಿದ್ದಾರೆಂದು ಹೇಳಿದಾಗ ಮೊದಮೊದಲಿಗೆ ಯಾರೂ ನಂಬಲಿಲ್ಲ ಆದರೆ, ಈ ವಾರ್ತೆಯು ನಿಜಕ್ಕೂ ಸತ್ಯ. ಆಡೆನ್ಯೂರರು ತಮ್ಮ ಆಡಳಿತಾವಧಿಯಲ್ಲಿ ಪಶ್ಚಿಮ ಜರ್ಮನಿಯ ರೂಪವನ್ನೇ ಸಂಪೂರ್ಣ ಬದಲಾಯಿಸಿರುವುದರಿಂದ, ಇವರ ರಾಜಿನಾಮೆಯಿಂದಾಗಿ ಅಲ್ಲಿನ ಒಂದು ಯುಗವೇ ಕೊನೆಗೊಂಡಂತಾಯಿತು. ಇತಿಹಾಸಕಾರರು ಇವರ ಆಡಳಿತೆಯ ಬಗ್ಗೆ ಯಾವ ಅಭಿಪ್ರಾಯವನ್ನೇ ಮಂಡಿಸಲಿ ಅಥವಾ ಇವರ ಕಾರ್ಯಕ್ರಮಗಳನ್ನು ಒಪ್ಪದೆ ಹೋಗಲಿ, ಪಶ್ಚಿಮ ಜರ್ಮನಿಯ ಪುನಾನಿರ್ಮಾಣ ಸಾಧನೆಗಳಲ್ಲಿ ಆಡೆನ್ಯೂರರು ವಹಿಸಿದ ಮಹತ್ತರ ಪಾತ್ರವನ್ನು ಇವರ ಶತ್ರುಗಳಿಂದಲೂ ಅಲ್ಲಗಳೆಯುವುದು ಸಾಧ್ಯವಿಲ್ಲ.

೧೯೪೯ರಲ್ಲಿ ಅಧಿಕಾರದ ಗದ್ದುಗೆಯೇರಿದ ಆಡೆನ್ಯೂರ್ ಸಿಂಹಾಸನವನ್ನು ಬಿಗಿಯಾಗಿಯೇ ಹಿಡಿದುಕೊಂಡರು. ಪ್ರಚ್ಛನ್ನ ಸಮರ ಭೀತಿಯ ಕರಿಛಾಯೆಯಡಿಯಲ್ಲಿಯ ಕೋಲಾಹಲಮಯ ವಾತಾವರಣದಲ್ಲಿಯೂ ಪಶ್ಚಿಮದ ದೇಶಗಳ ನಡುವೆ ಸರಿಸಾಟಿಯಾಗುವಂತೆ ನಿಲ್ಲುವ ಕೆಚ್ಚನ್ನು ಪ್ರಜೆಗಳಲ್ಲಿ ತುಂಬಿಸಿ, ಅವರಲ್ಲಿ ಆತ್ಮವಿಶ್ವಾಸವನ್ನು ಮೂಡಿಸಿ, ಪ್ರಜಾತಂತ್ರದಲ್ಲಿ ಭರವಸೆ ಹುಟ್ಟುವಂತೆ ಮಾಡಿದ ಧೀರ ಆಡೆನ್ಯೂರರನ್ನು ಯಾರು ತಾನೇ ಮರೆಯಬಲ್ಲರು?

ಆದರೆ, ಒಂದು ವಿಷಯದ ಮೇಲೆ ಆಡೆನ್ಯೂರರ ಬಗ್ಗೆ ದೇಶದಲ್ಲಿಯೂ ವಿದೇಶದಲ್ಲಿಯೂ ಅಸಮಾಧಾನವಿದೆ. ಅದೇ ಜರ್ಮನಿಯ ಏಕೀಕರಣದ ಪ್ರಶ್ನೆ. ಇದು ಆಡೆನ್ಯೂರರು ಅಧಿಕಾರಕ್ಕೆ ಬರುವುದಕ್ಕೆ ಮೊದಲು ಎಂದರೆ, ೧೯೪೯ರಲ್ಲಿ ಸಂಭವನೀಯವೆನಿಸಿದ್ದರೆ, ಇಂದು ೧೪ ವರ್ಷಗಳ ನಂತರ ಅಸಂಭವತೆಯ ದಾರಿಯನ್ನೇ ಮೆಟ್ಟುತ್ತಿದೆ. ರಷ್ಯದೊಡನೆ ಆಡೆನ್ಯೂರರು ಕಠೋರ ನೀತಿಯಿಂದಲೇ ವ್ಯವಹರಿಸಿದುದರಿಂದ ಮತ್ತು ಸೇನೆಯ ಶಕ್ತಿಯಲ್ಲಿಯೇ ಇವರು ಅಧಿಕ ವಿಶ್ವಾಸವಿಟ್ಟುದರಿಂದ ಅವರ ನವಮನ್ವಂತರಕಾಲದಲ್ಲೊಂದು ಕರಿಯ ಚುಕ್ಕೆ ಅಳಿಯದಂತುಳಿಯುತ್ತದೆ.

ಆಡೆನ್ಯೂರರ ಅಧಿಕಾರ ದರ್ಪ, ಸೋವಿಯತ್ ರಷ್ಯದೊಡನೆ ಅಸಹಕಾರಪೂರ್ಣ ವರ್ತನೆ—ಇವುಗಳಿಂದಾಗಿ ಅವರ ಮೇಲೆ ಜನತೆಯಿಟ್ಟಿದ್ದ ಅಭಿಮಾನಕ್ಕೆ ಕಳಂಕ ತಟ್ಟಿದೆ. ಆದುದರಿಂದಲೇ ಈಗ ಅವರ ನಿವೃತ್ತಿಯನ್ನು ತೃಪ್ತಿಯಿಂದ ಅದು ಸ್ವಾಗತಿಸುತ್ತದೆ; ಬದುಕಿದೆಯೆಂಬ ನಿಟ್ಟುಸಿರನ್ನು ಬಿಡುತ್ತದೆ. ಅದರ, ಇವರು ಕೆಲವು ವರ್ಷಗಳಿಗೆ ಮೊದಲೇ ನಿವೃತ್ತಿಯಾಗುವ ಇಚ್ಛೆಯನ್ನು ಪ್ರಕಟಿಸುತ್ತಿದ್ದರೆ, ಪ್ರಾಯಃ ಜನತೆ ಅದನ್ನು ಪ್ರತಿಭಟಿಸುತ್ತಿತ್ತು! ಆಡೆನ್ಯೂರರ ಹಿತಚಿಂತಕರು ಕೆಲವರು ಅವರು ಈಗ ತಮ್ಮ ದೇಶಕ್ಕೆ ಸಲ್ಲಿಸುವ ಮಹಾ ಸೇವೆಯೆಂದರೆ, ರಾಜಕಾರಣದಿಂದ ದೂರವುಳಿಯುವುದು ಎಂದು ಹೇಳುತ್ತಾರೆ. ಆದರೂ ಆಡೆನ್ಯೂರರು ಅವರ ಮಾತುಗಳನ್ನು ಮನ್ನಿಸುವ ಪೂರ್ವಸೂಚನೆಗಳನ್ನೂ ಕಂಡು ಬರುತ್ತಿಲ್ಲ. ತಮ್ಮ ೮೭ನೆಯ ವರ್ಷದಲ್ಲಿಯೂ ಇದು ವರೆಗೆ ಮಾಡಿದಂತೆಯೇ ಪರಡೆಯ ಹಿಂದಿದ್ದುಕೊಂಡು ಚಟುವಟಿಕೆಗಳನ್ನು ತೋರಿಸುತ್ತ ಜರ್ಮನ್ ರಾಜಕಾರಣದಲ್ಲಿ ಜೀವ ಪ್ರತಿಷ್ಠೆ ಮಾಡುತ್ತಲೇ ಇರುವೆನೆಂದು ಅವರೇ ಹೇಳುತ್ತಾರೆ. ಏಕೆಂದರೆ, ಭೌತಿಕವಾಗಿಯೂ ಮಾನಸಿಕವಾಗಿಯೂ ಆಡೆನ್ಯೂರರು ಸಶಕ್ತರಾಗಿದ್ದಾರೆ—ಈ ವಿಷಯದಲ್ಲಿ ಹೊರಗಿನವರಿಗಿಂತಲೂ ಅವರಿಗೇನೇ ವಿಶ್ವಾಸ ಹೆಚ್ಚು.

ಕಳೆದ ಮೂರು ವಾರಗಳಿಂದ ಆಡೆನ್ಯೂರರು—ಹಲವಾರು ವಿದಾಯ ಸತ್ಕಾರ ಕೂಟಗಳಲ್ಲಿ ಭಾಗವಹಿಸಿದ್ದರು. ಆದರೆ, ಆ ಸಂದರ್ಭದಲ್ಲಿ ತಮ್ಮ ಉತ್ತರಾಧಿಕಾರಿ ಡಾ| ಎರ್‌ಹಾರ್ಡರ ವಿಚಾರವಾಗಲೀ ಅವರಿಗೆ ತಮ್ಮ ಸಂಪೂರ್ಣ ಸಹಕಾರ ನೀಡುವೆನೆಂದಾಗಲೀ ಎಲ್ಲಿಯೂ ಉದ್ಗರಿಸಿಲ್ಲ. ಇದು ಏನನ್ನು ಸೂಚಿಸುತ್ತದೆ?

ಡಾ| ಎರ್‌ಹಾರ್ಡ್ ಮತ್ತು ವರ ವಿದೇಶ ಮಂತ್ರಿ ಶ್ರೀ ಶ್ರೋಡರರು ತುಸು ಮೃದುಲ ಸ್ವಭಾವದವರು ಎಂಬ ಪ್ರತೀತಿಯಿದೆ. ಆದುದರಿಂದ ಈ ಇರ್ವರು ಮಹಾಶಯರು ತಮ್ಮ ಸ್ವಭಾವವನ್ನು ಪ್ರದರ್ಶಿಸದಂತೆ ಮಾಡಬೇಕಾದುದೆಲ್ಲವನ್ನೂ ಆಡೆನ್ಯೂರ್ ಮಹಾಶಯರು ತಮ್ಮ ಪ್ರಭಾವ ಬೀರಿ ಮಾಡಬಲ್ಲರೆನಿಸುತ್ತದೆ. ಡಾ| ಆಡೆನ್ಯೂರರಿಗೆ ಕ್ರಿಶ್ಚಿಯನ್ ಡೆಮೊಕ್ರೇಟಿನ ಪ್ರಬಲ ಬೆಂಬಲವಿದೆ. ಮಾಜಿ ವಿದೇಶ ಮಂತ್ರಿಯಾದ ಡಾ| ಬ್ರೆಂಟಾನೊ ಮತ್ತು ಮಾಜಿ ಸಂರಕ್ಷಣಾ ಸಚಿವ ಶ್ರೀ ಸ್ಟ್ರಾಸ್ ಸರವರ ಸಹಕಾರ ಕೂಡ ಇದೆ. ಆದುದರಿಂದ ಡಾ| ಎರ್‌ಹಾರ್ಡರು ಈ ತ್ರಿಮೂರ್ತಿಗಳನ್ನು ಕಡೆಗಣಿಸಿ ತಮ್ಮ ಧ್ಯೇಯದಂತೆ ಮುಂದುವರಿಯುವರೇ ಅಥವಾ ಅವರ ಕೈಗೊಂಬೆಯಾಗಿ ಪರಿಣಮಿಸುವರೇ ಎಂಬುದನ್ನು ನೋಡಬೇಕಷ್ಟೆ. ಏನೇ ಆಗುವುದಾದರೂ ಜರ್ಮನಿಯ ರಾಜಕಾರಣದಲ್ಲಿ ಕೋಲಾಹಲ ಮತ್ತು ಗದ್ದಲಗಳು ಮೂಡಿ ಬರುವಂತಾಯಿತೆನ್ನುವುದು ಅತಿಶಯೋಕ್ತಿಯಲ್ಲ. ಕೆಲವು ನಿರೀಕ್ಷಕರು ದಿನದಿನಕ್ಕೆ ಬಣ್ಣ ಬದಲಾಯಿಸುವ ರಾಜನೀತಿ ಮತ್ತು ಸೂಜಿಯ ಮೊನೆಯ ಮೇಲೆ ನಿಲ್ಲುವ ಕಠಿನ ಸಂಘಟನೆಗಳಿಗೆ ಹೆಸರಾದ ವೀಮಾರ್ ರಿಪಬ್ಲಿಕ್‌ಗೆ ಜರ್ಮನಿಯನ್ನು ಹೋಲಿಸಲು ಈಗಾಗಲೇ ತೊಡಗಿದ್ದಾರೆ.

ಬರ್ಲಿನದಲ್ಲಿ ಕಮ್ಯುನಿಸ್ಟ್ ಗೋಡೆಯು ಕಟ್ಟಲ್ಪಟ್ಟ ಮೇಲೆ ಅಲ್ಲಿಗೆ ತೆರಳುವಾಗ ತನ್ನೊಡನೆ ಕೂಡಿಕೊಳ್ಳುವಂತೆ ಅಮೆರಿಕೆಯ ಉಪಾಧ್ಯಕ್ಷ ಶ್ರೀ ಲಿಂಡನ್ ಜಾನ್ಸನ್ನರನ್ನು ಕೇಳಿಕೊಂಡಾಗ, ಅವರು ಅದನ್ನು ತಿರಸ್ಕರಿಸಿದರೆಂದು ಆಡೆನ್ಯೂರ್ ಹೇಳುತ್ತಾರೆ. ಈ ಗೋಡೆಯು ಸೋವಿಯತ್ ವಲಯದಿಂದ ನಗರದ ಪೂರ್ವ ಭಾಗವನ್ನು ಪ್ರತ್ಯೇಕಿಸುತ್ತದೆ. ಇದರ ನಿರ್ಮಾಣವಾದ ಕೂಡಲೇ ಬರ್ಲಿನನ್ನು ಸಂದರ್ಶಿಸಲಿಲ್ಲ ಯಾಕೆ ಎಂದು ಪಶ್ಚಿಮ ಜರ್ಮನರು ಆಡೆನ್ಯೂರರ ಮೇಲೆ ಆರೋಪ ಹೊರಿಸುತ್ತಾರೆ.

ಆಡೆನ್ಯೂರರು ರಷ್ಯವು ಪಶ್ಚಿಮ ಜರ್ಮನಿಯ ಬಗ್ಗೆ ಅನುಸರಿಸುವ ನೀತಿಯನ್ನು ಟೀಕಿಸುತ್ತಾರೆ. ಅದು ಪ. ಜರ್ಮನಿಯನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಳ್ಳ ಬಯಸುತ್ತದೆ; ಇದರಿಂದ ಅದಕ್ಕೆ ಆರ್ಥಿಕ ಲಾಭವಾಗುತ್ತದೆ; ಸೋವಿಯತ್ತು ಅಮೆರಿಕೆ ಮತ್ತು ಚೀನಗಳಿಂದಲೂ ಹಿರಿಯದಾಗುವ ಆಸೆಯಿಟ್ಟುಕೊಂಡಿದೆ ಎನ್ನುತ್ತಾರೆ ಅವರು. ರಷ್ಯವು ತನ್ನ ನೀತಿಯನ್ನು ತುಸ ಸಡಿಲ ಬಿಟ್ಟಿರುವುದಾದರೂ ಅದರ ಪ್ರಾಮಾಣಿಕತೆಯನ್ನು ಅವರು ಪ್ರಶ್ನಿಸುತ್ತಾರೆ.

ಯುರೋಪಿಯ ಏಕತೆಯ ಬಗ್ಗೆ ಅವರಿನ್ನೂ ವಿಶ್ವಾಸವಿಟ್ಟಿದ್ದಾರೆ. ದ್ವಿತೀಯ ಲೋಕ ಯುದ್ಧದ ವೇಳೆ ಈ ಬಗ್ಗೆ ಕಳಕಳಿ ತುಂಬಿತ್ತು; ಆದರೂ ಒಂದುದಿನ ಯುರೋಪು ರಾಜನೈತಿಕ ಒಕ್ಕಟ್ಟನ್ನು ಸಾಧಿಸುವುದು ಎಂದವರು ದೃಢವಾಗಿ ನಂಬಿದ್ದಾರೆ.

ಪೂರ್ವ ಮತ್ತು ಪಶ್ಚಿಮ ಜರ್ಮನಿಯ ಏಕ ಘಟಕತೆಯಲ್ಲಿ ಆಡೆನ್ಯೂರ್ ಹೆಚ್ಚಿನ ವಿಶ್ವಾಸ ತಳೆದಂತಿಲ್ಲ. "ನಾವು ಮತ್ತು ನಮ್ಮ ಶತ್ರುಗಳು ಒಂದುಗೂಡಿ ಈ ಪ್ರಶ್ನೆಯನ್ನು ಬಗೆಹರಿಸುವುದು ಸಾಧ್ಯವಿಲ್ಲ. ವಿದೇಶೀ ಮಿತ್ರರು ನಮಗೀಗ ಇರುತ್ತಾರೆ; ಅವರ ಸಹಾಯದಿಂದ ಮಾತ್ರ ಸಮಸ್ಯೆ ಬಗೆಹರಿದೀತು' ಎನ್ನುತ್ತಾರೆ ಅವರು. 'ನಮ್ಮ ಶತ್ರುಗಳು' ಎಂದರೆ ಯಾರು? ೨೨ ಮಿಲಿಯ ಗೆಳೆಯರ ಮೇಲೆ ಕಮ್ಯುನಿಸ್ಟ್ ಶಾಸನ ಹೇರಿದ ಸೋವಿಯತ್ತು!

೧೪ ವರ್ಷಗಳ ಅಧಿಕಾರಾವಧಿಯಲ್ಲಿ ಮಹಾಯುದ್ಧದಿಂದ ಕಂಗಾಲಾದ (ಪಶ್ಚಿಮ) ಜರ್ಮನಿಯನ್ನು ಸರ್ವರೀತಿಯಿಂದಲೂ ಪುನಾರಚಿಸಲು ಹೋರಾಡಿದ ಆಡೆನ್ಯೂರ್ ನಿಜಕ್ಕೂ ಅಭಿನಂದನಾರ್ಹರು. ಜರ್ಮನಿಯ ಅವರನ್ನೀಗ ಬಿಡುವ ಮನ ಮಾಡಿದ್ದರೂ ಅವರು ಜರ್ಮನಿಯನ್ನು ಖಂಡಿತಕ್ಕೂ ಬಿಡಲಾರರು. ಅವರ ಬಿಗಿದ ಮುಷ್ಟಿ ಆ ತಿರುವುದು; ಮುಂಗಮುಷ್ಟಿಯನ್ನುವುದಿಲ್ಲವೆ, ಹಾಗೆ!

ತಾ. 14—11—63ರ

'ನವಯುಗ'ವು

ದೀಪಾವಳಿ ಸಂಚಿಕೆಯಾಗಿ

ವಿಶಿಷ್ಟ ತರದಲ್ಲಿ ಪ್ರಕಟವಾಗುವುದು.

3 ದಿನ ಮುಂಚಿತವಾಗಿಯೇ ಸಂಚಿಕೆ ತಯಾರಾಗುವುದರಿಂದ ಜಾಹೀರಾತುದಾರರು ತ್ವರೆ ಮಾಡುವಂತೆ ವಿನಂತಿ.

Read & Advertise in

NAVAYUGA

DEEPAVALI ISSUE

ದೀಪಾವಳಿಯ ಅಪೂರ್ವ ರಿಯಾಯತಿ

[ನವಂಬರ ತಾ. 30, 1963ರ ವರೆಗೆ ಮಾತ್ರ]

ಪುಸ್ತಕ ಭಂಡಾರಗಳಿಗೆ, ರಸಿಕ ಓದುಗರಿಗೆ

ಒಂದು ಅಪೂರ್ವ ಅವಕಾಶ

ಶ್ರೀಗಳಾದ ಎಂ. ವಿ ಹೆಗ್ಡೆ, ಕುಲಕರ್ಣಿ ಬಿಂದು ಮಾಧವ, ವಿ. ಟಿ. ಶಿತ್ತಲಮನಿ, ಬಿ. ಎಚ್. ಶ್ರೀಧರ, ಕು. ಶಿ. ಹರಿದಾಸ ಭಟ್ಟ, ಪ್ರೇಮಚಂದ, ಎಸ್. ವೆಂಕಟರಾಜ, ಶಿವರಾಮ ಕಾರಂತ ಮತ್ತು ಶ್ರೀಮತಿಯರಾದ ಆರ್. ಕಲ್ಯಾಣಮ್ಮ, ಗಿರಿಬಾಲೆ, ಪದ್ಮಾ ಶೆಣೈಯವರೇ ಮೊದಲಾದ ಹಲವಾರು ಕನ್ನಡದ ಪ್ರಸಿದ್ಧ ಬರಹಗಾರರ ಅನುಪಮ ಕೃತಿಗಳಿರುವ

ಅಂತರಂಗ ಪ್ರಕಟಣಾಲಯದ 35/- ರೂ. ಬೆಲೆಯ 90 ಪ್ರಕಟಣೆಗಳನ್ನು ಒಮ್ಮೆಗೇ ಪಡಕೊಳ್ಳುವವರಿಗೆ ರೂ. 25/- ಕ್ಕೆ ಕೊಡುವೆವು—

ಹಾಗೆಯೇ

ಶ್ರೀಗಳಾದ ಕೆ. ಕೆ ಶೆಟ್ಟಿ, ಎಂ. ಎಲ್. ಸಿ, ಡಾ| ಕೊರಡ್ಕಲ್ ಶ್ರೀನಿವಾಸರಾವ್, ಎಸ್. ವೆಂಕಟರಾಜ್, ಸರಸ್ವತಿಬಾಯಿ ರಾಜವಾಡೆ, ಕೈಯಾರ ಕಿಞ್ಞಣ್ಣ ರೈ, ಕೆ. ಪದ್ಮಲಶೆಣೈ, ಎಂ. ವಿ ಹೆಗ್ಡೆ ಮೊದಲಾದ ಖ್ಯಾತ ಸಾಹಿತಿಗಳ ಅತ್ಯುತ್ತಮ ಕೃತಿಗಳಿರುವ

'ಕಿರಿಯರ ಪ್ರಪಂಚ'ದವರ 40 ರೂಪಾಯಿ ಬೆಲೆಯ 39 ಪುಸ್ತಕಗಳನ್ನು ರೂ. 30/- ಕ್ಕೆ ಕೊಡುವೆವು

ವಿವರವಾದ ಕೆಟಲಾಗಿಗೆ ಹತ್ತು ನಯಾಪೈಸೆ ಸ್ಟಾಂಪು ಇಟ್ಟು ಬರೆಯಿರಿ

ನವಭಾರತ ಪುಸ್ತಕ ಭಂಡಾರ, ರಿಜಿಸ್ಟರ್ಡ್ ಪಬ್ಲಿಷರ್ಸ್, ಉಡುಪಿ

'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No. 466 N/50 dated 2—12—1950 of the Director of Public Instructra Madras

NAVAYUGA
Kannada Weekly
UDIPI
Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ

ವರುಷ	ಉಡುಪಿ	ವಾರ
೪೩	೨೪-೧೦-೧೯೬೩	೮

ದೇಶ ಮೊದಲು

ಅಕ್ಟೋಬರ ೨೦ನೆ ದಿನಾಂಕವೆಂಬುದು ಭಾರತೀಯ ಇತಿಹಾಸದಲ್ಲಿ ಮರೆಯಲಾಗದ ದಿನ. ಸ್ವತಂತ್ರ ಭಾರತದ ಮೇಲೆ ಆಕ್ರಮಣ ಮಾಡಲು ಚೀನವು ಮನದಂದ ದಿನವದು. ಎಂತಲೇ ದೇಶ ಸಂಸ್ಕೃತಿಯ ರಕ್ಷಣೆಗಾಗಿ ನಾವು ವೀರಪ್ರತಿಜ್ಞೆ ಮಾಡುವ ಸುದಿನ. ಒಂದು ವರ್ಷಕ್ಕೆ ಮೊದಲು ಸಾಮ್ರಾಜ್ಯವಾದಿ ಚೀನೀಯರು ನಮ್ಮ ಈಶಾನ್ಯ ಮತ್ತು ಉತ್ತರ ಗಡಿಗಳಲ್ಲಿ ಬೃಹದಾಕ್ರಮಣವನ್ನು ಮಾಡಿದರು ನಮ್ಮ ಸ್ವಾತಂತ್ರ್ಯವನ್ನು ಅಪಹರಿಸುವ ಸಾಹಸವನ್ನು ತೋರಿದರು. ಅನಿರೀಕ್ಷಿತವಾಗಿ, ಅನ್ಯಾಯವಾಗಿ ಅವರ ಸೇನೆಯು ಧಾವಿಸಿ ಬಂದುದರಿಂದ ನಮ್ಮ ನೂರಾರು ವೀರ ಯೋಧರು ಸೀಮಾರಕ್ಷಣೆಯ ಹೋರಾಟದಲ್ಲಿ ಪ್ರಾಣತ್ಯಾಗ ಮಾಡಲೇಬೇಕಾಯಿತು; ಅವರು ವೀರಸ್ವರ್ಗವನ್ನು ಪಡೆದರು. ಚೀನೀಯರ ಆಕ್ರಮಣದ ಗುಟ್ಟು ತಿಳಿದಂದೇ ವೀರ ಭಾರತೀಯ ಪ್ರಜೆಯು ಪ್ರತಿಜ್ಞೆ ಸ್ವೀಕರಿಸಿದ್ದಾನೆ—ಚೀನೀಯರನ್ನು ಮೆಟ್ಟಿ ದೇಶದ ಕಣಕಣವನ್ನೂ ಮುಕ್ತಗೊಳಿಸದೆ ವಿಶ್ರಾಂತಿಯಿಲ್ಲವೆಂದು. ಇದೀಗ ಆ ಪ್ರತಿಜ್ಞೆಯನ್ನು ನಾವು ಮರಳಿ ಉಚ್ಚರಿಸಬೇಕು; ಪದೇಪದೇ ಉಚ್ಚಾರ ಮಾಡುವುದು ಕಾರ್ಯಶೀಲತೆಗೆ ಸಹಾಯಕವಾಗುವುದು; ಪ್ರೇರಕ ಶಕ್ತಿಯೆನಿಸುವುದು.

ನಾವು ಮಾಡಿದ ಪ್ರತಿಜ್ಞೆಯಾದರೂ ಯಾವುದು? 'ನನ್ನ ತಾಯಿನಾಡಿನ ಸ್ವಾತಂತ್ರ್ಯ ಮತ್ತು ಐಕಮತ್ಯದ ರಕ್ಷಣೆಗಾಗಿ, ಆ ಹೋರಾಟವು ಅದೆಷ್ಟು ಕಠಿನವಾಗಿಯೇ ಇರಲಿ, ಅದೆಷ್ಟು ದೀರ್ಘವಾಗಿಯೇ ಇರಲಿ ಅದಕ್ಕಾಗಿ ನಾನು ಮಾಡಬೇಕಾದ ತ್ಯಾಗವು ಅದೆಷ್ಟು ಅಪಾರವಾಗಿಯೇ ಇರಲಿ, ನಮ್ಮ ಜನರು ಮಾಡಿರುವ ದೃಢ ಸಂಕಲ್ಪದಲ್ಲಿ ನಾನು ಸಮಭಾಗಿಯಾಗುತ್ತೇನೆ; ನಾನು ನಾಡಿನ ಶಕ್ತಿ ಮತ್ತು ಐಕ್ಯಕ್ಕಾಗಿ ದುಡಿಯಲು ದೃಢ ಪ್ರತಿಜ್ಞೆ ಕೈಗೊಳ್ಳುತ್ತೇನೆ.'—ಈ ವೀರ ಪ್ರತಿಜ್ಞೆಯನ್ನು ಎಲ್ಲರೂ ಗೈದಿದ್ದಾರೆ. ಮಾಡಿದ ಪ್ರತಿಜ್ಞೆಯನ್ನು ಮರೆಯದೆ ಅದನ್ನು ಕಾರ್ಯರೂಪಕ್ಕೆ ತರಲು ತೊಡಗಿದ್ದಾರೆ. ಮಹಾರಾಜ ಪುರುವು ಅಲೆಗ್ಸಾಂಡರನಿಗೆ ಹೇಳಿದ ಒಂದು ಮಾತನ್ನು ನಾವು ನೆನಪಿಸಿಕೊಳ್ಳಬಹುದು. ಪುರೂರವನೊಡನೆ ಸ್ನೇಹ ಮಾಡಿಕೊಂಡ ಯುನಾನಿ ದೊರೆ ಭಾರತದ ಇತರ ದೇಶಗಳನ್ನು ಗೆಲ್ಲುವಲ್ಲಿ ತನ್ನ ಸ್ನೇಹಿತ ಪುರುವು ಯಾವ ರೀತಿಯ ಸಹಾಯ ಕೊಡುವನೆಂದು ಪ್ರಶ್ನಿಸಿದಾಗ ಆತನೆಂದನು: 'ನಿನಗೆ ಸಹಾಯ ಮಾಡುವುದೆಂದರೆ, ಒಂದೂದೇಶಕ್ಕೆ ಅನ್ಯಾಯ ಮಾಡಿದಂತೆ. ನೀನು ನನ್ನ ಮಿತ್ರನಹುದು; ಆದರೆ, ದೇಶ ಮೊದಲು; ಮಿತ್ರತ್ವವು ಅನಂತರದ್ದು,' ಇಂತಹ ವೀರೋಚಿತ ಸ್ವಾಭಿಮಾನ ಸ್ವದೇಶಾಭಿಮಾನದ ಉದ್ಗಾರವನ್ನು ನಾವು ಇಂದು ಮಾಡಬೇಕು. ದೇಶವೊಂದಳಿದರೆ ಎಲ್ಲವೂ ಅಳಿದಂತೆ, ನಾವು ನಮ್ಮ ಸಂಪತ್ತು ನಮ್ಮ ದೇಶ ನಮ್ಮ ಸಂಸ್ಕೃತಿ ಎಲ್ಲವೂ ಮಣ್ಣು ಪಾಲಾದಂತೆ. ಆದರೆ ದೇಶವೊಂದುಳಿದರೆ ಎಲ್ಲವೂ ಬದುಕುಳಿದಂತೆ. ಆದುದರಿಂದಲೇ ದೇಶದ ಐಕ್ಯ-ಸಮಗ್ರತೆಯ ರಕ್ಷಣೆ ಪ್ರತ್ಯೇಕ ನಾಗರಿಕನ ಆದ್ಯ ಕರ್ತವ್ಯ. ೪೩ಕೋಟಿ ಜನಶಕ್ತಿಯಿರುವ ಭಾರತ ಜಗತ್ತಿನ ಅತಿ ದೊಡ್ಡ ಪ್ರಜಾ ಸತ್ತಾತ್ಮಕ ರಾಷ್ಟ್ರಗಳಲ್ಲಿ ಒಂದು; ಮಾತ್ರವಲ್ಲ ಅಗ್ರಮಾನ್ಯವೂ ಹೌದು. ಅಲಿಪ್ತ ರಾಷ್ಟ್ರಗಳ ಸಾಲಿನಲ್ಲಿ ಭಾರತವು ತುತ್ತತುದಿಯಲ್ಲಿದೆ. ಇಂತಹ ನಮ್ಮ ಪ್ರಾಣಪ್ರಿಯವಾದ ಭಾರತ ಭೂಮಿಯ ಮೇಲೆ ಪರಕೀಯರ ಆಕ್ರಮಣವೆನ್ನುವುದು ನಮ್ಮ ವೀರತೆಗೆ, ನಮ್ಮ ಸ್ವಾತಂತ್ರ್ಯಕ್ಕೆ, ನಮ್ಮ ತ್ಯಾಗಕ್ಕೆ ಬಂದಿರುವ ಒಂದು ಆಹ್ವಾನ! ಚೀನಾದ ಅಂತರ್ಯ ಭಾರತವನ್ನು ನುಂಗುವುದಿರುತ್ತದೆ; ಅದಕ್ಕೆಂದೇ ಅದು ಪೀಠಿಕೆ ಹಾಕುವ ಪ್ರಯತ್ನ ಮಾಡಿತು. ಆದರೆ ಪ್ರಥಮ ಚುಂಬನದಲ್ಲೇ ಭಗ್ನದಂತವಾಗಿ ಅದು ಒಳಗಿಂದೊಳಗೇನೇ ತಪತಪಿಸುತ್ತಿದೆ. ಚೀನಾದ ರಂಗುರಂಗಿನ ಮಾತಿಗೆ ಬಲಿ ಹೋಗುವಷ್ಟು ಮೂರ್ಖರು ಭಾರತೀಯರಲ್ಲ. ನಮಗೂ ನಮ್ಮ ದೇಶದ ಮೇಲೆ ಅಭಿಮಾನವಿದೆ, ಗೌರವವಿದೆ; ನಮ್ಮ ದೇಶದ ಸಮಗ್ರತೆ ಮತ್ತು ಐಕ್ಯಮತ್ಯದಲ್ಲಿ ವಿಶ್ವಾಸ ನಮಗಿದೆ. ನಮ್ಮ ರಕ್ಷಣೆಯನ್ನು ಮಾಡಿಕೊಳ್ಳಬೇಕೆಂಬ ಇಚ್ಛೆಯೂ ಶಕ್ತಿಯೂ ನಮ್ಮಲ್ಲಿದೆ. ಇದಕ್ಕಾಗಿ ನಾವು ಬೇರೆಯವರ ಸಹಾಯವನ್ನು ಪಡೆಯಬೇಕಾಗಬಹುದು; ದೇಶದ ಶತ್ರುವನ್ನು ಹೊಡೆಯಲು ಮಿತ್ರರ ಸಹಕಾರ ಬಯಸುವುದು ತಪ್ಪು ಎನ್ನುವಂತಿಲ್ಲ. ಆದರೆ, ಸದಾಕಾಲ ಇಂತಹ ಬಾಹ್ಯ ಸಹಾಯವನ್ನೇ ನಂಬಿರುವುದು ಮಾತ್ರ ಸಾಧುವಲ್ಲ. ಆದುದರಿಂದ ಭಾರತೀಯನ ಕರ್ತವ್ಯಗಳು ಇಂದು ಕೆಲವಿವೆ.

ಭಾರತೀಯನು ಯಾವ ದೃಷ್ಟಿಯಲ್ಲೂ ಜಗತ್ತಿನ ಇತರ ದೇಶದ ಪ್ರಜೆಗಿಂತ ಹೀನನಲ್ಲ. ಆತನಲ್ಲಿ ಶಕ್ತಿಯಿದೆ; ಕೆಚ್ಚು ಇದೆ; ಯುಕ್ತಿ ಕೌಶಲವೂ ಇದೆ. ತನ್ನ, ತನ್ನ ಸಮಾಜದ ಮತ್ತು ತನ್ನ ದೇಶದ ಮೇಲೆ ಆತನಿಗೆ ತುಂಬಾ ಭರವಸೆಯಿದೆ. ಸ್ವತಂತ್ರನಾಗಿರುವ ಆತ ಯಾವ ಬಗೆಯಲ್ಲೇ ಇರಲಿ ಪರತಂತ್ರನಾಗಬಯಸುವುದಿಲ್ಲ. ಆದುದರಿಂದ ಶತ್ರುಗಳು ನೀಡಿರುವ ಆಹ್ವಾನವನ್ನು ಆತ ಸಂತೋಷದಿಂದ ವೀರಪ್ರತಿಜ್ಞೆಯನ್ನು ಕೈಗೊಂಡು ಸ್ವೀಕರಿಸಿದ್ದಾನೆ. ದೇಶದ ಸ್ವಾತಂತ್ರ್ಯವನ್ನು, ಸಮಗ್ರತೆಯನ್ನು ಉಳಿಸಿಕೊಳ್ಳಲು ಆತ ತನ್ನ ಪ್ರಾಣ ಪಣವಿಡಲು, ಸಿದ್ಧನಾಗಿದ್ದಾನೆ. ತನ್ನ ಸರ್ವಸ್ವವನ್ನು ತ್ಯಾಗ ಮಾಡುವುದಕ್ಕೂ ಆತನು ಹಿಂಜರಿಯಲಾರನು. ಭಾರತೀಯ ಸಂಸ್ಕೃತಿಯು ಉನ್ನತ ಪರಂಪರೆಯು ಆತನ ಸಹಾಯಕ್ಕೆ ನಿಂತಿದೆ. ಭಾರತಾಂಬೆಯ ಮೊಲೆ ಹಾಲುಂಡು ದಿವ್ಯ ಚೇತನಗೊಂಡು ಸ್ವಾತಂತ್ರ್ಯಕ್ಕಾಗಿ ಕೆಚ್ಚೆದೆಯಿಂದ ಹೋರಾಡಿ ತಮ್ಮ ತನುಮನ ಧನಗಳನ್ನು ಬಲಿಯಿತ್ತ ವೀರಾತ್ಮರು ಹಲವರು ಇದ್ದಾರೆ ಇವರು ಹಾಕಿ ಕೊಟ್ಟ ಸತ್‌ಸಂಪ್ರದಾಯ ನಮ್ಮ ಮುಂದಿದೆ. ಅವರು ತುಳಿದ ದಾರಿಯಲ್ಲಿ ನಾವೂ ಮುಂದುವರಿಯಬೇಕು. ವೈರಿಯಿಂದ ನೆತ್ತರು ಚಿಮ್ಮಿ ಹಾರಲಿ, ತಲೆ ಕತ್ತರಿಸಿ ಉರುಳಿ ಹೋಗಲಿ, ತಾಯ್ನಾಡಿನ ಮೇಲ್ಮೆಗೆ ಹೋರುವ ಏಕಮೇವ ಉದ್ದೇಶವನ್ನಿಟ್ಟುಕೊಂಡು ನಾವು, ಭಾರತೀಯರು ಸಮರ ಸಿದ್ಧರಾಗಬೇಕು. ಸಂಧಾನದ ಪ್ರಯತ್ನವನ್ನು ಮಾಡುತ್ತಿರುವುದರ ಜೊತೆಗೆ ಮಾತೃಭೂಮಿಯನ್ನು ಪಾದಾಕ್ರಾಂತ ಮಾಡಿದ ಚೀನೀಯ ದುಷ್ಟ ಶಕ್ತಿಯೊಡನೆ ನಮ್ಮ ಭೂಮಿಯಲ್ಲಿರುವ ದೇಶದ್ರೋಹಿ ದುಷ್ಟ ಶಕ್ತಿಗಳ ದಮನ ಮಾಡುವುದೂ ಇಂದೂ ನಮ್ಮ ಆದ್ಯ ಕರ್ತವ್ಯ. ವೀರ ಭಾರತೀಯ ವೀರ ಪ್ರತಿಜ್ಞೆಯನ್ನು ಕೈಗೊಂಡಿದ್ದಾನೆ; ಅದನ್ನು ಕಾರ್ಯರೂಪಕ್ಕೆ ತರುತ್ತಾನೆ; ಭೀಷ್ಮ ನೆನಿಸುತ್ತಾನೆ.

ಲಾರ್ಡ್ ಹೋಮ್

ಪ್ರೊಫ್ಯೂಮೊ ಪ್ರಕರಣವು ಬ್ರಿಟನ್ನಿನಲ್ಲಿ ಮತ್ತಿತರ ದೇಶಗಳಲ್ಲಿ ಎಂತಹ ಪ್ರಭಾವ ಬೀರಿದೆಯೆಂಬುದನ್ನೂ ಬ್ರಿಟಿಷ್ ಸರಕಾರವು ಈ ಪ್ರಕರಣದಲ್ಲಿ ನಿರಪರಾಧಿಯೆಂದು ನಿಯುಕ್ತ ಸಮಿತಿಯ ವರದಿ ಪ್ರಕಟವಾದುದನ್ನೂ ಎಲ್ಲರೂ ಬಲ್ಲರು., ಆದರೂ ಅದೇ ಸಮಯದಲ್ಲಿ ಹೆರಾಲ್ಡ್ ಮ್ಯಾಕ್ಮಿಲನ್ ತಮ್ಮ ರಾಜೀನಾಮೆಯನ್ನು ಘೋಷಿಸಿದ್ದರು. ಅವರು ತಮ್ಮ ವೈಯುಕ್ತಿಕ ಅಭಿಪ್ರಾಯದಂತೆಯೇ ರಾಜೀನಾಮೆಯನ್ನೂ ಇತ್ತರು. ಅವರ ಉತ್ತರಾಧಿಕಾರಿಯಾಗಲು ಸ್ಪರ್ಧೆಯೇ ನಡೆಯಿತು. ಮತ್ತು ಶ್ರೀಮಂತರ ಸಭೆಯ ಸದಸ್ಯರಾದ ಲಾರ್ಡ್ ಹೋಂರವರು ಚುನಾಯಿತರಾದರು. ಹೋಂ ಸಾಮಾನ್ಯ ಸಭೆಯ ಸದಸ್ಯರಲ್ಲ; ಅವರು ಆ ಸಭೆಯ ಸದಸ್ಯತ್ವವನ್ನು ಪಡೆಯ ಬೇಕಾದರೆ, ತಮ್ಮ ಲಾರ್ಡ್ ಪದವಿಯನ್ನು ಬಿಡಬೇಕಾಗುವುದು; ಆದರೆ ಇದಕ್ಕೆ ಅವರು ಒಪ್ಪುವಂತೆ ತೋರುವುದಿಲ್ಲ. ೧೯೦೨ರಲ್ಲಿ ಸ್ಯಾಲಿಸ್ ಬರಿಯವರು ಶ್ರೀಮಂತರ ಸಭೆಯ ಸದಸ್ಯರಾಗಿದ್ದು, ಪ್ರಧಾನ ಮಂತ್ರಿ ಪದವನ್ನು ಬಯಸಿದ್ದರು. ಆ ನಂತರದ ಸರದಿಯೀಗ ಅರುವತ್ತು ವರ್ಷಗಳ ನಂತರ ಹೋಮರಿಗೆ ಬಂದಿದೆ. ಲಾರ್ಡ್ ಹೋಂ ಮ್ಯಾಕ್ಮಿಲನ್ ಸಚಿವ ಸಂಪುಟದಲ್ಲಿ ವಿದೇಶ ಖಾತೆಯ ಮಂತ್ರಿಯಾಗಿದ್ದರು. ಆ ಹಿಂದೆಯೂ ಹಲವಾರು ಸಂಪುಟಗಳಲ್ಲಿ ಸೇರಿಕೊಂಡಿದ್ದು ದೀರ್ಘಕಾಲದ ಅನುಭವ ಪಡೆದವರು; ೬೦ ವರ್ಷ ಪ್ರಾಯದವರು ಆದರೆ, ಇವರು ಇಂದು ಗಂಭೀರ ಪರಿಸ್ಥಿತಿಯಲ್ಲಿಯೇ ಅಧಿಕಾರವನ್ನು ಸ್ವೀಕರಿಸಬೇಕಾಗಿದೆ. ಚುನಾವಣೆಯ ಕಾರಣದಿಂದ ಸರಕಾರಿ ಪಕ್ಷದಲ್ಲಿಯೇ ಮೂರು ಪಂಗಡಗಳಾದಂತೆ ತೋರುತ್ತದೆ. ಇವುಗಳಲ್ಲಿ ಉಪ ಪ್ರಧಾನಿಯಾಗಿದ್ದ ಬಟ್ಲರರ ಗುಂಪೂ ಒಂದು. ಹೋಮರು ಸರಕಾರವನ್ನು ರಚಿಸುವೆನೆಂದು ಮಹಾರಾಣಿ ಎಲಿಜಬೆಥ್‌ರಿಗೆ ತಿಳಿಸುವುದಕ್ಕೆ ಮೊದಲು ಪಕ್ಷದ ಪಾರ್ಲಿಮೆಂಟರಿ ಸದಸ್ಯರನ್ನು ಕಂಡು ಅವರ ಸಹಕಾರವನ್ನು ಖಚಿತ ಪಡಿಸಿರುವರೆಂದು ನಂಬಬಹುದು ಲಾರ್ಡ್ ಹೋಂ ವಿದೇಶ ಮಂತ್ರಿಯಾಗುವಾಗ ಬ್ರಿಟನ್ನಿನಲ್ಲಿ ವಿವಾದವೆದ್ದಿತು, ಅಪರಿಚಿತನೊಬ್ಬನು ಆ ಆಸ್ಥಾನಕ್ಕೇಕೆ ಎಂದು. ಆದರೀಗ ಹೋಂ ಎಲ್ಲರಿಗೂ ಪರಿಚಿತರಾಗಿದ್ದಾರೆ ದೇಶ—ವಿದೇಶಗಳಲ್ಲಿಯೂ ಅವರು ಹೆಸರು ಪಡೆದಿದ್ದಾರೆ. ಬ್ರಿಟನ್ನಿನ ಪ್ರಧಾನ ಮಂತ್ರಿತ್ವದ ಬದಲಾವಣೆಯಿಂದ ಭಾರತದ ಮೇಲೆ ಯಾವ ಹೆಚ್ಚಿನ ಪರಿಣಾಮಗಳು ಕಂಡುಬರಲಾರವು ಎಂದು ನಂಬಬಹುದು.

ಜಗತ್ಪರ್ಯಟನ

ಜವಾಹರಲಾಲ

ಭಾರತದ ಹಿತವನ್ನೇ ಹಗಲಿರುಳು ಕನವರಿಸುವ ಏಕಮೇವ ವ್ಯಕ್ತಿ—ಅಲ್ಲ ಶಕ್ತಿ—ಜವಾಹರಲಾಲ. ದೇಶದ ಸಮಗ್ರತೆ ಮತ್ತು ಏಕತೆಯನ್ನು ಪ್ರತಿಪಾದಿಸುತ್ತ ಇಡಿಯ ಭಾರತದ ಮೇಲ್ಮೆಯನ್ನು ಬಯಸುವವರು—ವಿಶ್ವದಲ್ಲಿ ಆದರ ಸ್ಥಾನವು ಭದ್ರವಾಗಬೇಕೆಂದು ದುಡಿಯುವವರು ಅವರು. 'ಅಗೌರವವನ್ನು ತಿಲಮಾತ್ರವೂ ಸಹಿಸದ ದೇಶ ನಮ್ಮದು. ಆಹ್ವಾನಿಸುವ ಆಕ್ರಮಣಕಾರರನ್ನು ಸದೆಬಡೆಯಲು ಒಂದಾಗಿ ನಿಲ್ಲುವ ಶಕ್ತಿವಂತರು ನಾವು. ಈ ಸ್ಫೂರ್ತಿ ಚೈತನ್ಯ ಸದಾ ನಮ್ಮಲ್ಲಿರಬೇಕು. ಅಂದರೆ ಮಾತ್ರ ನಾವು ಬಲಶಾಲಿಯಾಗುತ್ತೇವೆ; ಅಷ್ಟೇ ಅಲ್ಲ; ದೇಶವು ಸುಖ-ಸಂಮೃದ್ಧಿಗಳಿಂದ ನಲಿಯುವಂತಾಗುತ್ತದೆ' ಎಂದ ನೆಹರು ತಮ್ಮ ಹೃದಯವನ್ನು ಬಿಚ್ಚಿ ಜನತೆಯ ಮುಂದಿಟ್ಟಿದ್ದಾರೆ. ಇದನ್ನು ಭಾರತೀಯರು ಆಳವಾಗಿ ಒಳಹೊಕ್ಕು ನೋಡಬೇಕು.

ಅಯ್ಯೂಬಖಾನ್

ಮನೆಯ ಮಡದಿಯನ್ನು ಸಾಕಲಾರದವ ಹೊರಗಿನ ಹೆಣ್ಣಿಂದಿರನ್ನು ಬಯಸುವಂತೆ ಪಾಕ್ ಅಧ್ಯಕ್ಷ ಅಯ್ಯೂಬಖಾನರ ಇಚ್ಛೆಯಿದೆ. ತಾನು ಆಕ್ರಮಿಸಿ 'ಆಜಾದ್' ಎಂದು ಕರೆಯುವ ಕಾಶ್ಮೀರದ ಜನತೆಗೆ ಆಹಾರವನ್ನು ಒದಗಿಸಲಾರದೆ, ಸೌಕರ್ಯವನ್ನು ಕಲ್ಪಿಸಲಾಗದ ಅವರು ಇಡಿಯ ಕಾಶ್ಮೀರವನ್ನು ಬಯಸುತ್ತಾರೆ. ಸಮಗ್ರ ಪಾಕ್ ಆಕ್ರಮಿತ ಪ್ರದೇಶದಲ್ಲಿ ಆವಶ್ಯಕ ಪದಾರ್ಥಗಳ ಅಭಾವವು ಕಾಣಿಸುತ್ತ ಅನೇಕ ಜನರು ಮೃತ್ಯುಮುಖರಾಗುತ್ತಿರುವುದರಿಂದ ಅಲ್ಲಿನ ನಾಗರಿಕರು ಆಡಳಿತೆಯ ಕಡೆಗೆ ಅಸಂತೃಪ್ತರಾಗುವುದು ಸ್ವಾಭಾವಿಕ. ಇವರನ್ನು ಶಾಂತ ಮಾಡದೆ ಹೋದರೆ ವಿದ್ರೋಹವೇಳಬಹುದು; ಪರಿಣಾಮವಾಗಿ ಪಾಕ್ ಕುತಂತ್ರಿಗಳ ತಂತ್ರ ತಪ್ಪಿ ಹೋಗುವುದೂ ಅಸಂಭವವಲ್ಲ

ವ್ಯಾಸರಾಯ ಮಠದ ಶ್ರೀಗಳು

ಕನ್ನಡದ ಸಂತಾಗ್ರಣಿ ಪುರಂದರ ದಾಸರ ನಾಲ್ಕನೆಯ ಶತಮಾನೋತ್ಸವವಾದರೂ ವೈಭವೋಪೇತವಾಗಿ ಆಚರಿಸುತ್ತಿರುವುದು ಅಭಿನಂದನೀಯ. ಈ ಸಂದರ್ಭದಲ್ಲಿ ಶ್ರೀ ದಾಸರ ಕೃತಿಗಳನ್ನು ಇಂಗ್ಲಿಷ್‌ನಲ್ಲಿ ಅನುವಾದಿಸಿ ಇಂಗ್ಲೆಂಡ್ ಅಮೆರಿಕೆಗಳಲ್ಲಿಯೂ ಪ್ರಕಾಶಪಡಿಸಬೇಕು, ಎಂಬ ನಿರ್ಧಾರಕ್ಕೆ ಬರಲಾಗಿದೆ. ಶ್ರೀ ವ್ಯಾಸರಾ

ಯ ಮಠದ ಶ್ರೀಗಳವರು ಖುದ್ದಾಗಿ ವಿದೇಶಯಾತ್ರೆ ಮಾಡುವಂತೆ ತೋರುತ್ತದೆ. ವಿದೇಶ ಪ್ರಯಾಣ—ಸಮುದ್ರಯಾನಗಳು ಭಾರತೀಯ ಸನ್ಯಾಸಿ ಪರಂಪರೆಗೆ ಹೊರತಾದುವಲ್ಲ. ಅಶೋಕನ ಕಾಲಗಿಂದಲೂ ನಡೆದುಬಂದ ಸಂಪ್ರದಾಯ. ಆದರೆ, ಇತ್ತೀಚೆಗಿನ ಕಾಲದ ತನಕ ಸಮುದ್ರಯಾನ ಮಾಡಿದವರನ್ನು ಜಾತಿಭ್ರಷ್ಟರೆಂದು ಹೇಳುವ ಪರಿಪಾಠವಿತ್ತು. ಶ್ರೀಗಳು ನವಯುಗದ ನವಧರ್ಮವನ್ನು ಮರೆಯಬಾರದು.

ಸಂಜೀವಯ್ಯ

ವಿಶಾಲ ತಳಹದಿಯ ಹೆಸರಿನಲ್ಲಿ ಮೊದಲೇ ದೊಡ್ಡ ಮಂತ್ರಿಮಂಡಳವನ್ನು ರಚಿಸಿಕೊಂಡಿರುವ ಮಹಾರಾಷ್ಟ್ರ ಮತ್ತು ಕರ್ನಾಟಕದ ಮುಖ್ಯಮಂತ್ರಿಗಳಿಗೆ ಕಹಿಗುಳಿಗೆಯನ್ನು ಕೊಟ್ಟಿದ್ದಾರೆ, ಕಾಂಗ್ರೆಸ್ ಅಧ್ಯಕ್ಷ ಸಂಜೀವಯ್ಯನವರು ೨೦ಕ್ಕಿಂತ ಹೆಚ್ಚಿನ ಸದಸ್ಯರ ಸಂಪುಟಗಳು ಇರಬಾರದೆಂಬ ನಿಯಮವು ಈ ರಾಜ್ಯಗಳಿಗೂ ಅನ್ವಯಿಸುತ್ತದೆಯೆಂದ ಅವರು ಆವಶ್ಯಕತೆ ಕಂಡರೆ, ಆದೇಶವನ್ನೂ ನೀಡಲಾಗುವುದು ಎಂದರು. ಆವರು ಕನ್ನಮ್ವಾರರಿಗಿಂತ ನಿಜಲಿಂಗಪ್ಪನವರನ್ನೇ ಹೆಚ್ಚಾಗಿ ದಂಗುಬಡಿಸಿದರು. ರಾಜ್ಯದ ವಿಧಾನ ಸಭಾ ನಾಯಕನಿಗೆ ತನ್ನ ಸಹೋದ್ಯೋಗಿಗಳನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯವೂ ಇಲ್ಲವೆಂದಾದರೆ ಕೆಲವು ಮುಖ್ಯಮಂತ್ರಿಗಳಿಗೆ ಅನಿಷ್ಟವೆನಿಸೀತು.

ಎಲಿಜಬೆಥ್

ಅಸ್ವಸ್ಥದ ಮೂಲಕ ಆಸ್ಪತ್ರೆ ಸೇರಿರುವ ಹೆರಾಲ್ಡ್ ಮ್ಯಾಕ್ಮಿಲನ್ ತನ್ನ ಪ್ರಧಾನ ಮಂತ್ರಿಪಟ್ಟದ ರಾಜಿನಾಮೆಯನ್ನು ಮಹಾರಾಣಿಯವರಿಗೆ ತಲಪಿಸಿದರು; ಖುದ್ದಾಗಿ ಮುಟ್ಟಿಸುವುದು ಅವರಿಗೆ ಅಸಾಧ್ಯವಾಯಿತು. ಆ ಕ್ಷಣವೇ ಎಲಿಜಬೆಥರು ಆಸ್ಪತ್ರೆಗೆ ಬಂದು ಮ್ಯಾಕ್ಮಿಲನರನ್ನು ಕಂಡುಹೋದರು. ಮಹಾರಾಣಿಯೇ ತನ್ನ ದರ್ಶನಕ್ಕೆ ಬಂದುದರಿಂದ ಮ್ಯಾಕ್ಮಿಲನರ ವ್ಯಕ್ತಿತ್ವಕ್ಕೊಂದು ಅಪೂರ್ವ ಕಳೆಬಂತು ನಿಜ; ಆದರೆ, ಇದಕ್ಕೂ ಹೆಚ್ಚು ಮಹಾರಾಣಿ ಎಲಿಜಬೆಥರ ಸಹೃದಯತೆಗೆ ಕಲಶವಿಡುತ್ತದೆ. ಕೃಷ್ಣ ಭಗವಂತನಾದರೂ ಭಕ್ತ ಅರ್ಜುನನ ಮನೆಯ ಬಂಡಿಯ ಬೋವನಾಗಲಿಲ್ಲವೆ? ವೈಕೋಚನಿಯ ಮನೆಯ ಬಾಗಿಲು ಕಾಯುತ್ತಿಲ್ಲವೆ?

ನೋಟೀಸು
ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. 332/63.

ಗಂಗಮ್ಮ — ವಾದಿ

ಕೊರಪ್ಪ ಗೌಡ, ಕೋಮಪ್ಪ ಗೌಡರ ಮಗ, ಪುತ್ತೂರು ತಾಲೂಕು, ನಾಲ್ಕೂರು ಗ್ರಾಮ — ಪ್ರತಿವಾದಿ.

ಪ್ರತಿವಾದಿಗೆ ತಿಳಿಸುವುದೇನೆಂದರೆ:

ಡಿ. ಪ್ರೊ. ನೋಟಿನ ಪ್ರಕಾರ ಬರತಕ್ಕ ಹಣದ ವಸೂಲಿಗೆ ವಾದಿಯು ದಾಖಲು ಮಾಡಿದ ಈ ದಾವೆಯು ತಾ. 31–10–63ಕ್ಕೆ ಇರುವುದರಿಂದ ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ಆ ದಿವಸ ಉಪಸ್ಥಿತರಿರತಕ್ಕದ್ದು. ತಪ್ಪಿದರೆ ನಿಮ್ಮ ಗೈರುಹಾಜರಿಯಲ್ಲಿ ತೀರ್ಮಾನಿಸಲಾದೀತು.

ಎ. ರಾಧಾಕೃಷ್ಣ ಗೌಡ,
ವಾದಿಯ ಎಡ್ವೊಕೇಟ್.

ಪುತ್ತೂರು, ತಾ. 4–10–63.

ಮಾರ್ಶಲ್ ಟಿಟೊ

ಕಮ್ಯುನಿಸ್ಟ ಬಣವಾಗಿದ್ದರೂ ನಿರ್ಲಿಪ್ತತೆಯನ್ನು ತಳೆದಿರುವ ರಾಷ್ಟ್ರವೆಂದರೆ ಯುಗೊಸ್ಲಾವಿಯ. ಅದರ ಅಧ್ಯಕ್ಷ ಮಾರ್ಶಲ್ ಟಿಟೋ ರವರೀಗ್ಗೆ ಅಮೆರಿಕನ್ ಸಂದರ್ಶನ ಮಾಡಲು ಸಪತ್ನೀಕರಾಗಿ ಹೋಗಿದ್ದಾರೆ. ರಶ್ಯ ಮತ್ತು ಅಮೆರಿಕೆಗಳ ನಡುವೆ ಮೈತ್ರಿ ಭಾವನೆಯ ಬೀಜವು ಬಿತ್ತುತ್ತ ಬರುತ್ತಿರುವಂತೆಯೇ ಜಾಗತಿಕ ರಾಜನೀತಿಯೂ ಅಸ್ತವ್ಯಸ್ತವಾಗತೊಡಗಿದೆ. ಇನ್ನು ಈ ಎರಡು ರಾಷ್ಟ್ರಗಳಲ್ಲಿ ತಿಳುವಳಿಕೆಯ ಭಾವನೆಯು ಹೆಚ್ಚುತ್ತ ಬಂದಿತೆಂದರೆ ಮತ್ತೆ ಕಾಳಜಿಯಿಲ್ಲ. ರಶ್ಯವನ್ನು ಮೊದಲೇ ನೋಡಿದ ಮುದುಕ ಮುತ್ಸದ್ದಿ ಟಿಟೊ ಈಗ ಅಮೆರಿಕೆಯನ್ನು ಕಾಣುತಿದ್ದಾರೆ. ಅಮೆರಿಕೆಯ ಗುರಿ ಮತ್ತು ಕಾರ್ಯ ಪ್ರಣಾಲಿಗಳನ್ನು ಇವರು ಅಲ್ಲಿ ಅರಿತುಕೊಂಡರೆ, ಅದರಿಂದ ಲೋಕಕ್ಕೆ—ಮುಖ್ಯವಾಗಿ ಆಫ್ರೇಸ್ಯಾಕ್ಕೆ ಲಾಭವಾಗುವುದು.

ಅಲ್ಲಲ್ಲಿಯ ಸುದ್ದಿಸಾರ

ಸೌಹಾರ್ದ ನಿಯೋಗ— ಮಣಿಪಾಲದ ಎಕಾಡೆಮಿ ಆಫ್ ಜನರಲ್ ಎಜುಕೇಶನ್ ಇದಕ್ಕೆ ಸೇರಿದ ಕಾಲೇಜುಗಳ ವಿದ್ಯಾರ್ಥಿಗಳಲ್ಲಿ ಸೌಹಾರ್ದ ವೃದ್ಧಿಯಾಗಬೇಕೆಂಬ ಉದ್ದೇಶದಿಂದ ಉಡುಪಿಯ ಎಂ. ಜಿ. ಎಂ. ಕಾಲೇಜು ಯೋಜಿಸಿದ ಸೌಹಾರ್ದ ವಿನಿಮಯ ಯೋಜನೆಯಂತೆ ತಾ. 6–10–63ರಲ್ಲಿ ಕಾರ್ಕಳದ ಶ್ರೀ ಭುವನೇಂದ್ರ ಕಾಲೇಜನ್ನು ಎಂ. ಜಿ. ಎಂ. ಕಾಲೇಜಿನ ವಿದ್ಯಾರ್ಥಿ ಹಾಗೂ ಅಧ್ಯಾಪಕರ ತಂಡವೊಂದು ಸಂದರ್ಶಿಸಿದುದಕ್ಕೆ ಪ್ರತಿಯಾಗಿ ಭುವನೇಂದ್ರ ಕಾಲೇಜಿನ ವಿದ್ಯಾರ್ಥಿ ಹಾಗೂ ಅಧ್ಯಾಪಕರ ವೃಂದವೊಂದು ಇದೇ ತಾ. 14ರಲ್ಲಿ ಎಂ. ಜಿ. ಎಂ. ಕಾಲೇಜನ್ನು ಸಂದರ್ಶಿಸಿತು. ಕಾರ್ಕಳದ ವಿದ್ಯಾರ್ಥಿಗಳು ಎಂ. ಜಿ. ಎಂ ನ ಕೆಲವು ವಿದ್ಯಾರ್ಥಿಗಳೊಂದಿಗೆ ವಿವಿಧ ಮನರಂಜನೆಯ ಕಾರ್ಯಕ್ರಮಗಳನ್ನು ಪ್ರದರ್ಶಿಸಿದರು. ಎಂ. ಜಿ. ಎಂ. ಕಾಲೇಜಿನ ಯೂನಿಯನ್ ಅಧ್ಯಕ್ಷ ಕೃಷ್ಣ ಸುಧೀರರು ತಂಡವನ್ನು ಸ್ವಾಗತಿಸಿದರು. ಅತ್ಯಂತ ತೃಪ್ತಿಕರವಾಗಿ ತಮ್ಮ ವಿವಿಧ ಕಲಾಪ್ರತಿಭೆಗಳನ್ನು ಪ್ರದರ್ಶಿಸಿದ ಕಾರ್ಕಳದ ವಿದ್ಯಾರ್ಥಿ ವೃಂದವನ್ನು ಎಂ. ಜಿ. ಎಂ. ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರ ರಾಯರು ಅಭಿನಂದಿಸಿದರು.

ಶಾಲೆಗಳಿಗೆ ಎಕೆಡೆಮಿಯ ಉತ್ತೇಜಕ ಗ್ರಾಂಟು— ಮಣಿಪಾಲದ ಎಕೆಡೆಮಿ ಆಫ್ ಜನರಲ್ ಎಜ್ಯುಕೇಷನಿನ ರಜಿಸ್ಟ್ರಾರ್ ಡಾ. ಟಿ. ಎಮ್. ಎ. ಪೈಯವರು ಶಾಲೆಗಳಲ್ಲಿಯ ಕೆಲವೊಂದು ಅಲ್ಪ ಕೊರತೆಗಳ ನಿವಾರಣೆಯ ಬಗೆಗಾಗಿ ಯೋಚಿಸುತ್ತಿದ್ದು ಇದೀಗ ಆ ಬಗ್ಗೆ ಪ್ರೇರಕ ಗ್ರಾಂಟಾಗಿ ಕೊಡಲು ರೂ. 15,000ವನ್ನು ನಿಗದಿಪಡಿಸಿಟ್ಟಿರುವರು. ಇದನ್ನು ಕೆಲವೊಂದು ಶರ್ತಗಳೊಂದಿಗೆ ವಿತ್ತರಿಸುವ ಹೊಣೆಗಾರಿಕೆಯನ್ನು ಉಡುಪಿ ರೋಟರಿ ಕ್ಲಬ್ಬಿನವರು ಹೊತ್ತಿರುವರು. ಈ ಗ್ರಾಂಟನ್ನು ಲೈಬ್ರರಿ ಪುಸ್ತಕಗಳನ್ನು ತರಿಸಲಿಕ್ಕೆ, ಗೋಡೆ ಗಡಿಯಾರ, ಫರ್ನಿಚರು ಮತ್ತಿತರ ಅತ್ಯಾವಶ್ಯಕ ಸಾಮಗ್ರಿ, ಶಾಲಾ ಮಕ್ಕಳಿಗೆ ಕವಾಯತ್ತು ಇದಕ್ಕೆ ಮಾತ್ರ ಕೊಡಲಾಗುವುದು. ಯಾವುದಾದರೊಂದು ಶಾಲೆಗೆ ಕೊಡಬಹುದಾದ ಅತ್ಯಧಿಕ ಗ್ರಾಂಟು ರೂ. 500 ಆಗಿದೆ. ಆದರೆ ಅಡಳಿತೆಯವರು ಕೂಡಾ ಅಷ್ಟೇ ಹಣವನ್ನು ಈ ಪಡೆಯುವ ಸಾಮಗ್ರಿಗಳಿಗಾಗಿ ಹಾಕಬೇಕಾಗಿರುತ್ತದೆ. ಉಡುಪಿ ಫಿರ್ಕಾದಲ್ಲಿರುವ ಶಾಲೆಗಳಿಗೆ ಮಾತ್ರ ಈ ಗ್ರಾಂಟು ಕೊಡಲಾಗುವುದು. ಆದರೆ ಹೊರ ವಲಯದ ವಿನಂತಿಗಳನ್ನು ನಿಧಿಯ ಪರಿಮಿತಿ ನೋಡಿ ಪರ್ಯಾಲೋಚಿಸಲಾಗುವುದು. ಅರ್ಜಿಗಳನ್ನು ಈ ತಿಂಗಳ ಅಂತ್ಯದೊಳಗೆ ಕಳಿಸಿಕೊಡಬೇಕಾಗಿರುತ್ತದೆ ಎಂದು ಉಡುಪಿ ರೋಟರಿ ಕ್ಲಬ್ಬಿನ ಕಾರ್ಯದರ್ಶಿ ಶ್ರೀ ಎ. ಜಿ. ಅಲ್ಸೆಯವರು ತಿಳಿಸುತ್ತಾರೆ.

ರಾಷ್ಟ್ರೀಯ ಐಕ್ಯತಾ ದಿನಾಚರಣೆ

ಉಡುಪಿ ತಾಲೂಕು ರಾಷ್ಟ್ರೀಯ ರಕ್ಷಣಾ ಸಮಿತಿಯ ನೇತೃತ್ವದಲ್ಲಿ ತಾ. 20ರಂದು ರಾಷ್ಟ್ರೀಯ ಐಕ್ಯತಾ ದಿನಾಚರಣೆಯು ಉಡುಪಿಯಲ್ಲಿ ನೆರವೇರಿತು. ಬೆಳಿಗ್ಗೆ ಅಜ್ಜರಕಾಡಿನಲ್ಲಿ ನಗರ ಸಭಾಪತಿ ಶ್ರೀ ಪಿ. ಆರ್. ಶೆಟ್ಟಿಯವರು ಧ್ವಜಾರೋಹಣಗೈದರು ಅನಂತರ ಶಾಲಾ ಮಕ್ಕಳಿಗೆ ಸಿಹಿ ತಿಂಡಿ ವಿತರಣೆಯಾಯಿತು. ಸಂಜೆ ರಥ ಬೀದಿಯಲ್ಲಿ ಶ್ರೀ ಎ. ಜಿ. ಅಲ್ಸೆಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನೆರವೇರಿತು. ಶ್ರೀಗಳಾದ ಬೈಕಾಡಿ ವೆಂಕಟಕೃಷ್ಣ ರಾವ್, ಕೆ. ಮಹಮ್ಮದ್ ಬ್ಯಾರಿ (ರೀಜನಲ್ ನೇಶನಲ್ ಸೇವಿಂಗ್ಸ್ ಆಫೀಸರ್) ಇವರು ಭಾಷಣವಿತ್ತ ಮೇಲೆ ಶ್ರೀ ಪಿ. ರಂಗನಾಥ ಶೆಣೈಯವರು ಪ್ರತಿಜ್ಞಾ ವಿಧಿ ಸ್ವೀಕರಿಸಿದರು.

ಉಪಾಹಾರ ಸತ್ಕಾರ— ಯು. ಎಸ್. ಐ. ಎಸ್.ನ ಪ್ರೆಸ್ ಆಫೀಸರ್ ಮಿ. ಡೊನಾಲ್ಡ್ ನ್ಯೂಮೆನ್ ಅವರು ಕನ್ನಡ ವಿಭಾಗದ ಸಂಪಾದಕ ಶ್ರೀ ಕೆ. ಎಸ್. ರಾಮಕೃಷ್ಣಮೂರ್ತಿ ಅವರೊಂದಿಗೆ ಇದೇ ತಾ. 15ನೇ ಸಂಜೆ ಉಡುಪಿಗೆ ಆಗಮಿಸಿ 'ಪ್ರಕಾಶ'ದ ಸಂಪಾದಕ ಶ್ರೀ ಎ. ಜಿ. ಅಲ್ಸೆಯವರು ಉಪೇಂದ್ರ ಭಾಗದಲ್ಲಿ ಏರ್ಪಡಿಸಿದ ಸತ್ಕಾರ ಕೂಟದಲ್ಲಿ ಭಾಗ ವಹಿಸಿದರು. ಸ್ಥಳೀಯ ಪತ್ರಿಕೋದ್ಯಮಿಗಳು ಸಮ್ಮಿಳಿತರಾಗಿದ್ದ ಈ ಸಭೆಯಲ್ಲಿ ಶ್ರೀ ಅಲ್ಸೆಯವರು ಸ್ವಾಗತಿಸಿದ ಬಳಿಕ ವಿಚಾರವಿನಿಮಯ ನಡೆಯಿತು.

ಕಲಾ ಸಂಘದ ಉದ್ಘಾಟನೆ— ತಾ. 16–10–63ರಂದು ಮಂಗಳೂರಿನ ಕರ್ನಾಟಕ ಪೋಲಿಟೆಕ್ನಿಕ್ ಲಲಿತ ಕಲಾ ಸಂಘವನ್ನು ಪ್ರೊ. ಕು. ಶಿ. ಹರಿದಾಸ ಭಟ್ಟರು ಉದ್ಘಾಟಿಸುತ್ತಾ "ಎಂದಿನಿಂದ ಲಲಿತಕಲೆಗೆ ರಾಜಾಶ್ರಯ ತಪ್ಪಿತೋ ಅಂದಿನಿಂದ ಕಲೆಗಳ ಅಭಿವೃದ್ಧಿಯ ಹಾಗೂ ಪ್ರೋತ್ಸಾಹಿಸುವ ಹೊಣೆ ಪ್ರಜೆಗಳಿಗೆ; ಅದ ನಮ್ಮ ಮೇಲೆ ಬಿದ್ದಿದೆ" ಎಂದರಲ್ಲದೆ ಇಟಲಿಯಲ್ಲಿ ತಾನಿದ್ದ ಆರು ತಿಂಗಳ ಅನುಭವವನ್ನು ವಿವರಿಸಿದರು.

ಪ್ರಿನ್ಸಿಪಾಲ್ ಶ್ರೀ ಎಂ. ಎಲ್. ಶಾಸ್ತ್ರಿಯವರು ಅಧ್ಯಕ್ಷತೆ ವಹಿಸಿದ್ದರು. ಆರಂಭದಲ್ಲಿ ಸಂಘದ ಅಧ್ಯಕ್ಷ ಶ್ರೀ ಎಸ್. ಯು. ಪುತ್ತಿಗೆಯವರು ಸ್ವಾಗತಿಸಿದರು ಕಾರ್ಯದರ್ಶಿ ಶ್ರೀ ಎಂ. ವೆಂಕಟೇಶನ್ ನಾಯಕರು ಧನ್ಯವಾದ ಸಮರ್ಪಿಸಿದರು.

ರೋಟರಿ ಸಭೆ— ಉಡುಪಿ ರೋಟರಿ ಕ್ಲಬ್ಬಿನ ಸಭೆಯು ಅಧ್ಯಕ್ಷ ಶ್ರೀ ಟಿ. ರಮೇಶ ಪೈಗಳ ಅಧ್ಯಕ್ಷತೆಯಲ್ಲಿ ತಾ. 15ರಂದು ಜರಗಿತು ಯು. ಎಸ್. ಐ. ಎಸ್.ನ ಪ್ರೆಸ್ ಆಫೀಸರ್ ಮಿ। ಡೊನಾಲ್ಡ್ ನ್ಯೂಮೆನ್‌ರವರು ಮಾತನಾಡುತ್ತಾ ಹಿಂದುಳಿದ ಅಭಿವೃದ್ಧಿ ಹೊಂದದ ರಾಷ್ಟ್ರಗಳ ಅಭಿವೃದ್ಧಿಗಾಗಿ ಅಮೆರಿಕೆಯು ತನ್ನ ಸಹಾಯ ನೀಡುತ್ತಿರುವುದನ್ನು ವಿವರಿಸಿದರು. ಆರಂಭದಲ್ಲಿ ಶ್ರೀ ಎ. ಜಿ. ಅಲ್ಸೆಯವರು ಮಾನ್ಯ ಅತಿಥಿಗಳ ಪರಿಚಯ ಮಾಡಿಕೊಟ್ಟರು. ಕೊನೆಯಲ್ಲಿ ಶ್ರೀ ಟಿ. ಎ. ಪೈಗಳು ಧನ್ಯವಾದ ಸಮರ್ಪಿಸಿದರು.

ನಿಧನ— ಕಡೇಕಾರು (ಉಡುಪಿ), ಕಿದಿಯೂರು ಪ್ರೌಢ ಪ್ರಾಥಮಿಕ ಶಾಲೆಯ ಸಂಸ್ಥಾಪಕರಾದ ಶ್ರೀ ಸಗ್ರಿ ಶ್ರೀನಿವಾಸಾಚಾರ್ಯರು ತಾ. ೧೩ನೇ ಭಾನುವಾರ ರಾತ್ರಿ ತನ್ನ ೭೦ನೇ ವಯಸ್ಸಿನಲ್ಲಿ ನಿಧನರಾದರು. ಇವರು ಉಡುಪಿ ಸಂಸ್ಕೃತ ಮಹಾ ಪಾಠ ಶಾಲೆಯಲ್ಲಿ ಕೆಲವು ವರ್ಷಗಳ ಹಿಂದೆ ಕನ್ನಡ ಅಧ್ಯಾಪಕರಾಗಿದ್ದರಲ್ಲದ ಕಡಿಯಾಳಿ, ಕಡೇಕಾರು ಶಾಲೆಗಳಲ್ಲೂ ಉಪಾಧ್ಯಾಯರಾಗಿ ಸೇವೆ ಸಲ್ಲಿಸಿದ್ದರು. ಅನಂತರ ಕಿದಿಯೂರು ಶಾಲೆಯನ್ನು ಸ್ಥಾಪಿಸಿ ಆರೇಳು ವರ್ಷ ಪ್ರಮಪಟ್ಟು ನಡೆಯಿಸಿಕೊಂಡುಬಂದು ನಿವೃತ್ತರಾದರು. ಸಾಹಿತ್ಯ ಪ್ರೇಮಿಗಳಾದ ಇವರಿಗೆ ಇಂಗ್ಲಿಷ್, ಕನ್ನಡ, ಸಂಸ್ಕೃತಗಳಲ್ಲದೆ ಬಂಗಾಳೀ ಭಾಷೆಯಲ್ಲೂ ಪರಿಶ್ರಮವಿತ್ತು. ಇವರ ನಿಧನದಿಂದ ಒಬ್ಬ ನಿಷ್ಠಾವಂತ ನಿಸ್ಪೃಹ, ನಿಸ್ವಾರ್ಥ ಸೇವಾ ಮೂರ್ತಿಯನ್ನು ಊರವರು ಕಳೆದುಕೊಂಡಂತಾಯ್ತು. ಇವರ ಸ್ಮರಣಾರ್ಥವಾಗಿ ಕಿದಿಯೂರು ಶಾಲೆಗೆ ರಜಾ ಕೊಡಲ್ಪಟ್ಟಿತ್ತು.

ಯಕ್ಷಗಾನ— ದೇಲಂಪಾಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾ ಮಂದಿರದಲ್ಲಿ ತಾ. 19ರಂದು ಶ್ರೀ ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟರಿಂದ ರಚಿಸಲ್ಪಟ್ಟ 'ಕಂಜಾಕ್ಷಿ ಕಲ್ಯಾಣ' ಎಂಬ ಯಕ್ಷಗಾನವು ನಡೆಸಲ್ಪಟ್ಟಿತು. ಶ್ರೀ ಕೆ. ಅಣ್ಣಯ ಭಂಡಾರಿಯವರು ಕಾರ್ಯಕ್ರಮವನ್ನು ವ್ಯವಸ್ಥೆಗೊಳಿಸಿದ್ದು ಶ್ರೀಗಳಾದ ಕೇ. ವ. ಕೇಶವ, ಯಂ. ಶಂಕರ ಭಟ್, ಎಂ. ನಾರಾಯಣ ರೈ, ಅಪ್ಪು ಪಾಟಾಳಿ, ಬಾಬು ರೈ ಮೊದಲಾದವರು ಭಾಗವಹಿಸಿದ್ದರು.

ಅಖಿಲ ಕರ್ನಾಟಕ ಬೀಡಿ ಮಜೂರರ ಸಮ್ಮೇಳನವು ಇದೇ ಬರುವ ನವಂಬರ 2 ಮತ್ತು 3ರಂದು ಮಂಗಳೂರಲ್ಲಿ ಜರಗಲಿರುವುದೆಂದೂ ಸಮ್ಮೇಳನವನ್ನು ಯಶಸ್ವಿಗೊಳಿಸಲು ಸರ್ವರೂ ಸಹಕರಿಸಬೇಕೆಂದೂ ಸ್ವಾಗತ ಸಮಿತಿಯ ಕಾರ್ಯದರ್ಶಿಗಳು ವಿನಂತಿಸುತ್ತಾರೆ.

ಶ್ರೀ ಸುಬ್ರಹ್ಮಣ್ಯದಲ್ಲಿ ಷಷ್ಠಿ ಮಹೋತ್ಸವ— ಈ ಸಂವತ್ಸರದ ಕ್ಷಯ ಹಾಗೂ ಅಧಿಕ ಮಾಸಗಳಿಂದಾಗಿ ಈ ವರ್ಷ ಚಂಪಾ ಷಷ್ಠಿ ಮಹೋತ್ಸವವು ತಾ. 22.12.63 ನೇ ಭಾನುವಾರವೂ, ಇದರ ಪೂರ್ವಭಾವಿಯಾಗಿ ನಡೆಯುವ ಕುಲ್ಕುಂದ ಜಾನುವಾರು ಜಾತ್ರೆಯು ತಾರೀಕು 30–11–63ರಿಂದ 15–12–63ರವರೆಗೂ ಜರಗುವುದೆಂದು ತಿಳಿದುಬಂದಿದೆ.

ಅಳಿಕೆ— ತಾ. 14–10–63ರಂದು ಇಲ್ಲಿನ ಲೋಕ ಸೇವಾ ಹಾ. ವಿ. ಶಾಲೆಯಲ್ಲಿ ಅಮೇರಿಕದ 'ಕೇರ್' ಸಂಸ್ಥೆಯ ಉಪಹಾರವನ್ನು ಮಿಡ್ಡೇ ಮಿಲ್ಸ್ ಕಮಿಟಿಯ ವತಿಯಲ್ಲಿ ವಿತರಣೆ ಮಾಡುವ ಯೋಜನೆಯನ್ನು ಅಳಿಕೆ ಗ್ರಾಮದ ಪ್ರಮುಖರಾದ ಶ್ರೀ ಯಂ. ಅಕ್ಕಾರಿ ರೈಗಳು ಉದ್ಘಾಟಿಸಿದರು.

ನಮ್ಮ ಚಂದಾದಾರರಲ್ಲಿ ವಿನಂತಿ

ಇನ್ನೂ ಚಂದಾಹಣ ಪಾವತಿ ಮಾಡದ ನಮ್ಮ ಚಂದಾದಾರರು ದಯಮಾಡಿ ಕೂಡಲೇ ಪಾವತಿ ಮಾಡುವಂತೆ ಅಪೇಕ್ಷಿಸುತ್ತೇವೆ. ಅಂತೂ ಈ ತಿಂಗಳಾಂತ್ಯದೊಳಗೆ ಚಂದಾ ಬಾರದಿದ್ದರೆ ನಾವು ಮುಂದಿನ ಸಂಚಿಕೆಯನ್ನು ವಿ. ಪಿ. ದ್ವಾರಾ ಕಳುಹಿಸುತ್ತೇವೆ. ಅದನ್ನು ದಯವಿಟ್ಟು ಸ್ವೀಕರಿಸುವಂತೆ ವಿನಂತಿಸುತ್ತೇವೆ.

ಮೆನೇಜರ್.

In the Court of the District Munsif of Karkala

O. S. 344/1963.

Between

I. Rama Moorthi (Receiver)— Plaintiff

Sesappa Poojari — Defendant

To the defendant

Sesappa Poojari, son of Thukra Poojari, residing in Bajre village of Belthangadi Taluk.

Whereas the plaintiff has instituted the above suit for arrears of rents etc. for Rs. 1558-05 and subsequent interest and costs of suit etc. and the said suit stands posted to 31—10—1963 for your appearance. You are hereby informed that you are at liberty to appear before the said Court at 11 A. M. on the said date and submit your defence if any, failing which the suit will be decided exparte.

V. V. Upadhyaya,
Advocate for plaintiff.

Karkala, Dated 19—10—63.

ಯಶಸ್ಸಿನ ಕಥೆ

ಮುನಿಯಪ್ಪನ ಪುನರುಜ್ಜೀವನ

ನಮ್ಮ ದೇಶದ ಇತರ ಸಹಸ್ರಾರು ಮಂದಿ ರೈತರಂತೆ ಮುನಿಯಪ್ಪ ಕೂಡ ತನ್ನ ಜಮೀನಿನಲ್ಲಿ ರಾಗಿ ಇಲ್ಲವೆ ಭತ್ತ ಬೆಳೆಯುತ್ತಿದ್ದ. ಈ ಸಾಗುವಳಿ ಕಾರ್ಯಕ್ಕೆ ಅವನು ಬೆವರು ಸುರಿಸಿ ದುಡಿಯಬೇಕಾಗಿತ್ತು. ಆದರೂ ಶ್ರಮಕ್ಕೆ ತಕ್ಕ ಪ್ರತಿಫಲವಿಲ್ಲ. ಭೂಮಿಯನ್ನು ಇನ್ನು ನಂಬಿಕುಳಿತರೆ ಪ್ರಯೋಜನವಿಲ್ಲ ಎಂದುಕೊಂಡ ರೈತರನೇಕರು ಅವನ ಕಣ್ಮುಂದೆಯೇ ಬೇರೆ ಉದ್ಯೋಗಗಳಿಗೆ ಹೋಗತೊಡಗಿದರು.

ನೀರಿನ ಸೌಕರ್ಯ ಸಾಕಷ್ಟು ಇಲ್ಲವಾಗತೊಡಗಿತು, ಕೀಟ-ಗೊಬ್ಬರಗಳ ಬೆಲೆ ಏರತೊಡಗಿತು. ಬೆಂಗಳೂರಿನ ಸುತ್ತ ಕೈಗಾರಿಕೆಗಳು ಬೆಳೆದಂತೆ ಬೇಸಾಯಕ್ಕೆ ಜನ ಸಿಗುವುದೇ ಕಷ್ಟವಾಯಿತು. ಎಲ್ಲೆಲ್ಲೂ ಹಾಳು ಬಿದ್ದಿರುವ ಭೂಮಿ; ಭವಿಷ್ಯದ ನಿರೀಕ್ಷೆ ಮಸುಕು ಮಸುಕಾಗತೊಡಗಿತು. ಜೀವನ ನಡೆಸುವುದೇ ದುಸ್ತರವಾಯಿತು. ಆದರೂ ಭೂಮಿಯ ಮೇಲೆ ಮೋಹ ಪ್ರಬಲವಾಗಿತ್ತು ಎಂದೇ 'ಏನಾದರೂ ಮಾಡಿ ಬೇಸಾಯವನ್ನು ಹೆಚ್ಚು ಲಾಭದಾಯಕಗೊಳಿಸಿಕೊಳ್ಳಬೇಕು' ಎಂದು ಮುನಿಯಪ್ಪ ಯೋಜಿಸತೊಡಗಿದ.

ತನ್ನ ೨೫ ಎಕರೆ ಭೂಮಿ ಗದ್ದೆಯಾಗಿದ್ದರೆ ಈ ಯೋಚನೆ ಬರುತ್ತಿರಲಿಲ್ಲವೇನೋ! ಆ ಭಾಗ್ಯ ಪಡೆದು ಬಂದಿಲ್ಲ ಎಂದು ನಿಟ್ಟುಸಿರು ಬಿಡುತ್ತಾ ಎಷ್ಟು ದಿನ ತಾನೇ ಕುಳಿತಿರಲು ಸಾಧ್ಯ? ಹಿರಿಯರು ಹಾಕಿದ ಆಲದ ಮರ ಅಂತ, ನೇಣು ಹಾಕಿಕೊಂಡು ಅಲ್ಲೇ ಸಾಯಬೇಕೆ? ಇಲ್ಲ. ಏನಾದರೂ ಹೊಸಮಾರ್ಗ ಹುಡುಕಲೇ ಬೇಕು; ಇಲ್ಲವಾದರೆ ಎರಡು ಹೊತ್ತು ಗಂಜಿಗೂ ಮಾರ್ಗ ತಪ್ಪಿ ಕಣ್ಣು ಕಣ್ಣು ಬಿಡಬೇಕಾದ ಪರಿಸ್ಥಿತಿ ಬಂದೀತು! ಕೊನೆಗೆ ಬೇಸಾಯವನ್ನೇ ಕೈ ಬಿಟ್ಟು ಕಾರ್ಖಾನೆಯ ಕೂಲಿಗೆ ಕೈಯೊಡ್ಡಬೇಕಾದ ಪರಿಸ್ಥಿತಿ ಬಂದರೂ ಆಶ್ಚರ್ಯವಿಲ್ಲ; ಇತರರ ಪಾಡು ನೋಡುತ್ತಿಲ್ಲವೇ?

ಆದರೂ ಬೇಸಾಯವನ್ನು ಬಿಡುವ ಮನಸ್ಸು ಆತನಿಗಾಗಲಿಲ್ಲ. ಭೂಮಿಯನ್ನು ನಂಬಿ ಕೆಟ್ಟವರಿಲ್ಲ ಎಂದು ಹಿರಿಯರು ಹೇಳುತ್ತಿದ್ದ ಮಾತು ನೆನಪಿಗೆ ಬರುತ್ತಿತ್ತು; ಕಾದು ಜೈಸಬೇಕು, ಅಲ್ಲವೇ?

ತೋಟಗಾರಿಕೆಯ ಅಧಿಕಾರಿಯೊಬ್ಬರ ಪರಿಚಯ ದೈವದತ್ತವಾಗಿಯೇ ಮುನಿಯಪ್ಪನಿಗೆ ಲಭಿಸಿತು. ಭೂಮಿಯನ್ನು ಪರೀಕ್ಷಿಸಿ ನೋಡಿದ ಆ ಅಧಿಕಾರಿ ಮುಗುಳ್ನಕ್ಕು ಪರಿಹಾರ ಸೂತ್ರವೊಂದನ್ನು ಮುನಿಯಪ್ಪನ ಮುಂದಿಟ್ಟ.

"ಮುನಿಯಪ್ಪ, ಧೃತಿಗೆಡಬೇಡ; ಭೂಮಿ ಚೆನ್ನಾಗಿದೆ. ಹಣ್ಣುಗಳನ್ನು ಬೆಳೆದರೆ ಒಳ್ಳೆಯ ಫಸಲು ಬರುತ್ತೆ", ಎಂದು ಆ ಅಧಿಕಾರಿ ಭರವಸೆ ಕೊಟ್ಟಾಗ ಮುನಿಯಪ್ಪನಿಗೆ ಅವರ ಮಾತಿನಲ್ಲಿ ಅಷ್ಟಾಗಿ ನಂಬಿಕೆ ಹುಟ್ಟಲಿಲ್ಲ. ಏನೋ ಪುಸ್ತಕದ ಬದನೆಕಾಯಿ ಹೇಳುತಿದ್ದಾರೆ ಎಂದುಕೊಂಡಿರಬೇಕು.

ಅನೇಕ ರೈತರು ಹೀಗೆಯೇ ತಲೆಕೊಡವಿದ್ದರು. ಮುನಿಯಪ್ಪ ಈ ಪ್ರಿಯಮಕ್ಕೆ ಗುರಿಯಾಗಿರಲಿಲ್ಲ. ಆದರೆ ಅಧಿಕಾರಿ ಹಣ್ಣಿನ ಬೆಳೆ ಹೇಗೆ ಲಾಭದಾಯಕವಾಗುತ್ತದೆ ಮತ್ತು ಈ ಬೆಳೆಗೆ ಸಂಬಂಧಿಸಿದ ಸಮಸ್ಯೆಗಳು ಹೇಗೆ ಕಡಿಮೆ ಎಂಬುದನ್ನು ವಿವರಿಸಿ ಹೇಳಿದಾಗ ಮುಳುಗುತ್ತಿದ್ದ ಮನುಷ್ಯನಿಗೆ ಒಂದು ಹುಲ್ಲಿನ ಕಡ್ಡಿಯೇ ಆಸರೆಯ ಮಾರ್ಗ ತೋರಿಸಂತಾಗಿರಬೇಕು. ಒಂದು ಸಣ್ಣ ಆಸರೆ ಸಿಕ್ಕಿದರೆ ಸಾಕು, ಬದುಕು ಹಸನಾಗಬಹುದು ಎಂದು ಭಾವಿಸಿದ ಮುನಿಯಪ್ಪ "ಪ್ರಯೋಗ ನಡೆಸಿ ನೋಡಿಯೇ ಬಿಡೋಣ" ಎಂದು ಒಂದು ದೃಢ ಸಂಕಲ್ಪ ಮಾಡಿಕೊಂಡ.

ಅಧಿಕಾರಿಯ ಮಾತ ನೈಜತೆ ಅವನ ಮನಸ್ಸಿಗೆ ಹಿಡಿಸಿತು.

ರಾಗಿ ಬೆಳೆಯುವ ಬದಲು ದ್ರಾಕ್ಷಿ ಬೆಳೆದರೆ? ರಾಗಿಗೆ ಬೇಕಾಗುವಷ್ಟು ನೀರೂ ಬೇಕಾಗಿಲ್ಲ, ಅಷ್ಟು ಗೊಬ್ಬರವೂ ಬೇಕಾಗುವುದಿಲ್ಲ. ಮೂರನೆಯ ಒಂದು ಭಾಗದಷ್ಟು ಆದರೆ ಸಾಕು!

ಸೆರವಿಗೆ ಬೇಕಾಗುವ ಆಳುಗಳ ಸಂಖ್ಯೆ ಕೂಡ ಅಷ್ಟೇ ಕಡಿಮೆ. ಸಹಾಯಕ್ಕೆ ಒಂದಾಳಾದರೆ ಸಾಕು!

ಫಸಲು ಬಂದಾಗ ಲಾಭದ ಪ್ರಮಾಣ ರಾಗಿಯ ಫಸಲಿನಿಂದ ಬರುತ್ತಿದ್ದ ಆದಾಯಕ್ಕಿಂತ ಹತ್ತು ಪಟ್ಟು ಹೆಚ್ಚು!

ಇದರ ಕಲ್ಪನೆಯಿಂದ ಮುನಿಯಪ್ಪನಿಗೆ ಕಚಕುಳಿ ಇಟ್ಟಂತಾಯಿತು. ಹಸಿದ ಹೊಟ್ಟೆಗೆ ರಸದೌತಣ ದೊರಕುವ ಕಲ್ಪನೆ, ಅದು. ಮನಸ್ಸು ಹಿಗ್ಗಿತು.

ಮುನಿಯಪ್ಪನ ಬಾಹುಗಳಿಗೆ ಹತ್ತಾಳುಗಳ ಬಲ ಬಂದಂತಾಯಿತು ಪ್ರಯೋಗವನ್ನು ತನ್ನ ಭೂಮಿಯ ಒಂದು ಭಾಗದಲ್ಲಿ ಆರಂಭಿಸಿದ. ಬರಡು ಬಿದ್ದಿದ್ದ ಭೂಮಿಯಲ್ಲಿ ಒಂದು ವರ್ಷದ ದುಡಿಮೆಯ ಫಲವಾಗಿ ತುಂಬು ಫಸಲಿನ ಮುನ್ಸೂಚನೆಗಳು ಕಾಣ ತೊಡಗಿದುವು. ದ್ರಾಕ್ಷಿಯ ಬಳ್ಳಿ ಚಿಗುರ ತೊಡಗಿತ್ತು. ಇನ್ನೊಂದು ವರ್ಷದಲ್ಲಿಯೇ ಈ ಬಳ್ಳಿಗಳಲ್ಲಿ ಕಣ್ಣು ತಣಿಸುವ ದ್ರಾಕ್ಷಿಯ ಗೊಂಚಲುಗಳು ಮೈತುಂಬಿ ಕೊಂಡುವು.

ಮುನಿಯಪ್ಪನಿಗೆ ಕನಸು ಮನಸಿನಲ್ಲೂ ಇದರ ನಿರೀಕ್ಷೆ ಇರಲಿಲ್ಲ. ಪ್ರತಿ ಎಕರೆಯ ಫಸಲು ವರ್ಷಕ್ಕೆ ೪,೦೦೦ ರೂ.ಗಳ ಆದಾಯ ಕೊಟ್ಟಿತು. ಮುನಿಯಪ್ಪನ ಜೀವನದಲ್ಲಿ ಇದರಿಂದಾಗಿ ಒಂದು ಹೊಸ ಅಧ್ಯಾಯವೇ ಆರಂಭವಾದಂತಾಯಿತು. ಇದರಿಂದ ಸ್ಫೂರ್ತಿ ಪಡೆದ ಮುನಿಯಪ್ಪ ತನ್ನ ೨೦ ಎಕರೆಗಳಷ್ಟು ಭೂಮಿಯಲ್ಲಿ ಸಂಪೂರ್ಣವಾಗಿ ದ್ರಾಕ್ಷಿಯನ್ನೇ ಬೆಳೆಯುವ ನಿರ್ಧಾರ ಕೈಗೊಂಡ.

ಮುನಿಯಪ್ಪನಂತೆಯೇ ಇಂದು ನೂರಾರು ಜನ ರೈತರು ದ್ರಾಕ್ಷಿ ಬೆಳೆಯುವ ಉದ್ಯಮಕ್ಕೆ ಕೈ ಹಾಕಿದ್ದಾರೆ. ನೀಲಿ ಬಣ್ಣದ "ಬ್ಯಾಂಗಳೂರ್ ಬ್ಲೂಸ್" ಜಾತಿಯ ದ್ರಾಕ್ಷಿಯ ಬೆಳೆ ತುಂಬಾ ಜನಪ್ರಿಯವಾಗತೊಡಗಿದೆ. ಬೆಂಗಳೂರು ನಗರದ ಸುತ್ತ ಮುತ್ತಲೂ ಒಟ್ಟು ೧೦,೦೦೦ ಎಕರೆಗಳಷ್ಟು ಭೂಮಿ ಇಂದು ದ್ರಾಕ್ಷಿ ಬೆಳೆಗೆ ಮೀಸಲಾಗಿದೆ. ಒಂದು ಪೌಂಡು ದ್ರಾಕ್ಷಿಗೆ ೨೫ ನಯೇ ಪೈಸೆಗಳಷ್ಟು ಬೆಲೆ ಬಂದರೂ ಸಾಕು, ಒಂದು ಎಕರೆಯಷ್ಟು ಭೂಮಿಯಲ್ಲಿ ಬರುವ ಫಸಲು ವರ್ಷಕ್ಕೆ ೫,೦೦೦ ರೂಗಳ ವರಮಾನ ತರುವುದು ಬೆಂಗಳೂರು, ಕೋಲಾರ, ತುಮಕೂರು ಮಂಡ್ಯ ಮತ್ತು ಮೈಸೂರು ಈ ಜಿಲ್ಲೆಗಳಲ್ಲಿ "ಬ್ಯಾಂಗಳೂರ್ ಬ್ಲೂಸ್" ಜಾತಿಯ ದ್ರಾಕ್ಷಿ ಬೆಳೆ ಕ್ರಮೇಣ ಹೆಚ್ಚುತ್ತಿದೆ ದ್ರಾಕ್ಷಿಯ ರಸ ಉತ್ತಮ ಪಾನೀಯ ಮಾತ್ರವಲ್ಲದೆ, ತುಂಬಾ ಸ್ವಾದಿಷ್ಟವಾಗಿಯೂ ಇರುತ್ತದೆ ಇನ್ನೂ 'ಬ್ಯಾಂಗಳೂರ ಬ್ಲೂಸ್' ಜಾತಿಯ ರಸವನ್ನು ದ್ರಾಕ್ಷಿ ರಸ ತಯಾರಿಕೆಗೂ ಉಪಯೋಗಿಸಬಹುದು, ದ್ರಾಕ್ಷಾರಸ ತಯಾರಿಕೆ ಒಂದು ಉತ್ತಮ ಕೈಗಾರಿಕೆಯಾಗಿ ಈ ಪ್ರದೇಶಗಳಲ್ಲಿ ಅಭಿವೃದ್ಧಿಯಾಗುವುದೂ ಸಾಧ್ಯವಿದೆ. 'ಬ್ಯಾಂಗಳೂರ್ ಬ್ಲೂಸ್' ಜಾತಿಯ ದ್ರಾಕ್ಷಿಗೂ ಇತರ ಜಾತಿಯ ದ್ರಾಕ್ಷಿಗೂ ಒಂದು ಮುಖ್ಯ ವ್ಯತ್ಯಾಸವಿದೆ. ಈ ಜಾತಿಯ ದ್ರಾಕ್ಷಿಗಳು ಹೆಚ್ಚು ಕಾಲ ಕೆಡದಂತೆ ಉಳಿಯುತ್ತವೆ.

ಇನ್ನೂ ಉತ್ತಮ ಜಾತಿಯ ದ್ರಾಕ್ಷಿಗಳಾದ ಅನಾಬ್ -ಎ- ಶಾಹಿ, ಫಕಡಿ ಮತ್ತು ಗುಲಾಬಿ ಈ ಕೆಲವು ಇದೀಗ ಮೈಸೂರು ರಾಜ್ಯದ ಉತ್ತರ ಜಿಲ್ಲೆಗಳಲ್ಲಿ ಹೆಚ್ಚು ಹೆಚ್ಚಾಗಿ ಬೆಳೆಯಲ್ಪಡುತ್ತಿದೆ.

ಈ ಜಾತಿಯ ಬೆಳೆಗಳು ಹೆಚ್ಚು ಲಾಭದಾಯಕವಾಗಿವೆ. ಎಕರೆಗೆ ೧೫–೨೦ ಸಹಸ್ರ ರೂಪಾಯಿಗಳ ಆದಾಯ ಕೊಡುವ ಚೈತನ್ಯ ಈ ಕೆಲವು ಜಾತಿಯ ಬೆಳೆಗಳಿಗೆ ಇದೆ. ಸಮುದ್ರತೀರದ ಜಿಲ್ಲೆಗಳಲ್ಲೂ ಇವುಗಳನ್ನು ಬೆಳೆಯುವ ಪ್ರಯತ್ನ ನಡೆಯುತ್ತಿದೆ.

ಮೈಸೂರು ರಾಜ್ಯ ಸರಕಾರದ ತೋಟಗಾರಿಕೆ ಇಲಾಖೆ ದ್ರಾಕ್ಷಿ ಬೆಳೆಗೆ ನೆರವು ನೀಡುವ ಕಾರ್ಯಕ್ರಮವೊಂದನ್ನು ಇಟ್ಟುಕೊಂಡಿದೆ. ಸುಲಭ ರೀತಿಯಲ್ಲಿ ತೀರಿಸಬಹುದಾದ ಸಾಲಗಳನ್ನು ಒದಗಿಸುವುದರ ಜೊತೆಗೆ ದ್ರಾಕ್ಷಿ ಬೆಳೆಗೆ ಬೇಕಾಗುವ ನೀರು ಮತ್ತು ಗೊಬ್ಬರ ಇವುಗಳನ್ನು ಕಡಿಮೆ ದರದಲ್ಲಿ ಒದಗಿಸುತ್ತಿದೆ. ಉತ್ತಮ ಜಾತಿಯ ಸಸಿಗಳನ್ನೂ ರೈತರಿಗೆ ಒದಗಿಸುವ ಕಾರ್ಯದಲ್ಲಿ ಆಸಕ್ತಿ ವಹಿಸಿದೆ. ದ್ರಾಕ್ಷಿ ಹಣ್ಣಿನ ರಸ ತಯಾರಿಸುವ ವಿಧಾನವನ್ನು ಪ್ರದರ್ಶಿಸುವುದರ ಮೂಲಕ ಈ ತಂಪು ಪಾನೀಯವನ್ನು ಹೆಚ್ಚು ಹೆಚ್ಚಾಗಿ ಜನಪ್ರಿಯಗೊಳಿಸುವ ಪ್ರಯತ್ನಗಳನ್ನೂ ನಡೆಸಲಾಗುತ್ತಿದೆ.

ಎಷ್ಟು ಜಾತಿಯ ದ್ರಾಕ್ಷಿ ಹಣ್ಣುಗಳಿವೆ ಎಂಬುದನ್ನು ತಿಳಿಯಬೇಕಾದರೆ ನೀವು ಬೆಂಗಳೂರಿನ ಲಾಲ್‌ಬಾಗಿನಲ್ಲಿರುವ ಹಣ್ಣುಗಳನ್ನು ಬೆಳೆಯುವ ವಿಭಾಗಕ್ಕೆ ಹೋದರೆ ಸಾಕು. ಸುಮಾರು ೧೫೦ ಜಾತಿಯ ದ್ರಾಕ್ಷಿಗಳನ್ನು ಇಲ್ಲಿ ಬೆಳೆಯಲಾಗುತ್ತಿರುವ ಪ್ರಯೋಗವನ್ನು ನೋಡಿ ಆಶ್ಚರ್ಯ ಪಡುತ್ತೀರಿ. ಬೇರೆ ಬೇರೆ ದೇಶಗಳಿಂದ ಈ ದ್ರಾಕ್ಷಿ ಸಸಿಗಳನ್ನು ತರಿಸಿ ಪ್ರಯೋಗ ರೂಪದಲ್ಲಿ ಅವುಗಳನ್ನು ಬೆಳೆಯಲಾಗುತ್ತಿದೆ.

ದ್ರಾಕ್ಷಿ ಬೆಳೆಗಾರರು ತಮ್ಮದೇ ಆದ ಒಂದು ಸಹಕಾರ ಸಂಸ್ಥೆಯನ್ನು ಸ್ಥಾಪಿಸಿಕೊಂಡು ದ್ರಾಕ್ಷಿಯ ಮಾರಾಟ ವ್ಯವಸ್ಥೆ ಮತ್ತು ಸಂಸ್ಕರಣ ವ್ಯವಸ್ಥೆಗೆ ಗಮನ ಕೊಡುತ್ತಿದ್ದಾರೆ.

'ಬ್ಯಾಂಗಳೂರ್ ಬ್ಲೂಸ್' ಜಾತಿಯ ದ್ರಾಕ್ಷಿಗಳನ್ನು ಇದೀಗ ನೆರೆಯ ರಾಜ್ಯಗಳಾದ ಆಂಧ್ರ, ಮದರಾಸ್ ಮತ್ತು ಕೇರಳಗಳಿಗೂ ಕಳುಹಿಸಲಾಗುತ್ತಿದೆ. ಉದಾಹರಣೆಗೆ ಹೇಳುವುದಾದರೆ, ೧೯೬೨ರಲ್ಲಿ ಸುಮಾರು ೩೦,೦೦೦ ಮಣಗಳಷ್ಟು ದ್ರಾಕ್ಷಿಯನ್ನು ಈ ರೀತಿ ಕಳುಹಿಸಲಾಯಿತು.

"ದ್ರಾಕ್ಷಿ ಬೆಳೆಗೆ ಕೈಹಾಕಿ ಬದುಕಿಕೊಂಡೆ" ಎನ್ನುವ ಮುನಿಯಪ್ಪ ಇಂದಿಗೂ ತನ್ನ ಹಿಂದಿನ ದಿನಗಳನ್ನು ನೆನಪು ಮಾಡಿಕೊಂಡು ತನ್ನ ಯಶಸ್ಸಿನ 'ಗುಟ್ಟ'ನ್ನು ತುಂಬಾ ಹೆಮ್ಮೆಯಿಂದ ಹೇಳಿಕೊಳ್ಳುತ್ತಾನೆ.

ಯಕ್ಷಗಾನದಲ್ಲಿ ಹಿರಿಯ ಸ್ಥಾನ ಗಳಿಸಿ, 'ಯಕ್ಷಗಾನ ಭಾಸ್ಕರ'ನೆಂದು ಪ್ರಸಿದ್ಧಿ ಪಡೆದ ದಿ| ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ಟರ

ನವಕಾಲೋಚಿತವಾದ ಯಕ್ಷಗಾನ ಪ್ರಸಂಗಗಳು.

ಸಾಹಸ ಭೀಮ ವಿಜಯ (ಗದಾಯುದ್ಧ) ೦—೮—೦

ಯಕ್ಷಗಾನ ದಶಾವತಾರದ ಆಟದ ಕ್ರಮಕ್ಕನುಸರಿಸಿ ಪಾಂಡವರ ಒಡ್ಡೋಲಗದ ದೃಶ್ಯವನ್ನು ದಿಗ್ದರ್ಶನ ಮಾಡಿ, ಮುಂದೆ ಕಥಾಭಾಗವನ್ನು ಮೂಲ ಕಾವ್ಯಕ್ಕನುಸರಿಸಿಯೇ ಕೊನೆಗೊಳಿಸಿದೆ

ಭಾರತದ ಗುರುಕುಲ ೦—೬—೦

ಪಾಂಡವ, ಕೌರವ ಬಾಲ್ಯ ಕೇಳಿಗಳು, ವಿದ್ಯಾಭ್ಯಾಸ, ಪರೀಕ್ಷಾರಂಗದ ಕಾರ್ಯಗಳು, ಗುರುದಕ್ಷಿಣೆ ಮೊದಲಾದ ವಿಷಯಗಳನ್ನೊಳಗೊಂಡಿದೆ.

ಲತ್ತ್ರಪಗಡೆ ೦—೬—೦

ಭಾರತದ ಸಭಾಪರ್ವದೊಳಗಣ ಚರಿತ್ರೆಗಳಿರುವ ನಾಲ್ಕು ದೃಶ್ಯಗಳೂ ಅರಣ್ಯಪರ್ವೋಕ್ತವಾದ ಕಿಮ್ಮೀರ ವಧೆಯೆಂಬ ದೃಶ್ಯವೂ ಸೇರಿವೆ.

ಭರತೇಶ ದಿಗ್ವಿಜಯ ೦—೮—೦

ರಾಜಕವಿ ರತ್ನಾಕರವರ್ಣಿಯ ಶೃಂಗಾರ ರಸಪ್ರಧಾನವಾದ ಭರತೇಶ ವೈಭವದೊಳಗಣ ದಿಗ್ವಿಜಯ ವಿಭಾಗದ ನೂತನ ಕಥಾವಸ್ತುಗಳನೊಳಗೊಂಡಿದೆ. ಯಕ್ಷಗಾನ ಕಲಾಭಿಮಾನಿಗಳಿಗೆ ವಿವರವಾದ ಸೂಕ್ತ ಅನುಭವ ಸೂಚಿಯಿದೆ.

ವಾಲಿ ಸುಗ್ರೀವ (ಬಹುಮಾನಿತ) ೦—೮—೦

ವೀರ, ಕರುಣಾ ರಸಪ್ರಧಾನವಾದ ನವೀನ ರೀತಿಯಲ್ಲಿ ಮನವೊಪ್ಪುವಂತೆ ರಚಿಸಲಾದ ರಾಮಾಯಣಾಂತರ್ಗತ ಪ್ರಸಂಗ.

ಪುಸ್ತಕ ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಕರುಣಾಸೇತು ಪದ್ಮಶ್ರೀ ಜಗದೀಶನ್

(೪ನೇ ಪುಟದಿಂದ)

'ನನ್ನ ಶಿಷ್ಯ ಜೀವನದ ಅತ್ಯಂತ ಅಮೂಲ್ಯ ಸಂದರ್ಭವದು. ನಾನ ನೈಜ ನೈಷ್ಠನನ ದರ್ಶನಮಾಡಿದೆನು; ಶ್ರೇಯ ಮತ್ತು ಪ್ರೇಯಗಳ ನಡುವೆ ತೂಗುತ್ತಿದ್ದ ನನ್ನ ಮನಸ್ಸು ಆಗ ಸ್ಥಿರವಾಯಿತು. ಕುಷ್ಠ ನಿವಾರಣ ಕಾರ್ಯವು ನನ್ನ ಜೀವನದ ಗುರಿಯೂಯಿತು' ಎಂದವರು ಹೇಳುತ್ತಿರುತ್ತಾರೆ.

ಗಾಂಧೀಜಿಯವರ ಆಶೀರ್ವಾದದಿಂದ ಮದ್ರಾಸ ರಾಜ್ಯದ ದಕ್ಷಿಣ ಆರ್ಕಾಟ್ ಜಿಲ್ಲೆಯಲ್ಲಿ ಕಸ್ತೂರ್ಬಾ ಕುಷ್ಠ ನಿವಾರಣ ನಿಲಯವು ಪ್ರಾರಂಭವಾಯಿತು, ಜಗದೀಶನ್ ಅದರ ಸಂಚಾಲನೆಯ ಭಾರವನ್ನು ನಿರ್ವಹಿಸಿದರು.

೧೯೪೭ರಲ್ಲಿ ವಾರ್ಧಾದಲ್ಲಿ ಭಾರತದ ಕುಷ್ಠ ನಿವಾರಣ ಕಾರ್ಯಕರ್ತರ ಒಂದು ಸಮ್ಮೇಳನ ಸೇರಿತು. ಅಖಿಲ ಭಾರತ ಕುಷ್ಠ ಸಮಿತಿಯ ರಚನೆಯೂಯ್ತು. ಜಗದೀಶನರೂ ಅದರ ಸದಸ್ಯರಾದರು. ಇವರ ಪರಿಶ್ರಮದಿಂದಾಗಿಯೇ ಭಾರತದ ಬೇರೆ ಬೇರೆಡೆಯಲ್ಲಿ ಕುಷ್ಠ ನಿವಾರಣ ಸಂಬಂಧದ ಸಮ್ಮೇಳನಗಳು ನಡೆದುವು. ೧೯೪೭ರಲ್ಲಿ ಗಾಂಧೀಜಿಯವರು ದಕ್ಷಿಣದಲ್ಲಿ ಹಿಂದ್ ಕುಷ್ಠ ನಿವಾರಣಾ ಸಂಘವನ್ನು ಸ್ಥಾಪಿಸಿದರು. ಜಗದೀಶನರು ಅದರ ಕಾರ್ಯದರ್ಶಿಯಾದರು.

ಬಾಪೂಜಿಯವರ ಆಶೀರ್ವಾದ ಮತ್ತು ಜಗದೀಶನರ ಆಸಕ್ತಿ ಹಾಗೂ ದಕ್ಷತೆಗಳಿಂದ ಇಂದು ದಕ್ಷಿಣದಲ್ಲಿ ಐವತ್ತು ಕುಷ್ಠನಿವಾರಣ ಕೇಂದ್ರಗಳು ಸುಚಾರು ರೂಪದಲ್ಲಿ ನಡೆಯುತ್ತಿವೆ. ಗಾಂಧೀಜಿಯವರ ಈ ಮಾತು ಯಾವಾಗಲೂ ಅವರ ಕಿವಿಯಲ್ಲಿ ಪ್ರತಿಧ್ವನಿಸುತ್ತಿರುತ್ತದೆ: "ತಮ್ಮ ಜಗದೀಶನ್, ನಿನ್ನ ಮೇಲಿನ ವಿಶ್ವಾಸದಿಂದಲೇ ನನ್ನ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಕುಷ್ಠ ನಿವಾರಣವನ್ನೂ ಅಳವಡಿಸಿಕೊಂಡಿದ್ದೇನೆ" ಗಾಂಧೀಜಿಯವರ ನಂತರ ಜಗದೀಶನರ ಆರಾಧ್ಯಮೂರ್ತಿ ಠಕ್ಕರ ಬಾಪಾ ಇವರೂ ಒಮ್ಮೆ ಅಂದಿದ್ದರು. "ಕುಷ್ಠ ನಿವಾರಣದ ಕಾರ್ಯದಲ್ಲಿ ತೊಡಗಿರುವ ಕಾರ್ಯಕರ್ತರನ್ನು ನಾನು ನನ್ನ ಪೂಜ್ಯ ಗುರುವೆಂದು ತಿಳಿಯುತ್ತೇನೆ."

ತನ್ನ ಆರ್ಕಾಟ ಜಿಲ್ಲೆಯಲ್ಲಿ ಜಗದೀಶನ್ ನಾಲ್ಕು ಕುಷ್ಠ ನಿವಾರಣ ಕೇಂದ್ರಗಳನ್ನು ನಡೆಸುತಿದ್ದಾರೆ ಹಿಂದ್ ಕುಷ್ಠ ನಿವಾರಣ ಸಂಘದ ಕಾರ್ಯದರ್ಶಿಯಾಗಿದ್ದಾರೆ. ಕುಷ್ಠ ಸಂಬಂಧದಲ್ಲಿ ಜನತೆಯ ಭ್ರಮೆಗಳ ನಿವಾರಣೆ, ಅವನ್ನು ತಡೆಯುವ ರೀತಿ ವಿಧಾನಗಳ ಪ್ರಚಾರ, ಸರಕಾರಿ ಮತ್ತು ಸರಕಾರೇತರ ಕುಷ್ಠ ಚಿಕಿತ್ಸಾಲಯಗಳ ನಿರೀಕ್ಷಣೆ, ರೋಗಿಗಳೊಡನೆ ಸಂಪರ್ಕವಿಟ್ಟುಕೊಂಡು ಅವರಿಗೆ ಆಶ್ವಾಸನೆ [illegible] ಕೊಡುವ ಉದ್ದೇಶ, ಕುಷ್ಠದ ಪರೀಕ್ಷಿಸುವ [illegible] ಯ ಕಾರ್ಯಕರ್ತರ [illegible]

ಶಿಶುವಿನಂತೆ ಕುಷ್ಠ ಸಾಂಕ್ರಾಮಿಕ ಅಥವಾ ಘಾತಕ ರೋಗವಲ್ಲ. ಮಕ್ಕಳು ರೋಗಿಗಳ ಸಂಪರ್ಕದಲ್ಲಿ ಎಡೆಬಿಡದ ಉಳಿದರೆ ಈ ರೋಗವು ಹರಡಬಹುದು, ಆದರೂ ೪೦-೫೦ ಪ್ರತಿಶತ ಮಾತ್ರ ವಯಸ್ಕರಿಗೆ ಯಾವ ಅಪಾಯವೂ ಇಲ್ಲ. ಇದಕ್ಕೆ ಒಂದೆರಡು ಅಪವಾದವಿರಬಹುದಾದರೂ ಅದು ಚಿಕಿತ್ಸೆಯಿಂದ ಗುಣಮುಖವಾಗುವುದು. ಕುಷ್ಠರೋಗವು ಚಿಕಿತ್ಸೆಯಿಂದ ದೂರ ಮಾಡಬಹುದೆಂಬುದನ್ನು ಮರೆಯಬಾರದು. ಸಂಪರ್ಕದಿಂದಲೇ ಇದು ಹರಡುವುದಲ್ಲದೆ ವಂಶ ಪಾರಂಪರ್ಯವಾಗಿಯಲ್ಲ. ಕೆಲವು ವಿಧದ ಸ್ನಾಯುವಿಕ ಕುಷ್ಠವು ಸಾಂಕ್ರಾಮಿಕ ಅಲ್ಲ; ಆದರೆ, ಇವು ಭಾರತದಲ್ಲಿರುವುದು ಅತ್ಯಲ್ಪ ಪ್ರಮಾಣದಲ್ಲಿ. ಹೈಡ್ರೊನಾಕಾರ್ಪಸ್ ಮತ್ತು ಸಲ್ಫೋನಸ್‌ಗಳ ನಿಯಮಿತ ಉಪಯೋಗದಿಂದ ಈ ಮಹಾ ರೋಗವು ಕ್ರಮೇಣ ವಾಸಿಯಾಗುವುದು ಎನ್ನುತ್ತಾರೆ ಜಗದೀಶನ್.

'ಕುಷ್ಠ ರೋಗಿಯನ್ನು ಕಂಡು ಮುಖ ತಿರುಗಿಸಬೇಡಿರಿ. ಅದು ದುರ್ಧರ ರೋಗವೆಂದು ತಿಳಿಯಬೇಡಿರಿ. ಆತನೂ ಒಬ್ಬ ಮಾನವನೆಂದು ತಿಳಿಯಿರಿ ಸ್ನೇಹ ಮತ್ತು ಸದ್ಭಾವನೆಯಿಂದ ಆತನ ಸಂತಪ್ತ ಮನವನ್ನು ಸಾಂತ್ವನಗೊಳಿಸಿರಿ. ರೋಗಿಗೆ ಇದಕ್ಕಿಂತ ಉತ್ತಮೌಷಧ ಬೇರೆಯಿಲ್ಲ' ಎನ್ನುತ್ತಾರೆ ಜಗದೀಶನ್.

ವಿದೇಶಗಳ ಕಾರ್ಯಕರ್ತರೂ ಜಗದೀಶನರಲ್ಲಿ ಸಲಹೆಗಾಗಿ ಬರುತ್ತಾರೆ ಅವರು ಅಂತಾರಾಷ್ಟ್ರೀಯ ಕುಷ್ಠ ನಿವಾರಣ ಮತ್ತು ಸ್ವಾಸ್ಥ್ಯ ಆಯೋಗದ ಅಧ್ಯಕ್ಷರು. ೧೯೫೮ರಲ್ಲಿ ಈ ಸಂಘದ ಉಚ್ಚ ಸಭೆಯು ಇವರ ಹಿರಿತನದಲ್ಲಿ ಟೋಕಿಯೋದಲ್ಲಿ ಸೇರಿತ್ತು. ಇಂಗ್ಲೆಂಡಿನ ಲೆಪರ್ ಮಿಶನಿನ ಪ್ರಧಾನ ಕಾರ್ಯದರ್ಶಿ ಡೋನಾಲ್ಡ್ ಮಿಲ್ಲರ್‌ರು ಇವರನ್ನು "ಕರುಣ ಸೇತು" ಎಂದು ಕರೆದಿದ್ದರು ಭಾರತ ಸರಕಾರವು ೧೯೬೨ರಲ್ಲಿ "ಪದ್ಮ ಶ್ರೀ" ಪದಕವಿತ್ತು ಅವರ ಸೇವೆಯ ಬಗ್ಗೆ ಆದರವನ್ನು ವ್ಯಕ್ತಪಡಿಸಿತು.

ಜಗದೀಶನರ ಬಗ್ಗೆ ಗಾಂಧೀಜಿ ಉದ್ಗರಿಸಿದ್ದಾರೆ—'ಕುಷ್ಠರೋಗ ಸಂಬಂಧದ ಅಜ್ಞಾನದಿಂದಿರುವ ಜನರ ಕಣ್ಣು ತೆರೆಯಿಸುವ ಕೀರ್ತಿಯು ಶ್ರೀ ಜಗದೀಶನರಿಗೆ ಕಡಿಮೆಯಿಲ್ಲ ಅವರ ಸೇವೆಯು ಯಾವನೇ ದೇಶ ಸೇವಕನಿಗೆ ಅನುಕರಣೀಯ. ಕುಷ್ಠ ನಿವಾರಣ ಕಾರ್ಯದಲ್ಲಿ ಅವರೇ ನನ್ನ ಕೈ, ಕಿವಿ; ಕಣ್ಣು"

ಜಗದೀಶನ್ನರು ವಿಘ್ನಗಳನ್ನು ಎದುರಿಸಲಿಲ್ಲ ಎಂದರ್ಥವಲ್ಲ ಆದರೆ, ಗಾಂಧೀಜಿಯವರ ಒಂದು ಮಾತು ಅವರ ಮಾನಸಾಕಾಶದಲ್ಲಿ ಧ್ರುವ ತಾರೆಯಂತೆ ದೇದೀಪ್ಯಮಾನವಾಗಿ ಹೊಳೆಯುತ್ತಿದೆ, ನಿರಾಶೆಯನ್ನು ದೂರಮಾಡಿಸಿ ಪಥ ಪ್ರದರ್ಶನ ಮಾಡುತ್ತಿದೆ: "ನಿನ್ನ ಗುರಿ ಸಾಧನೆಯಲ್ಲಿ ತತ್ಪರನಾಗ; ಅವಶ್ಯ ಸಫಲನಾಗುವೆ"—ಎಂಬಿದೇ ಗಾಂಧೀಜಿಯವರ ಉಪದೇಶದ ಅವಿಸ್ಮರಣೀಯ ವಾಕ್ಯ.

ಎನ್. ಸಿ. ಸಿ. ದಳದ ವಿದ್ಯಾರ್ಥಿನಿಯರು ಟೆಲಿಫೋನ್ ವಿನಿಮಯ ಕೇಂದ್ರದಲ್ಲಿ ಕೆಲಸ ಕಲಿಯುತ್ತಿರುವ ದೃಶ್ಯ.

● ಅಮೃತ ಬಿಂದು ●

ಹೆಚ್ಚು ವಿಷಯಗಳ ಬಗ್ಗೆ ಒಬ್ಬನು ನಾಚಿಕೆ ಪಡಬೇಕಿದ್ದಷ್ಟೂ ಆತನು ಹೆಚ್ಚು ಗೌರವಾರ್ಹನಾಗಿರುತ್ತಾನೆ.

o o o

ಗಂಡಿ ಕೊಡೆಯುತ್ತಾ ಹೋಗುವವನಿಗೆ ಗುಂಡಿಗೆ ಬೀಳುವ ಭಯ ಹೆಚ್ಚು

o o o

ಭೂಮಿ ಎಷ್ಟೇ ತಿರುಗಲಿ, ಹೇಗೇ ಸುತ್ತಲಿ, ಸೂರ್ಯ ಮೂಡುವದನ್ನು ತಡೆಹಿಡಿಯಲಾರದು.

o o o

ಮುಖ ಕುರೂಪವಾಗಿದ್ದರೆ ಚಿಂತೆ ಇಲ್ಲ, ಆದರೆ ಮನ ಕುರೂಪವಾಗಿರಬಾರದು.

o o o

ವಿನಾಶದ ವಿಜ್ಞಾನವೇ ಯುದ್ಧನೆಂದು ಕರೆಯಲ್ಪಡುವುದು

o o o

ಒಳ್ಳೆ ಯುದ್ಧವೆಂಬುದಿಲ್ಲ, ಹಾಗೆಯೇ ಕೆಟ್ಟ ಶಾಂತಿ ಎಂಬುದೂ ಇಲ್ಲ.

o o o

ಜಾಣರಿಂದ ತಿಳಿಗೇಡಿಗಳು ಕಲಿಯುವದಕ್ಕಿಂತಾ ಹೆಚ್ಚು ಜಾಣರು ತಿಳಿಗೇಡಿಗಳಿಂದ ಕಲಿಯುತ್ತಾರೆ.

o o o

ಹಿಡಿತವಿಲ್ಲದ ಬಾಲ್ಯ ಹಿಡಿತ ತುಂಬಿದ ವೃದ್ಧಾಪ್ಯವನ್ನು ತರುತ್ತದೆ.

o o o

ನಲುವತ್ತು ಯೌವನದ ವೃದ್ಧಾಪ್ಯ, ಐವತ್ತು ವೃದ್ಧಾಪ್ಯದ ಯೌವನ.

o o o

ನಿಂತ ನೀರಿನಲ್ಲಿ ಕೊಳೆ ಹೆಚ್ಚುವಂತೆ ಅಭಿಪ್ರಾಯ ಬದಲಾಯಿಸದವನ ಮನದಲ್ಲಿ ವಿಷ ಬೆಳೆಯುತ್ತದೆ.

o o o

ಅಭಿಪ್ರಾಯಗಳ ಹಿಡಿತಕ್ಕೊಳಗಾದವನು ಹಠವಾದಿ. ಅಭಿಪ್ರಾಯಗಳನ್ನು ಹಿಡಿತದಲ್ಲಿಟ್ಟವನು ನ್ಯಾಯವಾದಿ

o o o

ಸದುಪಯೋಗವಾದ ಹುಚ್ಚನ್ನು ಜ್ಞಾನ ಯಾ ಅರಿವೆಂದು ಕರೆಯುತ್ತಾರೆ.

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ.
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಿಗಳು,
ಫಾರ್ಮುಗಳು
ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ
ಅತ್ಯಂತ ಪ್ರಯೋಜನಕಾರಿ ಪುಸ್ತಕ—
ಮನೆ-ಮದ್ದು
(HOME REMEDIES)
ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್. ಐ. ಎಮ್.
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೇಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು
ನವಭಾರತ ಪುಸ್ತಕ ಭಂಡಾರ, ಉಡುಪಿ.

ಕಮ್ಯುನಿಸ್ಟ್ ಚೀನಾದಲ್ಲಿ ಅಣುಗುಂಡು

(೩ನೇ ಪುಟದಿಂದ)

ಧವಾ, ಅವರು ಹಾರಿಸುತ್ತಾರೆಯೋ ಎಂದು ಕೇಳುವದರಲ್ಲೇನೂ ಅರ್ಥವಿರುವದಿಲ್ಲ. ಪ್ರಶ್ನೆ ಯಾವದೆಂದರೆ ಅವರೆಂದು ಹಾರಿಸಬಹುದೆಂಬುದು ಮಾತ್ರ.

ಕೆಲ ಅಂಕೆ-ಸಂಖ್ಯೆಗಳ ಆಧಾರದಿಂದ ಸಾಧಾರಣ ಮಟ್ಟಿಗೆ ಆ ಕೊನೆಯ ಪ್ರಶ್ನೆಗೆ ಉತ್ತರ ಕೊಡಬಹುದು. ೧೯೬೦ರಲ್ಲಿ ಚೈನಾದಲ್ಲಿ ೨,೧೦,೦೦೦ ಯಂತ್ರಶಾಸ್ತ್ರ ವಿಶಾರದರಿದ್ದರು. ಜನರಲ್ ಇಲೆಕ್ಟ್ರಿಕಿನ ಯಂತ್ರಶಾಸ್ತ್ರ ಸೈನಿಕ ಯೋಜನಾ ವಿಭಾಗದ ಜೋನ್ ಬರ್ಬರ್ಟ್‌ರ ಅಭಿಪ್ರಾಯ ಈ ರೀತಿ ಇದೆ: —ಅಣುಗುಂಡು ತಯಾರಿಕೆಗೆ ೧,೩೦೦ ಯಂತ್ರಶಾಸ್ತ್ರಜ್ಞರು ಸಾಕು. ಚೈನಾದಲ್ಲಿ ೪೪,೦೦೦ ವಿಜ್ಞಾನಿಗಳಿದ್ದಾರೆ. ಅದರಲ್ಲಿ ಅಣುಗುಂಡು ರಚನೆಗೆ ೫೦೦ ವಿಜ್ಞಾನಿಗಳು ಸಾಕು. ಈ ವಿಜ್ಞಾನಿಗಳಲ್ಲಿ ಹೆಚ್ಚಿನವರು ಅಮೇರಿಕ, ಬ್ರಿಟಿಷ್ ಹಾಗೂ ಫ್ರೆಂಚ್ ವಿಶ್ವವಿದ್ಯಾಲಯಗಳಲ್ಲಿ ಪದವೀಧರರಾದವರೇ ಇದ್ದಾರೆ. ಅವರು ಅಲ್ಲಿ ಯಾವ ವಿಷಯಗಳನ್ನು ಅಭ್ಯಾಸಿಸಿರುವರೆಂಬುದನ್ನು ಪರಿಶೀಲಿಸಿದಲ್ಲಿ ಪರಮಾಣು ಹಾಗೂ ಅಂತಹ ವೈಜ್ಞಾನಿಕ ವಿಷಯಗಳನ್ನೂ ಯುರೇನಿಯಮಿನ ಕುರಿತೂ ಅಭ್ಯಾಸ ನಡೆಸಿರುವರೆಂಬುದು ಗೊತ್ತಾಗುತ್ತದೆ.

ಗುಂಡು ತಯಾರಿಕೆಗೆ ಬೇಕಾಗಿರುವ ಮುಖ್ಯ ಕಚ್ಚಾವಸ್ತು ಯುರೇನಿಯಂ ಲೋಹವು ಹೇರಳವಾಗಿ ಸಿಂಕಿಯಾಂಗ್, ತ್ರಿವಿಷ್ಟಪ ಹಾಗೂ ಸ್ಜೆಚುವಾ ಪ್ರಾಂತ್ಯಗಳಲ್ಲಿ ಸಿಗುತ್ತದೆ. ಎಲ್ಯೂಮಿನಿಯಂ, ಗ್ರೈಫೈಟು ಹಾಗೂ ಬೇಕಾದಷ್ಟು ಸಿಮೆಂಟು, ಅಲ್ಲದೆ ತಣ್ಣಗಾಗಿಸಲು ಹೇರಳ ನೀರೂ ಅಲ್ಲಿ ಸಿಗುತ್ತವೆ. ರಾಸಾಯನಿಕ ಪದಾರ್ಥಗಳ ಅಭಾವವೂ ಅಷ್ಟೇನೂ ಅಲ್ಲಿಲ್ಲ. ಅಲ್ಲಿ ಅಭಾವ ಇರುವದಾದಲ್ಲಿ ನಿಕ್ಕಲು ಹಾಗೂ ಕ್ರೋಮಿಯಂ ಲೋಹಗಳಿಗೆ ಇದೆ. ಅವುಗಳನ್ನು ನೆರೆಯ ಕಮ್ಯೂನಿಸ್ಟ್ ರಾಷ್ಟ್ರಗಳಿಂದಾಗಲೀ, ಪಾಶ್ಚಾತ್ಯ ರಾಷ್ಟ್ರಗಳಿಂದಾಗಲೀ ಆಮದು ಮಾಡಿಕೊಳ್ಳಬಹುದು.

ಯುರೇನಿಯಮಿನಿಂದ ಪ್ಲುಟೋನಿಯಂ ತಯಾರಿಸಲು ಬೇಕಾಗುವ ಉಪಕರಣಗಳೇ ಮುಖ್ಯ ಹಾಗೂ ಆರಂಭಿಸಲು ಬೇಕಾಗುವ ಯಂತ್ರಗಳಿವೆ. ಅದನ್ನು ಚೈನಾವು ರಷ್ಯಾದ ಸಹಾಯದಿಂದ ೧೯೫೮ರಲ್ಲೇ ಪೆಕಿಂಗನಲ್ಲಿ ಜೋಡಿಸಿಕೊಂಡಿರುತ್ತದೆ. ನಾಗಸಕಿಯ ಮೇಲೆ ಹಾಕಲಾಗಿರುವ ಗಾತ್ರದ ಗುಂಡನ್ನು ತಯಾರಿಸಲು ಬೇಕಾಗುವಷ್ಟು ಪ್ಲುಟೋನಿಯಂ ಉಂಟುಮಾಡಲು ಆ ಯಂತ್ರಕ್ಕೆ ಕೇವಲ ಎರಡು ವರ್ಷ ಸಮಯ ಸಾಕು. ಇತ್ತೀಚಿಗೆ ಬಂದಿರುವ ವರದಿಗಳ ಪ್ರಕಾರ ಕೊನೆಯ ಪಕ್ಷ ಇನ್ನೂ ಮೂರಾದರೂ ಅಂತಹ ಯಂತ್ರಾಲಯಗಳು ಚೈನಾದಲ್ಲಿವೆ— ಅವು ಕ್ರಮಶಃ ವೆಯಿ ನದಿ ಬಳಿ ಇರುವ ಸಿಯಾನ್, ಹಳದಿ ನದಿ ಬಳಿ ಇರುವ ಚುಂಗ್‌ಕಿಂಗ್ ಹಾಗೂ ಮೂರನೆಯದು ಮಂಚೂರಿಯಾಗಲ್ಲಿವೆ. ಇವೆಲ್ಲಾ ಸರಿಯಾದ ರೀತಿಯಲ್ಲಿ ಕಾರ್ಯ ಮಗ್ನವಾಗಿನೆಯಾದಲ್ಲಿ ಹಲವಾರು ಗುಂಡುಗಳನ್ನುಂಟುಮಾಡಲು ಬೇಕಾಗುವಷ್ಟು ಸಿಡಿಮದ್ದುಗಳನ್ನು ಅವು ಸಿದ್ಧಮಾಡಿಟ್ಟುಕೊಂಡಿವೆ.

ಹಣವು ಇನ್ನೊಂದು ಪ್ರಶ್ನೆ ಇದೆ, ನಂತರದ ಅವಶ್ಯಕತೆ ಇದೆ. ಅವಿಗ್ನಾನ್ ಪ್ರದೇಶದಲ್ಲಿರುವ ಫ್ರಾನ್ಸಿನ ಪ್ಲುಟೋನಿಯಂ ಯಂತ್ರಸ್ಥಾಪನೆಗೆ ಎರಡು ವರ್ಷಕಾಲ ಬೇಕಾಯಿತು. ಮತ್ತು ಬಿರುಕು ಗುಂಡು ಕಾರ್ಯಕ್ರಮಕ್ಕೆ ಪ್ರತೀ ವರ್ಷವೂ ಫ್ರಾನ್ಸಿಗೆ ನಾನೂರು ಮಿಲಿಯ ಡಾಲ್ಲರುಗಳು ಖರ್ಚಾಗುತ್ತಿವೆ. ಚೈನಾದ ಒಟ್ಟು ರಾಷ್ಟ್ರೀಯ ಉತ್ಪಾದನೆಯು ೧೯೫೭ರಲ್ಲಿ ಐವತ್ತು ಬಿಲಿಯನ್ ಡಾಲ್ಲರುಗಳು. ಫ್ರಾನ್ಸಿನ ಖರ್ಚಿನೊಂದಿಗೆ ಹೋಲಿಸಿ ನೋಡುವಾಗ ಚೈನಾಕ್ಕೆ ಅದರ ಒಟ್ಟು ರಾಷ್ಟ್ರೀಯ ಉತ್ಪಾದನೆಯ ಶೇಕಡಾ ಒಂದು ಪಾಲೂ ಬೇಕಾಗಿರುವದಿಲ್ಲ. ಈಗಿನ ಕಮ್ಯುನಿಸ್ಟ್ ಚೈನಾದ ಚಿತ್ರವನ್ನು ಕೆಲವರು ಮುಂದಿಡಬಹುದು. ಬರಗಾಲಕ್ಕೆ ಅಲ್ಲಿ ಬರಗಾಲ ಇಲ್ಲದಿರಬಹುದು. ಆದರೆ ಒಂದು ವಿಷಯವನ್ನು ಮಾತ್ರ ಯಾರೂ ಮರೆಯುವಂತಿಲ್ಲ—ಅದು ಅಲ್ಲಿರುವ ಸರಕಾರದ ಕುರಿತು ಇದೆ. ಅಲ್ಲಿಯ ಸರಕಾರದ ಬಳಿ ಎಲ್ಲಾ ಅಧಿಕಾರವೂ ಕೇಂದ್ರೀಕೃತವಾಗಿದೆ. ಜನತೆಗೆ ಬೆವರನ್ನು ಸುರಿಸಿಯೂ ಉಳಿಸಿದ ಹಣದಿಂದ ಅದು ಅಣುಗುಂಡು ಸಿದ್ಧತೆಗೆ ಮುಂದರಿಯುವದರಲ್ಲಿ ಸಂದೇಹ ಪಡಬೇಕಾಗಿರುವದಿಲ್ಲ ಆದುದರಿಂದ ಇಂದಿನ ಬರಗಾಲ, ಕಮ್ಯೂನ್‌ಗಳು ಸರಿಯಾಗಿ ಪ್ರತಿಫಲಕೊಡದಿರುವದು ಅಥವಾ ರಷ್ಯಾದ ಅಡ್ಡಗಾಲು ಮುಂತಾದ ಮಾತುಗಳಿಗದೇನೂ ಬೆಲೆ ಇರುವದಿಲ್ಲ. ಅಲ್ಲಿ ಅಷ್ಟು ಕಷ್ಟಗಳಿದ್ದರೂ ಇಂದೂ ಚೈನಾವು ಅರ್ಧಬಿಲಿಯನ್ ಡಾಲ್ಲರು ಬೆಲೆ ಬಾಳುವಷ್ಟು ಆಹಾರ ಧಾನ್ಯಗಳನ್ನು ಪರದೇಶಕ್ಕೆ ಮಾರುತ್ತಿದೆ.

ಚೈನಾ ಅಣ್ವಸ್ತ್ರಗಳನ್ನು ಹೊಂದುವದೆಂದರೆ ಅದರ ಸ್ಥಿತಿಗತಿಯು ಒಂದು ಚಿಹ್ನೆ ಇದೆ. ಚೈನಾದ ಬಳಿ ಇದ್ದರೇನು? ರಷ್ಯಾದಲ್ಲಿ ಇಲ್ಲವೇ? ಈ ರೀತಿಯ ಪ್ರಶ್ನೆಗಳನ್ನು ಕೆಲವರು ಕೇಳಬಹುದು. ಇತ್ತೀಚಿಗಿನ ಆಧುನಿಕ ಸಲಕರಣೆಗಳನ್ನು ಚೈನಾಕ್ಕೆ ರಷ್ಯಾವು ಒದಗಿಸಿರುತ್ತದೆ. ಆದರೆ ಅದು ರಕ್ಷಣೆಯ ದೃಷ್ಟಿಯಿಂದ ಮಾತ್ರವಿದೆ. ನಾಶದ ದೃಷ್ಟಿಯಿಂದ ಅದೇನನ್ನೂ ಕೊಟ್ಟಿರುವದಿಲ್ಲ. ಅಣ್ವಸ್ತ್ರ ನಾಶಕ್ಕಾಗಿ ಇದೆ. ಆದುದರಿಂದ ಇದು ವರೆಗೂ ರಷ್ಯಾವು ಚೈನಾಕ್ಕೆ ಅಣ್ವಸ್ತ್ರಗಳನ್ನೊದಗಿಸಿರುವದಿಲ್ಲ ಕೆಲ ರೀತಿಯ ಅಣ್ವಸ್ತ್ರಗಳನ್ನು ರಷ್ಯಾವು ಇತರ ರಾಷ್ಟ್ರಗಳಿಗಾದರೂ ರಫ್ತು ಮಾಡುತ್ತದೆ, ಚೈನಾಕ್ಕೆ ಇತ್ತಿರುವದಿಲ್ಲ. ಚೈನಾದ ಮೇಲೆ ರಷ್ಯಾಕ್ಕೆನೇ ನಂಬಿಕೆ ಇರುವದಿಲ್ಲ. ಅದು ಐಗುಪ್ತಕ್ಕೆ ಗುಂಡು ಹಾಕುವ ಜೆಟ್ ಬೇಜರನ್ನು ಕೊಟ್ಟಿರುತ್ತದಾದರೂ ಚೈನಾಕ್ಕೆ ಕೊಟ್ಟಿರುವಿಲ್ಲ.

ಚೈನಿಯರು ಅಣುಗುಂಡು ಹಾಕುವ ಯಂತ್ರ ರಚಿಸುವದರಲ್ಲೂ ಬಹಳ ಮುಂದುವರಿದಿರಬಹುದು. ಕೆಲವೆಡೆಗಳಲ್ಲಿ ಅವುಗಳ ಪ್ರಯೋಗ ನಡೆಸಿರುವ ವರದಿಗಳೂ ಬಂದಿರುತ್ತವೆ. ಹೀಗೆ ಕ್ರಮಶಃ ಅವರು ಮುಂದಿದು ಅಣುವಾಹಕ ಯಂತ್ರಗಳನ್ನು ಕಂಡು ಹಿಡಿಯಲು ಸಾಧ್ಯವಿದೆ.

ಮೇಲೆ ತಿಳಿಸಿರುವ ವಿಷಯಗಳೆಲ್ಲಾ ನಿಜವೆಂದಾದಲ್ಲಿ ಚೈನಾವು ಅಣ್ವಸ್ತ್ರಗಳಿಂದದೇನೂ ಮಾಡೀತೆಂಬುದರತ್ತವೂ ಗಮನ ಕೊಡಬೇಕಾಗುತ್ತದೆ. ಅದು ರಷ್ಯಾಕ್ಕೆ ಮಾತ್ರ ಸಮಸ್ಯೆಯಲ್ಲ, ಅಥವಾ ಸಂಯುಕ್ತ ರಾಷ್ಟ್ರಗಳಿಗೆ ಮಾತ್ರ ಸಮಸ್ಯೆಯಲ್ಲ, ಚೈನಾದ ನೆರೆಕರೆಯ ನಾಡುಗಳಿಗೂ ಸಮಸ್ಯೆ ಇದೆ. ರಷ್ಯಾ—ಚೈನಾ ಭಿನ್ನಾಭಿಪ್ರಾಯದ ತೆರೆಯನ್ನಿಳಿಸಿ ಸಮಸ್ಯೆಯನ್ನಡಗಿಸಲು ಕೆಲವರು ಪ್ರಯತ್ನಿಸುತ್ತಾರೆ. ಆದರೆ ಇದೆಲ್ಲವೂ ಅಧಿಕಾರ—ರಾಜಕೀಯದ ಚದುರಂಗದಾಟವೆಂಬುದನ್ನಾರೂ ಮರೆಯಲು ಸಾಧ್ಯ ಇರುವದಿಲ್ಲ. ಮಾರ್ಕ್ಸ್‌ವಾದ — ಲೆನಿನ್ ವಾದಗಳಿಗೆ ತೀರಾ ವಿರುದ್ಧವಾಗಿ ಇದೆ. ಕ್ರುಶ್ಚೆಫರ ಸಹ—ಅಸ್ತಿತ್ವದ ತತ್ವವೆಂಬುದು ಚೈನಾದ ಅಭಿಪ್ರಾಯ. ಚೈನಾ ಸಹ—ಅಸ್ತಿತ್ವವನ್ನು ವಿರೋಧಿಸಲು ಕಾರಣವಿದೆ. ಸಹ ಅಸ್ತಿತ್ವವು ಕ್ರಮೇಣ ಅಣ್ವಸ್ತ್ರ ನಿರೋಧ ಒಪ್ಪಂದಕ್ಕೆ ಸಹಿ ಹಾಕಲು ಒತ್ತಾಯಿಸಬಹುದು. ಹಾಗಾದಲ್ಲಿ, ಅದು ಅಷ್ಟು ಕಷ್ಟಪಟ್ಟು ಕಟ್ಟಿರುವ ಅಣ್ವಸ್ತ್ರಾಲಯ ಕಾಸಿಗೆ ಪ್ರಯೋಜನವಿಲ್ಲದೆ ಹೋಗುತ್ತದೆ........

ಹೀಗೆ ಇನ್ನೂ ಕೆಲ ವಿಷಯಗಳ ಕುರಿತು ಶ್ರೀ ಆನಂದಮೋಹನ ಬರೆದಿರುವರು. ಈ ಮೇಲಿನ ವಿಷಯಗಳಿಂದ ಚೈನಾವು ಅಣುಗುಂಡು ತಯಾರಿಯಲ್ಲಿ ಬಹಳ ಜೋರಾಗಿ ವೇಗದಿಂದ ಮುಂದರಿಯುತ್ತದೆನ್ನುವದರಲ್ಲಿ ಸಂದೇಹವಿರುವದಿಲ್ಲ. ದೀರ್ಘವಾಗಿ ಸೂಚಿಸಿರುವ ಸ್ಥಳಗಳ ಹೆಸರನ್ನೇ ಆನಂದ ಮೋಹನ ಕೊಟ್ಟಿದ್ದಾರೆ. ತ್ರಿವಿಷ್ಟಪವನ್ನು ಕಮ್ಯುನಿಸ್ಟ್ ಕಪಿಮುಷ್ಟಿಯೊಳಗಿಟ್ಟುಕೊಳ್ಳಲು ಕಾರಣವೇನೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಅಲ್ಲದೆ ನಮ್ಮ ಉತ್ತರ ಗಡಿಯ ಕುರಿತೂ ನಾವು, ಅದು ಕಲ್ಲು—ಮುಳ್ಳಿರುವ ಪ್ರದೇಶ, ಹುಲ್ಲೂ ಬೆಳೆಯದ ನಿಷ್ಪ್ರಯೋಜಕ ಬರಡು ಭೂಮಿಯೆಂದು ಅನಾದರಣೆ ತೋರಿಸುತ್ತಿದ್ದಾಗಲೂ ಕಮ್ಯುನಿಸ್ಟ್ ಚೈನಾ ಅಲ್ಲೇ ಗೃಧ್ರದೃಷ್ಟಿ ಹಾಕಿ ಕೂತುಕೊಂಡಿರಲು ಕಾರಣವೇನೆಂಬುದೂ ಇದರಿಂದ ಸ್ಪಷ್ಟವಾಗುತ್ತದೆ.

ಅಮೇರಿಕದ ನೆರವಿನಿಂದ ಗಾಳಿ—ಕೊಡೆ ರಚಿಸಲು ಸಿದ್ಧತೆ ನಡೆದಾಗ ಇಲ್ಲಿಯ ಕಮ್ಯುನಿಸ್ಟರೂ ಅವರ ಸಹಚರರೂ ಹಾಹಾಕಾರ ಗೊಂದಲವೆಬ್ಬಿಸಿದರು ಆ ಯೋಜನೆಯನ್ನು ಬಿಟ್ಟುಕೊಡಬೇಕಾಯಿತು. ಚೈನಾ ಅಣ್ವಸ್ತ್ರ ತಯಾರಿಸುವುದಕ್ಕೂ ನಾವು ಅಣ್ವಸ್ತ್ರ ತಯಾರಿಸುವದಿರಲಿ, ಅಣ್ವಸ್ತ್ರ ನಿರೋಧಕ ಅಸ್ತ್ರಗಳನ್ನು (ಉಪಕರಣಗಳನ್ನು) ಪಡೆಯುವದನ್ನು ಇಲ್ಲಿಯ ಕಮ್ಯುನಿಸ್ಟರು ತಡೆಯುವದಕ್ಕೂ ಇರುವ ಸಾಮೀಪ್ಯ ಯೋಚಿಸಿದವರಿಗೆ ಗೊತ್ತಾದೀತು.

ಚೈನಾ ಹಣದ ಪ್ರಶ್ನೆಯನ್ನು ತೀರಿಸಿಕೊಳ್ಳಲು ಕೀಳ್ಮಟ್ಟಕ್ಕೂ ಇಳಿಯಲು ಹೇಸುವುದಿಲ್ಲ. ಅದು ಚೈನೀಯೇತರರ ಸೊತ್ತುಗಳನ್ನು ವಶಪಡಿಸಿಕೊಂಡಿರುತ್ತದೆ, ಇತರ ದೇಶಗಳಲ್ಲಿರುವ ಚೈನೀಯರು ಕಳುಹಿಸಿರುವ ಹಣವನ್ನು ಸ್ವಂತ ಖರ್ಚಿಗೆ ಉಪಯೋಗಿಸಿಕೊಳ್ಳುತ್ತದೆ. ಅದೇನೇ ಇರಲಿ, ನಮ್ಮ ಪರಿಸ್ಥಿತಿ ಹೇಗಿದೆ?

—ಶಿವಶಂಕರ

ಅಸ್ತಮಾ ರೋಗಿಗಳ ತಿಳುವಳಿಕೆಗೆ

ರಿಜಿಸ್ಟ್ರಿಯಾದ ಚಿತ್ರಕೋಟ್ ಅಸ್ತಮಾ ನಿವಾರಕಬೂಟಿಯನ್ನು ತಾ. 1-11-63ನೇ ಹುಣ್ಣಿಮೆ ರಾತ್ರಿ ಮೀನಿನೊಂದಿಗೆ ಸೇವಿಸುವದರಿಂದ ಅಸ್ತಮಾ, ನೇಮಸ, ಕೆಮ್ಮು ನೆಗಡಿ ನಿವಾರಣೆಯಾಗುತ್ತದೆ. ಕೂಡಲೇ ಹುಣ್ಣಿಮೆಯ ಮೊದಲೇ ಬರೆಯಿರಿ.

Manager, Shri Mahatma Naga
Baba Ayurvedashram,
P. O. Chitrakot U. P.

ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ.
14 CT ಚಿನ್ನದ ಆಭರಣಗಳಲ್ಲಿ 58⅓% ಶುದ್ಧ ಪುತ್ಥಳಿ ಚಿನ್ನ ಇರುತ್ತದೆ.
ಬೇಡದಿದ್ದಲ್ಲಿ 1 ರೂ. ಕಮ್ಮಿಯಲ್ಲಿ ಯಾವಾಗಲೂ ಬಜಾರು ಧಾರಣೆಗೆ ಪಡಕೊಳ್ಳುವ ಭರವಸೆ ಕೊಡುತ್ತೇವೆ.

ವಿ. ಸೂ ಹಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡಕೊಳ್ಳುವರೆ ಸರಕಾರದ ಲೈಸನ್ಸ್ ಸಿಕ್ಕಿರುತ್ತದೆ.

ಮದುವೆ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡಕೊಂಡು ಖಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.

ಶ್ರೀ ಕೃಷ್ಣಾ ಜ್ಯುವೆಲರಿ ಮಾರ್ಟ್

ತೆಂಕಪೇಟೆ — ಉಡುಪಿ.

ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.

ಫೋನ್ ನಂಬ್ರ: 66



ಕುಮಾರಿ ಬಿಲ್ಲೆಗಳು

(ರಿಜಿಸ್ಟರ್ಡ್ Regd.)

ಪ್ರಕೃತಿಯು ವಿಫಲಗೊಂಡಾಗ ಉಂಟಾಗುವ ಕಾತರ ನಿವಾರಣೆಗೆ ಸಮಯೋಚಿತವಾದ ಆಯುರ್ವೇದೀಯ ಮಿಶ್ರಣ।
ಟ್ಯೂಬ್ 1ರ ಸಾಮಾನ್ಯ ರೂ. 4/. ಮಧ್ಯಮ ರೂ. 6/ ಉತ್ತಮ ರೂ. 9/.

P. Devee & Co. (N. J.) Calcutta—40.

ಸ್ಟಾಕಿಸ್ಟರು — ರಾಜಾ ಮೆಡಿಕಲ್ ಹಾಲ್, ಬೆಂಗಳೂರು ಕೆಂಟೋನ್‌ಮೆಂಟ್; ಕುಮ್ಟಾ ಫಾರ್ಮಸಿ, ಕುಮ್ಟಾ (ಉ. ಕ.)

ಸೂಚನೆ

'ನವಯುಗ"ದಲ್ಲಿ ಪ್ರಕಟನೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದಗಳ ಒಂದೇ ಮಗ್ಗುಲಿನಲ್ಲಿರಬೇಕು. ಸುವಾಚ್ಯವಾಗಿಯೂ ಇರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ

ಗಜಪತಿ ನಂದಿನಿ

(೨ನೇ ಪುಟದಿಂದ)

ದೃಶ್ಯ ೧೬—ಬೀದಿ.

(ರಾತ್ರಿ ಬೈರಾಗಿ ರೂಪಸಿಂಗನು ನಾಲ್ವರು ಯವನ ಸೇವಕರೊಂದಿಗೆ ಪ್ರವೇಶಿಸುವನು.)

ಸೇವಕರಲೊಬ್ಬ— ಬೈರಾಗ್‌ಜೀ, ಇನ್ನೆಷ್ಟು ದೂರವಿದೆಯೋ ಆ ಶಿವನ ಗುಡಿಗೆ?

ಬೈರಾಗಿ — ಅಕೋಕೋ! ಬಂತ್ ಬಂತು, ಬನ್ನಿ ಬನ್ನೀ, (ಸ್ವಲ್ಪ ಮುಂದೆ ಹೋಗಿ ದೊಡ್ಡದಾಗಿ ಕೆಮ್ಮುವನು)

ಇನ್ನೊಬ್ಬ:— ಏನಾಯ್ತಯ್ಯ ಬೈರಾಗಿ?

ಮತ್ತೊಬ್ಬ:— ಗಂಟಲಿಗೆ ನುಸಿಗಿಸೀ ಹೊಕ್ಕಿತೋ?

ಬೈರಾಗಿ:— ಔದಂದ್ರೇ ಸುಡುಗಾಡು. ಗುಂಗಾಡು—ಉಂ ಬನ್ನಿ ಬನ್ನೀ—(ಎರಡು ಹೆಜ್ಜೆಯಿಟ್ಟು, ಗಡಕ್ಕನೆ ನಿಲ್ಲುವನು. ಎರಡು ಬದಿಗಳಿಂದಲೂ ಕೆಲವು ಮಂದಿ ಹಿಂದೂ ಸೈನಿಕರೂ ಜಯರಾಂನೂ ಪ್ರವೇಶಿಸುವರು.)

ಯವನ ಸೇವಕರು—ಅರರರೇ! ದಗಲ್ಬಾಜ್! ಬಡೇ ದಗಾರೀ!

ಜಯರಾಂ— ಹಿಂದೂಸೈನಿಕರು— ಜೈಕರ್ನಾಟಕಚಕ್ರವರ್ತಿಗೆ!

(ಯವರನ್ನು ಹಿಂದೂ ಸೈನಿಕರು ಸೆರೆಹಿಡಿಯುವರು.)

ಬೈರಾಗಿ—ಜಯರಾಂಜೀ ನನ್ನ ಹಿಂದೆ ಬನ್ನಿ. ದುರ್ಗದ ಗುಪ್ತ ಮಾರ್ಗವು ಸಿಕ್ಕಿ ಬಿಟ್ಟಿತು. ನಡೆಯಿರಿ, ದುರ್ಗವನ್ನು ವಶಪಡಿಸಿಕೊಳ್ಳಿ! ನೀಚನನ್ನು ಸೆರೆಹಿಡಿಯಿರಿ. ಜೈಕರ್ನಾಟಕಭುವನೇಶ್ವರೀ!

ಎಲ್ಲರೂ— ಜೈ ಭುವನೇಶ್ವರಿ!(ಹೋಗುವರು)

ದೃಶ್ಯ ೧೭

ಮುದಗಲ್‌ದುರ್ಗದೊಳಗೆ ಸಭಾರಂಗ

(ಕೃಷ್ಣದೇವರಾಯನು ಆಸನಾಸೀನನಾಗಿರುವನು. ಆತನ ಒಂದು ಬದಿಯಲ್ಲಿ ರೂಪಸಿಂಗನೂ, ಇನ್ನೊಂದು ಬದಿಯಲ್ಲಿ ತಿಮ್ಮರಸನೂ, ಮತ್ತು ಕ್ರಮವಾಗಿ ಇತರ ಸೇನಾಧೀಶರೂ ಕುಳಿತಿರುವರು. ಸೈಯುದ್ ಮರ್ಕಾರ ಸೆರೆಯಾಳಾಗಿ ಸೇವಕರ ಮಧ್ಯದಲ್ಲಿ ನಿಂತಿರುವನು.)

ತಿಮ್ಮರಸು— (ಎದ್ದುನಿಂತು) ಮಾನ್ಯ ಸಭಾಸದರೇ, ಇಂದು ಈ ಮುದಗಲ್ ದುರ್ಗವನ್ನು ಬಹಳ ಉಪಾಯದಿಂದ ಅತೀ ಸುಲಭವಾಗಿ ಸಾಧಿಸಿಕೊಟ್ಟ ಕೀರ್ತಿ ಈ ಹೊಸ ವೀರರಾದ ರೂಪಸಿಂಗರಿಗೆ ಸೇರಿದೆ. ಇವರು ತಮಗಾರೂ ದಿಕ್ಕಿಲ್ಲವೆಂದು ಹೇಳುತ್ತಾರೆ. ಏನೋ ಸಾಹಸವನ್ನು ತೋರಿ ಪದವಿಯನ್ನು ಸಂಪಾದಿಸಲು ಬಂದಿದ್ದರು. ಈಗ ಈ ಧೀಮಂತ ಪುರುಷರನ್ನು ಗೌರವಿಸುವುದಕ್ಕೆ ಮೊದಲು, ಮಹಾ ರಾಜರು ಅಪರಾಧಿಗಳ ತೀರ್ಮಾನ ಮಾಡುವರು.

ಕೃಷ್ಣದೇವ— ಹೌದು ಈ ಮುದಗಲ್ ದುರ್ಗಕ್ಕೆ ನಮ್ಮ ಲಕ್ಷ್ಯ ಸೆಳೆದವನು ಈ ಸೈಯುದ್ ಮರ್ಕಾರ್. ಈತನು ಹಿಂದೆ ಚೆಲೋ ಅರಬ್ಬೀ ಕುದುರೆಗಳನ್ನು ತಂದು ಕೊಡುವುದಾಗಿ ಹೇಳಿ ನಮ್ಮಿಂದ ನಲುವತ್ತು ಸಾವಿರ ವರಹಗಳನ್ನು ಅಪಹರಿಸಿಕೊಂಡು ಹೋದ ಕಳ್ಳ. ಈಗ ಮೋಸದಿಂದ ಗುತ್ತಿ ದುರ್ಗವನ್ನು ಪ್ರವೇಶಿಸಿ ಅನಾಚಾರವೆಸಗಿದ ಮಹಾ ಚೋರ. ತನ್ನ ಉತ್ತಮ ಪತ್ನಿಯನ್ನು ಕೊಲೆ ಮಾಡಿದ ಘಾತಿ! ಇವನ ನೀಚತನಗಳನ್ನು ನಾವು ಕಣ್ಣಾರೆ ಕಂಡಿದ್ದೇವೆ. ಇವನಿಗೆ ಅಜನ್ಮ ಆನೆಗೊಂದಿಯ ಸೆರೆಮನೆಯ ವಾಸವನ್ನು ವಿಧಿಸಿದ್ದೇವೆ. (ಸೇವಕರು ಸೈಯುದನನ್ನು ದರದರನೆ ಎಳೆದುಕೊಂಡು ಹೋಗುವರು.) ಇನ್ನು ಯುಕ್ತಿಶಾಲಿಯಾದ ಚತುರ ರೂಪಸಿಂಗನಿಗೆ ಪ್ರತಿಫಲವಾಗಿ ಎರಡು ಬಹುಮಾನಗಳನ್ನು ಕೊಡುತ್ತೇನೆ ಒಂದು ಈ ಮುದಗಲ್ ದುರ್ಗಾಧಿಪತ್ಯ. ಇದು ರೂಪಸಿಂಗನಿಗೇ ಜಹಗೀರಾಗಿರಲಿ. ಎರಡನೆಯದು— ನಾನು ಒಂದು ಪ್ರತಿಜ್ಞೆ—

ತಿಮ್ಮರಸು— (ಧಿಗ್ಗನೆದ್ದು) ರಾಜಕೀಯ ರಹಸ್ಯವನ್ನು ಈಗಲೇ ಮುರಿಯಬಾರದು ಪ್ರಭು.

ಕೃಷ್ಣ—ಹೋ, ಮರೆತೆನು. ಆ ಎರಡನೆಯ ಬಹುಮಾನವು ರಾಜಕೀಯ ರಹಸ್ಯಗಳ ನಡುವೆ ಹುದುಗಿದೆ. ರೂಪಸಿಂಗ್, ಹೀಗೆಬಾ- (ರೂಪಸಿಂಗ್ ಎದ್ದು ರಾಯನ ಬಳಿಗೆ ಬರುವನು. ರಾಯನು ಅವನ ಕಿವಿಯಲ್ಲಿ ಏನೋ ಹೇಳುವನು. ರೂಪಸಿಂಗ್ ಅಚ್ಚರಿದೋರಿ ಕೃತಜ್ಞತೆ ಸೂಚಿಸುವನು.) ಈಗ ರೂಪಸಿಂಗನು ಮುದಗಲ್ ದುರ್ಗಾಧಿಪ. ರೂಪಸಿಂಗ್, ನಾವು ಕಟಕಪುರಿಗೆ ಹೋಗಿ ನಿನ್ನನ್ನು ಕರೆಕೊಳ್ಳುವೆವು.

ರೂಪಸಿಂಗ್— (ರಾಯನಿಗೆ ನಮಸ್ಕರಿಸುತ್ತ) ಸಾರ್ವಭೌಮರ ದಯೆ ಈ ದೀನ ಸೇವಕನ ಮೇಲೆ ಅಪಾರ ವಾಯಿತು.

(ಮುಂದುವರಿಯುವದು)

ಆದರ್ಶ ಚರಿತೆಗಳು—೮

ಮಹಾತ್ಮ ಸೋಲನ್

ಶ್ರೀ ಎಸ್. ಎಂ. ಶೆಟ್ಟಿ, ಶಿವಮುಂಜೆ ಪರಾರಿ.

ಗ್ರೀಕ್ ದೇಶದ ಎಥೆನ್ಸ್ ನಗರದಲ್ಲಿ ಮಹಾತ್ಮಾ ಸೋಲನ್ ಅವರ ಜನ್ಮ ತಳೆದರು ಅವರು ಅಲ್ಲಿಯ ಒಬ್ಬ ಪ್ರಸಿದ್ಧ ರಾಜನೀತಿಜ್ಞರಾಗಿದ್ದರು.

ಇವರ ತಂದೆಯವರು ಬಹಳ ದುಂದುಗಾರನಾಗಿದ್ದರು. ಮನೆಯಲ್ಲಿ ಊಟಕ್ಕೂ ತಾಪತ್ರಯವಿತ್ತು. ತನ್ನ ಹೊಣೆಯನ್ನರಿತ ಸೋಲನ್ ಅವರು ವ್ಯಾಪಾರವನ್ನು ಆರಂಭಿಸಿದರು. ಮುಖ್ಯತಃ ಅವರು ವಿದೇಶದಲ್ಲಿ ವ್ಯಾಪಾರ ಬೆಳೆಸಿದರು.

ಯುವಕರಾಗಿದ್ದಾಗ ಸೋಲನರು ಕವಿಯ ರೂಪದಲ್ಲಿ ತುಂಬಾ ಪ್ರಖ್ಯಾತಿಯನ್ನು ಗಳಿಸಿದ್ದರು. ಮೊದಮೊದಲು ಅವರು ಪ್ರೇಮ ಗೀತೆಗಳನ್ನು ಬರೆಯುತ್ತಿದ್ದರು ಆದರೆ ಅನಂತರ ದೇಶ ಭಕ್ತಿಯ ಹಾಗೂ ಉಪದೇಶ ಪೂರ್ಣ ಕವಿತೆಗಳನ್ನು ರಚಿಸತೊಡಗಿದರು. 'ಸಲಾಮಿಸ್' ಎಂಬ ದ್ವೀಪವು ಎಥೆನ್ಸ್ ರಾಜ್ಯದ ಕೈಯಿಂದ ತಪ್ಪಿಸಿ ಹೋಗಿತ್ತಲ್ಲದೆ ಆ ರಾಜ್ಯದ ಕುರಿತು ಮಾತಾಡುವುದೂ ಅಪರಾಧವೆಂದು ಶಾಸನವಾಗಿತ್ತು. ಸೋಲನರು ಹುಚ್ಚನಂತೆ ವರ್ತಿಸಿ ಸಲಾಮಿಸ್ ದ್ವೀಪವನ್ನು ಹಿಂದೆ ತೆಗೆದುಕೊಳ್ಳಬೇಕೆಂಬ ಉತ್ಸಾಹಪೂರ್ಣ ಕ್ರಾಂತಿಕಾರೀ ಪದ್ಯವೊಂದನ್ನು ರಚಿಸಿ ಜನತೆಯ ಮುಂದೆ ಓದಿ ತೋರಿಸಿದರು. ಫಲಸ್ವರೂಪವಾಗಿ ಸಲಾಮಿಸ್ ದ್ವೀಪವು ಸೋಲನರ ಪ್ರಾಂತವಾದ ಎಟಿಕಾದ ಕೈ ವಶವಾಯಿತು.

ಎಟಿಕಾದ ಶಾಸನ ವ್ಯವಸ್ಥೆಯಿಂದ ಜನತೆಯು ಅಸಂತುಷ್ಟವಾಗಿತ್ತು. ಹಿರಿಕಿರಿಯರೆಲ್ಲರೂ ಕೂಡಿ ಸೋಲನರನ್ನು ಉಚಿತರನ್ನಾಗಿ ಹೊಸ ಶಾಸನ ನಿಯಮಗಳನ್ನು ರಚಿಸುವಂತೆ ಕೇಳಿಕೊಂಡರು. ಸೋಲನರು ತಯಾರಿಸಿದ ಶಾಸನ ಪ್ರಣಾಲಿಯಲ್ಲಿ ಜನತಾ ರಾಜ್ಯದ ನಿಯಮದ ಬೀಜವನ್ನು ನಾವಿಂದೂ ಕಾಣಬಹುದಾಗಿದೆ. ಆದಕ್ಕಾಗಿಯೇ ಇಂದೂ ಅವರು ಆದರಣೀಯರಾಗಿರುವರು ಆ ಸಮಯದಲ್ಲಿ ಈ ನಿಯಮಾವಳಿಯನ್ನು ಹಲವಾರ ಮಂದಿ ತಿರಸ್ಕರಿಸಿದರು. ಒಮ್ಮೆ ಈ ವಿರೋಧವು ಎಷ್ಟು ಹೆಚ್ಚಿತೆಂದರೆ ಸುಮಾರು ಹತ್ತು ವರ್ಷಗಳ ತನಕ ಅವರು ವಿದೇಶದಲ್ಲಿಯೇ ವಾಸಿಸಬೇಕಾಯ್ತು. ಆದರೆ ಎಲ್ಲೆಲ್ಲಿಗೆ ಅವರು ಹೋದರೋ ಅಲ್ಲೆಲ್ಲಾ ಅವರು ಸನ್ಮಾನವನ್ನು ಪಡೆದರು. ಒಂದೆಡೆಯಂತೂ ಅವರ ನೆನಪಿಗಾಗಿ 'ಸೋಲೀ' ಎಂಬ ನಗರವನ್ನೇ ನಿರ್ಮಿಸಲಾಯಿತು.

ವ್ಯಾಪಾರ ಸಂಬಂಧವಾಗಿ ಸೋಲನರು ಮಾಡಿದ ಸುಧಾರಣೆಯ ಫಲ ಸ್ವರೂಪವಾಗಿ ಎಥೆನ್ಸದ ವಿದೇಶೀ ವ್ಯಾಪಾರವು ಬಹು ವಿಸ್ತಾರವಾಯಿತು.

ವಿದೇಶದಿಂದ ಸೋಲನರು ಸ್ವದೇಶಕ್ಕೆ ಹಿಂತಿರುಗುವಾಗ, ಎಥೆನ್ಸದಲ್ಲಿ ಅಂತಃ ಕಲಹ ಪ್ರಾರಂಭವಾಗಿತ್ತು.

ಸೋಲನರ ಮೃತ್ಯುವಿನ ನಂತರ ಅವರನ್ನು ಸುಟ್ಟ ಭಸ್ಮವನ್ನು ಸಲಾಮಿಸ್ ದ್ವೀಪದ ಸುತ್ತಲೂ ಚೆಲ್ಲಲಾಯ್ತಂತೆ. ಜನರ ದೃಷ್ಟಿಯಲ್ಲಿ ಅವರೇ ಆ ದ್ವೀಪದ ಉದ್ಧಾರ ಕರ್ತರಾಗಿರುವರು.

ಮೂಲ: ಠಾಕೂರ್ ಸುದರ್ಶನಸಿಂಹ

ಹೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

ಜನಪ್ರಿಯವಾದ
ಗೀತೆಯ ಸಮೂಲ ಭಾಷಾಂತರ
ಇದೀಗ ಮಾರಾಟಕ್ಕೆ ಸಿದ್ಧವಾಗಿದೆ.
360 ಪುಟಗಳಿಗೂ ಮಿಕ್ಕಿದ
ಪಾಕೆಟ್ ಎಡಿಶನ್!
ದಪ್ಪವಾದ ಬಿಳಿ ನುಣುಪು ಕಾಗದ!
ಬೆಲೆ: ಸಾದಾ ಪ್ರತಿ ರೂ. ೧-೦೦
ಉತ್ತಮ ಪ್ರತಿ ರೂ. ೧-೫೦
ಅಂಚೆ ವೆಚ್ಚ ರೂ. ೦-೫೦
ಹೆಚ್ಚು ಪ್ರತಿಗಳ ದರಕ್ಕೆ ಬರೆಯಿರಿ:
ನವಯುಗ ಪ್ರೆಸ್, ಉಡುಪಿ, ದ. ಕ.

ವಿದ್ಯಾರ್ಥಿಗಳ 2 ಕೈಪಿಡಿಗಳು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 NP ಸೇರಿಸಿ ಮನಿಯಾರ್ಡರು ಮಾಡಿದವರಿಗೆ ಪುಸ್ತಕ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರತಿಗಳು— ಮಂಗಳೂರಲ್ಲಿ ಶ್ರೀನಿವಾಸ್ ಬ್ರದರ್ಸ್, ಸ್ಕೂಲ್ ಬುಕ್ ಕೊ ಕೆನರಾ ಕಾಲೇಜ್ ಬುಕ್ ಕೊ' ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್ ಇವರಲ್ಲಿಯೂ, ಪುತ್ತೂರಲ್ಲಿ ಪಾಪ್ಯುಲರ್ ನ್ಯೂಸ್ ಏಜನ್ಸಿಯಲ್ಲಿಯೂ ದೊರೆಯುತ್ತವೆ.

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್) ರೂ.
ಕಲಂ ಸೆಂಟಿಮೀಟರಿಗೆ 1-00
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ 1 50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾ ಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಜಾಸ್ತಿ ಖರ್ಚು ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡಬಹುದಾಗಿರುವುದು.

EGD. No. B. G. 176
LICENCE No. 31
Licensed to Post without Prepayment

ಗೇಹರಾಜ್ಯದಲ್ಲಿ

ಅಂಧಕಾರಹರಣ ಜ್ಯೋತಿ

ನೋಡೇ! ದೀಪ ಕುಸು ದೊಡ್ಡದು ಮಾಡೂಂದೆ.

ಅಂಗಳದಲ್ಲಿ ಚಂದ್ರನ ಬೆಳಕು ಚಳ ಮಕಾಂತ ಹರಡಿರೋವಾಗ ದೀಪದೊಡ್ಡ ಮಾಡೋದು ಯಾಕೆಂತ.

ಏನೇ ಹೀಗೆಲ್ಲಾ ಮಾತಾಡೋದು? ಸದ್ಯ ನಾಲ್ಕೇ ಕಿವಿಗಳು ಇಲ್ಲಿ ಇದ್ದದ್ದರಿಂದ ಸರಿ ಹೋಯ್ತು ಬಿಡು.

ಆರು ಇರುತಿದ್ರೆ....

ಯಾರೋ ಒಬ್ಬ ಎಡಿಸನ್ನೋ ಎವರ್ಸನ್ನೋ ಅಂದಿದ್ದ ಅರು ಕಿವಿಗೆ ಬಿದ್ದ ಮಾತು ಹಾರಿ ಹೋಗ್ತ ಬೇಂತ.

ಯಾರೋ ಅಲ್ವೆ. ನೀವು ಸನ್ನುಸನ್ನು ಅನ್ನೋವಾಗ ನಂಸನ್ನೋಂತ ಹೆದ್ರಿ ಕಂಗಾಲಾಗ್ಬಿಟ್ಟೆ ಕಣ್ರೆ!

ಸಾಕುಕಣೇ ನಿನ್ನ ಹಾಸ್ಯ. ಮಾತಾಡೋಕೆ ಮಹಾಪ್ರವೀಣೆ....

ವಾಚಾಳಿ ಅನ್ನಿ; ಅದ್ಕೇಕೆ ಸಂಕೋಚ?

ಏನು ನೆತ್ತಿಗೇರಿತೂಂತ ತೋರುತ್ತೆ. ಅಲ್ಲಾ ಮಾತಾಡೋದ್ರಲ್ಲಿ ಪ್ರವೀಣೆ ಅಂತಂದ್ರೆ ಅಷ್ಟೆ ರೇಗಿಕೊಳ್ಬೇಕಾದ್ರೂ ಯಾಕೇಂತ.

ಹೋಗೀಂದ್ರೆ ... ನಿಮ್ಮ....

ಕೋಪಿಸ್ಕೋಬೇಡ್ವೆ. ನೋಡು ಸ್ವಲ್ಪ ದೀಪ ದೊಡ್ಡ ಮಾಡು.

ಅದೇ ಯಾಕೇಂತ?

ಏನಾದ್ರೂ ಪೇಪ್ರುಗೀಪ್ರು ಸ್ವಲ್ಪ ನೋಡೋಣಾಂತ.

ನಿಮ್ಗೆ ಮತ್ತೇನು ಕೆಲ್ಸ? ಈಗ ತಾನೇ ಮಾಗಿನ್ನನ್ನ ತಿಂದಾಯಿತು. ಇನ್ನು....

ನಾಗು ಬಿಡೇ ನಾಲಿಗೆ ಬಾರಿ ಸಡ್ಲಾಯ್ತಲ್ಲ. ಅಲ್ಲ, ನಾನು ತಿಂತೇನೆ, ಓದ್ತೀನೆ. ನೀನೂ ತಿನ್ನು ಓದು ಯಾರು ಬೇಡಂತಾರೆ?

ತಿನ್ನದೆ ಇರೋಕಾಗೊಲ್ಲ ಸ್ವಲ್ಪ ಹೆಚ್ಚು-ಕಡಿಮೆ, ಆದರೆ, ಈ ಕಷ್ಟಕಾಲದಲ್ಲಿ ಓದೋಕೆ ಪೇಪ್ರಿಗೆ ದುಡ್ಡು, ಮತ್ತೆ ಚಿಮಿಣಿ ಎಣ್ಣೆಗೆ ದಂಡ—ಇದ್ಕೆಲ್ಲ ಎಲ್ಲಿ ಹೋಗೋದೂಂತ?

ದುಡಿದು ಸಂಪಾದಿಸಿ ತರೋ ಗಂಡ್ಸಿಗೂ ಇಲ್ದ ಚಿಂತೆ ಹೆಣ್ಣು ಹೆಂಗ್ಸಿಗೇಕೇಂತ?

ಗಂಡಸ್ರಿಗೇನಂತೆ? ಒಂದನೇ ತಾರೀಕು ಬರುತ್ಲೂ ಕೈಲಿದ್ದಷ್ಟನ್ನು ದಾಟ್ಸಿದ್ರಾಯಿತು. ಅಷ್ಟ್ರಲ್ಲೇ ಕೊನೇತನ್ಕ ನಡೆಸಿಕೊಂಡು ಬರೋ ಹೊಣೆ ಯಾರ್ದೂಂತ?

ಓಹೋ, ಹಾಗೇ ಅಲ್ಲ; ಅಂದ್ರೆ ಚಿಮಿಣಿ ಎಣ್ಣೆಗೆ ಅಭಾವ ಬಂದಿದೇಂತ ತೋರುತ್ತೆ.

ಇವತ್ತಿನ್ನೂ ತಾರೀಕು ಇಪ್ಪತ್ನಾಲ್ಕು. ಸರಿ ಗೊತ್ತಾಯ್ತು ಬಿಡು. ಹೆದ್ರಬೇಡ. ನಿನ್ನೆ ಮೊನ್ನೆ ಊಟಕ್ಕೆ ಸುಬ್ರಾಯ ಭಟ್ರಲ್ಲಿಗೆ ಹೋಗಿದ್ದೆ ಕಣೇ...

ಹ್ಞೂಂ...

ಅಲ್ಲಿ ಸಿಕ್ಕಿದ ದಕ್ಷಿಣೆ ಹಣ ಲಪಟಾಯಿಸೋಕೆ ಇದೆಲ್ಲಾ ಪ್ಲಾನು ಅಲ್ವೆ?

....

ಏನೇ ಮಾತಾಡೋಲ್ಲ? ಇಷ್ಟ್ರ ತನಕ ಮಾತಿಗೆ ಮಾತು ಕೊಟ್ಟು ಮುಂದರ್ಸಿದ ನೀನು ಈಗೇಕೆ ಸುಮ್ಮನಾದೀಂತ. ಮಳೆಗಾಲ ಪ್ರಾರಂಭವಾಗುತ್ಲೂ ಮೂಲೆ ಸೇರೋ ಕೋಗಿಲೆಗಳಂತೆ.

ಏನಂತೆ ಈಗ ಮಳೆಗಾಲ ಪ್ರಾರಂಭವಾದ್ದೂಂತ?

ಮಳೆಗಾಲ ಆಲ್ವೆ ಈಗ ಆದದ್ದು ಕೊಳೆಗಾಲ.

ಹಾಗಂದ್ರೆ....

ಅದೇ ಕೊಳೆ ಅಂದ್ರೆ ಮೈಲಿ...ಅಂದ್ರೆ ಅಪರಿಶುದ್ಧತೆ, ಮಾನಸಿಕ ಅಂಧಕಾರ.

ಅಂಧಕಾರವೋ ಡೋಬಿಕಾರವೊ ಅಥ್ವಾ ಹಪ್ಪಕಾರವೊ....

ಸಾಕು ನಾಕೇ ಸುಮ್ನಿರು ಸ್ವಲ್ಪ. ನಾನೊಂದಂದ್ರೆ ನೀನು ನೂರನ್ಸಿಯಲ್ಲ....

ಅಂತೂ ನೀವು ಏನು ಹೇಳಿದ್ರೂ ಕೇಳ್ಕೊಂಡು ಸುಮ್ನಿರಬೇಕು, ಅಲ್ವೆ? ನಿಮ್ಮ ಗಂಡಸ್ರ ಮಾತೇ ಹೀಗೆ...

ಹಾಗೇಂತ ಯಾಕನ್ಬೇಕು? ಸ್ತ್ರೀ ಬುದ್ಧಿಯು ಪ್ರಳಯಾಂತಕವೆನ್ನುವಂತೆ ಪುರುಷ ಬುದ್ಧಿಗೆ ಉಪಮೆಕೊಡ್ಲಿಲ್ಲ ನೋಡು.

ಮೆಣ್ಸಿನಕಾರ, ಉಪ್ಪುಕಾರ ಅಂದ್ರಲ್ಲ ಆಗ....

ಏನೂಂತಂದೆ....

ಹೀಗೇ ಅಂದೆ....ಅಂಧಕಾರಾಂತಂದ್ರೆ ಕತ್ಲು ತಾನೆ?

ಸರಿಯಾಗೇ ಹೇಳ್ದೆ ಅದನ್ನ....

ದೂರ ಮಾಡೋಕೆ ದೀಪ ಹಚ್ಚಿದ್ರೆ ಸರಿ. ಆದ್ರೆ....

ಏನಂತೆ ಆದ್ರೆ....

ಏನೂ ಇಲ್ಲ; ದೀಪ ಹಚ್ಚೋಕೂ ಎಣ್ಣೆ ಬೇಕಲ್ಲಾಂತ? ಆ ಎಣ್ಣೇನೇ ಇಲ್ದಿದ್ರೆ....

ಯಾಕೇ ಹೀಗನ್ತಿ? ಆ ದೀಪ ಎಲ್ಲ ಮನೆಗಳಲ್ಲೂ ಉರಿಯುತ್ತಿರುತ್ತದೆ ಆದ್ರೆ ಕೆಲವ್ರ ಮನೆಯಲ್ಲಿ ಬಾಗಿಲುಗಳೆಲ್ಲಾ ಮುಚ್ಚಿರೋದ್ರಿಂದ ಹಗ್ಲಲ್ಲೂ ಅಂಧಕಾರ ಕವಿದಿರುತ್ತೆ. ಅಲ್ದೆ ಉರಿಯುವ ದೀಪಾನೂ ಹಾಗೇನೇ. ಟಿಮಿ ಟಿಮಿಂತ. ಅಂತಹ ದೀಪ ಏನು ಅಂಧಕಾರ ಓಡಿಸ್ಬಹುದೂಂತ?

ಅದ್ಕೇ ಏನು ದೀಪ ದೊಡ್ಡ ಮಾಡೂಂತಂದದ್ದು. ದಕ್ಷಿಣೆ ಸಿಕ್ಕ ದುಡ್ಡ ಇಲ್ಲಿ ಕೊಡೋದಾದ್ರೆ ಈಗ ದೊಡ್ಡ ಮಾಡ್ತೀನಿ.

ನೀನು ಹೇಳ್ದ ಅಂದ್ಮೇಲೆ ಅದ್ಕೆ ಅಪೀಲುಂಟೆ ಮತ್ತೆ?

ನೋಡಿ, ಹುಕ್ಕೇರಿಯೋ ಹುಬ್ಬಳ್ಳಿಯೋ ಎಲ್ಲೋ ಒಂದು ದೀಪ ಬಂತಂತೆ. ಅದ್ಕೆಲ್ಲಾ ಯಾರೋ ಎಣ್ಣೆ ಸುರಿದ್ರಂತೆ... ಏನೇನೋ ಅಂತಾರೆ.

ಯಾರೇ ಹೇಳಿದ್ರು ನಿಂಗೆ ಇದ್ರೆಲ್ಲಾ...

ಯಾರು ಯಾಕೆ ಹೇಳ್ತಾರೆ? ನಮ್ಮ ಪದ್ದಕ್ಕ....

ಓ, ಹಾಗೋ? ಸರಿನ್ನು. ಅದು ನೇಮಾದಲದ ಜ್ಯೋತಿ. ಹುಬ್ಬಳ್ಳಿಯಲ್ಲಿ ೪೦ ವರ್ಷಗಳ ಹಿಂದೆ ಹರ್ಡೀಕರರಿಂದ ಸೇವಾದಲ ಸ್ಥಾಪಿತವಾಗಿ ಜನರಲ್ಲಿ ತ್ಯಾಗ—ಸೇವೆ—ಸ್ವಾತಂತ್ರ್ಯದ ಭಾವನೆಯನ್ನು ಕೆರಳಿಸಿತು. ಈಗ ಜ್ಯೋತಿಯಾಗಿ ದೇಶದ ಅನೈಕ್ಯ ಅಂಧಕಾರವನ್ನು ಹೊಡೆದೋಡಿಸುವ ಸತ್ಕಾರ್ಯದಲ್ಲಿ ತೊಡಗಿದೆ.

ಓಹೋ, ಹಾಗಾದ್ರೆ ನಮ್ಮೂರಿಗೆ ಬಂದ್ರೆ ನಾವೂನೂ ಎಣ್ಣೆ ಹೊಯ್ಬೇಕಲ್ಲಾ ... ಆದ್ರಿಂದ ...

ಹ್ಞೂಂ ಅರ್ಥವಾಯ್ತು ಬಿಡು....

— ಗೋರಾ.

ಮಿತ್ರರಾಷ್ಟ್ರಗಳ ದಿಟ್ಟ ಹೆಜ್ಜೆ

(೧ನೇ ಪುಟದಿಂದ)

ಮಾವೋರವರು ಸೂಚಿಸಿದಂತೆ ಅಲಿಪ್ತ ರಾಷ್ಟ್ರಗಳು ಒಂದಾದರೆ, ಆಕ್ರಮಣಶೀಲರ ಮೇಲೆ ತೀವ್ರ ಕಾರ್ಯಕ್ರಮ ಕೈಗೊಳ್ಳಲು ಮುಂದಾದರೆ, ಆಂತರಿಕ ಪರಿಸ್ಥಿತಿಗಳು ಮೊದಲೇ ಬಿಗಡಾಯಿಸಿದ ಚೀನವು ಬಾಹ್ಯದಲ್ಲಿಯೂ ಹದಗೆಡಬೇಕಾಗುತ್ತದೆ. ಜಗತ್ತಿನಿಂದಲೇ ಸಿಡಿದು ಹೋಗುವ ಚೀನಾದ ಹೇರಾಸೆಯು ಕೈಗೂಡಲಾರದಾದರೆ, ಏಕಾಕಿ ಚೀನ ಏನು ತಾನೇ ಮಾಡಬಲ್ಲುದು? ಆಕ್ರಮಣಕಾರ ಚೀನಾವನ್ನು ದಾರಿಗೆ ತರುವ ಈ ಹೊಸ ಸೂಚನೆಯು ಕಾರ್ಯರೂಪಕ್ಕೆ ಬಂದಲ್ಲೇ ಮಾರ್ಗತಪ್ಪಿದ ಕೆಂಪು ಚೀನವನ್ನು ಸರಿದಾರಿಗೆ ತರುವುದು ಸಾಧ್ಯವಾದೀತು; ಎಂತಲೇ ಈ ಸೂಚನೆಯು ಸರ್ವತ್ರ ಸ್ವಾಗತ ಪಡೆದಿದೆ; ಭಾರತಕ್ಕೂ ಮಾನ್ಯವಾಗಿದೆ.

ದಿನನಿತ್ಯದ ವೆಚ್ಚದಲ್ಲಿ
ಉಳಿತಾಯವೂ.......ಒಂದು ಆವಶ್ಯಕತೆಯೆ??

ಆಹಾರ, ವಸತಿ ಮತ್ತು ಬಟ್ಟೆಬರೆ, ನಮ್ಮ ಜೀವನಾವಶ್ಯಕ ವಸ್ತುಗಳಾದಂತೆ, ಉಳಿತಾಯವೂ ಅತೀ ಅವಶ್ಯವೆಂದು, ನೀವೆಂದಾದರೂ ಯೋಚಿಸಿದ್ದೀರಾ??

ಭವಿಷ್ಯತ್ತಿನ ಭದ್ರತೆ, ಸಮೃದ್ಧಿ ಮತ್ತು ಮನಸ್ಸಿಗೆ ನೆಮ್ಮದಿ, ನಿಮ್ಮ ಇಂದಿನ ದೂರದೃಷ್ಟಿಯ ಉಳಿತಾಯವನ್ನೇ ಹೊಂದಿಕೊಂಡಿದೆ.

ವಿವಿಧ ಉಳಿತಾಯ ಯೋಜನೆಗಳಿಗೆ.......
ಸಿಂಡಿಕೇಟ್ ಬ್ಯಾಂಕ್ ಸಹಕರಿಸಬಲ್ಲುದು

ಇಂದೇ ನಿಮ್ಮ ಹತ್ತಿರದ ಶಾಖೆಯೊಂದರಲ್ಲಿ
ಸೇವಿಂಗ್ಸ್ ಖಾತೆ ತೆರೆಯಿರಿ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ಚಲಾವಣಾ ಸಂಪತ್ತು 44 ಕೋಟಿಗೂ ಮಿಕ್ಕಿದೆ
ಶಾಖೆಗಳು 189

ಆಕ್ರಮಣಶೀಲ ವೈರಿಯನ್ನು ಅಳಿಸಲು
ರಕ್ಷಣೆಯನ್ನು ಬಲಪಡಿಸಿರಿ!
ರಕ್ಷಣಾ ನಿಧಿಗೆ
ಧನ-ಕನಕ-ನೀಡಿ!
ಬಿಡುವಿಲ್ಲದೆ
ದುಡಿಯೋಣ;
ಸಾಧ್ಯವಿದ್ದಷ್ಟು
ಉಳಿಸೋಣ!

ನವಯುಗಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ

Edited, Printed & Published by K. H.Shetty. at the Navayuga Press, Udipi, S. India.

ಅಖಿಲ ಕರ್ನಾಟಕದ ಪ್ರಸಿದ್ಧ ಕತೆಗಾರರ
ಮಧುವನ
ಕಥಾ ಸಂಕಲನ
'ಕಿರಿಯರ ಪ್ರಪಂಚ'ದ ಅಪೂರ್ವ ಪ್ರಕಟಣೆ
ಬೆಲೆ: ರೂ. ಮೂರು
ನವಭಾರತ ಪುಸ್ತಕ ಭಂಡಾರ
ಉಡುಪಿ

ನವಯುಗ

Estd. 1921 ಸ್ಥಾಪನೆ
Regd. No. B.G. 176
Vol. 43 No. 9

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
NAVAYUGA— NATIONAL WEEKLY
ಉಡುಪಿ, 31—10—1963 ಗುರುವಾರ

13 ನ ಪೈಸೆ
ವಾ. ಚಂದಾ ರೂ. ೬-೭೫
ಸಂಪುಟ ೪೩ ಸಂಚಿಕೆ ೯

ಯಾವತ್ತೂ ಪ್ರಿಂಟಿಂಗ್ ಕೆಲಸಗಳನ್ನು ಮಾಡಿಕೊಡಲಾಗುವುದು
ಕ್ಲಪ್ತ ಸಮಯದಲ್ಲಿ ಮಿತ ದರದಲ್ಲಿ ಉತ್ತಮ
ಮುದ್ರಣ
ಕೆಲಸಗಳಿಗಾಗಿ ಬೇಕೆ?
ಸಂದರ್ಶಿಸಿರಿ ಯಾ ವಿಚಾರಿಸಿರಿ
ನವಯುಗ ಪ್ರೆಸ್,
ಪಾಲುಕೋಟೆ, **ಉಡುಪಿ**

ಪಾಕಿಸ್ತಾನದಿಂದ
ಬರಸಿಡಿಲಿನ ಸುರಿಮಳೆ

ಅತ್ತ ಕಡೆ ಕೆಂಪು ಚೀನೀಯರು ನಮ್ಮ ಪವಿತ್ರ ಭೂಮಿಯ ಮೇಲೆ ಮರಳಿ ಆಕ್ರಮಣದ ಸಿದ್ಧತೆಯಲ್ಲಿ ತೊಡಗಿದ್ದಾರೆ. ಜಾಗ್ರತಗೊಂಡ ದೇಶಕ್ಕೆ ದೇಶವೇ ಮಾತೃ ಭೂ ರಕ್ಷಣೆಯ ದೀಕ್ಷೆ ತೊಟ್ಟು ವಿಜಯ ಧ್ವಜ ಛಾಯೆಯಲ್ಲಿ ಒಂದಾಗಿದೆ ಇಂತಹ ಸಂದರ್ಭವನ್ನು ನಮ್ಮ 'ಹಳೆಯ ಮಿತ್ರ' ಪಾಕ್ ನಾಯಕರು ಸ್ವಾರ್ಥ ಸಾಧನೆಗಾಗಿ ಉಪಯೋಗಿಸಿ ಒತ್ತಾಯದ ಸೈನಿಕ ಶಕ್ತಿ,ಆಟೋಪಗಳನ್ನು ಮುಪ್ಪುರಿಗೊಳಿಸಿ, ತಯಾರಿಸಿದ ಹಗ್ಗದ ಉರುಳಿಗೆ ಭಾರತೀಯರ ಸ್ವಾತಂತ್ರ್ಯವನ್ನು, ಸಮಗ್ರತೆಯನ್ನು ಬಲಿಗೊಳ್ಳುವ ದುಸ್ಸಾಹಸವನ್ನು ಮಾಡುತಿದ್ದಾರೆ. ಕಾಶ್ಮೀರದ ವಿಷಯವಾಗಿ ಪಾಕ್ ನೇತಾರರು ಕಟ್ಟಿದ್ದ ಗೋಪುರ ಈಗ ಗಾಳಿಯಲ್ಲಿ ತೇಲಾಡುವಂತಾದುದರಿಂದ ಅವರ ವಿಷಜ್ವಾಲೆ, ಕಹಿನಾಲಿಗೆಯ ಶಕ್ತಿ ಅಧಿಕವಾಯಿತೆಂದು ತೋರುತ್ತದೆ. ಅದಕ್ಕೆಂದೇ ಅವರು ತೋರಿದ ಸಾಹಸವೆಂದರೆ, ಕಾಶ್ಮೀರದಲ್ಲಿರುವ ಸಮರ ವಿರಾಮ ರೇಖೆಯನ್ನು ಮೀರುವುದು ಮತ್ತು ಕಿರುಕುಳ ನೆಬ್ಬಿಸುವುದು. ಭಾರತದ ಬಗೆಗೆ ಅಪಪ್ರಚಾರ ತಂತ್ರವನ್ನು ಸ್ವೇಚ್ಛೆಯಾಗಿ ಬಳಸಿಕೊಳ್ಳುವುದು.

ಸಮರವಿರಾಮ ರೇಖೆ

ಪಾಕಿಸ್ತಾನವು ಕಾಶ್ಮೀರವನ್ನು ಆಕ್ರಮಿಸಿದಾಗ, ಅದರ ರಕ್ಷಣೆಗೆ ಭಾರತವು ಧಾವಿಸಿತ್ತು. ಸಂಯುಕ್ತರಾಷ್ಟ್ರ ಸಂಸ್ಥೆಯ ನೇತೃತ್ವದಲ್ಲಿ ಸಮರವಿರಾಮ ರೇಖೆಯೊಂದು ನಿರ್ಮಾಣಗೊಂಡಿತ್ತು. ಮುಂದೆ ಪಾಕ್ ಸೈನ್ಯದ ವಾಪಸಾತಿಗೆ ಅನಂತರ ಜನಮತ ಗಣನೆಗಳಿಗೆ ಸಂಬಂಧಿಸಿದ ಗೊತ್ತುವಳಿಯನ್ನು ಭದ್ರತಾ ಮಂಡಳಿವು ಸ್ವೀಕರಿಸಿತ್ತು. ಅಂದು ಪಾಕಿಸ್ತಾನವು ತನ್ನ ಆಕ್ರಮಣವನ್ನು ಹಿಂತೆಗೆದುಕೊಳ್ಳಲಿಲ್ಲವಾದುದರಿಂದ ಅಲ್ಲಿ ಜನಮತ ಗಣನೆಗೂ ಅನುಕೂಲ ವಾತಾವರಣ ನೆಲೆಗೊಳ್ಳಲಿಲ್ಲ. ಆದರೂ ಸಮರವಿರಾಮ ರೇಖೆಯನ್ನು ಮಾತ್ರ ಪಾಕ್ ನಾಯಕರು ಸಂರಕ್ಷಿಸಿಕೊಂಡು ಬಂದಿದ್ದರು. ಮಾತ್ರವಲ್ಲ, ಗತಕಾಲದಲ್ಲಿ ಅಲ್ಲಿನ ಪ್ರಧಾನ ಮಂತ್ರಿಯಾಗಿದ್ದ ಫಿರೋಜಖಾನ ನೂನರು ಈ ರೇಖೆಯನ್ನು ಸಂರಕ್ಷಿಸುವುದು ತಮ್ಮ ಕರ್ತವ್ಯವೆಂದೂ ಘೋಷಿಸಿದ್ದರು. ಆದರೆ, ಇಂದಿನ ಪಾಕ್ ಸರ್ವಾಧಿಕಾರಿಗಳು ಏನನ್ನು ಬಯಸುತ್ತಾರೆ? ಭಾರತದೊಡನೆ ಪಾಕಿಸ್ತಾನವು ಮಿತ್ರತ್ವದಿಂದಿರಬೇಕೆಂದು ಉಭಯತರರ ಮಿತ್ರರಾಷ್ಟ್ರಗಳು ಬಯಸುತ್ತಿವೆ ಆದರೆ, ಭಾರತದ ಮೈತ್ರಿ ಪಾಕ್ ನಾಯಕರಿಗೆ ಬೇಡ ಅದಕ್ಕೆಂದೇ ಇಲ್ಲದ ವಿವಾದಗಳನ್ನು ಸೃಷ್ಟಿಸಿ ಕಿರುಕುಳವೆಬ್ಬಿಸಿ, ಭಾರತವು ತನ್ನ ಮೇಲೆ ಶಕ್ತಿ ಪ್ರದರ್ಶನ ನಡೆಸುತ್ತಿದೆ ಎಂಬ ಪ್ರಚಾರವನ್ನು ಜಗದ್ವ್ಯಾಪಿಯಾಗಿಸುವ ಇರಾದೆಯಿಂದವರು ಇದ್ದಾರೆ. ಇಂತಹ ನೀಚ ಪ್ರಚಾರ ವೈಖರಿ ಪಾಕ್ ನಾಯಕರಿಗೆ ಹೊಸತೇನೂ ಅಲ್ಲ ತಮ್ಮ ದೇಶದ ಆಂತರಿಕ ಸಮಸ್ಯೆಗಳಿಂದ ನೊಂದಿರುವ ನಾಗರಿಕರ ಅಳಲನ್ನು ಭಾರತದತ್ತ ಹರಿಯ ಬಿಡುವ ಅವರ ಕುತಂತ್ರವನ್ನು ಅರಿಯದವರಿಲ್ಲ.

ಅಯೂಬರ ಅಂಜಿಕೆ

ಪಾಕಿಸ್ತಾನವು ಭಾರತದ ಅವಿಭಾಜ್ಯ ಅಂಗವಾದ ಕಾಶ್ಮೀರದ ಮೇಲೆ ಇಂದು ಅಧಿಕಾರ ಬಯಸುತ್ತಿದೆ. ಆದರೆ, ಕಾಶ್ಮೀರಿಗಳು ತಮ್ಮ ಭವಿಷ್ಯವನ್ನು ತಾವೇ ನಿರ್ಧರಿಸಿಕೊಂಡಿದ್ದಾರೆ. ಭಾರತದೊಡನೆ ತಮ್ಮನ್ನು ವಿಲೀನಗೊಳಿಸುವ ಕಾರ್ಯವನ್ನದು ಎಂದೋ ಮಾಡಿಬಿಟ್ಟಿದ್ದಾರೆ ಆದರೂ ಅಲ್ಲಿಯ ಸದರ್-ರಿಯಾಸತ್ ಮತ್ತು ಪ್ರಧಾನ ಮಂತ್ರಿಗಳೆಂಬ ಪದವಿಗಳು ಕಾಶ್ಮೀರವು ಬೇರೆಯೆಂಬ ಭಾವನೆಯನ್ನು ಹುಟ್ಟಿಸುವಂತಿದ್ದುವು ಆದರೆ ಇತ್ತೀಚಿಗೆ ಬಕ್ಷಿಗುಲಾಂ ಮಹಮ್ಮದರು ಈ ಹುದ್ದೆಗಳನ್ನು ತೆಗೆದು, ರಾಜ್ಯಪಾಲ-ಮುಖ್ಯ ಮಂತ್ರಿಗಳೆಂದೇ ಅವನ್ನು ಕರೆಯುವ ಕ್ರಮಕೈಗೊಳ್ಳುವ ಬಗೆಗೆ ಮಾತಾಡಿದರು. ಅಲ್ಲಿಗೆ ಕಾಶ್ಮೀರವು ಭಾರತದ ಅವಿಭಾಜ್ಯ ಅಂಗವೆಂದು ಸಾರುವುದರತ್ತ ಇನ್ನೊಂದು ಮಹತ್ವದ ಹೆಜ್ಜೆ ಮುನ್ನಿಟ್ಟಂತಾಗುವುದು ಈಗಾಗಲೇ ಸರ್ವೋಚ್ಚ ನ್ಯಾಯಾಲಯ ಚುನಾವಣಾ ಆಯೋಗಗಳ ಅಧಿಕಾರ ಮಿತಿಯನ್ನು ಭಾರತದ ರಾಷ್ಟ್ರಪತಿಗಳು ಕಾಶ್ಮೀರಕ್ಕೂ ವಿಸ್ತರಿಸಿದ್ದಾರೆ. ಮತ್ತೆ ಉಳಿಯುವುದೆಂದರೆ ಪ್ರತ್ಯೇಕ ಸಂವಿಧಾನ. ಭಾರತದಲ್ಲಿ ವಿಲಯನದ ಕಾರ್ಯಕ್ರಮಗಳು ಒಂದೊಂದಾಗಿ ಕಾರ್ಯಗತವಾಗಿ, ಕಾಶ್ಮೀರದ ಸ್ಥಾನಮಾನಗಳು ಸಂಪೂರ್ಣ ಇತರ ರಾಜ್ಯಗಳ ಸಾಲಿಗೆ ಬಂದಿತೆಂದರೆ, ಆಗ ಈ ಸಂವಿಧಾನದ ಆಗತ್ಯವೂ ಉಳಿಯುವುದಿಲ್ಲ; ಆಗ ಪಾಕಿಸ್ತಾನಕ್ಕೆ ಕಾಶ್ಮೀರದ ಸುದ್ದಿಯೆತ್ತುವ ಅವಕಾಶವೂ ಇರುವುದಿಲ್ಲ ಇದನ್ನು ಮನಗಂಡ ಅಯೂಬಖಾನರು ಚಿಂತಾಗ್ರಸ್ತರಾಗಿದ್ದಾರೆ. ಏನು ಮಾಡುವುದೆಂದು ಅವರಿಗೇನೇ ತಿಳಿದಿಲ್ಲ. ತಮ್ಮ ಕುರುಡು ರಾಜಕಾರಣ ಮತ್ತು ಅನ್ಯಾಯದ ಕಾಶ್ಮೀರ ನೀತಿಯಿಂದಾಗಿ ಅನ್ಯಾಯ-ಅತ್ಯಾಚಾರ—ಅಪಚಾರಗಳೆಂದಲಾದರೂ ಸಮರ ವಿರಾಮ ರೇಖೆಯೇ ಇಲ್ಲವೆಂದೆನ್ನುವ, ತನ್ಮೂಲಕ ಕಾಶ್ಮೀರವನ್ನು ಕಬಳಿಸುವ ದುಷ್ಟ ಸಾಹಸವನ್ನವರು ಮಾಡುತಿದ್ದಾರೆ.

ಆಕ್ರಮಣ ಭೀತಿಯಂತೆ!

ಅಯ್ಯೂಬಖಾನರು ಸಂಯುಕ್ತ ರಾಷ್ಟ್ರ ಸಂಘದ ನಿರೀಕ್ಷಕರಿರುವ ಸಮರ ವಿರಾಮ ರೇಖೆಯ ಆಸಪಾಸಿನಲ್ಲಿ ಪ್ರಬಲವಾದ ಸೇನೆಯನ್ನು ಈಗ ಜಮಾಯಿಸುತ್ತಿದ್ದಾರೆ ಅಲ್ಲಿ ಭಾರತದ ಭಾಗದಲ್ಲಿರವ ಚಾಕನಾಟ ಎಂಬ ಹಳ್ಳಿ ತಮ್ಮದೆಂದು ವಾದಿಸುತ್ತಿದ್ದಾರೆ. (ಇದು ಸಮರ ವಿರಾಮ ರೇಖೆಯ ಉತ್ತರಕ್ಕಿರುವುದನ್ನು ನಿರೀಕ್ಷಕರೇ ಒಪ್ಪುತ್ತಾರೆ.) ಈ ರೇಖೆಯನ್ನು ಉಲ್ಲಂಘಿಸುವಂತೆ ಆಜಾದ್ ಕಾಶ್ಮೀರಿಗಳನ್ನು, ತಮ್ಮ ಸೇನಾ ಸಿಬ್ಬಂದಿಯನ್ನು ಪ್ರೇರೇಪಿಸುತಿದ್ದಾರೆ; ಆಕಾಶಿ ಗಡಿಯನ್ನೂ ಮೀರಿದ ಪ್ರಸಂಗಗಳು ಅನೇಕವಿವೆ. ಪಾಕ್ ಸರಕಾರವು ದೇಶದ ಪತ್ರಿಕೆಗಳನ್ನು ತನ್ನ ವಶಕ್ಕೆ ತಂದುಕೊಂಡಿದ್ದುದರಿಂದ ತನ್ಮೂಲಕ ಭಾರತ ವಿರೋಧಿ ಪ್ರಚಾರವನ್ನು ಅವ್ಯಾಹತವಾಗಿ ನಡೆಸುತ್ತಿದ್ದಾರೆ. ಭಾರತವು ತನ್ನ ಮೇಲೆ ಆಕ್ರಮಣ ಮಾಡುತ್ತಿದೆ—ತನಗೆ ಯುದ್ಧ ಭೀತಿಯಿದೆ—ಎಂದು ಪ್ರಚಾರವನ್ನು ಪಾಕ್ ಮಾಡುತ್ತಿದೆ—ಒಟ್ಟಿನಲ್ಲಿ ತಾನು ಸಮರದ ಭಯಭೀತಿಯಿಂದ ಅದನ್ನು ಅನಿವಾರ್ಯವಾಗಿ ಎದುರಿಸುವ ಸನ್ನಾಹದಲ್ಲಿರುವೆನೆಂಬುದನ್ನದು ಜಗಜ್ಜಾಹೀರು ಮಾಡುತ್ತಿದೆ. ಆದರೆ, ನಿಜವಾಗಿ ಪಾಕಿಸ್ತಾನಕ್ಕೆ ಆಕ್ರಮಣ ಭೀತಿಯಿದೆಯೆ? ಇರುವುದಾದರೂ ಯಾರಿಂದ? ಭಾರತದ ಕಡೆಯಿಂದಲೆ? ಹಾಗಿದ್ದರೆ, ಭಾರತವು ಹಿಂದೆ ಕೊಡಮಾಡಿದ ಅನಾಕ್ರಮಣ ಒಡಂಬಡಿಕೆಯನ್ನು ತಿರಸ್ಕರಿಸಿದ್ದಾದರೂ ಏಕೆ? ಇದರಿಂದ ಅಯ್ಯೂಬಖಾನರಿಗೆ ಅವಕಾಶವೊದಗಿದಾಗ ಆಕ್ರಮಣ ನಡೆಸುವ ಆಶೆಯಿಗೆಯೆಂದು ತೋರುವುದಿಲ್ಲವೆ? ಅದೇ ಆಕ್ರಮಣ ಶೀಲತೆಯನ್ನು ಈಗ ಅವರು ತೋರಿಸುತ್ತಿದ್ದಾರೆ ಅಲ್ಲವೆ!

ಕೆಚ್ಚೆದೆಯ ಕಾಶ್ಮೀರಿಗಳು

ಹಿಂದೊಮ್ಮೆ, ಅಂದರೆ, ಕೆಲದಿನಗಳಿಗೆ ಮೊದಲು ಪಾಕಿಸ್ತಾನವು ಪೂರ್ವ ಗಡಿಯಲ್ಲಿ ಕಿರುಕುಳವೆಬ್ಬಿಸಿತ್ತು. ಒಂದೆರಡು ದಿನಗಳ ಗುಂಡುಗಳ ಪ್ರಶ್ನೋತ್ತರಗಳೂ ಅಲ್ಲಿ ನಡೆದುವು. ಅಸಾಮಿಂದ ಮುಸ್ಲಿಮರನ್ನು ಹೊರಗಟ್ಟಲಾಗುತ್ತಿದೆಯೆಂಬ ವ್ಯರ್ಥ ಅಪಪ್ರಚಾರ ಮಾಡಿತು. ಈಗ ತನ್ನ ರಾಗವನ್ನು ಸರಾಗಗೊಳಿಸಿ ಕಾಶ್ಮೀರಿಗಳಲ್ಲಿ ಭಾರತದ ಮೇಲೆ ದುರ್ಭಾವನೆ ಹುಟ್ಟುವಂತೆ ಅಲ್ಲಿಂದಲೂ ಮುಸ್ಲಿಮರನ್ನು ಹೊರಗಟ್ಟಲಾಗುತ್ತಿದೆಯೆಂದು ದೂರ ತೊಡಗಿದೆ. ಭಾರತದ ಸಂಸರ್ಗದೊಡನೆ ಕಳೆದ ೧೫ ವರ್ಷಗಳಿಂದಲೂ ಇದ್ದ ಕಾಶ್ಮೀರಿಗಳು ಭಾರತವು ಜಾತ್ಯತೀತ ರಾಷ್ಟ್ರವೆಂಬುದನ್ನೂ ತಮ್ಮ ಸಂರಕ್ಷಣೆಯನ್ನದು ಉಚಿತ ರೀತಿಯಲ್ಲೇ ಮಾಡುತ್ತಿದೆಯೆಂದೂ ಬಲ್ಲರು. ಅದರ ಬದಲು ಪಾಕ್ ಆಕ್ರಮಿತ ಆಜಾದ ಕಾಶ್ಮೀರದಲ್ಲಿರುವ ತಮ್ಮ ಸೋದರರಿಗೆ ಆಜಾದಿ ಇಲ್ಲವೆಂಬದನ್ನವರು ಈ ಹಿಂದೆಯೇ ಕಂಡುಕೊಂಡಿದ್ದಾರೆ. ಇಸ್ಲಾಮನ್ನೇ ತನ್ನ ರಾಷ್ಟ್ರ ಧರ್ಮವೆಂದು ಸ್ವೀಕರಿಸಿದ ಪಾಕಿಸ್ತಾನವು ತಮ್ಮ ನಾಶಕ್ಕೆಂದು ಪತನಕ್ಕೆಂದು ಕಾರ್ಯವ್ಯೂಹವನ್ನು ಸಂಯೋಜಿಸುತ್ತಿದೆಯೆಂದವರು ಅರಿತಿದ್ದಾರೆ. ಎಂತಲೇ ಸಮರ ವಿರಾಮ ರೇಖೆಯ ಬಳಿ ಪಾಕಿಸ್ತಾನವು ಯುದ್ಧದ ಕರಿ ಛಾಯೆಯನ್ನು ಹರಡುತ್ತಿದ್ದರೂ ಭಾರತದ ಅಂಗ ಕಾಶ್ಮೀರದ ಜನ ಬೆಚ್ಚಿಲ್ಲ, ಬೆದರಿಲ್ಲ. ಭಾರತದ ಕೈಗಳಲ್ಲಿ ತಮ್ಮ ಭವಿಷ್ಯ ಉಜ್ವಲವಾಗಿಯೇ ಇದೆಯೆಂದು ಅವರು ದೃಢವಾಗಿ ನಂಬಿದ್ದಾರೆ; ಇದು ನಿಜವೂ ಹೌದು.

ದುರುದ್ದೇಶವಲ್ಲವೆ?

ಭಾರತಕ್ಕೆ ಚೀನೀಯ ಆಕ್ರಮಣದಿಂದ ಸಂರಕ್ಷಿಸಲೆಂದು ಅಮೆರಿಕೆ ಶಸ್ತ್ರಾಸ್ತ್ರ ಸಹಾಯ ಪಿತ್ತುದನ್ನು ಪ್ರತಿಭಟಿಸಿದ ಏಕಮೇವ ರಾಷ್ಟ್ರ ಪಾಕಿಸ್ತಾನ. ಈ ಶಸ್ತ್ರಗಳಿಂದ ಭಾರತವು ಪಾಕಿಸ್ತಾನದ ಮೇಲೂ ಆಕ್ರಮಣ ಮಾಡಬಹುದಂತೆ ಅಮೆರಿಕೆಯ ಶಸ್ತ್ರಾಸ್ತ್ರಗಳು ಚೀನೀಯ ಆಕ್ರಮಣವನ್ನೆದುರಿಸಲು ಮಾತ್ರವೆಂದು ಪಾಕ್ ತಿಳಿಯಲಿಲ್ಲ. ಭಾರತವು ಈ ಹಿಂದೆಯೂ ಈಗಲೂ ತನಗೆ ಆಕ್ರಮಣದ ಇಚ್ಛೆಯಿಲ್ಲವೆಂದು ಒಂದಲ್ಲ ಹಲವು ಬಾರಿ ತಿಳಿಸಿದ್ದರೂ ಕಾಶ್ಮೀರ ನುಂಗುವ ಕನಸು ಕಾಣುವ ಪಾಕಿಸ್ತಾನಕ್ಕೆ ಇದಾವುದೂ ಕೇಳಿಸುವುದಿಲ್ಲ ಎಂತಲೇ 'ತನಗಿಂದು ಭಾರತದಿಂದ ಆಕ್ರಮಣದ ಭೀತಿಯಿದೆ; ಅದಕ್ಕೆಂದೇ ತಾವೂ ಸಮರ ಸನ್ನಾಹ ಮಾಡ

(೧೦ನೇ ಪುಟ ನೋಡಿ)

ಐತಿಹಾಸಿಕ ನಾಟಕ

ಗಜಪತಿ ನಂದಿನಿ

ಬರೆದವರು: “ನವಗಿರಿನಂದ”

(ಕಳೆದ ಸಂಚಿಕೆಯಿಂದ ಮುಂದುವರಿದುದು)

ದೃಶ್ಯ—೧೮

ಕಟಕಪುರಿಯಲ್ಲಿ ತಿಮ್ಮಣ್ಣ ಯೋಗಿಯ ಆಶ್ರಮ.

ಹಗಲು ಹೊತ್ತು.

(ಬಳಿಯಲ್ಲಿ ಕಮಂಡಲು; ಕೃಷ್ಣಾಜಿನದ ಮೇಲೆ ಯೋಗದಂಡದಲ್ಲಿ ಕೈಯಿಟ್ಟುಕೊಂಡು ತಿಮ್ಮಣ್ಣ ಯೋಗಿ ಕುಳಿತಿದ್ದಾನೆ ಒಂದು ಬದಿ ಚಿಕ್ಕ ವೇದಿಕೆಯಲ್ಲಿ ಶಿವಲಿಂಗ. ರಾಮಕೃಷ್ಣನು ಕಾವಿ ಬಟ್ಟೆಯನ್ನುಟ್ಟುಕೊಂಡು ತಲೆಯೂ ಮುಸುಕು ಹಾಕಿಕೊಂಡು ಪ್ರವೇಶಿಸಿ ಹಾವಿನ ಬುಟ್ಟಿಯನ್ನು ಲಿಂಗದ ಬಳಿಯಿಟ್ಟು, ದೀಪಕ್ಕೆ ಎಣ್ಣೆ ಹಾಕಿ)

ರಾಮಕೃಷ್ಣ-- ಓ! ಓ! ಬಹಳ ದೊಡ್ಡ ಸಮಾಧಿಯಲ್ಲಿ ಮಗ್ನರಾಗಿದ್ದಾರೆ! ಎಂಥಾ ಧ್ಯಾನಾ! ಎಂಥಾ ಮೌನಾ! ಭಲೇ ಕಾರ್ಯ ಸಾಧನಾ! ಅಂದು ಪೌರ್ಣಮಿಯ ಚಂದ್ರೋದಯದ ವೇಳೆ ಒಮ್ಮೆಗೇ ಮಹಾನದಿಯಲ್ಲಿ ಉದ್ಭವರಾದ ಸ್ವಾಮಿಗಳು. ಗಜಪತಿ ರಾಜನನ್ನೆ ಮರುಳು ಮಾಡಿದರು. ಪಾಪ, ಅವರು ಹಾದಿಯ ಮಾರಿಯನ್ನು ಕರೆಸಿ ತಂದ ಹಾಗೆ, ಈ ಟಕ್ಕು ಸ್ವಾಮಿಯನ್ನು ಪಾಲಕಿಯಲ್ಲಿ ಕರೆದು ತಂದು ತನ್ನ ಉದ್ಯಾನದ ಆಶ್ರಮದಲ್ಲಿ ಪ್ರತಿಷ್ಠೆ ಮಾಡಿಬಿಟ್ಟರು. ಈತ ಅವರ ಮುಖಕ್ಕೆ ತಕ್ಕ ಹಾಗೆ ಹುಸಿಗುಂಡು ಹಾರಿಸುತಿದ್ದಾನೆ. ಜಗನ್ಮೋಹಿನಿಯಂತೂ ಇವನ ಪಾದವನ್ನೆ ನಂಬಿಬಿಟ್ಟಿದ್ದಾಳೆ. ಛೀ ಛೀ! ಈ ಮಹಾ ಪಾಪಿ ಮುನಿಗೆ ನನ್ನ ಹೊಟ್ಟೆ ಹಗುರಾಗುವ ಹಾಗೆ ಒಮ್ಮೆ ಬಯ್ದುಬಿಡಬೇಕೆನಿಸುತ್ತದೆ. ಇದೇ ಸಮಯ! ಕಣ್ಣು ಮುಚ್ಚಿ ನಿದ್ದೆ ಮಾಡುತ್ತಿದೆ ಈ ಹಂಪೆಯ ಕಪಿ. ಹೇ! ಸಂನ್ಯಾಸೀ ಕುಲಕಳಂಕ! ದ್ರೋಹಿ!... ...

ತಿಮ್ಮಯೋಗಿ— (ಕಣ್ಣು ತೆರೆಳಿಸಿ ನೋಡಿ) ಎಲೆಲಾ! ಪಾಪೀ ಪುಂಡಾ! ತ್ರಿಕಾಲಜ್ಞಾನಿಯಾದ ನನ್ನನ್ನು ಬಯ್ಯುವಿಯಾ! ಹಿಡಿ ಹಿಡೀ ಶಾಪ! (ಕಮಂಡಲುವಿನ ನೀರನ್ನು ತೆಗೆದುಕೊಳ್ಳುವನು.)

ರಾಮಕೃಷ್ಣ—(ಯೋಗಿಗೆ ಅಡ್ಡ ಬಿದ್ದು) ಹಾಬೇಡ ಸ್ವಾಮೀ! ಅಂತರ್ಜ್ಞಾನೀ ಮಹಾ ಮೌನೀ! ತಿಳಿಯದೇ ತಪ್ಪು ಚೇಸ್ತಿನಿ! ಅನ್ಯಥಾ ಶರಣಂನಾಸ್ತಿ. ಕ್ಷಮಿಂಪುಮೂ, ಕ್ಷಮಿಂಪುಮೂ.

ತಿಮ್ಮಯೋಗಿ— ಶಿವ ಶಿವಾ! ಶರಣಾಗತ ರಕ್ಷಣಂ ಪರಮ ಧರ್ಮಂ. ಇನ್ನೆಲ್ಲಾದರೂ ಬಯ್ದರೆ,

ರಾಮಕೃಷ್ಣ— ಲೇದು ಗುರುದೇವು ಡೂ, ಇಲ್ಲ-ಲೇದೂ.

ತಿಮ್ಮಯೋಗಿ— ಹಾಗಾದರೆ ನನ್ನ ಈ ಶಾಪೋದಕವು ವ್ಯರ್ಥವಾಗಿ ಹೋಗದಂತೆ ಏನು ಮಾಡಲಿ?

ರಾಮಕೃಷ್ಣ — ಅದು ಕರ್ಣಾಟಕರಾಯನು ಕಳಿಂಗರಾಜ ನಂದಿನಿಗೆ ಕರಪೀಡನವನ್ನುಂಟುಮಾಡಲಿ!

ತಿಮ್ಮಣ್ಣಯೋಗಿ— ಸರೀ ಅಂತಾಗಲೀ! (ಉದಕವನ್ನು ಬಿಡುವನು.)

ರಾಮಕೃಷ್ಣ-- ಗುರುದೇವಾ! ಶಿಷ್ಯನ ವಿನಂತಿ, ನಮ್ಮ ರಾಜೇಂದ್ರನು ಮಹಾನದಿಯ ಆಚೆಯ ಬದಿಯಲ್ಲಿ ಬೀಡು ಬಿಟ್ಟಿದ್ದಾನೆ. ತಿಮ್ಮರಸರು ತಮ್ಮ ಯೋಗಮಹಾತ್ಮ್ಯವನ್ನು ರಾಯನ ಮುಂದೆ ಬಣ್ಣಿಸಿ ರಾಯನಲ್ಲಿ ತಮ್ಮ ದರ್ಶನಾಭಿಲಾಷೆಯನ್ನು ಹುಟ್ಟಿಸಿದ್ದಾರೆ.

ತಿಮ್ಮಯೋಗಿ — ಈಗ ಬರುತ್ತಾರೇನು?

ರಾಮಕೃಷ್ಣ-- ಹೌದು. ನನ್ನ ಹಿಂದೆಯೇ ಹೊರಟಿದ್ದರು. ಈಗ ಜಗನ್ಮೋಹಿನೀದೇವಿ ಇಲ್ಲಿಗೆ ಬರುವ ಸಮಯವಾದುದರಿಂದ ಇದೇ ತಕ್ಕ ಸಮಯವೆಂದು ನಾನು ಮಂತ್ರಿಗಳಿಗೆ ತಿಳಿಸಿದ್ದೇನೆ. ಇಬ್ಬರೂ ಬೇರೆ ಬೇರೆ ವೇಷಗಳಿಂದ ಬರುತ್ತಾರೆ. ನಮ್ಮ ರಾಯರಿಗೆ ರಾಜವರ್ಮನೆಂಬ ಹೆಸರಂತೆ.

ತಿಮ್ಮಯೋಗಿ- ಒಳ್ಳೇದು. ಅಗೋ ಜಗನ್ಮೋಹಿನಿ. ಓಂ! ಶಿವಾ! (ಕಣ್ಣು ಮುಚ್ಚುವನು)

(ಮಂದಾರ— ಗೌರಾಂಬಾ ಸಖೀದ್ವಯರೊಡನೆ ಜಗನ್ಮೋಹಿನಿ ಪ್ರವೇಶಿಸುವಳು. ಸಖಿಯರು ಗಂಧಪುಷ್ಪಫಲಾಹಾರಗಳ ತಟ್ಟೆಯನ್ನು ಮುಂದಿಡುವರು. ಜಗನ್ಮೋಹಿನಿ ಯೋಗಿಗೆ ನಮಸ್ಕರಿಸುವಳು).

ತಿಮ್ಮಯೋಗಿ— (ಕಣ್ಣುಬಿಡಿಸಿ) ಜೈ ಮಹಾದೇವ ಶಂಭೋ! ಕಲ್ಯಾಣಮಸ್ತು ಸರ್ವದಾ ಹರಿದ್ರಾ ಕುಂಕುಮ ಸೌಭಾಗ್ಯಾಭಿವೃದ್ಧಿರಸ್ತು.

(ಜಗನ್ಮೋಹಿನಿ ಚಕಿತಳಾಗಿ ಲಜ್ಜೆಯಿಂದ ತಲೆ ತಗ್ಗಿಸುವಳು)

ತಿಮ್ಮಯೋಗಿ— ಏಕೆ ತಾಯಿ, ಏನಾಯಿತು?

ಜಗನ್ಮೋಹಿನಿ— ತಾವಿಂದು ಹೊಸ ಒಗೆಯ ಆಶೀರ್ವಾದ ಮಾಡಿದ್ದು ನೋಡಿ ಆಶ್ಚರ್ಯವಾಯಿತು.

ತಿಮ್ಮ ಯೋಗಿ— ಅದು ನಾನಲ್ಲ, ಶಿವನೇ ನನ್ನ ಬಾಯಿಂದ ಹೊರಡಿಸಿದ ಆಶೀರ್ವಾದ.

ಜಗನ್ಮೋಹಿನಿ— ಸ್ವಾಮೀ, ಕೃಷ್ಣದೇವನೆಂಬ ಹೆಬ್ಬಾವು ನಮ್ಮ ಉತ್ಕಲ ರಾಷ್ಟ್ರದ ಸರ್ವಾಂಗವನ್ನೂ ನುಂಗಿದೆ ಇನ್ನು ಕಟಕಪುರಿಯ ತಲೆ ಮಾತ್ರ ಉಳಿದಿದೆ.

ತಿಮ್ಮ ಯೋಗಿ— ಆ! ತಲೆ ಮಾತ್ರ ಉಳಿದಿದೆ ತಾನೇ. ಇದೀಗ ಸಂಧಿಕಾಲವೆನ್ನು. ಸಂಧಿಕಾಲದಲ್ಲೇ ಥಕ್ಕನೆ ವಿಜಯಾನಂದವುಂಟಾಗುತ್ತದೆಂದು ನಾನು ಹೇಳುತ್ತಾ ಬಂದಿದ್ದೇನೆ. ಅದಕ್ಕಾಗಿ ತಲೆದೋರುವ ಆ ವೀರಪುರುಷನು, ಆ ಹೆಬ್ಬಾವನ್ನು ಮೆಟ್ಟಿ, ಅದು ನುಂಗಿದುದೆಲ್ಲವನ್ನೂ ಕಾರಿಸಿ ಬಿಡುತ್ತಾನೆ. ನಾನು ಎಷ್ಟೋ ದಿನದಿಂದ ಹೇಳುತ್ತಿರುವ ಆ ವೀರ, ಇಂದು, ಈಗ, ಈಗಲೇ—ಹಾ! ನಿನ್ನ ಕಣ್ಣಿಗೆ ಬೀಳುತ್ತಾನೆ ನೋಡು. (ಕಣ್ಣು ಮುಚ್ಚಿ) ಅಗೋ ನಿನ್ನ ಭಾಗ್ಯ ಸೂರ್ಯನು ಬರುತ್ತಿದ್ದಾನೆ!

ಜಗನ್ಮೋಹಿನಿ—(ತೆರೆಯ ಕಡೆ ನೋಡಿ, ನಾಚಿ) ಆ! ತೇಜಸ್ವಿ ಯಾವ ವಂಶೀನು ಗುರುದೇವಾ?

ತಿಮ್ಮಯೋಗಿ— ಎಲ್ಲಿ ಬಂದೇಬಿಟ್ಟನೆ?

ರಾಮಕೃಷ್ಣ— (ನೋಡಿ) ಓ, ಅಲ್ಲಿ ಯಾರೋ ಇಬ್ಬರು ಈ ಕಡೆಗೇ ಬರುತಿದ್ದಾರೆ.

ತಿಮ್ಮಯೋಗಿ— ಆಹಾ! ಶಿವ ಶಿವಾ! ಓ! ಜಗನ್ಮೋಹಿನಿ! ಆತನೇ ನಿಮ್ಮ ರಾಜ್ಯವನ್ನಾಳಿಸುವ ವೀರ ಚಂದ್ರ ಕುಲ ಕ್ಷತ್ರಿಯ ಲಲಾಮ! ಕುಲಗೇಡಿ ಕೃಷ್ಣದೇವರಾಯನ ವೈರಿ. ಪ್ರಕೃತ ರಾಜವರ್ಮನೆಂಬ ಹೆಸರಿನಿಂದ, ಗುಪ್ತವಾಗಿ ಮಹಾ ಸೇನೆಯನ್ನು ಸಂಗ್ರಹಿಸಿರುತ್ತಾನೆ. ನನ್ನ ದರ್ಶನಕ್ಕೆ ಧಾವಿಸಿ ಬರುತ್ತಿದ್ದಾನೆ. ಈ ಧೀರ ಪುರುಷನೇ ನಿನಗೆ ತಕ್ಕ ಪತಿಯಾಗುವನು ಜಗನ್ಮೋಹಿನೀ. (ಜಗನ್ಮೋಹಿನಿ ನಾಚಿಗೆಯಿಂದ ನಮಿಸುವಳು, ರಾಜವರ್ಮ ತಿಮ್ಮರಸರು ಪ್ರವೇಶಿಸುವರು ರಾಜವರ್ಮ ಜಗನ್ಮೋಹಿನಿಯರು ಪರಸ್ಪರನೋಡಿಕೊಳ್ಳುವರು. ಜಗನ್ಮೋಹಿನಿಗೆ ಮತ್ತಷ್ಟು ನಾಚಿಗೆ.)

ರಾಮಕೃಷ್ಣ — ಬರಬೇಕು ಬೇಗೆ (ಎರಡು ಪೀಠಗಳನ್ನಿಡುವನು)

ತಿಮ್ಮರಸು— ಮಹಾತ್ಮರಿಗೆ ವಂದಿಸುವೆನು. (ವಂದಿಸುವನು)

ರಾಜವರ್ಮ— ಮಹಾತ್ಮರಿಗೆ ಸಾಷ್ಟಾಂಗ ನಮಸ್ಕಾರ. (ಸಾಷ್ಟಾಂಗ ನಮಸ್ಕರಿಸುವನು)

ತಿಮ್ಮಯೋಗಿ— ವಿಜಯೀ ಭವ! ಶಿವ ಶಿವಾ! ಶಿವ ಶಿವಾ! ಶಿವ ಶಿವಾ! ರಾಜವರ್ಮನೂ, ಅವನಿದುರು ತಿಮ್ಮರಸನೂ ಯೋಗಿಯ ಅಕ್ಕಪಕ್ಕಗಳಲ್ಲಿ ಕುಳಿತುಕೊಳ್ಳುವರು)

ರಾಮಕೃಷ್ಣ — ಗುರುದೇವ, ಪೂಜಾ ಸಾಮಗ್ರಿಗಳು ಸಿದ್ಧವಾಗಿವೆ.

ತಿಮ್ಮಯೋಗಿ — ಓಹೋ! ಶಿವ ಶಿವಾ! (ರಾಮಕೃಷ್ಣ ಕರ್ಪೂರ ಹಚ್ಚಿ ಕೊಡುವನು. ಯೋಗಿ ಶಿವಲಿಂಗಕ್ಕೆ ಪೂಜೆ ಮಾಡುವನು. ಅವನ ಕೈಯಿಂದ ಪ್ರಸಾದ ಸ್ವೀಕರಿಸಿಕೊಂಡು ಜಗನ್ಮೋಹಿನಿ ಸಖಿಯರೊಂದಿಗೆ ಹೋಗುವಳು. ರಾಜವರ್ಮನ ನೋಟದಿಂದ ಸವಿ ನೋವನ್ನು ಅನುಭವಿಸಿಕೊಂಡು ಹೋಗುವಳು.)

ತಿಮ್ಮಯೋಗಿ— ರಾಜವರ್ಮ, ನೀನು ಕೇವಲ ನನ್ನ ದರ್ಶನಾಪೇಕ್ಷಿಯಾಗಿ ಬಂದರೂ ಶಿವನು ನಿನಗೊಂದು ಕನ್ಯಾರತ್ನದ ಕಾಣಿಕೆ ಕೊಡುತ್ತಾನೆ.

ರಾಜವರ್ಮ— ಇದೇನು—ಯೋಗಿಗಳು ಏನೋ ಹೇಳುತ್ತಾರೆ.

ರಾಮಕೃಷ್ಣ— ಆ! ನಿಮಗೇ ಹೇಳುವುದು ಸ್ವಾಮೀ.

(ಜಗನ್ಮೋಹಿನಿ ಸಖೀದ್ವಯರನ್ನು ಮುಂದೆ ಮಾಡುತ್ತಾ ಮೆಲ್ಲಮೆಲ್ಲನೆ ಬರುತ್ತಾಳೆ. ಅವಳ ಕಣ್ಣು ರಾಜವರ್ಮನ ಕಡೆಗೆ ಹಾರಿ ಹಾರಿ ತಗ್ಗುತ್ತದೆ. ರಾಜವರ್ಮ ಗಂಭೀರನಾಗಿರುತ್ತಾನೆ.)

ರಾಮಕೃಷ್ಣ-- ಏನು ಬೇಕಮ್ಮ?

ಮಂದಾರ— ಆ ಹೂವಿನ ತಟ್ಟೆ.

ರಾಮಕೃಷ್ಣ— ಓ! ಓ! (ತಟ್ಟೆಯನ್ನೆತ್ತಿ ಜಗನ್ಮೋಹಿನಿಯ ಕೈಗೆ ಕೊಡುವನು. ಅವಳು ಸಖಿಯರೊಂದಿಗೆ ಹೋಗುವಳು)

ತಿಮ್ಮಯೋಗಿ— ರಾಜವರ್ಮ, ಈಗಿ

(೧೧ನೇ ಪುಟ ನೋಡಿರಿ)

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕ್ಯಾಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3 ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ಹೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

ಜನಪ್ರಿಯವಾದ

ಗೀತೆಯ ಸಮೂಲ ಭಾಷಾಂತರ

ಇದೀಗ ಮಾರಾಟಕ್ಕೆ ಸಿದ್ಧವಾಗಿದೆ-

360 ಪುಟಗಳಿಗೂ ಮಿಕ್ಕಿದ

ಪಾಕೆಟ್ ಎಡಿಶನ್!

ದಪ್ಪವಾದ ಬಿಳಿ ನುಣುಪು ಕಾಗದ!

ಬೆಲೆ: ಸಾದಾ ಪ್ರತಿ ರೂ. ೧-೦೦
ಉತ್ತಮ ಪ್ರತಿ ರೂ. ೧-೫೦
ಅಂಚೆ ವೆಚ್ಚ ರೂ. ೦-೫೦

ರಖಂ ಪ್ರತಿಗಳ ದರಕ್ಕೆ ಬರೆಯಿರಿ:

ನವಯುಗ ಪ್ರೆಸ್ ಉಡುಪಿ, ದ ಕ.



ವಿವೇಚನೆಗೊಂದು ಸವಾಲು

ಭಾರತವು ಶಾಂತಿಪ್ರಿಯ ದೇಶವೆ?

ತಮ್ಮ ಕಾಲ್ಪನಿಕ ವಿಚಾರ ಕಿರಣಗಳಲ್ಲಿ ಇತಿಹಾಸಾಧ್ಯಯನ ಮಾಡಿದವರು ಐತಿಹಾಸಿಕ ತಥ್ಯಗಳ ಹೆಸರಿನಲ್ಲಿ ಎಷ್ಟು ಕಾಲ್ಪನಿಕ ಕಥೆಗಳನ್ನು ನಮಗೆ ಹೇಳಲಿಲ್ಲ?

ಶತಮಾನಗಳಿಂದ ಭಾರತ ಮತ್ತು ಚೀನಾಗಳ ನಡುವೆ ಮೈತ್ರಿಯು ಬೆಳೆದು ಬಂದಿತ್ತು ಎಂದು ನಮಗೆ ಪದೇ ಪದೇ ಹೇಳುತ್ತಾರೆ ಅವರು. ಸತ್ಯ ಹೇಳುವುದಾದರೆ ಆಸ್ವಾದ ಈ ಎರಡು ಮಹಾ ದೇಶಗಳ ನಡುವೆ ಅಲಂಘ್ಯ ಹಿಮಾಲಯ ಪರ್ವತ ಶ್ರೇಣಿಗಳು ಅಡ್ಡವಾಗಿದ್ದುವು; ಆದುದರಿಂದಲೇ ಯಾವ ಯುದ್ಧವೂ ನಡೆಯಲಿಲ್ಲ; ಇದರಿಂದಲೇ ಮೈತ್ರಿಯಿತ್ತೆಂದು ಹೇಳಬಾರದೇಕೆ? ಇಂದು ಈ ಅಡೆಯು ಪ್ರಭಾವ ಹೀನವಾಗಿ ಪರಿಣಮಿಸಿರುವುದರಿಂದ ಸ್ನೇಹವೂ ನಾಶವಾಯಿತೆಂದೇಕೆ ಹೇಳಬಾರದು? ಕಲ್ಪನಾ ಲೋಕದಲ್ಲಿಯೇ ವಿಚಾರಿಸಿ ಈ ಪ್ರಶ್ನೆಗಳನ್ನು ಉತ್ತರಿಸುವ ಪ್ರಯತ್ನ ಮಾಡಬಹುದು.

ಚೀನೀಯರು ಯುದ್ಧ ಪಿಪಾಸುಗಳು. ಆದುದರಿಂದ ಚೀನೀಯರೊಡನೆ ಸೈನಿಕ ಹೋರಾಟಕ್ಕೆ ನಾವು ಸದಾ ಬದ್ಧಕಟಿಯಾಗಿರಬೇಕು ಎಂದೀಗ ಮರಳಿ ಮರಳಿ ನಮ್ಮಲ್ಲಿ ಚೇತನ ದುಂಬಲಾಗುತ್ತಿದೆ. ಯುದ್ಧ ಲಿಪ್ಸುಗಳು ಅಧಿಕ ದೂರದರ್ಶಿಗಳು; ಆದರೆ, ತಾವು ಅಲ್ಪರು, ಅಸಹಾಯಕರು ಎಂದು ತಿಳಿಯುವವರು ನಿಜಕ್ಕೂ ಮೂರ್ಖರೆಂದು ಹೇಳಬೇಕಾಗುತ್ತದೆ.

'ನಾವು ಶಾಂತಿಪ್ರಿಯರು; ನಮ್ಮದು ಶಾಂತಿಪ್ರಿಯ ದೇಶ' ಎಂಬ ಪಲ್ಲವಿಯು ನಮ್ಮ ಕಿವಿದೆರೆಗೆ ಸದಾ ಬಡಿಯುತ್ತಿರುತ್ತದೆ. ಸಧ್ಯ ಇದು ನಿಜವೆನ್ನಬಹುದು; ಆದರೆ, ಐತಿಹಾಸಿಕ ದೃಷ್ಟಿಯಿಂದ ಹೇಳುವುದಾದರೆ, ಅದು ಶುದ್ಧ ಸುಳ್ಳು; ತಥ್ಯಕಥನದನ್ವಯ ಗಾಳಿಗೋಪುರ.

ನಾವು ಎಷ್ಟರ ಮಟ್ಟಿಗೆ ಶಾಂತಿ ಪ್ರಿಯರಾಗಿದ್ದೆವು? ವಿಜಯಾಕಾಂಕ್ಷೆಯ ಉನ್ಮಾದದೊಡನೆ ಎಲ್ಲರನ್ನೂ ಶಾಂತಿಯಿಂದ ಗೆಲ್ಲಬೇಕೆಂದು ಬಯಸುವಷ್ಟರ ವರೆಗೆ; ತಮ್ಮ ಹಿತಾಸಕ್ತಿಗಳ ದೃಷ್ಟಿಯಿಂದ ಯುದ್ಧವನ್ನು ಪರಿತ್ಯಾಗ ಮಾಡುವಷ್ಟರ ವರೆಗೆ. ಇದಕ್ಕಿಂತ ಹೆಚ್ಚಾದ ಶಾಂತಿಪ್ರಿಯತೆ ನಮ್ಮಲ್ಲಿ ಮೂಡಿದ್ದಿದೆಯೆ? ಆದರೆ, ನಾವೆಂದೂ ಯುಯುತ್ಸರಲ್ಲ; ಯುದ್ಧಾವಸರವು ಸನ್ನಿಹಿತವಾದಾಗಲೂ ಶತ್ರುವನ್ನು ವಿರೋಧಿಸುವವರಲ್ಲ—ಎಂದು ಯಾರಾದರೂ ತಿಳಿದರೆ, ಅದು ಸಂಪೂರ್ಣ ತಪ್ಪು.

ನಮ್ಮ ವೇದಗಳಲ್ಲಿ ಅನೇಕ ಸ್ಫೂರ್ತಿದಾಯಕ ಋಕ್ಕುಗಳಿವೆ. ಅವುಗಳಲ್ಲಿ ವೀರಭಾವನೆಯು ವರ್ಣಿತವಾಗಿದೆ. ದೇವತೆಗಳ ಅಧಿಪತಿಯಾದ ಇಂದ್ರನು ಸಮರೇಂದ್ರನೂ ಹೌದು. ಸಮರ ವಿಜಯಿಯಾಗುವ ಅಸ್ತ್ರಗಳನ್ನು ದಿವ್ಯಾಸ್ತ್ರಗಳೆಂದು ತಿಳಿಯುತಿದ್ದರು. ಯುದ್ಧ ಸನ್ನದ್ಧನಾಗದಿರುವುದೆಂದರೆ, ಅದು 'ಅನಾರ್ಯತನ'.

ಬುದ್ಧ ಮತ್ತು ಮಹಾವೀರರು ಅಹಿಂಸೆಯ ಪಾಠವನ್ನು ಕಲಿಸಿದರು. ಅವರು ತಮ್ಮ ಅನುಯಾಯಿ ಸಂಸಾರತ್ಯಾಗಿ ಭಿಕ್ಷು ಮತ್ತು ಶ್ರಮಣರಿಗೆ ದಯೆ ಮತ್ತು ಅಹಿಂಸೆಯ ದೀಕ್ಷೆಯಿತ್ತರು. ಸಂತರು ಮತ್ತು ಸಾಧುಗಳ ಮೂಲಕ ಜೀವನದಲ್ಲಿ ಆಚರಿಸಲ್ಪಡುವ ಈ ಸದ್ಗುಣಗಳು ಸಮಾಜದ ಹಿಂಸಾಪ್ರವೃತ್ತಿಯನ್ನು ಬಹಳಷ್ಟು ಉಪಶಮನಗೊಳಿಸಿದುವು. ಆದರೆ, ಜನತೆಯು ತನ್ನ ಮಾರ್ಗದಲ್ಲಿಯೇ ನಡೆಯುತಿತ್ತು.

ಲೋಕಾಚಾರ ಮತ್ತು ರಾಜನೀತಿಯ ಪರಮ ಗುರು ಮನು ಮತ್ತು ಯಾಜ್ಞವಲ್ಕ್ಯರು, ಶಾಂತಿ ಪರ್ವದ ಉಪದೇಶಕಾರ ಭೀಷ್ಮ ಮತ್ತು ಅರ್ಥಶಾಸ್ತ್ರದ ಪ್ರಣೇತರಾದ ಕೌಟಿಲ್ಯರು ನ್ಯಾಯಸ್ಥಾಪನೆಯ ಸಾಧನವೆಂದು ಯುದ್ಧವನ್ನು ವರ್ಜಿಸಲಿಲ್ಲ. ಯುದ್ಧವನ್ನು ಎಂದು ಮತ್ತು ಹೇಗೆ ಮಾಡಬೇಕು ಎಂದು ಅವರು ವಿವರಿಸಿದ್ದಾರೆ.

ಭಾರತೀಯರು ಯುದ್ಧಕ್ಕೆ ತಿಲಾರ್ಪಣ ಬಿಟ್ಟಿಲ್ಲ. ಸಂಪೂರ್ಣವಾಗಿ ಸಮರವನ್ನು ಪರಿತ್ಯಜಿಸಲಿಲ್ಲ. ಅಜಾತಶತ್ರು ಮತ್ತು ಬಿಂಬಸಾರರು ಯುದ್ಧ ಮಾಡಿದರು. ಹಾಗೆಯೇ ಚಂದ್ರಗುಪ್ತ ಮೌರ್ಯನೂ ಸಮರಗೈದನು. ಅವನ ಮೊಮ್ಮಗ ಅಶೋಕನು ಕಳಿಂಗ ಯುದ್ಧದ ವರೆಗೆ ಹೋರಾಟ ನಡೆಸಿದನು. ಅನಂತರ ಯುದ್ಧಾವಸರವು ಆತನಿಗೆ ಬರಲಿಲ್ಲ.

ಪ್ರತಿಹಾರ, ರಾಷ್ಟ್ರಕೂಟ ಮತ್ತು ಚೋಳ ರಾಜರು ಯಶಸ್ವಿಯಾಗಿ ವಿಜಯ ಗಳಿಸಿದರು. ಹೂಣ, ಅಫಘಾನ, ತುರ್ಕ ಮತ್ತು ಮೊಗಲರು ಭಾರತವನ್ನು ಪದದಲಿತ ಮಾಡಿದಾಗ, ಒಂದೊಂದಂಗುಲ ಭೂಮಿಗಾಗಿ ವರ್ಷಗಟ್ಟಲೆಯಾಗಿ ಭಾರತೀಯರು ಹೋರಾಡಿದ್ದರು. ರಾಣಾಸಂಗ, ಪೃಥ್ವೀರಾಜ ಚೌಹಾನ, ರಾಣಾಪ್ರತಾಪ, ಶಿವಾಜಿ ಮಹಾರಾಜ, ಗುರುಗೋವಿಂದ ಸಿಂಹರ ಹೆಸರು ಯುದ್ಧ ಕ್ಷೇತ್ರದಲ್ಲಿ ಅವರ ವಿರೋಚಿತ ಸಮರಗಳಿಂದಾಗಿ ಮನೆಮನೆಯಲ್ಲಿ ನೂರಾರು ವರ್ಷಗಳಿಂದ ಪ್ರತಿಧ್ವನಿತವಾಗುತ್ತಿದೆ.

ಔರಂಗಜೇಬನು ತನ್ನ ಪೂರ್ವಜರ ಉದಾರ ನೀತಿಯಿಂದ ಹಿಂಜರಿದಾಗ, ಪಂಜಾಬ, ಮಹಾರಾಷ್ಟ್ರ ಮತ್ತು ರಾಜಸ್ಥಾನಗಳು ಆತನ ಸಾಮ್ರಾಜ್ಯವನ್ನು ಉನ್ಮೂಲನಗೊಳಿಸಲು ಬದ್ಧಕಂಕಣವಾದುವು; ಸಮರ ಹೂಡಿದುವು. ೧೭೫೭ರಿಂದ ೧೮೫೭ರ ವರೆಗಿನ ಬ್ರಿಟಿಷ ರಾಜ್ಯದಲ್ಲಿ ಸತತ ಸಂಘರ್ಷವು ನಡೆಯುತ್ತಲೇ ಇತ್ತು. ಯುದ್ಧ, ವಿದ್ರೋಹ ಮತ್ತು ಭಾವೋದ್ರೇಕಗಳು ನಾನಾ ರೂಪವಾಗಿ ವಿಸ್ಫೋಟಗೊಳ್ಳುತ್ತಲೇ ಇದ್ದುವು. ಬ್ರಿಟಿಷರ ಅಪರಿಮಿತ ಶಕ್ತಿಗನುಸಾರ ೧೮೫೭ರ ಮಹಾಕ್ರಾಂತಿಯಲ್ಲಿ ಜನತೆಯು ತಲೆಯೆತ್ತಿ ನಿಂತಿತು.

ಮಹಾಕ್ರಾಂತಿಯನ್ನು ಅದುಮಿಡಲಾಯಿತು. ಬ್ರಿಟಿಷರು ದೇಶದ ಸಂಪೂರ್ಣ ಆಧಿಪತ್ಯ ಗ್ರಹಿಸಿದರು. ಸೈನ್ಯದ ಬಲದಿಂದ ಶಾಂತಿ ಸ್ಥಾಪಿತವಾಯಿತು. ೧೮೫೭ರಲ್ಲಿ ಜನತೆಯು ಶಾಂತಿಪೂರ್ಣ ಪ್ರತಿರೋಧವನ್ನೇ ಅವಲಂಬಿಸಬೇಕಾಯ್ತು. ಏಕೆಂದರೆ, ಇದರ ಹೊರತು ಏನನ್ನು ಮಾಡುವುದಕ್ಕೂ ಅವಕಾಶವಿರಲಿಲ್ಲ.

ರಣೋದ್ಯತ ರಾಷ್ಟ್ರವಾದದ ಸಾಕ್ಷಾತ್ ಅವತಾರ ಸ್ವರೂಪರಾದ ಯೋಗಿರಾಜ ಅರವಿಂದರು ಹಿಂಸೆಯ ಪರಿತ್ಯಾಗವನ್ನು ಸಿದ್ಧಾಂತರೂಪದಲ್ಲಿ ಮಾಡಲಿಲ್ಲ. ಯುದ್ಧ ಧುರಂಧರರಾದುದರಿಂದ ಅವರು ಆ ದಿನಗಳ ಸ್ಥಿತಿಗತಿಗಳಿಗನುಸಾರವಾಗಿ ಅಹಿಂಸಕ ಸಾಧನಗಳನ್ನು ರಾಷ್ಟ್ರೀಯ ಮುಕ್ತಿಯ ಉಪಾಯವೆಂದು ಸ್ವೀಕರಿಸಿದರು. ಆದರೂ ದೇಶಭಕ್ತ ನವ ಯುವಕರಿಗೆ ಹುತಾತ್ಮರಂತೆ ವೀರ ಮೃತ್ಯುವನ್ನು ಪಡೆಯಲು ಪ್ರೇರಣೆ ನೀಡುತಿದ್ದರು.

ಗಾಂಧೀಜಿಯವರ ಅಹಿಂಸೆಗೆ ದುರಾಗ್ರಹವು ಸಂತರಂತಿತ್ತು. ಆದರೆ, ಅವರ ಸಮರ್ಥಕರ ದೃಷ್ಟಿಯು ಸಂತರದರಂತಿರಲಿಲ್ಲ. ಅವರ ಪುಣ್ಯ ಪ್ರಭಾವದಿಂದ ಜನತೆಯ ಕೆಲವಾರು ವರ್ಗಗಳು ಹಿಂಸೆಯನ್ನು ನಿಂದ್ಯವೆಂದು ತಿಳಿದುವು; ಆದರೆ, ಇತರರು ಅಹಿಂಸೆಯನ್ನು, ಗಾಂಧೀಜಿಯವರು ಸ್ವಾತಂತ್ರ್ಯ ಸಂಗ್ರಾಮದ ನೇತೃತ್ವವನ್ನು ವಹಿಸುತ್ತಿರುವರು ಎಂಬ ಕಾರಣದಿಂದ ಸ್ವೀಕರಿಸಿದರು. ವಾಸ್ತವಿಕವಾಗಿ ಗಾಂಧೀಜೀಯವರ ಅನುಯಾಯಿಗಳಲ್ಲಿ ಅಧಿಕಾಂಶ ಜನರು ಸರ್ವಾತ್ಮಭಾವದಿಂದ ಅಹಿಂಸೆಯನ್ನೆಂದೂ ಸ್ವೀಕರಿಸಲಿಲ್ಲ. ಬಂಗಾಳವು ಅಹಿಂಸೆಯನ್ನೆಂದೂ ಸ್ವೀಕರಿಸಿದ್ದಿಲ್ಲ. ಪಂಜಾಬವು ಹಿಂಸೆಯನ್ನೇ ಮುಂದುವರಿಸುತಿತ್ತು. ದೇಶದ ಇತರೆಡೆಗಳಲ್ಲಿಯೂ ಸತ್ಯಾಗ್ರಹ ಆಂದೋಲನವು ಸಂಪೂರ್ಣ ಯಶಸ್ವಿಯಾದಲ್ಲಿ ಹಿಂಸಕವಾಗಿಯೇ ಅದು ನಡೆದಿತ್ತು. ಗಾಂಧೀಜೀ ಯುದ್ಧದ ಬದಲು ಸತ್ಯಾಗ್ರಹವನ್ನು ಸಾಧನವೆಂದು ಸ್ವೀಕರಿಸಿದರು. ಆ ಸತ್ಯಾಗ್ರಹವು ಸಫಲವೇಕಾಯಿತು? ಜನತೆಯಲ್ಲಿ ಹಿಂಸಾತ್ಮಕ ಸಾಧನಗಳು ಇ

(೧೦ನೇ ಪುಟ ನೋಡಿರಿ)

ಅಂಚೆಯವನು ತನ್ನ ಕರ್ತವ್ಯಪಾಲನೆಯಲ್ಲಿ ನಿಮಗ್ನನಾಗಿದ್ದಾನೆ. ನೀವೂ ನಿಮ್ಮ ಕರ್ತವ್ಯ ಮಾಡಬಾರದೇಕೆ?

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ........
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ

1—1—1963ರಿಂದ ಠೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ

ನಿಮ್ಮ ಉಳಿತಾಯವು ಸೇವಿಂಗ್, ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.
ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

● ಕುಮಾರಿ ಬಿಲ್ಲೆಗಳು ●

(ರಿಜಿಸ್ಟರ್ಡ್ Regd.)
ಪ್ರಕೃತಿಯು ವಿಫಲಗೊಂಡಾಗ ಉಂಟಾಗುವ ಕಾತರ ನಿವಾರಣೆಗೆ ಸಮಯೋಚಿತವಾದ ಆಯುರ್ವೇದೀಯ ಮಿಶ್ರಣ!
ಟ್ಯೂಬ್ 1ರ ಸಾಮಾನ್ಯ ರೂ. 4/- ಮಧ್ಯಮ ರೂ. 6/ ಉತ್ತಮ ರೂ. 9/-
P. Devce & Co. (N. J.) Calcutta—10.
ಸ್ಟಾಕಿಸ್ಟರು — ರಾಜಾ ಮೆಡಿಕಲ್ ಹಾಲ್, ಬೆಂಗಳೂರು ಕೆಂಟೋನ್ಮೆಂಟ್; ಕುಮಟಾ ಫಾರ್ಮಸಿ, ಕುಮಟಾ (ಉ. ಕ.)

ಗೇಹರಾಜ್ಯದಲ್ಲಿ

ಅಪರಾಧಕ್ಕೆ ತಕ್ಕ ಪ್ರಾಯಶ್ಚಿತ್ತ

ಹಾಗಂದ್ರೆ, ಇಂದು ಏನು ವಿಶೇಷ ವಿತ್ತೂಂತ?

ಎಲ್ಲಿ? ಯಾಕೆ? ಏನಾಯ್ತು?

ಅಲ್ಲಾ, ಮತ್ತೇನೂ ಇಲ್ಲಾನ್ನಿ.

ಅದೇ ಏನು ಹೇಳ ಬಾರದೇಂತ?... ಅಲ್ಲಾ...ಎಲ್ಲಿ ಹೋಗಿತ್ತೋ ಇಷ್ಟ್ರವರೆಗೆ ರಾಣೀ ಸವಾರಿ..

ಓ, ಅದನ್ನೇ ಹೇಳ್ಬೇಕೊಂತಂದೆ ಹೇಳಿಬಿಡಲ್ಲ ಮತ್ತೆ....

ಹೇಳ್ತೀನೆ, ನೋಡಿ ಮತ್ತೆ ನೀವು ಕೋಪಿಸ್ಕೋಬಾರ್ದು....

ಎಲಾ ಇವ್ಳ....ನಾನು ಕೋಪಿಸ್ಕೊಳ್ಳೋ ಕೆಲ್ಸ ನೀನು ಮಾಡೋದಾದ್ರೂ ಏನೂಂತ? ಅದನ್ನ ನೀನು ಹೇಳೋದಾದ್ರೂ ಏನೂಂತ?

ಇವತ್ತು ಸಂಜೆಗೆ ಸರ‍್ಸು ಬಂದಿದ್ಳು...

ಇವಳ್ಯಾಂತೇನು? ಅವ್ಳು ಯಾವಾಗ್ಲೂ ಬರ‍್ತಾನೇ ಇರ‍್ತಾಳೆ ಅಲ್ಲಾ....

ಅದು ಸರೀನ್ನಿ. ಆದ್ರೆ ಇಂದು ಹಾಗಲ್ಲ, ಕುಸು ವಿಶೇಷವಿತ್ತು....

ಅಂದ್ರೆ? ನನ್ಗೊಂದೂ ಅರ್ಥವಾಗೋದಿಲ್ಲ.

ನಿಮಗೆ ಅದೆಲ್ಲಾ ಹೇಗೆ ಅರ್ಥವಾಗಬೇಕು?

ಇಲ್ಲಿ ಬಿಡು ನಿನ್ಗಾದರೂ ಆಗಿದೆಯಲ್ಲಾ ಅದೇ ಸಂತೋಷ. ಆಗ್ಲಿ ಏನಂತ ಹೇಳ್ಬಿಡು ಮತ್ತೆ....

ಈಗ ನವರಾತ್ರಿ ತಾನೆ? ಹಾಗೇ ದೇವಿ ಪ್ರದರ್ಶನಾನೂ ಆಯ್ತು ಮತ್ತು...

ಏನೇ ಅದು ಮತ್ತೂಂತ ಅಲ್ಲೇ ನಿಲ್ಸಿದೆ....ಹೇಳ್ಬಾರ್ದೆ ಮುಂದೆ.?

ನೋಡಿ, ಇವತ್ತು ಏನು ವಿಶೇಷ...? ನವರಾತ್ರೀಂತಂದೆಯಲ್ಲಾ ಈಗ?

ಅದೂ ಗೊತ್ತಿಲ್ಲ ನಿಮ್ಗೆ. ಆಗ್ಲಿ, ಹೇಳಿದ್ದನ್ನಾದ್ರೂ ನೆನ್ಪಿಟ್ಟುಕೊಂಡ್ರಲ್ಲ. ಅದೇ ತೃಪ್ತಿ. ಅಲ್ಲ ಮತ್ತೇನೂ ಇಲ್ವೆ?

ಏನೋ ಸುಡುಗಾಡು....

ಸುಡುಗಾಡೇ ಸರೀ ಅನ್ನಿ. ಇಲ್ಲಾದ್ರೆ ನಿಮ್ಮಂತವರು ಕೂಡಾ...

ಏನು ಆಡ್ತಾ ಇದ್ದೀಯಾ ನೀನು? ನನ್ಗೇನಾಗಿದೇಂತ?

ಅಲ್ಲಾ ನೀವು ಎಲ್ಲಿ ಹೋಗಿದ್ರಿ ಇವತ್ತು?

ಚಲೋ ಸಿನಿಮಾ ಬಂದಿದೆ ನೋಡು ನೋಡೋಣಾಂತ ಹೊರಟುಬಿಟ್ಟೆ.

ಸರಿಹೋಯ್ತು ಬಿಡಿ ನಿಮ್ಮಂತಹ ದೇಶಭಕ್ತರಿಂದಲೇ ಭಾರತದ ಉದ್ಧಾರವಾಗೋದು.

ಏನೇ ಏನಾಡ್ತೀಯೇ?

ಇನ್ನೂ ಅರ್ಥವಾಗಿಲ್ಲ. ಅಬ್ಬಾ ದೇವರೇ, ನಿಮ್ಮ ಬುದ್ಧಿಶಕ್ತಿಯೆ?

ಉದ್ದ ತಮಿಳು ಸಿನೇಮಾ ನೋಡಿ ತಲೆ ಸಿಡಿಯುತ್ತಾ ಇದೆ. ನೀನನ್ನೋ ಒಂದು ಮಾತೂ ಅರ್ಥವಾಗೋಲ್ಲ

ಸರಿಯಾಯ್ತು ಬಿಡಿ. ಅರ್ಥವಾಗೋದಾದ್ರು ಹೇಗೆ? ನಾವು ಹೇಳುವ ಮಾತು ತಮ್ಮನ್ನು ಬಿಟ್ಟು ಬೇರೆಯವರಿಗೇಂತ ಹೇಳೋದು. ಸರಿಯಾಯ್ತು.

ಏನೇ ನೀನೀವತ್ತು ನನ್ನ ಗೋಳು ಹೊಯ್ಸೋಕೆ ಪ್ರಾರಂಭ ಮಾಡಿದ್ದೀಯ? ಏನಾಯ್ತೂಂತ? ಏನಪರಾಧ ಮಾಡಿದ್ದೇನೆ ನಾನೂಂತ? ಹೇಗೆ ಮಾತುಮಾತ್ನಲ್ಲೂ ಇಂಜೆಕ್ಷನ್ ಚುಚ್ಚುತ್ತ ಇದ್ರೆ ನುಸಿ ಚುಚ್ಚಿದ ಹಾಗೆ ಆಗುತ್ತೆ ಏನದು ಹೇಳ್ಬಾರ್ದೆ ಮತ್ತೆ.

ಸರಿಯಾಯ್ತು. ನಿಮ್ಮಂತವರನ್ನು ನಂಬಿಯೇ ನಮ್ಮ ನೆಹ್ರೂ ಕೆಟ್ಟು ಹೋದ್ರು.

ಏನಾಯ್ತೆ? ಏನಾಯ್ತೂಂತ!

ಹೇಳ್ತೀನಿ ಕೇಳಿ: ಸರಿಯಾದ ಉತ್ರ ಕೊಡ್ಬೇಕು ಮತ್ತೆ. ತಲೆ ಬಿಸಿಗಿಸೀಂತ ಬಾಯ್ಗೆ ಬಂದಾಗೆ ಬಡಬಡ್ಸಿದ್ರೆ...ಇಗೋಳ್ಳಿ ಒಂದ್ಲೋಟ ತಣ್ಣೀರಾದ್ರೂ ಕುಡೀರಿ—ತಲೆಗೆ ಏರಿದ ಗರ್ಮಿ, ಸಿತ್ತ ಸ್ವಲ್ಪ ಇಳೀಲಿ

ಅಯ್ಯಬ್ಬ. ಏನೋ ತುಸ ತ್ರಾಸವಾದಂತಿದೆ. ಈ ಹಾಳು ಸಿನೆಮಾ ನೋಡಿದ್ರೆ ಆಗೋದೇ ಹೀಗೆ.

ಮತ್ತೆ ಯಾಕೆ ಹೋದದ್ದು? ಯಾರು ನಿಮ್ಮನ್ನು ಹೋಗ ಹೇಳಿದರು?

ಅದೆಲ್ಲಾ ಬಿಡು ಮತ್ತೆ. ಈಗ ಒಂದು ಯಕ್ಷಪ್ರಶ್ನೆ ಕೇಳ್ತೀನೇಂತ ಹೇಳಿದಿಯಲ್ಲಾ? ಏನದು?

ಯಕ್ಷಪ್ರಶ್ನೆ .... ಅಲ್ಲ.... ಮತ್ತೆ....

ಸರಿ ಸರಿ ತಿದ್ದಿಕೊಂಡೆ ಯಕ್ಷಿಣಿ ಪ್ರಶ್ನೆ....

ಸಾಕು ಬಿಡೀಂದ್ರೆ. ಶುರುವಾಯ್ತು ಮತ್ತೆ ನಿಮ್ದು..

ಇಲ್ಲಮ್ಮಾ ಇಲ್ಲ. ಕೇಳು ನಿನ್ನ ಪ್ರಶ್ನೆಯನ್ನ...

ಹೇಳಿ ನಿಮ್ಮ ಉತ್ರವನ್ನ....

ಅಯ್ಯೋ ಸರಿ ಹೋಯ್ತು ಬಿಡು ನಿನ್ನ. ಅಲ್ಲ ಪ್ರಶ್ನೇನೇ ಕೇಳದೆ ಉತ್ರ ಹೇಳೇಂದ್ರೆ ಹೇಗೆ?

ಮತ್ತೆ ನಿಮಗೇನಷ್ಟು ಅವಸ್ರ. ಮಾತು ಪೂರ್ಣವಾಗೋಕ್ಕೂ ಅವಕಾಶ ಕೊಡ್ದಿದ್ರೆ ಹೇಗೆ ಮತ್ತೆ?

ಅಂತೂ ತಪ್ಪು ನನ್ದು ಅಲ್ವೆ?

ನಿಮ್ಮಾಣೆಯಾಗಿ ಹೇಳಬಲ್ಲೆ ಇವತ್ತು ನಿಮ್ದೇ ತಪ್ಪು.

ಅಬ್ಬಾ ನಿನ್ನ ಎದೆಗಾರಿಕೆಯೆ? ಏನು ಮಹಾಪರಾಧ ಮಾಡಿದೇಂತ.

ಅದನ್ನೇ ಹೇಳ್ತಿದ್ದೆ. ನೋಡಿ, ಇಲ್ಲಿ ನೋಡೀಂದ್ರೆ ಇವತ್ತು ಯಾವ ವಾರ?

ಭಾನುವಾರ ಅಲ್ವೆ?

ಸರಿ ಸರಿ, ತಾರೀಕು.

ತಾರೀಕು....ಹತ್ತೊಂಬತ್ತೋ ಹದಿನೆಂಟೊ ..

ನೋಡಿಯಾದ್ರೂ ಹೇಳಿಂದ್ರೆ....

ಸರಿ ಸರಿ ಇಪ್ಪತ್ತೂಂತ ನನ್ಗೆ ಅಂದಾಜೇ ಆಗ್ಲಿಲ್ಲ. ಮತ್ತು ನೀನಾದ್ರೂ ನೆನ್ಪು ಮಾಡ್ಬೇಕಿತ್ತಲ್ಲ ಕಣೇ. ಅನ್ಯಾಯವಾಯ್ತು..

(೯ನೇ ಪುಟ ನೋಡಿರಿ)



ಸೌರವ್ಯೂಹಾಧ್ಯಯನಕ್ಕೆ ಸಹಾಯಕವಾದ ಬೃಹದಾಕಾರದ ರೇಡಿಯೋ ಟೆಲಿಸ್ಕೋಪ್

ಉಡ್ಪಿ ಸಬೋರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ

O. S. 61/63.

P. ದೇವದಾಸ ನಾಯಕ್—ಕಡೆಯಿಂದ ಇವರ ಜನರಲ್ ಏಜೆಂಟ್

H. V. ಕಾಮತ್ — ವಾದಿ.

ಮತ್ತು

ಬಿ ಅನಂತ ಕಾಮತ್—ಬಿ. ಶ್ರೀನಿವಾಸ ಕಾಮತರ ಮಗ, ವ್ಯಾಪಾರಸ್ಥ, ಉಡ್ಪಿ ತಾಲ್ಲೂಕು, ಮೂಡುಬೆಳ್ಳೆ ಗ್ರಾಮ — ಪ್ರತಿವಾದಿ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ:—

ನೀವು ವಾದಿಗೆ ತಾರೀಕು 24-5-60 ರಂದು ರೂಪಾಯಿ 4800=00 ಮತ್ತು ರೂಪಾಯಿ 1500=00ಕ್ಕೆ ಬರಕೊಟ್ಟ ಎರಡು ಪ್ರೋಮಿಸರಿ ನೋಟಿನ ಅಸಲು ಬಾಕಿ ವ ಬಡ್ಡಿ ಕೂಡಾ ರೂಪಾಯಿ 7,631=57ಕ್ಕೆ ವಾದಿರು ನಿಮ್ಮ ಮೇಲೆ ದಾವಾ ಮಾಡಿದ್ದಾರೆ. ಸದರಿ ವ್ಯಾಜ್ಯವು ತಾರೀಕು 11-11-63ರಂದು ನಿಮ್ಮ ಹಾಜರಾತಿ ಬಗ್ಗೆ ಇಟ್ಟಿದೆ. ಆ ದಿವಸ ನೀವು ಸ್ವತಹಾ ಯಾ ವಕೀಲ ಮುಖಾಂತ್ರವಾಗಲೀ ಕೋರ್ಟಿಗೆ ಹಾಜರಾಗಿ ಉದಹರಿಸದಿದ್ದ್ರ, ನಿಮ್ಮ ಗೈರುಹಾಜರಿಯಲ್ಲಿ ಸದರಿ ವ್ಯಾಜ್ಯವು ತೀರ್ಮಾನಿಸಲ್ಪಡುವುದೆಂದು ನಿಮಗೆ ಈ ಮೂಲಕ ತಿಳಿಯಪಡಿಸೋಣಾಗಿಯದೆ.

M. Damodar Kamath,
Advocate for Plaintiff.

ತಾ. 17—10—63.

ದೀಪಾವಳಿಯ ಅಪೂರ್ವ ರಿಯಾಯತಿ

[—ನವಂಬರ ತಾ. 30, 1963ರ ವರೆಗೆ ಮಾತ್ರ]

ಪುಸ್ತಕ ಭಂಡಾರಗಳಿಗೆ, ರಸಿಕ ಓದುಗರಿಗೆ ಒಂದು ಅಪೂರ್ವ ಅವಕಾಶ

ಶ್ರೀಗಳಾದ ಎಂ ವಿ ಹೆಗ್ಡೆ, ಕುಲಕರ್ಣಿ ಬಿಂದು ಮಾಧವ, ವಿ. ಜಿ. ಹಿತ್ತಲಮನಿ, ಬಿ ಎಲ್. ಶ್ರೀಧರ, ಕು. ಶಿ ಹರಿದಾಸ ಭಟ್ಟ, ಪ್ರೇಮಚಂದ, ಎಸ್. ವೆಂಕಟರಾಜ, ಶಿವರಾಮ ಕಾರಂತ ಮತ್ತು ಶ್ರೀಮತಿಯರಾದ ಆರ್. ಕಲ್ಯಾಣಮ್ಮ, ಗಿರಿಬಾಲೆ, ಪದ್ಮಾ ಶೆಣೈಯವರೇ ಮೊದಲಾದ ಹಲವಾರು ಕನ್ನಡದ ಪ್ರಸಿದ್ಧ ಬರಹಗಾರರ ಅಮೂಲ್ಯ ಕೃತಿಗಳಿರುವ

ಅಂತರಂಗ ಪ್ರಕಟಣಾಲಯದ 35/- ರೂ ಬೆಲೆಯ 90 ಪ್ರಕಟಣೆಗಳನ್ನು ಒಮ್ಮೆಗೇ ಪಡಕೊಳ್ಳುವವರಿಗೆ ರೂ. 25/- ಕ್ಕೆ ಕೊಡುವೆವು—

ಹಾಗೆಯೇ

ಶ್ರೀಗಳಾದ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ, ದಿ| ಕೊರಡ್ಕಲ್ ಶ್ರೀನಿವಾಸರಾವ್, ಎಸ್. ವೆಂಕಟಯ್ಯಂಗಾರ್, ಸರಸ್ವತಿಬಾಯಿ ರಾಜವಾಡೆ ಕೈಯಾರ ಕಿಞ್ಞಣ್ಣ ರೈ, ಕೆ. ವಿಠಲಶೆಣೈ, ಎಂ. ವಿ. ಹೆಗ್ಡೆ ಮೊದಲಾದ ಖ್ಯಾತ ಸಾಹಿತಿಗಳ ಅತ್ಯುತ್ತಮ ಕೃತಿಗಳಿಸಿದ

'ಕಿರಿಯರ ಪ್ರಪಂಚ'ದವರ 40 ರೂಪಾಯಿ ಬೆಲೆಯ 39 ಪುಸ್ತಕಗಳನ್ನು ರೂ 30/- ಕ್ಕೆ ಕೊಡುವೆವು

ವಿವರವಾದ ಕೆಟಲಾಗಿಗೆ ಹತ್ತು ನಯಾಪೈಸೆ ಸ್ಟಾಂಪು ಇಟ್ಟು ಬರೆಯಿರಿ

ನವಭಾರತ ಪುಸ್ತಕ ಭಂಡಾರ, ರಿಜಿಸ್ಟರ್ಡ್ ಪಬ್ಲಿಷರ್ಸ್, ಉಡುಪಿ

ತಾ 14—11—63ರ

'ನವಯುಗ'ವು

ದೀಪಾವಳಿ ಸಂಚಿಕೆಯಾಗಿ ವಿಶಿಷ್ಟ ತರದಲ್ಲಿ ಪ್ರಕಟವಾಗುವುದು.

3 ದಿನ ಮುಂಚಿತವಾಗಿಯೇ ಸಂಚಿಕೆ ತಯಾರಾಗುವುದರಿಂದ ಜಾಹೀರಾತುದಾರರು ತ್ವರೆ ಮಾಡುವಂತೆ ವಿನಂತಿ.

Read & Advertise in

NAVAYUGA

DEEPAVALI ISSUE

ಜಾನಪದ ಕಥೆ

ಹೇಂಟೆಯೇನನ್ನು ಹುಡುಕುತ್ತಿದೆ?

ಹಿಂದೊಮ್ಮೆ ಒಂದು ಹೇಂಟೆ ಇತ್ತು. ಆಕೆಯಷ್ಟು ಅಂದದ ಹೇಂಟೆ ಬೇರೆನ್ನಾವದೂ ಆಗ ಇರಲಿಲ್ಲ. ಆಕೆಯ ವರ್ಣ ಹಿಮದಂತೆ ಶುಭ್ರ ಬೆಳ್ಳಗಾಗಿದ್ದು, ಕೊಕ್ಕು ಆಕರ್ಷಕವಾಗಿ ಬಗ್ಗಿಕೊಂಡಿತ್ತು. ಗರಿಗಳು ಬಹಳ ಮೆತ್ತನೆ ಇದ್ದವು. ಆಕೆಯ ಕಣ್ಣುಗಳು ಗುಂಡಗಾಗಿದ್ದು, ಸ್ಪಷ್ಟವಾಗಿದ್ದವು. ನಡಿಗೆಯು ಮನಸ್ಸನ್ನು ಆಕರ್ಷಿಸುವಂತಿತ್ತು. ಇತರ ಹೇಂಟೆಗಳು ಕೂಡಾ ಆಕೆಯ ನಡಿಗೆಯನ್ನು ನಿಂತುಕೊಂಡು ನೋಡುತ್ತಿದ್ದವು, ಅಲ್ಲದೆ ತಮ್ಮ ಮರಿಗಳ ಬಳಿ ಆಕೆಯ ನಡಿಗೆಯನ್ನು ಅನುಕರಿಸಲು ಹೇಳುತ್ತಿದ್ದವು.

ಎಲ್ಲಾ ಕೋಳಿಗಳಿಗೂ ಆಕೆಯು ಬಹಳ ಪ್ರಿಯಳಾಗಿದ್ದಳು. ಆಕೆಯ ಸುತ್ತ ಸುತ್ತ ಅವು ಯಾವಾಗಲೂ ಸುತ್ತು ಬರುತ್ತಿದ್ದವು. ಆಕೆ ಬಹಳವಾಗಿ ತನ್ನ ರೂಪದ ಹಾಗೂ ಕೋಳಿಗಳ ಅನುರಾಗದ ಪ್ರಪಂಚದಲ್ಲೇ ವಿಹರಿಸುತ್ತಿದ್ದಳು.

ಒಂದು ದಿನ ಒಂದು ವಿಚಿತ್ರ ನಡೆಯಿತು ಅದು ಬೆಳಗ್ಗಿನ ಸಮಯವಾಗಿತ್ತು. ಆಕೆಯು ಅಂಗಳದಲ್ಲಿ ಕಾಳುಗಳನ್ನು ಹೆಕ್ಕುತ್ತಿದ್ದಳು. ಆಗ ರೆಕ್ಕೆ ಬೀಸಿದಾಗ ಉಂಟಾಗುವ ಶಬ್ದ ಕೇಳಿ ಬಂತು. ಆಕಾಶದಿಂದ ಅದೇನೋ ವಸ್ತು ಕೆಳಗೆ ಬಿದ್ದಂತಾಯಿತು.

ಹೇಂಟೆಯು ಹೆದರಿಕೆಯಿಂದ ಒಮ್ಮೆಲೆ ಚೀರಿದಳು. ಆಕೆಯು ಕಣ್ಣು ತೆರೆದು ನೋಡಿದಾಗ ಪಕ್ಕದಲ್ಲಿ ಒಂದು ಗರುಡ ಪಕ್ಷಿ ಇರುವದನ್ನು ಕಂಡಳು.

"ನೀನು ಯಾರು?" ಆಕೆ ವಿಚಾರಿಸಿದಳು.

ಗರುಡನು ನಗುನಗುತ್ತ ನುಡಿದನು, "ನೀವು ನಾರಿಯರು ಅದ್ಯಾವಾಗಲೂ ಅಂಜುಬುರುಕರೇ ಸರಿ. ನಾನಾರೆಂಬುದು ನಿನಗೆ ತಿಳಿದಿಲ್ಲವೇನು? ನಾನೇ ಗರುಡನಿದ್ದೇನೆ. ನಿನಗೆ ಸುಸ್ವಾಗತ ಬಯಸಲಿಕ್ಕಾಗಿ ಇಲ್ಲಿಳಿದಿರುವೆನು.... "

ಆತನು ನೇರ ದೃಷ್ಟಿಯಿಂದ ಆಕೆಯನ್ನು ಕಂಡನು. ಆಕೆಯ ರೂಪಾಕರ್ಷಣೆಯಲ್ಲಿ ಆತನು ಪರವಶನಾದನು. "ನೀನೆಂತಹ ಸುರೂಪಿಣಿ!" ಅವನಿಗರಿವಿಲ್ಲದೆಯೇ ಮಾತುಗಳು ಹೊರಬಂದುವು

ಹೊಗಳಿಕೆಯಿಂದ ಹೇಂಟೆ ಉಬ್ಬಿತು. ಆಕೆಯ ಸಂತೋಷದಿಂದ ಬೆನ್ನು ತಟ್ಟಿದಂತಾದ ಗರುಡನು ಸಮೀಪಕ್ಕೆ ಸಾರಿ ಮೆಲ್ಲನೆ ಮಾತೆತ್ತಿದನು, "ನೀನು ನನ್ನನ್ನು ಮದುವೆಯಾಗುತ್ತೀಯೇನೇ?"

"ಏನ?" ಆಶ್ಚರ್ಯ ಹಾಗೂ ಆನಂದ ಭರದಿಂದ ಹೆಜ್ಜೆ ಹಿಂದಿಡುತ್ತ ಹೇಂಟೆ ಹೇಳಿದಳು

"ಯಾಕೆ, ಕೂಡದೇನು? ಇಷ್ಟು ಅಂದದ ಹೇಂಟೆಯನ್ನು ನಾನಿದುವರೆವಿಗೂ ಕಂಡಿರುವದೇ ಇಲ್ಲ.... "

ಹೇಂಟೆ ಮುದದಿಂದ ಮುಗುಳ್ನಗೆ ಬೀರಿದಳು. ಸ್ತುತಿ ಮಂತ್ರದಂತೆ ವರ್ತಿಸಿತು. ಲಲನೆಯ ಲಜ್ಜೆ ಅವಳನ್ನು ಆವರಿಸಿತು. ಆಕೆಯಿಂದವೇನ ಪ್ರತಿಯಾಡಲು ಸಾಧ್ಯವಾಗಲಿಲ್ಲ. ಉದ್ವೇಗಕ್ಕಡೆ ಕೊಡಬಾರದೆಂದು ಗರುಡನು ಗಂಭೀರತೆಗೆಡೆ ಕೊಟ್ಟನು. ಅವಳತ್ತ ಮುಗುಳ್ನಗೆ ಬೀರಿ ಗಗನದಲ್ಲಿ ಗರುಡನು ಹಾರಿಹೋದನು.

ಮರುದಿನವೂ ಗರುಡನು ಅಲ್ಲಿಗೆ ಬಂದನು. ಪುನರಪಿ ಅದೇ ಮಾತುಗಳನ್ನು ಆವನನುಸರಿಸಿದನು.

ಈ ಸಲ ಇನ್ನಷ್ಟು ನಾಚಿಕೆಯ ಬಿನ್ನಾಣದಿಂದ ಹೇಂಟೆ ಸಮ್ಮತಿ ಸೂಚಿಸಿದಳು. ಮುಂದರಿದು ಆಕೆಯು "ನಿಮ್ಮನ್ನು ವಿವಾಹವಾದಾಗ ನಿಮ್ಮೊಂದಿಗೆ ಹಾರಾಡಲು ನನಗೆ ಸಾಧ್ಯವಾಗಬೇಕು. ಆದರೆ, ಈಗ ಅದಕ್ಕೆ ನನ್ನ ರೆಕ್ಕೆಗಳು ಸಮರ್ಥವಾಗಿಲ್ಲ. ಆದುದರಿಂದ ಕೆಲ ದಿನ ಕಾದು ನೋಡೋಣವೆ"ಂದೂ ಮಾತುಕೊಟ್ಟಳು.

ಗರುಡನು ಸಂತೋಷದಿಂದ ಸಮ್ಮತಿ ಸೂಚಿಸಿ "ಸರಿ, ಹಾಗೆಯೇ ಆಗಲಿ. ಒಳ್ಳೆಯದು. ಇಕೋ, ಈ ಉಂಗುರವನ್ನು ತೆಗೆದುಕೊಳ್ಳು. ಇದು ನಿಶ್ಚಯದ ಉಂಗುರವಾಗಿರಲೆ"ಂದು ಹಚ್ಚ ಹಸುರು ಹುಲ್ಲಿನ ಅಂಗುಲೀಯವನ್ನು ಆಕೆಗೆ ಅರ್ಪಿಸಿದನು.

ಮುದ್ರೆಯನ್ನಾಕೆ ಧರಿಸಿಕೊಂಡಳು. "ಈ ಉಂಗುರದಿಂದ ನನ್ನ ಬೆರಳು ಅದೆಷ್ಟು ಅಂದವಾಗಿ ಕಾಣುತ್ತಿದೆ! ಯಾವ ಹೇಂಟೆಗೂ ಇಂತಹ ಅಂಗುಲೀಯ ಇರುವದಿಲ್ಲ...." ಆಕೆ ತನ್ನಷ್ಟಕ್ಕೆನೇ ಹೇಳಿಕೊಂಡಳು.

ಗರುಡನು ಹೋದ ನಂತರ, ತನ್ನ ಉಂಗುರವನ್ನು ಎಲ್ಲರಿಗೂ ಪ್ರದರ್ಶಿಸಬೇಕೆಂದು ಆಕೆ ಯೋಚಿಸಿಕೊಂಡಳು. ಆದರೆ, ದುರಾದೃಷ್ಟವಶಾತ್, ಆಕೆಯ ಎದುರಿಗೆ ಮೊದಲು ಬಂದದ್ದು ಹುಂಜರಾಯ. ಅವನು ಆ ಅಂಗುಲೀಯವನ್ನು ಕಂಡನು— ಕೆಂಡು ಕೆಂಪಾಯಿತು ಕ್ರೋಧದಿಂದ ಅವನ ಮುಖ.

"ಇದರ ಅರ್ಥವಾದರೂ ಏನು?" ಅವನು ಜೋರಾಗಿ ಕೇಳಿದನು. "ಇದನ್ನಿಕ್ತವನ್ಯಾರು?"

'ಆ...ಆ 'ಗರುಡನು ಕೊಟ್ಟನು.. ನನಗೆ 'ನಿಶ್ಚಯ...'ತಿಳಿಸಲಾಕೆ, ತಡವರಿಸುತ್ತ, ಪ್ರಯತ್ನಿಸಿದಳು.

"ಏನು?" ಹುಂಜ ಹಾರಿ ಕೇ'ದನು "ನಿಶ್ಚಯವಾಗಿದೆಯೇ? ನಮ್ಮ ನಡುವೆ ನಿಶ್ಚಯವಾಗಿರುವದು ನಿನಗೀಗ ನೆನಪಿಲ್ಲವೇನು?'

ಸಿಟ್ಟಿನಿಂದ ಅವನು ಆ ಅಂಗುಲೀಯವನ್ನು ಹಿಡಿದೆಳೆದು ತೆಗೆದು ದೂರ ಕಸದ ರಾಶಿಗೆ ಬಿಸಾಡಿದನು. ಆ ದೃಶ್ಯವನ್ನು ಕಾಣುತ್ತ ಸುತ್ತು ಗಟ್ಟಿದ್ದ ಹೇಂಟೆಗಳು ಹರ್ಷದಿಂದ ಮರಿಗಳನ್ನು ಕರೆಯುತ್ತ ಹೋಗಿ ಉಂಗುರವನ್ನು ಕಸದ ತುಂಡಾಗಿ ಮಾಡಿ ಹಾಕಿದುವು.

ವ್ಯಸನ ಹೇಂಟೆಯನ್ನು ಕವಿಯಿತು. ಅವಳಿಂದ ಅದೇನಾಡಲೂ ಅಸಾಧ್ಯವಾಯಿತು.

ಕೆಲ ದಿನಗಳ ನಂತರ ದರ್ಶನಾಕಾಂಕ್ಷಿ ಗರುಡನು ಪುನ ಇಲ್ಲೇ ಬಂದಿಳಿದನು. ಅವನ ಆಗಮನವನ್ನರಿತ ಆಕೆ ಬೆರಳನ್ನು ಬಚ್ಚಿಡಲು ಪ್ರಯತ್ನಿಸಿದಳು. ಅವನ ದೃಷ್ಟಿಗೆ ಬೆರಳು ಬೀಳದಿದ್ದಲ್ಲಿ ಉಂಗುರ ಕಳೆದು ಹೋಗಿರುವದು ಅವನಿಗೆ ಗೊತ್ತಾಗಲಿಕ್ಕಿಲ್ಲವೆಂಬುದು ಆಕೆಯ ಅಭಿಪ್ರಾಯ. ಗಾದೆಯ ಮಾತಿನಂತೆ ಗರುಡನ ಕಣ್ಣು ಅಷ್ಟು ಸ್ಪಷ್ಟವಾಗಿತ್ತು. ಉಂಗುರ ಇಲ್ಲದಿರುವದು ಅವನಿಗೆ ಗೊತ್ತಾಯಿತು. ಅವನು ಆಶ್ಚರ್ಯದಿಂದ, "ನಿನ್ನ ನಿಶ್ಚಯದುಂಗುರವೆಲ್ಲಿದೆ"ಂದು ವಿಚಾರಿಸಿದನು.

ನೈಜ ಸಂಗತಿಯನ್ನು ಸೂಚಿಸಲು ಆಕೆಗೆ ಧೈರ್ಯವಾಗಲಿಲ್ಲ ಆಕೆಯ ಅಲಕ್ಷ್ಯದಿಂದಾಗಿ ಅಂಗುಲೀಯ ಬಿಸಾಡಿಹೋಗಿದೆಂದೇ ಗರುಡನು ನಿಶ್ಚಯಿಸಿಕೊಂಡನು.

ಸಿಟ್ಟಿನಿಂದ ಸಿಡಿದು ಹಾರುತ್ತ ಗರುಡನು "ಅಲಕ್ಷ್ಯದ ಅಂಗನೆಯೇ, ಇದೇ ಏನು ನೀನು ನನ್ನ ಪ್ರಣಯಕ್ಕಿತ್ತಿರುವ ಮೌಲ್ಯ? ಒಳ್ಳೆಯದು. ನೀನು ಉಂಗುರವನ್ನು ಕಂಡುಹಿಡಿಯುವ ವರೆಗೂ ನಿನ್ನನ್ನು ನಾನು ಕಲ್ಯಾಣವಾಗುವದಿಲ್ಲ!" ಆತನು ದೂರ ಬಹುದೂರ ಆಕಾಶದಲ್ಲಿ ಹಾರಿ ಹೋದನು.

ಅಂದಿನಿಂದ, ಅಂಗುಲೀಯವನ್ನರಸುತ್ತ ಹೇಂಟೆಯು ಮಣ್ಣಿನಲ್ಲಿ ಹುಡುಕುತ್ತಿದೆ. ಇಂದಿಗೂ ಆ ಉಂಗುರ ದೊರಕಿರುವದಿಲ್ಲ. ಇನ್ನೂ ಆಕೆ ನೆಲವನ್ನು ಕೆರೆಯುತ್ತಿದ್ದಾಳೆ— ವಿವಾಹವಿನ್ನೂ ಆಗಿರುವುದಿಲ್ಲ

—ಶಿವಶಂಕರ ಮಂದ್ರಾಸು.

ಉತ್ತರದಿ ನುಗ್ಗಿಹರು......

ಉತ್ತರದಿ ನುಗ್ಗಿಹರು ಕಡುಕ್ರೂರ
ಶತ್ರುಗಳು
ಮಿತ್ರದ್ರೋಹದಿ ಕಪಟ ವಂಚನೆಯ
ಗೈದು
ಧರ್ಮ ಭಾವವ ತ್ಯಜಿಸಿ, ಕ್ರೂರ
ಸಂಚಕರೆನಿಸಿ
ಕಪಟದಿಂ ನುಗ್ಗಿಹರು ಶಾಂತಿಯನೆ
ತುಳಿದು ‖ ೧ ‖

'ಹಾವಿಗೆ ಹಾಲೆರೆದರೇನು ಫಲ'
ಎಂಬುದನು
ತೋರಿದರು ಚೀನಿಗಳು
ಭಾರತೀಯರಿಗೆ
ಭಾರತವು ನೀಡಿದ ವರದಹಸ್ತಂಗಳಿಗೆ
ವಿಷಕ್ರಿಯ ನೀಡಿದರು ಭಾರತದ
ವೀರರಿಗೆ ‖ ೨ ‖

ಭರತ ಮಾತೆಗೆ ಬಂಟು ಜಗತಾಯ
ಬೆಂಬಲ
ಈ ದುಷ್ಟ ಚೀನಿಗಳ ಪ್ರಯತ್ನವೇ
ನಿಷ್ಫಲ
ಹಾಗಿರಲು ನಮಗೇಕೆ ಭಯವು
ಅಣ್ಣಂದಿರಾ
ಭಾರತದ ಹಿಂದಣ ಶೂರರನು
ಮರೆತಿರಾ ‖ ೩ ‖

ಜಗಜಟ್ಟಿ ರಣಶೂರ ಭೀಮನಿದ್ದ
ಭಾರತ
ಮಹಾದಾನಿ ರಾಜ ಕರ್ಣನ ನೆರೆಸಿ
ನಿಂತ ಭಾರತ
ಜಯಸಿರಿಯು ಒಲಿಸಿದಂತ ಅರ್ಜುನನ
ಭಾರತ
ಮಹಾತ್ಮ ಶ್ರೀಕೃಷ್ಣ ಪಾಲಿಸುವ
ಭಾರತ ‖ ೪ ‖

ಗಾಂಧಿತಾತಗೆ ಜನ್ಮವಿತ್ತಳು ತಾಯಿ
ಭಾರತ ಮಾತೆಯು
ಲೋಕಮಾನ್ಯ ಶ್ರೀ ತಿಲಕರ ಪುಣ್ಯ
ಜನ್ಮದಾತಳು
ಶಾಂತಿಯನೆ ಪಾಲಿಸುವ ದೇವಿ
ಜಗನ್ಮಾತೆಯು
'ವಿಶ್ವವೆಲ್ಲ ಒಂದು ರಾಷ್ಟ್ರ' ಎಂಬ
ಐಕ್ಯ ಹಿತವತ್ರ ‖ ೫ ‖

ನಾವಲ್ಲ ಕನ್ನಡಿಗರು, ನಾವಲ್ಲ
ತಮಿಳರು
ನಾವು ಯಾವುದೂ ಅಲ್ಲಲ್ಲ ನಾವು
ಭಾರತೀಯರು
ಹಾಗಿರಲು ನೀವೇನು ಯೋಚಿಸು
ವಿರಣ್ಣಾ
ತಾಯ್ನೆಲವ ಬಿಡಬೇಡಿ ಕಾಪಾಡಿ
ರಣ್ಣಾ ‖ ೬ ‖

— ಕುತ್ಯಾರುಗುತ್ತು ರವೀಂದ್ರ ಶೆಟ್ಟಿ.

ಯಕ್ಷಗಾನದಲ್ಲಿ ಹಿರಿಯ ಸ್ಥಾನ ಗಳಿಸಿ, 'ಯಕ್ಷಗಾನ ಭಾಸ್ಕರ'ನೆಂದು ಪ್ರಸಿದ್ಧಿಪಡೆದ ದಿ| ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ಟರ

ನವಕಾಲೋಚಿತವಾದ ಯಕ್ಷಗಾನ ಪ್ರಸಂಗಗಳು.

ಸಾಹಸ ಭೀಮ ವಿಜಯ (ಗದಾಯುದ್ಧ) ೦—೮—೦
ಯಕ್ಷಗಾನ ದಶಾವತಾರದ ಆಟದ ಕ್ರಮಕ್ಕನುಸರಿಸಿ ಪಾಂಡವರ ಒಡ್ಡೋಲಗದ ದೃಶ್ಯವನ್ನು ದಿಗ್ದರ್ಶನ ಮಾಡಿ, ಮುಂದೆ ಕಥಾಭಾಗವನ್ನು ಮೂಲ ಕಾವ್ಯಕ್ಕನುಸರಿಸಿಯೇ ಕೊನೆಗೊಳಿಸಿದೆ.

ಭಾರತದ ಗುರುಕುಲ ೦—೬—೦
ಪಾಂಡವ, ಕೌರವ ಬಾಲ್ಯ ಕೇಳಿಗಳು, ವಿದ್ಯಾಭ್ಯಾಸ, ಪರೀಕ್ಷಾರಂಗದ ಕಾರ್ಯಗಳು, ಗುರುದಕ್ಷಿಣೆ ಮೊದಲಾದ ವಿಷಯಗಳನ್ನೊಳಗೊಂಡಿದೆ.

ಲತ್ತಪಗಡೆ ೦—೬—೦
ಭಾರತದ ಸಭಾಪರ್ವದೊಳಗಣ ಚರಿತ್ರೆಗಳಿರುವ ನಾಲ್ಕು ದೃಶ್ಯಗಳೂ ಅರಣ್ಯಪರ್ವೋಕ್ತವಾದ ಕಿರ್ಮೀರ ವಧೆಯೆಂಬ ದೃಶ್ಯವೂ ಸೇರಿವೆ.

ಭರತೇಶ ದಿಗ್ವಿಜಯ ೦—೮—೦
ರಾಜಕವಿ ರತ್ನಾಕರವರ್ಣಿಯ ಶೃಂಗಾರ ರಸಪ್ರಧಾನವಾದ ಭರತೇಶ ವೈಭವದೊಳಗಣ ದಿಗ್ವಿಜಯ ವಿಭಾಗದ ನೂತನ ಕಥಾವಸ್ತುಗಳನ್ನೊಳಗೊಂಡಿದೆ ಯಕ್ಷಗಾನ ಕಲಾಭಿಮಾನಿಗಳಿಗೆ ವಿವರವಾದ ಸೂಕ್ತ ಅನುಭವ ಸೂಚಿಯಿದೆ.

ವಾಲಿ ಸುಗ್ರೀವ (ಬಹುಮಾನಿತ) ೦—೮—೦
ವೀರ, ಕರುಣಾ ರಸಪ್ರಧಾನವಾದ ನವೀನ ರೀತಿಯಲ್ಲಿ ಮನವೊಪ್ಪುವಂತೆ ರಚಿಸಲಾದ ರಾಮಾಯಣಾಂತರ್ಗತ ಪ್ರಸಂಗ.

ಪುಸ್ತಕ ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ನವಭಾರತ ಪುಸ್ತಕ ಭಂಡಾರ, ಉಡುಪಿ.

NAVAYUGA
Kannada Weekly
UDIPI
Founder:
Late Sri A. B. Shetty
Former Minister for Public
Health, Govt of Madras
& Govt. of Mysore.

ನವಯುಗ

ವರುಷ	ಉಡುಪಿ	ವಾರ
೪೩	೩೧-೧೦-೧೯೬೩	೯

ಕಳಗಂ ಧೋರಣೆ

ಮದ್ರಾಸ ರಾಜ್ಯದ ಅನಭಿಷಿಕ್ತ ದೊರೆಯಂತಿದ್ದ ಕಾಮರಾಜರೇ ಮುಖ್ಯಮಂತ್ರಿಯಾಗಿರುವಾಗ ಸಂವಿಧಾನ ವಿರೋಧಿಯಾದ ಕೆಲಸಗಳನ್ನು ಮಾಡುತ್ತ ಹುಟ್ಟಿಕೊಂಡಿತ್ತು ದ್ರಾವಿಡ ಮುನ್ನೇತ್ರ ಕಳಗಂ. ಪ್ರತ್ಯೇಕ ತಮಿಳು ನಾಡಿನ ಬೇಡಿಕೆ, ಬ್ರಾಹ್ಮಣ ದ್ವೇಷ, ಹಿಂದೀ ಭಾಷಾ ವಿರೋಧ, ಭಾರತೀಯ ಸಂವಿಧಾನ ಪ್ರತಿ ದಹನ, ದೇವ ಮೂರ್ತಿ ಭಂಜನ—ಮೊದಲಾದ ವಿಚಿತ್ರ ಆದರೆ ಘಾತುಕ ಕಾರ್ಯಕ್ರಮಗಳಲ್ಲಿ ವ್ಯಸ್ತವಾಗಿದ್ದ ಕಳಗಂ ಆ ದಿನೆಗಳಲ್ಲಿಯೇ ಮುಂದುವರಿಯುತಿತ್ತು. ಕಳೆದ ಸಾರ್ವತ್ರಿಕ ಚುನಾವಣೆಗಳಲ್ಲಿ ಮದ್ರಾಸ ರಾಜ್ಯದಲ್ಲಿ ಅದು ನಿರೀಕ್ಷೆಗೂ ಮಿಗಿಲಾದ ಮತಗಳನ್ನು ಪಡೆದು ಹಲವು ಸ್ಥಾನಗಳನ್ನು ಗೆದ್ದುಕೊಂಡಿತು. ಸುಮಾರು ಇದೇ ಸಮಯದಲ್ಲಿ ಭಾವೈಕ್ಯದ ಬಿರುಗಾಳಿ ದೇಶದಲ್ಲಿ ಬೀಸಿತು. ಅದರ ಹಿಂದೆಯೇ ಚೀನೀಯರಿಂದ ದೇಶದ ಸಮಗ್ರತೆಗೆ ಮತ್ತು ಸ್ವಾತಂತ್ರ್ಯಕ್ಕೆ ಆಹ್ವಾನ ಬಂದಿತು. ಇದರ ಪರಿಣಾಮವಾಗಿಯೇ ಪ್ರತ್ಯೇಕತೆಯನ್ನು ಪ್ರತಿಪಾದಿಸುವುದನ್ನು ಮಹಾಪರಾಧವೆಂದು ಘೋಷಿಸುವ ತಿದ್ದುಪಡಿಯನ್ನು ನಮ್ಮ ಸಂವಿಧಾನಕ್ಕೆ ಮಾಡಲು ಉದ್ದೇಶಿಸಲಾಯಿತು. ಈ ಕಾರಣದಿಂದಾಗಿ ಕಳಗಂನ ನಾಯಕ ಅಣ್ಣಾದೊರೈಯವರು ತಮ್ಮ ಮಾತಿನ ದಾಟಿಯನ್ನು ಈಗ ಬದಲಿಸಿರುವುದಾಗಿ ಹೇಳಿಕೆ ನೀಡಿದ್ದಾರೆ; ಇದು ನಿಜಕ್ಕೂ ಕಳಗಂ ಇಟ್ಟ ಸಾಹಸದ ಹೆಜ್ಜೆಯೆನ್ನಬೇಕು

ಕಳಗಂ ಇನ್ನು ಮುಂದೆ ಪ್ರತ್ಯೇಕತೆಯ ವಾದವನ್ನು ಮುಂದಿಡುವುದಿಲ್ಲ; ಅಂದರೆ, ಪ್ರತ್ಯೇಕ ತಮಿಳು ನಾಡು ರಚನೆಯನ್ನೂ ಸ್ವತಂತ್ರ ದ್ರವಿಡ ಸ್ಥಾನದ ಕನಸು ಕಾಣುವುದನ್ನೂ ಬಿಟ್ಟುಕೊಟ್ಟು ಇಡಿಯ ಭಾರತದ ಸಮಗ್ರತೆಯ ರಕ್ಷಣೆಗೆ ಹೋರಾಡುವುದೆಂದೂ ಇದಕ್ಕೆ ಅನುಕೂಲವಾಗುವಂತೆ ತನ್ನ ಸಂವಿಧಾನದಲ್ಲಿ ಅವಶ್ಯಕ ತಿದ್ದುಪಡಿಯನ್ನು ಮಾಡಿಕೊಳ್ಳುವುದೆಂದೂ ಅಣ್ಣಾದೊರೈ ಹೇಳಿದ್ದಾರೆ. ದೊರೈಯವರು ಈ ರೀತಿಯಾಗಿ ಯೋಚಿಸಲು ಇರುವ ಕಾರಣವೇನು ಎಂಬುದಿನ್ನೂ ಸ್ಪಷ್ಟವಾಗಿ ತಿಳಿದು ಬಂದಿಲ್ಲ. ತನ್ನ ಪಕ್ಷದ ಮುಖ್ಯ ಉದ್ದೇಶವನ್ನೇ ಬಿಟ್ಟುಕೊಡುವುದಕ್ಕೆ ಅವರು ಮನದಂದರು ನಿಜ. ಇದಕ್ಕೆ ಪರಿಸ್ಥಿತಿಗಳ ಒತ್ತಡವೇ ಕಾರಣವೇ ಅಥವಾ ಅವರ ಹೃದಯವು ಸ್ವಾಭಾವಿಕವಾಗಿಯೂ ಪರಿವರ್ತನೆ ಹೊಂದಿದೆಯೆ? ಪ್ರಾಯಃ ಮೊದಲಿನ ಊಹೆಯೇ ಸರಿಯೆನಿಸುತ್ತದೆ. ಪ್ರತ್ಯೇಕವಾದವನ್ನು ಸಂವಿಧಾನ ಬಾಹಿರವೆಂದು ಸಾರಿದರೆ, ಸಂವಿಧಾನ ವಿರೋಧಿಯಾದ ಪಕ್ಷವು ದೇಶದಲ್ಲಿರುವುದು ಸಾಧ್ಯವಿಲ್ಲ. ಆಗ, ಕಳಗಂನ ಅಸ್ತಿತ್ವಕ್ಕೂ ಧಕ್ಕೆ ಬರುವುದು. ಈ ಎಲ್ಲಾ ಕಾರಣಗಳಿಂದ ಅಣ್ಣಾದೊರೈಯವರು 'ಮಹಾಪರಿವರ್ತನೆ'ಗೆ ಸಿದ್ಧರಾದರೆಂದರೆ, ಕಳಗಂನಿಂದಾಗಲೀ ಅವರ ನಾಯಕರಿಂದಾಗಲೀ ಭಾರತದ ಕಲ್ಯಾಣವಾಗುವುದು ಸಾಧ್ಯವಿಲ್ಲ. ಅಣ್ಣಾದೊರೈಯವರ ಹೇಳಿಕೆಯನ್ನು ಮದ್ರಾಸದ ಮುಖ್ಯಮಂತ್ರಿ ಶ್ರೀ ಭಕ್ತವತ್ಸಲಂ ಸ್ವಾಗತಿಸಿದರು; ಅವರಲ್ಲಿ ವಿವೇಕೋದಯವಾಯಿತೆಂದು ಹೇಳಿದರು. ಆದರೆ, ಕಾಂಗ್ರೆಸ್ ಪರಿಷ್ಯಗಲ್ಲಿ ಸೇರಿದ ಕಾಮರಾಜ ಮತ್ತು ಲಾಲಬಹದೂರರು ಅವರ ಮಾತಿನ ಮೇಲೆ ಹೆಚ್ಚು ವಿಶ್ವಾಸವಿಡಲಿಲ್ಲ ಅಭಿಪ್ರಾಯವನ್ನೂ ವ್ಯಕ್ತಪಡಿಸಲಿಲ್ಲ, ದೊರೈಯವರ ಹೃದಯವು ಅಂತರ್ಯದಲ್ಲಿ ಪರಿವರ್ತನೆಯಾದರೆ ಮಾತ್ರ ಅದರಿಂದ ದೇಶಕಲ್ಯಾಣ ಸಾಧ್ಯವಾಗುವುದೆಂಬುದನ್ನು ಮರೆಯಬಾರದು.

ಸಮಗ್ರತೆಗೆ ವ್ಯತಿರಿಕ್ತವಾದ ಸವಾಲೆತ್ತುವ ಅವಕಾಶ ಯಾರಿಗೂ ಇಲ್ಲವೆಂದಾದಲ್ಲಿ ಪ್ರತ್ಯೇಕತೆ ಮಾತ್ರ ದಂಡನಾರ್ಹವಾಗುವುದಲ್ಲ. ಭಾರತವು ಹಿಂದೀ ಭಾಷೆಯನ್ನು ತನ್ನ ಅಧಿಕೃತ ಭಾಷೆಯೆಂದು ಒಪ್ಪಿಕೊಂಡಿದೆ. ೧೯೬೫ರ ನಂತರ ಹಿಂದಿಯೊಡನೆ ಇಂಗ್ಲಿಷ್ ಭಾಷೆಯೂ ಸಮಾನಸ್ಥಾನಮಾನಗಳಿಂದ ಬಳಕೆಯಲ್ಲಿ ನಿಲ್ಲುವುದು. ಆದರೆ, ಕಳಗಂ ಹಿಂದೀ ಭಾಷೆಯನ್ನು ವಿರೋಧಿಸುತ್ತದೆ. ಇದು ಸಂವಿಧಾನದ ಸಮಗ್ರತಾ ರಕ್ಷಣೆಗೆ ಪ್ರತಿಕೂಲವಾಗುವುದಿಲ್ಲವೆ? ಜಾತ್ಯತೀತ ಕಲ್ಯಾಣ ರಾಷ್ಟ್ರದಲ್ಲಿ ಮತಧರ್ಮಗಳ ಮೇಲ್ಮೆ, ಕೀಳ್ಮೆಗಳು, ಆರಾಧನಾ ಸ್ವಾತಂತ್ರ್ಯವಿರುವ ದೇಶದಲ್ಲಿ ಮೂರ್ತಿ ಭಂಜನಾ ಕಾರ್ಯ ಮೊದಲಾದುವುಗಳಿಗೆ ಸಂವಿಧಾನವು ಅನುಕೂಲವಿದೆಯೆ? ಎಂದು ಮುಂತಾಗಿ ಪರಿಶೀಲಿಸಿದರೆ, ಇಲ್ಲವೆಂಬ ಉತ್ತರವೇ ಹೊರಡುತ್ತದೆ. ಹಾಗಾದರೆ ಅಣ್ಣಾದೊರೈ ಬಯಸುವಂತೆ ಸಾಮಾನ್ಯ ರೀತಿಯಲ್ಲಿ ಕಾರ್ಯನಿರ್ವಹಿಸುವಂತೆ ಸಂವಿಧಾನಕ್ಕೆ ತಿದ್ದುಪಡಿ ಮಾಡುವಾಗ ಈ ಎಲ್ಲ ವಿಚಾರಗಳನ್ನು ಗಮನಿಸಿ ಮುಂದಡಿಯಿಡಬೇಕಾಗುತ್ತದೆ. ಆಗ, ಕಳಗಂನ ಧ್ಯೇಯ ಧೋರಣೆಗಳಲ್ಲಿ ಕಂಡುಬರುವ ಹೊಸತನವೇನೂ ಇಲ್ಲ. ಎಂದರೆ, ಅಲ್ಲಿಗೆ ಕಳಗಂ ಮೂಲತಃ ಪತಿತವಾದಂತೆಯೇ ಸರಿ. ಕಳಗಂ ತನ್ನ ವಿಚಿತ್ರ ವೈಶಿಷ್ಟ್ಯವನ್ನು ಕಳೆದುಕೊಂಡು ಉಳಿಯಬೇಕಾದ ಆವಶ್ಯಕತೆಯಾಗಲೀ ಉಳಿದು ಸಾಧಿಸಬಹುದಾದ ಪುರುಷಾರ್ಥವಾಗಲಿ ಒಂದೂ ಇಲ್ಲ. ದೊರೈಯವರ ವಿಚಾರ ಧಾರೆಯು ಇಲ್ಲಿಯವರೆಗೂ ತೆರೆದಿರಬಹುದು. ಆದರೆ, ಆವೇಶವನ್ನು ಕಾರ್ಯರೂಪಕ್ಕೆ ತರುವುದು ಅಥವಾ ಬಿಡುವುದು ಕಳಗಂಗೆ ಸೇರಿದ್ದು. ಸ್ವಯಂ ತಮಿಳು ನಾಡಿನಲ್ಲಿಯೇ ಹೆಚ್ಚಿನ ಜನಪ್ರಿಯತೆ ಕಳೆದುಕೊಂಡು ಕಳಗಂ ತನ್ನ ವಿಧ್ವಂಸಕ ಪ್ರವೃತ್ತಿಗಳಲ್ಲಿ ತೊಡಗುವುದೆಂದರೆ, ಅದು ರಾಷ್ಟ್ರದ್ರೋಹ; ಸುಮ್ಮನುಳಿಯೋಣವೆಂದರೆ, ಪಕ್ಷದ ವರ್ಚಸ್ಸು ಕಡಿಮೆಯಾಗುವ ಸಂದರ್ಭ. ಹೀಗೆ ದ್ವಿವಿಧಾ ವೃತ್ತಿಗೆ ಸಿಕ್ಕಿಬಿದ್ದ ದೊರೈ ಯಾವ ರೀತಿಯಲ್ಲಿ ತನ್ನ ಮುಂದಿಟ್ಟ ಮಾತನ್ನು ನಡೆಸಿಕೊಡುವರ; ಕಾಗದ ಪತ್ರಗಳಲ್ಲಿ ಮಾತ್ರವೇ ಅಥವಾ ಕಾರ್ಯರಂಗದಲ್ಲೂ ಉಂಟೋ ಎಂದು ನಿಕಟ ಭವಿಷ್ಯದಲ್ಲಿ ನೋಡಬೇಕು.



ಶ್ರೀ ಶ್ರೀ ವಿದ್ಯಾರತ್ನ ತೀರ್ಥ ಶ್ರೀಪಾದಂಗಳವರು

ದ್ವೈತ ಮತ ಪ್ರತಿಷ್ಠಾಪನಾಚಾರ್ಯ ಶ್ರೀ ಮಧ್ವಾಚಾರ್ಯರಿಂದ ಸ್ಥಾಪಿತವಾದ ಉಡುಪಿಯ ಶ್ರೀ ಕೃಷ್ಣಾಪುರ ಮಠಾಧೀಶರಾದ ಶ್ರೀ ಶ್ರೀ ವಿದ್ಯಾರತ್ನ ತೀರ್ಥ ಶ್ರೀಪಾದಂಗಳವರು ತಮ್ಮ ಪ್ರಥಮ ಪರ್ಯಾಯೋತ್ಸವದ ಅವಧಿಯಲ್ಲಿಯೇ ಉಡುಪಿಗೊಂದು ಸಭಾಮಂದಿರ ಬೇಕೆಂಬ ಅಭಿಪ್ರಾಯ ಪಟ್ಟವರು. ಅದಕ್ಕಾಗಿಯೇ ಪಾಲುಕೋಟೆಯಲ್ಲಿ ಸದ್ಯ ಪೋಸ್ಟ್ ಆಫೀಸಿಗೆಂದು ಮೀಸಲಾದ ಸ್ಥಳವನ್ನು ಆಯ್ದುಕೊಂಡವರು. ಆದರೆ, ಕಾರಣಾಂತರದಿಂದ ಅವರಂದು ಕಾಣುತ್ತಿದ್ದ ಕನಸು ನನಸಾಗಲು ತುಸು ಸಮಯ ಕಳೆಯಿತು. ಇದೀಗ ಅವರು ತಮ್ಮ ಮಠದಾವರಣದಲ್ಲಿಯೇ ಸರ್ವವಿಧದ ಆಧುನಿಕ ರಂಗಸಜ್ಜಿಕೆಗಳಿಂದ ಕೂಡಿದ 'ಶ್ರೀಕೃಷ್ಣ ಸಭಾ ಮಂದಿರ'ವನ್ನು ಕಟ್ಟಿಸಿದ್ದಾರೆ, ಅದರ ಪ್ರವೇಶೋತ್ಸವವು ಇದೇ ವಿಜಯ ದಶಮಿಯಂದು ವೈಭವೋಪೇತವಾಗಿ ನಡೆಯಿತು. ಸ್ವಯಂ ಕಲಾಭಿಜ್ಞರೂ ಕಾರ್ಯನಿರತರೂ ಕರ್ತವ್ಯ ಪರಾಯಣರೂ ದೃಢ ನಿಲುವೆಯವರೂ ಆದ ಶ್ರೀ ಶ್ರೀ ವಿದ್ಯಾರತ್ನ ತೀರ್ಥ ಶ್ರೀಪಾದಂಗಳವರು ಉಡುಪಿ ನಗರದ ಆವಶ್ಯಕತೆಯೊಂದನ್ನು ಪೂರೈಸಿಕೊಟ್ಟರು. ಮಠದ ಆವರಣದಲ್ಲಿಯೇ ಈ ಸಭಾಮಂದಿರವಿರುವುದಾದರೂ ಅದನ್ನು ಹೊರಗಿನವರ ಉಪಯೋಗಕ್ಕೂ ಕೊಡುವ ಸೂಕ್ತ ವ್ಯವಸ್ಥೆಯಿರುವುದರಿಂದ ಅವರ ಕೃತ್ಯವು ನಿಜಕ್ಕೂ ಪ್ರಶಂಸನೀಯ. ಸರ್ವ ಕಾಲಗಳಲ್ಲಿಯೂ ಸಭೆ ಸಮಾರಂಭಗಳನ್ನು ನಡೆಸಲು ಸಮಾನುಕೂಲವಾದ ಸಭಾಮಂದಿರದ ನಿರ್ಮಾಣದಿಂದ ಶ್ರೀ ಪಾದಂಗಳವರು ನಾಗರಿಕರ ಕೃತಜ್ಞತೆಗೆ ಪಾತ್ರರಾಗಿದ್ದಾರೆ

ವಿಸ್ಮಯ, ಆದರೆ ಆನಂದ

ಚೀನಾ ಮತ್ತು ಸೋವಿಯತ್ ದೇಶಗಳ ನಡುವೆ ಬಿದ್ದಿರುವ ಬಿರುಕಿನ ಪ್ರಮಾಣವು ದಿನದಿನಕ್ಕೆ ಹೆಚ್ಚುತ್ತ ಬರುತ್ತಿರುವುದರಿಂದ ಚೀನಾದ ಆರ್ಥಿಕ ಹಿತಾಸಕ್ತಿಗಳ ಮೇಲೆ ತೀವ್ರತಮವಾದ ದುಷ್ಪರಿಣಾಮವು ಬೀಳುವಂತಾಗಿದೆ. ಇದರಿಂದಾಗಿ ಚೀನಾವು ಆಹಾರ ಪದಾರ್ಥಗಳು ಮತ್ತು ಔದ್ಯಮಿಕ ಉತ್ಪನ್ನಗಳಿಗಾಗಿ ಫ್ರಾನ್ಸ್, ಕೆನೆಡ, ಆಸ್ಟ್ರೇಲಿಯಾ ಮತ್ತಿತರ ಪಾಶ್ಚಾತ್ಯ ಬಣದ ದೇಶಗಳ ಮುಖವನ್ನು ನೋಡಬೇಕಾಗಿ ಬಂದಿದೆ. ಪಾಶ್ಚಾತ್ಯ ಬಂಡವಳಶಾಹಿ ದೇಶಗಳಿಂದ ಉದಾರ ಶರ್ತಗಳ ಮೇಲೆ ನೆರವನ್ನು ಪಡೆಯುತ್ತಿದ್ದರೆ, ಕಳೆದೊಂದು ದಶಕದಿಂದ ಸೋವಿಯತ್ತಿನ ಸಹಕಾರದಿಂದ ಸ್ಥಾಪಿತವಾದ ಉದ್ಯಮಗಳೆಲ್ಲವೂ ನಷ್ಟಹೊಂದುವುವು. ಪಾಶ್ಚಾತ್ಯ ದೇಶಗಳಿಂದ ತಮ್ಮ ದೇಶದ ಔದ್ಯೋಗೀಕರಣಕ್ಕೆ ಸಹಾಯ ಪಡೆಯುವುದು ಅನ್ಯಾಯವೆಂದು ಭರ್ತ್ಸನೆ ಮಾಡುತ್ತಿದ್ದ ಚೀನವೇ ಇಂದು ಪರರೊಡ್ಡುವದತ್ತ ಕೈನೀಡುತ್ತಿದೆ. ಬ್ರಿಟನ್, ಜಪಾನ್, ಫ್ರಾನ್ಸು ಮತ್ತು ಜರ್ಮನಿಗಳು ಚೀನಾದ ರೇಲುದಾರಿ, ಟೆಕ್ಸ್‌ಟೈಲ್ ಫೇಕ್ಟರಿ, ನೌಕಾಂಗಣ ಮೊದಲಾದುವನ್ನು ಮೊದಲು ಸ್ಥಾಪಿಸಿದವರು. ಇವೇ ಕಾರ್ಯಗಳನ್ನು ಮಾಡಲು ಚೀನಾವು ಮತ್ತೊಮ್ಮೆ ಅವುಗಳಿಗೆ ಕರೆನೀಡಲು ನಿರೀಕ್ಷೆಯಿದೆ. ಆಫ್ರೋ-ಏಶ್ಯನ್ ದೇಶಗಳು ಈ ಘಟನೆಯಿಂದ ಮನನಮಾಡುವುದು; ಏಕೆಂದರೆ ಅನಭಿವೃದ್ಧ ದೇಶಗಳು ಇದೇ ರೀತಿಯ ಸಹಾಯದಿಂದ ತಮ್ಮನ್ನು ತಾವೇ ಸುಧಾರಿಸ ಹತ್ತಿದ್ದಾರೆ. ಆದರೆ, ಇಂತಹ ದೇಶಗಳನ್ನು ಬಂಡವಳಶಾಹಿಗಳ ಕೈವಾರಿ ಎಂದು ಚೀನಾವು ಪ್ರತಿಭಟಿಸಿ, ತಾನು ತನ್ನ ಉದ್ಧಾರವನ್ನು ತಾನೇ ಮಾಡಿಕೊಳ್ಳುವುದಾಗಿ ಸಾರಿಕೊಂಡಿತ್ತು. [illegible] ಮತ್ತು ಬ್ರಿಟನ್ನಿನ ತಂತ್ರಜ್ಞರು ಚೀನಕ್ಕೆ ಬಂದೀಗ ರಶ್ಯವು ಎಂತಹ ಸಹಾಯ ನೀಡಿತ್ತೆಂಬುದನ್ನು ಪರಿಶೀಲಿಸ ಹತ್ತಿದ್ದಾರೆ. ಇದಕ್ಕಿಂತ ಆನಂದ ವಿಸ್ಮಯದ ಸುದ್ದಿ ಮತ್ತೇನಿದೆ?

ಅಲ್ಲಲ್ಲಿಯ ಸುದ್ದಿಸಾರ

ಶ್ರೀಕೃಷ್ಣ ಸಭಾ ಮಂದಿರದ ಪ್ರಾರಂಭೋತ್ಸವ

ಶ್ರೀಕೃಷ್ಣಾಪುರ ಮಠದ ಶ್ರೀ ಶ್ರೀ ವಿದ್ಯಾರತ್ನ ತೀರ್ಥ ಶ್ರೀಪಾದಂಗಳವರು ನೂತನವಾಗಿ ಕಟ್ಟಿಸಿದ ಶ್ರೀ ಕೃಷ್ಣ ಸಭಾ ಮಂದಿರದ ಪ್ರಾರಂಭೋತ್ಸವವು ತಾ. 27ರಂದು ವಿಜೃಂಭಣೆಯಿಂದ ನೆರವೇರಿತು. ಮಠದ ಪರವಾಗಿ ಶ್ರೀ ಎ. ಜಿ. ಅಲ್ಸೆಯವರು ಸ್ವಾಗತಿಸಿದರು. ಶ್ರೀ ವಿದ್ಯಾರತ್ನ ತೀರ್ಥ ಶ್ರೀಪಾದಂಗಳವರು ಸಭಾ ಮಂದಿರದ ಉದ್ದೇಶವನ್ನು ಪ್ರಸ್ತಾಪಿಸಿ ಸರ್ವರ ಆಗಮನಕ್ಕೆ ಸಂತೋಷ ವ್ಯಕ್ತಪಡಿಸಿದರು. ಶ್ರೀಗಳಾದ ಟಿ. ಎ. ಪೈಯವರೂ, ಕೆ. ಕೆ. ಪೈಯವರೂ ಶ್ರೀ ಕೃಷ್ಣಾಪುರ ಸ್ವಾಮಿಯವರ ಕಲಾ ಪ್ರೇಮ, ಅವರು ಕಲಾವಿದರಿಗೆ ಕೊಡುತ್ತಿರುವ ಪ್ರೋತ್ಸಾಹಗಳನ್ನು ವಿವರಿಸಿ ಅವರ ಈ ಕಾರ್ಯವನ್ನು ಕೊಂಡಾಡಿದರು. ಅನಂತರ ಉಪಸ್ಥಿತರಿದ್ದ ಕಾಣಿಯೂರು, ಎಡನೀರು, ಪಲಿಮಾರು, ಪರ್ಯಾಯ ಶೀರೂರು ಮಠಗಳ ಶ್ರೀಪಾದಂಗಳವರುಗಳು ಭಾಷಣ ಮಾಡಿ ಶ್ರೀಕೃಷ್ಣಾಪುರ ಮಠದ ಸ್ವಾಮಿಯವರ ಕಾರ್ಯವನ್ನು ಶ್ಲಾಘಿಸಿದರು ಕೊನೆಯಲ್ಲಿ ಶ್ರೀ ಬನ್ನಂಜೆ ರಾಮಾಚಾರ್ಯರು ಧನ್ಯವಾದಗಳನ್ನು ಅರ್ಪಿಸಿದರು. ಆ ದಿನ ಮತ್ತು ಮರುದಿನ ರಾತ್ರಿ ಮಠದ ಯುವಕ ಮಂಡಳಿಯವರಿಂದ ರುಕ್ಮಿಣೀ ಸ್ವಯಂವರ ಮತ್ತು ಬಡತನದ ಚಮತ್ಕಾರವೆಂಬ ನಾಟಕಗಳು ಜಯಶೀಲವಾಗಿ ಪ್ರದರ್ಶಿಸಲ್ಪಟ್ಟವು.

ನವರಾತ್ರಿ ಕಾರ್ಯಕ್ರಮಗಳು— ಉಡುಪಿಯ ಶ್ರೀ ಲಕ್ಷ್ಮೀ ವೆಂಕಟ್ರಮಣ ದೇವಸ್ಥಾನದ ವರದೇಂದ್ರ ಕಲಾಮಂದಿರದಲ್ಲಿ ತಾ. 23-10-63ರಿಂದ ಸಂಗೀತ, ನಾಟಕ, ಬಯಲಾಟ, ಹರಿಕಥೆ, ನೃತ್ಯ, ಭಜನೆ, ವ್ಯಾಯಾಮ ಪ್ರದರ್ಶನ ಮೊದಲಾದ ದಸರಾ ಮಹೋತ್ಸವದ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯುತ್ತಿವೆ. ತಾ. 27ರಂದು ಬಂಟ್ವಾಳ ಶ್ರೀ ಯಶವಂತ ವ್ಯಾಯಾಮ ಶಾಲೆಯವರಿಂದ ವ್ಯಾಯಾಮ ಪ್ರದರ್ಶನವೊಂದು ಶ್ರೀ ಟಿ ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಭಕ್ತ ಮಂಡಳಿಯ ಪರವಾಗಿ ಉತ್ಸಾಹಿ ಕಾರ್ಯಕರ್ತರಾದ ಶ್ರೀ ಯು. ರಾಘವೇಂದ್ರ ಕೃಷ್ಣಭಟ್ಟರು ಈ ಕಾರ್ಯಕ್ರಮಗಳನ್ನು ವ್ಯವಸ್ಥಾಪಿಸಿ ಕಲಾವಿದರ ಹಾಗೂ ಭಕ್ತರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದಾರೆ ತಾರೀಕು 5-11-63ರ ತನಕ ಜರಗಲಿರುವ ಈ ಕಾರ್ಯಕ್ರಮಗಳು ಉಡುಪಿಯ ಜನತೆಗೆ ಆಕರ್ಷಕ ಕಲೋತ್ಸವವಾಗಿವೆ.

ನಾಡಹಬ್ಬ- ಉಡುಪಿ ಗುಂಡಿಬೈಲು ಎಲಿಮೆಂಟರಿ ಶಾಲೆಯಲ್ಲಿ ಶಾಲಾ ವ್ಯವಸ್ಥಾಪಕರು ಮತ್ತು ಶಾಲೆಯ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ತಾ. 26ರಂದು ನಾಡಹಬ್ಬವನ್ನು ಆಚರಿಸಲಾಯಿತು. ಸಂಸ್ಕೃತ ಕಾಲೇಜ್ ಹೈಸ್ಕೂಲಿನ ಶ್ರೀ ರಾಮಣ್ಣ ಉಡುಪರು ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದ ಅಂಗವಾಗಿ ನಡೆದಿದ್ದ ವಿವಿಧ ಸ್ಪರ್ಧೆಗಳಲ್ಲಿ ಜಯಶೀಲರಾದವರಿಗೆ ಬಹುಮಾನಗಳನ್ನು ಹಂಚಲಾಯಿತು. ಶ್ರೀ ಬಿ. ಲಕ್ಷ್ಮೀನಾರಾಯಣ ನೆಲ್ಲಿಯವರಿಂದ ಭಾಷಣ, ಶ್ರೀ ಲಕ್ಷ್ಮೀನಾರಾಯಣ ರಾವ್ ಮತ್ತು ಶ್ರೀಪತಿ ರಾವ್‌ರಿಂದ ಕಾವ್ಯವಾಚನಗಳೂ ಮನರಂಜನಾ ಕಾರ್ಯಕ್ರಮಗಳೂ ನಡೆದುವು.

ಪ್ರವಾಸೀ ಪತ್ರಿಕೋದ್ಯಮಿಗಳು

ಹೈದರಾಬಾದು ಮತ್ತು ಮುಂಬಯಿ ಕರ್ನಾಟಕ ಪ್ರದೇಶಗಳಿಂದ ಪ್ರವಾಸ ಕೈಗೊಂಡ ಪತ್ರಿಕೋದ್ಯಮಿಗಳ ತಂಡವೊಂದು ತಾ 25ರಂದು ಜಿಲ್ಲೆಯ ವಿವಿಧ ಪ್ರಗತಿ ಕಾರ್ಯಗಳನ್ನು ಪರಿಶೀಲಿಸಿತು. ಮಂಗಳೂರಲ್ಲಿ 'ನವಭಾರತ' ಸಂಪಾದಕ ಶ್ರೀ ವಿ. ಎಸ್. ಕುಡ್ವರು ಪತ್ರಿಕೋದ್ಯಮಿಗಳನ್ನು ಸತ್ಕರಿಸಿದರು ಮಣಿಪಾಲದಲ್ಲಿ ಡಾ. ಟಿ. ಎಂ. ಎ. ಪೈಯವರು ಅವರಿಗೆ ಭೋಜನ ಸತ್ಕಾರವಿತ್ತು ಗೌರವಿಸಿದರು.

ನವಜೀವನ ಟೈಲ್ ಫ್ಯಾಕ್ಟರಿಯ ಉದ್ಘಾಟನೆ

ಶ್ರೀ ಬಿ. ಜಗಜ್ಜೀವನದಾಸ ಶೆಟ್ಟರು

ಶ್ರೀ ಶೆಟ್ಟರು ಸಾಮಾಜಿಕ, ವ್ಯಾವಹಾರಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಪ್ರಭಾವಶಾಲಿ ವ್ಯಕ್ತಿ. ಮಾಜಿ ಎಂ. ಎಲ್. ಎ. ಆದ ಇವರು ಸೌಮ್ಯ, ಸಂಘ ಪ್ರಕೃತಿಯ ಉತ್ಸಾಹಿ ಕಾರ್ಯಕರ್ತರು; ಜನಪ್ರಿಯರು. ಹಂಚಿನ ಉದ್ಯಮದಲ್ಲಿ ಇವರದು ಎತ್ತಿದ ಕೈ. ನಮ್ಮ ಜಿಲ್ಲೆಯಲ್ಲಿ ಮುಖ್ಯವಾಗಿ ಉತ್ತರ ವಿಭಾಗದಲ್ಲಿ ಈ ಉದ್ಯಮದಲ್ಲಿ ದೀರ್ಘಾವಧಿಯ ಅನುಭವವುಳ್ಳವರು ಹಿಡಿದ ಕೆಲಸವನ್ನು ನಡೆಸುವಾಗ ಅನೇಕ ವಿಘ್ನ ವಿಡಂಬನೆಗಳು ಎದುರಾದರೂ ಅವೆಲ್ಲವನ್ನು ಎದುರಿಸಿ ಜಯ ಗಳಿಸುವ ದೃಢ ಸಂಕಲ್ಪ ಮತ್ತು ಎದೆಗಾರಿಕೆಯುಳ್ಳ ಇವರು ಉಡುಪಿಯ ಅನತಿದೂರದ ಪುತ್ತೂರಿನಲ್ಲಿ 'ನವಜೀವನ ಟೈಲ್ ಫ್ಯಾಕ್ಟರಿ' ಎಂಬ ನವೀನ ಹಂಚಿನ ಕಾರ್ಖಾನೆಯೊಂದನ್ನು ಪ್ರಾರಂಭಿಸಿರುವರು ಇದರ ಉದ್ಘಾಟನಾ ಸಮಾರಂಭವು ತಾ 29ರಂದು ಡಾ ಟಿ ಎಮ್. ಎ ಪೈಯವರಿಂದ ನಡೆಯಿತು ಸುವಿಶಾಲವಾದ ಪುತ್ತೂರಿನ ಮೈದಾನದಲ್ಲಿ ಸರ್ವಸಜ್ಜಿತವಾದ ಈ ಕಾರ್ಖಾನೆಯ ನಿರ್ಮಾಣದಿಂದ ಶ್ರೀ ಶೆಟ್ಟರು ಹಂಚಿನ ಉತ್ಪಾದನಾ ಉದ್ದಿಮೆಯಲ್ಲೊಂದು ಮುಖ್ಯವಾದ ಹೆಜ್ಜೆ ಇಟ್ಟರು ಮಾತ್ರವಲ್ಲ ಪುತ್ತೂರಿಗೂ ಕೀರ್ತಿಯನ್ನು ತಂದು ಕೊಟ್ಟರು

ಯಕ್ಷಗಾನ ಕಲಾವಿದರಿಗೆ ಸನ್ಮಾನ— ಬಡಗುತಿಟ್ಟಿನ ಯಕ್ಷಗಾನ ಕಲಾವಿದರಲ್ಲಿ ಹೆಸರಾಂತ ಶ್ರೀ ಉಡುಪಿ ಬಸವನವರನ್ನು ಯಕ್ಷಗಾನ ಕಲಾಕ್ಷೇತ್ರದವರು ಸನ್ಮಾನ ಪತ್ರವನ್ನೂ ಉಚಿತ ಉಡುಗೊರೆಗಳನ್ನೂ ಇತ್ತು ಸತ್ಕರಿಸಿದರು. ತಾ. 28ರಂದು ಸ್ಥಳೀಯ ವರದೇಂದ್ರ ಕಲಾಮಂದಿರದಲ್ಲಿ ಜರಗಿದ ಈ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಕಲ್ಯಾಣ ಪ್ರಭಾಕರ ಪೈಯವರು ವಹಿಸಿದ್ದರು ಪ್ರಾರಂಭದಲ್ಲಿ ಅನೇಕ ಸಂಘ ಸಂಸ್ಥೆಗಳ ಪರವಾಗಿ ಶ್ರೀ ಉಡುಪಿ ಬಸವನವರಿಗೆ ಮಾಲಾರ್ಪಣೆಗಳನ್ನು ಮಾಡಲಾಯಿತು. ಅನಂತರ ಶ್ರೀ ಬೈಕಾಡಿ ವೆಂಕಟ ಕೃಷ್ಣರಾಯರು ಭಾಷಣ ಮಾಡುತ್ತಾ ಇಂದು ಪ್ರಾಚೀನ ಪರಂಪರೆಯ ಕಳೆ ನಮ್ಮ ಯಕ್ಷಗಾನ ಕಲಾರಂಗದಲ್ಲಿ ಉಳಿದಿರುವುದಕ್ಕೆ ಶ್ರೀ ಬಸವನವರಂತಹ ಹಿರಿಯ ಕಲಾವಿದರ ತ್ಯಾಗ ಮತ್ತು ನಿಸ್ವಾರ್ಥಪೂರ್ವಕವಾದ ದುಡಿಮೆ ಕಾರಣ ಎಂದರು ಶ್ರೀ ಬಸವನವರು ತಮ್ಮ ಕೃತಜ್ಞತೆಯನ್ನು ಅರ್ಪಿಸುತ್ತಾ, ಯಕ್ಷಗಾನದ ಬಗ್ಗೆ ಮತ್ತು ಈ ರಂಗದಲ್ಲಿ ದುಡಿಯುವ ಕಲಾವಿದರ ಕುರಿತು ಇಂದು ಉಂಟಾಗಿರುವ ಜಾಗೃತಿ ಮತ್ತು ಗೌರವ ಭಾವವು ಸ್ತುತ್ಯ ಎಂದರು. ತಮ್ಮಲ್ಲಿ ಏನಾದರೂ ಹೆಚ್ಚುಗಾರಿಕೆ ಇದ್ದರೆ ಅದಕ್ಕೆ ಯಕ್ಷಗಾನ ಪ್ರೇಮಿಗಳ ಪ್ರೋತ್ಸಾಹ ಕಾರಣ ಮತ್ತು ತಮ್ಮ ಗುರುಗಳಾದ ದಿವಂಗತ ಗಣಪತಿ ಪ್ರಭುಗಳ ಕೃಪೆ ಎಂದು ನುಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಬಸವನವರ ಪಾತ್ರ ನಿರ್ವಹಣೆಯನ್ನು ಪ್ರಶಂಸಿಸಿ ಅವರಿಗೆ ಶ್ರೇಯಸ್ಸನ್ನು ಕೋರಿದರು. ಸಮಾರಂಭವು 'ಚಿತ್ರಭಾ ಪರಿಣಯ' ಎಂಬ ಯಕ್ಷಗಾನ ಬಯಲಾಟದೊಂದಿಗೆ ಮುಕ್ತಾಯವಾಯಿತು ಇದರಲ್ಲಿ ಕಲಾಕ್ಷೇತ್ರದ ಸದಸ್ಯರು ತಾವು ಬಯಲಾಟದಲ್ಲಿ ಸಾಧಿಸಿದ ಪ್ರೌಢಿಮೆಯನ್ನು ರಸಿಕರು ಮೆಚ್ಚುವಂತೆ ಪ್ರದರ್ಶಿಸಿದರು.

ನಾಡಹಬ್ಬ ಮತ್ತು ಹಿಂದೀ ಪ್ರಮಾಣ ಪತ್ರ ವಿತರಣೋತ್ಸವ— ಕಡಿಯಾಳಿ ಹಾ ಎ ಶಾಲೆಯ ಹಳೆಯ ವಿದ್ಯಾರ್ಥಿ ಸಂಘದ ಪತಿಯಿಂದ ತಾ 25ರಂದು ನಾಡಹಬ್ಬ ಮತ್ತು ಹಿಂದೀ ಪ್ರಮಾಣ ಪತ್ರ ವಿತರಣೋತ್ಸವಗಳು ಉಡುಪಿ ನಗರ ಸಭಾಧ್ಯಕ್ಷ ಶ್ರೀ ಪಿ. ರಂಗನಾಥ ಶೆಣೈ ಅವರ ಅಧ್ಯಕ್ಷತೆಯಲ್ಲಿ ಜರಗಿದವು. ಉಡುಪಿ [illegible] ಅವರು ಪ್ರಮಾಣಪತ್ರಗಳನ್ನು ವಿತರಿಸಿದರು. ಕನ್ನಡ, ಹಿಂದೀ ನಾಟಕಗಳನ್ನು ಅಭಿನಯಿಸಲಾಯಿತು. ಪ್ರಾರಂಭದಲ್ಲಿ ಸಂಘದ ಅಧ್ಯಕ್ಷ ಶ್ರೀ ಕೆ. ಕೆ. ಪೈ ಅವರು ಸ್ವಾಗತ ಭಾಷಣ ಮಾಡಿದರು. ಕೊನೆಯಲ್ಲಿ ಪ್ರಧಾನ ಕಾರ್ಯದರ್ಶಿ ಶ್ರೀ ಎಸ್. [illegible] ಅವರು ಧನ್ಯವಾದ ಸಮರ್ಪಿಸಿದರು. ಸಂಘವು ಕೆಲವೊಂದು ವರ್ಷಗಳಿಂದ ಹಿಂದೀ ಶಿಕ್ಷಣವನ್ನು ಒದಗಿಸುತ್ತಿದ್ದು ಇದರಲ್ಲಿ ಪ್ರವೇಶ, ಹಿಂದೀ ಪ್ರಚಾರ ಪರಿಷತ್ತಿನ ಪ್ರಥಮಾ, ಮಧ್ಯಮಾ, ಪ್ರವೇಶ ಮತ್ತು ಉತ್ತಮಾ ಪರೀಕ್ಷೆಗಳಿಗೆ ಸೂಕ್ತ ತರಬೇತಿ ನೀಡಲಾಗುತ್ತಿದೆ

ಸದಸ್ಯರ ಮಹಾಧಿವೇಶನ— ಉಡುಪಿಯ ಹಿಂದೀ ಪ್ರಚಾರ ಪರಿಷತ್ತಿನ ಸದಸ್ಯರ ವಾರ್ಷಿಕ ಮಹಾಧಿವೇಶನವು ತಾ 24ರಂದು ಶ್ರೀ ಎ ನರಸಿಂಹ ಬಲ್ಲಾಳರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯಕಾರಿ ಸಮಿತಿಯು ಮಂಡಿಸಿದ ಹಿಂದಿನ ವರ್ಷದ ವರದಿ ಮತ್ತು ಪರಿಶೋಧಿತ ಆಯವ್ಯಯ ಹಾಗೂ ಸಾಲ ಮೂಲಗಳ ಲೆಕ್ಕಪತ್ರಗಳನ್ನು ಸಭೆಯು ಸರ್ವಾನುಮತದಿಂದ ಮಂಜೂರು ಮಾಡಿತು. ಪ್ರಚಲಿತ ವರ್ಷದ ಕಾರ್ಯಕಾರಿ ಸಮಿತಿಗೆ ಸದಸ್ಯರನ್ನು ಆರಿಸಿತು. ಶ್ರೀ ಶೀರೂರು ಮಠದ ಶ್ರೀ ಶ್ರೀ ಲಕ್ಷ್ಮೀಮನೋಜ್ಞತೀರ್ಥ ಶ್ರೀಪಾದಂಗಳವರನ್ನು ಪರಿಷತ್ತಿನ ಮಹಾ ಪೋಷಕರಾಗುವಂತೆ ಕೇಳಿಕೊಳ್ಳುವ ಗೊತ್ತುವಳಿಯನ್ನು ಸ್ವೀಕರಿಸಿತು.

ಕುಂದಾಪುರದಲ್ಲಿ ಕಾರಂತರ ಯಕ್ಷಗಾನ— ಯಕ್ಷಗಾನ ಕಲಾಕ್ಷೇತ್ರದಲ್ಲಿ ಶ್ರೀ ಕೋಟ ಶಿವರಾಮ ಕಾರಂತರು ನಡೆಸಿದ ನವ್ಯ ಪ್ರಯೋಗಗಳು ಸಧ್ಯದಲ್ಲೇ ಕುಂದಾಪುರದಲ್ಲಿ ಪ್ರದರ್ಶಿಸಲ್ಪಡುವುವು. ನವಂಬರ್ ತಾ 9ರಂದು 'ಬಭ್ರುವಾಹನ ಕಾಳಗ' ಎಂಬ ಪ್ರಸಂಗವೂ, ತಾ. 10ರಂದು 'ರತಿ ಕಲ್ಯಾಣ' ಪ್ರಸಂಗವೂ ಅಭಿನಯಿಸಲ್ಪಡುವುದು. ಕುಂದಾಪುರದ ಬೋರ್ಡ್ ಹೈಸ್ಕೂಲಿನ ಕಲಾ ಮಂದಿರದಲ್ಲಿ ನಡೆಯುವ ಈ ಪ್ರದರ್ಶನಗಳನ್ನು ಯಶಸ್ವಿಗೊಳಿಸಲು ಇಲ್ಲಿಯ ಕಲಾ ಸಂಘ ಸನ್ನಾಹ ನಡೆಸುತ್ತಿದೆ. ಕುಂದಾಪುರದಲ್ಲಿ ಕಾರಂತರ ಯಕ್ಷಗಾನದ ಪ್ರದರ್ಶನ ನಡೆಯುತ್ತಿರುವುದು ಇದೇ ಮೊದಲಬಾರಿ

ಉಡುಪಿಯಲ್ಲಿ ಡಾ. ಮೋದಿಯವರ ಉಚಿತ ನೇತ್ರ ಚಿಕಿತ್ಸಾ ಶಿಬಿರವು— ತಾ. 4-11-63ರಿಂದ ಸ್ಥಳೀಯ ಬೋರ್ಡ್ ಹೈಸ್ಕೂಲಿನ ಆವಾರದಲ್ಲಿ ಪ್ರಾರಂಭವಾಗುವುದು, ಚಿಕಿತ್ಸೆ ಪಡೆಯುವವರಿಗೆ ಉಚಿತ ಊಟ ವಸತಿ, ಔಷಧಿಯ ವ್ಯವಸ್ಥೆಯಿದೆ.

ಶಿರ್ವದಲ್ಲಿ ಶ್ರೀ ಕೊಳ್ತಿಬೈಲ್— ಶ್ರೀ ಎಲ್ ಎಸ್ ಕೊಳ್ತಿಬೈಲ್, ಎಂ. ಎಲ್. ಎ., ಕುಂದಾಪುರ ಇವರು ಇತ್ತೀಚೆಗೆ ಶಿರ್ವಕ್ಕೆ ಆಗಮಿಸಿ ಸ್ಥಳೀಯ ವಿದ್ಯಾವರ್ಧಕ ಸಂಘದ ಕಾರ್ಯನಿರ್ವಾಹಕ ಮಂಡಳಿಯ ಸದಸ್ಯರೊಡನೆ ವಿಚಾರ ವಿನಿಮಯ ಮಾಡಿ ಸಂಘವು ನಡೆಸಿಕೊಂಡು ಬರುತ್ತಿರುವ ವಿದ್ಯಾಸಂಸ್ಥೆಗಳ ಪ್ರಗತಿಗಾಗಿ ಸೂಕ್ತ ಸಲಹೆಗಳನ್ನಿತ್ತರೆಂಬುದಾಗಿ ತಿಳಿದು ಬರುತ್ತದೆ

ಶ್ರೀ ಟಿ. ರಮೇಶ ಪೈಗಳು

[illegible] ವ್ಯವಹಾರ ಪ್ರಪಂಚದಲ್ಲಿ [illegible] ಶ್ರೀ ಪೈಗಳು ಉಡುಪಿ [illegible]

ಉಡುಪಿ ಕರ್ನಾಟಕ ಸಂಘ— [illegible] ತಾ. 26 [illegible]

ವಿಜಯ ದಶಮಿ— [illegible]

[illegible]

[illegible]

ಯೋಜನೆಯ ಯಶಸ್ಸು

ಬಡವರೂ ಹಣ್ಣು ತಿನ್ನಬಹುದು

ಬೆಂಗಳೂರಿನ ಸಮೀಪದಲ್ಲಿಯೇ ಇರುವ ರೈತ ಲಕ್ಷ್ಮಯ್ಯನ ಪಾಲಿಗೆ ಸೀಬೇ ಹಣ್ಣು ಬೆಳೆಯುವುದು ತುಂಬ ಲಾಭದಾಯಕವಾಯಿತು. ಅವನ ಹಿರಿಯರೂ ರಾಗಿಯನ್ನಷ್ಟೇ ಬೆಳೆಯುತಿದ್ದರು ವರ್ಷಕ್ಕೆ ಎಕರೆಯೊಂದಕ್ಕೆ ೩೦೦ ರೂಪಾಯಿಗಳ ಆದಾಯ ಬಂದರೆ ಹೆಚ್ಚು. ಜೀವನದ ಅತ್ಯಂತಾವಶ್ಯಕ ವಸ್ತುಗಳನ್ನು ಕೊಳ್ಳುವುದಕ್ಕೂ ಈ ವರಮಾನ ಸಾಕಾಗುತ್ತಿರಲಿಲ್ಲ. ತುಂಬ ಬಡತನದ ಜೀವನ ಆತನದ. ಲಕ್ಷ್ಮಯ್ಯನಿಗೆ ಜೀವನವೇ ನಾಕುಸಾಕಾಗಿ ಹೋಗಿತ್ತು. ಆತನು ಸದ್ಯ, ಈ ಉದ್ಯೋಗ ನಮ್ಮ ಪೀಳಿಗೆಗೇ ಸಾಕು ಎಂದುಕೊಂಡ. ಹೇಗಾದರೂ ಮಾಡಿ ತನ್ನ ತಮ್ಮನನ್ನು ಒಬ್ಬ ಎಂಜಿನಿಯರ್‌ನನ್ನಾಗಿ ಮಾಡಿದರೆ ತನ್ನ ಜೀವನದ ಗುರಿ ಸಫಲವಾಗುತ್ತದೆ ಎಂದು ಭಾವಿಸಿದ. ಆದರೆ ರಾಗಿ ಬೆಳೆಯನ್ನು ನಂಬಿ ಕುಳಿತಿರುವ ಅವನು ತಮ್ಮನಿಗೆ ಎಂಜಿನಿಯರಿಂಗ್ ಶಿಕ್ಷಣ ಕೊಡಿಸುವುದಾದರೂ ಹೇಗೆ?

ಲಕ್ಷ್ಮಯ್ಯನ ವಿಚಾರವನ್ನು ಕೇಳಿದ ಎಷ್ಟೋ ಜನ ಅವನ ಸ್ನೇಹಿತರು "ಇದೇನು ಹುಚ್ಚು ಯೋಚನೆ? ನೀನೆಂದರೇನು, ನಿನ್ನ ತಮ್ಮನಿಗೆ ಎಂಜಿನಿಯರಿಂಗ್ ಶಿಕ್ಷಣ ಕೊಡಿಸುವುದೆಂದರೇನು? ಈ ಯೋಚನೆಯನ್ನು ಇಲ್ಲಿಗೇ ಬಿಡು, ಹಾಳಾದೀಯೆ!" ಎಂದು ಎಚ್ಚರಿಕೆ ಕೊಟ್ಟರು.

ಆದರೆ ತಮ್ಮನನ್ನು ಒಬ್ಬ ಎಂಜಿನಿಯರ್‌ನನ್ನಾಗಿ ಮಾಡಲೇಬೇಕೆಂಬ ಪ್ರಬಲಾಕಾಂಕ್ಷೆ ಲಕ್ಷ್ಮಯ್ಯನನ್ನು ಆ ದಿಶೆಯಲ್ಲಿ ಹುಚ್ಚನನ್ನಾಗಿಯೇ ಮಾಡಿತ್ತು.

'ಯಾರು ಏನು ಬೇಕಾದರೂ ಹೇಳಿಕೊಳ್ಳಲಿ, ಒಂದು ಕೈ ನೋಡಿಯೇ ಬಿಡುತ್ತೇನೆ" ಎಂದುಕೊಂಡ ಲಕ್ಷ್ಮಯ್ಯ ಎಂತಹ ತ್ಯಾಗಕ್ಕೂ ಸಿದ್ಧನಾಗಿ ನಿಂತ. ಅವನ ದೃಢ ಸಂಕಲ್ಪವೇ ಅವನಿಗೆ ಅನೇಕ ಬಲಕೊಟ್ಟಿತು. ಎಷ್ಟು ಬೇಕಾದರೂ ದುಡಿಯಲು ಅವನು ಸಿದ್ಧನಿದ್ದ. ಗುರಿ ಮುಟ್ಟುವುದೊಂದೇ ಅವನ ಸಂಕಲ್ಪವಾಯಿತು. ಲಕ್ಷ್ಮಯ್ಯನಿಗೆ ಇದ್ದದ್ದು ಕೇವಲ ಐದು ಎಕರೆಯಷ್ಟು ಭೂಮಿ. ಇಷ್ಟು ದಿನ ಅದರಲ್ಲಿ ರಾಗಿಯ ಬೆಳೆಯನ್ನಷ್ಟೇ ತೆಗೆಯಲಾಗುತ್ತಿತ್ತು. ಈಗ ಮೂರು ಎಕರೆಯಷ್ಟು ಜಮೀನಿನಲ್ಲಿ ಸೀಬೆಹಣ್ಣು ಬೆಳೆಯುವ ತೀರ್ಮಾನಕ್ಕೆ ಬಂದ ಲಕ್ಷ್ಮಯ್ಯ ಫಸಲು ಕೈಗೆ ಬರತೊಡಗಿದಾಗ ತನ್ನ ಶ್ರಮ ಸಾರ್ಥಕವಾಗುವ ಸೂಚನೆಗಳನ್ನು ಕಂಡು ಹಿಗ್ಗಿದ. ಒಂದು ಎಕರೆಗೆ ೧೦೦೦ ರೂ.ಗಳ ಆದಾಯ ಸುಲಭವಾಗಿ ಬರುತ್ತದೆಯೆಂಬುದು ಅವನಿಗೆ ಖಾತ್ರಿಯಾಯಿತು. ಆದರೆ ಸೀಬೆ ಹಣ್ಣನ್ನು ೧೫ ಮೈಲು ದೂರದ ಬೆಂಗಳೂರಿಗೆ ಮಾರುಕಟ್ಟೆಗೆ ಸಾಗಿಸಬೇಕು. ಗಾಡಿಗಳಲ್ಲಿ ಸಾಗಿಸುವಷ್ಟು ಹೆಚ್ಚು ಪ್ರಮಾಣದಲ್ಲಿ ಫಸಲು ಕೈಗೆ ಬರುವುದಿಲ್ಲ. ಮನಸ್ಸಿಗ್ದರೆ ಮಹಾದೇವ ಎನ್ನುವುದಿಲ್ಲವೇ ಹಾಗೆ, ಈ ವಿಚಾರದಲ್ಲಿಯೂ ಅವನೊಂದು ತೀರ್ಮಾನಕ್ಕೆ ಬಂದ. ಪ್ರತಿದಿನವೂ ಒಂದೆರಡು ಬುಟ್ಟಿಗಳಷ್ಟು ಹಣ್ಣು ಕೀಳುವ ಸ್ಥಿತಿಯಲ್ಲಿರುತ್ತದೆ. ಅವುಗಳನ್ನು ಆಗಾಗಲೇ ಸೈಕಲ್ಲಿನ ಮೇಲಿಟ್ಟುಕೊಂಡು ಬೆಂಗಳೂರಿನ ಮಾರ್ಕೆಟ್ಟಿಗೆ ಸಾಗಿಸಿದಂತಾಯಿತು! ಬೆಳಿಗ್ಗೆ ಎದ್ದು ಗಿಡಗಳ ಕಡೆ ದೃಷ್ಟಿ ಹಾಯಿಸಿದಾಗ ಅವನಿಗಾಗುತ್ತಿದ್ದ ಆನಂದ ಅಷ್ಟಿಷ್ಟಲ್ಲ. 'ನಿನ್ನ ಶ್ರಮ ಸಾರ್ಥಕವಾಗುತ್ತಿದೆ, ನೋಡು.' ಎಂದು ಅಶರೀರ ವಾಣಿಯೊಂದು ಹೇಳಿ ಹುರುಪು ತುಂಬಿದಂತಾಗುತಿತ್ತು! ತಮ್ಮ ಎಂಜಿನಿಯರ್ ಆಗುವುದು ತಾನು ಕಟ್ಟಿಕೊಂಡ ಭ್ರಮೆಯೇನೂ ಅಲ್ಲ ಎಂಬ ಭರವಸೆಯುಂಟಾಯಿತು.

ಲಕ್ಷ್ಮಯ್ಯನ ತಮ್ಮ ಎಂಜಿನಿಯರ್ ಆಗಿ ಕಂಟ್ರಾಕ್ಟ್ ಕೆಲಸ ನಡೆಸುತ್ತಿದ್ದಾನೆ. ಈಗ ಒಂದು ದೊಡ್ಡ ಬಂಡೆ ಒಡೆಸುವ ಕಂಟ್ರಾಕ್ಟ್ ಕೂಡ ಲಭಿಸಿದೆ. ಕೃತಂಬ ಸಂಪಾದನೆಯಾಗುತ್ತಿದೆ. ತಮ್ಮದೇ ಆದ ಮೂರು ಲಾರಿಗಳಲ್ಲಿ ಈ ಒಂಡೆಕಲ್ಲುಗಳು ಸಾಗಿಸಲ್ಪಡುತ್ತಿವೆ. ಲಾರಿಗಳು ತಮ್ಮ ಇತರ ಕಂಟ್ರಾಕ್ಟ್ ಉದ್ಯಮಗಳಿಗೂ ಪ್ರಯೋಜನಕಾರಿಯಾಗುತ್ತಿವೆ. ಯಾರ ಹಂಗೂ ಇಲ್ಲ, ಸ್ವತಂತ್ರ ಉದ್ಯಮ, ಸ್ವತಂತ್ರ ಸಂಪಾದನೆ, ಅದಕ್ಕೆ ತಕ್ಕ ದುಡಿತ. ಲಕ್ಷ್ಮಯ್ಯ ಈಗ ಹಿರಿಯ ಪ್ರಮಾಣದಲ್ಲಿ ಬೇಸಾಯ ನಡೆಸುವ ಪ್ರಬಲಾಕಾಂಕ್ಷೆಯಿಂದ ಹೊಸದಾಗಿ ಜಮೀನುಗಳನ್ನು ಕೊಂಡು ಅಲ್ಲಿ ಹಣ್ಣಿನ ತೋಟಗಾರಿಕೆಯನ್ನೇ ಮುಖ್ಯ ಗುರಿಯಾಗಿಟ್ಟುಕೊಂಡು ಸುಮಾರು ೧೫,೦೦೦ ರೂ.ಗಳ ವೆಚ್ಚದಲ್ಲಿ ದೊಡ್ಡ ಬಾವಿಯೊಂದನ್ನು ತೋಡಿಸುತ್ತಿದ್ದಾನೆ.

ತಮ್ಮನನ್ನು ಎಂಜಿನಿಯರ್‌ನನ್ನಾಗಿ ಮಾಡುವ ಯೋಚನೆಯನ್ನು ಕೇಳಿ ಅವನನ್ನೂ ಅಪಹಾಸ್ಯ ಮಾಡುತ್ತಿದ್ದ ಜನರೇ ಈಗ ಅವನನ್ನೂ ಕಂಡು ಮೂಗಿನ ಮೇಲೆ ಆಚ್ಚರಿಯಿಂದ ಬೆರಳಿಟ್ಟುಕೊಳ್ಳುತ್ತಾರೆ. ಮತ್ತು ತಾವೂ ಅದೇ ಮಾರ್ಗ ಹಿಡಿಯುತ್ತಿದ್ದಾರೆ.

"ರಾಗಿ ಬೆಳೆಯುವುದಿಲ್ಲವೇ, ಲಕ್ಷ್ಮಯ್ಯ'? ಈ ಪ್ರಶ್ನೆಗೂ ಅವನ ಬಳಿ ಉತ್ತರವಿದೆ. "ಬೆಳೆಯುತ್ತೇನೆ ಸ್ವಾಮಿ ಅದನ್ನು ಬಿಡುವಹಾಗಿಲ್ಲ, ತೋಟದಲ್ಲಿ ಕೆಲಸ ಮಾಡುವ ರೈತರ ಆಹಾರಕ್ಕೆ ಬೇಡವೇ? ನಮ್ಮ ಮನೆ ಉಪಯೋಗಕ್ಕೆ ಬೇಡವೆ? ಅದಕ್ಕಾಗಿ ಎಷ್ಟು ಬೇಕೋ ಅಷ್ಟನ್ನು ಬೆಳೆಯುತ್ತೇವೆ."

ರಾಗಿ, ಭತ್ತ ಇವುಗಳನ್ನಷ್ಟೇ ಬೆಳೆಯುವುದರಿಂದ ತಮ್ಮ ಆರ್ಥಿಕ ಸ್ಥಿತಿ ಸುಧಾರಿಸದು ಎಂದು ತಿಳಿದುಕೊಂಡಿರುವ ಎಷ್ಟೋ ಜನ ರೈತರು ಈಗಾಗಲೇ ಲಕ್ಷ್ಮಯ್ಯನಂತೆ ತೋಟಗಾರಿಕೆಗೆ ಕೈ ಹಾಕಿದ್ದಾರೆ. ಪಕ್ಕದ ಇನ್ನೊಂದು ಗ್ರಾಮದ ರೈತ ಬೈರೇಗೌಡರು ಹೇಳುವುದೂ ಇಷ್ಟೆ. ಹಣ್ಣು ಹಂಪಲು ಇತ್ಯಾದಿ ಬೇರೆ ಲಾಭದಾಯಕ ಬೆಳೆಗಳಿಗೆ ಕೈ ಹಾಕದಿದ್ದರೆ ರೈತರ ಆರ್ಥಿಕ ಸ್ಥಿತಿ ಸುಧಾರಿಸುವಂತೆಯೇ ಇಲ್ಲ. ಅವರ ದ್ರಾಕ್ಷಿ ತೋಟ ನೋಡುವುದೇ ಕಣ್ಣಿಗೊಂದು ಹಬ್ಬ. ಒಳ್ಳೆ ಪುಷ್ಟಿಕರವಾದ ಹಣ್ಣು ಹಂಪಲುಗಳನ್ನೂ ತರಕಾರಿಯನ್ನೂ ಬೆಳೆಯಬಹುದಾದ ಚೈತನ್ಯ ನಮಗಿರುವಾಗ ಇತರ ದೇಶಗಳಿಂದ ನಾವು ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳುವ ಆಗತ್ಯವಾದರೂ ಎಲ್ಲಿದೆಯೆಂದು ಆತ ಕೇಳುತ್ತಾನೆ. ದೇಶದಲ್ಲಿ ಇಂದು ಇರುವುದು ಆಹಾರದ ಕೊರತೆಯಷ್ಟೇ ಅಲ್ಲ ಉತ್ತಮ ಪೌಷ್ಟಿಕ ಆಹಾರದ ಹಾಗೂ ಹಣ್ಣು ಹಂಪಲುಗಳ ಕೊರತೆ ಇದೆಯೆಂಬುದನ್ನು ಗಮನಿಸಬೇಕು ಎಂದು ಆತ ಹೇಳುತ್ತಾನೆ.

ಪ್ರಾಯಶಃ ಇಂತಹ ಒಂದು ತಿಳಿವಳಿಕೆಯ ಪರಿಣಾಮವಾಗಿಯೇ ಇಂದು ಮೈಸೂರು ರಾಜ್ಯದಲ್ಲಿ ಹಣ್ಣು ಹಂಪಲುಗಳ ಬೆಳೆ ಪ್ರಮಾಣ ಹೆಚ್ಚಾಗುತ್ತಿದೆ ಎನ್ನಬಹುದು. ನಾನಾ ಜಾತಿಯ ವಾಣಿಜ್ಯ ಫಲಗಳನ್ನು ಈಗ ಬೆಳೆಯಲಾಗುತ್ತಿದೆ.

ಹಣ್ಣುಗಳ ಬೆಳೆಗೆ ಪ್ರೋತ್ಸಾಹ ನೀಡುವ ದೃಷ್ಟಿಯಿಂದ ಮೈಸೂರು ರಾಜ್ಯ ಸರ್ಕಾರ ಉತ್ತಮ ಜಾತಿಯ ಸಸಿಗಳನ್ನೂ ತಾಂತ್ರಿಕ ನೆರವನ್ನೂ, ಒದಗಿಸುವುದರ ಜೊತೆಗೆ ಸಾಲಸೌಲಭ್ಯವನ್ನೂ ಒದಗಿಸುತ್ತಿದೆ.

ಹಣ್ಣುಹಂಪಲುಗಳ ಬೆಳೆ ಅಭಿವೃದ್ಧಿಗಾಗಿ ಮೈಸೂರು ರಾಜ್ಯ ಸರ್ಕಾರವು ತೃತೀಯ ಯೋಜನಾ ಕಾಲದಲ್ಲಿ ಒಟ್ಟು ೪೦ ಲಕ್ಷ ರೂಗಳ ವೆಚ್ಚವನ್ನು ಮೀಸಲಿಟ್ಟುಕೊಂಡಿದೆ. ರೈತರಿಗೆ ಯೋಜನೆಯ ಕಾಲದಲ್ಲಿ ಸುಮಾರು ೩೦ ಲಕ್ಷ ಸಸಿಗಳನ್ನು ಒದಗಿಸುವ ಕಾರ್ಯ ಯೋಜನೆ ಕೂಡಾ ಜಾರಿಯಲ್ಲಿದೆ.

ಹಣ್ಣು ಬೆಳೆಯುವ ರೈತರಿಗೆ ತಾಂತ್ರಿಕ ಸಲಹೆಗಳನ್ನು ನೀಡಲು ರಾಜ್ಯ ಮಟ್ಟದಲ್ಲಿ, ಡಿವಿಜನ್ ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ತಾಂತ್ರಿಕ ಸಿಬ್ಬಂದಿಯನ್ನು ಇಡಲಾಗಿದೆ. ರೈತರ ಬೇಡಿಕೆಗಳನ್ನು ಪೂರೈಸುವ ಸಲುವಾಗಿ ಎಲ್ಲಾ ಜಿಲ್ಲೆಗಳಲ್ಲಿ ನರ್ಸರಿಗಳನ್ನು ಆರಂಭಿಸುವ ಕಾರ್ಯಕ್ರಮ ಕೂಡಾ ಇದೆ. ರಾಜ್ಯದಲ್ಲಿ ಹವಾಗುಣ ಹಾಗೂ ಮಣ್ಣಿನ ಲಕ್ಷಣಗಳ ಆಧಾರದ ಮೇಲೆ ಒಟ್ಟು ಎಂಟು ಪ್ರಾದೇಶಿಕ ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸಿ ಆ ಪ್ರದೇಶಗಳಲ್ಲಿ ಬೆಳೆಯುತ್ತಿರುವ ಹಣ್ಣು ಹಂಪಲುಗಳ ಬೆಳೆಗಳಿಗೆ ಸಂಬಂಧಿಸಿದಂತೆ ಸಲಹೆಗಳನ್ನು ನೀಡಲೂ ವ್ಯವಸ್ಥೆ ಮಾಡಲಾಗುವುದು.

ಸರ್ಕಾರ ಉದ್ದೇಶಿಸಿರುವ ಈ ಕ್ರಮಗಳು ಮತ್ತು ರೈತರಲ್ಲಿಯೇ ಕಂಡುಬರುತ್ತಿರುವ ವಿಶೇಷ ಉತ್ಸಾಹ, ಇವು ಹಣ್ಣು ಹಂಪಲುಗಳು ಜನಸಾಮಾನ್ಯರಿಗೂ ಒದಗುವಂತಹ ಒಂದು ಭವ್ಯ ಕನಸು ನನಸಾಗುವ ದಿಶೆಯಲ್ಲಿ ತುಂಬಾ ನೆರವಾಗುತ್ತವೆಯೆಂದು ಭಾವಿಸಬಹುದಾಗಿದೆ.



ಮಹಾರಾಷ್ಟ್ರದ ಟ್ರಾಂಬೆಯಲ್ಲಿನ ಬರ್ಮಾ ಶೆಲ್ ತೈಲ ಶುದ್ಧೀಕರಣ ಕಾರಖಾನೆಯ ಒಂದು ನೋಟ

ಅಪರಾಧಕ್ಕೆ ತಕ್ಕ ಪ್ರಾಯಶ್ಚಿತ್ತ

(೪ನೇ ಪುಟದಿಂದ)

ಏನದು ಅನ್ಯಾಯ? ಯಾರಿಗೆ ಅನ್ಯಾಯ? ಸ್ವಲ್ಪ ಬಿಡ್ಸಿ ಹೇಳೀಂಪ್ರೆ....

ಅಲ್ಲ ಇನ್ನು ಹೇಳಿ ಏನು ಪ್ರಯೋಜನ? ಅನ್ಯಾಯ ವಾದದ್ದಂತೂ ನಿಜ. ಇನ್ನು ಪ್ರಾಯಶ್ಚಿತ್ತವೇ ಬಾಕಿ.

ಯಾಕೆ ಏನಾಯ್ತೂಂತ ಅಂಥ ದೊಡ್ಡ ತಪ್ಪು ...

ಜೇನೀಯರು ಥಾಳಿಯಿಟ್ಟು ಒಂದು ವರ್ಷ ಆಯ್ತು ಕಣೇ. ಇಂದಿನ ದಿನವನ್ನು ರಾಷ್ಟ್ರೀಯ ಐಕ್ಯದಿನವೆಂದು ಆಚರಿಸುವುದೆಂದು ಗೊತ್ತಾಗಿತ್ತು. ನಮ್ಮಲ್ಲೂ ಅದನ್ನು ಆಚರಿಸಲು ಸಭೆ ನಡೆಯಿತು. ಛೆ...ನನ್ನ ಮರವೆ? ರಜೆಯಿದ್ರೆ ಹೀಗೇನೇ ತಾರೀಖೂ ಇಲ್ಲ ನೆನಪೂ ಇಲ್ಲ....

ಈಗಲಾದ್ರೂ ಗೊತ್ತಾಯ್ತಲ್ಲ ನಿಮ್ಗೆ ಏನು ತಪ್ಪೂಂತ?

ಅದನ್ನೇ ತಾನೇ ನೀನು ಆಗ್ನಿಂದ್ಲೂ ಮೇಲ್ಮೆ ಹಾಕ್ತಿರೋದು? ನೋತೆ ನೋತೆ ಕಣೆ ಇವತ್ತು. ಏನ್ಮಾಡೋದೀಗ?

ಅಯ್ಯೋ, ಏಕೆ ಹೀಗೆ ಮಾಡ್ತಿದ್ರೀಂತ. ಅಲ್ಲಾ ಏನೋ ಆಯ್ತು ಹೋಗ್ಲಿ ಬಿಡಿ. ಅದ್ಕೆಲ್ಲ ತಲೆ ಬಿಸಿಮಾಡಿಕೊಂಡ್ರೆ ಹೇಗೆ?

ಏನ್ಮಾಡೋದು ಹೇಳು ಈಗ ತಪ್ಪಾಗಿ ಹೋಯ್ತಲ್ಲ....

ಆಗಿ ಹೋದ್ಮೇಲೆ ಏನ್ಮಾಡೋಕಾಗುತ್ತೇಂದ್ರೆ...

ಏನು ಮಾಡೋದು ಹೇಳು....

ನೀವು ಹೀಗೆಲ್ಲಾ ಮಾಡ್ತೀರೀಂತ ಗೊತ್ತಿದ್ರೆ ನಾನು ಹೋಗ್ತಾನೇ ಇರ್ಲಿಲ್ಲ.... ನೋಡಿ, ನಮ್ಮ ನೆರ್ಮನೆ ನಾನೂ ದೇವಸ್ಥಾನಕ್ಕೆ ಹೋದೆವು ಕಣ್ರಿ. ಅಲ್ಲಿ ನಡೀತಿತ್ತು ಭಾಷಣ. ಒಬ್ರು ಜನಇಲ್ಲದೇನೇ ಇದೇಂತ ತಿಳ್ಕೊಂಡು ತಾಸು ಮಾತಾಡಿದ್ರು. ಮತ್ತೊಬ್ರು ಜನ ಇಲ್ಲಾಂತ ಗೊತ್ತಿದ್ರೂ ತುಂಬ ಮಾತಾಡಿದ್ರು. ಅಂತೂ ರಾಷ್ಟ್ರೀಯ ಐಕ್ಯ ಮಂತ್ರ ದೂರದಲ್ಲಿ ಹೇಳೋಕೆ ಮಾತ್ರ; ಕಾರ್ಯರೂಪಕ್ಕೆ ತರೋಕಲ್ಲಾಂತ ಅದ್ಕೊಂಡೆ ಎಲ್ರೂ ಅವರವರ ಮಟ್ಟಿಗೆ ಐಕ್ಯ ಪ್ರತಿಜ್ಞೆ ತೀರ್ಸಿಕೊಂಡೋ ಏನೋ. ನಾನಾದ್ರೂ ನಿಮ್ಮನ್ನ ಅರಸಿದೆ. ಅಲ್ಲಿ ಎಲ್ಲೂ ಕಾಣ್ಲಿಲ್ಲ. ಮತ್ತೆ ಭಾಷಣಾದ ಕೇಳ್ಕೊಂಡು ಬಂದ್ಬಿಟ್ಟೆ....

ಆಗ್ಲಿ, ಸದ್ಯ ನೀನಾದ್ರೂ ಹೋದೆಯಲ್ಲ, ಅದೇ ಸಂತೋಷ.

ಬನ್ನಿ ಕಾಲಾದ್ರೂ ತೊಳ್ಕೊಳ್ಳಿ. ಊಟಾ ಮಾಡ್ರಿ. ತಲೆ ಬಿಸಿಯೇರಿದೇಂತಂದ್ರಿ...

ಇವತ್ತು ಊಟ ಬೇಡ ಉಪವಾಸ.

ಅಂದ್ರೆ ಮಾಡಿದ ತಪ್ಪಿಗೆ ಪ್ರಾಯಶ್ಚಿತ್ತ ಅಲ್ವೇ?

ಹಾಗೇಂತ ತಿಳಿದು ಕೋ ಬೇಕಾದ್ರೆ...

ಅಲ್ಲಾ, ಎಲ್ಲೂ ನಿಮ್ಮ ಹಾಗೇನೇ ಇರುತಿದ್ರೆ...

ನೋಡು ಊರವರ ಸುದ್ದಿ ನನ್ಮುಂದೆ ಎತ್ಬೇಡ.

ಯಾಕೇಂತ.

ನೋಡು. ನಮ್ಮ ನಮ್ಮ ಡೊಂಕನ್ನು ತಿದ್ದಿ ಕೊಳ್ಳಲು ನಮ್ಮಿಂದ ಸಾಧ್ಯವಿಲ್ಲ. ಹಾಗಿರುವಾಗ ಕರವರ ಡೊಂಕನ್ನೇನು ತಿದ್ದ ಬಲ್ಲೆವು?

ಯಾರು ಹೇಗೆ ಬೇಕಾದ್ರೂ ಮಾಡ್ಲಿ ನಾವ್ಯಾಕೆ ಅತ್ತ ಗಮನಿಸಬೇಕು? ನಮಗೆ ಬುದ್ಧಿಯಿದೆ; ನಮಗೆ ಧರ್ಮಪಡೆ, ವಿವೇಚನಾ ಶಕ್ತಿಯಿದೆ ನಾವು ಬೇರೆಯವರ ಬಗ್ಗೆ ತೋರಿಸುವಷ್ಟು ಗಮನ ನಮ್ಮ ಮೇಲೇನೇ ತೋರ್ಸೋದಿಲ್ಲ...

ಅದೆಲ್ಲಾ ಬಿಡಿ. ಹೋಗ್ಲಿ ಈಗ...

ಹೇಳಿದ್ನಲ್ಲ, ಉಪವಾಸ..

ಹಾಗಾದ್ರೆ ನಾನೂನೂ.........

ಬೇಡ ಕಣೇ....

ಊಹ್ಞೂಂ...ನಾನೇನು ಭಾರತೀಯಳಲ್ಲವೆ?

ಹ್ಞಾಂ....ಸರಿ, ಹಾಗಾದ್ರೆ....ನೋಡು ಕೈಕಾಲು ತೊಳೆದುಕೊಂಡು ಬರ್ತೀನಿ. ಪ್ರತಿಜ್ಞೆ ಸ್ವೀಕರಿಸೋಕೆ ಸನ್ನಾಹ ಮಾಡಿಬಿಡು. ಭಾರತ ಮಾತೆಯ ಮುಂದೆ ದೀಪ.

ಅದೆಲ್ಲಾ ನೀವು ನನ್ಗೆ ಹೇಳಿಕೊಡ್ಬೇಕೆ? ನೀವು ಬೇಗನೇ ಹೋಗಿ ಬನ್ನಿ. ಎಲ್ಲ ರೆಡಿಯಾಗುತ್ತೆ

ಸರಿ ಹಾಗಾದ್ರೆ..., ಹೋಗಿ ಬರ್ತೀನಿ...

ಹ್ಞಾಂ....ಬೇಗ ಬನ್ನಿ ಮತ್ತೆ.

— ಗೋರಾ.

ಏಲಂ ಪ್ರಕಟಣೆ

ಉಡುಪಿ ಉಪಾಧ್ಯಾಯರ ಪರಸ್ಪರ ಸಹಾಯಕ ಸಂಘ ಲಿಮಿಟೆಡ್, ಉಡುಪಿ.

ಇದರ ಬಾಬ್ತು ಇರುವ ಹಳೆಯ ಫರ್ನಿಚರುಗಳನ್ನು ತಾ. 3—11—1963 ನೇ ಆದಿತ್ಯವಾರ ಅಪರಾಹ್ನ ಘಂ. 3-30 ಕ್ಕೆ ಸಂಘದ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಹಾಕಲಾಗುವುದು. ಬಾಯಸು ಉಳ್ಳವರು ಹೆಚ್ಚಿನ ಮಾಹಿತಿ ಬಗ್ಗೆ ಸಂಘದ ಆಫೀಸಿನಲ್ಲಿ ವಿಚಾರಿಸಿ ತಿಳಿದುಕೊಳ್ಳಬಹುದು.

B. Seetharama Shetty
ಕಾರ್ಯದರ್ಶಿ.

ಉಡುಪಿ, 25-10-1963.

ಸುಖೀ ವಿಶ್ವರಚನೆ

ದಿವಂ ಭೂಮಿಗಿಳಿಯುವ ದಿನ

ವಿಷಾಣುಗಳನ್ನು ತಡೆಯಲು ಚಿಕಿತ್ಸಾಕ್ಷೇತ್ರದಲ್ಲಿ ಚುಚ್ಚು ಮದ್ದೊಂದೇ ಪರಿಣಾಮಕಾರಿ ಔಷಧಿಯೆಂದು ಸಿದ್ಧವಾಗಿದೆ. ಒಂದು ಕಾಲದಲ್ಲಿ ಸಹಸ್ರಾರು ಜನರ ಮೃತ್ಯುವಿಗೆ ಕಾರಣವಾಗಿದ್ದ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವುದರಲ್ಲಿಯೂ ಚುಚ್ಚು ಮದ್ದುಗಳು ಯಶಸ್ವಿಯಾಗಿವೆ. ಜನಾರೋಗ್ಯವನ್ನುಳಿಸಲು ಸಹಕಾರ ನೀಡಿದ ಭೇಷಜ ವಿಜ್ಞಾನದ ಯಾವ ಶಾಖೆಗಿಂತಲೂ ವಿಷಾಣು ವಿಜ್ಞಾನವು ಅತ್ಯಧಿಕವಾಗಿ ಸಹಕಾರ ನೀಡಿರುತ್ತದೆ.

ವಿಷಾಣುಗಳು ಅತಿ ಸೂಕ್ಷ್ಮವಾಗಿರುತ್ತವೆ. ಅವನ್ನು ಶಕ್ತಿಶಾಲಿ ವಿದ್ಯುದಣು ಅನುವೀಕ್ಷಣ ಯಂತ್ರಗಳ ಮೂಲಕವೇ ನೋಡಬೇಕು. ಹಾಗಿದ್ದರೂ ಅವುಗಳನ್ನು ತಡೆಯುವ ಮತ್ತು ನಾಶಮಾಡುವ ಕಾರ್ಯದಲ್ಲಿ ಸಫಲತೆಯು ದೊರೆತಿದೆ. ಹುಣ್ಣು ಮೊದಲಾದ ನಿರಪಾಯ ರೋಗಗಳಿಂದ ತೊಡಗಿ ಮಸ್ತಿಷ್ಕ ಕೋಶದಂತಹ ಮಹಾ ರೋಗಗಳ ವರೆಗಿನ ಸರ್ವ ಪ್ರಕಾರದ ಅಸ್ವಾಸ್ಥ್ಯಗಳೂ ವಿಷಾಣುಗಳಿಂದಲೇ ಪ್ರಾರಂಭವಾಗುತ್ತವೆ.

ಚುಚ್ಚು ಮದ್ದುಗಳ ವಿರೋಧಾತ್ಮಕ ಪ್ರಯೋಗಗಳ ಹೊರತು ಇವುಗಳ ನಾಶಕ್ಕೆ ಯಾವ ಮಾರ್ಗಗಳೂ ಇಲ್ಲ. ಮತ್ತು ಇದರಿಂದ ರೋಗ ಪೀಡಿತನಿಗೆ ತುಂಬ ಹಾನಿಯಾಗುತ್ತದೆ ಎಂಬುದು ನಿಸ್ಸಂದೇಹ. ಆದರೆ, ಸ್ವಾಸ್ಥ್ಯಶೀ ವ್ಯಕ್ತಿಗಳ ಶರೀರದಲ್ಲಿ ಚುಚ್ಚು ಮದ್ದು ಶರೀರದ ನಿರೋಧಾತ್ಮಕ ಕ್ಷಮತೆಯನ್ನು ಹೆಚ್ಚಿಸುತ್ತದೆ; ಮತ್ತು ಅದರಿಂದ ವಿಷಾಣುಗಳ ಆಕ್ರಮಣವನ್ನು ತತ್ಕಾಲ ವಿಫಲಗೊಳಿಸಬಹುದು. ಚುಚ್ಚು ಮದ್ದುಗಳ ಪ್ರಭಾವವು ಬೇರೆ ಬೇರೆ ಅವಧಿ ಮತ್ತು ಕೆಲವೊಂದು ವಿಶಿಷ್ಟ ಪ್ರಸಂಗಗಳಲ್ಲಿ ಕೆಲವು ವರ್ಷಗಳ ವರೆಗೆ ಇರಬಲ್ಲುದು.

ಸಿಡುಬಿನಿಂದ ಹಿಂದೆ ನೂರಾರು ಜನರು ಮೃತ್ಯುವನ್ನಪ್ಪುತಿದ್ದರು. ಇನ್ನು ಕೆಲವರು ಕುರೂಪಿಯಾಗುತಿದ್ದರು ಈಗ ಪ್ರಪಂಚದ ಹೆಚ್ಚಿನ ದೇಶಗಳಲ್ಲಿ ಸಿಡುಬು ನಿರೋಧಾತ್ಮಕ ಚುಚ್ಚು ಮದ್ದನ್ನು ಚುಚ್ಚಲಾಗುತ್ತದೆ ಹಾಗಾಗಿ ಈ ರೋಗವು ನಾಮಾವಶೇಷವಾಗುವ ಸಮಯವು ನಿಕಟವಾಗುತ್ತಿದೆ. ಉತ್ತರ ಅಮೆರಿಕೆ ಮತ್ತು ಯುರೋಪುಗಳಲ್ಲಿ ಒಬ್ಬ ಯುವಕ ಚಿಕಿತ್ಸಕನೂ ಸಿಡುಬು ರೋಗಿಯನ್ನು ಕಂಡೇ ಇಲ್ಲ; ಕಾಣುವುದೂ ಶಕ್ಯವಿಲ್ಲ. ಎಲ್ಲಾದರೂ ಕೆಲವೊಬ್ಬರು ನರೆಗೂದಲಿನ ಮುದಿ ವೈದ್ಯರು ಅಂತಹರನ್ನು ಕಂಡಿದ್ದಿರಬಹುದು. ಇಂದಂತೂ ಅಲ್ಲಿ ಸಿಡುಬು ರೋಗವೇ ಇಲ್ಲ.

ವಿಶ್ವಸಂಸ್ಥೆಯ ಮೂಲಕ ಉಳಿದ ದೇಶಗಳಲ್ಲಿಯೂ ಸಿಡುಬು ನಿರ್ಮೂಲನೆಯ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ. ಇತ್ತೀಚೆಗೆ ಈ ರೋಗ ನಿರೋಧಕ ಚುಚ್ಚು ಮದ್ದಿನಲ್ಲಿಯೂ ಸಂಶೋಧನೆಗಳು ನಡೆದು, ಜನ ಕಲ್ಯಾಣಕ್ಕೆಂದು ಒದಗಿಸುವ ದಿವ್ಯೌಷಧಿಯ ಅಂತಿಮ ಸ್ವರೂಪವನ್ನು ಗೊತ್ತುಮಾಡಲಾಗುತ್ತಿದೆ. ಇದರಿಂದ ವಿಶ್ವವೇ ಮಹಾಮಾರಿಯಿಂದ ಮುಕ್ತವಾಗವುದೆಂಬ ಆಶೆಯಿದೆ.

ಉಷ್ಣ ವಲಯದ ಪ್ರದೇಶಗಳಲ್ಲಿ ಕಂಡು ಬರುವ ಅನೇಕ ರೋಗಗಳು ಕೂಡಾ ಈಗ ಚುಚ್ಚು ಮದ್ದಿನ ಮೂಲಕ ದೂರವಾಗುವಂತಾಗಿವೆ. ಪೀತಜ್ವರಕ್ಕೆಂದು ಸಿದ್ಧಪಡಿಸಿದ ಚುಚ್ಚು ಮದ್ದು ಅತ್ಯಂತ ಉತ್ಕೃಷ್ಟವಾಗಿದೆ ಇದರಲ್ಲಿ ಯಾವುದೇ ಪ್ರಕಾರದ ಸುಧಾರಣೆಯಾಗುವುದು. ಅನಗತ್ಯವೆಂದು ವಿಶೇಷಜ್ಞರು ಒಮ್ಮತದಿಂದ ಅಭಿಪ್ರಾಯ ಪಡುತ್ತಾರೆ ಈಗ ಕಂಠಮಾಲೆ, ನೀಮುಕೋಟ್ಟೆ ಮೊದಲಾದ ರೋಗಗಳ ನಿರೋಧಾತ್ಮಕ ಔಷಧಿಗಳನ್ನು ತಡೆಗಟ್ಟುವ ಚುಚ್ಚು ಮದ್ದುಗಳನ್ನೂ ಕಂಡು ಹಿಡಿಯುವ ಪ್ರಯತ್ನ ನಡೆಯುತ್ತಿದೆ ಮಾತ್ರವಲ್ಲ ಒಂದು ಚುಚ್ಚು ಮದ್ದಿನಿಂದ ನಾಲ್ಕು ರೋಗಗಳ ತಡೆಯಾಗುವ ದಿನವೂ ಬರುವಂತಾಗಿದೆ

ನಾಯಿಕೆಮ್ಮು, ಟಿಟೆನಸ್, ಡಿಫ್ತೀರಿಯಾ ಮತ್ತು ಪಕ್ಷಾಘಾತಗಳಿಂದ ಮಕ್ಕಳನ್ನು ಉಳಿಸುವ ಚುಚ್ಚು ಮದ್ದು ಈಗ ಪೇಟೆಯಲ್ಲಿ ದೊರೆಯುತ್ತಿದೆ. ಇನ್ನೊಂದು ನಾಲ್ಕು ವಿಧದ ಇಫ್ಲುಯೆಂಜಾವನ್ನೂ ಮೂರು ಪ್ರಕಾರದ ಶ್ವಾಸಕೋಶ ಸಂಬಾಧಿ ರೋಗಗಳನ್ನೂ ದೂರ ಮಾಡುವ ಶಕ್ತಿ ಪಡೆದಿದೆ.

ವಿಜ್ಞಾನಿಗಳು ಇನ್ನೂ ಹೋರಾಡುತ್ತಾರೆ. ಮಾನವನನ್ನು ಹೆಚ್ಚಾಗಿ ಕಾಡುತ್ತಿರುವ ಸುಮಾರು ೨೦ ರೋಗಗಳನ್ನು, ಇವುಗಳಲ್ಲಿ ಸಾಂಕ್ರಾಮಿಕ ರೋಗಗಳೂ ಸೇರಿವೆ, ಒಂದೇ ಬಾರಿಗೆ ತಡೆಗಟ್ಟಬಹುದಾದ ಶಕ್ತಿಶಾಲಿ ಚುಚ್ಚು ಮದ್ದನ್ನು ಅರಸುವಲ್ಲಿಗ ದಿನರಾತ್ರಿ ಪ್ರಯತ್ನ ಮಾಡುತಿದ್ದಾರೆ. ಇದರಲ್ಲಿ ವಿಷಾಣು ವಿಜ್ಞಾನಿಗಳು ಯಶಸ್ವಿಯಾದರೆಂದರೆ, ಮಾನವನು ಒಂದೇ ಒಂದು ಚುಚ್ಚು ಮದ್ದನ್ನು ಚುಚ್ಚಿಸಿಕೊಂಡರೆ, ಮತ್ತೆ ವೈದ್ಯರ ಬಳಿಗೆ ಹೋಗಬೇಕಾದ ಪ್ರಮೇಯವೇ ಅವನಿಗೆ ಬಾರಲಾರದು. ಇದು ಅಸಂಭವವೆಂದು ತೋರಬಹುದು; ಒಂದು ವೇಳೆ ಸಂಭವವೆನಿಸಿದರೂ ಒಂದಲ್ಲ ನೂರಾರು ಇತರ ಸಮಸ್ಯೆಗಳು ತಲೆದೋರಬಹುದು. ಆದರೂ ವಿಜ್ಞಾನಿಗಳು ವಿಶ್ವಾಸವಿಡುತ್ತಾರೆ—'ಒಂದಲ್ಲ ಒಂದು ದಿನ ಪ್ರಪಂಚದಲ್ಲಿ ರೋಗಗಳು ಇಲ್ಲವೆನ್ನುವುದು ಸಾಧ್ಯವಾಗುತ್ತದೆ.

'ದಿವಂಭೂಮಿಗಿಳಿಯುವುದು' ಎಂದರೆ ಅದೇ ಅಗಿರಬಹುದು ತಾನೆ?

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ
ಅತ್ಯಂತ ಪ್ರಯೋಜನಕಾರಿ ಪುಸ್ತಕ—

ಮನೆ-ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಎ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೇಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಯುಗಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ

ಭಾರತವು ಶಾಂತಿಪ್ರಿಯ ದೇಶವೇ?

(೩ನೇ ಪುಟದಿಂದ)

ರಲಿಲ್ಲವಾದುದರಿಂದ. ನಾವು ಬ್ರಿಟಿಷರ ಸಾಮ್ರಾಜ್ಯವನ್ನು ವಿರೋಧಿಸ ತಿದ್ದೆವು; ಗಾಂಧೀಜಿಯವರ ಸ್ವಯಂ ಸ್ಫೂರ್ತಿ ಆತ್ಮೋತ್ಸರ್ಗದ ಭಾವನೆಗಳು ಆಂಗ್ಲ ಸತ್ಪುರುಷರ ಅತ್ಮಗಳನ್ನು ಸೆಳೆಯುವಂತಾಯಿತು. ಇದೇ ಕಾಲದಲ್ಲಿ ಇಡಿಯ ಏಶ್ಯದಲ್ಲಿ ಮತ್ತು ಮೂರು ಭೂಖಂಡಗಳಲ್ಲಿಯೂ ಭಾರತೀಯ ಸೇನೆಯ ಸಾಹಸ ಕಾರ್ಯಗಳು ಮತ್ತು ಅಜಾದ ಹಿಂದ್ ಸೇನೆಯ ಕಾರ್ಯಕ್ರಮಗಳು ಉಗ್ರ ಪರಿಣಾಮಗಳನ್ನು ಬೀರಿದುವು. ಇದರ ಸೇನೆಯ ಮೇಲೆಯೂ ಬಿತ್ತು ಮತ್ತು ಈ ಕಾರಣದಿಂದ ಭಾರತವನ್ನು ಮತ್ತೆ ಹೆಚ್ಚುಸಮಯ ಸ್ವಾಧೀನದಲ್ಲಿಟ್ಟುಕೊಳ್ಳುವುದು ಬ್ರಿಟಿಷರಿಗೆ ಅಸಾಧ್ಯವಾಯಿತು. ದ್ವಿತೀಯ ಲೋಕಯುದ್ಧದ ಅಂತ್ಯದೊಡನೆ ಇಂಗ್ಲಿಷರು ಸಂಪೂರ್ಣ ನಿಸ್ಸತ್ವರಾದರು.

ಸಮಯ ಬಂದಾಗ, ಗಾಂಧೀಜಿಯವರು ತಮ್ಮ ಅಹಿಂಸಾ ಪಂಥಾಯಣತೆಯ ಮುಂದೆ ಕರ್ತವ್ಯಶೀಲತೆಯನ್ನು ಜಾರಿ ಹೋಗಗೊಡಲಿಲ್ಲ; ಬದಲು ಎತ್ತಿ ಹಿಡಿದಿದ್ದರು. ಕಾಶ್ಮೀರದಲ್ಲಿ ಸೇನೆಯನ್ನು ಕಳಿಸಲು ಅವರು ಸಲಹೆ ನೀಡಿದರು. ಹೈದರಾಬಾದದಲ್ಲಿ ಕನ್ಹಯ್ಯಲಾಲ ಮುಂಶಿಯವರು ಏಜಂಟ್-ಜನರಲ್ ಆಗಿದ್ದಾಗ, ಅವರಿಂದ ಸಮಸ್ತ ಶಾಂತಿಪೂರ್ಣ ಉಪಾಯಗಳು ನಿಷ್ಫಲಗೊಂಡನಂತರವೇ ಅನ್ಯ ಉಪಾಯಗಳನ್ನು ಸ್ವೀಕರಿಸಬೇಕೆಂದು ವಚನ ತೆಗೆದುಕೊಂಡಿದ್ದರು

ಭಾರತೀಯರು ಯುದ್ಧವನ್ನು ತ್ಯಜಿದ್ದು ಯಾವಾಗ? ದುಷ್ಟಾಚಾರವನ್ನು ಪ್ರತಿಬಂಧಿಸುವ ಸಾಧನವನ್ನಾಗಿ ಭಾರತೀಯರು ಯುದ್ಧವನ್ನು ಬಹಿಷ್ಕರಿಸಿದ್ದಾರೆಯೆ? ದೇಶ ವಿಭಜನೆಗೆ ಮೊದಲ ಕೆಲವು ದಿನಗಳಲ್ಲಿ ಅಹಿಂಸೆಯ ರೂಪವೇ ಗೋಚರವಾಗುತ್ತಿರಲಿಲ್ಲ ಹೈದರಾಬಾದವು ಶಸ್ತ್ರಾಸ್ತ್ರಗಳಿಂದಲೇ ಭಾರತದೊಡನೆ ವಿಲಯನ ಗೊಂಡಿತು. ಕಾಶ್ಮೀರದ ಮೇಲೆ ಆದ ಪಾಕಿಸ್ತಾನದ ಆಕ್ರಮಣವು ಸೇನೆಯ ಉಪಯೋಗದಿಂದಲೇ ತಡೆ ಹಿಡಿಯಲ್ಪಟ್ಟಿತು. ಗೋವೆಯಾದರೂ ಅಹಿಂಸಾತ್ಮಕ ವಿಧಾನಗಳಿಂದ ದಾಸ್ಯ ಮುಕ್ತವಾಗಲಿಲ್ಲ

ನಾವು ಯುದ್ಧ ಪರಿತ್ಯಾಗ ಶಾಂತಿ ಪ್ರಿಯರಾಷ್ಟ್ರವೆನ್ನುವುದು ಬರೇ ಸಮ್ಮೋಹನ ಅಥವಾ ಅದರ ಪ್ರಭಾವ. ಅನ್ಯ ರಾಷ್ಟ್ರಗಳು, ನಾವು ಶಾಂತಿಯಿಂದ ದಿನಗಳೆಯಲು ಕೀಟಲೆ ಮಾಡದಿರಲಿ ಎಂಬ ಹೇಳಾಸೆಯಿಂದ ಹುಟ್ಟಿಕೊಂಡ ಉನ್ಮೋಷಣೆಯಿದು. ನಮ್ಮೀ ಮೋಷಣೆಯನ್ನು ಚೀನಾವು ತುಂಡುತುಂಡರಿಸಿತು. ಭೀರುತನ ಮತ್ತು ತಂಪು ಸಾಹಸದ ಬದಲು ಜನತೆಯಲ್ಲಿ ಪ್ರತಿರೋಧದ ಸಾಹಸ ಭಾವನೆಯು ಉದಯಿಸಿದೆ.

ಚೀನಾವು ಆಕ್ರಮಣಮಾಡಿ ನಮ್ಮನ್ನು ಮೌಢ್ಯದಿಂದ ಸಚೇತನಗೊಳಿಸಿದೆ. ಹಿಂದಿನ ದಿನಗಳಲ್ಲಿ ನಮ್ಮಲ್ಲಿ ತೋರಿಬಂದ ಸಜೀವತೆ, ಸಾಹಸ, ಬಲಿದಾನಗಳ ಭಾವನೆ ಮತ್ತು ಪ್ರತಿಕಾರೇಚ್ಛೆಗಳು ಮರಳಿ ಪ್ರಾ

ಅವಿರತ ಶ್ರಮದಿಂದ

ಶಸ್ತ್ರಾಸ್ತ್ರದಲ್ಲಿ ಸ್ವಯಂಪೂರ್ಣತೆ ಸಾಧ್ಯ

ಭಾರತದ ಗಡಿ ಪ್ರದೇಶಗಳಾದ ನೇಫಾ ಮತ್ತು ಲಡಾಖ್‌ಗಳಲ್ಲಿ ಚೀಣೀಯರು ಕಳೆದ ವರ್ಷ ಬೃಹತ್ ಪ್ರಮಾಣದ ಧಾಳಿಯನ್ನು ನಡೆಸಿದ ಸಮಯದಲ್ಲಿ ಭಾರತದ ಪ್ರಧಾನ ಮಂತ್ರಿಗಳು, ನಮ್ಮ ಜನತೆಯು ತಮ್ಮ ಸರ್ವಶಕ್ತಿಗಳನ್ನು ಮೈಗೂಡಿಸಿಕೊಂಡು, ಸರ್ವ ಸನ್ನದ್ಧರಾಗಬೇಕೆಂದು ಇಡಿ ರಾಷ್ಟ್ರವೇ ಒಂದಾಗಿ, ಏಕಮೇವ ಪುರುಷನಂತೆ ಸವಾಲನ್ನು ಎದುರಿಸಬೇಕೆಂದೂ ಹೃದ್ಯ ಮನವಿಯೊಂದನ್ನು ಮಾಡಿಕೊಂಡರು. ಭಾರತವು ಇಂತಹ ವಿಕ್ಷುಬ್ಧ ಪರಿಸ್ಥಿತಿಯಲ್ಲಿದ್ದಾಗ, ಮಿತ್ರರಾಷ್ಟ್ರಗಳು ಭಾರತಕ್ಕೆ ಸಮಯಾನುಗುಣವಾಗಿ ಶಸ್ತ್ರಾಸ್ತ್ರಗಳನ್ನು ಕಳುಹಿಸಿಕೊಟ್ಟವು. ಚೀಣೀಯರ ನಗ್ನ ಧಾಳಿಯನ್ನು ಹಿಮ್ಮೆಟ್ಟಿಸುವುದಕ್ಕಾಗಿ ತನ್ನ ಐಕ್ಯತೆಗೆ ಬಂದ ಬೆದರಿಕೆಯನ್ನು ಉನ್ಮೂಲನಗೊಳಿಸುವುದಕ್ಕಾಗಿ ತನ್ನ ಜನಶಕ್ತಿ ಸಾಮರ್ಥ್ಯಗಳನ್ನೂ, ಸಾಮಗ್ರಿಗಳನ್ನೂ ತ್ವರಿತಗತಿಯಲ್ಲಿ ಕೂಡಿಸಿಕೊಳ್ಳುವುದರಲ್ಲಿ ಭಾರತವು ನಿರತವಾಯಿತು.

ದೇಶದ ಸ್ವಾತಂತ್ರ್ಯವನ್ನು ಸಂರಕ್ಷಿಸುವುದಕ್ಕಾಗಿ ನಡೆಯುವ ಹೋರಾಟ ಯುದ್ಧರಂಗದಲ್ಲಿ ಮಾತ್ರವೇ ನಡೆಯುವುದಿಲ್ಲ. ಕಾರ್ಖಾನೆಗಳಲ್ಲಿಯೂ ನಡೆಯುತ್ತದೆ. ಆದ್ದರಿಂದ ಈ ತುರ್ತುಪರಿಸ್ಥಿತಿಯಲ್ಲಿ ಭಾರತದಲ್ಲಿರುವ, ಶಸ್ತ್ರಾಸ್ತ್ರ ಸಾಮಗ್ರಿಗಳನ್ನು ತಯಾರಿಸುವ ಕಾರ್ಖಾನೆಗಳಲ್ಲಿರುವ ಸಹಸ್ರಾರು ಕೆಲಸಗಾರರು ರಾಷ್ಟ್ರೀಯ ಮಹತ್ವದ ಉತ್ಪಾದನಾ ಪ್ರಯತ್ನದಲ್ಲಿ ಗಣನೀಯ ಪಾತ್ರ ನಿರ್ವಹಿಸಿದ್ದಾರೆ ನಮ್ಮ ಗಡಿಯಲ್ಲಿ ಹೋರಾಡುವ ಸೈನಿಕರಿಗೆ ಅಗತ್ಯವಾದ ಶಸ್ತ್ರಾಸ್ತ್ರಗಳನ್ನು ಉತ್ಪಾದಿಸಬೇಕೆಂಬ ಕರೆಗೆ ಅವರು ಒಮ್ಮನಸ್ಸಿನಿಂದ 'ಓ' ಗೊಟ್ಟಿರುವರು ಶಸ್ತ್ರಾಸ್ತ್ರ ಸಾಮಗ್ರಿಗಳನ್ನು ಉತ್ಪಾದಿಸುವುದಲ್ಲದೆ, ಅವರು ರಾಷ್ಟ್ರೀಯ ರಕ್ಷಣಾ ನಿಧಿಗೆ ಸುಮಾರು ೪೦ ಲಕ್ಷ ರೂಪಾಯಿಗಳಷ್ಟು ಚಂದಾವನ್ನು ಈಗಾಗಲೇ ಸಲ್ಲಿಸಿರುವರು.

ಕಳೆದ ಮೂರು ಅಥವಾ ನಾಲ್ಕು ವರ್ಷಗಳಿಂದ ಶಸ್ತ್ರಾಸ್ತ್ರ ಕಾರ್ಖಾನೆಗಳಲ್ಲಿ ಉತ್ಪಾದನೆಯು ಗಣನೀಯ ಪ್ರಮಾಣದಲ್ಲಿ ಹೆಚ್ಚುತ್ತಿದೆ ತುರ್ತುಪರಿಸ್ಥಿತಿ ಬಂದೊದಗಿದ ನಂತರ ಈ ಕಾರ್ಖಾನೆಗಳು ತಮ್ಮ ಉತ್ಪಾದನೆ ಪ್ರಯತ್ನಗಳನ್ನು ದ್ವಿಗುಣಗೊಳಿಸಿವೆ ವಿವಿಧ ಪಾಳಿಗಳಲ್ಲಿ ಅಹೋ ರಾತ್ರಿ ಎಡಬಿಡದೆ ಕೆಲಸ ಮಾಡುತ್ತಿವೆ.

ಕಳೆದ ಮಹಾ ಯುದ್ಧದ ನಂತರ ರಕ್ಷಣಾ ಸೇವೆಗಳಿಗೆ ಶಸ್ತ್ರಾಸ್ತ್ರ ಮತ್ತು ಮದ್ದು ಗುಂಡುಗಳ ಅಗತ್ಯವು ಕಡಿಮೆಯಾಗುತ್ತ ಬಂದಿತು. ಅಂತಹ ಸಮಯದಲ್ಲಿ ಕಾರ್ಖಾನೆಗಳು, ತಮ್ಮ ಕಾರ್ಯಕ್ರಮಗಳನ್ನು ಶಾಂತಿ ಕಾಲದಲ್ಲಿ ಅಗತ್ಯವಾಗುವ ವಸ್ತುಗಳನ್ನಷ್ಟೇ ಪೂರೈಸುವಂತೆ ಪುನರ್ವ್ಯವಸ್ಥೆ ಮಾಡಿಕೊಳ್ಳಬೇಕಾಯಿತು. ಈ ಕ್ರಮದಿಂದ ಭಾರತ ಸರ್ಕಾರದ ಇಲಾಖೆಗಳಿಗೆ ಮತ್ತು ನಾಗರಿಕ ಮಾರುಕಟ್ಟೆಗೆ ಬೇಕಾಗುವ ಸಾಮಗ್ರಿಗಳನ್ನು ಸಿದ್ಧಪಡಿಸುವುದರ ಕಡೆಗೆ ಗಮನ ಹೋಯಿತು.

ಇದರಿಂದ ಶಸ್ತ್ರಾಸ್ತ್ರ ಕಾರ್ಖಾನೆಗಳು, ಅತ್ಯಂತ ಕುಶಲರಾದ ತಂತ್ರಜ್ಞರನ್ನು ಮಾತ್ರ ಉಳಿಸಿಕೊಂಡು, ಸಾವಿರಾರು ಜನ ಕುಶಲ ಕೆಲಸಗಾರರನ್ನು ಕೆಲಸದಿಂದ ತೆಗೆಯುವುದು ಅವಶ್ಯಕವಾಯಿತು. ಅವರ ಜೊತೆಗೆ ವಿಶಿಷ್ಟವಾದ ಯಂತ್ರೋಪಕರಣಗಳನ್ನು ಕೆಲಸವಿಲ್ಲದೆ ನಿಲ್ಲಿಸಬೇಕಾಯಿತು. ಯುದ್ಧ ಸಮಯದಲ್ಲಿ ಕ್ಷೇತ್ರದಲ್ಲಿ ಅಧಿಕ ಉತ್ಪಾದನೆಯನ್ನು ಸಾಧಿಸುವುದಕ್ಕೆ ಇದು ಸಹಾಯಕವಾಯಿತು. ತುರ್ತು ಪರಿಸ್ಥಿತಿಯು ಘೋಷಿಸಲ್ಪಟ್ಟ ಕೂಡಲೆ ಈ ಕಾರ್ಖಾನೆಗಳು ಉಳಿದ ಸಾಮಗ್ರಿಗಳ ಉತ್ಪಾದನೆಯನ್ನು ನಿಲ್ಲಿಸಿ, ಸೈನಿಕರಿಗೆ ಬೇಕಾಗುವ ಶಸ್ತ್ರಾಸ್ತ್ರಗಳನ್ನು ತಯಾರಿಸತೊಡಗಿದವು. ಈ ಕಾರ್ಖಾನೆಗಳಲ್ಲಿ ತಯಾರಿಸುವ ಶಸ್ತ್ರಾಸ್ತ್ರಗಳನ್ನು ಸ್ಥೂಲವಾಗಿ ವರ್ಗೀಕರಿಸಬಹುದು. ಅವು ಆಟೊಮ್ಯಾಟಿಕ್ ರೈಫಲ್, ಫೀಲ್ಡ್‌ಗನ್ಸ್, ಕಾಯಿಲ್ ಲೆಸ್ ಬಂದೂಕಗಳು, ರಾಕೆಟ್ ಲಾಂಚರ್ಸ್, ಮಾರ್ಟರ್ಸ್, ಆಂಟಿ ಟ್ಯಾಂಕ್ ವೆಪನ್ಸ್ ಆಂಟಿ ಏರ್‌ಕ್ರಾಫ್ಟ್ ಬಂದೂಕಗಳು ಟ್ಯಾಂಕಿಗೆ ಬೇಕಾಗುವ ಮದ್ದು ಗುಂಡುಗಳು, ಗ್ರೆನೇಡ್ಸ್, ಮಾರ್ಟರ್ ಬಾಂಬುಗಳು ಮತ್ತು ಏರ್‌ಕ್ರಾಫ್ಟ್ ಬಾಂಬುಗಳು.

ಶಸ್ತ್ರಾಸ್ತ್ರ ಕಾರ್ಖಾನೆಗಳು ಉತ್ಪಾದಿಸುವ ಸರಕುಗಳು ವೈವಿಧ್ಯಪೂರ್ಣವಾಗಿದ್ದರೂ ಕಳೆದ ಐದು ವರ್ಷಗಳಿಂದ ಕಾರ್ಖಾನೆಗಳಲ್ಲಿನ ಉತ್ಪಾದನೆಯು ಗಣನೀಯವಾಗಿ ಹೆಚ್ಚಿದೆ ೧೯೬೨—೬೩ರಲ್ಲಿ ಈ ಕಾರ್ಖಾನೆಗಳಲ್ಲಿನ ಉತ್ಪಾದನೆಯ ಮೌಲ್ಯವು ೫೨ ಕೋಟಿ ರೂ.ಗಳು ೫೭-೫೮ರಲ್ಲಿ ಅದು ಕೇವಲ ೧೮-೭೬ ಕೋಟಿ ರೂ.ಗಳಿದ್ದಿತು ೧೯೬೩-೬೪ರಲ್ಲಿ ಈ ಕಾರ್ಖಾನೆಗಳಲ್ಲಿ ಉತ್ಪಾದನೆಯಾಗುವ ವಸ್ತುಗಳ ಮೌಲ್ಯವು ೧೦೦ ಕೋಟಿ ರೂ.ಗಳಾಗುವುದೆಂದು ಅಂದಾಜು ಮಾಡಲಾಗಿದೆ.

ಭಾರತ ಸರ್ಕಾರದವರ, ದೇಶದ ರಕ್ಷಣಾ ಸಾಮರ್ಥ್ಯವನ್ನು ಸ್ಥಿರವಾದ ತಳಪಾಯದ ಮೇಲೆ ಅಭಿವೃದ್ಧಿ ಪಡಿಸಲು ಅಲ್ಪ ಕಾಲಾವಧಿ ಹಾಗೂ ದೀರ್ಘ ಕಾಲಾವಧಿ ಪ್ರಯತ್ನಗಳೆರಡನ್ನೂ ಕೈಗೊಂಡಿರುವರು. ಈಗಿರುವ ಶಸ್ತ್ರಾಸ್ತ್ರ ಕಾರ್ಖಾನೆಗಳನ್ನು ಸ್ಥಾಪಿಸಲೂ ಉದ್ದೇಶಿಸಲಾಗಿದೆ ಇದರ ಜೊತೆಗೆ ನಾಗರಿಕ ಕಾರ್ಖಾನೆಗಳ ಸಾಮರ್ಥ್ಯವನ್ನು ಶಸ್ತ್ರಾಸ್ತ್ರಗಳ ತಯಾರಿಕೆಯಲ್ಲಿ ಸದುಪಯೋಗ ಮಾಡಿಕೊಳ್ಳಲಾಗುವುದು.

ಶಸ್ತ್ರಾಸ್ತ್ರ ಕಾರ್ಖಾನೆಗಳಲ್ಲಿರುವ ಕೆಲಸಗಾರರ ದೇಶ ಪ್ರೇಮ ಮತ್ತು ಅಭಿಮಾನ, ಆಡಳಿತ ವರ್ಗದವರೊಂದಿಗೆ ಅವರ ಸಹಕಾರ ಇವೇ ಈ ಕಾರ್ಖಾನೆಯ ಉತ್ಪಾದನೆಯನ್ನು ಹೆಚ್ಚಿಸುವುದಕ್ಕೆ ಇಂಬು ಗೊಟ್ಟ ಪ್ರಧಾನ ಅಂಶಗಳು ರಕ್ಷಣಾ ಕೈಗಾರಿಕೆಗಳಲ್ಲಿ "ಉತ್ಪಾದಿಸು, ಇಲ್ಲವೇ ನಶಿಸು" ಎಂಬುದೇ ಇಂದು ನಮ್ಮ ಶಸ್ತ್ರಾಸ್ತ್ರ ಕಾರ್ಖಾನೆಗಳ ಮುಖ್ಯ ಮಂತ್ರವಾಗಿರುವುದು. ಆಗ ಮಾತ್ರವೇ ವಿಕೃತ್ತದ ಸೋಗಿನಲ್ಲಿ ನಮ್ಮ ಬೆನ್ನು ಇರಿಯ ಬಂದ ಚೀಣೀಯರನ್ನು ಹಿಮ್ಮೆಟ್ಟಿಸಲು ಸಾಧ್ಯ

ದುರ್ಭರಿಸಿರುವುದು ಆನಂದ ಲಕ್ಷಣ; ಎಂತಲೇ ಭಾರತ ಸುರಕ್ಷಿತವಾಗಿದೆ; ಭಾರತೀಯರ ಶಕ್ತಿ ಅಜೇಯವಿದೆ.

(ಮುಂಶಿಯವರ ಲೇಖನದಿಂದ)

ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ.

14 CT ಚಿನ್ನದ ಆಭರಣಗಳಲ್ಲಿ 58⅓% ಶುದ್ಧ ಪುತ್ತಳಿ ಚಿನ್ನ ಇರುತ್ತದೆ

ಬೇಡದಿದ್ದಲ್ಲಿ 1 ರೂ ಕಮ್ಮಿಯಲ್ಲಿ ಯಾವಾಗಲೂ ಬಜಾರು ಧಾರಣೆಗೆ ಪಡಕೊಳ್ಳುವ ಭರವಸೆ ಕೊಡುತ್ತೇವೆ.

ವಿ ಸೂ: ಹಳೆ ಚಿನ್ನದ ಅಭರಣ ಯಾ ಚಿನ್ನದ ಗಟ್ಟಿಗಳನ್ನು ಪಡಕೊಳ್ಳುವರೆ ಸರಕಾರದ ಲೈಸನ್ಸ್ ಸಿಕ್ಕಿರುತ್ತದೆ.

ಮದುವೆ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡಕೊಂಡು ಖಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.

ಶ್ರೀ ಕೃಷ್ಣಾ ಜ್ಯುವೆಲರಿ ಮಾರ್ಟ್

ಕೆಂಕಪೇಟೆ — ಉಡುಪಿ.

ಪ್ರೊಪ್ರೈಟರ್. ರಾಘವೇಂದ್ರ ಕೃಷ್ಣ ಭಟ್.

ಫೋನ್ ನಂಬ್ರ. 66

ಸೂಚನೆ

'ನವಯುಗ"ದಲ್ಲಿ ಪ್ರಕಟನೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೆ ಮಗ್ಗುಲಿನಲ್ಲಿರಬೇಕು. ಸುವಾಚ್ಯವಾಗಿಯೂ ಇರಬೇಕು. ಲೇಖಬಂಧುಗಳು ಸಹಕರಿಸಬೇಕಾ ವಿನಂತಿ. —ಸಂ

ವರ್ಗ—ಊಳಿಗ

ಮೊದಲಾದ ಯಾವತ್ತೂ ತರ

ಎಕೌಂಟ್ ಪುಸ್ತಕಗಳು

ಶಾಲಾ ರಿಜಿಸ್ತ್ರಿಗಳು,

ಫಾರ್ಮುಗಳು

ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.

ಗಜಪತಿ ನಂದಿನಿ

(೨ನೇ ಪುಟದಿಂದ)

...ಸುಳಿದಾಡಿ ಹೋದ ಆ ರೂಪರಾಶಿಯು ಮಿಂಚಿನಿಂದ ಮನಸ್ಸೆಲ್ಲಾ ಹೊಳವಾಯಿತೆ?

ರಾಜವರ್ಮ— ಹಾಗೆ ಹೊಳವಾಗುವಷ್ಟು ಕಠಿಣವಾಗಿ ಮನಸ್ಸಿದ್ದರೆ ತಾನೆ?

ರಾಮಕೃಷ್ಣ— ಅಯ್ಯಾ ರಾಜವರ್ಮ, ಹೀಗೆ ನಮ್ಮ ಗುರುಗಳಿಗೆ ಇದಿರಾಡಬಾರದು. ಇವರು ಹೇಳಿದ್ದಕ್ಕೆಲ್ಲಾ ಹೌದು ಎನ್ನಬೇಕು.

ರಾಜವರ್ಮ— ಓಹೋ! ಅದೇಕೆ?

ರಾಮಕೃಷ್ಣ— ಏಕೆಂದರೆ, ಇವರ ಬಾಯಿಯಿಂದ ಬರುವುದೆಲ್ಲಾ ಶಿವನ ಮಾತುಗಳು. ನಿಮ್ಮ ಗುಟ್ಟೆಲ್ಲಾ ಇವರ ದಿವ್ಯ ದೃಷ್ಟಿಗೆ ಗೊತ್ತಾಗುತ್ತದೆ.

ತಿಮ್ಮಯೋಗಿ— ಹೌದು. ರಾಜವರ್ಮ, ನೀನು ಯಾರೆಂಬುದೂ ನನಗೆ ಗೊತ್ತು. ಶತ್ರು ರಾಜ್ಯದಲ್ಲಿ ಛದ್ಮ ವೇಷ ಧಾರಣೆ ದೋಷವಲ್ಲವೆಂದೇ ಕ್ಷಮಿಸುತ್ತೇನೆ. ಮುಚ್ಚುಮರೆ ಮಾಡಬೇಡ. ಸತ್ಯ ಹೇಳು.

ರಾಜವರ್ಮ— ಏನದು?

ತಿಮ್ಮಯೋಗಿ— ನೀನೀಗ ಉತ್ಕಲ ರಾಜಕುಮಾರಿಯ ರೂಪರಾಶಿಗೆ ಮರುಳಾಗಿಯೋ ಇಲ್ಲವೋ?

ರಾಜವರ್ಮ— ಯಾರವಳು?

ತಿಮ್ಮಯೋಗಿ— ಈಗ ತಾನೇ ನೀನು ಯಾವ ರಮಣೀ ಮಣಿಯನ್ನು ನೋಡಿ ನಿನ್ನ ಹೃದಯ—

ರಾಜವರ್ಮ— ಓ! ತಿಳಿಯಿತು, ನಾಕು ಮಾಡಿ ಅದು ಮಾತ್ರವಲ್ಲ, ನಿಮ್ಮ ದಿವ್ಯ ಸ್ವರೂಪವೂ ನನಗೆ ಚೆನ್ನಾಗಿ ತಿಳಿಯಿತು.

ತಿಮ್ಮಯೋಗಿ— (ಬೆಚ್ಚಿ) ಏನು! (ಕಮಂಡಲುವನ್ನು ತೆಗೆದು) ಹ..! ಶಾಪ! ಶಾಪ!

ರಾಮಕೃಷ್ಣ— (ನಡುಗುತ್ತ) ಹಾ! ಗುರೂ! ಶಾಂತಂ ಶಾಂತಂ!

ರಾಜವರ್ಮ— ತಾಪಸ ಶ್ರೇಷ್ಠರು ಇಷ್ಟು ಬೇಗ ಕೋಪಗೊಳ್ಳಬಾರದಯ್ಯಾ!

ತಿಮ್ಮಯೋಗಿ— ಮುನಿಗಳಿಗೆ ಮುನಿಸು ಮೂಗಿನ ತುದಿಯೊಳಗಲ್ಲೇ!

ರಾಮಕೃಷ್ಣ — ಅಯ್ಯೋ ಗುರೂಜೀ!

ರಾಜವರ್ಮ— ಭಲೇ! ಮೊದಲು ನೋಡಿದಾಗ ನಿಮ್ಮನ್ನು ರಾಮಾನಂದ ಸಂನ್ಯಾಸಿಯೇ ಎಂದು ಸಂದೇಹಪಟ್ಟೆ. ಈಗ ನೀವು ಘಟಕ ಸಂನ್ಯಾಸಿಯೆಂದು ನಿಶ್ಚಯವಾಯಿತು.

(ರಾಮಕೃಷ್ಣ— ತಿಮ್ಮಣ್ಣಾ - ತಿಮ್ಮರಸರು ಪರಸ್ಪರ ಬೆರಗಾಗಿ ನೋಡಿಕೊಳ್ಳುವರು)

ರಾಜವರ್ಮ— ನೋಡುವಿರೇನು ಪಿಳಿಪಿಳಿ! ನನಗೆಲ್ಲವೂ ತಿಳಿಯಿತು. ಅಪ್ಪಾಜೀ! ನೀವು ಈ ಕನ್ನಡಾಂಧ್ರ ಕಪಿದ್ವಯರನ್ನು ಇಲ್ಲಿಗೆ ಕಳುಹಿಸಿ ವ್ಯರ್ಥ ಶ್ರಮ ಪಟ್ಟಂತಾಯಿತು.

ತಿಮ್ಮಯೋಗಿ— ಅದೇನು?

ರಾಜವರ್ಮ— ನಿಮ್ಮ ಈ ಘಟನೆಯಿಂದ ನನ್ನ ಪ್ರತಿಜ್ಞೆ ಕದಲುವುದೆಂದು ತಿಳಿಯುವಿರಾ?

ತಿಮ್ಮಯೋಗಿ— ಪ್ರತಿಜ್ಞೆಯನ್ನು ವಿಮುಖಗೊಳಿಸಿದರಂತೂ ಅತ್ಯುತ್ತಮ.

ರಾಮಕೃಷ್ಣ - ಎಷ್ಟಾದರೂ ಅದು ಕೋಪದ ಪ್ರತಿಜ್ಞೆ ತಾನೆ?

ತಿಮ್ಮರಸು— ರಾಜೇಂದ್ರಾ, ಆ ಘೋರ ಪ್ರತಿಜ್ಞೆಯನ್ನು ಮಾನಸಿಕ ಮಾಡಿ ಜಗನ್ಮೋಹಿನಿಯನ್ನು ವರಿಸಿಕೊಳ್ಳುವ ಮನಸ್ಸು ಮಾಡೆಂದು ಬೇಡಿಕೊಳ್ಳುತ್ತೇನೆ.

ರಾಜವರ್ಮ— ಅಪ್ಪಾಜಿ, ಯಾರೋ ಧನಯೋಗಿಗಳೆಂದು ಹೇಳಿ ನನ್ನನ್ನು ಇಲ್ಲಿಗೆ ಕರೆತಂದದ್ದು, ಅವಳ ದರ್ಶನಕ್ಕೇನು? ಅವಳ ಸೌಂದರ್ಯವು ನನ್ನ ಮನಸ್ಸನ್ನು ಕಲಕಿ ಬಿಡುವುದೆಂದು ಭಾವಿಸುವಿರಾ? ಅಷ್ಟು ಅಸ್ಥಿರ ಮನಸ್ಸಿನವನಲ್ಲ ನಾನು. ಈ ಮಹೋನ್ನತಿಯನ್ನು ಹಿಡಿದು ಪ್ರತಿಜ್ಞೆಯಂತೆ ನಡೆಯುವುದೇ ನಿಶ್ಚಯ.

(ತಿಮ್ಮರಸು ಖಿನ್ನನಾಗುವನು)

ರಾಮಕೃಷ್ಣ - ನಿಮ್ಮ ಸಾಹಸ ಮಾತ್ರ ಹೇಗೂ ವ್ಯರ್ಥವಾಗುವಂತಿಲ್ಲ. ಪ್ರತಿಜ್ಞೆಯ ಗತಿ ಹೇಗಾದರೂ ಜಗನ್ಮೋಹಿನಿ ನಿಮ್ಮ ಕೈಗೆ ಸಿಕ್ಕಬೇಕಷ್ಟೆ?

ತಿಮ್ಮಯೋಗಿ— ಪ್ರಭೂ, ನಿಮ್ಮ ಈ ಘಟಕ ತಪಸ್ಸಿನ ಫಲವನ್ನು ಅದಕ್ಕಾದರೂ ಉಪಯೋಗಿಸಿಕೊಳ್ಳಬೇಕು.

ರಾಜವರ್ಮ— ಹಾಗಾದರೆ ನೋಡೋಣ.

(ಮುಂದುವರಿಯುವುದು)

ನವಯುಗ

ರಾಷ್ಟ್ರೀಯ ವಾರಪತ್ರಿಕೆ

ಉಡುಪಿ

ಜಾಹೀರಾತು ದರಗಳು:

ನಿಯಮಿತ (ಕಂಟ್ರಾಕ್ಟ್) ರೂ. ಕಲಂ ಸೆಂಟಿಮೀಟರಿಗೆ 1-00

ಅನಿಯಮಿತ (ಕೆಜುವಲ್) ಕಲಂ ಸೆಂಟಿಮೀಟರಿಗೆ 1-50

ಚಂದಾ:

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75

ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಆದರ್ಶ ಚರಿತೆಗಳು-೯

ಮಹಾತ್ಮಾ ಸೋಕ್ರಟೀಸ್

ಶ್ರೀ ಎಸ್. ಎಂ. ಶೆಟ್ಟಿ, ಶಿಮುಂಜೆಪರಾರಿ

ಗ್ರೀಕ್ ದೇಶದಲ್ಲಿ ಕ್ರಿಸ್ತಪೂರ್ವ ಐದನೇ ಶತಮಾನದ ಉತ್ತರಾರ್ಧದಲ್ಲಿ ಸುಪ್ರಸಿದ್ಧ ತತ್ವಜ್ಞಾನಿ ಸೋಕ್ರಟೀಸರ ಜನನವಾಯಿತು. ಆ ಸಮಯ ಗ್ರೀಕ್ ದೇಶದಲ್ಲಿ "ಸೂಫಿ" ಜನಾಂಗದವರ ಪ್ರಾಧಾನ್ಯವಿತ್ತು. ಮತವು ಯಾವುದೇ ಇರಲಿ, ಅದರಲ್ಲಿ ವ್ಯರ್ಥದ ತರ್ಕ ಜಾಲವು ಹೆಚ್ಚಿದಾಗ, ಸಂಯಮ ಸದಾಚಾರಾದಿಗಳು ಕಡಿಮೆಯಾದಾಗ, ಕೇವಲ ಬುದ್ಧಿಯ ಬಲದಿಂದಲೇ ಶಬ್ದ ಜಾಲವನ್ನು ಹೆಚ್ಚಿಸಲಾಗುತ್ತದೋ ಆಗ ಅದು ಸತ್ಯದಿಂದ ದೂರವಾಗಿ ಬಿಡುತ್ತದೆ. ಅದರಲ್ಲಿ ಡಂಭಾಚಾರವು ಮಾತ್ರ ಉಳಿದು ಬಿಡುತ್ತದೆ. ಗ್ರೀಕಿನಲ್ಲಿ "ಸೂಫಿ" ಪಂಡಿತರ ಅವಸ್ಥೆಯು ಹೀಗೆಯೇ ಇತ್ತು. ಪಾರಮಾರ್ಥಿಕದ ಕುರಿತು ಜನರ ಭ್ರಮೆಯನ್ನು ದೂರೀಕರಿಸಲು, ಜನಸಾಮಾನ್ಯರೂ ಆ ಪರಮಾತ್ಮನೊಡನೆ ವ್ಯಾಪಕ ರೂಪದಲ್ಲಿ ಪರಿಚಿತರಾಗಬೇಕು, ಎಂಬ ಸದುದ್ದೇಶದಿಂದ—ಮಹಾತ್ಮ ಸೋಕ್ರಟೀಸರು ಉಪದೇಶವೀಯಲು ಪ್ರಾರಂಭಿಸಿದರು.

ಸೋಕ್ರಟೀಸರ ಉಪದೇಶದಲ್ಲಿ ಎರಡು ಮಾತುಗಳು ಮುಖ್ಯವಾಗಿದ್ದವು. ಮೊದಲನೆಯದು ಮನುಷ್ಯನು ಅಲ್ಪಜ್ಞನು ಎಂಬುದು. ನನಗೇನೂ ತಿಳಿದಿಲ್ಲ ಎಂಬುದು ಎರಡನೆಯ ಉಪದೇಶವಾಗಿತ್ತು. ಆತ್ಮದ ವ್ಯಾಪಕತೆಯ ಕುರಿತು ಅವರು ತನ್ನ ಉಪದೇಶಗಳಲ್ಲಿ ಪ್ರಚಾರ ಗೈಯ್ಯುತ್ತಿದ್ದರು. ಸಾದಾ ಜೀವನ ಹಾಗೂ ಫಲಹೀನ ವ್ಯವಹಾರ ಇದೇ ಸೋಕ್ರಟೀಸರ ಮುಖ್ಯ ಶಿಕ್ಷಣವಾಗಿತ್ತು.

"ಏಕ ಮಾತ್ರ ಆತ್ಮದ ಉಪಾಸನೆಗೈಯಬೇಕು" ಎಂಬ ಸೋಕ್ರಟೀಸರ ನವೀನ ಉಪದೇಶವು ಗ್ರೀಕ್ ದೇಶದ ಪ್ರಚಲಿತ ನೀತಿಗಳಿಗೆ ವಿರೋಧವಾಗಿತ್ತು. ಇದುದರಿಂದಾಗಿಯೇ ಸೋಕ್ರಟೀಸರ ಮೇಲೆ ಅವರು ಜನರಲ್ಲಿ ಕುವಿಚಾರ ತುಂಬುತ್ತಿರುವರು ನಿರೀಶ್ವರವಾದದ ಪ್ರಚಾರ ಗೈಯ್ಯುತ್ತಿರುವವರು ಎಂಬ ಆರೋಪವನ್ನು ಹೊರಿಸಲಾಯಿತು. ಇದಕ್ಕಾಗಿಯೇ ಅವರಿಗೆ ಮೃತ್ಯುದಂಡವನ್ನೀಯಲಾಯಿತು. ವಿಷದ ಬಟ್ಟಲನ್ನು ಅವರಿಗೆ ಕಳುಹಿಸಿ, ಅದನ್ನು ಕುಡಿಯುವಂತೆ ಅಪ್ಪಣೆಯೀಯಲಾಯಿತು.

ಸೋಕ್ರಟೀಸರ ಶಿಷ್ಯವರ್ಗ ಹಾಗೂ ಸ್ನೇಹಿತರು ಇದರಿಂದ ತುಂಬಾ ವ್ಯಾಕುಲರಾದರು. ಕಿಂತು, ಸೋಕ್ರಟೀಸರು ಆತ್ಮಜ್ಞಾನಿಯಾಗಿದ್ದರು. ಅವರಿಗೆ ಶರೀರದ ಮೇಲೆ ಮೋಹವಿರಲಿಲ್ಲ ಶರೀರವು ನಶ್ವರ ಆತ್ಮವು ಅಮರ ಎಂಬ ಅನುಭಾವವು ಅವರಿಗಾಗಿತ್ತು. ವಿಷದ ಬಟ್ಟಲನ್ನು ಎರಡು ಕೈಯಿಂದ ಎತ್ತಿ, ನಗು ನಗುತ್ತಾ ಗಟಗಟನೆ ಕುಡಿದು ಬಿಟ್ಟರು. ಸ್ವಯಂ ಗಾಢ ನಿದ್ರೆಯಾಗುವ ವರೆಗೂ ಅವರು ಕೂಡಿದ ಜನರಿಗೆ ಸದುಪದೇಶವನ್ನೀಯುತ್ತಿದ್ದರು. ಅವರ ಶರೀರವನ್ನು ವಿಷವು ಆವರಿಸಿ ನಷ್ಟಗೊಳಿಸಿತು; ಆದರೆ ಸೋಕ್ರಟೀಸರನ್ನು ಕೊಲ್ಲುವುದು ಯಾರಿಂದ ಸಾಧ್ಯ? ಅವರು ಇಂದೂ ಅಮರರಾಗಿರುವುದೇ ಇದಕ್ಕೆ ಪ್ರತ್ಯಕ್ಷ ಉದಾಹರಣೆ ಯಾಗಿಲ್ಲವೇ? ಅವರ ಉಪದೇಶಗಳನ್ನು ಇಂದೂ ಪೂಜ್ಯ ದೃಷ್ಟಿಯಿಂದ ಕಾಣಲಾಗುತ್ತದೆ. ಸೋಕ್ರಟೀಸರಂತಹ ಆತ್ಮಜ್ಞಾನಿ ತಮ್ಮಲ್ಲಿ ಜನ್ಮ ತಾಳಿದರು ಎಂದು ಗ್ರೀಕರು ಇಂದೂ ಅಭಿಮಾನ ಪಡುತ್ತಾರೆ.

(ಮೂಲ:- ಠಾಕುರ್ ಸುದರ್ಶನ ಸಿಂಹ)

ವಿದ್ಯಾರ್ಥಿಗಳ 2 ಕೈಪಿಡಿಗಳು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ವಿ. ಸೂ.— ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 NP ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರತಿಗಳು— ಮಂಗಳೂರಲ್ಲಿ ಶ್ರೀನಿವಾಸ್ ಬ್ರದರ್ಸ್, ಸ್ಕೂಲ್ ಬುಕ್ ಕೊ., ಕೆನರಾ ಕಾಲೇಜ್ ಬುಕ್ ಕೊ. ಇಂಡಿಯನ್ ಇಂಡಸ್ಟ್ರಿಯಲ್ಸ್ & ಪಬ್ಲಿಶರ್ಸ್ ಇವರಲ್ಲಿಯೂ, ಪುತ್ತೂರಲ್ಲಿ ಪೊಪ್ಯುಲರ್ ನಲ್ಲಿಯೂ ದೊರೆಯುತ್ತವೆ.



REGD. No. B. G. 176
LICENCE No. 31
Licensed to Post without Prepayment

ಬರಸಿಡಿಲಿನ ಸುರಿಮಳೆ

(೧ನೇ ಪುಟದಿಂದ)

ಬೇಕಾಗಿದೆ. ಇಂತಹ ತ್ವೇಷಕ್ಕೆ ನೀವು ಭಾರತಕ್ಕೆ ನೀಡುತ್ತಿರುವ ಶಸ್ತ್ರಾಸ್ತ್ರಗಳೇ ಕಾರಣ' ಎಂದು ಅಮೆರಿಕೆಯ ಕಿವಿ ಚುಚ್ಚುವ ಕೆಲಸಕ್ಕೆ ಪಾಕಿಸ್ತಾನವಿಂದು ಉದ್ಯತವಾಗಿದೆ. ಆದರೆ, ಇರುವ ಸತ್ಯಾಂಶ ಅಮೆರಿಕೆಯೊಂದೇನು, ಲೋಕವೇ ಅರಿತುಕೊಂಡಿದೆ.

ಅಪಪ್ರಚಾರ ವೈಖರಿ

ಪಾಕಿಸ್ತಾನವನ್ನು ನುಂಗುವ ರಾಷ್ಟ್ರ ಭಾರತ—ಎಂದು ಪ್ರಚಾರ ಸಾಧನಗಳಿಂದ ಜಗತ್ತಿಗೆ ಮನವರಿಕೆಯಾಗಿಸುವ ಅಪ್ರತಿಮ ಸಾಹಸಕ್ಕೆ ಅಯೂಬಖಾನರು ತೊಡಗಿದ್ದಾರೆ. ಅಮೆರಿಕೆಯ ಸೇನಾ ಪಡೆಗಳ ಪ್ರಮುಖ ಜನರಲ್ ಮ್ಯಾಕ್ಸ್‌ವೆಲ್ ಟೇಲರ್, ಸಂರಕ್ಷಣಾ ಮಂತ್ರಿ ರಾಬರ್ಟ್ ಮ್ಯಾಕ್‌ನಮಾರಾ ಮತ್ತು ಉಪವಿದೇಶ ಮಂತ್ರಿ ಜಾರ್ಜ್‌ಬಾಲ್‌ರವರು ಪಾಕಿಸ್ತಾನಕ್ಕೆ ಭೆಟ್ಟಿಕೊಡಲಿದ್ದಾರೆ. ಅವರು ಬರುವಾಗಲೇ ಇಲ್ಲಿ ತಾನು ಗಂಭೀರಾತಿಗಂಭೀರ ಪರಿಸ್ಥಿತಿಯನ್ನೆದುರಿಸ ಬೇಕಾಗಿದೆಯೆಂಬುದನ್ನು ಅವರ ಮನಸ್ಸಿಗೆ ಹೋಗಿಸುವ ಆಶಯ ಅವರದು. ಹಿಂದೊಮ್ಮೆ ಅಮೆರಿಕನ್ ಅಧ್ಯಕ್ಷ ಐಸನ್‌ಹಾವರ್ ಮತ್ತು ಹ್ಯಾರಿಮನ್ನರು ಪಾಕಿಸ್ತಾನಕ್ಕೆ ಸಂದರ್ಶನ ನೀಡಿದ ವೇಳೆಯಲ್ಲಿ ಹಾಗೂ ಭದ್ರತಾ ಮಂಡಳಿಯಲ್ಲಿ ಕಾಶ್ಮೀರದ ಪ್ರಶ್ನೆಯನ್ನು ಎತ್ತಿಕೊಳ್ಳುವ ವೇಳೆಯಲ್ಲಿ 'ಭಾರತದ ಆಕ್ರಮಣ ನೀತಿ'ಯ ಬಗೆಗೆ ಹಲವಾರು ರೀತಿಗಳಿಂದ ಬಣ್ಣನೆಯ ಮಾತುಗಳಿಂದ ಪ್ರಚಾರಕಾರ್ಯ ನಡೆದಿತ್ತು. ಪಾಕಿಸ್ತಾನ ದುರುದ್ದೇಶ ಸಾಧನೆಗೆ ಅಪಪ್ರಚಾರವೊಂದೇ ಸಾಧನವಲ್ಲವೆ?

ಉಪಸಂಹಾರ

ಭಾರತದ ನೀತಿಯು ಲೋಕದಿಂದ ವಂಚಿತವಾಗಿಲ್ಲ. ಅದು ಸುಸ್ಪಷ್ಟವಿದೆ 'ತಟಸ್ಥ ವಿದೇಶ ನೀತಿಯು ಅವರದು; ಬಾಗೆಂದರೆ, ತಮ್ಮ ಮೇಲೆ ಆಕ್ರಮಣ ಶೀಲ ಶಕ್ತಿಗಳು ಎರಗಿಬಂದಾಗ ನಿರಾಯುಧರಾಗಿ ಪರತಂತ್ರಕ್ಕೆ ಸಿಲುಕುವರೆನ್ನುವುದು ತಪ್ಪು. ತಮ್ಮ ದೇಶದ ಪಾರತಂತ್ರ್ಯಕ್ಕಾಗಿ ಚಾನುವಾರುಗಳೂ ಪ್ರಾರ್ಥಿಸಲಾರವು. ಸುಜ್ಞರಾದ ಭಾರತೀಯರು ಪರರ ಮೇಲೆ ಅಧಿಕಾರ ಜಮಾಯಿಸ ಬಯಸುವುದಿಲ್ಲ; ತಮ್ಮ ಮೇಲಾಗುವ ಆಕ್ರಮಣವನ್ನು ಕೆಚ್ಚೆದೆಯಿಂದ ಎದುರಿಸಿ ಜಯಶೀಲರಾಗದುಳಿಯುವುದಿಲ್ಲ ಪಾಕಿಸ್ತಾನದ ಅಪ ಪ್ರಚಾರದ ಕಹಿಗುಳಿಗೆಯನ್ನು ಭಾರತವು ನಂಜುಂಡನಂತೆ ಸಹಿಸುತ್ತದೆ; ಸಹನೆಗೂ ಒಂದು ಮಿತಿಯಿದೆ. ಲೋಕಜನಿತವಾದ ಭಾರತದ ಸೌಮ್ಯನೀತಿಯನ್ನು ಪಾಕಿಸ್ತಾನವಿ ಬಣ್ಣದ ಮೆರಗನ್ನಿತ್ತು ಅಸಚಾರವೆಸಗ ಬಹುದು; ಅದು ಹುಲಿಯೆಂದು ವರ್ಣಿಸ ಬಹುದು. ಆದರೆ, ಲೋಕಕ್ಕೂ ಚಕ್ಷುಗಳಿವೆ. ಅವುಗಳಲ್ಲಿ ನೋಡುವ ಶಕ್ತಿಯಿದೆ. ಅಮೇರಿಕನ್ ಸೇನಾನಾಯಕರೂ ವಿದೇಶ ಮಂತ್ರಿಗಳೂ ಇಂತಹ ಶಕ್ತಿಯಿಂದ ವಂಚಿತರಲ್ಲ. ಎಂತಲೇ ಪಾಕ್ ಆಟೋಪ ಬರಸಿಡಿಲು ಮಾತ್ರ; ವ್ಯರ್ಥಗಲ್ಲು, ನಿದ್ದೆಗೇಡು ಎಂಬಂತೆ. ಇಂತಹ ಹೊಲಸು ತಂತ್ರಜಾಲ ಪಾಕಿಸ್ತಾನದ ಆಧಾರ. ಸತ್ಯ, ನ್ಯಾಯ, ಮೈತ್ರಿಗಳ ತ್ರಿವೇಣಿಗೆ ಪಾಕ್ ನಾಯಕರು ಇಳಿದಂದೇ ಅವರ ಉನ್ನತಿ; ಅದುವರೆಗೆ ನಿಜಕ್ಕೂ ಅವನತಿ. ಭಾರತವು ಸತ್ಯ ನ್ಯಾಯ, ಮೈತ್ರಿಯ ಪಥಭ್ರಮಣ ಮಾಡುತ್ತಿರುವುದರಿಂದಲೇ ಅದರ ದಾರಿ ಎಂದಿಗೂ ಪ್ರಶಸ್ತವಿದೆ.

ನಿಮ್ಮ ಪ್ರಾಯವೆಷ್ಟು?

ಮೊಂಟ್ರಿಯಲ್ ವಿಶ್ವವಿದ್ಯಾನಿಲಯದ ಪ್ರಾಯೋಗಿಕ ಔಷಧ ಹಾಗೂ ಶಸ್ತ್ರ ಚಿಕಿತ್ಸಾ ಶಾಲೆಯ ಡೈರೆಕ್ಟರ್ ಮತ್ತು ಪ್ರೊಫೆಸರ್ ಆಗಿರುವ ವಿಜ್ಞಾನಿ ಡಾ. ಹ್ಯಾನ್ಸ್ ಸೆಲ್ಯ ಅವರು ಆಸ್ಟ್ರಿಯಾದಲ್ಲಿ ೧೯೦೭ರಲ್ಲಿ ಜನಿಸಿದರು. ಡಾ. ಸೆಲ್ಯ ಅವರು "ವಯಸ್ಸಾಗುವಿಕೆ ಬಗ್ಗೆ ತಮ್ಮ ಅಭಿಪ್ರಾಯವನ್ನು ಈ ಕೆಳಗಿನಂತೆ ನಿರೂಪಿಸುತ್ತಾರೆ.

೧] ಬದುಕಿನ ಸಾಮಾನ್ಯ ಮತ್ತು ಅನಿವಾರ್ಯ ಅನುಭವಗಳಿಂದಲೂ ಶರೀರ ಸವೆಯುವುದೇ "ಪ್ರಾಯ"

೨] ಶ್ರಮಕ್ಕೂ ವಯಸ್ಸಾಗುವಿಕೆಗೂ ಸಂಬಂಧ ಇರುವುದರಲ್ಲಿ ಸಂಶಯವೇ ಇಲ್ಲ.

೩] ನಿಜವಾದ ವಯಸ್ಸಾಗುವಿಕೆಯನ್ನು ವರ್ಷದಲ್ಲಿ ಅಳೆಯುವುದಕ್ಕೆ ಆಗುವುದೇ ಇಲ್ಲ. ದೇಹ ಹಾಗೂ ಮನಸ್ಸು ಒಳಗಾಗುವ ಸವೆತದಿಂದ ಮಾತ್ರ ಇದು ಸಾಧ್ಯ.

ಕೆಲವರು ಒಂದಕ್ಕೆ ಸಾವನ್ನು ಸಮೀಪಿಸಿದರೆ, ಎಷ್ಟೋ ಮಂದಿ ಸ್ತ್ರೀ ಪುರುಷರು ೪೦ ಅಥವಾ ೫೦ಕ್ಕೆಲ್ಲಾ ಮರಣಕ್ಕೆ ಅಪ್ಪುಟ ಹತ್ತಿರವಿರುತ್ತಾರೆ. ಇವರು ಬದುಕಿನ ಶ್ರಮದಿಂದ ನೊಂದಿರುವುದೇ ಇದಕ್ಕೆ ಕಾರಣವೆನ್ನುತ್ತಾರೆ. ಡಾ. ಸೆಲ್ಯ ಅವರು ಸ್ವಾಭಾವಿಕವಾದ ಹಾಗೂ ಅಸಾಮಾನ್ಯ ಶ್ರಮದ ಬಗ್ಗೆ ದೇಹದ ಪ್ರತಿಕ್ರಿಯೆಯು ಮೂರು ಹಂತಗಳಲ್ಲಿ ಉಂಟಾಗುವುದು— "ಗಾಬರಿ, ಪ್ರತಿರೋಧ ಹಾಗೂ ಬಳಲಿಕೆ ಇವೇ ಆ ಮೂರು ಹಂತಗಳೆಂದು ಅವರ. ಹೇಳುತ್ತಾರೆ. "ಹುಟ್ಟುವಾಗಲೇ ಪ್ರತಿಯೊಬ್ಬನಲ್ಲೂ ಜೀವಶಕ್ತಿ ಸಂಗ್ರಹವಾಗಿರುತ್ತದೆ. ಅದು ಮುಗಿದೊಡನೆ ಮರಣ" ಎನ್ನುತ್ತಾರೆ. ಡಾ. ಸೆಲ್ಯ ಪರಿಸ್ಥಿತಿಯ ಬಗ್ಗೆ ಕೋಪ ಅಸಮಾಧಾನ, ಹೆಚ್ಚಿದಷ್ಟೂ ಜೀವಶಕ್ತಿ ಬಹು ಬೇಗ ಸವೆಯುತ್ತಿದೆ. ಇದಕ್ಕೆಲ್ಲಾ ಪರಿಹಾರವೆಂದರೆ ಗಾಬರಿಯನ್ನುಂಟು ಮಾಡುವ ಘಟನೆಗಳ ಅಸಮಾಧಾನಕಾರವಾದ ಪರಿಸ್ಥಿತಿಯನ್ನೂ ಶಾಂತ ಮನಸ್ಸಿನಿಂದ ಎದುರಿಸುವುದೇ ಆಗಿದೆ ಎಂದು ಅವರು ಸೂಚಿಸುತ್ತಾರೆ.

[ಸಂಗ್ರಹ]

—ಎಸ್. ಚನ್ನಪ್ಪ.
(ಆವತಿ)

ಅಮೃತ ಬಿಂದು

ಪಾರತಂತ್ರ್ಯ ಹಾಗೂ ತೀವ್ರ ಕಿರುಕುಳದ ರತ್ನ ಸಿಂಹಾಸನಕ್ಕಿಂಥಾ ಸ್ವತಂತ್ರವಾದ ಚಾಪೆಯೇ ಲೇಸು.

o o o

'ಅವನವನಿಗೆ ಅವನು, ನಮ್ಮೆಲ್ಲರಿಗೆ ದೇವರು' ಎಂದು ನಂಬಿದವನಿಗೆ ದುಃಖವಿಲ್ಲ.

o o o

ಈ ಜಗತ್ತಿನಲ್ಲಿ ಪ್ರತಿಯೊಬ್ಬರಿಗೂ ತುಂಬಬೇಕಾದ ಸ್ಥಾನ, ಮಾಡ ಬೇಕಾದ ಕೆಲಸ ಇದ್ದೇ ಇದೆ. ಅದನ್ನು ಅಚ್ಚುಕಟ್ಟಾಗಿ ಮಾಡುವದರಲ್ಲೇ ಘನತೆ ಇದೆ.

o o o

ಸೋಮಾರಿತನದ ಮೃಷ್ಟಾನ್ನಕ್ಕಿಂಥಾ ಪರಿಶ್ರಮದ ಅಂಬಲಿ ಹೆಚ್ಚು ರುಚಿಕರ.

o o o

ಹೆಚ್ಚು ದುಡಿದಷ್ಟು ಇನ್ನೂ ಹೆಚ್ಚು ದುಡಿಯಬಹುದು ಹೆಚ್ಚು ಕರ್ಮಕುಶಲನಾದಷ್ಟೂ ಹೆಚ್ಚು ವಿರಾಮ ಸಂಪಾದನೆಯಾಗುವದು

o o o

ಕೊಡುವ ಕೈಯನ್ನು ಕಚ್ಚುವುದೂ ಹೊಡೆಯುವ ಕೈಯನ್ನು ಪಿಟೈಸುವದೂ ಸಾಮಾನ್ಯರ ಸ್ವಭಾವ.

o o o

ಗರ್ವ ತುಂಬಿಕೊಂಡ ಹೊಟ್ಟೆಯವರಿಗೆ ದಯೆಯೆಂಬುದು ಜೀರ್ಣವಾಗದ ಆಹಾರ.

o o o

ತನ್ನ ಪೂರ್ವಜರಲ್ಲಿ ಗುಲಾಮರನ್ನು ಪಡೆಯದ ಯಾವ ಅರಸನೂ ಇಲ್ಲ. ತನ್ನ ಪೂರ್ವಜರಲ್ಲಿ ಅರಸನನ್ನು ಪಡೆಯದ ಯಾವ ಗುಲಾಮನೂ ಇಲ್ಲ.

ಶ್ರೀ ಕೆ. ಕೆ ಶೆಟ್ಟಿ, ಎಂ.ಎಲ್.ಸಿ.ಯವರ
ಕ್ರಾಂತಿಕಾರಿ ಲೇಖನಿಯ
ನವಕಾಲಕ್ಕೊಪ್ಪುವ ನವನವೀನ
ಪುಸ್ತಕಗಳು

ಪುಸ್ತಕಗಳು	ರೂ ನ.
ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಮನೆಮನೆಯಲ್ಲಿರಲೇಬೇಕಾದ
ನಿತ್ಯೋಪಯೋಗಿ ಪುಸ್ತಕಗಳು

ಗೀತೆಯ ಕೈಗನ್ನಡಿ(ಚಿದಂಬರಯ್ಯ)	1=00
ಮನೆಮದ್ದು (ಡಾ| ಕೊರಡ್ಕಲ್)	2=00
ಸುಲಭದಲ್ಲಿ ಇಂಗ್ಲಿಷ್(ಕೊರಡ್ಕಲ್	2=00
Letter Writing Made Easy	1=25

ಟಪ್ಪಾಲು ಖರ್ಚು ಪ್ರತ್ಯೇಕ. ವಿವರವಾದ ಪಟ್ಟಿಗಾಗಿ ಹತ್ತು ನ. ಪೈ. ಸ್ಟಾಂಪಿನೊಂದಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ

5 ರೂ. ಮಾತ್ರ

o ನೀವಿನ್ನೂ ಸಿಂಡಿಕೇಟ್ ಬೇಂಕಿನಲ್ಲಿ ಒಂದು o
o ಸೇವಿಂಗ್ಸ್ ಬೇಂಕ್ ಖಾತೆಯನ್ನು ತೆರೆದಿಲ್ಲವೆ? o
o ಹಾಗಾದರೆ ಇನ್ನು ತಡಮಾಡಬೇಡಿರಿ. o
o ಕೇವಲ ಐದು ರೂಪಾಯಿಗಳಿಂದ ನೀವು o
o ಸೇವಿಂಗ್ಸ್ ಬೇಂಕ್ ಲೆಕ್ಕವನ್ನು ಪ್ರಾರಂಭಿಸಬಹುದು. o
o ನಿಮಗೆ ಸಾಧ್ಯವಿದ್ದಷ್ಟನ್ನು 25 ನಯೆ o
o ಪೈಸೆಯಷ್ಟನ್ನು ಸಹಾ ನೀವು ನಿಮ್ಮ ಲೆಕ್ಕಕ್ಕೆ o
o ಕೊಡಿಸುತ್ತಾ ಹೋಗಬಹುದು. o
o ಸಿಂಡಿಕೇಟ್ ಬೇಂಕಿನ ಚೆಕ್ ಮತ್ತು ಪಾಸ್ ಪುಸ್ತಕ o
o ಗಳೆರಡು ನಿಮ್ಮ ಗೌರವದ ಸೊತ್ತುಗಳಾಗುವುವು. o
o ಮಾತ್ರವಲ್ಲ ನಿಮ್ಮ ಹಣಕ್ಕೆ ಯೋಗ್ಯ ಬಡ್ಡಿಯೂ o
o ಸಿಗುವುದು. o
o ಇಂದೇ ನಿಮಗೆ ಸಮೀಪವಿರುವ ನಮ್ಮ o
o ಶಾಖೆಯೊಂದನ್ನು ದಯಮಾಡಿ ಸಂದರ್ಶಿಸಿರಿ. o

ಆಗಾಗ ಉಳಿಸಲು
ಮಿತವಾಗಿ ವ್ಯಯಿಸಲು
ಬಡ್ಡಿಯನು ಗಳಿಸಲು

ಸೇವಿಂಗ್ಸ್ ಬೇಂಕ್

ಸಿಂಡಿಕೇಟ್ ಬೇಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

Edited, Printed & Publisb-d by K. H.Shetty. at the Navayuga Press, Udipi, S. India.

ಅಖಿಲ ಕರ್ನಾಟಕದ
ಪ್ರಸಿದ್ಧ ಕತೆಗಾರರ
ಮಧುವನ
ಕಥಾ ಸಂಕಲನ
ಕಿರಿಯರ ಪ್ರಪಂಚ'ದ
ಅಪೂರ್ವ ಪ್ರಕಟಣೆ
ಬೆಲೆ: ರೂ ಮೂರು
ಭಾರತ ಪುಸ್ತಕ ಭಂಡಾರ
ಉಡುಪಿ

ನವಯುಗ

Estd. 1921 ಸ್ಥಾಪನೆ | ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ | 13 ನ ಪೈಸೆ
Regd No. B G 176 | NAVAYUGA— NATIONAL WEEKLY | ವಾ. ಚಂದಾ ರೂ 6 75
Vol. 43 No. 10 | ಉಡುಪಿ, 7—11—1963 ಗುರುವಾರ | ಸಂಪುಟ ೪೩ ಸಂಚಿಕೆ ೧೦

ಯೂವತ್ತೂ
ಪ್ರಿಂಟಿಂಗ್ ಕೆಲಸಗಳನ್ನು
ಮಾಡಿಕೊಡಲಾಗುವುದು
ಕ್ಲಪ್ತ ಸಮಯದಲ್ಲಿ
ಮಿತ ದರದಲ್ಲಿ ಉತ್ತಮ
ಮುದ್ರಣ
ಕೆಲಸಗಳಾಗಬೇಕೆ?
ಸಂದರ್ಶಿಸಿರಿ ಯಾ ವಿಚಾರಿಸಿರಿ
ನವಯುಗ ಪ್ರೆಸ್,
ಪಾಲುಕೋಟೆ, ಉಡುಪಿ

ಕನ್ನಡಿಗರ ಉನ್ನತಿಗಾಗಿ

ಸರ್ವತ್ರ ಕನ್ನಡ ಮಾಧ್ಯಮವಾಗಬೇಕು

ಕರ್ನಾಟಕ ರಾಜ್ಯವು ರೂಪಿತವಾಗಿ ವರ್ಷಗಳು ಏಳು ಸಂದುವು. ಕನ್ನಡ ನೆಲವನ್ನು ಕರ್ನಾಟಕವೆಂದು ಕರೆಯಲು ಹಿಂಜರಿವವರು ಕೆಲವು ಜನರು; ತಮ್ಮನ್ನು ಕನ್ನಡಿಗರೆಂದು ಹೇಳಿಕೊಳ್ಳಲು ನಾಚುವವರೂ ಬೇಕಾದಷ್ಟಿದ್ದಾರೆ. ಆದರೆ, ಕೆಟ್ಟ ಡಿಭ ಷೆಯನ್ನಾಡುವವರಾದರೂ ತಾವಾಡುವ ಭಾಷೆ ಕನ್ನಡವೆಂದು ಸಾರಲು ಯಾರೂ ಹಿಂದು ಮುಂದು ನೋಡುತ್ತಿಲ್ಲ ಅಷ್ಟಾದರೂ ಅಭಿಮಾನ ಕನ್ನಡದ ಮೇಲೆ ಇಡೆಯೆಂಬುದಷ್ಟೇ ಸದ್ಯದ ಸಮಾಧಾನ. ಕನ್ನಡ ನೆಲ, ಜನ, ನುಡಿ ಒಂದಾಗಬೇಕು; ಪರಿಶುದ್ಧವಾಗಬೇಕು; ಸಚ್ಚರಿತ್ರವೆನಿಸಬೇಕು, ಆಗಲೇ ಎತ್ತಿದ ಕನ್ನಡಗುಡಿ ಅರಳಿ ಹಾರುತ್ತದೆ; ಆ ದಿನವನ್ನೇ ಕನ್ನಡ ಜನರು ಎದುರು ನೋಡುತ್ತಾರೆ. ಕನ್ನಡದ ತಾಯಿ, ಕನ್ನಡಿಗರ ಆರಾಧ್ಯ ದೈವ, ಕನ್ನಡ ನೆಲದೊಡತಿ ಸಿರಿವ ಡಿಗೆ ಹೂತೊಟ್ಟು, ಹಸುರುಡಿಗೆ ಪಸಿದು ಟ್ಟು, ಹಿರಿಹಿರಿ ಹಿಗ್ಗುವ, ನಲಿದು ಹಾಡುವ ಸುದಿನ ವೆಂದು ಬಂದೀತು ಎಂದೆಲ್ಲರೂ ತವಕಪಡುತಿದ್ದಾರೆ.

ನಮ್ಮ ಕುಲಧರ್ಮ

ಕರ್ನಾಟಕ ಏಕೀಕರಣಕ್ಕಾಗಿ ಅಹೋರಾತ್ರಿ ಹೋರಾಡಿದವರು ಹಲವರು; ತಮ್ಮ ಜೀವನವನ್ನು ಅದಕ್ಕಾಗಿ ಮುಡಿಪಿಟ್ಟು ಅಮರರಾದವರು ಕೆಲವರು. ಇವರು ನಮ್ಮ ಮುಂದಿಂದಿಲ್ಲ, ಆದರೆ, ಅವರು ಕಟ್ಟಲೆಳಸಿದ ಭವ್ಯ ಕಟ್ಟಡದ ಕರಡು ನಕ್ಷೆ ನಮ್ಮೊಡನಿದೆ; ಅದನ್ನು ಅಂದವಾದ ಚಂದವಾದ ಭವ್ಯವೂ ದಿವ್ಯವೂ ಆದ ಸೌಧವಾಗಿ ಕಟ್ಟುವ ಹೊಣೆಗಾರಿಕೆ ನಮ್ಮದು ನಮ್ಮ ಕೆಚ್ಚೆದೆಯ ಬಂಟರು ತೋರಿಸಿದ ದಾರಿ, ನೀಡಿದ ಆದರ್ಶ ನಮ್ಮ ಮುಂದಿದೆ; ನಮ್ಮ ಪಥ ಪ್ರದರ್ಶಕರನ್ನು ನೆನೆದು ಅವರು ತೋರಿದ ದಾರಿಯಲ್ಲಿ ನಾವು ಮುಂದಡಿಯಿಡಬೇಕು; ದೀಪ ಹಚ್ಚಿ ಬೆಳಗಬೇಕು. ಇದು ಕನ್ನಡಿಗರಾದ ನಮ್ಮ ಧರ್ಮ; ಪರಮ ಕರ್ತವ್ಯ. ನಾಡಿಗಾಗಿ ನಮ್ಮ ಪಾಲಿನ ಅಳಿಲ ಸೇವೆ.

ನಮ್ಮ ಕನಸು

ಎರಡು ಸಾವಿರ ವರ್ಷಗಳಿಗೂ ಹಿಂದಿನ ಪ್ರಸಿದ್ಧಿಯಿರುವ ಪ್ರಾಚೀನ ನಾಡು ಕನ್ನಡ. ಅದರ ಇತಿಹಾಸ—ಚರಿತ್ರೆ ರೋಮಾಂಚಕಾರಿ. ಅದರ ನೆಲ, ಹವೆ—ಗಾಳಿ—ನೀರು ಇತ್ಯಾದಿ ಎಲ್ಲವೂ ಸೌಮ್ಯ ಸುಂದರ, ಅವ್ಯಾಜ ಪ್ರೇಮ. ಭಾರತದ ವಿಶ್ವವಿಖ್ಯಾತ ರಾಜ ಮಹಾರಾಜರ ಸಾಲಿನಲ್ಲಿ ಕನ್ನಡ ರಾಜವಂಶದವರೂ ನಿಲ್ಲುತ್ತಾರೆ ಕನ್ನಡಿಗರು ಬುದ್ಧಿಯಲ್ಲಿ, ವಿವೇಕದಲ್ಲಿ ದೇಹದ ಧೈರ್ಯದಲ್ಲಿ ಕೆಚ್ಚಿನಲ್ಲಿ ಮೆಚ್ಚಿನಲ್ಲಿ ಕಲೆಗಳಲ್ಲಿ, ವಿಲಾಸದಲ್ಲಿ ಯಾವುದರಲ್ಲಿ ಕಡಿಮೆ? ಕನ್ನಡಿಗರು ಎಲ್ಲರೂ ಒಂದಾಗಿ ದುಡಿದರೆ, ರಾಜ್ಯದ ಸವಸ್ಯೆಗಳೆಲ್ಲವೂ ಹೇಳ ಹೆಸರಿಲ್ಲದಂತಾಗುವುದು, ಹಾಲು ಹರಿವ ಜೇನು ಸುರಿವ ದಿವಂ ಭೂಮಿಗಿಳಿಯುವುದು ಅಂತಹ ಸುದಿನದ ನಿರೀಕ್ಷೆಯೆಲ್ಲರದ್ದು

ಕನ್ನಡದ ಇತಿಹಾಸ

ಪವಿತ್ರಾತಿ ಪವಿತ್ರ ಗಂಗಾದ ಹತ್ತು ಹಲವು ನದಿನದಗಳ ನೀರುಣ್ಣುವ ನಾಡು ನಮ್ಮದು ಭತ್ತ ಹತ್ತಿ ಮೊದಲಾದ ಉತ್ತಮೋತ್ತಮ ಬೆಳೆ ಬೆಳೆವ ಭೂಮಿ ನಮ್ಮದು; ಚಿನ್ನದ ನಾಡು ನಮ್ಮದು. ಪುಲಿಕೇಶಿಯಂತಹ ಪುರುಷ ಸಿಂಹನಾಳಿದ ನಾಡು ನಮ್ಮದು; ವಿಷ್ಣುವರ್ಧನನಂತಹ ಕಲಾಪ್ರಿಯ ಮಹಾ ರಾಜನ ಕಲಾಭೂಮಿ ನಮ್ಮದು; ನೃಪತುಂಗ ನಂತಹ ರಾಜಕವಿಯು ಆಳಿದುದು ಕನ್ನಡನಾಡನ್ನು. ಪಂಪ ರನ್ನಾದಿ ಮಹಾ ಕವಿಗಳು ಬರೆದುದು ಕನ್ನಡದಲ್ಲಿ. ಜಕ್ಕಣ ಡೊಂಕಣರು ಕೆತ್ತಿದ್ದು ಕನ್ನಡದ ಶಿಲೆಯನ್ನು, ಚಿತ್ರಿಸಿದ್ದು ಕನ್ನಡಿಗರ ಸಂಸ್ಕೃತಿಯನ್ನು, ಕಟ್ಟಿಸಿದ್ದು ಕನ್ನಡದ ಕಲೆಯನ್ನು, ಮೆಚ್ಚಿಸಿದ್ದು ಅಖಿಲ ಜನಕೋಟಿಯನ್ನು; ಅನುಪಮವಾದುದು ಕನ್ನಡಿಗರ ಇತಿಹಾಸ; ಅದು ಭಾರತದ ಮುಂದಾಳು

ಪಂಚೀಕೃತ ಕನ್ನಡ

ದುರ್ದೈವದಿಂದ ಯವನರಿಂದ ಕಲಂಕಿತವಾಗಿ, ವಿದೇಶಿಯರಿಂದ ಭಿನ್ನ ಭಿನ್ನವಾಗಿ ಹರಿ ಹಂಚಾದ ಕನ್ನಡ ಏಳು ವರ್ಷಗಳ ಹಿಂದ ಒಂದಾಯಿತು—ರಾಜಕೀಯವಾಗಿ ರಾಜ್ಯವೊಂದಾದ ಕೂಡಲೇ ನಮ್ಮ ಸಾಧನೆಯು ಪೂರೈಸಿತೆಂದರ್ಥವಲ್ಲ. ನಾವು ಸಾಧಿಸಬೇಕಾದುದರೊಡನೆ ಸಾಧಿಸಿದ್ದನ್ನು ತೂಕ ಮಾಡಿದರೆ, ಇದು ಅತ್ಯಲ್ಪ. ಮೊದಮೊದಲಿಗೆ ನಮ್ಮ ರಾಜ್ಯಕೀಯವೇ ಹೋಳುಹೋಳಾಗುವ ಸಂಭವವಾಗಿತ್ತು. ಇಂದದು ಕುಸಿವಾದರೂ ಸ್ಥಿರವಾಗಿದೆ. ಆಗುತ್ತದೆ ಇದು ವಿಭಿನ್ನ ಆಡಳಿತೆಯಲ್ಲಿ ವಿಭಿನ್ನ ಭಾಷೆ, ಸಂಸ್ಕೃತಿ ಸನ್ನಿವೇಶಗಳ ಪ್ರಭಾವಕ್ಕೆ ಸಿಕ್ಕಿಬಿದ್ದ ಕನ್ನಡ ಪತಿತವಾಗಿತ್ತು. ಅದನ್ನು ನಾವು ಪಾವನಗೊಳಿಸಬೇಕಾಗಿದೆ ಕನ್ನಡಿಗನಾಗಿ ಹುಟ್ಟಿದವನು ಈ ದಿಸೆಯಲ್ಲಿ ಎಳ್ಳಷ್ಟಾದರೂ ಸೇವೆಗೈಯ್ಯದೆ ಹೋದರೆ ಅಂತಹವನ ಬಾಳು ಕಡುಕಪ್ಪು ನಡೆ ಇಷ್ಟ

ರಾಜಕಾರಣದ ಪ್ರಭಾವ

ಭಾರತ ಒಕ್ಕೂಟದ ಒಂದು ರಾಜ್ಯವಾಗಿ ಕರ್ನಾಟಕವು ಬೆಳೆಯುತ್ತದೆ. ತನ್ನ ರೂಪಧಾರಣೆಯ ವೇಳೆಯ ಪ್ರಾರಂಭಾತ್ಮಕ ವಿಘಟನೆಗಳನ್ನು ದಾಟಿ ಆಡಳಿತ ಕಾನೂನು ಶಾಸನಗಳಲ್ಲಿ ಏಕರೂಪತೆಯನ್ನು ತಂದುಕೊಂಡಿದ್ದೇವೆ; ಇನ್ನೂ ಹಲವು ಕಾನೂನುಗಳು ಏಕರೂಪಕ್ಕೆ ಬರಬೇಕಾಗಿವೆ. ಪರಸ್ಪರ ಸಂಪರ್ಕ ಇನ್ನೂ ನಮ್ಮ ಆಡಳಿತಾತ್ಮಕ ಏಕರೂಪಕ್ಕೆ ಬಂದಿಲ್ಲ ಕನ್ನಡವು ರಾಜ್ಯದ ಆಡಳಿತ ಭಾಷೆಯಾಗಿ ವ್ಯವಹಾರಕ್ಕೆ ಬಂದಿಲ್ಲ; ಜನರ ಮಾನಸಿಕ ಐಕ್ಯ ಸಾಧ್ಯವಾಗಿಲ್ಲ ಎಲ್ಲಕ್ಕಿಂತ ಮುಖ್ಯವಾಗಿ ರಾಜ್ಯದ ಹೆಸರು ಕರ್ನಾಟಕವಾಗಿಲ್ಲ ಆಡಳಿತ ವರ್ಗವು ರಾಜ್ಯದ ಸಂಪತ್ತನ್ನು

(ಆನೇ ಪುಟ ನೋಡಿರಿ)



ಕಲ್ಯಾಣಪುರ ಎಸ್. ವಿ ಎಸ್ ಹೈಸ್ಕೂಲಿಗೆ ಹಳೆ ವಿದ್ಯಾರ್ಥಿಗಳೂ ಉತ್ಸಾಹಿ ಕಾರ್ಯಕರ್ತರೂ ಆದ ರೋಟೇರಿಯನ್ ಕೆ. ವಾಸುದೇವ ಕಿಣಿಯವರು ದಾನವಾಗಿ ಕೊಟ್ಟ ವಿದ್ಯುದ್ದೀಪಗಳನ್ನು ಇತ್ತೀಚೆಗೆ ಮಣಿಪಾಲದ ಎಕೆಡೆಮಿಯ ರಿಜಿಸ್ಟ್ರಾರ್ ಡಾ| ಟಿ ಎಂ. ಎ ಪೈಗಳು ಉದ್ಘಾಟಿಸಿದಾಗ ತೆಗೆದ ಚಿತ್ರ. ಇದೇ ಸಂದರ್ಭದಲ್ಲಿ ರೋಟರಿ ಅಧ್ಯಕ್ಷ ಶ್ರೀ ಟಿ ರಮೇಶ ಪೈಗಳು ದೀಪದಾನಿ ಶ್ರೀ ಕಿಣಿಯವರ ತೈಲಚಿತ್ರವನ್ನೂ ಅನಾವರಣಗೈದರು.

ಈ ಚಿತ್ರದಲ್ಲಿ ಡಾ| ಟಿ ಎಂ. ಎ ಪೈ, ಅಧ್ಯಕ್ಷತೆ ವಹಿಸಿದ್ದ ಉಡುಪಿ ಸಬ್‌ಜಡ್ಜ್ ಶ್ರೀ ಜಿ. ಆರ್. ದೇಸಾಯಿ, ಶ್ರೀ ಪಿ. ರಾಮದಾಸ ನಾಯಕ್, ಶ್ರೀ ಟಿ ರಮೇಶ ಪೈ, ಶ್ರೀ ಭಾಸ್ಕರ ಕಿಣಿ, ಶ್ರೀ ಕೆ. ವಾಸುದೇವ ಕಿಣಿಯವರನ್ನು ನೋಡಬಹುದು

ಮಾಧ್ಯಮಿಕ ಶಿಕ್ಷಣ

ಹನ್ನೆರಡು ವರ್ಷಗಳ ಶಾಲಾಭ್ಯಾಸ

ಮಾಧ್ಯಮಿಕ ಶಿಕ್ಷಣದ ವಿಷಯವಾಗಿ ಇತ್ತೀಚಿನ ವರ್ಷಗಳಲ್ಲಿ ಬಹಳಷ್ಟು ಗೊಂದಲಗಳು ಉಂಟಾಗಿವೆ. ಇದು ಹತ್ತು ವರ್ಷದ್ದಿರಬೇಕೇ ಅಥವಾ ಹನ್ನೊಂದು ವರ್ಷದ ಅವಧಿಯದ್ದಿರಬೇಕೇ ಎಂಬುದು ಒಂದು ಸಮಸ್ಯೆಯಾದರೆ, ಪ್ರಾರಂಭಿಕ ಶಿಕ್ಷಣಾನಂತರದ ಪದವಿ ಶಿಕ್ಷಣಾವಧಿಯ ವಿಷಯದಲ್ಲೂ ಭಿನ್ನಾಭಿಪ್ರಾಯ ಹುಟ್ಟಿ ಬಂದಿದೆ. ಶಿಕ್ಷಣದಂತಹ ಮಹತ್ವದ ಸಂಗತಿಗಳಲ್ಲಿ ಅಖಿಲ ಭಾರತೀಯ ಏಕರೂಪವಿರಬೇಕು ಎಂಬ ಅಂಶವನ್ನು ಹೆಚ್ಚಿನವರು ಒಪ್ಪುತ್ತಾರೆ. ಈ ಉದ್ದೇಶದಿಂದಲೇ ಶಾಲಾ ಶಿಕ್ಷಣವನ್ನು ಹನ್ನೊಂದು ವರ್ಷ (ಅಂದರೆ ಹಾಯರ್ ಸೆಕೆಂಡರಿ) ಮತ್ತು ಪದವಿ ಶಿಕ್ಷಣವು ಮೂರು ವರ್ಷವಿರಬೇಕು ಎಂದು ನಾಲ್ಕಾರು ವರ್ಷಗಳಿಗೆ ಮೊದಲು ಅಭಿಪ್ರಾಯಪಡಲಾಯಿತು. ಆದರೆ, ಹಾಯರ್ ಸೆಕೆಂಡರಿ ಶಿಕ್ಷಣ ಕ್ರಮವನ್ನು ವ್ಯವಹಾರಕ್ಕೆ ತರುವಲ್ಲಿ ತುಂಬ ವೆಚ್ಚವೂ ವ್ಯಾವಹಾರಿಕ ಅಡಚಣೆಗಳೂ ಕಂಡು ಬರುತ್ತವೆಂಬ ಅನುಭವದಿಂದ ಕೆಲವು ರಾಜ್ಯಗಳು ಈ ಸಲಹೆಯನ್ನು ಒಪ್ಪಲಿಲ್ಲ. ಇನ್ನು ಒಂದೆರಡು ಮೊದಲು ಒಪ್ಪಿ ಮುಂದೆ ಅದನ್ನು ಹಿಂತೆಗೆದುಕೊಂಡವು; ಅಥವಾ ಅರ್ಧದಲ್ಲಿಯೇ ನಿಲ್ಲಿಸಿರುವುವು. ಹಾಗಿರುವಾಗ ಏಕರೂಪತೆಯೆಲ್ಲಿ ಬಂದಂತಾಯಿತು?

ಪ್ರಸಿದ್ಧ ಶಿಕ್ಷಣ ತಜ್ಞರೂ ಆದ ಡಾ| ಸಿ. ಡಿ. ದೇಶಮುಖರು ಒಬ್ಬನು ತನ್ನ ಪ್ರಥಮ ಪದವಿಯನ್ನು ಪಡೆಯುವುದಕ್ಕೆ ಮೊದಲು ಕಡಿಮೆ ಪಕ್ಷ ೧೬ ವರ್ಷಗಳ ಶಿಕ್ಷಣವನ್ನು ಹೊಂದಿರಬೇಕೆಂದು ಹೇಳುತ್ತಾರೆ. ಇದು ಹೊಸ ವಿಚಾರವಲ್ಲ; ಪಾಶ್ಚಾತ್ಯ ದೇಶಗಳಲ್ಲಿ ಇಂದಿಗೂ ಈ ಪ್ರಣಾಳಿಯು ನಡೆದು ಬರುತ್ತಿದೆ. ನಮ್ಮ ದೇಶದಲ್ಲಾದರೂ ಮೊನ್ನೆ ಮೊನ್ನೆಯವರೆಗೆ ಈ ಅವಧಿಯು ಹದಿನೈದು ವರ್ಷಗಳಿದ್ದುವೆಂಬುದು ಮರೆತು ಹೋಗಲಾರದು. ವಿಶ್ವವಿದ್ಯಾಲಯ ಶಿಕ್ಷಣವು ಪ್ರೌಢವೂ ವೈಷಯಿಕವೂ ಆಗಿರುವುದರಿಂದ ಅದನ್ನು ಮನವರಿಕೆ ಮಾಡಿಕೊಳ್ಳುವಷ್ಟು ಬುದ್ಧಿ ಶಕ್ತಿಯು ವಿದ್ಯಾರ್ಥಿಗಳಲ್ಲಿ ಮೂಡಿ ಬರಬೇಕು; ಇದಕ್ಕೆ ತಕ್ಕ ಪೂರ್ವತಯಾರಿ ಶಾಲಾ ಶಿಕ್ಷಣದಲ್ಲಿ ನಡೆಯಬೇಕು. ಆದರೆ ಕೇವಲ ೧೧ ವರ್ಷದ ಶಿಕ್ಷಣವು ಈ ದಿಸೆಯಲ್ಲಿ ಯಾವ ಲಾಭವನ್ನೂ ಕೊಡಲಾರದು ಎಂಬುದಾಗಿ ಇದೀಗ, ಸ್ವಲ್ಪ ತಡವಾಗಿಯಾದರೂ ತಜ್ಞರ ಮನಸ್ಸು ಹೊಕ್ಕದು ಸುದೈವವೆನ್ನಬೇಕು.

ಸೆಕೆಂಡರಿ ಶಿಕ್ಷಣವು ೧೧ ವರ್ಷ ಮತ್ತು ಪದವಿ ಶಿಕ್ಷಣವು ಮೂರು ವರ್ಷದ್ದಿರಬೇಕೆಂಬುದನ್ನು ಖಂಡಿಸಿದ ಎದೆಗಾರ ಮದ್ರಾಸ ರಾಜ್ಯ. ಅದು ತಾನೇ ಒಂದು ಯೋಜನೆಯನ್ನು ರೂಪಿಸಿ, ಹತ್ತು ವರ್ಷಗಳ ಶಾಲಾ ಶಿಕ್ಷಣ, ಮತ್ತೆರಡು ವರ್ಷಗಳ ಪೂರ್ವಶಿಕ್ಷಣ ಮತ್ತು ಮುಂದೆರಡು ವರ್ಷ ಪದವಿ ಶಿಕ್ಷಣಬೇಕು ಎಂದು ಪ್ರತಿಪಾದಿಸಿತು; ಮತ್ತು ತಾನು ಮೊದಲು ವ್ಯವಹಾರಕ್ಕೆ ತಂದಿದ್ದ ಹನ್ನೊಂದು ವರ್ಷದ ಹಾಯರ್ ಸೆಕೆಂಡರಿ ಪ್ರಣಾಲಿಯನ್ನು ಕಿತ್ತು ಹಾಕಿತು. ಇದೀಗ, ಅಖಿಲಭಾರತೀಯ ಮಾಧ್ಯಮಿಕ ಶಿಕ್ಷಣ ಮಂಡಳವು ಮದ್ರಾಸವು ಸೂಚಿಸಿದ ಮಾದರಿಯನ್ನೇ ತ್ರಸು ಮಟ್ಟಿಗೆ ಎತ್ತಿ ಹಿಡಿಯಿತು ಎಂದು ಹೇಳಬೇಕಾಗುತ್ತದೆ.

ಮಾಧ್ಯಮಿಕ ಶಿಕ್ಷಣ ಮಂಡಲವು ಇಡಿಯ ದೇಶದಲ್ಲಿ ಏಕರೂಪಾವಧಿಯ ಶಿಕ್ಷಣಕ್ರಮವಿರಬೇಕೆಂದು ಹೇಳುತ್ತದೆ; ಇದು ನಿಜಕ್ಕೂ ಅಪೇಕ್ಷಣೀಯ. ಮತ್ತು ವ್ಯವಹಾರ್ಯವೂ ಹೌದು. ದೇಶದ ಎಲ್ಲ ರಾಜ್ಯಗಳೂ ಕೇಂದ್ರಾಧೀನ ಪ್ರದೇಶಗಳೂ ಈ ಹೊಸ ಪ್ರಣಾಳಿಯನ್ನು ಆದಷ್ಟು ಶೀಘ್ರದಲ್ಲಿ ಕಾರ್ಯಗತಗೊಳಿಸಬೇಕೆಂದು ಶಿಫಾರಸು ಮಾಡಿದ್ದು, ಕೇಂದ್ರ ಸರಕಾರವು ರಾಜ್ಯಗಳಿಗೆ ಈ ದಿಸೆಯಲ್ಲಿ ಸಲಹೆ ನೀಡಬಹುದೆಂದೂ ರಾಜ್ಯಗಳ ಯಾವ ವಿವಾದಗಳಿಗೂ ಅವಕಾಶ ಕೊಡದೆ ಅದನ್ನು ಅನುಷ್ಠಾನಕ್ಕೆ ತರಬಹುದೆಂದು ನಂಬ ಬಹುದು.

ಮಂಡಳವು ಮಾಡಿದ ಸಲಹೆಗಳಲ್ಲಿ ಎಂಟು ವರ್ಷದ ಪ್ರಾಥಮಿಕ ಶಿಕ್ಷಣ ಮತ್ತು ಮೂರು ವರ್ಷಗಳ ಪ್ರಥಮ ಪದವಿ ಶಿಕ್ಷಣಗಳು ಮುಖ್ಯವಾದುವುಗಳು. ಹೀಗೆ ಮೊದಲನೆಯ ಪದವಿ ಪಡೆಯುವುದಕ್ಕೆ ವಿದ್ಯಾರ್ಥಿಯು ಒಟ್ಟು ಹದಿನೈದು ವರ್ಷಗಳ ಕಾಲ ಅಭ್ಯಸಿಸ ಬೇಕಾಗುತ್ತದೆ. ಎಂಟು ವರ್ಷಗಳ ಪ್ರಾಥಮಿಕ ಶಿಕ್ಷಣದ ಕುರಿತು ಮಂಡಳವು ಯಾವ ಅಭಿಪ್ರಾಯವನ್ನೂ ತಿಳಿಸಿಲ್ಲ; ಅದರ ಕರ್ತವ್ಯಕ್ಕೂ ಅದು ಹೊರಗಾದುದು. ಅದು ಈ ಹಿಂದೆ ಇದ್ದಂತೆಯೇ ಇರಲೂ ಬಹುದು. ಆದರೆ, ಒಂದು ಸಂಗತಿಯನ್ನು ನಾವು ಮರೆಯಲಾರದು. ಮೊದಲು ಪ್ರಾಥಮಿಕ ಶಿಕ್ಷಣದ ಎರಡು ಭಾಗಗಳಲ್ಲಿ ವಿಂಗಡಿತವಾಗಿತ್ತು. ಐದನೆಯ ತರಗತಿಯ ಹಂತವೊಂದು, ಎಂಟನೆಯ ತರಗತಿಯದೊಂದು. ಇವೆರಡೂ ಹಂತಗಳು ಸ್ವಯಂಪೂರ್ಣವಾಗಿದ್ದುವು. ಶಿಕ್ಷಣದ ಆಸಕ್ತಿಯು ಜನತೆಯಲ್ಲಿ ಹೆಚ್ಚುತ್ತ ಬರುತ್ತಿರುವಂತೆ, ಖಡ್ಡಾಯ ಶಿಕ್ಷಣದ ಪ್ರಚಾರವು ಅಧಿಕಗೊಳ್ಳುತ್ತ ಹೋಗುತ್ತಿರುವಂತೆ, ತಮ್ಮ ಶಿಕ್ಷಣವನ್ನು ಐದನೆ ತರಗತಿಯಲ್ಲೇ ನಿಲ್ಲಿಸುವವರ ಸಂಖ್ಯೆ ಕಡಿಮೆಯಾಗುತ್ತ ಬರುತ್ತಿವೆ. ಆದುದರಿಂದ, ಪ್ರಾಥಮಿಕ ಶಿಕ್ಷಣದಲ್ಲಿ ಒಂದೇ ಘಟ್ಟವನ್ನು ನಿರ್ಮಿಸಿ, ಅದನ್ನು ಸಂಯೋಜಿತ ಪ್ರಣಾಳಿಯಲ್ಲಿ ರೂಪಿಸುವುದರಿಂದ ಶಿಕ್ಷಣದಲ್ಲಿ ಆಸಕ್ತಿಯನ್ನು ಕೆರಳಿಸಬಹುದು; ನಾವಿಂದು ಕೇವಲ ಬುದ್ಧಿಜೀವಿಗಳನ್ನು ಬಯಸುತ್ತಿಲ್ಲ. ಮಾನಸಿಕವಾಗಿ, ಬೌದ್ಧಿಕವಾಗಿ ದೈಹಿಕವಾಗಿ ನೈತಿಕವಾಗಿ ದೃಢಕಾಯರಾದ ನಾಗರಿಕರನ್ನು ನಾವಿಂದು ಸೃಷ್ಟಿಸಬೇಕಾಗಿದೆ. ಏಕಗ್ರಾಹಿಗೆ ಸಮೀಚಯವೆಂದಿಗೂ ಗಮನಿಸಲಾರದು. ಇದಕ್ಕೆ ಅನುಕೂಲವಾಗುವಂತೆ ನಾವು ಪ್ರಾಥಮಿಕ ಶಿಕ್ಷಣಪ್ರಣಾಳಿಯನ್ನು ಪುನಾ ರೂಪಿಸುವುದಾದರೆ, ಅದು ತಪ್ಪಾಗಲಾರದು.

ಮಾಧ್ಯಮಿಕ ಶಿಕ್ಷಣವು ಎರಡು ಹಂತಗಳಿಂದ ಕೂಡಿರಬೇಕೆಂದು ಮಂಡಳವು ಅಭಿಪ್ರಾಯಕ್ಕೆ ಬಂದಿದೆ. ಹತ್ತನೆಯ ವರ್ಷಾಂತ್ಯದಲ್ಲಿ ಪ್ರಥಮ ಖಂಡ ಮತ್ತು ಹನ್ನೆರಡನೆಯ ವರ್ಷಾನಂತರ ದ್ವಿತೀಯ ಖಂಡ. ದ್ವಿತೀಯ ಖಂಡದಲ್ಲಿ ವಿದ್ಯಾರ್ಥಿಯು ತಾನು ತೆಗೆದುಕೊಳ್ಳುವ ಐಚ್ಛಿಕ ವಿಷಯಗಳ ಕುರಿತು ಆಳವಾದ ಅಭ್ಯಾಸವನ್ನು ಮಾಡಬೇಕಾಗುತ್ತದೆ. ಎಂದರೆ, ಉಳಿದ ಸಾಮಾನ್ಯ ವಿಷಯಗಳು ಪ್ರಥಮ ಖಂಡದಲ್ಲಿಯೇ ಆಳವಾಗಿ ಅಭ್ಯಸಿಸಲ್ಪಡಬೇಕು. ದ್ವಿತೀಯ ಖಂಡದಲ್ಲಿ ಉತ್ತೀರ್ಣನಾದವನು ಯಾವ ಪೂರ್ವ ಪರೀಕ್ಷೆಯೂ ಇಲ್ಲದೆ,—ಪದವಿ ವರ್ಗದ ಪ್ರಥಮ ವರ್ಷದಲ್ಲಿ ಪ್ರವೇಶ ಪಡೆಯಲು ಅರ್ಹನಾಗುತ್ತಾನೆ. ಇಂತಹ ಶಿಕ್ಷಣ ನೀಡುವ ಶಾಲೆಗಳು ಹಾಯರ್ ಸೆಕೆಂಡರಿ ಶಾಲೆಗಳೆಂದು ಕರೆಯಲ್ಪಡುತ್ತವೆ. ಇಲ್ಲಿ ವಿದ್ಯಾರ್ಥಿಯು ಒಟ್ಟು ನಾಲ್ಕು ವರ್ಷಗಳ ಕಾಲ ಅಭ್ಯಾಸ ನಡೆಸಬೇಕಾಗುವುದು.

ಈಗ ೧೧ನೆಯ ತರಗತಿ ಮಾತ್ರ ಇರುವಲ್ಲಿ ಇನ್ನೊಂದು ವರ್ಷವನ್ನು ಹೆಚ್ಚಿಸಬೇಕು; ೧೧ ವರ್ಷದ ಅವಧಿಯಲ್ಲೊಂದು ವರ್ಷವನ್ನು ಸೇರಿಸಬೇಕು; ಈಗಾಗಲೇ ಹಾಯರ್ ಸೆಕೆಂಡರಿ ೧೧ನೆಯ ವರ್ಷದಲ್ಲಿ ಉತ್ತೀರ್ಣರಾದವರು ನೇರವಾಗಿ ಮೂರು ವರ್ಷದ ಪದವೀ ವರ್ಗಗಳಲ್ಲಿ ಪ್ರವೇಶ ಪಡೆಯಬೇಕು; ಪಾರಪಟ್ಯಯಾದರೂ ಆಯಾ ಹಂತಗಳಿಗೆ ತಕ್ಕಂತೆ ಸಮಾನತೆಯಿಂದ ಕೂಡಿರಬೇಕು. ಈ ಹೊಸಮಾದರಿಯ ಶಿಕ್ಷಣ ಪ್ರಣಾಳಿಯನ್ನು ಒಪ್ಪದಿರುವ ಯಾವುದೇ ಹೊಸ ಶಾಲೆಗಳಿಗೆ ಮನ್ನಣೆಯನ್ನು ನೀಡಬಾರದು. ಹೀಗೆ ನಿರೂಪಿತ ನೂತನ ಮಾದರಿಯಲ್ಲಿ ಸೆಕೆಂಡರಿ ಶಿಕ್ಷಣದ ಹಂತದಲ್ಲಿ ವಿದ್ಯಾರ್ಥಿಯು ಹಳೆಯ ಇಂಟರ್ ಮೀಡಿಯೇಟ್ ತರಗತಿಯಲ್ಲಿ ಪಡೆಯುತ್ತಿದ್ದಷ್ಟು ಜ್ಞಾನವನ್ನು ಗಳಿಸಬಲ್ಲನು. ಆ ಮೇಲಿನ ಪದವಿ ತರಗತಿಯು ಮೂರು ವರ್ಷಗಳದ್ದಿರುವುದರಿಂದ ಒಬ್ಬನು ತನ್ನ ಅಧ್ಯಯನದ ವಿಷಯಗಳನ್ನು ಸಾಕಷ್ಟು ಆಳವಾಗಿ ಅಭ್ಯಸಿಸಲು ಅವಕಾಶ ದೊರೆಯುವುದು ಮತ್ತು ಇದರಿಂದಾಗಿ ಶಿಕ್ಷಣದ ಮಟ್ಟವೂ ಉನ್ನತವಾಗುವ ನಿರೀಕ್ಷೆಯಿದೆ.

ಶಿಕ್ಷಣ ರಂಗವಿಂದು ಒಂದು ಆಫೀಸಿನ ಅಪ್ರೆಂಟಿಸನಂತೆ ಇದೆ; ಅಥವಾ ಮಿತಿ ಮೀರಿದ ವಿಜ್ಞಾನಿಗಳ ಪ್ರಯೋಗ ಶಾಲೆಯಂತೆ ಇದೆ. ಗಳಿಗೆ ಗಳಿಗೆ ಬದಲಾಗುವಂತ

(೭ನೇ ಪುಟ ನೋಡಿರಿ)



ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕ್ಯಾಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3 ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ.

14 CT ಚಿನ್ನದ ಆಭರಣಗಳಲ್ಲಿ 58⅓% ಶುದ್ಧ ಪುತ್ತಳಿ ಚಿನ್ನ ಇರುತ್ತದೆ.

ಬೇಡದಿದ್ದಲ್ಲಿ 1 ರೂ. ಕಮ್ಮಿಯಲ್ಲಿ ಯಾವಾಗಲೂ ಬಜಾರು ಧಾರಣೆಗೆ ಪಡಕೊಳ್ಳುವ ಭರವಸೆ ಕೊಡುತ್ತೇವೆ.

ವಿ ಸೂ: ಹಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡಕೊಳ್ಳುವರೆ ಸರಕಾರದ ಲೈಸನ್ಸ್ ಸಿಕ್ಕಿರುತ್ತದೆ.

ಮದುವೆ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡಕೊಂಡು ಖಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.

ಶ್ರೀ ಕೃಷ್ಣಾ ಜ್ಯುವೆಲರಿ ವರ್ಕ್ಸ್

ಕಂಕಪೇಟೆ — ಉಡುಪಿ.

ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.

ಫೋನ್ ನಂಬ್ರ: 66

ಗೇಹ ರಾಜ್ಯದಲ್ಲಿ

ಗಂಡಸ್ರ ಬುದ್ಧಿ ಹರಿಯೋದೇ ಇಲ್ವೆ?

ನೋಡೇ, ಇಲ್ಲಿ ಕೇಳೊಂದಿ

ಕೇಳ್ತಾ ಇದ್ದೇನೆ ಹೇಳಿ, ಏನಂತೆ

ಅಲ್ಲಾ ಒಂದು ಕಥೆ ಗೊತ್ತಿದೆಯೇನೆ?

ಒಂದೆಂದೇನು? ನೂರಾರು ಕಥೆ ಗೊತ್ತಿವೆ. ನೋಡಿ, ನಮ್ಮಜ್ಜಿ ಹೇಳ್ತಿದ್ದ ಗುಬ್ಬಚ್ಚಿ–ಕಾಗೇಕಥೆನೂ ಗೊತ್ತಿದೆ. ಅಲ್ಲಾ ಈಗ ಕಥೆ ಕೇಳೋದುನ್ನು ಏನೂಂತ?

ಹ್ಞೂ ಹ್ಞೂ ಹ್ಞೂ.... ನಾನು ಒಂದು ಹೇಳಿದ್ರೆ ನೀನು ಮತ್ತೊಂದು ಹೇಳ್ತೀ. ಪರ್ವಾಗಿಲ್ಲ ಕಣೆ. ಎಷ್ಟಾದ್ರೂ ಹೆಂಗಸ್ರ ಬುದ್ಧಿ ಹರಿಯೋದೆಲ್ಲಿಗೇಂತ.. ಮೊಣಕಾಲ ಕೆಳಗೆ ಅಲ್ವೆ

ಸುರುವಾಯ್ತು ನಿಮ್ದು. ಹೆಂಗಸ್ರ ಬುದ್ಧಿ ಮೊಣಕಾಲ ಕೆಳ್ಗೆ ಅನ್ನಿ. ಆದ್ರೆ ಗಂಡಸ್ರ ಬುದ್ಧಿ....

ಹಾವೇ, ಸರೀನ್ನು; ಅದನ್ನು ಯಾರೂ ಕೇಳಿಲ್ಲ....,,

ಅಂದ್ರೆ, ಅದು ಹರಿಯೋದೇ ಇಲ್ಲಾಂತರ್ಥ ಅಲ್ವೆ?

ಇದ್ರೂ ಇರ್ಬಹುದು ಬಿಡು ಅದನ್ನು..,

ನೋಡಿ, ಈಗ ಯಾಕೆ ನೀವು ಬಿಡು ಅಂತೀರಿ? ಮಾತಾಡಿ, ಮುಂದ್ವರ್ಸಿ......,

"ಅಲ್ವೆ, ಕಥೆ ಗೊತ್ತದೇಂತ ಹೇಳ್ಲಿಲ್ಲ....,,

ಹೌದು. ಹೇಳ್ದೆ; ಏನು ಕಥೆ ಕೇಳಬೇಕೇ ನಿಮ್ಗೆ?

ನೀನು ಹೇಳ್ತೀನೀಂತಂದ್ರೆ ನಾನು ಬೇಡಾಂತೇನೆಯ?

ಸರಿ ಹೇಳಿ ಹಾಂಗಾದ್ರೆ ಯಾವ ಕಥೆ ಬೇಕು? ಸಿಂಹ ಮತ್ತು ಕುದುರೆಯದ್ದೋ ಅಥ್ವಾ ಮಂತ್ರಿ ಮಂತ್ರಾಣಿಯವರದ್ದೋ

ನೋಡ್ವಾ, ಸಿಂಹ ಕುದುರೆಯದನ್ನೆ ಹೇಳು....

ಕೇಳಿ ಹಾಂಗಾದ್ರೆ. ಒಂದು ಕಾಡಿನಲ್ಲಿ ಒಂದು ಸಿಂಹವಿತ್ತು. ಅದೇ ಕಾಡ್ನಲ್ಲಿ ಒಂದು ಕುದುರೆಯಿತ್ತು....ಹ್ಞೂಂ ಗುಟ್ಟ್ಬೇಕಲ್ವಾದ್ರೆ...

ಹೌದು, ಕಥೆ ಹೇಳೋಕೂ ಸ್ಫೂರ್ತಿ ಬೇಕಲ್ಲಾ? ಹೇಳ್ತೋ ಸ್ಫೂರ್ತಿಯ ಟಾನ್ಲಿಕ್ ಕಾಣೋ ಹ್ಞೂಂ ಅನ್ನೋದು.... ಹ್ಞೂಂ....

ಏನು ಹೇಳ್ದೆ, ಅದೇ ಸಿಂಹ ಮತ್ತು ಕುದುರೆಗಳಿದ್ದುವು. ಅವುಗಳಲ್ಲಿ ಒಂದು ದಿನ ಜಗಳವಾಯ್ತು...

ಹ್ಞೂಂ....

ಇಬ್ಬರೂ ಹೊಡೆದಾಡ ತೊಡಗಿದರು....

ಹ್ಞೂಂ....

ಕುದುರೆ ಸೋಲುವುದರಲ್ಲಿತ್ತು....

ಹ್ಞೂಂ....

ಏನಿದು ಹ್ಞೂಂ ಹ್ಞೂಂ ಅಂತ ಆಕಳಿಸ್ತಾ ಇದ್ದೀರಿ? ಮಾತು ಮಾತಿಗೂ ಹ್ಞೂಂ ಗುಟ್ಟಿ ಕಥೇಲಿಂಕ್ ತಪ್ಪಿಸ್ತೀರಿ.

ಆಯ್ತು ಮಹಾರಾಯ್ತಿ...ಇನ್ನು ಹೇಳೊಲ್ಲ. ಹ್ಞೂಂ ಕಥೇನ ಮುಂದುವರ್ಸು. ಕುದುರೆ ಸೋಲುವುದ್ರಲ್ಲಿತ್ತು...

ಹೌದು...ಆಗ ಒಬ್ಬ ಮನುಷ್ಯ ಬಂದ, ಅವನು ಹೇಳಿದ, ನನ್ನನ್ನು ಬೆನ್ನ ಮೇಲೆ ಹೊತ್ತುಕೋ, ಸಿಂಹವನ್ನು ನಾನು ಕೊಲ್ಲುತ್ತೇನೆ...

ಸರಿ ಬಿಡು; ಕುದ್ರೆ ಒಪ್ಪಿತು; ಅಲ್ವೆ?

ಹೌದು, ಆಗ ಒಂದು ಸರಿ ನೋಡಿ ಹೇಳ್ತು: ಕುದ್ರೆ, ಸಿಂಹ ಹೋರಾಡಿ ಇನ್ನು ಸೋಲಬೇಕು; ಆದ್ರೆ ನೀನು ಈಗ್ಲೇ ಸೋತು ಬಿಟ್ಟೆ ಎಂತ...

ಮುಗಿಯಿತೇ ನಿನ್ನ ಕಥೆ....

ಹ್ಞೂಂ....

ಇನ್ನು ಮಂತ್ರಿ ಮಂತ್ರಾಣಿ ಕಥೆ ಉಂಟಲ್ಲಾ?

ಹೌದು. ಅದು ಹೀಗಲ್ಲ...

ಮತ್ತೆ

ಅದೇ ನಿಮ್ಮ ಟೋಪಿಯವರದ್ದು....

ಏನೇ ಅದು ಹಾಗನ್ನೋದು?

ಕೇಳಿ ನಮ್ಮ ಕೃಪಲಾನಿ ಇದ್ದಾರಲ್ಲಾ...

ಹಾದಾದು ನಿಮ್ಮ ಕೃಪಲಾನಿ. ಅಂದ್ರೆ ಉತ್ತರ ಪ್ರದೇಶದ ಮುಖ್ಯ ಮಂತ್ರಾಣಿ ....

ಅಲ್ಲ, ಅಲ್ಲ...

ಮತ್ತೆ....

ಮುಖ್ಯಮಂತ್ರಿ....

ಏನಂತೀಯಾ ನೀನು. ನೀನನ್ನೋದು ಸುಚೇತಾ ಕೃಪಲಾನಿಯನ್ನಲ್ಲವೆ?

ಹೌದು....

ಹಾಗಾದ್ರೆ ಮುಖ್ಯ ಮಂತ್ರಿಣಿ ಅಲ್ಲಾ ಮಂತ್ರಾಣಿ ಅಂತೂ ಮಂತ್ರಿಯಲ್ಲ....

ಅದ್ಕೇ ಹೇಳೋದು ನಿಮ್ಮ ಬುದ್ಧಿ ಹರಿಯೋದಿಲ್ಲಾಂತ

ಏನೇ ಅದು ಕೈ ಹಿಡಿದ ಗಂಡ್ನನ್ನೂ ಹಳಿಸೋ ಧೈರ್ಯ ಬಂತು ಬಿಟ್ಟೆ?

ನನ್ನನ್ನ ಕೇಳ ಬೇಡಿ. ನಿಮ್ಮ ಮದನ ಮೋಹನವರ್ಮರನ್ನು ಕೇಳಿ.

ಯಾರೇ ಅದು ಹಾಂಗಂದ್ರೆ?

ಅದೇ ಯು. ಪಿ. ಯ ವಿಧಾನಸಭಾಧ್ಯಕ್ಷರು.

ಓಹೋ, ಹಾಗೋ, ಏನೋ ಇದೆ, ಇದ್ರಲ್ಲಿ ಏನು ಹೇಳಬಿಡು..

ಕೇಳ್ತೀರೇನು ಕಥೇನ? ವಿಧಾನ ಸಭೆಯಲ್ಲಿ ನಮ್ಮ ಕೃಪಲಾನಿಯನ್ನ ಹೇಗೆ ಕರೆಯಬೇಕೂಂತ ಗೊಂದಲ ಎದ್ದಿತಂತೆ ಕೆಲವರು ಮುಖ್ಯಮಂತ್ರಿಯೆಂದರೆ, ಇನ್ನು ಕೆಲವರು ಮುಖ್ಯಮಂತ್ರಿಣಿಯೆಂದರು;

ಹೌದೇ...

ಮಂತ್ರಾಣಿಯೆಂಬುದು ಅಬದ್ಧ ಪ್ರಯೋಗ. ಮಂತ್ರಿಣಿಯೆಂದರೆ, ಮಂತ್ರಿಯ ಹೆಂಡ್ತಿ. ಆದ್ದರಿಂದ ಮುಖ್ಯ ಮಂತ್ರಿಯೇ ಸರಿ ಅಂತ ತೀರ್ಪಿತ್ತರು ಮದನ ಮೋಹನರು.

ಸರಿಹೋಯ್ತು ಬಿಡು.

ಅದ್ಕೇ ಹೇಳೋದು ಗಂಡಸ್ರ ಬುದ್ಧಿ ಹರಿಯೋದಿಲ್ಲಾಂತ

ಯಾಕೆ ಹಾಗಂತೀಯ?

ಸರಿಯಾಯ್ತು. ಒಪ್ಕೊಳ್ಳಿ ಸೋತೇಂತ.

ಸೋಲೋದೇನ. ಬಂತೇ ಇದ್ರಲ್ಲಿ... ಯಾಕೆ ನಮ್ಮ ಚರ್ಚೆ, ಅದೂ ನಿನ್ನೊಡನೆ, ಹ್ಞೂಂ ಸೋತೆ.

ಅಲ್ಲ, ಆ ನಿಮ್ಮ ವರ್ಮರು ತೀರ್ಪು ಕೊಟ್ಟದ್ರಿಂದ ನಿಮ್ಮ ಗಂಡಸ್ರ ಗೌರವ ಕಡಿಮೆಯಾಯ್ತೂಂತ.

ಹೇಗೆ?

ಅವ್ರು ಮುಖ್ಯ ಮಂತ್ರಿಣಿ ಅಂತ ಅನ್ನೋದು ಸರಿ ಅಂತಂದಿದ್ರೆ, ನಿಮ್ಮ ಕೃಪಲಾನಿಯವರು ಬಿಟ್ಟಿ ಮುಖ್ಯಮಂತ್ರಿ ಆಗ್ತಿದ್ರು ನೋಡಿ; ಪಾಪ, ಅವ್ರ ಹಣೇಲಿ ಆ ಪದ ಬರೆಯಲೇ ಇಲ್ಲ ಬ್ರಹ್ಮ...

ಹ್ಞಹ್ಞ....ಬಹಳ ಜಾಣೆ ಕಣೇ ನೀನು. ಇದೆಲ್ಲಾ ನಿನ್ಗೆಂದ್ಲೆ ಬಂದದ್ದು....

ಅಲ್ಲಾ ಹಾಗೆಲ್ಲಾ ಸಿಕ್ಕಾಪಟ್ಟೆ ಹೇಳೋಕೆ...

ನಿವಾಗ್ತಿದ್ರೆ ಹೇಳ್ತಿರ್ಲಿಲ್ವಾ?

ಅನ್ಯಾಯ ಮಾಡೋಕಾಗುತ್ಯೆ?

ಈಗ ನೀವು ಹೇಳಿದ್ರಿ ಮಂತ್ರಾಣಿ, ಮಂತ್ರಿಣಿ ಅಂತ,

ಸರೀನ್ನು, ಹೊಟ್ಟೆ ಹಸಿವೆಯಾಗ್ತಾಯಿದೆ. ಬದ್ಧಿಗೆ ಏನು ಯೋಚನೇನೇ ಹರಿಯದು.

ಇನ್ನು ಸಾಕೊಂದ್ರೆ!

ಅಂದ್ರೆ...

ಅಲ್ಲಾ ನೀವೇ ಹೇಳಿದ್ರಲ್ಲಾ ಯೋಚನೇನೇ ಹರಿಯೊಲ್ಲಾಂತ. ಮತ್ಯಾಕೆ ಚರ್ಚೆ? ಹೋಗಿ ಕಾಲುಕೈ ತೊಳ್ಕೊಳ್ಳಿ.

ಹ್ಞೂಂ....

ಬೇಗ ಬನ್ನಿ ಮತ್ತೆ....

ಸೋತವರು ತಲೆ ತಗ್ಗಿಸಲೇ ಬೇಕಲ್ಲಾ ...

—ಗೋಪಾ

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ........
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ

1–1–1963ರಿಂದ ಠೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ

ನಿಮ್ಮ ಉಳಿತಾಯವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ವಾರ್ತೆ—ಪ್ರತಿವಾರ್ತೆ

ದಸರಾ ನೋಡಿ ಆನಂದಿಸಲು ತೆರಳಿದ್ದ ಮೂವರು ವಿಹಾರಾರ್ಥವಾಗಿ ಗಗನ ಯಾತ್ರೆ ಕೈಗೊಂಡರಂತೆ. ಅವರು ಪ್ರಯಾಣಿಸುತ್ತಿದ್ದ ಸರಕಾರಿ ಫ್ಲೈಯಿಂಗ್ ಸ್ಕೂಲಿನ ವಿಮಾನ ಅಪಘಾತಕ್ಕೀಡಾಗಿ ಗಗನ ವಿಹಾರಿಗಳು ಯಮಲೋಕ ವಿಹಾರಕ್ಕಾಗಿ ತೆರಳಿದರಂತೆ.

—ವಿಮಾನದ ಚಾಲಕನು ಚೀನೀಯನೋ ಪಾಕಿಸ್ತಾನಿಯೋ ಅಥವಾ ಜೇಲನೋ ಎಂಬ ಸಂದೇಹ ಮಾತ್ರ ಇನ್ನೂ ದೃಢಪಟ್ಟಿಲ್ಲವಂತೆ.

o o

ದ್ರಾವಿಡ ಕಳಗಂನ ಕಾರ್ಯದರ್ಶಿ ಅಣ್ಣಾ ದೊರೈಯವರು ಭಾರತೀಯ ಸಂವಿಧಾನಕ್ಕೆ ಹೊಂದಿಕೊಂಡು ಹೋಗುವಂತೆ ಪ್ರತ್ಯೇಕ ದ್ರಾವಿಡನಾಡಿನ ಬೇಡಿಕೆಯನ್ನು ತ್ಯಜಿಸುವಂತೆ ಕಳಗಂ ಸಂವಿಧಾನಕ್ಕೆ ತಿದ್ದುಪಡಿ ಮಾಡಲು ನಿರ್ಧರಿಸಿ ಜನರಲ್ಲಿ ಯಶಸ್ವಿಯಾದರು.

- ಅಂದು ಭಾರತೀಯ ಸಂವಿಧಾನದ ಪ್ರತಿಗಳನ್ನು ಸುಟ್ಟವರು; ಇಂದು ತಮ್ಮ ಸಂವಿಧಾನವನ್ನೇ ಅಗ್ನಿಗಾಹುತಿ ಮಾಡಿದರು ಕಾಲಾಯ ತಸ್ಮೈ ನಮಃ

o o

ಮಹಾ ವೀರತ್ಯಾಗಿ, ಅಲಿಗುರ್‍ರ್ಯ್ ಖಾನ್ ಮತ್ತು ಒಕ್ರೈ ಲಾಂ ಮಾಹಮ್ಮದರು ವಿಮಾನಿಸಿತಿ ಸೇರಿದನವಲ್ಲಿರಾವ್ನ ನಾಯಕರಾಗಿ ತಮ್ಮ ಅಭಿಪ್ರಾಯಗಳನ್ನು ವಿಸ್ತರಿಸು ಮಾಡಿಕೊಂಡು ಅಧಿವೇಶನಕ್ಕೆ ಮೊರಗನ್ನು ಕಂಡರು.

— ರಾಜಕೀಯ ಕ್ಷೇಂತ ಶಾಶ್ವತವಾಗಿ ಇವರಿಗೆ ಉಚಿತವೆಂದು ತಿಳಿದ. ಇವರನ್ನು ಹಿಂದೆ ಜಗ್ಗಿದರು ಎಂಬುದಿನ್ನೂ ಖಚಿತವಾಗಿಲ್ಲ.

o o

ಹಿಂದಿನ ಸರಕಾರದಲ್ಲಿ ಉಪಾಧ್ಯಕ್ಷರಾಗಿದ್ದ ಗುಸ್ಸೇಲ ಎನ್‌ಗಾರ್‌ಫೈ ದಕ್ಷಿಣ ವಿಯತ ನಾಮದ ಮಿಲಿಟರಿ ಸರಕಾರದಲ್ಲಿ ಪ್ರಧಾನ ಮಂತ್ರಿಯೆಂದು ನೇಮಿತರಾಗುವರು.

—ಮಿಲಿಟರಿ ಕ್ರಾಂತಿ, ಅಧ್ಯಕ್ಷರ ಕೊಲೆ ಮತ್ತು ಈ ವಾರ್ತೆಗಳ ನಡುವೆ ಪೂರ್ವಾಪರ ಸಂಬಂಧವಿಲ್ಲವೆಂದು ನಂಬಬಹುದೆ?

o o

ಪಾಕಿಸ್ತಾನವು ಭಾರತದೊಡನೆ ಸ್ನೇಹವನ್ನು ಬಯಸುತ್ತದೆಯೆಂದು ಗುಡುಗುತ್ತಾರೆ ಅಯ್ಯೂಬ್ ಖಾನ್.

—ಸರ್ವಸ್ವ ತ್ಯಾಗದಿಂದಲೇ ಸ್ನೇಹ ದೃಢವಾಗುತ್ತದೆ ಎಂದು ಕಥಿಸುತ್ತಾರೆ ಚೌ. ಎನ್. ಲಾಯ್.

o o

ರಾಜಧಾನಿ ಬೆಂಗಳೂರಲ್ಲಿ ಕನ್ನಡ ರಾಜ್ಯ ದಿನಾಚರಣೆಯನ್ನು ಮೊತ್ತಮೊದಲಿಗೆ ವೈಭವೋಪೇತವಾಗಿ ಆಚರಿಸಲಾಯಿತು.

—ಪ್ರಾಯಃ ಅಲ್ಲಿನ ಮೈಸೂರಿಗರು ಪರಭಾಷೀಯರ ಒತ್ತಡದಿಂದ ತಪ್ಪಿರಬೇಕು. ಆದಕ್ಕೆಂದೇ ಈಗ ಕನ್ನಡ ಸ್ನೇಹ ಬಯಸುತ್ತಾರೆ.

NAVAYUGA
Kannada Weekly
UDIPI
Founder:
Late Sri A. B. Shetty
Former Minister for Public
Health, Govt. of Madras
& Govt. of Mysore.

ನವಯುಗ

ವರುಷ	ಉಡುಪಿ	ವಾರ
೪೩	೭-೧೧-೧೯೬೩	೧೦

ಸರ್ವಾಧಿಕಾರಿ ಯಾರು?

ಇರುಳ ಬಿದಿರ ಹಿಂಡಿಲಿಗೆ ಉರಿಯು ಬಿದ್ದಾಗ ಚೌಹಾರಿ ಕಂಗಾಲಾಗಿ ಸಿಕ್ಕಸಿಕ್ಕವರನ್ನು ಕಚ್ಚುವ ಸರ್ಪ ಬುದ್ಧಿಯನ್ನು ನಮ್ಮ ನೆರೆಯ ಪಾಕಿಸ್ತಾನದ ಅಧ್ಯಕ್ಷ ಅಯೂಬಖಾನರು ಈಗ ಬಲವತ್ತರವಾಗಿ ತೋರಿಸುತ್ತಿದ್ದಾರೆ. ತನ್ನನ್ನು ಸಂಭಾವಿತನೆಂದೂ ತನ್ನ ಪರವಾಗಿ ವಕಾಲತ್ತನ್ನು ಮಾಡುವವರು ಒಳ್ಳೆಯವರೆಂದೂ ಉಳಿದವರೆಲ್ಲ ಬುದ್ಧಿಗೇಡಿಗಳು, ತಿಳಿಗೇಡಿಗಳು, ಮೂರ್ಖರು ಎಂದು ಸಾರುವ ತನ್ನ ಸಲ್ಲವಿಯನ್ನು ಅಯೂಬಖಾನರು ಟೆಲಿವಿಜನ್ನಲ್ಲಿ ಒಂದು ಗಂಟೆಕಾಲ ಹಾಡಿದ್ದು ಆಶ್ಚರ್ಯವಲ್ಲ; ಕಾಜಲಾರದವನು ಕೈ ಕಾಲನ್ನಾದರೂ ಬಡೆದು ನೋಡ. ವನರ ಕಣ್ಣಿಗೆ ಮಣ್ಣೆರಚ ಬೇಕು ತಾನೆ? ತನ್ನ ದೇಶದ ಆಂತರಿಕ ಸಂಪತ್ತನ್ನು ಬೆಳೆಸಲಾಗದ ಅಯ್ಯೂಬರು ತಾನು ಸರ್ವಾಧಿಕಾರಿಯಾಗಿದ್ದು ಕಳೆದುಕೊಳ್ಳ ಬೇಕಾಗಿ ಬಂದ ಗೌರವವನ್ನು ಉಳಿಸಿಕೊಳ್ಳುವ ಪ್ರಯತ್ನದಲ್ಲಿ ತೊಡಗಿದ್ದಾರೆ.

ಅಮೆರಿಕೆ ಮತ್ತು ಚೀನಾಗಳ ನಡುವೆ ಸಂಪರ್ಕವನ್ನು ಹೆಚ್ಚಿಸಿ ಅವರ ನಡುವೆ ಮೈತ್ರಿಯನ್ನುಂಟುಮಾಡುವಲ್ಲಿ ತಾನು ವಿಶ್ವಾಸದಿಂದ ಕಾರ್ಯನಿರ್ವಹಿಸುವುದಾಗಿ ಹೇಳಿಕೊಳ್ಳುವ ಅಯೂಬಖಾನರು ಇಂತಹ ಮೈತ್ರಿಯು ತನ್ನ, ಅಮೇರಿಕೆಯ ಮತ್ತು ಚೀನಾಗಳ ವೈಯಕ್ತಿಕ ಹಿತ ಸಾಧನೆಗೆ ಅಗತ್ಯವೆಂದು ಹೇಳುತ್ತಾರೆ. ಕಮ್ಯುನಿಸ್ಟ್ ಚೀನಾವನ್ನೂ ಅಮೇರಿಕೆಯನ್ನೂ ಹತ್ತಿರಕ್ಕೆ ತರುವಲ್ಲಿ ಪಾಕಿಸ್ತಾನದ ಪ್ರಯೋಜನವೇನು? ಭಾರತಕ್ಕೆ ಚೀನೀಯ ಆಕ್ರಮಣದಿಂದ ಸಂರಕ್ಷಣೆ ಪಡೆಯಲು ಅಮೇರಿಕೆಯು ನೆರವು ನೀಡುತ್ತಿದ್ದು ಇದನ್ನು ಸಹಿಸಲಾಗದ ಅಯ್ಯೂಬರು ಕರಬಿ ಈ ಮೈತ್ರಿಯ ಮಂತ್ರ ಪಠನೆಗೆ ತೊಡಗಿದ್ದಾರೆ ಅಮೇರಿಕೆಯು ಚೀನಾದ ಹತ್ತಿರ ಬಂದರೆ, ಭಾರತಕ್ಕೆ ನೆರವು ನೀಡಲಾರದು; ಮತ್ತು ಆಗ ತನ್ನ ತಂತ್ರಸಿದ್ಧಿಯಾಗುವುದು ಎಂಬ ಅವರ ವಿಚಾರಧಾರೆಯು ಗುಪ್ತವಿರುವುದು ಸಾಧ್ಯವಿಲ್ಲ ಹಾಗೆಯೇ ಕಮ್ಯುನಿಸ್ಟ್ ಚೀನಾ ಮತ್ತದರ ಬಾಲ ಬಡಕವಾಗ ಹೊರಟಿರುವ ಪಾಕಿಸ್ತಾನಗಳ ರಾಜಕಾರಣವನ್ನು ಅರ್ಥ ಮಾಡಿ ಕೊಳ್ಳದಿರುವಷ್ಟು ಮೂರ್ಖರು ಅಮೇರಿಕನರಲ್ಲ ಕಮ್ಯುನಿಜಂ ವಿಶ್ವದಲ್ಲಿ ಹರಡಬಾರದೆಂದು ಕಮ್ಯುನಿಸ್ಟ್ ರಾಷ್ಟ್ರಗಳ ಆಕ್ರಮಣದಿಂದ ರಕ್ಷಿಸಿಕೊಳ್ಳುವ ಉದ್ದೇಶದಿಂದ ಅಮೇರಿಕೆಯು ಪಾಕಿಸ್ತಾನಕ್ಕೆ ಮಿಲಿಟರಿ ಸಹಾಯ ನೀಡುತ್ತಿರುವಾಗ, ಅದು ಕಮ್ಯುನಿಸ್ಟ ಚೀನಾದೊಡನೆ ಮೈತ್ರಿಯನ್ನು ಬಯಸುವುದು ಸಾಧ್ಯವೆ? ಅದೂ ಇಂದಿನ ಅದರ ಸಾಮ್ರಾಜ್ಯವಾದದ ಪ್ರತಿಷ್ಠಾಪನೆಯ ಕಾಲದಲ್ಲಿ! ಚೀನೀಯ ಆಕ್ರಮಣ ನಡೆದಿದೆಯೆಂದು ಒಪ್ಪದ ಅಯ್ಯೂಬಖಾನರು ಇಂದೀಗ ಗಡಿ ವಿವಾದವು ತೀವ್ರವಾಗುವ ಸಂಭವವಿಲ್ಲವೆಂದೂ ಆದುದರಿಂದ ಭಾರತಕ್ಕೆ ಅಮೇರಿಕನ್ ನೆರವು ಅನಗತ್ಯವೆಂದೂ ಹೇಳುತ್ತಾರೆ. ಭಾರತ—ಚೀನಾ ಗಡಿಯಲ್ಲಿ ಏನು ನಡೆದಿದೆ, ಏನು ನಡೆಯುತ್ತಿದೆ ಯೆಂಬುದನು ಅರಿತುಕೊಂಡೇ ಅಮೆರಿಕೆ—ಭಾರತಗಳ ಕಾರ್ಯತತ್ಪರವಾಗಿವೆ. ಮಾಳಿಗೆಯ ತುದಿ ಕುಳಿತವನಿಗೆ ಪಂಚಾಂಗ ಕಲ್ಲು ಜಾರುವುದು ಹೇಗೆ ತೋರಬೇಕು? ಭಾರತವು ತಾನು ಸಂಗ್ರಹಿಸಿರುವ ಶಸ್ತ್ರಾಸ್ತ್ರಗಳ ಉಪಯೋಗವನ್ನು ಮಾಡಿಕೊಳ್ಳುವುದೆಂದೂ ಅದಕ್ಕಾಗಿ ಅದು ಪಾಕಿಸ್ತಾನದ ಮೇಲೆ ಏರಿಬರಬಹುದೆಂದೂ ಅಯೂಬರ ಬೆದರಿಕೆ. ಪಾಶ್ಚಾತ್ಯ ಮಿತ್ರರಿಂದ ಪಡೆದ ಯುದ್ಧೋಪಕರಣಗಳನ್ನು ಚೀನೀಯರ ವಿರುದ್ಧ ಮಾತ್ರ ಬಳಸಿಕೊಳ್ಳಬೇಕೆಂಬ ಒಡಂಬಡಿಕೆಯನ್ನು ಭಾರತ ಮೀರುವುದಿಲ್ಲ; ಇಂತಹ ನ್ಯಾಯ ಬುದ್ಧಿ ಅಯೂಬರಲ್ಲಿಲ್ಲ; ಎಂತಲೇ ಅವರು ಕಾಶ್ಮೀರದ ಸಮರ ವಿರಾಮದ ಅಂತಾರಾಷ್ಟ್ರೀಯ ರೇಖೆಯನ್ನೂ ಉಲ್ಲಂಘಿಸಿದ್ದಾರೆ. ತನ್ನಂತೆಯೇ ಭಾರತವೂ ಇದೆಯೆಂದು ನಂಬುವ ಧೂರ್ತತೆಯನ್ನು ಅಯೂಬಖಾನರು ಮಾತ್ರ ತೋರಿಸ ಬಲ್ಲರು.

ಜನರಲ್ ಅಯೂಬರು ಇನ್ನೂ ಒಂ ಹೆಜ್ಜೆ ಮುಂದುವರಿದಿದ್ದಾರೆ. ಕಾಶ್ಮೀರದ ಪ್ರಶ್ನೆಗೆ ಒಂದು ಪರಿಹಾರವನ್ನು ಅರಸುವ ಇಚ್ಛೆ ಪಂಡಿತ ನೆಹರುಗಳಿಗಿಲ್ಲವಂತೆ ಇಂದಿರುವ ಸಮರವಿರಾಮ ರೇಖೆಯನ್ನೇ ಅಲ್ಪ ಸ್ವಲ್ಪ ಹೊಂದಾಣಿಕೆಯೊಡನೆ ಪಾಕ್—ಭಾರತಗಳ ಗಡಿಯೆಂದು ಒಪ್ಪಿಕೊಳ್ಳುವಷ್ಟು ತ್ಯಾಗಕ್ಕೆ ಸಿದ್ಧರಾದ ನೆಹರುರವರನ್ನು ಮನಸ್ವಿಯಾಗಿ ನಿಂದಿಸುವುದಷ್ಟೇ ಅವರ ಉದ್ದೇಶ. ನೆಹರು ತನ್ನ ಮೇಲೂ ಯುದ್ಧವನ್ನು ಕರೆದು ತರುವವರು – ಇದು ಅವರ ದೇಶದ ದುರದೃಷ್ಟ ಇಂತಹವರು ನೆರೆಯವರಾಗಿರುವುದು ನಮ್ಮ ದುರದೃಷ್ಟವೆಂದ ಅವರ ಮಾತು ನೆಹರುಗಳಿಗಿಂತ ಅಯ್ಯೂಬಖಾನರಲ್ಲಿಯೇ ಅಕ್ಷರಶಃ ಹೊಂದುತ್ತದೆ. ತನ್ನನ್ನು ಕ್ರಾಂವೆಲ್, ನೆಪೋಲಿಯನ್ ಮೊದಲಾದವರಿಗೆ ಹೋಲಿಸುವ ಧಾರ್ಷ್ಟ್ಯವನ್ನೂ ಜನರಲ್ ಅಯೂಬಖಾನರು ತೋರಿಸಿದರೆನ್ನುವಾಗ, ಚೀನಾದ ಸ್ನೇಹವನ್ನು ಮಾಡಿಕೊಂಡು ಅವರು ತಮ್ಮ ಬದುಕನ್ನು ಸಾರ್ಥಕ ಮಾಡಿಕೊಂಡಂತಾಯಿತು; ದೇಶವನ್ನು ಉದ್ಧರಿಸಿದಂತಾಯ್ತು. ಪಾಕಿಸ್ತಾನದಲ್ಲಿ ನಿಚ್ಚಳ ಸರ್ವಾಧಿಕಾರವಿದೆ ಯೆಂಬುದನ್ನು ಅಲ್ಲಗಳೆದು ಭಾರತದಲ್ಲಿ ನೆಹರು ಸರ್ವಾಧಿಕಾರಿಯಾಗಿದ್ದಾರೆಂದು ಆರೋಪಿಸಿದರು ಆದರೆ, ಸತ್ಯದ ಮೇಲೆ ಸದಾ ಮಣ್ಣೆರಚುವುದು ಸಾಧ್ಯವಿಲ್ಲ; ಎಂತಲೇ ಅವರು ಕೊನೆಗೂ ಒಪ್ಪಿಕೊಳ್ಳಲೇ ಬೇಕಾಯಿತು. ಭಾರತದಲ್ಲಿ ನೆಹರು ಮಾತು ಮಾನ್ಯವಾಗುವುದಾರೆ ಅದಕ್ಕೆ ಅವರ ಜನಪ್ರಿಯತೆ ಮತ್ತು ವಿಶ್ವ ವ್ಯಕ್ತಿತ್ವವೇ ಕಾರಣ; ಅವರು ಪ್ರಜಾತಂತ್ರಾತ್ಮಕವಾಗಿಯೇ ಅಧಿಕಾರಕ್ಕೇರಿದವರು: ತಾನಾದರೂ ಮಿಲಿಟರಿ ಕ್ರಾಂತಿಯ ಕಾರಣವಾಗಿ ಅಧಿಕಾರ ಗದ್ದುಗೆಗೇರಿದವನು ಎಂಬುದನ್ನು ಇದೇ ತಿಳುವಳಿಕೆಯ ತಿಳಿ ಬುದ್ಧಿಯಿಂದ ವಿವೇಚಿಸಿದರೆ- ತಾನು ಭಾರತದ ವಿರುದ್ಧ ಮಾಡುತ್ತಿರುವ ಆಲಾಪವು ವ್ಯರ್ಥಗಲ್ಲ ನಿಷ್ಫಗೇಡ ಎಂದು ಅವರು ತಿಳಿದುಕೊಳ್ಳಲಾರರೆ? ಸ್ನೇಹದ ಹೆಸರಿನಲ್ಲಿ ದ್ರೋಹ ಬಗೆಯುವುದು ಅನ್ಯಾಯವೆಂದವರು ಅರಿತು ಕೊಳ್ಳಲಾರರೆ?

ಶಿಸ್ತು ಮತ್ತು ಸಂಯಮ

ಒಂದು ಸಮಾಜದಲ್ಲಿ ಸೇರಿಕೊಂಡಾಗ ಶಿಸ್ತನ್ನು ಪರಿಪಾಲಿಸುವುದು ಅಗತ್ಯವಿದೆ. ಶಿಸ್ತು ಕೆಟ್ಟರೆ ವ್ಯಕ್ತಿಯೇ ಕೆಟ್ಟಂತೆ. ಯಾರು ಶಿಸ್ತನ್ನು ಪರಿಪಾಲಿಸುತ್ತಾನೆ ಅವನು ಎಲ್ಲರ ದೃಷ್ಟಿಯನ್ನೂ ತನ್ನತ್ತ ಆಕರ್ಷಿಸುತ್ತಾನೆ. ನಿಯಮವೆಂದರೆ ಇದೇ ತಾನೆ? ನಾವು ಮಾಡುವ ಕೃತಿ ಕೆಲಸವೂ ವಿಧಿವತ್ತಾಗಿ ನಡೆಯ ಬೇಕು. ವಿಧಿಗೆಟ್ಟ ಕೆಲಸ ನಿಷ್ಪ್ರಯೋಜಕ. ಅಂತೆಯೇ ಶಿಸ್ತುಪಾಲನೆಗೆ ನಮ್ಮ ದೈನಂದಿನ ಜೀವನದಲ್ಲಿ ಮಹತ್ವದ ಸ್ಥಾನವಿದೆ. ಮಗುವಿದ್ದಾಗಲೇ ಈ ಶಿಸ್ತು ಮನೋಭಾವನೆ ಹುಟ್ಟಬೇಕು; ವಿದ್ಯಾಧ್ಯಯನದ ವೇಳೆ ಅದು ದೃಢವಾಗಿ ಮೂಡಬೇಕು. ಎಳೆ ವಯಸ್ಸಿನಲ್ಲಿ ಈ ದಿಸೆಯಲ್ಲಿ ಪ್ರಯತ್ನ ನಡೆಯದೆ ಹೋದರೆ, ಮುಂದೆ ಬಹುತ್ರಾಸವಾಗುವುದು. ಇಂದು ನಮ್ಮ ವಿದ್ಯಾರ್ಥಿಗಳಲ್ಲಿ ಜನತೆಯಲ್ಲಿ ಶಿಸ್ತು - ಸಂಯಮಗಳ ಅಭಾವವಿದೆ ಯೆಂದ, ಎಲ್ಲರೂ ಹೇಳುತ್ತಾರೆ ಇದನ್ನು ಹೇಗೆ ಪ್ರತಿಷ್ಠಾಪಿಸಬಹುದು. ಶಿಸ್ತು ಸಂಯಮವೆಂಬಿವು ಉಪದೇಶದಿಂದ ಬರುವಂತಹುವಲ್ಲ; ಅವು ಆಂತರಿಕ ಪ್ರವೃತ್ತಿಗಳು. ಒಬ್ಬನು ಪರರ ಬಗೆಗೆ ವಹಿಸುವ ಕಾಳಜಿಯಲ್ಲಿ ಒಂದು ಅಂಶವನ್ನು ತನ್ನ ಬಗೆಗೆ ತೋರಿಸಿ, ತನ್ನ ನಡತೆ- ವರ್ತನೆಗಳ ಕಡೆಗೆ ಪರ್ಯಾಲೋಚನೆ ನಡೆಸಿದರೆ ಈ ಶಿಸ್ತು—ಸಂಯಮವನ್ನು ಅನುಷ್ಠಾನಕ್ಕೆ ತರುವುದು ಸರಳವಾಗುವುದು. ಬೇರೆಯವರನ್ನೂ ಅದರ ಕೃತ್ಯಗಳನ್ನೂ ಕಣ್ಣಿನಲ್ಲಿ ಎಣ್ಣೆಸುರಿದು ನೋಡುವ ಬದಲು ತನ್ನನ್ನೂ ತನ್ನ ಕೃತ್ಯಗಳನ್ನೂ ಒಳಗಣ್ಣಿನಿಂದ ನೋಡುವ ಪರಿಪಾಠ ನಮ್ಮಲ್ಲಿ ಮೂಡಿದರೆ, ಅದೇ ಶಿಸ್ತಿಗೆ ಮಂಗಲಾಚರಣೆ ಯಾಗುವುದು. ದೇಶದ ಸಮಗ್ರತೆಗೆ ಶಕ್ತಿ ಸಂವರ್ಧನೆಗೆ ಶಿಸ್ತು – ಸಂಯಮಗಳು ಅಗತ್ಯ. ಆದುದರಿಂದ ನಾವಿತ್ತ ಇನ್ನಾದರೂ ಗಮನ ಹರಿಸ ಬೇಡವೇ

ಜಗತ್ಪರ್ಯಟನ

ಜವಹರಲಾಲ

ಆವಡಿಯ ಅಧಿವೇಶನವು ಕಾಂಗ್ರೆಸ್ಸಿನ ಇತಿಹಾಸದಲ್ಲಿ ಅಮರವಾದುದು. ಅಲ್ಲಿ ಸಮಾಜವಾದ ಮಾದರಿಯ ಸಮಾಜವನ್ನು ಕಟ್ಟಿ ದೇಶವನ್ನು ಕಲ್ಯಾಣರಾಷ್ಟ್ರವನ್ನಾಗಿ ರೂಪಿಸುವ ನಿರ್ಧಾರವನ್ನು ಅದು ಕೈಕೊಂಡಿತ್ತು ಸಮಾಜವಾದದ ನೀತಿಯಿಂದಾಗಿ ಇಂದು ಕಾಂಗ್ರೆಸ್ಸಿನಲ್ಲೇ ಎ

ಡ ಮತ್ತು ಬಲವೆಂಬ ಗುಂಪುಗಳು ತಲೆಯೆತ್ತಿದ್ದ, ಪಕ್ಷದ ಸಂಘಟನೆ ಮತ್ತು ಆಡಳಿತ ಯಂತ್ರದ ನಿರಾತಂಕತೆಗೆ ಇವು ಕಂಟಕ ಪ್ರಾಯವಾಗಬಹುದಾದುದರಿಂದ ಪ್ರಧಾನಿನೆಹರೂ ಪ್ರಜಾಪ್ರಭುತ್ವವಾದಿ ಸಮಾಜವಾದದ ನೀತಿಯನ್ನು ಕಾಂಗ್ರೆಸ್ಸ್ ಅನುಸರಿಸ ಬೇಕೆಂದು ಅಂದಿದ್ದಾರೆ. ಪ್ರಜಾಶಕ್ತಿಯಲ್ಲಿ ವಿಶ್ವಾಸವಿರುವವರಲ್ಲರೂ ಈ ನೀತಿಯನ್ನು ಒಪ್ಪಿಕೊಳ್ಳಬಹುದು. ಸಮಾಜ್ಯವಾದಿ ಕಮ್ಯುನಿಷ್ಟ ಚೀನೀಯರ ಮತ್ತು ಸರ್ವಾಧಿಕಾರಿ ಪಾಕಿಸ್ತಾನಿಗಳ ಆಕ್ರಮಣ ಭೀತಿಯ ಈ ಕಾಲದಲ್ಲಿ ನೆಹರುರವರ ಪ್ರಜಾಪ್ರಭುತ್ವವಾದಕ್ಕೆ ಅತೀವ ಮಹತ್ವವಿದೆ.

ಸಂಜೀವಯ್ಯ

ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಡಿ. ಸಂಜೀವಯ್ಯನವರು ತಮ್ಮ ಪದವನ್ನು ಕಾಮರಾಜರಿಗ ಒಪ್ಪಿಸಿಕೊಟ್ಟ ಕೇಂದ್ರ ಸಚಿವ ಸಂಪುಟವನ್ನು ಸೇರುವರು ಎಂಬ ದಟ್ಟ ವಾರ್ತೆಯು ಹರಡಿದೆ. ಕೆಲಪ್ರೊಪ್ಪ ಹರಡಿದ ವರದಿಗಳು ನಿರಾಧಾರವೆನಿಸುವುದಿದೆಯಾದರೂ ಈ ವಾರ್ತೆಯು ಹಾಗಾಗಲಾರದು. ಎಂತಲೇ ಅವರು ಎಲ್ಲರಂತೆ ಪ್ರಧಾನ ಮಂತ್ರಿಯನ್ನು ಹೊಗಳುತ್ತಾರೆ ಅವರನ್ನು ರಾಮನೆಂದೂ ನಮ್ಮನ್ನೆಲ್ಲಾ ಹನುಮಂತನೆಂದೂ ಅವರು ಹೋಲಿಸಿದ ಬಗೆಯ ದಗೆಗೆ ತಕ್ಕ ಅಭಿಮಾನ ವಿರಬಹುದು; ಆದರೆ, ದೇಶ ಸಂರಕ್ಷಣೆ ಮತ್ತು ಪುನಾರಚನೆಯ ಕಾರ್ಯದಲ್ಲಿ ನಿರತರಾದ ಜವಾಹರರೊಡನೆ ಸಮಸ್ತ ಭಾರತೀಯರೂ ಹೆಗಲಿಗೆ ಹೆಗಲಿತ್ತು ಸಹಕರಿಸುತ್ತಾರೆಂಬುದರಲ್ಲಿ ಸಂದೇಹವಿಲ್ಲ. ಸ್ವಾತಂತ್ರ್ಯೋತ್ತರ ಭಾರತದ ಪ್ರಗತಿ ಮತ್ತು ಆರ್ಥಿಕ ಸಾಧನೆಯೇ ಇದಕ್ಕೆ ನಿದರ್ಶನ.

ವೆಂಕಟರಾಯರು

ಕನ್ನಡದ ಕುಲಪುರೋಹಿತ ಆಲೂರ ವೆಂಕಟರಾಯರು, ನಿಜವಾದ ಕರ್ನಾಟಕವಿನ್ನೂ ಉದಯವಾಗಬೇಕಾಗಿದೆ ಎಂದಿದ್ದಾರೆ ಕಾಸರಗೋಡು ಮೊದಲಾದ ಗಡಿ ನಾಡುಗಳು ಕನ್ನಡಿಗರ ಕೈತಪ್ಪಿ ಅವು ಪರಭಾಷೀಯರ ಮಂಗಮುಷ್ಟಿಯಲ್ಲಿ ನರೆಯುವ ಪರಿಸ್ಥಿತಿಯಿಂದ ಮರುಗಿದ ಅವರ ಹೃದಯ ಹಾಗೆಂದಿತು ಅವರೊಡನೆ ಎಲ್ಲ ಕನ್ನಡಿಗರ ಅನುಕಂಪವೂ ಇದೆ. ಅದೇ ಸಮಯದಲ್ಲಿ ಬೆಳಗಾವಿಯ ಶ್ರೀ ಅಣ್ಣಾ ಗುರೂಜಿಯವರು ರಾಜ್ಯಗಳ ಪುನರ್ ರಚನೆಯು ಸಂಪೂರ್ಣ ವಾಗಿದಿರು

ವುದೆಂದೂ ಇನ್ನು ಆ ಬಗ್ಗೆ ಯಾವ ಮು ಖಂಡರು ಆಡಬಾರದೆಂದೂ ಹೇಳು ತ್ತಾರೆ. ಬೆಳಗಾವಿಯ ಪರಿಸ್ಥಿತಿಯಲ್ಲಿ ಇ ವರು ಅನ್ನುವುದೂ ನ್ಯಾಯವೇ. ಹೀಗೆ ಉಭಯ ಕಡೆ ಕರ್ತವ್ಯ ಕಠಿನವಾಗಿದ್ದು ಅದನ್ನು ಸರಕಾರ ನಿರ್ವಹಿಸುವುದು ಕಷ್ಟ ಕರವಲ್ಲವೆ? ನಾವು ಸಾಯಬಾರದು; ಕೋಲು ಮುರಿಯಬಾರದು; ಬೆಳಗಾವಿ ಕೈ ಬಿಡಬಾರದು; ಕಾಸರಗೋಡು ಕೈಗೆ ಬಾರದಿರಬಾರದು—ಇದು ಇಂದು ನಮ್ಮ ನೀತಿಯಾಗಬೇಕು; ನ್ಯಾಯ ನಮಗೆ ಬೇಕು.

ಅಲ್ಲಲ್ಲಿಯ ಸುದ್ದಿಸಾರ

ನವ ರಾಜ್ಯೋದಯ ದಿನ—ಉಡುಪಿ ಲಾ ಕಾಲೇಜ್ ಯೂನಿಯನ್‌ರವರು 'ನವ ರಾಜ್ಯೋದಯ ದಿನ'ವನ್ನು ತಾ 1ರಂದು ವಿಕ್ಟೋರಿಯಾ ಜುಬಿಲಿ ಯೂನಿಯನ್ ಕ್ಲಬ್‌ನಲ್ಲಿ ಮೈಸೂರಿನ ನಿವೃತ್ತ ಮುಖ್ಯ ನ್ಯಾಯಾಧೀಶರಾದ ಶ್ರೀ ನಿಟ್ಟೂರು ಶ್ರೀನಿವಾಸ ರಾಯರ ಅಧ್ಯಕ್ಷತೆಯಲ್ಲಿ ಆಚರಿಸಿದರು.

ಪ್ರಾರಂಭದಲ್ಲಿ ಕುಮಾರಿ ಮನೋರಮಾ ರಾವ್ ಇವರಿಂದ ಪ್ರಾರ್ಥನೆಯಾದ ಬಳಿಕ ಕಾಲೇಜ್ ಯೂನಿಯನ್‌ನ ಅಧ್ಯಕ್ಷ ಶ್ರೀ ಸೀತಾರಾಮರಾಯರು ಸ್ವಾಗತ ಭಾಷಣ ಮಾಡಿದರು. ಡಾ। ಮಾಧವ ಪೈಗಳು ಪ್ರಸ್ತಾವಿಕ ಭಾಷಣ ಮಾಡಿ ನವರಾಜ್ಯೋದಯ ದಿನದ ಆಚರಣೆಯ ಮಹತ್ವವನ್ನು ವಿವರಿಸಿದರು. ಆ ನಂತರ ಎಲ್ಲ ಆಟ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಅಧ್ಯಕ್ಷರು ಬಹುಮಾನ ವಿತರಣೆ ಮಾಡಿ, ಭಾಷಣ ಮಾಡುತ್ತ ಇಂತಹ ಮಹತ್ವದ ದಿನವನ್ನು ಆಚರಿಸುವ ಉಡುಪಿ ಲಾ ಕಾಲೇಜ್ ಯೂನಿಯನ್‌ರವರ ಚಟುವಟಿಕೆಗಳನ್ನು ಪ್ರಶಂಸಿಸಿದರು, ಅಲ್ಲದೆ ಆಚರಣೆಯ ಇತಿಹಾಸ ಹಾಗೂ ಮಹತ್ವವನ್ನು ವಿವರಿಸಿದರು. ಅಂತ್ಯದಲ್ಲಿ ಲಾ ಕಾಲೇಜ್ ಯೂನಿಯನ್ನಿನ ಪ್ರಧಾನ ಕಾರ್ಯದರ್ಶಿ ಶ್ರೀ ಸಿದ್ಧನಾಥ ಶೆಟ್ಟರು ಧನ್ಯವಾದ ಸಮರ್ಪಣೆ ಮಾಡಿದರು. ಬಳಿಕ ಮನೋರಂಜನಾ ಕಾರ್ಯಕ್ರಮಗಳಾದುವು.

ಮುಖ್ಯ ಮಂತ್ರಿಗಳಿಗೆ ಮನವಿ—ದ. ಕ. ಜಿಲ್ಲಾ ಖಾಸಗಿ ಶಾಲೆಗಳ ಮೆನೇಜರರ ಸಂಘದ ಉಪಾಧ್ಯಕ್ಷ ರೆ ಫಾ. ಬಿ. ಯಸ್. ಡಿಸೋಜ, ಕಾರ್ಯದರ್ಶಿ ಶ್ರೀ ಕುರುಕಾಲು ಗಣಪಯ್ಯ ಶೆಟ್ಟಿ ಇವರು ಶ್ರೀ ಕೆ. ಕೆ. ಶೆಟ್ಟಿ, ಯಂ ಯಲ್. ಸಿ ಯವರ ನೇತೃತ್ವದಲ್ಲಿ ತಾ. 30—10—63ರಲ್ಲಿ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರನ್ನು ಮಂಗಳೂರಲ್ಲಿ ಭೇಟಿಯಾಗಿ, ಖಾಸಗಿ ಪ್ರಾಥಮಿಕ

ಕುಂದಾಪುರ ಪಿ ಮು ಕೋರ್ಟಿನಲ್ಲಿ

S. C. 630/1953 R. E. A. 424/1963

ಕಸ್ತೂರಿ ಶ್ರೀನಿವಾಸ ಪೈ —ವಾದಿ.

ನಾಗಪ್ಪ ಹೇರ್ಳೆ, ಮಂಜಯ್ಯ ಹೇರ್ಳೆರ ಮಗ ಚಿತ್ರಪಾಡಿ ಗ್ರಾಮ —ಪ್ರತಿವಾದಿ.

Nagappaya Gandhi Bajar Vaiar Netkallappa circle House No. 16 Bangalore.

ಇವರಿಗೆ—

ವಾದಿಯು ಸದ್ರಿ S. C. 630/1953ನೇ ಡಿಕ್ರಿ ಮೇಲೆ ಸದ್ರಿ ಅಮಲ್‌ಜಾರಿ ನಡಿಸಿರುವ ದ್ದರಿಂದ ಯಾಕೆ ಅಮ್ಲುಜಾರಿ ಮಾಡಕೂಡದೆಂದು ಎಂಬ ಬಗ್ಗೆ ಸಬಬು ತೋರಿಸುವರೆ ತಾ 19—11—1963ನೇ ದಿನ ಹಗಲು 11 ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಜಾಹೀರ್ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಕೋರ್ಟು ಹುಕುಂ ಪ್ರಕಾರ ಈ ಮೂಲ್ಕ ತಿಳಿಸಲಾಗುತ್ತದೆ.

By Order of the Court.

K. Raghunath Shenai

Advocate for plaintiff.

Coondapoor, 2—11—1963.

ಶಾಲೆಗಳಿಗೆ 1962 ಮತ್ತು 1963ನೇ ವರ್ಷಗಳಲ್ಲಿ ದೊರೆಯತಕ್ಕ ಮೆಂಟೆನೆನ್ಸ ಗ್ರಾಂಟ ನಲ್ಲಿ ಅತೀವ ಕಡಿತ ಮಾಡಿದನ್ನು ಕೂಡಲೇ ಕೊಡಬೇಕಾಗಿ ಅನೇಕಾವರ್ತಿ ವಿದ್ಯಾ ಮಂತ್ರಿ ಮತ್ತಿತರ ಅಧಿಕಾರಿಗಳಿಗೆ ಮನವಿಗಳನ್ನು ಸಮರ್ಪಿಸಿದ್ದಾದರೂ, ಫಲಕಾರಿಯಾಗದ ಕಾರಣ ಖಾಸಗಿ ಶಾಲೆಗಳ ಅಸ್ತಿತ್ವಕ್ಕೇ ಗಂಡಾಂತರ ಒದಗಿಯದೆ ಎಂತಲೂ, ವಸ್ತುಸ್ಥಿತಿ ಇತರ ವಿಚಾರಗಳಲ್ಲಿಯೂ ಮನವಿ ನೀಡಿ ಅರ್ಪಿಸಿ ನಿವೇದಿಸಿಕೊಳ್ಳಲು, ಮುಖ್ಯ ಮಂತ್ರಿಗಳು, ತಾವು ಬೆಂಗಳೂರಿಗೆ ಹೋದ ಮೇಲೆ ಈ ವಿಚಾರದಲ್ಲಿ ಪುನರ್ ಪರಿಶೀಲಿಸಿ ನಿವೃತ್ತಿ ಪಡಿಸುವದಾಗಿ ಸಹಾನುಭೂತಿ ಪೂರ್ವಕ ಭರವಸೆಯಿತ್ತರು.

ಹೊಸ ಕಾರ್ಯ ನಿರ್ವಾಹಕ ಮಂಡಳಿಯ ಆಯ್ಕೆ—ವಿದ್ಯಾ ವರ್ಧಕ ಸಂಘ (ಶಿ ಶಿರ್ವ, ದ. ಕ.) ಇದರ ಹೊಸ ಕಾರ್ಯ ನಿರ್ವಾಹಕ ಮಂಡಳಿಯು ಈ ಕೆಳಗಿನಂತಿದೆ.— ಶ್ರೀಗಳಾದ ಸೂಡ ಕಟ್ಟೆಬೈಲುಗುತ್ತು ವಾಸು ಶೆಟ್ಟಿ, (ಅಧ್ಯಕ್ಷ), ಬಿ ಕಾಳಪ್ಪ ಶೆಟ್ಟಿ ಕಿನ್ನಿಮೂಲ್ಕಿ, ಉಡ್ಪಿ, (ಉಪಾಧ್ಯ), ಬಿ ಆನಂದ ಶೆಟ್ಟಿ, ಬಿ.ಎ., ಬಿ.ಎಲ್ ಉಡ್ಪಿ, (ಕಾರ್ಯದರ್ಶಿ), ಕೆ ವಾಸುದೇವ ಶೆಟ್ಟಿ ಎಂ. ಎ ಬಿ ಟಿ. (ಉಪಕಾರ್ಯದರ್ಶಿ), ಪಿ ಜಯರಾಮ ಶೆಟ್ಟಿ, ಬಿ.ಎ ಬಿ ಟಿ. (ಕೋಶಾಧಿಕಾರಿ), ಪಿ. ಶಿವಾಜಿ ಶೆಟ್ಟಿ, ಬಿ. ಎ .ಎಲ್‌ಎಲ್.ಬಿ ಉಡ್ಪಿ, ಡಾ. ಎಮ್. ಬಾಲಕೃಷ್ಣ ಶೆಟ್ಟಿ ಕಾಪು, ಡಾ ಎಮ್. ರಾಜಶೇಖರ ಹೆಗ್ಡೆ, ಶಿರ್ವ, ಶ್ರೀಗಳಾದ ಶಿರ್ವ ನಡಿಬೆಟ್ಟು ದುಗ್ಗಪ್ಪ ಹೆಗ್ಡೆ, ಮಟ್ಟಾರು ಅರಂತಡೆ ಸದಾಶಿವ ಹೆಗ್ಡೆ, ಬಿ. ಚಂದ್ರಹಾಸ ಹೆಗ್ಡೆ, ನ್ಯಾಮ್ ಮಾಣಿಪಾಡಿ ಮೇಲ್ಮನೆ ಲೋಕಯ ಶೆಟ್ಟಿ, ಅಂತಯ ಶೆಟ್ಟಿ, ಉದ್ಯಾವರ ಕುತ್ಯಾರುಗುತ್ತು ತಿಮ್ಮಪ್ಪ ಶೆಟ್ಟಿ, ಕುತ್ಯಾರ ಕಲ್ಯಾಣ ಭೋಜ ಶೆಟ್ಟಿ, ಕಳತ್ತೂರು ಬರೆಬೆಟ್ಟುಗುತ್ತು ನಾರಾಯಣ ಶೆಟ್ಟಿ (ಸದಸ್ಯರು), ಶಾಲಾ ಗೌರವ ಕರೆಸ್ಪೊಂಡೆಂಟರಾಗಿ ಎಡ್ವಕೇಟ್, ಶ್ರೀ ಪಿ. ಶಿವಾಜಿ ಶೆಟ್ಟಿರನ್ನು ನೇಮಿಸಲಾಗಿದೆ.

ಕಾರ್ಯಕಾರಿ ಮಂಡಳಿ ರಚನೆ

ಹೆರ್ಗ ಹೌಸ್ ಬಿಲ್ಡಿಂಗ್ ಸೊಸೈಟಿಯ ಪ್ರಥಮ ಮಹಾ ಸಭೆಯು ಉಡುಪಿ ಮುನ್ಸಿಪಲ್ ಚೆಯರ್ ಮೇನ್ ಶ್ರೀ ಕರ್ಕಳ ರಂಗನಾಥ ಶೆಣೈ ಇವರ ಅಧ್ಯಕ್ಷತೆಯಲ್ಲಿ ತಾರೀಕು 1-11 63ರಂದು ಜರಗಿ ಪ್ರಥಮ ಡೈರೆಕ್ಟರರಾಗಿ ಆರಿಸಿದ ಈ ಕೆಳಗಿನ ಕಾರ್ಯಕಾರಿ ಮಂಡಳಿಯನ್ನು ರಚಿಸಲಾಯಿತು. ಅಧ್ಯಕ್ಷ ಶ್ರೀ ಬಿ ರಂಗನಾಥ ಹೆಗ್ಡೆ, ಉಪಾಧ್ಯಕ್ಷ ಡಾ ಯು. ಗಿರಿಧರರಾವ್, ಡೈರೆಕ್ಟರರಾಗಿ ಶ್ರೀಗಳಾದ ಬೆಳಿಂಜೆ ವಿಠಲ ಹೆಗ್ಡೆ, ಎ. ಸಂಜೀವ ಹೆಗ್ಡೆ, ಎಮ್ ಸೀತಾರಾಮ್ ಶೆಟ್ಟಿ ಮತ್ತು ಕಾರ್ಯದರ್ಶಿ ಶ್ರೀ ಕೆ ಆನಂದ ಶೆಟ್ಟಿ, ಸದ್ರಿ ಸಭೆಯಲ್ಲಿ ಕೋಆಪರೇಟಿವ್ ಎಕ್ಸ್‌ಟೆನ್‌ಶನ್ ಆಫೀಸರ್ ಶ್ರೀ ಎನ್. ನಾರಾಯಣರು ಸೂಕ್ತ ಸಲಹೆಯನ್ನಿತ್ತರು. ಸಭಾಂತ್ಯದಲ್ಲಿ ವಕೀಲ್ ಬಿ. ಜಗನ್ನಾಥ ಹೆಗ್ಡೆಯವರು ಧನ್ಯವಾದ ಅರ್ಪಿಸಿದರು.

ನಾಡಹಬ್ಬ— ರಂಗಂಪೇಟೆ (ಸುರಪುರ) ಕನ್ನಡ ಸಾಹಿತ್ಯ ಸಂಘದ ಆಶ್ರಯದಲ್ಲಿ ನಾಡಹಬ್ಬವು ತಾ 18.10.63 ರಿಂದ 5 ದಿನ ವಿಜೃಂಭಣೆಯಿಂದ ಜರಗಿತು ಮಹೋತ್ಸವದ ಉದ್ಘಾಟನೆಯನ್ನು ಮಾಜಿ ಮಂತ್ರಿ ದೇವರಾಜ ಅರಸ್ ಅವರು ನೆರವೇರಿಸಿದರು. ಶ್ರೀಗಳಾದ ರಾಘವೇಂದ್ರ ಕಟ್ಟಿ, ಆರ್. ಎಚ್. ದೇಶಪಾಂಡೆ, ಆರ್. ಆರ್. ರುದ್ರಸ್ವಾಮಿ ಮಠ, ಡಿ. ಯಂ. ಬುರುಡೇಕರಿ, ಪಿ. ಯಂ ಗಲಗಲಿ, ಸಿದ್ಧವನ ಹಳ್ಳಿ ಕೃಷ್ಣ ಶರ್ಮ ಮೊದಲಾದವರು ಅನುಕ್ರಮವಾಗಿ ಭಾಷಣಗಳನ್ನಿತ್ತರು. ಪ್ರತೀ ದಿನ ನಾಟಕಾದಿ ಮನೋರಂಜನಾ ಕಾರ್ಯಕ್ರಮಗಳಿದ್ದುವು ಕೊನೆಯ ದಿನ ಶ್ರೀ ಬೋದಾ ರಾಮಣ್ಣನವರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಭಾಷಣಗಳಾದ ಮೇಲೆ ಪಾರಿತೋಷಕ ವಿತರಣೆಯಾಗಿ ಕಾರ್ಯದರ್ಶಿಗಳಿಂದ ಆಭಾರ ಮನ್ನಣೆಯಾಯಿತು.

ಪ್ರಮಾಣಪತ್ರ ವಿತರಣೋತ್ಸವ—ಬಸ್ರೂರಿನ "ರಾಷ್ಟ್ರಭಾಷಾ ಪ್ರಚಾರ ಸಮಿತಿ"ಯು ಮೈಸೂರು ಹಿಂದೀ ಪ್ರಚಾರ ಪರಿಷತ್ ಮತ್ತು ದಕ್ಷಿಣ ಭಾರತ ಹಿಂದೀ ಪ್ರಚಾರ ಸಭಾ ಮದ್ರಾಸು ಇವುಗಳ ಪರೀಕ್ಷೆಗಳಿಗೆ ಕುಳಿತು ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಶ್ರೀ ಎಂ ಎನ್ ಜ್ಞಾನಭಾಗ, ಸಿಂಡಿಕೇಟ್ ಬ್ಯಾಂಕ್, ಉಡುಪಿ ಇವರ ಅಧ್ಯಕ್ಷತೆಯಲ್ಲಿ ಪ್ರಮಾಣಪತ್ರ ವಿತರಣೆಯನ್ನು ಮಾಡಿದರು. ಸಮಿತಿಯ ಗೌರವಾಧ್ಯಕ್ಷ ಶ್ರೀ ಬಿ ಸಿ. ಅಡಿಗರು ವರದಿಯನ್ನಿತ್ತರು. ಡಾ. ಸಂಸ್ಥೆಯ ಪ್ರಗತಿಯನ್ನು ವಿವರಿಸಿದರು ಮಹಾತ್ಮಾಜಿಯ ಸಭೆಯ ರಚನಾತ್ಮಕ ಕಾರ್ಯಕ್ರಮಗಳ ಉಪಯುಕ್ತ ಕೆಲಸಗಳನ್ನು ಶ್ಲಾಘಿಸಿ ಜನತೆಯ ಪ್ರೋತ್ಸಾಹವನ್ನು ಕೋರಿದರು ಅಧ್ಯಕ್ಷರ ಭಾಷಣದ ಬಳಿಕ ಗೌರವ ಕಾರ್ಯದರ್ಶಿ ಶ್ರೀ ಬಿ ಮಂಜುನಾಥ ಮಯ್ಯರರು ಕೃತಜ್ಞತೆಯನ್ನು ಅರ್ಪಿಸಿದರು.

ಬಸ್ರೂರಿನ ಭಾರತ ಪಾಠಶಾಲೆಯಲ್ಲಿ ತಾ 23ರಂದು ನಾಲ್ಕು ದಿನ ನಾಡಹಬ್ಬ ವೈಭವದಿಂದ ಜರಗಿತು. ಅಂತೆಯೇ ಬಸ್ರೂರಿನ ಚೇತನಾ ಪ್ರಕಾಶನದಲ್ಲಿ ತಾ 27.10.63 ರಂದು ನಾಡಹಬ್ಬ ಕಾರ್ಯಕ್ರಮವು ಶ್ರೀ ಬಿ ಪರಮೇಶ್ವರ ಅಡಿಗರ ಅಧ್ಯಕ್ಷತೆಯಲ್ಲಿ ನಡೆಯಿತು.

ನಾಡಹಬ್ಬ— ತಾ 23—10—63 ರಲ್ಲಿ ಸುಬ್ರಹ್ಮಣ್ಯದ ಶ್ರೀ ಪಾಲೇಕ್ಷರೀ ಸಂಗೀತ ನಾಟಕ ಶಾಲೆಯಲ್ಲಿ ಶ್ರೀ ಸುಬ್ರಹ್ಮಣ್ಯ ಮಠದ ಶ್ರೀ ವಿದ್ಯಾಪ್ರಜ್ಞ ತೀರ್ಥ ಶ್ರೀಪಾದಂಗಳವರ ಸಾನ್ನಿಧ್ಯದಲ್ಲಿ ಶ್ರೀ ಸುಬ್ರಹ್ಮಣ್ಯೇಶ್ವರ ಹೈಸ್ಕೂಲಿನ ಮುಖ್ಯೋಪಾಧ್ಯಾಯ ಶ್ರೀ ಯಂ. ಜಂಬಾಬಲ ಶೆಟ್ಟಿ ಅಧ್ಯಕ್ಷತೆಯಲ್ಲಿ ನಾಡಹಬ್ಬವು ಬಹು ವಿಜೃಂಭಣೆಯಿಂದ ಜರಗಿತು.

ವಿದ್ಯುದ್ದೀಪ ಸ್ತಂಭದ ಉದ್ಘಾಟನೆ

ದಿ। ಕಂಚಾವರ ಸುಬ್ಬಣ್ಣ ಶೆಟ್ಟಿರ ಸ್ಮಾರಕವಾಗಿ ಅವರ ಬಂಧು ಬಳಗದವರು ದಾನವಾಗಿತ್ತ ವಿದ್ಯುದ್ದೀಪ ಸ್ತಂಭವನ್ನು ಬಸ್ರೂರು ರಸ್ತೆಯ ಪಡೇರ ಮೋಟಳಿ ಜಂಕ್ಷನ್‌ನಲ್ಲಿ ಕಳೆದ ತಾ. 27ರಂದು, ಶ್ರೀ ಮಂಜಯ್ಯ ಶೆಟ್ಟಿ ಎಂ. ಎಲ್ ಎ. ಅವರು ಉದ್ಘಾಟಿಸಿದರು ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಎಸ್ ಎಸ್ ಕೊಳ್ಕೆಬೈಲ್ ಎಂ. ಎಲ್.ಎ. ರವರು ವಹಿಸಿದ್ದರು.

ಆದಿಯಲ್ಲಿ ಕುಂದಾಪುರ ಟೌನ್ ಸಂಸ್ಥೆಯ ಅಧ್ಯಕ್ಷ ಶ್ರೀ ಕೆ. ಗಣಪತಿ ಶೇಣೈಯವರು ಸ್ವಾಗತಿಸಿದರು ಶ್ರೀ ಎಚ್. ಭಾಸ್ಕರ ಕಾಮತ್‌ರವರು ಸಿಹಿತಿಂಡಿ ಹಂಚಿದರು ಸಭಿಕರ ಪರವಾಗಿ ಶ್ರೀಗಳಾದ ಎಂ. ಎಂ ಹೆಗ್ಡೆ, ಕೆ. ಗಣಪತಿ ಶೇಟ್, ಎಚ್. ಭಾಸ್ಕರ ಕಾಮತ್, ಮತ್ತು ಸಟ್ವಾಡಿ ರಾಜೀವ ಶೆಟ್ಟರು ಮಾತಾಡಿ ದಿವಂಗತರನ್ನು ಪ್ರಶಂಸಿಸಿದರು.

ಡಾ. ನೋದಿಯವರ ಉಚಿತ ನೇತ್ರ ಚಿಕಿತ್ಸಾ ಶಿಬಿರದ ಉದ್ಘಾಟನೆಯು— ಉಡುಪಿಯಲ್ಲಿ ತಾ. 6ನೇ ಬೆಳಿಗ್ಗೆ ಉಡುಪಿಯ ಬೋರ್ಡ್ ಹೈಸ್ಕೂಲ್ ಪ್ರಾಂಗಣದಲ್ಲಿ ಮಂಗಳೂರಿನ ನಗರ ಸಭೆಯ ಮಾಜಿ ಅಧ್ಯಕ್ಷ ಶ್ರೀ ಕೆ. ಸದಾಶಿವರಾವ್ ಎಂ.ಎ. ಅಡಿಗರ ಅಧ್ಯಕ್ಷತೆಯಲ್ಲಿ ಡಾ ಬಿ ಎಂ ಎ. ಪೈಯವರಿಂದ ನೆರವೇರಿಸಲ್ಪಟ್ಟಿತು. ಚಿಕಿತ್ಸಾ ಸಮಿತಿಯ ಕಾರ್ಯದರ್ಶಿ ಶ್ರೀ ಎಚ್. ವಿ. ಶೆಣೈಯವರು ಸ್ವಾಗತಿಸಿದರು. ಡಾ ಪೈಗಳು ಡಾ ನೋದಿಯವರ ಚಿಕಿತ್ಸಾ ಕ್ರಮವನ್ನು, ಶಿಬಿರಗಳನ್ನು ವಿವರಿಸಿ ಉದ್ಘಾಟನಾ ಭಾಷಣ ಮಾಡಿದ ಬಳಿಕ ಡಾ. ನೋದಿಯವರು ಇದ್ದಿಯ ಈ ಪವಿತ್ರ ಕ್ಷೇತ್ರದಲ್ಲಿ ರೋಗಿಗಳ ಸೇವೆಗೈಯಲು ಸಹಕರಿಸಿ ಸಂಧಿಯಿತ್ತ ಈ ಕಾರ್ಯಕರ್ತರಿಗೆ ಕೃತಜ್ಞತೆಯನ್ನು ಚಿಕಿತ್ಸೆಯಿಂದ ಗುಣವಾದ ರೋಗಿಗಳ ಕಣ್ಣುಗಳೇ ಸಾಕ್ಷಿಯೆಂದೂ ಹೇಳಿ ಈ ಪುಣ್ಯಕ್ಷೇತ್ರದಲ್ಲಿ ನಡೆಯುವ ಪವಿತ್ರ ಕಾರ್ಯದ ಯಶಸ್ಸಿಗೆ ಸರ್ವರ ಸಹಕಾರವನ್ನು ಕೋರಿದರು. ಅಧ್ಯಕ್ಷ ಶ್ರೀ ಅಡಿಗರು ವಿದ್ಯಾದಾನ ಡಾ ಪೈಗಳಿಂದ ಉದ್ಘಾಟಿಸಲ್ಪಟ್ಟ ನೇತ್ರದಾನ ಡಾ ನೋದಿಯವರ ಈ ಶಿಬಿರವು ಅತ್ಯಂತ ಜಯಶೀಲವಾಗುವುದರಲ್ಲಿ ಅನುಮಾನವಿಲ್ಲವೆಂದು ಹೇಳಿ ಡಾ ನೋದಿಯವರು ಪ್ರಪಂಚದಲ್ಲಿಯೇ ಅಸಮಾನ್ಯ ನೇತ್ರ ಶಸ್ತ್ರ ಚಿಕಿತ್ಸಕರೆಂದರು. ಅಂತ್ಯದಲ್ಲಿ ಸಮಿತಿಯ ಜತೆ ಕಾರ್ಯದರ್ಶಿ ಶ್ರೀ ಪಿ. ರಂಗನಾಥ ಶೆಣೈಯವರು ಧನ್ಯವಾದಗಳನ್ನರ್ಪಿಸಿದರು.

ಪುರಂದರ ದಾಸರ ಸ್ಮಾರಕ ಪ್ರಬಂಧ ಮತ್ತು ಕೀರ್ತನೆಗಳ ಸ್ಪರ್ಧೆ

ಉಡುಪಿಯಲ್ಲಿ ಇದೇ ದಶಂಬರ ಕೊನೆಯ ವಾರದಲ್ಲಿ ಸಂಗೀತ ಸಭೆಯ ಆಶ್ರಯದಲ್ಲಿ ಜರಗುವ ಶ್ರೀ ಪುರಂದರ ದಾಸರ ಚತುರ್ಥ ಶತಮಾನೋತ್ಸವದ ಅಂಗವಾಗಿ ಪ್ರಬಂಧ ಮತ್ತು ಕೀರ್ತನೆಗಳನ್ನು ಹಾಡುವ ಎರಡು ಪ್ರತ್ಯೇಕ ಸ್ಪರ್ಧೆಗಳನ್ನು ನಡೆಸಲಾಗುವುದು. ಸ್ಪರ್ಧೆಗಳಲ್ಲಿ ಎಲ್ಲರಿಗೂ ಪ್ರವೇಶವಿದ್ದು ಭಾಗವಹಿಸಲು ಪ್ರವೇಶ ಧನವೊಂದೊಂದು ರೂಪಾಯಿ ಆಗಿರುತ್ತದೆ. ಪ್ರಥಮ ಮೂರು ಸ್ಥಾನಗಳನ್ನು ಪಡೆದವರಿಗೆ ಪ್ರತಿಸ್ಪರ್ಧೆಯಲ್ಲಿ ಪ್ರತ್ಯೇಕ ರೂ. 100, ರೂ 75 ಮತ್ತು 50ರ ಮೂರು ಮೂರು ನಗದಿ ಬಹುಮಾನಗಳನ್ನು ನೀಡಲಾಗುವುದು.

ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸುವವರು ಈ ಕೆಳಗಿನ ವಿಷಯಗಳಲ್ಲಿ ಒಂದನ್ನು ಆರಿಸಿ, ಸಾವಿರ ಶಬ್ದಗಳಿಗೆ ಮೀರದಂತೆ, ಪ್ರಬಂಧ ಬರೆದು ದಶಂಬರ ೧೫ರ ಒಳಗೆ ಕಳಿಸತಕ್ಕದ್ದು.

1 ಸಾಮಾಜಿಕ ಜೀವನದ ಮೇಲೆ ಪುರಂದರ ದಾಸರ ಪ್ರಭಾವ.

2 ಭಕ್ತಿ ಸಂಗೀತಕ್ಕೆ ಪುರಂದರ ದಾಸರ ಕಾಣಿಕೆ

3 ದಾಸ ಸಾಹಿತ್ಯಕ್ಕೆ ಪುರಂದರ ದಾಸರ ಕೊಡುಗೆ

ಪುರಂದರ ದಾಸರ ಕೀರ್ತನೆಗಳನ್ನು ಹಾಡುವ ಸ್ಪರ್ಧೆಯಲ್ಲಿ ಭಾಗವಹಿಸುವವರು ಪ್ರವೇಶ ಧನ ಸಹಿತ, ತಮ್ಮ ಹೆಸರು ಮತ್ತು ವಿಳಾಸಗಳನ್ನು ಇದೇ ನವಂಬರ 30ರ ಒಳಗೆ ತಿಳಿಸುವಂತೆ ಕೇಳಿಕೊಳ್ಳುತ್ತೇವೆ.

ವಿವರಗಳಿಗೆ ಮತ್ತು ಸ್ಪರ್ಧೆಗಳಿಗೆ ಸಂಬಂಧಿಸಿದ ಪತ್ರ ವ್ಯವಹಾರಗಳನ್ನು, ಕಾರ್ಯದರ್ಶಿ ಶ್ರೀ ಪುರಂದರ ದಾಸ ಚತುರ್ಥ ಶತಮಾನೋತ್ಸವ ಸಮಿತಿ, C/o ಸಂಗೀತ ಸಭಾ, ಉಡುಪಿ ಇವರೊಡನೆ ನಡೆಸಬಹುದು.

ಚೌ ಎನ್ ಲಾಯ್

[illegible] ಇತ್ತೀಚೆಗೆ ಚೀನಾ ಪ್ರಧಾನಿ ಚೌ ಎನ್ ಲಾಯ್ ಅವರು [illegible] ಭಾರತ—ಚೀನಾ ಗಡಿ ವಿವಾದದ [illegible] ಶಾಂತಿ ಪರಿಹಾರದಲ್ಲಿ ಆಸಕ್ತಿಯನ್ನು [illegible] ಭಾರತ [illegible] ಪ್ರತಿಪಾದಿಸುವಂತೆ ಮಾಡುತ್ತಿದೆ ಎಂಬುದು ಎರಡನೆಯ ಆರೋಪ [illegible] ಸಿಡಲಾಗದು.

'ನವಯುಗ'ದ ಓದುಗರಿಗೆ ರಸದೂಟವನ್ನೊದಗಿಸುವ

ದೀಪಾವಳಿ ಸಂಚಿಕೆ

ಬರುವ ವಾರ ಪ್ರಕಟವಾಗುವುದು.

ಬೆಲೆ ೨೫ ನ ಪೈಸೆ.

ಈ ಸಂಚಿಕೆಯು ಕಾಗದದ ಅಭಾವದಿಂದಾಗಿ ಈ ಬಾರಿ ಎಂಟು ಪುಟಗಳನ್ನಷ್ಟೇ ಕೊಡಲಾಗಿದೆ ವಾಚಕರು ಗಮನಿಸಬೇಕಾಗಿ ವಿನಂತಿ.

—ವ್ಯವಸ್ಥಾಪಕ.

ಹೀಗಿದೆ ಪ್ರಪಂಚ

ಬರೆದವರು ಯಾರು?

'ಪ್ರಪಂಚದ ಎಲ್ಲ ಪುಸ್ತಕಗಳನ್ನೂ ನಾನು ಬರೆದಿದ್ದೇನೆ. ನಾನು ಹುಟ್ಟಿಲ್ಲವಾಗಿದ್ದರೆ, ಸಾಹಿತ್ಯದ ಭಂಡಾರವೆಲ್ಲವೂ ರಿಕ್ತವಾಗಿ ಹೋಗುತಿತ್ತು. ವಾಗ್ದೇವಿಯ ಚರಣಕಮಲಗಳಲ್ಲಿ ಯಾವ ಪುರಸ್ಕಾರವೂ ಬರುತ್ತಿರಲಿಲ್ಲ' ಲೇಖನಿಯು ಹೇಳುತಿತ್ತು.

ಇದನ್ನು ಕೇಳಿದ ಶಾಯಿಯು ನುಡಿಯಿತು: 'ನಾನಿಲ್ಲದೆ ಹೋದರೆ ನೀನೇನು ಬರೆಯಬಲ್ಲೆ? ಮಣ್ಣು! ಯಾವ ಪುಸ್ತಕವನ್ನಾದರೂ ತೆರೆದು ನೋಡು, ಪ್ರತಿ ಪುಟದ ಪ್ರತಿ ಪಂಕ್ತಿಯ ಪ್ರತಿ ಅಕ್ಷರವೂ ನನ್ನ ಜೀವನ ರಸದಿಂದ ಮಾಡಿರುವುದನ್ನು ನೀನು ಅಲ್ಲಗಳೆಯುವೆಯೆಂತು?'

ಹಸ್ತವು ಇವೆರಡರ ವಾದಗಳನ್ನು ಖಂಡಿಸುತ್ತ ಹೇಳ ತೊಡಗಿತು: 'ನೀವನ್ನುವುದೆಲ್ಲಾ ಶುದ್ಧ ಸುಳ್ಳು. ಈಯೆಲ್ಲ ಪುಸ್ತಕಗಳನ್ನೂ ಬರೆದವನು ನಾನು. ನೀವಿಬ್ಬರೂ ನನ್ನ ಕಾರ್ಯದಲ್ಲಿ ಸಾಧನ ಮಾತ್ರರಾಗಿದ್ದೀರಿ. ನಾನಿಲ್ಲದೆ ಇರುತಿದ್ದರೆ ಬರೇ ನಿಮ್ಮಿಂದ ಏನಾಗುತಿತ್ತು?'

ಬುದ್ಧಿಯು ಈ ಮೂವರ ಮಾತುಕತೆಯನ್ನು ಕೇಳಿತು. ಗುಪ್ತವಾಗಿ ಗಂಭೀರವಾಗಿ ಖಿಲಖಿಲನೆ ನಕ್ಕು ಬಿಟ್ಟಿತು!

° ° °

ನಿರ್ಧಾರದ ಸಾಧಕರು

ಪ್ರಪಂಚದ ಕೋಲಾಹಲದಿಂದ ಕಿವುಡರಾದ ಮೂವರು ಸನ್ಮಿತ್ರರು ಕಂಗಾಲಾಗಿ ಏಕಾಂತ ವಾಸವನ್ನು ಕೈಗೊಳ್ಳಲು ನಿರ್ಧರಿಸಿದರು. ಮೂವರೂ ಮನೆಯಿಂದ ಹೊರಟು, ಹಿಮಾಲಯವನ್ನು ಏರಿದರು. ಅಲ್ಲಿ ಒಳ್ಳೆಯ ಸ್ಥಾನವೊಂದನ್ನು ಆಯ್ದು ಇರ ತೊಡಗಿದರು.

ಒಂದು ವರ್ಷಾನಂತರ ಮೊದಲನೆಯವನು ಮೌನ ಮುರಿದು ಹೇಳಿದನು—'ಮಿತ್ರಾ, ಇಲ್ಲಿ ತುಂಬ ಶಾಂತಿ ದೊರೆಯುತ್ತಿದೆ.

ಮರಳಿ ಒಂದು ವರ್ಷದ ವರೆಗೆ ಮೌನವು ಆವರಿಸಿತು. ಬಳಿಕ ಎರಡನೆಯವನು ಉತ್ತರವಿತ್ತನು 'ಹೌದು, ಇಲ್ಲಿ ತುಂಬ ಶಾಂತಿಯಿದೆ'.

ಹೀಗೆಯೇ ಮೌನವಾಗಿ ಮತ್ತೊಂದು ವರ್ಷವೂ ಕಳೆಯಿತು.

ಆಗ ಮೂರನೆಯವನು ಗಡಸು ದನಿಯಿಂದಲೇ ಹೇಳಿದನು-'ನೀವು ಹೀಗೆಯೇ ವಾತುಕತೆ ನಡೆಸುತ್ತ ಶಾಂತಿಭಂಗ ಮಾಡಿದರೆ, ನಾನು ನಗರಕ್ಕೆ ಮರಳಿ ಹೋಗುವೆನು; ಇಲ್ಲಿಗಿಂತ ಕಡಿಮೆ ಕೋಲಾಹಲವಿರುವಲ್ಲಿ ನೆಲಸುವೆನು"

ಉತ್ತಮ ಸಲಹೆ

'ಮಿತ್ರ, ನಾನು ಪ್ರೀತಿಸುವ ಹುಡುಗಿ ಬಡವಳು. ಇದು ನಿನಗೆ ಗೊತ್ತು. ಆಕೆಯೂ ನನ್ನನ್ನು ಬಹಳ ಮೆಚ್ಚುತ್ತಾಳೆ. ನನ್ನನ್ನಗಲಿ ಆರೆಚಣವೂ ಉಳಿಯಲಾರಳು. ನೀನು ಬೇರೆ ಯಾರನ್ನಾದರೂ ಮದುವೆಯಾದರೆ ಏನಾದರೂ ತಿಂದು ಸಾಯುತ್ತೇನೆ ಎನ್ನುತ್ತಾಳೆ. ಆದರೆ, ತಂದೆಯು ಇದನ್ನು ಒಪ್ಪುವುದಿಲ್ಲ ಅವರು ಒಬ್ಬಾಕೆ ಶ್ರೀಮಂತ ವಿಧವೆಯನ್ನು ತರಲು ನಿಶ್ಚಯಿಸಿದ್ದಾರೆ. ಆಕೆಯೊಡನೆ ಲಕ್ಷಾಂತರ ರೂಪಾಯಿಗಳಿವೆ; ಮನೆ, ಮೋಟರು ಎಲ್ಲ ಇವೆ. ಆಕೆಯನ್ನು ಕೇಳುವವರು ಯಾರೂ ಇಲ್ಲ. ಈಗ ನಾನು ಏನು ಮಾಡಬೇಕು? ಯಾರ ಕೈ ಹಿಡಿಯಬೇಕು?

'ಪ್ರೀತಿಸುವ ಹುಡುಗಿಯನ್ನೇ ನೀನು ಮದುವೆಯಾಗಬೇಕು' ಮಿತ್ರನು ಗಂಭೀರ ಪರ್ಯಾಲೋಚನಾನಂತರ ಹೇಳಿದನು; 'ಬಡತನವೆಂಬುದು ಪಾಪವೇನಲ್ಲ; ಅಲ್ಲದೆ ಆಕೆಯೂ ನಿನ್ನ ಬಯಸುತ್ತಾಳೆಎಂದಿ ಇದಕ್ಕಾಗಿ ನಿನ್ನ ತಂದೆಯೊಡನೆ ಹೊಡೆದಾಡ ಬೇಕಾಗಿಲ್ಲ. ಸಾಮಾನ್ಯವಾಗಿ ಮುದುಕರು ಅನ್ನುವುದೇ ಹಾಗೆ'

'ನಾನೂ ಹಾಗೆ ಯೋಚಿಸುತ್ತೇನೆ.ಆದರೆ, ತಂದೆಯವರ ಮುಂದೆ ನಾಲಿಗೆ ತೆರೆಯುವುದಿಲ್ಲ. ಇಂದು ಸಾಹಸಮಾಡಿ ಎಲ್ಲವನ್ನೂ ಹೇಳಿ ಬಿಡುತ್ತೇನೆ. ಸರಿ; ನಾನಿನ್ನು ಹೋಗಲಿ?'

'ಸರಿ ಬಿಡು; ಆಗಾಗ ಸಿಗುತ್ತಿರು; ಮತ್ತು ಕೇಳು, ಆ ವಿಧವೆಯ ವಿಳಾಸವನ್ನು ಸ್ವಲ್ಪ ಕೊಟ್ಟು ಹೋಗು.'

In the Court of the District Munsif of Karkala

O. S. No. 345/1963.

Between

Bala Vyasa Rao (Receiver)—Plaintiff

Kanthappa Poojari —Defendant

To the defendant

Kanthappa Poojari, nephew of Cheenkra Poojari, residing at Bajre village of Beltangadi Taluk.

Whereas the plaintiff has instituted the above suit for arrears of rent etc. for Rs. 1506-80 and subsequent interest and costs of suit etc. and the said suit stands posted to 18-11-1963, you are hereby informed that you are at liberty to appear before the said Court at 11 A. M. on the said date and plead your defence if any; failing which the suit will be heard and decided in your absence.

V. V. Upadhyaya,
Advocate for plaintiff.

Karkala, Dated 30-10-63.

ಆದರ್ಶ ಚರಿತೆಗಳು—೧೦

ದಾರ್ಶನಿಕ ಪ್ಲೇಟೋ

ಶ್ರೀ ಎಸ್. ಎಂ. ಶೆಟ್ಟಿ: ಶಿವಮಂಜೆಸರಾರಿ.

ವಿಶ್ವವಿಖ್ಯಾತ ಪ್ಲೇಟೋ ಅವರು ಗ್ರೀಕ್ ದೇಶದ ಪ್ರಜೆಯಾಗಿದ್ದರು. ಇವರು ಸುಮಾರು ಕ್ರಿ ಪೂ. ೪೨೭-೨೮ರಲ್ಲಿ ಜನ್ಮ ತಾಳಿದರು. ಇವರ ಮಾತಾಪಿತರು ಅಗರ್ಭ ಶ್ರೀಮಂತರೂ ಸಮಾಜದಲ್ಲಿ ಪ್ರತಿಷ್ಠಿತ ವ್ಯಕ್ತಿಗಳೂ ಆಗಿದ್ದರು. ಪ್ಲೇಟೋರವರ ಮಾವನವರು ಗ್ರೀಕಿನ ಸುಪ್ರಸಿದ್ಧ ತತ್ವಜ್ಞಾನಿ ಸೋಕ್ರಟೀಸರ ಬಾಲ್ಯಗೆಳೆಯರಾದ ಕಾರಣ, ಪ್ಲೇಟೋ ಅವರು ಸೋಕ್ರಟೀಸರ ಸಂಪರ್ಕಕ್ಕೆ ಬಂದಿರಬೇಕು ಎಂದು ಊಹಿಸಲಾಗುತ್ತದೆ ಶ್ರೀಮಂತ ಮನೆತನಗಳ ಮಕ್ಕಳು ಹೆಚ್ಚಾಗಿ, ತಿನ್ನುಣ್ಣಲು ಯಥೇಷ್ಟವಾಗಿರುವುದರಿಂದ ದುರ್ವ್ಯಸನಿಗಳೂ, ಆಲಸಿಗಳೂ ಆಗಿರುತ್ತಿದ್ದರು. ಆದರೆ ಪ್ಲೇಟೋ ಶ್ರೀಮಂತಿಕೆಯಿಂದ ಲಾಭ ಪಡೆದರು. ಅವರ ಶಿಕ್ಷಣವೂ ಬಹು ಉತ್ತಮ ರೀತಿಯಲ್ಲಿಯೇ ನಡೆಯಿತು. ಮೊತ್ತಮೊದಲು ಅವರು ಕವಿತೆ, ನಾಟಕಗಳನ್ನು ರಚಿಸತೊಡಗಿದರು; ಆದರೆ ಸೋಕ್ರಟೀಸರ ಸಹವಾಸದಿಂದಾಗಿ ಅವರೂ ದಾರ್ಶನಿಕತೆಯೆಡೆಗೆ ತಿರುಗಿದರು ಪ್ಲೇಟೋ ಅವರ ಜೀವನದ ಮೇಲೆ ಸೋಕ್ರಟೀಸರ ಅದ್ಭುತ ಪ್ರಭಾವಬಿದ್ದಿತ್ತು. ಮಹಾತ್ಮರ ಸಂಗ ಬಹಳ ಮಂದಿ ಮಾಡುತ್ತಾರಾದರೂ, ಅವರಿಂದ ಲಾಭ ಪಡೆಯುವವರು ಬಹು ವಿರಳ.

ಪ್ಲೇಟೋ ಅವರ ಅಧಿಕಾಂಶ ಜೀವನವು ಜ್ಞಾನಚರ್ಚೆಯಲ್ಲಿಯೇ ಕಳೆಯಿತು. ತನ್ನ ಕಾಲದ ಶಾಸನ ವ್ಯವಸ್ಥೆಯಿಂದ ಅವರು ತುಂಬಾ ಅಸಂತುಷ್ಟರಾಗಿದ್ದರು. ಸುಂದರ ಶಾಸನವು ಹೇಗಿರಬೇಕು? ಎಂಬುದರ ಕುರಿತು ಅವರು ಅನೇಕ ಗ್ರಂಥಗಳ ರಚನೆ ಗೈದುದಲ್ಲದೆ, ಸಾಕಷ್ಟು ಪ್ರಚಾರಗೈದರು. ಆದರೆ ಯಾವ ಆದರ್ಶವನ್ನು ಅವರು ಬಯಸುತ್ತಿದ್ದರೋ, ಅದು ಆ ಕಾಲದಲ್ಲಿ ನಿರ್ಮಾಣವಾಗುವುದು ಅಸಂಭವವಾಗಿತ್ತು, 'ಸಿರಾಕೂಜ' ಎಂಬ ದೇಶದ ರಾಜನನ್ನು ನ್ಯಾಯನಿಷ್ಠನನ್ನಾಗ ಮಾಡಲು ಅವರು ಮೂರು ಬಾರಿ ಯತ್ನಿಸಿ ಅಸಫಲರಾಗಿದ್ದರು. ಕೊನೆಯ ಬಾರಿಯಂತೂ ದೈವಕೃಪೆಯಿಂದಲೇ ಇವರು ಜೈಲಿಗೆ ಹೋಗುವುದು ತಪ್ಪಿತು.

ತನ್ನ ಮಾವನವರು ನಲ್ವತ್ತನೇಯ ವಯಸ್ಸಿನಲ್ಲಿ ಪ್ಲೇಟೋ ಅವರು 'ಎಕೆಡೆಮಿ' ಎಂಬೊಂದು ಸಂಸ್ಥೆಯ ನಿರ್ಮಾಣಗೈದರು ಆ ಸಂಸ್ಥೆಯ ಹೆಬ್ಬಾಗಿಲಲ್ಲಿ— "ಯಾರಿಗೆ ರೇಖಾಗಣಿತ ತಿಳಿಯದೋ, ಅವರು ಒಳಗೆ ಬರಬಾರದು" ಎಂದು ಉಲ್ಲೇಖಿಸಲ್ಪಟ್ಟಿತ್ತು. ಇದರಿಂದಾಗಿ ಅವರ ಗಣಿತ ಪ್ರೇಮದ ಅರಿವಾಗುತ್ತದೆ, ಈ 'ಎಕೆಡೆಮಿ'ಯಲ್ಲಿ ಆ ಕಾಲದ ಎಲ್ಲಾ ವಿದ್ವಾಂಸರೂ, ವಿಚಾರಕರೂ ಒಟ್ಟಾಗುತ್ತಿದ್ದರು ಪ್ಲೇಟೋ ಅವರೆಲ್ಲರ ಮುಂದಾಳಾಗಿರುತ್ತಿದ್ದರು.

ತನ್ನ ೮೧ನೇ ವಯಸ್ಸಿನಲ್ಲಿ ಈ ಮಹಾಪುರುಷನು, ಈ ಜಗತ್ತಿನಿಂದ ಕಣ್ಮರೆಯಾದನು.

(ಮೂಲ: ಠಾಕೂರ್ ಸುದರ್ಶನ ಸಿಂಹ)

ಕಾರ್ಕಳ ಡಿ. ಮು ಕೋರ್ಟಿನಲ್ಲಿ

O. S. No 501/1963.

B ರಘುರಾಮ ಶೆಟ್ಟಿ — ವಾದಿ.
ಮತ್ತು

N. ಸದಾಶಿವ ಹೆಗ್ಡೆ - ಸೀತಾರಾಮ ಹೆಗಡ್ತಿ ರವರ ಮಗ, ಪಟೇಲ, ಕಾರ್ಕಳ ತಾಲ್ಲೂಕು ನಂದಳಿಕೆ ಗ್ರಾಮದ ಚಾವಡಿ ಮನೆಯಲ್ಲಿ ರುವವ. —ಪ್ರತಿವಾದಿ.

ಈ ಮೂಲಕ ಸದ್ರಿ ಪ್ರತಿವಾದಿಗೆ ತಿಳಿಸುವದೇನಂದ್ರೆ:

ವಾದಿಯು ನಿಮ್ಮ ಮೇಲೆ ಮಾಡಿದ ಮೇಲಿನ ದಾವಾ ನಿಮ್ಮ ಹಾಜರಿಗ್ಗೆ ತಾರೀಕು 25.11-1963ಕ್ಕೆ ಇಟ್ಟ ಬಗ್ಗೆ ಸದ್ರಿ ದಿನ ಬೆಳಿಗ್ಗೆ 11 ಗಂಟೆಗೆ ನೀವು ಮೇಲ್ಕಂಡ ಕೋರ್ಟು ಮುಂದೆ ಸ್ವತಹಾ ಯಾ ವಕೀಲ್ ದ್ವಾರ ಹಾಜರಾಗಿ ಉದಹರಿಸ ತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಸಿವ್ಯಾಮಾಡಿ ಸದ್ರಿ ದಾವಾ ಏಕಪಕ್ಷವಾಗಿ ತೀರ್ಮಾನಿಸಲಾದೀತು.

(By order of the court.)

N. M. Adyanthaya,
Advocate for Plaintiff

Karkala, 2—11—1963

● ಕುಮಾರಿ ಬಿಲ್ಲೆಗಳು ●

(ರಿಜಿಸ್ಟರ್ಡ್ Regd.)

ಪ್ರಕೃತಿಯು ವಿಫಲಗೊಂಡಾಗ ಉಂಟಾಗುವ ಕಾತರ ನಿವಾರಣೆಗೆ ಸಮಯೋಚಿತವಾದ ಆಯುರ್ವೇದೀಯ ಮಿಶ್ರಣ।

ಟ್ಯೂಬ್ 1ರ ಸಾಮಾನ್ಯ ರೂ. 4/. ಮಧ್ಯಮ ರೂ. 6/ ಉತ್ತಮ ರೂ.9/-

P. Devee & Co. (N. J.) Calcutta—40.

ಸ್ಟಾಕಿಸ್ಟರು — ರಾಜಾ ಮೆಡಿಕಲ್ ಹಾಲ್, ಬೆಂಗಳೂರು ಕೆಂಟೋನ್ಮೆಂಟ್; ಕುಮ್ಟಾ ಫಾರ್ಮಸಿ, ಕುಮ್ಟಾ (ಉ. ಕ.)

ಹೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

ಜನಪ್ರಿಯವಾದ ಗೀತೆಯ ಸನ್ಮೂಲ ಭಾಷಾಂತರ ಇದೀಗ ಮಾರಾಟಕ್ಕೆ ಸಿದ್ಧವಾಗಿದೆ. 360-ಪುಟಗಳಿಗೂ ಮಿಕ್ಕಿದ ಪಾಕೆಟ್ ಎಡಿಶನ್ ದಪ್ಪವಾದ ಬಿಳಿ ನುಣುಪು ಕಾಗದ!

ಬೆಲೆ: ಸಾದಾ ಪ್ರತಿ ರೂ. ೧-೦೦
ಉತ್ತಮ ಪ್ರತಿ ರೂ. ೧-೫೦
ಅಂಚೆ ವೆಚ್ಚ ರೂ. ೦-೫೦

ರಖಂ ಪ್ರತಿಗಳ ದರಕ್ಕೆ ಬರೆಯಿರಿ:

ನವಯುಗ ಪ್ರೆಸ್ ಉಡುಪಿ, ದ. ಕ

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

ಐತಿಹಾಸಿಕ ನಾಟಕ

ಗಜಪತಿ ನಂದಿನಿ

ಬರೆದವರು: "ನವಗಿರಿನಂದ"

(ಕಳೆದ ಸಂಚಿಕೆಯಿಂದ ಮುಂದುವರಿದುದು)

ದೃಶ್ಯ ೧೯—ಕಟಕದ ಬೀದಿ

ಚಿನ್ನಾ— (ಘೋಷೆಯನ್ನು ಹಾಕಿಕೊಂಡು ಸಹಜ ವೇಷದಿಂದ ಪ್ರವೇಶಿಸಿ) ಹುಂ, ರಾಯನ ಪ್ರತಿಜ್ಞೆಯನ್ನು ಮುಗಮುಗೊಳಿಸಲು ರಹಸ್ಯವಾಗಿ ಕಟಕಪುರಿಗೇನೋ ಬಂದೆ. ಆದರೆ ಜಗನ್ಮೋಹಿನಿಯ ದರ್ಶನವು ಎಲ್ಲಿ ಆಗುವುದೋ? ಹೇಗಾಗುವುದೋ! (ತೆರೆ ಕಡೆಗೆ ನೋಡಿ) ಆ ಬ್ರಾಹ್ಮಣನನ್ನು ಕೇಳಿ ನೋಡುವ.... ಓ ಹೋಯ್, ಅಯ್ಯಾ, ಸ್ವಾಮೀ!

ರಾಮಕೃಷ್ಣ— (ತಲೆಯ ಮೇಲೆ ಗಾಢ ವಸ್ತ್ರ ಹಾಕಿಕೊಂಡಿದ್ದು ಪ್ರವೇಶಿಸಿ) ಆ! ಯಾರು ತಾಯಿ?

ಚಿನ್ನಾ— ಓ! ಕವಿವರ್ಯ ತೆನಾಲಿ ರಾಮಕೃಷ್ಣ! ನೀನು ಇಲ್ಲಿ ಎಲ್ಲಿಂದ?

ರಾಮಕೃಷ್ಣ— ಎಲಯೋ! ಚಿನ್ನಾ! ತಲ್ಲೀ! ನೀವಿಕ್ಕಡ ಎಕ್ಕಣ್ಣುಂಚಿ ವಿಚ್ಚೇಸಿತಿವೇ?

ಚಿನ್ನಾ— ಕವಿತಿಲಕಾ! ಉದಯಗಿರಿಯ ರಾಜಾವೀರ ರುದ್ರ ಗಜಪತೀಸುತೆಯಾದ ಚಿನ್ನಾದೇವಿ ವಂದಿಸುವಳು.

ರಾಮಕೃಷ್ಣ— ಮಹಾರಾಜ್ಞೀಭವ! ಸೌಭಾಗ್ಯಮಸ್ತು! ಸದಾ ಹರಿದ್ರಾ ಕುಂಕುಮಾಂ ಅಭಿವೃದ್ಧಿರಸ್ತು! ಮನೋವಾಂಛಿತ....

ಚಿನ್ನಾ— ಸಾಕು ಸಾಕು! ಹೆಚ್ಚು ಮಳೆಯಿಂದ ನೆನೆಯಬೇಡ.

ರಾಮಕೃಷ್ಣ— ಅಕಸ್ಮಾತ್? ನಿನ್ನನ್ನು ನೋಡಿ ನನಗಾದ ಸಂತೋಷ ಇಷ್ಟಿಷ್ಟಲ್ಲ. ಆದರ ಮೇಲೆ ಉದಯಗಿರಿಯ ರಾಜಾವೀರ ರುದ್ರ ಗಜಪತೀಸುತೆಯೆಂದೆಯಲ್ಲಾ! ನನ್ನಾನಂದ ಎಲ್ಲೆ ಮೀರಿ ಹೋಯಿತ.

ಚಿನ್ನಾ— ಅದೆಲ್ಲಾ ನಿದಾನವಾಗಿ ಹೇಳುವೆನು. ಈ ಅಪರಿಚಿತಸ್ಥಳದಲ್ಲಿ ನೀನೊಬ್ಬನು ಸಿಕ್ಕಿದ್ದೇ ನನ್ನ ಕಾರ್ಯಕ್ಕೆ ದೈವ ಸಹಾಯ ದೊರೆತಂತಾಯಿತು. ರಾಮಕೃಷ್ಣ, ಇಲ್ಲಿ ನೀನು ಇದೇನು ತಂತ್ರ ನಡೆಸಿದ್ದಿ?

ರಾಮ— ಕಪಟ ತಂತ್ರ. ಉತ್ಕಲ ನಂದಿನಿಯನ್ನು ನಮ್ಮ ರಾಯನ ಕೈಗೆ ರಾಣಿಕೆ ಬೀಳಿಸುವ ಮಹಾ ತಂತ್ರ.

ಚಿನ್ನಾ— ನೀನೊಬ್ಬನೇ?

ರಾಮ— ಅಲ್ಲ ನಮ್ಮ ತಿಮ್ಮ ಕವಿ ಕೂಡಾ. ಮಹಾ ದೊಡ್ಡ ಯೋಗೀಶ್ವರನಾಗಿ—

ಚಿನ್ನಾ— ಓಹೋ! ಇಲ್ಲಿಯೊಬ್ಬ ಮಹಾತ್ಮನು ಅವತರಿಸಿರುವನೆಂದು ನಾನೂ ಕೇಳಿದ್ದೆ. ನಿಮ್ಮನ್ನು ಕಳುಹಿಸಿದ್ದ ತಿಮ್ಮರಸರು ತಾನೆ?

ರಾಮ— ಆ! ಸೂಕ್ಷ್ಮಮತಿಯಮ್ಮ ನೀನು.

ಚಿನ್ನಾ— ನಿಮ್ಮ ಯತ್ನ ಸಫಲವಾಯಿತೇ?

ರಾಮ— ಅ-ಯಿ-ಅ-ಗು-ಅ-ದೀತು.

ಚಿನ್ನಾ— ಅಂದರೆ?

ರಾಮ— ಮೋಹಾಂಕುರವಾಗಿದೆ. ಇದರಲ್ಲೊಂದು ಸಿಕ್ಕು ಬದ್ದದೆ.

ಚಿನ್ನಾ— ರಾಯನ ಪ್ರತಿಜ್ಞೆ ತಾನೆ?

ರಾಮ— ಆ! ಕೊನೆಗೆ ಮಾಳಗಿತ್ತು ನಿನಗೆ ಹೇಗೆ ಗೊತ್ತಾಯ್ತು?

ಚಿನ್ನಾ— ಎಲ್ಲಾ ಗೊತ್ತು. ಅದನ್ನು ಸರಿ ಮಾಡಲಿಕ್ಕೆ ನಾನಿಲ್ಲಿಗೆ ಬಂದದ್ದು. ನಿಮ್ಮ ಪ್ರಯತ್ನ ನಿಷ್ಫಲವಾಗಲಿ.

ರಾಮ— ನಮ್ಮದೇನಿದೆ? ಜಗನ್ಮೋಹಿನಿಯನ್ನು ರಾಯನ ಕೈಗೆ ಸೇರಿಗೊಟ್ಟು ಬಿಡುವುದಷ್ಟು ನಮ್ಮ ಕೆಲಸ. ಅವನು ಹೃದಯದಲ್ಲಾದರೂ ಇಟ್ಟು ಕೊಳ್ಳಲಿ, ಪ್ರತಿಜ್ಞೆಗಾದರೂ ಉಪಯೋಗಿಸಿಕೊಳ್ಳಲಿ.

ಚಿನ್ನಾ— ಪ್ರತಿಜ್ಞೆಗೇ ಉಪಯೋಗಿಸಿಕೊಳ್ಳುವರು. ಜಗನ್ಮೋಹಿನಿಗೆ ತಕ್ಕ ವರನನ್ನು ಕೂಡಾ ರಾಯರು ನಿಶ್ಚಯಿಸಿದ್ದಾರೆ.

ರಾಮಕೃಷ್ಣ— ಅವನಾರು?

ಚಿನ್ನಾ— ಯಾರೋ ಒಬ್ಬ ತಬ್ಬಲಿಯೆಂದಷ್ಟೇ ನನಗೆ ಗೊತ್ತು.

ರಾಮ— ಅಯ್ಯೋ! ಶೋಚನೀಯ! ಆದರೆ—ಆ! ನೀನೇನೋ ಸರಿಮಾಡುವೆನೆಂದೆಯಲ್ಲಾ? ಅದೇನಮ್ಮ?

ಚಿನ್ನಾ— ಅದೇ? ನಾನು ರಾಯರ ಧರ್ಮಪತ್ನಿ ಹೌದೋ?

ರಾಮ— ಹಾ! ಹೌದು. ನಿನಗೆ ಪ್ರತ್ಯೇಕ ನಮಸ್ಕಾರ.

ಚಿನ್ನಾ— ಮೊದಲು ರಾಯರು ನನ್ನ ಮುಂದೆ ಬಂದು ಪ್ರತಿಜ್ಞೆ ಮಾಡಿದ್ದರು.

ರಾಮ— ಹೋ! ಆ ನಾಗಲಾಪುರದ ತೋಟದಲ್ಲಿ— (ನಾಲಿಗೆ ಕಚ್ಚಿ ಕಡಮ ಕೊಳ್ಳುವನು)

ಚಿನ್ನಾ— ಅದು ನಿನಗೆ ಗೊತ್ತೇ?

ರಾಮ— ತಪ್ಪನ್ನು ಕ್ಷಮಿಸಬೇಕು. ನಾನೂ ತಿಮ್ಮಣ್ಣನೂ ಅಡಗಿಕೊಂಡು— ಅಲ್ಲಲ್ಲ—ರಾಯನ ಗುಪ್ತ ಅಂಗರಕ್ಷಕರಾಗಿ ಹಿಂದೆ ದೂರದಲ್ಲಿದ್ದೆವು.

ಚಿನ್ನಾ— ಓ! ಮಂಗಗಳು ಅಂಗರಕ್ಷಕರ ಹಾಗೆ!

ರಾಮ— ತಪ್ಪಾಯಿತಮ್ಮ. ಕ್ಷಮಿಸು. (ಕೈ ಮುಗಿಯುವನು)

ಚಿನ್ನಾ— ಅಲ್ಲಿ ರಾಯರು, ನನ್ನನ್ನು ಪಟ್ಟದ ರಾಣಿಯನ್ನಾಗಿ ಮಾಡಿಕೊಳ್ಳಲಾದರೆ ಮಾತ್ರವೇ ಜಗನ್ಮೋಹಿನಿಯನ್ನು ಮದುವೆಯಾಗುವೆನೆಂದು ಪ್ರತಿಜ್ಞೆ ಮಾಡಿದರು.

ರಾಮ— ಹೌದು. ಅದು ನಾಗಲಾಪುರದಲ್ಲಿ. ಅನೇಕ ಜಗನ್ಮೋಹಿನಿಯನ್ನು ಹಿಡಿದು ಒಬ್ಬ ತಬ್ಬಲಿಗೆ ಮದುವೆ ಮಾಡಿಸುವೆನೆಂದು ವಿದ್ಯಾನಗರದಲ್ಲಿ ಪ್ರತಿಜ್ಞೆ ಮಾಡಿದನು.

ಚಿನ್ನಾ— ಈ ಎರಡು ಪ್ರತಿಜ್ಞೆಗಳೂ ಸರಿಯಾಗಿ ಕೊನೆಗಾಣ ಬೇಕಲ್ಲವೆ?

ರಾಮ— (ತಲೆತಪ್ಪಿಸಿ) ಒಹೋ ಕಷ್ಟ ಕಷ್ಟ. ಹೇಗೂ ಇದು!

ಚಿನ್ನಾ— ಮತ್ತೆ ಕಟ್ಟಿದ್ದು ಮೊದಲು ಸಾಯಬೇಕು. ಮೊದಲು ಹುಟ್ಟಿದ್ದು ಮತ್ತೆ ಬಾಳಬೇಕು.

ರಾಮ— ಅಯ್ಯಯ್ಯೋ! ಗಜಬಿಜಿ! ಹೇಗೆ ಸಾಧ್ಯ?

ಚಿನ್ನಾ— ಭುವನೇಶ್ವರಿಯ ಕೃಪೆಯಿಂದ ಸಾಧ್ಯವಾಗುತ್ತದೆ. ಈಗ ಜಗನ್ಮೋಹಿನಿ ರಾಯನನ್ನು ಮೋಹಿಸಿರುತ್ತಾಳೋ ಇಲ್ಲವೋ ಹೇಳು.

ರಾಮ— ಮೋಹಿಸಿದ್ದಾಳೆ ನಿಜ. ಆದರೆ ರಾಯನೆಂದು ಅಲ್ಲ, ಬೇರೊಬ್ಬನೆಂದು.

ಚಿನ್ನಾ— ಸರಿ ಇಬ್ಬರೂ ಪರಸ್ಪರ ರೂಪಗಳನ್ನು ಮೆಚ್ಚಿದ್ದಾರೆ, ನಾವುಗಳನ್ನು ದ್ವೇಷಿಸುತ್ತಾರೆ ಅನ್ನು. ನಾವು ಪ್ರಯತ್ನ ಮಾಡಿದರೆ ಸುಲಭವಾಗುವುದು.

ರಾಮ— ಅದು ಹೇಗೆ ತಾಯೆ?

ಚಿನ್ನಾ— ನಾನೀಗ ಸನ್ಯಾಸಿ ಜಾತೆಯೆಂದು ಬೆಳಗಿರುತ್ತೇನೆ. ಇನ್ನು ಸಿಂಹಾಸನಕ್ಕೆ ನನ್ನಿಂದ ಅಪವಿತ್ರವಾಗುವುದಿಲ್ಲ.

ರಾಮ— ಸಂಪಾ ವಿರೂಪಾಕ್ಷನ ದಯ.

ಚಿನ್ನಾ— ನಡೆ, ರಾಮಕೃಷ್ಣಾ. ಈ ಬೀದಿಯಲ್ಲಿ ಹೆಚ್ಚೆಲ್ಲಾ ಮಾತಾಡ ಬಾರದು. ತಿಮ್ಮಣ್ಣ ಯೋಗಿಯನ್ನು ನೋಡೋಣ.

ರಾಮ— ಹೋಗೋಣ ಬಾ. ತಿಮ್ಮರಸು ಮಂತ್ರಿಗಳಿಗೆ ಈ ಒಳಗುಟ್ಟನ್ನು ತಿಳಿಸಲೇ ಬಾರದು. ಅವರು ಮಾಗಿಗೆ ಬೆರಳಿಟ್ಟು ಕೊಳ್ಳಲಿ.

ಚಿನ್ನಾ— ಹೌದು ಹೌದು, ಅವರು ಆಕಾಶದಲ್ಲೇ ಭ್ರಮಣ ಮಾಡುತ್ತಿರಲಿ. ಹೋಗೋಣ. (ಹೋಗುವರು)

(ಮುಂದುವರಿಯುವುದು)

ಹನ್ನೆರಡು ವರ್ಷಗಳ ಶಾಲಾಭ್ಯಾಸ

(೨ನೇ ಪುಟದಿಂದ)

ಈ ಪ್ರಯೋಗಗಳು ಯಾವ ಪರಿಣಾಮವನ್ನು ತಾಳಿ ಕೊಂಡಿವೆಯೋ? ಗಿಡವೆಬ್ಬಿ ಪ್ರತಿದಿನ ಬೇರು ಕುಟ್ಟಿ ನೋಡಿದಂತೆ ಆಗಿರುವ ಪರಿಣಾಮವನ್ನು ಕಂಡಿರುವಲ್ಲಿ ಅನಿವಾರ್ಯವಾಗಿ ಪ್ರಯೋಜನವಿಲ್ಲ. ಅಂತೆಯೇ ಪಾಠ್ಯಕ್ರಮವೊಂದನ್ನು ಬಿಗಿಗೊಳಿಸಿ, ವಿದ್ಯಾರ್ಥಿಗಳು ಪೊರೆಯಲಾರದಷ್ಟು ವಿಷಯಗಳನ್ನು ಅವರ ತಲೆಯಲ್ಲಿ ತುರುಕಿಸುವುದರಿಂದ ಮಾತ್ರ ಶಿಕ್ಷಣಾಭಿವೃದ್ಧಿಯಾಗಲಾರದು. ಸಾಕ ಶರೀರಕ್ಕೆ ಸಾವೂನು ಸಿಗದರೆ ಸಾಕು ನಿಜ; ಆದರೂ ಅದನ್ನು ಹೇರುವುದಕ್ಕೆ ಮೊದಲು ತಾನೇ ಸಾಕಿದ ಎತ್ತಿನ ಶಕ್ತಿಯನ್ನು ಗಮನಿಸ ಬೇಡವೆ? ಈ ದೃಷ್ಟಿಯಿಂದ ನಾವು ಇಡಿಯ ಸಮಸ್ಯೆಯನ್ನು ಪುನರ್ವಿಮರ್ಶಿಸ ಬೇಕಾಗಿದೆ. ಹನ್ನೆರಡು ವರ್ಷಗಳ ಶಾಲಾ ಶಿಕ್ಷಣವು ಇದಕ್ಕೆ ತಕ್ಕ ಪರಿಹಾರ ನೀಡಬಹುದು.

ಈ ಕ್ರಮ [illegible] [illegible] [illegible] [illegible] [illegible] [illegible] [illegible] [illegible] [illegible] [illegible]

೧೧ನೇ ವರ್ಷಕ್ಕೆ [illegible] [illegible] [illegible] [illegible] [illegible] ಅವಕಾಶಗಳನ್ನು [illegible] [illegible] [illegible] ವರ್ಷಗಳವರೆಗೂ [illegible] [illegible] ಇಂಟರ್ ಮೀಡಿಯೇಟ್ ಕಾಲೇಜುಗಳು ಈ ಹಿಂದೆ ಇದ್ದಂತಾಗುತ್ತದೆ. ಆರ್ಥಿಕವಾಗಿಯಾಗಲೀ ವ್ಯಾವಹಾರಿಕವಾಗಿಯಾಗಲೀ ಇದರಿಂದ ತೊಂದರೆಯಾಗಲಾರದು; ಅಷ್ಟು ಹೊತ್ತಿಗೆ ಮಾತೃಭಾಷೆಯಲ್ಲಿಯೇ ಪದವೀ ಶಿಕ್ಷಣವೂ ದೊರೆಯುವಂತಾದರೆ, ಅದಕ್ಕಿಂತ ದೊಡ್ಡ ಸಾಧನೆ ಬೇರೊಂದಿರಲಾರದು, ಹಾಗಾಗುವುದೆಂದು ಆಶಿಸಿದರೆ ತಪ್ಪೇನು?

READ & ADVERTISE IN NAVAYUGA WEEKLY



REGD. No. B G. 176
LICENCE No. 31
Licensed to Post without Prepayment

ಸರ್ವತ್ರ ಕನ್ನಡ ಮಾಧ್ಯಮವಾಗಬೇಕು

(೧ನೇ ಪುಟದಿಂದ)

ಹೆಚ್ಚಿಸಲು ಶ್ರಮಿಸುತ್ತಿದೆ; ಹಲವಾರು ಉದ್ದಿಮೆಗಳನ್ನೂ ನೀರಾವರಿ ಮತ್ತು ವಿದ್ಯುದ್ಯೋಜನೆಗಳನ್ನೂ ಕಾರ್ಯರೂಪಕ್ಕೆ ತರುವಲ್ಲಿ ಆಸಕ್ತಿ ವಹಿಸುತ್ತಿದೆ. ನಾಡನ್ನು ಸರ್ವಾಂಗ ಸುಂದರವಾಗಿ ಪುನಾರಚಿಸುವಲ್ಲಿ ಶ್ರದ್ಧಾವಂತವಾಗಿ ನಡೆದುಕೊಳ್ಳುತ್ತಿದೆ ಆದರೆ, ನಮ್ಮ ಒಂದೇ ಒಂದು ಕೊರತೆಯೆಂದರೆ, ಪ್ರತಿ ವಿಷಯದಲ್ಲಿಯೂ ರಾಜಕಾರಣದ ಪ್ರಭಾವ—ಅದರ ಗತ್ತು ಗಾಂಚಿ ಇದು ದೂರವಾದಂದೇ ಕನ್ನಡದ ಉದ್ಧಾರ.

ಭಾಗ್ಯ ತೆರೆಯದೆ?

ಭಾರತದಂತೆ ನಮ್ಮ ನಾಡಿನಲ್ಲಿಯೂ ರಾಜಕೀಯವೇ ಮುಂದುವರಿದು, ಸಾಹಿತ್ಯ ಕಲೆಗಳ ಬಗೆಗೆ ತಿರಸ್ಕಾರ—ಅನಾದರ—ಅನಾಸ್ಥೆಗಳು ಮೂಡುತ್ತಿವೆ. ಕೇಂದ್ರ ಮತ್ತು ರಾಜ್ಯ ಸರಕಾರಗಳು ಇವುಗಳಿಗೆ ಒಂದು ರೂಪದಲ್ಲಿ ಉತ್ತೇಜನ ಕೊಡುತಿದ್ದಾರೆ, ನಿಜ ಆದರೆ, ಇದರ ಪರಿಮಾಣ ಸಾಕಾದೀತೆ? ಎಲ್ಲೋ ವರ್ಷದಲ್ಲಿ ಕೆಲವೊಂದು ಸಹಸ್ರ ರೂಪಾಯಿಗಳನ್ನು ಕಲೆ—ಸಾಹಿತ್ಯಾಭಿವೃದ್ಧಿಗೆಂದು ವಿನಿಯೋಗಿಸಿದರೆ, ಅದು ಎಲ್ಲಿಗೆ ಮುಟ್ಟೀತು? ಜನರನ್ನು ಒಗ್ಗೂಡಿಸುವುದು ಸಾಹಿತ್ಯ ಕಲೆಗಳಿಂದ ಸುಲಭ ಸಾಧ್ಯ; ಅದರಿಂದ ಜನತೆಯೂ ಜಾಗ್ರತವಾಗುವುದು; ರಾಜಕಾರಣವೂ ಪವಿತ್ರವಾಗುವುದು. ಜನ ಜನದ ನರನಾಡಿಗಳಲ್ಲಿ ಇಂದು ಹರಿಯುವ ರಾಜಕಾರಣದ ಕೊಳಚೆ ಬಿಸಿನೀರು ಹರಿದು ಹೋಗಿ ಅದರ ಬದಲು ಸಾಹಿತ್ಯ ಕಲೆಗಳ ಪ್ರವಾಹ ಹರಿದು ಬಂದರೆ, ಅದರಿಂದ ಭಾವೈಕ್ಯವೂ ಸಾಧ್ಯವಾದೀತು; ರಾಜಕೀಯವೂ ಪರಿಶುದ್ಧವಾದೀತು ನಮ್ಮ ನಾಡಿನ ಭಾಗ್ಯ ತೆರೆದೀತು.

ತಿಳುವಳಿಕೆ ಹೆಚ್ಚಬೇಕು

ನಮ್ಮ ಕನ್ನಡ ನಾಡಿನಲ್ಲಿ ಸುಮಾರು ೨ ಕೋಟಿ ಪ್ರಜೆಗಳಿದ್ದಾಗ್ಯೂ ಇವರಲ್ಲಿ ಕೆಲವರಾದರೂ ಕನ್ನಡ ಅರಿಯದವರಿರುವುದು ನಾಚಿಗೆಗೇಡು. ನಮ್ಮ ರಾಜಧಾನಿ ಬೆಂಗಳೂರನ್ನೇ ತೆಗೆದುಕೊಳ್ಳುವುದಾದರೆ, ಅಲ್ಲಿ ಕನ್ನಡ ಬಾರದವರು ಎಷ್ಟು ಜನ ಇದ್ದಾರೆ! ಇದೇ ಪರಿಸ್ಥಿತಿಯು ಇನ್ನೂ ಕೆಲವು ವರ್ಷಗಳ ಕಾಲ ಮುಂದುವರಿಯಿತೆಂದರೆ, ಕನ್ನಡದ ಸ್ಥಿತಿಗತಿಗಳು ಎಲ್ಲಿ ಬಂದು ನಿಂತಾವು? ಕನ್ನಡದ ಬಗ್ಗೆ ಆಸಕ್ತಿ ಹೇಗೆ ಹುಟ್ಟೀತು? ತಮ್ಮ ನುಡಿಯ, ನಾಡಿನ ಮತ್ತು ನಾಡಿಗರ ಬಗೆಗೆ ಅಭಿಮಾನ— ಗೌರವ ಭಾವನೆಯಿಲ್ಲದವರಿಂದ ಯಾರಿಗೆ ಯಾವ ವಿಧದ ಲಾಭವುಂಟಾದೀತು? ಆದುದರಿಂದ, ಸರಕಾರವು ಈ ದಿಸೆಯಲ್ಲಿ ಕೈಗೊಳ್ಳಬೇಕಾದ ಹಲವಾರು ಉಪಕ್ರಮಗಳಿವೆ. ಕನ್ನಡ ಬಾರದವರನ್ನು ಸರಕಾರಿ ನೌಕರಿಗೆ ತೆಗೆದುಕೊಳ್ಳಲೇ ಬಾರದು; ತಾನು ನಡೆಸುವ ಅಥವಾ ತನ್ನ ನಾಡಿನಲ್ಲಿ ನಿರ್ಮಿಸಲಾಗುವ ಉದ್ದಿಮೆ—ವಾಣಿಜ್ಯ ಸಂಸ್ಥೆಗಳಲ್ಲಿ ಕನ್ನಡಿಗರಿಗೆ ಅಗ್ರಪ್ರಾಶಸ್ತ್ಯ ನೀಡಬೇಕು. ಸರಕಾರದ ಎಲ್ಲ ವ್ಯವಹಾರಗಳನ್ನೂ ಕನ್ನಡದಲ್ಲಿ ಮಾಡಬೇಕು; ವಿಶ್ವವಿದ್ಯಾಲಯ ಶಿಕ್ಷಣದಲ್ಲಿಯೂ ಕನ್ನಡದ ಸ್ಥಾನಮಾನಗಳನ್ನು ಎತ್ತರಿಸಬೇಕು. ಕನ್ನಡದ ಬಗೆಗೆ ವಿಶೇಷ ಅಧ್ಯಯನ, ಸಂಶೋಧನೆಗಳಿಗೆ ಅಧಿಕಾಧಿಕ ಸಹಾಯ ನೀಡಬೇಕು ಭಿನ್ನ ಮನೋಭಾವದ ಕನ್ನಡಿಗರನ್ನು ರಾಜಕೀಯವಾಗಿ ಒಂದುಗೊಳಿಸುವುದರಲ್ಲಿ ನಾವಿಂದು ಅಸಫಲರಾಗಿದ್ದೇವೆ; ಏಕೆಂದರೆ, ರಾಜಕೀಯ ಪಕ್ಷ, ರಂಗಡಗಳು ತಮ್ಮ ತಮ್ಮ ಪ್ರತಿಷ್ಠೆಯನ್ನು ಸ್ಥಾಪಿಸುವಲ್ಲಿ ಇತರರ ಅವಹೇಳನದಲ್ಲೇ ತೃಪ್ತಿ ಪಡುತ್ತವೆ. ಆದುದರಿಂದ ಕಲೆ—ಸಾಹಿತ್ಯ—ಸಂಸ್ಕೃತಿ—ಗಳ ಸಹಕಾರದಿಂದಲಾದರೂ ಭಾವೈಕ್ಯವನ್ನು ಸ್ಥಾಪಿಸುವುದು ಅಗತ್ಯವಿದೆ. ಒಂದು ಭಾಗದ ಜನರು ಇನ್ನೊಂದು ಭಾಗದವರೊಡನೆ ಹೆಚ್ಚೆಚ್ಚು ಬೆರೆತಂತೆ ತಿಳುವಳಿಕೆ ಹೆಚ್ಚಿದಂತೆ ಐಕ್ಯಭಾವವೂ ದೃಢವಾಗುವುದು. ಪ್ರತಿ ಕನ್ನಡಿಗನೂ ತನ್ನನ್ನು ಸಂಪೂರ್ಣವಾಗಿ ತಿಳಿದುಕೊಳ್ಳುವ ಪ್ರಯತ್ನ ಮಾಡಬೇಕು; ಇದರಲ್ಲಿ ಆತ ಯಶಸ್ವಿಯಾದರೆ, ಆವನು ಲೋಕವನ್ನು ಸುಲಭವಾಗಿ ಗ್ರಹಿಸಬಲ್ಲನು; ಇದರಿಂದ ಐಕ್ಯವು ಸ್ಥಾಪಿತವಾಗುವುದು. ಈ ದಿಸೆಯಲ್ಲಿ ನಾವು ಮುಂದುವರಿಯಬೇಕು.

ಉಪಸಂಹಾರ

ಕೊನೆಯದಾಗಿ ಒಂದು ಮಾತನ್ನು ಹೇಳಬೇಕು. ಕನ್ನಡದ ಗುಡಿಯನ್ನು ನಾವು ಏರಿಸಬೇಕು, ಹಾರಿಸಬೇಕು. ಜನರೆಲ್ಲರೂ ಕನ್ನಡದ ಬಗೆಗೆ ಅಭಿಮಾನ ತಾಳಬೇಕು; ಕನ್ನಡದ ಸಸ್ವವನ್ನು, ಸಾರವನ್ನು ತಿಳಿಯಬೇಕು. ಜನರಿಗಿಂತ ಮೊದಲು ಕನ್ನಡದ ಕವಿಗಳ ಕನ್ನಡ ಮಾಧ್ಯಮದಲ್ಲಿ ಬರೆಯಬೇಕು; ಮಂತ್ರಿಗಳು ಕನ್ನಡ ಮಾಧ್ಯಮದಲ್ಲಿ ಕನ್ನಡ ಕಲಾವಿದರ ಮಾಧ್ಯಮ ಕನ್ನಡವಾಗಬೇಕು. ಆಡಳಿತೆ ನಡೆಸುವ ಮಂತ್ರಿಗಳೂ ಸರಕಾರವೂ ಜನತೆಯನ್ನು ನೈತಿಕವಾಗಿ ಮೇಲೆತ್ತುವ ಕವಿಗಳೂ, ಸರ್ವಾತ್ಮಕವಾಗಿ ಉದ್ಧರಿಸುವ ಕಲಾವಿದರೂ ಕನ್ನಡವನ್ನ ಕೊಳಪೆಯೆಂದು, ಭಾವವ್ಯಂಜಕ ಹೀನವೆಂದು ತಿರಸ್ಕರಿಸುತ್ತ ಮುಂದುವರಿದರೆ, ಮತ್ತೆ ಜನತೆಯನ್ನೇಕೆ ದೂರಬೇಕು? ಏಳು ವರ್ಷಗಳ ನಂತರವಾದರೂ "ಕನ್ನಡದ ರಾಜಧಾನಿ" ಬೆಂಗಳೂರಿನಲ್ಲಿ ನಂತ ಮೊದಲ ಬಾರಿಗೆ ರಾಜ್ಯೋದಯ ದಿನ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು ಎಂದು ಕೇಳಿದಾಗ ಮೈನವಿರೇಳುವುದು. ಜತೆಗೆ ಕನ್ನಡಿಗರ ಆಶೋತ್ತರಗಳು ಈಡೇರುವ ಸದಿನ ಸಿಕಟವಾಯಿತೇ ಎಂಬ ಅನುಮಾನಕ್ಕೆ ಎಡೆದೋರುವುದು. ಈ ಅನುಮಾನ ವರ್ತಮಾನವಾಗಿ ಪರಿಣಮಿಸಲಿ.

ಪ್ರೊ. ಕು ಹರಿದಾಸ ಭಟ್ಟ, ಎಂ ಎ,
ಅವರ ನವೀನ ಪುಸ್ತಕಗಳು ರೂ.ನ.

ನಡುಹಗಲಿನ ಕಗ್ಗತ್ತಲೆ	2=50
ಸ್ವಾತಂತ್ರ್ಯ ಮತ್ತು ಸಂಸ್ಕೃತಿ	2=00
ಘಂಟಮಾರಿ	2=00
ಏಕ್ಯದ ಸಂಪತ್ತು	2=00
ಅಮೇರಿಕದ ಆರು ಕತೆಗಳು	1=75
ವರ್ತಮಾನಕಾಲದ	
ನಾಲ್ವರು ಮಹಾನುಭಾವರು	0=31
ಯುಗವಾಣಿ	0=50
ಕಾಲವೇ ಬದಲಾಗಿದೆ	0=31
ಪುಸ್ತಕ ಪುರಾಣ	0=25
ಮನೆಯೊಳಗಿನ ಮಹಾಜೀವಿಗಳು	0=37

ಮನೆಯೊಂದಾದಲ್ಲಿ ಇರಲೇಬೇಕಾದ ಪುಸ್ತಕಗಳು

ಗೀತೆಯ ಕೈಗನ್ನಡಿ (ಚಿದಂಬರಯ್ಯ)	1=00
ಮನೆ ಮದ್ದು (ಡಾ। ಕೊರಡ್ಕಲ್)	2=00
ಸುಲಭದಲ್ಲಿ ಇಂಗ್ಲಿಷ್ (ಕೊರಡ್ಕಲ್)	2=00
Lettr erWiting Made Easy	1=25

ಅಂಚೆವೆಚ್ಚ ಪ್ರತ್ಯೇಕ, ವಿವರವಾದ ಕೆಟಲಾಗಿಗೆ 10 ನ. ಪೈ. ಸ್ಟಾಂಪಿನೊಂದಿಗೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ

ನನಗೆ ಬ್ಯಾಂಕ್ ವ್ಯವಹಾರ ಮಾಡಬೇಕೆಂದೆನಿಸಿದಾಗ...

- ಆ ಬೇಂಕು...... ನನಗೆ ಬೇಕಾಗುವ ಎಲ್ಲಾ ಸೌಕರ್ಯಗಳನ್ನೊದಗಿಸುವಷ್ಟು ದೊಡ್ಡದಿರಬೇಕಲ್ಲದೆ, ನನ್ನ ಹಣಕಾಸಿನ ಖಾತೆಯು ಸಣ್ಣದ್ದೆಂಬ ತಾರತಮ್ಯ ಭಾವನೆಯನ್ನು ಎಂದಿಗೂ ತಳೆಯುವಂತಹದ್ದಿರಬಾರದು.
- ಆ ಬೇಂಕು...... ಎಲ್ಲಾ ವಿಧದ ಆಧುನಿಕ ವ್ಯವಹಾರಗಳನ್ನು ಕ್ರಮಬದ್ಧವಾಗಿಯೂ, ಸೌಜನ್ಯಯುತವಾಗಿಯೂ ನೀಡುತ್ತ, ನನ್ನ ಆರ್ಥಿಕ ಜೀವನದಲ್ಲಿ — ಅವಶ್ಯಪೂರ್ಣ ಸಹಕಾರವನ್ನು ನೀಡುವ — ಸದಾಸಿದ್ಧ ಸಂಸ್ಥೆಯಾಗಿಯೂ ಇರುವಂತಹದ್ದಾಗಿರಬೇಕು.
- ಆ ಬೇಂಕು...... ಸಮರ್ಥ ಸಂಪನ್ಮೂಲ ಶಕ್ತಿಯಿಂದಲೂ ಹೇರಳ ವ್ಯವಹಾರಾನುಭವದ ದಕ್ಷತೆಯಿಂದಲೂ — ವಿಳಂಬರಹಿತ ಸೇವಾ ತತ್ಪರತೆಯಿಂದಲೂ ಕೂಡಿದ್ದು, ಈ ವ್ಯವಹಾರವು ಎಂದೆಂದೂ ಮರೆಯದಂತಹ ಆನಂದದಾಯಕ ಚಿರಸ್ಮರಣೆಯದ್ದಾಗಬೇಕು.

ಚುರುಕಿನಲ್ಲಿ ನಾನು ಆರಿಸುವ ಬ್ಯಾಂಕೆಂದರೆ.......

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ ,ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಅಮೃತ ಬಿಂದು

ಪ್ರತಿಕ್ಷಣ ಬೋರ್ಗರೆಯುವ ಕರ್ಮಶಾಲಿ ಸಮುದ್ರದಂತೆಯೇ ಸೋಮಾರಿಯಾದ ಕಾಮನಬಿಲ್ಲೂ ಭಗವಂತನಿಗೆ ಪ್ರಿಯ.

o o o

ಅಜ್ಞಾನವು ಅವಮಾನಕರವಲ್ಲ. ಅಜ್ಞಾನವು ಐಶ್ವರ್ಯದೊಡನಿರುವದು ಅವಮಾನಕರ.

o o o o

ತನಗೆ ತಿಳಿದಿರದಿದ್ದಾಗ ತಿಳಿದಿಲ್ಲವೆಂದು ಹೇಳಿಕೊಳ್ಳಲಾರದ ದುರಹಂಕಾರಿಗಿಂಥಾ ದೊಡ್ಡ ಅಜ್ಞಾನಿ ಬೇರೆ ಇಲ್ಲ.

o o o o

ಅಜ್ಜ ತಾತಂದಿರ ಹೆಸರು ಹಿಡಿದು ನಿದ್ರಿಸಬೇಡ ಜಗತ್ತು ಮುಂದರಿಯತ್ತಿದೆ. ಅದರೊಡನೆ ಹೆಜ್ಜೆ ಹಾಕದವನಿಗೆ ಭವಿಷ್ಯವಿಲ್ಲ.

o o o o

ತನ್ನನ್ನ ತಾನು ಮೆಚ್ಚಿಕೊಂಡಿರುವ ನನ್ನ ಆದರ್ಶವೇ ಹಿರಿದೆಂಬುವವನಿಗೆ ಪ್ರಗತಿ ಇಲ್ಲ.

o o o o

ಸತ್ಯವು ಕಲ್ಪನಾ ಕಥೆಗಳಿಗಿಂತ ಸತ್ಯವೆನಿಸುತ್ತದೆ. ಏಕೆಂದರೆ ಅದು ಸುಲಭವಾಗಿರುತ್ತದೆ. ಸತ್ಯವನ್ನು ನಂಬದಿರಲು ಅದರ ಅತಿ ಸುಲಭತೆಯು ಕಾರಣವಲ್ಲದೆ ಜನತೆಯಲ್ಲಿ ಪ್ರಚುರವಾಗಿರುವ ಕೆಲವು ಪೂರ್ಣ ಗ್ರಹಿಕೆಗಳೂ ಕಾರಣವಾಗಿರುತ್ತವೆ.

o o o o

ಹೃದಯದಲ್ಲಿ ಸಾತ್ವಿಕತೆ ಇದ್ದರೆ ವರ್ತನೆಯಲ್ಲಿ ಸೌಂದರ್ಯವಿರುತ್ತದೆ. ವರ್ತನೆಯಲ್ಲಿ ಸೌಂದರ್ಯವಿದ್ದರೆ ಮನೆಯಲ್ಲಿ ಸಾಮರಸ್ಯವಿರುತ್ತದೆ.

o o o o

ಕೋಲಿಗೆ ಕೋಲು ಹೊಡೆದು ಕೋಲಾಟವಾಡುವುದಕ್ಕಿಂತ ಕೈಗೆ ಕೈಹೊಡೆದು ಮೇಲಾಟಕ್ಕೆ ನಿಲ್ಲುವುದೇ ಪೌರುಷ; ಮಾತಿಗೆ ಮಾತು ಹೂಡಿ ವಾದ ಬೆಳೆಸುವ ದಕ್ಷತೆಗಿಂತಲೂ ಕಾರ್ಯಕ್ಕೆ ಕಾರ್ಯವೊಡ್ಡಿ ವರ್ಚಸ್ಸು ಬೆಳೆಸುವದೇ ಹಗ್ಗಳಿಕೆ.

Edited, Printed & Publish d by K. H.Shetty, at the Navayuga Press, Udipi, S. India.

ನವಯುಗ

ದೀಪಾವಳಿ ಸಂಚಿಕೆ ೧೯೬೩

DEEPAVALI SPECIAL 1963



ANCHOR BRAND

Manufacturers and Exporters of Fresh Frozen Shrimp, Lobstertails, Froglegs and Canned Seafood.

Always insist on:-

ANCHOR BRAND

CANNED FISH

IT IS OCEAN FRESH, DELICIOUS AND NUTRITIOUS

"ANCHOR BRAND" CANNED MACKERELS, SARDINES, TUNAMEAT, SEERFISH AND PRAWNS/SHRIMP. ANCHOR BRAND FLAT SARDINE CANS IS OUR SPECIALITY.

CORONET CANNING COMPANY

MALPE, SOUTH KANARA

Telegrams: "CORONET" MALPE. Telephone: 33 MALPE.

Proprietor: KARNATAKA FISHERIES CORPORATION

(Approved Contractors to the Government of India, Department of Food, Army purchase organisation.)

AND

CANTEEN STORES DEPARTMENT (INDIA)

ಸ್ಥಾಪಕರು:
ದಿ| ಶ್ರೀ ಎ. ಬಿ. ಶೆಟ್ಟರು
(ಮದರಾಸು ಮತ್ತು ಮೈಸೂರು
ಸರಕಾರಗಳಲ್ಲಿ ಆರೋಗ್ಯ
ಮಂತ್ರಿಗಳಾಗಿದ್ದವರು)

ಸಂಪುಟ ೪೩
ಸಂಚಿಕೆ ೧೧

Vol 43
No 11

Estd: 1921 ಸ್ಥಾಪನೆ

ಸಂಚಾಲಕ—ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ.

ದೀಪಾವಳಿ ಸಂಚಿಕೆ ೧೯೬೩

ದೀಪಾವಳಿಯ ದೀಪಾರಾಧನೆ

ದೀಪಗಳ ಪರ್ವದಿನ ದೀಪಾವಳಿ ಬಂದಿದೆ, ಜನ ಜನವೂ ತನ್ನ ಅಭಿರುಚಿ ಮತ್ತು ಆಸಕ್ತಿಗನುವಾಗಿ ಆಚರಿಸಿ ಆನಂದ ವಿಭೋರವಾಗುತ್ತದೆ ನಮ್ಮ ದೇಶದ ಮಹಾ ಶತ್ರುಗಳಾದ ಆಕ್ರಮಣಶೀಲರಾದ ಸಾಮ್ರಾಜ್ಯವಾದದ ಕೈವಾರಿಗಳಾದ ಚೀನೀಯರು ಕಳೆದ ದೀಪಾವಳಿಗೆ ಮೊದಲೇ ನಮ್ಮ ಮೇಲೆ ಕೈಮಾಡಿದ್ದರು; ಇಂದಿಗಾದರೂ ದೂರ ನಿಂತೇ ಕೈಯೆತ್ತುತ್ತಿದ್ದಾರೆ. ನಮ್ಮ ಸಹೋದರ ರಾಷ್ಟ್ರ ಪಾಕಿಸ್ತಾನವೂ ಅದರೊಂದಿಗೆ ತನ್ನ ಕೈಯನ್ನೂ ಎತ್ತುತ್ತಿದೆ, ಮತ್ತು ಅದರ ಎತ್ತಿದ ಕೈಯನ್ನು ಮತ್ತೂ ಎತ್ತುವಂತೆ ಪ್ರೇರೇಪಿಸುತ್ತಿದೆ ನಮ್ಮ ದೇಶದ ಸುತ್ತಮುತ್ತ ಮಿಲಿಟರಿ ಕ್ರಾಂತಿಯು ನಡೆದು ಸರ್ವಾಧಿಕಾರಿ ಆಡಳಿತವು ತಾಂಡವ ಮಾಡುತ್ತಿರುವಾಗ, ನಾವು ಹಚ್ಚಿದ ಪ್ರಜಾಪ್ರಭುತ್ವದ ದಿವ್ಯ ಜ್ಯೋತಿಯನ್ನು ಎತ್ತಿ ಹಿಡಿಯಲು, ಅದರ ಅಮಿತ ಪ್ರಕಾಶದಲ್ಲಿ ಜಗತ್ತನ್ನು ಮುನ್ನಡೆಸಲು ದೃಢ ಸಂಕಲ್ಪ ಮಾಡಿದ್ದೇವೆ. ಇಂದಿನ ರಾಷ್ಟ್ರೀಯ ಪರ್ವದಿನದಂದು ಈ ಸಂಕಲ್ಪವನ್ನೇ ನಾವು ಪುನರುಚ್ಚರಿಸುತ್ತೇವೆ.

ಚೀನೀಯ ಬ್ರಹದ್ರಾಕ್ಷಸನ ವಿಕಟಾಕ್ರಮಣದಿಂದ ದೇಶಕ್ಕೆ ದೇಶವೇ ಎಚ್ಚತ್ತಿದೆ ಜಾಗ್ರತವಾಗಿದೆ ಮಾತೃ ಭೂರಕ್ಷಣೆಯ ಪ್ರತಿಜ್ಞೆ ಮಾಡಿದೆ ಚೀನೀಯ ನರಕಾಸುರನನ್ನು ಹೊರಗೋಡಿಸಿ, ಅವಭೃಥ ಮಾಡುವ ವೀರಪಣವನ್ನು ತೊಟ್ಟಿದೆ. ಸ್ವಾತಂತ್ರ್ಯದ ಹಿರಿಸೊಡರನ್ನು ಹಚ್ಚಿ ಹಬ್ಬವಾಚರಿಸಲು, ಜಯಲಕ್ಷ್ಮಿಯನ್ನು ಆರಾಧಿಸಲು ಮತ್ತು ಮಾತೃಸ್ವರೂಪಿ ಗೋಮಾತೆಯನ್ನು ಪೂಜಿಸಲು ನಿರ್ಧರಿಸಿದೆ. ಆದರೆ, ವರ್ಷವೊಂದು ಸಂದರೂ ಹೊಸತು ಹಬ್ಬ ಬಂದರೂ ನಮ್ಮ ಉದ್ದೇಶ ವಿಂದಿಗೂ ಸಂಪೂರ್ಣ ಕೈಗೂಡಿಲ್ಲ. ಇದಕ್ಕೆ ನರಕಾಸುರನು ಹರಡುತ್ತಿರುವ ಮಾಯೊಜಾಲವೇ ಕಾರಣ. ಇದರಿಂದಾಗಿಯೇ ಭಾರತೀಯನ ದೀಪಾವಳಿಯು ಕೇವಲ ಸಾಂಪ್ರದಾಯಿಕವಾಗಿಂದು ಆಚರಿಸಲ್ಪಡುತ್ತಿದೆ ಆದರೆ, ಅದು ನಿರಾಡಂಬರವಾದರೂ ಉತ್ಸಾಹದ ಆಚರಣೆ; ಜನಜಾಗ್ರತಿಯ ಪ್ರತೀಕ. ದೇಶ ಭಕ್ತಿಯ ಮಹಾದೀಪವನ್ನು ನಮ್ಮ ಹೃದಯದಲ್ಲಿ ಉರಿಸುತ್ತೇವೆ; ಅದರ ಉಜ್ವಲ ಪ್ರಕಾಶದಲ್ಲಿ ಮುಂದಡಿಯಿಡುತ್ತೇವೆ ಇದು ನಮ್ಮ ನೀತಿ-ಧರ್ಮ, ಪರಮ ಕರ್ತವ್ಯ ಪ್ರಧಾನಿ ನೆಹರೂರವರು ಎಪ್ಪತ್ತನಾಲ್ಕರ ಗಡಿಯನ್ನು ಮುಟ್ಟಿದ್ದಾರೆ, ಇಪ್ಪತ್ತನಾಲ್ಕರ ವೀರ ಯೋಧನ ಕೆಚ್ಚು, ಸಾಧನಾಶೀಲತೆ ಅವರಲ್ಲಿದೆ. ಅವರ ನಾಯಕತ್ವದಲ್ಲಿ ಮುಂದಡಿಯಿಡುವ ನಾವು ಅವರಂತೆಯೇ ಆತ್ಮಸಂಯಮಿಗಳಾಗಬೇಕು, ದೇಶಭಕ್ತರಾಗಬೇಕು; ದೇಶಕ್ಕಾಗಿಯೇ ನಮ್ಮ ಜೀವನವನ್ನು ಮುಡುಪಿಡಬೇಕು. ಇಂತಹ ಆದರ್ಶ ಜೀವನ ನಮ್ಮದಾಗಲಿ, ಆಕ್ರಮಣ ಭೀತಿಯನ್ನು ನೀಗಿದ ಭಾರತೀಯರು ಆನಂದೋತ್ಸಾಹದಿಂದ ವೈಭವೋಪೇತವಾಗಿ ಆಚರಿಸುವ ದೀಪಾವಳಿಯು ಮುಂದಿನ ವರ್ಷವಾದರೂ ಒದಗಿ ಬರಲಿ

ದೀಪಾವಳಿ ಸಂಚಿಕೆ

ದೀಪಾವಳಿ ವಿಶೇಷ ಸಂಚಿಕೆಯನ್ನು ನಾವು ನಮ್ಮ ವಾಚಕರ ಕೈಗಳಲ್ಲಿಟ್ಟಿದ್ದೇವೆ. ಮತ್ತಿದರ ಗುಣಾವಗುಣಗಳ ವಿಮರ್ಶೆಯ ಭಾರವನ್ನು ಅವರಿಗೇನೇ ಒಪ್ಪಿಸುತ್ತೇವೆ. ಸಂಚಿಕೆಯ ವೈವಿಧ್ಯಪೂರ್ಣತೆಗೆ ಹಲವಾರು ವಿಧಾನಗಳಿಂದ ನಮ್ಮ ಹಿತಚಿಂತಕ ಲೇಖಕ ಬಳಗವು ನೆರವಾಗಿವೆ ನಮ್ಮ ಉದ್ಯಮದಲ್ಲಿ ಜಾಹಿರಾತುದಾರರು ಸಹಕರಿಸಿದ್ದಾರೆ; ಹಲವಾರು ಸದ್ಗ್ರಹಸ್ಥರು ಸಂದೇಶಗಳನ್ನು ಕಳಿಸಿ ನಮ್ಮ ಉತ್ಸಾಹವನ್ನು ದ್ವಿಗುಣಿತಗೊಳಿಸಿದ್ದಾರೆ. ಮುದ್ರಣಾಲಯದ ನೌಕರರು ತಮ್ಮ ಕರ್ತವ್ಯದಿಂದ ನಮ್ಮನ್ನು ಋಣಿಗಳನ್ನಾಗಿಸಿದ್ದಾರೆ ನಮ್ಮ ಗ್ರಾಹಕರೂ ಓದುಗರೂ ಬೆಂಗೋಲಾಗಿ ನಿಂತು ತಮ್ಮ ಹೊಣೆಯನ್ನು ನಿರ್ವಹಿಸಿದ್ದಾರೆ. ಇವರೆಲ್ಲರಿಗೂ ನಮ್ಮ ತುಂಬು ಮನಸ್ಸಿನ ಅನಂತ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ

ದೀಪಾವಳಿಯು ದೇಶಕ್ಕೆ ಹೊಸ ಒಸಗೆಯನ್ನು ತರಲಿ; ಜನಜನಕ್ಕೂ 'ನವಯುಗ'ದ ಶುಭಾಶಯಗಳನ್ನು ಹೊತ್ತು ತರಲಿ.

॥ ಜೈ ಹಿಂದ್ ॥

ಸಂದೇಶಗಳು

ಆರೋಗ್ಯ ಸಚಿವ ಡಾ| ಕೆ ನಾಗಪ್ಪ ಆಳ್ವ ಎಂ. ಬಿ., ಬಿ ಎಸ್, ಅವರಿಂದ

ವಿಧಾನ ಸೌಧ,
ಬೆಂಗಳೂರು, 2—11—1963.

ಮಾನ್ಯ ಸಂಪಾದಕರೇ,

'ನವಯುಗ' ವಾರ ಪತ್ರಿಕೆಯು ದೀಪಾವಳಿಯ ಪ್ರಯುಕ್ತ ವಿಶೇಷ ಸಂಚಿಕೆಯನ್ನು ಹೊರಡಿಸಲಿರುವುದೆಂದು ತಿಳಿದು ಅತ್ಯಂತ ಸಂತೋಷವಾಯಿತು ಭಾರತದ ಜನತೆಗೆ ದೀಪಾವಳಿಯು ಬಹಳ ಮಹತ್ವಪೂರ್ಣ ಹಬ್ಬವೆನಿಸಿದೆ ಜನತೆಯ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ವಿಕಾಸಕ್ಕೆ ದೀಪಾವಳಿಯು ಸಾಂಕೇತಿಕವೆಂದು ಪರಿಗಣಿಸಲಾಗಿದೆ ಇಂತಹ ಶುಭ ಸಂದರ್ಭದಲ್ಲಿ ರಾಷ್ಟ್ರೀಯ ವಾರ ಪತ್ರಿಕೆಯಾದ ನವಯುಗ'ವು ದೀಪಾವಳಿ ಸಂಚಿಕೆಯನ್ನು ಹೊರಡಿಸುತ್ತಿರುವುದು ಅತ್ಯಂತ ಔಚಿತ್ಯಪೂರ್ಣವಿದೆ ಇದರಿಂದ ನಾಡಿನ ಹಾಗೂ ರಾಜ್ಯದ ಪ್ರಗತಿಗೆ ಸಹಾಯಕವಾಗಬಹುದೆಂದು ಆಶಿಸುತ್ತೇನೆ

'ನವಯುಗ ವಾರಪತ್ರಿಕೆಯು ದಿನೇ ದಿನೇ ಪ್ರಗತಿ ಹೊಂದಿ ಜನತೆಗೆ ಉತ್ತಮ ಮಾರ್ಗದರ್ಶನ ಮಾಡಲೆಂದು ಹಾರ್ದಿಕವಾಗಿ ಹಾರೈಸುವ

ಇತಿ ನಿಮ್ಮ ವಿಶ್ವಾಸಿ,
ಕೆ. ನಾಗಪ್ಪ ಆಳ್ವ

ಸಿಂಡಿಕೇಟ್ ಬ್ಯಾಂಕಿನ ಮೆನೇಜಿಂಗ್ ಡೈರೆಕ್ಟರ್ ಶ್ರೀ ಟಿ.ಎ ಪೈ ಅವರಿಂದ

ಮುಕುಂದನಿವಾಸ,
ಉಡುಪಿ 9-11-1963.

ಪ್ರಿಯ ಹೊನ್ನಯ್ಯ ಶೆಟ್ಟರೆ,

ಶತ್ರು ಚೀನೀಯರ ಆಕ್ರಮಣದಿಂದಾಗಿ ನಿರಾಡಂಬರವಾದರೂ ಉತ್ಸಾಹದಿಂದ ದೀಪಾವಳಿಯನ್ನು ದೇಶವಿಂದು ಆಚರಿಸುತ್ತಿದೆ ನೀವೂ ದೀಪಾವಳಿ ವಿಶೇಷ ಸಂಚಿಕೆಯನ್ನು ಪ್ರಕಟಿಸಿ ಅದರಲ್ಲಿ ಪಾಲುಗೊಳ್ಳುವಿರೆಂದು ತಿಳಿದು ಸಂತೋಷವಾಗುತ್ತದೆ

ಪತ್ರಿಕಾರಂಗದಲ್ಲಿ ಧ್ಯೇಯ-ಉದ್ದೇಶಗಳು ಸ್ಥಿರವಾಗಿರುವುದು ಕಷ್ಟಸಾಧ್ಯ. ಆದುದರಿಂದಲೇ ತಮ್ಮ ಧ್ಯೇಯ-ಗುರಿಗಳನ್ನು ಪತ್ರಿಕೆಗಳು ಬದಲಾಯಿಸುತ್ತಿರುವುದನ್ನು ನಾವು ನೋಡುತ್ತಿದ್ದೇವೆ ಆದರೆ ನಿಮ್ಮ 'ನವಯುಗ' ಯಾವ ಪಂಗಡ ಕೋಮುವಾರು ಭಾವನೆಯನ್ನೂ ಉದ್ರೇಕಿಸದೆ ಕಳೆದ ೪೩ ವರ್ಷಗಳ ಸುದೀರ್ಘಾವಧಿಯಲ್ಲಿಯೂ ಕಾಂಗ್ರೆಸ್ ಮತ್ತದರ ತತ್ವಗಳನ್ನು ವಿಶದವೆ, ಅದರ ಪ್ರಚಾರದ ಮೂಲ ಧ್ಯೇಯವನ್ನು ಬಿಡದೆ ಸಾಧಿಸುತ್ತ ಬಂದಿದೆ ಇಂದು ಕನ್ನಡದಲ್ಲಿ ಪತ್ರಿಕೆಗಳ ಸಂಖ್ಯೆ ಹೆಚ್ಚಾಗಿದ್ದರೂ ಅದರಿಂದ ಧ್ಯೇಯವಾದಿಗಳ ಮಾರ್ಗದಲ್ಲಿ ಸ್ವಲ್ಪ ಕಂಟಕಗಳು ತುಂಬುವಂತಾದರೂ ಅವನ್ನು ಇದು ವರೆಗಿನಂತೆಯೇ ಕೆಚ್ಚೆದೆಯಿಂದ ಎದುರಿಸಿ ಕನ್ನಡದಲ್ಲಿಯೂ ಧ್ಯೇಯವಾದಿ ಪತ್ರಿಕೆಗಳು ಇರುವುದು ಸಾಧ್ಯವೆಂದು ನೀವು ತೋರಿಸಿಕೊಡುವಿರೆಂದು ನಂಬುತ್ತೇನೆ. ನಿಮ್ಮ ವಿಶೇಷ ಸಂಚಿಕೆಯು ತನ್ನ ಹಿಂದಿನ ಉತ್ತಮ ಪರಂಪರೆಯನ್ನು ಬಿಡದೆ ಮುಂದುವರಿಸುವುದೆಂದು ಆಶಿಸುತ್ತೇನೆ.

ಟಿ. ಎ. ಪೈ

ಸ್ಪೀಕರ್ ಶ್ರೀ ಬಿ ವೈಕುಂಠ ಬಾಳಿಗಾ, ಬಿ ಎ, ಬಿ ಎಲ್. ಅವರಿಂದ

ವಿಧಾನ ಸೌಧ,
ಬೆಂಗಳೂರು, 31-10-1963.

ಪ್ರಿಯ ಸ್ನೇಹಿತರೆ,

ನಿಮ್ಮ 28 - 10—1963ರ ಪತ್ರ ತಲಪಿತು ನವಯುಗ ವಾರ ಪತ್ರಿಕೆಯ ದೀಪಾವಳಿ ವಿಶೇಷ ಸಂಚಿಕೆಯನ್ನು ಪ್ರಕಟಿಸುವಿರೆಂಬುದನ್ನು ಕೇಳಿ ಸಂತೋಷಿಸುತ್ತೇನೆ

ಈ ಸಂಚಿಕೆಯು ಜೀವನದ ವಿವಿಧ ಕ್ಷೇತ್ರಗಳಲ್ಲಿ ವಿಖ್ಯಾತರಾದ ಮಹನೀಯರ ಲೇಖನಗಳನ್ನೊಳಗೊಂಡು ವಿವಿಧ ಅಭಿರುಚಿಗಳ ಓದುಗರಿಗೆ ವೈವಿಧ್ಯಪೂರ್ಣವಾದ ವಾಚನ ಸಾಮಗ್ರಿಯನ್ನೊದಗಿಸಿ ಸರ್ವರ ಮೆಚ್ಚುಗೆಗೆ ಪಾತ್ರವಾಗಲೆಂದು ಹಾರೈಸುತ್ತೇನೆ

ನಿಮ್ಮ ವಿಶ್ವಾಸಿ,
ಬಿ ವೈಕುಂಠ ಬಾಳಿಗಾ

ಶ್ರೀ ಎಂ ಮಧ್ವರಾಜ್, ಬಿ. ಎ, ಎಂ ಎಲ್ ಎ, ಅವರಿಂದ

ಮಲ್ಪೆ, 11—11—1963

ಪ್ರಿಯರೇ,

ಪತ್ರಿಕೆಗಳು ಇರುವುದು ಜನತೆಯ ಉಪಯೋಗಕ್ಕೆ; ಅವರ ವಿಚಾರಪ್ರಚೋದನೆಗೆ ನಮ್ಮ ಹೆಚ್ಚಿನ ಪತ್ರಿಕೆಗಳು ನಗರಗಳಲ್ಲಿ ಹುಟ್ಟಿ ಬೆಳೆಯುತ್ತಿರುವುದರಿಂದ ನಗರವಾಸಿಗಳ ಅಭಿರುಚಿಯನ್ನು ಸಂರಕ್ಷಿಸುವುದನ್ನೇ ತಮ್ಮ ಉದ್ದೇಶವೆಂದು ತಿಳಿದಿವೆ ಹಾಗಾಗಿ ನಮ್ಮ ಅಸಂಖ್ಯಾತ ಗ್ರಾಮೀಣರು ಪತ್ರಿಕೆಗಳಿಂದ ಪ್ರಯೋಜನ ಪಡೆಯದಂತಾಗಿದೆ ಕಾಂಗ್ರೆಸ್ ಧ್ಯೇಯ ನೀತಿಯನ್ನು ಪ್ರತಿಪಾದಿಸುವ ನಿಮ್ಮ 'ನವಯುಗ ವು ತನ್ನ ಉದ್ದೇಶದೊಡನೆ ಜನಾಭಿರುಚಿಯನ್ನೂ ಸಂರಕ್ಷಿಸಿಕೊಂಡು ಬರುತ್ತಿದೆ ಕಾಂಗ್ರೆಸ್ ಸಂಘಟನೆಯು ಬಲವಾಗ ಬೇಕಾದ ಇಂದಿನ ದಿನಗಳಲ್ಲಿ ನೀವು ಗ್ರಾಮೀಣ ಜನತೆಯ ಅಭಿರುಚಿಯನ್ನೂ ಹೊಂದಿಸಿಕೊಂಡರೆ, ಉಪಯುಕ್ತವಾಗಬಹುದು. ಎಂದಿನಂತೆ ಸಂಗ್ರಾಹ್ಯವೆನಿಸುವ ನಿಮ್ಮ ವಿಶೇಷ ಸಂಚಿಕೆಗೆ ನನ್ನ ಅಮಿತ ಶುಭಾಶಯಗಳು

ಎಂ ಮಧ್ವರಾಜ್.

ಮುಖಚಿತ್ರ

ಮನೆ ಮನೆಗಳಲ್ಲಿ ಸ್ನೇಹ (ಎಣ್ಣೆ) ಮತ್ತು ಗುಣ (ಬತ್ತಿ)ಗಳಿಂದ ಜ್ಯೋತಿಯನ್ನು ಉರಿಸಿ ಮನೆ-ಮನ ತುಂಬಿ ಬೆಳಗಿ ಅಂಧಕಾರವನ್ನು ದೂರ ಮಾಡುವ ಹಬ್ಬ-ದೀಪಾವಳಿ! ಮನೆ ಮನೆಯವರ ಸ್ನೇಹ ಮತ್ತು ಗುಣಗಳಿಂದ ಜ್ಞಾನ ಜ್ಯೋತಿಯನ್ನು ಉರಿಸಿ,ಮನೆ ಮನ ತುಂಬಿ ಬೆಳಗಿ ಅಜ್ಞಾನಾಂಧಕಾರವನ್ನು ದೂರ ಮಾಡುವುದು ವಿದ್ಯಾ ಸಂಸ್ಥಾವಳಿ! ಇಂತಹ ವಿದ್ಯಾ ಸಂಸ್ಥಾವಳಿಯನ್ನು ಕಟ್ಟಿ ದೇಶದಲ್ಲಿ ಜ್ಞಾನ ದೀಪವುರಿಸುವ ಸತ್ಕಾರ್ಯದಲ್ಲಿ ತನ್ನ ಜೀವನ ಸವೆಸುತ್ತಿರುವ-ವಿಶ್ವವಿದ್ಯಾಲಯದ ಮಹಾದೀಪವನ್ನುಹಚ್ಚಲು ಹವಣಿಸುತ್ತಿರುವ ಅಕಡಮಿ ಆಪ್ ಜನರಲ್ ಎಜ್ಯುಕೇಶನಿನ ರಿಜಿಸ್ಟ್ರಾರ್ **ಡಾ ಟಿ ಮಾಧವ ಪೈಯವರು**

ಎಕೆಡೆಮಿ ರಿಜಿಸ್ಟ್ರಾರ್ ಡಾ ಟಿ ಎಂ ಎ ಪೈ, ಎಂ. ಬಿ. ಬಿ ಎಸ್ ಅವರಿಂದ

ಮಣಿಪಾಲ,
ಅಕ್ಟೋಬರ, 29 1963

ಪ್ರಿಯ ಹೊನ್ನಯ್ಯ ಶೆಟ್ಟರೇ,

ದೀಪಾವಳಿಯ ವಿಶೇಷ ಸಂಚಿಕೆಯನ್ನು ಹೊರಡಿಸುವ ನಿಮ್ಮ ಸದಿಚ್ಛೆಗಾಗಿ ನನ್ನ ಅಭಿವಂದನೆಗಳನ್ನು ಸ್ವೀಕರಿಸಿರಿ ದೀಪಾವಳಿಯು ಸೊಡರುಗಳ ಹಬ್ಬ ಹಲವರು ಸಾಹಿತ್ಯಕಾರರ ವಿಚಾರಪ್ರಚೋದಕ ಮತ್ತು ಉಪಯುಕ್ತ ಲೇಖನಗಳಿಂದ ಕೂಡಿದ ನಿಮ್ಮ ನವಯುಗ ದ ದೀಪಾವಳಿ ಸಂಚಿಕೆಯೂ ಅದೇ ರೀತಿ ಹಬ್ಬವಾಗುವುದೆಂಬ ಖಚಿತ ನನಗಿದೆ

ಈ ಮೊದಲಿನ ಸಂದರ್ಭಗಳಲ್ಲಿ ನೀವು ಪ್ರಕಟಿಸಿದ ಎಲ್ಲಾ ವಿಶೇಷ ಸಂಚಿಕೆಗಳನ್ನು ಅವಲೋಕಿಸುವಾಗ ನಿಮ್ಮ ಸಾಹಸವನ್ನು ಮುಂದುವರಿಸಲು ಅನುರೂಪವಾದ ನಿರಂತರ ಪ್ರಯತ್ನವನ್ನು ನಾನು ಕಾಣುತ್ತೇನೆ ವೈವಿದ್ಯ ಮತ್ತು ಅಭಿರುಚಿಗಳೆರಡರಲ್ಲೂ ಓದುಗರಿಗೆ ಅತ್ಯುತ್ತಮ ವಾಚನೀಯ ವಿಷಯಗಳನ್ನು ನೀವು ಒದಗಿಸಿದ್ದೀರಿ ಅವರ ಅಭಿರುಚಿಯನ್ನು ನೀವು ಕಂಡುಕೊಂಡು ಮುಂದುವರಿಯುತ್ತಿದ್ದೀರಿ ಈ ವರ್ಷದ ದೀಪಾವಳಿ ವಿಶೇಷ ಸಂಚಿಕೆಯೂ ಎಂದಿನಂತೆ, ವಿಶೇಷ ಆಕರ್ಷಣೀಯವಾಗುವುದರಲ್ಲಿ ಸಂದೇಹವಿಲ್ಲ

ಶುಭಾಶಯಗಳೊಡನೆ

ಡಾ| ಟಿ ಎಂ ಎ ಪೈ

ಶ್ರೀ ಎಸ್ ಎಸ್ ಕೊಳ್ಕೆಬೈಲು ಎಂ ಎಲ್, ಎ, ಅವರಿಂದ

ಕುಂದಾಪುರ,
11 _ 11 _ 1963.



ಪ್ರಿಯ ಮಿತ್ರರೇ,

ನೀವು ನವಯುಗ ದ ದೀಪಾವಳಿ ಸಂಚಿಕೆಯನ್ನು ಪ್ರಕಟಿಸಲಿರುವಿರೆಂಬುದನ್ನು ತಿಳಿದು ಸಂತೋಷವಾಯಿತು

ದೀಪಾವಳಿಯು ಬೆಳಕಿನ ಹಬ್ಬ, ಮನೆ.ಮನಗಳನ್ನು ಬೆಳಗಿಸುವ ಹಬ್ಬ ನಿಮ್ಮ ವಿಶೇಷ ಸಂಚಿಕೆಯೂ ಮನೆ ಮನೆಗಳಲ್ಲಿ ಬೆಳಗಿ ಜನ ಮನವನ್ನು ವಿಕಾಸಿಸುವಂತಾಗಲೆಂದೂ ನವಯುಗವು ಎಲ್ಲರ ಪತ್ರಿಕೆಯಾಗಿ ಪ್ರಗತಿ ಪಥದಲ್ಲಿ ಮುಂದುವರಿಯುವಂತಾಗಲೆಂದೂ ಹಾರೈಸುತ್ತೇನೆ

ನಿಮಗೆ ದೀಪಾವಳಿಯ ಶುಭಾಶಯಗಳು

ಇತಿ ನಿಮ್ಮ
ಎಸ್ ಎಸ್ ಕೊಳ್ಕೆಬೈಲ್

Another Bumper Volume—

NAVAYUGA REPUBLIC DAY SPECIAL

will be published on 26th January

a great day for us.

Best medium for Advertisements

ಲೋಕದ ಮಾಣಿಕ್ಯ-ಮಾತುಕತೆ

ಇಬ್ಬರು ಸೇರಿದರೆ ತೀರಿತು; ಮಾತಿನ ತಂತಿ ಮೀಂಟ ತೊಡಗುತ್ತದೆ; ಇಲ್ಲಿಯ ಅಲ್ಲಿಯ ಮಾತು ಮಿಂಚುತ್ತ ನೈಮಾಯವಾಗುತ್ತದೆ— ಆದರೆ, ಇಂತಹ ಮಾತಿನಿಂದ ಯಾವ ಪ್ರಯೋಜನ? ತನ್ನಲ್ಲಿ ತಾನೇ ಮಾತಾಡಿಕೊಳ್ಳುವ ಚಟವು ಕೇವಲ ಚಟವಲ್ಲ, ಅದೊಂದು ಮಹಾಸಾಧನೆ, ಉಗ್ರ ತಪಶ್ಚರ್ಯೆ. ಇಂತಹ ಮಾತೇ ಲೋಕಕ್ಕೆ ಮಾಣಿಕ್ಯ. ಈ ಮಾಣಿಕ್ಯವೇ ನಮಗೆ ಸಂಗ್ರಾಹ್ಯ.

ಲೇಖಕರು: ಶ್ರೀ ಎಸ್. ಗೋಪೀಚಂದ ರಾವ್.

ಪರಮಾತ್ಮನು ಮಾನವನಿಗೆ ಅನೇಕ ಶಕ್ತಿಗಳನ್ನು ವರದಾನ ರೂಪವಾಗಿತ್ತಿದ್ದಾನೆ. ಇವುಗಳಲ್ಲಿ ವಾಕ್-ಶಕ್ತಿಯೂ ಒಂದು. ಮಾನವನ ಸಕಲೇಂದ್ರಿಯಗಳು ಅವಿಕಲವಾಗಿದ್ದು ಆತನಲ್ಲಿ ವಾಕ್ ಶಕ್ತಿಯೊಂದಿಲ್ಲವಾಗಿದ್ದರೆ, ಈ ಮೂಕ ಸೃಷ್ಟಿಯ ಸ್ಥಿತಿಗತಿಗಳೇನಾಗುತ್ತಿದ್ದವು? ಎಲ್ಲರೂ ತಮ್ಮ ತಮ್ಮ ಇಂದ್ರಿಯಗಳ ಮೂಲಕ ಸಂಗ್ರಹಿಸಿದ ಅನುಭವಗಳನ್ನು ಹೇಳಲಾರರು; ಕೇಳಲಾರರು ಇಂತಹ ವಿಚಿತ್ರ ಜೀವನವು ಮಾನವನಿಗೆ ಶಾಪವಾಗಿಯೇ ಪರಿಣಮಿಸ ಬಹುದಿತ್ತು.

ವಾಕ್-ಶಕ್ತಿಯು ಭಾಷಣ ಮತ್ತು ಮಾತುಕತೆಗಳ ಮೂಲಕ ವ್ಯಕ್ತವಾಗಬಹುದು. ಭಾಷಣದ ವೈಖರಿ ಅತಿ ವಿಲಕ್ಷಣ. ಬಹಳ ಮರ್ಯಾದೆಯಿಂದ ಪಾದಗಜಗಮನದಿಂದ ತಲೆತೂಗುತ್ತ ತಾನು ಪ್ರಾರಂಭಿಸ ಬೇಕಾಗಿದ್ದ ಭಾಷಣದ ಆರಂಭದ ಶಬ್ದ ಶಬ್ದವನ್ನೂ ಮಾನಸಿಕವಾಗಿಯೇ ಪುನರುಚ್ಚರಿಸುತ್ತ ವೇದಿಕೆಯ ಮೇಲೆ ನಿಲ್ಲುವ ಅಥವಾ ಅನಂತರ, ಮಹನೀಯರೇ ಮಹಿಳೆಯರೇ- ಎಂದು ಮುಂತಾದ ಸಂಬೋಧನಾ ಪದಗಳನ್ನು ಹೇಗೆ ತೊಡಗಬೇಕೆಂಬ ಗೊಂದಲದಲ್ಲಿ ಉರುಳುತ್ತ, ಯಾರನ್ನಾದರೂ ಹೊಗಳುವ ಇಲ್ಲವೇ ತೆಗಳುವ ಡೊಲಾಯಮಾನ ಸ್ಥಿತಿಯಲ್ಲಿ ಕಂಗೆಡುವ ಅವಶ್ಯಕತೆ ಮಾತುಕತೆಯಲ್ಲಿಲ್ಲ. ನಾಟುವ ಚುಚ್ಚುಮಾತುಗಳನ್ನಾಡಿ ಸಭಾಸದರ ಕರತಾಡನದಿಂದ ಉತ್ಸಾಹಿತನಾಗ ಬೇಕಾದ ಅಗತ್ಯವೂ ಇಲ್ಲ. ಭಾಷಣದಲ್ಲಿ ಮಾತ್ರ ಎಲ್ಲಿಂದಾದರೂ ಅರಸಿ ಇಂತಹ ಸನ್ನಿವೇಶಗಳನ್ನು ತರಲೇ ಬೇಕಾಗುತ್ತದೆ. ಇಲ್ಲವಾದರೆ, ಅಂತಹ ಉಪನ್ಯಾಸ ಸಪ್ಪೆ, ನೀರಸ!

ಮಾತು ಕತೆಯ ಮಾತು ಅಂತೀಯಲ್ಲ. ಇಲ್ಲಿ ಕರತಾಳಧ್ವನಿಗೆ ಅವಕಾಶವಿಲ್ಲ. ಮಾತು ಮುಗಿದ ಬಳಿಕ ಗೊಣಗಾಟಕ್ಕೂ ಸಂದರ್ಭವಿಲ್ಲ. ಇಬ್ಬರೂ ಪ್ರೇಮಪೂರ್ವಕ ಮಾತಾಡುತ್ತಾರೆ, ಏನಾದರೂ ವ್ಯಂಗ್ಯ ಮಾತು ಬಂತು; ನಕ್ಕುಬಿಟ್ಟರು. ನಗುವುದೆಂದರೇನು? ತುಟಿಗಳು ಇದ್ದಲ್ಲಿಯೇ ತುಸು ಹಿಗ್ಗಿ ಅಲುಗಿ ಬಿಡುವುದು. ಇದಕ್ಕಿಂತ ಹೆಚ್ಚಾದ ಗೊಳ್ಳನೆಯ ನಗುವಿಗೆ ಅಲ್ಲಿ ಆಸ್ಪದವಿರುವುದಿಲ್ಲ. ಭಾಷಣದ ಕತೆ ಹೀಗಲ್ಲ. ಕೇಳುವವರಲ್ಲಿ ಉತ್ಸಾಹ ಮತ್ತು ಸ್ಫೂರ್ತಿಯನ್ನು ತುಂಬಿಸಬೇಕು. ಈ ಗುಣರಹಿತ ಭಾಷಣ ಭಾಷಣವೇ ಅಲ್ಲ. ಮಾತುಕತೆ ಮನಸ್ಸಂತೋಷಪಡುವ ಒಂದು ಸಾಧನ; ಇದರಲ್ಲಿ ಭಾಷಣದ ಉತ್ಸಾಹವಾಗಲೀ ಗೌರವವಾಗಲೀ ಹೆಸರಿಗಾದರೂ ಇರುವುದಿಲ್ಲ.

ಮಾನವನ ಜೀವನವು ಸಂತೋಷದಿಂದ ಕಳೆಯ ಬೇಕೆಂದಿದ್ದರೆ, ಆತನಿಗೆ ಖಾನ, ಪಾನ, ಶಯನಾದಿಗಳು ಅವಶ್ಯಕವಿರುವಂತೆಯೇ ಮಾತುಕತೆಯೂ ಬೇಕೇ ಬೇಕು. ಮನಸ್ಸಿನ ಕೊಳೆಯು ಇದರಿಂದ ಅಳಿಯುತ್ತದೆ. ಚಿತ್ತವು ಹಗುರವೂ ಸ್ವಚ್ಛವೂ ಆಗಿ ಆನಂದ ಮಗ್ನವಾಗುತ್ತದೆ. ಮಾತಾಡುವುದರಲ್ಲಿಯೂ ಒಂದು ಬಗೆಯ ತನ್ಮಯತೆ, ಆನಂದವಿದೆ. ಈ ಚಟಕ್ಕೆ ಒಳಗಾದವನು ತನ್ನ ಭೋಜನಾದಿ ಕರ್ತವ್ಯಗಳನ್ನೇ ಮರೆತು ಬಿಡುತ್ತಾನೆ. ರೊಬಿನ್ಸನ್ ಕ್ರೂಸೊವಿಗೆ ೧೬ ವರ್ಷಗಳ ತನಕ ಮಾನವನ ಭೆಟ್ಟಿಯಾಗಲಿಲ್ಲ ಕೊನೆಗೆ ಫ್ರೈಡೇಯ ಮಾತು ಕೇಳಿಸಿತು ತನ್ನ ಕಾಡು ಭಾಷೆಯಲ್ಲಿ ಆತನು ಆಡಿದ್ದನಾದರೂ, ಕ್ರೂಸೋ ನಿಜಕ್ಕೂ ಆನಂದ ಸಾಗರದಲ್ಲಿಯೇ ಮುಳುಗಿದ್ದನು. ಮಾನವನ ವಾಕ್ ಶಕ್ತಿಯಲ್ಲಿ ಆಕರ್ಷಕ ಗುಣವಿದೆಯೆಂಬುದಕ್ಕೆ ಬೇರೆ ನಿದರ್ಶನಬೇಕೆ? ಪತ್ರವ್ಯವಹಾರದಲ್ಲಿಯೇ ಪ್ರೇಮಿಗಳಾದವರು ಪರಸ್ಪರ ಭೆಟ್ಟಿಯಾಗಲು ಎಷ್ಟೊಂದು ಕಾತರರಾಗಿರುವುದಿಲ್ಲ? ತನ್ನ ಆಭ್ಯಂತರಿಕ ಭಾವ ಪ್ರಕಟಣೆ ಮತ್ತು ಪರಭಾವ ಗ್ರಹಣವು ಶಬ್ದ ಸಹಾಯದಿಂದಲೇ ನಡೆಯುತ್ತದೆ. ಮನುಷ್ಯ ಮಾತಾಡದ ವರೆಗೆ ಆತನ ಗುಣದೋಷಗಳು ಪ್ರಕಟವಾಗುವುದಿಲ್ಲ. ಮಾತಿನಿಂದಲೇ ಮಾನವನ ರೂಪ ಹೊರ ಪಡುತ್ತದೆಯೆಂಬ ಜಾನ್ಸನರ ಮಾತು ನಿಜಕ್ಕೂ ಉಚಿತವಾದುದು.

ಮಾತುಕತೆಯಾಡಲು ಇಬ್ಬರು ಕನಿಷ್ಠ ಬೇಕು; ಗರಿಷ್ಠ ಮಿತಿಯೆಂಬುದೇ ಇಲ್ಲ.

(೨೬ನೇ ಪುಟ ನೋಡಿ)

'ಖೀರಾ' ಉಕ್ಕಿನ ಫರ್ನಿಚರುಗಳಿಂದ ನಿಮ್ಮ ಮನೆ-ಆಫೀಸುಗಳು ಸುರಕ್ಷಿತ.

ARROW Steel SOFA-CUM-BED
With chromium handle

ಇಬ್ಬಗೆಯ ಉಪಯೋಗಕ್ಕೆ, ಸೋಫಾ-ಕಂ- ಬೆಡ್

YOU CAN USE SOFA AS A BED AT NIGHT





ಖೀರಾ ಉಕ್ಕಿನ ಕ್ಯಾಬಿನೆಟ್ಟುಗಳು ಈ ಮೂರು ಸೈಜುಗಳಲ್ಲಿ ದೊರೆಯುತ್ತವೆ.

'ಯುಟಿಲಿಟಿ' — 78" × 30" × 19'
'ಪೊಪ್ಯುಲರ್' — 65" × 33" × 19"
'ಮಿಜೆಟ್' — 50" × 30" × 17"

ಕಿಟಿಕಿ-ಬಾಗಿಲುಗಳು, ಕಂಪೌಂಡ್-ಗೇಟ್‌ಗಳು, ರೋಲಿಂಗ್ ಶಟ್ಟರ್‍ಸ್ ರೂಫ್ ಟ್ರಸ್ಸೆಸ್ ಮೊದಲಾದ ಸ್ಟೀಲಿನ ಕಟ್ಟಡ ಸಾಹಿತ್ಯ ಸಾಮಗ್ರಿಗಳೂ ದೊರೆಯುತ್ತವೆ.

ಚಿತ್ರದ ವೈವಿಧ್ಯಪೂರ್ಣ ಫರ್ನಿಚರುಗಳೂ ಸಿಗುತ್ತವೆ

ಸೋಫಾವನ್ನು ರಾತ್ರಿಯಲ್ಲಿ ಬೆಡ್ ಆಗಿ ಉಪಯೋಗಿಸಬಹುದು

ARROW STEEL INDUSTRIES ವೈವಿಧ್ಯತೆಯು ನಮ್ಮ ವೈಶಿಷ್ಟ್ಯ

Phone: 788
Grams: "Shastrico"

ಸಂದರ್ಶಿಸಿರಿ:

ಶಾಸ್ತ್ರಿ ಅಂಡ್ ಕಂಪೆನಿ, ಹಂಪನಕಟ್ಟೆ, ಮಂಗಳೂರು.

ಉಡುಪಿಯಲ್ಲಿ

ಸಂದರ್ಶಿಸಿ! ಸಂತೃಪ್ತಿಪಡಲು!!

ಮತ್ತು

ಉಳಕೊಳ್ಳಲು

ಪ್ರಶಾಂತ ವಾತಾವರಣದ

ಉತ್ತಮ ವಸತಿ ಗೃಹ

ಹೋಟೆಲ್ ಕಲ್ಪನಾ

ಉಪೇಂದ್ರ ಬಾಗ್,

ಉಡುಪಿ.

ಫೋನ್ ನಂ 140

ಈ ವರುಷದ

ದೀಪಾವಳಿಯು

ಸರ್ವರ ಸಕಲ ಅಭೀಷ್ಟಗಳನ್ನು ನೆರವೇರಿಸಿಕೊಡಲಿ!
ಕತ್ತಲೆಯನ್ನು ಹೋಗಲಾಡಿಸಿ ಬಾಳು ಬೆಳ್ಳಂ ಬೆಳಗುವಂತೆ
ಸರ್ವರಲ್ಲೂ ಉಳಿತಾಯ ಮನೋವೃತ್ತಿಯನ್ನು ಒಡಮೂಡಿಸಲಿ!!

ಕೋರ್ಪೊರೇಶನ್ ಬೇಂಕ್

ಆಡಳಿತ ಮಂಡಳಿ ಮತ್ತು ಸಿಬ್ಬಂದಿ

ದಿ ಕೆನರಾ ಬೇಂಕಿಂಗ್ ಕೋರ್ಪೊರೇಶನ್ ಲಿಮಿಟೆಡ್

(ರಿಜಿಸ್ಟರ್ಡ್ ಆಫೀಸು : ಉಡುಪಿ)
ಆಡಳಿತ ಆಫೀಸು — ಮಂಗಳೂರು

ಬಡ ಕ್ಷಯ ರೋಗಿಗಳ ಕುಟುಂಬ ರಕ್ಷಣೆ

ಕುಟುಂಬ ರಕ್ಷಕರಿಗೆ ಕ್ಷಯ ರೋಗ ತಗಲಿದಾಗ ಅವರ ಕುಟುಂಬದ ದುರವಸ್ಥೆಯನ್ನು ಕಡಿಮೆ ಮಾಡುವುದಕ್ಕಾಗಿ ಏನಾದರೂ ಮಾಡಬೇಕು. ಸಾಮಾನ್ಯವಾಗಿ ಅಂತಹ ರೋಗಿಗಳು ವೈದ್ಯಕೀಯ ಸಲಹೆಗೆ ವಿರುದ್ಧವಾಗಿ ಹಸಿದಿರುವ ತಮ್ಮನ್ನು ಅವಲಂಬಿಸಿಕೊಂಡಿರುವವರ ಪೋಷಣೆಗಾಗಿ ಬಿಡುಗಡೆ ಹೊಂದಲ್ಪಡುತ್ತಾರೆ. ಅವರು ಹೊರ ಬಂದು ಶ್ರಮ ವಹಿಸಿ, ಕೆಲಸ ಮಾಡಿ, ಕರಗಿ, ಸೊರಗಿ, ಸೋಂಕಣೆಯನ್ನು ಹೆಚ್ಚಿಸಿ ಮತ್ತೂ ಕನಿಷ್ಠ ಪರಿಸ್ಥಿತಿಗೆ ಒಳಗಾಗುತ್ತಾರೆ. ಅಂತಹ ದುರದೃಷ್ಟವನ್ನು ತಡೆಯುವುದಕ್ಕಾಗಿ ಸಮಾಜವು ಜಾಗ್ರತೆ ವಹಿಸಬೇಕು ಮತ್ತು ಈ ಕುಟುಂಬಗಳಿಗೆ ಸಹಾಯ ನೀಡಬೇಕು. ಬೇರೆ ಇಡುವ ಪ್ರಯತ್ನ ಒಂದೇ ಸಾಲದು. ಆದುದರಿಂದ ಸ್ವಯಂ ಸ್ಫೂರ್ತಿಯಿಂದ ಮುಂದೆ ಬರುವ ಸಂಸ್ಥೆಗಳ ಮೂಲಕ ಸಹಕಾರಯುತ ಪ್ರಯತ್ನ ಮಾಡಬೇಕಾಗಿದೆ. ನಿಮ್ಮ ಟಿ ಬಿ ಸಂಸ್ಥೆಗಳು ಸದಾ ಅವರಿಗೆ ಸಹಾಯ ಮಾಡಲು ಇಚ್ಛಿಸುತ್ತವೆ. ಆದರೆ ಅವುಗಳಿಗೆ ನಿಧಿ ಬೇಕಾಗಿದೆ. ಟಿ ಬಿ ಮೊಹರುಗಳನ್ನು ಪಡಕೊಂಡು ನಿಮ್ಮ ಟಿ ಬಿ ಸಂಸ್ಥೆಗಳಿಗೆ ಉದಾರ ಸಹಾಯ ಮಾಡಿರಿ.

ಒಂದು ಟಿ ಬಿ ಮೊಹರಿನ ಬೆಲೆ ಬರೇ ಹತ್ತು ನಯೇಪೈಸೆ ಮಾತ್ರ

ಮೊಹರುಗಳು ಸಿಗುವ ಸ್ಥಳಗಳು:— 1) ಮೈಸೂರು ರಾಜ್ಯ ಟಿ ಬಿ ಎಸೋಸಿಯೇಶನ್, ಸರಕಾರಿ ಟಿ ಬಿ ಸೆನೆಟೋರಿಯಂ, ಹಳೆ ಮದ್ರಾಸ್ ರಸ್ತೆ, ಬೆಂಗಳೂರು; 2) ದ. ಕ. ಜಿಲ್ಲಾ ಟಿ ಬಿ ಎಸೋಸಿಯೇಶನ್, ಸರಕಾರಿ ವೆನ್‌ಲೋಕ್ ಆಸ್ಪತ್ರೆ, ಮಂಗಳೂರು, ಮತ್ತು ಅವರ ವಿವಿಧ ಏಜನ್ಸಿಗಳಲ್ಲಿ

ಹದಿನಾಲ್ಕನೇ ಕ್ಷಯರೋಗ ಮೊಹರು ಮಾರಾಟ ಚಳವಳ

(ದಿ ಟ್ಯೂಬರ್‌ಕ್ಯುಲೋಸಿಸ್ ಎಸೋಸಿಯೇಶನ್ ಆಫ್ ಇಂಡಿಯಾ, ನ್ಯೂ ಡಿಲ್ಲಿ ಇವರಿಂದ ಪ್ರಾರಂಭಿಸಲ್ಪಟ್ಟದ್ದು)

ಈ ಸ್ಥಳದ ದಾತೃಗಳು:

Tea Estates India Private Ltd., Coimbatore.

ಬ್ರಿಟಿಷರ ದೃಷ್ಟಿಕೋನದಿಂದ ಬರೆಯಲಾದ

ಕಿತ್ತೂರಿನ ಬಂಡಾಯದ ಕಥೆ

ಕಿತ್ತೂರಿನ ಬಂಡಾಯದ ಕಥೆಯನ್ನು ಬ್ರಿಟಿಷರು ತಮಗೆ ಅನುಕೂಲವಾಗುವಂತೆ ಹೇಳಿದಿದ್ದಾರೆ. ಟಿಪ್ಪಣಿಯ ರೂಪದಲ್ಲಿರುವ ಈ ಲೇಖನವು ಸುಪ್ರಸಿದ್ಧ ಇತಿಹಾಸ ಸಂಶೋಧಕರಾಗಿದ್ದ ದಿವಂಗತ ನಾ. ಶ್ರೀ ರಾಜಪುರೋಹಿತ ಇವರ ಹಳೆಯ ಕಡತಗಳಲ್ಲಿ ದೊರಕಿತು. ಇದರ ಮೂಲ ಲೇಖಕರಾರೆಂಬುದು ತಿಳಿದಿಲ್ಲ.

ಲೇಖಪ್ರೇಷಕರು: ಶ್ರೀ ಶ್ರೀನಿವಾಸ ಕೆ. ಹಾವನೂರ.

ಮುಂಬಯಿ ಕರ್ನಾಟಕವನ್ನು ಬ್ರಿಟಿಷರು ವಶಮಾಡಿಕೊಂಡ ಬಳಿಕ ಬೆಳಗಾವ ಜಿಲ್ಲೆಯ ಶಾಂತತೆಯು ಪುನಃ ಪುನಃ ಭಂಗ ಮಾಡಲ್ಪಟ್ಟಿತು. ಇಂಥ ಕೆಲವು ಬಂಡಾಯಗಳಿಂದಲೂ ಜಮೀನದಾರರ ಅಕ್ರಮ ಆಡಳಿತೆಯಿಂದಲೂ ಮುಂಬಯಿ ಕರ್ನಾಟಕದ ಬಹು ಭಾಗಗಳನ್ನು ಸರಕಾರಕ್ಕೆ ಕೂಡಿಸಿಕೊಳ್ಳಲು ಕಾರಣವಾಯಿತು. ೧೮೨೪ನೆಯ ಇಸವಿಯಲ್ಲಿ ಕಿತ್ತೂರಿನ ದೇಸಾಯಿಯಾದ ಶಿವಲಿಂಗ ರುದ್ರನು, ತನ್ನ ನೆರೆಹೊರೆಯವರಿಗೆ ತೊಂದರೆ ಕೊಡುತ್ತಿದ್ದಂಥ ದಂಗೆಖೋರರಿಗೆ ಆಶ್ರಯ ಕೊಟ್ಟದ್ದಕ್ಕೋಸ್ಕರ ಬ್ರಿಟಿಷ ಸರಕಾರದಿಂದ ಬಹುವಾಗಿ ಛೀ ಹಾಕಲ್ಪಟ್ಟನು. ೧೮೨೪ನೆಯ ಇಸವಿಯ ಸಪ್ಟಂಬರ ೧೨ನೆಯ ತಾರೀಕಿನ ದಿವಸ ಕಿತ್ತೂರ ದೇಸಾಯಿಯ ಒಬ್ಬ ಸೇವಕನು, ಧಾರವಾಡದ ಕಲೆಕ್ಟರನಾದ ಥ್ಯಾಕರೆ ಸಾಹೇಬನ ಹತ್ತಿರ ಬಂದು ಒಂದು ಪತ್ರವನ್ನು ಕೊಟ್ಟನು. ಆ ಪತ್ರದಲ್ಲಿ ಬರೆದದ್ದೇನೆಂದರೆ:— "ನಾನು (ಎಂದರೆ ಶಿವಲಿಂಗ ರುದ್ರ ದೇಸಾಯಿಯು) ಈಗ ಮರಣ ಶಯ್ಯೆಯಲ್ಲಿ ಇರುವೆನು. ಆದಕ್ಕೋಸ್ಕರ ನಾನು ಒಬ್ಬ ಹುಡುಗನನ್ನು ದತ್ತಕ ಮಗನನ್ನಾಗಿ ಮಾಡಿಕೊಂಡಿದ್ದೇನೆ."

ಜುಲೈ ೧೦ನೆಯ ತಾರೀಕಿನ ದಿವಸ ಈ ಪತ್ರವು ಬರೆಯಲ್ಪಟ್ಟಿತ್ತು. ಆದರೆ ಪತ್ರವು ಮುಟ್ಟಿದ ದಿನದ ವರೆಗೂ ಆ ಹುಡುಗನನ್ನು ದತ್ತಕ ತೆಗೆದುಕೊಂಡಿದ್ದಿಲ್ಲ. ಕೂಡಲೆ ಸಿವ್ಹಿಲ್ ಸರ್ಜನನನ್ನು ಕಿತ್ತೂರಿಗೆ ಕಳಿಸಲಾಯಿತು. ಸಿವ್ಹಿಲ್ ಸರ್ಜನ್ನನು ಹೋದಾಗ್ಗೆ, ಶಿವಲಿಂಗ ರುದ್ರ ದೇಸಾಯಿಯು ಸತ್ತು ಹೋಗಿದ್ದರು. ಸತ್ತ ದೇಸಾಯಿಯ ಮುಖಜರ್ಯೆಯ ಮೇಲಿಂದ ಈ ದೇಸಾಯಿಯು, ಎಷ್ಟೋ ತಾಸುಗಳ ಹಿಂದೆಯೇ ಸತ್ತಿರಬೇಕೆಂದೂ, ಬಹುಶಃ ಸೇವಕರನ್ನು ಕಿತ್ತೂರಿನಿಂದ ಧಾರವಾಡಕ್ಕೆ ಕಳಿಸುವ ಪೂರ್ವದಲ್ಲಿಯೇ ಸತ್ತಿರಬೇಕೆಂದೂ ಸಿವ್ಹಿಲ್ ಸರ್ಜನನು ಕಂಡು ಹಿಡಿದನು ಆದ್ದರಿಂದ ಈ ದತ್ತಕ ತೆಗೆದುಕೊಂಡ ಸಂಗತಿಯ ಬಗ್ಗೆ ಥ್ಯಾಕರೆ ಸಾಹೇಬರಿಗೆ ಬಹಳ ಸಂಶಯವುಂಟಾಯಿತು. ಅಪ್ಪಣೆ ಪಡೆದುಕೊಳ್ಳದೆ ದತ್ತಕ ತೆಗೆದುಕೊಳ್ಳಲು ಬರಲಾರದೆಂಬ ಸಂಗತಿಯು ಶಿವಲಿಂಗ ರುದ್ರ ದೇಸಾಯಿಗೆ ಗೊತ್ತಿದ್ದರೂ, ಆವನು ಈ ವಿಷಯವನ್ನು ಥ್ಯಾಕರೆ ಸಾಹೇಬನ ಬಳಿಯಲ್ಲಿ ಎಂದೂ ಪ್ರಸ್ತಾಪಿಸಿರಲಿಲ್ಲ. ಕೆಲವು ತಿಂಗಳುಗಳ ಹಿಂದೆ ಥ್ಯಾಕರೆ ಸಾಹೇಬನು ಈ ದೇಸಾಯಿಗೆ ಭೆಟ್ಟಿಯಾದಾಗ್ಗೆ, ಈತನು ಆಗ್ಗೆ ಬೇನೆಯಿಂದ ಬಳಲುತ್ತಿದ್ದರೂ ಮತ್ತು ಮನಬಿಚ್ಚಿ ಮಾತಾಡಿದರೂ ತಾನು ದತ್ತಕ ತೆಗೆದುಕೊಳ್ಳುವ ಅಭಿಲಾಷೆಯನ್ನೆಂದೂ ವ್ಯಕ್ತಮಾಡಲಿಲ್ಲ. ಇದಲ್ಲದೆ ಈ ಪತ್ರದಲ್ಲಿದ್ದ ದೇಸಾಯಿಯ ಸಹಿಯು ತಿಳಿಯುವಂತಿರಲಿಲ್ಲ ಇಷ್ಟೇ ಅಲ್ಲ ದೇಸಾಯಿಯ ಸುಸ್ಪಷ್ಟವಾದ ಅಕ್ಷರಗಳಂತೆ ಈ ಪತ್ರದ ಅಕ್ಷರಗಳು ಇರಲಿಲ್ಲ ಇವೆಲ್ಲ ಕಾರಣಗಳಿಂದ ಥ್ಯಾಕರೆ ಸಾಹೇಬರು ನಿರ್ಣಯಿಸಿದ್ದೇನೆಂದರೆ:— "ಈ ದೇಸಾಯಿಯು ಮರಣ ಹೊಂದಿದ ಮೇಲಾಗಲಿ ಅಥವಾ ಇವನಿಗೆ ಸ್ಮೃತಿ ತಪ್ಪಿದ ಮೇಲಾಗಲಿ ಈ ದತ್ತಕ ತೆಗೆದುಕೊಳ್ಳುವ ವಿಧಾನವು ನಡೆದಿರಲಿಕ್ಕೆ ಬೇಕು."

ಇವೆಲ್ಲ ಸಂಗತಿಗಳನ್ನು ವರಿಷ್ಠ ಅಧಿಕಾರಿಗಳಿಗೆ ತಿಳಿಸುವ ಕಾಲಕ್ಕೆ ಥ್ಯಾಕರೆ ಸಾಹೇಬನು ಕೊನೆಗೆ ಬರೆದದ್ದೇನೆಂದರೆ:— "ಈ ದೇಸಾಯಿಯ ಮನೆತನದಲ್ಲಿ ಅವನ ಹೆಂಡತಿಯು ಮತ್ತು ಅವನ ೧೧ ವರ್ಷದ ಮಗಳು ಅಲ್ಲದೆ ಆತನ ಮಲತಾಯಿ, ಹಾಗೂ ೨ ವರ್ಷಗಳ ಹಿಂದೆ ತೀರಿಕೊಂಡ ಈ ದೇಸಾಯಿಯ ಅಣ್ಣನ ಹೆಂಡತಿ ಇಷ್ಟು ಜನರು ಇದ್ದಾರೆ. ಇನ್ನುಳಿದ ಆಪ್ತರಲ್ಲಿ ದತ್ತಕ ತೆಗೆದುಕೊಳ್ಳಲ್ಪಟ್ಟ ಕೂಸೊಂದು; ಅದು ಬಹು ದೂರದಿಂದ ಸಂಬಂಧಿಸಿದ ಆಪ್ತನದ್ದು." ಈ ರೀತಿ ಬರೆದದ್ದಲ್ಲದೆ ಥ್ಯಾಕರೆ ಸಾಹೇಬನು, ದತ್ತಕ ವಿಷಯದಲ್ಲಿ ಚವುಕಶಿ ಮಾಡಲು ಸ್ವತಃ ತಾನು ಕಿತ್ತೂರಿಗೆ ಹೋಗಿದ್ದೇನೆಂದೂ— ಮೇಲಿನ ಸರಕಾರದಿಂದ ನಿರ್ಣಯವು ಬರುವ ವರೆಗೆ ತಾನು ಕಿತ್ತೂರಿನಲ್ಲಿ ಶಾಂತತೆಯನ್ನು ಸ್ಥಾಪಿಸಲಿಕ್ಕೆ ಅಲ್ಲಿಗೆ ಹೋಗಿ ಏರ್ಪಾಡು ಮಾಡಿದ್ದೇನೆಂದೂ ವರಿಷ್ಠ ಸರಕಾರಕ್ಕೆ ತಿಳಿಸಿದನು. ಇದೂ ಅಲ್ಲದೆ ಈ ಕಿತ್ತೂರ ಸಂಸ್ಥಾನವನ್ನು ಬ್ರಿಟಿಷ್ ಸರಕಾರಕ್ಕೆ ಕೂಡಿಸಿಕೊಳ್ಳದಿದ್ದರೂ ಕೂಡ ಆ ದತ್ತಕದ ಕೂಸು ದೊಡ್ಡದಾಗುವ ವರೆಗೆ ಬ್ರಿಟಿಷ ಸರಕಾರದಿಂದ ನಿಯೋಜಿಸಲ್ಪಟ್ಟ ಒಬ್ಬ ಅಧಿಕಾರಿಯೂ, ಈ ದೇಸಾಯಿ ಮನೆತನದವರಿಂದ ನಿಯಮಿಸಲ್ಪಟ್ಟ ಮತ್ತೊಬ್ಬ ಅಧಿಕಾರಿಯೂ ಕೂಡಿ ಅಲ್ಲಿ ರಾಜ್ಯದಾಡಳಿತೆಯನ್ನು ಮಾಡಬೇಕಾಗುತ್ತದೆಂದು ತಿಳಿಸಿದನು.

ಈ ಪ್ರಕಾರ ಥ್ಯಾಕರೆ ಸಾಹೇಬನು ತಿಳಿಸಿದ ಸಂಗತಿಗಳ ಮೇಲಿಂದ ವರಿಷ್ಠ ಅ

(೨೪ನೇ ಪುಟ ನೋಡಿರಿ)

ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್, ನಂಜನಗೂಡು.

ಸುಮಾರು ಐವತ್ತು ವರ್ಷಗಳಿಂದ ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರಬತ್ತಿ, ಹೇರ್ ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹ

ಪ್ರತಿನಿತ್ಯ ಅತ್ಯುತ್ತಮ ರೀತಿಯಲ್ಲಿ ತಯಾರಾಗುತ್ತಲಿವೆ.

ಶಾಖೆಗಳು: ಮೈಸೂರು, ಬೆಂಗಳೂರು ಮತ್ತು ಮಂಗಳೂರು. ಡಿಪೋ: ಟಿ. ನರಸೀಪುರ.

ಸೋಲ್ ಏಜಂಟರು:— (ಕರ್ನಾಟಕದಾಚೆಗೆ) ದಿ ಯುನೈಟೆಡ್ ಕನ್ಸರ್ನ್ಸ್, 54, ಬಂದರುಬೀದಿ, ಮದ್ರಾಸ್.

ವಾದಿಸುವ ದೊರೆ

ಯೆಹೂದಿ ಪುರೋಹಿತನನ್ನು ಪರೀಕ್ಷಿಸ ಹೊರಟ ರೋಮಿನ ದೊರೆಯು ವಾದಿಸುವ ದೊರೆಯೆಂದೇನೋ ಹೆಸರು ಪಡೆದನು; ಆದರೆ, ತನ್ನ ವಾದದಿಂದ ತಾನೇ ಸೋತನು. ಅದು ಹೇಗೆ?

ಅನು: ಶ್ರೀ ಕೆ. ನಾರಾಯಣ ಆಚಾರ್, ಶಿರೋಮಣಿ, ವಿದ್ವಾನ್; ಕಣ್ವತೀರ್ಥ

ರೋಮಿನಲ್ಲಿ ಒಬ್ಬ ದೊರೆಯಿದ್ದನು. ಅವನು ಯೆಹೂದೀ ಧರ್ಮದಲ್ಲಿ ಹೆಚ್ಚಿನ ಆಸಕ್ತಿನ್ನು ತೋರಿಸುತ್ತಿದ್ದನು. ಒಬ್ಬಾತನೊಬ್ಬ ಯೆಹೂದೀ ಪುರೋಹಿತನಲ್ಲಿ ಅವನು ಆಗಾಗ್ಗೆ ಅನೇಕ ಪ್ರಶ್ನೆಗಳನ್ನು ಕೇಳುತ್ತಿದ್ದನು. ಒಂದು ದಿನ ಅವನು ಆ ಪುರೋಹಿತನಿಗೆ ಹೇಳಿದನು:—

"ಯೆಹೂದಿಗಳು ವರ್ಜಿಸಬೇಕಾದ ಆಹಾರ ವಸ್ತುಗಳು ಮತ್ತು ಅವರು ಸ್ವೀಕರಿಸಲು ವಿಹಿತವಾದ ಆಹಾರಗಳನ್ನು ತಯಾರಿಸುವ ಕ್ರಮಗಳು ಇತ್ಯಾದಿ ಅವರ ಆಹಾರ ನಿಯಮಗಳ ಕುರಿತು ನಾನು ಬಹಳ ಕೇಳಿರುತ್ತೇನೆ. ಒಂದು ಯೆಹೂದಿಗಳ ಭೋಜನದ ರುಚಿಯನ್ನು ನೋಡಲು ನಾನು ಬಯಸುತ್ತೇನೆ. ಆದ್ದರಿಂದ ನಾನು ಶನಿವಾರ ದಿವಸ ನಿಮ್ಮ ಮನೆಗೆ ಭೋಜನಕ್ಕೆ ಬರುವೆನು."

ಶನಿವಾರವು ಯೆಹೂದಿಗಳಿಗೆ ಸಬ್ಬಾತ್ ದಿನವಾಗಿದೆ ಸಬ್ಬಾತ್ ದಿನದಲ್ಲಿ ಬೆಂಕಿಯನ್ನು ಉರಿಸುವುದು ನಿಷಿದ್ಧ. ಆದರೂ ಸಬ್ಬಾತ್ ದಿನ ಬರತಕ್ಕ ಒಬ್ಬ ಅತಿಥಿಯು ಸ್ವಾಗತಾರ್ಹನು. ಆದ್ದರಿಂದ ಆ ಪುರೋಹಿತನು "ನಿಮ್ಮನ್ನು ನಾನು ಉಪಚರಿಸುವೆನು" ಎಂದು ದೊರೆಗೆ ಹೇಳಿದನು.

ಶನಿವಾರವು ಬಂತು ಅದರೊಂದಿಗೆ ದೊರೆಯೂ ಪುರೋಹಿತನ ಮನೆಗೆ ಬಂದನು. ಆಹಾರವನ್ನು ಬಡಿಸಿದಾಗ ಅದು ತಣ್ಣಗಾಗಿತ್ತು. ಆದರೂ ಈ ಮೊದಲು ತಾನು ಇಷ್ಟು ರುಚಿಕರವಾದ ಪದಾರ್ಥವನ್ನು ಎಂದೂ ತಿಂದಿರಲಿಲ್ಲವೆನ್ನುವಷ್ಟು ದೊರೆಗೆ ಅದು ರುಚಿಕರವಾಗಿ ಕಂಡಿತು. ನಿಜವಾಗಿಯೂ ಅವನು ಬಹಳ ಸಂತೋಷಪಟ್ಟು ಅನಂತರದ ಬುಧವಾರ ಕೂಡ ತಾನು ತಿರುಗಿ ಭೋಜನಕ್ಕೆ ಬರುವನೆಂದು ಹೇಳಿದನು.

ಆದರೆ ಏನೋ ಆ ಎರಡನೆಯ ಭೋಜನವು ಶನಿವಾರದ ಭೋಜನದಷ್ಟು ರುಚಿಕರವಾಗಿ ದೊರೆಗೆ ಕಂಡು ಬರಲಿಲ್ಲ. ಅವನು ಆ ಕುರಿತು ಆಶ್ಚರ್ಯಪಟ್ಟು ಪುರೋಹಿತನ ಕಡೆಗೆ ತಿರುಗಿ ಕೇಳಿದನು:—"ಇದಕ್ಕೆ ಏನಾಗಿದೆ? ನನಗೆ ಹೇಳಿರಿ. ಇದು ಎಷ್ಟು ಬೇಕೋ ಅಷ್ಟು ಬಿಸಿಯಾಗಿ ನನಗೆ ಬಡಿಸಿದರೂ ಕೂಡ ಕಳೆದ ಶನಿವಾರ ದಿವಸ ನೀವು ನನಗೆ ಬಡಿಸಿದ ತಣ್ಣಗಾದ ಪದಾರ್ಥದಷ್ಟು ಇದು ಉತ್ತಮವಾಗಿಲ್ಲ. ಇದರಲ್ಲಿ ಏನಾದರೂ ಇರಬೇಕಾದುದು ಇಲ್ಲವೇ?"

ಪುರೋಹಿತನು ನಗಾಡಿ ಉತ್ತರಿಸಿದನು:— "ನಿಜವಾಗಿಯೂ ಇಲ್ಲ. ಇದರಲ್ಲಿ ಸೇರಬೇಕಾದ ಒಂದು ವಿಶೇಷ ಪದಾರ್ಥವಿದೆ. ಅದು ಶನಿವಾರ ದಿನ ಬಡಿಸುವ ಪದಾರ್ಥದಲ್ಲಿ ಮಾತ್ರ ಕಂಡು ಬರುತ್ತದೆ. ಅದು ಸಬ್ಬಾತ್ ಮಸಾಲೆ."

ಇದನ್ನು ದೊರೆಯು ನಂಬದಿದ್ದರೂ ಈ ಉತ್ತರದಿಂದ ಅವನು ಸುಮ್ಮನಿರಬೇಕಾಯಿತು. ಪುರೋಹಿತನು ತನ್ನ ಧರ್ಮದಲ್ಲಿ ಹೆಚ್ಚಿನ ಆಸಕ್ತಿಯಿಲ್ಲದವನಾದರೂ ತನ್ನ ಕಲ್ಪನೆಯಲ್ಲಿ ಪ್ರಬಲನಾಗಿದ್ದನು.

ಪುರೋಹಿತನ ಉತ್ತರವು ದೊರೆಗೆ ಇಲ್ಲಿ ಆಗಲೇ ಕೇಳಬೇಕಾದ ಮತ್ತೊಂದು ಪ್ರಶ್ನೆಯನ್ನು ಹುಟ್ಟಿಸಿತು.

ಅವನು ಆಲೋಚನೆ ಮಾಡಿ ಹೇಳಿದನು:— "ನಿಮ್ಮ ದೇವರು? ಅವನಿದ್ದಾನೆ ಎಂಬುದನ್ನೇ ನಾನು ನಂಬುವುದಿಲ್ಲ. ಅವನು ಸೃಷ್ಟಿಕರ್ತನು, ಆಳುವವನು, ಮತ್ತು ನಿಮಗೆ ನಿಮ್ಮ ವಿಧಿನಿಯಮಗಳನ್ನು ಕೊಟ್ಟವನೆಂದು ನೀವು ಹೇಳುತ್ತೀರಿ. ಆದರೆ ಅವನು ಅದೃಶ್ಯನಾಗಿದ್ದಾನೆ. ನಮ್ಮ ದೇವತೆಗಳು ಮೂರ್ತಿಮಂತರು. ನಾವು ಬೇಕಾದಾಗ ಅವರನ್ನು ಕಾಣಬಹುದು. ನಿಮ್ಮ ದೇವರನ್ನು ನನಗೆ ತೋರಿಸಿರಿ, ಆಗ ಒಂದು ವೇಳೆ ನಾನು ಅವನ ಅಸ್ತಿತ್ವವನ್ನು ನಂಬಬಹುದು."

ಪುರೋಹಿತನು ಸುಮ್ಮನೆ ತಲೆಯಲ್ಲಾಡಿಸಿದನು. ಆ ವಿಷಯವು ಅಲ್ಲೇ ಬಿಡಲ್ಪಟ್ಟಿತು.

ಮರುದಿನ ಸೂರ್ಯನು ಆಕಾಶದಲ್ಲಿ ಚೆನ್ನಾಗಿ ಮೇಲೇರಿದಾಗ ಪುರೋಹಿತನು ಅರಮನೆಗೆ ಹೋಗಿ ದೊರೆಯ ಮುಂದೆ ನಿಂತನು.

ಅವನು ಹೇಳಿದನು:— "ನೀವು ದೇವರನ್ನು ನೋಡುವ ಅಪೇಕ್ಷೆಯಿದೆಯೆಂದು ಹೇಳಿದಿರಿ. ಹಾಗಾದರೆ ನನ್ನ ಸಂಗಡ ಬನ್ನಿರಿ." ದೊರೆಯು ಪುರೋಹಿತನೊಡನೆ ಹೊರಗೆ ಬಂದನು.

ಪುರೋಹಿತನು ಹೇಳಿದನು:— "ಈಗ ಸೂರ್ಯನ ಕಡೆಗೆ ನೋಡಿರಿ. ಹೆದರಬೇಡಿರಿ. ನೇರವಾಗಿ ಆ ಕಡೆಗೆ ನೋಡಿರಿ."

ದೊರೆಯು ಸೂರ್ಯನ ಕಡೆಗೆ ಮುಖವನ್ನು ತಿರುಗಿಸಿದನು. ಆದರೆ ಅದನ್ನೇ ಗುರಿಯಿಟ್ಟು ನೋಡಲಿಕ್ಕಾಗುವುದಿಲ್ಲವೆಂದು ಅವನಿಗೆ ಕಂಡಿತು. ಅವನು ಕಣ್ಣುಗಳನ್ನು ಮುಚ್ಚಿ ತೆರೆದು ತಿರುಗಿಸಿ ಮತ್ತೊಮ್ಮೆ ಪ್ರಯತ್ನಪಟ್ಟನು. ಪ್ರಯತ್ನವು ಹೆಚ್ಚಾದಂತೆ ಕಣ್ಣುಗಳಿಗೆ ಕಣ್ಣೀರು ಬಂತು. ಆದರೆ ಸೂರ್ಯನು ಬಹಳ ಕಣ್ಣು ಕುಕ್ಕುತ್ತಿದ್ದನು.

ಅವನು ತಿರುಗಿ ಕಷ್ಟದಿಂದ ಹೇಳಿದನು:— "ಇಲ್ಲ, ನನಗೆ ಸಾಧ್ಯವಿಲ್ಲ."

ಪುರೋಹಿತನು ಹೇಳಿದನು:—"ಸರಿ, ಇಲ್ಲಿದೆ ಗುಟ್ಟು. ನಿಮಗೆ ದೇವರ ಸೃಷ್ಟಿಗಳನ್ನೂ ನೋಡಲಿಕ್ಕಾಗುವುದಿಲ್ಲ. ಹಾಗಾದರೆ ನೀವು ದೇವರನ್ನು ಹೇಗೆ ನೋಡಬಲ್ಲಿರಿ?"

ಆದರೆ ಮತ್ತೂ ದೊರೆಯು ವಾದಿಸುವುದಕ್ಕೆ ತೊಡಗಿದನು.

ಅವನು ಹೇಳಿದನು:— "ನಿಮ್ಮ ದೇವರು ದೊಡ್ಡವನಾಗಿದ್ದರೆ "ತೋರಾ" ಗ್ರಂಥವನ್ನು ಅವನು ಯೆಹೂದಿಗಳಿಗೆ ಏಕೆ ಕೊಟ್ಟನು? ಅವರು ಅತ್ಯಂತ ಅಲ್ಪ ಜನರು. ಆದರೆ ನೋಡಿರಿ. ರೋಮನರು ಪ್ರಪಂಚವನ್ನು ಗೆದ್ದು ಆಳುವವರು. ಶತಮಾನಗಳ ಪೂರ್ವದಲ್ಲಿ ಈಜಿಪ್ಟ್ ಮತ್ತು ಪರ್ಸಿಯಾ ಸಾಮ್ರಾಜ್ಯಗಳಿದ್ದವು. ಈ ದೊಡ್ಡ ಜನಾಂಗಕ್ಕೆ ನಿಮ್ಮ ದೇವರು ಏಕೆ ಕಾಣಿಸಿಕೊಳ್ಳಲಿಲ್ಲ? ಅವನ ಮಹಿಮೆಯು ಇನ್ನೂ ಹೆಚ್ಚಾಗುತ್ತಿತ್ತು."

ಪುರೋಹಿತನು ದೊರೆಯನ್ನು ನೋಡಿದನು.

ಕೊನೆಗೆ ಅವನು ಹೇಳಿದನು:—"ಪ್ರಭುವೇ! ನೀವು ಅರಮನೆಗೆ ತಿರುಗಿ ಹೋದಾಗ ದ್ರಾಕ್ಷಾರಸವನ್ನು ಸಂಗ್ರಹಿಸಿಡಲು ಅದನ್ನು ಬಂಗಾರದ ಮತ್ತು ಬೆಳ್ಳಿಯ ಪಾತ್ರೆಗಳಲ್ಲಿ ಹೊಯ್ದಿಡಲು ಆಜ್ಞಾಪಿಸಿರಿ.'

ದೊರೆಯು ಕೋಪದಿಂದ ಉದ್ಗಾರವೆತ್ತಿದನು:— "ಛೆ, ಇದೆಂತಹ ಹೊಲಸು? ಮಣ್ಣಿನ ಪಾತ್ರೆಗಳ ಹೊರತು ಇತರ ಯಾವ ಪಾತ್ರೆಗಳಲ್ಲಿ ಸಂಗ್ರಹಿಸಿಟ್ಟರೂ ದ್ರಾಕ್ಷಾರಸವು ಕೆಟ್ಟು ಹೋಗುವುದೆಂಬುದು ಎಲ್ಲರಿಗೂ ಗೊತ್ತು."

ಪುರೋಹಿತನು ನಗಾಡಲು ತೊಡಗಿದನು.

ಅವನು ಹೇಳಿದನು:—"ನಿಮ್ಮ ಪ್ರಶ್ನೆಗೆ ನೀವೇ ಉತ್ತರ ಕೊಟ್ಟಿರುತ್ತೀರಿ."

ಆದರೆ ಇನ್ನೂ ದೊರೆಯು ಸುಮ್ಮನಿರಲಿಲ್ಲ.

ಅವನು ಹೇಳಿದನು:— "ಸರಿ. ನಿಮ್ಮ ದೇವರು ಕಳ್ಳ"

ಬೆರಗಾದ ಪುರೋಹಿತನು ಕೇಳಿದನು:— "ಅದು ಹೇಗೆ?"

"ನಿಮ್ಮ ಶಾಸ್ತ್ರ ಗ್ರಂಥಗಳಲ್ಲಿ ದೇವರು ಮೊದಲನೇ ಮನುಷ್ಯನಾದ ಆದಮ್ಮನ ಮೇಲೆ ಗಾಢವಾದ ನಿದ್ದೆಯನ್ನುಂಟು ಮಾಡಿ ಅವನ ಎಲುಬನ್ನು ತೆಗೆದನೆಂದು ಹೇಳಿದೆ. ಅದೊಂದು ಕಳ್ಳನ ಕೆಲಸ."

ಈಗ ಪುರೋಹಿತನಿಗೆ ಏನು ಹೇಳಬೇಕೆಂದು ತಿಳಿಯಲಿಲ್ಲ. ದೊರೆಯ ಪ್ರಶ್ನೆಗೆ ತನಗೆ ಉತ್ತರ ಕೊಡಲಿಕ್ಕಾಗಲಿಲ್ಲವೆಂದು ಅವನು ಬಹು ದುಃಖದಿಂದ ಮನೆಗೆ ಹೋದನು ಅವನ ಮಗಳು ಏನು ಸಮಾಚಾರವೆಂದು ಕೇಳಿದಾಗ ಅವನು ಅವಳಿಗೆ ಅದೆಲ್ಲವನ್ನೂ ಹೇಳಿದನು.

ಅವಳು ಬುದ್ಧಿವಂತೆಯಾದ ಹುಡುಗಿಯಾದುದರಿಂದ 'ಆ ಕೆಲಸವನ್ನು ನನಗೆ ಬಿಟ್ಟುಬಿಡೆಂ'ದು ಹೇಳಿದಳು.

ಮರುದಿನ ಬೆಳಿಗ್ಗೆ ಅವಳು ಬಾಡಿದ ಮುಖ ಮಾಡಿಕೊಂಡು ದೊರೆಯಲ್ಲಿಗೆ ಹೋದಳು, ಅವಳು ಹೇಳಿದಳು. "ನನಗೊಬ್ಬ ಆಫೀಸರರನ್ನು ಕೊಡಿರಿ. ಒಂದು ಶೋಧನೆ ನಡೆಸಬೇಕಾಗಿದೆ."

"ಎಂತಹ ಶೋಧನೆ?" ದೊರೆಯು ಕೇಳಿದನು.

ಅವಳು ಅವನಿಗೆ ಹೇಳಿದಳು:—"ಕಳೆದ ರಾತ್ರಿ ನಮ್ಮ ಮನೆಗೆ ಕಳ್ಳರು ನುಗ್ಗಿದ್ದಾರೆ. ಅವರು ಒಂದು ಬೆಳ್ಳಿಯ ಪಾತ್ರೆಯನ್ನು ಕದ್ದು ಅದರ ಸ್ಥಾನದಲ್ಲಿ ಒಂದು ಬಂಗಾರದ ಪಾತ್ರೆಯನ್ನು ಬಿಟ್ಟು ಹೋಗಿರುತ್ತಾರೆ"

ದೊರೆಯು ಒದರಿದನು:—'ಏನು? ಇದಕ್ಕಾಗಿ ನೀನು ದೂರಿಡುವೆಯಾ? ಅಂತಹ ಕಳ್ಳನು ಯಾವಾಗಲೂ ನನ್ನಲ್ಲಿಗೆ ಬರಲೆಂದು ನಾನು ಬಯಸುತ್ತೇನೆ.'

ಪುರೋಹಿತನ ಮಗಳು ಹೇಳಿದಳು:— "ಇದು ನಿಜವೇ? ಹಾಗಾದರೆ ನೀವು ದೇವರು ಒಬ್ಬ ಕಳ್ಳನು. ಏಕೆಂದರೆ ಅವನು ಮೊದಲನೆಯ ಮನುಷ್ಯನಿಂದ ಒಂದು ಎಲುಬನ್ನು ತೆಗೆದುಕೊಂಡು ಬದಲಿಗೆ ಅವನ ಶುಶ್ರೂಷೆಗೆ ಒಂದು ಸ್ತ್ರೀಯನ್ನು ಕೊಟ್ಟನೆಂದು ಏಕೆ ದೂರುವಿರಿ?

ಲೋಕದಲ್ಲಿ ನಡೆದು ಬರುವ ಪದ್ಧತಿಯಂತೆ ಹೆಂಗಸಿನ ಮಾತೇ ಕೊನೆಯದಾಯಿತು. ಆ ಮೇಲೆ ದೊರೆಯು ಎಂದೂ ಹೆಚ್ಚಿನ ಪ್ರಶ್ನೆಗಳನ್ನು ಕೇಳುತ್ತಿರಲಿಲ್ಲವಂತೆ.

—(ಮಿರರ್ ಪತ್ರಿಕೆಯಿಂದ.)

ಸರ್ವರಿಗೂ ದೀಪಾವಳಿಯ ಶುಭಾಶಯಗಳು !

ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ.

14 CT ಚಿನ್ನದ ಆಭರಣಗಳಲ್ಲಿ 58⅓% ಶುದ್ಧ ಪುತ್ತಳಿ ಚಿನ್ನ ಇರುತ್ತದೆ.

ಬೇಡದಿದ್ದಲ್ಲಿ 1 ರೂ. ಕಮ್ಮಿಯಲ್ಲಿ ಯಾವಾಗಲೂ ಬಜಾರು ಧಾರಣೆಗೆ ಪಡಕೊಳ್ಳುವ ಭರವಸೆ ಕೊಡುತ್ತೇವೆ.

ವಿ ಸೂ: ಹಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡಕೊಳ್ಳುವರೆ ಸರಕಾರದ ಲೈಸನ್ಸ್ ಸಿಕ್ಕಿರುತ್ತದೆ.

ಮದುವೆ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡಕೊಂಡು ಖಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.

ಶ್ರೀ ಕೃಷ್ಣಾ ಜ್ಯುವೆಲರಿ ಮಾರ್ಟ್

ತೆಂಕಪೇಟೆ — ಉಡುಪಿ.

ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.

ಫೋನ್ ನಂಬ್ರ: 66

ಪರಬ್ರಹ್ಮನಿರ್ಮಿತವಾದ ಈ ಪ್ರಪಂಚದಲ್ಲಿ ಪಾಷಾಣೇತ್ಯಾದಿ ನಿರ್ಜೀವ ವಸ್ತುಗಳಿಗಿಂತಲೂ ಸಜೀವಿಗಳಾದ ಪ್ರಾಣಿಗಳೂ, ಅವುಗಳೊಳಗೆ ಬುದ್ಧಿಯಿಂದ ಜೀವಿಸುವ ಮೃಗಪಕ್ಷಿಗಳೂ, ಅವುಗಳಿಗಿಂತಲೂ ಜ್ಞಾನಯುಕ್ತನಾದ ಮಾನವನೂ ಶ್ರೇಷ್ಠನು. ಜ್ಞಾನಿಯಾದ ಮಾನವನು ತನ್ನ ಐಹಿಕಾಮುಷ್ಮಿಕ ಸಾಧನೆಗಾಗಿ, ಪರೋಪಕಾರಾರ್ಥವಾಗಿ ವ್ಯವಹಾರ ಹೇತುಭೂತವಾದ ವಸ್ತು ನಿರ್ಮಾಣವನ್ನು ಮಾಡಬಲ್ಲನು. ಈ ವಸ್ತು ನಿರ್ಮಾಣ ಜ್ಞಾನವೇ ಶಿಲ್ಪವೆಂದೆನಿಸುತ್ತದೆ ಈ ಶಿಲ್ಪ ಜ್ಞಾನವು ಅನಾದಿಯಾದುದು, ಸದಾ ಪ್ರಚಲಿತವಾದುದು, ನಾಶರಹಿತವಾದುದು. ಜಗತ್ತಿನಲ್ಲಿ ಮಾನವೋತ್ಪತ್ತಿಗಿಂತಲೂ ಹಿಂದಿನ ಪಂಚಭೂತಗಳ ಉತ್ಪತ್ತಿ, ಅದಕ್ಕೂ ಪೂರ್ವದಲ್ಲಿ ಜಗತ್ಸೃಷ್ಟಿಯು ನಾಂದಿಯೇ ಶಿಲ್ಪದಿಂದಾಯಿತು. ಈ ಭಾವವನ್ನು ನಾವು ಅಪೌರುಷೇಯವಾದ ವೇದಗಳಿಂದ ತಿಳಿಯಬಹುದಾಗಿದೆ. ಜಗತ್ಸೃಷ್ಟಿ ಕ್ರಮವೂ ಶಿಲ್ಪವೇ. ಜೀವನವೂ ಶಿಲ್ಪಮಯವಾಗಿರುತ್ತದೆ. ಶಿಲ್ಪ ಸಂಸ್ಕಾರದ ವಿನಃ ಯಾವ ಜೀವಿಯೂ ಅಸ್ತಿತ್ವದಲ್ಲಿರಲಾರದು. ಈ ಶಿಲ್ಪ ಜ್ಞಾನದಿಂದಲೇ ಮಾನವನು ವಿಶ್ವದ ರಹಸ್ಯವನ್ನು ಅಲ್ಲದೆ ತನ್ನನ್ನು ತಾನು ತಿಳಿಯಬಲ್ಲನು. ಇಂದು ಮಾನವನು ವಿಜ್ಞಾನದ ಮಡಿಲಲ್ಲಿರುವನು. ವಿಜ್ಞಾನವಾದರೋ ಶಿಲ್ಪದಿಂದ ಹೊರತಲ್ಲ. ಶಿಲ್ಪದ ವಿಶ್ವವ್ಯಾಪಕತ್ವವು ಅಚಿಂತ್ಯವಾದುದು. ಸರ್ವ ಪ್ರಪಂಚದ ಮೂಲ ಕಾರಣವಾದ ಈ ವಿಶ್ವಶಿಲ್ಪದ, ತತ್ಕಾರಣಭೂತನಾದ ವಿಶ್ವಕರ್ತಾರನ ಸಾಕ್ಷಾತ್ಕಾರಾರ್ಥವಾಗಿ ಆದಿಯಲ್ಲಿ ಬ್ರಹ್ಮರ್ಷಿಗಳು ಅಮೋಘವಾದ ತಪಸ್ಸನ್ನಾಚರಿಸಿ ದಿವ್ಯ ಸಂಶೋಧನೆಯನ್ನು ಗೈದಿರುವರು. ಈ ಭಾವವು ಋಗ್ವೇದ ದಶಮ ಮಂಡಲ ಹಾಗೂ ಯಜುರ್ವೇದ ತೈತ್ತಿರೀಯ ಸಂಹಿತೆಯಲ್ಲಿ ಪ್ರಸಿದ್ಧವಾಗಿರುವ ವಿಶ್ವಕರ್ಮ ಸೂಕ್ತದಿಂದ ವ್ಯಕ್ತವಾಗುತ್ತದೆ.

ಶ್ರು॥ ಕಿಂ ಸ್ವಿದಾಸೀ ದಧಿಷ್ಠಾನ ಮಾರಂಭಣಂ ಕತಮತ್ಸ್ವಿತ್ ಕಥಾಸೀತ್ । (ಋ॥ ವಿ. ಸೂ.)

ಆದಿಯಲ್ಲಿ ಜಗತ್ತು ಏನಾಗಿತ್ತು? ಹೇಗಿತ್ತು? ಕಾರಣಭೂತನಾರು? ಎಂದು ಪ್ರಶ್ನಿಸಿ ತಮ್ಮ ತಪೋಬಲದಿಂದ ಪಂಚಮಹಾ ಭೂತಗಳನ್ನೆಲ್ಲಾ ಶೋಧಿಸಿ ಕೊನೆಗೆ ಅಂತರ್ಮುಖರಾಗಿ 'ನೇತಿ, ನೇತಿ' ಇದಲ್ಲ, ಇದಲ್ಲ "ಏತಸ್ಮಾತ್ ಪರಮಸ್ತಿ" ಇದಕ್ಕೂ ಬೇರೆಯಾದುದಿದೆ.

ಶ್ರು॥ ಯತೋ ಭೂಮಿಂ ಜನಯನ್ ವಿಶ್ವಕರ್ಮಾ ವಿದ್ಯಾಮೌರ್ಣೋನ್ಮಹಿನಾ ವಿಶ್ವ ಚಕ್ಷಾಃ ॥ (ಋ॥ ವಿ. ಸೂ.)

ಈ ಸಕಲ ಭುವನ ಬ್ರಹ್ಮಾಂಡಗಳೂ ಸಮರ್ಥನಾದ ವಿಶ್ವಕರ್ಮನಿಂದಲೇ ನಿರ್ಮಾಣವಾಗಿವೆ—ಎಂಬ ನಿರ್ಧಾರಕ್ಕೆ ಬಂದಿರುವರು.

ಶ್ರು॥ ಯ ಇಮಾ ವಿಶ್ವಾಭುವನಾನಿ ಜುಹ್ವ ದೃಷಿರ್ಹೋತಾ ನಿಷ ಸೀದ ಪಿತಾನಃ ।

ಸ ಆ ಶಿಷಾ ದ್ರವಿಣ ಮಿಚ್ಛಮಾನಃ ಪರಮಚ್ಛದೋ ವರ ಆ ವಿ ವೇಶ ॥ (ಋ. ವಿ. ಸೂ.)

ಶಿಲ್ಪ ಸಂಸ್ಕೃತಿ

ಮೊದಲು ಪಂಚ ಭೂತಾತ್ಮಕ ಸೃಷ್ಟಿಯಾಯಿತು. ಇದೂ ಒಂದು ಶಿಲ್ಪವೇ. ಕರ್ತಾರನ ಕಾರ್ಯವೆಲ್ಲವೂ ಶಿಲ್ಪದ ಬೇರೆ ಬೇರೆ ಪ್ರಕಾರಗಳಲ್ಲವೆ? ನಮಗೂ ಮೊದಲು ಹುಟ್ಟಿಕೊಂಡು ನಮ್ಮೊಡನೆಯೇ ಅವ್ಯಾಹತವಾಗಿ ಸಂಸ್ಕಾರಗೊಂಡ ಶಿಲ್ಪ ಸಂಸ್ಕೃತಿಯ ಬಗ್ಗೆ ನಾವು ತಿಳಿದುಕೊಳ್ಳುವುದು ಅಗತ್ಯ.

ಲೇಖಕರು: ಶ್ರೀ "ಆಪಸ್ತಂಭ"

ವಿಶ್ವಕರ್ಮನು ಸೃಷ್ಟಿಗೆ ಪೂರ್ವದಲ್ಲಿ ಎಲ್ಲ ಲೋಕಗಳನ್ನೂ ಪಂಚಮಹಾಭೂತ ತತ್ವಗಳನ್ನೂ ತನ್ನಲ್ಲೇ ಅಡಗಿಸಿಕೊಂಡಿದ್ದು ತನ್ನ ಸಂಕಲ್ಪದಂತೆ ಇಚ್ಛಾ ಮಾತ್ರದಿಂದ ಚರಾಚರಾದಿ ಸರ್ವ ಜಗತ್ತನ್ನೂ ಕ್ರಮವಾಗಿ ಸೃಷ್ಟಿಸಿ, ತನ್ನ ಸ್ವರೂಪ ಚೈತನ್ಯವನ್ನು ಬೇರೆ ಪೃಥಕ್ ಸ್ಥಾನದಲ್ಲಿ ವಾಸಿಸುತ್ತಾನೆ. ಪ್ರಳಯ ಕಾಲದಲ್ಲಿ ಸರ್ವವನ್ನೂ ತನ್ನಲ್ಲೇ ಅಗ್ನಿಗೆ ಆಹುತಿ ಇತ್ತಂತೆ ಸಂಹರಿಸಿ ಕೊಂಡವನಾಗಿ—ವಿಶ್ವಯಜ್ಞ ಕರ್ತಾರನಾಗಿ ತನ್ನಲ್ಲೇ ಅಡಗಿಸಿಕೊಂಡು, ಪುನಃ ಯಥಾ ಪ್ರಕಾರವಾಗಿ ಸರ್ವವನ್ನೂ ಸೃಷ್ಟಿ ಮಾಡುವವನಾಗಿಯೂ, ತಾನೊಬ್ಬನೇ ಅಧಿಷ್ಠಿತನಾಗಿರುತ್ತಾನೆ.

ಶ್ರು॥ ಏಷದೇವೋ ವಿಶ್ವಕರ್ಮಾ ಮಹಾತ್ಮಾ ಸದಾ ಜನಾನಾಂ ಹೃದಯೇ ಸನ್ನಿವಿಷ್ಟಃ । ಹೃದಾ ಮನೀಷಾ ಮನಸಾಭಿಕ್ಲೃಪ್ತೋ ಯ ಏನಂ ವಿದುರ ಮೃತಾಸ್ತೇ ಭವಂತಿ ॥ (ಶ್ವೇತಾಶ್ವತ ರೋಪನಿಷತ್)

ಆ ವಿಶ್ವಕರ್ಮನು ಸದಾ ಕಾಲವೂ ಸಕಲ ಜೀವರಾಶಿಗಳ ಹೃದಯದಲ್ಲೂ ಸನ್ನಿವಿಷ್ಟನಾಗಿರುತ್ತಾನೆ. ಯಾರು ಆತನನ್ನು ಪರಿಶುದ್ಧವಾದ ಮನಸ್ಸಿನಿಂದ ತಮ್ಮಲ್ಲಿಯೇ ತಿಳಿಯುವರೋ ಅವರು ಅಮೃತತ್ವ (ಬ್ರಹ್ಮಾನಂದ)ವನ್ನು ಹೊಂದುತ್ತಾರೆ. ಈ ಭಾವವನ್ನೇ ಗೀತಾಚಾರ್ಯನಾದ ಶ್ರೀ ಕೃಷ್ಣನು—

ಈಶ್ವರಃ ಸರ್ವ ಭೂತಾನಾಂ ।
ಹೃದ್ದೇಶೇ ಅರ್ಜುನ ತಿಷ್ಠತಿ ।
ಭ್ರಾಮಯನ್ ಸರ್ವ ಭೂತಾನಿ ।
ಯಂತ್ರಾ ರೂಢಾನಿ ಮಾಯಯಾ ॥
ತಮೇವ ಶರಣಂ ಗಚ್ಛ । ಸರ್ವ ಭಾವೇನ ಭಾರತ ।
ತತ್ಪ್ರಸಾದಾತ್ ಪರಾಂ ಶಾಂತಿಂ ।
ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಂ ॥

ಎಲೈ ಅರ್ಜುನಾ! ಈಶ್ವರನು (ವಿಶ್ವಕರ್ತಾರನು) ಸರ್ವ ಭೂತಾಂತರಾತ್ಮನಾಗಿ ಸರ್ವರ ಹೃದಯದಲ್ಲೂ ನೆಲೆಸಿರುವನು. ಆತನನ್ನು ಸರ್ವ ವಿಧದಿಂದಲೂ ಶರಣು ಹೋಗು. ನಿನಗೆ ಶಾಶ್ವತ ಶಾಂತಿಯು ಲಭಿಸುತ್ತದೆ, ಎಂದು ಬೋಧಿಸಿರುವುದನ್ನು ಗಮನಿಸತಕ್ಕದಾಗಿದೆ.

ಶ್ರು॥ ವಿಶ್ವಕರ್ಮಾಹ್ಯಜನಿಷ್ಟ ದೇವ ಆದಿದ್ಗಂಧರ್ವೋ ಅಭವದ್ದ್ವಿತೀಯಃ । ತೃತೀಯಪಿತಾ ಜನಿತೌಷಧೀನಾಂ ಅಪಾಂ ಗರ್ಭಂ ವ್ಯದಧಾತ್ಪುರುತ್ರಾ ॥ (ಯಜುಃ ವಿ. ಸೂ.)

ದೇವತಿರ್ಯಗಾದಿ ವಿವಿಧ ಭೇದಗಳನ್ನುಂಟು ಮಾಡಿದ ಆ ವಿಶ್ವಕರ್ಮನು ಮೊದಲು ಸ್ವಯಂ ಬ್ರಹ್ಮನಾಗಿಯೂ, ಅನಂತರ ಗಂಧರ್ವನಾಗಿಯೂ, ತರುವಾಯ ಸಕಲೌಷಧಿಗಳ ಜನಕನಾದ ಸೋಮನಾಗಿಯೂ ಬಹುವಿಧವಾದ ರೂಪಗಳಿಂದ ವೈದೋರಿಸನು ಶುದ್ಧ ಸತ್ವಗುಣ ಯುತವಾದ ಪರಮಾತ್ಮ ಸಾಕ್ಷಾತ್ಕಾರವೆಂಬ ತನ್ನ ದಿವ್ಯ ದರ್ಶನವನ್ನು ಪ್ರತಿಯೊಂದು ವಸ್ತುವಿನಲ್ಲೂ ಬೇರೆ ಸರ್ವರೂಪಧರನಾಗಿರುತ್ತಾನೆ. ಈ ಜಗತ್ಸೃಷ್ಟಿ ಜ್ಞಾನವೇ ಶಿಲ್ಪವೆನಿಸುತ್ತದೆ ಇಂತಹ ವಿಶ್ವಶಿಲ್ಪವನ್ನು ತಪೋಬಲದಿಂದ ಸಾಕ್ಷಾತ್ಕರಿಸಿಕೊಂಡು ಜಗತ್ತಿಗೆ ಅದರ ಆದ್ಯ ಪ್ರವರ್ತಕರಾದವರು ಭಗವಾನ್ ಭೌವನ ಮಹರ್ಷಿಗಳು.

ಶ್ರು॥ ಏತೇನ ಹವಾ ಐಂದ್ರೇಣ ಮಹಾಭಿಷೇಕೇಣ ಕಶ್ಯಪೋ ವಿಶ್ವಕರ್ಮಾಣಂ ಭೌವನ ಮಭಿಷಿಷೇಚ । ತಸ್ಮಾದು ವಿಶ್ವಕರ್ಮಾ ಭೌವನ ಸಮಗ್ರಾಂ ಸರ್ವತಃ ಪೃಥಿವೀಂ ಜಯನ್ ಪರಿಯಾಯ ರಾಜನೇ ಸ್ವರಾಜೇ ॥ (ಐ॥ ಐತರೇಯ ಬ್ರಾಹ್ಮಣ.)

ಈ ಪರಮ ಜ್ಞಾನವನ್ನು ಜಗತ್ತಿಗೆ ಉಪದೇಶಿಸಿದ ಭೌವನ ಮಹರ್ಷಿಗಳನ್ನು ಸಮಸ್ತ ಋಷಿಗಳೂ ಸಾಕ್ಷಾತ್ ವಿಶ್ವಕರ್ಮನೆಂದೇ ತಿಳಿದು ಭಕ್ತಿಯಿಂದ ನಮಸ್ಕರಿಸಿ ಮಹಾಭಿಷೇಕವಂ ಗೈದು ಋಷಿಮಹಾಸಭೆಯ ಅಧ್ಯಕ್ಷರನ್ನಾಗಿ ಮಾಡಿ ಗೌರವಿಸಿದರು. ಭೌವನ ಮಹರ್ಷಿಗಳಿಂದ ಆ ಶಿಲ್ಪವನ್ನು ಕಶ್ಯಪ ಮಹರ್ಷಿಗಳು ಪರಿಗ್ರಹಿಸಿ ರಚಿಸಿದರು. ಕಾಶ್ಯಪ ಶಿಲ್ಪವು ಸುಂದರವೂ ಬಲಿಷ್ಠವೂ ತೇಜೋಮಯವೂ ಆದ್ದು ಜಗತ್ಸೃಷ್ಟಿ ಕ್ರಮದಂತೆಯೇ ಗೌರವಿಸಲ್ಪಟ್ಟಿದೆ. ಮಹಾಜ್ಞಾನಿಗಳಾದ ಕಶ್ಯಪರಿಂದ ಜ್ಞಾನಜ್ಯೋತಿ ರೂಪವಾದ ಶಿಲ್ಪವನ್ನು ಸರ್ವರೂ ತಿಳಿಯುವಂತಾಯಿತು.

ಶ್ರು॥ ಶಿಲ್ಪಾನಿ ಶಂಸಂತಿ ದೇವಶಿಲ್ಪಾನ್ಯೇತೇಷಾಂ ವೈ ಶಿಲ್ಪಾನಾಮನು ಗ ವ್ಯತೇ॥ ಹಸ್ತಿಕಂಸೋ ವಾಸೋ ಹಿರಣ್ಯ ಮಶ್ವತರೀ ರಥಃ ಶಿಲ್ಪಂ॥ ಶಿಲ್ಪಂ ಹಾಸ್ಯ ಧಿಗಮ್ಯತೇ ಯ ಏವಂ ವೇದ ಯದೇವ ಶಿಲ್ಪಾನೀ ಆತ್ಮಸಂಸ್ಕೃತಿರ್ವಾ ಶಿಲ್ಪಾನಿ ಛಂದೋಮಯಂ ವಾ ಏತೈರ್ಯಜಮಾನ ಆತ್ಮಾನಂ ಸಂಸ್ಕುರುತೇ (ಐತರೇಯ ಬ್ರಾಹ್ಮಣ)

ಶಿಲ್ಪವು ಸಕಲ ಜಗತ್ತಿನಲ್ಲೂ ಏಕಮಾತ್ರ ಪ್ರಶಂಸೆಗೆ ಕಾರಣವಾಗಿರುತ್ತದೆ. ಏಕೆಂದರೆ ಜಗತ್ಸೃಷ್ಟಿ ಕ್ರಮರೂಪವಾದ ದೈವಶಿಲ್ಪವೇ ಇತರ ಎಲ್ಲಾ ಮಾನವ ಶಿಲ್ಪಗಳಿಗೂ ಕಾರಣ ರೂಪವಾಗಿರುವುದರಿಂದ ಮಾನವ ಶಿಲ್ಪವೂ ದೈವಶಿಲ್ಪದಂತೆಯೇ ಮಹತ್ವಪೂರ್ಣವಾಗಿದೆ. ಶಿಲೆ, ಲೋಹ, ಮರ, ಚಿನ್ನ, ಕಬ್ಬಿಣ ಈ ಪಂಚ ವಿಧ

(೨೩ನೇ ಪುಟ ನೋಡಿರಿ)

ಕನ್ನಡ ನಾಡಿನ ಹೆಮ್ಮೆಯ ಪ್ರಕಾಶನದ ಹೊಸ ಕೃತಿಗಳು

ಬೀCHIಯವರ

ತಿಂಮನ ತಲೆ	೧.೭೫
ಹುಲಿಯ ಬೆನ್ನ ಮೇಲಿಂದ	೨.೫೦
ಖಾದಿ ಸೀರೆ	೨.೫೦
ಆಗಿಷ್ಟು ಈಗಿಷ್ಟು	೨.೦೦

ಕೃಷ್ಣಮೂರ್ತಿ ಪುರಾಣಿಕರ

	ಹೆಣ್ಣು ಸಂತಾನ	೨.೦೦
	ಗಯ್ಯಾಳಿಗರತಿ	೨.೦೦
	ಮಧುರ ವೀಣೆ	೨.೦೦
	ಮೀಸಲು ನೀರೆ	೨.೦೦
ಹೊಸ ಮುದ್ರಣ	ಮಂಗಲಾಕ್ಷತೆ	೨.೫೦
ಹೊಸ ಮುದ್ರಣ	ಸೈರಂಧ್ರಿ	೧.೫೦

ಉಮಾಪತಿಯವರ

ಉಡುಗೊರೆಗೆ ಉತ್ತಮ ಕೃತಿಗಳು	ಮದುವೆಯ ಮೊದಲ ವರ್ಷ	೨.೦೦
	ಆಣೆ ಮುತ್ತು ಭಾಗ ೧	೪.೦೦
	ಆಣೆ ಮುತ್ತು ಭಾಗ ೨	೪.೦೦

ಅಶ್ವಥರ ಹಾಸ್ಯ ಪ್ರಬಂಧ

ಮೂಗಿನ ಮೇಲೆ	೩.೦೦

ಎ. ಎಸ್. ಮೂರ್ತಿಯವರ

ಗಂಡಸ್ತನ	೧.೫೦

ಶಾಲೆಗಳಿಗೆ, ಪುಸ್ತಕ ಭಂಡಾರಗಳಿಗೆ, ಪಂಚಾಯಿತಿಗಳಿಗೆ ಬೇಕಾದ ಎಲ್ಲ ಸಾಹಿತ್ಯ ಕೃತಿಗಳು ದೊರೆಯುತ್ತವೆ.

ಅ. ನ. ಕೃ, ತ. ರಾ ಸು, ಬೀಚಿ, ತ್ರಿವೇಣಿ, ಕಟ್ಟಿಮನಿ, ರಾಂಮೂರ್ತಿ, ಪುರಾಣಿಕ, ಜಯಲಕ್ಷ್ಮಿ, ನರಸಿಂಹಯ್ಯ ಈ ಎಲ್ಲರ ಕೃತಿಗಳು ನಮ್ಮಲ್ಲಿ ಸದಾ ದೊರೆಯುತ್ತವೆ.

ಸುದರ್ಶನ ಪ್ರಕಾಶನ ತಾರಾನಿವಾಸ ತಿಪಟೂರು

ಕಟ್ಟಾಣಿ ಕಡ್ಡಿ ಬಸವಿ

ಹಳ್ಳಿಯ ಗೊಂಬೆಯೆಂದು ತಿರಸ್ಕೃತಳಾದ ಬಸವಿ ಕಾಲೇಜ ಸೇರಿ ವಾಸುವನ್ನು ಆಕರ್ಷಿಸಿದಳು. ಆದರೆ, ತನ್ನ ಮನದ ರಾಣಿಯ ರೂಪದಲ್ಲಿ ತಾನೇ ಕೈಬಿಟ್ಟ ಕಟ್ಟಾಣಿಯನ್ನು ಕಂಡ ಆತನ ಸ್ಥಿತಿ ಏನಾಗಬೇಕು?

ಲೇಖಕರು: ಶ್ರೀ ಪಿ. ಪರಮೇಶ್ವರಪ್ಪ.

—: ಪಾತ್ರವರ್ಗ :—

ರಾಮರಾಯರು

ವಾಸು—ರಾಮರಾಯರ ಮಗ

ಚನ್ನಪ್ಪ—ರಾಮರಾಯರ ನೆಂಟರು

ಕಟ್ಟಾಣಿ ಕಡ್ಡಿ ಬಸವಿ—ಚನ್ನಪ್ಪನ ಮಗಳು (ವಾಸುವಿನ ಪತ್ನಿ)

[ರಾಮರಾಯರ ಮನೆ. ವಾಸು ಕುರ್ಚಿಯಲ್ಲಿ ಕುಳಿತುಕೊಂಡು Paper ಓದುತ್ತಿರುತ್ತಾನೆ. ಆನಂತರ ರಾಮರಾಯರ ಪ್ರವೇಶ.]

ರಾಯರು— ವಾಸು ವಾಸು

ವಾಸು – ಏನಪ್ಪಾ.

ರಾಯರು — ನಾನು ಹೇಳಿದ ವಿಷಯ ಏನು ಮಾಡಿದೆ.

ವಾಸು— ಯಾವ ವಿಷಯ

ರಾಯರು— ಈಗ [ಸರಿಹೋಯ್ತು ನೋಡು ರಾತ್ರಿಯೆಲ್ಲಾ ರಾಮಾಯಣ ಕೇಳಿ ಬೆಳಗ್ಗೆ ಎದ್ದು ರಾಮ ಸೀತೆ ಯಾರು ಅಂದಾಗಾಯಿತು. ಅದೇ ನಿನ್ನ ಹೆಂಡ್ತಿ ಕಟ್ಟಾಣಿ ಕಡ್ಡಿ ಬಸವಿ ಕರೆಸಿಕೊಳ್ಳುವುದು.

ವಾಸು— ಆ ಕೆಲಸ ಮಾತ್ರ ಜೀವವಿರುವ ವರೆಗೂ ಸಾಧ್ಯವಿಲ್ಲ.

ರಾಯರು— ಹೀಗೆಲ್ಲಾ ಹಠಮಾಡಿದರೆ ಹೇಗೆ ವಾಸು. ಅವಳ ಜೀವನ ಗತಿ ಏನಾಗಬೇಕು.

ವಾಸು— ಕೂಲಿ ಮಾಡಿ ಜೀವಿಸಲಿ. ಬೇಡ ಅನ್ನುವರಾರು.

ರಾಯರು— ಅಲ್ಲಾ ವಾಸು, ಶಾಸ್ತ್ರೋಕ್ತವಾಗಿ ಮದ್ವೆಮಾಡಿಕೊಂಡವಳು........

ವಾಸು— ಬ್ರಾಹ್ಮಣರ ಮಂತ್ರ ಪಠನದ ಮಧ್ಯೆ, ಸಪ್ತಪದಿ ತುಳಿದು, ಮಾಂಗಲ್ಯ ಧಾರಣೆ ಮಾಡಿದೆ. ಈಗ ಅಲ್ಲ ಅಂದವರಾರು?

ರಾಯರು— ಸಾಹುಕಾರನ ಮನೆ ಸೊಸೆ ಕೂಲಿಗೆ ಹೋದರೆ ಏನು ಅನ್ನುತ್ತಾರೆ?

ವಾಸು— ಪ್ರಪಂಚವನ್ನು ಮೆಚ್ಚಿಸಲು ಜನಾರ್ದನನಿಂದಲೂ ಸಾಧ್ಯವಿಲ್ಲವಪ್ಪಾ

ರಾಯರು— ಈ ರೀತಿಯಾಗಿ ಕೊಂಕು ನುಡಿಗಳು ಮಾತನಾಡಬಾರದು ವಾಸು. ತಿಳಿದವನಿಗೆ ಹೆಚ್ಚಿಗೆ ಹೇಳಲಾರೆ. ಮುಂದಿನ ಕಾರ್ಯಕ್ರಮ ಸುಸೂತ್ರವಾಗಿ ನಡೆಯಬೇಕು.

ವಾಸು— ಆ ಹಳ್ಳಿ ಗೊಂಬೆಯನ್ನು ಯಾಕೆ ಮದ್ವೆ ಮಾಡಬೇಕಿತ್ತು?

ರಾಯರು— ಅವಳು ಹಳ್ಳಿಯವಳಾದ್ರು ಏತಕ್ಕೆ ಕಡಿಮೆಯಾಗಿದ್ದಾಳೋ? ಮುದ್ದು ಮುದ್ದಾಗಿ ಒಳ್ಳೆ ಟೊಮಟೋ ಹಣ್ಣು ಇದ್ದಾಗೆ ಇದ್ದಾಳೆ.

ವಾಸು— ಅಂಗಾರೆ ಕೊಯ್ದು ತಿನ್ನಲೇನು?

ರಾಯರು— ಕೊಯ್ದು ತಿನ್ನುವುದಕ್ಕಿಂತ ನಿನ್ನ ದಾರಿಗೆ ಸರಿ ಹೋಗುವಂತೆ ಹೊಂದಿಸಿಕೊಳ್ಳಬೇಕು ವಾಸು.

ವಾಸು— ಆ ಹಳ್ಳಿ ಹೆಣ್ಣಿಗೆ ಅಷ್ಟು ಬುದ್ಧಿ ಇದೆಯೇ? ಆವಳನ್ನು ಕಟ್ಟಿಕೊಂಡದ್ದೇ ತಪ್ಪಾಯಿತು.

ರಾಯರು— ಅಲ್ಲಾ ವಾಸು, ಹಳ್ಳಿ ಹೆಣ್ಣುಗಳ ಹೃದಯ ಸಂಸ್ಕಾರ ಸಂಸ್ಕೃತಿಗಳಿಂದ ಇರುವುದಿಲ್ಲವೇ? ನಿನ್ನ ಹೆಂಡ್ತಿ ಏನಾಗಿದ್ದಾಳೆ ಅಂತಾ? ರೂಪ ಇಲ್ಲವೇ? ವಿದ್ಯೆವಿಲ್ಲವೇ? ತಂಬೂರಿ ಸರಿಯಾಗಿದ್ದರೆ ಶುದ್ಧ ಸ್ವರವನ್ನಾದರೂ ನುಡಿಸಬಹುದು. ಕಡೇ ಪಕ್ಷ ಅಪಶ್ರುತಿಯನ್ನಾದರೂ ನುಡಿಸಬಹುದು ಸಿಟಿಯಲ್ಲಿರುವ ಬಂಡ ಗಂಡುಗಳಿಗೆ ಮಧುರ ರಸವನ್ನು ತುಂಬಿರುವ ಹಳ್ಳಿ ಹೆಣ್ಣು ಏತಕ್ಕೆ ಕಡಿಮೆಯಾಗಿದ್ದಾರೆ? ಕುದುರೆ ಹಳ್ಳಿ ಆದ್ರು ಚಾಲಕ ಚುರುಕಾಗಿರಬೇಕು.

ವಾಸು— ಆಯಿತೇನಪ್ಪಾ ನಿನ್ನ ಭಾಷಣ?

ರಾಯರು— ನಾನು ಭಾಷಣ ಮಾಡುತ್ತಿಲ್ಲ ವಾಸು.

ವಾಸು— ಮತ್ತೇನು ಒಳ್ಳೆ ಚೀಫ್ Minister ಭಾಷಣ ಮಾಡಿದಂಗೆ ಮಾಡಿದೆ.

ರಾಯರು— ನಾನು ಏನೇ ಮಾಡಿದರೂ ನಿನ್ನ ಸುಖಕ್ಕೋಸ್ಕರ ವಾಸು.

ವಾಸು— ನನ್ನ ಸುಖ ತಾನೇ ಬಯಸುತ್ತಿರುವುದು?

ರಾಯರು— ಅಹುದು ಕಣೋ. ನನ್ನ ಜೀವನ ಸರ್ವಸ್ವವೆಲ್ಲಾ ನೀನೇ ಆಗಿದ್ದೀಯೇ? ಗಿಡಕ್ಕೆ ಒಂದೇ ಕಾಯಿಯಾಗಿ ಹುಟ್ಟಿದ್ದೀಯೊ. ನಮ್ಮ ವಂಶ ಉದ್ಧಾರವಾಗಬೇಡವೇ? ನಾನು ಮೊಮ್ಮಗನನ್ನು ಕೈಯಲ್ಲಿ ಎತ್ತಿಕೊಳ್ಳುವುದೆಂದು? ಅವನ ತೊದಲು ನುಡಿಗಳನ್ನು ಕೇಳಿ ನಗುವುದೆಂದು ವಾಸು?

ವಾಸು— ನಾನು ಹೇಳಿದಂತೆ ಮಾಡಿದರೆ ನಿನ್ನ ಆಸೆಯೆಲ್ಲಾ ನೆರವೇರುತ್ತದೆ.

ರಾಯರು— (ಆತುರದಿಂದ) ಏನದು ವಾಸು?

ವಾಸು – ಇನ್ನೊಂದು ಮದ್ವೆ ಮಾಡಿಬಿಡು ಎಲ್ಲಾ ಸರಿ ಹೋಗುತ್ತದೆ.

ರಾಯರು— ಇನ್ನೊಂದು ಮದ್ವೆ! ಅದೆಲ್ಲಾ ಹೇಗೆ ಸಾಧ್ಯ ವಾಸು.

ವಾಸು— ಏಕೆ ಸಾಧ್ಯವಿಲ್ಲಾ ಅಂತಾ.

ರಾಯರು— ಕಟ್ಟಾಣಿ ಕಡ್ಡಿ ಬಸವಿ ಸುಮ್ಮನೆ ಇರುತ್ತಾಳೆಯೇ?

ವಾಸು— ಇರದೆ ಏನು ಮಾಡುತ್ತಾಳೆ. ನಾಲ್ಕು ದಿನ ಅಳಬಹುದು. ಆ ಮೇಲೆ ಅವಳೆ ತೆಪ್ಪಗಾಗುತ್ತಾಳೆ.

ರಾಯರು— ಚನ್ನಪ್ಪ ಕೋರ್ಟಿಗೆ ಹೋದರೆ ಆಸ್ತಿಯಲ್ಲಿ ಅರ್ಧಭಾಗ ಕೊಡಬೇಕು. ನಮ್ಮ ಮಾನಮರ್ಯಾದೆ ಮಣ್ಣುಪಾಲಾಗುತ್ತೆ ಗೊತ್ತೋ.

ವಾಸು— ಹಳ್ಳಿ ಜನಕ್ಕೆಲ್ಲಾ ಹೆದರಿದರೆ ಹೇಗಪ್ಪಾ.

ರಾಯರು— ಅವರು ಹಳ್ಳಿಯವರಾದರೂ ಕಾನೂನು ಹಳ್ಳಿಯವಲ್ಲ. ಭಾರತ ದೇಶಕ್ಕೆ ಒಂದೇ ಕಾನೂನು. ಬಡವ ಬಲ್ಲಿದ, ಹಳ್ಳಿಯವನು ದಿಲ್ಲಿಯವನು ಅಂತಾ ತಾರತಮ್ಯವಿಲ್ಲ ವಾಸು.

ವಾಸು— ಅದೆಲ್ಲಾ ನನಗೆ ಗೊತ್ತಿದೆ.

ರಾಯರು— ಗೊತ್ತಿದ್ದರೂ ಏಕೆ ಹಠ ಮಾಡುತ್ತೀಯೊ. ನಿನ್ನ ಹೆಂಡ್ತಿಯನ್ನು ಕರೆದುಕೊಂಡು ಬಂದು ಸುಖವಾಗಿರು.

ವಾಸು— ಆ ಕಟ್ಟಾಣಿ ಕಡ್ಡಿ ಬಸವಿ ಮಾತು ಎತ್ತಬೇಡ ಅಂದ್ರೆ.

ರಾಯರು— ಅವರಪ್ಪ ಕಾಗದ ಬರೆಯುವುದಂತೂ ಲೆಕ್ಕವೇ ಇಲ್ಲಾ.

ವಾಸು— ಮತ್ತೆ ಏನಂತಾ ಬರೆದಿದ್ದಾನೆ?

ರಾಯರು— ನಿಮ್ಮ ಸೊಸೆಯನ್ನು ಮನೆಗೆ ಕರೆಸಿಕೊಳ್ಳಿ. ಇಲ್ಲದೆ ಇದ್ರೆ....

ವಾಸು— ಇಲ್ಲದೆ ಇದ್ರೆ ಏನು ಮಾಡುತ್ತಾನಂತೆ?

ರಾಯರು— ಮುಂದಿನ ಕ್ರಮ ಕೈಗೊಳ್ಳಬೇಕಾಗಿ ಬರುತ್ತೆ.

ವಾಸು — ಅಪ್ಪಾ, ಅವರ ದಂಗು ಮಾತಿಗೆ ಬೆರಗಾಗಬೇಡ.

ರಾಯರು— ಮಾನಮರ್ಯಾದೆಗೋಸ್ಕರ ಹೆದರಬೇಕು ವಾಸು ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬರದು. ತಾತಂದಿರು ಗಳಿಸಿಕೊಂಡು ಬಂದಿರುವ ವಂಶದ ಗೌರವವನ್ನು ಕಾಪಾಡಿಕೊಂಡು ಬರಬೇಕು. ಇಲ್ಲಿಯ ವರೆಗೂ ಕಾಪಾಡಿದೆ. ಇನ್ನು ನೀನು ಕಾಪಾಡಬೇಕು. ತಂದೆಯಂತೆ ಮಗನೆಂದು ತೋರಿಸಬೇಕು.

ವಾಸು— ಅಪ್ಪಾ ಅದೆಲ್ಲಾ ಹಳೆಯ ರಾಮಾಯಣ ಬೇಡ. ನಾನು ಹೇಳಿದಂತೆ ಇನ್ನೊಂದು ಮದ್ವೆ ಮಾಡು.

ರಾಯರು— ಇಷ್ಟು ಹೊತ್ತಿನ ತನಕ ಹೇಳಿದ್ದು ಸಾಹೇಬರ ಕೇರಿಯಲ್ಲಿ ಬಸವ ಪುರಾಣ ಓದಿದಂತಾಯಿತು.

ವಾಸು— ಅವಳು ನನ್ನ ಕಾಲೇಜು ಮೇಟ್.

ರಾಯರು— ಅವಳಿಗೆ ಚಪ್ಪಲಿ ಏಟು ಬೇಕಾಗಿದೆ ಅಂತಾ ಕಾಣುತ್ತೆ.

ವಾಸು ಅವಳು ನನ್ನ ಅಂತಸ್ತಿಗೆ ತಕ್ಕಂತೆ ಇದ್ದಾಳೆ.

ರಾಯರು— ನಿನ್ನ ಹಳೆ ಕಂತೆ ನನ್ನ ಮುಂದೆ ಬಿಚ್ಚಬೇಡ ಅಂದೆ.

ವಾಸು— ನಿನ್ನ ಹೊಸ ಕಂತೆ ನನ್ನ ಮುಂದೆ ಹೇಳಬೇಡ.

ರಾಯರು— ನನ್ನ ಮಾತು ಕೇಳು ವಾಸು. ಚಾಡಿ ಕೋರರ ಮಾತು ಕಟ್ಟಿಕೊಂಡು ಹಾಳಾಗ ಬೇಡ ಹಳ್ಳಕ್ಕೆ ಬಿದ್ದರೆ ಆ ಮೇಲೆ ಎತ್ತುವವರು ಯಾರೂ ಇಲ್ಲ. ಎಲ್ಲರೂ ನಿಂತು ನೋಡಿ ಕೇಕೆಹಾಕಿ ನಗುತ್ತಾರೆ.

ವಾಸು— ನಾನೇನು ಚಾಡಿಮಾತನ್ನು ನಂಬಲು ಎಳೆಕೂಸಲ್ಲ.

ರಾಯರು— ಅದು ನನಗೆ ಗೊತ್ತಿದೆ ವಾಸು.

ವಾಸು— ಸುಮ್ಮನೆ ಚರ್ಚೆ ಏತಕ್ಕೆ? ನನ್ನ ಕೊನೆ ತೀರ್ಮಾನ ಹೇಳಿಬಿಡುತ್ತೇನೆ.

(೬ನೇ ಪುಟ ನೋಡಿರಿ)

ಜನರ ಅಭಿರುಚಿ, ಫ್ಯಾಶನ್ ಇವೆಲ್ಲಾ ಸಮಯಕ್ಕಿಂತಲೂ ತೀವ್ರವಾಗಿ ಬದಲಾವಣೆಯಾಗುತ್ತಿವೆ.

ಇದಕ್ಕಿಂತಲೂ ಶೀಘ್ರವಾಗಿ ವಿವಿಧ ನವನವೀನ ಡಿಸೈನುಗಳ ಸಂಗ್ರಹ ಮಾಡುವುದೇ ನಮ್ಮ

ಯಶಸ್ಸಿನ ಗುಟ್ಟು.

ಮದುವೆಯ ಸೀರೆಗಾಗಲೀ ಇತರ ಬಟ್ಟೆಗಳ ಖರೀದಿಗಾಗಲೀ

ಸಂದರ್ಶಿಸಿರಿ:

ಜಯಂತಿಲಾಲ್ ಬ್ರದರ್ಸ್

ಹಂಪನಕಟ್ಟಾ, ಮಂಗಳೂರು.

ಮನ ಬೆಳಗಿಸುವ ದೀಪಾವಳಿ

ದೀಪಾವಳಿ ಬರೇ ಹಿಂದುಗಳ ಭಾರತದ ಹಬ್ಬವಲ್ಲ; ಅದು ವಿಶ್ವದ ಹಬ್ಬವೆಂತಲೇ ಅಂತಾರಾಷ್ಟ್ರೀಯ ಖ್ಯಾತಿಯು ದಕ್ಕಿದೆ. ದೀಪಗಳನ್ನು ಹಚ್ಚಿ ಮನೆಯನ್ನು ಬೆಳಗುವುದರ ಜೊತೆಗೆ ಮನದ ಜಾಡ್ಯವನ್ನೂ ಕಳೆದು ದೇಶದ ಸಮಗ್ರತೆ-ಸ್ವಾತಂತ್ರ್ಯಗಳ ಭಾವನೆಯನ್ನು ಜಾಗ್ರತಗೊಳಿಸುವುದು ಭಾರತೀಯರ ಆದ್ಯ ಕರ್ತವ್ಯ.

ಲೇಖಕರು: ಶ್ರೀ ಸಿ, ರೋಹಿದಾಸ ಕಾಮತ್.

ದೀಪಾವಳಿಯು ಬಹು ಪ್ರಾಚೀನ ಹಾಗೂ ದೇಶದಾದ್ಯಂತ ಆಚರಿಸುವ ಸಂತಸದ ಹಬ್ಬವಾಗಿದೆ. ಭಿನ್ನಭಿನ್ನ ಮತೀಯರು ಈ ದೀಪಾವಳಿ ಹಬ್ಬದಲ್ಲಿ ಪಾಲುಗೊಂಡು ತಮ್ಮ ಮನೆಯನ್ನು ಬೆಳಗಿಸುವರು, ದುರುಸು ಬಾಣಗಳನ್ನು ಬಿಟ್ಟು ತಮ್ಮ ಸಂತಸವನ್ನು ಪ್ರದರ್ಶಿಸುವರು. ವರ್ಷದ ದುಡಿತದಿಂದ ದಣಿದ ನೌಕರನಿಗೆ ದೀಪಾವಳಿ ಒಂದು ಸಂತಸದ ಸುಗ್ಗಿ. ಜಾತೀಯತೆಯ ಪ್ರಶ್ನೆಯಿಲ್ಲದೆ ಆಚರಿಸುವ ಈ ಹಬ್ಬ ನಿಜಕ್ಕೂ ಮಾನವನ ಸುಖಕ್ಕೆ ಕೊಟ್ಟ ವರದಾನ!

ದೀಪಾವಳಿಯಂದೇ ದೀಪಗಳನ್ನು ಬೆಳಗಿಸಿ, ಕತ್ತಲೆಯನ್ನು ಬೆಳಕನ್ನಾಗಿಸುವ ಉದ್ದೇಶವೇನು? ದುರುಸುಬಾಣ ಮೊದಲಾದ ಸಿಡಿಮದ್ದುಗಳನ್ನು ಬಿಟ್ಟು ಕತ್ತಲೆಯನ್ನು ಪ್ರಕಾಶಿಸುವುದರ ಅರ್ಥವೇನು? ದೀಪಾವಳಿಯಂದು ಧನ ದೇವತೆಯೆನಿಸಿದ ಲಕ್ಷ್ಮಿಯು ಊರನ್ನು ಸುತ್ತುವಳು; ಕತ್ತಲೆಯಿದ್ದ ಸ್ಥಳದಲ್ಲಿ ಅವಳು ತನ್ನ ಮುಖವನ್ನು ಕೂಡಾ ತೋರಿಸದೆ ದೀಪಗಳಿಂದ ಬೆಳಗಿಸಿದ ಮನೆಯತ್ತ ಧಾವಿಸುವಳು ಎಂಬ ನಂಬಿಕೆ ಜನರಲ್ಲಿ ಬೆಳೆದಿದೆ.

ದೀಪಾವಳಿಯಂದು ಶಿವ ಪಾರ್ವತಿಯರು ಜೂಜಾಟವಾಡಿ ಪಾರ್ವತಿಯಿಂದ ಸೋತ ಶಿವನು ತನ್ನ ಸಕಲ ಸಂಪತ್ತನ್ನು ಪಾರ್ವತಿಗೆ ಬಿಟ್ಟುಕೊಟ್ಟು ಸ್ಮಶಾನ ಸಂಚಾರ ಮಾಡಿ ಹೋದನೆಂಬ ಪೌರಾಣಿಕ ಕಥೆಯಿದೆ. ಇದಕ್ಕಾಗಿಯೇ ಈ ದಿನದಲ್ಲಿ ಜೂಜಾಟವಾಡಿದರೆ ಉತ್ತಮ ಎಂಬ ನಂಬಿಕೆಯುಳಿದಿದೆ. ಜೂಜಾಡುವ ಮತ್ತು ಪಣತೊಡುವ ಚಟವುಳ್ಳ ಜನರು ದೀಪಾವಳಿಯನ್ನೇ ಉತ್ತಮ ದಿನವಾಗಿ ಆಚರಿಸುತ್ತಾರೆ. ದೀಪಾವಳಿಯ ಮೊದಲ ದಿನವಾದ ಧನ ತ್ರಯೋದಶಿಯಂದು ವ್ಯಾಪಾರಿಗಳು ಲಕ್ಷ್ಮಿಯನ್ನು ಪೂಜಿಸುವುದರೊಂದಿಗೆ ತಮ್ಮ ಲೆಕ್ಕ ಪುಸ್ತಕವನ್ನು ಪೂಜಿಸುವರು.

ಬೆಳ್ಳಿಯ ರೂಪಾಯಿ ಹಾಗೂ ರೂಪಾಯಿ ನೋಟುಗಳನ್ನು ಕುಂಕುಮಗಳಿಂದ ಅಲಂಕರಿಸಿ ಲಕ್ಷ್ಮಿಯ ಭಾವ ಚಿತ್ರದ ಎದುರಿಗೆ ಇಟ್ಟು ಪೂಜೆಗಳನ್ನು ಮಾಡುವರು ಪ್ರಾರ್ಥನೆಗಳನ್ನು ಸಲ್ಲಿಸುವರು

ಹಿಂದುಗಳು ಈ ಹಬ್ಬವನ್ನು ಬಹು ವಿಜೃಂಭಣೆಯಿಂದ ಆಚರಿಸುವರು, ಈ ದಿನದಂದು ವಿಷ್ಣುವು ವಾಮನಾವತಾರದಲ್ಲಿ ಬಂದು ಬಲಿಯನ್ನು ಪಾತಾಳಕ್ಕೆ ಅಟ್ಟಿದನೆಂದು ಪ್ರತೀತಿಯಿದೆ. ನರಕಾಸುರನೆಂಬ ರಾಕ್ಷಸನು ಅಪ್ಸರೆಯರನ್ನು ಬಾಧಿಸುತ್ತಿದ್ದನು ಸಿಕ್ಕ ಸಿಕ್ಕ ಸ್ತ್ರೀಯರನ್ನು ತನ್ನ ಸೆರೆಯಲ್ಲಿರಿಸುತ್ತಿದ್ದನು. ದೇವತೆಗಳ ಮಾತೆಯ ಕರ್ಣ ಕುಂಡಲವನ್ನು ಕೂಡಾ ಕಿತ್ತು ತೆಗೆಯುತ್ತಿದ್ದನು. ಇದನ್ನು ಕಂಡ ಋಷಿಗಳು ವಿಷ್ಣುವಿನಲ್ಲಿ ಮೊರೆಯಿಟ್ಟರು. ವಿಷ್ಣುವು ಕೃಷ್ಣಾವತಾರವನ್ನು ಧರಿಸಿ ಆ ನರಕಾಸುರನು ವಧಿಸಿದನು 16000 ಸ್ತ್ರೀಯರನ್ನು ಸೆರೆಯಿಂದ ಬಿಡುಗಡೆಗೊಳಿಸಿದನು.

ನರಕಾಸುರನ ತಾಯಿಯು, ಮಗನು ಸತ್ತ ದಿನವನ್ನು ಬಹು ಸಂತಸದಿಂದ ಆಚರಿಸುವಂತೆ ದೇವರನ್ನು ಕೇಳಿಕೊಂಡ ಮೇರೆಗೆ ಈ ದಿನವನ್ನು ಬಹು ಸಂತೋಷದಿಂದ ಆಚರಿಸುತ್ತಾರೆ. ದೀಪಾವಳಿಯಂದು ಮೈಗೆ ಎಣ್ಣೆ ಹಚ್ಚಿ ತೈಲಾಭ್ಯಂಜನ ಮಾಡುವುದರಿಂದ ಮನುಷ್ಯನ ಆಯುಷ್ಯ ಹೆಚ್ಚುವುದೆಂಬ ಕುರುಡು ನಂಬಿಕೆಯಿದೆ. ಲಕ್ಷ್ಮಿಯು ಎಣ್ಣೆಯಲ್ಲಿಯೂ, ಗಂಗೆಯು ನೀರಿನಲ್ಲಿಯೂ ಮುಳುಗಿರುತ್ತಾಳೆ ಎಂಬ ನಂಬಿಕೆ ಜನರಲ್ಲಿ ದ್ದುದರಿಂದಲೇ ಕೊಡಪಾನ ಪಾತ್ರೆಯನ್ನು ಗುಡಾಣವನ್ನು ಹೂಗಳಿಂದ ಶೃಂಗರಿಸಿ ರಂಗೋಲಿಯನ್ನು ಬಿಡಿಸಿ ಪೂಜಿಸುವರು

ಉಜ್ಜಯಿನಿಯ ವಿಕ್ರಮಾದಿತ್ಯನು ಪಟ್ಟವೇರಿದುದು ಈ ದಿನದಲ್ಲಿಯೇ ಎಂದು ಹೇಳುವರು. ರಾಮಚಂದ್ರನು ವನವಾಸ ಮುಗಿಸಿ ಪಟ್ಟವೇರಿದುದು ಇದೇ ದೀಪಾವಳಿಯಂದು ಆದ ಕಾರಣವೇ ವಿಕ್ರಮಾದಿತ್ಯನು ಕೂಡಾ ಇದೇ ದಿನವನ್ನು ಆಚರಿಸಿದನು ಎಂದು ಉಲ್ಲೇಖವಿದೆ.

ದೀಪಾವಳಿಯ ದಿನವಾದ ಧನ ತ್ರಯೋದಶಿಯಂದು ಲಕ್ಷ್ಮಿಯನ್ನು ಈ ರೀತಿ ಪ್ರಾರ್ಥಿಸುವರು 'ಹೇ ಲಕ್ಷ್ಮಿಯೇ ನೀನು ಸಕಲ ಶಕ್ತಿಗೂ ಕಾರಣಳಾಗಿರುವೇ. ಸೂರ್ಯ ಚಂದ್ರರ ಪ್ರಕಾಶಕ್ಕೂ ನೀನೇ ಕಾರಣ! ಉರಿಯುವ ಬೆಂಕಿ, ಮಿನುಗುವ ತಾರೆಗೂ ನೀನೇ ಕಾರಣ! ನಿನಗೆ ನಮಸ್ಕಾರಗಳು, ಈ ಹಬ್ಬದ ದೀಪದಲ್ಲಿ ನೆಲಸು, ಈ ಕಾರ್ತಿಕ ಶುಭದಿನದಲ್ಲಿ ಲಕ್ಷ್ಮಿಯು ಈ ದೀಪವನ್ನು ಬೆಳಗಿಸಿದ ಮನೆಯಲ್ಲಿ ನೆಲಸಲಿ ಗೋಕುಲವೃದ್ಧಿಯಾಗಲಿ ಎಂದು ಪ್ರಾರ್ಥಿಸುವರು.

ದೀಪಾವಳಿಯ ಎರಡನೇ ದಿನವಾದ ನರಕಚತುರ್ದಶಿಯಂದು ವ್ಯಾಪಾರಿಗಳು ತಮ್ಮ ಹೊಸ ಲೆಕ್ಕವನ್ನು ಪ್ರಾರಂಭಿಸುವರು. ಅಂದಿನಿಂದಲೇ ಹೊಸ ವರ್ಷದ ಪ್ರಾರಂಭವಾಗುವುದು.

ತಮ್ಮನು ತಂಗಿಗೆ ರಾಖಿಯನ್ನು ಕಟ್ಟುವುದು ಕೂಡಾ ಆರನೇ ದೀಪಾವಳಿಯ ದಿನ

(೨೦ನೇ ಪುಟ ನೋಡಿರಿ)

Rs. 250
GETS YOU A NEW 1963
himalux

Buy a HIMALUX
—the refrigerator
you can afford

HIMALUX is the registered trade mark of Himalux Private Limited

Manufactured by
VINAR LTD
Calcutta-16

ON HIRE-PURCHASE
Himalux, the quality refrigerator, can be yours now for a down payment of only Rs 250 (plus local taxes). Pay the balance in 12 monthly instalments of Rs 87·50 nP. Lose no time—check with your nearest Himalux dealer today.

Telephone 362 & 186
Telegram "ARVIND"
ARVIND MOTORS
BALMATTA ROAD : : MANGALORE-1

ನಿಸರ್ಗದ ಮಡಿಲಲ್ಲಿ ಸರಸ್ವತೀ ಮಂದಿರ

ಕರ್ನಾಟಕ ಪ್ರಾದೇಶಿಕ ಇಂಜಿನಿಯರಿಂಗ್ ಕಾಲೇಜು ಕನ್ನಡನಾಡಿನ ಆಧುನಿಕ ತೀರ್ಥಸ್ಥಾನ. ಬೋರ್ಗರೆದು ಮೊರೆದಾಡುವ ಸಮುದ್ರವೇ ಇಲ್ಲಿನ ತೀರ್ಥ; ಕಾಲೇಜೇ ಸರಸ್ವತಿಯ ಮಂದಿರ. ಸುರತ್ಕಲ್‌ನ 'ಶ್ರೀನಿವಾಸ ನಗರ' ದಕ್ಷಿಣ ಕನ್ನಡದ ಪ್ರೇಕ್ಷಣೀಯ ಸ್ಥಾನವಾಗಿದೆ; ಅದು ನಿಷ್ಠಾವಂತ ಕರ್ಮಯೋಗಿಗಳ ಕರ್ತವ್ಯದ ಸಾಕ್ಷಾತ್ಕಾರವಾಗಿ ನಮ್ಮ ಮುಂದೆ ನಿಂತಿದೆ.

ಲೇಖಕರು: ಶ್ರೀ ಬಸವರಾಜ ಕಂಚೂರು.

'ಮಾನವ ತನ್ನ ಬುದ್ಧಿಬಲದಿಂದ ಭೂವಿನ್ಯಾಸವನ್ನು ಬದಲು ಮಾಡಬಲ್ಲ" ಎನ್ನುವ ವಾದಸರಣಿ, ಸತ್ಯಕ್ಕೆ ಸಮೀಪದ ಮಾತು. ಕಬ್ಬಿಣವನ್ನು ಓಡುವಂತೆ, ಕಟ್ಟಿಗೆಯನ್ನು ಹಾರುವಂತೆ, ಅಂತರಿಕ್ಷದಲ್ಲಿ ಹಕ್ಕಿಯಂತೆ ಜಿಗಿದಾಡುವಂತೆ, ಸಾಧನಗಳನ್ನು ಕಂಡು ಹಿಡಿದ ಮಾನವ ಭೂವಿನ್ಯಾಸವನ್ನೇ ಬದಲು ಮಾಡಬಲ್ಲನೆ? ಎನ್ನುವದು ಆಶ್ಚರ್ಯವಾಗಿ ಉಳಿಯಲಾರದು. ಮರಳುಗಾಡುಗಳನ್ನು ನಂದನವನಗಳನ್ನಾಗಿ ಮಾರ್ಪಡಿಸಿದ್ದಾನೆ, ಕಾಡನ್ನು ನಾಡನ್ನಾಗಿ ಮಾಡಿದ್ದಾನೆ. ಈ ಪ್ರತ್ಯಕ್ಷ ನಿದರ್ಶನಗಳನ್ನು ನಾವಿಂದು ಕೇಳುತ್ತಿದ್ದೇವೆ, ನೋಡುತ್ತಿದ್ದೇವೆ.

ಈಗ್ಗೆ ಐದಾರು ವರ್ಷಗಳ ಕೆಳಗೆ, ನರಿ, ತೋಳ, ಹುತ್ತಗಳ, ಬೇಲಿ ಸಣ್ಣ, ಸಣ್ಣ ಗಿಡಗಳಿಂದ ಆವೃತ್ತವಾಗಿ ತಗ್ಗುದಿನ್ನೆಗಳಿಂದ ಕೂಡಿ, ಹಗಲಲ್ಲೇ ಭಯಾನಕವಾಗಿದ್ದ ಪ್ರದೇಶ, ಇಂದು ಜನಭರಿತವಾಗಿದೆ, ಮನೋಹರವಾಗಿದೆ, ಕಾಡಿನ ಗಂಭೀರತೆ ಮಾಯವಾಗಿದೆ, ಮಂಗಳೂರಿಂದ ಹನ್ನೆರಡು ಮೈಲು, ಉಡುಪಿಯಿಂದ ಇಪ್ಪತ್ತು ಮೈಲು, ವಿಮಾನ ನಿಲ್ದಾಣ ಬಜ್ಪೆಯಿಂದ ಹತ್ತು ಮೈಲು, ಸುರತ್ಕಲ್ಲನಿಂದ ಒಂದುವರೆ ಮೈಲು, ದೂರವಿರುವ ಈ ಪ್ರದೇಶ ತನ್ನ ಹೊಸ ಹೆಸರನ್ನಿಟ್ಟುಕೊಂಡು ಪಶ್ಚಿಮ ಕರಾವಳಿಯಲ್ಲಿ ಮೈದಳೆದಿದೆ, ಕನ್ಯಾಕುಮಾರಿಯಿಂದ ಮುಂಬಯಿಗೆ ಹೋಗುವ ರಾಷ್ಟ್ರೀಯ ಹೆದ್ದಾರಿಯ ಬದಿಯಲ್ಲಿಯೇ ಸಮುದ್ರ ತೀರದಿಂದ ಕೇವಲ ಮೂರು ಫರ್ಲಾಂಗ್ ದೂರದಲ್ಲಿ ತನ್ನ ಸುತ್ತ ತೆಂಗಿನ ಗಿಡಗಳನ್ನು, ಭತ್ತದ ಗದ್ದೆಗಳನ್ನು ಮನಮೋಹಕ ಅರಣ್ಯ ದೃಶ್ಯವನ್ನು ಕಟ್ಟಿಕೊಂಡು ಪ್ರಕೃತಿ ದೇವಿಯ ಮಡಿಲಲ್ಲಿ ಬೆಳೆದು ಬರುತ್ತಿದೆ ಶ್ರೀನಿವಾಸ ನಗರ.

ಹಿಂದೆ ಐದಾರು ವರುಷದ ಕೆಳಗೆ ಈ ಪ್ರದೇಶವನ್ನು ನೋಡಿದ ಯಾರಾದರು ಇಂದು ಮರಳಿ ನೋಡಿದರೆ ನಿಜವಾಗಿಯು ದಂಗು ಬಡಿಯುತ್ತಾರೆ. ಕಾಡುಗಳ, ಹುತ್ತಗಳ ನಕಾಸೆಯನ್ನು ನೋಡಿದ ಮನುಷ್ಯ, ಇಂದು ದೊಡ್ಡದೊಡ್ಡ ಸೌಧಗಳನ್ನು ಅಚ್ಚುಕಟ್ಟಾದ ರಸ್ತೆಗಳನ್ನು, ಎಲ್ಲಲ್ಲೂ ಕೆಲಸದ ತರಾತುರಿಯನ್ನು ನೋಡುತ್ತಾನೆ.

ಇಂಜನಿಯರುಗಳ ಕೊರತೆಯನ್ನು ನೀಗಿಸಲು ಭಾರತ ಸರಕಾರವು ದೇಶದ ಮೂಲೆ ಮೂಲೆಗಳಲ್ಲಿ ಪ್ರಾರಂಭಿಕವಾಗಿ, ಎಂಟು ಕಾಲೇಜುಗಳನ್ನು ತೆರೆಯಿತು. ಆ ಎಂಟರಲ್ಲಿ ಒಂದು ಕರ್ನಾಟಕಕ್ಕೆ ದೊರೆತದ್ದು ಕನ್ನಡಿಗರ ಸುದೈವ. ನಮ್ಮ ನಮ್ಮಲ್ಲಿಯ ಕಚ್ಚಾಟದಿಂದಾಗಿ, "ಬೆಕ್ಕ ಜಿಣ್ಣಿಯ ಜಗಳದಲ್ಲಿ ಮಂಗನಿಗೆ ಲಾಭವಾದಂತೆ" ದೊರೆಯಬೇಕಾದ ಅನೇಕ ಸೌಲಭ್ಯಗಳು ಕೇಂದ್ರ ಸರ್ಕಾರದಿಂದ ದೊರಕದೆ ಹೋಗಿವೆ. ಇದು ಹೀಗಾಗಲಿಲ್ಲ ಎಂದು ಸಮಾಧಾನ ಪಡಬೇಕಾಗಿದೆ.

ಸ್ಥಳ ಸಮೀಕ್ಷೆ:— ಸಮುದ್ರ ಮಟ್ಟದಿಂದ ಸುಮಾರು ಐವತ್ತು ಅಡಿ ಎತ್ತರದ ಗಟ್ಟಿ ಮಣ್ಣಿನ ಪ್ರದೇಶವಿದು. ಈಗಿನ ಇದರ ಒಟ್ಟು ಭೂ ಆಳತೆ 375.39 ಎಕರೆಗಳಷ್ಟು. ಬೇಸಿಗೆಯಲ್ಲಿ ಅತಿಬಿಸಿಲು ಮಳೆಗಾಲದಲ್ಲಿ ಅತಿ ಮಳೆಸುರಿಯುವ, ಕರಾವಳಿ ಹವಾಗುಣದ ಭಾಗವಿದು. ಹವಾಮಾನದ ಈ ವೈಪರೀತ್ಯ, ಬೇರೆಡೆಯಿಂದ ಬಂದವರಿಗೆ ಸ್ವಲ್ಪ ಹಿಡಿಸುವುದು ಕಷ್ಟವಾದರೂ. ದಕ್ಷಿಣ ಕನ್ನಡ ಜಿಲ್ಲೆಯ ಬೆಳಗು ಬೈಗು ಮತ್ತು ರಾತ್ರಿ ಬಹಳ ಆಹ್ಲಾದವಾಗಿರುತ್ತದೆ. ಕ್ಷಣ ಹೊತ್ತು ಹೃದಯ ಅರಳಿ ನಿಲ್ಲುತ್ತದೆ. ನಿಸರ್ಗದ ರಮ್ಯ ನೋಟ ಕಣ್ಮನಗಳನ್ನು ತಣಿಸುತ್ತದೆ. ಇಲ್ಲಿ ಚಳಿಗಾಲ ಬಲುಸೊಗಸು, ಸಂದರ್ಶಕರಿಗೆ ಸರಿಯಾದ ಸಮಯ.

ಸಾರಿಗೆ:— ಒಂದು ಕಡೆ ಪಶ್ಚಿಮ ಘಟ್ಟಗಳ ಸಾಲು ಇನ್ನೊಂದು ಕಡೆ ಸಮುದ್ರ ತೀರವಿರುವ ದಕ್ಷಿಣ ಕನ್ನಡ ಜಿಲ್ಲೆ ಸಾರಿಗೆಯ ಸಂಪರ್ಕದಲ್ಲಿ ಬಹು ಹಿಂದೆ ಉಳಿದಿತ್ತು. ತಗ್ಗು ದಿನ್ನೆಗಳ ಪ್ರದೇಶವಾದ ಇದು ಅನೇಕ, ಹೊಳೆ ಹಳ್ಳಗಳ ಬೀಡಾಗಿರುವುದರಿಂದ, ಮೊಟ ಮೊದಲು ಓಡಾಟ ಬಹು ತಾಪದಾಯಕವಾಗಿತ್ತು. ಇಂದು ಕಾಲ ಬದಲಾಗಿದೆ. ಮಂಗಳೂರು ಇಂದು, ಎಲ್ಲೆಡೆಗೂ ನೇರ ಸಂಪರ್ಕವನ್ನು ಹೊಂದಿದೆ ಶ್ರೀನಿವಾಸ ನಗರದಿಂದ ಹತ್ತು ಮೈಲು ದೂರದಲ್ಲಿ ಬಜ್ಪೆಯೆಂಬಲ್ಲಿ ನಾಗರಿಕ ವಾಯು. ವಿಮಾನ ನಿಲ್ದಾಣವಿದೆ. ವಾರಕ್ಕೊಂದು ಸಲ, ಮಂಗಳೂರಿಂದ ಮುಂಬಯಿಗೆ ಸ್ಟೀಮರ ಸಾರಿಗೆಯಿದೆ. ಇನ್ನು ಸ್ವಲ್ಪ ಸಮಯದಲ್ಲಿ ಕನ್ಯಾಕುಮಾರಿಯಿಂದ ಮುಂಬಯಿಗಿರುವ ರಾಷ್ಟ್ರೀಯ ಹೆದ್ದಾರಿ ಪೂರ್ಣಗೊಳ್ಳಲಿದೆ, ಹಾಸನ ಮಂಗಳೂರು ರೈಲ್ವೆ ಸಂಪರ್ಕವಾದಲ್ಲಿ ನಾಡಿನ ಮೂಲೆ ಮೂಲೆಗೆ ಬಹು ಬೇಗನೆ ತಲಪಬಹುದು.

ದೊರೆತಿರುವ ಈ ಒಂದು ತಾಂತ್ರಿಕ ಕಲಾಶಾಲೆಯನ್ನು ರಾಜ್ಯದ ಮಧ್ಯ ಸ್ಥಳವನ್ನು ನೋಡಿ, ಅಲ್ಲಿ ಸ್ಥಾಪಿಸಬಹುದಿತ್ತು ಎನ್ನುವ ವಿಚಾರ, ಈ ಸ್ಥಳವನ್ನು ನೋಡಿದವರಿಗೆ ಹೊಳೆಯದಿರಲಾರದು. ಆದರೆ! ಇದು ವಿಷಯದ ಒಂದು ಮುಖ್ಯ ವಿಚಾರ.

ಕಟ್ಟಡ ರಚನೆ:— ಈ ನಗರದ ರೂಪರೇಷೆಗಳನ್ನು ಸೌಧಗಳ ಹೊಳವುಗಳನ್ನು ಎಳೆದವರು ಮಹಾರಾಷ್ಟ್ರದ ತಂತ್ರಜ್ಞರು. ಮೈಸೂರಿನ ತಂತ್ರಜ್ಞರು ನಾಡಿನ ಒಳಗು ಹೊರಗು ಪ್ರಖ್ಯಾತ ಹೊಂದಿದ್ದಾರೆ. ಆದರೆ, ಈ ಇಂಜನಿಯರಿಂಗ್ ಕಾಲೇಜಿನ ಮತ್ತು ನಗರದ ಇತರ ಸೌಧಗಳನ್ನು ಹೊಳವುಗಳನ್ನು ರೂಪಿಸಲು ಬೇರೆಡೆಯವರು ಬೇಕಾಯಿತು. ಯಾರೇ ರೂಪಿಸಲಿ, ಅವರ ಪ್ರಶ್ನೆ ಬೇರೆ! ಕನ್ನಡಿಗರ ಮನೋಭಾವನೆ ಎಷ್ಟೆಂಬುದು ಒಂದು ಚಿಕ್ಕ ನಿದರ್ಶನವು ತಿಳಿಹೇಳುತ್ತದೆ. "ಹಿತ್ತಲಗಿಡ ಮದ್ದಲ್ಲ" ಎನ್ನುವ ಮನೋಭಾವನೆ ನಮ್ಮಲ್ಲಿ ಬೇರೂರಿದೆ.

ಈಗ ತಲೆಯೆತ್ತಿ ನಿಂತಿರುವ ಮತ್ತು ನಿಲ್ಲುವ ಕೆಲವು ಕಟ್ಟಡಗಳ ಪಟ್ಟಿ

1) ಕಾಲೇಜ
2) ವಿದ್ಯಾರ್ಥಿನಿಲಯಗಳು
3) ಪ್ರಯೋಗಶಾಲೆ
4) ಪ್ರಿನ್ಸಿಪಾಲ ಬಂಗಲೆ
5) ವರ್ಕಶಾಪ ಬಿಲ್ಡಿಂಗ್ಸ್
6) ಪ್ರಾಧ್ಯಾಪಕರ ಮತ್ತು ಉಪಪ್ರಾಧ್ಯಾಪಕರ ಸೌಧಗಳು
7) ಮೂರನೆ ಮತ್ತು ನಾಲ್ಕನೆ ದರ್ಜೆಯ ನೌಕರರ ಮನೆಗಳು
8) ಆಸ್ಪತ್ರೆ
9) ಪ್ರವಾಸಿ ಮಂದಿರ
10) ನಾಟಕ ಮಂದಿರ
11) ಕ್ಲಬ್ಬ
12) ಕಾಲೇಜ ವಾಹನಗಳಿಗೆ ಶೆಡ್
13) ಮಾರ್ಕೆಟಿಂಗ್ ಸೆಂಟರ್

ಇವುಗಳಲ್ಲಿ ಕೆಲವನ್ನು ಬಿಟ್ಟರೆ ಉಳಿದವೆಲ್ಲವು ಮುಗಿದಿವೆ. ಕೆಲವು ಕೊನೆಯ ಹಂತದಲ್ಲಿವೆ. ಕೆಲವು ಪ್ರಾರಂಭವಾಗಿವೆ.

ಕಾಲೇಜ:— ಜನವರಿ 1960ರಲ್ಲಿ ಕಟ್ಟಡ ಕೆಲಸ ಪ್ರಾರಂಭವಾಯಿತು. ಈಗ ಕೊನೆಯ ಹಂತದಲ್ಲಿದೆ. ಸುಮಾರು ಜೂನ್ 1961ರ ಸಮಯಕ್ಕೆ ಮುಗಿಯಬಹುದು. ಇದಕ್ಕೆ ತಗಲಬಹುದಾದ ವೆಚ್ಚ 21,87,000 ರೂಪಾಯಿಗಳು ಸಮುದ್ರ ಮಟ್ಟದಿಂದ ಸುಮಾರು ಅರುವತ್ತು ಅಡಿ ಎತ್ತರದಲ್ಲಿರುವ ಈ ಸೌಧ ಭವ್ಯವಾಗಿದೆ. ಇದಕ್ಕೆ ಹೊಂದಿಕೊಂಡೇ ವಾಚನ ಮಂದಿರ ಇರುವದರಿಂದ ತನ್ನ ಅಗಲಕ್ಕೆ ಮೀರಿದ ಉದ್ದ ಅಷ್ಟು ಸರಿ ಅಲ್ಲವೇನೋ ಹಾಗೆ ನಿರೀಕ್ಷಕರಿಗೆ ಎದ್ದು ಕಾಣುತ್ತದೆ. ಫ್ರೇಮ್ಡ ಸ್ಟ್ರಕ್ಚರ್ (ಕಂಬ ಮಾಲೆಗಳ ಸೌಧ) ರಚನೆಯನ್ನು ಈ ಸೌಧಕ್ಕೆ ಸೂಚಿಸಿರುವದು ನಿಜವಾಗಿಯು ತಂತ್ರಜ್ಞರ ಜಾಣ್ಮೆ, ಏಕೆಂದರೆ, ಸ್ವಲ್ಪ ಸ್ಥಳದಲ್ಲಿ ಕಡಿಮೆ ವೆಚ್ಚದಲ್ಲಿ ಶೀಘ್ರಗತಿಯಲ್ಲಿ ಕಟ್ಟಡವನ್ನು ಕಟ್ಟಲಿಕ್ಕೆ ಸಾಧ್ಯತೆಯಿದೆ. ಬೇಕಷ್ಟು ಗಾಳಿ, ಬೆಳಕಿಗೆ, ಅವಕಾಶ ಕಲ್ಪಿಸಿರುವದು ಮೆಚ್ಚುಗೆ ಪಡುವಂತಿದೆ. ಮೂರಂತಸ್ತಿನ ಈ ಭವ್ಯ ಸೌಧದ ಕೆಲಸ ಪೂರ್ತಿಗೊಂಡಾಗ ಸಂದರ್ಶಕರನ್ನು ಆಕರ್ಷಿಸುವಲ್ಲಿ ಸಂದೇಹವಿಲ್ಲ.

ವಿದ್ಯಾರ್ಥಿ ನಿಲಯಗಳು:— ಈ ಹೊಸ ಮಾದರಿಯ ಪ್ರಾದೇಶಿಕ ಕಾಲೇಜಿನ ವೈಶಿಷ್ಟ್ಯವೆಂದರೆ, ಎಲ್ಲ ವಿದ್ಯಾರ್ಥಿಗಳು

(೧೯ನೇ ಪುಟ ನೋಡಿರಿ)

ಹೆಚ್ಚಿನ ಫಸಲಿಗಾಗಿ
ಮೆಚ್ಚಿನ

ಕಿರ್ಲೋಸ್ಕರ
ಪಂಪು ಸೆಟ್‌ಗಳನ್ನು
ಉಪಯೋಗಿಸಿರಿ
ವಿತರಣೆಗಾರರು:
ಕರ್ಕೇರ ಸನ್ಸ್ ಮತ್ತು ಕಂಪೆನಿ
ಮೆಷಿನರಿ ವ್ಯಾಪಾರಸ್ಥರು
ಕರ್ಕೇರ ಮೆನ್ಶನ್
ಮೈದಾನ್ ವೆಸ್ಟ್ ರೋಡ್
ಮಂಗಳೂರು-1

ನೆಹರೂ ಸಿಂಹಾವಲೋಕನ

ಎಳವೆಯಲ್ಲಿ ಕನಸು ಕಾಣದಿರುವವರು ಬಳಿವಯಲ್ಲಿ ಮನೆ ಕಟ್ಟದಿರುವವರು ಯಾರೂ ಇಲ್ಲ. ಆದರೆ ಕಂಡ ಕನಸು ನನಸಾಗುವುದು, ಕಟ್ಟಿದ ಮನೆ ಉಳಿಯುವುದು ಮಾತ್ರ ಅಪರೂಪ. ನಮ್ಮ ಕಣ್ಮಣಿ ಜವಾಹರರು ಸೃಷ್ಟಿಸಿಯೂ ಕೊಂಡು ಅಪವಾದವಾಗಿ ಅಜೇಯರಾಗಿ ನಿಂತಿದ್ದಾರೆ. ಇನ್ನೂ ಬಹುಕಾಲ ನಿಲ್ಲುತ್ತಾರೆ.

ಲೇಖಕರು. ಶ್ರೀ ಮಾದರಬೆಟ್ಟು ರಂಗ ರಾವ್

ಬಾಲ್ಯದಲ್ಲಿ ಬಯಸಿದ ಅನೇಕ ಬಗೆಯ ಆನಂದದ ಕೋರಿಕೆಗಳು ಎಲ್ಲರಿಗೂ ಈಡೇರಿ ಬಿಟ್ಟರೆ ಪ್ರಪಂಚದಲ್ಲಿ ಇನ್ನೇನಿದೆ? ಅದಕ್ಕೆ ತಕ್ಕ ಗುಣಗಳು ಎಲ್ಲರಿಗೂ ಬಂದು ಬಿಟ್ಟರೆ ಎಲ್ಲರೂ ಸಾರ್ಥಕ ಜನ್ಮಿಗಳಾಗಿ ಹೋಗುತ್ತಿದ್ದರು. ಆಗ ಪ್ರಪಂಚದಲ್ಲಿ ಯಾವ ಕಸರುಚಿಗಳಿಗೂ ಠಾವಿರುತ್ತಿದ್ದಿಲ್ಲ. ದೇವರೇ ಬೇಡಾಗುತಿತ್ತು. ಪುಣ್ಯಕ್ಕೆ ಎಲ್ಲರೂ ಹಾಗಾಗಲಿಲ್ಲ. ಅದಕ್ಕೆ ತಕ್ಕ ಕ್ರಿಯಾ ಶಕ್ತಿಯನ್ನು ಎಲ್ಲರೂ ಬೆಳೆಸಿಕೊಂಡು ಬರಲಿಲ್ಲ. ಬಾಲ್ಯದ ಆನಂದದ ಕೋರಿಕೆಗಳಲ್ಲ ಕನಸಿನ ಹಾಗೆ ಮಾಯವಾಗಿ ಹೋಗಿ, ಬೆಳೆಯುತ್ತಾ ಬಂದ ಹಾಗೆ, ನಾನಾ ದುರಭ್ಯಾಸಗಳಿಗೀಡಾಗಿ ಸುಖ ದುಃಖಗಳ ಚಕ್ರದಲ್ಲಿ ಸಿಕ್ಕಿ ಉರುಳಿಕೊಂಡೇ ಹೋಗುತಿದ್ದಾನೆ ಮನುಷ್ಯ. ಇಂತಹ ಜನ ಜಂಗುಳಿಯಲ್ಲಿ ಕೆಲವೊಬ್ಬರು ಮಾತ್ರವೇ ಆದರ್ಶ ಮಾರ್ಗದರ್ಶಕರಾಗಿ, ಮುಖಂಡರಾಗಿ ನಾಯಕರಾಗಿ ನಿಲ್ಲಲರ್ಹರಾಗುತ್ತಾರೆ. ಅದಕ್ಕೆ ಕಾರಣ, ಅವರು ದೊಡ್ಡವರಾಗುತ್ತಾ ಬಂದ ಹಾಗೆ, ತಮ್ಮ ಕ್ರಿಯಾಶಕ್ತಿಯನ್ನು ಸನ್ಮಾರ್ಗದಲ್ಲೇ ಬೆಳೆಸಿಕೊಂಡು ಮುಂದೆ ಬಂದುದು. ಕಾಯಾ ವಾಚಾ ಮನಸಾ ಉತ್ತಮತೆಯ ಕಡೆಗೇ ವಾಲಿಕೊಂಡಿದ್ದುದು. ಬೇರಾದರ ನಮ್ಮ 'ಚಾ ಚಾ" ನೆಹರೂರನ್ನು ನೋಡಿಕ್ಷಿ!

ಅವರು ಮಗುವಾಗಿದ್ದಾಗಲೇ ವರುಷ ವರುಷವೂ ಅವರ ಹುಟ್ಟುಹಬ್ಬವನ್ನು ಆಚರಿಸಲಾಗುತ್ತಿತ್ತು. ಆದಿನ ಬಾಲ ಜವಾಹರನಿಗೆ ಬಂಧು ಬಳಗದವರಿಂದಲೂ, ಇತರರಿಂದಲೂ ಬಗೆ ಬಗೆಯಾದ ಬಹುಮಾನ ವಸ್ತುಗಳು ಹೇರಳವಾಗಿ ಬರುತ್ತಿದ್ದವು. ಬಾಲ ಜವಾಹರ್ ಅತ್ಯಾನಂದ ಪಡುತ್ತಿದ್ದರು. ಆದರೆ ಮರುದಿನವೇ ಅವರಿಗೊಂದು ಬಗೆಯ ದುಃಖವಾಗುತ್ತಿತ್ತಂತೆ. ಏಕೆ ಗೊತ್ತೇ? ಇಂಥ ಜನ್ಮದಿನೋತ್ಸವ ಪ್ರತಿದಿನವೂ ಬರುವುದಿಲ್ಲವಲ್ಲಾ ಎಂದು.

ಆದರೆ ಮೂಢತನದಿಂದ ಹಾಗೆನಿಸುತ್ತಿದ್ದರೆ, ಅವರ ಹುಟ್ಟುಹಬ್ಬಕ್ಕೆ ಎಂದೋ ಅಸ್ತು ಬಿದ್ದಿರಬೇಕಿತ್ತು. ದೊಡ್ಡವರಾಗುತ್ತ ಬಂದಂತೆ, ಹುಟ್ಟುಹಬ್ಬ ಮಾಡಿಸಿಕೊಳ್ಳುವ ಯೋಗ್ಯತೆ ಹೆಚ್ಚು ಹೆಚ್ಚಾಗಿ ತನಗೆ ಬರುವ ರೀತಿಯಲ್ಲೇ ಅವರು ನಡೆದುಕೊಂಡಿದ್ದಾರೆ. ಅಂತೆಯೇ ಅಂದು ಕುಟುಂಬದವರಿಂದ ಹುಟ್ಟುಹಬ್ಬ ಮಾಡಿಸಿಕೊಂಡ ನೆಹರೂ, ಇಂದು ಅಖಿಳ ಭಾರತೀಯರಿಂದಲೂ ಹುಟ್ಟುಹಬ್ಬ ಮಾಡಿಸಿಕೊಳ್ಳುತ್ತಿದ್ದಾರೆ. ಅದೂ ಹೇಗೆ? ಭಾರತ ಪ್ರಧಾನಿಯಾದ ನೆಹರೂ ಏನೋ ದೊಡ್ಡದೊಡ್ಡವರ ಪಾಲಿಗೆ ಮಾತ್ರ ಸೇರಿದವರಾಗಿ ಹೋಗಲಿಲ್ಲ. ಅಜ್ಞಾನೀ ಮಕ್ಕಳೊಂದಿಗೆ ತಾನೂ ಮಗುವಾಗಿ ಆಟವಾಡುವ ಚಾಚಾ ನೆಹರೂ ಆಗಿದ್ದಾರೆ.

೦ ೦ ೦

ಸ್ವಾತಂತ್ರ್ಯಕ್ಕೆ ಕಂಡೆಯಾದ, ಅಹಿಂಸಾದರ್ಶ ಪ್ರತಿಪಾದಕರಾದ, ಮಹಾತ್ಮಾ ಗಾಂಧಿಯ ಪ್ರಥಮ ಶಿಷ್ಯರಲ್ಲವೇ ನಮ್ಮ ಚಾಚಾ ನೆಹರೂ? ಗಾಂಧೀಜಿಯ ನಡೆವಳಿಕೆಗೂ ನೆಹರೂರ ನಡೆವಳಿಕೆಗೂ ಎಷ್ಟೋ ವ್ಯತ್ಯಾಸವಿದ್ದರೂ, ನೆಹರೂ ಗಾಂಧೀಜಿಯ ಪಟ್ಟ ಶಿಷ್ಯರೆನಿಸಿದ್ದು ಆಶ್ಚರ್ಯವೇ? ಏನಿದೆ ಆಶ್ಚರ್ಯ! ಅನ್ಯೋನ್ಯರಾಗಿರುವ ಪತಿ ಪತ್ನಿಯರ ಸ್ವಭಾವದಲ್ಲಿ ಎಷ್ಟೋ ವ್ಯತ್ಯಾಸವಿರುವುದಿಲ್ಲವೇ! ಆದರೂ ಹೃದಯ ಒಂದಾಗಿರವುಲ್ಲವೇ? ವೈಯಕ್ತಿಕ ಅಭಿರುಚಿಗಳಲ್ಲಿ ಭೇದವಿದ್ದರೇನು ಮಹಾ? ಗಾಂಧೀಜಿ ಹೇಗೆ ಕರ್ಮವೀರರೋ ನೆಹರೂಜಿ ಹಾಗೆಯೇ ಕರ್ಮಶೀಲರೇ. ಗಾಂಧೀಜಿ ತಪಸ್ವಿಯಂತಹರು. ಹಾಗಾಗಲು ಎಲ್ಲರಿಗೂ ಸಾಧ್ಯವಿಲ್ಲ. ಅಂತೆಯೇ ಮಹಾತ್ಮರು. ನೆಹರೂ ಆದರೋ ಎಲ್ಲರಿಗೂ ಅಳವಡುವಂತಹರು; ನಿಲುಕುವಂತಹರು. ಅಂತೆಯೇ ಎಲ್ಲರನ್ನೂ ವಿರೋಧಿಸಿಂತ ಮಹಾ ನಾಯಕರು. ಶ್ರೀ ರಾಮಕೃಷ್ಣ ಪರಮ ಹಂಸರಿಗೆ ವಿವೇಕಾನಂದರಂತಹ ಶಿಷ್ಯರಿರಲಿಲ್ಲವೇ, ಹಾಗೆ.

ನ ಹಾ ಶ್ರೀಮಂತ ಮನೆತನದಲ್ಲಿ ಹುಟ್ಟಿಯೂ ಗರ್ವಿಷ್ಠರಾಗದೆ, ಪರಿಪಕ್ವನಾದ

(೧೬ನೇ ಪುಟ ನೋಡಿರಿ)

ನಾಡಿನ ಸಮಸ್ತರಿಗೂ
ದೀಪಾವಳಿ ಶುಭಾಶಯಗಳು

30 REGD.
REGD. TRADE MARK



30 REGD.
REGD. TRADE MARK

ನಂಬರ್ ಮುವತ್ತು ಮಾರ್ಕಿನ ಬೀಡಿಗಳು.
ತಯಾರಕರು:
ಡಿ. ಭಾರತ್ ಬೀಡಿ ವರ್ಕ್ಸ್ (ರಿಜಿಸ್ಟರ್ಡ್)
ಕಾರ್ಕಳ. S. K.
Mysore State.

ಕ್ರಾಂತದರ್ಶಿ ಕಾರಂತರು

ತಮ್ಮ ಸಾಹಿತ್ಯಾದಿ ಸಂಶೋಧನೆಯಿಂದ ಪ್ರಸಿದ್ಧರಾದ ಶ್ರೀ ಕೋಟ ಶಿವರಾಮ ಕಾರಂತರಿಂದು ಅಖಿಲ ಭಾರತೀಯವೇ ಏಕೆ ಅಂತಾರಾಷ್ಟ್ರೀಯ ವ್ಯಕ್ತಿಯಾಗಿದ್ದಾರೆ. ಅವರು ಮುಟ್ಟದ ದಾರಿಯಿಲ್ಲ; ಅವರು ಪಡೆಯದ ಶಕ್ತಿಯಿಲ್ಲ. ಅಮೋಘ ಶಕ್ತಿ ಸಂಪಾದನೆಗೆ ಅವರು ಗೆಯ್ದ ತಪಶ್ಚರ್ಯೆ ಅಪಾರ. ಪ್ರಾರಂಭದಿಂದಲೂ ಕ್ರಾಂತಿಕಾರರಾಗಿ ಬೆಳೆದು ಬಂದ ಕಾರಂತರು ಇಂದಿಗೂ ಕ್ರಾಂತದರ್ಶಿಯಾಗಿಯೇ ಉಳಿದಿದ್ದಾರೆ, ಮುಂದೆಯೂ ಉಳಿಯುತ್ತಾರೆ.

ಲೇಖಕರು: ಶ್ರೀ ಜಿ. ಆರ್. ಪಾಂಡೇಶ್ವರ.

ಹಿಮಾಲಯ ಪರ್ವತ ಪಂಕ್ತಿಯಲ್ಲಿ ಕೈಲಾಸ ಶಿಖರದಿಂದ ಹಿಡಿದು ಎವರೆಸ್ಟ್ ಶಿಖರದ ವರೆಗೆ ಅನೇಕ ಅತ್ಯುನ್ನತ ಶಿಖರಗಳುಂಟು; ಒಂದೊಂದೂ ಒಂದೊಂದು ರೀತಿಯ ವಿಶಿಷ್ಟತೆಯಿಂದ ಮಹೋನ್ನತವೆನಿಸಿ ಮೆರೆಯುತ್ತಿದೆ. ನಮ್ಮಿಂದಿನ ಕನ್ನಡ ಸಾಹಿತ್ಯದಲ್ಲಿಯೂ ಹಾಗೆಯೇ ಇದೆ. ನೂರಕ್ಕಿಂತ ಹೆಚ್ಚು ಕಾದಂಬರಿ ಬರೆದ ಕಾದಂಬರಿಕಾರರಿದ್ದಾರೆ, ಮೂರು ಸಾವಿರದಷ್ಟು ಭಾವಗೀತ ರಚಿಸಿದ ಕವಿಗಳಿದ್ದಾರೆ ರಾಮಾಯಣ ರಚಿಸಿದ ಮಹಾಕವಿಗಳಿದ್ದಾರೆ, ಐವತ್ತಕ್ಕಿಂತ ಹೆಚ್ಚು ನಾಟಕ, ಗೀತನಾಟಕ, ಪ್ರಹಸನಗಳನ್ನು ಬರೆದ ನಾಟಕಕಾರರಿದ್ದಾರೆ, ಇನ್ನೂರಕ್ಕಿಂತ ಹೆಚ್ಚು ಸಣ್ಣಕತೆ ಬರೆದವರೂ, ಎರಡು ಸಾವಿರ ಪುಟಕ್ಕೂ ಮಿಕ್ಕಿದ (ಗದ್ಯ) ಜೀವನ ಚರಿತ್ರೆಗಳು, ವ್ಯಕ್ತಿ ಚಿತ್ರಗಳು, ಹರಟೆಗಳು, ವಿಮರ್ಶೆಗಳು, ಪ್ರಬಂಧಗಳು, ಪ್ರವಾಸ ವೃತ್ತಾಂತಗಳು, ಬಾಲಸಾಹಿತ್ಯ ಕಥಾವಳಿಗಳು, ಕವನಗುಚ್ಛಗಳು ಮೊದಲಾದವನ್ನು ಬರೆದ ಲೇಖಕರೆಷ್ಟೋ ಮಂದಿ ಇದ್ದಾರೆ. ಪ್ರಾಚೀನ ಗ್ರಂಥ ಮತ್ತು ಶಾಸನ ಶಿಲಾಲೇಖಗಳ "ದಧಿ ಮಂಥನ" ಮಾಡಿ ತಿಥಿ-ವಾರ ನಕ್ಷತ್ರಗಳ ಇತಿಹಾಸ ನಿರ್ಣಯದ ಬೆಣ್ಣೆ ಮುದ್ದೆಗಳನ್ನು ತೆಗೆದ ಸಂಶೋಧಕರೂ, ಭಾಷಾಶಾಸ್ತ್ರ, ವ್ಯಾಕರಣ, ಅಲಂಕಾರ ಛಂದಸ್ಸುಗಳನ್ನು ಆಳವಾಗಿ ಅಭ್ಯಾಸ ಮಾಡಿದ ಪಂಡಿತರೂ, ಹಲವರಿದ್ದಾರೆ. ಅದೇ ರೀತಿಯಲ್ಲಿ, ಅತ್ಯುತ್ತಮ ಶಿಲ್ಪಿಗಳೂ, ಚಿತ್ರಕಾರರೂ, ಗಾಯಕರೂ, ನಟರೂ, ಪತ್ರಿಕೋದ್ಯಮಿಗಳೂ ಹಲವರಿದ್ದಾರೆ. ಇಂದಿನ ನಮ್ಮ ಕನ್ನಡತಾಯಿ ಅನೇಕ ವರಪುತ್ರರನ್ನು ಹಡೆದ "ರತ್ನಗರ್ಭೆ"ಯಾಗಿದ್ದಾಳೆ ಒಂದೊಂದು ವಿಭಾಗದಲ್ಲಿ ಒಬ್ಬೊಬ್ಬರೇ ಅತ್ಯುಚ್ಚ ಕಲಾವಿದರೆನಿಸಿಕೊಂಡವರೂ ಕೆಲವರುಂಟು. ಹೀಗಿದ್ದರೂ, ಒಂದೇ ವ್ಯಕ್ತಿ ಈ ಎಲ್ಲ ಸಾಹಿತ್ಯ ಕಲಾ ಶಾಖೆಗಳಲ್ಲೂ ತನ್ನದೇ ಆದ ಒಂದು ವೈಶಿಷ್ಟ್ಯದಿಂದ ಬೆಳಗುವ ಕೃತಿರಚನೆ ಮಾಡಿರುವುದು ವಿರಳ.

ಅಂತಹ ವಿರಳ ವ್ಯಕ್ತಿಯೇ ನಮ್ಮ ಶಿವರಾಮ ಕಾರಂತರು. ಅವರು ಮೂವತ್ತರಷ್ಟು ಉತ್ತಮ ದರ್ಜೆಯ ಕಾದಂಬರಿ ಬರೆದಿದ್ದಾರೆ. ಇಪ್ಪತ್ತರಷ್ಟು ನಾಟಕ, ಗೀತನಾಟಕ, ಆತ್ಮಚರಿತ್ರೆ, ಕರ್ನಾಟಕದ ಚಿತ್ರ-ಶಿಲ್ಪಕಲಾಗ್ರಂಥ, ಯಕ್ಷಗಾನ ಬಯಲಾಟದ ಕುರಿತು ಹೊತ್ತಗೆ, ಬಾಲಪ್ರಪಂಚ, ಮಕ್ಕಳ ಪರ್ಯ ಪುಸ್ತಕಾವಳಿ, ಇದೀಗ, ವಿಜ್ಞಾನ ಕೋಶ ಗ್ರಂಥಮಾಲೆ, ಅನೇಕ ಪರಭಾಷಾ ಭಾಷಾಂತರ ಪುಸ್ತಕಗಳು, "ಅಬೂವಿಂದ ಬರಮಾ" "ಅಪೂರ್ವ ಪಶ್ಚಿಮ" ಎಂಬ ಪ್ರವಾಸ ಕಥನಗಳು ಮೊದಲಾದ ಒಟ್ಟು ನೂರರಷ್ಟು ಗ್ರಂಥಗಳನ್ನು ರಚಿಸಿ, ನಮ್ಮ ಸಾರಸ್ವತ ಸಂಪತ್ತನ್ನು ಹೆಚ್ಚಿಸಿದ್ದಾರೆ. ಅವರು ಕುಣಿತವನ್ನೂ ಬಲ್ಲವರು; ಗೀತಗಾಯಕರೂ ಹೌದು. ಫೋಟೋಗ್ರಾಫಿಯಿಂದ ಹಿಡಿದು ಶಿಲ್ಪದ ವರೆಗಿನ ಚಿತ್ರಕಾರರೂ ಹೌದು. ಹೀಗೆ, ಅವರೊಬ್ಬ ಕನ್ನಡದ ಸಾಹಿತ್ಯ ಕಲಾ ಪ್ರಪಂಚದ "ಸವ್ಯಸಾಚಿ" "ಸರ್ವಾಂತರ್ಯಾಮಿ" ಶಕ್ತಿಯಾಗಿದ್ದಾರೆ.

ಕ್ರಾಂತದರ್ಶಿ

ಗಾಂಧೀ ಅಸಹಕಾರದಲ್ಲಿ, ೧೯೨೧ರಲ್ಲಿ ಅವರು ಕಾಲೇಜು ಶಿಕ್ಷಣವನ್ನು ಬಿಟ್ಟು ಕೊಟ್ಟು ತಮ್ಮ ಹುಟ್ಟೂರಾದ ಕೋಟದ ಸಮೀಪದ ಕುಂದಾಪುರ ಶಹರದಲ್ಲಿ "ಖಾದಿಭಂಡಾರ" ತೆರೆದರು. ದಿನಂಪ್ರತಿ ಬೆಳಗಿನ ನಾಲ್ಕು ಗಂಟೆಗೇ ಎದ್ದು, ಈ ೧೮ವರ್ಷದ ವೀರ ತರುಣ, ಕುಂದೇಶ್ವರ ಕೆರೆಯಲ್ಲಿ ತಣ್ಣೀರು ಜಳಕ ಮಾಡುವನು, ಬಗೆ ಬಗೆಯ ಆಸನ ಪ್ರಾಣಾಯಾಮದಿಂದ ಕೆಲಕಾಲ ಕಳೆಯುವನು. ಖಾದೀ ಭಂಡಾರಕ್ಕೆ ಬಂದು ತನ್ನ ದೇಶ ಸೇವೆಯ ಖಾದೀ ಪ್ರಚಾರದಲ್ಲಿ ಮಗ್ನನಾಗುವನು. ಆಗಿನ ಅವರ ರೂಪವೋ, ಯಾರ ಕಣ್ಣನ್ನಾದರೂ ಸೆಳೆದುಕೊಳ್ಳುವಷ್ಟು ತೇಜೋಭರಿತವಾದ ಸುಂದರ ರೂಪ! ದೃಢಕಾಯ, ಉಜ್ವಲ ನೇತ್ರ, ಮೊಳಕೆಯೊಡೆಯುವ ಮೀಸೆ, ಕನ್ನಡಿಯಂತಹ ಕದಪು, ಮುತ್ತಿನಸಾಲಿನಂತಹ ರದನಪಂಕ್ತಿ, ಆಜಾನುಬಾಹು, ವಿಶಾಲ ಫಾಲ—ಸಾವಿರ ಜನರ ನಡುವಿನಲ್ಲಿಯೂ ಎದ್ದು ಕಾಣುವಂತಹ ತರುಣಯೋಗಿಯಂತಿದ್ದರು.

ಅದೇ ವೇಳೆಯಲ್ಲೇ, ೧೯೨೪ರಲ್ಲಿ, ಅವರು "ವಸಂತ"ವೆಂಬ ಸುಂದರ ಸಚಿತ್ರ ಮಾಸಪತ್ರಿಕೆ ಸುರುಮಾಡಿದರು. ಅದರಲ್ಲಿ ಅವರದೇ ಪತ್ತೇದಾರಿ ಕಾದಂಬರಿ, ಕನ್ನಡ ಪಂಡಿತ ಶಿವರಾಮಯ್ಯನವರ ಲೇಖನಗಳು, ನನ್ನಂತಹರ ಕೆಲವು ಪುಂಡು ಕವನಗಳು ಇರುತ್ತಿದ್ದವು. ಕುಂದಾಪುರದ ಈ ಸಾಹಿತ್ಯಕಾರ್ಯ ೧೯೨೬ರೊಳಗೇ ಕಮರಿ ಹೋಯಿತು! ಅವರು ರಂಗನಾಥ ಭಟ್ಟರ 'ಅಂಬಾ ಪ್ರಾಸಾದಿಕ' ನಾಟಕ ಮಂಡಳಿ ಸೇರಿದರು. ಅಲ್ಲಿ ಒಂದು ವರ್ಷವೇನೋ 'ನಟ' ಕಾರ್ಯಮಾಡಿ ಪಾದಯಾತ್ರಿಗಳಾಗಿ ಅಖಿಲ ಭಾರತ ಸಂಚಾರ ಹೊರಟು ೧೯೨೭ ನಡುವಿನಲ್ಲಿ ಮಂಗಳೂರು ಶಹರಕ್ಕೆ ಬಂದು ಕೂತರು. ಅವರ ಅಣ್ಣಂದಿರಾದ ವಕೀಲ ಶ್ರೀ ರಾಮಕೃಷ್ಣ ಕಾರಂತರಲ್ಲಿ ಊಟ ಮಾಡುತ್ತ 'ಕರ್ನಾಟಕ ಬ್ಯಾಂಕ್' ಮಾಳಿಗೆಯಲ್ಲಿ ತಂಗಿ, ಪುನಃ 'ವಸಂತ' ಹೊರಡಿಸಿದರು. ಇದೇ ವೇಳೆ ಅವರ ವಸಂತ'ದಲ್ಲೂ 'ಸುವಾಸಿನಿ'ಯಲ್ಲೂ ನನ್ನ ಕೆಲವು ಕವನ ಲೇಖನಗಳು ಪ್ರಕಟಗೊಂಡವು. ಕಾರಂತರು, ಬೆಂಗಳೂರು "ಸತ್ಯ ಶೋಧನ ಪ್ರಕಟನಾಲಯ"ದವರ ಧನ ಸಹಾಯದಿಂದ 'ಬಾಲಪ್ರಪಂಚ' ಬರೆದದ್ದು ಆಗಲೇ. ಆಗಿನ ಕನ್ನಡದ ಆಚಾರ್ಯ ಪುರುಷರಲ್ಲೊಬ್ಬರಾಗಿದ್ದ ಪಂಜೆಯವರು ಕಾರಂತರ ಹಿರಿಯ ಬೆಂಬಲಿಗರಾಗಿ ನಿಂತರು. ಪಡುಕೋಣೆದಂಪತಿಗಳೂ, ಮೊಳಹಳ್ಳಿಶಿವರಾಯರೂ ಅವರಿಗೆ ವಿಶೇಷ ತರದ ಸೌಲಭ್ಯಗಳನ್ನೀಯ ತೊಡಗಿದರು.

ಕಾರಂತರು ಪುತ್ತೂರನ್ನು ತಮ್ಮ ಕಾರ್ಯಕೇಂದ್ರವಾಗಿ ಮಾಡಿಕೊಂಡು ಅಲ್ಲಿ ಮಕ್ಕಳ ಶಿಕ್ಷಣಕ್ಕೆ ಹೊಸ ಹಾದಿ ಹಾಕುವಂತೆ "ಬಾಲವನ"ವನ್ನು ಕಟ್ಟಿದರು. ಅದೇ ವೇಳೆಗೇ ಅವರು ಜಾನಪದ ಗೀತ-ನೃತ್ಯಗಳ ಅಭ್ಯಾಸ ತೊಡಗಿದರು. ಆದರೂ, ಅವರ ಸಾಹಿತ್ಯರಚನೆ ಇನ್ನೂ "ಎಳೆಮೆ"ಯಲ್ಲೇ ಇತ್ತು. ಅವರ ತಪಸ್ಸು ಮಾತ್ರ 'ಹಿರಿಮೆ'ಯಲ್ಲೇ ಇತ್ತು. ಅದು ಫಲಿಸುವ ದಿನ ದೂರವಾಗಲಿಲ್ಲ. ಬೆಂಗಳೂರು—ಧಾರವಾಡಗಳ ಗಣ್ಯ ಸಾಹಿತಿಗಳೊಡನೆ ಅವರ ಸ್ನೇಹ-ಸಂಪರ್ಕ ಸುರುವಾಯಿತು. ಅವರ ಪ್ರಥಮ ಗೀತನಾಟಕ "ಮುಕ್ತದ್ವಾರ" ಹೊರಬಂತು, ಅವರ ಕೃತಿ ಒಂದರ ಮೇಲೊಂದರಂತೆ ಅರಳ ತೊಡಗಿ, ಅವರ ಸಾಹಿತ್ಯ ಸೌರಭ ಅಖಿಲ ಕರ್ನಾಟಕವನ್ನೇ ವ್ಯಾಪಿಸಿತು. ಅದೇ ವೇಳೆಯಲ್ಲೇ ಅವರು ಅಂತರ್ಜಾತಿ ವಿವಾಹ ಮಾಡಿಕೊಂಡರು—೧೯೩೬ರಲ್ಲಿ.

ಕಾರಂತರು ಸುಧಾರಕರು, ಜಾತಿಮತಗಳು ಅವರಿಗೆ ಸೇರದ ವಸ್ತು. ಮಠ-ದೇವಾಲಯಗಳಲ್ಲಿ ಧರ್ಮ ಮತ್ತು ದೇವರ ಹೆಸರಿಂದ ನಡೆಯುವ ದುಷ್ಕೃತಿಗಳನ್ನವರು ತಮ್ಮ ಬರಹಗಳಲ್ಲಿ, ಭಾಷಣಗಳಲ್ಲಿ, ಟೀಕಿಸಿ, ವಿಡಂಬಿಸಿ, ಪರಂಪರಾಗತ ಸಾಮಾಜಿಕ ರೀತಿ ನೀತಿಗಳ ವಿರುದ್ಧ ಬಂಡಾಯ ಹೂಡಿದರು. ಆದರೂ 'ಧರ್ಮಸ್ಥಳ'ದ ಸರ್ವಧರ್ಮ ಸಮ್ಮೇಳನದ ಬೀಜವನ್ನು ಅವರೇ ಬಿತ್ತಿದರು! ಅಲ್ಲಿ ಅವರ ನಾಯಕತ್ವಕ್ಕೆ ಭಂಡಾರದ ಬೆಂಬಲ ದೊರೆತು ಬಗೆ ಬಗೆಯ ಸಾಂಪತ್ತಿಕ ಚಟುವಟಿಕೆಗಳು ಬೆಳೆಯ ತೊಡಗಿದವು. ಅದಕ್ಕೆ ಶ್ರೀ ಮಂಜಯ್ಯ ಹೆಗಡೆಯವರ ನಿರ್ಯಾಣದೊಡನೆ ಕಾರಂತರ ಧರ್ಮಸ್ಥಳ ಪ್ರಯಾಣವೂ ನಿಂತು ಹೋಯಿತು! ಅವರು ಸುಬ್ರಹ್ಮಣ್ಯದಲ್ಲಿ ಹೊಸದಾಗಿ ಈ 'ಸರ್ವಧರ್ಮಸಮ್ಮೇಳನ'ದ ಬೀಜಬಿತ್ತಿದರು.

ಕಾರಂತರು ೧೯೫೧ರಲ್ಲಿ ಶಾಸನ ಸಭೆಯ ಚುನಾವಣೆಗೆ ಸ್ವತಂತ್ರ ಹುರಿಯಾಳಾಗಿ ನಿಂತರು. ಆದರೆ ಅದರಲ್ಲವರು ಸೋಲಬೇಕಾಯಿತು. ಸೋತ ಮೇಲೆ ಅವರು ಇಂಗ್ಲೆಂಡ ಯುರೋಪ ಪ್ರವಾಸ ಮಾಡಿಬಂದರು. ಅವರ ಕಾದಂಬರಿ ರಚನಾಕಾರ್ಯ, ಯಕ್ಷಗಾನ ಸಂಶೋಧನ ಪ್ರಯತ್ನ, ಅಚ್ಚುಕೂಟದ ವಿಸ್ತರಣ ಮೊದಲಾದವುವೆಲ್ಲ ರಭಸದಿಂದಲೇ ನಡೆದವು.

ಈಗಲೂ ಅವರು ಬೆಳಗಿನ ಜಾವದ

(೧೬ನೇ ಪುಟ ನೋಡಿರಿ)

Deepavali Greetings

We wish all our Patrons and well-wishers

A Happy Deepavali.

K. VASUDEVA KINI

PROPRIETOR:

SHARADA INDUSTRIES

RICE, OIL, FLOUR & SAW MILLS

KATAPADI, S. KANARA.

Phone: 132

ಕಲೆಯು
ಸೌಂದರ್ಯಪೂರ್ಣವೂ—
ಸೌಲಭ್ಯಪೂರ್ಣವೂ
ಆಗಿದ್ದರೆನೇ ಜನಪ್ರಿಯವೆನಿಸುತ್ತದೆ.

ಕಳೆದ ಇಪ್ಪತ್ತೈದು ವರ್ಷಗಳಿಂದ ನಮ್ಮ ಸೀರೆಗಳು ಜನಪ್ರಿಯತೆ ಪಡೆದಿದ್ದರೆ ನಮ್ಮ ಮೇಲಿನ ಸಾಧನೆಯೇ ಕಾರಣವಾಗಿದೆ.

ಉಡುಪಿ ವೀವರ್ಸ್ ಕೋಪರೇಟಿವ್ ಪ್ರೊಡಕ್ಷನ್ ಅಂಡ್ ಸೇಲ್ಸ್ ಸೊಸೈಟಿ,
ಪೂರ್ಣಪ್ರಜ್ಞ ಕಾಲೇಜು ರಸ್ತೆ,
ಉಡುಪಿ.
[ಸ್ಥಾಪನೆ: 1938]

ರೇಷ್ಮೆ ಮತ್ತು ಚಿಲ್ಲರೆಯಾಗಿಯೂ ಸೀರೆಗಳು ನಮ್ಮಲ್ಲಿ ದೊರಕುತ್ತವೆ.

Hearty Deepavali Greetings
FROM
School Book Co.,
Book Sellers — Publishers — Stationers
PRINCIPAL PAPER DEALERS

Head Office:	Branch Office:
CAR STREET	K. S. RAO ROAD
	HAMPANKATTA
MANGALORE	MANGALORE
Phone No. 229	Phone No. 229 A

Distributors for:
The Mysore Paper Mills, Ltd.
BHADRAVATHI
(For S Kanara & N. Malabar)
Agents of:
Ganges Printing Ink Factory, Ltd.
HOWRAH

ಅತ್ಯುತ್ತಮ ಕಟ್ಟಿಂಗ್ ಬ್ಲೂಟಿಂಟ್ ತಾಜಾವಜ್ರಗಳಿಗೆ
ಅತ್ಯಾಧುನಿಕ ಬಂಗಾರದ ಆಭರಣಗಳಿಗೆ
ಅಲ್ಲದೆ ಬೆಳ್ಳಿಯ ಎಲ್ಲಾ ತರದ ಉಡುಗೊರೆ ವಸ್ತುಗಳಿಗೆ
ಎಸ್. ಎಲ್. ಶೇಟ್ ಡೈಮಂಡ್ ಹೌಸ್
ಕೆ. ಎಸ್. ಆರ್ ರೋಡ್, ಹಂಪನಕಟ್ಟೆ, ಮಂಗಳೂರು--1

ನಗರದ ಹಾಗೂ ಜಿಲ್ಲೆಯ
ಅತ್ಯಾಕರ್ಷಕ
ಸ್ಟೈಯಿನ್‌ಲೆಸ್ ಸ್ಟೀಲ್
ಪಾತ್ರೆಗಳ ಸಂಸ್ಥೆ-
ಅಶೋಕ ಸ್ಟೈಯಿನ್‌ಲೆಸ್ ಸ್ಟೀಲ್ ಸೆಂಟರ್
ಕಾರ್ನಾಡ್ ಸದಾಶಿವರಾವ್ ರಸ್ತೆ,
ಹಂಪನಕಟ್ಟೆ, ಮಂಗಳೂರು-1

ಗೃಹೋಪಯೋಗದ, ಉಡುಗೊರೆಗಳ, ಅಲಂಕಾರದ, ಉಪಯುಕ್ತ ಸ್ಟೈಯಿನ್ ಲೆಸ್ ಸ್ಟೀಲ್ ಪಾತ್ರೆಗಳು, ಸ್ಟೀಲ್ ಸೋಫಾಸೆಟ್ಟುಗಳು, ಆಕರ್ಷಕ ಜುವೆಲ್ ಬೋಕ್ಸುಗಳು, ಗ್ಲಾಸ್‌ವೇರ್ಸ್ ಹಾಗೂ ಫೇನ್ಸಿ ಆಭರಣ ಸೆಟ್ಟುಗಳು ಇತ್ಯಾದಿ ಇತ್ಯಾದಿ
ನವನವೀನ ಆಕರ್ಷಕ
ಡಿಸೈನ್‌ಗಳಲ್ಲಿ ಸಂಗ್ರಹವಿದೆ.

ಎಲ್ಲಾ ತರದ ಫೊಟೋಗ್ರಾಫಿಕ್
— ವಸ್ತುಗಳಿಗೆ —
ಐಡಿಯಲ್

ಫೋಟೋ ಹೌಸ್
ಅಗ್ಫಾ, ಕೋಡಕ್, ಮತ್ತು
ಇಲ್ಪೋರ್ಡ್ ಇವುಗಳ
ಅಧಿಕೃತ ವ್ಯಾಪಾರಿಗಾರರು.
ಕೆ. ಎಸ್. ಆರ್. ರೋಡ್,
ಹಂಪನಕಟ್ಟೆ, ಮಂಗಳೂರು-1
ಪ್ರೊ: ಎಸ್. ಎಲ್. ಶೇಟ್.
Tel: "GOLDKING"
Phone: 131.

ಎಂ. ಗಣಪಯ್ಯ ಎಂಡ್ ಸನ್ಸ್
ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು.
ಇವರ 1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಿಗಳು

ದೇಹಪುಷ್ಟಿ ಲೇಹ (ಸುವರ್ಣ ಸಾಲಾಮಿಶ್ರಿ ಕಲ್ಕದ ಮಿಶ್ರ) ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ 150ಗ್ರಾಂ ರೂ 7=00 325 ಗ್ರಾಂ. ರೂ. 4=00.

ಚ್ಯವನಪ್ರಾಶ ಲೇಹ (ಬಂಗಾರದ ಮಿಶ್ರ) ಇದು ಅತ್ಯಂತ ಶಕ್ತಿವರ್ಧಕ ರಸಾಯನ 450ಗ್ರಾಂ. ರೂ. 6=00, 225ಗ್ರಾಂ ರೂ 3=25.

ಅಶೋಕಾರಿಷ್ಟ ಮತ್ತು ಮಾತ್ರೆ ಇದು ಸ್ತ್ರೀಯರಿಗೆ ಉತ್ತಮವಾದ ಟಾನಿಕ್. ಬಾಟ್ಲಿ 1ರ ರೂ 4=00.

ಕಸ್ತೂರಿ ಮಿಶ್ರಣ ದಶಮೂಲ ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅನೋಘವಾದ ಶಕ್ತಿವರ್ಧಕ ರಸಾಯನ. 660 ಮಿ. ಲಿ. ರೂ. 6=00, 330 ಮಿ. ಲಿ. ರೂ 3=00. 420 ಮಿ ಲಿ. ರೂ. 2=25.

ಔಷಧಿ ಸಿಗುವ ಸ್ಥಳ: 1) ನ್ಯೂ ಕೆನರಾ ಜನರಲ್ ಸ್ಟೋರ್ಸ್, ವಿಕ್ಟೋರಿಯಾ ಗಾರ್ಡನ್ ರೋಡ್, ಬ್ರೈಕುಲ್ಲಾ, 2) ನ್ಯೂ ಬ್ರೈಕುಲ್ಲಾ ಸ್ಟೋರ್ಸ್, ಡಿಲೈಲ್ ರೋಡ್, ಬ್ರೈಕುಲ್ಲಾ 3) ವಿನಾಯಕ ಜನರಲ್ ಸ್ಟೋರ್ಸ್ ಗೋವಂಡಿ ರೋಡ್, ಚೆಂಬೂರು. 4) ಮಂಗಳೂರು ಸ್ಟೋರ್ಸ್ ಪೆರಡೈಸ್ ಸಿನಿಮಾದ ಬಳಿ, ಮಾಹಿಮ್, 5) ಕೆ. ಡಿ. ಶೆಟ್ಟಿ, ಮೋಹನ ಸ್ಟುಡಿಯೋದ ಬಳಿ, ಕುರ್ಲಾ ರೋಡ್, ಅಂಧೇರಿ, 6) ಸಾಯನ್ ಫಾರ್ಮಸಿ & ಸ್ಟೋರ್ಸ್, 32-A ಕೈಲಾಸ್ ಕೋಟೆಜ್, ಸಾಯನ್ ವೆಸ್ಟ್, ಸಾಯನ್, 7) ನ್ಯೂ ಕರ್ನಾಟಕಾ ಜನರಲ್ ಸ್ಟೋರ್ಸ್ ನಟರಾಜ್ ಸಿನೆಮಾ ಬಿಲ್ಡಿಂಗ್, ಚೆಂಬೂರ್, 8) ಶ್ರೀ ಸದ್ಗುರು ಪ್ರೊವಿಜನ್ ಸ್ಟೋರ್ಸ್, ಮಾಟುಂಗಾ. 9) ಕೆನರಾ ಸ್ಟೋರ್ಸ್, ಭಂಡಾರಕಾರ್ ರೋಡ್, ಮಾಟುಂಗಾ 10) ವಿಕ್ರಮ ಮೆಡಿಕಲ್ ಸ್ಟೋರ್ಸ್ ನ್ಯೂ ಪ್ರಕಾಶ್ ಸಿನೇಮಾದ ಎದುರು, ಡಿಲೈಲ್ ರೋಡ್. 11) ಶ್ರೀ ವೆಂಕಟೇಶ ಪ್ರೊವಿಜನ್ & ಜನರಲ್ ಸ್ಟೋರ್ಸ್ ಶೇಷಾದ್ರಿಪುರಂ ಬೆಂಗಳೂರು, 12) ಕೆನರಾ ಸ್ಟೋರ್ಸ್, ಮಡಿಕೇರಿ 13) ಪ್ರಭು ಫಾರ್ಮಸಿ, ಕಾರ್ಕಳ 14) ವೆರೈಟಿ ಸ್ಟೋರ್ಸ್, ಸುಳ್ಯ. 15) ಶ್ರೀಧರ ಭಟ್ ಬ್ರದರ್ಸ್, ಪುತ್ತೂರು 16) ಪೈ ಸ್ಟೋರ್ಸ್, ಪುತ್ತೂರು. 17) ಜಯಾ ಫಾರ್ಮಸಿ ಕುಂದಾಪುರ 18) ಶ್ರೀಕೃಷ್ಣ ಫಾರ್ಮಸಿ, ಪುತ್ತೂರು. 19) ಎಚ್. ಗೋಪಾಲಕೃಷ್ಣ ಗಣಪಯ್ಯ ಕಾಮತ್, ಕುಂದಾಪುರ.

ಪೋಸ್ಟ್ ಮುಖಾಂತರ ಔಷಧಿ ಬೇಕಾದವರು ಔಷಧಿ ಕ್ರಯದ ಅರ್ಧಾಂಶ ಹಣವನ್ನು ಮನಿಯಾರ್ಡರ್ ಮೂಲಕ ಕಳುಹಿಸತಕ್ಕದ್ದು.

ಜೀವನದ ವೈವಿಧ್ಯಗಳನ್ನು ಮತ್ತು ಆದರ ಆಳವನ್ನು ತೋರಿಸುವ ಚಿತ್ರಣವೇ ಸಾಹಿತ್ಯ! ಪಾಪವಿದು ಪುಣ್ಯವಿದು— ಹಿತರೂಪವಿದು, ಎಂಬುದನ್ನು ಬೋಧಿಸುವ ಮಾನವನ ಅಂತರಿಕ ವಿವಿಧ ಪ್ರವೃತ್ತಿಗಳನ್ನು ಚಿತ್ರಿಸುವ ಚಿತ್ರಣವೇ ಸಾಹಿತ್ಯ. ಸಾಹಿತ್ಯ ಮತ್ತು ಸಮಾಜ ಇವುಗಳ ಸಂಬಂಧ ಜೀವ ಮತ್ತು ದೇಹದಂತೆ ಐಕ್ಯವಾಗಿದೆ. ಸಾಹಿತ್ಯದಿಂದಲೇ ಸಮಾಜ ನಿರ್ಮಾಣ, ಸಾಹಿತ್ಯದ ಮೂಲಕವೇ ದೇಶಭಕ್ತಿ, ರಾಷ್ಟ್ರ ರಕ್ಷಣೆ, ಹಾಗೂ ಚಾರಿತ್ರ್ಯ ಸಂಸ್ಕೃತಿಗಳ ವಿಕಾಸವೂ ಆಗುವುದು.

ಯಾವ ಸಾಹಿತ್ಯವು ದೇಶಭಕ್ತಿಯನ್ನು ಕೆರಳಿಸಿ, ಧರ್ಮನೀತಿ ಮತ್ತು ಚಾರಿತ್ರ್ಯದ ವಿಕಾಸಕ್ಕೆ ಸಹಾಯಕವಾಗುವುದೋ, ಅದು ರಾಷ್ಟ್ರೀಯ ಸಾಹಿತ್ಯ. ಯಾವ ಸಾಹಿತ್ಯವು ಮಾನವನ ಸಂಕುಚಿತ ಮನೋಭಾವನೆ; ಸ್ವಾರ್ಥ ಪ್ರವೃತ್ತಿಗಳನ್ನು ಶಿಥಿಲಗೊಳಿಸಿ, ಪರೋಪಕಾರ, ವಿಶಾಲ ಮನೋಭಾವನೆ, ಇವುಗಳನ್ನು ಉಂಟುಮಾಡಬಲ್ಲುದೋ, ಅದೂ ಕೂಡ ರಾಷ್ಟ್ರೀಯ ಸಾಹಿತ್ಯವೇ ಆಗಿದೆ. ರಾಷ್ಟ್ರದ ಮೇಲೆ ಪರಕೀಯರ ಆಕ್ರಮಣ ನಡೆದಾಗ — ಯಾವ ಸಾಹಿತ್ಯವು— ಜನಮನಗಳನ್ನು ಒಂದುಗೂಡಿಸಿ ವೀರ ಗರ್ಜನೆಯೊಡನೆ, ವೈರಿಗಳನ್ನು ಎದುರಿಸಲು ಪ್ರೇರಕವಾಗುವುದೋ ಅದು ರಾಷ್ಟ್ರ ರಕ್ಷಣೆಯಲ್ಲಿ ಮೂಲ ಪ್ರೇರಕ ಸಾಹಿತ್ಯವಾಗಿದೆ.

ಹೀಗೆ ಸಾಹಿತ್ಯವು ರಾಷ್ಟ್ರದ ಆತ್ಮದಂತಿದೆ ಸಾಹಿತ್ಯವೇ ರಾಷ್ಟ್ರದ ನಿಧಿ! ಸಾಹಿತ್ಯದಿಂದಲೇ ರಾಷ್ಟ್ರಕ್ಕೆ ಸತ್ ಪ್ರೇರಣೆ! ಸಾಹಿತ್ಯವೇ ರಾಷ್ಟ್ರದ ಜ್ಞಾನ ಜ್ಯೋತಿಯಾಗಿದೆ! ಯಾವ ರಾಷ್ಟ್ರದಲ್ಲಿ ಇಂತಹ ಸತ್ ಸಾಹಿತ್ಯ ತುಂಬಿರುವುದೋ ಯಾವ ದೇಶದಲ್ಲಿ ಇಂತಹ ಸತ್ ಸಾಹಿತ್ಯ ನಿರ್ಮಾಪಕ ಕವಿ, ಸಾಹಿತಿಗಳಿರುವರೋ ಅಂತಹ ಆ ರಾಷ್ಟ್ರದ ರಕ್ಷಣೆ ಈ ಸತ್ ಸಾಹಿತ್ಯದ ಮೂಲಕ ತಾನಾಗಿಯೇ ಆಗುವುದು. ಎಂತಹ ಸಾಹಿತ್ಯವು ರಾಷ್ಟ್ರ ರಕ್ಷಣೆಗೆ ಪ್ರೇರಕವೆಂಬುದನ್ನು ವಿಚಾರಮಾಡಿದಾಗ ಈ ಬಗೆಯ ಸಾಹಿತ್ಯವನ್ನು ಸೃಜಿಸಬಲ್ಲ ಕವಿ- ಸಾಹಿತಿಗಳ ಪಾತ್ರ ರಾಷ್ಟ್ರ ರಕ್ಷಣೆಯಲ್ಲಿ ಎಷ್ಟು ಮಹತ್ವಪೂರ್ಣವಾದುದೆಂದು ಸ್ಪಷ್ಟವಾಗುವುದು. ರಾಷ್ಟ್ರೀಯ ಸಾಹಿತ್ಯವನ್ನು ನಿರ್ಮಾಣ ಮಾಡಿ, ನಮ್ಮ ರಾಷ್ಟ್ರವನ್ನು ಅನೇಕ ವಿಪತ್ತುಗಳಿಂದ ವಿಮೋಚನೆಗೊಳಿಸಿದ, ಆ ಲೋಕಮಾನ್ಯರಾದ ಸಾಹಿತಿಗಳಾರು? ಎಂಬುದನ್ನು ತಿಳಿದುಕೊಳ್ಳಬೇಕಾದುದು ಮುಖ್ಯವಾಗಿದೆ.

ನಮ್ಮ ರಾಷ್ಟ್ರದ ಇತಿಹಾಸವನ್ನು ನೋಡಿದರೆ, ಆದಿ ಮಾನವನು ಆದಿ ಕವಿ ವಾಲ್ಮೀಕಿಯಿಂದ ಹಿಡಿದು, ಇದುತನಕ ರಾಷ್ಟ್ರ ರಕ್ಷಣೆಗೆ ಪ್ರೇರಕವಾದ ಅಮರ ಸಾಹಿತ್ಯವನ್ನು ರಚಿಸಿದ, ಸಾವಿರಾರು, ನೂರಾರು ಮಂದಿ ಕವಿ, ಸಾಹಿತಿಗಳ ಹೆಸರುಗಳು ನಮಗೆ ಲಭಿಸುತ್ತವೆ. ಆ ಮಹನೀಯರ ನೂರಾರು ಗ್ರಂಥಗಳೂ ನಮ್ಮ ಮುಂದಿವೆ. ಈ ಸಾಹಿತ್ಯ ಹಾಗೂ ಸಾಹಿತ್ಯ ರಚಕರ ಸೂಕ್ಷ್ಮ ಪರಿಚಯ ಮಾಡಿಕೊಳ್ಳಬೇಕೆಂದರೂ, ಆ ಸೂಕ್ಷ್ಮವೇ ಅತಿ ವಿಸ್ತಾರವಾಗಬಹುದು. ಮಾನವ ಧರ್ಮವನ್ನು ರೂಪಿಸಿ ಬೋಧಿಸಿದ ಮನು— ಎಷ್ಟೋ ಶತಮಾನಗಳ ಹಿಂದೆಯೇ "ಅಭಿವಾದನ ಶೀಲಸ್ಯ ನಿತ್ಯಂ ವೃದ್ಧೋಪಸೇವಿನಃ ಚತ್ವಾರಿ ತಸ್ಯ ವರ್ಧಂತೇ ಆಯುರ್ವಿದ್ಯಾ ಯಶೋಬಲಮ್" ಎಂದು ಸಾರಿದ್ದಾನೆ. ಗುರುಹಿರಿಯರನ್ನು ಗೌರವದಿಂದ ಕಾಣುವ ವ್ಯಕ್ತಿ ಅವನು ಯಾರೇ ಇರಲಿ, ಅವನ ಶೌರ್ಯ— ಆಯಸ್ಸು— ವಿದ್ಯೆ— ಕೀರ್ತಿ ಇವು ನಾಲ್ಕೂ ದಿನೇ ದಿನೇ ವೃದ್ಧಿಯಾಗುವುವು ಎಂದು ಸಾರಿದ ಈ ಮನುವಿನ ಈ ಉಪದೇಶ ರಾಷ್ಟ್ರ ರಕ್ಷಣೆಯ ಅಸ್ತಿವಾರದಂತಿದೆ, ಎಂದರೂ ಸಾಲದು ರಾಷ್ಟ್ರದ ಉನ್ನತಿ ಅವನತಿಗೆ ಕಾರಣರಾದ ಮಾನವ ವರ್ಗಕ್ಕೆ ಮುಖ್ಯ ಪಾಠವಾಗಿದೆ. ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಸಾಹಿತಿಯ ಪಾತ್ರದ ಮಹತ್ವ ಮನುವಿನಿಂದಲೇ ಹೀಗೆ ಆರಂಭವಾಗಿದೆ. ಮನು ಸಾರಿದ ಈ ಉಪದೇಶ ರಾಷ್ಟ್ರೀಯರಿಗೆ ದಿನ ಬೋಧೆಯಾಗಿದೆ.

ಕೃಷ್ಣನು ಸಂಧಾನಕ್ಕೆ ಹೋದಾಗ ಕೌರವನು ಕೃಷ್ಣನನ್ನು ಆದರಿಸಿದ ರೀತಿಯನ್ನು ಮಹಾಭಾರತಕಾರನು— "ವಿಷಕುಂಭಂ ಪಯೋಮುಖಂ" ಎಂಬ ಒಂದೇ ನುಡಿಯಿಂದ ನಿರೂಪಿಸಿರುವನು ಈ ನುಡಿ ರಾಷ್ಟ್ರ ರಕ್ಷಣೆಗೆ, ರಾಷ್ಟ್ರದ ಜನರಿಗೆ ಎಚ್ಚರಿಕೆಯ ನುಡಿಯಂತಿದೆ. ಕೌರವನು ಅಂದು ಹೃದಯದಲ್ಲಿ ವಿಷ ತುಂಬಿಕೊಂಡೇ ಬಾಯಿಯಿಂದ ಮಿತ್ರನೆಯ ಸಿಹಿ ಮಾತುಗಳನ್ನಾಡಿದ. ಆದರೆ ಕೊನೆಗೆ ಆದರ ದುಷ್ಫಲ ಆತನಿಗೆ ಸಿಕ್ಕಿಯೇ ಸಿಕ್ಕಿತು. ಇಂದು ಚೀನಾ—ಭಾರತದ ರೀತಿಯೂ ಕೂಡ ಅಂಶತಃ ಹೀಗೇ ಇರುವುದು. ಕೃಷ್ಣನು ಪಾಂಡವರಿಗಾಗಿ ಕೇವಲ ಐದು ಗ್ರಾಮಗಳನ್ನಾದರೂ ಕೊಡಿ! ಎಂದು ಕೇಳಿದ್ದ. ಆದರೆ ಕೌರವನ ರಾಜ್ಯ ವಿಸ್ತಾರ ಲಾಲಸೆ ಸೂಜಿಯ ಮೊನೆಯಷ್ಟು ಉದಾರತೆಯನ್ನು ಕೂಡ ತೋರದ ಕಾರಣ ಕೊನೆಗೆ ರಕ್ತಪಾತವಾಗಬೇಕಾಯಿತು. ಕೌರವನ ಅತಿಯಾಸೆ ಹಾಗೂ ಹಟಮಾರಿತನ ನ್ನು ಬೇರು ಸಹಿತ ಕಿತ್ತೆಸೆಯಿತು. ಇಂದು ಚೀನಾದ ರಾಜ್ಯ ವಿಸ್ತಾರ ನೀತಿಯೂ ಅಂತೆಯೇ ಇದೆ. ಅಂದು ಕೃಷ್ಣನು ಸಂಧಾನಕ್ಕಾಗಿ ಕೌರವನಲ್ಲಿಗೆ ಹೋಗಿ ನಿರಾಶೆಯೊಡನೆ ಹಿಂತಿರುಗಿದ್ದ. ಇಂದು "ಕೊಲಂಬೋ ಪ್ರಪೋಸಲ್"ನವರು ಕೃಷ್ಣನ ಪಾತ್ರವನ್ನು ವಹಿಸಿ—ಚೀನಾ—ಭಾರತ—ಯುದ್ಧವಾಗಬಾರದೆಂದು, ಸಂಧಾನ ಪ್ರಯತ್ನ ಮಾಡಿದರು. ಆದರೆ ಚೀನದ ಹಟ ಹಾಗೂ ರಾಜ್ಯ ವಿಸ್ತಾರ ಲಾಲಸೆಯಿಂದ ಸಂಧಾನ ವಿಫಲವಾಯಿತು ಚೀನಾಸುರನ ನೀತಿಯೂ ಕೂಡ, ಕೌರವನ ನೀತಿಯಂತೆಯೇ "ಕಂಕುಳಲ್ಲಿ ದೊಣ್ಣೆ— ಬಾಯಿಯಿಂದ ಭಾಯೀ ಭಾಯೀ ನಮಸ್ಕಾರ!" ಎಂಬಂತಿರುವುದು. ಆದರೆ ಚೀನಾಸುರನಿಗೆ—ತಕ್ಕ ಪ್ರಾಯಶ್ಚಿತ್ತ ಆತನು ಕಟ್ಟಿಕೊಂಡ ಬುತ್ತಿಯ ಹಾಗೆ ಸಿಕ್ಕಿಯೇ ಸಿಕ್ಕುತ್ತದೆ. ಚೀನಾದ ದೌರ್ಜನ್ಯಕ್ಕೆ ಭಾರತೀಯರು ಎಂದೂ ತಲೆಬಾಗಲಾರರು. ರಾಮಾಯಣ—ಮಹಾಭಾರತಗಳಂತಹ ರಾಜಕೀಯ ಗ್ರಂಥರತ್ನಗಳಿಗೆ ಆಧಾರವಾದ, ಅಮರ ಧೈರ್ಯ ಕಾರ್ಯಗಳಿಗೆ ನಿಧಿಯಾದ ಭಾರತ ಹಾಗೂ

ರಾಷ್ಟ್ರ ರಕ್ಷಣೆಯಲ್ಲಿ

ಅಸಹಾಯ ಶೂರರಾದ ಕವಿಗಳು ರಾಷ್ಟ್ರವನ್ನು ಕಟ್ಟಬಲ್ಲರು, ಉಳಿಸಬಲ್ಲರು, ಅಳಿಸಬಲ್ಲರು, ಶಾಪಾನುಗ್ರಹ ಸಮರ್ಥರವರು. ಭಾರತದ ಸಾಹಿತ್ಯೇತಿಹಾಸವಾದರೂ ಸುಖೀರಾಜ್ಯ ಸ್ಥಾಪನೆಯಲ್ಲಿ ಸಾಹಿತಿಗಳು ಸಮುಚಿತ ಪಾತ್ರ ವಹಿಸಿದ್ದಾರೆಂಬುದನ್ನು ಸಾರಿ ಹೇಳುತ್ತದೆ ಶತ್ರುಗಳ ಆಕ್ರಮಣ

ಭಾರತೀಯರು ಚೀನಾದ ನರಪಿಶಾಚಿಗಳಿಗೆ ಎಂದಿಗೂ ತಲೆ ಬಾಗುವವರಲ್ಲ ನಮ್ಮ ಭಾರತದಲ್ಲಿ ಅರ್ಜುನನಂತಹ ಶೂರರಿದ್ದಾರೆ! ದ್ರೋಣ ಭೀಷ್ಮರಂತಹ ಅನುಭವಿಗಳಿದ್ದಾರೆ! ಭೀಮನಂತಹ ಜಟ್ಟಿಗಳಿದ್ದಾರೆ! ಇಂತಹ ಧೀರ ಪರಂಪರೆಯುಳ್ಳ ಧೀಮಂತ ರಾಷ್ಟ್ರದ ಎದುರು ಚೀನಾದ ಗತಿ, ಅಧೋಗತಿಯಾಗದಿರದು "ಆನೆ ಬೀದಿಲಿ ಬರಲು ಶ್ವಾನತಾ ಬೊಗಳುವುದು, ಶ್ವಾನನಂತಾನೆ ಬೊಗಳಿದೊಡೆ, ಆನೆಯೂ ಮಾನಕ್ಕೆ ಹಾನಿ ಸರ್ವಜ್ಞ!" ಎಂಬ ಸರ್ವಜ್ಞ ಕವಿಯ ಮಾತು ಆನೆಯಂತಿರುವ ಭಾರತಕ್ಕೆ ಸಹನೆಯ ಪಾಠವನ್ನು ಕಲಿಸಿದೆ. ನಾಯಿ ಬೊಗಳಿತೆಂದು ಆನೆಯನ್ನು ಕೆರಳಿಸಲು ಮುಂದಾಯಿತು, ಆನೆಯೂ ಶ್ವಾನನಂತೆ ವರ್ತಿಸಲಾರದು. ಆದರೆ ಆನೆ ಕೋಪ ಬಂದು ಕೆರಳಿದರೆ, ಅಂತಹ ನೂರಾರು ನಾಯಿಗಳನ್ನು ಕಾಲಿನ ಒದೆತದಿಂದಲೇ ನಾಶಮಾಡೀತು! ಭಾರತದ ಈ ಬಗೆಯ ಹಿರಿಮೆ ಭಾರತದ ಸಾಹಿತಿಯ ಅಮರ ಸಾಹಿತ್ಯದ ಸತ್ಪ್ರಭಾವವಲ್ಲದೆ ಮತ್ತೇನು?

ಭಾರತವು ಅನೇಕ ಶತಮಾನಗಳಿಂದ ವಿಪತ್ಪರಂಪರೆಗಳನ್ನು ಅನುಭವಿಸಿದೆ. ಆದರೆ ಭಾರತದ ಕವಿ—ಸಾಹಿತಿಗಳ ಅಮರ ಸಾಹಿತ್ಯದಿಂದಾಗಿ ಭಾರತದ ಆತ್ಮವು ಸುದೃಢವಾಗಿ ನಿಂತಿದೆ! ಎಂತಹ ವಿಪತ್ತು ಬಂದರೂ ಅದನ್ನೆದುರಿಸುವ ಅಸೀಮ ಶಕ್ತಿ ಭಾರತಕ್ಕಿದೆ. ಈ ಶಕ್ತಿ ಎಲ್ಲಿಂದ ಬಂದಿತು? ಇದು ಭಾರತದ ಕವಿ—ಸಾಹಿತಿಗಳ ಸಾಹಿತ್ಯ ಶಕ್ತಿಯು— ಮಹಾ ಶಕ್ತಿಯಾಗಿ ಬಂದಿದೆ. ಗೀತಾಚಾರ್ಯರು ಆತ್ಮದ ಕುರಿತು— "ನೈನಂ ಛಿಂದಂತಿ ಶಸ್ತ್ರಾಣಿ ನೈನಂ ದಹತಿ ಪಾವಕಃ" ಎಂದು ಆತ್ಮದ ಬಗೆಗೆ ಹೇಳಿದ ವಾಕ್ಯದಲ್ಲಿ ದೇಶಭಕ್ತಿಯ ಹೊನಲು ಹರಿಯುತ್ತಿದೆ ಈ ವಾಕ್ಯವೂ ಕವಿ ಹೃದಯದಿಂದಲೇ ಬಂದುದು. ಆತ್ಮಕ್ಕೆ ಶಸ್ತ್ರ-ಅಗ್ನಿಯೇ ಮೊದಲಾದ ಯಾವುದರ ಭಯವೂ ಇಲ್ಲ. ಆತ್ಮ ಅಮರ ಈ ದೇಹ ನಶ್ವರ! ರಾಷ್ಟ್ರಕ್ಕಾಗಿ ಈ ದೇಹ ಸಮರ್ಪಿತವಾದರೆ, ಅದಕ್ಕಿಂತ ಹೆಚ್ಚಿನ ಧನ್ಯತೆ ಏನಿದೆ? ಎಂಬ ಈ ಕವಿ ವಾಣಿಯ ನೆಲೆಯಲ್ಲಿ—ಭಾರತೀಯರು ದೇಶಕ್ಕಾಗಿ ಸಿಡಿಮದ್ದು ಗುಂಡುಗಳಿಗೆ ನಗು ನಗುತ—ಎದೆಯೊಡ್ಡಿದ್ದಾರೆ! ರಾಷ್ಟ್ರಕ್ಕಾಗಿ ಬಲಿದಾನಗೊಂಡಿದ್ದಾರೆ! ಮತ್ತು ಈ ಮೂಲಕ ಮುಂದಿನ ರಾಷ್ಟ್ರೀಯರಿಗೆ ಮೇಲ್ಪಂಕ್ತಿಯನ್ನು ಹಾಕಿ ಕೊಟ್ಟಿದ್ದಾರೆ. ಭಾರತದ ವೀರ ಪರಂಪರೆ ಬೇರಾವ ರಾಷ್ಟ್ರಕ್ಕೂ ದೊರೆತಿಲ್ಲ. ಭಾರತದ ವೀರ ನರನಾರಿಯರೆಲ್ಲರೂ; ಅಸಾಮಾನ್ಯಶೂರರು! ಭಾರತೀಯ ವಾಙ್ಮಯ ವಿಶ್ವಸಾಹಿತ್ಯದಲ್ಲೊಂದು ರತ್ನ! ಎಂಬ ಗೌರವವನ್ನು ಹೊಂದಿದೆ

ಭಾರತವು ಮುಸ್ಲಿಂ ಪ್ರಭುತ್ವಕ್ಕೆ ಒಳಪಟ್ಟಿದ್ದ ಆ ಕಾಲದ ಭಾರತೀಯರ ಸ್ಥಿತಿ, "ಭಾರತದ ರಕ್ತರಂಜಿತ ಇತಿಹಾಸವಾಗಿದೆ". ಈ ಕಾಲದ ರಕ್ತರಂಜಿತ ಇತಿಹಾಸದ ಪುಟಗಳನ್ನು ತೆರೆದಾಗ ನಮ್ಮಲ್ಲಿ ವೀರಾವೇಶವೇ ತುಂಬಿಬರುವುದು. ಆ ಕಾಲದ ಕೇವಲ ಅಬಲೆಯರ ಸಾಹಸವನ್ನು ಪರಿಶೀಲಿಸಿದರೂ ಸಾಕು, ಆಃ ನಮ್ಮ ಅಕ್ಕತಂಗಿಯರು ಎಷ್ಟು ಧೈರ್ಯವಂತರಾಗಿದ್ದರು! ಎಂತಹ ಸಾಹಸಗಳನ್ನವರು ಮಾಡಿದ್ದಾರೆ! ಎಂಬ ಕುರಿತು, ನಮ್ಮ ಹೃದಯ ತುಂಬಿ ಬರುವುದು. ಗಂಟಲು ಬಿಗಿದು, ನಯನಗಳು ಆನಂದ ಬಾಷ್ಪಗಳಿಂದ ತುಂಬಿಕೊಳ್ಳುವುವು. ರಕ್ತ ರಂಜಿತ ಇತಿಹಾಸದ ಈ ನೈಜವಾದ ಘಟನೆಗಳನ್ನು ಸಾಹಿತ್ಯರೂಪೀ ದರ್ಪಣದಲ್ಲಿ ಪ್ರತಿಬಿಂಬಿಸಿ ನಮ್ಮ ಹೃದಯಕ್ಕೆ ನಾಟುವಂತೆ, ಬರೆದಿಟ್ಟ ಆ ಲೇಖಕರೇ ನಮ್ಮ ರಾಷ್ಟ್ರ ರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸಿದ, ಕವಿ, ಸಾಹಿತಿಗಳಾಗಿದ್ದಾರೆ! ರಾಷ್ಟ್ರ ರಕ್ಷಣೆಯಲ್ಲಿ ಅವನ ಪಾತ್ರಕ್ಕಿಂತ ಪ್ರಮುಖವಾದ ಪಾತ್ರ ಬೇರೊಂದಿಲ್ಲ. ಈ ರಾಷ್ಟ್ರೀಯ ಕವಿ, ಸಾಹಿತಿಗಳ ಸಾಹಿತ್ಯದ ಪರಿಣಾಮವಾಗಿ, ಭಾರತದ ಜನತೆಗೆ ದೇಶಕ್ಕಾಗಿ ಕೊನೆಯ ಉಸಿರು ನಿಲ್ಲುವ ತನಕವೂ ಹೋರಾಡುವ ಉಜ್ವಲವಾದ ವೀರ ಪರಂಪರೆ ದೊರೆತಿದೆ!

ಆ ಕಾಲದಲ್ಲಿ, ಸ್ವಾಮೀ ದಯಾನಂದರೇ ಮೊದಲಾದ ಅನೇಕ ಧರ್ಮಪ್ರಚಾರಕರು, ಕವಿ, ಸಾಹಿತಿಗಳು. ತಂತಮ್ಮ ಲೇಖನ ಭಾಷಣಗಳ ಮೂಲಕ ಭಾರತೀಯರಲ್ಲಿ ನವಶಕ್ತಿಯನ್ನು ತುಂಬಿದರು. ದೇಶ ಮತ್ತು ಧರ್ಮ ರಕ್ಷಣೆಗಾಗಿ ಭಾರತೀಯರು "ಅನಿತ್ಯೋ ಭವತಿ ಪ್ರಾಣಃ ಮಾನಃ ಚಂದ್ರಾರ್ಕ ತಾರಕಃ" ಎಂಬ ಕವಿ ವಾಕ್ಯವನ್ನು ಕಾರ್ಯರೂಪಕ್ಕೆ ತಂದು ಕೀರ್ತಿಶೇಷರಾದರು! ಈ ಕಾಲದ ಕ್ರಾಂತಿಗೆ ಸಂತಕವಿಗಳು, ತಮ್ಮ ಭಕ್ತಿ ಗೀತಗಳಿಂದ

ದೇಶ ರಕ್ಷಣೆಯನ್ನು ಮಾಡು- ಇಲ್ಲವೆ ಮಡಿ!

ಸಾಹಿತಿಯ ಪಾತ್ರ

ಭೀತಿಯಿಂದ ನೊಂದಿರುವ ಮಾತೃ ಭೂ ರಕ್ಷಣೆಯ ಈ ಸಂಧಿಕಾಲದಲ್ಲಿ ಸಾಹಿತಿಗಳು ತಮ್ಮ ಕರ್ತವ್ಯವನ್ನು ತಪ್ಪದೆ ಮಾಡುತ್ತಾರೆ

ಲೇಖಕರು:
ಶ್ರೀ ಕೆ ಎಸ್ ಭಟ್, ಶಿರಾಡಿಪಾಲ್, ವಿದ್ವಾನ್, ವಿಶಾರದ.

ಕಾಂತಿಯ ಅಮೃತ ಸೇಚನ ಮಾಡಿದರು ಈ ಕಾಲದಲ್ಲಿ ಛತ್ರಪತಿ ಶಿವಾಜಿಯು ತೋರಿಸಿದ ಧೈರ್ಯ ಸಾಹಸ ಹಾಗೂ ದೇಶಭಕ್ತಿ ಇವು ಚರಿತ್ರೆಯಲ್ಲಿ ಅನುರವಾಗಿದ್ದು ಭಾರತೀಯರಿಗೆ ಮಾರ್ಗದರ್ಶಕವಾಗಿವೆ

ಧರ್ಮ–ಮಾತೃ ದೇಶರಕ್ಷಣೆಗಾಗಿ, ಸನ್ಯಾಸಿಯಾದರೂ ಶಸ್ತ್ರಧಾರಣೆ ಮಾಡಲು ಬದ್ಧನು! ಎಂಬ ವಿಚಾರವನ್ನು ಶಿವಾಜಿಯ ಗುರುಗಳಾದ ಸಮರ್ಥರಾಮದಾಸರು ಸಾರಿದರು ಅವರು ಬೋಧಿಸಿದ ರಾಷ್ಟ್ರರಕ್ಷಣೆಯ ಮಂತ್ರವು ಇಂದಿಗೂ ಎಂದೆಂದಿಗೂ ಅನುಕರಣೀಯವಾಗಿದೆ! ರಾಮದಾಸರು ಹೇಳಿದ ವಾಕ್ಯಗಳನ್ನು ನಾವು ಮತ್ತೆ ಮತ್ತೆ ಮನನ ಮಾಡಿಕೊಳ್ಳಬೇಕು.- "ಮರಾವೆ ಪರಿ ಮರಾಠಾ ದೇಶ ಮಾರೀಂ ಮರ ಮೇ! ಮರತಾನಾ ಮರೋನಿ ಮರಾವೆ! ಮಾರಿತಾಂ ಮಾರಿತಾಂ ಘ್ಯಾವೆಂ ರಾಜ್ಯ ಆಪುಲೆಂ ಎಂತಹ ವೀರವಾಣಿ! ಎಂತಹ ವೀರ ಸಾಹಿತ್ಯವಿದು! ಧರ್ಮರಕ್ಷಣೆಗಾಗಿ ದೇಶ ರಕ್ಷಣೆಗಾಗಿ ದ್ರೋಹಿಗಳ ಘಾತುಕರ ಕದಿ ಕಡಿದು ಚೆಲ್ಲುತ್ತ ಆತ್ಮಾರ್ಪಣೆಯ ಮಾಡಲು ಬೇಕು! ಈ ಪರಿಯ ಆತ್ಮಾರ್ಪಣೆಯ ಮೂಲಕ ನಮ್ಮ ಜನರಿಗೆ ಈ ವೀರ ಪರಂಪರೆಯನ್ನು ಬೋಧಿಸಬೇಕು! ಇಂತು, ಈ ಕಾರ್ಯದಲ್ಲಿ ಪ್ರಾಣಹೋದರೂ ಸತ್ತರೂ ಬಿಡದೆ ನಮ್ಮ ರಾಷ್ಟ್ರವನ್ನು ನಾವು ರಕ್ಷಿಸಿಕೊಳ್ಳಬೇಕು! ಎಂದು ಬೋಧಿಸಿದರು ಭಾರತೀಯರನ್ನು ರಾಷ್ಟ್ರದ ರಕ್ಷಣೆಗಾಗಿ ಜಾಗೃತಗೊಳಿಸಲು, ಇಂತಹ ನೂರಾರು ಮಂದಿ ಸಾಧು ಸಂತರು ಹಾಗೂ ಕವಿ ಸಾಹಿತಿಗಳೇ ಕಾರಣರಾಗಿದ್ದಾರೆ!

ಭಾರತವು ಇಂಗ್ಲೀಷರ ಆಳ್ವಿಕೆಗೆ ಒಳಪಟ್ಟಿತು ಈ ಕಾಲದಲ್ಲಿಯೂ ಕೂಡ ಭಾರತೀಯರು ಅನೇಕ ಕಷ್ಟಗಳನ್ನು ಸಹಿಸುತ್ತ ಈ ಪರಕೀಯ ಆಳ್ವಿಕೆಯನ್ನು ಕಿತ್ತೊಗೆಯುವುದಕ್ಕಾಗಿ ಕ್ರಾಂತಿಯನ್ನೆಬ್ಬಿಸಿದರು ವೀರ ಯೋಧ ಮಂಗಲಪಾಂಡೆಯು ಈ ಕ್ರಾಂತಿಗೆ ಬೀಜ-ರೋಪಣ ಮಾಡಿದನು ಸೈನ್ಯದಲ್ಲಿದ್ದ ಆತನು ತನ್ನ ಅಧಿಕಾರಿಗಳ ಮೇಲೆಯೇ ತಿರುಗಿಬಿದ್ದನು ಬೇಲಿಯೇ ಹೊಲ ಮೇಯುವ ಪರಿಸ್ಥಿತಿಯನ್ನರಿತ ಅಧಿಕಾರಿಗಳೂ ಆಳುವವರೂ ನಡುಗಿದರು! ಚೌಧುರಿದೇವಿ, ದೀದೀ ಪ್ರೀತಿಲತಾ, ಅಜೀಜಾನ್ ಸುನಂದಾದೇವಿ, ಸ್ವಾತಂತ್ರ್ಯ ಲಕ್ಷ್ಮಿಯೇ ಮೊದಲಾದ ಅನೇಕ ಮಂದಿ ತರುಣಿಯರು, ಮಾನಿನಿಯರು ಮಾರಿಯ ರೂಪಧಾರಣೆ ಮಾಡಿ ಪರಕೀಯರನ್ನು ಪ್ರತಿಭಟಿಸಿದರು! ಈ ಕ್ರಾಂತಿ 1857ರ ಸ್ವಾತಂತ್ರ್ಯ ಸಮರವೆಂದು ಕರೆಯಲ್ಪಟ್ಟಿತು. ಈ ಕ್ರಾಂತಿಯೇ ಮುಂದಿನ ಶಾಂತಿ ಸಮರಕ್ಕೆ ಆಧಾರವಾಯಿತು. ಈ ಕ್ರಾಂತಿಯ ಇತಿಹಾಸವನ್ನು ನಮಗೆ ನೀಡಿರುವ ಆ ಕಾಲದ ನೂರಾರು ಮಂದಿ ದೇಶ ಸೇವಕರು, ರಾಷ್ಟ್ರರಕ್ಷಣೆಯಲ್ಲಿ ಸಾಹಿತಿಯ ಪಾತ್ರದ ಮಹತ್ವವನ್ನು ಅವರವಾಗಿ ರೂಪಿಸಿದ್ದಾರೆ!— ಈ ಕವಿ ಸಾಹಿತಿಗಳ ಪ್ರಭಾವೀ ಸಾಹಿತ್ಯದ ಫಲವಾಗಿ ನಮ್ಮ ಜನಾಂಗದ ವೀರ ಪರಂಪರೆ, ಅಚ್ಚಳಿಯದೆ ಉಳಿದಿದೆ. ಕೆಲವೇ ವರ್ಷ ಹಿಂದೆ ನಡೆದ ಗೋವಾ ಆಂದೋಲನದಲ್ಲಿ ಕೂಡ ಭಾರತೀಯರ ಈ ಅಜೇಯ ಅದ್ಭುತ ಶಕ್ತಿ ಸಾಹಸಗಳ ಪ್ರದರ್ಶನವಾಗಿರುವುದು, ನಮಗೆಲ್ಲರಿಗೂ ತಿಳಿದ ವಿಷಯವಾಗಿದೆ.

ವಿಶ್ವವಂದ್ಯ ವೀರ ಸಾಹಿತಿ, ಸ್ವಾಮಿ ವಿವೇಕಾನಂದರು. ಭಾರತದಿಂದ ಬ್ರಿಟಿಷರ ತೊಲಗಿದ ಮೇಲೆ, ಚೀನಾದವರು ಆಕ್ರಮಣ ಮಾಡುವರು!' ಎಂದು ಭವಿಷ್ಯ ವಾಣಿಯನ್ನು ನುಡಿದಿದ್ದರು. 'ರವಿ ಕಾಣದಂ ಕವಿ ಕಾಣುವಂ' ಎಂಬ ನುಡಿ, ಇದರಿಂದ ಸಿದ್ಧವಾಗಿದೆ ಅವರು ಭವಿಷ್ಯ ನುಡಿದಂತೆಯೇ ಚೀನಾ ಆಕ್ರಮಣ ಇಂದು ನಡೆದಿದೆ! ಈ ಆಕ್ರಮಣವನ್ನು ಪ್ರತಿಭಟಿಸಲೋಸುಗವೇ ಸ್ವಾಮಿ ವಿವೇಕಾನಂದರು ಅರುವತ್ತು ವರ್ಷಗಳ ಹಿಂದೆಯೇ— "ಭಾರತೀಯರೇ ಎದ್ದು ನಿಲ್ಲಿ! ಧೀರರಾಗಿರಿ! ನಿಮ್ಮ ಮಾಂಸಖಂಡಗಳು ಕಬ್ಬಿಣದಂತಿರಲಿ, ನರಗಳು ಉಕ್ಕಿನ ನರಗಳಂತಿರಲಿ! ಬಲಾಢ್ಯರಾಗಿ! ಮೃತ್ಯುವನ್ನೂ ಎದುರಿಸಿ ಸ್ವದೇಶವನ್ನು ಸ್ವಧರ್ಮವನ್ನು ರಕ್ಷಿಸಿರಿ!" ಎಂದು ವೀರ ಘೋಷಣೆಯ ಉಪದೇಶವನ್ನು ಮಾಡಿದ್ದರು!

ಲೋಕಮಾನ್ಯ ತಿಲಕರು, ವೀರ ಸಾವರ್ಕರರು, ಉಜ್ವಲ ದೇಶಭಕ್ತ ವೀರ ಸಾಹಿತಿಗಳು 'ಸ್ವಾತಂತ್ರ್ಯವು ನಮ್ಮ ಜನ್ಮಸಿದ್ಧವಾದ ಹಕ್ಕು' ಎಂಬ ಘೋಷಣೆಯನ್ನು ಮೊಟ್ಟಮೊದಲು ಪ್ರಸಾರ ಮಾಡಿದವರು, ವೀರವರ ತಿಲಕರು. "ಕೇಸರಿ" "ಮರಾಠಾ" ಮೊದಲಾದ ಪತ್ರಿಕೆಗಳ ಮೂಲಕ, ಲೋಕಮಾನ್ಯರು ದೇಶದ ಮೂಲೆ ಮೂಲೆಗೂ ವೀರ ಸಂದೇಶವನ್ನು ಕಳುಹಿಸಿ, ಜನ ಜಾಗೃತಿಯನ್ನುಂಟು ಮಾಡಿ, ದೇಶಕ್ಕೆ ಸ್ವಾತಂತ್ರ್ಯವನ್ನು ದೊರಕಿಸಿ ಕೊಡಲು ಮೂಲಶಕ್ತಿಯಾದರು. ಸುಭಾಷ್ ಬೋಸರು, ರವೀಂದ್ರನಾಥರು, ಅರವಿಂದರೇ ಮೊದಲಾದ ಈ ನೂರಾರು ಮಂದಿ ವೀರ ಸಾಹಿತಿಗಳ ಪ್ರಯತ್ನ ಹಾಗೂ—ತ್ಯಾಗದ ಫಲವಾಗಿ ಮುಂದೆ ಮಹಾತ್ಮ ಗಾಂಧಿಯವರ ಅಸಹಕಾರ ಚಳವಳಿ ಯಶಸ್ವಿಯಾಯಿತು ರಕ್ತಪಾತವಿಲ್ಲದೆ, ದೇಶಕ್ಕೆ ಸ್ವಾತಂತ್ರ್ಯ ದೊರಕಿಸಿದ ಶಾಂತಿ ಸಾಹಿತಿ ಗಳು ಮಹಾತ್ಮಾ ಗಾಂಧಿಯವರು ಇವರನ್ನು "ಬಾಪೂ" ಎಂದು ಮಾತ್ರವಲ್ಲ ಕಲಿಯುಗದ ಸತ್ಯ ಹರಿಶ್ಚಂದ್ರ" ನೆಂದು ಕೊಂಡಾಡ ಬೇಕು

ದೇಶದಾಸ್ಯ ವಿಮೋಚನೆಗಾಗಿ ಗಾಂಧೀಜಿಯವರು, ಹೂಡಿದ ಅಸಹಕಾರ ಚಳವಳಿ "ಕ್ವಿಟ್ ಇಂಡಿಯಾ" ಚಳವಳಿಗಳಲ್ಲಿ ದೇಶಕ್ಕೆ ದೇಶವೇ ಐಕ್ಯಮತ್ಯವಾಗಿ ಭಾಗವಹಿಸಿ ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟಿತೆಂದರೆ, ಗಾಂಧೀಜಿಯವರ, ಸಾಹಿತ್ಯ ಹಾಗೂ ವಾಕ್ ಶಕ್ತಿಯು, ಈ ಮಹಾ ಸಂಘಟನೆಗೆ ಎಷ್ಟರಮಟ್ಟಿಗೆ ಪ್ರೇರಕವಾಯಿತೆಂಬುದು ನಮಗೆ ಸ್ಪಷ್ಟವಾಗುತ್ತದೆ ಗಾಂಧೀಜೀಯವರ 'ಯಂಗ್ ಇಂಡಿಯಾ' ಪತ್ರಿಕೆಯು, ಈ ಸಂಘಟನಾ ಕಾರ್ಯವನ್ನು ಮಾಡಿತು ರಾಜಕಾರಣಿಗಳು ಮೆಚ್ಚಲ್ಪಟ್ಟವು! ನೌಕರರು, ತಂತಮ್ಮ ವೃತ್ತಿಗೆ ರಾಜಿನಾಮೆಯನ್ನಿತ್ತು ಅಸಹಕಾರ ಚಳವಳದಲ್ಲಿ ಧುಮುಕಿದರು! ಹೀಗೆ ಗಾಂಧೀಜೀಯವರ ಸಾಹಿತ್ಯ ಶಕ್ತಿಯು ಕೋಟಿ ಕೋಟಿಜನ ಮನಗಳನ್ನು ಒಂದುಗೂಡಿಸಿತು, ತನ್ಮೂಲಕ ಭಾರತಕ್ಕೆ ಸ್ವಾತಂತ್ರ್ಯ ಲಭಿಸಿತು. ಕವಿ- ಸಾಹಿತಿಗಳ ಹಾಗೂ ಮಹಾತ್ಮಾಜೀಯವರ ಈ ಸಾಹಿತ್ಯ ಶಕ್ತಿ ಯಿಂದಲ್ಲವೇ ರಾಷ್ಟ್ರದ ಅಭೀಷ್ಟ ಸಿದ್ಧಿಸಿದುದು? ಕವಿ ಸಾಹಿತಿಗಳ ಈ ಸಾಹಿತ್ಯ ಶಕ್ತಿ ಇಲ್ಲದಿರುತಿದ್ದರೆ, ಜನ ಮನಗಳು ಒಂದಾಗಿ, ದೇಶವು ಸ್ವತಂತ್ರವಾಗುತಿತ್ತೇ? ಇಲ್ಲ, ಎಂದಿಗೂ ಇದು ಸಾಧ್ಯವಿರಲಿಲ್ಲ!

"ಲೇಖನಿ ಖಡ್ಗಕ್ಕಿಂತಲೂ ತೀಕ್ಷ್ಣವಾದುದು. ಸಾಹಿತ್ಯದ ಗರ್ಜನೆ ಅದು ಗುಡುಗಿಂತಲೂ ಮಿಗಿಲಾದುದು. ಹೃದಯ ಪರಿವರ್ತನೆಯನ್ನು ಮಾಡಬಲ್ಲ ಏಕೈಕ ಶಕ್ತಿ ಯಾವುದು ? ಅದು ಸಾಹಿತ್ಯ! ನೊಂದ ಹೃದಯಕ್ಕೆ ತಂಪನ್ನೀಯುವ ಸಂಜೀವಿನಿ ಶಕ್ತಿ ಯಾವುದು ? ಅದೂ ಸಾಹಿತ್ಯವೇ ಆಗಿದೆ! ರಾಷ್ಟ್ರಕ್ಕೆ ಗಂಡಾಂತರ ಒದಗಿದಾಗ ಅದನ್ನು ಪರಿಹರಿಸಬಲ್ಲ ಪ್ರೇರಕ ಶಕ್ತಿ ಯಾವುದು? ಅದೂ ಸಾಹಿತ್ಯವೇ ಆಗಿದೆ ಹೀಗೆ ಸಾಹಿತ್ಯ ಶಕ್ತಿಗೆ ಇದಿರಾಗಬಲ್ಲ ಮತ್ತೊಂದು ಶಕ್ತಿ ಜಗತ್ತಿನಲ್ಲಿಲ್ಲ! ಇಂತಹ ಸಾಹಿತ್ಯವನ್ನು ಸೃಜಿಸಬಲ್ಲ ಕವಿ, ಸಾಹಿತಿಗಳ ಪಾತ್ರ ರಾಷ್ಟ್ರ ರಕ್ಷಣೆಯಲ್ಲಿ ಯಾವ ಹಂತದಲ್ಲಿರುವುದು? ಎಂದರೆ, ಇದಕ್ಕೆ ಉತ್ತರ—ರಾಷ್ಟ್ರದ ಜೀವವೇ ಸಾಹಿತ್ಯ! ರಾಷ್ಟ್ರ ಜೀವನದ ಸೂತ್ರಧಾರಿಗಳೇ ಕವಿ- ಸಾಹಿತಿಗಳು ಎಂಬ ಈ ವಿಚಾರ ಭಾರತದ ಗತ ಇತಿಹಾಸದ ಮೂಲಕ ಸ್ಪಷ್ಟವಾಗುತ್ತದೆ. ಸಾಹಿತಿ ಒಂದು ರಾಷ್ಟ್ರವನ್ನು ತನ್ನ ಲೇಖನಿಯ ಬಲದಿಂದ ಕಟ್ಟಬಲ್ಲನು! ಉರುಳಿಸಿಬಿಡಲೂ ಸಮರ್ಥನಾಗಿದ್ದಾನೆ! ಹಾಗೆ ನೋಡಿದರೆ ಕವಿ, ಸಾಹಿತಿಗಳು 'ಶಾಪಾನುಗ್ರಹಾದಿಕಾರ'ಗಳು. ರೂಸೋ—ವಾಲ್ಟೇರ್ ಮೊದಲಾದ ವಿದೇಶೀ ಲೇಖಕರ ರಾಜಕೀಯ ಗ್ರಂಥಗಳು, ಫ್ರಾನ್ಸಿನ ರಾಜ್ಯ ವಿಪ್ಲವಕ್ಕೆ ಕಾರಣವಾಗಲಿಲ್ಲವೇ? ಇಟಲಿಗೆ ಸ್ವಾತಂತ್ರ್ಯ ದೊರಕಿಸಲು ಮೆಟ್‌ಸಿನಿ ಎಂಬ ಕವಿಯೇ ಕಾರಣನಾಗಿದ್ದ ಹಿಂದೆ ನಡೆದ ಜರ್ಮನಿಯ ಯುದ್ಧಕ್ಕೆ ಟ್ರಿಸ್ಕಿ ಎಂಬ ಇತಿಹಾಸ ಲೇಖಕನು ಕಾರಣನಾಗಿದ್ದನು. ವಂಗಭಂಗ ಚಳವಳದಲ್ಲಿ ರಾಜಾ ರಾಮಮೋಹನರಾಯರು ಬಂಕಿಮ ಚಂದ್ರರು, ಇವರು—ಮುಖ್ಯ ಸಹಿತಿಗಳಾಗಿದ್ದರು. ಭಾರತಕ್ಕೆ ಸ್ವಾತಂತ್ರ್ಯ ದೊರಕಿಸಲು ಸಾವಿರಾರು ಕವಿ ಸಾಹಿತಿಗಳ ಸಾಹಿತ್ಯ ಪ್ರೇರಕವಾಗಿದೆ. ಇದರ ವಿವರಗಳಿಂದೊಡಗೂಡಿದ ಭಾರತದ ಭವ್ಯ ಇತಿಹಾಸ ನಮ್ಮ ಮುಂದಿದೆ ಸಾಹಿತಿಯು ರಾಷ್ಟ್ರವನ್ನು ತನ್ನ ಸಾಹಿತ್ಯದ ಮೂಲಕ ನಿರ್ಮಿಸುವ ಹಾಗೂ ರಕ್ಷಿಸುವ ಶಕ್ತಿಯುಳ್ಳವನಾಗಿದ್ದಾನೆ, ರಾಷ್ಟ್ರ ರಕ್ಷಣೆಯಲ್ಲಿ ಸಾಹಿತಿಯ ಪಾತ್ರದ ಮಹತ್ವ ಇದರಿಂದ ಸ್ಪಷ್ಟವಾಗುತ್ತದೆ

ಸ್ವತಂತ್ರ ಭಾರತದ ಕವಿ, ಸಾಹಿತಿಗಳ ಜವಾಬ್ದಾರಿ ಹೆಚ್ಚಿದೆ ಅದಕ್ಕೆ ತಕ್ಕಂತೆ ಈಗ ರಾಷ್ಟ್ರೀಯ ಸಾಹಿತ್ಯವೂ ರಚಿತವಾಗುತ್ತಿದೆ. ಈಗ ಈ ಬಗೆಯ ಸಾಹಿತ್ಯದ ಆವಶ್ಯಕತೆಯು ವಿಶೇಷವಾಗಿದೆ

ವೈರಿಗಳಿಗೆದುರಾಗಿ ಹೋರಾಡುತ್ತಿರುವ ನಮ್ಮ ಯೋಧರನ್ನು ಹುರಿದುಂಬಿಸಿ ಅವರಲ್ಲಿ ನವ ಶಕ್ತಿಯನ್ನು ತುಂಬುವ ಶಕ್ತಿಪೂರ್ಣ ಸಾಹಿತ್ಯವೀಗ ಬೇಕಾಗಿದೆ "ಎಷ್ಟೆ ಚಲೋ ಬಢೆ ಚಲೋ ರಹೇ ಸಮುಚ್ಚ ಹೈ ಖಡಾ ಶಿಖಂ! ತುಷಾರ ಶೃಂಗ ಉರೇ ಸಿ ಖಿರ್! ಭಲೇ ಹಿಜಾಯೆ ತನ್ ಬಿಖರ್ ಅ ಡೋ ನಹೀಂ ಹಟೋ ನಹೀಂ ಬಢೆ ಚಲೋ ಬಢೆ ಚಲೋ!' ಎಂತಹ ವೀರ್ಯವತ್ತಾದ ಕವಿತೆಯಿದು? ನಿಮ್ಮ ಕಾರ್ಯದಲ್ಲಿ ಮುಂದಿಟ್ಟ ಹೆಜ್ಜೆಯನ್ನು ಹಿಮ್ಮೆಟ್ಟಿಸದಿರಿ ಎಷ್ಟು ದೊಡ್ಡ ಕಷ್ಟ ಬಂದರೂ ಹಿಂದಿಕ್ಕದಿರಿ! ಎಚ್ಚರಿಕೆಯಿಂದಿರಿ! ನಿಮ್ಮ ದೇಹ ದೂರು ಚೂರಾಗಿ ಹೋದರೂ, ಪ್ರಾಣ ಹೋಗುವ ಸಂಭವ ಬಂದರೂ, ಹಿಮ್ಮೆಟ್ಟದಿರಿ! ನಡೆಯಿರಿ! ಮುಂದೆ ಮುಂದೆ ನಡೆಯಿರಿ!' ಎಂತಹ ಸತ್ವ ಪೂರ್ಣವಾದ ವಾಣಿ! ಇಂತಹ ಸಾವಿರಾರು ಗೀತೆಗಳು ನಮ್ಮ ಮುಂದಿವೆ ಇಂತಹ ಕವಿ ಸಾಹಿತಿಗಳಿಂದಲ್ಲವೇ ರಾಷ್ಟ್ರದ ರಕ್ಷಣೆ!

ಇನ್ನೊಬ್ಬರ ಕವಿಗಳ ಗೀತೆಯಿದು— ಅವರ ಈ ಗೀತೆ ಹೇಡಿಗಳನ್ನು ಕಂಪಿಸಿ, ವೀರರನ್ನು ರೋಮಾಂಚನಗೊಳಿಸುವಂತಿದೆ = ಏನು ಹೇಳುತ್ತಾರೆ ಗೊತ್ತೇ ಮಾತಾರ್ ಭಾರತಿ, ಅಮೃತಮಯ ಪಯಃಕಾಲಕಾಟ ಹೇಯಾ! ಅಂಧೋಂಕಾ ಪಾಸೀ ಖಾಪೇ ಪಹ ಶೋಣಿತಕೀ ಬೂದೇಂ ಒನಜಾಯೆಂ! ಓ ದೇಶಬಾಂಧವರೇ! ನಿಮ್ಮ ದೇಶವೆಂಬ ಮನೆಯ ಒಂದು ಭಾಗದಲ್ಲಿ ಕಳ್ಳರು ನಗ್ಗ ಕೊಲೆ ಸುಲಿಗೆಗಳನ್ನು ಮಾಡುತ್ತಿದ್ದಾರೆ!

(೧೬ನೇ ಪುಟ ನೋಡಿರಿ)

ವೈರಿಗಡಣವನ್ನು ಸುಡು- ವಿಜಯ ಧ್ವಜವನ್ನು ನೆಡು!

ರಾಷ್ಟ್ರ ರಕ್ಷಣೆಯಲ್ಲಿ ಸಾಹಿತಿಯ ಪಾತ್ರ

(೧೫ನೇ ಪುಟದಿಂದ)

ಈ ಸಂಕಟ ಸಮಯದಲ್ಲಿ ನೀವುಗಳು ಸುಮ್ಮನೆ ಕುಳಿತಿರುವಿರಲ್ಲ? ಹೋಗಿ. ಆಕ್ರಮಣಕಾರರನ್ನು ಪ್ರತಿಭಟಿಸಿರಿ! ಏನು ನಿಮಗೆ ಹೆದರಿಕೆಯಾಗುತ್ತಿದೆಯೇ? ಹಾಗಾದರೆ ನೀವು ಹೇಡಿಗಳೇ? ನೀವು ಹೇಡಿಗಳಾದರೆ, ನೀವುಂಡ ನಿಮ್ಮ ಮಾತೆಯ ಮೊಲೆಹಾಲು ನಿಮಗೆ ಕಾಲಕೂಟ ವಿಷವಾಗಿ ಪರಿಣಮಿಸಲಿ! ನಿಮ್ಮಂತಹ ಹೇಡಿಗಳು ಉಳಿದರೂ, ಅಳಿದರೂ, ಅದರಿಂದ ದೇಶಕ್ಕೆ ಉಪಯೋಗವಿಲ್ಲ!" ಎಂತಹ ಕಟು ಸತ್ಯ! ಎಂತಹ ದಿಟ್ಟೆದೆಯ ವೀರವಾಣಿ! ಇಂತಹ ಕವಿ ಸಾಹಿತಿಗಳಿರುವ ವೀರ ಪರಂಪರೆಯುಳ್ಳ ರಾಷ್ಟ್ರ ನಾಲ್ಕು ಚೀನಾಗಳು ಎದುರು ಬಂದರೂ ತಲೆಬಾಗದು!

ಜಯಕರ್ತ ರುದ್ರನಾ ಗಂಟಲನೊತ್ತಿ ಸೋಲಿಸಿದ ನರನ ನಾಡು! ಈ ನಾಡು! ಇಂತಹ ಭಾರತದ ವೀರಕಂಕಣಕೆ ಜೀವಿಪರಾರು?

"ಅಳಿಯುವುದು ಕಾಯ! ಉಳಿಯುವುದು ಕೀರ್ತಿ" ಎಂಬ–ತತ್ವವನ್ನು ನಮ್ಮ ಕನ್ನಡ ಕವಿಗಳೊಬ್ಬರು ವೀರ ಗೀತೆಯ ಮೂಲಕ ಸಾರಿದ್ದಾರೆ! ಅವರೇನು ಹೇಳುತ್ತಾರೆ? ನೋಡಿ— "ಎತ್ತರಿಸು ಧೈರ್ಯವನು! ಹೇಡಿಯಂತಾಗದಿರು! ನೋಡಿ ಬೆರಗಾಗದಿರು! ಓಡಿ ಹಿಮ್ಮೆಟ್ಟದಿರು! ಬೇಡಿ ನೀ ಬದುಕದಿರು! ನೀನು ಎತ್ತರನಾಗು! ದೌರ್ಬಲ್ಯವನು ನೀಗು! ನಾಡ ರಕ್ಷಿಸ ಪೋಗು! ತ್ಯಾಗಕ್ಕೆ ತಲೆಬಾಗು! ವೈರಿ ಸೈನ್ಯವ ತಾಗು! ಬಲು ಸಾಹಸದಿ ಸಾಗು! ತೊರೆಜೀವದಾಹಂಗು! ಚೀನಿಯರ ಕೊಂದು ನೀ ವಿಶ್ವದಲಿ ತಂಗು!" ಎಂತಹ ವೀರಭಕ್ತಿ! ಎಂತಹ ದೇಶಭಕ್ತಿ! ಈ ಗೀತೆ ಒಬ್ಬ ಬಾಲಕನನ್ನು ಕೂಡ ಕೆರಳಿಸಬಲ್ಲದು! ಕೆರಳಿಸಿ ರಣಾಂಗಣಕ್ಕೆ ಧುಮುಕಿಸಬಲ್ಲದು! ನಮ್ಮ ನಾಡಿನಲ್ಲಿ ಇಂತಹ ವೀರ ಕವಿ—ಸಾಹಿತಿಗಳು ಸಾವಿರಾರು ಮಂದಿ ಇರುವರು! ಆದರೆ ಇವರಿಗೆ ಸರಕಾರದ ಸಹಾಯವಾದರೂ ಸಾಕಷ್ಟಿದೆಯೇ? ಸಾಕಷ್ಟು ಜನರ ಬೆಂಬಲವಾದರೂ ಇದೆಯೇ? ಇಂತಹ ಕವಿ ಸಾಹಿತಿಗಳನ್ನು ನಮ್ಮ ಜನರು ಆದರಿಸ ಬೇಕು. ಆದರಿಸಿ, ಸಹಕರಿಸ ಬೇಕು! ಮತ್ತು ತನ್ಮೂಲಕ ಧನ್ಯತೆಯನ್ನು ಹೊಂದ ಬೇಕು! ಇದಾಗದಿದ್ದರೆ, ಪರಿಣಾಮ ಶೋಚನೀಯವಾದೀತು! ಆದರೆ ನಮ್ಮ ಕವಿ ಸಾಹಿತಿಗಳು ಇದನ್ನೆಲ್ಲ ಲೆಕ್ಕಿಸುವವರಲ್ಲ! ಅವರು ಸ್ವಸಹಾಯ ಶೂರರು! ಅಸಹಾಯ ಶೂರರು!

ರಾಷ್ಟ್ರದ ನವೋದಯವನ್ನು ಅಪೇಕ್ಷಿಸುವ ಕವಿಗಳಲ್ಲೊಬ್ಬರು "ಹೂಂಕಾರ" ಮಾಡುತ್ತಾರೆ. ಈ ಹೂಂಕಾರ ಶೌರ್ಯದ ಕಿಡಿಯಾಗಿದೆ! ಸತ್ಯದ ಪ್ರತಿಬಿಂಬವಾಗಿದೆ! ನೋಡಿ- "ಲಕ್ಷ ಲಕ್ಷ ಲೋಚನೋಂ ಮೆ ಚಮಕೆ ಪ್ರಾಣದಾನಕೀ ನಿರ್ಮಲ ಜ್ವಾಲಾ! ಕೋಟಿ ಕೋಟಿ ಕಂಠೋಂ ಸೆ ಹೋ ಸರ್ವನಾಶಕಾ ಉದ್ಘೋಷ ನಿರಾಲಾ" ವೈರಿಗಳಿಗೆದುರಾದಾಗ ಲಕ್ಷ ಲಕ್ಷ ಕಣ್ಣುಗಳಲ್ಲಿ ಸಮಯ ಬಂದರೆ ಆತ್ಮಾರ್ಪಣ ಮಾಡುವ ನಿರ್ಮಲವಾದ ಭಾವ ಜ್ಯೋತಿಯು ಜಗಮಗಿಸಲಿ! ಕೋಟಿ ಕೋಟಿ ಕಂಠಗಳಿಂದ- "ವೈರಿಗಳ ಸರ್ವನಾಶವಾಗಲಿ" ಎಂಬ ಭೀಕರವಾದ ಘೋಷಣೆಯು ಎಡೆತಡೆಯಿಲ್ಲದೆ ಪ್ರತಿಧ್ವನಿಸುತ್ತಿರಲಿ!

"ಸಿಂಗ್ ನೆ ದಿಖಲಾ ದೇಕಿ ಮರಣ ಹೀ ಜೀವನ ಹೈ! ರಣ ಪ್ರಾಂಗಣ ಹೀ ಗೀತಾ ಹೈ!" ಹೇ ವೀರರೇ! ಹಿಂದೊಮ್ಮೆ ರಣಾಂಗಣದಲ್ಲಿಯೇ ಅರ್ಜುನನಿಗೆ ಕೃಷ್ಣನು ಗೀತೆಯ ಜ್ಞಾನೋಪದೇಶವನ್ನು ಕೊಟ್ಟಿದ್ದನು. ಈಗ ನೀವು "ಮರಣವೇ ಜೀವನ!" ರಣಾಂಗಣದಲ್ಲಿ ಕಾದಾಡುವ ಸಾಹಸವೇ ಗೀತಾಪಾರಾಯಣ! ಎಂಬುದನ್ನು ಜಗತ್ತಿಗೆ ಮತ್ತೊಂದು ಬಾರಿ ತೋರಿಸಿ ಕೊಡಿ!" ರಾಷ್ಟ್ರ ರಕ್ಷಣೆಯಲ್ಲಿ ಸಾಹಿತಿಯ ಪಾತ್ರ ಈ ಪರಿಯಿಂದ ಅತ್ಯಂತ ಮಹತ್ವಪೂರ್ಣವಾಗಿದೆ!

ಚೀನಾದ ದುರಾಕ್ರಮಣದ ಈ ಕಾಲದಲ್ಲಿ ನಮ್ಮ ಕವಿ ಸಾಹಿತಿಗಳು ತಮ್ಮ ಪಾತ್ರದ ಮಹತ್ವವನ್ನರಿತು ಸಾಹಿತ್ಯ ಶಕ್ತಿಯನ್ನು ನೀಡುತ್ತ ಭಾರತೀಯರಲ್ಲಿ. ಯೋಧರಲ್ಲಿ ನವಶಕ್ತಿಯನ್ನು ತುಂಬುತ್ತಿರಲಿ! ತನ್ಮೂಲಕ ಹಗೆಗಳ ಹತ್ಯಾಕಾಂಡ ನಡೆಯಲಿ! ಭಾರತದ ಭೂಭಾಗಗಳನ್ನು ಕಬಳಿಸಲು ಬಂದ ವಂಚಕರಾದ ವೈರಿಗಳಿಗೆ, ಈ ಪುಣ್ಯ ಭೂಮಿಯಲ್ಲಿಯೇ ಮುಕ್ತಿ ಲಭಿಸಲಿ!

ಜೈ ಹಿಂದ್! ಜೈ ಕರ್ನಾಟಕ!

ದೀರ್ಘ ಬಾಳಿಕೆಯ
ಫೌಂಟನ್ ಪೆನ್ನುಗಳು
ಯೋಗ್ಯ ಬೆಲೆಗೆ ದೊರೆಯುವ ಸ್ಥಳ:
ವಿಜಯಾ ಪೆನ್ ಮಾರ್ಟ್
ಹಂಪನಕಟ್ಟಾ, ಮಂಗಳೂರು-1

ಸೂಚನೆ

'ನವಯುಗ"ದಲ್ಲಿ ಪ್ರಕಟನೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಲು ತಾವು ಸೈಜಿನ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಸುವಾಚ್ಯವಾಗಿಯೂ ಇರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ. ನ.

ಪುತ್ತೂರು ಡಿ. ಮು. ಕೋರ್ಟಿನಲ್ಲಿ
O. S. 315/1963

ಕೊಲ್ಲಾಜೆ ಅನಂತರಾಮಯ್ಯ —ವಾದಿ,

ಹೊನ್ನಮ್ಮ, ಜೋಗಿ ಗಾಡನ ಮಗಳು ಮಲವಂತಿ ಗ್ರಾಮದ ಕಡ್ತಿಕುಮೇರು —ಪ್ರತಿವಾದಿರು

ಪ್ರತಿವಾದಿಗೆ ಈ ಮೂಲಕ ತಿಳಿಸುವುದೇನೆಂದರೆ—

ವಾದಿಯು ನಿಂಮ ಮೇಲೆ ತೀರ್ವ ಬೇಕಿಜಿನ ಹಣ ವಸೂಲಿ ಬಗ್ಗೆ ಮಾಡಿದ ಮೇಲಿನ ದಾವೆಯು ತಾ. 29—11—63ಕ್ಕೆ ಯಿಟ್ಟಿರುವುದರಿಂದ ಅನ್ಯೆ ಆಕ್ಷೇಪಣೆಗಳಿದ್ರೆ ಸದ್ರಿ ದಿವ್ಸ ಪುತ್ತೂರು ಕೋರ್ಟ್ ಮುಂದೆ ನೀವು ಸ್ವತಃ ವ ವಕೀಲರ ದ್ವಾರೆ ಹಾಜರಾಗಿ ಪುದಹರಿಸಕೊಳ್ಳ ತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರುಹಾಜರಿಯಿಂದ ತೀರ್ಮಾನಿಸಲಾದೀತು ಎಂತ ಈ ಮೂಲ್ಕ ತಿಳಿಸಿದೆ.

C. S. Shastry.
Vakil for plff.

ಪುತ್ತೂರು. ತಾ. 7-11-63.

ಉಡುಪಿ ಡಿ. ಮು. ಕೋರ್ಟಿನಲ್ಲಿ
R. E. P. No. 140/63.

ಲೂವಿಸ್ ಫೆರ್ನಾಂಡಿಸ್ —ಅರ್ಜಿದಾರ,

ಮತ್ತು

ಶಾಂತು ಪೂಜಾರಿ —ಎದ್ರಿ

ಯವರೊಳಗೆ

ಶಾಂತು ಪೂಜಾರಿ— ಕಾಳು ಪೂಜಾರಿ ಅಳಿಯ—ಉಡ್ಪಿ ತಾಲೂಕು ತೆಂಕನಿಡಿಯೂರು ಗ್ರಾಮ.

ಅರ್ಜಿದಾರನು ಎದ್ರಿಯ ಬಾಬ್ತು ಸ್ಥಿರಾಸ್ತಿ ಏಲಂಗೆ ಅಪೇಕ್ಷಿಸಿದ ಬಾಬ್ತು ಇಸ್ತಿಹಾರಿನ ಶರತುಗಳ ನಿರ್ಣಯದ ಬಗ್ಗೆ ತಾರೀಕು 18-11-63ಕ್ಕೆ ಇಟ್ಟಿದೆ. ಎದ್ರಿಯು ಸದ್ರಿ ತಾ 18-11-63ರಲ್ಲಿ ಪೂರ್ವಾಹ್ನ ಘಂಟೆ 10ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಸದ್ರಿ ಅಮಲ್ದಾರಿಯಲ್ಲಿ ಹಾಜರಾಗುವರೆ ತಪ್ಪಿದರೆ ಎದ್ರಿಯ ಗೈರುಹಾಜ್ರಿಯಿಂದ ಸದ್ರಿ ಅಮಲ್ದಾರಿ ತೀರ್ಮಾನಿಸಲ್ಪಡುವದು

(Sd) Gratian C. Rego
Pleader for Petitioner.

ಉಡ್ಪಿ, ತಾ. 10—11—63.

India needs Technical men; We offer to train them
JOIN
THE PROGRESSIVE COMMERCIAL & TECHNICAL INSTITUTE,
(Approved by The Govt. of Mysore)
Opp: City Bus Stand, UDIPI, S. K.

Subjects taught: *Typewriting, Shorthand, Book-keeping & Banking.*

NEW BATCHES in Typewriting (Jr. Sr. and Proficiency Grades) and Shorthand (Jr. and Sr. Grades) will be commenced from 15—11—1963.

++++++

SECURES BEST RESULTS. COLLECTS MODERATE FEES

B. APPAJI RAO, *HEADMASTER.*

Grams: "GANESH RICE" Phone: 1051

For all your requirements in Quality Provisions,
of all kinds of Stationery
Visit
BALIGA STORES
BIJEY KAVOOR ROAD,
MANGALORE-4.
Our hand-pound Rice is a speciality !
Contact:—
SRI GANESH HANUMAN RICE MILLS
DEREBAIL KONCHADY,
MANGARORE-6.
For
Best quality dry Rice & Bran etc.
A great name to reckon
within Rice Milling Industry !!

SPECTACLES TO SUIT ALL SIGHTS AND TASTES
at moderate rates
ENQUIRE AT:
M/S. Y. RAMA RAO & Co.,
OPHTHALMIC OPTICIANS,
MAGALORE-1.

ನೆಹರೂ ಸಿಂಹಾವಲೋಕನ

(೧೧ನೇ ಪುಟದಿಂದ)

ಹೃದಯದೊಂದಿಗೇ ಹುಟ್ಟಿದ ನೆಹರೂ, ಭಾರತ ಮಾತೆಯವರ ಕುಮಾರರೆಂದೇ ಹೇಳಬಹುದು.

o o o

ರಾಜಕುಮಾರನಂತೆಯೇ ಬೆಳೆದ ಬಾಲ ಜವಾಹರನಿಗೆ ಬೇಟೆಯಲ್ಲಿಯೂ ಬಹಳ ಅಭಿರುಚಿಯಿತ್ತು. ಹಳೆಯ ಕಾಲದ ರಾಜರು ಬೇಸರ ಬಂದಾಗ ಬೇಟೆಗೆ ಹೊರಡುವ ಹಾಗೆ, ಬಾಲಜವಾಹರನೂ ಬೇಸರ ಬಂತೆಂದರೆ ಬೇಟೆಗೆ ಹೊರಡುತ್ತಿದ್ದ ಯುರೋಪಿಯನ್ನರ ಹಾಗೆ ಕೋವಿ ಹಿಡಿದುಕೊಂಡು.

ಹಾಗೊಮ್ಮೆ ಜವಾಹರ್ ಬೇಟೆಗೆ ಹೋದಾಗ ಓಡುತ್ತಿದ್ದ ಒಂದು ಜಿಂಕೆಯನ್ನು ನೋಡಿ ಗುರಿಯಿಟ್ಟು ಗುಂಡುಹಾರಿಸಿಬಿಟ್ಟ. ಗುಂಡು ತಾಗಿದ ಆ ಜಿಂಕೆ, ಹಿಂದಕ್ಕೇ ಓಡಿ ಬಂದು ಆತನ ಕಾಲಡಿಯಲ್ಲಿಯೇ ಬಿದ್ದು ಬಿಟ್ಟಿತು. ಮಾತ್ರವಲ್ಲ, ಜವಾಹರನ ಮುಖವನ್ನೇ ಅರ್ಥಪೂರ್ಣವಾಗಿ ದೈನ್ಯದಿಂದ ನೋಡಿತು ಆ ನೋಟವು ಬಾಲ ಜವಾಹರನ ಎದೆಯನ್ನು ಕರಗಿಸಿಬಿಟ್ಟಿತು "ನನ್ನಂಥ ನಿರುಪದ್ರವಿಯನ್ನು ಸುಮ್ಮನೆ ಕೊಲ್ಲಬಹುದೆ?" ಎಂದು ಆ ಜಿಂಕೆ ತನ್ನ ನೋಟದಿಂದಲೇ ಕೇಳಿದಂತೆ ತೋರಿತು. ಅಂದಿನಿಂದ ಜವಾಹರ್ "ತುಪಾಕಿ ಮುಟ್ಟಲಾರೆ, ಪ್ರಾಣಿ ಹಿಂಸೆ ಮಾಡಲಾರೆ" ಎಂದು ಪ್ರತಿಜ್ಞೆಮಾಡಿಕೊಂಡನಂತೆ.

o o o

ಆಗಿನ್ನೂ ಮಹಾತ್ಮಾ ಗಾಂಧಿಯವರ ಅಹಿಂಸಾ ಯಜ್ಞವು ಪ್ರಾರಂಭವಾಗಿರಲಿಲ್ಲ. ಮುಂದೆ ಮಹಾತ್ಮರ ಅಹಿಂಸಾತ್ಮಕ ಚಳವಳಿ ಪ್ರಾರಂಭವಾದಾಗ ಅದನ್ನು ಸ್ವೀಕರಿಸಲು ತಕ್ಕ ಹೃದಯವು ಜವಾಹರಲಾಲರ ರೂಪದಲ್ಲಿ ಈ ಮೊದಲೇ ಸಿದ್ಧವಾಗಿತ್ತು.

ಆನಂತರ ಜವಾಹರ ರಾಜಕೀಯ ಕೈದಿಯಾಗಿ ಜೈಲಿನಲ್ಲಿದ್ದಾಗ, "ರಾಜ ಭೋಗದಲ್ಲಿ ಬೆಳೆದ ನನಗೆ ಈ ಹಾಳು ಬಾಳು ಏಕೆ ಬೇಕಿತ್ತು!" ಎಂದು ಕನಸಿನಲ್ಲಿ ಕೂಡ ನೆನೆದವರಲ್ಲ! ಅದೊಂದು ಹುಡುಗಾಟವೆಂಬಂತೆ ಉತ್ಸಾಹವಾಗಿಯೇ ಇದ್ದರು ಏಕಾಂಗಿಯಾಗಿ ಜೈಲಿನಲ್ಲಿದ್ದ ಅವರೊಂದಿಗೆ ಆಡಿಕೊಂಡಿದ್ದವರಾರು ಗೊತ್ತೇ? ನೊಣ, ಹಾಂತಿ, ಇರುವೆ, ಗುಬ್ಬಿ, ಜೇಳು.... ಇತ್ಯಾದಿ ಕ್ಷುದ್ರ ಪ್ರಾಣಿಗಳೇ ಅವರ ಪ್ರಾಣ ಸ್ನೇಹಿತರು.

ಒಮ್ಮೆ ಜೇಲಿನಲ್ಲಿ ದೊಡ್ಡದೊಂದು ಕಪ್ಪು ಚೇಳನ್ನು ಹಿಡಿದು, ಅದರ ಬಾಲಕ್ಕೆ ನೂಲುಕಟ್ಟಿ ಮೇಲೆ ನೇತಾಡಿಸಿಟ್ಟರು. ಚೇಳನ್ನು ಕೊಲ್ಲಲು ಅವರ ಮನಸ್ಸು ಒಪ್ಪಲಿಲ್ಲ. ಬೇರೆ ಜೀವಿಗಳಿಗೆ ಇದೊಂದು ಪಾಠವಾಗಿರಲೆಂದೇ ಹಾಗೆ ನೇತಾಡಿಸಿದ್ದು. ಆದರೆ ಆ ಚೇಳು ತಪ್ಪಿಸಿಕೊಂಡುಬಿಟ್ಟಿತು. ಪುನಃ ಅದು ಬಂದು ತನ್ನ ಮೇಲೆ ಹಗೆ ತೀರಿಸಿಕೊಳ್ಳುವುದೇನೋ ಎಂದು ಜವಾಹರರು ತುಸು ಅಂಜಿಕೊಂಡು ಎಚ್ಚರಿಕೆಯಿಂದಲೇ ಇದ್ದರಂತೆ. ಬರಲೇ ಇಲ್ಲ ಆ ಚೇಳು. ಆಗ ಅವರಿಗೆ ತಿಳಿಯಿತು, ಮಾನವನೊಳಗಿರುವ ಹಗೆಯ ಗುಣ ಇತರ ಜೀವಿಗಳಲ್ಲಿ ಇಲ್ಲವೆಂದು. ಇಂತಹ ಪ್ರಕೃತಿ ಶಾಸ್ತ್ರವೇತ್ತರಾದ ಜವಾಹರಲಾಲ ನೆಹರೂ ಸೆರೆಮನೆಯಲ್ಲಿಯೇ ಅನೇಕ ಉದ್ಗ್ರಂಥಗಳನ್ನು ಬರೆದು ಪ್ರಸಿದ್ಧರಾಗಿದ್ದಾರೆ.

ಒಂದು ವೇಳೆ ಗಾಂಧಿಯೇ ಹುಟ್ಟದಿರುತ್ತಿದ್ದರೆ, ಜವಾಹರರು ರಾಜಕೀಯಕ್ಕೇ ಸೇರದಿರುತ್ತಿದ್ದರೆ, ಮಹಾ ಸಾಹಿತಿಗಳಾಗಿ ಜೀವ ಶಾಸ್ತ್ರವೇತ್ತರೆಂದು ಪ್ರಪಂಚದಲ್ಲೇ ಪ್ರಸಿದ್ಧರಾಗುತ್ತಿದ್ದರು.

ಅಂತಹ ಜವಾಹರಲಾಲರೇ ಸ್ವತಂತ್ರ ಭಾರತದ ಪ್ರಥಮ ಸಾರಥಿಯಾಗಿದ್ದಾರೆ. ತನ್ನ ನಂತರ ಯಾರೆಂಬ ಪ್ರಶ್ನೆಯೊಂದಿಗೆ ಇನ್ನೂ ಏಕೈಕ ತಾನೇ ಎಂಬ ಮಹಾನ್ ವ್ಯಕ್ತಿಯಾಗಿ ವಿರಾಜಿಸುತ್ತಿದ್ದಾರೆ ಇಂತಹ ಜವಾಹರಲಾಲ ನೆಹರೂ, ಲಕ್ಷ ಲಕ್ಷ ಮಕ್ಕಳ ಆಶೀರ್ವಾದಗಳಿಂದ ಚಿರಂಜೀವಿಯಾಗಿರಲೆಂದು ನಾವೆಲ್ಲಾ ಹಾರೈಸೋಣ.

(ಸಂಗ್ರಹಿಸಿ ಬರೆದುದು).

ಕ್ರಾಂತದರ್ಶಿ ಕಾರಂತರು

(೧೨ನೇ ಪುಟದಿಂದ)

ಕ್ಕೇ ಹಳುವರು. ಶಿಕ್ಷಿತ ಜೀವನಕಾರ್ಯವನ್ನು ಶಿಕ್ಷಿತ ವೇಳೆಯಲ್ಲೇ ಮಾಡಿ ಮುಗಿಸುವರು. ನಾಡಿನ ಎಲ್ಲೆಡೆಯೂ ಆಮಂತ್ರಣ ಬಂದಂತೆಲ್ಲ ಹೋಗಿ ಉಪನ್ಯಾಸ ಮಾಡಿ ಬರುವರು. ಯಾವ ಕಾರ್ಯಕ್ಕೇ ಆಗಲಿ ಉತ್ಸಾಹವೇ ಮುಖ್ಯ ಭಂಡವಳ. ಶ್ರೀ ಕಾರಂತರಲ್ಲಿ ಆ ಭಂಡವಳ ಅಮಿತವಾಗಿರುವುದರಿಂದಲೇ ಅವರು ಎಲ್ಲ ಕ್ಷೇತ್ರಗಳ ಎಲ್ಲ ಕಾರ್ಯಗಳಿಗೂ ಕೈ ಹಾಕುವರು; ಹಾಗೂ ಅವುಗಳಲ್ಲೆಲ್ಲ ತಮ್ಮದೇ ಆದ ಒಂದು ವಿಶಿಷ್ಟಸ್ಥಾನವನ್ನು ಗಳಿಸಿಕೊಳ್ಳುವರು.

ಅವರಂತಹವರನ್ನು ಜಿಲ್ಲೆಯ ಮತ್ತು ಪ್ರಾಂತ್ಯದ ಜನರು ಶಾಸನ ಸಭೆಗಾಗಲಿ ಪಾರ್ಲಿಮೆಂಟಿನಂತಹ ಪ್ರಾತಿನಿಧಿಕ ಸಂಸ್ಥೆಗೆ ಆರಿಸಿ ಕಳಿಸಲಿಲ್ಲವೆಂಬುದು ಬಹು ಸೋಜಿಗದ ಮಾತೇಸರಿ. 'ಜ್ಞಾನಿನಾಂ ಚರಿತುಂ ಶಕ್ಯಂ ಸಮ್ಯಗ್ರಾಜ್ಯಮಲೌಕಿಕಂ' ಎಂದು ವಿದ್ಯಾರಣ್ಯ ಯತೀಶ್ವರರು ಹೇಳಿದ ಮಾತನ್ನು ನಮ್ಮಂದಿನ ಪ್ರಜಾಪ್ರಭುತ್ವದಲ್ಲಿ ಜನಪ್ರಮುಖರು ಒಪ್ಪುವರೇ? ಪ್ರ— ದೇವಾಲಯಗಳು ಅಂದಿನಂತೆ ಇಂದೂ ತಮ್ಮ ಸಂಪ್ರದಾಯ, ಶರಣತೆ ನಡೆಸಿವೆ, ಯೇನಕೇನ ಪ್ರಕಾರೇಣ ಹಣ ಮುಕ್ತ ಪ್ರಭಾವ ಗಳಿಸುವ ಕೀರ್ತಿಕರು ಇಂದೂ ತಮ್ಮ ಕಾಯಕ ನಡೆಸುತ್ತಾರೆ. ಸಾಮಾಜಿಕ ಸುಧಾರಣೆಯ ಬಗ್ಗೆ ಇಂದು ಯಾರೂ ಭಾಷಣ ಮಾಡುತ್ತಿಲ್ಲ, ಪ್ರಚಾರ ಮಾಡುತ್ತಲೂ ಇಲ್ಲ. ಲೇಖನ ಬರೆಯುತ್ತಲೂ ಇಲ್ಲ. ಕ್ರಾಂತದರ್ಶಿ ಕಾರಂತರು ೪೦ ವರ್ಷಗಳ ಹಿಂದೆ ಕಂಡಿದ್ದ ಧಾರ್ಮಿಕ- ಸಾಮಾಜಿಕ ಆರ್ಥಿಕ ಶೋಷಕ ವೃತ್ತಿಗಳು ಇಂದೂ ಅಷ್ಟೇ ಆಳವಾಗಿ ಬೇರೂರಿಕೊಂಡು ಮೆರೆಯುತ್ತಿವೆ "ಎಲ್ಲ ಬಲ್ಲವರಿಲ್ಲ ಬಲ್ಲವರು ಬಹಳಿಲ್ಲ| ಬಲ್ಲವರು ಇದ್ದು ಬಲವಿಲ್ಲ. ಸಾತ್ವಿಕರೆಲ್ಲರಿಗಿಲ್ಲ ಸರ್ವಜ್ಞ" ಎಂಬಂತಾಗಿದೆ ಕಾರಂತರಂತಹ ಕ್ರಾಂತದರ್ಶಿಗಳಸ್ಥಿತಿ ನಮ್ಮ ಸಾಹಿತ್ಯದ ಗರುಡಿಯ ಆಚಾರ್ಯರಾದ ಶ್ರೀ ಮಾಸ್ತಿಯವರು ೧೯೫೩ರಲ್ಲಿ ತಮ್ಮ 'ಮಲರ'ದಲ್ಲಿ ಕಾರಂತರ ಬಗ್ಗೆ ಬರೆದ ಚತುರ್ದಶಪದಿಯ 'ಕಡಲ ತೀರದ ನಮ್ಮ ಭಾರ್ಗವ ತಪೋವನದ ಕಲಿ, ಆತ... ಸರ್ವದಮನ' ಎಂಬ ಮಾತು ಮಾತಾಗಿಯೇ ಉಳಿದಿದೆ. ಭಾರ್ಗವ ತಪೋವನವಿಂದಿಗೂ ಅದಮ್ಯ ಭೌತಿಕ ಸಂಪದ್ಧಿಕಾರರ ಲಂಪಟತ್ವದ ಕ್ರೀಡಾವನವಾಗಿ ಕಂಗೊಳಿಸುತ್ತಿದೆ.

ದೀಪಾವಳಿ

— ೧ —

ಬನ್ನಿರಿ ಬಾಲರೆ ಬನ್ನಿರಿ ಯುವಕರೆ
ಬನ್ನಿ ಜೀವನ ಜ್ಯೋತಿ ಬೆಳಗೋಣ!
ಹೊನ್ನಿನ ಕಳಶದಂತೆ ಸಂಜೆ ಚಿತ್ತಾರಗಳೆ
ನನ್ನಿಯ ಶ್ರೀ ನಮ್ಮ ಬಾಳ ಬೆಳಗೋಣ!

— ೨ —

ಚಿತ್ತ ನನಸಾಗದ ಚಿತ್ತವನ್ನು ಬಿಡು
ಜಗದೆಡೆ ಅಭಿನವಿಸೋಣ!
ದುರ್ಗುಣ ಬಿಟ್ಟು ಸದ್ಗುಣ ಹಿಡಿದು
ಬಾಳಿನ ಬೆಳಕನು ಪಡೆಯೋಣ!

— ೩ —

ಅಜ್ಞಾನ ದಾರಿದ್ರ್ಯ ಕತ್ತಲೆಯ ಕಳೆದು
ಸಿರಿ ಸುಜ್ಞಾನಗಳ ದೀಪ ಹಚ್ಚೋಣ!
ವಿಜ್ಞಾನದಾ ಮಹತಿಯನೆ ತಿಳಿದು
ಪ್ರಗತಿಪರ ನಾಡನ್ನು ಕಟ್ಟೋಣ!

— ೪ —

ವಿಶ್ವಬಂಧುತ್ವವನೆ ಸಾಧಿಸುತ ನಾವು
ಪ್ರೇಮ ದೇವರನ ಭಜಿಸೋಣ!
ಮನದ ಕತ್ತಲೆಯನೆ ಕಳೆಯುತ ನಾವು
ನಿಜ ದೀಪಾವಳಿಯನೆ ಹೂಡೋಣ!

—ದಿಗಂಬರ ಜೋಶಿ, ಬೆಳಗಾವಿ

Deepavali Greetings!

'OGALE' Totally Enclosed or Screen Protected Squirrel Cage Induction Motors from 1 HP to 15 HP for

Most Suitable and Practical Drive and Service to *INDUSTRY and IRRIGATION*

Sole Distributors:

A. C. E. C. INDIA PRIVATE LIMITED

Electrical Engineers, Head Office: BOMBAY.
Branch Office At: BANGALORE-2; MADRAS-1; DELHI-6.

For Particulars please contact:

Mr. U. SADIYA,

Licenced Electrical Contractor,
Class "A"
Power, Pump Set, Lighting Installations,
CAR-STREET, **UDIPI, S. K.**

● ಕುಮಾರಿ ಬಿಲ್ಲೆಗಳು ●

(ರಿಜಿಸ್ಟರ್ಡ್ Regd.)

ಪ್ರಕೃತಿಯು ನಿಷ್ಫಲಗೊಂಡಾಗ ಉಂಟಾಗುವ ಕಾತರ ನಿವಾರಣೆಗೆ ಸನುಮೋದಿತವಾದ ಆಯುರ್ವೇದೀಯ ಮಿತ್ರನ!

ಟ್ಯೂಬ್ 1ರ ಸಾಮಾನ್ಯ ರೂ. 4/- ಮಧ್ಯಮ ರೂ. 6/ ಉತ್ತಮ ರೂ. 9/-

P. Devee & Co. (N. J.) Calcutta—40.

ಸ್ಟಾಕಿಸ್ಟರು — ರಾಜಾ ಮೆಡಿಕಲ್ ಹಾಲ್, ಬೆಂಗಳೂರು ಕೆಂಟೋನ್ಮೆಂಟ್; ಕುಮಟಾ ಫಾರ್ಮಸಿ, ಕುಮಟಾ (ಉ. ಕ.)

ಶ್ರೀ ಕೆ. ಕೆ. ಶೆಟ್ಟಿ, ಎಂ.ಎಲ್.ಸಿ.ಯವರ
ಕ್ರಾಂತಿಕಾರಿ ಲೇಖನಿಯ
ನವಕಾಲಕ್ಕೊಪ್ಪುವ ನವನವೀನ
ಪುಸ್ತಕಗಳು

ಪುಸ್ತಕಗಳು	ರೂ. ನ
ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಟಪ್ಪಾಲು ಖರ್ಚು ಪ್ರತ್ಯೇಕ. ವಿವರವಾದ ಕಟಲಾಗಿಗೆ ಹತ್ತು ನ. ಪೈ. ಸ್ಟಾಂಪಿನೊಂದಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ

ಪ್ರೊ. ಕು. ಶ. ಹರಿದಾಸ ಭಟ್ಟ, ಎಂ.ಎ.,
ಅವರ ನವೀನ ಪುಸ್ತಕಗಳು

ಪುಸ್ತಕಗಳು	ರೂ. ನ.
ನಡುಹಗಲಿನ ಕಗ್ಗತ್ತಲೆ	2=50
ಸ್ವಾತಂತ್ರ್ಯ ಮತ್ತು ಸಂಸ್ಕೃತಿ	2=00
ಘಟನಾಸಾರ	2=00
ಸರ್ವದ ಸಂಪತ್ತು	2=00
ಅಮೇರಿಕದ ಆರು ಕತೆಗಳು	1=75
ವರ್ತಮಾನಕಾಲದ ನಾಲ್ವರು ಮಹಾನುಭಾವರು	0=31
ಯುಗವಾಣಿ	0=50
ಕಾಲವೇ ಬದಲಾಗಿದೆ	0=31
ಪುಸ್ತಕ ಪುರಾಣ	0=25
ಮನೆಯೊಳಗಿನ ಮಹಾಜೀವಿಗಳು	0=37

ಅಂಚೆವೆಚ್ಚ ಪ್ರತ್ಯೇಕ. ವಿವರವಾದ ಕಟಲಾಗಿಗೆ 10 ನ. ಪೈ. ಸ್ಟಾಂಪಿನೊಂದಿಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ

'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc No 466 N/50 dated 2-12—1950 of the Director of Public Instruction Madras.

ಕವಿತಾ ವಿಹಾರ

ಜೀವ ವಿಮೆ

ಜಯವೆನ್ನೀ, ಜಯವೆನ್ನೀ; ಜಯ ಜಯ ಹಾಡೀ|
ಜಯ ಭಾರತ ಶ್ರೀ ಜೀವ ವಿಮಾ ಯೋಜನೆಗೇ|
ಯೋಚನೆಯೇ? || ಪಲ್ಲ ||
ಜಯ ಸಿರಿಯೊಲಿವಳು ವಿಜಯು ನಿಶ್ಚಯವು|
ಜಯ ಸ್ವೀಕೃತ ನಿಜ ಕಾರ್ಯಗಳೊಲವು ||
ದಯೆಯಲಿ ಯೋಗ ಕ್ಷೇಮ ನಿರ್ವಹಿಪ, ವಿ|
ಜಯ ಶ್ರೀ ಜೀವನ ಕೃಷ್ಣನ ಮರೆಯದೇ || ೧ ||
ಶ್ರಮಿಸಿದ ತನು, ಮನ ರಮಿಸಿದರೇನೈ? |
ರಮಿಸಿದ ಮನಶಕಿಯುಣಿಸಿದರೇನೈ? |
ಕ್ರಮದಲಿ ಧನಗೂಡಿಡದಿರಲೇನೈ? |
ಯಮನೊಯ್ವ ಕಾಲವ, ಬಲ್ಲಿಗನೇನೈ? || ೨ ||
ತನಗೇ ತಾನೇ ಹಿತನಹಿತನು ತಾನೆನೆ |
ತನ ತನವರಿತಿಹ ತನುವಿನ ಪಾಲನೆ; ||
ತನು ಹಿತಸಾಧನೆಗನು ದಿನದಾರ್ಜನೆ |
ಮನುಜನ ಮಮತಾಪದ ಗತಿ ಪೋಷಣೆ || ೩ ||
ಹನಿಗೂಡಿಬರಲ್ಲೇ? ಹಳ್ಳಕೇ ಜೆಲುವು |
ವನಿಗೂಡಿಬರಲ್ಲೇ? ಗಾನದ ಗೆಲುವೂ ||
ಅನಿತನಿತೆನದಳ ಕಾಲ ಸಂಭ್ರಮದಲಿ
ಅನುದಿನ, ಶ್ರಮಿಸಿರೆ, ಮಧು ಸಂಗ್ರಹಣವು? || ೪ ||
ಜನನೀ ಜನಕರು ಸತಿ ಸುತರಾಪ್ತರು |
ಗುಣ ಚರಿತಾಢ್ಯ ಸಂಪ್ರೀತ ಸುಪ್ರಿಯರು ||
ಧನಹೀನರು ಬಡ ಬಗ್ಗರ ನೆರವಿಗೇ |
ಉಣಬಾರದ ಹಣ, ಹೆಣ ಕಾಯ್ವುದಿದೆಯೇ? || ೫ ||
ಕರೆಯೇತ, ಕಾಲ್ಸಂಕ; ನದಿಸರೋವರ ಕಣೆ'
ಗೆರೆ ತಂತಿ ಮಿಂಚದು ಕಿವಿಯೊಳು ವಾಣೀ? ||
ವರ ಪ್ರೇಮ ಧರ್ಮ ಸುಕರ್ಮ ತ್ಯಾಗಗಳೆನೆ |
ವರದೆ ಭಾರತಿ, ಮಹಾಮಾಯೆ; ಕಲ್ಯಾಣೀ! || ೬ ||

ಜಿ. ಕೆ. ಕೃಷ್ಣ ಭಟ್, ಗುರುಪುರ, ದ. ಕ.

ಯುದ್ಧ ಸನ್ನದ್ಧತೆ

— ೧ —

ಶಾಂತಿ ನಿಜವಾದ್ದಲ್ಲ; ಶಾಂತಿ ನೆಲೆಸಿರುವಂತೆ
ಕಾಣುವುದು ಮಾತ್ರವಿದು ಯುದ್ಧ ಸನ್ನದ್ಧತೆ.
ಯುದ್ಧ ಕರೆಯನ್ನು ಕೇಳಿದ್ದು ಬಂದತ್ತಿಕೊ—
ಳ್ಳಾಯುಧವ, ಮಾಡಿಕೋ ಬೇಗ ಕಟಿ ಬದ್ಧತೆ
ಮೂಕತೆಗೇಗಿಲ್ಲ ಸಮಯ ಕಿಂಚಿತ್ತು
ವ್ಯರ್ಥ ವೆಷ್ಟೋ ದಿನಗಳನ್ನು ಕಳೆದಾಯ್ತು
ಈಗಿನ್ನು ಸರ್ವರೊಂದಾಗಿ ಮುಂದೊತ್ತಿ ಮತಿ—
ಗೆಟ್ಟವರ ಕತ್ತು ಹಿಡಿದೊತ್ತ ಬೇಕಾಯ್ತು.
ಪೆಟ್ಟು ತಲೆಗಪ್ಪಳಿಸಿದಾಗ ಮತಿ ತಪ್ಪುವುದು;
ಕಾಯುವುದು ತರವಲ್ಲ ಮಾಡು ಸನ್ನದ್ಧತೆ.
ಬೆಂಕಿ ದಳ್ಳುರಿಯಾದ ಮೇಲೆ ಕೊಳತೋಡುವುದೆ?
ಮಾಡಿಕೊಳ್ಳೀಗಲೇ ಬೇಗ ಕಟಿ ಬದ್ಧತೆ.

— ೨ —

ಶಾಂತಿಮಂತ್ರದ ನಮ್ಮ ಶಬ್ದಗಳು ಕಿವುಡು ಗವಿ—
ಗಳ ಹೊಕ್ಕು ಮಾಯವಾಗುತ್ತಲಿಹವು.
ಸತ್ಯ ಧರ್ಮಾದಿಗಳ ರಕ್ಷಕರ ಹಿಂಭಾಗ
ತಡೆಯಿಲ್ಲದೊಡೆಗಳೇ ಬೀಳುತ್ತಲಿಹವು.
ಮೂಕತೆಯಿಂದಿನ್ನು ಸಾಧಿಸದು ಕಾರ್ಯ
ನೀಚರಲ್ಲಿಲ್ಲ ನಯ ನೀತಿ ಔದಾರ್ಯ
ಈಗಿನ್ನು ಯಮರೂಪ ತಳೆದಾಕ್ರಮಕರನ್ನು
ಓಡಿಸಲು ಹೊಡೆದು ಹಿಮ್ಮೆಟ್ಟಿಸುವುದನಿವಾರ್ಯ.
ಅರಿಬಲದ ಬಿರುಗಾಳಿ ಅತ್ಯಂತ ಬಲಶಾಲಿ—
ಯದರ ಧಾಳಿಯ ತಡೆಯೆ ಮಾಡು ಕಟಿಬದ್ಧತೆ.
ನಮ್ಮ ಕೆಚ್ಚೆದೆಗಳನ್ನೊಂದಾಗಿ ಸ್ಥಿರಗಿರಿಯ
ಸದೃಶ ಕೂಡಿಸುವದೇ ಯುದ್ಧ ಸನ್ನದ್ಧತೆ.

— ೩ —

'ಸ್ಫೋಟನದ ಶಬ್ದವಿನ್ನೂ ಕೇಳುತ್ತಿಲ್ಲ'
ಎಂದೆಣಿಸಿ ತಲೆದೂಗಿ ಗೂಂಗ ಬೇಡಾ.
ಕೋವಿಗಳ ಮೊನೆಗಳೊಂದಾಗಿ ಬೆನ್ನಲ್ಲಿರಿಯ—
ಲಾಗ ಧೃತಿ ಕೆಡುವುದೇ ಮಾತ್ರ ನೋಡಾ!
ಕಾರ್ಯ ಕೆಡಲಾ ಮೇಲೆ ಚಿಂತಿಸುದು ವ್ಯರ್ಥ
ಜೋಕೆಯಿಂದಿಲ್ಲದಿರೆ ಖಾತರಿಯನರ್ಥ
ದೇಶರಕ್ಷಣೆಗಾಗಿ ತನ್ನೆಲ್ಲವನ್ನು ಲವ—
ಲೇಶ ಮರುಗದೆ ಬಲಿ ಕೊಡುವವ ಕೃತಾರ್ಥ,
ಸ್ವಾತಂತ್ರ್ಯಕಾಪತ್ತು ಬಂದಿರಲು ಯಾವುದೇ
ತ್ಯಾಗವೂ ಘನವಲ್ಲ, ಮಾಡು ಕಟಿಬದ್ಧತೆ.
ಸ್ವತಂತ್ರತೆಯ ಮೌಲ್ಯ ಸ್ವಾತಂತ್ರ್ಯವೇ! ಭದ್ರ—
ವಾಗಿರಿಸಿಕೊಳ್ಳಲಿದು ಯುದ್ಧಸನ್ನದ್ಧತೆ.

ಪಡುಬಿದ್ರಿ ಹರಿದಾಸರಾಯ

ಯುಗಯುಗಕೆ ಕನ್ನಡಕೆ ಬೆಳಕಾಗಿ ನಿಂದಿರಲಿ !!

ಕನ್ನಡದ ಕಾವ್ಯ ದೇವಾಲಯದ ಕಾವ್ಯಋಷಿ
ಇನ್ನಿಲ್ಲದಾದೆಯಾ— ನಿನ್ನ ಜೀವನ ಜ್ಯೋತಿ
ತನ್ನ ಕನವಂ ಬಟ್ಟನಂತತೆಗೆ ಮರೆಯಾಯ್ತೆ?
ಮರೆವೆನೆಂತೈ ನಿನ್ನ— ವರಕವಿಯೆ ಕಾವ್ಯರಸ
ಧಾರೆಯಿಂ ಕನ್ನಡದ ಕೋಟಿಹೃದಯಕೆ ಅಮೃತ
ದೂಟವನೆ ನೀಡಿರ್ದೆ— ಸಾಹಿತ್ಯ ಸಾಗರವ
ಮೊಗೆಮೊಗೆದು ಸರ್ವರಿಗು ಸತ್ವಸಂಜೀವಿನಿಯ
ನಿತ್ತಿನೀ ತೋರಿರ್ದೆ— ನಿನ್ನ ಇತಿಹಾಸನೇತ್ರದಿ
ನೀನಿತ್ತು ಸತ್ಯಸಂಶೋಧನೆಗೆ ಸತ್ಪ್ರಕಾಶವ ಬೀರ್ದೆ
ಸರಳತೆಗೆ ನೀನೊಂದು ಸಂಕೇತವೆನಿಸಿರ್ದೆ
ಕಣ್ಣೀರ ಕರೆವ ಕಾತರಗೊಂಡ ಕನ್ನಡಿಗ
ರಿನ್ನೊಮ್ಮೆ ನಾವೆಲ್ಲನಾಥರಾದೆವು ಇಂದು
ಕನ್ನಡಾಂಬೆಯ ಕೂಡೆ ನಿನ್ನನೂ ಕಳಕೊಂಡು
'ರಾಷ್ಟ್ರಕವಿ ಗೋವಿಂದ ಪೈ' ಯೆಂಬು ಮೆರೆದಿರುವ
ವರಕವಿಯೆ ನಿನ್ನಾತ್ಮ ಆನಂದ ಸಂತೋಷ
ಸಾಗರದಿ ತೇಲಿರಲಿ ! ನಿನ್ನ ಕಾವ್ಯಪ್ರಭೆಯು
ಯುಗಯುಗಕೆ ಕನ್ನಡಕೆ ಬೆಳಕಾಗಿ ನಿಂದಿರಲಿ —

ರಮಾನಂದ ಬನಾರಿ, ದೇಲಂಪಾಡಿ

ದೊಡ್ಡವರ ಬಾಳು
ನಮ್ಮ ಜೀವನಕ್ಕೆ ಒಂದು ದಾರಿದೀಪ
ಅದಕ್ಕಾಗಿ ಓದಬೇಕು—

"ಶ್ರೀತನಯ"ರ

"ಬದುಕಲು ಕಲಿಯಿರಿ"

ಬೆಲೆ ರೂ. 1-50

ವ್ಯಾಪಾರಿಗಳಿಗೆ ಆಕರ್ಷಕ ಕಮಿಶನ್
ಕೊಡಲಾಗುವುದು.

ಪ್ರಕಾಶನ:
ಗ್ರಾಮಸೇವಾ ಪ್ರತಿಷ್ಠಾನ,
ಮಣಿಪಾಲ, ದ. ಕನ್ನಡ.

MODERN GARAGE
UDIPI
(ESTD: 1950)

Offers

The Car owners, the service
of a well equipped

SERVICE STATION

Supervision by
Technically Qualified Staff

Phone: 65.

ನಿಸರ್ಗದ ಮಡಿಲಲ್ಲಿ ಸರಸ್ವತೀ ಮಂದಿರ

(೧ನೇ ಪುಟದಿಂದ)

ತಮ್ಮ ವ್ಯಾಸಂಗವನ್ನು ಒಂದೆಡೆ ಮಾಡಿ, ಒಂದೆಡೆ ಇರುವದು. ಕಾರಣ ಇದನ್ನು Residencial college ಎಂದು ಕರೆಯಲಾಗಿದೆ.

ಒಟ್ಟು ಐದು ವಿದ್ಯಾರ್ಥಿನಿಲಯಗಳು ಬೇಕಾಗಿವೆ ಅದರಲ್ಲಿ ಎರಡು ಈಗಾಗಲೆ ಮುಗಿದಿವೆ. ಮೂರು ಮತ್ತು ನಾಲ್ಕರಲ್ಲಿ ಕೆಲಸ ಪ್ರಥಮ ಘಟ್ಟವನ್ನು ಮುಟ್ಟಿದೆ. ಈ ನಿಲಯಗಳ ಆಕೃತಿ ತಲೆಕೆಳಗಾದ λ ಅಕ್ಷರದಂತಿದೆ ಇವೆಲ್ಲವು ಫ್ರೇಮ್ಡ್ ಸ್ಟ್ರಕ್ಚರ್ಸ್ ಒಂದು ನೆಲಮನೆ ಎರಡು ಅಂತಸ್ತುಗಳನ್ನು ಎಲ್ಲ ಸೌಧಗಳು ಒಳಗೊಂಡಿವೆ. ಒಂದೊಂದು ನಿಲಯದಲ್ಲಿ 250 ವಿದ್ಯಾರ್ಥಿಗಳು ವಾಸಿಸಬಹುದು. ಮೊದಲನೆ ಮತ್ತು ಎರಡನೆಯ ನಿಲಯಗಳಿಗೆ 13.40 ಲಕ್ಷ ರೂಪಾಯಿ ವೆಚ್ಚವಾಗಿದೆ, ಮೂರು ಮತ್ತು ನಾಲ್ಕನೆಯ ನಿಲಯಗಳಿಗೆ 20.06 ಲಕ್ಷ ರೂಪಾಯಿ ತಗಲಬಹುದೆಂದು ಅಂದಾಜು ಮಾಡಲಾಗಿದೆ. ಸಾಕಷ್ಟು ಗಾಳಿ, ಬೆಳಕಿಗೆ, ಪ್ರಾಮುಖ್ಯತೆ ಕೊಟ್ಟಿರುವದು ಶ್ಲಾಘನೀಯವಾಗಿದೆ.

ಉಳಿದ ಇತರ ಕಟ್ಟಡಗಳು ಆಯಾ ಮಟ್ಟಕ್ಕೆ ಸರಿಯಾಗಿವೆ, ಅಧ್ಯಾಪಕ ವರ್ಗಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಟ್ಟಿರುವದು ಮೆಚ್ಚುವ ಸಂಗತಿ. ಆದರೆ ಒಂದು ಪಕ್ಷವನ್ನು ಮೇಲಕ್ಕೆತ್ತಿ ಇನ್ನೊಂದನ್ನು ಕೆಳಗೆ ಮಾಡಿರುವದು ವಿಷಾದನೀಯ.

ಆಫೀಸ ಸಿಬ್ಬಂದಿಗೆ ಮೀಸಲಾದ ಮೂನೆ ಮತ್ತು ನಾಲ್ಕನೆ ದರ್ಜೆಯ ಕಟ್ಟಡಗಳು ಬರಿ ಉಳಿತಾಯವನ್ನು ಎದ್ದು ತೋರಿಸುತ್ತವೆ, ಮೂರನೆ ವರ್ಗದ ಮನೆಗಳು ಸಾಧಾರಣ ಕುಂದುಕೊರತೆಗಳಿಂದಿದ್ದರೂ ...ರವಾಯಿಲ್ಲ ಎನ್ನಬಹುದು, ಆದರೆ ನಾಲ್ಕನೆ ದರ್ಜೆಯ ಮನೆಗಳು ಉಳಿತಾಯದ ...ಗೆಯನ್ನು ಬೀರುವ ಪ್ರತ್ಯಕ್ಷ ನಿದರ್ಶನಗಳಾಗಿವೆ, ಅವನ್ನು ಮನೆ ಎನ್ನುವದಕ್ಕಿಂತ ಕೋಣೆ ಎಂದರೆ ಮೇಲು.

“ಒಬ್ಬ ವೈದ್ಯ ತನ್ನ ವೃತ್ತಿಯಲ್ಲಿ ...ಪ್ಪಿದರೆ, ಒಬ್ಬ ಮನುಷ್ಯ ...ಥವಾ ಕೆಲವಾರು ಜನರಿಗೆ ...ತ್ರ ಹಾನಿಯಾದೀತು, ವಕೀಲ ಹಾದಿ ...ಪ್ಪಿದರೆ ಕಕ್ಷಿದಾರನಿಗೆ ಅನ್ಯಾಯವಾದೀತು, ಆದರೆ ಒಬ್ಬ ಇಂಜನಿಯರ ತನ್ನ ವೃತ್ತಿಯಲ್ಲಿ ತಪ್ಪಿದರೆ ಇಡೀ ಜನಾಂಗವೆ ಅ...ದರ ಫಲವನ್ನು ಉಣ್ಣುತ್ತದೆ”. ಈಗಲಾದರು ಮನಸ್ಸು ಮಾಡಿದರೆ, ಸ್ವಲ್ಪ ಮಟ್ಟಿಗಾದರು ಸುಧಾರಿಸಬಹುದು. ತಪ್ಪುತಿದ್ದಿಕೊಳ್ಳಲಿಕ್ಕೆ ಇನ್ನೂ ಸಮಯ ಮೀರಿಲ್ಲ.

ಕುಂದುಕೊರತೆಗಳು:— ಎಲ್ಲಾ ...ತಿಯ ಕುಂದುಕೊರತೆಗಳನ್ನು ಒಂದಡೆಯೆ ಹೇಳಿ ಬಿಡುತ್ತೇನೆ, ಏಕೆಂದರೆ ಪಿಂಗಳನೆ ಮಾಡಿದಲ್ಲಿ ಹನುಮಪ್ಪನ ಬಾಲದ ಹಾಗೆ ಬೆಳೆದೀತು? ಒಂದು ಯೋಜನೆ ಎಂದ ಬಳಿಕ, ಕುಂದುಕೊರತೆಗಳು ಇರದೆ ಇರಲಿಕ್ಕೆ ಸಾಧ್ಯವೆ? ಅದನ್ನು ಬೆಳೆಯಗೊಡದೆ ಕಡಿಮೆ ಮಾಡುತ್ತಾ ಹೋಗುವುದು ಕರ್ತವ್ಯ. ಈ ಕಾಲೇಜಿನ ರಥದ ಎರಡು ಗಾಲಿಗಳು, ಅಧ್ಯಾಪಕ ವರ್ಗ ಮತ್ತೊಂದು ಆಫೀಸ ಸಿಬ್ಬಂದಿ. ಕಾಲೇಜಿನ ಪ್ರಮುಖ ವರ್ಗ ಅಧ್ಯಾಪಕರೆಂಬುದು ನಿಜ, ಆದರೆ ಆಫೀಸ ಸಿಬ್ಬಂದಿಯನ್ನು ಕಡೆಗಣಿಸಲಾಗದು. ಕೇವಲ ಸಣ್ಣದೊಂದು ಕಾಲೇಜು ಅಲ್ಲ ಇದು ಒಂದು ನಗರವನ್ನೇ ನಿರ್ಮಾಣ ಮಾಡಿದ ಕಲಾ ಶಾಲೆ. ರಥದ ಎರಡು ಗಾಲಿಗಳು ಸರಿಯಾಗಿದ್ದರೆ ರಥ ಮುಂದಕ್ಕೆ ಹೋದೀತು. ಇದರ ಚಾಲಕ ಇದರ ಬಗ್ಗೆ ಮುನ್ನೆಚ್ಚರಿಕೆಯುಳ್ಳವರಾಗಿರಬೇಕು. ಅಧ್ಯಾಪಕ ವರ್ಗ ಕೇಂದ್ರ ಸರಕಾರದ ಸಂಬಳವನ್ನು ಪಡೆಯುತ್ತಿದ್ದರೆ ಆಫೀಸ ಸಿಬ್ಬಂದಿ, ರಾಜ್ಯ ಸರಕಾರ ನಿಗದಿ ಮಾಡಿರುವ ಸಂಬಳವನ್ನು ಪಡೆಯುತ್ತದೆ. ಒಂದೇ ಕಾಲೇಜಿನಲ್ಲಿ “ಒಬ್ಬರ ಕಣ್ಣಲ್ಲಿ ಬೆಣ್ಣೆ ಇನ್ನೊಬ್ಬರ ಕಣ್ಣಲ್ಲಿ ಸುಣ್ಣ” ಇದು ಯಾವ ನ್ಯಾಯ? ಈ ಕಾಲೇಜಿನ ಆಡಳಿತ ಕಮಿಟಿಯವರು, ಇದರ ಬಗ್ಗೆ ಬೇಗನೆ ನಿರ್ಣಯಕ್ಕೆ ಬರಬೇಕು.

ನೀರಿನ ಸಮಸ್ಯೆ:— ಮನುಷ್ಯನ ಬಾಳಿನಲ್ಲಿ ದ್ವಿತೀಯ ಅವಶ್ಯಕತೆ ಎಂದರೆ ನೀರು. ಇಂದು ಭಾರತದಲ್ಲಿ ಬೆಳೆಯುತ್ತಿರುವ ನಗರಗಳಿಗೆ ನೀರನ್ನು ಒದಗಿಸುವದು ದೊಡ್ಡ ತೊಂದರೆಯಾಗಿದೆ, ಹೀಗಾಗಿ ನೀರಿನ ಬಗ್ಗೆ ಮುನ್ನೋಟ ಇರುವದು ಅವಶ್ಯ. ಈಗ ಎರಡು ಬೋರವೆಲ್ಲಗಳು ಇದ್ದರೂ ಅವು ಸಾಕಾಗುತ್ತಿಲ್ಲ. ಬೇಸಿಗೆಯಲ್ಲಂತು ಬಹಳ ತೊಂದರೆ, ಈ ಪ್ರಶ್ನೆಯನ್ನು ಹೀಗೆ ಬಿಡದೆ, ಇದಕ್ಕೆ ಶಾಶ್ವತ ಉಪಾಯವನ್ನು ಹುಡುಕಬೇಕು.

ಇಲ್ಲಿಗೆ ಸಮೀಪದಲ್ಲಿರುವ ನೇತ್ರಾವತಿಯ ನೀರನ್ನು ಉಪಯೋಗಿಸುವದು ಬಹು ಔಚಿತ್ಯ. ಮುಕ್ಕಾ, ಸುರತ್ಕಲ್, ಶ್ರೀನಿವಾಸ ನಗರ, ಮೂರಕ್ಕೂ ಒಂದು ಯೋಜನೆಯನ್ನು ಮಾಡಿ, ಈ ಪ್ರಶ್ನೆಯನ್ನು ಬಗೆಹರಿಸುವುದು ಒಳಿತು ಎಂದು ತೋರುತ್ತದೆ.

ಮೂರನೆಯ ಮತ್ತು ಮುಖ್ಯ ಕೊರತೆ ಎಂದರೆ, ಅಧ್ಯಾಪಕರು, ಬೇರೆಯ ಕಾಲೇಜುಗಳೊಂದಿಗೆ ಹೋಲಿಸಿದರೆ, ಇದು ಬಹಳ ನೋವೆಂಬುದು ನಿಜ, ಕೋಟಿಗಟ್ಟಲೆ ಹಣ ಖರ್ಚುಮಾಡಿ, ಸರಿಯಾದ ಅಧ್ಯಾಪಕರು ಇಲ್ಲದಿದ್ದರೆ ಎಲ್ಲ ನಿರರ್ಥಕ, ಬರಿ ಕಟ್ಟಡಗಳಲ್ಲಿ ದೊಡ್ಡದಾದರೆ ಸಾಲದು, ಅದಕ್ಕೆ ಸರಿಯಾಗಿ ಅಧ್ಯಾಪಕರು ಮುಖ್ಯ, ಯಾವ ವಿಧ ಮೋಸ ಮಾಡದೆ ನುರಿತ ಅಧ್ಯಾಪಕರನ್ನು ಆರಿಸುವುದು ಕರ್ತವ್ಯ.

The heart of every educational institution is the teacher ಎಂಬುದನ್ನು ಮರೆಯಬಾರದು. ಇವೆಲ್ಲ ಅಲ್ಲದೆ ಇನ್ನೂ ಅನೇಕ ಸಣ್ಣಪುಟ್ಟ ಕುಂದು ಕೊರತೆಗಳುಂಟು, ಇನ್ನೂ ಬಾಲ್ಯಾವಸ್ಥೆಯಲ್ಲಿರುವ ಈ ಕಾಲೇಜು ಅವುಗಳನ್ನು ಬೆಳೆಯಗೊಡದೆ, ಕಡಿಮೆ ಮಾಡಲು ಪ್ರಯತ್ನಿಸಬೇಕು.

ಈ ಕಾಲೇಜಿನ ಸರ್ವತೋಮುಖ ಅಭಿವೃದ್ಧಿಗೆ ಕಾರಣರಾದ ಪ್ರಿನ್ಸಿಪಾಲ್ ಡಾ॥ ಅಡ್ಕೆಯವರಂತ ನಿಸ್ಪೃಹವಂತ, ಇಂಜನಿಯರು ನಮ್ಮ ರಾಜ್ಯದಲ್ಲಿ ಎಷ್ಟು ಜನ ಸಿಕ್ಕಾರು? ಕೆಲವರು, ಅಧಿಕಾರದಿಂದ ಮೇಲು ಬಂದರೆ, ಇನ್ನು ಕೆಲವರು ತಮ್ಮ ಕರ್ತೃತ್ವ ಶಕ್ತಿಯಿಂದ ಮೇಲೆ ಬಂದಿರುತ್ತಾರೆ, ಡಾ॥ಅಡ್ಕೆಯವರು ಎರಡನೆ ಗುಂಪಿಗೆ ಸೇರಿದವರು. ಅಧಿಕಾರದ ಗದ್ದುಗೆ ಏರಿದಾಗಲು, ನಿಗರ್ವಿಯಾಗಿ, ತಾಳ್ಮೆಯಿಂದ ಇರುವ ಅಧಿಕಾರಿಗಳು ಎಷ್ಟು ಜನ ಸಿಕ್ಕಾರು? ಒಬ್ಬ ಇಂಜಿನಿಯರಾಗಿ, ಕೆಲವೊಂದು ನಗರದ ರೂಪ ರೇಷೆಗಳನ್ನು ಎಳೆದು, ನಕಾಶೆಯನ್ನು ಬದಲು ಮಾಡಿದ ಅಡ್ಕೆಯವರು, ಇಂದು, ದೊಡ್ಡ ಆಫೀಸರಾಗಿ, ಪ್ರಿನ್ಸಿಪಾಲರಾಗಿ, ಶ್ರೀನಿವಾಸ ನಗರದ, ಸಕಲ ಅಭಿವೃದ್ಧಿಗಳಿಗೆ ಕಾರಣರಾಗಿದ್ದಾರೆ, ಯಾರೇ ಹೊರಗಿನ ಸಂದೇಶಕರು ಬರಲಿ Dr Adke is a silent worker ಎಂದು ಉದ್ಗಾರ ತೆಗೆಯುತ್ತಾರೆ. ದಯೆ, ತಾಳ್ಮೆ, ಕರ್ತೃತ್ವದ ಪ್ರತೀಕ ಡಾ. ಅಡ್ಕೆಯವರು. ಕೇವಲ ಅವರನ್ನು ಹೊಗಳಿದರೆ ಸಾಲದು. ಅವರ ನಿಜವಾದ ಪ್ರಶಂಸ ಸಾಕಾರಕ್ಕೆ ನಮ್ಮ ರಾಜ್ಯದ ಜನ ಮುಂದೆ ಬರಬೇಕು ಅವರನ್ನು ಯೋಗ್ಯರೀತಿಯಲ್ಲಿ ಪ್ರಶಂಸಿಸಬೇಕು. ರಾಜ್ಯದ ಕೆಲವೇ ಧೀಮಂತ ವ್ಯಕ್ತಿಗಳಾದ, ಡಾ. ಪೈ ಸಾವಟಿ, ಕಾರಂತರ ಜೊತೆಗೆ, ಅಡ್ಕೆ ಎನ್ನುವ ಹೆಸರು, ಕೆಲವೇ ವರ್ಷಗಳಲ್ಲಿ ಸೇರಿದರೆ ಆಶ್ಚರ್ಯವಿಲ್ಲ.

ಒಬ್ಬ ವ್ಯಕ್ತಿ ಮುಂಜಾನೆಯಿಂದ ಸಂಜೆಯತನಕ, ಬಿಸಿಲಿನಲ್ಲಿ, ಮಳೆಯಲ್ಲಿ, ಶ್ರೀನಿವಾಸ ನಗರದ ಒಂದು ಬದಿಯಿಂದ ಇನ್ನೊಂದು ಬದಿಯವರೆಗೆ ಕಟ್ಟಡಗಳ ತನಿಕೆ ನಡೆಸುತ್ತಾ ತಿರುಗುವವನ್ನು ನೋಡಿದರೆ, ಇವರೇನು ಇಷ್ಟು ಕೆಲಸ ಮಾಡಿ ಯಾರು ಎಷ್ಟು ಒಡೆದು? ಮೂವತ್ತೈದು ವರುಷದ ಒಬ್ಬ ತರುಣ ಇಂಜನಿಯರ, ಇಡೀ ನಗರದ ರಚನೆಗೆ ಕಾರಣರಾಗಿದ್ದಾರೆ ಎಂದರೆ ನಂಬಲಿಕ್ಕಿಲ್ಲ, ಆದರೆ, ಇದು ಸತ್ಯ ಎಂಬುದು ಎಲ್ಲರಿಗೆ ತಿಳಿದ ವಿಷಯವಾಗಿದೆ, ಅವರಿಗೆ ಯಾವಾಗಲೂ ಕೆಲಸದ ಚಿಂತೆ, ಇಂಥವರು, ನೂರಕ್ಕೊಬ್ಬರಾದರು, ಸಿಕ್ಕಾರೋ ಇಲ್ಲವೋ? ಬೇರೆ ಬೇರೆ ಪ್ರಾದೇಶಿಕ ಕಾಲೇಜುಗಳಲ್ಲಿ, ಎರಡು ಡಿವಿಜನ್. ಒಬ್ಬ ಸುಪರಿಂಟೆಂಡಿಂಗ್ ಇಂಜನಿಯರು ಇದ್ದರೆ ಇಲ್ಲಿ ಒಂದೇ ಸಬ್ ಡಿವಿಜನ್ ಕೇವಲ ನಾಲ್ಕು ಜನ, ತಂತ್ರಜ್ಞರು. ಆದರೂ ಯಾವ ಕಾಲೇಜ್, ಸಾಧಿಸದಷ್ಟು ಪ್ರಗತಿಯನ್ನು ಇದು ಸಾಧಿಸಿದೆ ಎಂದರೆ ಆಶ್ಚರ್ಯವಾಗದೆ ಇರದು. ಅದಕ್ಕೆಲ್ಲಾ ಕಾರಣರೇ ಉತ್ಸಾಹಿ ತರುಣ ಇಂಜನಿಯರ್, ಶ್ರೀ ಶಿವ. ಜಿ ಶೆಟ್ಟಿಯವರು. ಇದು ಕೇವಲ ಪ್ರಶಂಸೆಯಲ್ಲ.

ಸಣ್ಣ ಭರತ ಖಂಡ— ದೇಶದ ನಾನಾ ಭಾಗಗಳಿಂದ ಬಂದ ವಿದ್ಯಾರ್ಥಿಗಳನ್ನು ನೋಡಿದಾಗ ತ್ರೈಲ ಪುಟ್ಟ ಯನೆನಪು ಆಗದ ಇರಲಾರದು. ಒಬ್ಬ ಬಂಗಾಳಿ ಇನ್ನೊಬ್ಬ ಗುಜರಾಥಿ ಮತ್ತೊಬ್ಬ ಮರಾಠಿ ಮುಗದೊಬ್ಬ ಮಲೆಯಾಳಿ, ಮದ್ರಾಸಿ, ಹಾಗೆ ವಿವಿಧ ಉಡುಪು ವಿವಿಧ ರೀತಿ, ನೀತಿ ವಿವಿಧ ಭಾಷೆ ಎಲ್ಲವನ್ನೂ ಇಲ್ಲಿ ಕಾಣಬಹುದು.

ಸಂದರ್ಶಕರಿಗೊಂದು ಕಿವಿ ಮಾತು:— ಉಡುಪಿಯ ಕೃಷ್ಣನನ್ನು ಧರ್ಮಸ್ಥಳದ ಮಂಜುನಾಥಸ್ವಾಮಿಯನ್ನು ಕಾರ್ಕಳದ ಗೊಮ್ಮಟನನ್ನು ಮೂಡಬಿದರೆಯ ಬಸದಿಯನ್ನು ನೋಡಲು ಬಂದ ಭಾವುಕರು, ಶ್ರೀನಿವಾಸ ನಗರಕ್ಕೊಮ್ಮೆ ಬನ್ನಿ. ಇಂಜನಿಯರಿಂಗ್ ಪ್ರತಿಭೆಯ ಸ್ಪಷ್ಟವಾದ ಒಂದು ಪ್ರತ್ಯಕ್ಷ ನಿದರ್ಶನವನ್ನು ನೋಡಲು ಮರೆಯಬೇಡಿ.

ದೀಪಾವಳಿ—
ವೃದ್ಧಿ-ಸಮೃದ್ಧಿಗಳ ಸಂಕೇತ
ಪರಿಶ್ರಮ-ಉಳಿತಾಯಗಳೇ
ವಿಜಯದ ರಹಸ್ಯ!
ಇಂದಿನ ಉಳಿತಾಯ—
ಮುಂದಿನ ಸುಖ-ಶಾಂತಿಯ ಸೋಪಾನ

ಉಳಿತಾಯವನ್ನು ಠೇವಣಾತಿಯಾಗಿಡಲು ವಿಜಯ ಬೇಂಕು ಒಂದು ಭದ್ರವಾದ ಮನೆ. ಉಳಿತಾಯ ಯೋಜನೆಯ ಸೌಕರ್ಯಗಳ ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯ ಸಂಪರ್ಕ ಬೆಳೆಸಿರಿ.

ವಿಜಯ ಬೇಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು— ವಿಜಯ ಬೇಂಕ್ ಬಿಲ್ಡಿಂಗ್,
ಲೈಟ್ ಹೌಸ್ ಹಿಲ್ ರೋಡು,
ಮಂಗಳೂರು—3.
Estd 1931 ಸ್ಥಾಪನೆ Phone No. 240

ಮನ ಬೆಳಗಿಸುವ ದೀಪಾವಳಿ

(೧ನೇ ಪುಟದಿಂದ)

ದಲ್ಲಿ. ತನ್ನ ತಂಗಿಗೆ ಉಡುಗೊರೆಯನ್ನು ಕೊಟ್ಟು ಆಕೆಯನ್ನು ತೃಪ್ತಿಪಡಿಸುವುದು ಇದೇ ದೀಪಾವಳಿಯಂದು.

ದೀಪಾವಳಿಯ ಮೂಲ ಏನೇ ಇರಲಿ ಇದು ದೇಶದಾದ್ಯಂತ ಆಚರಿಸುವ ಒಂದು ಪ್ರಮುಖ್ಯವಾದ ಹಬ್ಬ. ಶೀತಲವಾದ, ಪರ್ವತ ಪ್ರದೇಶದಿಂದ ಕೂಡಿದ ಹಿಮಾಲಯದಿಂದ ಹಿಡಿದು ಉರಿಯುವ ಬಿಸಿಲನ್ನು ಸದಾ ಅನುಭವಿಸುತ್ತಿರುವ ನಾವು ಕೂಡಾ ಈ ದೀಪಾವಳಿಯನ್ನು ಆಚರಿಸುತ್ತೇವೆ ಜನಸಾಂದ್ರತೆಯಿಂದ ಕೂಡಿದ ನಗರದಿಂದ ಹಿಡಿದು ಚಿಕ್ಕಹಳ್ಳಿಯ ಜನರು ಕೂಡಾ ಇದನ್ನು ಆಚರಿಸುತ್ತಾರೆ.

ರಾಜಸ್ಥಾನದಲ್ಲಾದರೆ ದೀಪಾವಳಿಯಂದು ನೃತ್ಯ, ಕುಣಿತಗಳಿಂದ ಶ್ರೀರಾಮನ ಪಟ್ಟಾಭಿಷೇಕದ ಆ ದಿನವನ್ನು ನೆನಪಿಗೆ ತರುತ್ತಾರೆ. ದಕ್ಷಿಣ ಭಾರತದವರು ಕೃಷ್ಣನು ನರಕಾಸುರನನ್ನು ಕೊಂದ ದಿನವನ್ನು ನೆನಪಿಸಿಕೊಳ್ಳುತ್ತಾರೆ. ಉತ್ತರ ಪ್ರದೇಶದಲ್ಲಿ ದೀಪಾವಳಿಯನ್ನು ರಾಮನು ರಾವಣನನ್ನು ಕೊಂದ ಆ ದಿನವನ್ನು ನೆನಪಿಗೆ ತರುವಂತೆ ಆಚರಿಸುತ್ತಾರೆ. ಬಂಗಾಳದಲ್ಲಿ ದೀಪಾವಳಿಯಂದು ದುರ್ಗಾ ಪೂಜೆ ನಡೆಸುವರು.

ಜಪಾನ್ ದೇಶದಲ್ಲಿ ಕೂಡಾ ದೀಪಾವಳಿಯನ್ನು ಆಚರಿಸುತ್ತಾರೆ ಅದರ 'ಲಾಂಟನಿನ ಹಬ್ಬ' ಎಂದು ಕರೆಯಲ್ಪಡುವ ಈ ದಿನದಲ್ಲಿ ಸತ್ತ ಹಿರಿಯರು ಬಂದು ಕಿರಿಯರನ್ನು ಆಶೀರ್ವದಿಸುವರು ಎಂದು ಅವರ ನಂಬಿಕೆ. ಅಂದು ಅವರು ಸತ್ತ ಹಿರಿಯರಿಗೆ ತಮ್ಮ ಗೌರವ ಸೂಚಿಸುವರು.

ಇದೊಂದು ಬರೀ ಹಿಂದುಗಳ ಹಬ್ಬವಾಗಿರದೆ ಇಡೀ ರಾಷ್ಟ್ರೀಯ ಹಬ್ಬವಾಗಿದೆ. ವಿಧ ವಿಧದ ಮತೀಯರನ್ನು ಒಂದುಗೂಡಿಸುವ, ಅವರಲ್ಲಿ ಹೊಸ ಹುರುಪನ್ನು ತುಂಬಿಸುವ ಒಂದು ಹಬ್ಬವಾಗಿದೆ. ಸಿಡಿಮದ್ದುಗಳನ್ನು ಬಿಡುವುದರೊಂದಿಗೆ ಭಾರತದ ಸ್ವತಂತ್ರವು ಅಳಿಯದಂತೆ ನೋಡುವುದು ನಮ್ಮ ಆದ್ಯಕರ್ತವ್ಯವಾಗಿದೆ. ಪ್ರಜಾಪ್ರಭುತ್ವದ ಚಟಯನ್ನು ಅರಿತು ನಾವು ಸ್ವಾತಂತ್ರ್ಯಕ್ಕೆ ಎಂದೂ ಧಕ್ಕೆ ಬರದಂತೆ ಈ ಹಬ್ಬವನ್ನು ನಾವು ಆಚರಿಸುವ.

ಶ್ರೀ ಕೆ ಕೆ ಶೆಟ್ಟಿ, ಎಂ.ಎಲ್.ಸಿ.ಯವರ
ಕ್ರಾಂತಿಕಾರಿ ಲೇಖನಿಯ
ಸವಕಾಲಕ್ಕೊಪ್ಪುವ ನವನವೀನ

ಪುಸ್ತಕಗಳು	ರೂ. ನ.
ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಟಪ್ಪಾಲು ಖರ್ಚು ಪ್ರತ್ಯೇಕ. ವಿವರವಾದ ಕೆಟಲಾಗಿಗೆ ಹತ್ತು ನ. ಪೈ. ಸ್ಟಾಂಪಿನೊಂದಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ

ಕಟ್ಟಾಣಿ ಕಡ್ಲಿ ಬಸವಿ

(೧ನೇ ಪುಟದಿಂದ)

ಕಡ್ಲಿ ಬಸವಿಯನ್ನು ಮನೆಗೆ ಕರೆತರಲು ಸಾಧ್ಯವಿಲ್ಲ.

(ಚನ್ನಪ್ಪ ಮತ್ತು ಕಟ್ಟಾಣಿ ಗಡ್ಲಿ ಬಸವಿ ಪ್ರವೇಶ)

ರಾಯರು— ಆಗೋ ನಿಮ್ಮ ಮಾವ ಮಗಳ ಜತೆಗೆ ಬಂದ. ಏನು ಹೇಳುತ್ತಿಯೂ ಹೇಳು. ಬನ್ನಿ ಚನ್ನಪ್ಪನವರೇ

ಚೆನ್ನಪ್ಪ — ತಮ್ಮ ಪತ್ರಕ್ಕೆ ಕಾದು ಕಾದು ಸುಸ್ತಾದೆ. ಕೊನೆಗೆ ನಾನೇ ಕರೆದು ಕೊಂಡುಬಂದೆ. ಇಗೋ ನಿಮ್ಮ ಸೊಸೆಯನ್ನು ಕರೆತಂದಿದ್ದೇನೆ. ಸುಖವಾಗಿಯಾದರೂ ಇಟ್ಟುಕೊಳ್ಳಿ. ಹಾಳು ಬಾವಿಗಾದರೂ ತಳ್ಳಿ. ಇದ್ದ ಮಗಳು ಸತ್ತು ಹೋದಳು ಅಂತ ತಿಳಿದುಕೊಂಡು ಬಿಡುತ್ತೇನೆ.

ರಾಯರು— ಈ ರೀತಿಯಾಗಿ ಮಾತನ್ನಾಡಬಾರದು ಚೆನ್ನಪ್ಪನವರೇ ಏನೋ ವಿಷಗಳಿಗೆ ಕಾಡುತ್ತದೆ ಈ ಗಂಡಾಂತರದಿಂದ ತಪ್ಪಿದರೆ ಎಲ್ಲಾ ಸರಿ ಹೋಗಬಹುದು.

ಕಟ್ಟಾಣಿ - (ವಾಸುವಿಗೆ) ನಾನು ಏನು ತಪ್ಪುಮಾಡಿದ್ದರೂ ಕ್ಷಮಿಸಿ.

ವಾಸು—(..........)

ಕಟ್ಟಾಣಿ— ಈ ರೀತಿಯಾಗಿ ಸುಮ್ಮನಿದ್ದರೆ ಹೇಗೆ. ನನ್ನ ಜೀವನದ ಬಾಳೆಲ್ಲಾ ಕಣ್ಣೀರಿನಲ್ಲಿ ಕೈ ತೊಳೆಯ ಬೇಕೇ?

ವಾಸು— ಬೇಡ ಅಂದವರಾರು. ನಿನ್ನ ಮದ್ವೆಯಾಗಿದ್ದೇ ತಪ್ಪು.

ಕಟ್ಟಾಣಿ—ತಪ್ಪಿರಬಹುದು. ಆದರೆ ನಿಮ್ಮಂತೆ ನಾನು ಗಂಡಲ್ಲಾ ನೋಡಿ ನಾನು ಸಹಾ ಬೇರೆ ಮದ್ವೆಯಾಗುವುದಕ್ಕೆ. ಒಮ್ಮೆ ಹೆಣ್ಣಿನ ಕೊರಳಿಗೆ ಕರಿಮಣಿ ಸರ ಎಂದು ಬಿತ್ತೋ ಅಂದೇ ಆಯಿತು ಮಾಂಗಲ್ಯ ಕಟ್ಟಿದ ಪತಿಯು ಕುರುಡನೇ ಆಗಿರಲಿ, ಕುಂಟನೇ ಆಗಿರಲಿ ಹೆಣ್ಣಿಗೆ ಸಾಯುವ ತನಕ ಅವನೇ ಪತಿ.

ವಾಸು— ನಿನ್ನ ಹಳೆ ಪುರಾಣ ಬೇಕಿಲ್ಲಾ ಅಂದೆ

ಕಟ್ಟಾಣಿ— ಈ ಮನೆಯಲ್ಲಿರಲು ಅನುಮತಿಕೊಡಿ ನನಗೆ. ನಿಮ್ಮ ಪಾದಸೇವೆ ಮಾಡುತ್ತಾ ನೀವು ಹಾಕಿದ್ದನ್ನು ತಿಂದು ಬಿದ್ದಿರುತ್ತೇನೆ.

ವಾಸು— ಈ ಮನೆಯಲ್ಲಿರಲು ಸಾಧ್ಯವಿಲ್ಲ. ನಿನ್ನ ಗಂಡ ಸತ್ತುಹೋದ ಅಂತ ತಿಳಿದುಕೊಂಡು ಹೋಗು.

ಕಟ್ಟಾಣಿ— ಶಿವಾ ಶಿವಾ! ಎಂತಹ ಮಾತಾಡುತ್ತಿದ್ದೀರಲ್ಲಾ ಸ್ವಾಮಿ. ನೀವು ಸತ್ತುಹೋದರೆ ಏನು ಪ್ರಯೋಜನ ಹೇಳಿ. ಯಾರಿಗೆ ಅನುಕೂಲ ಹೇಳಿ? ನನಗೂ..? ನಿಮ್ಮ ತಂದೆಯವರಿಗೆ? ಇರಬೇಕು. ಇದ್ದು ಜಯಿಸಬೇಕು. ಬಂದುದೆಲ್ಲ ಬರಲೀ ಗೋವಿಂದನ ದಯೆಯೊಂದಿರಲಿ ಅಂತಾ ಕೇಳಿಲ್ಲವೇ?

ರಾಯರು— ಅಹುದು ವಾಸು. ವಿಧಿ ವಿಲಾಸವನ್ನು ತಪ್ಪಿಸಲು ದೇವತೆಗಳಿಂದಲೂ ಸಾಧ್ಯವಿಲ್ಲ. ಆವನು ಹಾಕಿ ಕೊಟ್ಟ ದಾರಿಯಲ್ಲಿ ಹೋಗುವುದು ಒಳ್ಳೆಯದು.

ವಾಸು— ಅದೆಲ್ಲಾ ಸಾಧ್ಯವಿಲ್ಲ Father. ನಾನು ಇನ್ನೊಂದು ಮದ್ವೆಯಾಗುವುದು ಖಂಡಿತ.

ಕಟ್ಟಾಣಿ — ಇನ್ನೊಂದು ಮದ್ವೆ! ನನ್ನ ಸ್ವಾಮಿಗೆ ಮತ್ತೊಂದು ಲಗ್ನವೇ!!

ಚನ್ನಪ್ಪ— ಇನ್ನೊಂದು ಮದ್ವೆಯಾಗುತ್ತೀರಾ!! ನನ್ನ ಮಗಳ ಗತಿ ಹೀಗಾಯಿತು. ಇನ್ನು ಬರುವವಳ ಗತಿಯೋ...

ವಾಸು — ನಾನು ಮನಸಾರ ಪ್ರೀತಿಸಿರುವಾಗ ಅವಳ ಬಾಳು ಸ್ವರ್ಗ ಸುಖವಾಗುತ್ತದೆ.

ಕಟ್ಟಾಣಿ— ನಿಮಗೆ ಇನ್ನೊಂದು ಮದ್ವೆಯಾಗಬೇಕೆಂದು ಆಸೆ ಇದ್ದರೆ ನಾನು ಬೇಡ ಅನ್ನುವುದಿಲ್ಲ ನಾನೇ ಮುಂದೆ ನಿಂತು ಮಾಡುತ್ತೇನೆ.

ಚನ್ನಪ್ಪ— ಕಟ್ಟಾಣಿ ಏನು ಹೇಳುತ್ತೀಯಾ-ಸವತಿಯನ್ನು ಕಾಣಬೇಕೆಂದು ಆಸೆಯೇ?

ಕಟ್ಟಾಣಿ— ಅಹುದಪ್ಪ. ಪತಿಯೇ ಪ್ರತ್ಯಕ್ಷ ದೇವರು. ಪತಿಯ ಆಸೆಯನ್ನು ನೆರವೇರಿಸಬೇಕಾದದು ಪತ್ನಿಯ ಪ್ರಥಮ ಕರ್ತವ್ಯ. ಹೇಳಿ ನನ್ನ ತಂಗಿ ಯಾರೆಂದು.

ರಾಯರು— ನೋಡಿದೆಯ ವಾಸು. ಅವಳ ಹೃದಯ ಕಡು ಕಟ್ಟಣವಲ್ಲ. ಮಲ್ಲಿಗೆ ಹೂ ಇದ್ದಾಗೆ. ಈಗಲಾದರೂ ಕಟ್ಟಾಣಿಯ ಮನಸ್ಸನ್ನು ಅರ್ಥಮಾಡಿಕೊಂಡು ಕರೆದುಕೋ. ನಿನ್ನ ಹೃದಯದಲ್ಲಿ ಅವಳಿಗೆ ಸ್ಥಾನ ಕೊಡು.

ಕಟ್ಟಾಣಿ— ನಿಮ್ಮ ಹೃದಯಕ್ಕಿಂತಲೂ ನಿಮ್ಮ ಪಾದಗಳ ಬಳಿ ಕೊಡಿ, ಆ ಹೃದಯದಲ್ಲಾ ತಂಗಿಗೆ ಸ್ಥಾನ ಕೊಡಿ.

ಚನ್ನಪ್ಪ— ಕಟ್ಟಾಣಿ ಕಡ್ಲಿ ಬಸವಿ ನೀನು ಸಾಮಾನ್ಯ ಹೆಣ್ಣಲ್ಲವಮ್ಮ.

ವಾಸು— ಅಹುದು. ಸಾಮಾನ್ಯ ಹೆಣ್ಣಲ್ಲ ಹಳ್ಳಿ ಗೂಬೆ.

ಕಟ್ಟಾಣಿ— ನಾನು ಹಳ್ಳಿ ಗೂಬೆ ನಿಜ. ಆದರೆ ವಿಧಿನಿಯಮವನ್ನು ಮೀರುವವನಾರ ಸ್ವಾಮಿ. ನಮ್ಮಿಬ್ಬರ ಸಂಬಂಧವಿತ್ತು ಲಗ್ನ ನಡೆದೇ ಹೋಯಿತು ಮಾವಯ್ಯ.

ರಾಯರು— ಏನಮ್ಮಾ ಕಟ್ಟಾಣಿ.

ಕಟ್ಟಾಣಿ— ನನ್ನ ಸ್ವಾಮಿ ಇನ್ನೊಂದು ವಿವಾಹವಾಗಲು ಆಸೆ ಪಡುತ್ತಿದ್ದಾರೆ ಅವರು ಓದುವ ತರಗತಿಯಲ್ಲಿರಬೇಕು. ಅವರಿಗೆ ಮದ್ವೆಮಾಡಿ ನಾನು ಯಾವುದಕ್ಕೂ ಅಡ್ಡಿ ಬರುವುದಿಲ್ಲ.

ರಾಯರು— ನೀನು ಸಾಮಾನ್ಯ ಹೆಣ್ಣಲ್ಲ.

ವಾಸು— ಹಳ್ಳೀ ಕೋಡಂಗಿ.

ಚನ್ನಪ್ಪ— ಈ ಹಳ್ಳಿಯ ಕೋಡಂಗಿಯ ಕತೆ ಪೂರೈಸಿತು ವಾಸು, ಇನ್ನು ಮುಂದೆ ಬರುವ ಪಟ್ಟಣದ ಕೋಡಂಗಿ ನೋಡ ಬೇಕಾಗಿದೆ.

ವಾಸು— ಏನಾದರೆ ಮಾವಯ್ಯ. ಮತ್ತು ಸರಿಯಾಗಿ ಬರಲಿ.

ಕಟ್ಟಾಣಿ— ಸುಮ್ಮನಿರಪ್ಪ ನೀನು. ಆಗಿದ್ದು ಆಗಿ ಹೋಯಿತು. ಮಿಂಚಿ ಹೋದ ಕಾರ್ಯಕ್ಕೆ ಚಿಂತಿಸಿ ಫಲವೇನು? ಸ್ವಾಮಿ, ನನ್ನ ಕಡೆಯ ಆಸೆಯನ್ನು ನೆರವೇರಿಸಿ ಕೊಡುವಿರಾ?

ವಾಸು— ಏನದು?

ಕಟ್ಟಾಣಿ - ಈ ಮನೆಯಲ್ಲಿರಲು ಅನುಮತಿ ಕೊಡಿ.

ವಾಸು— ಸಾಧ್ಯವಿಲ್ಲಾ.

ಕಟ್ಟಾಣಿ — ಸ್ವಾಮಿ.

ವಾಸು— ಸಾಧ್ಯವಿಲ್ಲ ಅಂತಾ ಹೇಳಿದೆನಲ್ಲಾ.

ದೀಪಾವಳಿಯ ಶುಭಾಶಯಗಳು.

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ನಮ್ಮ ನಾಗಮಂಗಲ ಶಾಖೆ (ಮಂಡ್ಯಾ ಜಿಲ್ಲೆ) ತಾ. 2—9—'63ಕ್ಕೂ, ಚಿಕ್ಕನಾಯಕನಹಳ್ಳಿ ಶಾಖೆ (ತುಮಕೂರು ಜಿಲ್ಲೆ) ತಾ. 31—10—'63ಕ್ಕೂ ತೆರೆಯಲ್ಪಟ್ಟಿವೆ.

ರೂ. 1·35 ಕೋಟಿಗೂ ಮಿಕ್ಕಿದ ಠೇವಣಾತಿಗಳು

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ಕಟ್ಟಾಣಿ— ನಿಮ್ಮ ಆಸೆ ಆಕಾಂಕ್ಷೆಗಳಿಗೆ ನಾನು ಅಡ್ಡಿ ಬರುವುದಿಲ್ಲ. ತಂಗಿಯ ಜತೆಯಲ್ಲಿ ಬಾಳಬೇಕೆಂದು ಆಸೆ.

ವಾಸು— ನಿನ್ನ ಆಸೆ ನೇರವೇರಲಾರದು ಬಸವಿ.

ಕಟ್ಟಾಣಿ— ಅಷ್ಟೆಯೇ ಸ್ವಾಮಿ. ಇನ್ನೊಮ್ಮೆ ಆಲೋಚಿಸಿ.

ವಾಸು— ಆಲೋಚಿಸುವುದೇನು ಬಂತು ಬದನೆಕಾಯಿ. ನೀನು ಇಲ್ಲಿ ಇರಕೂಡದು,

ಕಟ್ಟಾಣಿ— (ದುಃಖದಿಂದ) ನನ್ನದು ನಾಯಿಜನ್ಮ ಅಂತಾ ಕಾಣುತ್ತೆ. ಸ್ವಾಮಿ, ನಿಮ್ಮ ಮದ್ವೆಗೆ ನಾನು ಬರಲೇ.

ವಾಸು— ನೀನು ಬಂದರೆಷ್ಟು ಲಾಭವೋ ಬರಲಿಲ್ಲದಿದ್ದರೂ ಅಷ್ಟೇ ಲಾಭ.

ಕಟ್ಟಾಣಿ— ನನ್ನ ತಂಗಿಯ ಮುಖ ನೋಡುವುದಕ್ಕೆ ಆದ್ರು...

ವಾಸು— ನೀನು ಬಂದು ನನ್ನ ಮನಸ್ಸು ಕಲಕ ಬೇಡ.

ಕಟ್ಟಾಣಿ— ನಾನು ಬರಲೇ ಇರಲಿಲ್ಲದಿದ್ದರೇ ಮದ್ವೆ ನಡೆಯುವುದೇ ಇಲ್ಲಾ ಗೊತ್ತೇ.

ವಾಸು— ಕೋಳಿ ಕೂಗದಿದ್ದರೆ ಬೆಳಕು ಹರಿಯುವುದಿಲ್ಲವೇ?

ಕಟ್ಟಾಣಿ— ಈಗೇಕೆ ಆ ಮಾತು. ಮುಂದೆ ತಮಗೆ ಗೊತ್ತಾಗುತ್ತದೆ. ನಿಮ್ಮ ಪಾದಗಳಿಗೆ ನಮಸ್ಕಾರ ಹೋಗುತ್ತೇನೆ.

ವಾಸು— ಹುಂ ಹುಂ. ಜಾಗ್ರತೆಯಾಗಿ ಪೂರೈಸಿ ಇಲ್ಲಿಂದ ತೊಲಗು.

(ನಮಸ್ಕರಿಸಿ, ನಿರ್ಗಮಿಸುವಳು)

ಚನ್ನಪ್ಪ— ನಿಲ್ಲು ಕಟ್ಟಾಣಿ ನಾನು ಬರುತ್ತೇನೆ.

ರಾಯರು — ನಿಲ್ಲಿ ಚನ್ನಪ್ಪನವರೇ, ಊಟ ಮಾಡಿಕೊಂಡು ಹೋಗುವಿರಂತೆ.

ಚನ್ನಪ್ಪ— ಯಾವ ಮುಖವಿಟ್ಟುಕೊಂಡು ಊಟ ಮಾಡಲಿ ರಾಯರೇ?

ರಾಯರು— ಏನು ಮಾಡಲಿ ಹೇಳಿ. ನಾವು ಮಾಡಿದ್ದೆಲ್ಲಾ ಕೋಣದ ಮುಂದೆ ಕಿಂದರಿ ಬಾರಿಸಿದಂತಾಯಿತು.

ಚನ್ನಪ್ಪ— ನಾನು ಸುಮ್ಮನೆ ಇರಬಹುದು ರಾಯರೇ. ಆದರೆ ನನ್ನ ಕಟ್ಟಾಣಿ ಮುಖ ನೋಡಿ ಸಹಿಸಲು ಸಾಧ್ಯವಿಲ್ಲ. ನಿಮ್ಮಗಳ ಮರುಳು ಮಾತಿಗೆ ಕಟ್ಟುಬಿದ್ದು ಮದ್ವೆ ಮಾಡಿವೆ ಈಗ ನೋಡಿ ನನ್ನ ಸ್ಥಿತಿ. ಇನ್ನೂ ನನ್ನ ಬಸವಿಯ ಗತಿಯೇನು ರಾಯರೇ?

ವಾಸು— ದೇವರೇ ಗತಿ.

ಚನ್ನಪ್ಪ— ನಾನು ಮನಸ್ಸು ಮಾಡಿದರೆ ಮುಂದೆ ಮದ್ವೆಯಾಗುವುದನ್ನು ನಿಲ್ಲಿಸಬಲ್ಲೆ.

ವಾಸು— ಅದು ಹೇಗೆ ನಿಲ್ಲಿಸುತ್ತೀರಾ ನಾನೂ ನೋಡುತ್ತೇನೆ.

ಚನ್ನಪ್ಪ— ಆದರೆ, ಆದರೆ ಕಟ್ಟಾಣಿಯ ಮುಖ ನೋಡಿ ಸುಮ್ಮನಿರಬೇಕಾಗಿದೆ. ಅವಳ ಸಂತೋಷವೇ ನನ್ನ ಸಂತೋಷ. ಇರುವ ಒಬ್ಬ ಮಗಳನ್ನು ಗಂಡೇ ಎಂದು ಸಾಕುತ್ತೇನೆ. ಇಂದಿಗೆ ನಮ್ಮ ನಿಮ್ಮ ಋಣಾನುಬಂಧ ತೀರಿತೆಂದೇ ತಿಳಿಯಬೇಕು.

ರಾಯರು — ಹಾಗೆನ್ನಬೇಡಿ ಚನ್ನಪ್ಪನವರೇ. ಮುಂದೆ ಕಾಲ ಬಂದರೆ ಎಲ್ಲಾ ಸರಿ ಹೋಗುತ್ತದೆ.

ಚನ್ನಪ್ಪ— ನಾರಿ ಡೊಂಕನ್ನು ತಿದ್ದಲು ಕಷ್ಟ ಅಂತಿದ್ದೆ. ಆದರೆ ಈಗ ಸೂಜಿ ಡೊಂಕನ್ನು ತಿದ್ದಲು ಕಷ್ಟಕರವಾಗಿದೆ.

ರಾಯರು— ಹೆದರ ಬೇಡಿ. ನಾನು ಸರ್ವ ಪ್ರಯತ್ನವನ್ನೂ ಮಾಡುತ್ತೇನೆ.

ಚನ್ನಪ್ಪ— ನೀವು ಏನು ಮಾಡಿದರೂ ಪ್ರಯೋಜನವಿಲ್ಲ. ತಲೆ ಕೆಡುಕರ ಬುದ್ಧಿಯನ್ನು ತಿದ್ದಲು ಸಾಧ್ಯವಿಲ್ಲ. ನಿಮ್ಮ ವಂಶ ವೃಕ್ಷ ಬೆಳೆಯಬೇಕು. ಕಟ್ಟಾಣಿ ಹೇಳಿದಂತೆ ಇನ್ನೊಂದು ಮದ್ವೆಮಾಡಿ. ಆದರೆ, ಆದರೆ....

ರಾಯರು — ಆದರೇನು ಚನ್ನಪ್ಪನವರೇ....

ಚನ್ನಪ್ಪ— ನನ್ನ ಮಗಳಂತೆ ಮಾಡಬೇಡಿ.

ವಾಸು— ಆ ರೀತಿ ಹೂಗುವುದೇ ಇಲ್ಲಾ ಮಾವಯ್ಯ. ಅವಳನ್ನು ನೋಡಿದರೆ ನಾಕು ದೇವಲೋಕದ ಅಪ್ಸರೆಯಂತಿದ್ದಾಳೆ.

ಚನ್ನಪ್ಪ— ನಿನ್ನ ಕಣ್ಣಿಗೀಗ ದೇವಲೋಕದ ಅಪ್ಸರೆಯಾಗಿ ಕಾಣಬಹುದು ವಾಸು. ಅವಳು ಸಹ ಹಳ್ಳಿಯ ಹುಡುಗಿಯಾಗಿದ್ದರೆ ಏನು ಮಾಡುತ್ತಿಯೂ?

ವಾಸು— ನಿಮ್ಮ ಭಾವನೆ ತಪ್ಪು ಎಂದು ಹೇಳುತ್ತೇನೆ.

ಚನ್ನಪ್ಪ— ಈಗೇಕೆ. ಬಸಿರಾದವಳು ಹೆರದೆ ಇರುತ್ತಾಳೆಯೇ?

(ಕಟ್ಟಾಣಿ ಆಧುನಿಕ ಕಾಲೇಜು ಲೇಡಿಯಂತೆ ಪ್ರವೇಶ)

ವಾಸು— ಅಗೋ ನೋಡಿ, ಇವಳು ಹಳ್ಳಿಯ ಹುಡುಗಿಯೇ?

ಕಟ್ಟಾಣಿ — ಹಲೋ darling how do you do?

ವಾಸು— I am quite O K.

ಕಟ್ಟಾಣಿ— ಇವರಾರು darling

ವಾಸು— ಇವರ ಕಥೆಯನ್ನು ಕಟ್ಟಿಕೊಂಡು ನಿನಗೇಕೆ darling

ರಾಯರು— ಈ ಬಣ್ಣದ ಚಿಟ್ಟೆಯನ್ನು ಯಾವ zoo (ಮೃಗಾಲಯ) ನಿಂದ ತಂದೆ.

ಕಟ್ಟಾಣಿ— ನಾನ್ಸೆನ್ಸ್. ಯಾರಿವರು ವಾಸು.

ವಾಸು— My Father.

ಕಟ್ಟಾಣಿ— O I see ನಮಸ್ಕಾರ Father in-law.

ರಾಯರು— ನಿನ್ನ ನಮಸ್ಕಾರದ ಮನೆ ಹಾಳಾಗ್ಹೋಯ್ತು.

ಕಟ್ಟಾಣಿ— Father- in- law ಮಾತು ಸರಿಯಾಗಿ ಬರಲಿ.

ವಾಸು ಅಪ್ಪಾ ಇವಳನ್ನು ಮದ್ವೆಯಾಗುತ್ತೇನೆ.

ಚನ್ನಪ್ಪ— (ಅಣಕಿಸುವಂತೆ) ಅಗ ಅಪ್ಪಾ ಬೇಡವೆನ್ನುವರಾರು?

ಕಟ್ಟಾಣಿ— ಇವರಾರು darling.

ವಾಸು— ನನ್ನ old father in law.

ಚನ್ನಪ್ಪ— ನಿನ್ನ ಹೆಸರೇನಮ್ಮ.

ಕಟ್ಟಾಣಿ— ಲಿಲ್ಲಿ.

ಚನ್ನಪ್ಪ— ಅಯ್ಯೋ ಲಿಲ್ಲಿಯೋ ಅಪಶಕುನದ ಹಲ್ಲಿಯೋ. ವಾಸುವನ್ನು ಮದ್ವೆಯಾಗುತ್ತಿಯಾ ಲಿಲ್ಲಿ.

ಕಟ್ಟಾಣಿ — yes yes.

ಚನ್ನಪ್ಪ— ವಾಸುವಿಗೆ ಮೊದಲೆ ಮದ್ವೆಯಾಗಿತ್ತು.

ಕಟ್ಟಾಣಿ— ಆಫ್ course ಇರಬಹುದು: ಕಟ್ಟಾಣಿ ಕಡ್ಲಿ ಬಸವಿ ತಾನೆ?

ವಾಸು— ಈ ವಿಷಯ ನಿನಗೆ ಗೊತ್ತೇ ಲಿಲ್ಲಿ

ಕಟ್ಟಾಣಿ— yes Darling ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿದರೆ ಜಗತ್ತಿಗೆ ಗೊತ್ತಾಗುವುದಿಲ್ಲವೇ? ನಿಮ್ಮ ಮನೆತನದ ವಿಷಯವೆಲ್ಲಾ ಗೊತ್ತು.

ವಾಸು— ಕಟ್ಟಾಣಿ ವಿಷಯವನ್ನು ನಿನಗೆ ಹೇಳುವುದೊಂದು ಬಗೆ ಹರಿಯಿತು. ಅದೇ ಸಂತೋಷ

ರಾಯರು— ನೋಡಮ್ಮ ಲಿಲ್ಲಿ, ಒಬ್ಬಳ ಜೀವನ ಹಾಳು ಮಾಡಿ ನಿನ್ನ ಜೀವನ ಸುಖವಾಗಿರುವುದು ಚನ್ನಾಗಿರುವುದಿಲ್ಲ.

ಕಟ್ಟಾಣಿ — what! ನೀವು ಹೇಳುತ್ತಿರುವುದೇನು? ಯಾರ ಜೀವನವನ್ನೂ ಹಾಳುಮಾಡುವುದಿಲ್ಲ. ಅಂತ ಹೀನ ಜಾತಿಯ ಹೆಣ್ಣಲ್ಲ ನಾನು.

ರಾಯರು— ಅಂದರೆ ವಾಸುವನ್ನು ಮದ್ವೆಯಾಗುವುದಿಲ್ಲವೇ?

ಕಟ್ಟಾಣಿ— ಯಾಕಾಗ ಬಾರದು?

ರಾಯರು— ಅಂದರೆ ಮೊದಲನೆಯವಳ ಜೀವನವನ್ನು ಹಾಳುಮಾಡಿದಂತೆ ಆಗಲಿಲ್ಲವೆ?

ಕಟ್ಟಾಣಿ - ಇಲ್ಲವಲ್ಲ ?

ವಾಸು— ಅವಳ ಸುದ್ದಿ ನಮಗೆ ಬೇಡ ಲಿಲ್ಲಿ.

ಕಟ್ಟಾಣಿ— ಅಹುದು ಅವಳ ಸುದ್ದಿ ನಮಗೆ ಬೇಡ. Darling ಒಂದು ವಿಷಯ ನಿಮ್ಮ ಹತ್ತಿರ ಕೇಳಬೇಕು

ವಾಸು— What is the matter Lilli.

ಕಟ್ಟಾಣಿ— ನಿಮ್ಮನ್ನು ಮದ್ವೆಯಾಗಲು ಒಂದು ಸಿಂಗಲ್ ಕಂಡಿಷನ್ ಇದೆ,

ವಾಸು— Please tell me Darling.

ಕಟ್ಟಾಣಿ— ನನ್ನನ್ನು ಮದ್ವೆಯಾಗಿ ಕಟ್ಟಾಣಿಯಂತೆ ಮಾಡಿದರೆ....

ಚನ್ನಪ್ಪ— ಹಾಗೆ ಬರಲಿ ಪ್ರಶ್ನೆ.

ವಾಸು— ಹಾಗೆಂದೂ ಆಗುವುದಿಲ್ಲ. ಲಿಲ್ಲಿ.

ಕಟ್ಟಾಣಿ— ನನಗೆ ಯಾವ ನಂಬಿಕೆ ವಾಸು?

ರಾಯರು— ಈಗ ಸರಿಯಾಗಿದೆ ವಾದ

ಕಟ್ಟಾಣಿ— ಪತ್ರ ಬರೆದು ಕೊಡಿ. ನನ್ನನ್ನು ಬಿಟ್ಟು ಮತ್ತೆಯಾರನ್ನೂ ಮದ್ವೆಯಾಗುವುದಿಲ್ಲಾ ಅಂತಾ. ಒಂದು ಪಕ್ಷ ಆದರೆ ನಿಮ್ಮ ಆಸ್ತಿಯೆಲ್ಲಾ ನನಗೆ.

ವಾಸು— ಅದಕ್ಕೇನಂತೆ. ಅಗತ್ಯವಾಗಿ ಆಗಲಿ. (Table ಹತ್ತಿರ ಹೋಗಿ, ಬರೆದುಕೊಂಡು ಬಂದು ಕಟ್ಟಾಣಿಗೆ ಕೊಡುವನು) ಈಗ ಸಂತೋಷವಾಯಿತೇ ಲಿಲ್ಲಿ?

ಕಟ್ಟಾಣಿ— (ಮನಸ್ಸಿನಲ್ಲಿಯೇ ಓದಿಕೊಂಡು) ಸಂತೋಷವಾಯ್ತು Darling.

ಚನ್ನಪ್ಪ— ನನ್ನ ಕಟ್ಟಾಣಿ

ವಾಸು— ಇವಳ ಹೆಸರು ಕಟ್ಟಾಣಿಯಲ್ಲ. ಲಿಲ್ಲಿ ಲಿಲ್ಲಿ ಅಂತಾ.

ಚನ್ನಪ್ಪ— ನಿನ್ನ ಕಣ್ಣಿಗೆ ಲಿಲ್ಲಿಯಾಗಿ ಕಾಣುತ್ತಾಳೆ ವಾಸು. ಆದರೆ ನನಗೆ ಕಟ್ಟಾಣಿಯು ಕಟ್ಟಾಣಿಯೇ.

ವಾಸು - ನೀವು ಹೇಳುತ್ತಿರುವುದು ಒಂದೂ ಅರ್ಥವಾಗುತ್ತಿಲ್ಲ.

ಕಟ್ಟಾಣಿ— Darling ನಾನು ಯಾರೆಂದು ತಿಳಿದುಕೊಂಡಿರಿ? ನಾನೇ ಹಳ್ಳಿಯ ಗೂಬೆ ಕಟ್ಟಾಣಿ ಕಡ್ಲಿ ಬಸವಿ.

ವಾಸು— OH MY GOD! ನೀನು ಕಟ್ಟಾಣಿಯೇ!!

ರಾಯರು— ಕಟ್ಟಾಣಿ ಕಡ್ಲಿ ಬಸವಿಯೇ!! ಆಶ್ಚರ್ಯವಾಗಿದೆಯಲ್ಲಾ?

ಕಟ್ಟಾಣಿ— ಅಹುದು ಸ್ವಾಮಿ ಅಹುದು. ನಾನು ಮಾಡಿದ ಅಪರಾಧವನ್ನು ಕ್ಷಮಿಸಿ.

ರಾಯರು— ಏನಿದು ನನಗೊಂದು ಅರ್ಥವೇ ಆಗುತ್ತಿಲ್ಲವಲ್ಲ.

ಚನ್ನಪ್ಪ— ಇವಳೇ ನನ್ನ ಮಗಳು ರಾಯರೇ.

ವಾಸು — ಹೆಣ್ಣು ಅಬಲೆಯಲ್ಲಾ.

ರಾಯರು— ಏನಾಯಿತಲ್ಲ ನನ್ನ ಸೊಸೆ ನನಗೆ ಗುರುತೇ ಸಿಕ್ಕಲಿಲ್ಲ. ವೇಷಭಾಷೆ, ಎಷ್ಟು ಬದಲಾಯಿಸಿದೆ?

ಚನ್ನಪ್ಪ— ಇದಕ್ಕೆಲ್ಲಾ ಕಾಲೇಜು ಕಾರಣ ರಾಯರೇ.

ರಾಯರು— ಎಂತಹ ಘನವಾದ ಕಾರ್ಯಮಾಡಿದಳು.

ವಾಸು— ಲಿಲ್ಲೀ......

ಕಟ್ಟಾಣಿ— ನಾನು ಲಿಲ್ಲಿಯಲ್ಲರೀ. ಕಟ್ಟಾಣಿ.

ವಾಸು— ಕಟ್ಟಾಣಿ ನನ್ನದೇ ತಪ್ಪನ್ನು ಕ್ಷಮಿಸು.

ಕಟ್ಟಾಣಿ— ಹಾಗೆಲ್ಲಾ ಅನ್ನಬಾರದು ಸ್ವಾಮಿ. ನೀವೇ ನನ್ನನ್ನು ಕ್ಷಮಿಸಬೇಕು. (ಕಾಲಿಗೆ ಬೀಳುವಳು)

ವಾಸು— (ಕೈ ಹಿಡಿದು ಎಳೆಯುತ್ತಾ) ಇನ್ನೆಂದಿಗೂ ಕೈ ಬಿಡುವುದಿಲ್ಲಾ. ಕಟ್ಟಾಣಿ (ಆಲಂಗಿಸಿಕೊಳ್ಳುವನು)

ಚನ್ನಪ್ಪ— ಈಗ ಪರಮೇಶ್ವರ ಕಣ್ಣು ತೆರೆದ. (ನಗುವರು. ತೆರೆ ಸರಿಯುವುದು)

—: ಸಂಪೂರ್ಣಂ :—

(ಸೂಚನೆ— ಈ ನಾಟಕವನ್ನು ಅಭಿನಯಿಸುವ ಇಚ್ಛೆಯುಳ್ಳವರು ಲೇಖಕರಾದ ಶ್ರೀ ಪಿ. ಜಿ. ಪರಮೇಶ್ವರಪ್ಪ, S/o. ಪಿ. ಗುರುಶಾಂತಪ್ಪ ಅಂಡ್ ಸನ್ಸ್, ಜನಲ್ ಸ್ಟೋರ್ಸ್ ಗಳು ಸಂತೆ ಪೇಟೆ, ಚಿತ್ರದುರ್ಗ (ಮೈಸೂರು ಸ್ಟೇಟ್) ಇವರಿಗೆ ಬರೆದು ಅನುಮತಿ ಪಡೆಯಬೇಕು)

ಮುದ್ರಣ

ಸಣ್ಣದಿರಲಿ, ದೊಡ್ಡದಿರಲಿ,
ಯಾವುದೇ ತರದ
ಕನ್ನಡ ಇಲ್ಲವೆ ಇಂಗ್ಲಿಷ್
ಮುದ್ರಣ ಕಾರ್ಯಗಳಿಗೆ
ವಿಚಾರಿಸಿರಿ —

ನವಯುಗ ಪ್ರೆಸ್

ಸಂತೆಕಟ್ಟೆ
ಉಡುಪಿ

ದಾರಿದ್ರ್ಯ ಹರಣಂ

ಬಡತನದ ಕಾರಣವನ್ನೂ ಅದನ್ನು ನಿವಾರಿಸುವ ಉಪಾಯವನ್ನೂ ಶಾಸ್ತ್ರಗಳಲ್ಲಿ ಹೇಳಿದ್ದಾರೆ. ಕನ್ನಡದ ಹೆಚ್ಚಿನ ಕವಿ ಲಕ್ಷ್ಮೀಶ ತನ್ನ ಜೈಮಿನಿ ಭಾರತದಲ್ಲಿ ಇದನ್ನು ವಿವೇಚಿಸಿದ್ದಾನೆ ಅದರಂತೆ ನಡೆಯುವುದು ರಾಮರಾಜ್ಯ ಪಥದ ಮೈಲಿಗಲ್ಲಾಗಬಹುದು.

ಲೇಖಕರು: ಶ್ರೀ ರಾ. ಕೃ.

“ಶ್ರೀವೇ ಕೂಡದ ಗುಣವಂ ಬಣ್ಣಿಸಲ್” ಎಂಬುದಾಗಿ ಒಂದು ವಾಕ್ಯವಿರುತ್ತದೆ. “ದುಡ್ಡಿದ್ದವನೇ ದೊಡ್ಡಪ್ಪ; ದುಡ್ಡೊಂದಿದ್ದರೆ ದೊಡ್ಡ ದೊಡ್ಡ ಕಾರ್ಯಗಳನ್ನು ಸಾಧಿಸಬಹುದು” ಎಂಬುದಾಗಿ ಇನ್ನೊಬ್ಬರು ಹೇಳುತ್ತಾರೆ ‘ಹಣವೇ ಕಳ್ಳರನ್ನು ನಿರ್ಮಿಸುವುದು’ ಎಂದು ಮತ್ತೊಬ್ಬರು ಹೇಳಿದ್ದಾರೆ. ಅಂತೂ ಹಣ (ಲಕ್ಷ್ಮೀ)ವು ಎಲ್ಲ ವಿಷಯಗಳಿಗೂ ಕಾರಣವಾಗಿದೆಯೆಂದು ಪುನಃ ಹೇಳಬೇಕಾಗಿಲ್ಲವಷ್ಟೆ? ‘ಕಿಸೆಯಲ್ಲಿ ಹಣವಿದ್ದರೆ ಶ್ರೀಕಾರ ಇಲ್ಲದಿದ್ದರೆ ಭಿಕಾರಿ’ ಎಂಬಂತೆ ಹಣವು ಪ್ರತಿಯೊಬ್ಬರಿಗೂ ಬೇಕೇ ಬೇಕು. ಆದರ ಲೋಕದಲ್ಲಿ ದಾರಿದ್ರ್ಯ ತುಂಬಲು ಕಾರಣವೇನು?

ಕಾರಣವಿಷ್ಟೆ—ಐಶ್ವರ್ಯ ಬಂದಾಗ ಹೆಮ್ಮೆ ಬರುತ್ತದೆ. ಬಡವರು ಕಾಣುವುದಿಲ್ಲ. ಆತನ ಹಣ (ಲಕ್ಷ್ಮೀ ದೇವಿ)ವು ಜುಗಾರಿ, ಕುಡುಕತನ ಇತ್ಯಾದಿಗಳಿಗೆ ದುಂದುವೆಚ್ಚವಾಗಿ, ಲಕ್ಷ್ಮೀ ದೇವಿಯನ್ನೇ ಅವಮಾನಿಸುತ್ತಾನೆ. ಇಂತಹ ಕಡೆಗಳಲ್ಲಿ ‘ಸಿರಿದೇವಿ’ನಿಂತಾಳೇ? ದಾರಿದ್ರ್ಯ ತುಂಬದೆ ಬಿಟ್ಟೀತೆ? ಹಾಗಾದರೆ ದಾರಿದ್ರ್ಯಹರಣ ಮಾಡಬೇಕಾದರೆ ಏನು ಮಾಡಬೇಕು ಎಂಬುದನ್ನು ನೋಡೋಣ—

ಸಿರಿ ಬಂದ ಕಾಲಕ್ಕೆ ಕರೆದು ದಾನವ
ಮಾಡು
ಪರಿಣಾಮವಕ್ಕು ಪದವಕ್ಕು, ಕೈಲಾಸ
ನೆರೆಮನೆಯು ಅಕ್ಕು—ಸರ್ವಜ್ಞ।

ಎಂಬ ಸರ್ವಜ್ಞ ವಚನದಂತೆ ಐಶ್ವರ್ಯವಂತನಾದವನು ಬಡವ ಬಲ್ಲಿದವರಿಗೆ ಕೈಲಾದಷ್ಟು ದಾನ ಮಾಡ ಬೇಕು.

ಧನ ಕನಕ ಉಳ್ಳನಕ ದಿನಕರ
ನಂತಕ್ಕು
ಧನ ಕನಕ ಹೋದ ಮರುದಿನವೆ
ಆ ಅಣ್ಣ
ಶುನಕ ನಂತಕ್ಕು—ಸರ್ವಜ್ಞ।

ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು.

ಸಿರಿಯು ಸಂಸಾರವನು ಹಿರಿದೆಂದು
ನಂಬದಿರು
ಹಿರಿದಾಗಿ ಸಂತೆ ನೆರೆದೊಂದು ಜಾವಕ್ಕೆ
ಹರಿದು ಹೋದಂತೆ—ಸರ್ವಜ್ಞ।

ಇತ್ಯಾದಿ ವಚನಗಳು ಸತ್ಯ ಎಂಬುದನ್ನು ಜಗತ್ತಿಗೇ ತೋರಿಸಿಕೊಡಬೇಕು. ಇನ್ನು ಜಾನಪದ ಗೀತೆಯಲ್ಲಿ ಈ ಒಂದು ಪದ್ಯವನ್ನು ನೋಡಿ—

ಬಂಗಾರ ಬಳಿಯಿಟ್ಟು ಜೈ ಬ್ಯಾಡ
ಬಡವರಿಗೆ।
ಬಂಗಾರ ನಿನಗೆ ಸ್ಥಿರವಲ್ಲ।ಮಧ್ಯಾಹ್ನ।
ಬಿಸಿಲು ಹೊಳ್ಳುವುದು ತಡವಲ್ಲ॥

ಆದುದರಿಂದ ಐಶ್ವರ್ಯ ಬಂದಾಗ ಉಬ್ಬಬಾರದು. ಎಲ್ಲರಿಗೂ ಒಂದೇ ತರದ ಕಷ್ಟಗಳು—ಹಾಗೂ ಎಲ್ಲರೂ ನಮಗೆ ಬೇಕಾದವರೇ—ಎಂಬುದಾಗಿ ಎಣಿಸಬೇಕು—ಲಕ್ಷ್ಮೀ ದೇವಿಯು ಹೀಗೆ ಮಾಡಿದರೆ ಖಂಡಿತಾ ಒಲಿಯುವಳೆನ್ನಲು ಸಂದೇಹವಿಲ್ಲ.

ಅದನ್ನೇ ಲಕ್ಷ್ಮೀಶನು ತನ್ನ “ಜೈಮಿನೀ ಭಾರತ”ದಲ್ಲಿ ತಿಳಿಸಿದ್ದಾನೆ:— ವೇದವ್ಯಾಸರು ಧರ್ಮರಾಯನಿಗೆ ಹೇಳುವ “ಧರ್ಮಸಾರ” (ಜೈ. ಭಾ. ೫ನೇ ಸಂಧಿ) ದಲ್ಲಿ—

ಈ ಚತುರ್ದಶ ಜಗನೊಳಂತಿರಲಿ
ದಿನ್ನು ಸಲೆ।
ಸೂಚಿಪೆಂ ನಿನಗೆ ಬೆಳಗೊಂಬುದನೆ
ರಮೆನೆಲಸಿ
ಗೋಚರಿಸಲಾವನ ಮನೆಯೊಳೆಂದು
ಭೂವರಂ ಕೇಳ್ದೊಡಾ ಮುನಿ ನುಡಿ
ದನು॥
ರನ್ನದಿಂ ಧ್ಯಾನಮೆ ವಿಶೇಷಮೆಂದೊದ
ವಿಸುವ।
ನನ್ನ ಮೇ ಕರಿಸಿಂ ಕಡೆಯೆಂದು
ಮೆಚ್ಚಿಸುವ।
ನುನ್ನಿಸಲ್ ಬಾಲಕನು ಮತಿಥಿಯುಂ
ಬರಿಯೆಂದು ಸತ್ಕರಿಪನಾವನವನ॥
ತನ್ನ ತಾಯ್ತಂದೆ ಸೋದರ ಬಂಧು
ಬಳಗಮಂ।
ಮನ್ನಿಸುವನಾತನ ಸದಾಚಾರ ಸಂ।
ಪನ್ನನಾವನವನ ಮಂದಿರದೊಳೈ
ಶ್ವರ್ಯ ಲಕ್ಷ್ಮಿನೆಲೆಯಾಗಿರ್ಪಳು॥

ಮಧುರ ವಾಣಿಯ, ಕೃತಜ್ಞನ,
ದಾನಪರನ, ಪರ।
ವಧುವಿನೊಲ್ಮೆಯ ಬೇಟಿಗೊಳಗಾಗ
ದನ, ಮಾನ।
ನಿಧಿಯೆನಿಸುವವನ, ತೀರ್ಥ ಸಂಗತನ,
ಸಲೆಕೂಟ ಸಾಕ್ಷ್ಯಮಂ ನುಡಿಯದವನ॥
ವಿಧಿತ ಕರ್ಮದ ಮಾಳ್ಕೆಯಂ
ಮಾಡುವಾತನ, ವ।
ಸುಧೆಯೊಳಿಷ್ಟಾರ್ಥಮಂ ತವೆನೆಗಳ್ಚು
ವನ, ಬಹು ವಿಧದ ಧರ್ಮಂಗಳಂ ರಚಿ
ಸುವನ, ಮನೆಯೊಳಿಂದಿರೆ ಬಿಡದೆ
ನೆಲಸಿರ್ಪಳು॥

ಇನ್ನು ಲಕ್ಷ್ಮೀದೇವಿಯು ತೊಲಗಲು ಕಾರಣವೇನು-ಎಂಬುದನ್ನು ಲಕ್ಷ್ಮೀಶನೇ ಹೀಗೆ ತಿಳಿಸಿದ್ದಾನೆ:

ಹೊಸ್ತಿಲೊಳಗೊಸಕೆಗಳ ಮೇಲೆ
ಕುಳ್ಳಿರ್ಪವನ।
ಮಸ್ತಕವನೆರಡು ಕಯ್ಯಿಂ ತುರಿಸಿ
ಕೊಂಬವನ।
ವಿಸ್ತರದ ಜೂಜುಗಳ್ಗೆಳಸುವ ಪಿರಿ
ದುಂಬುವನಸಿಂದು ನೀಗುರ್ಡಿವನ॥
ಅಸ್ತಮಯದುದಯಕಾಲದೆ ನಿದ್ರೆ
ಗೈವನಾ।
ತ್ಮಸ್ತುತಿಯು ಪರ ನಿಂದೆಯವನ
ಸಾಧಿಸಿ ಪರರ।
ವಸ್ತುವಂ ಕಳುವನ ನಿರುದ್ಯೋಗ
ದವನ ಸಿರಿ ತೊಲಗದೆ ಮಾಣ್ಬಳೆ॥
ಜಡನ, ಮೂರ್ಖನ, ಶಠನ,
ತಾಮಸನ, ನಿಷ್ಠುರದ,।
ನುಡಿಯವನ, ಪಿಸುಣನ, ಕೃತಘ್ನನ
ಕುರುಬನ, ಬಾ।
ಯ್ಬಡಿಕನ, ಕುಚೇಷ್ಟಕನ, ಕಾಮು
ಕನ ಹಿಂಸಕನ ಡಾಂಬಿಕನ
ಪಾಮುಡಿಯ॥
ಕಡು ಕೋಪದವನ, ಬಹು ಭಕ್ಷಕನ,
ಖೂಳನನ।
ದೃಢನ, ಕುತ್ಸಿತನ, ಕುಹಕನ, ದುರಾ
ಚಾರದಿಂ।
ನಡೆವವನ, ವಿಶ್ವಾಸ ಘಾತಕನ,
ಲಕ್ಷ್ಮಿ ತೊಲಗದೆ ಮಾಣ್ಬಳೆ॥

ಆದುದರಿಂದ ಸದಾ ಲಕ್ಷ್ಮಿ ದೇವಿಯನ್ನು ಒಲಿಸುತ್ತಾ, ಜನತೆಯಿರಲಿ. ಲಕ್ಷ್ಮೀ ದೇವಿಯು ಒಲಿದು ಲೋಕದಲ್ಲಿನ ದಾರಿದ್ರ್ಯವನ್ನು ನಾಶಗೊಳಿಸಲಿ. ರಾಮರಾಜ್ಯವಾಗಿ, ಮೆರೆಯಿಸಲಿ. ಜಗತ್ತಿನ ದಾರಿದ್ರ್ಯ ಹರಣವಾಗಲಿ.

॥ಸಿರಿಗನ್ನಡಂ ಗೆಲ್ಗೆ॥

ಶಿಲ್ಪ ಸಂಸ್ಕೃತಿ

(೭ನೇ ಪುಟದಿಂದ)

ಕರ್ಮಗಳೂ ಶಿಲ್ಪವೆನಿಸಿವೆ. ಯಾವನು ಈ ಶಿಲ್ಪವನ್ನು ತಿಳಿಯುವನೋ ಆ ಶಿಲ್ಪವು ಅವನಿಗೆ ಆತ್ಮಸಂಸ್ಕಾರವನ್ನುಂಟುಮಾಡುತ್ತದೆ. ಈ ಶಿಲ್ಪವೆಂಬ ವಸ್ತು ನಿರ್ಮಾಣ ಜ್ಞಾನವೂ ಛಂದೋಮಯವಾದ ವೇದವೂ ಸಮಾನವಾಗಿವೆ; ಎರಡೂ ಒಂದೇಯಾಗಿವೆ. ಇವೆರಡನ್ನೂ ತಿಳಿಯುವುದರಿಂದ ಆತ್ಮನು ಸಂಸ್ಕಾರ ಹೊಂದಿ ಪೂರ್ಣನಾಗುವನು

ಯಾವ ಜಗತ್ಕರ್ತನು ವಿಶ್ವವ್ಯಾಪಿಯಾದ ಈ ಶಿಲ್ಪಕ್ಕೆ ವಿಭುವಾಗಿ ಎಲ್ಲದರಲ್ಲಿಯೂ ಪರಿಪೂರ್ಣನಾಗಿದ್ದರೂ ದುರ್ವಿಜ್ಞೇಯನಾಗಿ ಕಾಣಿಸಿಕೊಳ್ಳದೆ ಅವ್ಯಕ್ತ ರೂಪದಿಂದಿರುವನೋ ಆತನ ಸಾಕ್ಷಾತ್ಕಾರಕ್ಕೆ ಶಿಲ್ಪವೇ ಸಾಧನವಾಗಿರುತ್ತದೆ. ಒಂದೇ ಬಂಗಾರವೇ ನಾನಾ ಒಡವೆಗಳ ರೂಪವನ್ನು ತಾಳುವಂತೆ, ಸಚ್ಚಿದಾತ್ಮಕವಾದ ಒಂದೇ ಒಂದು ಮಹತ್ತ್ವವು ಕರ್ಮೋಪಾಧಿ ಭೇದದಿಂದ ಶಿವವಿಷ್ಣ್ವಾದ್ಯಾಕಾರಗಳಿಂದ ಪ್ರಸಿದ್ಧವಾಗಿಲ್ಲವೇ? ವಿಭಿನ್ನ ವ್ಯಕ್ತಿಗಳು ತಮ್ಮ ಆಶೆ ಆಕಾಂಕ್ಷೆಗಳಿಗನುಗುಣವಾಗಿ ವಿಭಿನ್ನ ಭೂಷಣಗಳಿಂದ ತಮ್ಮನ್ನಲಂಕರಿಸಿಕೊಂಡು ಸಂತೋಷಪಡುತ್ತಿರುವಂತೆ ವಿಭಿನ್ನ ಸಾಧಕರೂ ತಮಗೆ ಅಭಿಲಷಿತವಾದ ದೇವತಾ ಮೂರ್ತಿಯನ್ನಾರಾಧಿಸಿ ವ್ಯಷ್ಟಿ ತತ್ವದಿಂದ ಸಮಷ್ಟಿ ತತ್ವವನ್ನು ದರ್ಶಿಸಿ ಕೃತಕೃತ್ಯರಾಗುತ್ತಾರೆ. ಸಾಧಕನು ಮೊದ ಮೊದಲು ವಿಶ್ವಾತ್ಮನ ಸಾಕಾರ ರೂಪವನ್ನು ಸಂಪ್ರಜ್ಞಾತ ಸಮಾಧಿಯಲ್ಲಿ ಸಾಕ್ಷಾತ್ಕರಿಸಿಕೊಂಡು ಕ್ರಮೇಣ ಅಸಂಪ್ರಜ್ಞಾನ ಸಮಾಧಿಯಲ್ಲಿ ನಿರಾಕಾರ ಪುರುಷನನ್ನು ದರ್ಶಿಸುತ್ತಾನೆ. ಆದುದರಿಂದ ಈಶ್ವರ ಸಾಕ್ಷಾತ್ಕಾರಕ್ಕೆ ಶಿಲ್ಪವೇ ಬುನಾದಿ ಎನಿಸಲ್ಪಡುವುದು. ಸಾಧಕನು ತನ್ನ ಅಭ್ಯಾಸವು ಪರಿಪೂರ್ಣಗೊಂಡು ಗಾಢವಾದಾಗ ಬಾಹ್ಯದಲ್ಲಿರುವ ರೂಪವನ್ನು ಹೃದಯಪ್ರದೇಶದಲ್ಲೇ ಭಾವಿಸಿ ಧಾರಣಮಾಡಿಕೊಂಡು ಆ ದೇವನಲ್ಲಿಯೇ ವೃತ್ತಿರಹಿತವಾದ ತನ್ನ ಮನಸ್ಸನ್ನು ಬಿಗಿ ಹಿಡಿದು ಏಕಾಗ್ರಾವಸ್ಥೆಯನ್ನು ಹೊಂದುತ್ತಾನೆ. ಆಗ ಅವನ ಧ್ಯಾನ ಧಾರೆಗೆ ವಿಷಯವಾದುದು ಭಾವನಾ ಶಿಲ್ಪ ವಿರಾಜಿತವಾದ ಆ ದೇವತಾ ಮೂರ್ತಿ ಅಥವಾ ದೇವತೆಯೇ ಆಗಿರುವುದು. ಹೀಗಿರಲು ಶಿಲ್ಪವು ಪರಿಪೂರ್ಣತೆಗೂ ನೆರವಾಗುವುದು.

ಶಿಲ್ಪ ತತ್ವವೇತ್ತರಾದ ಸ್ಥಪತಿಗಳು ಈ ರಹಸ್ಯವನ್ನು ತಿಳಿಸೇ ಆಸೇತು ಹಿಮಾಚಲ ಪರ್ಯಂತ ದೇವಾಲಯಗಳನ್ನು, ದೇವತಾ ಮೂರ್ತಿಗಳನ್ನು ನಿರ್ಮಿಸಿರುತ್ತಾರೆ. ದೇವತಾ ಮೂರ್ತಿ, ದೇವಾಲಯಗಳ ನಿರ್ಮಾಣದಲ್ಲಿ ಮಗ್ನವಾದಷ್ಟು ಗಾಢವಾಗಿ ವೈಶ್ವಕರ್ಮಣಸ್ಥಪತಿಗಳ ಚಿತ್ತವು ಅನ್ಯ ವಿಷಯಗಳಲ್ಲಿ ಅಂಟಿಕೊಳ್ಳಲಿಲ್ಲ. ಅವಾಙ್ಮನಸ ಗೋಚರವಾದ ಈಶ್ವರ ಸೌಂದರ್ಯವನ್ನೇ ಈ ಸ್ಥಪತಿಗಳು ಚಿತ್ರಿಸಿಯೂ ಗಾನಮಾಡಿಯೂ ಕೃತಕೃತ್ಯರಾಗಿದ್ದಾರೆ. ಅತೀಂದ್ರಿಯ “ಸತ್”ನ್ನು ರೂಪದ್ವಾರದಿಂದ ಇಂದ್ರಿಯ ವಿಷಯವನ್ನಾಗಿ ಮಾಡಿ ಬಾಹ್ಯಾಭ್ಯಂತರ ಜಗತ್ತನ್ನು ರಸಭೋಗ ಸಮಂಚಿತವನ್ನಾಗಿ ಮಾಡಬೇಕೆಂಬುದೇ ಈ ಸನಾತನ ಸ್ಥಪತಿಗಳ ಲಕ್ಷ್ಯ. ಈ ಪರಮ ಲಕ್ಷ್ಯದಿಂದಲೇ ಸರ್ವ ಪುರುಷಾರ್ಥಗಳೂ ಸಾಧಿಸಲ್ಪಟ್ಟವೆ,

ಪವಿತ್ರವಾದ ಸೌಂದರ್ಯ ದೇವತೆಯನ್ನು ಶ್ರೇಷ್ಠ ಸಂಸ್ಕಾರಗಳಿಂದ ನಮ್ಮ ಹೃದಯಗಳಲ್ಲಿಯೂ, ದೇಹಗಳಲ್ಲಿಯೂ, ಎಲ್ಲಾ ವಸ್ತುಗಳಲ್ಲಿಯೂ ನರ್ತನಗೊಳಿಸಿ ಮಾನವ ಜೀವನವನ್ನು ಮಧುರವನ್ನಾಗಿಯೂ, ಮನೋಜ್ಞವನ್ನಾಗಿಯೂ ಮಾಡಿ ವಿಶಿಷ್ಟ ಸ್ಥಾನಕ್ಕೆ ತರಲು ಶಿಲ್ಪವು ಬದ್ಧಕಂಕಣವಾಗಿವೆ. ಜಗತ್ಕರ್ತನಾದ ದೇವನೂ ಮಹಾಶಿಲ್ಪಿಯಾದುದರಿಂದ ಆತನ ಸಾಕ್ಷಾತ್ಕಾರವನ್ನು ಕೋರುವ ಸಾಧಕರಿಂದ ಪಶ್ಚಾತ್ತ್ಯರೂ ವಿಶ್ವಕರ್ಮಾರಾಧಕರಾಗಿರುವರು.

THE UDIPI ELECTRIC STORES,
CHURCH ROAD, UDIPI.
Phone 129.
ELECTRICAL CONTRACTORS
ALL ELECTRICAL INSTALLATIONS
ARE UNDERTAKEN.

ನೊಂದ ಜೀವಿಗಳು

ಕುಸುಮ—ಗಿರೀಶರ ಅನುರಾಗಲತೆ ಫಲ ನೀಡಲು ಸಿದ್ಧವಾದಾಗ ತಾಯಿ ಗಂಗವ್ವನ ಬಣ ಪ್ರತಿಷ್ಠೆ ಅಡ್ಡ ಬಂತು. ಒಲ್ಲದ ಮಡದಿಯ ಕೈ ಹಿಡಿದ ಗಿರೀಶ ಜೀವನದಲ್ಲಿ ಈಸಲಾರದೆ ಮುಳುಗಿ ತಣ್ಣಗಾದ; ಆನಂತರ ಕುಸುಮ........?

ಶ್ರೀ ರೋಹಿದಾಸ ಮರದ, ಪಶ್ಚಾಪೂರ,

ನಾಗೇಶರಾಯರು ತೀರ ಸಿರಿವಂತರೂ ಅಲ್ಲದ ತೀರ ಬಡತನದವರೂ ಅಲ್ಲದ ಮಧ್ಯಮ ವರ್ಗಕ್ಕೆ ಸೇರಿದ ಕುಟುಂಬದವರು. ಅವರು ಕನ್ನಡ ಶಾಲೆಯ ಗುರುಗಳಾಗಿದ್ದರು. ಅವರಿಗೆ ಒಬ್ಬಳೆ ಒಬ್ಬ ಅಕ್ಕ ಇದ್ದಳು. ಅವಳ ಹೆಸರೇ ಗಂಗಾತಾಯಿ. ನಾಗೇಶರಾಯರು ಸಾಕಷ್ಟು ದೊಡ್ಡವರಾದ ಮೇಲೆ ಅವರ ತಾಯಿ-ತಂದೆಯ ನಿಧನವಾಯಿತು. ಆಗ ಅವರ ಅಕ್ಕನ ಲಗ್ನವೂ ಆಗಿತ್ತು. ಅದರ ಜೊತೆಗೆ ನಾಗೇಶರಾಯರದೂ ಆಗಿತ್ತು. ಅವರು ತಮ್ಮ ಚಿಕ್ಕ ಕುಟುಂಬವನ್ನು ವೇತನದಿಂದ ಸಾಗಿಸಿ ೮೦೦೦ ರೂ.ಗಳನ್ನು ಮಗಳ ಮದುವೆಗೆಂದೂ ಮತ್ತು ಮುಂದಿನ ಜೀವನಕ್ಕಾಗಿಯೆಂದೂ ತಮ್ಮ ಸ್ಥಾನದಲ್ಲಿರುವಾಗಲೇ ಗಳಿಸಿದ್ದರು. ನಾಗೇಶರಾಯರಿಗೆ ಒಬ್ಬಳೇ ಒಬ್ಬ ಮಗಳು, ಅವಳ ಹೆಸರು ಕುಸುಮ. ಅದರಂತೆ ಗಂಗಾತಾಯಿಯವರಿಗೂ ಒಬ್ಬನೆ ಒಬ್ಬ ಮಗ. ಅವನ ಹೆಸರು ಗಿರೀಶ.

ಕುಸುಮ ಗಿರೀಶರು ಚಿಕ್ಕಂದಿನಿಂದಲೂ ಕೂಡಿ ಆಡಿದವರು. ಒಂದೇ ತಾಟನಲ್ಲಿ ಊಟ ಮಾಡಿದವರು. ಗಿರೀಶ ಕುಸುಮನಿಗಿಂತ ದೊಡ್ಡವನು. ಆದ್ದರಿಂದ ಕುಸುಮಳನ್ನು ಆಡಿಸುತ್ತಿದ್ದನು. ಇಬ್ಬರೂ ಆಡಿ ದಣಿಯುತ್ತಿದ್ದರು. ಮನೆ ಎದುರಿನ ದೇವಾಲಯದಲ್ಲಿ ಕಣ್ಣುಮುಚ್ಚಾಲೆ ಆಡುತ್ತಿದ್ದರು. ಇಬ್ಬರೂ ಶಾಲೆಗೆ ಹೋಗ ತೊಡಗಿದರು ಕುಸುಮಳು ತನ್ನ ಮಿಡ್ಲಸ್ಕೂಲನ್ನು ತೀರಿಸಿಕೊಂಡು ಶಾಲೆಬಿಟ್ಟಳು. ಆದರೆ ಹಾಯ್‌ಸ್ಕೂಲಿಗೆ ಹೋಗಬೇಕೆಂಬ ಮನದಾಸೆ ಅವಳನ್ನು ಆಗಾಗ ನೋಯಿಸುತ್ತಿತ್ತು. ಏಕೆಂದರೆ ಅದು ಅವಳ ತಾಯಿಗೆ ಬೇಡಾಗಿತ್ತು. ಅಂತೂ ಹೇಗೋ ತಾಯಿಯನ್ನು ಒಪ್ಪಿಸಿ ಹಾಯ್‌ಸ್ಕೂಲನ್ನು ಸೇರಿದಳು. ಎಸ್. ಎಸ್. ಸಿಗೆ ಬಂದಾಗ ಮನೆ ಕೆಲಸಕ್ಕೆ ಶರಣು ಹೊಡೆದು ಅಭ್ಯಾಸದ ಬೆನ್ನು ಹತ್ತಿದಳು ಅದು ಅವಳ ತಾಯಿಗೆ ಸರಿ ಬಾರದೆ ಕುಸುಮಳ ಮೇಲೆ ರೇಗ ತೊಡಗಿದಳು. ಮನೆಗೆಲಸ ಮುಗಿದ ಮೇಲೆ 'ಅಭ್ಯಾಸವೆಂದು ಕಟ್ಟಪ್ಪಣೆ ಹಾಕಿದಳು. ಕುಸುಮಳು ತಾಯಿಯ ಅಪ್ಪಣೆಯನ್ನು ಪಾಲಿಸಲೇ ಬೇಕಾಯಿತು. ಮನೆಗೆಲಸವನ್ನು ಮುಗಿಸಿ ತನ್ನ ಶಿಕ್ಷಣವನ್ನು ಪೂರ್ತಿಗೊಳಿಸಿದಳು.

ಗಿರೀಶ ಕುಸುಮರಲ್ಲಿ ನಿಕಟವಾದ ಪ್ರೇಮವು ಬೆಳೆದು ಬಂದಿತ್ತು. ಕುಸುಮಳನ್ನು ಕೈ ಹಿಡಿಯಲು ಹಾತೊರೆಯುತ್ತಿದನು. ಕುಸುಮಳು ಕೂಡ ಗಿರೀಶನ ಅರ್ಧಾಂಗಿನಿಯಾಗಲು ಒಪ್ಪಿದಳು. ಆದರೆ ಗಂಗಾತಾಯಿಯವರಿಗೆ ಅವಳನ್ನು ಸೊಸೆಯನ್ನಾಗಿ ಸ್ವೀಕರಿಸಲು ಇಷ್ಟವಿರಲಿಲ್ಲ. ತಮ್ಮನ ೮೦೦೦ರೂಗಳ ಮೇಲೆ ಮಾತ್ರ ಆಶೆ ಇತ್ತು. ಹೇಗಾದರೂ ಮಾಡಿ ಆ ಹಣವನ್ನು ಕಿತ್ತುಕೊಳ್ಳಬೇಕೆಂಬ ದುರಾಶೆಯುಂಟಾಗುತ್ತಿತ್ತು. ಯಾವುದಾದರೂ ರೂಪದಿಂದ ಅದನ್ನು ತಮ್ಮೆಡೆಗೆ ಜಗ್ಗಬೇಕೆಂಬ ಆಶೆಯಿತ್ತು. ಒಂದು ದಿನ ಗಂಗಾತಾಯಿಯವರು ನಾಗೇಶರಾಯರ ಮನೆಗೆ ಹೋಗಿ ಸಾಲದ ರೂಪದಲ್ಲಿ ೨೦೦೦ರೂ.ಗಳನ್ನು ಕೊಡು ನಾನು ನಿನಗೆ ಬಡ್ಡಿ ಸಹಿತ ಕೊಡುತ್ತೇನೆ ಎಂದು ಕೇಳಿದರು.

ಆಗ ನಾಗೇಶರಾಯರು ವಿಚಾರ ಮಾಡಿದರು ಮಗಳಂತೂ ದೊಡ್ಡವಳಾಗಿದ್ದಾಳೆ. ಅವಳು ಗಿರೀಶನನ್ನು ಮದುವೆಯಾಗಲು ಒಪ್ಪುತ್ತಾಳೆ. ಗಿರೀಶನೂ ಕೂಡ ಒಪ್ಪುತ್ತಾನೆ. ಅವರಿಬ್ಬರ ನಡುವೆ ಪ್ರೇಮವೂ ಇರುತ್ತದೆ. ಅಂದ ಮೇಲೆ ಅವರಿಬ್ಬರಿಗೂ ಮದುವೆ ಮಾಡಿ ೨೦೦೦ ರೂ.ಗಳನ್ನು ವರದಕ್ಷಿಣೆ ರೂಪದಿಂದ ಅಕ್ಕನಿಗೆ ಕೊಟ್ಟರಾಯಿತು ಎಂದು ಯೋಚಿಸಿ ಹಾಗೆಯೆ ಅಕ್ಕನಿಗೆ ಹೇಳಿದರು. ಇದನ್ನು ಕೇಳಿ ಗಂಗಾತಾಯಿಯವರ ಮನಸ್ಸು ಕಲ್ಲಾಯಿತು. ಹಣಕ್ಕೆ ಹೆಣ್ಣಿಗೆ ಗಂಟು ಹಾಕಬಾರದು. ನಾನು ನಿನ್ನ ದುಡ್ಡನ್ನು ಮರಳಿ ಕೊಡುತ್ತೇನೆ ಎಂದು ನುಡಿದರು. ನಾಗೇಶರಾಯರು ಅದನ್ನು ಒಪ್ಪಲಿಲ್ಲ, ಕೊಟ್ಟದುಡ್ಡು ಮರಳಿ ಬರಲಾರದೆಂದು ಅವರಿಗೆ ಗೊತ್ತಿತ್ತು. ಗಂಗಾತಾಯಿಯವರು ಸಿಟ್ಟಿನಿಂದ ಹೊರಟು ಹೋಗಿಯೇ ಬಿಟ್ಟರು.

ಗಿರೀಶ ಮತ್ತು ಕುಸುಮರಲ್ಲಿಯ ನಿಕಟವಾದ ಪ್ರೇಮವನ್ನು ಗಂಗಾತಾಯಿಯವರು ಅರಿತಿದ್ದರೂ ಸಹ ಕುಸುಮಳನ್ನು ಸೊಸೆಯಾಗಿ ಮನೆಗೆ ತರಲು ಒಪ್ಪಲಿಲ್ಲ. ಆದ್ದರಿಂದ ಮಗನಿಗೆ ಬೇರೆ ಲಗ್ನ ನಿಶ್ಚಯಿಸಿ ಒಂದು ಹೆಣ್ಣು ಗೊತ್ತು ಮಾಡಿದರು. ಯಾವುದೊ ಪ್ರಸಂಗದಿಂದ ಅದು ತಪ್ಪಿ ಹೋಯಿತು. ಆದ್ದರಿಂದ ಗಂಗಾತಾಯಿಯವರು ತಮ್ಮ ಹಟವನ್ನೆ ಸಾಧಿಸಬೇಕೆಂದು ಗಿರಿಜೆಯೆಂಬ ಕನ್ಯೆಯನ್ನು ತಂದು ಗಿರೀಶನಿಗೆ ಲಗ್ನ ಮಾಡಿದರು. ಕೊನೆಗೂ ಗಂಗಾತಾಯಿಯವರು ತಮ್ಮ ಹಟವನ್ನೇ ಸಾಧಿಸಿದರು.

ಲಗ್ನವಾಗುವ ಪೂರ್ವದಲ್ಲಿ ಕುಸುಮಳು ಗಿರೀಶನಿಗೆ ಸಾಕಷ್ಟು ತಿಳಿ ಹೇಳಿದಳು ತಂದೆ ತಾಯಿಗಳನ್ನು ಬಿಟ್ಟು ಎಲ್ಲಿಗಾದರೂ ಹೋಗೋಣ, ದುಡ್ಡಿನ ಕೊರತೆಯಿಲ್ಲ. ಎಷ್ಟೇ ಧೈರ್ಯ ಕೊಟ್ಟರೂ ಗಿರೀಶ ಒಪ್ಪಲಿಲ್ಲ. ತಾಯಿಯ ವಚನ ಪಾಲಿಸುವದೆ ಮಗನ ಕರ್ತವ್ಯವೆಂದು ತಿಳಿದು ಕುಸುಮಳ ಬಾಳಿಗೆ ಮಣ್ಣೆರಚಿದ. ಆಗ ಕುಸುಮಳ ಹೃದಯವು ಕಂಪನಗೊಂಡಿತು ಯಾವ ಹಣ್ಣಿಗಾಗಿ ಆಶಿಸಿದ್ದಳೊ ಆ ಹಣ್ಣು ಅವಳ ಪಾಲಿಗೆ ಇದ್ದಿರಲಿಲ್ಲ. ಆ ಹಣ್ಣು ಹಣ್ಣಾಗದೆ ಹೆಣ್ಣಾಗಿದ್ದರೆ. ಬೇರೆಯವರ ಬಾಳು ಸಾರ್ಥಕವಾಗುತ್ತಿತ್ತು. ಕುಸುಮ ಗಂಡಾಗಿದ್ದರೆ ನಿಶ್ಚವನ್ನೆ ಭಸ್ಮ ಮಾಡುವ ಧೈರ್ಯ ಅವಳಲ್ಲಿ ಇತ್ತು. ಕುಸುಮ ಬಳೆತೊಡದೆ ಗಿರೀಶ ಬಳೆತೊಟ್ಟಿದ್ದರೆ ಚೆನ್ನಾಗಿತ್ತು.

ಇತ್ತ ನಾಗೇಶರಾಯರು ಮಗಳ ಜೀವಕ್ಕಾಗಿ ಭ್ರಮೆ ಹಿಡಿದವರಾದರು. ಅವರಿಗೆ ಜೀವನದಲ್ಲಿ ಉತ್ಸಾಹವಿರಲಿಲ್ಲ. ಕುಸುಮಳ ಜೀವನವು ತುಂಬಾ ವಿಚಿತ್ರವಾಯಿತು. ಅವಳು ಎದೆಗುಂದದೆ ತನ್ನ ಮನಸ್ಸನ್ನು ಪಣಕ್ಕೆ ಹಚ್ಚತೊಡಗಿದಳು ಆದರೆ ಎಷ್ಟಾದರೂ ಹೆಣ್ಣಿನ ಹೃದಯ ಕೊನೆಗೊಮ್ಮೆ ಅಧೈರ್ಯಕ್ಕೆ ಆಸ್ಪದ ಕೊಟ್ಟು ಆತ್ಮಹತ್ಯೆಗೆ ಸಿದ್ಧಳಾದಳು. ಆದರೆ ವಿಧಿ ಲಿಖಿತವೇ ಬೇರೆಯಿತ್ತು.

ಅತ್ತ ಗಿರೀಶನ ಬಾಳಿನಲ್ಲಿ ಸುಖವಿರಲಿಲ್ಲ. ತನ್ನ ಬಾಳು ದುಃಖಮಯವಾದಾಗ ಆವನಲ್ಲಿ ಜ್ಞಾನೋದಯವಾಯಿತು. ತನ್ನ ತಪ್ಪು ತಿಳಿಯಿತು. ಬಂಗಾರವಾಗಿದ್ದ ಕುಸುಮಳ ಬಾಳಿಗೆ ಮಣ್ಣೆರಚಿದೆ ಎಂಬ ವಿಚಾರವು ಅವನ ಹೃದಯವನ್ನೊಡೆದು ನೀರು ಮಾಡಿತು ಆತ ತಂದೆ ತಾಯಿಗಳ ವಿರುದ್ಧ ನಡೆಯತೊಡಗಿದ. ಕೈ ಹಿಡಿದ ಗಿರಿಜೆಯನ್ನು ಅವಳ ತಂದೆ ತಾಯಿಗಳ ಕಡೆಗೆ ಕಳಿಸಿ ತಾನು ಒಬ್ಬಂಟಿಗನಾಗಿ ಇರತೊಡಗಿದ.

ಇತ್ತ ಕುಸುಮಳ ಜೀವನವೂ ಚಿಂತಾಮಯ ಜೀವನವಾಗಿ ಪರಿಣಮಿಸಿತ. ಅವಳಲ್ಲಿ ನಿರುತ್ಸಾಹವು ಉತ್ಪನ್ನವಾಯಿತು. ಅವಳು ವಿಚಾರ, ಸಾಗರದಲ್ಲಿ ಮುಳುಗಿ ಎದ್ದು ದಡೆಗೆ ಬಂದಾಗ ಜೀವನದಲ್ಲಿ ಚೈತನ್ಯವಿಲ್ಲದ ಜೀವಕ್ಕೆ ತಂಪು ತಗಲಿ ಆ ಹೃದಯವು ಕಂಪನಗೊಳ್ಳುತ್ತಿತ್ತು. ಒಬ್ಬೊಂಟಿಗಳೇ ಕುಳಿತಾಗ ಜೀವನವನ್ನೇ ನೆಲುಕು ಹಾಕುತ್ತಿದ್ದಳು. ರಾತ್ರಿ ನಿದ್ದೆ ಹತ್ತುವದೆ ಕಠಿಣವಾಗುತ್ತಿತ್ತು. ವಿಚಾರವಾಹಿನಿಯಲ್ಲಿ ಮುಳುಗಿ ಬಿಡುತ್ತಿದ್ದಳು.

ಕುಸುಮಳೇನೂ ಕುರೂಪಿಯಲ್ಲ. ಕೋಮಲವಾದ ಕಣ್ಣುಗಳು, ತುಂಬಿದ ಮೈಕಟ್ಟಿನ ದೇಹ, ಗುಲಾಬಿಯಂತಹ ಬಣ್ಣ ಇವೆಲ್ಲವೂ ನೋಡಿದವರ ಕಣ್ಣುಗಳನ್ನು ಆಕರ್ಷಿಸುತ್ತಿದ್ದವು. ಆದರೆ ಇತ್ತೀತ್ತ ಚಿಂತೆಯಿಂದ ಅವಳ ಕಣ್ಣುಗಳು ಒಳಸೇರಿದ್ದವು. ಮೈಕಟ್ಟಿನ ದೇಹ ಇಳಿದು ಹೋಗಿತ್ತು. ಚಿಂತೆಯು ಅವಳನ್ನು ಹಣ್ಣು ಹಣ್ಣು ಮಾಡಿತ್ತು. ಅವಳು ವಿದ್ಯಾರ್ಥಿಗಳ ಮಧ್ಯದಲ್ಲಿರುವಾಗ ಮಾತ್ರ ತನ್ನ ಜೀವನವನ್ನು ಮರೆಯುತ್ತಿದ್ದಳು. ಮತ್ತೆ ಕೋಣೆಗೆ ಬಂದಾಗ ಅದೇ ವಿಚಾರ, ಅದೇ ಆಚಾರ, ಅದೇ ನಡೆ, ಅದೇ ನುಡಿ. ಕುಸುಮಳು ತನ್ನ ಜೀವನದಲ್ಲಿ ಆನಂದವಿಲ್ಲವೆಂಬುದನ್ನು ಅರಿತಿದ್ದಳು. ಬಾಳಿನಲ್ಲಿ ನಿರುತ್ಸಾಹ ಉಂಟಾಗಿತ್ತು. ಬಾಳಿನಲ್ಲಿ ಹುರುಳಿಲ್ಲ ಎಂದ ನಂಬಿಕೆಯಾಗಿತ್ತು. ಅವಳು ನಿರಾಶಾಮಯ ವಾತಾವರಣದಲ್ಲಿ ಕಾಲ ಕಳೆಯ ತೊಡಗಿದಳು.

ಗಿರೀಶನ ಬಾಳಿನಲ್ಲಿಯೂ ಶಾಂತಿ ಸಮಾಧಾನ ವಿಲ್ಲವಾಯಿತು. ಆತನು ಬಾಳಿಗೆ ಬೇಸತ್ತನು ಬಾಳಿಗೆ ಬೇಸತ್ತು ತಂದೆ ತಾಯಿಗಳಿಗೆ ಬುದ್ಧಿ ಕಲಿಸ ಬೇಕೆಂಬ ಇಚ್ಛೆಯಿಂದ ಬೆಂಗಳೂರಿನಲ್ಲಿರುವಾಗ ಕುಸುಮಳಿಗೂ ತಂದೆ ತಾಯಿಗಳಿಗೂ ಕೈ ಹಿಡಿದ ಧರ್ಮ ಪತ್ನಿಗೂ ಕಾಗದವನ್ನು ಬರೆದು ಮರಣವನ್ನಪ್ಪಿದನು. ಆ ಕಾಗದವು ಕುಸುಮಳ ಹೃದಯವನ್ನು ಒಡೆದು ನೀರು ಮಾಡಿತು. ಅವಿಚಾರಕ್ಕೆ ಆಸ್ಪದ ಕೊಟ್ಟ ಅವಳೂ ಕೂಡಾ ಗಂಗೆಯನ್ನಪ್ಪಿದಳು.

ಓದಲೇ ಬೇಕಾಗಿರುವ ನವೀನ ಪುಸ್ತಕಗಳು!

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು

೧. ಚಂದ್ರಲೋಕಕ್ಕೆ ಪ್ರಯಾಣ

ಲೇಖಕರು: ಯು. ರಾಘವೇಂದ್ರ ಆಚಾರ್ಯ, ಎಂ. ಎ.

ಆಧುನಿಕ ಪ್ರಪಂಚದ ಮಹತ್ತರವಾದ ಆಂದೋಲನಗಳು, ಪ್ರಪಂಚವನ್ನೆಲ್ಲಾ ಅಲುಗಾಡಿಸುತ್ತಿರುವ ಆರ್ಥಿಕ, ರಾಜಕೀಯ ಚಳುವಳಿಗಳು, ಅವುಗಳ ಹಿಂದಿರುವ ತತ್ವಗಳು, ಅವುಗಳಿಗೆ ಮಾನವನ ಪ್ರತಿಕ್ರಿಯೆ ಇವನ್ನೆಲ್ಲಾ ಗಮನಿಸಿ ರಚಿಸಿರುವ, ನಮ್ಮಲ್ಲಿ ವಿಚಾರಶಕ್ತಿ ಬೆಳೆಯಲು ನೆರವಾಗುವ ವೈಜ್ಞಾನಿಕ ಗ್ರಂಥ.

೨. ಸಾಮಾನ್ಯ ರೋಗಗಳು

ಲೇಖಕರು: ಡಾ| ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಅತ್ಯುಪಯುಕ್ತ ಪುಸ್ತಕ.

೩. ಭೌತಿಕ ದರ್ಶನ

ಲೇಖಕರು: ಬದೆಕ್ಕಿಲ ಕೃಷ್ಣ ಭಟ್ಟ, ಎಲ್‌ಎಲ್.ಬಿ

ಸಜ್ಜನರ, ವಿದ್ವಜ್ಜನರ, ವಿಜ್ಞಾನಿಗಳ ಅಭಿಮತವನ್ನು ಸಂಗ್ರಹಿಸಿ ಬರೆದ ಭೌತಿಕ ದರ್ಶನದ ಸ್ಥೂಲ ಪರಿಚಯ.

ಪ್ರತಿಯೊಂದು ಪುಸ್ತಕದ ಬೆಲೆ ಬರೇ ಒಂದೊಂದು ರೂಪಾಯಿ.

ರೂ. ೩-೫೦ನ್ನು ಮನಿಯಾರ್ಡರು ಮಾಡಿದರೆ ಮೂರೂ ಪುಸ್ತಕಗಳನ್ನು ಬುಕ್ ಪೋಸ್ಟ್‌ನಿಂದ ಕಳಿಸಬಹುದು.

ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಸವಲತ್ತುಗಳಿವೆ.

ವಿಚಾರಿಸಿರಿ:

ನವಭಾರತ ಪುಸ್ತಕ ಭಂಡಾರ, ಉಡುಪಿ.

ಕಿತ್ತೂರಿನ ಬಂಡಾಯದ ಕಥೆ

(೫ನೇ ಪುಟದಿಂದ)

ಧಿಕಾರಿಗಳಿಂದ ಹೀಗೆ ಬರೆದು ಬಂದಿತು:— "ಸರಕಾರದವರು ಈ ದತ್ತಕವನ್ನು ಮಾನ್ಯಮಾಡುವುದಿಲ್ಲವೆಂದು ದೇಸಾಯಿ ಮನೆತನದವರಿಗೆ ತಿಳಿಸಬೇಕು. ಮತ್ತು ಈ ದತ್ತಕ ವಿಷಯದಲ್ಲಿ ಚೌಕಶಿ ಮಾಡಬೇಕು. ಹಾಗೂ ಆ ಕಿತ್ತೂರಿನ ರಾಜ್ಯದಾಡಳಿತೆಯನ್ನು ನೀನೇ ಕೈಯಲ್ಲಿ ತೆಗೆದುಕೊಳ್ಳಬೇಕು. ಒಂದು ವೇಳೆ ದತ್ತಕ ಬಂದಂಥ ಹುಡುಗನು, ಈ ದೇಸಾಯಿ ಮನೆತನದವನು ಆದದ್ದೇ ನಿಜವಾದರೆ ಮತ್ತು ಈ ಕಿತ್ತೂರ ಸಂಸ್ಥಾನವು ಟೀಪೂ ಸುಲ್ತಾನನ ಕಾಲಕ್ಕಿಂತ ಪ್ರಾಚೀನದ್ದಾಗಿದ್ದರೆ, ಆ ದತ್ತಕದ ಹುಡುಗನು ಅಧಿಕಾರದ ಸೂತ್ರಗಳನ್ನು ವಹಿಸಬಹುದು. ಆದರೆ ತದ್ವಿರುದ್ಧವಾಗಿ ಆ ದತ್ತಕ ಮಗನು, ಈ ದೇಸಾಯಿಯ ಮೂಲವಂಶಸ್ಥನಲ್ಲೆಂದೂ ಅಥವಾ ಸತ್ತ ದೇಸಾಯಿಯ ದುಹಿತೃ ಸಂತತಿಗೂ ಸಮೀಪ ಆಪ್ತನಲ್ಲೆಂದೂ ಕಂಡು ಬಂದರೆ ದತ್ತಕ ನಡೆಯಗೊಡಬಾರದು."

ಮಿ. ಥ್ಯಾಕರೆ ಸಾಹೇಬರು ಈ ದತ್ತಕ ಕಾರ್ಯಕಲಾಪದ ವಿಷಯವಾಗಿ ಶೋಧ ಮಾಡಿ ನೋಡಲು ಅವರಿಗೆ ಕಂಡು ಬಂದದ್ದೇನೆಂದರೆ, ಈ ಶಿವಲಿಂಗ ರುದ್ರ ದೇಸಾಯಿಯು ಸಪ್ಟಂಬರ ೧೨ನೆಯ ತಾರೀಕಿನ ದಿನವಲ್ಲ; ೧೧ನೆಯ ತಾರೀಕಿನ ರಾತ್ರಿ ತೀರಿಕೊಂಡನು. ಹಾಗೂ ಅವನು ದತ್ತಕ ತೆಗೆದುಕೊಂಡಿರಲಿಲ್ಲ. ಆದರೆ ದೇಸಾಯಿಯು ತೀರಿಕೊಂಡ ನಂತರ ಈ ದೇಸಾಯಿ ಮನೆತನದ ವ್ಯವಸ್ಥಾಪಕನಾದ ಕೊಣ್ಣೂರ ಮಲ್ಲಪ್ಪನು ಮತ್ತು ಅವನ ಇತರ ಅನುಯಾಯಿಗಳು ಒಬ್ಬ ಹುಡುಗನನ್ನು ದತ್ತಕ ಮಗನೆಂದು ಕಲ್ಪಿಸಿ, ಆ ಬಾಲಕನಿಗೆ ದೇಸಾಯಿಯ ಅಧಿಕಾರ, ಮರ್ಯಾದೆಗಳನ್ನು ಕೊಟ್ಟರು. ಇದಕ್ಕೆ ಈ ಸಂಸ್ಥಾನಕ್ಕೆ ಸಂಬಂಧಿಸಿದ ಎಲ್ಲ ಪಕ್ಷದವರೂ ಒಪ್ಪಿದರು. ಇಷ್ಟೇ ಅಲ್ಲ ಜುಲೈ ೧೧ನೇಯ ತಾರೀಕಿನ ದಿವಸ ಥ್ಯಾಕರೆ ಸಾಹೇಬರಿಗೆ ಬರೆದ ಪತ್ರಕ್ಕೆ ಸತ್ತ ದೇಸಾಯಿಯಲ್ಲಿ ಲೇಖಣಿ ಕೊಟ್ಟು ಸಹಿ ಮಾಡಿಸಿದರು. ಎಂಬುದನ್ನೂ ಸಹ ಒಪ್ಪಿದರು.

ಕೊಣ್ಣೂರ ಮಲ್ಲಪ್ಪನನ್ನು ಈ ದೇಸಾಯಿ ಮನೆತನಕ್ಕೆ ವ್ಯವಸ್ಥಾಪಕನನ್ನಾಗಿ ಸರಕಾರದವರೇ ನಿಯಮಿಸಿದ್ದರೂ ಈ ಕೃಷ್ಣಕಾರಸ್ಥಾನದಲ್ಲಿ ಭಾಗವಹಿಸಿದ್ದರಿಂದಲೂ ಹಾಗೂ ಖಜಾನಿಯಲ್ಲಿದ್ದ ದ್ರವ್ಯ ಆಭರಣ ಮುಂತಾದವುಗಳನ್ನು ಒಯ್ಯುವುದರಲ್ಲಿ ಸಂಬಂಧಿಸಿದ್ದರಿಂದಲೂ ಸರಕಾರದವರು ಅವನನ್ನು ಕೆಲಸದಿಂದ ತೆಗೆದರು. ಈ ಎಲ್ಲ ಸಂಗತಿಗಳನ್ನು ಮಿ. ಥ್ಯಾಕರೆ ಸಾಹೇಬರು ವರಿಷ್ಠ ಸರಕಾರಕ್ಕೆ ತಿಳಿಸುವ ಕಾಲಕ್ಕೆ ಬರೆದದ್ದೇನೆಂದರೆ— ಕಿತ್ತೂರಿನಲ್ಲಿ ಸಂಪೂರ್ಣ ಶಾಂತತೆಯಿದೆ. ಯಾವ ದೃಷ್ಟಿಯಿಂದಲೂ ಅವ್ಯವಸ್ಥೆ ಯಾದೀತೆಂದು ಅನಿಸುವುದಿಲ್ಲ. ಮತ್ತು ಲಷ್ಕರೀ ಸಹಾಯದ ಹೊರತಾಗಿ ದೇಶದ ಶಾಂತತೆಯನ್ನು ಕಾಯ್ದುಕೊಳ್ಳಲು ಸಾಧ್ಯವಿದೆಯೆಂದು ಅನಿಸುತ್ತದೆ."

ಆ ಬಳಿಕ ದೇಸಾಯಿ ಮನೆತನದ ವಂಶ ವೃತ್ತಾಂತವನ್ನು ತಿಳಿದು-ಬರೆದದ್ದೇನೆಂದರೆ-"ಈ ದತ್ತಕ ಮಗನು ಈ ಪುರಾತನ ದೇಸಾಯಿಯ ವಂಶಸ್ಥನಲ್ಲ ಮತ್ತು ಈ ದೇಸಾಯಿ ಮನೆತನದ ದುಹಿತೃ ಸಂತತಿಗೂ ಸಮೀಪ ಸಂಬಂಧಿಕನಲ್ಲ."

ಈ ವಿಷಯದ ವಿಚಾರ ನಡೆದ ಕಾಲಕ್ಕೆ ಕಿತ್ತೂರಿನಲ್ಲಿ ಬಂಡಾಯವೆದ್ದು, ಪೊಲಿಟಿಕಲ್ ಏಜಂಟನು ಮತ್ತು ಬೇರೆ ಅಧಿಕಾರಿಗಳು ಸತ್ತರೆಂಬ ಸುದ್ದಿಯು ತಿಳಿದು ಬಂದು ಸರಕಾರಕ್ಕೆ ದಿಗಿಲುಬಿದ್ದಿತು.

ಅಕ್ಟೋಬರ ೨೧ನೆಯ ತಾರೀಖಿನ ದಿವಸ ಥ್ಯಾಕರೆ ಸಾಹೇಬರು, ಈ ಸಂಸ್ಥಾನದ ಖಜಾನೆಯ ಭದ್ರತೆಯ ಬಗ್ಗೆ ಕಾವಲಗಾರರ ಮುಖ್ಯಸ್ಥನು ಕಳ್ಳನಿದ್ದಾನೆಂದು ಕಂಡು ಸರಕಾರಿ ಶಿಪಾಯಿಯರನ್ನು ಖಜಾನೆಯ ನಾಲ್ಕುದಿಕ್ಕಿಗೂ ಪ್ರತಿಯೊಂದು ಬಾಗಿಲಕ್ಕೂ ಕಾವಲಗಾರರನ್ನಾಗಿ ನಿಯಮಿಸಬೇಕೆಂದು ಗೊತ್ತು ಪಡಿಸಿದರು.

ಇದಲ್ಲದೆ "ಖಜಾನೆಯ ಭದ್ರತೆಯ ಬಗ್ಗೆ ನಾವು ಹೊಣೆಗಾರರಿರುತ್ತೇವೆ"ಂದು ಕಿತ್ತೂರಿನ ಮುಖ್ಯಸ್ಥರು ಕರಾರ ಪತ್ರವನ್ನು ಬರೆದು ಕೊಡಬೇಕೆಂದು ಥ್ಯಾಕರೆ ಸಾಹೇಬನು ಅವರನ್ನು ಕೇಳಿದನು. ಅದಕ್ಕೆ ಆ ಮುಖ್ಯಸ್ಥರು, ಸತ್ತ ದೇಸಾಯಿಯ ಮಲತಾಯಿಯಾದಂಥ ಮತ್ತು ಸಂಸ್ಥಾನದ ಯಾವತ್ತೂ ಅಧಿಕಾರವನ್ನೆಲ್ಲ ತನ್ನ ವಶಕ್ಕೆ ಕೊಡಬೇಕೆಂದು ಬೇಡಿದಂಥ ಚೆನ್ನವ್ವನ ಅಪ್ಪಣೆಯ ಹೊರತು ಕರಾರ ಬರೆದು ಕೊಡುವುದಿಲ್ಲೆಂದು ಹೇಳಿದರು. ಇದಕ್ಕೊಕ್ಕರ ಥ್ಯಾಕರೆ ಸಾಹೇಬನು ಈ ಪ್ರಕರಣದ ಸ್ಪಷ್ಟೀಕರಣಾರ್ಥವಾಗಿ ಈ ದೇಸಾಯಿ ಮನೆತನದ ಹೆಣ್ಣು ಮಕ್ಕಳನ್ನು ಭೆಟ್ಟಿಯಾಗುವ ಇಚ್ಛೆಯನ್ನು ವ್ಯಕ್ತ ಪಡಿಸಿದನು. ಇದರೆ ಅವರು "ಈ ದಿವಸ ಭೆಟ್ಟಿಯಾಗುವುದಿಲ್ಲ. ಮರು ದಿವಸ ಭೆಟ್ಟಿಯಾಗುವೆವು" ಎಂದು ಹೇಳಿದರು. ಇಷ್ಟೇ ಅಲ್ಲ, ಮರು ದಿವಸವೂ ಸಹ ಎಂದರೆ ಅಕ್ಟೋಬರ ೨೨ ನೆಯ ತಾರೀಖಿನ ದಿವಸವೂ ಕೂಡಾ ಅವರು ಭೆಟ್ಟಿಯಾಗುವುದಕ್ಕೆ ಒಪ್ಪಲಿಲ್ಲ. ಮತ್ತು ಕಿತ್ತೂರಿನ ಮುಖ್ಯಸ್ಥರು ಯಾರೂ ಅರಮನೆಗೆ ಥ್ಯಾಕರೆ ಸಾಹೇಬನ ಸಂಗಡ ಬರಲಿಲ್ಲ.

ಸುತ್ತು ಮುತ್ತಲಿನ ಹಳ್ಳಿಗಳಿಂದ ದಂಗೆ ಖೋರರ ಕುಮುಕು (ಗುಂಪು) ಬರುತ್ತದೆಂದು ಸುದ್ದಿಗಾರರಿಂದ ಕೇಳಿ ಥ್ಯಾಕರೆ ಸಾಹೇಬನು ತನ್ನ ಸಂಗಡ ಬಂದಂಥ ಸೇನಾ ಪತಿಯಾದ ಕ್ಯಾಪ್ಟನ್ ಬ್ಲ್ಯಾಕ್ಸನಿಗೆ ಹೇಳಿದ್ದೇನೆಂದರೆ, "ಎರಡು ತೋಫುಗಳನ್ನು ತಂದು ಅಗಸೆ ಬಾಗಿಲದ ಹತ್ತಿರ ಇರಿಸು."

ಅಕ್ಟೋಬರ ೨೩ ನೆಯ ತಾರೀಖಿನ ದಿವಸ ತೋಫಖಾನೆಯ ಅಧಿಕಾರಿಯು ಕಾವಲ ಗಾರರನ್ನು ಬದಲು ಮಾಡಲು ಕೋಟೆಗೆ ಹೋದಾಗ್ಗೆ ಕಂಡು ಬಂದದ್ದೇನೆಂದರೆ, ಕೋಟೆಯ ಹೊರಗಿನ ಬಾಗಿಲಿಗೆ ಕೀಲಿ ಹಾಕಿದ್ದು, ಕೋಟೆಯ ಒಳ ಮಗ್ಗಲಿನಲ್ಲಿ ಸಶಸ್ತ್ರ ಜನರಿಂದ ಕಿಕ್ಕಿರಿಯಾಗಿ ತುಂಬಿ ಹೋಗಿತ್ತು. ಈ ಸಮಯದಲ್ಲಿ ಈ ಅಧಿಕಾರಿಯನ್ನು ಒಳಗೆ ಬರಗೊಡಲಿಲ್ಲ. ಈ ಎಲ್ಲ ಪರಿಸ್ಥಿತಿಯನ್ನು ತಿಳಿದು, ಥ್ಯಾಕರೆ ಸಾಹೇಬನು, ಕೋಟೆಯ ಬಾಗಿಲನ್ನು ತೆರೆಯುವುದಕ್ಕೆ ಅವರಿಗೆ ಎಷ್ಟೋ ಸಲ ಹೇಳಿಕಳಿಸಿದನು. ಆದರೂ ಆ ಮಾತಿಗೆ ಲಕ್ಷ್ಯಗೊಡಲಿಲ್ಲ ಆ ಬಳಿಕ ಬೇರೆ ಎರಡು ತೋಫುಗಳನ್ನು ತರಿಸಿ, ಥ್ಯಾಕರೆ ಸಾಹೇಬನು ಕೊನೆಗೆ ಸಾರಿದ್ದೇನೆಂದರೆ, ೨೦ ಮಿನ್ಯೂಟುಗಳಲ್ಲಿ ಕೋಟೆಯ ಬಾಗಿಲನ್ನು ತೆರೆಯದಿದ್ದರೆ ಅದನ್ನು ತೋಫಿನಿಂದ ಹೊಡೆದು ಹಾರಿಸಿ ಬಿಡುವೆನು."

ಈ ಮಾತಿಗೂ ಅವರು ಕಿವಿಗೊಡಲಿಲ್ಲ. ಕೂಡಲೇ ಇಂಗ್ಲಿಷರು ಅಗಸೆ ಬಾಗಿಲವನ್ನು ಕೆಡುವ ಪ್ರಯತ್ನವನ್ನು ಮಾಡಲಾರಂಭಿಸಿದರು. ಆಗ ಒಳಗಿನವರು ಕೋಟೆಯ ಬಾಗಿಲನ್ನು ತೆರೆದು, ರೋಷಾವೇಶದಿಂದ ಬ್ರಿಟಿಷರ ಮೇಲೆ ಏರಿಹೋಗಿ, ಆ ತೋಫುಗಳನ್ನು ಕೈವಶ ಮಾಡಿಕೊಂಡದ್ದಲ್ಲದೆ ಬ್ರಿಟಿಶ ಅಧಿಕಾರಿಗಳನ್ನು ಸಂಹರಿಸಿದರು ಅಷ್ಟರಲ್ಲಿ ಥ್ಯಾಕರ್ ಸಾಹೇಬರು ಬಂದು, ಶಾಂತತೆಯನ್ನು ಸ್ಥಾಪಿಸುತ್ತಿರುವಾಗ, ಚನ್ನವ್ವನ ಸೈನಿಕರು ಗುಂಡು ಹಾಕಿ ಅವರನ್ನೂ ಕೊಂದರು! ಇಷ್ಟೇ ಅಲ್ಲ ಅವರ ದೇಹವನ್ನು ಚೂರು ಚೂರು ಮಾಡಿದರು. ಹಾಗೂ ಮಿಕ್ಕ ಸೈನ್ಯದ ಮೇಲೆ ಸಾಗಿಹೋಗಿ, ಆ ದಂಡಾಳುಗಳನ್ನೆಲ್ಲ ತುಂಡರಿಸಿದರು.

ಪೊಲಿಟಿಕಲ್ ಏಜಂಟನ ಅಸಿಸ್ಟಂಟರಾದ ಸ್ಟೀವನ್ಸನ್ ಮತ್ತು ಇಲಿಯಟ್ ಇವರಿಬ್ಬರು ಒಂದು ಮನೆಯಲ್ಲಿ ಅಡಗಿಕೊಂಡಿದ್ದರು. ಇವರನ್ನೂ ಇವರ ಸೈನ್ಯದ ಕೆಲವರು ಅಧಿಕಾರಿಗಳನ್ನೂ ಸೈನಿಕರನ್ನೂ ಸೆರೆಹಿಡಿದರು. ಈ ಬಂಡಾಯದಲ್ಲಿ ಮುಖಂಡರಾದ ಗುರುಸಿದ್ದಪ್ಪ ಮತ್ತು ಸತ್ತ ದೇಸಾಯಿಯ ಮಲತಾಯಿಯಾದ ಚನ್ನವ್ವ ಇವರಿಬ್ಬರ ಪ್ರೋತ್ಸಾಹದಿಂದ ಈ ಕೊಲೆಯಾಯಿತು. ಈ ಕೊಲೆಯನ್ನೆಲ್ಲ ನೋಡಿ, ದೇಸಾಯಿ ಪಕ್ಷದವರೆಲ್ಲರೂ ಬೆದರಿದರು. ಆದ್ದರಿಂದ ಯುರೋಪಿಯನ್ ಕೈದಿಗಳನ್ನು ಉತ್ತಮ ರೀತಿಯಿಂದ ಸಂರಕ್ಷಿಸಿದರು.

ಜೀವನದ ಹಂಗುದೊರೆದು ನಿಂತಂಥ ೫ ಸಾವಿರ ವೀರ ಸೈನಿಕರಿಂದ ತುಂಬಿದ ಕಿತ್ತೂರ ಕೋಟೆಯಂಥ ಅಜೇಯವಾದ ಕಿಲ್ಲೆಯನ್ನು ಕೈವಶ ಮಾಡಿಕೊಳ್ಳಲು ಬೆಳಗಾವಿಯಲ್ಲಿದ್ದಂಥ ಬ್ರಿಟಿಶ ಸೈನ್ಯವು ಅಸಮರ್ಥವಿದ್ದುದರಿಂದ ಕೂಡಲೆ ಬ್ರಿಟಿಷ ಸರಕಾರದವರು ಮುಂಬಯಿ, ಮದ್ರಾಸ ಮೊದಲಾದ ಸ್ಥಳಗಳಿಂದ ಹೊಸ ಸೈನ್ಯವನ್ನು ತರಿಸುವ-ಏರ್ಪಾಡು ಮಾಡಿದರು. ಇಷ್ಟೇ ಅಲ್ಲ ಗೊತ್ತು ಮಾಡಿದ ತಾರೀಕಿನೊಳಗಾಗಿ ಶರಣ ಬಂದವರಿಗೆ ಗುರುಸಿದ್ದಪ್ಪನ ಹೊರತಾಗಿ ಎಲ್ಲರಿಗೂ ಕ್ಷಮೆ ಸಿಗುವುದು. ಗುರುಸಿದ್ದಪ್ಪನೂ ಸಹ ಶರಣ ಬಂದರೆ ಅವನ ಜೀವಕ್ಕೆ ಏನೂ ಅಪಾಯವಿಲ್ಲೆಂದು ಜಾಹೀರ ಮಾಡಿದರು.

ಬ್ರಿಟಿಷ ಕೈದಿಗಳನ್ನು ಸುರಕ್ಷಿತವಾಗಿ ಇಡುವ ಹೊಣೆಗಾರಿಕೆಯು ಕಿತ್ತೂರಿನ ನಾಗರಿಕರ ಮೇಲೆ ಇರುವುದೆಂದು ಕಿತ್ತೂರಿನಲ್ಲಿಯ ಮುಖಂಡರಿಗೂ ಸೈನಿಕರಿಗೂ ತಿಳಿಸಿ ಅವರನ್ನು ಎಚ್ಚರಪಡಿಸಿದರು.

ಈ ಸಮಯದಲ್ಲಿ ಕಿತ್ತೂರಿನ ಜನರು, ಥ್ಯಾಕರೆ ಸಾಹೇಬನ ಕೃತ್ಯಗಳ ವಿರುದ್ಧವಾಗಿ ಎಷ್ಟೋ ಪತ್ರಗಳನ್ನು ಬ್ರಿಟಿಷ ಸರಕಾರಕ್ಕೆ ಬರೆದು, ಕಿತ್ತೂರ ಸಂಸ್ಥಾನದ ಸ್ವಾತಂತ್ರ್ಯದ ಮಾನಮರ್ಯಾದೆಯನ್ನು ಕಾಯಬೇಕೆಂದು ಬೇಡಿಕೊಂಡರು. ಹಾಗೂ ಅವರು ಕೊಲ್ಹಾಪುರದ ರಾಜನನ್ನು ತಮ್ಮ ಪಕ್ಷಕ್ಕೆ ಸೇರಿಸಿಕೊಳ್ಳಲು ಯತ್ನಿಸಿದರು. ನವೆಂಬರ ೩೦ನೆಯ ತಾರೀಖಿನ ದಿವಸ ಕಿತ್ತೂರ ಕೋಟೆಗೆ ಮುತ್ತಿಗೆ ಹಾಕಿ, ಆ ಸ್ಥಳಕ್ಕೆ ಅವಸರದಿಂದ ಬಂದಂಥ ದಕ್ಷಿಣ ಭಾಗದ ಕಮೀಶನರರಾದ ಮಿ॥ ಚಾಪ್ಲಿನ್ ಇವರು ಕೋಟೆಯ ಒಳಗಿನ ಜನರಿಗೆ ಶರಣ ಬರಲು ತಿಳಿಸಿದರು. ಆಗ ಒಳಗಿನ ಜನರು ಯುರೋಪಿಯನ್ ಕೈದಿಗಳನ್ನು ಬಿಡುವುದಕ್ಕಿಂತ ಮೊದಲು ಹೆಚ್ಚಿನ—ಸವಲತ್ತುಗಳನ್ನು ಬೇಡಿದರು. ಆದರೆ ಅವರಿಗೆ ಮೇಲಿನ ಜಾಹೀರ್ ನಾಮೆಯನ್ನು ತೋರಿಸಲಾಯಿತು.

ಡಿಸೆಂಬರ ೨ನೆಯ ತಾರೀಖಿನ ಬೆಳಗ್ಗೆ ಕೈದಿಗಳನ್ನು ಬಿಟ್ಟರು. ಆದರೆ ಕೋಟೆಯನ್ನು ಬಿಟ್ಟುಕೊಡಲಿಲ್ಲ. ಆದ್ದರಿಂದ ಡಿಸೆಂಬರ ೩ ನೆಯ ತಾರೀಖಿನ ದಿವಸ ಬ್ರಿಟಿಶ್ ಸೈನಿಕರು ಆ ಕೋಟೆಗೆ ಲಗ್ಗೆ ಹತ್ತಿದರು. ಅರ್ಥಾತ್ ತೋಫುಗಳನ್ನು ಹಾರಿಸಿ, ಕೋಟೆಯನ್ನು ವಿಧ್ವಂಸ ಮಾಡಿ, ಅದನ್ನು ಕೈವಶ ಮಾಡಿಕೊಂಡರು.

ಈ ಯುದ್ಧದಲ್ಲಿ ಮೂರು ಜನ ಬ್ರಿಟಿಶ ಅಧಿಕಾರಿಗಳು ಸತ್ತರು. ೨೫ ಜನರು ಗಾಯ ಹೊಂದಿದರು.

ಥ್ಯಾಕರೆ ಸಾಹೇಬನು ಸತ್ತ ಮೇಲೆ ಅವನ ಸ್ಥಳಕ್ಕೆ ಬಂದಂಥ ಸೊಲ್ಲಾಪುರದ ಸಬ್ ಕಲೆಕ್ಟರರು ಸತ್ತ ಮೂವರಲ್ಲಿ ಒಬ್ಬರಾಗಿದ್ದಾರೆ.

ಆ ಬಳಿಕ ಕಿತ್ತೂರು ಸಂಸ್ಥಾನವನ್ನು ಬ್ರಿಟಿಶ್ ರಾಜ್ಯಕ್ಕೆ ಸೇರಿಸಿಕೊಂಡರು. ಮತ್ತು ಉದಾರ ಬುದ್ಧಿಯಿಂದ ಬ್ರಿಟಿಶರು ಈ ದೇಸಾಯಿ ಮನೆತನದ ಹೆಣ್ಣುಮಕ್ಕಳಿಗೆ ಮೋಟಗಿ ಕೊಟ್ಟು, ಬೈಲಹೊಂಗಲದ ಕಿಲ್ಲೆಯಲ್ಲಿ ಅವರನ್ನು ಸುರಕ್ಷಿತವಾಗಿ ಇಟ್ಟರು.

READ &
ADVERTISE IN
NAVAYUGA WEEKLY

ನವ್ಯತೆಯ ಭರವಸೆ....... **ಭವ್ಯತೆಯ ಆಶ್ವಾಸನೆ.......**

ಕತ್ತಲೆಯಿಂದ ಬೆಳಕಿನೆಡೆಗೆ
ಉನ್ನತಿಯಿಂದ ಪ್ರಗತಿಯೆಡೆಗೆ
ಸಾಗಬೇಕೆಂಬುದರ ಸಂಕೇತವಾದ

ದೀಪಾವಳಿಯು

ನಮ್ಮ ಸರ್ವ ಗ್ರಾಹಕರಿಗೆ—ಹಿತೈಷಿಗಳಿಗೆ
ಸರ್ವತೋಮುಖ ಅಭಿವೃದ್ಧಿ-ಸಮೃದ್ಧಿಯನ್ನು ತರಲೆಂದು ಹಾರೈಸುತ್ತೇವೆ.

ಮಂಗಳೂರಿನ ಪ್ರಗತಿ ಮುನ್ನಡೆಗೆ ಕಲಶಪ್ರಾಯವೆಂದೆನಿಸಿದ

ಕೆನರಾ ಜ್ಯುವೆಲರ್ಸ್

ಹಂಪನಕಟ್ಟಾ : : ಮಂಗಳೂರು

ಎಲ್ಲಾ ತರದ ವಜ್ರದ, ಚಿನ್ನದ ಆಭರಣಗಳು ಇಲ್ಲಿ ಮಾರಾಟಕ್ಕೆ ಸಿದ್ಧವಿವೆ.
ಪ್ರಾಮಾಣಿಕ ವಿತರಣೆಯ ಜನಪ್ರಿಯ ಸಂಸ್ಥೆ.

ಇವರ ಆಶ್ರಯದಲ್ಲಿ ಇದೀಗ ಪ್ರಾರಂಭವಾದ ಇನ್ನೊಂದು ನವೋದಿತ ಸಂಸ್ಥೆ....

ಪಾಲ್ಕೆ ಇಂಡಸ್ಟ್ರೀಸ್

ಗಣಪತಿ ಹೈಸ್ಕೂಲು ರಸ್ತೆ, ಮಂಗಳೂರು

ಎಲ್ಲಾ ತರದ ಸ್ಟೀಲ್ ಫರ್ನಿಚರು ಹಾಗೂ ತತ್ಸಂಬಂಧ ಯಾವತ್ತೂ
ಸಾಮಾಗ್ರಿಗಳ ವಿತರಣೆಗಾರರು.

ಬಂಗೋ ಸ್ಟೀಲ್ ಫರ್ನಿಚರ್ (ಪ್ರೈವೇಟ್) ಲಿಮಿಟೆಡ್, ಕಲ್ಕತ್ತಾ
ಮತ್ತು
ಆಲ್‌ಮೆಟಲ್ ಎಕ್ವಿಪ್‌ಮೆಂಟ್ ವರ್ಕ್ಸ್, ಪ್ರೈವೇಟ್ ಲಿ. ಕಲ್ಕತ್ತಾ
ಇವರ ಅಧಿಕೃತ ವಿತರಣೆಗಾರರು

Phone No: **356,356 A** Residence **855**

ಲೋಕದ ನಾಟಕ್ಯ—ಮಾತುಕತೆ

(೩ನೇ ಪುಟದಿಂದ)

ಮಾತಾಡುವವನ ಮಾತು ಕೇಳಿಸುವಷ್ಟು ದೊಡ್ಡ ಜಂಗುಳಿಯೂ ನೆರೆಯಬಹುದು. ಆದರೆ, ಮಾತುಕತೆಯಾಡಲು ಎರಡೇ ಜನ ಇರಬೇಕು ಎನ್ನುತ್ತಾರೆ ಎಡಿಸನ್. ಇದರರ್ಥವೇನು? ಇಬ್ಬರಿದ್ದರೆ ಮಾತ್ರ ಎದೆ ಬಿಚ್ಚಿ ಮಾತುಕತೆ ನಡೆಯುತ್ತದೆ ಇಲ್ಲವಾದರೆ ಇಲ್ಲ ಎಂದಲ್ಲವೆ? ಮೂರನೆಯವನು ಸೇರಿದನೆಂದರೆ ಇಬ್ಬರ ಮಾತು ಅಲ್ಲೇ ಉಳಿಯಿತು. ಆರು ಕಿವಿಗಳಿಗೆ ಬಿದ್ದ ಮಾತು ಗಾಳಿಗೆ ಬಿಟ್ಟ ಕಸ್ತೂರಿ ಎನ್ನುತ್ತಾರೆ. ಮೂರನೆಯವನ ಆಗಮನವಾದೊಡನೆಯೇ ಮೊದಲಿನಿಬ್ಬರು ತಮ್ಮ ಮಾತನ್ನು ನಿಲ್ಲಿಸಿಬಿಡುತ್ತಾರೆ, ಇಲ್ಲವೇ ಆತನು ಶುದ್ಧ ಮೂರ್ಖನೆಂದು ತಿಳಿದು ಮುಂದುವರಿಯುತ್ತಾರೆ

ಬಿಸಿ ಮತ್ತು ತಣ್ಣೀರ ಎರಡು ಪಾತ್ರೆಗಳನ್ನು ಒಟ್ಟಿಗಿಟ್ಟರೆ, ಒಂದರ ಪ್ರಭಾವ ಇನ್ನೊಂದರ ಮೇಲೆ ಬೀಳುವುದು; ಅಂದರೆ ಬಿಸ್ನೀರು ತಣ್ಣಗಾಗುವುದು, ತಣ್ಣೀರು ಬೆಚ್ಚಗಾಗುವುದು. ಹಾಗೆಯೇ ಇರ್ವರು ಸಮೀಪ ಕೂಡ ತೊಡಗಿದರೆಂದರೆ ಪರಸ್ಪರ ಪ್ರಭಾವವು ಜಮೆಯಾಗುವುದು. ಒಬ್ಬರ ಶರೀರದೊಳಗಿನಿಂದ ವಿದ್ಯುತ್ ಹರಿದು ಇನ್ನೊಬ್ಬನ ದೇಹ ಹೋಗುತ್ತದೆ. ಹತ್ತಿರ ಕುಳಿತುಕೊಳ್ಳುವುದರಿಂದಲೇ ಇನ್ನೊಂದು ಪ್ರಭಾವ ಬೀರುವುದಾದರೆ ಇನ್ನು ಮಾತಿಗೆ ಪ್ರಾರಂಭಿಸಿದರೆ ಹೇಗೆ? ಇದೇ ವಿಚಾರವನ್ನು ನಾವು ಮೂವರು ವ್ಯಕ್ತಿಗಳನ್ನಿಟ್ಟುಕೊಂಡು ವಿವೇಚಿಸುವ. ಒಂದು ತ್ರಿಕೋಣವಾದಂತಾಯಿತು ಮೂವರ ಮೂರು ಚಿತ್ತಗಳು ಮೂರು ಕೋಣಗಳು ಮೂರು ಮನೋವೃತ್ತಿಪ್ರಸರಣಾ ಧಾರೆಗಳು ತ್ರಿಕೋಣದ ಮೂರು ರೇಖೆಗಳು. ಅವ್ಯಕ್ತ ಪ್ರಭಾವವು ಮೂವರ ಮೇಲೂ ಆಗುತ್ತದೆ ಮೂವರಲ್ಲಾಗುವ ಮಾತು ಚೆಪ್ಪೆರಳಿನ ಮೇಲಿನ ಚಿಟ್ಟಿದಂತೆ. ಇನ್ನು ನಾಲ್ವರಾದರೆ, ನಿಷ್ಕಪಟತೆಗೆ ಸ್ಥಾನವೇ ಇಲ್ಲ. ಬಿಚ್ಚುಮನಸ್ಸಿನ ಮಾತುಕತೆ ನಡೆಯುವುದೇ ಇಲ್ಲ. ಏನಾದರೂ ನಡೆಯಿತಾದರೂ ಅದು ಶಿಷ್ಟಾಚಾರದ ಮಾತುಗಳು; ಗಂಭೀರ ವಾಕ್ಯಗಳು. ಉದ್ದೇಶ ರಹಿತವಾದುವುಗಳು ನಾಲ್ವರಿಗಿಂತ ಹೆಚ್ಚಿನವರ ನಡುವಣ ಮಾತುಕತೆಯು ವ್ಯರ್ಥ, ನಿರುಪಯುಕ್ತ, ನಿರುದ್ದೇಶಿತ. ಅದನ್ನು ಸಲ್ಲಾಪವೆನ್ನಲಾಗದು.

ಮಾತುಕತೆಯಲ್ಲಾದರೂ ಹಲವು ವಿಧಗಳಿವೆ. ಸಾಮಾನ್ಯವಾಗಿ ಹಳಬರು ಕಾಲಸ್ಥಿತಿಸಂದೆಯಿಂದ ಮಾತುಕತೆಗೆ ತೊಡಗುತ್ತಾರೆ. ಅವರು ಭಗವನ್ನಾರಾಯಣನು ಪತ್ರಶಾಯಿಯಾದ ದಿನದಿಂದ ನಡೆದುಬಂದ ಪುರಾಣವನ್ನು ಆಡುತ್ತಾರೆ. ಇದರಲ್ಲಿ ಒಂದು ಸತ್ಯವಾದರೆ ಹತ್ತು ಸುಳ್ಳು. ಇವರ ಮಾತಿನ ಕುದುರೆಯು ಓಡಲಾರಂಭಿಸಿತೆಂದರೆ, ಕಡಿವಾಣ ಜಗ್ಗಿದರೂ ಅದು ತಡೆಯಲೊಲ್ಲದು. ಹಿಂದಿನ ಕಾಲವನ್ನು ಆಂಗ್ಲ ಸರಕಾರದ ದುರ್ನೀತಿಗಳನ್ನು ಅನುಮೋದಿಸುತ್ತ ಇಂದಿನ ನವಯುವಕರ ಅವಹೇಳನಕ್ಕೆ ತೊಡಗುತ್ತಾರೆ. ಓದುಬರಹ ಬಲ್ಲವರಾದರೆ, ಶೇಕ್ಸ್‌ಪಿಯರ್, ಮಿಲ್ಟನ್ ಮತ್ತು ಸ್ಪೆಂಸರ್‌ರವರು ಅವರ ನಾಲಗೆತುದಿಯಲ್ಲಿ ನರ್ತಿಸುತ್ತಾರೆ. ತಮ್ಮ ಸಂಭಾವಿತಗಿರಿಯ ನಡುವೆ ಇತರರೆಲ್ಲರೂ ಶುದ್ಧ ಮೂರ್ಖರೆಂಬುದೇ ಅವರ ಸಿದ್ಧಾಂತ. ಇರ್ವರು ಸ್ನೇಹಿತರು ಒಟ್ಟು ಸೇರಿದರೆ ಮಾತಿನ ಸರಿಯೇ ಬೇರೆ. ಹಾಸ್ಯರಸದ ಸಮುದ್ರದಲ್ಲಿ ತರಂಗಾವಳಿಯೇಳುತ್ತಿದು. ಇಂತಹ ರಸಮಯ ಮಾತುಕತೆಯನ್ನು ಕದ್ದು ಕೇಳಿದವರಿದ್ದಾರೆ, ಅವರೊಡನೆ ಅದರ ಸವಿಯನ್ನು ಕೇಳಬೇಕು!

ಇರ್ವರು ಮುದುಕಿಯರು ಏತರಿಂದ ಮಾತಿಗೆ ತೊಡಗುತ್ತಾರೆ? ತಮ್ಮ ಸೊಸೆಯಂದಿರ ದೂರಿನಿಂದ, ತಮ್ಮ ಬೇಗರ ನಿಂದೆಯಿಂದ. ಮಾತು ಆಡುತ್ತ ಆಡುತ್ತ ಅವರ. ತಮ್ಮ ಕೋರೆಹಲ್ಲು ಮುಸೆಯುವುದಕ್ಕೆ ಮೊದಲು ಮಾಡುತ್ತಾರೆ. ಇರ್ವರು ಹುಡುಗರು ತಂತಮ್ಮ ಪ್ರಶಂಸೆಯಿಂದಲೇ ಮಾತಿಗೆ ಕೂತುಕೊಳ್ಳುತ್ತಾರೆ. ಶಾಲಾಬಾಲಕರು ತಮ್ಮ ಅಧ್ಯಾಪಕರ ನಿಂದೆ-ಪ್ರಶಂಸೆ, ತಮ್ಮ ಸಹಪಾಠಿಗಳ ಕಥನೋಪಕಥನವನ್ನೇ ಮುಖ್ಯವಿಷಯವನ್ನಾಗಿಸುತ್ತಾರೆ. ಬುದ್ಧಿವಂತರಾದರೆ, ತಮ್ಮ ಮುಂದೆ ಎಲ್ಲರೂ ಅಲ್ಪರೆಂದೂ, ಮಂದಬುದ್ಧಿಯವರಾದರೆ, ಇತರರೆಲ್ಲರೂ ತಮ್ಮ ಗುರುಸಮಾನರೆಂದೂ ತಿಳಿಯುತ್ತಾರೆ. ಇವಲ್ಲದೆ ಇನ್ನೂ ಕೆಲವು ಮಾತಿನ ಘಾಟಗಳಿವೆ. ರಾಜಕಾರಣ, ವ್ಯಾಪಾರಸಂಬಂಧಿ, ಪ್ರೇಮಾಲಾಪವೆಲ್ಲವೂ ಬೇರೆ ಬೇರೆ ಗುಣೋಪೇತವಾದುವು. ಮದಿರಾಲಯದ ಮಾತು ಅದ್ಭುತ, ಅತ್ಯದ್ಭುತ. ವಿದ್ಯಾವಂತರಾಗಿ ನೌಕರಿ ಹಿಡಿದಿರುವವರ ಮಾತುಕತೆಯು ಬೇರೆಯರಿಗೂ ಅರ್ಥವಾಗದು.



ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. S. 481/63

ಬಾಬು ಪೂಜಾರಿ .. ವಾದಿ.

ಓದಮ್ಮ ಹೆಂಗಸು —ಪ್ರತಿವಾದಿ.

ಕಾರ್ಕಳ ತಾಲೂಕು ನಾಲ್ಪಾಡಿ ಗ್ರಾಮದಲ್ಲಿರುವ ಲೋಕಮ್ಮ ಹೆಂಗಸಿನ ಮಗಳು ಪ್ರತಿವಾದಿಳು ಓದಮ್ಮ ಹೆಂಗಸು ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ:

ನಿಂಮಿಂದ ಪ್ಲೈಂಟನಲ್ಲಿ ವಿವರಿಸಿದ ಮೂಲಗೇಣಿ ಆಸ್ತಿ ಜವಾಬ್ದಾರಿಯಿಂದ ವಾದಿಗೆ ಸಲ್ಲದ 31-3-1961, 31-3-1963ಕ್ಕೆ ಬರತಕ್ಕ ಮೂಲಗೇಣಿ, ಗೇಣಿ ½ ಅಂಶ ಸೆಸ್ಸು ಸರ್ಚಾರ್ಜ ವಗೈರೆ ಮತ್ತು ದಾವಾ ಆಸ್ತಿಯಲ್ಲಿದ್ದ ಹಟ್ಟಿ ಬೀಳಿಸಿದ್ದರ ಬಾಬ್ತು ನಷ್ಟದ ಐವೇಜು ವಗೈರೆ ಒಟ್ಟು ರೂಪಾಯಿ 367—96 N. P. ಕೇಳಿ ನಿಮ್ಮ ಮೇಲೆ ದಾಖಲ್ಲು ಮಾಡಿದ ದಾವೆಯು ನಿಮ್ಮ ಹಾಜರಾತಿ ಬಗ್ಗೆ ತಾರೀಕು 21-11-1963ಕ್ಕೆ ಇಟ್ಟಿದೆ, ಆ ಕುರಿತು ನಿಮಗೆ ಆಕ್ಷೇಪಗಳು ಇದ್ದರೆ ನೀವು ತಾರೀಕು 21-11-1963ರಲ್ಲು ಪೂರ್ವಾಹ್ನ ಘಂಟೆ 10ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಖುದ್ದಾಗಲೀ ವ ವಕೀಲರ ಮೂಲಕವಾಗಲೀ ಹಾಜ್ರಾಗಿ ಉಜರಿಸ ತಕ್ಕದ್ದು, ತಪ್ಪಿದಲ್ಲಿ ಕೋರ್ಟಿನವರಿಗೆ ಯುಕ್ತ ಕಂಡಂತೆ ತೀರ್ಮಾನಿಸಲಾಗುವುದು,

D. Venkatesh Bhat,
ವಾದಿಕಡೆ ವಕೀಲ್.

ಕಾರ್ಕಳ, 7-11-1963.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 101/1961, R. E. P. 93/1963

ಶ್ರೀ ವಿದ್ಯಾರತ್ನ ತೀರ್ಥ ಶ್ರೀ ಪಾದಂಗಳವರು —ಅರ್ಜಿದಾರರು.

ಲಕ್ಷ್ಮೀನಾರಾಯಣ ತುಂಗ —ಎದ್ರಿ.

ಉಡುಪಿ ತಾಲ್ಲೂಕು ಕಾರ್ಕಡ ಗ್ರಾಮದಲ್ಲಿರುವ ಮರದ ಕಾಳಿಂಗ ತುಂಗರ ಮಗ ಲಕ್ಷ್ಮೀನಾರಾಯಣ ತುಂಗರಿಗೆ ಈ ಮೂಲ್ಕ ತಿಳಿಯಪಡಿಸುವುದೇನೆಂದರೆ —

ಸದ್ರಿ ವ್ಯವಹರಣೆಯಲ್ಲಿ ಎದ್ರಿಯ ಹಕ್ಕಿನ ಸ್ಥಿರ ಆಸ್ತಿ ಏಲಂ ಮಾಡುವ ಕುರಿತು ಅರ್ಜಿದಾರರ ಕಡೆಯಿಂದ ಹಾಜ್ರುಪಡ್ಸಿದ ಏಲಂ ಇಸ್ತಿಹಾರಿನ ಷರತುಗಳನ್ನು ನಿರ್ಣಯಿಸುವ ಬಗ್ಗೆ ತಾ. 18-11-63ಕ್ಕೆ ಮೇಲಿನ ಕೋರ್ಟಿನಲ್ಲಿ ತನ್ಖಿಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವ್ಸ ಮೇಲಿನ ಕೋರ್ಟು ಮುಂದೆ ಹಗಲು 11 ಗಂಟೆಗೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲ್ಕ ತಿಳಿಯಪಡ್ಸಿಯದೆ.

N. S. Parameshwariah
Advocate for Petr

Coondapoor, Date 7—11—63.

ಉಡುಪಿ ಡಿ. ಮು ಕೋರ್ಟಿನಲ್ಲಿ

R. I. A. 593/63, O. S. No. 260/63

ವೆಂಕಟ್ರಾಜ ಮಿತ್ತಂತಾಯ —ವಾದಿ

1. ಗಿರಿಯ ಪೂಜಾರಿ, 2. ಬೂದ ಪೂಜಾರಿ

3. ಕರಿಯ ಪೂಜಾರಿ. ಚೆನ್ನ ಪೂಜಾರಿ, ಮಕ್ಕಳು ಉಡುಪಿ, ತಾಲ್ಲೂಕು ಇನ್ನಂಜೆ ಗ್ರಾಮ —ಪ್ರತಿವಾದಿರು

ದಾವಾ ಆಸ್ತಿಯ ಬಾಬ್ತು ಇಂಜಕ್ಷನ ಕೇಳಿ ಮಾಡಿದ್ದ ವಾದಿಯು ದಾವೆಯೂ ಮತ್ತು ಟೆಂಪರರಿ ಇಂಜಕ್ಷನ್ ಅರ್ಜಿಯೂ 2-3ನೆ ಪ್ರತಿವಾದಿರ ಉದಾಸರಣೆ ಬಗ್ಗೆ ತಾ, 20-11-63ಕ್ಕೆ ಇಟ್ಟಿದೆ, ಅದ್ರಿಂದ ಆ ದಿವ್ಸ ಬೆಗ್ಗೆ 11 ಗಂಟೆಗೆ ನಂ, 2-3ನೇ ಪ್ರತಿವಾದಿರ ಕೋರ್ಟಿಗೆ ಹಾಜರಾಗಿ ಅವರ ಆಕ್ಷೇಪಣೆ ಇದ್ದರೆ ಹೇಳತಕ್ಕದ್ದು, ತಪ್ಪಿದ್ರೆ ಸದ್ರಿ ವ್ಯಾಜ್ಯವನ್ನೂ, ಅವರ ಅರ್ಜಿಯನ್ನೂ ಅವರ ಗೈರುಹಾಜರಿಯಲ್ಲಿ ತೀರ್ಮಾನಿಸಲಾದೀತು,

K. L. Aithal
Vakil for plaintiff

ಉಡುಪಿ. ತಾ. 9-11-63.



ಉಡುಪಿಯ ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ನವರಾತ್ರಿ ಮಹೋತ್ಸವದ ಅಂಗವಾಗಿ ಮೂವತ್ತೇಳು ದಿನಗಳ ಸಾಂಸ್ಕೃತಿಕ ಕಲಾಕಾರ್ಯಕ್ರಮಗಳನ್ನು ಏರ್ಪಡಿಸಿ, ಯಶಸ್ವಿಯಾಗಿ ನೆರವೇರಿಸಿದ ಉತ್ಸಾಹಿ ಕಲಾಭಿಮಾನಿ ಶ್ರೀ ಕೆ ರಾಘವೇಂದ್ರಕೃಷ್ಣ ಭಟ್ಟರು.

(೨೬ನೆಯ ಪುಟದಿಂದ)

ಎ ಯಿಂ ಂ ದ ಜಡ್‌ನವರೆಗಿನ ೨೬ ಅಕ್ಷರಗಳನ್ನು ಅವರು ಲೀಲಾ ಜಾಲಖಾಗಿ ಗಾಳಿ ಪಟದಂತೆ ಹಾರಿಸುತ್ತಿರುತ್ತ ಅದರೊಡನೆ ಸ್ವರ್ಗವನ್ನೇರುತ್ತಲೇ ಇರುತ್ತಾರೆ.

ಯುರೋಪಿನಲ್ಲಿ ಮಾತಾಡುವ ಕಲೆಯೊಂದಿದೆ "ಆರ್ಟ್ ಆಫ್ ಕಾನ್‌ವರ್ಸೇಶನ್" ಎನ್ನುತ್ತಾರೆ ಅದನ್ನು ಇದರ ಪರಿಪೂರ್ಣ ಶೋಭೆಯನ್ನು ನೋಡಬೇಕು, ಕಾವ್ಯಕಲಾ ಪ್ರವೀಣ ವಿದ್ವನ್ಮಂಡಲಿಯಲ್ಲಿ ಶ್ರವಣೇಂದ್ರಿಯಕ್ಕೆ ಆನಂದ ದೊರೆಯಬಹುದಾದ ವಿಷಯದಿಂದಲೇ ಅವರು ಮಾತಿಗೆ ತೊಡಗುತ್ತಾರೆ ಇದನ್ನೇ ಸುಹೃತ್ ಗೋಷ್ಠಿ ಎನ್ನಬಹುದು. ಇದರಲ್ಲಿ ಎದುರಾಳಿಯನ್ನು ಸೋಲಿಸುವ ಉದ್ದೇಶವಿಲ್ಲ. ಆತನನ್ನು ಅಪಮಾನ ಮಾಡದೆ ತನ್ನ ಚತುರತೆಯಿಂದ ಪ್ರಸನ್ನಗೊಳಿಸುವುದೇ ಇದರ ಕೆಲಸ. ನಮ್ಮಲ್ಲಿನ ಪಂಡಿತಾಗ್ರಣ್ಯರ ಶಾಸ್ತ್ರಾರ್ಥ ಹೀಗಿರುವುದಿಲ್ಲ. ಇಲ್ಲಿ ಹುಂಜಗಳ ಜಗಳ, ಕಪಟ, ನಿಂದೆಗಳ ಶ್ರವಣಸ್ರಿಯ ವಾಕ್ಯ ನೋಡಲೂ ಕೇಳಲೂ ದೊರೆಯುತ್ತವೆ. ಆದರೆ, ತಾಸು ತಾಸುಗಳ ಕಾಲದ ಮಾತ್ರ ಬೇಸರ ತರುವುದು. ಮಾತಿನ ಮಹತ್ವವು ಅತ್ಯಧಿಕ. ಇಂದು ದೊಡ್ಡ ದೊಡ್ಡ ರೂಪದಳೆದ ಸಂಘಸಂಸ್ಥೆಗಳು ಹೀಗೆಯೇ ಇಬ್ಬರ ಮಾತುಕತೆಯಿಂದಲೇ ಹುಟ್ಟಿವೆಯೆಂಬುದನ್ನು ಮರೆಯಬಾರದು. ಐವತ್ತು ವರ್ಷ ಮೀರಿದವರ ಮಾತಿನಲ್ಲಿ ಅನುಭವವಿರುತ್ತದೆ, ಸ್ವಾರಸ್ಯವಿರುತ್ತದೆ ಕೇಳಿಗನವರದ್ದು ಮಾತುಕತೆ ಹೌದಾದರೂ ಅದರಲ್ಲಿ ಇಷ್ಟೊಂದು ರಸವಿರುವುದಿಲ್ಲ. ದೂರದರ್ಶಿತೆಯಾಗಲಿ ಹೃದಯ ವಿಕಾಸ ಗುಣವಾಗಲೀ ನಾವು ಮಾತ್ರಕ್ಕೂ ಇರುವುದಿಲ್ಲ

ಮಾತುಕತೆಗೆ ಇಬ್ಬರಾದರೂ ಬೇಕು. ಈ ಇಬ್ಬರು ಒಟ್ಟು ಸೇರುವುದು ಹೇಗೆ? ತಮಗೆ ಮಾತಾಡಬೇಕೆಂದಿದ್ದರೆ, ಬೇರೆಯವರನ್ನು ತಮ್ಮಲ್ಲಿಗೆ ಆಹ್ವಾನಿಸಿದರೆ, ಅವರನ್ನು ಸನ್ಮಾನ ಮಾಡಿ ಕಳಿಸಬೇಕೇ ಅಲ್ಲದೆ ಅಪಮಾನ ಮಾಡುವುದು ಸಾಧ್ಯವಿಲ್ಲ. ಮಾತಿಗೆಂದು ಇತರರ ಮನೆಗೆ ಹೋಗುವುದಾದರೂ ಶಿಷ್ಟಾಚಾರವಲ್ಲ. ಕರೆಯದೆ ಹೋಗುವುದು ಅಪಮಾನವಲ್ಲವೆ? ಆದುದರಿಂದ ಮಾತಿನ ಇನ್ನೊಂದು ಪ್ರಕಾರವು ಅಗತ್ಯವೆನಿಸುತ್ತದೆ. ಇದರಿಂದ ಯಾರ ಗೌರವಕ್ಕೂ ಕುಂದು ಬರಬಾರದು, ಯಾರಿಗೂ ಉಪದ್ರವವೂ ಆಗಬಾರದು. ಅದಕ್ಕೆ ಏಕಾಂತವಾಕ್ಯೇ ಉಪಯುಕ್ತವಲ್ಲವೆ?

ಪ್ರತಿಕ್ಷಣ ನವನವ ವರ್ಣ ಪ್ರದರ್ಶಿಸುವ ನಮ್ಮ ಆಂತರಿಕ ಮನೋವೃತ್ತಿಯು ಪ್ರಸಂಚಾತ್ಮಕ ಜಗತ್ತಿನ ಒಂದು ಕನ್ನಡಿ. ಇದರಲ್ಲಿ ಯಾವ ಸ್ವರೂಪವನ್ನೂ ನೋಡಬಹುದು ಸರ್ವ ಪ್ರಕಾರದ ತರುಗುಲ್ಮಲತಾದಿಗಳಿರುವ ಉದ್ಯಾನವನ. ಇಂತಹ ಉಪವನ ಯಾತ್ರೆಯು ಹೃದಯ ವಿಕಾಸ ಹೇತುವಾಗದೆ? ಮಿತ್ರರ ಪ್ರೇಮಲಾಪವು ಕೆಲವೊಮ್ಮೆ ಇದರ ಪೋಷಕಲೆಯನ್ನು ಪಡೆಯಬಹುದು. ಈ ಯಾತ್ರೆಯನ್ನೇ ಧ್ಯಾನವೆನ್ನುತ್ತಾರೆ. ಮನಯೋಗ, ಚಿತ್ತೈಕಾಗ್ರತೆಯೆಂದರೂ ಇದೇ ಇದರ ಸಾಧನೆಯು ಒಂದೆರಡು ದಿನಗಳಲ್ಲಿಯಾಗದು ವರ್ಷಗಟ್ಟಲೆಯ ಅಭ್ಯಾಸದಿಂದ ನಮ್ಮ ಮನೋವೃತ್ತಿಯನ್ನು ಕಿಂಚಿತ್ ಸ್ಥಿರೀಕರಿಸಿ ಅವರಲ್ಲಾಗಿ, ನಮ್ಮ ಮನಸ್ಸಿನೊಡನೆ ಮಾತಾಡುವ ಕಲೆಯನ್ನು ಕರಗತ ಮಾಡಿಕೊಂಡರೆ, ಈ ವಾಕ್ ಶಕ್ತಿ ದಮನದಿಂದ ಹಲವಾರು ದುಷ್ಟಶಕ್ತಿಗಳ ದಮನವಾಗುವುದು ನಾಲಿಗೆಯು ಕತ್ತರಿಯಂತೆ ಸದಾ ತಿರುಗಾಡುತ್ತಿರುವುದು ಅದನ್ನು ಒತ್ತಿ ಹಿಡಿದು ನಾವು ಪರಪರಿಸಿದರೆ, ಕ್ರೋಧಾಧಿಕ ಶತ್ರುಗಳನ್ನಾದರೂ ಪ್ರಯಾಸವಿಲ್ಲದೆ ಸ್ವಾಧೀನ ಪಡಿಸಬಹುದು ಆದುದರಿಂದ ಮೌನವಾಗಿದ್ದು ತನ್ನಲ್ಲಿ ತಾನೇ ಮಾತಾಡಿಕೊಳ್ಳುವ ಸಾಧನೆಯು ಅನೇಕ ಅನ್ಯ ಸಾಧನೆಗಳಿಗೆ ಮೂಲಸ್ರೋತ, ಶಾಂತಿಯ ಪರಮ ಪೂಜ್ಯ ಮಂದಿರ, ಪರಮಾರ್ಥದ ಏಕಮಾತ್ರ ಸೋಪಾನ.

ಸರ್ವಜ್ಞನು ಸುಮ್ಮನೆ ಅನ್ನಲಿಲ್ಲ:
ಮಾತಿನಿಂ ನಗೆನುಡಿಯು ಮಾತಿನಿಂ
ಹಗೆಕೊಲೆಯು
ಮಾತಿನಿಂ ಸಕಲ ಸಂಪದವು ಲೋಕಕ್ಕೆ
ಮಾತೆ ಮಾಣಿಕ್ಯ ಸರ್ವಜ್ಞ||

ಹುಟ್ಟುವಾಗ ಎಲ್ಲರೂ ಒಳ್ಳೆಯವರಾಗೇ ಇರುತ್ತಾರೆ. ಮುಂದೆ ವಾತಾವರಣದಿಂದಾಗಿ, ಅಧಿಕಾರ ಸಂಪತ್ತುಗಳಿಂದಾಗಿ ಅವರೆಲ್ಲ ಮಾನವರ ವಿರೋಧಿಗಳಾಗುತ್ತಾರೆ.

೦ ೦ ೦ ೦

ಧನಿಕರ ಧನ, ಅಧಿಕಾರಿಗಳ ಅಧಿಕಾರ ತೊಲಗಿದರೆ ಅವರೆಲ್ಲ ತುಂಬ ಒಳ್ಳೆಯವರಾಗುತ್ತಾರೆ. ರಾಕ್ಷಸರಂತೆ ವರ್ತಿಸಿದವರು ಕೂಡಾ ದೇವರಂತಾಗುತ್ತಾರೆ.

೦ ೦ ೦ ೦

ಭಾರತಕ್ಕೆ ಇಂದು ದುರಂತ ಕವಿದೊರೆದಿದೆ, ನಮ್ಮ ದೇಶದ ಧನಿಕರೆಲ್ಲ ದೇವತೆಗಳಾಗಲು ಇದೀಗ ಪುಣ್ಯಕಾಲ ಜನತೆಗೆ ಸೇವೆ ಸಲ್ಲಿಸಿ ಅಧಿಕಾರಿಗಳೂ ದೇವರಾಗಲಿ.

ಶ್ರೀ ಕೆ ವಾಸುದೇವ ಕಿಣಿ

ಅನುಕೂಲತೆಯಿದ್ದರೂ ಅನ್ಯರಿಗೆ ಅನುವಾಗುವ ಗುಣ ಎಲ್ಲರಿಗೂ ಇಲ್ಲ ಆದರೆ ಶ್ರೀ ಕೆ ವಾಸುದೇವ ಕಿಣಿಯವರು ಹಾಗಲ್ಲ. ಇವರು ಇತ್ತೀಚೆಗೆ ಕಟಪಾಡಿ ಮಠದ ಶಾಲೆಗೆ ವಿದ್ಯುದ್ದೀಪಗಳನ್ನು ಒದಗಿಸಿ ದೀಪಾವಳಿಯನ್ನೊದಗಿಸಿದ್ದಾರೆ. ದೀಪದಾನ ಮಾಡಿದ್ದಾರೆ

ಮನೆಯೊಂದಾದಲ್ಲಿ ಇರಲೇಬೇಕಾದ ಪುಸ್ತಕಗಳು

ಗೀತೆಯ ಕೈಗನ್ನಡಿ (ಚಿದಂಬರಯ್ಯ)	1=00
ಮನೆ ಮದ್ದು (ಡಾ। ಕೊರಡ್ಕಲ್)	2=00
ಸುಲಭದಲ್ಲಿ ಇಂಗ್ಲಿಷ್ (ಕೊರಡ್ಕಲ್)	2=00
Letter Writing Made Easy	1=25

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕಿರ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಛೇರಿ: ಉಡುಪಿ, ದ. ಕನ್ನಡ.

ಟೆಲಿಫೋನ್ 2968 ತಂತಿ: MYCAFE

ನಿಯೋ ಮೈಸೂರು ಕೆಫೆ,

(ರಿಜಿಸ್ಟರ್ಡ್)

ಸಮರ್ಥರಾದ ಹೊಸ ಮ್ಯಾನೇಜರರ ಉತ್ಸಾಹಿ ಮೇಲ್ವಿಚಾರಣೆಯಲ್ಲಿ ನಡೆಯುವ ಅತ್ಯುತ್ತಮ ತರಗತಿಯ

ರೆಸ್ಟೋರೆಂಟ್, ಬೋರ್ಡಿಂಗ್ ಮತ್ತು ಲಾಜಿಂಗ್

ಕೆಂಪೇಗೌಡ ರೋಡ್, : : ಬೆಂಗಳೂರು—2

ಶುಚಿಯಾದ ತಿಂಡಿತಿನಸುಗಳು, ಮಧುರವಾದ ಕಾಫಿ ಟೀ, ಇತರ ಪಾನೀಯಗಳು, ರುಚಿರುಚಿಯಾದ ಊಟ

VISIT—

NEO MYSORE CAFE (REGD)

Kempegowda Road, : . Bangalore

ಎಂದಿನಂತೆ ಪ್ರಕಟವಾಗಲಿದೆ—

ನವಯುಗ ಪ್ರಜಾರಾಜ್ಯ ವಿಶೇಷಾಂಕ

ಕರ್ನಾಟಕದ ಹೆಸರಾಂತ ಲೇಖಕರ ಕತೆ, ಕವನ ವಿಚಾರಪರ ಲೇಖನಗಳಿಂದೊಡಗೂಡಿ ವಿಶಿಷ್ಟ ತರದಲ್ಲಿ ಹೊರಡಲಿದೆ

ಅಖಿಲ ಕರ್ನಾಟಕದಲ್ಲಿ ಪ್ರಚಾರವಾಗುವ ಈ ವಿಶೇಷ ಸಂಚಿಕೆಯು ಜಾಹೀರಾತಿಗೆ ಉತ್ತಮ ಮಾಧ್ಯಮವಾಗಿದೆ.

ವಿವರಗಳಿಗೆ ಬರೆಯಿರಿ.

ಮ್ಯಾನೇಜರ್, ನವಯುಗ, ಉಡುಪಿ

ಗಡಿನಾಡಿನಲ್ಲಿ ಆಕ್ರಮಣ

ಉತ್ತರದ ಗಡಿಯಲ್ಲಿ ದುರಾಕ್ರಮಣಗೆಯ್ದ ಕೆಂಪುಚೀನೀಯರಿಂದ ನಮ್ಮ ದೇಶ ರಕ್ಷಣೆ ಮಾಡುವುದು ನಮ್ಮೆಲ್ಲರ ಕರ್ತವ್ಯ. ಕಳೆದ ದೀಪಾವಳಿಯಂದು ಶತ್ರುಗಳನ್ನು ಹಿಮ್ಮೆಟ್ಟಿಸುವ ದೃಢ ಸಂಕಲ್ಪವನ್ನು ಮಾಡಿದ ನಾವಿಂದು ಅದನ್ನೇ ಪುನರುಚ್ಚರಿಸಬೇಕು.

ಲೇಖಕರು: ಶ್ರೀ "ಸಿರಿಪತಿ"

ಭಾರತ ದೇಶದ ಸಂಪತ್ತಿನಿಂದ ಆಕರ್ಷಿತರಾಗಿ ಸಮಯ ಸಾಧಕ ವಿದೇಶಿಯರು ನಮ್ಮಲ್ಲಿ ಬಂದು ಸ್ಥಾನಗಟ್ಟಿಮಾಡಿಕೊಂಡು ತಮ್ಮ ಕೂಟನೀತಿಯಿಂದ ಭಾರತೀಯ ಸಂಸ್ಕೃತಿಯನ್ನು ಪುಡಿಮಾಡಿ ಹಿಂದೂ ಧರ್ಮ ಹಿಂದೂ ಸಂಸ್ಕೃತಿಯ ಮೇಲೆ ತಮ್ಮ ಪ್ರಭಾವ ಬೀರಿದರು. ಅಲ್ಲದೆ ನಮ್ಮ ಸಂಪತ್ತಿನ ಅಪಹರಣ ಮಾಡತೊಡಗಿ ತಮ್ಮ ಸ್ವೇಚ್ಛಾಧಿಕಾರ ಚಲಾವಣೆಯನ್ನು ಭಾರತೀಯರ ಮೇಲೆ ಪ್ರಾರಂಭಿಸಿದರು. ದಾಸ್ಯತಾ ಶೃಂಖಲೆಯಲ್ಲಿ ಭಾರತೀಯರು ಚಡಪಡಿಸ ಬೇಕಾಯಿತು. ಭಾರತೀಯರು ತಮ್ಮ ರಕ್ಷಣೆಗೆ ತಮ್ಮ ಶಕ್ತಿ ಮೀರಿ ಹೋರಾಡಿದರು.

ಪುರಾಣೇತಿಹಾಸವನ್ನು ಓದಿದರೆ ಭಾರತ ದೇಶವು ಯುಗಯುಗಾಂತರದಿಂದಲೂ ಒಂದು ರುದ್ರಭೂಮಿಯಾಗಿದೆ. "ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿಯುಗೇ ಯುಗೇ" ಎಂದು ಪರಮಾತ್ಮನು ಭಾರತದಲ್ಲಿಯೇ ತನ್ನ ಎಲ್ಲಾ ಅವತಾರಗಳನ್ನು ತಳೆದನು. ಭಾರತದ ಎಲ್ಲ ಸ್ಥಳಗಳಲ್ಲಿಯೂ ಒಂದಿಲ್ಲೊಂದು ಕಾಲದಲ್ಲಿ ಯುದ್ಧ ಜರಗಿದೆ. ಭಾರತದ ಮೇಲೆ ವಿದೇಶೀ ಆಕ್ರಮಣ ಕಾರಿಗಳು ನುಗ್ಗಿದಂತೆ ಪ್ರಾಯಶಃ ಇನ್ನಾವ ದೇಶದಲ್ಲಿಯೂ ಚರಿತ್ರೆಯಿಲ್ಲ! ಸಾಮರ್ಥ್ಯದಲ್ಲಿ ಹಿಂಗದೆ ತಮ್ಮ ಬಲಿದಾನ-ತ್ಯಾಗಗಳಿಂದ ದೇಶರಕ್ಷಣಾಕಾರ್ಯದಲ್ಲಿ ಭಾರತೀಯರು ಹಿಂದಿನಿಂದಲೂ ಪ್ರಖ್ಯಾತರೆನಿಸಿ ಕೊಂಡಿದ್ದಾರೆ.

ಭಾರತೀಯರಲ್ಲಿಯ ದೋಷವೆಂದರೆ, ಪಕ್ಷ ಪಂಗಡ ನಿರ್ಮಾಣ ಹಾಗೂ ಸ್ವಾಭಿಮಾನ! ನಮ್ಮ ನಮ್ಮೊಳಗೆ ಒಡಕುಗಳು, ಕಳೆದ ಶತಮಾನದಲ್ಲಿ ಪಾಶ್ಚಿಮಾತ್ಯರು ನಮ್ಮ ದೌರ್ಬಲ್ಯದ ದುರುಪಯೋಗ ಮಾಡಿಕೊಂಡು ತಮ್ಮ 'Divide and Rule Policy'ಯ ಚಾಣಾಕ್ಷತನದಿಂದ ನಮ್ಮ ದೇಶವನ್ನು ಗೆದ್ದರು! ಸ್ವತಂತ್ರ್ಯ ರಾಜ್ಯಗಳೆಲ್ಲ ದೇಶದಲ್ಲಿ ಪುಡಿಯಾದವು. ನಮ್ಮ ಸಂಪತ್ತಿನ ಸುಲಿಗೆ ನಮ್ಮ ಕಣ್ಣಿನ ಮುಂದೆಯೇ ನಡೆಯಿತು. ಈ ಅವಸ್ಥೆ ಬಹುಕಾಲ ನಡೆಯಲಿಲ್ಲ! ನಿದ್ರಾವಸ್ಥೆಯಲ್ಲಿದ್ದ ಜನತೆ ಕಣ್ತೆರೆದು ತಮ್ಮ ಸ್ವಾಭಿಮಾನ ರಕ್ಷಣಾ ಹೋರಾಟ ಪ್ರಾರಂಭಿಸಿತು. ಲೋಕಮಾನ್ಯ ತಿಲಕರು ಮಹಾತ್ಮಾ ಗಾಂಧಿಗಳೂ ತಮ್ಮ ಜೀವನವನ್ನು ಭಾರತದ ದೇಶ ಕಲ್ಯಾಣಕ್ಕಾಗಿ ಮುಡಿಪಿಟ್ಟರು

ದೇಶದ ಸ್ವತಂತ್ರ್ಯತಾ ಸಂಗ್ರಾಮದಲ್ಲಿ ಮೋತೀಲಾಲ ನೆಹರು, ಡಾ। ರಾಜೇಂದ್ರ ಪ್ರಸಾದ, ಸುಭಾಸಚಂದ್ರ ಬೋಸ್, ಸರದಾರ ಪಟೇಲ್—ಜವಾಹರಲಾಲ ನೆಹರೂ ಮುಂತಾದ ಮೇಧಾವಿಗಳೂ ತಮ್ಮ ಜೀವನಕ್ಕೆ ತಿಲಾಂಜಲಿಯನ್ನಿತ್ತು ಜನತಾ ಸ್ವಾತಂತ್ರ್ಯದ ಬಗೆಗೆ—ವಿದೇಶೀಯರ ವಿರುದ್ಧ ಪ್ರತಿಭಟನೆ ನಡೆಯಿಸಿದರು. ರುದ್ರ ಭೂಮಿ ಭಾರತದಿಂದ ವಿದೇಶೀಯರು ಕಾಲ್ದೆಗೆಯಲೇ ಬೇಕಾಯಿತು.

ಸ್ವಾತಂತ್ರ್ಯವೇನೋ ದೊರೆಯಿತು. ಆದರೆ, ಪಾಕಿಸ್ಥಾನ ಮತ್ತು ಹಿಂದುಸ್ಥಾನವೆಂದು ವಿಭಜನೆ ರುಧ್ರ ಭೂಮಿಯಲ್ಲಿ ತಾಂಡವವಾಗಿ ಭಾರತ ಹೋಳಾಗಿ ದೊರೆಯಿತು. ಹಿಂದೂ-ಮುಸ್ಲಿಂ ಜಾತಿ ಪಂಥಗಳು ಅಖಂಡ ಭಾರತವನ್ನು ಹೋಳು ಮಾಡಿಕೊಂಡವು.

ಇಂಗ್ಲಿಷರೇನೋ ಭಾರತವನ್ನು ಬಿಟ್ಟರೂ ಪೋರ್ಚುಗೀಜ ವಸಾಹತುಗಳಲ್ಲಿ ವಾಸಿಸುವ ಭಾರತೀಯ ಜನಾಂಗದವರ ಗೋಳು ಹಾಗೆಯೇ ಇದ್ದೀತು. ಅಂತೂ ಕಳೆದ ವರ್ಷ ಅವರ ಕಡೆಗೆ ಓಗೊಟ್ಟು ಭಾರತ ಸರಕಾರದವರು ತಮ್ಮ ಅಂಗವಾದ ಗೋವಾ, ದೀವ, ದಮನಗಳನ್ನು ವಶಪಡಿಸಿಕೊಳ್ಳಲು ಕೊನೆಗೂ ಯುದ್ಧಗೈಯಬೇಕಾಯಿತು!

ಯುಗ ಯುಗಾಂತರದಿಂದ ನಿರ್ಧರಿತವಾದ ಭಾರತದ ಉತ್ತರ ಗಡಿಯಲ್ಲಿ ಚೀನೀ ಮಧಾಂದರು ಒಳಹೊಕ್ಕು ಆಕ್ರಮಣ ಮಾಡಬಹುದೆಂದು ನಾವೆಂದೂ ಎಣಿಸಿರಲಿಲ್ಲ!

ಹಿಂದಿನ ಮಹಾತ್ಯಾಗಿಗಳನ್ನೂ, ಮೇಧಾವಿಗಳನ್ನೂ ಕಳೆದುಕೊಂಡು ಸ್ವಾತಂತ್ರ್ಯ ರಕ್ಷಣಾ ಕಾರ್ಯವನ್ನು ನಿರ್ವಹಿಸಬೇಕಾದ ಭಾರತ ದೇಶಕ್ಕೆ...ರುಧ್ರ ಭೂಮಿಯೆನಿಸಿದ ಭಾರತ ದೇಶಕ್ಕೆ ತಿಲಕಪ್ರಾಯವಾಗಿದ್ದ ಒಂದೇ ಒಂದು ಮುತ್ಸದ್ಧಿ— ವೃದ್ಧ ಕಾವಲುಗಾರ ರೂಪದಲ್ಲಿ ಇನ್ನೂ ನಮ್ಮ ಭಾಗ್ಯಕ್ಕೆ ಇದ್ದಾರೆ. ಇದು ನಮ್ಮ ಪುಣ್ಯತೇಷವೆನ್ನಬೇಕು. ಈ ವೃದ್ಧ ಕಾವಲುಗಾರನ ಸಮರ್ಥ ಮುತ್ಸದ್ಧಿತನದಿಂದ ನಮ್ಮ ದೇಶ ವಿಶ್ವದಲ್ಲಿ ತನ್ನದೇ ಆದ ಉಚ್ಚಸ್ಥಾನ ಪಡೆದು ನಿಂತಿದೆ.

ಜವಾಹರಲಾಲರು ನಮ್ಮ ದೇಶದ ಜೀವಾಳದಂತಿದ್ದಾರೆ. ಅವರು ತನ್ನ ಕೋಟಿಗಟ್ಟಲೆ ನಿಧಿಯನ್ನೂ ಅಮೂಲ್ಯ ಮುತ್ಸದ್ದಿತನವನ್ನೂ ವ್ಯಕ್ತಿತ್ವವನ್ನೂ ಜೀವಿತವನ್ನೂ ದೇಶಕ್ಕಾಗಿ ಮೀಸಲಾಗಿರಿಸಿದ್ದಾರೆ. ಈ ಪುರುಷಸಿಂಹನ ಗರ್ಜನೆಯನ್ನು ಕೇಳಿ ಎಂತಹ ಅಂಜುಗುಳಿಯಲ್ಲಿಯೂ ಧೈರ್ಯೋತ್ಸಾಹಗಳು ಹೊರ ಹೊಮ್ಮುವುದರಲ್ಲಿ ಸಂದೇಹವಿಲ್ಲ! — ವಿಶ್ವವನ್ನೇ ಒಂದುಗೂಳಿಸುವ ಸಾಮರ್ಥ್ಯ ಅವರ ನುಡಿಯಲ್ಲಿದೆ!

ಪರದೇಶದವರೆಲ್ಲ ಭಾರತವು ವಿಶ್ವಶಾಂತಿದೂತ ರಾಜ್ಯವೆಂದೆಣಿಸಿದ್ದಾರೆ. ಆದರ ಪರಿಣಾಮವಾಗಿ ನಮ್ಮ ದೇಶದ ದೌರ್ಬಲ್ಯದ ಅನುಚಿತ ಲಾಭಪಡೆದು ನಮ್ಮನ್ನು ಘಾಸಿ ಮಾಡಲು ನೆರೆ ರಾಷ್ಟ್ರದವರು ಹೊಂಚು ಹಾಕಿದ್ದಾರೆ. ಶಾಂತಿ ಮಂತ್ರದ ವಾಸ್ತವಿಕ ಅರ್ಥವನ್ನವರು ತಿಳಿದಿಲ್ಲ!. ಇದೇ ಶಾಂತಿಮಂತ್ರ ಬಾಣದಿಂದ ಘಾಸಿಗೊಂಡ ಇಂಗ್ಲೀಷರು ತಮ್ಮ ಗರಡಿ — ಬಿಡಾರಗಳೊಂದಿಗೆ ಹಿಂದಿರುಗಿದ ವಿಷಯವನ್ನವರಿಯಬೇಕು.

ನಿದ್ರಿಸಿದ ಮರಿ ಕೇಸರಿಯನ್ನು ಕೆಣಕುವ ಚೀನೀಯರಿಗೆ ನಮ್ಮ ಸಾಮರ್ಥ್ಯವನ್ನು ತೋರುವ ಕಾಲ ಬಂದಿದೆ. ನೇಫಾ ಹಾಗೂ ಲಡಾಖ ಗಳಲ್ಲಿಯ ಚೀನೀಯರ ಆಕ್ರಮಣ ಸಮಸ್ಯೆ— ಇಂದು ತಾನೇ ಜನಿಸಿದ ಚಿಕ್ಕ ಮಗುವಿನಂತೆ ದೊಡ್ಡದೊಂದು ಸಂದಿಗ್ಧ ಗಂಡಾಂತರ ಪ್ರಾಯವಾಗಿ ವೃದ್ಧ ಕಾವಲುಗಾರ ಜವಾಹರಲಾಲ ನೆಹ್ರು ಅವರನ್ನೂ ನಮ್ಮೆಲ್ಲ ಭಾರತೀಯರನ್ನೂ ಕಾಡಿದೆ !! ಭಾರತದ ಪೂರ್ವೋತ್ತರದ ಗಡಿಯು ಇಂದು ರುಧ್ರಭೂಮಿಯಾಗಿದೆ. ಚಿಕ್ಕ ಮಗುವಿನೋಪಾದಿಯಲ್ಲಿ ಈಗ ಉದ್ಭವಿಸಿದ ಈ ಸಮಸ್ಯೆಯ ಕುರಿತು ಯೋಗ್ಯ ಕ್ರಮ ಕೈಗೊಳ್ಳುವುದು ಪ್ರತಿಯೊಬ್ಬ ಭಾರತೀಯನ ಕೆಲಸ.

ನಾವು ಕೇವಲ ಶಾಂತಿ ವಾದಿಗಳಲ್ಲ!! ಆದರೆ ವಿಶ್ವಶಾಂತಿಯನ್ನು ಬಯಸುವವರು!! ಪರಿಸ್ಥಿತಿಗನುಸಾರ ನಮ್ಮ ದೇಶ ರಕ್ಷಣೆ ಉಚಿತವಾದ ಸಾಹಸ ಕಾರ್ಯವನ್ನು ಮಾಡಲು ನಾವು ಹಿಂಜರಿಯುವಂತಿಲ್ಲ!! ಯಾವ ಪ್ರಕಾರ ಶಾಂತಿವಾದದಿಂದ— ಸಾಮೋಪಾಯದಿಂದ ಪೋರ್ತುಗೀಜ ವಸಾಹತು ದೊರೆಯದ ಸಂದರ್ಭದಲ್ಲಿ ಸೈನ್ಯ ಹಾಗೂ ಬಲ ಪ್ರಯೋಗ ಅನಿವಾರ್ಯವಾಯಿತೋ-ಇಂದೂ ಭೇದೋಪಾಯದಿಂದಲೇ ನಮ್ಮ ರಕ್ಷಣೆಯಾಗಬೇಕಾಗಿದೆ. ನಮ್ಮ ದೇಶದ ಗಡಿರಕ್ಷಣೆ ನಮ್ಮ ಪ್ರಥಮ ಕಾರ್ಯವೆಂದ. ಪ್ರತಿ ಭಾರತೀಯನೂ ಅರಿಯಬೇಕು.

ಭಾರತವು ಮೊದಲಿನಿಂದಲೂ ಶಾಂತಿ-ಸದಾಚಾರ ಹಾಗೂ ಸಹಯೋಗ ನೀತಿರಾಷ್ಟ್ರವಾಗಿದೆ. ಪರರಾಷ್ಟ್ರದ ಮೇಲೆ ಆಕ್ರಮಣ ನಡೆಯಿಸಿದ ಚರಿತ್ರೆ ಭಾರತದ ಯಾವ ರಾಜರ ಇತಿಹಾಸದಲ್ಲಿಯೂ ಚಿತ್ರಿಸಿಲ್ಲ!!ಆದರೆ ವಿದೇಶೀಯರಿಂದಲೂ ಯವನರಿಂದಲೂ ಮ್ಲೇಚ್ಛರಿಂದಲೂ ದೇಶದ ಮೇಲೆ ಅತ್ಯಾಚಾರ ಅನ್ಯಾಯ ನಡೆದಕಾಲದಲ್ಲಿಸ್ವರಕ್ಷಣೆ ಹಾಗೂ ದೇಶದ ಸ್ವಾತಂತ್ರ್ಯತೆಯ ಬಗ್ಗೆಅವಶ್ಯವಾಗಿ ಭಾರತೀಯರು ಹೋರಾಡಿ ತಮ್ಮ ವೀರತ್ವಹಾಗೂ ಅಪ್ರತಿಮ ಸಾಹಿತ್ಯ ಕೃತ್ಯಗಳನ್ನು ತೋರಿಸಿ ತಮ್ಮ ಪ್ರತಿಷ್ಠೆಯನ್ನು ಉಳಿಸಿಕೊಂಡಿದ್ದಾರೆ. ತಮ್ಮ ತಮ್ಮೊಳಗೆ ಪಕ್ಷಪಂಗಡಗಳಲ್ಲಿ ಯಾವದೇ ಭಿನ್ನಾಭಿಪ್ರಾಯವಿದ್ದರೂ— ವಿದೇಶೀಯ ಆಕ್ರಮಣದ ವಿರುದ್ಧ ಏಕಮತದಿಂದ ಹೋರಾಡಿ ದೇಶದ ರಕ್ಷಣೆಯನ್ನು ಭಾರತೀಯರು ಅಂದಿನಿಂದಲೂ ಮಾಡಿಕೊಂಡು ಬರಿದಿದ್ದಾರೆ— ಚೀಣೀಯರ ಆಕ್ರಮಣದಿಂದ ನಾವು ಧೃತಿಗುಂದದೆ ದೇಶ ರಕ್ಷಣೆಗೆ ತನು-ಮನ-ಧನದಿಂದ ನೆರವಾಗ ಬೇಕು. ವೃದ್ಧ ಕಾವಲುಗಾರ ಜವಾಹರಲಾಲ ನೆಹ್ರುರವರ ವೀರವಾಣಿ ನಮ್ಮೆಲ್ಲರ ಉಸಿರಾಗಿದೆ. ರುದ್ರಭೂಮಿ ಭಾರತದಲ್ಲಿ ಶಾಂತಿಸ್ಥಾಪನೆ ಅವಶ್ಯಕ. ಗಡಿಭಾಗದಲ್ಲಿಯ ಭೀಕರ ಸಮಸ್ಯೆ ಈಗೊಂದಲ ಚಿಕ್ಕ ಮಗುವಿನೋಪಾದಿಯಲ್ಲಿದೆ. ಅದನ್ನು ಈಗಲೇ ಬಗೆಹರಿಸಲು ನಾವು ಸನ್ನದ್ಧರಾಗ ಬೇಕು. ದೇಶರಕ್ಷಣೆಗೆ ನಮ್ಮ ಅಳಿಲ ಸೇವೆ ಸಲ್ಲಿಸ ಬೇಕು!!

ದೀಪಾವಳಿ ಶುಭಾಶಯಗಳು

SR

QUALITY BEEDIES

S. R. BEEDI WORKS
UDIPI, S. K.

ಕರ್ನಾಟಕ ಬ್ಯಾಂಕ್

ಪ್ರಗತಿಯು ಪ್ರಕೃತಿಯ ಗುಣಧರ್ಮ;
ಗಳಿಸಿ ಉಳಿಸಿ ಬೆಳೆಸುವುದು ಜಾಣತನ.

ದಿನನಿತ್ಯವಾಗಲಿ, ತಿಂಗಳುಗಟ್ಲೆಯಾಗಲಿ ನಿಮ್ಮ ಗಳಿಕೆಯಲ್ಲೊಂದಿಷ್ಟು ಉಳಿಕೆ ಮಾಡುತ್ತ ಬಂದರೆ
ಕಾಲಕ್ರಮೇಣ ಅದು ವೃದ್ಧಿಯಾಗಿ ದೊಡ್ಡ ನಿಧಿಯಾಗುವುದು;
ನಿಮ್ಮ ಆಪತ್ಕಾಲದ ಕಗ್ಗತ್ತಲೆಯಲ್ಲಿ ಅದುವೇ

ಬೆಳಕಿನ ದೀಪಾವಳಿ!

ನಿಮ್ಮ ಉಳಿತಾಯವನ್ನು———

ಸೇವಿಂಗ್ಸ್ ಬ್ಯಾಂಕ್ ಖಾತೆಯಲ್ಲಾಗಲಿ, ಕ್ಯುಮುಲೇಟಿವ್ ಠೇವಣಾತಿಯಲ್ಲಾಗಲಿ,
ಹನಿ ಡಿಪಾಸಿಟ್‌ನಲ್ಲಾಗಲಿ, ಫಿಕ್ಸೆಡ್ ಡಿಪಾಸಿಟ್‌ನಲ್ಲಾಗಲಿ

———**ವಿನಿಯೋಗಿಸಿರಿ.**

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ:

THE KARNATAKA BANK LIMITED
Registered Office: MANGALORE—3

K. N. BASRI, *B. A., A. C. A.*,
General Manager.

K. S. N. ADIGA, *B. A., B. L.*,
Chairman.

ದೀಪಾವಳಿ........



ಶುಭಾಶಯಗಳು !

ನವಜೀವನ, ನವಚೇತನ
ನವೋತ್ಸಾಹದ ಸಂಕೇತ—
ದೀರ್ಘ ಕಾಲದ ಅನುಭವ
ಶೀಘ್ರ ಕಾರ್ಯದ ಪ್ರತೀಕ—

ನವಜೀವನ ಟೈಲ್ ವರ್ಕ್ಸ್

ಪುತ್ತೂರು, ಕಲ್ಯಾಣಪುರ (ಉಡುಪಿ)

1963ನೇ ಅಕ್ಟೋಬರ 23ರಂದು ಹಂಚಿನ ಉತ್ಪಾದನೆಗೆ ಪ್ರಾರಂಭ ಮಾಡಿದೆ
ಹಂಚು ಉತ್ಪಾದನಾ ರಂಗದಲ್ಲಿ ದೃಢ ಸಂಕಲ್ಪದ ದಿಟ್ಟ ಹೊಸ ಹೆಜ್ಜೆ ಇಟ್ಟಿದೆ
ಸರ್ವರ ಸೌಹಾರ್ದಮಯ ಸಹಕಾರ ನಿರಂತರವಾಗಿರಲೆಂದು ದೀಪಾವಳಿ ಶುಭಾಶಯದೊಡನೆ ಬಯಸುವ

ಬಿ. ಜಗಜ್ಜೀವನದಾಸ ಶೆಟ್ಟಿ, *L. M. E.*

NAVA-JEEVAN TILE WORKS,

PUTTUR, KALLIANPUR P. O., S. K.

Regd. No. B. G. 176
LICENCE NO. 31
Licenced to Post without Prepayment

Edited, Printed & Published by K. H. Shetty at the Navayuga Press, Udipi, S. India.

ಅಖಿಲ ಕರ್ನಾಟಕದ
ಪ್ರಸಿದ್ಧ ಕತೆಗಾರರ
ಮಧುವನ
ಕಥಾ ಸಂಕಲನ
'ಶಿರಿಯರ ಪ್ರಪಂಚ'ದ
ಅಪೂರ್ವ ಪ್ರಕಟಣೆ
ಬೆಲೆ: ರೂ. ಮೂರು
ನವಭಾರತ ಪುಸ್ತಕ ಭಂಡಾರ
ಉಡುಪಿ

ನವಯುಗ

Estd. 1921 ಸ್ಥಾಪನೆ
Regd. No. B.G. 176
Vol. 43 No. 12

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
NAVAYUGA— NATIONAL WEEKLY
ಉಡುಪಿ, 21—11—1963 ಗುರುವಾರ

13 ನ. ಪೈಸೆ
ವಾ. ಚಂದಾ ರೂ. 6-75
ಸಂಪುಟ ೪೩ ಸಂಚಿಕೆ ೧೨

ಯಾವತ್ತೂ
ಪ್ರಿಂಟಿಂಗ್ ಕೆಲಸಗಳನ್ನು
ಮಾಡಿಕೊಡಲಾಗುವುದು
ಕ್ಲಪ್ತ ಸಮಯದಲ್ಲಿ
ಮಿತ ದರದಲ್ಲಿ ಉತ್ತಮ
ಮುದ್ರಣ
ಕೆಲಸಗಳಾಗಬೇಕೆ?
ಸಂದರ್ಶಿಸಿರಿ ಯಾ ವಿಚಾರಿಸಿರಿ
ನವಯುಗ ಪ್ರೆಸ್,
ಪಾಲುಕೋಟೆ, ಉಡುಪಿ

ಪರೀಕ್ಷಾಭೂತವು

ಶಿಕ್ಷಣವನ್ನು ಪರಿಣಾಮಗೊಳಿಸುವುದೆ?

ಇಂದು ನಮ್ಮ ವಿದ್ಯಾರ್ಥಿಗಳು ಪಡೆಯುತ್ತಿರುವ ಶಿಕ್ಷಣದ ಮಟ್ಟವು ಇಳಿಮುಖವಾಗುತ್ತಿದೆಯೆಂದೂ ಇದನ್ನು ಉನ್ನತೀಕರಿಸುವುದು ಅತ್ಯವಶ್ಯವೆಂದೂ ಒಂದು ಪಕ್ಷದವರ ವಾದ ದಿನದಿಂದ ದಿನಕ್ಕೆ ಇಳುವರಿಯಾಗುತ್ತಿರುವಂತೆ ಇದು ಗೋಚರವಾಗುವುದು ನಿಜವಾದರೂ ವಾಸ್ತವಿಕವಾಗಿ ವಿಶಾಲ ತಳಹದಿಯ ಸಾರ್ವತ್ರಿಕ ಶಿಕ್ಷಣದ ಈ ಕಾಲದಲ್ಲಿ ಅದು ಇಳಿಮುಖವಾಗಿಲ್ಲವೆನ್ನುವವರೂ ಇದ್ದಾರೆ. ಆದರೂ ವಿದ್ಯಾರ್ಥಿಗಳಲ್ಲಿ ತಮ್ಮ ಶಿಕ್ಷಣದಲ್ಲಿ ಆಸಕ್ತಿಯನ್ನು ಹೆಚ್ಚಿಸಿ, ಅವರು ಉತ್ತಮ ರೀತಿಯಲ್ಲೇ ತಮ್ಮ ಅಧ್ಯಯನವನ್ನು ಮುಂದುವರಿಸಿ ಅವಧ್ಯಂತದ ಪರೀಕ್ಷೆಗಳಲ್ಲಿ ಉತ್ತಮ ರೀತಿಯಲ್ಲಿ ತೇರ್ಗಡೆ ಹೊಂದಿದರೆಂದರೆ, ಆಗ, ಶಿಕ್ಷಣ ಮಟ್ಟವು ಉನ್ನತವಾಗಿದೆಯೆಂದು ಮೊದಲ ಪಕ್ಷದವರು ಅಭಿಪ್ರಾಯ ಪಡುತ್ತಾರೆ. ಇದಕ್ಕೆ ಅವರು ಒಂದು ಹೊಸ ಕ್ರಮವನ್ನು ಸೂಚಿಸುತ್ತಾರೆ.

ಅಧ್ಯಯನದಲ್ಲಿ ಆಸಕ್ತಿ

ಇದೀಗ ಕೆಲವು ರಾಜ್ಯಗಳಲ್ಲಿ ಒಂದು ವರ್ಷದಲ್ಲಿ ತ್ರೈಮಾಸಿಕ, ಅರ್ಧವಾರ್ಷಿಕ ಮತ್ತು ವಾರ್ಷಿಕವೆಂದು ಮೂರು ಪರೀಕ್ಷೆಗಳು ನಡೆಯುತ್ತವೆಯಾದರೂ ಕೊನೆಯದರಲ್ಲಿ ವಿದ್ಯಾರ್ಥಿಯು ಪಡೆದ ಗುಣಗಳೇ ಆತನು ಮುಂದಿನ ತರಗತಿಗೆ ಎತ್ತಗಡೆ ಪಡೆಯಲು ಅರ್ಹ- ಅನರ್ಹನೆಂದು ಸಾರುತ್ತವೆ. ಕೆಲವೆಡೆ ನಾಲ್ಕು ಪರೀಕ್ಷೆಗಳು ಜರಗುವವಾದರೂ ಅಲ್ಲಿಯೂ ವಾರ್ಷಿಕ ಪರೀಕ್ಷಾಗುಣಗಳಿಗೇನೇ ಪ್ರಾಧಾನ್ಯ. ಆದುದರಿಂದ ವಿದ್ಯಾರ್ಥಿಯು ತನ್ನ ಭವಿಷ್ಯ ನಿರ್ಧರಿಸುವ ನಿರ್ಣಾಯಕ ಪರೀಕ್ಷೆಗಾಗಿ ಓದುತ್ತಾನೆ; ಎಂತಾದರೂ ಜಡಪಡಿಸಿ ಉತ್ತೀರ್ಣನಾಗುವ ಪ್ರಯತ್ನ ಮಾಡುತ್ತಾನೆ; ಇದರಿಂದ, ಆತನ ಆಸಕ್ತಿಯು ತನ್ನ ಶಿಕ್ಷಣದಲ್ಲಿ —ಅಧ್ಯಯನದಲ್ಲಿ— ಇಡಿಯ ವರ್ಷ ವಿರುವುದಿಲ್ಲ; ಕೊನೆಯ ಕೆಲವು ತಿಂಗಳುಗಳಲ್ಲಿ ಮಾತ್ರ ಇರಬಲ್ಲುದು. ಇದು ಸ್ವಾಭಾವಿಕ. ಇದಕ್ಕಾಗಿ ಪ್ರತಿ ಪರೀಕ್ಷೆಗಳ ಗುಣಗಳೂ ವಿದ್ಯಾರ್ಥಿಯ ಎತ್ತಗಡೆಗೆ ಕಾರಣವಾಗುತ್ತವೆಯೆಂದು ಪರಿಗಣಿಸಿದರೆ, ಆಗ, ಆತನು ಇಡಿಯ ವರ್ಷವೂ ಅಧ್ಯಯನದಲ್ಲಿ ಮನಸ್ಸಿಡ ಬೇಕಾಗುತ್ತದೆ.

ಹೆಚ್ಚಿನ ಪರೀಕ್ಷೆಗಳು

ಇದಕ್ಕಾಗಿ ಈ ಪಕ್ಷದವರು ಹೊಸ ಕ್ರಮದ ವಿಧಾನವನ್ನು ಮುಂದಿಟ್ಟಿದ್ದಾರೆ: ವರ್ಷದಲ್ಲಿ ಮೂರು ಪರೀಕ್ಷೆಗಳು ಮತ್ತು ಎರಡು ಪರೀಕ್ಷೆಗಳ ನಡುವೆ ಒಂದೊಂದು ಸಂಶೋಧನಾ ಪರೀಕ್ಷೆಗಳು— ಹೀಗೆ ಒಟ್ಟು ಆರು ಪರೀಕ್ಷೆಗಳನ್ನು ನಡೆಸಬೇಕು. ಸಾಮಾನ್ಯವಾಗಿ ಸಪ್ಟೆಂಬರ, ದಶಂಬರ ಮತ್ತು ಮಾರ್ಚ ತಿಂಗಳ ಕೊನೆಯಲ್ಲಿ ಪರೀಕ್ಷೆಗಳು ನಡೆಯುವವಾದರೆ, ಆಗೋಸ್ತು, ನವಂಬರ ಮತ್ತು ಫೆಬ್ರವರಿಗಳ ಪ್ರಥಮಾರ್ಧದಲ್ಲಿ ಸಂಶೋಧನಾ ಪರೀಕ್ಷೆಗಳು ನಡೆಯಬೇಕು. ಪ್ರತಿ ಸಂಶೋಧನಾ ಪರೀಕ್ಷೆಗೆ ೨೦ರಂತೆ ಮೂರಕ್ಕೆ ೬೦ ಗುಣಗಳು, ತ್ರೈಮಾಸಿಕ ಮತ್ತು ಅರ್ಧವಾರ್ಷಿಕ ಪರೀಕ್ಷೆಗಳಿಗೆ ಪ್ರತಿಯೊಂದಕ್ಕೆ ೩೦ರಂತೆ ೬೦ ಗುಣಗಳು ಮತ್ತು ವರ್ಷಾಂತ್ಯದ ಪರೀಕ್ಷೆಗೆ ೮೦ ಗುಣಗಳೆಂದು ಪರಿಗಣಿಸಿ, ಈ ಪ್ರಣಾಳಿಯಲ್ಲಿ ವಿದ್ಯಾರ್ಥಿಯು ಪಡೆದ ಗುಣಗಳನ್ನು ಆಧರಿಸಿ, ಆತನ ಉತ್ತೀರ್ಣತೆಯ ಅನುತ್ತೀರ್ಣತೆಯನ್ನು ನಿರ್ಧರಿಸಬೇಕು. ಈ ವಿಧಾನದಿಂದ ವಿದ್ಯಾರ್ಥಿಯು ಇಡಿಯ ವರ್ಷವೂ ಒಂದಲ್ಲ ಒಂದು ಪರೀಕ್ಷೆಗೆ ತಯಾರು ಮಾಡುತ್ತಿರಲೇ ಬೇಕಾದುದರಿಂದ ಆತನು ಆಸಕ್ತಿಯಿಂದ ಕಲಿಯುವಂತಾಗುವುದು.

ಲಾಭಾಂಶಗಳು

ಉಪರೋಕ್ತ ನೂತನ ವಿಧಾನವು ವಿದ್ಯಾರ್ಥಿಯ ಅಧ್ಯಯನ ದೃಷ್ಟಿಯಿಂದ ಉಪಯುಕ್ತವಾಗಿದೆ. ಆತನು ತನ್ನ ಅಭ್ಯಾಸದಲ್ಲಿ ಅನಾಸಕ್ತಿ ತಳೆಯದೆ ಸೋಮಾರಿತನ ತೋರಿಸದೆ ಸದಾ ತಯಾರಿಯಲ್ಲೇ ಕಳೆಯುವಂತಾಗುವುದು. ಪ್ರತಿ ಪರೀಕ್ಷೆಯಲ್ಲಿಯೂ ತಾನು ಗಳಿಸುವ ಗುಣಗಳು ಉತ್ತೀರ್ಣತೆಯ ಒಂದೊಂದೇ ಸೋಪಾನವಾದುದರಿಂದ ಪಟ್ಟು ಹಿಡಿದು ಅಧ್ಯಯನ ಮಾಡಬೇಕಾಗುವುದು. ಓದಿ ತಿಳಿದುಕೊಳ್ಳಲಾರದವನು ಕಂಠಪಾಠ ಮಾಡಿಯಾದರೂ ಬರೆಯಲೇ ಬೇಕಾಗುವುದು. ಇಲ್ಲವಾದರೆ, ತನ್ನ ಕಾಲಿಗೆ ತಾನೇ ಕೊಡಲಿಯೇಟು ಹಾಕಿಕೊಂಡಂತೆ. ಅನಾರೋಗ್ಯ ಮತ್ತಿತರ ಅನಿರೀಕ್ಷಿತ ಅಡೆತಡೆಗಳಿಂದ ವಿದ್ಯಾರ್ಥಿಯು ಒಂದು-ಎರಡು ಪರೀಕ್ಷೆಗಳಲ್ಲಿ ಅನುಪಸ್ಥಿತನಿದ್ದರೂ ಬುದ್ಧಿವಂತ ವಿದ್ಯಾರ್ಥಿಯು ಆವಶ್ಯಕ ಗುಣಗಳನ್ನು ಪಡೆದು ಉತ್ತೀರ್ಣನಾಗುವುದು ಸಾಧ್ಯ. ಇದಕ್ಕಾಗಿ ಆತ ಯಾರ ಕೈಕಾಲನ್ನೂ ಹಿಡಿಯುವ ಆಗತ್ಯವಿಲ್ಲ. ಅಧ್ಯಯನದಲ್ಲಿಯೇ ಆಸಕ್ತನಾದ ವಿದ್ಯಾರ್ಥಿಯ ಹೆತ್ತವರಿಗೂ ಹಲವಾರು 'ಸಮಸ್ಯೆ'ಗಳು ಕಡಿಮೆಯಾದಂತಾಗುವುದು.

ಪರೀಕ್ಷೆಯ ಭೂತಹಾವಳಿಯೆ?

ಆದರೆ, ಈ ಪ್ರಣಾಳಿಯಿಂದ ಕೆಲವೊಂದು ಅನಿಷ್ಟ ಪರಿಣಾಮಗಳೂ ಇಲ್ಲದಿಲ್ಲ. ಇಂದು ನಾವು ವಿದ್ಯಾರ್ಥಿಯು 'ಕೇವಲ ಬುದ್ಧಿವಂತ'ನಾಗುವುದನ್ನೇ ನಮ್ಮ ಉದ್ದೇಶವಾಗಿಟ್ಟುಕೊಂಡಿಲ್ಲ. ನಾವೀಗ ನಡೆಸುವ ಪರೀಕ್ಷೆಗಳ ವಿಧಾನಗಳಲ್ಲೂ ಸಾಕಷ್ಟು ಸುಧಾರಣೆ ಮಾಡಿಕೊಂಡಿದ್ದೇವೆ. ವಿಷಯವನ್ನು ವಿದ್ಯಾರ್ಥಿಯು ಯಾವ ಪ್ರಮಾಣದಲ್ಲಿ ಗ್ರಹಣ ಮಾಡಿದ್ದಾನೆಯೆಂಬುದನ್ನು ಅಳೆಯುವ ಮಾನದಂಡವೆಂದು ಪರೀಕ್ಷೆ ನಡೆಸುತ್ತೇವೆಯೇ ಹೊರತು, ಆತನ ಜಾಣಾಕ್ಷತನವನ್ನು ಅಳೆಯುವುದಕ್ಕಲ್ಲ. ಹಾಗಿರುವಾಗ, ಒಂದಲ್ಲ ಇನ್ನೊಂದು ಪರೀಕ್ಷೆಗೆ ತಯಾರು ಮಾಡುವುದು ವಿದ್ಯಾರ್ಥಿಯ ಕರ್ತವ್ಯವೆಂದು ನಾವು ತಿಳಿದುಕೊಂಡರೆ, ನಮ್ಮ ಇಂದಿನ ಉದ್ದೇಶಕ್ಕೆ ಭಂಗಬರುತ್ತದೆ; ಈ ಉದ್ದೇಶವನ್ನೂ ನಾವು ಪರಿವರ್ತಿಸಿಕೊಳ್ಳಬೇಕಾಗುತ್ತದೆ. ಇನ್ನು, ಇಂದು ನಮ್ಮ ಮಕ್ಕಳು ಪುಸ್ತಕ ವಿದ್ಯೆಯನ್ನು ಕಲಿತರೆ ಸಾಕು ಎಂದು ನಾವು ತಿಳಿದಿಲ್ಲ. ಪಾಠೇತರ ಚಟುವಟಿಕೆಗಳಲ್ಲಿ ಶಾರೀರಿಕ ಶ್ರಮದಲ್ಲಿ, ಲೋಕ ವ್ಯವಹಾರದಲ್ಲಿ, ಆಟ—ಓಟಗಳಲ್ಲಿ, ಮತ್ತೀಗ ಸೈನಿಕ ಶಿಕ್ಷಣದಲ್ಲಿ ಕೂಡ ಅವರು ಪಳಗಬೇಕೆಂದು ನಾವು ಬಯಸುತ್ತೇವೆ. ಒಬ್ಬನು ಪಾಠ್ಯ ವಿಷಯಗಳಲ್ಲಿ ಮಾತ್ರವಲ್ಲದೆ ತನಗೆ ಅಭಿರುಚಿಯಿರುವ ಮತ್ತಿತರ ಕಲೆಗಳನ್ನೂ ಕಲಿತುಕೊಳ್ಳಬೇಕು, ಸ್ವತಂತ್ರ ಭಾರತದಲ್ಲಿ ನೌಕರಿ ಹಿಡಿಯುವುದು ಮಾತ್ರ ಪ್ರಜೆಯ ಕರ್ತವ್ಯವಲ್ಲ; ಸ್ವಾವಲಂಬಿ ಜೀವನದಲ್ಲಿ ಆಸಕ್ತಿ ಹುಟ್ಟಿಸುವುದು ಮತ್ತದನ್ನು ಸಾಧಿಸಿ ಯಶಸ್ವಿಯಾಗುವುದೂ ಆಗತ್ಯವೆಂದು ನಾವನ್ನುತ್ತೇವೆ. ಹಾಗಿರುವಾಗ ಪರೀಕ್ಷೆಗಳಿಗೆ ಅತ್ಯಧಿಕ ಮಹತ್ವವನ್ನು ನಾವಿತ್ತರೆ, ವಿದ್ಯಾರ್ಥಿಗಳಲ್ಲಿ ತಲೆಯ ಮೇಲೆ ಪರೀಕ್ಷಾಭೂತವನ್ನು ಸವಾರಿ ಮಾಡಬಿಟ್ಟರೆ, ಅವರು ಪಾಠೇತರ ಚಟುವಟಿಕೆಗಳಲ್ಲಿ ಆಸಕ್ತಿ ತೋರುವುದು ಸಾಧ್ಯವೆ? ನಮ್ಮ ವಿದ್ಯಾರ್ಥಿಗಳು ಕಲಿತುಕೊಳ್ಳಬೇಕಾದ ಆವಶ್ಯಕ ಪಾಠ್ಯ ವಿಷಯಗಳ ಸಂಖ್ಯೆಯೂ ಪರಿಮಾಣವೂ ಬೆಳೆಯುತ್ತಿರುವಾಗ, ಎಲ್ಲವನ್ನೂ ಸರಿಗೂಡಿಸಿ ಮುನ್ನಡೆಯುವುದು ಅವರಿಗೆ ಸಾಧ್ಯವೆನಿಸೀತೆ—ಊಹನೆಗೂ ಮಿಗಿಲಾದ ವಿಷಯವಿದು.



ಬಿಳಿ ತುಂಬಿದ ಯುವಕ—
ಜನನಾಯಕ— ನೆಹರು

ಅಧ್ಯಾಪಕರ ಮೇಲೆ ಹೊರೆ

ಇನ್ನು ಅಧ್ಯಾಪಕರ ದೃಷ್ಟಿಯಿಂದಲೂ ಈ ಪ್ರಣಾಳಿಯನ್ನು ವಿವೇಚಿಸಬಹುದು. ಅಧ್ಯಾಪಕನು ಹೈಸ್ಕೂಲು ಮಟ್ಟದಲ್ಲಿ ಇಂದು ಕಡಿಮೆಯೆಂದರೆ ವಾರದಲ್ಲಿ೩೦—೩೩ ತಾಸುಗಳ ಕಾಲ ಪಾಠ ಪ್ರವಚನ ನಡೆಸಬೇಕಾಗುತ್ತದೆ. ಎಂದರೆ, ಶಾಲಾದಿನದಲ್ಲಿ ಆತನಿಗೆ ಒಂದು ತಾಸಿನಷ್ಟು ವಿರಾಮ ದೊರೆಯುವುದು ದುಸ್ತರ. ತನ್ನ ಪ್ರವಚನದ ತಯಾರಿಗಾಗಿ ಆತ ಶ್ರಮಿಸಬೇಕಾಗುತ್ತದೆ. ಇಂದಿನ ಪರಿವರ್ತನಶೀಲ ಜಗತ್ತಿನ ಆಗುಹೋಗುಗಳನ್ನು ಆತ ಅರಿತಿರಲೇ ಬೇಕಾಗಿದೆ. ಇಲ್ಲವಾದರೆ, ಆತನ ಪರಿಸ್ಥಿತಿ ಗೋಳಿನಲ್ಲಿ ಬೀಳುತ್ತದೆ. ಪ್ರಬಂಧಗಳ ತಿದ್ದುವಿಕೆ, ಮತ್ತಿತರ ಮನೆಗೆಲಸಗಳ ಪರಿಶೀಲನೆಯನ್ನು ಆತನು ಮಾಡಬೇಕಾಗಿದೆ. ತನ್ನ ಆರ್ಥಿಕ ದುಸ್ಥಿತಿಯ ಕಾರಣದಿಂದ ಇನ್ನಿತರ ಉಪಕಸುಬನ್ನು ಇಟ್ಟುಕೊಂಡು ಅಧ್ಯಾಪಕರೂ ಹಲ

(೯ನೇ ಪುಟ ನೋಡಿರಿ)

ಐತಿಹಾಸಿಕ ನಾಟಕ

ಗಜಪತಿ ನಂದಿನಿ

ಬರೆದವರು: "ನವಗಿರಿನಂದ"

(ತಾ ೭ರ ಸಂಚಿಕೆಯಿಂದ ಮುಂದುವರಿದುದು)

ದೃಶ್ಯ—೨೦

ಪ್ರತಾಪರುದ್ರ ಗಜಪತಿಯ ಅಂತಃಪುರ.

(ಸಂಜೆಯವೇಳೆ ಪ್ರತಾಪರುದ್ರ ಗಜಪತಿಯೂ, ಜಗನ್ಮೋಹಿನಿಯೂ ಕುಳಿತು ಕೊಂಡಿರುವರು.)

ಪ್ರತಾಪರುದ್ರ— ಕುಮಾರಿ (ಮಗಳ ಮುಂಗುರುಳು ನೀವುತ್ತ) ನನ್ನ ಮುಂದೆ ಲಜ್ಜೆಪಡಬೇಡ ತಾಯಿ. ನೀನು ವಿವಾಹವೇ ಬೇಡವೆಂದುಪಟ್ಟು ಹಿಡಿದುದರಿಂದ ಈ ವರೆಗೆ ನಿರುಪಾಯನಾದೆ, ಹೇಳಮ್ಮ, ನೀನು ಬಣ್ಣಿಸುತ್ತಿರುವ ಆ ರಾಜವರ್ಮನಿಗೇ ನಿನ್ನನ್ನು ಕೊಟ್ಟು ವಿವಾಹ ಮಾಡಿಸಿಬಿಡಲೇ?

ಜಗನ್ಮೋಹಿನಿ — (ಲಜ್ಜೆಯಿಂದ) ಮಾಡಿಸಿಬಿಡಿ ಅಪ್ಪಾ. ಆ ಯೋಗೀಶ್ವರರ ಸನ್ನಿಧಾನದಲ್ಲಿ ನಾನು ಅತನನ್ನೆ ಪತಿಯಾಗಿ ಭಾವಿಸಿ ಬಿಟ್ಟಿದ್ದೇನೆ,

ಪ್ರತಾಪ— ಒಳ್ಳೇದು ಮಗಳೆ, ನಿನ್ನ ಪ್ರೇಮವು ಯೋಗ್ಯ ಪಾತ್ರಕ್ಕೇ ಸೇರುವುದೆಂದು ನನಗೆ ನಂಬುಗೆಯಿದೆ. ಅವನು ಯಾವಾಗ ತನ್ನ ನಿಜ ನಾಮಧೇಯವನ್ನು ಪ್ರಕಟಪಡಿಸಿ ನಿನ್ನನ್ನು ವರಿಸುತ್ತಾನಂತೆ?

ಜಗನ್ಮೋಹಿನಿ— ಕೃಷ್ಣದೇವರಾಯರನ್ನು ಬಂದಿಯಾಗಿ ಮಾಡಿದ ಕೂಡಲೇ ಎಲ್ಲವನ್ನೂ ಪ್ರಕಟಪಡಿಸುವುದಾಗಿ ಅಪ್ಪಣೆಕೊಡಿಸಿದ್ದಾರೆ.

ಪ್ರತಾಪ— ಒಳ್ಳೇದು ಮಗಳೇ, ನೀನು ಆ ರಾಜವರ್ಮನಿಗೆ ನಿನ್ನ ಕೈಯಾರೆ ಪತ್ರ ಬರೆದಿರುವೆನೆಂದೆಯಲ್ಲಾ; ತಡೆ, ಮೊದಲು ನಮ್ಮ ಆಶ್ರಯಕ್ಕೆ ಬಂದಿರುವ ಆ ಚಿನ್ನಾಳನ್ನು ಕರೆ.

(ಜಗನ್ಮೋಹಿನಿ ಹೋಗಿ ಚಿನ್ನಾದೇವಿಯನ್ನು ಕರೆ ತರುವಳು. ಚಿನ್ನಾದೇವಿ ಪ್ರತಾಪರುದ್ರನಿಗೆ ನಮಸ್ಕರಿಸುವಳು.)

ಪ್ರತಾಪ— ತಬ್ಬಲಿ ಹೆಂಗುಸಾದ ನೀನು ನನ್ನ ಮಗಳಿಗೆ ಉಪಕಾರ ಮಾಡಲು ಬಂದಿರುವಿಯೊ?

ಚಿನ್ನಾ— ಅವಳಿಗೆ ಮಾತ್ರವಲ್ಲ ಪ್ರಭೂ, ಉತ್ಕಲ ರಾಜ್ಯಕ್ಕೇ ನನ್ನ ಈ ದೇಹದಿಂದ ಉಪಕಾರವಾಗಲಿ. ನಿಮ್ಮ ವೈರಿ ನನಗೂ ವೈರಿಯೇ, ನಿಮ್ಮ ಕುಮಾರಿಯನ್ನು ಬಲವಂತವಾಗಿ ಎಳೆದೊಯ್ಯಲು ಬರುವವನನ್ನು ನನ್ನ ಸೌಂದರ್ಯದಿಂದ ಮೋಸಪಡಿಸುವುದು ದೋಷವಾಗದು ಪ್ರಭು. ನಾನಂತೂ ಪತಿತೆ, ಭ್ರಷ್ಟೆ, ನನ್ನಿಂದ ಇಷ್ಟಾದರೂ ಉಪಕಾರವಾಗಲಿ,

ಪ್ರತಾಪ— ಸರಿ, ನಾಡದು ಆದಿತ್ಯವಾರ ಮಧ್ಯ ರಾತ್ರಿಯಲ್ಲಿ ನಿನಗೂ ಕೃಷ್ಣದೇವರಾಯನಿಗೂ ವಿವಾಹವಾಗುತ್ತದೆ. ಒಳಗೆ ಹೋಗಿರು.

(ಚಿನ್ನಾದೇವಿ ನಮಸ್ಕರಿಸಿ ಹೋಗುವಳು.)

ಜಗನ್ಮೋಹಿನಿ— ಅಪ್ಪಾ, ಪತ್ರ ಓದುತ್ತೇನೆ, ಕೇಳಿ.

ಪ್ರತಾಪ— ಹೌದು, ಓದಮ್ಮ. ಅಂದು ನೀನು ಕೃಷ್ಣದೇವನಿಗೆ ಬರೆದ ಪತ್ರವನ್ನು ನಾನು ನೋಡದ್ದರಿಂದಲೇ ಈ ಸಂದಿಗ್ಧ ಪರಿಸ್ಥಿತಿ ಪ್ರಾಪ್ತವಾಯಿತು. ಎಲ್ಲಿ ಓದು.

ಜಗನ್ಮೋಹಿನಿ— ಸ್ವಸ್ತಿ ಶ್ರೀ ಪ್ರಕೃತ ರಾಜವರ್ಮರೆಂದು ಪರಿಚಿತರಾಗಿರುವ ಮಹಾ ಸ್ವಾಮಿಯವರಿಗೆ, ಶ್ರೀ ವೀರಪ್ರತಾಪರುದ್ರ ಗಜಪತೀಸುತೆ ಜಗನ್ಮೋಹಿನೀದೇವಿ ಪ್ರಾರ್ಥಿಸಿ ಬರೆಯುವುದೇನೆಂದರೆ, ನಮ್ಮ ಯೋಗೀಶ್ವರರು ನಿಮಗೆ ಎಲ್ಲಾ ಸಂಗತಿಯನ್ನೂ ತಿಳಿಸುವುದಾಗಿ ಭರವಸೆ ಕೊಟ್ಟಿರುತ್ತಾರೆ. ಆದರೂ ಲಜ್ಜೆಯನ್ನು ಬದಿಗಿರಿಸಿ ನಾನೂ ಒಂದೆರಡೂ ಪ್ರಾರ್ಥನೆ ಮಾಡಿಕೊಳ್ಳುವೆನು,

ನಾವು ತಂತ್ರದಿಂದ ಶತ್ರುವಾದ ಕೃಷ್ಣದೇವನನ್ನು ಹಿಡಿಯಬೇಕೆಂದು ನಾಡದು ಆದಿತ್ಯವಾರ ಮಧ್ಯ ರಾತ್ರಿಯ ಸಮಯವನ್ನು ನಿಶ್ಚಯಿಸಿ ಕೃಷ್ಣ ದೇವರಾಯನಿಗೆ ಸಂಧಿ ಪತ್ರವನ್ನೂ ಬರೆದಿದ್ದೇವೆ. ತಾವು ಆ ಸಮಯಕ್ಕೆ ದಯಮಾಡಿ ಬಂದು, ನನ್ನನ್ನೂ, ತಂದೆಯವರನ್ನೂ, ನಮ್ಮ ಈ ರಾಷ್ಟ್ರವನ್ನೂ ಉದ್ಧರಿಸಿ ಕೊಡಬೇಕು. ಉತ್ತರ ನಿರೀಕ್ಷಿಸುತ್ತಿದ್ದೇನೆ. ಇತಿ ವಿಪದ್ಗ್ರಸ್ತೆ—ಜಗನ್ಮೋಹಿನಿ.

ಪ್ರತಾಪ— ಸರಿಯಾಗಿದೆ ಮಗಳೆ. ಇದನ್ನು ಯೋಗಿವರ್ಯರೆಡೆಗೆ ಕಳುಹಿಸಿ ರಾಜವರ್ಮಂಗೆ ಮುಟ್ಟಿಸುವಂತೆ ಹೇಳು. (ಜಗನ್ಮೋಹಿನಿ ಹೋಗುವಳು) ಯಾರಲ್ಲಿ?

ಸೇವಕ— (ಪ್ರವೇಶಿಸಿ) ಮಹಾ ಪ್ರಭೂ.

ಪ್ರತಾಪ— ಅಮಾತ್ಯ ಜಯಸಿಂಹರನ್ನು ಬರಲಿಕ್ಕೆ ಹೇಳು. (ಯೋಚಿಸುತ್ತಾ ತಲೆದೂಗಿ- ಮುಗುಳ್ನಗುವನು)

ಜಯಸಿಂಹ— (ಬಂದು) ನಮಸ್ಕಾರ ಪ್ರಭೂ,

ಪ್ರತಾಪ— (ಅವನನ್ನು ಕೂಡುವಂತೆ ಸನ್ನೆಮಾಡಿ, ತಾನೂ ಕುಳಿತು) ಮಹಾಮಂತ್ರಿ ಜಯಸಿಂಹ, ಶತ್ರು ಅಜೇಯನಾಗಿದ್ದರೂ ನಾವು ಸಾಹಸವನ್ನು ಬಿಡದೆ ದೃಢನಾಗಿದ್ದರಿಂದ ಈಗ ಶಂಕರನು ನಮಗೆ ಸಹಾಯವನ್ನು ಕರುಣಿಸಿದ್ದಾನೆ.

ಜಯಸಿಂಹ— ಅದೇನು ಪ್ರಭು?

ಪ್ರತಾಪ— ನಮ್ಮ ಕುಮಾರಿ ರಾಜವರ್ಮನೆಂದು ಗುಪ್ತ ನಾಮಧೇಯವನ್ನಿಟ್ಟುಕೊಂಡಿರುವ ನಮ್ಮ ಶತ್ರುವಿನ ಶತ್ರು ವೀರ ಪುರುಷನೊಬ್ಬನನ್ನು ಪತಿಯಾಗಿ ಆರಿಸಿಕೊಂಡಿದ್ದಾಳೆ. ಆ ರಾಜವರ್ಮನು ಉತ್ತಮ ಚಂದ್ರವಂಶದ ಕ್ಷತ್ರಿಯನೆಂದು ಯೋಗೀಶ್ವರರು ತಿಳಿಸಿದ್ದಾರೆ.

ಜಯ— ಓಹೊ! ಒಬ್ಬ ಮಹಾವೀರನು ಬಂದು ನಿಮ್ಮೆಲ್ಲರನ್ನೂ ಉಳಿಸುವನೆಂದು ಆ ಯೋಗೀಶ್ವರರು ಭವಿಷ್ಯ ಹೇಳುತಿದ್ದರಷ್ಟೆ?

ಪ್ರತಾಪ— ಹಾ! ಆ ವೀರನೇ ಈ ರಾಜವರ್ಮ. ಕಾಳಸರ್ಪ ಚಿಹ್ನಾಂಕಿತನಾದ ಅತಿಗುಪ್ತ ಸೈನ್ಯವನ್ನು ಕೂಡಿಸಿಕೊಂಡು ಕೃಷ್ಣದೇವನ ವಿನಾಶಕ್ಕೆ ಹೊಂಚು ಹಾಕುತ್ತಿರುವವನು.

ಜಯ — ಓಹೊ! ಪರಂತು ಹಿಂದೆ ಕೃಷ್ಣದೇವನಿಂದಾದ ಅವಮಾನವನ್ನು ಸಹಿಸದೆ ಶಿವ ಸಮುದ್ರದ ಗಂಗರಾಜನು ಕಾವೇರಿಗೆ ಹಾರಿ ತನ್ನ ಪ್ರಾಣವನ್ನು ನೀಗಿದ್ದನಷ್ಟೆ? ಆ ಗಂಗರಾಜನಿಗೆ ಈ ರಾಜವರ್ಮನು ಸಮೀಪ ಬಂಧುವಾಗಿದ್ದನು.

ಪ್ರತಾಪ— ಎಲ್ಲಾ ತಿಳಿಯುವುದಷ್ಟೆ? ಅಲ್ಲದೆ ಸ್ವಾಮಿ ಕಾರ್ಯಕ್ಕೆ ದೇಹವನ್ನರ್ಪಿಸಲು ಚಿನ್ನಾ ದೇವಿಯೆಂಬ ಪರಮ ಸುಂದರಿಯಾದ ಹೆಂಗುಸೊಬ್ಬಳು ಮುಂದೆ ಬಂದಿದ್ದಾಳೆ. ಅವಳು ನಡು ವಯಸ್ಸಿನವಳಾದರೂ ತರುಣಿಯಂತಿದ್ದಾಳೆ, ಕೃಷ್ಣದೇವನು ಜಗನ್ಮೋಹಿನಿಯನ್ನು ಕಂಡವನಲ್ಲವಾದುದರಿಂದ ಅವಳನ್ನು ಜಗನ್ಮೋಹಿನಿಯಾಗಿ ಮಾಡಿ ಅವನಿಗೆ ಎರೆಹಾಕಿ ಹಿಡಿಯಬೇಕು. ನಮಗಿಂತ ಮೀರಿದ ಬಲಶಾಲಿಯನ್ನು ಹೀಗೆ ಯುಕ್ತಿಯಿಂದ ಹಿಡಿಯುವುದು ತಪ್ಪಾಗದು,

ಜಯ— ತಪ್ಪೇನಿಲ್ಲ. ಬಲವಂತದಿಂದ ಕುಮಾರಿಯನ್ನು ಕೈಹಿಡಿಯಲು ಬರುವುದು ನ್ಯಾಯವೇನು?

ಪ್ರತಾಪ— ಸರಿ, ಕೃಷ್ಣದೇವನಿಗೆ ಸಂಧಿ ಪತ್ರ ಬರೆಯಿರಿ, ನಿನ್ನ ಕೋರಿಕೆಯಂತೆ ಕುಮಾರಿಯನ್ನು ಕೊಟ್ಟು ರಾಜಿಯಾಗಲು ಇಷ್ಟಪಡುತ್ತೇವೆಂದೂ, ನಾಡದು ಆದಿತ್ಯವಾರ ಮಧ್ಯರಾತ್ರಿಯೇ ಸರಿಯಾದ ಮುಹೂರ್ತವೆಂದೂ, ಅದಕ್ಕೆ ಸರಿಯಾಗಿ ಬರಬೇಕೆಂದೂ ಬರೆದು ಕಳುಹಿಸಿರಿ.

ಜಯ— ಒಳ್ಳೆಯದು ಪ್ರಭು.

ದೃಶ್ಯ—೨೧

ಕಟಕದ ಬೀದಿ—ಸಂಜೆಯ ಹೊತ್ತು

ರಾಮಕೃಷ್ಣ— (ಪ್ರವೇಶಿಸಿ) ಆ ಹಾಹಾ! ಒಳ್ಳೇ ಇಂದ್ರಜಾಲವೇ ಆಗುತ್ತದೆ ನಮ್ಮ ರಾಯನ ವಿಜಯ ಕಲ್ಯಾಣ. ರಾಯನು ಅದೋ ದೋ – ದೂರದಲ್ಲಿ ನದಿ ದಾಟಿ ಬರುತಿದ್ದಾನೆ. ಜಗನ್ಮೋಹಿನಿಯ ಪ್ರಾರ್ಥನಾಪತ್ರಕ್ಕೆ ಉತ್ತರ ಕಳುಹಿಸಿದಂತೆ, ಆ ಕಾಳಸರ್ಪ ಚಿಹ್ನಾಂಕಿತ ಬರುತ್ತಾನೆ ಈ ದಾರಿಯಲ್ಲಿ. ನಾನಿಲ್ಲಿಯೇ ಇದ್ದು ಘಟನೆಯ ಬೆಸುಗೆ ಸಡಿಲಿಹೋಗದ ಹಾಗೆ ಕೂಡಿಸುತ್ತೇನೆ. (ಕಾಳ ಸರ್ಪ ಚಿಹ್ನಾಂಕಿತ ಸೇನೆಯವನಾಗಿ ಜಯರಾಂ ಪ್ರವೇಶಿಸುವನು) ಹೊ! ನಮ್ಮ ಜಯರಾಮರೆ, ಹೀಗೇ ಹೋಗಿ. ಅಲ್ಲಿ ಆ ತೋಟದಲ್ಲಿ ತಿಮ್ಮ ಮಹಾಮುನಿ ಯಾಶ್ರಮದಲ್ಲಿ ಜಗನ್ಮೋಹಿನಿ ಕಾದಿದ್ದಾಳೆ. ಅವಳಿಗೆ ಸಂಶಯವಾಗದಂತೆ ವರ್ತಿಸಿ ಕರೆದುಕೊಂಡು ಬನ್ನಿ.

ಜಯರಾಂ— ಒಳ್ಳೇದು. (ಹೋಗುವನ)

ರಾಮಕೃಷ್ಣ— ರಾಯನು ರೂಪಸಿಂಗನಿಗೂ ಅವಸರದ ಆಹ್ವಾನ ಕಳುಹಿಸಿದ್ದಾನಂತೆ ಮುದಗಲ್ಲಿಗೆ. ಆ ರೂಪಸಿಂಗ ಎಲ್ಲಿದ್ದಾನೆಂದು ನನಗೆ ಗೊತ್ತಿಲ್ಲವೆ? ಹ್ಹ ಹ್ಹ ಹ್ಹ! (ಜಯರಾಮನ ಹಿಂದೆ ಸಖೀದ್ವಯರೊಂದಿಗೆ ಜಗನ್ಮೋಹಿನಿಯೂ, ತಿಮ್ಮ ಯೋಗಿಯೂ ಬರುವರು)

ತಿಮ್ಮಯೋಗಿ— ತಾಯಿ, ಜಗನ್ಮೋಹಿನಿ, ಕಾಳಸರ್ಪ ಚಿಹ್ನಾಂಕಿತನೊಂದಿಗೆ ಸುಭದ್ರವಾದ ಸ್ಥಾನಕ್ಕೆ ಹೋಗಿರು. ಯುದ್ಧದ ಗಡಿಬಿಡಿಯನ್ನು ಪ್ರಾರಂಭಿಸುವ ಮುಂಚೆ ನಿನ್ನ ರಕ್ಷಣೆ ಮುಖ್ಯ.

ರಾಮಕೃಷ್ಣ— ಹೌದು ಹೌದೂ! ಅದೋ, ಕೃಷ್ಣದೇವರಾಯ ನದಿ ದಾಟುತಿದ್ದಾನೆ. ರಾತ್ರಿ ಅವನು ನಗರ ಪ್ರವೇಶ ಮಾಡುವುದರೊಳಗೆ ಬಲೆಯೆಲ್ಲಾ ಸಿದ್ಧವಾಗಬೇಕಲ್ಲಾ.

(ಜಗನ್ಮೋಹಿನಿ ಯೋಗಿಗೆ ನಮಸ್ಕರಿಸಿ ಕಾಳಸರ್ಪ ಚಿಹ್ನಾಂಕಿತನೊಂದಿಗೆ ಹೋಗುವಳು)

ರಾಮಕೃಷ್ಣ— ಯೋಗೀಂದ್ರ! ಭಲೇ ಯೋಗೀಂದ್ರ! ಮಹಾಮಾಜಾಲ ಸಂನ್ಯಾಸೀಕೀ ಜೈ!

ಯೋಗಿ— ಛಪ್, ಬಾಯಿ ಮುಚ್ಚೋ! ಯಾರಾದರೂ ದಾರೀಹೋಕರು ಕಂಡಗಿಂದಾರು. (ಅವನನ್ನು ಎಳೆದುಕೊಂಡು ಹೋಗುವನು.)

(ಮುಂದುವರಿಯುವುದು)

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5

2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ

3 ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಛೇರಿ: ಉಡುಪಿ, ದ. ಕನ್ನಡ.

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

ಚೀನಾ—ರಷ್ಯಗಳಲ್ಲಿ

ಸಿಂಕಿಯಾಂಗಿಗಾಗಿ ಹೋರಾಟ

ಭಾರತವನ್ನು ವಿಸ್ತಾರವಾದಿ ರಾಷ್ಟ್ರವೆನ್ನುತ್ತ, ಚೈನಿ ಕಮ್ಯೂನಿಸ್ಟರು ಮೆಲ್ಲ ಮೆಲ್ಲನೆ ಮುಂದಕ್ಕೆ ಬರುತ್ತಿದ್ದಾರೆ. ಇನ್ನೊಂದೆಡೆ ಕೊರಿಯಾ, ವಿಯಟ್ನಾಂ ಮುಂತಾದ ದೇಶಗಳಲ್ಲಿ ಸೈನಿಕರು ನೆಲೆ ಸುವಂತೆ ಮಾಡಿ 'ಕ್ರಾಂತಿ"ಯ ಹೆಸರಿನಲ್ಲಿ ಕಮ್ಯೂನಿಸ್ಟ್ ಕಾಳ್ಗಿಚ್ಚನ್ನು ಹರಡಿಸುತ್ತಿದ್ದಾರೆ. ನೇಪಾಲ, ಬ್ರಹ್ಮದೇಶ, ಪಾಕಿಸ್ತಾನ ಮುಂತಾದೆಡೆಗಳಲ್ಲಿ ಸ್ನೇಹ ಹಸ್ತವೆಂದು ಚೈನಿ ಚೇಳು ತನ್ನ ಕೈಯ್ಯನ್ನು ಕೊಡುತ್ತಿದೆ. ಚೈನಿ ಕಮ್ಯೂನಿಸ್ಟರ ನೆಲದಾಹ ಅಲ್ಲಿಗೆನೇ ನಿಂತಿರುವದಿಲ್ಲ. ಅವರು ಇನ್ನೂ ಉತ್ತರದತ್ತ ದೃಷ್ಟಿ ಹಾಯಿಸಿದ್ದಾರೆ. ಜನವಸತಿ ಇರುವ ಪ್ರದೇಶ ಎಲ್ಲಿದ್ದರೂ ಅತ್ತ ಅವರ ಗೃಧ್ರ ದೃಷ್ಟಿ ಬಿದ್ದಿರುತ್ತದೆ. ಹಾಗಿದ್ದರೂ ತಾನು ಪಂಚಶೀಲವನ್ನು ಅನುಸರಿಸುತ್ತಿರುವದಾಗಿಯೂ ಭಾರತವೇ ಆಕ್ರಮಣ ನಡೆಸುತ್ತಿದೆಯೆಂದೂ ಅಪಪ್ರಚಾರ ಅವ್ಯಾಹತವಾಗಿ ಚೈನಾ ನಡೆಸಿಕೊಂಡು ಬರುತ್ತಿದೆ. ಠಕ್ಕನಿಗೆ ಠಕ್ಕ ಸಾಕ್ಷಿ ಎಂಬಂತೆ ಅವರಿಗೆ ಪಾಕಿಸ್ತಾನ ಹೇಳುತ್ತಿದೆ. ಭಾರತ ಆಕ್ರಮಣ ಮುಂದರಿಸುತ್ತ ಇದೆಯಾದರೂ ತಾನೇ ದಿಲ್ಲಿಗೆ ಹೋಗಿ ಸಂಧಾನ ಮಾತುಕತೆ ಮುಂದರಿಸುವದಾಗಿ ಅವರ ಪ್ರಧಾನಿ ಚೌ ಎನ್. ಲೈ ಹೇಳಿರುವರು. ಹಿಂದೆಯೂ ಅವರು ಸಂಧಾನ ನಡೆಸಿದ್ದರು. ದಿಲ್ಲಿಯಲ್ಲಿ ಪ್ರಧಾನಿಗಳಿಬ್ಬರು ಸ್ನೇಹಾಲಿಂಗನ ಮಾಡಿಕೊಳ್ಳುತ್ತಿದ್ದಂತೆ ಗಡಿಗಳಲ್ಲಿ ಕಾವಲುಗಾರರ ಮೇಲೆ ಕಳ್ಳತನದಿಂದ ಚೈನಿ ಕೆಂಪು ಸೈನಿಕರು ಹಲ್ಲೆ ನಡೆಸಿ, ಭಾರತದ ಪ್ರಧಾನಿ ಜವಾಹರಲಾಲ ನೆಹ್ರೂಜೀಯವರ ಹುಟ್ಟು ಹಬ್ಬದಂದು, ಆ ಕಾವಲುಗಾರರ ಶವಗಳನ್ನು ಬಹುಮಾನವಾಗಿ ಕಳುಹಿಸಿಕೊಟ್ಟಿದ್ದರು. ಈಗಾದರೂ ಅವರು ಮಾಡುವದೇನು? ಚೈನಾ ನಮ್ಮ ಬಳಿ ಮಾತ್ರ ಈ ರೀತಿ ಮಾಡುವದಲ್ಲ, ಸ್ವತಃ ರಷ್ಯಕ್ಕೆನೇ ಆ ರೀತಿ ಮಾಡಿಕೊಂಡು ಬಂದಿರುತ್ತದೆ. ರಷ್ಯಾದ ಬಳಿಯೂ ಒಪ್ಪಂದಕ್ಕೆ ವಿರುದ್ಧವಾಗಿ ಹೋಗಿರುವರು ಚೈನೀಯರು.

ಸಿಂಕಿಯಾಂಗಿನಲ್ಲಿ ಮುಸ್ಲಿಮರು ದಂಗೆ ಏಳುತ್ತಿರುವ, ರಷ್ಯಾಕ್ಕೆ ಓಡಿ ಹೋಗುತ್ತಿರುವ ಹಾಗೂ ಚೈನಾವು ಅಲ್ಲಿದ್ದ ರಷ್ಯಾದ ರಾಯಭಾರಿ ಕಾರ್ಯಾಲಯವನ್ನು ಮುಚ್ಚಿಸಿರುವ ವಿಷಯಗಳನ್ನು ಹಿಂದಿನ ಕೆಲ ಸಂಚಿಕೆಗಳು ಪ್ರಕಟಿಸಿವೆ. ಜಗತ್ತಿನ ಗಮನವನ್ನೇ ಸೆಳೆದುಕೊಂಡಿರುವ ಸಿಂಕಿಯಾಂಗಿನ ಕುರಿತು ಕೆಲ ವಿವರಗಳನ್ನು ಒಂದೆರಡು ಸಂಚಿಕೆಗಳಲ್ಲಿ ಕೊಡಲು ಪ್ರಯತ್ನಿಸಲಾಗುತ್ತಿದೆ. ಚೈನೀಯರ ನೆಲದಾಹ, ಒಪ್ಪಂದಕ್ಕೆ ಅವರೀಯುವ ಬೆಲೆ ಹಾಗೂ ಅವರ ಯೋಚನೆಗಳತ್ತ ಅವು ಕ್ಷ-ಕಿರಣ ಬೀರುತ್ತವೆ. ಕೊನೆಯಲ್ಲಿ ಕಮ್ಯೂನಿಸ್ಟ್ ರಾಷ್ಟ್ರಗಳು ಹಾಗೆಯೇ ಎಂಬ ಉದ್ಗಾರವನ್ನು ಅವು ಬರಿಸಿಯಾವುದಿ "ಮೆಯಿಲ್"ನ (ಮದ್ರಾಸು) ವಿಶೇಷ ವರದಿಗಾರರೊಪ್ಪಿಸಿರುವ ಸುದ್ದಿಗಳನ್ನು ಇಲ್ಲಿ ಕೊಡಲಾಗಿರುತ್ತದೆ:

ರಷ್ಯಾ—ಚೈನಾಗಳ ನಡುವಣ ಕಲಹ ಕಾರಣ ಗಡಿ ಪ್ರದೇಶ ಸಿಂಕಿಯಾಂಗ್ ಇತ್ತೀಚಿಗಿನ ಕೆಲ ವಾರಗಳಿಂದ ಪ್ರಪಂಚ ಪ್ರಮುಖ ಪತ್ರಿಕೆಗಳಲ್ಲಿ ಪ್ರಮುಖ ಸ್ಥಾನವನ್ನು ಪಡೆದಿರುತ್ತದೆ. ಹಿಂದೊಮ್ಮೆ, ಏರೋಪ್ಯ ಹಾಗೂ ದೂರ ಪ್ರಾಚ್ಯ ದೇಶಗಳ ನಡುವಣ ಸಂಪರ್ಕ ಕೊಂಡಿಯಂತಿದ್ದ ಸಿಂಕಿಯಾಂಗ್ ಇಂದು ರಾಕ್ಷಸ ಸದೃಶ ಎರಡು ಕಮ್ಯುನಿಸ್ಟ್ ರಾಷ್ಟ್ರಗಳನ್ನು ಬೇರ್ಪಡಿಸಲು ಮುಖ್ಯ ಕಾರಣವಾಗಿರುತ್ತದೆ.

ಸೋವಿಯಟ್ ಗಣರಾಜ್ಯ ಕಝಾಕಸ್ಥಾನದಿಂದ ಬರುತ್ತಿರುವ ವರದಿಗಳ ಪ್ರಕಾರ ಅಲ್ಲಿಯ ಶೋಚನೀಯ ಸ್ಥಿತಿಯು ಅರಿವಾಗುತ್ತದೆ. ಸಿಂಕಿಯಾಂಗ್—ಕಝಾಕ್ ಸ್ಥಾನಗಳು ಅಕ್ಕಪಕ್ಕದ ರಾಜ್ಯಗಳಿವೆ ಸಿಂಕಿಯಾಂಗಿನ ಸ್ವಾತಂತ್ರ್ಯಪ್ರಿಯ ಗುಡ್ಡಗಾಡಿನ ಜನರು ಬಲಿಷ್ಠ ಮಾನವರು ಚೈನೀಯರ ತಡೆಗಳಿಂದಾಗಿ ತುಂಟರಾಗುತ್ತ ಬರುತ್ತಿದ್ದಾರಲ್ಲದೆ, ಅಲ್ಲಿಂದ ಸೋವಿಯಟ್ ದೇಶಗಳೊಳಗೆ ತಲೆತಪ್ಪಿಸಿಕೊಂಡು ಓಡಿ ಹೋಗುತ್ತಿದ್ದಾರೆ.

"ಕಝಾಕಸ್ಥಾನಸ್ಥಾಯ ಪ್ರವ್ದಾ" ಪತ್ರಿಕೆಯು ಸುದ್ದಿಯೊಂದನ್ನು ಪ್ರಕಟಿಸಿ ಪ್ರಪಂಚವನ್ನು ಗಾಬರಿಗೊಳಿಸಿಬಿಟ್ಟಿತು. ಇದೇ ಗಡಿಪ್ರದೇಶದಿಂದ ಕಳೆದ ವರ್ಷ ಡಜನುಗಟ್ಟಿ ಕುಟುಂಬಗಳು ಓಡಿಹೋಗಿವೆ. ಅವು ರಾಷ್ಟ್ರೀಯ ಅಸಂಖ್ಯಾಕರಿಂದ. ಕರೆಯಲ್ಪಡುವವರ ಬಳಗಕ್ಕೆ ಸೇರಿದ ಕುಟುಂಬಗಳು ಆ ಕುಟುಂಬಗಳು ಹಸಿವಿನಿಂದ ಕಂಗೆಟ್ಟಿದ್ದುವು. ದೇಹ ಮುಚ್ಚಿಕೊಳ್ಳಲು ಬಟ್ಟೆ ಇಲ್ಲದ ಸ್ಥಿತಿಗೆ ಬಂದಾಗಿದ್ದುವು. ಸರಿಯಾದ ಪಾದರಕ್ಷೆಗಳಿಲ್ಲದ ಕಾರಣ ಬೆರಳುಗಳು ಪಾದರಕ್ಷೆಗಳಿಂದ ಹೊರ ಇಣಿಕಿ ನೋಡುತ್ತಿದ್ದುವು. ಚೈನೀ ಗಡಿ ರಕ್ಷಕರು ಬಹಳ ಜಾಗರೂಕತೆಯಿಂದಿದ್ದಾರೆ ಓಡಿ ಹೋಗುತ್ತಿದ್ದಾರೆಂಬ ಅನುಮಾನ ಹುಟ್ಟಿದರೂ ಸಾಕು, ಅವರು ಆಗಲೇ ಅಗ್ನಿಯ ಮಳೆಸುರಿಸಿಬಿಡುತ್ತಾರೆ. ಹಾಗಿದ್ದರೂ, ಕಂಗೆಟ್ಟಿರುವ ಜನಪ್ರವಾಹ ಕಳ್ಳತನದಿಂದ ಆದರೂ ಎಡೆಬಿಡದೆ ಸಾಗುತ್ತಿದೆ. ಗಡಿಪ್ರದೇಶದಲ್ಲಿದ್ದ ಚೈನೀಯೇತರ ಜನರನ್ನು ಅಲ್ಲಿಂದ ಎಬ್ಬಿಸಿ ಬೇರೆಡೆ ಸಾಮೂಹಿಕ ಶಿಬಿರಗಳಲ್ಲಿ ಹಾಕಿಟ್ಟಿದ್ದಾರೆ. ರಷ್ಯಾದ ಗಡಿ ಪ್ರದೇಶದಿಂದ ನೋಡಿದರೂ ಕಾಣಸಿಗುತ್ತದೆ: ಸಂಕೋಲೆಗಳಿಂದ ಬಂಧಿಸಲ್ಪಟ್ಟಿರುವ ಜನರು ಬೆಟ್ಟಗಳಲ್ಲಿ ರಸ್ತೆಗಳನ್ನು ರಚಿಸುವದನ್ನು.

ಕಝಾಕರು ಖಿಗಿಣಗಳು ಉಯಿಗುರರು ಮುಂತಾದ ಸಿಂಕಿಯಾಂಗ್ ಪ್ರಾಂತ್ಯದ ಗುಡ್ಡಗಾಡಿನ ಜನರನ್ನು ಗಡಿ ಪ್ರದೇಶದಿಂದ ಒಳ ಪ್ರದೇಶಗಳಿಗೆ ಕರೆದುಕೊಂಡು ಹೋಗಿರುವ ಸುದ್ದಿಗಳೂ ರಷ್ಯಾದ ಪತ್ರಿಕೆಗಳಲ್ಲಿ ಪ್ರಕಟವಾಗಿರುತ್ತವೆ.

ಶಾಲಾ ಉಪಾಧ್ಯಾಯರೊಬ್ಬರು ಚೈನಿ ಕಮ್ಯೂನಿಸ್ಟರ ಕಣ್ಣು ತಪ್ಪಿಸಿಕೊಂಡು ರಷ್ಯಕ್ಕೆ ಓಡಿ ಹೋಗಿರುವ ಸಮಾಚಾರ ಬೆಳಕಿಗೆ ಬಂದಿರುತ್ತದೆ ಅವರನ್ನು ಚಿಯಾಂಗ್ ಕೈಶೆಕ್ ಸರಕಾರ ಮಾತ್ರ ಸೆರೆಮನೆಯಲ್ಲಿಟ್ಟಿದ್ದಿಲ್ಲ, ಕಮ್ಯೂನಿಸ್ಟ್ ಸರಕಾರ ಬಂದ ಮೇಲೂ ಬಂಧೀಖಾನೆಯ ಬಾಗಿಲು ಅವರಿಗಾಗಿ ತೆರೆಯಲ್ಪಡಲಿಲ್ಲ. ಅವರು ಮಾಡಿದ್ದ ಅಪರಾಧವಾದರೂ ಏನು? ಕಝಾಕರು ಚೈನೀಯರಿಂದ ಪಠ್ಯ ಪುಸ್ತಕಗಳಲ್ಲಿ ತಿದ್ದಿ ಬರೆಯಲು ತಿರಸ್ಕರಿಸುದುವೇ ಅವರು ಗೈದಿದ್ದ ಮಹಾಪರಾಧ!

ಇವೀಗ ಜಗತ್ತಿನ ಕುತೂಹಲವನ್ನು ಕೆರಳಿಸಿರುವ ಸಿಂಕಿಯಾಂಗ್ ಪ್ರಾಂತ್ಯವು ಬಹಳ ಹಿಂದಿನಿಂದಲೂ ರಷ್ಯಾ—ಚೈನಾಗಳ ನಡುವಣ ಪಂದ್ಯಾಟದ ಪ್ರದೇಶವಾಗಿತ್ತು. ಅಷ್ಟೇ ಏನು? ಈ ಪ್ರದೇಶವಾಗಿನ್ನು ತಮ್ಮ ಆಳ್ವಿಕೆಯೊಳಗೆ ಸೇರಿಸಿಕೊಳ್ಳಲು ಎಡೆಬಿಡದೆ ಚೈನೀಯರು ಪ್ರಯತ್ನಿಸುತ್ತಲೇ ಇದ್ದರಾದರೂ ಇಲ್ಲಿಯ ಸ್ವಾತಂತ್ರ್ಯ ಪ್ರಿಯ ಜನರು ಕ್ರಾಂತಿ ನಡೆಸುತ್ತ ಇದ್ದರು.

ಸಿಂಕಿಯಾಂಗ್ ಪದದ ಅರ್ಥವೇ ಹೊಸ ಗಡಿ ಪ್ರದೇಶವಿದೆ. ೧೮೮೪ರ ವರೆಗೂ ಸಿಂಕಿಯಾಂಗ್ ಸ್ವಾತಂತ್ರ್ಯವನ್ನು ಕಾಪಾಡಿಕೊಂಡು ಬಂದಿತ್ತು. ೧೮೮೪ರಲ್ಲಿ ಒಂಭತ್ತು ಹೊಸ ಪ್ರಾಂತ್ಯಗಳನ್ನು ಸಂರಕ್ಷಣೆಯ ಹೆಸರಿನಿಂದ ಕೇಂದ್ರ ಚೈನಾದ ಆಡಳಿತಕ್ಕೊಳಪಡಿಸಿಕೊಳ್ಳಲಾಯಿತು. ಆಗ ಚೈನಾದಲ್ಲಿದ್ದದ್ದು ಹತ್ತೊಂಭತ್ತು ಪ್ರಾಂತ್ಯಗಳು, ಹತ್ತೊಂಭತ್ತನೇ ಶತಮಾನದ ಹಿಂದೆ ಈ ಪ್ರಾಂತ್ಯದ ಉತ್ಥಾನ ಪತನವು ಕೇಂದ್ರ ಏಷ್ಯಾ ಸಾಮ್ರಾಜ್ಯದ ಏಳುವಿಕೆ ಬೀಳುವಿಕೆಗಳ ಮೇಲೆ ಹೊಂದಿಕೊಂಡಿತು.

೧೮೭೧ರಲ್ಲೇ ರಷ್ಯಾವು ಸಿಂಕಿಯಾಂಗಿನ ಈ ಭಾಗವನ್ನು ತನ್ನ ಆಳ್ವಿಕೆಗೆ ಒಳಪಡಿಸಿಕೊಂಡಿತ್ತು. ೧೮೮೦ರಲ್ಲಿ ಸಿಂಕಿಯಾಂಗಿನ ನಿಮಿತ್ತ ರಷ್ಯಾ—ಚೈನಾಗಳ ನಡುವೆ ದೊಡ್ಡ ಯುದ್ಧವಾಗುವದಿತ್ತು. ಆಗ ಮುಸಲ್ಮಾನರ ಮುಂದಾಳು ಯಾಕೂಬ್ ಬೇಗನು ಚೈನೀಯರ ವಿರುದ್ಧ ದಂಗೆ ಎದ್ದು, ಬ್ರಿಟಿಷರ ಸಹಾಯದಿಂದ ಯುದ್ಧ ಮಾಡುವದಾಗಿ ಹೆದರಿಸಿದ್ದನು. ಆಗ ಚೈನಾದಲ್ಲಿ ಚಿಂಗ್ ಮನೆತನ ಆಳಿಕೊಂಡಿತ್ತು. ಅದು ಕ್ರಮಶಃ ಕಿನ್ಸಿ, ಕಾಂಸು ಮತ್ತು ಸಿಂಕಿಯಾಂಗಿನ ಹಲವಾರೆಡೆಗಳಲ್ಲಿ ಬಂಡಾಯವನ್ನು ಅಡಗಿಸಿತು. ಕೊನೆಯಲ್ಲಿ ಯಾಕೂಬ್ ಬೇಗನು ಕೊಲೆ ಮಾಡಿಕೊಂಡನು. ಹೀಗಾಗಿ ಇಲಿ ಬಿಟ್ಟುಳಿದ ಪ್ರದೇಶವೆಲ್ಲಾ ಚೈನಾದ ಆಡಳಿತಕ್ಕೊಳಪಟ್ಟಿತು ಇಲಿ ರಷ್ಯಾನರ ಮುಷ್ಟಿಯೊಳಗೆನೇ ಉಳಿದು ಬಿಟ್ಟಿತು. ಸಿಂಕಿಯಾಂಗ್ ಶಾಂತ ಪರಿಸ್ಥಿತಿಗೆ ಬಂದೊಡನೆ ಇಲಿಯನ್ನು ಬಿಟ್ಟುಕೊಡುವದಾಗಿ ಮೊದಲೇನೋ ರಷ್ಯನರು ಹೇಳುತ್ತಿದ್ದರು. ಸಿಂಕಿಯಾಂಗಿನಲ್ಲಿ ದಂಗೆ ಶಾಂತವಾದೊಡನೆ ಚಿಂಗ್ ಮನೆತನದವರು ಇಲಿಯನ್ನು ಬಿಟ್ಟುಕೊಡಲು ರಷ್ಯನರನ್ನು ಕೇಳಿಕೊಂಡರು. ಆಗ ರಷ್ಯವು ತುರ್ಕಿಯೊಂದಿಗೆ ಹೋರಾಡುತ್ತಿತ್ತು. ಚೈನಾವು ಗಡಿ ಪ್ರದೇಶದಲ್ಲಿ ಶಾಂತತೆಯನ್ನು ಕಾಯ್ದುಕೊಳ್ಳುವೆನೆಂಬ ಭರವಸೆಯನ್ನೀಯಬೇಕಲ್ಲದೆ, ಅಲ್ಲಿಯ ವರೆಗೆ ಚೈನಾದ ಪರವಾಗಿ ಇಲಿಯನ್ನು ನೋಡಿಕೊಂಡುದುದಕ್ಕಾಗಿ ಪ್ರತಿಫಲವನ್ನೀಯಬೇಕೆಂದು ರಷ್ಯಾವು ಹೇಳಿತು. ೧೮೭೯ರಲ್ಲಿ ಚಿಂಗ್ ನ್ಯಾಯಾಲಯವು ಚುಂಗ್—ಹೋನನ್ನು ಒಪ್ಪಂದ ನಡೆಸಲು ಕಳುಹಿಸಿಕೊಟ್ಟಿತು. ಅವನಿಗೆ ಒಂದು ನಿಶ್ಚಯಕ್ಕೆ ಬರಲು ಒಂದು ವರ್ಷ ಹಿಡಿಯಿತು. ಈ ಒಪ್ಪಂದಕ್ಕೆ ಲಿವಾಡಿಯಾ ಒಪ್ಪಂದವೆನ್ನಲಾಗುತ್ತದೆ. ಒಪ್ಪಂದದ ಮುಖ್ಯ ಸಾರಾಂಶ ಈ ರೀತಿ ಇದೆ:— ರಷ್ಯಾಕ್ಕೆ ಸೈನಿಕ ಖರ್ಚೆಂದು ಐದು ಮಿಲಿಯ ರೂಬೆಲ್ಲ್‌ಗಳನ್ನು ಚೈ

(೧೦ನೇ ಪುಟ ನೋಡಿರಿ)

ದೀರ್ಘ ಬಾಳಿಕೆಯ ಫೌಂಟನ್ ಪೆನ್ನುಗಳು

ಯೋಗ್ಯ ಬೆಲೆಗೆ ದೊರೆಯುವ ಸ್ಥಳ:

ವಿಜಯಾ ಪೆನ್ ಮಾರ್ಟ್

ಹಂಪನಕಟ್ಟಾ, ಮಂಗಳೂರು-1

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ.......
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ

1—1—1963ರಿಂದ ಠೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ

ನಿಮ್ಮ ಉಳಿತಾಯವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.



ನಮ್ಮ ರಾಜ್ಯದ

ನೈಸರ್ಗಿಕ ಸಂಪತ್ತು ಕೊಳೆಯಬಾರದು

ನಮ್ಮ ರಾಜ್ಯ

ಕನ್ನಡಿಗರ ಬಹುದಿನಗಳ ಬಯಕೆಯು ಈಡೇರಿ ನಮ್ಮದೇ ಆದ ಮೈಸೂರು ರಾಜ್ಯವು ನವಂಬರ ೧, ೧೯೫೬ರಂದು ರೂಪುಗೊಂಡಿತು. ೭೫ ಸಾವಿರ ಚದರ ಮೈಲುಗಳ ವಿಸ್ತೀರ್ಣವುಳ್ಳ ನಮ್ಮ ಮೈಸೂರು ರಾಜ್ಯವು ಸುಮಾರು ೨½ ಕೋಟಿ ಜನಸಂಖ್ಯೆಯಿಂದ ಕೂಡಿದೆ. ಕನ್ನಡಿಗರ ಆಶ್ರಯ ಸ್ಥಾನವಾಗಿರುವ ಈ ನಮ್ಮ ಮೈಸೂರು ರಾಜ್ಯವು ಭಾರತದ ರಾಜ್ಯಗಳಲ್ಲೇ ವೈಶಿಷ್ಟ್ಯವುಳ್ಳದ್ದಾಗಿದೆ. ಕಲೆ, ಸಂಸ್ಕೃತಿ ಸಾಹಿತ್ಯಗಳಲ್ಲಿ ಮೈಸೂರಿನ ಹಿರಿಮೆ ಭವ್ಯವಾಗಿದ್ದಂತೆ ಉದ್ಯಮ, ಕೈಗಾರಿಕೆಗಳಲ್ಲಿ ಅದರ ಹಿರಿಮೆ ನವ್ಯವಾಗಿದೆ. ಈ ನಮ್ಮ ಮೈಸೂರು ರಾಜ್ಯವು ದಕ್ಷಿಣದ ಸುಂದರ ವನದೋಷಾದಿಯಲ್ಲಿ ಪ್ರವಾಸಿಗಳ ಕಣ್ಮನಗಳನ್ನು ತಣಿಸುತ್ತಿರುವುದರ ಜೊತೆಗೆ, ಭವ್ಯ ಭಾರತದ ಮುನ್ನಡೆಯಲ್ಲಿ ತಾನೂ ಅಪಾರವಾದ ಪಾತ್ರವನ್ನು ನಿರ್ವಹಿಸುತ್ತಿದೆ.

ಪ್ರಕೃತಿ ಹರಸಿದ ನಾಡು

ನಮ್ಮ ರಾಜ್ಯವು ಪ್ರಕೃತಿ ಹರಸಿದ ಚೆಲುನಾಡು. ಆದುದರಿಂದಲೇ ಹುಯಿಲಗೋಳ ನಾರಾಯಣರಾಯರು ಇದನ್ನು "ಬದುಕು ಬಲುಹಿನ ನಿಧಿಯು, ಸದಭಿಮಾನದ ಗೂಡು" ಎಂದು ಕರೆದಿರುವರಲ್ಲದೆ ಬೊಕ್ಕಸದ ಕಣಜ ಎಂದೂ ಸಂಬೋಧಿಸಿದ್ದಾರೆ. ಪ್ರಕೃತಿ ಮಾತೆಯ ವರದಾನವಾಗಿ ಮೈಸೂರಿಗೆ ದೊರೆಯ ಬೇಕಾದುದೆಲ್ಲವೂ ದೊರೆತಿದೆ. ಮೈಸೂರಿನ ನೈಸರ್ಗಿಕ ಸಂಪತ್ತು ಭಾರತದ ಉಳಿದ ರಾಜ್ಯಗಳು ಅಸೂಯೆ ಪಡುವ ರೀತಿಯಲ್ಲಿದೆ. ನಿಸರ್ಗದತ್ತವಾಗಿ ಮೈಸೂರು ಪಡೆದುದು ಉಳಿದ ರಾಜ್ಯಗಳಿಗಿಂತ ಹೆಚ್ಚೆಂಬುದು ನಿಸ್ಸಂದೇಹವಾಗಿ ಹೇಳಬಹುದು

ನೈಸರ್ಗಿಕ ಸಂಪತ್ತೆಂದರೇನು?

ಸಂಪತ್ತೆಂದರೇನೆಂಬುದು ಎಲ್ಲರಿಗೂ ಗೊತ್ತು. ರಷ್ಯಾ ಅಮೇರಿಕಾಗಳನ್ನು ನಾವು ಸಂಪದ್ಭರಿತ ರಾಷ್ಟ್ರಗಳೆಂದು ಸಂಬೋಧಿಸುವುದೂ ಉಂಟು. ಸಂಪತ್ತೆಂದರೇನು? ಸಂಪತ್ತೆಂದರೆ ಬರೀ ಹಣ, ನೋಟುಗಳ ಕಂತೆ ಎಂದು ಭಾವಿಸುವ ಜನರೇ ಇಂದು ಹೆಚ್ಚು. ಆದರೆ ಸಂಪತ್ತೆಂದರೆ ಕೇವಲ ಅಚ್ಚು ಹಾಕಿದ ನಾಣ್ಯ ಯಾ ನೋಟುಗಳೇ? ಅಲ್ಲ. ಈ ಭೂಮಿಯಲ್ಲಿರುವುದು ಎಲ್ಲವೂ ಒಂದು ಬಗೆಯ ಸಂಪತ್ತು. ಸೊಕ್ಕಿ ಹರಿಯುವ ನದಿ, ಉಕ್ಕಿ ಭೋರ್ಗರೆಯುತ್ತಿರುವ ಸಮುದ್ರ, ರಭಸದಿಂದ ಧುಮುಕುವ ಜಲಪಾತಗಳು, ಪ್ರಶಾಂತವಾಗಿರುವ ಕೊಳ ಸರೋವರಗಳು, ಸದ್ದಿಲ್ಲದೆ ಜಿನುಗುತ್ತಿರುವ ಒರತೆಗಳು ಇವುಗಳೆಲ್ಲವೂ ಸಂಪತ್ತುಗಳೇ ಆಗಿವೆ. ಇವುಗಳನ್ನೆಲ್ಲಾ ಒಂದೇ ಹೆಸರಿನಲ್ಲಿ ಹೇಳುವುದಾದರೆ ಜಲಸಂಪತ್ತೆಂದು ಹೇಳಬಹುದು.

ನೆಲಸಂಪತ್ತು

ನೈಸರ್ಗಿಕ ಸಂಪತ್ತನ್ನು ಮುಖ್ಯವಾಗಿ ಎರಡು ವಿಧಗಳಾಗಿ ವಿಂಗಡಿಸಬಹುದು. ಅದರಲ್ಲಿ ಮೊದಲನೆಯದು ಈ ಹಿಂದೆ ತಿಳಿಸಿದ ಜಲಸಂಪತ್ತು. ಎರಡನೆಯದು ನೆಲಸಂಪತ್ತು ನೆಲವು ಒಂದು ಸಂಪತ್ತು. ನೆಲವೂ ಒಂದು ಸಂಪತ್ತು ಭೂಮಿಯನ್ನು ನಾವು ರೈತರ ತಾಯಿ ಎಂದು ಕರೆಯುತ್ತೇವೆ. ಭೂಮಿತಾಯಿ ಕೊಟ್ಟರೇನೇ ನಮ್ಮ ಕೈ ಬಾಯಿಯ ಕಡೆ ಸಾಗೀತು. ಹೀಗಿರುವಾಗ ಇಂತಹ ನೆಲವು ಸಂಪತ್ತಲ್ಲವೆನ್ನುವವರಾರು? ಅಂತೆಯೇ ನೆಲಸಂಪತ್ತಿನಲ್ಲಿ ಅಡಕವಾಗಿರುವವುಗಳು ಕಾಡುಗಳು. ದಟ್ಟವಾಗಿ, ಎತ್ತರವಾಗಿ, ಹಚ್ಚಹಸುರಾಗಿ ಬೆಳೆದ ಕಾಡುಗಳು ಅಮೂಲ್ಯವಾದ ಸಂಪತ್ತುಗಳೇ ಆಗಿವೆ. ಅವುಗಳಿಂದ ದೊರೆಯುವ ಪ್ರಯೋಜನಗಳು ಒಂದೇ ಎರಡೇ ಲೆಕ್ಕವಿಲ್ಲದಷ್ಟು ಇವೆ. ಕಾಡಿನಲ್ಲಿ ವಾಸಿಸುವ ಜನರನ್ನು ನಾವು ಕಾಡು ಮನುಷ್ಯರೆಂದು ನಿಂದಿಸಿದರೂ ಆ ನಿಂದೆಗೆ ಕಾಡುಗಳನ್ನು ಒಳಪಡಿಸಿದರೆ ನಾವೇ ಕಾಡು ಮನುಷ್ಯರಾಗ ಬೇಕಾದೀತು. ಅರಣ್ಯ ಸಂಪತ್ತಿನಿಂದಲೇ ಸಂಪನ್ನವಾದ ರಾಷ್ಟ್ರಗಳಿಲ್ಲವೆ? ನೋರ್ವೆ, ಸ್ವಿಡನ್ ಕೆನಡಾಗಳಂತಹ ರಾಷ್ಟ್ರಗಳ ಆರ್ಥಿಕ ಸೌಧದ ತಳಪಾಯ ಇರುವುದು ಆ ದೇಶಗಳಲ್ಲಿ ಬೆಳೆದಿರುವ ಕಾಡುಗಳಲ್ಲಿ.

ಭೂಮಿಯ ಅಡಿಭಾಗದಲ್ಲಿನ ಸಂಪತ್ತು

ಭೂಮಿಯ ಮೇಲ್ಭಾಗದಲ್ಲಿರುವುದು ನಮಗೆ ಗೋಚರವಾಗುವ ಸಂಪತ್ತಾದರೆ ಭೂಮಿಯ ಗರ್ಭದಲ್ಲಿ ಅಗೋಚರವಾದ ನಿಕ್ಷೇಪವು ಅಡಗಿದೆ. ಅದೇ ಖನಿಜ ಸಂಪತ್ತು. ನಾವಿಂದು ಬಾಯಿಬಿಡುತ್ತಿರುವ ಹಣ ತಯಾರಾಗುವುದು ಈ ಖನಿಜಗಳಿಂದ. ನಮ್ಮ ಉಪಯೋಗದ ನೋಟುಗಳು ತಯಾರಾಗುಗುವುದು ಕಾಡಿನಲ್ಲಿ ಬೆಳೆದಿರುವ ಮರಗಳಿಂದ. ಹಾಗಿರುವಾಗ ನಾಣ್ಯ ನೋಟುಗಳ ಮೂಲಗಳೂ ಇವುಗಳೇ ಎಂದಾಗಲಿಲ್ಲವೇ? ಭೂಮಿಯ ಅಡಿಭಾಗದಲ್ಲಿರುವ ಖನಿಜ ಸಂಪತ್ತು ಮೇಲ್ಭಾಗದ ಸಂಪತ್ತಿಗಿಂತಲೂ ಹಿರಿದು ಬರಡು ಬಂಜರು ಭೂಮಿಯಾಗಿ ಪಡಿಲು ಬಿದ್ದಿರುವ ಮರುಭೂಮಿಗಳನ್ನು ನಾವು ನಿಷ್ಪ್ರಯೋಜಕ ಎಂದೂ ಕರೆದರೂ, ಆ ಮರುಭೂಮಿಗಳ ಅಡಿಯಲ್ಲಿ ದೊರೆಯುವ ಖನಿಜಗಳಿಂದ ಅವುಗಳು ಸಂಪತ್ತಿನ ನಿಧಿಗಳಾಗಿರುವ ನಿದರ್ಶನಗಳೂ ನಮ್ಮ ಕಣ್ಣ ಮುಂದಿವೆ. ಅರೇಬಿಯಾ, ಇರಾಕ್, ಇರಾನ್ ಕೆಲಿಫೋರ್ನಿಯಾಗಳ ಬಹು ಭಾಗ ಮರುಭೂಮಿಗಳಿಂದ ಆವರಿಸಲ್ಪಟ್ಟಿದ್ದರೂ ಅಲ್ಲಿ ದೊರೆಯುವ ಕಲ್ಲೆಣ್ಣೆ, ಚಿನ್ನ ಹಾಗೂ ಇನ್ನಿತರ ಖನಿಜಗಳಿಂದ ಅವು ಸಂಪತ್ತಿನ ತವರೂರುಗಳಾಗಿವೆ.

ನಮ್ಮ ರಾಜ್ಯವೂ ಇದಕ್ಕೆ ಹೊರತಲ್ಲ

ಈ ವರೆಗೆ ನೈಸರ್ಗಿಕ ಸಂಪತ್ತೆಂದರೇನೆಂದು ಸ್ಥೂಲವಾಗಿ ತಿಳಿದುದಾಯಿತು. ಇನ್ನು ನಮ್ಮ ರಾಜ್ಯದ ನೈಸರ್ಗಿಕ ಸಂಪತ್ತಿನ ಕುರಿತು ತಿಳಿಯೋಣ. ಮೇಲೆ ಹೇಳಿದ ಸಂಪತ್ತುಗಳನ್ನು ಪಡೆಯುವ ಭಾಗ್ಯ ದೇಶದ ಇತರ ರಾಜ್ಯಗಳಿಗಿಂತ ಹೆಚ್ಚು ನಮ್ಮ ರಾಜ್ಯಕ್ಕೆ ದೊರೆತಿದೆ. ಜಲಸಂಪತ್ತು ನಮಗೆ ಬೇಕಾದಷ್ಟಿದೆ. ನೆಲಸಂಪತ್ತಿನ ಕೊರತೆಯೇ ನಮಗಿಲ್ಲ. ಇವುಗಳೆಲ್ಲವುಗಳ ಜೊತೆಗೆ ೨½ ಕೋಟಿ ಜನ ಸಂಪತ್ತೂ ನಮ್ಮಲ್ಲಿದೆ. ಮೇಲೆ ಹೇಳಿದ ನೆಲ, ಜಲ, ಸಂಪತ್ತುಗಳು ಮಾತ್ರ ಸಂಪತ್ತೆಂದು ಭಾವಿಸಲಾಗದು ಜನರು ಕೂಡಾ ಒಂದು ಸಂಪತ್ತು. ಅವೆಲ್ಲವುಗಳಿಗಿಂತ ಮಿಗಿಲಾದ ನೈಸರ್ಗಿಕ ಸಂಪತ್ತು ಜನಸಂಪತ್ತು. ಜನಸಂಪತ್ತು ಹೆಚ್ಚಾದರೆ ತೊಂದರೆ ಎಂಬ ಭಾವನೆಯೂ ಬೇಡ. ನೆಲಸಂಪತ್ತಿನ ಸದ್ವಿನಿಯೋಗವಾಗಿ ಅವುಗಳು ನಮ್ಮ ನಿತ್ಯದ ಉಪಯೋಗಕ್ಕೆ ಬರಬೇಕಾದರೆ, ಅವುಗಳಿಂದ ನಿರ್ದಿಷ್ಟ ಪ್ರಯೋಜನವನ್ನು ಪಡೆಯಬೇಕಾದರೆ ಸಾಕಷ್ಟು ಜನಸಂಪತ್ತಿಲ್ಲದೆ ಸಾಧ್ಯವಾದೀತೆ? ಆದರೆ ದುಃಖದ ವಿಷಯವೆಂದರೆ ಜನಸಂಪತ್ತು ಹೆಚ್ಚಾದಂತೆ ನೆಲ ಜಲಸಂಪತ್ತೂ ಹೆಚ್ಚಾಗುತ್ತಿಲ್ಲ!

ನಮ್ಮ ಜಲಸಂಪತ್ತು

ನಮ್ಮ ರಾಜ್ಯದ ಜಲಸಂಪತ್ತಿನ ವಿಷಯ ತಿಳಿಯೋಣ. ಜಲಸಂಪತ್ತನ್ನು ಮುಖ್ಯವಾಗಿ ಸಮುದ್ರಗಳೂ, ನದಿಗಳೂ, ಜಲಪಾತಗಳೂ, ಸರೋವರಗಳೂ, ಒರತೆಗಳೂ ಎಂದು ಐದು ವಿಧಗಳಾಗಿ ವಿಂಗಡಿಸಬಹುದು, ಈ ಪ್ರತಿಯೊಂದರ ಕುರಿತು ಸ್ವಲ್ಪ ವಿಚಾರಿಸೋಣ,

ಸಮುದ್ರಗಳು:

ಭಾರತದ ಕೆಲವೇ ರಾಜ್ಯಗಳಿಗಿರುವ ಸಮುದ್ರ ಸಂಪತ್ತು ಮೈಸೂರಿಗಿದೆ. ನಮ್ಮ ರಾಜ್ಯದ ಪಶ್ಚಿಮದಲ್ಲಿರುವ ಅರಬೀ ಸಮುದ್ರದ ಸಂಪೂರ್ಣ ಪ್ರಯೋಜನವನ್ನು ಪಡೆಯುತಿದ್ದೇವೆ. ಅರಬೀ ಸಮುದ್ರ ತೀರದ ೨೦೦ ಮೈಲು ಉದ್ದದ ಕರಾವಳಿಯ ಭಾಗವನ್ನು ಪಡೆದ ಮೈಸೂರು ಅಂತಾರಾಷ್ಟ್ರೀಯ ವ್ಯವಹಾರವನ್ನು ಸಾಗಿಸುವಲ್ಲಿ ಈ ಸಮುದ್ರವನ್ನೇ ಮರೆಹೋಗಬೇಕು. ಮಹಾ ಬಂದರವೊಂದು ಈ ಕರಾವಳಿ ಭಾಗದಲ್ಲಾದರೆ ಮತ್ತೆ ಮೈಸೂರಿಗೆ ವಿದೇಶಗಳ ಹೆಬ್ಬಾಗಿಲು ತೆರೆದಂತೆಯೇ; ಅರಬೀ ಸಮುದ್ರ ಮೈಸೂರಿನ ಕರಾವಳಿ ಜಿಲ್ಲೆಗಳಿಗೆ ಮಳೆ ಸುರಿಸುತ್ತಿದೆ. ಮಾತ್ರವಲ್ಲ ಆಹಾರಕ್ಕೆ ರುಚಿಕರವಾದ ಉಪ್ಪನ್ನು ಒದಗಿಸುತ್ತಿದೆ. ಬಿತ್ತದೆ ದೊರಕುವ ಮತ್ತನೆಯ ಪೌಷ್ಟಿಕ ಆಹಾರವಾದ ಮೀನನ್ನು ಈ ಸಮುದ್ರದಿಂದಲೇ ನಾವು ಪಡೆಯುತ್ತಿದ್ದೇವೆ. ದೇಶವಿದೇಶಗಳೊಡನೆ ವ್ಯಾಪಾರ ವ್ಯವಹಾರವನ್ನು ಸಾಗಿಸಲು ಈ ಸಮುದ್ರವು ಅತಿ ಉಪಯುಕ್ತವಾಗಿದೆ,

ನದಿಗಳು

ನಮ್ಮ ರಾಜ್ಯದಲ್ಲಿ ನದಿಗಳಿಗೆ ಕೊರತೆಯೇ ಇಲ್ಲ. ಪಶ್ಚಿಮದ ಘಟ್ಟಗಳು ಹಲವಾರು ನದಿಗಳ ಉಗಮ ಸ್ಥಾನಗಳಾಗಿವೆ. ನೇತ್ರಾವತಿ, ಶರಾವತಿ. ಕೃಷ್ಣಾ, ತುಂಗಭದ್ರಾ, ಕಾವೇರಿ ಇವುಗಳು ಮುಖ್ಯ ನದಿಗಳು. ಹಾಗೆಯೇ ಭೀಮಾ, ಘಟಪ್ರಭಾ, ಮಲಪ್ರಭಾ, ಹೇಮಾವತಿ ಇತ್ಯಾದಿಗಳೂ ನಮ್ಮ ರಾಜ್ಯದ ಜೀವಾಳವೆನಿಸಿವೆ. ಈ ನದಿಗಳಿಗೆ ಅಲ್ಲಲ್ಲಿ ಅಣೆಕಟ್ಟುಗಳನ್ನು ಹಾಕಿ ನೀರಾವರಿಯ ಪ್ರಯೋಜನವನ್ನು ನಾವು ಪಡೆಯುತ್ತಿದ್ದೇವೆ ದೊಡ್ಡ ದೊಡ್ಡ ನೀರಾವರಿ ಯೋಜನೆಗಳಿಂದ ನಮ್ಮ ರಾಜ್ಯವು

(೯ನೇ ಪುಟ ನೋಡಿರಿ)

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಅತ್ಯಂತ ಪ್ರಯೋಜನಕಾರಿ ಪುಸ್ತಕ—

ಮನೆ-ಮದ್ದು

(HOME REMEDIES)

ಬರೆದವರು: **ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್** ಎಲ್. ಐ. ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನವಭಾರತ ಪುಸ್ತಕ ಭಂಡಾರ, ಉಡುಪಿ.

● **ಕುಮಾರಿ ಬಿಲ್ಲೆಗಳು** ●

(ರಿಜಿಸ್ಟರ್ಡ್ Regd.)

ಪ್ರಕೃತಿಯು ವಿಫಲಗೊಂಡಾಗ ಉಂಟಾಗುವ ಕಾತರ ನಿವಾರಣೆಗೆ ಸಮಯೋಚಿತವಾದ ಆಯುರ್ವೇದೀಯ ಮಿಶ್ರಣ!

ಟ್ಯೂಬ್ 1ರ ಸಾಮಾನ್ಯ ರೂ. 4/- ಮಧ್ಯಮ ರೂ. 6/ ಉತ್ತಮ ರೂ. 9/.

P. Devee & Co. (N. J.) Calcutta—40.

ಸ್ಟಾಕಿಸ್ಟರು— ರಾಜಾ ಮೆಡಿಕಲ್ ಹಾಲ್, ಬೆಂಗಳೂರು ಕೆಂಟೋನ್‌ಮೆಂಟ್; ಕುಮ್ಟಾ ಫಾರ್ಮಸಿ, ಕುಮ್ಟಾ (ಉ. ಕ.)

ಗೇಹ ರಾಜ್ಯದಲ್ಲಿ

ಊರಿಗೆ ಬಂದ ದೀಪಾವಳಿ

"ಏ, ಕೇಳಿದಿಯೇನೆ?"

"ಏನು?'

'ಕಣ್ಣು ಕೊಡೋ ಕಣ್ಮಣಿ ಸಂಗ್ತಿ ಕೇಳಿದಿಯೇಂತ?"

"ಕಣ್ಮಣೀನ ಕೇಳೋದೇನು, ನೋಡೋದಲ್ವೆ?"

"ನೋಡಿದೆಯೂ ಹಾಂಗಾದ್ರೆ?"

"ಪಾಪ ನೀವೊಬ್ರು, ಹೋಗೋಣ ಹೋಗೋಣಾಂತ ಹೇಳ್ಬಿಟ್ಟು ದಿನ ಆರಾಯ್ತು. ಇನ್ನೂ......"

"ಇನ್ನು ನೋಡೋಕೆ ಹೋಗ್ಬೇಕು ಮತ್ತೊಂದೂರಿಗೆ. ಭಟ್ಕಳವೋ ಕಾರ್ಕಳವೋ......"

"ನಂದೇವ್ರ ಬುದ್ಧಿ ನಂಗೊತ್ತಿಲ್ವೆ? ದೇವ್ರಿಗೆ ಸಾವಿರಾರು ಭಕ್ತರ ಕ್ಷೇಮ ಚಿಂತನೆ ಮಾಡೋಕೆ ಇರುವಾಗ......"

"ಏನೇ ಅದು, ಏನೆಲ್ಲಾ ಆಡ್ತಾ ಇದೀಯೆ?"

'ಇಲ್ಲದೆ ಇರೋದನ್ನ ಅನ್ನಿಲ್ಲ ತಾನೆ?"

"ಸಾಕು ಬಿಡೆ ನಿನ್ನ ತಮಾಷೆ ಶಾಲೇಲಿ ಮಾಸ್ತರಾಂತಂದ್ರೆ ಹೆಂಡ್ತಿ ಮಕ್ಕಳಿಗೆಲ್ಲಾ ಅಷ್ಟೂ ಸಸಾರ ಅಲ್ವೆ?"

"ಯಾಕೆ ಹಾಗಂತೀರಾ? ಗಂಡ ಯಾರೇ ಇರ್ಲಿ ಹೆಂಡ್ತಿಗೆ ಸಸಾರ ಆಗೋದುಂಟೆ?'

'ಆಗದೆ ಮತ್ತೆ......"

"ಕೇಳಿದ್ರಾ ನಮ್ಮ ಪದ್ಮಾಕ್ಷಿ ಕಥೆಯನ್ನ....?"

"ಪದ್ಮಾಕ್ಷೀನೇ ಪದ್ಮಶ್ರೀನೇ....?'

"ಹ್ಞಾಂ....ಪದ್ಮಶ್ರೀ.... ಅಲ್ಲ, ಅಲ್ಲ ನಾನು ಅನ್ನೋದು ಪದ್ಮಾಕ್ಷೀನ.."

"ನಾನು ಅಂದ್ಕೊಂಡದ್ದು ಪದ್ಮಶ್ರೀನ

"ಹಾಗಾದ್ರೆ ಒಂದು ಕೆಲ್ಸ ಮಾಡೋಣ. ನಾನು ಪದ್ಮಾಕ್ಷೀ ಕಥೆ ಹೇಳ್ತೇನೆ. ನೀವು...."

"ಪದ್ಮಶ್ರೀ ಕಥೆ ಹೇಳ್ತೇನೆ. ಸರಿ ತಾನೆ?"

"ಪದ್ಮಾಕ್ಷೀ ನಿಮ್ಗೆ ಗೊತ್ತಿಲ್ಲ...ಆ ಕೆಳಮನೆ ತೋಟದಾಚೆ ಹುಲ್ಲಿನ ಜೋಪಡಿಯವಳು....

"ಅಂದ್ರೆ...."

'ಅದೂ ಗೊತ್ತಿಲ್ವೆ ನಿಮ್ಗೆ....ಮೊನ್ನೆ ಅವನ ಹೆಸ್ರು ಪೇಪರ‍್ನಲ್ಲಿ ಬಂತಲ್ಲನೋಡಿ"

"ಪೇಪರ‍್ನಲ್ಲಿ ಅನೇಕ ಹೆಸ್ರು ದಿನಾನಿತ್ಯ ಬರ್ತಾನೇ ಇರ್ತವೆ. ಅದ್ರ ಮೇಲೆ ಮೊನ್ನೆ ನಡೆದದ್ದು ಬಾಲದಿನ ನೋಡು ಸ್ಕೂಲು ಸ್ಕೂಲುಗಳಿಗೂ ಕೂತುಕೊಳ್ಳಲು ಸ್ಥಳ ಇಲ್ಲದಿದ್ರೂ ಮಾರ‍್ನಾಲ್ಕು ಜನ ಬಂದಿದ್ದಾರೆ, ತಮ್ಮ ಹೆಸ್ರಾದ್ರೂಬರ‍್ಲೀಂತ?"

ಹ್ಞಾಂ- ಏನಂತೀರಾ ನೀವು? ನನ್ಗೊಂದೂ...

"ನೋಡು, ಧ್ವಜಹಾರಿಸೋಕೆ ಒಬ್ರು, ಅಧ್ಯಕ್ಷತೆ ವಹಿಸೋಕೆ ಒಬ್ರು, ಭಾಷಣ ಬಿಗಿಯೋಕೆ ಒಬ್ರು, ಮತ್ತೆ ಬೇಕಾದ್ರೆ ಬಹುಮಾನ ವಿತರಣೆ ಮಾಡೋಕೊಬ್ರು- ಹೀಗೆ ತಮ್ಮ ಹೆಸರಾದ್ರೂ ಪೇಪರ‍್ನಲ್ಲಿ ಬರ‍್ಲೀಂತ ಬಂದಿದ್ರು ನೋಡು.."

"ಓ, ನೀವನ್ನೋದು ಹಾಗೆ. ಇರ್ಲಿ, ಪಾಪ, ಅದ್ಕೆಂದೇ ಅಲ್ವೆ ನಿಮ್ಮ ಟೋಪಿ ಸರ್ಕಾರ ಈ ಡೇವೀಜ್‌ಗಳನ್ನು ತಂದಿರೋದು. ಆದಿರ‍್ಲಿ, ನಾನು ಏನು ಹೇಳ್ತಿದ್ದೇಂದ್ರೆ....ಹೌದು ಪದ್ಮಾಕ್ಷೀ ಕಥೆಯನ್ನ ಅಲ್ವೆ? ಅವಳ ಗಂಡ ಎಲ್ಲೋ ದೇವಸ್ಥಾನದಲ್ಲಿ...."

"ಹ್ಞಾಂ.. ಹ್ಞಾಂ ಕೈಕೊಟ್ಟವನಲ್ಲವೆ? ಹೌದು ಹೌದು. ಚೋರ ಶಿಖಾಮಣಿ ಸತ್ಯನಾರಾಯಣ...."

"ನೋಡಿ, ಅವನ ಕಥೆ ಹಾಗಾಯ್ತು. ಒಂದು ದಿನಾನೂ ಪದ್ಮಾಕ್ಷಿ ಕಣ್ಣೀರಿಲ್ಲದ ಕೂಳು ಉಣ್ಣಿಲ್ಲ. ಆದ್ರೂ ಆಕೆಗೆ ತನ್ನ ಪತೀ ಮೇಲೆ ಎಷ್ಟು ಪ್ರೀತೀಂತ ನಿಜವಾದ ಪತಿವ್ರತೆಯೆಂದರೆ ಆಕೆಯೇಸರಿ?"

"ಅಂದ್ರೆ ಅಭಿನವ ಸಾವಿತ್ರಿ ಅಂದ ಹಾಗಾಯ್ತು'

"ಸಾವಿತ್ರಿ ಅಲ್ರಿ, ಸೀತೆ ಅನ್ನಿ..."

"ಅದ್ರೆ ಸತ್ಯನಾರಾಯಣ...."

"ಅವನ ಕಥೆ ಬಿಡಿ. ಇವಳು...."

"ಸರಿ ಬಿಡು, ಇವಳು ಸೀತೆಯಂತೆ ಪತಿವ್ರತೆಯಂತ. ಅಭಿನವ ಸೀತೆ ಅಲ್ವೆ ನೀನನ್ನೋದು?"

"ಹ್ಞಾಂ....ಸರಿ ಮತ್ತೆ ಇನ್ನು ನಿಮ್ಮ ಪದ್ಮಶ್ರೀ ಕಥೇನ ಹೇಳಿ. ಯಾರವಳು? ಯಾಕೆ ಅವಳ ಹೆಸ್ರು ಬಂತು?"

"ಅವಳು ಅಲ್ವೆ ಅವನು..."

"ಅಯ್ಯಯ್ಯೋ.... ಈಗಿನ ಕಾಲ್ದ ಹೆಸ್ರುಗಳೇ ಚಂದ. ಗಂಡಸ್ರೆಲ್ಲಾ ಹೆಂಗ್ಸರ ಹೆಸ್ರಿಡೋದು ಅಲ್ಲಿಗೂ ನಿಮ್ಮ ಸಮಾಜವಾದದ ದಾಳಿ..."

'ನೀನು ಕಥೆ ಕೇಳೋಕೋ ಅಲ್ಲ..'

"ಹ್ಞಾಂ ಹ್ಞಾಂ. ಹೇಳಿಬಿಡಿ ಕಥೆಯನ್ನ...."

'ಹಾಗಾದ್ರೆ ಕೇಳು. ಪದ್ಮಶ್ರೀ ಅನ್ನೋದು ಗಂಡ್ಸಿಗೂ ಹೆಂಗ್ಸಿಗೂ ಅನ್ವಯಿಸೋ ಶಬ್ದ."

"ಹೇಳಿದ್ನೆಅಲ್ಲಾ ನಾನ, ಸಮಾಜವಾದದ ಮಾದರೀಂತ. ನೀವು ನೋಡಿ ಕಥೆ ಹೇಳ್ತೀನೀಂತ ಶಬ್ದ ಶಾಸ್ತ್ರ ಬಿಚ್ಚೋಕೆ ಹೊರಟ್ರಿ"

ಕೋರ ಮತ್ತು ನೀರುಕೋಟ್ಲೆಗಳು ಪಿಡುಬಿನ ತಂಗಿ ರೋಗಗಳು. ಪ್ರಾಣ ಹಾನಿಯನ್ನಿವು ಮಾಡುವುದಿಲ್ಲವಾದರೂ ಯಾತನೆಗೆ ಹೇತುವಾಗಿವೆ. ಚಿಕ್ಕಂದಿನಲ್ಲೇ ಇವಕ್ಕೆ ಪ್ರತಿಬಂಧಕ ಚುಚ್ಚು ಮದ್ದು ಕೊಡುವುದರ ಪ್ರಯೋಗವೀಗ ಎಲ್ಲೆಡೆಯೂ ನಡೆಯುತ್ತಿದೆ

"ಹಾಂಗಲ್ವೇ. ಪದ್ಮಶ್ರೀ ಅನ್ನೋದು ಬಿರುದು ಗೌರವಕ್ಕಾಗಿ ಭಾರತ ಸರ್ಕಾರ ಕೊಡೋದು ಅದನ್ನ ಗಂಡಸ್ರಿಗೂ ಹೆಂಗ್ಸರಿಗೂ ಇಬ್ರಿಗೂ ಕೊಡ್ತಾರೇಂತಂದೆ ನಾನು"

"ಓ, ಹಾಗೆ ನೀವನ್ನೋದು. ಹ್ಞಾ, ಅಂದ್ರೆ ನೀವನ್ನೋ ಕಥಾ ನಾಯಕನ ಹೆಸ್ರು ಬೇರೆಯೇ ಇದೆ ಅಲ್ವೆ? ಭಾರತ ಸರ್ಕಾರ ಯಾಕೆ ಅವ್ರಿಗೆ ಆ ಬಿರುದು ಕೊಟ್ರೊಂತ"

"ಅದೋ ಅವರಂತೆ ಜನ ಸೇವೆ ಮಾಡೋವ್ರಿಗೆ ಕೊಡ್ದೆ ಮತ್ಯಾರಿಗೆ ಯಾಕೆ ಕೊಡ್ಬೇಕು?"

"ಯಾವ ಸೇವೆಯನ್ನ ಅವರು ಮಾಡ್ತಾರೆ?'

"ವೈದ್ಯಕೀಯದಲ್ಲಿ..."

"ವೈದ್ಯಕೀಯ? .."

"ಹೌದು.

"ಓ, ನೀವು ಕೇಳೋದು ಮೋದಿಯವರನ್ನಲ್ವೆ?'

"ಹೌದು..."

'ಅಯ್ಯೋ ಪಾಪ, ಮೊದ್ಲೇ ಮೋದಿ ಅಂತನ್ನಿದ್ರೆ ಇಷ್ಟೆಲ್ಲಾ ಪುರಾಣ ಯಾಕೇಂತ. ಅವ್ರ ಕಥೆಯನ್ನ ನೀವು ಹೇಳೋದೇನು? ನಮ್ಮ ಪಾಪಲಚ್ಚನೂ ಹೇಳ್ತಾನೆ. ಊರಲ್ಲಿ ಯಾರ‍್ನ ಬೇಕಾದ್ರೂ ಕೇಳಿ ಮೋದಿ ಅಂದ್ರೆ ಎಲ್ರಿಗೂ ಗೊತ್ತು. ಮತ್ತೆ ನಿಮ್ಹಾಗೆ ಪದ್ಮಶ್ರೀ ಬಿರುಶ್ರೀ ಅಂದ್ರೆ ನಮ್ಮಂತೋರಿಗೆ ಹೇಗೆ ಅರ್ಥವಾಗಬೇಕು?"

"ಹಾಂಗಾದ್ರೆ ನನ್ನ ಕಥೆ ಪೊಟ್ಟಾಯಿತೂಂತಾಯ್ತು."

"ಏನಂದ್ರಿ? ಮೋದಿ ಕತೆ ಪೊಟ್ಟಾಯಿತೂಂದ್ರೆ, ನಾಲಿಗೇಲಿಹುಳ ಬಿದ್ದೀತು. ಆ ಲ್ಲ ದಿನಾ ನೂರಾರು "ಕುರುಡ"ರಿಗೆ ಕಣ್ಣು ಕೊಡೋ ಕಣ್ಮಣೀನ ಕಥೆ ಪೊಟ್ಟು ಅಂದ್ರೆ ಮತ್ತೆ ನಿಮ್ಮ ಕಥೆ...?"

"ಏನೇ ಮಾತು ಎಲ್ಲೆಲ್ಲೋ ಸುತ್ತಿ ನನ್ನ ನಿನ್ನ ವರೆಗೇನೂ ಬಂತು!'

"ಏನೋ ಅಂದ್ಬಿಟ್ಟೆ..."

"ಪಾಪ, ಸ್ಪಿರಿಟ್ ಬಂದ್ಬಿಟ್ರೊನ್ನು...

'ನಮ್ದೆಲ್ಲಾ ಸ್ಪಿರಿಟ್ ಏನು? ಸ್ಪಿರಿಟ್ ಅಂದ್ರೆ ಆ ಮೋದೀದ್ದು. ನಿಜವಾಗಿಯೂ ಅವ್ರೊಬ್ರ ಮನುಷ್ಯ ಒಂದು ಕ್ಷಣದಲ್ಲೇ ಪರೀಕ್ಷೆ ಮಾಡಿ ಬಿಡ್ತಾರಂತೆ. ಆಪರೇಶನೂ ಹಾಗೇ ಅಂತೆ. ಮತ್ತೆ ನೋಡಿ, ಅವರ ಕಣ್ಣು ಇದೆಯಲ್ಲಾ ಅದು ಭಾರೀ ಸೂಕ್ಷ್ಮ.

"ಹೇಗೆ ಗೊತ್ತಾಯ್ತು ನಿನಗೆ."

"ನಮ್ಮ ಲೀಲಜ್ಜಿ ಹೋದ್ಳಂತೆ ಆಪರೇಶನ್ ಆಗ್ಬೇಕೊಂದ್ರಂತೆ ಅದ್ರೆ ನ್ಯಾಯ್ಲಿ ತ್ರಾಣವಿಲ್ಲದ್ರಿಂದ ಇನ್ನೊಂದು ಕ್ಯಾಂಪಿಗೆ ಬನ್ನೀದ್ರಂತೆ ಅವಳು ನೋಡೊಣಾಂತ, ಮತ್ತೊಮ್ಮೆ ನಾಲ್ಕು ಪರೀಕ್ಷೆಗೆ ನಿಂತ್ಳಂತೆ ಅವಳ ಹತ್ರ ಬಂದೋರೇ ನಿಮ್ಗೆ ಮತ್ತೊಂದು ಕ್ಯಾಂಪಿಗೇಂತ ಹೇಳ್ಲಿಲ್ಲಾ? ಅಂತ ಕೇಳ್ಬೇಕೆ?'

"ಓಹೋ......"

"ಮತ್ತೆ ನೋಡಿ, ಕಣ್ಣು ಸರಿಯಿರೋರೂ ಸಾಲ್ನಲ್ಲಿ ನಿಲ್ಲೋದಂತೆ...."

(ಆನೇ ಪುಟ ನೋಡಿರಿ)

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!
ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)
ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.
ಬೆಲೆ. ರೂ. ೧—೮—೦ (1 = 50)
ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.
ದೊರೆವ ಸ್ಥಳ.
ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

NAVAYUGA
Kannada Weekly
UDIPI
Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ

ವರುಷ	ಉಡುಪಿ	ವಾರ
೪೩	೨೧-೧೧-೧೯೬೩	೧೨

ಕಾರ್ಮೋಡ ಅವಿಚಲವೆ?

ಅಣ್ವಸ್ತ್ರ ಪರಿಶೀಲನೆಗೆ ಮುಟ್ಟುಗೋಲು ಹಾಕುವ ಆಂಶಿಕ ಒಡಂಬಡಿಕೆಯು ರಶ್ಯ ಮತ್ತು ಅಮೆರಿಕೆಗಳ ನಡುವೆ ಆಗಿತ್ತು; ರಶ್ಯಕ್ಕೆ ಅಮೆರಿಕನ್ ಗೋಧಿಯನ್ನು ನಿರ್ಯಾತ ಮಾಡುವ ಸೂಚನೆಯೂ ವಾಶಿಂಗ್‌ಟನ್ನಿನಿಂದ ಹೊರಟಿತ್ತು. ಇದರಿಂದ ಪ್ರಚ್ಛನ್ನ ಸಮರದ ಕಾವು ಶಾಂತವಾಗುತ್ತಿದೆಯೆಂದು ತಿಳಿದವರು ಇತ್ತೀಚೆಗಿನ ಕೆಲವು ಘಟನೆಗಳಿಂದ ತುಸು ತಲ್ಲಣಗೊಳ್ಳುವಂತಾಗಿದೆ. ಬರ್ಲಿನಿಗೆ ಅಮೆರಿಕನ್ ಸಾರಿಗಾ ವ್ಯವಸ್ಥೆಯನ್ನು ತಡೆಹಿಡಿದಿರುವುದು, ಗೂಢಚರ್ಯೆಯ ಸಂದೇಹದ ಮೇಲೆ ಮಾಸ್ಕೊವಿನಲ್ಲಿ ಅಮೆರಿಕನ್ ಪ್ರಾಧ್ಯಾಪಕರೊಬ್ಬರನ್ನು ಬಂಧಿಸಿದುದು, ಅಲ್ಜೀರಿಯಾ ಮತ್ತು ಸೋಮಾಲಿಯಾಗಳಿಗೆ ರಶ್ಯವು ಶಸ್ತ್ರಾಸ್ತ್ರಗಳನ್ನು ಪೂರಯಿಸುತ್ತಿರುವುದು — ವಾಶಿಂಗಟನ್ನಿನಲ್ಲಿ ಕಳವಳಕ್ಕೆ ಕಾರಣವಾದರೆ ಆಶ್ಚರ್ಯವೇನು? ಉಭಯ ರಾಷ್ಟ್ರಗಳು ಸಂಯುಕ್ತ ರಾಷ್ಟ್ರ ಸಭೆಯಲ್ಲಿ ಘೋಷಿಸಿದ ನಿಶ್ಶಸ್ತ್ರೀಕರಣದ ನೀತಿಯಲ್ಲಿ ಬಾಹ್ಯ ಪರಿಶೀಲನೆಗೆ ಮಾತ್ರ ಆತಂಕವಿರುವುದಲ್ಲದೆ, ಭೂಗತ ಪರೀಕ್ಷೆಯನ್ನು ಬಿಟ್ಟುಕೊಡಲು ಅವರು ಸಿದ್ಧರಿಲ್ಲವೆಂಬುದು ಗೊತ್ತಾಗುತ್ತದೆ. ಹಾಗೆಯೇ ಜರ್ಮನಿ ಸಮಸ್ಯೆಯ ಪರಿಹಾರ, ಸೈನಿಕ ವೆಚ್ಚದಲ್ಲಿ ಕಡಿತಗಳನ್ನೂ ಅವರು ಒಪ್ಪುವುದಿಲ್ಲ. ಕ್ರುಶ್ಚೇವರು ಕ್ಯೂಬಾಕ್ಕೆ ನೆರವು ನೀಡುವ ತನ್ನ ನೀತಿಯನ್ನು ಮುಂದುವರಿಸುತ್ತಾರೆ; ಅಲ್ಲಿನ ಅಧ್ಯಕ್ಷ ಕಾಸ್ಟ್ರೊರವರಾದರೂ ರಶ್ಯ—ಚೀನಾ ವಿವಾದದಲ್ಲಿ ಸಿಲುಕಿಕೊಳ್ಳದೆ, ಸೋವಿಯತ್ ಶಸ್ತ್ರಾಸ್ತ್ರಗಳನ್ನು ನಂಬಿಯೇ ಇದ್ದಾರೆ. ತನ್ನ ಪಾಶ್ಚಾತ್ಯ ಮಿತ್ರರು ಕ್ಯೂಬಾದೊಡನೆ ವ್ಯಾಪಾರ ಸಂಬಂಧವನ್ನು ಕಡಿದುಕೊಳ್ಳುವಂತೆ ಮಾಡುವಲ್ಲಿ ಅಮೆರಿಕೆಯು ಯಶಸ್ವಿಯಾಗಿಲ್ಲ. ಮಾತ್ರವಲ್ಲ, ಪಾಶ್ಚಾತ್ಯ ದೇಶಗಳು ರಶ್ಯದೊಡನೆಯೂ ವ್ಯಾಪಾರ ನಡೆಸುತ್ತಲೇ ಇವೆ, ಅಮೆರಿಕೆಯು ಈ ಸಂಬಂಧದಲ್ಲಿ ಹೇರಿರುವ ನಿರ್ಬಂಧದಿಂದ ಅಲ್ಲಿನ ವ್ಯಾಪಾರಿ ವರ್ಗವು ತುಸು ಅಸಮಾಧಾನಗೊಂಡಿದೆಯೆಂದರೂ ತಪ್ಪಾಗಲಾರದು; ಇದರಿಂದಾಗಿಯೇ ಅಮೆರಿಕೆಯು ತನ್ನ ವ್ಯಾಪಾರ ನೀತಿಯ ಬಿಗುಹನ್ನು ತುಸುವಾದರೂ ಸಡಿಲಿಸಬೇಕಾಗಬಹುದು.

ಹೀಗೆ ಜಾಗತಿಕ ರಾಜಕಾರಣದಲ್ಲಿ ಒಂದೆಡೆ ಅಮೆರಿಕೆಯು ಶಕ್ತಿಹೀನವಾಗುತ್ತ ಬರುತ್ತಿರುವಂತೆಯೇ ರಶ್ಯವು ತನ್ನ ಸ್ಥಾನವನ್ನು ಬಿಗಿಗೊಳಿಸುತ್ತ ಬರುತ್ತಿರುವುದು ವಿವಂಚನೆಗೆ ಇನ್ನೊಂದು ಕಾರಣವೆನ್ನಬಹುದು. ಮಧ್ಯಪೂರ್ವವನ್ನು ಸೋವಿಯತ್ತು ತನ್ನ ಮುಷ್ಟಿಯೊಳಗೆ ಮರಳಿ ತಂದುಕೊಳ್ಳುವಲ್ಲಿ ಯಶಸ್ವಿಯಾಗುತ್ತಿದೆ. ಇರಾಣದೊಡನೆ ಅದರ ಆರ್ಥಿಕ ಸಂಬಂಧವು ಬಲಗೊಳ್ಳುತ್ತಿದೆ. ರಶ್ಯವು ಪಾಕಿಸ್ತಾನದೊಡನೆ ವಿಮಾನ ಸಾರಿಗೆಯ ಸಂಬಂಧದಲ್ಲಿ ಒಡಂಬಡಿಕೆಯೊಂದಕ್ಕೆ ಸಹಿಹಾಕಿದ್ದು ಇದು ಮಹತ್ವಪೂರ್ಣವೆನ್ನದಿರಲು ಸಾಧ್ಯವಿಲ್ಲ. ಟರ್ಕಿಯೊಡನೆ ತನ್ನ ಸಂಬಂಧವನ್ನು ಸೋವಿಯತ್ ಸುಧಾರಿಸಲು ಪ್ರಯತ್ನಿಸುತ್ತಿದೆ. ಹೀಗೆ ಜಗತ್ತಿನಲ್ಲಿ ರಶ್ಯಕ್ಕೆ ಪ್ರತಿಯಾಗಿ ಬೀಸಿದ ಡಲ್ಲೆಸ್ಸರ ಜಾಲವೀಗ ಛಿದ್ರ ಛಿದ್ರವಾಗುವ ಕಾಲ ಸನ್ನಿಹಿತವಾಗಿದೆಯೆನಿಸುತ್ತದೆ. ಪೂರ್ವ ಯುರೋಪಿನ ಹೆಚ್ಚಿನ ದೇಶಗಳು ಕೂಡ ಇಂದು ವ್ಯಾಪಾರದ ಮಟ್ಟಿಗೆ ತಮ್ಮ ಬಾಗಿಲನ್ನು ಉದಾರವಾಗಿಯೇ ತೆರೆದಿವೆ. ಚಿಕ್ಕ ರಾಷ್ಟ್ರ ಅಲ್ಬೇನಿಯಾವು ರಶ್ಯದ ಪ್ರತ್ಯಕ್ಷ ರಕ್ಷಣೆಯಲ್ಲಿದೆ. ಜರ್ಮನಿಯ ಮಹಾ ಪ್ರಶ್ನೆ, ವಿಯತ್‌ನಾಮ್, ಫಾರ್ಮೋಸ ಮತ್ತು ಕೋರಿಯಾಗಳ ಸಮಸ್ಯೆಗಳೂ ಹಾಗೆಯೇ ಉಳಿದಿದ್ದು, ಇವುಗಳ ಸಂಬಂಧದಲ್ಲಿ ಯಾವ ಪ್ರಗತಿಯನ್ನು ಸಾಧಿಸುವುದೂ ಸಾಧ್ಯವಾಗಿಲ್ಲ. ಇದರಿಂದಾಗಿ ಅಲ್ಲಿನ ಪರಿಸ್ಥಿತಿಗಳು ಹಾಗೆಯೇ ಮುಂದುವರಿಯುತ್ತಿವೆ; ಪಶ್ಚಿಮ ಜರ್ಮನಿ ಮತ್ತು ದಕ್ಷಿಣ ವಿಯತನಾಮುಗಳ ನಾಯಕತ್ವದಲ್ಲಾದ ಬದಲಾವಣೆಗಳಿಂದಾಗಿ, ಈ ಸಮಸ್ಯಾ ಪರಿಹಾರದ ಹೊಸ ಮಾರ್ಗಗಳನ್ನು ಅರಸಬಹುದೆಂದು ನಿರೀಕ್ಷೆಯಿದೆ; ಆದರೆ, ಅದು ಸಾಧ್ಯವೆನಿಸೀತು ಎಂಬುದು ಸಂದೇಹಾಸ್ಪದ. ರಶ್ಯ ಮತ್ತು ಅಮೆರಿಕೆಗಳ ನಡುವೆ ಆಂಶಿಕ ಅಣ್ವಸ್ತ್ರ ನಿಷೇಧ ಒಡಂಬಡಿಕೆಯಾದುದು ನಿಜವಾದರೂ ಇದರಿಂದ ಬಾಹ್ಯ ಪರಿಶೀಲನೆಗೆ ತಡೆಯಾಗುವುದನ್ನು ಅಲ್ಲಗಳೆಯಲಾಗುವುದಿಲ್ಲವಾದರೂ ಅವಿನ್ನೂ ನಿಕಟವಾಗುವ ಹಂತಕ್ಕೆ ಬಂದಿಲ್ಲವೆನ್ನಲೇ ಬೇಕು.

ಇದಕ್ಕೇನು ಕಾರಣ? ಅಮೆರಿಕೆ ಮತ್ತು ರಶ್ಯಗಳು ತಂತಮ್ಮ ತತ್ವಗಳಿಗೆ, ಧೋರಣೆಗಳಿಗೆ ಬಲವಾಗಿ ಅಂಟಿಕೊಂಡಿವೆ. ಹಾಗಾಗಿ ಇವು ಹತ್ತಿರ ಬರಲು ಇನ್ನೂ ಕೆಲಕಾಲ ಬೇಕಾದೀತು. ಅಷ್ಟರಲ್ಲಿ ಮತ್ತೇನು ಸಂಭವಿಸುವುದೆಂದು ಇಂದೀಗಲೇ ಹೇಳುವುದು ಕಷ್ಟ. ಆದರೆ, ಒಂದು ಮಾತು ಮಾತ್ರ ನಿಜ. ರಶ್ಯ-ಅಮೆರಿಕಗಳ ನೀತಿಯಲ್ಲಿ ಅಜಗಜಾಂತರವಿದ್ದರೂ ಅವುಗಳ ಅನುಗಾಮಿಯಾದ ದೇಶಗಳು ಈ ಸಿದ್ಧಾಂತಗಳ ಬಗ್ಗೆ ಅಧಿಕ ಮಹತ್ವವನ್ನು ಕೊಡುತ್ತಿಲ್ಲ. ತಮ್ಮ ದೇಶಕ್ಕೆ ತಮ್ಮದೇ ಆದ ನೀತಿಯನ್ನು ರೂಪಿಸಿ, ತಮ್ಮ ಇಚ್ಛೆಯಂತೆ ಸ್ವತಂತ್ರವಾಗಿಯೇ ಇತರರೊಡನೆ ವ್ಯವಹಾರ ನಡೆಸುತ್ತಿವೆ. ಈ ಒಂದು ಕಾರಣದಿಂದ ಮಾತ್ರ ಪ್ರಚ್ಛನ್ನ ಸಮರದ ಕಾರ್ಮೋಡಗಳು ದೂರ ಸರಿದಿವೆಯೆನ್ನುವುದು ಸಾಧುವಲ್ಲವಾದರೆ, ಕವಿದ ಮೋಡಗಳು ಹಾಗೆಯೇ ಅವಿಚಲವಾಗಿಯೇ ಇವೆ; ಅವೆಂದಿಗೂ ಗುಡುಗಬಹುದು ಎಂದು ಹೇಳಲೇ ಬೇಕಾಗುತ್ತದೆ.

ವಿಮಾನ ತರಬೇತಿ

ನಮ್ಮ ವಿದೇಶೀ ಮಿತ್ರರ ಸಹಾಯದಿಂದ ತೊಡಗಿದ ಸಂಯುಕ್ತ ವಿಮಾನ ತರಬೇತಿ ಯೋಜನೆಯು ಈಗಾಗಲೇ ಪ್ರಾರಂಭವಾಗಿದೆ. ಎತ್ತರದ ಪರ್ವತ ಪ್ರದೇಶದಲ್ಲಿ ವಾಯು ರಕ್ಷಣೆಯನ್ನು ಮಾಡಿಕೊಳ್ಳುವ ವಿಚಾರದಲ್ಲಿ ನಮ್ಮ ಸಿಬ್ಬಂದಿಗೆ ತರಬೇತಿ ನೀಡುವುದು, ವಿದೇಶೀ ಉಪಕರಣಗಳನ್ನು ನೋಡಿಕೊಳ್ಳಲು ನಮ್ಮ ವಾಯು ದಳದವರಿಗೆ ಕಲಿಸುವುದೇ ಈ ತರಬೇತಿಯ ಪ್ರಮುಖ ಉದ್ದೇಶ. ರಾಡಾರ ತರಬೇತಿ ಮತ್ತು ವಾಯು ರಕ್ಷಣೆಯ ನಿಯಂತ್ರಣಕ್ಕೆ ಇಲ್ಲಿ ಹೆಚ್ಚಿನ ಮಹತ್ವವನ್ನು ಕೊಡಲಾಯಿತು. ಸದ್ಯ ನಡೆದ ಕಾರ್ಯಾಚರಣೆಯು ಸಂಪೂರ್ಣ ತೃಪ್ತಿಕರವಾಗಿದೆಯೆಂದು ತಿಳಿದು ಬರುತ್ತದೆ. ಈ ಕಾರ್ಯಾಚರಣೆಯ ಬಗ್ಗೆ ಅಪಸ್ವರವೆಬ್ಬಿಸಿದವರೂ ಲೋಕದಲ್ಲಿದ್ದಾರೆ. ಆದರೆ, ಭಾರತವು ಯಾವ ದುರುದ್ದೇಶ ಅಥವಾ ಪೂರ್ವಗ್ರಹವನ್ನಿಟ್ಟುಕೊಂಡು ಈ ಯೋಜನೆಗೆ ಕೈಹಾಕಿಲ್ಲ. ಕೆಂಪು ಚೀನಾವು ಕಳೆದ ವರ್ಷ ಭಾರಿ ಪ್ರಮಾಣದ ಆಕ್ರಮಣವನ್ನು ಮಾಡಿದ ಮೇಲೆ, ಆತ್ಮ ರಕ್ಷಣೆಗಾಗಿ ಸರ್ವ ವಿಧದ ಸಿದ್ಧತೆಯನ್ನು ಮಾಡಿಕೊಳ್ಳುವುದು ಅವಶ್ಯವಾಯಿತು. ಇದಕ್ಕಾಗಿ ತನ್ನ ಸೈನಿಕ ಶಕ್ತಿಯನ್ನು ಬಲಪಡಿಸುವ ಹಲವಾರು ಯೋಜನೆಗಳಲ್ಲಿ ಆಧುನಿಕೋಪಕರಣಗಳ ಉಪಯೋಗವೂ ಒಂದಾಗಿದ್ದು, ಅವುಗಳನ್ನು ನೋಡಿಕೊಳ್ಳಲು ನಮ್ಮ ಸಿಬ್ಬಂದಿಗೆ ಸೂಕ್ತ ತರಬೇತಿ ನೀಡುವುದು ಅಗತ್ಯವೆನಿಸಿತು. ಈ ಉದ್ದೇಶವೀಗ ಸಫಲವಾಗುತ್ತ ಬರುತ್ತಿದೆ. ಇದಕ್ಕಾಗಿ ನೆರವಾದ ವಿದೇಶೀಯ ಮಿತ್ರರಿಗೆ ಭಾರತವು ಸದಾ ಕೃತಜ್ಞವಾಗಿದೆ.

ಮಕ್ಕಳಲ್ಲಿ ಉಳಿತಾಯ ಯೋಜನಾ ಸಪ್ತಾಹ

ನವಂಬರ ೧೪, ನಮ್ಮ ನೆಚ್ಚಿನ ಪ್ರಧಾನಿ ಜವಾಹರಲಾಲರ ಜನ್ಮದಿನ; ಭಾರತದಾದ್ಯಂತ ಬಾಲದಿನ. ಭಾರತದ ಮಕ್ಕಳೆಲ್ಲರೂ ಮನದುಂಬಿ ನಲಿದಾಡಿ ಚಾಚಾ ನೆಹರುವನ್ನು ಅಭಿವಂದಿಸುವ ದಿನ; ಅವರಂತೆಯೇ ಭಾರತದ ಪುತ್ರ—ಪುತ್ರಿಯರು ರತ್ನವಾಗುವಂತೆ ಕರುಣಿಸೆಂದು ಪ್ರಾರ್ಥಿಸುವ ಸುದಿನ.

ಉಳಿತಾಯವೆಂಬುದು ಜೀವನದ ಒಂದು ಮಹತ್ವದ ಅಂಶ. ಉಳಿತಾಯವಿಲ್ಲದ ಜೀವನವು ಸದಾ ರುದ್ರಭಯಾನಕ. ಈ ಉಳಿತಾಯದ ಪ್ರವೃತ್ತಿ ಉಣ್ಣುವಂತೆಯೇ, ಶಿಕ್ಷಣದಂತೆಯೇ ಎಳೆಯ ಮಕ್ಕಳಲ್ಲಿ ರಕ್ತಗತವಾದರೆ, ಅದರಿಂದ ಅವರ ಭವಿಷ್ಯ ಜೀವನವು ಭದ್ರವಾಗುವುದು; ಈ ಸತ್ ಪ್ರವೃತ್ತಿ ಮಕ್ಕಳಲ್ಲಿ ಅನಾವ್ಯಯವನ್ನು ತಪ್ಪಿಸುವುದರ ಜತೆಗೆ ಉಳಿತಾಯದ ಪಾಠವನ್ನೂ ಕಲಿಸುವುದು. ಅದಕ್ಕಾಗಿ ಸಿಂಡಿಕೇಟ್ ಬ್ಯಾಂಕ್ ನವಂಬರ ೧೪ನೆಯದಿನವನ್ನು ಮಕ್ಕಳ ಉಳಿತಾಯ ದಿನವೆಂದು ತನ್ನ ೧೮೯ ಶಾಖೆಗಳಲ್ಲಿ ವಿಜೃಂಭಣೆಯಿಂದ ಆಚರಿಸಿತು.

ಉಳಿತಾಯ ಚಳುವಳಿಯಲ್ಲಿ ಯಾವ ಶಾಲಾ ಮಗುವೂ ಭಾಗವಹಿಸಬಹುದು. ೧೨ ವರ್ಷಕ್ಕೆ ಮೇಲ್ಪಟ್ಟವರು ಸೇವಿಂಗ್ಸ್ ಬ್ಯಾಂಕ್ ಖಾತೆಯನ್ನು ತೆರೆಯಬಹುದು; ಇದಕ್ಕೆ ಕೆಳಗಿನವರು ಪಿಗ್ಮಿ ಡಿಪೋಜಿಟ್ ಖಾತೆಗೆ ಸೇರಿಕೊಳ್ಳಬಹುದು. ತಾ. ೧೪ರಿಂದ ತೊಡಗಿ ಒಂದು ವಾರದ ನಡುವೆ ಈ ಖಾತೆಗಳನ್ನು ಮಕ್ಕಳು ತೆರೆಯಬಹುದು. ಈ ಸೇವಿಂಗ್ಸ್ ಬ್ಯಾಂಕ್ ಖಾತೆಗೆ ರೂ. ೧/=ನ್ನೂ ಪಿಗ್ಮಿ ಖಾತೆಗೆ ರೂ ೦=೫೦ನ್ನು ಬ್ಯಾಂಕು ತನ್ನ ಉಡುಗೊರೆಯೆಂದು ಜಮೆ ಮಾಡುವುದು.

ಸಿಂಡಿಕೇಟ್ ಬ್ಯಾಂಕಿನ ಎಲ್ಲ ಶಾಖೆಗಳಲ್ಲೂ ಈ ಸಪ್ತಾಹವು ಹೆಚ್ಚಿನ ಮುತುವರ್ಜಿಯಿಂದ ಆಚರಿಸಲ್ಪಡುತ್ತಿದೆ; ವಿದ್ಯಾರ್ಥಿಗಳೂ ಉತ್ಸಾಹದಿಂದ ಅದರಲ್ಲಿ ಆಸಕ್ತರಾಗಿದ್ದಾರೆ. ಅಧ್ಯಾಪಕರೂ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುತಿದ್ದಾರೆ. ಹೆತ್ತವರಾದರೂ ತಮ್ಮ ಮಕ್ಕಳಲ್ಲಿ ಸುಭದ್ರ ಜೀವನ ಕಾರಣವಾದ ಉಳಿತಾಯ ಪ್ರವೃತ್ತಿಯನ್ನು ಹುಟ್ಟಿಸುವ ಈ ಯೋಜನೆಯನ್ನು ಸ್ವಾಗತಿಸದೆ ಇಲ್ಲ. ಹೀಗೆ ಸರ್ವರ ಮೆಚ್ಚುಗೆಯೊಡನೆ ದೇಶದಲ್ಲಿ 'ಚಿಕ್ಕ ಉಳಿತಾಯ ಯೋಜನೆ'ಯನ್ನು ಪ್ರಚಾರಮಾಡ ಹೊರಟ ಸಿಂಡಿಕೇಟ್ ಬ್ಯಾಂಕ್ ಇಟ್ಟಿರುವ ಹೆಜ್ಜೆ ದಿಟ್ಟತನದ್ದು; ಪ್ರಾಯಸ್ಥರ ವರೆಗೆ ಮಾತ್ರ ಸೀಮಿತವಾಗಿದ್ದ ಬ್ಯಾಂಕಿಂಗ್ ಮನೋವೃತ್ತಿಯನ್ನು ಎಳೆಯ ಮಕ್ಕಳಿಗೂ ನಿಲುಕುವಂತೆ ಮಾಡಿದ ಸಿಂಡಿಕೇಟ್ ಬ್ಯಾಂಕ್ 'ಸಮಗ್ರ ಸೇವೆ' ಸಲ್ಲಿಸುವ ಅಗ್ರಗಣ್ಯ ಬ್ಯಾಂಕೆಂದು ಹೇಳಿದರೆ, ಪ್ರಿಯಸತ್ಯವನ್ನೇ ಆಡಿದಂತಾಗುತ್ತದೆ. ಹೊಸ ಹೊಸ ಯೋಜನೆಗಳನ್ನು ರೂಪಿಸುತ್ತ ಮಿಂಚಿನ ವೇಗದಿಂದ ಧಾವಿಸುತ್ತಿರುವ ಬ್ಯಾಂಕಿನ ಮೆನೇಜಿಂಗ್ ಡೈರೆಕ್ಟರ್ ಶ್ರೀ ಟಿ. ಎ. ಪೈಯವರ ನವೋತ್ಸಾಹವು ನಿಜಕ್ಕೂ ಪ್ರಶಂಸನೀಯ.

ಪದ್ಮಶ್ರೀ ಮೋದಿ

ಯೋಗ್ಯತೆಯೊಂದಿದ್ದರೆ ಸಾಲದು; ದೈವಾನುಗ್ರಹವೂ ಬೇಕು. ಯೋಗ್ಯತೆ ಮತ್ತು ಪರಮಾತ್ಮಾನುಗ್ರಹಗಳೆರಡನ್ನೂ ಪಡೆದ ಪದ್ಮಶ್ರೀ ನೇತ್ರದಾನಿ ಡಾ| ಎಂ. ಸಿ. ಮೋದಿಯವರು ಉಡುಪಿಯಲ್ಲಿ ನೇತ್ರ ಚಿಕಿತ್ಸಾ ಶಿಬಿರವನ್ನು ತೆರೆದರು; ಯಶಸ್ವಿಯಾಗಿ ಅದನ್ನು ಮುಗಿಸಿದರು. ನೂರಾರು ನೇತ್ರ ರೋಗಿಗಳ ಪರಿಶೀಲನೆ ನಡೆಸಿದ್ದಲ್ಲದೆ ೪೪೯ ನಾನಾ ರೀತಿಯ ಶಸ್ತ್ರಕ್ರಿಯೆಗಳನ್ನೂ ಅವರು ಮಾಡಿದರು. ಸೋಜಿಗದ ಸಂಗತಿಯೆಂದರೆ, ಈ ಬಹುಸಂಖ್ಯಾತ ಶಸ್ತ್ರಕ್ರಿಯೆಗಳೆಲ್ಲವೂ ಸಂಪೂರ್ಣ ಯಶಸ್ವಿಯಾದುದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದು ಮೋದಿಯವರ ಏಳನೆಯ ಶಿಬಿರವೆಂಬುದನ್ನು ಮನಗಾಣುವಾಗ, "ಸಪ್ತಮಂ ದೈವಚಿಂತನಂ" ಎಂಬುದು ಸತ್ಯಾಂಶ ಮನವರಿಕೆಯಾಗುತ್ತದೆ. ಶಿಬಿರದ ರೋಗಿಗಳ ಮತ್ತದಕ್ಕೆ ಸಂಬಂಧಿಸಿದವರ ಊಟೋಪಚಾರಗಳ ವ್ಯವಸ್ಥೆ ಮಾಡಿದ ಪರ್ಯಾಯ ಮಠದ ಶ್ರೀ ಶ್ರೀಲಕ್ಷ್ಮೀಮನೋಜ್ಞ ತೀರ್ಥ ಸ್ವಾಮಿಯವರೂ ಶಿಬಿರದ ಕಾರ್ಯಕಲಾಪಗಳಲ್ಲಿ ಭಾಗವಹಿಸಿದ ಎಲ್ಲ ಮಹನೀಯರೂ ಮೋದಿಯವರಂತೆಯೇ ಕೃತಜ್ಞತೆಗೆ ಅರ್ಹರು.

ಅಲ್ಲಲ್ಲಿಯ ಸುದ್ದಿ ಸಾರ

ರಾಷ್ಟ್ರಕವಿ ಸ್ಮಾರಕೋತ್ಸವ— ಕುಂದಾಪುರದ ಭಂಡಾರ್‌ಕರ್ಸ್ ಕಾಲೇಜಿನಲ್ಲಿ ರಾಷ್ಟ್ರಕವಿ ಗೋವಿಂದ ಪೈ ಸ್ಮಾರಕ ಗ್ರಂಥ ಸಮಿತಿಯು ಸಭೆ ಸೇರಿ ಸದ್ರಿ ಕಾಲೇಜಿನ ಆಶ್ರಯದಲ್ಲಿ ತಾ. 23—3—1964ರಲ್ಲು ರಾಷ್ಟ್ರಕವಿಗಳ ಸ್ಮಾರಕೋತ್ಸವವನ್ನು ಆಚರಿಸುವುದೆಂದು ನಿಶ್ಚಯಿಸಿರುತ್ತದೆ. ಆ ಸಂದರ್ಭದಲ್ಲಿ ಶ್ರೀ ರಂಗನಾಥ ದಿವಾಕರರ ಹಸ್ತದಿಂದ ಸ್ಮಾರಕ ಗ್ರಂಥದ ಉದ್ಘಾಟನೆಯನ್ನು ನೆರವೇರಿಸಬೇಕೆಂದೂ, ರಾಷ್ಟ್ರಕವಿಗಳ ತೈಲಚಿತ್ರದ ಅನಾವರಣವನ್ನು ಮಾಡಬೇಕೆಂದೂ ಹಾಗೂ ರಾಷ್ಟ್ರಕವಿಗಳ ಹೆಸರಿನಲ್ಲಿ ವಿದ್ಯಾರ್ಥಿ ವೇತನ ನಿಧಿಯನ್ನು ಏರ್ಪಡಿಸಬೇಕೆಂದೂ ನಿರ್ಣಯಿಸಿರುತ್ತದೆ. ಸ್ಮಾರಕೋತ್ಸವದ ಅಂಗವಾಗಿ ಕನ್ನಡ ನಾಡಿನ ಕಾಲೇಜು ಹಾಗೂ ಹೈಸ್ಕೂಲು ವಿದ್ಯಾರ್ಥಿಗಳಿಗೆ ಲೇಖನ ಸ್ಪರ್ಧೆಯೊಂದು ಏರ್ಪಡಿಸಲಾಗುವುದು. ಲೇಖನ ವಿಷಯವು ಕಾಲೇಜು ವಿದ್ಯಾರ್ಥಿಗಳಿಗೆ "ಗೋವಿಂದ ಪೈಯವರ ಸಾಹಿತ್ಯ ಕೃತಿಗಳು" ಎಂಬುದಾಗಿದ್ದು ಲೇಖನವು 2000 ಶಬ್ದಗಳಿಗಿಂತ ಮೀರಿರಬಾರದು. ಹೈಸ್ಕೂಲು ವಿದ್ಯಾರ್ಥಿಗಳಿಗೆ "ಕನ್ನಡ ಸಾಹಿತ್ಯಕ್ಕೆ ಶ್ರೀ ಪೈಯವರ ಕೊಡುಗೆ" ಎಂಬುದು ವಿಷಯವಾಗಿದ್ದು ಲೇಖನವು 1500 ಶಬ್ದಗಳಿಗೆ ಮೀರಿರಬಾರದು. ಲೇಖನವನ್ನು ವಿದ್ಯಾರ್ಥಿಯು ಸ್ವತಃ ಬರೆದಿರುವನೆಂಬುದಕ್ಕೆ ಮುಖ್ಯ ಅಧ್ಯಾಪಕ ಅಥವಾ ಪ್ರಿನ್ಸಿಪಾಲರ ಶಿಫಾರಸು ಅಗತ್ಯ. ಲೇಖನಗಳಿಗೆ ಪ್ರತಿಯೊಂದು ವಿಭಾಗದಲ್ಲಿ ಪ್ರಥಮ, ದ್ವಿತೀಯ ಬಹುಮಾನಗಳಿದ್ದು, ಪ್ರಥಮವೆಂದು ತೀರ್ಮಾನಿಸಲಾದ ಲೇಖನಗಳನ್ನು ಸ್ಮಾರಕ ಗ್ರಂಥದಲ್ಲಿ ಪ್ರಕಟಿಸಲಾಗುವುದು.

ರಾಷ್ಟ್ರಕವಿಗಳ ನೆನಪನ್ನು ಜನತೆಯ ಹೃದಯದಲ್ಲಿ ಚಿರಸ್ಥಾಯಿಯಾಗಿ ಇರುವಂತೆ ಮಾಡುವ ಈ ಕಾರ್ಯದಲ್ಲಿ ಕನ್ನಡ ನಾಡಿನ ಜನತೆಯ ಬೆಂಬಲವು ಅಗತ್ಯವಿದ್ದು ಪೂಜ್ಯ ರಾಷ್ಟ್ರಕವಿಗಳ ಅಭಿಮಾನಿಗಳು ದ್ರವ್ಯ ಸಹಾಯ ಹಾಗೂ ಇತರ ವಿಷಯ ಸಾಹಿತ್ಯಗಳನ್ನು ಒದಗಿಸಿ ಪ್ರೋತ್ಸಾಹಿಸಬೇಕಾಗಿ ಸಮಿತಿಯು ವಿನಂತಿಸುತ್ತದೆ. ಸ್ಮಾರಕ ಗ್ರಂಥವು ಪೂಜ್ಯ ಪೈಯವರ ಆಪ್ತ ವರ್ಗ ಹಾಗೂ ಹೆಸರಾಂತ ಸಾಹಿತಿಗಳ ಲೇಖನ ಹಾಗೂ ಭಾವಚಿತ್ರಗಳಿಂದ ಒಳಗೊಂಡಿರುವುದಲ್ಲದೆ, ಈ ಮಹಾ ಕಾರ್ಯದಲ್ಲಿ ಧನಸಹಾಯ ಮಾಡಲಪೇಕ್ಷಿಸುವವರು "ಕೋಶಾಧಿಕಾರಿ, ರಾಷ್ಟ್ರಕವಿ ಗೋವಿಂದ ಪೈ ಸ್ಮಾರಕ ಗ್ರಂಥ ಸಮಿತಿ, ಭಂಡಾರ್‌ಕರ್ಸ್ ಕಾಲೇಜು, ಕುಂದಾಪುರ, ದ.ಕ."—ಈ ವಿಳಾಸಕ್ಕೆ ಕಳಿಸಬೇಕಾಗಿ ವಿನಂತಿ.

ನಾಯಕ್ ಬ್ಯಾಂಕ್— ಸಾಂಗಾಳ ನಾಯಕ್ ಬ್ಯಾಂಕಿನ 21ನೆಯ ಶಾಖೆಯು ತಾರೀಕು 31—10—63ನೇ ಗುರುವಾರ ಚಿಕ್ಕನಾಯಕನ ಹಳ್ಳಿ (ತುಮಕೂರು ಜಿಲ್ಲೆ)ಯಲ್ಲಿ ತೆರೆಯಲ್ಪಟ್ಟಿತು. ಸಮಾರಂಭದಲ್ಲಿ ಬ್ಯಾಂಕಿನ ಚೇರ್‌ಮನ್ ಶ್ರೀ ಸಾಂಗಾಳ ರಾಮದಾಸ ನಾಯಕ್ ಮತ್ತು ಜನರಲ್ ಮೆನೇಜರ್ ಶ್ರೀ ಕೆ. ಎಸ್. ಕಾಮತರು, ನೆರೆದ ಆಮಂತ್ರಿತರನ್ನುದ್ದೇಶಿಸಿ ತಮ್ಮ ಬ್ಯಾಂಕಿನ ಶಾಖೆಯು, ಜನತೆಯ ಸೇವೆಗಾಗಿ ಚಿಕ್ಕನಾಯಕನ ಹಳ್ಳಿಯಲ್ಲಿ ಕಾಲಿಡುತ್ತಿದೆಯೆಂದೂ, ಎಲ್ಲರೂ ಇದರ ಸಂಪೂರ್ಣ ಸವಲತ್ತು ಮತ್ತು ಸೌಲಭ್ಯಗಳನ್ನು ಪಡೆದುಕೊಂಡು ಸಹಕರಿಸಬೇಕೆಂದೂ ಕರೆಯಿತ್ತರು.

ಜಿಲ್ಲಾ ಖಾಸಗಿ ಪ್ರಾಥಮಿಕ ಶಾಲಾ ಮೆನೇಜರರ ಸಂಘ— ಇದರ ಆಡಳಿತ ಮಂಡಳಿಯ ಸಭೆಯು ಸಂಘದ ಅಧ್ಯಕ್ಷ ಶ್ರೀ ಟಿ. ಎ. ಪೈಯವರ ನೇತೃತ್ವದಲ್ಲಿ, ಉಡುಪಿ ಮುಕುಂದ ನಿವಾಸದಲ್ಲಿ ತಾ. 9ರಲ್ಲು ಜರಗಿತು. ಖಾಸಗಿ ಶಾಲಾ ಮ್ಯಾಂಟಿನೆನ್ಸ್ ಗ್ರೇಂಟಿನ ಅತೀವ ಕಡಿತದ ಕುರಿತು ವಿದ್ಯಾ ಮಂತ್ರಿ, ಮುಖ್ಯ ಮಂತ್ರಿ ಮತ್ತು ಸ್ಥಳೀಯ ಶಾಸನ ಸಭಾ ಸದಸ್ಯರಿಗೂ, ಅನೇಕಾವರ್ತಿ ನಿವೇದಿಸಿಕೊಂಡ ಪ್ರಯತ್ನದ ವಿಫಲತೆಯ ವಿಚಾರವನ್ನು ಕಾರ್ಯದರ್ಶಿ ಕುರುಕಾಲು ಗಣಪಯ್ಯ ಶೆಟ್ಟರು ತಿಳಿಸಲು, ಇದರ ಪರಿಣಾಮವಾಗಿ ಮುಂದಿನ ವರ್ಷದಲ್ಲಿ ಖಾಸಗಿ ಶಾಲೆಗಳ ಅಭ್ಯುದಯಕ್ಕೆ ವಿಶೇಷ ಆಘಾತ ಉಂಟಾಗುವ ಕುರಿತು ಸಭೆಯಲ್ಲಿ ಚರ್ಚೆಯಾಗಲು— ಅಧ್ಯಕ್ಷರು ತಾನು ತಿರುಗಿ ಈಸಂಬಂಧವಾಗಿ ಇದೇ ತಾ. 20ಕ್ಕೆ ಬೆಂಗಳೂರಲ್ಲಿ ವಿದ್ಯಾ ಮಂತ್ರಿ, ಆರ್ಥಿಕ ಮಂತ್ರಿಯವರನ್ನು ಭೇಟಿಯಾಗುವರೇ, ಪತ್ರ ಬರೆಯುತ್ತೇನೆಂಬುದಾಗಿ ತಿಳಿಸಿದ ಮೇರೆಗೆ ಸರ್ವ ಭಾರವನ್ನು ಅಧ್ಯಕ್ಷರಿಗೆ ಒಪ್ಪಿಸಿದ್ದಲ್ಲದೆ—ಜಿಲ್ಲಾ ಸಂಘದ ವಿಶೇಷ ಮಹಾ ಸಭೆಯನ್ನು ಕೊನೆಯ ನಿರ್ಧಾರದ ಬಗ್ಗೆ ಬರುವ ಜನವರಿ ತಿಂಗಳಲ್ಲಿ ಕರೆಯಬೇಕಾಗಿ ನಿಶ್ಚೈಸಲಾಯ್ತು.

ತೆಂಕಪೇಟೆ ಮಾಗಣೆ ಭಜಕ ವೃಂದದ ಸಭೆ— ತೆಂಕಪೇಟೆ ಮಾಗಣೆ ಕಟಪಾಡಿ ಶ್ರೀ ವಿಶ್ವಕರ್ಮೇಶ್ವರ ದೇವಸ್ಥಾನದ ಉಡುಪಿ ಕಸಬೆಯ ಭಜಕ ವೃಂದದವರ ಸಭೆಯೊಂದು ಉಡುಪಿ ಪಳಕಾಡಿನಲ್ಲಿ ತಾ 17—11-63 ರಲ್ಲು ಶ್ರೀ ದೇವಳದ ವ್ಯವಸ್ಥಾಪಕ ಶ್ರೀ ಪಿ. ಮಾಧವಾಚಾರ್ಯರ ಚಿಂತನದಲ್ಲಿ ಸಮಾವೇಶಗೊಂಡು ಶ್ರೀಗಳಾದ ಯು. ಬೈ ಭಾಸ್ಕರಾಚಾರ್ಯ ಹಾಗೂ ಕೆ. ರಘುವಾಚಾರ್ಯರನ್ನು ಕಸಬಾ ಮೊಕ್ತೇಸರರನ್ನಾಗಿ ಸರ್ವಾನುಮತದಿಂದ ಚುನಾಯಿಸಲಾಯಿತು.

ಎಂ ಜಿ.ಎಂ. ಕಾಲೇಜಿನಲ್ಲಿ ಕೀರ್ತನ ಸ್ಪರ್ಧೆ— ಉಡುಪಿಯ ಎಂ. ಜಿ. ಎಂ. ಕಾಲೇಜಿನಲ್ಲಿ ಪುರಂದರ ದಾಸರ ನಾಲ್ಕನೇ ಶತಮಾನೋತ್ಸವದ ಅಂಗವಾಗಿ ಜಿಲ್ಲೆಯ ಕಾಲೇಜುಗಳೊಳಗೆ ಕೀರ್ತನ ಸ್ಪರ್ಧೆಯೊಂದನ್ನು ಏರ್ಪಡಿಸಲಾಗಿತ್ತು. ಎಂ. ಜಿ. ಎಂ. ಕಾಲೇಜು, ಶ್ರೀ ಪೂರ್ಣಪ್ರಜ್ಞ ಕಾಲೇಜು, ಸೈಂಟ್ ಎಲೋಶಿಯಸ್ ಕಾಲೇಜು ಮತ್ತು ಕೆ. ಎಂ. ಸಿ. ಮಂಗಳೂರು ಇವುಗಳಿಂದ ಒಟ್ಟು ಏಳು ಮಂದಿ ಸ್ಪರ್ಧಾಳುಗಳು ಸ್ಪರ್ಧೆಯಲ್ಲಿ ಭಾಗವಹಿಸಿದರು.

ಕುಮಾರಿ ವತ್ಸಲಾ ಇವರಿಂದ ಪ್ರಾರ್ಥನೆಯಾದ ಬಳಿಕ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರರಾಯರು ಸ್ಪರ್ಧಾಳುಗಳನ್ನೂ ಪರೀಕ್ಷಕರಾಗಿ ಬಂದ ಶ್ರೀಮತಿ ಅನುಸೂಯ ಬಿ. ಶೆಟ್ಟಿ, ಶ್ರೀ ಮಾಧವ ಭಟ್ ಮತ್ತು ಶ್ರೀ ಪರಮೇಶ್ವರ ಭಟ್ಟರನ್ನೂ, ಬಹುಮಾನ ವಿತರಣ ಗೈಯಲು ಬಂದ ಸಂಗೀತ ವಿದ್ವಾನ್ ಶ್ರೀ ಮಂಜುನಾಥಯ್ಯ ಇವರನ್ನೂ ಸ್ವಾಗತಿಸಿದರು. ಸ್ಪರ್ಧೆಯಲ್ಲಿ ಭಾಗವಹಿಸಿ ಎಂ. ಜಿ. ಎಂ. ಕಾಲೇಜಿನ ಕುಮಾರಿ ಹೇಮ ಪ್ರಭಾ, ಮತ್ತು ಕಲ್ಯಾಣ ಸುಂದರಂ, ಸೈಂಟ್ ಎಲೋಶಿಯಸ್ ಕಾಲೇಜಿನ ಎಸ್. ಕೃಷ್ಣನ್ ಮತ್ತು ರಾಧಾಕೃಷ್ಣ ಆರಿನಾಯ, ಪೂರ್ಣಪ್ರಜ್ಞ ಕಾಲೇಜಿನ ಕುಮಾರಿ ವತ್ಸಲಾ ಮತ್ತು ಪಿ. ವಿಷ್ಣುಮೂರ್ತಿ ಭಟ್, ಕೆ. ಎಂ. ಸಿ. ಮಂಗಳೂರಿನ ಯು. ಬಿ. ಪಡುವೆಟ್ನಾಯ ಇವರು ಪುರಂದರ ದಾಸರ ಬೇರೆ ಬೇರೆ ಕೀರ್ತನೆಗಳನ್ನು ಹಾಡಿದರು. ಸ್ಪರ್ಧೆಯ ಬಳಿಕ ಶ್ರೀ ಕು. ಶಿ. ಹರಿದಾಸ ಭಟ್ಟರು ಪುರಂದರ ದಾಸರ ಕೀರ್ತನೆಗಳು ನಮ್ಮನ್ನು ಹೇಗೆ ಸುಸಂಸ್ಕಾರಗೊಳಿಸ ಬಲ್ಲವು ಎಂಬುದನ್ನು ತಿಳಿಸಿದರು. ಸ್ಪರ್ಧೆಯಲ್ಲಿ ಪ್ರಥಮ ಬಹುಮಾನವನ್ನು ಶ್ರೀ ವಿಷ್ಣುಮೂರ್ತಿ ಭಟ್ಟರಿಗೂ ದ್ವಿತೀಯ ಬಹುಮಾನವನ್ನು ಕುಮಾರಿ ವತ್ಸಲಾ ಇವರಿಗೂ, ತೃತೀಯ ಬಹುಮಾನವನ್ನು ಶ್ರೀ ಪಡುವೆಟ್ನಾಯ ಇವರಿಗೂ ಕೊಡತಕ್ಕುದೆಂದು ಪರೀಕ್ಷಕರು ತೀರ್ಮಾನ ವಿತ್ತಂತೆ ಶ್ರೀ ಮಂಜುನಾಥಯ್ಯನವರು ಅವರಿಗೆ ಬಹುಮಾನಗಳನ್ನು ವಿತರಣೆ ಮಾಡಿದರು. ಸ್ಪರ್ಧಾಳುಗಳಿಗೆ ಹಿತವಚನಗಳನ್ನಾಡುತ್ತಾ ಅವರು ದಾಸರ ಕೀರ್ತನೆಗಳನ್ನು ಉತ್ತರಾದಿ ಪಾಟಿಯಲ್ಲಿ ಹಾಡುವುದಕ್ಕಿಂತ ಕರ್ನಾಟಕ ರೀತಿಯಲ್ಲಿ ಹಾಡುವುದು ಉತ್ತಮವೆಂದೂ, ಹಾಡುವಾಗ ಪಲ್ಲವಿ ಇತ್ಯಾದಿಗಳಿಂದ ಭಾವ, ಅರ್ಥಗಳಿಗೆ ಭಂಗಬರದಂತೆ ಚೆನ್ನಾಗಿ ಶೋಧಿಸಿ ಹಾಡುವುದು ಅಗತ್ಯವೆಂದೂ ಸೂಚಿಸಿದರು. ಕೊನೆಗೆ ಕಾಲೇಜಿನ ಕಲಾ ಸಂಘದ ಕಾರ್ಯದರ್ಶಿ ವಿಟ್ಠಲ ಶೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಸಾರ್ವಜನಿಕ ಆಡಳಿತೆ ಕುರಿತು ಭಾಷಣ— ಎಂ. ಜಿ ಎಂ. ಕಾಲೇಜಿನ ಯೂನಿಯನ್ ಮತ್ತು ಯೋಜನಾರಂಗಗಳ ಆಶ್ರಯದಲ್ಲಿ ತಾ. 13ರಂದು ನಡೆದ ಸಮಾರಂಭವೊಂದರಲ್ಲಿ ಮಂಗಳೂರಿನ ಶ್ರೀ ಜೆ. ಎಂ. ಲೋಬೋ ಪ್ರಭು ಇವರು ವಿಚಾರ ಪ್ರಚೋದಕ ಭಾಷಣವನ್ನು ಮಾಡಿದರು. ಸರಕಾರದ ದುರಾಡಳಿತದ ಟೀಕಾಕಾರನೆಂದು ತನ್ನನ್ನು ಪರಿಚಯಿಸಿಕೊಂಡು ಶ್ರೀ ಪ್ರಭುಗಳು ಪ್ರಸ್ತುತ ಸರಕಾರದ ಸಾರ್ವಜನಿಕ ಆಡಳಿತ ರಂಗದಲ್ಲಿರುವ ನ್ಯೂನತೆಗಳ ಬಗ್ಗೆ ಮಾತನಾಡಿದರು. ಕೃಷಿ ಅಭಿವೃದ್ಧಿಯ ಕುರಿತು ಉಲ್ಲೇಖಿಸುತ್ತಾ ಭೂಸುಧಾರಣೆಗಳು ಕೃಷಿ ರಾಷ್ಟ್ರೀಕರಣಕ್ಕೆ ಸಮಾನವಾಗಿದ್ದು ಅವು ಉತ್ಪನ್ನವನ್ನು ಕುಂಠಿತಗೊಳಿಸುತ್ತವೆಂದೂ ಕೃಷಿಕನಿಗೆ ಬೇಕಾದ ಸವಲತ್ತುಗಳನ್ನೂ ಅಭಿವೃದ್ಧಿಗೆ ಬೇಕಾದ ಪ್ರೋತ್ಸಾಹವನ್ನೂ ಕೊಡದೆ ಆಹಾರದಲ್ಲಿ ನಾವು ಸ್ವಾವಲಂಬಿಗಳಾಗುವುದು ಸಾಧ್ಯವಿಲ್ಲವೆಂದೂ ಹೇಳಿದರು. ಕೈಗಾರಿಕಾ ವಿಭಾಗದಲ್ಲೂ ಸ್ಪರ್ಧೆಯ ಮಹತ್ವವನ್ನೂ ಸಾರ್ವಜನಿಕ ರಂಗದ ಕೈಗಾರಿಕೆಗಳು ಹೆಚ್ಚುತ್ತ ಹೋದಂತೆ ಉಳಿತಾಯ ವ್ಯಕ್ತಿಗಳ ಬಂಡವಾಳವು ವಿನಿಯೋಗವಾಗದೆ ಹೋಗಿ, ಪ್ರಜೆಗಳ ಮೇಲೆ ಕರಭಾರವು ಅಧಿಕವಾಗುವುದೆಂದೂ ಅಭಿಪ್ರಾಯಪಟ್ಟರು. ವಿದ್ಯಾರ್ಥಿಗಳು ವಿಚಾರಸ್ವಾವಲಂಬಿಗಳಾಗಿರಲು ಕಲಿಯಬೇಕೆಂದು ಅವರು ವಿದ್ಯಾರ್ಥಿಗಳಿಗೆ ಕರೆಯಿತ್ತರು.

ಅತಿಥಿಗಳನ್ನು ಪ್ರಿನ್ಸಿಪಾಲ್ ಶ್ರೀ ಸುಂದರರಾಯರು ಸ್ವಾಗತಿಸಿದರು. ಕೊನೆಗೆ ಕಾರ್ಯದರ್ಶಿಗಳು ಧನ್ಯವಾದವಿತ್ತರು.

ದೀಪಾರಾಧನೆ— ಕಟಪಾಡಿಯ ಮಹತೋಭಾರ ಶ್ರೀ ವಿಶ್ವಕರ್ಮೇಶ್ವರ ದೇವರ ಸನ್ನಿಧಿಯಲ್ಲಿ ಶ್ರೀಯಸ್ತಿನಾವತೀ ರತ್ನಸಿಂಹಾಸನಾಧೀಶ್ವರ ಜಗದ್ಗುರು ಶ್ರೀಮದ್ ಕಾಮಾಚಾರ್ಯ ಶ್ರೀ ಮದಭಿನವ ನಾಗಧರ್ಮೇಂದ್ರ ತೀರ್ಥ ಶ್ರೀಪಾದಂಗಳವರ ಆರಾಧನೆಯು ಇದೇ ತಾ. 8—11—63ರಲ್ಲು ವಿಜೃಂಭಣೆಯಿಂದ ಜರಗಿತು. ಪೂರ್ವಾಹ್ನ ಶ್ರೀಗಳವರ ಸಮಾಧಿಯಲ್ಲಿ ಪ್ರತಿಷ್ಠಿತವಾದ ಶಿವಲಿಂಗಕ್ಕೆ ಮಹಾ ರುದ್ರಾಭಿಷೇಕ, ಮಧ್ಯಾಹ್ನ ಮಹಾಪೂಜೆ, ಸಮಾರಾಧನೆ, ರಾತ್ರಿ ಶ್ರೀ ದೇವಳದ ದೀಪೋತ್ಸವವೂ ವಿದ್ಯುಕ್ತವಾಗಿ ನೆರವೇರಿತು. ಉತ್ಸವದ ಅಂಗವಾಗಿ ತಾ. 7ರ ಸೂರ್ಯೋದಯದಿಂದ ಏಕಾಹ ಭಜನೆಯೂ ಜರಗಿತು.

'ವೀರ ಭೂಮಿ' ದೀಪಾವಳಿ ಸಂಚಿಕೆಯ ಉದ್ಘಾಟನೆಯು ತಾ. 10ರಂದು ಸಾಂಗಾಳ ನಾಯಕ್ ಬೇಂಕಿನ ಪ್ರಧಾನ ಕಚೇರಿಯಲ್ಲಿ ಬೇಂಕಿನ ಜನರಲ್ ಮೆನೇಜರ್ ಶ್ರೀ ಕೆ. ಎಸ್. ಕಾಮತರ ಅಧ್ಯಕ್ಷತೆಯಲ್ಲಿ ಡಾ| ಕೆ. ಎಲ್. ಐತಾಳರಿಂದ ನೆರವೇರಿಸಲ್ಪಟ್ಟಿತು. ಸಂಪಾದಕ ಶ್ರೀ ಎಸ್. ವೆಂಕಟರಾಜ ಮತ್ತು ಸಾಧನಾ ಜಾಹೀರಾತು ಸಂಸ್ಥೆಯ ಮಾಲಕ ಶ್ರೀ ಸಿ ಅಚ್ಯುತ ನಾಯ್ಕರಿಂದ ಸ್ವಾಗತವಾದ ಮೇಲೆ ಉದ್ಘಾಟಕರ ಮತ್ತು ದಿ. ಎಸ್. ಲಾವಿಸರ ಭಾಷಣಗಳಾದುವು. ಅಧ್ಯಕ್ಷರು ಮಾತನಾಡಿದ ಬಳಿಕ ವೆಂಕಟರಾಜರು ವಂದನಾರ್ಪಣೆ ಗೈದರು.

ಉಡುಪಿಯಲ್ಲಿ ವ್ಯವಸಾಯ ಮಂತ್ರಿಗಳು— ಇದೇ ತಾ. 12ರಂದು, ರಾಜ್ಯದ ವ್ಯವಸಾಯ ಮಂತ್ರಿ ಶ್ರೀ ಜಿ. ನಾರಾಯಣ ಗೌಡರು ಕಾಂಗ್ರೆಸ್ ಕಾರ್ಯಕರ್ತರನ್ನುದ್ದೇಶಿಸಿ, ಭಾಷಣ ಮಾಡುತ್ತಾ ಕೃಷಿ ಉತ್ಪಾದನೆಯಲ್ಲಿ ವಿದ್ಯಾವಂತರು ಅಧಿಕ ಆಸಕ್ತಿ ವಹಿಸಬೇಕೆಂದರು.

ಆರಂಭದಲ್ಲಿ ಶ್ರೀ ಟಿ. ಎ ಪೈಯವರು ಮಾತಾಡುತ್ತಾ, ಭಾರತವು ಸ್ವತಂತ್ರವಾಗಿ ಹದಿನೈದು ವರ್ಷಗಳಾದರೂ ಕೃಷಿ ಉತ್ಪಾದನೆಯು ಹೆಚ್ಚಾಗದ್ದು ವಿಷಾದಕರವೆಂದೂ ಇದನ್ನು ನಿವಾರಿಸಿ ಕೃಷಿಕನಿಗೆ ತಕ್ಕ ಪ್ರೋತ್ಸಾಹ ಕೊಡಬೇಕೆಂದೂ, ವಿದ್ಯಾವಂತ ನಿರುದ್ಯೋಗಿಗಳು ಕೃಷಿಯ ಕುರಿತು ಆಸಕ್ತಿ ವಹಿಸುವಂತಾಗಬೇಕೆಂದೂ ಹೇಳಿದರು. ಅಂತ್ಯದಲ್ಲಿ ಶ್ರೀ ಎ. ಜಿ. ಅತ್ರೆಯವರು ಧನ್ಯವಾದಗಳನ್ನಿತ್ತರು.

ಡಾ. ಮೋದಿಯವರ ನೇತ್ರ ಚಿಕಿತ್ಸಾ ಶಿಬಿರದ ಮುಕ್ತಾಯ— ಉಡುಪಿಯಲ್ಲಿ ತಾ. 6ರಿಂದ ಪ್ರಾರಂಭವಾದ ಪದ್ಮಶ್ರೀ ಡಾ. ಮೋದಿಯವರ ನೇತ್ರ ಶಸ್ತ್ರ ಚಿಕಿತ್ಸಾ ಶಿಬಿರವು ತಾ 16ರಂದು ಯಶಸ್ವಿಯಾಗಿ ಮುಕ್ತಾಯವಾಯಿತು. ಮುಕ್ತಾಯ ಸಮಾರಂಭವು ರಥಬೀದಿಯಲ್ಲಿ ಪರ್ಯಾಯ ಶ್ರೀ ಶೀರೂರು ಮಠದ ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ನೆರವೇರಿತು. ಕಾರ್ಯದರ್ಶಿ ಶ್ರೀ ಎಸ್. ಡಿ. ಪೆಜತ್ತಾಯರು ಪ್ರಸ್ತಾವಿಕ ಭಾಷಣ ಮಾಡಿ ವರದಿಯನ್ನೊಪ್ಪಿಸಿ ನೆರವಾದವರಿಗೆಲ್ಲ ವಂದನೆ ಸಲ್ಲಿಸಿದರು. ಸ್ವಯಂ ಸೇವಕರಿಗೆ ಅಧ್ಯಕ್ಷರು ಪ್ರಶಸ್ತಿ ಪತ್ರಗಳನ್ನು ವಿತರಣೆ ಮಾಡಿದ ಬಳಿಕ ಶ್ರೀಗಳಾದ ಕೆ. ಸೂರ್ಯನಾರಾಯಣ ಅಡಿಗ, ಮಣೇಲ್ ಶ್ರೀನಿವಾಸ ನಾಯಕ್, ಎಂ. ಎಲ್. ಎ., ಪಿ. ರಂಗನಾಥ ಶೆಣೈ, ಜಿಲ್ಲಾಧಿಕಾರಿ ಕೆ. ಆರ್. ರಾಮಚಂದ್ರನ್ ಮೊದಲಾದವರು ಡಾ. ಮೋದಿಯವರ ಆದರ್ಶ ಸೇವೆಯನ್ನು ಕೊಂಡಾಡಿದರು. ಅಧ್ಯಕ್ಷರ ಭಾಷಣ ವಾದ ಡಾ. ಮೋದಿಯವರಿಗೆ ಶ್ರೇಯಸ್ಸನ್ನು ಕೋರಿದರು. ಶ್ರೀ ಕೆ. ಕೆ. ಪೈಗಳು ಧನ್ಯವಾದಗಳನ್ನರ್ಪಿಸಿದರು.

ಹೈಸ್ಕೂಲ್ ಕಟ್ಟಡದ ಶಂಕು ಸ್ಥಾಪನೆ— ಉಡುಪಿ ನಗರ ಸಭೆಯವರು ಈ ವರ್ಷ ಪ್ರಾರಂಭಿಸಿದ ಹೈಸ್ಕೂಲಿನ ಹೊಸ ಕಟ್ಟಡದ ಶಂಕುಸ್ಥಾಪನೆಯನ್ನು ಇದೇ ತಾ.12 ರಂದು ಪದ್ಮಶ್ರೀ ಡಾ. ಎಂ. ಸಿ. ಮೋದಿಯವರು ಜರಗಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ವ್ಯವಸಾಯ ಮಂತ್ರಿ ಶ್ರೀ ನಾರಾಯಣ ಗೌಡರು ವಹಿಸಿದ್ದರು. ನಗರ ಸಭಾಧ್ಯಕ್ಷ ಶ್ರೀ ಪಿ. ರಂಗನಾಥ ಶೆಣೈಯವರು ಸ್ವಾಗತ ಭಾಷಣವಿತ್ತರು. ಅಂತ್ಯದಲ್ಲಿ ಹೆಡ್ ಮಾಸ್ಟರ್ ಎಸ್. ಎನ್. ನ.ಫ್ರಡೆರು ವಂದನಾರ್ಪಣೆಗೈದರು.

ಗಮಾಲ್ ನಸ್ಸೇರ್

ಇರಾಕದಲ್ಲಿ ತನ್ನ ವಿರೋಧಿ ಬಾತ್ ಪಕ್ಷದ ಅಧಿಕಾರದಿಂದ ನೊಂದ ಸಂಯುಕ್ತ ಅರಬ ಪ್ರಜಾರಾಜ್ಯದ ಅಧ್ಯಕ್ಷ ಅಬ್ದುಲ್ ಗಮಾಲ್ ನಸ್ಸೇರರು ಅಲ್ಲೀಮಧ್ಯೆ ನಡೆದ ಕ್ರಾಂತಿಯಿಂದ ಸಮಾಧಾನಪಡುವಂತಾಗಿದೆ. ಅಲ್ಲಿನ ಕ್ರಾಂತಿಯನ್ನು ಸ್ವಾಗತಿಸಿದ ನಸ್ಸೆರ್ ಮತ್ತು ಸಂಯುಕ್ತ ಅರಬ ರಾಜ್ಯದೊಡನೆ ತನ್ನ ಪ್ರಥಮ ಕರ್ತವ್ಯವಿದೆಯೆಂದೂ ಇರಾಕು ಅದನ್ನು ಬಿಟ್ಟುಕೊಡಲಾರದೆಂದೂ ಘೋಷಿಸಿದ ಹೊಸ ಅಧ್ಯಕ್ಷ ಫೀಲ್ಡ್ ಮಾರ್ಶಲ್ ಅಬ್ದುಲ್ ಎರಿಫ್‌ರವರ ನಡುವಣ ಸಂಬಂಧ ಹೇಗಿರಲಿದೀತೆಂಬುದನ್ನೇ ಅರಬ ರಾಜ್ಯಗಳ ಭವಿಷ್ಯವು ಅವಲಂಬಿಸಿದೆ. ಬಾತ್ ಪಕ್ಷದ ನಾಯಕರು ಇನ್ನೇನು ಕಿರುಕುಳವೆಬ್ಬಿಸುವರೆಂದು ಈಗಲೇ ಹೇಳುವುದು ಹೇಗೆ ಸಾಧ್ಯವಾದೀತು?

ಜವಾಹರಲಾಲ

ವಿಶ್ವಸಂಸ್ಥೆಯು ಪ್ರಕಟಿಸಿದ ಒಂದು ಪುಸ್ತಕದಲ್ಲಿ ಭಾರತದಲ್ಲಿ ವಿಲೀನಗೊಂಡಿರುವ ಗೋವಾ, ದಮನ ಮತ್ತು ದೀವಿಗಳು ಪೋರ್ಚುಗಾಲದ ಸಮುದ್ರಾಂತರ ಪ್ರದೇಶವೆಂದು ಗುರುತಿಸಲಾಗಿದ್ದು, ಇದು ಲೋಕ ಸಭೆಯಲ್ಲಿ ಚರ್ಚೆಯ ವಿಷಯವಾಯಿತು. ಈ ಪ್ರಕಟಣೆಯಲ್ಲಿ ಈ ಪ್ರದೇಶಗಳು ಭಾರತ ಒಕ್ಕೂಟದಲ್ಲಿ ಸೇರಿವೆಯೆಂದು ವಿಶ್ವಸಂಸ್ಥೆಯು ಸ್ವೀಕರಿಸಿದ ಗೊತ್ತುವಳಿಗೆ ವಿರೋಧವಾದ ವಿವರಗಳು ಮಾತ್ರವಿರುವುದನ್ನು ಪ್ರಧಾನಿ ನೆಹರು ಗಮನಿಸಿ, ಇನ್ನು ಮುಂದೆ ಸರಿಯಾಗುವುದೆಂದು ಹಾರೈಸಿದರು. ಬೃಹತ್ ಗ್ರಂಥವೊಂದರ ನಿರ್ಮಾಣದಲ್ಲಿ ಈ ತೆರದ ದೋಷಗಳು ಕಂಡು ಬಂದರೆ, ಇದು ಸ್ವಾಭಾವಿಕ. ಗೋವಾದಿಗಳು ಭಾರತದ ಅಂಗವೆಂದು ವಿಶ್ವಸಂಸ್ಥೆಯು ಒಪ್ಪಿಕೊಂಡಿರುವುದನ್ನು ನಾವು ಅವಶ್ಯ ಗಮನಿಸ ಬೇಕಲ್ಲವೆ?

ಊರಿಗೆ ಬಂದ ದೀಪಾವಳಿ

(ಹಿಂದಿನ ಪುಟದಿಂದ)

"ಅಂದ್ರೆ ಮೋದೀನ ಪರೀಕ್ಷೆ ಮಾಡೋಕೆ?"

"ಅಯ್ಯೋ ನಿಮ್ಮ.... ಮೋದೀನ ಈ ಮೊಸಳೆಗಳು ಏನು ಪರೀಕ್ಷೆ ಮಾಡಿಯಾವು? ಇರ್ಲಿ; ಮತ್ತೆ ನೋಡಿ, ಆ ಸೇವೆ, ಶುಶ್ರೂಷೆ ಎಲ್ಲಾ ಅಸಾಧ್ಯ. ಏನು ಮಾತು, ಏನು ನಯ ವಿನಯ? ಡಾಕ್ಟ್ರೂಂತಂದ್ರೆ ಮೋದೀ ಹಾಗಿರ್ಬೇಕೂಂತ ಊರಿಗೆ ಊರೇ ಹೇಳುತ್ತೆ."

"ಅದಕ್ಕೇ ನೋಡು ಅವರಿಗೆ ಪದ್ಮಶ್ರೀ ಬಿರುದು ಕೊಟ್ಟಿರೋದು?"

"ವಿದೇಶಗಳಲ್ಲಿ ಹೆಸ್ರು ಪಡೆದ ಮೇಲಾದ್ರೂ ಮೋದೀ ನೆನಪು ಬಂತಲ್ಲ ಸರ್ಕಾರಕ್ಕೆ. ನಿಮ್ಮ ಟೋಪಿ ಸರ್ಕಾರ ಮಾಡಿದ ಈ ಕೆಲ್ಸ ನಿಜಕ್ಕೂ ಸಾರ್ಥಕ."

"ಅಂತೂ ನಿನಗೆ ಸಮಾಧಾನವಾಯ್ತಿನ್ನು."

"ನನಗೆ ಮಾತ್ರವೆಂದೇನು? ಲೋಕಕ್ಕೇನೇ ಸಮಾಧಾನ–ಸಂತೋಷವಾಗಿದೆ. ನೇತ್ರದಾನಿ ಮೋದಿಯವರು ನಿಜಕ್ಕೂ ಅಕ್ಷನೀ ದೇವತೆ."

"ಭಲೇ ಭಲೇ. ನಿನ್ನ ಬಾಯಿಯಿಂದಲೂ ಪ್ರಶಂಸೆ ಪಡೀ ಬೇಕಾದ್ರೆ ಅವು ನಿಜಕ್ಕೂ ಹಾಗೆಯೇ ಇರ್ಬೇಕು."

"ಏನು, ಅಷ್ಟೂ ಸಸಾರ ಮಾಡ್ತೀರಾ ನೀವು?"

"ಸಸಾರ ಅಲ್ವೆ. ಎಲ್ಲಾದ್ರೂ ಎಳ್ಳಿನಷ್ಟು ಇದ್ರೆ ನಿನ್ಗೆ ಕಾಣೋದೇ ಇಲ್ಲ. ಬೆಟ್ಟದಷ್ಟಿದ್ರೆ ಮಾತ್ರ..."

"ಹೌದೌದು, ಅವ್ರು ಒಂದು ಬೆಟ್ಟ.... ಗೋವರ್ಧನ ಗಿರಿ."

"ಸರಿ ಹೋಯ್ತು ಬಿಡು"

"ಏನು?"

"ಗೋವರ್ಧನಾಂತಂದ್ರೆ ದೃಷ್ಟಿ ಬೆಳೆಸುವವಾಂತರ್ಥ ಬರುತ್ತೆ. ನೀನು ಇಷ್ಟೆಲ್ಲಾ ಕಲ್ತದ್ದು ಯಾವಾಗಾಂತ?"

"ಅದ್ಕೇ ಅನ್ನೋದು ನಾನು. ನಿಮ್ಮನ್ನ ನಂಬಿ ಕೂತಿರುತಿದ್ರೆ, ಅಂತ ಮಹಾಭಾಗನನ್ನು ಕಾಣೋ ಭಾಗ್ಯ ಕಳೆದುಕೊಳ್ತಿದ್ದೆ. ದೀಪಾವಳಿಂತ ದೇವಸ್ಥಾನಕ್ಕೆ ಹೋದಾಗ, ಅಲ್ಲ ಈ ದೇವ್ರು ದರ್ಶನವಾಯ್ತು. ಜತೇಲಿದ್ದ ಲಕ್ಷ್ಮಿ ಎಲ್ಲವನ್ನೂ ಹೇಳಿದ್ಲು."

"ಇಂದಿಗೆ ನನ್ನ ಜನ್ಮ ಸಾರ್ಥಕವಾಯ್ತು ಬಿಡು."

"ಏನು? ಮನುಷ್ಯನಲ್ಲೇ ದೇವತ್ವವನ್ನು ಕಂಡುಕೊಂಡೆಯಲ್ಲಾ ನೀನು?

"ಏನಂತೀರಾ ಈಗ?

"ರಾಮ ದೇವ್ರ ಅವತಾರವಲ್ಲ, ನಮ್ಮಂತೆಯೇ ಒಬ್ಬ ತನ್ನ ಗುಣದಿಂದ್ಲೇ ಆತ ದೇವತ್ವವನ್ನು ಪಡೆದಾಂತಂದ್ರೆ ನಿನಗೆ ನಂಬಿಕೆಯಾಗಿಲ್ಲ. ಮನುಷ್ಯ ದೇವರಾಗೋದು ಹ್ಯೇಗೇಂತ ಅಡಡಿಕವಾಲು ಹಾಕ್ತಿದ್ದಿ. ಈಗ್ಲಾದ್ರೂ ಹ್ಯೇಗೇಂತ ತಿಳೀತು ತಾನೆ?

"ಸಾಕು ಸಾಕು ನಿಮ್ಮ ಪುರಾಣ. ರಾಮ ಮನುಷ್ಯನೋ ದೇವ್ರೋ ನೋಡಿದೋರು ಯಾರು? ಅವನ ಗುಣವೇನೂಂತ ಯಾರಿಗೇನು ಗೊತ್ತು? ಆದ್ರೆ ಮೋದಿ ಕಥೆ ಬೇರೆ ಕಣ್ಣಿಂದ ಕಂಡಿದ್ದೇವೆ, ಬಾಯಿಂದ ಹೇಳೋಗೆ ಸಂಕೋಚವೇಕೆ?"

"ನಿನ್ನ ಮೊಂಡನ್ನ ಯಾರಿಂದ್ಲೂ ಬಿಡಿಸೋಕೆ ಸಾಧ್ಯವಿಲ್ಲ ಇಲ್ಲಿಬಿಡು. ಹೊತ್ತು ಮೀರುತ್ತಿದೆ. ಹೊಟ್ಟೇನೂ ಹಸಿಯುತ್ತಿದೆ."

"ಹ್ಞಾಂ... ಸರಿ ಹಾಂಗಾದ್ರೆ, ಬನ್ನಿ. ದೀಪಾವಳೀಂತ ಕಡಬು ಮಾಡಿದ್ದೀನಿ."

"ಹ್ಞೂಂ ಊರಿಗೆ ಈಗಲಾದ್ರೂ ದೀಪಾವಳಿ ಬಂತಲ್ಲ........ಬಂದೆ ಬಂದೆ."

—ಗೋರಾ.

ಪುತ್ತೂರು ಡಿ. ಮುನ್ಸೀಫ್ ಕೋರ್ಟಿನಲ್ಲಿ

O. P. 41/63

1. ದರ್ಣಮ್ಮ ಯಾನೆ ಕಮಲಾವತಿ—
ನಾಭಿರಾಜ ಕೊಂಡೆಯವರ ವಿಧವೆ,

2. ಮ್ಯಾನರ ನಿರ್ಮಲಾ
3. ಮ್ಯಾನರ ಲೀಲಾ
4. ಮ್ಯಾನರ ಬಾಲಚಂದ್ರ
5. ಮ್ಯಾನರ ಸುಬಾಸ
} ನಾಭಿರಾಜ ಕೊಂಡೆಯವರ ಮ್ಯಾನರ ಮಕ್ಕಳು, ಗಾರ್ಡಿಯನ ತಾಯಿ 1ನೇ ಅರ್ಜಿದಾರರು

ಎಲ್ಲರೂ ಬಂಟ್ವಾಳ ತಾಲೂಕು ಮಣಿನಾಲ್ಕೂರು ಗ್ರಾಮದ ನಾಲೂರು — ಅರ್ಜಿದಾರರು,

ಮತ್ತು

1. ಪದ್ಮರಾಜ ಕೊಂಡೆ— ಶಾಂತಿರಾಜ ಅಜ್ರಿಗಳ ಮಗ – ವ – ನಾಗರಾಜು ಕೊಂಡೆಯವರ ಅಳಿಯ — ಕಬಕ ಗ್ರಾಮದ ಕಾಯರ ಮಜಲು — ಎದ್ರಿ.

ಸದ್ರಿ ಎದ್ರಿಗೆ ಮತ್ತು ಸಮಸ್ತ ಜನರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

1ನೇ ಅರ್ಜಿದಾರಳ ಗಂಡ 2ರಿಂದ 5ನೇ ಎದ್ರಿರ ತಂದೆ ನಾಭಿರಾಜ ಕೊಂಡೆಯವರು ತಾ. 8-10-63ರಲ್ಲು ಮೃತಪಟ್ಟಿರುವುದರಿಂದ, ಸದ್ರಿ ನಾಭಿರಾಜ ಕೊಂಡೆಯವರಿಗೆ ಪುತ್ತೂರು ಡಿ. ಮುನ್ಸಿಫ್ ಕೋರ್ಟು R.E. P. 360/62 in O. S. 377/59ನೇ ಅನುಲ್ಲಾರಿಯಲ್ಲಿ ಕೇಳಿದ ಹಣ ಎದ್ರಿಯಿಂದ ಅರ್ಜಿದಾರರು ವಸೂಲು ಮಾಡುವ ಕುರಿತು ಅರ್ಜಿದಾರರ ಬಗ್ಗೆ 1ನೇ ಅರ್ಜಿದಾರಳ ಹೆಸರಲ್ಲಿ Succession Certificate ಕೊಡಿಸಬೇಕೆಂತ ವಗೈರೆ ಅರ್ಜಿದಾರರು ಕೊಟ್ಟ ಮೇಲ್ಕಂಡ ಅರ್ಜಿಯನ್ನು ನಿಮ್ಮೆಲ್ಲರ ನೋಟೀಸಿನ ಬಗ್ಗೆ ತಾ. 12–12-63ಕ್ಕೆ ಇಟ್ಟಿರುತ್ತದೆ. ಆ ದಿವಸ ಆಕ್ಷೇಪವುಳ್ಳವರು ಈ ಕೋರ್ಟಿನ ಮುಂದೆ ಹಾಜರಾಗಿ ಉದಹರಿಸತಕ್ಕದ್ದು.

Sd/- M. Sadashiva Rao,
Vakil for petitioners.

ಪುತ್ತೂರು, ತಾ. 11–11–63.

ವಾರ್ತೆ--ಪ್ರತಿವಾರ್ತೆ

ನೇತ್ರದಾನಿ ಪದ್ಮಶ್ರೀ ಮೋದಿಯವರು ತಮ್ಮ ಶಸ್ತ್ರಕ್ರಿಯೆಯ ಬಗೆಗೆ ಹಲವಾರು ಮಹನೀಯರು ಮಾಡಿದ ಟೀಕೆಗಳ ಬಗೆಗೆ ಉತ್ತರಕೊಡುವ ಗೋಜಿಗೆ ಹೋಗದೆ, ಕಾರ್ಯರೂಪದಲ್ಲೇ ಅದನ್ನು ಮಾಡುತ್ತ ಹೋಗಿದ್ದಾರೆ.

–ಜ್ಞಾನವಾನನಿಯ ಬೊಗಳಲೀನೆ ತಾನಂಜುವನೆ ಜ್ಞಾನಿತಾ ಜ್ಞಾನನಂದದಿ ಬೊಗಳಲಭಿಮಾನವಡಗಹುದೆ?

o o o

ಶಾಲಾ ಪಠ್ಯ ಪುಸ್ತಕಗಳನ್ನು ರಚಿಸುವವರಲ್ಲಿ ಅತಿತ್ವರೆಯು ಕಾಣಿಸಿಕೊಳ್ಳುವುದರಿಂದ ಇಂದಿನ ಮಕ್ಕಳ ಶಿಕ್ಷಣ ಕ್ರಮವು ತಪ್ಪುತಿದೆಯೆಂದು ಕಡಲ ತಡಿಯ ಭಾರ್ಗವ ಶಿವರಾಮ ಕಾರಂತರು ಅನ್ನುತ್ತಾರೆ.

ಅಲ್ಲಗಳೆಯುತ್ತಾರೆ ಯಾರು?

— ಆದರೆ, ಇಂತಹ ತ್ವರೆಯು ಕಾಣಿಸದೆ ಹೋದರೆ, ವರ್ಷದಲ್ಲಿ ಈಗಿನ ಮೂರು ತಿಂಗಳ ಓದಿಗೂ ತತ್ವಾರ ಬಂದರೆ....? ಎಂದು ಮಾತ್ರ ಅಂಜಿಕೆ.

o o o

ಭಾರತದಲ್ಲಿ ಪಾಕಿಸ್ತಾನದ ಪರವಾಗಿ ಗೂಢ ಚರ್ಯೆಯಲ್ಲಿ ಭಾಗವಹಿಸಿದುದರಿಂದ ಪಾಕ್ ದೂತಾವಾಸದ ಮೂವರನ್ನು ಮರಳಿ ಕರೆದುಕೊಳ್ಳಬೇಕೆಂಬ ಭಾರತದ ಕೇಳಿಕೆಗೆ ಪಾಕ್ ಸರಕಾರವೂ ಭಾರತೀಯ ದೂತಾವಾಸದ ಮೂವರನ್ನು ಪಾಕಿಸ್ತಾನದಿಂದ ಹಿಂದೆ ಕರೆದುಕೊಳ್ಳುವಂತೆ ತಿಳಿಸಿ ಪ್ರತೀಕಾರ ಮಾಡಿದೆ.

—ಒಂದನ್ನು ಹತ್ತೆಂದು ವಾದಿಸುವ ಅಯೂಬ ಖಾನರು ಲೆಕ್ಕ ಇಲ್ಲಿ ಏಕೆ ತಪ್ಪಿ ಹೋಯಿತು ಎಂದು ಎಲ್ಲರಿಗೂ ಕುತೂಹಲವೆಂಬುದಿನ್ನೂ ದೃಢಪಟ್ಟಿಲ್ಲ.

o o o

ಮಕ್ಕಳಿಗೆ ತಾಳ್ಮೆ, ಸಹಿಷ್ಣುತೆ ಮತ್ತು ವಿಶ್ವ ಪ್ರೀತಿಗಳ ಮಹತ್ವವನ್ನು ಬಿಂಬಿಸಿ ಹೇಳಬೇಕು ಎಂದು ರಾಷ್ಟ್ರಪತಿ ಡಾ। ರಾಧಾಕೃಷ್ಣನ್‌ರವರು ಮಕ್ಕಳ ದಿನಾಚರಣೆಯ ಸಂದರ್ಭದಲ್ಲಿ ಹೇಳಿದರು.

— ಹೇಳುವ ಹಕ್ಕು ಪಡೆದಿರುವ ಮಂತ್ರಿವರ್ಯರುಗಳು ಮೊದಲು ಇವನ್ನು ತಮ್ಮಲ್ಲಿ ಬಿಂಬಿಸಿಕೊಳ್ಳುವುದು ಅಗತ್ಯವಲ್ಲವೆ?

o o o

ರಾಜ್ಯಸಾರಿಗೆ ಕಾರ್ಪೊರೇಶನ್ನಿನವರು ಮೈಸೂರು ರಾಜ್ಯದಲ್ಲಿ ಮತ್ತೆ ನಾಲ್ಕು ಪ್ರಮುಖ ಮಾರ್ಗಗಳನ್ನು ರಾಷ್ಟ್ರೀಕರಿಸುವ ಘೋಷಣೆಯನ್ನು ಗಜೆಟ್ಟಿನಲ್ಲಿ ಪ್ರಕಟಿಸಿದ್ದಾರೆ.

— ಮತ್ತೆ ಕಡಿಮೆಯಲ್ಲಿ ಕಡಿಮೆ ನಾಲ್ಕು ಲಕ್ಷಕ್ಕಾದರೂ ಒಂದು ಬಜೆಟ್ ಬಂದೀತು.

o o o

ಗೋವಾ ವಿಧಾನ ಸಭೆಯ ೩೦ ಸ್ಥಾನಗಳಿಗೆ ೧೯೯ ನಾಗರಿಕರು ನಾಮಪತ್ರ ಸಲ್ಲಿಸಿದ್ದಾರೆ.

—ಹೊಸತಾಗಿ ಸಿಕ್ಕ ಅಧಿಕಾರವನ್ನು ಉಳಿದವರೇಕೆ ಪ್ರಯೋಗಿಸಲಿಲ್ಲ?

o o o

ಕಾಂಗ್ರೆಸಿಗರು ತಮ್ಮ ನಡುವಣ ಭಿನ್ನಾಭಿಪ್ರಾಯವನ್ನು ತೊರೆದು ತಮ್ಮ ಶಕ್ತಿಯನ್ನು ರಾಷ್ಟ್ರ ರಚನಾಕಾರ್ಯದಲ್ಲಿ ತೊಡಗಿಸಬೇಕು; ಇದಕ್ಕೆ ತಪ್ಪಿದರೆ, ಕಾಂಗ್ರೆಸಿಗರೆಂದು ಕರೆದುಕೊಳ್ಳುವ ಅಧಿಕಾರವೇ ಅವರಿಗುಳಿಯದು! ನೆಹರೂರವರ ಘೋಷಣೆಯಿದು!

— ಕರೆದುಕೊಳ್ಳುವ ಅಧಿಕಾರ ನಮಗೇಕೆ ಬೇಕು? ಚಲಾಯಿಸುವ ಅಧಿಕಾರ ಮಾತ್ರ ನಮಗಿರಲಿ—ಇದು ಗೀಷಣೆ.



'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No.466 N/50 dated 2-12—1950 of the Director of Public Instruction Madras.

ಹೊಸ ಪುಸ್ತಕ—

ನಚಿಕೇತ'ರ,

ನವೀನ ಕಾದಂಬರಿ—

ಹಸುರು ಹಂಸ

ಇದೀಗ ಪ್ರಕಟವಾಗಿದೆ.

ಬೆಲೆ: ರೂ. ಎರಡು.

ವಿಚಾರಿಸಿರಿ,

ನವಯುಗ ಪ್ರೆಸ್, ಉಡುಪಿ.

ಶಿಕ್ಷಣವನ್ನು ಪರಿಣಾಮ ಗೊಳಿಸುವುದೆ?

(೧ನೇ ಪುಟದಿಂದ)

ವರಿದ್ದಾರೆ.. ಆಗ ತನು ದೈನಂದಿನ ಕಾರ್ಯಕ್ರಮಗಳನ್ನೇ ನಿರ್ವಿಘ್ನವಾಗಿ ನಡೆಯಿಸಲು ಅಸಮರ್ಥರಾದ ಅಧಿಕ ಸಂಖ್ಯೆಯ ಅಧ್ಯಾಪಕರು ನಿಯೋಜಿತ ಪ್ರಣಾಳಿಯಂತೆ ಹೆಚ್ಚಿನ ಪರೀಕ್ಷೆಗಳ ಉತ್ತರ ಪುಸ್ತಕಗಳನ್ನೂ ಪರಿಶೀಲಿಸ ಬೇಕು. ಈ ಹೊರೆಯನ್ನು ಹೊರಲು ಅವರು ಹೆಚ್ಚಿನ ಪ್ರತಿಫಲ ಪಡೆಯುವುದು ಸಾಧ್ಯವಿದೆಯೆ? ಸರಕಾರದ ಮಲತಾಯಿ ನೀತಿಗೆ ಗುರಿಯಾದ ವಿದ್ಯಾ ಇಲಾಖೆ ಈ ಯೆಲ್ಲ ಸಮಸ್ಯೆಗಳನ್ನು ಪರಿಶೀಲಿಸುವುದು ಸಾಧ್ಯವಿದೆಯೆ?

ಯಕ್ಷಪ್ರಶ್ನೆ

ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಆಯ್ಕೆ ಮಾಡಿ ವಿದ್ಯಾರ್ಥಿಗಳನ್ನು ಕಳಿಸುವ ಪರಿಪಾಠಿ ಮೊದಲು ಇತ್ತು. ಆಗ ವಿದ್ಯಾರ್ಥಿಗಳು ಆಯ್ಕೆ ಪರೀಕ್ಷೆಗಾದರೂ ಸರಿಯಾಗಿ ಓದುತಿದ್ದರು. ಸರಕಾರಿ ಪರೀಕ್ಷೆಗಳಲ್ಲೂ ಉತ್ತಮ ಯಶಸ್ಸು ಪಡೆಯುತಿದ್ದರು. ಇಂದು ಅಂತಹ ಕ್ರಮವಿಲ್ಲ, ಹಾಗಾಗಿ ವಿದ್ಯಾರ್ಥಿಗಳ ಪ್ರಗತಿ-ಅಧ್ಯಯನವಾದರೂ ನೀರಸ. ಸರಕಾರಿ ಪರೀಕ್ಷೆಗಳ ಅಲ್ಪ ಪರಿಣಾಮಗಳಿಗೆ ಇದೂ ಒಂದು ಕಾರಣವಿರಲೇ ಬೇಕು. ಪರೀಕ್ಷಾಕ್ರಮದ ಹಲವಾರು ಲೋಪದೋಷಗಳೂ ಪೂರಕವೆನಿಸಬಹುದುದು. ಪರೀಕ್ಷೆಗಳಿಗೇನೇ ಮಹತ್ವಕೊಡುವುದಾದರೆ, ನಮ್ಮ ಇಂದಿನ ಪರೀಕ್ಷಾ ಪ್ರಣಾಳಿಯನ್ನೇ ಅದ್ಯಂತ ಬದಲಾಯಿಸಬೇಕಾಗುತ್ತದೆ. ಕೆಲವೊಮ್ಮೆ ಪಾಠ್ಯ ಕ್ರಮವನ್ನು ಸುಧಾರಿಸುವುದೂ ಆಗತ್ಯವೆನಿಸಬಹುದು. ಚಿಕ್ಕ ಪೋರನಿಗೆ ಬೊಕ್ಕಸ ತುಂಬ ಹೊರಿಕೆಯೆಂಬಂತೆ ನಮ್ಮ ವಿದ್ಯಾರ್ಥಿಗಳ ಪಾಡಾಗಿದೆ; ಅಧ್ಯಾಪಕರ ಸ್ಥಿತಿಗತಿಗಳೂ ಇದಕ್ಕಿಂತ ಭಿನ್ನವಿಲ್ಲ. ತನ್ನ ಕೆಲಸ ಕಾರ್ಯಗಳ ನಡುವೆ ಆತ ಶಾಲೆಯ ಪಾಠೇತರ ಚಟುವಟಿಕೆಗಳಲ್ಲಿ, ಗೈರು ಹಾಜರಾದ ಅಧ್ಯಾಪಕರ ಪ್ರಾತಿನಿಧ್ಯದಲ್ಲಿ ಅವಶ್ಯ ಭಾಗವಹಿಸಲೇ ಬೇಕಾಗುತ್ತದೆ. ಈಯೆಲ್ಲ ಸಮಸ್ಯೆಗಳಂತೆಯೇ ಸರಕಾರವೂ ಅನುತ್ತೀರ್ಣ ವಿದ್ಯಾರ್ಥಿಗಳ ಸಂಖ್ಯಾ ಪ್ರಮಾಣವು ಬೆಳೆಯುತ್ತ ಬರುವುದಕ್ಕೆ ಚಿಂತಿಸಬೇಕಾಗಿದೆ. ವಿದ್ಯಾರ್ಥಿಗಳು ತೇರ್ಗಡೆ ಹೊಂದದಿರುವುದರಿಂದ ಶಾಲೆಗೆ — ಸರಕಾರಕ್ಕೆ ಲಾಭವೆಂದು ಹೆಚ್ಚಿನವರು ತಿಳಿದುಕೊಂಡಿದ್ದಾರೆ. ಆದರೆ, ಅವರ ಈ ತಿಳುವಳಿಕೆಯು ತಪ್ಪು ಎಂದು ಹೇಳಲೇ ಬೇಕಾಗುತ್ತದೆ. ಪ್ರತ್ಯೇಕ ವಿದ್ಯಾರ್ಥಿಯ ಸಲುವಾಗಿ ಶಾಲಾ ಆಡಳಿತೆಯವರೂ ಸರಕಾರದವರೂ ವೆಚ್ಚ ಮಾಡಬೇಕಾಗುತ್ತದೆಂಬುದನ್ನು ನಾವು ಮರೆಯಬಾರದು. ಹಾಗಾಗಿ ಈ ಪ್ರಶ್ನೆಯನ್ನು ಹೇಗೆ ಬಿಡಿಸಬೇಕು? ಇದು ಯಕ್ಷ ಪ್ರಶ್ನೆ.

ಉಪಸಂಹಾರ

ಈ ಯಕ್ಷ ಪ್ರಶ್ನೆಯನ್ನು ಉತ್ತರಿಸಲು ಧರ್ಮರಾಯನೇ ಬರಬೇಕಷ್ಟೆ. ನಿರ್ವಿಕಲ್ಪನೂ ನಿರ್ವಿಕಾರನೂ ಸಕಲ ಶಾಸ್ತ್ರಕೋವಿದನೂ ಆದವನು ಮಾತ್ರ ಇದಕ್ಕೆ ಉತ್ತರ ವಿತ್ತಾನು. ಪರೀಕ್ಷಾ ಸಂಖ್ಯೆ ಹೆಚ್ಚು ಮಾಡಿ ಪಾಠ್ಯವಿಷಯಗಳಲ್ಲಿ ಪ್ರಾವೀಣ್ಯವನ್ನು ವಿದ್ಯಾರ್ಥಿಗಳಲ್ಲಿ ತುಂಬಿಸ ಬಹುದು. (ಈಗಲೂ ಕೆಲವೆಡೆ ಹೀಗೆ ಮಾಡುವುದುಂಟು) ಆದರೆ, ಇದರ ಪರಿಣಾಮ ಪ್ರತಿಲೋಮವಾಗುವ ಅವಕಾಶವೂ ಇಲ್ಲದಿಲ್ಲ. ದೇಶಕ್ಕೆ ಕಾಲಕ್ಕೆ ತಕ್ಕಂತಹ ಶಿಕ್ಷಣಕ್ರಮದಲ್ಲಿ ವಿದ್ಯಾರ್ಥಿಗಳಲ್ಲಿ ಆಸಕ್ತಿ ಕೆರಳಿಸುವುದು ನಮ್ಮ ಇಂದಿನ ಕರ್ತವ್ಯವಾಗಿದೆ. ಅಧ್ಯಾಪಕ ವಿದ್ಯಾರ್ಥಿಗಳ ಸಮಧುರ ಸಂಬಂಧ ಮತ್ತು ಸ್ವಯಂ ತೃಪ್ತಿ—ತಂತಮ್ಮ ಕರ್ತವ್ಯದಲ್ಲಿ ನಿಷ್ಠೆ ಮತ್ತು ದಕ್ಷತೆಗಳು ಬಂದುವೆಂದರೆ, ವಿದ್ಯಾರ್ಥಿಗಳಲ್ಲಿ ವಿದ್ಯಾಸಕ್ತಿ ಹೆಚ್ಚದೆ ಇರುವುದು ಸಾಧ್ಯವೇ ಇಲ್ಲ. ಇಲ್ಲಿ ಸರಕಾರ ಅಥವಾ ಆದರ ಅಧಿಕಾರಿಗಳಿಗಿಂತಲೂ ಅಧ್ಯಾಪಕನಿಗೆ ಅಧಿಕ ಸ್ವಾತಂತ್ರ್ಯವನ್ನು ಕೊಡಬೇಕೆನ್ನಿಸುತ್ತದೆ ಆಗ ನಿಷ್ಠಾವಂತ ಕರ್ಮಯೋಗಿ ಅಧ್ಯಾಪಕನು ದೇಶಕ್ಕೆ ಆವಶ್ಯಕ ರೂಪದಲ್ಲಿ ಪ್ರಜೆಗಳನ್ನು ನಿರ್ಮಿಸಬಲ್ಲ. ಆತನ ಪರಿಸ್ಥಿತಿಯನ್ನು ಸುಧಾರಿಸುವಲ್ಲಿ ಸರಕಾರ ಹೆಚ್ಚಿನ ಕಾಳಜಿ ವಹಿಸಿದರೆ, ಹೆಚ್ಚಿನ ಸಮಸ್ಯೆಗಳು ದೂರವಾಗುವುವು ಅಧ್ಯಾಪಕನ ಆರ್ಥಿಕ ಸ್ಥಿತಿಗತಿಗಳ ಸುಧಾರಣೆ, ಆತನಿಗೆ ಹಿತಮಿತದ ಕೆಲಸ, ಮಧ್ಯಮ ಪ್ರಮಾಣದ ತರಗತಿ — ಇವು ಮೂರು ಮುಪ್ಪರಿಗೊಂಡು ಅನುಷ್ಠಾನಕ್ಕೆ ಬಂದಲ್ಲಿ ಪ್ರಾಯಃ ಹೆಚ್ಚಿನ ಸಮಸ್ಯೆಗಳು ತಮಗೆ ತಾವಾಗಿಯೇ ಉದುರಿಹೋಗುತ್ತವೆ. ಮೂರೇ ಮೂರು ಅಕ್ಷರಗಳ ಆಕ್ರಮಣ ಭೀತಿಯೂ ತೊಲಗುತ್ತದೆ. ಶಿಕ್ಷಣ ಮಟ್ಟವು ಉನ್ನತವಾಗಲು ಪರೀಕ್ಷೆಯೊಂದೇ ಸಾಧನವಾಗದು. ಅದಿಲ್ಲದೆಯೇ ಉತ್ತಮ ಶಿಕ್ಷಣ ವಿದ್ಯಾರ್ಥಿಗಳಿಗೆ ಅಧ್ಯಾಪಕರಿಂದ ದೊರೆಯಬಲ್ಲುದು. ಆತನಲ್ಲಿ ತೃಪ್ತಿಯೆಂಬುದು ಮಾತ್ರ ಇರಬೇಕಾಗುತ್ತದೆ. ಇದು ಹುಟ್ಟುವುದು ಸಾಧ್ಯವೆ?

ನೈಸರ್ಗಿಕ ಸಂಪತ್ತು ಕೊಳೆಯಬಾರದು

(೪ನೇ ಪುಟದಿಂದ)

ತುಂಬಾ ಪ್ರಯೋಜನ ಪಡೆದಿದೆ. ತುಂಗಭದ್ರಾ ನದಿಗೆ ಹೊಸ ಪೇಟೆಯಲ್ಲಿ ಹಾಕಿದ ತುಂಗಭದ್ರಾ ಆಣೆಕಟ್ಟು, ಕಾವೇರಿ ನದಿಗೆ ಕನ್ನಂಬಾಡಿಯಲ್ಲಿ ಹಾಕಿದ ಅಣೆಕಟ್ಟು.ಘಟಪ್ರಭಾ ಮಲಪ್ರಭಾ ಯೋಜನೆಗಳಿಂದ ರಾಜ್ಯದ ಕೃಷಿ ಅಭಿವೃದ್ಧಿಗೊಂಡಿದೆ.

ಜಲಪಾತಗಳು

ಭಾರತದಲ್ಲೇ ಅತೀ ಎತ್ತರವಾದ ಗೇರುಸೊಪ್ಪೆ ಜಲಪಾತವಿರುವುದು ನಮ್ಮ ರಾಜ್ಯದಲ್ಲಿ. ಶರಾವತಿ ನದಿಯು ದುಮುಕಿ ಉಂಟಾದ ಈ ಜಲಪಾತವು ದೇಶವಿದೇಶಗಳ ರಸಿಕರನ್ನು ತನ್ನೆಡೆಗೆ ಆಕರ್ಷಿಸುತ್ತಿದೆ. ಈ ಶರಾವತಿಯ ಜಲಪಾತದಿಂದ ವಿದ್ಯುತ್ತನ್ನು ತಯಾರಿಸುತ್ತಿದ್ದಾರೆ. ಈ ವಿದ್ಯುತ್ತಿನ ಉಪಯೋಗವನ್ನು ಕನ್ನಡಿಗರು ಪಡೆಯುತ್ತಿದ್ದೇವೆ. ಶರಾವತಿ ನದಿಯ ಜಲಪಾತದಿಂದ ಸಂಪೂರ್ಣ ಪ್ರಯೋಜನ ಪಡೆಯುವಂತೆ ಕೋಟಿಗಟ್ಟಲೆ ಹಣ ವ್ಯಯಿಸಿ ಈಗ ಶರಾವತಿ ಯೋಜನೆ ಆರಂಭವಾಗಿದೆ. ಈ ಯೋಜನೆ ಪೂರ್ತಿಯಾದರೆ ಇದು ಭಾರತದಲ್ಲೇ ಪ್ರಥಮಸ್ಥಾನ ಪಡೆಯುವುದು.

ನೆಲಸಂಪತ್ತು

ನೆಲ ಸಂಪತ್ತಿನಲ್ಲಿ ಮುಖ್ಯವಾಗಿ ಬೆಟ್ಟಗಳು, ಕಾಡುಗಳು ಹಾಗೂ ಖನಿಜಗಳು ಸೇರಿವೆ. ಕಾಡು ಬೆಟ್ಟಗಳಿದ್ದರೇನೇ ಮಳೆ ಬಂದೀತು. ಹೀಗೆ ಒಂದನ್ನೊಂದು ವಿಶೇಷವಾಗಿ ಅವಲಂಬಿಸಿ ಕೊಂಡಿವೆ. ಮೈಸೂರಿನ ಅರಣ್ಯ ಸಂಪತ್ತು, ಖನಿಜಸಂಪತ್ತು ನಿಜಕ್ಕೂ ನಾವು ಪಡೆದ ನಿಧಿಗಳು.

ಖನಿಜ ಸಂಪತ್ತು

ಖನಿಜಗಳ ವಿಚಾರ ಬರುವಾಗ ಖನಿಜಗಳ ರಾಜನೇ ನಮ್ಮ ನಾಡಿನಲ್ಲಿ ದೊರುಕುವನೆಂದ ಮೇಲೆ ಇನ್ನೇನು ಬೇಕು? ಖನಿಜಗಳಲ್ಲಿ ಶ್ರೇಷ್ಠವಾದ ಚಿನ್ನ ಬೆಳ್ಳಿಗಳೆರಡೂ ನಮ್ಮ ರಾಜ್ಯದಲ್ಲಿ ದೊರೆಯುತ್ತವೆ. ನಮ್ಮ ರಾಜ್ಯದ ಕೋಲಾರ ಹಾಗೂ ರಾಯಚೂರುಗಳಲ್ಲಿ ಇವುಗಳ ಗಣಿಗಳಿವೆ. ಕೋಲಾರವು ಭಾರತದ ಏಕಮಾತ್ರ ಚಿನ್ನ ಉತ್ಪಾದನಾ ಕೇಂದ್ರವಾಗಿದೆ. ರಾಯಚೂರು ಹಾಗೂ ಕೋಲಾರದ ಎರಡು ಗಣಿಗಳಲ್ಲಿ ವರ್ಷಕ್ಕೆ ಸುಮಾರು ೨ ಲಕ್ಷ ಔನ್ಸ್ ಚಿನ್ನ ಹಾಗೂ ೧೫ ಸಾವಿರ ಔನ್ಸ್ ಬೆಳ್ಳಿಯೂ ಸಿಕ್ಕುತ್ತದೆ. ಖನಿಜಗಳಲ್ಲಿ ಇನ್ನೊಂದು ಪ್ರಾಮುಖ್ಯವಾದುದು ಲೋಹ ಮಂಡೂರ. ನಮ್ಮ ರಾಜ್ಯದ ತುಮಕೂರು, ಚಿತ್ರದುರ್ಗ, ಶಿವಮೊಗ್ಗ, ಬಳ್ಳಾರಿ, ಉತ್ತರಕನ್ನಡ ಜಿಲ್ಲೆಗಳಲ್ಲಿ ಹೇರಳವಾಗಿ ಲೋಹ ಮಂಡೂರ ಸಿಕ್ಕುತ್ತದೆ. ಇದರ ವಾರ್ಷಿಕ ಉತ್ಪನ್ನವು ೪ ಲಕ್ಷ ಟನ್ ಎಂದು ಅಂದಾಜು ಮಾಡಲಾಗಿದೆ. ಹಾಗೆಯೇ ಕಬ್ಬಿಣದ ಅದುರುಗಳು ನಮ್ಮ ರಾಜ್ಯದಲ್ಲಿ ಬಳ್ಳಾರಿ, ಚಿಕ್ಕಮಗಳೂರು, ಕೆಮ್ಮಣ್ಣುಗುಂಡಿ. ಬಾಬಾಬುಡಾನ್ ಗಿರಿಗಳಲ್ಲಿ ಧಾರಾಳ ಸಿಗುತ್ತವೆ. ಕಬ್ಬಿಣದ ಅದುರು ಲೋಹಮಂಡೂರಗಳನ್ನು ನಾವು ಪರದೇಶಗಳಿಗೂ ಕಳಿಹಿಸುತ್ತೇವೆ.

ನಮ್ಮ ರಾಜ್ಯದ ನೈಸರ್ಗಿಕ ಸಂಪತ್ತಿನ ಸ್ಥೂಲವಾದ ಪರಿಚಯ ಮಾಡಿದಂತಾಯಿತು. ನೈಸರ್ಗಿಕ ಸಂಪತ್ತಿನಿಂದಲೇ ಒಂದು ರಾಷ್ಟ್ರವೂ ರಾಜ್ಯ ಸಂಪನ್ನವಾಗಬಲ್ಲುದು. ನಮ್ಮ ಮೈಸೂರು ರಾಜ್ಯದಿಂದ ಹೇರಳವಾಗಿ ವಿದೇಶಗಳಿಗೆ ವಸ್ತುಗಳನ್ನು ರಫ್ತುಮಾಡುತ್ತೇವೆ. ನಮ್ಮ ರಾಜ್ಯದಿಂದ ಕಾಫೀ ಬೀಜ, ಚಹಗಳನ್ನು ನಾವು ಬ್ರಿಟನ್ ಹಾಗೂ ಪಶ್ಚಿಮ ಜರ್ಮನಿಗೆ ರಫ್ತು ಮಾಡುತ್ತೇವೆ. ಲೋಹಮಂಡೂರದ ಅದುರನ್ನು ನಾವು ರಶ್ಯಾಕ್ಕೆ ಕಳುಹಿಸುತ್ತೇವೆ.

ನೈಸರ್ಗಿಕ ಸಂಪತ್ತು ದೇವರು ಕೊಟ್ಟ ವರದಾನ ಇದನ್ನು ಕಂಡುಹಿಡಿದು ಅದನ್ನು ನಮ್ಮ ಉಪಯೋಗಕ್ಕೆ ಬಳಸುವುದರಲ್ಲಿದೆ ನಮ್ಮ ಜಾಣ್ಮೆ. ಇದಕ್ಕಾಗಿಯೇ ಜನ ಸಂಪತ್ತು ಆಗತ್ಯ ಎಂದು ನಾನು ಮೊದಲು ಹೇಳಿದುದಾಗಿದೆ.

ಜಲಪಾತಗಳಿಂದ ವಿದ್ಯುತ್ ಉತ್ಪಾದನೆ ಮಾಡಿ, ನದಿಗಳಿಂದ ನೀರಾವರಿಯ ಸೌಕರ್ಯ ಪಡೆದು, ಸಮುದ್ರಗಳಿಂದ ಸಾಗಾಟ ಸಾರಿಗೆ ಹಾಗೂ ವ್ಯವಸಾಯವನ್ನು, ಮಾಡಿಕೊಂಡು ಅಭಿವೃದ್ಧಿ ಹೊಂದಬೇಕು. ಪರದೇಶಗಳಿಂದ ಕೋಟಿಗಟ್ಟಲೆ ಹಣ ಸಾಲ ತಂದು ಜನರಿಗೆ ಹಂಚಿದರೆ ದೇಶದ ಸಂಪತ್ತು ಹೆಚ್ಚುವುದಿಲ್ಲ ಜನರ ಬಡತನ ನೀಗುವುದಿಲ್ಲ. ಅವುಗಳನ್ನು ಮೇಲೆ ಹೇಳಿದ ಪ್ರಯೋಜನಕಾರಿ ಕಾರ್ಯಗಳಲ್ಲಿ ತೊಡಗಿಸಿದರೆ ಮಾತ್ರ ಅಭಿವೃದ್ಧಿ ಹೊಂದೀತು.

ನೈಸರ್ಗಿಕ ಸಂಪತ್ತನ್ನು ಬಳಸುವುದರ ಜೊತೆಗೆ ಅವುಗಳ ರಕ್ಷಣೆಯೂ ಅತ್ಯಗತ್ಯ. ಪ್ರಕೃತಿಯ ಸಂಪತ್ತನ್ನು ಬಳಸುವಾಗ ಅದು ನಾಶವಾಗದಂತೆ ನೋಡಬೇಕು. ಪ್ರಕೃತಿಯ ಸಂಪತ್ತಿನ ರಕ್ಷಣೆ ಹಾಗೂ ಅಭಿವೃದ್ಧಿಗಳ ಕಡೆಗೆ ಗಮನ ಕೊಡಬೇಕು. ದೇಶದ ಆರ್ಥಿಕ ಕ್ಷೇತ್ರದಲ್ಲಿ ಆ ದೇಶದ ನೈಸರ್ಗಿಕ ಸಂಪತ್ತಿನ ಪಾತ್ರ ಅಪಾರವಾದುದು. ದೇಶದ ಅಭಿವೃದ್ಧಿಯಾಗ ಬೇಕಾದರೆ ವಿಪುಲವಾದ ನೈಸರ್ಗಿಕ ಸಂಪತ್ತು ಅತಿ ಆಗತ್ಯವಾಗಿದೆ.

—ಶ್ರೀ ಗೋಪಾಲ

ಯಕ್ಷಗಾನದಲ್ಲಿ ಹಿರಿಯ ಸ್ಥಾನ ಗಳಿಸಿ, 'ಯಕ್ಷಗಾನ ಭಾಸ್ಕರ'ನೆಂದು ಪ್ರಸಿದ್ಧಿಪಡೆದ ದಿ| ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ಟರ

ನವಕಾಲೋಚಿತವಾದ ಯಕ್ಷಗಾನ ಪ್ರಸಂಗಗಳು.

ಸಾಹಸ ಭೀಮ ವಿಜಯ (ಗದಾಯುದ್ಧ) ೦—೮—೦

ಯಕ್ಷಗಾನ ದಶಾವತಾರದ ಆಟದ ಕ್ರಮಕ್ಕನುಸರಿಸಿ ಪಾಂಡವರ ಒಡ್ಡೋಲಗದ ದೃಶ್ಯವನ್ನು ದಿಗ್ದರ್ಶನ ಮಾಡಿ, ಮುಂದೆ ಕಥಾಭಾಗವನ್ನು ಮೂಲ ಕಾವ್ಯಕ್ಕನುಸರಿಸಿಯೇ ಕೊನೆಗೊಳಿಸಿದೆ.

ಭಾರತದ ಗುರುಕುಲ ೦—೬—೦

ಪಾಂಡವ, ಕೌರವ ಬಾಲ್ಯ ಕೇಳಿಗಳು, ವಿದ್ಯಾಭ್ಯಾಸ, ಪರೀಕ್ಷಾರಂಗದ ಕಾರ್ಯಗಳು, ಗುರುದಕ್ಷಿಣೆ ಮೊದಲಾದ ವಿಷಯಗಳನ್ನೊಳಗೊಂಡಿದೆ.

ಲಕ್ತ್ತಪಗಡೆ ೦—೬—೦

ಭಾರತದ ಸಭಾಪರ್ವದೊಳಗಣ ಚರಿತ್ರೆಗಳಿರುವ ನಾಲ್ಕು ದೃಶ್ಯಗಳೂ ಅರಣ್ಯಪರ್ವೋಕ್ತವಾದ ಕಿರ್ಮಿರ ವಧೆಯೆಂಬ ದೃಶ್ಯವೂ ಸೇರಿವೆ.

ಭರತೇಶ ದಿಗ್ವಿಜಯ ೦—೮—೦

ರಾಜಕವಿ ರತ್ನಾಕರವರ್ಣಿಯ ಶೃಂಗಾರ ರಸಪ್ರಧಾನವಾದ ಭರತೇಶ ವೈಭವದೊಳಗಣ ದಿಗ್ವಿಜಯ ವಿಭಾಗದ ನೂತನ ಕಥಾವಸ್ತುಗಳನೊಳಗೊಂಡಿದೆ. ಯಕ್ಷಗಾನ ಕಲಾಭಿಮಾನಿಗಳಿಗೆ ವಿವರವಾದ ಸೂಕ್ತ ಅನುಭವ ಸೂಚಿಯಿದೆ.

ವಾಲಿ ಸುಗ್ರೀವ (ಬಹುಮಾನಿತ) ೦—೮—೦

ವೀರ, ಕರುಣಾ ರಸಪ್ರಧಾನವಾದ ನವೀನ ರೀತಿಯಲ್ಲಿ ಮನವೊಪ್ಪುವಂತೆ ರಚಿಸಲಾದ ರಾಮಾಯಣಾಂತರ್ಗತ ಪ್ರಸಂಗ.

ಪುಸ್ತಕ ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸಕಲ ಕಷ್ಟಕಾರಣಿ

ಮಾವೋ ತ್ಸೆ ತುಂಗ್

"ನನ್ನ ವಿಶ್ವದಲ್ಲಿ ಭೀತಿ, ಪ್ರಕೋಪ, ವಿಜಯ ಮತ್ತು ಸ್ವಾವಹೇಳನ ಇವನ್ನು ಬಿಡು ಮತ್ತಾವ ಭಾವಾತಿರೇಕಗಳೂ ಇಲ್ಲ. ಉಳಿದೆಲ್ಲವನ್ನೂ ನಾವು ನಾಶಪಡಿಸುತ್ತೇವೆ—ಎಲ್ಲವೂ ಅಷ್ಟೆ ನಾಶಗೊಳ್ಳುತ್ತವೆ. ಈಗಾಗಲೇ ..... ತನ್ನ ಹೆಂಡತಿಯನ್ನಾಗಲಿ, ಮಕ್ಕಳನ್ನಾಗಲಿ ಇಲ್ಲವೆ ಸ್ನೇಹಿತನನ್ನಾಗಲಿ ವಿಶ್ವಾಸವನ್ನಿಡುವ ಸ್ಥಿತಿಯುಳ್ಳಿಲ್ಲ. ಇನ್ನು ಮುಂದೆ ಹೆಂಡತಿಯೂ ಇರುವುದಿಲ್ಲ, ಸ್ನೇಹಿತರೂ ಇರುವುದಿಲ್ಲ- ಕೋಳಿಯಿಂದ ಮೊಟ್ಟೆಯನ್ನು ಬೇರ್ಪಡಿಸುವಂತೆ, ಮಕ್ಕಳನ್ನು ಹುಟ್ಟಿಸ್ತಲೇ ಅವರ ತಾಯಿಯಿಂದ ಬೇರ್ಪಡಿಸಲಾಗುವುದು. ಆ ದೊಡ್ಡಣ್ಣನ ಪ್ರೀತಿಯ ಹೊರತು, ಮತ್ತಾವ ನಿಷ್ಠೆಯೂ ಇರುವುದಿಲ್ಲ, ಇರಕೂಡದು."

ಇಂದಿಗೆ 14 ವರ್ಷಗಳ ಹಿಂದೆ—ಜಾರ್ಜ್ ಆರ್‌ವೆಲ್‌ರವರು ತಮ್ಮ ಸುಪ್ರಸಿದ್ಧ ಪುಸ್ತಕದಲ್ಲಿ—ಚೀಣಾದಲ್ಲಿನ ಸಮಾಜ ವ್ಯವಸ್ಥೆಯ ರೂಪುರೇಷೆಗಳನ್ನು ವರ್ಣಿಸಿರುವರು.

ಆದರೆ, ಮಾ। ಮಾವೋ ತ್ಸೆ ತುಂಗ್‌ರವರ ಕೃಪೆಯಿಂದಾಗಿ, ಚೀಣಾದ ಜನತಾ ರಿಪಬ್ಲಿಕ್‌ನಲ್ಲಿನ ಈ ಭ್ರಮೆಯು ಪರಿಸ್ಥಿತಿಯು, ವಾಸ್ತವ ಸ್ಥಿತಿಗೆ ದಾರಿಮಾಡಿಕೊಟ್ಟಿವೆ.

ಇಂದು ಚೀಣಾದಲ್ಲಿ, ಜನತೆ, ಮಾವೋ ತ್ಸೆ ತುಂಗರು ಮಾಡಿದ ಆಲೋಚನೆಗಳನ್ನಷ್ಟೇ ಮಾತ್ರ ಆಲೋಚಿಸಲು ಸಮರ್ಥರು. ಚೀನಿ ಜನತೆಗಾಗಿ ಮಾವೋರವರು ಆಲೋಚನೆ ಮತ್ತು ವರ್ತನೆಗಳ ಸಂಪೂರ್ಣ ಪಟ್ಟಿಯನ್ನೇ ಮಾಡಿರುವರು. ಗೊತ್ತುಪಡಿಸಿರುವ ಜೀವನ ವಿಧಾನ ಮತ್ತು "ಮಾನವ ಐಹಿಕ ನೀತಿ' ವಿಷಯಗಳಲ್ಲಿ ಯಾವ ರೀತಿಯ ವಿಪರ್ಯಾಸವಾದಾಗ್ಯೂ, ಅದು ಪ್ರಕಾಶಕ್ಕೆ ಬಂದು ಶಿಕ್ಷೆಗೊಳಗಾಗುತ್ತಾರೆ. ಕುರಬಂದ ಬೇಹುಗಾರರ ಮತ್ತು ಬಿಗಿಯಾದ ಆಚಾರ ನಿಯಂತ್ರಣಗಳ ವ್ಯೂಹ ಯಾರನ್ನೂ ಕ್ಷಮಿಸದು. ತನ್ನ ಒಲವಿನ ವರ್ಗಕ್ಕೆ ಸೇರಿದವರಿಗಿಂತ, ಇನ್ನೊಡನೆ ರುಚಿ ಕಾಮನೆಗಳಿಗೆ ಚೀಣಾದ ಚೌಲಿ ಬಂದಿದೆ

ಫಲಿತಾಂಶವಾಗಿ, ಅಲ್ಲಿ ಪರಸ್ಪರ ಅಪನಂಬಿಕೆಯುಳ್ಳ ಕ್ರೂರಾವಳಿತೆ ಏರ್ಪಟ್ಟಿದೆ. ಪ್ರತಿಯೊಬ್ಬ ಚೀಣೀಯನೂ ಮತ್ತೊಬ್ಬ ಚೀಣಿಯನನ್ನು ಸಂಶಯ ದೃಷ್ಟಿಯಿಂದಲೇ ನೋಡುತ್ತಿದ್ದಾನೆ

ಇಂತಹ ಪರಿಸ್ಥಿತಿ ಏರ್ಪಡಲು ಯಾರು ಕಾರಣರು? ಇದಕ್ಕೆ ಮಾವೋ ತ್ಸೆ ತುಂಗ್ ಕಾರಣ, ಎಂಬುದರಲ್ಲಿ ಸಂದೇಹವೇ ಇಲ್ಲ. ಚೀಣಾದ ಲಕ್ಷಾಂತರ ಜನರನ್ನು ದಾರುಣ ಸ್ಥಿತಿಗೆ ತಂದ ಈ "ಮಹಾನ್ ವ್ಯಕ್ತಿ' ಯ ವಿಷಯವನ್ನು ಕೊಂಚ ನೋಡೋಣ.

ಶಿಸ್ತು ದ್ವೇಷಿ

ಮಾವೋ ತ್ಸೆ ತುಂಗ್‌ರವರು ೭೦ ವರ್ಷಗಳ ಹಿಂದೆ ಹೊನಾನ್ ಪ್ರಾಂತದ ಷಾವೋಷಾನ್ ಗ್ರಾಮದಲ್ಲಿ ೧೮೯೩ರ ಡಿಸೆಂಬರ್ ೨೬ರಂದು, ಜನ್ಮ ತಳೆದರು. ತನ್ನ ಚಿಕ್ಕ ವರ್ಷದಿಂದಲೂ, ಅವರು ಶಿಸ್ತಿನ ದ್ವೇಷಿ. ಮಾವೋನ ಕಮ್ಯುನಿಸ್ಟ್ ಜೀವನ ಚರಿತ್ರೆಗಾರ, ಎಮಿಸಿಯಾವೊ ಈ ವಿಷಯವನ್ನು ಸ್ಪಷ್ಟಪಡಿಸಿದ್ದಾನೆ. ತನ್ನ ೫ನೆಯ ವಯಸ್ಸಿನಲ್ಲಿ ಮಾವೋ ತನ್ನ ತಂದೆಯ ವಿರುದ್ಧ ದಂಗೆಯೆದ್ದು ನಿಂತರು. ಶಾಲೆಯಲ್ಲಿ ಮಾವೊ ತರಗತಿಗಳಿಂದ ತಪ್ಪಿಸಿಕೊಳ್ಳುತ್ತಿದ್ದರು. ಏಕೆಂದರೆ ಅಲ್ಲಿ ಕನ್‌ಫ್ಯೂಷಿಯ ತತ್ವಗಳನ್ನು ನಾಲ್ಕು ಮಹಾ ಕಾವ್ಯಗಳನ್ನು ಬೋಧಿಸುತ್ತಿದ್ದರು. ಆ ಶಿಕ್ಷಕರು ತುಂಬಾ ಶಿಸ್ತಿನವರು ಹುಡುಗರನ್ನು ಹೊಡೆಯುತ್ತಿದ್ದರು.

ಅನಂತರ, ಕಮ್ಯುನಿಸ್ಟ್ ಕಾರ್ಯಕರ್ತನಾಗಿ, ತನ್ನ ಪಕ್ಷದ ನಾಯಕರ ಸೂಚನೆಗಳಿಗೆ ವಿಧೇಯನಾಗಿರಲಿಲ್ಲ. ಅಂದಿನ ದಿನಮಾನದ ಪಕ್ಷದ ಮಾರ್ಗವನ್ನು ಆತ ಅನುಸರಿಸಲಿಲ್ಲ, ಅದನ್ನು ಕೃತಿಯಿಂದ ವಿರೋಧಿಸಿದ.

ಚೀನಿ ಕಮ್ಯುನಿಸ್ಟರು, ನಗರಗಳಲ್ಲಿ ಗುಂಪುಗೂಡಿ ಕಾರ್ಮಿಕರ ಕ್ರಾಂತಿ ನಡೆಸಿ, ಬಂಡವಾಳಶಾಹಿಗಳ ವಿರುದ್ಧ ಹೋರಾಟ ನಡೆಸಬೇಕೆಂದು ಸಲಹೆ ಮಾಡಿದರೆ, ಮಾವೊ ಅದನ್ನು ಪ್ರತಿಭಟಿಸಿ, ಗ್ರಾಮಾಂತರ ಪ್ರದೇಶಗಳಲ್ಲಿ ಕ್ರಾಂತಿ ನಡೆಸುವುದರ ಮೂಲಕ ಕಮ್ಯುನಿಸ್ಟರು ಅಧಿಕಾರಕ್ಕೆ ಬರಬೇಕೆಂಬ ತನ್ನ ವಾದವನ್ನು ಮುಂದಿಟ್ಟರು.

ಶೀಘ್ರ ಕೋಪಿ

ಮಾವೋ ಶೀಘ್ರಕೋಪಿ. ತನ್ನ ಅಭಿಪ್ರಾಯವನ್ನು ಮನ್ನಿಸದ ಯಾರನ್ನೂ ಆತ ಸಹಿಸಲಾರ. ಈ ಅಂಶವನ್ನು ಸಮರ್ಥಿಸಲು ಅನೇಕ ಸಾಂದರ್ಭಿಕ ಸಾಕ್ಷಿಗಳನ್ನು ಒದಗಿಸಬಹುದು. ಸರ್ಕಾರ ಮತ್ತು ಪಕ್ಷದಲ್ಲಿ ೮ ವರ್ಷಕಾಲ ಉನ್ನತ ಸ್ಥಾನದಲ್ಲಿದ್ದ ಡಾ|| ಚಾ ಚಿಂಗ್ ವೆನ್‌ರವರು "ಬಿರುಗಾಳಿಯ ಹತ್ತುವರ್ಷ' ಎಂಬ ತಮ್ಮ ಗ್ರಂಥದಲ್ಲಿ ಒಂದು ದೃಶ್ಯವನ್ನು ವಿವರಿಸುತ್ತಾ, ಡೆಮೋಕ್ರೆಟಿಕ್ ಲೀಗ್‌ನ ಸದಸ್ಯರಾದ ಲಿಯಾಂಗ್ ರವರು ಚೀಣಾದಲ್ಲಿ ಕಾರ್ಮಿಕರಿಗಿಂತ, ರೈತರು ಹೆಚ್ಚಿನ ಭಾರ ಹೊರಬೇಕಾಗಿದೆ ಎಂಬ ವರದಿಯನ್ನು ಮಾಡಿದುದರ ಪರಿಣಾಮವಾಗಿ, ಮಾವೊರವರ ಅಸಂತೃಪ್ತಿಗೊಳಗಾದರೆಂದು ತಿಳಿಸಿರುವರು.

ಧ್ವನಿವರ್ಧಕವನ್ನು ವಶಪಡಿಸಿಕೊಂಡು ಮಾವೊರವರು. "ನೀನು ತುಂಬಾ ಸುಂದರನೆಂದು, ಕ್ಸೈ ಷಿಹ್‌ಗಿಂತ ಸುಂದರನೆಂದು, ಕುಚಿಫೈಗಿಂತ ಸುಂದರನೆಂದು ನೀನು ತಿಳಿದುಕೊಂಡಿರಬಹುದು. ಆದರೆ ನನಗೆ ನೀನು ಅಸ್ತಿಪಂಜರವೆಂದೇ' ಎಂದು ಹೇಳಿದರು.

ಲಿಯಾಂಗ್ ಅಲ್ಲಿಂದ ಮುಂದೆ "ಜನತೆಯ ಶತ್ರುವಾದ' ಮತ್ತು ಅದೃಶ್ಯನಾದ.

ಮಾವೋ ತ್ಸೆ ತುಂಗರ ಆಲೋಚನೆ ಮಾರ್ಗಕ್ಕಿಂತ ವಿಭಿನ್ನವಾದ ಆಲೋಚನೆಗಳನ್ನು ಅಭಿವ್ಯಕ್ತಪಡಿಸಲು ಪ್ರಯತ್ನಿಸಿದವರಿಗೆಲ್ಲಾ ಲಿಯಾಂಗ್‌ನಿಗೆ ಆದ ಗತಿಯೇ ಆಗುವುದು. ಮಾವೋನ ಕೈಗೊಂಬೆಗಳಿಗೆ ಮಾತ್ರ ಜೀವನ ಹೂವಿನ ಹಾಸಿಗೆಯಾಗಿರುವುದು.

ಇದರಲ್ಲಿ ಉತ್ಪ್ರೇಕ್ಷೆಯಿಲ್ಲ. ಎಲ್ಲಾ ಕಮ್ಯುನಿಸ್ಟ್ ನಾಯಕರಿಗೂ, ಜೊತೆಗೆ ಹೊಸ ಪತ್ನಿಯರು ಇರುತ್ತಾರೆ "ಕಮ್ಯುನಿಸ್ಟ್ ನಾಯಕರು, ಹುಡುಗಿಯ ಹಿಂದಿನ ಕತೆಯನ್ನು ಅಷ್ಟು ಮನಸ್ಸಿಗೆ ಹಚ್ಚಿಕೊಳ್ಳುವುದೇ ಇಲ್ಲ. ಹುಡುಗಿ ಆಕರ್ಷಕಳಾಗಿದ್ದರೆ ಸಾಕು, ಅವಳು ಜಹಗೀರ್‌ದಾರರ ಮಗಳಾಗಲಿ, ಬಂಡವಾಳಶಾಹಿಯ ಮಗಳಾಗಿರಲಿ ಚಿಂತೆಯಿಲ್ಲ. ಅವಳು ಮಾರ್ಕ್ಸ್‌ವಾದ-ಲೆನಿನ್‌ವಾದಗಳನ್ನು ಅರ್ಥಮಾಡಿಕೊಂಡಿದ್ದಾಳೆ ಎಂದು ಪರಿಗಣಿಸಿ, ತಮ್ಮ ಚಟುವಟಿಕೆಗಳಲ್ಲಿ ಸೇರಿಸಿಕೊಳ್ಳುತ್ತಾರೆ' ಎಂದು ಚಾಚಿಂಗ್‌ವೆನ್ ಬರೆದಿದ್ದಾನೆ. ಈ ಹುಡುಗಿಯರಿಗೆ 'ಹೊಸ ಪತ್ನಿಯರು' ಅಥವಾ "ಸ್ತ್ರೀಕಾಮ್ರೇಡ್' ಗಳೆಂದು ಹೆಸರು.

ಅಧಿಕಾರ ರಕ್ಷಣೆ

ಈ ಪ್ರಶ್ನೆಗೆ ಮಾವೋ ತಾನೇ ಉತ್ತರ ಕೊಟ್ಟಿದ್ದಾನೆ. ರೋಗಿಯ ಕಡೆಗೆ ತಿರುಗಿ "ನಿನಗೆ ಕಾಯಿಲೆ" ಎಂದು ಕಿರುಚುವುದನ್ನು ಮತ್ತು ಕ್ಷೋಭೆಯನ್ನುಂಟು ಮಾಡುವುದನ್ನು ಆರಂಭಿಸಿದರೆ, ಅವನು ಭೀತನಾಗಿ ಬೆವರು ಸುರಿಸುವನು. ಅನಂತರ "ನಿನಗೆ ಚಿಕಿತ್ಸೆಯ ಆಗತ್ಯವಿದೆ"ಯೆಂದು ಆತನನ್ನು ನಿಧಾನವಾಗಿ ಒಪ್ಪಿಸಬಹುದು.

'ರಾತ್ರಿಯ ವೇಳೆಯಲ್ಲಿ ಬಾಗಿಲನ್ನು ತಟ್ಟುವುದು' ಒಂದು ಕಾರ್ಯವಿಧಾನ! ಚೀಣಾದಲ್ಲಿ ಕಮ್ಯುನಿಸ್ಟರು ಅಧಿಕಾರಕ್ಕೆ ಬಂದಂದೀಚೆಗೆ, ಈ ರೀತಿ ಬಾಗಿಲು ತಟ್ಟಿದಾಗ ಬಾಗಿಲು ತೆಗೆದ ಸಾವಿರಾರು ಜನರನ್ನು, ವಿನಾಕಾರಣ ವಾರೆಂಟ್ ಇಲ್ಲದೆ, ಆರೋಪಣೆಯಿಲ್ಲದೆ, ವಿಚಾರಣೆ ನೀಡಲು ಅವಕಾಶ ಕೊಡದೆ ದಸ್ತಗಿರಿ ಮಾಡಲಾಗಿದೆ. ಅಸಂಖ್ಯಾತ ಜನರಿಗೆ ಈ ದಸ್ತಗಿರಿ, ಅವಮಾನ ಅವಹೇಳನ, ಕಿರುಕುಳ ಅಥವಾ ಪ್ರಾಣಹಾನಿಗೆ ಸಂಚಕಾರವಾಗಿದೆ. ಇಂತಹ ಭಯಾನಕ ಪರಿಸ್ಥಿತಿಯಲ್ಲಿ ಮಾವೋ ನಾಯಕತ್ವ ನಡೆಯುತ್ತಿದೆ. ಭೀತಿ, ಹಿಂಸೆ ಪ್ರಾಣಭಯದಿಂದಾಗಿ ಪ್ರತಿಯೊಬ್ಬ ಚೀಣೀಯನೂ ಕಮ್ಯುನಿಸ್ಟ್ ದಬ್ಬಾಳಿಕೆಯ ಬಗ್ಗೆ ದನಿಯೆತ್ತಿ ಮಾತನಾಡಲಾರ

ಏಕಮೇವ ನಾಯಕ

ಮಾವೋ ಏಕಮೇವ ಆರಾಧ್ಯನಾಯಕನೆಂಬ ಕಲ್ಪನೆಯನ್ನು ತಲೆಯಲ್ಲಿ ತುಂಬುವ ಪ್ರಯತ್ನ ಬಹುವರ್ಷದಿಂದಲೂ ನಡೆಯುತ್ತಿದೆ ಪರಿಣಾಮಕಾರಿಯಾದ ಪ್ರಚಾರದ ಮೂಲಕ ಮಾವೋ ಪ್ರತಿಭಾವಂತನ ಪಟ್ಟ ಕಟ್ಟಿಕೊಂಡಿದ್ದಾನೆ ಶಸ್ತ್ರ ಚಿಕಿತ್ಸಾ ಪರಿಣತರು, ಕಾದಂಬರಿಕಾರರೂ, ಇಂಜಿನಿಯರು, ಕಲಾವಿದರು ಮುಂತಾದವರಿಗೆಲ್ಲ ಅವರ ವೃತ್ತಿಯಲ್ಲೇ ಮಾರ್ಗದರ್ಶನ ಕೊಡುವಂತಹ ಪ್ರತಿಭಾವಂತಹ ಪ್ರತಿಭಾವಂತ ಮಾವೊ ರಷ್ಯಾದಲ್ಲಿ ಸ್ಟಾಲಿನ್ ವಿರುದ್ಧ ನಡೆದ ಚಳುವಳಿಯು ಸಹಾ, ಮಾವೋರವರ ಆಹಂಭಾವದ ಪ್ರಭಾವವನ್ನು ತಗ್ಗಿಸಲಿಲ್ಲ

ಮಾವೋರವರ ಮೊಂಡತನದ ಬಗ್ಗೆ ಈಗ ಕ್ಯಾಂಗ್ ತುಂಗ್‌ನಲ್ಲಿ ಕಮ್ಯೂನ್‌ನಲ್ಲಿ ಕೆಲಸಮಾಡುತ್ತಿರುವ, ಮೊದಲು ಬೌದ್ಧ ಬಿಕ್ಕುವಾಗಿದ್ದವನು, ಇತ್ತೀಚೆಗೆ ಮಾವೋರವರ ಆಡಳಿತವು ೧೯೬೮ ರಲ್ಲಿ ಕೊನೆಗೊಳ್ಳುವುದೆಂದು ಘೋಷಿಸಿರುವನು ನಿರೀಕ್ಷೆಯಂತೆ ಅವನನ್ನು ದಸ್ತಗಿರಿ ಮಾಡಿ, ಸುಧಾರಣಾಶ್ರಮ ಶಿಬಿರಕ್ಕೆ ಹಾಕಲಾಗಿದೆ. ಅವನು ಮತ್ತೆ ಮಾತಾಡಲು ಜೀವ ಸಹಿತ ಇರುವನೋ ಇಲ್ಲವೋ ಅನುಮಾನಸ್ಪದ.

—ಸ್ಯಾಮುವೆಲ್ ಬಂಕರ್.

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ.
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಿಗಳು,
ಫಾರ್ಮುಗಳು
ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ

ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ,
14 CT ಚಿನ್ನದ ಆಭರಣಗಳಲ್ಲಿ 58⅓% ಶುದ್ಧ ಪುತ್ಥಳಿ ಚಿನ್ನ ಇರುತ್ತದೆ.
ಬೇಕಾದಲ್ಲಿ 1 ರೂ ಕಮ್ಮಿಯಲ್ಲಿ ಯಾವಾಗಲೂ ಬಜಾರು ಧಾರಣೆಗೆ ಪಡಕೊಳ್ಳುವ ಭರವಸೆ ಕೊಡುತ್ತೇವೆ.
ವಿ ಸೂ: ಹಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡಕೊಳ್ಳುವರೆ ಸರಕಾರದ ಲೈಸನ್ಸ್ ಸಿಕ್ಕಿರುತ್ತದೆ
ಮದುವೆ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡಕೊಂಡು ಖಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.
ಶ್ರೀ ಕೃಷ್ಣಾ ಜ್ಯುವೆಲರಿ ಮಾರ್ಟ್
ತೆಂಕಪೇಟೆ — ಉಡುಪಿ.
ಪ್ರೊಪ್ರೈಟರ್. ರಾಘವೇಂದ್ರ ಕೃಷ್ಣ ಭಟ್.
ಫೋನ್ ನಂಬ್ರ: 66

ಸೂಚನೆ

'ನವಯುಗ"ದಲ್ಲಿ ಪ್ರಕಟನೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಲು ತಾವು ಸೈಜಿನ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಸುವಾಚ್ಯವಾಗಿಯೂ ಇರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ ಸ.

ಆದರ್ಶ ಚರಿತೆಗಳು-೧೧

ಮಹಾತ್ಮಾ ಅರಿಸ್ಟಾಟಲ್

ಶ್ರೀ ಎಸ್. ಎಂ. ಶೆಟ್ಟಿ ಶಿವಪುಂಜೆ ಹರಾರಿ.

ವಿಶ್ವವಿಜೇತ ಅಲೆಗ್ಝಾಂಡರನ ಗುರುವಾದ ಅರಿಸ್ಟಾಟಲರ ಜನ್ಮವು ಕ್ರಿಸ್ತಪೂರ್ವ ೩೮೪ರಲ್ಲಿ 'ಸ್ಟೆಗಿರಾ' ಎಂಬ ನಗರದಲ್ಲಿ ಆಯ್ತು. ಇವರ ತಂದೆಯವರು ಒಬ್ಬ ಸುಪ್ರಸಿದ್ಧ ಚಿಕಿತ್ಸಕರಾಗಿದ್ದರು ಸಂಭವತಃ ಇದೇ ಕಾರಣದಿಂದಾಗಿ ಅರಿಸ್ಟಾಟಲರಿಗೆ, ಮುಂದೆ ಜೀವ ಜಂತುಗಳ ಅಧ್ಯಯನ ಗೈಯುವ ಅಭಿರುಚಿ ಹುಟ್ಟಿತು. ಅರಿಸ್ಟಾಟಲರ ಜೀವನವನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು.

ತನ್ನ ಹದಿನೇಳನೇ ವರ್ಷದಿಂದ, ಮೂವತ್ತೇಳನೇ ವರ್ಷ ಪ್ರಾಯದ ವರೆಗೆ ಅವರು ಪ್ಲೇಟೋನ ಬಳಿಯಿದ್ದರು. ಈ ಸುಪ್ರಸಿದ್ಧ ದಾರ್ಶನಿಕ ಪ್ಲೇಟೋನ ಬಳಿಯಿದ್ದೇ ಅವರು ತನ್ನ ಜ್ಞಾನ ಭಂಡಾರವನ್ನು ಹೆಚ್ಚಿಸಿದ್ದರು ಗುರುವನ್ನು ಬಹುವಾಗಿ ಸನ್ಮಾನಿಸುತ್ತಿದ್ದರು, ಕೆಲವು ವಿಷಯಗಳಲ್ಲಿ ಅವರದೇ ಆದ ಸ್ವತಂತ್ರ ವಿಚಾರವನ್ನು ಪ್ರಕಟಿಸುತ್ತಿದ್ದರು ಗುರು-ಶಿಷ್ಯರ ಅಭಿರುಚಿಯಲ್ಲಿಯೂ ಅಜ-ಗಜಗಳ ಅಂತರವಿತ್ತು ಆತ್ಮ-ಪರಮಾತ್ಮಗಳ ಚರ್ಚೆಯಲ್ಲಿ ಪ್ಲೇಟೋ ಅವರು ಭಾವನಾ ಪರವಶರಾಗಿ ಬಿಡುತ್ತಿದ್ದರೆ, ಸ್ಥೂಲ ಜಗತ್ತಿನ ಪದಾರ್ಥ ಮತ್ತು ಪ್ರಾಣಿಗಳ ಅಧ್ಯಯನದಲ್ಲಿ ಅರಿಸ್ಟಾಟಲರು ತನ್ನನ್ನೇ ಮರೆತು ಕುಳಿತು ಬಿಡುತ್ತಿದ್ದರು.

ಪ್ಲೇಟೋ ಅವರ ಮರಣಾನಂತರ, ಅರಿಸ್ಟಾಟಲ್ ಹಾಗೂ ಇನ್ನಿತರ ಕೆಲವು ಶಿಷ್ಯರು ಕೂಡಿ 'ಏಥೆನ್ಸ' ನಗರವನ್ನು ಬಿಟ್ಟು, ಪ್ಲೇಟೋ ಅವರ ಇನ್ನೊಬ್ಬ ಶ್ರೀಮಂತ ವ್ಯಾಪಾರೀ ಶಿಷ್ಯನಿರುವಲ್ಲಿಗೆ ಬಂದರು. ಕೆಲವು ಸಮಯದ ಬಳಿಕ ಆದೇ ಶ್ರೀಮಂತ ವ್ಯಾಪಾರಿಯ ಮಗಳನ್ನು ಅರಿಸ್ಟಾಟಲರು ವಿವಾಹವಾದರು.

ಅಲೇಗ್ಝಾಂಡರನ ತಂದೆ ಹಾಗೂ ಅರಿಸ್ಟಾಟಲರ ಮಾವನವರಲ್ಲಿ ಒಳ್ಳೇ ಗೆಳತನವಿದ್ದುದರಿಂದಲೇ ಅಲೇಗ್ಝಾಂಡರನಿಗೆ ಶಿಕ್ಷಣವೀಯಲು ಇವರನ್ನು ನೇಮಿಸಲಾಯ್ತು ಹಾಗೂ 'ಮೆಸಿಡೋನಿಯಾ'ಕ್ಕೆ ಕರೆದೊಯ್ಯಲಾಯ್ತು ಆದರೆ ಸಿಂಹಾಸನಾರೋಹಣ ಗೈಯ್ಯುತ್ತಲೇ ಅಲೇಗ್ಝಾಂಡರನು ಯುದ್ಧದಲ್ಲಿ ಎಷ್ಟು ಮಗ್ನನಾಗಿ ಬಿಟ್ಟನೆಂದರೆ, ಅಲೇಗ್ಝಾಂಡರ ಹಾಗೂ ಅರಿಸ್ಟಾಟಲರ ಸಂಬಂಧವೇ ದೂರವಾಯ್ತು. ಅರಿಸ್ಟಾಟಲರ ಸಮಯವೆಲ್ಲವೂ ಜ್ಞಾನಾರ್ಜನೆಗಾಗಿ ಹಾಗೂ ಶಿಕ್ಷಣ ನೀಯಲಿಕ್ಕಾಗಿಯೇ ವಿನಿಯೋಗವಾಗುತ್ತಿತ್ತು. ಇವರೂ ತನ್ನ ಗುರು ಪ್ಲೇಟೋನಂತೆಯೇ ಒಂದು ಶಾಲೆಯನ್ನು ಸ್ಥಾಪಿಸಿದರು.

ಅಲೇಕ್ಝಾಂಡರನ ಮರಣಾನಂತರ ಶಾಸನ ವ್ಯವಸ್ಥೆಯೇ ತಿರುವು ಮುರುವಾಗಿ ಬಿಟ್ಟಿತು. ರಾಜ್ಯದ ವಿಭಿನ್ನ ಭಾಗಗಳಲ್ಲಿ ಬಂಡಾಯವೆದ್ದಿತು ಅರಿಸ್ಟಾಟಲರೂ ತನ್ನ ಹುಟ್ಟೂರಿಗೆ ಓಡಿ ಹೋಗಬೇಕಾಯ್ತು ತನ್ನ ೬೨ನೇಯ ವಯಸ್ಸಿನಲ್ಲಿ ಅವರು ಅಲ್ಲಿಯೇ ದೈವಾಧೀನರಾದರು.

(ಮೂಲ: ರಾ. ಕು. ಸುದರ್ಶನ ಸಿಂಹ)

ವಿಶ್ವೈಕ್ಯದಲ್ಲಿ ಮತ್ತೊಂದು ಹೆಜ್ಜೆ

ಏಕರೂಪದ ಅಂಚೆಪದ್ಧತಿ

ಇನ್ನು ಮೂರು ವರ್ಷಗಳೊಳಗಾಗಿ ವಿಶ್ವದಾದ್ಯಂತ ಟೆಲಿವಿಷನ್ ಮತ್ತು ಟೆಲಿಫೋನ್ ಜಾಲವನ್ನು ಕೃತಕ ಉಪಗ್ರಹಗಳ ಸಹಾಯದಿಂದ ಹೆಣೆಯಬಹುದು ಈ ಕಾರ್ಯವು ಯಶಸ್ವಿಯಾಗಬೇಕಾದರೆ, ಸರ್ವದೇಶಗಳ ಸಹಕಾರವು ಅತ್ಯಗತ್ಯ. ಈ ಕಾರಣದಿಂದ ಯುರೋಪಿನ ಕಮ್ಯೂನಿಸ್ಟೇತರ ರಾಷ್ಟ್ರಗಳೆಲ್ಲಾ ಅಂಚೆ ದರಗಳಲ್ಲಿ ಏಕರೂಪತೆಯನ್ನು ಜಾರಿಗೆ ತರುವುವು

ಮ್ಯೂನಿಚ್ಚಿನಲ್ಲಿ ಈಚೆಗೆ ಕರೆಯಲಾಗಿದ್ದ ಅಂಚೆ ಮತ್ತು ಟೆಲಿಕಮ್ಯೂನಿಕೇಷನ್ ಸಂಬಂಧದ ಸಮ್ಮೇಳನದಲ್ಲಿ ಯುರೋಪಿನ ಹತ್ತೊಂಬತ್ತು ಕಮ್ಯೂನಿಸ್ಟೇತರ ದೇಶಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಈ ಇನ್ನೂರಕ್ಕೂ ಹೆಚ್ಚಿನ ಪ್ರತಿನಿಧಿಗಳು ಅಂಚೆ ಇಲಾಖೆಯ ಪ್ರಗತಿ ಮತ್ತು ಆಧುನಿಕ ಅಂತಾರಾಷ್ಟ್ರೀಯ ವಾರ್ತಾಸಂಪರ್ಕಗಳ ಬಗ್ಗೆ ಚರ್ಚಿಸಿದರು ಯೂರೋಪಿನಲ್ಲಿ ಅಂಚೆ ವಿಭಾಗವು ಪ್ರಗತಿಯನ್ನು ಹೊಂದಬೇಕೆಂದರೆ, 'ಐಕ್ಯ ಯೂರೋಪ್'ನಿಂದಲೇ ಸಾಧ್ಯವೆಂದು ಎಲ್ಲರ ಅಭಿಮತ.

ನಾರ್ವೆ ದೇಶಕ್ಕೆ ಸೇರಿದ ಚಿತ್ರಗಾರನೊಬ್ಬನು ಯೂರೋಪಿಯನ್ ಸ್ಟ್ಯಾಂಪ್ ಹೇಗಿರಬೇಕೆಂದು ಗುರುತು ಹಾಕಿಕೊಟ್ಟಿದ್ದಾನೆ ಒಂದು ದೇಶಕ್ಕೂ, ಮತ್ತೊಂದು ದೇಶಕ್ಕೂ ಇರುವ ಸೀಮಾ ಪ್ರದೇಶಗಳಿಗೆ ಸಂಖ್ಯೆಗಳನ್ನೀಯುವುದು ಹೇಗೆ ಎಂಬ ವಿಷಯದಲ್ಲಿ ಸ್ವಿಟ್ಜರ್ಲೆಂಡ್ ಸಲಹೆಯಿತ್ತಿತು. ಎಲ್ಲಾ ದೇಶಗಳ ಕಾರ್ಡು, ಕವರು, ಸ್ಟಾಂಪ್‌ಗಳು ಒಂದೇ ಅಳತೆಯವಾಗಿರಬೇಕೆಂದು ಬೆಲ್ಜಿಯಂ ತಿಳಿಸಿತು. ಒಂದೇ ಅಳತೆಯ ಒಂದೇ ಸಮಾನ ಪತ್ರವಾಹಕ ಚೀಲಗಳನ್ನು ಜಾರಿಗೆ ತರಬೇಕೆಂದು ಪಶ್ಚಿಮ ಜರ್ಮನಿಯು ತಿಳಿಸಿತು 'ಯೂನಿವರ್ಸಲ್ ಪೋಸ್ಟಲ್ ಯೂನಿಯನ್' ಎಂಬ ಸಲಹೆಯನ್ನಿತ್ತವರು ಓರ್ವ ಫ್ರೆಂಚ್ ಪ್ರತಿನಿಧಿ

ಯೂರೋಪಿಯನ್ ಸ್ಟಾಂಪಿನ ಸಲಹೆಯನ್ನು ಹದಿಮೂರು ರಾಷ್ಟ್ರಗಳು ಒಪ್ಪಿಕೊಂಡವು ಅಷ್ಟು ಮಾತ್ರವಲ್ಲದೆ. ಇಡಿ ಯೂರೋಪಿನಲ್ಲಿನ ಅಂಚೆ ದರಗಳು ಏಕರೂಪದವಾಗಿರಬೇಕೆಂದು ಈ ಎಲ್ಲಾ ದೇಶಗಳೂ ಒಪ್ಪಿಕೊಂಡವು. ಈಗಾಗಲೇ ಜರ್ಮನಿ, ಫ್ರಾನ್ಸ್, ಬೆಲ್ಜಿಯಂ, ಲಕ್ಸೆಂಬರ್ಗ್ ದೇಶಗಳಿಗೆ ಈ ಯಾವುದೊಂದು ದೇಶವು ವ್ಯವಹರಿಸಬೇಕಾದಲ್ಲಿ ವಿಶೇಷ ದರವಿಲ್ಲದೆ ಪತ್ರವನ್ನು ಸಾಗಿಸಲಾಗುವುದು

ಇನ್ನೂ ಶೀಘ್ರವಾಗಿ ಅಂಚೆ ವಿತರಣೆ ಮಾಡುವ ವಿಧಾನಗಳನ್ನು ಕಂಡು ಹಿಡಿಯಬೇಕಾದದ್ದು ಅತ್ಯಗತ್ಯ. ಕೃತಕ ಉಪಗ್ರಹಗಳಿಂದ ಟೆಲಿವಿಷನ್ ಟೆಲಿಕಮ್ಯೂನಿಕೇಷನ್, ಸಂಜ್ಞೆಗಳ ಮೂಲಕ ಅಂಚೆ ಬಟವಾಡೆ, ಏಕರೀತಿಯ ಅಂಚೆ ಕಟ್ಟುವ ಚೀಲದ ಬಳಕೆ ಮುಂತಾದ ವಿಷಯಗಳು ಚರ್ಚಿಸಲ್ಪಟ್ಟವು

ಈಗ ಜರ್ಮನಿಯಲ್ಲಿ ಬಟವಾಡೆಯಲ್ಲಿ ಯಂತ್ರಗಳ ಸಹಾಯವನ್ನು ಪಡೆಯಲಾಗುತ್ತಿದ್ದು ಈ ಪದ್ಧತಿಯನ್ನು ಯುರೋಪಿನಾದ್ಯಂತ ಜಾರಿಗೆ ತರುವ ಕುರಿತು ಸಮ್ಮೇಳನದಲ್ಲಿ ಪರಿಶೀಲಿಸಲಾಯಿತು ಈ ಅಂಚೆ ಸಮ್ಮೇಳನವು ಹನ್ನೆರಡು ದಿನಗಳ ಕಾಲ ನಡೆಯಿತು ಬವೇರಿಯಾ ಪಾರ್ಲಿಮೆಂಟ್ ಸೇರುವ ಮ್ಯಾಕ್ಸಿಮಿಲಿಯನ ಭವನವು ಪೋಸ್ಟಲ್ ಮ್ಯೂಸಿಯಂನಂತೆ ಕಂಗೊಳಿಸುತ್ತಿತ್ತು, ಸಾರ್ವಜನಿಕರೂ ಮೆಚ್ಚುವಂತಹ ರೀತಿಯಲ್ಲಿ ಏರ್ಪಡಿಸಿದ ಪ್ರದರ್ಶನದಲ್ಲಿ ಹಳೆಯ ಅಂಚೆ ಚೀಟಿಗಳನ್ನೂ ಕಳೆದ ಶತಮಾನದ ಸಿಬ್ಬಂದಿಯು ಉಪಯೋಗಿಸುತ್ತಿದ್ದ ಸಮವಸ್ತ್ರಗಳನ್ನೂ, ಇನ್ನೂ ಅನೇಕ ಸಂಬಂಧಿತ ವಸ್ತುಗಳನ್ನೂ ಪ್ರದರ್ಶಿಸಲಾಗಿತ್ತು. ಪ್ರಖ್ಯಾತ ಬರ್ಲಿನ್-ವಿಯೆನ್ನಾ ಅಂಚೆ ಮಾರ್ಗದ ಚಿತ್ರಗಳನ್ನೂ ಪ್ರದರ್ಶಿಸಲಾಯಿತು ರಷ್ಯನ್ನರು ಪೂರ್ವ ಜರ್ಮನಿಯನ್ನಾಕ್ರಮಿಸಿಕೊಂಡ ನಂತರ ಬರ್ಲಿನ್ ವಿಯೆನ್ನಾಗಳ ನಡುವೆ ಉಕ್ಕಿನ ತೆರೆಯನ್ನೆಬ್ಬಿಸಿ, ಈ ಮಾರ್ಗವನ್ನು ಮುಚ್ಚಿಬಿಟ್ಟರು

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್) ರೂ
ಕಲಂ ಸೆಂಟಿಮೀಟರಿಗೆ 1-00
ಅನಿಯಮಿತ (ಕಜುವಲ್)
ಕಲಂ ಸೆಂಟಿಮೀಟರಿಗೆ 1 50

ಚಂದಾ
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮಾ ಮಾಡುವ ಸೌಕರ್ಯವಿರುವುದು.

ವಿದ್ಯಾರ್ಥಿಗಳ 2 ಕೈಪಿಡಿಗಳು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್
(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ. ರೂ ಎರಡು. ಉತ್ತಮ ಪ್ರತಿ: ರೂ ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ 1-4-0 (1=25).

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ
0=25 NP ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು

ನವಭಾರತ ಪುಸ್ತಕ ಭಂಡಾರ, ಉಡುಪಿ

ಪ್ರತಿಗಳು— ಮಂಗಳೂರಲ್ಲಿ ಶ್ರೀನಿವಾಸ್ ಬ್ರದರ್ಸ್, ಸ್ಕೂಲ್ ಬುಕ್ ಕೊ. ಕೆನರಾ ಕೊಲೆಜ್ ಬುಕ್ ಕೊ. ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್ ಇವರಲ್ಲಿಯೂ, ಪುತ್ತೂರಲ್ಲಿ ಪೊಪ್ಯುಲರ್ ಸ್ಟೋರ್ ದೊರೆಯುತ್ತವೆ

ಹೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

ಜನಪ್ರಿಯವಾದ
ಗೀತೆಯ ಸಮೂಲ ಭಾಷಾಂತರ
ಇದೀಗ ಮಾರಾಟಕ್ಕೆ ಸಿದ್ಧವಾಗಿದೆ.
360 ಪುಟಗಳಿಗೂ ಮಿಕ್ಕಿದ
ಪಾಕೆಟ್ ಎಡಿಶನ್
ದಪ್ಪವಾದ ಬಿಳಿ ನುಣುಪು ಕಾಗದ!
ಬೆಲೆ. ಸಾದಾ ಪ್ರತಿ ರೂ. ೧-೮೦
ಉತ್ತಮ ಪ್ರತಿ ರೂ. ೧-೫೦
ಅಂಚೆ ವೆಚ್ಚ ರೂ. ೦-೫೦
ಹೆಚ್ಚಿನ ಪ್ರತಿಗಳ ದರಕ್ಕೆ ಬರೆಯಿರಿ:
ನವಯುಗ ಪ್ರೆಸ್ ಉಡುಪಿ, ದ. ಕ.

REGD. No. B. G. 176
LICENCE No. 31
Licensed to Post without Prepayment

ನಿಮಗೂ ಗೊತ್ತಿರಲಿ

ಭಾಕ್ರಾ ಅಣೆಕಟ್ಟು

ಪಂಜಾಬಿನ ಭಾಕ್ರಾನಂಗಾಲ್ ಯೋಜನೆಯಲ್ಲಿ ಮುಖ್ಯ ಭಾಗವೆನಿಸಿದ ೭೪೦ ಅಡಿಗಳ ಎತ್ತರದ ಭಾಕ್ರಾ ಅಣೆಕಟ್ಟು ಇಡೀ ಏಷ್ಯಾದಲ್ಲೇ ಅತ್ಯಂತ ಎತ್ತರವಾದುದಾಗಿದೆ. ಇದು ಕುತುಬ್ ಮಿನಾರಿನ ಮೂರರಷ್ಟಿರುವುದು.
ಗಾತ್ರದಲ್ಲಿ ಈ ಅಣೆಕಟ್ಟೆಯು, ಒಂದು ಲಕ್ಷ ಕೋಣೆಗಳುಳ್ಳ ೬೦ ಅಂತಸ್ತಿನ ಗಗನಚುಂಬಿ ಕಟ್ಟಡಕ್ಕೆ ಸಮವೆನಿಸುವುದು.

ಈ ಭಾಕ್ರಾನಂಗಾಲ್ ಯೋಜನೆಯು ೧೯೪೮ರಲ್ಲಿ ಆರಂಭವಾಯಿತು. ಇದರಲ್ಲಿ ೩,೦೦೦ ಮೈಲಿ ಉದ್ದದ ಕಾಲುವೆ ವ್ಯವಸ್ಥೆಯಿದ್ದು, ೩೬ ಲಕ್ಷ ಎಕರೆಗಳಷ್ಟು ಜಮೀನಿಗೆ ನೀರು ಒದಗಿಸುವುದು.

ಈ ಯೋಜನೆಯು ಅಂತಿಮವಾಗಿ ೮೦೦,೦೦೦ ಕಿ ವ್ಯಾ ಗಳಷ್ಟು ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವುದು.

ಅಣೆಕಟ್ಟಿನ ಹಿಂದಿರುವ ೫೨ ಮೈಲಿ ಉದ್ದದ ಸರೋವರದಲ್ಲಿ ೮೦,೦೦,೦೦೦ ಎಕರೆ ಅಡಿಗಳಷ್ಟು ನೀರಿರುವುದು; ಅದು ಒಂದು ವರ್ಷಕ್ಕೆ ಇಡೀ ದೇಶದ, ಒಳ ದೇಶದ ಬೇಡಿಕೆಯನ್ನು ಪೂರೈಸಬಲ್ಲುದು.

ಈ ಯೋಜನೆಯ ಕಾಮಗಾರಿಯಲ್ಲಿ, ತುಂಬಿ ಹರಿಯುವ ಏರಿ, ೭೪ ಲಕ್ಷ ಘನ ಗಜಗಳಷ್ಟು ಕಲ್ಲು ಮಣ್ಣುಗಳನ್ನು ಅಗೆಯುವುದು ಈ ಕೆಲಸಕ್ಕಾಗಿ ಏಷಿಯಾದಲ್ಲೇ ಅತ್ಯಂತ ಉದ್ದವಾದ 'ಬೆಲ್ಟ್ ಕನ್ವೇಯರ್' ವಿಧಾನವನ್ನು ಉಪಯೋಗಿಸಲಾಯಿತು. ವಿಶ್ವದಲ್ಲೇ ಅತ್ಯಾಧುನಿಕ ಕಾಂಕ್ರೀಟ್ ಉತ್ಪಾದನೆಯ ಕಂಪನಿಯೊಂದರ ನೆರವು ಪಡೆದುಕೊಳ್ಳಲಾಯಿತು.

ಈ ಯೋಜನೆಯಿಂದ ದೊರೆಯುವ ನೇರವಾದ ಪ್ರಯೋಜನವೆಂದರೆ: ನೀರಿನ ತೆರಿಗೆ, ಹೆಚ್ಚಿನ ಭೂಕಂದಾಯ, ಸುಧಾರಣಾ ತೆರಿಗೆ, ಮತ್ತು ವಿದ್ಯುಚ್ಛಕ್ತಿಯ ಮಾರಾಟದಿಂದ ಹಣ. ಅಪ್ರತ್ಯಕ್ಷವಾಗಿ ದೊರೆಯುವ ಪ್ರಯೋಜನಗಳಲ್ಲಿ ಜನತೆಯ ಶ್ರೇಯೋಭಿವೃದ್ಧಿ, ಕ್ಷಾಮಗಳಿಂದ ಮುಕ್ತಿ, ಆಹಾರ ಬೆಳೆ ಮತ್ತು ನಗದು ಹಣ ತರುವ ಬೆಳೆಗಳಲ್ಲಿ ಅಧಿಕ ಉತ್ಪಾದನೆ, ಕೈಗಾರಿಕಾಭಿವೃದ್ಧಿ, ಬಂಜರು ಭೂಮಿಗಳ ನಾಗುವಳಿ, ನಿರಾಶ್ರಿತರ ಪುನರ್ ವ್ಯವಸ್ಥೆ.

ಗೋಧಿ, ಅಮೆರಿಕನ್ ಜಾತಿಯ ಹತ್ತಿ ಕಬ್ಬು ಮುಂತಾದ ಬೆಲೆ ಬಾಳುವ ಬೆಳೆಯನ್ನು ಭಾಕ್ರಾ ಕ್ಷೇತ್ರದಲ್ಲಿ ಬೆಳೆಯಬಹುದು. ಈ ಕ್ಷೇತ್ರದಲ್ಲಿ ೧೧ ಲಕ್ಷ ಟನ್ನುಗಳಷ್ಟು ಆಹಾರ ಧಾನ್ಯಗಳೂ, ೮ ಲಕ್ಷ ಬೇಲುಗಳಷ್ಟು ಹತ್ತಿಯೂ, ೫ ಲಕ್ಷ ಟನ್ನುಗಳಷ್ಟು ಕಬ್ಬು ಬೆಳೆಯುವುದೆಂದು ಅಂದಾಜು ಮಾಡಲಾಗಿದೆ.

ಕಬ್ಬು, ಎಣ್ಣೆ ಬೀಜಗಳು ಮತ್ತು ಹತ್ತಿ ಮೊದಲಾದ ಕಚ್ಚಾ ವಸ್ತುಗಳು ವಿಪುಲವಾಗಿ ದೊರೆಯುವುದರಿಂದ ಹಾಗೂ ವಿದ್ಯುಚ್ಛಕ್ತಿ ಅಗ್ಗದ ದರದಲ್ಲಿ ದೊರೆಯುದರಿಂದ ಈ ಭಾಗದಲ್ಲಿ ಅನೇಕ ಕಾರ್ಖಾನೆಗಳು ಬೆಳೆಯುವುದು ಅನಿವಾರ್ಯ.

ಸುಮಾರು ೩೦೦೦ ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದರಿಂದ ಚಿಕ್ಕ ಪುಟ್ಟ ಗೃಹ ಕೈಗಾರಿಕೆಗಳು ಬೆಳೆಯುವುವು. ವಿದ್ಯುಚ್ಛಕ್ತಿ ಒದಗುವುದರಿಂದ ಸ್ತ್ರೀ ಪುರುಷರಿಗೆ ಅಧಿಕ ಪ್ರಮಾಣದ ಕೆಲಸದ ಹೊರೆಯು ತಪ್ಪಿ, ಅವರು ಕೊಂಚಮಟ್ಟಿನ ವಿರಾಮ ಪಡೆಯಬಹುದು.

ಈ ಅಭಿವೃದ್ಧಿ ಕಾರ್ಯಯೋಜನೆಯಲ್ಲಿ ಎಂಟು ವಿಭಾಗಗಳಿರುವುವು. ಭಾಕ್ರಾ ಅಣೆಕಟ್ಟು ಮತ್ತು ಭಾಕ್ರಾ ವಿದ್ಯುದುತ್ಪಾದನಾ ಕೇಂದ್ರ—ಬಲದಂಡೆಯಲ್ಲೊಂದು, ಎಡದಂಡೆಯಲ್ಲೊಂದು; ನಂಗಾಲ್ ಹೈಡಲ್ ಕಾಲುವೆ; ನಂಗಾಲ್ ಅಣೆಕಟ್ಟು; ಗಂಗೂವಾಲ್ ಮತ್ತು ಕೋಟ್ಲಾಗಳ ಬಳಿ ನಂಗಾಲ್ ಹೈಡಲ್ ಕಾಲುವೆಯ ಮೇಲೆ ಎರಡು ವಿದ್ಯುಚ್ಛಕ್ತಿ ಕೇಂದ್ರಗಳು; ರೂಪಾರ್ ಹೆಡ್‌ವರ್ಕ್ಸ್ ಮತ್ತು ಸಿರ್‌ಹಿಂದ್ ಕಾಲುವೆಗಳ ದುರಸ್ತು; ಭಾಕ್ರಾ ಕಾಲುವೆಗಳು; ಬಿಸ್ತ್ ದೋಬ್ ಕಾಲುವೆ ಮತ್ತು ಟ್ರಾನ್ಸ್ ಮಿಷನ್ ಲೈನುಗಳ ವ್ಯೂಹ.
ಈ ಯೋಜನೆಯ ಪ್ರಯೋಜನವು ೧೯೫೪ರಿಂದಲೇ ನಂಗಾಲ್ ಅಣೆಕಟ್ಟಿನ ಕೆಲಸ ಮುಕ್ತಾಯವಾದಾಗಿನಿಂದಲೇ ದೊರೆಯ ತೊಡಗಿದೆ ನಂಗಾಲ್ ಹೈಡಲ್ ಕಾಲುವೆ ವ್ಯವಸ್ಥೆಯನ್ನು ೧೯೫೪ ಜುಲೈ ತಿಂಗಳಲ್ಲಿ ಉದ್ಘಾಟಿಸಲಾಯಿತು. ಗಂಗೂವಾಲ್ ವಿದ್ಯುಚ್ಛಕ್ತಿ ಉತ್ಪಾದನಾ ಕೇಂದ್ರವು ೧೯೫೫ರಲ್ಲಿಯೂ, ಕೋಟ್ಲಾ ವಿದ್ಯುಚ್ಛಕ್ತಿ ಕೇಂದ್ರವು ೧೯೫೬ರಲ್ಲಿಯೂ ಕಾರ್ಯಾಚರಣೆಗೆ ತೊಡಗಿದವು. ರೂಪಾರ್ ಹೆಡ್‌ವರ್ಕ್ಸ್ ಮತ್ತು ಸಿರ್‌ಹಿಂದ್ ಕಾಲುವೆಯ ದುರಸ್ತು ಮತ್ತು ಬಿಸ್ತ್ ದೋಬ್ ಕಾಲುವೆಯ ನಿರ್ಮಾಣ ಕಾರ್ಯವೂ ಸಹ ಮುಕ್ತಾಯಗೊಂಡಿದೆ.

ಈ ಅಣೆಕಟ್ಟೆಯ ಕೊಂಚ ಭಾಗ ಮರಳುಗಲ್ಲಿನ ಮೇಲೂ, ಕೊಂಚ ಭಾಗ ಜೇಡಿಗಲ್ಲಿನ ಮೇಲೂ ನಿಂತಿರುವುದು. ಪ್ರತಿ ಭಾಗದಲ್ಲಿ ವಿಶೇಷ ನಿರ್ಮಾಣ ವಿಧಾನವನ್ನು ಅನುಸರಿಸಿ, ಅಣೆಕಟ್ಟೆ ಭದ್ರವಾಗಿರುವಂತೆ ಮಾಡಲಾಗಿದೆ.

ಎಡದಂಡೆಯಲ್ಲಿರುವ ಭಾಕ್ರಾ ಜಲಜನಿಕ ವಿದ್ಯುಚ್ಛಕ್ತಿ ಉತ್ಪಾದನಾ ಕೇಂದ್ರವು ನಮ್ಮ ದೇಶದಲ್ಲಿ ಈಗ ಕಾರ್ಯಾಚರಣೆಯಲ್ಲಿರುವ ವಿದ್ಯುಚ್ಛಕ್ತಿ ಉತ್ಪಾದನಾ ಕೇಂದ್ರಗಳಲ್ಲೆಲ್ಲಾ ಅತ್ಯಂತ ದೊಡ್ಡದು. ಅದರ ಸ್ಥಾಪಿತ ಸಾಮರ್ಥ್ಯ ೪೫೦,೦೦೦ ಕಿ. ವ್ಯಾ. ೯೦,೦೦೦ ಕಿ. ವ್ಯಾಟ್‌ಗಳ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ವಿಭಾಗಗಳು ಅಲ್ಲಿರುವುವು.

ಪ್ರೊ. ಕು. ಹರಿದಾಸ ಭಟ್ಟ, ಎಂ. ಎ.,

ಅವರ ನವೀನ ಪುಸ್ತಕಗಳು	ರೂ. ನ.
ನಡುಹಗಲಿನ ಕಗ್ಗತ್ತಲೆ	2=50
ಸ್ವಾತಂತ್ರ್ಯ ಮತ್ತು ಸಂಸ್ಕೃತಿ	2=00
ಘಂಟಮಾರಾ	2=00
ವಿಶ್ವದ ಸಂಪತ್ತು	2=00
ಅಮೆರಿಕದ ಆರು ಕತೆಗಳು	1=75
ವರ್ತಮಾನಕಾಲದ	
ನಾಲ್ವರು ಮಹಾನುಭಾವರು	0=31
ಯುಗವಾಣಿ	0=50
ಕಾಲವೇ ಬದಲಾಗಿದೆ	0=31
ಪುಸ್ತಕ ಪುರಾಣ	0=25
ಮನೆಯೊಳಗಿನ ಮಹಾಜೀವಿಗಳು	0=37

ಅಂಚೆವೆಚ್ಚ ಪ್ರತ್ಯೇಕ. ವಿವರವಾದ ಕೆಟಲಾಗಿಗೆ 10 ನ. ಪೈ. ಸ್ಟಾಂಪಿನೊಂದಿಗೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ

ಸಿಂಕಿಯಾಂಗಿಗಾಗಿ ಹೋರಾಟ

(೯ನೇ ಪುಟದಿಂದ)

ನಾ ಕೊಡಬೇಕಲ್ಲದೆ ತೇಕ್ ನದಿ ಬಳಿ ಇರುವ ಕಣಿವೆಯನ್ನೂ ಇಲಿಯ ದಕ್ಷಿಣ ಭಾಗವನ್ನೂ ರಷ್ಯಾಕ್ಕೆ ಬಿಟ್ಟುಕೊಡಬೇಕಾಗಿತ್ತು.

ಈ ಒಡಂಬಡಿಕೆಯಿಂದ ಚಿನ್ ದ ಬಾರಿಗೆ ಕೋಪ ಬಂತು. ದೇಶದ ಪ್ರದೇಶವನ್ನು ಇತರರಿಗೆ ಬಿಟ್ಟು ಕೊಡುವ ಹಕ್ಕು ಚುಂಗ್‌ನಿಗೆ ಇರುವದಿಲ್ಲವೆಂದವರು ವಾದಿಸಿದರು. ಅದು ಮಾನಾಪಮಾನದ ಪ್ರಶ್ನೆಯಾಗಿತ್ತು. ಚೈನಾದಲ್ಲಿದ್ದ ದೊಡ್ಡ ಜನರೆಲ್ಲರೂ ಸಮರ ಸಾರಲು ಸರಕಾರವನ್ನು ಕೇಳಿಕೊಂಡರು ಟಾನ್‌ಲಿನ್ ವಿಶ್ವವಿದ್ಯಾಲಯದಲ್ಲಿ ಶಿಕ್ಷಕನಾಗಿದ್ದ ಚಾಂಗ್-ಚಿ-ತುಂಗನು ಯುದ್ಧ ಉದ್ದೇಶದ ವಕ್ತಾರನಾಗಿದ್ದನು. ಅವನು ಸಿಂಹಾಸನಕ್ಕೆ ಕಳುಹಿಸಿದ್ದ ನಿವೇದನ ಪತ್ರದ ಒಂದು ಅಂಶ ಇಂದೂ ಓದಲೇಬೇಕಾಗಿರುವ ವಿಷಯವಿದೆ. ಅದರಲ್ಲಿ ಈ ರೀತಿ ಇದೆ:—

"ರಷ್ಯಾವನ್ನು ತಡೆಯುವ ಕಾರ್ಯ ಜಯಪ್ರದವಾಗಬೇಕು. ಒಂದು ವೇಳೆ ರಷ್ಯನರೇ ಜಯಶಾಲಿಗಳಾಗುತ್ತಾರೆನ್ನೋಣ, ಆಗ ಇಡೀ ರಾಷ್ಟ್ರದ ಶಾಂತತೆಯನ್ನು ಕದಡಿಸಲು ಅವರಿಗೆ ಸಾಧ್ಯ ಇರುವದಿಲ್ಲ. ಬಹಳ ಸಮಯ ಸಮರಾಂಗಣದಲ್ಲೇ ಇರಬೇಕಾಗಿರುವದರಿಂದ ಅವರಲ್ಲಿ ಆಹಾರ, ಸಂಪತ್ತಿನ ಕೊರತೆ ಕಂಡು ಬರುತ್ತದೆ. ಅವರ ಶಕ್ತಿ ಕುಂದುವುದೂ ಸ್ವಾಭಾವಿಕವಿದೆ ಹಾಗಿರುವಾಗ ನಾವ್ಯಾಕೆ ಅವರಿಗೆ ಹೆದರಿಕೊಂಡಿರಬೇಕು, ಇಂದು ನಾವು ಯುದ್ಧ ಮಾಡಿದಲ್ಲಿ ನಾಳೆ ದಿಸೆ ಬದಲಾಗಬಹುದು. ಆಗ ಚೈನಾ ಪ್ರಬಲ ಅಥವಾ ದುರ್ಬಲ ರಾಷ್ಟ್ರವಾಗಿರಬಹುದು......

ಈ ಸಮಯದಲ್ಲಿ ಚೈನೀಯರಿಗೆ ಬ್ರಿಟಿಷರು ಅಡ್ಡ ಬಂದರು. ಬ್ರಿಟಿಷರ ಪ್ರಭಾವ ಆ ಹೊತ್ತಿನಲ್ಲಿ ಚೈನೀಗಳ ಮೇಲೆ ಅಪರಿಮಿತವಾಗಿ ಚೆನ್ನಾಗಿ ಬಿದ್ದಿತ್ತು. ಹಾಗಾಗಿ ಚೈನಾ—ರಷ್ಯಾಗಳ ನಡುವೆ ಹೊಸ ಒಪ್ಪಂದ ನಡೆಯಿತು. ಅದರ ಪ್ರಕಾರ ಇನ್ನಷ್ಟು ಸಂಪತ್ತನ್ನು ಯಾಚಿಸಿ ಇಲಿಯನ್ನು ಬಿಟ್ಟುಕೊಡಲು ರಷ್ಯಾ ಒಪ್ಪಿತು.

—ಶ್ರೀ ಶಿವಶಂಕರ

5 ರೂ. ಮಾತ್ರ

- ನೀವಿನ್ನೂ ಸಿಂಡಿಕೇಟ್ ಬೇಂಕಿನಲ್ಲಿ ಒಂದು ಸೇವಿಂಗ್ಸ್ ಬೇಂಕ್ ಖಾತೆಯನ್ನು ತೆರೆದಿಲ್ಲವೆ?
- ಹಾಗಾದರೆ ಇನ್ನು ತಡಮಾಡಬೇಡಿರಿ.
- ಕೇವಲ ಐದು ರೂಪಾಯಿಗಳಿಂದ ನೀವು ಸೇವಿಂಗ್ಸ್ ಬೇಂಕ್ ಲೆಕ್ಕವನ್ನು ಪ್ರಾರಂಭಿಸಬಹುದು.
- ನಿಮಗೆ ಸಾಧ್ಯವಿದ್ದಷ್ಟನ್ನು 25 ನಯೆ ಪೈಸೆಯಷ್ಟನ್ನು ಸಹಾ ನೀವು ನಿಮ್ಮ ಲೆಕ್ಕಕ್ಕೆ ಕೂಡಿಸುತ್ತಾ ಹೋಗಬಹುದು.
- ಸಿಂಡಿಕೇಟ್ ಬೇಂಕಿನ ಚೆಕ್ ಮತ್ತು ಪಾಸ್ ಪುಸ್ತಕಗಳೆರಡು ನಿಮ್ಮ ಗೌರವ ಸೊತ್ತುಗಳಾಗುವುವು.
- ಮಾತ್ರವಲ್ಲ ನಿಮ್ಮ ಹಣಕ್ಕೆ ಯೋಗ್ಯ ಬಡ್ಡಿಯೂ ಸಿಗುವುದು.
- ಇಂದೇ ನಿಮಗೆ ಸಮೀಪವಿರುವ ನಮ್ಮ ಶಾಖೆಯೊಂದನ್ನು ದಯಮಾಡಿ ಸಂದರ್ಶಿಸಿರಿ.

ಆಗಾಗ ಉಳಿಸಲು
ಮಿತವಾಗಿ ವ್ಯಯಿಸಲು
ಬಡ್ಡಿಯನು ಗಳಿಸಲು

ಸೇವಿಂಗ್ಸ್ ಬೇಂಕ್

ಸಿಂಡಿಕೇಟ್ ಬೇಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಸ್ಥಾಪನೆ: 1925 ಶಾಖೆಗಳು: 189

READ & ADVERTISE IN NAVAYUGA WEEKLY

Edited, Printed & Published by K. H.Shetty. at the Navayuga Press, Udipi, S. India.

ಅಖಿಲ ಕರ್ನಾಟಕದ
ಪ್ರಸಿದ್ಧ ಕತೆಗಾರರ
ಮಧುವನ
ಕಥಾ ಸಂಕಲನ
'ಶಿರಿಯರ ಪ್ರಪಂಚ'ದ
ಅಪೂರ್ವ ಪ್ರಕಟಣೆ
ಬೆಲೆ: ರೂ. ಮೂರು
ನವಭಾರತ ಪುಸ್ತಕ ಭಂಡಾರ
ಉಡುಪಿ

ನವಯುಗ

Estd. 1921 ಸ್ಥಾಪನೆ
Regd. No. B.G. 176
Vol. 43 No. 13

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
NAVAYUGA— NATIONAL WEEKLY
ಉಡುಪಿ, 28—11—1963 ಗುರುವಾರ

13 ನ. ಪೈಸೆ
ವಾ. ಚಂದಾ ರೂ. 7.75
ಸಂಪುಟ ೪೩ ಸಂಚಿಕೆ ೧೩

ಯಾವತ್ತೂ
ಪ್ರಿಂಟಿಂಗ್ ಕೆಲಸಗಳನ್ನು
ಮಾಡಿಕೊಡಲಾಗುವುದು
ಕ್ಲಪ್ತ ಸಮಯದಲ್ಲಿ
ಮಿತ ದರದಲ್ಲಿ ಉತ್ತಮ
ಮುದ್ರಣ
ಕೆಲಸಗಳಾಗಬೇಕೆ?
ಸಂದರ್ಶಿಸಿರಿ ಯಾ ವಿಚಾರಿಸಿರಿ
ನವಯುಗ ಪ್ರೆಸ್,
ಬಾಲುಕೋಟೆ, ಉಡುಪಿ

ಗತ ವಿಭೂತಿ

ಶಾಂತಿಯ ಪ್ರತೀಕ, ಮಾನವತೆಯ ಸೇವಕ

ಜಾನ್-ಎಫ್-ಕೆನ್ನೆಡಿಯವರ ಅನಿರೀಕ್ಷಿತ ಕೊಲೆಯಿಂದಾಗಿ ಅವರು ಅಧ್ಯಕ್ಷರಾಗಿದ್ದ ಅಮೆರಿಕೆಯ ನಾಗರಿಕರು ಮಾತ್ರವಲ್ಲ, ಇಡೀ ಜಗತ್ತಿನ ಮಹಾ ಜನರೆಲ್ಲರೂ ಶೋಕಗ್ರಸ್ತರಾಗಿದ್ದಾರೆ. ಅಮೆರಿಕೆಯು ತನ್ನೊಬ್ಬ ಧೈರ್ಯಶಾಲಿ ಕರ್ತೃತ್ವಶಾಲಿ ಅಧ್ಯಕ್ಷನನ್ನು ಕಳೆದುಕೊಂಡಿತು; ಭಾರತವು ತನ್ನೊಬ್ಬ ಹಿತಚಿಂತಕನಿಂದ ವಂಚಿತವಾಯಿತು; ಜಗತ್ತು ಶಾಂತಿಯ ಪುರಸ್ಕರ್ತನೊಬ್ಬನನ್ನು ಕಳೆದುಕೊಂಡು ಅನಾಥವಾಯಿತು. ಪೂರ್ವ ಮತ್ತು ಪಶ್ಚಿಮವೆಂದು ಸಿಡಿದಿದ್ದ ಪ್ರಪಂಚವನ್ನು ಸಮೀಪಕ್ಕೆ ತರಲು ನಿರಂತರವಾಗಿ ಶ್ರಮಿಸಿದ ಅಧ್ಯಕ್ಷ ಕೆನ್ನೆಡಿಯವರನ್ನು ಯಾರು ತಾನೇ ಮರೆಯಲು ಸಾಧ್ಯ? ಮಾನವರಲ್ಲಿ ಸಮಾನತೆಯ ತತ್ವವನ್ನು ಪ್ರತಿಷ್ಠಾಪಿಸಿದ ಕಾರಣದಿಂದಲೇ ವಧಕನೊಬ್ಬನ ಗುಂಡಿಗಾಹುತಿಯಾದ ಕೆನ್ನೆಡಿ ಅದೇ ಆದರ್ಶದ ಆದ್ಯ ಪ್ರವರ್ತಕ ಅಬ್ರಹಾಂ ಲಿಂಕನ್ನರಂತೆ ಅಮರರಾದರು.

ಆದರ್ಶದ ಕುದುರೆ

ಸಂಯುಕ್ತ ಸಂಸ್ಥಾನಗಳಲ್ಲಿ ಗುಲಾಮಗಿರಿಯನ್ನು ನಿರ್ನಾಮ ಮಾಡುವ ಸದುದ್ದೇಶದಿಂದ ಹೊರಡಿಸಿದ ಘೋಷಣೆಯಿಂದ ಲಿಂಕನ್ ಗುಲಾಮರೇ ಹೆಚ್ಚಾಗಿದ್ದ ರಾಷ್ಟ್ರದ ದಕ್ಷಿಣ ಭಾಗದ ಜನತೆಯ ಅಪ್ರಿಯತೆಗೊಳಗಾದರು; ನಾಗರಿಕಾಧಿಕಾರದಲ್ಲಿ ಸಮಾನತೆಯನ್ನು ತರುವ ಶಾಸನವೊಂದನ್ನು ತಂದು ಅಧ್ಯಕ್ಷ ಕೆನ್ನೆಡಿಯವರು ನೀಗ್ರೋಗಳಿಗೆ ಒದಗಿಸಿದ ನ್ಯಾಯವು ಕೆಲವು ಬಿಳಿಯರಿಗೆ ಅನ್ಯಾಯವಾಗಿ ಕಂಡಿತು; ಇರ್ವರು ಅಧ್ಯಕ್ಷರೂ ತಮ್ಮ ನೀತಿಯು ನೈತಿಕವೆಂದೂ ಅತ್ಯಂತ ಅಮೂಲ್ಯವೆಂದೂ ತಿಳಿದಿದ್ದರು; ಮತ್ತು ತಮ್ಮ ಈ ಉನ್ನತಾದರ್ಶಗಳಿಗಾಗಿಯೇ ಗುಂಡಿಗಾಹುತಿಯಾದರು. ಈ ಅಧ್ಯಕ್ಷದ್ವಯರೂ ತಮ್ಮ ಆದರ್ಶಗಳ ಬೆನ್ನ ಮೇಲೆ ಏರಿ ಹೋಗಿ ತಮ್ಮ ಪಾರ್ಥಿವ ಶರೀರದಿಂದ ವಂಚಿತರಾದರೂ ಅವರ ನಾಮ-ಕೃತಿಗಳು ಜಾಗತಿಕೇತಿಹಾಸದಲ್ಲಿ ಅಜರಾಮರವಾಗಿರುವುವು.

ರುದ್ರ ಶುಕ್ರವಾರ

ಲಿಂಕನ್ ಮತ್ತು ಕೆನ್ನಡಿಯವರಲ್ಲಿ ಆದರ್ಶದ ಸಮಾನತೆ ಮಾತ್ರವಿರುವುದಿಲ್ಲ. ಇಬ್ಬರೂ ತಲೆಗೆ ಗುಂಡು ಏಸೆಯಲ್ಪಟ್ಟು ಶುಕ್ರವಾರ ದಿನವೇ ಮೃತ್ಯುಮುಖರಾದರು. 'ಶುಕ್ರವಾರ' ವೆನ್ನುವದು ಲೋಕದ ಹಲವಾರು ಮಹಾಪುರುಷರು ದುರ್ಮರಣಗೊಂಡದಿನ. ತತ್ವಜ್ಞಾನಿಯಾದ ಸಾಕ್ರೆಟೀಸನು ವಿಷಪಾನ ಮಾಡಿ ಪರಂಧಾಮವನ್ನೈದಿದ್ದು ಶುಕ್ರವಾರ. ಕ್ರೈಸ್ತ ಮತ ಪ್ರವರ್ತನಾಚಾರ್ಯ ಯೇಸುಕ್ರಿಸ್ತನು ಹೆರೋದನ ಪಾಶಕ್ಕೆ ಗುರಿಯಾದುದು ಶುಕ್ರವಾರ. ಭಾರತದ ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರು ಗೋಡ್ಸೆಯ ಗುಂಡಿಗೆಡೆಕೊಟ್ಟು ಭೌತಿಕ ಶರೀರವನ್ನು ಕಳೆದುಕೊಂಡದ್ದೂ ಶುಕ್ರವಾರ.— ಹೀಗೆಯೇ ಹಲವಾರು ರುದ್ರ ಶುಕ್ರವಾರದ ಮಹಾತ್ಮರ ಸಾಲಿನಲ್ಲಿ ಅಧ್ಯಕ್ಷ ಕೆನ್ನೆಡಿಯವರೂ ಸೇರಿದರು.

ದಿಟ್ಟ ಹೆಜ್ಜೆಯ ಯೋಧ

ಅನಭಿವೃದ್ಧ ದೇಶಗಳಿಗೆ ಕೆನ್ನೆಡಿಯವರು ಹಲವಾರು ರೀತಿಯ ಸಹಕಾರವನ್ನು ನೀಡುವುದನ್ನು ತಮ್ಮ ನೀತಿಯನ್ನಾಗಿ ರೂಪಿಸಿಕೊಂಡಿದ್ದಾರೆ. ಆದುದರಿಂದಲೇ ಇದನ್ನು ಪರಮ ತತ್ವವೆಂದು ತಿಳಿದಿದ್ದಾರೆ. ಈ ವರ್ಷದ ಪ್ರಾರಂಭದಲ್ಲಿ ಶ್ರೀಮಂತ ಮತ್ತು ಕಂಗಾಲು ರಾಷ್ಟ್ರಗಳ ನಡುವಣ ಅಂತರವನ್ನು ಕಡಿಮೆ ಮಾಡುವ ಹೊಸ ಪ್ರಯೋಗಕ್ಕೆ ಅಗ್ರ ಪ್ರಾಶಸ್ತ್ಯವಿತ್ತಿದ್ದಾರೆ. ಸಂಪನ್ನ ದೇಶಗಳಲ್ಲಿ ನೇ. ೯೦ರಷ್ಟು ಸಾಕ್ಷರತೆ, ೬೭ ವರ್ಷಗಳ ಸರಾಸರಿ ಆಯುಷ್ಯ, ಸರಾಸರಿ ೯೦೫,೦೦೦ ಡಾಲರ್‌ಗಳ ಆದಾಯಗಳಿದ್ದರೆ, ದರಿದ್ರ ದೇಶಗಳ ಕತೆ ಅದ್ಭುತ. ಅಲ್ಲಿ ಜನಸಂಖ್ಯೆಯು ಸಂಪನ್ನರ ಜನಸಂಖ್ಯೆಗಿಂತ ಇಮ್ಮಡಿಯಿದೆ; ಇದರಿಂದಲೇ ಇವರಲ್ಲಿ ಮೂವರಿಗೊಬ್ಬನು ಸಾಕ್ಷರನು. ಇವರ ಸರಾಸರಿ ಆಯುಷ್ಯ ಕೇವಲ ೩೮ ವರ್ಷ, ಶ್ರೀಮಂತ ರಾಷ್ಟ್ರಗಳು ಐದು ಗಳಿಸಿದರೆ, ಈ ದೇಶಗಳು ಗಳಿಸುವುದು ಒಂದನ್ನು ಮಾತ್ರ. ಇಂತಹ ಸಂಪನ್ನತೆಯ ಅಜಗಜಾಂತರವನ್ನು ದೂರ ಮಾಡುವಲ್ಲಿ ಕೆನ್ನೆಡಿಯವರು ದಿಟ್ಟ ಹೆಜ್ಜೆಯಿಟ್ಟಿದ್ದಾರೆ; ಯಶಸ್ವಿತೆಯ ಹಾದಿ ಮೆಟ್ಟಿದ್ದಾರೆ.

ದೈವೀಕಾರ್ಯಾಸಕ್ತ

ತನ್ನ ರಾಷ್ಟ್ರವನ್ನು ಬಲಿಷ್ಠಗೊಳಿಸಬೇಕು ಎಂಬ ವಿಚಾರಕ್ಕೆ ಕೆನ್ನೆಡಿಯವರದು ದ್ವಿತೀಯ ಸ್ಥಾನವಿತ್ತೆಂಬುದನ್ನು ಮರೆಯಬಾರದು. ವಿಶ್ವದಲ್ಲಿ ಇನ್ನೂ ಹಲವಾರು ಸಮಸ್ಯೆಗಳಿದ್ದುವು; ಇಂದಿಗೂ ಇವೆ. ಬರ್ಲಿನ್, ಲಾವೋಸ್, ಕಾಂಗೊ, ಕ್ಯೂಬಾ, ಪಶ್ಚಿಮ ಏಶ್ಯ—ಎಲ್ಲವೂ ಒಂದೊಂದು ಮಹಾ ಪ್ರಶ್ನೆಗಳೇ. ಆದರೆ, ಅಧ್ಯಕ್ಷ ಕೆನ್ನೆಡಿಯವರು ರಾಜಕಾರಣಕ್ಕಿಂತ ಮಾನವತೆಗೆ ಆಧಾರ ಕೊಡುತ್ತಿದ್ದರೆಂದು ತಿಳಿಯುವುದು. ಆಡಳಿತೆಯ ಹೆಸರಿನಲ್ಲಿ ವಿಶ್ವದಲ್ಲಿ ದಾನವತೆಯನ್ನು ಹರಡಿಸಲು ಅವರು ಹೊರಡಲಿಲ್ಲ; ಹರಡಿರುವ ರಾಕ್ಷಸೀ ಪ್ರವೃತ್ತಿಗಳನ್ನು ದೈವೀಕರಿಸುವುದೇ ಅವರ ಪವಿತ್ರ ಪ್ರಯತ್ನದ ಉದ್ದೇಶವಿತ್ತು. ಹಸಿದ ಹೊಟ್ಟೆಯ ಬತ್ತಲೆ ದೇಹದ ದಟ್ಟ ದರಿದ್ರರ ಉದ್ಧಾರದ ದೈವೀಕಾರ್ಯಾಸಕ್ತರಾದ ಕೆನ್ನೆಡಿ ಹಸಿವಿನ ವಿರುದ್ಧ ಜಾಗತಿಕ ಸಮರವನ್ನೇ ಹೂಡಿದ ಎಂಟೆದೆಯ ಬಂಟರು; ಕೆಚ್ಚೆದೆಯ ವೀರರು. ಬಡತನಕ್ಕೆ ತಾನು ನೀಡಿದ ಆಹ್ವಾನವನ್ನು ಯಶಸ್ವಿಯಾಗಿ ಅನುಷ್ಠಾನಕ್ಕೆ ತರಬೇಕಾದರೆ, ಒಂದು ದಶಕವಾದರೂ ಬೇಕಾದೀತು ಎಂದು ನಂಬಿದ್ದರು ಅವರು.

ಭಾರತದ ಪರಮ ಮಿತ್ರ

ಕೆನ್ನೆಡಿಯವರು ಭಾರತದ ಪರಮ ಮಿತ್ರ. ಅಮೇರಿಕೆಯು ನಮಗಿಂದು ಹಲವಾರು ವಿಧಗಳಿಂದ ನೆರವು ನೀಡುತ್ತಿದೆ. ಅನಭಿವೃದ್ಧ ದೇಶಗಳ ಸಾಲಿನಲ್ಲಿ ಭಾರತದ ಸ್ಥಾನವೂ ದೊಡ್ಡದು; ಅದರ ಸಾಧನೆಯೂ ದೊಡ್ಡದು. ಇದರಿಂದಲೇ ಪ್ರಸನ್ನರಾದ ಅಧ್ಯಕ್ಷ ಕೆನ್ನೆಡಿ ಭಾರತದ ಆರ್ಥಿಕ ಪುನಾರಚನೆಯಲ್ಲಿ ಸಹಾಯಹಸ್ತ ಮುಂದೆ ಮಾಡಿದ್ದಾರೆ. ಚೀನಿಯರು ನಮ್ಮ ಉತ್ತುಂಗ ಧವಲಗಿರಿಯ ಸೋಪಾನದಲ್ಲಿ ರಕ್ತಕಾಲುವೆ ಹರಿಸತೊಡಗಿದಾಗ, ಸುಧಾರಿಸಿಕೊಳ್ಳಲು ನಮಗೆ ಅವರು ನೀಡಿದ ಸಹಾಯವನ್ನು ಯಾವ ಭಾರತೀಯನೂ ಮರೆಯಲಾರನು. ಆರ್ಥಿಕವಾಗಿ, ತಾಂತ್ರಿಕವಾಗಿ, ಸೈನಿಕ ಶಸ್ತ್ರಾಸ್ತ್ರ ರೂಪವಾಗಿ ಅಮೆರಿಕೆಯಿಂದ ನಾವು ನೆರವನ್ನು ಪಡೆಯುತ್ತಿದ್ದೇವೆಂಬುದನ್ನು ಮರೆಯಬಾರದು.

ಬಿತ್ತಿದ ಬೀಜ

ಅಧ್ಯಕ್ಷ ಕೆನ್ನೆಡಿಯವರು ರಾಜಕಾರಣದಲ್ಲಿ ಬಹುವರ್ಷ ಸಿಲುಕಿಕೊಂಡಿರಲಿಲ್ಲ; ಆದರೆ ಅಲ್ಪಾವಧಿಯಲ್ಲಿಯೇ ತನ್ನ ಸ್ಥಾನವನ್ನವರು ಭದ್ರಪಡಿಸಿಕೊಂಡಿದ್ದಾರೆ. ಇತಿಹಾಸಾಕಾಶದಲ್ಲಿ ಮಿಂಚಿದ ಮಿಂಚಲ್ಲ, ಅವರು ತೇಜಸ್ವಿಯಾಗಿ ಬೆಳಗುತ್ತಿರುವ ಧ್ರುವತಾರೆ. ಪೂರ್ವ-ಪಶ್ಚಿಮಗಳನ್ನು ಒಂದುಗೂಡಿಸುವ ಪ್ರಯತ್ನವನ್ನು ಯುದ್ಧಾನಂತರ ಯಾರೂ ಮಾಡಿರಲಿಲ್ಲ. ನಿಶ್ಶಸ್ತ್ರೀಕರಣ ಸಾಧನೆಯಲ್ಲಿ ಆಂಶಿಕ ಒಡಂಬಡಿಕೆಯನ್ನು ಮಾಡಿಕೊಂಡು ಎರಡು ಶಕ್ತಿಕೂಟಗಳನ್ನು ಒತ್ತಟ್ಟಿಗೆ ಸೇರಿಸುವ ಸಾಹಸವನ್ನವರು ತೋರಿಸಿದರು. ಪರಸ್ಪರ ತಿರಸ್ಕಾರ ಪ್ರವೃತ್ತಿಯಿಂದಲೇ ನೋಡುತ್ತಿದ್ದ ಅಮೇರಿಕ—ರಷ್ಯಗಳ ನಾಯಕರು ಒಂದೇ ಘಾಟಿಯಲ್ಲಿ ಮಾತಾಡುವಂತಹ ವಾತಾವರಣವನ್ನು ನಿರ್ಮಿಸಿದರು. ಜಾಗತಿಕ ಶಾಂತಿ ಮತ್ತು ಅಂತಾರಾಷ್ಟ್ರೀಯ ಒಕ್ಕಟ್ಟಿನ ಸಾಧನೆಯಲ್ಲಿ ಅವರು ಬಿತ್ತಿದ ಬೀಜ ಮೊಳಕೆ ಬರತೊಡಗಿದೆಯೆಂದರೆ, ಅಚ್ಚರಿಯೇನು?

ಉಪಸಂಹಾರ

ಅಧ್ಯಕ್ಷ ಕೆನ್ನೆಡಿಯವರು ಧೀರ ವ್ಯಕ್ತಿ. ಅವರೇ ತಮ್ಮ ಪುಸ್ತಕವೊಂದರಲ್ಲಿ ಹೇಳು

(೧೦ನೇ ಪುಟ ನೋಡಿರಿ)

ಐತಿಹಾಸಿಕ ನಾಟಕ

ಗಜಪತಿ ನಂದಿನಿ

ಬರೆದವರು: "ನವಗಿರಿನಂದ"

(ಕಳೆದ ಸಂಚಿಕೆಯಿಂದ ಮುಂದುವರಿದುದು)

ದೃಶ್ಯ ೨೨

ಗಜಪತಿಯ ವಿವಾಹ ರಂಗ

(ನಡುರಾತ್ರಿ. ಪ್ರತಾಪರುದ್ರನು ಸಪರಿವಾರನಾಗಿರುವನು. ತಿಮ್ಮಣ್ಣ ಯೋಗಿ ರಾಮಕೃಷ್ಣರೂ ಇರುವರು.)

ಪ್ರತಾಪ— ಯೋಗಿವರ್ಯರೆ, ನನ್ನ ಕುಮಾರಿ ಜಗನ್ಮೋಹಿನಿ ಸುರಕ್ಷಿತಳಾಗಿ ರಾಜವರ್ಮನ ಕೈಗೆ ಸೇರಿದ್ದರಿಂದ ದೊಡ್ಡ ಭಾರವೇ ಇಳಿದಂತಾಯಿತು.

ತಿಮ್ಮ— ಶಿವಶಿವಾ! ಎಲ್ಲಾ ಶಿವ ಶಂಕರನ ಆಟ.

ರಾಮಕೃಷ್ಣ— ಅಗೋ! ಕೃಷ್ಣದೇವನು ಬರುತಿದ್ದಾನೆ. ಜಯಧ್ವನಿ!

(ತೆರೆಯಲ್ಲಿ— "ಜೈ ಕರ್ಣಾಟಕ ಸಾಮ್ರಾಟ"!)

ತಿಮ್ಮಯೋಗಿ— ಹಾ! ಇನ್ನೇನೂ ತಡವಿಲ್ಲ, ಗಜಪತಿ ಸಾರ್ವಭೌಮಾ! ಕಾರ್ಯಗಳು ತ್ವರೆಯಿಂದ ಮುಗಿಯಲಿ. ಸಂಕೇತ ಸಮಯಕ್ಕೆ ಸರಿಯಾಗಿ ರಾಜವರ್ಮನ ಕಾಳಸರ್ಪ ಚಿಹ್ನಾಂಕಿತ ಸೈನ್ಯವು ಬರುತ್ತೆ.

(ವೈತಾಳಿಕರು ಬಿರುದಾವಳಿಯನ್ನು ಸಾರುತ್ತಿರಲು ರಾಯನು, ತಿಮ್ಮರಸು, ಜಯರಾಂ, ರಾಮಲಿಂಗಾದಿ ಸಮಸ್ತ ಪರಿವಾರಗಳೊಡನೆ ಪ್ರವೇಶಿಸುತ್ತಿರಲು ಗಜಪತಿರಾಜನೂ ಸಪರಿವಾರನಾಗಿ ಎದ್ದು ಮುಂದೆಬರುವನು. ಯೋಗಿಮಾತ್ರ ಇದ್ದಲ್ಲೆ ಇದ್ದು ಶಿವಧ್ಯಾನ ಮಾಡುತ್ತಿರುವನು.)

ಮೊದಲನೇವೈತಾಳಿಕರು— ಶ್ರೀ ಮತ್ಸಮಸ್ತಭುವನಾಶ್ರಯ ದಕ್ಷಿಣ ಭಾರತ ಪ್ರಥ್ವಿವಲ್ಲಭೋ ಪರಾಕ್!

ಎರಡನೇ— ರಾಜಾಧಿರಾಜ ರಾಜಪರಮೇಶ್ವರೋ ಪರಾಕ್!

ಮೊದಲನೇ— ಶ್ರೀ ಮದ್ಭಕ, ಪರಮ ಭಟ್ಟಾರಕ, ಸತ್ಯಾಶ್ರಯ ಪದವಾಕ್ಯ ಪ್ರಮಾಣ ಪಾರಾವಾರ ಪಾರೀಣ-ಶ್ರಿ ಮನ್ಮಹಾಮಂಡಲೇಶ್ವರೋ ಪರಾಕ್!

ಎರಡನೇ— ಪ್ರತ್ಯರ್ಥಿರಾಜ ವಿಭಾಡ— ಶ್ರೀ ಸಂಪಾ ವಿರೂಪಾಕ್ಷ ಪಾದ ಪದ್ಮಾರಾಧಕೋ ಪರಾಕ್!

ಮೊದಲನೇ— ಮಹಾವೀರ ಪ್ರತಾಪ ಉತ್ಕಲಾಂತರ್ಗತ ಅಸೇತು ವಿಂಧ್ಯಾದಿ ಭೂಮಂಡಲೈಕ ಛತ್ರಾಧಿಪೋ ಪರಾಕ್!

ಎರಡನೇ— ಸಕಲ ವರ್ಣಾಶ್ರಮಾಚಾರ— ಸನಾತನ ಧರ್ಮ ಪ್ರತೀಪಾಲಕ

ಮೊದಲನೇ— ಸಕಲ ಕಲಾನಿಪುಣ— ಆಂಧ್ರಭೋಜ

ಎರಡನೇ — ಶ್ರೀ ಮದ್ವಿದ್ಯಾನಗರ ರಾಜಧಾನೀ ರತ್ನ ಸಿಂಹಾಸನಾಧೀಶ್ವರ

ಮೊದಲು— ಕರ್ಣಾಟಕ ರಾಜ್ಯ ರಮಾರಮಣ (ಒಟ್ಟಿಗೆ) ಶ್ರಿಮನ್ನನ್ನರಸ ರಾಜೇಂದ್ರ ಕುಮಾರ— ತುಳುವಂಶಾಬ್ಧಿ ಚಂದ್ರ— ಚಂದಕುಲ ಲಲಾಮ ಶ್ರೀ ಕೃಷ್ಣದೇವರಾಯ ಭೂಪಾಲಕೋ ಪರಾಕ್! ಪರಾಕ್!

ರಾಯ— ಗಜಪತಿ ಸಾರ್ವಭೌಮ, ಶ್ರೀ ಕೃಷ್ಣದೇವರಾಯನು ವಂದಿಸುವನು.

ಪ್ರತಾಪ— ನನ್ನ ವಂದನೆಯನ್ನೂ ಸ್ವೀಕರಿಸಿರಿ. ನನ್ನ ಸಂಧಿಪತ್ರವನ್ನು ಮಾನ್ಯಮಾಡಿ ದಯಮಾಡಿಸಿದ್ದಕ್ಕೆ ಧನ್ಯನಾದೆ. ಸುಮುಹೂರ್ತವು ಸನ್ನಿಹಿತವಾಗುತ್ತಿದೆ ಹೀಗೆ ಬರಬೇಕು. (ರಾಯನನ್ನು ಕೈಹಿಡಿದೊಯ್ದು ವಿವಾಹ ವೇದಿಕೆಯಲ್ಲಿ ಕೂಡಿಸುವನು "ಜೈ—ಗಜಪತಿ ಸಾರ್ವಭೌಮ" "ಜೈ ಕರ್ಣಾಟಕ ಸಾಮ್ರಾಟ್" ಎಂಬ ಘೋಷಣ.)

ಪುರೋಹಿತ— ಹಾ! ಸುಮುಹೂರ್ತಂ! ಸನ್ನಿಧಾನಂ! ಸಾವಧಾನಂ! ಹಾ! ಕನ್ಯಾ ಸುಗುಣ ಸಂಪನ್ನಾಂ! ಬರಲೀ— ಕನ್ಯಾ ಗಮನಂ! ಶುಭಾ ಗಮನಂ! ದಿವ್ಯಾ ಗಮನಂ. (ರಾಯನು ತಿಮ್ಮರಸನ ಮುಖವನ್ನು ನೋಡಿ ಭಾವ ಸೂಚಕವಾಗಿ ತಲೆಯಾಡಿಸುವನು. ಗಜಪತಿ ಏನೋ ಹುಡುಕುವವನಂತೆ ಅತ್ತಿತ್ತ ನೋಡುವನು. ಘೋಷಾ ಧಾರಿಣಿಯಾದ ಚಿನ್ನಾದೇವಿ ವರಮಾಲೆಯನ್ನು ಹಿಡಿದುಕೊಂಡು ಸಖಿಯರೊಂದಿಗೆ ಪ್ರವೇಶಿಸುವಳು. ಪುರೋಹಿತನು ಅವಳನ್ನು ರಾಯನ ಬಳಿಯಲ್ಲಿ ನಿಲ್ಲಿಸುವನು)

ಗಜಪತಿ— (ನಡುಗುವ ಕಂಠದಿಂದ) ಮಾಲೆ ಹಾಕು ಮಗಳೇ.

ರಾಯನು ಕೋಪದಿಂದೆದ್ದು ಚಿನ್ನಾದೇವಿಯ ಕೈಯನ್ನು ಬಲವಾಗಿ ತಡೆ ಹಿಡಿದು) ಯಾರು ನೀನು? (ಚಿನ್ನಾದೇವಿಯ ಮುಸುಕನ್ನು ಕಿತ್ತು ಹಾಕಿ) ಹಾ! ಚಿನ್ನಾದೇವೀ!

ಚಿನ್ನಾ— ಹೌದು. ನಾನು ಚಿನ್ನಾದೇವಿ ನಿಮ್ಮ ಕ್ರೋಧ ಪ್ರತಿಜ್ಞೆಯನ್ನು ತೊಲಗಿಸಲಿಕ್ಕಾಗಿ ಹೀಗೆ ನಿಂತಿದ್ದೇನೆ. ನಾನೀಗ ನಿಷ್ಕಳಂಕ ವಂಶೀಯಳು. ಇನ್ನು ನೀವು ನಿಮ್ಮ ನೇಮ ಪ್ರತಿಜ್ಞೆಯಂತೆ ಜಗನ್ಮೋಹಿನಿಯನ್ನು ವರಿಸಲು ಅಭ್ಯಂತರವಿಲ್ಲ.

ರಾಯ— ನೀನು ಹೇಗೆ ಸದ್ವಂಶೀಯಳಾದಿ ಚಿನ್ನಾ?

ಚಿನ್ನಾ— ಆ ಕ್ರೋಧ ಪ್ರತಿಜ್ಞೆಯನ್ನು ಬಿಟ್ಟೆನೆಂದು ಮಾತು ಕೊಡಿ. ಹೇಳುವೆನು.

ರಾಯ— ಆ ಎರಡನೇ ಪ್ರತಿಜ್ಞೆ ಬಿಡಲು ಸಾಧ್ಯವಿಲ್ಲ. ಕ್ಷತ್ರಿಯನಿಗೆ ಕ್ರೋಧ ಪ್ರತಿಜ್ಞೆಯೇ ಮುಖ್ಯವಾದುದು. ನನ್ನ ಸೆರೆಗೆ ಸಿಕ್ಕಿರುವ ಆ ಜಗನ್ಮೋಹಿನಿಯನ್ನು ರೂಪಸಿಂಗನೆಂಬ ತಬ್ಬಲಿಗೆ ವಿವಾಹಮಾಡಿಸಿ ಪ್ರತಿಜ್ಞಾಪೂರಣ ಮಾಡಿಯೇ ತೀರುವೆನು.

ಪ್ರತಾಪ— ಹಾ! ನನ್ನ ಮಗಳು ಈತನ ಸೆರೆಯಲ್ಲಿರುವಳೆ? (ಬೀಳ ಹೋಗಲು ತಿಮ್ಮರಸು ಜಯಸಿಂಹರು ಅವನನ್ನು ಹಿಡಿದುಕೊಳ್ಳುವರು ಚಿನ್ನಾದೇವಿ ಮಾಲಿಕೆಯನ್ನು ರಾಯನ ಪಾದಮೂಲದಲ್ಲಿ ಹಾಕಿ ಸರಸರನೆ ಹೊರಟು ಹೋಗುವಳು.)

ರಾಯ— ಗಜಪತಿ ಸಾರ್ವ ಭೌಮ, ನಾನೇ ಆ ರಾಜವರ್ಮ. ನಿಮ್ಮ ಕುಮಾರಿಯ ಗರ್ವೋನ್ಮತ್ತ ಪತ್ರದಿಂದಾಗಿ ನಿಮಗೀಗತಿ ಬಂತು. ಉಪಾಯವಿಲ್ಲ.

ಪ್ರತಾಪ— ಹಾ! ಮೋಸ! ಆ ಯೋಗೀಂದ್ರನ ಮಾತು ಕೇಳಿ—

ತಿಮ್ಮ— ಅಯ್ಯೋ! ಶಿವ ಶಿವಾ! ನಾನು ಘಟಕ ಸನ್ಯಾಸಿ—ಗಜಪತೀ!

ರಾಮಕೃಷ್ಣ— ಮಹಾ ಘಟಕ ಸನ್ಯಾಸಿ ಮಹಾ ಗಜಪತಿ!

ಪ್ರತಾಪ— ಹಾ! ನಮ್ಮ ಸೇನಾಧಿಪತಿಗಳೇನಾದರು? ಕೈಗೆ ಬಳೆ ಹಾಕಿಕೊಂಡರೆ?

ತಿಮ್ಮಯೋಗಿ— ಹಾ! ಕಬ್ಬಿಣದ ಬಳೇ.

ತಿಮ್ಮರಸು— (ಗಂಭೀರದಿಂದ) ವ್ಯಥಾ ರಕ್ತಪಾತ ಬೇಡ. ಉಪಯೋಗವಿಲ್ಲ. ನಮ್ಮ ಸೈನ್ಯವು ನಿಮ್ಮ ರಾಜಧಾನಿಯ ಸುತ್ತಲೂ ಮುತ್ತಿರುವುದೆಂದು ತಿಳಿಯಿರಿ.

("ಜೈ ಗಜಪತಿ ಸಾರ್ವಭೌಮ" ಎಂದು ಗಜಸೈನಿಕರು ಕತ್ತಿಯನ್ನು ಹಿರಿಯಲು, ರಾಮಲಿಂಗಾದಿಗಳು ಅವರ ಕತ್ತಿಗಳನ್ನು ಸೆಳೆದು ಬಂಧಿಸುವರು. ಗಜಪತಿ—ಜಯಸಿಂಹರನ್ನೂ ಸೇವಕರು ಬಂಧಿಸಿ ಒಯ್ಯುವರು. "ಜೈ ಕೃಷ್ಣದೇವರಾಯ ಸಾರ್ವಭೌಮಾ!" ಜಯ ಘೋಷ!)

ದೃಶ್ಯ ೨೩

ಬೀದಿ.

(ಹಗಲುಹೊತ್ತು — ಡಂಗುರದವನು ಬರುವನು.)

"ಓಹೋ ಹೋಯ್! ಎಲ್ಲರೂ ಗಳ್ ಧಿನ್ಯಾಗ್ಬೇಕೋ! ಅಗ್ಬೇಕು. ಯಾರ್ಯಾರೂ ನಿಲ್ಬಾರ್ದು, ಯಾರೊಬ್ರು ಹೋಗ್ಬಾರ್ದು. ಎಲ್ಲರೂ ಕೇಳ್ಬೇಕು—ಕೇಳ್ಲೇಬೇಕೂ! ಡಂಗುರಾ! ಮತ್ತೆ ಕೇಳ್ಲಿಲ್ಲಾ ಅಂದೀರೀ—ಹೇಳ್ಲಿಲ್ಲಾ ಅಂದೀರಿ—ಕೇಳ್ಬೇಕೋಯ್, ಕೇಳ್ಬೇಕೂ! ವಿದ್ಯಾನಗರದ ಮಾರಾಯ್ರು— ಶ್ರೀಕೃಷ್ಣದೇವರಾಯ್ರೂ ಉತ್ಕಲ ದೇಶಾನೆಲ್ಲಾ ಗೆದ್ಬಿಟ್ರು ಗೆದ್ಬಿಟ್ರು! ಪ್ರಜೆಗಳ್ ಯಾರೂ ಹೆದರಬಾರ್ದಂತೇ. ಎಲ್ಲಿಗೂ ಓಡಿ ಹೋಗಬಾರ್ದಂತೇ. ಸಂತೋಷಪಡಬೇಕಂತೇ! ನಾಳೆ ಮಧ್ಯಾಹ್ನ ಹನ್ನೆರಡು ಗಂಟೆಯ ಅಭಿಜನ್ಮುರ್ತದಲ್ಲೇ— ಉತ್ಕಲ ರಾಜನಂದಿನೀನ ರೂಪಸಿಂಗ್ ಎಂಬಾ ವರನಿಗೆ ಕೊಟ್ಟು ನಮ್ಮ ರಾಯುರ್‍ರು ಮದುವೇನಡಸ್ತಾರೇ. ನೀವೆಲ್ಲಾರೂ ಬಂದು, ನೋಡೀ ಬಹುಮಾನ ಪಡೀಬೇಕೂ. ಮಾರಾಯ್ರು ಅಜ್ಞೇ! ಕಟ್ಟಾಜ್ಞೇ! ಭಕ್ಷಭೋಜ್ಯಾ, ದಕ್ಷಿಣೇ, ದಾನಾ—ಭಾರೀ ಭಾರೀ ಬೇಕಾದ್ದೆಲ್ಲಾ ಉಂಟೂ! ಎಲ್ಲೀಗೂ ಉಂಟೂ, ಸಾರ್ಬಿಟ್ಟೇ ಹೇಳ್ಬಿಟ್ಟೇ!"

(ಹೋಗುವನು)

ದೃಶ್ಯ ೨೪

ವಿವಾಹ ಮಂಟಪ

(ಮಧ್ಯಾಹ್ನ ಹೊತ್ತು. ರೂಪಸಿಂಗನು ವಿವಾಹ ಮಂಟಪದಲ್ಲಿ ಕೃಷ್ಣದೇವರಾಯ ಸಿಂಹಾಸನದಲ್ಲಿ. ಪ್ರತಾಪ ರುದ್ರನ ಹೊರತು ಉಳಿದೆಲ್ಲರೂ ಇದ್ದಾರೆ. ವೀರ ರುದ್ರ— ಸುಭದ್ರಾದೇವಿಯರೂ ಕಾವೀ ವಸ್ತ್ರದಲ್ಲಿದ್ದಾರೆ ತಿಮ್ಮಣ್ಣ ರಾಮಕೃಷ್ಣರು ಪುರೋಹಿತರ ವೇಷದಲ್ಲಿದ್ದಾರೆ. ಸಖಿಯರೂ ದುಃಖಿತಳಾಗಿರುವ ಜಗನ್ಮೋಹಿನಿಯನ್ನು ದೂಡಿಕೊಂಡು ತರುವರು.)

ತಿಮ್ಮರಸು— ಜಗನ್ಮೋಹಿನೀ, ತಾಳ್ಮೆಯನ್ನು ವಹಿಸು. ವಿಧಿಯನ್ನು ಮೀರಲು ಸಾಧ್ಯವಿಲ್ಲ. ನಿನ್ನ ದುಡುಕಿನ ಫಲ ಹೀಗಾಯಿತು. ನಿನಗೆ ನಿಜವಾಗಿಯೂ ರೂಪಸಿಂಗನು ಅನುರೂಪ ವರನಾಗಿರುವನು)

ಜಗನ್ಮೋಹಿನಿ— (ತಿಮ್ಮರಸನ ಕಾಲನ್ನು ನೋಡುತ್ತ) ಆದರೆ ಈ ಜಡದೇಹದ ಮೇಲೆ ನನಗೇನೂ ಆಶೆಯಿಲ್ಲ. ಈ ದೇಹದಿಂದ ನನ್ನ ತಂದೆಗೆ ಸಹಾಯವಾಗುವುದಾದರೆ ಮಾತ್ರವೇ ನಿಮ್ಮ ಕಾರ್ಯ ನಡೆದೀತು ಇಲ್ಲದಿದ್ದರೆ ಇದೊ ಈ ಕಲ್ಲು ನೆಲಕ್ಕೆ ತಲೆಯನ್ನಪ್ಪಳಿಸಿಕೊಂಡು ಸಾಯುವೆನು.

(೧೧ನೇ ಪುಟ ನೋಡಿರಿ)



ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕ್ಯಾಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5

2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ

3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ರಹಸ್ಯ ಭೇದಿ

ಲಕ್ಷಣ ಬೇಹುಗಾರ-ಕೆಂಟ್

ೃ ೩ ·

ಂತ್ರೆಯು ಗತಿಯನ್ನು ಒಬ್ಬ ಮನು ಬದಲಾಯಿಸಬಲ್ಲನೆಂದು ಹೇಳಬ ದರೆ, ಈ ಸಿದ್ಧಾಂತವನ್ನು ಸಮರ್ಥಿ ಉತ್ತಮ ಉಮೇದ್ವಾರನು ಟೈಲರ್ ಂದು ನಾವು ತಿಳಿಯಬಹುದು.

ಲರ್ ಕೆಂಟನು ಒಬ್ಬ ಗೂಢಚಾರ ದ್ದನು.

ತ್ತು ಆತನು ಒಬ್ಬ ವಿಲಕ್ಷಣ ಗೂ ರನಾಗಿದ್ದನು.

ಣ, ಪದವಿ ಅಥವಾ ರಾಷ್ಟ್ರೀಯ ನೆ ಇವು ಯಾವುವೂ ಅವನಲ್ಲಿ ಉಚಿ ನವನ್ನು ಪಡೆದಿರಲು ಸಾಧ್ಯವಿರ ಅವನನ್ನು ಗೂಢಚಾರ ವೃತ್ತಿಗೆ ಗಿಸಿದುದೆಲ್ಲಾ ಸ್ವಲ್ಪ ದುರಭಿಪ್ರಾ ದ ಜೆರೆತ ಒಂದು ವಿಧದ ಆದರ್ಶ ತ್ವವಾಗಿತ್ತು.

ನನಿಗೆ ಯುದ್ಧವು ಒಂದು ಅನಾವಶ್ಯ ದ ಪಾಪಕಾರ್ಯ, ಮತ್ತು ಯೆಹೂ ಎಂದಿಗೂ ತೊಂದರೆಗೆ ಮುಖ್ಯ ಕಾರಣಭೂತರು—ಎಂಬ ಅಭಿ ಮವಿತ್ತು. ಅವನು ಎಲ್ಲಾ ಗೊಂದ ಹಿಂದೆ ಯೆಹೂದಿಗಳಿದ್ದಾರೆಂದು ತಿ ವರ ವಿಷಯದಲ್ಲಿ ದುರಭಿಪ್ರಾಯ ನನಾಗಿದ್ದನು.

ಎರಡನೇ ಜಾಗತಿಕ ಯುದ್ಧದ ಮೊದ ವರ್ಷದ ಮುಕ್ಕಾಲು ಭಾಗದ ಕಾ ಹಿಟ್ಲರನಿಗೆ ಅತ್ಯಂತ ನಂಬಿಗಸ್ತ ಮತ್ತು ವಿಶೇಷ ಸಹಾಯಕನಾದ ಗೂಢಚಾರನಿದ್ದನು. ಬ್ರಿಟಿಷ್ ತ್ರಿ ಮಂಡಳದ ಅತ್ಯಂತ ರಹಸ್ಯ ವಿ ಗಳನ್ನು ಆವನು ಹಿಟ್ಲರನಿಗೆ ತಿಳಿಸು ನು.

ದು ಟೈಲರ್ ಕೆಂಟನು ಹೊರತು ಯಾರೂ ಆಗಿರಲಿಲ್ಲ.

ಟೈಲರ್ ಕೆಂಟನು ಲಂಡನಿನಲ್ಲಿ ಸಂ ಕ್ತ ಸಂಸ್ಥಾನಗಳ ರಾಯಭಾರಿ ಕಚೇರಿಯಲ್ಲಿ ಗುಪ್ತ ಪತ್ರಗಳ ಗುಮಾಸ್ತನಾಗಿದ್ದನು. ಅವನ ಕಾರ್ಯಗಳು ಬ್ರಿಟಿಷ್ ಸರಕಾರಕ್ಕೆ ಅವರ ಸರಿಯಾದ ಯೋಜನೆಯನ್ನು ಪೂರ್ಣ ಹಾಳುಗೆಡಹುವಷ್ಟು ಅಪಾಯಕರವೂ ನಾಶಪ್ರದವೂ ಆಗಿದ್ದವು.

ಬಹುಮುಖಿ ಕಾರ್ಯಚತುರನೂ, ಮಹತ್ವಾಕಾಂಕ್ಷಿಯೂ, ತರುಣನೂ ಆದ ಟೈಲರ್ ಕೆಂಟನು ಅಮೇರಿಕದ ಒಬ್ಬ ರಾಜ್ಯತಂತ್ರ ಪ್ರವೀಣನ ಮಗನಾಗಿ ತನ್ನ ೨೫ನೇ ವರ್ಷದ ಚಿಕ್ಕ ಪ್ರಾಯದಲ್ಲೇ ರಾಜ್ಯತಂತ್ರದ ಉದ್ಯೋಗವನ್ನು ಪಡೆದಿದ್ದನು. ಫ್ರೆಂಚ್, ಜರ್ಮನ್, ರಶ್ಯನ್ ಮತ್ತು ಇಟೇಲಿಯನ್ ಭಾಷೆಗಳನ್ನು ನಿರರ್ಗಳವಾಗಿ ಮಾತನಾಡಬಲ್ಲ ಟೈಲರ್ ಕೆಂಟನ ಜೀವನವು ಮುಂದಕ್ಕೆ ಸಂಯುಕ್ತ ಸಂಸ್ಥಾನಗಳ ಒಬ್ಬ ದೊಡ್ಡ ರಾಜ್ಯತಂತ್ರಜ್ಞನಾಗುವಂತೆ ಸ್ಪಷ್ಟವಾಗಿ ರೂಪಿತವಾಗಿತ್ತು.

ಮೊದಲು ಕೆಂಟನು ಮೋಸ್ಕೋದಲ್ಲಿ ಸಂಯುಕ್ತ ಸಂಸ್ಥಾನಗಳ ರಾಯಭಾರಿ ಕಚೇರಿಯಲ್ಲಿ ಸೇರಿಕೊಂಡಿದ್ದನು. ಅಲ್ಲಿಂದ ೧೯೩೯ರಲ್ಲಿ ಅವನು ಅತಿ ಮುಖ್ಯವಾದ ಗುಪ್ತಪತ್ರಗಳ ಗುಮಾಸ್ತನ ಖಾಲಿ ಸ್ಥಾನವನ್ನು ತುಂಬಿಸಲು ಲಂಡನಿಗೆ ಕಳುಹಿಸಲ್ಪಟ್ಟನು.

ಅವನು ತನ್ನ ಹೊಸ ಉದ್ಯೋಗದಲ್ಲಿ ತೊಡಗಿದ ಕೂಡಲೆ ಆಕಾಶದಲ್ಲಿ ಯುದ್ಧದ ಮೋಡಗಳು ತಲೆದೋರಿದವು. ತರುಣನಾದ ಕೆಂಟನ ಹೃದಯಕ್ಕೆ ವೇದನೆಯಾಯಿತು. ಅವನು ಯಾವ ಮೌಲ್ಯವನ್ನು ಕೊಟ್ಟಾದರೂ ಯುದ್ಧವನ್ನು ತಪ್ಪಿಸಬೇಕೆಂಬ ಕಾರ್ಯದಲ್ಲಿ ತೊಡಗಿದವರೊಡನೆ ಅತ್ಯಂತ ಸಹಾನುಭೂತಿಯನ್ನು ತೋರಿಸಿದನು.

ಅವನು ಯುದ್ಧವನ್ನು ನಿಂದಿಸುವ ಹೊರಗಿನ ವಿಾಟಿಂಗುಗಳಲ್ಲಿ ಉಪಸ್ಥಿತನಾಗಿ ಯೆಹೂದೀ ವಿರೋಧಿಯಾದ ಪ್ರಚಾರಗಳಿಗೆ ಕಿವಿಗೊಟ್ಟನು. ಮಯಸ್ಸಿನಲ್ಲಿ ಚಿಕ್ಕವನಾಗಿದ್ದಂತೆಯೇ ಸರಿಯಾದ ವಿಚಾರದಲ್ಲಿ ಕೂಡ ಅವನು ಇನ್ನೂ ಚಿಕ್ಕವನಾಗಿದ್ದನು. ಯೆಹೂದಿಗಳಲ್ಲಿ ಅಸಂತುಷ್ಟಿ ಮತ್ತು ಯುದ್ಧದಲ್ಲಿ ದ್ವೇಷ ಇವುಗಳಿಂದ ಅವನು ಪ್ರಭಾವಿತನಾದನು.

ಅನಂತರ ಸ್ವಲ್ಪ ಸಮಯದೊಳಗೆ ಟೈಲರ್ ಕೆಂಟನು ಅನ್ನಾವೋಲ್ಕೋಫ್ ಎಂಬವಳನ್ನು ಸಂಧಿಸಿದನು. ಆಕೆಯು ಉನ್ನತ ಸಾಮಾಜಿಕ ಸ್ಥಿತಿಯುಳ್ಳ ಒಬ್ಬ ಮಹಿಳೆಯಾಗಿ ಉಜ್ವಲ ಭವಿಷ್ಯವುಳ್ಳ ತರುಣ ಉಮೇದ್ವಾರನನ್ನು ಮೋಹಗೊಳಿಸುವ ಕಲೆಯಲ್ಲಿ ಅತ್ಯಂತ ಚತುರೆಯಾಗಿದ್ದಳು.

ಒಂದು ಕಾಲದಲ್ಲಿ ಶ್ರೀಮಂತ ಮನೆತನದವಳಾಗಿದ್ದ ಅನ್ನಾವೋಲ್ಕೋಫಳು ೧೯೧೭ರ ರಷ್ಯದ ಕ್ರಾಂತಿಯ ಸಮಯದಲ್ಲಿ ರಷ್ಯದಿಂದ ಇಂಗ್ಲೆಂಡಿಗೆ ಓಡಿ ಬಂದಳು.

ಇದೊಂದು ಯೋಗವು ಕೂಡಿಬಂತು. ಯುವಕನಾದ ಅಮೇರಿಕನು ಒಂದು ವಿಾಟಿಂಗಿಗೆ ಹೋಗಿದ್ದನು. ಆಗ ಅನ್ನಾವೋಲ್ ಕೋಫಳು ಅವನನ್ನು ನೋಡಿದಳು.

ಸುಲಭವಾಗಿ, ಹೆಚ್ಚಿನೂ ಪ್ರಯತ್ನವಿಲ್ಲದೆ ಅವನು ಅವಳಿಗೆ ಮರುಳಾದನು. ಕೆಂಟನನ್ನು ಆಕರ್ಷಿಸಲು ಅವಳ ಸೌಂದರ್ಯದಲ್ಲಿ ವೈಶಿಷ್ಟ್ಯವೇನೂ ಇರಲಿಲ್ಲ. ಅವರು ಪರಸ್ಪರ ಆಕರ್ಷಿತರಾದುದು ತಾತ್ಕಾಲಿಕವಾಗಿ ಹುಟ್ಟಿದ ಮನೋಭಾವನೆಗಳಿಂದಲೇ. ಅವಳ ವಿಚಾರಗಳಿಗಾಗಿ ಅವನು ಅವಳನ್ನು ಗೌರವಿಸಿದನು. ಅವುಗಳು ತನ್ನ ವಿಚಾರಗಳಂತೆಯೇ ಇರುವುದಾಗಿ ಅವನಿಗೆ ಕಂಡಿತು.

ಅನ್ನಾವೋಲ್ ಕೋಫಳು ಯೆಹೂದಿಗಳ ಮೇಲೆ ಕೆಂಟನಿಗಿರುವ ದುರಭಿಪ್ರಾಯಗಳಿಗೆ ಪುಷ್ಟಿಕೊಟ್ಟಳು. ಯುದ್ಧವು ನಿರರ್ಥಕವೆಂಬ ಅವನ ಅಭಿಪ್ರಾಯಕ್ಕೂ ಅವಳು ಒಪ್ಪಿದಳು.

ಕೆಲವು ಸಮಯ ಅನುಭವ ಪಡೆಯದ ಆ ತರುಣನೂ ಹೆಚ್ಚು ವಯಸ್ಸಿನ ಚತುರೆಯಾದ ಆ ಮಹಿಳೆಯೂ ಒಬ್ಬರನ್ನೊಬ್ಬರು ಆಗಾಗ್ಯೆ ಕಾಣುತ್ತಾ ಅತ್ಯಂತ ಸ್ನೇಹಿತರಾದರು.

ಆದರೆ ಹೆಚ್ಚು ಸಮಯ ಕಳೆಯಲಿಲ್ಲ. ಯುದ್ಧವು ಪ್ರಾರಂಭವಾಗಿತ್ತು.

ಒಂದು ದಿನ ಅನ್ನಾವೋಲ್ ಕೋಫಳು ತನ್ನ ಎಳೆಯ ಕುರಿಮರಿಗೆ (ಟೈಲರ್ ಕೆಂಟನಿಗೆ) ಮಾತುಗಳಿಂದ ಮಾತ್ರವಲ್ಲ, ಕಾರ್ಯಗಳಿಂದಲೂ ಶಾಂತಿಯನ್ನು ಸಾಧಿಸಲು ಇರತಕ್ಕ ಆಕಾಂಕ್ಷೆಯನ್ನು ತನಗೆ ತೋರಿಸಿಕೊಡ ಬೇಕೆಂದು ಆಹ್ವಾನವಿತ್ತಳು.

ಆ ಆಹ್ವಾನವು ಪ್ರಬಲವಾಗಿತ್ತು ಮತ್ತು ಹೆಂಗಸು ಕೊಟ್ಟದಾಗಿತ್ತು.

ಮಾತ್ರವಲ್ಲದೆ, ಯುದ್ಧಕ್ಕೆ ಸುಲಭವಾದ ಪರಿಹಾರ ಮಾರ್ಗವು ಅಮೇರಿಕನನ್ನು ಯುದ್ಧ ರಂಗದಿಂದ ಹೊರಗೆ ನಿಲ್ಲುವಂತೆ ಮಾಡುವುದೇ ಆಗಿದೆಯೆಂಬ ಅಭಿಪ್ರಾಯವನ್ನು ಕೆಂಟನ ಯುಕ್ತಿ ವಾದಗಳು ಸಮರ್ಥಿಸಿದವು. ಗುಪ್ತ ಪತ್ರಗಳ ಗುಮಾಸ್ತನಾಗಿ ನಿರಾತಂಕವೂ, ಅಸಾಧಾರಣವೂ ಆದ ತನ್ನ ಪರಿಸ್ಥಿತಿಯಿಂದ ಕೆಂಟನು (ಅವನು ಮಂತ್ರಿ ಮಂಡಲದ ಎಲ್ಲಾ ಪತ್ರವ್ಯವಹಾರಗಳನ್ನೊಳಗೊಂಡು ಬ್ರಿಟನಿನಿಂದ ಅಮೇರಿಕಕ್ಕೆ ಹೋಗತಕ್ಕ ಮುಖ್ಯವಾದ ಪ್ರತಿಯೊಂದು ಸಂದೇಶವನ್ನು ನೋಡಲು ಅಧಿಕಾರವುಳ್ಳವನಾಗಿದ್ದನು.) ತಾನು ಪ್ರಪಂಚದ ರಾಜ ತಂತ್ರಜ್ಞರನ್ನು ಸೋಲಿಸಿ ಎರಡನೇ ಜಾಗತಿಕ ಯುದ್ಧದ ಕಡೆಗೆ ಉಪಸಂಹಾರವನ್ನು ಬರೆಯಬಲ್ಲ ಒಬ್ಬ ವ್ಯಕ್ತಿಯಾಗಿದ್ದೇನೆಂದು ದೃಢಪಟ್ಟಿದ್ದ.

ಬ್ರಿಟನು ಅಮೇರಿಕದೊಡನೆ ನಿಕಟ ಸಂಬಂಧವುಳ್ಳದಾಗಿತ್ತು. ಅತ್ಯಂತ ರಹಸ್ಯವಾದ ಮುಖ್ಯವಾದ ದಾಖಲೆಗಳೂ, ಬ್ರಿಟಿಷ್ ಸೈನ್ಯಗಳ ಬಲ ಮತ್ತು ಸಾಮಗ್ರಿ ಸಂಗ್ರಹಗಳ ಕುರಿತಾದ ಎಲ್ಲಾ ವರದಿಗಳೂ, ತ್ವರಿತವಾದ ಯೋಜನೆಗಳೂ ಕೆಂಟನ ಮೂಲಕ ಕಳುಹಿಸಲ್ಪಡುತ್ತಿದ್ದವು.

ಮೊದಲು ಅನ್ನಾವೋಲ್ ಕೋಫಳು ಇಟೆಲಿಗೆ ಹೋಗತಕ್ಕ ಅಮೇರಿಕದ ರಾಜ್ಯ ತಂತ್ರಜ್ಞರ ಚೀಲದಲ್ಲಿ ಸಂದೇಶಗಳನ್ನು ಗುಟ್ಟಿನಿಂದ ಹಾಕಿ ಜರ್ಮನಿಯಲ್ಲಿರುವ ತನ್ನ ಸ್ನೇಹಿತರಿಗೆ ಅವುಗಳನ್ನು ಕಳುಹಿಸಿ ಕೊಡಬೇಕೆಂದು ಟೈಲರ್ ಕೆಂಟನನ್ನು ಕೇಳಿಕೊಂಡಳು. ಈ ಸಂದೇಶಗಳು ಇಟೆಲಿಯ ಒಬ್ಬ ಸಹೋದ್ಯೋಗಿಯಿಂದ ಯಾರ ಪರಿಶೋಧನೆಯೂ ಇಲ್ಲದೆ ಜರ್ಮನಿಗೆ ಕಳುಹಿಸಲ್ಪಡುತ್ತಿದ್ದವು.

ಆದರೆ ಇದೊಂದು ದೀರ್ಘವಾದ ಕ್ರಮ. ಹೆಚ್ಚು ಸಮಯವನ್ನು ತೆಗೆದುಕೊಳ್ಳುತ್ತಿತ್ತು. ಅನೇಕ ಆತಂಕಗಳನ್ನೂ ಅಸಿಕ್ಷಿಯಗಳನ್ನೂ ಒಳಗೊಳ್ಳುತ್ತಿತ್ತು.

ಆದ್ದರಿಂದ ಸಂಯುಕ್ತ ಸಂಸ್ಥಾನಗಳಿಗೆ ಅವುಗಳನ್ನು ಕಳುಹಿಸುವ ಮೊದಲು ಎಲ್ಲಾ ಕಾಗದ ಪತ್ರಗಳ ಫೋಟೋಗ್ರಾಫಿನ ಪ್ರತಿಗಳನ್ನು ತೆಗೆದುಕೊಳ್ಳುವಂತೆ ಕೆಂಟನಿಗೆ ಪ್ರೇರಣೆ ಕೊಡಲಾಯಿತು,

ಫಲಿತಾಂಶ: ಬ್ರಿಟನು ಜೀವಗಳಲ್ಲಾ, ಸೊತ್ತುಗಳಲ್ಲಾ ಮಹತ್ವವಾದ ನಷ್ಟಗಳ ಪರಂಪರೆಯನ್ನು ಸಹಿಸ ಬೇಕಾಯಿತು.

ಆದರೆ ಹೆಚ್ಚು ಸಮಯ ಕಳೆಯಲಿಲ್ಲ. ಬ್ರಿಟಿಷ್ ಗುಪ್ತವಾರ್ತಾ ಶೋಧಕ ಮಂಡಳಿಯು ಈ ರಹಸ್ಯ ಭೇದದ ಕುರಿತು ಸಂಶೋಧನೆ ನಡೆಸುವುದರಲ್ಲಿ ಜಾಗರೂಕವಾಗಿತ್ತು. ಕೆಂಟ್

(೧೦ನೇ ಪುಟ ನೋಡಿ)

ಹೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

ಜನಪ್ರಿಯವಾದ

ಯ ಸಮೂಲ ಭಾಷಾಂತರ

ಗ ಮಾರಾಟಕ್ಕೆ ಸಿದ್ಧವಾಗಿದೆ.

ಪುಟಗಳಿಗೂ ಮಿಕ್ಕಿದ

ಪಾಕೆಟ್ ಎಡಿಶನ್

ವಾದ ಬಿಳಿ ನುಣುಪು ಕಾಗದ!

ಸಾಮಾ ಪ್ರತಿ ರೂ. ೧-೦೦

ಉತ್ತಮ ಪ್ರತಿ ರೂ. ೧-೫೦

ಅಂಚೆ ವೆಚ್ಚ ರೂ. ೦-೫೦

ಪ್ರತಿಗಳ ದರಕ್ಕೆ ಬರೆಯಿರಿ:

ಯುಗ ಪ್ರೆಸ್ ಉಡುಪಿ, ದ. ಕ

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ........

ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ

1—1—1963ರಿಂದ ಠೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ

ನಿಮ್ಮ ಉಳಿತಾಯವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ಸ್ಥಿರ ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ

ಹೆಚ್ಚಿನ ವಿವರಗಳಿಗೆ ನಿಮ್ಮ ಸಮಿಾಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",

ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ಸಾಮ್ರಾಜ್ಯವಾದಿ ಚೀನೀಯರಿಗೆ

ಹೊಸ ಸಿಂಕಿಯಾಂಗ್ ಬೇಕಾಗಿದೆ

ರಶ್ಯ-ಚೀನಾ ಒಡಂಬಡಿಕೆಯ ನಂತರ ಸಿಂಕಿಯಾಂಗ್ ಪ್ರತ್ಯೇಕ ಪ್ರಾಂತ್ಯವಾಗು ಳಿದುಕೊಂಡು ಬಂದಿದೆ. ಹಾಗೆ ಮಾಡಿದರೂ ಸಿಂಕಿಯಾಂಗಿನಲ್ಲಿ ತಮ್ಮ ಪ್ರಭಾವ ಬೀರಲು ಚೈನೀಯರಿಗೆ ಸಾಧ್ಯವಾಗಿರಲಿಲ್ಲ. ಆ ಪ್ರದೇಶದ ಆಡಳಿತ ನೋಡಿಕೊಳ್ಳಲು ಬಂದಿದ್ದ ಟಿಸೊಟ್ಸಂಗ್-ಟಾಂಗನು ರಾಜ ದರ್ಬಾರಿಗೆ ಕಳುಹಿಸಿದ್ದ ಒಂದು ಪತ್ರದ ಸಾರಾಂಶ ಈ ರೀತಿ ಇದೆ:—

"ಸಿಂಕಿಯಾಂಗಿನಲ್ಲಿ ..ಮಹಮ್ಮದೀಯರೂ ಚೈನೀಯರೂ ಒಟ್ಟೊಟ್ಟಿಗೆ ಜೀವಿಸುವಂತಿಲ್ಲ ಅಧಿಕಾರಿಗಳಿಗೂ ಜನರಿಗೂ ಬಹಳ ಅಂತರವಿದೆ. ಹಾಗಿರುವದರಿಂದ ಏನಾದರೂ ಕಾನೂನು ಅಥವಾ ನಿಯಮವನ್ನು ಪ್ರಯೋಗಕ್ಕೆ ತರುವದೆಂದರೆ ಬಹಳ ಕಷ್ಟವಿದೆ. ಸರಕಾರೀ ನಿಬಂಧನೆಗಳನ್ನು ಮೊದಲು ಮುಸಲ್ಮಾನ ಮುಂದಾಳುಗಳಿಗೆ ವಿವರಿಸಿ ಹೇಳಬೇಕಾಗುತ್ತದೆ. ಇದು ಒಂದು ದೊಡ್ಡ ತಡೆ ಇದೆ....ನಾವು ಬರೆಯುವ ಹಾಗೂ ಮಾತಾಡುವ ಭಾಷೆಯನ್ನು ಇಲ್ಲಿಯ ಮಹಮ್ಮದೀಯ ಮಕ್ಕಳಿಗೆ ಹೇಳಿ ಕೊಡಲು ಧರ್ಮಾರ್ಥ ಶಾಲೆಗಳನ್ನು ತೆರೆಯಬೇಕು. ನಮ್ಮ ಭಾಷೆಯನ್ನು ಅವರಿಗೆ ಕಲಿಸಿಕೊಟ್ಟೆವೆಂದರೆ ಆಗ ಇಲ್ಲಿಯ ಆಡಳಿತವನ್ನು ನಡೆಸುವ ನಮ್ಮ ಗುರಿ ಮುಟ್ಟಿದಂತೆಯೇ ಸರಿ...."

ಅನಂತರದ ಚರಿತ್ರೆಯ ಪುಟಗಳನ್ನು ತಿರವಿ ಹಾಕಿದಾಗ, ಈ ಪ್ರದೇಶವು ರಷ್ಯಾ ಚೈನಾಗಳ ನಡುವಣ ರಣಾಂಗವಾಗಿತ್ತೆಂಬುದು ವೇದ್ಯವಾಗುತ್ತದೆ. ೧೯೧೧ರಲ್ಲಿ ಮಂಚೂ ಸಾಮ್ರಾಜ್ಯ ಸಂಪೂರ್ಣ ಮಣ್ಣುಪಾಲಾಯಿತು. ಅನಂತರ ಚೈನಾ ಯುದ್ಧಪ್ರಿಯರ ಕೈಗೊಂಬೆಯಾಯಿತು. ಆಗ ಇತರ ಪ್ರಾಂತ್ಯಗಳಂತೆಯೇ ಈ ಪ್ರಾಂತ್ಯವೂ ಪ್ರಥಮ ಪ್ರಾಂತ್ಯಪಾಲ ಯಾಂಗ್‌ಟ್ಸೆಂಗ್—ಹ್ಸಿನ್ ಕೈ ಕೆಳಗೆ ಹೋಯಿತು. ಆದರೂ ೧೯೪೨ರ ವರೆಗೆ ರಷ್ಯನರ ವರ್ಚಸ್ಸು ಅಲ್ಲಿ ವರ್ಧಿಸುತ್ತ ಹೋಗಿತ್ತು. ಆಗ ರಷ್ಯನರು ಜರ್ಮನರ ಪಡಿತಕ್ಕೆದುರಾಗಬೇಕಾಗಿತ್ತು ಆ ಸಂದರ್ಭದ ಸದುಪಯೋಗ ಪಡೆಯಲು ಶ್ರೀಮತಿ ಚಿಯಾಂಗ್ ಕೈಶೆಕ್ ತಿಹ್ವಾಕ್ಕೆ ಪ್ರಯಾಣಮಾಡಿದರು ಆಗ ಅಲ್ಲಿ ಪ್ರಾಂತ್ಯಪಾಲರಾಗಿದ್ದ ಶಿ—ಟ್ಸಾಯಿಯು ತನ್ನ ಸ್ವಾಮಿನಿಷ್ಠೆಯನ್ನು ರಷ್ಯದಿಂದ ಚೈನಾಕ್ಕೆ ಬದಲಾಯಿಸುವಂತೆ ಒಪ್ಪಿಸಲಿಕ್ಕಾಗಿ ಶ್ರೀಮತಿಯವರು ಅತ್ತ ಪ್ರಯಾಣಮಾಡಿದ್ದರು.

೧೯೪೪ರಲ್ಲಿ ಕಝಾಕರು ಇಲಿ ಕಣಿವೆಯಲ್ಲಿ ದಂಗೆ ಎದ್ದರು. ಅವರು ಸಿಂಕಿಯಾಂಗಿನ ಒಂದು ಪ್ರದೇಶವನ್ನು ವಶಪಡಿಸಿಕೊಂಡು ಪ್ರತಿ ಸರಕಾರವನ್ನು ರಚಿಸಿದರು. ೧೯೪೯ರಲ್ಲಿ ಅವರದನ್ನು ಬಲಪಡಿಸಿಕೊಂಡು ಸಂಪೂರ್ಣ ಸಿಂಕಿಯಾಂಗನ್ನು ತಮ್ಮ ಮುಷ್ಟಿಯಲ್ಲಿಟ್ಟುಕೊಂಡರು ಆಗ ಚೈನಾವು ಕಮ್ಯುನಿಸ್ಟರ ಕಪಿಚೇಷ್ಟೆಯಿಂದ ಕಷ್ಟಕ್ಕೊಳಗಾಗಿತ್ತು. ಚಿಯಾಂಗ್ ಸರಕಾರವು ಒಂದು ನಿಶ್ಚಯಕ್ಕೆ ಬಂದು ಪರಿಸ್ಥಿತಿಯನ್ನೆದುರಿಸುವ ಸಲುವಾಗಿ ಸಿಂಕಿಯಾಂಗಿನ ಕೇಂದ್ರ ಹಾಗೂ ಉತ್ತರ ಪ್ರದೇಶಗಳಿಗೆ ಸ್ವಾಯತ್ತಾಧಿಕಾರವನ್ನಿತ್ತಿತು. ೧೯೪೭ರಲ್ಲಿ ಅವರು ಸಂಪೂರ್ಣ ಸಿಂಕಿಯಾಂಗನ್ನು ಯೋಚಿಸುತ್ತ, ಇನ್ನಷ್ಟು ಅಧಿಕಾರವನ್ನು ಕೇಳಿದರು ಈ ಬಂಡಾಯದ ಬೇರು ತುರ್ಕಿಯಲ್ಲಿತ್ತು. ಕಝಾಕರಿಗೆ ಹುಟ್ಟು ನೆಲದ ಮೇಲೆ ಹೆಚ್ಚು ಪ್ರೇಮವಿರುತ್ತದೆ. ಇಲಿ ಸರಕಾರವು ಚೈನಾದ ಸ್ವಾಮಿತ್ವವನ್ನೊಪ್ಪಿಕೊಂಡಿದ್ದರೂ ತಮ್ಮದೇ ಆದ ಧ್ವಜವನ್ನು ಹಾರಿಸಿಕೊಂಡಿದ್ದು ಪರದೇಶಗಳಲ್ಲಿ ಸಂಯುಕ್ತ ಪೂರ್ವ ತುರ್ಕಿಸ್ಥಾನದ ಕುರಿತು ತೀವ್ರ ಪ್ರಚಾರ ನಡೆಸುತ್ತಿತ್ತು. ಅದು ಚೈನಾ ಮತ್ತು ರಷ್ಯಾಗಳಲ್ಲಿದ್ದ ತುರ್ಕಿ ಸ್ಥಾನಗಳನ್ನು ಒಂದಾಗಿಸಿದರು.

ಸಿಂಕಿಯಾಂಗಿನಲ್ಲಿದ್ದ ಚೈನಿ ಸೈನ್ಯವು ಉಭಯ ಸಂಕಟದಲ್ಲಿ ತೊಳಲಾಡುತ್ತಿತ್ತು ಅದರಲ್ಲಿದ್ದ ಅಧಿಕಾರಿಗಳಿಗೂ ಪ್ರಾದೇಶಿಕ ಜನರ ವಿರುದ್ಧ ಸೈನಿಕ ಶಕ್ತಿಯ ಪ್ರಯೋಗ ನಡೆಸಲು ಇಷ್ಟ ಇಲ್ಲದೆ ಧೈರ್ಯವೂ ಇರಲಿಲ್ಲ. ಅವರಲ್ಲಿ ಕೇವಲ ಪಲಾಯನ ತುಗಾರರ ಗುಣ ಮಾತ್ರವಿತ್ತು.

ಇವೆಲ್ಲಾ ಇತ್ತೀಚಿನ ತಕರಾರಿನ ಹಿಂಬದಿ ಇದ. ಅಲ್ಲಿರುವ ಜನತೆ ಸ್ವಾತಂತ್ರ್ಯಕ್ಕಾಗಿ ಬಡಿದಾಡುತ್ತಿದ್ದಲ್ಲಿ, ಎರಡು ಬಲಿಷ್ಟ ಮದಪೂರ್ಣ ಹೋರಿಗಳು ತಮ್ಮ ಪೌರುಷ ಪ್ರಕಟನೆಗಾಗಿ ಗುದ್ದಾಡುತ್ತಿವೆ ಅವಕ್ಕೂ ದೊರಕಿರುವುದು ಅದೇ ಸ್ಥಳವಿದೆ.

ಸಿಂಕಿಯಾಂಗ್ ಬಹಳ ವಿಶಾಲ ಪ್ರದೇಶವಿದೆ. ಏಳು ಲಕ್ಷ ಚದರ ಮೈಲು ಅದರ ವಿಸ್ತೀರ್ಣವಿದೆ ಆದರೆ ಅದರ ಹೆಚ್ಚಿನಂಶ ಮರುಭೂಮಿ ಇದೆ; ಜನಸಂಖ್ಯೆಯೂ ಅತಿ ವಿರಳವಿದೆ. ಅಲ್ಲಿಯ ಜನಸಂಖ್ಯೆ ಕೇವಲ ೪೫ ಲಕ್ಷ. ಅದರಲ್ಲಿ ಹೆಚ್ಚೆಂದರೆ ಶೇಕಡಾ ಆರರಷ್ಟು ಚೈನೀಯರಿದ್ದಾರೆ. ಆದರಲ್ಲೂ ಹೆಚ್ಚಿನವರು ಆಡಳಿತ ಯಂತ್ರದಲ್ಲಿ ಹಾಗೂ ವ್ಯಾಪಾರ ರಂಗದಲ್ಲಿದ್ದಾರೆ. ಶೇಕಡಾ ೭೭ ಜನರು ತುರ್ಕಿಗಳಿದ್ದಾರೆ (ತುರುಕರು) ಶೇಕಡಾ ೧೦ ಕಝಾಕರು ಶೇಕಡಾ ಎಂಟು ಕಿರ್ಗಿಗಳಿದ್ದಾರೆ. ಶೇಕಡಾ ಒಂದರಷ್ಟು ಮಂಗೋಲರಿದ್ದಾರೆ ಇದರಲ್ಲಿ ತುರ್ಕಿಗಳು, ಕಝಾಕರು ಮತ್ತು ಕಿರ್ಗಿಗಳು ಮುಸಲ್ಮಾನರಿದ್ದು, ಮುಖ್ಯವಾಗಿ ಸುನ್ನಿ ಪಂಥಕ್ಕೆ ಸೇರಿದವರಿದ್ದಾರೆ. ಮಂಗೋಲರಲ್ಲಿ ಹೆಚ್ಚಿನವರು ಬೌದ್ಧರಿದ್ದಾರೆ. ಅಲ್ಲಿ ಕ್ರಿಶ್ಚಿಯನರ ಗುಂಪುಗಳೂ ಇವೆ ಇದೆಲ್ಲಾ ಕಮ್ಯೂನಿಸ್ಟ್ ಕಪಿ ಆ ವಶಕೊಳ್ಳುವಾಗಿದ್ದದ್ದು. ಮಾವ ಗದ್ದುಗೆಯನ್ನೇರಿದ ಮೇಲೆ ಇಲ್ಲಿ ಚೈನಿಯರ ಸಂಖ್ಯೆ ಹೆಚ್ಚಾಗುತ್ತ ಬಂದಿದೆ.

ಸಿಂಕಿಯಾಂಗಿನಲ್ಲಿ ಎಣ್ಣೆ ಸಂಪತ್ತು ಹೇರಾಳವಿದೆಯಾದರೂ ಈ ಪ್ರದೇಶ ಇನ್ನೂ ಅಭಿವೃದ್ಧಿ ಹೊಂದಿರುವದಿಲ್ಲ. ಗಂಧಕ, ಪಟಕಾರ, ಪೆಟ್ರೋಲ್, ಸೀಸ, ಕಬ್ಬಿಣ ಅಲ್ಲದೆ ಇಂಧನ ಕೂಡಾ ಕೆಲವಾರೆಡೆಗಳಲ್ಲಿ ದೊರಕುತ್ತವೆ. ಬೆಳೆ ಬೆಳೆಸಲು ಸಾಧ್ಯ ಇರುವ ಹುಲ್ಲುಗಾವಲು ಪ್ರದೇಶಗಳಲ್ಲಿ ಜನವಸತಿಯನ್ನು ಕಾಣಬಹುದು.

ಈ ಸಂಗತಿಗಳಿಂದಲೂ ಪಾಕಿಸ್ಥಾನ ಅಯೂಬ್ ಪಾರ ಕಲಿತುಕೊಳ್ಳದೇ ಇರುವದು ಅವರ ದೌರ್ಭಾಗ್ಯವೇ ಸರಿ. ಇಲ್ಲದಿದ್ದಲ್ಲಿ, ಶೇಕಡಾ ತೊಂಭತ್ತಕ್ಕಿಂತಲೂ ಜಾಸ್ತಿ ಮುಸಲ್ಮಾನರೇ ಇರುವ ಪ್ರದೇಶ ರಷ್ಯದ ಕರಡಿ ಹಾಗೂ ಚೈನಾ ಡ್ರೇಗನ್‌ಗಳ ನಡುವೆ ಹುಡಿಪುಡಿಯಾಗುತ್ತಿರುವಾ

(೯ನೇ ಪುಟ ನೋಡಿರಿ)

ಇದು ಪ್ರಾಮುಖ್ಯವಾದುದು

ಆಧುನಿಕ ಔಷಧಿಗಳ ಗೃಹ ಚಿಕಿತ್ಸೆಯಿಂದ ಸುಮಾರು 60% ರೋಗಿಗಳು ಮೂರು ತಿಂಗಳಲ್ಲಿ ಕ್ರಮಪ್ರಕಾರದ ಕೆಲಸಕ್ಕೆ ಸಮರ್ಥರಾಗುತ್ತಾರೆ. ಅದಕ್ಕೆಲ್ಲಾ ಅಗತ್ಯವಾಗಿ ಬೇಕಾದುದೆಂದರೆ ಒಂದು ಟಿ ಬಿ ಆಸ್ಪತ್ರೆಯಿಂದ ಕ್ರಮವಾದ ಚಿಕಿತ್ಸೆ ಮುಂದುವರಿದ ಟಿ ಬಿ ರೋಗಿಗಳು ಕೂಡಾ ಮನೆಯಲ್ಲಿಯೇ ಸಾಮಾನ್ಯ ಔಷಧಗಳನ್ನು ಉಪಯೋಗಿಸುವುದರಿಂದ ಗುಣಮುಖರಾಗುತ್ತಾರೆ. ಆದರೆ ವಿಳಂಬ ಮಾಡುವುದೇಕೆ? ರೋಗ ಪರೀಕ್ಷೆಯನ್ನು ಬೇಗನೆ ಮಾಡಿಸುವುದರಿಂದ ಗುಣವಾಗುವ ಸಂದರ್ಭಗಳು ಉತ್ತಮವಾಗಿರುವುದಲ್ಲದೆ ಕ್ರಮಪ್ರಕಾರದ ಜೀವನಕ್ಕೆ ತೀವ್ರ ಹೊಂದಿಕೊಳ್ಳಬಹುದಾಗಿದೆ. ಗೃಹ ಚಿಕಿತ್ಸೆಯಿಂದ ವಿಫಲರಾಗುವುದಕ್ಕೆ ಮುಖ್ಯ ಕಾರಣಗಳೆಂದರೆ ಔಷಧಿ ತೆಗೆದುಕೊಳ್ಳುವುದರಲ್ಲಿ ಕ್ರಮವಿಲ್ಲದಿರುವುದೂ ಚಿಕಿತ್ಸೆಯನ್ನು ಅಗತ್ಯವಿರುವುದಕ್ಕಿಂತ ಮೊದಲೇ ನಿಲ್ಲಿಸುವುದೂ ಆಗಿದೆ ನಿಮ್ಮ ವೈದ್ಯರು ನಿಮಗೆ ಮಾರ್ಗದರ್ಶಕರಾಗಲಿ

ಟಿ ಬಿ ಸೀಲುಗಳನ್ನು ಕೊಂಡುಕೊಳ್ಳಿರಿ ಮತ್ತು ಟಿ ಬಿ ವಿರುದ್ಧ ಹೋರಾಡುವುದಕ್ಕೆ ಸಹಾಯ ಮಾಡಿರಿ ಮೊಹರು ಮಾರಾಟಗಳಿಂದ ಎತ್ತಿದ ನಿಧಿಯು ನಿಮ್ಮ ರಾಜ್ಯದ ಸಮಿತಿಗೆ ವಿವಿದ ಟಿ ಬಿ ನಿರೋಧಕ ಚಟುವಟಿಕೆಗಳನ್ನು ನಿರ್ವಹಿಸುವುದರಲ್ಲಿ ರಾಜ್ಯದ ಟಿ ಬಿ ಆಸ್ಪತ್ರೆಗಳನ್ನು ಬಲಪಡಿಸುವುದಕ್ಕೂ ಉಪಯೋಗವಾಗುತ್ತದೆ ಒಂದು ಮೊಹರಿನ ಬೆಲೆ ಹತ್ತು ನಯೇಪೈಸೆ ಮಾತ್ರ.

ಮೊಹರುಗಳು ದೊರೆಯುವ ಸ್ಥಳಗಳು: ದಕ್ಷಿಣ ಕನ್ನಡ ಜಿಲ್ಲಾ ಟಿ ಬಿ ಎಸೋಸಿಯೇಶನ್, ಗವರ್ನ್‌ಮೆಂಟ್ ವೆನ್‌ಲಾಕ್ ಹಾಸ್ಪಿಟಲ್, ಮಂಗಳೂರು ಮತ್ತು 2. ಮೈಸೂರು ರಾಜ್ಯ ಟಿ ಬಿ ಎಸೋಸಿಯೇಶನ್, ಗವರ್ನ್‌ಮೆಂಟ್ ಟಿ ಬಿ ಸೆನೆಟೋರಿಯಂ, ಹಳೆ ಮದ್ರಾಸ್ ರಸ್ತೆ, ಬೆಂಗಳೂರು ಮತ್ತು ಅವರ ಬೇರೆ ಬೇರೆ ಏಜನ್ಸಿಗಳಲ್ಲಿ

14ನೇ ಟಿ ಬಿ ಮೊಹರು ಮಾರಾಟ ಚಳವಳ

(ನವದೆಹಲಿಯಲ್ಲಿರುವ ಭಾರತದ ಕ್ಷಯರೋಗ ಸಮಿತಿಯಿಂದ ವ್ಯವಸ್ಥೆಗೊಳಿಸಲ್ಪಟ್ಟದ್ದು)

ಈ ಸ್ಥಳದ ದಾತೃಗಳು:

India Tube Mills & Metal Industries Private Limited, Bombay.

ಕೇಂದ್ರ ಮಂತ್ರಿಮಂಡಳ

ಪರೀಕ್ಷಾರಂಗವಾಗಿದೆಯೆ?

ಛಿ

ಕಾಮರಾಜ ಸೂತ್ರವು ಕಾಂಗ್ರೆಸ್ ಸಂಘಟನೆಗೊಂದು ಸಂಜೀವಿನಿಯಂತೆ ಎಂದು ತಿಳಿಯಲಾಗಿತ್ತು. ಈ ಸೂತ್ರವು ಕಾಂಗ್ರೆಸ್ ಕಳೆದುಕೊಳ್ಳುತ್ತಿದ್ದ ಪ್ರತಿಷ್ಠೆಯನ್ನು ಮರಳಿಗಳಿಸಲು ಉಪಯುಕ್ತ ಕ್ರಮಕೈಗೊಂಡೀತೆಂದು ಹೆಚ್ಚಿನವರ ಅಭಿಪ್ರಾಯವಾಗಿತ್ತು. ಆದರೆ, ಈಗ ತಿಂಗಳುಗಳು ಮೂರು ಸಂದರೂ ಕಾಂಗ್ರೆಸ್ ಪಕ್ಷದಲ್ಲಿ ಯಾವ ಹೆಚ್ಚಿನ ಉತ್ಸಾಹವಾಗಲೀ ಚಟುವಟಿಕೆಗಳಾಗಲೀ ತೋರಿಬರಲಿಲ್ಲ. ಕಾಮರಾಜನಾಡಾರರನ್ನೇ ಕಾಂಗ್ರೆಸ್ ಅಧ್ಯಕ್ಷ ಗದ್ದುಗೆಗೇರಿಸಿದ ಒಂದು ಕಾರ್ಯವನ್ನು ಬಿಟ್ಟರೆ, ಮತ್ತಾವುದೂ ನಡೆಯಲೇ ಇಲ್ಲವೆಂದರೂ ತಪ್ಪಾಗಲಾರದು.

ಇದಕ್ಕೆ ಕಾರಣವೇನು? ಕಾಮರಾಜ ಸೂತ್ರವನ್ನು ವ್ಯವಹೃತಗೊಳಿಸುವಲ್ಲಿ, ಮೊದಲಿಗೆ ಬಲಿಯಾದ ಹಿರಿಯ ಮಂತ್ರಿಗಳು ಪಕ್ಷದ ಹೆಸರಿನಲ್ಲಿ ಹೊರಬಂದರು; ಪ್ರಧಾನಿಯವರ ಕೈಗಳಿಗೇನೇ ಸರ್ವಾಧಿಕಾರವನ್ನು ತಾವೇ ಇತ್ತುದರಿಂದ ಅವರಲ್ಲಿ ಹೆಚ್ಚಿನವರು ಸುಮ್ಮನುಳಿದರಲ್ಲದೆ ಮನಸ್ವಿಯಾಗಿಯಲ್ಲ. ಆಗ ಉಂಟಾದ ವಿರಸದಿಂದಾಗಿ ಇನ್ನು ಯಾವ ಮಂತ್ರಿಯನ್ನೂ ಕೈಬಿಡುವುದಿಲ್ಲ ಎಂಬ ಸುದ್ದಿ ಹರಡಿತು; ಮತ್ತೆ ಮರಳಿ ಕೇಳಿ ಬಂತು, ಇನ್ನೂ ಕೆಲವರನ್ನು ಪಕ್ಷಸಂಘಟನೆಗಾಗಿ ಕಳಿಸಲಾಗುವುದು ಎಂದು.

ಪ್ರಧಾನಿ ನೆಹರೂರವರು ಕಾಮರಾಜ ಸೂತ್ರದ ಕಾರ್ಯಾನುಷ್ಠಾನದ ಹೆಸರಿನಲ್ಲಿ ಮೂರು ಬಾರಿ ತನ್ನ ಸಹೋದ್ಯೋಗಿಗಳನ್ನೂ ಅವರ ಮಂತ್ರಿ ಖಾತೆಯನ್ನೂ ಬದಲಾಯಿಸಿದರು. ಆದರೆ, ಇಲ್ಲಿಗೂ ಸಚಿವ ಸಂಪುಟದ ಪುನಾರಚನೆ ಪೂರ್ಣವಾಗಲಿಲ್ಲವೆನ್ನುವಾಗ ಇದು ವಿಳಂಬ ಸ್ಥಿತಿಯಲ್ಲದೆ ಮತ್ತೇನು? ಇಂತಹ ವಿಳಂಬ ನೀತಿಗೂ ಕಾರಣವಿಲ್ಲದಿರಬಹುದೆ? ಮೊರಾರ್ಜಿ ದೇಸಾಯಿಯವರಂತಹ ಸರ್ವ ಸಮರ್ಥ ಕಾರ್ಯಕರ್ತ, ಕ್ರಿಯಾಶಾಲಿಯನ್ನು ನೆಹರು ಬಿಟ್ಟುಕೊಡಲು ಒಪ್ಪಿದ್ದು ಸ್ವಯಂ ದೇಸಾಯಿಯವರಿಗೇನೇ ದಂಗು ಬಡಿಸಿತ್ತು. ಹೀಗೆಯೇ ಆ ಸಮಯದಲ್ಲಿ ಎದ್ದ ಬಿರುಗಾಳಿಯು ಶಾಂತವಾಗುವ ವರೆಗೆ ಮಂತ್ರಿ ಖಾತೆಗಳನ್ನು ಮರಳಿ ಹಂಚಲಾಯಿತು. ಡಾ. ಕೆ. ಎಲ್. ರಾಯರನ್ನು ನೀರಾವರಿ ಶಾಖೆಗೆ ಮತ್ತೆ ತೆಗೆದುಕೊಂಡಾಗ ಇನ್ನೊಂದು ಚಂಡಮಾರುತವೇ ಬಡೆಯಿತು. ಈ ಮಾರುತ ಪ್ರಕೋಪವೀಗ ಶಾಂತವಾಯಿತು ಎನ್ನುವಾಗ, ಶ್ರೀ ಎಂ. ಸಿ. ಛಗಲಾರನ್ನು ಶಿಕ್ಷಣ ಮಂತ್ರಿಯೆಂದು ನೇಮಿಸಿ ಸುಂಟರಗಾಳಿಯನ್ನೇ ಎಬ್ಬಿಸಿದ್ದಾರೆ, ನೆಹರು. ಹೀಗೆ ಪರಿಸ್ಥಿತಿಗಳನ್ನು ತಿಳಿಗೊಳಿಸಿ ಸಮರ್ಥರಾದವರನ್ನು ಆಡಳಿತೆಯ ರಂಗಕ್ಕೆ ಎಳೆಯುವ ಒಂದು ತಂತ್ರವನ್ನು ಶ್ರೀ ನೆಹರು ಇಂದು ಅನುಷ್ಠಾನಕ್ಕೆ ತರುವಂತಿದ್ದಾರೆ. ಆದುದರಿಂದಲೇ ಅವರ ಮಂತ್ರಿಮಂಡಳದ ಪುನರ್ಘಟನೆ ಇನ್ನೂ ಅಪೂರ್ಣವೆಂದೇ ಭಾಸವಾಗುತ್ತದೆ.

ಮಂತ್ರಿಮಂಡಳದಲ್ಲಿ ಆಗುತ್ತಿರುವ ಬದಲಾವಣೆಗಳು ಸರಕಾರಿ ಆಡಳಿತೆಯ ಮೇಲೆಯೂ ಬಲವಾದ ಪರಿಣಾಮ ಬೀರುವುದು ಸ್ವಾಭಾವಿಕ. ಹೊಸ ಹೊಸ ಮಂತ್ರಿಯು ಅಧಿಕಾರ ಸ್ವೀಕರಿಸಿದಂತೆ ಆತನೇ ಹೊಸಖಾತೆಯ ಸಾಮಾನ್ಯಾನುಭವ ಪಡೆಯುವಷ್ಟರಲ್ಲಿಯೇ ಅದನ್ನು ಬಿಟ್ಟುಕೊಡುವಂತಾಗುತ್ತದೆ. ಇದರಿಂದ ಮಂತ್ರಿಗಳು ನಿಷ್ಕ್ರಿಯರಾಗುತ್ತಾರೆ, ಕಾರ್ಯಾಂಗವೂ ಸುಮ್ಮನಿರುತ್ತದೆ. ಈ ಏಕ್ ದಿನ್ ಕಾ ಸುಲ್ತಾನಗಿರಿ ನಿಲ್ಲದೆ, ಸರಕಾರದ ಕಾರ್ಯಕಲಾಪಗಳು ಸಲೀಸಾಗಲಾರವು. ಆದುದರಿಂದ ಪ್ರಧಾನ ಮಂತ್ರಿಗಳು ಇನ್ನೂ ವಿಳಂಬಮಾಡದೆ ತನ್ನ ಸಚಿವ ಸಂಪುಟಕ್ಕೊಂದು ಅಂತಿಮ ರೂಪ ಕೊಡಬೇಕು. ಈಗಿನದೇ ಪೂರ್ಣ ರೂಪವೆಂದು ಹೇಳುವುದು ಸಾಧ್ಯವಿಲ್ಲ, ಏಕೆಂದರೆ, ವಾಣಿಜ್ಯ ಮತ್ತು ಉದ್ಯಮ ಶಾಖೆಗಳಿಗೆ ಒಬ್ಬ ಸಮರ್ಥ ಮಂತ್ರಿಯಿನ್ನೂ ಬಂದಿಲ್ಲ; ಎ. ಕೆ. ಸೇನ ಮತ್ತು ಸತ್ಯನಾರಾಯಣರ ತಲೆಯ ಮೇಲೆ ಹೊರಲಾರದಷ್ಟು ಭಾರ ಬಿದ್ದಿದೆ. ಇದನ್ನು ಸರಿಪಡಿಸದೆ ಇದ್ದರೆ, ಪುನಾರಚನೆ ಪೂರ್ಣವಾಗುವುದು ಹೇಗೆ?

ಶ್ರೀ ಎಚ್. ಸಿ. ದಾಸಪ್ಪನವರನ್ನು ಕೇಂದ್ರ ಮಂತ್ರಿಯಾಗಿ ನೇಮಿಸಿದಾಗ ಯಾರೂ ಆಕ್ಷೇಪವೆತ್ತಲಿಲ್ಲ. ಆದರೆ, ಸುವಿಖ್ಯಾತ ಇಂಜಿನಿಯರರಾಗಿ ನಿವೃತ್ತರಾದ ಡಾ. ಕೆ. ಎಲ್. ರಾವ್ ಮತ್ತು ವರಿಷ್ಠ ನ್ಯಾಯಾಧೀಶರಾಗಿ ನಿವೃತ್ತರಾದ ಶ್ರೀ ಮಹಮ್ಮದಾಲಿ ಕರೀಮ್‌ಭಾಯಿ ಛಗಲಾರನ್ನು ಶಿಕ್ಷಣ ಶಾಖಾ ಮಂತ್ರಿಯಾಗಿ ನೇಮಿಸಿದುದಕ್ಕೆ ಬಲವಾದ ಅಡ್ಡಿಯೆತ್ತಲಾಯಿತು. ಆದರಲ್ಲೂ ಛಗಲಾರ ನಿಯುಕ್ತಿಯು ತೀವ್ರವಾದ ಆತಂಕವನ್ನೆದುರಿಸಬೇಕಾಗಿತ್ತೆನ್ನಬೇಕು. ಕಳೆದ ಸಾರ್ವತ್ರಿಕ ಚುನಾವಣೆಯಲ್ಲಿ ರಾಜ್ಯ ಸಭೆಗೆ ಸ್ಪರ್ಧಿಸಿದ್ದ ಛಾಗ್ಲಾರು ಆಗಲೇ ಸಚಿವರಾಗುತಿದ್ದರು; ಪ್ರಾಯಃ ಆಗ ಸಮಯ ಪಕ್ವವಾಗಲಿಲ್ಲ; ಆದುದರಿಂದಲೇ ಬ್ರಿಟನ್ನಿನಲ್ಲಿ ಭಾರತದ ಹೈಕಮಿಶನರಾಗಿ ಹೋದರು. ನ್ಯಾಯಾಂಗದಲ್ಲಿ ನುರಿತ ಛಾಗ್ಲಾರು ಅಲ್ಲಿ ರಾಜಕಾರಣದಲ್ಲಿಯೂ ಪಳಗಿದರು; ಈಗ ಅವರು ಶಿಕ್ಷಣ ಶಾಖೆಯ ಕ್ಯಾಬಿನೆಟ್ ಮಂತ್ರಿಗಳಾದರು.

ಇವರ ನೇಮಕಕ್ಕೆ ಮುಂದೆ ಬರುವ ಆತಂಕಗಳು ಇವು: ಇವರು ಸರಕಾರಿ ಸೇವೆಯಲ್ಲಿದ್ದು ನಿವೃತ್ತಿ ಹೊಂದಿದವರು; ಸ್ವಾತಂತ್ರ್ಯ ಚಳವಳಿಯಲ್ಲಿ ಯಾವ ಪಾತ್ರವನ್ನೂ ವಹಿಸದವರು; ಕಾಂಗ್ರೆಸ್ಸಿನ ಗಂಧಗಾಳಿಯೂ ಇಲ್ಲದವರು;—ಇಂತಹವರನ್ನು ಒಮ್ಮಿಂದೊಮ್ಮೆಗೇನೇ ಪಕ್ಷಕ್ಕೆ ತೆಗೆದುಕೊಂಡು, ಉನ್ನತಾಧಿಕಾರಿಯಾಗಿ ಮಾಡುವುದು ಉತ್ತಮವಲ್ಲ. ಅಲ್ಲದೆ, ಶಿಕ್ಷಣ ಶಾಖೆಯನ್ನು ನೋಡಿಕೊಳ್ಳ ಛಗಲರಿಗಿಂತಲೂ ಅನುಭವಿಗಳೂ ಸಮರ್ಥರೂ ಆದವರು ಪಕ್ಷದಲ್ಲಿರುವಾಗ ಅನನುಭವಿಯನ್ನೇಕೆ ಕರೆಯಬೇಕು?

ಇದು ಸಮರ್ಥನೀಯವಾದ ವಾದವಲ್ಲ. ರಾಷ್ಟ್ರಪತಿ ಡಾ. ರಾಧಾಕೃಷ್ಣನ್ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿಲ್ಲ. ಅಥವಾ ಚಳುವಳಿಯಲ್ಲಿ ಭಾಗವಹಿಸುವುದೊಂದೇ ವಿಶಿಷ್ಟ ಯೋಗ್ಯತೆಯಲ್ಲ. ಸರಕಾರಿ ನೌಕರರಿದ್ದ ಮಾತ್ರಕ್ಕೆ ಅವರು ನಿವೃತ್ತರಾದ ಮೇಲೆ ಪ್ರಜಾಸತ್ತಾತ್ಮಕ ಪಕ್ಷಗಳನ್ನು ಸೇರಬಾರದೆಂದಿಲ್ಲ. ನ್ಯಾಯ ವಿದರಾದ ಛಗಲಾ ಕಾಂಗ್ರೆಸ್ ತತ್ವಗಳನ್ನು ಒಪ್ಪಿದ್ದಾರೆ; ಅನುಭವ ಸುಜ್ಞಾನದಿಂದ ಬರುತ್ತದೆ; ಅಲ್ಲದೆ ಇವರೇನೂ ಅರಿಯದ ಎಳೆ ಹರೆಯದವರಲ್ಲ. ಆದುದರಿಂದ ಇವರ ನಿಯುಕ್ತಿಯನ್ನು ವಿರೋಧಿಸಬೇಕಾದ ಆವಶ್ಯಕತೆಯಿಲ್ಲ.

ನ್ಯಾಯಾಧೀಶರಾಗಿ ಜಗದ್ವಿಖ್ಯಾತರಾದ ಛಗಲಾರಿಗೆ ನ್ಯಾಯ ಖಾತೆಯನ್ನೇ ಕೊಡಬೇಕಿತ್ತೆಂದು ಹೇಳುವವರೂ ಇದ್ದಾರೆ. ಇದು ಒಂದು ದೃಷ್ಟಿಯಿಂದ ಸಹಜ, ಅನುಭವವಿರುವ, ಹೊಕ್ಕುಬಳಕೆಯಿರುವ ಕೆಲಸವನ್ನು ಮಾಡುವುದು ವಿಶೇಷವಲ್ಲ. ಒಂದು ಕಾರ್ಯವನ್ನು ಹೊಸಬನೊಬ್ಬನು ಮಾಡುವುದಾದರೆ, ಆತನು ಪೂರ್ವಾಪರ ವಿವೇಚನೆಯಿಂದ ಮಾಡುತ್ತಾನೆ. ಹಾಗೆಯೇ ನ್ಯಾಯವಿದ ಛಗಲಾ ಶಿಕ್ಷಣ ಖಾತೆಯನ್ನು ವಹಿಸಿಕೊಂಡರೆ, ಅದರ ಕಾರ್ಯಕಲಾಪಗಳು ವಿವೇಕಯುತವಾಗಿಯೇ ನಡೆಯಲು ಅನುಕೂಲವಾಗುವುದು. ವಿಧಾನ ಸಭಾ ಸದಸ್ಯರಲ್ಲಿಯೂ ಮಂತ್ರಿ ಮಂಡಳಿಯ ಸದಸ್ಯರಲ್ಲಿಯೂ ವಿಖ್ಯಾತ ಡಾಕ್ಟರರಿದ್ದರೂ ಡಿ. ಎ. ಬಿ. ಶೆಟ್ಟರು ಮದ್ರಾಸದಲ್ಲಿ ಬಹು ವರ್ಷ ಆರೋಗ್ಯ ಮಂತ್ರಿಯಾಗಿ ಕೀರ್ತಿ ಗಳಿಸಿರುವುದನ್ನು ಮರೆಯಬಾರದು.

ಕೇಂದ್ರದ ನೂತನ ವಿದ್ಯಾಮಂತ್ರಿ
ಎಂ. ಸಿ. ಛಾಗ್ಲಾ

* * *

ಡಾ. ರಾಯ್ ಮತ್ತು ಛಗಲಾ ಇವರ ನೇಮಕಕ್ಕೂ ಅವರು ನೋಡಿಕೊಳ್ಳಬೇಕಾದ ಶಾಖೆಗಳಿಗೂ ಒಂದು ವೈಶಿಷ್ಟ್ಯವಿದೆ. ರಾವ್ ಇಂಜಿನಿಯರರಿದ್ದವರು; ಆಗ ಅವರು ನೀರಾವರಿ ಮಂತ್ರಿಯಾದುದು ಸಹಜ. ಛಗಲಾ ಶಿಕ್ಷಣ ಕ್ಷೇತ್ರಕ್ಕೆ ಅನನುಭವಿಗಳು. ತಮ್ಮ ಜವಾಬ್ದಾರಿಯನ್ನು ಅನುಭವವಿದ್ದವರು ಹೇಗೆ ನಿರ್ವಹಿಸುತ್ತಾರೆ, ಇಲ್ಲದೆ ಇದ್ದವರು ಎಲ್ಲಿ ಜಾರುತ್ತಾರೆ—ಎಂಬುದನ್ನು ನೆಹರು ಪರಿಶೀಲಿಸಲೆಂದೇ ಇವರಿಬ್ಬರನ್ನು ತನ್ನ ಸಂಪುಟದಲ್ಲಿ ಸೇರಿಸಿದರೆನ್ನಬಹುದೆ? ಇಬ್ಬರೂ ತಂತಮ್ಮ ಕರ್ತವ್ಯ ಪಾಲನೆಯಲ್ಲಿ ವಿಮುಖರಾಗರೆಂಬ ವಿಶ್ವಾಸ ಪಡಬಹುದು.

ನೀರಾವರಿ ಮತ್ತು ಶಿಕ್ಷಣಗಳೆರಡೂ ಮಹತ್ವದ ಮಂತ್ರಿ ಶಾಖೆಗಳು. ದೇಶದ ಸಂಪತ್ ಸಮೃದ್ಧಿಯ ಎರಡು ನಯನಗಳಿವು. ಇವೆರಡೂ ಸರಿಯಾಗಿ ಕಾರ್ಯನಿರ್ವಹಿಸಿದರೆ ಮಾತ್ರ ದೇಶದ ಭವಿಷ್ಯ ಸುಭದ್ರವಾದೀತು. ಆದುದರಿಂದಲೇ ಪ್ರಧಾನಿಯವರು ಪಕ್ಷದ ಹಳೆಯ ಸದಸ್ಯರನ್ನು ಒತ್ತಟ್ಟಿಗಿಟ್ಟು, ಸರಕಾರಿ ನೌಕರಿಯಿಂದ ನಿವೃತ್ತರಾದವರನ್ನೇ, ಕಾರ್ಯಕುಶಲರನ್ನೇ ಆಯ್ದುಕೊಂಡು, ಒಂದು ಆದರ್ಶವನ್ನು ಹಾಕಿಕೊಟ್ಟರು ಎಂದು ಭಾವಿಸಿದರೆ ತಪ್ಪಾಗದ.

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ
ಅತ್ಯಂತ ಪ್ರಯೋಜನಕಾರಿ ಪುಸ್ತಕ—
ಮನೆ-ಮದ್ದು
(HOME REMEDIES)
ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಕಿರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು
ನವಭಾರತ ಪುಸ್ತಕ ಭಂಡಾರ, ಉಡುಪಿ.

READ &
ADVERTISE IN
NAVAYUGA WEEKLY

NAVAYUGA
Kannada Weekly
UDIPI
Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ

ವರುಷ	ಉಡುಪಿ	ವಾರ
೪೩	೨೮-೧೧-೧೯೬೩	೧೩

ಪ್ರಯೋಗ ಮಂದಿರ

ಒಂದು ಸ್ವತಂತ್ರ ದೇಶದಲ್ಲಿ ಆದರ ಸಂಸ್ಕೃತಿಗೆ ಅನುಗುಣವಾದ ಶಿಕ್ಷಣವನ್ನು ಜನತೆಗೆ ನೀಡಬೇಕೆಂಬುದು ನ್ಯಾಯ. ಪ್ರಜಾಸತ್ತಾತ್ಮಕ ಕಲ್ಯಾಣ ರಾಷ್ಟ್ರದ ಕನಸು ಕಾಣುತ್ತಿರುವ ಭಾರತದಲ್ಲಿಯಾದರೂ ಜನಜಾಗೃತಿಯನ್ನುಂಟು ಮಾಡಿ, ಉತ್ತಮ ತಿಳುವಳಿಕೆ, ಮತ್ತು ಸರ್ವಸಮತಾ ಭಾವಗಳನ್ನು ಮಕ್ಕಳಲ್ಲಿ ಹುಟ್ಟಿಸಿ,ದೇಶದ ಸ್ವಾತಂತ್ರ್ಯವನ್ನು ಭದ್ರಪಡಿಸಲು ಉತ್ತಮ ರಾಷ್ಟ್ರೀಯರನ್ನಾಗಿ ಅವರನ್ನು ರೂಪಿಸುವ ಶಿಕ್ಷಣ ಬೇಕಾಗಿದೆ. ಇದು ಉಪದೇಶದಿಂದಾಗಲೀ, ಗ್ರಂಥ ರಚನೆಯಿಂದಾಗಲೀ ಆಗುವ ಕೆಲಸವಲ್ಲ. ಮಗು ಮಗುವಿನಲ್ಲೂ ಇಂತಹ ಉಜ್ವಲ ಭಾವನೆಯನ್ನು ಆರಂಭದಿಂದಲೇ ಹುಟ್ಟಿಸಬೇಕಾಗುತ್ತದೆ. ತನ್ನ ಮಾತೃಭೂಮಿಯ ಮೇಲೆ ಪ್ರೀತಿ, ಗೌರವ, ಸಂಸ್ಕೃತಿಯ ಮೇಲೆ ಆದರ, ಜ್ಞಾನ ಸಂಪಾದನೆಯಲ್ಲಿ ಕಳಕಳಿ, ಅಧ್ಯಯನ— ಪರಿಶ್ರಮಗಳಲ್ಲಿ ತೀವ್ರಾಸಕ್ತಿ— ಇವು ವಿದ್ಯಾರ್ಥಿಯಲ್ಲಿರಲೇಬೇಕಾದ ಆವಶ್ಯಕ ಗುಣಗಳು. ಆದುದರಿಂದ ಮಗುವಿಗೆ ನೀಡುವ ಶಿಕ್ಷಣವು ಪರಿಣಾಮಕಾರಿಯಾಗಿ ಈ ಗುಣೋಪೇತವಾಗಿದ್ದರೆ ಮಾತ್ರ ಇಚ್ಛಿತ ಲಾಭಗಳಿಸಬಹುದು. ಇದಕ್ಕಾಗಿ ಶಿಕ್ಷಣರಂಗದಲ್ಲಿ ಶಾಂತತೆಯಿರುವುದು ಅತ್ಯಗತ್ಯ.

ಶಿಕ್ಷಣ ಕ್ಷೇತ್ರದಲ್ಲಿ ವ್ಯರ್ಥವಾದ ಯಾವ ಕ್ರಮವೂ ಇರುವಂತಾಗಬಾರದು. ಮುಂದಿನ ನಾಗರಿಕರನ್ನು ರೂಪಿಸುವ ಈ ರಂಗದಲ್ಲಿ ಸ್ಥಿರತೆಯಿಲ್ಲದೆ ಹೋದರೆ, ಅದು ಬಿರುಗಾಳಿಗೆ ಸಿಕ್ಕ ನಾವೆಯಂತೆ ದಿಕ್ಕುಪಾಲಾಗಿ ಛಿದ್ರ ಛಿದ್ರವಾಗುವುದು. ಇಂದು ದೇಶದ ಯಾವುದೇ ಕ್ಷೇತ್ರದಲ್ಲಾಗದ ಗಡಿಬಿಡಿ, ಹುಟ್ಟಿದ ಗೊಂದಲದ ವಾತಾವರಣವು ಈ ಪವಿತ್ರ ಕ್ಷೇತ್ರದಲ್ಲಿ ಉದ್ಭವಿಸಿದೆ—ಇದು ಭೂಷಣಪ್ರಾಯವಲ್ಲ. ಶಿಕ್ಷಣದ ಹೊಣೆಗಾರಿಕೆಯನ್ನು ಸರಕಾರವು ಹೊತ್ತುಕೊಂಡಿದೆ, ವಿಶ್ವವಿದ್ಯಾನಿಲಯಗಳೂ ಈ ಹೊಣೆಯಲ್ಲಿ ಒಂದು ಪಾಲನ್ನು ಪಡೆದಿವೆ. ಆದರೆ, ಅಲ್ಲಿ ನಡೆಯುತ್ತಿರುವ ಗೊಂದಲಕ್ಕೆ ಶಿಕ್ಷಣತಜ್ಞರೂ ರಾಜಕಾರಣಿಗಳಂತೆಯೇ ಜವಾಬ್ದಾರರು. ವಿದೇಶೀಯ ಆಡಳಿತಗಾರರ ಅವಧಿಯಲ್ಲಿಯೇ ವಿದ್ಯಾಬುದ್ಧಿ ಕಲಿತ ಈ ತಜ್ಞರು ಸ್ವತಂತ್ರ ಭಾರತದ ಮಕ್ಕಳನ್ನು ಪ್ರಯೋಗಕ್ಕೆ ಗುರಿಮಾಡುತ್ತ ಪವಿತ್ರ ಶಿಕ್ಷಣ ಕ್ಷೇತ್ರವನ್ನು ಪ್ರಯೋಗ ಮಂದಿರವೆಂದು ತಿಳಿದುಕೊಂಡಿದ್ದಾರೆ. ಇದರಿಂದಾಗಿಯೇ ಶಿಕ್ಷಣ ಪ್ರಣಾಳಿಯಲ್ಲಿ ಪದೇ ಪದೇ ಪರಿವರ್ತನೆಗಳಾಗುತ್ತಿದ್ದು ಅಸ್ಥಿರತೆಯ ಕಾರಣದಿಂದ ಅದು ಯಾವ ಉದ್ದೇಶವನ್ನೂ ಸಾಧಿಸದಂತಾಗಿದೆ ಈ ಬಗೆಯ ಸದಾ ಡೋಲಾಯಮಾನ ದುಸ್ಥಿತಿಯಿಂದ ಈ ರಂಗವನ್ನು ನಾವು ತಪ್ಪಿಸಿ ಯಾವುದಾದರೂ ಒಂದು ವಿಧಾನವನ್ನೇ ಸಾಕಷ್ಟು ಪರಿಶೀಲನೆಗೆ ಬಿಟ್ಟುಕೊಟ್ಟು, ಅದರ ಪರಿಣಾಮವನ್ನು ನಿರೀಕ್ಷಿಸುವುದಾದರೆ, ಸರಿಯಾಗಬಹುದು. ಫೆಡರಲ್ ಮಾದರಿಯ ನಮ್ಮ ದೇಶದಲ್ಲಿ ಶಿಕ್ಷಣದ ಶಾಖೆಯು ರಾಜ್ಯ ಸರಕಾರದ ಅಧೀನದಲ್ಲಿದೆ. ಇಡಿಯ ದೇಶಕ್ಕೆ ಸಂಬಂಧಿಸಿದಂತೆ ಶಿಕ್ಷಣಕ್ರಮ ರೂಪಿಸಲು ಕೇಂದ್ರದಲ್ಲಿಯೂ ಮಂತ್ರಿಯೊಬ್ಬನಿದ್ದಾನೆ. ಆದರೆ, ಶಿಕ್ಷಣ ತಜ್ಞರ ಅಭಿಪ್ರಾಯವನ್ನು ಕೇಳದೆ ಕೇಂದ್ರ ಮತ್ತು ರಾಜ್ಯ ಸರಕಾರಗಳು ಸಾಮಾನ್ಯವಾಗಿ ಯಾವ ಬದಲಾವಣೆಗಳನ್ನೂ ಮಾಡುವುದಿಲ್ಲ. ಆದುದರಿಂದ ಈ ವಿಭಾಗದಲ್ಲಿರುವ ಎಲ್ಲ ಲೋಪದೋಷಗಳಿಗೆ ರಾಜಕಾರಣಿಗಳಿಗಿಂತಲೂ ಹೆಚ್ಚಾಗಿ ಇಂತಹ ತಜ್ಞರೇ ಕಾರಣವೆಂದು ಹೇಳಬಹುದಾಗಿದೆ.

ದೇಶವು ಸ್ವತಂತ್ರವಾದ ಮೇಲೆ ಇಲ್ಲಿನ ನಾಗರಿಕರು ಪಡೆಯುವ ಶಿಕ್ಷಣದ ಪುನರ್ಘಟನೆಗೆ ಪ್ರಾರಂಭವಾಯಿತು. ಆದರೆ, ದುರ್ದೈವದ ಸಂಗತಿಯೆಂದರೆ, ಈ ಪುನರ್ಘಟನೆಯು ಇನ್ನೂ ಪರಿಪೂರ್ಣತೆಯನ್ನು ಪಡೆಯದಿರುವುದು. ಇಂದು ನಮ್ಮ ಶಿಕ್ಷಣ ಕ್ಷೇತ್ರದಲ್ಲಿ ನಿರ್ಧಾರವಾಗಬೇಕಾದ ಮುಖ್ಯಾಂಶವೆಂದರೆ, ಶಿಕ್ಷಣವು ಎಷ್ಟು ಸಮಯವಿದ್ದಿರಬೇಕು ಮತ್ತು ಅದನ್ನು ಹೇಗೆ ವಿಂಗಡಿಸಬೇಕು ಎಂಬುದು ಪ್ರಥಮ. ಪದವಿ ಪಡೆಯುವುದಕ್ಕೆ ಮೊದಲು ವಿದ್ಯಾರ್ಥಿಯು ಕನಿಷ್ಠ ೧೪ ವರ್ಷಗಳ ಶಿಕ್ಷಣ ಸಾಕೆಂಬ ಒಂದು ಅಭಿಪ್ರಾಯ ೧೯೫೫ರಲ್ಲಿ ಹೊರಪಟ್ಟಿರೆ, ಇದೀಗ ಆ ಅವಧಿಯು ೧೫ ವರ್ಷಗಳದ್ದಿರಬೇಕೆಂಬ ನಿರ್ಧಾರವು ಬಂದಿದೆ. ಅದರ ಮೇಲೆ ಪ್ರಾಥಮಿಕ, ಲೋವರ್ ಸೆಕೆಂಡರಿ, ಹಾಯರ್ ಸೆಕೆಂಡರಿ ಮತ್ತು ವಿಶ್ವವಿದ್ಯಾಲಯದ ಶಿಕ್ಷಣವೀಯುವ ವರ್ಗಗಳು ಹೇಗೆ ವಿಭಜಿತವಾಗಬೇಕು ಎಂಬುದರ ಬಗ್ಗೆಯೂ ಹಲವಾರು ಭಿನ್ನಾಭಿಪ್ರಾಯಗಳು ಹುಟ್ಟಿವೆ. ಇಂದು ಒಂದೊಂದು ರಾಜ್ಯದಲ್ಲಿ ಒಂದೊಂದು ಅವಧಿಯ ಶಿಕ್ಷಣ ದೊರೆಯುತ್ತಿದೆ. ಶಿಕ್ಷಣದ ಅವಧಿಯು ಏಕರೂಪವೊಂದಕ್ಕೆ ಬರಬೇಕಾದರೆ, ಎಲ್ಲ ರಾಜ್ಯಸರಕಾರಗಳೂ ಏಕರೀತಿಯ ಶಿಕ್ಷಣ ಪ್ರಣಾಳಿಯನ್ನು ರೂಪಿಸುವುದು ಆಗತ್ಯವಾಗಿದೆ. ಇದಕ್ಕಿಂತ ಕೇಂದ್ರ ಸರಕಾರವೇ ಈ ಶಾಖೆಯನ್ನು ವಹಿಸಿಕೊಳ್ಳುವುದು ಉತ್ತಮವೆನಿಸುತ್ತದೆ. ಸದ್ಯ ಕೇಂದ್ರದ ಆಶಯವನ್ನು ಕಾರ್ಯರೂಪಕ್ಕೆ ತರುವ ಅಥವಾ ಬಿಡುವ ಅಧಿಕಾರವು ರಾಜ್ಯಸರಕಾರಕ್ಕಿದೆ. ಇದರಿಂದಾಗಿ ಅದರ ಸಲಹೆಯನ್ನು ಕೇಳಿದವರು ಕೆಲವರಾದರೆ ಮೀರಿದವರು ಮತ್ತೆ ಕೆಲವರು. ಹೀಗಾಗಿಯೇ ವಿಲಕ್ಷಣತೆಯು ಗೋಚರವಾಗುತ್ತದೆ ಶಿಕ್ಷಣದ ಗುರಿಯನ್ನು ಮೊದಲು ಗುರುತಿಸಿ, ಎಲ್ಲವರೂ ಈ ಗುರಿಸಾಧನೆಯ ದಾರಿಯಲ್ಲಿನ ಆತಂಕಗಳನ್ನು ದೂರಮಾಡಿ, ಕಾರ್ಯ ಪ್ರವೃತ್ತರಾಗಬೇಕು. ಇದಕ್ಕೆಂದೇ ಎಲ್ಲೆಡೆಯೂ ಏಕರೂಪದ ಶಿಕ್ಷಣಾವಧಿಯಿರಬೇಕು; ಶಾಶ್ವತವಾದ ನೀತಿಯನ್ನು ಸ್ವೀಕರಿಸಿ, ಬಾಲಕರನ್ನು ಗೊಂದಲದಿಂದ ಉಳಿಸಬೇಕು; ಕೇಂದ್ರಕ್ಕೆ ಇಷ್ಟೊಂದು ಅಧಿಕಾರವಿರಬೇಕೆನಿಸುತ್ತದೆ. ಇಲ್ಲವೇ ರಾಜ್ಯಗಳ ಮೇಲೆ ಒತ್ತಾಯ ಹೇರಬೇಕಾಗುವುದು. ಆದುದರಿಂದ ಸರಕಾರವೂ ಶಿಕ್ಷಣತಜ್ಞರೂ ಒಂದಾಗಿ ಬಾಲವಧೆಯಾಗುತ್ತಿರುವುದನ್ನು ನಿಲ್ಲಿಸಬೇಕು. ಹೀಗಾದರೆ ಮಾತ್ರ ಪ್ರಜಾಸತ್ತೆಯ ಭವಿಷ್ಯ ನೆಟ್ಟಗಾಗಬಹುದು; ಇಲ್ಲವಾದರೆ, ಶಿಕ್ಷಣರಂಗವು ಹುಚ್ಚರ ರಾಜ್ಯವಾಗಬಹುದು.

ಜಗತ್ಪರ್ಯಟನ

ಕನ್ನಂವಾರ್

ಸರಕಾರದ ಕಾರ್ಯಗಳು ವಿಲಂಬವಾಗುತ್ತಿರುವುದು ಬ್ರಿಟಿಷರ ಕಾಲದಿಂದಲೂ ಅಂಟಿಕೊಂಡ ರೋಗ. ಇಂದು ಈ ರೋಗದ ಪ್ರಭಾವವೂ ರೋಗಿಗಳ ಸಂಖ್ಯೆಯೂ ಅಧಿಕವಾಗಿದೆಯೆಂದು ಖಂಡಿತಕ್ಕೂ ಹೇಳಬಹುದು. ಜನತೆಗಾಗಿ ಜನತೆಯಿಂದಲೇ ಪ್ರಶಾಸನ ನಡೆಯುವಲ್ಲಿ ಹೀಗಾಗುವುದು ನಾಚಿಕೆ. ಆದುದರಿಂದಲೇ ಕನ್ನಂವಾರರು ತಾನು ಅಧಿಕಾರಕ್ಕೆ ಬಂದ ಎರಡನೆಯ ವರ್ಷದಲ್ಲಿ ಒಂದು ಸುತ್ತು ಅಧಿಕಾರಕ್ಕೆ ಬಂದಿದ್ದಾರೆ: ತಾಲೂಕು ಮಟ್ಟದಲ್ಲಿ ರೈತರ ಸಭೆಗಳನ್ನು ಅನುಕ್ರಮವಾಗಿ ಕರೆದು, ಅವರ ನ್ಯಾಯೋಚಿತ ಕೇಳಿಕೆಗಳಿಗೆ ಅಲ್ಲಲ್ಲೇ ತೀರ್ಮಾನ ಕೊಡುವ ಆಲೋಚನೆ ಇದು. ಹೆಚ್ಚಿನ ವಿಚಾರಣೆ ಬೇಕಾದ ಅಗತ್ಯವಿದ್ದಲ್ಲಿ ಮಾತ್ರ ತೀರ್ಮಾನ ಬಾಕಿಯುಳಿಯಬಹುದು. ತ್ವರಿತ ನಿರ್ಣಯ ಕೈಗೊಳ್ಳಬಲ್ಲ ಅಧಿಕಾರಿಗಳು ನಮಗಿಂದು ಬೇಕಾಗಿದ್ದಾರೆ ಎಂದು ಹಿಂದೊಮ್ಮೆ ಗೃಹಮಂತ್ರಿಯಾಗಿದ್ದ ಶಾಸ್ತ್ರಿ ಅಂದಿದ್ದರು. ಕನ್ನಂವಾರರು ಅವರ ಇಂಗಿತವನ್ನರಿತುಕೊಂಡು ಅದನ್ನು ಅನುಷ್ಠಾನಕ್ಕೆ ತರಲು ಸನ್ನದ್ಧರಾದರು. ಆದರೆ ಅವರ ಈ ಸದಾಲೋಚನೆಯು ಕಾರ್ಯಕೃತವಾಗುತ್ತಿದೆ ಯೆನ್ನುವಷ್ಟರಲ್ಲಿಯೇ ಅವರು ಅಂತಿಮಶ್ವಾಸವನ್ನೆಳೆದರು. ೬೩ ವರ್ಷ ಪ್ರಾಯದ ಕನ್ನಂವಾರ್ ಮೃತರಾದರು ನಿಜ; ಆದರೆ, ಅವರ ಯೋಜನೆಯು ಎಲ್ಲ ರಾಜ್ಯಗಳಲ್ಲಿಯೂ ಜ್ಯಾರಿಗೊಂಡರೆ, ಕಾಮರಾಜರಿಗಿಂತಲೂ ಮನ್ನಣೆ ಪಡೆದೇ ಪಡೆಯುತ್ತದೆ.

ಜಾನ್‌ಸನ್

ಅಮೆರಿಕನ್ ಅಧ್ಯಕ್ಷ ಜಾನ್‌ಎಫ್.ಕೆನೆಡಿಯವರು ಗುಂಡಿಗಾಹುತಿಯಾದುದರಿಂದ ಅದುವರೆಗೆ ಉಪಾಧ್ಯಕ್ಷರಾಗಿದ್ದ ಲಿಂಡನ್ ಜಾನ್ಸನ್ನರು ಅಧ್ಯಕ್ಷ ಗದ್ದುಗೆಯನ್ನೇರಿದರು. ೪೬ ವರ್ಷದ ಕೆನೆಡಿಯವರ ವಿದೇಶ ನೀತಿಯನ್ನೇ ಅವರ ಉತ್ತರಾಧಿಕಾರಿಯಾಗಿ ಬಂದ ೫೫ ವರ್ಷದ ತಾವೂ ಅನುಸರಿಸುವುದಾಗಿ ಅವರು ಘೋಷಿಸಿದ್ದಾರೆ. ಹಿಂದೆ ಅಧಿಕಾರದಲ್ಲಿದ್ದ ಮಂತ್ರಿಗಳಾಗಲೀ ರಾಜದೂತರಾಗಲೀ ರಾಜಿನಾಮೆ ಸಲ್ಲಿಸಬೇಕಾಗಿಲ್ಲವೆಂದೂ ತಂತಮ್ಮ ಹಿಂದಿನ ಕಾರ್ಯಗಳನ್ನೇ ಮಾಡುತ್ತ ಹೋಗಬೇಕೆಂದೂ ಅವರು ಕೇಳಿಕೊಂಡಿದ್ದಾರೆ; ಹಾಗಿರುವಾಗ ಅಮೇರಿಕನ್ ನೀತಿಯಲ್ಲಿ ಪರಿಣಾಮಕಾರಿಯಾದ ಪರಿವರ್ತನೆ ಘಟಿಸಲಾರದೆನಿಸುತ್ತದೆ. ಅನಭಿವೃದ್ಧ ರಾಷ್ಟ್ರಗಳ ಆರ್ಥಿಕ ಪುನಾರಚನೆ ಮತ್ತು ವಿಶ್ವಶಾಂತಿಗಳಿಗಾಗಿ ಹೆಸರುಪಡೆದ ಕೆನೆಡಿಯವರ ಧೋರಣೆಯನ್ನೇ ಜಾನ್ಸನರೂ ಮುಂದುವರಿಸುವ ಆಶಯದಿಂದ ಕೂಡಿದ್ದಾರೆ. ಆದರೆ, ಆಗ ಅವರು ಕೆನಡಿಯವರಂತೆಯೇ ಉತ್ತರಿಸಲು ಸುಲಭಗ್ರಾಹ್ಯವಲ್ಲದ ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಗಬಹುದೆ? ಅವೆಲ್ಲವನ್ನೂ ನಂಜುಂಡನಂತೆ ಅರಗಿಸಿ ದಿಟ್ಟತನದಿಂದ ಮುಂದುವರಿವಾರೆ?—ಎಂದು ಎಲ್ಲರೂ ಕೇಳುವ ಪ್ರಶ್ನೆಗೆ ಭವಿಷ್ಯವೇ ಉತ್ತರ ಹೇಳಬೇಕು. ಆದರೂ ಎಲ್ಲರೂ ಅವರಲ್ಲಿ ಆಶಾವಾದವನ್ನಿಟ್ಟುಕೊಂಡಿದ್ದಾರೆ—ಲೋಕದ ಆಶೆಯು ಈಡೇರಲಿ.

ಓಸ್ವಾಲ್ಡ್

ಅಧ್ಯಕ್ಷ ಕೆನ್ನೆಡಿಯವರ ಕೊಲೆಯು ಪೂರ್ವನಿಯೋಜಿತವೆಂಬುದೀಗ ವೀಕ್ಷಕರಿಗೆ ಮನದಟ್ಟಾಗುತ್ತಿದೆ. ಅವರನ್ನು ಕೊಲೆಗೈದ ಓಸ್ವಾಲ್ಡನೂ ಕ್ಲಬ್ಬೊಂದರ ಮಾಲಕ ರೂಬಿಯಿಂದ ಕೊಲ್ಲಲ್ಪಟ್ಟದ್ದು ವಿಸ್ಮಯವಲ್ಲವಾದರೂ ಪೋಲೀಸ್ ಠಾಣೆಯಲ್ಲಿಯೇ ಎಲ್ಲರ ಸಮ್ಮುಖದಲ್ಲಿಯೇ ಇಂತಹ ಕಾರ್ಯ ನಡೆದುದು ಮಾತ್ರ ಸಂದೇಹಕ್ಕೆಡೆಗೊಡುತ್ತದೆ. ಟೆಕ್ಸಾಸ ಜನತೆಯು ಕಳೆದುಕೊಂಡ ಸಂಬಂಧವನ್ನು ಮರು ಬೆಸೆಯಲು ಡಲ್ಲಸ್ ನಗರಕ್ಕೆ ಬಂದಿದ್ದ ಕೆನೆಡಿಯವರು ಪರಮಾತ್ಮನ ಸಂಬಂಧವನ್ನೇ ಬೆಳೆಸುವಂತೆ ಮಾಡಿದ ಓಸ್ವಾಲ್ಡನು ಮೃತನಾದುದರಿಂದ ಆವನು ಮಾಡಿದ ಕೊಲೆಯ ರಹಸ್ಯ ಸ್ಫೋಟವಾಗುವುದು ಕಷ್ಟಸಾಧ್ಯ, ಆದರೂ ಹೊಸ ಅಧ್ಯಕ್ಷ ಜಾನ್ಸನ್ ವಿಚಾರಣೆಯನ್ನು ಮುಂದುವರಿಸುವಂತೆ ಆಜ್ಞೆಯಿತ್ತಿದ್ದಾರೆ. ಭವಿಷ್ಯದಲ್ಲಿ ಏನಾಗುವುದೋ ಯಾರು ಬಲ್ಲರು?

ಸಾಹುಕಾರ್, ಸುಬ್ರಹ್ಮಣ್ಯಂ

ಹಳೆಯ ಮೈಸೂರಿನ ಹಳೆಯ ಹುಲಿಗಳು ಮರಳಿ ಗರ್ಜಿಸತೊಡಗಿವೆ. ತಮ್ಮನ್ನು ನಿಷ್ಠಾವಂತ ಕಾಂಗ್ರೆಸಿಗರೆಂದೂ ಗಾಂಧೀ ತತ್ವಾನುಯಾಯಿಗಳೆಂದೂ ಕೊಂಡಾಡಿಕೊಳ್ಳುವ ಇವರು ಕಾಂಗ್ರೆಸ್ ಸಂಸ್ಥೆಯು ಅಕ್ರಮ – ಅನ್ಯಾಯ— ಹೊಲಸುಗಳಿಂದ ತುಂಬಿದೆಯೆಂದೂ ಇದನ್ನು ಸರಿಪಡಿಸುವುದು ಅಸಾಧ್ಯವೆಂದೂ ಆದುದರಿಂದ ಕಾಂಗ್ರೆಸ್ಸಿನಿಂದ ಹೊರಬಂದು ಅದಕ್ಕೆ ಪ್ರತಿಸ್ಪರ್ಧಿಯಾದ ಹೊಸ ಪಕ್ಷವೊಂದನ್ನು ಕಟ್ಟಬೇಕೆಂದೂ ಅಭಿಮತಪಡುತ್ತಾರೆ. ಹೀಗೆ ಹೇಳುವವರಲ್ಲಿ ತುರುವೇಕೆರೆ ಸುಬ್ರಹ್ಮಣ್ಯಂ ಮತ್ತು ಸಾಹುಕಾರ್ ಚೆನ್ನಯ್ಯನವರು ಅಗ್ರಗಣ್ಯರು. ಅಧಿಕಾರ ಕಳೆದುಕೊಂಡ ಈ ಮಹಾ ವ್ಯಕ್ತಿಗಳು ಪ್ರದರ್ಶಿಸುವ ಕಾಂಗ್ರೆಸ್ ನಿಷ್ಠೆ ಪ್ರಶಂಸನೀಯವಲ್ಲ, ಪ್ರೋತ್ಸಾಹನೀಯವೂ ಅಲ್ಲ. "ಈಸಬೇಕು, ಈಸಿ ಜೈಸಬೇಕು, ಹೇಸಿಗೆ ಕಾಂಗ್ರೆಸ್ಸಿನಲ್ಲಿ ಪಾಪಲೇಪ ಬಾರದ ಹಾಗೆ" ಹೀಗೆ ಈಸಿದರೆ ಮಾತ್ರ ಅವರ ನಿಷ್ಠೆ ಸಾರ್ಥಕವಾಗುವುದು.

ಅಲ್ಲಲ್ಲಿಯ ಸುದ್ದಿ ಸಾರ

ಉಡುಪಿಯಲ್ಲಿ ಕಲಾಪ್ರದರ್ಶನ— ಮುಂದಿನ ಎಪ್ರಿಲು ತಿಂಗಳಲ್ಲಿ ಉಡುಪಿಯಲ್ಲಿ, ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಚಿತ್ರ ಮತ್ತು ಶಿಲ್ಪ ಕಲಾವಿದರ ಕೃತಿಗಳ ಬೃಹತ್ ಪ್ರದರ್ಶನವೊಂದನ್ನು ಕೈಗೊಳ್ಳುವ ಸಿದ್ಧತೆಗಳು ನಡೆಯುತ್ತಿವೆ. ಕೆನರಾ ಜಿಲ್ಲೆಗಳಲ್ಲಿ ಈ ವರೆಗೆ ನಡೆಯದ ರೀತಿಯಲ್ಲಿ ಪ್ರಥಮ ವಿಯುಕ್ತವಾಗಿ, ಕ್ರಮಬದ್ಧವಾಗಿ ಈ ಪ್ರದರ್ಶನದ ಏರ್ಪಾಟು ನಡೆಯುತ್ತಿದ್ದು, ದಕ್ಷಿಣ, ಉತ್ತರ ಕನ್ನಡ ಜಿಲ್ಲೆಗಳ ಕಲಾವಿದರೆಲ್ಲರಿಗೂ ಪ್ರದರ್ಶನದಲ್ಲಿ ಭಾಗವಹಿಸಲು ಮನವಿಪತ್ರಗಳು ಇಷ್ಟರಲ್ಲೇ ಹೋಗಿವೆ. ಸುಮಾರು 100 ಕ್ಕೂ ಮಿಕ್ಕಿದ ಕಲಾಸಿರಿಯ, ಕಿರಿಯ ಕಲಾವಿದರು ಪ್ರದರ್ಶನದಲ್ಲಿ ಭಾಗವಹಿಸುವ ನಿರೀಕ್ಷೆ ಇದ್ದು, 250ಕ್ಕೂ ಮಿಕ್ಕಿದ ಕಲಾಕೃತಿಗಳು ಪ್ರದರ್ಶಿತವಾಗುವ ಅಂದಾಜಿದೆ.

ಈ ಪ್ರದರ್ಶನವು ಉಡುಪಿಯ ಸಂಗೀತ ಸಭೆಯ ಆಶ್ರಯದಲ್ಲಿ ನಡೆಯಲಿದ್ದು, ಕಾರ್ಯಕ್ರಮದ ವಿರ್ವಹಣೆಗಾಗಿ, ಕನ್ನಡ ಜಿಲ್ಲೆಗಳ ಕಲಾಭಿಮಾನಿಗಳಿಂದ ಮತ್ತು ಕಲಾವಿದರಿಂದ ಕೂಡಿದ ಒಂದು ಪ್ರಾತಿನಿಧಿಕ ಸಮಿತಿಯು ರಚಿಸಲ್ಪಟ್ಟಿದೆ. ಮಣಿಪಾಲದ ಅಕಾಡೆಮಿ ಆಫ್ ಜನರಲ್ ಎಜುಕೇಶನ್" ಸಂಸ್ಥೆಯು ಪ್ರದರ್ಶನಕ್ಕೆ ತಗಲುವ ಬಹುಭಾಗದ ವೆಚ್ಚವನ್ನು ವಹಿಸಲು ನಿರ್ಧರಿಸಿದೆ.

ಪ್ರದರ್ಶನದ ವೇಳೆ ಕಲಾಗೋಷ್ಠಿಯೊಂದನ್ನು ಏರ್ಪಡಿಸುವ ಯೋಜನೆ ಇದ್ದು, ಅದರಲ್ಲಿ ಭಾಗವಹಿಸಲು ಕಲಾವಿದರನ್ನೂ, ಕಲಾವಿಮರ್ಶಕರನ್ನು ಆಮಂತ್ರಿಸಲಾಗುವುದು. ಗೋಷ್ಠಿಯಲ್ಲಿ, ಕನ್ನಡ ಜಿಲ್ಲೆಗಳಲ್ಲಿ ಕಲಾಭಿವೃದ್ಧಿಯನ್ನು ಸಾಧಿಸುವ ಬಗ್ಗೆ ಹಾಗೂ ಈ ಜಿಲ್ಲೆಗಳಿಗೊಂದು ಪ್ರಾತಿನಿಧಿಕ ಕಲಾಸಂಸ್ಥೆಯೊಂದನ್ನೂ, ಕಲಾ ಶಾಲೆಗಳನ್ನೂ, ಸ್ಥಾಪಿಸುವ ಬಗ್ಗೆ, ವಿಚಾರ ವಿನಿಮಯ ಮಾಡಿ ಸರಕಾರದ ನೆರವನ್ನು ಪಡೆದು, ಅದನ್ನು ಕಾರ್ಯರೂಪಕ್ಕಿಳಿಸುವ ಪ್ರಯತ್ನ ಮಾಡಲಾಗುವುದು. ಈ ಪ್ರದರ್ಶನದಲ್ಲಿ ಬಾಲಕರ ಕಲಾಪ್ರದರ್ಶನದ ವಿಭಾಗವೊಂದನ್ನು ತೆರೆಯಲಾಗುವುದು ಅಲ್ಲದೆ 16 ವರ್ಷಗಳ ಕೆಳಗಿನ ವಯಸ್ಸಿನ ಬಾಲಕರಿಗಾಗಿ ಕಲಾ ಸ್ಪರ್ಧೆಯನ್ನು ಇಡಲಾಗುವುದು. ಚಿತ್ರಕಲೆ ಮತ್ತು ಶಿಲ್ಪಗಳಿಗೆ ಸಂಬಂಧಿಸಿದ ಗ್ರಂಥಗಳ ಪ್ರದರ್ಶನದ ವಿಭಾಗವೊಂದನ್ನು ಕೂಡಾ ತೆರೆಯಲಾಗುವುದು.

ಪ್ರದರ್ಶಿತವಾಗುವ ಕಲಾಕೃತಿಗಳನ್ನು ಪಡೆಕೊಳ್ಳಲು ಮತ್ತು ಪ್ರದರ್ಶನದಲ್ಲಿ ಭಾಗವಹಿಸುವ ಕಲಾವಿದರ ಪ್ರತಿಭೆಯನ್ನು ಗುರುತಿಸಿ, ಅವರಿಂದ ಕೃತಿಗಳನ್ನು ರಚಿಸಿ, ಅವರನ್ನು ಉತ್ತೇಜಿಸಲು ನಾಡಿನ ವಿವಿಧ ಭಾಗಗಳ ಸಂಘಗಳನ್ನೂ, ಮ್ಯೂಸಿಯಮ್‌ಗಳ ಅಧಿಕಾರಿಗಳನ್ನೂ, ಸರಕಾರದ ಒಡೆತನದಲ್ಲಿರುವ ಸಂಸ್ಥೆಗಳನ್ನೂ ಕೇಳಿಕೊಳ್ಳಲಾಗುವುದು.

ದೇಶದ ಹಿರಿಯ ಕಲಾವಿದರ, ವಿಮರ್ಶಕರ ಬರಹಗಳನ್ನೊಳಗೊಂಡ ಹೊತ್ತಗೆಯೊಂದು ಸಿದ್ಧವಾಗುತ್ತಿದ್ದು, ಅದರ ಉದ್ಘಾಟನೆಯೂ ಈ ಸಂದರ್ಭದಲ್ಲಿ ನಡೆಯಲಿರುವುದು ಅಲ್ಲದೆ, ಕಲೆಯ ಕುರಿತಾದ ಸುಂದರ ಕೈಹೊತ್ತಗೆಗಳನ್ನು ಪ್ರಕಾಶಿಸಿ, ಪ್ರದರ್ಶನಕ್ಕೆ ಎರಡು ತಿಂಗಳ ಮುಂಚೆಯೇ ಕನ್ನಡ ಜಿಲ್ಲೆಗಳ ಜನರಿಗೆ ಉಚಿತವಾಗಿ ಹಂಚಿ, ಕಲಾ ವಿಷಯಕವಾದ ಜಾಗೃತಿಯನ್ನು ಉಂಟುಮಾಡುವ ಯೋಜನೆಯು ಸಮಿತಿಯ ಮುಂದಿದೆ.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 301/1963

ರುಕ್ಮಿಣಿ ಅಮ್ಮ — ವಾದಿಳು

ಮತ್ತು ಕನಲ ಸೆಟ್ಟಿ ಕೂಡಾ—ಪ್ರತಿವಾದಿಗಳು

ಇವರೊಳಗೆ

3ನೇ ಪ್ರತಿವಾದಿ—ರಘುರಾಮ ಸೆಟ್ಟಿ — ಸಂಕಮ್ಮ ಸೆಟ್ಟಿ ಮಗ —

5 ಸದಾಶಿವ ಸೆಟ್ಟಿ—ಶೀತಮ್ಮ ಶೆಟ್ಟಿ ಮಗ—

ಉಡ್ಪಿ ತಾಲೂಕು ಉಪ್ಪೂರು ಗ್ರಾಮ—

ಇವರಿಗೆ ತಿಳಿಯಪಡಿಸುವದೇನೆಂದರೆ:—

ವಾದಿಳು—ಈದಿನ ಅಸಲು ಬಡ್ಡಿಗೆ— ದಾಕ್ಲು ಮಾಡಿದ ಮೇಲ್ಕಂಡ ದಾವೆಯು ತಾ. 12—12—63ಕ್ಕೆ ತನ್ನಿ ಬಗ್ಗೆ ಇಡೋಣಾಗಿಯದೆ. ಆ ಕುರಿತು ಸದ್ರಿ 3-5ನೆ ಪ್ರತಿವಾದಿರಿಗೆ ಆಕ್ಷೇಪ ಹೇಳತಕ್ಕದ್ದು ಇದ್ರೆ ಸದ್ರಿ ದಿವ್ಸ ಮೇಲ್ಕಂಡ ಕೋರ್ಟಿ ಮುಂದೆ 11 ಗಂಟೆಗೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲ್ಕ ತಿಳಿಸೋಣಾಗಿಯದೆ.

N. V. Kamath,
Advocate for Plaintiff.

ಉಡ್ಪಿ, 25-11-1963.

ದಿ| ಎ. ಬಿ. ಶೆಟ್ಟಿರ ಜನ್ಮ ದಿನಾಚರಣೆ— ಇದೇ ತಾ. 14ರಂದ, ಮಂಗಳೂರಿನ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ವೆಂಕಪ್ಪ ಪೂಂಜ ಸಭಾ ಭವನದಲ್ಲಿ, ಶ್ರೀ ಎ ಬಿ. ಶೆಟ್ಟಿರ 82ನೇ ಜನ್ಮ ದಿನವನ್ನು ಶ್ರೀ ಎಂ. ಎಸ್. ಏಕಂಬರ್ ರಾಯರ ಅಧ್ಯಕ್ಷತೆಯಲ್ಲಿ ಜರಗಿಸಲಾಯಿತು.

ಪ್ರಾರಂಭದಲ್ಲಿ ಕಾರ್ಯದರ್ಶಿ ಶ್ರೀ ಎಸ್. ಆರ್. ಹೆಗ್ಡೆಯವರು ಸ್ವಾಗತಿಸಿದರು. ಗೌರವ ಸುಪರಿಂಟೆಂಡೆಂಟ್ ಶ್ರೀ ಪಿ. ಎಸ್. ತಿಮ್ಮಪ್ಪ ಶೆಟ್ಟರು ಅತಿಥಿಗಳ ಪರಿಚಯ ಮಾಡಿಕೊಟ್ಟರು. ಬಳಿಕ ದಾ| ಎಂ ವಿ. ಬಾರಿ, ಟಾ| ಎಚ್. ಎಸ್. ನಾಯಕ್, ಶ್ರೀಮತಿ ಕಲ್ಯಾಣಿ ಬಿ ಶೆಟ್ಟಿ, ಮತ್ತು ಡಾ| ಬಾಬು ಶೆಟ್ಟಿ, ಇವರು ಮಾತಾಡುತ್ತಾ ದಿ| ಶೆಟ್ಟರು ಸಾಧಿಸಿದ ಕಾರ್ಯಗಳ ವಿವರಣೆ ಕೊಡುತ್ತಾ, ವಿದ್ಯಾರ್ಥಿಗಳು ಅವರ ಆದರ್ಶವನ್ನರಿಸಿಕೊಂಡು ಮುಂದುವರಿಯಬೇಕೆಂದರು. ಸೆಕ್ರೆಟರಿ ಶ್ರೀ ಕೆ. ಕೆ. ರೈಗಳು ಸಂದೇಶ ವಾಚಿಸಿದರು. ಜತೆಕಾರ್ಯದರ್ಶಿ ಶ್ರೀ ಎಚ್. ಸುಧಾಕರ ಶೆಟ್ಟರು ಧನ್ಯವಾದ ಸಮರ್ಪಿಸಿದರು.

ಉದ್ಘಾಟನೆ— ಮಹಿಳಾ ಸಮಾಜದಿಂದ ನಡೆಸಲ್ಪಡುವ ಗ್ರಾಮೀಣ ಹೆರಿಗೆ ಮತ್ತು ಶಿಶು ಸಂಗೋಪನಾ ಕೇಂದ್ರಗಳ ಪತಿಯಿಂದ ನವಂಬರ 14ರಂದು ಬಾಲವಾಡಿ ಮತ್ತು ಕೈಗಾರಿಕಾ ಕೇಂದ್ರವೊಂದು ಶ್ರೀ ಟಿ ರಮೇಶ ಯು. ಪೈಯವರಿಂದ ಉದ್ಘಾಟಿಸಲ್ಪಟ್ಟಿತು. ಶ್ರೀ ಎಂ. ಮಧ್ವರಾಜ, ಎಂ. ಎಲ್. ಎ.ಯವರು ಸಭಾಧ್ಯಕ್ಷತೆ ವಹಿಸಿದರು. ಶ್ರೀ ಎಂ. ಸದಾನಂದ ಶೆಟ್ಟರು ಸ್ವಾಗತ ಭಾಷಣ ಮಾಡಿದರು ಶ್ರೀ ಮರ್ಣೆ ಗೋವಿಂದ ಶೆಟ್ಟರು ಸಂಘಯೋಜಕ ಭಾಷಣವಿತ್ತರು ಬ್ಲೋಕ್ ಡೆವಲಪ್ ಆಫೀಸರ್ ಶ್ರೀ ಕೊರಗಪ್ಪನವರು ಶಿಶು ಪ್ರದರ್ಶನದ ವಿಜಯಿಗಳಿಗೆ ಪಾರಿತೋಷಕ ವಿತರಣೆ ಮಾಡಿದರು.

ಗೃಹ ಪ್ರವೇಶ— ರಾಯಚೂರು ಜಿಲ್ಲಾ ದೇವದುರ್ಗದಲ್ಲಿ ವಡಬಿಪ್ರ ನಡೆಸಾಲುಗುತ್ತು ಡಾ. ರಘುನಾಥ ಶೆಟ್ಟರು ಕಟ್ಟಿಸಿದ 'ಲಕ್ಷ್ಮೀಕೃಪಾ' ಎಂಬ ನೂತನ ಗೃಹದ ಪ್ರವೇಶ ಸಮಾರಂಭವು ಇದೇ ತಾ. 16ರಂದು ವಿಶ್ವಪೂರ್ವಕ ವಿಜೃಂಭಣೆಯಿಂದ ನೆರವೇರಿತು. ಸಾವಿರಾರು ಜನರಿಗೆ ಅನ್ನಸಂತರ್ಪಣೆಯೂ ನಡೆಯಿತು.

ಜೀವವಿಮಾ ಚಿತ್ರ ಪ್ರದರ್ಶನ— ಮಣಿಪಾಲದ ಎಕೆಡೆಮಿ ರಿಜಿಸ್ಟ್ರಾರ್ ಡಾ. ಟಿ. ಎಂ. ಎ. ಪೈಗಳ ಅಧ್ಯಕ್ಷತೆಯಲ್ಲಿ ಮಂಗಳೂರು ಸರಕಾರೀ ಕಾಲೇಜಿನ ಸಭಾಭವನದಲ್ಲಿ ಜಿಲ್ಲಾಧಿಕಾರಿ ಶ್ರೀ ಕೆ. ಆರ್. ರಾಮಚಂದ್ರನವರಿಂದ ತಾ. 23ರಂದು, ಜೀವವಿಮಾ ಚಿತ್ರ ಪ್ರದರ್ಶನವೊಂದು ಉದ್ಘಾಟಿಸಲ್ಪಟ್ಟಿತು. ಪ್ರಾರಂಭದಲ್ಲಿ ಶ್ರೀಮತಿ ಲೀಲಾ ಬ್ಯಾಬಾಳಿಗಾರರಿಂದ ಪ್ರಾರ್ಥನೆಯಾದ ಬಳಿಕ ಉಡುಪಿ ಡಿವಿಜನಲ್ ಮೆನೇಜರ್ ಶ್ರೀ ಟಿ. ಆರ್. ಎ. ಪೈಗಳು ಸ್ವಾಗತಿಸಿದರು. ಶ್ರೀ ರಾಮಚಂದ್ರನವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಎಲ್. ಐ. ಸಿ.ಯ ಧ್ಯೇಯಗಳನ್ನು ಶ್ಲಾಘಿಸುತ್ತಾ ಚಿತ್ರ ಪ್ರದರ್ಶನದಿಂದ ಇದರ ಪ್ರಚಾರ ಸಾಧ್ಯವಾಗಬಹುದೆಂದು ತಿಳಿಸಿದರು. ಮಂಗಳೂರಿನ ಬ್ರಾಂಚ್ ಮೆನೇಜರ್ ಶ್ರೀ ಪಿ. ಎಸ್. ರಾಮರಾವ್‌ರವರು ಸಮಾರಂಭಕ್ಕೆ ಶುಭಕೋರಿ ಬಂದ ಸಂದೇಶಗಳನ್ನೋದಿದರು. ಡಾ. ಪೈಗಳು ಮಾತಾಡುತ್ತಾ ಜೀವವಿಮೆಯ ಪ್ರಯೋಜನಗಳನ್ನು ತಿಳಿಸಿದರು.

ಬೀಳ್ಕೊಡುವ ಸಭೆ— ಉಡುಪಿಯ ಯಕ್ಷಗಾನ ಪರಿಷತ್ತಿನ ಕಾರ್ಯಾಲಯದಲ್ಲಿ ಯಕ್ಷಗಾನ ಕಲಾ ಶಿಕ್ಷಣವನ್ನೊದಗಿಸುತ್ತಿದ್ದ ಶ್ರೀ ಉಡುಪಿ ಬಸವ ನಾಯ್ಕರು ಯಕ್ಷಗಾನ ಸಂಚಾರಕ್ಕೆ ಹೊರಡುವ ಸಂದರ್ಭದಲ್ಲಿ ಉಡುಪಿ ನಗರ ಸಭೆಯ ಉಪಾಧ್ಯಕ್ಷ ಶ್ರೀ ಮಂಜುನಾಥ ಮಧ್ಯಸ್ಥರ ಅಧ್ಯಕ್ಷತೆಯಲ್ಲಿ ವಿದಾಯ ಸತ್ಕಾರ ನಡೆಯಿತು. ಕಾರ್ಯದರ್ಶಿ ಶ್ರೀ ಶಾ. ಬಾ. ಉಪಾಧ್ಯಾಯರು ಸ್ವಾಗತಿಸಿದ ಬಳಿಕ ಶ್ರೀಗಳಾದ ಕೆ. ಪ್ರಭಾಕರ ಪೈ, ಯು. ವಾಸುದೇವ ಆಚಾರ್ಯ ಇವರು ಬಸವ ನಾಯ್ಕರ ಕಲಾಪ್ರತಿಭೆಯನ್ನು ಕೊಂಡಾಡಿದರು. ಶ್ರೀ ಎ. ಜಿ. ಅಲ್ಸೆಯವರು ಗುರುದಕ್ಷಿಣಾ ರೂಪದಲ್ಲಿ ನಿಧಿಯನ್ನು ಅರ್ಪಿಸಿದರು. ಬಸವ ನಾಯ್ಕರು ಶಿಷ್ಯ ವೃಂದಕ್ಕೆ ಶುಭ ಕೋರಿದರು. ಅಧ್ಯಕ್ಷರು ಶ್ರೀ ನಾಯ್ಕರ ಹಿರಿಮೆಯನ್ನು ಶ್ಲಾಘಿಸಿ ಉಜ್ವಲಭವಿಷ್ಯ ಕೋರಿದರು.

ಕಾರ್ಕಳ ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ— ತಾ. 11 ಮತ್ತು 26ರಲ್ಲಿ ಉಡುಪಿ ಕಲಾ ಮಂಡಳಿಯಿಂದ "ಸುಗ್ರೀವ ಸಖ್ಯ" ಮತ್ತು "ಸೀತಾ ಸಂದರ್ಶನ"ವೆಂಬ ಕಥಾ ಭಾಗಗಳು ಅಭಿನಯಿಸಲ್ಪಟ್ಟವು. ಶ್ರೀ ಉದ್ಯಾವರ ವಿಠಲಾಚಾರ್ಯರ ಆಂಜನೇಯ ಪಾತ್ರವು ಉಪಸ್ಥಿತರಿದ್ದ ಗುರುತ್ರಯ ಮಠಾಧೀಶರ ಮೆಚ್ಚುಗೆಗೆ ಪಾತ್ರವಾಯಿತಲ್ಲದೆ ಗುರುತ್ರಯರು ಅವರಿಗೆ ಉಡುಗೊರೆಗಳನ್ನಿತ್ತು ಆಶೀರ್ವದಿಸಿದರು.

ಮಕ್ಕಳ ದಿನಾಚರಣೆ— ಮಣಿಪಾಲದ ಹಿರಿಯ ಬುನಾದಿ ಶಾಲೆಯಲ್ಲಿ ಶ್ರೀ ಎಚ್. ಜಿ. ಕೆದ್ಲಾಯರ ಅಧ್ಯಕ್ಷತೆಯಲ್ಲಿ ಮಕ್ಕಳ ದಿನಾಚರಣೆ ಜರಗಿತು. ಮುಖ್ಯ ಅಧ್ಯಾಪಕ ಶ್ರೀ ಪಾ ಲ ನಾ ಉಪಾಧ್ಯಾಯರು ಸ್ವಾಗತಿಸಿದರು. ಶಾಲಾ ಮಕ್ಕಳಲ್ಲಿ ಕುಮಾರಿಯರಾದ ವಸಂತಿ, ನಿರ್ಮಲಾ ಪಡಿಯಾರ್, ಶಾರದಾ ರಾವ್ ಮೊದಲಾದವರು ಮಾತನಾಡಿದರು. ಶ್ರೀ ಎಸ್. ಎಲ್. ಭಂಡಾರ್‌ಕಾರರು ಆ ದಿನದ ಮಹತ್ವವನ್ನು ವಿವರಿಸಿದರು. ಅಧ್ಯಕ್ಷರು ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನ ವಿತರಣೆ ಮಾಡಿ ಭಾಷಣವಿತ್ತ ಬಳಿಕ ವಿವಿಧ ಮನೋರಂಜನಾ ಕಾರ್ಯಕ್ರಮಗಳಾದುವು.

ಯುವಕ ಮಂಡಲದ ಉದ್ಘಾಟನೆ— ಉಡುಪಿ ಬ್ರಹ್ಮಶ್ರೀ ಗುರುನಾರಾಯಣ ಯುವಕ ಮಂಡಲದ ಉದ್ಘಾಟನೆಯನ್ನು ತಾ. 21ರಂದು ಬನ್ನಂಜೆ ಶ್ರೀ ಗುರುನಾರಾಯಣ ಸಭಾ ಭವನದಲ್ಲಿ ಡಾ. ಟಿ. ಎಂ. ಎ. ಪೈಯವರು ಶ್ರೀ ದಯಾನಂದ ಆರ್. ಕಲ್ಯಾ, ಎಂ. ಎಲ್. ಎ ಇವರ ಅಧ್ಯಕ್ಷತೆಯಲ್ಲಿ ನೆರವೇರಿಸುತ್ತಾ ಜಾತಿಯ ಸಂಸ್ಥೆಗಳ ಮೂಲಕ ಸಾಮಾಜಾಭಿವೃದ್ಧಿ ಬಯಸುವುದೇನೂ ದೋಷವಲ್ಲವೆಂದರು. ಆರಂಭದಲ್ಲಿ ಸಂಘದ ಅಧ್ಯಕ್ಷ ಶ್ರೀ ಎ. ವಿಶ್ವನಾಥನವರು ಸ್ವಾಗತಿಸಿದರು. ಸಂಘದ ಸಂಚಾಲಕ ಶ್ರೀ ಎಂ. ಸುಬ್ಬ, ಬಿ. ಎ., ಅವರು ಸಂಘದ ಧ್ಯೇಯೋದ್ದೇಶಗಳನ್ನು ವಿವರಿಸಿದರು. ಶ್ರೀ ಕೆ. ವಿಟ್ಠಪ್ಪ, ಬಿ ಎ. ಎಲ್. ಟಿ ಯವರು ಶ್ರೀ ಗುರು ನಾರಾಯಣ ಸ್ವಾಮಿಯವರ ತೈಲ ಚಿತ್ರವನ್ನು ಅನಾವರಣ ಮಾಡಿದರು. ಸಭಿಕರಲ್ಲಿ ಶ್ರೀಗಳಾದ ಎಸ್. ಕಾಳಪ್ಪ ಜತನ್ನ, ಸೋಮಪ್ಪ ಸುವರ್ಣ, ಭೋಜ ಅಂಚನ್, ಎಮ್. ರಂಗ ಇವರು ಭಾಷಣ ಮಾಡಿದರು. ಅಧ್ಯಕ್ಷರ ಭಾಷಣದ ನಂತರ ಧನ್ಯವಾದಗಳೊಂದಿಗೆ ಸಭೆ ಮುಕ್ತಾಯವಾಯಿತು.

ಸುಬ್ರಹ್ಮಣ್ಯ ಷಷ್ಠಿ— ಇದೇ ತಾರೀಕು 12-12-63ರಂದ, ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ ಉತ್ಸವವು ಪ್ರಾರಂಭವಾಗಿ ತಾ. 15ರಲ್ಲಿ ಲಕ್ಷದೀಪೋತ್ಸವ, ತಾ. 20ರಲ್ಲಿ ಹೂವಿನ ತೇರು ಉತ್ಸವ, ತಾ. 21 ರಲ್ಲಿ ಪಂಚಮಿ ರಥೋತ್ಸವ, ತಾ. 22ರಲ್ಲಿ ಚಂಪಾಷಷ್ಠಿ ಮಹಾ ರಥೋತ್ಸವ, ತಾ. 23 ರಲ್ಲಿ ಅವಭೃತೋತ್ಸವಾದಿಗಳು ಜರಗಲಿವೆ.

ಟ್ಯುಟೋರಿಯಲ್ ಕೊಲೇಜ್ ಉದ್ಘಾಟನೆ— ಇದೇ ತಾ. 23ರಂದು ವಿಶ್ವಜ್ಞಾನ ಸಾಸಗ ಟ್ಯುಟೋರಿಯಲ್ ಕೊಲೇಜಿನ ಉದ್ಘಾಟನೆಯು ಉಡುಪಿಯಲ್ಲಿ ಶ್ರೀ ಕೆ. ವಿಟ್ಠಪ್ಪನವರ ಅಧ್ಯಕ್ಷತೆಯಲ್ಲಿ ಶ್ರೀ ನರಸಿಂಹ ಆಚಾರ್ಯರಿಂದ ನೆರವೇರಿಸಲ್ಪಟ್ಟಿತು. ಡಾ. ಕಲ್ಯಾಣದರು ಸ್ವಾಗತಿಸಿದರು. ಶ್ರೀ ಯು ಎಂ. ಮಧ್ಯಸ್ಥ ಮೊದಲಾದವರು, ಕೊಲೇಜಿಗೆ ಶುಭ ಕೋರಿ ಮಾತನಾಡಿದರು.

ಮೌನ ಕಾರ್ಯಸಾಧಕ— ಶ್ರೀ ಕೆ. ಕೆ. ಪೈ

ಬ್ಯಾಂಕಿಂಗ್ ಉದ್ದಿಮೆಯಲ್ಲಿ ಚಾಣಾಕ್ಷರಾದ ಶ್ರೀ ಕೆ. ಕಮಲಾಕ್ಷ ಪೈಯವರು ಕಲೆ, ಶಿಕ್ಷಣ, ಸಾಮಾಜಿಕ ಚಟುವಟಿಕೆ, ಮೊದಲಾದ ಉಪಯುಕ್ತ ಕ್ಷೇತ್ರಗಳನ್ನೂ ತುಳಿಯುತಿದ್ದಾರೆ ಎಲ್ಲರ ರಕ್ತಗತವಾಗುತ್ತಿರುವ ರಾಜಕಾರಣವಾದರೂ ಅವರನ್ನು ಬಿಟ್ಟಿರುವುದಿಲ್ಲ. ಉಡುಪಿಯಲ್ಲಿ ಕಾಂಗ್ರೆಸ್‌ನ ಕೋಟೆಯನ್ನು ಉಳಿಸಿಕೊಳ್ಳುವಲ್ಲಿ ಇವರು ಪಟ್ಟ ಶ್ರಮ ಅವರಿಗೇನೇ ಗೊತ್ತು. ನಗರ ಸಭಾಧ್ಯಕ್ಷನಾಗಿದ್ದಾಗ, ನಗರಕ್ಕೆ ಯಾವ ರೀತಿಯ ಸೇವೆ ಸಲ್ಲಿಸಬಹುದು ಎಂಬುದನ್ನು ತೋರಿಸಿ ಕೊಟ್ಟವರು ಅವರು. ಸಿಂಡಿಕೇಟ್ ಬೇಂಕಿನ ಡಿಪ್ಯುಟಿ ಚೀಫ್ ಆಫೀಸರರಾದ ಇವರು ಕೆ ಕೆ. ಪೈ ಎಂದೇ ಪ್ರಸಿದ್ಧರಾದವರು ಮೌನ ಕಾರ್ಯಸಾಧನೆಯಲ್ಲಿ ಇವರದು ಎತ್ತಿದ ಕೈ. ಇವರ ಕೈವಾಡ ಬಿರುಗಾಳಿಯಂತೆ ಬೋರ್ಗರೆದು ಬರುವುದಿಲ್ಲ. ಮಂದಸುಗಂಧ ಮಾರುತನಂತೆ ಪ್ರಸನ್ನನಗಲಿಗೆ ಅವ್ಯಕ್ತಮಾನವಾಗಿ ಬೀಸುತ್ತದೆ. ಎಲ್ಲರೊಡನೆಯೂ ಮುಗುಳ್ನಗೆಯಿಂದಲೇ ಮಾತನಾಡುವ ಇವರು 'ಮಾತು ಕಡಿಮೆ; ಕೃತಿ ಹೆಚ್ಚು' ಎಂಬ ಸಿದ್ಧಾಂತವನ್ನು ಅನುಷ್ಠಾನಕ್ಕೆ ತಂದವರು. ಸದ್ಯ, ಉಡುಪಿಯಲ್ಲಿ ಪುರಂದರದಾಸರ ನಾಲ್ಕನೆಯ ಶತಸಾಂವತ್ಸರೀಕೋತ್ಸವವನ್ನು ವೈಭವೋಪೇತವಾಗಿ ಆಚರಿಸಲು ನಿರ್ಧರಿಸಿದ ಸಂಗೀತ ಸಭೆಯು ವ್ಯಕ್ತ ಉಠಕ್ರಮಕ್ಕೆ ಅದರ ಅಧ್ಯಕ್ಷ ಶ್ರೀ ಪೈಗಳವರ ಕಲಾಪ್ರೇಮವೇ ಪ್ರೇರಕ ಶಕ್ತಿ; ಅದನ್ನು ಮುನ್ನಡೆಸುವ ಶಕ್ತಿ. ಮೌನ ಕಾರ್ಯಸಾಧಕ ಶ್ರೀ ಪೈಯವರ ಬಹುಮುಖ ಪ್ರತಿಭೆ ಮತ್ತು ಆಸಕ್ತಿಗಳನ್ನು ಜನತೆ ಮರೆಯಬಾರದ; ಮರೆಯಲಾರದು.

ಲೋಕಸೇವಾ ಹೈಸ್ಕೂಲು— ತಾ. 20ರಂದು ಡಾ. ಜಿ. ಜಯರಾಮ ಶಾಸ್ತ್ರಿಯವರು ವಿದ್ಯಾರ್ಥಿಗಳನ್ನುದ್ದೇಶಿಸಿ ನೀತಿ, ನಡತೆ ಮತ್ತು ಆರೋಗ್ಯಯುತ ಜೀವನದ ಆವಶ್ಯಕತೆಯ ಕುರಿತು ಭಾಷಣವಿತ್ತರು. ಲೋಕಸೇವಾ ಸಂಘದ ಕಾರ್ಯಕ್ರಮಗಳಿಗೆ ಮೆಚ್ಚಿಗೆಯನ್ನು ವ್ಯಕ್ತಪಡಿಸಿದರು.

ಲೋಕಸೇವಾ ಹೈಸ್ಕೂಲು ಮತ್ತು ಹಾ. ಪ್ರಾ. ಶಾಲೆಗಳಲ್ಲಿ ಮಕ್ಕಳ ದಿನಾಚರಣೆಯು ಶ್ರೀ ಎಂ. ನಾರಾಯಣ ಭಟ್ಟರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ನೆರವೇರಿತು.

ಪುಸ್ತಕ ವಿಮರ್ಶೆ

[ವಿಮರ್ಶೆಗಾಗಿ ಪುಸ್ತಕಗಳನ್ನು ಕಳ ಹಿಸುವವರು ಎರಡೆರಡು ಪ್ರತಿಗಳನ್ನು ಕಳ ಸಬೇಕಾಗಿ ವಿನಂತಿ —ಸಂ. ನ]

ಮಣ್ಣಿನ ಮೂರ್ತಿಗಳು—ಮೂಲ: ಶ್ರೀ ರಾಮವೃಕ್ಷ ಬೇನಿಪುರಿ ಅನುವಾದ: ಶ್ರೀ ಎಸ್. ಕೃಷ್ಣ ಪ್ರಕಾಶಕರು: ಸಾಹಿತ್ಯ ಅಕಾಡೆಮಿಯ ಪರವಾಗಿ ಪ್ರತಿಭಾ ಗ್ರಂಥಮಾಲೆ, ಧಾರವಾಡ. ಪುಟಗಳು: ೧೫೦ ಬೆಲೆ: ರೂ. ೨=೫೦.

ನಗರಗಳ ದಾಂಧಲೆಯನ್ನೇ ಮುಖ್ಯ ವಿಷಯವಾಗಿ ಸಾಹಿತ್ಯಕಾರರು ಬರೆಯಲು ತೊಡಗಿ ಅಲ್ಲಿನ ಥಳಕನ್ನೇ ಬಾಹ್ಯಾಡಂಬರವನ್ನೇ ಮೆಲುಕು ಹಾಕುತ್ತಿರುವ ಇಂದಿನ ದಿನಗಳಲ್ಲಿ ನಿರಾಡಂಬರ ಗ್ರಾಮೀಣ ವ್ಯಕ್ತಿಗಳ ಜೀವನವನ್ನು ಕಡೆಗಣಿಸುತ್ತಾರೆ. ಇಲ್ಲಿ ಬೇನಿಪುರಿಯವರು ಗ್ರಾಮ ಗ್ರಾಮಗಳಲ್ಲಿಯೂ ನಮಗೆ ಕಾಣಬರುವ ೧೨ ಮೂರ್ತಿಗಳ ಆತ್ಮಚರಿತ್ರವನ್ನು ನಮ್ಮ ಮುಂದಿರಿಸಿದ್ದಾರೆ ಈ ಮೂರ್ತಿಗಳು ಮಣ್ಣಿನವಾದರೂ ಸಜೀವವಿವೆ; ಅವುಗಳ ಮುಖದಲ್ಲಿ ಗಂಭೀರತೆಯು ತುಂಬಿ ತುಳುಕಾಡುತ್ತದೆ

ರಜಿಯಾಳ ನಿರ್ವ್ಯಾಜ ಪ್ರೇಮ, ಬಲದೇವಸಿಂಹರ ಬಾಹುಬಲ, ಪರೋಪಕಾರದಿಂದಲೇ ತೊಳಲಾಟಕ್ಕೆ ಸಿಕ್ಕಿ ಬಿದ್ದ ಸರಜೂ ಭೈಯಾ, ಸ್ವಾಭಿಮಾನಿಯಾದ ಮಂಗರ್, ಲೋಕಾಪವಾದಕ್ಕೆ ಪಕ್ಕಾದ ರೂಪಳ ಅಜ್ಜ, ಆತ್ಮಾಭಿಮಾನಿ ದೇವ್, ಗ್ರಾಮಸೇವಕ ಬಾಲ್ ಗೋಬಿನ್ ಭಗತ್, ವಂದನಾರ್ಹ ಅತ್ತಿಗೆ, ಮಾಲಿಕ್ ಹೈ ಸಿಯರಾಮ್ ಎಂದು ದೃಢವಾಗಿ ನಂಬಿದ ಪರಮೇಸರ್, ಎತ್ತನ್ನು ತಂದು ದುಡ್ಡು ಉಳಿಸಿ ಆರಂಭ ಮಾಡ ಹೋಗಿ ಆಯುಷ್ಯವನ್ನೇ ಜೇಲಿನಲ್ಲಿ ಕಳೆದ ಬೈಜೂ ಮಾಮಾ, ಗೋಬಲಿಯನ್ನು ತಡೆಯ ಹೋಗಿ ಪ್ರಾಣ ಬಲಿ ಅರ್ಪಿಸಿದ ಸುಭಾನ್‌ಖಾನ್ ಮತ್ತು ಹಿರಿಯ-ತಾಯಿ ಬುಧಿಯಾ—ಇವರ ವಿಭಿನ್ನ ಬದುಕಿನ ಚಿತ್ರಗಳು ನಮ್ಮ ಮನಸ್ಸನ್ನು ಆಕರ್ಷಿಸುತ್ತವೆ. ಸಜೀವ ಮೂರ್ತಿಗಳ ಚರಿತ್ರೆಯನ್ನು ಉದ್ದಾಮ ಹಿಂದೀ ಸಾಹಿತಿ ಬೇನಿಪುರಿಯವರು ಬರೆದಿದ್ದಾರೆ; ಅವರ ಕಥನಕ್ರಮ ಆದರ್ಶವಿದೆ; ಹೃದಯಸ್ಪರ್ಶಿಯಾಗಿದೆ. ಮೂಲದ ಸರ್ವಗುಣ ಸಂಪನ್ನತೆಯನ್ನೂ ಉಳಿಸಿಕೊಂಡಿದೆ, ಕನ್ನಡದ ಅನುವಾದ. ಕನ್ನಡದಲ್ಲಿಯೂ ಸಾಮಾನ್ಯರಂತಿರುವ ವಿಶಿಷ್ಟ ವ್ಯಕ್ತಿ ಚಿತ್ರಗಳು ಎಳೆಯಲ್ಪಟ್ಟಿವೆಯಾದರೂ ಅವುಗಳ ಸಂಖ್ಯೆ ಅತ್ಯಲ್ಪ. ನಿರಾಡಂಬರ ಸರಳ ಆದರ್ಶ ಜೀವಿಗಳ ವೃತ್ತವು ಮನರಂಜನೆಯೊಂದಿಗೆ ನಮ್ಮ ದಲಿತ ಜನಸಮುದಾಯದ ಪರಿಚಯವನ್ನೂ ಮಾಡಿ ಕೊಡಬಲ್ಲುದು ಸಹಜತೆ, ಸತ್ಯತೆ ಮತ್ತು ಉದಾರ ಚರಿತೆಗಳಿಗೆ ಹೆಸರಾದ ಬೇನಿಪುರಿಯವರ ಮಣ್ಣಿನ ಮೂರ್ತಿಗಳನ್ನು ಕಾಣುವಾಗ, ಅವುಗಳಿಂದ ಪ್ರಭಾವಿತವಾಗದೆ ಅದನ್ನು ನಮಸ್ಕರಿಸದೆ ಮುಂದುವರಿಯುವುದು ಅಸಾಧ್ಯ. ಅನ್ಯಭಾಷಾ ಸಾಹಿತ್ಯದಿಂದ ಎರವಲು ತಂದ ಕೃತಿಯಾದರೂ ಕನ್ನಡ ಸಾಹಿತ್ಯದಲ್ಲಿ ಇದೊಂದು ತೇಜಸ್ವೀತಾರಕೆಯೆಂದು ಧೈರ್ಯವಾಗಿ ಹೇಳಬಹುದು. ಇಂತಹ ಅನೂದಿತ ಕೃತಿಗಳು ಸದಾ ಸ್ವಾಗತಾರ್ಹವೇ.

ನಗೆದೀವಿಗೆ—ಬರೆದವರು: ಶ್ರೀ ಎನ್. ವಿ. ರಾವ್. ಪ್ರಕಾಶಕರು: ಪ್ರಗತಿ ಪಬ್ಲಿಕೇಶನ್ಸ್, ಬೆಂಗಳೂರು—೧೧. ಪುಟಗಳು. ೧೩೨ ಬೆಲೆ: ರೂ. ೧=೫೦.

ನಗುತ್ತಿರುವ ಹೂವನ್ನು ಕಂಡರೆ ಅವ್ಯಕ್ತಾನಂದವಾಗುವಂತೆಯೇ ನಗುವ ಮಕ್ಕಳನ್ನು ಕಂಡರೂ ಬ್ರಹ್ಮಾನಂದವಾಗುವುದು. ನಗುವು ಸಹಜದ ಧರ್ಮ, ನಗಿಸುವುದು ಪರಧರ್ಮ. ಅದರಿಂದಲೇ ನಗುವಿಗೆ ಅಗ್ರಸ್ಥಾನ ನಮ್ಮ ಜೀವನದಲ್ಲಿದೆ. ನಗುವುದಕ್ಕೆ ವಿಷಯವು 'ಗಂಭೀರ'ವಾಗಿಯೇ ಇರಬೇಕಾಗಿಲ್ಲ. ದಿನನಿತ್ಯ ನಾವೂ ಹಲವಾರು ನಗೆಯೂಟದ ಸನ್ನಿವೇಶವನ್ನು ಎದುರಿಸುತ್ತೇವೆ; ಆದರೆ, ಅದರ ಉಪಯೋಗವನ್ನು ಎಷ್ಟು ಜನ ಮಾಡಿಕೊಳ್ಳುತ್ತೇವೆ? ನಗುವ ಅವಕಾಶವನ್ನು ಎಂದಿಗೂ ಕಳೆದುಕೊಳ್ಳದ ಶ್ರೀ ಎನ್. ವಿ. ರಾಯರು ತಾನು ನಕ್ಕು ಉಳಿದವರನ್ನೂ ನಗಿಸುವ ಪ್ರಯತ್ನವನ್ನು ಮಾಡುತ್ತ ಬಂದಿದ್ದಾರೆ. ಅವರ 'ವಕ್ರದೃಷ್ಟಿ' ಇದರ ಒಂದು ಹಂತವಾದರೆ, ಅದರ ಮುಂದಿನ ಸೋಪಾನ 'ನಗೆದೀವಿಗೆ'

'ನಗೆ ದೀವಿಗೆ'ಯು ತನ್ನ ೨೦ ನಾಲಿಗೆಗಳಿಂದ ನಗೆಯ ಬೆಳಕನ್ನು ಸುತ್ತ ಹರಡುತ್ತದೆ ಅನುಭವದ ಸನ್ನಿವೇಶಗಳನ್ನು ತಮ್ಮ ಚಮತ್ಕಾರಿಕ ಆದರೆ, ಸರಳವಾದ ತಿಳಿಭಾಷೆಯಲ್ಲಿ ಚಿತ್ರಿಸಿ, ನವುರಾದ ಹಾಸ್ಯದ ಒರತೆಯನ್ನು ಚಿಮ್ಮಿಸಿದ್ದಾರೆ ಶ್ರೀ ರಾಯರು. ಸಮಾಜದ ರೂಢಿ-ಶಿಸ್ತು, ನೀತಿ-ನಡವಳಿಗಳ ಮೇಲೆ ವ್ಯಂಗ್ಯ ಬಾಣವನ್ನು ಬಿಟ್ಟು ವಿಚಾರಕ್ಕೊಂದು ಪ್ರಚೋದನೆ ಕೊಡುವಂತಿವೆ ಇಲ್ಲಿನ ಪ್ರತಿಯೊಂದು ಬರಹಗಳು. ಶ್ರೀ ರಾಯರ ಈ ಕೃತಿಯು ಅವರ ಹಿಂದಿನ ಕೃತಿಗಳಂತೆಯೇ ಜನಪ್ರಿಯವಾಗುವುದರಲ್ಲಿ ಸಂದೇಹವಿಲ್ಲ. ಕೆಲವೇ ನಗು ಬರಹಗಾರರ ನಡುವೆ ಶ್ರೀ ರಾಯರೂ ಉಜ್ವಲತಾರೆಯಾಗಿ ಬೆಳಗಲಿ.

ದತ್ತಪುತ್ರ—ಕಥೆಗಾರರು, ಶ್ರೀ ಎನ್ ನಾರಾಯಣ ಬಲ್ಲಾಳ. ಪ್ರಕಾಶಕರು: ರೇಖಾ ಪ್ರಕಾಶನ, ತೆಂಕಪೇಟೆ, ಉಡುಪಿ. ಪುಟಗಳು: ೭೨: ಬೆಲೆ: ರೂ. ೧=೦೦

ಉಡುಪಿಯ ತರುಣ ಉತ್ಸಾಹಿ ಸಾಹಿತ್ಯಕಾರರ ಸಾಲಿನಲ್ಲಿ ಈಗಾಗಲೇ ನಿಂತು ಪ್ರಖ್ಯಾತರಾದ ಶ್ರೀ ಬಲ್ಲಾಳರ ಆರು ಕಥೆಗಳ ಸಂಕಲನ 'ದತ್ತಪುತ್ರ'. ಲೇಖಕರು ತನ್ನ ಅನುಭವಕ್ಕೆ ಬಂದ ಒಂದೊಂದು ಘಟನೆಯಿಂದ ಪ್ರೇರಿತರಾಗಿ ಇಲ್ಲಿನ ಕಥೆಗಳನ್ನು ಬರೆದಿದ್ದಾರೆಂದು ಹೇಳಿಕೊಂಡಿದ್ದಾರೆ; ಇದು ಒಪ್ಪತಕ್ಕದ್ದೇ. 'ಮುಗಿಯದ ಯೋಚನೆ'ಯು ಲಹರಿಹರಿ ಸ್ತಬ್ಧವಾಗುವುದೇ ಇಲ್ಲ; ಅದು ಮುಗಿಯದೇನೇ ಮತ್ತೂ ಮತ್ತೂ ಹರಿಯಲೇ ಇರುತ್ತದೆ. ವಿಚಾರಕ್ಕೆ ತಕ್ಕ ಪ್ರಚೋದನೆ ಸಮಗ್ಗಿಲ್ಲಿ ದೊರೆಯುತ್ತದೆ. 'ದತ್ತಪುತ್ರ'ವು ಒಂದು ಉತ್ತಮ ಕಥೆ. ಇಲ್ಲಿ ಅಶೋಕನಲ್ಲಿ ತೋರಿಸಿದ 'ಮಾನವತೆ'ಯು ನಿಜ ಕ್ಕೂ ಹೃದಯಸ್ಪರ್ಶಿಯಾಗಿದೆ; ಆದರೆ ಭಟ್ಟರು ತನ್ನನ್ನು ಬ್ರಹ್ಮನ ಪುನರಾವತಾರವೆಂದು ಕಣ್ಣು ಮುಚ್ಚಿಸಿ ಬ್ರಹ್ಮನೆ ಆದರ್ಶದಲ್ಲಿ ಹಾಕಿಕೊಟ್ಟ ಆದರ್ಶ ಮಾತ್ರ, ಸಮರ್ಥನೀಯವೆನ್ನುವಂತಿಲ್ಲ ಸಾಹಿತಿ ಸಮಾಜದ ಚಿತ್ರವನ್ನು ಇದ್ದಕ್ಕಿದ್ದಂತೆ ಕೊಡುವುದಷ್ಟೇ ತನ್ನ ಉದ್ದೇಶವೆಂದಿಟ್ಟುಕೊಂಡರೆ ಸಾಲದು, ಜತೆಗೆ ಉತ್ತಮ ಆದರ್ಶವನ್ನೂ ದಿಗ್ದರ್ಶನವನ್ನೂ ಮಾಡುವುದು ಹಾರುವ ಕುದುರೆಗೊಂದು ಲಗಾಮಿನಂದರೆ ತಪ್ಪಾಗಲಾರದು. 'ಬೇಸತ್ತು ಬಿದ್ದ ಪ್ರಣಯಿ', 'ಕತ್ತಲಲಿ ನಲಿಯುತಿಹವು ಹೆಗೆ ಕಣ್ಣು ಮುಚ್ಚಿ' ಮತ್ತು 'ಸಿಗದ ಸೀಟು'ಗಳು ಪ್ರಣಯ ಪ್ರೇಮಗಳ ಹೊಯ್ದಾಟದ ಘಟನೆ—ದುರ್ಘಟನೆಗಳು. ಇವುಗಳಲ್ಲಿ ಮೊದಲನೆಯದರಲ್ಲಿ ಪ್ರತಿಭಾಳ ದಿಟ್ಟತನ ಎರಡನೆಯದರಲ್ಲಿ ಶಾರಿಯು ತೋರಿದ ಸ್ನೇಹಗಳು ಆದರ್ಶನೀಯ ಮತ್ತು ಸಮರ್ಥನೀಯ ಮೂರನೆಯದರಲ್ಲಿ ಶಂಕರನ ಫಜೀತಿ ಕಂಡು ಅಳಬೇಕೋ ನಗಬೇಕೋ ಎಂಬ ಪರಿಸ್ಥಿತಿ ಹಾಸ್ಯವನ್ನೂ ಚಿಮ್ಮುತ್ತದೆ.

ಗೆಳೆಯ ಬಲ್ಲಾಳರ ಲೇಖನಿಯಲ್ಲಿ ಕಸುವಿದೆ, ಅವರ ಭಾಷೆಯಲ್ಲಿ ಸರಳತೆಯಿದೆ, ಕಥನದಲ್ಲಿ ಓಟವೂ ಇದೆ, ಎಲ್ಲ ವಸ್ತುವಿನಲ್ಲಿ ಹೊಸತನವೇ ಇಲ್ಲವಾದರೂ ವಿಚಾರಕ್ಕೆ ಆಹಾರ ಮಾತ್ರ ಇದೆ; ಸಾಹಿತ್ಯಕಾರನಲ್ಲಿ ಅವಶ್ಯವಾಗಿರುವ ಸಹೃದಯತೆಯಿಂದ ಕೂಡಿದ ಬಲ್ಲಾಳರು ಉಜ್ವಲ ಭವಿಷ್ಯವುಳ್ಳವರು. ಇದು ಗೆಳೆಯರ ಪ್ರಶಂಸೆಯಲ್ಲ; ಹೃದಯಾಂತರಾಳದಿಂದ ಚಿಮ್ಮಿ ಬಂದ ಕಾರಂಜಿ. ಅವರು ತಮ್ಮ ಲೇಖನ ಶಕ್ತಿಯಿಂದ ಸಮಾಜಕ್ಕೆ ಉಚ್ಚ ಆದರ್ಶವನ್ನು ಹಾಕಿಕೊಡಲು ಸಮರ್ಥರು ಎಂಬುದಕ್ಕೆ 'ದತ್ತಪುತ್ರ'ನೇ ಸಾಕ್ಷಿ. ಈ ಶ್ರೀ ಬಲ್ಲಾಳರಿಂದ ಸರಸ್ವತಿಯು ಹಲವಾರು ಪೂರ್ಣಕ್ಯಾರೇಟಿನ ಕಂಠಾಭರಣಗಳನ್ನು ನಿರ್ಮಿಸಿಕೊಳ್ಳಲಿ

—ಗೋರಾ

ಪ್ರೊ ಕು ಹರಿದಾಸ ಭಟ್ಟ, ಎಂ.ಎ,

ಅವರ ನವೀನ ಪುಸ್ತಕಗಳು

ಪುಸ್ತಕ	ರೂ. ನ.
ನಡುಹಗಲಿನ ಕಗ್ಗತ್ತಲೆ	2=50
ಸ್ವಾತಂತ್ರ್ಯ ಮತ್ತು ಸಂಸ್ಕೃತಿ	2=00
ಘಂಟಮಾರಾ	2=00
ಏಶ್ಯದ ಸಂಪತ್ತು	2=00
ಅಮೆರಿಕದ ಆರು ಕತೆಗಳು	1=75
ವರ್ತಮಾನಕಾಲದ ನಾಲ್ವರು ಮಹಾನುಭಾವರು	0=31
ಯುಗವಾಣಿ	0=50
ಕಾಲವೇ ಬದಲಾಗಿದೆ	0=31
ಪುಸ್ತಕ ಪುರಾಣ	0=25
ಮನೆಯೊಳಗಿನ ಮಹಾಜೀವಿಗಳು	0=37

ಶ್ರೀ ಕೆ. ಕೆ ಶೆಟ್ಟಿ, ಎಂ ಎಲ್ ಸಿ ಯವರ

ಕ್ರಾಂತಿಕಾರಿ ಲೇಖನಿಯ

ನವಕಾಲಕ್ಕೊಪ್ಪುವ ನವನವೀನ ಪುಸ್ತಕಗಳು

ಪುಸ್ತಕ	ರೂ ನ
ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ!	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಟಪ್ಪಾಲು ಖರ್ಚು ಪ್ರತ್ಯೇಕ. ವಿವರವಾದ ಕೆಟಲಾಗಿಗೆ ಹತ್ತು ನ. ಪೈ. ಸ್ಟಾಂಪಿನೊಂದಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ

ಆನಂದ ಜ್ಯೋತಿ

ಗೀತಾ ಧ್ಯಾನವ, ಮಾಡೋ! ಶ್ರೀ
ಮದ್ಭಗವದ್ಗೀತಾ ಸುವಿಚಾರವಮಾಡೋ!||
ಆ ಗೀತೆ ಯೀಗೀತೆಯಿಂದೇನು ಹಿಂಗಿತೇ?
ಅಗು ಹೋಗಿನ ಕಂತೆ—
ವ್ಯಥೆಗಳ ನೀಗಂತೆ, ನಿನ್ನನೆ ನೀ ತಿಳಿಯೆ||
ಗೀತಾಧ್ಯಾನವ,||
ಜೀವನ ರಣರಂಗದಲೀ, ಮನನೊಂದ
ಧನಂಜಯ; |
ಜೀವದುಂಬಿ ವಿಜಯ ಪಡೆದು
ಕೃತಾರ್ಥನೆನಿಸಿದ ||
ಭವ ಭಯ ಶೋಕಮೋಕ್ಷಗಳ.
ತತ್ವವ. ಪರಿ |
ವಿವರಿಸಿ, ದಯೆಯಲೀ ವಿಶ್ವರೂಪವ
ತೋರಿದ ದಿವ್ಯ || ೧ ||
ಅಗಸಕಾವರಿಸಿರುವ ಮೇಘ
ಮಾಲೆಗಳಿಂದ |
ಮೇಗಡೆ ದಿನಕರನೆ ಮರೆಗೊಂಡ
ನೆಂಬುವರೋ ||
ಜಗಜ್ಯೋತಿಯನಿಸಿರುವ ಪರಂ
ಜ್ಯೋತಿಯಾತ್ಮನೇ|
ಬಗೆಗಾಣ ದಿಹನೆಂದು
ಭಯಗೊಂಡರೇಸಿಹುದೋ || ೨ ||
ಆ ಜ್ಞಾನದ ಮಾಯಾ ಅಂಧಕಾರವ
ನೀನೇ ಕಳೆಯೋ |
ಸುಜ್ಞಾನ ಸಾಗರದಲೀಸಾಡೀ ಶೋಕವ
ಹರಿಸೇ ||
ಪ್ರಜಾ ಶಕ್ತಿಯ ಬಲದಿಂದ
ಮೋಹವನುರಿಸೀ; ಮೋಕ್ಷ—|
ಸುಜ್ಞೆಯ ಆನಂದ ಶ್ರೀ ದುರ್ಗಾನಂದ
ತತ್ವವ ಮಾಧಿಸೇ || ೩ ||

ಜಿ. ಕೆ ಕೃಷ್ಣ ಭಟ್, ಗುರುಪುರ, ದ ಕ.

ನಮ್ಮ ಚಂದಾದಾರರಲ್ಲಿ ವಿನಂತಿ

ಇನ್ನೂ ಚಂದಾಹಣ ಪಾವತಿ ಮಾಡದ ನಮ್ಮ ಚಂದಾದಾರರು ದಯ ಮಾಡಿ ಕೂಡಲೇ ಪಾವತಿ ಮಾಡುವಂತೆ ಅಪೇಕ್ಷಿಸುತ್ತೇವೆ ಅಂತೂ ಈ ತಾ. 3-12-63ರೊಳಗೆ ಚಂದಾ ಬಾರದಿದ್ದರೆ ನಾವು ಮುಂದಿನ ಸಂಚಿಕೆಯನ್ನು ವಿ. ಪಿ. ದ್ವಾರಾ ಕಳುಹಿಸುತ್ತೇವೆ. ಅದನ್ನು ದಯವಿಟ್ಟು ಸ್ವೀಕರಿಸುವಂತೆ ವಿನಂತಿಸುತ್ತೇವೆ

ಮೆನೇಜರ್.



ಕುಮಾರಿ ಬಿಲ್ಲೆಗಳು

(ರಿಜಿಸ್ಟರ್ಡ Regd.)

ಪ್ರಕೃತಿಯು ವಿಫಲಗೊಂಡಾಗ ಉಂಟಾಗುವ ಕಾತರ ನಿವಾರಣೆಗೆ ಸಮಯೋಚಿತವಾದ ಆಯುರ್ವೇದೀಯ ಮಿಶ್ರಣ!

ಟ್ಯೂಬ್ 1ರ ಸಾಮಾನ್ಯ ರೂ. 4/- ಮಧ್ಯಮ ರೂ. 6/ ಉತ್ತಮ ರೂ. 9/.

P. Devee & Co. (N. J.) Calcutta—40.

ಸ್ಟಾಕಿಸ್ಟರು— ರಾಜಾ ಮೆಡಿಕಲ್ ಹಾಲ್, ಬೆಂಗಳೂರು ಕೆಂಟೋನ್ಮೆಂಟ್; ಕುಮ್ಟಾ ಫಾರ್ಮಸಿ, ಕುಮ್ಟಾ (ಉ. ಕ.)

ಹೊಸ ಸಿಂಕಿಯಾಂಗ್ ಬೇಕಾಗಿದೆ

(೪ನೇ ಪುಟದಿಂದ)

ಗಲೂ ಆ ಕುರಿತು ಭಕಾರವನ್ನೂ ಎತ್ತದೆ ಭಾರತಕ್ಕೆ ಕಿರುಕಳವನ್ನೀಯಬೇಕೆಂಬ ಏಕನೋವ ಉದ್ದೇಶದಿಂದ ಅವರು ಆ ಎರಡು ರಾಷ್ಟ್ರಗಳ ನಡುವೆಯೂ ಸಂಧಾನ ಮಾತುಕತೆಗಳಲ್ಲಿ ಕಾಲ ಕಳೆಯುತ್ತಿದ್ದಾರೆ. ತಾನು ಕೊಟ್ಟ ಭಾಷೆಗೆನೇ ತಪ್ಪುತ್ತಿರುವ ಪಾಕಿಸ್ಥಾನ ಚೈನಾ—ರಷ್ಯಾಗಳ ಸಂಧಾನ—ಒಡಂಬಡಿಕೆಗಳಿಗೆ ಗೌರವನ್ನಿತ್ತೀತೇ? ಆ ವಿಷಯದಲ್ಲಿ ಚೈನಾ ಕೂಡಾ ಹಿಂದುಳಿದಿರುವದಿಲ್ಲ. ಅದರ ಮಾತು ಒಂದಾದಲ್ಲಿ ಕೃತಿ ಇನ್ನೊಂದಿದೆ.

ಈ ಹಿಂದೆಯೇ ಚೈನಾವು ರಷ್ಯಾದೊಡನೆ ನಡೆಸಿರುವ ಒಪ್ಪಂದವನ್ನು ಮುರಿದು ಕೊಂಡಿರುವ ವಿಷಯವನ್ನು ಮೊದಲೇ ಕೊಡಲಾಗಿರುತ್ತದೆ. ಇಲ್ಲಿ ಭಾರತಕ್ಕೆ ಒಂದು ಉತ್ತಮ ಪಾಠವಿದೆ ನಾವು ಅವರಂತೆ ಮೋಸಮಾಡಬೇಕೆಂದಲ್ಲ, ಮೋಸದಲ್ಲಿ ಸಿಕ್ಕಿಕೊಳ್ಳಕೂಡದೆಂದು. ಪಾಕಿಸ್ಥಾನಕ್ಕೆ ಬೆರುಬಾರಿ ಪ್ರದೇಶವನ್ನು ಬಿಟ್ಟು ಕೊಡುತ್ತೇನೆಂದು ಪ್ರಧಾನಿ ನೆಹರೂಜೀಯವರು ಒಪ್ಪಿಕೊಂಡಾಗ ದೇಶವಿಡೀ ನಡುಕ ಉಂಟಾಗಿತ್ತು. ಒಂದು ವರ್ಷಕಾಲ ಮಾತುಕತೆ ನಡೆಸಿ ಚಂಗ್ ಬಾಡ ಒಪ್ಪಂದಕ್ಕೂ ಚೈನಿ ದರ್ಬಾರು ಒಪ್ಪಲಿಲ್ಲ-ಕಾರಣ, ಭೂಪ್ರದೇಶವನ್ನು ಬಿಟ್ಟು ಕೊಡುವ ಹಕ್ಕು ಚಂಗನಿಗೆ ಇರುವದಿಲ್ಲವೆಂಬುದು. ಹುಲ್ಲು-ಮುಳ್ಳು ಕೂಡಾ ಬೆಳೆಯದ ಹಿಮ ಪ್ರದೇಶವನ್ನು ಚೈನಾ ಕೇಳಿದಲ್ಲಿ ಶಾಂತಿ-ಸಂಧಾನದ ಹೆಸರಿನಲ್ಲಿ ನಮ್ಮ ನೇತಾ ಸ್ಥಾನದಲ್ಲಿರುವವರು ಒಪ್ಪಿಕೊಂಡಲ್ಲಿ ಭಾರತೀಯರು ಆದೇನು ಮಾಡಬೇಕೆಂಬುದನ್ನು ಮೇಲಿನ ಘಟನೆ ಸ್ಪಷ್ಟಪಡಿಸುತ್ತದೆ.

ಕೇಂದ್ರ ಚೈನಾ ಕ್ರಮಶಃ ಅನಂತ ರಾಜ್ಯಗಳ ಮೇಲೆ ರಾಜ್ಯಗಳನ್ನು ಸೇರಿಸಿಕೊಂಡು ಇಂದು ದೊಡ್ಡ ಸಾಮ್ರಾಜ್ಯವಂತಿದೆಂಬುದನ್ನೂ ಈ ಸಮಾಚಾರಗಳಿಂದ ತಿಳಿದುಕೊಳ್ಳಬಹುದು. ದಿನ ಹೋದಂತೆ ಮಗು ಬೆಳೆಯುವಂತೆ ಚೈನಾ ಕೂಡಾ ಬೆಳೆಯುತ್ತಿರುವದನ್ನು ಕಂಡುಕೊಂಡ ಮೇಲೂ, ಚೈನಾ ಆಕ್ರಮಣ ನಡೆಸುವದೇ ಇಲ್ಲವೆನ್ನುತ್ತಿರುವ ಚೈನಿ ಚೇಲಾಗಳಿಗೆ ಆದೇನು ಹೇಳುವದು! ನೆಲದಾಹದಿಂದ ಅದು ರಷ್ಯದೊಂದಿಗೆನೇ ಕಾದಲು ಮುಂದರಿಯುತ್ತಿರುವಾಗ ಭಾರತದ ಗಡಿ ಪ್ರದೇಶವನ್ನು ತನ್ನದೆಂದು ಪ್ರಚಾರ ನಡೆಸದೆ ಬಿಟ್ಟೀತೇ? ಕಮ್ಯೂನಿಸ್ಟರು ಚೈನಾ ಗದ್ದುಗೆಯನ್ನಾಕ್ರಮಿಸಿಕೊಂಡ ಮೇಲೂ ಅನೇಕ ಸ್ವತಂತ್ರ ನಾಡುಗಳನ್ನವರು (ತ್ರಿವಿಷ್ಟಪ ಮುಂತಾದ ದೇಶಗಳು) ಮುಷ್ಟಿಯೊಳಗಿಟ್ಟುಕೊಂಡು ಅಭ್ಯಾಸಬಲಕ್ಕನುಸಾರವಾಗಿ ಇತ್ತ ಬರುತ್ತಿದ್ದಾರೆ.

ಅದನ್ನೇ ತಮ್ಮ ಅಕ್ಟೋಬರ ದಿನಾಂಕ ೨೦ರ ಭಾಷಣದಲ್ಲೂ ಪ್ರಧಾನಿ ಜವಾಹರಲಾಲ್ಜೀಯವರು ಸ್ಪಷ್ಟವಾಗಿ ಸೂಚಿಸಿದ್ದಾರೆ. ಚೈನೀ ಕಮ್ಯೂನಿಸ್ಟರು ಸಂಧಾನ ಮಾತುಕತೆ ಮುಂದರಿಸುತ್ತಿದ್ದಂತೆಯೇ ಭಾರೀ ಪ್ರಮಾಣದಲ್ಲಿ ಆಧುನಿಕ ಶಸ್ತ್ರಾಸ್ತ್ರ ಸಹಿತ ಉತ್ತರ ಗಡಿ ಪ್ರದೇಶಗಳಲ್ಲಿ ನಮಗೆ ಕಂಟಕವನ್ನುಂಟು ಮಾಡಿದ್ದಾರೆ. ಆ ರೀತಿ ಅವರು ಬಂದೆರಗಬೇಕಾದಲ್ಲಿ ಪೂ

ರಕ್ಷಣೆಯ ಕರೆ

ಶ್ರೀ

ವೀರರೆ ಏಳಿರಿ ದೇಶದ ಗಡಿಯಲಿ |
ವಿಜಯ ಧ್ವಜವ ಹಾರಿಸ ಬೇಕು.
ರಿಪುಗಳ ಕಚ್ಚನು ಕೊಚ್ಚಿ—ಮೆಟ್ಟುತಲಿ |
ಗಡಿರಕ್ಷಣೆ ಸಾಧಿಸಬೇಕು.
ಭಾರತಾಂಬೆಯ ವಿಜಯ ಘೋಷದಿ |
ಬಾನಿನಂಗಣ ಬಿರಿಯಲಿ.
ಭಾರತದ ಭೂ ಗಡಿಯ ಬವರದಿ |
ಧಕ್ಕಧಳ್ಳುರಿಯೇರಲಿ.

ಪ್ರಳಯದಾ ಚೂಣಿಯಲಿ ರಿಪುಗಳ |
ಮುಂಡಗಳು ಚಂಡಾಡಲಿ.
ವೀರಕೇಸರಿ, ಯುಬ್ಬರದಿ ಹೊಡೆ |
ಕಡಿದು ಕೆಡೆ ನಗುತಲಿ.
ಭರ್ಜಿಬಂದೂಕನು ಬಿಚ್ಚುಗತ್ತಿಯನು |
ಎತ್ತಿ ಸಾಗಿ ರಣರಂಗದಲಿ.
ಅತ್ತಲಿತ್ತ ಇಕ್ಕೆಲಧಿ ಕುತ್ತಿ ಕೊಡೆ |
ಹಿಗ್ಗಿ ವಿಜಯ ಘೋಂಕಾರದಲಿ.
ಕನಲಿದ ರುದ್ರನ ಪೋಲು ಶೌರ್ಯದಲಿ |
ವೈರಿ ಶಿರವ ಚಂಡಾಡುವುದು.
ಆತ್ಮ-ರಕ್ತ- ಬಲಿದಾನ ಸಾಹಸದಿ |
ದೇಶದ ಮಾನವ ಕಾಯುವುದು.
ಅಕ್ಕ- ತಂಗಿಯರ- ಅಣ್ಣತಮ್ಮಂದಿರೆ |
ದೇಶಕೆ ಬಂದಿಹುದಾಪತ್ತಿ.
ಮದಾಂಧ ಚೀನರ ಆಕ್ರಮಣದ ಗಡಿ |
ನಾಡಿನೊಳೆದಗಿದೆ ವಿಪತ್ತಿ.
ಶೂರವಂಶಜರೆ ವೀರಮಾತೆಯರೆ |
ಮರೆತಿರ ಪೂರ್ವದ ಚರಿತೆಗಳ,
ಹಿಂದಿನ ಕೆಚ್ಚುಚ್ಚಳಿಯದೆ ಮೆರೆಯಲಿ |
ತೋರಿರಿ ನಿಮ್ಮಯ ಘನತೆಗಳ,
ವೀರರೆ ಏಳಿರಿ ದೇಶದ ಗಡಿಯಲಿ |
ವಿಜಯಧ್ವಜವ ಹಾರಿಸಬೇಕು,
ಪುಗಳ ಕಚ್ಚನು ಕೊಚ್ಚಿ—ಮೆಟ್ಟುತಲಿ.
ಗಡಿರಕ್ಷಣೆ ಸಾಧಿಸಬೇಕು.

ಸಿರಿಪತಿ

ರ್ಯ ಯೋಜನೆ ನಡೆದಿರಬೇಕು. ಇವು ಎಲ್ಲರಿಗೂ ಅರ್ಥವಾಗುವ ಮಾತು. ಪುನಃ ನಾವು ಅದೇ ತಪ್ಪನ್ನು ಮಾಡುವದೆಂದರೆ ಅತಿಶಯೋಕ್ತಿಯೇ ಆದೀತು. ಆದರೂ ಇಲ್ಲಿಯ ಕಮ್ಯೂನಿಸ್ಟರು ಜೋಗುಳ ಹಾಡುತ್ತಿದ್ದಾರೆ; ನೃತ್ಯಮಾಡುತ್ತಿದ್ದಾರೆ. (ಚೈನಿ ಪದ್ಧತಿ ಮಿಶ್ರಿತ ಕಥಕ್ಕಳಿ!)

ಸಿಂಕಿಯಾಂಗ್ ಈಗ ಚೈನಿ ಕಮ್ಯೂನಿಸ್ಟರಿಗೆ ಹಳೆಯ ಗಡಿ ಪ್ರದೇಶವಾಗುತ್ತ ಬಂದಿರುವದರಿಂದ ಅವರು ಹೊಸ ಸಿಂಕಿಯಾಂಗನ್ನು ಹೊಂಚು ಹಾಕುತ್ತಿದ್ದಾರೆ. ಇದರ ಕುರಿತು ಹೆಚ್ಚಿನ ವಿವರಗಳನ್ನು ಬರುವ ವಾರ ಕಾಣಬಹುದು.

—ಶ್ರೀ ಶಿವಶಂಕರ.

ದಿ ವಿಜಯಾ ಬೇಂಕ್ ಲಿಮಿಟೆಡ್, ಬೈಂದೂರು.

ರಿಜಿಸ್ಟರ್ಡ್ ಆಫೀಸು: ವಿಜಯಾ ಬೇಂಕ್ ಬಿಲ್ಡಿಂಗ್
ಲೈಟ್ ಹೌಸ್ ಹಿಲ್ ರೋಡು, ಮಂಗಳೂರು ದ. ಕ.

—: ಏಲಂ ನೋಟೀಸು :—

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಶಾಖೆಯಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲಗಳನ್ನು ವ್ಯಾದೆಗೆ ಸರಿಯಾಗಿ ಮರುಪಾವತಿ ಮಾಡದೆ ಇರುವುದರಿಂದ, ಸದ್ರಿಯವರಿಗೆ ರಿಜಿಸ್ಟ್ರ ನೋಟೀಸು ಮೂಲಕ ಕೇಳಿಕೊಂಡದಕ್ಕೆ ಕೆಲವರಿಗೆ ಬಿಟ್ಟ ರಿಜಿಸ್ತ್ರ ನೋಟೀಸುಗಳು ಕಾರಣಾಂತರಗಳಿಂದ ಜಾರಿಯಾಗದೆ ನಮಗೇನೇ ವಾಪಾಸು ಬಂದಿರುವುದರಿಂದಲೂ, ಇನ್ನು ಕೆಲವರು ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳದೆ ಇರುವುದರಿಂದಲೂ ಸದ್ರಿಯವರಿಗೆ ವ ಅವರ ವಾರೀಸುದಾರರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ ಸಾಲದ ಬಾಬ್ತು ಬೇಂಕಿಗೆ ಸಲ್ಲತಕ್ಕ ಮೊಬಲಗನ್ನು ತಾರೀಕು 7—12—1963ರ ಒಳಗಾಗಿ ಬೇಂಕಿಗೆ ಮರುಪಾವತಿ ಮಾಡಲು ತಪ್ಪಿದಲ್ಲಿ ಸದ್ರಿಯವರು ನಮ್ಮಲ್ಲಿ ಅಡವಿಟ್ಟ ನಗಗಳನ್ನು ತಾರೀಕು 9—12—1963ನೇ ಸೋಮವಾರ ಅಪರಾಹ್ನ ಗಂಟೆ 3ಕ್ಕೆ ಸರಿಯಾಗಿ ಬೇಂಕಿನ ವಠಾರದಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು; ಅಥವಾ ಬೇಂಕಿಗೆ ಯುಕ್ತ ಕಂಡ ಇತರ ಯಾವುದೇ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬಹಿರಂಗ ಏಲಂ ಮೂಲಕ ಯಾ ಖಾಸಗಿಯಾಗಿ ಮಾರಾಟ ಮಾಡಲಾದೀತು. ಈ ಸಂಬಂಧ ಬೇಂಕಿಗೆ ಉಂಟಾಗಬಹುದಾದ ಸಕಲ ಖರ್ಚು ನಷ್ಟಗಳನ್ನು ತೆರಲು ಸದ್ರಿ ಸಾಲಗಾರರು ಜವಾಬುದಾರರಾಗಿರುತ್ತಾರೆ. ತಿಳಿದಿರಲಿ

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಬರತಕ್ಕ ಮೊಬಲಗು
261/61	ಜೋನ್ ಡಿಲೀನ್ಮ, ಪೀಟರ್ ಡಿಲೀಮರ ಹೆಂಡತಿ, ಹೊಳೆಬಾಗಿಲು ಯೆಡ್ತರೆ ಗ್ರಾಮ.	61=75
409/61	ವಿಟ್ಠಲ ಶೆಟ್ಟಿ, ಮಹಾಬಲ ಶೆಟ್ಟರ ಅಳಿಯ, ತಗ್ಗರ್ಸೆಗ್ರಾಮ ಪೋಸ್ಟು ಮಯ್ಯಾಡಿ.	115=13
431/61	ಫಿಲಿಪ್ ನಜ್ರೆತ್, ಸಲವದೋರ್ ನಜ್ರೆತರ ಮಗ, ಬಿಸ್ಕೂರು ಪಡುವರಿಗ್ರಾಮ, ಪೋಸ್ಟು ಪಡುವರಿ.	29=47
522/61	ಕೆ. ಮಂಜಯ ಶೆಟ್ಟಿ, ಕೃಷ್ಣಪ್ಪ ಶೆಟ್ರ ಅಳಿಯ, ತಗ್ಗರ್ಸೆ, ಪೋಸ್ಟು ಮಯ್ಯಾಡಿ	254=61
584/61	ಶ್ರೀನಿವಾಸ ನ್ಯಾಕ್, ವೆಂಕಟ್ರಮಣ ನ್ಯಾಕರ ಮಗ ಪ್ರಕಾಶ ಸೋಡಾ ಫೇಕ್ಟರಿ, ಬೈಂದೂರು.	58=10
831/61	ಕೃಷ್ಣ ಶೆಟ್ಟಿ, ರಾಮಯ್ಯ ಶೆಟ್ರ ಅಳಿಯ, ಬಟ್ಶೆಟ್ರಮನೆ, ಶಿರೂರು.	34=41
837/61	ಗೋವಿಂದ ಆಚಾರಿ, ದೇವನ ಮಗ, ಮಡಿಕಲ್, ಪೋಸ್ಟು ಉಪ್ಪುಂದ	22=21
1016/61	ಪೂವಮ್ಮ ಮೇಸ್ತ, ದೇವಪ್ಪಮೇಸ್ತರ ಮಗ, ಹಡವಿನ ಕೋಣೆ, ಪೋಸ್ಟು ಶಿರೂರು	20=36
1042/61	ಅನ್ನಂತ ನ್ಯಾಕ್, ವೆಂಕಟೇಶ ನ್ಯಾಕರ ಮಗ ಕಾಲ್ತೋಡುಗ್ರಾಮ, ಪೋಸ್ಟು ಕಾಲ್ತೋಡು.	42=32
1120/61	ನಾಗಪ್ಪ ಮೊಗೇರ, ಬೈರುನ ಮಗ, ಗೊರ್ಟೆಗ್ರಾಮ, ಪೋಸ್ಟು ಬೆಳ್ಳ.	42=81

Office of
THE VIJAYA BANK LIMITED,
BYNDOOR 21—11—1963

K. Bhojaraja Hegde
Agent.

ಬಾಪು ನಡೆದ ಹಾದಿ

ಬಡತನದ ಆಳವನ್ನು ಗಾಂಧೀಜಿ ಅರಿತಿದ್ದರು

ಒಂದು ಬಾರಿ ನೌಖಾಲಿಯಲ್ಲಿಗಾಂಧೀಜಿಯವರು ತಂಗಿದ್ದರು. ಚಳಿ ಬಹಳವಿದ್ದುದರಿಂದ ಕಾಲುಗಳನ್ನು ತೊಳೆಯಲು ಅವರ ಮೊಮ್ಮಗಳಾದ ಮನೂ ಬೆಹನ್, ಗಾಂಧೀಜಿಯವರಿಗೆ ಬಿಸಿ ನೀರನ್ನು ತಂದು ಕೊಟ್ಟಳು. ಇದರಿಂದಾಗಿ ಸಂತೋಷಗೊಳ್ಳುವ ಬದಲು ಬಾಪೂ ದುಃಖಗೊಂಡರು. ಅವರು ಹೇಳಿದರು "ನೀನು ಬಿಸಿ ನೀರನ್ನು ಸ್ನಾನಕ್ಕಾಗಿ ಉಪಯೋಗಿಸುವುದನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಇಂತಹ ವಿಪರೀತ ಪರಿಸ್ಥಿತಿ ಇಲ್ಲದಿರುವಾಗ ಬಿಸಿನೀರನ್ನು ಕಾಲುಗಳನ್ನು ತೊಳೆಯಲು ಉಪಯೋಗಿಸಲು ಅದೆಷ್ಟು ಧೈರ್ಯ ನಿನಗೆ? ಎಷ್ಟು ಹೆಮ್ಮಕ್ಕಳು ತಮ್ಮ ದಿನ ನಿತ್ಯದ ರೊಟ್ಟಿಯನ್ನು ಸುಡಲು ಸಹ ಬೇಕಾದಷ್ಟು ಕಟ್ಟಿಗೆ ದೊರೆಯದೆ ಬನ್ನ ಪಡುತ್ತಿರುವರೆಂಬುದನ್ನು ನೀನು ತಿಳಿದಿರುವೆಯಾ? ಹೀಗಿರುವಾಗ ಯಾವ ಆಧಾರದ ಮೇಲೆ ನಾವು ನಿರ್ದಯಿಗಳಾಗಿ ಬಿಸಿ ನೀರನ್ನು ಕಾಲು ತೊಳೆಯಲು ಉಪಯೋಗಿಸುತ್ತೇವೆ?" ಮನೂಬೆಹನ್ ಇದನ್ನು ಕೇಳಿ ಅವಾಕ್ಕಾದಳು. ಬಾಪೂರವರು ಬಿಸಿ ನೀರನ್ನು ಉಪಯೋಗಿಸಲು ನಿರಾಕರಿಸಿ ತಣ್ಣೀರಿನಿಂದಲೇ ತನ್ನ ಕಾಲುಗಳನ್ನು ತೊಳೆದುಕೊಂಡರು.

ಬಾಪೂರವರು ಇಂತಹ ಆದರ್ಶವಾದಿಗಳಾದುದರಿಂದಲೇ ಭಾರತದ ಪಿತನೆನಿಸಿಕೊಂಡರು. ದೀನದಲಿತರ ಉದ್ಧಾರಕ್ಕಾಗಿ ತನ್ನ ಜೀವನವನ್ನು ಮುಡಿಪಾಗಿಟ್ಟ ಅವರ ಆದರ್ಶವನ್ನು ನಾವೆಷ್ಟು ಅನುಸರಿಸುತ್ತಿದ್ದೇವೆ?

ಸಂಗ್ರಾಹಕ:
ಶ್ರೀ ಕೆ. ಜಗನ್ನಾಥ ಆಳ್ವ,
ಬಿ. ಎ. ಎಲ್ಎಲ್. ಬಿ,
ಕಾಸರಗೋಡು.

ಸೂಚನೆ

'ನವಯುಗ"ದಲ್ಲಿ ಪ್ರಕಟನೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಲು ಠಾವು ಸೈಜಿನ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಸುವಾಚ್ಯವಾಗಿಯೂ ಇರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ. ನ.

ವಿಲಕ್ಷಣ ಬೇಹುಗಾರ—ಕೆಂಟ್

(೩ನೇ ಪುಟದಿಂದ)

ಮತ್ತು ಅನ್ನಾ ವೊಲ್ ಕೋಫರ ಅಜಾಗ್ರತೆ ನಡೆಯದಿದ್ದರೆ ಅವರು ಜಯ ಪಡೆಯುವುದು ದುಸ್ತರವಾಗುತ್ತಿತ್ತು.

ಟೈಲರ್ ಕೆಂಟನು ಹಾಗೆ ಫೋಟೋಗ್ರಾಫರ್ ವೃತ್ತಿಯವನಲ್ಲ, ಆದ್ದರಿಂದ ಅವನ ಫೋಟೋಗ್ರಾಫುಗಳು ಅಷ್ಟು ಸ್ಪಷ್ಟವಾಗಿರಲಿಲ್ಲ. ಮಾತ್ರವಲ್ಲದೆ ಅವನು ತನ್ನ ನಿಯತ ಕರ್ತವ್ಯದ ಸಮಯ ಬಿಟ್ಟು ಬೇರೆ ಸಮಯದಲ್ಲಿ ಅಂತಹ ಕಾರ್ಯಗಳಲ್ಲಿ ತೊಡಗಬೇಕು. ಇದನ್ನೆಲ್ಲಾ ನಿವಾರಿಸಲಿಕ್ಕಾಗಿ ೧೯೪೦ರಲ್ಲಿ ಅನ್ನಾ ವೊಲ್ ಕೋಫಳು ಒಬ್ಬ ಫೋಟೋಗ್ರಾಫರ್ ವೃತ್ತಿಯವನ ಸೇವೆಯನ್ನು ಪಡೆಯಲು ನಿಶ್ಚಯಿಸಿದಳು.

ಈ ಕಾರ್ಯವು ಅವರ ಮೃತ್ಯುವಿಗೆ ಮುಖ್ಯ ಸಾಧನವಾಯಿತು.

ಕಾಗದ ಪತ್ರಿಕೆಗಳ ಪ್ರತಿ ತೆಗೆಯುವುದು ಆಫೀಸಿನ ಒಂದು ಕಾರ್ಯ. ಟೈಲರ್ ಕೆಂಟ್ ಮತ್ತು ಅನ್ನಾವೊಲ್‌ಕೋಫರು ಅಮೇರಿಕದ ರಾಯಭಾರಿ ಕಚೇರಿಯ ಉದ್ಯೋಗಸ್ಥರು ಎಂದು ಫೋಟೋಗ್ರಾಫರ್ ವೃತ್ತಿಯವನಿಗೆ ನಂಬಿಕೆ ಹುಟ್ಟಿಸಲಾಯಿತು.

ಬ್ರಿಟಿಷ್ ಗುಪ್ತವಾರ್ತಾ ಶೋಧಕ ಮಂಡಳಿಯು ಕಾಯುತ್ತಾ ಇತ್ತು. ಆದು ಅವರ ದಿನಚರಿಯ ಕಾರ್ಯ ಹೊರತು ಬೇರೇನೂ ಆಗಿರಲಿಲ್ಲ. ಅವಳು ರಷ್ಯದಲ್ಲಿ ಹುಟ್ಟಿದವಳು. ಮತ್ತು ಹೆಚ್ಚು ಪ್ರಾಯದವಳಾಗಿದ್ದಳು. ಆದರೆ ಅವಳ ಪ್ರಣಯಿಯು ಚಿಕ್ಕ ಪ್ರಾಯದ ಅಮೇರಿಕನ್ ರಾಜತಾಂತ್ರಿಕನು. ಅದು ನಿಜವಾಗಿಯೂ ವಯಸ್ಸಿನ ಮಿತಿಯನ್ನು ಮೀರಿದ್ದಾಗಿ ಕೌತುಕಪ್ರದವಾಗಿ ಕಂಡು ಬಂತು.

ಬ್ರಿಟಿಷ್ ಗುಪ್ತವಾರ್ತಾ ಶೋಧಕ ಸಂಸ್ಥೆಯು ತಪ್ಪನ್ನೇನೂ ಕಾಣಲಿಲ್ಲ. ಅವರು ತಿಳಿಯದಿದ್ದ ಒಂದೇ ಒಂದು ವಿಷಯವೇನೆಂದರೆ ಫೋಟೋಗ್ರಾಫರನ ಚಿತ್ರಶಾಲೆಯಲ್ಲಿ ಕೊನೆಗೊಳ್ಳುವ ಅನ್ನಾ ವೊಲ್‌ಕೋಫ್ ಮತ್ತು ಟೈಲರ್‌ಕೆಂಟರ ಸಂಚಾರವೇಕೆ ಎಂಬುದು ಮಾತ್ರವಾಗಿತ್ತು. ಎಲ್ಲಾ ಯುವಕ ಯುವತಿಯರು ಕ್ಲಬ್ಬುಗಳಲ್ಲೂ ನಾಟ್ಯರಂಗಗಳಲ್ಲೂ ವಿನೋದ ಪಡುತ್ತಿರುವಾಗ ವಿಶೇಷವಾಗಿ ಈ ಜೋಡಿಯು ಒಬ್ಬ ಫೋಟೋಗ್ರಾಫರನ ಬೋರ್ಡಿನ ಹಿಂದುಗಡೆ ತಮ್ಮ "ಪ್ರೇಮಜಾಲ"ವನ್ನು ಕಂಡುಕೊಂಡಿರುತ್ತದೆ ಎಂದು ತಿಳಿದು ಬಂತು.

ಇದೊಂದು ಮಹಾ ಸಂಶಯೊಷ್ಪದ ವಿಷಯವಾಗಿರಲಿಲ್ಲ. ತಿಳಿಯಲಿಕ್ಕೆ ಕೌತುಕವನ್ನುಂಟುಮಾಡುವುದು ಮಾತ್ರವಾಗಿತ್ತು.

ಟೈಲರ್‌ಕೆಂಟ್ ಮತ್ತು ಅನ್ನಾವೊಲ್ ಕೋಫಳ ಆಗಾಗ್ಗೆ ನಡೆಯುವ ಸಂದರ್ಶನದ ಕುರಿತು ಫೋಟೋಗ್ರಾಫರನನ್ನು ಕೇಳುವಾಗ ಅವನು ನಂಬಿಗೆಯಿಂದ ಉತ್ತರಕೊಟ್ಟನು: "ಅದರ ಕುರಿತು ಯೋಚನೆಗೆ ಏನೂ ಕಾರಣವಿಲ್ಲ. ಅದು ಅಮೇರಿಕದ ರಾಯಭಾರಿ ಕಚೇರಿಯ ಆಫೀಸಿನ ಕೆಲಸವಾಗಿದೆ."

ಫೋಟೋಗ್ರಾಫರನು ತನ್ನಲ್ಲೇನೂ ಅಡಗಿಸುವ ಸಂಗತಿಯಿಲ್ಲವೆಂದು ಹೇಳಿ ಬ್ರಿಟಿಷ್ ಗುಪ್ತವಾರ್ತಾಶೋಧಕ ಸಂಸ್ಥೆಯ ಏಜೆಂಟನಿಗೆ ಇತ್ತೀಚೆಗೆ ತೆಗೆದ ಫೋಟೋಗ್ರಾಫುಗಳ ನೆಗೆಟಿವ್ ಪ್ರತಿಗಳನ್ನು ಕೂಡ ತೋರಿಸಿ ದಾರಿ ತಪ್ಪಿ ನಡೆದನು.

ಪತ್ತೇದಾರನು ನೆಗೆಟಿವ್ ಪ್ರತಿಗಳನ್ನು ನೋಡಿದ ಕೂಡಲೆ ಇವುಗಳ ಹಿಂದೆ ಏನೋ ಗುಪ್ತ ಕಾರ್ಯವು ನಡೆಯುತ್ತಿದೆಯೆಂದು ದೃಢಪಟ್ಟನು ಏಕೆಂದರೆ ಆ ನೆಗೆಟಿವ್ ಪ್ರತಿಗಳಲ್ಲಿ ಅತಿ ರಹಸ್ಯ ಎಂಬ ಪದಗಳು ಸ್ಪಷ್ಟವಾಗಿ ಅವನಿಗೆ ಕಂಡು ಬಂದವು.

ಕೂಡಲೇ ಈ ಸಮಾಚಾರವು ಮುಖ್ಯ ಮಂತ್ರಿಯಾಗಿ ಒಂದೇ ವಾರ ಕಳೆದ ವಿನ್ಸ್ಟನ್ ಚರ್ಚಿಲ್ಲರಿಗೆ ತಿಳಿಸಲ್ಪಟ್ಟಿತು. ಅವರು ಲಾರ್ಡ್ ಹೆಲಿಫಾಕ್ಸರನ್ನು ಸಂಯುಕ್ತಸ್ಥಾನಗಳ ರಾಯಭಾರಿಯನ್ನು ಕಾಣುವುದಕ್ಕೆ ಕಳುಹಿಸಿಕೊಟ್ಟರು.

ಈಗಿನ ಸಂಯುಕ್ತ ಸಂಸ್ಥಾನಗಳ ಅಧ್ಯಕ್ಷರ ತಂದೆಯಾದ ಮಿಸ್ಟರ್ ಜೋಸೆಫ್ ಪಿ. ಕೆನ್ನೆಡಿಯವರಿಗೆ ಟೈಲರ್‌ಕೆಂಟ್ ಅನ್ನಾವೊಲ್‌ಕೋಫರ ಒಳ ಸಂಚಿನ ಕಥೆಯನ್ನು ನಂಬುವುದಕ್ಕೆ ಬಹಳ ಕಷ್ಟವಾಯಿತು. ಆದರೆ ಅವರಿಗೆ ಆ ನೆಗೆಟಿವ್ ಪುರಾವೆಗಳನ್ನು ತೋರಿಸಿದಾಗ ಏನೂ ಸಂಶಯ ಉಳಿಯಲಿಲ್ಲ.

ಕೂಡಲೆ ಟೈಲರ್‌ಕೆಂಟನನ್ನು ಉದ್ಯೋಗದಿಂದ ನಿವೃತ್ತಿಪಡಿಸಲಾಯಿತು. ಅವನಿಗೆ ಇರತಕ್ಕ ರಾಜ್ಯ ತಂತ್ರಜ್ಞರ ಭದ್ರತೆಯೂ ಹೀಗೆ ರದ್ದುಗೊಂಡಿತು.

ಸ್ಕಾಟ್‌ಲೇಂಡ್‌ಯಾರ್ಡು ತಮ್ಮ ಅನುಭವಪಟ್ಟ ಕೈ ಕೆಳಗೆ ಈ ಕೇಸನ್ನು ತೆಗೆದುಕೊಂಡಿತು. ಕೆಂಟನ ರೂಮನ್ನು ಪರಿಶೋಧಿಸಿದಾಗ ಅವನು ೧೯೩೯-೪೦ರ ಚಳಿಗಾಲದಲ್ಲಿ ಜರ್ಮನರಿಗೆ ಕಳುಹಿಸಿದ ಸಾವಿರನ್ನ ೧೫೦೦ ಅತಿಗೋಪ್ಯ ಪತ್ರಗಳ ಪ್ರತಿಗಳು ಅವರಿಗೆ ಸಿಕ್ಕಿದವು.

ಟೈಲರ್‌ಕೆಂಟನಿಗೆ ೭ ವರ್ಷಗಳ ಶಿಕ್ಷೆಯೂ, ಅನ್ನಾವೊಲ್ ಕೋಫಳಿಗೆ ೧೦ ವರ್ಷಗಳ ಶಿಕ್ಷೆಯೂ ದೊರಕಿತು.

ಆದರೆ ಯುದ್ಧಾನಂತರ ಕೆಂಟನನ್ನು ಸೆರೆಯಿಂದ ಬಿಡಲಾಯಿತು. ತಾನು ರಹಸ್ಯ ವಿಷಯಗಳನ್ನು ತಿಳಿಸಿ ತಪ್ಪು ಮಾಡಿದ್ದಿಲ್ಲವೆಂಬ ಅಭಿಪ್ರಾಯವನ್ನು ಮಾತ್ರ ಅವನು ಹಿಡಿದುಕೊಂಡಿದ್ದನು. ಎಷ್ಟರ ಮಟ್ಟಿಗೆ ಎಂದರೆ,—ತಾನು ಜೈಲಿನಲ್ಲಿ ಕಳೆದ ಸಮಯಕ್ಕೆ ತನಗೆ ಬರತಕ್ಕ ಸಂಬಳ ಮತ್ತು ಭತ್ತೆಗಳನ್ನು ಕೊಡಿಸಬೇಕೆಂದು ಸಂಯುಕ್ತ ಸಂಸ್ಥಾನ ಸರಕಾರದ ಮೇಲೆ ಅವನು ಒಂದು ಕೋರ್ಟು ದಾವೆಯನ್ನು ಕೂಡ ಹೂಡಿದನು.

ಆದರೆ ಅದರಲ್ಲಿ ಅವನು ಸೋತನು.

ಅನೇಕ ಮಂದಿ ಜರ್ಮನ್ ಮುಖಂಡರ ಹೇಳಿಕೆ ಪ್ರಕಾರ ಟೈಲರ್ ಕೆಂಟನ ಕಾರ್ಯಗಳು ಹಿಟ್ಲರನಿಗೆ ಬಹು ಮುಖ್ಯವಾಗಿದ್ದವು. ಸಂಯುಕ್ತ ಸಂಸ್ಥಾನಗಳ ರಾಯಭಾರಿ ಕಚೇರಿಯಲ್ಲಿ ಅತ್ಯಂತ ನಂಬಿಗಸ್ತನಾದ ಈ ಗೂಢಚಾರ ಸಿಲ್ಲದಿರುತ್ತಿದ್ದರೆ ಅವನು ಎಂದಿಗೂ ಯುದ್ಧದ ಪಗಡೆಯಾಟಕ್ಕೆ ಕೈಹಾಕುತ್ತಿರಲಿಲ್ಲ.

ಟೈಲರ್ ಕೆಂಟನು ಯುದ್ಧವನ್ನು ನಿಲ್ಲಿಸಲು ಯತ್ನಿಸಿದನು. ಆದರೆ ಪರಿಸ್ಥಿತಿಯ ವೈಪರೀತ್ಯವು ಅವನಿಗೆ ತಿಳಿಯದಂತೆಯೇ ಹಾನಿ ಮತ್ತು ವಿನಾಶಗಳ ಒಂದು ಹೊಸ ಜ್ವಾಲೆಯನ್ನು ಎಬ್ಬಿಸಿತು.

(ಮಿರರ್ ಪತ್ರಿಕೆಯಿಂದ)

—ಶ್ರೀ ಕೆ. ನಾರಾಯಣ ಆಚಾರ್,
ಶಿರೋಮಣಿ, ವಿದ್ವಾನ್,

ಅಮೃತ ಬಿಂದು

ಬೆಳ ತೊಡಗಿದ ಹಳೆ ಮನೆಯನ್ನು ಇಲಿಗಳೂ ತ್ಯಜಿಸುತ್ತವೆ; ಹೀನದೆಸೆಗಿಳಿದವನನ್ನು ಆತನ ನಾಯಿಯೂ ತ್ಯಜಿಸುತ್ತದೆ.

o o o

ಬಾಯಿ ಎಲ್ಲರಿಗೂ ಒಂದೇ ಇರಬಹುದು. ಆದರೆ ಅದು ಗಂಡಸಿನ ಮಿದುಳಿನ ಬಾಗಿಲಾದರೆ ಹೆಂಗಸಿನ ಹೃದಯದ ಬಾಗಿಲಾಗಿದೆ.

o o o

ಸಾರ್ಥಕ ಸಂಗೀತವೆನ್ನಬೇಕಾದರೆ ಅದು ಗಂಡಿನ ಹೃದಯದಲ್ಲಿ ಕಿಡಿ ಹಚ್ಚಬೇಕು, ಹೆಂಗಸಿನ ಕಣ್ಣಲ್ಲಿ ಕಂಬನಿ ತರಬೇಕು.

o o o

ಹೇರಳ ಹಣಕ್ಕಿಂತಾ ಸದಾ ಹೊಗಳಲ್ಪಡುವ ಕೀರ್ತಿ ಹೆಚ್ಚುಕಾಲ ಬಾಳುತ್ತದೆ.

o o o

ವ್ಯಕ್ತಿ ಯೋಗ್ಯ ಘನತೆಗೇರಬೇಕಾದರೆ ಹೇಗೆ ಸಂಗ್ರಹಿಸಬೇಕೊ ಹಾಗೆ ತ್ಯಜಿಸಲೂ ಬೇಕಾಗುತ್ತದೆ.

o o o

ದೀನದಳಿತ ಕಪ್ಪು ಮನುಷ್ಯನನ್ನು ಸುಧಾರಿಸುವ ಏಕ ಮಾರ್ಗವೆಂದರೆ ಹಿರಿಯ ಗಿರಿಯನೆಂಬ ಬಿಳಿ ಮನುಷ್ಯನ ಕಪ್ಪು ಹೃದಯಕ್ಕೆ ಸುಣ್ಣ ಬಳಿಯುವುದು.

o o o

ನೆರೆಮನೆಯವನ ಮನೆಗೆ ಬೆಂಕಿಬಿದ್ದಿದೆಯೆಂದಾಗ ತನ್ನ ಮನೆಗೂ ಗಂಡಾಂತರವಿದೆಯೆಂದು ತಿಳಿದು ವರ್ತಿಸುವುದು ಜಾಣತನ.

o o o

ಮನುಷ್ಯನ ಮೆರೆವೆಯೇ ಹೊಸತನದ ಬುನಾದಿಯಲ್ಲದೆ ಹೊಸತೆಂಬುದು ಈ ಜಗತ್ತಿನಲ್ಲಿ ಯಾವುದೂ ಇಲ್ಲ.

o o o

ತಿಳಿಗೇಡಿ ಮಾತನ್ನು ಎಲ್ಲರೂ ಆಡುತ್ತಾರೆ. ಆದರೆ ಆಡಿದ ತಿಳಿಗೇಡಿ ಮಾತಿಗೆ ಅಂಟಿಕೊಂಡಿರುವುದು ತಿಳಿಗೇಡಿತನ.

o o o

ವಿದ್ಯಾರ್ಥಿಗಳ 2 ಕೈಪಿಡಿಗಳು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರದ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್
(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ,
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ
0=25 NP ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರತಿಗಳು— ಮಂಗಳೂರಲ್ಲಿ ಶ್ರೀನಿವಾಸ್ ಬ್ರದರ್ಸ್, ಸ್ಕೂಲ್ ಬುಕ್ ಕೊ.
ಕೆನರಾ ಕಾಲೇಜ್ ಬುಕ್ ಕೊ' ಇಂಡಿಯನ್ ಇಂಡಸ್ಟ್ರಿಯಲ್ಸ್ &ಏಜನ್ಸೀಸ್ ಇವರಲ್ಲಿಯೂ, ಪುತ್ತೂರಲ್ಲಿ ಪೊಪ್ಯುಲರ್ ನ್ಯೂಸ್ ಏಜನ್ಸಿಯಲ್ಲಿಯೂ ದೊರೆಯುತ್ತವೆ.

ದೀರ್ಘ
ಬಾಳಿಕೆಯ
ಫೌಂಟನ್ ಪೆನ್ನುಗಳು
ಯೋಗ್ಯ ಬೆಲೆಗೆ ದೊರೆಯುವ ಸ್ಥಳ:
ವಿಜಯಾ ಪೆನ್ ಮಾರ್ಟ್
ಹಂಪನಕಟ್ಟಾ, ಮಂಗಳೂರು.

ಗಜಪತಿ ನಂದಿನಿ

(೨ನೇ ಪುಟದಿಂದ)

ತಿಮ್ಮರಸು— ನಿಮ್ಮ ವಿವಾಹವಾದ ಮರುಕ್ಷಣದಲ್ಲೇ ನಿನ್ನ ಕೋರಿಕೆಯಂತೆ ನಿನ್ನ ತಂದೆಯನ್ನು ಬಂಧಮುಕ್ತ ಮಾಡುವೆವು. ಪುರೋಹಿತರೇ, ಮುಂದುವರಿಸಿರಿ— ವಾದ್ಯ ಮೇಳಧ್ವನಿ. "ಮಾಲೆಹಾಕಿರಿ" ಎನ್ನುವನು ಪುರೋಹಿತ. ಜಗನ್ಮೋಹಿನಿ ಕೈಯಲ್ಲಿ ಹಿಡಿದಿದ್ದ ಮಾಲೆಯನ್ನು ಅವಳ ಕೈಯನ್ನೆಳೆದು ರೂಪಸಿಂಗನೇ ತನ್ನ ಕೊರಳೊಳಗೆ ಹಾಕಿಕೊಳ್ಳುವನು.)

ರೂಪಸಿಂಗ್— (ರಾಯನನ್ನು ನೋಡಿ) ರಾಜೇಂದ್ರಾ, ಈಗ ನಿಮ್ಮ ಕ್ರೋಧ ಪ್ರತಿಜ್ಞೆ ಈಡೇರಿತೆ?

ರಾಯ— ಶ್ರೀ ವಿರೂಪಾಕ್ಷನು ಕೊನೆಗಾಣಿಸಿದನು.

ರೂಪ— ಇನ್ನು ಈಕೆಯನ್ನು ನಾನು ನನ್ನ ಇಚ್ಛಾನುಸಾರವಾಗಿ ನಡೆಯಿಸಿಕೊಳ್ಳಬಹುದಷ್ಟೆ?

ರಾಯ— ಸಂದೇಹವೇಕೆ ರೂಪಸಿಂಗ್

ರೂಪ— (ಸಹಜ ಸ್ವರದಲ್ಲಿ) ಭಲೇ, ತಂಗೀ, ಜಗನ್ಮೋಹಿನೀ! (ಜಗನ್ಮೋಹಿನಿಯನ್ನು ಗಾಢಾಲಿಂಗನ ಮಾಡಿಕೊಳ್ಳುವನು. ಎಲ್ಲರೂ ಬೆರಗಾಗಿ ಮುಖ ತಿರುಗಿಸಿಕೊಳ್ಳುವರು. ತಿಮ್ಮರಸನೂ ರಾಯನೂ ಹುಬ್ಬೇರಿಸುವರು. ಜಗನ್ಮೋಹಿನಿ ಆಶ್ಚರ್ಯದಿಂದ ರೂಪಸಿಂಗನನ್ನು ನೋಡುವಳು.) ರಾಜೇಂದ್ರಾ! ಇನ್ನುಳಿದುದು ಒಂದೇ ಪ್ರತಿಜ್ಞೆ. ಅಂದು ನಾಗಲಾಪುರದ ತೋಟದಲ್ಲಿ ನನಗೆ ಕೊಟ್ಟ ಮಾತಿನಂತೆ; ನನ್ನನ್ನು ಪಟ್ಟದ ರಾಣಿಯಾಗಿ ಮಾಡಿಕೊಳ್ಳಿ—ನಾನೀಗ ನಿಷ್ಕಳಂಕಿನಿ! ನನ್ನೊಂದಿಗೇ ಇವಳನ್ನೂ ಪರಿಗ್ರಹಿಸಿಕೊಳ್ಳಿ ಪ್ರಭೂ! (ಉದ್ವೇಷ ಕಳಚುವುದು)

ರಾಯ— ಇಳಿದು ಬರುತ್ತ! ಏನಿದು ಚಿನ್ನಾ! ಆ ದಿನ ಅಕಸ್ಮಾತ್ ನಗರದಿಂದ ಕಣ್ಮರೆಯಾದೆ! ಗೊಂಡಡವಿಯಲ್ಲಿ ಮತ್ತೆ ಮಾಯವಾದೆ! ಈಗ ಮತ್ತೆ ಮತ್ತೆ ಮಿನುಗುತ್ತಿರುವಿ? ಮಾಯವಾಗುವಿಯಾ ಇನ್ನೂ! ಓ ಚಿನ್ನಾ!

ಚಿನ್ನಾ— ಇಲ್ಲ ಪ್ರಭೂ! ಇನ್ನು ಮಾಯವಾಗುವುದಿಲ್ಲ. ಇಗೋ ಇವರೇ ನನ್ನ ತಂದೆ ತಾಯಿಗಳು.

ರಾಯ— ಇವರು ಉದಯಗಿರಿಯ ರಾಜರು! ವೀರರುದ್ರ ಗಜಪತಿ! ನನ್ನ ಮೇಲಿನ ವೈರತ್ವದಿಂದ ಇವರು ಬೆಲ್ಲಂಗೊಂಡದ ಅರಣ್ಯದಲ್ಲಿ ನನ್ನನ್ನು ಸಂಧಿಸಿದ್ದರು. ಈಗ ಸ್ನೇಹಿತರಾಗಿದ್ದಾರೆ. (ವೀರರುದ್ರನ ಕೈ ಹಿಡಿದು ಕರೆದುಕೊಳ್ಳುವನು. ಸುಭದ್ರಾ ಚಿನ್ನಾದೇವಿಯು ಬಳಿ ನಿಲ್ಲುವಳು ಜಗನ್ಮೋಹಿನಿ ನಿರ್ಮೂಢೆಯಾಗಿ ನಿಂತಿರುವಳು.)

ತಿಮ್ಮರಸು— ಬಹಳಾಶ್ಚರ್ಯವಾಗಿದೆ ಈ ಯೋಗ!

ತಿಮ್ಮಣ್ಣ— ವಿಚಿತ್ರ ದೈವಲೀಲೆ! ಶಿವ ಶಿವಾ!

ರಾಮಕೃಷ್ಣ— ಎಲ್ಲಾ ದೊಡ್ಡ ಚಿನ್ನಾಟ!

ವೀರರುದ್ರ— ಅನೇಕ ವರ್ಷಗಳ ಹಿಂದೆ ಒಬ್ಬ ನೀಚನ ಚಾಡಿಯನ್ನು ನಂಬಿ ನನ್ನ ಈ ಪಟ್ಟಮಹಿಷಿ ಸುಭದ್ರಾ ದೇವಿಯ ಮೇಲೆ ನಾನು ದುರಾರೋಪವನ್ನು ಹೊರಿಸಿ ತ್ಯಾಗಮಾಡಿದೆ. ಆ ನೀಚನು ಇವಳ ಮೇಲೆ ಆಶೆಯು ಪಟ್ಟು, ಇವಳು ಅವನಿಗೆ ಬರೆದಂತೆ ಒಂದು ಪತ್ರವನ್ನು ಸೃಷ್ಟಿಸಿ ಅದು ನನಗೆ ಸಿಕ್ಕುವಂತೆ ಮಾಡಿದನು. ನಾನು ತುಂಬು ಗರ್ಭಿಣಿಯಾದ ಇವಳನ್ನು ಮನೆಯಿಂದ ಹೊರಹಾಗೆ ಬಿಟ್ಟೆ. (ಸುಭದ್ರಾ ದೇವಿಯನ್ನು ನೋಡುವನು)

ಸುಭದ್ರಾ— ಪತಿಯಿಂದ ತ್ಯಜಿಸಲ್ಪಟ್ಟ ನಾನು ಆತ್ಮಹತ್ಯ ಭ್ರೂಣಹತ್ಯಗಳಿಗೆ ಅಂಜಿ ಹೇಗೂ ವಿದ್ಯಾನಗರವನ್ನು ಸೇರಿದೆ, ಅಲ್ಲಿ ಮಹಾತಾಯಿ ನಾಗಾಲಾ ದೇವಿ ನನಗೆ ಆಶ್ರಯವಿತ್ತಳು. ಅಲ್ಲಿಯೇ ನಾನು ಈ ಚಿನ್ನಾದೇವಿಯನ್ನು ಹೆತ್ತೆ.

ರಾಯ— ಇಂತಹ ಸುಯೋಗವನ್ನು ಕಂಡ ಪ್ರತಾಪರುದ್ರ ಗಜಪತಿಗಳೂ ಸಂತೋಷ ಪಡುವರೆಂದು ನಂಬುತ್ತೇನೆ.

ತಿಮ್ಮರಸು— ನಾನೇ ಹೋಗಿ ಅವರನ್ನು ಕರೆದು ತರುತ್ತೇನೆ. (ತಿಮ್ಮರಸು ಹೋಗುವನು.)

ರಾಮಕೃಷ್ಣ— ಈಗ, ದೇವಿ, ಜಗನ್ಮೋಹಿನಿ, ನಮ್ಮ ಈ ತಿಮ್ಮಣ್ಣ ಕಪಟಯೋಗಿಗಳ ತಪಸ್ಸಿನ ಫಲವಾಗಿ—

ತಿಮ್ಮ— ಬರೀ ನನ್ನ ತಪಸ್ಸಿನಿಂದಲ್ಲವೋ ರಾಮಕೃಷ್ಣಾ. ಜಗನ್ಮೋಹಿನಿಯ ಪತಿಯಾದ ರೂಪಸಿಂಗನ ಚಾತುರ್ಯದಿಂದ ಅನ್ನು.

ರಾಮ— ಹಾಗೇ ಅಂದೆ. ಜಗನ್ಮೋಹಿನಿಗೆ ತನ್ನ ಮನೋರಮಣನೇ ಪತಿಯಾಗಿ ದೊರಕಿದ.

(ತಿಮ್ಮರಸು ಪ್ರತಾಪರುದ್ರ ಗಜಪತಿಯನ್ನು ಆದರದಿಂದ ಕರೆದುಕೊಂಡು ಬರುವನು. ಕೃಷ್ಣದೇವರಾಯನು ಮುಂದೆ ಬಂದು ಆತನ ಕೈಹಿಡಿದು.)

ರಾಯ— ಬರಬೇಕು ಹೀಗೆ. ನನ್ನ ಅಪರಾಧ ಕ್ಷಮಿಸಿ. ಶ್ರೀ ವಿರೂಪಾಕ್ಷನು ಸರ್ವ ಮಂಗಳವನ್ನುಂಟು ಮಾಡಿದನು. (ಕರೆದೊಯ್ದು ಗದ್ದುಗೆಯಲ್ಲಿ ಕೂಡಿಸುವನು. ಪ್ರತಾಪರುದ್ರನು ದಿಙ್ಮೂಢನಂತೆ ಸುತ್ತ ನೋಡಿ, ವೀರರುದ್ರನನ್ನ ಕಂಡ.)

ಪ್ರತಾಪ – ಅಣ್ಣಾ, ಇದೇನ? ಇಲ್ಲಿ ನಿನ್ನ ಅಪರೂಪ ದರ್ಶನ?

ವೀರ— ತಮ್ಮ ಪ್ರತಾಪರುದ್ರ, ಈಕೆ ನನ್ನ ಮಗಳಾದ ಚಿನ್ನಾದೇವಿ. ಇವಳ ಸಾಹಸದಿಂದ ಈ ಅಮೃತ ಯೋಗವುಂಟಾಯಿತು. ಇನ್ನು ರಾಯನ ಮೇಲಿನ ವೈರವನ್ನು ತೊರೆ. ಈತನು ದಕ್ಷಿಣ ಭಾರತದ ಮಧ್ಯಂದಿನ ಮಾರ್ತಾಂಡನಂತಿದ್ದಾನೆ. ನಮಗೆ ತಿಳಿಯದಂತೆಯೇ ದೈವವು ಈತನನ್ನು ಮೊದಲೇ ನಮ್ಮ ಅಳಿಯನನ್ನಾಗಿ ಮಾಡಿದೆ ನನ್ನ ಮಗಳು ಚಿನ್ನಾದೇವಿಯನ್ನು ಈತನು ಅನೇಕ ವರ್ಷಗಳ ಹಿಂದೆಯೇ ವಿಧ್ಯುಕ್ತವಾಗಿ ವಿವಾಹ ಮಾಡಿಕೊಂಡಿದ್ದಾನೆ. ಈಗ ನೀನೂ ಪ್ರಸನ್ನನಾಗಿ ನಿನ್ನ ಕುಮಾರಿಯನ್ನು ಆತನಿಗೆ ಸಮರ್ಪಿಸಿ ವಿವಾಹವನ್ನು ನೆರವೇರಿಸು. (ಪ್ರತಾಪರುದ್ರನ ಕೈಹಿಡಿದೆಬ್ಬಿಸಿ) ಇಗೋ, ಈ ಅಭಿಜಿನ್ಮುಹೂರ್ತವು ಅತಿಕ್ರಮಿಸಿ ಹೋಗುವುದರೊಳಗೆ ಪಾಣಿಗ್ರಹಣ ಮಹೋತ್ಸವವನ್ನು ನೆರವೇರಿಸೋಣ. (ವೀರರುದ್ರ—ಸುಭದ್ರಾ ದೇವಿಯರು ಚಿನ್ನಾದೇವಿಯನ್ನು ರಾಯನ ಎಡಗಡೆಯಲ್ಲಿ ನಿಲ್ಲಿಸುವರು. ಪ್ರತಾಪರುದ್ರನು ಜಗನ್ಮೋಹಿನಿಯನ್ನು ರಾಯನ ಬಲಗಡೆಯಲ್ಲಿ ನಿಲ್ಲಿಸುವನು. ಪಾಣಿಗ್ರಹಣ. ಮಂತ್ರ-ವಾದ್ಯ—ಜಯಘೋಷ.)

ಮಳೆಗರೆಯಲಿ ತತ್ಕಾಲಕೆ
ಇಳೆಬೆಳೆಯಲಿ ಸಸ್ಯಶೋಭೆಯಿಂದಾ
ಧರ್ಮಂ
ಬೆಳಗಲಿ ಸತ್ಯಂ ನೆಲಸಲಿ
ಗೆಳೆತನದಿಂ ಪ್ರಜೆಗಳೆಲ್ಲ ಬಾಳಲಿ
ನಿರತಂ ||

(ಸಮಾಪ್ತಂ)

ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ.
14 CT ಚಿನ್ನದ ಆಭರಣಗಳಲ್ಲಿ 58⅓% ಶುದ್ಧ ಪುತ್ಥಿ ಚಿನ್ನ ಇರುತ್ತದೆ.
ಬೇಡವಿದ್ದಲ್ಲಿ 1 ರೂ. ಕಮ್ಮಿಯಲ್ಲಿ ಯಾವಾಗಲೂ ಬಜಾರು ಧಾರಣೆಗೆ ಪಡಕೊಳ್ಳುವ ಭರವಸೆ ಕೊಡುತ್ತೇವೆ.
ವಿ. ಸೂ: ಹಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡಕೊಳ್ಳುವರೆ ಸರಕಾರದ ಲೈಸನ್ಸು ಸಿಕ್ಕಿರುತ್ತದೆ.
ಮದುವೆ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡಕೊಂಡು ಖಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.

ಶ್ರೀ ಕೃಷ್ಣಾ ಜ್ಯುವೆಲರಿ ಮಾರ್ಟ್

ತೆಂಕಪೇಟೆ — ಉಡುಪಿ.
ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.
ಫೋನ್ ನಂಬ್ರ: 66

ಆದರ್ಶ ಚರಿತೆಗಳು—೧೨

ಸಂತ ಕಾನ್‌ಫ್ಯೂಶಿಯಸ್

—ಶ್ರೀ ಎಸ್. ಎಂ. ಶೆಟ್ಟಿ, ಶಿವಮುಂಜೆಪರಾರಿ.

ಚೀನಾದ ಒಂದು ದರಿದ್ರ ಪರಿವಾರದಲ್ಲಿ ಕಾನ್‌ಫ್ಯೂಶಿಯಸ್ ಅವರ ಜನನವಾಯಿತು. ಭಾರತ ವರ್ಷದ ಉತ್ತರಕ್ಕೆ ಟಿಬೇಟನಾಚೆ ಚೀನಾ ದೇಶವಿದೆ.

ಕಾನ್ ಫ್ಯೂಶಿಯಸರು ದಟ್ಟ ದರಿದ್ರತೆಯಲ್ಲಿಯೇ ಬೆಳೆದರು. ದೊಡ್ಡವರಾದ ಮೇಲೆ, ಜನರು ಅವರ ವಿಶಾಲ ಜ್ಞಾನವನ್ನು ಕಂಡು ಹೊಗಳಿದಾಗ, ಅದರ ಶ್ರೇಯಸ್ಸನ್ನು ಇವರು 'ದರಿದ್ರತೆ'ಗೆ ಅರ್ಪಿಸುತ್ತಿದ್ದರು ಐದಾರು ವರ್ಷ ಪ್ರಾಯದ ಮಗುವಾಗಿರುವಾಗಲೇ, ಆಸನಗಳನ್ನು ಹಾಕಿ ಕುಳಿತುಕೊಳ್ಳುವುದು, ಯಜ್ಞ ಯಾಗಾದಿಯ ಅನುಕರಣೆ ಗೈಯುವುದು ಅವರ ಪ್ರೀತಿಯ ಆಟವಾಗಿತ್ತು.

ತನ್ನ ೨೨ನೆಯ ವಯಸ್ಸಿನಲ್ಲಿ ಕಾನ್‌ಫ್ಯೂಶಿಯಸರು ಒಂದು ಶಾಲೆಯನ್ನು ತೆರೆದರು. ನಿರ್ದೋಷ ಆಚರಣೆ, ಸುಧಾರಿತ ಶಾಸನ ಪ್ರಣಾಳಿಗಳನ್ನು ತಿಳಿಯಲಿಕ್ಕಾಗಿ ವಯಸ್ಕರು ಇಲ್ಲಿಗೆ ಹೋಗುತ್ತಿದ್ದರು. ರಾಜಪರಿವಾರದ ಇಬ್ಬರು ವ್ಯಕ್ತಿಗಳೂ ಈ ಶಾಲೆಗೆ ಬರುತ್ತಿದ್ದರು. ಅನೇಕ ಬಾರಿ ಅವರೊಡನೆ ಕಾನ್‌ಫ್ಯೂಶಿಯಸರು ರಾಜಸಭೆಗೆ ಹೋದರು. ಅಲ್ಲಿಯೇ ಅವರು ಶ್ರೇಷ್ಠತಮ ಸಂಗೀತ ಶಿಕ್ಷಣವನ್ನು ಪಡೆದರು. ಅಲ್ಲಿಯೇ ಅವರಿಗೆ ಆ ಕಾಲದ ಸುಪ್ರಸಿದ್ಧ ದಾರ್ಶನಿಕ 'ಲಾವೋತ್ಸೆತುಂಗ್' ರೊಡನೆ ಭೇಟಿಯಾಗುವ ಸುಸಂದರ್ಭ ಲಭಿಸಿತು.

ತನ್ನ ೫೨ರ ಹರೆಯದಲ್ಲಿ ಇವರು ಒಂದು ನಗರದ ಮುಖ್ಯ ನ್ಯಾಯಾಧೀಶರಾಗಿ ನಿಯುಕ್ತರಾದರು. ಇವರು ಆ ಪದವಿಯನ್ನು ಸ್ವೀಕರಿಸುತ್ತಲೇ ಆ ಊರಿನಲ್ಲಿ ಒಂದು ಅತ್ಯದ್ಭುತ ಪ್ರತಿಕ್ರಿಯೆಯು ನಡೆಯಿತು. ಅಪರಾಧಗಳು, ಕೊಲೆ ಸುಲಿಗೆಗಳು ಸಂಪೂರ್ಣವಾಗಿ ಕೊನೆಗೊಂಡುವು. ಊರು ಉನ್ನತಿಯ ಪಥದಲ್ಲಿ ಮುಂದುವರಿಯಿತು. ಪುರುಷರು ಚರಿತ್ರವಂತರೂ, ದೇಶಭಕ್ತರೂ ಆದರು; ಹೆಂಗಸರು ಸತೀ ಸಾಧ್ವಿಯರಾದರು. ಕಾನ್‌ಫ್ಯೂಶಿಯಸರನ್ನು ದೇವತೆಯಂತೆ ಕಾಣಲಾಯ್ತು. ಅವರ ಪ್ರಶಂಸಾಪೂರ್ಣ ಗೀತೆಗಳು ರಚಿಸಲ್ಪಟ್ಟವು. ಅವು ಲೋಕ ಗೀತೆಯಂತೆ ಜನಜನಿತವಾದುವು.

ಕಾನ್‌ಫ್ಯೂಶಿಯಸ್ 'ಲೂ' ರಾಜ್ಯದ ನಿವಾಸಿ, ಹೆಚ್ಚುತ್ತಿರುವ ಇವರ ಪ್ರಭುತ್ವವನ್ನು ಕಂಡು ನೆರೆಹೊರೆಯ ರಾಜರು ಗಾಭರಿಯಾದರು. "ಲೂ"ರಾಜ್ಯದ ಶಕ್ತಿಯು ಒಂದು ದಿನ ತಮ್ಮೆಲ್ಲರನ್ನು ನುಂಗಿಬಿಡಬಹುದು ಎಂದವರು ಭಯಭೀತರಾದರು. ನೆರೆರಾಜ್ಯದ ಕುತಂತ್ರ ರಾಜನೊಬ್ಬನು "ಗಾಯನ—ನರ್ತನ" ಪ್ರವೀಣೆಯರಾದ ಸುಂದರಾಂಗನೆಯರ ತಂಡವೊಂದನ್ನು "ಲೂ" ರಾಜ್ಯಕ್ಕೆ ಕಳುಹಿಸಿದನು. ಅವರ ಮೋಸವು ಸಫಲವಾಯ್ತು, "ಲೂ" ರಾಜ್ಯದ ರಾಜನು ರಾಜಕಾರ್ಯಗಳನ್ನೆಲ್ಲಾ ನಿರ್ಲಕ್ಷಿಸಿ ದಿನರಾತ್ರಿ ಅವರ ಗಾಯನ ವಾದನಗಳಲ್ಲಿ ಲೀನನಾಗಿರ ತೊಡಗಿದನು. ಕಾನ್‌ಫ್ಯೂಶಿಯಸರ ಆತ್ಮೀಯ ಸಲಹೆಯನ್ನೂ ಅವನು ತಿರಸ್ಕರಿಸಿದನು. ಇದರಿಂದ ಬೇಸರಗೊಂಡ ಕಾನ್‌ಫ್ಯೂಶಿಯಸ್‌ರವರು ಆರಾಜ್ಯವನ್ನು ಬಿಟ್ಟು ಹೋದರು.

ಅವರು ಮತ್ತೊಮ್ಮೆ ಹಿಂತಿರುಗಿ ಬಂದಾಗ ಬೇರೊಬ್ಬ ರಾಜನು ಸಿಂಹಾಸನಾರೋಹಣ ಗೈದಿದ್ದನು. ಆದರೆ ಈಗ ಕಾನ್ ಫ್ಯೂಶಿಯಸರು ರಾಜಕಾರಣದಿಂದ ದೂರಸರಿದ. —ಅಧ್ಯಯನ ಹಾಗೂ ಶಿಕ್ಷಣ ನೀಡುವುದರಲ್ಲಿ ಸಮಯ ವಿನಿಯೋಗಿಸ ತೊಡಗಿದರು.

ತನ್ನ ೭೩ನೇ ವರ್ಷ ಪ್ರಾಯದಲ್ಲಿ ಅವರು ಪರಂಧಾಮವನ್ನೈದಿದರು.

(ಮೂಲ: ಠಾಕೂರ್ ಸುದರ್ಶನ ಸಿಂಹ)

ನವಯುಗಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ

REGD. No B G. 176
LICENCE No. 31
Licensed to Post without Prepayment

ಶಾಂತಿಯ ಪ್ರತೀಕ, ಮಾನವತೆಯ ಸೇವಕ

(೧ನೇ ಪುಟದಿಂದ)

ತ್ತಾರೆ. ನಮಗಿಂದು ಬೇಕಾಗಿರುವುದು ಧೈರ್ಯಅಥವಾ ಕೆಚ್ಚು ನಾಯಕತನವೆನ್ನುವುದು ಮಾಂಗಟಗಾರತನವಲ್ಲ ಸೂಕ್ತ ಮಾರ್ಗದರ್ಶನವೇ ನಾಯಕತ್ವದ ಉತ್ತಮ ಪರೀಕ್ಷೆ" ಈ ಮಾತನ್ನು ಮರೆಯದ ಅಮೇರಿಕೆಗೆ ಮಾತ್ರವಲ್ಲ, ಇಡಿಯ ವಿಶ್ವಕ್ಕೇನೇ ಮಾರ್ಗದರ್ಶನ ಮಾಡಿ ವಿಶ್ವನಾಯಕ ಸ್ಥಾನವನ್ನಡರಿದ್ದಾರೆ, ಅಧ್ಯಕ್ಷ ಕೆನ್ನೆಡಿಯವರು ಮಾನವತೆಯ ಹೃದಯ ಸಿಂಹಾಸನಾರೋಹಣ ಮಾಡಿದ್ದಾರೆ, ಅವರು ಶಾಂತಿಯ ಪ್ರತೀಕ, ಮಾನವತೆಯ ಸೇವಕ ಕಳೆದ ಎರಡೂವರೆ ವರ್ಷಗಳ ತನ್ನ ಸಾಧನೆಯಲ್ಲಿ ಇದರ ಪರಿಚಯ ಮಾಡಿ ಕೊಟ್ಟಿದ್ದಾರೆ ಕೆನ್ನೆಡಿಯವರ ನಿಧನದಿಂದ ವಿಶ್ವದ ಮಹಾ ಜೀವವೊಂದು ಅಸ್ತಂಗತ ವಾದಂತಾಯಿತು ಅಧ್ಯಕ್ಷ ಲಿಂಕನ್ನರಂತೆಯೇ ಅಧ್ಯಕ್ಷ ಕೆನ್ನೆಡಿಯವರೂ ಇದೀಗ ಗತಕಾಲದ ವಿಭೂತಿ ಪುರುಷರಾದರು

ಉಡುಪಿ ಡಿ ಮು ಕೋರ್ಟಿನಲ್ಲಿ

O. P No 36 of 1963

1) ಫಾತ್ಮಾಬಿ-ಖಾಜಿ ಅಹಮ್ಮದ್ ಸಾಹೇಬರ ವಿಧವೆ—2) ಖತಿಜಾಬಿ— ಖಾಜಿ ಉಮ್ಮರ್ ಸಾಹೇಬರ ವಿಧವೆ-ಉಡ್ಪಿ ತಾಲೂಕು ಉದಿಯಾವರ ಗ್ರಾಮದಲ್ಲಿರುವವರು

– ಅರ್ಜಿದಾರರು,

ಮತ್ತು

1) ಅಬ್ದುಲ್ ರಹಿಮಾನ್, 2) ಅಮಿರ್ ವುದ್ದೀನ್, 3) ಇಬ್ರಾಹಿಂ ಸಾಹೇಬ, 4) ಸಾಬುದ್ದೀನ್ ಸಾಹೇಬ—ಖಾಜಿ ಫಕೀರ್ ಮಹಮದ್ ಸಾಹೇಬರ ಮಕ್ಕಳು.

5) ಯುಸೂಫ್ ಸಾಹೇಬ, 6) ಮೈದಿನ್ ಸಾಹೇಬ, 7) ಇಸ್ಮಾಲ್ ಸಾಹೇಬ, 8) ಖಾದರ್ ಸಾಹೇಬ, 9) ಅಬುದ್ದಿನ್ ಸಾಹೇಬ, 10) ಮಿಟ್ಟು ಸಾಹೇಬ-ಮೈನರ್ ಗಾರ್ಡಿಯನ್—8ನೇ ಎದ್ರಿ— ಖಾಜಿ ಇಬ್ರಾಹಿಂ ಸಾಹೇಬರ ಮಕ್ಕಳು,

11) ಸಲಿಮಾಬಿ ಜೈನುದ್ದೀನ್ ಫಕೀರ್ ಸಾಹೇಬರ ಮಗ,

11ನೇಯವನು ಉಡ್ಪಿ ತಾಲೂಕು ಪಡುತೋನ್ಸೆ ಗ್ರಾಮದಲ್ಲಿಯೂ ಮಿಕ್ಕವರು ಉಡ್ಪಿ ತಾಲೂಕು ಉದಿಯಾವರ ಗ್ರಾಮದಲ್ಲಿಯೂ ಯಿರುವವರು - ಎದ್ರಿರು

ಇವರೊಳಗೆ

ಸದ್ರಿ ಎದ್ರಿರಿಗೆ ವ ಸಮಸ್ತ ಜನರಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ —

ತಾರೀಕು 15—8—1963ರಲ್ಲಿ ಉಡ್ಪಿ ಮಿಶ್ಯನ್ ಆಸ್ಪತ್ರೆಯಲ್ಲಿ ಮೃತಪಟ್ಟ ಉದಿಯಾವರ ಖಾಜಿ ಅಹಮ್ಮದ್ ಸಾಹೇಬರ ಬಾಬ್ತು ಅರ್ಜಿಯಲ್ಲಿ ಕಾಣಿಸಿದ ಇನ್ಶೂರೆನ್ಸ್ ಏಜೆನ್ಸಿನಲ್ಲಿ 7/12 ಅಂಶದ ಹ್ಯಸೇಜುವನ್ನು ಪಡೆಯುವರೆ ತಮ್ಮ ಹೆಸರಲ್ಲಿ ವಾರೀಸು ಹಕ್ಕು ಸರ್ಟಿಫಿಕೇಟು ಕೊಡಬೇಕಾಗಿ ವಗೈರೆ ಅಪೇಕ್ಷಿಸಿ ಅರ್ಜಿದಾರರು ಮಾಡಿಕೊಂಡ ಮೇಲ್ಕಂಡ ಅರ್ಜಿಯು ತಾ 2—12—1963ಕ್ಕೆ ಯಿಟ್ಟಿರುವದ್ರಿಂದ ಆ ಕುರಿತು ಆಕ್ಷೇಪವುಳ್ಳವರು ಸದ್ರಿ ದಿವ್ಸಪೂರ್ವಾಹ್ನ 11 ಘಂಟೆಗೆ ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳಬಹುದು

K. Balachandra Rao,
Advocate for Petitioners.
Udipi, 25—11—1963

ವಾರ್ತೆ—ಪ್ರತಿವಾರ್ತೆ

ಭಗತಾರನ್ನು ಕೇಂದ್ರ ಸಂಪುಟದಲ್ಲಿ ಕ್ಯಾಬಿನೆಟ್ ದರ್ಜೆಯ ಮಂತ್ರಿಯನ್ನಾಗಿ ನಿಯುಕ್ತ ಮಾಡಿದ ಪಂಡಿತ ನೆಹರುರವರು ಅಕ್ಷಮ್ಯ ಅಪರಾಧ ಮಾಡುತಿದ್ದಾರೆಂದು ಕೆಲವು ಕಾಂಗ್ರೆಸಿಗರು ಗೊಣಗುತಿದ್ದಾರೆ.

—ಜತೆಗೆ ಅಧ್ಯಕ್ಷ ಕೆನ್ನೆಡಿಯವರ ಹೆಸರನ್ನು ಜಪಿಸುತ್ತಿಲ್ಲವೆಂಬುದು ಮಾತ್ರ ಸಂತೋಷ.

० ० ०

ಕೆನ್ನೆಡಿ ಮರಣ ವಾರ್ತೆ ಕೇಳಿದ ಸೋವಿಯತ್ ಪ್ರಧಾನಿ ಕ್ರುಶ್ಚೇವರು ದುಃಖ ಸೂಚಕ ಕಾಳವಸ್ತ್ರಧಾರಿಯಾಗಿ ಮೋಸ್ಕೊವಿನಲ್ಲಿನ ಅಮೆರಿಕನ್ ದೂತಾವಾಸಕ್ಕೆ ತೆರಳಿ ೨೫ ನಿಮಿಷಗಳ ಕಾಲ ಅಲ್ಲಿದ್ದು ತಮ್ಮ ಶೋಕವನ್ನು ವ್ಯಕ್ತಪಡಿಸಿದರು.

—ಅಸಮಾನತೆಯನ್ನು ಕ್ರುಶ್ಚೇವರೇ ತೋರಿದರೆನ್ನುವಾಗ, ಸಮಾನತೆಗೆ ಇನ್ನು ಸ್ಥಾನವಿಲ್ಲವೆಂದು ತಿಳಿಯ ಬಹುದೆ?

० ० ०

ಭಾರತದ ವಾಯು ಪಡೆಯ ಐವರು ವರಿಷ್ಠಾಧಿಕಾರಿಗಳೂ ಹೆಲಿಕಾಪ್ಟರ್ ಚಾಲಕನೂ ಜಾಂಪೂವಿನಲ್ಲಿ ಅಪಘಾತದಿಂದ ಮಡಿದರ, ಅದೇ ದಿನ ಡಲ್ಲೆಸ್ ನಗರದಲ್ಲಿ ಅಧ್ಯಕ್ಷ ಕೆನ್ನೆಡಿಯವರು ಅಪಘಾತಿಸಲ್ಪಟ್ಟರು

—ಸಪ್ತಮಂ ದೈವಚಿಂತನಂ ಎಂಬುದರಲ್ಲಿ ಸತ್ಯಾಂಶವಿದ್ದರೂ ಇರಬಹುದೆನಿಸುತ್ತದೆ.

० ० ०

ಪಂಚಾಯತುಗಳ ಕಾರ್ಯಗಳು ಸುಸೂತ್ರವಾಗಿ ನಡೆಯುವಂತೆ ಪಂಚಾಯತುಗಳಿಗೆ ಅಧಿಕ ಅಧಿಕಾರವೀಯುವ ಬಗ್ಗೆ ತಿದ್ದುಪಡಿ ಮಸೂದೆಯೊಂದು ಮುಂದೆ ಬರಲಿದೆ.

—ಪಂಚಾಯಿತಿ ಕಾರ್ಯ ಸುಸೂತ್ರವಾಗಿ ನಡೆಯ ಬೇಕಾದರೆ ಅಧಿಕ ಅಧಿಕಾರ ಬೇಕೆಂದು ಪಂಚಾಯಿತಿ ಕಾರ್ಯದರ್ಶಿಗಳು ಸಲಹೆ ನೀಡಿದ್ದಾರೆಂಬುದಿನ್ನೂ ದೃಢಪಟ್ಟಿಲ್ಲ

० ० ०

ತ್ರಿವೆಂಡ್ರಮದ 'ತುಂಬಾ' ಆಕಾಶ ಬಾಣ ನೆಲೆಯಿಂದ ೧,೬೦೦ ರಾತಲು ಭಾರದ ಒಂದು ಆಕಾಶ ಬಾಣವನ್ನು ಭಾರತವು ಹಾರಿಸಿ, ಅಂತರಿಕ್ಷ ಸಂಶೋಧನಾ ರಂಗವನ್ನು ಪ್ರವೇಶಿಸಿತು.

—ಅಂತರಾಳ ಸಂಶೋಧನೆಯನ್ನಿನ್ನು ಪೂರ್ಣ ಕೈಬಿಡ ಬಹುದೆನಿಸುತ್ತದೆಯಲ್ಲವೆ?

० ० ०

ಚಿಕ್ಕ ಮಕ್ಕಳಲ್ಲಿ ಉಳಿತಾಯ ಪ್ರವೃತ್ತಿಯನ್ನು ಹುಟ್ಟಿಸಲು ಸಿಂಡಿಕೇಟ್ ಬ್ಯಾಂಕ್, ಉಳಿತಾಯ ಸಪ್ತಾಹವನ್ನು ಆಚರಿಸಿ ಮಕ್ಕಳಿಂದ ಬ್ಯಾಂಕಿನಲ್ಲಿ ಖಾತೆ ತೆರೆಸುವ ಹೊಸ ಚಳವಳಿಯನ್ನು ಆರಂಭಿಸಿತ

० ० ०

—ವ ನೆಯಲ್ಲಿ ಮಾಯಕ ವೇಕೆ ಪ್ರಾರಂಭವಾಗಿದೆಯೆಂದು ಹೆತ್ತವರು ಶಂಕಾತುರರಾಗಿದ್ದಾರೆಂಬುದು ನಿಜಕ್ಕೂ ಕಲ್ಪನೆ.

० ० ०

ಕಾಂಗ್ರೆಸ್ ಉಪದೇಶಿಸುವ ಆದರ್ಶ ಕಾರ್ಯಗತ ಮಾಡಲೊಲ್ಲದ ಉತ್ತಮ ಕೃತಿಗಳನ್ನು ವ್ಯವಸ್ಥಿತಗೊಳಿಸುವಂತೆ ಸಾವ ಜನಿಕ ಕ್ರಮಕೈಗೊಳ್ಳಬೇಕೆಂದು ಕಮ್ಯೂನಿಸ್ಟ್ ನಾಯಕ ಶ್ರೀ ಎ ಕೆ. ಗೋಪಾಲನ್, ಸಮಾಜವಾದಿ ಶಕ್ತಿಗಳಿಗೆ ಕರೆಯಿತ್ತಿದ್ದಾರೆ.

—ಗೋಪಾಲನರು ಮೂರು ವಿಷಯಗಳನ್ನು ಸ್ಪಷ್ಟೀಕರಿಸಲಿಲ್ಲ

೧ ಕಾಂಗ್ರೆಸ್ಸು ಸಮಾಜವಾದಿ ಶಕ್ತಿಕೂಟದಲ್ಲಿ ಸೇರಿಕೊಳ್ಳುವುದೇ ಇಲ್ಲವೆ?

೨. 'ಉತ್ತಮ ಕೃತಿ'ಯೆಂದರೇನು?

೩. ಉಪದೇಶವೆಂಬುದು ಪರರಿಗಾಗಿಯೋ ತನಗಾಗಿಯೊ?

ಅಪಘಾತ

ಶಿರಮುಡಿ[1]ಯ ರಕ್ಷಣೆಗೆ,
ಪಾಂಡವರು[2] ನಡೆದಿಹರು—
ಅಪಘಾತ, ಅದುವೆಮಗೆ ಅಘಾತ!
ಐವರೂ ಮಡಿದಿಹರು,
ಧೀರ ಕಣ್ಮಣಿಗಳು!
ನಡುರಾತ್ರಿ—
ಕಾರಿರುಳು ತುಂಬಿಹುದು, ಇಲ್ಲಿ!
ಯಾರೇನು ಬಲ್ಲರು, ಅಮೇರಿಕೆಯಲ್ಲಿ?
ಪಂಚಮದಂತಸ್ತಿನಲಿ,
ಪಂಚಮನೊಬ್ಬ
ಎಸೆದನದೊ ಗುಂಡು!
ಅಪಘಾತ, ಅದುವೆಮಗೆ ಅಘಾತ!
ಎಸೆದಾ ಗುಂಡು —
ಕೆನ್ನದಿಲೆ[3]ಗೆ ಬಡಿಯಿತು,
ಕೆನ್ನದಿ[4]ಯು ಹರಿಯಿತು.
ನಡು ಹಗಲೆ—
ಕಾರಿರುಳು ತುಂಬಿಹುದಲ್ಲಿ!
ನಡುರಾತ್ರಿ –
ಉರಿ ಬಿಸಿಲು ಕಾಯುತಿದೆ ಇಲ್ಲಿ!

—ಮಾ ಮಾ ಪನಾಸಕರ್

1 ಶಿರಮುಡಿ = ಹಿಮಾಲಯ
2 ಪಾಂಡವರು = ಐದುಮಂದಿ ವೀರರು
3 ಕೆನ್ನದಿಲೆ = ಅಧ್ಯಕ್ಷ ಕೆನ್ನಡಿ
4 ಕೆನ್ನದಿ = ರಕ್ತಧಾರೆ

ಉಳಿತಾಯ.......
ಒಂದು ಆವಶ್ಯಕತೆ

ಸೊಗಸಾಗಿ ಜೀವನ ನಡೆಸುವ ಈ ಆದರ್ಶ ದಂಪತಿಗಳ ಅಭಿಪ್ರಾಯದಂತೆ ಉಳಿತಾಯವು ಸಹಾ 'ಅತ್ಯಾವಶ್ಯಕ ವೆಚ್ಚಗಳಲ್ಲೊಂದು'. ಕೈಗೆ ಬಂದ ಸಂಪಾದನೆಯಲ್ಲಿ ಬೇಕಾದುದಕ್ಕೆಲ್ಲಾ ವೆಚ್ಚಮಾಡಿದ ನಂತರ 'ಏನಾದರೂ ಉಳಿದರೆ ನೋಡುವ' ಎಂಬ ಮನೋಭಾವನೆ ಅವರದಲ್ಲ ಆಹಾರ, ಬಟ್ಟೆ ಇತ್ಯಾದಿಗಳಿಗೆ ಖರ್ಚುಮಾಡುವಂತೆಯೇ ಒಂದು ನಿರ್ದಿಷ್ಟ ಮೊತ್ತವನ್ನು ಕ್ರಮವಾಗಿ ಬ್ಯಾಂಕಿನಲ್ಲಿಡುತ್ತಾ ಬರುವ ಆಗತ್ಯವನ್ನು ಅವರು ಚೆನ್ನಾಗಿ ಮನಗಂಡಿರುವರು

ಈ ದಂಪತಿಗಳು ತಮ್ಮ ಸೇವಿಂಗ್ಸ್ ಬ್ಯಾಂಕ್ ಪಾಸ್ ಪುಸ್ತಕವನ್ನು ಅವರ ಭವಿಷ್ಯ ಜೀವನದ ಭರವಸೆಯ ಚಿಹ್ನೆಯೆಂದು ಪರಿಗಣಿಸುತ್ತಿರುವರು ದಿನೇ ದಿನೇ ವೃದ್ಧಿಗೊಳ್ಳುತ್ತಿರುವ ಮೊತ್ತವನ್ನು ತರುವ ಈ ಚಿಕ್ಕ ಪುಸ್ತಕವು ಅವರ ಕಷ್ಟ ಕಾರ್ಪಣ್ಯಗಳನ್ನು ನಿವಾರಿಸಿ ಸುಖಶಾಂತಿಗಳನ್ನು ನೀಡುವ ಸಾಧನವೆಂಬ ಅವರ ಅಭಿಪ್ರಾಯವು ಎಷ್ಟು ಸಮಂಜಸವಾದುದು!

ಒಂದು ಸೇವಿಂಗ್ಸ್ ಬ್ಯಾಂಕ್ ಖಾತೆಯನ್ನು ತೆರೆಯಿರಿ.

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ.
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಿಗಳು,
ಫಾರ್ಮುಗಳು
ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ

Edited, Printed & Published by K. H.Shetty. at the Navayuga Press, Udipi, S. India.

ನವಯುಗ

VOL. 43 No 14 — ಸಂಪುಟ ೪೩ ಸಂಚಿಕೆ ೧೪

NAVAYUGA—Nationalist Weekly ‡‡ ಉಡುಪಿ 5–12–1963 ಗುರುವಾರ ‡‡ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಆತ್ಮಶೋಧ

ಲಂಚಾಸುರ ವಧೆಯಾಗುವುದೆ?

ಲೋಕಮಾನ್ಯ ತಿಲಕರು ಆಂಗ್ಲ ಅಧಿಕಾರಿ ಶ್ರಾಫರ್ಡನ ವಿರುದ್ಧ ಎಬ್ಬಿಸಿದ ಹುಯ್ಯಲಿಗೆ ಆತನ ಅತ್ಯಾಚಾರವೇ ಮೂಲ ಕಾರಣ ಇದು ಲಂಚ ಸ್ವೀಕಾರ ಅಥವಾ ಭ್ರಷ್ಟಾಚಾರದ ಪರಮ ಸೀಮೆಯನ್ನು ಮುಟ್ಟಿತ್ತು. ಮುಂದೆ ಸರಕಾರವು ನಿರುಪಾಯವಾಗಿ ಆತನ ಪ್ರಕರಣವನ್ನು ವಿಚಾರಣೆಗೆ ತೆಗೆದುಕೊಂಡಿತು. ಆದರೆ, ನ್ಯಾಯಾಧೀಶರ ನಿರ್ಧಾರ ಮಾತ್ರ ತಿಲಕರಿಗೆ ವಿರುದ್ಧವಾಗಿಯೇ ಬಂತು. "ಲಂಚ ಕೊಟ್ಟುದರಿಂದಲೇ ಶ್ರಾಫರ್ಡನು ತೆಗೆದುಕೊಂಡುದರಿಂದ ಕೊಟ್ಟವರೇ ಅಪರಾಧಿಗಳು; ತೆಗೆದುಕೊಂಡವರಲ್ಲ"– ಇಂತಹ ವಿಲಕ್ಷಣ ತೀರ್ಪು ಪರಂಪರೆಯಲ್ಲಿ ದೇಶೀಯರಿಗೆ ದೊರೆಯುವುದು ಸಹಜ. ಆದರೆ, ಇಂದು ನಾವು ಸ್ವತಂತ್ರರಿದ್ದೇವೆ; ದೇಶದ ಅಭಿವೃದ್ಧಿಗಾಗಿ ದುಡಿಯುವ, ದುಡಿಮೆಯ ಫಲವನ್ನು ಉಣ್ಣುವ ಅಧಿಕಾರವನ್ನು ಪಡೆದಿದ್ದೇವೆ, ಪ್ರಜಾಪ್ರಭುತ್ವ ವಾದಿಗಳೆಂದು ನಾವು ಕರೆದುಕೊಳ್ಳುತ್ತೇವೆ. ಪ್ರಜಾ ತಂತ್ರದ ದಾರಿಯನ್ನು ಮುಟ್ಟುತಿದ್ದೇವೆಂದು ಹೆಮ್ಮೆಪಟ್ಟುಕೊಳ್ಳುತ್ತೇವೆ; ನಿಜವೇ. ಆಂಗ್ಲರಾಡಳಿತೆಯಲ್ಲಿ ಬೀಜ ಮಾತ್ರವಿದ್ದ ಭ್ರಷ್ಟಾಚಾರವಿಂದು ಹೆಮ್ಮರವಾಗಿದೆ; ನಮ್ಮ ಪ್ರಜಾ ಶಕ್ತಿಯ ದಾರಿತುಂಬ ಇಂತಹ ಮರಗಳೇ ಸಾಲುಗಟ್ಟಿವೆ. ಇದರಿಂದಾಗಿ ಸಾಮಾನ್ಯ ಜನತೆಯನ್ನು ನಾನಾ ಪರಿಯಾಗಿ ಶೋಷಿಸುವ ವರ್ಗವೊಂದು ಬೆಳೆದು ನಿಂತಿದೆ.

ಪೆಡಂಭೂತ

ದೇಶದಲ್ಲಿ ಸುಭಿಕ್ಷೆಯುಂಟಾಗ ಬೇಕೆಂದು ನಾವು ಬಯಸುವುದಾದರೆ, ವಿಷಗಾಳಿಯಂತೆ ಹರಡಿರುವ ಭ್ರಷ್ಟಾಚಾರವು ಮೂಲೋತ್ಪಾಟನವಾಗಬೇಕು. ಎಂದಿನವರೆಗೆ ಪ್ರತ್ಯಕ್ಷವಾಗಿ ಇಲ್ಲವೇ ಅಪ್ರತ್ಯಕ್ಷವಾಗಿ ಇದು ಬೆಳೆಯುತ್ತಿರುವುದೋ ಅಂದಿನ ವರೆಗೆ ನಮ್ಮ ಸುಖ ಜೀವನವು ಕನಸಿನ ಛತ್ರ. ಲಂಚವನ್ನು ತೆಗೆದುಕೊಳ್ಳುವುದು ವ್ಯಕ್ತಿಯ ಸ್ವಾರ್ಥದೊಡನೆ ಆತನ ನಿರ್ಬಲತೆಯ ದ್ಯೋತಕವಿರುವಂತೆಯೇ ಕೊಡುವುದೂ ಆತನ ಅಶಕ್ತತೆ ಮತ್ತು ಸ್ವಾರ್ಥಪರತೆಯ ಕುರುಹೆಂದು ಹೇಳಲೇಬೇಕು, ಇಲ್ಲಿ ತಪ್ಪು ಯಾರದು ಎನ್ನುವುದನ್ನು ವಿಚಾರಿಸುವದರಿಂದ ಯಾವ ಪರಿಣಾಮವೂ ದೊರೆಯಲಾರದು, ಅದು ನಡೆಯದಂತೆ, ಅದಕ್ಕೆ ಆಸ್ಪದವೇ ದೊರೆಯದಂತೆ ಮಾಡುವುದಷ್ಟೇ ಮುಖ್ಯ. ಇಂತಹ ಕೆಲಸವನ್ನು ಯಾರು ಮಾಡಬೇಕು, ಹೇಗೆ ಮಾಡಬೇಕೆಂಬ ಪ್ರಶ್ನೆಯನ್ನು ವಿವೇಚಿಸಿಯೆ ಸರಿಯಾದ ದಾರಿಯನ್ನು ಹಿಡಿಯಬೇಕು. ಮಿತಿಮೀರುತ್ತಿರುವ ಭ್ರಷ್ಟಾಚಾರದ ಆಪಾದನೆಗೆ ಗುರಿಯಾದವರಲ್ಲಿ ಸಾಮಾನ್ಯ ಸರಕಾರಿ ಚಪರಾಸಿಯಿಂದ ತೊಡಗಿ ಮಂತ್ರಿಪರ್ಯಂತರ ವರೆಗಿನವರೂ ಸೇರಿದ್ದಾರೆ ದೇಶದಲ್ಲಿ ಲಂಚದ ದುರ್ವಾಸನೆ ಸರ್ವತ್ರ ಹರಡಿದೆಯೆಂದಿದರಿಂದ ತಿಳಿಯುತ್ತದೆ ಇದೇ ದುರ್ವಾಸನೆಯು ಇನ್ನೂ ಇನ್ನೂ ಪಸರಿಸುತ್ತ ಹೋಯಿತೆಂದರೆ, ಈಗಾಗಲೇ ಶಿಥಿಲಗೊಂಡ ಆಡಳಿತವು ಸಂಪೂರ್ಣ ಕುಸಿಯುವುದು ಆಗ ಅವ್ಯವಸ್ಥೆ ಹೆಚ್ಚಿ ಜನತೆಯಲ್ಲಿ ಅಸಮಾಧಾನ ತುಂಬಿ ದೊಂಬಿ ಏಳುವ ಸಂಭವವೂ ಇದೆ ನಮ್ಮ ನೆರೆಯ ರಾಷ್ಟ್ರಗಳಲ್ಲಿ ಮಿಲಿಟರಿ ಕ್ರಾಂತಿ ನಡೆಯುವುದಕ್ಕೆ ಮುಂದೂಡಲಾದ ಪ್ರಬಲ ಕಾರಣಗಳಲ್ಲಿ "ಭ್ರಷ್ಟಾಚಾರದ ಪೆಡಂಭೂತದಿಂದ ದೇಶದ ಜನತೆಯನ್ನು ರಕ್ಷಿಸುವುದು" ಕೂಡ ಒಂದಾಗಿತ್ತೆಂಬುದನ್ನು ನೆನಪಿಸಿಕೊಂಡರೆ, ಅಂತಹ ಗಂಭೀರ ಪರಿಸ್ಥಿತಿಯನ್ನು ನಾವೇಕೆ ಎದುರಿಸಬೇಕು ಎನಿಸುವುದಿಲ್ಲವೆ?

ಸಾಮೂಹಿಕ ಸೂರೆ

ನರಭಕ್ಷಕವೆಂಬ ಹುಲಿಯೊಂದಿದೆ. ಅಪ್ಪಿ ತಪ್ಪಿ ಒಮ್ಮೆ ಅದು ನರಮಾಂಸದ ರುಚಿ ನೋಡಿತೆಂದರೆ, ಎತ್ತದು ಮಾನವರನ್ನೇ ಬೇಟೆಯಾಡುತ್ತದೆ. ಇತರ ಪ್ರಾಣಿಗಳಾವುವೂ ಅದಕ್ಕೆ ರುಚಿಸುವುದಿಲ್ಲ. ಹಾಗೆಯೇ ಸರಕಾರಿ ಅಧಿಕಾರಿಗಳು 'ಲಂಚ ಸ್ವೀಕರಿಸುವ' ಚಟಕ್ಕೆ ಒಮ್ಮೆ ಬಲಿ ಬಿದ್ದರೆಂದರೆ, ಮತ್ತೆ ಯಾವ ಕೆಲಸದಲ್ಲೂ ಅವರಿಗೆ ಆಸಕ್ತಿಯಿಲ್ಲ ವಿರಕ್ತನು ಭಗವದ್ಧ್ಯಾನದಲ್ಲಿ ನಿಮಗ್ನನಾಗುತ್ತಾನೆ; ಅಧಿಕಾರಿಯು ತನ್ನ ಚರಿತ್ರೆಗೆ ಅಪ್ರಾಮಾಣಿಕತೆಗೆ ಬೇಕಾದ ಮಾರುಕಟ್ಟೆಯನ್ನು ಅರಸುವುದರಲ್ಲೇ ವಿಹರಿಸುತ್ತಾನೆ; ಇಂತಹ ಆಡಳಿತ ಯಂತ್ರದಿಂದ ಜನತೆಯ ಸೇವೆ ನಡೆಯದು, ಸೂರೆಮಾತ್ರ ನಿರಾತಂಕವಾಗಿ ನಡೆಯುತ್ತದೆ

ಅರ್ಥಕ್ಕೆ ಅರ್ಥ

ಲಂಚ ಪ್ರಪಂಚವನ್ನು ಪರಿಶೋಧಿಸುವ ಒಂದು ಇಲಾಖೆಯಿದೆ. ಇದನ್ನು ಬಸ್ಸುಗಳ ಚೆಕ್ಕಿಂಗ್ ಇನ್ಸ್‌ಪೆಕ್ಟರರಿಗೆ ಹೋಲಿಸಬಹುದು. ಅದರಲ್ಲೂ ಎಸ್. ಟಿ ಬಸ್ಸುಗಳ ಮಟ್ಟಿಗೆ ಇದು ಅಕ್ಷರಶಃ ನಿಜವೇ. ೪೦ ಜನರ ಪ್ರಯಾಣಕ್ಕೆ ಪರವಾನಿಗೆಯಿರುವ ಬಸ್ಸಿನಲ್ಲಿ ೬೦ ಜನರನ್ನು ತುರುಕಿಸಿಕೊಂಡು ಬಸ್ಸು ಮುಂದುವರಿಯುತ್ತದೆ, ಆದರೆ, ಬಸ್ಸಿನ ಪ್ರಯಾಣಿಕರ ಸ್ಟೇಟ್‌ಮೆಂಟ್ ಮಾತ್ರ ಇದನ್ನು ತೋರಿಸುವುದಿಲ್ಲ. ಚೆಕ್ಕಿಂಗ್ ಅಧಿಕಾರಿ ಬಸ್ಸು ಹತ್ತಿದವನೆ. ಕೇಳುತ್ತಾನೆ ಕಂಡಕ್ಟರನೊಡನೆ 'ಬೆಂಕಿಪೊಟ್ಟಣ ಕೊಡಯ್ಯಾ' ಎಂದು. ಆದರೆ, ಎರವಲು ಪಡೆದ ಅದನ್ನು ಮರಳಿಸುವ ಬುದ್ಧಿ ಅವನಿಗೇನೇ ಇಲ್ಲವೆಂದಾದ ವೇಳೆ ಕೊಟ್ಟವನದನ್ನು ಕೇಳುವುದುಂಟೆ? ಈ ಬೆಂಕಿಪೊಟ್ಟಣವೇ ಎಸ್. ಟಿ. ಖಾತೆಗೆ ಉಂಟಾಗುವ ಲಕ್ಷಾಂತರ ರೂಪಾಯಿಗಳ ನಷ್ಟಕ್ಕೆ ಕಾರಣವೆಂದು ಎಲ್ಲರಿಗೂ ಗೊತ್ತು; ಆದರೆ, ಹೇಳಲು ಯಾರು ಸಿದ್ಧರಿದ್ದಾರೆ? ಪ್ರಯಾಣಿಕರಿಗಂತೂ ತಮ್ಮ ಗುರಿ ಸೇರಿದರಾಯಿತು; ಟಿಕೇಟು ಕೊಡಲಿ ಬಿಡಲಿ, ಅವರಿಗದರಿಂದೇನಾಗಬೇಕು? ಪ್ರಾಮಾಣಿಕತೆಯಲ್ಲಿ, ಸಚ್ಚರಿತ್ರತೆಯಲ್ಲಿ ಅರ್ಥ ಕಾಣದ ಅಧಿಕಾರಿ ವರ್ಗದಿಂದ ತಮ್ಮ ಕಾರ್ಯವಾಗ ಬೇಕೆಂದಿದ್ದರೆ, ಕೊಡಲೇಬೇಕು, ಅರ್ಥವನ್ನು.

ಹುಲ್ಲಿಗೆ ಗಂಡಾಂತರ

ಹಿಂದಿಯ ಸುಪ್ರಸಿದ್ಧ ಕಾದಂಬರಿ ಕಥಾಗಾರ ಮುಂಶಿ ಪ್ರೇಮಚಂದರು ಹೇಳುವಂತೆ, ಪ್ರಾಮಾಣಿಕತೆ ಮತ್ತು ಸಚ್ಚರಿತ್ರತೆ ಬೇಕೆಂದಿರುವವನು ನೌಕರಿ ಹಿಡಿಯಬಾರದು; ವ್ಯಾಪಾರ ಮಾಡಬಾರದು ಪ್ರಾಯ: ಆತನು ಕಾಡಿಗೆ ತೆರಳಿ ಮೂಗು ಹಿಡಿದು ಭಗವಧ್ಯಾನಾಸಕ್ತನಾಗಬೇಕು ಬಕ ಧ್ಯಾನ ಮಾಡಬಲ್ಲಾತನು ಮಾತ್ರ ಸುಸಂಸ್ಕೃತನೆನಿಸುತ್ತಾನೆ; 'ಒಬ್ಬ ಮನುಷ್ಯ'ನೆಂದು ಕರೆಯಲ್ಪಡುತ್ತಾನೆ. 'ತಾನೂ ತಿನ್ನಲಿ, ನಮಗೂ ತಿನಗೊಡಲಿ' ಎಂಬುದು ನೌಕರನ ವ್ಯಾಪಾರಿಯ ಮೂಲಮಂತ್ರ. ಹಿರಿಯ ಅಧಿಕಾರಿಯೊಬ್ಬನು ಈ ಮಂತ್ರಾನುಷ್ಠಾನವನ್ನು ಪ್ರತಿಭಟಿಸತೊಡಗಿದನೆಂದರೆ, ಮುಗಿಯಿತವನ ಕಥೆ. ನೂರಾರು ನೂಕರ್ಜಿಗಳು ಹೋಗುತ್ತವೆ, ನೋಟಿನ ಚೀಟಿ ಹಚ್ಚಿ ಪತ್ರಗಳು ರವಾನೆಯಾಗುತ್ತವೆ, ಬೇಲಿಯೇ ಹೊಲ ಮೇಯ ತೊಡಗುತ್ತದೆ, ಮತ್ತೆ ಹುಲ್ಲಿನ ಅಸ್ತಿತ್ವವೆಲ್ಲಿ ಉಳಿಯಿತು!

ಲಂಚಾವತಾರ

ಭ್ರಷ್ಟಾಚಾರವಿಂದು ಸರಕಾರಿ ವಲಯಗಳಲ್ಲಿ ಮಾತ್ರ ಪರಿಮಿತವಾಗಿದೆಯೆಂದು ಹೇಳುವಂತಿಲ್ಲ ನಾನಾ ಅವತಾರ ತಾಳಿದ ಲಂಚಾಸುರ ಹೊಗದ ಎಡೆಯಿಲ್ಲ. ಟ್ಯೂಷನ್‌ನ ಹೆಸರಿನಲ್ಲಿ ಶಾಲಾ ಅಧ್ಯಾಪಕರು ಪಡೆಯುವುದು ಏನನ್ನು? ಕಮಿಶನ್ನಿನ ಪವಿತ್ರ ನಾಮಧೇಯದಿಂದ ಏಜಂಟರು ಗಳಿಸುವುದು ಲಂಚವಲ್ಲವೆ? ಲಾಭದ ದೃಷ್ಟಿಯಿಂದ ವ್ಯಾಪಾರ-ವ್ಯವಹಾರ ಮಾಡುವುದು ಲಂಚಾಸುರನು ಪ್ರಸನ್ನನಾಗಲಿ ಎಂದಲ್ಲದೆ? ಹೆಚ್ಚೇಕೆ, ಬ್ಯಾಂಕುಗಳು ಠೇವಣಿ ಮೊಬಲಗಿಗೆ ಬಡ್ಡಿ ಕೊಡುವುದು ಕೂಡ ಲಂಚದ ಕಕ್ಷೆಯಲ್ಲಿ ಬರಬಹುದು ಎಂದು ತೋರುತ್ತದೆ ಚತುರುಪಾಯಗಳಲ್ಲಿ ಶ್ರೇಷ್ಠವಾದ "ದಾನ"ವೇ ಲಂಚದ ಮೂಲ ರೂಪವಿರಬೇಕು ಅದು ಬರಬರುತ್ತಾ ಬೇರೆ ಬೇರೆ ಹೆಸರುಗಳನ್ನು ಪಡೆದಿರ ಬಹುದು, ಇವಾವುವನ್ನೂ ಲಂಚವೆಂದು ಹೆಸರಿಸುವುದಿಲ್ಲ ಸರಕಾರಿ ನೌಕರರು "ತಮ್ಮ ಸೇವೆಗೆ" ಮಾಡಿಸಿ ಕೊಳ್ಳುವವನಿಂದ ದಾನ ಸ್ವೀಕರಿಸದರೆ ಅದು "ಲಂಚ"ವೆಂಬ ಕೆಟ್ಟ ಹೆಸರನ್ನು ಪಡೆಯುತ್ತದೆ. ಇದೀಗ "ಲಂಚ ನಿರ್ಮೂಲನ"ವೆಂದರೆ ಈ ಅಪಾತ್ರದಾನದ ಪುರಸ್ಕರ್ತರನ್ನು ಕಂಡು ಹಿಡಿಯುವುದಾಗಿದೆ.

ಏಜಂಟನಿಂದ ದೇವರಿಗೆ

ಇನ್ನು ಕೆಲವರು ಹೇಳಬಹುದು- ಸೃಷ್ಟಿಕರ್ತ ದೇವರೇ ಲಂಚ ತೆಗೆದುಕೊಳ್ಳುವಾಗ, ಅದನ್ನು ಆತನಿಂದ ನಿರ್ಮಿತರಾದ ಮಾನವರು ಬಿಡುವುದಿದೆಯೇ ಎಂದು- ಮಂದಿರಗಳಲ್ಲಿ ದೇವರಿದ್ದಾನೆಂದು ನಂಬುವುದಾದರೆ, ಅಲ್ಲಿಗೊಯ್ದ ಲಂಚವನ್ನು ನಾವು ಮರಳಿಯೇ ತರುತ್ತೇವೆ, ಅದನ್ನು ಆತನು ಸ್ವೀಕರಿಸುವುದಿಲ್ಲ- ಬೆಂಕಿಯನ್ನು ದೇವತೆಗಳ ಏಜಂಟನೆಂದು ತಿಳಿಯುವುದಾದರೆ ಮಾತ್ರ ಕಷ್ಟದ ಮಾತಾಯಿತು ನೇರವಾಗಿ ನಮ್ಮಿಂದ ಲಂಚ ತೆಗೆದುಕೊಳ್ಳುವ ದೇವರಿಗೆ ಅಗ್ನಿಯ ಮೂಲಕ ಕಳಿಸಿಕೊಡುವಂತಹ ವಿಧಾನಗಳೂ ನಮ್ಮ ಸಮಾಜದಲ್ಲಿ ತುಂಬ ಇವೆ. ಪಾನ ಪ್ರತಿಬಂಧ, ಸಕ್ಕರೆ, ಸಿಮೆಂಟುಗಳ ನಿಯಂತ್ರಣ—ಬಂಗಾರದ ಶಾಸನ ಇತ್ಯಾದಿಗಳು ಇದಕ್ಕೆ ಹೊಸ ಜೀವವನ್ನು ಕೊಟ್ಟಿವೆ.

ಉಪಸಂಹಾರ

ಇಂದು ಜನರನ್ನು ಆಳುವವನು ಲಂಚಾಸುರನೆಂದು ಎಳೆಯ ಮಗುವೂ ಅರಿತಿದೆ ಆತನು ಉಳಿಸಿದನೆಂದರೆ, ಉಳಿವೇವು ಇಲ್ಲವಾದರೆ ಅಳಿದು ಹೋದೇವು ಈ ಸತ್ಯ ಸಂಗತಿ ನಮ್ಮ ಪ್ರಧಾನ ಮಂತ್ರಿ ನೆಹರೂರವರಿಗೆ ತುಸು ತಡವಾಗಿಯಾದ

(೨ನೇ ಪುಟ ನೋಡಿ)

ವಾರದ ಕಥೆ

ಬಾಳು ಬೆಳಗಿದಾಗ

ಎಲ್ಲರೂ ಮೋಹನನನ್ನು ಅಭಿನಂದಿಸುವವರೇ ಆಗಿದ್ದರು. ಆತನು ಬಿ. ಎ. ಯಲ್ಲಿ ಜಿಲ್ಲೆಯಲ್ಲಿಯೇ ಅಧಿಕ ಮಾರ್ಕುಗಳನ್ನು ಗಳಿಸಿ ಪಾಸಾಗಿದ್ದನು ಅದೇ ದಿನ ಬೆಳಗ್ಗೆ ಪ್ರಿನ್ಸಿಪಾಲರು ಸಹ ಆತನನ್ನು ಹೊಗಳಿ ತನ್ನ ವಿದ್ಯಾಭ್ಯಾಸವನ್ನು ಮುಂದುವರಿಸುವಂತೆ ಉಪದೇಶಿಸಿದ್ದರು. ಮೋಹನ ಹೊರ ಬಂದಿದ್ದ. ಆತನಿಗೆ ಕಾಲೇಜ್ ಗೇಟ್ ದಾಟಿ ಬರುವುದೇ ಕಷ್ಟವಾಯಿತು. ಆತನನ್ನು ಟೀಕಿಸಿದವರು; ಪ್ರೀತಿಸಿದವರು, ಅವರಿವರಿಂದೇಕೆ ಎಲ್ಲರೂ ಆವನ ಮೇಲೆ ಅಭಿವಂದನೆಯ ಅತಿವೃಷ್ಟಿಯನ್ನು ಕರೆದಿದ್ದರು. ಎಲ್ಲರಿಗೂ ಪ್ರತ್ಯುತ್ತರ ಒಂದು ನಗೆ ಮತ್ತು "ದೈವಕೃಪೆ" ಎಂಬ ಸೊಲ್ಲು.

ಮೋಹನ ಮನೆಗೆ ಮರಳಿದನು. ತಮ್ಮಂದಿಗೆ; ಒಡಹುಟ್ಟುಗಳಿಗಾಗಿ ಒಂದು ಬಿಸ್ಕಿಟ್ ಪೊಟ್ಟಣ ಕೈಯಲ್ಲಿತ್ತು. ಕಾಲೇಜಿನಿಂದ ಮನೆಗೆ ಐದು ಮೈಲು ದೂರವಿತ್ತು ಯೋಚಿಸುತ್ತಾ ಬರ ಬರನೆ ಮೋಹನ ಕಾಲು ಹಾಕಿದನು. ಆತನ ಕಣ್ಣಿನಿಂದ ಎರಡು ಹನಿಕಳಗಿಳಿದು ಕಂಟಿನ ಕಾಲರನ್ನು ಒದ್ದೆ ಮಾಡಿದುವು; ಮಾಡುತ್ತಿದ್ದುವು.

೦ ೦ ೦

ದೇವರು ಬಡವರಿಗೆ ಅಪೇಕ್ಷಿಸದಿದ್ದರೂ ಮಕ್ಕಳನ್ನು ಕೊಡುತ್ತಾನಂತೆ. ಇದಕ್ಕೆ ಸಾಕ್ಷಿ ಗುಮಾಸ್ತ ವೆಂಕಪ್ಪಯ್ಯ. ನಾಲ್ಕು ಗಂಡು ಮಕ್ಕಳ, ಐದು ಹೆಣ್ಣು ಕೂಸುಗಳ ತಂದೆ ಅವರಾಗಿದ್ದರು. ಹಿರಿಯ ಮಗನೇ ಮೋಹನ. ಸರಿಯಾಗಿ ಹೊಟ್ಟೆಗಿಲ್ಲದಿದ್ದರೂ, "ಮೋಹನನು ವಿದ್ಯಾವಂತನಾಗಿ, ದುಡಿದು, ತಮ್ಮನ್ನೂ, ತಮ್ಮ ಕುಟುಂಬವನ್ನೂ ಪೋಷಿಸಿಯಾನು" ಎಂಬ ಹಿರಿಯಾಸೆಯಿಂದ ಸಾಲ-ಗೀಲ ಮಾಡಿ ಅವನನ್ನು ಓದಿಸಿದ್ದರು. ಮೋಹನ ಬಿ. ಎ. ತಲಪಿ ಹೊರ ಬಂದಿದ್ದನು. ಒಂದು ದಿನವೂ ತೃಪ್ತಿಯಿಂದ ಒಂದು ತುತ್ತನ್ನು ವೆಂಕಪ್ಪಯ್ಯ ಉಂಡದ್ದಿಲ್ಲ. ಮೈತುಂಬ ಸಾಲವಿತ್ತು. ಆದರೆ ಶಂಕರಮ್ಮನವರು "ಪಾಲಿಗೆ ಬಂದದ್ದು ಪಂಚಾಮೃತ" ಎಂಬ ದೊಡ್ಡ ಜೀವ. ತಾನು ಉಪವಾಸವಿದ್ದರೂ ಮಕ್ಕಳ ಹೊಟ್ಟೆ ತುಂಬಿಸಲು ಯತ್ನಿಸುತ್ತಿದ್ದಳು. ನೆರೆಕರೆಯ ಮನೆಗಳ, ಆಸುಪಾಸಿನ ಸಿರಿವಂತರ ಮನೆಯ ಚಾಕರಿ ಮಾಡಿದ್ದರು; ಮಾಡಲಿದ್ದರು. ಸಂಸಾರದ ಬೇವು-ಬೆಲ್ಲದ ಕಹಿ-ಸಿಹಿಗಳ ಅನುಭವವಿದ್ದ ಹೆಣ್ಣು.

ಅದೊಂದು ದಿನ—

ಮೋಹನನಿಗೆ ಪರೀಕ್ಷಾ ಫೀಸು ಕಟ್ಟುವುದಿತ್ತು. ವೆಂಕಪ್ಪಯ್ಯನವರು ಶತಪ್ರಯತ್ನ ಗೈದರು! ತಮ್ಮ ಆತ್ಮ ಗೌರವವನ್ನೂ ಸಂಕೋಚವನ್ನೂ ಬಿಟ್ಟು ಕೇಳಿದರು. ಆದರೆ ಕೊಡುವವರು ಒಬ್ಬರೂ ಸಿಗಲಿಲ್ಲ. ಆಗ ಶಂಕರಮ್ಮ ಮುಂದೆ ಬಂದು ತನ್ನ ತವರಿನವರಿತ್ತ ಚಿನ್ನದ ಸರವನ್ನಿತ್ತಿದ್ದರು. ಅಲ್ಲದೆ, ಇರುವ ಎರಡು ಚಿನ್ನದ ಬಳೆಗಳನ್ನೂ ನೀಡಿದ್ದರು.

ನಿರ್ವಾಹವಿಲ್ಲದೆ ವೆಂಕಪ್ಪಯ್ಯನವರು ಅದನ್ನು ಪಡೆದರು. ಶಂಕರಮ್ಮನ ಬಡಕಾಯದಲ್ಲಿ ಮೂಗುತಿ, ಕಿವಿಯ ಆಭರಣ ಮತ್ತು ಮಾಂಗಲ್ಯದ ಹೊರತು ಬೇರೇನೂ ಇರಲಿಲ್ಲ. ಶೇಪೆ ಬಟ್ಟೆಯನ್ನು ಹೊಲಿದು ಹೊಲಿದು ಉಪಯೋಗಿಸುತ್ತಿದ್ದರು. ಇದನ್ನೆಲ್ಲಾ ನೋಡಿ ವೆಂಕಪ್ಪಯ್ಯ ದುಃಖಿಸುತ್ತಿದ್ದರು.

೦ ೦ ೦

ಮೋಹನನ ಪರೀಕ್ಷಾ ಫಲಿತಾಂಶ ತಿಳಿದಾಗ ಎಲ್ಲರೂ ಸಂತೋಷಪಟ್ಟರು. ಎಲ್ಲರಿಗೆ ಬಿಸ್ಕಿಟ್ ಹಂಚಿದ. ವೆಂಕಪ್ಪಯ್ಯನವರು ಕ್ಷೀಣ ಸ್ವರದಿಂದ ಪ್ರಶ್ನಿಸಿದರು, "ಮಗೂ, ಮುಂದೇನು ಮಾಡುತ್ತೀ?"

"ಮಾಡುವುದೇನು? ಏನಾದರು ನೌಕರಿಗೆ ಸೇರಬೇಕು ಅಪ್ಪ." ಓದಬೇಕು ಎಂದು ಅಪೇಕ್ಷೆಯುಳ್ಳ ಬುದ್ಧಿವಂತನಾದ ಮಗನ ಮಾತು ಕೇಳಿದಾಗ ವೆಂಕಪ್ಪಯ್ಯನವರಿಗೆ ಕರುಳು ಕಿತ್ತು ತೆಗೆದಂತಾಯಿತು. "ಆರ್ಥಿಕ ಅಡಚಣೆ ಆದಾವಾಗಲೇ ಮಿತಿ ಮೀರಿದ್ದು. ಇನ್ನು ತನ್ನ ವಿದ್ಯಾಭ್ಯಾಸವನ್ನು ಮುಂದುವರಿಸುವುದು ಅಸಾಧ್ಯ" ಎಂದು ತಿಳಿದಿದ್ದ ಮೋಹನ. ಕುಟುಂಬದ ಬಡ ಚಿತ್ರ ಕಣ್ಣೆದುರು ನಿಲ್ಲುತ್ತಿತ್ತು.

ವೆಂಕಪ್ಪಯ್ಯನವರಿಗೂ ಕೂಡ ಮಗನನ್ನು ಮುಂದೆ ಓದಿಸಬೇಕೆಂದು ಮನಸ್ಸಿತ್ತು. ಆದರೆ ಹೇಗೆ? ಏನ್ನುವುದೇ ಅವರನ್ನು ಅಹರ್ನಿಶಿ ಕಾಡುವ ಪ್ರಶ್ನೆ. ಅದೊಂದು ದಿನ ಅವರು ತಾವು ಗುಮಾಸ್ತರಾಗಿದ್ದ ಧಂಡಸಾಲೆಯ ಸಾಹುಕಾರರಲ್ಲಿ ಸಾಲಕೇಳಿದಾಗಿನ ಚಿತ್ರ ಕಣ್ಣೆದುರು ಬಂದು ನಿಂತು ಅವರನ್ನು ಮಾದಲಿಸಿತು.

ಸಾಹುಕಾರರು ಹೇಳಿದ್ದರು, "ಲೋ ಬೇವಕೂಫ, ಬಂದು ಬಂದು ಕೇಳಲಿಕ್ಕೇನು ನೀನು ಇಲ್ಲಿ ಸಾವಿರಗಟ್ಟಲೆ ಹಣ ತಂದು ಇಟ್ಟಿದ್ದೀಯೊ? ಅಲ್ಲ ನಿನ್ನ ತಾತ, ಮುತ್ತಂದಿರು ನನ್ನ ಪಕ ಕೊಟ್ಟು ಹೋಗಿದ್ದಾರೆಯೆ? ನಿನಗೆ ನಿನ್ನ ಬಾಕಿ ತೀರಿಸುವ ಆಲೋಚನೆ ಇಲ್ಲವೇ?"

ವೆಂಕಪ್ಪಯ್ಯನ ಆತ್ಮಾಭಿಮಾನಕ್ಕೆ ಬಹಳ ಆಘಾತವಾಗಿತ್ತು.

೦ ೦ ೦

ಮೋಹನ ಇದ್ದ ಕಂಪೆನಿಗಳಿಗೆಲ್ಲ ಅರ್ಜಿ ಹಾಕಿದನು. "ಕೆಲಸ ಬೇಕಾಗಿದೆ; ದಯವಿರಿಸಿ ನೀಡುವ ಕೃಪೆಮಾಡಬೇಕಾಗಿ ಅಪೇಕ್ಷೆ" ಎಂದೇ. ಆತ ಬಿ. ಎ. ಯಲ್ಲಿ ಪ್ರಥಮನಾಗಿ ಉತ್ತೀರ್ಣನಾಗಿರಬಹುದು. ಆದರೆ ಆತನಿಗೆ ಒಂದು ಬಡ ಗುಮಾಸ್ತನ ಕೆಲಸ ಸಹ ಬೆಂಗಳೂರಿನಲ್ಲಿ ಸಿಗಲಿಲ್ಲ. ಹಲವು ಕಡೆ "ಕನ್ನಡಿಗ"ನೆಂಬ ಕಾರಣದಿಂದಲೇ ತಮಿಳು ತೆಲುಗು ಸಾಹುಕಾರರಿಂದ ಛೀಮಾರಿ ಸಿಕ್ಕಿತು. ಆತನಂತೆ ಪದವೀಧರರಾದ, ಅಲ್ಲದೆ ನಿರುದ್ಯೋಗಿಗಳ ಪಡೆ ಬಹು ದೊಡ್ಡದಿತ್ತು ದಿನದಿಂದ ದಿನಕ್ಕೆ ಹನುಮಂತನ ಬಾಲದಂತೆ ಬೆಳೆಯುತಿತ್ತು. ಇದ್ದ ಶಾಲೆಗಳಿಗೆಲ್ಲ ಅರ್ಜಿ ಗುಜರಾಯಿಸಿದ. ಒಂದೈನೂರು—ಸಾವಿರ ಕೈ ಬಿಡಲು ಸಾಧ್ಯವಿದ್ದರೆ ಕೆಲಸ "ರೆಡಿ" ಯಾಗಿತ್ತು! ಮೋಹನನಿಗೆ ಆ ದಿನ ಪ್ರಿನ್ಸಿಪಾಲರು ಹೇಳಿದ ಮಾತು ನೆನಪಿಗೆ ಬಂದಿತು—"ಮೋಹನ, ನಿಮ್ಮಂತಹವರಿಂದಲೇ ಬಡ ಭಾರತ ಉದ್ಧಾರವಾಗುತ್ತದೆ. ನಿಮಗೆ ಉತ್ತಮ ಭವಿಷ್ಯಕಾದಿದೆ".

ಈ ಉತ್ತಮ ಭವಿಷ್ಯದ ಬಿಸಿಲ್ಕುದುರೆಯನ್ನು ಹಿಡಿಯುವುದರಲ್ಲಿ ಆತ ಹಣ್ಣುಹಣ್ಣಾಗಿದ್ದ.

ತಂದೆಯ ಆಕಸ್ಮಿಕ ಅಸ್ವಸ್ಥ ಮೋಹನನ್ನು ಚಿಂತೆಗೀಡುಮಾಡಿತು. ಎಷ್ಟು ಬಡತನವಿದ್ದರೂ ಅವರು ಇಷ್ಟರವರೆಗೆ ರೋಗರುಜಿನಗಳಿಗೆ ಬಲಿಯಾಗಿರಲಿಲ್ಲ. ವೆಂಕಪ್ಪಯ್ಯನವರನ್ನು ಬಾಧಿಸಿದ್ದ ರೋಗ ಪ್ರಬಲವಾಯಿತು; ಆದರೆ ಡಾಕ್ಟರುಗಳನ್ನು ಕರೆತರಲು ಕೈಯಲ್ಲಿ ಕಾಸಿರಲಿಲ್ಲ. ಕಡೆಗೆ ಓರ್ವ ಡಾಕ್ಟರರನ್ನು ಕಾಡಿಬೇಡಿ ಕಾಲಿಗೆರಗಿ ಮೋಹನ ಮನೆಗೆ ಕರೆತಂದು ಪರೀಕ್ಷಿಸಿದಾಗ ಅವರು ಕುತನೊಡನೆ ಏಕಾಂತದಲ್ಲಿ ನುಡಿದಿದ್ದರು, "ಮಿ. ಮೋಹನ್. ನಿಮ್ಮ ತಂದೆಗೆ ಟಿ. ಬಿ ಹಿಡಿದಿದೆ. ಯೋಗ್ಯ ಔಷಧೋಪಚಾರ ನಡೆಸಿದಲ್ಲಿ ಗುಣವಾದೀತು;" ಮೋಹನನಿಗೆ ಶೋಕ್ ಬಡೆದಂತಾಯಿತು.

ಎಲ್ಲದಕ್ಕೂ ಬಡತನ ಹೆಮ್ಮಾರಿಯಾಗಿ ಅಡ್ಡ ಬರುತ್ತಿತ್ತು. ಹಣವಿಲ್ಲದೆ ಯಾವುದನ್ನು ಮಾಡಲು ಸಾಧ್ಯ ಈ ಜಗತ್ತಿನಲ್ಲಿ? 'ಹಣ ವಿಲ್ಲದವ ಹೆಣದ ಸಮಾನ' ವೆಂದಿದ್ದಾರೆ ಓರ್ವ ಹಿರಿಯರು. ಯೋಗ್ಯ ಔಷಧೋಪಚಾರಗಳಿಗಾಗಿ ಸಾವಿರಾರು ರೂಪಾಯಿ ಖರ್ಚುಮಾಡಲು ಮೋಹನನಿಗೆ ತ್ರಾಣವಿರಲಿಲ್ಲ. ಈಗಾಗಲೇ ಮೂರು ನಾಲ್ಕು ಡಾಕ್ಟರರಲ್ಲಿ ಸಾಲವಾಗಿದ್ದು ಮುಂದೆ ಔಷಧವೀಯಲು ನಿರಾಕರಿಸಿದರು. ಅಂತಹವರೊಬ್ಬರ ಭಾವಚಿತ್ರ ಮತ್ತು ವ್ಯಕ್ತಿ ಪರಿಚಯ ಪತ್ರಿಕೆಯಲ್ಲಿ ಪ್ರಕಟಿಸಲಾಗಿದ್ದು "ಬಡವರ-ಬಂಧು", "ಲೋಕೋದ್ಧಾರಕ" ಮೊದಲಾಗಿ ಸಂಬೋಧಿಸಿದನ್ನು ನೋಡಿದಾಗ ಮೋಹನನಿಗೆ ನಗು ಬಂತು; ದುಃಖವೂ ಆಯಿತು.

ಒಂದು ದಿನ ಮೋಹನ ನಗರವಿಡೀ ಅಲೆದಾಡಿ ಮನೆಗೆ ಮರಳಿದ್ದ. ಎಲ್ಲಿಯೂ ಕೆಲಸ ದೊರಕಿರಲಿಲ್ಲ. ಇನ್ನು ದೊರಕದಿದ್ದರೆ ಮೋಟರ್ ರಿಪೇರಿ ಕೆಲಸ ಮಾಡುವವರೊಡನೆ ಸೇರಿ ಆ ಕೆಲಸವನ್ನಾದರೂ ಮಾಡುವುದು ಎಂದು ಮೋಹನ ನಿರ್ಧರಿಸಿದ್ದನು ಮನೆಯಲ್ಲಿ ಎರಡು ತುತ್ತು ಹೊಟ್ಟೆಗೆ ಸೇರಿಸುತ್ತಿದ್ದನು. ಆಗ ತಂದೆ ಕನವರಿಸುತ್ತಿರುವುದನ್ನು ಕೇಳಿದನು. ವೆಂಕಪ್ಪಯ್ಯನವರಿಗೆ ನಿದ್ದೆಯು ಸಾಧಾರಣವಾಗಿ ಬರುತ್ತಿರಲಿಲ್ಲ; ಅಂದು ಅಕಸ್ಮಾತ್ತಾಗಿ ಬಂದಿತ್ತು. ಅವರು ಕ್ಷೀಣ ಸ್ವರದಲ್ಲಿ ಕನವರಿಸುತ್ತಿದ್ದರು. "ಕೆ...ಲ...ಸ... ದೆ...ರ....ಕಿತೇ.... ಮೋಹ....ನ ....ಸಾಲ .. ತೀ...ರಿಸಿ....ಅ....ಗಿ....ದೆ ...ಯೇಕ... "

ತಂದೆಯ ಮನಸ್ಸನ್ನು ಕಾಡುತ್ತಿದ್ದ ಪ್ರಬಲ ಚಿಂತೆಯ ಸಂಪೂರ್ಣ ಅರಿವಾಯಿತು. ಮನೋರೋಗ ವಾಸಿಯಾಗದೆ ಅವರ ಹೃದ್ರೋಗ ವಾಸಿಯಾಗಲಾರದು ಎಂಬುದನ್ನು ಯೋಚಿಸಿದಾಗ ಮೋಹನನ ದೀರ್ಘ ಶರೀರ ಒಮ್ಮೆ ಭಯದಿಂದ ನಡುಗಿತು.

ಧರ್ಮಾಸ್ಪತ್ರೆಯಿಂದ ತಂದಿದ್ದ ಬಣ್ಣದ ನೀರು ಅವರ ರೋಗವನ್ನು ಹಿಡಿತದಲ್ಲಿರಿಸಿಕೊಳ್ಳುವುದರಲ್ಲಿ ಯಶಸ್ವಿಯಾಗಿರಲಿಲ್ಲ. ಹದಗೆಡುತ್ತಿರುವ ತಂದೆಯ ಹಾಗೂ ತನ್ನ ಪರಿಸ್ಥಿತಿಯು ಮೋಹನನ ಶಾಂತ ಮನಸ್ಸಿನಲ್ಲಿ ಆಂದೋಲನವನ್ನೆಬ್ಬಿಸಿತು ಬಿ. ಎ ಪರೀಕ್ಷೆಯಲ್ಲಿ ಅತ್ಯಧಿಕ ಮಾರ್ಕುಗಳಿಸಿ ವಿಜಯಿಯಾದ ಮೋಹನನಿಗೆ ಈ ಪರೀಕ್ಷೆ ಅತ್ಯಂತ ಕಠಿಣವಾಗಿ ಕಂಡಿತು.

ಮರುದಿನ, ಮೋಹನ ಹತ್ತು ಗಂಟೆಗೆ ಮನೆ ಬಿಟ್ಟು ನಗರದಲ್ಲಿ ಅಲೆದಾಡಿದನು.

(೧೧ನೇ ಪುಟ ನೋಡಿರಿ)

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5

2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ

3 ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ಹೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

ಜನಪ್ರಿಯವಾದ

ಗೀತೆಯ ಸನೂಲ ಭಾಷಾಂತರ ಇದೀಗ ಮಾರಾಟಕ್ಕೆ ಸಿದ್ಧವಾಗಿದೆ.

360 ಪುಟಗಳಿಗೂ ಮಿಕ್ಕಿದ ಪಾಕೆಟ್ ಎಡಿಶನ್

ದಪ್ಪವಾದ ಬಿಳಿ ನುಣುಪು ಕಾಗದ!

ಬೆಲೆ: ಸಾದಾ ಪ್ರತಿ ರೂ. ೧-೦೦

ಉತ್ತಮ ಪ್ರತಿ ರೂ. ೧-೫೦

ಅಂಚೆ ವೆಚ್ಚ ರೂ. ೦-೫೦

೫೦ ಪ್ರತಿಗಳ ದರಕ್ಕೆ ಬರೆಯಿರಿ:

ನವಯುಗ ಪ್ರೆಸ್ ಉಡುಪಿ, ದ. ಕ

ಕತ್ತರಿಯ ಅಡಿಕೆ

ಸಿಂಕಿಯಾಂಗದ ದುರವಸ್ಥೆ

ಕಮ್ಯೂನಿಸ್ಟ್ ರಾಜ್ಯಗಳಲ್ಲಿ ನೆಲ ದಾಹ ಅದೆಂತು ಪೀಡಿಸುತ್ತಿದೆಂಬುದನ್ನು ಕಳೆದ ವಾರ ಕಂಡಿರುವೆವು. ರಷ್ಯಾವು ಚೈನಾವನ್ನು ಸಹೋದರ ರಾಷ್ಟ್ರವೆಂದೇ ಕರೆಯುತ್ತಿದೆಯಾದರೂ ಚೈನಿಯರ ಆಕ್ರಮಣಕ್ಕೊಳಗಾಗಿರುವ ಸಿಂಕಿಯಾಂಗಿನ ಮೇಲೆ ತಾನೂ ಕಣ್ಣು ಹಾಕಿರುತ್ತದೆ! ಇಲ್ಲಿ ಅಪೂರ್ವ ಸಹೋದರರ ಜ್ಞಾಪಕ ಬಂದೀತು. ಕಳೆದ ವಾರ ಪ್ರಕಟವಾಗಿರುವ ವಿಷಯಗಳನ್ನು ಭಾರತದಲ್ಲಿರುವ ಆಂಗ್ಲ ಪತ್ರಿಕೆಯೊಂದರ ವಿಶೇಷ ಪ್ರತಿನಿಧಿಯು ವರದಿಯಿಂದ ಅರಿಸಿಕೊಳ್ಳಲಾಗಿರುತ್ತದೆ. ಈ ಸಲ ಹೊಂಗ್‌ಕಾಂಗಿನಲ್ಲಿರುವ ಓರ್ವ ಸುದ್ದಿಗಾರನು ಅನೇಕ ಪತ್ರಿಕೆಗಳಿಗೆ ಕಳುಹಿಸಿರುವ ವಿಷಯಗಳನ್ನು ಸಂಗ್ರಹಿಸಲಾಗಿರುತ್ತದೆ. ಆ ಸುದ್ದಿಗಾರರ ಹೆಸರು ಬಟ್ರ್ರಾಮ್ ಜೋನ್ಸ್. ಅವರ ಲೇಖನದ ಸಾರಾಂಶ ಈ ರೀತಿ ಇದೆ: –

ದ್ರಾಕ್ಷಾರಸ ಕುದಿಯುತ್ತಿರುವಾಗ ಗುಳ್ಳೆಗಳೇಳುವಂತೆ ಕಮ್ಯೂನಿಸ್ಟ್ ಚೈನಾ ಮತ್ತು ಸೋವಿಯಟ್ ಒಕ್ಕೂಟಗಳೊಳಗಣ ರಹಸ್ಯ ತಿಕ್ಕಾಟದ ಸಂಗತಿಗಳು ಈಗೀಗ ಸಿಡಿದು ಬಯಲಾಗುತ್ತಿದ್ದು, ಅವುಗಳ ನಡುವಣ ಮಧುರ ಸಂಬಂಧ ಕಹಿಯಾಗುತ್ತಿದೆನ್ನುವದು ಗೊತ್ತಾಗುತ್ತಿದೆ.

ಅದರಲ್ಲಿ ಇತ್ತೀಚೆಗೆ ಬಯಲಾಗಿರುವ ವಿಷಯವೆಂದರೆ, ಚೈನಾವು ರಷ್ಯಾದ ಮೇಲೆ ಹೊರಿಸಿರುವ ಆರೋಪವಿದೆ. ಚೈನಾ—ರಷ್ಯಾಗಳ ಗಡಿಪ್ರದೇಶದಲ್ಲಿ ಸಿಂಕಿಯಾಂಗ್ ಪ್ರಾಂತ್ಯವಿದೆ. ಇದು ಹಲವಾರು ವರ್ಷಗಳಿಂದಲೂ ಆ ಎರಡು ರಾಷ್ಟ್ರಗಳ ನಡುವಣ ಆರ್ಥಿಕ ಹಾಗೂ ರಾಜಕೀಯ ತಿಕ್ಕಾಟಗಳಿಗೆ ಕಾರಣವಾಗಿದೆ. ಅಲ್ಲಿ ರಷ್ಯನರೂ ತಮ್ಮ ಕಾರುಬಾರು ನಡೆಸಲು ಕೈ ಹಾಕುತ್ತಿದ್ದಾರೆ ಎಂಬುದು ಆ ಆರೋಪವಿದೆ

ಕಳೆದೆರಡು ವರ್ಷಗಳಿಂದ, ಸಿಂಕಿಯಾಂಗಿನಿಂದ ಓಡಿ ಬರುತ್ತಿರುವ ನಿರಾಶ್ರಿತರಿಂದ ಅಲ್ಲಿ ದಂಗೆ ಏಳುತ್ತಿರುವ ಹಾಗೂ ಹೋರಾಟ ನಡೆಯುತ್ತಿರುವ ಕುರಿತಾದ ವರದಿ ಹಾಗೂ ಸುದ್ದಿ ತಿಳಿದು ಬರುತ್ತಿದೆಯಾದರೂ ಇತ್ತೀಚೆಗಿನ ವರೆಗೆ ಅದನ್ನು ಧೃಢೀಕರಿಸಲು ಆಧಾರವಿರಲಿಲ್ಲ.

ಸೆಪ್ಟೆಂಬರ ಆರಂಭದಲ್ಲಿ ಪೆಕಿಂಗ್ ಆಕಾಶ ವಾಣಿಯಲ್ಲಿ ಸಿಂಕಿಯಾಂಗಿನ ಜಿಲ್ಲೆ ಈಲಿಯಿಂದ ಚೈನಿ ಆಡಳಿತ ಯಂತ್ರವನ್ನು ಕಿತ್ತೊಗೆಯಲು ಹವಣಿಸುತ್ತಿರುವದಾಗಿ ಬಿಸಿ ಬಿಸಿ ಆರೋಪವನ್ನು ಹೊರಿಸಿತು. ಹಾಗೆಯೇ, ಚೈನಿ ಕಮ್ಯೂನಿಸ್ಟ್ ಪಕ್ಷದ ಕಚೇರಿಯಿಂದಲೂ ಪ್ರಕಟಣೆ ಹೊರಡಿಸಲಾಗಿತ್ತು. ಅದರಲ್ಲಿ ೧೯೬೨ರ ಎಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಸೋವಿಯತ್ ಒಕ್ಕೂಟವು ತನ್ನ ಸ್ವಪಕ್ಷದ ಪತ್ರಿಕೆ ಹಾಗೂ ವ್ಯಕ್ತಿಗಳಿಂದ ಈಲಿಯಲ್ಲಿ ಚೈನಾ ಸರಕಾರವನ್ನು ಬುಡಮೇಲು ಮಾಡುವ ಚಟುವಟಿಕೆ ಮತ್ತು ಸಾವಿರಾರು ಚೈನಿ ಪ್ರಜೆಗಳನ್ನು ಗಡಿದಾಟಿ ರಷ್ಯಾಕ್ಕೆ ಬರುವಂತೆ ಬಲಾತ್ಕರಿಸಿದ್ದಾರೆ ಹಾಗೂ ಪುಸಲಾಯಿಸಿದ್ದಾರೆಂದು ಹೇಳಲಾಗಿತ್ತು.

ಚೈನಾವು ಹಲವಾರು ಬಾರಿ ಕೇಳಿಕೊಂಡಿದ್ದರೂ ಸೋವಿಯಟ್ ಒಕ್ಕೂಟವು ಚೈನಿ ಪ್ರಜೆಗಳನ್ನು ಮಾನವೀಯತಾ ದೃಷ್ಟಿಯಿಂದ ನೋಡಿಕೊಳ್ಳುವುದರಲ್ಲಿ ತಪ್ಪಿರುತ್ತದೆಯೆಂದೂ ಆಕಾಶವಾಣಿ ಸಾರಿರುತ್ತದೆ.

ಈಗ ಈ ಸಿಂಕಿಯಾಂಗ್ ಸಮಸ್ಯೆಯ ಸದ್ದಿಯನ್ನು ಬಿತ್ತರಿಸಲು ಕಾರಣವೇನೆಂಬುದನ್ನು ಕೊನೆಯ ದೂರು ವಿವರಿಸುತ್ತದೆ. ಇದಕ್ಕಿಂತ ಒಂದು ವಾರದ ಹಿಂದೆ, ಕಮ್ಯೂನಿಸ್ಟ್ ಚೈನಾದಿಂದ ಕೇಂದ್ರ ರಷ್ಯದತ್ತ ನಿರಾಶ್ರಿತರ ನಿರಂತರ ಪ್ರವಾಹ ಹರಿಯುತ್ತಿದೆಂಬುದನ್ನು ಅಧಿಕಾರ ಪೂರ್ಣ ಸೋವಿಯಟ್ ಮೂಲಗಳಿಂದ ರಹಸ್ಯವಾಗಿ ಧೃಢಪಡಿಸಿಕೊಳ್ಳಲಾಗಿದೆಯೆಂಬ ಕಥೆ ಉದ್ಭವವಾಗಿತ್ತು: ಸಿಂಕಿಯಾಂಗಿನಿಂದ 'ಶೋಚನೀಯ ಸ್ಥಿತಿಯಲ್ಲಿ ಸಾವಿರಾರು ಮಹಮ್ಮದೀಯರು' ರಷ್ಯಾದ ತಡ್ಜಕಿಸ್ತಾನ, ಕಿರ್ಗಿಜಿಯಾ ಮತ್ತು ಕಝಕ ಸ್ಥಾನಗಳೊಳಗೆ ಪ್ರವೇಶಿಸುತ್ತಿರುವರಾಗಿ ಆ ಕಥೆ ಹೇಳುತ್ತದೆ.

ಈ ಎರಡು ವರದಿಗಳನ್ನು ಅಕ್ಕಪಕ್ಕದಲ್ಲಿಟ್ಟುಕೊಂಡು ಕಣ್ಣೋಟ ಹಾಯಿಸುವಾಗ, ಕಳೆದ ವರ್ಷ ಸಿಂಕಿಯಾಂಗಿನಿಂದ ಓಡಿ ಬಂದಿದ್ದ ನಿರಾಶ್ರಿತನೊಬ್ಬನು ಹೇಳಿರುವ ವಿಷಯ ಜ್ಞಾಪಕಕ್ಕೆ ಬರುತ್ತದೆ. ಸಿಂಕಿಯಾಂಗಿನಿಂದ ಕೇಂದ್ರ ಚೈನಾಕ್ಕೆ ಆಹಾರ ಕಳುಹಿಸುವವರನ್ನು ಉಯಿಗುರ್, ಉಝ್ಬೆಕ್ ಮತ್ತು ಕಝಕ್ ಮುಸ್ಲಿಮರು ೧೯೬೨ರ ಬೇಸಿಗೆಯಲ್ಲಿ ದುರಿಸಿರುವದಾಗಿ ಅವನು ಅರುಹಿದನು. ಆಗ, ಚೈನಿ ಕಮ್ಯುನಿಸ್ಟ್ ಪಡೆಗಳು ಪ್ರದರ್ಶನಗಾರರ ಮೇಲೆ ಗುಂಡಿನ ಮಳೆ ಸುರಿದುದದರ ಕಾರಣವಾಗಿ ಹನ್ನೆರಡು ಜನರು ಸತ್ತಿರುವದಾಗಿಯೂ ಅವನು ಹೇಳಿರುವನು. ಅವರ ಮೊದಲನೆಯ ಓಸ ಮುಸ್ಲಿಮರು ಒಂದಾಗಿ ಸೇರಿ ಈಲಿಯ ಕ್ಲಿರದ [ಅದನ್ನು ಕುಟ್ಜ್ಞಾವೆಂದೂ ಕರೆಯುತ್ತಾರೆ] ಸೋವಿಯಟ್ ರಾಯಭಾರಿ ಕ್ಯಾಲಯಕ್ಕೆ ಹೋಗಿ, ಚೈನಿಯರನ್ನು ಹೊಡೆಯಟ್ಟಲು ಶಸ್ತ್ರ ಸಹಾಯವನ್ನು ಯಾಚಿಸಿದರು.

ಸೋವಿಯಟ್ ರಾಯಭಾರಿ ಕಾರ್ಯಾಲಯವು ಅವರಿಗೆ ಶಸ್ತ್ರ ಸಹಾಯವನ್ನು ಕೊಡಲೊಪ್ಪಲಿಲ್ಲ, ಮಾತ್ರವಲ್ಲ, ಹಿಂತಿರುಗಿ ಹೋಗಿ ಚೈನಿ ಅಧಿಕಾರಿಗಳಿಗೆ ಸಹಾಯ ಮಾಡಲು ಸೂಚಿಸಿತು. ಅನಂತರ ಗುಂಪು ಚದರಿ ಹೋಯಿತೆಂದು ಆ ಮೂಲವು ತಿಳಿಸುತ್ತದೆ. ಹಾಗಿದ್ದರೂ, ಈಲಿ ಮತ್ತು ಉರುಮ್ಚಿಯಲ್ಲಿರುವ ಸೋವಿಯಟ್ ರಾಯಭಾರಿ ಕಾರ್ಯಾಲಯಗಳನ್ನು ಮುಚ್ಚಿಬಿಡಲು ಚೈನಿ ಸರಕಾರ ರಷ್ಯಾಕ್ಕೆ ಸೂಚಿಸಿತು. ಅದಕ್ಕೆ ಅವರೇನೂ ಕಾರಣ ಕೊಟ್ಟಿರುವದಿಲ್ಲ. ಈ ಎರಡೂ ಸ್ಥಳಗಳು ಸಿಂಕಿಯಾಂಗಿನಲ್ಲೇ ಇವೆ.

ಈ ವಿಷಯಗಳು ನಮ್ಮನ್ನು ಈ ಪ್ರದೇಶದ ಹಿಂದಿನ ಚರಿತ್ರೆಯತ್ತ ಸಿಂಹಾವಲೋಕನ ಮಾಡಲು ಮರುಳು ಮಾಡುತ್ತವೆ. ಇದರ ವಿಸ್ತೀರ್ಣ ೬,೫೦,೦೦೦ ಚದರ ಮೈಲು. ಇದರ ಹೆಚ್ಚಿನಂಶ ಮರಳು ಭೂಮಿ ಹಾಗೂ ಪರ್ವತ ಪ್ರದೇಶವಿದೆ. ಇದು ಕೇಂದ್ರ ಚೈನಾದ ಪಶ್ಚಿಮ ದಿಕ್ಕಿನಲ್ಲಿದೆ. ಹತ್ತಿ, ಗೋಧಿ, ಎಣ್ಣೆ, ಕಬ್ಬಿಣ, ಉಕ್ಕು, ಯುರೇನಿಯಂ, ಕುರಿ ಮತ್ತು ದನಕರುಗಳು, ಅಲ್ಲದೆ, ಇತ್ತೀಚೆಗಿನ ಚಿಕ್ಕಪುಟ್ಟ ಕೈಗಾರಿಕೆಗಳು ಇಲ್ಲಿಯ ಆರ್ಥಿಕ ಸಂಪತ್ತಿವೆ. ಇದು ಬಹಳ ಮುಖ್ಯ ವಿಷಯವಿದೆ. (ಇದರಲ್ಲಿ ಯುರೇನಿಯಂ ಅಣುಗುಂಡಿನ ತಯಾರಿಗೆ ಅವಶ್ಯವಿದೆ. ಇದರ ಕುರಿತು ಚೈನಾದಲ್ಲಿ ಅಣುಗುಂಡಿದೆಯೇ ಎಂಬುದನ್ನು ತಿಳಿದ ಕೊಳ್ಳುವಾಗ ನೋಡಿರುವೆವು.)

ಎರಡು ಶತಮಾನಗಳಿಂದಲೂ, ಚೈನೀ—ರಷ್ಯನರ ನಡುವೆ ಈ ಪ್ರದೇಶವು ಹೋರಾಟದ ಕಳವಾಗಿತ್ತು. ಮಂಚೂ ವಂಶ ಕೆಳಮುಖವಾಗುತ್ತಿದ್ದಾಗ ಈ ಪ್ರದೇಶದ ಮೇಲೆ ರಷ್ಯನರು ತಮ್ಮ ಸ್ವಾಮಿತ್ವದ ಮುದ್ರೆಯನ್ನೊತ್ತಿದ್ದರು.

೧೮೭೬ರಿಂದ ೧೮೮೪ರ ವರೆಗೆ ಚೈನಿಯರು ಈ ಪ್ರದೇಶದ ಮೇಲೆ ತಮ್ಮ ಹತೋಟಿಯನ್ನು ಪುನಃ ಸ್ಥಾಪಿಸಿದರಾದರೂ ೧೯೩೩ರಿಂದ ೧೯೪೪ರ ವರೆಗೆ ರಷ್ಯದ ಪ್ರಭಾವವೇ ಇಲ್ಲಿ ಪ್ರಮುಖವಾಗಿತ್ತು. ಸಿಂಕಿಯಾಂಗಿನಲ್ಲಿ ರಷ್ಯನರ ಗುರುತನ್ನು ನಿರ್ಮಿಸಲಿಕ್ಕಾದರೂ ಎಡೆಗಿಗಬೇಕೆಂದು ಇಲ್ಲಿ ಹಲವಾರು ಬಾರಿ ದಂಗೆಗಳೇಳುವಂತೆ ರಷ್ಯನರು ದಂಗೆಗೆ ಕಾರಣವಾಗಿದ್ದಾರೆ.

ರಷ್ಯನರ ಮೇಲ್ವಿಚಾರಣೆಯಲ್ಲಿ, ಚೈನಿ–ವಿರುದ್ಧ 'ಪೂರ್ವ ತುರ್ಕಿಸ್ಥಾನ ಗಣರಾಜ್ಯ'ವು ಇಲ್ಲಿ ಸ್ಥಾಪಿತವಾಗಿತ್ತು. ಈ ಗಣರಾಜ್ಯದಲ್ಲಿ ಉಯಿಗುರರು, ಕಝಕರು ಮತ್ತು ಉಝ್ಬೆಕರು, ಅಂದರೆ ಮುಸಲ್ಮಾನರೆಲ್ಲರೂ, ಸೇರಿಕೊಂಡಿದ್ದರು. ಇದು ರಷ್ಯನರ ಶಿಕ್ಷಣೆಗೊಳಪಟ್ಟ ಪೂರ್ಣ ಸ್ವತಂತ್ರ ರಾಜ್ಯವೆಂದು ಹೇಳಲಾಗಿತ್ತು.

೧೯೪೯ರಲ್ಲಿ ಮಾವೋ ತ್ಸೆಟುಂಗ್ ಹಾಗೂ ಕಮ್ಯೂನಿಸ್ಟ್ ಚೈನಾದಲ್ಲಿ ಅಧಿಕಾರ ಅಟ್ಟವನ್ನೇರಿದ ಮೇಲೆ, ಮೊಸಕೋವ್ ಸಿಂಕಿಯಾಂಗಿಗೆ ಆರ್ಥಿಕ ನೆರವನ್ನಿತ್ತು ತಮ್ಮ ಪ್ರಭಾವವನ್ನುಳಿಸಿಕೊಳ್ಳಲು ಪ್ರಯತ್ನಿಸಿ ವಿಫಲರಾದರು. ಚೈನಾದ ಪ್ರಭುತ್ವ ಪುನಃ ಸ್ಥಾಪಿಸಲ್ಪಟ್ಟಿತು.

ಈಗ ಚೈನಿ ಕಮ್ಯೂನಿಸ್ಟರ ಕಪಿ ಮುಷ್ಟಿಯೊಳಗೆ ಸಿಕ್ಕಿಕೊಂಡಿರುವ ಇತರ ಅನೇಕ ಪ್ರದೇಶಗಳಂತೆ ಸಿಂಕಿಯಾಂಗ್ ಸಹಾ ಚೈನೇತರ ಪ್ರಜೆಗಳಿರುವ ಪ್ರದೇಶವಿದೆ. ಈ ಎಲ್ಲಾ ಪ್ರದೇಶಗಳಲ್ಲೂ ತಮ್ಮ ಹತೋಟಿಯನ್ನು ಸ್ಥಾಪಿಸಲು ಹಾಗೂ ಅಲ್ಲಿರುವವರ ರಾಷ್ಟ್ರೀಯ ಮನೋಭಾವನೆಯನ್ನು ಚಿವುಟಿ ಹಾಕಿ ಬಿಡಲು ಪಡುವ ಪ್ರಯತ್ನ ಒಂದೇ ರೀತಿಯಲ್ಲಿಟ್ಟಿದೆ. ಈ ಎಲ್ಲಾ ಪ್ರದೇಶಗಳಿಗೂ ಚೈನಿ ಜನರ ಪ್ರವಾಹವನ್ನು ಕಳುಹಿಸಲಾಗುತ್ತಿದೆ ಚೈನಿ ಕಮ್ಯೂನಿಸ್ಟ್ ಧೋರಣೆಗೆ ಅನುಸಾರವಾಗಿ ಬದಲಾಗುವಂತೆ ಅಲ್ಲಿಯ ನಿವಾಸಿಗಳ ಮೇಲೆ ಸಾಂಸ್ಕೃತಿಕ ಸುಧಾರಣೆ ಮುಂತಾದ ದೊಡ್ಡ ಹೆಸರುಗಳಿಂದ ಒತ್ತಡ ಹಾಕಲಾಗುತ್ತಿದೆ. ಚೈನಿಯೇತರ ಪ್ರದೇಶದ ಮೇಲೆ ಚೈನಿ ಪ್ರಭಾವ ಬೀರಲು, ಗುತ್ತಿಗೆದಾರರಾಗಲು, ಸರ್ವವಿಧದಲ್ಲೂ ಪ್ರಯತ್ನ ನಡೆಸಲಾಗುತ್ತಿದೆ.

ಸಿಂಕಿಯಾಂಗಿಗೆ ಕಳುಹಿಸಲ್ಪಟ್ಟಿರುವ ಚೈನೀಯರತ್ತ ಗಮನ ಹರಿಯಿಸಿದಾಗ ಒಂದು ವಿಷಯ ತಟ್ಟನೆ ಜ್ಞಾಪಕಕ್ಕೆ ಬರುತ್ತದೆ. ಅಲ್ಲಿಗೆ ಹೋಗುತ್ತಿರುವವರು ಹೂಣರಿದ್ದಾರೆ. ಇವರನ್ನು ನಿಜವಾದ ಚೈನಿಯರೆನ್ನಲಾಗುತ್ತಿದೆ. ಇದು ಬಹಳ ಮುಖ್ಯ ವಿಷಯ ಹಾಗೂ ಪೂರ್ವ ಯೋಜಿತ ಹಂಚಿಕೆ ಇದೆ. ಚೈನಾದಲ್ಲಿ ಕಮ್ಯೂನಿಸ್ಟ್ ಷಾಹಿ ಅಧಿಕಾರಕ್ಕೆ ಬರುವ ಮೊದಲು ಇಲ್ಲಿ ಉಯಿಗುರರ ಸಂಖ್ಯೆ ಜಾಸ್ತಿ ಇತ್ತು, ಅಲ್ಲಿ ಉಯಿಗುರರ ಸಂಖ್ಯೆ ೩೯,೪೧,೦೦೦ ಮತ್ತು ಕಝಕರ ಸಂಖ್ಯೆ ೩,೧೯,೦೦೦ ಇವೆರಡೂ ತುರಕರ ಸಂತತಿ ಇವೆ. ಹೂಣರ ಸಂಖ್ಯೆ ೨,೦೩,೦೦೦ಕ್ಕಿಂತ ಜಾಸ್ತಿ ಇರಲಿಲ್ಲ.

೧೯೪೯ರ ನಂತರ ಜನಸಂಖ್ಯೆ ಬಹಳಷ್ಟು ಜಾಸ್ತಿಯಾಗಿರುತ್ತದೆ. ಅದಕ್ಕೆ ಹೂಣರ ಆಗಮನವೇ ಕಾರಣವೆನ್ನಬಹುದು. ೧೯೫೩ರಲ್ಲಿ ದೊರಕಿರುವ ಪ್ರಜಾ ಸಂಖ್ಯೆಯ ಪ್ರಕಾರ ಸಿಂಕಿಯಾಂಗಿನ ಜನಸಂಖ್ಯೆ ಇಮ್ಮಡಿಯಾಗಿರುವದು ಸ್ಪಷ್ಟವಾಗುತ್ತದೆ. ಈ ರೀತಿ ಇವತ್ತಿದ್ದಂತೆ ಹೂಣರ ಸಂಖ್ಯೆ ಅಧಿಕವಾಗುತ್ತಿರುವುದರಿಂದ ಅವರು ಸ್ಥಳೀಯ ಜನರ ಆಗ್ರಹಕ್ಕೊಳಗಾಗಬೇಕಾಗುತ್ತದೆ.

ಸಿಂಕಿಯಾಂಗಿಗೆ "ಸ್ವಾಯತ್ತಾಧಿಕಾರದ ಪ್ರದೇಶ"ವೆಂಬ ಶಿರೋನಾಮೆಯನ್ನು ಪೆಕಿಂಗ್ ಕೊಟ್ಟಿದೆಯಾದರೂ ನಿಜವಾಗಿ ಅಲ್ಲಿಯವರಿಗೆ ರಾಜಕೀಯ ಹಕ್ಕು ಬಾಧ್ಯತೆಗಳೇನೂ ದೊರಕಿರುವದಿಲ್ಲ.

ಮುಖನೇ ಪುಟ ನೋಡಿರಿ.

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ........
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ

1—1—1963ರಿಂದ ಠೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ

ನಿಮ್ಮ ಉಳಿತಾಯವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ಆಂಧ್ರ ಪ್ರದೇಶದ

ಶೃಂಗಾರಗಾನ ಕವಿ-ಕ್ಷೇತ್ರಜ್ಞ

ಕ್ಷೇತ್ರಜ್ಞನು ಗಾಯಕಕವಿ--ಶೃಂಗಾರ ಗಾನಕವಿ. ಆತನ ಭಾಷೆ ತೆಲುಗು. ಆತನ ವಸ್ತುವು ಸಮಸ್ತ ಸ್ತ್ರೀ ಪುರುಷರ ಹೃದಯ ವಿಲಾಸ. ಆ ವಸ್ತುವು ಸರ್ವಮಾನವನಿಗೂ ಸಾಮಾನ್ಯವಾದ ಕಾರಣ ಆತನ ಪ್ರತಿಭೆಯು ಕೀರ್ತಿ ಭಾಷೆಯ ಮೇರೆಗಳನ್ನು ದಾಟಿ ಹರಡಿದೆ.

ಕ್ಷೇತ್ರಜ್ಞನು ಇಂದಿಗೆ ಸುಮಾರು ಮುನ್ನೂರು ವರ್ಷ ಹಿಂದೆ ಇದ್ದವನು. ಪುರಂದರದಾಸರಿಗಿಂತ ನೂರು ವರ್ಷ ಈಚೆ—ತ್ಯಾಗ ರಾಜನಿಗಿಂತ ಇನ್ನೂರು ವರ್ಷ ಆಚೆ.

ಕ್ಷೇತ್ರಜ್ಞನ ಜನ್ಮಸ್ಥಳ ಆಂಧ್ರ ದೇಶದ ಕೃಷ್ಣಾ ಜಿಲ್ಲೆಯ ಮುವ್ವ ಎಂಬ ಹಳ್ಳಿ. ಅಲ್ಲಿಯ ಗೋಪಾಲಕೃಷ್ಣ ದೇವಾಲಯದ ಮೂರ್ತಿ ಕ್ಷೇತ್ರಜ್ಞನ ಇಷ್ಟದೈವ. ಆತನ ಪದಗಳಲ್ಲಿ ಮಾತನಾಡುವ ನಾಯಿಕೆಯರು ತಮ್ಮ ನಾಯಕನು ಮುವ್ವ ಗೋಪಾಲನೆಂದು ಹೇಳಿ ಕೊಂಡಿದ್ದಾರೆ. ಕ್ಷೇತ್ರಜ್ಞನ ಜೀವನದ ಸಂಗತಿ ಯಾವುದೂ ನಿಷ್ಕರ್ಷೆಯಾಗಿ ತಿಳಿದು ಬರುವಂತಿಲ್ಲ. ಆತನ ರಸಿಕತೆಯನ್ನು ತೋರಿಸುವ ಕಥೆಗಳು ಒಂದೆರಡಿವೆ. ಅವು ಕಟ್ಟು-ಕಥೆಗಳಲ್ಲವೆಂದು ಇಟ್ಟುಕೊಂಡರೂ ಅವುಗಳಿಂದ ಆವನ ವ್ಯಕ್ತಿ ಚರಿತ್ರೆಯ ಅಂಶವೇನೂ ಹೊರಪಡುವಂತಿಲ್ಲ.

ಆತನಿಗೆ ತಂದೆತಾಯಿ ಕೊಟ್ಟ ಹೆಸರು ವರದಯ್ಯನೆಂದೂ ಆತ ಬಹು ಕ್ಷೇತ್ರಯಾತ್ರೆ ಮಾಡಿದ್ದರಿಂದ ಆತನಿಗೆ ಕ್ಷೇತ್ರಜ್ಞನೆಂದು ಹೆಸರಾಯಿತೆಂದೂ ಹೇಳುತ್ತಾರೆ. ಆ ಹೆಸರು ಇನ್ನೊಂದು ದೃಷ್ಟಿಯಿಂದಲೂ ಅನ್ವರ್ಥವಾಗುತ್ತದೆ. ಭಗವದ್ಗೀತೆಯ ಹದಿಮೂರನೆಯ ಅಧ್ಯಾಯವು ಕ್ಷೇತ್ರ ಮತ್ತು ಕ್ಷೇತ್ರಜ್ಞ ಸ್ವರೂಪವನ್ನೂ ವರ್ಣಿಸುತ್ತದೆ. ಅಲ್ಲಿ ಕ್ಷೇತ್ರವೆಂದರೆ ಸಂಸಾರ—ಸಸ್ಯ ಬೆಳೆಯುವ ಭೂಮಿ ಎಂದರೆ ಜೀವನರಂಗ ನಮ್ಮ ದೇಹ, ಇಂದ್ರಿಯಗಳು, ಮನಸ್ಸು, ನಾವು ಪಡುವ ಸುಖ ದುಃಖಗಳು ನಮ್ಮ ರಾಗ ದ್ವೇಷಗಳು. ಇವೆಲ್ಲಾ ಕ್ಷೇತ್ರಾಂಶಗಳು. ಈ ದೇಹ ಮನಶ್ಚೇಷ್ಟೆಗಳ ಕಾರ್ಯಕಾರಣ ಮರ್ಮಗಳನ್ನರಿತವನು ಕ್ಷೇತ್ರಜ್ಞ. ಕ್ಷೇತ್ರಜ್ಞ ಪದಗಳೆಂದು ಪ್ರಚಾರದಲ್ಲಿರುವ ಕೃತಿಗಳಿಂದ ಅವುಗಳ ಕರ್ತೃವು ಮನುಷ್ಯ ಹೃದಯ ರಹಸ್ಯಗಳನ್ನು ಚೆನ್ನಾಗಿ ಬಲ್ಲವನು—ಜೀವಚಾಪಲ್ಯಗಳನ್ನು ಅರಿತವನು ಎಂದು ವ್ಯಕ್ತಪಡುತ್ತದೆ. ಹೀಗೆ ಕ್ಷೇತ್ರಜ್ಞ ಎಂಬ ಹೆಸರು ಸಾರ್ಥಕವಾಗಿದೆ.

ಶೃಂಗಾರವು ದೇಹ ಮನಸ್ಸುಗಳೆರಡೂ ಬೆರೆತು ಮಾಡುವ ವ್ಯಾಪಾರವಾದರೂ ಆ ಎರಡಂಶಗಳಲ್ಲಿ ಮನೋವಿಲಾಸ ಮುಖ್ಯವಾದಲ್ಲಿ ಅದು ರಸಿಕ ಶೃಂಗಾರ, ಮಿಕ್ಕದ್ದು ಪಾಮರ ಶೃಂಗಾರ. ಭೋಜನದಲ್ಲಿ ರುಚಿವಂತಿಕೆಯೂ ಹೊಟ್ಟೆ ಬಾಕತನವೂ ಬೇರೆ ಬೇರೆಯಾದಂತೆ, ಶೃಂಗಾರದಲ್ಲಿ ನಾಜೂಕಿನ ದಾರಿಯೊಂದೂ ಒರಟುತನದಿನ್ನೊಂದೂ ಇದೆ. ರಸಿಕನಯವನ್ನು ನಿಪುಣನಪಡಿಸುವವನು ಕ್ಷೇತ್ರಜ್ಞ. ಆತನ ಮಿಥುನಾ ಕಾಂಕ್ಷೆಗಳು ಪ್ರಾಣಿ ಮಾತ್ರಕ್ಕೆ ಸಹಜವಾದವು. ಮೃಗ ಮನುಷ್ಯರಿಬ್ಬರಿಗೂ ಅವು ಸಾಮಾನ್ಯ ಲಕ್ಷಣ. ಆ ಪ್ರಕೃತಿ ವಿಧೇಯತೆಯಲ್ಲಿ ಮನುಷ್ಯನು ಮೃಗಕ್ಕಿಂತ ಎಷ್ಟು ದೂರ ಮೇಲ್ಪಟ್ಟಿದ್ದಾನೆಂಬುದರಿಂದ ಆತನ ಹಿರಿಮೆ ನಿಶ್ಚಿತವಾಗುತ್ತದೆ. ಲೈಂಗಿಕ ಪ್ರವೃತ್ತಿ ಪ್ರಕೃತಿ; ಶೃಂಗಾರ ರಸಿಕ ಸಂಸ್ಕೃತಿ. ಅಂಥ ಸರಸ ಶೃಂಗಾರವು ಜೀವಕ್ಕೆ ಒಂದು ಸಂಸ್ಕಾರವಾಗುತ್ತದೆ. ಪ್ರಣಯವು ಹೃದಯವನ್ನು ಪರಿಪಾಕಗೊಳಿಸುವ ರಸಕ್ರಿಯೆ.

ನಮ್ಮ ಕಾವ್ಯಾಲಂಕಾರ ಮೀಮಾಂಸೆಯಲ್ಲಿ ಶೃಂಗಾರದ್ದು ದೊಡ್ಡ ಪ್ರಕರಣ. ಅದರಲ್ಲಿ ನಾಯಕಿ ನಾಯಕರ ಹೃದಯ ಭಂಗಿಗಳನ್ನು ಜಾತಿಜಾತಿಯಾಗಿ ವಿಂಗಡಿಸಿ ಪಟ್ಟಿ ಮಾಡಿದ್ದಾರೆ. ಪ್ರಣಯಿಗಳು ತಮ್ಮ ಬಯಕೆ, ಅಗಲಿಕೆ, ಅಪನಂಬಿಕೆ, ಮುನಿಸು, ಪೇಚಾಟ, ಹಂಬಲ, ಹೊಟ್ಟೆಕಿಚ್ಚು, ರೋಷ, ದೈನ್ಯ, ಸಂಭ್ರಮ- ಇಂಥ ನಾನಾ ಸುಖಸಂಕಟಗಳನ್ನೂ ತಮ್ಮ ತಮ್ಮ ಸಖಿಗೋದೂತಿಗೋ ಹೇಳಿಕೊಳ್ಳುತ್ತಾರೆ. ಈ ಆರ್ತಿಯಲ್ಲಿ ನಾಯಿಕೆಯ ಭಾಗವೇ ಹೆಚ್ಚು. ಅವಳು ತನ್ನ ಗೋಳನ್ನು ತೋಡಿಕೊಳ್ಳುವ ನೆವದಲ್ಲಿ ನಾಯಕನ ಸ್ವಭಾವವನ್ನು ವರ್ಣಿಸುತ್ತಾಳೆ. ಹೀಗೆ ಕ್ಷೇತ್ರಜ್ಞ ಪದಗಳಲ್ಲಿ ಸ್ತ್ರೀ ಪುರುಷರ ಹೃದಯ ಚೇಷ್ಟಿತಗಳು ನಮಗೆ ದೃಶ್ಯಗಳಾಗುತ್ತವೆ. ಅದು ನಮಗೆ ಸುಖ ಸ್ವಾನುಭೂತಿ ಮಾತ್ರವಲ್ಲದೆ ನೀತಿ ಶಿಕ್ಷಣವೂ ಆಗುತ್ತದೆ. ಪ್ರೇಮ ಕಾಮಗಳ ಪ್ರತಾಪ ಎಂಥಾದ್ದು-- ಹೃದಯದ ದುರ್ಬಲತೆ ಎಂಥಾದ್ದು —ಎಂಬುದು ನಮಗೆ ಅರಿವಾಗುತ್ತದೆ. ಅದಕ್ಕಿಂತ ಹೆಚ್ಚಾಗಿ ರಸಿಕನ ಶೃಂಗಾರವು— ವ್ಯಗ್ರಾಂಶವನ್ನು ಸ್ವಾಧೀನಕ್ಕೆ ತಂದುಕೊಂಡಿರುವವನ ಶೃಂಗಾರವು— ಹೃದಯದ ಸಣ್ಣತನವನ್ನು ಬಿಡಿಸುತ್ತದೆ. ತಾನೆಂಬ ಒಂದೇ ಜೀವ ಆಕ್ರಮಿಸಿಕೊಂಡಿದ್ದ ಜಾಗದಲ್ಲಿ ಪ್ರೇಮ ಪಾತ್ರವಾದ ಇನ್ನೊಂದು ಜೀವಕ್ಕೆ ಎಡೆಮಾಡಿಕೊಡುತ್ತದೆ. ಹೀಗೆ ಹೃದಯ ವಿಸ್ತಾರವಾಗುತ್ತದೆ.

ಕ್ಷೇತ್ರಜ್ಞನಿಗೆ ಆರ್ಷೇಯವಾದ ಅನುಪೂರ್ವಿಯಿದೆ. ವೇದದಲ್ಲಿ ಪ್ರಣಯಗಾಗೆಗಳಿವೆ. ಉಪನಿಷತ್ತುಗಳು ಕಾಮ ಪ್ರೇರಣೆಯ ಮರ್ಮವ್ಯತೆಯನ್ನೊಪ್ಪಿ ಸಂಸ್ಕಾರೋಪಾಯಗಳನ್ನು ತಿಳಿಸುತ್ತವೆ. ರಾಮಾಯಣ ಭಾರತಗಳು ಪ್ರೇಮಕಾಮಗಳ ಮಹಿಮೆಯನ್ನು ಕೀರ್ತಿಸಿವೆ. ಭಾಗವತದ ಕೆಲವು ಭಾಗಗಳಂತೂ ತನ್ಮಯವಾಗಿವೆ.

ಋಷಿ ಪ್ರಸಕ್ತಿಯಿಲ್ಲದ ಕೇವಲ ಕವಿಗಳಲ್ಲಿ ಕಾಳಿದಾಸ, ಅಮರುಕ ಜಯದೇವ ಇವರು ಕ್ಷೇತ್ರಜ್ಞ ಸಂಪ್ರದಾಯದ ಮೂಲ ಪುರುಷರು. ಮೇಘ ಸಂದೇಶವು ವಿಪ್ರಲಂಭ ಶೃಂಗಾರಕ್ಕೆ ದೃಷ್ಟಾಂತ. ಅಮರುಕನು ಶಂಕರಾಚಾರ್ಯರ ಅಪರಾವತಾರವೆಂದು ಹೇಳುವುದುಂಟು. ಪ್ರಣಯಿಗಳ ಅಂತರಂಗ ವಿಕಾರಗಳ ಸೂಕ್ಷ್ಮ ಕೋಮಲ ಚಲನ ವಲನಗಳನ್ನು ಚಿತ್ರಿಸುವುದರಲ್ಲಿ ಅಮರುಕನು ನಿಸ್ಸೀಮ. ರಾಧಾಕೃಷ್ಣರ ಕೇಳೀವಿಲಾಸಗಳನ್ನು ವರ್ಣಿಸುವ ವ್ಯಾಜದಲ್ಲಿ ಗೀತ-ಗೋವಿಂದ ಕಾವ್ಯವು ಹೃದಯ ತಂತ್ರದ ಮರ್ಮಗಳನ್ನು ಹೊರಕ್ಕೆ ತಂದಿದೆ. ಕ್ಷೇತ್ರಜ್ಞನು ಅಮರುಕನ ಭಾವಮರ್ಮವನ್ನೂ ಜಯದೇವನ ಸಂಗೀತ ಜೀವಾಳವನ್ನೂ ಸಂಮಿಳಿತ ಮಾಡಿದ್ದಾನೆ.

ಕ್ಷೇತ್ರಜ್ಞನ ಕೃತಿಗೆ ಸಂಗೀತ ಪರಿಭಾಷೆಯಲ್ಲಿ "ಪದ" ಎಂದು ನಾಮ. ಸಂಕ್ಷೇಪ ಪದವು ಶೃಂಗಾರ ಪ್ರತಿಪಾದಕವಾದ ಗೇಯ— ಎಂದರೆ ಹಾಡು. ಇಂಥ ಪದಗಳನ್ನು ೪,೭೦೦ರಷ್ಟು ತಾನು ರಚಿಸಿದವನೆಂದು ಆತ ಹೇಳಿಕೊಂಡಂತೆ ಒಂದು ಪದ ತಿಳಿಸುತ್ತದೆ. ಮಧುರೆಯ ತಿರುಮಲ ನಾಯಕ ತಂಜಾವೂರಿನ ವಿಜಯ ರಾಘವ ನಾಯಕ, ಗೋಲಕೊಂಡದ ಪಾದುಷಾ—ಈ ದೊರೆಗಳಿಗಾಗಿ ಆ ಪದಗಳನ್ನು ರಚಿಸಿ, ಅವರ ಮುಂದೆ ಹಾಡಿ, ಬಹುಮಾನ ಪಡೆದನಂತೆ. ಇದ್ದರೂ ಇದ್ದೀತು. ಅದು ಹೇಗಾದರಾಗಲಿ. ಈಗ ಪೀಠಾಪುರ ರಾಜಾಶ್ರಯದಲ್ಲಿ ಮುದ್ರಿತವಾಗಿರುವ ಪುಸ್ತಕದಲ್ಲಿ ೪೧೧ ಪದಗಳು ಆತನದಿದ್ದರೂ ಇರಬಹುದೆಂದೂ ದೊರೆಯುತ್ತವೆ. ಕ್ಷೇತ್ರಜ್ಞನ ಮಹತ್ವವೆಂತಾದ್ದು, ಎಷ್ಟರದು ಎಂದು ತೋರಿಸಲು ಇವೇ ಸಾಕಾಗಿವೆ.

ಕ್ಷೇತ್ರಜ್ಞನ ಪದದಲ್ಲಿ ಹೃದಯ ಭಾವ ಮುಖ್ಯ ಭಾವಕ್ಕೆ ಇಬ್ಬರು ಓಲೆಕಾರರನ್ನು ನಿಯಮಿಸಿದ್ದಾನೆ. ಒಂದು ಮಾತು ಅಥವಾ ಸಾಹಿತ್ಯ; ಇನ್ನೊಂದು ರಾಗ ಅಥವಾ ಸಂಗೀತ. ಮಾತು ಭಾವವನ್ನು ಅನುಸರಿಸಿಕೊಂಡಿರತಕ್ಕದ್ದು. ರಾಗ ವಿನ್ಯಾಸದ ರೀತಿಯು ಭಾವ ವಿಶದೀಕರಣಕ್ಕೂ ಭಾವಾನುಧ್ಯಾನಕ್ಕೂ ಸಾಧಕವಾಗಬೇಕು. ಧ್ಯಾನದಿಂದ ಅನುಭವ ಸಾಹಿತ್ಯ ಸಂಗೀತಗಳ ಸಂಯೋಜನೆ ಇಲ್ಲಿ ಹೀಗಿರುವುದರಿಂದ ಪದಗಾಯನವು ಗಾಯಕರಿಂದ ಹೆಚ್ಚು ಸಾವಧಾನತೆಯನ್ನಪೇಕ್ಷಿಸುತ್ತದೆ.

ಕ್ಷೇತ್ರಜ್ಞ ಪದ ಗಾಯನಕ್ಕೆ ತ್ಯಾಗರಾಜೀಯಾದ ಕೃತಿಗಾಯನಕ್ಕಿಂತ ಕೊಂಚ ಬೇರೆಯಾದ ಗುಣ ಸಾಮರ್ಥ್ಯಗಳು ಅವಶ್ಯವಾಗುತ್ತವೆ. ಪದಗಾಯನದಲ್ಲಿ ಮನೋಧರ್ಮ ವಿಕಾಸಕ್ಕೆ ಸ್ವಾತಂತ್ರ್ಯ ಹೆಚ್ಚು. ಆದರಂತೆ ಗಾಯಕನ ಜವಾಬ್ದಾರಿಯೂ ಹೆಚ್ಚು, ಅದಕ್ಕಾಗಿ ಪಡಬೇಕಾದ ಶ್ರಮವೂ ಹೆಚ್ಚು. ಎರಕ ಹೊಯ್ದ ಸ್ವರ ಸಂಗತಿಯ ಅಚ್ಚು ತುಂಡುಗಳಿಗೆ ಪದ ಗಾಯನದಲ್ಲಿ ಅವಕಾಶ ಕಡಿಮೆ. ಇಲ್ಲಿ ಬೇಕಾದದ್ದು ಭಾವಾಭಿವ್ಯಂಜಕವಾದ ರಾಗ ವಿಲಸಿತ, ಕಂಠಧ್ವನಿಯ ತೀವ್ರತ್ವ ಕೋಮಲತ್ವಾದಿ ಪರಿವರ್ತನೆಗಳಿಂದ ಕೇಳುವವನ ಅಂತಃಕರಣದಲ್ಲಿ ಮೂರ್ಛನ ಸಾಂತ್ವನಾದಿ ಪರಿಣಾಮಗಳಾದಾಗ ಪದ ಗಾಯಕನು ಕೃತಕೃತ್ಯನಾಗುತ್ತಾನೆ. ಇದಕ್ಕೆ ಅವನಲ್ಲಿರಬೇಕಾದದ್ದು ಕವಿತ್ವಭಾವ ರಾಗ ಭಾವಗಳ ಮೇಲೆ ಅಧಿಕಾರ.

ಕ್ಷೇತ್ರಜ್ಞನು ಉಪಯೋಗಿಸಿರುವ ರಾಗಗಳು ಸುಮಾರು ಐವತ್ತು. ಅವೆಲ್ಲ ರಕ್ತಿ ಜಾತಿಯವು. ಅವುಗಳಲ್ಲಿ ಕಾಂಭೋಜಿ, ಮುಖಾರಿ, ಭೈರವಿ, ಕಲ್ಯಾಣಿ, ತೋಡಿ- ಇವುಗಳ ಸಂಖ್ಯೆ ಹೆಚ್ಚು. ಕಲವು ರಾಗಗಳಲ್ಲಿ ಪದಗಳು ಒಂದೋ ಎರಡೋ ಮಾ

(೧೯ನೇ ಪುಟ ನೋಡಿ.)

ಮತ್ತೊಂದು ಬ್ಯಾಂಕಿನ ಸೇರ್ಪಡೆ

2-12-1963

ಸೋಮವಾರದಿಂದ

ಕೆನರಾ ಬ್ಯಾಂಕ್ ಲಿ.

ಪಾಂಡ್ಯನ್ ಬ್ಯಾಂಕಿನ

ಸಮಸ್ತ ಆಸ್ತಿ

ಹಾಗೂ ಹೊಣೆಗಾರಿಕೆಗಳೆಲ್ಲವನ್ನೂ

ವಹಿಸಿಕೊಂಡಿದೆ.

ಮತ್ತು ಅಂದಿನಿಂದ

ಪಾಂಡ್ಯನ್ ಬ್ಯಾಂಕಿನ ಶಾಖೆಗಳೆಲ್ಲವೂ

ಕೆನರಾ ಬ್ಯಾಂಕಿನ ಶಾಖೆಗಳಂತೆ

ಕಾರ್ಯ ನಿರ್ವಹಿಸುತ್ತವೆ.

ಕೆನರಾ ಬ್ಯಾಂಕ್ ಲಿ.

(ಸ್ಥಾಪನೆ: ೧೯೦೬)

ರಿಜಿಸ್ಟರ್ಡ್ ಆಫೀಸು: ಮಂಗಳೂರು.
235 ಕ್ಕೂ ಮೀರಿದ
ಶಾಖೆಗಳು.

ಆಡಳಿತ ಕಛೇರಿ: ಬೆಂಗಳೂರು.
ಪ್ರಪಂಚದಾದ್ಯಂತ
ಪ್ರತಿನಿಧಿಗಳು.

ಲೋಕ ಪ್ರಾರ್ಥಿಸುತ್ತಿದೆ

ದೀಪ ಹೊತ್ತಿದೆ, ಎತ್ತಿ ಹಿಡಿಯಿರಿ

ಅಧ್ಯಕ್ಷ ಕೆನೆಡಿಯವರು ಇನ್ನಿಲ್ಲ. ಅವರ ಮೇಲೆ ಯಾರಿಗೆ ದ್ವೇಷವಿತ್ತು? ಅವರನ್ನು ಯಾರು ಕೊಲ್ಲಲು ಮನದಂದರು? ಈ ಪ್ರಶ್ನೆಯನ್ನು ಉತ್ತರಿಸುವುದು ಸದ್ಯ ಸಾಧ್ಯವಿಲ್ಲ. ಕೆನೆಡಿಯವರ ಉದಾರ ನೀತಿಯಿಂದ ಅಸಹನಗೊಂಡ ಉಗ್ರವಾದಿಯಿರಬಹುದು; "ನೀಗ್ರೋ ಪ್ರೇಮಿ"ಯೆಂದವರನ್ನು ಕರೆಯುತ್ತಿದ್ದ ಶ್ವೇತ ವರ್ಣೀಯ ಪ್ರಿಯನಿರಬಹುದು; ಅಧ್ಯಕ್ಷ ಕೆನೆಡಿಯವರ ನೀತಿಯಿಂದ ದಿಗಿಲುಗೀಡಾದ ವಿದೇಶದ ಸಹಾನುತಾಪಿಯಿರಬಹುದು; ಅಥವಾ ಅಧ್ಯಕ್ಷರ ಮೇಲೆ ವೈಯಕ್ತಿಕ ವೈರವಿದ್ದವನಿರಬಹುದು. ಯಾರು ಕೆನೆಡಿಯವರ ಕೊಲೆಗೆ ಕಾರಣೀಭೂತರು? ಎಂಬುದೊಂದು ಇಂದಿನ ಯಕ್ಷ ಪ್ರಶ್ನೆ. ಆದರೆ, ಅಧ್ಯಕ್ಷ ಕೆನೆಡಿಯವರು ಕೊಲೆಗೆಯ್ಯಲ್ಪಟ್ಟರು ಎಂಬುದು ಪೂರ್ಣ ಉತ್ತರ.

ಹಲವಾರು ರಾಜಕೀಯ ನಾಯಕಾಗ್ರಣಿಗಳೂ ರಾಷ್ಟ್ರ ಪ್ರಮುಖರೂ ಈ ಹಿಂದೆ ಕೊಲೆಗಾಹುತಿಯಾಗಿದ್ದಾರೆ. ಆದರೆ, ಅಧ್ಯಕ್ಷ ಕೆನೆಡಿಯವರ ಕೊಲೆಯಂತೆ ಯಾವುದೂ ನಾಟಕೀಯವಾಗಿರಲಿಲ್ಲ. ಕೊಲೆಯ ದುರ್ಘಟನೆಯು ಪ್ರಾರಂಭದಿಂದ ಕೊನೆಯವರೆಗೂ ಟೆಲಿವಿಜನಿನಿಂದ ನೋಡಲ್ಪಡಬಹುದಾಗಿತ್ತು. ಪ್ರತ್ಯಕ್ಷ ಸಾಕ್ಷ್ಯದಾರರಾಗಿರುವವರು ಸಾವಿರಾರು ಮಂದಿ ದೊರೆಯಬಲ್ಲರು. ಇಂತಹ ಅಮಾನುಷ್ಯ ಕೃತ್ಯವು ನಡೆಯುವುದೆಂದು ಯಾರೊಬ್ಬರೂ ಕಲ್ಪಿಸಿರಲಿಲ್ಲ; ನಡೆಯಿತೆಂಬಾಗಲೂ ನಂಬಲಿಲ್ಲ. ಆದರೆ, ನಂಬಲೇ ಬೇಕಾದ ಪರಿಸ್ಥಿತಿಯೊದಗಿದಾಗ ನಂಬದಿರುವುದೂ ಸಾಧ್ಯವಾಗಲಿಲ್ಲ.

ಕೆನೆಡಿಯವರ ಆಕಸ್ಮಿಕ ಕಗ್ಗೊಲೆಯಿಂದಾಗಿ ವಿಶ್ವವು ತಲ್ಲಣಗೊಂಡಿದೆ. ದೇಶ ದೇಶವೂ, ಕೆಂಪು ಚೀನಾ ಮಾತ್ರ ಬಿಟ್ಟು, ತನ್ನ ಹೃದಯದ ಕಳವಳವನ್ನು ವ್ಯಕ್ತಪಡಿಸಿದೆ. ಯಾವ ರಾಜಕಾರಣಿಗೂ ದೊರೆಯದಂತಹ ಗೌರವ ಈ ಅಧ್ಯಕ್ಷರು ಪಡೆದಿದ್ದಾರೆ. ಅಂತ್ಯ ಸಂಸ್ಕಾರ ಕಾರ್ಯದಲ್ಲಿ ಹಲವಾರು ರಾಷ್ಟ್ರಗಳ ವರಿಷ್ಠರೂ ಭಾಗವಹಿಸಿದ್ದಾರೆನ್ನುವಾಗ, ಅವರ ಕೀರ್ತಿಯನ್ನು ಪ್ರತ್ಯೇಕ ಹೇಳುವ ಅಗತ್ಯವಿಲ್ಲ. ಒಂದು ರಾಷ್ಟ್ರದಲ್ಲಿ ಇಂತಹ ದುರ್ಘಟನೆಯು ನಡೆದರೆ, ಅದು ಅಲ್ಲಿನ ಆಂತರಿಕ ವಿಷಯ ಮಾತ್ರ ಆಗಿರುವುದು ಸ್ವಾಭಾವಿಕ. ಆದರೆ, ಕೆನೆಡಿ ಕೊಲೆಯು ಅಂತಾರಾಷ್ಟ್ರೀಯ ದುರ್ಘಟನೆಯೆಂದು ಹೆಸರಾಂತಿದೆ ಇದಕ್ಕೆ ಕಾರಣವೇನು?

ಅಮೆರಿಕೆ ಜಗತ್ತಿನ ಸಂಪನ್ನ ರಾಷ್ಟ್ರ. ಇಡಿಯ ವಿಶ್ವದ ಮೇಲದು ಪ್ರಭಾವ ಬೀರುತ್ತದೆ. ಸಂಪರ್ಕ ಸಾಧನಗಳು ಅಧಿಕಾಧಿಕವಾಗುತ್ತಿರುವಂತೆ ದೇಶದೇಶಗಳಲ್ಲಿ ನಿಕಟತೆ ಮೂಡುವುದರಿಂದ ಹೀಗಾಯಿತು ಎನ್ನುವುದು ಒಂದು ದೃಷ್ಟಿ. ಈ ದೃಷ್ಟಿಯು ತಪ್ಪಲ್ಲವಾದರೂ ಇದಕ್ಕಿಂತ ಭಿನ್ನವಾದ ಒಂದು ಕಾರಣವಿದೆಯೆನ್ನಲೇ ಬೇಕಾಗುತ್ತದೆ. ಕೆನೆಡಿಯವರ ವ್ಯಕ್ತಿತ್ವ ಅವರು ಅನುಸರಿಸಿದ ಕ್ರಾಂತಿಕಾರಿ ನೀತಿ ಮತ್ತು ಇಟ್ಟ ದಿಟ್ಟ ಹೆಜ್ಜೆಗಳು ಅವರಿಗೆ ಜನಪ್ರಿಯತೆಯನ್ನೂ ಅಂತಾರಾಷ್ಟ್ರೀಯತೆಯನ್ನು ತಂದು ಕೊಟ್ಟವೆ. ಅಮೇರಿಕೆಯು ಅದುವರೆಗೆ ತುಳಿದು ಬಂದ ದಾರಿಯನ್ನು ತ್ಯಜಿಸಿ ಕೆನೆಡಿಯವರು ತನ್ನದೇ ಆದ ಹೊಸ ಮಾರ್ಗವೊಂದನ್ನು ಹಿಡಿದರು; ಮತ್ತದು ರಾಜಕಸ್ತೆಯೆಂಬುದನ್ನೂ ಎಲ್ಲರೂ ಅದರಲ್ಲಿ ನಡೆಯಬಹುದೆಂಬುದನ್ನೂ ತೋರಿಸಿಕೊಟ್ಟರು. ಪೂರ್ವ-ಪಶ್ಚಿಮ ದೇಶಗಳು ಪ್ರಚ್ಛನ್ನ ಸಮರವನ್ನು ಹೂಡಿ ಪ್ರತ್ಯಕ್ಷ ಸಮರದ ಕಿಡಿಗಳನ್ನೇಳಿಸುತ್ತಿರುವಾಗ, ಸಮರ ಭೀತಿಯಿಂದ ಲೋಕವನ್ನುಳಿಸಿದರು. ಬಂಡವಾಳ ಶಾಹಿ ಮತ್ತು ಸಮ್ಯವಾದಿಗಳು ಹೊಡೆದಾಡುತ್ತಿರುವಾಗ, ಅವರಿಬ್ಬರೂ ಸಹಜೀವನ ನಡೆಸುವುದು ಸಾಧ್ಯವೆಂಬುದನ್ನು ತೋರಿಸಿಕೊಟ್ಟರು. ಶಸ್ತ್ರಾಸ್ತ್ರಗಳ ಪೋರನೆಟೆಯು ಇನ್ನೇನು ನಡೆಯುತ್ತಿದೆಯೆನ್ನುವಾಗ ನಿಶ್ಶಸ್ತ್ರೀಕರಣದ ಪ್ರಾಕ್ಷಿಕ ಒಡಂಬಡಿಕೆಯನ್ನು ಮಾಡಿ, ಸರ್ವನಾಶದಿಂದ ಜೀವನದತ್ತ ದಾರಿ ಮಾಡಿಕೊಟ್ಟರು. ಸ್ವದೇಶೀಯರಲ್ಲಿಯೇ ತಾಂಡವವಾಡುತ್ತಿದ್ದ ವರ್ಣಭೇದ ನೀತಿಯನ್ನು ಕಿತ್ತುಹಾಕಿ. ನಾಗರಿಕರೆಲ್ಲರಿಗೂ ಸಮಾನಾಧಿಕಾರವೀಯುವ ಶಾಸನವನ್ನು ಮಾಡಿದರು. ಇಂತಹ ಅನುಪಮ ನೀತಿಯನ್ನು ಅನುಸರಿಸಿದ ಕೆನೆಡಿಯವರು ತಮ್ಮ ನೀತಿಗಾಗಿಯೇ ಮೃತ್ಯುವನ್ನಪ್ಪಬೇಕಾಯಿತು.

"ಒಡಲು ಅಳಿಯುವುದು; ಅವನಿಸಾಗರವುಳಿಯುವುದು ಕೀರ್ತಿ!" ಇಂದು ಕೆನೆಡಿಯವರ ಪಂಚಭೂತ ನಿರ್ಮಿತ ಶರೀರವನ್ನು ಯಾರೋ ದುರಾತ್ಮರು ಹಾಳುಗೆಡಹಿದರು. ಆದರೆ, ಅವರು ರೂಪಿಸಿದ ಉದಾರ ನೀತಿಯನ್ನು ಮಾತ್ರ ಯಾರಿಂದಲೂ ಕೊಲ್ಲುವುದು ಸಾಧ್ಯವಿಲ್ಲ; ಅದು ಆಚಂದ್ರಾರ್ಕತಾರಾಂಬರವಾಗಿ ನಿಲ್ಲುತ್ತದೆ. ಅವರು ಪ್ರಾರಂಭಿಸಿದ ಲೋಕ ಕಲ್ಯಾಣ ಚಳವಳವನ್ನು ಹತ್ತಿಕ್ಕುವ ಕೆಚ್ಚು ಇದೆಯಾದರೂ ಯಾರಲ್ಲಿ? ಅಂತಹ ದುಷ್ಟ ಶಕ್ತಿಗಳ ಪ್ರಭಾವ ಅಷ್ಟು ಶಕ್ತಿಶಾಲಿಯಾಗಿರುವುದು ಸಾಧ್ಯವಿಲ್ಲ. ಕೆನೆಡಿಯವರ ಪಾರ್ಥಿವ ಶರೀರದ ಮೇಲೆ ಗುಂಡೆಸೆದು ಅದನ್ನು ನಿರುಪಯುಕ್ತಗೆಯ್ದ ಅವಿವೇಕಿಗಳು ಅವರ ತತ್ತ್ವ ಮತ್ತು ಸುವಿಚಾರಗಳನ್ನು ಎಂದಿಗೂ ನಾಶ ಮಾಡಲಾರರು; ಇದು ಸತ್ಯ.

ದಿ ಕೆನೆಡಿಯವರ ಪತ್ನಿ
ಶ್ರೀಮತಿ ಜಾಕೆಲಿನ್ ಕೆನೆಡಿ.

++ ++

ಕೆನೆಡಿಯವರ ಉತ್ತರಾಧಿಕಾರಿಯಾಗಿ ಬಂದಿರುವ ಲಿಂಡನ್ ಜಾನ್ಸರನ್ನು ಲೋಕವೊಂದು ಪ್ರಶ್ನೆ ಕೇಳುತ್ತದೆ—'ಕೆನೆಡಿಯವರು ತಮ್ಮ ಮಾನವತಾ ಪ್ರೇರಿತ ಉದಾರ ನೀತಿಯಿಂದ ಜಾಗತಿಕ ರಾಜಕಾರಣದಲ್ಲಿ ತೇಜೋವಂತ ತಾರೆಯಾಗಿ ಹೋದರು; ಅವರ ನೀತಿಯನ್ನು ಮುಂದೆಯೂ ಅನುಸರಿಸುವ ಅಥವಾ ಅದನ್ನು ಖಂಡರಿಸುವ ಹೊಣೆಗಾರಿಕೆ ನಿಮ್ಮ ಮೇಲಿದೆ. ನೀವು ಹೇಗೆ ನಿರ್ವಹಿಸುತ್ತೀರಿ?' ಅಮೆರಿಕೆಯ ಬಹುಮಂದಿ ಕೆನೆಡಿ ನೀತಿಯಿಂದ ಪ್ರಭಾವಿತರಾಗಿರುವುದು ನಿಜವಾದರೆ, ಜಾನ್ಸನರಾದರೂ ನಿರುಪಾಯರಾಗಿ ಅವನ್ನು ಸ್ವೀಕರಿಸಿ ಮುಂದುವರಿಯಲೇ ಬೇಕಾಗುತ್ತದೆ

ಕೆನೆಡಿ ನಡುಹರೆಯದವರು; ಪ್ರಗತಿಗಾಮಿಗಳು; ದಿಟ್ಟ ಹೆಜ್ಜೆಯಿಡುವ ಕೆಚ್ಚು ಅವರಲ್ಲಿತ್ತು. ಹೇಳಿ ಕೇಳಿ ಜಾನ್ಸನ್ ಅಷ್ಟು ಪ್ರಗತಿಗಾಮಿಯಲ್ಲ; ತುಸು ಮಂದಗಾಮಿಯೆಂದೇ ಹೇಳಬೇಕಾಗುತ್ತದೆ. ಆದರೂ ಅಧ್ಯಕ್ಷ ಪದಗಳಿಸಿದ ಅವರು, ಕೆನೆಡಿಯವರು ಅನುಸರಿಸಿದ ಉದಾರ ನೀತಿದಾರಿಗಳನ್ನೇ ತಾನೂ ತನ್ನ ದೇಶವೂ ಮೆಚ್ಚುವುದು ಎಂದವರು ಒಂದಲ್ಲ, ಹಲವು ಬಾರಿ ಘೋಷಿಸಿದ್ದಾರೆ. ಸೋವಿಯತ್ ಪ್ರಧಾನಿ ಕ್ರುಶ್ಚೇವರಿಗೆ ಕಳಿಸಿದ ಒಂದು ಪುರು ಸಂದೇಶದಲ್ಲಿ ಈ ನಿರ್ಧಾರವನ್ನು ಪುನರುಚ್ಚರಿಸಿದ್ದಾರೆ ಅಧ್ಯಕ್ಷ ಜಾನ್ಸನರು ಮಾಡಿದ ಮೊದಲ ಕಾರ್ಯವೆಂದರೆ ವಿದೇಶ ಮಂತ್ರಿ ಡೀನ್ ರಸ್ಕರನ್ನು ಕಂಡು ವಿಚಾರವಿನಿಮಯ ಮಾಡಿದುದು. ಈ ಸಮಯದಲ್ಲಿ ಕೆನೆಡಿ ನೀತಿಯು ಹೇಗೆ ಜಾಗತಿಕ ಪ್ರಶಂಸೆಗೆ ಕಾರಣವಾಯಿತು; ಮತ್ತವರ ಹಾಗೂ ಅಮೇರಿಕೆಯ ಕೀರ್ತಿಯು ವಿಶ್ವದಾದ್ಯಂತ ಪಸರಿಸಿತು ಎಂಬುದನ್ನವರು ಅರಿತು ಕೊಂಡಿರಬಹುದು. ಅದೇ ನೀ

(೬ನೇ ಪುಟ ನೋಡಿರಿ)

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. S. No 189/1963

ಕಾವೇರಮ್ಮ —ವಾದಿಳು.

ಮತ್ತು

ಸೀತಮ್ಮ ಕೂಡಾ —ಪ್ರತಿವಾದಿರು,

ಪ್ರತಿವಾದಿರು 3, ಅಪ್ಪಣ್ಣ, 4 ನಾಗೇಶ 5, ದೇವಕಿ —ಕಲ್ಲಾರೆ ತಿಂಮಪ್ಪನವರ ಮಕ್ಕಳು. 3ನೇ ಪ್ರತಿವಾದಿಯು ಮದ್ರಾಸಿನಲ್ಲಿ ಪೋಲೀಸ್ ಕೆಲ್ಸದಲ್ಲಿ ರೆಡ್‌ಹಿಲ್ ಎಂಬಲ್ಲಿಯೂ, 4 ನೇ ಪ್ರತಿವಾದಿಯು ಶಂಕರ್ ಮೋಟರ್ ಸರ್ವಿಸಿನಲ್ಲಿ ಡ್ರೈವರನಾಗಿ ಕೊಪ್ಪ ಎಂಬಲ್ಲಿಯೂ, 5ನೇ ಪ್ರತಿವಾದಿಯು ಪುತ್ತೂರು ಕಸಬಾ ಗ್ರಾಮದ ಕಲ್ಲಾರೆ ಎಂಬಲ್ಲಿಯೂ ಇರುವುದಾಗಿದೆ—

ಇವರಿಗೆ

ವಾದಿಳು ಗೇಣಬಾಕಿ ವಸೂಲಿ ಬಗ್ಗೆ ನಿಮ್ಮ ವಗೈರರ ಮೇಲೆ ಮಾಡಿದ ಮೇಲಿನ ದಾವೆಯು ನಿಮ್ಮ ಹಾಜರಾತಿ ಬಗ್ಗೂ, ವಿವಾದಾಂಶವನ್ನು ನಿರ್ಧರಿಸುವಬಗ್ಗೂ, ಪ್ರತಿವಾದಿಸಲ್ಪಡುತ್ತದೆಯಲ್ಲವೊ ಎಂದು ತಿಳಿಯುವ ಬಗ್ಗೆ ತಾರೀಕು 9-12-1963ಕ್ಕೆ ವ್ಯಾದೆಯಿರುತ್ತದೆ ನಿಮಗೇನಾದರೂ ಆಕ್ಷೇಪಣೆಯಿದ್ದರೆ ಆ ದಿವ್ಸ ಬೆಳಿಗ್ಗೆ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಉದಾಹರಿಸಿಕೊಳ್ಳತಕ್ಕದ್ದೆಂತಲೂ, ತಪ್ಪಿದರೆ ನಿಮ್ಮ ಗೈರು ಹಾಜರಿಯಲ್ಲಿ ತೈಸಲು ಮಾಡೋಣಾದೀತೆಂತಲೂ ಕೋರ್ಟಿನ ಹುಕುಂ ಪ್ರಕಾರ ನಿಮಗೆ ಈ ಮೂಲಕ ತಿಳಿಸೋಣಾಗುತ್ತಿದೆ.

(Sd.) N. Subramanyam,
Advocate for Plff.

ಮೊಕ್ಕಾಂ ಪುತ್ತೂರು, ತಾ. 23-11-63,

ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ.

14 CT ಚಿನ್ನದ ಆಭರಣಗಳಲ್ಲಿ 58⅓% ಶುದ್ಧ ಪುತ್ತೇ ಚಿನ್ನ ಇರುತ್ತವೆ.

ಬೇಕಾದಲ್ಲಿ 1 ರೂ ಕಮ್ಮಿಯಲ್ಲಿ ಯಾವಾಗಲೂ ಬಜಾರು ಧಾರಣೆಗೆ ಪಡೆಕೊಳ್ಳುವ ಭರವಸೆ ಕೊಡುತ್ತೇವೆ.

ವಿ. ಸೂ: ಹಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡೆಕೊಳ್ಳುವರೆ ಸರಕಾರದ ಲೈಸನ್ಸ್ ಸಿಕ್ಕಿರುತ್ತದೆ.

ಮದುವೆ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡೆಕೊಂಡು ಖಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.

ಶ್ರೀಕೃಷ್ಣಾ ಜ್ಯುವೆಲರಿ ಮಾರ್ಟ್

ತೆಂಕಪೇಟೆ — ಉಡುಪಿ.

ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.

ಫೋನ್ ನಂಬ್ರ: 66

ದೀರ್ಘ

ಬಾಳಿಕೆಯ

ಫೌಂಟನ್ ಪೆನ್ನುಗಳು

ಯೋಗ್ಯ ಬೆಲೆಗೆ ದೊರೆಯುವ ಸ್ಥಳ:

ವಿಜಯಾ ಪೆನ್ ಮಾರ್ಟ್

ಹಂಪನಕಟ್ಟಾ, ಮಂಗಳೂರು.

NAVAYUGA
Kannada Weekly
UDIPI
Founder:
Late Sri A. B Shetty
Former Minister for Public Health, Govt of Madras & Govt. of Mysore.

ನವಯುಗ

ವರುಷ	ಉಡುಪಿ	ವಾರ
೪೩	೫-೧೨-೧೯೬೩	೧೪

ನಾಗಾಲ್ಯಾಂಡ್

ಅಸ್ಸಾಮು ರಾಜ್ಯ ಮತ್ತು ಬ್ರಹ್ಮ ದೇಶಗಳ ನಡುವಣ ಬ್ರಹ್ಮಪುತ್ರಾ ನದಿ ಕಣಿವೆಯ ಆಯಕಟ್ಟಿನ ಪರ್ವತ ಪ್ರದೇಶ "ನಾಗಾಲ್ಯಾಂಡ್" ಎಂಬ ಹೆಸರಿನಿಂದ ಇದೇ ಮೊದಲನೆಯ ದಿನಾಂಕದಂದು ಪ್ರತ್ಯೇಕ ರಾಜ್ಯದ ರೂಪವನ್ನು ಪಡೆದು ಭಾರತ ಒಕ್ಕೂಟದ ಹದಿನಾರನೆಯ ರಾಜ್ಯವಾಯಿತು. ಇದರಿಂದಾಗಿ ಬಹುಕಾಲದಿಂದಲೂ ಎದ್ದು ಬರುತ್ತಿದ್ದ ನಾಗಾ ಜನರು ಭಾರತದ ಒಕ್ಕೂಟದಲ್ಲಿಯೇ ಉಳಿದುಕೊಂಡು ತಮ್ಮ ಉನ್ನತಿಯನ್ನು ತಮಗೆ ಉಚಿತ ಕಂಡಂತೆ ಮಾಡಿಕೊಳ್ಳುವ ಅವಕಾಶವನ್ನು ಪಡೆಯುವಂತಾಯಿತು. ಸದ್ಯ ಈ ಹೊಸ ರಾಜ್ಯಕ್ಕೆ ಪ್ರತ್ಯೇಕ ರಾಜ್ಯಪಾಲರಾಗಲೀ ಉಚ್ಚ ನ್ಯಾಯಾಲಯವಾಗಲೀ ಇರುವುದಿಲ್ಲ. ಅಸಾಮದ ರಾಜ್ಯಪಾಲರೇ ಇಲ್ಲಿನ ರಾಜ್ಯಪಾಲರಾಗಿದ್ದಾರೆ; ಮತ್ತು ಶಿಲ್ಲಾಂಗಿನ ಅಸಾಮ ರಾಜ್ಯದ ಉಚ್ಚ ನ್ಯಾಯದ ಅಧಿಕಾರ ಕಕ್ಷೆಯೊಳಗೆ ನಾಗಾಲ್ಯಾಂಡ್ ಬರುತ್ತದೆ. ಹಾಗಿದ್ದರೂ ೬೦ ಜನ ಚುನಾಯಿತ ಸದಸ್ಯರಿರುವ ಒಂದು ವಿಧಾನ ಸಭೆಯೂ ಇದಕ್ಕೆ ಜವಾಬುದಾರವಾದ ಮಂತ್ರಿಮಂಡಳಿಯೂ ಇರುವುವು. ಲೋಕ ಸಭೆ ಮತ್ತು ರಾಜ್ಯ ಸಭೆಗಳಿಗ ಒಬ್ಬೊಬ್ಬನಂತೆ ಪ್ರತಿನಿಧಿಯನ್ನು ಜನತೆಯು ಆಯ್ದು ಕಳಿಸುವುದು. ಸದ್ಯ ಅಧಿಕಾರದಲ್ಲಿರುವ ಆಡಳಿತ ಮಂಡಳಿಯೇ ಮುಂದುವರಿಯುವುದಾದರೂ ಮುಂದಿನ ತಿಂಗಳಲ್ಲಿ ವಯಸ್ಕ ಮತದಾನದ ಪದ್ಧತಿಯಲ್ಲಿ ಇಲ್ಲಿ ಚುನಾವಣೆಗಳು ನಡೆಯುವುವು. ಅಂದಿನಿಂದ ನಾಗಾಲ್ಯಾಂಡು ಭಾರತದ ಇತರ ರಾಜ್ಯಗಳ ಸ್ಥಾನಮಾನಗಳನ್ನು ಸಂಪೂರ್ಣವಾಗಿ ಪಡೆಯುವುದು.

ನಾಗಾಲ್ಯಾಂಡು ಭಾರತದ ಅತಿ ಚಿಕ್ಕ ರಾಜ್ಯ. ಅದರ ವಿಸ್ತಾರವು ಸುಮಾರು ಆರೂವರೆ ಸಾವಿರ ಚದರ ಮೈಲುಗಳು, ಇಲ್ಲಿನ ಜನಸಂಖ್ಯೆಯು ಬರೇ ನಾಲ್ಕು ಲಕ್ಷ. ಆದರೆ, ಇಲ್ಲಿನ ನಾಗರಿಕರು ಹಲವಾರು ಬುಡಕಟ್ಟುಗಳಿಗೆ ಸೇರಿದ್ದಾರೆ, ಹಲವಾರು ಭಾಷೆಗಳನ್ನು ಆಡುತ್ತಾರೆ. ಸ್ವಭಾವತಃ ಯುದ್ಧಪ್ರಿಯರಾದ ಇವರು ಬ್ರಿಟಿಷ ಆಡಳಿತಾವಧಿಯಲ್ಲಿ ಮತ್ತಷ್ಟು ಉತ್ಸಾಹಿತರಾದರು. ಈ ಕಾರಣದಿಂದಲೇ ಭಾರತವು ಸ್ವತಂತ್ರವಾದ ಮೇಲೆ ಪ್ರತ್ಯೇಕ ಸ್ವತಂತ್ರ ರಾಜ್ಯದ ಕನಸನ್ನು ಕಂಡ ಕೆಲವು ಬಂಡುಗಾರರು ಫಿಜೋನ ಮಾರ್ಗದರ್ಶನದಲ್ಲಿ ಅಶಾಂತಿಗೆ ಕಾರಣೀಭೂತರಾದರು. ಆದರೆ, ಭಾರತ ಸರಕಾರವು ಬಂಡುಗಾರರನ್ನು ಹತ್ತಿಕ್ಕಿ ನಾಗಾಜನರು ಬೇಕೆಂಬಷ್ಟು ಅಭಿವೃದ್ಧಿ ಹೊಂದುವುದಕ್ಕೆ ಅನುಕೂಲತೆಯನ್ನು ಒದಗಿಸುವ ಸಂಕಲ್ಪ ಮಾಡಿತು. ಇದರ ಪರಿಣಾಮವಾಗಿಯೇ ನಾಗಾಲ್ಯಾಂಡು ಕೇಂದ್ರಾಧೀನ ಪ್ರದೇಶವಾಯಿತು, ಅಲ್ಲಿನ ಆಡಳಿತೆಯು ಸಲಹಾ ಮಂಡಳಿಯೊಂದರ ಮೂಲಕ ನಡೆಯತೊಡಗಿತು. ಹೀಗಾಗಿ ಭಾರತ ಸರಕಾರದ ಕಾರ್ಯ ವಿಧಾನದಲ್ಲಿ ವಿಶ್ವಾಸ ತಾಳಿದ ನಾಗಾ ಜನರು ಕಾಲಕ್ರಮದಲ್ಲಿ ತಮ್ಮ ವಿಧ್ವಂಸಕ ಚಟುವಟಿಕೆಗಳನ್ನು ದೂರ ಮಾಡುತ್ತ ಬಂದಿದ್ದಾರೆ, ಇನ್ನು ಅತ್ಯಲ್ಪ ಕಾಲದಲ್ಲಿಯೇ ಅಲ್ಲಿ ಸಂಪೂರ್ಣ ಶಾಂತತೆಯೂ ಪ್ರಜಾಸತ್ತೆಯೂ ಸ್ಥಾಪಿತಗೊಳ್ಳುವುದೆಂದು ನಂಬಲು ಅವಕಾಶವಿದೆ.

ತಮ್ಮದಾದ ಹೊಸ ರಾಜ್ಯದಲ್ಲಿ ನಾಗಾ ಜನರು ತುಂಬ ಉತ್ಸಾಹ ತೋರಿಸುತ್ತಾರೆ. ಇದಕ್ಕೆ ಅದರ ಉದ್ಘಾಟನಾ ಸಮಾರಂಭದಲ್ಲಿ ಅವರು ತೋರಿಸಿದ ಅಪೂರ್ವ ಆಸಕ್ತಿಯೇ ದ್ಯೋತಕ. ದೇಶದ ಸೀಮಾ ಪ್ರದೇಶದಲ್ಲಿರುವ ನಾಗಾಲ್ಯಾಂಡು ರಾಜಕೀಯ ಕಾರಣಗಳಿಂದಾಗಿ ಹಿಂದೆ ಅಭಿವೃದ್ಧಿಗೊಂಡಿರಲಿಲ್ಲ. ಆದರೆ ರಾಷ್ಟ್ರ ರಕ್ಷಣಾ ಪ್ರಣಾಳಿಕೆಯು ವೈಜ್ಞಾನಿಕ ಆವಿಷ್ಕಾರಗಳಿಂದ ಪರಿವರ್ತಿತವಾದುದರಿಂದ ಇಂದು ಪ್ರತಿ ಪ್ರದೇಶವೂ ಉನ್ನತಿ ಹೊಂದುವುದು ಅಗತ್ಯವಾಗಿದೆ. ಈ ದಿಸೆಯಲ್ಲಿ ಈಗಾಗಲೇ ಭಾರತ ಸರಕಾರವು ಕಾರ್ಯಪ್ರವರ್ತವಾಗಿತ್ತು. ಆರೋಗ್ಯ, ಸಾರಿಗೆ, ಶಿಕ್ಷಣ ಸೌಕರ್ಯಗಳನ್ನು ಉದಾರವಾಗಿ ಅದು ಒದಗಿಸಿತ್ತು, ಮತ್ತು ಇದರಿಂದಾಗಿಯೇ ಭಾರತ ಸರಕಾರದ ಮೇಲೆ ನಾಗಾ ಬಂಡುಗಾರರಿಗೆ ವಿಶ್ವಾಸ ಹುಟ್ಟಿತು ಎಂದೂ ಹೇಳಬಹುದು. ನಾಗಾಲ್ಯಾಂಡಿನಲ್ಲಿ ಪ್ರತಿಯೊಬ್ಬನ ಸರಾಸರಿ ಆದಾಯ ವಾರ್ಷಿಕ ಮೂರು ರೂಪಾಯಿಗಳಿಗಿಂತ ತುಸು ಹೆಚ್ಚು, ವೆಚ್ಚವು ಆದಾಯದ ನಾಲ್ಕು ಪಾಲಷ್ಟಿದೆ. ಈ ಕೊರತೆಯನ್ನು ಕೇಂದ್ರವೇ ತುಂಬಿಸಿ ಕೊಡುತ್ತಿದೆ, ಈ ಪರಂಪರೆಯು ಇನ್ನೂ ಕೆಲವು ಕಾಲ ನಡೆದುಕೊಂಡು ಬರಬೇಕಾಗಬಹುದು. ನಾಗರಿಕ ಸೌಕರ್ಯಗಳಲ್ಲಿಯೂ ಉತ್ಪನ್ನಾದಿ ಹೆಚ್ಚಳದಲ್ಲಿಯೂ ಸಾಕಷ್ಟು ಪ್ರಗತಿ ಹೊಂದಿದ ಬಳಿಕ, ನಾಗಾಲ್ಯಾಂಡು ಭಾರತದ ಇತರ ಯಾವುದೇ ರಾಜ್ಯಕ್ಕೆ ಕಡಿಮೆಯಾಗಿ ನಿಲ್ಲಲಾರದು. ಹೀಗೆ ದೇಶದಲ್ಲಿಯೇ ಅತ್ಯಂತ ಹಿಂದುಳಿದಿರುವ ಪ್ರದೇಶವೊಂದನ್ನು ಮುಂದೆತರುವ ಈ ಯೋಜನೆಯ ಲಾಭವನ್ನು ನಾಗಾ ನಾಗರಿಕರು ಸದುಪಯೋಗ ಪಡಿಸಿಕೊಳ್ಳುವುದು ಅಗತ್ಯ. ಇದು ಸಾಧ್ಯವೂ ಹೌದು. ಇದಕ್ಕೆ ಅಡಗಿಕೊಂಡಿರುವ ನಾಗಾ ಬಂಡುಗಾರರು ಒಬ್ಬೊಬ್ಬರಾಗಿಯೇ ಬೆಳಕಿಗೆ ಬಂದು, ಈ ನೀತಿಯನ್ನು ಒಪ್ಪುತ್ತಿರುವುದೇ ನಿದರ್ಶನ. ನಾಗಾ ಜನರು ಇದುವರೆಗೆ ಪ್ರತ್ಯೇಕ ಜನಾಂಗವೆಂಬಂತೆ ಬೆಳೆದು ಬಂದಿದ್ದರೂ ಅವರು ಒಂದಾಗಿ ಬಾಳುವ ದಿನ ಬಂದಿದೆ. ಸದ್ಯ ಮುಖ್ಯಮಂತ್ರಿಯಾಗಿರುವ ಶೀಲುಆವ್ ಸರಕಾರವು ಈ ಸಮಬಾಳ್ವೆಯ ಯಶಸ್ವೀ ನಾಯಕರಾಗುವ ಸಂಭವವಿದೆ.

ಬಾಗಿಲು ತೆರೆಯಿರಿ

ಕೇಂದ್ರ ಸರಕಾರದಲ್ಲಿ ಶಿಕ್ಷಣ ಮಂತ್ರಿಯೆಂದು ನಿಯುಕ್ತರಾದ ಶ್ರೀ ಎಂ. ಸಿ. ಛಾಗ್ಲ ಅವರು ಶಿಕ್ಷಣದ ಸುಧಾರಣೆಯಲ್ಲಿ ತುಂಬ ಆಸಕ್ತಿ ತೋರಿಸುವಂತ ಭಾಸವಾಗುತ್ತದೆ. ಮಾಧ್ಯಮಿಕ ಶಾಲಾ ಶಿಕ್ಷಣಾಂತ್ಯದಲ್ಲಿ ನಡೆಯುವ ಪರೀಕ್ಷೆಗಳಲ್ಲಿ ಅಧಿಕ ಸಂಖ್ಯಾಕ ವಿದ್ಯಾರ್ಥಿಗಳು ಅನುತ್ತೀರ್ಣರಾಗುತ್ತಿರುವುದರ ಬಗ್ಗೆ ಅವರು ಕಳವಳ ವ್ಯಕ್ತಪಡಿಸಿ, ಇದರಿಂದ ಮಾನವ ಸಂಪತ್ತಿನ ಭೀಕರ ಅಪವ್ಯಯವಾಗುವುದೆಂದು ಹೇಳುತ್ತಾರೆ. ಇದಕ್ಕಾಗಿ ಪರೀಕ್ಷಾಕ್ರಮಗಳಲ್ಲಿ ಸುಧಾರಣೆ ಬೇಕೆನ್ನುತ್ತಾರೆ. ಇವರು ಪರೀಕ್ಷೆಗಳು ವಿದ್ಯಾರ್ಥಿಯ ಸ್ಮರಣ ಶಕ್ತಿಯನ್ನು ಪರೀಕ್ಷಿಸುವುದಲ್ಲ, ಅಥವಾ ಕೇವಲ ಮಾಹಿತಿ ಪಡೆಯುವುದೂ ಅಲ್ಲ. ಆತನ ಯೋಗ್ಯತೆ ಮತ್ತು ಸಾಮರ್ಥ್ಯಗಳನ್ನು ಅಳೆಯುವಂತಿರಬೇಕು. ಇದಕ್ಕಾಗಿ ಒಂದು ಪರೀಕ್ಷೆಯಿಂದ ಆತನ ಭವಿಷ್ಯ ನಿರ್ಧರಿಸದೆ ಆತನ ನಿರೀಕ್ಷಣಾ ಸಾಮರ್ಥ್ಯ ಮತ್ತು ಜ್ಞಾನ ಸಂಗ್ರಹ ಶಕ್ತಿಯನ್ನು ಪರಿಶೀಲಿಸಬೇಕು—ಎನ್ನುತ್ತಾರೆ ಅವರು. ತರಗತಿಯಲ್ಲಿ ಮತ್ತು ನಿಯತ ಕಾಲಿಕ ಪರೀಕ್ಷೆಗಳಲ್ಲಿ ಆತನು ಸಾಧಿಸುವ ಪ್ರಗತಿಯನ್ನು ಪರಿಗಣಿಸಬೇಕು, ಅಥವಾ ಮೌಖಿಕ ಪರೀಕ್ಷೆ ನಡೆಸಬೇಕು ಎಂಬ ಎರಡು ಪರೀಕ್ಷಾ ವಿಧಾನಗಳನ್ನು ಶ್ರೀ ಅವರು ಸೂಚಿಸಿದ್ದಾರೆ. ಸರ್ವ ಸಾಮಾನ್ಯವಾಗಿ ಶಾಲಾ ಪರೀಕ್ಷೆಗಳಲ್ಲಿ ಮೊದಲಿನ ವಿಧಾನವನ್ನೇ ಅನಧಿಕೃತವಾಗಿ ಅನುಸರಿಸಲಾಗುತ್ತಿದೆ; ಆದರೆ, ಸರಕಾರಿ ಪರೀಕ್ಷೆಗಳ ವಿಧಾನ ಹಾಗಿಲ್ಲ. ಶಿಕ್ಷಣವು ರಾಜ್ಯ ಸರಕಾರದ ಕಕ್ಷೆಯಲ್ಲಿ ಬರುವ ವಿಷಯವಾದುದರಿಂದ ನಮ್ಮ ರಾಜ್ಯ ಸರಕಾರಗಳು ಈ ಸಲಹೆಗಳತ್ತ ಅವಶ್ಯ ಗಮನ ಹರಿಸಬೇಕಾಗಿದೆ. ಮಾಧ್ಯಮಿಕ ಶಿಕ್ಷಣಾಂತ್ಯದ ಪರೀಕ್ಷೆಯೊಂದರಲ್ಲಿ ಉತ್ತೀರ್ಣನಾದವನಿಗ ಜೀವನರಂಗದ ಹೆಬ್ಬಾಗಿಲುಗಳು ತೆರೆಯುತ್ತವೆಯಾದುದರಿಂದ, ಇತ್ತಕಡೆಗೆ ಎಷ್ಟು ಬೇಗನೇ ದೃಷ್ಟಿ ಹರಿಯುತ್ತದೆಯೋ ಅಷ್ಟು ಕ್ಷೇಮಕರವೆನ್ನಬಹುದು.

ನಿಷ್ಠಾವಂತ ಕಾಂಗ್ರೆಸಿಗ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆ



ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆಯವರು ಜಿಲ್ಲೆಯ ಹಳೆಯ ಕಾಂಗ್ರೆಸಿಗರಲ್ಲಿ ಒಬ್ಬರು. ಉಡುಪಿ ತಾಲೂಕಿನಲ್ಲಿ ಶಾಂತ್ಯಾರು ಅನಂತ ಪದ್ಮನಾಭ ಭಟ್ಟ, ಮಾಂಗಾಳ ಲಕ್ಷ್ಮೀನಾರಾಯಣ ನಾಯಕ್, ಬಿ. ಸದಾಶಿವ ಹೆಗ್ಡೆ, ಸಿ. ಎ. ಪೈ, ಕೆ. ಶೆಟ್ಟಿ, ಮಾಂಗಾಳ ಮಂಜುನಾಥ ನಾಯಕ್ ಮೊದಲಾದವರು ಕಾಂಗ್ರೆಸ್ ತತ್ತ್ವ ಮತ್ತು ಗಾಂಧೀ ವಿಚಾರಗಳನ್ನು ಭರದಿಂದ ಪ್ರಚಾರ ಮಾಡಿದವರ, ವಿಧಾಯಕ ಕಾರ್ಯಕ್ರಮಗಳನ್ನು ಕೈಕೊಂಡವರು. ಹಿ. ರಾಮರಾಯ ಮಲ್ಯ ಮತ್ತು ಎಸ್. ಯು. ಪಣಿಯಾಡಿಯವರೂ ಈ ಕಾರ್ಯಗಳನ್ನು ಉತ್ಸಾಹದಿಂದ ಮುಂದುವರಿಸಿದರು. ಆ ಸಮಯದಲ್ಲಿ ಪಣಿಯಾಡಿಯವರ ಬಲಗೈ ಬಂಟರಾಗಿ ಹಗಲಿಗೆ ಹೆಗಲು ಕೊಟ್ಟು ಕಾಂಗ್ರೆಸಿಗರಾಗಿ ದುಡಿದವರಲ್ಲಿ ಕೃಷ್ಣಯ್ಯ ಹೆಗ್ಡೆಯವರು ಅಗ್ರಗಣ್ಯರು. ಕಾಂಗ್ರೆಸ್ ಹೂಡಿದ ಸ್ವಾತಂತ್ರ್ಯ ಆಂದೋಲನದಲ್ಲಿ ಭಾಗವಹಿಸಿದ ಕಾರಣದಿಂದ ತುರುಂಗವಾಸವನ್ನೂ ಇವರು ಅನುಭವಿಸಿದ್ದರು. ಅಂದಿನಿಂದ ಇಂದಿನ ವರೆಗೂ ಕಾಂಗ್ರೆಸ್ ಸಂಸ್ಥೆಗಾಗಿ ದುಡಿಯುತ್ತಿರುವ ಹೆಗ್ಡೆಯವರು ಅಧಿಕಾರವನ್ನು ಎಂದೂ ಬಯಸಿದವರಲ್ಲ, ಅದರ ಆಕಾಂಕ್ಷೆಯೂ ಅವರಲ್ಲಿಲ್ಲ. ಅವರಲ್ಲಿ ಅಧಿಕಾರಕ್ಕೆ ಅಂಟಿಕೊಳ್ಳುವ ಹವ್ಯಾಸವಿರುತ್ತಿದ್ದರೆ, ಇಷ್ಟರಲ್ಲಿಯೇ ಮಹತ್ವದ ಸ್ಥಾನವನ್ನು ಗಳಿಸುತ್ತಿದ್ದರು. ಆದರೆ, ತಾಲೂಕು ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ, ಜಿಲ್ಲಾ ಕಾಂಗ್ರೆಸಿನ, ಜಿಲ್ಲಾ ಬೋರ್ಡಿನ ಹಾಗೂ ಪ್ರಾಂತಿಕ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿ ಅಯಾಚಿತವಾಗಿ ಬಂದ ಅವಕಾಶವನ್ನು ಸದುಪಯೋಗ ಪಡಿಸಿ, ತಮ್ಮ ಕೈಲಾದ ಸೇವೆಯನ್ನು ಜನತೆಗೆ ಅರ್ಪಿಸಿದ್ದಾರೆ. ಕಾಂಗ್ರೆಸಿನ ಪ್ರತಿ ವಿಧಾಯಕ ಕಾರ್ಯಕ್ರಮಗಳಲ್ಲಿಯೂ ಆಸಕ್ತಿಯಿಂದ ಭಾಗವಹಿಸಿದ್ದಾರೆ. ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಅವರ ಉತ್ಸಾಹ ಇಂದಿಗೂ ಕಡಿಮೆಯಾಗಿಲ್ಲ. ಮಿತಭಾಷಿ, ಜನಸಿಸಿದ ಹೆಗ್ಡೆಯವರು ಗಾಂಧೀತತ್ತ್ವಾನುವರ್ತಿಗಳು; ಜಿಲ್ಲೆಯ ಹಳೆಯ ಕಾಂಗ್ರೆಸಿಗರಲ್ಲಿ ಒಬ್ಬರು. ಕಾಂಗ್ರೆಸಿಗರಲ್ಲಿ ಇಂದು ತೋರಿಬರುತ್ತಿರುವ ಅಧಿಕಾರದಾಹವನ್ನು ಇವರು ಎಂದಿಗೂ ಒಪ್ಪುವುದಿಲ್ಲ. ತಮ್ಮ ಕೈಗೆಬಂದ ಅಧಿಕಾರವನ್ನು ಕಾಂಗ್ರೆಸಿಗರು ಜನತೆಯ ಒಳಿತಿಗಾಗಿ ಉಪಯೋಗಿಸಬೇಕು ಎನ್ನುತ್ತಾರೆ ಇವರು. ಕಾಂಗ್ರೆಸ್ ಪಕ್ಷದಲ್ಲಿ ಇಂದು ಕಂಡುಬರುತ್ತಿರುವ ಲೋಪದೋಷಗಳ ಬಗ್ಗೆ ಮತ್ತು ಪಕ್ಷ ಸಂಘಟನೆಯ ಶಿಥಿಲತೆಯ ಕುರಿತಾಗಿ ಇವರು ವಿಮರ್ಶನೆಯನ್ನು ವ್ಯಕ್ತಪಡಿಸುತ್ತಾರೆ. ಕಾಂಗ್ರೆಸ್ಸು ಜನತೆಯ ಹೃದಯವನ್ನು ಆಕರ್ಷಿಸಿ ಅವರಿಗೆ ಬೇಕಾಗುವ ರೀತಿಯಲ್ಲಿ ಆಡಳಿತೆ ನಡೆಸಬೇಕು, ಜನತಾ ಸರಕಾರವೆಂದರೆ ಇದೇ ಅಲ್ಲವೆ? ಎನ್ನುತ್ತಾರೆ ಅವರು. ಗಾಂಧೀತತ್ತ್ವಗಳನ್ನು ನಿರಂತರ ಪ್ರತಿಪಾದಿಸುತ್ತಿರುವ ಹೆಗ್ಡೆಯವರು ನಿರಾಡಂಬರ ಮತ್ತು ಸರಳ ವ್ಯಕ್ತಿ. ಇವರ ಅಭಿಪ್ರಾಯಗಳು ಇಂದಿನ ಕಾಂಗ್ರೆಸಿಗರಿಗೆ ಮಾರ್ಗದರ್ಶನವಾಗಬಲ್ಲವು. ಸದ್ಯ ಹೆಗ್ಗ ಸಹಕಾರಿ ವ್ಯವಸಾಯ ಬ್ಯಾಂಕಿನ ಅಧ್ಯಕ್ಷರಾಗಿ ಗ್ರಾಮೀಣ ಜನತೆಯ ಪ್ರಗತಿಗಾಗಿ ದುಡಿಯುತ್ತಿದ್ದಾರೆ.

ಅಲ್ಲಲ್ಲಿಯ ಸುದ್ದಿಸಾರ

ಶಿರ್ವದಲ್ಲಿ ಸತ್ಕಾರ ಸಮಾರಂಭ— ತಾ. 22-11-63ರಂದು ಶಿರ್ವ ಚೋರಲ್ ಫಂಡ್ ಆಸ್ಪತ್ರೆಯಲ್ಲಿ ಇತ್ತೀಚೆಗೆ ರಶ್ಯಾದ ಮೋಸ್ಕೋದಲ್ಲಿ ಜರಗಿದ ಭಾರತೀಯ ವಸ್ತು ಪ್ರದರ್ಶನದಲ್ಲಿ ಭಾರತವನ್ನು ಉಣ್ಣೆ ಬಟ್ಟೆಯ ಉದ್ಯಮದ ಪರವಾಗಿ ಪ್ರತಿನಿಧಿಕರಿಸಿದ್ದ ಅಲ್ಲದೆ ಈ ಉದ್ಯಮದಲ್ಲಿಹಲವು ಬಾರಿ ಪರದೇಶ ಪ್ರವಾಸ ಕೈಕೊಂಡಿದ್ದು ಈ ಊರಿನವರೇ ಆಗಿ ಸ್ವಪ್ರಯತ್ನದಿಂದ ವಿದ್ಯಾರ್ಜನೆ ಗೈದು ತನ್ನ ಕಾರ್ಯದಕ್ಷತೆಯಿಂದ ಪ್ರಕೃತ "ಶ್ರೀ ದಿನೇಶ ಊಲನ್ ಮಿಲ್ಸ್ ಲಿಮಿಟೆಡ್" ಥರೋಡ ಇದರ ಮ್ಯಾನೇಜರಾದ ಶ್ರೀ ಯಸ್. ಜಿ. ಕೆ. ಶೆಟ್ಟಿಯವರನ್ನು, ಸತ್ಕರಿಸುವರೇ ಸ್ಥಳೀಯ ಆಸ್ಪತ್ರೆಯ ಮೆಡಿಕಲ್ ಆಫೀಸರ್ ಡಾ| ಕೆ. ಆರ್. ವೆಂಕಟಕೃಷ್ಣನವರು ಒಂದು ಸತ್ಕಾರ ಕೂಟವನ್ನು ವೆ. ರೆ. ಫಾ. ಯಚ್. ಗೊನ್ಸಾಲ್ವಿಸರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದರು. ಪ್ರಾರಂಭದಲ್ಲಿ ಆಸ್ಪತ್ರೆಯ ಮೆಡಿಕಲ್ ಆಫೀಸರರವರು ಶ್ರೀ ಶೆಟ್ಟರನ್ನು ಸ್ವಾಗತಿಸುತ್ತಾ ಶಿರ್ವದಲ್ಲಿ ಇತ್ತೀಚೆಗೆ ಸ್ಥಾಪಿತವಾದ ಮೆಡಿಕಲ್ ರಿಲೀಫ್ ಎಸೋಸಿಯೇಶನಿನ ಘನ ಉದ್ದೇಶವನ್ನು ವಿವರಿಸಿ, ಈ ಊರಿನವರೇ ಆದ ಶ್ರೀ ಶೆಟ್ಟರಿಂದ ಎಲ್ಲಾ ವಿಧದ ಸಹಕಾರವನ್ನು ಕೊಡಬೇಕೆಂದು ವಿನಂತಿಸಿ ಅವರಿಗೆ ಒಂದು ಮಾನಪತ್ರವನ್ನು ಸಮರ್ಪಿಸಿದರು. ಸಭಿಕರ ಪರವಾಗಿ ಉಡುಪಿ ತಾಲೂಕು ಬೋರ್ಡ್ ಉಪಾಧ್ಯಕ್ಷ ಡಾ| ಯು ಕೆ ಆಚಾರ್ಯ, ಸರ್ವಶ್ರೀಗಳಾದ ಯಲ್. ಮೆಂಡೋನ್ಸಾ, ಬಿ. ಜಯರಾಮ ಶೆಟ್ಟಿ, ಕೆ. ಯಂ. ಹೊಳ್ಳ ಮೊದಲಾದವರು ಭಾಷಣ ಮಾಡಿದರು ಶ್ರೀ ಶೆಟ್ಟರು ತನಗಿತ್ತ ಸತ್ಕಾರಕ್ಕೆ ಕೃತಜ್ಞತೆಯನ್ನು ಸಲ್ಲಿಸಿ ಮಾನಪತ್ರಕ್ಕೆ ಉತ್ತರಿಸುತ್ತಾ ತನ್ನ ಊರಿನ ಆಸ್ಪತ್ರೆಯ ಏಳಿಗೆಗೆ ತನ್ನಿಂದ ಕೈಲಾದಷ್ಟು ಸಹಾಯವನ್ನು ನೀಡುವೆನೆಂದು ಭರವಸೆಯಿತ್ತರು. ಕೊನೆಗೆ ಲಘು ಉಪಹಾರವಾಗಿ ಮುಖ್ಯ ಅತಿಥಿಗಳೊಡನೆ ನೆರೆದ ಮಹನೀಯರ ಭಾವಚಿತ್ರ ತೆಗೆದನಂತರ ಶ್ರೀ ಕೆ. ಆರ್. ಹೆಗ್ಡೆಯವರ ಧನ್ಯವಾದ ಸಮರ್ಪಿಸಿದರು

ಕರಿಯಪ್ಪನವರ ನೇಪಾಳ ಸಂದರ್ಶನ— ಭಾರತದ ಕ್ಷಯರೋಗ ಸಮಿತಿಯ ಕಾರ್ಯದರ್ಶಿಗಳೂ ಅಂತರಾಷ್ಟ್ರೀಯ ಕ್ಷಯರೋಗ ನಿರೋಧಕ ಯೂನಿಯನಿನ ಈಸ್ಟರ್ನ್ ರೀಜನಲ್ ಕಮಿಟಿಯ ಕಾರ್ಯದರ್ಶಿ ಹಾಗೂ ಕೋಶಾಧಿಕಾರಿಗಳೂ ಆದ ಶ್ರೀ ಬಿ ಯಂ. ಕರಿಯಪ್ಪನವರು ನೇಪಾಳ ಕ್ಷಯರೋಗ ಸಮಿತಿ, ಕಟ್ಮಂಡು ಇದರ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸುವುದಕ್ಕೂ ಕ್ಷಯ ಮತ್ತು ಹೃದ್ರೋಗಗಳ ಕುರಿತಾದ ಪರಿಷತ್ತಿಗೂ ನವಂಬರ್ 22ರಂದು ನೇಪಾಳಕ್ಕೆ ಸಂದರ್ಶನವಿತ್ತರು. ನೇಪಾಳದ ರಾಜ ಮಹೇಂದ್ರರವರು ಇದನ್ನು ಉದ್ಘಾಟಿಸಿದರು.

ಸರೋಜಿನಿ ಸ್ತ್ರೀ-ಶಿಶು ಸೇವಾ ಸಮಾಜದ ವಾರ್ಷಿಕೋತ್ಸವ— ಕಳೆದ ತಾ 23ರಂದು ಮುಲ್ಕಿಯ ಸರೋಜಿನಿ ಸ್ತ್ರೀ-ಶಿಶು ಸೇವಾ ಸಮಾಜದ ದ್ವಿತೀಯ ವಾರ್ಷಿಕೋತ್ಸವವು ನಿಯೋಜಿತ ಅಧ್ಯಕ್ಷರಾದ ಶ್ರೀಮತಿ ವಸಂತಲತಾ ಮಿಜಾರ್ಕರ್ ಗೈರು ಹಾಜರಿಯಲ್ಲಿ ಬಾಸೆಲ್ ಮಿಶನ್ ಚರ್ಚಿನ ಕುಮಾರಿ ಎಟ್ವಿನ್ ಹೋಫರ್ ಇವರ ಅಧ್ಯಕ್ಷತೆಯಲ್ಲಿ ಜರಗಿತು.

ಬೆಳಿಗ್ಗೆ ಧ್ವಜಾರೋಹಣವು ತಾರಗಣೇಶ ಶೆಟ್ಟಿಯವರಿಂದ ನೆರವೇರಿಸಲ್ಪಟ್ಟಿತು, ವಸ್ತು ಪ್ರದರ್ಶನದ ಉದ್ಘಾಟನೆಯನ್ನು ಕಲ್ಯಾಣಿ ಡಿ. ಶೆಟ್ಟಿಯವರು ಜರಗಿಸಿದರು

ಮಧ್ಯಾಹ್ನದ ಕಾರ್ಯಕ್ರಮವು ಮಿಸ್ ಎಟ್ವಿನ್ ಹೋಫರ್ ಅಧ್ಯಕ್ಷತೆಯಲ್ಲಿ ಪ್ರಾರಂಭವಾದಾಗ, ಡಾ ಸಂಜೀವನಾಥರು ಕೆನಡಿಯವರ ನಿಧನದ ಕುರಿತು ಸಭೆಯ ಮುಂದಿಡಲು ಸಂತಾಪ ಸೂಚಕ ಠರಾವು ಮಂಜೂರಾಯಿತು. ಸಮಾಜದ ಅಧ್ಯಕ್ಷರಾದ ಭವಾನಿ ಯಸ್. ಶೆಟ್ಟಿಯವರು ಭಾಷಣ ಮಾಡಿದರು. ಕಾರ್ಯದರ್ಶಿ ಕುಮಾರಿ ಕೆ. ಕುಂದರ್‌ರವರು ಸಮಾಜದ ಗತವರ್ಷದ ವರದಿಯನ್ನೂ, ಕಾರ್ನಾಡ್ ಸದಾಶಿವ ರಾವ್ ಸ್ಮಾರಕ ಸೇವಾಶ್ರಮದ ಪರವಾಗಿ ಕಾರ್ಯದರ್ಶಿ ಡಾ. ಸಂಜೀವನಾಥ್ ಐಕಳ ಎಂ. ಎಲ್ ಎ. ರವರು ಸಮಾಜದ [illegible] ವಿವರವನ್ನೂ ಸಭೆಯ ಮುಂದಿಟ್ಟರು. ಅತಿಥಿಗಳಾಗಿ ಆಗಮಿಸಿದ ಡಾ ಭಟ್ಟಾಚಾರ್ಯ ಡೈರೆಕ್ಟರ್ ಆಫ್ ಫಿಶರೀಸ್ (ಕೇಂದ್ರ ಸರಕಾರ) ಇವರು ಸ್ತ್ರೀಯರ ಕರ್ತವ್ಯ ಜವಾಬ್ದಾರಿ ಸ್ಥಾನಮಾನಗಳ ಕುರಿತೂ ಕುಮಾರಿ ಸೀತಾರಾಮ ಅಡಿಗರು ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀಯರ ಬಗ್ಗೆ ಆದರ ಗೌರವಗಳ ಕುರಿತೂ ಭಾಷಣವನ್ನು ಕೊಟ್ಟರು.

ಹೆಜಮಾಡಿ ರಾಮಚಂದ್ರ ಶೆಟ್ರು ಸಮಾಜದ ಚಟುವಟಿಕೆಗಳ ಕುರಿತು ಪ್ರಶಂಸಿಸಿ ಮಾತನಾಡಿದರು. ಅಧ್ಯಕ್ಷರು ಕನ್ನಡದಲ್ಲಿ ಮಾತನಾಡಿ ಈ ಸಮಾಜದ ಚಟುವಟಿಕೆಗಳನ್ನು ಶ್ಲಾಘಿಸಿ ಸಮಾಜಕ್ಕೆ ಶ್ರೇಯಸ್ಸುಂಟಾಗಲೆಂದು ಹಾರೈಸಿದರು ಈ ಸಭೆಗೆ ವಿಶೇಷ ಅತಿಥಿಗಳಾಗಿ ಫಿಶರೀಸ್ ಇಲಾಖೆಯ ತಜ್ಞರಾಗಿ ಜಪಾನಿನಿಂದ ಮಂಗಳೂರಿಗೆ ಬಂದಿದ್ದ ಎಂಟು ಮಂದಿ ತಜ್ಞರು ಕುಟುಂಬ ಸಮೇತ ಆಗಮಿಸಿದ್ದರು. ಇವರಲ್ಲಿ ಕೆಲವರು ವಿಶೇಷ ಭಂಗಿಯಲ್ಲಿ ವಿವಿಧಾಕೃತಿಯ ಕಲಾಪೂರ್ಣ ರೀತಿಯಲ್ಲಿ ಹೂ ಜೋಡಣೆಯ ಪ್ರದರ್ಶನವನ್ನು ಮಾಡಿ ತೋರಿಸಿದುದನ್ನು ಸಭಿಕರು ಬಹುವಾಗಿ ಪ್ರಶಂಶಿಸಿದರು. ಸುರತ್ಕಲ್ ಇಂಜಿನಿಯರಿಂಗ್ ಕಾಲೇಜಿನ ಪ್ರೊಫೆಸರ್ ಸ್ಮಿತ್ ಮತ್ತು ಸ್ಲೀಮನ್ಸ್ ಇವರು ಸಭೆಗೆ ವಿಶೇಷ ಅತಿಥಿಗಳಾಗಿ ಆಗಮಿಸಿದರು. ಕುಮಾರಿ ಯಂ ಸುಲೋಚನ ಹಂಗಾಮಿ ಡಿಪ್ಟಿ ಬಿ. ಡಿ. ಒ. ಮುಲ್ಕಿ, ಕುಮಾರಿ ಯಂ. ಬಿ. ಕಾವೇರಿ ಗ್ರಾಮ ಸೇವಕಿಯರು ಪ್ರಶಂಶಿಸಿರುವರು.

ಕೊನೆಯದಾಗಿ ಗವರ್ನಮೆಂಟ್ ಹೈಸ್ಕೂಲಿನ ಗುಡ್ಡಪ್ಪ ಮೂಲ್ಯರವರು ಧನ್ಯವಾದವನ್ನರ್ಪಿಸಿದರು ರಾತ್ರಿ ಕಿನ್ನಿಗೋಳಿಯ ಯುವಕ ಸಂಘದವರು "ಗಗ್ಗಯ್ಯನ ಗಡಿಬಿಡಿ" ಎಂಬ ಹಾಸ್ಯಭರಿತ ನಾಟಕವನ್ನು ಆಡಿ ತೋರಿಸಿದರು.

ಕರ್ನಾಟಕ ಸಂಘದ ಸತ್ಕಾರ— ಕೇಂದ್ರ ಸರ್ಕಾರದ ಬೆಂಗಳೂರು ವಿಭಾಗದ ವಾರ್ತಾ ಅಧಿಕಾರಿ ಶ್ರೀ ಎಂ. ಎಸ್. ಭಾರದ್ವಾಜರಿಗೆ, ಉಡುಪಿ ಕರ್ನಾಟಕ ಸಂಘದವರು ಕಳೆದ ತಾ 29ರಂದು ಶ್ರೀ ಪಿ ರಂಗನಾಥ ಶೆಣೈಯವರ ಅಧ್ಯಕ್ಷತೆಯಲ್ಲಿ ಸತ್ಕಾರ ಸಮಾರಂಭವೊಂದನ್ನು ಉಪೇಂದ್ರ ಭಾಗದಲ್ಲಿ ಏರ್ಪಡಿಸಿದ್ದರು.

ಆರಂಭದಲ್ಲಿ ಸಂಘದ ಕಾರ್ಯದರ್ಶಿ ಎಚ್. ಎನ್. ಬಲ್ಲಾಳರು ಸ್ವಾಗತಿಸಿ, ಅತಿಥಿಗಳ ಪರಿಚಯ ಮಾಡಿಕೊಟ್ಟರು ಶ್ರೀ ಭಾರದ್ವಾಜರು ಪತ್ರಿಕಾ ವ್ಯವಸಾಯದ ತಮ್ಮ ಅನುಭವಗಳನ್ನು ವಿವರಿಸಿದರು. ಅಧ್ಯಕ್ಷರ ಭಾಷಣದ ಬಳಿಕ ಶ್ರೀ ಬಿ. ಗೋವಿಂದ ಆಚಾರ್ಯರು ಧನ್ಯವಾದಗಳನ್ನರ್ಪಿಸಿದರು.

ಲೋಕ ಸೇವಾ ಸ್ಪಂದ— ಇದರ ವತಿಯಿಂದ ನಡೆಯುವ ಶಾಲೆಗಳ ಸಂಯುಕ್ತ ಸಭೆಯು ಜರಗಿ ಕೆನೆಡಿಯವರ ದುರ್ಮರಣದ ಬಗ್ಗೆ ಸಂತಾಪ ಸೂಚಿಸಿತು ಹಾಗೆಯೇ ಹೆಲಿಕಾಪ್ಟರ್ ದುರಂತದಲ್ಲಿ ಸಾವಿಗೀಡಾದ ಸೇನಾಧಿಕಾರಿಗಳ ಹಾಗೂ ಮಹಾರಾಷ್ಟ್ರದ ಮುಖ್ಯಮಂತ್ರಿ ಕನ್ನಂವಾರರ ನಿಧನದ ಬಗ್ಗೆ ತೀವ್ರ ಸಂತಾಪ ವ್ಯಕ್ತಪಡಿಸಿತು.

ಕೋಲಾರ ಜಿಲ್ಲಾ ಕೋಪರೇಟಿವ್ ಸೆಂಟ್ರಲ್ ಬ್ಯಾಂಕ್— ಇದರ ಮಹಾಸಭೆಯು ನವೆಂಬರ್ 24ರಂದು ಕೋಲಾರದ ಸಿಲ್ವರ್ ಜ್ಯುಬಿಲಿ ಹೋಲಿನಲ್ಲಿ ಬ್ಯಾಂಕಿನ ಅಧ್ಯಕ್ಷ ಶ್ರೀ ಎಚ್. ಸಿ. ಲಿಂಗಾರೆಡ್ಡಿ, ಬಿ.ಎ. ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ಜರಗಿತು. ತೆರವು ಇದ್ದ ಸ್ಥಾನಗಳಿಗೆ 1963-64ನೇ ವರ್ಷಕ್ಕೆ ಡೈರೆಕ್ಟರರಾಗಿ ಶ್ರೀಗಳಾದ ಎಚ್. ಸಿ. ಲಿಂಗಾರೆಡ್ಡಿ (ಅವಿರೋಧ) ಪಿ. ಟಿ. ಸುಬ್ಬರೆಡ್ಡಿ ಕೆ. ವಿ. ಹನುಮಪ್ಪ, ವಿ. ನಾರಾಯಣರೆಡ್ಡಿ, ವಿ. ವೆಂಕಟರೆಡ್ಡಿ, ಎನ್. ಸೀತಾರಾಮಯ್ಯ, ಇವರು ಆರಿಸಲ್ಪಟ್ಟಿದ್ದಾರೆ. ಅಲ್ಲದೆ ಎಜೆಂಡಾದ ನಡಾವಳಿಗಳೆಲ್ಲಾ ಸರ್ವಾನುಮತದಿಂದ ಮಂಜೂರಾದುವು ರಿಸರ್ವ್ ಫಂಡಿನಿಂದ ಸುಮಾರು 83,000 ರೂ.ವೆಚ್ಚದಲ್ಲಿ ಬ್ಯಾಂಕ್ ಕಟ್ಟಡ ನಿರ್ಮಾಣಕ್ಕೂ ಸರ್ವಾನುಮತದ ಒಪ್ಪಿಗೆಯನ್ನಿತ್ತಿತು.

—ವಿವಾಹ ಸಮಾರಂಭ—

ಕೋಪರೇಟಿವ್ ಸೊಸೈಟಿಗಳ ನಿವೃತ್ತ ಅಸಿಸ್ಟೆಂಟ್ ರಿಜಿಸ್ಟ್ರಾರ್ ಶ್ರೀ ಕೆ ಕಾಳಪ್ಪ ಶೆಟ್ರ ಪುತ್ರಿ ಕುಮಾರಿ ಗುಣಲತಾಳ ವಿವಾಹವು ದಿ| ಬೆಳ್ಳಿಪಾಡಿ ನರಸಿಂಗ ರೈಗಳ ಪುತ್ರ ಶ್ರೀ ರಾಮಕೃಷ್ಣ ರೈಗಳೊಡನೆ ತಾರೀಕು 2-12-63ರಂದು ಮಂಗಳೂರು ಕೆಥೊಲಿಕ್ ಕ್ಲಬ್ಬಿನಲ್ಲಿ ಜರಗಿತು.

ದಿ| ನೀಲಾವರ ವೆಂಕಟರಮಣ ಶೇಟರ ಪುತ್ರಿ ಚಿ| ಸುಂದರಿ ಮತ್ತು ದಿ| ಕೃಷ್ಣರಾವ್ ಇವರ ಪುತ್ರ ಚಿ| ಉಮೇಶ ಇವರ ವಿವಾಹವು ತಾ 4-12-63ರಂದು ಉಡುಪಿ ಅಜ್ಜರಕಾಡು ವಧುವಿನ ಗೃಹದಲ್ಲಿ ನೆರವೇರಿತು.

ಸುದ್ದಿಗಳನ್ನು ಕಳಿಸುವವರು ಸಂಕ್ಷೇಪವಾಗಿ, ಸ್ಪಷ್ಟವಾಗಿ ಬರೆದು ಕಳಿಸಬೇಕಾಗಿದೆ. ಕಾರ್ಬನ್ ಪ್ರತಿಗಳನ್ನು ಗಮನಿಸಲಾಗುವುದಿಲ್ಲ.

—ಸಂ.

ಮಂಗಳೂರಿನಲ್ಲಿ ನಮ್ಮ ಅಧಿಕೃತ ಪ್ರತಿನಿಧಿಗಳು—

ಶ್ರೀ ಎನ್. ಮಾರಪ್ಪ ಶೆಟ್ಟಿ, ಬಿಜೈ.

ಉಡುಪಿ ಸಬ್ ಜಡ್ಜರ ಕೋರ್ಟಿನಲ್ಲಿ

O. S. 61/61. R. E. P. No. 60/63

ನಾಗೇಶ ನ್ಯಾಕ —ಅರ್ಜಿದಾರ.

ಮತ್ತು

ಶ್ರೀಧರ ನ್ಯಾಕ ಕೂಡಾ 10ಜನರು —ಎದ್ರಿರು

ಯವರೊಳಗೆ

ಪ್ರಕಟಣೆ

6ನೆ ಎದ್ರಿಳು ಶಾರದಾ-ಮಹಾಬಲ ಶೇಟ್ರ ಹೆಂಡ್ತಿ—ಕುಂದಾಪುರ ತಾಲೂಕು ಕೋಟೇಶ್ವರ ಗ್ರಾಮದಲ್ಲಿರುವವಳು.

8ನೆ ಎದ್ರಿಳು ಸುಮಿತ್ರ—ಗೋಪಾಲ ಶೇಟ್ರ ಹೆಂಡ್ತಿ—ಶಿವಮೊಗ್ಗಾ ಡಿಸ್ಟ್ರಿಕ್ಟ್ ನಗರ ತಾಲ್ಲೂಕು ನಗರ ಟೌನಿನ ಚಿಕ್ಕ ಪೇಟೆಯಲ್ಲಿರುವವಳು—ಇವರಿಗೆ.

ಅರ್ಜಿದಾರನು ಮೇಲ್ಕಂಡ ಡಿಕ್ರಿ ಸಾಲಕ್ಕೆ ಆಸ್ತಿ ಏಲಮಿಗೆ ತಂದ ಬಾಬ್ತು ತಾರೀಕು 16-1-64ಕ್ಕೆ ಏಲಂ ನೋಟೀಸಿನ ಬಗ್ಗೆಯಿಟ್ಟಿದೆ. 6; 8ನೇ ಎದ್ರಿರು ಅವರ ಆಕ್ಷೇಪಗಳಿದ್ರೆ ಆ ದಿವ್ಸ ಕೋರ್ಟಿನ ಮುಂದೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. -ಯಿಲ್ಲವಾದ್ರೆ ಅವರ ಗೈರಾಜ್ರಿಯಲ್ಲಿ ತೀರ್ಮಾನಿಸಲ್ಪಡುವದು, ಎಂಬುದನ್ನು ಯಿದು ಮೂಲ್ಕ ತಿಳಿಯಪಡ್ಸಿಯದೆ.

(ಕೋರ್ಟು ಹುಕುಂ ಪ್ರಕಾರ)

P. Padmanabha Rao,
Vakil for Petitioner

ಉಡುಪಿ, 2-12-63.

THE KARNATAKA BANK LIMITED, UDIPI, S. K.

Regd. office: Dongarkeri, Mangalore-3

ದಿ ಕರ್ನಾಟಕ ಬ್ಯಾಂಕ್ ಲಿ, ಉಡುಪಿ, ದ. ಕ.

ರಿಜಿಸ್ಟರ್ಡ್ ಆಫೀಸು: ಡೊಂಗರಕೇರಿ, ಮಂಗಳೂರು-3

—: ಏಲಂ ನೋಟೀಸು :—

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಲ್ಲಿ ನಗಗಳ ಈಡಿನ ಮೇಲೆ ಸಾಲ ಪಡಕೊಂಡು ಕ್ಲಪ್ತ ಮಿಯಾದಿಗೆ ಅಸಲು ಬಡ್ಡಿ ವಗೈರೆ ಪಾವತಿ ಮಾಡದೇ ಬಾಕಿ ಮಾಡಿಕೊಂಡಿರುವುದರಿಂದ ಸದ್ರಿ ಸಾಲಗಳನ್ನು ವಸೂಲು ಮಾಡುವರೆ ಅವರಿಗೆ ರಿಜಿಸ್ಟ್ರಿ ನೋಟೀಸುಗಳನ್ನು ಬಿಟ್ಟಿದ್ದರೂ ಕೂಡಾ ಸದ್ರಿ ಈಡಿಟ್ಟ ನಗಗಳನ್ನು ಬಿಡಿಸದೇ ಇರುವುದರಿಂದ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಇದೇ 1963ನೇಯ ಇಸವಿ ದಸಂಬರ ತಿಂಗಳ 20ನೇ ತಾರೀಕಿನ ಅಪರಾಹ್ನ 2 ಗಂಟೆಯ ಒಳಗೆ, ಬೇಂಕಿಗೆ ಸಲ್ಲತಕ್ಕ ಅಸಲು, ಬಡ್ಡಿ, ನೋಟೀಸು ಖರ್ಚು, ವಗೈರೆ ಬಾಕಿಗಳನ್ನು ಸಲಾಯಿಸಿ ನಗಗಳನ್ನು ವಾಪಾಸು ಪಡಕೊಳ್ಳದೆ ಇದ್ದ ಪಕ್ಷದಲ್ಲಿ ಸದ್ರಿಯವರು ಈಡಿಟ್ಟ ನಗಗಳನ್ನು ಇದೇ 1963ನೇಯ ಇಸವಿಯ ದಸಂಬರ ತಿಂಗಳ 21ನೇಯ ತಾರೀಕು ಶನಿವಾರ ದಿನ ಅಪರಾಹ್ನ ಗಂಟೆ 2ಕ್ಕೆ ಯಾ ಅನಂತರ ನಮಗೆ ಯುಕ್ತ ಕಂಡ ತಾರೀಕಿನಲ್ಲಿ ನೋಟೀಸು, ಸಿವಾಯಿ, ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಬರತಕ್ಕ ಮೊಬಲಗು
142/61	ಎ ರಾಘವೇಂದ್ರ ಆಚಾರ್, ಕೆ. ನರಸಿಂಹ ಆಚಾರ್ಯರ ಮಗ; ಕುಂಜಿಬೆಟ್ಟು ಉಡುಪಿ, ದ. ಕ.	250=00
206/61	ಜೋಗಿ ಶೆಟ್ಟಿ. ನಾರಾಯಣ ಶೆಟ್ರರ ಮಗ, ತೋಟಮನೆ, ಗುಂಡಿಬೈಲು ಉಡುಪಿ ದ. ಕ.	120=00
36/62	ಜೇಮ್ಸ್ ಆರ್. ಬಂಗೇರ, ರೂಬೆನ್ ಬಂಗೇರರ ಮಗ; "ರೋಸ್ ವಿಲ್ಲಾ" ಒಳಕಾಡು ಉಡುಪಿ ದ. ಕ.	320=00
157/62	ಯು. ರಾಮದಾಸ ಪೈ, ಶ್ರೀನಿವಾಸ ಪೈಗಳ ಮಗ, C/o ಕೋಲ್‌ಕರ್ಸ್ ಮೆಟಲ್ ವೇರ್ಸ್ ರಥಬೀದಿ, ಉಡುಪಿ, ದ.ಕ.	550=00
224/62	ಜೋಗಿ ಶೆಟ್ಟಿ, ನಾರಾಯಣ ಶೆಟ್ಟರ ಮಗ, ತೋಟದ ಮನೆ ಗುಂಡಿಬೈಲು, ಉಡುಪಿ.	300=00
227/62	— ದಿ —	1250=00
281/62	ವಿಲಿಯಂ ಆಳ್ವ, ಜೋಸೆಫ್ ಆಳ್ವರ ಮಗ, ತಾಂಬೈಲ್ ಮನೆ, ಮೂಡುಬೆಳ್ಳೆ, ಉಡುಪಿ ತಾಲೂಕು ಮೂಡುಬೆಳ್ಳೆ ಪೋಸ್ಟ್	100=00
316/62	— ದಿ —	100=00

UDIPI 29-11-1963 } K. B. Rama Rao, Agent.

ಬೇಕಾಗಿದ್ದಾರೆ

ಪ್ರಿಂಟಿಂಗ್ ಪ್ರೆಸ್ಸಿನ ನಾನಾ ವಿಭಾಗಗಳಲ್ಲಿ ಕೆಲಸ ಮಾಡಲು ಅನುಭವಸ್ಥ ಕೆಲಸಗಾರರು ಬೇಕಾಗಿದ್ದಾರೆ.

ತರಬೇತಿಗಾಗಿಯೂ IIIಫಾರ್ಮಿನ ವರೆಗೆ ಓದಿದ ಹುಡುಗರನ್ನು ತೆಗೆದುಕೊಳ್ಳಲಾಗುವುದು.

ವಿಚಾರಿಸಿರಿ—

ನವಯುಗ ಪ್ರೆಸ್, ಉಡುಪಿ.

ದೀಪ ಹೊತ್ತಿದೆ, ಎತ್ತಿ ಹಿಡಿಯಿರಿ

(೫ನೇ ಪುಟದಿಂದ)

ತಿಯನ್ನು ಮುಂದುವರಿಸಿ ಕೊಂಡು ಹೋಗುವುದರಿಂದ ತನ್ನ ಕಲ್ಯಾಣವಿದೆ; ದೇಶದ ಒಳಿತಿದೆ; ವಿಶ್ವಕ್ಕೆ ರಕ್ಷಣೆಯಿದೆ ಎಂದವರು ಕಂಡು ಕೊಂಡರು— ಕೆನೆಡಿಯವರ ಉದಾರ ನೀತಿಯೇ ಮುಂದೆಯೂ ಮುಂದುವರಿಯುವುದು ಎಂದವರು ಸಾರಿದರು.

ಜಾನ್ಸನರು ತಮ್ಮ ಶಕ್ತಿಮೀರಿ ಇದಕ್ಕಾಗಿ ಪ್ರಯತ್ನಿಸಬಹುದು ಹಗ್ಗವೂ ಹಾವಾಗಿ ಪರಿಣಮಿಸ ತೊಡಗಿದ ಅಮೇರಿಕೆಯಲ್ಲಿ ಈಗ ಒಂದು ದುಷ್ಟ ಪ್ರವೃತ್ತಿಯು ಸಂಗಡವಿದೆಯೆಂದು "ಕೆನೆಡಿ ಕೊಲೆಯ ನಾಟಕ"ದಿಂದ ವ್ಯಕ್ತವಾಗುತ್ತದೆ. ಈ ದುಷ್ಟ ಶಕ್ತಿಯು ಅಲ್ಲಿರುವ ವರೆಗೆ ಜಾನ್ಸನರಿಗೂ ಕೆನೆಡಿಯವರ ಪ್ರತಿಗಾಮಿ ನೀತಿಯನ್ನು ಅನುಷ್ಠಾನಕ್ಕೆ ತರುವುದು ಸ್ವಲ್ಪ ಕಷ್ಟ ಸಾಧ್ಯವಾಗಬಹುದು. ಕೆನೆಡಿಯವರನ್ನು ಜಗ್ಗಿದಂತೆಯೇ ಜಾನ್ಸನರನ್ನೂ ಬೆದರಿಸಬಹುದು. ವಿಶ್ವಜನಪ್ರಿಯ ಅಧ್ಯಕ್ಷ ಕೆನೆಡಿಯವರ ಚಿಂಸ್ಮಾರಕವೊಂದನ್ನು ಅಮೇರಿಕೆಯು ರಚಿಸುವುದಾದರೆ, ಅವರ ನೀತಿಯನ್ನು ಮುಂದುವರಿಸಿಕೊಂಡು ಹೋ

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. S. 336/63.

K. ಅಬ್ದುಲ್ ಬ್ಯಾರಿ —ವಾದಿ.

T. B. ಮುಹಮ್ಮದ ಬ್ಯಾರಿ—

T. B. ಮೊಯಿದು ಕುಂಞ ಬ್ಯಾರಿಗಳ ಮಗ —Bandad house, Thekkil village —ಪ್ರತಿವಾದಿ,

ಸದ್ರಿ ಪ್ರತಿವಾದಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯ ಪಡಿಸುವುದೇನೆಂದರೆ—

ನೀವು ವಾದಿಯ ಅಂಗಡಿಯಿಂದ ಸಾಮಾನು ಕೊಂಡು ಹೋದ ಬಾಬ್ತು ಇನ್ನು ನಿಮ್ಮಿಂದ ವಾದಿಗೆ ಬರಲ್ಲಿಕ್ಕಿದ್ದ ಹಣ ರೂಪಾಯಿ 899—64 (ಬಡ್ಡಿ ಸಮೇತ) ಕೇಳಿ ನಿಮ್ಮ ಮೇಲೆ ಮಾಡಿದ ಮೇಲಿನ ದಾವೆಯನ್ನು ತಾ. 23—12—63ಕ್ಕೆ ನೋಟೀಸಿನ ಬಗ್ಗೆ ಇಟ್ಟಿರುತ್ತದೆ. ಆ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉದಹರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಷ್ಟಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

(Sd.) M. Sadashiva Rao,
Vakil for Plff.

ಪುತ್ತೂರು, 30-11-63.

ವಾರ್ತೆ—ಪ್ರತಿವಾರ್ತೆ

ಗೊತ್ತುವಳಿಗಳನ್ನು ಸ್ವೀಕರಿಸಲು ಮತ್ತು ಭಾಷಣಗಳನ್ನು ಬಿಗಿಯಲು ನಾವು ಶೂರರು ಎಂದು ಪ್ರಧಾನಿ ನೆಹರು ಹೇಳುತ್ತಾರೆ.

—ಸ್ವೀಕರಿಸಿದ ಗೊತ್ತುವಳಿಯನ್ನು ಬಿಟ್ಟುಕೊಡುವುದರಲ್ಲಿಯೂ ಬಿಗಿದ ಭಾಷಣಗಳ ವಿಚಾರ ಮರೆಯುವುದರಲ್ಲಿಯೂ ನಾವೇನೂ ಹಿಂದುಳಿದಿಲ್ಲವೆಂಬುದನ್ನವರು ಮರೆತಿದ್ದಾರೆಂಬುದು ವ್ಯರ್ಥ ಸಂದೇಹ.

○ ○ ○

ಜನಜನಕ್ಕೂ ಕಾಂಗ್ರೆಸ್ ತತ್ವಗಳನ್ನು ಪ್ರಚಾರ ಮಾಡುವ ಉದ್ದೇಶದಿಂದ ಯುವಕರಿಗೆ ಭಾಷಣ ಮಾಡುವ ವಿಷಯದಲ್ಲಿ ತರಬೇತಿ ಕೊಡುವ ಸಂಸ್ಥೆಯೊಂದನ್ನು ಕಾಮರಾಜರು ಉದ್ಘಾಟಿಸಿದರು.

—ಜನ ಜನದ ಹೃದಯವರಿತು ಉತ್ತಮ ಆಡಳಿತೆ ನಡೆಸುವದರಲ್ಲಿ ತರಬೇತಿ ನೀಡುವ ಸಂಸ್ಥೆಯೊಂದನ್ನು ಕಾಮರಾಜರು ಸ್ಥಾಪಿಸಿದ್ದರೆ ತುಂಬ ಒಳ್ಳೆಯದಾಗುತಿತ್ತು.

○ ○ ○ ○

ಗೋವೆಯನ್ನು ಭಾರತದಇತರ ಭಾಗಗಳಿಗೆ ಸಮವಾಗುವಂತೆ ಅವಕಾಶ ಕಲ್ಪಿಸಿ ಮುಂದುವರಿಯುವಂತೆ ಮಾಡುವುದೇ ಅದನ್ನು ಪ್ರತ್ಯೇಕ ಕೇಂದ್ರಾಧೀನ ಘಟಕ

ಗುವುದು ಅತ್ಯವಶ್ಯ. ಏಕೆಂದರೆ, ಇದೇ ಅವರ ಚಿರಸ್ಥಾಯಿ ಸ್ಮಾರಕ,ಜಾನ್ಸನ್ ಇದಕ್ಕಾಗಿ,ಈ ಸ್ಮಾರಕ ರಚಿಸುವುದಕ್ಕಾಗಿ, ದೇಶದಲ್ಲಿ ವ್ಯಾಪರಿಸಿಕೊಂಡಿರುವ ದುಷ್ಟ ಶಕ್ತಿಗಳನ್ನು ಬಹಿರಂಗಕ್ಕೆ ತರಬೇಕು; ಅವನ್ನು ಇಲ್ಲವಾಗಿಸಬೇಕು.

ಅಧ್ಯಕ್ಷ ಕೆನೆಡಿಯವರನ್ನು ಕೊಂದ ಓಸ್ವಾಲ್ಡನನ್ನು ನೈಟ್‌ಕ್ಲಬ್ ಮಾಲಿಕ ರೂಬಿ ಪೋಲೀಸ್ ಸ್ಟೇಶನಿದಿರೇ ಗುಂಡಿಕ್ಕಿ ಕೊಂದನು. ಇದರಿಂದ ಕೆನೆಡಿ ಕೊಲೆಯ ವಿಚಾರಣೆಯು ಕಷ್ಟವಾಗುವುದು, ನಿಜ. ಆದರೂ ಅಧ್ಯಕ್ಷರ ಕೊಲೆಯ ವಿಚಾರಣೆಯನ್ನು ಮುಂದುವರಿಸಬೇಕೆಂದು ಅಧ್ಯಕ್ಷ ಜಾನ್ಸನರು ಆಜ್ಞೆ ಹೊರಡಿಸಿದ್ದಾರೆ. ಈ ಆಜ್ಞೆಯ ಹಿಂದೆ ಕೆನೆಡಿ ನೀತಿ ಪುರಸ್ಕಾರದ ದೃಢ ಧೋರಣೆಯಿದೆಯೆಂದು ಹೇಳಬಹುದು. ಓಸ್ವಾಲ್ಡನ ಕೊಲೆಯ ವಿಚಾರಣೆಯಿಂದ ಕೊಲೆಗಟುಕರ ಅಂತರಂಗ ಬಹಿರಂಗವಾಗಲು ಕಷ್ಟವಾದರೂ ತೀರಾ ಅಸಾಧ್ಯವಲ್ಲ. ಅಧ್ಯಕ್ಷ ಕೆನೆಡಿಯವರು ಜಗತ್ತಿಗೆ ಬೆಳಕಿತ್ತು ಹೋದರು. ಅವರನ್ನು ಕಳೆದುಕೊಂಡ ನಾವು ಬೆಳಕಿನಿಂದಲೂ ವಂಚಿತರಾಗ ಬಾರದೆಂದು ಆಶಿಸುತ್ತೇವೆ. ನೂತನಾಧ್ಯಕ್ಷ ಲಿಂಡನ್ ಜಾನ್ಸನ್ ಆ ಬೆಳಕನ್ನು ಎತ್ತಿ ವಿಶ್ವದಾದ್ಯಂತ ಪಸರಿಸಲಿ ಎಂದು ಹಾರೈಸುತ್ತೇವೆ. ಹೊತ್ತಿಸಿದ ದೀಪವನ್ನೇ ಎತ್ತುವವರಿಲ್ಲವಾದರೆ, ಮರಳಿ ಅದನ್ನು ಹೊತ್ತಿಸುವ ವೀರ ಬರುವಷ್ಟರಲ್ಲಿ ಲೋಕವೇ ಇನ್ನಿಲ್ಲವೆಂದಾಗಲೂ ಬಹುದು! ಆದುದರಿಂದ ಜಾನ್ಸನರನ್ನು ಎಲ್ಲರೂ ಕೈ ಮುಗಿದು ಕೇಳುತಿದ್ದಾರೆ: "ದೀಪ ಹೊತ್ತಿದೆ, ಎತ್ತಿಹಿಡಿಯಿರಿ"

ಮಹಾತ್ಮರ ದುರ್ಮರಣ!

ಏನಿದು? ಏನಿದು! ಏನೀಜಗದ
ಪ್ರತ್ಯೇಕತೆಯೊ ಅತ್ಯದ್ಭುತವೊ?
ಕಾಲನ ಮಹಿಮೆಯೊ! ಕಾಲದ
ಹಿರಿಮೆಯೊ!
ಪೇಳುವೆನೆಂತಿದ ನಾನರಿಯೆ!
ಜನತೆಯ ಸೇವೆಯ ಗೈಯುವೆನೆಂದು
ತಾಯ್ನಾಡಿನ ಹಿತ ಸಾಧಿಪೆನೆಂದು
ತನು ಮನ ಧನವನು ಲೆಕ್ಕಿಸದೆಂದೂ
ದುಡಿದ ಮಹಾತ್ಮರ ದುರ್ಮರಣ
ರೋಮನ್ ಜನತೆಯ ಕಾಮುಕವಾಗಿರೆ
ಆವಾ ಸತ್ಯವು ಧರ್ಮವು ಅಳಿದಿರೆ
ಭೂಮಿಗೆ ನೀತಿಯ ಜ್ಯೋತಿಯ ಬೆಳಗಿದ
ಸ್ವಾಮಿಯು ಕ್ರಿಸ್ತನ ದುರ್ಮರಣ!

ವಾಗಿಟ್ಟುದರ ಉದ್ದೇಶವೆನ್ನುತ್ತಾರೆ ಜಗಜೀವನ್ ರಾಮ್.

—ಮತ್ತಾವುದರಲ್ಲಿ ಮುಂದುವರಿದರೂ ಪಾನ ಪ್ರತಿಬಂಧ ಮಾತ್ರ ಅಲ್ಲಿಗೆ ಬಾರದಿರಲಿ ಎಂದು ನೆರೆಯವರೂ ಒಳಗಿನವರೂ ಬೇಡಿಕೊಳ್ಳುತ್ತಾರೆ ಎಂಬುದು ಶುದ್ಧ ಕುಹಕ.

○ ○ ○ ○

ಭಾರತಕ್ಕೆ ಅಮೇರಿಕೆಯು ಇತ್ತ ಸೈನಿಕ ನೆರವಿನಿಂದ ಭಾರತ-ಪಾಕಿಸ್ತಾನಗಳ ನಡುವೆ ಶಸ್ತ್ರಾಸ್ತ್ರ ಸ್ಪರ್ಧೆ ನಡೆಯುವಂತಾಗಿದೆಯೆಂಬುದನ್ನು ರಾಯಭಾರಿ ಚೆಸ್ಟರ್ ಬೌಲ್ಸ್ ಪಾಕ್ ಪತ್ರಿಕಾ ಪ್ರತಿನಿಧಿಯೆದುರು ಅಲ್ಲಗಳೆದರು.

—ಆದರೆ, ಇದರಿಂದ ಪಾಕ್ ರಾಜಕೀಯ ದುರಂಧರರಿಗೆ ಖಂಡಿತಕ್ಕೂ ಅಸಮಾಧಾನ ಹೆಚ್ಚುವುದು ಮತ್ತು ಅದರ ಪರಿಣಾಮವಾಗಿ ಚೀನಾದೊಡನೆ ಅವರ ಮೈತ್ರಿ ಮತ್ತಷ್ಟು ದೃಢವಾಗುವುದು.

○ ○ ○

ಕೆನೆಡಿಯವರಿಗೆ ಗುಂಡು ಎಸೆದ ಸುದ್ದಿಯನ್ನು ಕೇಳಿದ ಡಲ್ಲೆಸ್ ನಗರದ ವಿವಿದ್ಯಾರ್ಥಿಗಳು ಹರ್ಷೋದ್ಗಾರ ಮಾಡಿದರು—ಅಧಿಕೃತವರದಿ.

—ಅವರು ಮಡಿದ ಸುದ್ದಿ ಕೇಳಿದ ವಿದ್ಯಾರ್ಥಿಗಳು ದುಃಖೋದ್ಗಾರ ಮಾಡಿದ್ದರೂ ಇರಬಹುದು—ಅನಧಿಕೃತವರದಿ.

○ ○ ○

ರಾಜ ಶಾಹಿಯಲ್ಲಿರುವ ಭಾರತದ ಸಹಾಯಕ ಹೈಕಮಿಶನರರ ಕಛೇರಿ ಮುಚ್ಚುವಂತೆ ಪಾಕ್ ಸರಕಾರವಿತ್ತ ಆಜ್ಞೆಯನ್ನು ಪುನರ್ವಿಮರ್ಶಿಸುವಂತೆ ಭಾರತವು ಕೇಳಿಕೊಂಡಿದೆ- ವಾರ್ತೆ.

—ಮಿಲಿಟರಿ ಆಡಳಿತೆಯಲ್ಲಿ ಆಜ್ಞೆ ಪುನರ್ವಿಮರ್ಶೆಯೇ ಇಲ್ಲದಿರುವಾಗ ಭಾರತ ವಿರೋಧಿ ಅರ್ಜಿಯ ಸ್ವೀಕಾರವೇ ಅಸಂಭವವಲ್ಲವೆ?

○ ○ ○ ○

ಮುಂದಿನ ಎರಡು ವರ್ಷಗಳಲ್ಲಿ ಯಾವ ಹೊಸಕರಗಳನ್ನೂ ರಾಜ್ಯದಲ್ಲಿ ಹೇರುವುದಿಲ್ಲ— ಮುಖ್ಯಮಂತ್ರಿ ನಿಜಲಿಂಗಪ್ಪನವರ ಭರವಸೆ.

— ರಕ್ಷಣಾ ನಿಧಿಗೆ ಉದಾರದಾನ ನೀಡಿದ ವರ್ತಕರೇ ಜನತೆಯಿಂದ ಸಕ್ಕರೆ- ಸಿಮೆಂಟುಗಳ ಹೆಸರಿನಲ್ಲಿ ಈ ಕರಾಕರಣೆಯನ್ನು ಮುಂದಾಗಿಯೇ ವಸೂಲು ಮಾಡುತಿದ್ದಾರೆ— ಇದು ಬಡ ನಾಗರೀಕನ ಕೊರಗು.

ಮಾತೆಯಬಂಧನ ಬಿಡಿಸಿದ ಸಮಯದಿ
ಜಾತಿಯ ವೈರದ ಜ್ವಾಲೆಯು
ಜ್ವಲಿಸಲು
ಶಾಂತಿ ಅಹಿಂಸೆಯ ಸಾರುತ ಸಾರಿದ
ಗಾಂಧಿ ಮಹಾತ್ಮನ ದುರ್ಮರಣ!
ನಿಜಭುಜಬಲದಿಂ ಅಹಿತರ ನೋಡಿಸೆ
ನಿಜ ಮಾತೆಯ ಪರ ಬಂಧನ ತೊಲಗಿಸೆ
ನಿಜ ತಾಯ್ನಾಡನು ತೊರೆಯುತ
ದುಡಿದಿಹ
ನಿಜ ಕಲಿ ಘೋಷರ ದುರ್ಮರಣ!
ಮೃಗಗಳ ತೆರದಿಂ ಮಾನವಕುಲವನು
ನೊಗದಭಿಲಾಷೆಯ ಸ್ವಾರ್ಥಸ್ವ
ದೃಷ್ಟಿಯ
ಮೃಗಮಾನವರುರೆ ವಿಕ್ರಯಿಸುವು
ದನು
ಮುಗಿಸಿದ ಲಿಂಕನ ದುರ್ಮರಣ!
ಅಣುಯುಗವೆನ್ನುತ ಬಣಗಳ ರಚಿಸುತ
ಕ್ಷಣಕ್ಷಣ ಕಲ್ಪಿತ ಬೇಧವ ಬೆಳೆಸುತ
ದಿನ ದಿನ ಜಗವಿರೆ ಶಾಂತಿ ಸ್ನೇಹವ
ನೆಣಿಸಿದ ಕೆನಡಿಯ ದುರ್ಮರಣ!
ಲೋಕವು ಪರರುತ್ಕರ್ಷೆಯ ಸಹಿಸದು
ಬೇರಾದೌಷಧಿ ರೋಗಿಗೆ ರುಚಿಸದು
ಭಿನ್ನತೆ ಜನತೆಯ ಹೃದಯದಿ ಅಳಿ
ಯದು
ಇನ್ನೆಂದಿಹುದೊ?! ದುರ್ಮರಣ!

—ಯೆಂ. ಭಾಸ್ಕರ ಭಂಡಾರಿ
ಮಜಿಬೈಲು; ಮಂಜೇಶ್ವರ

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R. E. P. 192/63 (os 295/60)

ರಾಮಕ್ಕ ಯಾನೆ ಚಂದ್ರಾವತಿ —ಅರ್ಜಿದಾರಳು.

ಕುಸುಮ ಸಹಾ —ಎದ್ರಿರು.

ಎದ್ರಿರು: 9) ಲಲಿತ ಕುಮಾರಿ- ಲಲಿತನ ಮಗಳು.

18) ಜ್ಯೋತಿ ಪ್ರಸಾದ, 19) ಶಾಂತಿ ಪ್ರಸಾದ, 20) Male child -- ಮೈನರರು ಗಾರ್ಡಿಯನ್ ತಾಯಿ 9ನೇ ಎದ್ರಿ.

37) ಜಗಜ್ಜಾಲ. 38) ರತ್ನ — ಶಿವದೇವಿಯ ಮಕ್ಕಳು.

39) ದೇವಿ ಕುಮಾರಿ, 40) ಜಿನದತ್ತ 41) ಅಭಿಚಂದ್ರ—ಮೈನರರು ಗಾರ್ಡಿಯನ ತಾಯಿ 38ನೇ ಎದ್ರಿ. —ಎದ್ರಿರು.

ಎಲ್ಲರೂ ಪುತ್ತಿಲ ಗ್ರಾಮಸ್ತರು,

ಸದ್ರಿ ಎದ್ರಿರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ:

ಮೇಲಿನ ಅಮಲ್ದಾರಿಯಲ್ಲಿ ದಾಖಲಾದ ಯೇಲಂ ಇಸ್ತಿಹಾರಿನ ಶರಥಗಳನ್ನು ನಿರ್ಣಯಿಸುವ ಬಗ್ಗೆ ಮತ್ತು ಯೇಲಂ ನಿಲ್ಲುವರೇ ಪರ್ಮಿಶನ್ ಕೇಳಿ ಮಾಡಿದ R. E. A. 391/63ನೇ ಅರ್ಜಿಯನ್ನು ಕೂಡಾ ತಾರೀಕು 13—12—63ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಇಟ್ಟಿರುತ್ತದೆ. ಆ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉದಹರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಷ್ಟ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

Sd/ M. Sadashiva Rao
Vakil for Petitioner.

ಪುತ್ತೂರು, ತಾ. 30—11—63

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ.
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಗಳು,
ಫಾರ್ಮುಗಳು
ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

ಸಿಂಕಿಯಾಂಗದ ದುರವಸ್ಥೆ

(೩ನೇ ಪುಟದಿಂದ)

ಅಧಿಕಾರದ ಬೀಗದಕ್ಕೈ ಚೈನಿ ಕಮ್ಯೂನಿಸ್ಟರ ಕೈಯಲ್ಲೇ ಇದೆ; ಬೀಗ ಮಾತ್ರ ಸ್ಥಳೀಯ ಅಧಿಕಾರಿಗಳ ಬಳಿ ಇದೆ ಬೀಗ ತೆರೆಯಲಿಲ್ಲವೆಂದು ಸ್ಥಳೀಯ ಅಧಿಕಾರಿಗಳ ಮೇಲೆ ಜನರು ಹಲ್ಲೆ ನಡೆಸುವದು ಸ್ವಾಭಾವಿಕವಿರುತ್ತದೆ. ಆಗ ದೊಡ್ಡ ಜನರಂತೆ ಚೈನಿಯರು ರಾಜಿ ಪಂಚಾಯಿತಿಕೆಯ ಚಕ್ಕಂದಕ್ಕೆ ಬರುತ್ತಾರೆ!

ಇಲ್ಲಿಯ ವಿರುದ್ಧತೆಯ ಅನುಭವವಾದೊಡನೆ ೧೯೫೭ರಲ್ಲಿ ಮಾವೊತ್ಸೆ-ಟುಂಗನು "ಸಾವಿರ ಹೂಗಳು ಅರಳಲಿ, ಸಾವಿರ ಅಭಿಪ್ರಾಯಗಳು ಮುಂದೆ ಬರಲಿ"ಎಂದು ಆಮಂತ್ರಣವನಿತ್ತನು. ಇದು ಕೇವಲ ಘೋಷಣೆ ಮಾತ್ರ ಇದೆ. ನಿಜವಾಗಿ, ಅಭಿಪ್ರಾಯ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರು ಸೆರೆಮನೆ ಸಾಲ್ಗೆ ಕೊಳೆಯುತ್ತಿದ್ದಾರೆ

"ಚೈನಾದ ರಾಷ್ಟ್ರೀಯರು ಯಾವ ಪ್ರಮಾಣಗಳಲ್ಲಿ ವಾಸಿಸಿಕೊಂಡಿದ್ದಾರೆ. ಅಲ್ಲಿಯ ಇತಿಹಾಸ ಹಾಗೂ ರಹಸ್ಯದಲ್ಲಿ ಇಂದಿರುವ ವಿವಿಧ ಸ್ಥಿತಿಗಳನ್ನು ಸಿಂಕಿಯಾಂಗಿನ ಜನರು ನಿರ್ಲಕ್ಷಿಸಿದ್ದಾರೆ"ಎಂದು ಚೈನಿ ವಕ್ತಾರನೊಬ್ಬನು ಎಚ್ಚರಿಕೆಯನ್ನಿತ್ತಿರುವನು.

ಜೋನ್ಸ್‌ರ ಈ ಲೇಖನದಲ್ಲಿ ಒಂದು ಮುಖ್ಯ ವಿಷಯವೆಂದರೆ ಜನಸಂಖ್ಯೆಯ ಪ್ರಮಾಣ ಬದಲಾಯಿಸಲು ಚೈನಿಯರನ್ನು ಅಲ್ಲಿಗೆ ವಲಸೆ ಕಳುಹಿಸಿ ಅವರಿಂದ ಅನುಕೂಲ ವಾತಾವರಣ ನಿರ್ಮಿಸಿಕೊಳ್ಳುವ ಚೈನಿ ವಿಧಾನವಿದೆ. ಪಾಕಿಸ್ತಾನಿಗಳೂ ಅದೇ ಆಟವನ್ನು ಆಡುತ್ತಿದ್ದಾರೆ. ಅದನ್ನು ಅವರು ಜರ್ಮನರಿಂದ ಕಲಿತುಕೊಂಡಿರಬಹುದು. ಚೈನಿ ಕಮ್ಯೂನಿಸ್ಟರು ಸಹಾಗಡಿ ಪ್ರದೇಶದಲ್ಲಿ ಒಂದು ಅಲ್ಲಿಯ ನಿವಾಸಿಗಳಂತೆಯೇ ವಾಸಿಸುತ್ತಿರುವ ಪಂದಿಗಳೂ ಬಂದಿರುತ್ತವೆ. ನೇಫ-ರಸ್ತೆ ನಿರ್ಮಾಪಕರಲ್ಲಿ ಅವರ ಸಂಖ್ಯೆಯಿತ್ತೆಂಬುದು ಗಮನೀಯ ವಿಷಯವಿದೆ. ಕಾಲಿಪೊಂಗ್ ಮುಂತಾದೆಡೆಗಳಲ್ಲಿ ಅದೆಂತು. ಅವರ ಸಂಖ್ಯೆ ವರ್ಧಿಸುತ್ತಿದೆಂಬುದನ್ನು ಲಕ್ಷಿಸದಿರಲು ಸಾಧ್ಯವಿಲ್ಲ. ಚೈನಿ ಕಮ್ಯೂನಿಸ್ಟರು ಈಗ ಇನ್ನೊಂದು ರೀತಿಯ ಚಟುವಟಿಕೆಗಳಲ್ಲಿ ಮಗ್ನರಾಗಿದ್ದಾರೆ. ನೇರ ಬಂದಿಳಿದು ಜನಸಂಖ್ಯೆ ವರ್ಧಿಸುತ್ತ, ಚಟುವಟಿಕೆ ನಡೆಸಲು ಕಷ್ಟ ಇರುವದರಿಂದ ಇತರ ನೆರೆಯ ರಾಷ್ಟ್ರದ ರಾಯಭಾರಿ ಕಛೇರಿಗಳನ್ನು ಕಮ್ಯುನಿಸ್ಟ್ ಪರರಾಷ್ಟ್ರಗಳ ಜನರ ಸಹಾಯದಿಂದ ಒಂದೆಡೆ ತಮ್ಮ ಬೇಳೆ ಬೇಯಿಸಿಕೊಳ್ಳಲು ಅವರು ಪ್ರಯತ್ನಿಸುತ್ತಿದ್ದಾರೆ. ಎರಡನೆಯದಾಗಿ, ಇಲ್ಲೇ ಇದ್ದಾರಲ್ಲ, ನಮ್ಮ ಹಿತ ಶತ್ರುಗಳು ಕಮ್ಯುನಿಸ್ಟ್ ಪಕ್ಷದವರು. ಅವರು ಅನೇಕಾನೇಕ ರೀತಿಯ ರಾಜಕೀಯ ನಾಟಕಗಳನ್ನೀಗ ಆಡುತ್ತಿದ್ದಾರೆ. ಪಕ್ಷದ ವಿಷಯ ದಿನಂಪ್ರತಿ ಪತ್ರಿಕೆಗಳ ಮೂಲಕ ಹಾಗೂ ಆಕಾಶವಾಣಿಯ ಮೂಲಕ ಹಬ್ಬುವಂತೆ ಅನೇಕ ಕಾರ್ಯಕ್ರಮಗಳನ್ನು ನಡೆಸುತಿದ್ದಾರೆ.

ಸಿಂಕಿಯಾಂಗಿನ ಮುಹಮ್ಮದೀಯರ ಕುರಿತು ನಿಜವಾಗಿ ಪಾಕಿಸ್ತಾನವು ಬಹಳ ಮುತುವರ್ಜಿ ತೋರಿಸ ಬೇಕಾಗಿತ್ತು. ಪಾಕಿಸ್ತಾನವನ್ನೇ ಮೋಹದವಿನ ಹಾಗೂ ಆನಂತರ ಕೂಡಾ ಒಂದು ಮುಸ್ಲೀಮ್ ಪಂಗಡದವರ ಸಾಮೂಹಿಕ ಹತ್ಯೆ ನಡೆಸುತ್ತಿರುವಾಗ ಪರ ರಾಷ್ಟ್ರಗಳಲ್ಲಿರುವವರ ಕುರಿತು ಅವರೆಂತು ಯೋಚಿಸಿಯಾರೆಂಬ ಪ್ರಶ್ನೆ ಬರಬಹುದು. ಸಿಂಕಿಯಾಂಗಿನಲ್ಲಿರುವವರೂ ಸುನ್ನಿಗಳೇ ಇದ್ದಾರೆ. ಅವರ ರಕ್ಷಣೆಗೆ ಪಾಕಿಸ್ತಾನ ಧಾವಿಸ ಬೇಕಾಗಿತ್ತು. ಆದರೆ ಇನ್ನೊಬ್ಬರನ್ನು ನಾಶ ಮಾಡಬೇಕೆಂದು ಹೊಂಚುಹಾಕುತ್ತಿದ್ದು; ಮಿತ್ರನನ್ನು ಪಡೆದಿರುವವನು ಆ ಮಿತ್ರನ ಸಹಸ್ರ ದೋಷಗಳನ್ನು ಮರೆತು ತನ್ನೆದುರು ಅಳಿಯಾಗಿರುವವನನ್ನು ಸದೆಬಡೆಯಲೆಂದು ಅವನ ಪಾದಪೂಜೆ ಮಾಡುತ್ತ ಇರುತ್ತಾನೆ.

ಅದರ ಪ್ರತಿರೂಪವನ್ನೇ ಭಾರತದಲ್ಲೂ ಕಾಣ ಬರುದಾಗಿರುತ್ತದೆ. ಇತ್ತೀಚೆಗೆ ಕಮ್ಯೂನಿಸ್ಟರೂ ಮುಸ್ಲಿಂ ಲೀಗಿನವರೂ ಭಜಕ್ಕ ಭುಜಕೊಟ್ಟು ರಾಷ್ಟ್ರೀಯ ಶಕ್ತಿಗಳ ವಿರುದ್ಧ ಒಂದಾಗಿ ಕುಕೃತ್ಯಗಳನ್ನು ನಡೆಸುತ್ತಿದ್ದಾರೆ. ಅವರಿಗೆ ಸಹಾಯವಾಗುವ ರೀತಿಯಲ್ಲಿ ಅವರೊಂದಿಗೆ ಸೇರಲೀಗ ದ್ರಾ. ಮು. ಕ. ದವರು ಮುಂದಾಗಿದ್ದಾರೆ. ಭಾರತೀಯರಿದನ್ನು ಬಹುಜಾಗ್ರತೆಯಿಂದ ಗಮನಿಸದೆ ಇರುವದೆಂತು?

ಶ್ರೀ ಶಿವಶಂಕರ.

ಲೋಕ ಮಾಡಿತು ಸೂತಕ ಸ್ನಾನ

(೧೦ನೇ ಪುಟದಿಂದ)

ಯುತ್ತದೆ. ಅಮೇರಿಕೆಯೆಂದರೆ ದೇವಲೋಕವಲ್ಲ ತಾನೆ?"

"ಇದರಲ್ಲಿ ಕೆಂಪಿನವರ ಕೈಯಿದೇಂತ ಹೇಳುತ್ತಾರಂತೆ?

"ಕೆಂಪಿನವರದೋ ಬಿಳಿಯ ಜನರದೋ...! ಆದರೆ, ಕಪ್ಪಿನವರದಂತೂ ಇಲ್ಲವೇ ಇಲ್ಲ."

"ಏನಾದರೇನಂತೆ? ದೀಪವೊಂದು ಆರಿತಲ್ಲಾ..."

"ಒಂದು ದೀಪ ಆರಿತು ನಿಜ. ಅದು ತೇಜೋವಂತವೂ ಆಗಿತ್ತು. ಆದರೆ ಅದು ಆರಿತೆಂದು ವ್ಯಥಿಸುತ್ತ ಕೂತರೆ ದಾರಿ ಕಾಣುವುದಿಲ್ಲ ನೋಡು. ಹೊಸದೊಂದು ದೀಪ ಉರಿಯ ತೊಡಗಿದೆ; ಅದೂ ತೇಜೋವಂತವಾಗಲಿ, ಲೋಕದ ಕಣ್ಣಾಗಲಿ ಎಂದು ಹಾರೈಸಿ, ಎಣ್ಣೆ ಸುರಿಯಬೇಕು; ಕಣ್ಣೀರನ್ನಲ್ಲ...."

"ಅದು ಸರಿಯೇ ಅನ್ನಿ...ಆದರೂ...."

"ನೋಡು ಇಲ್ಲಿ ಬಾ ನೀನು...ಹೀಗೆಲ್ಲಾ ಮುಖ ಬಾಡಿಸಬಾರದು. ದೈವ ಸಂಕಲ್ಪವನ್ನು ಮೀರುವುದು ಯಾರಿಗೂ ಸಾಧ್ಯವಿಲ್ಲ...."

"ಇದು ನಿಮ್ಮ ವೇದಾಂತದ ಕೊನೆಯ ಪಾಠ".

"ಪರಮಾತ್ಮನಲ್ಲಿ ನಂಬಿಕೆಯಿಟ್ಟವನು ಎಂದಿಗೂ ಮಡಿಯುವುದಿಲ್ಲ."

"ವೇದಾಂತ ಅಂದರೆ ಇದೇ ತಾನೆ? ನಿಟಕ್ಕೂ ಅದರಲ್ಲಿ ಅರ್ಥವಿದೆ."

"ಹೇಗೆ?"

"ಕೆನೆಡಿ ಮಡಿಯುವುದಿಲ್ಲ. ವಿಸ್ತೃತಾಕಾಶದಲ್ಲಿ ತೇಜೋವಂತವಾಗಿ ಹೊಳೆಯುವ ನಕ್ಷತ್ರವಾಗಿ ಸದಾಕಾಲ ಬೆಳಗುತ್ತಿರುತ್ತಾರೆ."

"ಸರಿ ಸರಿ. ಹೋಗು, ಇನ್ನಾದರೂ ಸೂತಕಸ್ನಾನ ಮಾಡಿ ಬಾ. ಎಲ್ಲರೂ ಆಗಲೆ ಮಾಡಿಬಿಟ್ಟಿದ್ದಾರೆ. ಮತ್ತೆ, ನೀನು ಮಾತ್ರ .."

"ಹ್ಞಾಂ ನೀವೇ ಹೀಗಂದ್ಮೇಲೆ ..."

"ಅಷ್ಟಾದ್ರೂ ಇದೆಯಲ್ಲಾ ಸದ್ಯ ..."

"ಇಲ್ಲದೆ ಎಲ್ಲಿ ಹೋಗುತ್ತೆ? ಬಂದೆ ಈಗ...."

"ಬೇಗ ಬಂದ್ಬಿಡು ಮತ್ತೆ..."

"ಹ್ಞಾಂ....

— ಗೋವಾ.

ಶೃಂಗಾರಗಾನ ಕವಿ ಕ್ಷೇತ್ರಜ್ಞ

(೮ನೇ ಪುಟದಿಂದ)

ತ್ರ ಸಿಕ್ಕಿವೆ. ಪ್ರತಿಯೊಂದು ಪದವೂ ಸರಿಗೆಯ ಮಾತಿನ ಧೋರಣೆಯಲ್ಲಿದೆ ಅದರಲ್ಲಿ ಸಂದರ್ಭದ ವ್ಯಕ್ತಿ ಚಿತ್ರಣವು ಕಣ್ಣಿಗೆ ಕಟ್ಟಿದಂತೆ ಎದ್ದು ನಿಲ್ಲುತ್ತದೆ ಇದರಿಂದ ನಮಗೆ ಭಾವಾನುಭವ ಸುಲಭವಾಗಿದೆ

ಕ್ಷೇತ್ರಜ್ಞನ ಶಬ್ದ ಯೋಜನೆಯು ಭಾವಪುಷ್ಟವಾಗಿರುವುದರ ಜೊತೆಗೆ ನಾಟ್ಯಾಭಿನಯವನ್ನು ಆಹ್ವಾನಿಸುವುದಾಗಿದೆ ಪೂರ್ವ ಕಾಲದಲ್ಲಿ ವಿವಾಹಾದಿ ಸಂತೋಷ ಸಂದರ್ಭಗಳಲ್ಲಿಯೂ ದೇವತೋತ್ಸವಗಳಲ್ಲಿಯೂ ಸುಶಿಕ್ಷಿತರಾದ ನರ್ತಕಿಯರು ಕ್ಷೇತ್ರಜ್ಞ ಪದಗಳನ್ನು ಹಿಡಿದು ಅಂಗಾಭಿನಯ ಮಾಡುವುದು ರೂಢಿಯಲ್ಲಿತ್ತು. ನಮ್ಮ ಜನಸಾಮಾನ್ಯರಲ್ಲಿ ರಸಿಕ ಸಂಸ್ಕೃತಿ ಪ್ರಚಾರವಾಗುತ್ತಿದ್ದದ್ದೇ ಹಾಗೆ.

ಸಾಹಿತ್ಯ ಭಾವ, ಸಂಗೀತ ಭಾವ, ಅಭಿನಯ ಭಾವ — ಈ ತ್ರಿವಿಧ ಭಾವ ಸಂಪತ್ತಿಗೂ ಏಕಾಯತನವಾಗಿರುವುದು ಕ್ಷೇತ್ರಜ್ಞನ ಪದರಚನೆ ಈ ಮಾತು ಉತ್ಪ್ರೇಕ್ಷೆಯಲ್ಲವೆಂಬುದು ಈಗ ನಾಲ್ಕು ಪದಗಳಿಂದ ತಕ್ಕಮಟ್ಟಿಗೆ ತಮ್ಮ ಅನುಭವಕ್ಕೆ ತೋರೀತು.

ಮೊದಲನೆಯದು: 'ಜೇಬೆಟ್ಲ ಕಾವಚ್ಚು ನಾ?' ಬಿಲಹರಿ ರಾಗ. ನಾಯಿಕೆಗೂ ನಾಯಕನಿಗೂ ಜಗಳವಾಗಿದೆ. ಅವಳ ಸಖಿ "ಏನೆ, ನಿಮ್ಮ ನಿಮ್ಮಲ್ಲೇ ಗುದ್ದಾಟವಾಯಿತಂತೆ. ಆಗಬಹುದೇ?" ಎಂದು ಅವಳಿಗೆ ಬುದ್ಧಿ ಹೇಳುತ್ತಾಳೆ.

ಎರಡನೆಯದು: "ಎಕ್ಕಡಿನೇಸ್ತಮು" ಸಾರಂಗರಾಗ. ನಾಯಿಕೆ ತನ್ನ ಪ್ರಿಯನು ಅನ್ಯಾಸಕ್ತನಾದನೆಂದು ದೂರು ಹೇಳುತ್ತಾ "ಎಲ್ಲಿಯ ಸ್ನೇಹ" ಎಂದು ನಿರಾಶೆ ಸೂಚಿಸುತ್ತಾಳೆ

ಮೂರನೆಯದು: "ಪೇರೆಗಾಡು"— ಶಹನ ರಾಗ. ನಾಯಿಕೆ ಕಲಹದಿಂದ ಅಗಲಿದ ಪ್ರಿಯನನ್ನು ಬರಹೇಳಬೇಕೆಂದು ಸಖಿಗೆ ತಿಳಿಸಿ ಆತನ ನಡತೆ "ಮರ್ಯಾದೆಯಲ್ಲ!" ಎಂದು ಹೇಳುತ್ತಾಳೆ.

ನಾಲ್ಕನೆಯದ : "ಆಯ್ಯಯ್ಯೋ ವೇಗಟಾಯನೇ"—ನಾದನಾಮ ಕ್ರಿಯಾರಾಗ ನಾಯಿಕೆ ವಿರಹವನ್ನು ಸಹಿಸಲಾರದವಳಾಗಿ ತಾನು ಹಿಂದೆ ಪಟ್ಟಿದ್ದ ಕೇಳಿಕಾ ಸಂತಸಗಳನ್ನು ಸ್ಮರಿಸಿಕೊಂಡು "ನನ್ನ ಸ್ವಾಮಿಗೆ ಸುಖಾತಿರೇಕದಿಂದ ವೆಗಟಾಯಿತೆ?" ಎಂದು ವಿತರ್ಕ ಮಾಡಿಕೊಳ್ಳುತ್ತಾಳೆ.

— ಡಾ| ಡಿ. ವಿ ಗುಂಡಪ್ಪ

(ಆಕಾಶವಾಣಿ, ಬೆಂಗಳೂರು ಸೌಜನ್ಯ)



ಗೇಪರಾಜ್ಯದಲ್ಲಿ

ಶೋಕ ಮಾಡಿತು ಸೂತಕ ಸ್ನಾನ

"ಲೇ, ಇಲ್ಲಿ ಬಾ ಅಂದ್ರೆ ..."

"........"

"ಬಾರೇ ಇಲ್ಲಿ....ಯಾಕೆ ಹಾಗೆಗುಮ್ಮನಂತೆ ಮುದುರಿಕೊಂಡಿದ್ದೀಯಾ......? ಬಾರೆ...."

"........"

"ಇಲ್ಲಿ ನೋಡೇ ಸ್ವಲ್ಪ....ನಿನ್ನೊಡನೆ ಮನಬಿಚ್ಚಿ ಮಾತಾಡದೆ ವಾರವೊಂದು ಕಳೆಯಿತು...."

"... ..."

"ಏನೇ ಅದು? ಮೂಕಿಯಾಗಿ ಹೋದೆಯ? ಅಥವಾ ಮೌನವ್ರತಧಾರಣೆ... ಏಕಾದಶಿ ..."

"........"

"ಬಾರೇ ಇತ್ತ ನೋಡು, ಏನಿದೇಂತ"

"ಸಾಕು ಬಿಡೀಂದ್ರೆ...."

"ಏನೇ, ಯಾಕೆ ಹೀಗನ್ತೀಯ? ದುರ್ದಿನದಂದು ಕೋಗಿಲೆ ಮೂಗವಟ್ಟಿರುವಂತೆ ತೆಪ್ಪಗಿದ್ದೀಯ...."

"ಮತ್ತೇನು ಮಾಡಬೇಕೂನ್ರಿ...."

"ಎಲಾ ಇವಳ....ಯಾಕೆ ಹೀಗೆ ಇದ್ದೀಯ? ಏನು ಅರಾಮವಾಗಿದ್ದೀತಾನೆ?"

"ಅರಾಮವೋ ವಿರಾಮವೋ...."

"ಅರಾಮವೋ, ಏನಾಯಿತೇ ಈಗ? ಒಂದಕ್ಕೊಂದೂವರೆ ಅನ್ತೀಯಲ್ಲಾ...ಏನು ಮುಖ ಭಾರಿ ಬಾಡಿದೆ? ನನ್ನ ಹೃದಯ ರಾಣಿಯ ಮುಡಿದ ಹೂವೇಕೆ ಬಾಡಿದೆ?...."

"ಸಾಕು ಬಿಡೀಂದ್ರೆ...ನಿಮಗೀಗಲೂ ತಮಾಷೆ....ಪಾಪ ಕವಿಗಳು ತಾನೆ?"

"ಕವಿಗಳೂಂತಂದ್ರೆ ಅಷ್ಟೊ ಸಸಾರವೇನುಟಂತೆ?....ಅಲ್ಲ, ಮೌನವಾಗಿ ಮುಖ ಬಾಡಿಸಿಕೊಂಡಿರೋ ಕಾರಣ ಕೇಳಿದ್ರೆ...."

"ಏನ್ರಿ, ನಿಮಗೆ ಇನ್ನೂ ಗೊತ್ತಿಲ್ವಾ?"

"ಏನೂಂತ ..?"

"ಲೋಕಕ್ಕೆ ಲೋಕವೇ ದುಃಖ ಸಾಗರದಲ್ಲಿ ಮುಳುಗಿ ಸೂತಕವನ್ನಾಚರಿಸುತ್ತಿರುವಾಗ...?

"ಓಹೋ, ಹಾಗೋ....ಜಾಕಲಿನ್ ಕೆನ್ನೆಡಿಯವರ ಮೇಲೆ ಸಹಾನುಭೂತಿ ತಾನೆ?"

"ಹ್ಞಾಂ ಅದೇ ಅನ್ನಿ. ಇಂತಹ ದುಃಖದ ಸಮಯದಲ್ಲೂ ನಿಮಗೊಂದು ಶೋಕವಿಲ್ಲ. ಅಲ್ಲ, ಪಾಪ ಮಾನವತೆಯ ಪ್ರತಿವಾದಕ ಕೆನಡಿ ಅಂದ ನೀವೇ ಇಂದು ವಿನೋದಕ್ಕೆ ತೊಡಗಿದ್ರೆ...."

"ಬಲು ಜಾಣೆ ಕಣೇ ನೀನು. ಆದರೆ, ಒಂದು ಮಾತು ನೋಡು. ಯಾರೋ ಒಬ್ಬ ದುರಾತ್ಮ ಅಂತ ಇಟ್ಕೊ. ಮಾನವತೆಯ ಪ್ರತಿವಾದಕನನ್ನು ಕೊಂದಾತ ಅನ್ಕೊ. ಕೊಂದ ಮೇಲೆ ಮಾಡೋದೇನು?"

"ಏನೂ ಮಾಡೋಕಾಗದೋರು ಸುಮ್ಮದ್ರೂ ಕೂತ್ಕೊಳ್ಳ ಬೇಕು. ದುಃಖವನ್ನು ಪ್ರಕಟ ಪಡಿಸುವ ಉತ್ತಮೋತ್ತಮ ಸಾಧನ ಅಂದರೆ ಮೌನಾಂತ ನೀವೇ ಹಿಂದೊಮ್ಮೆ ಅಂದಿದ್ರಲ್ಲಾ...."

"ಇರಬಹುದು ಬಿಡು. ಆದ್ರೆ, ಯಾವಾಗ್ಲೂ ಹೀಗೇನೇ ಕೂತ್ಕೊಂಡು ಬಿಟ್ರೆ, ಮುಂದಿನ ಗತಿ?"

"ಅದೇ ಹೇಳಿದ್ನಲ್ಲಾ ಆವತ್ತೆ. ನಿಮ್ಮ ಗಂಡಸರ ದುಃಖವೆನ್ನುವುದು ಹಾಗೆಯೇ ಬನಾವಟ್ಟಿದ್ದು. ಇಲ್ಲವಾದ್ರೆ, ಲೋಕ ಚಕ್ರವಂತಹ ಕೆನೆಡಿಯ ಸೂತಕವನ್ನು ಆಚರಿಸದೆ ಮರೆಯೋದಂತಂದ್ರೆ .... ನಿಮಗೇನು ಒಂದು ಬಾರಿ ಹೌದಾ ಅಂತೀರಿ." ಮರುಕ್ಷಣ, ಚಲೋದಾಯಿತು ಬಿಡು ಅಂತೀರಿ."

"ಅಂದ್ರೆ ಈ ಶೋಕ ಸದ್ಯ ನಿನಗೆ ಮಾತ್ರ ಅಂತ ತೋರುತ್ತೆ. ಅಲ್ವೆ?"

"ನಾನು ಹಾಗೆಲ್ಲಿ ಅಂದಿದ್ದೇನೆ?"

"ಅಲ್ಲಾ, ನಿನ್ನ ಮಾತಿನ ದಾಟಿ ನೋಡುವಾಗ ಹಾಗೇ ತೋರುತ್ತೆ?"

"ಸಾಕು ಬಿಡೀಂದ್ರೆ...ನನಗೆ ಈಗ ನಿಮ್ಮ ಯಾವುದೊಂದು ಮಾತೂ ಕೇಳಿಸೋದಿಲ್ಲ. ನನಗೊಂದೇ ಯೋಚನೆ. ಯಾಕೆ ಹೀಗಾಯ್ತೂಂತ ..."

"ಯಾಕೋ ಆಯಿತು; ಆದ ಮೇಲೆ ಆ ಬಗ್ಗೆ ಚಿಂತಿಸಿ ಪ್ರಯೋಜನವೇನು?"

"ಅಂದ್ರೆ ಕೆನೆಡಿ ಕೊಲೆಯೆಂದರೆ, ಒಬ್ಬ ಅಜ್ಞಾತ ಆಗಂತುಕನ ಕೊಲೇಂತ ತಿಳ್ಕೊಂಡಿದ್ದೀರಿ..."

"ಛೆ, ಛೆ, ಇಲ್ಲ ಇಲ್ಲ. ಕೆನ್ನೆಡಿ ಅಂದ್ರೆ ಶುದ್ಧ ಶಾಂತಿಯ ಕನ್ನಡಿ. ಮಹಾ ಸಾಹಸಿ...."

"ಸಾಕು ಹೋಗೀಂದ್ರೆ... ಎಲುಬಿಲ್ಲದ ನಾಲಿಗೆ ಹೇಗೂ ತಿರುಗುತ್ತೆ. ಇಲ್ವಾದ್ರೆ, ಬಾಯಲ್ಲಿ ನೀವು ವ್ಯಕ್ತಪಡಿಸಿದ ಬಡಬಡಿಕೆಯ ಮಾತನ್ನು ಹೃದಯದಿಂದ ತಂದು ಹೇಳಿದಿರಾ?"

"ಹಾಗಂದ್ರೆ ಏನೆ? ಕೆನೆಡಿ ಗುಂಡೇಟಿನಿಂದ ಮಡಿದಾಂತ ನಿನಗೆ ಮಾತ್ರ ಕಳವಳಾಂತ ತಿಳಿದೆಯ? ನಿಜವಾದ ದುಃಖ ಬಾಯಿಯಿಂದ ಹೊರಡೋದಿಲ್ಲ; ಅದು ಹೃದಯದಲ್ಲೇ ತುಂಬಿರುತ್ತೆ."

"ವೇದಾಂತದ ಪಾಠ ನಾನು ನಿಮ್ಮಿಂದ ಕೇಳಿಲ್ಲ ನಿಮ್ಮ ಟೋಪಿ ಸರಕಾರ ಕೇಳಿದ ಕೂಡ್ಲೆ ಕೆಂಪಿನವರ ವಿರುದ್ಧ ಶಸ್ತ್ರಾಸ್ತ್ರ ಸಹಾಯವನ್ನು ಕೆನೆಡಿ ಕಳಿಸಿದ್ದಾರೇಂತ ನೀವೇ ಅಂದಿದ್ದಿರಿ."

"ಹೌದು, ಯಾರು ಇಲ್ಲಂತಾರೆ?"

"ಹಾಗೇನೇ ಸರಕಾರದ ಯೋಜನೆಗಳಿಗೆಲ್ಲಾ ಉದಾರವಾದ ಸಹಾಯ ನೀಡುತ್ತಿದ್ದರು..."

"ಅದೂ ಹೌದು... ಅದ್ಕೇನೋಡು, ಇಡಿಯ ಭಾರತ ಒಂದು ದಿನ ಸೂತಕವನ್ನು ಆಚರಿಸಿದ್ದು...."

"ಸೂತಕ ಅನ್ನೋತ್ಲೆ ನೆನಪಿಗೆ ಬಂತು... ಆಚೆ ಮನೆ ಬಾಬು ಇದ್ದಾನಲ್ಲಾ...."

"ಯಾರು? ಬಾಬೂನೆ? ಶೀಲಳ ಮಗ ತಾನೆ?"

"ಹೌದು ಹೌದು.... ಮೊನ್ನೆ ಅವನ ಶಾಲೇಲಿ ಧ್ವಜವನ್ನು ಅರ್ಧಕ್ಕೆ ಏರಿಸಿ ಕೆನಡಿ ಮರಣ ವೃತ್ತಾಂತವನ್ನು ತಿಳಿಸಿದ್ರಂತೆ...."

"ಹ್ಞಾಂ.... ಸರಿಯೇ.... ಅದ್ರಲ್ಲಿ ತಪ್ಪೇನೂಂತ?"

"ತಪ್ಪು ಒಪ್ಪು ಎಲ್ಲಾ ಒತ್ತಟ್ಟಿಗಿರಲಿ. ಕೆನಡಿ ಅಂದ್ರೆ ನಿಮಗೆಲ್ಲಾ ಉಪ್ಪಿಟ್ಟು-ಹಾಲು ಕೊಡೋ ದೇಶದ ಅಧ್ಯಕ್ಷರೂಂದ್ರಂತೆ. ."

"ಸರಿ ಬಿಡು, ತಪ್ಪೋ ಒಪ್ಪೋ ಏನೋ ಹೇಳಿದ್ರೂನ್ನು."

"ಅಗ್ಲೆ ಹೆಚ್ಚಿನ ಮಕ್ಕಳೆಲ್ಲಾ ಅಯ್ಯೋಂತ ಕೂಗಿದ್ರಂತೆ."

"ಕೂಗಿ ಬಿಟ್ರೆ? ಯಾಕಂತೆ?"

"ಮತ್ತೇನೂ ಇಲ್ಲಾನ್ರಿ. ತಮಗೆ ಬರೋ ಉಪ್ಪಿಟ್ಟು—ಹಾಲಿಗೆಲ್ಲ ಕತ್ತರಿ ಬರುತ್ತೋ ಅಂತ ಪಾಪ, ಅವು ಹೆದ್ರಿ ಬಿಟ್ವು..."

"ಸದ್ಯ ನಮಗಿನ್ನಾರು ಗತೀಂತ ಅರ್ಭಟಿ ಕೊಡ್ಲಿಲ್ಲ ತಾನೆ?"

"ಹುಟ್ಟೆ ಮಕ್ಳಾದ್ರಿಂತ ಆಯಿತು. ಇಲ್ಲಾದ್ರೆ ಅದನ್ನೂ ಅಂದು ಬಿಡುತ್ತಿದ್ದರು."

"ಅದೆಲ್ಲಾ ಇರ್ಲಿ ಬಿಡು. ನಿನ್ನೊಡನೆ ಸರಿಯಾಗಿ ಮಾತಾಡದೆ ವಾರವೊಂದು ಸಂದಿತು. ಈಚೆ ಬಾ ಹೀಗೆ ...ಇಲ್ಲಿ ...ಹತ್ತಿರಕ್ಕೆ"

"ಸಾಕೂಂದ್ರೆ ನಿಮ್ದು. ರಾಮನ ಕಥೆಯೆಲ್ಲಾ ಕೇಳಿದ ಮೇಲಾದ್ರೂ ಒಂದು ಕೈ ಮುಗಿಯ ಬಾರದೇಂತ"

"ನೋಡು ಅದೆಲ್ಲಾ ಕೃತಕತೆ ನನಗರಿಯದು. ಮತ್ತೆ ಶೋಕ ನೋಡು ಒರೆಬರೆ ಅರೆಯಾಯಿತು. ಮೊದಲ ದಿನ ಹಣೆ ಹಚ್ಚಿಕೊಂಡು, ಎರಡನೆಯ ದಿನ ಕೈ ಕಟ್ಟಿಕೊಂಡು, ಶೋಕಮಾಡಿದರೆ ಮೂರನೆಯ ದಿನ ತೂಕಡಿಕೆಯಲ್ಲೇ ಶೋಕ ಪ್ರದರ್ಶನವಾಗಬೇಕಾದೀತು."

"ನಿಮ್ಮೊಡನೆ ವಾದ ಮಾಡಿ ಗೆಲ್ಲುವುದಿದೆಯೆ? ಆದ್ರೂ ನೋಡಿ, ಲೋಕ ಸುಭಿಕ್ಷೆಯಾಗಬೇಕೆಂದು ಹಗಲಿರುಳು ಕನವರಿಸುತಿದ್ದವರು ಅವರು, ಇದಕ್ಕಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟು, ಅಮೆರಿಕೆಯಲ್ಲಿಯೇ ಅಸಾಧಾರಣ ಆದರೆ, ಶಾಂತ ಕ್ರಾಂತಿ ಪುರುಷರೆನಿಸಿದವರು ಅವರು. ."

"ಸರಿ ಬಿಡೂನ್ನು. ಆದರೆ. ಇನ್ನು ಅದನ್ನು ಅಂದುಕೊಂಡು ಪ್ರಯೋಜನ?"

"ನಿಮ್ಮ ಗಂಡಸ್ರ ಜಾತಿ ಹಾಗೆಯೇ. ಒಂದು ಕಿವಿಯಲ್ಲಿ ಕೇಳೋದು, ಇನ್ನೊಂದರಲ್ಲಿ ಬಿಡೋದು. ಅಷ್ಟೆ ನಮ್ಮಿಂದ ಆದಾ ಆಗುವುದಿಲ್ಲ..."

"ಮತ್ತೇನು ಮಾಡಬೇಕು ಹೇಳು. ಇದ್ದ ಮನೆಯೊಂದು ಉರುಳಿ ಬಿದ್ದಾಗ, ಹಾಗೆಯೇ ಮೌನವಾಗಿ ಶೋಕಿಸುತ್ತಿದ್ದರೇ ಮನೆಯಾಗುವುದೆ?"

"ಅದಿಲ್ಲಾನ್ರಿ..."

"ಹಾಗೇ ನೋಡು, ಆಗಬಾರದ ಘಟನೆ ನಡೆದು ಹೋದರೆ, ಅದರ ಶೋಕ ಒಂದೆರಡು ದಿನ ಇರುತ್ತದೆ. ಆದರೆ, ಒಂದೊಂದೇ ಹೊಸ ಹೊಸ ಚಿಂತೆಗಳು ಬರುವಾಗ, ಹಳೆಯವೆಲ್ಲವೂ ಮರೆತು ಹೋಗುತ್ತವೆ. ಆದುದರಿಂದಲೇ ಹೊಸ ಹೊಸ ದುಃಖಗಳನ್ನು ಸಹಿಸುವ ಶಕ್ತಿ ಮಾನವನಿಗೆ ಬರುತ್ತದೆ...."

"ಅಂದರೆ, ಭವಿಷ್ಯದ ಸುಖದಾಸೆಯಿಂದ ವರ್ತಮಾನ—ಭೂತಗಳ ದುಃಖಗಳನ್ನು ಮರೆಯಬೇಕು ಅಲ್ಲವೆ?'

"ಸರಿಯಾಗಿಯೇ ಅರ್ಥ ಮಾಡಿಕೊಂಡೆ. ಜಾಣೆ ಕಣೆ ನೀನು...."

"ನನ್ನ ಜಾಣ್ಮೆಯೇನು ಬಂತು? ಎಲ್ಲವೂ ನಿಮ್ಮದೇ. ಆದರೂ ನನಗೆಲ್ಲಾ ಒಂದೇ ಚಿಂತೆ. ಅಮೆರಿಕೆಯಲ್ಲೂ ಇದು ನಡೆಯುತ್ತದಲ್ಲಾಂತ."

"ಇದು ಎಂದೇನು? ಪೋಲೀಸರಿರುವಂತೆಯೇ ಓಸ್ವಾಲ್ಡನನ್ನೂ ಕೊಲ್ಲಲಿಲ್ಲವೆ? ಹಾಗೂ ನಡೆಯುತ್ತದೆ, ಹೀಗೂ ನಡೆ

(೯ನೇ ಪುಟ ನೋಡಿರಿ.)

● ಕುಮಾರಿ ಬಿಲ್ಲೆಗಳು ●

(ರಿಜಿಸ್ಟರ್ಡ್ Regd.)

ಪ್ರಕೃತಿಯು ವಿಫಲಗೊಂಡಾಗ ಉಂಟಾಗುವ ಕಾತರ ನಿವಾರಣೆಗೆ ಸಮಯೋಚಿತವಾದ ಆಯುರ್ವೇದೀಯ ಮಿಶ್ರಣ!

ಟ್ಯೂಬ್ 1ರ ಸಾಮಾನ್ಯ ರೂ. 4/- ಮಧ್ಯಮ ರೂ. 6/ ಉತ್ತಮ ರೂ. 9/-

P. Devee & Co. (N. J.) Calcutta—40.

ಸ್ಟಾಕಿಸ್ಟರು— ರಾಜಾ ಮೆಡಿಕಲ್ ಹಾಲ್, ಬೆಂಗಳೂರು ಕೆಂಟೋನ್‌ಮೆಂಟ್; ಕುಮ್ಟಾ ಫಾರ್ಮಸಿ, ಕುಮ್ಟಾ (ಉ. ಕ.)

ಉಡುಪಿ ಡಿ. ಮು. ಕೋರ್ಟಿನಲ್ಲಿ

O. P. No. 39/1963

1) B. ಶಾರದಾ ಹೆಗ್ಗಡ್ತಿ— S. ಭವಾನಿ ಶಂಕರ ಹೆಗ್ಡೇರ ವಿಧವೆ 2) B. ಪ್ರೇಮ ಕುಮಾರ ಹೆಗ್ಡೆ 3) ಪ್ರೇಮಲೀಲಾ 4) ಶ್ರೀನಾಥ ಹೆಗ್ಡೆ 5) B ತಾರಾನಾಥ 6) B ರಮಾನಾಥ 7) B. ಉಮಾನಾಥ 8) B. ಚಂದ್ರಶೇಖರ 9) B. ಕೃಷ್ಣ ಕುಮಾರ S ಭವಾನಿಶಂಕರ ಹೆಗ್ಡೇರ ಮಕ್ಕಳು 5ರಿಂದ 9ನೇ ವರೇಗಿನವರು—ಮ್ಯಾನರರು—ರಕ್ಷಕಳು ತಾಯಿ 1ನೇ ಅರ್ಜಿದಾರಳು, ಉಡ್ಪಿ ತಾಲ್ಲೂಕು ಹೆರ್ಗ ಗ್ರಾಮದಲ್ಲಿರುವವರು— ಅರ್ಜಿದಾರರು.

ಈ ಮೂಲಕ ಯಾವತ್ತು ಜನರೀಗೆ ತಿಳಿಯಪಡಿಸುವದೇನೆಂದ್ರೆ:—

1ನೇ ಅರ್ಜಿದಾರಳ ಗಂಡ S ಭವಾನಿಶಂಕರ ಹೆಗ್ಡೇರ ತಂದೆ ತಾ. 10—3—61ರಲ್ಲು ಮೃತಪಟ್ಟ ರಾಘವ ಹೆಗ್ಡೇರೀಗೆ ಬರತಕ್ಕ ಅರ್ಜಿಯಲ್ಲಿ ಕಾಣಿಸಿದ ಸಾಲ ವಸೂಲು ಮಾಡುವ ಹಕ್ಕು 1ನೇ ಅರ್ಜಿದಾರಳ ಗಂಡ S. ಭವಾನಿಶಂಕರ ಹೆಗ್ಡೇರೀಗೆ ಬಂದು ನಂತ್ರ ಅವರು ಕೂಡಾ ತಾ. 6—9—62ರಲ್ಲಿ ಮೃತಪಟ್ಟಿರುವುದರಿಂದ ಆ ಬಾಬ್ತು ಅರ್ಜಿಯಲ್ಲಿ ಕಾಣ್ಸಿದ ಯಾವತ್ತು ಸಾಲ ವಸೂಲುಮಾಡುವರೇ ಅರ್ಜಿದಾರರು ಹಕ್ಕುದಾರರಾಗಿರುವುದರಿಂದ ಆ ಬಗ್ಗೆ ಅರ್ಜಿದಾರರ ಗೋಸ್ಕರ 1ನೇ ಅರ್ಜಿದಾರಳ ಹೆಸರಿನಲ್ಲಿ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ವಗೈರೆ ಅರ್ಜಿದಾರರು ಮೇಲಿನ ಅರ್ಜಿ ಮಾಡಿರುವುದರಿಂದ ಆ ಕುರಿತು ಯಾರಾದರೂ ಆಕ್ಷೇಪ ಹೇಳತಕ್ಕವರುಯಿದ್ದಲ್ಲಿ ಮೇಲ್ಕಂಡ ಕೋರ್ಟಿನಲ್ಲಿ ತಾ. 1–1–64 ರಲ್ಲು ಹಗಲು 10 ಗಂಟೆಗೆ ಹಾಜ್ರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದರೇ ಯೋಕ್ತವಾಗಿ ತೀರ್ಮಾನಿಸಲ್ಪಡುವುದು ಎಂಬ ಸಂಗ್ತಿ ಈ ಮೂಲ್ಕ ಯಾವತ್ತೂ ಜನರೀಗೆ ತಿಳಿಸೋಣಾಗಿಯದೆ.

By order of the Court

B. Jagannatha Hegde,

Advocate for Petitioners.

Udipi, 22—11—63.

ಆದರ್ಶ ಚರಿತೆಗಳು –೧೩

ಸಂತ ಫ್ರಾನ್ಸಿಸ್

ಸುಮಾರು ಸನ್ ೧೧೮೧ರಲ್ಲಿ ಅಸ್ಸೀಸಿಯಲ್ಲಿ ಸಂತ ಫ್ರಾನ್ಸಿಸರ ಜನನವಾಯ್ತು. ಪಿಟ್ರೋ ಬರ್ನಾಡ್ರೋ ಎಂದು ಅವರ ತಂದೆಯ ಹೆಸರು. ಅವರು ಬಹಳ ಶ್ರೀಮಂತ ವ್ಯಾಪಾರಿಯಾಗಿದ್ದರು. ಪಿಟ್ರೋ ಅವರ ಹೆಂಡತಿ ರೋಗಿಷ್ಠೆಯಾಗಿದ್ದಳಲ್ಲದೆ ಆಕೆ ಹೆಚ್ಚುಸಮಯ ಬದುಕಲಾರಳು ಎಂದು ಡಾಕ್ಟರರು ಸೂಚನೆಯಿತ್ತಿದ್ದರು. ಇದೇ ಸಮಯ ಒಬ್ಬ ದಿವ್ಯ ಪುರುಷನು ಬಂದು ಪಿಟ್ರೋರ ಬಳಿ ಭಿಕ್ಷೆ ಬೇಡಿದನು. ಪಿಟ್ರೋ ಅವರು ಆತನಿಗ ಅನ್ನಧನಗಳನ್ನಿತ್ತು ಬಹುವಾಗಿ ಸತ್ಕರಿಸಿದರು. "ನಿನ್ನ ಪತ್ನಿಯ ಗರ್ಭದಿಂದ ಪುತ್ರ ರತ್ನವು ಜನನವಾಗಲಿದೆ" ಎಂದವನು ಹರಸಿದನು. ರೋಗಿಯ ಮಂಚವನ್ನು ಮಹಲಿನಿಂದ ತೆಗೆಸಿ, ಅಶ್ವಲಾಯದಲ್ಲಿ ಹಾಕಬೇಕು ಎಂದವನು ಆದೇಶವಿತ್ತನು. ಆ ದಿವ್ಯ ಪುರುಷನಾಣತಿಯಂತೆ ಮಂಚವನ್ನು ಅಶ್ವಲಾಯದಲ್ಲಿ ಹಾಕಲಾಯ್ತು; ಹಾಗೂ ಅಲ್ಲಿಯೇ ಪ್ರತಿಭಾಪೂರ್ಣ ಪುತ್ರರತ್ನ ಸಂತ ಫ್ರಾನ್ಸಿಸರ ಜನನವಾಯ್ತು.

ಬಾಲ್ಯದಲ್ಲಿ ಫ್ರಾನ್ಸಿಸರು ತುಂಬಾ ಆಡಂಬರ ಜೀವಿಯಾಗಿದ್ದರಲ್ಲದೆ, ಉದ್ಧಟ ಪ್ರಕೃತಿಯವರಾಗಿದ್ದರು. ಒಮ್ಮೆ ಅವರಿಗೆ ಬಹಳ ಜ್ವರ ಬಂದು, ಅವರು ಮರಣಾಪನ್ನರಾದರು. ಅವರು ಈ ಸ್ಥಿತಿಯಲ್ಲಿರುವಾಗಲೇ ಇದ್ದಕ್ಕಿದ್ದಂತೆ ಅವರ ಮನೋಭಾವನೆಯು ಬದಲಾಯ್ತು. ತನ್ನ ಹಿಂದಿನ ಜೀವನದ ಕುರಿತು ಅವರಿಗೇ ತಿರಸ್ಕಾರವಾಯ್ತು. ಈ ಮುಂದೆ ತಾನು ಶುದ್ಧ ಸಾದಾ ಜೀವನ ನಡೆಸುವುದಾಗಿ ಅವರು ನಿಶ್ಚೈಸಿದರು. ಅನಂತರ ಅವರು ಹುಷಾರಾದರು. ಈ ರೋಗವನ್ನವರು ತನ್ನ ಬುದ್ಧಿಯನ್ನು ಶುದ್ಧಗೊಳಿಸಲು ಬಂದ ಭಗವಂತನ ಕೃಪೆಯೆಂದು ತಿಳಿದುಕೊಂಡರು. ಅವರು ಬಡತನದಲ್ಲಿಯೇ ತಪಸ್ವೀ ಜೀವನ ಕಳೆಯಲು ನಿಶ್ಚೈಸಿದರು.

ಒಂದುದಿನ ಆಕಸ್ಮಿತ್ತಾಗಿ ಇವರು ಮನೆಯಿಂದ ಮಾಯವಾದರು. ಮಾರ್ಗದಲ್ಲಿ ಭಿಕ್ಷುಕರಿಗೆ ತನ್ನ ಬೆಲೆ ಬಾಳುವ ಉಡುಗೆಗಳನ್ನು ದಾನವಾಗಿತ್ತು, ಅವರ ವಸ್ತ್ರಗಳನ್ನು ಸ್ವೀಕರಿಸಿ ಮೈಮುಚ್ಚಿಕೊಂಡರು. ರಾಜಸೀ ಭೋಜನವನ್ನು ಅವರು ಅವರು ತೊರೆದರು. ಅವರ ಶರೀರವು ಕ್ಷೀಣವಾಯ್ತು. ಕೊಳೆಯ ತಾಂಡವ ಆಟದಿಂದ ಅವರ ಮೈಹೊಲಸಾಯ್ತು. ತನ್ನ ಬಳಿಯಿದ್ದ ಧನಕನಕಗಳನ್ನವರು ದರಿದ್ರರಿಗೆ ಹಂಚಿ ಬಿಟ್ಟರು. ಗೆಳೆಯರೇ ಇವರನ್ನು ಹುಚ್ಚರೆಂದೂ ತಿಳಿದು ಹೊಡೆದು, ಬಡಿದು, ಸಂಕೋಲೆಯಿಂದ ಬಿಗಿದು ಕೊಟಡಿಯೊಂದರಲ್ಲಿ ಹಾಕಿಟ್ಟರು.

ಆದರೆ ಇವರ ಹುಚ್ಚುತನ ಬೇರೆಯೇ ಆಗಿತ್ತು, ಇವರನ್ನು ಪಾದ್ರಿ (ಕ್ರಿಸ್ತ ಧರ್ಮಗುರು)ಯ ಮುಂದಕ್ಕೆ ತರಲಾಯ್ತು. —ಅಲ್ಲಿ ಇವರು ಸ್ಪಷ್ಟವಾಗಿ "ನಾನು ದೀನ, ಹೀನನಾಗಿ ಜೀವಿಸ ಬಯಸುತ್ತೇನೆ. ನನ್ನ ತಂದೆಯ ಸಂಪತ್ತಿಗೂ ನನಗೂ ಯಾವತ್ತೂ ಸಂಬಂಧವಿಲ್ಲ" ಎಂದು ಬಿಟ್ಟರು. ಅವರ ಹೃದಯದಲ್ಲಿ ವಿಶ್ವ ಪ್ರೇಮದ ಜ್ವಾಲೆ ಹರಡಿತ್ತು. ಅವರು ಅಲ್ಲಿ ಇಲ್ಲಿ ತಿರುಗಾಡ ತೊಡಗಿದರು.

ಫ್ರಾನ್ಸಿಸ್ ಅವರು ತನ್ನ ಪ್ರಚಾರ ಕಾರ್ಯವನ್ನಾರಂಭಿಸಿದರು. ಸಾವಿರಾರು ಅನುಯಾಯಿಗಳು ಇವರಿಗಿದ್ದರು. ಒಮ್ಮೆಯಂತೂ ಅರಬ ದೇಶದಲ್ಲಿ ಇವರನ್ನು ಸೆರೆ ಹಿಡಿಯಲಾಯ್ತು. ಕೊನೆಗೆ ಅಲ್ಲಿಯ ಬಾದಶಹನು ಇವರನ್ನು ಸನ್ಮಾನ ಪೂರ್ವಕವಾಗಿ 'ಜೋವಿಯಚ್ಚಾ'ದ ಧರ್ಮಯೋಜಕರ ಗುಡಿಗಳಿಗೆ ಕಳುಹಿಸಿಕೊಟ್ಟನು.

ಸಂತ ಫ್ರಾನ್ಸಿಸರು ಮಾನವ ಜೀವನದ ಚರಮ ಲಕ್ಷ್ಯವನ್ನು ಪಡೆಯಲು ಬಯಸಿದ್ದರು—ಅದರಲ್ಲಿ ಸಫಲರಾಗಿದ್ದರು. ಪ್ರೇಮವೇ ಇವರ ಜೀವನದ ಮೂಲಮಂತ್ರ. ಈ ಪ್ರೇಮದಲ್ಲಿ ಈಶ್ವರ ಪ್ರೇಮ, ಮಾನವ ಜಾತಿಯ ಮೇಲೆ ಪ್ರೇಮ, ಪಶುಪಕ್ಷಿಗಳ ಮೇಲೆ ಪ್ರೇಮ, ರೋಗಿ ದುಃಖಿಗಳ ಪ್ರೇಮವೆಲ್ಲವೂ ಸಮಾವೇಶವಾಗುತ್ತದೆ. ಪ್ರಾಣವನ್ನೇ ಪಣವಾಗಿಟ್ಟು ಇವರು ಕುಷ್ಟರೋಗಿಗಳ ಸೇವೆಗೈದರು. ಇವರಿಂದಾಗಿ ಸೇವೆ ಮತ್ತು ಪ್ರೇಮದ ಮಿಷನ್ ಪವಿತ್ರ ಪ್ರಚಾರವಾಯ್ತು.

೩ನೇ ಅಕ್ಟೋಬರ ೧೨೨೬ರಂದು ಇವರು ಪ್ರಾಣತ್ಯಾಗಗೈದರು. ಮರಣೋನ್ಮುಖರಾದಾಗ ಇವರು ತನ್ನ ಚಿಕಿತ್ಸಕ ಡಾಕ್ಟರನ್ನು ಹತ್ತಿರ ಕರೆದು—'ನಿಜ ಹೇಳಿ ನಿಮಗೇನನ್ನಿಸುತ್ತದೆ? ಭಗವಂತನೊಡನೆ ನನ್ನ ಏಕಾತ್ಮತೆಯು ಆಗಿಬಿಟ್ಟಿತು. ಆದುದರಿಂದ ಜೀವಿಸಿರುವುದರಲ್ಲಿ ನನಗೆಷ್ಟು ಆನಂದ ವಾಗುತ್ತಿದೆಯೋ, ಸಾಯುತ್ತಿರುವೆನೆಂದೂ ಅಷ್ಟೇ ಆನಂದವಾಗುತ್ತಿದೆ.' ಇದನ್ನು ಕೇಳಿ ಹಕೀಮನು 'ನಿನ್ನ ಮರಣ ಸಮೀಪಿಸಿದೆ' ಎಂದು ಸ್ಪಷ್ಟವಾಗಿ ಹೇಳಿದನು. ಈ ಉತ್ತರವನ್ನು ಕೇಳಿ ಫ್ರಾನ್ಸಿಸರು ಶಾಂತಿಯಿಂದ ಮಲಗಿ ದೇವನತ್ತ ಕೈ ನೀಡಿ—"ಬಾ ಭಗವಾನ್ ಮೃತ್ಯುವಿನ ರೂಪದಲ್ಲಿ ಬಾ, ನಾನು ನಿನ್ನ ಆಲಿಂಗನಕ್ಕಾಗಿ ಕಾದಿರುವೆನು" ಎಂದೆನ್ನುತ್ತಲೇ ಇವರ ಶರೀರವು ನಿಷ್ಪ್ರಾಣವಾಯ್ತು.

ಮೂಲ: ಠಾಕೂರ್ ಸುದರ್ಶನ ಸಿಂಹ

ಬಾಳು ಬೆಳಗಿದಾಗ

(೨ನೇ ಪುಟದಿಂದ)

ಮೋಹನನೊಮ್ಮೆ, ಯಾವುದೋ ಕೆಲಸಕ್ಕಾಗಿ ತನ್ನ ಗ್ರಾಮಾಧಿಕಾರಿಗಳಲ್ಲಿಗೆ ಹೋದಾಗ ಅವರು ಒತ್ತಾಯದಿಂದ ಒಂದು ಐದು ರೂಪಾಯಿಯ ಪ್ರೈಜ್ ಬೋರ್ಡನ್ನು ಹಿಡಿಸಿದ್ದರು! ಅದನ್ನು ತೆಗೆದುಕೊಳ್ಳದಿದ್ದರೆ ಕೆಲಸವಾಗುವ ಪರಿಸ್ಥಿತಿ ಇರಲಿಲ್ಲ ನಿರ್ವಾಹವಿಲ್ಲದೆ, ಪರಿಸ್ಥಿತಿಯ ಒತ್ತಡದಿಂದ ಅದನ್ನು ಪಡೆದಿದ್ದನು. ಇಂದು; ಗೆಳೆಯರ ಕೈಯಲ್ಲಿದ್ದ ಬಹುಮಾನ ದೊರಕಿದ ಸಂಖ್ಯೆಗಳ ಪಟ್ಟಿಯನ್ನು ಕಂಡವನೇ ಮೋಹನ ತನ್ನ ಸಂಖ್ಯೆ ಬಂದಿದೆಯೇ ಎಂದು ಹುಡುಕಾಡಿದನು. ಏನು ಅದೃಷ್ಟವೋ ಅವನದು! ತನ್ನ ಬೋರ್ಡ್‌ನ ನಂಬ್ರ ಕಂಡವನೇ ಸಂತಸದಿಂದ ನಲಿದಾಡಿದನು. ಆತನಿಗೆ ತೃತೀಯ ಬಹುಮಾನ ಬಂದಿತ್ತು. ಮಳೆಗಾಲದಲ್ಲಿ ಮೋಡಗಳ ಎಡೆಯಿಂದ ಆಕಸ್ಮಾತ್ ಇಣುಕುವ ಸೂರ್ಯನಂತೆ ನಗು ಆತನ ಮೊಗದಲ್ಲಿ ಲಾಸ್ಯವಾಡಿತು

ಆ ದಿನ ಆತನೆದ್ದ ಗಳಿಗೆ ಒಳ್ಳೆಯದಿತ್ತೋ ಏನೋ! ಅಲ್ಲ ಮೊದಲು ನರಿಯನ್ನು ನೋಡಿದ್ದನೋ!! ರಾವ್ ಬಹದ್ದೂರ್ ಚನ್ನ ಬಸಪ್ಪನವರು ಆತನನ್ನು ಅವರ ಕಾರ್ಯದರ್ಶಿ ಸ್ಥಾನಕ್ಕೆ ಆರಿಸಿದ್ದರು. ಮೋಹನನಿಗೆ, ಅದನ್ನು ತಿಳಿಸಲು ಅವನು ಅವರ ಕಾಲು ಹಿಡಿದು ಅಭಿನಂದಿಸಿದನು. ಆತನಿಗೆ ಅನಿರೀಕ್ಷಿತವಾಗಿ ಈ ದಿನ ಸಂತಸದ ಮಳೆ ಗರೆದಿತ್ತು. ಆತನ ಮುಖ ಕಳೆಯಿಂದೊಡಗೂಡಿತ್ತು.

ಮನದಲ್ಲಿ ಸಂತಸವಿದ್ದರೂ, ತಂದೆಯ ಅಸೌಖ್ಯವನ್ನೇ ಚಿಂತಿಸುತ್ತಾ ತನಗೆ ಸಾಧ್ಯವಿದ್ದಷ್ಟು ಜೋರಾಗಿ ಮನೆಗೆ ನಡೆದನು. ಆದರೆ...? ಗುಡಿಸಲಿನ ಸಮೀಪ ಬರುತ್ತಲೇ ತನ್ನ ಮನೆಯಲ್ಲಿ ತುಂಬಾ ರೋದನದ ಸ್ವರ ಕೇಳಿಸಿತು. ಹುಚ್ಚಿದ್ದವನಂತೆ ಓಡಿ ನುಗ್ಗಿದಾಗ ಮೋಹನ ಕಂಡುದೇನು?

ಬಿಳಿ ಬಟ್ಟೆಯಿಂದಾವೃತವಾದ ಶರೀರವೊಂದರ ಬಳಿ ತನ್ನ ತಾಯಿ ಮತ್ತು ಒಡಹುಟ್ಟಿದವರು ಅಳುತ್ತಿದ್ದಾರೆ. ಒಂದು ತೆಂಗಿನೆಣ್ಣೆಯ ದೀಪ ಉರಿಯುತ್ತಿದೆ. ಪರಿಸ್ಥಿತಿಯ ಅರಿವಾಗಲು ಮೋಹನನಿಗೆ ಹೆಚ್ಚು ಸಮಯ ಬೇಕಾಗಿರಲಿಲ್ಲ. ತನಗೊದಗಿದ ಭಾಗ್ಯದ ಮತ್ತು ತನ್ನ ಭವಿಷ್ಯದ ದೀಪ ಬೆಳಗಿದುದನ್ನು ತಿಳಿಸುವ ಅವಲವಿಕೆಯಲ್ಲಿ ಬಂದ ಮೋಹನ ತನ್ನ ಮನೆಯ ಹಿರಿಯ ದೀಪ ನಂದಿದುದನ್ನು ಕಾಣಬೇಕಾಯಿತು. ಯಾರೆಂದು ಶೋಧಿಸುತ್ತಿದ್ದ ಶಂಕರಪ್ಪ ತಿರುಗಿ ನೋಡುವಷ್ಟರಲ್ಲಿ 'ಹಾ! ಅಯ್ಯೋ!' ಎಂದ. ಮೋಹನ ಚೀರಿ ಮೊಸ್ತಿಲಲ್ಲೇ ಬಿದ್ದಿದ್ದನು

—"ಸಚಿತ್ರ" ಯೋತಡ್ಕ

ವಿದ್ಯಾರ್ಥಿಗಳ 2 ಕೈಪಿಡಿಗಳು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವೂ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ
ಬೆಲೆ ರೂ. 1-4-0 (1=25).

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ
0 =25 NP ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರತಿಗಳು— ಮಂಗಳೂರಲ್ಲಿ ಶ್ರೀನಿವಾಸ್ ಬ್ರದರ್ಸ್, ಸ್ಕೂಲ್ ಬುಕ್ ಕೊ, ಕೆನರಾ ಕೊಲೆಜ್ ಬುಕ್ ಕೊ' ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್ ಇವರಲ್ಲಿಯೂ, ಪುತ್ತೂರಲ್ಲಿ ಪಾಪ್ಯುಲರ್ ನ್ಯೂಸ್ ಏಜನ್ಸಿಯಲ್ಲಿಯೂ ದೊರೆಯುತ್ತವೆ.



REGD. No. B. G. 176
LICENCE No. 31
Licensed to Post without Prepayment

ಪುಸ್ತಕ ವಿಮರ್ಶೆ

[ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ. —ಸಂ. ನ.]

ಯಕ್ಷಗಾನ ಪುಷ್ಪವೇಣಿ ಕಲ್ಯಾಣ: ಕೃತಿ ಕರ್ತರು: ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟ, ದೇಲಂಪಾಡಿ. ಪುಟಗಳು ೩೧, ಬೆಲೆ: ರೂ ೦—೬೦.

'ಶ್ರೀಕೃಷ್ಣ ಬೋಧಾಮೃತ'ದಲ್ಲಿ ಕೃಷ್ಣನು ಅರ್ಜುನನಿಗೆ ಸಚ್ಚಿದಾನಂದ ಪ್ರಭಾವವನ್ನು ಉಪದೇಶಿಸಲು ಪುಷ್ಪವೇಣೀ ಕಲ್ಯಾಣದ ಕಥೆಯನ್ನು ತಿಳಿಸುತ್ತಾನೆ. ಮಾಳವ ರಾಜನು ತನ್ನ ಹಿರೀ ಹೆಂಡತಿಯ ಮಗ ಶ್ರುತಕೀರ್ತಿಗೆ ಪಟ್ಟಗಟ್ಟಿ ಆಳಿಸಿದಾಗ, ಆತನ ಸವತಿ ಅಡ್ಡ ಬಂದು, ರಾಜನನ್ನು ಮಂಕುಗೊಳಿಸಿ, ಶ್ರುತಕೀರ್ತಿಯನ್ನು ಹುಲಿಯ ಹಾಲು ತರಲು ಕಾಡಿಗೆ ಕಳಿಸಿದಳು. ಧರ್ಮದೇವಾನುಗ್ರಹದಿಂದ ಕಾಳಿಯ ಕೃಪೆ ಪಡೆದ ಶ್ರುತಕೀರ್ತಿ ಸರ್ವಾಪಾಯಗಳಿಂದಲೂ ಪಾರಾದನು. ಮುಂದೆ, ಆತನ ಪ್ರೇಯಸಿ ಪುಷ್ಪವೇಣಿಯ ಸ್ವಯಂವರವು ನಡೆಯಲು ವೃದ್ಧವೇಶದಿಂದ ಹೋಗಿ ಜಿದ್ದುಗೆದ್ದು ಆಕೆಯನ್ನು ವರಿಸಿದನು. ಆಕೆಯ ಪ್ರೇಮವನ್ನು ಪುಟಕ್ಕಿಟ್ಟು, ಸುಚರಿತ್ರೆಯೆಂದು ಅರಿತುಕೊಂಡ ಬಳಿಕ ತನ್ನ ರಾಜ್ಯ ಸೇರಿ ಸುಖದಿಂದ ರಾಜ್ಯವಾಳಿದನು. ಶ್ರುತಕೀರ್ತಿಯು ಎದುರಿಸಬೇಕಾಗಿ ಬಂದ ಎಲ್ಲ ವಿಪತ್ತುಗಳೂ ಕಾಳಿಯನುಗ್ರಹದಿಂದ ದೂರವಾದುದರಿಂದ ಭಗವದ್ಭಕ್ತರ್ಗೆ ಭವಣೆ ಬಪ್ಪುದೆ? ಎಂಬ ಮಾತು ನಿಜವಾಯಿತು. ಸಚ್ಚಿದಾನಂದನ ಪ್ರಭಾವವೂ ಮನವರಿಕೆಯಾಯಿತು.

ಕೀರಿಕ್ಕಾಡು ಮಾಸ್ತರರು ದಕ್ಷಿಣ ಕನ್ನಡದ ಜಾನಪದ ಸಾಹಿತ್ಯ ಪ್ರಾಕಾರವಾದ ಯಕ್ಷಗಾನ ರೂಪದಲ್ಲಿ ಈ ಕಥೆಯನ್ನು ನಮ್ಮ ಮುಂದಿರಿಸಿದ್ದಾರೆ, ಮನರಂಜನೆಗೆ ಅವಶ್ಯವಾದ ಎಲ್ಲ ವೇಶಗಳನ್ನೂ ಇಲ್ಲಿ ತಂದಿದ್ದಾರೆ. ಕುಂಭಾಸುರನದು ಉತ್ತಮ ಬಣ್ಣದ ವೇಷವೆನಿಸುವುದು, ರಾಗ-ತಾಳಗಳಲ್ಲಿ ಎಲ್ಲವನ್ನೂ ಇಲ್ಲಿನ ಪದ್ಯಗಳಲ್ಲಿ ಅಳವಡಿಸಿದ್ದಾರೆ; ವಾರ್ಧಕ—ಭಾಮಿನಿ ಷಟ್ಪದಿಗಳೂ ಇವೆ. ಕಂದ ಪದ್ಯಗಳು ಬೆರಳೆಣಿಕೆಯಷ್ಟು ಮಾತ್ರ. ಇಲ್ಲಿ ತೋರುವ ಪದ್ಯಗಳ ಸಾಹಿತ್ಯಕ ಮಟ್ಟ ಮಧ್ಯಮ ತರದ್ದು. ಯಕ್ಷಗಾನಕ್ಕೆ ಅಗತ್ಯವಾದ ಶಬ್ದಾಲಂಕಾರಗಳೂ ಅಲ್ಲಲ್ಲಿ ಇಣಿಕಿ ನೋಡುತ್ತೇವೆ. ಸಾಹಿತ್ಯವನ್ನು ಇನ್ನೂ ಉನ್ನತೀಕರಿಸಲು ಅವಕಾಶವಿದೆ ನಿಜ, ಆದರೆ, ಜನತೆಯ ಮಟ್ಟವನ್ನು ಹಿಡಿಯಬೇಕೇ, ಬೇಡವೇ ಎಂಬುದು ಕೃತಿಗಾರರಿಗೆ ಬಿಟ್ಟ ವಿಷಯ. ಮಾಸ್ತರ್ ವಿಷ್ಣು ಭಟ್ಟರ ಹಿಂದಿನ ಕೃತಿಗಳಂತೆಯೇ ಈ ಕೃತಿಯೂ ಯಕ್ಷಗಾನ ಕಲಾವಿದರ ಪ್ರಯೋಗಕ್ಕೆ ಒಳಗಾಗಲಿ; ಶ್ರೀಯುತರಿಂದ ಸಾಹಿತ್ಯ ಸೇವೆ ನಿರರ್ಗಳವಾಗಿ ಸಲ್ಲಲಿ.

ಯಕ್ಷಗಾನ ರಾತ್ರಿ ಶಾಲೆ (ಅಥವಾ ನೈಟ್ ಸ್ಕೂಲ್) ರಚಯಿತರು: ಯು. ಬಿ. ಗೋವಿಂದ ಭಟ್ ಬೆಳ್ಳಿಪ್ಪಾಡಿ. ಪುಟಗಳು ೨೦. ಬೆಲೆ: ರೂ. ೦=೩೦.

ವಿದ್ಯೆಯ ಗಂಧಗಾಳಿಯಿಲ್ಲದ ನಮ್ಮ ಗ್ರಾಮೀಣ ಜನತೆ ಪ್ರಜಾ ಪ್ರಭುತ್ವದ ಮೌಲ್ಯವನ್ನೂ ಕಾರ್ಯ ವಿಧಾನಗಳನ್ನೂ ಅರಿಯರು. ಅಂತಹರಲ್ಲಿ ಈ ವಿಷಯದಲ್ಲಿ ಮನವರಿಕೆ ಮಾಡಿಸುವುದೇ ಈ ಪುಟ್ಟ ಯಕ್ಷಗಾನ ಕೃತಿಯ ಉದ್ದೇಶ. ಗ್ರಂಥ ಕರ್ತರು ತಮ್ಮ ಕೃತ್ಯದಲ್ಲಿ ಯಶಸ್ವಿಯಾಗಿದ್ದಾರೆ. ರಚಿಸಿದ ಪದಗಳಿಗೆ ವಿವರವಾದ ಅರ್ಥವನ್ನೂ ಯಕ್ಷಗಾನ ಧಾಟಿಯಲ್ಲೇ ಬರೆದಿರುವುದು ಸ್ವಾಗತಾರ್ಹವೇ. ಸುಮಾರು ಒಂದು ತಾಸಿನ ಮನರಂಜನೆಯ ಕಾರ್ಯಕ್ರಮಗಳಿಗೆ ಅಳವಡಿಸಿಕೊಳ್ಳುವುದಕ್ಕೆ ಅನುಕೂಲವಾಗಿದೆ ಇದು. ಸುಬ್ರಾಯ ಮಾಸ್ತರರ ಗ್ರಾಮೋದ್ಧಾರದಲ್ಲಿ ಆಸಕ್ತಿ, ಗ್ರಾಮ ಸೇವಕ ಮತ್ತು ಎ. ಸಿ. ಸಿ. ಆಫೀಸರರ ಕರ್ತವ್ಯ ಪರಾಯಣತೆ ಮಾರ್ಗದರ್ಶಕವಿವೆ. ಒಟ್ಟಿನಲ್ಲಿ, ದೇಶವು ಪುನಾರಚನೆಯ ಪಥದಲ್ಲಿ ತೀವ್ರವಾಗಿ ಮುಂದುವರಿಯುತ್ತಿರುವಾಗ, ಆ ಓಟದ ಪಕ್ಷಿ ನೋಟವನ್ನು ನಮ್ಮ ಹಳ್ಳಿಗರಿಗೆ ತೋರಿಸುವ ಈ ಕೃತಿಯು ಸ್ವಾಗತಾರ್ಹ. ಇಂತಹ ಕೃತಿಗಳು ಹೆಚ್ಚು ಹೆಚ್ಚಾಗಿ ಬೆಳಕಿಗೆ ಬರಬೇಕು; ಪ್ರಚಾರವಾಗಬೇಕು. ಗ್ರಾಮೀಣರಲ್ಲಿ ಜಾಗ್ರತಿ ಮೂಡಿಸುವುದಕ್ಕೆ ಈ ದಾರಿಯೇ ತಾರಕ. ಈ ಪವಿತ್ರ ದಾರಿಯನ್ನು ನೆಟ್ಟು ಉಪಕಾರ ಮಾಡಿದ್ದಾರೆ, ಗೋವಿಂದ ಭಟ್ಟರು.

ಮಹಾ ವೀರವಾಣಿ. ಅನುವಾದಕರು ಮತ್ತು ಸಂಪಾದಕರು: ವಿದ್ಯಾಭೂಷಣ ಪಂ. ಕೆ. ಭುಜಬಲಿ ಶಾಸ್ತ್ರಿಗಳು, ಮೂಡಬಿದಿರೆ. ಪ್ರಕಾಶಕರು: ದಿ ಜೈನ ತರುಣ ಸಂಘ, ಲಕ್ಷ್ಮೇಶ್ವರ. ಪುಟಗಳು: ೪೬. ಬೆಲೆ. ಸದುಪಯೋಗ.

ವರ್ಧಮಾನ ಮಹಾವೀರರ ಈ ದಿವ್ಯ ವಾಣಿಯು ಆಗಮ ಗ್ರಂಥಗಳಿಂದ ಸಂಗ್ರಹಿತವಾದುದು, ಜೈನ ಧರ್ಮದ ತತ್ವಗಳನ್ನು ಪ್ರತಿಪಾದಿಸುವ [illegible] ಸೂಕ್ತಿಗಳು ಇಲ್ಲಿವೆ. ಕೇವಲ ಜೈನರಿಗೆ ಮಾತ್ರವಲ್ಲ, ಪ್ರತಿಯೊಬ್ಬ ಧರ್ಮಪ್ರೇಮಿಯೂ ಇವುಗಳನ್ನು ಓದಿ ಮನನ ಮಾಡಿಕೊಂಡಲ್ಲಿ, ತನ್ನ ಧರ್ಮದಲ್ಲಿಯೂ ಇವಕ್ಕೆ ಸಂವಾದಿಯಾದ ಸೂಕ್ತಿಗಳಿವೆಯೆಂಬುದನ್ನು ಅರಿತುಕೊಳ್ಳಬಹುದು. ಮಾನವತೆಯ ಸಂರಕ್ಷಣೆಯೇ ಸಕಲ ಧರ್ಮದ ಉದ್ದೇಶ ತಾನೆ! ಶಾಸ್ತ್ರಗಳ ಸಾಹಿತ್ಯಕ ಭಾಷೆ ಈ ಪುಟ್ಟ ಗ್ರಂಥದಲ್ಲಿಯೂ ಹೊರಪಟ್ಟಿದೆ. ಈ ಪ[illegible] ಯ ಧರ್ಮ ಪ್ರಚಾರವಿದೀಗ ಅಗತ್ಯವೆ[illegible] ಸುತ್ತದೆ.

—ಗೋ[illegible]

ಲಂಚಾಸುರ ವಧೆಯಾಗುವುದೆ?

(೧ನೇ ಪುಟದಿಂದ)

ದೂ ತಿಳಿಯಿತೆಂಬುದು ಸಮಾಧಾನಕರ. ಪ್ರತಾಪ ಸಿಂಹ ಕೈರಾನ, ಆರ್. ಶಂಕರ, ಬೀರೇನ್ ಮಿತ್ರಾ ಮುಂತಾದ ಮಹಾ ಮಹಾ ನಾಯಕ ಮಣಿಗಳನ್ನೂ ಲಂಚಾಸುರನು ತನ್ನ ಮುಷ್ಟಿಯಲ್ಲಿಡಲು ಭಗೀರಥ ಪ್ರಯತ್ನ ಮಾಡುತಿದ್ದಾನೆಂಬ ಅಂಶ ಅವರಲ್ಲಿ ಜಾಗ್ರತಿ ಹುಟ್ಟಿಸಿದರೂ ಇರಬಹುದು. ಅವರು ಗುಡುಗಿದರು: 'ಭ್ರಷ್ಟಾಚಾರವನ್ನು ಕೊನೆಗೊಳಿಸಲೇ ಬೇಕು": ಗೃಹ ಮಂತ್ರಿ ನಂದಾ ಮತ್ತೂ ಮುಂದುವರಿದರು; 'ಇನ್ನೆರಡು ವರ್ಷಗಳಲ್ಲಿ ಈ ಲಂಚಾಸುರನನ್ನು ಓಡಿಸದೆ ಹೋದರೆ, ಅಧಿಕಾರ ನಿರ್ವಹಿಸಲು ನಾವು ಅಸಮರ್ಥರು ಎಂದು ತಿಳಿಯ ಬೇಕಾಗುತ್ತದೆ." ಇಂತಹ ಉದ್ಗಾರಗಳಲ್ಲಿ ಜನತೆ ವಿಶ್ವಾಸವಿಡುವ ಕಾಲ ಎಂದೋ ಸಂದು ಹೋಯಿತು; ನೆಹರು ಮತ್ತು ನಂದಾ ಭ್ರಷ್ಟಾಚಾರವನ್ನು ತಡೆಯಲು ಉಗ್ರಕ್ರಮ ಕೈಕೊಳ್ಳಬೇಕು; ಲಂಚಾಸುರನ ಪ್ರಭಾವಕ್ಕೆ ಬಿದ್ದವನನ್ನು ಕಠಿನವಾಗಿ ದಂಡಿಸುವ ವ್ಯವಸ್ಥೆಯಾಗಬೇಕು. ಭ್ರಷ್ಟಾಚಾರಿಯ ಶೋಧನೆಯಲ್ಲಿ ಭ್ರಷ್ಟಾಚಾರವಾಗದಂತೆ ಎಚ್ಚರಿಕೆ ಬೇಕು. ಸರಕಾರಿ ಯಂತ್ರವು ನ್ಯಾಯಪರವಾಗಿ ಶೀಘ್ರಕಾರ್ಯಶೀಲವಾಯಿತೆಂದರೆ, ಜನ ತಮ್ಮ ಕಾರ್ಯಸಾಧನೆಗೆ ಲಂಚಾಸುರನನ್ನು ಮುಂದು ಮಾಡುವುದಿಲ್ಲ; ಭ್ರಷ್ಟಾಚಾರಿಯ ಶರಣು ಹೋಗುವುದಿಲ್ಲ. ಆದುದರಿಂದ, ನೆಹರು-ನಂದಾ ಮತ್ತಿತರರು ಆಡಳಿತದ ವಿಲಂಬ ನೀತಿಯನ್ನು ನಿವಾರಿಸುವ ಹೊಸ ಉಪಾಯವೊಂದನ್ನು ಸಂಶೋಧಿಸುವುದು ಅಗತ್ಯವಲ್ಲವೆ?

ಜನತೆಯ ಸೌಕರ್ಯಕ್ಕಾಗಿ ಹೊಸ ಬಗೆಯ ಸೇವಿಂಗ್ಸ್ ಬ್ಯಾಂಕ್ ಸೌಲಭ್ಯಗಳು

- ಪ್ರಾಯಕ್ಕೆ ಬಾರದ ಮಕ್ಕಳು ಕೂಡಾ 12 ವರ್ಷಕ್ಕೆ ಮೇಲ್ಪಟ್ಟವರಾದರೆ ತಮ್ಮ ಹೆಸರಿನಲ್ಲೇ ಸೇವಿಂಗ್ಸ್ ಬ್ಯಾಂಕ್ ಖಾತೆಯನ್ನು ತೆರೆಯಬಹುದು.
- ನೀವು ನಿಮ್ಮ ಸೇವಿಂಗ್ಸ್ ಬ್ಯಾಂಕ್ ಖಾತೆಯಿಂದ 1 ವರ್ಷದಲ್ಲಿ 150 ಬಾರಿ ಹಣವನ್ನು ತೆಗೆಯಬಹುದು.
- ನಿಮ್ಮ ಸೇವಿಂಗ್ಸ್ ಬ್ಯಾಂಕ್ ಖಾತೆಯಿಂದ ಎಂದು ಬೇಕಾದರೂ ಎಷ್ಟು ಮೊತ್ತವನ್ನಾದರೂ ಯಾವುದೇ ಪೂರ್ವ ಸೂಚನೆಯಿಲ್ಲದೆ ಹಿಂದೆ ಪಡೆಯಬಹುದು.
- ಸೇವಿಂಗ್ಸ್ ಬ್ಯಾಂಕ್ ಖಾತೆಯ ಮೇಲೆ ಯಾವುದೇ ಖರ್ಚು ವೆಚ್ಚಗಳನ್ನು ವಸೂಲು ಮಾಡಲಾಗುವುದಿಲ್ಲ.

ಸಿಂಡಿಕೇಟ್ ಬ್ಯಾಂಕ್‌ನಲ್ಲಿ ನಿಮ್ಮ ಸೇವಿಂಗ್ಸ್ ಬ್ಯಾಂಕ್ ಖಾತೆಯನ್ನು ತೆರೆಯಿರಿ.

ಚಲಾವಣಾ ಬಂಡವಾಳ ರುಪಾಯಿ 45 ಕೋಟಿಗೂ ಮಿಕ್ಕಿದೆ.

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ಉಡುಪಿ.

ನುಡಿ ಮುತ್ತುಗಳು

ಧೈರ್ಯವೆಂಬ ಚಿನ್ನದ ಬೆಲೆಯನ್ನು ಕಟ್ಟುವುದಕ್ಕೆ ಅಪಜಯವೆ ಒರೆಗಲ್ಲು. [illegible] ಲುವು ಸಿಕ್ಕುತ್ತ ಹೋದ ಹಾಗೆಲ್ಲ ಧೈರ್ಯವು ಉಕ್ಕುವುದೇನೂ ದೊಡ್ಡ ಮಾ[illegible] ತಲ್ಲ. ಆ ಧೈರ್ಯಕ್ಕೇನೂ ಬೆಲೆಯಿಲ್ಲ. ಸೋಲಿನ ಮೇಲೆ ಸೋಲಾದರೂ ಮನಸ್ಸಿನ ಉತ್ಸಾಹವು ತಗ್ಗದಿರುವುದೇ ನಿಜವಾದ ಧೈರ್ಯ. ಗೆಲುವನ್ನು ಅವಲಂಬಿ[illegible] ಬೆಳೆಯುವ ಧೈರ್ಯವು ಹೇಡಿಯಲ್ಲಿ[illegible] ರೂ ವ್ಯಕ್ತವಾಗುವುದು. ಅದು ಹುರುಳಿ[illegible] ದ ಧೈರ್ಯ. ಎಷ್ಟು ಸೋಲಾದರೂ ತಗ್ಗದಿರುವ ಧೈರ್ಯವು ನಿಜವಾದ ಧೀರನ[illegible] ಮಾತ್ರ ಕಾಣಿಸಿಕೊಳ್ಳುವುದು.

- ಶ್ರೀ ಹೊಸಕೆರೆ ಚಿದಂಬರಯ್ಯ

ನಿನ್ನಲ್ಲೇ ಅದ್ಭುತ ಮಹಾಶಕ್ತಿ ತುಂ[illegible] ಬಿರುವಾಗ ಜಗತ್ತಿನ ಯಾವ ವಸ್ತುವು [illegible] ನ್ನನ್ನು ರೋದಿಸುವಂತೆ ಮಾಡಿದೆ? ನಿನ್ನ ಶಕ್ತಿ ವ್ಯರ್ಥವಾಗಿ ನಾನಾ ಕಡೆ ಹರಿದು ಹಂಚಿ ಹೋಗುತ್ತಿದೆ. ವಿವಿಧ ಕಡೆ ಹೋಗುತ್ತಿರುವ ಪ್ರಕೃತಿದತ್ತವಾದ [illegible] ಮಹಾ ಶಕ್ತಿಯನ್ನು ಒಟ್ಟುಗೂಡಿಸು[illegible] ದಾದರೆ ಇಡೀ ವಿಶ್ವವೇ ನಿನ್ನ ಕಾಲಿನ ಬ[illegible] ಗೆ ಬಂದು ಬೀಳುವುದು. ಪಾಪಿಯೆಂದು ದುಃಖಿಯೆಂದು, ಏನೂ ಆಗದವನೆಂದು ಭಾವಿಸಿ ಏಕೆ ಅಳುತ್ತಿರುವೆ?

—ಸ್ವಾಮೀ ವಿವೇಕಾನಂದ

ಸಂಗ್ರಾಹಕ
ಜಿ. ಕೆ. ನಿರ್ಚಾಲ್

ನವಯುಗ

VOL. 43 No. 15 | ಸಂಪುಟ ೪೩ ಸಂಚಿಕೆ ೧೫

NAVAYUGA—Nationalist Weekly ‡‡ ಉಡುಪಿ 12-12-1963 ಗುರುವಾರ ‡‡ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಕೆ. ಸೂರ್ಯನಾರಾಯಣ ಅಡಿಗರು

ದಕ್ಷಿಣ ಕನ್ನಡ ಜಿಲ್ಲೆಯ ನಿಷ್ಠಾವಂತ ಕಾಂಗ್ರೆಸಿಗರಲ್ಲಿ ಎದ್ದು ತೋರುವ ಹೆಸರೆಂದರೆ ಶ್ರೀ ಅಡಿಗರದು. ೧೯೫೭ರಲ್ಲಿ ಚುನಾವಣೆಯಲ್ಲಿ ಸೋಲನ್ನುಂಡರೂ, ಅದರಿಂದ ಅವರು ಬೆಂಕಿಗಿಟ್ಟ ಚಿನ್ನದಂತೆ ಪುಟವಾಗಿದ್ದಾರೆ. ಅವರು ಮಂಗಳೂರು ನಗರ ಸಭೆಯ ಅಧ್ಯಕ್ಷರಾಗಿ ಸಲ್ಲಿಸಿದ ಸೇವೆಯನ್ನು ಮಂಗಳೂರ ನಾಗರಿಕರು ಎಂದೆಂದಿಗೂ ಮರೆಯುವಂತಿಲ್ಲ. ಶ್ರೀ ಅಡಿಗರದು ಸತ್ಯಕ್ಕೆ ಸರಿಯಾದ ನಿಷ್ಪಕ್ಷಪಾತ ಸೇವೆ. ಅವರು ಮುಂದಿಡುವ ವಿಚಾರ ಹಾಗೂ ಧೋರಣೆಗಳು ಆಳವಾದ ಅಭ್ಯಾಸ ಹಾಗೂ ಅನುಭವದಿಂದ ಮೂಡಿ ಬಂದವುಗಳು. ಅಂತಲೇ ಅವುಗಳು ಯಶಸ್ವಿಯಾಗುತ್ತಿವೆ. ಅವರು ಸತ್ಯಪ್ರಿಯರು. ಇದ್ದುದನ್ನು ಇದ್ದಂತೆಯೇ ನುಡಿಯುವ ಅವರ ಭಾಷಣ, ಹಲವರಿಗೆ ಅಪ್ರಿಯವೆನಿಸಲೂ ಬಹುದು. ಆದರೆ ಕೇವಲ ಜನರಂಜನೆಯನ್ನೇ ಗುರಿಯಾಗಿಟ್ಟು ಅವರು ಸತ್ಯಕ್ಕೆ ದೂರವಾದ ಮಾತುಗಳನ್ನು ಎಂದಿಗೂ ನುಡಿಯುವವರಲ್ಲ.

ಶ್ರೀಯುತ ಅಡಿಗರು ಸಾರ್ವಜನಿಕ ಕಾರ್ಯಗಳ ಅತಿ ಉತ್ಸಾಹದಿಂದ ಭಾಗವಹಿಸುವವರು. ನಿರಾಡಂಬರ ಹಾಗೂ ಸರಳ ಜೀವಿಗಳು. ಅವರು ದಕ್ಷರಾದ ವಕೀಲರಾದಂತೆ, ವಿಚಕ್ಷಣ ರಾಜಕಾರಣಿಯೂ ಹೌದು ತನ್ನ ವಕೀಲ ವೃತ್ತಿಯ ಜತೆಗೆ ಜಿಲ್ಲಾ ಕಾಂಗ್ರೆಸಿನ ಕಾರ್ಯದರ್ಶಿಗಳಾಗಿ ಅವರು ಕಾಂಗ್ರೆಸಿನ ಹಾಗೂ ತನ್ಮೂಲಕ ಜನತೆಯ ಸೇವೆಯನ್ನು ಮಾಡುತ್ತಿದ್ದಾರೆ. ಅವರು ಸಾರ್ವಜನಿಕ ಕ್ಷೇತ್ರದಲ್ಲಿ ಮಾತ್ರವಲ್ಲ ಬ್ಯಾಂಕಿಂಗ್ ಉದ್ದಿಮೆಯಲ್ಲೂ ಪಳಗಿದವರು. ಕರ್ನಾಟಕದಲ್ಲಿ ಸುಪ್ರಸಿದ್ಧವೆನಿಸಿದ ಕರ್ನಾಟಕ ಬ್ಯಾಂಕಿನ ಚೇರ್‌ಮೇನ್‌ರಾಗಿ ಅವರು ಬ್ಯಾಂಕಿಂಗ್ ಕ್ಷೇತ್ರದಲ್ಲೂ ಬಹಳಷ್ಟು ಯಶಸ್ವಿ ಗಳಿಸಿದ್ದಾರೆ

ಸಾಮಾಜಿಕ ಜೀವನದಲ್ಲಿ ಅಡಿಗರು ಕೈಹಾಕದ ಕ್ಷೇತ್ರವಿಲ್ಲ. ಹೃತ್ಪೂರ್ವಕ ಸೇವೆ ಹಾಗೂ ನಿರಾಡಂಬರ ವ್ಯಕ್ತಿತ್ವವೇ ಅವರು ಜನಪ್ರಿಯರಾಗಲು ಕಾರಣವೆನಿಸಿವೆ. ನಮ್ಮ ಜಿಲ್ಲೆ ಅವರಿಂದ ಇನ್ನೂ ಹೆಚ್ಚಿನ ಸೇವೆ ನಿರೀಕ್ಷಿಸ ಬಹುದು. ನಿರಾಡಂಬರ ಸೇವೆಯ ಪಾಠ ಕಲಿಯ ಬಹುದು.

ವಿ. ಎಸ್. ಕುಡ್ವರು

ಶ್ರೀಯುತ ಕುಡ್ವರ ಹೆಸರು ಇಂದು ದಕ್ಷಿಣ ಕನ್ನಡದಲ್ಲಿ ಮಾತ್ರವಲ್ಲ ಇಡಿಯ ಭಾರತದಲ್ಲೂ ಮನೆ ಮಾತಾಗಿದೆ. ಅವರ ಸಂಪಾದಕತ್ವದಲ್ಲಿ ಹೊರಡುತ್ತಿರುವ "ನವಭಾರತ" ದೈನಿಕ ಕರ್ನಾಟಕದ ಕೆಲವೇ ದೈನಿಕಗಳಲ್ಲಿ ಜನಪ್ರಿಯವೆನಿಸಿದೆ. ಹೀಗಾಗಿ ಶ್ರೀಯುತ ಕುಡ್ವರನ್ನು ನಮ್ಮ ಜಿಲ್ಲೆಯ ಮಕ್ಕಳಿಂದ ಹಿಡಿದು ಮುದುಕರ ವರೆಗೆ ಎಲ್ಲರೂ ತಿಳಿದಿದ್ದಾರೆ. ೧೯೩೦ರ ಕಾಂಗ್ರೆಸಿನ ಆಂದೋಲನದಲ್ಲಿ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಯಾಗಿದ್ದ ಶ್ರೀ ಕುಡ್ವರು ಕಾಲೇಜು ತ್ಯಜಿಸಿ ಧುಮುಕಿದರು ಅಲ್ಲಿಗೇ ಅವರ ಇಂಜಿನಿಯರಿಂಗ್ ಶಿಕ್ಷಣ ನಿಂತರೂ, ಅವರಲ್ಲಿದ್ದ ತಾಂತ್ರಿಕ ಪ್ರವೃತ್ತಿ ಸುಮ್ಮನಿರಲಿಲ್ಲ ಶ್ರೀಯುತ ಕುಡ್ವರು ದಕ್ಷಿಣಕನ್ನಡದ ಬಸ್ಸು ಸಾರಿಗೆಯಲ್ಲಿ ಅಗ್ರಸ್ಥಾನಗಳಿಸಿದ ಸಿ. ಪಿ. ಸಿ. ಕಂಪೆನಿಯ ಅಭ್ಯುದಯಕ್ಕೆ ಕಾರಣರಾದರು. ಇಂದು ಈ ಕಂಪೆನಿಯು ಬಸ್ಸು ಸಾರಿಗೆಯಲ್ಲಿ ಮಹತ್ತರ ಸ್ಥಾನಗಳಿಸಿದೆ.

ಶ್ರೀಯುತ ಕುಡುವರು ಸಾಹಸಿಗರು. ಅವರು ಭಾರತದಲ್ಲೇ ಹಿರಿದೆನಿಸಿದ "ಕೆನರಾ ಸ್ಪ್ರಿಂಗ್ಸ್" ಸಂಸ್ಥೆಯ ಸ್ಥಾಪನೆಗೆ ಕಾರಣಪುರುಷರು. ಇಂದು ಕೆನರಾ ಸ್ಪ್ರಿಂಗ್ಸ್ ಭಾರತದ ಎಲ್ಲೆಡೆಗಳಲ್ಲೂ ತಾಳಿಕೆ ಹಾಗೂ ಬಾಳಿಕೆಗಳಿಗೆ ಜನಪ್ರಿಯವೆನಿಸಿದೆ ಉದ್ದಿಮೆ ರಂಗದಲ್ಲಿ ಶ್ರೀ ಕುಡುವರ ಹೆಸರು ಅಚ್ಚಳಿಯದೆ ಉಳಿಯುವಂತಹುದು.

ಶ್ರೀಯುತ ಕುಡುವರು ಪತ್ರಿಕೋದ್ಯಮದಲ್ಲಿ ತುಂಬಾ ದುಡಿದವರು, ಹಾಗೂ ದುಡಿಯುತ್ತಿರುವವರು. ದೇಶದ ಸ್ವಾತಂತ್ರ್ಯ ಹೋರಾಟದ ಕಾಲ ಅವರು ತನ್ನ ಲೇಖನಗಳಿಂದ ಕ್ರಾಂತಿಕಾರರೆನಿಸಿದರು. ಕಾಂಗ್ರೆಸಿನ ಮುಖ ಪತ್ರಿಕೆಯಾಗಿದ್ದ "ಸತ್ಯಾಗ್ರಹಿ", "ಸಾರಸ್ವತ' ಎಂಬ ಕೊಂಕಣಿ ಪತ್ರಿಕೆ "ಸ್ವದೇಶಾಭಿಮಾನಿ" ಮೊದಲಾದುವುಗಳಲ್ಲಿ ದುಡಿದು ಪತ್ರಿಕಾ ರಂಗದಲ್ಲಿ ಅಪಾರ ಅನುಭವಗಳಿಸಿದ್ದಾರೆ. ಆ ಅನುಭವದಿಂದ ಮೂಡಿಬಂದುದು ನವಭಾರತ" ದೈನಿಕ ಶ್ರೀಮಂತ ಕುಡುವರ ಮುಂದಾಲೋಚನೆಯುಳ್ಳ ಪ್ರಗತಿಶೀಲ ವ್ಯಕ್ತಿಗಳು ಅವರ ಅಪರೂಪವಾದ ಧೈರ್ಯ ಹಾಗೂ ಕಾರ್ಯದಕ್ಷತೆಗಳಿಂದ ಜಿಲ್ಲೆಯ ಜನತೆ ಇನ್ನೂ ಹೆಚ್ಚಿನ ಲಾಭ ಪಡೆಯ ಬಹುದು



ಎಂ. ಮಧ್ವರಾಜ

ಅತಿ ಚಿಕ್ಕ ಪ್ರಾಯದಲ್ಲಿ ಅತಿ ದೊಡ್ಡ ಜವಾಬ್ದಾರಿಯ ಸ್ಥಾನವನ್ನೇರಿದ ತರುಣರಾದ ಶ್ರೀಯುತ ಮಧ್ವರಾಜರು, ಮೈಸೂರು ವಿಧಾನ ಸಭೆಯಲ್ಲಿ ಉಡುಪಿ ಮತದಾರ ಕ್ಷೇತ್ರವನ್ನು ಕಾಂಗ್ರೆಸ್ ಸಂಸ್ಥೆಯ ಸದಸ್ಯರಾಗಿ ಪ್ರತಿನಿಧೀಕರಿಸುತ್ತಿದ್ದಾರೆ. ಎರಡನೇ ಮಹಾ ಚುನಾವಣೆಯಲ್ಲಿ ಉಡುಪಿಯಲ್ಲಿ ಕಾಂಗ್ರೆಸಿಗೆ ಸೋಲು ಪ್ರಾಪ್ತವಾದಾಗ, ಮುಂದೆ ಇಲ್ಲಿ ಪುನಃ ಕಾಂಗ್ರೆಸಿನ ಯಶಸ್ಸು ಅಸಾಧ್ಯ ಎಂದೇ ನಂಬಿದ್ದಾಗ, ಮೂರನೇ ಚುನಾವಣೆಯಲ್ಲಿ, ಈ ನಂಬಿಗೆಯನ್ನು ಸುಳ್ಳಾಗಿಸಿ, ಕಾಂಗ್ರೆಸಿಗೆ ಪ್ರಚಂಡ ಬಹುಮತ ದೊರಕಿಸಲು ಪ್ರಯತ್ನಿಸಿದವರು ಇವರು ಹೆಸರೇ ಸೂಚಿಸುವಂತೆ ಅವರದು ರಾಜಾಮರ್ಜಿ. ಎಲ್ಲದರಲ್ಲೂ, ಅವರು ಧಾರಾಳಿಗಳು. ಹೊಸ ವಿಚಾರ ಹಾಗೂ ಕಾರ್ಯಗಳೆಂದರೆ ಅವರಿಗೆ ಎಲ್ಲಿಲ್ಲದ ಉತ್ಸಾಹ ಹಾಗೂ ಅಭಿರುಚಿ.

ಶ್ರೀಯುತ ಮಧ್ವರಾಜರು ತಮ್ಮ ಹಿರಿಯರು ನಡೆಸಿಕೊಂಡು ಬಂದ ಮತ್ಸ್ಯ ವ್ಯವಸಾಯವನ್ನೇ ಅಳವಡಿಸಿಗೊಂಡು ಅದರಲ್ಲಿ ಕಾಲಕ್ಕನುಗುಣವಾದ ಬದಲಾವಣೆಗಳನ್ನು ಮಾಡಿದವರು. ಅವರು ಮಲ್ಪೆಯಲ್ಲಿ ಸ್ಥಾಪಿಸಿದ ಕೊರೊನೆಟ್ ಕ್ಯಾನಿಂಗ್ ಕಂಪೆನಿ ಹಾಗೂ ಮಂಗಳೂರಿನ ಕರ್ನಾಟಕ ಫಿಶರೀಸ್ ಕಾರ್ಪೊರೇಶನ್ ಎಂಬ ಸಂಸ್ಥೆಗಳು ಇಂದು ವಿದೇಶದಲ್ಲಿ ಕೂಡಾ ಪ್ರಸಿದ್ಧಿ ಹೊಂದಿವೆ.

ಇತ್ತೀಚೆಗೆ ವಿದೇಶ ಸಂಚಾರಕ್ಕೆ ಕೈಕೊಂಡು ಮರಳಿ ಬಂದ ಮಧ್ವರಾಜರು ಮತ್ಸ್ಯವ್ಯವಸಾಯದಲ್ಲಿ ಹಲವಾರು ಹೊಸ ಸುಧಾರಣೆಗಳ ಕುರಿತು ಅಭ್ಯಾಸಿಸಿ, ತಿಳಿದು ಬಂದಿರಬಹುದು.. ಅವರು ವಿದೇಶದಲ್ಲಿ ಗಳಿಸಿದ ಅನುಭವ ಹಾಗೂ ಜ್ಞಾನಗಳ ಲಾಭವನ್ನು ಕರ್ನಾಟಕದ ಕರಾವಳಿಯ ಜನತೆ ಪಡೆಯದೆ ಉಳಿಯಲಾರದು. ಜಿಲ್ಲೆಯ ಉತ್ಸಾಹಿ ಕಾರ್ಯಕರ್ತರಾದ ಮಧ್ವರಾಜರು ಉಜ್ವಲ ಭವಿಷ್ಯವುಳ್ಳ ತರುಣ ಜನಪ್ರತಿನಿಧಿಗಳು. ಕಾಂಗ್ರೆಸಿನ ನಿಷ್ಠಾವಂತ ಸದಸ್ಯರಾದ ಅವರಿಂದ ಕಾಂಗ್ರೆಸು ಹಾಗೂ ಜನತೆ ಇನ್ನು ಹೆಚ್ಚಿನ ಸೇವೆಯನ್ನು ನಿರೀಕ್ಷಿಸಿದರೆ ಅದು ತಪ್ಪಲ್ಲ.

ಸುಳ್ಳು ಪೂರ್ಣ ಸುಳ್ಳೇ ಆಗಿದ್ದರೆ ಅದನ್ನದರಿಸಿ ಸದೆಬಡೆಯ ಬಹುದು, ಆದರೆ ಸುಳ್ಳಿನಲ್ಲಿ ಸತ್ಯದ ಅಂಶವಿದ್ದರೆ ಅದನ್ನೆದುರಿಸುವುದು ಬಹು ಕಷ್ಟ.

—ರಾಜಾಜಿ.

ಕೆಟ್ಟ ಮಗನು ಹುಟ್ಟಬಹುದು; ಕೆಟ್ಟ ತಾಯಿ ಮಾತ್ರ ಎಂದೆಂದಿಗೂ ಹುಟ್ಟುವುದಿಲ್ಲ.

—ಶ್ರೀ ಶಂಕರಾಚಾರ್ಯ.

ಯಶಸ್ಸು, ಎದೆಗಾರಿಕೆಯಿಂದ ಯಾರು ಕಾರ್ಯವೆಸಗುತ್ತಾರೋ ಅವರಿಗೆ ಬರುತ್ತದೆ, ಹೇಡಿಗಳಿಗೆ ಅದು ದೊರಕುವುದು ವಿರಳ. —ನೆಹರು.

ನಾರದ ಕತೆ

ಕಾಲ ಕೂಡಿಬಂದಾಗ....

ಸಾಧಾರಣ ಬೆಳಗ್ಗೆ ಹತ್ತು ಗಂಟೆಯ ಸಮಯ. ಹೊರಗಿನ ಬಾಗಿಲಿನಿಂದ "ಭವತಿ ಭಿಕ್ಷಾಂ ದೇಹಿ" ಎನ್ನುವ ಸ್ವರ ಕೇಳಿಸಿತು. ದಿನಾಲೂ ಇದು ಸರ್ವಸಾಧಾರಣವಾಗಿ ಎಲ್ಲರ ಮನೆಯ ಮುಂದೆ ಕೇಳಿ ಬರುವ ಸಾಮಾನ್ಯ ಸ್ವರ.

ಶಾಂತಳು ಅಡಿಗೆ ಮನೆಯಲ್ಲಿ ತನ್ನ ದಿನದ ಕೆಲಸದಲ್ಲಿ ತೊಡಗಿದ್ದಳು. ಅಡಿಗೆಗೆ ಬೇಕಾಗುವ ಸಾಮಾನುಗಳನ್ನು ತರ ಹೋದ ಆಳು ಹೋಗಿ ಗಂಟೆ ಎರಡಾದರೂ ಪೇಟೆಯಿಂದ ಮರಳಿ ಬಂದಿರಲಿಲ್ಲ. ಶಾಂತಳ ಗಂಡ ಮಾಧವನು ಆಫೀಸಿಗೆ ಹೊರಟು ಹೋಗಿದ್ದನು. ಮನೆಯಲ್ಲಿ ಆಕೆ ಮತ್ತು ಆರು ವರುಷದ ಮಗಳು ಪರಿಮಳ ಮಾತ್ರ ಇದ್ದರು. "ಪರಿಮಳ—ಪರಿಮಳ" ಶಾಂತಳು ಅಡಿಗೆ ಮನೆಯಿಂದಲೇ ಮಗಳನ್ನು ಕೂಗಿದಳು. "ಕರೆದೆಯಾ—ಅಮ್ಮ ಬಂದೆ" ಎಂದು ಪರಿಮಳ ತಾಯಿಯ ಕಡೆಗೆ ಧಾವಿಸಿ ಬಂದಳು.

"ಎಷ್ಟು ಕೂಗಿದೆ ಗೊತ್ತುಂಟೇ? ಕರೆದು ಕರೆದು ಗಂಟಲು ಆರಿದರೂ—ಕೂಗಿದೆಯೂ ಅನ್ನುತ್ತೀಯಾ!"

"ಏನಮ್ಮಾ ನೀನು ಸದಾ ಹೀಗೆ ಹೇಳುತ್ತೀಯಾ?"

"ಇಲ್ಲ—ನೀನು ಯಾವಾಗಲೂ ಬೀದಿಯಲ್ಲಿ ಆಟವಾಡುತ್ತೀರು. ಅಡಿಗೆಯ ಕಾರ್ಯವಿನ್ನೂ ಪ್ರಾರಂಭ ಮಾಡಿಲ್ಲ. ಪೇಟೆಗೆ ಹೋದ ಆಳು ಇನ್ನೂ ಮರಳಿ ಬಂದಿಲ್ಲ; ಈಗಲೇ ಗಂಟೆಯಾಗುತ್ತಾ ಬಂತು. ಇನ್ನೇನು ಅನ್ನುವಷ್ಟರಲ್ಲಿ ನಿನ್ನ ತಂದೆಯವರು ಊಟಕ್ಕೆ ಬಂದುಬಿಡುತ್ತಾರೆ. ಅದಲ್ಲದೆ ನಮ್ಮ ಮನೆಗೆ ದಿನಾಲು ಬರುವ ಸಾಧುಗಳು ಬರುವ ಹೊತ್ತಾಗುತ್ತಾ ಬಂತು. ನೋಡು ಮಗೂ ಹೀಗೆಲ್ಲಾ ಬೀದಿಯಲ್ಲಿ ಆಡಬೇಡ. ತಿಳಿಯಿತೆ?" ಎಂದು ಬುದ್ಧಿಯ ಬೀಜವನ್ನು ಎಳೆಯ ಮಗುವಿನಲ್ಲಿ ಬಿತ್ತಿದ್ದಳು.

"ಇಲ್ಲಮ್ಮ, ನಾನು ಆಟವಾಡುತ್ತಿಲ್ಲ. ಬದಲಾಗಿ ನಮ್ಮ ಮನೆಗೆ ಬರುವ ಸಾಧುಗಳನ್ನು ಕಾಣುವುದಕ್ಕಾಗಿ ಬೀದಿಯಲ್ಲಿದ್ದೆ ಅಷ್ಟೇ!" ಎಳೆ ಮಗುವಾದರೂ ಪ್ರೇಮದ ಮಾತು ಹರಿತವಾಗಿ ಬರುತ್ತಿತ್ತು.

ಮಾಧವನು ಊಟಕ್ಕೆಂದು ತನ್ನ ಇಬ್ಬರು ಗೆಳೆಯರನ್ನು ಕರೆದುಕೊಂಡು ಬಂದಿದ್ದನು. ಮನೆಗೆ ಬಂದೊಡನೆ ತನ್ನ ಪ್ರೀತಿಯ ಮಗಳಾದ ಪರಿಮಳಳನ್ನು ಕೂಗಿದನು. "ಪರಿಮಳಾ—ಎಲ್ಲಿ ತಾಯಿಯನ್ನು ಕರೆಯಮ್ಮಾ. ಊಟಕ್ಕೆ ಬಡಿಸಲು ಹೇಳಮ್ಮಾ. ತಿರುಗಿ ಆಫೀಸಿನತ್ತ ಹೋಗುವುದು ಬೇಡವೆ?" ಎಂದು ಮಗುವಿನೊಂದಿಗೆ ಚಕ್ಕಂದವಾಡಲು ಪ್ರಾರಂಭಿಸಿದ. ತಂದೆ ಹೇಳಿ ಕಳುಹಿಸಿದ ನುಡಿಯನ್ನೇ ಮಗು ತಾಯಿಗೆ ತಿಳಿಸಿತು. ಶಾಂತಳು ಪತಿದೇವರಿಗೆ ಹೆದರಿ ಬೇಗನೇ ಎಲೆಯನ್ನು ಹಾಕಿ ಬಡಿಸಿದಳು. ಊಟ ಇನ್ನೂ ಪೂರ್ತಿಯಾಗಿ ಮುಗಿದಿಲ್ಲ. "ಅಮ್ಮಾ ಅಮ್ಮಾ, ಸಾಧು ಬಂದನೆ"ಂದು, ಸಾಧುಗಳ ನಿರೀಕ್ಷಣೆಯಲ್ಲಿದ್ದ ಮಗು ಪರಿಮಳ ಓಡಿಬಂದು ಹೇಳಿದಳು. ಪರಿಮಳ ಯಾವಾಗಲೂ ಸಾಧುಗಳಿಗೆ ಭಿಕ್ಷೆಯಿತ್ತನಂತರವೇ ಊಟ ಮಾಡುವ ಪದ್ಧತಿ. ಅರ್ಧ ಬಡಿಸುತ್ತಿರುವ ಶಾಂತಳು ಗಂಡನ ಹತ್ತಿರ ಈಗ ಬರುವೆನೆಂದು ಹೇಳಿ, ಹೊರಗೆ ಬಂದು ಸನ್ಯಾಸಿಗೆ ಭಿಕ್ಷೆಯಿತ್ತು ಮರಳಿ ಬಂದಳು.

ಮಾಧವನಿಗೆ ಕೋಪ ನೆತ್ತಿಗೇರಿತು. ತನ್ನ ಗೆಳೆಯರಿರುವಾಗ, ಅವರಿಗೆ ಅರ್ಧಮರ್ಧ ಊಟ ಬಡಿಸಿ, ಅದರ ಮಧ್ಯೆ ಭಿಕ್ಷುಕನಿಗೆ ಭಿಕ್ಷೆ ನೀಡುವುದೆಂದರೇನು? ಅದರಿಂದ ನನ್ನ ಗೆಳೆಯರಿಗೆಷ್ಟು ಬೇಸರವಾಗಿರ ಬಹುದು? ನನ್ನ ಮಾನಕ್ಕೆ ಅಪಮಾನ; ಧಕ್ಕೆ ಬಂತಲ್ಲಾ! ಒಂದು ದಿನ ಶಾಂತಳಿಗೂ, ಜತೆಗೆ ಭಿಕ್ಷುಕನಿಗೂ ನಾನೇ ಪಾಠ ಕಲಿಸುತ್ತೇನೆಂದು ಮನಸ್ಸಿನಲ್ಲಿ ಮುಂದಿಗೆ ತಿಂದು; ಬಂದ ಸಿಟ್ಟನ್ನು ನುಂಗಿಕೊಂಡು ಆಫೀಸಿನತ್ತ ಕಾರನ್ನು ತಿರುಗಿಸಿದನು.

ಸನ್ಯಾಸಿಯಾದರೂ ನಿಜವಾದ ಸನ್ಯಾಸಿ. ಕಪಟಿಯಲ್ಲ. ಬರೇ ಕಾವಿ ವಸ್ತ್ರವನ್ನು ಧರಿಸಿ ನಾನು ಸನ್ಯಾಸಿಯೆಂದು ಮಾಡಬಾರದ ಅಕೃತ್ಯಗಳನ್ನು ಮಾಡುವ ಸಾಧುವಲ್ಲ. ಜೀವನದಲ್ಲಿ ಜಿಗುಪ್ಸೆಹೊಂದಿ ಸಂಸಾರಿಕ ಜೀವನದಿಂದ ಬಂಧಮುಕ್ತನಾಗಿ. ಬೀದಿಯಲ್ಲಿ ಅಲೆದಲೆದು ತಿರುಪೆಯೆತ್ತಿ ಅದರಿಂದಲೇ ತೃಪ್ತನಾಗಿ' ಜೀವನವನ್ನು ಸಾಗಿಸುತ್ತಿದ್ದ ಸಾಧು. ಹಣ್ಣಾದ ಗಡ್ಡವು, ಇಳಿದ ಹೃದಯ ಕಮಲವನ್ನು ಆವರಿಸಿತ್ತು. ತಲೆಯು ಬಿಚ್ಚಿಕೊಂಡಿತ್ತು. ಕೂದಲು ಎಣ್ಣೆಯನ್ನು ಕಾಣದೇ, ಸತ್ತೆ ಹೋಗಲೆಂದು ಆಕಾಶದತ್ತ ಕಣ್ಣಿಟ್ಟ ಮೋಘವನ್ನು ಮರೆಹೊಕ್ಕಿದ್ದವು ಕೈಯಲ್ಲಿ ಜಪಮಣಿಸರ ಬಗಲಲ್ಲಿ ಜೋಳಿಗೆ ಅಂತೂ ಜೀವನವೇ ಸಾಧು- ಸಾಧುವೇ ಜೀವನ ಎನ್ನುವಂತಿತ್ತು. ಬೇಸರ, ನೀರಸ ಎರಡೂ ಮೂಡಿಬಂದಿದ್ದವು. ಹೀಗೆ ಅತೃಪ್ತ ಜೀವನವಾದರೂ, ಜೀವನದಲ್ಲಿ ಬೇಸರ ಬಂದಿತ್ತಾದರೂ, ಹೊಟ್ಟೆಯನ್ನು ತುಂಬದಿದ್ದರೆ ಹೇಗೆ ಸಾಧ್ಯ? ಅದಕ್ಕಾಗಿ ದಿನಾಲು ಮಾಧವನ ಮನೆಯ ಕಡೆಗೆ ಬರುತ್ತಿದ್ದ ಆ ಸಾಧು ಸನ್ಯಾಸಿ. ಊಟದ ಹೊತ್ತನ್ನು ನೋಡಿ ಬರುವುದು ಆತನ ಸ್ವಭಾವ. ಅದಕ್ಕೆ ಸರಿಯಾಗಿ ಶಾಂತಾಳ ಧೆರ್ಯ ಗುಣ ತಾನು ಮಾಡಿದುದರಲ್ಲಿಯೇ, ತಾನು ಶ್ರೀಮಂತಳೆಂಬುದನ್ನು ಗಮನಕ್ಕೆ ತಾರದೇ ಸಾಧುವಿಗೆ ಅನ್ನವನ್ನು ಭಿಕ್ಷೆಯಾಗಿ ನೀಡುತ್ತಿದ್ದಳು. ಅವಳಂತೆ ಪರಿಮಳ. ತಾಯಿಯಂತ ಮಗಳಲ್ಲವೆ?

ಸಾಧು ಸನ್ಯಾಸಿ ದಿನಾಲು ಬಂದಾಗ ಚಿಕ್ಕ ವಯಸ್ಸಿನ ಪರಿಮಳಗೆ ಒಂದಲ್ಲ ಒಂದು ಕತೆಯನ್ನು ಹೇಳಿ, ಅವಳ ಜೀವನದ ಬಗ್ಗೆ ಪಾಠವನ್ನು ಕೊಡುತ್ತಿದ್ದ ತನ್ನ ಕತೆಯ ಮೂಲಕ. ಹಾಗೆಯೇ ಮನೆಗೆ ದಿನಾಲೂ ಬರುತ್ತಿದ್ದ ಸನ್ಯಾಸಿಯಲ್ಲಿ ಪರಿಮಳಗೆ ಸಲಿಗೆ, ವಾತ್ಸಲ್ಯ ಮಮತೆ ಬೆಳೆಯಿತು. ಸನ್ಯಾಸಿ ಬಾರದೇ ಇದ್ದರೆ ಅಂದು ಪರಿಮಳಗೆ ಊಟವಿಲ್ಲ ಅಂತಹ ಪರಿಸ್ಥಿತಿಯೂ ಬಂತು – ವಾತ್ಸಲ್ಯದಿಂದ.

ಸಿಟ್ಟು ಕವಲೊಡೆದು ದಾರಿ ಎರಡಾಯಿತು. ಒಂದು ದಾರಿ ಶಾಂತಳಿಗೆ ಬುದ್ಧಿ ಕಲಿಸ ಬೇಕೆಂದೂ, ಇನ್ನೊಂದು ಕಡೆಯಿಂದ ಸಾಧುಗಳಿಗೆ ಬುದ್ಧಿ ಕಲಿಸ ಬೇಕೆಂದೂ ತಿಳಿದುಕೊಂಡು ಮಾಧವನು ಅಂದು ರಾತ್ರಿ ಮನೆಗೆ ಬರುವುದಿಲ್ಲವೆಂದು ಆಳಿನೊಡನೆ ಹೇಳಿಕಳುಹಿಸಿದನು.

ಶ್ರೀಮಂತ ಕುಟುಂಬದಲ್ಲಿ ಬೆಳೆದು ಬಂದ ಮಾಧವನ ತಂದೆಗೆ ಆತನು ಒಬ್ಬನೇ ಮಗನು. ಆದರ ಸಂಪೂರ್ಣ ಅಧಿಕಾರವು ಈತನ ಕೈಯಲ್ಲಿತ್ತು. ತನ್ನ ಶ್ರೀಮಂತಿಕೆಯ ಗರ್ವದಲ್ಲಿ ಲೋಕವೇ ತನ್ನದೆಂದು ಹೇಳಿಕೊಳ್ಳುವುದೇ ವಿನಃ ಜನರು ಆತನಿಗೆ ಎಳ್ಳಷ್ಟು ಗೌರವ ಆದರವನ್ನು ತೋರಿಸುತ್ತಿರಲಿಲ್ಲ. ಬದಲಾಗಿ ಅವನನ್ನು ದ್ವೇಷಿಸುತ್ತಿದ್ದರು ಈ ಹಾಳು ಪ್ರಪಂಚದಲ್ಲಿ ಈಗ ಬೆಲೆಯಿರುವುದಾದರೆ ಅದು ಶ್ರೀಮಂತಿಗೆ, ಹಣದ ಮದದಿಂದ ಯಾರನ್ನು ಏನು ಬೇಕಾದರೂ ಮಾಡಬಹುದೆಂಬ ದೃಢ ಕಲ್ಪನೆ ಶ್ರೀಮಂತರಲ್ಲಿ ತಲೆಮಾರಿನಿಂದಲೂ ಅಡರಿಕೊಂಡು ಬಂದಿದೆ. ಆದರೆ ಲಕ್ಷ್ಮೀ ಚಂಚಲ ಸ್ವಭಾವದವಳು ಎಂದು ಮಾತ್ರ ಅವರು ಅರಿಯರು.

ಮರುದಿನ ಮಾಧವನು ಮನೆಗೆ ಬಂದನು ಬಂದೊಡನೆ ಎಂದಿನಂತೆ ತನ್ನ ಪ್ರೀತಿಯ ಮಗಳಾದ ಪರಿಮಳಳನ್ನು ಕೂಗಿದನು.

ಪರಿಮಳಾ— ಇಂದು ನಿನ್ನ ಸನ್ಯಾಸಿ ಭಿಕ್ಷೆಗೆ ಬಂದಿಲ್ಲವೇ"

"ಇಲ್ಲ— ಇನ್ನೂ ಬಂದಿಲ್ಲ ಅಪ್ಪಾ".

"ಆತನು ಬಂದೊಡನೆ ನನಗೆ ಸುದ್ದಿಯನ್ನು ಮುಟ್ಟಿಸಬೇಕು ತಿಳಿಯಿತೆ? ಹಾಗೆಯೇ ತಾಯಿಯನ್ನು ಬರಲು ಹೇಳು."

ಶಾಂತಳು ನಡುಗುತ್ತಾ ಮಾಧವನ ಸನಿಹಕ್ಕೆ ಬಂದಳು.

"ಶಾಂತಾ, ಅದಾರು ನಿನ್ನೆ ಬಂದಾತ—ಆ ಸನ್ಯಾಸಿ".

"ಯಾಕೆ? ನಿಮಗೇನು ತಪ್ಪು ಸಿಟ್ಟು. ಅವರು ಸಾಧು ಸಂತರು, ಎರಡೂ ತಿಂಗಳಿಂದಲೂ ನಮ್ಮ ಮನೆಗೆ ಬರುತ್ತಲಿದ್ದಾರೆ!

"ಆಹಾ! ಎರಡೂ ತಿಂಗಳಿಂದಲೂ! ಮಾಧವನ ಜೀವ ಹಾರಿ ಹೋದಸಂತಾಯಿತು! ಧೈರ್ಯ ತಂದು ಕೊಂಡ.

"ಸಾಧು, ಸಂತರಂತೆ! ನೀನು ದಿನಾಲು ಹೀಗೆ 'ಧರ್ಮ' ಕೊಡುತ್ತಿರು, ಅವರು ದಿನಾಲು ಬರುತ್ತಿರಲಿ! 'ವೃಥಾ' ಯಾರಿಗೆ ಕೆಲಸ ಮಾಡಲು ಆಗದೇ ಹೀಗೆಯೇ ಕೊಡುವವರಿಂದ ಅವರಿನ್ನೂ ಸೋಮಾರಿಗಳಾಗುತ್ತಾರೆ. ಮನೆಯ ಬಾಗಿಲಿಗೆ ಬಂದೊಡನೆ 'ಧಿಕ್ಕಾರ' ಹಾಕಬೇಕು. ಆಗ ಅವರು ತನ್ನಷ್ಟಕ್ಕೆ ಬೇಡುವುದನ್ನು ಬಿಟ್ಟು ಕೆಲಸ ಮಾಡುತ್ತಾರೆ. ಆದ್ದರಿಂದಲೇ ಇಂದಿನ ವರೆಗೂ ಕೂಡಾ ನಮ್ಮ ಸರಕಾರಕ್ಕೆ ಭಿಕ್ಷುಕರ ಸಮಸ್ಯೆಯನ್ನು ನಿವಾರಿಸಲು ಆಗಲಿಲ್ಲ! ಅದಿರಲಿ ನಿನ್ನೆ ನನಗೆ ಊಟ ಬಡಿಸುವುದಕ್ಕಿಂತಲೂ ಮುಖ್ಯ ಆತನಿಗೆ ಭಿಕ್ಷೆ ನೀಡುವುದಲ್ಲವೆ? ಇಂದು ಆತ ಬರಲಿ ಆತನಿಗೆ ನಾನೇ ಚೆನ್ನಾಗಿ ಪಾಠ ಕಲಿಸುತ್ತೇನೆ."

೦ ೦ ೦

"ಭಿಕ್ಷಾಂದೇಹಿ" ಹೊರ ಬಾಗಿಲಿನಿಂದ ಸಾಧುವಿನ ಸ್ವರ ನಿಧಾನವಾಗಿ ಕೇಳಿಬಂತು.

ಪರಿಮಳಳು ಭಿಕ್ಷೆ ನೀಡಲು ಒಳ ಓಡುತ್ತಿರುವಾಗ ಮಾಧವನು ತಡದು ನಿಲ್ಲಿಸಿ. 'ಪರಿಮಳಾ ಎಲ್ಲಿಗೆ ಹೋಗುವೆ" ಎಂದು ಗದರಿಸಿದನು. ಸಾಧುವಿನೊಡನೆ ಕೆಲವು ಮಾತುಗಳನ್ನು ಆಡಿದನು.

'ನೀನು ಯಾರು"? ಮಾಧವನ ಪ್ರಶ್ನೆ.

"ನಾನು ಸನ್ಯಾಸಿ—ಭಿಕ್ಷುಕ" ಪ್ರಶ್ನೆಗೆ ತಕ್ಕ ಉತ್ತರ.

"ಅದು ನನಗೆ ನಿನ್ನ ಉಡಿಗೆತೊಡಿಗೆಗಳಿಂದ ತಿಳಿಯುತ್ತದೆ".

"ಸರಿ ಮತ್ತೆ, ಕೇಳುವುದೇನುಳಿಯಿತು"

"ನೀನು ಮಾಡುವ ಕೆಲಸ?"

"ತಿರುಪೆಯೆತ್ತಿ ಬೇಡಿ ಜೀವಿಸುವುದು"

"ಸರಿ. ಅದೇ ನಿನಗೆ ಸರಿಯಾದ ವೃತ್ತಿ. ನಿನ್ನ ಈ ದಷ್ಟಪುಷ್ಟವಾಗಿ ಬೆಳೆದ ಶರೀರಕ್ಕೆ ಅದೇ ಕೆಲಸ ಸರಿ. ಬದಲು ದುಡಿದು ತಿನ್ನುವುದಕ್ಕಾಗುತ್ತದೆಯೆ? ಮನೆಯಿಂದ ಮನೆಗೆ ತಿರುಗುವ ಕೆಲಸ ಬಹಳ ಸುಲಭವಲ್ಲವೆ?"

(೧೧ನೇ ಪುಟ ನೋಡಿರಿ)

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕ್ಯಾಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5

2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ

3 ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ; 1920. ಪ್ರಧಾನ ಕಚೇರಿ: ಉಡುಪಿ, ದ ಕನ್ನಡ.



ಹೊಸ ಅಧ್ಯಕ್ಷ

ಲಿಂಡನ್ ಬಿ. ಜಾನ್ಸನ್

ಅಮೇರಿಕದ ೩೬ನೆಯ ಅಧ್ಯಕ್ಷರಾಗಿರುವ ಲಿಂಡನ್ ಬಿ. ಜಾನ್ಸನ್ ರವರಿಗೆ ಸರಕಾರದ ಕಾರ್ಯಾಂಗ, ನ್ಯಾಯಾಂಗಗಳೆರಡರಲ್ಲೂ ವಿಸ್ತೃತ ಅನುಭವವಿದೆ. ಜಾನ್ಸನ್‌ರವರು ೧೯೬೧ರಿಂದ, ೧೯೬೩ನೇ ನವೆಂಬರ ೨೨ರಂದು ಕೆನೆಡಿಯವರ ಕೊಲೆಯಾಗುವವರೆಗೆ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದರು.

ಅನೇಕ ಸಾರ್ವಜನಿಕ ಭಾಷಣಗಳು, ಅನೇಕ ಬಾರಿ ಅವರ ವಿಶಿಷ್ಟ ಆಸಕ್ತಿಯ ವಿಷಯವಾದ ಅಂತರಿಕ್ಷ ವಿಜ್ಞಾನದ ಬಗೆಗೆ—ಮತ್ತು ವಿಸ್ತೃತ ಪ್ರಯಾಣಗಳು ಉಪಾಧ್ಯಕ್ಷರಾಗಿದ್ದಾಗ ಜಾನ್ಸನರು ನಿರ್ವಹಿಸಿದ ಕಾರ್ಯಗಳಲ್ಲಿ ಕೆಲವು. ಅಧಿಕೃತ ಸಂಚಾರಗಳಲ್ಲಿ ಅವರು ದಕ್ಷಿಣ ಏಷ್ಯದ ಹೆಚ್ಚಿನಂಶಕ್ಕೆ (ಭಾರತ, ಪಾಕಿಸ್ತಾನಗಳಲ್ಲಿ ತಂಗಿದ್ದರು), ಸಮೀಪ ಪ್ರಾಚ್ಯ (ಲೆಬನಾನ್, ಟರ್ಕಿ, ಇರಾನ್ ಮತ್ತು ಸೈಪ್ರಸ್‌ಗಳಲ್ಲಿ ತಂಗಿದ್ದರು), ಸ್ಕಾಂಡಿನೇವಿಯನ್ ದೇಶಗಳಿಗೆ ಭೇಟಿಕೊಟ್ಟಿದ್ದರು ಮತ್ತು ಇತ್ತೀಚೆಗೆ ಲಕ್ಸೆಂಬರ್ಗ್, ನೆದರ್‌ಲೆಂಡ್ಸ್ ಮತ್ತು ಬೆಲ್ಜಿಯಂಗೆ ಒಂದು ವಾರದ ಸಂದರ್ಶನವನ್ನು ನೀಡಿದ್ದರು.

ಅಧ್ಯಕ್ಷ ಜಾನ್ಸನರು ೧೯೦೮ರಲ್ಲಿ ಟೆಕ್ಸಾಸಿನ ಸಮೀಪದ ಜಾನ್ಸನ್ ನಗರದಲ್ಲಿ ಜನಿಸಿದರು. ಅವರ ಅಜ್ಜ ಈ ನಗರವನ್ನು ಸ್ಥಾಪಿಸಿದುದರಿಂದ ಇದನ್ನು ಜಾನ್ಸನ್ ನಗರ ಎಂದು ಅವರ ಹೆಸರಿಂದ ಕರೆಯಲಾಗಿದೆ. ಅಧ್ಯಕ್ಷ ಜಾನ್ಸನರು ೧೯೩೦ರಲ್ಲಿ ಸೌತವೆಸ್ಟ್ ಟೆಕ್ಸಾಸ್ ಟೀಚರ್ಸ್ ಕಾಲೇಜಿನಿಂದ ಪದವೀಧರರಾದರು, ಅನಂತರ ವಾಷಿಂಗ್ಟನ್‌ನಲ್ಲಿ ಜಾರ್ಜಟೌನ್ ವಿಶ್ವವಿದ್ಯಾನಿಲಯದಲ್ಲಿ ನ್ಯಾಯಶಾಸ್ತ್ರವನ್ನು ಕಲಿತರು.

೧೯೩೫ರಲ್ಲಿ ಅಧ್ಯಕ್ಷ ಫ್ರಾಂಕ್ಲಿನ್ ಡಿ. ರೂಸವೆಲ್ಟರು ಇವರನ್ನು ಟೆಕ್ಸಾಸ್ ಸಂಸ್ಥಾನದ ರಾಷ್ಟ್ರೀಯ ಯುವಜನ ಆಡಳಿತ ಡೈರೆಕ್ಟರನಾಗಿ ನೇಮಿಸಿದರು. ಅಂದಿನಿಂದ ಜಾನ್ಸನರು ಸಾರ್ವಜನಿಕ ಜೀವನದಲ್ಲಿ ಭಾಗವಹಿಸುತ್ತಿದ್ದಾರೆ. ಜಾನ್ಸನರು ೧೯೩೭ರಲ್ಲಿ ಪ್ರತಿನಿಧಿ ಸಭೆಗೆ ಮತ್ತು ೧೯೪೮ರಲ್ಲಿ ಸೆನೆಟಿಗೆ ಚುನಾಯಿತರಾದರು ೧೯೫೩ರಿಂದ ೧೯೬೧ರ ವರೆಗೆ ಇವರು ಸೆನೆಟಿನಲ್ಲಿ ಬಹುಸಂಖ್ಯಾಕರ ಮುಖಂಡರಾಗಿದ್ದಾಗ, ಬಹಳ ಭಿನ್ನ ಮತಗಳಿರುವ ಸಹಕಾರ್ಯಕರ್ತರೊಡನೆ ವ್ಯವಹರಿಸುವುದರಲ್ಲಿ ದಕ್ಷರೆಂದು ರಾಷ್ಟ್ರವಿಖ್ಯಾತಿ ಪಡೆದರು.

೧೯೬೧ನೇ ಆಗಸ್ಟ್‌ದಲ್ಲಿ ಜಾನ್ಸನರವರು ಬರ್ಲಿನ್ನಿಗೆ ವಿಮಾನಯಾನಮಾಡಿ ಪಶ್ಚಿಮ ಬರ್ಲಿನ್ನಿನ ಮತ್ತು ಪಶ್ಚಿಮ ಜರ್ಮನಿಯ ನಿವಾಸಿಗಳಿಗೆ ಅಧ್ಯಕ್ಷ ಕೆನೆಡಿಯವರ ಭರವಸೆಯ ಸಂದೇಶವನ್ನಿತ್ತರು. ಅಮೇರಿಕವು ಅವರ ಸ್ವಾತಂತ್ರ್ಯಕ್ಕೆ ಭರವಸೆಕೊಡುವುದು ಮತ್ತು ಪೂರ್ವ ಮತ್ತು ಪಶ್ಚಿಮ ಬರ್ಲಿನ್ನಿನ ಗಡಿಗಳನ್ನು ಮುಚ್ಚಿದುದರಿಂದ ಉಂಟಾಗಿರುವ ಕಲಹದಲ್ಲಿ ಅವರಿಗೆ ಬೆಂಬಲ ನೀಡುವುದು ಎಂಬ ಕೆನೆಡಿಯವರ ಆಶ್ವಾಸನೆಯನ್ನು ತಿಳಿಸಿದರು.

ಸೆನೇಟಿನಲ್ಲಿ ಜಾನ್ಸನರು ನಿರ್ವಹಿಸಿದ ಕಾರ್ಯಗಳು, ಅವರು ಅಂತಾರಾಷ್ಟ್ರೀಯ ಶಾಂತಿ, ಸೌಹಾರ್ದಗಳ ಅಭಿವೃದ್ಧಿ ಸಾಧನೆಗೆ ನಿಷ್ಠರಾಗಿರುವರು ಎಂಬುದನ್ನು ಸ್ಪಷ್ಟಪಡಿಸಿದವು ೧೯೪೮ರಲ್ಲಿ ಮೊದಲ ಬಾರಿಗೆ ಸೆನೇಟಿಗೆ ಚುನಾಯಿತರಾಗಿ ಸ್ವಲ್ಪ ಕಾಲವಾದನಂತರ ಅವರು ಇತರ ರಾಷ್ಟ್ರಗಳಿಗೆ ತಾಂತ್ರಿಕ ಸಹಾಯ ನೀಡುವ ಅಧ್ಯಕ್ಷ ಟ್ರೂಮನರ ಚತುರ್ಥಾಂಶ ಕಾರ್ಯಕ್ರಮಕ್ಕೆ ಬಲವಾಗಿ ಅನುಮೋದನೆ ಕೊಟ್ಟರು.

ಇದಕ್ಕೆ ಮುಂಚೆ ೧೯೪೭ರಲ್ಲಿ, ಪ್ರತಿನಿಧಿ ಸಭೆಯ ಸದಸ್ಯರಾಗಿದ್ದ ಅವರು, ದ್ವಿತೀಯ ಪ್ರಪಂಚ ಯುದ್ಧಾನಂತರ ಪಶ್ಚಿಮ ಯುರೋಪಿನ ಆರ್ಥಿಕ ಪುನರುದ್ಧಾರಕ್ಕೆ ಸಹಾಯ ಮಾಡುವ ಮಾರ್ಷಲ್ ಯೋಜನೆಯ ಧನಸಹಾಯಗಳಿಗೆ ಬೆಂಬಲ ಕೊಟ್ಟಿದ್ದರು.

ಜಾನ್ಸನರು ಕಾಂಗ್ರೆಸಿನಲ್ಲಿ ಅತ್ಯಂತ ಪರಿಶ್ರಮದಿಂದ ಕೆಲಸಮಾಡುವ ಸದಸ್ಯರಲ್ಲೊಬ್ಬರು ಎಂದು ಖ್ಯಾತರಾಗಿದ್ದರು. ೧೯೫೫ರಲ್ಲಿ ಹೃದಯ ವ್ಯಾಧಿಯಿಂದಾಗಿ ಅನೇಕ ತಿಂಗಳುಗಳ ವರೆಗೆ ಅವರು ಕಾರ್ಯ ನಿರ್ವಹಿಸಲು ಅಸಮರ್ಥರಾದರು ಪೂರ್ಣ ಚೇತರಿಸಿದ ನಂತರ ಅವರು ಹೆಚ್ಚಿನ ಚೈತನ್ಯದಿಂದ ತಮ್ಮ ಸೆನೇಟ್ ಕಾರ್ಯಗಳಿಗೆ ತೊಡಗಿದರು.

ಲಿಂಡನ್ ಜಾನ್ಸನರು ೧೯೩೪ರಲ್ಲಿ ಕ್ಲಾಡಿಯಾ ಟೇಯ್ಲರ್‌ಳನ್ನು ಮದುವೆಯಾದರು. ಈಕೆಗೆ "ಲೇಡಿ ಬರ್ಡ್" ಎಂಬ ಜನಪ್ರಿಯ ಹೆಸರೂ ಇದೆ. ಜಾನ್ಸನ್ ದಂಪತಿಗಳಿಗೆ ಲಿಂಡಾ ಬರ್ಡ್ ಮತ್ತು ಲೂಸಿ ಬೈನ್ಸ್ ಜಾನ್ಸನ್ ಎಂಬಿಬ್ಬರು ಪುತ್ರಿಯರಿದ್ದಾರೆ ಕಾಂಗ್ರೆಸಿನಲ್ಲಿ ಜಾನ್ಸನರ ಮೊದಲನೆಯ ಸದಸ್ಯಾವಧಿ ಕೊನೆಗೊಂಡನಂತರ ಅವರ ಪತ್ನಿ ಅವರ ಜೊತೆಯಲ್ಲಿ ಚುನಾವಣಾ ಪ್ರಚಾರದಲ್ಲಿ ಭಾಗ ವಹಿಸಿದರು. ಉದ್ದಕ್ಕೂ ಮದಲ್ಲೂ ಈಕೆ ಸಕ್ರಿಯ ಭಾಗ ವಹಿಸಿದ್ದಾರೆ. ರೇಡಿಯೋ ಮತ್ತು ಟೆಲಿವಿಷನ್ ಕೇಂದ್ರಗಳಲ್ಲಿ ಆಸಕ್ತಿಯಿಂದ ಕಾರ್ಯ ನಿರ್ವಹಿಸಿದ್ದಾರೆ.

ಚಿಕ್ಕ ಪ್ರಾಯದಲ್ಲಿ ಲಿಂಡನ್ ಜಾನ್ಸನರು ಟೆಕ್ಸಾಸಿನ ಸಾನ್ ಮಾರ್ಕೋಸ್‌ನಲ್ಲಿರುವ ಸೌತ್‌ವೆಸ್ಟ್ ಸ್ಟೇಟ್ ಟೀಚರ್ಸ್ ಕಾಲೇಜಿನಲ್ಲಿ ಕಲಿಯಲು ಬೇಕಾದ ಹಣಗಳಿಸಲು ದ್ವಾರಪಾಲಕರಾಗಿ ಕೆಲಸ ಮಾಡಿದರು. ೧೯೩೦ರಲ್ಲಿ ಪದವೀಧರರಾದ ನಂತರ ಟೆಕ್ಸಾಸಿನ ಹೂಸ್ಟನ್ನಿನಲ್ಲಿ ಎರಡು ವರ್ಷಗಳ ವರೆಗೆ ಶಾಲಾ ಶಿಕ್ಷಕರಾಗಿದ್ದರು. ರಾಜಕೀಯದಲ್ಲಿ ಆಸಕ್ತಿಯಿದ್ದ ಜಾನ್ಸನರು ವಾಷಿಂಗ್ಟನ್ನಿನಲ್ಲಿ ಟೆಕ್ಸಾಸಿನ ಕಾಂಗ್ರೆಸ್ ಸದಸ್ಯ ರಿಚರ್ಡ್ ಎಂ. ಕ್ಲೆಬರ್ಗ್‌ರವರ ಕಾರ್ಯದರ್ಶಿಯಾಗಿ ಮೂರು ವರ್ಷಗಳ ವರೆಗೆ ಕೆಲಸ ಮಾಡಿದರು. ಈ ಅವಧಿಯಲ್ಲಿ ಅವರು ಜಾರ್ಜ್‌ಟೌನ್ ವಿಶ್ವವಿದ್ಯಾನಿಲಯದ ಲಾ ಸ್ಕೂಲಿನಲ್ಲಿ ಕಲಿಯುತ್ತಿದ್ದರು.

೧೯೪೧ರಲ್ಲಿ ಪರ್ಲ್‌ಹಾರ್ಬರ್‌ನ ಮೇಲೆ ದಾಳಿಯಾದಾಗ ಜಾನ್ಸನರನ್ನು ಅಮೇರಿಕದ ನೌಕಾಬಲದಲ್ಲಿ ಅಧಿಕಾರಿಯಾಗಿ ನೇಮಿಸಲಾಯಿತು. ಕಾಂಗ್ರೆಸ್ ಸದಸ್ಯರು ಸಶಸ್ತ್ರ ಬಲಗಳಲ್ಲಿ ಕೆಲಸಮಾಡಬಾರದೆಂದು ಅಧ್ಯಕ್ಷ ರೂಸವೆಲ್ಟರು ಆಜ್ಞೆ ಮಾಡುವ ವರೆಗೆ, ಜಾನ್ಸನರು ಎಂಟು ತಿಂಗಳ ತನಕ ಪ್ಯಾಸಿಫಿಕ್ ಪ್ರದೇಶದಲ್ಲಿ ನೌಕಾಬಲದ ಅಧಿಕಾರಿಯಾಗಿ ಸೇವೆಸಲ್ಲಿಸುತ್ತಿದ್ದರು.

ಉಪಾಧ್ಯಕ್ಷರಾಗಿ ಮತ್ತು ಸೆನೇಟರಾಗಿ ಲಿಂಡನ್ ಬಿ. ಜಾನ್ಸನರು ಪೌರ ಹಕ್ಕುಗಳಿಗೆ ಬೆಂಬಲ ನೀಡಲು ಶ್ರದ್ಧೆಯಿಂದ ಕೆಲಸ ಮಾಡಿದರು.

ಅಧ್ಯಕ್ಷರಾಗಿ ಜಾನ್ಸನರವರು ಮಾನವಕುಲದ ಹಿತಸಾಧನೆಯ ಕಾರ್ಯದಲ್ಲಿ ಮುಂದುವರಿಯುವರೆಂದು ನಿರೀಕ್ಷಿಸಬಹುದು. ಅವರು ಮತ್ತು ಅಧ್ಯಕ್ಷ ಕೆನಡಿಯವರಿಬ್ಬರೂ ಈ ಕಾರ್ಯದಲ್ಲಿ ನಿರತರಾಗಿದ್ದರು.

ಉದಾಹರಣೆಗೆ, ಕಳೆದ ಮಾರ್ಚನಲ್ಲಿ ಅವರು ಸುದ್ದಿಗಾರರೊಡನೆ ಮಾತಾಡುತ್ತ, ಪೌರ ಹಕ್ಕುಗಳ ಮಸೂದೆಯ ಅಂಗೀಕಾರದಲ್ಲಿ ತಮ್ಮ ಪಾತ್ರ, ತಾವು ಇದು ವರೆಗೆ ನಿರ್ವಹಿಸಿದ ಕಾರ್ಯಗಳಲ್ಲೇ ಅತಿ ಮಹತ್ವದ್ದೆಂದು ಪರಿಗಣಿಸುತ್ತೇನೆ ಎಂದು ಹೇಳಿದರು.

ಅಮೇರಿಕದ ಕಾಂಗ್ರೆಸು ೧೯೫೭ರಲ್ಲಿ ಮತ್ತು ೧೯೬೦ರ ಪೌರ ಹಕ್ಕುಗಳ ಮಸೂದೆಗಳನ್ನು ಮಂಜೂರು ಮಾಡಿದಾಗ ಜಾನ್ಸನರು ಸೆನೆಟಿನಲ್ಲಿ ಬಹುಸಂಖ್ಯಾಕರ ಮು

(೧೧ನೇ ಪುಟ ನೋಡಿರಿ)



ಸಿಂಕಿಯಾಂಗಿನ ದುರವಸ್ಥೆ

ಕರಡಿ ಡ್ರೆಗನ್‌ಗಳ ನಟ್ಟನಡುವೆ

ದ್ವಾರಕ್ಷಾರಸ ಕುದಿಯುತ್ತಿರುವಾಗ ಗುಳ್ಳೆಗಳೇಳುವಂತೆ, ಕಮ್ಯೂನಿಸ್ಟ್ ಚೈನಾ ಮತ್ತು ಸೋವಿಯಟ್ ಒಕ್ಕೂಟಗಳೊಳಗಣ ರಹಸ್ಯಪೂರ್ಣ ಘರ್ಷಣೆಗಳ ಸಂಗತಿ ಇದೀಗ ಸಿಡಿದು ಬಯಲಾಗುತ್ತಿದ್ದು, ಅವುಗಳ ನಡುವಣ ಸಂಬಂಧ ಹದಗೆಡುತ್ತಿದೆನ್ನುವದು ಪ್ರಕಟವಾಗುತ್ತಿದೆ.

ಅದರಲ್ಲಿ ಇತ್ತೀಚೆಗೆ ಬಯಲಾಗಿರುವ ವಿಷಯವೆಂದರೆ ಚೈನಾವು ರಷ್ಯಾದ ಮೇಲೆ ಹೊರಿಸಿರುವ ಆರೋಪವಿದೆ. ಚೈನಾ-ರಷ್ಯಾಗಳ ಗಡಿ ಪ್ರದೇಶದಲ್ಲಿ ಸಿಂಕಿಯಾಂಗ್ ಪ್ರಾಂತ್ಯವಿದೆ. ಇದು ಹಲವಾರು ವರ್ಷಗಳಿಂದಲೂ ಆ ಎರಡು ರಾಷ್ಟ್ರಗಳ ನಡುವಣ ಆರ್ಥಿಕ ಹಾಗೂ ರಾಜಕೀಯ ರಾದ್ಧಾಂತಗಳಿಗೆ ಕಾರಣವಾಗಿತ್ತು. ಅಲ್ಲಿ ರಷ್ಯನರು ಕಾರುಬಾರು ನಡೆಸುತ್ತಿದ್ದಾರೆಂಬುದೇ ಚೈನಾದ ಆರೋಪವಿದೆ.

ಕಳೆದೆರಡು ವರ್ಷಗಳಿಂದ, ಸಿಂಕಿಯಾಂಗಿನಿಂದ ತಪ್ಪಿಸಿಕೊಂಡು ಬರುತ್ತಿದ್ದ ನಿರಾಶ್ರಿತರಿಂದ ಅಲ್ಲಿ ದಂಗೆ ಏಳುತ್ತಿರುವ ಹಾಗೂ ಹೋರಾಟ ನಡೆಯುತ್ತಿರುವದರ ಕುರಿತು ವರದಿ ಹಾಗೂ ಸಮಾಚಾರ ಬರುತ್ತಿತ್ತಾದರೂ ಇತ್ತೀಚೆಗಿನ ವರದಿಗಳು ಪ್ರಕಟವಾಗುವ ವರೆಗೆ ಅದನ್ನು ದೃಢೀಕರಿಸಲು ಆಧಾರವಿರಲಿಲ್ಲ.

ಸಪ್ಟಂಬರ್ ಆರಂಭದಲ್ಲಿ ಪೆಕಿಂಗ್ ಆಕಾಶವಾಣಿಯು, ಸಿಂಕಿಯಾಂಗಿನ ಜಿಲ್ಲೆ ಇಲಿಯಿಂದ ಚೈನಿ ಆಡಳಿತ ಯಂತ್ರವನ್ನು ಕಿತ್ತೊಗೆಯಲು ಪ್ರಯತ್ನಿಸಿರುವದಾಗಿ ಬಿಸಿಬಿಸಿಯಾದ ಆರೋಪವನ್ನು ಹೊರಿಸಿತು. ಹಾಗೆಯೇ ಚೈನಿ ಕಮ್ಯೂನಿಸ್ಟ್ ಪಕ್ಷದ ಕಛೇರಿಯಿಂದಲೂ ಪ್ರಕಟಣೆ ಹೊರಡಿಸಲಾಯಿತು. ಅದರಲ್ಲಿ ೧೯೬೨ರ ಎಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಸೋವಿಯಟ್ ಒಕ್ಕೂಟವು ತನ್ನ ಸ್ವಪಕ್ಷದ ಪತ್ರಿಕೆ ಹಾಗೂ ವ್ಯಕ್ತಿಗಳಿಂದ ಇಲಿಯಲ್ಲಿ ಚೈನಿ ಸರಕಾರವನ್ನು ಬುಡಮೇಲು ಮಾಡುವ ಚಟುವಟಿಕೆ ಮತ್ತು ಸಾವಿರಾರು ಚೈನಿ ಪ್ರಜೆಗಳನ್ನು ಗಡಿ ದಾಟಿ ರಷ್ಯಾಕ್ಕೆ ಬರುವಂತೆ ಬಲಾತ್ಕರಿಸುತ್ತಿದ್ದಾರೆ ಹಾಗೂ ಪುಸಲಾಯಿಸುತ್ತಿದೆಂದೂ ಹೇಳಲಾಗಿತ್ತು.

ಚೈನಾವು ಹಲವಾರು ಬಾರಿ ವಿನಂತಿಸಿಕೊಂಡಿದ್ದರೂ ಸೋವಿಯಟ್ ಒಕ್ಕೂಟವು ಚೈನೀ ಪ್ರಜೆಗಳನ್ನು ಮಾನವೀಯತಾ ದೃಷ್ಟಿಯಿಂದ ನೋಡಿಕೊಳ್ಳುವದರಲ್ಲಿ ತಪ್ಪಿರುತ್ತದೆಂದೂ ಆ ಆಕಾಶವಾಣಿ ಸಾರಿರುತ್ತದೆ.

ಈಗ ಈ ಸಿಂಕಿಯಾಂಗ್ ಸಮಸ್ಯೆಯ ಸುದ್ದಿಯನ್ನು ಬಿತ್ತರಿಸಲು ಕಾರಣವೇನೆಂಬುದನ್ನು ಕೊನೆಯ ದೂರು ವಿವರಿಸುತ್ತದೆ. ಇದಕ್ಕಿಂತ ಒಂದು ವಾರದ ಹಿಂದೆ, ಕಮ್ಯೂನಿಸ್ಟ್ ಚೈನಾದಿಂದ ಕೇಂದ್ರ ರಷ್ಯಾದತ್ತ ನಿರಾಶ್ರಿತರ ಪ್ರವಾಹ ಹರಿಯುತ್ತಿದೆಂಬುದನ್ನು ಅಧಿಕಾರಿಯುಕ್ತ ಸೋವಿಯಟ್ ಮಂತ್ರಿಗಳಿಂದ ರಹಸ್ಯವಾಗಿ ದೃಢಪಡಿಸಿಕೊಳ್ಳಲಾಗಿರುತ್ತದೆಯೆಂಬ ಸುದ್ದಿ ಹುಟ್ಟಿಕೊಂಡಿತು. ಸಿಂಕಿಯಾಂಗಿನಿಂದ ಶೋಚನೀಯ ಸ್ಥಿತಿಯಲ್ಲಿ ಸಾವಿರಾರು ಮುಸಲ್ಮಾನರು ರಷ್ಯಾದ ತಡ್ಜಕಿಸ್ಥಾನ, ಕಿರ್ಗಿಜಿಯಾ ಮತ್ತು ಕಝಕಸ್ಥಾನಗಳೊಳಗೆ ಪ್ರವೇಶಿಸುತ್ತಿರುವದಾಗಿಯೂ ಆ ಸುದ್ದಿ ತಿಳಿಸುತ್ತದೆ.

ಈ ಎರಡು ಸುದ್ದಿಗಳನ್ನು ಅಕ್ಕಪಕ್ಕದಲ್ಲಿಟ್ಟುಕೊಂಡು ಕಣ್ಣೋಟ ಹಾಯಿಸುವಾಗ, ಕಳೆದ ವರ್ಷ ಸಿಂಕಿಯಾಂಗಿನಿಂದ ಓಡಿ ಬಂದಿದ್ದ ನಿರಾಶ್ರಿತನೊಬ್ಬನು ಹೇಳುವ ಸಂಗತಿ ಜ್ಞಾಪಕಕ್ಕೆ ಬರುತ್ತದೆ. ಸಿಂಕಿಯಾಂಗಿನಿಂದ ಕೇಂದ್ರ ಚೈನಾಕ್ಕೆ ಆಹಾರ ಕಳಿಸುವದನ್ನು ಉಯಿಗರ್, ಉಜಬೆಕ್ ಮತ್ತು ಗಝಾಕ್ ಮುಸ್ಲಿಮರು ೧೯೬೨ರ ಬೇಸಿಗೆಯಲ್ಲಿ ವಿರೋಧಿಸಿರುವರೆಂದು ಆತನು ಹೇಳಿರುವನು. ಆಗ ಕಮ್ಯುನಿಸ್ಟ್ ಪಡೆಗಳು ಪ್ರದರ್ಶನಗಾರರ ಮೇಲೆ ಗುಂಡಿನ ಮಳೆ ಸುರಿಸಿದುದರ ಕಾರಣ ಹನ್ನೆರಡು ಜನರು ಸತ್ತಿರುವದಾಗಿಯೂ ಆತನು ತಿಳಿಸಿರುವನು. ಅದರ ಮೊದಲನೆಯ ದಿನ ಮುಸ್ಲಿಮರು ಒಂದಾಗಿ ಸೇರಿ ಇಲಿಯಲ್ಲಿರುವ [ಅದನ್ನು ಕುಲ್‌ಡ್ಜಾವೆಂದೂ ಕರೆಯುತ್ತಾರೆ.] ಸೋವಿಯಟ್ ರಾಯಭಾರಿ ಕಾರ್ಯಾಲಯಕ್ಕೆ ಹೋಗಿ ಚೈನಿಯರನ್ನು ಹೊಡೆದಟ್ಟಲು ಶಸ್ತ್ರ ಸಹಾಯವನ್ನು ಯಾಚಿಸಿದರು.

ಸೋವಿಯಟ್ ರಾಯಭಾರಿ ಕಾರ್ಯಾಲಯವು ಅವರಿಗೆ ಶಸ್ತ್ರ ಸಹಾಯ ಮಾಡಲೊಪ್ಪಲಿಲ್ಲವಲ್ಲದೆ, ಹಿಂತಿರುಗಿ ಹೋಗಿ ಚೈನಿ ಅಧಿಕಾರಿಗಳಿಗೆ ಸಹಾಯ ಮಾಡಲು ಸೂಚಿಸಿತು, ಅನಂತರ ಗುಂಪು ಚದರಿ ಹೋಯಿತೆಂದೂ ಆ ವಲಯವು ತಿಳಿಸುತ್ತದೆ

ಹಾಗಿದ್ದರೂ, ಇಲಿ ಮತ್ತು ಉರುಮ್ಚಿಯಲ್ಲಿರುವ ಸೋವಿಯಟ್ ರಾಯಭಾರಿ ಕಾರ್ಯಾಲಯಗಳನ್ನು ಮುಚ್ಚಿ ಬಿಡಲು ಚೈನಿ ಸರಕಾರ ಆಜ್ಞೆಯಿತ್ತಿತು. ಇದಕ್ಕೆ ಅವರೇನೂ ಸರಿಯಾದ ಕಾರಣವನ್ನು ಕೊಟ್ಟಿರುವುದಿಲ್ಲ. ಈ ಎರಡೂ ಸ್ಥಳಗಳು ಸಿಂಕಿಯಾಂಗ್ ಪ್ರಾಂತ್ಯದಲ್ಲೇ ಇವೆ.

ಈ ವಿಷಯಗಳು ನಮ್ಮನ್ನು ಈ ಪ್ರದೇಶದ ಹಿಂದಿನ ಚರಿತ್ರೆಯತ್ತ ಸಿಂಹಾವಲೋಕನ ಮಾಡಲು ಮರುಳು ಮಾಡುತ್ತವೆ. ಇದರ ವಿಸ್ತೀರ್ಣ ೬,೫೦,೦೦೦ ಚದರ ಮೈಲು. ಇದರ ಹೆಚ್ಚಿನಂಶ ಮರುಳು ಭೂಮಿ ಹಾಗೂ ಪರ್ವತ ಪ್ರದೇಶವಿದೆ. ಇದು ಕೇಂದ್ರ ಚೈನಾದ ಪಶ್ಚಿಮ ದಿಕ್ಕಿನಲ್ಲಿದೆ. ಹತ್ತಿ, ಗೋಧಿ, ಎಣ್ಣೆ, ಕಬ್ಬಿಣ, ಉಕ್ಕು, ಯುರೇನಿಯಂ, ಕುರಿ ಮತ್ತು ದನಕರುಗಳು, ಅಲ್ಲದೆ, ಇತ್ತೀಚೆಗಿನ ಚಿಕ್ಕ ಪುಟ್ಟ ಕೈಗಾರಿಕೆಗಳು ಇಲ್ಲಿಯ ಆರ್ಥಿಕ ಸಂಪತ್ತಿವೆ. ಇದು ಬಹಳ ಮುಖ್ಯ ವಿಷಯವಿದೆ. [ಇದರಲ್ಲಿ ಯುರೇನಿಯಂ ಅಣುಗುಂಡಿನ ತಯಾರಿಗೆ ಬೇಕಾಗುತ್ತದೆ]

ಕೆಲ ಶತಮಾನಗಳ ಹಿಂದೆಯೂ ಚೈನಿ—ರಷ್ಯನರ ನಡುವೆ ಈ ಪ್ರದೇಶವು ಹೋರಾಟದ ಕಣವಾಗಿತ್ತು. ಮಂಚೂ ವಂಶ ಕೆಳಮುಖವಾಗಿದ್ದಾಗ ಈ ಪ್ರದೇಶದ ಮೇಲೆ ರಷ್ಯನರು ತಮ್ಮ ಸ್ವಾಮಿತ್ವದ ಮುದ್ರೆಯನ್ನೊತ್ತಿದರು.

೧೮೦೦ರಿಂದ ೧೮೮೫ರ ವರೆಗೆ ಚೈನೀಯರು ಈ ಪ್ರದೇಶದ ಮೇಲೆ, ತಮ್ಮ ಹ

(೯ನೇ ಪುಟ ನೋಡಿರಿ)

ಕೆಲವು ವರ್ಷಗಳ ಹಿಂದೆ ಈ ದೇಶದಲ್ಲಿ ಒಬ್ಬ ಕ್ಷಯರೋಗಿಗೆ ಏನಾಯಿತು ಎಂಬುದನ್ನು ನಿಮ್ಮಷ್ಟಕ್ಕೆ ನೀವು ಪ್ರಶ್ನಿಸುವುದನ್ನು ಎಂದಾದರೂ ನಿಲ್ಲಿಸಿದ್ದೀರಾ? ಆ ವರ್ಷಗಳಲ್ಲಿ ಕ್ಷಯರೋಗವು ಗುಣವಾಗುವ ರೋಗವಲ್ಲ ಎಂದು ಪರಿಗಣಿಸಲ್ಪಟ್ಟಿತ್ತು; ಮತ್ತು ಯಾರಿಗೆ ಅದು ತಗಲುತಿತ್ತೋ ಅಂತಹ ಪರಿತ್ಯಕ್ತರನ್ನು ಅದರ ಆಕ್ರಮಣದಿಂದ ಬಿಡಿಸುವುದೂ ಅಸಾಧ್ಯವಾಗಿತ್ತು. ಹಿಂದಿನ ಕಾಲದವರು ಕ್ಷಯರೋಗವು ವಂಶಪಾರಂಪರ್ಯವಾದದ್ದೆಂದೂ ಅದು ಆಶೆಯಿಲ್ಲದುದೆಂದೂ ನೆನಸಿದ್ದರು. ಅವರು ಟಿ ಬಿ ಗೆ ಬಲಿಯಾದವನನ್ನು ಸಾಮಾನ್ಯವಾಗಿ ಸಾಯಬಿಡುತ್ತಿದ್ದರು.

ಆದರೆ ಇಂದದು ಹಾಗಲ್ಲ. ನಾವು ಕ್ಷಯರೋಗವನ್ನು ನಿರೋಧಿಸಬಹುದು, ಮತ್ತು ಹತೋಟಿಗೆ ತರಬಹುದು. ಆದರೂ ಈ ಕಾಯಿಲೆಯು ಈ ದೇಶದಲ್ಲಿ ಹಲವು ಜನರನ್ನು ದಿನಂಪ್ರತಿ ಕೊಲ್ಲುತ್ತದೆ. ಆದರೆ ಪ್ರತಿಯೊಬ್ಬರೂ ಸಹಾಯ ಮಾಡಿದರೆ ಇದನ್ನು ಒಂದು ದಿನ ಸಂಪೂರ್ಣವಾಗಿ ನಿಲ್ಲಿಸಲು ನಾವು ಶಕ್ತರಾಗಬಹುದು.

ಸಹಾಯದ ಒಂದು ದಾರಿಯೆಂದರೆ ಟಿ ಬಿ ಮೊಹರುಗಳನ್ನು ತೆಗೆದುಕೊಳ್ಳುವುದು ಮತ್ತು ನಿಮ್ಮ ಟಪ್ಪಾಲಿನ ಮೇಲೆ ಅದನ್ನು ಉಪಯೋಗಿಸುವುದು. ಒಂದು ಟಿ ಬಿ ಮೊಹರಿನ ಬೆಲೆ 10 ನಯೆ ಪೈಸೆ ಮಾತ್ರ. ಮೊಹರುಗಳು ನಿಮ್ಮ ರಾಜ್ಯದ ಕ್ಷಯರೋಗ ಸಮಿತಿ ಮತ್ತು ಅದರ ಬೇರೆ ಬೇರೆ ಏಜನ್ಸಿಗಳಲ್ಲಿ ಮಾರಾಟಕ್ಕೆ ದೊರೆಯುತ್ತವೆ.

ನಕಾಶೆಗಳು ಬೇಕಾಗಿವೆ: 15ನೆ ಟಿ ಬಿ ಮೊಹರು ಮಾರಾಟ ಚಳವಳಕ್ಕೆ ಸಾದಾ ಮತ್ತು ಆಕರ್ಷಕವಾದ ನಕಾಶೆಗಳನ್ನು ಆಮಂತ್ರಿಸಲಾಗಿದೆ ಉತ್ತಮವಾದ ನಕಾಶೆಗೆ ರೂ. 500/-ರ ಒಂದು ಪಾರಿತೋಷಕ ಕೊಡಲಾಗುವುದು. ವಿವರವಾದ ಫೋರ್ಮುಗಳಿಗೆ ಸೆಕ್ರೆಟರಿ, ಟ್ಯುಬರ್‌ಕ್ಯುಲೋಸಿಸ್ ಎಸೋಸಿಯೇಶನ್ ಆಫ್ ಇಂಡಿಯಾ, 3, ರೆಡ್ ಕ್ರೊಸ್ ರೋಡ್, ನ್ಯೂ-ಡಿಲ್ಲಿ ಇವರಿಗೆ ಬರೆಯಿರಿ

ಈ ಸ್ಥಳದ ದಾತೃಗಳು:

Messrs. Seth Mofatlal Charity Trust, Bombay.

ರಾಜಕೀಯ

ಲಾಯರ ಆಫ್ರಿಕ ಸಂದರ್ಶನ

ಚೀನೀಯ ಪ್ರಧಾನ ಮಂತ್ರಿ ಚೌ-ಎನ್-ಲಾಯ್ ಮತ್ತು ವಿದೇಶ ಮಂತ್ರಿ ಚೆನ್‌ಯೀಯವರು ಸದ್ಯ ಕೈಗೊಂಡ ಆಫ್ರಿಕನ್ ದೇಶಗಳ ಸಂಚಾರದಿಂದ ಭಾರತಕ್ಕಾಗಲೀ, ಲಾಯಿಯವರಿಗಾಗಲೀ ಅಥವಾ ಉಳಿದವರಿಗಾಗಲೀ ಏನೂ ಲಾಭವಿಲ್ಲ. ಆದರೂ ಲಾಯಿಯವರು ತಮ್ಮ ಕು-ನೀತಿಯನ್ನು ವಿವರಿಸಿ ಭಾರತ-ಚೀನಾ ಗಡಿ ವಿವಾದದಲ್ಲಿ ಭಾರತವು ಚೀನಾದ ಸಮರ ವಿರಾಮ ಸೂಚನೆಗಳನ್ನು ಒಡಂಬಡುವಂತೆ ಮಾಡುವ ಉತ್ಕಟೇಚ್ಛೆಯಿಂದ ಕೂಡಿದ್ದಾರೆ. ಸಂಯುಕ್ತ ಅರಬ ಪ್ರಜಾರಾಜ್ಯ, ಅಲ್ಜೀರಿಯಾ, ಮಾಲಿ, ಕೆನಿಯಾ, ಟಂಗನೀಕ, ಘಾನಾ ಮೊದಲಾದ ಆಫ್ರಿಕನ್ ದೇಶಗಳನ್ನು ಸಂಚರಿಸಿ ಮರಳುವಾಗ ಪಾಕಿಸ್ತಾನ ಮತ್ತು ಸಿಂಹಳಗಳನ್ನೂ ಅವರು ಭೆಟ್ಟಿಯಾಗುವರೆಂದು ಗೊತ್ತಾಗಿದೆ. ಈ ದೀರ್ಘ ಯಾತ್ರೆಯ ಹಿಂದಿರುವ ಆಶಯ ಯಾವುದು?

ಆಫ್ರಿಕೆಯ ಸಂಚಾರದ ವೇಳೆಯಲ್ಲಿ ಲಾಯಿಯವರು ೫೦ ಜನರ ಸೇನೆಯೊಂದನ್ನೂ ಒಯ್ದಿದ್ದಾರೆ. ವಿದೇಶ ಮಂತ್ರಿಯವರ ನೇತೃತ್ವದಲ್ಲಿಯೂ ಇಂತಹುದೇ ಪಡೆಯೊಂದನ್ನು ಕೆನಿಯಾದ ಸ್ವಾತಂತ್ರ್ಯ ದಿನೋತ್ಸವದಲ್ಲಿ ಭಾಗವಹಿಸಲು ಕಳಿಸಿದ್ದಾರೆ; ಈ ಎರಡೂ ಸೇನೆಗಳ ಗುರಿ ಮಾತ್ರ ಒಂದೇ.

ಈ ಸೇನೆಗಳು ಸಂದರ್ಶಿಸುವ ದೇಶಗಳ ರಾಜಧಾನಿಯಲ್ಲಿ ತಮಗನುಕೂಲವಾದ ವಾತಾವರಣವನ್ನು ನಿರ್ಮಿಸುವ ಕಾರ್ಯವನ್ನು ಪೀಕಿಂಗ್ ಮೊದಲಿನಿಂದಲೇ ಮಾಡುತ್ತ ಬಂದಿದೆ. ಮುಖ್ಯವಾಗಿ ಕೈರೋವಿನ ಬೀದಿ ಬೀದಿಗಳಲ್ಲಿ ಭಾರತ-ವಿರೋಧಿ ಪ್ರಚಾರವು ತಡವರಿಸದೆ ಮುಂದುವರಿಯುತ್ತಿತ್ತು. ಪೀಕಿಂಗ್ ಕೊಡಮಾಡಿದ ಉದಾರ ದಾನವನ್ನು ಭಾರತವು ಸ್ವೀಕರಿಸಬೇಕೆನ್ನುವ ವಿಚಾರದ ಪುಸ್ತಿಕೆ, ಕರಪತ್ರಗಳ ವಿತರಣೆ ಅಲ್ಲಿ ನಡೆಯುತ್ತಿದೆ; ಪಾಕ್ ಮಿತ್ರರೂ ಇದಕ್ಕೆ ಒತ್ತಾಸೆ ನೀಡುತ್ತಿದ್ದಾರೆ. ಅಧ್ಯಕ್ಷ ನಸ್ಸೇರರು ಪಾಕ್ ರಾಯಭಾರಿ ಕಛೇರಿಗೆ ನೀಡಿದ ಎಚ್ಚರಿಕೆಗೆ ಇದುವೇ ಹೇತುವಿದ್ದರೂ ಇರಬಹುದು.

ಅಧ್ಯಕ್ಷ ನಸ್ಸೇರರ ಮತ್ತು ಚೌ-ಎನ್-ಲಾಯ್‌ಯವರ ನಡುವೆ ಬಹು ದೀರ್ಘವಾದ ಮಾತುಕತೆಗಳು ನಡೆಯಲಿದ್ದು, ಕೊಲಂಬೊ ಸಲಹೆಗಳೇ ಇದರಲ್ಲಿ ಮಹತ್ವದ ಪಾತ್ರ ವಹಿಸುವುವು. ಲಾಯರು ಕೊಲಂಬೋ ರಾಷ್ಟ್ರಗಳ ಸಲಹೆಗಳು ಸಿರುಪಯುಕ್ತವೆಂದೂ ಅದು ಅನ್ಯಾಯದ್ದಾಗುವವೆಂದೂ ಪೀಕಿಂಗ್‌ನ ವಿಚಾರ ಸರಣಿಯೇ ಸರಿಯಾದುದೆಂದೂ ಅವರಲ್ಲಿ ಪ್ರತಿಬಿಂಬಿಸಿ ನವದೆಹಲಿಯು ಪೀಕಿಂಗ್ ನೀತಿಯನ್ನು ಒಪ್ಪಿಕೊಳ್ಳುವಂತೆ ಮಾಡಬೇಕು—ಎಂಬ ವಿಚಿತ್ರವಾದವನ್ನು ಮುಂದೊಡ್ಡುವರು. ಮುಂದೆ ಸ್ವದೇಶಕ್ಕೆ ಮರಳುವಾಗ ದಾರಿಯಲ್ಲಿ ಸಿಂಹಳವನ್ನು ಸಂದರ್ಶಿಸಿ ಅಲ್ಲಿಯೂ ಸಿರಿಮಾವೋರವರ ಮೇಲೆ ತನ್ನ ವಾದ ಜಾಲವನ್ನು ಹರಡುವುದು ನಿಶ್ಚಯ. ಕೊಲಂಬೊ ಸೂಚನೆಗಳ ಶಿಲ್ಪಿಗಳಲ್ಲಿ ನಸ್ಸೇರ ಮತ್ತು ಸಿರಿಮಾವೊ ಮುಖ್ಯರಾದುದರಿಂದ, ಅವರಿಬ್ಬರ ಮನವೊಲಿಸುವ ಲಾಯರ ತಂತ್ರ ಸರಿಯಾದುದಾದರೂ ಅದರ ಪರಿಣಾಮ ಮಾತ್ರ ಉಚಿತವೆನಿಸದು.

ಅಧ್ಯಕ್ಷ ನಸ್ಸೇರ ಅಥವಾ ಸಿರಿಮಾವೋ ಭಂಡಾರ ನಾಯಿಕೆಯವರು ಲಾಯಿಯವರ ತಂತ್ರಜಾಲಕ್ಕೆ ಮರುಳಾಗುವವರಲ್ಲ. ಸತ್ಯ, ನ್ಯಾಯವೆಂದರೇನೆಂಬುದನ್ನು ಅರಿಯದ ಮೊದ್ದುಗಳು ಅವರಲ್ಲ. ಚೀನೀಯ ನಾಯಕ ಮಣಿಗಳ ಶಕ್ತಿದರ್ಪವನ್ನು ಅಂತ ಅನರು ಲಾಯಿಯವರ ಮಾತಿಗಾಗಲೀ ಬೆದರಿಕೆಗಾಗಲೀ ಸೊಪ್ಪು ಹಾಕುವವರಲ್ಲ.

ಚೌ—ಎನ್—ಲಾಯ್‌ಯವರ ಈ ಬೃಹತ್ ಯಾತ್ರೆಯ ಒಂದು ಉದ್ದೇಶ ಮೇಲಿನದ್ದಾದರೆ ಇನ್ನೊಂದು ರಶ್ಯದ ವಿರುದ್ಧ ತನ್ನ ಪ್ರಭಾವವನ್ನು ಹೆಚ್ಚಿಸುವುದು. ಕಮ್ಯೂನಿಜಂನ ಪ್ರಚಾರದ ಹಿನ್ನೆಲೆಯಲ್ಲಿ ಹೊಸತಾಗಿ ಸ್ವಾತಂತ್ರ್ಯಗಳಿಸಿದ ಆಫ್ರಿಕದ ರಾಷ್ಟ್ರಗಳು ಪಶ್ಚಿಮದತ್ತ ವಾಲುವುದನ್ನುಳಿದು, ತನ್ನತ್ತ ಎದ್ದು ಬರುವಂತೆ ಮಾಡುವುದೇ ಅವರ ಇಂಗಿತ. ವಸಾಹತು ಶಾಹಿ, ಬಂಡವಾಳ ಶಾಹಿ, ಸಾಮ್ರಾಜ್ಯವಾದಗಳ ವಿರುದ್ಧ ರಂಗೀಟಿನ ಮಾತುಗಳನ್ನಾಡಿ, ಈ ಹೊಸತಾಗಿ ತಲೆಯೆತ್ತಿದ ರಾಷ್ಟ್ರಗಳನ್ನು ತಮ್ಮ ಬಲೆಯಲ್ಲಿ ಸಿಲುಕಿಸಿ ಕೊಳ್ಳುವ ಸಂಚು ಅವರದ್ದು.

ಬ್ರಿಟನ್, ಫ್ರಾನ್ಸು ಮತ್ತು ಅಮೇರಿಕೆಗಳೂ ಚೀನಾದವರ ಆಫ್ರಿಕನ್ ಪ್ರವಾಸವನ್ನು ಸಂಶಯ ದೃಷ್ಟಿಯಿಂದಲೇ ನೋಡುತ್ತವೆ. ನೈರೋಬಿ, ಅಕ್ರಾ, ದಾರೆ ಸಲಾಮ್ ಮೊದಲಾದೆಡೆಗಳಲ್ಲಿ ಈ ಚೀನಾದವರು ಏನನ್ನು ಸಾಧಿಸಲಿರುವರು ಎಂಬ ಕಾತುರಗಳು ಅಲ್ಲಿ ಮೂಡಿವೆ. ಜಗತ್ತಿನಿಂದ ಸಿಡಿದು ದೂರ ದೂರಹೋಗುತ್ತಿರುವ ಕೆಂಪು ಚೀನಾವು ತನ್ನದೊಂದು 'ಬಣ'ವನ್ನು ಕಟ್ಟುವ ಹವ್ಯಾಸದಲ್ಲಿ ತೊಡಗಿದೆ; ಬಾಡುಂಗ ಸಮ್ಮೇಳನದ ರಾಷ್ಟ್ರಗಳ ಇನ್ನೊಂದು ಸಮ್ಮೇಳನವನ್ನು ಕರೆಯಲು ಸೂಕ್ತ ವಾತಾವರಣವನ್ನು ನಿರ್ಮಿಸುವುದೂ ಅವರ ಸಂಚಾರದ ಮತ್ತೊಂದು ಉದ್ದೇಶ. ಹೊಸ ಸ್ವತಂತ್ರ ದೇಶಗಳಲ್ಲಿ ಪಾಶ್ಚಾತ್ಯರ ಹಿತಾಸಕ್ತಿಗಳೂ ಲಾಯರ ಸಂದರ್ಶನಾನಂತರ ಸ್ವಲ್ಪ ಹ್ರಾಸವಾಗಬಹುದು. ಪಶ್ಚಿಮ ಯುರೋಪದ ಎರಡು ದೇಶಗಳು ಚೀನಾದೊಡನೆ ಸಂಪರ್ಕವಿರಿಸಿಕೊಳ್ಳಲು ಮುಂದುವರಿದುದರಿಂದ ಪಾಶ್ಚಾತ್ಯ ಬಣವೂ ತುಸು ಹೆದರುವಂತಾಗಿದೆ. ರಶ್ಯವಾದರೂ ತನ್ನ ಪ್ರಭಾವವನ್ನು ಹಿಂದಿನಂತೆಯೇ ಮುಂದೆಯೂ ಆಫ್ರಿಕೆಯ ಮೇಲೆ ಬೀರುತ್ತಿರಬೇಕಾದರೆ, ಅದೂ ಹೆಚ್ಚಿನ ಆಸಕ್ತಿ ತಳೆಯಬೇಕಾಗುತ್ತದೆ.

ಹೀಗೆ ರಶ್ಯ, ಭಾರತ ಹಾಗೂ ಪಾಶ್ಚಾತ್ಯ ಮಿತ್ರರು ಮೂವರೂ ಏಕಸಮನಾಗಿ ಲಾಯ್ ಆಫ್ರಿಕನ್ ಸಂಚಾರದ ಬಗ್ಗೆ ಕುತೂಹಲಿಗಳಾಗಿದ್ದಾರೆ. ಇತ್ತೀಚೆಗಿನ ನವದೆಹಲಿಯಲ್ಲಿ ಸೇರಿದ ಆಫ್ರಿಕನ್ ಮಿತ್ರರ ಸಮ್ಮೇಳನವು ಆಫ್ರಿಕನ್ ದೇಶಗಳಲ್ಲಿ ಭಾರತ ವಿರೋಧಿ ಪ್ರಚಾರಕ್ಕೆ ತಡೆಯುಂಟು ಮಾಡಲು ಒಂದು ಉತ್ತಮ ಸಾಧನವಾಗಿತ್ತು. ಚೀನಾದ ಅಪಪ್ರಚಾರವನ್ನು ಭಾರತವು ಇನ್ನು ಸಹಿಸುವಂತಿಲ್ಲ;

ಪೀಕಿಂಗಿನ ನಾಯಕರು ಆಫ್ರಿಕೆಯನ್ನು ತಮ್ಮ ಪ್ರಚಾರ ರಂಗವನ್ನಾಗಿ ಮಾಡ ಹೊರಟಿರುವಾಗ, ನಾವೂ ಸುಮ್ಮನಿರುವುದು ಸಾಧ್ಯವಿಲ್ಲ. ಲೋಕದ ಕಣ್ಣುಗಳಲ್ಲಿ ಪೀಕಿಂಗಿನ ಅನ್ಯಾಯವೂ ನಮ್ಮ ನ್ಯಾಯ ಬೇಡಿಕೆಯೂ ಸರಿಯಾಗಿ ತೋರುವಂತೆ ಮಾಡಬೇಕು. ಆಫ್ರಿಕನ್ ರಾಷ್ಟ್ರ ಪ್ರಧಾನರಲ್ಲಿ ಕೆಲವರು ಸದ್ಯದಲ್ಲಿಯೇ ನಮ್ಮ ದೇಶವನ್ನು ಸಂದರ್ಶಿಸಲಿದ್ದಾರೆ. ದೇಶ—ದೇಶಗಳ ನಡುವಣ ವಿಚಾರ ವಿನಿಮಯಗಳ ವಿಷಯವೇ ನೀತಿ ವಿವರಣೆಯೂ ಇರುವಾಗ, ನಾವೂ ಅವಕಾಶಗಳ ಸದುಪಯೋಗ ಪಡೆದುಕೊಳ್ಳಬೇಡವೇ?

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. S. 365/1963.

ಕೂಸಪ್ಪ ಗೌಡ — ವಾದಿ.

ಮತ್ತು

ಕುಕ್ಕಂಣ ಗೌಡ ಕೂಡಾ—ಪ್ರತಿವಾದಿರು

ಸದ್ರಿ ಪ್ರತಿವಾದಿ ಕಡೆಯಿಂದ—2ನೇ ಪ್ರತಿವಾಗಿ ಹೂವಪ್ಪ ಗೌಡ. 4ನೇ ಪ್ರತಿವಾದಿ ಮೋದಪ್ಪ ಗೌಡ—ತಳೂರು ವ್ಯಾಲ ಗೌಡರ ಮಕ್ಕಳು 2 ನೇಯವ ಪುತ್ತೂರು ತಾಲ್ಲೂಕು ನಾಲ್ಯೂರು ಗ್ರಾಮದ ಚಾರ್ಮಾಳ ಎಂಬಲ್ಲಿರುವವ. 4ನೆಯವ ಪುತ್ತೂರು ತಾಲ್ಲೂಕು ಕಳಂಜ ಗ್ರಾಮದ ಅಲೆಕಿವಿ ಎಂಬಲ್ಲಿರುವವ. ಇವರಿಬ್ಬರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ:—

ಮೇಲ್ಕಂಡ ಕೋರ್ಟಿನಲ್ಲಿ ನೀವು ಕೂಡಾ ನಾಲ್ಕು ಜನರ ಮೇಲೆ ವಾದಿಯು ದಾಖಲು ಮಾಡಿದ ಡಿ. ಪ್ರೊ. ನೋಟಿನ ದಾವೆಯು ತಾರೀಕು 16—12—1963ಕ್ಕೆ ಇಟ್ಟಿದೆ. ಆ ದಿವಸ ನೀವಿಬ್ಬರೂ ಸ್ವತಹಾ ವಕೀಲರ ಮುಖಾಂತರ ಹಾಜರಾಗಿ ಉದಹರಿಸಿಕೊಳ್ಳತಕ್ಕದ್ದು.

ಸದ್ರಿ ವ್ಯಾದೆಗೆ ನೀವು ಹಾಜರಾಗಿ ಉತ್ತರಿಸಿಕೊಳ್ಳಲು ತಪ್ಪಿದಲ್ಲಿ ನಿಮ್ಮಿಬ್ಬರ ಗೈರುಹಾಜರಿಯಿಂದ ಕೋರ್ಟಿನವರಿಗೆ ಯುಕ್ತ ಕಂಡಂತೆ ತೀರ್ಮಾನಿಸಲಾಗುವುದು ಎಂಬ ಸಂಗತಿಯನ್ನು ಈ ಮೂಲಕ ನಿಮಗೆ ತಿಳಿಸಲಾಗಿಯದೆ

(By Court Order)

K. Subramanya Gowda
Vakil for Pltf.

ಪುತ್ತೂರು, 18-11-63.

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ.......
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ

1—1—1963ರಿಂದ ಠೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ

ನಿಮ್ಮ ಉಳಿತಾಯವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.
ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.



● **ಕುಮಾರಿ ಬಿಲ್ಲೆಗಳು** ●

(ರಿಜಿಸ್ಟರ್ಡ್ Regd.)
ಪ್ರಕೃತಿಯು ವಿಫಲಗೊಂಡಾಗ ಉಂಟಾಗುವ ಕಾತರ ನಿವಾರಣೆಗೆ ಸಮಯೋಚಿತವಾದ ಆಯುರ್ವೇದೀಯ ಮಿಶ್ರಣ!
ಟ್ಯೂಬ್ 1ರ ಸಾಮಾನ್ಯ ರೂ. 4/- ಮಧ್ಯಮ ರೂ. 6/
ಉತ್ತಮ ರೂ. 9/-

P. Devee & Co. (N. J.) Calcutta—40.

ಸ್ಟಾಕಿಸ್ಟರು— ರಾಜಾ ಮೆಡಿಕಲ್ ಹಾಲ್, ಬೆಂಗಳೂರು ಕೆಂಟೋನ್‌ಮೆಂಟ್;
ಕುಮ್ಟಾ ಫಾರ್ಮಸಿ, ಕುಮ್ಟಾ (ಉ. ಕ.)

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

ಕ್ರಮಸಂಖ್ಯೆ 395/1963

ಗೋವಿಂದ ಸೆಟ್ಟಿ —ವಾದಿ,

ಮತ್ತು

1. ರಾಮಯ್ಯ ಸೆಟ್ಟಿ
2. ಅಂತಯ್ಯ ಸೆಟ್ಟಿ } ಪ್ರತಿವಾದಿರು

ಇವರೊಳಗೆ

ಕುಂದಾಪುರ ತಾಲ್ಲೂಕು ಕಟ್‌ಬೆಲ್ತೂರು ಗ್ರಾಮದ ಕೋಟಿಬೈಲಲ್ಲಿರುವ ಶಾಮೇರಿ ಸೆಟ್ಟಿಯ ಮಗ 1ನೆ ಪ್ರತಿವಾದಿ ರಾಮಯ್ಯ ಸೆಟ್ಟಿ 1. ಈತನ ಅಳಿಯ 2ನೇ ಪ್ರತಿವಾದಿ ಅಂತಯ್ಯ ಸೆಟ್ಟಿ, 1. ಕೂಡಾ 2 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—

ಗೋವಿಂದ ಸೆಟ್ಟಿಯು ವಾದಿಯಾಗಿ, ಪ್ರತಿವಾದಿರು ರಾಮಯ್ಯ ಸೆಟ್ಟಿ ಕೂಡಾ 2 ಜನರ ಮೇಲೆ ಪ್ರತಿವಾದಿರು ವಾದಿಗೆ ತಾರೀಕು 5—9 1957ರಲ್ಲಿ ರುಪಾಯಿ 600ಕ್ಕೆ ಬರೆಸಿಕೊಟ್ಟ ಡಿಮಾಂಡ್ ನೋಟಿನ ಬಾಬ್ತು ಅಸಲು ಬಡ್ಡಿ ಹಣಗಳಲ್ಲಿ ತಾ. 29-8-1960ರಲ್ಲಿ ರೂ. 112-50 ನ. ಪೈ. ವಸೂಲು ಕೊಟ್ಟು ಸದ್ರಿ ನೋಟಿನಲ್ಲಿ ಜಮಾ ಬರೆಸಿಕೊಟ್ಟದ್ದು ಕಳೆದು ಬಾಕಿ ಅಸಲು ಬಡ್ಡಿ ಕೂಡಾ ರೂಪಾಯಿ 689-69 ನ. ಪೈ.ಗೆ ಸದ್ರಿ ಕೋರ್ಟಿನಲ್ಲಿ ಮೇಲ್ಕಂಡ ದಾವೆ ನಡೆದು ಸದ್ರಿ ದಾವೆಯು ತನ್ನ ತಾ. 23-12—1963ಕ್ಕೆ ತನಿಖೆಗೆ ಇಡೋಣಾಗಿಯದೆ. ಎಂಬ ವಿಷಯ ಈ ಮೂಲಕ ತಿಳಿಯಪಡಿಸೋಣಾಗಿಯದೆ. ಆ ದುದರಿಂದ ಸದ್ರಿ ತನ್ನ ದಿವಸ ನೀವು ಸ್ವತಹಾ ಆಗಲೀ ಯಾ ವಕೀಲರ ಮೂಲಕವಾಗಲೀ ಆಕ್ಷೇಪಗಳೇನಾದರೂ ಇದ್ದ ಪಕ್ಷದಲ್ಲಿ ಹಾಜರಾಗಿ ಜಾಹಿರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಗೈರು ಹಾಜರಿಯಿಂದ ದಾವೆಯನ್ನು ತೀರ್ಮಾನಿಸಲ್ಪಡಲಾದೀತು.

ವ್ಯಾ. ತೇಜಪ್ಪ ಸೆಟ್ಟಿ
ಎಡ್ವೊಕೇಟ್, ಕುಂದಾಪುರ

ಕುಂದಾಪುರ, ತಾ. 30-11-1963

NAVAYUGA
Kannada Weekly
UDIPI
Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ

ವರುಷ	ಉಡುಪಿ	ವಾರ
೪೩	೧೨-೧೨-೧೯೬೩	೧೫

ಚೀನಾ ಮತ್ತು ತಾಟಸ್ಥ್ಯ

ಬೆಲ್ಗ್ರೇಡ್ ಮಾದರಿಯ ತಟಸ್ಥ ರಾಷ್ಟ್ರಗಳ ಸಮ್ಮೇಳನವೊಂದನ್ನು ಕೂಡಿಸಬೇಕೆಂದು ಕೆಲವು ದಿನಗಳಿಗೆ ಮೊದಲು ಸಿಂಹಳದ ಪ್ರಧಾನಿ ಶ್ರೀಮತಿ ಸಿರಿಮಾವೊ ಭಂಡಾರ ನಾಯಿಕೆ ಮತ್ತು ಸಂಯುಕ್ತ ಅರಬ ಪ್ರಜಾರಾಜ್ಯದ ಅಧ್ಯಕ್ಷ ನಸ್ಸೇರರು ನಿರ್ಧಾರಕ್ಕೆ ಬಂದರೆಂದು ತಿಳಿದ ಕೆಂಪು ಚೀನಾದ ನಾಯಕರು ಮೊದಲು ತಬ್ಬಿಬ್ಬಾದರು. ಬಾಡುಂಗ ರಾಷ್ಟ್ರಗಳ ಸಮ್ಮೇಳನವನ್ನು ಕರೆಯುವ ಪ್ರಯತ್ನ ಮಾಡುತಿದ್ದ ಅವರು ಕೈಕಾಲುಗೆಟ್ಟುದು ಸ್ವಾಭಾವಿಕ. ಹಾಗಾಗಿ ತಟಸ್ಥ ದೇಶಗಳ ಸಮ್ಮೇಳನವನ್ನೇ ಹೆಚ್ಚಿನ ದೇಶಗಳು ಸ್ವಾಗತಿಸುತ್ತಿರುವುದನ್ನು ಮನಗಂಡ ಅವರು ತಮ್ಮ ವಾದಕ್ಕೆ ಬೆಂಬಲವಿಲ್ಲ ಎಂಬುದನ್ನು ತುಸು ತಡವಾಗಿಯಾದರೂ ಮನವರಿಕೆ ಮಾಡಿಕೊಂಡುದು ಸಮಾಧಾನಕರ. ಆದರೆ, ತಮ್ಮ ಉದ್ದಂಡ ನೀತಿಯನ್ನು ತಾವು ತ್ಯಜಿಸಿದ್ದೇವೆಂದು ಹೇಳುತ್ತ ತಟಸ್ಥ ರಾಷ್ಟ್ರಗಳ ಸಮ್ಮೇಳನದಲ್ಲಿ ತಮಗೂ ಸ್ಥಾನವೊಂದನ್ನು ಗಿಟ್ಟಿಸಿಕೊಳ್ಳುವ ಕುತಂತ್ರ ಜಾಲವನ್ನು ಹಣಿಯ ತೊಡಗಿದ್ದಾರೆ.

ಇಬ್ಬರು ಚೀನೀಯ ಮಹಾ ನಾಯಕರು ಸದ್ಯ ಕೈಗೊಂಡ ಆಫ್ರಿಕನ್ ದೇಶಗಳ ಸಂಚಾರಕ್ಕೀಗ ಬೇರೆಯೇ ಬಣ್ಣ ಬಂದಿದೆ ಬೆಲ್ಗ್ರೇಡ್ ತಟಸ್ಥ ರಾಷ್ಟ್ರ ಸಮ್ಮೇಳನದಲ್ಲಿ ಹೇಗಾದರೂ ಮಾಡಿ ಸ್ಥಾನಗಳಿಸುವುದು ಮತ್ತು ಅದಕ್ಕೆ ತಕ್ಕ ವೇದಿಕೆಯನ್ನು ಸಿದ್ಧಗೊಳಿಸುವದು ಇಂದವರ ಉದ್ದೇಶವಿದ್ದಂತಿದೆ. ತಟಸ್ಥರಾಷ್ಟ್ರ ತಮ್ಮದು ಎಂದವರೀಗ ಹೊಸ ಹಾಡಿನ ಪಲ್ಲವಿಯನ್ನು ಎಲ್ಲೆಲ್ಲೂ ಸಾರುವ ಕಾರ್ಯವನ್ನು ಮಾಡತೊಡಗಿದ್ದಾರೆ ಮೊನ್ನೆ ಮೊನ್ನೆಯವರೆಗೆ ರಶ್ಯದೊಡನೆ ನಿಕಟ ಸಂಬಂಧ ಬೆಳೆಸಿಕೊಂಡ ಪೀಕಿಂಗ್ ತಾನೀಗ ಆ ಸಂಬಂಧವನ್ನು ಕಡಿದು ಕೊಂಡಿರುವೆನೆಂದೂ ಆದುದರಿಂದ ಯಾವ ಬಣ್ಣಕ್ಕೂ ತಾನು ಅಂಟಿಕೊಂಡಿಲ್ಲವೆಂದೂ ಆ ಕಾರಣದಿಂದ ತನಗೆ ನಿಯೋಜಿತ ಸಮ್ಮೇಳನದಲ್ಲಿ ಸ್ಥಾನ ಸಿಗಬೇಕೆಂದೂ ಅದು ವಾದಿಸುವ ಸಾಹಸಕ್ಕೆ ತೊಡಗಿದಂತೆ ಮತ್ತು ತನ್ನ ಬಾಲಬಡಕ ದೇಶಗಳ ಮೂಲಕ ಈ ಬಗ್ಗೆ 'ಹೇರಿಂಗ್' ಮಾಡ ಹೊರಟಿರುವಂತೆ ಭಾಸವಾಗುತ್ತದೆ. ಕೆಂಪು ಚೀನವು ತಟಸ್ಥ ರಾಷ್ಟ್ರವೆಂದು ಒಮ್ಮೆ ಸ್ವೀಕೃತವಾಯಿತೆಂದರೆ, ಅದು ಖಂಡಿತಕ್ಕೂ ಸಂಧ್ಯವಿಲ್ಲ, ರಶ್ಯವನ್ನದು ದೂರವಿರಿಸಿ ತನ್ನ ತಾತ್ವಿಕ ವಿವಾದದಲ್ಲಿ ಮಹಾ ವಿಜಯ ಸಂಪಾದಿಸಿದಂತಾಗುವುದು. ಇಂತಹ ಕುತಂತ್ರಗಳಿಗೆ ತಟಸ್ಥ ರಾಷ್ಟ್ರಗಳು ಬಲಿಯಾಗಲಾರವು. ಜಗತ್ತಿನಿಂದಲೇ ಸಿಡಿದು ಪ್ರತ್ಯೇಕವಾಗುತ್ತಿರುವ ಚೀನಾವು ತನ್ನ ಹೊಸ ಜಗತ್ತೊಂದನ್ನು ನಿರ್ಮಿಸುವ ವ್ಯರ್ಥ ಪರಿಶ್ರಮವನ್ನು ಎಲ್ಲರೂ ಮನವರಿಗೆ ಮಾಡಿಕೊಳ್ಳಬಲ್ಲರು. ಆಕ್ರಮಣ ಶೀಲತೆ, ಸಾಮ್ರಾಜ್ಯ ಮತ್ತು ವಸಾಹತು ವಾದವನ್ನು ಪುರಸ್ಕರಿಸುವ ಚೀನೀಯ ನೀತಿಯನ್ನು ತಾಟಸ್ಥ್ಯವೆಂದು ಒಪ್ಪುವುದಾದರೆ, ತಾಟಸ್ಥ್ಯ ಮತ್ತು ನಿರ್ಲಿಪ್ತತೆಯ ವ್ಯಾಖ್ಯೆಯನ್ನೇ ಬದಲಾಯಿಸಬೇಕಾಗುತ್ತದೆ. ಭಿಕ್ಷುಕನೊಬ್ಬನನ್ನು ಲಕ್ಷಪತಿ ಎಂದು ಹೆಸರಿಸುವ ಮೌಢ್ಯವನ್ನು ಎಂದೂ ತಟಸ್ಥ ರಾಷ್ಟ್ರಗಳು ತೋರಿಸಲಾರವು, ತಟಸ್ಥ ನೀತಿಯನ್ನು ತಾನು ಸ್ವೀಕರಿಸಿರುವೆನೆಂದು ಕೆಂಪು ಚೀನಾವು ಹೇಳುವುದಾದರೂ ಅದು ಒಪ್ಪತಕ್ಕದಲ್ಲ; ಆದುದರಿಂದ ಅದಕ್ಕೆ ತಟಸ್ಥ ರಾಷ್ಟ್ರಗಳ ಸಾಲಿನಲ್ಲಿ ಸ್ಥಾನ ದೊರೆಯುವುದೂ ಸಾಧ್ಯವಿಲ್ಲ.

ಕೆಂಪು ಚೀನಾ ಮತ್ತು ಸೋವಿಯತ್ ರಶ್ಯಗಳ ನಡುವೆ ತಾತ್ವಿಕ ಭಿನ್ನಾಭಿಪ್ರಾಯವು ಬಲಿತು ಅವುಗಳ ನಡುವೆ ವಿರಸವುಂಟಾಗಿರುವುದು ಲೋಕವಿದಿತ; ಅಲ್ಲದೆ ಉಭಯ ದೇಶಗಳ ನಾಯಕರು ಪರಸ್ಪರ ಆರೋಪ—ಪ್ರತ್ಯಾರೋಪಗಳನ್ನು ಹೊರಿಸುತ್ತ ನಡೆದಿರುವುದರಿಂದ, ವಿರಸವು ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಬಂತು. ರಶ್ಯದೊಡನೆ ತಮಗಿರುವ ಸಂಬಂಧವನ್ನು ತಾವು ಕಡಿದುಕೊಂಡ ಮಾತ್ರಕ್ಕೆ ಕೆಂಪು ಚೀನೀಯ ನಾಯಕರು ತಟಸ್ಥ ರಾಷ್ಟ್ರಪಂಕ್ತಿಯಲ್ಲಿ ಸ್ಥಾನ ಪಡೆಯಲಾರರು. ಏಕೆಂದರೆ, ಬಂಡವಳ ಶಾಹಿಯನ್ನು ಉರುಳಿಸಬೇಕೆಂದೂ ಸಾಮ್ಯವಾದವೊಂದೇ ಉದ್ಧಾರದ ಮಾರ್ಗವೆಂದೂ ಅವರು ನಂಬಿದ್ದಾರೆ ಮತ್ತು ಅದೇ ನೀತಿಯನ್ನು ಅನುಸರಿಸುತ್ತಿದ್ದಾರೆ. ಆದುದರಿಂದ ಕೆಂಪು ಚೀನಾವು ಮೋಸೆ ಹೊಗ್ಗಿಸುವ ಪ್ರಯತ್ನದಲ್ಲಿ ಎಂದಿಗೂ ಸಫಲವಾಗದು. ಒಂದು ವೇಳೆ ನಿರ್ಲಿಪ್ತ ರಾಷ್ಟ್ರಗಳು ಚೀನಾದ ಬಲಾತ್ಕಾರಕ್ಕೆ, ಹಂಗು ದಾಕ್ಷಿಣ್ಯಗಳಿಗೆ ಬಲಿಬಿದ್ದುವಾದರೆ, ಅಂದಿಗೆ ನಿರ್ಲಿಪ್ತತೆಯು ತನ್ನ ಪವಿತ್ರಾರ್ಥವನ್ನು ಕಳೆದುಕೊಂಡು ಅದೊಂದು ಪ್ರತ್ಯೇಕ 'ಬಣ್ಣ'ವೇ ಆಗುವುದು. ಇಂತಹ ಅನಪೇಕ್ಷಿತ ಪ್ರಸಂಗದಿಂದ ಎಲ್ಲ ತಟಸ್ಥ ರಾಷ್ಟ್ರಗಳು ದೂರವಿದ್ದು ಚೀನಾವನ್ನು ಬಹಿಷ್ಕರಿಸಿಯೇ ತಮ್ಮ ಸಮ್ಮೇಳನವನ್ನು ನಡೆಸುವುವೆಂದು ಆಶಿಸುತ್ತೇವೆ.

ಶಿಕ್ಷಣ ಮಾಧ್ಯಮ

ಕೇಂದ್ರ ಸರಕಾರದ ನೂತನ ಶಿಕ್ಷಣ ಮಂತ್ರಿ ಎಂ. ಸಿ ಛಾಗಲಾ ಅವರು ಶಿಕ್ಷಣದ ಮಾಧ್ಯಮದ ಕುರಿತಾಡಿದ ಮಾತೊಂದು ಗಂಭೀರ ಪರಿಶೀಲನೆಗೆ ಅರ್ಹವಾಗಿದೆ. ಭಾರತವು ಸ್ವತಂತ್ರಗೊಂಡ ಬಳಿಕ ಎದ್ದಿರುವ ಹಲವಾರು ಸಮಸ್ಯೆಗಳಲ್ಲಿ ಶಿಕ್ಷಣದ ಮಾಧ್ಯಮವೂ ಒಂದು. ಇಂದು ಮಾಧ್ಯಮಿಕ ಮಟ್ಟದ ಶಿಕ್ಷಣವು ಮಾತೃಭಾಷೆಯಲ್ಲಿಯೇ ನಡೆಯುತ್ತಿದೆ. ಈಗ ಎದ್ದಿರುವ ಪ್ರಶ್ನೆಯೆಂದರೆ ವಿಶ್ವವಿದ್ಯಾಲಯ ಹಂತದಲ್ಲಿ ಶಿಕ್ಷಣದ ಮಾಧ್ಯಮ ಯಾವುದಾಗಬೇಕು ಎಂಬುದು. ಇಂಗ್ಲಿಷ್ ಭಾಷೆಯ ಮಹತ್ವವು ಕಡಿಮೆಯಾಗುವುದರಿಂದ ರಾಷ್ಟ್ರ ಭಾಷೆ ಹಿಂದಿ ಅಥವಾ ಆಯಾಯಾ ರಾಜ್ಯದ ರಾಜ್ಯ ಭಾಷೆಯು ಮಾಧ್ಯಮವಾಗ ಬೇಕಾಗುತ್ತದೆ. ಆದರೆ, ಇಂಗ್ಲಿಷೇತರ ಭಾಷೆಗಳನ್ನು ಬೋಧ ಭಾಷೆಯನ್ನಾಗಿ ಮಾಡುವುದು ಸದ್ಯ ಕೈಲಾಗದ ಕಾರ್ಯವೆಂದು ಹೇಳಲಾಗುತ್ತಿದೆ. ಇಂಡಿಯ ದೇಶದಲ್ಲಿ ಒಂದೇ ಭಾಷೆಯನ್ನು ಮಾಧ್ಯಮವಾಗಿ ಸ್ವೀಕರಿಸಬೇಕೆಂದೂ ವಾದಿಸುವವರಿದ್ದಾರೆ. ಆದರೆ, ಇದಕ್ಕೆ ಬಲವಾದ ಪ್ರತಿರೋಧವು ತಲೆದೋರಬಹುದು ಮಾತ್ರವಲ್ಲ, ಬಹು ದೀರ್ಘ ಅವಧಿಯೂ ಬೇಕಾಗುವುದು. ಹಿಂದಿಯನ್ನು ಮಾಧ್ಯಮಿಕ ಹಂತದಲ್ಲಿ ಕಡ್ಡಾಯ ವಿಷಯವೆಂದು ಹೇಳುವುದಕ್ಕೇನೇ ವಿರೋಧವಿರುವುದನ್ನು ನಾವು ಗಮನಿಸಿದರೆ, ಇದು ಸಾಧ್ಯವೆನಿಸುವುದಿಲ್ಲ; ಮಾತ್ರವಲ್ಲ, ಅದರಿಂದ ಹಿಂದ್ಯೇತರ ಭಾಷಾ ಪ್ರದೇಶಗಳಿಗೂ ಅನ್ಯಾಯ ಮಾಡಿದಂತಾಗುತ್ತದೆ. ಆದುದರಿಂದ ಒಂದಲ್ಲ ಒಂದು ದಿನ ಬೋಧ ಭಾಷೆಯ ಸ್ಥಾನವನ್ನು ಮಾತೃ ಭಾಷೆಯೇ ಪಡೆಯಬೇಕು; ಕೇವಲ ನೂರರಲ್ಲಿ ಒಬ್ಬಿಬ್ಬ ಬುದ್ಧಿವಂತರ ಸಲುವಾಗಿ ಉಳಿದವರನ್ನು ಬಲಿಕೊಡುವುದು ಸಲ್ಲದು. ವಿಶ್ವವಿದ್ಯಾಲಯ ಹಂತದಲ್ಲಿ ಅನುತ್ತೀರ್ಣತೆಯು ಹೆಚ್ಚಾಗುವುದಕ್ಕೆ ವಿದ್ಯಾರ್ಥಿಗಳ ಅಜ್ಞಾನಕ್ಕಿಂತಲೂ ಬೋಧ ಭಾಷೆ ಇಂಗ್ಲಿಷಿನಲ್ಲಿರುವ ಹತೋಟಿಯು ಕಡಿಮೆಯಾಗಿರುವುದೇ ಪ್ರಬಲ ಕಾರಣ. ಆದುದರಿಂದ ಇಡಿಯ ಪ್ರಶ್ನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ವಿಷಯದಲ್ಲಿ ನಿರ್ಧಾರ ಕೈಗೊಳ್ಳಬೇಕೇ ಹೊರತು ಅವಸರ ಮಾಡಬಾರದು ಎಂಬ ಛಾಗಲಾರ ವಾದವನ್ನು ನಾವೂ ಒಪ್ಪುತ್ತೇವೆ.

ವಾರ್ತೆ—ಪ್ರತಿವಾರ್ತೆ

ರಾಜ್ಯದಲ್ಲಿ ಸಕ್ಕರೆಯ ಅಭಾವವಿಲ್ಲ; ಒಂದೇ ತಿಂಗಳಲ್ಲಿ ಮೂರು ಹಬ್ಬಗಳೂ ಕಾಣಿಸಿಕೊಂಡುದರಿಂದ ಕೃತಕಾಭಾವವಿದ್ದದ್ದು ನಿಜ. ಈಗ ಎಷ್ಟು ಬೇಕಾದರೂ ಕೊಂಡುಕೊಳ್ಳಬಹುದು. ಕಂದಾಯ ಮಂತ್ರಿ ಎಂ. ವಿ. ಕೃಷ್ಣಪ್ಪನವರ ಹೇಳಿಕೆ

ಸಕ್ಕರೆಯ ಅಭಾವವಂತೂ ಇರಲೇ ಇಲ್ಲ; "ಭಾವ"ದ ಹೆಚ್ಚಳದಿಂದಾಗಿ ಕೊಂಡುಕೊಳ್ಳುವವರ ಅಭಾವವೇ ಅಂದು ತಲೆದೋರಿತ್ತು. ಇಂದು ಅದರ "ಭಾವ" ವೇನು ಎಂಬುದನ್ನು ಮಂತ್ರಿವರ್ಯರು ತಿಳಿಸುತಿದ್ದರೆ ...?

೦ ೦ ೦

ಗೋವೆಯು ಮಹಾರಾಷ್ಟ್ರದಲ್ಲಿ ವಿಲೀನಗೊಳ್ಳುವುದೆಂದು ಸಂರಕ್ಷಣಾಮಂತ್ರಿ ಚವನರು ಚುನಾವಣಾ ಭಾಷಣವೊಂದರಲ್ಲಿ ಗೋವೆಯೊಳಗೆ ನುಡಿದರು.

—ಗೋವೆಯ ಭವಿಷ್ಯ ಗೋವೆಯಂತರ ಕೈಯಲ್ಲಿದೆಯೆಂದು ಕರ್ನಾಟಕದ ಮುಖ್ಯ ಮಂತ್ರಿ ನಿಜಲಿಂಗಪ್ಪನವರು ಮತ್ತೊಮ್ಮೆ ನೆನಪಿಸಿ ಕೊಟ್ಟರು.

೦ ೦ ೦

ಹಿಮ್ಮತ್ ನಗರದ ಭಾರೀ ಸಭೆಯೊಂದರಲ್ಲಿ ಲಂಚದ ವಿರುದ್ಧವಾದ ಪ್ರತಿಜ್ಞೆಯನ್ನು ನೆರೆದವರಿಂದ ಗೃಹಮಂತ್ರಿ ನಂದಾರವರು ಮಾಡಿಸಿ ತಮ್ಮ ಹಿಮ್ಮತ್ತ್ ಪ್ರದರ್ಶನ ಮಾಡಿದರು.

ನ್ಯಾಯಾಲಯಗಳಲ್ಲಿ ವಾದಿ ಪ್ರತಿವಾದಿಗಳಿಬ್ಬರೂ ತಾವು ಸತ್ಯವನ್ನೇ ನುಡಿಯುವುದಾಗಿ ಪ್ರತಿಜ್ಞೆ ಮಾಡುತ್ತಾರೆ, ತಾನೆ?

೦ ೦ ೦

೧೮೮೯ರಲ್ಲಿ ಜನಿಸಿದ ನೆಹರೂರವರು ೧೯೦೪ರಲ್ಲಿ ಮೊತ್ತಮೊದಲಿಗೆ ಸಿನೇಮಾ ನೋಡಿದ್ದರಂತೆ.

—ನಮ್ಮ ಮುಂದಿನ ಜನಾಂಗ ಇದರಿಂದ ತಮ್ಮ ಸಿನೇಮಾ ಪ್ರಿಯತೆಯ ಬಗ್ಗೆ ಅಭಿಮಾನ ಪಟ್ಟುಕೊಳ್ಳಬಹುದು.

೦ ೦ ೦ ೦

ಚೀನೀಯ ಪ್ರಧಾನಿ ಮತ್ತು ಉಪಪ್ರಧಾನಿಗಳಿಗೆ ಭಾರತದ ವಾಯುಕ್ಷೇತ್ರದ ಮೇಲೆ ಹಾರಿಹೋಗಲು ಭಾರತ ಸರಕಾರ ಅನುಮತಿಯಿತ್ತಿದೆ ಕೆಲವೊಂದು ಶರ್ತಗಳ ಮೇಲೆ.

—ಹಾರಿಹೋಗುವ ಸಮಯದಲ್ಲಿ ಅವರ ವಿಮಾನವನ್ನು ನೋಡಲು ಎಲ್ಲ ಭಾರತೀಯರೂ ಉತ್ಸಾಹಕರಿದ್ದಾರೆಂಬುದು ಸುಳ್ಳೆ?

೦ ೦ ೦ ೦

ಸುಚೇತಾ ಕೃಪಲಾನಿಯವರ ವರ್ತನೆಯ ಬಗ್ಗೆ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿಗೆ ಅಸಮಾಧಾನ ಹೆಚ್ಚಿದೆ.

—ತನ್ನ ಕೃತಿಗೆ ಅನುಮತಿಯಿತ್ತರೆ ಸಾಕು, ಸಮಾಧಾನ—ಅಸಮಾಧಾನದ ಪ್ರಶ್ನೆ ಬೇಡ ಎಂದು ಕೃಪಲಾನಿಯೆನ್ನುವುದು ಸತ್ಯವಿದ್ದರೂ ಇರಬಹುದು.

೦ ೦ ೦

ತೃತೀಯ ಯೋಜನೆಯ ಮೌಲ್ಯಮಾಪನವು ತೀರ ಅಸಂತೃಪ್ತಿಯಿದೆ—ವರದಿ.

—ಯೋಜನೆಯ ಹೆಸರಿನಲ್ಲಿ ಸಂತೃಪ್ತಿ ಪಡೆದವರು ಕೆಲ ಮಂದಿಯಿದೆ—ಗಿರದಿ.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. S. 537/63

ಕೊರಗಪ್ಪ ರೈ —ವಾದಿ.

7) ಕಮಲಾ—ಅಬ್ಬಕ್ಕ ಮಗಳು 13) ರಾಜೀವ, 14) ಮನೋಹರ—ಕಮಲಾ ಹೆಂಗ್ಸಿನ ಮಕ್ಕಳು —ಪ್ರತಿವಾದಿರು

ಗಾರ್ಡಿಯನ್ ತಾಯಿ 7ನೇ ಪ್ರತಿವಾದಿ ಕುರಿಯ ಗ್ರಾಮದಲ್ಲಿ ಮಂಜಪ್ಪ ರೈಗಳ ಮನೆಯಲ್ಲಿರುತ್ತಾರೆ.

ಇವರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ.—

ವಾದಿಯು ನಿಮ್ಮ ಮೇಲೆ ಕೂಡಾ ಮಾಡಿದ ಮೇಲಿನ ದಾವೆಯನ್ನು ತಾ. 23-12-63 ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಇಟ್ಟಿರುತ್ತದೆ. ಆ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉದಹರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಏಕಪಕ್ಷ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

Sd/- M. Sadashiva Rao,
Vakil for Pltf.

ಪುತ್ತೂರು, ತಾ. 6-12-1963

ಮಂಜುನಾಥನ ಧರ್ಮಸ್ಥಳ ❖ ಶ್ರೀ ರತ್ನವರ್ಮ ಹೆಗ್ಗಡೆಯವರು

ಭಾರತೀಯ ಧಾರ್ಮಿಕ ಪರಂಪರೆಗಳಲ್ಲಿ ಧರ್ಮಕ್ಷೇತ್ರಗಳ ಮಹತ್ವವು ಅಖಂಡವಾಗಿ ಉಳಿದು ನಡೆದು ಬಂದಿದೆ. ತನ್ನಲ್ಲಿ ಪ್ರವೇಶಮಾಡಿದ ಯಾತ್ರಿಕರ ಮೇಲೆ ತನ್ನ ದಿವ್ಯ ಪ್ರಭಾವವನ್ನು ಬೀರಿ ಅವರ ದೈವೀ ಸಂಪತ್ತನ್ನು ಕ್ಷೇತ್ರಗಳು ಉಚ್ಚೇತನಗೊಳಿಸುತ್ತವೆ, ಅವರ ಜೀವನವನ್ನು ಕೃತಾರ್ಥಗೊಳಿಸುತ್ತವೆ. ಇಂತಹ ಅಮರ ಪುಣ್ಯ ಸ್ಥಳಗಳಲ್ಲಿ ಇಡಿಯ ಭಾರತದಲ್ಲಿಯೇ ಹೆಸರು ಪಡೆದುದು ದಕ್ಷಿಣ ಕನ್ನಡ ಜಿಲ್ಲೆಯ ಶ್ರೀ ಧರ್ಮಸ್ಥಳ ಕ್ಷೇತ್ರ

ಬೆಳ್ತಂಗಡಿ ತಾಲೂಕಿನಲ್ಲಿ ನೇತ್ರಾವತಿ ನದಿಯು ಹರಿಯುತ್ತದೆ. ಈ ಪುಣ್ಯನದಿಯು ಗುಡ್ಡ-ಕಾಡುಗಳಲ್ಲಿ ನೆಗೆಯುತ್ತ ಧರ್ಮಸ್ಥಳದ ಬಳಿ ಸರಿಯುತ್ತದೆ. ಈ ಪುಣ್ಯತೀರ್ಥದಲ್ಲಿ ಪುಣ್ಯ ಸ್ನಾನಗೈದು ಅಂತರಂಗ-ಬಹಿರಂಗ ಶುದ್ಧರಾಗಿ ಶ್ರೀ ಧರ್ಮಸ್ಥಳದ 'ಮಾತು ಬಿಡದ ಮಂಜುನಾಥ'ನ ದರ್ಶನ ಮಾತ್ರದಿಂದ ಸಾಂಸಾರಿಕ ಬಂಧನ ಕ್ಲೇಶಗಳೆಲ್ಲವೂ ಪರಿಹಾರವಾಗುವುದೆಂಬುದು ಭಕ್ತ ಮಹಾಶಯರ ದೃಢ ವಿಶ್ವಾಸ. ಇದಕ್ಕೆಂದೇ ದೇಶದ ನಾಲ್ಕು ನಿಟ್ಟುಗಳಿಂದ ದಿನಂಪ್ರತಿ ಸಾವಿರಾರು ಯಾತ್ರಿಕರು ಬಂದು, ಸ್ವಾಮಿಯ ದರ್ಶನ ಭಾಗ್ಯ ಪಡೆದು ಧನ್ಯರಾದವೆಂದು ತಿಳಿದು ಮರಳುತ್ತಾರೆ.

"ಕುಡುಮ' ಎಂಬ ಹೆಸರಿನಲ್ಲಿಯೇ ದಾನ ಧರ್ಮ, ಸಮ್ಮೇಳನ, ಯಾತ್ರಾರ್ಥಿಗಳ ನೆರವಿಗಳಿಗೆ ಹೆಸರಾದ ಶ್ರೀ ಮಂಜುನಾಥನ ನೆಲೆಯಿತ್ತೀಚೆಗೆ ಧರ್ಮಸ್ಥಳವೆಂಬ ಸಮುಚಿತವೂ ಯೋಗ್ಯವೂ ಸುಸಂಸ್ಕೃತವೂ ಆದ ಹೆಸರು ಪಡೆಯಿತು. ಅಂದಿನಿಂದ ಇಂದಿಗೂ ಧರ್ಮಕಾರ್ಯಗಳ ನಾಯಕನಾಗಿ ಕೀರ್ತಿಶಾಲಿಯೆನಿಸುತ್ತ ಭಕ್ತ ಜನ ಮಹಾಶಯರ ಇಷ್ಟಾರ್ಥಗಳನ್ನು ಪೂರೈಸುತ್ತ ಲೋಕರಕ್ಷಕನಾಗಿ ನಿಂತಿದ್ದಾನೆ. ಭಕ್ತ ಕುಟುಂಬಿಯೆಂಬ ಬಿರುದನ್ನು ಸಾರ್ಥಕಗೊಳಿಸುವುದರಲ್ಲಿ ನಿಮಗ್ನನಾಗಿದ್ದಾನೆ, ಮಂಜುನಾಥ.

ಶ್ರೀ ಮಂಜುನಾಥನ ದೇವಾಲಯದಂತೆಯೇ ಚಂದ್ರನಾಥ ಬಸದಿಯೂ ಇಲ್ಲಿನ ಮುಖ್ಯ ಮಂದಿರ. ಶ್ರೀ ಕ್ಷೇತ್ರ ರಕ್ಷಕನಾದ ಶ್ರೀ ಅಣ್ಣಪ್ಪ ಸ್ವಾಮಿಯ ಮಹಿಮೆ ಅಪಾರ. ಅಸೀಮ ಪ್ರಕೃತಿಯ ಮಡಿಲಲ್ಲಿ, ಎತ್ತರೆತ್ತರವಾದ ಬೆಟ್ಟಸಾಲುಗಳು, ಕಣಿವೆಗಳಲ್ಲಿ ಭೋರ್ಗರೆದು ಹರಿವ ನದೀನಾಲೆಗಳು ವಿವಿಧ ಪಕ್ಷಿ—ಮೃಗ ಸಂಕುಲಗಳಿಂದೊಡಗೂಡಿದ ಕಾಡುಗಳ ಎಡೆಯಲ್ಲಿ— ಕಂಗೊಳಿಸುವ, ಭಾರತ ಪ್ರಸಿದ್ಧಿ ಪಡೆದ ಈ ಕ್ಷೇತ್ರದಲ್ಲಿ ಯಾತ್ರಾರ್ಥಿಗಳಿಗೆ ಸರ್ವಪ್ರಕಾರದ ವ್ಯವಸ್ಥೆಯೂ ಲಭಿಸುತ್ತದೆ; ಆದುದರಿಂದಾಗಿಯೇ ತನ್ನ ಜೀವಮಾನದಲ್ಲಿ ಒಂದು ಬಾರಿಯಾದರೂ ಧರ್ಮಸ್ಥಳ ಯಾತ್ರೆ ಮಾಡಲೇಬೇಕು; ಇದರಿಂದ ಮನಸ್ಸು ಹಗುರವಾಗುವುದು, ಪ್ರಫುಲ್ಲಿತವಾಗುವುದು ದುಃಖ ಜಂಜಾಟಗಳು ದೂರವಾಗುವುವು. ನೀವೂ ಈ ಸೌಲಭ್ಯವನ್ನೇಕೆ ಸದುಪಯೋಗ ಮಾಡಿಕೊಳ್ಳಬಾರದು?

ಧರ್ಮಾಧಿಕಾರಿ ಶ್ರೀ ಡಿ. ರತ್ನವರ್ಮ ಹೆಗ್ಗಡೆಯವರು

ಶ್ರೀ ಧರ್ಮಸ್ಥಳದ ಸಕಲ ಧಾರ್ಮಿಕ ವ್ಯವಸ್ಥೆಗಳೂ ಧರ್ಮಾಧಿಕಾರಿಗಳ ನೇತೃತ್ವದಲ್ಲಿ ನಡೆಯುತ್ತವೆ. ಆದುದರಿಂದ ಸುವ್ಯವಸ್ಥೆ ಮತ್ತು ಸಂಯೋಜನೆಗಳು ಉತ್ತಮ ಧರ್ಮಾಧಿಕಾರಿಗಳ ಆಡಳಿತೆಯಲ್ಲಿರುವುದು ಸ್ವಾಭಾವಿಕ. ಪ್ರಕೃತದ ಧರ್ಮಾಧಿಕಾರಿ ಶ್ರೀ ಡಿ. ರತ್ನವರ್ಮ ಹೆಗ್ಗಡೆಯವರು [illegible]ರಲ್ಲಿ ಪಟ್ಟಾಭಿಷಿಕ್ತರಾದರು. ಇವರ ತೀರ್ಥರೂಪರಾದ ಚಂದಯ್ಯ ಹೆಗ್ಗಡೆಯವರು [illegible]ರಿಂದ [illegible]ರ ತನಕ ಧರ್ಮಾಧಿಕಾರಿಗಳಾಗಿದ್ದು ಶ್ರೀ ದೇವಾಲಯದ ಉನ್ನತಿ ಮತ್ತು ಯಾತ್ರಾರ್ಥಿಗಳ ಅನುಕೂಲತೆಗಳನ್ನು ಸಾಧಿಸಿದ್ದರು. ಶ್ರೀ ರತ್ನವರ್ಮ ಹೆಗ್ಗಡೆಯವರು ತನ್ನ ತೀರ್ಥರೂಪರು ಮತ್ತು ಪೂರ್ವಪಟ್ಟಾಧಿಕಾರಿ ಮಂಜಯ್ಯ ಹೆಗ್ಗಡೆಯವರ ಮಾದರಿಯನ್ನೇ ಅನುಸರಿಸಿ, ಅವರಿಗೂ ಮಿಗಿಲೆನಿಸಿ, ಶ್ರೀ ಕ್ಷೇತ್ರದ ಗೌರವ-ಪ್ರತಿಷ್ಠೆಗಳಿಗೆ ಯಾವದೇ ರೀತಿಯ ಕುಂದು-ಕೊರತೆಯಾಗದಂತೆ ನೋಡಿಕೊಂಡು ಅದ್ಭುತ ಕಾರ್ಯಶೀಲರಾಗಿದ್ದಾರೆ. ಇದಕ್ಕೆ ದಿನೇ ದಿನೇ ಬದಲಾಗುತ್ತಿರುವ ಶ್ರೀ ಕ್ಷೇತ್ರದ ಸ್ವರೂಪವೇ ಜ್ವಲಂತ ನಿದರ್ಶನ.

ಶ್ರೀ ರತ್ನವರ್ಮ ಹೆಗ್ಗಡೆಯವರು ಆಡಳಿತ ವಹಿಸಿದಂದಿನಿಂದ ಶ್ರೀ ಕ್ಷೇತ್ರದ ಇತಿಹಾಸದಲ್ಲಿಯೇ ಹೊಸ ಘಟಗಳು ಶಿರಿಯತಾರಂಭವಾಗಿದೆ. ಸರ್ವ ಧರ್ಮಗಳನ್ನೂ ಅಭಿಮಾನದಿಂದ ಕಾಣುವ, ಸರಳತನಕ್ಕೆ ಹೆಸರಾದ ಸದಾ ಹಸನ್ಮುಖಿ ಸ್ವಾಗತ ನೀಡುವ, ಹೃತ್ಪೂರ್ವಕ ಸತ್ಕಾರವೀಯುವ ಶ್ರೀ ಹೆಗ್ಗಡೆಯವರು ಹಿತಮಿತ ಮೃದು ಮಧುರ ವಚೋವಿದರು. ಭಗವಂತನಲ್ಲಿ ಅವರ ವಿಶ್ವಾಸ ಅದ್ವಿತೀಯವಾದುದು, ಭಗವದ್ಭಕ್ತರೇ ಅವರ ಪ್ರಾಣ. ಶ್ರೀ ಕ್ಷೇತ್ರವನ್ನು ಸಂದರ್ಶಿಸುವ ಯಾತ್ರಿಕರ ಸಂಖ್ಯಾ ಪ್ರಮಾಣವು ಮಿತಿಮೀರಿ ಬೆಳೆಯುತ್ತಿರುವುದರಿಂದ ಅವರಿಗೆ ಉಚಿತ ಅನುಕೂಲತೆಗಳನ್ನು ಒದಗಿಸುವತ್ತ ಅವರ ದೃಷ್ಟಿ ಹರಿದುದು ಸಹಜ. ಇದಕ್ಕೆಂದೇ ನೂರಾರು ಸುವ್ಯವಸ್ಥಿತ ಕೋಣೆಗಳಿರುವ ಮೂರು ಅಂತಸ್ತಿನ ಬೃಹದಾಕಾರದ ಛತ್ರಗಳನ್ನು ಕಟ್ಟಿಸಿದರು. ಇನ್ನೂ ಛತ್ರಗಳ ರಚನೆ ನಡೆಯುತ್ತಲೇ ಇದೆ, ಅಲ್ಲಿ ಯಾತ್ರಾರ್ಥಿಗಳು ಸಕಲ ಸೌಕರ್ಯಗಳನ್ನೂ ಪಡೆಯುತ್ತಾರೆ. ತಮ್ಮ ವಾಸ್ತವ್ಯದ ಬೀಡನ್ನು ಪುನರುಜ್ಜೀವನಗೊಳಿಸಿ, ಅದನ್ನು ಕಲಾಪೂರ್ಣವಾಗಿ ರೂಪಿಸಿದ್ದಾರೆ, ಅವರ ಕಲಾಪ್ರೇಮದ ಪ್ರತೀಕವಾಗಿದೆ ಇದು. ಅತಿಥಿಶಾಲೆ, ಚಂದ್ರನಾಥ ಬಸದಿಯ ವಿಸ್ತರಣೆ, ನೆಲ್ಯಾಡಿ ಬೀಡು ಮತ್ತು ಅಣ್ಣಪ್ಪ ಬೆಟ್ಟಗಳ ವಿವಿಧ ಕಟ್ಟಡಗಳು, ಕರ್ನಾಟಕ ವಿದ್ಯಾಲಯ, ಜನಾರ್ದನ ಬುನಾದಿ ಶಾಲೆ, ವಿದ್ಯಾಲಯದ ವಿದ್ಯಾರ್ಥಿ ಭವನಗಳ ವಿಸ್ತರಣೆ ಮತ್ತು ಜೀರ್ಣೋದ್ಧಾರಗಳು ಶ್ರೀ ಹೆಗ್ಗಡೆಯವರ ಅಭಿವೃದ್ಧಿ ಕಾರ್ಯಗಳಲ್ಲಿರುವ ಆಸಕ್ತಿಯನ್ನು ತೋರಿಸುತ್ತವೆ

(ಮುಂದಿನ ಪುಟಕ್ಕೆ)

ನೂತನವಾಗಿ ನಿರ್ಮಿಸಿದ ಛತ್ರ

ಹೆಗ್ಗಡೆಯವರ ಬೀಡು

ಮಾನವ ಧರ್ಮ ಪ್ರತಿಪಾದಕ - ಸರ್ವ ಧರ್ಮ ಸಮ್ಮೇಳನ

ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಕಾರ್ತಿಕ ಮಾಸದಲ್ಲಿ ನಡೆಯುವ ಲಕ್ಷದೀಪೋತ್ಸವದ ಕೊನೆಯ ಎರಡು ದಿನಗಳಲ್ಲಿ ಸರ್ವಧರ್ಮ ಸಮ್ಮೇಳನ ಮತ್ತು ಸಾಹಿತ್ಯ ಸಮ್ಮೇಳನಗಳು ಕಳೆದ ಮೂವತ್ತು ವರ್ಷಗಳಿಂದಲೂ ಅನೂಚಾನವಾಗಿ ನಡೆದುಕೊಂಡು ಬರುತ್ತಿವೆ. ಹಿಂದಿನ ಧರ್ಮಾಧಿಕಾರಿ ಮಂಜಯ್ಯ ಹೆಗ್ಗಡೆಯವರು ಪ್ರಾರಂಭಿಸಿದ ಈ ಪರಂಪರೆಯನ್ನು ಈಗಿನ ಧರ್ಮಾಧಿಕಾರಿ ಶ್ರೀ ರತ್ನವರ್ಮ ಹೆಗ್ಗಡೆಯವರೂ ಅದೇ ರೀತಿಯಲ್ಲಿ ಲೋಕಪ್ರಶಂಸೆಗಳಿಗಾಸ್ಪದವೀಯುವೆ ಮುಂದುವರಿಸಿಕೊಂಡು ಬಂದಿದ್ದಾರೆ. ಈ ಎರಡು ಸಮ್ಮೇಳನಗಳಲ್ಲಿ ಕರ್ನಾಟಕದ ಮಾತ್ರವಲ್ಲ, ಅಖಿಲ ಭಾರತದ ಹಿಂದೂ, ಇಸ್ಲಾಂ, ಕ್ರೈಸ್ತ, ಜೈನ, ಬೌದ್ಧ ಮೊದಲಾದ ಹತ್ತಾರು ಮತಗಳ ವಿದ್ವನ್ಮಣಿಗಳು ಪ್ರತಿವರ್ಷ ಭಾಗವಹಿಸಿ, ವಿವಿಧ ಧರ್ಮಗಳ ಮೂಲ ತತ್ವಗಳನ್ನು ವಿಶ್ಲೇಷಿಸಿ, ಅವುಗಳನ್ನು ಮಥಿಸಿ, ನವನೀತವನ್ನು ತೆಗೆದು ಸಾಮಾನ್ಯ ಜನರ ಕೈಗಳಿಗೊಪ್ಪಿಸುತ್ತಾರೆ ಇದೇ ಆದರ್ಶ ಸಾಹಿತ್ಯ ಸಮ್ಮೇಳನದಲ್ಲಿ ಕೂಡಾ ಇದೆ. ಈ ಅಪೂರ್ವವಾದ ಸಮಾರಂಭಗಳಲ್ಲಿ ಭಾಗವಹಿಸಲು ಸಾವಿರಾರು ಯಾತ್ರಿಕರು, ಭಗವದ್ಭಕ್ತರು, ಧರ್ಮಾಭಿಮಾನಿಗಳು, ಸಾಹಿತ್ಯಕಲಾಪ್ರೇಮಿಗಳು ಗುಂಪುಸೇರುತ್ತಾರೆ, ತಮ್ಮ ಬದುಕಿನಲ್ಲಿ ಇದೊಂದು ಪುಣ್ಯ ದಿನವೆಂದು ತಿಳಿದು ಮೈ ಮರೆಯುತ್ತಾರೆ.

(ಹಿಂದಿನ ಪುಟದಿಂದ)

ಶ್ರೀ ರತ್ನವರ್ಮ ಹೆಗ್ಗಡೆಯವರು ರತ್ನದಂತಹ ಮನುಷ್ಯರು, ಮಾನವತಾವಾದಿಗಳು, ಸಜ್ಜನಿಕೆ, ಸತ್ಸಂಗ ಮತ್ತು ಸಾನುಕಂಪಗಳಿಗೆ ಹೆಸರಾದವರು. ಧರ್ಮಸಮನ್ವಯವೇ ಇವರ ವೈಶಿಷ್ಟ್ಯ ಎಲ್ಲ ಧರ್ಮಗಳೂ "ಏಕಂ ಸತ್ ವಿಪ್ರಾ ಬಹುಧಾ ವದಂತಿ' ಎಂದು ಸಾರುತ್ತಿರುವುದನ್ನು ಕಂಡು ಎಲ್ಲ ಧರ್ಮಗಳ ರಹಸ್ಯವರಿತು ವಸ್ತು ಸ್ವರೂಪ ವಿವೇಚನೆ ಮಾಡುವ ಉದಾರವಾದಿಗಳಿವರು. ಶ್ರೀ ರತ್ನವರ್ಮ ಹೆಗ್ಗಡೆಯವರಿಗೆ ಅವರ ತೀರ್ಥರೂಪರು ಇಟ್ಟ 'ರತ್ನವರ್ಮ' ಎಂಬ ನಾಮಧೇಯ ಅನ್ವರ್ಥಕ ನಾಗಿದೆ; ಶ್ರೀ ಕ್ಷೇತ್ರ ಧರ್ಮಸ್ಥಳವನ್ನು' ಸಂದರ್ಶಿಸಿದ ಪ್ರತಿಯೊಬ್ಬನೂ ಅಲ್ಲಿ ಈ ಹೆಸರು ಸಾರ್ಥಕವಾಗಿದೆಯೆಂದು ಅವಶ್ಯ ಮನನ ಮಾಡಿಕೊಳ್ಳುತ್ತಾನೆ ಮಿಂಚಿನ ವೇಗದಿಂದ ಶ್ರೀ ಕ್ಷೇತ್ರಾಭಿವೃದ್ಧಿಯನ್ನು ಸಾಧಿಸುವ ಮತ್ತು ಯಾತ್ರಾರ್ಥಿಗಳಿಗೆ ಆಕರ್ಷಕವನ್ನಾಗಿ ಮಾಡುವ ಹೆಗ್ಗಡೆಯವರ ಹಂಬಲ ಯಶಸ್ವಿಯಾಗಬೇಕು; ಅವರ ಉತ್ಸಾಹ, ಉದಾರತೆ, ಧರ್ಮಪ್ರಿಯತೆಗಳ ಪ್ರಯೋಜನ ನಾಡಿಗೆ ಬಹುಕಾಲ ದೊರೆಯಬೇಕು, ಶ್ರೀ ಸ್ವಾಮಿ ಇವರಿಂದ ಚಿರಕಾಲ ಸಮುಚಿತ ಸೇವೆ ಸ್ವೀಕರಿಸಿ, ನಾಡಿಗೆ ಉಪಕಾರವಾಗುವಂತೆ ಮಾಡಬೇಕು.

ಸರ್ವಧರ್ಮ ಸಮ್ಮೇಳನವು ಸರ್ವಧರ್ಮ ಸಮನ್ವಯ ದೃಷ್ಟಿಯಿಂದ ಸ್ಥಾಪಿತವಾಗಿದೆ. ಅವಿಚ್ಛಿನ್ನವಾಗಿ ನಡೆದು ಬಂದು ಜನ ಜಾಗೃತಿಯನ್ನುಂಟು ಮಾಡಿದೆ ಧರ್ಮವು "ಮತಧರ್ಮ"ವಲ್ಲ, ಮಾನವ ಧರ್ಮವೆಂಬುದನ್ನು ಜನತೆಗೆ ತೋರಿಸಿಕೊಟ್ಟಿದ್ದಾರೆ, ಧರ್ಮ ಸಂಸ್ಥಾಪಕರು "ಏಕಂಸತ್ ವಿಪ್ರಾ ಬಹುಧಾ ವದಂತಿ" 'ದೇವನೊಬ್ಬ, ನಾಮ ಹಲವು"; " ಹರನೆಂಬುದೇ ಸತ್ಯ, ಸತ್ಯವೆಂಬುದೆ ಹರನು" ಎಂದು ಮುಂತಾದ ಮಹಾ ವಾಕ್ಯಗಳ ಹಿಂದೆ ಅಡಗಿರುವ ವಿಶ್ವ ವಿಶಾಲ ಮನೋ ಧರ್ಮಗಳನ್ನು ಎಲ್ಲ ಮತೀಯರೂ ಸ್ಮರಿಸಿ, ಚಿಂತಿಸಿ, ಮನನಮಾಡಿ, ಧ್ಯಾನ ವಿಧಿಗಳಾದ ಅನುಷ್ಠಾನಕ್ಕೆ ತಂದು ಮಾನವನು ದೇವನಾಗಲು ಬೇಕಾದ ನೀತಿ ಹಂತಗಳನ್ನು, ಜೀವನದ ಪರಮ ಧ್ಯೇಯದ ಮಹಡಿಗೆ ಹತ್ತಲು, ಕಟ್ಟಬೇಕೆಂಬುದೇ ವಿವಿಧ ಧರ್ಮ ಸಮ್ಮೇಳನಗಳ ಉದ್ದೇಶ ಮಾನವನಿಗೆ ವಿಜ್ಞಾನಬೇಕು, ಆದರೆ, ಆತ್ಮ ಜ್ಞಾನದ ಅವಶ್ಯಕತೆಯು ಇದಕ್ಕೂ ಹೆಚ್ಚು. ಲೋಕಕ್ಕೆ ಪ್ರಳಯ ತರುವುದಾದರೆ, ವಿಜ್ಞಾನವು ನಮಗೆ ಬೇಡ; ಅದಕ್ಕಿಂತ ಆತ್ಮಕ್ಕೆ ಶಾಂತಿ ನೀಡುವ ಆಧ್ಯಾತ್ಮವೇ ಲೇಸು. ಮತಧರ್ಮಗಳ ತತ್ವಗಳನ್ನು ವೈಜ್ಞಾನಿಕ ನಿಟ್ಟಿನಿಂದ ವಿಶ್ಲೇಷಿಸಬೇಕು; ಇದಕ್ಕಾಗಿ ವಿಚಾರ ಮಾಡಬೇಕು, ನಮ್ಮ ಮತ ತತ್ವಗಳಲ್ಲಿ ದೃಢವಾದ ಶ್ರದ್ಧೆ—ವಿಶ್ವಾಸಗಳನ್ನಿಡಬೇಕು; ಅನ್ಯಮತಗಳ ರಹಸ್ಯವನ್ನು ತಿಳಿಯಬೇಕು; ಸಮದೃಷ್ಟಿಯಿಂದ ವಸ್ತು ಸ್ವರೂಪ ವಿವೇಚನೆ ಮಾಡಬೇಕು, ಪುರಾತನ ಶಾಸ್ತ್ರವು ಅಂಧಶ್ರದ್ಧೆಗಳ ಕಂತೆಯೆಂಬ ಕುತ್ಸಿತ ಭಾವನೆಯನ್ನು ದೂರ ಮಾಡಬೇಕು; ವೈಜ್ಞಾನಿಕಾನುಭವದಿಂದ ನಮ್ಮ ಮತ ತತ್ವಗಳನ್ನು ಇನ್ನಷ್ಟು ಸ್ಪಷ್ಟ ರೀತಿಯಲ್ಲಿ ಪುಷ್ಟಿಗೊಳಿಸಿ, ಪ್ರಚಾರ ಮಾಡಬೇಕು, ವೈಜ್ಞಾನಿಕ ಶಾಸ್ತ್ರದ ಇಂದ್ರಜಾಲದಿಂದ ಮುಳುಗುತ್ತಿರುವ ನಮ್ಮ ಆಧ್ಯಾತ್ಮಿಕ ಶಾಸ್ತ್ರಗಳನ್ನು ಉಳಿಸುವ ದೃಢ ಪ್ರತಿಜ್ಞೆ ಮಾಡಬೇಕು.

ಸರ್ವ ಧರ್ಮ ಸಮ್ಮೇಳನವು ಏಕ ಧರ್ಮ ಸಮ್ಮೇಳನವಲ್ಲ; ವಿವಿಧ ಧರ್ಮ ಸಮ್ಮೇಳನ ಜಗತ್ತಿನ ಧರ್ಮಗಳ ವೈವಿಧ್ಯವನ್ನು ಅಳಿಸುವುದು ಇದರ ಉದ್ದೇಶವಲ್ಲ; ಆ ವೈವಿಧ್ಯದಲ್ಲಿ ಸೊಗಸನ್ನು ಕಾಣುವುದು ಮತ್ತು ಐಕ್ಯವನ್ನು ಕಾಣುವುದು ಇದರ ಉದ್ದೇಶ ವಿವಿಧ ಧರ್ಮಾನುಯಾಯಿಗಳಲ್ಲಿ ಪರಸ್ಪರ ಸಹನೆ, ಸೌಹಾರ್ದ ಮತ್ತು ಸಮರಸಭಾವ —ಇವುಗಳನ್ನು ಉತ್ತೇಜನಗೊಳಿಸಿ, ಮಾನವನ ಶಾಂತಿಗಾಗಿ ಉತ್ಪನ್ನವಾದ ಧರ್ಮಗಳಿಂದ ನಿಜವಾದ ಶಾಂತಿಯನ್ನು ನೆಲೆಗೊಳಿಸುವುದು ಸರ್ವ ಧರ್ಮ ಸಮ್ಮೇಳನದ ಉದ್ದೇಶ ದ್ವೇಷವಿದ್ದೆಡೆ ದೇವನಿರಲಾರ, ಸ್ನೇಹವಿದ್ದೆಡೆಯಲ್ಲಿ ದೇವನಿರುವುದು ಖಂಡಿತ ಆದದರಿಂದ ಎಲ್ಲ ಧರ್ಮಗಳವರೂ ಪರಸ್ಪರ ದ್ವೇಷ ಭಾವನೆಗಳಿಗೆ ಆಸ್ಪದ ಕೊಡದೆ, ಸಮದೃಷ್ಟಿಯಿಂದ ಕಾಣುವಂತೆ ಮಾಡ ವುದಕ್ಕೆ ಇಂತಹ ಸರ್ವ ಧರ್ಮ ಸಮ್ಮೇಳನಗಳು ಪಥಪ್ರದರ್ಶಕವಾಗಿವೆ

ಸಚೇತನ ಜ್ಞಾನದೊಡನೆ ಜಡಜ್ಞಾನವನ್ನು ಜತೆಗೂಡಿಸುವ ಹೊಣೆಗಾರಿಕೆ ಧರ್ಮಕ್ಷೇತ್ರವಾದ ಭರತ ಖಂಡ ಹೊರಬೇಕು ಜಗತ್ತಿನ ಮಾನವತೆಯಲ್ಲಿ ಅನ್ಯೋನ್ಯ ಹೊಂದಿಕೆಯಿಲ್ಲದೆ ಘರ್ಷಣೆಗಳು ನಡೆಯುತ್ತವೆ, ಇವು ವಿಪತ್ಪರಂಪರೆಗಳಿಗೆ ನಾಂದಿಯೆನಿಸುತ್ತವೆ. ಆದುದರಿಂದ ನಮಗಿಂದು ಲೋಕ ಕಲ್ಯಾಣಕ್ಕಾಗಿ ಸಮನ್ವಯ ಭಾವಬೇಕು, ಇಂತಹ ಅಪೂರ್ವ ಭಾವವನ್ನು ಭಾರತ ಮಾತ್ರ ವ್ಯಕ್ತಪಡಿಸಬಲ್ಲುದು. ಗಾಂಧೀಜಿಯವರು ರಾ

ಇಂತಹ ಧರ್ಮ ಸಮ್ಮೇಳನಗಳು ಜರಗುವುದರಿಂದ ಪರಸ್ಪರ ಮತಗಳ ಪರಿಚಯವುಂಟಾಗಿ ಪ್ರತಿಯೊಂದು ಮತದ ವಿದ್ವಾಂಸರು ಬಂದು ತಮ್ಮ ಮತದ ಮುಖ್ಯ ತತ್ವಗಳನ್ನು ಜನರಲ್ಲಿ ವಿವರಿಸಿ ಹರಡಲಿಕ್ಕೂ ಅದನ್ನು ಅರಿತುಕೊಂಡ ಹಲವು ಮತಧರ್ಮಗಳಲ್ಲಿ ಐಕ್ಯವು ಬೆಳೆಯಲಿಕ್ಕೂ ಅನುಕೂಲವಾಗುವುದ. ಸ್ವಮತ ಪ್ರಚಾರವನ್ನಿಚ್ಛಿಸುವ ಗಣ್ಯ ಮಾನ್ಯ ವಿದ್ವಾಂಸರು ಸಮ್ಮೇಳನಕ್ಕೆ ಮುಂಚಿತವಾಗಿಯೇ ತಮ್ಮ ತಮ್ಮ ಮಂತವ್ಯಗಳನ್ನು ಸಂಗ್ರಹಿಸಿ ತಯಾರಿಸಿಡಬೇಕಾಗುವುದರಿಂದ, ಸಾಧಾರಣವಾಗಿ ಈ ಸಂದರ್ಭದಲ್ಲಿ ಎಲ್ಲರ ಭಾಷಣಗಳೂ ಸಾರಯುಕ್ತವೂ ವಿದ್ವತ್ಪೂರ್ಣವೂ ಆಗಿದ್ದು ಕೇಳುವವರಿಗೆ ಹೆಚ್ಚಿನ ಪ್ರಯೋಜನವನ್ನುಂಟು ಮಾಡುತ್ತವೆ

—ಡಿ. ಮಂಜಯ್ಯ ಹೆಗ್ಗಡೆಯವರು

(ಸ್ವಾಗತ ಭಾಷಣ, ೧೯೩೩)

ಡಿ| ಚಂದಯ್ಯ ಹೆಗ್ಗಡೆ

(ಶ್ರೀ ರತ್ನವರ್ಮ ಹೆಗ್ಗಡೆಯವರ ತೀರ್ಥರೂಪರು)

ವಿವಿಧ ಧರ್ಮ ಸಮ್ಮೇಳನವು ಪಂಡಿತಪಾಮರರೆಲ್ಲರ ಆಧ್ಯಾತ್ಮಿಕ ಬೆಳವಣಿಗೆಗೆ ಪರಮ ಸಾಧನ. ತಮ್ಮ ತಮ್ಮ ಅಧ್ಯಯನ ವಿಷಯವಾದ ಧರ್ಮದಲ್ಲಿ ಪಾಂಡಿತ್ಯವನ್ನು ಮತ್ತು ಪ್ರತಿಭೆಯನ್ನು ಹೊಂದಿದ ಪ್ರಾಜ್ಞರು ಈ ಸಮ್ಮೇಳನದಲ್ಲಿ ಭಾಗ ವಹಿಸುತ್ತಿರುವುದು ಶುಭ ಸೂಚನೆಯಾಗಿದೆ. ಈ ಶುಭ ಸನ್ನಿವೇಶದಲ್ಲಿ ಪಂಡಿತರಲ್ಲಿ ಮತ್ತು ಪಾಮರರಲ್ಲಿ ಉದ್ಭವಿಸುವ ಸಮರಸವೇ ಇದರ ಅತ್ಯುತ್ತಮ ಫಲಿತಾಂಶ ಜಗತ್ತಿನ ಧರ್ಮಗಳೆಲ್ಲದರ ಮುಖ್ಯ ಉದ್ದೇಶ ನಮ್ಮನ್ನು ಸಾರಾಸಾರ ವಿವೇಕಜ್ಞರನ್ನಾಗಿ ಮಾಡುವುದು. ಇದರಿಂದಲೇ ಮಾನವ ಜೀವನದ ಸಾರ್ಥಕ್ಯ ಸಾಧ್ಯ

—ಶ್ರೀ ಜಯಚಾಮರಾಜ ಒಡೆಯರ್.

(ಉದ್ಘಾಟನಾ ಭಾಷಣ, ೧೯೫೭)

ದೀಪೋತ್ಸವ ಮತ್ತು ಧರ್ಮಸಮ್ಮೇಳನ

> ವಿವಿಧ ಮತಭೇದಗಳಿರುವ ಜನರ ಹೃದಯದಲ್ಲಿ ಪರಸ್ಪರ ಸೌಹಾರ್ದವನ್ನು ಹೆಚ್ಚಿಸಿ ಐಕ್ಯವನ್ನುಂಟು ಮಾಡುವ ಧರ್ಮ ಸಮ್ಮೇಳನದ ಒಂದು ಆವಶ್ಯಕತೆ ಇದೆ, ತಮ್ಮ ಧರ್ಮದ ರಹಸ್ಯವನ್ನು ತಾವರಿಯದೆ, ಬಳಕೆಯಲ್ಲಿಟ್ಟಿರುವ ಕಟ್ಟು ಆಚರಣೆಗಳ ಯಥಾರ್ಥತೆಯನ್ನೂ ಹಿನ್ನೆಲೆಯನ್ನೂ ತಿಳಿದುಕೊಳ್ಳಲೂ "ವಿವಿಧ ಧರ್ಮಗಳ" ವಿಷಯದಲ್ಲಿ ನಮ್ಮಲ್ಲಿರುವ ಅಜ್ಞಾನವನ್ನು ಹೋಗಲಾಡಿಸಿಕೊಳ್ಳಲೂ, ಎಲ್ಲ ಧರ್ಮೀಯರೂ ಸ್ನೇಹಭಾವದಿಂದ ಒಂದು ವೇದಿಕೆಯ ಮೇಲೆ ಸೇರಿ ತಮ್ಮ ತಮ್ಮ ಮತಧರ್ಮಗಳಲ್ಲಿ ಅಂತರ್ಗತವಾಗುವ ವಿಶ್ವ ಬಾಂಧವ್ಯ ಲೋಕ ಕಲ್ಯಾಣ ತತ್ತ್ವಗಳನ್ನು ಬೆಳಕಿಗೆ ತರಲು "ಧರ್ಮ ಸಮ್ಮೇಳನ'ದಂತಹ ವಿದ್ಯಾಶಾಲೆಯು ಮತ್ತೊಂದಿಲ್ಲ.
>
> —ಶ್ರೀ ಡಿ. ರತ್ನವರ್ಮ ಹೆಗ್ಗಡೆಯವರು.
> (ಸ್ವಾಗತ ಭಾಷಣ, ೧೯೩೨)

"ದೀಪೋತ್ಸವ"ವೆಂದರೆ ದೀಪಗಳನ್ನು ಉರಿಸಿ ಮಾಡುವ ಉತ್ಸವ ಅಥವಾ ಪ್ರಭಾವನೆಯೆಂದರ್ಥ. ವಸ್ತುಗಳು ಇದ್ದರೂ ಇಲ್ಲದಂತೆ, ಕಣ್ಣುಗಳು ತೆರೆಯಲ್ಪಟ್ಟರೂ ತೋರದಂತೆ ಮರೆ ಮಾಡುವ ಕತ್ತಲೆಯಲ್ಲಿ ದೀಪವನ್ನುರಿಸಿ ಅದರ ಪ್ರಕಾಶವು ಬಂದಾಗ ವಸ್ತುಗಳು ದೃಷ್ಟಿ ಪಥಕ್ಕೆ ಬಿದ್ದು ಸಂತೋಷವಾಗುವುದು ನಮ್ಮ ಅನುಭವ. ಸಾಮಾನ್ಯ ವಸ್ತುಗಳನ್ನು ಕಾಣುವಾಗಲೇ ಇಷ್ಟೊಂದು ಸಂತೋಷವಾಗುವಾಗ, ಅಜ್ಞಾನಾಂಧಕಾರವನ್ನು ತಳ್ಳಿ ಸುಜ್ಞಾನವನ್ನುಂಟುಮಾಡುವ ಸರ್ವಜ್ಞ ಮೂರ್ತಿಯ ವಿಗ್ರಹವನ್ನು ನೋಡುವುದರಿಂದ ಭಕ್ತರಿಗೆ ಅದೆಷ್ಟು ಸಂತೋಷವಾಗದು? ದೀಪಗಳನ್ನು ಸಾವಿರಗಟ್ಟಲೆಯಾಗಿ ಸಾಲಾಗಿಟ್ಟು ಉರಿಸಿ ಜಗಜಗಿಸುವ ಪ್ರಕಾಶದಲ್ಲಿ, ನಮ್ಮ ಭಕ್ತಿಗೆ ಮುಖ್ಯ ನಿದಾನವಾದ ದೇವರ ದಿವ್ಯ ಮೂರ್ತಿಯನ್ನು ಶೃಂಗಾರ ಮಾಡಿ ಪಲ್ಲಕಿಯಲ್ಲಿಯೋ ಮಂಡಪದಲ್ಲಿಯೋ ರಥದಲ್ಲಿಯೋ ಕುಳ್ಳಿರಿಸಿ ವಿವಿಧ ವಾದ್ಯ, ನೃತ್ಯ, ಗೀತಗಳಿಂದ ಬೀದಿಗಳಲ್ಲಿ ಮೆರವಣಿಗೆ ಹೊರಟಾಗ ಭಕ್ತರಾದ ಆಸ್ತಿಕ ಮಹಾ ಜನಗಳಲ್ಲಿ ಉಕ್ಕುತ್ತಿರುವ ಉತ್ಸಾಹವು ಇಷ್ಟೆಂದು ಹೇಳಲಾಗುವುದೇ?

✣ ✣ ✣ ✣

ಹೆಚ್ಚಾಗಿ ಇಂಥ "ದೀಪೋತ್ಸವ" ಜಾತ್ರೆಗಳಿಂದ ಏನು ಪ್ರಯೋಜನ? ಜನರೆಲ್ಲಾ ಏಕೆ ಸೇರುತ್ತಾರೆ? ಇಂಥ ಜನಸಂದಣಿಯು ಸೇರಿದಾಗ ವಸ್ತು ಸ್ವರೂಪವನ್ನು ತಿಳಿಯತಕ್ಕ ಪ್ರಸಂಗಗಳಿಗೆ ಅವಕಾಶವಿರುವುದೇ ಅಪೂರ್ವ. ಇಂಥ ಪರಿಸ್ಥಿತಿಯಲ್ಲಿ ಜಾತ್ರೆಯಲ್ಲಿ ಸೇರುವ ಜನರ ಅಭಿಪ್ರಾಯವನ್ನು ತಿಳಿದ ವಿದೇಶಿಯರಲ್ಲಿ ಕೆಲವರು-ಮತಭ್ರಾಂತರು ಉಪದೇಶಿಗಳಾಗಿ ತಮ್ಮ ಸವಿನುಡಿಗಳಿಂದ ತಮ್ಮ "ಮತವೇನು? ಧರ್ಮವೇನು?" ಎಂಬ ಅರಿವಿಲ್ಲದ ಮೂಢಜನರಲ್ಲಿ ಮತ ಭ್ರಾಂತಿಯನ್ನುಂಟು ಮಾಡಿ ಮೋಸಗೊಳಿಸುತ್ತಿರುವುದು ನಮಗೆ ತಿಳಿಯದ ವಿಚಾರವಲ್ಲ. ನಾವು ಕರ್ತವ್ಯಮೂಢರಾದುದೇ ಇದಕ್ಕೆ ಕಾರಣವೆನ್ನಬೇಕು. ಇದಕ್ಕೆ ಭಾರತೀಯರೆಲ್ಲರೂ ಪಶ್ಚಾತ್ತಾಪ ಪಡಬೇಕು. ಹಾಗಾದರೆ ನಾವು ಮುಂದಕ್ಕೆ ಏನು ಮಾಡಬೇಕು? ಎಂಬೀ ಯೋಚನೆಯು ಬರುವುದು. ಆವ ಉದ್ದೇಶದಿಂದ ಜಾತ್ರೆಯಾಗಲೀ ಉತ್ಸವವಾಗಲೀ ಏರ್ಪಡಿಸಲ್ಪಡುವುದೋ, ಆವುದಕ್ಕೋಸ್ಕರ ಜನರು ಸಾವಿರಗಟ್ಟಲೆ ಬಂದು ಸೇರುತ್ತಾರೋ, ಅಂಥ ಉದ್ದೇಶ ಮತ್ತು ಸಂದರ್ಭವನ್ನರಿತು ಲೋಕದ ಮತಗಳ ತತ್ವಗಳ ಯಥಾರ್ಥ ಜ್ಞಾನವು ಆವಾಗ ಉಂಟಾಗುವುದೋ ಆಗ ಒರುವುದು 'ಶಾಂತಿ' ಅದೇ ಮತಗಳ "ಐಕ್ಯ"ಕ್ಕೆ ಸರಿಯಾಗವಾದ ಮಾರ್ಗ, ಆಗ ಸಂಕುಚಿತ ದೃಷ್ಟಿಯು ಹೋಗುವುದು. ವಿಶಾಲ ದೃಷ್ಟಿಯು ಬರುವುದು ಈ ಧ್ಯೇಯವನ್ನಿಟ್ಟುಕೊಂಡು ಸರ್ವ ಧರ್ಮ ಸಮ್ಮೇಳನ'ವು ಇಲ್ಲಿ ಏರ್ಪಡಿಸಲ್ಪಟ್ಟಿತು.

ಮ ರಹೀಮರು ಒಂದೇ ಎಂಬ ಸಮಭಾವವನ್ನು ಬೆಳೆಸಿದರು ಎಲ್ಲಾ ಧರ್ಮಗಳೂ ಒಂದೇ ಗುರಿಯತ್ತ ಸಾಗುತ್ತಿವೆ ಎಂದು ಸ್ವಾಮಿ ವಿವೇಕಾನಂದರು ಜಗತ್ತಿನ ಮುಂದೆ ಉದ್ಘೋಷಿಸಿದರು. ಇದೇ ಭಾವನೆಯನ್ನು ನಮ್ಮ ಜನಜನದಲ್ಲಿ ಮೂಡಿಸುವ ಸಫಲ ಪ್ರಯತ್ನವೇ ಧರ್ಮ ಸಮ್ಮೇಳನ

ಮಾನವೇತಿಹಾಸದಲ್ಲಿಯೇ ಉತ್ಕ್ರಾಂತಿಯಾಗುತ್ತ ಬರುತ್ತಿದೆ ಮಾನವ ಜೀವನದಲ್ಲಿ ಪ್ರಗತಿಯೆಂಬುದು ನಿತ್ಯ. ಅದು ಪ್ರಗತಿಯೂ ಆಗಬಹುದು; ಪತನವೂ ಆಗಬಹುದು ಮಾನವ ಕುಲ ಸಂಸ್ಕಾರಗೊಳ್ಳುತ್ತ ನಡೆಯುತ್ತಿದೆ. ಆಂತರಿಕ ಮತ್ತು ಬಾಹ್ಯ ಪರಿವರ್ತನೆಗಳು ಆಗಿಯೇ ಆಗುತ್ತಿವೆ. ಉಗಿ ಶಕ್ತಿ, ವಿದ್ಯುತ್ ಶಕ್ತಿ, ಅಣು ಶಕ್ತಿ ಮತ್ತು ಇಂದಿನ ಗ್ರಹ ಶಕ್ತಿಗಳನ್ನು ನೋಡಿದರೆ ಇದೇ ಕೊನೆಯಲ್ಲವೆಂದು, ವ್ಯಕ್ತವಾಗುವುದು. ಅದುದರಿಂದ ಮೆದುಳು ಶಕ್ತಿಯು ನಿಸರ್ಗದ ಅಂತಃಶಕ್ತಿಯೊಂದಿಗೆ ಸಮನ್ವಯಗೊಂಡು ಪ್ರಗತಿ ಹೊಂದುವುದು ಸಾಧ್ಯವಾಗಿದೆ ಯೋಗಗಳು, ಕರ್ಮಗಳು ಸಮನ್ವಯ ಗೊಳ್ಳುವುದರಲ್ಲಿ ಸಂದೇಹವಿಲ್ಲ. ಈವರೆಗಾದ ಮಹಾ ಪುರುಷರಿಗಿಂತಲೂ ಹೆಚ್ಚಿನ ಮಹಾಪುರುಷರ ಅವತಾರವಾಗುವುದು; ಸತ್ಯ ಧರ್ಮಯುಗವೊಂದು ಮುಂದೆ ಬಂದೇ ಬರುವುದು. ನಮ್ಮ ಆದೃಷ್ಟವು ನಿನ್ನೆಯ ಅರುಣೋದಯದಲ್ಲಿ ಮಾತ್ರವಲ್ಲ, ನಾಳಿನ ಮಧ್ಯಾಹ್ನದಲ್ಲಿಯೂ ಇದೆಯೆಂಬುದನ್ನು ನಾವು ನಂಬಬೇಕು. ಇಂತಹ ಸತ್ಯ ಯುಗ ಸ್ಥಾಪನೆಯೆಂದು ಕೇವಲ ಏಕ ಧರ್ಮದಿಂದ ಸಾಧ್ಯವಿಲ್ಲ; ಏಕ ಧರ್ಮೀಯರಿಂದ ಸಾಧ್ಯವಿಲ್ಲ. ಸರ್ವಧರ್ಮಗಳ ರಹಸ್ಯವನ್ನು ತಿಳಿದು ಅವುಗಳ ಸಂಪೂರ್ಣಜ್ಞಾನದಿಂದಲೇ ಉಂಟಾಗುವ "ಮಾನವ ಧರ್ಮ"ದಿಂದ ಮಾತ್ರ ಸಾಧ್ಯ. ಅದುದರಿಂ ಅನ್ಯ ಧರ್ಮಗಳ ಅಜ್ಞಾನದಿಂದ ಹುಟ್ಟುವ ಮಾನವ ಸಹಜ ಕುತ್ಸಿತ ಮನೋಭಾವನೆಯನ್ನು ದೂರೀಕರಿಸಿ, ಸಮನ್ವಯ ಮತ್ತು ಸಹಿಷ್ಣುತೆಗಳ ಪಾಠವನ್ನು ನಮ್ಮ ಜನ ಕಲಿತುಕೊಳ್ಳಬೇಕು; ಆಗ ಮಾತ್ರ ಭಾರತವು ಮಾನವ ಧರ್ಮವನ್ನು ಲೋಕದ ಮುಂದೆ ಯಶಸ್ವಿಯಾಗಿ ಇಡುವುದು ಸಾಧ್ಯವಾದೀತು.

ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ನಡೆಯುವ ಸರ್ವಧರ್ಮ ಸಮ್ಮೇಳನವು ಈ ದೃಷ್ಟಿಯಿಂದ ಅದ್ವಿತೀಯವಾದುದು; ಅಪೂರ್ವವಾದುದು, ಅನುಕರಣೀಯವಾದುದು. ಈ ಸಮ್ಮೇಳನದಲ್ಲಿ ಶ್ರೀ ಕ್ಷೇತ್ರದ ಧರ್ಮಾಧಿಕಾರಿಗಳು ವಹಿಸುತ್ತಿರುವ ಆಸಕ್ತಿ ಪ್ರಶಂಸಾರ್ಹವಾದುದು; ಇಂತಹ ಸಮ್ಮೇಳನಗಳು ದೇಶದ ಬೇರೆ ಬೇರೆಡೆ ನಡೆದು ಬರಲಿ. ಶ್ರೀ ಕ್ಷೇತ್ರ ಧರ್ಮಸ್ಥಳವು ಹಾಕಿಕೊಟ್ಟು ನಡೆಯುತ್ತಿರುವ ಮಾನವ ಧರ್ಮ ನಿರ್ಮಾಣದ ಕಾರ್ಯವು ಶ್ರೇಯಸ್ಸನ್ನೂ ಪ್ರೇಯಸ್ಸನ್ನೂ ಒದಗಿಸುವಂತೆ ಶ್ರೀ ಮಂಜುನಾಥ ಸ್ವಾಮಿ ಅನುಗ್ರಹಿಸಲಿ.

ಜನತಾ ಉಗ್ರಾಣ

ಶ್ರೀ ಧರ್ಮಸ್ಥಳ ಕ್ಷೇತ್ರದಲ್ಲಿ ಪಟ್ಟಕ್ಕೆ ಬಂದ ಧರ್ಮಾಧಿಕಾರಿಗಳ ಅನುಕ್ರಮಣಿಕೆ

ಬಮ್ಮಣ್ಣ ಹೆಗ್ಗಡೆಯವರು
ಪದ್ಮಯ್ಯ ಹೆಗ್ಗಡೆಯವರು
ಚಂದಯ್ಯ ಹೆಗ್ಗಡೆಯವರು (ಒಂದನೆಯ)
ದೇವರಾಜ ಹೆಗ್ಗಡೆಯವರು
ಮಂಜಯ್ಯ ಹೆಗ್ಗಡೆಯವರು (ಒಂದನೆಯ)
ಜಿನ್ನಪ್ಪ ಹೆಗ್ಗಡೆಯವರು
ಚಂದಯ್ಯ ಹೆಗ್ಗಡೆಯವರು (ಇಮ್ಮಡಿ)
ದೇವಪ್ಪರಾಜ ಹೆಗ್ಗಡೆಯವರು
ಅನಂತಯ್ಯ ಹೆಗ್ಗಡೆಯವರು
ವೃಷಭಯ್ಯ ಹೆಗ್ಗಡೆಯವರು
ಗುಮ್ಮಣ್ಣ ಹೆಗ್ಗಡೆಯವರು
ವರ್ಧಯ್ಯ ಹೆಗ್ಗಡೆಯವರು
ಚಂದಯ್ಯ ಹೆಗ್ಗಡೆಯವರು (ಮುಮ್ಮಡಿ)
ಕುಮಾರಯ್ಯ ಹೆಗ್ಗಡೆಯವರು
ಚಂದಯ್ಯ ಹೆಗ್ಗಡೆಯವರು (ನಾಲ್ಮಡಿ)
ಮಂಜಯ್ಯ ಹೆಗ್ಗಡೆಯವರು (ಇಮ್ಮಡಿ)
ಧರ್ಮಪಾಲ ಹೆಗ್ಗಡೆಯವರು
ಚಂದಯ್ಯ ಹೆಗ್ಗಡೆಯವರು (ಐದನೆಯ)
ಮಂಜಯ್ಯ ಹೆಗ್ಗಡೆಯವರು (ಮುಮ್ಮಡಿ)
ರತ್ನವರ್ಮ ಹೆಗ್ಗಡೆಯವರು (ಈಗಿನ ಧರ್ಮಾಧಿಕಾರಿಗಳು)

> ಈ ಸ್ಥಳದ ದೇವರು, ಧರ್ಮದೇವತೆಗಳು, ಅರ್ಚಕರು, ಆರಾಧನೆ ನಡೆಸುವ ಹೆಗ್ಗಡೆಯವರು—ಇವನ್ನೆಲ್ಲ ಒಂದು ಸಂಶೋಧನೆಯ ದೃಷ್ಟಿಯಿಂದ ಅಧ್ಯಯನ ಮಾಡುವಂತಿದೆ. ಆಗ ಸರ್ವ ಧರ್ಮ ಸಮನ್ವಯವು ಈ ಪವಿತ್ರ ಸ್ಥಳದಲ್ಲಿ ಅಚ್ಚುಕಟ್ಟಾಗಿ ಬೆಳೆದು ಬಂದುದು ತಿಳಿಯುತ್ತದೆ ಆ ದೃಷ್ಟಿಯಿಂದ ಶ್ರೀ ಧರ್ಮಸ್ಥಳದಲ್ಲಿ ಈ ಸರ್ವ ಧರ್ಮ ಸಮ್ಮೇಳನವು ಜರಗುತ್ತಿರುವುದು ಸಮರ್ಪಕವಾಗಿದೆ.
>
> —ಶ್ರೀ ರಂ. ರಾ. ದಿವಾಕರ
> (ಅಧ್ಯಕ್ಷರ ಭಾಷಣ, ೧೯೩೨)

ಉತ್ಸವ - ಪರ್ವದಿನಗಳು

ನಿತ್ಯ ಪೂಜಾವಿಧಿಗಳು

ಶ್ರೀ ಮಂಜುನಾಥ ದೇವರ ಸನ್ನಿಧಿಯಲ್ಲಿ ಬೆಳಿಗ್ಗೆ ಪವಮಾನಾದಿ ಪೂಜೆ, ಪಂಚಾಮೃತಾಭಿಷೇಕ, ಏಕಾದಶ ರುದ್ರ ಪಾರಾಯಣ, ಚತುರ್ವೇದ ಪಾರಾಯಣ, ಸಹಸ್ರನಾಮ ಪೂರ್ವಕ ಬಿಲ್ವಾರ್ಚನೆ, ಶತಜಪ, ಗಂಧಜಪ, ಅಂಗ ಪ್ರದಕ್ಷಿಣೆ—ಮೊದಲಾದ ವಿಧ್ಯುಕ್ತ ಕ್ರಿಯೆಗಳು ನಡೆಯುತ್ತವೆ

ಧರ್ಮ ದೇವತೆಗಳು ಮತ್ತು ಅಮ್ಮನವರಲ್ಲಿ ಪವಮಾನ ಪೂಜೆ, ದೇವಿ ಮಹಾತ್ಮೆ ಪಾರಾಯಣ, ಸಹಸ್ರನಾಮ ಪೂಜೆ, ಮಹಾ ಪೂಜೆಗಳು ನೆರವೇರುತ್ತವೆ. ಗಣಪತಿ ದೇವರಲ್ಲಿ ಮತ್ತು ಅಣ್ಣಪ್ಪ ಸ್ವಾಮಿಯಲ್ಲಿಯೂ ವಿವಿಧ ಪೂಜೆಗಳು ಕ್ರಮವಾಗಿ ಜರಗುತ್ತವೆ.

ಲಕ್ಷದೀಪೋತ್ಸವ

ಪ್ರತಿ ವರ್ಷ ಕಾರ್ತಿಕ ಬಹುಳ ದಶಮಿಯಿಂದ ಅಮಾವಾಸ್ಯೆಯ ವರೆಗೆ ಲಕ್ಷದೀಪೋತ್ಸವವು ನಡೆಯುವುದು. ಕೊನೆಯ ಎರಡು ದಿನಗಳಲ್ಲಿ ಸರ್ವಧರ್ಮ ಸಮ್ಮೇಳನ ಮತ್ತು ಸಾಹಿತ್ಯ, ಕಲಾಗೋಷ್ಠಿಗಳು ವ್ಯವಸ್ಥಿತವಾಗಿ ಏರ್ಪಡುವುವು. ಇವುಗಳಲ್ಲಿ ಭಾರತದ ಸುವಿಖ್ಯಾತ ವಿದ್ವಾಂಸರು ಭಾಗವಹಿಸುತ್ತಾರೆ.



ಬೆಳ್ಳಿಯ ರಥ

ಕಾಲಾವಧಿ ಉತ್ಸವ

ಮೇಷ ಸಂಕ್ರಮಣ ದಿವಸ ಧ್ವಜಾರೋಹಣವು ನಡೆದು, ಧರ್ಮ ದೇವತೆಗಳಿಗೆ ಪೂಜೋತ್ಸವ, ಶ್ರೀ ಮಂಜುನಾಥ ಸ್ವಾಮಿಗೆ ರಥೋತ್ಸವವೂ ಇತರ ದೇವತಾ ವಿನಿಯೋಗಗಳೂ ಒಂಭತ್ತು ದಿವಸದ ವರೆಗೆ ನಡೆಯುವದು.

ನವರಾತ್ರಿ

ನವರಾತ್ರಿಯಲ್ಲಿ ಅಮ್ಮನವರಿಗೆ ಉತ್ಸವ ಮತ್ತು ಬ್ರಾಹ್ಮಣ ಸಂತರ್ಪಣೆಗಳು ನಡೆಯುವುವು ಕೊನೆಯದಿನ ಬ್ರಾಹ್ಮಣ ಮುತ್ತೈದೆಯರಿಗೆ ಸೀರೆಗಳು ಧರ್ಮವಾಗಿ ಕೊಡಲ್ಪಡುವುವು

ಶಿವರಾತ್ರಿ

ಶಿವರಾತ್ರಿಯದಿನ ಶ್ರೀ ಸ್ವಾಮಿಗೆ ರಥೋತ್ಸವವೂ ಶಿವರಾತ್ರಿ ಬೆಟ್ಟದಲ್ಲಿ ಶ್ರೀ ಸ್ವಾಮಿಯ ಉತ್ಸವ ಮೂರ್ತಿ ಪೂಜೆಯೂ ನಡೆಯುತ್ತವೆ.

ಸಾಮಾನ್ಯ ಉತ್ಸವಗಳು

ವೃಷಭ ಮಾಸದ ಹತ್ತನೆಯದಿನ ಧ್ವಜಸ್ಥಂಭವನ್ನು ಇಳಿಸುತ್ತಾರೆ. ಆದಿನ ಶ್ರೀ ಸ್ವಾಮಿಗೆ ಪೂಜೆ, ಉತ್ಸವ ಮತ್ತು ಆರಾಧನೆಗಳು ನಡೆಯುವುವು.

ವರ್ಷದಲ್ಲಿ ಎರಡು ಬಾರಿ ಶ್ರೀ ಕ್ಷೇತ್ರದ ದೈವಗಳಿಗೆ ನಡಾವಳಿಗಳು ಸಲ್ಲಿಸಲ್ಪಡುತ್ತವೆ ಮತ್ತು ಶ್ರೀ ಚಂದ್ರನಾಥ ಬಸದಿಯಲ್ಲಿ ಉತ್ಸವಗಳೂ ಇವೆ

ಶ್ರೀ ಧರ್ಮಸ್ಥಳ ಲಕ್ಷದೀಪೋತ್ಸವ ಮತ್ತು ಸರ್ವಧರ್ಮ ಮತ್ತು ಕನ್ನಡ ಸಾಹಿತ್ಯ ಸಮ್ಮೇಳನಗಳು

ಮಹಾಶಯರೆ,

ಸರ್ವಧರ್ಮ ಮತ್ತು ಸಾಹಿತ್ಯ ಸಮ್ಮೇಳನಗಳ ಮೂವತ್ತೊಂದನೆಯ ಅಧಿವೇಶನವು ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳದಲ್ಲಿ ೧೯೬೩ನೆಯ ಇಸವಿ ಡಿಸೆಂಬರ್ ತಿಂಗಳು ೧೪ ಮತ್ತು ೧೫ನೆಯ ತಾರೀಖುಗಳಲ್ಲಿ ನಡೆಯುವುವು ತಾ. ೧೩—೧೨—೧೯೬೩ ನೆಯ ಶುಕ್ರವಾರ ಒಂದು ವಿಶಿಷ್ಟ ಕಾರ್ಯಕ್ರಮವನ್ನೂ ಏರ್ಪಾಡುಮಾಡಲಾಗಿದೆ.

ಈ ಸಮ್ಮೇಳನಗಳಿಗೆ ತಾವು ಆಗಮಿಸಬೇಕಾಗಿ ಪ್ರಾರ್ಥನೆ.

ಕಾರ್ಯಕ್ರಮ

ತಾ. ೧೧—೧೨—೧೯೬೩ನೆಯ ಬುಧವಾರ

ಹೊಸಕಟ್ಟೆ ದೀಪೋತ್ಸವ ಮತ್ತು ದ. ಕನ್ನಡದ ಯಕ್ಷಗಾನ ಕಲಾವಿದರಿಂದ ಯಕ್ಷಗಾನ

ತಾ. ೧೨—೧೨—೧೯೬೩ನೆಯ ಗುರುವಾರ

ಕೆರೆ ಕಟ್ಟೆ ಉತ್ಸವ— ರಾತ್ರಿ ೯ ೩೦ಕ್ಕೆ ಲಲಿತಕಲಾ ನಾಟಕ ಸಂಘದವರಿಂದ ಸಂಗೀತ ಸಾಮಾಜಿಕ ನಾಟಕ.

ತಾ. ೧೩—೧೨—೧೯೬೩ನೆಯ ಶುಕ್ರವಾರ

ಲಲಿತೋದ್ಯಾವನದಲ್ಲಿ ದೀಪೋತ್ಸವ. ಅ. ಗ. ೩ರಿಂದ ೬ರ ವರೆಗೆ ಪ್ರಸಿದ್ಧ ವಿವಿಧ ವಿದ್ವಾಂಸರಿಂದ ಸಂಗೀತ ವಾದ್ಯಗೋಷ್ಠಿ. ಅ. ಗ. ೬ರಿಂದ ೭ರ ವರೆಗೆ ಕುಮಾರಿ ವಸುಂಧರಾದೇವಿ ಮತ್ತು ಪಾರ್ಟಿಯವರಿಂದ ಭರತನಾಟ್ಯ. ಅ. ಗ. ೭ರಿಂದ ನಾಟಕರತ್ನ ಜಿ. ಎಚ್. ವೀರಣ್ಣನವರ ಪುತ್ರಿ ಚಲನಚಿತ್ರ ತಾರೆ ಲತಾ ಮತ್ತು ಪಾರ್ಟಿ ಇವರಿಂದ ನೃತ್ಯ.

ರಾತ್ರಿ ೧೦-೩೦ ಕ್ಕೆ ಲಲಿತೋದ್ಯಾವನದಲ್ಲಿ ಭಗವಾನ್ ಶ್ರೀ ಮಂಜುನಾಥ ಸ್ವಾಮಿಯ ದೀಪೋತ್ಸವ

ತಾ. ೧೪—೧೨—೧೯೬೩ನೇ ಶನಿವಾರ ಸರ್ವಧರ್ಮ ಸಮ್ಮೇಳನ

ಉದ್ಘಾಟಕರು:

ಮೈಸೂರು ರಾಜ್ಯದ ಶ್ರೇಷ್ಠ ನ್ಯಾಯಸ್ಥಾನದ ನಿವೃತ್ತ ನ್ಯಾಯಾಧೀಶರಾದ **ಮಾನ್ಯ ಶ್ರೀಮಾನ್ ಟಿ ಎನ್. ಮಲ್ಲಪ್ಪ**, ಬಿ.ಎ ಎಲ್ಎಲ್.ಬಿ ಇವರು.

ಅಧ್ಯಕ್ಷರು : **ಪೂಜ್ಯ ಶ್ರೀ ನಿ.ಪ್ರ.ಸ್ವ ಶ್ರೀ ಶಿವಕುಮಾರಸ್ವಾಮಿಗಳು**, ಎಂ ಎ ಸರ್ಪ ಭೂಷಣ ಮಠ, ಬೆಂಗಳೂರು.

ವಿಷಯ: "ವಿಶ್ವಧರ್ಮದ ಸಾಧ್ಯಾಸಾಧ್ಯತೆ"

ಮಧ್ಯಾಹ್ನ ೩ ಗಂಟೆಗೆ: ಪ್ರಾರ್ಥನೆ, ಶ್ರೀ ಬಿ.ಎಸ್ ರಾಮಾಚಾರ್ ಅವರು ಸ್ವಾಗತ ಭಾಷಣ, ಶ್ರೀ ಡಿ ರತ್ನವರ್ಮ ಹೆಗ್ಗಡೆಯವರು. ಉದ್ಘಾಟನೆ: ನ್ಯಾಯಮೂರ್ತಿ ಶ್ರೀಮಾನ್ ಟಿ. ಎನ್. ಮಲ್ಲಪ್ಪನವರು. ಅಧ್ಯಕ್ಷ ಭಾಷಣ: ಶ್ರೀಮನ್ನಿರಂಜನ ಪ್ರ. ಸ್ವ ಶ್ರೀ ಶಿವಕುಮಾರ ಸ್ವಾಮಿಗಳವರು, ಸಂಗೀತ. ಶ್ರೀಮಾನ್ ಎಂ. ಪಾಪಯ್ಯನವರ ಮಾರ್ಗದರ್ಶಿತ್ವದಲ್ಲಿ ಶ್ರೀ ಉದಯ ಆರ್ಕೆಸ್ಟ್ರಾ ಕಲಾವಿದರು

ಭಾಷಣಗಳು. ಸರ್ವಶ್ರೀ ೧ ವೇದಾಂತ ಮತ್ತು ಆಗಮಾಚಾರ್ಯ, ಕಾವ್ಯತೀರ್ಥ ಶ್ರೀ ಮಹಲಿಂಗೇಶ್ವರ ಸ್ವಾಮಿಗಳು ಎಂ.ಎ. ೨.ಕಡೆಂಗೋಡ್ಲು ಶಂಕರ ಭಟ್ಟರು (ಅದ್ವೈತ) ೩ ಡಾ| ಕೆ. ಎಂ, ಕೃಷ್ಣರಾಯರು ಎಂ.ಎ ; ಪಿಎಚ್. ಡಿ (ದ್ವೈತ), ೪. ಹೆಮ್ಮಿಗೆ ದೇಶಿಕಾಚಾರ್ಯರು (ವಿಶಿಷ್ಟಾದ್ವೈತ). ೫. ರೆ| ಎಸ್. ಜೆ ಸಮರ್ಥ, ಎಸ್. ಟಿ. ಎಂ. ಪಿಎಚ್ ಡಿ (ಕ್ರೈಸ್ತ ಧರ್ಮ) ಶ್ರೀ ಬಿ. ನಾಗೇಂದ್ರಪ್ಪ ಮತ್ತು ಮಂಡಲಿ ಅವರಿಂದ ಕ್ಲಾರಿಯನೆಟ್ ವಾದನ ೬. ಪಂಡಿತರತ್ನಂ ಬಿ ಶಿವಮೂರ್ತಿ ಶಾಸ್ತ್ರಿಗಳು (ವೀರಶೈವ ಧರ್ಮ) ೭. ಎಂ ಅಕ್ಬರ್ ಅಲಿ ಅವರು, ಎಂ. ಎ. ಡಿ ಪಿ. ಇಡಿ (ಇಸ್ಲಾಂ ಧರ್ಮ), ೮.ಪ್ರೊ ಎಸ್ ಕೆ ರಾಮಚಂದ್ರರಾಯರು, ಎಂ.ಎ (ಬೌದ್ಧ ಧರ್ಮ) ೯. ಆಸ್ಥಾನ ವಿದ್ವಾನ್ ನ್ಯಾಯತೀರ್ಥ ಎಸ್. ಬಿ ಜಿನಚಂದ್ರ ಶಾಸ್ತ್ರಿಗಳು(ಜೈನಧರ್ಮ),೧೦.ವಿದ್ಯಾವಿಭೂಷಣ, ನ್ಯಾಯತೀರ್ಥ ಕೆ ಭುಜಬಲಿ ಶಾಸ್ತ್ರಿಗಳು (ಸ್ಯಾದ್ವಾದ), ೧೧ ಕೆ. ಪಿ ಶಾಂತಿರಾಜ್ ಅವರು. ವಂದನಾರ್ಪಣ, ರಾಷ್ಟ್ರಗೀತೆ.

ತಾ. ೧೫—೧೨—೧೯೬೩ನೇ ಭಾನುವಾರ ಕನ್ನಡ ಸಾಹಿತ್ಯ ಸಮ್ಮೇಳನ

ಅಧ್ಯಕ್ಷರು: **ಡಾ|| ಆರ್. ಸಿ. ಹಿರೇಮಠ** ಅವರು. ಎಂ ಎ,ಪಿ ಎಚ್. ಡಿ. ಧಾರವಾಡ

ವಿಷಯ: "ನಾನು ಮೆಚ್ಚಿದ ಕವಿ", "ನಮಗೆ ಬೇಕಾದ ಸಾಹಿತ್ಯ"

ಮಧ್ಯಾಹ್ನ ೩ ಗಂಟೆಗೆ: ಪ್ರಾರ್ಥನೆ: ಶ್ರೀ ಬಿ. ಎಸ್ ರಾಮಾಚಾರ್ ಅವರು. ಸ್ವಾಗತಭಾಷಣ ಶ್ರೀ ಡಿ. ರತ್ನವರ್ಮ ಹೆಗ್ಗಡೆಯವರು. ಅಧ್ಯಕ್ಷ ಭಾಷಣ: ಡಾ ಆರ್. ಸಿ. ಹಿರೇಮಠ ಅವರು ಸಂಗೀತ, ಚಲಚಿತ್ರ ನಟ ಮತ್ತು ಸಂಗೀತ ಕೋಕಿಲ ಶ್ರೀ ಕೆ. ರಘುರಾಮಯ್ಯನವರು ಮತ್ತು ಮಂಡಲಿ.

ಭಾಷಣಗಳು: ಸರ್ವ ಶ್ರೀ ೧. ಡಾ. ಪ್ರಭುಶಂಕರ್ ಅವರು, ಎಂ ಎ, ಪಿ,ಎಚ್ ಡಿ ೨. ಅ ನ. ಕೃಷ್ಣರಾಯರು, ೩. ಕೆ. ಎಸ್. ಧರಣೇಂದ್ರಯ್ಯನವರು, ಎಂ ಎ., ಬಿ. ಟಿ. ೪. ಪಂಚಾಕ್ಷರಿ ಹಿರೇಮಠ ಅವರು. ೫ ಪ್ರೊ ಎಂ. ಮರಿಯಪ್ಪ ಭಟ್ಟರು, ಎಂ. ಎ., ೬. ಅನ್ನದಾನಯ್ಯ ಪುರಾಣಿಕರು, ಬಿ. ಎಸ್‌ಸಿ,ಎಲ್ ಎಲ್. ಬಿ ೭. ಶ್ರೀಮತಿ ಎಸ್. ರತ್ನಮ್ಮನವರು, ಎಂ ಎ ೮ ಕುಮಾರಿ ಎಸ್. ವಿಮಲ ಅವರು, ಬಿ. ಎ. ೯ ವಿದ್ವಾನ್ ಎಸ್. ಬಾಲಕೃಷ್ಣ ಆಚಾರ್ ಅವರು ಬಿ. ಎ. ೧೦ ಕೆ. ಬೃಹಸ್ಪತಿಯವರು ಎಂ ಎ ೧೧. ಹಿ. ಎನ್ ಲಿಂಗಣ್ಣಯ್ಯನವರು, ಬಿ. ಎ. (ಆನರ್ಸ್) ವಂದನಾರ್ಪಣೆ: ಶ್ರೀ ಜೆ ಸ್ವಾಮಿದಾಸ್ ಅವರು, ರಾಷ್ಟ್ರಗೀತೆ.

ಕು. ಸ. ಧರಣೇಂದ್ರಯ್ಯ, ಎಂ.ಎ., ಬಿ ಟಿ.
ಕಾರ್ಯದರ್ಶಿ ಸರ್ವಧರ್ಮ ಸಮ್ಮೇಳನ, ಧರ್ಮಸ್ಥಳ.

ಡಿ ರತ್ನವರ್ಮ ಹೆಗ್ಗಡೆ
ಧರ್ಮಸ್ಥಳ, ದ. ಕ.

ವಿ.ಸೂ. ಆಮಂತ್ರಣ ಪತ್ರ ತಲಪದಿರುವವರು ಇದನ್ನೇ ಆಮಂತ್ರಣವೆಂದು ತಿಳಿಯುವುದು.

೪೪ನೇ ಕನ್ನಡ ಸಾಹಿತ್ಯ ಸಮ್ಮೇಳನ ತುಮಕೂರು— ಕರ್ನಾಟಕ ಮಾತೆಯ ಹಣೆಯ ಕುಂಕುಮದಂತೆ ಪರಿಶೋಭಿಸುತ್ತಿರುವ, ಪ್ರಕೃತಿ ಸೌಂದರ್ಯದಿಂದಲೂ ಸಾಹಿತ್ಯ ವೈಭವದಿಂದಲೂ ಕಂಗೊಳಿಸುತ್ತಿರುವ, ತುಮಕೂರು ಜಿಲ್ಲೆಯ ಶ್ರೀ ಸಿದ್ಧಗಂಗಾ ಕ್ಷೇತ್ರದಲ್ಲಿ ೧೯೬೩ನೇ ಡಿಸೆಂಬರ್ ತಿಂಗಳು ದಿನಾಂಕ ೨೮, ೨೯, ೩೦, ಈ ಮೂರು ದಿನ ಪರ್ಯಂತವೂ ೪೪ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ನಡೆಯಬೇಕೆಂದು ತೀರ್ಮಾನವಾಗಿದೆ. ಸಾಂಗ್ಲಿಯ ವಿಲ್ಲಿಂಗ್‌ಡನ್ ಕಾಲೇಜಿನ ಪ್ರಿನ್ಸಿಪಾಲ್ ಡಾ| ರಂಗನಾಥ ಶ್ರೀನಿವಾಸ ಮುಗಳಿ ಅವರು ಈ ಸಮ್ಮೇಳನದ ಅಧ್ಯಕ್ಷರಾಗಲು ಒಪ್ಪಿರುತ್ತಾರೆ. ಈ ಸಮ್ಮೇಳನದ ಕಾಲದಲ್ಲಿ ಪದ್ಧತಿಯಂತೆ ಕವಿ ಗೋಷ್ಠಿ, ಸಾಹಿತ್ಯ ಗೋಷ್ಠಿ, ನಾಟಕ ಗೋಷ್ಠಿ, ಮಹಿಳಾ ಗೋಷ್ಠಿ, ಪತ್ರಿಕಾ ಗೋಷ್ಠಿ ಮತ್ತು ಗ್ರಂಥ ಪ್ರದರ್ಶನ ಮುಂತಾದವುಗಳನ್ನು ಏರ್ಪಡಿಸಲಾಗುವುದು.

ಸಮ್ಮೇಳನಕ್ಕೆ ಪ್ರತಿನಿಧಿಗಳಾಗ ಬಯಸುವವರು ೪ ರೂ. ಶುಲ್ಕ ಕೊಡಬೇಕೆಂದು ನಿರ್ಧರಿಸಲಾಗಿದೆ. ಪ್ರತಿನಿಧಿಗಳಿಗೆ ಊಟ, ವಸತಿ ಸೌಕರ್ಯ ಏರ್ಪಡಿಸಲಾಗುವುದು. ಊಟ ಮತ್ತು ವಸತಿಗಾಗಿ ದಿನಕ್ಕೆ ೨ ರೂ.ನಂತೆ ಮೂರು ದಿನಗಳಿಗೆ ೬ ರೂ. ಗಳನ್ನು ವಿಧಿಸಲಾಗುವುದು.

ಸ್ವಾಗತ ಸಮಿತಿಯಲ್ಲಿ ಪೋಷಕರಾಗ ಬಯಸುವವರು ೧೦೦ ರೂ ಗಳನ್ನೂ, ಹಿತಚಿಂತಕರಾಗ ಬಯಸುವವರು ೫೦ ರೂ. ಗಳನ್ನೂ, ಸದಸ್ಯರಾಗ ಬಯಸುವವರು ೨೫ ರೂ. ಗಳನ್ನೂ ಪಾವತಿ ಮಾಡಬೇಕೆಂದು ನಿರ್ಧರಿಸಲಾಗಿದೆ.

ಕನ್ನಡನಾಡು ನುಡಿಗಳ ಅಭಿಮಾನಿಗಳೆಲ್ಲರೂ ಈ ಮಹತ್ಕಾರ್ಯಕ್ಕೆ ತಮ್ಮ ತನು, ಮನ, ಧನಗಳಿಂದ ನೆರವಾಗುವುದರ ಮೂಲಕ ಸಮ್ಮೇಳನವನ್ನು ಯಶಸ್ವಿಯನ್ನಾಗಿ ಮಾಡಬೇಕೆಂದು ಪ್ರಾರ್ಥಿಸುತ್ತೇವೆ.

ಕೋಶಾಧಿಕಾರಿ:
ಡಾ. ಟಿ. ಎಸ್. ಮಲ್ಲಿಕಾರ್ಜುನಯ್ಯ
ಪ್ರಧಾನ ಕಾರ್ಯದರ್ಶಿ:
ಆರ್. ಎಸ್. ಆರಾಧ್ಯ.

In The Court of District Munsif Puttur, S. K.

O P. 42/1963.

1. Mahalaxmi amma.
2. Shanthi, 3. Mohan, 4. Shamala, 5 Shankunthala, 6 Satish, 7 Premalatha, 8. Santhosh, 9. Poornima—Minors by their mother, 1st petitioner as guardian and next friend —Petitioners

All the petitioners are residing in Belthangady kasba village, P. O. Belthangady S. Kanara Dt.

To all Concerned:

Please take notice that an application under section 372 of Indian Succession Act, 1925, has been filed by the aforesaid petitioners in the above Court. for grant of Succession Certificate in their favour in respect of sum of Rs. 1112-90 representing the arrears of Salary due from the village Panchayath, Belthangady S. K. to deceased B. Shankarnarayana Rao, husband of 1st petitioner and father of minor petitioners 2 to 9 aforesaid. Said Petition stands posted having to 21—12—1963 on which date you may appear before the said Court at 11 a. m. and prefer your objections, if any If you fail to do so, the proceedings will be decided on merits.

By order of court.

M· Raghavendra Rao
Advocate for Petitioner
Puttur S. K. Dt. 5—12—63.

ಅಲ್ಲಲ್ಲಿಯ ಸುದ್ದಿ ಸಾರ

ಕುಂಜ ವಿಹಾರ ಪ್ರವೇಶೋತ್ಸವ- ಕಾಫಿ ಪ್ಲಾಂಟರ್ ಶ್ರೀ ಕೆ. ಪಿ. ರಾಮಣ್ಣ ಶೆಟ್ಟರು ಉಡುಪಿ ತಿರುಬೀದಿನಲ್ಲಿ ಹೊಸತಾಗಿ ಕಟ್ಟಿಸಿರುವ "ಕುಂಜ ವಿಹಾರ" ನೂತನ ಊಟ ಹಾಗೂ ವಸತಿ ಗೃಹದ ಪ್ರವೇಶೋತ್ಸವ ಸಮಾರಂಭವು ತಾ. 8-12-63ರಂದು ವಿಜೃಂಭಣೆಯಿಂದ ನೆರವೇರಿತು. ಸಂಜೆ ಗಂಟೆ 4ರಿಂದ 8ರ ತನಕ ಉಪಹಾರ ಸತ್ಕಾರ ಸಮಾರಂಭವು ನೆರವೇರಿತು. ಊರು ಪರಊರುಗಳಿಂದ ಸಾವಿರಾರು ಜನರು ಈ ಸಮಾರಂಭಕ್ಕೆ ಆಗಮಿಸಿದ್ದರು. ಮಾಲಕರಾದ ಶ್ರೀ ಕೆ. ಪಿ ರಾಮಣ್ಣ ಶೆಟ್ಟರೂ ಸಂಚಾಲಕರಾದ, ಶ್ರೀ ಮಂಜುನಾಥ ಹೋಟೆಲಿನ ಶ್ರೀ ಕೆ. ನಾರಾಯಣ ಶೆಟ್ಟರೂ ಅತಿಥಿಗಳನ್ನು ಸ್ವಾಗತಿಸಿದರು. ಉಡುಪಿ ನಗರದ ಕೇಂದ್ರ ಸ್ಥಾನದಲ್ಲಿ ಪ್ರಶಾಂತ ವಾತಾವರಣದಲ್ಲಿರುವ "ಕುಂಜ ವಿಹಾರ"ವು ತರುಣೋತ್ಸಾಹಿ ಶ್ರೀ ನಾರಾಯಣ ಶೆಟ್ಟರ ಸಂಚಾಲಕತ್ವದಲ್ಲಿ ಯಶಸ್ವಿಯಾಗಿ ಜನಪ್ರಿಯವಾಗಲೆಂದು ಹಾರೈಕೆ.

ವಿವಾಹ ಸಮಾರಂಭ— ಶ್ರೀ ಪವಾಡಿ ಗೋವಿಂದರಾಜ ಹೆಗ್ಡೆಯವರ ಪುತ್ರಿ ಮಾಲತಿಯನ್ನು ಶ್ರೀ ಬಜಲು ಬೀಡು ನಾರಾಯಣ ಶೆಟ್ಟರ ಪುತ್ರ ಕುಮಾರ ಉಮೇಶ್ಚಂದ್ರ ಶೆಟ್ಟರು ಇದೇ ತಾ 8ರಂದು ಮಂಗಳೂರಿನ ಡೋನ್ ಬೋಸ್ಕೊ ಹಾಲಿನಲ್ಲಿ ವಿಜೃಂಭಣೆಯಿಂದ ವಿವಾಹವಾದರು.

ದಾಸ ಪ್ರಕಾಶದಲ್ಲಿ ದೀಪಾವಳಿ ಉತ್ಸವ—ಇದೇ ಕಾರ್ತಿಕ ಮಾಸದ ಶುಕ್ಲ ಪ್ರತಿಪತ್ತಿನಿಂದ, ಉತ್ಥಾನ ದ್ವಾದಶೀ ಪೂರ್ತಿ ಹನ್ನೆರಡು ದಿನಗಳೂ ಮದ್ರಾಸಿನ 'ದಾಸ ಪ್ರಕಾಶ'ದಲ್ಲಿ ದೀಪಾವಳೀ ತುಳಸೀ ಪೂಜೆಯು ವಿಧಿವತ್ತಾಗಿ ಜರಗಿತು. ನಿತ್ಯವೂ ಸೂರ್ಯೋದಯಕ್ಕೆ ಸರಿಯಾಗಿ ಗೋ ಪೂಜೆ, ತುಳಸೀ ಪೂಜೆಗಳು ಜರಗುತ್ತಿದ್ದವು. ಸಾಯಂಕಾಲ ತುಳಸೀ ವೃಂದಾವನದಲ್ಲಿ ದೇವಪೂಜೆ, ಭಜನೆ ಮುಂತಾದುವು ತುಂಬಿದ ಜನ ಸಂದಣಿಯ ಕಣ್ಣೆದುರು ಸಂಭ್ರಮದಿಂದ ಜರಗುತ್ತಿತ್ತು. ವ್ಯವಸ್ಥಾಪಕರಾದ ಶ್ರೀ ಕೆ. ಸೀತಾರಾಮರಾಯರು ತಮ್ಮ ಶೀಘ್ರರೂಪದ ಪದ್ಧತಿಗನುಗುಣವಾಗಿ ಭಜನೆಯನ್ನು ಆರಂಭಿಸುತ್ತಿದ್ದರು. ಇವೆಲ್ಲ ಕಳೆದ ಮೇಲೆ ಪ್ರಸಾದ ವಿನಿಯೋಗ ಬ್ರಾಹ್ಮಣ ಸುವಾಸಿನಿಯರ ಸಂತರ್ಪಣೆ ಮೊದಲಾದುವುಗಳಿಂದ ಅಂತ್ಯಗೊಳ್ಳುತ್ತಿದ್ದ ಈ ಸಂಭ್ರಮಯುಕ್ತ ತುಳಸೀ ಪೂಜೆಗೆ, ಮದ್ರಾಸಿನ ಗವರ್ನರ್ ಮಾನ್ಯ ಶ್ರೀ ಬಿಷ್ಣುರಾಮ ಮೇಧಿ, ಮುಖ್ಯಮಂತ್ರಿ ಭಕ್ತವತ್ಸಲಂ, ನ್ಯಾಯಾಧೀಶ ಶ್ರೀ ಟಿ. ವಿ. ಪೈ, ಮೇಜರ್ ಶ್ರೀ ಜಿ. ವಿ. ಪೈ, ಶ್ರೀ ವಿ. ಟಿ ರಂಗಸ್ವಾಮಿ, ಅಯ್ಯಂಗಾರ್ ಶ್ರೀ ಟಿ ವಿ. ವಿಶ್ವನಾಥ ಅಯ್ಯರ್, ಶ್ರೀ ರಾಜಗೋಪಾಲಾಚಾರಿ ಮುಂತಾದ ಮಹನೀಯರು ಸಪರಿವಾರವಾಗಿ ಆಗಮಿಸಿ ದೈವ ಕೃಪೆಗೆ ಪಾತ್ರರಾಗಿದ್ದರು.

ಹೊಸಕಟ್ಟಡದ ಉದ್ಘಾಟನೆ—ಮಜೂರು ಕರಂದಾಡಿ ಶ್ರೀ ರಾಮಾ ಹಾ. ಪ್ರಾ. ಶಾಲೆಯ ನೂತನ ಕಟ್ಟಡದ ಉದ್ಘಾಟನೆಯನ್ನು ತಾ. 2-12-63ರಂದು ಶ್ರೀ ಎಚ್. ಎಂ. ಮುರುಗೇಶಯ್ಯ ಸಮಾಜ ವಿಸ್ತರಣಾಧಿಕಾರಿ. ಕಾಪು ಇವರು ಡಾ. ಯಂ. ಬಿ. ಶೆಟ್ಟರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು ಕಟ್ಟಡವು ಶಾಲಾ ವ್ಯವಸ್ಥಾಪಕ ಶ್ರೀ ಸೀತಾರಾಮ ಶೆಟ್ರ ನೆರವಿನಿಂದ ಕಟ್ಟಲ್ಪಟ್ಟಿತ್ತು. ಶ್ರೀ ಎಸ್. ಪೂವಣಿ ಶೆಟ್ರು ರಾಷ್ಟ್ರೀಯ ಮುಖಂಡರ ನೆರವಿನಿಂದ ಭಾವಚಿತ್ರ ಅನಾವರಣೆ ಗೈದರು. ಶ್ರೀ ಟಿ ಕೃಷ್ಣ ಶೆಟ್ರು ಸ್ವಾಗತಿಸಿದರು. ಮುಖ್ಯೋಪಾಧ್ಯಾಯ, ಶ್ರೀ ವೈ. ವಿ ನಾರಾಯಣ ರಾಯರು ವರದಿಯನ್ನು ಮುಂದಿಟ್ಟರು

ಯಕ್ಷಗಾನ— ಬ್ರಹ್ಮಾವರ ಬ್ಲಾಕಿನ ಆಶ್ರಯದಲ್ಲಿ ಕೆಮ್ಮಣ್ಣು ಮತ್ತು ಕಲ್ಯಾಣಪುರ ಪಂಚಾಯತ ಬೋರ್ಡು ಇವರ ಜೊತೆ ಗ್ರಾಮ ವೃಂದಾಳುಗಳ ಶಿಕ್ಷಣ ಶಿಬಿರದಲ್ಲಿ ತಾ. 7ನೇ ರಾತ್ರೆ ಉಡುಪಿಯ ಯಕ್ಷಗಾನ ಕಲಾಮಂಡಲ (ರಿ) ಇವರಿಂದ ಕರ್ಣಪರ್ವ ಯಕ್ಷಗಾನ ಆಟವು ಜರಗಿತು ಶ್ರೀಗಳಾದ ಕೆ. ನಾರಾಯಣ ಶೆಟ್ಟಿ ಹಾಡುಗಾರಿಕೆ, ಎಮ್. ಗೋವರ್ಧನ ರಾವ್ ಮತ್ತು ಸಗ್ರಿ ಕಿಟ್ಟಾಚಾರಿ ಇವರ ಮೃದಂಗ ವಾದನ. ಸರ್ವ ಶ್ರೀಗಳಾದ ಪೊಲ್ಯ ದೇಜಪ್ಪ ಶೆಟ್ಟಿ (ಕರ್ಣ) ಶಿವಪುರ ಶ್ರೀನಿವಾಸ ಪಂಡಿತ (ಶಲ್ಯ) ಮಟ್ಟಿ ಸುಬ್ಬರಾವ್ (ಕೌರವ) ಸೀತಾನದಿ ಗಣಪಯ್ಯ (ಕೃಷ್ಣ) ಮಣಿಯಾರ್ ಶಂಕರ ಶೆಟ್ಟಿ (ಧರ್ಮರಾಜ) ಜನ್ನಿಬೆಟ್ಟು ಗೋಪಾಲ ಶೆಟ್ಟಿ (ಅರ್ಜುನ) ಮಟ್ಟಲ್ಲ ಕೃಷ್ಣಯ್ಯ ಶೆಟ್ಟಿ (ಭೀಮ) ವೆಂಕಟಾಚಲ ಭಟ್ (ಕ್ಷೇಮಧೂರ್ತ) ಕೆ. ರಾಮ ಶೆಟ್ಟಿ (ಸೂತ) ಕೆ. ವೆಂಕಪ್ಪ ಶೆಟ್ಟಿ (ದ್ರೌಪದಿ) ಇವರೇ ಮೊದಲಾದವರು ಭಾಗವಹಿಸಿದ್ದರು ಕೆಮ್ಮಣ್ಣು ಪಂಚಾಯತ್ ಕಾರ್ಯದರ್ಶಿ ಕೆ. ರಘುರಾಮ ಶೆಟ್ಟರು ಧನ್ಯವಾದ ಸಮರ್ಪಿಸಿದರು.

ನವಯುಗದ ಪ್ರತಿನಿಧಿಗಳು— ಪತ್ರಿಕೆಯ ಪ್ರಚಾರಾರ್ಥವಾಗಿ ಸಂಚಾರ ಮಾಡಲಿದ್ದಾರೆ ಜಿಲ್ಲೆಯ ಮತ್ತು ಹೊರಗಿನ ಮಹನೀಯರು ಅವರಿಗೆ ಉದಾರ ಸಹಕಾರ ಪ್ರೋತ್ಸಾಹ ನೀಡಬೇಕಾಗಿ ವಿನಂತಿ.

ಶ್ರೀ ಮೊರಾರ್ಜಿಯವರ ಉಡುಪಿ ಸಂದರ್ಶನ—ಇದೇ ತಾ. 11ಕ್ಕೆ ಶ್ರೀ ಮೊರಾರ್ಜಿ ದೇಸಾಯಿ, ಎಂ ಪಿ ಯವರು ಉಡುಪಿಗೆ ಸಂದರ್ಶನವಿತ್ತು ಮರುದಿನ ಬೆಳಿಗ್ಗೆ ಉಡುಪಿ ಅಜ್ಜಾರಣ್ಯದಲ್ಲಿ ನೂತನವಾಗಿ ಕಟ್ಟಿಸಿದ ಪೂರ್ಣಪ್ರಜ್ಞ ಕಾಲೇಜಿನ ವಿಜ್ಞಾನ ವಿಭಾಗದ ಕಟ್ಟಡದ ಉದ್ಘಾಟನೆಯನ್ನು ನೆರವೇರಿಸಲಿರುವರು. 1960ರಲ್ಲಿ ಪ್ರಾರಂಭವಾದ ಈ ಕಾಲೇಜು ಕಟ್ಟಡದ ಶಂಕುಸ್ಥಾಪನೆಯನ್ನು ಶ್ರೀ ಎಸ್. ಆರ್. ಕಂಠಿಯವರು 1962ನೇ ಮೇ 16ರಂದು ನೆರವೇರಿಸಿದ್ದರು.

ಬಾರ್ ಕೌನ್ಸಿಲಿಗೆ ಆಯ್ಕೆ:— ಮೈಸೂರು ರಾಜ್ಯದ ಬಾರ್ ಕೌನ್ಸಿಲಿನ ಇಪ್ಪತ್ತು ಸ್ಥಾನಗಳ ಪೈಕಿ ದಕ್ಷಿಣ ಕನ್ನಡ ಜಿಲ್ಲೆಯಿಂದ ಶ್ರೀಗಳಾದ ಬಿ. ಬಾಲಕೃಷ್ಣ ಶೆಟ್ಟಿ. ಡಿ. ಮೋಹನರಾವ್ ಕೆ. ಜಗನ್ನಾಥ ಶೆಟ್ಟಿ ಮತ್ತು ಎಂ ಗೋಪಾಲಕೃಷ್ಣ ಶೆಟ್ಟಿ ಇವರು ಆರಿಸಲ್ಪಟ್ಟಿದ್ದಾರೆಂದು ಗೊತ್ತಾಗಿದೆ.

ಕಾರ್ಕಳದಲ್ಲಿ ಡಾ| ಮೋದಿಯವರ ಶಿಬಿರ—ಇದೇ ತಾ 14ರಿಂದ 23ರ ತನಕ ಪದ್ಮಶ್ರೀ ಡಾ. ಎಂ. ಸಿ. ಮೋದಿಯವರ ಉಚಿತ ನೇತ್ರ ದಾನ ಶಿಬಿರವು ಕಾರ್ಕಳ ತಾಲೂಕು ಬೋರ್ಡಿನ ವತಿಯಿಂದ ಬೋರ್ಡ್ ಹೈಸ್ಕೂಲಿನಲ್ಲಿ ಜರಗಲಿರುವುದು ತಾಲೂಕು ಬೋರ್ಡ್ ಅಧ್ಯಕ್ಷ ಶ್ರೀ ಎಸ್. ಎಂ. ಆಶ್ಯಂತಾಯರ ಸಮರ್ಥ ನೇತೃತ್ವದಲ್ಲಿ ಬೇಕಾದ ಸಕಲ ಸಿದ್ಧತೆಗಳು ಭರದಿಂದ ನಡೆಯುತ್ತಿವೆ.

ಹೋಟೆಲ್ ದಾಸ ಪ್ರಕಾಶ

ಮದ್ರಾಸಿನ ಹೋಟೆಲ್ ದಾಸ ಪ್ರಕಾಶದವರು ತಮ್ಮ ಆಗಸವೂಡಿನಲ್ಲಿ ಏರ್ಪಡಿಸುತ್ತಿರುವ "ಚಂದ್ರಿಕಾ ಭೋಜನದ ಶತೋತ್ಸವದ ಸ್ಮಾರಕವಾಗಿ ಹೊರಡಿಸಿದ ಸ್ಮರಣ ಗ್ರಂಥ ಮತ್ತು ಪ್ರವಾಸಿ ಮಾರ್ಗದರ್ಶಿಯನ್ನು ಹೃತ್ಪೂರ್ವಕ ಸ್ವಾಗತಿಸುತ್ತೇವೆ. ಪ್ರವಾಸಿಗಳ ಮನ ತಣಿಸುವುದರಲ್ಲಿ ಆಸ್ತವಾದ ದಾಸ ಪ್ರಕಾಶದಂತಹ ಹೋಟೇಲುಗಳು ದೇಶದ ಎಲ್ಲೆಡೆಗಳಲ್ಲಿಯೂ ಹರಡಬೇಕು; ಇದರಿಂದಲೇ ಪ್ರವಾಸಿಗರು ಉತ್ತೇಜಿತರಾಗುವುದು ಸಾಧ್ಯ. ಪ್ರವಾಸದ ಕಾರ್ಯಕ್ರಮಗಳು ಹೆಚ್ಚುವುದರಿಂದ ದೇಶದಲ್ಲಿ ಐಕ್ಯವು ಬಲಗೊಳ್ಳುವುದು ಈ ಕಾರಣದಿಂದ ದಾಸ ಪ್ರಕಾಶದ ಸಂಸ್ಥಾಪಕ ಶ್ರೀ ಕೆ. ಸೀತಾರಾಮರಾಯರ ಸಾಹಸವು ಪ್ರಶಂಸನೀಯ. ಈ ಗ್ರಂಥವು ಹೋಟೆಲ್ ದಾಸ ಪ್ರಕಾಶದ ಪರಿಚಯ ಮತ್ತದು ಜನತೆಗೆ ಸಲ್ಲಿಸುತ್ತಿರುವ ಸೇವೆಯ ವಿವರಗಳನ್ನೂ ಹೋಟೇಲಿನ ಆಡಳಿತಕ್ಕೆ ಸಂಬಂಧಪಟ್ಟವರ ಮತ್ತು, ಅಲ್ಲಿ ನಡೆದ ವಿವಿಧ ಸಭೆ-ಸಮಾರಂಭಗಳ ಚಿತ್ರಪಟಗಳು ಆಕರ್ಷಕವಾಗಿವೆ. ದಕ್ಷಿಣ ಭಾರತದ ವಿವಿಧ ಪ್ರವಾಸ ಕೇಂದ್ರಗಳ ಪರಿಚಯವನ್ನೂ ಕೊಡಲಾಗಿದ್ದು ಇದು ಪ್ರವಾಸಿಗಳಿಗೆ ಅತ್ಯುಪಯುಕ್ತವಿದೆ. ಧರ್ಮಕಾರ್ಯಗಳಲ್ಲಿ ನಿರತರಾದ ಶ್ರೀರಾಯರು ವ್ಯವಹಾರದಲ್ಲಿಯೂ ಧರ್ಮರಕ್ಷಣೆ ಸಾಧ್ಯವೆಂಬುದನ್ನು ತೋರಿಸಿಕೊಡುವ ಸಾಕ್ಷಿ ಈ ಗ್ರಂಥದಲ್ಲಿದೆ. ಇವರಿಂದ ಇಂತಹ ಕಾರ್ಯಗಳು ನಿರರ್ಗಳವಾಗಿ ಸಾಗಲಿ

ಸೂರ್ಯ ಕಾಂತಿ

— ೧ —

ಯಾರ ಬರುವಿಕೆಗಾಗಿ ಈ ಬೆಡಗು
ಬಿನ್ನಾಣ!
ಕುಸುಮರಾಜ್ಞಿ ಸೂರ್ಯಕಾಂತಿ
ಹೇಳೆಯಾ!
ಬಂಗಾರ ವರ್ಣದಲಿ ಶೃಂಗರಿಸಿ ನಿಂತಿರುವ
ನಿನ್ನ ಬಿಂಕದ ಕೊಂಕನೇನ
ಗುರುಹೆಯಾ!

— ೨ —

ತಂಗಾಳಿ ಮೇಳಗಾನಕೆ ಭೃಂಗದಾ
ಶೃತಿಗಾನ
ಅಂಗ ಭಂಗಿಯ ನಿನ್ನ ನೃತ್ಯ ವಿನ್ಯಾಸ!
ಭಾವ ದುನ್ಮಾದದಲಿ ನಲಿವ
ನರ್ತಕಿಯಂತೆ
ಹೂವೆ ಕುಣಿ ಕುಣಿಯುತಿರುವೆ ಪ್ರಗತಿ
ರಂಗದಲಿ!

— ೩ —

ನೇಸರಿನ ವೈದು ಮಧುರ ಅಧರ
ಚುಂಬನಕೆ ನೀ
ಕೇಸರ ಪಕಳೆಗಳು ಪೊಳೆಯುತಿಹುದ?
ನಿನ್ನ ಮೊಗ ಕಂದುವುದು ದಿನಮಣಿಯು
ನಂದರಲು
ಸತಿಗಿಹುದೆ ಸೌಂದರ್ಯ
ಪತಿಯುಳಿಯಲು!

— ೪ —

ಯಾವ ಕಲ್ಪನೆ ಹಸ್ತ ನಿನ್ನ ಸೃಜಿಸಿತೊ
ಕಾಣೆ?
ಯಾವ ಬಣ್ಣದ ಕುಂಚ
ರೂಪಿತ್ತಿತೋ?
ಹಾವ ಭಾವದಲಿರುವ ಸೃಷ್ಟಿಯೂ
ಸಮವೃಷ್ಟಿ
ನಾ ಕಾಣೆನೀ ಜಗದಿ! ನೀ ಚೆಲುವ
ಹೊಸ ಸೃಷ್ಟಿ!

ಉ. ಅ, ಹಯವದನ ಆಚಾರ್ಯ ಎಂ. ಎ.

ಪರರ ಬಗೆಗೆ ಅನಗತ್ಯವಾದ ಟೀಕೆಗಳು ಸಾಕು. ಎಲ್ಲರೂ ಜತೆಗೂಡಿ ವಿಶ್ವಾಸ ಅಭಿಮಾನ ಬೆಳೆಸಿಕೊಳ್ಳೋಣ. ಅದೇ ದೇಶದ ರಕ್ಷಣೆಗೆ ಬುನಾದಿ.

ಸುದ್ದಿಗಳನ್ನು ಕಳಿಸುವವರು ಸಂಕ್ಷೇಪವಾಗಿ, ಸ್ಪಷ್ಟವಾಗಿ ಬರೆದು ಕಳಿಸಬೇಕಾಗಿದೆ. ಕಾರ್ಬನ್ ಪ್ರತಿಗಳನ್ನು ಗಮನಿಸಲಾಗುವುದಿಲ್ಲ.

—ಸಂ

ಜನ ಹೀಗೆ ಹೇಳುತ್ತದೆ

ಕಾಸರಗೋಡ ಕನ್ನಡಿಗರ ಗೋಳು

ಶ್ರೀ ಎನ್. ಮಾರಪ್ಪ ಶೆಟ್ಟಿ

ಅಖಂಡ ಭಾರತಕ್ಕೆ ಭಾಷಾವಾರು ಪ್ರಾಂತ ರಚನೆ ಬೇಡವಾಗಿತ್ತು. ಆದರೂ ಅನಿವಾರ್ಯವಾಗಿ ಮಾಡಬೇಕಾಗಿ ಬಂತು, ಒಪ್ಪಿಕೊಳ್ಳೋಣ. ಆದರೇನು? ಅದಕ್ಕಾಗಿ ನೇಮಕಗೊಂಡ ಸಮಿತಿಯು ಪ್ರಮಾದದಿಂದ ಲೋ, ಇಲ್ಲವೇ ಕೂಲಂಕಷ ವಿಚಾರಿಸದೆಯೋ, ಅಥವಾ ಕೆಲವು ಸದಸ್ಯರು ಕುತಂತ್ರವನ್ನು ಬಯಿಚಿಟ್ಟೋ, ಏನೋ ಎಂಬಂತೆ ಒಂದು ನಿಷ್ಪಕ್ಷಪಾತವಲ್ಲದ ತೀರ್ಮಾನವನ್ನು ಕೊಟ್ಟು ಬಿಟ್ಟಿತು. ಇದರಿಂದಾಗಿ ಒಂದು ಭಾಷೆಯ ತಾಲೂಕಿಗೆ ತಾಲೂಕು, ಜಿಲ್ಲೆಗೆ ಜಿಲ್ಲೆ ಇನ್ನೊಂದು ಭಾಷೆಗೆ ಸೇರಿ ಹೋಯಿತು. ಗಡಿಪ್ರಾಂತ್ಯದಲ್ಲಿ ಯುದ್ಧಾ ತದಷ್ಟೆ ಅನ್ಯಾಯ ನಡೆದು ಹೋಯಿತು. ಬಹುತ್ತಾಯದ ಹೊರೆಯನ್ನು ಹೊತ್ತ ಜನಜಂಗುಳಿ ನಿರ್ವಾಹವಿಲ್ಲದೆ, ಸತ್ಯಕ್ಕಾಗಿ—ನ್ಯಾಯಕ್ಕಾಗಿ ಕೈಯಲ್ಲಿ ಪ್ರಾಣ ಹಿಡಿದು, ಹೋರಾಟಕ್ಕೆ ಇಳಿಯ ತೊಡಗಿದ್ದಾರೆ ಸಂದರ್ಭ ಇಂತಿದ್ದರೂ ಕಂಡೂ ಕಾಣದಂತೆ ತಾತ್ಸಾರಗೊಂಡರೆ, ಮುಂದೆ ಒಂದಲ್ಲ ಒಂದು ದಿನ ಈ ಅನ್ಯಾಯದ ಕಿಡಿ ಭುಗಿಲೆದ್ದು ಕಾಡ್ಗಿಚ್ಚಿಗಿ ಸುಟ್ಟು ಬೂದಿಯಾಗಿಹೋದೀತು.

ಆದುದರಿಂದ ಇತ್ತಂಡದ ಆಳುವ ಅಧಿಕಾರಿ ವರ್ಗದವರು ಸದವಕಾಶ ತಂದು ಕೊಂಡು, ಸರ್ವಸಮ್ಮತವಾದ—ನಿರಾಕ್ಷೇಪವಾದ ಹಳ್ಳಿ—ಗ್ರಾಮಗಳನ್ನು ಸಂಬಂಧಪಟ್ಟ ಆಯಾಯ ಭಾಷಾ ಪ್ರಾಂತಗಳಿಗೆ ಬದಲಾಯಿಸಿಕೊಳ್ಳುವುದು ದೇಶದೊಗ್ಗಟ್ಟಿಗೆ ಲೇಸು.

ಅನಾದಿಯಿಂದ—ಮಾತೃ ಭಾಷೆಯ ತಳಹದಿಯಿಂದ ಬೆಳೆದು ಬಂದ, ಒಂದು ಪ್ರಾಂತ್ಯದ ಜನರ ಆಚಾರ ವಿಚಾರ, ಪದ್ಧತಿ, ರೀತಿ ರಿವಾಜು, ಕಟ್ಟು ಕಟ್ಟಳೆ—ಒಟ್ಟಾರೆ ಸಂಸ್ಕೃತಿಯನ್ನು ಇನ್ನೊಂದು ಪ್ರಾಂತ್ಯದ (ಪರ) ಭಾಷೆಯು ರಕ್ಷಿಸಲಾರದು. ಇಂಥಾ ಅನ್ಯಾಯಕ್ಕೆ ಒಳಗಾದ ಕಾಸರಗೋಡ ತುಳುವ ಕನ್ನಡಿಗರ ಗೋಳನ್ನಿಲ್ಲಿ ಕಾಣಬಹುದು.

ಅಯ್ಯೋ: ತುಳು ಕನ್ನಡದ | ಕೈಯ್ಯಾದ 'ಕಯ್ಯಾ[1]ರ'
ಪೈಯ್ಯಾದ 'ಮಾಯಿ[2]ಪಾಡಿ' 'ತಲೆಪಾ[3]ಡಿ'ಯನ್ನು ||
ಬಾಯ್ಯಾದ 'ಬಾಯಾ[4]ರ' | ಕುಯ್ಯುವರು ಕೇರಳ |
ಕ್ಕೊಯ್ಯುವರು ಮಲೆಯಾಳರನ್ಯಾಯದಿಂದ || || ೧ ||
—'ಕಯ್ಯಾ[5]ರರು" ಗೋವಿಂ[6]ದ | ಪೈಯ್ಯುವರು
ಸುಬ್ಬ[7] ಕವಿ" |
ಯಯ್ಯರುದಿಸಿದ ತಾಣ ಯಕ್ಷಗಾನ ||
ನೆಯ್ಯಾದ ತುಳುವಕಲೆ | ಕೆಯ್ಯಾದ ಕುರಳ ತಲೆ |
ಕುಯ್ಯುವರು 'ಕುರುವಾ[8]ಯಿ' 'ಕುಡುಗೋಲಿ'ನಿಂದ ||
|| ೨ ||
'ಮಂ[10]ಜಿ" "ದೋಣಿ"ಗಳಲೆವ | "ಮಾಂ[11]ಜಿ"
ಮೀನುಗಳುಲಿವ |
"ಮಂಜ[12]ಟ್ಟೆ ಕೋಣ" ಕಂಬಳದ "[13]ರ"ಗಳಿವ ||
"ಮಂ[14]ಜನಾರಿ"ನ ಮುತ್ತು | "ಕುಂಜ[15]ನಾರಿ"ನ
ಸುತ್ತು |
"ಮಿಾ[16]ಂಜ" "ಮಂ[17]ಜಳ ಕೋಡು" ತುಳುನಾಡ
ಸೊತ್ತು || || ೩ ||
"ಪಂ[18]ಬದ"ರ ಪಾಡ್ದ[19]ನಕೆ ತೆಂಬ[20]ರೆಯು
ಡೆಸ್ಸ[21]ನಕೆ |
ಕೊಂಬು ಕೋಲದ ಸಿರಿಗೆ ನೇಮ ನೆರಿಗೆ ||
ಕಂ[22]ಬಿಲಕೆ ಪರಕೆ[23]ಗೆ ಕ | ಜಂ[24]ಬು ದೇಗುಲ
"ಕೊಡಿ[25]"ಗೆ |
ಇಂಬಾದ ತುಳುನಾಡ ಕೊಲೆಯಾಯಿತೇ? || || ೪ ||
"ಮಂ[26]ಜ"ಕ್ಕೆ ಮೇ[27]ರನಕ | ಕೆಂ[28]ಜ"ಕೆ
ನಲ್ಕೆಗನ |
ಪಂಜು[29]ರ್ಲಿ ಕೋಲಕ್ಕೆ ನೆಲೆ "ಮಾದಿ[30]ರ"ಕ್ಕೆ ||
"ಕೂಂ[31]ಜೆಗೋಳು" ಕೊರಗರ "ಕೆ| ಡೆಂ[32]ಜೋಳು"
"ಕುರೊ[33]" "ಕುಕ್ಕೆ[34] |"
"ರೇಂ[35]ಜಿ'ಯೂನ ಕ್ರೀಕೆರ್ ಪೆಗಲ "ಬೋ[36]ವಿಗ"ನ ||
|| ೫ ||
ಕುಂ[37]ಜ ತುಳುಪಾತು "ಕಾ | ರಿಂ[38]ಜ"
"ನೆಲ್ಲಿಂ[39]ಜ" "ಬೈ"
"ಕುಂ[40]ಜ" "ಕುಂಜ[41]ತ್ತೂರು" "ಕೋಟೆ[42]ಕುಂಜ" ||
ಕುಂಜಮಯನಾಡು ಪದ | ರಂ[43]ಜ"
"ಬಾರಿಂ[44]ಜ" "ಬೇ
ಪುಂ[45]ಜ" ಕಾಡೂರುಗಳು ತುಳುನಾಡಿನ || || ೬ ||
"ಕಾನ"[48] "ಎಡಕಾನ"[49] "ಏ | ರ್ಕಾನ"[50]
"ಕೇಕಾನ"[51] "ಬೋ |
ಕಾನ"[52] "ಕೊಂದಲಕಾನ"[53] "ಕುಂಟಿಕಾನ"[54] ||
"ಕಾನಸುಡಿ"[55] ತುಳು—ಕಾಡು | ಕಾನನಕೆ
ಸಮಜೋಡು |
ಕಾಣದೇ ತುಳುವ ಕಾಸರಗೋಡು ಕನ್ನಡ || || ೭ ||
"ಕಣಿಯೂರ"[56] 'ಕಣಿಯೂರು'[57]
"ಕಣಕೂರು"[58] "ಕಣ್ವೂರು"[59]
"ಕಣ್ವತೀರ್ಥ"ಗಳ ಅರ್ಥ ತೋಡಿನೂರೆಂದು ||
"ಕೋಣಿಲ"[61] "ಕೊಣಿಯೇಲ"ವದೆ[62] |
"ಕಣಿಲ"[63] "ಕಣಿಯೇಲವಿದೆ[64] |
ಅನ್ವರ್ಥ ನಾಮದಲಿ ಹಳ್ಳಿಯೂರಾಗಿ || ೮ ||
"ಕೂಡೇಲು"[65] ಮೇಣು "ಬಜ | ಕೂಡೇಲು"[66]
"ಕೂಟೇಲು"[67] |
"ಕೂಡೇಲು[68]ಮೇರುಕಳ" | "ಕೂಡಳ್ಳಮೊಗರು"||[69]
ಕೂಡಿ ಹಳ್ಳಕ್ಕೆ ಹಳ್ಳ | "ಕೂಡಳ್ಳ"[70] ವಾದಂಥ |
ನಾಡುಂಟು ಹಲವು ಕಾಸರಗೋಡಿನಲ್ಲಿ || ೯ ||
"ಆರೆ"ನಲ [71] ತೊರೆ, ತೋಡು | ತೋರುವುದು
ಭ್ರಮೆಯಿಂದ |
ಊರಾಗಿ ತುಳುನಾಡಿನಾ ನಾಮಗಳು ||
"ಪೇರೂರು"[72] ಮತ್ತು "ಪಾ | ವೂರು"[73]
'ತೇವಾರು"[74] "ಬೆ |
ಪ್ಪಾರು"[75] "ಕಿದಿವೂರು"[76] "ಮದವೂರಿ"ದಕೆ[77]
ಸಾಕ್ಷಿ || ೧೦ ||
"ಮೊಗರು"[78] "ಮೊಗರಾಳ"[79] "ಪಡು |
ಮೊಗರು"[80]"ಅಂಗಡಿಮೊಗರು" |
"ಮೊಗರ್ನಾಡು"[82] ತುಳುನಾಡ ನದಿ
ಮುಖಜ ಭೂಮಿ ||
"ಮುಗು"ವಳಿಯ[83] ಮೂಗುಂಟೆ? |
ಮೊಗಪ್ರೋಗೆ ಮೂಗುತಿಯು |
ನಗನೇಕೆ? ತುಳುವಿಕೆಗೆ ವೈಧವ್ಯವಾಗೆ || ೧೧ ||
"ಅಡಕ"[84] "ಸಾರಡಕ"[85] "ಕಾ | ರಡಕ"[86]
"ಬಾರಡಕ"[87] "ಪೆಲ |
"ತಡಕ"[88] "ಗೋಳಿತ್ತಡಕ"[89] "ಪಳ್ಳತ್ತಡಕ"[90] ||
"ಅಡಕತಳ"[91] "ಬದಿಯಡಕ"[92] "ಅಡಕೊತ್ತ[93]
ಬಾಯ್ಗಿತ್ತ |
ರಡಕೆ ನೆಳಿವೀಡನಡಕತ್ತೆಬಯುಲ || ೧೨ ||
"ಬಾರಿ[94]" "ಪೆಗ್ಗ"ರ[95] 'ಗುತ್ತು[96]" "ದಾ[97]ಕೆ'ಯ
"ಬಾವ[98]ದ "ಪ |
ರಾರಿ[99]" ಬಂಟರ ಕನಡ ತುಳುವ ನುಡಿಗಟ್ಟು ||
ಭಾರವಪ್ಪುದು ಕಾರ | ಬಾರದಾ ಹೊರೆಯುಮಲ |
ಬಾರ ಜನಕೊಪ್ಪುವೈ ತುಳುಕನಡನಾಡು || || ೧೩ ||
ಮಿಾಸೆಯುಳಿಸದ "ವೀರ | [100] ಕಾಸೆ' ಕಳಚದ
ಧೀರ |
ಭಾಷೆದಪ್ಪಿದ ಬತ್ತಲೆಕೊಳಕ್ಕಿಳಿಯದಗಭೀರ ||
ಆಶೆ ಮಾತನ್ನಿತ್ತು | ಮೋಸ ಮಾಡಿದರೆ ಆ |
ವೇಶ ತಾಳದೆ ತಾಳ್ಮೆ ಕಳೆದ ತುಳುನಾಡ ಕುವರ ||೧೪||
"ಗುಮ್ಮ[101]' "ಗುಮ್ಮೆ[102]ಯು" ನುಡಿಗೆ |
"ಎಮ್ಮೆ[103]" "ಎರ್ಮೆ[104]"ಯು ಪದಕೆ |
ಒಮ್ಮತವು ಕನಡ ತುಳು ಕರ್ಮ ಧರ್ಮಕ್ಕೆ ||
"ಅಮ್ಮ[105]" "ಅಮ್ಮೆ[106]'ಯು ಒಂದೆ |
"ಅಪ್ಪು[107]' "ಮೊಮ್ಮೆ[108]'ಯು ಒಂದೆ |
"ಬೊಮ್ಮ[109]" "ಬೊಮ್ಮೆ[110]'ಯು ಒಂದೆ ತುಳು
ಕನಡ ಒಂದೆ || || ೧೫ ||
'ಬೆಳು[111]ಗೊಡೆ'ಯ ಕೆಲಸಿಗನ | ದಳಿಹು[112]
"ದೀವ[113]ಟಿ"ಯ ಮಡಿ |
ವಳನ "ಮದಿ[114]ಪಿ"ರದು ಕೊಂಬ 'ಸರಲಿ[115]ಗ"ನ ||
ಹೊಲ "ಬಾಳು[116]ಮ" "ಗೆಯು[117]ಮೆ"
"ಯೊ | ವ[118]ರ್ಗಳ"ವರ್[119]ಳದೋ[120]ವುರ[121]ರಲ |
"ಕಳ[122]ಮೆ" ಬೆಳಸಿನ "ಕದಿ[123]ರು" ಪೆಸರಿರದು
ತುಳುವ || || ೧೬ ||
ತಲೆಯ"ಬಾಸಿ[124]ಗದ""ಬೈ | ತಲೆ[125]ಮಣಿ"ಯ
"ಕರಿಮ[126]ಣಿ"ಯ |
"ಗೆ[127]ದ" "ಪವ[128]ಳದ" ಕರಿಯ ಕಂಕಣದ
ಕೈಯ ||
"ಗಿಳಿಯ[129]ಪ್ರೋಲೆ'ಯ ಕಿವಿಯ | ಲಲನೆಯರು
ಕೊಂಬರೇ |
ಮಲೆಯಾಳ "ದೊಪ್ಪ[130]ನುಡಿ" ತುಳುವೆಸರ
ಕಿಡಿಗೆ || || ೧೭ ||
ಬಡಿವನೇ "ದುಡಿ[131]" "ದೋಲು[132]" | ನುಡಿವನೇ
ಜಾನ[133]ಪದ |
ನಡವನೇ ಕನ್ನಡಿಗ ತುಳುತೀಲ ಬಿಟ್ಟು ||
ಬಿಡುವನೇ ಮಲೆಯಾಳ | ಪದೆವನೇ ಕಥಕ[134]ಳಿಯ |
ಕಡಿವನೇ ಮೊಲೆಹಾಲ ತೊರೆದು ಹಾಲಾ[135]ಹಲ ||
|| ೧೮ ||

---

(1) (2) (3) (4) ಕಾಸರಗೋಡು ತುಳುನಾಡಿನ ಊರ ಹೆಸರುಗಳು. (5) ಕವಿವರ್ಯ ಕಯ್ಯಾರು ಕಿಞ್ಞಣ್ಣ ರೈಯವರು. (6) ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈಯವರು. (7) ಯಕ್ಷಗಾನದ ಆದಿಕವಿ ಪಾರ್ತಿ ಸುಬ್ಬನವರು. (8) ತೆಂಗಿನ ಮರದ ಚಿಗುರೋತಿ (ತು: ಕಿಂ) ಕತ್ತರಿಸುವ ಒಂದು ಮುಪ್ಪುಹುಳ, (9) ಹಲ್ಲುಕತ್ತಿ. (10) ಸಣ್ಣ ಜಹಜು (11) ಒಂದು ಜಾತಿ ಮೀನು (12) ಜೂಜಿನ ಕೋಣನ ವಿಶೇಷ ಹೆಸರು (13) ಕಡಿದು ಮಾಡಿದ ಕಂಬಳ (14) (15) (16) (17) ಕಾಸರಗೋಡ ತುಳುನಾಡ ಊರಹೆಸರು.
(18) ಭೂತಕಟ್ಟುವ ಒಂದು ಜಾತಿ ವಿಶೇಷ. (19) ಭೂತ ಸಂಬಂಧದ ತುಳು ಹಾಡು. (20) ಪಂಬದರ ಡೋಲು ವಿಶೇಷ (21) ವಾದ್ಯನದ ಪಲ್ಲವಿಹಾಡು (22) ಗುಡಿಯ ಸಣ್ಣಪೂಜೆ. (23) ಹರಕೆ. (24) ಕೊಡಲ ಕಾಣಿಕೆಯ ದೇವಿಪೂಜೆ (25) ಧ್ವಜ (26) ಮೇರ ಹೊಲೆಯರ ಒಂದು ಪೂಜೆ.(27) ಹೊಲೆಯರ ಜಾತಿ ವಿಶೇಷ. (28) ನಲ್ಕೆ ಹೊಲೆಯರ ಮಾರಿ ಭೂತ. (29) ನಲ್ಕೆಯವರ ಒಂದು ಭೂತದ ನೇಮ. (30) ನಲ್ಕೆ ಹೊಲೆಯರ ನೃತ್ಯ ಕುಣಿತ ಮತ್ತು ಹಾಡು (31) ಮೀನು ಹಿಡಿಯುವ ಒಂದು ಸಾಧನ (32) (33) ಓಲೆ ಕೊಡೆಯ ಎರಡು ಭೇದ. (34) ಹೆಡಿಗೆ(35) ಮಂಚಿಲು. (36) ಜಾತಿ ವಿಶೇಷ (37)...... (46) ತುಳುನಾಡ ಕಾಡುಗಳು.
(48...... 54) ಊರ ಹೆಸರುಗಳು. (55) ಕಾಡು (56......(70) 70) ಊರ ಹೆಸರುಗಳು.
(71) ನದಿ (72) ....(92) (94) ಊರ ಹೆಸರುಗಳು (93) ಅಡಕೆ ಕತ್ತರಿಸುವ ಕತ್ತರಿ
(94) (95) ಬಂಟರ ಮನೆತನದ. ಯಜಮಾನತನದ ಹೆಸರು. (96) (97) -(98) (99) ಬಂಟರ ಗೊತ್ತುಗಾರಿಕೆಯ ಸ್ಥಳ ನಾಮಗಳು (100) (ಮುಂಡಲ್ಲ) ಕಚ್ಚೆ. 101) (102) ಗೂಬೆ 103) (104) ಎಮ್ಮೆ (ಸಂ. ಮಹಿಷಿ.) (105) (106) ತಾಯಿ (ಸಂ ಜನನಿ) (107) (108) ಸ್ತನ. (109) (110) ಬ್ರಹ್ಮ.
(111) ಅಗಸರು ಕೊಡೆ. (ತು. ಬೆಳ್ಗೊಡೆ) (112) ಮಡಿಮಾಡಿದ ಬಟ್ಟೆ. (113) ದೀವಟಿಗೆ. (114) ದೈವದ ಮುಂದೆ ಹೇಳುವ ನುಡಿಗಟ್ಟು (ನಿರೂಪ) (115) ಗಾಣಿಗ. (116) ಹೂಟೆ (117) ಕೆಲಸ (118) ಒರ್ಪುಳ=ಒಂದು ಸಾರಿಯ ಉಳ (119) ಇರ್ಪುಳ= ಎರಡು ಸಾರಿಯ ಉಳ (120) ಓ ಎಂದು ದನಿ (121) ಉಳುವಾಗ ಮಾಡುವ ದನಿ (122) ಒಂದು ಜಾತಿ ಬತ್ತ (123) ಕದಿರು (124) (125) ಸುಮಂಗಲೆಯರು ಹಣೆಗಿಡುವ ಒಂದು ನಗ= ಸುಂದರ ಬೊಟ್ಟು (126) ಕಪ್ಪು ಮಣಿಯ ಮಂಗಲ ಸೂತ್ರ. (127) ಕಂಠ, ಕೊರಳು (128) ಹವಳ (129) ಮುತ್ತೈದೆಯರ ನಗುವಿಶೇಷ. (130) ಗಿಲಿಬಿಲಿ; ಕೃತ್ರಿಮ ಬಿನ್ನ. (131) – (132) ಬಡಿವಾದ್ಯ ಪ್ರಭೇದ. (133) ಹಳ್ಳಿಹಾಡು (134) ಕೇರಳದ ನೃತ್ಯವಿಶೇಷ (135) ವಿಷ.

ಕರಡಿ ಡ್ರೆಗನ್‌ಗಳ ನಟ್ಟನಡುವೆ

(೮ನೇ ಪುಟದಿಂದ)

ತೋಟೆಯನ್ನು ಪುನಃ ಸ್ಥಾಪಿಸಿದಂದಿನಿಂದ ೧೯೩೩ರಿಂದ ೧೯೪೯ರ ವರೆಗೆ ರಷ್ಯದ ಪ್ರಭಾವವೇ ಇಲ್ಲಿ ಪ್ರಮುಖವಾಗಿತ್ತು. ಸಿಂಕಿಯಾಂಗಿನಲ್ಲಿ ರಷ್ಯದ ಕುರುಹನ್ನು ನಿರ್ಮೂಲಿಸುವದಕ್ಕಾದರೂ ಎಡೆ ಸಿಗಬೇಕೆಂದು ಇಲ್ಲಿ ಹಲವು ಬಾರಿ ದಂಗೆಗಳೇಳುವಂತೆ ರಷ್ಯನರೇ ದಂಗೆಗೆ ಕಾರಣರಾಗಿದ್ದಾರೆ.

ರಷ್ಯನರ ಮೇಲ್ವಿಚಾರಣೆಯಲ್ಲಿ ಚೈನಿ ವಿರುದ್ಧ ಪೂರ್ವ ತುರ್ಕಿಸ್ಥಾನ ಗಣರಾಜ್ಯ"ವು ಇಲ್ಲಿ ಸ್ಥಾಪಿತವಾಗಿತ್ತು. ಈ ಗಣರಾಜ್ಯದಲ್ಲಿ ಉಯಿಗುರರು, ಕಝಕರು ಮತ್ತು ಉಜ್ಬೆಕರು, ಅಂದರೆ, ಮುಸಲ್ಮಾನರೆಲ್ಲರೂ ಸೇರಿಕೊಂಡಿದ್ದರು. ಇದನ್ನು ರಷ್ಯದ ರಕ್ಷಣೆಗೊಳಪಟ್ಟ ಪೂರ್ಣ ಸ್ವತಂತ್ರ ರಾಜ್ಯವೆಂದು ಹೇಳಲಾಗುತ್ತಿತ್ತು.

೧೯೪೯ರಲ್ಲಿ ಮಾವೊ ತ್ಸೆ-ಟುಂಗ್ ಹಾಗೂ ಕಮ್ಯೂನಿಸ್ಟರು ಚೈನಾದಲ್ಲಿ ಅಧಿಕಾರ ಗದ್ದುಗೆಯನ್ನೇರಿದ ಮೇಲೆ ಮೋಸಕೋವು ಸಿಂಕಿಯಾಂಗಿಗೆ ಆರ್ಥಿಕ ನೆರವನ್ನಿತ್ತು ತನ್ನ ಪ್ರಭಾವವನ್ನುಳಿಸಿಕೊಳ್ಳಲು ಪ್ರಯತ್ನಿಸಿ ವಿಫಲವಾಯಿತು. ಚೈನಾದ ಪ್ರಭುತ್ವ ಪುನಃ ಸ್ಥಾಪಿಸಲ್ಪಟ್ಟಿತು.

ಈಗ ಚೈನಿ ಕಮ್ಯೂನಿಸ್ಟರ ಕಪಿ ಮುಷ್ಟಿಯೊಳಗೆ ಬಂದಿರುವ ಇತರ ಹಲವು ಪ್ರದೇಶಗಳಂತೆ ಸಿಂಕಿಯಾಂಗ್ ಸಹಾ ಚೈನೇತರ ಪ್ರಜೆಗಳಿರುವ ಪ್ರದೇಶವಿದೆ. ಈ ಎಲ್ಲಾ ಪ್ರದೇಶಗಳಲ್ಲೂ ತನ್ನ ಹತೋಟೆಯನ್ನು ಸ್ಥಾಪಿಸಲು ಹಾಗೂ ಅಲ್ಲಿರುವವ ರಾಷ್ಟ್ರೀಯರ ಮನೋಭಾವನೆಯನ್ನು ಚಿವುಟಿ ಹಾಕಿ ಬಿಡಲು ಪಡುವ ಪ್ರಯತ್ನ ಒಂದೇ ರೀತಿಯದ್ದಿದೆ. ಈ ಎಲ್ಲಾ ಪ್ರದೇಶಗಳಿಗೂ ಚೈನಿ ಜನತಾ ಪ್ರವಾಹವನ್ನು ಪ್ರವಹಿಸಲಾಗುತ್ತಿದೆ. ಚೈನಿ ಕಮ್ಯೂನಿಸ್ಟ್ ಧೋರಣೆಗೆ ಅನುಸಾರವಾಗಿ ಬದಲಾಗುವಂತೆ ಅಲ್ಲಿಯ ಜನರ ಮೇಲೆ ಸಾಂಸ್ಕೃತಿಕ ಸುಧಾರಣೆ ಮುಂತಾದ ದೊಡ್ಡ ಹೆಸರುಗಳುಳ್ಳ ಒತ್ತಡ ಹಾಕಲಾಗುತ್ತಿದೆ. ಚೈನೇತರ ಪ್ರದೇಶದ ಮೇಲೆ ಚೈನಿ ಪ್ರಭಾವ ಬೀರಲು—ಗುತ್ತಿಗೆದಾರರಾಗಲು—ಸರ್ವ ವಿಧದಲ್ಲೂ ಪ್ರಯತ್ನಿಸಲಾಗುತ್ತಿದೆ.

ಸಿಂಕಿಯಾಂಗಿಗೆ ಕಳುಹಿಸಲ್ಪಟ್ಟಿರುವ ಚೈನೀಯರನ್ನು ಕಂಡಾಗ ಒಂದು ವಿಷಯ ಜ್ಞಾಪಕಕ್ಕೆ ಬರುತ್ತದೆ. ಅಲ್ಲಿಗೆ ಹೋಗುತ್ತಿರುವವರು ಹೂಣರಿದ್ದಾರೆ, ಇವರನ್ನು ನಿಜವಾದ ಚೈನಿಯರೆನ್ನಲಾಗುತ್ತಿದೆ. ಇದು ಬಹಳ ಮುಖ್ಯ ವಿಷಯ ಹಾಗೂ ಪೂರ್ವ ಯೋಜಿತ ಹಂಚಿಕೆ ಇದೆ. ಚೈನಾದಲ್ಲಿ ಕಮ್ಯೂನಿಸ್ಟ್‌ಶಾಹಿ ಅಧಿಕಾರಕ್ಕೆ ಬರುವ ಮುಂಚೆ ಇಲ್ಲಿ ಉಯಿಗುರರ ಸಂಖ್ಯೆ ಜಾಸ್ತಿ ಇತ್ತು. ಅವರ ಸಂಖ್ಯೆ ೨೫,೪೧,೦೦೦ ಮತ್ತು ಕಝಕರ ಸಂಖ್ಯೆ ೩,೧೯,೦೦೦. ಇವೆರಡೂ ತುರಕರ ಸಂತತಿ ಇವೆ. ಹೂಣರ ಸಂಖ್ಯೆ ೨,೦೨,೦೦೦ಕ್ಕಿಂತ ಜಾಸ್ತಿ ಇರಲಿಲ್ಲ.

೧೯೫೨ರ ನಂತರ ಜನ ಸಂಖ್ಯೆ ಬಹಳಷ್ಟು ಜಾಸ್ತಿಯಾಗಿರುತ್ತದೆ. ಅದಕ್ಕೆ ಹೂಣರ ಆಗಮನವೇ ಮುಖ್ಯ ಕಾರಣವೆನ್ನಬಹುದು. ೧೯೫೩ರಲ್ಲಿ ದೊರಕಿರುವ ಪ್ರಜಾ ಸಂಖ್ಯೆಯಂತೆ ಸಿಂಕಿಯಾಂಗಿನ ಜನಸಂಖ್ಯೆ ಹಿಮ್ಮಡಿಯಾಗಿರುವದು ಸ್ಪಷ್ಟವಾಗುತ್ತದೆ. ಈ ರೀತಿ ಇದ್ದಕ್ಕಿದ್ದಂತೆ ಹೂಣರ ಸಂಖ್ಯೆ ಅಧಿಕವಾಗುತ್ತಿರುವರಿಂದ ಅವರು ಸ್ಥಳೀಯ ಜನರ ಆಗ್ರಹಕ್ಕೊಳಬೇಕಾಗಿರುತ್ತದೆ.

ಸಿಂಕಿಯಾಂಗಿಗೆ ಸ್ವಾಯತ್ತಾಧಿಕಾರದ ಪ್ರದೇಶವೆಂಬ ಶಿರೋನಾಮೆಯನ್ನು ಪೆಕಿಂಗ್ ಕೊಟ್ಟಿದೆಯಾದರೂ, ನಿಜವಾಗಿ ಅಲ್ಲಿಯವರಿಗೆ ರಾಜಕೀಯ ಹಕ್ಕುಬಾಧ್ಯತೆಗಳೇನೂ ದೊರಕಿರುವದಿಲ್ಲ. ಮುಖ್ಯ ಅಧಿಕಾರದ ಬೀಗದ ಕೈ ಚೈನಿಯರ ಕೈಯ್ಯಲ್ಲಿದೆ. ಬೀಗ ಮಾತ್ರ ಸ್ಥಳೀಯ ಜನರ ಬಳಿಯಿದೆ. ಬೀಗತೆಗೆದಿಲ್ಲವೆಂದು ಅಲ್ಲಿಯ ಜನರು ಸ್ಥಳೀಯ ಅಧಿಕಾರಿಗಳ ಮೇಲೆ ಗಲಾಟೆ ನಡೆಸುವದು ಸ್ವಾಭಾವಿಕ ಇದೆ. ಆಗ ದೊಡ್ಡ ಜನರಂತೆ ರಾಜಿ ಪಂಚಾಯತಿಗೆ ಚೈನಿಯರು ಬರುತ್ತಾರೆ.

ವಿರುದ್ಧತೆಯ ಅನುಭವವಾದೊಡನೆ ೧೯೫೭ರಲ್ಲಿ ಮಾವೊತ್ಸೆ-ಟುಂಗನು 'ಸಾವಿರ ಹೂಗಳು ಅರಳಲಿ, ಸಾವಿರ ಅಭಿಪ್ರಾಯಗಳು ಮುಂದೆ ಬರಲೆಂದು' ಆಮಂತ್ರಣವನ್ನಿತ್ತನು. ಇದೆಲ್ಲಾ ಘೋಷಣೆ ಮಾತ್ರ ಇದೆ. ನಿಜವಾಗಿ ಅಭಿಪ್ರಾಯ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರು ಸೆರೆಮನೆಯಲ್ಲಿ ಕೊಳೆಯುತ್ತಿದ್ದಾರೆ.

ಈ ರೀತಿ ಹಾಂಗ್‌ಕಾಂಗ್‌ನಲ್ಲಿರುವ ಪತ್ರಿಕಾ ವ್ಯವಸಾಯಿ ಬೆಟ್ರಾಮ್ ಜೋನ್ಸ್ ಬರೆದು ಐರೋಪ್ಯ ಪತ್ರಿಕೆಗಳಿಗೆ ಕಳುಹಿಸಿ ಕೊಟ್ಟಿರುವರು. ಅದು ಭಾರತದ ಪತ್ರಿಕೆಗಳಲ್ಲೂ ಪ್ರಕಟವಾಗಿರುತ್ತದೆ. ಇದರಿಂದ ಚೈನಿಯರ ದುರುದ್ದೇಶವೇನಿದೆಂಬುದನ್ನು ತಿಳಿದುಕೊಳ್ಳಬಹುದು. ಈ ಲೇಖನದಲ್ಲಿ ಜನಸಂಖ್ಯೆಯನ್ನು ಬೆಳಸಿ ಚೈನಾವು ಇತರ ದೇಶಗಳನ್ನು ನುಂಗಲು ಹವಣಿಸುತ್ತಿರುವ ಹಿಟ್ಲರ್ ಕ್ರಮವನ್ನು ಕಾಣಬಹುದು.

ಹೀಗಿದ್ದರೂ ಅಯೂಬ್ ಮೊನವ ಕಾಲು ನೆಕ್ಕುವದನ್ನು ಬಿಡುವದಿಲ್ಲ. ಅಲ್ಲಿ ಅವರ ಸಂಗಡದ ಸಂಸ್ಥೆಗಳಿಗೆನೇ ವಿಪತ್ತು ಬಂದೊದಗಿದೆ ಯಾದರೂ ತನ್ನ ಅಧಿಕಾರ ಸ್ಥಾನಕ್ಕಾಗಿ ಅಯೂಬ ಅದೆಂತಹ ಕಾರ್ಯ ಕಕ್ಕೆ ಹೇಸುವದಿಲ್ಲ!

— ಶಿವಶಂಕರ.

ಆದರ್ಶ ಚರಿತೆಗಳು—೧೪

ಮಹಾತ್ಮಾ ಟಾಲ್‌ಸ್ಟಾಯ್

—ಶ್ರೀ ಎಸ್. ಎಂ. ಶೆಟ್ಟಿ,
ಶಿವಪುಂಜಿಪರಾರಿ.

ರಷ್ಯದ ಮೋಸ್ಕೊ ನಗರದ ಹತ್ತಿರವಿರುವ ಒಂದು ಹಳ್ಳಿಯ ಶ್ರೀಮಂತ ಮನೆತನದಲ್ಲಿ ಮಹಾತ್ಮಾ ಟಾಲ್‌ಸ್ಟಾಯ್ ಅವರು ಸನ್ ೧೮೨೮ರಲ್ಲಿ ಜನ್ಮ ತಳೆದರು. ಅಧ್ಯಯನದಲ್ಲಿ ಇವರ ಮನಸ್ಸು ಪ್ರವೃತ್ತವಾಗುತ್ತಿರಲಿಲ್ಲ. ಸಾಹಿತ್ಯ ಕಾನೂನು ಯಾವುದೂ ಇವರಿಗೆ ಒಗ್ಗಲಿಲ್ಲ.

ಶಕ್ತಿ, ಜಿಜ್ಞಾಸೆ ಹಾಗೂ ಭಾವುಕತೆಗಳೇ ಇವರ ಸ್ವಭಾವವಾಗಿದ್ದುವು ಈ ಅತಿ ಭಾವುಕತೆಯಿಂದಾಗಿಯೇ ಹಲವಾರು ಸಲ ಇವರು ಆಪತ್ತುಗಳನ್ನೆದುರಿಸಬೇಕಾಯ್ತು. ವಿದ್ಯಾಭ್ಯಾಸವನ್ನು ತೊರೆದ ನಂತರ ಇವರನ್ನು ಕಾಕೇಶಸ್ ಪ್ರಾಂತ್ಯಕ್ಕೆ ಸೇನಾ ನಾಯಕನನ್ನಾಗಿ ಕಳುಹಿಸಲಾಯ್ತು. ದೀನದಲಿತರ, ಸ್ತ್ರೀ ಮಕ್ಕಳ ಹಾಗೂ ಬಡರೈತರ ಹತ್ಯೆಗೈಯುವಾಗ ಅವರ ಮನಸ್ಸು ಸಂತಪ್ತವಾಗಿ ಕಿರಿಚುತ್ತಿತ್ತು; ಆದರೆ ನೌಕರಿ ಎಂಬ ಭಾವನೆಯಿಂದ ಎಲ್ಲವನ್ನೂ ಸಹಿಸಬೇಕಾಯ್ತು. ಕೊನೆಗೆ ಹತ್ತು ವರ್ಷಗಳ ನಂತರ ಅವರು ಸೈನ್ಯದ ಕೆಲಸವನ್ನು ಬಿಟ್ಟು 'ಸೈಂಟ್ ಪೀಟರ್ ಬರ್ಗ್ಸ್' ಎಂಬ ಊರಿಗೆ ಹಿಂತಿರುಗಿ ಬಂದರು.

ಇಲ್ಲಿಗೆ ಬಂದವರು ರಾಜನೀತಿಯ ಆಂದೋಲವನ್ನು ಅಧ್ಯಯನ ಗೈಯ ತೊಡಗಿದರು. ಆದರೆ ಈ ಆಂದೋಲನದ ನೀತಿ ಮತ್ತು ಸಾಧನಗಳನ್ನು ಓದಿ ಅವರ ಮನಸ್ಸು ಅದನ್ನು ಒಪ್ಪಲಿಲ್ಲ. ಅವರಿಗದರಲ್ಲಿ ತಿರಸ್ಕಾರ ಉಂಟಾಯ್ತು. ಅನಂತರ ಅವರು ಇಡೀ ಯುರೋಪನ್ನು ಸುತ್ತಿದರು. ಹೋದಲ್ಲೆಲ್ಲಾ ಅವರಿಗೆ "ಜಡವಾದ" ಮತ್ತು "ಯುದ್ಧವಾದ"ಗಳ ಮಾತೇ ಕೇಳಬಂತು. ನಿರಾಶರಾಗಿ ಹಿಂತಿರುಗಿ ಬಂದ ಟಾಲ್‌ಸ್ಟಾಯರು ರಶ್ಯದ ಕೃಷಿಕನ ಜೀವನವನ್ನು ಅಧ್ಯಯನ ಗೈಯತೊಡಗಿದರು. ಅನಂತರ ಅವರು ಬೇರೆ ಬೇರೆ ದೇಶಗಳ ರೈತರನ್ನು ಅನುಸಂಧಾನ ಮಾಡಲಿಕ್ಕಾಗಿ ಪುನಃ ಯಾತ್ರಾರ್ಥಿಗಳಾದರು. ಈ ಯಾತ್ರೆಯಿಂದ ಇವರು ಹಿಂತಿರುಗಿದಾಗ ಸಾಧಾರಣ ಜನತೆಯು ಸರಿಯಾದ ಅವಸ್ಥೆಯನ್ನು ಬಹು ಸುಲಭವಾಗಿ ತಿಳಿಯಬಹುದಾದಂತಹ ಸರಕಾರೀ ನೌಕರಿಯೇ ಅವರಿಗೆ ದೊರೆಯಿತು.

"ಡೊನಿಯಾ" ಎಂಬ ಮಹಿಳೆಯನ್ನಿವರು ತನ್ನ ೩೪ನೇ ವಯಸ್ಸಿನಲ್ಲಿ ಅಂದರೆ ಸನ್ ೧೮೬೨ರಲ್ಲಿ ವಿವಾಹವಾದರು. ಅನಂತರ ಇವರು "ಯುದ್ಧ ಮತ್ತು ಶಾಂತಿ" ಹಾಗೂ "ಅನ್ನಾ ಮತ್ತು ಕರೆನ್ನಾ" ಎಂಬೆರಡು ಉಪನ್ಯಾಸಗಳನ್ನು ಬರೆದರು. ಈ ಎರಡೇ ಉಪನ್ಯಾಸಗಳಿಂದಾಗಿ ಇವರನ್ನು ರಷ್ಯಾದ ಸರ್ವಶ್ರೇಷ್ಠ ಲೇಖಕರಲ್ಲಿ ಗಣಿಸಲಾಯ್ತು.

ಮನುಷ್ಯನು ತಾಪ, ದುಃಖ, ಭೇದ ಭಾವ ಎಂಬ ಜ್ವಾಲೆಯಿಂದ ಜ್ವಲಿಸಿ ಭಸ್ಮವಾಗುತ್ತಿದ್ದಾನೆ ಎಂಬುದನ್ನವರು ಕಂಡುಕೊಂಡರು. ಆಗ ಅವರ ಜೀವನದಲ್ಲಿ ಬಹು ದೊಡ್ಡ ಪರಿವರ್ತನೆಯಾಯಿತು; ಅವರ ಚಿತ್ತವು ಅತ್ಯಂತ ಉದ್ವಿಗ್ನವಾಗಿ ಬಿಟ್ಟಿತು. ಆಗ ಅವರಿಗಿನ್ನೂ ೫೦ ವರ್ಷ ಪ್ರಾಯ. ವಿಭಿನ್ನ ಧರ್ಮ ಸಾಹಿತ್ಯವನ್ನು ಓದಿ ಅಧ್ಯಯನಗೈದ ಬಳಿಕ ಅವರು ಕೂಡಾ "ಅಹಿಂಸಾ ಪರಮೋಧರ್ಮ" ಎಂಬಲ್ಲಿಗೆ ಬಂದು ಮುಟ್ಟಿದರು. ಇದೇ ಸಿದ್ಧಾಂತವನ್ನವರು ಬಲವಾಗಿ ನಂಬಿ ರಶ್ಯದ ಬಾದಶಹನಿಂದಾಗುತ್ತಿರುವ ಅನ್ಯಾಯ ಹಿಂಸೆಗಳನ್ನು ತೀವ್ರವಾಗಿ ಪ್ರತಿಭಟಿಸಿದರು. ಫಲ ಸ್ವರೂಪವಾಗಿ ಇವರು ತುಂಬಾ ಕಷ್ಟ ಸಹಿಸಬೇಕಾಯ್ತು. ಆದರೂ ಅವರು ತನ್ನ ಸಿದ್ಧಾಂತದಲ್ಲಿ ಅಟಲರೂ ಅಚಲರೂ ಆಗಿ ನಿಂತು ಬಿಟ್ಟರು.

ಇವರು "ನನ್ನ ಧರ್ಮ" "ಭಗವಂತನ ರಾಜ್ಯ ನನ್ನೊಳಗಿದೆ" "ಹಾಗಾದರೆ ನಾನೇನು ಮಾಡಬೇಕು?" "ಧರ್ಮ ಕಥೆಗಳು" ಮುಂತಾದ ಹಲವಾರು ಪುಸ್ತಕಗಳನ್ನು ಬರೆದಲ್ಲದೆ ಅವುಗಳ ಸಿದ್ಧಾಂತಗಳನ್ನು ತನ್ನ ವ್ಯವಹಾರಿಕ ಜೀವನದಲ್ಲಿ ಭಟ್ಟಿಯಿಳಿಸ ತೊಡಗಿದರು. ಇದೇ ಕಾರಣದಿಂದಾಗಿ ಇವರಲ್ಲಿ—ಇವರ ಹೆಂಡತಿಯಲ್ಲಿ, ಹಾಗೂ ಸಂಬಂಧಿಕರಲ್ಲಿ ತೀವ್ರ ಮತಭೇದ ತಲೆದೋರಿತು. ಆ ಬಂಧುಗಳು ತನ್ನ ಸಿದ್ಧಾಂತಗಳನ್ನು ಪುಸ್ತಕಗಳ ವರೇಗೆ ಮಾತ್ರ ಸೀಮಿತವಾಗಿಡುವಂತೆ ಟಾಲ್‌ಸ್ಟಾಯರನ್ನು ಒತ್ತಾಯಿಸಿದರಾದರೂ ಅವರು ಅತ್ತಗಮನವೀಯದೆ ತನ್ನ ಅನುಸಂಧಾನವನ್ನು ಮುಂದುವರಿಸಿದರು, ಅನಂತರ ಅವರು ತನ್ನ ಪುಸ್ತಗಳನ್ನು ಯಾರು ಬೇಕಾದರೂ ಪ್ರಕಟಿಸಬಹುದೆಂದು ಪ್ರಚಾರಗೈದರು.

ಸನ್ ೧೯೧೦ನೇ ಇಸವಿಯಲ್ಲಿ ತನ್ನ ಹೆಂಡತಿ ಮತ್ತು ಬಂಧುಗಳ ತೊಂದರೆಯನ್ನು ಸಹಿಸಲಾರದೆ ಇವರು ಮನೆಬಿಟ್ಟು ಹೊರಟು ಹೋದರು, ಆಗ ಅವರಿಗೆ ೮೨ ವರ್ಷ ಪ್ರಾಯ. ಅವರು ಬಹು ದುರ್ಬಲರಾಗಿದ್ದರು. ಹಣ್ಣು ಹಣ್ಣು ಮುದುಕರಂತೆ ಕಾಣುತ್ತಿದ್ದರು ಮನೆಯಿಂದ ಹೊರಬಿದ್ದ ಕೆಲವೇ ಸಮಯದ ಬಳಿಕ ಈ ನಿರ್ಭೀಕ ಮಹಾ ಪುರುಷನ ದೇಹಾವಸಾನವಾಯ್ತು.

ಮೂಲ: ಠಾಕೂರ್ ಸುದರ್ಶನ ಸಿಂಹ.

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಅತ್ಯಂತ ಪ್ರಯೋಜನಕಾರಿ ಪುಸ್ತಕ—

ಮನೆ-ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್. ಐ. ಎಮ್.
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ರೋಗಿಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನವಭಾರತ ಪುಸ್ತಕ ಭಂಡಾರ, ಉಡುಪಿ.

READ &
ADVERTISE IN
NAVAYUGA WEEKLY

ಗುಡ್ಡಕಾಡುಗಳ

ನಾಗಾಜನರು - ನಾಗಾನಾಡು

ಇದೇ ತಿಂಗಳ ಮೊದಲನೆಯ ದಿನಾಂಕದಂದು ರಾಷ್ಟ್ರಪತಿ ಡಾ|| ರಾಧಾಕೃಷ್ಣನ್‌ರವರು ಭಾರತದ ಹದಿನಾರನೆಯ ರಾಜ್ಯವಾದ ನಾಗಾಲ್ಯಾಂಡನ್ನು ಅದರ ರಾಜಧಾನಿ ಕೊಹಿಮಾದಲ್ಲಿ ಉದ್ಘಾಟಿಸಿದರು. ನಾಗಾಲ್ಯಾಂಡಿನ ವಿಸ್ತೀರ್ಣವು ೬೩೬೬ ಚದರ ಮೈಲಿಗಳು; ಬಹು ಪಾಲು ಗುಡ್ಡ ಬೆಟ್ಟಗಳಿಂದ ತುಂಬಿದ ಈ ರಾಜ್ಯದಲ್ಲಿ ಕೊಹಿಮಾ, ಮೊಕಾಕ್‌ಚುಂಗ್ ಮತ್ತು ಟುಯೆನ್ಸಾಂಗ್ ಎಂಬ ಮೂರು ಜಿಲ್ಲೆಗಳಿವೆ. ಭಾರತದ ಪೂರ್ವ ತುದಿಯ ಈ ರಾಜ್ಯವು ಬ್ರಹ್ಮದೇಶದ ಗಡಿಗೆ ಹೊಂದಿಕೊಂಡಿದೆ. ಉತ್ತರದಲ್ಲಿ ತಿರಪ್ ಗಡಿ ವಿಭಾಗ, ದಕ್ಷಿಣದಲ್ಲಿ ಮಣಿಪುರಗಳಿವೆ. ದಕ್ಷಿಣದ ಬೆಟ್ಟಗಳಿಂದ ಅಸ್ಸಾಮಿನ ವಿಶಾಲ ಬಯಲು ಆರಂಭವಾಗುತ್ತದೆ. ಕಣಿವೆ ಪ್ರದೇಶವನ್ನುಳಿದ ಎಲ್ಲ ಭೂಮಿಯೂ ಪರ್ವತ ಸೋಪಾನಗಳಿಂದ ಕೂಡಿರುವ ನಾಗಾಲ್ಯಾಂಡಿನಲ್ಲಿ ೧೦ ಸಾವಿರ ಅಡಿ ಎತ್ತರದ ಜಾಪೊಟಿ ಶಿಖರವೂ ೧೨ ಸಾವಿರ ಅಡಿ ಉನ್ನತಿಯ ಸಾರಾಮತಿ ಶಿಖರವೂ ಇವೆ.

ಸರಾಸರಿ ೭೦ರಿಂದ ೧೦೦ ಅಂಗುಲಗಳಷ್ಟು ಮಳೆ ನಾಗಾಲ್ಯಾಂಡಿನಲ್ಲಿ ಬೀಳುತ್ತದೆ. ಹೊಳೆ ಕೊಳ್ಳಗಳಿಂದ ತುಂಬಿದ ಈ ರಾಜ್ಯದ ಹವಾಮಾನ ಆಹ್ಲಾದಕರ. ಹಿಮ ಬೀಳುವ ಸ್ಥಳಗಳು ಕೆಲವು ಮಾತ್ರ. ವರ್ಷದಲ್ಲಿ ಎರಡು ತಿಂಗಳುಗಳು ಮಾತ್ರ ವಿಶೇಷ ಚಳಿಯಿರುವ ಇಲ್ಲಿ ಉಳಿದ ಸಮಯ ಮನಚೇತೋಹಾರಿಯಾಗಿದೆ. ೯೩ರಿಂದ ೯೫ ಡಿಗ್ರಿ ರೇಖಾಂಶ ಮತ್ತು ೨೫ರಿಂದ ೨೭ ಡಿಗ್ರಿ ಅಕ್ಷಾಂಶಗಳ ನಡುವಣ ನಾಗಾಲ್ಯಾಂಡ್ ಹಚ್ಚ ಹಸುರಾದ ಕಾಡುಗಳಿಂದಲೂ ಬಯಲು ಗುಡ್ಡಗಳಿಂದಲೂ ಮನೋಹರವಾದ ರಾಜ್ಯ.

ಇತ್ತೀಚಿನ ಅಂದಾಜಿನಂತೆ ಈ ರಾಜ್ಯದ ಜನಸಂಖ್ಯೆ ಬರೇ ೩,೭೦,೦೦೦. ಇಲ್ಲಿಸುವವರು ಹೆಚ್ಚಿನವರು ನಾಗಾ ಜನರು. ಮಣಿಪುರ ಮತ್ತು ತ್ರಿಪುರಗಳಲ್ಲಿಯೂ ನಾಗಾ ಜನರು ನೆಲೆ ನಿಂತಿದ್ದಾರೆಂಬುದನ್ನು ನಾವು ಮರೆಯಬಾರದು.

ನಾಗಾ ಜನರಲ್ಲಿ ಮೊನ್ನೆಮೊನ್ನೆಯವರೆಗೆ ಪಂಗಡ—ಒಳಪಂಗಡಗಳಿದ್ದುವು. ಇವುಗಳ ಧಾರ್ಮಿಕ ಆಚಾರ—ವಿಚಾರಗಳು ಭಿನ್ನ ವಿಭಿನ್ನವಾಗಿವೆ. ಆದುದರಿಂದ ಇವರ ಮೂಲಕ್ಕೆ ಸಂಬಂಧಿಸಿದಂತೆ ಯಾವುದೇ ಸಿದ್ಧಾಂತವನ್ನು ಮಂಡಿಸುವುದು ಕಷ್ಟ. ಭಾರತವು ಸ್ವತಂತ್ರವಾದ ಬಳಿಕ ಸಾಮರಸ್ಯದ ಸುಖೀ ರಾಜ್ಯ ನಿರ್ಮಾಣಕ್ಕಾಗಿ ತಮ್ಮ ವೈಶಿಷ್ಟ್ಯಗಳನ್ನೂ ಪ್ರತ್ಯೇಕತಾ ಭಾವನೆಯನ್ನೂ ಇವರು ತ್ಯಜಿಸಿದ್ದಾರೆ

ನಾಗಾಲ್ಯಾಂಡಿನಲ್ಲಿ ಒಟ್ಟು ೮೬೦ ಹಳ್ಳಿಗಳಿವೆ. ಗುಡ್ಡಗಳ ತುದಿಯಲ್ಲಿ ನಿರ್ಮಿತವಾಗಿರುವ ಈ ಹಳ್ಳಿಗಳು ಸುರಕ್ಷಿತವಾಗಿವೆ; ಭದ್ರವಾಗಿವೆ ಎಂದು ಹಿಂದೆ ತಿಳಿಯುತ್ತಿದ್ದರು. ಪ್ರತಿ ಹಳ್ಳಿಯೂ ಒಂದೊಂದು ಕೋಟೆಯಂತಿದೆ. ಆದುದರಿಂದ ಇವು ಪ್ರತ್ಯೇಕವಾಗಿರುವುದು ಸಹಜ, ಈ ಹಳ್ಳಿಗಳು ಸ್ವಯಂ ಪರಿಪೂರ್ಣವಾಗಿವೆ; ಸ್ವಾವಲಂಬಿಯಾಗಿವೆ. ಪಂಗಡಗಳ ನಡುವಣ ಕಲಹವೇ ಮೊದಲಾದ ಗ್ರಾಮದ ಸಮಸ್ಯೆಗಳನ್ನು ಗ್ರಾಮ ಪರಿಷತ್ತೇ ತೀರ್ಮಾನಿಸುತ್ತದೆ. ಜನಸಂಖ್ಯೆಯ ಸಮಸ್ಯೆ ಇಲ್ಲಿಯೂ ತಲೆಯೆತ್ತಿದೆ. ಹಾಗಾಗಿ ನೆರೆಯ ಗುಡ್ಡಸಾಲಿನಲ್ಲಿಯೂ ನೆಲೆಯೂರುತ್ತಾರೆ, ನಾಗಾ ಜನರು.

ನಾಗಾ ಜನರ ವಿವಿಧ ಪಂಗಡಗಳ ನಡುವೆ ದ್ವೇಷ, ಅಸೂಯೆ, ಭಿನ್ನಾಭಿಪ್ರಾಯ ಮೊದಲಾದುವು ಮೊದಲಿಗಿಂತ ಈಗ ಕಡಿಮೆಯಾಗುತ್ತ ಬಂದಿವೆ. ರಾಜ್ಯದ ಅಭಿವೃದ್ಧಿಗಾಗಿ ಸಂಘಟಿತ ಪ್ರಯತ್ನಗಳು ನಡೆಯುತ್ತವೆ. ನಾಗಾಲ್ಯಾಂಡ್ ಎಂದರೆ, ಮಾನವರ ತಲೆಗಳನ್ನು ಬೇಟೆಯಾಡುವ ಜನಗಳ ನಾಡು ಎಂದರ್ಥ. ಈ ರಾಜ್ಯದ ಬಗೆಗೆ ವಿಚಿತ್ರ ಕಲ್ಪನೆ ಮಾಡಿಕೊಂಡವರು ಅನೇಕರು. ಆದರೆ, ಅವರಿಗೆ ನಾಗಾ ಜನರು ಮಾನವ ಜೀವನವನ್ನು ಅಮೂಲ್ಯವೆಂದು ಭಾವಿಸುತ್ತಾರೆಂದು ತಿಳಿದರೆ, ಅಚ್ಚರಿಯಾಗುವುದು. ನಾಗಾ ಜನರ ಪ್ರಾರ್ಥನೆ, ಧಾರ್ಮಿಕ ವಿಚಾರಗಳ ಹಿನ್ನೆಲೆಯಲ್ಲಿ ಸಮಗ್ರ ಮಾನವ ಕುಲದ ಹಿತ ಬಯಸುವ ಮನೋದ್ದೇಶವಿದೆ

ಸರಳ ಜೀವಿಗಳಾದ ನಾಗಾ ಜನರು ಕ್ರೀಡಾ ಪ್ರೇಮಿಗಳು. ತಮ್ಮೊಡನೆ ಸಹಾನುಭೂತಿ ಹಾಗೂ ದಯಾ ದೃಷ್ಟಿಯಿಂದ ವ್ಯವಹರಿಸುವವರನ್ನು ಅವರು ಪ್ರಾಣಕ್ಕಿಂತ ಮಿಗಿಲಾಗಿ ಪ್ರೀತಿಸುತ್ತಾರೆ. ಬುದ್ಧಿಶಾಲಿಗಳೂ ಸಾಹಸಿಗಳೂ ಆದ ನಾಗಾ ಜನರು ಶ್ರಮಪ್ರಿಯರು. ಉನ್ನತ ಹುದ್ದೆಯಲ್ಲಿರುವ ನಾಗಾ ಜನರಾದರೂ ಒಂದಲ್ಲ ಸಮಯ ತಮ್ಮ ಹೂದೋಟ ಅಥವಾ ಜಮೀನುಗಳಲ್ಲಿ ದುಡಿಯುತ್ತಾರೆ. ಅತಿಥಿ ಸತ್ಕಾರ ಪ್ರಿಯರಾದ ನಾಗಾ ಜನರ ನರ್ತನಗಳು, ಜಾನಪದ ಗೀತೆಗಳು ಅವರ ದೃಷ್ಟಿಕೋನವನ್ನು, ಕಾರ್ಯ ಪ್ರವೃತ್ತಿಯನ್ನೂ ಪ್ರತಿಬಿಂಬಿಸುತ್ತವೆ.

ಹಿಂದಿನ ಕಾಲದಲ್ಲಿ ನಾಗಾಜನರ ಶಾಂತ ಜೀವನಕ್ಕೆ ಆಕ್ರಮಣಕಾರರಿಂದ ಗಂಡಾಂತರ ಬಂದಿರಬೇಕು. ಹಾಗಾಗಿಯೇ ಅವರು ನಿರಂತರ ಹೋರಾಟದ ಪರಿಸ್ಥಿತಿಯಲ್ಲಿಯೇ ಬಾಳುವಂತಾಯಿತು. ಗಂಡಸರು ಗ್ರಾಮ ರಕ್ಷಣೆಯಲ್ಲಿ ಸಮಯ ಕಳೆಯುತ್ತಿದ್ದುದರಿಂದ ಹೆಂಗಸರು ಗದ್ದೆ-ಕಾಡುಗಳಲ್ಲಿ ದುಡಿಯುವುದು ಅಗತ್ಯವಾಯಿತು. ಇದರಿಂದ ನಾಗಾ ಹೆಮ್ಮಕ್ಕಳೂ ಪರಿಶ್ರಮ ಪ್ರಿಯರಾದರು. ಇವರು ದೃಢಕಾಯರು; ಆಕರ್ಷಕ ವ್ಯಕ್ತಿತ್ವವುಳ್ಳವರು. ಮಕ್ಕಳನ್ನು ಬೆನ್ನಲ್ಲಿ ಕಟ್ಟಿ ತಲೆಯಲ್ಲಿ ಬುಟ್ಟಿ ಹೊತ್ತು ಭತ್ತದ ಗದ್ದೆ ಇಲ್ಲವೇ ಅರಣ್ಯಗಳಿಗೆ ಹೋಗುವ ನಾಗಾ ಸ್ತ್ರೀಯರ ಹೃದಯಸ್ಪರ್ಶಿ ದೃಶ್ಯ ನಮ್ಮ ಕಣ್ಮುಂದೆ ನಿಲ್ಲುತ್ತದೆ.

ಹೊಸ ರಾಜ್ಯೋದಯದಿಂದ ನಾಗಾಲ್ಯಾಂಡಿನಲ್ಲಿ ನವ ಮನ್ವಂತರ ಪ್ರಾರಂಭವಾಗಿದೆ. ನಾಗಾ ಜನರಲ್ಲಿ ಸ್ವಾಭಾವಿಕವಾಗಿದ್ದ ದ್ವೇಷಭಾವನೆಯು ಈಗಾಗಲೇ ದೂರವಾಗಿದೆ; ಅದರ ಸ್ಥಾನದಲ್ಲಿ ಸೌಹಾರ್ದ—ವಿಶ್ವಾಸಗಳು ನೆಲೆ ನಿಲ್ಲುವುವು. ಹಿಂದಿನಂತೆ ಇಂದವರು ದುರ್ಗಮ ಘಾಟಿಗಳಲ್ಲಿ ಪ್ರತ್ಯೇಕ ಜೀವನ ನಡೆಸಬೇಕಾಗಿಲ್ಲ.

ಭಾರತದ ಉಳಿದ ರಾಜ್ಯಗಳ ಸ್ಥಾನಮಾನವನ್ನು ಪಡೆದ ನಾಗಾಲ್ಯಾಂಡಿನ ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸುವ ಒಂಭತ್ತು ವರ್ಷಗಳ ಯೋಜನೆ ಈಗಾಗಲೇ ಸಿದ್ಧವಾಗಿದೆ. ಕುಡಿಯುವ ನೀರಿನ ಪೂರೈಕೆ, ಸರ್ವ ಜೀವನ ಸೌಕರ್ಯಗಳ ಒದಗಣೆ ಅಲ್ಲಿ ಆಗಲಿದೆ.

ವಿದ್ಯಾಭ್ಯಾಸದಲ್ಲಿ ಬಹಳ ಹಿಂದುಳಿದ ನಾಗಾ ಜನರನ್ನು ಅಕ್ಷರಸ್ಥರನ್ನಾಗಿಸಲು ಶಾಲೆ—ಕಾಲೇಜುಗಳು ಸ್ಥಾಪಿತವಾಗುತ್ತವೆ. ಇವೆಲ್ಲವುಗಳ ಸಹಾಯದಿಂದ ಇವರು ತ್ವರಿತಗತಿಯಲ್ಲಿ ಪ್ರಗತಿ ಸಾಧಿಸುವರೆಂದು ನಂಬಬಹುದು. ತಮಗೆ ನೀಡಲಾದ ಅವಕಾಶಗಳ ಪ್ರಯೋಜನ ಪಡೆಯುವುದರಲ್ಲಿ ಆಸಕ್ತರಾದ ಈ ಪ್ರಜೆಗಳು ತಮ್ಮದೇ ರಾಜ್ಯದಲ್ಲಿ ಆದರ್ಶ ನಾಗರಿಕರಾಗುವರೆಂದು ವಿಶ್ವಾಸವಿಡಬಹುದು

ಲಿಂಡನ್ ಬಿ. ಜಾನ್ಸನ್

(೩ನೇ ಪುಟದಿಂದ)

ಖಂಡರಾಗಿದ್ದರು. ಮಸೂದೆ ಮಂಜೂರಾಗುವ ವರೆಗೆ ಅವರು ೩೭ ದಿನಗಳ ವರೆಗೆ ಹಗಲೂ ರಾತ್ರಿಯೂ ಸೆನೆಟಿನಲ್ಲಿದ್ದರು, ತಮ್ಮ ಆಫೀಸಿನಲ್ಲೇ ನಿದ್ರೆ ಮಾಡುತ್ತಿದ್ದರು.

ಜಾನ್ಸನ್‌ರವರು ಅಧ್ಯಕ್ಷ ಕೆನೆಡಿಯವರ ಸಮಾನ ಉದ್ಯೋಗಾವಕಾಶಗಳ ಸಮಿತಿಯ ಚೇರ್ಮನರಾಗಿದ್ದರು. ಅವರ ಉತ್ಸಾಹೀ ನೇತೃತ್ವದಲ್ಲಿ, ಮುಂಚೆ ಉದ್ಯೋಗ ನಿರಾಕರಣೆಯಾಗಿದ್ದ ಅನೇಕ ನೀಗ್ರೋ ಜನರಿಗೆ ಉದ್ಯೋಗಗಳು ಲಭಿಸಿದವು. ಸಮಿತಿಯ ಚೇರ್ಮನರಾಗಿ ತಮ್ಮ ಪಾತ್ರವು "ಕಠಿನವಾಗಿತ್ತು, ಆದರೆ ತೃಪ್ತಿಕರವಾಗಿತ್ತು" ಎಂದು ೫೫ ವರ್ಷ ವಯಸ್ಸಿನ ಈ ಟೆಕ್ಸಸ್ ನಿವಾಸಿ ಹೇಳುತ್ತಾರೆ.

ಕಳೆದ ಜುಲೈಯಲ್ಲಿ ಫ್ಲಾರಿಡಾದ ಮಿಯಾಮಿಯಲ್ಲಿ ಅಮೇರಿಕದ ೫೦ ಸಂಸ್ಥಾನಗಳ ಗವರ್ನರರ ಸಭೆಯಲ್ಲಿ ಭಾಷಣ ಮಾಡುತ್ತ ಜಾನ್ಸನರವರು, ಜನಾಂಗಿಕ ಭೇದಾಚರಣೆಯು ರಾಷ್ಟ್ರೀಯ ಸಮಸ್ಯೆ, ಅದನ್ನೀಗ ಪರಿಹರಿಸಬೇಕಾದ ಅವಶ್ಯಕತೆಯನ್ನು ಎತ್ತಿ ಹೇಳಿದರು.

ಅಧ್ಯಕ್ಷ ಜಾನ್ ಕೆನೆಡಿಯವರು ಅಮೇರಿಕನ್ನರ ಹಾಗೂ ಲೋಕದ ನಾಗರಿಕರ ಮುಂದಿರಿಸಿದ ಅಮರ ಸಿದ್ಧಾಂತಗಳನ್ನೇ ಅಧ್ಯಕ್ಷ ಲಿಂಡನ್ ಜಾನ್ಸನ್ನರೂ ಅನುಸರಿಸಿರುವರು, [illegible] ಇದರಿಂದ ಪ್ರಭಾವಶಾಲೀ ಅಧ್ಯಕ್ಷರಾಗುವರು ಎಂದು ಜನ ಹಾರೈಸುತ್ತದೆ.

ವಿದ್ಯಾರ್ಥಿಗಳ 2 ಕೈಪಿಡಿಗಳು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ಡಿ|| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0 =25 NP ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರತಿಗಳು— ಮಂಗಳೂರಲ್ಲಿ ಶ್ರೀನಿವಾಸ್ ಬ್ರದರ್ಸ್, ಸ್ಕೂಲ್ ಬುಕ್ ಕೊ, ಕೆನರಾ ಕಾಲೇಜ್ ಬುಕ್ ಕೊ' ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್ ಇವರಲ್ಲಿಯೂ, ಪುತ್ತೂರಲ್ಲಿ ಪೊಪ್ಯುಲರ್ ನ್ಯೂಸ್ ಏಜನ್ಸಿಯಲ್ಲಿಯೂ ದೊರೆಯುತ್ತವೆ.

ಸೂಚನೆ

'ನವಯುಗ"ದಲ್ಲಿ ಪ್ರಕಟನೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಲು ತಾವು ಸ್ಕೇಪಿನ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಸುವಾಚ್ಯವಾಗಿಯೂ ಇರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ. ನ.

ಪ್ರಧಾನಿ ನೆಹರುಗಳಿಂದ

ಭ್ರಷ್ಟಾಚಾರಕ್ಕೆ ಪ್ರೋತ್ಸಾಹನವೆ?

ಭಾರತದ ಉನ್ನತ ಪದವಿಯಲ್ಲಿರುವ ಪ್ರಧಾನಿ ನೆಹರೂರವರು ಇತ್ತೀಚೆಗೆ ಕೈರಾನರ ಭ್ರಷ್ಟಾಚಾರ, ಸ್ವಜನ ಪಕ್ಷಪಾತಗಳ ಕುರಿತಾಡಿದ ಮಾತುಗಳು ಸಾರ್ವಜನಿಕ ಜೀವನದಲ್ಲಿ ಸತ್ಯಕ್ಕೆ ಬೆಲೆ ಸಿಕ್ಕಬೇಕೆಂದು ಬಯಸುವ ಪ್ರಜೆಗಳಿಗೆ ತೀವ್ರ ನಿರಾಶೆಯಾಗಿದೆ.

ಕಳೆದ ವರ್ಷ ಚೈನಾ ಭಾರತದ ಮೇಲೆ ಆಕ್ರಮಣ ಮಾಡಿದಾಗ ಆಧುನಿಕ ಆಯುಧಗಳ ಅಭಾವದಿಂದ ನಮ್ಮ ಸೈನ್ಯ ವೀರಾವೇಶದಿಂದ ಕಾದಾಡಿದರೂ ಸೋಲಬೇಕಾಯಿತು ಶ್ರೀ ಮೆನನ್ ರಕ್ಷಣಾ ಮಂತ್ರಿಯಾಗಿ ರಕ್ಷಣಾ ವ್ಯವಸ್ಥೆ ಸಾಕಷ್ಟು ಮಾಡದಿದ್ದುದರಿಂದ ಭಾರತ ಸೋಲಬೇಕಾಯಿತು. ಅವಮಾನವನ್ನು ತಡೆಯಲಾರದ ಜನತೆ ಒಕ್ಕೊರಲಿನಿಂದ ಮೆನನರನ್ನು ಹೊರದಬ್ಬಿರಿ ಎಂದು ಕೂಗಿದರೂ, ನೆಹರೂ ಕಿವುಡರಂತೆ ಮೊದಲು ವರ್ತಿಸಿದರು ಆದರೆ, ಮುಂದೆ ಜನಾಭಿಪ್ರಾಯವನ್ನು ಮನ್ನಿಸಲೇ ಬೇಕಾಯಿತು.

ಪಂಜಾಬಿನ ಕೈರಾನರ ಮೇಲಿನ ಆಪಾದನೆಗಳ ಸಂಖ್ಯೆ ಒಂದೆರಡಲ್ಲ. ಈ ಭ್ರಷ್ಟಾಚಾರಗಳನ್ನು ಕಾಂಗ್ರೆಸ್, ವಿರೋಧ ಪಕ್ಷದವರೆಲ್ಲ ಒಗ್ಗಟ್ಟಾಗಿ ಸೇರಿ ಪ್ರಧಾನಿಯವರ ಗಮನಕ್ಕೆ ತಂದರು. ಕೈರಾನರು ಗೂಂಡಾಗಳಿಂದ ತನ್ನ ಪಕ್ಷದ ಎಂ. ಎಲ್. ಎ ಶ್ರೀರಾಮ ಪ್ಯಾರರನ್ನು ಹೊಡೆದು ಜಖಂಗೊಳಿಸಿದರು. ಗೂಂಡಾಗಿರಿಯಿಂದ ತೀವ್ರ ಗಾಯಗೊಂಡ ಶ್ರೀ ಪ್ಯಾರರನ್ನು ಮಂಚದಲ್ಲಿ ಮಲಗಿಸಿ ನೆಹರೂರವರ ಹತ್ತಿರ ಎತ್ತಿಕೊಂಡು ಹೋಗಿ ತೋರಿಸಲಾಯಿತು ಆದರೆ, ಪರಿಣಾಮ ಕಾಣದೆ ಬೇಸತ್ತ ಜನತೆ ಕೈರಾನರ ಭ್ರಷ್ಟಾಚಾರಗಳ ಹೊರೆಯನ್ನು ನಮ್ಮ ರಾಷ್ಟ್ರಾಧ್ಯಕ್ಷರ ಸಮಕ್ಷಮಕ್ಕೆ ಹೊತ್ತು ತಂದು ಅದರೊಡನೆ ಕಳಕಳಿಕೆಯಿಂದ ಭಿನ್ನವಿಸಿಕೊಂಡರು. ನ್ಯಾಯಕ್ಕೆ ಹೆಸರಾಂತ ಶ್ರೀ ರಾಧಾಕೃಷ್ಣನ್ ಈ ಅನ್ಯಾಯಗಳ ವಿಚಾರದಲ್ಲಿ ಕೂಡಲೇ ಕ್ರಮ ಕೈಕೊಳ್ಳ ಬೇಕೆಂದು ಉಚ್ಚರಿಸಿ ಬಿಟ್ಟರು.

ಪ್ರಧಾನಿಯವರು ಒಂದು ಹೇಳಿಕೆಯನ್ನು ಹೊರಡಿಸಿ' ಕೈರಾನರ ವಿರುದ್ಧವಾದ ಆರೋಪಣೆಗಳನ್ನು ವಿಚಾರಿಸುವುದಕ್ಕೆ ಉಚ್ಚ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಾಧೀಶರನ್ನು ನೇಮಿಸಲಾಗಿದೆ. ವಿಚಾರಣೆ ಗುಪ್ತವಾಗಿ ನಡೆಯುವುದು. ಸಾರ್ವಜನಿಕರು ಈ ವಿಚಾರಣೆಯಲ್ಲಿ ಭಾಗವಹಿಸುವಂತಿಲ್ಲ. ಕೈರಾನರು ಭಂಗಾರದಂತಹ ಮನುಷ್ಯ. ಅವರಿಂದಲೇ ಪಂಜಾಬು ಬದುಕಿದೆ– ಕೈರಾನರು ಪಂಜಾಬು ರಾಜ್ಯವೇ ಆಗಿದ್ದಾರೆ. ಅವರನ್ನು ಮುಖ್ಯಮಂತ್ರಿ ಪಟ್ಟದಿಂದ ತೆಗೆದು ಹಾಕುವುದಕ್ಕೆ ರಾಜ್ಯಸೂತ್ರಗಳಲ್ಲಿ ವಿಧಿಯಿಲ್ಲ. ಹಾಗೆಯೇ ಮಾಡುವುದು ಉಚಿತವೂ ಅಲ್ಲ' ಎಂಬ ಇತ್ತ ಹಾವು ಸಾಯಲೂ ಬಾರದು ಅತ್ತ ಕೋಲು ಮುರಿಯಲೂ ಬಾರದು" ಎಂದರು. ಈ ಹೇಳಿಕೆಯಿಂದ ಜನರಿಗೆ ಬೇಸರವಾಗಿದೆ, ಈ ವಿಚಾರ ನಾವು ಸೂಕ್ಷ್ಮವಾಗಿ ಪರೀಕ್ಷಿಸ ಬೇಕು.

ಕೈರಾನರ ಅಪಾದನೆಗಳ ಪಟ್ಟಿ ಪ್ರಧಾನಿಗಳ ಕೈ ಸೇರಿದೆ. ಭ್ರಷ್ಟಾಚಾರಗಳ ನಿಷ್ಪಕ್ಷಪಾತವಾದ ವಿಚಾರಣೆ ನಡೆಯುವ ವಾತಾವರಣ ಕಲ್ಪಿಸಿಕೊಡ ಬೇಕೆಂಬಭಾವನೆ ಅವರಿಗಿರುತ್ತಿದ್ದರೆ ವಿಚಾರಣೆ ಮುಗಿಯುವವರೆಗೆ ಕೈರಾನರು ತಮ್ಮ ಮುಖ್ಯಮಂತ್ರಿ ಪದವಿಗೆ ರಾಜಿನಾಮೆ ಕೊಡಬೇಕೆಂದು ಕೇಳಿಕೊಳ್ಳ ಬಹುದಿತ್ತು. ಆ ವಿಚಾರಣೆಯಲ್ಲಿ ಕೈರಾನರನಿರ್ದೋಷಿತ್ವ ಸ್ಥಾಪಿತವಾಗುವುದಾದರೆ ಪುನಃ ಸ್ವಸ್ಥಾನಕ್ಕೆ ಕೈರಾನರು ಹಿಂದಿರುಗಿ ಬರಬಹುದಿತ್ತು. ಆಗ್ಗೆ ಕೈರಾನರ ಗೌರವವೂ ಹೆಚ್ಚುತ್ತಿತ್ತು. ಇಂತಹ ಯಾವ ಪ್ರಯತ್ನವೂ ನಡೆಯಲಿಲ್ಲ. ಆದರ ಬದಲಾಗಿ ಹಲವು ಉತ್ಪ್ರೇಕ್ಷೆಗಳನ್ನು ಉಪಯೋಗಿಸಿ ಕೈರಾನರನ್ನು ನೆಹರೂ ಆಕಾಶಕ್ಕೆ ಏರಿಸಿ ಬಿಟ್ಟಿದ್ದಾರೆ. ಇಂತಹ ಸನ್ನಿವೇಶಗಳಲ್ಲಿ ವಿಚಾರಣೆ ನಡೆದಲ್ಲಿ ಸತ್ಯಸ್ಥಿತಿ ಹೊರ ಬರುವುದು ಅಸಾಧ್ಯ

ಮಹಾತ್ಮರ ಸಮಾಧಿಯ ಮುಂದೆ ನಿಂತು ಶ್ರದ್ಧಾಂಜಲಿಯನ್ನು ಸಮರ್ಪಿಸುವ ನಮ್ಮ ಧುರೀಣರು ಅವರ ನ್ಯಾಯ ಬುದ್ಧಿಗೂ, ಸಮಾಧಿಯನ್ನು ಸ್ಥಾಪಿಸಿದ್ದಾರೆಯೆ? ಗಾಂಧೀಯವರೊಡನೆ ಅವರ ನ್ಯಾಯ ಬುದ್ಧಿಯೂ ಕಣ್ಮರೆಯಾಗಿದೆಯೆ? ಎನ್ನುವಂತಹ ಅಭಿಪ್ರಾಯಕ್ಕೆ ಎಡೆಗೊಡುವ ಪಂಡಿತ ನೆಹರುಗಳ ಧೋರಣೆಯನ್ನು ವಿರೋಧ ಪಕ್ಷೀಯರು ಮಾತ್ರವಲ್ಲ ಕಾಂಗ್ರೆಸ್‌ನೊಳಗಣ ಹಲವಾರು ಮೆಚ್ಚುವಂತಿಲ್ಲ.

ಈ ಘಟನೆಗಳಿಂದ ಶ್ರೀ ನೆಹರೂರವರ ಧವಳ ಕೀರ್ತಿಗೆ ಕಪ್ಪು ಚುಕ್ಕಿಗಳು ಬಿದ್ದಂತಾಗಿವೆ. ಕಳೆದ ಕೆಲವು ವರ್ಷಗಳಿಂದ ಹೆಚ್ಚು ಹೆಚ್ಚಾಗಿ ಇಂತಹ ಸನ್ನಿವೇಶಗಳು ನಡೆಯುತ್ತಿದ್ದು ನೆಹರೂ ಪಡೆದ ಅಜರಾಮರ ಕೀರ್ತಿಯ ಶಿಖರ ಕಂಪಿಸಲಾರಂಭಿಸಿದೆ. ನೆಹರೂರವರಮೇಲೆ ಹೆಚ್ಚಿನ ಆದರ ಗೌರವಗಳಿರುವುದರಿಂದಲೇ ಈ ಮೇಲಿನ ಮಾತಗಳು ಸ್ವಲ್ಪ ಖಾರವಾದರೂ ನಾನು ಬರೆಯುತ್ತಿದ್ದೇನೆ. ಅವರು ರಾಷ್ಟ್ರಕ್ಕೋಸ್ಕರ ಪಟ್ಟ ಶ್ರಮ, ನಿಸ್ವಾರ್ಥ ಸೇವೆಯನ್ನು ಯಾರೂ ಅಲ್ಲಗಳೆಯುವಂತಿಲ್ಲ. ಇಂದು ಅವರ ಶ್ರೇಷ್ಟ ಹೆಸರು ಭ್ರಷ್ಟಾಚಾರಿ, ಲಾಭಪಡುವ ರಾಷ್ಟ್ರದ್ರೋಹಿ, ಲಂಚಕೋರರನ್ನು ರಕ್ಷಿಸುವ ಸಾಧನವಾಗಿರಬಾರದು.

—ಶಿಕಾರ್ಪಿ ವಿಲಿಯಂ ಪಿಂಟೊ.
ಬಿ. ಎ., ಎಲ್‌ಎಲ್. ಬಿ., ಉಡುಪಿ.

ಕಾಲ ಕೂಡಿಬಂದಾಗ....

(೨ನೇ ಪುಟದಿಂದ)

"ನನಗೆ ಬೇಡುವುದನ್ನು ಬಿಟ್ಟರೆ ಬೇರಾವ ವೃತ್ತಿಯು ತಿಳಿಯದು".

"ಸರಿ. ಬೇಡುವುದಕ್ಕೆ ಚೆನ್ನಾಗಿಬಲ್ಲೆ ತಾನೆ?

"............"

"ಸಾಧುಗಳೆಂದು, ಮೈಗಳ್ಳತನದಿಂದ ಬೇರೆ ತಿನ್ನುವುದು ಸರಿಯಾದ ವೃತ್ತಿ ಯಾಕೆ ನಿಮ್ಮನ್ನು ನೋರಬೇಕು? ಬಾಗಿಲಿಗೆ ಬರುವಾಗಲೇ ಕೊಡುತ್ತಿರುವ ನಮ್ಮ ಜನರನ್ನು ದ್ವೇಷಿಸಬೇಕು. ಇಂತಹವರಿಗೆ ಧರ್ಮ ಮಾಡಿದರೆ, ತಮಗೆ ನೇರವಾಗಿ ಸ್ವರ್ಗ ಸಿಗುವುದೆಂದು ಪ್ರಾಂಶಃ ಅವರು ಕಲ್ಪಿಸಿ ಕೊಂಡಿರಬೇಕು. ನಿಮ್ಮಲ್ಲಿ ಸಾಧುಗಳೆಂದು ಹೇಳಿಕೊಂಡು, ತಿರುಗುವವರೆಲ್ಲರೂ ಸಾಧುಗಳಲ್ಲ. ಭಿಕ್ಷುಕರಲ್ಲ. ಸಾಧುಗಳಂತೆ ವೇಷ ಹಾಕಿಕೊಂಡು, ದಾರಿಯಲ್ಲಿ ಹೋಗುವವರ ಮೇಲೆ ಧಾಳಿ ಮಾಡುವುದಕ್ಕಾಗಿ, ಕೊಲೆ ಮಾಡುವುದಕ್ಕಾಗಿ ಅದೆಷ್ಟು ಮಂದಿ ಇಂದು ಇದ್ದಾರೆ. ಅದರಿಂದ ಮೈಮರೆಸಿ ಕೊಳ್ಳುವುದಕ್ಕಾಗಿ ಈ ಕಪಟ ವೇಷವಲ್ಲವೆ?"

ಹೀಗೆಯೇ ಏನೇನೋ ಆವೇಶಪೂರಿತನಾಗಿ ಹೇಳುವುದರಲ್ಲಿದ್ದ. ಅಷ್ಟರಲ್ಲಿ ಕಾಂತಳು ಬಂದು, "ಯಾಕೆ ಅವರನ್ನು ವಿನಾ ಕಾರಣ ದೂಷಿಸುತ್ತೀರಿ. ತಪ್ಪೆಲ್ಲಾ ನನ್ನದು" ಎಂದಳು, ಸರಿ, ಆ ಸಿಟ್ಟು ಇವಳ ಮೇಲೆ ತಿರುಗಿತು. ಸರಿಯಾಗಿ ಹೆಂಡತಿಗೆ ಪೆಟ್ಟನ್ನು ಕೊಟ್ಟು ಒಳಗೆ ತಳ್ಳಿದ. ಇಂತಹ ದೃಶ್ಯವನ್ನು ಕಾಣಲಾರದೇ, ನಿಂತೇ ಇದ್ದ ಆ ಸನ್ಯಾಸಿ, "ಅಯ್ಯೋ! ದಯಮಾಡಿ ಅಮ್ಮನವರಿಗೆ ಹೊಡೆಯಬೇಡಿರಿ. ಈ ರೀತಿಯಾಗಿ ಅವರಿಗೆ ಹೊಡೆಯಲು ಕಾರಣ ನಾನು ನಿಮ್ಮಲ್ಲಿಗೆ ತಿರುಪೆಯೆತ್ತಲು ಬರುವುದು ಅಲ್ಲವೆ? ಇನ್ನೆಂದಿಗೂ ನಿಮ್ಮ ಮನೆಗೆ ಬರಲಾರೆ, ಇದು ಸತ್ಯಂ. ಕಾಲ ಕೂಡಿಬಂದರೆ, ನಾನೆಷ್ಟು ನಿಮ್ಮಿಂದ ಬೇಡಿದ್ದೇನೋ, ಅದಕ್ಕಿಂತಲೂ ಹೆಚ್ಚಾಗಿ ಕೊಡಬಲ್ಲೆ"ನೆಂದು ಹೇಳಿ ನಿಲ್ಲಲಾರದೇ ಹೊರಟು ಹೋದನು.

"ಉಹೂ! ನನ್ನಿಂದ ಪಡೆದುದಕ್ಕಿಂತಲೂ ಕಾಲ ಕೂಡಿಬಂದರೆ ಹೆಚ್ಚಾಗಿ ಕೊಡಬಲ್ಲನಂತೆ"—"ಏನೋ ಕೊಡುತ್ತಾನೋ ಈ ಸನ್ಯಾಸಿ—ಭಿಕ್ಷುಕ!" ಎಂದು ಕನಲ್ಲಿಯೋ ಉದಾಸೀನದ ಉದ್ಗಾರ ಗೈದ ಮಾಧವ

ಅಂದಿನ ವಾತಾವರಣವೇ ಬದಲಾಯಿತು, ದಿನವಿಡೀ ಕಾಂತಳೂ, ಪರಿಮಳಳೂ ಊಟವನ್ನೇ ಮಾಡಲಿಲ್ಲ. ತಾನೇ ಬಡಿಸಿಕೊಂಡು ಮಾಧವ ಊಟ ಮಾಡಿ ಆಫೀಸಿಗತ್ತ ಕಾಲು ತಿರುಗಿಸಿದ. ಅಲ್ಲಿಯೂ ಈ ವಿಚಾರ ಲಹರಿಯು ಬರುತ್ತಿತ್ತು.

ಮನೆಯಲ್ಲಿ ಪರಿಮಳಗೆ ಸೌಖ್ಯವಿಲ್ಲವೆಂದು ಆಳು ಬಂದು ತಿಳಿಸಿದ, ತಲೆ ತಿರುಗಿದಂತೆ ಆಯಿತು, ಆಫೀಸಿನಿಂದ ಒಂದೊಂದೇ ಮೆಟ್ಟಿಲನ್ನು ಇಳಿಯುವಾಗ ಅಂದಿನ ಒಂದೊಂದೇ ಘಟನೆಯು ನೆನಪು ಆತನ ತಲೆಯಲ್ಲಿ ಸುರುಳಿಯಂತೆ ಬಂದು ಮಾಯವಾಗುತ್ತಿತ್ತು. ಡಾಕ್ಟರರನ್ನು ಕರೆದುಕೊಂಡು ಬಂದ, ಡಾಕ್ಟರರು ಪರೀಕ್ಷಿಸಿದರು. ಕಾಹಿಲೆಯು ಗೊತ್ತಾಗದು. ಜ್ವರವು ಒಂದೇ ಸವನೆ ಏರುತ್ತಲೇ ಇತ್ತು. ಡಾಕ್ಟರರು ಅಂದಿನ ಪ್ರಕರಣದ ವಿವರವನ್ನು ತಿಳಿದ ನಂತರ "ಪರಿಮಳಳಿಗೆ ಮನೋ ವ್ಯಾಧಿ ಆ ಸನ್ಯಾಸಿ ಬಂದರೆ ಪುನಃ ಎಲ್ಲಾ ಸರಿ ಹೋಗುತ್ತೆ" ಎಂದು ಹೇಳಿ ಹೊರಟು ಹೋದರು.

ಮಾಧವನಿಗೆ ತನ್ನಿಂದ ನಡೆದ ಅಪರಾಧದ ಸಂಪೂರ್ಣ ಅರ್ಥವಾಯಿತು.. ಸನ್ಯಾಸಿಯನ್ನು ಹುಡುಕಲು ಕಾರನ್ನು ಒಂದೇ ಸವನೆ ದಾರಿಯಲ್ಲಿ ಓಡಿಸುತ್ತಿದ್ದ. "ಕಾಲ ಕೂಡಿ ಬಂದಾಗ ನಿನ್ನಿಂದ ಪಡೆದುದಕ್ಕಿಂತಲೂ ಹೆಚ್ಚು ಕೊಡಬಲ್ಲೆ" ಎಂಬ ಸನ್ಯಾಸಿಯ ಅಂತಿಮ ಉದ್ಗಾರವೊಂದೇ ಆತನ ಕಿವಿಗಳಲ್ಲಿ ಪ್ರತಿಧ್ವನಿಸುತಿತ್ತು.

—ಎಚ್. ಮಂಜುನಾಥ ಅಡಿಗ.
ಉಡುಪಿ.

ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ.

14 CT ಚಿನ್ನದ ಆಭರಣಗಳಲ್ಲಿ 58⅓% ಶುದ್ಧ ಪುತ್ತಳಿ ಚಿನ್ನ ಇರುತ್ತದೆ

ಬೇಡದಿದ್ದಲ್ಲಿ 1 ರೂ. ಕಮ್ಮಿಯಲ್ಲಿ ಯಾವಾಗಲೂ ಬಜಾರು ಧಾರಣೆಗೆ ಪಡಕೊಳ್ಳುವ ಭರವಸೆ ಕೊಡುತ್ತೇವೆ.

ವಿ. ಸೂ: ಹಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡಕೊಳ್ಳುವರೆ ಸರಕಾರದ ಲೈಸನ್ಸ್ ಸಿಕ್ಕಿರುತ್ತದೆ.

ಮದುವೆ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡಕೊಂಡು ಖಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.

ಶ್ರೀ ಕೃಷ್ಣಾ ಜ್ಯುವೆಲರಿ ಮಾರ್ಟ್

ತೆಂಕಪೇಟೆ — ಉಡುಪಿ.

ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.

ಫೋನ್ ನಂಬ್ರ: 66

ಪ್ರೊ. ಕು ಹರಿದಾಸ ಭಟ್ಟ, ಎಂ. ಎ, ಅವರ ನವೀನ ಪುಸ್ತಕಗಳು ರೂ. ಪ.

ನೆಹರುಗಳಿನ ಕಗ್ಗತ್ತಲೆ	2=50
ಸ್ವಾತಂತ್ರ್ಯ ಮತ್ತು ಸಂಸ್ಕೃತಿ	2=00
ಘಂಟೆವಾರಾ	2=00
ವಿಶ್ವದ ಸಂಪತ್ತು	2=00
ಅಮೆರಿಕದ ಆರು ಕತೆಗಳು	1=75
ವರ್ತಮಾನಕಾಲದ	
ನಾಲ್ವರು ಮಹಾನುಭಾವರು	0=31
ಯುಗವಾಣಿ	0=50
ಕಾಲವೇ ಬದಲಾಗಿದೆ	0=31
ಪುಸ್ತಕ ಪುರಾಣ	0=25
ಮನೆಯೊಳಗಿನ ಮಹಾಜೀವಿಗಳು	0=37

ಅಂಚೆವೆಚ್ಚ ಪ್ರತ್ಯೇಕ. ವಿವರವಾದ ಕೆಟಲಾಗಿಗೆ 10 ನ. ಪೈ. ಸ್ಟಾಂಪಿನೊಂದಿಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ

REGD. No. B. G. 176
LICENCE No. 31
Licensed to Post without Prepayment

ಗೋಪ ರಾಜ್ಯದಲ್ಲಿ

ದ್ವಿವಾರ್ಷಿಕ ಯೋಜನೆಗಳು

"ಕೇಳಿದೆಯೇನೇ ಸುದ್ದಿಯನ್ನ...."

"ಏನಂತೆ? ಯಾವ ಸುದ್ದಿಯಪ್ಪ ಅಂತದ್ದು?"

"ನೋಡ್ರು, ನಮ್ಮ ನೆಹರು ಭ್ರಷ್ಟಾಚಾರದ ವಿರುದ್ಧ ಉಗ್ರಕ್ರಮ ಕೈಗೊಳ್ಳೋ ನಿರ್ಧಾರಕ್ಕೆ ಬಂದಿದ್ದಾರಂತೆ...."

"ಅದೇ ತಾನೆ? ಮೊನ್ನೆ ಎರಡು ದಿನಗಳಿಂದ ರೇಡಿಯೋ ಅದನ್ನೇ ಮೊಳಗು ಹಾಕುತ್ತ ಇದೆ."

"ಅಷ್ಟು ಮಾತ್ರವಲ್ಲ; ಕೇಂದ್ರ ಗೃಹ ಮಂತ್ರಿ ಗುಲ್ಜಾರೀಲಾಲ ನಂದಾ ಅವರೂ ಇನ್ನೆರಡು ವರ್ಷಗಳಲ್ಲಿ ಅದರ ನಿರ್ಮೂಲನ ಮಾಡುವ ಬಗ್ಗೆ...."

"ಸರಿ, ತಿಳೀತು ಬಿಡಿ. ನಂದಾ ಅಂದ್ರೆ ಹಿಂದೆ ಯೋಜನಾ ಮಂತ್ರಿಯಾಗಿದ್ದವರಲ್ಲಾ...."

"ಹೌದೌದು, ಅವರೇ..."

"ಸರಿಹೋಯ್ತು ಬಿಡಿ. ಆ ಖಾತೆ ಅವ್ರ ಕೈತಪ್ಪಿ ಹೋದ್ಮೇಲೆ, ಏನಾದ್ರೂ ಯೋಜನೆ ಬೇಕಾಯ್ತಲ್ಲ...ಅದಕ್ಕೆಂದೇ ಈಗ ಎರಡೆರಡು ವರ್ಷಗಳ ಯೋಜನೆ ಶುರು ಮಾಡೋ ಆಲೋಚನೆ ಇರ್ಬಹುದೂನ್ನಿ."

"ಅಂದ್ರೆ, ನೀನು ಹೇಳೋದಾದ್ರೂ ಏನೂಂತ ಅರ್ಥವೇ ಆಗೋದಿಲ್ವಲ್ಲಾ?"

"ನಿಮ್ಗೆ ಅರ್ಥವಾಗೋದಂತೂ ಹೇಗೆ? ಹೇಳಿ. ನೆಹ್ರು ಹಾಗಂತಾರೆ, ನೆಹ್ರೂ ಹೀಗಂತಾರೇಂತ ನೆಹ್ರು ನಾಮಜಪ ಮಾಡೋದ್ರಿಂದ್ಲೆ ತೃಪ್ತಿಪಡೋ ಉದಾರ ಮನಸ್ಸಿನವರ್ರಿಗೆ ನನ್ನ ಮಾತು ಅರ್ಥವಾಗೋದಾದ್ರೂ ಹೇಗೇಂತ?"

"ಏನೇ ಅದು ನೀನನ್ನೋದು? ನೆಹ್ರು ಮಾತನ್ನ ಲೋಕವೇ ಗೌರವಿಸುವಾಗ..."

"ಅದು ಸರೀನ್ನಿ. ಆದ್ರೂ ನಿಮ್ಮ ನೆಹ್ರು ಇನ್ನು ಮಾತಾಡೋದನ್ನ ಕಡಿಮೆ ಮಾಡ್ಬೇಕು."

"ಏನೇ ಅಂತಾದ್ದು ಅವರೆಂದದ್ದು?"

"ನೋಡಿ, ಕೈರೋನರ ಬಗ್ಗೆ ಅವರು ಹೇಳಿದ ಮಾತು ಜನಂಗೆ ತುಸು ಚಿಂತೆ ತಂದಿದೆ ನೋಡಿ"

"ಅವರೇನಂತಂದ್ರೂಂತೆ. ಕೈರಾನರ ವಿಚಾರವನ್ನ ತೀರ್ಮಾನಕ್ಕೆ ಬಿಟ್ಟುಕೊಟ್ರು, ಆಗ ಏನೋ ಸ್ವಲ್ಪ ಅಂದ್ರು...."

"ಅದೇ ನೋಡಿ ಆಗ್ಲಿಲ್ಲಾಂತ ಆ ನಮ್ಮ ಸೀನು ಹೇಳ್ತಿದ್ದ..."

"ಬಿಡೇ ನಿನ್ನ ಸೀನೂನ. ಯಾವ ಯಾವದೋ ಪೇಪರಿನಲ್ಲಿ ಏನೇನೋ ಓದ್ಬಿಟ್ಟು ತಾನೇ ಬುದ್ಧಿವಂತಾಂತ ಪಿತ್ತ ನೆತ್ತಿಗೇರಿದೆ."

"ಪಾಪ, ಅವನನ್ನ ಯಾಕೆ ಬಯ್ತೀರಿ ಮತ್ತೆ? ಏನೋ ಬಡಪಾಯಿ ಮಗಾಂತಂದ್ರೆ ಎಲ್ರಿಗೂ ಸಸಾರವಲ್ವೆ?"

"ಅದೆಲ್ಲಾ ಬಿಡು ಮತ್ತೆ. ನೆಹ್ರೂ ಸರ್ಕಾರ ಕಂಡಿತಕ್ಕೂ ಈ ಬಾರಿ ಲಂಚ ನಿರ್ಮೂಲನ ಮಾಡಿಯೇ ಮಾಡುತ್ತೇಂತ ನನಗಂತೂ ವಿಶ್ವಾಸವಿದೆ."

"ಅಲ್ಲಾ, ನಿಮ್ಗೆ ವಿಶ್ವಾಸವಿರ್ದ್ದೆ ಮತ್ತೆ ಇರೋದಾದ್ರೂ ಯಾರಿಗೇಂತ?"

"ಅಂದ್ರೆ ನಿನ್ಗೆ ಇಲ್ಲಾನ್ನು..."

"ನೋಡಿ, ಸತ್ಯ ಹೇಳ್ಬೇಕಿದ್ರೆ ನನಗೆ ಮಂತ್ರಿಗಳ ಮಾತಿನಲ್ಲಿ ವಿಶ್ವಾಸ ಇಲ್ಲ.."

"ಅಂದ್ರೆ, ನೀನು ನಿರಾಶಾವಾದೀಂತನ್ನು."

"ಅಯ್ಯೊ, ನಾನು ಹಾಗೆನ್ನಲಿಲ್ಲ. ಆದ್ರೆ ಆಶೇನೂ ಹುಟ್ಟೋದಿಲ್ಲ."

"ನೋಡು, ನಂದಾ ಅವರು ಈ ಬಾರಿ ದೃಢ ಪ್ರತಿಜ್ಞೆ ಮಾಡಿದ್ದಾರೆ. ಎರಡು ವರ್ಷಗಳೊಳಗೆ ಭ್ರಷ್ಟಾಚಾರವನ್ನು ಸಮಾಧಾನಕರವಾಗಿ ನಿರ್ಮೂಲನ ಮಾಡಬಹುದೆಂದು ಆಶೆ ತಾಳಿದ್ದಾರೆ."

"ಸದ್ಯ ಅಷ್ಟೇ ಸಮಾಧಾನ."

"ಯಾಕೆ? ಏನಾಯ್ತು?"

"ಅಲ್ಲಾ, ಈಗ ಅದು ಅಸಮಾಧಾನಕರವಾಗಿ ಬೆಳೀತಿದೇಂತಾದ್ರೂ ಅವ್ರಿಗೆ ಗೊತ್ತಾಯ್ತಲ್ಲಾಂತ."

"ಇದಕ್ಕಾಗಿ ಜಾಗ್ರತಾ ಸಮಿತಿಯೊಂದನ್ನು ನೇಮಿಸುತ್ತಾರಂತೆ."

"ಇದನ್ನು ಜಾಗ್ರತಗೊಳಿಸಲು ನಂದಾರೇ ಜಾಗ್ರತವಾಗ ಬೇಕೋ ಅಥವಾ ಪ್ರಧಾನಿ ನೆಹರೂರವರೇ...."

"ನಾಕು ಬಿಡೇ, ಸ್ವಲ್ಪ ಹೇಳುವುದನ್ನು ಕೇಳು."

"ಆಯ್ತಪ್ಪ ಆಯ್ತು, ಏನೇನು ಹೇಳ್ಬೇಕೂ ಎಲ್ಲಾ ಹೇಳ್ಬಿಡಿ."

"ಅಷ್ಟೊಂದು ಸಿಟ್ಟು ಬಂತಲ್ಲಾ ನಿನಗೆ? ಎಲ್ಲಿ, ಸ್ವಲ್ಪ ಮುಖ ಎತ್ತೂಂಡೆ....ಎತ್ತೆ.... ನೋಡೋಣ, ಸಿಟ್ಟುಗೊಂಡ ಮುಖ ಹೇಗಿರುತ್ತೇಂತ."

"ನಾಕು ಬಿಡಿ ನಿಮ್ಮ...ನಿಮ್ಗೊಂದು ಯಾವಾಗ್ಲೂ ಹೀಗೇನೆ."

"ಹ್ಞಾಂ....ಹಾಗೆ....ಅಬ್ಬಬ್ಬ....ಭತ್ತ ಎಸೆದ್ರೆ, ಅರಳು ಆಗಿ ಬಿಡ್ತಿತ್ತು."

"ಎಸೆದು ಬಿಡಿ ಮತ್ತೆ...'

"ಎಸೀತಿದ್ದೆ....ಆದ್ರೆ...ಅರಳನ್ನು ಏನು ಮಾಡೋದಂತ. ಉತ್ಥಾನ ದ್ವಾದಶಿ ಆಗ್ಲೇ ಕಳ್ದು ಹೋಯ್ತು...."

"ಮುಗೀತಾ ಹೇಳಿ, ನಿಮ್ಮ ಮಾತು.."

"ಹೌದು, ನೋಡು, ಆಡಳಿತಾತ್ಮಕ ಸುಧಾರಣೆಯ ಶಾಖೆಯೊಂದನ್ನು ನಿರ್ಮಿಸುತ್ತಾರಂತೆ. ಕಾಗದ ಪತ್ರಗಳನ್ನು ಮತ್ತು ವ್ಯಕ್ತಿಗಳನ್ನು ಮುನ್ಸೂಚನೆಯಿಲ್ಲದೆ ತಪಾಸಣೆ ಮಾಡುವ ಸಲಹೆಯೊಂದೂ ಮುಂದಿದೆಯಂತೆ"

"ಅಷ್ಟು ಮಾತ್ರವಲ್ಲ ನೋಡಿ, ಹೃದಯವನ್ನು ಪರಿವರ್ತಿಸುವ ಮೂಲಕ ದೇಶದಲ್ಲಿ ಸಾರ್ವತ್ರಿಕ ಆಂದೋಲನ ಪ್ರಾರಂಭಿಸುವರಂತೆ. ಎಂಥಾ ಆಂದೋಲನವೋ...."

"ಅದನ್ನು ನೀನೂ ತಿಳಿದು ಕೊಂಡಿದ್ದೀಯೂ ಮತ್ತೆ? ಎಷ್ಟಾದ್ರೂ...."

"ಶುರುವಾಯ್ತು ನಿಮ್ಮದೊಂದು...."

"ಹಾಗಲ್ಲ ಕಣೇ, ನೀನು ಹೇಳ್ತಿದ್ದೆಯಲ್ಲ....ಲಂಚಾಸುರನ ಹಾವಳಿ ಹೆಚ್ಚಿದೆ; ಇದನ್ನ ತಡೆಯೋಕೆ ಸರ್ಕಾರ ಏನು ಕ್ರಮ ಕೈಗೊಂಡಿದೇಂತ. ಅದಕ್ಕೇ ಈ ಹೊಸ ಸುದ್ದಿಯನ್ನ ನಿನಗೆ....'

"...ತಿಳಿಸಿದ್ದು ಅಲ್ವೆ? ಇದನ್ನೆಲ್ಲಾ ರೇಡಿಯೋ ಹೇಳಿ ಆಗಿದೆ. ಬೇರೇನಾದ್ರೂ ಇದ್ರೆ ಹೇಳಿ.'

"ಅಂತೂ ಇವತ್ತು ಸುಮ್ನೆ ಮಾತಿಗೆ ಕುಳಿತು ಹೊತ್ತು ಹಾಳಾಯ್ತೂನ್ನು ನಿನ್ಗೆ ಗೊತ್ತಿರೋ ವಿಚಾರವನ್ನು ಮೊದ್ಲೇ ಹೇಳುತ್ತಿದ್ರೆ...."

"ಹೋಗ್ಲಿ ಬಿಡೀಂದ್ರೆ. ಅಂತೂ ನಿಮ್ಮ ಟೋಪೀ ಸರ್ಕಾರಕ್ಕೆ ಇಂದಾದ್ರೆ ಭ್ರಷ್ಟಾಚಾರದ ಪತ್ತೆಯಾಯ್ತಲ್ಲ?"

"ಛೆ, ಛೆ, ಲಂಚ ನಿರ್ಮೂಲನಾ ಶಾಖೆ ಮೊದ್ಲೇ ಇತ್ತಲ್ಲ....?'

"ಇತ್ತು, ಆದ್ರೆ ಆದು ಎಷ್ಟ ಬಸ್ಸ ಚೆಕ್ಕಿಂಗ್ ಆಫೀಸರಂತಿತ್ತು ಅಂತಾರೆ. ಇನ್ನು ಏನಾಗುವುದೋ ಯಾರಿಗೆ ಗೊತ್ತು?"

"ನೀನನ್ನೊದೇನು? ನಂದಾರ ಮಾತ್ನಲ್ಲಿ ವಿಶ್ವಾಸವಿಲ್ಲಾಂತ. ಅಲ್ವೆ?"

"ಇಲ್ಲಾಂತ ಹೇಗನ್ನೋದು? ಯಾವುದಕ್ಕೂ ಅವ್ರ ಒಂದು ಯೋಜನೆ ಮುಗಿಯಲಿ ಅಷ್ಟರವರೆಗೆ ನಾವು ಕಾದು ನೋಡೋಣ. ಮತ್ತೆ...."

"ಮತ್ತೆ ಏನೂಂತ...."

"ಅಲ್ಲ, ಪಂಚವಾರ್ಷಿಕ ಯೋಜನೆಗಳಂತೆಯೇ...."

"ಈ ದ್ವಿವಾರ್ಷಿಕ ಯೋಜನೆಗಳೂ ಮುಂದುವರಿಯುವವೆಂದು ಸಂದೇಹವೆ?"

"....ಸರಿಯಾಗಿ ಊಹಿಸಿದಿರಿ."

"ಹಾಗೆಲ್ಲಾ ಆಗದೆ, ಒಂದೇ ಯೋಜನೆಯಲ್ಲಿ ಉದ್ದೇಶ ಯಶಸ್ವಿಯಾಗಲಿ ಎಂತ ಹಾರೈಸುವ."

"ಸರಿ ಬಿಡಿ, ಹಾರೈಸೋಕೇನಂತೆ?"

"ಮಾತಿಗೆ ಕೂತ್ರೆ ನಿನ್ನ ನಾಲಿಗೆ ಸಲೀಸಾಗಿ ಸರಿದಾಡುತ್ತೆ. ಸರಿ ಹೋಗ್ಲಿ ಬಿಡು...."

"....ಇನ್ನಾದ್ರೂ, ಕಾಲ್ತೊಳ್ಕೊಳ್ತೀರಾ? ಬೇಗಬನ್ನಿ ಮತ್ತೆ...'

"ಹ್ಞಾಂ, ಒಂದೇ ನೀನು ಬಡಿಸೋಕೆ ತಯಾರಾಗು....'

"ಆಯ್ತು ಮತ್ತೆ...'

—ಗೋರಾ.

ಜನತೆಯ ಸೌಕರ್ಯಕ್ಕಾಗಿ

ಹೊಸ ಬಗೆಯ

ಸೇವಿಂಗ್ಸ್ ಬ್ಯಾಂಕ್ ಸೌಲಭ್ಯಗಳು.

- ಪ್ರಾಯಕ್ಕೆ ಬಾರದ ಮಕ್ಕಳು ಕೂಡಾ 12 ವರ್ಷಕ್ಕೆ ಮೇಲ್ಪಟ್ಟವರಾದರೆ ತಮ್ಮ ಹೆಸರಿನಲ್ಲೇ **ಸೇವಿಂಗ್ಸ್** ಬ್ಯಾಂಕ್ ಖಾತೆಗಳನ್ನು ತೆರೆಯಬಹುದು.
- ನೀವು ನಿಮ್ಮ **ಸೇವಿಂಗ್ಸ್** ಬ್ಯಾಂಕ್ ಖಾತೆಯಿಂದ 1 ವರ್ಷದಲ್ಲಿ 150 ಬಾರಿ ಹಣವನ್ನು ತೆಗೆಯಬಹುದು.
- ನಿಮ್ಮ **ಸೇವಿಂಗ್ಸ್** ಬ್ಯಾಂಕ್ ಖಾತೆಯಿಂದ ಎಂದು ಬೇಕಾದರೂ ಎಷ್ಟು ಮೊತ್ತವನ್ನಾದರೂ ಯಾವುದೇ ಪೂರ್ವ ಸೂಚನೆಯಿಲ್ಲದೆ ಹಿಂದೆ ಪಡೆಯಬಹುದು.
- **ಸೇವಿಂಗ್ಸ್** ಬ್ಯಾಂಕ್ ಖಾತೆಯ ಮೇಲೆ ಅರ್ಧ ವಾರ್ಷಿಕ ಖರ್ಚು ವೆಚ್ಚಗಳನ್ನು ವಸೂಲು ಮಾಡಲಾಗುವುದಿಲ್ಲ.
- **ಸೇವಿಂಗ್ಸ್ ಖಾತೆಯ** ಮೂಲಕ ಧರ್ಮಾರ್ಥವಾಗಿ ಹಣವನ್ನು ರವಾನಿಸಬಹುದು.

ಸಿಂಡಿಕೇಟ್ ಬ್ಯಾಂಕಿನಲ್ಲಿ ನಿಮ್ಮ ಸೇವಿಂಗ್ಸ್ ಖಾತೆ ತೆರೆಯಿರಿ.

ಸಿಂಡಿಕೇಟ್ ಬ್ಯಾಂಕ್

ಚಲಾವಣೆ ಬಂಡವಾಳ ರುಪಾಯಿ 45 ಕೋಟಿಗೂ ಮಿಕ್ಕಿದೆ.

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ಉಡುಪಿ.

'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No 466 N/50 dated 2-12—1950 of the Director of Public Instruction Madras.

Edited, Printed & Published by K. H.Shetty, at the Navayuga Press, Udipi, S. India.

ನವಯುಗ

VOL. 43 No. 16 — ಸಂಪುಟ ೪೩ ಸಂಚಿಕೆ ೧೬

NAVAYUGA—Nationalist Weekly ‡‡ ಉಡುಪಿ 19-12-1963 ಗುರುವಾರ ‡‡ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ನಮ್ಮ - ನಮ್ಮವರು

ಮುರಾರ್ಜಿ ದೇಸಾಯಿ

ಕೇಂದ್ರ ಸರಕಾರದಲ್ಲಿ ಅರ್ಥಮಂತ್ರಿಯಾಗಿ ಸಾಕಷ್ಟು ಹೆಸರುಗಳಿಸಿದ ಮೊರಾರ್ಜಿ ದೇಸಾಯಿಯವರು ಚಿನ್ನ ನಿಯಂತ್ರಣ ಕಾಯದೆಯನ್ನು ತಂದು ಮತ್ತಷ್ಟು ಪ್ರಸಿದ್ಧರಾದರು. ಈಗ ಕಾಮರಾಜ ಸೂತ್ರದನ್ವಯ ಮೊತ್ತಮೊದಲು ಹೊರಬಂದು ಕಾಂಗ್ರೆಸ್ ಸಂಸ್ಥೆಯ ಬಲಸಂವರ್ಧನೆಯಲ್ಲಿ ದುಡಿಯುವ ನಿಷ್ಠೆಯನ್ನು ಕಾರ್ಯರೂಪಕ್ಕೆ ತರುತಿದ್ದಾರೆ. ಹಿಂದಿನಿಂದಲೂ ಮುರಾರ್ಜಿಯವರ ನೀತಿಯು ಸಮಾಜವಾದಕ್ಕಿಂತ ತುಸು ಭಿನ್ನವೇ ಆಗಿತ್ತು. ಹಿಡಿದ ಕಾರ್ಯವನ್ನು ಬಿಡದೆ ಕಡೆ ತನಕವೂ ಸಾಧಿಸುವ ಹಠವಾದಿಗಳು ಇವರು. ನೆಹರು ಸರಕಾರದ ಮೇಲೆ ಅವಿಶ್ವಾಸ ಗೊತ್ತುವಳಿಯು ಲೋಕಸಭೆಯಲ್ಲಿ ಚರ್ಚೆಗೆತ್ತಿಕೊಂಡಾಗ, ಸರಕಾರದ ನೀತಿಯನ್ನು ಸಮರ್ಥಿಸಿ, ವಿರೋಧಿ ಪಕ್ಷಗಳನ್ನು ಹತಪ್ರಭರನ್ನಾಗಿ ಮಾಡಿದ ಶ್ರೇಯಸ್ಸು ಈ ಮಹನೀಯರಿಗೆ ಸೇರಿದ್ದು. ನಿರ್ಭೀಕರಾಗಿ ಮಾತನಾಡುವ ದೇಸಾಯಿಯವರದು ಮುಂಗಡಪತ್ರ ರಚನೆಯಲ್ಲಿ ಎತ್ತಿದ ಕೈ. ಆದಾಯವನ್ನು ಕಡಿಮೆಯಾಗಿ ವೆಚ್ಚವನ್ನು ತುಸು ಹೆಚ್ಚಾಗಿಯೇ ತೋರಿಸಿ ಕೊರತೆಯ ಮುಂಗಡ ಪತ್ರವನ್ನು ಉಳಿತಾಯದಲ್ಲಿ ಕೊನೆಗೊಳಿಸುವ ಇವರ ಜಾಣ್ಮೆಯಾಗ ಎಲ್ಲರಿಗೂ ಮನವರಿಕೆಯಾಗಿದೆ.

ಮುರಾರ್ಜಿ ದೇಸಾಯಿಯವರು ಕಳೆದ ವಾರ ಉಡುಪಿಗೆ ಸಂದರ್ಶನವಿತ್ತು, ಇಲ್ಲಿನ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು. ಪೂರ್ಣಪ್ರಜ್ಞ ಕಾಲೇಜಿನ ವಿಜ್ಞಾನ ವಿಭಾಗ ಭವನದ ಉದ್ಘಾಟನೆಯನ್ನು ಬೆಳ್ಳಿಯ ಬೀಗವನ್ನು ಬಂಗಾರದ ಕೀಲಿಕೈಯಿಂದ ತೆರೆದು ಮಾಡಿದರು. ಚಿನ್ನ ಮತ್ತು ಬೆಳ್ಳಿಯ ಸಾಮಾನುಗಳನ್ನು ತನ್ನೊಡನೆ ಒಯ್ಯುವುದಿಲ್ಲವೆಂದು ನಿರ್ಧಾರ ಮಾಡಿದ್ದ ದೇಸಾಯಿಯವರು ತಾವೇ ಸ್ವತಃ ಅವನ್ನು ಏಲಂ ಹಾಕಿ ಕಾಲೇಜಿನ ನಿಧಿಗೆ ೧೧೦೧ ರೂಪಾಯಿಗಳನ್ನು ಒದಗಿಸಿಕೊಟ್ಟರು.

ಮಣಿಪಾಲದ ಕಸ್ತೂರ್ಬಾ ಜನರಲ್ ಆಸ್ಪತ್ರೆಯ ಎಕ್ಸ್-ರೇ ಪ್ಲಾಂಟನ್ನು ಉದ್ಘಾಟಿಸಿದ ದೇಸಾಯಿಯವರು ರಾಷ್ಟ್ರದ ಶಿಕ್ಷಣ ವ್ಯವಸ್ಥೆಯ ಜವಾಬ್ದಾರಿಯನ್ನು ಪೂರ್ಣವಾಗಿ ಆಸಕ್ತಿಯಿರುವ ಖಾಸಗಿ ಸಂಸ್ಥೆಗಳಿಗೆ ವಹಿಸಿಕೊಡಬೇಕೆಂದೂ ಧನಸಹಾಯವನ್ನು ನೀಡುವ ಕೆಲಸವನ್ನು ಮಾತ್ರ ತನ್ನ ಕೈಯಲ್ಲಿಟ್ಟುಕೊಳ್ಳಬೇಕೆಂದೂ ಹೇಳಿದ ಮಾತು ಸರಕಾರಕ್ಕೆ ಅಪ್ರಿಯವಾದರೂ, ಶಿಕ್ಷಣ ರಂಗದ ತೀವ್ರ ಪ್ರಗತಿಗೆ ಕಾರಣೀಭೂತವಾಗಿದೆ. ವೃತ್ತಿಪರ ಶಿಕ್ಷಣ ಸಂಸ್ಥೆಗಳಲ್ಲಿ ಖಾಸಗಿ ಸಂಸ್ಥೆಗಳು ಬಂಡವಳ ಶುಲ್ಕ ವಸೂಲು ಮಾಡುವ ಕ್ರಮವನ್ನು ಕೆಲವರು ಟೀಕಿಸುತ್ತಿರುವುದನ್ನು ನಾವು ಮರೆಯುವಂತಿಲ್ಲ. ಆದರೆ, ಮುರಾರ್ಜಿಯವರು ಈ ರೀತಿಯಲ್ಲಿ ಹಣ ಕೂಡಿಸುವುದನ್ನು ಸಂಪೂರ್ಣ ಬೆಂಬಲಿಸಿ, ಇದರಿಂದ ವಿದ್ಯಾರ್ಥಿಗಳಲ್ಲಿ ತಮ್ಮ ಶಿಕ್ಷಣದ ಬಗ್ಗೆ ಗಮನ ಹೆಚ್ಚಾದೀತು ಎಂದು ಬಯಸಿದರು

ಮುರಾರ್ಜಿಯವರು ಯಾರ ಹಂಗು ದಾಕ್ಷಿಣ್ಯಗಳಿಗೂ ಗುರಿಯಾಗದ, ತನ್ನದೇ ಆದ ದಾರಿಯಲ್ಲಿ ನಡೆಯುವ ನಿರ್ಭಿಡೆಯ ವ್ಯಕ್ತಿ. ಅವರೀಗ ಮಾಜಿ ಮಂತ್ರಿಗಳ ಸಾಲಿನಲ್ಲಿ ನಿಲ್ಲುವರಾದರೂ ಪಾರ್ಲಿಮೆಂಟರಿ ಬೋರ್ಡಿನಲ್ಲಿ ತಮ್ಮ ಸ್ಥಾನವನ್ನು ಉಳಿಸಿಕೊಂಡಿದ್ದಾರೆ. ಕಾಂಗ್ರೆಸಿನ ನೀತಿಯೊಂದನ್ನು ಕಾರ್ಯರೂಪಕ್ಕಿಳಿಸುವ ವಿಧಾನಗಳ ಬಗ್ಗೆ ಭಿನ್ನಾಭಿಪ್ರಾಯವಿರಬಹುದಾದರೂ ಆದರ್ಶ ನೀತಿಗಳ ಬಗ್ಗೆ ಏಕಾಭಿಪ್ರಾಯವಿರಬೇಕೆಂಬ ಅವರ ಆಶಯವು ಸಹಜವಾದುದು. ಈ ಆಶಯವನ್ನು ಕಾಂಗ್ರೆಸಿಗರು ಪೂರ್ಣ ಮಾಡಿಕೊಡಬೇಕು.



ನಿಜಲಿಂಗಪ್ಪ

ಭಾರತದ ಇತರ ಹೆಚ್ಚಿನ ರಾಜ್ಯಗಳಲ್ಲಿ ಕಾಂಗ್ರೆಸ್ ಪಕ್ಷ ಮತ್ತು ವಿಧಾನ ಸಭಾ ಕಾಂಗ್ರೆಸ್ ಪಕ್ಷಗಳ ಘರ್ಷಣೆಗಳು ಬಹಿರಂಗವಾಗಿ ವ್ಯಕ್ತವಾಗುತ್ತ ಕೊಳಚೆಯನ್ನು ಹೊರ ಚೆಲ್ಲುತ್ತಿರುವಾಗ ಕರ್ನಾಟಕದಲ್ಲಿ ಅಂತಹ ಗೊಂದಲಗಳಿಗೆ ಆಸ್ಪದವಿಲ್ಲದಂತೆ ನೋಡಿಕೊಂಡವರು ಮುಖ್ಯಮಂತ್ರಿ ನಿಜಲಿಂಗಪ್ಪನವರು. ಪಕ್ಷಕಟ್ಟುವಲ್ಲಿ ಮೊದಲು ಯಶಸ್ವಿಯಾದ ಇವರೀಗ ಆಡಳಿತೆಯಲ್ಲಿಯೂ ತಮ್ಮ ಚಾತುರ್ಯವನ್ನು ತೋರಿಸಿ ಕೊಡುವ ಪ್ರಯತ್ನ ಮಾಡುತಿದ್ದಾರೆ. "ಶರಾವತಿ" ಪ್ರಕರಣದ ಮೇಲೆ ಬೆಳಕು ಚೆಲ್ಲುತ್ತ ಅವರು ಇಲಿಯನ್ನು ಹುಲಿಯೆಂದು ಹೆಚ್ಚಿಸಿ ಹೇಳಲಾಗುತ್ತಿದೆಯಾದುದರಿಂದ ಆ ಸಂಬಂಧದಲ್ಲಿ ನ್ಯಾಯ ವಿಚಾರಣೆಯು ಅನಗತ್ಯವೆಂದು ಹೇಳುತ್ತಾರೆ. ಸಮರ್ಥ ಆಡಳಿತದಾರರೆನಿಸಬೇಕಾದರೆ ಯಾರ ಟೀಕೆ ಟಿಪ್ಪಣಿಗಳಿಗೂ ಅವಕಾಶವಿಲ್ಲದಂತೆ ನಡೆಯಬೇಕು; ಇದು ಪ್ರಜಾತಂತ್ರದಲ್ಲಿ ಅತೀವ ಕಠಿನವಾದರೂ ನಿಜಲಿಂಗಪ್ಪನವರು ಇಂತಹ ನಿರ್ದೋಷಿ ಆಡಳಿತೆಯನ್ನು ಸ್ಥಾಪಿಸಬೇಕು; ಕನ್ನಡಿಗರು ಅವರಿಂದ ಇದನ್ನು ನಿರೀಕ್ಷಿಸುತ್ತಾರೆ.

ರಾಜ್ಯ ಪುನರ್ಘಟನಾ ನಂತರ ಹೊಸ ರಾಜ್ಯದ ಮೊದಲ ಮುಖ್ಯ ಮಂತ್ರಿಯಾದಾಗ, ಸರಕಾರಿ ನೌಕರರ ವೇತನವನ್ನು ಪರಿಷ್ಕರಿಸಿದ ನಿಜಲಿಂಗಪ್ಪನವರು ನ್ಯಾಯವನ್ನು ಮಾಡಿ ಪ್ರಶಂಸೆಯನ್ನು ಪಡೆದರು. ಈ ಹೆಚ್ಚಿನ ವೇತನದ ಸೌಲಭ್ಯವನ್ನು ಕಡಿಮೆ ವೇತನ ಪಡೆಯುತ್ತಿದ್ದ ಖಾಸಗಿ ಶಾಲಾ ಶಿಕ್ಷಕರಿಗೂ ಕೊಟ್ಟು ಅವರು ಬಹಳಷ್ಟು ಪುಣ್ಯಗಳಿಸಿದರು. ಅನಂತರ ಮುಖ್ಯ ಮಂತ್ರಿಯಾಗಿ ಬಂದ ಬಿ. ಡಿ. ಜತ್ತಿಯವರೂ ವೇತನದಲ್ಲಿ ಹೆಚ್ಚಳವನ್ನು ಘೋಷಿಸಿದರು; ಆದರೆ, ಆ ಹೆಚ್ಚಳವು ಇನ್ನೂ ದಕ್ಷಿಣ ಕನ್ನಡದ ಮಾಜಿ ಜಿಲ್ಲಾ ಬೋರ್ಡಿನ ಶಾಲೆಗಳ ಅಧ್ಯಾಪಕರಲ್ಲಿ ಹೆಚ್ಚಿನವರಿಗೆ ದೊರೆತಿಲ್ಲ. ಪ್ರಾಥಮಿಕ ಶಾಲಾ ಅಧ್ಯಾಪಕರು ತಮ್ಮ ಕನಿಷ್ಟ ಬೇಡಿಕೆಗಳನ್ನು ಹಲವಾರು ಬಾರಿ ಮಂತ್ರಿಗಳಿಗೆ ಮನ್ನಿಸುವಂತೆ ಕೇಳಿಕೊಂಡಿದ್ದರೂ ಅವಿನ್ನೂ ಮಾನ್ಯವಾಗಿಲ್ಲದಿರುವುದರಿಂದ, ದಶಂಬರ ೧೩ನೆಯ ದಿನಾಂಕವನ್ನು ಕನಿಷ್ಠ ಬೇಡಿಕೆಗಳ ದಿನವೆಂದು ಸಾಂಕೇತಿಕ ಉಪವಾಸದ ದಿನವಾಗಿ ಆಚರಿಸಿದರು; ನಮ್ಮ ಈ ಬೇಡಿಕೆಗಳನ್ನು ಮುಖ್ಯಮಂತ್ರಿಗಳ ಅವಗಾಹನೆಗೆ ತರುವುದಕ್ಕಾಗಿ ವ್ಯಕ್ತಿಗತ ಕಾಗದಗಳನ್ನು ಅಂಚೆ ಮೂಲಕ ಕಳಿಸಿದರು. ಹಿಂದೊಮ್ಮೆ ಈ ಶಾಖೆಯ ಚಳವಳವು ನಿಜಲಿಂಗಪ್ಪನವರ ಗಮನ ಸೆಳೆದಿತ್ತು, ಆ ಚಳವಳ ಯಶಸ್ವಿಯೂ ಆಗಿತ್ತು. ಇಂದು ಈ ಚಳವಳವೂ ಯಶಸ್ವಿಯಾಗುವುದೆಂದು ಪ್ರಾಥಮಿಕ ಶಾಲಾ ಶಿಕ್ಷಕರು ನಂಬಿದ್ದಾರೆ.

ಅಧ್ಯಾಪಕರ ಹೊಣೆಗಾರಿಕೆಯನ್ನು ಎತ್ತಿ ತೋರಿಸುವ ರಾಜಕಾರಣಿಗಳು ಅವರ ಕನಿಷ್ಠ ಬೇಡಿಕೆಗಳನ್ನು ಪೂರೈಸುವತ್ತ ಗಮನ ಹರಿಸಿದಂತೆ ತೋರುವುದಿಲ್ಲ. ಅವರು ಬಯಸುವಂತೆ ತಿಂಗಳ ವೇತನವನ್ನು ಗೊತ್ತಾದ ದಿನದಂದು ತಪ್ಪದೆ ಅವರ ಕೈಸೇರುವಂತೆ ಮಾಡುವುದು ಮತ್ತು ಬಾಕಿಯಿರುವ ವೇತನದ ಅಂಶವನ್ನು ಕೂಡಲೇ ಕೊಡಿಸುವುದು ಇಂದು ನಿಜಲಿಂಗಪ್ಪನವರ ಜವಾಬ್ದಾರಿಯಾಗಿದೆ. ಇದನ್ನವರು ನಿರ್ವಹಿಸಿದರೆಂದರೆ, ಅವರು ಈಗಾಗಲೇ ಹೊತ್ತ ಕಿರೀಟಕ್ಕೆ ನವಿಲಗರಿಯನ್ನೇರಿಸುವುದು. ಸಮಾಜ ನಿರ್ಮಾಪಕರಾದ ಈ ಪ್ರಾಥಮಿಕ ಅಧ್ಯಾಪಕರ ಸಹಾನುಭೂತಿಯನ್ನು ಗಳಿಸಲು ನಿಜಲಿಂಗಪ್ಪನವರು ಕೂಡಲೇ ಕಾರ್ಯತತ್ಪರರಾಗಬೇಕು - ಇದು ನಾಡಿಗರ ಹೃದಯಾಕಾಂಕ್ಷೆ.

ನವಯುಗಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ

ವಾರದ ಕತೆ

ಮಕ್ಕಳ ಮದುವೆ

ಅಂದು ಸೋಮವಾರ. ಚಂದ್ರಣ್ಣನ ಮದುವೆಯಾಗಿ ಮೂರು ದಿನವಾಗಿತ್ತು. ಮದುವೆಗೆಂದು ಬಂದ ನೆಂಟರಿಷ್ಟರು ಊರಿಗೆ ತೆರಳಿದ್ದರು. ಮೊದಲಿದ್ದ ಗಲಾಟೆ ಈಗಿಲ್ಲ. ನನ್ನ ಮಾವ ಆದಿನ ಊರಿಗೆ ಹೋಗಬೇಕೆಂದು ನಿಶ್ಚಯಿಸಿದ್ದರು.

"ನಾವು ಈ ದಿನ ಊರಿಗೆ ಹೋಗುತ್ತೇವೆಂ"ದು ಚಿಕ್ಕಮ್ಮನ ಹತ್ತಿರ ಬಂದು ತಿಳಿಸಿದರು.

"ಮದುವೆಯಾಗಿ ನಾಲ್ಕು ದಿನವಾಗಿಲ್ಲ. ಆಗಲೇ ಊರಿನ ಕಡೆಬ್ಬಾಸನೇ....? ಇಲ್ಲಿಯ ವರೆಗೂ ಇದ್ದೀರಾ, ಹಾಗೇ ಮಕ್ಕಳ ಮದುವೆನೂ ಮುಗಿಸಿಕೊಂಡು ಹೋಗಿ."

ಚಿಕ್ಕಮ್ಮನ ಜತೆಯಲ್ಲಿದ್ದ ನನಗೆ ಆಶ್ಚರ್ಯವಾಯಿತು. ಮಕ್ಕಳ ಮದುವೆ ಅಂದ್ರೆ ಏನು? ಸರ್ಕಾರದವರು ಹದಿನಾರು ವರ್ಷ ಹೆಣ್ಣಿಗೂ ಇಪ್ಪತ್ತು ವರ್ಷ ಗಂಡಿಗೂ ನಿಗಧಿ ಮಾಡಿದ್ದಾರೆ. ಕಾನೂನು ಉಲ್ಲಂಘಿಸಿ ವಿವಾಹ ಮಾಡುತ್ತಾರೆಯೇ? ನಮ್ಮ ಮನೆಯಲ್ಲಿ ಇದುವರೆಗೂ ಮಕ್ಕಳ ಮದುವೆ ಮಾಡಿಲ್ಲ! ನನಗೇನೋ ತೋಚದಾಯಿತು. ನನ್ನ ಮನಸ್ಸಿನಲ್ಲಿ ನೂರಾರು ಪ್ರಶ್ನೆಗಳು ಉದ್ಭವಿಸಿದವು. ಮಕ್ಕಳ ಮದುವೆ ಅಂತಾರಲ್ಲಾ ಹೆಣ್ಣು ಯಾರು? ಗಂಡು ಯಾರು? ಇನ್ನೂ ಲಗ್ನ ಪತ್ರಿಕೆಯನ್ನೇ ಪ್ರಿಂಟ್ ಮಾಡಿಲ್ಲ? ಮಕ್ಕಳ ಮದುವೆಯಾದ್ದರಿಂದ ಲಗ್ನ ಪತ್ರಿಕೆಯನ್ನ ಪ್ರಿಂಟ್ ಮಾಡಿಸದೆ ಬಿಟ್ಟಿರಬಹುದೇ? ಇದ್ದರೂ ಇರಬಹುದು. ನನಗೆ ಏನೂ ತಿಳಿಯದ ವಿಷಯವಾದ್ದರಿಂದ ಅವರ ಮಾತುಗಳನ್ನೇ ಕೇಳುತ್ತಾ ನಿಂತೆ.

"ಮನೆಕಡೆ ಯಾರೂ ಇಲ್ಲ ಗುರುಶಾಂತಮ್ಮ. ಹೋಗಲೇ ಬೇಕು."

"ನೀವೆಲ್ಲಾ ಹೊರಟು ಹೋದರೆ ಮಕ್ಕಳ ಮದುವೆ ಅಷ್ಟು ಚನ್ನಾಗಿರುವುದಿಲ್ಲ. ನೀವಿದ್ದರೆ ತಮಾಷೆಯಾಗಿಯೂ ಇರುತ್ತೆ"

"ಇಂತಹ ಕೆಲಸಕ್ಕೆ ನಾವಿರಲೇಬೇಕು ಅಂತಾಗಿ ನಿಯಮವಿಲ್ಲವಲ್ಲ?"

"ಅದೇನೋ ಸರಿ ಬಸಲಿಂಗಣ್ಣ. ನಮಗಿಂತಾ ದೊಡ್ಡವರಿದ್ದರೆ ಚೆನ್ನಾಗಿರುತ್ತೆ. ಮರೆತು ಹೋದ ವಿಷಯಗಳನ್ನೂ ಜ್ಞಾಪಕಕ್ಕೆ ತರಬಹುದು."

"ಒಳ್ಳೆ ಪ್ರಾಣಸಂಕಟಕ್ಕೆ ತಂದಿಟ್ಟೆ ಗುರುಶಾಂತಮ್ಮ. ಹೋಗಲಿ, ನಾನು ಹೋಗುತ್ತೇನೆ. ಅವಳು ಬೇಕಾದರೆ ಇರಲಿ."

"ಎಲ್ಲಿಯಾದರೂ ಉಂಟೇ? ಅಕ್ಷತೆಗೆ ಇಬ್ಬರೂ ಇದ್ದರೆ ಚೆನ್ನಾಗಿರುತ್ತೆ."

"ಮಕ್ಕಳ ಮದುವೆಯಾದ ಮೇಲೆ ಕಳಿಸಿ ಕೊಡುತ್ತೀರಾ ತಾನೇ?"

"ಮದುವೆನಾ ಇವತ್ತು ಊಟವಾದ ಮೇಲೆ ಇಟ್ಟುಕೊಂಡಿದ್ದೇವೆ ನಾಳೆ ಮಂಗಳವಾರ. ಬುಧವಾರ ಖಂಡಿತವಾಗಲೂ ನಿಲ್ಲ ಬೇಡಿ."

"ಮತ್ತೆರಡು ದಿನ ನಿಲ್ಲಬೇಕಲ್ಲಾ"

"ಎರಡು ದಿನಾ ಕಳೆಯುವುದು ಏನು ಮಹಾ ಬಸಲಿಂಗಣ್ಣ"

"ಸರಿ ಗುರುಶಾಂತಮ್ಮ, ನಿನ್ನ ಮಾತು ಮೀರೋದಿಕ್ಕೇ ಆಗೋದಿಲ್ಲಾ"

ಅವರಿಬ್ಬರ ಸಂಭಾಷಣೆ ಅಲ್ಲಿಗೆ ಮುಕ್ತಾಯವಾಯಿತ. ಮಾವನು ಪೇಟೆ ಕಡೆಗೆ ಹೊರಟರು. ಮಕ್ಕಳ ಮದುವೆ ಮಧ್ಯಾಹ್ನ ಅಂತ ಗೊತ್ತಾಯಿತು. ಊಟವಾದ ಮೇಲೆ ನಿದ್ದೆ ಮಾಡಬಾರದೆಂದು ಈಗಲೇ ಗಟ್ಟಿ ಮನಸ್ಸು ಮಾಡಿದೆ. ಮಕ್ಕಳ ಮದವೆ ಯಾವಾಗ ನೋಡುತ್ತೇನೆ ಎಂಬ ಬಯಕೆ ಮನಸ್ಸಿನಲ್ಲಿ ಇದ್ದುದರಿಂದ ಊಟವಾಗುವುದನ್ನೇ ಕಾಯುತ್ತಾ ಕುಳಿತೆ.

ಬಂದವರೆಲ್ಲರೂ ಮಕ್ಕಳ ಮದುವೆ ಊಟಮಾಡಿದರು. ಓಲಗದವರು ಬಂದಿಲ್ಲ. ಪುರೋಹಿತರು ಬರಲಿಲ್ಲ ಅಂತ ನನಗೆ ಯೋಚನೆಯಾಯಿತು. ಆಗಾಗ್ಗೆ ಹೊರಗಡೆ ಹೋಗಿ ನೋಡಿಕೊಂಡು ಬರುತ್ತಿದ್ದೆ. ಓಲಗದವರನ್ನೂ ಪುರೋಹಿತರನ್ನೂ ಜಾಗ್ರತೆ ಕರೆತನ್ನಿ ಅಂತಾ ಒಬ್ಬರ ಬಾಯಲ್ಲೂ ಮಾತು ಬರಲಿಲ್ಲ. ನನಗೆ ಬೇಸರ ಬಂತು. ಇದು ಎಂಥ ಮದುವೆ? ಒಂದು ಪಕ್ಷ ಸರಕಾರದ ಕಾನೂನಿಗೆ ಹೆದರಿಕೊಂಡು ಗುಟ್ಟಾಗಿ ಮದುವೆ ಮಾಡಬಹುದೆ?

"ತೆಂಗಿನ ಗರಿ ಕಡಿವ್ರು" ಅಂತ ಚಿಕ್ಕಮ್ಮ ನನಗೆ ತಿಳಿಸಿದಳು.

"ಯಾತಕ್ಕೆ ಚಿಕ್ಕಮ್ಮ" ಅಂತ ಮಾತು ಬಾಯಲ್ಲಿ ಬಂತು, ಆದರೆ ನನ್ನ ಮೀಸೆ ಮೇಲೆ ಕೈಯಾಡಿಸಿ ಕೊಂಡು ಸುಮ್ಮನೆ ತಲೆಯಾಡಿಸಿ ಗರಿ ಕೇಳಲು ಹಿತ್ತಲಿಗೆ ತೆರಳಿದೆ. ಮಾಹತ್ತಿ ಮಚ್ಚಿನಿಂದ ಗರಿಯನ್ನು ಕೆಡವಿದೆ. ಬೆಲ್ಲಕ್ಕೆ ನೊಣ ಮುತ್ತಿದಂತೆ ಹುಡುಗರು ಬಂದು ಗರಿಗಳನ್ನು ಕೇಳಲು ಪ್ರಾರಂಭಿಸಿದರು. "ಗರಿಗಳನ್ನ ಕೇಳಬೋಡ್ರೋ ಅಂಪ್ರೇ" ನನ್ನ ಮಾತು ಅವರ ಕಿವಿಯ ಮೇಲೆ ಬಿದ್ದರೆ ತಾನೇ?

"ಮಾವಯ್ಯ, ಪೀಪಿ ಮಾಡಿಕೊಡು" ಹುಡುಗ ಹಲ್ಲು ಕಿರಿದು ಕೇಳಿದ

"ನನಗೂ ಮಾವಯ್ಯ" ನನ್ನ ಸೊಸೆ ಮೂಗನ್ನೊರಸುತ್ತ ಹೇಳಿದಳು.

"ಚಿಕ್ಕಪ್ಪ ನನಗೂ ಕೊಟ್ರೇಸಿ ಬಂದು ಕುಣಿದಾಡಿದ.

"ಈಗ ಯಾತಕ್ಕೋ ಪೀಪಿ"

"ಅಷ್ಟು ಗೊತ್ತಿಲ್ಲವೇ ಮಾವಯ್ಯ. ಈಗ ಮಕ್ಕಳ ಮದುವೆಯಾಗುತ್ತೆ. ಓಲಗ ಬೇಡವೇ?"

ಮಕ್ಕಳ ಮಾತು ಕೇಳಿ ದಂಗು ಬಡಿದವನಂತೆ ನಿಂತೆ. ಇವರಿಗೆ ಗೊತ್ತಿರುವ ವಿಚಾರ ನನಗೆ ಗೊತ್ತಿಲ್ಲ, ನನಗೆ ನಾಚಿಕೆಯಾಯಿತು. ಎರಡು ಗರಿಗಳನ್ನು ಕಿತ್ತು ಇಬ್ಬರಿಗೂ ಪೀಪಿ ಮಾಡಿಕೊಟ್ಟೆ.

"ಚಿಕ್ಕಪ್ಪ, ನನಗೊಂದು ಪೀಪಿ" ಅಳುತ್ತಾ ಅಣ್ಣನ ಮಗಳು ಮಾಲತಿ ಬಂದಳು.

"ಸುಮ್ಮನಿರಮ್ಮ, ನಿನಗೆ ಎಲ್ಲರಿಗಿಂತಲೂ ದೊಡ್ಡ ಪೀಪಿ ಮಾಡಿ ಕೊಡುತ್ತೇನೆ." ಮಾಲತಿ ಸಂತೋಷದಿಂದ ಕುಣಿದಾಡಿದಳು ಅವಳಿಗೆ ಎಲ್ಲರಿಗಿಂತಲೂ ದೊಡ್ಡ ಪೀಪಿ ಮಾಡಿಕೊಟ್ಟೆ. ಪೀಪಿ ಊದುತ್ತಾ ಒಳಗಡೆ ಓಡಿದಳು. ಮದುವೆ ಯಾದರೂ ಹುಡುಗರು ಸುಮ್ಮನಾಗಿರಲಿಲ್ಲ. ಮಕ್ಕಳ ತಂಡವೇ ಬಂತು ಎಲ್ಲರಿಗೂ ಪೀಪಿ ಮಾಡಿಕೊಟ್ಟೆ.

ಮನೆ ಒಳಗೆ ಬಂದಾಗ ಪೀಪಿಗಳ ಗಲಾಟೆ ಹೇಳ ತೀರದು. ಕಿವಿಯನ್ನು ಮುಚ್ಚಿಕೊಂಡು ಚಿಕ್ಕಮ್ಮನನ್ನು ಹುಡುಕುತ್ತಾ ರೂಮು ಹತ್ತಿರ ಬಂದೆ. ಅಲ್ಲಿ ಎರಡು ಗೊಂಬೆಗಳಿಗೆ ಲಕ್ಷಣವಾಗಿ ಬಟ್ಟೆ ತೊಡಿಸಿದ್ದರು. ಅದಕ್ಕೊಪ್ಪುವಂತೆ ಬಾಸಿಂಗ ಕಟ್ಟಿದ್ದರು. ಅದರಲ್ಲಿ ಒಂದು ಗಂಡು ಒಂದು ಹೆಣ್ಣು ಗೊಂಬೆ ಮಕ್ಕಳ ಮದುವೆ ಅಂದ್ರೆ ಗೊಂಬೆಗಳ ಮದುವೆ ಅಂತಾ ಆಗ ಗೊತ್ತಾಯಿತು ನನಗೆ.

ಅಂಗಳದಲ್ಲಿ ಜಮಖಾನ ಹಾಸಿದ್ದಾರೆ. ಬಂದ ಅತಿಥಿಗಳೆಲ್ಲಾ ಜಮಖಾನದ ಮೇಲೆ ಕುಳಿತಿದ್ದಾರೆ ಒಂದು ಕಡೆ ಹುಡುಗರು ಪೀಪಿಗಳನ್ನು ಊದುತ್ತಾ ಕುಳಿತಿದ್ದಾರೆ. ಮಕ್ಕಳ ಕರ್ತವ್ಯ ನೋಡಿದರೆ ಓಲಗದವರಿಗಿಂತಲೂ ಮಿಗಿಲಾಗಿತ್ತು ಎನ್ನಬಹುದು.

"ಹೊತ್ತಾಯಿತು ಮದು ಮಕ್ಕಳನ್ನು ಕರೆತನ್ನಿ" ಎಂದು ಕುಳಿತವರಲ್ಲಿ ಒಬ್ಬರೆಂದರು. ಚಿಕ್ಕಮ್ಮ ಪೀಪಿಗಳ ತಂಡದವರನ್ನು ಕರೆದುಕೊಂಡು ರೂಮಿನ ಬಾಗಿಲಲ್ಲಿ ನಿಲ್ಲಿಸಿದರು. ಪೀಪಿ ತಂಡದವರ ಹಿಂದೆ ಮಕ್ಕಳು ನಿಂತಿವೆ. ರೂಮಿನಲ್ಲಿ ಗಲಾಟೆ ಹೇಳ ತೀರದು. ಒಬ್ಬರ ಮಾತು ಒಬ್ಬರಿಗೆ ಕೇಳಲು ಕಷ್ಟವಾಗಿದೆ. ದೊಡ್ಡವರು ಸಹ ಮಕ್ಕಳಂತೆ ಕುಣಿದಾಡುತ್ತಿದ್ದಾರೆ. ಒಬ್ಬ ಹುಡುಗನ ಹತ್ತಿರ ಗಂಡು ಗೊಂಬೆಯನ್ನೂ ಹುಡುಗಿ ಹತ್ತಿರ ಹೆಣ್ಣು ಗೊಂಬೆಯನ್ನು ಸಡಗರದಿಂದ ಹಿಡಿದು ಕೊಂಡಿದ್ದರು. ಮೆರವಣಿಗೆಯಿಂದ ಎಲ್ಲರೂ ಅಂಗಳಕ್ಕೆ ಬಂದರು. ದೊಡ್ಡವರ ಮದುವೆ ಈ ರೀತಿಯಾಗಿ ನಡೆಯುತ್ತೋ ಇಲ್ಲವೋ ಅಂತಾ ನನಗೆ ಅನುಮಾನವಾಯ್ತು. ಎಂದೂ ನೋಡದ ಮಕ್ಕಳ ಮದುವೆ ಮನಸ್ಸಿಗೆ ಹಿತಕರವಾಗಿ ಕಾಣಿಸಿತು.

ಗೊಂಬೆಗಳನ್ನು ಒಂದು ಕಡೆ ಕೂಡಿಸಿದರು. ಗಂಡು ಗೊಂಬೆಯ ಪಕ್ಕದಲ್ಲಿ ಹುಡುಗರ ಬಳಗವೂ, ಹೆಣ್ಣು ಗೊಂಬೆಯ ಪಕ್ಕದಲ್ಲಿ ಬಾಲಿಕೆಯರ ತಂಡವೂ ಕುಳಿತಿತ್ತು. ಮಕ್ಕಳು ಮಾಡುವ ಕಾರ್ಯವನ್ನೂ ಸಂತೋಷದಿಂದ ನೋಡುತ್ತಾ ನಿಂತೆ.

"ಗಂಡು ಹೆಣ್ಣಿಗೆ ಹೂವಿನ ಹಾರ ಹಾಕಿ ಎಂದರು",

ಗೊಂಬೆಗೆಂದೇ ಸಿದ್ಧ ಮಾಡಿದ ಹೂವಿನ ಹಾರಗಳನ್ನು ಚಿಕ್ಕಮ್ಮ ತಂದು ಕೊಟ್ಟರು. ಹುಡುಗನೂ ಹೆಣ್ಣು ಗೊಂಬೆಗೂ, ಹುಡುಗಿಯು ಗಂಡು ಗೊಂಬೆಗೂ ಹೂವಿನ ಹಾರವನ್ನೂ ಹಾಕಿದರು.

"ಮುಹೂರ್ತ ವೇಳೆಯಾಯಿತು ಮಾಂಗಲ್ಯ ಕಟ್ಟಿಸಿ ಬಿಡಿ" ಎಂದರು.

ಮಾಂಗಲ್ಯವಿದ್ದ ತಟ್ಟೆಯನ್ನು ಪುರೋಹಿತನಂತಿದ್ದ ಹುಡುಗನ ಕೈಲಿ ಕೊಟ್ಟರು. ಪುರೋಹಿತನು ಎಲ್ಲರಿಂದಲೂ ಮಾಂಗಲ್ಯವನ್ನು ಆಶೀರ್ವಾದ ಮಾಡಿಸಿಕೊಂಡು ತಂದ. ಅಕ್ಷತೆ ಕಾಳು ಎಲ್ಲರಿಗೂ ಹಂಚಲಾಯಿತು.

ಓಲಗ ಶಬ್ದ ಮಾಡಿದರು. ಪೀಪಿಗಳ ಗಲಾಟೆಯಲ್ಲಿ ಹುಡುಗ ತಾಳಿ ತೆಗೆದುಕೊಂಡು ಹೆಣ್ಣು ಗೊಂಬೆಗೆ ಕಟ್ಟಲು ಹೋದ.

"ಲೇ ಬಸವ, ತಾಳಿ ಕಟ್ಟ ಬೇಡ ನಿಲ್ಲಿಸು" ಅಂತಾ ಪಕ್ಕದಲ್ಲಿದ್ದ ಹುಡುಗನೆಂದ.

ಇವನೇಕೆ ಹೀಗೆ ಹೇಳುತ್ತಾನೆ ಅಂತಾ ನನಗೆ ದಿಕ್ಕೇ ತೋಚದಾಯಿತು.

"ಮುಹೂರ್ತ ವೇಳೆಯಲ್ಲಿ ಗಲಾಟೆ ಏಕೆ? ಇನ್ನೊಬ್ಬ ಹುಡುಗನೆಂದ.

"ವರದಕ್ಷಿಣೆ ಬರದ ಹೊರತೂ ಮಾಂಗಲ್ಯ ಕಟ್ಟಿಸಲು ಸಾಧ್ಯವಿಲ್ಲ ಕುಮಾರ್"

ಈ ಮಾತನ್ನು ಕೇಳಿ ಹೊಟ್ಟೆ ಹುಣ್ಣಾ

(೧೧ನೇ ಪುಟ ನೋಡಿರಿ)

ಅಮೃತಾಂಜನ
ಎಲ್ಲಾ ನೋವುಗಳಿಗೆ ಸಿದ್ಧೌಷಧ
ಎಲ್ಲಾ ತರದ ಸಿಡಿತ ಮತ್ತು ನೋವುಗಳಿಗೆ

50 ವರ್ಷ ಪ್ರಾಯದ
ಪಾಕೆಟ್ ಡಾಕ್ಟರ್
ಅಮೃತಾಂಜನ ಲಿ. ಬೊಂಬಾಯಿ, ಮದ್ರಾಸ್, ಕಲ್ಕತ್ತಾ

ಆಕರ್ಷಣೀಯ ಬಡ್ಡಿ ದರಗಳು
1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3
(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)
ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.
ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.
(ಶೆಡ್ಯೂಲ್ಡ್ ಬ್ಯಾಂಕ್)
ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ

PHONE 203

ESTD 1926
FOUNDATION STONE
Engraved
MARBLE TABLETS
(GOLD FILLED & LEAD FILLED)
Crown RUBBER STAMP CO.
BALMATTA ROAD, MANGALORE.

ಸತ್ಯ ಶೋಧನೆ

ಸಿಂಕಿಯಾಂಗಿನ ಮೇಲೆ ಗೃಧ್ರ ದೃಷ್ಟಿ

ಸಿಂಕಿಯಾಂಗ್—ರಷ್ಯಾ ಮತ್ತು ಚೈನಾಗಳ ನಡುವಣ ಕಲಹಕಾರಣ ಗಡಿ ಪ್ರದೇಶವೂ ಇತ್ತೀಚಿನ ಕೆಲ ವಾರಗಳಿಂದ ಪ್ರಪಂಚದ ಪ್ರಮುಖ ಪತ್ರಿಕೆಗಳಲ್ಲಿ ಪ್ರಮುಖ ಸ್ಥಾನವನ್ನು ಪಡೆದಿದೆ. ಹಿಂದೊಮ್ಮೆ ಯುರೋಪು ಮತ್ತು ದೂರ ಪ್ರಾಚ್ಯಗಳ ನಡುವಣ ಸಂಪರ್ಕ ಕೊಂಡಿಯಂತಿದ್ದ ಸಿಂಕಿಯಾಂಗ್ ಇಂದು ಎರಡು ರಾಕ್ಷಸ ಸದೃಶ ಕಮ್ಯೂನಿಸ್ಟ್ ರಾಷ್ಟ್ರಗಳನ್ನು ಬೇರ್ಪಡಿಸಲು ಮುಖ್ಯ ಕಾರಣವಾಗಿ ಬಿಟ್ಟಿದೆ.

ಸೋವಿಯಟ್ ಗಣರಾಜ್ಯ ಕಝಾಕ ಸ್ಥಾನದಿಂದ ಬರುತ್ತಿರುವ ವರದಿಗಳಿಂದ ಶೋಚನೀಯ ಸ್ಥಿತಿಯ ಅರಿವಾಗುತ್ತದೆ. ಸಿಂಕಿಯಾಂಗ್ ಕಝಾಕಸ್ಥಾನಗಳು ಅಕ್ಕಪಕ್ಕದ ರಾಜ್ಯಗಳಿವೆ. ಸಿಂಕಿಯಾಂಗಿನ ಸ್ವಾತಂತ್ರ್ಯಪ್ರಿಯ ಗುಡ್ಡಗಾಡಿನ ಜನರು ಬಲಿಷ್ಠ ಮಾನವರು, ಚೈನಿ ಕಮ್ಯೂನಿಸ್ಟರ ಕಾಟಗಳಿಂದಾಗಿ ತುಂಟರಾಗುತ್ತಾ ಬರುತ್ತಿದ್ದಾರಲ್ಲದೆ, ಅಲ್ಲಿಂದ ಸೋವಿಯಟ್ ದೇಶಗಳೊಳಗೆ ತಲೆತಪ್ಪಿಸಿಕೊಂಡು ಓಡಿ ಹೋಗುತ್ತಿದ್ದಾರೆ

'ಪ್ರವ್ಡಾ' ಪತ್ರಿಕೆಯು ಒಂದು ಸುದ್ದಿಯನ್ನು ಪ್ರಕಟಿಸಿ ಪ್ರಪಂಚವನ್ನು ಗಾಬರಿಗೊಳಿಸಿಬಿಟ್ಟಿತು: ಈ ಗಡಿ ಪ್ರದೇಶದಿಂದ ಕಳೆದ ವರ್ಷ ಜನಗಟ್ಟಲೆ ಕುಟುಂಬಗಳು ಓಡಿಹೋಗಿರುತ್ತವೆ. ಅವು ರಾಷ್ಟ್ರೀಯ ಅಲ್ಪಸಂಖ್ಯಾಕರೆಂದು ಕರೆಯಲ್ಪಡುವವರ ಪ್ರತಿನಿಧಿಗಳಾಗಿದ್ದುವು. ಆ ಕುಟುಂಬಗಳು ಹಸಿವಿನಿಂದ ಕಂಗೆಟ್ಟಿದ್ದುವು. ದೇಹ ಮುಚ್ಚಿಕೊಳ್ಳಲು ಬಟ್ಟೆ ಇಲ್ಲದೆ ನಿಸರ್ಗದೊಂದಿಗೆ ಒಂದಾಗಿದ್ದುವು. ಸರಿಯಾದ ಪಾದರಕ್ಷೆಗಳಿಲ್ಲದ ಕಾರಣ ಅವರ ಬೆರಳುಗಳು ಪಾದರಕ್ಷೆಗಳಿಂದ ಹೊರ ಇಣಿಕಿ ನೋಡುತ್ತಿದ್ದುವು. ಚೈನಿ ಗಡಿ ರಕ್ಷಕರೇನೋ ಬಹಳ ಜಾಗ್ರತೆಯಿಂದಿದ್ದಾರೆ. ಓಡಿ ಹೋಗುತ್ತಿದ್ದಾರೆಂಬ ಅನುಮಾನ ಬಂದರೂ ಸರಿ, ಒಡನೆ, ಅಗ್ನಿವರ್ಷಾರಂಭವಾಗುತ್ತವೆ. ಹಾಗಿದ್ದರೂ ಜನಪ್ರವಾಹ ಕಳ್ಳತನದಿಂದ ಎಡೆಬಿಡದೆ ಸಾಗುತ್ತಿದೆ. ಗಡಿಪ್ರದೇಶದಲ್ಲಿರುವ ಚೈನೇತರ ಪ್ರಜೆಗಳನ್ನು ಅಲ್ಲಿಂದ ಎಬ್ಬಿಸಿ ಬೇರೆಡೆ ಶಿಬಿರಗಳಲ್ಲಿ ರಾತಿರಾತ್ರಿ ಕಲಾಗಿರುತ್ತದೆ. ರಷ್ಯದ ಗಡಿಪ್ರದೇಶದಿಂದ ನೋಡಿದರೂ ಕಾಣಸಿಗುತ್ತದೆ, ಸಂಕೋಲೆಗಳಿಂದ ಬಂಧಿಸಲ್ಪಟ್ಟಿರುವ ಜನರು ಬೆಟ್ಟಗಳಲ್ಲಿ ರಸ್ತೆಗಳನ್ನು ಮಾಡುತ್ತಿರುವದು.

ಕಝಾಕರು, ಖಿಗಿಸಜರು, ಉಯಿಗುರರು ಮುಂತಾದ ಸಿಂಕಿಯಾಂಗಿನ ಪ್ರಾಂತ್ಯದ ಗುಡ್ಡಗಾಡಿನ ಜನರನ್ನು ಗಡಿಪ್ರದೇಶದಿಂದ ಒಳಪ್ರದೇಶಗಳಿಗೆ ಕರೆದುಕೊಂಡೊಯ್ದಿರುವ ಸುದ್ದಿಗಳೂ ರಷ್ಯದ ಪತ್ರಿಕೆಗಳಲ್ಲಿ ಪ್ರಕಟವಾಗಿರುತ್ತವೆ.

ಶಾಲಾ ಉಪಾಧ್ಯಾಯರೊಬ್ಬರು ಚೈನಿ ಕಮ್ಯೂನಿಸ್ಟರ ಕಣ್ಣು ತಪ್ಪಿಸಿಕೊಂಡು ರಷ್ಯಾಕ್ಕೆ ಓಡಿಹೋದರು. ತನ್ನನ್ನು ಚಿಯಾಂಗ್ ಕೈ—ಶೇಖ್ ಸರಕಾರ ಮಾತ್ರ ಸೆರೆಮನೆ ಯಲ್ಲಿಟ್ಟದ್ದಲ್ಲ, ಕಮ್ಯೂನಿಸ್ಟ್ ಸರಕಾರ ಸಹಾ ಸೆರೆಮನೆಯಲ್ಲಿಟ್ಟದ್ದೆಂದು ಅವರು ತಿಳಿಸಿರುವರು. ಆವರು ಮಾಡಿದ್ದ ಅಪರಾಧವಾದರೂ ಏನು? ಕಝಾಕರು ಚೈನೀಯರೆಂದು ಪಠ್ಯ ಪುಸ್ತಕಗಳಲ್ಲಿ ತಿದ್ದಿ ಬರೆಯಲು ತಿರಸ್ಕರಿಸಿದುದೇ ಆ ಮಹಾಪರಾಧ!

ಇದೀಗ ಜಗತ್ತಿನ ಕುತೂಹಲವನ್ನು ಕೆರಳಿಸಿರುವ ಸಿಂಕಿಯಾಂಗ್ ಪ್ರಾಂತ್ಯವು ಬಹಳ ಹಿಂದಿನಿಂದಲೂ ರಷ್ಯಾ—ಚೈನಾಗಳ ನಡುವಣ ಪಂದ್ಯಾಟದ ಪ್ರದೇಶವಾಗಿತ್ತು. ಅಷ್ಟೇ ಏನು? ಈ ಪ್ರದೇಶವನ್ನು ತಮ್ಮ ಭದ್ರ ಮುಷ್ಟಿಯೊಳಗಿಟ್ಟುಕೊಳ್ಳಲು ಚೈನೀಯರು ಎಡೆಬಿಡದೆ ಪ್ರಯತ್ನಿಸುತ್ತಲೇ ಬಂದಿರುವರಾದರೂ ಇಲ್ಲಿಯ ಸ್ವಾತಂತ್ರ್ಯಪ್ರೇಮಿ ಜನರು ಕ್ರಾಂತಿ ನಡೆಸುತ್ತಲೇ ಇದ್ದರು.

ಸಿಂಕಿಯಾಂಗ್ ಪದದ ಅರ್ಥವೇ ಹೊಸ ಗಡಿ ಪ್ರದೇಶವೆಂದಿದೆ. ೧೮೮೪ರ ವರೆಗೂ ಸಿಂಕಿಯಾಂಗ್ ಸ್ವಾತಂತ್ರ್ಯವನ್ನು ಕಾಪಾಡಿಕೊಂಡು ಬಂದಿತ್ತು. ೧೮೮೪ರಲ್ಲಿ ಒಂಭತ್ತು ಹೊಸ ಪ್ರಾಂತ್ಯಗಳನ್ನು ಸಂರಕ್ಷಣಾ ಹೆಸರಿನಿಂದ ಕೇಂದ್ರ ಚೈನಾದ ಆಡಳಿತಕ್ಕೊಳಪಡಿಸಿಕೊಳ್ಳಲಾಯಿತು. ಆಗ ಚೈನಾದಲ್ಲಿದ್ದದ್ದು ಹತ್ತೊಂಭತ್ತು ಪ್ರಾಂತ್ಯಗಳು. ಹತ್ತೊಂಭತ್ತನೇ ಶತಮಾನದ ಹಿಂದೆ ಈ ಪ್ರಾಂತ್ಯದ ಉತ್ಥಾನ ಪತನವು ಕೇಂದ್ರ ಏಷ್ಯಾ ಸಾಮ್ರಾಜ್ಯದ ಏಳುವಿಕೆ ಬೀಳುವಿಕೆಗಳ ಮೇಲೆ ಹೊಂದಿಕೊಂಡಿತ್ತು.

೧೮೬೪ರಲ್ಲೇ ರಷ್ಯಾವು ಸಿಂಕಿಯಾಂಗಿನ ಈ ವಿಭಾಗವನ್ನು ತನ್ನ ಆಳ್ವಿಕೆಯೊಳಗೆ ಸೇರಿಸಿಕೊಂಡಿತ್ತು. ೧೮೭೧ರಲ್ಲಿ ಸಿಂಕಿಯಾಂಗಿನ ನಿಮಿತ್ತ ರಷ್ಯಾ-ಚೈನಾಗಳ ನಡುವೆ ದೊಡ್ಡ ಯುದ್ಧವಾಗುವದಿತ್ತು. ಆಗ ಮುಸಲ್ಮಾನರ ಮುಖಂಡ ಯಾಕೂಬ ಬೇಗನು ಚೈನೀಯರ ವಿರುದ್ಧ ದಂಗೆ ಎದ್ದು, ಬ್ರಿಟಿಷರ ಸಹಾಯವನ್ನು ಪಡೆದು ಯುದ್ಧ ಹೂಡುವದಾಗಿ ಹೆದರಿಸಿದ್ದನು ಆಗ ಚೆಂಗ್ ಮನೆತನ ಚೈನಾದಲ್ಲಿ ಆಳಿಕೊಂಡಿತ್ತು. ಅದ, ಕ.ಮಶಃ ಕೆನ್ಸಿ, ಕಾಂಸು, ಮತ್ತು ಸಿಂಕಿಯಾಂಗಿನ ಅನೇಕ ಸ್ಥಳಗಳಲ್ಲಿ ದಂಗೆಯನ್ನಡಗಿಸಿತು. ಕೊನೆಯಲ್ಲಿ ಯಾಕೂಬ್ ಬೇಗನ, ಕೊಲೆ ಮಾಡಿಕೊಂಡನು. ಹೀಗಾಗಿ, ಇಲಿ ಬಿಟ್ಟೀದ ಪ್ರದೇಶವೆಲ್ಲಾ ಚೈನಾದ ಆಡಳಿತಕ್ಕೊಳಪಟ್ಟಿತು. ಇಲಿ ರಷ್ಯನರ ಕೈಯಲ್ಲೇ ಉಳಿಯಿತು. ಸಿಂಕಿಯಾಂಗ್ ಶಾಂತ ಪರಿಸ್ಥಿತಿಗೆ ಬಂದೊಡನೆ ಇಲಿಯನ್ನು ಬಿಟ್ಟುಕೊಡುವದಾಗಿ ಮೊದಲು ಅವರೇನೋ ಹೇಳುತ್ತಿದ್ದರು. ಸಿಂಕಿಯಾಂಗಿನಲ್ಲಿ ದಂಗೆ ನಿಂತೊಡನೆ ಚೆಂಗ್ ಮನೆತನದವರು ಇಲಿಯನ್ನು ಬಿಟ್ಟುಕೊಡಲು ರಷ್ಯನರನ್ನು ಕೇಳಿಕೊಂಡರು. ಆಗ ರಷ್ಯವು ತುರ್ಕಿಗಳೊಂದಿಗೆ ಹೋರಾಡುತ್ತಿತ್ತು. ಚೈನಾವು ಎಲ್ಲಿಯಲ್ಲಿ ಶಾಂತಿಯನ್ನು ಕಾಯ್ದುಕೊಳ್ಳುವೆನೆಂಬ ಆಶ್ವಾಸನೆಯನ್ನೀಯ ಬೇಕಲ್ಲದೆ, ಅಷ್ಟರ ವರೆಗ ಚೈನಾದ ಪರವಾಗಿ ಇಲಿಯನ್ನು ನೋಡಿಕೊಂಡುದುದಕ್ಕಾಗಿ ಪ್ರತಿಫಲವನ್ನು ಕೊಡಬೇಕೆಂದು ರಷ್ಯವು ಹೇಳಿತು. ೧೮೭೯ರಲ್ಲಿ ಚೆಂಗ್ ನ್ಯಾಯಾಲಯವು ಚಂಗ್-ಹೋನನ್ನು ಒಪ್ಪಂದ ನಡೆಸಲು ಪ್ರತಿನಿಧಿಯನ್ನಾಗಿ ಕಳುಹಿಸಿತು. ಒಂದು ನಿಶ್ಚಯಕ್ಕೆ ಬರಲು ಅವನಿಗೆ ಒಂದು ವರ್ಷ ಬೇಕಾಯಿತು ಆ ಒಪ್ಪಂದಕ್ಕೆ ಲಿವಾಡಿಯಾ ಒಪ್ಪಂದವೆನ್ನಲಾಗುತ್ತದೆ ಒಪ್ಪಂದದ ಮುಖ್ಯ ಸಾರಾಂಶ ಈ ರೀತಿ ಇದೆ:— ರಷ್ಯಾಕ್ಕೆ ಸೈನಿಕ ಖರ್ಚೆಂದು ಐದು ಮಿಲಿಯ ರೂಬೆಲ್‌ಗಳನ್ನು ಚೈನಾ ಕೊಡಬೇಕಲ್ಲದೆ ತೇಕ್ ನದಿಯ ಬಳಿಯಿರುವ ಕಣಿವೆಯನ್ನು ಇಲಿಯ ದಕ್ಷಿಣ ಭಾಗವನ್ನೂ ರಷ್ಯಾಕ್ಕೆ ಬಿಟ್ಟು ಕೊಡಬೇಕು.

ಈ ಒಪ್ಪಂದದಿಂದ ಚೆಂಗ್ ದರ್ಬಾರಿಗೆ ಕೋಪ ಬಂತು. ರಾಷ್ಟ್ರದ ಭೂ ಪ್ರದೇಶವನ್ನು ಇತರರಿಗೆ ಬಿಟ್ಟುಕೊಡುವ ಹಕ್ಕು ಚಂಗ್‌ನಿಗೆ ಇರುವುದಿಲ್ಲ. ಹಾಗೆ ಬಿಟ್ಟುಕೊಡುವದು ಮಾನಾಪಮಾನದ ಪ್ರಶ್ನೆಯಿದೆ. ಚೈನಾದಲ್ಲಿದ್ದ ದೊಡ್ಡ ಜನರೆಲ್ಲರೂ ಯುದ್ಧ ಸಾರಲು ಸರಕಾರವನ್ನು ಕೇಳಿಕೊಂಡರು. ಹಾನ್‌ಲಿನ್ ವಿದ್ಯಾಲಯದಲ್ಲಿ ಶಿಕ್ಷಕನಾಗಿದ್ದ ಚಾಂಗ್- ಚಿ-ತುಂಗನು ಯುದ್ಧ ಉದ್ದೇಶದ ಪಕ್ಷಪಾತಿಯಾಗಿದ್ದನು. ಅವನು ಸಿಂಹಾಸನಕ್ಕೆ ಕಳುಹಿಸಿದ್ದ ನಿವೇದನ ಪತ್ರದ ಒಂದು ಅಂಕೆ ಇಂದೂ ಓದಬೇಕಾಗಿರುವ ವಿಷಯವಿದೆ. ಅದರಲ್ಲಿ ಈ ರೀತಿ ಇದೆ:—

"ರಷ್ಯಾವನ್ನು ತಡೆಯುವ ಕಾರ್ಯ ಜಯಪ್ರದವಾಗಬೇಕು. ಒಂದು ವೇಳೆ ರಷ್ಯನರೇ ಜಯಶಾಲಿಗಳಾಗುತ್ತಾರೆನ್ನೋಣ. ಆಗ ಇಡೀ ರಾಷ್ಟ್ರದ ಶಾಂತತೆಯನ್ನು ಕದಡಿಸಲು ಅವರಿಗೆ ಸಾಧ್ಯವಾಗುವದಿಲ್ಲ ಬಹಳ ಸಮಯ ಸಮರಾಂಗಣದಲ್ಲೇ ಇರಬೇಕಾಗುವದರಿಂದ ಅವರಲ್ಲಿ ಆಹಾರ— ಸಂಪತ್ತಿನ ಕೊರತೆ ಕಂಡು ಬರುತ್ತದೆ. ಅವರ ಶಕ್ತಿ ಕುಂದುವದೂ ಸ್ವಾಭಾವಿಕವಾಗಿರುತ್ತದೆ. ಹಾಗಿರುವಾಗ ನಾವ್ಯಾಕೆ ಅವರಿಗೆ ಹೆದರಿಕೊಂಡಿರಬೇಕು. ಇಂದು ನಾವು ಯುದ್ಧ ಮಾಡಿದಲ್ಲಿ ನಾಳೆ ದಿಶೆ ಬದಲಾಗುವುದು. ಚೈನಾ ಪ್ರಬಲ ಅಥವಾ ದುರ್ಬಲ ರಾಷ್ಟ್ರವಾಗಿರಬಹುದು......."

ಆ ಸಮಯದಲ್ಲಿ ಬ್ರಿಟಿಷರು ಚೈನೀಯರಿಗೆ ಅಡ್ಡ ಬಂದರು. ಆಂಗ್ಲೇಯರ ಪ್ರಭಾವ ಆ ಸಮಯದಲ್ಲಿ ಚೈನೀಯರ ಮೇಲೆ ಬಿದ್ದಿತ್ತು. ಹಾಗಾಗಿ ಚೈನಾ ರಷ್ಯಾಗಳ ನಡುವೆ ಹೊಸ ಒಪ್ಪಂದ ನಡೆಯಿತು. ಇನ್ನಷ್ಟು ಸಂಪತ್ತನ್ನು ಯಾಚಿಸಿ ಇಲಿಯನ್ನು ಬಿಟ್ಟುಕೊಡಲು ರಷ್ಯಾ ಒಪ್ಪಿತು.

ಅಂದಿನಿಂದ ಸಿಂಕಿಯಾಂಗ್ ಪ್ರತ್ಯೇಕ ಪ್ರಾಂತ್ಯವಾಗುಳಿದುಕೊಂಡು ಬಂದಿದೆ. ಹಾಗೆ ಮಾಡಿದರೂ ಸಿಂಕಿಯಾಂಗಿನಲ್ಲಿ ತಮ್ಮ ಪ್ರಭಾವ ಬೀರಲು ಚೈನೀಯರಿಗೆ ಸಾಧ್ಯವಾಗಲಿಲ್ಲ ಆ ಪ್ರದೇಶದ ಆಡಳಿತ ನೋಡಿಕೊಳ್ಳಲು ಬಂದಿದ್ದ ಟ್ಸೊ ಟ್ಸುಂಗ್—ಟಾಂಗನು ರಾಜದರ್ಬಾರಿಗೆ ಕಳುಹಿಸಿದ್ದ ಒಂದು ಪತ್ರದ ಸಾರಾಂಶ ಈ ರೀತಿ ಇದೆ:—

"ಸಿಂಕಿಯಾಂಗಿನಲ್ಲಿ...... ಮಹಮ್ಮದೀಯರೂ ಚೈನೀಯರೂ ಒಟ್ಟೊಟ್ಟಿಗೆ ಜೀವಿಸುವಂತಿಲ್ಲ. ಅಧಿಕಾರಿಗಳ ಹಾಗೂ ಜನರ ನಡುವೆ ಬಹಳ ಅಂತರವಿದೆ. ಹಾಗಿರುವದರಿಂದ, ಏನಾದರೂ ಕಾನೂನು ಅಥವಾ ನಿಯಮವನ್ನು ಪ್ರಯೋಗಕ್ಕೆ ತರುವದೆಂದರೆ ಬಹಳ ಕಷ್ಟವಿದೆ. ಸರಕಾರೀ ನಿಬಂಧನೆಗಳನ್ನು ಮೊದಲು ಮುಸಲ್ಮಾನರ ಮುಂದಾಳುಗಳಿಗೆ ವಿವರಿಸಿ ಹೇಳಬೇಕಾಗಿರುತ್ತದೆ. ಇದ. ಒಂದು ದೊಡ್ಡ ತಡೆ ಇದೆ. ನಾವು ಬರೆಯುವ ಹಾಗೂ ಮಾತಾಡುವ ಭಾಷೆಯನ್ನು ಇಲ್ಲಿಯ ಮಹಮ್ಮದೀಯ ಮಕ್ಕಳಿಗೆ ಹೇಳಿ ಕೊಡಲು ಧರ್ಮಾರ್ಥ ಶಾಲೆಗಳನ್ನು ತೆರೆಯಬೇಕು. ನಮ್ಮ ಭಾಷೆಯನ್ನು ಅವರಿಗೆ ಕಲಿಸಿಕೊಟ್ಟೆವೆಂದರೆ ಆಗ ಇಲ್ಲಿಯ ಆಡಳಿತ ನಡೆಸು

(೧೦ನೇ ಪುಟ ನೋಡಿರಿ)

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ........

ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ

1—1—1963ರಿಂದ ಠೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ

ನಿಮ್ಮ ಉಳಿತಾಯವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ಶ್ರೀ ಕೆ. ಕೆ. ಶೆಟ್ಟಿ, ಎಂ.ಎಲ್.ಸಿ.ಯವರ

ಕ್ರಾಂತಿಕಾರಿ ಲೇಖನಿಯ

ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ!	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಟಪ್ಪಾಲು ಖರ್ಚು ಪ್ರತ್ಯೇಕ. ವಿವರವಾದ ಕೆಟಲಾಗಿಗೆ ಹತ್ತು ನ. ಪೈ. ಸ್ಟಾಂಪಿನೊಂದಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ

ಬೇಕಾಗಿದ್ದಾರೆ

ಭಾರತದ ಶ್ರೇಯೋ ಸಾಧನೆಗೆ!

[ಲಾಲಾ ಲಜಪತರಾಯರ ಹೆಸರನ್ನು ಕೇಳದವರಾರು? ಭಾರತದ ಪ್ರಾತಃ ಸ್ಮರಣೀಯ ಜನನಾಯಕರಾದ ಅವರು ಬಹು ವರ್ಷಗಳ ಹಿಂದೆ ಬರೆದ ಈ ಕೆಳಗಿನ ಬರವಣಿಗೆ ಸ್ವಾತಂತ್ರ್ಯ ಬಂದು ೧೬ ವರ್ಷ ಕಳೆದ ಮೇಲೂ ಜನರಿಗೆ ದಿಕ್ಸೂಚಿಯಂತಿದೆ. "ಭಾರತಕ್ಕೆ ಇವರು ಬೇಕಾಗಿದ್ದಾರೆ" ಎಂಬ ಅವರ ಅಂದಿನ ಲೇಖನದಲ್ಲಿ ಬೇಡಿದ ಜನ ಇಂದೂ ದೊರೆಯುವದು ದುಸ್ತರವಾಗಿರುವುದೇ ನಮ್ಮ ದೇಶದ ದುರ್ದೈವ]

ಸತ್ತಾಧಿಕಾರಿಗಳು — ಯಾರು ಸತ್ತೆ (ಅಧಿಕಾರ) ಯನ್ನು ನಡೆಯಿಸುವದಿಲ್ಲವೋ ಪ್ರತಿಯೊಬ್ಬರೂ ಸ್ವತಹ ತಾವು ತಮ್ಮ ಸ್ವಾಮಿಯಾಗುವಂತೆ ಉತ್ತೇಜನ ನೀಡುವರೋ, ತನಗಿರುವ ಅಧಿಕಾರವನ್ನು ತನ್ನ ಮತ್ತು ತನ್ನವರ ಹಿತಕ್ಕಾಗಿ ಉಪಯೋಗಿಸಿಕೊಳ್ಳುವದಿಲ್ಲವೋ ಅವರು ಬೇಕು.

ಅಧಿಕಾರ ವರ್ಗ—ಯಾರು ಸ್ವಂತ ಪ್ರತಿಷ್ಠೆ, ಗೌರವ, ಸ್ವಾರ್ಥ ಕಾಮನೆಗಳಿಂದ ಕುರುಡಾಗದೆ ನ್ಯಾಯ, ಸತ್ಯ, ಜನಹಿತಗಳನ್ನು ಕುರಿತು ವಿಚಾರಮಾಡಿ ಅದರಂತೆ ನಡೆಯುವರೋ ಅಂಥಾ ಅಧಿಕಾರಿ ವರ್ಗ.

ಜಮೀನ್ದಾರರು—ಯಾರು ತಮ್ಮ ಕುಳಗಳ ಹಿತಕ್ಕಿಂಥಾ ತಮಗೆ ಬರುವ ಆದಾಯದತ್ತ ದೃಷ್ಟಿ ಹರಿಸದೆ ತಮ್ಮ ಕುಳಗಳ ಆಗತ್ಯ, ಆರೋಗ್ಯಕರ ಜೀವನಕ್ಕೆ ಗಮನವೀಯುವರೋ ಅವರು.

ಉಪದೇಶಕರು—ಯಾರು ಬರೀ ಸಿದ್ಧಾಂತವನ್ನು ಉಪದೇಶಿಸಿ ಅಷ್ಟಕ್ಕೇ ವಿರಮಿಸುವುದಿಲ್ಲವೋ, ಶುಷ್ಕ ಸಿದ್ಧಾಂತಗಳಿಂದ ತೃಪ್ತರಾಗದೆ ಕಾರ್ಯತಃ ಮಾಡಿ ತೋರಿಸುವರೋ ಅಂಥಾ ಉಪದೇಶಕರು.

ದೇಶಭಕ್ತರು— ಸ್ವಲಾಭವನ್ನು ನೋಡದೆ ತಮ್ಮ ದೇಶದ ಹಿರಿಯ ಘನತೆ, ಸಂಸ್ಕೃತಿಗಳನ್ನು ತಿಳಿದುಕೊಂಡು ಆದರ ಉದ್ಧಾರ ಹಾಗೂ ಉತ್ಥಾನಕ್ಕಾಗಿ ಅಹೋ ರಾತ್ರಿ ದುಡಿಯುವರೋ ಅವರು.

ತರುಣರು— ಮಾನವೀಯತೆ, ಸನ್ಮಾನ, ಶೀಲಗಳಿಗೆ ಗೌರವವಿತ್ತು ಭೌತಿಕ ಸುಖಗಳನ್ನು ಕಡೆಗಣಿಸಿ, ವಯುಕ್ತಿಕ ಲಾಭವನ್ನು ನಿರ್ಲಕ್ಷಿಸಿ ಸಮಾಜದ ಹಿತ ಚಿಂತನೆ ಮಾಡುವರೋ ಅವರು.

ಪತಿಗಳು— ಪ್ರೇಮವಿತ್ತು, ಸೇವೆ ಸಲ್ಲಿಸಿ, ಸಹಕರಿಸಿ ದುಡಿದು ಪತ್ನಿಯ ವ್ಯಕ್ತಿತ್ವದ ಮೇಲೆ ತಮ್ಮ ಹುಲುಮೆಯನ್ನು ಹೇರದೆ, ಅವರ ವ್ಯಕ್ತಿತ್ವವನ್ನು ತೊತ್ತುಳಿಯದೆ ಬೆಳೆಸುವರೋ ಅವರು.

ಪತ್ನಿಗಳು— ತನ್ನ ಪುರುಷನ ಸಹಧರ್ಮಿಣಿಯೆಂದು ಭಾವಿಸಿ, ಅನ್ಯಾಯ ಜುಲುಮೆಗಳಿಗೆ ಬಲಿ ಬಾಗದೆ, ಮಾನ ಹಾನಿಗೆಡೆಗೊಡದೆ, ಪ್ರೇಮ. ಭಕ್ತಿ, ಸೇವೆಗಳೆಂಬ ಗುಣಗಳನ್ನು ಜೋಕೆಯಿಂದ ಬೆಳೆಸಿಕೊಳ್ಳುವರೋ ಅವರು.

ನಾಯಕರು— ಜನ ಜಂಗುಳಿಯ ಬಾಲ ಹಿಡಿದು ಅವರ ಕೈಗೊಂಬೆಯಾಗಿರದೆ ಜನತೆಯ ಮುಂದೆ ನಿಂತು ನಿಜವಾದ ದಾರಿ ತೋರುವವರು ಜನತೆಯಲ್ಲಿ ವಿಶ್ವಾಸವನ್ನು ಕೆರಳಿಸಿ ಮಹಾ ಸಾಧನೆಗಳಿಗೆ ಅಣಿಗೊಳಿಸಬಲ್ಲವರು.

ಅಧ್ಯಾಪಕರು — ವಿದ್ಯಾರ್ಥಿಗಳು ಸ್ವತಹ ವಿಚಾರಿಸುವಂತೆ ಕಲಿಸಿ ಸ್ವತಂತ್ರ ಮನೋಭಾವವನ್ನು ಬೆಳಸಿ, ತಾವು ಬೋಧಿಸುವದೇ ನಿತ್ಯ ಸತ್ಯವಲ್ಲವೆಂಬ ಅರಿವನ್ನು ಹೆಚ್ಚಿಸಿ ಜ್ಞಾನದ ಅನ್ವೇಷಣೆ ಮಾಡುವಂತೆಸಗುವರೋ ಅವರು.

ಸಂಪಾದಕರು— ಮಾನವ ನಿಜ ಕಲ್ಯಾಣ ವಿಷಯಗಳಿಗೆ ಪ್ರಾಶಸ್ತ್ಯವಿತ್ತು, ವ್ಯಕ್ತಿಗತ ದೋಷಾವಿಷ್ಕರಣದ ರಾಡಿ ಸಿಡಿಸುವ ಲೇಖನಗಳಿಗೆ ಇಂಬುಗೊಡದೆ ವ್ಯಕ್ತಿಗತ ಗಾಂಭೀರ್ಯಕ್ಕೂ, ಸಾಮಾಜಿಕ ಪ್ರಗತಿಗೂ, ರಾಷ್ಟ್ರದ ಹಿರಿಮೆಗೂ ಸಹಾಯಕವಾಗುವರೋ ಅವರು.

ಸಂಘಟಕರು— ದೇಶೋನ್ನತಿಯ ದೃಷ್ಟಿ ಇಟ್ಟು, ಸ್ವಂತ ಅಧಿಕಾರ, ಪ್ರತಿಷ್ಠೆಗಳನ್ನು ಹಾಗೂ ತಮ್ಮ ಪಕ್ಷ ಹಾಗೂ ಪಕ್ಷದ ಫಂಡಿನ ಬೆಳವಣಿಗೆಯ ದೃಷ್ಟಿ ಇಡದೆ ನಿಜವಾದ ಸೇವೆಗಾಗಿ ಸಂಘಟನೆ ಮಾಡುವರೋ ಅವರು.

—ಲಾಲಾ ಲಜಪತರಾಯರ ಅಭಿಪ್ರಾಯಗಳು

'ಕ್ರಿಸ್‌ಮಸ್'ನ ಸುಸಂದರ್ಭದಲ್ಲಿ ಕ್ಷಯರೋಗಿಯ ಕುರಿತು ಯೋಚಿಸಿ!

'ಕ್ರಿಸ್‌ಮಸ್'ನ ಪರ್ವದಿನಗಳು ಎಂದಿನಂತೆ ಪುನಃ ಸಮೀಪಿಸುತ್ತಿವೆ. ಎಲ್ಲೆಲ್ಲಿಯೂ ಉಲ್ಲಾಸ ಮತ್ತು ಸಮಾಶಯ ಹಾಗೂ ಸುಖಸಂತೋಷಗಳು ತುಂಬಿವೆ. ಆದರೆ ತನ್ನ ಬಾಳ್ವೆಯ ಅಸ್ಥಿರತೆಗಾಗಿ ಪರಿತಪಿಸುತ್ತಿರುವ, ನರಕಯಾತನೆಗೊಳಗಾಗಿರುವ ಕ್ಷಯರೋಗಿಗೆ, 'ಕ್ರಿಸ್‌ಮಸ್'ನ ಸಂತೋಷವಾದರೂ ಎಲ್ಲಿಂದ? ನರಳುವ ಕ್ಷಯರೋಗಿಗೆ ಸಹಾಯ ಮಾಡುವ ಸದುದ್ದೇಶಕ್ಕಾಗಿಯೇ ಟಿ ಬಿ ಮೊಹರು ಮಾರಾಟ ಚಳವಳವು ಉಪಕ್ರಮಿಸಲ್ಪಟ್ಟಿದೆ. ಅವನಿಗೆ ನೆರವು ನೀಡುವುದಕ್ಕಾಗಿ ಟಿ ಬಿ ಮೊಹರುಗಳನ್ನು ಕೊಂಡುಕೊಂಡು ಅವನ್ನು ನಿಮ್ಮ ಪತ್ರಗಳು, ಶುಭಾಶಯ ಕೋರುವ ಕಾರ್ಡುಗಳು, ಉಡುಗೊರೆ ಪಾರ್ಸೆಲುಗಳು ಇವುಗಳ ಮೇಲೆ ಅಂಟಿಸಿರಿ. ಈ ನಿಮ್ಮ ಸತ್ಕ್ರಿಯೆಯು ಯಾತನೆ ಪಡುವ ಕ್ಷಯರೋಗಿಗಳಿಗೆ ಆನಂದವನ್ನುಂಟುಮಾಡುತ್ತದೆ.

ಒಂದು ಟಿ ಬಿ ಮುದ್ರೆಯ ಬೆಲೆ 10 ನಯೇಪೈಸೆ ಮಾತ್ರ.

ಟಿ ಬಿ ಮುದ್ರೆಗಳು— ದಕ್ಷಿಣ ಕನ್ನಡ ಜಿಲ್ಲಾ ಕ್ಷಯರೋಗ ಸಮಿತಿ, ಸರಕಾರಿ ವೆನ್‌ಲೊಕ್ ಆಸ್ಪತ್ರೆ, ಮಂಗಳೂರು ಮತ್ತು ಆದರ ಬೇರೆ ಬೇರೆ ಏಜನ್ಸಿಗಳಲ್ಲಿ ದೊರೆಯುತ್ತವೆ.

14ನೆಯ ಟಿ ಬಿ ಮೊಹರು ಮಾರಾಟ ಚಳವಳ

(ಭಾರತದ ಕ್ಷಯರೋಗ ಸಮಿತಿ, ನವದೆಹಲಿ, ಇವರಿಂದ ನಡೆಸಲ್ಪಡುವಂತಹದು)

ಈ ಸ್ಥಳದ ದಾತೃಗಳು:

M/s Jessop & Co. Ltd., Calcutta.

'ಭವತಿ ಭಿಕ್ಷಾಂ ದೇಹಿ!'

ಕನ್ನಡದ ಅಮರ ಕವಿ
ಮುದ್ದಣನೆ ಹಾಡಿದನು
ಸಾಹಿತಿಗೆ ಗತಿಯೊಂದೆ!
ಸಪ್ತಾಕ್ಷರಿ ! ||
ಮುದ್ದಣ ಮನೋರಮೆಯ
ಸರಸ ಸಂವಾದದಾ
ಸೊಬಗು ನಮ್ಮೊಳಗೆಲ್ಲಿ?
ಓ ಸುಂದರೀ ||
"ರವಿಕಾಣದಿಹುದನ್ನು
ಕವಿ ಕಾಣುತಿಹ"ನೆಂದು
ನೀನು ಬಯಸಿರ ಬಹುದು
ಪ್ರೇಮ ಭಿಕ್ಷೆ ! ||
ಆಬೊಡಿದೋ ಕವಿಯಹುದು
ನಾನೆ ಭಿಕ್ಷುಕನಿಂದು
ನಿನಗೆಂತು ನೀಡುವೆನು?
ದಾನರಕ್ಷೆ ! ||
ಬಡವನಾ ಬಾಳಿಸಲು
ಔದರ್ಯವೆಂಬುದಿದೆ
ಆದರಿಂದ ಮಾತ್ರೊಂದ
ಪೇಳ್ವೆ ಕೇಳು !
ತಿರುಕ ನಾನಾದರೂ
ಬೇಡಿ ಸಿಕ್ಕಿದ ಕೂಳ
ನೀಡುವೆನು ನಿನಗರ್ಧ
ಸರಿಯೆ ಪಾಲು ! ||
ಕವಿಯ ಪ್ರೇಯಸಿಯಾಗೆ ಹೃದಯ
ಬಯಸುತಲಿಹುದೊ?
ಬಿಸುಟು ಬಾ ಹೊಂಗನಸ
ಸಿರಿಯ ಕಂಥೆ!
ಭಾವನೆಯ ಭಂಡಾರದಾ
ರಾಣಿಯಾಗಿ ನೀ
ಒಲಿದು ಬಾ ಮನದನ್ನೆ !
ಸುಗುಣವಂತೆ ! ||
ಸುಖ ಸಿರಿಗೆ ನಿನ್ನ ಮನ
ಒಲಿಯುತಿಹುದಾದೊಡೆಯು
ಬೇಡ ನಿನಗೀ ಕವಿಯ
ಗೋಜಿ ಸತ್ಯ ! ||
ಜನತೆ ಪೌಸಾಹಿತ್ಯ
ಪ್ರೇಮಿಸುವ ತನಕವಿದೊ
"ಭವತಿ ಭಿಕ್ಷಾಂ ದೇಹಿ"
ಕವಿಗೆ ಗತಿ ನಿತ್ಯ !

—ಭಾಸ್ಕರ ಭಂಡಾರಿ ಮಜಿಬೈಲು

ಆದರ್ಶ ಕಲಾವಿದ

ಎಂ. ರಂಗನಾಥ ಭಟ್ಟರು

ಡಿಸೆಂಬರ್ ದಿನಾಂಕ ೩೦, ೧೯೬೩ ರಂದು ಮೈಸೂರು ಸಂಗೀತ ನಾಟಕ ಅಕಾಡೆಮಿಯವರು ಎಪ್ಪತ್ತೆಂಟು ವರ್ಷದ ವಯೋವೃದ್ಧರೂ ಕಲಾ ತಪಸ್ವಿಗಳೂ ಆದ "ಅಭಿನಯ ವಿಭೂಷಣ" "ನಾಟ್ಯ ಕಲಾ ವಿಶಾರದ" ಇತ್ಯಾದಿ ಬಿರುದಾಂಕಿತರಾಗಿರುವ ಮಾನ್ಯ ಎಮ್. ರಂಗನಾಥ ಭಟ್ಟರನ್ನು ಸನ್ಮಾನಿಸುವ ಶುಭ ಕಾರ್ಯವನ್ನು ಕೈಗೊಂಡಿರುವ ಈ ಸಂದರ್ಭದಲ್ಲಿ ಶ್ರೀಯುತರ ಕಲಾ ಸೇವೆಯ ಸಂಕ್ಷಿಪ್ತ ಪರಿಚಯವನ್ನು ಈ ಮೂಲಕ ಕಲಾ ಪ್ರೇಮಿಗಳ ಮುಂದಿಡಲು ಹರ್ಷವಾಗುವುದು.

ಬಾಲ್ಯ ಮತ್ತು ಶಿಕ್ಷಣ

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿಗೆ ಸೇರಿದ ಮಲೆನಾಡಂಚಿನ ಮುಂಡಾಜೆ ಗ್ರಾಮದಲ್ಲಿ ಶ್ರೀ ಎಮ್. ರಂಗನಾಥ ಭಟ್ಟರು ೧೫—೮—೧೮೮೫ ರಲ್ಲಿ ಜನ್ಮವೆತ್ತಿದರು. ಶ್ರೀಯುತರು ಶ್ರದ್ಧಾವಂತ ವೈದಿಕ ಮನೆತನದ ಲಕ್ಷ್ಮೀನಾರಾಯಣ ಶಾನ್‌ಭಾಗ್‌ರವರ ಪುತ್ರರತ್ನರಾಗಿ ಶೋಭಿಸಿದರು. ಬಾಲ್ಯದಲ್ಲಿ ಸ್ವಲ್ಪ ಕಾಲ ವೇದ ಮಂತ್ರವನ್ನು ಹೇಳಿಸಿಕೊಂಡ ಶ್ರೀ ಭಟ್ಟರು ಪ್ರಾಥಮಿಕ ವಿದ್ಯಾಭ್ಯಾಸವನ್ನು ಪೂರೈಸಿ, ಬಳಿಕ ಮಂಗಳೂರಿನ ಕೆನರಾ ಹೈಸ್ಕೂಲಿಗೆ ಸೇರಿದರು. ಆದರೆ ಬಾಲ್ಯದಲ್ಲಿಯೇ ಶ್ರೀ ಭಟ್ಟರ ಒಲವು ಸಂಗೀತ-ನಾಟಕಗಳ ಕಡೆಗೆ ವಿಶೇಷವಾಗಿದ್ದುದರಿಂದ ಅವರು ಸ್ವಲ್ಪ ಕಾಲದಲ್ಲೇ ಹೈಸ್ಕೂಲಿಗೆ ಕೊನೆಯ ನಮಸ್ಕಾರ ಮಾಡಿ, ಅಲ್ಲಿಂದ ಹೊರಟರು. ಹೀಗೆ ಸ್ವೇಚ್ಛೆಯಿಂದ ಹೊರಟ ಭಟ್ಟರು ದೇಶ ಸಂಚಾರ ಮಾಡುತ್ತ ಆಗಿನ ಕಾಲದ ಪ್ರಸಿದ್ಧರಾದ ಅನೇಕ ಸಂಗೀತ ವಿದ್ವಾಂಸರ ಆಶ್ರಯವನ್ನು ಪಡೆದರು. ಕೊನೆಗೆ ಸಂಗೀತಾಭ್ಯಾಸದಲ್ಲಿ ಪಳಗಿದ ಅವರು ರಾಗ ಸ್ವರ ಪ್ರಸ್ತಾರಾದಿಗಳಲ್ಲಿಯೂ ನಿಪುಣರಾಗಿ ಸಂಗೀತ ವಿದ್ವಾಂಸರೆನಿಸಿದರು. ದಕ್ಷಿಣಾದಿ ಸಂಗೀತದೊಡನೆಯೇ ಉತ್ತರಾದಿ ಸಂಗೀತವನ್ನೂ ಅಭ್ಯಸಿಸಿದ ಶ್ರೀ ಭಟ್ಟರು, ದಕ್ಷಿಣೋತ್ತರದ ಗಾನವಾಹಿನಿಯ ಸಂಗಮದಂತೆ ಸಂಗೀತ ನಿಧಿಯೆನಿಸಿದರು. ಇದಕ್ಕೆ ತಕ್ಕಂತೆ ಶ್ರೀಯುತರ ಕಂಠವೂ ಗಾಂಭೀರ್ಯ ಮಾಧುರ್ಯಗಳಿಂದ ಪರಿಪೂರ್ಣವಾಗಿತ್ತು. ಈ ಸಂಗೀತದ ಅಭ್ಯಾಸದ ಕಾಲದಲ್ಲೇ ಅವರು ನಾಟಕಗಳ ಕಡೆಗೂ ಗಮನವಿತ್ತಿದ್ದರು. ಶ್ರೀ ಭಟ್ಟರ ನಾಟಕಾಭಿರುಚಿಯೆಂದರೆ—ಆ ಕಾಲದ ಯಾವ ನಾಟಕವನ್ನಾದರೂ ಸರಿಯೆ, ಅವರು ನೋಡದೆ ಬಿಟ್ಟದಿಲ್ಲ. ಹೀಗೆ ವಿಶೇಷ ಆಸಕ್ತಿ ವಹಿಸುತ್ತಿದ್ದ ಅವರು ಸನ್ ೧೯೦೫ರಲ್ಲಿ ಆಗಿನ ಪ್ರಸಿದ್ಧ ನಾಟಕ ಕಂಪೆನಿಯಾಗಿದ್ದ ನಾರಾಯಣ ಹೆಗ್ಡೆಯವರ ಕಂಪೆನಿಯಲ್ಲಿ ನಟರಾಗಿ ಸೇರಿಕೊಂಡರು.

ನಾಟಕ ಕಂಪೆನಿಯಲ್ಲಿ ಸೇರಿಕೊಂಡ ಭಟ್ಟರು ಚಾರಕನಿಂದ ಹಿಡಿದ, ಸ್ತ್ರೀ ಪಾತ್ರ ವಿದೂಷಕ, ಖಳನಾಯಕ ಮೊದಲಾದ ಪಾತ್ರಗಳಲ್ಲಿ ಶೋಭಿಸುತ್ತ ಕೊನೆಗೆ ನಾಯಕನ ಪಾತ್ರದಲ್ಲಿ ರಂಜಿಸತೊಡಗಿದರು. ಶ್ರೀಯುತರು ಯಾವ ಪಾತ್ರವನ್ನು ನಿರ್ವಹಿಸಿದರೂ, ಆ ಪಾತ್ರದ ಅಭಿನಯ "ನಭೂತೋ ನಭವಿಷ್ಯತಿ" ಎಂಬಂತೆ ಅನುಪಮವಾಗಿರುತ್ತಿತ್ತು. ಈ ಸಮಯದಿಂದ ನಟನಾಚಾತುರ್ಯದಲ್ಲಿ ದಿನೇ ದಿನೇ ಪ್ರಸಿದ್ಧರಾಗುತ್ತಿದ್ದ ಶ್ರೀಯುತರು ನವರಸಗಳ ಭಾವಾಭಿನಯವನ್ನು ಯಾವ ಸಂದರ್ಭದಲ್ಲಿ ಯಾವುದನ್ನು ಬೇಕಾದರೂ ಕುಶಲತೆಯಿಂದ ಅಭಿನಯಿಸುವ ವಿಶೇಷ ಜ್ಞಾನವನ್ನು ಪಡೆದರು.

ಆ ಕಾಲದಲ್ಲಿ ನಾಟಕ ಶಿರೋಮಣಿ ಎ. ವಿ. ವರದಾಚಾರ್ಯರು ನವರಸಗಳಲ್ಲಿ ಯಾವ ರಸವನ್ನಾದರೂ ಅಭಿವ್ಯಕ್ತಗೊಳಿಸುವ ಯಾವುದೇ ಪಾತ್ರವನ್ನಾದರೂ ಅತ್ಯಂತ ಯಶಸ್ವಿಯಾಗಿ ಅಭಿನಯಿಸುತ್ತಿದ್ದರು. ಶ್ರೀ ರಂಗನಾಥಭಟ್ಟರ ಮೇಲೆ ಮಾನ್ಯ ವರದಾಚಾರ್ಯರ ಅಭಿನಯನದ ಪ್ರಭಾವವು ಚೆನ್ನಾಗಿ ಬಿದ್ದಿತ್ತು. ಮುಂದೆ ಶ್ರೀ ಭಟ್ಟರೂ ವರದಾಚಾರ್ಯರಂತೆಯೇ ನವರಸಾನುಭವದ ಭಾವಾಭಿವ್ಯಕ್ತಿಯಲ್ಲಿ ಪರಿಪೂರ್ಣವಾಗಿ ಶೋಭಿಸಿರುವರು. ಸನ್ ೧೯೦೫ರಿಂದ ೧೯೧೨ ವರೆಗೆ ನಾಟಕ ಕಂಪೆನಿಯಲ್ಲಿ ನಟನಾಗಿ ಅಭಿನಯಿಸಿ ಅನುಭವ ಪಡೆದ ಶ್ರೀ ಭಟ್ಟರು ೧೯೧೫ರ ವರೆಗೆ ಧರ್ಮಸ್ಥಳದ ದಿವಂಗತ ಚಂದಯ್ಯ ಹೆಗ್ಗಡೆಯವರ ಆದೇಶದಂತೆ, ಹಲವು ನಾಟಕಗಳನ್ನಾಡಿ ಜನರಲ್ಲಿ ನಾಟಕಾಭಿರುಚಿಯನ್ನು ಕೆರಳಿಸಿದರು. ಕೊನೆಗೆ ಶ್ರೀ ಭಟ್ಟರು ಸನ್ ೧೯೧೬ರಲ್ಲಿ ತಮ್ಮ "ಅಂಬಾ ಪ್ರಸಾದಿಕ ನಾಟಕ ಮಂಡಳಿ" ಎಂಬ ಹೊಸ ನಾಟಕ ಕಂಪೆನಿಯನ್ನು ಪ್ರಾರಂಭಿಸಿದರು.

ನಾಟಕ ಕಂಪೆನಿಯ ಆದರ್ಶ

ಮಾನ್ಯ ರಂಗನಾದ ಭಟ್ಟರು ದೇಶಭಕ್ತರೂ ಸಂಸ್ಕೃತಿಯ ಉಪಾಸಕರೂ ಆಗಿರುವರು. ಶ್ರೀಯುತರ ನಾಟಕ ಕಂಪೆನಿಯು—ಉತ್ಕರ್ಷದ ಆ ಕಾಲದಲ್ಲಿ ಕಾಂಗ್ರೆಸ್ ಸಂಸ್ಥೆಗೆ ಶ್ರೀಯುತರು ನಾಟಕಗಳ ಮೂಲಕ ಸಹಸ್ರಾರು ರೂಪಾಯಿಗಳ ಧನಸಹಾಯವನ್ನು ನೀಡಿರುವರು. ಕಾಂಗ್ರೆಸ್ಸಿಗೆ ಸಹಾಯ ನೀಡುತ್ತಿದ್ದ ಶ್ರೀ ಭಟ್ಟರ ಮೇಲೆ ಆಗಿನ ಬ್ರಿಟಿಷ ಸರಕಾರದ ಕಟ್ಟು ದೃಷ್ಟಿ ಸದಾ ಇರುತ್ತಿದ್ದು, ಈ ಕಾರಣದಿಂದ ಅವರು ಅನೇಕ ಸಲ ಕಷ್ಟನಷ್ಟಗಳನ್ನು ಅನುಭವಿಸಬೇಕಾಗಿ ಬಂದರೂ ಧ್ಯೇಯವಾದಿಗಳಾದ ಅವರು ಸ್ವರಾಜ್ಯ ಸ್ಥಾಪನೆಗೆ ಕೊನೆತನಕವೂ ಸಹಕಾರ ನೀಡುತ್ತಲೇ ಬಂದರು.

ಅಂಬಾ ಪ್ರಸಾದಿಕ ನಾಟಕ ಮಂಡಳಿಯ ಶಿಸ್ತು ಹಾಗೂ ಸಂಯಮಗಳು ಬಹುಶಃ ಮತ್ತಾವ ಕಂಪೆನಿಗಳಲ್ಲೂ ಇರಲಿಲ್ಲ. ಶ್ರೀ ಭಟ್ಟರು ನಟನಟಿಯರ ಚಾರಿತ್ರ್ಯ ಮತ್ತು ಆರೋಗ್ಯದ ಕಡೆಗೂ ವಿಶೇಷ ಗಮನ ಕೊಡುತ್ತಿದ್ದರು. ಕಂಪೆನಿಯಲ್ಲಿಯೇ ನುರಿತ ವ್ಯಾಯಾಮ ಶಿಕ್ಷಕರೊಬ್ಬರು ನೇಮಕಗೊಂಡಿದ್ದು—ನಟವರ್ಗಕ್ಕೆ ಶಾಸ್ತ್ರೀಯ ವ್ಯಾಯಾಮದ ಅಭ್ಯಾಸ ಮಾಡಿಸುತ್ತಿದ್ದುದು ಈ ನಾಟಕ ಮಂಡಳಿಯ ಒಂದು ವೈಶಿಷ್ಟ್ಯ. ತಮ್ಮ ಕಂಪೆನಿಗೆ ಹೊಸ ನಟನಟಿಯರನ್ನು ಸೇರಿಸಿಕೊಳ್ಳುವಾಗ ಶ್ರೀ ಭಟ್ಟರು ಬಹಳ ಸೂಕ್ಷ್ಮವಾಗಿ ಪರೀಕ್ಷಿಸುತ್ತಿದ್ದರು. ಹೀಗೆ ಸೇರಿಸಿ ಕೊಳ್ಳುವಾಗ ಹಿಂದುಳಿದ ವರ್ಗದವರನ್ನೂ ಬಡ ಹುಡುಗರನ್ನೂ ಆರಿಸಿಕೊಳ್ಳುತ್ತಿದ್ದುದು ಶ್ರೀ ಭಟ್ಟರ ಮತ್ತೊಂದು ವೈಶಿಷ್ಟ್ಯ. ಹೊಸ ನಟನಟಿಯರನ್ನು ರಂಗಭೂಮಿಗೆ ತರಲು ಶ್ರೀ ಭಟ್ಟರಿಗೆ ಹೆಚ್ಚು ಕಾಲ ಬೇಕಾಗುತ್ತಿತ್ತು. ಯಾವ ನಟ ಅಥವಾ ನಟಿಯೇ ಆಗಲಿ, ಅವರ ಅಭಿನಯವು ಶ್ರೀ ಭಟ್ಟರ ಮನಸ್ಸಿಗೆ ತೃಪ್ತಿಯಾಗುವ ತನಕ ರಂಗಭೂಮಿಯ ಮೇಲೆ ಪಾತ್ರಧಾರಿಗಳಾಗಿ ಬರಲು ಅವಕಾಶವೇ ಇರಲಿಲ್ಲ. ಶ್ರೀಯುತರ ಕಲಾ ನಿಷ್ಠೆ ಹಾಗೂ, ವಿದ್ವತ್ತಿಗೆ ಇದೊಂದು ಉದಾಹರಣೆಯನ್ನಬಹುದು.

ತಮ್ಮ ನಾಟಕ ಕಂಪೆನಿಯಲ್ಲಿ ಶ್ರೀ ಭಟ್ಟರ ಶಿಸ್ತು ಒಬ್ಬ ಸಮರ್ಥನಾದ ಮಿಲಿಟರಿ ಕಮಾಂಡರನಂತಿದ್ದರೂ, ಅವರು ತಮ್ಮ ಕಂಪೆನಿಯ ನೌಕರರನ್ನೂ, ಬಂಧುಗಳಂತೆ ನೋಡಿಕೊಳ್ಳುತ್ತಿದ್ದರು. ಶ್ರೀಯುತರ ಕಂಪೆನಿಯಲ್ಲಿ ನಟರಾಗಿ ನೌಕರರಾಗಿ ಸೇವೆ ಸಲ್ಲಿಸಿದ ನೂರಾರು ಮಂದಿ, ಇಂದೂ ಸಮಗ್ರ ಕರ್ನಾಟಕದಲ್ಲಿ, ವಿವಿಧ ಉದ್ಯಮಗಳಲ್ಲಿ ತೊಡಗಿರುವರು, ಇವರೆಲ್ಲರೂ ಶ್ರೀ ಭಟ್ಟರ ಸಹೃದಯತೆ ಹಾಗೂ ಪ್ರೀತಿವಿಶ್ವಾಸಗಳನ್ನು ಸ್ಮರಿಸುತ್ತಿರುವುದು ಇದಕ್ಕೊಂದು ಉತ್ತಮವಾದ ನಿದರ್ಶನವಾಗಿದೆ.

ಶ್ರೀ ಭಟ್ಟರ ಪಾತ್ರಾಭಿನಯದ ವಿಚಾರದಲ್ಲಿ ವಿಖ್ಯಾತ ನಟರಾದ ಮಾನ್ಯ ಬಾಲಗಂಧರ್ವರೇ ಪ್ರಶಂಸೆಯ ಮಾತುಗಳನ್ನಾಡುತ್ತಿದ್ದರೆಂದ ಬಳಿಕ ಅವರ ಅಭಿನಯ ಹೇಗಿರುತ್ತಿತ್ತೆಂಬುದನ್ನು ನಾವು ಸುಲಭವಾಗಿ ಊಹಿಸಿಕೊಳ್ಳಬಹುದು. ಮಾನ್ಯ ರಂಗನಾಥ ಭಟ್ಟರ ಅಭಿನಯ ಚಾತುರ್ಯವು ಮಾನ್ಯ ಬಾಲಗಂಧರ್ವರನ್ನು ಅವರ ಆಪ್ತಮಿತ್ರನನ್ನಾಗಿ ಪರಿವರ್ತನೆಗೊಳಿಸಿತ್ತು.

ಕರ್ನಾಟಕ ರಂಗ ಭೂಮಿಯಲ್ಲಿ ಅನೇಕ ಹೊಸ ಹೊಸ ಪ್ರಯೋಗಗಳನ್ನು ಮಾಡಿ ಜನಪ್ರಿಯರಾದ ಶ್ರೀ ಭಟ್ಟರಿಗೆ— ಸನ್ ೧೯೩೭ರಲ್ಲಿ ವಿದ್ವನ್ಮಂಡಳಿಯ ಕಡೆಯಿಂದ "ಅಭಿನಯ ವಿಭೂಷಣ" ಎಂಬ ಬಿರುದೂ, ೧೯೩೮ರಲ್ಲಿ ಶ್ರೀ ಶೃಂಗೇರಿ ಜಗದ್ಗುರುಗಳ ಸನ್ನಿಧಿಯಲ್ಲಿ "ನಾಟ್ಯ ಕಲಾ ವಿಶಾರದ" ಎಂಬ ಬಿರುದೂ ಲಭಿಸಿತು.

ಭಟ್ಟರ ಶಿಷ್ಯ ವರ್ಗ

ಮಾನ್ಯ ರಂಗನಾಥ ಭಟ್ಟರ ನಾಟಕ ಕಂಪೆನಿಯ ಶಿಕ್ಷಣ — ಪ್ರತಿಕ್ಷಣಗಳಲ್ಲಿ ಪಳಗಿದ ಅನೇಕ ನೂರಾರು ಮಂದಿ ಶಿಷ್ಯರು ಈಗಲೂ ಗಾಯಕರಾಗಿ ಲೇಖಕರಾಗಿ ಹಾಗೂ ಸಮರ್ಥ ಅಧಿಕಾರಿಗಳಾಗಿ ದೇಶಕ್ಕೆ ಭೂಷಣಪ್ರಾಯರಾಗಿರುವುದು, ಅಂಶತಃ ಶ್ರೀ ಭಟ್ಟರ ಸಹೃದಯತೆ ಹಾಗೂ ಗುರುತ್ವದ ಪ್ರಭಾವದಿಂದ, ಎಂದು ಧಾರಾಳವಾಗಿ ಹೇಳಬಹುದು.

ಇಂದಿನ ವಿಖ್ಯಾತ ಸಿನೇಮಾ ಸಂಗೀತ ನಿರ್ದೇಶಕರೂ ಸಂಗೀತಾಚಾರ್ಯರೂ ಆಗಿರುವ ಶ್ರೀ ಕಾಳಿಂಗರಾಯರು ಮಾನ್ಯ ಭಟ್ಟರ ಕಂಪೆನಿಯಲ್ಲಿ ಹಲವು ವರ್ಷಗಳ

(೮ನೇ ಪುಟ ನೋಡಿರಿ)

ನಮ್ಮ ಗ್ರಾಹಕರಿಗೆ ಇನ್ನೂ ಹೆಚ್ಚಿನ ಸೌಲಭ್ಯ

ದಿನಕ್ಕೆ ಒಂದು ಬಾರಿ 10,000 ರೂಪಾಯಿಗಳ ವರೆಗೆ ಮೇಲ್ ಟ್ರಾನ್ಸ್‌ಫರ್ ಮಾಡಲು ತಗಲುವ ವೆಚ್ಚ ಉಚಿತ

ಈ ಸೌಲಭ್ಯ ನಮ್ಮ ಕರೆಂಟ್ ಅಕೌಂಟ ದಾರರಿಗೆಲ್ಲಾ ಉಂಟು.

ಎಷ್ಟೇ ಹಣಕ್ಕಾದರೂ ನಮ್ಮ ಯಾವುದೇ ಶಾಖೆಯ ಚೆಕ್ಕುಗಳಿಗೆ ಖರ್ಚಿಲ್ಲದೆ, ಚೆಕ್ಕಿನಲ್ಲಿ ನಮೂದಿಸಿದ ಪೂರ್ತಾ ಹಣಕ್ಕೆ ಪಾವತಿಯನ್ನು ಪಡೆಯಬಹುದು.

ಈ ಸೌಲಭ್ಯ ನಮ್ಮ ಸೇವಿಂಗ್ಸ್ ಬ್ಯಾಂಕ್ ಖಾತೆ ಮತ್ತು ಕರೆಂಟ್ ಅಕೌಂಟ್ ದಾರರಿಗೆಲ್ಲಾ ಉಂಟು.

ಇಂದೇ ನಿಮ್ಮ ಖಾತೆಯನ್ನು ನಮ್ಮ ಶಾಖೆಯಲ್ಲಿ ತೆರೆಯಿರಿ.

ಹೆಚ್ಚಿನ ವಿವರಗಳನ್ನು ನಿಮ್ಮ ಸಮೀಪದ ಶಾಖೆಯಲ್ಲಿ ಪಡೆಯಿರಿ.

ಕೆನರಾ ಬ್ಯಾಂಕ್ ಲಿ.

ಸಮಗ್ರ ಸೇವೆ | ಸ್ಥಾಪನೆ: 1906 | ಸಂಪೂರ್ಣ ಭದ್ರತೆ

ರಜಿಸ್ಟರ್ಡ್ ಆಫೀಸ್ : ಮಂಗಳೂರು ಆಡಳಿತ ಕಛೇರಿ : ಬೆಂಗಳೂರು

ನವಯುಗ

ವರುಷ	ಉಡುಪಿ	ವಾರ
೪೩	೧೯-೧೨-೧೯೬೩	೧೬

ಆಯುರ್ವೇದ

ಭಾರತದ ಪ್ರಾಚೀನತಮ ವೈದ್ಯಕವಾದ ಆಯುರ್ವೇದದ ಸಂಬಂಧದಲ್ಲಿ ಸಂಶೋಧನೆ ನಡೆಸಲು ಆಯುರ್ವೇದ ಮಂಡಳವೊಂದನ್ನು ನಿಯಮಿಸುವ ನಿರ್ಧಾರವನ್ನು ಕೇಂದ್ರ ಸರಕಾರದ ಆರೋಗ್ಯ ಮಂತ್ರಿಯವರು ಮಾಡಿದ್ದಾರೆ. ಈ ಮಂಡಳವು ಅಪೂರ್ವವಾದ ಆಯುರ್ವೇದ ಗ್ರಂಥಗಳನ್ನು ಪ್ರಕಟಿಸುವುದು; ಪ್ರತ್ಯಕ್ಷ ಸಂಶೋಧನೆಗೆ ಬುದ್ಧಿವಂತ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸುವುದು; ಆಯುರ್ವೇದವನ್ನು ಆಧುನಿಕ ವೈದ್ಯ ಶಾಸ್ತ್ರದಂತೆಯೇ ಪರಿಣಾಮಕಾರಿ ವಿಧಾನವಾಗಿ ಮಾಡಲು ಸೂಕ್ತ ಕ್ರಮಗಳನ್ನು ಕೈಗೊಳ್ಳುವುದು. ಮಂಡಳವು ಮಾಡಬೇಕಾದ ಮುಖ್ಯ ಕಾರ್ಯಗಳೆಲ್ಲವೂ ಆಧುನಿಕ ಅಲ್ಲೋಪಥಿ ವೈದ್ಯಕ ಪದ್ಧತಿಯಂತೆಯೇ ಪರಿಣಾಮಕಾರಿಯಾಗಿಯೂ ಶಕ್ತಿವಂತವಾಗಿಯೂ ಆಯುರ್ವೇದವು ರೂಪಿತವಾಗುವಂತೆ ನೋಡುವುದು ಅಗತ್ಯವೆನಿಸುತ್ತದೆ.

ಜನತೆಯ ಮನಸ್ಸು ಅಲ್ಲೋಪಥಿಯತ್ತವೇ ತೀವ್ರವಾಗಿ ಸರಿಯುತ್ತದೆ. ಆಯುರ್ವೇದ ವೈದ್ಯರನ್ನು ಗೌರವ ಭಾವನೆಯಿಂದ, ವಿಶ್ವಾಸದಿಂದ ನೋಡಿಕೊಳ್ಳುತ್ತಿದ್ದ ಕಾಲವಿಂದು ದೂರದೂರವಾಗುತ್ತ ಬರುತ್ತಿದೆ. ಇದಕ್ಕೆ ಹಲವಾರು ಕಾರಣಗಳಿವೆ. ಪ್ರಾಯಃ "ಹಿತ್ತಿಲಗಿಡ ಮದ್ದಲ್ಲ"ವೆಂಬಂತೆ ಈ ವೈದ್ಯರು ಸಮಾಜದವರಿಂದ ಅಲಕ್ಷಿಸಲ್ಪಟ್ಟಿದ್ದಾರೆ ಎನ್ನಬಹುದು. ಅಲ್ಲೋಪಥಿ ಔಷಧಿಗಳ ತಯಾರಿಕೆಯಲ್ಲಿ ಬೇಕಷ್ಟು ನಿಯಂತ್ರಣಗಳಿರುವವಾದರೂ ಆಯುರ್ವೇದ ಔಷಧಿ ತಯಾರಿಯಲ್ಲಿ ಅಂತಹ ನಿಯಂತ್ರಣಗಳು ಬಹು ಕಡಿಮೆ. ಇಂದು ನಮ್ಮ ಆಯುರ್ವೇದ ವೈದ್ಯರಲ್ಲಿ ಹೆಚ್ಚಿನವರು ತಾವೇ ಸ್ವತಃ ಔಷಧಿ ತಯಾರಿಸಿ ಕೊಳ್ಳುವುದನ್ನು ನಾವು ಕಾಣಬಹುದು. ಔಷಧಿ ತಯಾರಿಸುವ ಹೊಣೆಗಾರಿಕೆಯನ್ನು ಆಯುರ್ವೇದ ಔಷಧಿ ತಯಾರಿಸುವ ಸಂಘ ಸಂಸ್ಥೆಗಳಿಗೆ ಕೊಟ್ಟು, ವೈದ್ಯರು ಅವುಗಳ ಪ್ರಯೋಗವನ್ನು ಮಾತ್ರ ಮಾಡಬೇಕೆಂದು ನಿರ್ಧರಿಸಿದರೆ, ಆದರಿಂದ ತುಸು ಪರಿಸ್ಥಿತಿ ಸುಧಾರಿಸ ಬಹುದೊ ಏನೋ. ಸಂಶೋಧಕ ವೈದ್ಯರಿಗೆ ಇಂತಹ ನಿಯಂತ್ರಣದಿಂದ ತ್ರಾಸ ಒದಗ ಬಹುದಾದರೂ ಅವರು ಯಾವುದಾದರೂ ಉತ್ಪಾದಕ ಸಂಸ್ಥೆಯ ಸಹಾಯದಿಂದ ತಮ್ಮ ಪರಿಶ್ರಮದ ಫಲವನ್ನು ಜನತೆಗೆ ಕೊಡುವುದು ಅಗತ್ಯ. ನಮ್ಮ ಆಯುರ್ವೇದದ ಹಲವಾರು ಅಮೂಲ್ಯ ಔಷಧಿಗಳ ಪ್ರಯೋಗಗಳ ಕೆಲವು ಒಬ್ಬೊಬ್ಬ ವೈದ್ಯರ ಹಿಂದೆ ಒಂದೊಂದೆಂಬಂತೆ ಅಳಿದು ಹೋಗಿವೆ. ಇದಕ್ಕೆ ಈ ವೈದ್ಯರು ರಹಸ್ಯ ಸ್ಫೋಟನ ಮಾಡದಿರುವುದೇ ಕಾರಣ. ಜ್ಞಾನವೆನ್ನುವುದು ಒಂದು ವ್ಯಕ್ತಿಯ ಅಥವಾ ಒಂದು ಸಮಾಜದ ಸೊತ್ತಾಗಿ ಇಂದು ಉಳಿದಿಲ್ಲ. ಆದುದರಿಂದ, ನಮ್ಮ ಆಯುರ್ವೇದ ವೈದ್ಯರು ಇಂದಿನ ಕಾಲಗುಣಕ್ಕನುವಾಗಿ ತಮಗೆ ತಿಳಿದಿರುವ ಜ್ಞಾನವನ್ನು ಬಚ್ಚಿಡದೆ ಅದರ ಉಪಯೋಗವನ್ನು ಜನಸಮೂಹಕ್ಕೆ ಮಾಡಿಕೊಡಬೇಕು. ಆಯುರ್ವೇದ ವೈದ್ಯರೂ ತಜ್ಞರೂ ಸಂಶೋಧನೆಯನ್ನು ಅಲಕ್ಷಿಸಿರುವುದೂ ಜನತೆಯ ವಿಶ್ವಾಸಕ್ಕೆ ಎರವಾಗುವುದಕ್ಕೆ ಇನ್ನೊಂದು ಕಾರಣವೆನ್ನಬಹುದು.

ಆಯುರ್ವೇದದ ಶಿಕ್ಷಣ ಕ್ರಮವಾದರೂ ಇಂದು ಪರ್ಯಾಪ್ತವಾಗಿದೆಯೆನ್ನುವಂತಿಲ್ಲ. ತರಬೇತಿ ಹೊಂದಿದ ಆಯುರ್ವೇದ ವೈದ್ಯರಿಗೆ ಮಾನವ ಶರೀರದ ಪರಿಪೂರ್ಣ ಜ್ಞಾನವೂ ಇಲ್ಲದಿರುವುದುಂಟು; ವೈದ್ಯಕ ವಿಜ್ಞಾನದಲ್ಲೂ ಅಜ್ಞಾನ ಇಲ್ಲವೇ ಅರ್ಧಜ್ಞಾನವಿರುವುದೂ ಉಂಟು. ಆದುದರಿಂದಲೇ ಆಯುರ್ವೇದ ವಿದ್ಯಾರ್ಥಿಗಳಿಗೂ ಆಧುನಿಕ ವೈದ್ಯಕ ಪದ್ಧತಿಯಂತೆ ತರಬೇತಿ ಬೇಕು ಎಂದು ಕೆಲವರು ಹೇಳುತ್ತಾರೆ. ಕೆಲವು ಆಯುರ್ವೇದ ಕಾಲೇಜುಗಳಲ್ಲಿ ಇಂತಹ ವಿಧಾನವನ್ನು ಅಳವಡಿಸಿಕೊಂಡಿದ್ದಾರೆ. ಇದೇ ರೀತಿಯಲ್ಲಿ ಈ ಆಯುರ್ವೇದದ ಅಧ್ಯಯನವನ್ನು ನಡೆಸುವುದರಿಂದ ಕಲಿಯುವ ವಿದ್ಯಾರ್ಥಿಗಳಿಗೂ ಉತ್ತೇಜನ ದೊರೆಯುವುದು. ಇತ್ತೀಚೆಗೆ ನಮ್ಮ ರಾಜ್ಯದಲ್ಲಿ ಆಯುರ್ವೇದ ವಿದ್ಯಾರ್ಥಿಗಳು ಸಂಪು ಹೂಡಿರುವುದನ್ನು ನಾವು ಗಮನಿಸುವುದಾದರೆ, ಇತ್ತ ಅವಶ್ಯ ಲಕ್ಷ್ಯ ಹರಿಸಬೇಕಾದ ಕಾಲ ಸನ್ನಿಹಿತವಾಗಿದೆಯೆನ್ನಬೇಕು, ಆಯುರ್ವೇದವನ್ನು ಪರಿಣಾಮಕಾರಿಯಾದ ಚಿಕಿತ್ಸಾ ಪದ್ಧತಿಯನ್ನಾಗಿ ಆಧುನಿಕ ಮಾದರಿಯಲ್ಲಿ ರೂಪಿಸದ ಹೊರತು ಅದನ್ನು ಜನಪ್ರಿಯಗೊಳಿಸುವುದು ಸಾಧ್ಯವಿಲ್ಲ. ಕೇವಲ ಪುಸ್ತಕ ಪ್ರಕಟಿಸುವುದರಿಂದಾಗಲೀ, ಸಂಶೋಧನೆಯ ಹೆಸರಿನಲ್ಲಿ ಅರ್ಥ ವ್ಯಯ ಮಾಡುವುದರಿಂದಾಗಲೀ ಒಮ್ಮಿಂದೊಮ್ಮೆಗೇನೇ ಆಯುರ್ವೇದ ತನ್ನ ಕಳೆದುಕೊಂಡ ಗೌರವಾದರಗಳನ್ನು ಗಳಿಸುವುದು ಸಾಧ್ಯವಿಲ್ಲ. ಆಯುರ್ವೇದಾಧ್ಯಯನದ ಪಾಠಪಟ್ಟಿಯಲ್ಲಿ ಆಧುನಿಕ ಮಾದರಿಯ ಪ್ರತ್ಯಕ್ಷ ತರಬೇತಿಗೆ ಸೂಕ್ತ ಅವಕಾಶ ಕೊಡುವುದರಿಂದ ಈ ಅಭಿವೃದ್ಧಿ ಕಾರ್ಯ ಮೊದಲಾಗ ಬೇಕು. ಸಂಶೋಧನೆಯಲ್ಲಿ ಆಸಕ್ತರಾದ ವ್ಯಕ್ತಿಗಳಿಗೂ ಸಂಘ ಸಂಸ್ಥೆಗಳಿಗೂ ಸರ್ವ ಪ್ರಕಾರದ ಉತ್ತೇಜನ ದೊರೆಯಬೇಕು; ಆಯುರ್ವೇದದ ಔಷಧಿಗಳ ತಯಾರಿಕೆಯಲ್ಲಿ ಇರುವ ಅನಾವಶ್ಯಕ ನಿರ್ಬಂಧಗಳನ್ನು ಕಿತ್ತುಹಾಕಿ ಉತ್ಪಾದನಾ ಸಂಘ ಸಂಸ್ಥೆಗಳನ್ನು ಪ್ರೋತ್ಸಾಹಿಸಬೇಕು. ಒಂದು ಕಾಲದಲ್ಲಿ ಆಯುರ್ವಿಜ್ಞಾನವೆನಿಸಿದ ಆಯುರ್ವೇದ ಮೂರ್ತಿಯ ಅಷ್ಟ ಬಂಧವು ಸಂಪೂರ್ಣ ಜೀರ್ಣವಾಗಿದೆ; ಇದನ್ನು ಉದ್ಧಾರ ಮಾಡುವಲ್ಲಿ ಆಯುರ್ವೇದ ಮಂಡಳಿಯು ಯಶಸ್ವಿಯಾಗುವುದರಿಂದ ದೇಶಕ್ಕೆ ತುಂಬ ಲಾಭವಿದೆ.

ಗೋವೆಯ ಚುನಾವಣೆ

ಶತಮಾನಗಳ ದಾಸ್ಯ ಬಂಧವಿಮುಕ್ತವಾದ ಗೋವಾ, ದಮನ ಮತ್ತು ದೀವಿಗಳ ನಾಗರಿಕರು ತಮಗೆ ಭಾರತೀಯ ಸಂವಿಧಾನವು ನೀಡಿದ ಮತಾಧಿಕಾರವನ್ನು ಚಲಾಯಿಸಿ, ವಿಧಾನ ಸಭೆಗೂ ಪಾರ್ಲಿಮೆಂಟಿಗೂ ಸದಸ್ಯರನ್ನು ಆರಿಸಿಕೊಂಡರು. ಭಾರತದ ಎಲ್ಲ ರಾಜ್ಯಗಳೂ ಆರ್ಥಿಕ ಪುನಾರಚನಾ ಕಾರ್ಯದಲ್ಲಿ ತತ್ಪರವಾಗಿವೆ. ಗೋವೆಗಾದರೂ ಇಂತಹ ಪುನಾರಚನಾ ಯೋಜನೆಗಳು ಅಗತ್ಯವಾಗಿವೆ. ರಾಜಕೀಯ ಪಕ್ಷಗಳಾದರೂ ಇಂತಹ ಆರ್ಥಿಕ ನೀತಿಯನ್ನೇ ಚುನಾವಣಾ ಘೋಷಣೆಗಳಲ್ಲಿ ಅಳವಡಿಸುತ್ತಿವೆ. ಆದರೆ, ಗೋವೆಯಲ್ಲಿ ನಡೆದ ಚುನಾವಣೆಗಳಲ್ಲಿ ಅದರ ಭವಿಷ್ಯ ಸ್ಥಾನ ಯಾವುದೆಂಬ ಪ್ರಶ್ನೆಯೇ ಕಾರುಬಾರು ಮಾಡಿದಂತೆ ಭಾಸವಾಗುತ್ತದೆ. ಮಹಾರಾಷ್ಟ್ರವಾದಿ ಗೋಮಾಂತಕ ಪಕ್ಷವು ಮಹಾರಾಷ್ಟ್ರದಲ್ಲಿ ಗೋವೆ ವಿಲೀನಗೊಳ್ಳಬೇಕೆಂಬ ನೀತಿಯನ್ನು ಮುಂದಿಟ್ಟು ಸ್ಪರ್ಧಿಸಿ ಸುಮಾರು ಅರ್ಧಾಂಶದಷ್ಟು ಸ್ಥಾನಗಳನ್ನು ಪಡೆಯಿತು. ಯಾವ ಮುಖ್ಯ ಗುರಿಯೂ ಇಲ್ಲದ ಮೂವರು ಸ್ವತಂತ್ರರು ಆಯ್ಕೆಗೊಂಡರಾದರೂ ಗೋವೆಯ ಭವಿಷ್ಯವನ್ನು ಗೋಮಾಂತಕರೇ ಮುಂದೆ ನಿರ್ಧರಿಸಿಕೊಳ್ಳಬೇಕೆಂದ ಕಾಂಗ್ರೆಸ್ಸು ಸಂಪೂರ್ಣ ಪರಾಭವ ಹೊಂದಿತು. ಕಾಂಗ್ರೆಸ್ಸು ಅಲ್ಲಿ ಸೋಲುವುದಕ್ಕೆ ಬೇರೆ ಹಲವಾರು ಕಾರಣವಿರ ಬಹುದು. ಪ್ರಧಾನಿ ನೆಹರುರವರು ಈ ಚುನಾವಣೆಗಳಿಂದ ಬಹಳಷ್ಟು ನೊಂದಿರುವರೆಂದು ಹೇಳಲಾಗುತ್ತದೆ. ಅವರು ಗೋವೆಯು ತನ್ನ ವೈಶಿಷ್ಟ್ಯಗಳನ್ನು ಉಳಿಸಿಕೊಂಡು ಆರ್ಥಿಕ ಪುನರುತ್ಥಾನ ಮಾಡಿಕೊಳ್ಳುವ ತನಕ ಪ್ರತ್ಯೇಕ ಘಟಕವಾಗಿಯೇ ಉಳಿಯಬೇಕೆನ್ನುವವರು. ಆರ್ಥಿಕ ಪುನಾರಚನೆಯಿಂದ ಯಾವ ಯಾವ ಬಗೆಯ ಲಾಭಗಳು ತಮಗಿವೆಯೆಂಬುದನ್ನು ಗೋಮಾಂತಕರು ಸರಿಯಾಗಿ ವಿವೇಚಿಸದೆ ಕೇವಲ ವಿಲೀನೀಕರಣದ ಪ್ರಶ್ನೆಯೊಂದನ್ನೇ ಬೃಹತ್ತಾಗಿಸಿ ಮತವಿತ್ತರೆಂದು ಹೇಳಲೇ ಬೇಕಾಗುತ್ತದೆ. ಸ್ವತಂತ್ರರ ಸಹಾಯದಿಂದ ಅಲ್ಲಿ ಅಧಿಕಾರ ವಹಿಸುವ ಮಹಾರಾಷ್ಟ್ರವಾದಿ ಗೋಮಾಂತಕ ಪಕ್ಷವು ಬಹಳ ಜಾಗ್ರತೆಯಿಂದ ಕಾರ್ಯ ಮಾಡಬೇಕಾಗಿದೆ. ಕೇವಲ ಹೊಸ ಹುರುಪಿನಿಂದ ಮಹಾರಾಷ್ಟ್ರದೊಡನೆ ವಿಲೀನ ಮಾಡುವ ಉಗ್ರ ನೀತಿಯನ್ನದು ಕೂಡಲೇ ಅನುಸರಿಸಬಾರದು. ವಿಲೀನೀಕರಣದ ವೇಳೆಯೇ ಪ್ರತ್ಯೇಕ ಚುನಾವಣೆಗಳನ್ನೂ ನಡೆಸಬೇಕೆನ್ನುವ ಕೆಲವರೂ ಇರುತ್ತಾರೆ; ಆದುದರಿಂದ ಈ ವಿಚಾರದಲ್ಲಿ ಬಹು ದೀರ್ಘ ಆಲೋಚನೆ ಅಗತ್ಯವೆನಿಸುತ್ತದೆ. ಒಂದನ್ನು ಮಾಡುವುದಕ್ಕೆ ಮೊದಲು ಹತ್ತಾರು ಯೋಚಿಸಬೇಕಾಗುತ್ತದೆ.

ವಾರ್ತಾವೇದಿಕೆ

ದಿಟ್ಟತನದ ಹೆಜ್ಜೆ

ಸಮಾಜದಲ್ಲಿ ಹಿಂದುಳಿದ ವರ್ಗಗಳಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸಿ ಕೊಡುವ ಪ್ರಶ್ನೆಯನ್ನು ಕೇಂದ್ರ ಸರಕಾರವು ಆಲೋಚಿಸುತ್ತಿದೆ. ಈ ನಡುವೆ ತನ್ನ ನೌಕರರ ವಿಧವೆಯರಿಗೆ ಆಜೀವ ಪೆನ್ಶನ್ ನೀಡುವ ಒಂದು ಯೋಜನೆಯನ್ನು ಸರಕಾರವು ರೂಪಿಸುತ್ತಿದೆಯೆಂದೂ ಇದನ್ನು ಮುಂದಿನ ಜನವರಿಯಿಂದ ವ್ಯವಹಾರಕ್ಕೆ ತರಲಾಗುವುದೆಂದೂ ಕೇಂದ್ರ ಅರ್ಥಮಂತ್ರಿ ಟಿ. ಟಿ. ಕೃಷ್ಣಮಾಚಾರಿಯವರು ಲೋಕ ಸಭೆಯಲ್ಲಿ ಘೋಷಿಸಿದರು. ಈ ಘೋಷಣೆಯನ್ನು ಸಭೆಯ ಎಲ್ಲ ಪಕ್ಷಗಳೂ ಹರ್ಷೋದ್ಗಾರಗಳಿಂದ ಸ್ವಾಗತಿಸಿದರು. ನಿಯೋಜಿತ ಯೋಜನೆಯನ್ವಯ ಸುಮಾರು ೨೦ ಲಕ್ಷ ನೌಕರರು ಲಾಭ ಪಡೆಯುವರೆಂದು ಅಂದಾಜು ಮಾಡಲಾಗಿದೆ. ವೃದ್ಧಾಪ್ಯ ವೇತನವನ್ನು ಜ್ಯಾರಿಗೊಳಿಸುವ ಉದಾರತೆ ವಹಿಸಲು ಕೆಲವು ರಾಜ್ಯಗಳು ಅಂಜುತ್ತಿರುವಾಗ, ಕೇಂದ್ರ ಸರಕಾರದ ಈ ಯೋಜನೆ ದಿಟ್ಟತನದ್ದು ಹಾಗೂ ಆದರ್ಶಪ್ರಾಯವಾದುದೆಂದು ಹೇಳಬಹುದು.

ಸಫಲ ಗಾಂಧೀ ಮಾರ್ಗ

ಲೋಕದಿಂದಲೇ "ಮಹಾತ್ಮಾ" ಎಂದು ಕರೆಯಲ್ಪಟ್ಟ ಗಾಂಧೀಜಿಯವರು ಲೋಕಕ್ಕೆ ಮುಂದಿಟ್ಟ ಒಂದು ಶಾಂತಿಯುತ ಅಸ್ತ್ರವೆಂದರೆ, ಅಹಿಂಸಾತ್ಮಕ ವಿಧಾನಗಳು. ಅಮೆರಿಕೆಯಲ್ಲಿರುವ ನೀಗ್ರೋಗಳು ನಾಗರಿಕಾಧಿಕಾರವನ್ನು ಪಡೆಯಲು ವಿಧ್ವಂಸಕ ಚಟುವಟಿಕೆಗಳನ್ನು ಅನುಸರಿಸದೆ, ಗಾಂಧೀಜಿಯವರು ತೋರಿಸಿದ ಮಾದರಿಯಲ್ಲಿ ಅಹಿಂಸಾತ್ಮಕ ಚಳವಳವನ್ನು ಅನುಸರಿಸಬೇಕೆಂದು ಅಮೆರಿಕನ್ ಅಧ್ಯಕ್ಷ ಜಾನ್ಸನ್‌ರು ಸಂದೇಶವೊಂದರಲ್ಲಿ ಹೇಳಿದ್ದಾರೆ. ಗಾಂಧೀಜಿಯವರ ಅಹಿಂಸಾತ್ಮಕ ಆಂದೋಲನವು ಭಾರತದಂತಹ ಹಿರಿಯ ದೇಶಕ್ಕೆ, ಸ್ವಾತಂತ್ರ್ಯವನ್ನು ತಂದುಕೊಡುವಲ್ಲಿ ಶಕ್ತವಾಯಿತೆನ್ನುವಾಗ, ನೀಗ್ರೋಗಳಿಗೂ ನಾಗರಿಕಾಧಿಕಾರವನ್ನು ಅವಶ್ಯ ಒದಗಿಸಿ ಕೊಡುವಲ್ಲಿ ಸಫಲವಾಗುವುದು.

ಹೊಸ ರಾಗ ಹಾಡಿದರು

ಪಾಕ್ ಅಧ್ಯಕ್ಷ ಅಯ್ಯೂಬಖಾನ್ ಮತ್ತು ವಿದೇಶ ಮಂತ್ರಿ ಭುಟ್ಟೊ ಅವರು ಬೆಲ್‌ಗ್ರೇಡ್ ಸಮ್ಮೇಳನದಂತಹ ತಟಸ್ಥ ರಾಷ್ಟ್ರಗಳ ಸಮ್ಮೇಳನಕ್ಕೆ ತೀವ್ರ ವಿರೋಧಿಗಳು. ಆದರೆ, ಈಗ ಅವರಿಬ್ಬರೂ ತಮ್ಮ ರಾಗ ಬದಲಾಯಿಸಿ, ಅಂತಹ ಸಮ್ಮೇಳನ ಕೂಡುವುದಕ್ಕೆ ಮೊದಲು ಬಾಂಡುಂಗ ರಾಷ್ಟ್ರಗಳ ಪರಿಷತ್ತು ಸೇರಬೇಕೆಂದು ಆಲಾಪನೆಗೆ ತೊಡಗಿದ್ದಾರೆ. ಕೊಲಂಬೊದಲ್ಲಿ ಹೊರಟ ಈ ರಾಗವನ್ನು ಚೌ-ಎನ್-ಲಾಯ್ ಅವರು ತನ್ನ ಆಫ್ರಿಕಾ ಸಂದರ್ಶನದ ವೇಳೆ ಬೇರೆ ಬೇರೆಡೆಯಲ್ಲಿ ಹಾಡಬಹುದು; ಆದರೆ, ಅಧ್ಯಕ್ಷ ನಸ್ಸೇರರಾಗಲೀ, ಪ್ರಧಾನಿ ಸಿರಿಮಾವೊ ಭಂಡಾರ ನಾಯಕೆಯಾಗಲೀ ಇವರ ರಾಗಕ್ಕೆ ಎಂದಿಗೂ ತಲೆದೂಗುವುದಿಲ್ಲ. ಸ್ವಾತಂತ್ರ್ಯದಾಹದಿಂದ ತುಂಬಿದವರ ಹೃದಯದಲ್ಲಿರುವ ಕೊಳಚೆಯನ್ನು ಅವರು ಚೆನ್ನಾಗಿ ಬಲ್ಲರು.

ತತ್ತ್ವವೇತ್ತ ರಾಜ್ಯಪಾಲ

ಮೈಸೂರಿನ ಮಹಾರಾಜ ಜಯಚಾಮರಾಜ ಒಡೆಯರ್ ಅವರು ಉನ್ನತ ಮಟ್ಟದ ತತ್ತ್ವಶಾಸ್ತ್ರವೇತ್ತರು. ಪುರಾತನ ಸಂಸ್ಕೃತವೂ ಆಧುನಿಕ ಯುಗವಾಣಿಯನ್ನು ಅರ್ಥಮಾಡಿಕೊಳ್ಳುವ ಶಕ್ತಿವಂತರೂ ಆದ ಇವರು ತಮ್ಮ ಹಲವಾರು ದಾರ್ಶನಿಕ ಭಾಷಣಗಳಿಂದ ದೇಶ—ವಿದೇಶಗಳಲ್ಲಿ ಕೀರ್ತಿಶಾಲಿಗಳಾಗಿದ್ದಾರೆ. ನವದೆಹಲಿಯಲ್ಲಿ ದಾರ್ಶನಿಕರೊಬ್ಬರು ರಾಷ್ಟ್ರಪತಿಯಾಗಿದ್ದು ಭಾರತದ ಕೀರ್ತಿಶಿಖೆಯನ್ನು ದಿಗ್ದೇಶಗಳಲ್ಲಿ ಹರಡುತ್ತಿರುವಂತೆ

ಯೇ ಮೈಸೂರು ಮಹಾರಾಜರಿಂದ ದರ್ಶನ ಕೇಂದ್ರವಾಗಿ ಪರಿಣಮಿಸಿದೆ. ಹಿಂದೆ ಕರ್ನಾಟಕ ಸಿಂಹಾಸನಾಧೀಶ್ವರರೆಂಬ ಬಿರುದು ಹೊತ್ತ ಅವರು ೧೯೫೬ರಿಂದ ಕರ್ನಾಟಕ ರಾಜ್ಯಪಾಲರಾಗಿ ಜನಸೇವೆಯಲ್ಲಿ ನಿರತರಾಗಿದ್ದಾರೆ. ಇದೀಗ ದಟ್ಟವಾಗಿ ಹರಡಿದ ವರ್ತಮಾನದಂತೆ ಅವರು ಮದ್ರಾಸದ ರಾಜ್ಯಪಾಲರಾಗಿ ನಿಯುಕ್ತರಾಗಲಿರುವರು ಆಗ, ಮೈಸೂರಿನಂತೆ ಮದ್ರಾಸವೂ ತತ್ತ್ವಶಾಸ್ತ್ರಿಯೊಬ್ಬರಿಂದ ಆಳಲ್ಪಡುವಂತಾಗುವುದು.

ಅಲ್ಲಲ್ಲಿಯ ಸುದ್ದಿ ಸಾರ

ಉಡುಪಿ ರೋಟರಿ ಕ್ಲಬ್ಬಿನ ಸಭೆ

ತಾ. 13ರಂದು ಸೇರಿದ ಉಡುಪಿ ರೋಟರಿ ಕ್ಲಬ್ಬಿನ ಸಭೆಯೊಂದರಲ್ಲಿ ಮಾತಾಡುತ್ತಾ ಶ್ರೀ ಟಿ. ಎ. ಪೈಗಳು ಪ್ರಜಾಪ್ರಭುತ್ವವಾದಿ ಸಮಾಜವಾದಕ್ಕೆ ಸರಿಯಾದ ವಿವರಣೆಯನ್ನೀಯುವುದು ಅಸಾಧ್ಯ. ಪ್ರಜಾಪ್ರಭುತ್ವ ರಾಜ್ಯದಲ್ಲಿ ಪ್ರತಿಯೊಬ್ಬನಿಗೂ ಮುಂದೆ ಬರುವ ಶಕ್ತಿಯಿದೆ. ರಾಜ್ಯದ ಪ್ರಾಮುಖ್ಯತೆಯನ್ನರಿತುಕೊಂಡು ಜನರು ಕೆಲಸ ಮಾಡಬೇಕು, ಎಂದು ಹೇಳಿದರು. ಮಾತ್ರವಲ್ಲದೇ ನಮ್ಮ ಹಲವಾರು ಜನರು ತೆರಿಗೆ ಕೊಡದಿರುವುದನ್ನು ಟೀಕಿಸಿದರು. ಕೊನೆಯಲ್ಲಿ ಅವರು ದೇಶದ ಸ್ಥಿತಿಗಳನ್ನು ತಿಳಿಸಿ, ಅವನ್ನರಿತುಕೊಂಡು ಜನರು ಮುಂದುವರಿಯಬೇಕೆಂದರು

ಅಂತ್ಯದಲ್ಲಿ ಶ್ರೀ ಟಿ. ರಮೇಶ ಪೈ ಹಾಗೂ ಶ್ರೀ ಎ. ಜೆ. ಆಲ್ಸೆಯವರು ವಂದನಾರ್ಪಣೆಗೈದರು.

ಹೊಸ ಸಾಯನ್ಸ್ ಬ್ಲಾಕಿನ ಉದ್ಘಾಟನೆ— ತಾ. 12ರಂದು ಉಡುಪಿ ಶ್ರೀ ಪೂರ್ಣಪ್ರಜ್ಞ ಕಾಲೇಜಿನ ಹೊಸ ಸಾಯನ್ಸ್ ಬ್ಲಾಕಿನ ಆರಂಭೋತ್ಸವವು ಶ್ರೀ ಮೊರಾರ್ಜಿ ದೇಸಾಯಿಯವರಿಂದ ನೆರವೇರಿಸಲ್ಪಟ್ಟಿತು. ಸಭಾಧ್ಯಕ್ಷತೆಯನ್ನು ಮಂಗಳೂರಿನ ನಗರ ಸಭಾಪತಿ ಶ್ರೀ ಜಿ. ಸೋಮಶೇಖರ ರಾಯರು ವಹಿಸಿದ್ದರು

ಪ್ರಾರಂಭದಲ್ಲಿ ಪ್ರಿನ್ಸಿಪಾಲ್ ಶ್ರೀ ವಿ. ಎಂ. ಇನಾಂದಾರ್‌ರವರು ಸ್ವಾಗತಿಸಿದರು. ಅದಮಾರು ಮಠಾಧೀಶ ಶ್ರೀ ವಿಭುದೇಶ ತೀರ್ಥಶ್ರೀಪಾದಂಗಳವರು ಕಾಲೇಜಿನ ಸ್ಥಾಪನೆಯ ಹಿನ್ನೆಲೆ ಆದರ್ಶದ ಕುರಿತು ಹೇಳಿ, ಈ ವಿದ್ಯಾ ಕೇಂದ್ರವು ಇನ್ನು ಮುಂದೆ ಉಡುಪಿಯ ಶ್ರೀ ಕೃಷ್ಣನಿಗೆ ಸೇರಿದ್ದೆಂದರು.

ಶ್ರೀ ಮೊರಾರ್ಜಿ ದೇಸಾಯಿಯವರು ಮಾತಾಡುತ್ತಾ ಕಾಲೇಜಿನ ವಿದ್ಯಾರ್ಥಿಗಳಿಗೆ ವಿದ್ಯೆಯ ಮಹತ್ವವನ್ನು ತಿಳಿಸಿದರು. ಮಾತ್ರವಲ್ಲದೇ ತಮ್ಮ ಸರ್ವ ಶಕ್ತಿಯನ್ನು ಉಪಯೋಗಿಸಿ ವಿದ್ಯಾಕ್ಷೇತ್ರದಲ್ಲಿ ಮುನ್ನುಗ್ಗಬೇಕೆಂದರು.

ಇದೇ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಶ್ರೀ ಕೆ. ಆರ್. ರಾಮಚಂದ್ರನವರು ರಾಜ್ಯ ಸರಕಾರವು ನೀಡಿದ್ದ ರಾಜ್ಯಪ್ರಶಸ್ತಿಯನ್ನು ಶ್ರೀ ಮೊರಾರ್ಜಿ ದೇಸಾಯಿಯವರ ಮೂಲಕ ಅದಮಾರು ಸ್ವಾಮಿಗಳಿಗೆ ಸಮರ್ಪಣೆಗೈದರು.

ಕಾರ್ಕಳದಲ್ಲಿ ಡಾ| ಮೋದಿಯವರ ನೇತ್ರದಾನ ಶಿಬಿರ— ತಾ. 14ರಂದು, ಕಾರ್ಕಳದಲ್ಲಿ, ಪದ್ಮಶ್ರೀ ಡಾ. ಎಂ. ಸಿ. ಮೋದಿಯವರ ಉಚಿತ ನೇತ್ರ ಶಸ್ತ್ರಚಿಕಿತ್ಸಾ ಶಿಬಿರವು, ಜಿಲ್ಲಾಧಿಕಾರಿ ಶ್ರೀ ಕೆ. ಆರ್. ರಾಮಚಂದ್ರನ್‌ರವರಿಂದ ಎಕೆಡಿಮಿ ರಿಜಿಸ್ಟ್ರಾರ್ ಡಾ. ಟಿ ಮಾಧವ ಪೈಯವರ ಅಧ್ಯಕ್ಷತೆಯಲ್ಲಿ, ಉದ್ಘಾಟಿಸಲ್ಪಟ್ಟಿತು.

ಪ್ರಾರಂಭದಲ್ಲಿ ತಾಲೂಕು ಬೋರ್ಡ್ ಅಧ್ಯಕ್ಷರಾದ ವಕೀಲ್ ಶ್ರೀ ಎನ್. ಮೋಹನ್‌ದಾಸ ಅತ್ಯಂತಾದರದಿಂ ಸ್ವಾಗತಿಸಿ ಶಿಬಿರವು ಯಶಸ್ವಿಯಾಗಿ ನಡೆಯಲು ಸಹಕರಿಸುತ್ತಿರುವವರಿಗೆ ಧನ್ಯವಾದಗಳನ್ನಿತ್ತರು. ಜಿಲ್ಲಾಧಿಕಾರಿಗಳು ಮಾತಾಡುತ್ತಾ ಡಾ. ಮೋದಿಯವರ ಕಾರ್ಯವನ್ನು ಶ್ಲಾಘಿಸಿದರು. ಡಾ. ಮೋದಿಯವರು ಮಾತಾಡುತ್ತಾ, ದೇವರ ಸಹಾಯವೇ ತನ್ನ ಚಿಕಿತ್ಸೆಯ ಯಶಸ್ಸಿಗೆ ಕಾರಣವೆಂದರು.

ಈ ಸಮಾರಂಭಕ್ಕೆ ಶ್ರೀ ವೆಂಕಟ್ರಮಣ ದೇವಳದಿಂದ ಶ್ರೀ ಗೋಕರ್ಣ ಮಠಾಧೀಶ ಶ್ರೀಮತ್ ದ್ವಾರಕಾನಾಥ್ ತೀರ್ಥ ಸ್ವಾಮಿ ಮತ್ತು ಶ್ರೀ ಕೈವಲ್ಯ ಮಠಾಧೀಶ ಶ್ರೀಮತ್ ಸಚ್ಚಿದಾನಂದ ಸರಸ್ವತಿ ಸ್ವಾಮಿಯವರು ಆಗಮಿಸಿ ಸಭೆಗೆ ಶೋಭಿತರಾದರಲ್ಲದೆ ಆಶೀರ್ವದಿಸಿದರು. ಕೊನೆಯಲ್ಲಿ ಬೋರ್ಡ್ ಹೈಸ್ಕೂಲಿನ ಮುಖ್ಯೋಪಾಧ್ಯಾಯ ಶ್ರೀ ಎಸ್. ಆರ್. ಆಚಾರ್ಯರು ಧನ್ಯವಾದಗಳನ್ನರ್ಪಿಸಿದರು.

ಕಸ್ತೂರಬಾ ಜನರಲ್ ಆಸ್ಪತ್ರೆಯಲ್ಲಿ ಹೊಸ ಕ್ಷ-ಕಿರಣ ಯಂತ್ರದ ಉದ್ಘಾಟನೆ— ಮಣಿಪಾಲ ಕಸ್ತೂರ್ಬಾ ಜನರಲ್ ಆಸ್ಪತ್ರೆಯಲ್ಲಿ ಹೊಸ ಎಕ್ಸರೇ ಪ್ಲಾಂಟನ್ನು ಶ್ರೀ ಮೊರಾರ್ಜಿ ದೇಸಾಯಿಯವರು ತಾ. 11ರಂದು ಉದ್ಘಾಟಿಸಿ, ಮಾತಾಡುತ್ತಾ ರಾಷ್ಟ್ರದ ಶಿಕ್ಷಣ ವ್ಯವಸ್ಥೆ ಪೂರ್ಣವಾಗಿ ಖಾಸಗೀ ಸಂಸ್ಥೆಗಳ ವಶವಾಗಿರಬೇಕೆಂದು ಅಭಿಪ್ರಾಯಪಟ್ಟರು. ಖಾಸಗೀ ಸಂಸ್ಥೆಗಳು ಹೆಚ್ಚು ಹಣ ವಸೂಲು ಮಾಡುತ್ತಿರುವುದಕ್ಕೆ ಬೆಂಬಲ ಸೂಚಿಸಿ, ಶ್ರೀ ಮೊರಾರ್ಜಿ ದೇಸಾಯಿಯವರು, ಇದರ ಜೊತೆಗೆ ಅರ್ಹ ಬಡ ವಿದ್ಯಾರ್ಥಿಗಳಿಗೆ ಧರ್ಮಾರ್ಥ ಶಿಕ್ಷಣವೀಯುವ ವ್ಯವಸ್ಥೆಯು ಆಗಬೇಕೆಂದರು. ಡಾ. ಟಿ. ಎಂ. ಎ. ಪೈಗಳು ಸರಕಾರ ಮಾಡದ, ವಿವಿಧ ತಾಂತ್ರಿಕ ಶಿಕ್ಷಣ ರಂಗದಲ್ಲಿ ಸಾಧಿಸಿರುವ ಕಾರ್ಯಗಳನ್ನು ಶ್ಲಾಘಿಸಿದರು.

ಆರಂಭದಲ್ಲಿ ಡಾ. ಟಿ. ಎಂ. ಎ. ಪೈಗಳು ಸ್ವಾಗತಿಸಿದ ಬಳಿಕ, ಶ್ರೀ ಟಿ. ರಮೇಶ ಪೈಗಳು ಶುಭಕೋರಿ ಬಂದ ಸಂದೇಶಗಳನ್ನೋದಿದರು. ಪೇಜಾವರ ಮಠದ ಸ್ವಾಮಿಗಳು ಆಶೀರ್ವದಿಸಿದ ನಂತರ ಶ್ರೀ ಟಿ ಎ. ಪೈಗಳು ವಂದನೆಗಳನ್ನು ಸಲ್ಲಿಸಿದರು.

ಧರ್ಮಸ್ಥಳದಲ್ಲಿ ಕನ್ನಡ ಸಮ್ಮೇಳನ

ಇದೇ ತಾ. 15ರಂದು ಧರ್ಮಸ್ಥಳದಲ್ಲಿ 31ನೇ ಸಾಹಿತ್ಯ ಸಮ್ಮೇಳನವು ಡಾ| ಆರ್. ಸಿ. ಹಿರೇಮಠರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಪ್ರಾರಂಭದಲ್ಲಿ ಶ್ರೀ ಬಿ. ಎಸ್. ರಾಮಾಚಾರ್ ಪ್ರಾರ್ಥನೆ ಮಾಡಿದರು. ಶ್ರೀ ಬಾಸ್ಕರನ್ ಶೇಷಾಚಾರ್ಯರು ಸಂದೇಶ ವಾಚನ ಮಾಡಿದರು. ಧರ್ಮಾಧಿಕಾರಿ ಶ್ರೀ ಡಿ. ರತ್ನವರ್ಮ ಹೆಗ್ಡೆಯವರು ಬಿನ್ನವತ್ತಳೆಯನ್ನರ್ಪಿಸಿದರು.

ಡಾ| ಹಿರೇಮಠರವರು ಮಾತಾಡುತ್ತಾ ಕಾವ್ಯದ ಉದ್ದೇಶ, ಪ್ರಯೋಜನವನ್ನು ನಿವರಿಸಿ ಸಮಾಜದಲ್ಲಿ ಕಾವ್ಯದ ಸ್ಥಾನವನ್ನು ಎತ್ತಿ ತೋರಿಸಿದರು. ಅವರು ಮುಂದುವರಿಯುತ್ತಾ ಕಾವ್ಯವೊಂದು ದೃಷ್ಟಿಯಲ್ಲಿ ಲೋಕದ ಅನುಕರಣೆ ಮಾಡಿದರೆ, ಲೋಕವು ಮತ್ತೊಂದು ದೃಷ್ಟಿಯಲ್ಲಿ ಕಾವ್ಯದ ಅನುಕರಣೆ ಮಾಡುತ್ತದೆ. ಕಾವ್ಯದ ವ್ಯಕ್ತಿಗಳು ಲೋಕವನ್ನಾಧರಿಸಿ ನಿಂತರೆ, ಲೋಕದ ವ್ಯಕ್ತಿಗಳು ಕಾವ್ಯವನ್ನಾಧರಿಸಿ ನಿಲ್ಲುತ್ತಾರೆ, ಎಂದು ಹೇಳಿದರು. ಅಂತ್ಯದಲ್ಲಿ ಕನ್ನಡ ಸಾಹಿತ್ಯರಂಗಕ್ಕೆ ಶುಭ ಕೋರಿದರು.

ಶ್ರೀಮತಿ ರತ್ನಮ್ಮ, ಶ್ರೀ ಬಾಲಕೃಷ್ಣ ಆಚಾರ್, ಶ್ರೀ ಕೆ. ಎಸ್. ಧರಣೇಂದ್ರಯ್ಯ ಬಿ ಎಸ್. ಕುಲಕರ್ಣಿ ಮತ್ತು ಕೆಲವರಿಂದ ಭಾಷಣಗಳಾದವು.

ಮಾನಪತ್ರ— ಇದೇ ತಾ. 11ರಂದು ಶ್ರೀ ಮೊರಾರ್ಜಿ ದೇಸಾಯಿ ಮತ್ತು ಬೆಂಗಳೂರು ಮೇಯರ್ ಶ್ರೀ ಕೆ. ಎಂ. ನಂಜಪ್ಪ ಇವರಿಗೆ ಉಡುಪಿ ತಾಲೂಕು ಬೋರ್ಡಿನ ಪರವಾಗಿ ಅಧ್ಯಕ್ಷ ಶ್ರೀ ಎಂ. ಮಧ್ವರಾಜ, ಎಂ. ಎಲ್. ಎ.ಯವರೂ ಉಡುಪಿ ನಗರಸಭೆಯ ಪರವಾಗಿ ನಗರ ಸಭಾ ಅಧ್ಯಕ್ಷ ಶ್ರೀ ಪಿ ರಂಗನಾಥ ಶೆಣೈಯವರೂ ಮಹಾತ್ಮಾ ಗಾಂಧಿ ಬೇಸಿಕ್ ಮುನ್ಸಿಪಲ್ ಶಾಲೆಯಲ್ಲಿ ಮಾನಪತ್ರಗಳನ್ನು ಒಪ್ಪಿಸಿ ಸನ್ಮಾನಿಸಿದರು. ಮಾನಪತ್ರಕ್ಕೆ ಉತ್ತರವೀಯುತ್ತಾ ಶ್ರೀ ಮೊರಾರ್ಜಿಯವರು ಉಡುಪಿಯ ಧಾರ್ಮಿಕ ಪ್ರಭಾವವನ್ನು ಶ್ಲಾಘಿಸಿ ನಮ್ಮ ಸಂಸ್ಕೃತಿಯ ವಿಶಿಷ್ಟತೆಯೆಂದರೆ ವೈವಿಧ್ಯತೆಗಳಲ್ಲಿಯೂ ಏಕತೆ ಕಾಣಿಸಿಕೊಳ್ಳುವುದಾಗಿದೆ ಎಂದರು.

ಸೋಮ ಕ್ಷತ್ರಿಯ ಸಮಾಜದ ಮಹಾಸಭೆ— ಉಡುಪಿ ತಾಲೂಕು ಸೋಮ ಕ್ಷತ್ರಿಯ ಸಮಾಜದ ಮಹಾ ಸಭೆಯು ತಾ. 8—12—1963ರಂದು ಶ್ರೀ ಎ. ರಾಮ ಮಾಸ್ತರ್ ಕೋಟೇಶ್ವರ ಇವರ ಅಧ್ಯಕ್ಷತೆಯಲ್ಲಿ ಬಾರಕೂರಿನಲ್ಲಿ ಸೇರಿತು. ಶ್ರೀ ಯು. ರಾಮಕೃಷ್ಣಯ್ಯನವರು ಸ್ವಾಗತಿಸಿದ ಬಳಿಕ ಶ್ರೀ ಕೆ. ಆನಂದ ಗಾಣಿಗರವರು ವರದಿಯನ್ನು ಸಭೆಯ ಮುಂದಿಟ್ಟರು. ಶ್ರೀಗಳಾದ ಯು. ವೆಂಕಟಪ್ಪಯ್ಯ, ಬಿ. ರಾಮಗಾಣಿಗ ಮತ್ತು ಕೆ. ಆನಂದ ಗಾಣಿಗರವರು ಭಾಷಣವನ್ನಿತ್ತರು. ಸಂಘದ ಹೊಸ ಆಡಳಿತ ಮಂಡಳಿಯ ಚುನಾವಣೆ ನಡೆಯಲಾಗಿ, ಶ್ರೀ ಯು. ರಾಮಕೃಷ್ಣಯ್ಯನವರು ಅಧ್ಯಕ್ಷರಾಗಿಯೂ ಶ್ರೀ ಯು. ಶಿವರಾಮ ಶೆಟ್ಟಿಯವರು ಉಪಾಧ್ಯಕ್ಷರಾಗಿಯೂ, ಶ್ರೀ ಕೆ. ಆನಂದ ಗಾಣಿಗರು ಪ್ರಧಾನ ಕಾರ್ಯದರ್ಶಿಗಳಾಗಿಯೂ ಶ್ರೀ ಕೆ. ನಾಗಪ್ಪಯ್ಯನವರು ಉಪಕಾರ್ಯದರ್ಶಿಗಳಾಗಿಯೂ, ಶ್ರೀ ಕೃಷ್ಣನವರು ಕೋಶಾಧಿಕಾರಿಗಳಾಗಿಯೂ, ಮತ್ತು ಇತರ 15 ಮಂದಿ ಆಡಳಿತ ಮಂಡಳಿಯ ಸದಸ್ಯರಾಗಿಯೂ ಆಯ್ಕೆ ಹೊಂದಿದರು. ಹಲವಾರು ಮಹತ್ವ ವಿಚಾರಗಳ ಕುರಿತು ನಿರ್ಣಯ ಕೈಕೊಂಡ ನಂತರ ಅಧ್ಯಕ್ಷರು ಸಂಘದ ಶೀಘ್ರ ಬೆಳವಣಿಗೆಯ ಕುರಿತು ಮಾತನಾಡಿದರು.

ಉಡುಪಿ ಕಾಂಗ್ರೆಸಿಗರಿಗೆ ಮೊರಾರ್ಜಿ ಹಿತವಚನ— ತಾ. 12ರಂದು ಕಲ್ಪನಾ ಥಿಯೇಟರಿನಲ್ಲಿ ಉಡುಪಿಯ ಕಾಂಗ್ರೆಸಿಗರಿಗಿತ್ತ ಹಿತವಚನದಲ್ಲಿ ಶ್ರೀ ಮೊರಾರ್ಜಿ ದೇಸಾಯಿಯವರು, ಪರಂಪರೆಯಿಂದ ಬಂದ ಹಲವಾರು ಸಮಸ್ಯೆಗಳನ್ನು ಯೋಗ್ಯ ರೀತಿಯಲ್ಲಿ ಬಗೆಹರಿಸಬೇಕೆಂದೂ ಸಮಸ್ಯೆಯ ಬಗ್ಗೆ ಸರಿಯಾದ ಅರಿವನ್ನು ಜನತೆ ತಿಳಿಯುವಂತೆ ಮಾಡಬೇಕೆಂದೂ, ಗೋವಾ ಚುನಾವಣೆಯಲ್ಲಿ ಕಾಂಗ್ರೆಸಿನ ಸೋಲಿಗೆ ಪಕ್ಷದ ದುರ್ಬಲತೆ ಕಾರಣವಾಗಿರದೆ ಅಲ್ಲಿ ಬೆಳೆದು ಬಂದಿರುವ ಶಕ್ತಿಯುತ ಸಂಕುಚಿತ ರಾಜಕೀಯ ನೀತಿಯೇ ಮೂಲವೆಂದೂ ಹೇಳಿದರು.

ಶ್ರೀ ಟಿ. ಎ ಪೈಗಳು ಶ್ರೀ ಮೊರಾರ್ಜಿಯವರನ್ನು ಸ್ವಾಗತಿಸುತ್ತಾ ರಾಜಕೀಯ ಸಂತ್ರಸ್ತರ ಬಗ್ಗೆ ಕಾಂಗ್ರೆಸ್ ಪಕ್ಷವಾದರೂ ಹೆಚ್ಚಿನ ಗಮನವೀಯಬೇಕೆಂದರು.

ತಿದ್ದುಪಡಿ— ನಮ್ಮ ಪಂಚಾಂಗ ಗ್ರಾಹಕರಿಗೊಂದು ಸೂಚನೆ. ಇದೇ ಶೋಭಕೃತು ಸಂ||ರದ ಪುಷ್ಯ ಶುಕ್ಲ ೧೧ಯು ಗುರುವಾರ (ತಾ. 26.12 63ನೇ) ದಿನ ದಶಮಿ ವೇಧವು ಸಂಭವಿಸುವದರಿಂದ ಆ ದಿನವನ್ನು ಸ್ಮಾರ್ತೈಕಾದಶಿಯನ್ನಾಗಿಯೂ ತಾ. 27.12.63ನೇ ಶುಕ್ರವಾರವನ್ನು ಭಾಗವತೈಕಾದಶಿಯನ್ನಾಗಿಯೂ ತಾ. 28.12.63ನೇ ಶನಿವಾರವನ್ನು ಮುಕ್ಕೋಟಿದ್ವಾದಶಿಯನ್ನಾಗಿಯೂ ತಿದ್ದಿಕೊಳ್ಳುವದು

ಸಂಪಾದಕ, ಶ್ರೀಕೃಷ್ಣ ಪಂಚಾಂಗ, ಉಡುಪಿ.

ಶ್ರೀಮತಿ ಲಕ್ಷ್ಮಿ ಶೆಡ್ತಿಯವರ ನಿಧನ— ಶ್ರೀ ಕುರುಕಾಲು ಗಣಪಯ್ಯ ಶೆಟ್ಟರ ಧರ್ಮಪತ್ನಿ ಶ್ರೀಮತಿ ಲಕ್ಷ್ಮಿ ಶೆಡ್ತಿಯವರು ಪಾರ್ಶ್ವವಾತ ಕಾಯಿಲೆಗೆ ಒಳಗಾಗಿ ಕೆಲವು ಸಮಯದಿಂದ ಹಾಸಿಗೆ ಹಿಡಿದಿದ್ದು, ತಾ. 11.12.63ರಂದು ತನ್ನ 60ನೇ ವರ್ಷ ಪ್ರಾಯದಲ್ಲಿ ಕೊನೆಯುಸಿರನ್ನೆಳೆದರು. ದಿವಂಗತ ಲಕ್ಷ್ಮಿ ಶೆಡ್ತಿಯವರು ತನ್ನ ಆಯುಷ್ಯದಲ್ಲಿ ದಾನಧರ್ಮಗಳಲ್ಲಿಯೂ, ಅತಿಥಿ ಸತ್ಕಾರಗಳಲ್ಲಿಯೂ, ಭಾಗ್ಯಲಕ್ಷ್ಮಿಯೇ ಆಗಿದ್ದು ತನ್ನ ಬಂಧುಬಳಗದ, ಮತ್ತು ಊರ ಜನರ ಪ್ರೇಮಾದರಗಳಿಗೆ ಪಾತ್ರರಾಗಿದ್ದರು. ಅವರ ಶವದಹನ ಕಾಲದಲ್ಲಿ ದೊಡ್ಡ ಜನಸಮೂಹವು ನೆರೆದಿತ್ತು.

ಕಾಲೇಜ್ ಡೇ ಸಮಾರಂಭ— ಉಡುಪಿ ಆಯುರ್ವೇದ ಕಾಲೇಜಿನಲ್ಲಿ ತಾರೀಕು 13—12—63ರಂದು ಬೆಳಿಗ್ಗೆ ಶ್ರೀ ಧನ್ವಂತರಿ ಪೂಜೆ ಆಚರಿಸಲ್ಪಟ್ಟ ಅಂಗವಾಗಿ ನಡೆದ ಸಭೆಯ ಅಧ್ಯಕ್ಷತೆಯನ್ನು ಶ್ರೀ ಅದಮಾರು ಮಠಾಧೀಶರು ವಹಿಸಿದ್ದರು.

ಅದೇ ದಿನ ಸಂಜೆ ಶ್ರೀಕೃಷ್ಣಾಪುರ ಮಠದ ಕೃಷ್ಣ ಕಲಾ ಮಂದಿರದಲ್ಲಿ ಜರಗಿದ ಕಾಲೇಜ್ ಡೇ ಸಮಾರಂಭದ ಅಧ್ಯಕ್ಷತೆಯನ್ನು ಪರ್ಯಾಯ ಶೀರೂರು ಮಠಾಧೀಶರಾದ ಶ್ರೀ ಮನೋಜ್ಞತೀರ್ಥ ಶ್ರೀಪಾದಂಗಳವರು ಅಲಂಕರಿಸಿದರು. ಸ್ವಾಗತ ಭಾಷಣವನ್ನು ಡಾ. ಕೆ. ಗುರುರಾಜಾಚಾರ್ಯರು ಮಾಡಿ, ಸಮಾರಂಭಕ್ಕೆ ಬಂದ ಸಂದೇಶಗಳನ್ನು ವಾಚನ ಮಾಡಿದರು. ಪ್ರಿನ್ಸಿಪಾಲ್ ಶ್ರೀ ಬಿ. ಡಿ. ಸವಣೂರರು ಕಾಲೇಜಿನ ವರದಿಯನ್ನು ಓದಿದರು. ಪ್ರಮುಖ ಅತಿಥಿಗಳಾದ ಶ್ರೀ ಎ. ಕೃಷ್ಣರಾವ್ ಮತ್ತು ವರದರಾಜ ಬಲ್ಲಾಳರು ಆಯುರ್ವೇದದ ಬಗ್ಗೆ ತಮ್ಮ ವಿಶ್ವಾಸ ಹಾಗೂ ಆಯುರ್ವೇದದ ಸಮಸ್ಯೆಗಳ ಬಗ್ಗೆ ತಮ್ಮ ಭಾಷಣದಲ್ಲಿ ಹೇಳಿದರು. ಅಧ್ಯಕ್ಷ ಭಾಷಣದಲ್ಲಿ ಶ್ರೀಗಳವರು ಆಯುರ್ವೇದದ ಹಿರಿಮೆಯನ್ನು ಒತ್ತಿ ಹೇಳಿದರು.

ಅಂದು ರಾತ್ರಿ 10 ಗಂಟೆಗೆ ಸರಿಯಾಗಿ "ಕುರುಕ್ಷೇತ್ರ"ವೆಂಬ ಪೌರಾಣಿಕ ನಾಟಕವು ವಿದ್ಯಾರ್ಥಿಗಳಿಂದ ಯಶಸ್ವಿಯಾಗಿ ಅಭಿನಯಿಸಲ್ಪಟ್ಟಿತು.

ಶ್ರೀ ಧನ್ವಂತರೀ ಜಯಂತಿ— ನಂಜನಗೂಡಿನ ಸದ್ವೈದ್ಯ ಶಾಲೆಯ ಧನ್ವಂತರಿ ವಿಲಾಸದಲ್ಲಿ ತಾ. 13ರಂದು ಧನ್ವಂತರೀ ಜಯಂತಿಯು ಶ್ರೀ ಬಿ. ವಿ. ಪಂಡಿತರ ನೇತೃತ್ವದಲ್ಲಿ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು.

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

(ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ)

ಸ್ವದೇಶ ರೂ. ೧೦

ವಿದೇಶ ರೂ. ೧೫

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

ಚಂದಾ ಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಎಂ. ರಂಗನಾಥ ಭಟ್ಟರು

(೫ನೇ ಪುಟದಿಂದ)

ಕಾಲ ಶಿಕ್ಷಣ ಹೊಂದಿದವರಾಗಿದ್ದು, ಅನೇಕ ಕಾಲವೇ ನೆಲೆ ಹೊಂದಿದವರಾಗಿರುವ ಮಲ್ಲಾಡಿ ಹಳ್ಳಿಯ ಅನಾಥಾಶ್ರಮದ ಸಂಚಾಲಕ ಹಾಗೂ ಸಂಸ್ಥಾಪಕರಾಗಿ ದೇಶ ಸೇವೆ ಮಾಡುತ್ತಿರುವ ಶ್ರೀ ರಾಘವೇಂದ್ರ ಸ್ವಾಮಿಗಳು ತಮ್ಮ ಬಾಲ್ಯದಲ್ಲಿ ಶ್ರೀ ಭಟ್ಟರ ನಾಟಕ ಕಂಪೆನಿಯಲ್ಲಿಯೇ ಇದ್ದವರಾಗಿದ್ದು, ಪ್ರಶಿಕ್ಷಣ ಹೊಂದಿದ ಭಟ್ಟರ ಪ್ರಿಯ ಶಿಷ್ಯರೇ ಆಗಿರುವರು. ಕರ್ನಾಟಕದ ಮಹಾ ಸಾಹಿತಿಯಾಗಿ ರಾಷ್ಟ್ರೀಯ ಪುರಸ್ಕಾರವನ್ನು ಪಡೆದು, ಕವಿ, ಸಾಹಿತಿ, ನಾಟಕಕಾರ ಹಾಗೂ, ಕಲಾವಿದರೂ ಆಗಿ, "ಕನ್ನಡಕ್ಕೊಬ್ಬನೇ ಕಾರಂತ" ಎಂಬ ಮಾನ್ಯತೆಯನ್ನು ಪಡೆದಿರುವ, ಶ್ರೀಮಾನ್ ಕೋಟ ಶಿವರಾಮ ಕಾರಂತರು, ಮಾನ್ಯ ರಂಗನಾಥ ಭಟ್ಟರ ಕಂಪೆನಿಯಲ್ಲಿ ನಟರಾಗಿ, ನಾಟಕ ಲೇಖಕರಾಗಿ ಶಿಷ್ಯರಾಗಿದ್ದು ಸೇವೆ ಸಲ್ಲಿಸಿದವರಾಗಿರುವರು.

ಶ್ರೀ ಭಟ್ಟರ ಪಾತ್ರಾಭಿನಯ

ಮಾನ್ಯ ರಂಗನಾಥ ಭಟ್ಟರು ಸಮರ್ಥ ನಟರಾಗಿರುವಂತೆ ಸಮರ್ಥ ಗಾಯಕರೂ ಆಗಿದ್ದರು. ಇವಕ್ಕೆ ಕಳಶವಿಟ್ಟಂತೆ ಅವರ ಪ್ರಭಾವ, ವ್ಯಕ್ತಿತ್ವ ಹಾಗೂ, ಸುದೃಢವಾದ ಅಂಗ ಸೌಷ್ಠವದಿಂದೆಸವ ಗಾಂಭೀರ್ಯ ಯುಕ್ತವಾದ ಸೌಂದರ್ಯದಿಂದೊಡಗೂಡಿದ ರೂಪ ಹೇಗಿತ್ತೆಂಬುದಕ್ಕೆ ಇಂದಿನ ವಿಖ್ಯಾತ ಭಾರತದ ಮಲ್ಲರಾಗಿರುವ ದಾರಾಸಿಂಗರನ್ನು ಉದಾಹರಣೆಯಾಗಿ ತೆಗೆದುಕೊಂಡರೆ, ಈ ಉಪಮಾನವು ಸರಿಯಾಗ ಬಹುದು. ಶ್ರೀಯುತರ ಈ ಅಂಗ ಸೌಷ್ಠವವು "ಶೇಕ್ಸ್‌ಪೀಯರ್" ರವರ "ಒಥೆಲೋ" ನಾಟಕದ ಶೂರ ಸೇನ' ಮಹಾ ಭಾರತದ ಕೌರವ—ಕೀಚಕ-ಭೀಮ, ಕೃಷ್ಣ ಲೀಲೆಯ ಕಂಸ, ಪ್ರಹ್ಲಾದ ಚರಿತ್ರೆಯ-- ಹಿರಣ್ಯ ಕಶಿಪು--ಪೃಥ್ವೀರಾಜ ನಾಟಕದ ಪೃಥ್ವೀರಾಜ—ವಿಕ್ರಮ ಶಶಿಕಲಾದಲ್ಲಿ, ರಾಜಾ ವಿಕ್ರಮ. ಮೊದಲಾದ ಪಾತ್ರಗಳಿಗೆ ಅತ್ಯಂತ ಸಮರ್ಪಕವಾಗಿದ್ದಿತು. ಈ ಪಾತ್ರಗಳ ಜೊತೆ ಬೇರೆ ಬೇರೆ ನಾಟಕಗಳಲ್ಲಿ — ಡಾಕ್ಟರ್, ಪ್ರೊಫೆಸರ್, ಕಾಳಿದಾಸ ಮೊದಲಾದ ಶ್ರೀ ಭಟ್ಟರ ನೂರಾರು ಪಾತ್ರಗಳು, ಅನುಪಮವಾಗಿ ಶೋಭಿಸುತ್ತಿದ್ದವು. ಶ್ರೀಯುತರ ಪಾತ್ರಗಳು ಹಾಗೂ ಅವರು ಆಡುತ್ತಿದ್ದ ನಾಟಕಗಳ ಸಂಕ್ಷಿಪ್ತ ಪರಿಚಯವೇ ವಿಸ್ತಾರವಾಗ ಬಹುದಾದುದರಿಂದ ಇಲ್ಲಿ ಅತಿ ಸಂಕ್ಷಿಪ್ತವಾಗಿಯೇ ಸೂಚಿಸಬೇಕಾಗಿದೆ. ಹೀಗೆ ಅಭಿನಯ ವಿಭೂಷಣರಾಗಿ ಶೋಭಿಸುತ್ತಿದ್ದ ಮಾನ್ಯ ರಂಗನಾಥ ಭಟ್ಟರ ಆ ಸುಂದರವಾದ ಪಹಿಲ್ವಾನಿ ದೇಹವು ಇಂದು ವೃದ್ಧಾಪ್ಯದ ದೆಸೆಯಿಂದ ಸಂಬಲಾಗದಷ್ಟು ಪರಿವರ್ತನೆ ಹೊಂದಿದೆ. ಆದರೆ ಶ್ರೀಯುತರ ವ್ಯಕ್ತಿ ಪರಿಚಯವುಳ್ಳ ಹಿರಿಯರಿಗೆ ಇದು ತಿಳಿದೇ ಇದೆ. ಕಿರಿಯರಾದ ನಮಗೆ, ಅವರ ಹಿಂದಿನ ನೂರಾರು ಮಂಡಲಿಗಳಿಂದ ಶೋಭಿಸುವ ಭಾವ ಚಿತ್ರಗಳನ್ನು ನೋಡಿದಾಗ ಇದರ ಸತ್ಯಾಂಶ ಚೆನ್ನಾಗಿ ಮನವರಿಕೆಯಾಗುತ್ತದೆ.

ಅಂದಿನ ಕರ್ನಾಟಕ ರಂಗ ಭೂಮಿ

ಆ ಕಾಲದಲ್ಲಿ ಜನರು ವಿಶೇಷವಾಗಿ ಪೌರಾಣಿಕ ನಾಟಕಗಳನ್ನೇ ಮೆಚ್ಚುತ್ತಿದ್ದರು. ಶ್ರೀ ಭಟ್ಟರೂ ಪೌರಾಣಿಕ ನಾಟಕಗಳನ್ನೇ ಹೆಚ್ಚಾಗಿ ಆಡುತ್ತಿದ್ದರು. ಆದರೆ ಸುಮಾರು ಸನ್ ೧೯೩೦ರಿಂದ ಶ್ರೀ ಭಟ್ಟರು ಪ್ರಪ್ರಥಮವೆಂಬಂತೆ, ಉತ್ತಮವಾದ ಸಾಮಾಜಿಕ ನಾಟಕಗಳನ್ನು ಕರ್ನಾಟಕ ರಂಗ ಭೂಮಿಯ ಮೇಲೆ ಪ್ರದರ್ಶಿಸುವ ಸಾಹಸ ಮಾಡಿದರು. ಈ ಕಾರಣದಿಂದ ಪೌರಾಣಿಕ ನಾಟಕಗಳನ್ನೇ ಮೆಚ್ಚುತ್ತಿದ್ದ ಜನರ ಅಭಿರುಚಿ ಕೂಡಲೇ ಸಾಮಾಜಿಕ ನಾಟಕಗಳ ಕಡೆಗೆ ಆಕರ್ಷಿತವಾಗಲಿಲ್ಲ. ಇದರ ಪರಿಣಾಮವಾಗಿ ಶ್ರೀ ಭಟ್ಟರು ಅಪಾರ ನಷ್ಟವನ್ನು ಅನುಭವಿಸಬೇಕಾಗಿ ಬಂದಿತು. ಕೊನೆಗೆ ಇಪ್ಪತ್ತು ವರ್ಷಗಳಿಂದ ಆದರ್ಶವಾಗಿ ನಡೆದುಕೊಂಡು ಬಂದ "ಅಂಬಾ ಪ್ರಸಾದಿಕ ನಾಟಕ ಮಂಡಳಿ'ಯನ್ನು ೧೯೩೩ರಲ್ಲಿ ನಿಲ್ಲಿಸಿ ಬಿಡಬೇಕಾಯಿತು! ಇಂತು ಸಾಮಾಜಿಕ ನಾಟಕಗಳ ಹೊಸ ಪ್ರಯೋಗದ ಪರಿಣಾಮವಾಗಿ ಶ್ರೀ ಭಟ್ಟರು ನಾಟಕ ಕಲಾ ಸೇವೆಯಿಂದ ನಿವೃತ್ತರಾಗ ಬೇಕಾಗಿ ಬಂದರೂ, ಮುಂದೆ ಇತರ ನಾಟಕ ಕಂಪೆನಿಗಳು ಇದರಿಂದ ಲಾಭ ಪಡೆದವು. ಶ್ರೀ ಭಟ್ಟರ ನಷ್ಟರೂಪೀ ತ್ಯಾಗವು ಮುಂದೆ ಸಾಮಾಜಿಕ ನಾಟಕಗಳ ಕಡೆಗೆ ಜನರ ಅಭಿರುಚಿ, ಪರಿವರ್ತನೆಯಾಗಲು ಕಾರಣವಾಯಿತು. ಅಂದು ಪೌರಾಣಿಕ ನಾಟಕಗಳನ್ನೇ ಮೆಚ್ಚುತ್ತಿದ್ದ ಜನರು ಮುಂದೆ ಸಾಮಾಜಿಕ ನಾಟಕಗಳನ್ನು ಮೆಚ್ಚುವಂತೆ, ಪರಿವರ್ತನೆಯಾದ, ಈ ಪರಿಸ್ಥಿತಿಯನ್ನುಂಟುಮಾಡಿದ ಕೀರ್ತಿ ಪ್ರಾಯಶಃ ಶ್ರೀ ಭಟ್ಟರಿಗೆ ಸಲ್ಲಬೇಕು.

ಗೌರವ ಹಾಗೂ ನಿವೃತ್ತ ಜೀವನ

ನಾಟಕ ಕಂಪೆನಿಯಿಂದ ನಿವೃತ್ತರಾದ ಶ್ರೀ ರಂಗನಾಥ ಭಟ್ಟರು ತಮ್ಮ ಪರಿವಾರದೊಡನೆ, ತಮ್ಮ ಊರಾದ ಮುಂಡಾಜೆಗೆ ಮರಳಿದಾಗ ಕಲಾ ಪ್ರೇಮಿಗಳಾದ ಗ್ರಾಮಸ್ಥರು ಮತ್ತು ಧರ್ಮಾತ್ಮರಾದ ದಿವಂಗತ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರು ಶ್ರೀಯುತರಿಗೆ ಹಲವು ರೀತಿಯಿಂದ ಸಹಾಯ ಮಾಡಿದರು. ಕೊನೆಗೆ ಒಂದು ಚಿಕ್ಕ ಜಮೀನನ್ನು ಖರೀದಿ ಮಾಡಿ ಶ್ರೀಯುತರಿಗೆ ದಾನ ರೂಪವಾಗಿ ಅರ್ಪಿಸಿ, ತಮ್ಮ ಭಕ್ತಿಯನ್ನು ಪ್ರದರ್ಶಿಸಿದರು. ಶ್ರೀಯುತರು ತಮ್ಮ ನಿವೃತ್ತ ಜೀವನವನ್ನು ಅಲ್ಲಿಯೇ ನಡೆಸುತ್ತಿದ್ದಾರೆ.

ಮಾನ್ಯ ಭಟ್ಟರಿಗೆ ಪಂಚ ಕನ್ಯೆಯರೂ. ಮೂವರು ಹುಡುಗರೂ ಇದ್ದಾರೆ. ಇವರಲ್ಲಿ ಹಿರಿಯರಾದ ಅಂಬಾದಾಸರು ವೈದ್ಯಕೀಯ ಶಿಕ್ಷಣ ಪಡೆಯುತ್ತಿದ್ದಾರೆ.

ಶ್ರೀಯುತ ರಂಗನಾಥ ಭಟ್ಟರಿಗೆ, ದಕ್ಷಿಣ ಜಿಲ್ಲೆಯ ಬ್ರಹ್ಮಾವರದ ಕರ್ನಾಟಕ ಸಂಘದವರು ಮಾನ ಪತ್ರವನ್ನಿತ್ತು ಗೌರವಾರ್ಪಣೆ ಮಾಡಿರುವರು, ಆ ಬಳಿಕ ಶ್ರೀಯುತರ ಕಲಾಸೇವೆಯನ್ನು ಲಕ್ಷಿಸಿ, ಕೇಂದ್ರ ಸರಕಾರದ ಸಂಗೀತ ನಾಟಕ ಅಕಾಡೆಮಿಯವರು. ಶ್ರೀಯುತರಿಗೆ ಸನ್ ೧೯೬೦ರಿಂದ ೫೦ ರೂಪಾಯಿಗಳ ಮಾಸಿಕ ನಿವೃತ್ತಿ ವೇತನವನ್ನು ಕೊಡುತ್ತಿರುವರು. ಸನ್ ೧೯೬೨ರಲ್ಲಿ ಮೈಸೂರಿನ ಸಂಗೀತ ಅಕಾಡಮಿಯ ಮೂಲಕ ಶ್ರೀಯುತರಿಗೆ, ಧನ ಸಹಾಯ ರೂಪದಿಂದ ಸಂಭಾವನೆಯನ್ನು ಕೊಟ್ಟಿರುವರು. ಇದೀಗ ಈ ಕಲಾ ತಪಸ್ವಿಗಳನ್ನು ಮೈಸೂರು ರಾಜ್ಯದ ಸಂಗೀತ ನಾಟಕ ಅಕಾಡಮಿಯವರು ಸನ್ಮಾನಿಸಲು ಮುಂದೆ ಬಂದಿರುವುದು ಕರ್ನಾಟಕದ ಸಂಗೀತ ನಾಟಕ ಕಲಾಪ್ರೇಮಿಗಳೆಲ್ಲರಿಗೂ ರೂಪದಾಯಕವಾದ ವಿಚಾರವಾಗಿದೆ.

ಮಾನ್ಯ ಶ್ರೀ ರಂಗನಾಥ ಭಟ್ಟರಿಗೆ ಭಗವಂತನು, ಆಯುರಾರೋಗ್ಯ ಭಾಗ್ಯವನ್ನು ಕರುಣಿಸಲಿ.

ಲೇಖಕರು: ವಿದ್ವಾನ್ ಶ್ರೀ ಕೆ.ಎನ್. ಭಟ್, ಶಿರಾಡಿಪಾಲ್.

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಅತ್ಯಂತ ಪ್ರಯೋಜನಕಾರಿ ಪುಸ್ತಕ—

ಮನೆ-ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್ ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನವಭಾರತ ಪುಸ್ತಕ ಭಂಡಾರ, ಉಡುಪಿ.

ವಾರ್ತೆ—ಪ್ರತಿವಾರ್ತೆ

. ರಾಜ್ಯ ಪುನಾರಚನಾ ಆಯೋಗದ ಅಧ್ಯಕ್ಷರಾಗಿ ಸರದಾರ ಕೆ.ಎಂ ಪಾಣಿಕ್ಕರರು ಫಜಲ್ ಅಲಿ ಸಮಿತಿಯ ಮೇಲೆ ಬೀರಿದ ಪ್ರಭಾವ ಮತ್ತು ಮಾಡಿದ ಕಾರ್ಯಗಳು ಅವರ ಹೆಸರನ್ನು ಭಾರತದ ಚರಿತ್ರೆಯಲ್ಲಿ ಅಚ್ಚಳಿಯದೆ ಉಳಿಯುವಂತೆ ಮಾಡಿವೆ --ಅಭಿಪ್ರಾಯ.

—ಕಾಸರಗೋಡಿನ ಕನ್ನಡಿಗರು ಈ ಅಭಿಪ್ರಾಯವನ್ನು ಯಾವ ಕಾಲಕ್ಕೂ ಪೂರ್ಣ ರೂಪೇಣ ಸಮರ್ಥಿಸದೆ ಇದ್ದಾರೆ?

○ ○ ○

ಪೂರ್ವ ಪಾಕಿಸ್ತಾನದ ರಾಜಧಾನಿಯಲ್ಲಿರುವ ಭಾರತದ ಅಸಿಸ್ಟೆಂಟ್ ಹೈ ಕಮಿಶನರರ ಕಛೇರಿಯನ್ನು ಮುಚ್ಚಲು ನೀಡಿದ ಆಜ್ಞೆಯನ್ನು ಪಾಕ್ ಸರಕಾರ ಪುನರ್ವಿಮರ್ಶಿಸುವಪ್ರಶ್ನೆಯೇ ಉದ್ಭವಿಸಿಲ್ಲ—ಅಧಿಕೃತ ವರದಿ.

—ಈ ಬಗ್ಗೆ ಯೂ ಭಾರತ ಸರಕಾರ ಮತ್ತೊಂದು 'ಪ್ರತಿಭಟನೆ' ಸಲ್ಲಿಸುವುದೆ?

○ ○ ○

ಗೋವೆಯಲ್ಲಿ ವಿಧಾನ ಸಭೆಯ ೩೦ ಮತ್ತು ಲೋಕ ಸಭೆಯ ೨ ಸ್ಥಾನಗಳಿಗೆ ಸ್ಪರ್ಧಿಸಿದ ಕಾಂಗ್ರೆಸ್ಸು ವಿಧಾನ ಸಭೆಯ ಒಂದು ಸ್ಥಾನವನ್ನು ಮಾತ್ರ ಗಳಿಸಿದೆ.

—೧೮ ಸ್ಥಾನಗಳಲ್ಲಿ ಇಡು ಗಂಟನ್ನೂ ಕಳೆದುಕೊಂಡು ತನ್ನ ಇತಿಹಾಸದಲ್ಲಿಯೇ ಅಪೂರ್ವ ದಾಖಲೆಯನ್ನೂ ಸ್ಥಾಪಿಸಿದೆಯೆಂಬುದು ಕಾಂಗ್ರೆಸಿಗೊಂದು ಚಾಟಿಯೇಟಲ್ಲವೆ?

○ ○ ○

ಸಿಂಹಳದ ಪಾರ್ಲಿಮೆಂಟನ್ನು ಉದ್ದೇಶಿಸಿ ಮಾತಾಡುತ್ತ ಬಲ್‌ಗ್ರೇಡ್ ಮಾದರಿಯ ತಟಸ್ಥ ರಾಷ್ಟ್ರಗಳ ಸಮ್ಮೇಳನ ಸೇರಿದರೆ, ಅದರಲ್ಲಿ ಜಗತ್ತಿಗೆ ಇವರಲ್ಲೊಬ್ಬನನ್ನು ದಾನ ಮಾಡಿದ ಕೆಂಪು ಚೀನಾ ಭಾಗವಹಿಸ ವುದು ಸಾಧ್ಯವಿಲ್ಲವೆಂದು ಅಧ್ಯಕ್ಷ ಅಯೂಬ ಖಾನರು ಹೇಳಿದರಂತೆ.

—ಅಯೂಬರ ಈ ಮಾತಿನ ಬಗ್ಗೆ ತಮ್ಮನ್ನು ತಟಸ್ಥರ ಸಾಲಿನಲ್ಲಿ ನಿಲ್ಲುವಂತೆ ಮಾಡಬಯಸುವ ಚಾ.ಎನ್-ಲಾಯ್ ತೀವ್ರ ಅಸಮಾಧಾನ ವ್ಯಕ್ತಪಡಿಸದೆ ಇದ್ದಾರೆ?

○ ○ ○

ವಿದ್ಯಾರ್ಥಿಗಳಲ್ಲಿ ಹೆಚ್ಚುತ್ತಿರುವ ಅಶಿಸ್ತಿಗೆ ಉಪಾಧ್ಯಾಯರೇ ಕಾರಣ — ಎನ್‌ಸಿಸಿ ಡೈರೆಕ್ಟರ್ ಜನರಲ್ ವೀರೇಂದ್ರ ಸಿಂಗರ ಅಭಿಪ್ರಾಯ,

--ಉಪಾಧ್ಯಾಯರಿಗೆಲ್ಲಾ ಮೊದಲು ಎನ್‌ಸಿಸಿ ತರಬೇತಿ ಕೊಟ್ಟರೆ ಸಮಸ್ಯೆ ಪರಿಹಾರಗೊಂಡೀತೆ? ಅಥವಾ ಎನ್‌ಸಿಸಿ ಅಧಿಕಾರಿಗಳೇ ಉಪಾಧ್ಯಾಯರಾಗಿ ನಿಯುಕ್ತರಾಗ ಬೇಕಾಗಿ ಬಂದೀತೆ?

○ ○ ○

ಯೋಜನೆಯೊಂದು ಹುಲಿ. ನಾವು ಹುಲಿಯಿಂದ ಓಡಿ ಹೋಗಲಿಚ್ಛಿಸುತ್ತಿಲ್ಲ; ನಾವು ಅದನ್ನು ಹತ್ತೇ ತೀರುತ್ತೇವೆ— ಟಿಟಿಕೆಯವರ ಉದ್ಘೋಷ,

—ಹುಲಿಗೆ ಹೆದರುವವರು ಮೇಲೆ ಹತ್ತಿದವರಲ್ಲ; ಕೆಳಗೆ ಕಂಗೆಟ್ಟವರು ಮಾತ್ರ.

○ ○ ○

ಚೀನೀಯ ಪಡೆಗಳ ಭಾರತದ ಭೂಭಾಗದ ಮೇಲಿಂದ ಹಾರಿ ಹೋಗಲು ಭಾರತ ಸರಕಾರವಿತ್ತ ಅನುಮತಿಗೆ ಲೋಕ ಸಭೆಯಲ್ಲಿ ತೀವ್ರ ವಿರೋಧ ವ್ಯಕ್ತವಾಯಿತು.

—ಹಾರುತ್ತಿದ್ದ ವಿಮಾನವನ್ನು ಕೆಡೆಮರುಳಿಸುತಿದ್ದರೆ ಏನಾಗುತಿತ್ತೋ!

○ ○ ○

ಮಾನವ ಸಮಾನ ಹಕ್ಕು ಬಾಧ್ಯತೆಗಳ ವಿಧೇಯಕಕ್ಕೆ ಮನ್ನಣೆ ನೀಡಬೇಕೆಂದು ಅಧ್ಯಕ್ಷ ಜಾನ್ಸನ್ನರು ಅಮೇರಿಕನ್ ಕಾಂಗ್ರೆಸ್ಸನ್ನು ಕೇಳಿಕೊಂಡರು.

ದಿವಂಗತ ಕೆನ್ನೆಡಿಯವರ ಜನಪ್ರಿಯತೆ ಇನ್ನೀಗ ಪ್ರಕಟವಾಗಲಿದೆಯೆಂಬುದು ಕೇವಲ ಕುಹಕ!

ಭಾರತೀಯ ಕೃಷಿ ಸಂಶೋಧನಾ ಪರಿಷತ್ತು

ಕೃಷಿಕರಿಗೆ ಸೂಚನೆಗಳು

ಹಿಂಗಾರು ಮಳೆ ಅಲ್ಲಲ್ಲಿ ಚೆನ್ನಾಗಿ ಆಗಿದೆ. ಈ ತಿಂಗಳ ಕೊನೆಯ ಹೊತ್ತಿಗೆ ಕೆರೆ ಕಟ್ಟೆಗಳೆಲ್ಲಾ ತುಂಬುತ್ತವೆ. ಬೇಸಿಗೆ ಬೆಳೆ ಇಡುವ ಕಾಲ ಇದು. ಕಣಗಳಲ್ಲಿ ಕೆಲಸ ಜಾಸ್ತಿ ಇದ್ದರೂ ಬೆಳೆ ಇಡುವುದನ್ನು ತಡ ಮಾಡಬಾರದು.

ಭತ್ತ

ದೇಶಕ್ಕೆ ಹೆಚ್ಚು ಆಹಾರ ಅಗತ್ಯವಾಗಿದೆ. ಬೆಳೆ ಹೆಚ್ಚು ತೆಗೆಯಲು ರೈತರು ಮನಸ್ಸು ಮಾಡಬೇಕು. ಜಪಾನು—ಮಾದರಿ ವ್ಯವಸಾಯ ಉತ್ತಮ. ಅದನ್ನು ಅನುಸರಿಸುವುದರಿಂದ ಇಳುವರಿ ಹೆಚ್ಚುವುದು. ಆ ಕ್ರಮಗಳನ್ನು ರೈತರು ನೆನಪಿನಲ್ಲಿಡಬೇಕು.

೧. ಸುಧಾರಿಸಿದ ಬಿತ್ತನೆ ಬೀಜದ ಆಯ್ಕೆ ಮಾಡಿ

೨. ಬಿತ್ತನೆ ಬೀಜಕ್ಕೆ ಅಗ್ರಸಾನ್ ಅಥವಾ ಸೆರಸಾನ್ ಪುಡಿ ೧೮—೨೨ ಸೇರು ಬೀಜಕ್ಕೆ ೧ ತೊಲದಂತೆ ಬೆರಸಿ.

೩. ಎತ್ತರಿಸಿದ ಮಡಿಗಳಲ್ಲಿ ಮಡಿಯೊಂದಕ್ಕೆ ಅರ್ಧ ಪಾವಿನಷ್ಟು ಬೀಜವನ್ನು ತೆಳುವಾಗಿ ಬಿತ್ತಿ ಸಸಿಗಳಿಗೆ ೨೫—೩೦ ದಿನಗಳಾಗುವುದರೊಳಗೆ ನಾಟಿ ಕೆಲಸವನ್ನು ಪೂರೈಸಿ ಬಿಡಿ.

೪. ನಿಯಮಿತ ಪ್ರಮಾಣದಲ್ಲಿ ಜಮೀನಿಗೆ ಗೊಬ್ಬರ ಹಾಕಿ ನಾಟಿಯದಿನ ಎಕರೆಗೆ ೫೦ ಕಿಲೋಗ್ರಾಮು ಅಥವಾ ಅರ್ಧ ಪೌಂಡು ಅಮೋನಿಯಂ ಸಲ್ಫೇಟನ್ನು ಚೆಲ್ಲಿಕೊಂಡು ನಾಟಿ ಮಾಡಬೇಕು.

೫. ಪೈರನ್ನು ಸಾಲಾಗಿ ನಾಟಮಾಡಬೇಕು.

೬. ಅಂತರ ಕೃಷಿಗೆ ಜಪಾನು ಮಾದರಿಯ ರೋಟರಿ ಕಳೆ ಕೀಳಕವನ್ನು ಉಪಯೋಗಿಸಿ. ಇದರಿಂದ ಕಳೆ ನಾಶವಾಗುತ್ತದೆ.

ಕಬ್ಬು

ಡಿಸೆಂಬರ್ ತಿಂಗಳು ಕಬ್ಬು ನಾಟುವ ಕಾಲ. ಬಿತ್ತನೆಗೆ ೮—೧೦ ತಿಂಗಳು ಮಾತ್ರ ಆಗಿರುವ ಹೊರಪಾದ ಎಳೆಯ ಕಬ್ಬನ್ನು ಆರಿಸಿಕೊಂಡು ಕತ್ತರಿಸಿಕೊಳ್ಳಬೇಕು. ಒಂದು ತುಂಡಿಗೆ ಮೂರು ಕಣ್ಣುಗಳಿರತಕ್ಕದ್ದು. ೧೨ ತಿಂಗಳಿಗೆ ಮೀರಿದ ಅಥವಾ ಸೊನಂಗಿ ಬಿಟ್ಟ ಕಬ್ಬಿನಿಂದ ಒಳ್ಳೆಯ ಬಿತ್ತನೆ ಸಿಕ್ಕುವುದಿಲ್ಲ. ಆ ತುಂಡುಗಳು ಚೆನ್ನಾಗಿ ಮೊಳೆಯುವುದೂ ಇಲ್ಲ. ತುಂಡುಗಳನ್ನು ಕತ್ತರಿಸಿ ಕೊಳ್ಳುವಾಗ ಹುಳುಹೊಡೆದ ಅಥವಾ ಕೆಂಪು ರೋಗ ಹತ್ತಿದ ಕಬ್ಬನ್ನು ಬಿಟ್ಟುಬಿಡ ಬೇಕು. ತುಂಡುಗಳನ್ನು ೪೮ ಘಂಟೆಗಳ ಕಾಲ ನೀರಿನಲ್ಲಿ ನೆನೆಹಾಕಿ ತುಂಡುಗಳನ್ನೆಲ್ಲಾ ಒಂದು ನೀರುಗಾಲುವೆಯಲ್ಲಿಟ್ಟು ಎರಡು ಕಡೆ ಮಣ್ಣು ಕಟ್ಟಿ ನೀರು ನಿಲ್ಲಿಸಿದರೆ ಒಳ್ಳೆಯದು. ಬಿತ್ತನೆಯಲ್ಲಿ ಸಕ್ಕರೆ ಅಂಶ ಕಡಿಮೆಯಾಗಬೇಕು. ಸಾಧಾರಣ ಸೂಪರ್ ಫಾಸ್ಫೇಟ್ ಗೊಬ್ಬರ ಎಕರೆಗೆ ೧೦೦ ಕಿಲೋಗ್ರಾಮು ಮತ್ತು ೧೦೦ ಕಿಲೋಗ್ರಾಮು ಅಮೋನಿಯಂ ಸಲ್ಫೇಟ್ ಹಾಕಿ ಹಗುರವಾಗಿ ಮಣ್ಣಿನಲ್ಲಿ ಬೆರಸಬೇಕು. ಕಣ್ಣುಗಳು ತಳಕ್ಕೆ ಸಿಕ್ಕಿಕೊಳ್ಳದ ಹಾಗೆ ತುಂಡುಗಳ ಎರಡೂ ಕಡೆಗಳಲ್ಲಿ ಬರುವಂತೆ ಇಡಿ.

ತೆಂಗಿನ ತೋಟ

ಹಿಂದಿನ ತಿಂಗಳಲ್ಲಿ ಗುಪ್ಪೆಹಾಕಿದ ಮಣ್ಣನ್ನು ಹರಡಿ ಭೂಮಿಯನ್ನು ಸಮ ಮಾಡಬೇಕು. ಮಣ್ಣಿನಲ್ಲಿ ತೇವವಿದ್ದರೆ ಸ್ವಲ್ಪ ನಿಧಾನಿಸಿ. ಏಕೆಂದರೆ ತೇವವಿರುವವರೆಗೆ ಕಳೆಗಳು ಮತ್ತೆ ಹುಟ್ಟಿಕೊಳ್ಳಲು ಅವಕಾಶವಿರುತ್ತದೆ.

ನೀರಾವರಿ ಸೌಕರ್ಯ ವಿರುವ ತೋಟಗಗಳಲ್ಲಿ ತೆಂಗಿನ ಗಿಡಗಳ ಸುತ್ತಲೂ ದೊಡ್ಡ ದೊಡ್ಡ ಪಾತಿ ಕಟ್ಟೆಗಳನ್ನು ಕಟ್ಟಿ ನೀರು ಹಾಯಿಸುವ ಅಗತ್ಯವಿಲ್ಲ. ಜನವರಿಯಲ್ಲಿ ನೀರು ಹಾಯಿಸಲು ಮೊದಲು ಮಾಡ ಬಹುದು.

ಅಂತರ ಬೆಳೆಯಾಗಿ ಗೆಣಸು

ಗೆಣಸನ್ನು ನೆಡುವ ಸಸಿಲುವಾಗಿ ಗುಣಿಗಳನ್ನು ತೋಡಲು ಇದು ಸರಿಯಾದ ಕಾಲ. ೨॥ ಅಡಿ ವ್ಯಾಸ ಮತ್ತು ೬ ಅಂಗುಲ ಆಳದ ಗುಣಿಗಳನ್ನು ನಾಲ್ಕು ನಾಲ್ಕು ಅಡಿಗಳ ಅಂತರದಲ್ಲಿ ತೋಡಿ, ಆ ಗುಣಿಗಳಿಗೆ ಹಿತ್ತಲಿನ ಕಸ ಕಡ್ಡಿಗಳನ್ನು ಹಾಕಿ ಬೆಂಕಿ ಇಡ ಬೇಕು.

ತರಕಾರಿ

ಹಾಗಲ ಕಾಯಿ, ಪಡವಲ ಕಾಯಿ ಮುಂತಾದ ಬೇಸಿಗೆ ತರಕಾರಿಗಳ ಆರಂಭ ಕೃತಿಗೆ ಈಗಲೇ ಗಮನ ಕೊಟ್ಟರೆ ಉತ್ತಮ.

ಈ ತಿಂಗಳ ಅಖೈರಿನ ಹೊತ್ತಿಗೆ ಸೊಪ್ಪಿನ ಮಡಿಗಳನ್ನು ಬಿತ್ತ ಬೇಕು. ಮಡಿಗಳನ್ನು ಸುಡದೆ ಬಿತ್ತ ಬೇಡಿ. ಎಳೆ ಹರಿವೆ, ಮೆಂತ್ಯೆ ಮತ್ತು ಕೊತ್ತಂಬರಿ ಮಡಿಗಳ ಮೂಲೆಗಳಲ್ಲಿ ಶಾವಂತಿಗೆ ಗೆಡ್ಡೆಗಳನ್ನು ನಾಟಿದರೆ ಶ್ರಾವಣದ ಹೊತ್ತಿಗೆ ಹೂ ಬರುತ್ತೆ. ಬೀಟ್‌ರೂಟ್, ಗೆಡ್ಡೆಕೋಸು, ನವಿಲು ಕೋಸು, ಮೂಲಂಗಿಗಳನ್ನು ಬಿತ್ತ ಬಹುದು.

—— ——

ಕಿರುಗತೆ

ವಂಚನೆಗೆ ವಂಚನೆ

೧೫ನೇ ಶತಮಾನದ ಒಂದು ಸಣ್ಣ ಕಥೆ

ಇಬ್ಬರು ಪೇಟೆಯ ಜನರೂ ಒಬ್ಬ ಹಳ್ಳಿಯ ಮನುಷ್ಯನೂ ಮಕ್ಕಾ ಯಾತ್ರೆಗೆ ಹೊರಟು ಅಲ್ಲಿ ಮುಟ್ಟುವ ವರೆಗೆ ತಮ್ಮಲ್ಲಿದ್ದ ಆಹಾರ ಪದಾರ್ಥಗಳನ್ನು ಪರಸ್ಪರ ಹಂಚಿಕೊಳ್ಳುವುದಕ್ಕೆ ಒಪ್ಪಿಕೊಂಡಿದ್ದರು. ಆದರೆ ಆಹಾರ ವಸ್ತುವು ಬರ ಬರುತ್ತಾ ಕಡಿಮೆಯಾಗಿತ್ತು. ಕೊನೆಗೆ ಒಂದು ರೊಟ್ಟಿ ಮಾಡುವುದಕ್ಕೆ ಬೇಕಾದಷ್ಟು ಮಾತ್ರ ಸ್ವಲ್ಪ ಹಿಟ್ಟು ಉಳಿದಿತ್ತು.

ಅದನ್ನು ತಿಳಿದು ಆ ಪೇಟೆಯ ಜನರು ಹೇಳಿಕೊಂಡರು:– "ನಮ್ಮಲ್ಲಿ ಸ್ವಲ್ಪವೇ ಆಹಾರ ಉಳಿದಿದೆ. ನಮ್ಮ ಸಂಗಡ ಇರುವ ಆ ಹಳ್ಳಿಯವನು ಹೆಚ್ಚು ತಿನ್ನುತ್ತಾನೆ ಅದ್ದರಿಂದ ಅವನು ರೊಟ್ಟಿಯನ್ನು ಸ್ವಲ್ಪವೂ ತಿನ್ನದೆ ನಾವು ಮಾತ್ರ ತಿನ್ನುವಂತೆ ಏನುಉಪಾಯ ಮಾಡೋಣ?"

ಆ ವೇಳೆ ಅವರು ಹೀಗೆ ಆಲೋಚಿಸಿದರು:– "ನಾವು ರೊಟ್ಟಿಯನ್ನು ಮಾಡಬೇಕು. ಮತ್ತು ಅದು ಬೇಯುತ್ತಿರುವಾಗ ನಿದ್ದೆ ಮಾಡಬೇಕು, ಆ ಸಮಯ ಯಾರು ಅತ್ಯಾಶ್ಚರ್ಯಕರವಾದ ಸ್ವಪ್ನವನ್ನು ಕಾಣುತ್ತಾನೋ ಅವನು ಮಾತ್ರ ರೊಟ್ಟಿಯನ್ನು ತಿನ್ನಬೇಕು."

ಆ ಮೂಢ ಗ್ರಾಮಸ್ಥನನ್ನು ಮೋಸಗೊಳಿಸುವ ಆಲೋಚನೆಯಿಂದ ಅವರು ಹೀಗೆ ನಿರ್ಣಯಿಸಿ, ರೊಟ್ಟಿಯನ್ನು ಮಾಡಿ ಅದನ್ನು ಬೇಯಲಿಕ್ಕೆ ಹಾಕಿ ನಿದ್ದೆಮಾಡಲಿಕ್ಕೆ ಮಲಗಿಕೊಂಡರು. ಆದರೆ ಆ ಗ್ರಾಮಸ್ಥನು ಅವರ ಮೋಸಗಾರಿಕೆಯನ್ನು ತಿಳಿದು ಅವರು ನಿದ್ರಿಸುತ್ತಿರುವಾಗ, ಅರ್ಧ ಬೆಂದ ಆ ರೊಟ್ಟಿಯನ್ನು ತೆಗೆದು ತಿಂದು ಬಿಟ್ಟು ಮಲಗಿಕೊಂಡನು.

ಅವಾಗ ಅವರ ಪೈಕಿ ಒಬ್ಬ ನಾಗರಿಕನು ಎದ್ದು ಸ್ವಪ್ನಕಂಡು ಹೆದರಿದವನಂತೆ ನಟಿಸುತ್ತಾ ತನ್ನ ಸ್ನೇಹಿತನನ್ನು ಕರೆದನು. ಆ ಸ್ನೇಹಿತನು ಕೇಳಿದನು:– "ಏನಾಯಿತು ನಿನಗೆ?"

"ನಾನೊಂದು ಅದ್ಭುತ ದೃಶ್ಯವನ್ನು ಕಂಡೆನು ಇಬ್ಬರು ಅಪ್ಸರೆಯರು ಸ್ವರ್ಗದ ಬಾಗಿಲುಗಳನ್ನು ತೆರೆದರು. ನನ್ನನ್ನು ದೇವರ ಎದುರಿಗೆ ಕರೆದುಕೊಂಡು ಹೋದರು."

ಅವನ ಸ್ನೇಹಿತನು ಹೇಳಿದನು:– "ಆ ದೃಶ್ಯವು ಬಹು ಅದ್ಭುತವಾಗಿದೆ. ಆದರೆ ನಾನೂ ಸ್ವಪ್ನ ಕಂಡೆನು. "ಇಬ್ಬರು ಅಪ್ಸರೆಯರು ನನ್ನನ್ನು ಹಿಡಿದುಕೊಂಡು ಭೂಮಿಯನ್ನು ಅಗೆದು ಪಾತಾಳಕ್ಕೆ ಕರೆಕೊಂಡು ಹೋದರು."

ಆ ಗ್ರಾಮಸ್ಥನು ಇದನ್ನೆಲ್ಲಾ ಕೇಳುತ್ತಾ ನಿದ್ರಿಸುವವನಂತೆಯೇ ನಟಿಸಿದನು. ಆದರೆ ಉಳಿದವರು ಅವನನ್ನು ಎಬ್ಬಿಸಲಿಕ್ಕೆ ಗಟ್ಟಿಯಾಗಿ ಕರೆದರು. ಅದಕ್ಕೆ ಅವನು ಬುದ್ಧಿವಂತಿಕೆಯಿಂದ ಆಶ್ಚರ್ಯ ಪಟ್ಟವನಂತೆ ನಟಿಸಿ ಉತ್ತರಕೊಟ್ಟನು:– "ನನ್ನನ್ನು ಕರೆಯುವ ನೀವು ಯಾರು?"

ಅವರು ಹೇಳಿದರು: "ನಾವು ನಿನ್ನ ಸಂಗಡಿಗರಲ್ಲವೇ?"

ಅವನು ಹೇಳಿದನು:–"ನೀವು ತಿರುಗಿ ಬಂದಿರೇ?"

ಅವರು ಹೇಳಿದರು: "ನಾವು ನಿನಗೆ ಎಲ್ಲಿಂದ ತಿರುಗಿ ಬರಬೇಕಾಗಿದೆ?"

ಗ್ರಾಮಸ್ಥನು ಹೇಳಿದನು: – "ಆದರೆ ನಾನೀಗ ಇಬ್ಬರು ಅಪ್ಸರೆಯರು ಬಂದು ಒಬ್ಬನನ್ನು ಸ್ವರ್ಗಕ್ಕೆ ಕೊಂಡು ಹೋದ ಹಾಗೂ, ಮತ್ತಿಬ್ಬರು ಅಪ್ಸರೆಯರು ಇನ್ನೊಬ್ಬನನ್ನು ಪಾತಾಳಕ್ಕೆ ಕೊಂಡುಹೋದ ಹಾಗೂ ಕಂಡೆನು. ಅದ್ದರಿಂದ ನೀವು ತಿರುಗಿ ಬರಲಾರಿರಿ ಎಂದು ಯೋಚಿಸಿ ನಾನು ಎದ್ದು ರೊಟ್ಟಿಯನ್ನು ತಿಂದೆನು"

ಅನು: ಕೆ. ನಾರಾಯಣಾಚಾರ್, ಶಿರೋಮಣಿ, ವಿದ್ವಾನ್, ಕಣ್ವ ತೀರ್ಥ.
(ಎಕ್ಸೆಲ್‌ಸಿಯರ್, ಕೃಷ್ಣಕುಂಜ್ ಕಂಚಿ. ಸಂಪುಟ 6 ಸಂಚಿಕೆ 6 ಇದರಿಂದ)

ವಿದ್ಯಾರ್ಥಿಗಳ 2 ಕೈಪಿಡಿಗಳು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ
0 =25 NP ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರತಿಗಳು— ಮಂಗಳೂರಲ್ಲಿ ಶ್ರೀನಿವಾಸ್ ಬ್ರದರ್ಸ್, ಸ್ಕೂಲ್ ಬುಕ್ ಕೊ. ಕೆನರಾ ಕೊಲೆಜ್ ಬುಕ್ ಡಿಪೊ ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್ ಇವರಲ್ಲಿಯೂ, ಪುತ್ತೂರಲ್ಲಿ ಪೊಪ್ಯುಲರ್ ನ್ಯೂಸ್ ಏಜನ್ಸಿ ಯಲ್ಲಿಯೂ ದೊರೆಯುತ್ತವೆ.

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ.
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಿಗಳು,
ಫಾರ್ಮುಗಳು
ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ

ಸಿಂಕಿಯಾಂಗಿನ ಮೇಲೆ ಗೃಧ್ರ ದೃಷ್ಟಿ

(೩ನೇ ಪುಟದಿಂದ)

ವ ಗುರಿಯನ್ನು ನಾವು ಮುಟ್ಟಬಹುದು."

ಅನಂತರದ ಇತಿಹಾಸದ ಹಾಳೆಗಳನ್ನು ತಿರುವಿ ಹಾಕಿದಾಗ, ಈ ಪ್ರದೇಶವು ರಷ್ಯಾ—ಚೈನಾಗಳ ನಡುವಣ ರಣರಂಗವಾಗಿತ್ತೆಂಬುದು ತಿಳಿದು ಬರುತ್ತದೆ. ೧೯೧೧ರಲ್ಲಿ ಮಂಚೂ ಸಾಮ್ರಾಜ್ಯ ಸಂಪೂರ್ಣ ಮಣ್ಣುಪಾಲಾಯಿತು. ಅನಂತರ ಚೈನಾವು ಕಾಳಗ ಪ್ರಿಯರ ಕೈಗೊಂಬೆಯಾಯಿತು. ಆಗ ಇತರ ಪ್ರಾಂತ್ಯಗಳಂತೆಯೇ ಈ ಪ್ರಾಂತ್ಯವೂ ಪ್ರಥಮ ಪ್ರಾಂತ್ಯಪಾಲ ಯಂಗ್ ಟ್ಸೆಂಗ್—ಹ್ಸಿನ್ ಕೈಕೆಳಗೆ ಹೋಯಿತು. ಆದರೂ ೧೯೪೨ ವರೆಗೆ ರಷ್ಯನರ ವರ್ಚಸ್ಸು ಅಲ್ಲಿ ವರ್ಧಿಸುತ್ತ ಹೋಗಿತ್ತು. ಆಗ ರಷ್ಯನರು ಜರ್ಮನರ ಜಡಿತಕ್ಕೆದುರಾಗಬೇಕಾಗಿತ್ತು. ಆ ಸಂದರ್ಭದ ಸದುಪಯೋಗ ಪಡೆಯಲು ಶ್ರೀಮತಿ ಚಿಯಾಂಗ್ ಕೈ-ಶೆಕ್ ತಿಹ್ವಾಕ್ಕೆ ಪ್ರಯಾಣ ಮಾಡಿದರು. ಆಗ ಅಲ್ಲಿ ಪ್ರಾಂತ್ಯಪಾಲನಾಗಿದ್ದ ಶಿ-ಟ್ಸಾಯಿಯು ತನ್ನ ಸ್ವಾಮಿ ನಿಷ್ಠೆಯನ್ನು ರಷ್ಯಾದಿಂದ ಚೈನಾಕ್ಕೆ ಬದಲಾಯಿಸುವಂತೆ ಒಪ್ಪಿಸಲಿಕ್ಕಾಗಿ ಶ್ರೀಮತಿಯವರೇ ಪ್ರಯಾಣ ಮಾಡಿದರು.

೧೯೪೪ರಲ್ಲಿ ಕಝಾಕರು ಇಲಿ ಕಣಿವೆಯಲ್ಲಿ ದಂಗೆ ಎದ್ದರು. ಅವರು ಸಿಂಕಿಯಾಂಗಿನ ಒಂದು ಪ್ರದೇಶವನ್ನು ವಶಪಡಿಸಿಕೊಂಡು ಪ್ರತಿ ಸರಕಾರವನ್ನು ಸ್ಥಾಪಿಸಿದರು. ೧೯೪೫ರಲ್ಲಿ ಅವರು ಅದನ್ನು ಬಲಪಡಿಸಿಕೊಂಡು ಸಂಪೂರ್ಣ ಸಿಂಕಿಯಾಂಗ ತಮ್ಮ ಮುಷ್ಟಿಯೊಳಗಿಟ್ಟುಕೊಂಡರು. ಆಗ ಚೈನಾವು ಕಮ್ಯೂನಿಸ್ಟರ ಕಪಿಚೇಷ್ಟೆಯಿಂದ ಕಷ್ಟ-ನಷ್ಟಗೊಳಗಾಗಿ ಬಾಧಿಸಲ್ಪಟ್ಟಿತ್ತು. ಚಿಯಾಂಗ್ ಸರಕಾರವು ಒಂದು ನಿಶ್ಚಯಕ್ಕೆ ಬಂದು ಪರಿಸ್ಥಿತಿಯನ್ನೆದುರಿಸುವ ಸಲುವಾಗಿ ಸಿಂಕಿಯಾಂಗಿನ ಕೇಂದ್ರ ಹಾಗೂ ಉತ್ತರ ಪ್ರದೇಶಗಳಿಗೆ ಸ್ವಾಯತ್ತಾಧಿಕಾರವನ್ನಿತ್ತರು. ೧೯೪೬ರಲ್ಲಿ ಅವರು ಪೂರ್ಣ ಸಿಂಕಿಯಾಂಗಿಗೆ ಸ್ವಾಯತ್ತಾಧಿಕಾರವನ್ನು ಕೇಳಿದರು. ಈ ಬಂಡಾಯದ ಬೇರು ತುರ್ಕಿಯಲ್ಲಿತ್ತು. ತುರ್ಕರಿಗೆ ಹುಟ್ಟು ನೆಲದ ಮೇಲೆ ಅತೀವ ಪ್ರೀತಿ ಇತ್ತು. ಇಲಿ ಸರಕಾರವು ಚೈನಾದ ಸ್ವಾಮಿತ್ವವನ್ನೊಪ್ಪಿಕೊಂಡಿದ್ದರೂ ತಮ್ಮದೇ ಆದ ಧ್ವಜವನ್ನು ಹಾರಿಸಿಕೊಂಡಿದ್ದು, ಹೊರ ದೇಶಗಳಲ್ಲಿ ಸಂಯುಕ್ತ ಪೂರ್ವ ತುರ್ಕಿಸ್ಥಾನದ ಕುರಿತು ತೀವ್ರ ಪ್ರಚಾರ ನಡೆಸುತ್ತಿದ್ದರು. ಅವರು ಚೈನಾ ಮತ್ತು ರಷ್ಯಾಗಳಲ್ಲಿ ಇದ್ದ ತುರ್ಕಿಸ್ಥಾನ ಗಳನ್ನು ಒಂದಾಗಿಸಿದರು.

ಸಿಂಕಿಯಾಂಗಿನಲ್ಲಿದ್ದ ಚೈನಿ ಸೈನ್ಯ ಉಭಯ ಸಂಕಟದಲ್ಲಿ ತೊಳಲಾಡುತ್ತಿತ್ತು. ಅದರಲ್ಲಿದ್ದ ಅಧಿಕಾರಿಗಳಿಗೂ ಪ್ರಾದೇಶಿಕ ಜನರ ಮೇಲೆ ಸೈನಿಕ ಶಕ್ತಿಯ ಪ್ರಯೋಗ ನಡೆಸಲು ಇಷ್ಟ ಹಾಗೂ ಧೈರ್ಯವೂ ಇರಲಿಲ್ಲ. ಅವರಲ್ಲಿ ಕೇವಲ ವಸಾಹತುಗಾರರ ಗುಣ ಮಾತ್ರ ಇತ್ತು.

ಇವೆಲ್ಲಾ ಈಗಿನ ತಕರಾರಿನ ಹಿಂಬದಿ ಇದೆ. ಅಲ್ಲಿರುವ ಜನತೆ ಸ್ವಾತಂತ್ರ್ಯಕ್ಕಾಗಿ ಬಡಿದಾಡುತ್ತಿದೆಯಾದಲ್ಲಿ ಬಲಿಷ್ಟ ಮದದ ಹೋರಿಗಳೆರಡು ತಮ್ಮ ಪೌರುಷ ಪ್ರಕಟಣೆಗಾಗಿ ಅದೇ ಸ್ಥಳದಲ್ಲಿ ಗುದ್ದಾಡುತ್ತಿವೆ.

ಸಿಂಕಿಯಾಂಗ್ ಬಹಳ ವಿಶಾಲ ಪ್ರದೇಶವಿದೆ. ಏಳು ಲಕ್ಷ ಚದರ ಮೈಲುಗಳ ದರ ವಿಸ್ತೀರ್ಣವಿದೆ. ಆದರೆ ಇದರ ಹೆಚ್ಚಿನಂಶ ಮರುಭೂಮಿ ಇದೆ. ಜನಸಂಖ್ಯೆಯೂ ಅತಿ ವಿರಳವಿದೆ—ಕೇವಲ ನಲ್ವತ್ತೈದು ಲಕ್ಷ. ಅದರಲ್ಲಿ ಆಶ್ಚರ್ಯಕರವೆಂದರೆ ಶೇಕಡಾ ಆರರಷ್ಟು ಮಾತ್ರ ಚೈನೀಯರಿದ್ದಾರೆ. ಇದರಲ್ಲಿ ಹೆಚ್ಚಿನವರು ಆಡಳಿತ ಯಂತ್ರದಲ್ಲಿ ಹಾಗೂ ವ್ಯಾಪಾರ ರಂಗದಲ್ಲಿದ್ದಾರೆ. ಶೇಕಡಾ ಎಪ್ಪತ್ತೈದು ಜನರು ತುರ್ಕಿಗಳಿದ್ದಾರೆ, ಶೇಕಡಾ ಹತ್ತು ಕಝಾಕರಿದ್ದಾರೆ, ಶೇಕಡಾ ಎಂಟು ಕಿರ್ಗಿಗಳು, ಶೇಕಡಾ ೧ ಮಂಗೋಲರು ಅಲ್ಲಿದ್ದಾರೆ. ಇದರಲ್ಲಿ ತುರ್ಕಿಗಳು, ಕಝಾಕರು ಮತ್ತು ಕಿರ್ಗಿಗಳು ಮುಸಲ್ಮಾನರಿದ್ದು ಸುನ್ನಿ ಪಂಥಕ್ಕೆ ಸೇರಿದವರಿದ್ದಾರೆ. ಮಂಗೋಲರಲ್ಲಿ ಹೆಚ್ಚಿನವರು ಬೌದ್ಧರಿದ್ದಾರೆ. ಕ್ರಿಶ್ಚಿಯನ್ ಗುಂಪುಗಳೂ ಇವೆ. ಇದೆಲ್ಲಾ ಕಮ್ಯೂನಿಸ್ಟ ಕಪಿ ಮನಸ್ಸೇಕ್ಯವಾಗಿದ್ದದ್ದು. ಮಾವ ಗದ್ದುಗೆಯನ್ನೇರಿದ ಮೇಲೆ ಇಲ್ಲಿ ಚೈನೀಯರ ಸಂಖ್ಯೆ ಹೆಚ್ಚಾಗುತ್ತ ಬಂದಿರುತ್ತದೆ.

ಸಿಂಕಿಯಾಂಗಿನಲ್ಲಿ ಎಣ್ಣೆ ಸಂಪತ್ತು ಚೆನ್ನಾಗಿದೆಯಾದರೂ ಈ ಪ್ರದೇಶ ಇನ್ನೂ ಅಭಿವೃದ್ಧಿ ಹೊಂದಿರುವುದಿಲ್ಲ. ಗಂಧಕ, ಪಟಿಕಾರ, ಪೆಟ್ಲುಪ್ಪು, ಸೀಸ, ಕಬ್ಬಿಣ ಅಲ್ಲದೆ ಕಲ್ಲಿದ್ದಲು ಕೂಡಾ ಹಲವಾರೆಡೆಗಳಲ್ಲಿ ದೊರಕುತ್ತವೆ. ಬೆಳೆ ಬೆಳೆಸಲು ಸಾಧ್ಯವಿರುವ ಹುಲ್ಲುಗಾವಲು ಪ್ರದೇಶದಲ್ಲಿ ಜನವಸತಿಯನ್ನು ಕಾಣಬಹುದು.

ಈ ರೀತಿ ಮದ್ರಾಸಿನ ಆಂಗ್ಲ ಪತ್ರಿಕೆ ಮೆಯಿಲ್ ತನ್ನ ಸುದ್ದಿಗಾರ ಕಳುಹಿಸಿರುವ ಲೇಖನವನ್ನು ಪ್ರಕಟಿಸಿ ಕೆಲ ವಿಷಯಗಳನ್ನು ಓದುಗರ ಮುಂದಿಟ್ಟಿರುತ್ತದೆ. ಆರಂಭದಿಂದಲೂ ಚೈನ ಆದೆಂತು ಸಾಮ್ರಾಜ್ಯವಾದಿ ಎಂಬುದನ್ನು ನಾವಿಲ್ಲಿ ಕಾಣಬಹುದು. ಹಿಂದೆ ಚೈನಾ ಇಷ್ಟು ವಿಸ್ತಾರವಾಗಿರಲಿಲ್ಲ. ಆ ಡ್ರೇಗನ್ ಅಕ್ಕಪಕ್ಕದ ಚಿಕ್ಕ ಪುಟ್ಟ ರಾಷ್ಟ್ರಗಳನ್ನು ನುಂಗಿ ನಾಲಗೆಯನ್ನು ಮುಂದಕ್ಕೆ ಚಾಚುತ್ತಿದೆ. ಇನ್ನೂ ಅದಕ್ಕೆ ತೃಪ್ತಿಯೆಂಬುದಿಲ್ಲ. ಕೊರಿಯ ಮುಂತಾದ ಚಿಕ್ಕಪುಟ್ಟ ರಾಷ್ಟ್ರಗಳನ್ನು ನುಂಗಲು ಹವಣಿಸುತ್ತಿರುವಂತೆ ಭಾರತವನ್ನೂ ನುಂಗಲು ಪ್ರಯತ್ನಿಸುತ್ತಿದೆ. ಹೆಬ್ಬಾವಿನ ಹೊಟ್ಟೆ ಸೀಳದೆ ಬಿಟ್ಟಾರೇ ಭಾರತೀಯರು?

ನವೀನ್ಯ ಎಲ್ಲೆಯನ್ನು ಸಿಂಕಿಯಾಂಗೆಂದು ಕರೆದು ಅದನ್ನು ತಮ್ಮದನ್ನಾಗಿ ಇಂದು ಹೇಳಿಕೊಳ್ಳುತ್ತಿರುವಂತೆ ಕಮ್ಯುನಿಸ್ಟ್ ಚೈನಾವು ಭಾರತದ ಭೂ ಭಾಗಗಳನ್ನು ಚೈನಿ ಹೆಸರಿನಿಂದ ಭೂಪಟದಲ್ಲಿ ಗುರುತಿಸುತ್ತಿರುವುದನ್ನು ಜ್ಞಾಪಿಸಿಕೊಳ್ಳಬಹುದು.

ಸ್ವತಃ ರಷ್ಯಾದೊಂದಿಗೆ ಮಾಡಿಕೊಂಡಿರುವ ಒಪ್ಪಂದಕ್ಕೇನೇ ಚೈನಾ ಬೆಲೆ ಕೊಟ್ಟಿಲ್ಲವೆಂದಲ್ಲಿ ಆ ನೆಹ್ರೂಜೀಯವರಿಗೆ ಅದು ಬೆನ್ನಲ್ಲಿ ತಿವಿಯದೆ ಇನ್ನೇನು ಮಾಡೀತು? ಶ್ರೀ ನೆಹ್ರೂಜೀಯವರನ್ನು ಆಲಂಗಿಸಿ ಕೊಳ್ಳುತ್ತಿದ್ದಂತೆ ಚೌ—ಎನ್-ಲೈ ಭಾರತೀಯ ಸೈನಿಕರ ಶವಗಳನ್ನು ಜನ್ಮ ದಿನದ ಬಹುಮಾನವನ್ನಾಗಿ ಕಳುಹಿಸಿಕೊಟ್ಟಿರುವಂತಹ ಅಪಮಾನಕರ ಘಟನೆಯನ್ನು ಯಾವ ಭಾರತೀಯನೂ ಮರೆಯಲಾರನು. ನಮ್ಮ ಪ್ರಧಾನಿಯವರ ಬಳಿ ಕಮ್ಯುನಿಸ್ಟ್ ಪ್ರಧಾನಿ ಪಶ್ಚಾತ್ತಾಪ ಪಟ್ಟು ಕ್ಷಮೆ ಬೇಡಲೇ ಬೇಕು.

ನೇಫಾ—ಲಢಕ್ ಮುಂತಾದೆಡೆಗಳಲ್ಲಿ ಆದಾಗಲೇ ಚೈನಾವು ಚೈನೀಯರನ್ನು ಕಳುಹಿಸಿ ತಂಗುವಂತೆ ಏರ್ಪಾಡು ಮಾಡಿತ್ತೆಂಬುದು ಮುಖ್ಯಾಂಶವಿದೆ. ಇತರೆಡೆಗಳಲ್ಲಿ ತಮ್ಮ ಶಾಲೆಗಳನ್ನು ಮಾತ್ರ ತೆರೆದಿರುವದಲ್ಲದೆ ಚೈನಿ ಭಾಷೆಯನ್ನು ಹಂಚಿಸಲು ಅವರು ಪ್ರಯತ್ನಿಸಿರುವುದನ್ನು ಮೇಲಿನ ಸಿಂಕಿಯಾಂಗಿನ ಅಧಿಕಾರಿಯ ಪತ್ರದ ವಿಷಯದೊಂದಿಗೆ ಹೋಲಿಸಿ ನೋಡಬೇಕು. ಆಗ ಗೊತ್ತಾಗುತ್ತದೆ—ಡ್ರೇಗನ್ಸ್ ಹೇಗೆ ಸಾಗುತ್ತಿದೆಂದು.

ಸಿಂಕಿಯಾಂಗಿನ ಮೇಲೆ ರಷ್ಯಾಕ್ಕೂ ಚೈನಾಕ್ಕೂ ಗೃಧ್ರ ದೃಷ್ಟಿ ಬೀಳಲು ಅಲ್ಲಿ ಯುರೇನಿಯಂ ಸಿಗುವದೂ, ಅಲ್ಲಿ ಅಣುಗುಂಡು ತಯಾರಿಯ ಚೈನಿ ಯಂತ್ರಾಲಯ ಇರುವದೇ ಕಾರಣವೆಂಬುದನ್ನು ಮರೆತುಬಿಡಲು ಸಾಧ್ಯ ಇರುವದಿಲ್ಲ.

—ಶ್ರೀ ಶಿವಶಂಕರ

ಸಮರ ಗೀತೆ

|| ೧ ||

ಭಾರತಾಂಬೆಯ ವೀರ ಕಂದರೆ
ಸಾಗಿ ಬನ್ನಿರಿ ಧೀರರೆ !
ಜನ್ಮದಾತೆಯ ಸೇವೆ ಗೈಯಿರಿ
ಸವೆದು ಬಾಳನು ಶೂರರೆ !

|| ೨ ||

"ಅಡಿಯ ಮುಂದಿಡೆ ನಾಕ" ಎನುತಲಿ
ಕಾದಿ ಧೈರ್ಯದಿ ಜಯಿಸಿರಿ !
ಹೊಡೆದು ರಿಪುವಿನ ಶಿರವ ನುರುಳಿಸಿ
ಕದನ ಸಿಂಗಗಳಾಗಿರಿ!

|| ೩ ||

ಮೊಳಗು ತಿರುವುದು. ಕದನ ಕಹಳೆಯು
ರಣಕೆ ಕರೆವುದು ಮೊರೆಯುತ!
ಹಿಗ್ಗಿ ನಡೆಯಿರಿ | ಜಗ್ಗ ಬಡೆಯಿರಿ!
ಅರಿಯ ಶಿರವನು ತರಿಯುತ!

|| ೪ ||

ಸ್ವಾರ್ಥಜಾಲವ ಹರಿದು, ಐಕ್ಯದಿ
ವಿಶ್ವಶಾಂತಿಯ ಬಯಸುತ!
ಭಾರತಾಂಬೆಯ ಬೆಳಗಿ ಮೆರೆಯುವ!
ಧನ್ಯರಾಗುವ ಬೆಳಗುತ !

—ಯು ನಾರಾಯಣ ಸೇರಿಗಾರ, ಉದ್ಯಾವರ.

'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No 466 N/50 dated 2-12—1950 of the Director of Public Instruction Madras.

ಮುದ್ರಣ
ಸಣ್ಣದಿರಲಿ, ದೊಡ್ಡದಿರಲಿ, ಯಾವದೇ ತರದ ಕನ್ನಡ ಇಲ್ಲವೆ ಇಂಗ್ಲಿಷ್ ಮುದ್ರಣ ಕಾರ್ಯಗಳಿಗೆ
ವಿಚಾರಿಸಿರಿ:
ನವಯುಗ ಪ್ರೆಸ್
ಸಂತೆಕಟ್ಟೆ
ಉಡುಪಿ

ಮಕ್ಕಳ ಮದುವೆ

(೨ನೇ ಪುಟದಿಂದ)

ಗುವಂತೆ ನಕ್ಕ. ಬಂದ ಅತಿಥಿಗಳೆಲ್ಲಾ ನಗುವಿನ ಹೊಳೆಯಲ್ಲಿ ಮುಳುಗಿದರು. ಚಿಕ್ಕ ಮಕ್ಕಳಲ್ಲಿಯೂ ಸಹ ವರದಕ್ಷಿಣೆ ಎಂಬ ವಿಷಯ ಎಷ್ಟರಮಟ್ಟಿಗೆ ಆವರಿಸಿದೆ ಅಂತ ನನಗೆ ಸೋಜಿಗವಾಯಿತು.

"ಮುಹೂರ್ತ ಪೂರೈಸಲಿ ರಾಯರೇ ಆ ಮೇಲೆ ಬಾಕಿ ಹಣ ಕೊಡುತ್ತೇನೆ"

"ಸಾಧ್ಯವಿಲ್ಲ ಕುಮಾರ್, ನೂರು ನಯೇ ಪೈಸಾ ವರದಕ್ಷಿಣೆಗೆ ಬರದ ಹೊರತು ಮಾಂಗಲ್ಯ ಕಟ್ಟಿಸಲು ಸಾಧ್ಯವಿಲ್ಲ".

ಕೇವಲ ನೂರು ನಯೇ ಪೈಸಾನೇ! ನನ್ನ ಮಾವ ಬೇರು ಒಂದು ರೂಪಾಯಿ ಕೊಟ್ಟ ಆ ವೇಳೆ ಪೀಪಿಗಳ ಗಲಾಟೆಯಲ್ಲಿ, ಪುರೋಹಿತನ ಮಂತ್ರಗಳ ಗಲಾಟೆಯಲ್ಲಿ ಮಾಂಗಲ್ಯ ಹೆಣ್ಣು ಗೊಂಬೆಗೆ ಕಟ್ಟಿದ. ಕುಳಿತವರೆಲ್ಲಾ ಅಕ್ಷತೆ ತಾಳನ್ನು ಹಾಕಿದರು. ಅಲ್ಲಿದ್ದ ಮಕ್ಕಳ ತಂಡವು ಮದುಮಕ್ಕಳಿಗೆ ಮದುವೆಯ ಕಾಣಿಕೆಯನ್ನು ಕೊಟ್ಟರು. ದೊಡ್ಡವರು ಸಹ ಮಕ್ಕಳಂತೆ ಮದುವೆಯ ಉಡುಗೊರೆಯನ್ನು ಅರ್ಪಿಸಿದರು ಆ ಮೇಲೆ ಮಕ್ಕಳು ವಿಳ್ಯೆಯನ್ನು ಹಂಚಿದರು.

ಈ ಎಲ್ಲಾ ಕಾರ್ಯ ಸಂಜೆ ಐದು ಗಂಟೆ ತನಕ ನಡೆಯಿತು. ಕುಳಿತವರಿಗೆಲ್ಲಾ ಕಾಫಿ ತಿಂಡಿಯೂ ಆಯಿತು.

"ಸೊಸೆಯನ್ನು ಕಳಿಸಿಕೊಡಿ" ವರದಕ್ಷಿಣೆ ಪಡೆದವನು ಕೇಳಿದ. ಅವನೇ ಹುಡುಗನ ತಂದೆಯೆಂದು ಊಹಿಸಬಹುದು.

"ಇವತ್ತು ಬೇಡ ಬುಧುವಾರ ಕರೆದುಕೊಂಡು ಹೋಗಿ"

"ನಾವು ಇಲ್ಲಿ ಹೆಚ್ಚು ಕಾಲ ನಿಲ್ಲಲು ಸಾಧ್ಯವಿಲ್ಲ"

"ಸರಿ ತಮ್ಮ ಇಷ್ಟದಂತಾಗಲಿ"

ಬಾಲಿಕೆಯರ ಗುಂಪಿನಲ್ಲಿದ್ದ ಹುಡುಗಿಯು ಅಳುತ್ತಾ, "ಹೋಗಿ ಬರುತ್ತೀಯೂ ಮಗಳೇ" ಕೇಳಿದಳು.

"ಅಳ ಬೇಡಮ್ಮಾ ಹೆಣ್ಣಿಗೆ ತಾಯಿ ಮನೆ ಸ್ಥಿರವಲ್ಲವಮ್ಮಾ", ಗೊಂಬೆ ಪಕ್ಕದಲ್ಲಿ ಕುಳಿತವಳು ದುಃಖಿಸುತ್ತಾ ಹೇಳಿದಳು. ಅವರಿಬ್ಬರೂ ತಾಯಿ ಮಗಳೆಂದು ತಿಳಿದುಕೊಂಡೆ.

"ಗಂಡನ ಮನೆಯೇ ನಿನ್ನ ಮನೆಯೆಂದೇ ತಿಳಿಯುಕೋ ಮಗಳೇ. ಅತ್ತೆ-ಮಾವಂದಿರ ಸೇವೆಮಾಡು. ಗಂಡನು ಊಟ ಮಾಡದ ಹೊರತೂ ನೀನು ಮಾಡಬೇಡ ಸರೋಜ. ಗಂಡನ ಚಿಂತೆನೇ ಯಾವಾಗಲೂ ಬಯಸುತ್ತಿರು. ಪರ ಪುರುಷರ ಸಂಗಡ ಹೆಚ್ಚು ಕಾಲ ನಿಂತು ಮಾತನಾಡಬೇಡ. ಮನೆಯ ಮಕ್ಕಳನ್ನು ನಿನ್ನ ಮಕ್ಕಳಂತೆ ಸಾಕು ಮಗು. ನಿನಗೆ ಸಿಟ್ಟು ಜಾಸ್ತಿ ಅದನ್ನು ಕಡಿಮೆಮಾಡಿಕೊ ಸರೋಜ. ಗಂಡನ ಮನೆಯವರ ಆರೋಗ್ಯಕ್ಕೆ ಆಗಾಗ್ಗೆ ಕಾಗದಬರೆಯುತ್ತಿರು".

"ಆಗಲಮ್ಮಾ ನೀನು ಹೇಳಿದಂತೆ ಕೇಳುತ್ತೇನೆ".

"ರಾಯರೇ, ನನ್ನ ಮಗಳನ್ನು ನಿಮ್ಮ ಮನೆಗೆ ಕಳಿಸಿಕೊಡುತ್ತೇನೆ. ಹೆಚ್ಚು ಕಡಿಮೆಯಾದರೆ ಸುಧಾರಿಸಿಕೊಳ್ಳಿ. ಏನೂ ತಿಳಿಯದ ಹುಡುಗಿ"

"ನೀವು ಏನೂ ಯೋಚನೆ ಇಟ್ಟುಕೊಳ್ಳಬೇಡಿ. ನನ್ನ ಮಗಳಂತೆ ನೋಡಿಕೊಳ್ಳುತ್ತೇನೆ"

"ಗೌರಿ ಹಬ್ಬಕ್ಕೆ ಮಗಳನ್ನು ಕಳಿಸಿಕೊಡಿ"

"ಅಗತ್ಯವಾಗಿ ಕರೆದುಕೊಂಡು ಹೋಗಿ"

ಬಂದ ಅತಿಥಿಗಳೆಲ್ಲಾ ಮೇಲಕ್ಕೆ ಎದ್ದರು. ಓಲಗದಿಂದ ಮದುಮಕ್ಕಳನ್ನು ಪಕ್ಕದ ಕೋಣೆಗೆ ತಂದು ಕೂರಿಸಿದರು. ಅದೇ ಗಂಡನ ಮನೆ. ಬಂದವರಿಗೆಲ್ಲಾ ಊಟ ಮಾಡಿಕೊಂಡು ಹೋಗಿ ಎಂದರು.

ಅಂತೂ ಮಕ್ಕಳ ಮದುವೆ ಅತೀ ವೈಭವದಿಂದ ಜರಗಿತು. ಮದುವೆಯಲ್ಲಿ ಮದುವೆ ಇದ್ದರೆ ಊಟಕ್ಕೆ ಉಪ್ಪಿನಕಾಯಿ ಇದ್ದಂತೆ.

—ಶ್ರೀ ಪಿ. ಜಿ. ಪರಮೇಶ್ವರಪ್ಪ

ಆದರ್ಶ ಚರಿತೆಗಳು—೧೫

ರಾಜಾ ರಾಮ ಮೋಹನ ರಾಯ್

—ಎಸ್. ಎಂ. ಶೆಟ್ಟಿ, ಶಿವಪುಂಜಿ ಪುರಾರಿ.

ಬಂಗಾಳದ ಕೃಷ್ಣ ನಗರದ ಬಳಿ ಇರುವ ರಾಧಾ ನಗರದಲ್ಲಿ ಸನ್ ೧೭೭೪ರಲ್ಲಿ ಶ್ರೀ ರಾಜಾರಾಮ ಮೋಹನ ರಾಯರ ಜನನವಾಯ್ತು. ಇವರ ತಂದೆ ರಾಮಕಾಂತ ರಾಯರು ಕುಲೀನ ಬ್ರಾಹ್ಮಣರಾಗಿದ್ದರು, ಇವರ ತಾಯಿ ತಾರಿಣೀ ದೇವಿಯವರು ಮೃದು ಸ್ವಭಾವದ ದಯಾಳುಗಳು. ಜನರು ಇವರನ್ನು "ಹೂಮನದ ರಾಣಿ" ಎಂದು ಸಂಬೋಧಿಸುತ್ತಿದ್ದರು. ಮಾತಾಪಿತರು ವೈಷ್ಣವರಾಗಿದ್ದುದರಿಂದ, ಬಾಲ ರಾಮ ಮೋಹನ ರಾಯರ ಮೇಲೆ ತುಂಬ ಪ್ರಭಾವ ಬಿತ್ತು. ಬಾಲ್ಯದಲ್ಲಿ ಇವರು ತಮ್ಮ ಮನೆ ದೇವರಾದ "ರಾಧಾಕೃಷ್ಣ"ರ ಭಕ್ತರಾಗಿದ್ದರು.

ಹಿಂದಿನ ಹಲವಾರು ತಲೆ ಮಾರುಗಳಿಂದ ಈ ಕುಲವು ಇಸ್ಲಾಮ್ ಶಾಸಕರಿಂದಲೂ ಸನ್ಮಾನ ಪಡೆದಿತ್ತು. ಶಾಸಕರ ನಿಕಟ ಸಂಬಂಧವಿದ್ದುದರಿಂದ, ಈ ಕುಲದಲ್ಲಿ ಫಾರಸೀ ಭಾಷೆಯನ್ನು ಕಲಿಯುವ ರೂಢಿಯಿತ್ತು. ರಾಮ ಮೋಹನರಿಗೂ ಫಾರಸೀ ಭಾಷೆಯನ್ನು ಕಲಿಸಲು ಮೌಲವೀಯವರು ಬರತೊಡಗಿದರು ಸ್ಥಾನೀಯ ಶಿಕ್ಷಣ ಮುಗಿಯುತ್ತಲೇ ಇವರನ್ನು ಹೆಚ್ಚಿನ ಶಿಕ್ಷಣಕ್ಕಾಗಿ ಪಾಟ್ನಕ್ಕೆ ಕಳುಹಿಸಲಾಯ್ತು ಫಾರಸೀಯಲ್ಲಿ ಸೂಫೀ ಕವಿಗಳ ಕವಿತೆಗಳನ್ನಿವರು ತುಂಬಾ ಮೆಚ್ಚಿದ್ದರು. ಹಾಫೀಜ್, ಮೌಲಾನಾ, ರೂಂ, ಮುಂತಾದವರ ಹಲವಾರು ಕವಿತೆಗಳು ಇವರಿಗೆ ಕಂಠಸ್ಥವಾಗಿತ್ತು.

ಫಾರಸೀ ಭಾಷೆಯ ನಂತರ, ತಾಯಿಯ ಆಶೆಯಂತೆ ಸಂಸ್ಕೃತ ಕಲಿಯಲಿಕ್ಕಾಗಿ ಇವರು ಕಾಶಿಗೆ ಹೋದರು. ಅಲ್ಲಿ ಸುಮಾರು ನಾಲ್ಕು ವರ್ಷಗಳ ಕಾಲ ನಿಂತು, ಸಂಸ್ಕೃತವನ್ನು ಆಳವಾಗಿ ಅಧ್ಯಯನಗೈದರು. ಉಪನಿಷತ್ತಿನ "ಬ್ರಹ್ಮನು ಒಬ್ಬನೇ" ಎಂಬ ಮಾತು ಅವರ ಚಿತ್ತದ ಮೇಲೆ ತನ್ನ ಅಮರ ಮುದ್ರೆಯನ್ನೊತ್ತಿತು

ರಾಮ ಮೋಹನ ರಾಯರಿನ್ನೂ ಹದಿನಾರು ವರ್ಷದವರಿರುವಾಗಲೇ "ಏಕಂ ಬ್ರಹ್ಮಂ"ದ ಪ್ರಚಾರ ಗೈಯತೊಡಗಿದರು. ವೈಷ್ಣವ ಧರ್ಮದಿಂದ ಅವರ ವಿಶ್ವಾಸ ಹಾರಿಹೋಗಿತ್ತು. ಇದರಿಂದಾಗಿ ಮಾತಾಪಿತರ ಹಾಗೂ ಇವರ ಅಭಿಪ್ರಾಯದಲ್ಲಿ ವಿರೋಧವು ವ್ಯಕ್ತ ಪಟ್ಟಿತು. ಇದೇ ವಿರೋಧದ ಫಲ ಸ್ವರೂಪವಾಗಿ ಅವರು ಮನೆ ಬಿಟ್ಟು ಹೊರಟು ಹೋದರು. ಬೌದ್ಧ ಧರ್ಮದ ಅಧ್ಯಯನ ಗೈಯಲಿಕ್ಕಾಗಿಯೇ ಇವರು ಹಿಮಾಲಯದ ಮಾರ್ಗವು ಕಂಟಕಗಳನ್ನು ದಾಟಿ ಟಿಬೇಟಿಗೆ ಹೋದರು. ಆದರೆ ಅಲ್ಲಿಯ ಕೆಲವು ಲಾಮಾರಲ್ಲಿನ್ನ ಅನೀತಿಗಳನ್ನಿವರು ಎತ್ತಿ ತೋರಿಸಿದುದರಿಂದ ಸಿಟ್ಟುಗೊಂಡ 'ಲಾಮಾ' ಅವರುಗಳು, ಇವರ ಪ್ರಾಣ ಬಲಿ ತೆಗೆದುಕೊಳ್ಳಲೂ ಮುಂದಾದರು. ಆದರೆ ಕೆಲವು ಸ್ತ್ರೀಯರು ಇವರ ಪ್ರಾಣ ರಕ್ಷಣೆ ಗೈಯ್ಯದಿದ್ದಲ್ಲಿ, ಇವರ ಮತವನ್ನು ಸ್ವೀಕರಿಸಿದರು ಇದರಿಂದಾಗಿ ಅವರ ಹೃದಯದಲ್ಲಿ ಸ್ತ್ರೀ ಜಾತಿಯ ಕುರಿತು ಕೃತಜ್ಞತಾಭಾವ ಮೂಡಿಬಂತು ಅವರು ಜೀವನ ವಿಡೀ ಸ್ತ್ರೀ ಜಾತಿಯ ಹಿತೈಷಿಗಳಾಗಿದ್ದರು.

ಸ್ನೇಹಿತರು, ಪುತ್ರನನ್ನು ಹಿಂದಕ್ಕೆ ಕರೆದು ತಂದು ನೌಕರಿಗೆ ಸೇರಿಸಿದರು. ಆದರೆ ನೌಕರಿಯಲ್ಲಿ ಅವರ ಮನ ಮುದುಡಿತು. ಅಲ್ಲಿ ಅವರು ತ್ಯಾಗ ಪತ್ರವನ್ನಿತ್ತುಬಿಟ್ಟರು. ಈ ಮಧ್ಯೆ ಇವರಿಗೆ ವಿವಾಹವಾಗಿತ್ತು. ಬ್ರಹ್ಮಜ್ಞಾನದ ಪ್ರಚಾರಕ್ಕಾಗಿ ಇವರು ವೇದಾಂತ ಸೂತ್ರಕ್ಕೆ ವ್ಯಾಖ್ಯೆಯನ್ನು ಬರೆದರು ಸುಧಾರಿತ ವಿಚಾರಗಳು ಇವರಿಗೆ ಸಮಾಜದಲ್ಲಿ ಶತ್ರುಗಳನ್ನು ಹುಟ್ಟಿಸಿ ಕೊಟ್ಟಿತು. ಕೊನೆಗೆ ಅವರು ಮನೆಯನ್ನು ಬಿಟ್ಟು ಕಲ್ಕತ್ತೆಗೆ ಹೋದರು. ಸನ್ ೧೮೨೮ರಲ್ಲಿ ಇವರು ಕಲ್ಕತ್ತೆಯಲ್ಲಿಯೇ 'ಬ್ರಹ್ಮ ಸಮಾಜದ' ಸ್ಥಾಪನೆಗೈದರು.

ದಿಲ್ಲಿಯ ಬಾದಶಹನೇ ಇವರಿಗೆ 'ರಾಜಾ' ಎಂಬ ಬಿರುದನ್ನಿತ್ತು ಇಂಗ್ಲೆಂಡಿಗೆ ಕಳುಹಿಸಿದನು. ಅಲ್ಲಿ ಇವರ ಅಸಾಧಾರಣ ಯೋಗ್ಯತೆ, ಪ್ರತಿಭೆ, ಪಾಂಡಿತ್ಯ, ಕಾರ್ಯ ದಕ್ಷತೆ, ಉದಾರತೆ, ಸಂಭಾಷಣೆ ಮತ್ತು ವಾಕ್ಚಾತುರ್ಯವನ್ನು ಕಂಡು ಜನರು ಮಾರು ಹೋದರು ೧೮ನೇ ಸಪ್ಟೆಂಬರ ೧೮೩೩ರಂದು ಇವರು ಇಂಗ್ಲೆಂಡಿನಲ್ಲಿಯೇ ದೇಹ ತ್ಯಾಗಗೈದರು.

ರಾಜಾ ರಾಮಮೋಹನ ರಾಯರು ಸಮಾಜದಲ್ಲಿ ಸುಧಾರಣೆಯ ಪ್ರಚಾರಗೈದರು. ಅವರು ಸ್ತ್ರೀ ವಿದ್ಯಾಭ್ಯಾಸದ ಪ್ರಬಲ ಸಮರ್ಥಕರಾಗಿದ್ದರು. ಕನ್ಯಾ ವಿಕ್ರಯ, ಕನ್ಯಾ ಹತ್ಯೆ, ಬಾಲ ವಿವಾಹ ಮುಂತಾದ ರೂಢಿಗಳನ್ನಿವರು ತೀವ್ರವಾಗಿ ವಿರೋಧಿಸಿದರು 'ಯಾವುದೇ ಕೆಲಸವನ್ನು "ರೂಢಿ" ಎಂದು ಮಾಡುವುದನ್ನು ಬಿಟ್ಟು ಅದರ ಒಳಿತು, ಕೆಡುಕುಗಳನ್ನು ಸರಿಯಾಗಿ ಆಲೋಚಿಸಿ ತನಂತರ ಮಾಡಬೇಕು" ಎಂದವರು ಉಪದೇಶಿಸುತ್ತಿದ್ದರು.

ಮೂಲ: ರಾಕೂರ್ ಸುದರ್ಶನಸಿಂಹ

ಹೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

ಜನಪ್ರಿಯವಾದ

ಗೀತೆಯ ಸಮೂಲ ಭಾಷಾಂತರ
ಇದೀಗ ಮಾರಾಟಕ್ಕೆ ಸಿದ್ಧವಾಗಿದೆ
360 ಪುಟಗಳಿಗೂ ಮಿಕ್ಕಿದ
ಪಾಕೆಟ್ ಎಡಿಶನ್

ದಪ್ಪವಾದ ಬಿಳಿ ನುಣುಪು ಕಾಗದ!

ಬೆಲೆ: ಸಾದಾ ಪ್ರತಿ ರೂ. ೧–೦೦
ಉತ್ತಮ ಪ್ರತಿ ರೂ. ೧-೫೦

ನಿಮ್ಮ ಪ್ರತಿಗಳ ದರಕ್ಕೆ ಬರೆಯಿರಿ:

ನವಯುಗ ಪ್ರೆಸ್ ಉಡುಪಿ, ದ. ಕ.

ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ.

14 CT ಚಿನ್ನದ ಆಭರಣಗಳಲ್ಲಿ 58⅓% ಶುದ್ಧ ಪುತ್ಥಳಿ ಚಿನ್ನ ಇರುತ್ತದೆ.

ಬೇಡದಿದ್ದಲ್ಲಿ 1 ರೂ ಕಮ್ಮಿಯಲ್ಲಿ ಯಾವಾಗಲೂ ಬಜಾರು ಧಾರಣೆಗೆ ಪಡೆಕೊಳ್ಳುವ ಭರವಸೆ ಕೊಡುತ್ತೇವೆ.

ವಿ. ಸೂ: ಹಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡಕೊಳ್ಳುವರೆ ಸರಕಾರದ ಲೈಸನ್ಸ್ ಸಿಕ್ಕಿರುತ್ತದೆ.

ಮದುವೆ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡಕೊಂಡು ಖಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.

ಶ್ರೀ ಕೃಷ್ಣಾ ಜ್ಯುವೆಲರಿ ಮಾರ್ಟ್

ತೆಂಕಪೇಟೆ — ಉಡುಪಿ.

ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.

ಫೋನ್ ನಂಬ್ರ: 66



● ಕುಮಾರಿ ಬಿಲ್ಲೆಗಳು ●

(ರಿಜಿಸ್ಟರ್ಡ್ Regd.)

ಪ್ರಕೃತಿಯು ವಿಫಲಗೊಂಡಾಗ ಉಂಟಾಗುವ ಕಾತರ ನಿವಾರಣೆಗೆ ಸಮಯೋಚಿತವಾದ ಆಯುರ್ವೇದೀಯ ಮಿಶ್ರಣ!

ಟ್ಯೂಬ್ 1ರ ಸಾಮಾನ್ಯ ರೂ. 4/- ಮಧ್ಯಮ ರೂ. 6/ ಉತ್ತಮ ರೂ 8/-

P. Devee & Co. (N. J.) Calcutta—40.

ಸ್ಟಾಕಿಸ್ಟರು — ರಾಜಾ ಮೆಡಿಕಲ್ ಹಾಲ್, ಬೆಂಗಳೂರು ಕಂಟೋನ್ಮೆಂಟ್; ಕುಮ್ಟಾ ಫಾರ್ಮಸಿ, ಕುಮ್ಟಾ (ಉ. ಕ.)

READ & ADVERTISE IN NAVAYUGA WEEKLY

REGD. No. B. G. 176
LICENCE No. 31
Licensed to Post without Prepayment

ಗೋಹ ರಾಜ್ಯದಲ್ಲಿ

ಸಹಾನುಭೂತಿಪರ ಉಪವಾಸ

"ಏ, ಎಲ್ಲಿಹೋಗಿದ್ರಿ ಇಷ್ಟು ಹೊತ್ತು?"

"ಓ, ನೀವಾ, ನಾನು ಯಾರೋಂತ ಒಮ್ಮೆ ಹೆದರಿಬಿಟ್ಟೆ...."

"ಅಲ್ಲಾ, ಈ ಮನೆಗೆ ಬಂದು ನಿನ್ನ ಕರಿಯೋ ಧೈರ್ಯ ಯಾವ ಗಂಡಿಗೆ ಬಂದೀತೂಂತ ..."

"ಏನು ಈ ದಿನಾ ತುಸು ಏರಿದ ದನಿಯಲ್ಲೇ ಉತ್ತಿಗೆ ಇದೆ?"

"ನಾನು ಕೇಳಿದ ಪ್ರಶ್ನೆಗೆ ಮೊದಲು ಉತ್ತರ ಕೊಡು ..."

"....ಹ್ಞಾಂ....ಅದು ಸರೀನ್ನಿ. ಯಾವ ಗಂಡಿಗೆ ಬರಬೇಕು.....? ಅಲ್ಲಾ, ಇವತ್ತು ಏನಿಷ್ಟು ಬೇಗ ಬಂದುಬಿಟ್ರೀಂತ....?"

"ಏನೇ, ನನ್ನ ಮನೆಗೂ ನಾನು ಬೇಗ ಬರ್ಬಾರ್ದೇ?"

"ಛೆ...ಛೆ.... ಯಾರು ಹಾಗಂತಾರೆ? ಅಲ್ಲಾ ಬೇಗ ಬಂದ ಕಾರಣ ಏನೂಂತ....ಕೇಳಿದ್ರೆ ..."

"ಕಾರಣ ಇದ್ರೇ ಬೇಗ ಮನೆ ಸೇರ್ಕೊಳ್ಳೋ ಬೇಕೆಂಬ ನಿಯಮವೇನಾದ್ರೂ ಇಲ್ಲ ತಾನೆ?"

"ಅಲ್ಲ, ಸುಮ್ಸುಮ್ನೆ ಯಾಕೆ ಕೋಪಿಸ್ಕೋತೀರಿ? ನಾನೇನು ಬರ್ಬಾರ್ದು ಅಂದ್ನೆ? ಅಲ್ಲ, ಯಾವಾಗ್ಲೂ ಬೇಗ ಬನ್ನಿ ಅಂದ್ರೆ.... ಬಾರ್ದೆ ಇರೋರು ಇಂದು ಮಾತ್ರ...."

"ಅಂತೂ ನಿಂಗೆ ಕಾರಣ ಬೇಕಾಗಿದೆ ಅಲ್ವೆ? ನೋಡು, ಇವತ್ತು ಯಾರೂ ಮಾತಾಡೋಕೆ ಸಿಕ್ಲಿಲ್ಲ ನೆಟ್ಟಗೆ ಬಂದೇಬಿಟ್ಟೆ. ಆಯ್ತಲ್ಲಾ ಸಮಾಧಾನ"

".. ಹ್ಞೂ....ಸರಿ... ಅಲ್ಲಾ, ಆದ್ಯಾಕೆ ಯಾರೂ ಸಿಗ್ಲಿಲ್ಲಾಂತ..."

"ನೋಡು, ಮೊದ್ಲು ಯಾಕೆ ಬಂದ್ರೀಂತಂದಿ; ಈಗ...'

"ಬೇಡ ಬೇಡ, ಕೋಪಿಸ್ಕೊ ಬೇಡಿ.."

"ಏನೇ, ನಾನೇನು ಕೋಪಿಸ್ಕೊಂಡೆನೆ? ಯಾರು ಹಾಗಂತ ಹೇಳೋರು?.."

"ಯಾರು ಯಾರು ಯಾಕೆ ಹೇಳ್ಬೇಕು? ನಿಮ್ಮ ಆ ಎರಡು ಕಣ್ಣುಗಳೇ ಹೇಳ್ತಾವೆ ನೋಡಿ.."

"ಸಾಕು ಕಣೇ ನೀನು. ನಿನ್ನ ದುರ್ಬೀನು ಕಣ್ಣಿಂದ ಏನು ತಪ್ಪಿಸ್ಕೊಬಲ್ಲುದು? ಸರಿ, ನಿನ್ಗೆ ಅಷ್ಟೇ ಕಾಣೋದೆ? ಸರಿಯಾಗಿ ಹೇಳು."

"ಏನೇನು ಮಾತಾಡ್ತೀರಿ ಇಂದು? ಏನಾಯ್ತು ನಿಮ್ಗೆ? ಎಲಾ ಏನು ಮುಖ ಬಾಡಿಹೋಗಿದೇಂದ್ರೆ? ಕಾಫೀ ಕುಡೀಲಿಲ್ವಾ ಪೇಟೇಲಿ?"

"ಕಾಫೀನೂ ಕುಡೀಲಿಲ್ಲ ಊಟಾನೂ ಮಾಡ್ಲಿಲ್ಲ."

'ಛೆ, ಛೇ, ಛೇ, ಯಾಕೆ ಏನಾಯ್ತು ಯಾರಾದ್ರೂ? ಆಫೀಸರ್ರು ಬಂದಿದ್ರೇನು? ಮಧ್ಯಾಹ್ನಕ್ಕೆ?"

"ಹಾಗೇನೂ ಇಲ್ಲ ನೋಡು ಇವತ್ತು ಸಹಾನುಭೂತಿಗಾಗಿ ಉಪವಾಸ ಮಾಡಿದೆ"

"ಎಂಥ ಸಹಾನುಭೂತಿಯಪ್ಪ, ಅನ್ನ ಬಿಟ್ಕೊಂಡು ಯಾರಿಗೆ ಸಹಾನುಭೂತಿ, ಯಾಕ ಸಹಾನುಭೂತಿ."

"ಓಹೋ, ನಿಂಗೆ ಏನೂ ಗೊತ್ತಿಲ್ಲಾಂತ ತೋರುತ್ತೆ. ನಮ್ಮ ಜಿಲ್ಲೆಯ ಪ್ರಾಥಮಿಕ ಶಿಕ್ಷಕರು ಇಂದು ಸಾಂಕೇತಿಕ ಉಪವಾಸ ಮಾಡಿದ್ರು ಅವರಿಗೆ ಸಹಾನುಭೂತೀಂತ ನಾನೂ ಮಾಡ್ಬಿಟ್ಟೆ, ಮಧ್ಯಾಹ್ನ"

"ನಿಮ್ಗೆ ಯಾರಾದ್ರೂ ಹೇಳಿದ್ರಾ ಹಾಗೆ ಅನ್ನ ನೀರು ಬಿಡೇಕೆ?"

"ಯಾರು ಯಾಕೆ ಹೇಳಬೇಕು? ಏನೋ ನನ್ನ ಮನಸ್ಸಿಗೇನೇ ತೋರಿತು; ಮಾಡಿಬಿಟ್ಟೆ. ಅಷ್ಟೆ."

"ಅಯ್ಯೋ, ನಿಮ್ಮ ಹೂಮನಸ್ಸೆ!... ಅಲ್ಲಾ, ಅವ್ರೆಲ್ಲಾ ಯಾತಕ್ಕಂತೆ ಉಪವಾಸ ಮಾಡಿದ್ದು?"

"ಉಪವಾಸ್ದಲ್ಲಿ ಏನೂ ವಿಶೇಷವಿಲ್ಲಾನ್ನು. ಏನೋ ಅವ್ರಿಗೆ ಸಂಬಳ ಸಿಗೋಕೆ ನಿಶ್ಚಿತ ದಿನವೇ ಇಲ್ಲವಂತೆ. ಕೆಲವ್ರಿಗೆ ಏರಿದ ಸಂಬ್ಳಾ ಬನ್ಲಿಲ್ಲಂತೆ; ಮತ್ತೆ ಕೆಲವ್ರಿಗೆ ಏರಿದ ತುಟ್ಟಿಭತ್ತೆ ಬರ್ಲಿಲ್ಲಂತೆ. ಹೀಗೆ ಏನೇನೊ ಕಾರಣಾಂತನ್ನು. ಅವ್ರು ಕನಿಷ್ಟ ಬೇಡಿಕೆಗಳನ್ನ ಸರಕಾರದ ಗಮನಕ್ಕೆ ತರೋದಕ್ಕೆ ಸಾಂಕೇತಿಕವಾಗಿ ಉಪವಾಸ ಮಾಡಿದ್ರಂತೆ ..."

"ಅಲ್ಲ, ಉಪವಾಸ ಮಾಡಿ ಅವ್ರು ಸಾಧಿಸುವುದಾದ್ರೂ ಏನನ್ನ?"

"ನೋಡು, ಇಲ್ಲೇ ಇದೆ ನೋಡು, ಅವ್ರ ಅಧ್ಯಕ್ಷರ ಹೇಳಿಕೆ:....ದೀರ್ಘ ಸಮಯದಿಂದ ಪರಿಹಾರ ದೊರೆಯದೆ ಉಳಿದ ನಮ್ಮ ನ್ಯಾಯವಾದ ಬೇಡಿಕೆಗಳ ಕುರಿತು ನಾವು ಕೈಕೊಳ್ಳುವ ಈ ಉಪವಾಸ ಯಾರ ಮೇಲೂ ಗದ ತರುವಂತಹುದಲ್ಲ. ನಮ್ಮ ಬೇಡಿಕೆಗಳ ಕುರಿತು ಸರಕಾರದ ಹಾಗೂ ಜನತೆಯ ಸಹಾನುಭೂತಿಯನ್ನು ಸೆಳೆಯಲು ಇದು ಆತ್ಮ ಶುದ್ಧಿಯ ಒಂದು ಪವಿತ್ರ ಕಾರ್ಯಕ್ರಮವಾಗಿದೆ..."

"ಹ್ಞಾಂ. ಅಂದ್ರೆ ಒಂದು ಮಾತು ನೋಡಿ..."

"ಏನು"

"ಈಗಾಗ್ಲೆ ಅವ್ರು ಪರೋಕ್ಷವಾಗಿ ಪ್ರತಿ ತಿಂಗ್ಳೂ ಕೆಲವು ಹೊತ್ತು ಅನಿಯಮಿತವಾಗಿ ಉಪವಾಸ ಮಾಡ್ತಿದ್ರು ಪ್ರಾಯ ಇಂದು ಎಲ್ರೂ ಒಂದಾಗಿ ಒಂದು ದಿನ ಮಾಡಿದ್ರೂಂತ ತೋರುತ್ತೆ...."

'ಹಾಂಗಾದ್ರೆ, ಅವ್ರ ಕಥೆ ನಿಂಗೂ ಗೊತ್ತಿದೆ ನೋಡು ಆದ್ರೆ ಒಂದು ವಿಷ್ಯ ಮಾತ್ರ ದುಃಖದ್ದು ..."

"ಯಾವುದೂಂತ...."

"ಅಲ್ಲಾ, ಮನೆಯೊಳ್ಗೆ ಕೂತು ಯಾರ್ಯಾರಿಂದ್ಲೋ ಸುದ್ದಿ ತಿಳಿದುಕೊಳ್ಳು ನಿಂಗೆ ಗೊತ್ತಿರೊ ಸಂಗ್ತಿ, ನಮ್ಮ ಮಂತ್ರಿಗಳಿಗೆ ಗೊತ್ತಿಲ್ಲಾಂತಂದ್ರೆ...."

"ನಿಜವಾಗ್ಲೂ ಬೇಸರ ಅಲ್ವೆ? ಮತ್ತೆ ನೋಡಿ, ಯಾರು ಉಣ್ತಾರೆ, ಯಾರು ಉಣ್ಣೋದಿಲ್ಲಾಂತ ನೋಡೋಕೆ ಅವ್ರಿಗೆ ಸಾಧ್ಯವೆ? ಪಾಪ, ವಿಧಾನಸಭೇಲಿ ನಾಲ್ಕು ಉಪ ಪ್ರಶ್ನೆ ಕೇಳಿದ್ರೆ ಕಣ್ಣು ಕಾಲು ಬೇಡೋರೂಂತ ಹೇಳ್ತಾರಲ್ಲಾ.... ಅವ್ರು ..."

"ಅದು ಸರೀನ್ನು. ಇದೇ ಕಥೆ ಮುಂದುವರಿದ್ರೆ, ಎಲ್ಲಿಗೆ ಬಂದು ಮುಟ್ಟುತ್ತೋಂತ...."

"ಹೋಗ್ಲಿ ಬಿಡಿ ಸದ್ಯ ಉಪವಾಸ ಮಾಡಿದವರ ಆತ್ಮವಾದ್ರೂ ಶುದ್ಧವಾಯ್ತಲ್ಲ .."

"ಬಹುಶಃ ಅಷ್ಟೇ ಸಮಾಧಾನಾಂತ ಕಾಣುತ್ತೆ'

'ಹ್ಞಾಂ ..ಏನು ಈಗಾದ್ರೂ ಊಟ ಮಾಡ್ತೀರೋ ಬಟ್ಲು ಇಡ್ಲೆ?"

"ಛೆ, ಛೆ, ಬೇಡ ಕಣೇ. ಇಂದು ಏಕಾದಶೀಂತ ತಿಳಿಯೋಣ. ನಾಳೆ ಬೆಳಗ್ಗೆ ಎದ್ದು...."

'ಫಲಾರ ದ್ರೂನು.."

"ಅದೂ ಬೇಡ. ಇಂದು ಶುದ್ಧ ಉಪ್ವಾಸ ನಂಗೆ ತಿಳೀತೆ?"

"..ಹಾಂಗಾದ್ರೆ, ನಾನೂ ಉಣ್ಣೋಲ್ಲ...."

"ಹಾಗನ್ನ ಬಾರ್ದು ನೋಡು, ನೀನು ಉಣ್ಣು. ಆದ್ರೂ ಇಷ್ಟು ಬೇಗ ಏನು? ಇನ್ನೂ ಏಳು ಗಂಟೆಯಾಗಿಲ್ಲ .."

"ಏಳಿ, ಏಳಿ, ಕೈಕಾಲು ತೊಳ್ಕೊಂಡಾದ್ರೂ ಬನ್ನಿ. ಒಂದು ಲೋಟ ಹಾಲನ್ನಾದ್ರೂ...."

"ಹಠ ಮಾಡ್ಬೇಡ ಕಣೇ. ಬೇಡ ಅಂದ್ಮೇಲ್ಲಾ. ಎಲ್ಲಾ ನಾಳೆ .."

'ಹಾಂಗಾದ್ರೆ, ನಾನೂ ಸಹಾನುಭೂತಿ ತೋರಿಸ್ತೇನೆ....ನೀವು ಎರಡು ಹೊತ್ತು ಉಪ್ವಾಸ ಕೂತ್ರೆ, ನಾನು ಒಂದಾದ್ರೂ ಕೂತ್ಕೊಳ್ಳೋ ಬೇಡ್ವೆ ... ..."

"ಅಂತೂ ಸಹಾನುಭೂತಿ ನಿನ್ನಲ್ಲೂ ಇದೇಂತಾಯ್ತು".

"ನನ್ನದ್ದೀಂತೇನು? ಈ ಸಂಗ್ತಿಯನ್ನ ಮೊದ್ಲೇ ಎಲ್ರಿಗೂ ತಿಳಿಸ್ತಿದ್ರೆ ಎಲ್ರೂನೂ ತೋರಿಸ್ತಿದ್ರು. ಮತ್ತೆ ನಿಮ್ಮ ಟೋಪಿ ಸರ್ಕಾರದವ್ರು ದಿಲ್ಲಿಯಲ್ಲೋ ಬೆಂಗ್ಳೂರಲ್ಲೋ ಕುಳಿತು ಉಪಾಧ್ಯಾಯರು ದೇವ್ರು, ಇಂದ್ರರು ಚಂದ್ರರೂಂತಂದ್ಬಿಟ್ಟು...."

ದೇವ್ರನ್ನ ಕಂಡಾಗೇ ಕಾಣ್ತಾರೆ ಅವ್ರ್ನ....

"ಏನಂತೀರಿ ನೀವು? ಹಾಂಗಾದ್ರೆ ಈ ಕಷ್ಟ ಯಾಕೆ ಮತ್ತೇಂತ. ..

"ದೇವ್ರಿಗೆ ಸಿಗೋದೇನು? ಬರೇ ನಮಸ್ಕಾರ ನೋಡು. ಎಂದಾದ್ರೂ ಹಣ್ಣು ನೈವೇದ್ಯ ಸಿಕ್ಕೋದುಂಟು.'

"ಭಲೇ ಬುದ್ಧಿವಂತ್ರು ನೀವು. ನಿಮ್ಮ ಟೋಪಿಯವರ್ಗೆ ಸಮಾಧಿ ಸೇರೋಕೆ ಒಳ್ಳೇ ಲಾಯರ್ರು. ಅದ್ಕೇ ಇದ್ಬೇಕು. ಲಾಯರಗಿರಿ ಕಲಿಯುವ ದೂರದೃಷ್ಟದ್ದು ..."

. "ಅದೆಲ್ಲಾ ಇರ್ಲಿ ಈಗ, ಏನೂ ಕೂಡೋದಿಲ್ಲಾ. ಹಾಸನ್ನಾದ್ರೂ ಹಾಸಿ; ಬೇಗ ಮಲಗಿಯಾದ್ರೂ ಬಿಡೋಣ."

— ಗೋರಾ.

ಜನತೆಯ ಸೌಕರ್ಯಕ್ಕಾಗಿ

ಹೊಸ ಬಗೆಯ

ಸೇವಿಂಗ್ಸ್ ಬ್ಯಾಂಕ್ ಸೌಲಭ್ಯಗಳು.

- ಪ್ರಾಯಕ್ಕೆ ಬಾರದ ಮಕ್ಕಳು ಕೂಡಾ 12 ವರ್ಷಕ್ಕೆ ಮೇಲ್ಪಟ್ಟವರು ತಮ್ಮ ಹೆಸರಿನಲ್ಲೇ ಸೇವಿಂಗ್ಸ್ ಬ್ಯಾಂಕ್ ಖಾತೆಗಳನ್ನು ತೆರೆಯಬಹುದು.
- ನೀವು ನಿಮ್ಮ ಸೇವಿಂಗ್ಸ್ ಬ್ಯಾಂಕ್ ಖಾತೆಯಿಂದ 1 ವರ್ಷದಲ್ಲಿ 150 ಬಾರಿ ಹಣವನ್ನು ತೆಗೆಯಬಹುದು.
- ನಿಮ್ಮ ಸೇವಿಂಗ್ಸ್ ಬ್ಯಾಂಕ್ ಖಾತೆಯಿಂದ ಎಂದು ಬೇಕಾದರೂ ಎಷ್ಟು ಮೊತ್ತವನ್ನಾದರೂ ಯಾವುದೇ ಪೂರ್ವ ಸೂಚನೆಯಿಲ್ಲದೆ ಹಿಂದೆ ಪಡೆಯಬಹುದು.
- ಸೇವಿಂಗ್ಸ್ ಬ್ಯಾಂಕ್ ಖಾತೆಯ ಮೇಲೆ ಅರ್ಧ ವಾರ್ಷಿಕ ಖರ್ಚು ವೆಚ್ಚಗಳನ್ನು ವಸೂಲು ಮಾಡ ಲಾಗುವುದಿಲ್ಲ.
- ಸೇವಿಂಗ್ಸ್ ಖಾತೆಯ ಮೂಲಕ ಧರ್ಮಾರ್ಥವಾಗಿ ಹಣವನ್ನು ರವಾನಿಸಬಹುದು.

ಸಿಂಡಿಕೇಟ್ ಬ್ಯಾಂಕಿನಲ್ಲಿ ನಿಮ್ಮ
ಸೇವಿಂಗ್ಸ್ ಖಾತೆ ತೆರೆಯಿರಿ.

ಸಿಂಡಿಕೇಟ್ ಬ್ಯಾಂಕ್

ಚಲಾವಣೆ ಬಂಡವಾಳ ರುಪಾಯಿ 45 ಕೋಟಿಗೂ ಮಿಕ್ಕಿದೆ.

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ಉಡುಪಿ

Edited, Printed & Published by K. H. Shetty. at the Navayuga Press, Udipi, S. India.

ನವಯುಗ

VOL. 43 No 17 — ಸಂಪುಟ ೪೩ ಸಂಚಿಕೆ ೧೭

NAVAYUGA—Nationalist Weekly ‡‡ ಉಡುಪಿ 26–12–1963 ಗುರುವಾರ ‡‡ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ನಮ್ಮ - ನಮ್ಮವರು

ಶ್ರೀ ಎಸ್. ಆರ್ ಕಂಠಿ

ಮಾಜಿ ಮುಖ್ಯ ಮಂತ್ರಿಯಾಗಿ ಇಂದು ಶಿಕ್ಷಣ ಶಾಖೆಯ ಮಂತ್ರಿಯೆನಿಸಿರುವ ಶಿವಪ್ಪ ರುದ್ರಪ್ಪ ಕಂಠಿಯವರ ಮೇಲೆ ತುಂಬ ಭಾರದ ಹೊರೆ ಬಿದ್ದಿದೆ ಶಿಕ್ಷಣ ಶಾಖೆಯ ಕಾರ್ಯವಿಧಾನದ ಮೇಲಿರುವಷ್ಟು ಆರೋಪ ಪ್ರಾಯಃ ಮತ್ತಾವ ಶಾಖೆಯ ಮೇಲೂ ಇರಲಾರದು ವಿಧಾನ ಸಭೆಯ ಅಧ್ಯಕ್ಷರಾಗಿದ್ದ ಕಂಠಿಯವರು ಅದಕ್ಕೊಂದು ವಿಶೇಷ ಶೋಭೆಯನ್ನು ತಂದು ಕೊಟ್ಟಿದ್ದರು ತಲೆಕ್ಕಂಟ ಮಾತಾಡಿ, ಮಾತಿನಲ್ಲೇ ಜಗಳಕಾದುವ ಸದಸ್ಯರನ್ನು ಒಂದು ಕ್ರಮದಲ್ಲಿ ಕೊಂಡು ಹೋಗಿ ಸತ್-ಸಂಪ್ರದಾಯವನ್ನು ಅವರು ಹಾಕಿಕೊಟ್ಟರು. ಅಂತೆಯೇ ನಿಜಲಿಂಗಪ್ಪನವರು ವಿಧಾನ ಸಭಾ ಸದಸ್ಯರಾಗಿ ಬರುವ ವರೆಗೆ (ತಾತ್ಕಾಲಿಕ) ಮುಖ್ಯ ಮಂತ್ರಿಯಾಗಿ ತಮ್ಮ ಉದಾರ ಗುಣವನ್ನು ಮೆರೆದರು ಅಲ್ಲಿಯೂ ಅವರೊಂದು ಉತ್ತಮ ಸಂಪ್ರದಾಯವನ್ನೇ ಸ್ಥಾಪಿಸಿದರೆನ್ನಬಹುದು ಆದರೆ, ಅವರಿಂದು ವಹಿಸಿದ ಜವಾಬುದಾರಿಗೆ ತುದಿ ಕೊನೆಯಿಲ್ಲದಂತಾಗಿದೆ ದೇಶದ ಶಿಕ್ಷಣ ಪ್ರಣಾಳಿಯೇ ತೂಗುಯ್ಯಾಲೆಯಂತೆ ತೂಗುತ್ತಿರುವಾಗ ಅವರು ಮಾಡಬಲ್ಲರಾದರೂ ಏನನ್ನು? ಭವಿಷ್ಯ ನಿರ್ಮಾಣದ ಪ್ರಾರಂಭಿಕ ಹಂತವೆನಿಸಿದ ಶಿಕ್ಷಣ ವ್ಯವಸ್ಥೆಯಲ್ಲಿ ಎಲ್ಲೆಂದರಲ್ಲಿ ಅಸಮಾಧಾನ ತುಂಬಿದೆ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಪ್ರವೇಶ ಪ್ರಶ್ನೆಯು ವಿವಾದಗ್ರಸ್ತ ವಿಷಯವಾದರೆ, ಹಾಯರ್ ಸೆಕೆಂಡರಿಯದು ಅನಿರ್ದಿಷ್ಟನಿಲುವು ಪ್ರಾಥಮಿಕ ಶಾಲೆಗಳೆಂದರೆ, ಅವ್ಯವಸ್ಥೆಯ ನೆಲೆವೀಡು ಕಾಲೇಜುಗಳು ಅಶಿಸ್ತಿನ ತವರು ಮನೆ!

ಪ್ರಾಥಮಿಕ ಶಾಲಾ ಆಡಳಿತೆಯವರಿಗೆ ವೆಚ್ಚದಲ್ಲಿ ನೂರಕ್ಕೆ ನೂರರಷ್ಟು ಸಹಾಯಧನ ನೀಡುವುದು, ಅಧ್ಯಾಪಕರ ವೇತನಗಳು ಕ್ಲಪ್ತ ಸಮಯದಲ್ಲಿ ಬಟವಾಡೆಯಾಗುವಂತೆ ತೀವ್ರ ಕ್ರಮ ಕೈಗೊಳ್ಳುವುದು, ಮಾಧ್ಯಮಿಕ ಶಾಲೆಗಳಿಗೆ ನೀಡುವ ಸಹಾಯ ಧನ ನಿಯಮಗಳಲ್ಲಿ ಉದಾರತೆಯನ್ನು ತೋರಿಸುವುದು, ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ನಿಷ್ಪಕ್ಷಪಾತದ ಆಯ್ಕೆಯ ಪದ್ಧತಿಯನ್ನು ತರುವುದು ಹಾಗೂ ಅನಪೇಕ್ಷಿತವಾಗಿ ಆಗುವ ವಿಲಂಬವನ್ನು ತಪ್ಪಿಸುವುದು ಸದ್ಯ ಕಂಠಿಯವರ ಹೊಣೆಗಾರಿಕೆಯೆನಿಸುತ್ತದೆ ಆದರೆ, ಇವೆಲ್ಲವುಗಳಿಗಿಂತಲೂ ಹಳೆಯ ಮೈಸೂರು ವಿಭಾಗದ ಕಾಲೇಜು ವಿದ್ಯಾರ್ಥಿಗಳು ಏರಿದ ಶುಲ್ಕವೇ ಮೊದಲಾದುವುಗಳ ವಿರುದ್ಧ ಹೂಡಿದ ಬೃಹತ್ ಸಂಪು ಅವರ ಕಂಠಕ್ಕೆ ಉರುಳಾಗಿದೆ ಸಮಾನತೆಯ ಉದ್ದೇಶದಿಂದ ಹೊರಡಿಸಿದ ಸರಕಾರಿ ಆಜ್ಞೆಯ ವಿರುದ್ಧ ಏರಿದ ಶುಲ್ಕವನ್ನು ಪ್ರತಿಭಟಿಸಿ ಈ ಹಿಂದೊಮ್ಮೆ ಸಂಪು ನಡೆದಿತ್ತು ಈಗ ಮರಳಿ ನಡೆಯುವ ಸಂಪು ಹೇಗೆ ಕೊನೆಗೊಳ್ಳುವುದೆಂದು ಕಾದು ನೋಡಬೇಕಾಗಿದೆ. ಕಂಠಿಯವರು ಈ ವಿಷಯವನ್ನು ನುಂಗಿ ನೀಲಕಂಠರೆನಿಸಿದರೆಂದರೆ, ಅವರ ದಕ್ಷತೆಗೆ ಅದೇ ಒಂದು ಜ್ವಲಂತ ನಿದರ್ಶನ ಯಾರಿಗೂ ಅನ್ಯಾಯವಾಗದಂತೆ ತೀರ್ಮಾನ ಕೊಡಿಸುವಲ್ಲಿ ಕಂಠಿ ಹಿಂಜರಿಯಬಾರದು, ಅದನ್ನು ಒಪ್ಪದಿ ಸಂಪುಗಾರರು ಸಮ್ಮನಿರಬಾರದು

ಶ್ರೀ ಆರೂರು ವಕೀಲರು

ಉಡುಪಿಯಲ್ಲಿ ಮಾತ್ರವಲ್ಲ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆರೂರು ವಕೀಲರದು ಮನೆ ಮಾತಿನ ಹೆಸರು ಕ್ರಿಮಿನಲ್ ಮತ್ತು ಸಿವಿಲ್ ವಕಾಲತ್ತಿನಲ್ಲಿ ಇವರದು ಯಾವಾಗಲೂ ಮೇಲಗೈ, ಕೋರ್ಟಿನಲ್ಲಿ ಆರೂರು ಲಕ್ಷ್ಮೀನಾರಾಯಣ ರಾವ್‌ರವರ ವಾದವನ್ನು ಕೇಳುವುದೂ ಒಂದು ಬಗೆಯ ಭಾಗ್ಯವೆಂದೇ ಹೇಳಬೇಕು ಉಡುಪಿಗೆ ಸಮೀಪದ ಆರೂರಿನಲ್ಲಿ ಜನಿಸಿದ ಇವರು ಉಡುಪಿಯನ್ನೇ ತಮ್ಮ ವಿವಿಧ ಕಾರ್ಯಕ್ರಮಗಳ ಕೇಂದ್ರವನ್ನಾಗಿ ಆರಿಸಿಕೊಂಡರು. ಉದ್ಯೋಗದಲ್ಲಿ ವಕೀಲರಾದರೂ ಇವರ ಉತ್ಸಾಹ ವಕಾಲತ್ತಿನಲ್ಲೇ ಕೊನೆಗೊಂಡಿಲ್ಲ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಮುತುವರ್ಜಿ ವಹಿಸಿ, ಸ್ವಪ್ರಯತ್ನದಿಂದಲೇ ಏಳ್ಗೆಯನ್ನು ಪಡೆದ ಆದರ್ಶ ವ್ಯಕ್ತಿ ಇವರು ವಯಸ್ಸಿನಲ್ಲಿ ವೃದ್ಧರಾದರೂ ಇಂದಿಗೂ ಅವರ ಉತ್ಸಾಹಗಳಿಗೂ ಸಾರ್ವಜನಿಕ ಕಾರ್ಯಕಲಾಪಗಳಿಗೂ ವ್ಯತಿರೇಕತೆ ಕಂಡು ಬಂದಿಲ್ಲ.

ಉಡುಪಿ ನಗರ ಸಭೆಯು ಸ್ಥಾಪಿತಗೊಂಡಾಗಿನಿಂದ ಎರಡು ಪೂರ್ಣಾವಧಿಯ ವರೆಗೆ ಆದರೆ ಸಭಾಪತಿಗಳಾಗಿ ಆರೂರು ಅವರು ನಗರ ಸಭೆಯ ಬಹುಮುಖ ಸೇವೆ—ಕಾರ್ಯಗಳಿಗೆ ಬಲವಾದ ಅಡಿಗಲ್ಲನ್ನು ಹಾಕಿದರು ಈ ಪ್ರಸಂಗದ ವೇಳೆಯೇ ಇಂದಿನ ಉಡುಪಿ ನಗರ ಸಭೆ ನಿಂತಿದೆಯೆಂದರೆ ಅತಿಶಯೋಕ್ತಿಯಲ್ಲ ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನಲ್ಲಿಯೂ ಅಧ್ಯಕ್ಷರಾಗಿದ್ದು ಇಡಿಯ ಜಿಲ್ಲೆಯ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಆಸಕ್ತಿ ವಹಿಸಿದ ಸಮಾಜ ಸೇವಕರು ಅವರು, ಜಿಲ್ಲೆಯ ಸಾರಿಗೆ ಸಂಸ್ಥೆಗಳಲ್ಲಿ ಒಂದಾದ ಶಂಕರ ವಿಠಲ್ ಮೋಟಾರ್ ಕಂಪೆನಿಯ ಸಂಸ್ಥಾಪಕರಲ್ಲಿ ಅವರು ಅಗ್ರಗಣ್ಯರು. ಹೀಗೆ ಜಿಲ್ಲೆಯ ಜನತೆ ಆರೂರು ಇವರನ್ನು ಆರೂರವರು (ಆರು ತಾಲೂಕಿಗೂ ಸೇರಿದವರು) ಎಂದು ಕರೆದರೆ ಆಶ್ಚರ್ಯವಿಲ್ಲ ಜಿಲ್ಲೆಯ ಸುಪ್ರಸಿದ್ಧ ಬ್ಯಾಂಕುಗಳಲ್ಲಿ ಒಂದಾದ ಸಿಂಡಿಕೇಟ್ ಬ್ಯಾಂಕಿನ ಡೈರೆಕ್ಟರಾಗಿದ್ದು, ತಮ್ಮ ಸುದೀರ್ಘಾನುಭವಗಳಿಂದ ಬ್ಯಾಂಕಿನ ಅಭಿವೃದ್ಧಿಗೆ ನೆರವಾಗುವ ಆರೂರು ಅವರು ಉದಾರಿಗಳು, ದಾನಿಗಳು. ಇವರಿಂದ ಉಪಕೃತವಾಗದ ಸಂಘಸಂಸ್ಥೆಗಳು ಪ್ರಾಯ ಜಿಲ್ಲೆಯಲ್ಲಿರಲಾರವು

ಆರೂರು ಲಕ್ಷ್ಮೀನಾರಾಯಣ ರಾಯರಲ್ಲಿರುವ ಉತ್ಸಾಹ, ಸೇವಾಕಾಂಕ್ಷೆಗಳು ಅಸೀಮ ಅಂತೆಯೇ ಅವರ ಸುಪುತ್ರರು ಕೂಡ ಉತ್ಸಾಹಿಗಳು, ಕಾರ್ಯಪಟುಗಳು. ಅರವಿಂದ ಮೋಟರ್ಸ್, ಶಂಕರ ಮೋಟರ್ ಕಂಪೆನಿ—ಮೊದಲಾದ ಸಂಸ್ಥೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ ಅವರ. ಆರೂರು ವಕೀಲರು ಇಂದು ಆರ ಊರವರೂ ಆಗಿರದೆ ಎಲ್ಲ ಊರಿಗೂ ಸೇರಿದವರ, ಅವರ ಅನುಭವ, ಕಾರ್ಯಪಟುತ್ವಗಳ ಪ್ರಯೋಜನವನ್ನು ನಮ್ಮ ಜಿಲ್ಲೆ ಮಾತ್ರವಲ್ಲ ದೇಶವೇ ಪಡೆಯುವಂತಾಗಬೇಕು.

ಶ್ರೀ ಪಿ ಜನಾರ್ದನ ನಾಯಕ್

ಆಯುರ್ವೇದಕ್ಕೆ ಸಂಬಂಧಿಸಿದ ಔಷಧಿಗಳನ್ನು ಉತ್ಪಾದಿಸುವ ಸಂಸ್ಥೆಗಳಲ್ಲಿ ಕಟಪಾಡಿಯ ಭುವನೇಂದ್ರ ಪ್ರೊಡಕ್ಟ್ಸ್ ಒಂದು ಇಲ್ಲಿನ ಉತ್ಪಾದನೆಗಳು ದಕ್ಷಿಣ ಭಾರತವಿಡೀ ಪ್ರಚಾರದಲ್ಲಿವೆ. ಇದರ ಮೆನೇಜಿಂಗ್ ಡೈರೆಕ್ಟರ್ ಪಾಂಗಾಳ ಜನಾರ್ದನ ನಾಯಕರು ಪ್ರಸಿದ್ಧವಾದ ಪಾಂಗಾಳ ನಾಯಕ್ ಮನೆತನಕ್ಕೆ ಸೇರಿದ ಘನವಂತ ವ್ಯಕ್ತಿ ಇವರ ಅವಿರತ ಶ್ರಮ ಮತ್ತು ಕ್ರಿಯಾಶೀಲತೆಯಿಂದಲೇ ಭುವನೇಂದ್ರ ಪ್ರೊಡಕ್ಟ್ಸ್ ತ್ರಿವಿಕ್ರಮಾವತಾರವನ್ನು ಪಡೆಯುವಂತಾಯಿತು.

ಜನಾರ್ದನ ನಾಯಕರು ಒರ್ವರಿಯ ಅಲ್ಲ, ಹೀಗೆ ಹೇಳಬಹುದಾದರೆ, ಅವರು ಕಲ್ಪಕರು. ಅವರೆ, ಘನವೆತ್ತವರ, ತಾಳಿದ ಮನುಷ್ಯ ಎಂದರೆ, ಸರಿಯಾಗಿ ಒಪ್ಪಬಹುದು ಹಿಡಿದ ಕೆಲಸವನ್ನು ಬಿಡದೆ ಕಡತನಕ ಸಾಧಿಸುವ ಛಲಗಾರ ಇವರು ಎನ್ನುವುದಕ್ಕಿಂತ ಅನುಪಮ ಸಾಧಕರು ಎನ್ನುವುದು ಸಮಂಜಸವಾದೀತು ಆಯುರ್ವೇದದಲ್ಲಿ ಇವರ ಪರಿಶ್ರಮವೂ ಅಪಾರ. ಪಾಂಡುಪ್ರತಿಬಂಧ ಶಾ

(೧೨ನೇ ಪುಟ ನೋಡಿರಿ)

ವಾರದ ಕಥೆ

ಅಪರಾಧಿ ಯಾರು...?

"ಸಾರ್....ಸಾ....ರ್..."

"ಯಾರೋ ಬಂದಿದ್ದಾರೆ ಸಾ....ರ್"

"ಇನ್ಸ್‌ಪೆಕ್ಟ್ರು ಸಾರ್"

ಬಂದಿದ್ದ ಅಧಿಕಾರಿಗಳು ಕೈಸನ್ನೆಯಿಂದಲೇ ಮಕ್ಕಳ ಕೂಗನ್ನು ನಿಲ್ಲಿಸಿದರು. ಆ ಮೇಲೆ ತಾನೇ ಮುಂದೆ ಬಂದು ಉಪಾಧ್ಯಾಯರ ಬಳಿ ನಿಂತು ಎವೆಯಿಕ್ಕದೆ ನೋಡ ತೊಡಗಿದರು.

ಆದರೆ....ಊ ಹ್ಞೂ....ಗಾಢ ನಿದ್ರೆಯಲ್ಲಿ ಮುಳುಗಿದ್ದ ಮಾಸ್ತರರು ಮೇಜಿಗೊರಗಿಸಿದ ತಲೆಯನ್ನು ಮೇಲಕ್ಕೆತ್ತಲೇ ಇಲ್ಲ.

"ಮಾಸ್ಟ್ರೇ....ಏನು ಮಾಸ್ಟ್ರೇ... ಬಹಳ ಚೆನ್ನಾಗಿ ನಡೆಯುತ್ತೆ ನಿಮ್ಮ ಶಾಲೆ, ಅಲ್ವಾ ಮಕ್ಕಳೇ?"

ಮಕ್ಕಳೆಲ್ಲರೂ ಗೊಳ್ಳನೆ ನಕ್ಕು ಬಿಟ್ಟರು.

ಆ ನಗುವಿನ ಕರ್ಕಶತೆ ಉಪಾಧ್ಯಾಯರನ್ನು ಹೊಡೆದೆಬ್ಬಿಸಿತು. ಅವರು ತಲೆಯೆತ್ತಿ ನೋಡಿದರು.

ಕಣ್ಣುಗಳನ್ನು ತಿಕ್ಕಿಕೊಳ್ಳುತ್ತಾ ದಿಟ್ಟಿಸಿದರು.

ಪರೀಕ್ಷಾಧಿಕಾರಿಗಳು ಪ್ರತ್ಯಕ್ಷರಾಗಿ ಉರಿಗಣ್ಣುಗಳಿಂದ ತನ್ನನ್ನೇ ದಿಟ್ಟಿಸುತ್ತಿದ್ದರೆಂಬುದಕ್ಕೆ ಸಂದೇಹವೇ ಇರಲಿಲ್ಲ. ಇದೇನು ಕನಸೂ ಆಗಿರಲಿಲ್ಲ.

"ನಮಸ್ಕಾರ ಸಾರ್....ತಾವು ಬಂದುದು ತಿಳಿಯಲೇ ಇಲ್ಲ. ಕ್ಷಮಿಸಬೇಕು ಕೂತ್ಕೊಳ್ಳಿ." ಗಡಿಬಿಡಿಯಿಂದ ಎದ್ದು ನಿಂತು ಸೌಮ್ಯ ಸ್ವರದಲ್ಲಿ ನುಡಿದರು ಮಾಸ್ತರರು.

"ಅಯ್ಯೋ ಪಾಪ....! ಹೇಗೆ ತಿಳಿದೀತು? ಮಧ್ಯರಾತ್ರಿ ಹೊತ್ತು! ಛೆ! ಛೆ! ನಾನು ಬಂದು ಬಹಳ ತೊಂದರೆ ಕೊಟ್ಟೆ" ವ್ಯಂಗ್ಯ ಮಿಶ್ರಿತ ನಗುವಿನೊಂದಿಗೆ ನುಡಿದು ಕುರ್ಚಿಯಲ್ಲೊರಗಿದರು ಅಧಿಕಾರಿಗಳು.

"ಸಾರ್....ದಯವಿಟ್ಟು...." ಮಾಸ್ತರರು ದೈನ್ಯತೆಯಿಂದ ಸ್ವರವೆತ್ತಿದರು.

"ಸಾಕು, ಬಾಯಿ ಮುಚ್ಚಿ, ನಿಮ್ಮಂತಹ ಅಯೋಗ್ಯರ ಮೇಲೆ ದಯೆ! ಹ್ಞು! ನಿಮ್ಮಂತಹ ಮೂರ್ಖ ಮಾಸ್ತರರಿಂದ ಹಳ್ಳಿ ಶಾಲೆ ಉದ್ಧಾರವಾಯ್ತು. ನಾಳೆಯಿಂದಲೇ ನಿಮ್ಮನ್ನು ಕೆಲಸದಿಂದ ಡಿಸ್‌ಮಿಸ್ ಮಾಡಿ ಬಿಡ್ತೇನೆ. ಮನೇಲಿ ಹಾಯಾಗಿ ಮಲಗಿ ಬಿಡಿ." ಎಂದವರೇ ಪೆನ್ನು ಪುಸ್ತಕಗಳನ್ನು ತೆಗೆದು ಅವಸರವಸರವಾಗಿ ಬರೆಯಲಾರಂಭಿಸಿದರು. ಮಾಸ್ತರರು ಏನನ್ನೋ ಹೇಳಲೆಂದು ಬಾಯಿ ತೆರೆದರು. ಆದರೆ ಅಧಿಕಾರಿಗಳ ಗಂಭೀರ ಮುಖಮುದ್ರೆ ಅವರನ್ನು ಮೌನವಾಗಿರಿಸಿತ್ತು.

ಬರೆದು ಮುಗಿಸಿದ ಮೇಲೆ ಅಧಿಕಾರಿಗಳು ತೀಕ್ಷ್ಣವಾಗಿ ಮಾಸ್ತರರತ್ತ ನೋಡಿದರು. ಆದರೆ ಅದೇಕೋ ಮಾಸ್ತರರ ಬಾಡಿದ ಮುಖದಲ್ಲಿ ಮೊದಲಿದ್ದ ಭಯದ ಛಾಯೆಯೇ ಕಾಣಿಸಲಿಲ್ಲ. ಮಾತ್ರವಲ್ಲ, ಮಾಸ್ತರರನ್ನು ಹೆದರಿಸಿಲೆಂದೇ ಮುಂದೆ ಒಂದು ಮಾತನ್ನೂ ಆಡದೆ ಧಡಧಡನೆ ಮೆಟ್ಟಲಿಳಿದ ಅಧಿಕಾರಿಯನ್ನು ಮಾಸ್ತರರು ಕರೆಯಲೂ ಇಲ್ಲ, ಕೈ ಮುಗಿದು ಕ್ಷಮೆಯಾಚಿಸಿ ಕುಳ್ಳಿರಿಸಲೂ ಇಲ್ಲ.

ಕ್ರೋಧದೊಂದಿಗೆ ವಿಸ್ಮಯವೂ ಆಗಿತ್ತು ಆ ಅಧಿಕಾರಿಗಳಿಗೆ.

ರಾಮಯ್ಯ ಮಾಸ್ತರರು ನಿಟ್ಟುಸಿರೆಳೆದು ಕುರ್ಚಿಯಲ್ಲೊರಗಿದರು. ಮಕ್ಕಳು ಕುತೂಹಲ ಮತ್ತು ಭಯದಿಂದ ಮಾಸ್ತರರ ಮುಖವನ್ನು ಪರೀಕ್ಷಿಸುತ್ತಿದ್ದರು. ಆದರೆ ನಿರ್ಲಿಪ್ತ ಮುಖ ಭಾವದಲ್ಲಿದ್ದ ಮಾಸ್ತರರಲ್ಲಿ ಭೀತಿ ಇಲ್ಲವೇ ವಿಸ್ಮಯದ ಸುಳಿವೇ ಕಾಣಿಸಲಿಲ್ಲ.

ಎಂಟು ವರ್ಷಗಳ ಹಿಂದೆ ಇದೇ ರಾಮಯ್ಯ ಮಾಸ್ತ್ರು ಶಾಲೆಯನ್ನು ಉದ್ಧರಿಸಿದ ಆದರ್ಶ ಅಧ್ಯಾಪಕರೆಂದು ಹೆಸರುಗಳಿಸಿದ್ದರು. ಆಗ ಅವರಲ್ಲಿದ್ದ ಉತ್ಸಾಹವೆಷ್ಟು? ಹಸನ್ಮುಖಿಯಾಗಿ ಉತ್ಸಾಹದಿಂದ ಪಾಠವನ್ನಾರಂಭಿಸಿದಾಗ ಮಕ್ಕಳೆಲ್ಲರೂ ಮಂತ್ರ ಮುಗ್ಧರಾಗಿ ಅಚಲರಾಗಿ ಗಂಟೆಗಟ್ಟಲೆ ಕುಳಿತು ಬಿಡುತ್ತಿದ್ದರು. ಅಂದಿನ ಪರೀಕ್ಷಾಧಿಕಾರಿಗಳು ರಾಮಯ್ಯನ ಗುಣಗಾನ ಮಾಡಿ ಬೆನ್ನು ತಟ್ಟಿ ಸಂತೋಷ ವ್ಯಕ್ತಪಡಿಸಿ ಹೋಗಿದ್ದರು.

ಆದರೆ ಇಂದು....!

ಏಕೆ ಹೀಗಾಯ್ತು?

ನೂರಾರು ತಾಪತ್ರಯಗಳು ಬೆನ್ನಿಗಂಟಿಸಿಕೊಂಡೇ ಉಪಾಧ್ಯಾಯ ವೃತ್ತಿಗಿಳಿದಿದ್ದ ರಾಮಯ್ಯ ಮಕ್ಕಳ ಭವಿಷ್ಯ ಬಂಗಾರವಾಗ ಬೇಕೆಂಬುದನ್ನೂ ಮರೆತಿರಲಿಲ್ಲ.

ಆದ್ದರಿಂದಲೇ ಅವರು ಶಾಲೆಯ ಮೆಟ್ಟಲೇರಿದೊಡನೆಯೇ ವೈಯುಕ್ತಿಕ ತೊಂದರೆ, ತಾಪತ್ರಯಗಳನ್ನು ಮರೆತು ಬಿಡುವ ದೃಢ ಚಿತ್ತವನ್ನಿರಿಸಿಕೊಂಡಿದ್ದರು.

ಆದರೂ....ಇಂದು!

ಹಿಂದಿನ ದಿನ ಇಡೀ ರಾತ್ರಿಯನ್ನೂ ಯೋಚಿಸಿ ಯೋಚಿಸಿ ಹೊರಳಾಡಿ ಬೇಸತ್ತು ನಿದ್ದೆಯಿಲ್ಲದೇ ಕಳೆದುದರ ಪರಿಣಾಮವಾಗಿ ಅವರ ದಣಿದ ದೇಹ ಮನಸ್ಸು ಅವರ ಆದರ್ಶವನ್ನು ಹುಚ್ಚುತನದ್ದನ್ನಾಗಿ ಮಾಡಿಬಿಟ್ಟಿತು.

"ಮಾಸ್ಟ್ರೇ! ಮೂರು ತಿಂಗಳ ಬಾಡಿಗೆ ಬಾಕಿ ಮಾಡಿಕೊಂಡು ಮನೇಲಿರುವಂತಿಲ್ಲ." ಹದಿನೈದು ದಿನಗಳ ಹಿಂದೆಯೇ ಮನೆ ಮಾಲಿಕ ಎಚ್ಚರಿಕೆಯನ್ನಿತ್ತಿದ್ದ.

"ನಾಳೆಯಿಂದ ಹಾಲು ತರೋಲ್ಲ ಸ್ವಾಮಿ. ದನಕ್ಕೆ ಹಿಂಡಿ ಹಾಕದೆ ಹಾಲು ಕೊಡುತ್ತದೆಯೇ? ಬೇರೆ ಕಡೆ ಸಾಟಿ ಮಾಡ್ತೇನೆ. ಎರಡು ತಿಂಗಳ ಬಾಕಿ ಕೊಟ್ಟು ಬಿಡಿ." ದೃಢವಾಣಿಯಿಂದ ಒಂದು ತಿಂಗಳ ಹಿಂದೆಯೇ ಹಾಲಿನಾಕೆ ನುಡಿದುದರ ಪರಿಣಾಮವಾಗಿ ಮೊದಲೇ ಕೃಶವಾಗಿದ್ದ ಎಳೆಯ ಮಕ್ಕಳು ಇನ್ನಷ್ಟು ಬಡಕಲಾಗಿದ್ದವು. ಕಾಫಿಯ ಕ್ರಮ ಹೇಗೂ ರದ್ದಾಗಿತ್ತು.

ಇನ್ನು ಅಂಗಡಿಯಾತ!

ವಾರದ ಹಿಂದೆಯೇ ತೀರ್ಪನಿತ್ತಿದ್ದ. ಮೂರು ತಿಂಗಳವರೆಗೂ ಮಾಸ್ತರರ ಹಣಕ್ಕಾಗಿ ಕಾದ ಉದಾರಿಗೆ ಇನ್ನೂ ಕಾಯುವುದು ಸಾಧ್ಯವೇ?

"ಬಾಕಿ ತೀರಿಸದೆ ಸಾಮಾನು ಕೊಡಲಿಕ್ಕಾಗುವುದಿಲ್ಲ ಮಾಸ್ಟ್ರೇ ಈ ವರೆಗೆ ತಾಳಿದ್ದೇ ಹೆಚ್ಚಾಯ್ತು. ಇನ್ನು ಸಾಧ್ಯವೇ ಇಲ್ಲ".

"ಆದರೆ....ಸಂಬಳ"

"ಸುಮ್ಮನಿರಿಯಯ್ಯ. ನಿಮ್ಮ ಸಂಬಳ ನಂಬಿ ನಾವೇನು ಅಂಗಡಿ ದೀವಾಳಿ ತೆಗೆಯಲಿಕ್ಕಾಗುತ್ತದೆಯೇ? ಇನ್ನು ಆ ಮಾತೆತ್ತಬೇಡಿ. ಕೇಳಿ ಕೇಳಿ ಬೇಸರ ಬಂತು" ನಿಜ. ರಾಮಯ್ಯನಿಗೂ ಹೇಳಿ ಹೇಳಿ ಅದಕ್ಕಿಂತಲೂ ಹೆಚ್ಚಿನ ಬೇಸರವಾಗಿತ್ತು. ಆದರೆ ಬಡ ಮಾಸ್ತರರ ಬೇಸರಕ್ಕೆಲ್ಲಿಯ ಬೆಲೆ? ಎಂದೇ ನಿರೀಕ್ಷಿಸಿದ ಸಂಬಳ ಕೈ ಸೇರಲೇ ಇಲ್ಲ. ಕಾರಣವೇನೋ ಹಲವಾರು....ಅದು ರಾಮಯ್ಯನಿಗೇ ತಿಳಿಯದು ತಿಳಿದರೂ ಆ ಕಾರಣವನ್ನು ಕೇಳುವ ತಾಳ್ಮೆ ಸಾಲಕೊಟ್ಟವರಿಗಿದ್ದರೆ ತಾನೆ? ತೊಂಭತ್ತು ರೂಪಾಯಿಗಳಿಂದ ಒಂಭತ್ತು ಜನರ ಸಂಸಾರವನ್ನು ನಡೆಸ ಬೇಕಾಗಿದ್ದ ರಾಮಯ್ಯನಲ್ಲಿ ಆಪತ್ಕಾಲಕ್ಕೆ ಹಣ ಉಳಿಸುವ ಯೋಚನೆಗಂತೂ ಎಡೆಯೇ ಇರಲಿಲ್ಲ.

ಸಾಲ....ಸೋಲು....ಬಾಕಿ....ಕಡ...

ಆದರೆ ಸಂಬಳವೇ ಬಾಕಿ!

ಅಳುವ ಮಕ್ಕಳು, ಗೋಳಿಡುವ ಹೆಂಡತಿ, ಬುದ್ಧಿ ಹೇಳುವ ನೆವದಿಂದ ರಗಳೆ ಮಾಡುವ ಮುದುಕಿ ತಾಯಿ...

ಇವರನ್ನೆಲ್ಲ ಸಂತೈಸುವ ದಾರಿ?

ಎರಡು ದಿನಗಳ ಹಿಂದೆ ಸಾಮಾನಿಗೆಂದು ಹೋದ ರಾಮಯ್ಯನನ್ನು ಕಟುವಾಗಿ ಟೀಕಿಸಿ ಅಂಗಡಿಯಾತ ಬರಿಗೈಯಲ್ಲೇ ಮನೆಗೆ ಕಳುಹಿಸಿದ್ದ.

ಸಿಕ್ಕಿದಷ್ಟು ಕಡೆ ಸಿಕ್ಕಷ್ಟು ಕೈಗಡವೆಂದು ತೆಗೆದು ಕೊಂಡುದಾಗಿತ್ತು.

ಹಿಂದಿನ ದಿನವಷ್ಟೇ ಎಲ್ಲಿಂದಲೋ ಎರಡು ಸೇರು ಅಕ್ಕಿ ತಂದು ಮಕ್ಕಳಿಗೆ ಗಂಜಿಯ ದಾರಿ ತೋರಿಸಿ ತಾನು ಹಸಿವಿಲ್ಲವೆಂದು ಉಪವಾಸವೇ ಮಲಗಿ ಕೊಳಲಾದುದಾಗಿತ್ತು.

ಹಸಿವೆಯೋ... ಯೋಚನೆಯೋ.. ಅಂತೂ ರಾತ್ರಿ ಇಡೀ ನಿದ್ದೆ ಬಂದಿರಲಿಲ್ಲ.

ಆದರೂ ಮಾರುದಿನ ಶಾಲೆಗೆ ಬರಲೇಬೇಕಾಗಿತ್ತು. ಇಂದಿನ ಊಟದ ದಾರಿ ಹೊಳೆದಿರಲಿಲ್ಲ.

ನಿರೀಕ್ಷಿಸಿದ ಸಂಬಳ ನಿರಾಸೆಯನ್ನೇ ತಂದೊಡ್ಡಿತ್ತು.

ಏನಯ್ಯಾ, ಮಾಸ್ತ್ರೇ....ನಿಮ್ಮ ಸಂಬಳ ವರ್ಷಕ್ಕೊಮ್ಮೆ ಕೊಡ್ತಾರೋ ಅಂತ, ಈ ವ್ಯಂಗ್ಯವಾಗಿ ಕೇಳುವ ಕುಹಕ ನುಡಿಗಳಗೇನೂ ಕೊರತೆಯಿರಲಿಲ್ಲ.

ಆದರೆ ಆ ವ್ಯಂಗಕ್ಕೆಲ್ಲ ಉತ್ತರ ಕೊಡುವ ಧೈರ್ಯ ಸಾಹಸ ಮಾಸ್ತರರಿಗಿತ್ತೆ?

(೧೧ನೇ ಪುಟ ನೋಡಿರಿ)



ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5

2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ

3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಛೇರಿ: ಉಡುಪಿ, ದ. ಕನ್ನಡ

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

(ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ)

ಸ್ವದೇಶ ರೂ. ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಕೆಂಪು ಚೀನಾದ ನೀತಿ

ಕಲಾವಿದನೊಬ್ಬನಿಗೆ ಗಡೀಪಾರು

ಪೆಕಿಂಗಿನಲ್ಲಿ ಚೈನಿ ಬರಹಗಾರರ ಸಂಘವಿದೆ. ಅದರ ಸಮಿತಿಯವರು ೧೯೫೭ರಲ್ಲಿ ಒಂದು ಪುಸ್ತಕವನ್ನು ಪ್ರಕಟಿಸಿರುವರು. ಆ ಪುಸ್ತಕದಲ್ಲಿ ಅರುವತ್ತನಾಲ್ಕು ಕವಿಗಳ ಕವಿತೆಗಳಿವೆ. ಈ ಕವಿಗಳು ರಾಷ್ಟ್ರೀಯ ಅಲ್ಪ ಸಂಖ್ಯಾಕರ ಪ್ರತಿನಿಧಿಗಳಿರುವರು. ಅದರಲ್ಲಿ ಮೊದಲ ಕವಿತೆಯು "ಪೆಕಿಂಗಿನಲ್ಲಿ ಪೆಶ್ಲೊಂದ, ನಾ ಕಂಡೆ" ಎಂಬುದರಿಂದ ಆರಂಭವಾಗುತ್ತದೆ. ಅದನ್ನು ಬುಖಾರ ಟೈಶ್ಕಾಂಬಾಯೆವ್ ಬರೆದಿರುವರು. ಅವರು ಕುಲ್‌ಡ್ಜಾದ ಕಝಾಕರು.

ಟೈಶ್ಕಾಂಬಾಯೆವ್ ಚಿತ್ರ ಕಥೆಗಾರರೆಂದೂ ಪಶ್ಚಿಮ ಚೈನಾದಲ್ಲಿ ಪ್ರಖ್ಯಾತರಾಗಿರುವರು. "ಶಾಸನ ಹಾಗೂ ಜವಿಲಾ" ಚಲಚಿತ್ರಕ್ಕೆ ಅವರೆ ದೃಶ್ಯಗಳನ್ನು ಬರೆದಿರುವರು. ಇತ್ತೀಚೆಗೆ ಸೋವಿಯತ್ ಯೂನಿಯನ್ನಿನಲ್ಲಿರುವ ಕಝಾಕಸ್ತಾನದ ಬರಹಗಾರರ ಬಳಗಕ್ಕೆ ಅವರನ್ನು ಸೇರಿಸಿಕೊಳ್ಳಲಾಗಿರುತ್ತದೆ.

ಲಿಟರೇಚರ್‌ನಯಾ ಗಝೆಟಾದ [ಸೋವಿಯಟಿನ ಸಾಹಿತ್ಯ ಪತ್ರಿಕೆಯ] ವರದಿಗಾರನು ಟೈಶ್ಕಾಂಬಾಯೆವರನ್ನು ಇತ್ತೀಚೆಗೆ ಭೇಟಿಯಾಗಿರುವನು. ಅವರು ಚೈನಾದಿಂದೇತಕ್ಕೆ ಹೊರಬಂದಿರುವರೆಂಬುದನ್ನು ಭೇಟಿಯ ಸಮಯದಲ್ಲಿ ಆ ವರದಿಗಾರನು ಕೇಳಿ ತಿಳಿದುಕೊಂಡಿರುವನು. ಅವರ ಕಥೆ ಈ ರೀತಿ ಇದೆ:—

"ಟೈಶ್ಕಾಂಬೆಯೆವ್‌ರ ಕುಟುಂಬವು ಬಹಳ ಸಮಯದಿಂದ ಚೈನಾದಲ್ಲೇ ವಾಸಿಸಿಕೊಂಡಿತ್ತು. ಅವರ ಶೈಶವ ಹಾಗೂ ತಾರುಣ್ಯಾವಸ್ಥೆಯ ಅನುಭವಗಳೆಲ್ಲ ಚೈನಾಕ್ಕೆ ಸಂಬಂಧಪಟ್ಟದ್ದೇ ಆಗಿವೆ. ಅವರು ಅತಿ ಬಡವರಾಗಿದ್ದರು. ಕುಟುಂಬಕ್ಕೆ ಸಹಾಯ ಮಾಡಲಿಕ್ಕಾಗಿ ಅವರು ಆಗಲೇ ದುಡಿಯಲಾರಂಭಿಸಿದ್ದರು. ಅದೇ ಸಮಯದಲ್ಲಿ ಶಾಲೆಗೂ ಹೋಗುತ್ತಿದ್ದರು. ಕುಲ್‌ಡ್ಜಾದಲ್ಲಿ ಏಳು ವರ್ಷ ವಿದ್ಯಾಭ್ಯಾಸ ಮುಗಿಸಿದ ಮೇಲೆ ಉರುಮ್ಚಿಯಲ್ಲಿ ಶಿಕ್ಷಕರ ಶಿಕ್ಷಣವನ್ನು ಮುಗಿಸಿ ೧೯೪೫ರ ವರೆಗೆ ಶಾಲಾ ಉಪಾಧ್ಯಾಯರಾಗಿ ಅವರು ಕೆಲಸ ಮಾಡುತ್ತಿದ್ದರು. ಅಲ್ಲದೆ, ಕುಮಿಟಾಂಗಿಗಳ ವಿರುದ್ಧವೂ ಹೋರಾಡುತ್ತಿದ್ದರು. ಶಾಲೆಯಲ್ಲಿ ಪಾಠ ಹೇಳಿಕೊಡುತ್ತಿದ್ದಾಗಲೇ ಅವರನ್ನು ಕುಮಿಂಟಾಂಗ್ ಸರಕಾರವು ಸೆರೆಹಿಡಿಯಿತು. ಅಲ್ಲಿಂದ ಅವರನ್ನು ಕಾರಾಗೃಹಕ್ಕೆ ಕಳುಹಿಸಲಾಯಿತು. ಕುಮಿಟಾಂಗ್ ಕಾರಾಗೃಹದಲ್ಲಿ ಅವರು ಎರಡು ವರ್ಷ ಕಾಲ ಇದ್ದರು. ರಷ್ಯನ್ ಕಮ್ಯುನಿಸ್ಟರ ಕೆಂಪು ಕಾಲಿನ ಚಲ್ಲಾಳಿಗಳೆಂದು ಆಗ ಅವರನ್ನು ಅಪಮಾನಗೊಳಿಸುತ್ತಿದ್ದರು.

ಅವರಿನ್ನು ಬದುಕಿರುವುದು ಅದು ವೈದ್ಯರ ಕೃಪೆಯಿಂದ. ಅಲ್ಲಿಗೆ ಬಂದಿದ್ದ ಅಂತಾರಾಷ್ಟ್ರೀಯ ರೆಡ್‌ಕ್ರಾಸ್ ಸಂಸ್ಥೆಯ ವೈದ್ಯರೇ ಅವರನ್ನು ಕಾಪಾಡಿದ್ದು. ಅವರು ಯಾವ ಕಾರಣಕ್ಕಾಗಿ ಕಾಪಾಡಿದ್ದಾರೋ ಅದರ ಜಯವಾದಾಗಲೇ ಅವರಿಗೆ ಬಂಧವಿಮೋಚನೆಯಾಯಿತು.. ಅವರ ಕ್ರಾಂತಿಗೆ ಮೂರು ಜಿಲ್ಲೆಗಳ ಕ್ರಾಂತಿಯೆಂದು ಹೆಸರು ಸಿಕ್ಕಿತ್ತು. ಪೂರ್ವ ತುರ್ಕಿಸ್ತಾನದ ಹಂಗಾಮಿ ಸರಕಾರದ ಸ್ಥಾಪನೆಯೂ ಆಯಿತು. ಆಗ ಅವರನ್ನು ಟೊಂಕೆರಿಸ್ ಓಯಿ [ಕ್ರಾಂತಿಕೇತು] ಪತ್ರಿಕೆಯ ಮುಖ್ಯ ಸಂಪಾದಕರಾಗಿ ನೇಮಿಸಲಾಯಿತು. ೧೯೪೯ರಲ್ಲಿ ಮಾವೋತ್ಸೆ-ಟುಂಗರು ಅವರ ಕ್ರಾಂತಿಯನ್ನು ಸ್ವಾಗತಿಸುತ್ತ ಅದು ಅಖಿಲ ಚೈನೀ ಕ್ರಾಂತಿಯ ಅಂಗವೆಂದು ಸಾರಿದರು. ಆದಾಗ್ಯೂ, ೧೯೫೦ರಲ್ಲಿ ಪೂರ್ವ ತುರ್ಕಿಸ್ತಾನದ ಹಂಗಾಮಿ ಸರಕಾರವನ್ನು ಕೊನೆಗಾಣಿಸಲಾಯಿತು. ಆಗ ಅವರ ದೇಶವು ಚೈನಾದ ಒಂದು ಪ್ರಾಂತ್ಯವಾಗಿ ಬಿಟ್ಟಿತು. ಕುಲ್‌ಡ್ಜಾದಲ್ಲಿದ್ದ ರಾಜಧಾನಿಯನ್ನು ಉರುಮ್ಚಿಗೆ ಬದಲಾಯಿಸಲಾಯಿತು. ಅಂತೆಯೇ ಅವರ ಪತ್ರಿಕಾ ಕಾರ್ಯಾಲಯವನ್ನು ಬದಲಾಯಿಸಬೇಕಾಯಿತು.

ಪಕ್ಕದ ಪ್ರದೇಶಗಳಲ್ಲಿರುವ ಪ್ರಜೆಗಳಲ್ಲಿ ಹಲವಾರು ರೀತಿಯ ಯೋಚನೆಗಳನ್ನು ತುಂಬಿಸಿ ತಮ್ಮ ಕೆಲಸವನ್ನು ಕಮ್ಯೂನಿಸ್ಟರು ಮಾಡಿಸಿಕೊಳ್ಳುವ ರೀತಿಯನ್ನು ಇಲ್ಲಿ ಕಾಣಬಹುದು. ರಷ್ಯಾವೂ ಡಿದ್ದಾದರೂ ಅದೇ. ಹಂಗೇರಿ, ಪೋಲೆಂಡುಗಳಲ್ಲಿ...ಅವರು ಮಾಡಿದ್ದೇನು? ಅದನ್ನೇ ಇಂದು ಚೈನೀಯರು ಮುಂದರಿಸುತ್ತಿದ್ದಾರೆ. ಕ್ರಾಂತಿಯ ನೆವದಲ್ಲಿ ತಮ್ಮ ಧ್ವಜವನ್ನು ಹಾರಿಸುವುದೇ ಅವರ ಉದ್ದೇಶವಿರುತ್ತದೆ.

"ಕಝಾಕರ ರಾಷ್ಟ್ರೀಯ ಗೀತೆ ಹಾಗೂ ನೃತ್ಯವನ್ನು ಹೇಗೆ ಸೇರಿಸಿಕೊಳ್ಳಲಾಯಿತೆಂಬುದರ ಕುರಿತು ಬುಖಾರಾ ಟೈಶ್ಕಾಂಬಾಯೆವ್ ವಿವರಗಳನ್ನಿತ್ತಿರುವರು. ಅದರ ಸಂಪಾದಕ ಸಂಪುಟದಲ್ಲಿ ಅವರೂ ಇದ್ದರು. ಅನಂತರ ಸಿಂಕಿಯಾಂಗ್—ಉಯಿಗುರ್ ಸ್ವಾಯತ್ತಾಧಿಕಾರದ ಜಿಲ್ಲೆಯ ಸಾಂಸ್ಕೃತಿಕ ವಿಭಾಗವನ್ನು ತೆರೆಯಲಾಯಿತು. ಆ ವಿಭಾಗದ ಉಪ-ಮುಖ್ಯಾಧಿಕಾರಿಯನ್ನಾಗಿ ಟೈಶ್ಕಾಂಬಾಯೆವರನ್ನು ನೇಮಿಸಲಾಗಿತ್ತು. ಅನಂತರ ಅವರು ಚೈನಾದಲ್ಲಿ ಅಂತಹ ಅನೇಕ ಹುದ್ದೆಗಳಲ್ಲಿದ್ದರು. ಸಿಂಕಿಯಾಂಗ್- ಉಯಿಗರ್ ಸ್ವಾಯತ್ತಾಧಿಕಾರ ಜಿಲ್ಲೆಯ ಹಾಗೂ ಇಲಿ-ಕಝಾಕ್ ಸ್ವಾಯತ್ತಾಧಿಕಾರ ಜಿಲ್ಲೆಯ ಪ್ರಜಾಪಂಪತ್ತಿಗೆ ಅವರನ್ನು ಎರಡು ಸಲ ಆರಿಸಲಾಗಿತ್ತು.

ಉರುಮ್ಚಿಯಲ್ಲಿ ಚೈನೀ ಬರಹಗಾರರ ಬಳಗದ ಸ್ಥಾನೀಯ ಶಾಖೆಯನ್ನು ೧೯೫೬ರಲ್ಲಿ ಆರಂಭಿಸಿದಾಗ ಟೈಶ್ಕಾಂಬಾಯೆವರನ್ನು ಉಪಾಧ್ಯಕ್ಷನಾಗಿ ಚುನಾಯಿಸಲಾಗಿತ್ತು.

ಆಪ್ಟರಲ್ಲಿ ಅವರ ದೇಶವು ಬಹಳ ಬದಲಾವಣೆಗಳಿಗೊಳಗಾಯಿತು. ಸಹಕಾರೀ ಆರ್ಥಿಕ ವ್ಯವಸ್ಥೆಯು ಚೆನ್ನಾಗಿ ಫಲವನ್ನಿತ್ತಿತು. ಹಾಗೆಯೇ ಜನತೆಯ ಜೀವನ ಸ್ಥಿತಿಯು ಅಭಿವೃದ್ಧಿ ಹೊಂದಿತ್ತು. ಉಯಿಗುರ್, ಕಝಾಕ್ ಮತ್ತು ಕಿರ್ಗಿಜ್ ಭಾಷೆಗಳಲ್ಲಿ ಅಲ್ಲದೆ, ಪಶ್ಚಿಮ ಚೈನಾದಲ್ಲಿ ವಾಸಿಸುತ್ತಿರುವವರ ಭಾಷೆಗಳಲ್ಲಿ ಸಾಹಿತ್ಯ ಬೆಳೆಯಲಾರಂಭಿಸಿತು. ಅವರಿಗೆ ಸೋವಿಯಟ್ ಒಕ್ಕೂಟದಿಂದ ಪುಸ್ತಕಗಳು, ಪಠ್ಯಪುಸ್ತಕಗಳು, ಪತ್ರಿಕೆಗಳೂ ಬರುತ್ತಿದ್ದವು. ಅಲ್ಲಿನ ಗದ್ದೆಗಳಲ್ಲಿ ಸೋವಿಯಟ್ ಟ್ರೇಕ್ಟರುಗಳು ಕಂಡು ಬರುತ್ತಿದ್ದವು. ....ಸಮಾಚಾರ ಪತ್ರಿಕೆಗಳನ್ನು ಹಾಗೂ ಸಾಹಿತ್ಯಗಳನ್ನು ದಿನಸಾಗಲೂ ಅವರು ಒಕ್ಕೂಟದೊಂದಿಗೆ ಬದಲಾಯಿಸಿಕೊಳ್ಳುತ್ತಿದ್ದರು.

"ಅವರ ಪೂರ್ಣ ಕುಟುಂಬವು ಹೊಸ ಜೀವನದಲ್ಲಿ ಬಹಳ ಸಂತೋಷದಿಂದ ಸ್ವಾಗತಿಸಿತು. ಅವರೆಲ್ಲರೂ ಚೆನ್ನಾಗಿ ಕಷ್ಟಪಟ್ಟು ದುಡಿಯುತ್ತಿದ್ದರು. ಅವರ ಕುಟುಂಬದಲ್ಲಿ ಹಿರಿಯಾಕೆಯೆಂದರೆ ಅವರ ಹೆಂಡತಿಯ ತಾಯಿ. ಆಕೆ ಉಪಾಧ್ಯಾಯಿನಿಯಾಗಿದ್ದು ನಿವೃತ್ತಿ ಹೊಂದಿದ್ದಳು. ನವಜೀವನ ಆರಂಭವಾದೊಡನೆ ಆಕೆ ಪುನಃ ವೃತ್ತಿಗೆ ತೆರಳಿದಳಲ್ಲದೆ ನವಜೀವನದ ಪ್ರಚಾರಕಳಾಗಿ ಬಿಟ್ಟಳು. ಅನೇಕ ಬಾರಿ ಆಕೆಯನ್ನು ಜನತಾ ಪ್ರತಿನಿಧಿಗಳ ಅಖಿಲ ಚೈನೀಯ ಸಭೆಗಳಿಗೂ ಕಳುಹಿಸಲಾಗಿತ್ತು.

ಎಲ್ಲವೂ ಚೆನ್ನಾಗಿ ನಡೆಯುವಂತೆ ಕಂಡುಬರುತ್ತಿತ್ತು. ಆದರೆ ಆಗ, ಬೇಸಿಗೆಯಲ್ಲಿ, ಅವರ ತರಗತಿಗಳಲ್ಲಿದ್ದ ಪುಸ್ತಕ್ನ್‌. ಅಬ್ಬಾ ಮುಂತಾದ ಬರಹಗಾರರ ಹಾಗೂ ಕವಿಗಳ ಭಾವಚಿತ್ರಗಳಲ್ಲೊ ಹರಿದೊಗೆಯಲು ಆಜ್ಞೆ ಬಂದು, ಹಾಗೆ ಘಟಿಸಿ ಹೋಯಿತು. ಸಂಗತಿ ಏನೆಂದು ವಿಚಾರಿಸಲು ಟೈಶ್ಕಾಂಬಾಯೆವ್ ಇತರ ಕೆಲ ಉಪಾಧ್ಯಾಯರೊಂದಿಗೆ ಪಕ್ಷದ ಕಾರ್ಯಾಲಯಕ್ಕೆ ಹೋದರು. ಆದರೆ ಅವರಿಗೆ ಅಲ್ಲೇನೂ ಅಂತಹ ವಿವರಗಳು ದೊರಕಲಿಲ್ಲ. ಅನಂತರ ವೈಯಕ್ತಿಕ ಪರೀಕ್ಷೆಗಾರಂಭವಾಯಿತು. ವ್ಯಕ್ತಿಗತ ವಿವರಗಳನ್ನು ಸಂಗ್ರಹಿಸುವದಕ್ಕೆ ಬಹಳ ಸಮಯ ತಾಗುತ್ತಿತ್ತು. ವರ್ಷದ ಆಖೈರಿಯಲ್ಲಿ ಇನ್ನೂ ಕೆಲ ದುರ್ಘಟನೆಗಳು ನಡೆದವು. ಆವು ವರೆಗೂ ಇದ್ದ 'ರಾಷ್ಟ್ರೀಯ ಅಲ್ಪ ಸಂಖ್ಯಾಕರ' ಬಹು ಮಂದಿ ಪ್ರತಿನಿಧಿಗಳನ್ನು "ಪುನರುಜ್ಜೀವಕ" "ರಾಷ್ಟ್ರೀಯ" ಮುಂತಾದ ವಿವರಗಳ ಮೇಲೆ ಪದವಿಯಿಂದ ಬಿಡುಗಡೆಗೊಳಿಸಿ ಕಾರಾಗೃಹಗಳಿಗೆ ಕೆಲವರನ್ನೂ, ಉಳಿದವರನ್ನು ಕಾರ್ಮಿ

(೧೦ನೇ ಪುಟ ನೋಡಿರಿ)

ಪ್ರೊ. ಕು. ಹರಿದಾಸ ಭಟ್ಟ, ಎಂ.ಎ.,
ಅವರ ನವೀನ ಪುಸ್ತಕಗಳು

	ರೂ.ನ.
ನಡುಹಗಲಿನ ಕಗ್ಗತ್ತಲೆ	2=50
ಸ್ವಾತಂತ್ರ್ಯ ಮತ್ತು ಸಂಸ್ಕೃತಿ	2=00
ಘಂಟವಸೂರಾ	2=00
ಐಶ್ವದ ಸಂಪತ್ತು	2=00
ಅಮೆರಿಕದ ಆರು ಕತೆಗಳು	1=75
ವರ್ತಮಾನಕಾಲದ	
ನಾಲ್ವರು ಮಹಾನುಭಾವರು	0=31
ಯುಗವಾಣಿ	0=50
ಕಾಲವೇ ಬದಲಾಗಿದೆ	0=31
ಪುಸ್ತಕ ಪುರಾಣ	0=25
ಮನೆಯೊಳಗಿನ ಮಹಾಜೀವಿಗಳು	0=37

ಅಂಚೆವೆಚ್ಚ ಪ್ರತ್ಯೇಕ. ವಿವರವಾದ ಕೆಟಲಾಗಿಗೆ 10 ನ. ಪೈ. ಸ್ಟಾಂಪಿನೊಂದಿಗೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ

ಮತ್ತೊಂದು ಆಕರ್ಷಣೀಯ
ಉಳಿತಾಯ ಯೋಜನೆ
ರೆಕರಿಂಗ್
ಡಿಪಾಸಿಟ್ ಸ್ಕೀಮ್
ವಿಶೇಷ ಸೌಲಭ್ಯಗಳು :
- ಮಾಹೆಯಾನ ರೂ. 5/- ರಿಂದ ರೂ. 500/- ವರೆಗಿನ ಕಂತು ಕಟ್ಟುವ ರೆಕರಿಂಗ್ ಡಿಪಾಸಿಟ್ ಖಾತೆಯನ್ನು ನೀವು ತೆರೆಯಬಹುದು
- ರೆಕರಿಂಗ್ ಡಿಪಾಸಿಟ್ ಸ್ಕೀಮಿನ ಅವಧಿಗಳು- 12, 24, 36, 46 ಮತ್ತು 60 ತಿಂಗಳುಗಳು
- ತಡವಾಗಿ ಕಟ್ಟಿದ ಕಂತುಗಳಿಗೆ ದಂಡವೇನೂ ಕೊಡಬೇಕಾಗಿಲ್ಲ
- ವರ್ಷಕ್ಕೆ ಚಕ್ರಬಡ್ಡಿ 4½%

ಹೆಚ್ಚಿನ ವಿವರಗಳನ್ನು ನಿಮ್ಮ ಸಮೀಪದ ಶಾಖೆಯಲ್ಲಿ ಪಡೆಯಿರಿ
ಕೆನರಾ ಬ್ಯಾಂಕ್ ಲಿಮಿಟೆಡ್
ಸ್ಥಾಪನೆ : 1906
ಸಮಗ್ರ ಸೇವೆ : : ಸಂಪೂರ್ಣ ಭದ್ರತೆ
ರಜಿಸ್ಟರ್ಡ್ ಆಫೀಸ್: ಮಂಗಳೂರು ಆಡಳಿತ ಕಛೇರಿ: ಬೆಂಗಳೂರು

ಗೇಹ ರಾಜ್ಯದಲ್ಲಿ

ಆರಿದ ದೀಪದ ಸ್ಥಾನ ಪೂರ್ತಿ

"ಹೋಯ್ತು....ಹೋಯ್ತು ಕಣೇ.... ಆರಿಯೇ ಹೋಯ್ತು..."

"ಏನಂತೆ ಅದು? ಆರಿ ಹೋದುದಾದರೂ ಏನು? ಬರುವಾಗ ಕೇಂಡಲ್ ತಂದಿದ್ದೀರಾ ಮತ್ತೆ ಆರಿ ಹೋಗಲಿಕ್ಕೆ...."

"ಅಲ್ವೇ, ದೀಪವೇ ಆರಿಹೋಯ್ತೂಂದೆ...."

"ಅದನ್ನೇ ನಾನು ಕೇಳ್ತಿರೋದು? ಏನು, ಬ್ಯಾಟ್ರಿ ಕೈಯಲ್ಲಿ ಹಿಡಿದುಕೊಂಡೇ ಅಂತೀರಲ್ಲಾ, ದೀಪ ಆರಿ ಹೋಯ್ತೂಂತ. ಮೊನ್ನೆ ತಾನೇ ಹೊಸ ಸೆಲ್ ಹಾಕ್ತಿದೆ ಅಂದ್ರಿ...."

"ಬ್ಯಾಟ್ರಿ ಅಲ್ವೇ ದೀಪ ಆರಿ ಹೋಯ್ತೂಂದೆ..."

"ಅಲ್ಲ, ಬ್ಯಾಟ್ರಿ ಇರೋವಾಗ ದೀಪವನ್ನಾದ್ರೂ ಯಾಕೆ ತಂದ್ರೀಂತ. ಇರ್ಲಿ, ಕೇಂಡಲ್ ಆರಿ ಹೋದ್ರೆ ಹೋಗ್ಲಿ, ಅದ್ಕೆಲ್ಲಾ ಯಾಕಂತೆ ಇಷ್ಟು ರಂಪಾಟ... ಹೇಗೂ ಮನೆ ಜಗಲಿ ಹತ್ತಿದ್ರಲ್ಲಾ...."

"ಕೇಂಡ್ಲ್ ಅಲ್ಲ ಕಣೇ, ನಮ್ಮ ದೀಪ ಆರಿ ಹೋಯ್ತೂಂದ್ರೆ..."

"ಅಂದ್ರೆ...ನನಗೊಂದೂ ಅರ್ಥವೇ ಆಗೋಲ್ಲ. ಯಾವದೀಪ? ಬೀದಿ ದೀಪ ಆರಿ ಹೋಯ್ತೂಂತ್ಲೆ? ಹೋಗ್ಲಿ ಬಿಡಿ ಅದು ಆದ್ಕೆಲ್ಲಾ ಯಾಕೆ ಅಳ್ಬೇಕೂಂತ. ಏನೋ ಇಲೆಕ್ಟ್ರಿಕ್ ಕಂಪ್ನಿಯವರಿಗೆ ದೀಪ ಆರ್ಸೋ ಮನಸ್ಸಾಯ್ತು, ಆರ್ಸಿಕೊಂಡ್ರು...."

"ಅದೂ ಅಲ್ಲ...."

"ಮತ್ಯಾವ ದೀಪ ಅದು?"

"ದೀಪ, ದೀಪ, ನಮ್ಮ ಇತಿಹಾಸಾಕಾಶದಲ್ಲಿ ಉಜ್ವಲವಾಗಿ ಹೊಳೆಯುತಿದ್ದ ದೀಪ, ತಿಳಿಯಿತೇ?

"ಅಲ್ಲಾ, ಒಗಟಿನಂತೆ ನೀವು ಆಡ್ತಿದ್ರೆ ನಂಗೆ ಅದು ಹೇಗೆ ಗೊತ್ತಾಗ್ಬೇಕೂಂತ."

"ನಮ್ಮ ನಾಡಿನ ಇತಿಹಾಸ ಬರೆದಿರೋ ಸಂಶೋಧಕರು ಈ ಲೋಕ ಬಿಟ್ಟು ಹೋದ್ರಂತೆ ನೋಡು..."

"ಓ, ಹಾಗೋ........ಅಲ್ಲ, ಯಾರವ್ರೂಂತ...."

"ಅವ್ರೇ ಡಾಕ್ಟರ್ ಸಾಲೆತ್ತೂರೂಂತ...."

"ಸಾಲೆತ್ತೂರು ಅಂದ್ರೆ ನಮ್ಮ ತುಳು ನಾಡಿನ ಇತಿಹಾಸವನ್ನ ಬರೆದವ್ರು ಅಲ್ವೆ"

"ಹೌದು ಹೌದು ಅವ್ರೆ. ಅವ್ರ ಹೆಸ್ರು ನಿನ್ಗೂ ಗೊತ್ತಿದೆ ನೋಡು..."

"ಮೊನ್ನೆ ಒಂದು ಪುಸ್ತಕ ನೋಡಿದೆ, ಉಡುಪಿಯ ಎಂ. ಜಿ. ಎಂ. ಕಾಲೇಜಿನ ಪ್ರೊ| ಗುರುರಾಜ ಭಟ್ಟರು ಬರೆದ ಸಂಶೋಧನಾತ್ಮಕ ಗ್ರಂಥ. ಅದ್ರಲ್ಲಿ ಇವ್ರ ಹೆಸ್ರು ಇತ್ತು."

"ಮತ್ತೆ ನೀನು ಕನ್ನಡ ಸಾಹಿತ್ಯ ಪರಿಷತ್ತಿನವ್ರು ಪ್ರಕಟಿಸಿದ ಕನ್ನಡ ನಾಡಿನ ಚರಿತ್ರೆಯನ್ನು ಓದ್ಲಿಲ್ವೆ....ಅದ್ರಲ್ಲೂ...."

"ಹೌದು, ಹೌದು, ಅದ್ರೆ, ಅದನ್ನ ಓದಿದ್ದು ಯಾವಾಗ? ವರ್ಷ ಕೆಲವು ಕಳೆದು ಹೋಯ್ತು.... ಅಲ್ಲಾ, ಅವ್ರ ಪೂರ್ಣ ಹೆಸ್ರು ಏನಂತೆ...."

"ಭಾಸ್ಕರ ಆನಂದರಾವ್ ಸಾಲೆತ್ತೂರು...."

"ಅವ್ರು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯವ್ರು ಅಲ್ವೆ?"

"ಸರಿ. ಅವ್ರ ವಿದ್ಯಾಭ್ಯಾಸ ನಡೆದದ್ದು ಮದ್ರಾಸ ವಿಶ್ವವಿದ್ಯಾಲಯದಲ್ಲಿ. ಮತ್ತೆ ಡಾಕ್ಟರೇಟ್ ಪಡೆದದ್ದು ಲಂಡನ್ ಮತ್ತು ಜರ್ಮನಿಯ ಗೀಸನ್ ವಿಶ್ವವಿದ್ಯಾಲಯಗಳಲ್ಲಿ "

"ಆ ಮೇಲೆ, ಉದ್ಯೋಗ ಪ್ರಾರಂಭಿಸಿದ್ದು...."

"ಮೊದಲಿಗೆ ಇಲ್ಲಿಯೇ ಒಂದು ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿದ್ದರು.

"ಮುಂದೆ...?"

"ಪುಣೆ ಮತ್ತು ದೆಹಲಿಯಲ್ಲಿ ಪ್ರಾಧ್ಯಾಪಕರಾಗಿ,ಡೈರೆಕ್ಟರರಾಗಿ ದುಡಿದರು.ಅಲ್ಲಿಂದ ಮತ್ತೆ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸೇರಿಕೊಂಡರು."

"ಪ್ರಾಯಃ ಅವ್ರು ಇತಿಹಾಸ ಪ್ರಾಧ್ಯಾಪಕರಾಗಿ ದ್ರೂಂತ ತೋರುತ್ತೆ."

"ಅದರೊಂದಿಗೆ ಪ್ರಾಚ್ಯ ವಸ್ತು ಸಂಶೋಧನಾ ಶಾಖೆಯ ಡೈರೆಕ್ಟರರೂ ಆಗಿದ್ದರು...."

"ಸರಿಯಪ್ಪ, ಅವ್ರ ಆಯುಷ್ಯವೇ ಇತಿಹಾಸಾಧ್ಯಯನದಲ್ಲಿ, ಅದರ ಸಂಶೋಧನೆಯಲ್ಲಿ ಕಳೆದಿದೆ ಅನ್ನುವಾಗ .."

"ಸಂಶೋಧನೆ ಮಾಡಿದ್ದು ಮಾತ್ರವಲ್ಲ ಅವ್ರು ಅನೇಕ ಕೃತಿಗಳನ್ನೂ ರಚಿಸಿದ್ದಾರೆ; ತುಳು ನಾಡಿನ ಹಾಗೂ ಕರ್ನಾಟಕದ ಇತಿಹಾಸದ ಮೇಲೆ ಸರಿಯಾದ ಬೆಳಕು ಹರಡಿದ ಉಜ್ವಲ ತಾರೆಯವರು..."

"ಸರೀನ್ನಿ. ಸಂಶೋಧನೆ ಮಾಡಿದ ಮೇಲೆ ಅದನ್ನ ಪ್ರಕಾಶಕ್ಕೆ ತರಲೇ ಬೇಕು ತಾನೆ? ಅವ್ರು ಮಾಡಿದ ಮುಖ್ಯ ಸಂಶೋಧನೆಗಳಾದ್ರೂ ಯಾವುವೂಂತ..."

"ಇರ್ಲಿ ಬಿಡು, ಅದನ್ನೆಲ್ಲಾ ತಿಳ್ಕೊಂಡು ನಿನಗೇನು ಆಗ್ಬೇಕಾಗಿದೆ.?"

"ನೋಡಿ, ನಿಮ್ಮ ಗಂಡಸ್ರ ಸ್ವಾರ್ಥ.... ಅಲ್ಲ, ಅವ್ರ ಕಥೆ ಹೇಳಿದ್ರಿ ನೀವು; ಆ ಕಥೆಯಿಂದ ನನಗೆ ಆಗ್ಬೇಕಾದ್ದೂ ಏನೂಂತ........"

"ಏನೋ ಸುದ್ದಿ ತಿಳೀತು, ಹೇಳ್ಬಿಡೋಣಾಂತ ಅಂದೆ ಅಷ್ಟೆ...."

"ಇದ್ನ ಹೇಳೋದಕ್ಕಿಂತ ನಿಮ್ಗೆ ಮತ್ತೇನಾದ್ರೂ ಹೇಳ್ಬರ್ದಿತ್ತೆ? ಬೆಂಗ್ಳೂರಲ್ಲಿ ವಿದ್ಯಾರ್ಥಿಗಳು ಸಂಪು ಹೂಡಿದ್ದಾರಂತೆ....ಅದ್ರ ಕಥೆಯಾದ್ರೂ ಹೇಳ್ತಿದ್ರೆ.... ಕೇಳ್ಲಿಕ್ಕಾದ್ರೂ ರಂಗಿರ್ತಿತ್ತು..."

"ಸಂಪಿನ ಕಥೆಯಂತೆ.... ಅಂಥದ್ದನ್ನೆಲ್ಲಾ ಕೇಳೋದೇ ನಿಂಗೆ ಸೊಂಪು ಅಲ್ವೇ...?"

"ಅಲ್ಲಾ, ನೀವೇ ತೊಡಗಿದ್ದನ್ನ ಹೇಳೀಂದ್ರೆ...ಅಲ್ಲ ನೋಡಿ, ನಾವೆಲ್ಲ ಅವಿಚಾರ ತಿಳ್ಕೋ ಬಾರ್ದೂಂತ ಯಾಕೆ ನಿಮ್ಗಿಷ್ಟು ಆಗ್ರಹ.... ಕೇಳಿದ್ರೆ ನಾವೇನು ಸತ್ತು ಹೋಗ್ತೀವಾ...?

"ಅಯ್ಯೋ ಮಾರಾಯ್ತಿ.. ಸಾಯೋ ಮಾತು ಮಾತ್ರ ಎತ್ಬೇಡ. ಸತ್ತವ್ರಂತೂ ಸತ್ತುಹೋದ್ರು. ಇನ್ನು ಇದ್ದವ್ರು ನೀನೂ ಸತ್ತಿಂದ್ರೆ ಮತ್ತೆ ನಾನು ಏನ್ಮಾಡೋದು ಹೇಳು...."

"ಸಾಕು ಬಿಡಿ ಮತ್ತೆ.... ಅಂತಹ ಮಾತ್ನೆಲ್ಲಾ ಆಡ್ಬೇಡಿ. ನನ್ಗೆ ಹೇಳ್ಬಹುದಾದ್ರೆ ಹೇಳಿ ಸಾಲೆತ್ತೂರ್ರ ಸಾಹಸವೇನೂಂತ."

"ಅಯ್ತಪ್ಪ ಏನೂ ಉಪಯೋಗವಿಲ್ಲವಾದ್ರೂ ಸದ್ಯ ನಷ್ಟ ಏನೂ ಇಲ್ವಲ್ಲಾ.... ಕೇಳು ಹಾಗಾದ್ರೆ...."

"ಹ್ಞಾಂ. ಹೇಳಿ ಮತ್ತೆ...."

"ಏನು ಹೇಳ್ಬೇಕು?"

"ನಾನು ಏನು ಕೇಳಿದೆ?"

"ಕೇಳಿದವ್ಳಿಗೇನೇ ಏನು ತಿಳ್ಕೋ ಬೇಕೂಂತ ಗೊತ್ತಿಲ್ಲಾಂತಂದ್ಮೇಲೆ...."

"ಸಾಕು ಬಿಡಿ ಮತ್ತೆ...ಮಾತಿಗೆ ಅಡ್ಡ ಬಂದು ತಪ್ಪಿಸಿದವ್ರು ಯಾರು? ನಾನೇ ನೀವೇ?"

"ಕೇಳೇ ಬೇಗ,...."

"ತಡೀರಿ ಸ್ವಲ್ಪ... ಏನು ಕೇಳ್ತಾ ಇದ್ದೆ ನಾನು..."

"ಅದೇ ಅದೇ ನಾನೂ ಕೇಳೋದು ..... ಏನು ಕೇಳ್ತಾ ಇದ್ದೆ ನೀನೂಂತ...."

"ಹ್ಞಾಂ....ನೆನ್ಪಿಗೆ ಬಂತು...."

"ಏನು?"

"ಅದೇ ಅದೇ ಸಾಲೆತ್ತೂರು ಮಾಡಿದ ಸಂಶೋಧನೆಗಳು ಯಾವುವೂಂತ...."

"ಅವು ತುಂಬಾ ಇವೆ ನೋಡು. ಅದೆಲ್ಲಾ ಯಾರಿಗೆ ಗೊತ್ತುಂಟು?.... ಆದ್ರೂ....?"

"ಏನಂತದು? ಆದ್ರೂ...?"

"ವಿಜಯನಗರ ಸಾಮ್ರಾಜ್ಯ ತೆಲುಗರಿಂದ ಸ್ಥಾಪಿತವಾದುದಲ್ಲಾಂತ ಕಂಡು ಹಿಡಿದ್ರು...."

"ಮತ್ತೆ..."

"ಕನ್ನಡನಾಡು ಇಂದಿನ ಮುಂಬಯಿಯ ವರೆಗೂ ಹರಡಿತ್ತೂಂತ ಹೇಳಿದ್ರು...."

"ಓ, ಆದಾದ್ರೆ ಸರಿ ಈಗ...."

"ಯಾಕೆ? ಏನಾಯ್ತು...."

"ಪ್ರಾಯಃ ತುಳುನಾಡಿನ ಗಾಳಿಗ್ಲೂ ಕನ್ನಡ ನಾಡಿನ ಮೇಲೆ ಬೀಸ್ತಿರಬಹುದು..."

"ಬೀಸದೆ ಉಂಟೆ? ತುಳುನಾಡು ಹಿಂದಿನಿಂದ್ಲೂ ಕನ್ನಡದ ಒಂದು ಭಾಗವಾಗಿಯೇ ಇತ್ತಲ್ಲ?"

"ಅದ್ಕೇ ಇರಬೇಕು ನೋಡಿ, ಮುಂಬಯಿಗೂ ತುಳುನಾಡಿಗೂ ಅಷ್ಟೊಂದು ಸ್ನೇಹಾಚಾರ...."

"ಏನು ಹೇಳ್ತಾ ಇದ್ದೀಯ ನೀನು .?"

"ನೋಡಿ, ನಮ್ಮೂರವ್ರು ಬೊಂಬಾಯಿಗೆ ಹೋಗುವಷ್ಟು ಮತ್ಯಾರು ಹೋಗ್ತಾರೇಂತ...."

"ಬೊಂಬಾಯಿ ಹೋಗೋ ಸುದ್ದಿ ಯಾಕೆ ಬಂತೀಗ?"

"ಹೀಗೆಬಂತೂನ್ನಿ ...."

"ಹೀಗೇ ಬರೋ ಮಾತು ಬಿಡು; ಯಾರು ಹೋದ್ರೀಗ ಹೇಳು..."

"ಅಲ್ಲ, ಯಾರು ಹೋದ್ರೂಂತ ಹೇಳೋಕೆ ನಾನು ಸ್ಟೀಮರ್ ಬುಕ್ಕಿಂಗ್ ಕ್ಲಾರ್ಕ್ ಅಲ್ಲ ನೋಡಿ...."

"ಸುರುವಾಯ್ತು ನಿನ್ನದೊಂದು ಉಲ್ಟಿ...."

"ಏನು ಉಲ್ಟಿ ಬಂತೀಗಾಂತ?"

"ಇರ್ಲಿ ಬಿಡು. ಎಷ್ಟೊ ಜನ ಹೋಗ್ತಾರೆ;....ಬರ್ತಾರೆ, ಹೋಗ್ಲಿ. ಈಗ ಸಾಲೆತ್ತೂರ ವಿಷ್ಯ ಕೇಳು. ಅವ್ರು ಅನೇಕ ಪ್ರಬಂಧಗಳನ್ನ ಬರೆದ್ರು, ಕರ್ನಾಟಕದ ಇತಿಹಾಸದ ಮೇಲೆ ಕವಿದಿದ್ದ ಪರದೆಯನ್ನು ಎತ್ತಿದರು. ಅಲ್ಲೆ, ಅವ್ರಲ್ಲಿ ಇನ್ನೂ ಒಂದು ಗುಣ ಇತ್ತು ನೋಡು..."

"ಏನದು?"

"ಇವ್ರು ಸ್ವತಃ ಶಿಸ್ತನ್ನು, ನಿಯಮನಿರ್ಬಂಧಗಳನ್ನು ಪಾಲಿಸುತ್ತಿದ್ದರು. ತಮಗೆ ಗೊತ್ತಿಲ್ಲದ ವಿಷಯದ ಬಗ್ಗೆ ಅವರೆಂದೂ ತಮ್ಮ ಅಭಿಪ್ರಾಯ ಕೊಡುತ್ತಿರಲಿಲ್ಲ...."

"ಇದೀಗ ಸರಿಯಾದದ್ದು."

"ಯಾಕೆ?"

"ನೋಡಿ, ಇದನ್ನ ನಿಮ್ಮ ಟೊಪೀಕ

(೮ನೇ ಪುಟ ನೋಡಿರಿ)

ನಿಮ್ಮ ಆಕಾಂಕ್ಷೆಗಳ ಸಾಧನೆಗ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ........
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ

1—1—1963ರಿಂದ ಠೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ

ನಿಮ್ಮ ಉಳಿತಾಯವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.
ಹೆಚ್ಚಿನ ವಿವರಗಳಿಗೆ ನಿಮ್ಮಸಮೀಪದ ನಮ್ಮಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ಹೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

ಜನಪ್ರಿಯವಾದ
ಗೀತೆಯ ಸಮೂಲ ಭಾಷಾಂತರ
ಇದೀಗ ಮಾರಾಟಕ್ಕೆ ಸಿದ್ಧವಾಗಿದೆ.
360 ಪುಟಗಳಿಗೂ ಮಿಕ್ಕಿದ
ಪಾಕೆಟ್ ಎಡಿಶನ್
ದಪ್ಪವಾದ ಬಿಳಿ ನುಣುಪು ಕಾಗದ!
ಬೆಲೆ: ಸಾದಾ ಪ್ರತಿ ರೂ. ೧-೦೦
ಉತ್ತಮ ಪ್ರತಿ ರೂ. ೧-೫೦
ರಖಂ ಪ್ರತಿಗಳ ದರಕ್ಕೆ ಬರೆಯಿರಿ:
ನವಯುಗ ಪ್ರೆಸ್, ಉಡುಪಿ, ದ. ಕ

ತಲೆಯ ಮೇಲೆ ಕುಳಿತಿದೆ

ನಿರುದ್ಯೋಗ ಸಮಸ್ಯೆಯ ಪೆಡಂಭೂತ

ನಿರುದ್ಯೋಗ ಸಮಸ್ಯೆಯನ್ನು ಪರಿಹಾರಗೊಳಿಸಲು ಶತಪ್ರಯತ್ನಪಟ್ಟರೂ ಅದು ಸಮಸ್ಯೆಯಾಗಿಯೇ ಉಳಿದಿದೆ. ಭಾರತದ ಜನಸಂಖ್ಯೆ ದಿನೇ ದಿನೇ ಬೆಳೆಯುತ್ತಿದೆ. ಬೆಳೆದ ಜನಸಂಖ್ಯೆಗೆ ಆಹಾರ ಒದಗಿಸುವುದಾದರೂ ಯಾರು? ದೇಶದ ಸಂಪನ್ಮೂಲಗಳು ಅಭಿವೃದ್ಧಿ ಹೊಂದಿದರೆ ಸ್ವಲ್ಪ ಮಟ್ಟಿನ ಪರಿಹಾರ ನಿರುದ್ಯೋಗ ಸಮಸ್ಯೆಗೆ ಸಿಗಬಹುದು; ಆದರೆ ಸಂಪನ್ಮೂಲಗಳನ್ನು ಹೆಚ್ಚಿಸುವುದು ಹೇಗೆ ಎಂಬುದೇ ಪ್ರಶ್ನೆಯಾಗಿ ಉಳಿದಿದೆ.

ಭಾರತ ವಿಶಾಲವಾದ ದೇಶ. ಲಕ್ಷಕೋಟಿ ಭಾರತೀಯರಿಗೂ ಉದ್ಯೋಗ ದೊರಕುವುದಾದರೆ ಗಾಂಧೀಜಿಯ ರಾಮರಾಜ್ಯದ ಕನಸು ನನಸಾದಂತಾಗುವುದು. ಆದರೆ ಇದು ಕಷ್ಟ ಸಾಧ್ಯ. ಇಂದು ದುಡಿಯುವ ಕೈ ಒಂದು ತಿನ್ನುವ ಬಾಯಿ ಹತ್ತಾಗಿದೆ. ಮನೆಯ ಯಜಮಾನನೊಬ್ಬ ದುಡಿದರೆ ಇತರರು ನಿರುದ್ಯೋಗಿಗಳಾಗಿ ಬೀದಿ ಬೀದಿ ಅಲೆದಾಡುವರು. ಭಾರತದಲ್ಲಿ ಹೆಚ್ಚಿನ ಕಡೆಗಳಲ್ಲಿ ಆತ್ಮಹತ್ಯೆಯು ನಡೆಯುವುದಿದ್ದರೆ ಈ ನಿರುದ್ಯೋಗ ಸಮಸ್ಯೆಯು ಕೂಡಾ ಅದಕ್ಕೆ ಒಂದು ಕಾರಣವೆನ್ನಬಹುದು. ತಾನು ಕಲಿತವನೆಂಬ ಹೆಮ್ಮೆ ಕಲಿತ ಭಾರತೀಯನಿಗೆ ಅಂಟಿಕೊಂಡಿದೆ. ತನಗೆ ಯೋಗ್ಯವಾದ ಕೆಲಸ ಸಿಗುವ ವರೆಗೆ ಕೆಲಸಕ್ಕಾಗಿ ಹಾತೊರೆಯುತ್ತಿರುತ್ತಾನೆ. ಚಾತಕ ಪಕ್ಷಿಯಂತೆ ಯೋಗ್ಯ ಉದ್ಯೋಗದ ಬರವನ್ನು ಹಾರೈಸುತ್ತಾನೆ. ಆತನಿಗೆ ಪ್ರಭಾವಯುತವಾದ ವ್ಯಕ್ತಿಗಳು ಆ ಊರಲ್ಲಿ ಇದ್ದರೆ ಕೆಲಸವಂತೂ ಸಲೀಸಾಗಿ ದೊರೆಯುವುದು ಅದಿಲ್ಲವಾದರೆ ತನ್ನ ಅದೃಷ್ಟದ ಮೇಲೆ ಭಾರಹಾಕಿ ಕೂತುಕೊಳ್ಳಬೇಕಾಗುತ್ತದೆ.

ವಿಶ್ವವಿದ್ಯಾನಿಲಯದಿಂದ ಪದವೀಧರರಾಗಿ ಬೀದಿಯಲ್ಲಿ ಅಲೆದಾಡುತ್ತಿರುವ, ದಿನಾಲೂ ಪೇಪರಿನ "wanted" ಕಲಂ ನೋಡುತ್ತಿರುವ ಎಷ್ಟೋ ವಿದ್ಯಾರ್ಥಿಗಳನ್ನು ನೋಡಿ ನನಗೆ ಕನಿಕರ ಹುಟ್ಟುತ್ತದೆ. ಶ್ರಮಪಟ್ಟು ಒಂದು ಡಿಗ್ರಿಯನ್ನು, ಪಡೆದು ಕೆಲಸವಿಲ್ಲದೆ ತಿರುಗುವುದನ್ನು ನೋಡಿದಾಗ ಆ ಡಿಗ್ರಿ ಎಂಬ ಎರಡಕ್ಷರದ ಮೇಲೆ ತಾತ್ಸಾರ ಮೂಡಿದರೆ ಅದರಲ್ಲಿ ತಪ್ಪೇನು?

ಮಾನವನ ಬಾಳು ಹಸನಾಗಬೇಕಾದರೆ ನೆಮ್ಮದಿಯನ್ನು ಜೀವನದಲ್ಲಿ ಕಾಣಬೇಕಾದರೆ ಆತನಿಗೆ ಉದ್ಯೋಗವಿರಬೇಕು, ಮನುಷ್ಯನು ಮರದ ಕೊರಡಲ್ಲ. ಬುದ್ಧಿಶಕ್ತಿಯುಳ್ಳ ಜೀವ ಸಂಚಾರ ತನ್ನ ಮೇಧಾಶಕ್ತಿಯಿಂದ ಪ್ರಪಂಚವನ್ನು ಆಳುವ ಶಕ್ತಿ ಮಾನವನಿಗಿದೆ; ಆದರೆ ಮಾಡುವುದೇನು, ಆತನ ಬುದ್ಧಿ ಶಕ್ತಿಯನ್ನು ಉಪಯೋಗಿಸಲು ಆತನಿಗೆ ಯೋಗ್ಯ ಅವಕಾಶ ಲೋಕದಲ್ಲಿ ಸಿಗುತ್ತದೆಯೆ? ಪ್ರಭಾವ ಬೀರಬಲ್ಲ ಕೆಲವು ಅನ್ಯ ವ್ಯಕ್ತಿಗಳಿಂದಾಗಿ ಇಂದು ಯೋಗ್ಯತೆಗೆ ಬೆಲೆಯಿದೆಯೇ? ಹಾಗಿದ್ದಲ್ಲಿ ಎಷ್ಟೋ ಮಂದಿ ಪದವೀಧರರಾಗಿ ಬೀದಿ ಬೀದಿ ಅಲೆಯುವುದರ ರಹಸ್ಯವೇನು? ಪದವೀಧರನಾಗಲು ಕೂಡಾ ಅರ್ಹತೆ ಬೇಡವೆ? ಕೆಲವೊಮ್ಮೆ ಪ್ರಭಾವ ಬೀರಿ ಡಿಗ್ರಿ ಪಾಸಾಗಬಹುದು. ಆದರೆ ಇದು ಬರೀ ಅಲ್ಪ ಸಂಖ್ಯಾಕವರ್ಗ ಮಿಕ್ಕವರೆಲ್ಲಾ ತಮ್ಮ ಸಾಮರ್ಥ್ಯದಿಂದಲೇ ಪದವೀಧರರಾದವರು ಎಂಬುದರಲ್ಲಿ ಸಂದೇಹವಿಲ್ಲ.

ಮನುಷ್ಯನಿಗೆ ಕೆಲಸ ಮಾಡುವ ಹಂಬಲವಿದೆ, ಕುತೂಹಲವಿದೆ. ಆದರೆ ಕೆಲಸ ಕೊಡುವ ಮಹಾನುಭಾವರು ಕಡಿಮೆಯಾಗಿದ್ದಾರೆ. ಅಮೇರಿಕಾದಂಥ ದೇಶದಲ್ಲಾದರೆ ಯಾವ ಕೆಲಸವನ್ನು ಕೂಡಾ ಮಾಡಲು ಜನರು ಸಮರ್ಥರು. ಆದರೆ ವಸ್ತುಸ್ಥಿತಿ ಭಾರತದಲ್ಲಿ ಬೇರೆಯಾಗಿದೆ.

ಇಲ್ಲಿ ಕೈಗಾರಿಕೆಗಳ ಬೆಳವಣಿಗೆಯಾಗಬೇಕಾಗಿದೆ; ಪ್ರೈವೇಟ್ ಕೈಗಾರಿಕೆಗಳನ್ನು ಸರಕಾರವೇ ನಡೆಸಿ ಭಾರತದ ನಿರುದ್ಯೋಗ ಸಮಸ್ಯೆಯನ್ನು ದೂರಮಾಡಬೇಕಾಗಿದೆ. ಭಾರತದ ಆರ್ಥಿಕ ಚಟುವಟಿಕೆಗಳಿಗೆ ಮೂಲ ಆಗರವೆನಿಸಬಲ್ಲ ಮಾನವನ ಜೀವನ ಮಟ್ಟವನ್ನು ಅದಷ್ಟು ಊರ್ಜಿತಗೊಳಿಸಬೇಕಾಗಿದೆ. ಸರಕಾರವು ಕೈಗಾರಿಕೆಗಳನ್ನು ಸ್ಥಾಪಿಸುವಾಗ ರಾಜಕೀಯದ ಗುಂಗಿನಲ್ಲಿ ಮತ್ತವಾಗದೆ ಅರ್ಹವಾದ ಸ್ಥಳದಲ್ಲೇ ಕೈಗಾರಿಕೆಗಳನ್ನು ಸ್ಥಾಪಿಸಲಿ. ಒಂದೇ ಕಡೆ ಕೈಗಾರಿಕೆಗಳು ಕೇಂದ್ರೀಕೃತವಾದರೆ ಅದರಿಂದ ದೇಶಕ್ಕೆ ಪ್ರಯೋಜನವಾಗಲಾರದು. ಚಿಕ್ಕ ಪುಟ್ಟ ಕೈಗಾರಿಕೆಗಳಿಗೆ ಅದಷ್ಟು ಪ್ರೋತ್ಸಾಹ ಕೊಡುವುದರೊಂದಿಗೆ, ಬೃಹತ್ ಕೈಗಾರಿಕೆಗಳಿಗೂ ಹೆಚ್ಚಿನ ಗಮನ ಹರಿಸಿ ಭಾರತದ ನಿರುದ್ಯೋಗ ಸಮಸ್ಯೆಯನ್ನು ದೂರಮಾಡಲಿ.

ಭಾರತದಲ್ಲಿ ಎಷ್ಟೋ ಖನಿಜ ಸಂಪತ್ತಿದೆ. ಅದಿನ್ನೂ ಬೆಳಕಿಗೆ ಬಂದಿಲ್ಲ ಅದಷ್ಟು ಬೇಗನೇ ಭೂಮಿಯಡಿಯಲ್ಲಿ ಸುಪ್ತವಾಗಿದ್ದ ಈ ಖನಿಜ ಸಂಪತ್ತಿನ ಶೋಧವಾಗಲಿ! ದಿನೇದಿನೇ ಬೆಳೆಯುತ್ತಿರುವ ಜನಸಂಖ್ಯೆಯನ್ನು ತಡೆಹಿಡಿಯುವ ಕುಟುಂಬ ಯೋಜನಾ ಕಾರ್ಯಕ್ರಮದಲ್ಲಿ ಭಾರತದ ಪ್ರತಿಯೊಬ್ಬ ನಾಗರಿಕನು ತುಂಬು ಸಹಕಾರವನ್ನೀಯುವುದು ದೇಶದ ಹಿತ ದೃಷ್ಟಿಯಿಂದ ಅಗತ್ಯವಾಗಿದೆ. ಕ್ಷಾಮ, ಬರಗಾಲ, ಯುದ್ಧ ಮೊದಲಾದುವುಗಳಿಗೆ ಮೂಲಹೇತುವೆನಿಸಿದ ಏರುತ್ತಿರುವ ಜನಸಂಖ್ಯೆಯನ್ನು ತಡೆಯದ ವಿನಹ ಭಾರತದ ಆರ್ಥಿಕ ಅಭಿವೃದ್ಧಿಯಾಗುವುದು ಅಸಂಭವ ನಿರುದ್ಯೋಗ ಪರಿಹಾರವಾಗುವುದು ಕೂಡಾ ಅಸಾಧ್ಯ. ಜನಸಂಖ್ಯೆಯನ್ನು ತಡೆಗಟ್ಟಲು ಭಾರತ ಸರಕಾರ ಕೈಗೊಂಡ ಯೋಜನೆ ಕೈಗೂಡಬೇಕಾದರೆ ಕೆಲವು ಮನ್ವಂತರಗಳಾದರೂ ಹೋದೀತು. ಆದರೂ ಇದರಿಂದ ತುಂಬಾ ಪ್ರಯೋಜನವಿದೆ ಎಂಬುದು ನಿರ್ವಿವಾದ.

ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ನಾವು ೧೪ ಮಿಲಿಯ ಜನರಿಗೆ ಉದ್ಯೋಗವನ್ನು ಒದಗಿಸುವ ಎಂದು ಗುರಿಯನ್ನು ಇಟ್ಟುಕೊಂಡಿದ್ದೇವೆ. ಇದು ಎಷ್ಟರ ಮಟ್ಟಿಗೆ ಸಾಧಿಸುವುದು ಎಂಬುದನ್ನು ಕಾದು ನೋಡಬೇಕು ಹೇಗೂ ಇರಲಿ ದಿನೇ ದಿನೇ ಬೆಳೆಯುತ್ತಿರುವ ನಿರುದ್ಯೋಗಕ್ಕೆ ಭಾರತ ಸರಕಾರವು ಯೋಗ್ಯ ಕಾರ್ಯಕ್ರಮವನ್ನು ಕೈಗೊಂಡರೆ ದೇಶದ ಅಭಿವೃದ್ಧಿಯಾಗುವುದು. ಗಾಂಧೀಜಿಯವರ ರಾಮರಾಜ್ಯದ ಕನಸು ನನಸಾಗಬಹುದು.

—ಶ್ರೀ ಎನ್. ಆರ್. ಕಾಮತ್,
ಉಡುಪಿ.

NAVAYUGA

Republic Day Special

On January 26th, 1964, our beloved Republic is celebrating the greatest event in Modern History, namely the founding of our Republic, the biggest democracy in the world. Ever since then, our country is marching ahead as the foremost torchbearer of the rich, enviable traditions of true democracy inspite of the troubled waters we are sailing through.

On this occasion your popular Kannada Weekly, NAVAYUGA, that has been a useful vehicle for the propogation of scientific, cultural and political thought of the times, means to bring forth its "**Republic Day Special**" with rich food for thought from celebrated writers and critics. As such, it can be quite a useful medium to advertise your fare and to speak of your achievements and get the wide publicity you deserve.

We are sure, you will not miss this opportunity of publishing your fare and promoting your own interests, thereby encouraging us as well, in making this venture a success.

Please send your advt. matter along with the blocks, if any, on or before 11-1-1964 and kindly cooperate.

DDVT. MANAGER, NAVAYUGA, UDIPI.

ADVERTISEMENT RATES

Full Page ...	Rs. 125/-	Back Cover Page ..	Rs. 500/-
Half Page ...	Rs. 65/-	Inside Ist Cover Page ...	Rs. 400/-
Quarter Page ...	Rs. 35/-	Inside 2nd Cover Page...	Rs. 300/-

Ordinary Full Page in Double colours . . Rs. 200/-

MECHANICAL DATA

Paper size ... 15" x 10" Size of type page ... 13" x 8"
(37·5 Cm. x 25 Cm.) Half Crown (32·5 Cm. x 20 Cm.)

Date of Publication : 23—1—1964.

ಕಂಬನಿ

ವಿಶ್ವದೇಳಿಗೆ ಚಿಂತಕ
ವಿಶ್ವವಂದಿತ ನಿರಂತಕ
ವಿಶ್ವೇಶನಲಿ ಐಕ್ಯವಾದರಧ್ಯಕ್ಷ ಅಮೇರಿಕ
ಶಾಂತಿಮೂಕರಿಗೆ ಶೋಕ
ಸಹಿಸಲಾರದ ಕಹಿ ದುಃಖ
ತುಂಬ ಬಲ್ಲಿದೆ ಈ ಕುಂದ
ಮುಂದಾದರು ಅಮೇರಿಕ

ವಿಜ್ಞಾನದ ಕೈಗನ್ನಡಿ
ಜಗದೈಕ ಶ್ರೀ ಕೆನಡಿ—
ಗುಂಡಾಯ್ತು ಮೂರ್ಖರಿಂದವರ
ದೇಹ ಪುಡಿ ಪುಡಿ
ಅಖಿಲರ ಮುಂದಾಳ್ತ
ಹಸಿದವರಿಗೆ ಅನ್ನದಾತ
ಹಿಂದುಳಿದ ಜನರ ದೇಶದ
ರಕ್ಷಣೆಯ ನಾಥ
ಧರ್ಮದ ನಿಧಿಯು ಕೊಂದರಲ್ಲಾ
ಮುಂದೇನು ಗತಿಯೋ ಅರಿಯಲ್ಲ
ಈ ದುಃಖದಡುಗೆಯ ಮುಂದೆ ಜನ
ಉಂಬರೆಲ್ಲ
ವಾದಕ್ಕೆ ಈತನಲಿ ಎಡೆಯಿಲ್ಲ
ಭೇದ ಭಾವನೆ ಮನದೊಳಿದ್ದುದಿಲ್ಲ
ಸೋದರರು ನಾವೆಂದು ಜಗಕೆಲ್ಲ
ಸಾರಿದ್ದರಲ್ಲ
ಜಗತ್ತಿನ ಕಣ್ಣರಳಿತು
ಶೋಕದ ಹನಿ ಉರುಳಿತು
ಅಶುಭ ವಾರ್ತೆಯ ಕೇಳಿ ಹೃದಯ
ತಲ್ಲಣಿಸಿತು
ಓ ಶಾಂತ್ಯನ್ವೇಷಣೆಯ ಮೂರ್ತಿ
ಮರೆಯಲಾಪರೆ ನಿನ್ನ ಕೀರ್ತಿ
ನಾವೆಲ್ಲ ಬೇಡುವೆವು ಆತ್ಮಕ್ಕೆ
ಪರಮಾತ್ಮನಲಿ ಚಿರಶಾಂತಿ.
ಓಂ ಶಾಂತಿಃ ಶಾಂತಿಃ ಶಾಂತಿಃ.

—ಡಾ| ಯು. ಚಂದ್ರಶೇಖರ್,
ಕುದುಮಲ್ಲಿಗೆ

ಶ್ರೀ ಎಮ್. ವಿ. ಹೆಗ್ಡೆಯವರ ಪುಸ್ತಕಗಳು

ವಿಷ್ಣುವಿನ ದಶಾಪರಾಧ ಅರ್ಥಾತ್ ದಶಾವತಾರ	0=75
ಸ್ವರಾಜ್ಯ ವಿಜಯ	0=50
1949ರ ಬಿರುದಾವಳಿ	0=18
ಆ ಸುದ್ದಿ	0=25
ಹೈದರಾಬಾದ್ ವಿಜಯ	0=25
ಗಾದೆಯ ಗಾಂಧಿ	0=18
ಅಗಲಿದ ಅಕ್ಕ ಸರೋಜಿನಿ	0=18
ನುಡಿಮುತ್ತುಗಳು ೧, ೨, ೩	0=56

ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಯುಗ

ವರುಷ	ಉಡುಪಿ	ವಾರ
೪೩	೨೬-೧೨-೧೯೬೩	೧೭

ವಿದ್ಯಾರ್ಥಿ ಮುಷ್ಕರ

ಹಳೆಯ ಮೈಸೂರುಪ್ರದೇಶದಲ್ಲಿ ಕಾಲೇಜುಗಳ ವಿದ್ಯಾರ್ಥಿಗಳು ಕಳೆದ ಕೆಲವಾರು ದಿನಗಳಿಂದ ಹೂಡಿದ ಸಂಪು ರಾಜ್ಯದ ಶೈಕ್ಷಣಿಕ ಕ್ಷೇತ್ರದಲ್ಲಿ ಒಂದು ಗೊಂದಲವನ್ನೇ ಉಂಟು ಮಾಡಿದೆ. ಸಂಪಿಗೆ ಕಾರಣವನ್ನು ವಿದ್ಯಾರ್ಥಿಗಳು ಈ ರೀತಿಯಾಗಿ ಮುಂದಿಡುತ್ತಾರೆ: ಸರಕಾರದ ಪರಿಷ್ಕೃತ ಆಜ್ಞೆಯಂತೆ ವಿದ್ಯಾರ್ಥಿಗಳಿಗೆ ದೊರೆಯುತ್ತಿರುವ ಶುಲ್ಕ ರಿಯಾಯತಿಯಲ್ಲಿ ಕಡಿಮೆಯಾಗಿರುವುದು; ಶುಲ್ಕದ ದರಗಳಲ್ಲಿ ಏರಿಕೆಯಾಗಿರುವುದು; ಎನ್. ಸಿ. ಸಿ. ವಿದ್ಯಾರ್ಥಿಗಳಿಗೆ ಉಪಾಹಾರವೊದಗಿಸದಿರುವುದು; ಪದವಿ ತರಗತಿಯಲ್ಲಿ ನಾಲ್ಕನೆಯ ಭಾಗವನ್ನು ರದ್ದುಗೊಳಿಸದಿರುವುದು; ಮತ್ತು ಕೊನೆಯದಾಗಿ ಸಿಬ್ಬಂದಿಯ ಕೊರತೆಯಿರುವುದು. ಈ ಐದು ಕಾರಣಗಳನ್ನು ಮುಂದಿಟ್ಟು ಈ ಕೊರತೆಗಳನ್ನು ಸರಿಪಡಿಸುವ ವರೆಗೆ ತಮ್ಮ ಮುಷ್ಕರವನ್ನು ಹಿಂದೆಗೆಯಲಾರೆವೆನ್ನುತ್ತಾರೆ ಅವರು. ಈ ಪರಿಸ್ಥಿತಿಯಿಂದಾಗಿಯೇ ಮೈಸೂರು ವಿಶ್ವವಿದ್ಯಾಲಯಕ್ಕೆ ಸೇರಿದ ಹೆಚ್ಚಿನ ಕಾಲೇಜುಗಳು ಮುಚ್ಚಲ್ಪಟ್ಟಿವೆ, ಇಂತಹ ಗಂಭೀರ ವಾತಾವರಣವನ್ನು ವಿದ್ಯಾರ್ಥಿಗಳು ಉಂಟು ಮಾಡಿದ್ದಾರೆ. ಸರಕಾರ ಪರಿಸ್ಥಿತಿಯನ್ನು ಸುಧಾರಿಸಲು ಬಹಳ ಆಸಕ್ತಿಯಿಂದ ಪ್ರಯತ್ನಿಸುತ್ತಿರುವುದಾದರೂ ಅದು ಇನ್ನೂ ಯಶಸ್ವಿಯಾಗಿಲ್ಲ. ವಿದ್ಯಾರ್ಥಿಗಳು ತಮ್ಮ ಹಠಮಾರಿತನವನ್ನು ಬಿಡದೆ ಉಳಿದರೆ, ವಾತಾವರಣವು ಮತ್ತಷ್ಟು ವಿಕೋಪಕ್ಕೆ ಏರಬಹುದು. ಇಂತಹ ಪ್ರಕೋಪವು ಉರಿಜ್ವಾಲೆಯಾಗುವುದಕ್ಕೆ ಮುನ್ನವೇ ಎರಡೂ ಪಂಗಡಗಳೂ ಒಂದು ನ್ಯಾಯೋಚಿತವಾದ ತೀರ್ಮಾನಕ್ಕೆ ಬರುವುದು ಅತ್ಯಗತ್ಯ. ಈಗಾಗಲೇ ಆಗಬಾರದ ತಡವಾಗಿದೆ; ಮತ್ತು ಅದರಿಂದಲೇ ಕಾಲುಷ್ಯ ಹೆಚ್ಚುತ್ತ ಬರುತ್ತಿದೆ. ಸಂಪು ಪ್ರಾರಂಭವಾಗುವುದಕ್ಕೆ ಮೊದಲೇ ವಿವಾದವನ್ನು ಪರಿಹರಿಸಬಹುದಿತ್ತು; ತೊಡಗಿದ ಪ್ರಾರಂಭದಲ್ಲಾದರೂ ಈ ಬಗ್ಗೆ ಕಳಕಳಿಯ ಯತ್ನ ನಡೆಯಬಹುದಿತ್ತು. ಆದರೆ, ಇಂದದು ನುಂಗಲಾರದ ತುತ್ತಾಗಿದೆ, ಎರಡೂ ಕಡೆಯವರಿಗೆ ನಾಗರಿಕರಾದರೂ ಕಳವಳಪಡುವಂತಾಗಿದೆ.

ವಿದ್ಯಾರ್ಥಿಗಳ ಬೇಡಿಕೆಗಳನ್ನು ನಾವು ಪರಿಶೀಲಿಸುವುದಾದರೆ, ಅವುಗಳಲ್ಲಿ ಕೆಲವೊಂದು ಅರ್ಥವಿಲ್ಲದ್ದು ಎನ್ನಲೇ ಬೇಕಾಗುತ್ತದೆ. ಶುಲ್ಕದಲ್ಲಿ ದೊರೆಯುವ ವಿನಾಯತಿಯಲ್ಲಿ ವಿದ್ಯಾರ್ಥಿಗಳ ಮಟ್ಟಿಗೆ ಯಾವ ಕಡಿಮೆಯೂ ಆಗುವುದಿಲ್ಲವೆಂದೂ, ವಿದ್ಯಾರ್ಥಿನಿಯರಿಗೆ ಆಗುವ ಅನ್ಯಾಯವನ್ನು ಸರಿಪಡಿಸಲು ಸರಕಾರವು ಆಲೋಚಿಸುವುದೆಂದೂ ತಿಳಿಯುತ್ತದೆ. ಈ ಆಲೋಚನೆಯನ್ನು ಶೀಘ್ರದಲ್ಲಿಯೇ ಪೂರೈಸಿ ನಿರ್ಧಾರಕ್ಕೆ ಬರಲು ಸರಕಾರವು ಹಿಂದೆ ಸರಿಯುವುದು ಸರಿಯಲ್ಲ. ಶುಲ್ಕದಲ್ಲಾದ ಹೆಚ್ಚಳವು ಅನಿವಾರ್ಯವಾದುದು; ಅದನ್ನು ವಿರೋಧಿಸುವುದು ಎಷ್ಟು ಮಾತ್ರಕ್ಕೂ ನ್ಯಾಯವಲ್ಲ. ವಿಲೀನ ಹೊಂದಿದ ಪ್ರದೇಶಗಳ ವಿದ್ಯಾರ್ಥಿಗಳು ಮೊದಲಿನಿಂದಲೂ ಅಧಿಕ ಶುಲ್ಕವನ್ನು ತೆತ್ತೇ ವಿದ್ಯಾರ್ಜನೆಯನ್ನು ಮಾಡುತಿದ್ದಾರೆ. ಹಾಗಿರುವಾಗ ಹಳೆಯ ಮೈಸೂರಿಗರು ಮಾತ್ರ ಕಡಿಮೆ ಶುಲ್ಕದ ಪ್ರಯೋಜನ ಪಡೆಯುವುದು ನ್ಯಾಯವಲ್ಲ. ಹಾಗಾದರೆ, ಉಳಿದೆಡೆಗೂ ಶುಲ್ಕ ಕಡಿಮೆ ಮಾಡಿರೆಂದು ಹೇಳಬಹುದು. ಆದರೆ, ಹಿಂದಿಗಿಂತ ಇಂದು ಕಾಲೇಜುಗಳ ವೆಚ್ಚದಲ್ಲಿ ಹೆಚ್ಚಳವಾಗಿರುವಾಗ, ಅವುಗಳಲ್ಲಿ ಕಲಿಯುವವರೂ ಹೆಚ್ಚಿನ ಶುಲ್ಕತೆರಬೇಕಾಗುವುದು; ವಿದ್ಯಾರ್ಥಿಪಾಲಕರ ಆದಾಯದಲ್ಲೂ ಹೆಚ್ಚಳವಾಗಿರುವುದನ್ನು ನಾವು ಗಮನಿಸಬೇಕು. ಆದುದರಿಂದ ಶುಲ್ಕಏರಿಕೆಯವಿರುದ್ಧ ಏಳುವ ಅಪಸ್ವರವು ಎಂದಿಗೂ ಅಸಮರ್ಥನೀಯ.

ಎನ್.ಸಿ.ಸಿ. ವಿದ್ಯಾರ್ಥಿಗಳಿಗೆ ಉಪಾಹಾರ ವ್ಯವಸ್ಥೆಯನ್ನು ಹಿಂದಿನಂತೆಯೇ ಮುಂದುವರಿಸಿಕೊಂಡು ಹೋಗುವುದು ಅಗತ್ಯವಾಗಿದೆ. ಆದರೂ ಕಡ್ಡಾಯವಾಗಿ ಎನ್.ಸಿ.ಸಿ. ತರಬೇತಿ ಪಡೆಯಬೇಕಾದವರ ಮಟ್ಟಿಗೆ ಇದನ್ನು ನಿಲ್ಲಿಸಿದರೂ ಅದು ತಪ್ಪಲ್ಲ. ಪದವಿ ಪರೀಕ್ಷೆಗಳ ಪಠ್ಯಪಟ್ಟಿಯನ್ನು ವಿಶ್ವವಿದ್ಯಾಲಯವೇ ನಿರ್ಧರಿಸುವುದರಿಂದ, ಸರಕಾರದ ಪಾತ್ರವು ಇದರಲ್ಲಿ ಕಡಿಮೆಯೆನ್ನಬಹುದು. ಶಿಕ್ಷಣ ಮಂತ್ರಿಗಳು ಈ ಸಂಬಂಧದಲ್ಲಿ ವಿಶ್ವವಿದ್ಯಾಲಯದೊಡನೆ ಪತ್ರವ್ಯವಹಾರ ನಡೆಸುವ ಭರವಸೆಯಿತ್ತಿರುವುದರಿಂದ ಸಂಪುಗಾರರು ಇಷ್ಟರಿಂದಲೇ ತೃಪ್ತಿಪಡಬೇಕಾಗಿದೆ. ಆವಶ್ಯಕ ಸಿಬ್ಬಂದಿಯನ್ನು ನೇಮಿಸಿಕೊಳ್ಳುವುದು ಸರಕಾರದ ಕರ್ತವ್ಯ. ಇದರಿಂದದು ಎಂದಿಗೂ ತಪ್ಪಿಸಿಕೊಳ್ಳುವಂತಿಲ್ಲ. ಹುದ್ದೆಗಳಿಗೆ ಅಭ್ಯರ್ಥಿಗಳು ದೊರೆಯುತ್ತಿಲ್ಲವೆಂದು ಸರಕಾರ ಹೇಳಬಹುದು. ಆದರೆ, ಇದಕ್ಕೆ ಕಾರಣಗಳನ್ನು ಸರಕಾರ ಅರಿತುಕೊಂಡು, ಅವನ್ನು ಸರಿಪಡಿಸಬೇಕು. ಇದು ಕಾಲೇಜುಗಳಿಗೆ ಮಾತ್ರವಲ್ಲ ಹೈಸ್ಕೂಲು ಪ್ರಾಥಮಿಕ ಶಾಲೆಗಳಿಗೂ ಪರಿಣತ ಶಿಕ್ಷಕರು ದೊರೆಯುತ್ತಿಲ್ಲ. ಇದಕ್ಕೆ ಅಧ್ಯಾಪಕರ ವೇತನ–ಭತ್ತೆಗಳ ಸೌಲಭ್ಯ ಕಡಿಮೆಯಿರುವುದೇ ಮೂಲಕಾರಣ. ಆದುದರಿಂದ ಸರಕಾರ ಇತ್ತ ಆವಶ್ಯ ಗಮನ ಹರಿಸುವುದು ಆಗತ್ಯ.

ಸಂಪು ಬೆಳೆದಿದೆ; ಇಕ್ಕಡೆಯೂ ಅಸಹಾಯಕವೆಂಬಂತಾಗಿದೆ. ಇದು ಉತ್ತಮ ಆರೋಗ್ಯದ ಚಿಹ್ನೆಯಲ್ಲ. ಸಂಪಿನ ಹಿಂದೆ ರಾಜಕೀಯವೂ ಕೂಡಿಕೊಂಡಂತೆ ಭಾಸವಾಗುತ್ತಿದೆ. ಶಿಕ್ಷಣ ಮಂತ್ರಿ ಶ್ರೀ ಕಂಠಿಯವರು ಹಳೆಯ ಮೈಸೂರಿಗೆ ಅನ್ಯಾಯ ಮಾಡುತಿದ್ದಾರೆಂಬ ಆರೋಪವು ನಿರಾಧಾರವಾದುದು; ಹಳೆಯ ಕಾಂಗ್ರೆಸಿಗರ ಪೂರ್ವಾಗ್ರಹದಿಂದ ಪ್ರೇರಿತವಾದುದೆಂಬುದು ನಿರ್ವಿವಾದ. ರಾಜ್ಯದ ಆರ್ಥಿಕ ಪರಿಸ್ಥಿತಿಯು ಈಗಲೇ ಬಿಗಡಾಯಿಸಿದ್ದು, ಇದನ್ನು ಮತ್ತಷ್ಟು ಹದಗೆಡಿಸುವ ಯಾವ ದುಷ್ಟ ಪ್ರಯತ್ನವನ್ನೂ ವಿವೇಕಿ ನಾಗರಿಕರು ಬೆಂಬಲಿಸಬಾರದು; ಆದುದರಿಂದ ವಿದ್ಯಾರ್ಥಿಗಳು ಮುಂದಿಟ್ಟ ಹೆಚ್ಚಿನ ಬೇಡಿಕೆಗಳ ಬಗ್ಗೆ ಸರಕಾರವು ಈಗಾಗಲೇ ಸಮಾಧಾನ ನೀಡಿದೆ; ಇನ್ನೂ ಅಸ್ಪಷ್ಟವಿರುವ ಅಂಶಗಳ ಬಗ್ಗೆ ಸ್ಪಷ್ಟೀಕರಣವನ್ನು ಸರಕಾರ ನೀಡಬೇಕು; ಸಂಪುಗಾರರು ತಮ್ಮ ಆಗ್ರಹವನ್ನು ಬಿಟ್ಟು ವಾಸ್ತವಿಕ ದೃಷ್ಟಿಯಿಂದ ಯಥಾರ್ಥತೆಯ ವಿವೇಚನೆ ಮಾಡಬೇಕು. ಆಗ, ವಾತಾವರಣವೂ ದುರಭಿಪ್ರಾಯ-ದುರಭಿಮಾನಗಳೂ ತಿಳಿಗೊಂಡು ಸಮಸ್ಯೆ ತಾನಾಗಿಯೇ ಬಗೆಹರಿಯುವುದು. ಇಂತಹ ದಿನ ಇಂದು ನಾಳೆಯಲ್ಲೇ ಬರಲೆಂದು ಎಲ್ಲರ ಹಾರೈಕೆ.

ಗೋಮಾಂತಕರ ಸರಕಾರ

ಗೋವೆಯಲ್ಲಿ ಪ್ರಜಾಪ್ರಭುತ್ವ ಮಾದರಿಯಲ್ಲಿ ಮೊದಲನೆಯ ಮಂತ್ರಿಮಂಡಲವು ಅದು ಬಂಧಮುಕ್ತವಾದ ಎರಡೇ ವರ್ಷಗಳಲ್ಲಿ ರೂಪಿತಗೊಂಡುದು ಭಾರತದಲ್ಲಿ ಪ್ರಜಾತಂತ್ರ ಪ್ರಣಾಲಿಗೆ ದೊರೆಯುತ್ತಿರುವ ಗೌರವವೆಷ್ಟೆಂಬುದನ್ನು ಪ್ರದರ್ಶಿಸುತ್ತದೆ. ಇಲ್ಲಿನ ವಿಧಾನ ಸಭೆಯಲ್ಲಿ ೩೦ ಜನ ಸದಸ್ಯರಿದ್ದು, ಮಹಾರಾಷ್ಟ್ರವಾದಿ ಗೋಮಾಂತಕ ಪಕ್ಷವು ೧೪ ಸ್ಥಾನಗಳನ್ನು ಪಡೆದುಕೊಂಡಿರುವುದು ಮಾತ್ರವಲ್ಲ, ಇಬ್ಬರು ಸ್ವತಂತ್ರರ ಬೆಂಬಲವನ್ನು ಪಡೆದುದರಿಂದ ಮಂತ್ರಿಮಂಡಳಿಯನ್ನು ರಚಿಸಿತು. ಸದ್ಯ ವಿಧಾನ ಸಭೆಯ ಸದಸ್ಯರಲ್ಲದ ೫೨ ವರ್ಷ ಪ್ರಾಯದ ಶ್ರೀ ದಯಾನಂದ ಬಿ. ಬಾಂದೋಡಕರರು ಮುಖ್ಯ ಮಂತ್ರಿಯಾಗಿ ಪ್ರತಿಜ್ಞಾವಿಧಿಯನ್ನು ಸ್ವೀಕರಿಸಿದ್ದಾರೆ. ತನ್ನ ಸಹಕಾರಿಗಳೆಂದು ೩೩ ವರ್ಷದ ಶ್ರೀ ಟೋನಿ ಫೆರ್ನಾಂಡಿಸ ಮತ್ತು ೩೧ ವರ್ಷದ ಶ್ರೀ ವಿಟ್ಠಲ ಸುಬ್ರಾಯ ಕರಮಾಳಿಯವರನ್ನು ನೇಮಿಸಿಕೊಂಡಿದ್ದಾರೆ. ಗೋವೆಯನ್ನು ಪ್ರಜಾತಂತ್ರದ ತಳಹದಿಯಲ್ಲಿ ಕಟ್ಟುವ ಉತ್ತರದಾಯಿತ್ವವನ್ನು ವಹಿಸಿಕೊಂಡಿರುವ ಈ ತ್ರಿಮೂರ್ತಿಗಳು ಗೋವೆಯು ಮಹಾರಾಷ್ಟ್ರದಲ್ಲಿ ವಿಲೀನಗೊಳಿಸುವ ತಮ್ಮ ಉದ್ದೇಶವನ್ನು ಪೂರ್ತಿಗೊಳಿಸಲು ದುಡಿಯುವ ನಿರೀಕ್ಷೆಯಿದೆ. ಗೋವೆಯ ಭವಿಷ್ಯದ ಬಗ್ಗೆ ಹೊರಗಿನವರು ಯಾವ ಅಭಿಪ್ರಾಯವನ್ನೇ ಮುಂದಿಡಲಿ, ಗೋಮಾಂತಕರ ನಿರ್ಧಾರದಂತೆ ಅದು ರೂಪಿತವಾಗಬೇಕು. ಪ್ರಧಾನಿ ನೆಹರುರವರು ಸದ್ಯ ಗೋವೆ ಕೇಂದ್ರಾಧೀನ ಪ್ರದೇಶವಾಗಿರಬೇಕೆನ್ನುತ್ತಾರಲ್ಲದೆ, ಅದು ಯಾವ ಕಾಲಕ್ಕೂ ಪ್ರತ್ಯೇಕವಾಗಿಯೇ ಉಳಿಯಬೇಕೆನ್ನುವುದಿಲ್ಲ; ಹಾಗೆ ಹೇಳುವುದಾಗಲೀ ಬಯಸುವುದಾಗಲೀ ಸಾಧುವಾದುದೂ ಅಲ್ಲ. ಶ್ರೀ ಬಾಂದೋಡಕರರು ವಿಲೀನೀಕರಣದ ಪ್ರಶ್ನೆಗಿಂತ ಗೋವೆಯ ಆರ್ಥಿಕ—ಸಾಮಾಜಿಕ ಸುಧಾರಣೆಗಳಿಗೆ ಹೆಚ್ಚಿನ ಮಹತ್ವ ನೀಡುವುದು ಸದ್ಯ ಅಗತ್ಯ.

ವಾರ್ತಾವೇದಿಕೆ

ಉದ್ದಿಮೆ ಬೆಳೆಯಲಿ

ಕರ್ನಾಟಕದ ವಿತ್ತಮಂತ್ರಿ ಜತ್ತಿ ಮತ್ತು ಸಿಂಡಿಕೇಟ್ ಬ್ಯಾಂಕಿನ ಮೆನೇಜಿಂಗ್ ಡೈರೆಕ್ಟರ್ ಟಿ ಎ. ಪೈಯವರು ರಾಜ್ಯದ ಅಭಿವೃದ್ಧಿಯು ಉದ್ದಿಮೆಗಳಿಂದಲೇ ಸಾಧ್ಯವೆಂದು ಹೇಳುತ್ತಾರೆ. ನೆರೆಯ ರಾಜ್ಯಗಳಲ್ಲಿ ಜನರು ಉದ್ದಿಮೆಯ ಯೋಜನೆಯನ್ನು ತಯಾರಿಸಿ ಸರಕಾರದಿಂದ ಸಹಾಯಪಡೆದು ಕಾರ್ಖಾನೆಗಳನ್ನು ಸ್ಥಾಪಿಸುವಾಗ, ನಾವು ಎಲ್ಲವಕ್ಕೂ ಸರಕಾರದ ಮುಖವನ್ನೇ ನೋಡುವುದು ಸರಿಯಲ್ಲ ಎಂದರವರು. ನಮ್ಮ ರಾಜ್ಯದಲ್ಲಿ ಬಂಡವಳದ ಅಥವಾ ವಿದ್ಯುಚ್ಛಕ್ತಿಯ ಕೊರತೆಯಿಲ್ಲ, ಆದರೆ, ಉದ್ದಿಮೆ ಬೆಳೆದು ಬರಬೇಕಾದ ವಾತಾವರಣವನ್ನು ಹುಟ್ಟಿಸಬೇಕೆನ್ನುತ್ತಾರೆ ಅವರು. ಔದ್ಯಮೀಕರಣದತ್ತ ನೆಗೆಯುತ್ತಿರುವ ಭಾರತವು ಪುನಾರಚನೆಗೊಳ್ಳಬೇಕಾದರೆ, ಉದ್ದಿಮೆಗಳ ಸಂಖ್ಯೆ ಹೆಚ್ಚಬೇಕೆಂಬುದು ಖಂಡಿತ.

ಚೌ ಎನ್ ಲಾಯ್

ಚೌ ಎನ್ ಲಾಯಿಯವರು ತನ್ನ ಪುಂಗಿಯಿಂದ ಯಾವ್ಯಾವ ರಾಗಗಳನ್ನು ಹಾಡಿದರೂ ಅಧ್ಯಕ್ಷ ನಸ್ಸೇರರು ಆಕರ್ಷಿತರಾಗಲಿಲ್ಲ. ಇದರ ಪರಿಣಾಮವಾಗಿಯೇ ಅವರಿಬ್ಬರ ಜತೆ ಹೇಳಿಕೆಯಲ್ಲಿ ಬಾಡುಂಗ ಮಾದರಿಯ ಇನ್ನೊಂದು ಸಮ್ಮೇಳನ ಸೇರುವ ಕುರಿತು ಪ್ರಸ್ತಾಪವೇ ಬಾರದಂತಾಯಿತು. ತಾವು ತಟಸ್ಥ ರಾಷ್ಟ್ರಗಳ ಸಮ್ಮೇಳನದಲ್ಲಿ ಸೇರುವುದಿಲ್ಲವೆನ್ನುವ ಲಾಯ್ ತನಗದರಲ್ಲಿ ಪ್ರವೇಶ ದೊರೆಯುವುದಿಲ್ಲವೆಂಬುದನ್ನು ಖಾತ್ರಿ ಮಾಡಿಕೊಂಡಂತಿದೆ. ಹಾಗಾಗಿ ಚೀನಾವು ತಟಸ್ಥ ರಾಷ್ಟ್ರವೆಂದು ಹೇಳಿಕೊಳ್ಳಲು ಹೂಡಿದ ಅದರ ತಂತ್ರಗಳೆಲ್ಲ ಬಹಿರಂಗಗೊಂಡಿವೆಯೆನ್ನಲು ಯಾವ ಬಾಧೆಯೂ ಇಲ್ಲ. ಲಾಯರ ಹೋಳಿಗೆ ತುಪ್ಪದಲ್ಲಿ ಬೀಳಲಿಲ್ಲ; ಉಪ್ಪಿನ ಮೇಲೆ ಬಿತ್ತು; ಅಷ್ಟೆ.

ನೌಕಾಪಡೆಯ ವಿವಾದ

ಅಮೆರಿಕೆಯ ಏಳನೆಯ ನೌಕಾಪಡೆಯ ಹಡಗಗಳು ಹಿಂದೂ ಮಹಾ ಸಾಗರದಲ್ಲಿ ಸಂಚರಿಸುವುದು ಇಂದು ಭಾರತ ಮತ್ತು ಪಾಕಿಸ್ತಾನಗಳ ತಲೆ ಶೂಲೆಗೆ ಕಾರಣವಾಗಿದೆ. ಇದರಿಂದ ಭಾರತದ ಸ್ವಾತಂತ್ರ್ಯ ಮತ್ತು ತಟಸ್ಥ ನೀತಿಗೆ ಗಂಡಾಂತರ ಒದಗುವುದು. ಈ ನೌಕೆಗಳ ಆಗಮನದ ಪ್ರಶ್ನೆಯು ಸೂಚನಾ ಹಂತದಲ್ಲಿದೆಯಲ್ಲದೆ ಯಾವ ನಿರ್ಣಯವನ್ನೂ ಕೈಗೊಂಡಿಲ್ಲವಾದರೂ ಇದನ್ನು ಹಿಂದೂ ಸಾಗರನಡಿಯ ದೇಶಗಳು ಗಂಭೀರವಾಗಿ ಪರ್ಯಾಲೋಚಿಸಬೇಕಾಗುತ್ತದೆ. ಇತ್ತೀಚೆಗೆ ಪ್ರಧಾನಿ ನೆಹರುಗಳೊಡನೆ ಮಾತಾಡಿ ಹೋದ ಅಮೇರಿಕೆಯ ಜ|| ಟೇಲರ್ ಈ ಪ್ರಶ್ನೆಯು ಅಂತಿಮವಾಗಿ ನಿರ್ಧಾರವಾಗಿಲ್ಲವೆಂದು ಹೇಳಿದ್ದಾರೆ. ಆದರೂ ಇವು ಹಿಂದೂ ಸಾಗರಕ್ಕೆ ಬರಬೇಕಾದರೂ ಯಾಕೆ ಎಂಬ ಒಂದು ಪ್ರಶ್ನೆಗೆ ಉತ್ತರ ಅತ್ಯವಶ್ಯ.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

S. C. 476/63

ಬಿ. ಕೆ. ಸುಬ್ಬರಾವ್ — ವಾದಿ

ಮತ್ತು

ಅತಪ್ಪ ಪೂಜಾರಿ — ಪ್ರತಿವಾದಿ.

ಸದ್ರಿ ಪ್ರತಿವಾದಿ ಅತಪ್ಪ ಪೂಜಾರಿಗೆ ಈ ಮೂಲಕ ತಿಳಿಸುವುದೇನೆಂದ್ರೆ—

ಸದ್ರಿ ಪ್ರತಿವಾದಿ ಬಿ. ಕೆ. ಸುಬ್ಬರಾಯರು ನಿಮ್ಮ ಮೇಲೆ ದಾಖಲು ಮಾಡಿದ ಮೇಲಿನ ವ್ಯಾಜ್ಯವು ತನಿಕೆ ವ ನಿಮ್ಮ ಹಾಜರಾತಿಯ ಬಗ್ಗೆ ತಾ. 4—1—1964ಕ್ಕೆ ಇಟ್ಟಿದೆ. ಅದರಲ್ಲಿ ವ್ರದಪಡಿಸುವುದಿದ್ದರೆ ಸದ್ರಿ ವ್ಯಾದೆಗೆ ಕೋರ್ಟು ಮುಂದೆ ಗಂಟೆ 10ಕ್ಕೆ ಸರಿಯಾಗಿ ಸ್ವತಃ ಅಗ್ಲೀ ವ ವಕೀಲರ ಮುಖಾಂತ್ರವಾಗಲೀ ಹಾಜರು ಆಗಿ ತಿಳಿಸಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮನ್ನು ಶಿವಾಯ ಮಾಡಿ ಏಕ ಪಕ್ಷ ವಿಚಾರಣೆಯಿಂದ ತೀರ್ಮಾನ ಮಾಡಲಾಗುವುದು. ತಿಳಿದಿರಲಿ.

ಬಿ.ಕೆ. ಸೂರ್ಯನಾರಾಯಣರಾವ್
ಎಡ್ವೋಕೇಟ್,

ಪುತ್ತೂರು, 16-12—1963

ವಾರ್ತೆ—ಪ್ರತಿವಾರ್ತೆ

ಶರಾವತಿ ಪ್ರಕರಣವನ್ನು ಕೇಂದ್ರದ ಮಂತ್ರಿ ಡಾ| ರಾವ್ ಬಂದು ಪರಿಶೀಲಿಸಿ ಇದರಲ್ಲಿ ಏನೂ ಇಲ್ಲ ಎಂದಿರುವಾಗ ಅಧಿಕಾರ ಸಿಗದೆ ನಿರಾಶರಾದ ಕೆಲವು ಪಕ್ಷಗಳು ಅಪಪ್ರಚಾರ ನಡೆಸಿವೆ. ಇದಕ್ಕೆ ನಾವು ಕಿವಿಗೊಡಬಾರದು—ನಿಜಲಿಂಗಪ್ಪನವರ ಭಾಷಣ.

—ಸರಕಾರವು ಪ್ರಚಾರ ನಡೆಸುತ್ತಿದೆ; ಆದುದರಿಂದ ಅದನ್ನು ಎಲ್ಲರೂ ಕಿವಿಗೊಟ್ಟು ಕೇಳಬೇಕು ಎಂದು ನೆರೆದವರು ಅರ್ಥಮಾಡಿಕೊಂಡಿರಬಹುದೆ?

○ ○ ○

ಮಂತ್ರಿಗಳು ಪ್ರತಿವರ್ಷ ತಮ್ಮ ಸಾಲ ಮೂಲಗಳನ್ನು ಸಂಸತ್ತಿಗೆ ಒಪ್ಪಿಸಬೇಕು—ಎಚ್. ವಿ. ಕಾಮತರ ವಿಧೇಯಕ.

....ಮಂತ್ರಿಗಳ ಸಂಬಂಧಿಕರು, ಸಂಸತ್ ಸದಸ್ಯರು ಇವರ ವರೆಗೂ ವಿಧೇಯಕ ವ್ಯಾಪ್ತಿ ಮಾಡಲಿಲ್ಲವೆಂಬುದು ತಾತ್ಕಾಲಿಕ ಸಮಾಧಾನ.

○ ○ ○

ಯೋಗ್ಯ ಉಮೇದ್ವಾರರ ಕೊರತೆಯಿಂದಾಗಿ ಕೆಲವೊಂದು ಶಿಕ್ಷಣಾಲಯದ ಹುದ್ದೆಗಳನ್ನು ಖಾಲಿಬಿಡಬೇಕಾಗಿ ಬಂದುದಕ್ಕೆ ಪಬ್ಲಿಕ್ ಸರ್ವಿಸ್ ಕಮಿಶನ್ ವ್ಯಥೆಪಟ್ಟಿತು.

—ಯೋಗ್ಯ ವೇತನ ಸೌಲಭ್ಯಗಳ ಕೊರತೆಯಿಂದಾಗಿ ಶಿಕ್ಷಣಾಲಯಗಳ ಹುದ್ದೆ ಬೇಡವೆನ್ನುವವರ ಸಂಖ್ಯೆ ಬಲವಾಗ ತೊಡಗಿದೆಯಂತೆ!

○ ○ ○

ಲೋಕ ಸಭೆಯ ಚಳಿಗಾಲದ ಅಧಿವೇಶನವನ್ನು ಕೃಷ್ಣಮಾಚಾರಿ ಅಧಿವೇಶನವೆಂದು ವರ್ಣಿಸಲಡ್ಡಿಯಿಲ್ಲ—ವರದಿ.

—ಆಚಾರಿಯವರ ಆಚಾರ ಕೂಡ ದುರ್ಯೋಧನನ ಆಸ್ಥಾನದಲ್ಲಿ ಕೃಷ್ಣನ ಆಚಾರದಂತೆಯೇ ಖಾರವಾಗಿತ್ತು ಎಂಬುದು ಮಾತ್ರ ಹೆಚ್ಚಿನವರ ಮನಸ್ಸಿಗೆ ಬರುವುದಿಲ್ಲ.

○ ○ ○

ಧಾರವಾಡ ಮತ್ತು ವಿಜಾಪುರಗಳ ಉಪಚುನಾವಣೆಗಳಲ್ಲಿ ಕಾಂಗ್ರೆಸ್ ಗೆದ್ದು ಬರುವದು ಖಂಡಿತ (ಭರವಸೆ).

—ಗೋವೆಯ ಮುಂದಿನ ಚುನಾವಣೆಗಳಲ್ಲಂತೂ ಕಾಂಗ್ರೆಸ್ ಗೆದ್ದೇ ತೀರುವುದು (ಆತ್ಮಬಲ ಅಲ್ಲ, ಆತ್ಮವಿಶ್ವಾಸ).

○ ○ ○

ಸೇನೆಯ ಜವಾನರಿಗೆ ಮನೆಯಲ್ಲಿ ಮಾಡಿದ ಉಪ್ಪಿನಕಾಯಿಯನ್ನು ಕಳಿಸಿಕೊಡಲು ಸಾರ್ವಜನಿಕರನ್ನು ವಿನಂತಿಸಲಾಗಿದೆ.

—ನ್ಯಾಯವೇ. ಆದರೆ, ಉಪ್ಪುಗೇಡಿಗಳಾದ ದಾನಶೂರರು ಉಪ್ಪು ಮತ್ತು ಕಾಯನ್ನು ಕಳಿಸಿಕೊಟ್ಟರೆ, ಉಪ್ಪಿನಕಾಯಿ ಮಾತ್ರ ಹಾಕಿಕೊಟ್ಟಾರು.

○ ○ ○

ಅಧ್ಯಕ್ಷ ನಸ್ಸೇರ ಮತ್ತು ಪ್ರಧಾನಿ ಚಾ ಎನ್ ಲಾಯಿಯವರು ಭಾರತ—ಚೀನಾ ಗಡಿ ವಿವಾದವನ್ನು ಶಾಂತಯುತವಾಗಿ ಪರಿಹರಿಸುವ ಪ್ರಯತ್ನವನ್ನು ನಡೆಸುವ ಇಚ್ಛೆಯನ್ನು ಪ್ರಕಟಿಸಿದ್ದಾರೆ.

—ಚಾ ಎನ್ ಲಾಯಿಯವರ ನಿಘಂಟುವಿನಲ್ಲಿ ಉಗ್ರ ಅರ್ಥಗಳೇ ತುಂಬಿರುವಾಗ, 'ಶಾಂತಿ'ಯೆಂಬುದು ಒಳಗೊಂಡಿರೆ ಬಹುದೆಂಬುದು ಸಂದೇಹ.

○ ○ ○

ರಾಜ್ಯ ಸರಕಾರದ ಆದಾಯವು ಎರಡು ವರ್ಷಾನಂತರ ಸ್ಥಿರಗೊಳಿಸದೆ ಹೋದರೆ, ಅದು ತನ್ನ ನೌಕರರಿಗೂ ಸರಿಯಾಗಿ ಸಂಬಳ ಕೊಡುವುದೂ ಕಷ್ಟವಾಗ ಬಹುದೆಂದು ಅರ್ಥ ಮಂತ್ರಿ ಜತ್ತಿಯವರು ಉದ್ಗರಿಸಿದರು.

—ನೌಕರರಿಗೆ ಸಂಬಳದ ಬದಲು ಗಿಂಬಳವಾದರೂ ಹೆಚ್ಚೀತು; ಹಾಗೆ, ನಿರ್ದೋಷಿ ಮಂತ್ರಿವರ್ಯರ ಮತ್ತು ಶಾಸಕರ ವೇತನ ಭತ್ತೆಗಳಿಗೆ ಖೋತ ಬೀಳದಿದ್ದರೆ, ಸಾಕು.

ಅಲ್ಲಲ್ಲಿಯ ಸುದ್ದಿ ಸಾರ

ಪರಿಣಾಮಕಾರಿ ಕುಟುಂಬ ಯೋಜನೆಗೆ ಪ್ರಚಾರ ಅಗತ್ಯ— ಕುಟುಂಬ ಯೋಜನೆಯ ಬಗ್ಗೆ ಪರಿಣಾಮಕಾರಿಯಾದ ರೀತಿಯಲ್ಲಿ ಪ್ರಚಾರ ನಡೆಸುವುದು ಅತ್ಯಗತ್ಯವಾಗಿದೆಯೆಂದು, ಉಡುಪಿ ರೋಟರಿ ಕ್ಲಬ್ಬಿನ ಅಧ್ಯಕ್ಷರೂ, ರಾಜ್ಯ ಕುಟುಂಬ ಯೋಜನಾ ಮಂಡಳಿಯ ಸದಸ್ಯರೂ ಆದ, ಶ್ರೀ ರಮೇಶ ಪೈಯವರು, ತಾ. 17—12—63ರ ಸಭೆಯಲ್ಲಿ ಒತ್ತಿ ಹೇಳಿದರು. ಈ ವರೆಗೆ ಪಂಚವಾರ್ಷಿಕ ಯೋಜನೆಗಳ ಪ್ರಕಾರ ನಡೆದಿರುವ ಕುಟುಂಬ ಯೋಜನಾಕಾರ್ಯ ಸಾಕಷ್ಟು ಆಗಿಲ್ಲವೆಂದೂ, ಗ್ರಾಮಾಂತರ ಪ್ರದೇಶಗಳಲ್ಲಿ ಕುಟುಂಬ ಯೋಜನೆಯ ಬಗ್ಗೆ ದಂಪತಿಗಳಿಗೆ ಸಲಹೆ ಕೊಡುವುದಕ್ಕಾಗಿ, ನಿವೃತ್ತರಾದ ಹಾಗೂ, ನೌಕರಿಯಲ್ಲಿರುವ ಉಪಾಧ್ಯಾಯರುಗಳನ್ನು, ನೇಮಿಸಲು ಇಲ್ಲಿ ಪ್ರಯತ್ನಗಳನ್ನು ಮಾಡಲಾಗುತ್ತಿದೆಯೆಂದು ಅವರು, ಉಡುಪಿ ರೋಟರಿ ಕ್ಲಬ್ ಸಭೆಯನ್ನುದ್ದೇಶಿಸಿ, ಮಾತನಾಡುತ್ತಾ ತಿಳಿಸಿದರು.

ಕ್ಲಬ್ಬಿನ ಸಮಾಜ ಸೇವಾ ಸಮಿತಿಯ ಅಧ್ಯಕ್ಷರಾದ, ಡಾ. ಎ. ಕೃಷ್ಣರಾವ್‌ರವರು ಮಾತನಾಡಿ, ಬೆಂಗಳೂರಿನ ರೋಟರಿ ಕ್ಲಬ್ ಮತ್ತು ವಿದ್ಯಾರ್ಥಿಗಳ ಸಹಾಯ ಸಂಸ್ಥೆ ಮತ್ತು ಉಡುಪಿ ರೋಟರ್ಯಾಕ್ಟ್ ಕ್ಲಬ್ ಜೊತೆಗೂಡಿ, ಇಲ್ಲಿನ ಕಸ್ತೂರ್ಬಾ ಮೆಡಿಕಲ್ ಕಾಲೇಜಿನಲ್ಲಿ, ಕಳೆದ ವರ್ಷ ಆರಂಭಿಸಿರುವ ಪುಸ್ತಕಗಳ ಬ್ಯಾಂಕಿನ ಯೋಜನೆಯನ್ನು ಈ ವರ್ಷವೂ ಮುಂದುವರಿಸುವ ಕಾರ್ಯಕ್ರಮವನ್ನು ತಿಳಿಸಿದರು.

ಅಂತರ್‍ರಾಷ್ಟ್ರೀಯ ರೋಟರಿ ಸಂಸ್ಥೆಯ ಕಾರ್ಯವಿಧಾನ ಕುರಿತು "ಕ್ವಿಜ್" ಕಾರ್ಯಕ್ರಮದಲ್ಲಿ, ಕ್ಲಬ್ಬಿನ ಸದಸ್ಯರೆಲ್ಲರೂ ಭಾಗವಹಿಸಿದ್ದರು. ಕಾರ್ಯದರ್ಶಿ, ಶ್ರೀ ಎ. ಜಿ. ಅಲ್ಸೆಯವರು ಅದರ ಫಲಿತಾಂಶ ತಿಳಿಸಿ, ಶೇ. ೭೦ರಷ್ಟು ಸರಿಯಾದ ಉತ್ತರಗಳು ಬಂದಿವೆ ಎಂದರು. ಡಾ| ಶಾಂತಾರಾಮ್‌ರವರು ಕೀನ್ಯಾದ ಸ್ವಾತಂತ್ರ್ಯೋತ್ಸವದ ಸಂಬಂಧದಲ್ಲಿ ನೈರೋಬಿಯ ರೋಟರಿ ಕ್ಲಬ್ಬಿಗೂ, ಫ್ರಾನ್ಸಿನಲ್ಲಿರುವ ಎರಡು ರೋಟರಿ ಕ್ಲಬ್‌ಗಳಿಗೂ ಸ್ವಸ್ತಿ ವಾಚನ ಮಾಡಿದರು.

ಎಂ. ಜಿ. ಎಂ. ಕಾಲೇಜಿನಲ್ಲಿ ಪುರಂದರದಾಸರ ಚತುರ್ಥ ಶತಮಾನೋತ್ಸವ—ಉಡುಪಿ ಎಂ. ಜಿ. ಎಂ. ಕಾಲೇಜಿನಲ್ಲಿ ಪುರಂದರದಾಸರ ಚತುರ್ಥ ಶತಮಾನೋತ್ಸವವು ಪ್ರಿನ್ಸಿಪಾಲ್ ಎಚ್. ಸುಂದರ ರಾಯರ ಅಧ್ಯಕ್ಷತೆಯಲ್ಲಿ ತಾ. 14ರಂದು ಜರಗಿತು.

ಪ್ರಾರಂಭದಲ್ಲಿ ಶ್ರೀ ಎಸ್. ಕೆ. ಶ್ರೀಪತಿ ಆಚಾರ್ಯರು ಸ್ವಾಗತಿಸಿದ ಬಳಿಕ, ಶ್ರೀ ಕೆ. ವೆಂಕಟರಾಮಪ್ಪನವರು ಶ್ರೀ ಬಾಯರಿಯವರು ಚಿತ್ರಿಸಿದ ಶ್ರೀ ಪುರಂದರದಾಸರ ಭಾವಚಿತ್ರ ಅನಾವರಣಗೈದು ಅವರ ಪ್ರತಿಭಾವಂತ ವ್ಯಕ್ತಿತ್ವದ ಕುರಿತು ಮಾತಾಡಿದರು. ಶ್ರೀ ಶೀ. ಸಂ. ಶ್ರೀ ಕಂಠಯ್ಯನವರು ಮಾತಾಡುತ್ತಾ ಪುರಂದರ ದಾಸರನ್ನೇ ರಚನೆಗಳನ್ನು ಅವರ ಈ ಚತುರ್ಥ ಶತಮಾನೋತ್ಸವವೆಂದು ಸಂಗ್ರಹಿಸಬೇಕೆಂದು ಹೇಳಿದರು. ಅಧ್ಯಕ್ಷರೂ ಪುರಂದರದಾಸರ ದೈವ ಭಕ್ತಿ, ಕಲಾವಂತಿಕೆಯನ್ನು ವಿವರಿಸಿದರು. ಬಳಿಕ ಶ್ರೀಮತಿ ಅನುಸೂಯಾ ಬಿ. ಶೆಟ್ಟರಿಂದ ಸಂಗೀತ ಕಾರ್ಯಕ್ರಮ ನೆರವೇರಿತು. ಅಂತ್ಯದಲ್ಲಿ ಶಾಕಾರ್ಯದರ್ಶಿ ಶ್ರೀ ಕರುಣಾಕರ ಶೆಟ್ಟರು ವಂದನಾರ್ಪಣಗೈದರು.

ವಿದ್ಯಾರ್ಥಿ ಪರಿಷತ್‌ನಲ್ಲಿ ಪುರಂದರದಾಸ ಜಯಂತಿ— ಇದೇ ತಾ. 20ರಂದು 'ವೀರಭೂಮಿ' ಸಂಪಾದಕ ಶ್ರೀ ಎಸ್ ವೆಂಕಟರಾಜರ ಅಧ್ಯಕ್ಷತೆಯಲ್ಲಿ, ಉಡುಪಿ ವಿದ್ಯಾರ್ಥಿ ಪರಿಷತ್ತಿನ ಆಶ್ರಯದಲ್ಲಿ, ಪುರಂದರದಾಸರ ಚತುರ್ಥ ಶತಮಾನೋತ್ಸವವು ಬೋರ್ಡ್ ಹೈಸ್ಕೂಲಿನ ಜನತಾ ಭವನದಲ್ಲಿ ನೆರವೇರಿತು.

ಆರಂಭದಲ್ಲಿ ವಿದ್ಯಾರ್ಥಿ ಪರಿಷತ್ತಿನ ಉಪಾಧ್ಯಕ್ಷ ಶ್ರೀ ಕೆ. ಎಸ್. ಶ್ರೀಪತಿ ಆಚಾರ್ಯರು ಸ್ವಾಗತಿಸಿದರು. ಅಧ್ಯಕ್ಷರು, ಪುರಂದರದಾಸ ಸ್ಮಾರಕ, ಲೇಖನ ಹಾಗೂ ಭಾಷಣ ಸ್ಪರ್ಧೆಯಲ್ಲಿ ಬಹುಮಾನಿತರಾದವರಿಗೆ ಬಹುಮಾನ ವಿತರಣೆ ಮಾಡಿ, ಭಾಷಣ ಮಾಡುತ್ತಾ ಪುರಂದರದಾಸರ ಪ್ರತಿಭೆಯನ್ನು ಹೊಗಳಿ, ನಾವು ಪ್ರಾಮಾಣಿಕ ರೀತಿಯಲ್ಲಿ ಅವರ ಸಾಹಿತ್ಯದ ವಿಮರ್ಶೆ ಮಾಡಬೇಕಲ್ಲದೆ ಇಲ್ಲದೆ ಸಂಶಯಾಗ ಳಿಂದ ಅವರ ಹೆಸರಿಗೆ ಮಸಿ ಬಳಿಯಬಾರದೆಂದರು. ಸಂಗೀತ ಕಾರ್ಯಕ್ರಮಗಳಾದ ಬಳಿಕ ಪರಿಷತ್ತಿನ ಕಾರ್ಯದರ್ಶಿ ಶ್ರೀ ಪಿ. ವಿಶ್ವನಾಥ ಶೆಟ್ಟರು ಧನ್ಯವಾದ ಸಮರ್ಪಿಸಿದರು.

ಕಿದಿಯೂರು— ಸ್ಥಳೀಯ ಹಿರಿಯ ಬುನಾದಿ ಮತ್ತು ಉನ್ನತ ಪ್ರಾಥಮಿಕ ಶಾಲೆಯಲ್ಲಿ ದಶಂಬರ 18ರಂದು ಡಾ| ಕೆ. ಮೋಹನ್‌ದಾಸ್ ಶೈಯವರ ಹಿರಿತನದಲ್ಲಿ ಕುಟುಂಬ ಯೋಜನಾ ದಿನಾಚರಣೆಯು ಜರಗಿತು. ಡಾ| ಕೆ. ರಾಮಕೃಷ್ಣ ಭಾಗವತರು ಬ್ರಹ್ಮಚರ್ಯ ಪಾಲನೆ ಅಗತ್ಯವೆಂದೂ ಶ್ರೀ ಪಿ. ಶೀನ ಶೆಟ್ಟರವರು ಕುಟುಂಬ ಯೋಜನೆಯು ಅತ್ಯಗತ್ಯ ಎಂದೂ ತಿಳಿಸಿದರು. ನಂತರ ಅಧ್ಯಕ್ಷರು ಮಣಿಪಾಲದ ಆಸ್ಪತ್ರೆಗಳಲ್ಲಿ ಮತ್ತು ಉಡುಪಿಯ ಎಲ್ಲಾ ವೈದ್ಯರುಗಳ ಬಳಿಯಲ್ಲಿ ಗರ್ಭ ನಿರೋಧಕಗಳನ್ನು ಧರ್ಮಾರ್ಥವಾಗಿ ಕೊಡಲಾಗುವುದೆಂದೂ ಶ್ರೀ. ಕೆ. ಯಮ್. ಪದ್ಮನಾಭನವರು ಮುತುವರ್ಜಿಯಿಂದ ಇಲ್ಲಿಯ ಆಸುಪಾಸುಗಳಲ್ಲಿ ಅದರ ಕಾರ್ಯವನ್ನೆಸಗುತ್ತಿರುವರೆಂದೂ ಹೇಳಿದರು. ನಂತರ ಶ್ರೀ ಆರ್. ಶ್ರೀಶನ್‌ರವರಿಂದ "ಸತೀ ಅನುಸೂಯ" ಎಂಬ ಹರಿಕಥೆ ನಡೆಯಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಕೆ. ಕೆ ತಂತ್ರಿಗಳು ಧನ್ಯವಾದವನ್ನಿತ್ತರು.

ಶ್ರೀ ಕೆ. ಯಮ್. ಪದ್ಮನಾಭನವರು ಹರಿದಾಸರಿಗೂ ಹಿಮ್ಮೇಳಕರಿಗೂ ಪಾರಿತೋಷಕವನ್ನಿತ್ತರು.

ಲೋಕ ಸೇವಾ ವೃಂದ— ಇದರ ಶಾಲೆಗಳ ಸೇರುವಿಕೆಯಿಂದ ತಾ. 7ರಂದು ವಿವೇಕಾನಂದರ ಶತಮಾನೋತ್ಸವವು ಜಿಲ್ಲಾ ಪ್ರಚಾರಾಧಿಕಾರಿ ಶ್ರೀ ಎಲ್. ಸುಬ್ರಹ್ಮಣ್ಯ ಅಯ್ಯರ್ ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಕೆ ಎಸ್. ಕೃಷ್ಣ ಭಟ್ಟರು ಸ್ವಾಗತಿಸಿದ ಮೇಲೆ ಬಹುಮಾನ ವಿತರಣೆಯಾಗಿ ಶ್ರೀ ಬಿ. ಎಂ. ಇದಿನಬ್ಬನವರ ಕವಿತಾ ವಾಚನ ನಡೆಯಿತು. ಶ್ರೀ ಎಮ್. ನಾರಾಯಣ ಭಟ್ಟ ಮತ್ತು ಅಧ್ಯಕ್ಷರ ಭಾಷಣವಾದ ಬಳಿಕ ಶ್ರೀ ಬಿ. ನಾರಾಯಣರಾಯರು "ಧನ್ಯವಾದ ಸಮರ್ಪಿಸಿದರು. ಅನಂತರ ಶ್ರೀ ಬಿ. ಎಂ. ಇದಿನಬ್ಬನವರ ಅಧ್ಯಕ್ಷತೆಯಲ್ಲಿ ಲೋಕ ಸೇವಾ ವೃಂದದ ಮೂರನೇ ಸ್ಥಾಪನಾ ದಿನವನ್ನು ಆಚರಿಸಲಾಯಿತು.

ವಿವಾಹ ಸಮಾರಂಭ

ಸತಾರದಲ್ಲಿ ಪ್ರಸಿದ್ಧ ಹೋಟೆಲ್ ಮಾಲಕರಾದ ಶ್ರೀ ಕೆ. ಶ್ಯಾಮರಾವ್ ದಿ. ಶಾನ್‌ಭೋಗ್ ಇವರ ಪುತ್ರಿ ಕುಮಾರಿ ಮಾಲಿನಿಯವರ ವಿವಾಹವು ಬೆಂಗಳೂರು ಇಂಡಿಯನ್ ಬ್ಯಾಂಕಿನ ಶ್ರೀ ಬಿ. ವಿಠ್ಠಲ್‌ರಾಯರ ಪುತ್ರ ಶ್ರೀ ರವೀಂದ್ರನಾಥರಾಯರೊಂದಿಗೆ ಇದೇ ತಾ. 19ರಂದು ಉಡುಪಿ ಸಮೀಪದ ಮಾಲ್ಪೆಯಲ್ಲಿ ಉಳವೂರಿನಲ್ಲಿರುವ 'ಆನಂದನಿವಾಸ'ದಲ್ಲಿ ವೈಭವದಿಂದ ನೆರವೇರಿತು.

ದಿವಂಗತ ಪಾದೆ ನಾರಾಯಣ ಶೆಟ್ರ ಪುತ್ರ ಹಾಗೂ ವಿಜಯಾ ಬ್ಯಾಂಕಿನ ಕಾರ್ಯದರ್ಶಿ ಶ್ರೀ ಪಿ. ಜಯರಾಮ ಶೆಟ್ರ ಸಹೋದರ ಶ್ರೀ ಪಿ. ಯಶವಂತ ಶೆಟ್ರ ವಿವಾಹವು ಬೊಂಬಾಯಿಯ ಪ್ರಸಿದ್ಧ ಹೋಟೆಲ್ ಮಾಲಕರಾದ ಶ್ರೀ ಬಾಲ ಹೊಸಮನೆ ಶಾಂತಾರಾಮ ಶೆಟ್ರ ಪುತ್ರಿ ಸೌ| ವಿಜಯಾಳೊಂದಿಗೆ ಇದೇ ತಾ. 25ರಂದು ಮಂಗಳೂರು ಡೊನ್ ಬೋಸ್ಕೊ ಹೋಲಿನಲ್ಲಿ ವಿಜೃಂಭಣೆಯಿಂದ ನೆರವೇರಿತು.

ಉಡುಪಿ ಸಂಗೀತ ಸಭೆ—ಇದರ ನೇತೃತ್ವದಲ್ಲಿ ಇದೇ ತಾ. 28, 29 ಮತ್ತು 30ರಂದು ಜರಗಲಿರುವ ಪುರಂದರದಾಸರ 4ನೇ ಶತಮಾನೋತ್ಸವದ ಸಿದ್ಧತೆಗಳು ಭರದಿಂದ ಜರಗುತ್ತಿವೆ ಪ್ರಸಿದ್ಧರನೇಕರು ಇದರಲ್ಲಿ ಭಾಗವಹಿಸಲಿರುವರು.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R. E. P. 432/63, O. S. 274/60.

ರಕ್ಷಿ ಯಾನೆ ಲಕ್ಷ್ಮೀದೇವಿ ಕೂಡಾ —ಅರ್ಜಿದಾರರು.

ಅಲಿಮಮ್ಮ ಕೂಡಾ —ಎದ್ರಿರು.

1ನೇ ಎದ್ರಿ ಅಲಿಮಮ್ಮ ಅಬ್ಬು ಬ್ಯಾರಿಯ ವಿಧವೆ, ಬೆಳ್ತಂಗಡಿ ತಾಲೂಕು, ಕುಕ್ಕಳ ಗ್ರಾಮದಲ್ಲಿ.

ಇವರಿಗೆ ತಿಳಿಸುವುದೇನೆಂದರೆ.

ಸ್ಥಿರಾಸ್ತಿ ನಿಲಮಿನ ಬಗ್ಗೆ ಅರ್ಜಿದಾರರು ದಾಖಲು ಮಾಡಿದ ಈ ಅಮಲ್ದಾರಿಯು ಇಸ್ತಿಹಾರಿನ ಶರ್ಥಗಳನ್ನು ನಿರ್ಣಯಿಸುವ ಬಗ್ಗೆ ತಾ. 4—1—64ಕ್ಕೆ ಇದೆ. ಆದ್ದರಿಂದ ಆ ಕುರಿತು ಅಗಲೀ ನಿಲಮಿನಲ್ಲಿ ನಿಲ್ಲುವರೆ ಪರ್ಮಿಶನ್ ಕೊಡಿಸುವ ಬಗ್ಗೆ ವಗೈರೆ ಬಗ್ಗೆ ದಾಖಲು ಮಾಡಿದ R. E. A. 848/63ನೆ ಅರ್ಜಿ ವಿಶಯದಲ್ಲಾಗಲೀ ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ಆ ದಿವಸ ಹಾಜರಿದ್ದು ಉದಪಡಿಸಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರು ಹಾಜ್ರಿಯಲ್ಲಿ ತೀರ್ಮಾನಿಸಲಾದೀತು.

ಬಿ ಚಿದಾನಂದರಾವ್,
ಅರ್ಜಿದಾರರ ವಕೀಲ,

ಪುತ್ತೂರು, ತಾ. 18—12—63.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

RIA 1042/1963
in OS No: 91/1962.

U. K. ಮ್ಯಾಲಪ್ಪ ಗೌಡ ಕೂಡಾ—
ಅರ್ಜಿದಾರರು (ವಾದಿರು)
ಮತ್ತು
N. ಮರಿಯಪ್ಪ ಗೌಡ ಕೂಡಾ
—ಎದ್ರಿರು (ಪ್ರತಿವಾದಿರು)

ಸದ್ರಿ ಅರ್ಜಿದಾರರ ಕಡೆಯಿಂದ—

1ನೇ ಎದ್ರಿ ಯನ್ ಮರಿಯಪ್ಪ ಗೌಡ ನಾಕೋಡು ಚಿಕ್ಕ ಗೌಡರ ಮಗ, 3ನೇ ಎದ್ರಿ ಯನ್. ಮ್ಯಾಲಪ್ಪ ಗೌಡ ನಾಕೋಡು ಪಕೀರ ಗೌಡರ ಮಗ, 4ನೇ ಎದ್ರಿ ಯನ್. ರಾಮಣ್ಣ ಗೌಡ, ಮ್ಯಾಲಪ್ಪ ಗೌಡರ ಮಗ, ಪುತ್ತೂರು ತಾಲ್ಲೂ ಅಲೆಟ್ಟಿ ಗ್ರಾಮದಲ್ಲಿರುವವರು—ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಮೇಲ್ಕಂಡ ಕೋರ್ಟಿನಲ್ಲಿ ನೀವುಕೂಡಾ ನಾಲ್ಕು ಜನರ ಮೇಲೆ ಅರ್ಜಿದಾರರು (ವಾದಿರು) ಕ್ರಮನಂಬ್ರ 91/1962 ನೇ ಪ್ರಿಲಿಮ್ನರಿ ಡಿಕ್ರಿ ವಿಧಿ ಮೇರಿಗೆ ದಾಖಲು ಮಾಡಿದ ಫೈನಲ್ ಡಿಕ್ರಿ ಅರ್ಜಿಯು ತಾ. 6—1—1964ಕ್ಕೆ ತನಿಖೆಗೆ ಇಟ್ಟಿದೆ ಆ ದಿವಸ ನೀವು ಸ್ವತಹಾ—ವ-ವಕೀಲರ ಮುಖಾಂತರ ಹಾಜ್ರಾಗಿ ಉದಪಡಿಸ ಕೊಳ್ಳತಕ್ಕದ್ದು. ಆ ಪ್ರಾಪಗೆ ಹಾಜ್ರಾಗಿ ಉದಪಡಿಸಿ ಕೊಳ್ಳಲು ತಪ್ಪಿದಲ್ಲಿ ನಿಮ್ಮ ಗೈರು ಹಾಜ್ರಾಗುವಿಕೆಯಿಂದ ಕೋರ್ಟಿನವರಿಗೆ ಯುಕ್ತಕಂಡಂತೆ ತೀರ್ಮಾನಿಸಲಾದೀತೆಂಬ ಸಂಗ್ತಿಯನ್ನು ಈ ಮೂಲಕ ನಿಮಗೆ ತಿಳಿಸಿಯದೆ.

(By Court Order)

K. Subrahmanya Gowda
Advocate for Petrs.
Puttur 16—12—63.

ಗಡಿ ಪ್ರದೇಶದಲ್ಲಿ

ಭೋಜನ ಬಯಸಿದ ಕಳ್ಳ ಅತಿಥಿ

ದೇಶದ ಉತ್ತರ ಗಡಿ ಪ್ರದೇಶಗಳಲ್ಲಿ ಭಾರತೀಯ ವೀರ ಯೋಧರು ರಕ್ಷಣಾ ಕಾರ್ಯದಲ್ಲಿ ನಿರತರಾಗಿದ್ದಾರೆ, ಪೂರ್ವ ರಂಗದಲ್ಲಿ ೧೪,೦೦೦ ಅಡಿಗಳ ಎತ್ತರದ ಹಿಮಶಿಖರದ ಪ್ರದೇಶದಲ್ಲಿ ನಮ್ಮ ಸೈನಿಕರ ಒಂದು 'ಲಂಗರ್' ಇದೆ ಈ 'ಲಂಗರ್''ನಲ್ಲಿ ಈಚೆಗೆ ವಿಚಿತ್ರ 'ನಾಟಕ'ವೊಂದು ನಡೆಯಿತು

ಮಧ್ಯ ರಾತ್ರಿಯ ಭೋಜನಕ್ಕೆಂದು ಕ್ಷುದ್ಬಾಧಪೀಡಿತ ಕರಡಿಯೊಂದು ಹೊರಟಿತ್ತು. ಹಸಿವೋ ಹಸಿವು ಕರಡಿಗೆ, ಆದರೆ ಎಲ್ಲಿ ನೋಡಿದರೂ ಮಂಜು ಹೊರತು ಮತ್ತೇನೂ ದೊರಕದು ಅದಕ್ಕೆ.

ಒಂದು ರಾತ್ರಿ ಹೊಟ್ಟೆಯ ಪಾಡಿಗಾಗಿ ಆಹಾರವನ್ನು ಹುಡುಕಿಕೊಂಡು ಹೊರಟ ಆ ಕರಡಿಗೆ ನಮ್ಮ ಸೈನಿಕರಿದ್ದ 'ಲಂಗರ್'ನಿಂದ ರುಚಿ ರುಚಿಯಾದ ಆಹಾರದ ಗಮಗಮ ವಾಸನೆ ಬಂದಿತು ಆ ವಾಸನೆ ಕರಡಿಯನ್ನು ಸೈನಿಕರ ಪಾಕಶಾಲೆಗೂ ಕರೆದು ತನ್ನಿತೆನ್ನಿ. ಮಧ್ಯ ರಾತ್ರಿಯಲ್ಲಿ ಆ ಕರಾಳ ಸ್ವರೂಪದ ಕರಡಿಯನ್ನು ಕಂಡ ಬಾಣಸಿಗ ದಿಗ್ಭ್ರಾಂತನಾದ ಹಾಗೂ ಕರಡಿಗೆ ಶರಣಾದ ಕರಡಿಗೆ ಆ ರಾತ್ರಿ ಒಳ್ಳೆಯ ಊಟ ದಕ್ಕಿತೆನ್ನಿ.

ಈ ಸಮಾಚಾರ ಸೇನೆಯ ಸುಬೇದಾರ್—ಮೇಜರ್ ಗಜೇ ಸಿಂಗ್‌ಗೆ ಸಿಟ್ಟು ಬಾಯಿತು ಸರಿ, ಈ 'ಕಳ್ಳ ಅತಿಥಿಗೆ, ತಕ್ಕ ಶಾಸ್ತಿ ಮಾಡಲೇಬೇಕೆಂದು ಅವರು ಕಾಣತೊಟ್ಟರು.

ಮರುದಿನ ರಾತ್ರಿ ಅವರು ಆ ಕರಡಿಗಾಗಿ ಕಾದುಕುಳಿತರು

ಮಧ್ಯರಾತ್ರಿಯ ಸಮಯ ಅರ್ಧ ಚಂದ್ರನ ಬೆಳಕು ಲಂಗರಿನ ಮೇಲೆ ಬೀಳುತ್ತಿದೆ. ಗಜೇ ಸಿಂಗ್ ಕರಡಿಗಾಗಿ ಕಾಳಿತಿದ್ದಾರೆ. ಬಂತು ಕರಾಳ ಕಪ್ಪಿನ ಕರಡಿ, ಕಳ್ಳ ಹೆಜ್ಜೆ ಹಾಕುತ್ತಾ ಪಾಕಶಾಲೆಯ ಕಡೆ

ಕರಡಿ ಲಂಗರಿನ ಸಮೀಪಕ್ಕೆ ಬರುವವರೆಗೆ ಕಾದಿದ್ದ ಸುಬೇದಾರ್-ಮೇಜರ್ ಗುಂಡು ಹಾರಿಸಿದರು. ಕರಡಿ ಗುರುಗುಟ್ಟಿ ಅವರ ಕಡೆ ನೆಗೆಯಿತು. ಅದು ಕರಡಿಯ ಕೊನೆಯ ನೆಗೆತ. ಆ ಕೊರೆತದ ಚಳಿಯ ರಾತ್ರಿಯಲ್ಲಿ ಗುಂಡಿನ ಶಬ್ದ ಹಿಮಾಲಯದ ಪ್ರಶಾಂತತೆಯನ್ನು ಭೇದಿಸಿತು.

ಆಹಾರಾನ್ವೇಷಣೆಯಲ್ಲಿದ್ದ ಕರಡಿ ಈ ರೀತಿ ಪ್ರಾಣ ಬಿಟ್ಟಿತು.

ಬಂದೂಕಿನ ಶಬ್ದ ಕೇಳಿದ ಗಜೇಸಿಂಗರ ಸಂಗಾತಿಗಳು ಹಾಸಿಗೆಗಳನ್ನು ಬಿಟ್ಟು ಓಡಿ ಬಂದರು. ಏನು ಚೀಣೀಯರು ಬಂದರೇ ಎಂಬುದು ಅವರು ಹಾಕಿದ ಪ್ರಶ್ನೆ. ಗಜೇಂದ್ರ ಸಿಂಗರನ್ನೂ, ಸತ್ತು ಬಿದ್ದಿದ್ದ ಕರಡಿಯನ್ನೂ ಕಂಡ ಅವರು ಗೊಳ್ಳೆಂದು ನಗಲಾರಂಭಿಸಿದರು, ಆ ಹೊಡೆತದ ಚಳಿಗಾಳಿಯಲ್ಲಿ.

ಪನಿಗತೆ.

ಮಹಾವಿದ್ಯೆ

ಉದ್ದಾಲಕನೆಂಬ ಮಹಾಋಷಿಗೆ ಶ್ವೇತಕೇತು ವೆಂಬ ಮಗನಿದ್ದನು ಈ ಮಗನು ಹರವಾದಿಯೂ, ಯಾರ ಮಾತನ್ನೂ ಕೇಳುತ್ತಿರಲಿಲ್ಲ ಇತರ ಹುಡುಗರಂತೆ ವಿದ್ಯೆ ಕಲಿಯಲು ಗುರುಗಳ ಹತ್ತಿರ ಹೋಗುತ್ತಿರಲಿಲ್ಲ ಆದ್ದರಿಂದ ತಂದೆ ಉದ್ದಾಲಕನು ಮಗನನ್ನು ಬೈದು ದಂಡಿಸಿದನು. ಇದರಿಂದ ಕುಪಿತನಾದ ಶ್ವೇತಕೇತುವು ಮನೆಬಿಟ್ಟು ಹೊರಟುಹೋಗಿ ತಾನೇ ಋಗ್ವೇದ, ಯಜುರ್ವೇದ, ಸಾಮ ಮತ್ತು ಅಥರ್ವ ವೇದಗಳನ್ನೂ, ವೇದಾಂಗಗಳಾದ ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ ಛಂದಸ್ ಮತ್ತು ಜ್ಯೋತಿಷ್ಯಗಳನ್ನೂ ಅಭ್ಯಾಸ ಮಾಡಿ ಮಹಾ ಪಂಡಿತನಾಗಿ ಹಿಂತಿರುಗಿದನು. ಆತನಲ್ಲಿ ತಾನು ಪಂಡಿತನೆಂಬ ಅಹಂಕಾರ ತುಂಬಿತ್ತು.

ಮನೆಗೆ ಬಂದಾಗ ತಂದೆ ಉದ್ದಾಲಕನು ಮಗನನ್ನು "ಮಹಾವಿದ್ಯೆ" ಕರಗತವಾಯಿತೇ ಎಂದು ಪ್ರಶ್ನಿಸಿದನು. ಶ್ವೇತಕೇತುವು ವೇದ, ವೇದಾಂಗ, ಶ್ರುತಿ, ಸ್ಮೃತಿಗಳನ್ನು ಓದಿ ಕಂಠಪಾಟ ಮಾಡಿ ಪಂಡಿತನಾಗಿದ್ದನೇ ವಿನಾ ಈ 'ಮಹಾವಿದ್ಯೆ' ಎಂದರೇನೆಂದು ತಿಳಿದಿರಲಿಲ್ಲ. ಉದ್ದಾಲಕನು ಹೇಳಿದನು. 'ಪ್ರಪಂಚದಲ್ಲಿರುವ ಚೇತನ ಒಂದು ಆದರಿಂದ ನೂರಾರು ರೂಪಗಳುದಯಿಸಿ ವಿವಿಧ ಹೆಸರುಗಳನ್ನು ಪಡೆದಿವೆ. ಮಣ್ಣಿನಿಂದಲೇ ಮನೆ, ಪಾತ್ರೆ ಮೊದಲಾದುವು ತಯಾರಾಗಿ ಬೇರೆ ಹೆಸರು ಪಡೆವಂತೆ, ಚಿನ್ನದಿಂದ ವಿವಿಧ ನಗಗಳು ರೂಪಗೊಂಡು ಬೇರೆ ಹೆಸರಿಂದ ಕರೆಯಲ್ಪಡುವಂತೆ ಈ ಪ್ರಪಂಚ ಒಂದೇ ವಸ್ತುವಿನಿಂದಾಗಿದೆ.

ತಂದೆಯ ಮಾತು ಕೇಳಿ ಶ್ವೇತಕೇತುವಿಗೆ ಆಶ್ಚರ್ಯವಾಯಿತು. ಆ ರೀತಿ ಆತನಿಗೆ ಯಾರೂ ಬೋಧಿಸಿರಲಿಲ್ಲ. ಆತನ ಗರ್ವ ಅಡಗಿ ದೈನ್ಯತೆ ಜರಗತೊಡಗಿತು. ಉದ್ದಾಲಕನು ಹೇಳಿದನು ವೇದವೇದಾಂಗಗಳೆಲ್ಲ ಅಪಾರ ವಿದ್ಯೆ ಆದರೆ ಪಾರವಿದ್ಯೆ ಒಂದಿದೆ. ಅದೇ ಸರ್ವ ಜ್ಞಾನದ ಮೂಲ ಅದಿದ್ದರೆ ಸರ್ವವೂ ಅರ್ಥವಾಗುತ್ತದೆ. ಅದಿಲ್ಲದ್ದರೆ ಸರ್ವವೂ ವ್ಯರ್ಥ.

ಮಗನಿಗೆ ಮಾತು ಮಂದಟ್ಟುಮಾಡಲು ೧೫ ದಿನ ಅನ್ನಾಹಾರ ತೆಗೆದುಕೊಳ್ಳಕೂಡದೆಂದು ಉದ್ದಾಲಕನು ಆಜ್ಞಾಪಿಸಿದನು. ಅದರಂತೆ ಶ್ವೇತಕೇತು ಉಪವಾಸವಿದ್ದನು. ೧೫ನೇ ದಿನ ಕಳೆ ಮೇಲೆ ಉದ್ದಾಲಕನು ಮಗನನ್ನು ಕುರಿತು ಆತನು ಯಾ ಪಾರಕಲಿತಿದ್ದ ವೇದವನ್ನು ಉಚ್ಚರಿಸಲು ಹೇಳಿದನು. ಶ್ವೇತಕೇತುವಿನ ಜ್ಞಾಪಕ ಶಕ್ತಿ ಕುಂದಿ ಹೋಗಿತ್ತು. ಆತನಿಗೆ ತಾನು ಕಲಿತ ವೇದಗಳು ಮಸುಕು ಮಸುಕಾಗಿದ್ದವು. ಉದ್ದಾಲಕನು ಹೇಳಿದನು. 'ಅನ್ನದ ಮೂಲಕ ನಿನಗೆ ದೊರೆಯುವ ಶಕ್ತಿಯು ಯಾವ ರೀತಿ ನಿನ್ನ ಮೆದುಳಿಗೆ ಅರ್ಥತುಂಬಿದೆಯೋ ಅದೇ ರೀತಿ ಈ ಜಗದ ವಿವಿಧ ರೂಪ, ಭೇದಗಳಿಗೂ ಅರ್ಥ ತುಂಬಿದ ಶಕ್ತಿಯೊಂದಿದೆ ಅದನ್ನೇ ದೇವರೆನ್ನುತ್ತಾರೆ ಅದರ ಅರಿವಿಲ್ಲದ ಯಾವ ವಿದ್ಯೆಯು ನಿಷ್ಪ್ರಯೋಜಕ. ನಿನ್ನ ಮೆದುಳಿಗೆ ಶಕ್ತಿ ಈಯುವ ಆ ಪ್ರಾಣ ಯಾ ಚಿತ್‌ಶಕ್ತಿಯೇ ದೇವರು!' ಎಂದನು ಶ್ವೇತಕೇತುವಿಗೆ ಜ್ಞಾನೋದಯವಾಯಿತು.

ಚಂಡೀಘರ ಬಳಿ ಪಿಂಜೋರಿಯ ಹಿಂದುಸ್ಥಾನ್ ಮೆಶಿನ್‌ಟೂಲ್ ಫೇಕ್ಟರಿಯ ಒಂದು ನೋಟ.

ಆರಿದ ದೀಪದ ಸ್ಥಾನ ಪೂರ್ತಿ

(೪ನೇ ಪುಟದಿಂದ)

ರ್ಕಾರದ ಮಂತ್ರಿ ಮಾಗಧರು ಮೊದಲು ಕಲಿತುಕೊಳ್ಳ ಬೇಕು.'

"ನೋಡು ಮತ್ತೆ ಸುರುವಾಯ್ತು ನಿನ್ನದು..."

"ಇದ್ದುದನ್ನು ಇದ್ದಂತೆ ಹೇಳಿದ್ರೆ . ."

'ನಬ್ರೂಯಾತ್ ಸತ್ಯಮಪ್ರಿಯಂ....ಅನ್ನೋ ಮಾತು ನಿಂಗೊತ್ತಿಲ್ವೆ?"

"ಸರಿ ಸರಿ ಬಿಡಿ. ಸಾಕಿನ್ನು ಈ ವಿಷಯದಲ್ಲಿ ಚರ್ಚೆ. ಹೋಗಿನ್ನು ..ಕೈಲಾಲನ್ನಾದ್ರೂ ತೊಳ್ಕೊಂಡ್ಬನ್ನಿ...."

"ಯಾಕೆ? ಮಾತಿನ ತಂತೀನ ಕಡಿದು ಬಿಟ್ರೆ"

"ಇನ್ಯಾಕೆ ಮಾತು? ನೀವೂ ಒಪ್ಕೊಂಡ್ಬಿಟ್ರಲ್ಲಾ..."

"ಏನನ್ನ ?"

"ನನ್ನ ಮಾತನ್ನ...."

"ಓ, ಹುಡುಗಿ. ಭಲೇ ಜಾಣೆ ಕಣೇ ನೀನು."

'ಮತ್ತೆ, ನೀವ್ಮಾತ್ರ ಜಾಣಾಂತ ತಿಳ್ಕೊಂಡಿದೀರಾಂತ.. .''

"ಸರಿ ಹೋಯ್ತು ಜಾಣನ ಹೆಂಡ್ತಿ ಜಾಣೆ ತಾನೇ ಆಗ್ಬೇಕಲ್ಲಾ ..ಹೋಗ್ಲಿ. ಅಂತೂ ದೀಪವೊಂದು ೬೨ ವರ್ಷ ಉರಿದು ಹಾರಿಹೋಯ್ತು ... ,,

"ಆರಿದ ದೀಪದ ಸ್ಥಾನಕ್ಕೆ ಹೊಸತನ್ನ ತಂದಿಡ್ಬೇಕು ನೋಡಿ ...'

"ಆ ಕೆಲ್ಸ ವಿಶ್ವವಿದ್ಯಾಲಯಗಳದ್ದು.."

"ಏನು ಸಾಯ್ತಾ ವೋ ಅವು .. ಕಲಿಯೋಕೆ ತಿಳಿಯೋಕೆ ಮನ್ಸಿಲ್ದಿದ್ರಿಂದ ಏನು ದೀಪ ಹಚ್ಚಿದ್ರಾವೋ ಅವು .."

"ಅದೇ ನೋಡು ಸಮಸ್ಯೆ..."

"ಇಲ್ಲಿ ಬಿಡಿ .ಕಾಲಕ್ಕೆ ಕೈ ಮುಗಿಯಬೇಕು ತಾನೆ?"

"ಸದ್ಯ ಅದೇ ಸಮಾಧಾನ ..."

"ಹೋಗಿ ಸಮಾಧಾನದಿಂದ್ಲೇ ಸಾವಧಾನ ಮಾಡ್ದೆ ಬೇಗ ಬಂದ್ಬಿಡಿ ."

"ರಾಣೀ ಸಾಹೇಬರ ಅಜ್ಞೆ ಶಿರೋಧಾರ್ಯ..."

"ಊರಿಗೆ ರಾಜನಾದ್ರೂ ಹೆಂಡ್ತಿಗೆ ಗಂಡನೇ ನೋಡಿ...."

"ಹಾವ್‌ದು, ಬಂದ,, ಬಂದೆ ."

"ಹ್ಞಾಂ ..."

— ಗೋರಾ.

● ಕುಮಾರಿ ಬಿಲ್ಲೆಗಳು ●

(ರಿಜಿಸ್ಟರ್ಡ್ Regd)

ಪ್ರಕೃತಿಯು ವಿಫಲಗೊಂಡಾಗ ಉಂಟಾಗುವ ಕಾತರ ನಿವಾರಣೆಗೆ ಸಮಯೋಚಿತವಾದ ಆಯುರ್ವೇದೀಯ ಮಿಶ್ರಣ!

ಟ್ಯೂಬ್ 1ರ ಸಾಮಾನ್ಯ ರೂ. 4/. ಮಧ್ಯಮ ರೂ. 6/ ಉತ್ತಮ ರೂ.9/-

P. Devee & Co. (N. J.) Calcutta—40.

ಸ್ಟಾಕಿಸ್ಟರು — ರಾಜಾ ಮೆಡಿಕಲ್ ಹಾಲ್, ಬೆಂಗಳೂರು ಕೆಂಟೋನ್‌ಮೆಂಟ್, ಕುಮ್ಟಾ ಫಾರ್ಮಸಿ, ಕುಮ್ಟಾ (ಉ. ಕ)

ವರ್ಗ—ಊಳಿಗ

ಮೊದಲಾದ ಯಾವತ್ತೂ ತರದ

ಎಕೌಂಟ್ ಪುಸ್ತಕಗಳು

ಶಾಲಾ ರಿಜಿಸ್ಟ್ರಿಗಳು

ಫಾರ್ಮುಗಳು

ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ

…ರಳವಾಗುತ್ತಿರುವ

ಭಾರತೀಯ ತಂತಿ ಸಂಪರ್ಕ ಸೇವೆ



ಆಗ್ರ ಮತ್ತು ದೆಹಲಿಗಳ ಟೆಲಿಫೋನ್ ಚಂದಾದಾರರು ವಿನಿಮಯ ಕೇಂದ್ರದ ಸಹಾಯವಿಲ್ಲದೆ ಫೋನಿನಲ್ಲಿ ಮಾತಾಡಿಕೊಳ್ಳುತ್ತಿದ್ದಾರೆ.

ಟೆಲೆಕ್ಸ್ ಸೇವೆಯು ಆರಂಭವು ತಂತಿ ಸಂಪರ್ಕ ಸೌಲಭ್ಯಗಳ ವಿಸ್ತರಣೆಯ ದಿಶೆಯಲ್ಲಿ ಒಂದು ಮಹತ್ವದ ಹೆಜ್ಜೆ. ಟೆಲೆಕ್ಸ್ ಸಂಪರ್ಕ ವ್ಯವಸ್ಥೆಯೆಂದರೆ ಟೆಲಿಪ್ರಿಂಟರ್ ಮೂಲಕ ವಿಚಾರ ವಿನಿಮಯವನ್ನು ಮಾಡಿಕೊಳ್ಳಲು ಇರುವ ಒಂದು ಸೌಲಭ್ಯ. ಇತ್ತೀಚೆಗೆ ಮುಂಬಯಿ, ದೆಹಲಿ, ಮದರಾಸ್ ಮತ್ತು ಕಲ್ಕತ್ತಾ, ಈ ನಾಲ್ಕು ಬೃಹತ್ ನಗರಗಳ ನಡುವೆ ಟೆಲೆಕ್ಸ್ ಸಂಪರ್ಕವನ್ನು ಏರ್ಪಡಿಸಲಾಗಿದೆ.

ಟೆಲೆಕ್ಸ್ ಸಂಪರ್ಕ ವ್ಯವಸ್ಥೆಯಲ್ಲಿ ಒಂದು ನಗರದ ಟೆಲಿಪ್ರಿಂಟರ್ ಚಂದಾದಾರರು ಅದೇ ನಗರದಲ್ಲಿ ಅಥವಾ ಬೇರೆ ನಗರಗಳಲ್ಲಿರುವ ಟೆಲಿಪ್ರಿಂಟರ್ ಚಂದಾದಾರರ ನಂಬರುಗಳನ್ನು ಯಾಂತ್ರಿಕವಾಗಿ ತಿರುಗಿಸುವ ಮೂಲಕ ನೇರವಾಗಿ ಸಂದೇಶ ವಿನಿಮಯ ಮಾಡಿಕೊಳ್ಳಬಹುದಾಗಿದೆ. ಈ ಕಾರ್ಯದಲ್ಲಿ ಯಾವುದೇ ಮಾನವೀಯ ಶ್ರಮದ ಅಗತ್ಯವಿಲ್ಲ.

ಈಗ 'ಆಟೋಮೆಟಿಕ್ ಡೈಲಿಂಗ್' ಆಧಾರದ ಮೇಲೆ ಮುಂಬಯಿ, ದೆಹಲಿ, ಮದರಾಸ್ ಮತ್ತು ಕಲ್ಕತ್ತಾ ನಗರಗಳ ನಡುವೆ ಪೂರ್ಣ ಸಂಪರ್ಕವು ಏರ್ಪಟ್ಟಿದೆ. ಅಹ್ಮದಾಬಾದಿನಲ್ಲಿರುವ ಟೆಲೆಕ್ಸ್ ವ್ಯವಸ್ಥೆಯು ಈಗ ಮುಂಬೈ ಟೆಲೆಕ್ಸ್ ವ್ಯವಸ್ಥೆಯೊಡನೆ ಜೋಡಿಸಲ್ಪಟ್ಟಿದೆ. ಹೊಸ ಉಪಕರಣಗಳ ಸ್ಥಾಪನೆಯೊಂದಿಗೆ ಈ ವ್ಯವಸ್ಥೆಯನ್ನು ರಾಷ್ಟ್ರೀಯ ಟೆಲೆಕ್ಸ್ ಜಾಲಕ್ಕೆ ಜೋಡಿಸಲಾಗುವುದು.

ತೃತೀಯ ಯೋಜನೆಯ ಅವಧಿಯಲ್ಲಿ ಬೆಂಗಳೂರು, ಅಂಬಾಲ, ಅಮೃತ್‌ಸರ್, ಕೊಯಮತ್ತೂರ್, ಕಟಕ್, ಗೌಹತಿ, ಜಮಶೇಡ್‌ಪುರ್, ಕಾನ್‌ಪುರ್, ಲಕ್ನೋ, ನಾಗಪುರ್, ಪಾಟ್ನಾ ಪುಣೆ, ರಾಜಕೋಟ್, ಸಿಕಂದರಾಬಾದ್ ಮತ್ತು ತಿರುಚಿರಾಪಳ್ಳಿ ಇವೇ ಮೊದಲಾದ ನಗರಗಳಲ್ಲಿ ಹೊಸ ಟೆಲಿಪ್ರಿಂಟರ್ ವಿನಿಮಯ ಕೇಂದ್ರಗಳನ್ನು ತೆರೆಯುವ ಉದ್ದೇಶವಿದೆ.

ಟೆಲೆಕ್ಸ್ ಸೇವೆಯಲ್ಲಿ ಬಳಸಲಾಗುವ ಎಲ್ಲ ಟೆಲಿಪ್ರಿಂಟರ್‌ಗಳನ್ನು ಸ್ವದೇಶದಲ್ಲಿಯೇ ತಯಾರಿಸಲಾಗಿದೆ. ವಿನಿಮಯ ಸಾಧನಗಳ ವಿನ್ಯಾಸವನ್ನು ಭಾರತದಲ್ಲಿಯೇ ರೂಪಿಸಿ ಸಿದ್ಧಗೊಳಿಸಲಾಯಿತೆ ಇದು ಮಹತ್ವದ ಸಂಗತಿಯಾಗಿದೆ.

ಅಂಚೆ ಮತ್ತು ತಂತಿ ಇಲಾಖೆಯು ಸಂಪರ್ಕ ಸಾಧನಗಳ ಮೂಲಕ ಮತ್ತು ಆಧುನಿಕ ತಾಂತ್ರಿಕ ವಿಧಾನಗಳನ್ನು ಅಳವಡಿಸಿಕೊಳ್ಳುವ ಮೂಲಕ ಈ ಕಾರ್ಯಪ್ರಗತಿಗೆ ಕಾರಣರಾಗಿದ್ದಾರೆ.

ಟೆಲೆಕ್ಸ್ ಸೇವಾ ಕ್ಷೇತ್ರ ಈಗ ಸೀಮಿತವಾಗಿದೆ. ಸಾಮಾನ್ಯ ತಂತಿ ಸೇವೆಯಲ್ಲಿ ಸುಧಾರಣೆಯಾಗುವುದು ಅಗತ್ಯ. ಈ ದಿಸೆಯಲ್ಲಿ ಈಗ ಅನೇಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ತೃತೀಯ ಯೋಜನೆಯ ಅವಧಿಯಲ್ಲಿ ತಂತಿ ಕಚೇರಿಗಳಲ್ಲಿನ ಟೆಲಿಪ್ರಿಂಟರ್‌ಗಳ ಸಂಖ್ಯೆಯು ಮೂರರಷ್ಟು ಹೆಚ್ಚುವುದು. ಕೆಲವು ಮಹತ್ವದ ಸ್ಥಳಗಳಲ್ಲಿ ಟೇಪ್ ರಿಲೆ ಎಕ್ಸ್‌ಚೇಂಜ್‌ಗಳನ್ನು ಸ್ಥಾಪಿಸಲಾಗುವುದು. ಹೊಸದಾಗಿ ೨೦೦೦ ತಂತಿ ಕಚೇರಿಗಳನ್ನು ತೆರೆಯುವ ಮೂಲಕ ತಂತಿ ಸೇವಾ ಸೌಲಭ್ಯವನ್ನು ವಿಸ್ತರಿಸುವ ಉದ್ದೇಶವಿದೆ.

ಕೊಕ್ಸಿಯಲ್ ಕೇಬಲ್‌ಗಳು ಮತ್ತು ಮೈಕ್ರೋವೇವ್ ಸಂಪರ್ಕ ಸಾಧನಗಳ ಉಪಯೋಗವು ತಂತಿ ಸಂಪರ್ಕ ಸೌಲಭ್ಯ ವಿಸ್ತರಣೆಯಲ್ಲಿ ಒಂದು ಮಹತ್ಸಾಧನೆ. ವ್ಯಾಪಕವಾದ ಈ ಸಂಪರ್ಕ ಜಾಲದಿಂದ, ದೇಶದಲ್ಲಿನ ಎಲ್ಲ ನಗರಗಳನ್ನು ಜೋಡಿಸುವ ಉದ್ದೇಶವಿದೆ. ಈಗಾಗಲೇ ಆಗ್ರಾ, ಕಾನ್‌ಪುರ, ಬನಾರಸ್, ಅಸನ್‌ಸಾಲ್‌ಗಳ ಮೂಲಕ ದೆಹಲಿ–ಕಲ್ಕತ್ತಾ ನಡುವೆ ಕೊಕ್ಸಿಯಲ್ ಸಂಪರ್ಕವನ್ನು ವ್ಯವಸ್ಥೆಗೊಳಿಸಲಾಗಿದೆ. ಈ ಮುಖ್ಯ ಸಂಪರ್ಕ ವ್ಯವಸ್ಥೆಗೆ ಪಾಟ್ನಾವನ್ನು ಜೋಡಿಸುವ ಕೆಲಸವು ತ್ವರಿತವಾಗಿ ನಡೆದಿದೆ. ಆಗ್ರ—ಮುಂಬೈ ನಡುವೆ ಕೇಬಲ್ ಸಂಪರ್ಕವನ್ನು ಏರ್ಪಡಿಸಿದ ಬಳಿಕ ಮುಂಬೈ—ಮದ್ರಾಸ್‌ಗಳ ನಡುವೆ ಈ ಸಂಪರ್ಕವನ್ನು ಏರ್ಪಡಿಸುವ ಕಾರ್ಯ ಕೈಗೊಳ್ಳಲಾಗುವುದು. ಕಲ್ಕತ್ತಾ ಮತ್ತು ಡಿಬ್ರುಗರ್ ನಡುವೆ ಅನೇಕ ಕಾಲುವೆಗಳನ್ನು ಮೈಕ್ರೋವೇವ್ ಸಂಪರ್ಕವನ್ನು ಸ್ಥಾಪಿಸುವ ಕಾರ್ಯವನ್ನು ತೀವ್ರ ಆರಂಭಿಸಲಾಗುವುದು.

ಸ್ಥಳೀಯ ಸಂಪರ್ಕ ವಿನಿಯಯ ಕಚೇರಿಗಳ ಬಗ್ಗೆ ಹೇಳುವುದಾದರೆ, ಈಗಿರುವ ಕಚೇರಿಗಳ ಸಾಮರ್ಥ್ಯವನ್ನು ಹೆಚ್ಚಿಸಲು, ಹಾಗೂ ಹೊಸ ಕಚೇರಿಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ತೃತೀಯ ಯೋಜನೆಯ ಅವಧಿಯಲ್ಲಿ ೧,೨೦೦ ಚಿಕ್ಕ ವಿನಿಮಯ ಕೇಂದ್ರಗಳನ್ನು ತೆರೆಯಲಾಗುವುದು. ಮುಂಬಯಿಯ ಫೋರ್ಟ್ ಪ್ರದೇಶದಲ್ಲಿಯೇ ೩೦,೦೦೦ ಲೈನ್‌ಗಳ ಸಾಮರ್ಥ್ಯವುಳ್ಳ ಒಂದು ಬೃಹತ್ ವಿನಿಮಯ ಕೇಂದ್ರವನ್ನು ಸ್ಥಾಪಿಸಲಾಗುವುದು.

ಆಟೋಮೆಟಿಕ್ ಟ್ರಂಕ್ ವಿನಿಮಯ ಕೇಂದ್ರಗಳ ಸ್ಥಾಪನೆಯ ಕಾರ್ಯಯೋಜನೆಯೂ ತಂತಿ ಸಂಪರ್ಕ ಸೇವೆಯ ಪ್ರಗತಿಯ ದಿಶೆಯಲ್ಲಿ ಒಂದು ಹೆಜ್ಜೆಯ ಸಾಧನೆ. ಆರಂಭದಲ್ಲಿ ಮುಂಬೈ, ದೆಹಲಿ, ಮದ್ರಾಸ್, ಕಾನ್‌ಪುರ ನಗರಗಳಲ್ಲಿ ಆಟೋಮೆಟಿಕ್ ಟ್ರಂಕ್ ವಿನಿಮಯ ಕೇಂದ್ರಗಳ ಮೂಲಕ ೨೬ ಕೇಂದ್ರಗಳನ್ನು ಆಟೋಮೆಟಿಕ್ ತಳಹದಿಯ ಮೇಲೆ ಜೋಡಿಸಲು ಸಾಧ್ಯವಾಗುವುದು. ಅನಂತರ ಬೆಂಗಳೂರು, ಅಹಮ್ಮದಾಬಾದ್, ಕಲ್ಕತ್ತಾ ಕೊಯಮತ್ತೂರ್‌ಗಳಲ್ಲಿ ಇಂತಹ ವಿನಿಮಯ ಕೇಂದ್ರಗಳನ್ನು ತೆರೆಯಲಾಗುವುದು.

ಟೆಲಿಫೋನ್ ಚಂದಾದಾರರೊಬ್ಬರು ವಿನಿಮಯ ಕೇಂದ್ರದ ನೆರವಿನಿಂದ ಮತ್ತೊಂದು ಸ್ಥಳದಲ್ಲಿಯ ಚಂದಾದಾರರೊಂದಿಗೆ ನೇರವಾಗಿ ಟೆಲಿಫೋನ್ ಸಂಭಾಷಣೆ ನಡೆಸುವ ಬಗ್ಗೆ ಅಂಚೆ ತಂತಿ ಇಲಾಖೆಯವರು ಕಾರ್ಯಯೋಜನೆಯನ್ನು ಕೈಗೊಂಡಿದ್ದಾರೆ. ಈ ಕಾರ್ಯಯೋಜನೆಯ ಪ್ರಕಾರ ಒಂದು ನಗರದಲ್ಲಿನ ಟೆಲಿಫೋನ್ ಚಂದಾದಾರರು ಬೇರೊಂದು ಸ್ಥಳದ ಟೆಲಿಫೋನ್ ಆಪರೇಟರ್‌ರ ನೆರವಿಲ್ಲದೆ ಆ ಸ್ಥಳದಲ್ಲಿನ ಚಂದಾದಾರರೊಂದಿಗೆ ಮಾತನಾಡಬಹುದು. ಟ್ರಂಕ್ ಕರೆಗಳಿಗೆ ತಗಲುವ ವೆಚ್ಚದ ಮೊತ್ತವನ್ನು ಮೂಲ ಚಂದಾದಾರನ ಟೆಲಿಫೋನ್ ಮೀಟರ್ ಯಾಂತ್ರಿಕವಾಗಿ ತೋರಿಸುವುದು.



ನೂತನ ಟೆಲಿಫೋನ್ ವಿನಿಮಯ ಕೇಂದ್ರವೊಂದರ ಕಾರ್ಯವಿಭಾಗ.

'NAVAYUGA' WEEKLY

is in the list of periodicals and Newspapers approved for use in Secondary Schools as per proceedings Roc. No 466 N/50 dated 2-12—1950 of the Director of Public Instruction Madras.

ಕಲಾವಿದನೊಬ್ಬನಿಗೆ ಗಡೀಪಾರು

(೩ನೇ ಪುಟದಿಂದ)

ಕರನ್ನು ತಿದ್ದುವ ಶಿಬಿರಗಳಿಗೂ ಕಳುಹಿಸಲಾಯಿತು ನಿಜವಾಗಿ ಈ ಶಿಬಿರಗಳು ಕೇಂದ್ರೀಕರಣಗೊಳಿಸಿರುವ ಶಿಬಿರಗಳಾಗಿದ್ದುವು.

ಟಿಸಾರ್ಸಿನ ಹೊಯಿಗೆಯಲ್ಲಿಯ ಶಿಬಿರದಲ್ಲಿ ಟ್ರೈಶ್ಯಾಂಬೆಯವರನ್ನು ಹಾಕಿದ್ದರು. ಮುಂಜಾವಿನಲ್ಲಿ ಜಾಗಂಟೆಗಳು ಜನರನ್ನೆಬ್ಬಿಸುತ್ತಿದ್ದುವು. ಕಾವಲ ಸೈನ್ಯ ಸುತ್ತಮುತ್ತಲೂ ಸಿದ್ಧವಾಗಿತ್ತು. ಆಗ ಅವರೆಲ್ಲರನ್ನೂ, ತಿನ್ನಲಿಕ್ಕೂ ಏನನ್ನೂ ಕೊಡದೆ, ಕೆಲಸಕ್ಕೆ ಕಳಿಸಲಾಯಿತು. ಆ ದಿನ ಇಡೀ ಅವರೆಲ್ಲರೂ ಯಾವ ಕಾರಣವೂ ಇಲ್ಲದೆ ಉಸುಬನ್ನು ಸಿಕ್ಕಾಸಿನಿಂದ ಅಗೆಯಬೇಕಾಯಿತು. ಆ ನಡುವೆ ಒಂದು ಬಟ್ಟಲು ನೀರು-ಸಾರನ್ನು ಮಧ್ಯಾಹ್ನದ ಭೋಜನವೆಂದು ಕೊಡಲಾಯಿತು. ಆದರೆ ನಂತರ ಯಥಾಪ್ರಕಾರ ಅಗೆಯಲವರನ್ನು ಅಟ್ಟಿಬಿಟ್ಟರು ಸ್ಥಳೀಯ ಜನರು ಅವರಿಗೆ ಸಹಾಯ ಮಾಡಲು ಪ್ರಯತ್ನಿಸಿದರು. ಆದರೆ ಅದೂ ಸಾಧ್ಯವಾಗಲಿಲ್ಲ.

ಸಹಕಾರೀ ಸಂಸ್ಥೆಗಳನ್ನು ಒಂದುಗೂಡಿಸಿ ಕಡ್ಡಾಯ ಶಿಬಿರಗಳನ್ನಾಗಿ [ಕಮ್ಯೂನ್] ಬದಲಾಯಿಸಲಾಯಿತು. ಅವರ ಹಾಗೆಯೇ, ಆ ಸಹಕಾರೀ ಸಂಸ್ಥೆಗಳಲ್ಲಿದ್ದ ಸದಸ್ಯರನ್ನೂ ಬಲಾತ್ಕಾರದಿಂದ ಶಿಬಿರಗಳಲ್ಲಿ ತುಂಬಿಸಿ ದುಡಿಸಲಾಯಿತು, ಅವರಿಗೂ ಸಿಕ್ಕಿದ್ದು ಒಂದೇ ಒಂದು ಬಟ್ಟಲು ನೀರು-ಸಾರು. ಆ ಒಂದು ಬಟ್ಟಲು ನೀರು-ಸಾರನ್ನು ಪಡೆಯುಕೊಳ್ಳಲಿಕ್ಕಾಗಿ ಅವರು ಸುಡುತ್ತಿರುವ ಸೂರ್ಯನ ಬಿಸಿಲಿನಲ್ಲಿ ಸಾಮಾನ್ಯ ಖಾನಾವಳಿಗೆ ನಡೆದುಕೊಂಡೇ ಹೋಗಿ ಬರಬೇಕಾಗಿತ್ತು. ಅದೂ ಅಲ್ಲದೆ, ಭಿನ್ನ ಭಿನ್ನ ರಾಷ್ಟ್ರೀಯರ ನಡುವೆ ಹಗೆತನ ಬೆಳೆಯಲು ಏನೆಲ್ಲಾ ಮಾಡಬೇಕೋ ಅವನ್ನೆಲ್ಲಾ ಶಿಬಿರ ಪ್ರಮುಖರು ಮಾಡುತ್ತಿದ್ದರು. ಇವೆಲ್ಲಾ ನಡೆದದ್ದು ೧೯೫೮ರಲ್ಲಿ. ಆಗ ಆರ್ಥಿಕ ವ್ಯವಸ್ಥೆ ಅವರೆದುರಿಗೇನೇ ಪತನಾವಸ್ಥೆಗೆ ಬಂದಿತ್ತು. ಸಹಕಾರೀ ಸಂಸ್ಥೆಗಳಿದ್ದಾಗ ಟಿಸಾರ್ಸಿನಲ್ಲಿ ಉತ್ತಮ ದ್ರಾಕ್ಷಿಯ ಬೆಳೆಯಾಗಿತ್ತು. ಆದರೆ ಈಗ ಬಳ್ಳಿಗಳೂ ಬಾಡಿರುತ್ತವೆ. ಟಿಸಾರ್ಸಿನ್ ಕಮ್ಯೂನ್‌ಗಳಲ್ಲಿ ರಾಸುಗಳೂ ಮಾಯವಾದುವು. ಅವುಗಳ ಸ್ಥಾನಕ್ಕೂ ಜನರನ್ನೇ ಉಪಯೋಗಿಸಲಾಯಿತು.

ಕುಲ್‌ಡ್ಜಾದ ಹೆಚ್ಚಿನ ಕಝಾಕ್ ಬುದ್ಧಿಜೀವಿಗಳೆಲ್ಲರೂ—ಚಿತ್ರಕಾರರು, ಹಾಡುಗಾರರು, ಕವಿಗಳು ಹಾಗೂ ಉಪಾಧ್ಯಾಯರು — ಟ್ರೈಶ್ಯಾಂಬಾಯೆಯವರಿದ್ದ ಜೇರೆಯಲ್ಲೇ ವಾಸಿಸುತ್ತಿದ್ದರು. ಅವರಲ್ಲಿ ಹೆಚ್ಚಿನವರು ಅವರ ಹಾಗೆಯೇ ಕುಮಿಟಾಂಗ್ ಕಾರಾಗೃಹವನ್ನು ಕಂಡವರೇ ಇದ್ದರು, ತಮ್ಮ ಧ್ಯೇಯದ ಪೂರ್ತಿಗಾಗಿ ಹೋರಾಡುವಾಗ ಶತ್ರು ವರ್ಗ ಅವರನ್ನು ಬಂಧಿಸಿತ್ತೆಂಬುದು ಆಗ ಅವರಿಗೆಗೊತ್ತು. ಯಾವದರ ವಿಜಯಕ್ಕಾಗಿ ಹೋರಾಡಿದ್ದರೊ ಅದು ಫಲಿಸಿದೊಡನೆ ಪುನಃ ಸೆರೆಮನೆಯೊಳಗಿರಬೇಕಾಗುತ್ತದೆನ್ನುವದನ್ನು ಆಗ ಯೋಚಿಸಲು ಸಾಧ್ಯವಿದೆಯೇ?"

"೧೯೫೮ರ ಶರತ್ಕಾಲದಲ್ಲಿ ಸಿಂಕಿಯಾಂಗ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಟ್ರೈಶ್ಯಾಂಬಾಯೆವ್ ಹಾಗೂ ಇತರರ ಬಿಡುಗಡೆಗಾಗಿ ಪ್ರದರ್ಶನ ನಡೆಸಿದರು. ಪ್ರದರ್ಶಕರೆಲ್ಲರೂ ಅವರ ಹಿಂದಿನ ವಿದ್ಯಾರ್ಥಿಗಳಾಗಿದ್ದರು. ನಗರದ ನಾಟಕ ಪ್ರೇಮಿಗಳು ತಮ್ಮ ಪ್ರಿಯ ನಟರ ಬಿಡುಗಡೆಯಾಗಬೇಕೆಂದು ಕೇಳಿಕೊಂಡರು ಮನೆಮನೆಗಳ ಗೋಡೆಗಳ ಮೇಲೆ ನವಜೀವನದ ವೀರರನ್ನು ಬಂಧವಿಮೋಚನೆಗೊಳಿಸಬೇಕೆಂದು ಕೇಳಿಕೊಳ್ಳುವ ವಿನಂತಿ ಪತ್ರಿಕೆಗಳನ್ನು ತಾಗಿಸಲಾಯಿತು. ಪರಿಣಾಮವಾಗಿ ಅವರೆಲ್ಲರ ಬಿಡುಗಡೆ ಏನೋ ಆಯಿತು. ಹಿಂದಿನ ಉದ್ಯೋಗವೂ ದೊರಕಿತು. ಆದರೆ ಅವರ್‍ಯಾರಿಗೂ ಹಕ್ಕು—ಅಧಿಕಾರ ಅವೇನೂ ಇರಲಿಲ್ಲ.

ಅದೇ ವರ್ಷ ಪುಷ್ಕಿನ್, ನೇಕ್ರಾಸೊವ್, ಮುಖಾಂಬೆಟ್, ಯುಟೆಮಿಸೊವ್; ಅಬ್ಬಾ, ಇಬ್ರ್ಯಾ ಅಲ್ಟಿನ್ಸಾರಿನ್ ಮತ್ತು ಮುಖ್ತಾರ್ ಐಜೋವರ ಕುರಿತು ಉಲ್ಲೇಖವಿದ್ದ ಪಠ್ಯಪುಸ್ತಕಗಳನ್ನು ಚೈನಾದಲ್ಲಿರುವ ಕಝಾಕ್ ಶಾಲೆಗಳಿಂದ ತೆಗೆದುಹಾಕಲಾಯಿತು ಕಝಾಕರ ಜಾನಪದ ಗೀತೆ ಹಾಗೂ ಹಿಂದಿನ ಕಝಾಕ ವಾದನಗಳ ಕುರಿತು ಹೀನಾಯವಾಗಿ ಮಾತಾಡಲು ಟ್ರೈಶ್ಯಾಂಬಾಯೆವರಿಗೆ ಆಜ್ಞೆ ಕೊಡಲಾಯಿತು. ಅವರು ನಕಾರವನ್ನು ಸೂಚಿಸಿದರು. ಅನಂತರ ಬೇರೊಂದು ಆಜ್ಞೆ ಬಂತು. ಕಝಕರೂ ಚೈನಿಗಳೇ ಇದ್ದಾರೆ. ಅವರ ಸಾಹಿತ್ಯ ಹಾಗೂ ಸಂಸ್ಕೃತಿ ಚೈನೀಯರದ್ದೇ ಇದೆ, ಕಝಾಕಸ್ಥಾನ ಮತ್ತು ಚೈನಾದ ನಡುವೆ ಗಡಿಯನ್ನು ಗುರುತಿಸಬಾರದು... ಮುಂತಾದ ವಿಷಯಗಳ ಮೇಲೆ ಪಠ್ಯಪುಸ್ತಕ ಬರೆಯಲು ಆಜ್ಞೆ ಬಂತು. ಕುಮಿಟಾಂಗ್ ಸರಕಾರವು ಸಹಾ ಅದೇ ರೀತಿ ಬಲಾತ್ಕರಿಸಿದ್ದರೂ ತಾನದನ್ನು ತಿರಸ್ಕರಿಸಿದ್ದೆನೆಂದು ಹೇಳಿ ತನ್ನ ವಿರೋಧವನ್ನವರು ವ್ಯಕ್ತಪಡಿಸಿದರು".

ಪಾಕಿಸ್ಥಾನದ ಸರ್ವಾಧಿಕಾರಿ ಅಯೂಬ ತನ್ನ ಸರ್ವಶಕ್ತಿಯನ್ನುಪಯೋಗಿಸಿಸ್ವರವೆತ್ತುತ್ತಿದ್ದಾರೆ—ಭಾರತದಲ್ಲಿರುವ ಮುಸಲ್ಮಾನರ ಮೇಲೆ ಒತ್ತಡ ಹಾಕಲಾಗುತ್ತಿದೆಯೆಂದು ಪಾಕಿಸ್ಥಾನದಲ್ಲಿ ಉಳಿದಿರುವ ಹಿಡಿ ಹಿಂದೂಗಳನ್ನು ಮತಾಂತರಿಸಲು ಎಲ್ಲಾ ರೀತಿಯಲ್ಲೂ ಅಲ್ಲಿ ಪ್ರಯತ್ನ ನಡೆಯುತ್ತಿದೆ. ಮುಸಲ್ಮಾನರನ್ನು ಚೈನೀಯರನ್ನಾಗಿ ಮಾಡಲು ಕಝಾಕಸ್ಥಾನ—ಸಿಂಕಿಯಾಂಗಿನಲ್ಲಿ ಪ್ರಬಲ ಪ್ರಯತ್ನ ನಡೆಯುತ್ತಿರುವತ್ತ ಅವರ ಗಮನ ಹೋಗಿರುವದಿಲ್ಲ. ಚೈನಾ—ರಷ್ಯಾಗಳ ಗಡಿ ಪ್ರದೇಶದಲ್ಲಿದ್ದ ಮುಸಲ್ಮಾನರನ್ನು ಒಳ ಪ್ರದೇಶಗಳಿಗೆ ರವಾನೆ ಮಾಡಲಾಗಿರುತ್ತದೆ. ಅಸ್ಸಾಂ, ಬಂಗಾಲ, ತ್ರಿಪುರ, ಪಂಜಾಬ, ಕಾಶ್ಮೀರ ... ಕೇಳುತ್ತ ಪಡೆಯಲು ಪ್ರಯತ್ನವನ್ನು ಅಯೂಬ ಮುನ್ನಡೆಸುತ್ತಿದ್ದಾರೆ—ರಾದಲ್ಲಿ ಚೈನಾವು ಕ್ರಮಶಃ ಕಝಾಕಸಾನ ಹಾಗೂ ಇತರ ಸ್ವತಂತ್ರ ದೇಶಗಳನು ನುಂಗುತ್ತ ಪಾಕಿಸ್ಥಾನದತ್ತವೇ ನಾಲಗೆ ಚಾಚುತ್ತಿದೆ. ಇಷ್ಟಾದರೂ ಅಯೂಬರಿಗೆ ಯೋಗ್ಯ ಜ್ಞಾನೋದಯವಾಗುವದಿಲ್ಲ! ಅದಕ್ಕಿಂತಲೂ ಆಶ್ಚರ್ಯವೆಂದರೆ ದೂರದಲ್ಲಿದ್ದು ಎರಡನ್ನೂ ಹೋಲಿಸಿ ನೋಡುವ ಸಂದರ್ಭ ಇದ್ದರೂ ಅತ್ತ ಮನಸ್ಸು ಕೊಡದೆ ಮತದತ್ತ ಅದಕ್ಕಿಂತಲೂ ಪಾಕಿಸ್ಥಾನದತ್ತವೇ ಮನಸ್ಸು ಕೊಡುತ್ತಿರುವ ಪಂಚಮ ದಳದ ಚಟುವಟಿಕೆ.

'ಚೈನಾದಲ್ಲಿ ಪರಿಸ್ಥಿತಿ ಅತಿ ಹೀನಾವಸ್ಥೆಗೆ ಬಂದಿರುತ್ತದೆ. ಇಂದು ಅಲ್ಲಿ ಯಾರೂ ಪುಷ್ಕಿನ್, ಅಬ್ಬಾ ಅಥವಾ ಆಹ್ಯಾವ ಆಧುನಿಕ ರಷ್ಯನ್ ಬರಹಗಾರರ ಪುಸ್ತಕಗಳನ್ನು ಓದುವಂತಿಲ್ಲ. ಪಶ್ಚಿಮ ಚೈನಾದಲ್ಲಿ ವಾಸಿಸಿಕೊಂಡಿದ್ದ ಕಝಾಕರನ್ನು, ಕಿರ್ಗಿಗಳನ್ನು ಒಳಪ್ರದೇಶಗಳಲ್ಲಿ ಕೂಡಿ ಹಾಕಲಾಗಿರುತ್ತದೆ, ಅಲ್ಲಿಗೆ ಒಳಪ್ರದೇಶಗಳ ಜನರನ್ನು ನಾಗಿಸಲಾಗಿರುತ್ತದೆ.

ಇದೆಲ್ಲಾ ಏತಕ್ಕಾಗಿ ನಡೆಯುತ್ತಿದೆ? ಇದರಿಂದ ಸ್ನೇಹತ್ವ ಸಂವರ್ಧನೆಯಾಗಬಹುದೇ? ಇದು ಅಂತಾರಾಷ್ಟ್ರೀಯತೆ?- ಖಂಡಿತ ಇಲ್ಲ ಇದು ಕೇವಲ ನಗ್ನ ಚೌವಾದ.

ಭಾರತದ ಕುರಿತು ಉಪನ್ಯಾಸಕರ ಲೇಖನಗಳನ್ನಿರುವ 'ಚೈನಾ ಇಂದು." (ಚೈನಾ ಟುಡೇ) ಪತ್ರಿಕೆಯ ಕೆಲ ಸಂಚಿಕೆಗಳನ್ನು ಇಲ್ಲಿಗೆ ಬರಲು ಸರಕಾರ ಬಿಡದಿದ್ದುದಕ್ಕಾಗಿ ಅಬ್ಬಾ! ಇಲ್ಲಿಯ ಕಮ್ಯೂನಿಸ್ಟರು ಎಬ್ಬಿಸಿದ ಕೂಗೇ! ಮುನ್ಸಿಜೀಯವರು ಅಮೇರಿಕದಲ್ಲಿ ಹಿಂದೆಯೇ ಪ್ರಕಟವಾಗಿದ್ದ ಮತೀಯ ಮುಂದಾಳುಗಳನ್ನು ತಮ್ಮ ಭವನದಲ್ಲಿ ಪ್ರಕಟಿಸಿದಾಗ ಪಾಕಿಸ್ಥಾನದ ಪರದಾಟವೇ! ಆದರೆ ಚೈನಾದಲ್ಲಿ ನಡೆಯುತ್ತಿರುವದೇನು? ಚೌ-ಎನ್-ಲಾಯ್, ಮಾವೊ ತ್ಸೆ-ಟುಂಗರ ಹೆಸರು-ಚಿತ್ರಗಳಿಲ್ಲದ ಪುಸ್ತಕಗಳು ನೋಡಸಿಗುವಂತಿಲ್ಲ! ಮುಸಲ್ಮಾನರ ಕೃತಿಗಳನ್ನೆಲ್ಲಾ ನಾಶಮಾಡಲಾಗಿರುತ್ತದೆ, ಅತ್ತ ಗಮನ ಕೊಡಲು ಯಾರಿಗೂ ಅವಕಾಶವೇ ಸಿಗುತ್ತಿರುವದಿಲ್ಲ,

ಚಿಯಾಂಗ್ ಕೈಶೇಖರ ವಿರುದ್ಧ ಹೋರಾಡಿ ಕಮ್ಯೂನಿಸ್ಟ್ ಸರಕಾರದ ಸ್ಥಾಪನೆಗಾಗಿ ಸಕ್ರಿಯ ಹೋರಾಟ ನಡೆಸಿ, ಸ್ಥಾಪಿಸಿ, ನಂತರ, ಅದರ, ಕಹಿಯನ್ನು ಕಂಡಿರುವ ಶಿಕ್ಷಕರ, ಕವಿಗಳ. ರಾಜನೀತಿಜ್ಞರ ಅನುಭವವನ್ನು ಅದರಿಂದಲೇ ತಿಳಿದುಕೊಂಡಿರುವಂತೆ ಇಲ್ಲಿ ನೋಡಿರುವೆವು. ಚೈನಾದೊಳಗೇನೇ ಏನು ನಡೆಯುತ್ತಿದೆ? ಬುದ್ಧಿಜೀವಿಗಳ ಕುರಿತು ಮಾತ್ರವಲ್ಲ ಸಾಮಾನ್ಯ ವ್ಯಕ್ತಿಯ ಅವಸ್ಥೆ ಹೇಗಿದೆಂಬುದನ್ನೂ ವಿವರವಾಗಿ ತಿಳಿದುಕೊಳ್ಳಬಹುದು.

—ಶ್ರೀ ಶಿವಶಂಕರ

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ, ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್‌ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ
ಅತ್ಯಂತ ಪ್ರಯೋಜನಕಾರಿ ಪುಸ್ತಕ—

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು
ನವಭಾರತ ಪುಸ್ತಕ ಭಂಡಾರ, ಉಡುಪಿ.

READ & ADVERTISE IN NAVAYUGA WEEKLY

ಸಾಹಸದ ಪ್ರತೀಕ

ಸ್ವಾತಂತ್ರ್ಯಪ್ರಿಯ ಅಫಘಾನರು

ಇತಿಹಾಸ ಪ್ರಸಿದ್ಧವಾದ ಖೈಬರ್ ಕಣಿವೆಯೂಹಿ ಗುಡ್ಡ ಪರ್ವತಗಳಿಂದ ಆವೃತವಾದ ಅಫಘಾನಿಸ್ಥಾನವಿದೆ. ಹಣ್ಣುಹಂಪಲುಗಳ ನೆಲೆವೀಡಾದ ಈ ಪ್ರದೇಶದ ಜನರು ಕಷ್ಟ ಸಹಿಷ್ಣುಗಳು; ಮೇಲಾಗಿ ಸ್ವಾತಂತ್ರ್ಯ ಪ್ರಿಯರು. ಉತ್ತರದಲ್ಲಿ ರಶ್ಯ, ಪಶ್ಚಿಮದಲ್ಲಿ ಇರಾನ್, ಪೂರ್ವದಲ್ಲಿ ಪಾಕಿಸ್ತಾನ್, ಈಶಾನ್ಯದಲ್ಲಿ ಚೈನಾ ಮತ್ತು ಭಾರತ ಈ ರಾಷ್ಟ್ರಗಳ ನಡುವೆ ಸಾಹಸಮಯ ಜೀವನವನ್ನು ನಡೆಸುತ್ತಿರುವ ಅಫಘಾನಿಸ್ತಾನವಿದೆ. ಅಫಘಾನಿಸ್ತಾನದ ಆರ್ಥಿಕ ಅಭಿವೃದ್ಧಿ ತನ್ನ ಸುತ್ತು ಮುತ್ತಲಿನ ರಾಷ್ಟ್ರದವರ ದೃಷ್ಟಿಕೋನವನ್ನವಲಂಬಿಸಿಕೊಂಡಿದೆಯೆನ್ನಬಹುದು.

ಪ್ರಾಚೀನ ಕಾಲದಲ್ಲಿ ಈ ನಾಡನ್ನು 'ಆರ್ಯಾನಾ" ಅಂದರೆ ಆರ್ಯರ ನಾಡು ಎಂದು ಕರೆಯುತ್ತಿದ್ದರು. ಈ ನಾಡಿನಲ್ಲೇ ಮೊತ್ತಮೊದಲು ಆರ್ಯರು ನೆಲೆಸಿದ್ದಿರಬೇಕು ಎಂದು ಚರಿತ್ರೆ ಸಾರುತ್ತಿದೆ. ೧೫ ಮಿಲಿಯ ಜನರಿಗಿಂತಲೂ ಹೆಚ್ಚಿನವರು ಆರ್ಯರ ವಂಶಜರು. ತಾಜಿಕ್ಸ್, ಉಜ್‌ಬೆಕ್ಸ್, ಹಜಾರಸ್ ಮುಂತಾದ ಮಂಗೋಲಿಯನ್ ವಂಶಕ್ಕೆ ಸೇರಿದವರು ಕೂಡಾ ಇಲ್ಲಿ ವಾಸಮಾಡಿಕೊಂಡಿದ್ದಾರೆ.

ಅಫಘಾನಿಸ್ತಾನದ ಮೇಲೆ ಅನೇಕ ಆಕ್ರಮಣಗಳಾಗಿದ್ದುವು. ಆರ್ಯರು ಪರ್ಶಿಯನರು, ಮೌರ್ಯರು, ಶಿಥಿಯನರು, ಹೂಣರು, ಅರಬರು, ತುರ್ಕರು, ಮೊಗಲರು ಇನ್ನೂ ಅನೇಕ ಮತೀಯರು ಸಹಸ್ರಾರು ಜನಾಂಗದವರು ಅಫಘಾನಿಸ್ಥಾನವನ್ನು ಆಳಿದ್ದರು. ಮೆಸಿಡೋನಿಯಾದ ಅಲೆಕ್ಸಾಂಡರ್, ಚೆಂಗಿಸ್‌ಖಾನ್ ಮತ್ತು ತೈಮೂರ್ ಅಫಘಾನಿಸ್ಥಾನದ ಮೇಲೆ ಧಾಳಿಮಾಡಿ ಅದನ್ನು ಜಯಿಸಿದ್ದರು. ಇದೇ ದಾರಿಯಾಗಿ 'ಸುವರ್ಣದ ನಾಡೆ'ನಿಸಿದ ಭಾರತದ ಮೇಲೆ ಅಲೆಕ್ಸಾಂಡರ್ ಗಂಡೆತ್ತಿ ಬಂದಿದ್ದ. ಭಿನ್ನ ಭಿನ್ನ ಮತೀಯರು ಅಫಘಾನಿಸ್ತಾನದ ಮೇಲೆ ಆಕ್ರಮಣ ನಡೆಸಿದ್ದರು. ಆದರೆ ಆಕ್ರಮಣದಿಂದ ಪ್ರಭಾವಿತರಾಗದೆ, ಪರಕೀಯರ ಭಾಷಾ ವ್ಯಾಮೋಹಕ್ಕೆ ಸಿಲುಕದೆ ತನ್ನದೇ ಆದ ಸ್ವಾತಂತ್ರ್ಯದ ಕಿಡಿಯನ್ನು ಪ್ರಜ್ವಲಿಸಿತು. ಸ್ವಾತಂತ್ರ್ಯವೇ ಅವರ ಸರ್ವಸ್ವವಾಗಿತ್ತು. ೧೮ನೇ ಶತಮಾನದಲ್ಲಿ ಅಫಘಾನರ ಮುಖಂಡ ಅಹಮ್ಮದ್ ಷಹಾ ಅಬ್ದಾಲಿ ಅಫಘಾನಿಸ್ಥಾನವನ್ನು ಸ್ಥಾಪಿಸಿದ. ಇವನ ಪ್ರಾಂತ್ಯವು ಪಶ್ಚಿಮದ ಕ್ಯಾಸ್ಪಿಯನ್ ಸಮುದ್ರ ದಂಡೆಯಿಂದ ಪೂರ್ವದ ಸಟ್ಲೆಜ್ ನದಿಯ ಕಿನಾರೆಯ ವರೆಗೆ ಹರಡಿತ್ತು.

ಮುಖ್ಯ ಕಸುಬು

ಅಫಘಾನಿಸ್ತಾನವು ಪರ್ವತಗಳ ನಾಡೆಂದು ಮೊದಲೇ ಹೇಳಿದೆ. ಇಲ್ಲಿ ಫಲವತ್ತಾದ ಭೂಮಿಗಳಿಲ್ಲ. ಮರುಭೂಮಿಯಲ್ಲಿ ಅಲ್ಲಲ್ಲಿ ಓಯಸಿಸ್‌ಗಳು ಕಂಡು ಬರುತ್ತವೆ. ನದೀ ಕಣಿವೆಗಳಲ್ಲಿ ಹಣ್ಣು ಹಂಪಲುಗಳನ್ನು ಬೆಳೆಸುತ್ತಾರೆ. ಇಲ್ಲಿಯ ಹಣ್ಣು ಹಂಪಲು ಜಗತ್ಪ್ರಸಿದ್ಧವಾಗಿವೆ. ಕೆಲವು ಕಡೆಗಳಲ್ಲಿ ನೀರಾವರಿಯ ಸಹಾಯದಿಂದ ಗೋಧಿಯೇ ಮುಂತಾದ ಬೆಳೆಗಳನ್ನು ಬೆಳೆಸುತ್ತಾರೆ. ಜನರು ಉಣ್ಣೆ ಬಟ್ಟೆಗಳನ್ನು ತಯಾರಿಸುತ್ತಾರೆ. ಜಮಖಾನೆಗಳು ಕೂಡಾ ಇಲ್ಲಿ ತಯಾರಾಗುತ್ತವೆ. ಜಲವಿದ್ಯುತ್ ಯೋಜನೆಯಿಂದಾಗಿ ಇಲ್ಲಿಯ ಬಟ್ಟೆ ಗಿರಣಿ ಮತ್ತು ಸಕ್ಕರೆಯ ಕಾರ್ಖಾನೆಗಳು ಪ್ರಗತಿ ಪಥದಲ್ಲಿ ಮುನ್ನಡೆಯುತ್ತಲಿವೆ.

ಹೆಲ್ಮಂಡ್ ನದೀ ಯೋಜನೆ

ಪರ್ವತ ಪ್ರದೇಶದಿಂದ ರಭಸವಾಗಿ ಹರಿದು ಬಂದು ಸಾವಿನ ಮರುಭೂಮಿ ಮಾರ್ಗವಾಗಿ ಹರಿದು ಹೆಲ್ಮಂಡ್ ನದಿಯು ನೈಋತ್ಯ ಪ್ರದೇಶಕ್ಕೆ ತುಂಬಾ ಉಪಕಾರಿಯಾಗಿದೆ. ಪುರಾತನ ಕಾಲದಲ್ಲಿ ಈ ಹೆಲ್ಮಂಡ್ ನದಿಯ ದಡದಲ್ಲಿ ಸಂಪದ್ಯುಕ್ತವಾದ ಪಟ್ಟಣಗಳು ಸ್ಥಾಪಿಸಲ್ಪಟ್ಟಿದ್ದು ಇವುಗಳಲ್ಲಿ ಚಾಕ್ ಶಾನ್ಸ್ಪುರ್ ಪ್ರಾಮುಖ್ಯ ಪಟ್ಟಣವಾಗಿತ್ತು. ಜಂಗೀಜ್ ಖಾನನ ಹುಚ್ಚು ರಾಜ್ಯ ನೀತಿಯಿಂದಾಗಿ ಇಲ್ಲಿಯ ನಿವಾಸಿಗಳು ಸಾವನ್ನಪ್ಪ ಬೇಕಾಯಿತು. ಒಂದೊಮ್ಮೆ ಸಂಪದ್ಯುಕ್ತವಾದ ನಗರವಿಂದು ಒಂದು ಮರುಭೂಮಿಯಾಗಿ ಪರಿಣಮಿಸಿದೆ

ಇತ್ತೀಚೆಗಿನ ಸಂಶೋಧನೆಯಿಂದ ಅಲ್ಲಿಯ ಜನರ, ಆ ಕಾಲದ ಅಸ್ಥಿಪಂಜರಗಳು, ವಿಗ್ರಹಗಳು, ಆಟಿಕೆಗಳು ಸಿಕ್ಕಿವೆ. ಜನರು ಸಿಂಧೂ ನದೀ ಕಣಿವೆಯವರಂತೆ ನಾಗರೀಕರಾಗಿದ್ದಿರಬೇಕೆಂದು ಊಹಿಸಲಾಗಿದೆ.

ಹೆಲ್ಮಂಡ್ ನದೀ ಯೋಜನೆಯು ಕಾರ್ಯಭರದಿಂದ ನಡೆಯುತ್ತಲಿದೆ. ಹಲವಾರು ಚಿಕ್ಕ ಚಿಕ್ಕ ಆದರ್ಶ ಹಳ್ಳಿಗಳು ತಲೆಯೆತ್ತುವಂತಾಗಿದೆ. ಬೇಸಾಯವನ್ನು ಅಭಿವೃದ್ಧಿಗೊಳಿಸುವ ಯೋಜನೆಯು ನಡೆಯುತ್ತಲಿದೆ. ಅಫಘಾನಿಸ್ತಾನವು ಆ ದಿನವನ್ನು ಬೇಗನೇ ಕಾಣುವುದರಲ್ಲಿ ಸಂದೇಹವಿಲ್ಲ. ಮರುಳುಗಾಡನ್ನು ನಂದನ ವನವನ್ನಾಗಿ ಮಾಡುವ ಯತ್ನ ಅವರದು. ಜನರ ಬೆಂಬಲ ಸರಕಾರಕ್ಕೆ ಸದಾ ಇದ್ದೇ ಇದೆ.

ಬೌದ್ಧರ ಕೇಂದ್ರ

ಬೌದ್ಧ ಮತದ ಪ್ರಭಾವವು ಅಫಘಾನಿಸ್ಥಾನದ ಮೇಲೆ ಬಿದ್ದಿರಬೇಕು. ಇಲ್ಲಿಯ ಸಹಸ್ರಾರು ಬೌದ್ಧ ಗುಹೆಗಳು ಇದಕ್ಕೆ ಸಾಕ್ಷಿಯಾಗಿದೆ. ೧೭೫ ಅಡಿ ಎತ್ತರವಿರುವ ಮತ್ತು ೧೧೬ ಅಡಿ ಎತ್ತರದ ಬೌದ್ಧ ಪ್ರತಿಮೆಗಳೆರಡು ಪ್ರವಾಸಿಕರ ಕಣ್ಮನವನ್ನು ಸೆಳೆಯುತ್ತವೆ. ಬೌದ್ಧ ವಿಹಾರಗಳು, ವಿಗ್ರಹಗಳು, ಗುಹೆಗಳು, ಕೆತ್ತನೆಗಳು ಇವೆಲ್ಲವುಗಳಿಂದ ಅಫಘಾನಿಸ್ತಾನ ಹಿಂದೆ ಬೌದ್ಧರ ಕೇಂದ್ರವಾಗಿದಿರಬೇಕೆಂದು ತಿಳಿಯುತ್ತದೆ.

ಅಫಘಾನಿಸ್ತಾನದ ರಾಜಧಾನಿಯಾದ ಕಾಬೂಲ್ ಚಿಕ್ಕ ಚಿಕ್ಕ ಹಳ್ಳಿಗಳಿಂದ ಆವೃತವಾಗಿದೆ. ಇಲ್ಲಿಯ ಜನ ಸಂಖ್ಯೆ ೫ ಲಕ್ಷ ಎಂದು ಅಂದಾಜು ಮಾಡಲಾಗಿದೆ. ಕಾಬೂಲ್ ಪಟ್ಟಣವನ್ನು ನವ ಕಾಬೂಲ್ ಮತ್ತು ಹಳೆಯ ಕಾಬೂಲ್ ಎಂದು ಎರಡು ವಿಭಾಗವಾಗಿ ವಿಂಗಡಿಸಿದ್ದಾರೆ. ಪ್ರಾಚೀನ ಕಾಬೂಲ್‌ನಲ್ಲಿ ಹಳೆಯ ನಮೂನೆಯ ಮಾರುಕಟ್ಟೆಗಳು, ಮಸೀದಿಗಳು, ಇಟ್ಟಿಗೆಗಳ ಮನೆಗಳು ಇವನ್ನೆಲ್ಲಾ ಕಾಣುತ್ತೇವೆ. ನವೀನ ಕಾಬೂಲ್‌ನಲ್ಲಿ ಸುವ್ಯವಸ್ಥಿತವಾದ ಮಾರುಕಟ್ಟೆಗಳು, ಸುಂದರವಾದ ಉದ್ಯಾನವನಗಳು, ಕೈಗಾರಿಕಾ ಗೃಹಗಳನ್ನು ನೋಡುತ್ತೇವೆ. 'ಹೆರಾಟ್" ಅಫಘಾನಿಸ್ತಾನದ ಸುಂದರ ನಗರವಾಗಿತ್ತು. ೧೩ನೇ ಶತಮಾನದಲ್ಲಿ ಚೆಂಗೀಜ ಖಾನನಿಂದಾಗಿ ಅದು ನಾಶವಾಗಿತ್ತು. ಅದರ ಭಗ್ನಾವಶೇಷಗಳು ಇಂದಿಗೂ ಕಾಣಸಿಗುತ್ತವೆ. ಕಾಲನ ಕೋಪಕ್ಕೆ ತುತ್ತಾದ ಈ ನಗರವಿನ್ನೂ ಚೇತರಿಸಿಲ್ಲ.

ಕಂದಹಾರ್ ಅಫಘಾನಿಸ್ತಾನದ ಜನಲಿ ಕವರುವನೆ. ಇಲ್ಲಿಯ ಹಣ್ಣುಹಂಪಲುಗಳು ಲೋಕ ವಿಖ್ಯಾತವಾಗಿದೆ. ಗಜನಿಯಿರುವುದು ಕಾಬೂಲ್ ಕಂದಹಾರಗಳ ನಡುವೆ. ಭಾರತದಿಂದ ಕೊಳ್ಳೆಹೊಡೆದು ತಂದ ದ್ರವ್ಯವನ್ನು ಘಜನಿ ಮಹಮ್ಮದ್ ಘಜನಿಯ ಪ್ರಗತಿಗಾಗಿ ವಿನಿಯೋಗಿಸಿದ. ಇವನ ಗೋರಿ ಅಲ್ಲಿಯ ಒಂದು ವೈಶಿಷ್ಟ್ಯವಾಗಿದೆ. ಮಹಮ್ಮದನ ಮರಣಾನಂತರ ೫೦ ವರ್ಷಗಳ ಬಳಿಕ ಅಲ್ಲಾವುದ್ದೀನ್ ಆ ಗೋರಿಯ ಕೆತ್ತನೆ ಕೆಲಸವನ್ನು ನಾಶಮಾಡಿದ. ಘಜನಿ ಮಹಮ್ಮದನ ಗೋರಿ ಅಲ್ಲಿಯ ಪ್ರೇಕ್ಷಣೀಯ ಸ್ಥಳವೆನ್ನಬಹುದು.

ಅಫಘಾನಿಸ್ತಾನದಲ್ಲಿ ಪ್ರತೀ ಮೂರು ವರ್ಷಕ್ಕೊಮ್ಮೆ ಚುನಾವಣೆ ನಡೆಯುತ್ತದೆ. ಶಾಸನ ಸಭೆಯು ೫೦ ಮಂದಿ ಸದಸ್ಯರಿಂದ ಕೂಡಿದೆ. ಈ ಸೆನೆಟನ್ನು ರಾಜ ಮತ್ತು ೧೭೧ ಮಂದಿ ಪ್ರತಿನಿಧಿಗಳು ಆರಿಸುತ್ತಾರೆ. ಜನರಿಂದಲೇ ಆರಿಸಿದ ೧೭೧ ಮಂದಿ ಪ್ರತಿನಿಧಿಗಳು ವಿಧಾನ ಸಭಾ ಸದಸ್ಯರಾಗಿ ದೇಶದ ಆಗುಹೋಗುಗಳ ಕುರಿತು ವಿಮರ್ಶೆ ಮಾಡುವರು. ವಿಧಾನ ಸಭೆಯು ಮೇಲಿನ ಎಲ್ಲಾ ಅಧಿಕಾರವಿರುವುದು. ೫೦ ಮಂದಿಯಿಂದ ಕೂಡಿದ ಸೆನೆಟಿಗೆ. ರಾಜನೇ ತನ್ನ ಮಂತ್ರಿ ಮಂಡಲವನ್ನು ರಚಿಸುವನು. ಇದಕ್ಕೆ ಒಬ್ಬ ಮುಖ್ಯ ಮಂತ್ರಿಯಿರುವನು. ಆ ಮುಖ್ಯ ಮಂತ್ರಿಯೇ ಪಾರ್ಲಿಮೆಂಟಿನ ಕಾರ್ಯಕಲಾಪಗಳಿಗೆ ಹೊಣೆಗಾರ.

ವಿದ್ಯಾ ಪ್ರಸಾರಕ್ಕೆ ಅಫಘಾನೀಯರು ತುಂಬಾ ಗಮನ ಕೊಡುತ್ತಿದ್ದಾರೆ. ನವೀನ ಮಾದರಿಯ ಶಾಲೆಗಳನ್ನು ಕಟ್ಟಿದ್ದಾರೆ, ನವೀನ ರೀತಿಯ ವಿದ್ಯಾಕ್ರಮವನ್ನು ಜಾರಿಗೆ ತರಲಾಗಿದೆ. ತಾಂತ್ರಿಕ ಶಿಕ್ಷಣಕ್ಕೆ ಹೆಚ್ಚಿನ ಗಮನ ಕೊಡಲಾಗಿದೆ. ೧೯೩೨ರಲ್ಲಿ ಕಾಬೂಲ್ ಯೂನಿವರ್ಸಿಟಿಯ ಸ್ಥಾಪನೆಯಾಯಿತು. ಈ ಯುನಿವರ್ಸಿಟಿ ಇಂದು ಹೆಚ್ಚಿನ ಜನರಿಗೆ ವಿದ್ಯಾದಾನ ಮಾಡುತ್ತಿದೆ. ಇತರ ರಾಷ್ಟ್ರಗಳಂತೆ ಅಫಘಾನಿಗಳೂ ಮುಂದೆ ಬರತೊಡಗಿದ್ದಾರೆ. ಸಾಗಾಟದ ಅನುಕೂಲತೆ ಒದಗಿಸುವುದು ಅಫಘಾನಿಸ್ತಾನಕ್ಕೆ ಒಂದು ದೊಡ್ಡ ತಲೆಶೂಲೆಯಾಗಿದೆ. ಪರ್ವತ ಕಣಿವೆಗಳನ್ನು ಸಮತಟ್ಟುಮಾಡಿ ಸಾಗಾಟದ ಅನುಕೂಲತೆ ಮಾಡಿಕೊಳ್ಳುವುದೆಂದರೆ ಅತಿ ವೆಚ್ಚದ ದಾರಿ. ಆದರೂ ಸ್ವಾತಂತ್ರ್ಯಪ್ರಿಯರಾದ ಕಷ್ಟ ಸಹಿಷ್ಣುಗಳಾದ ಅಫಘಾನಿಗಳು ಇತರ ರಾಷ್ಟ್ರಗಳಂತೆ ಮುಂದುವರಿಯಲು ಪ್ರಯತ್ನಿಸುತ್ತಿದ್ದಾರೆ. ದಿನದಿಂದ ದಿನಕ್ಕೆ ಪ್ರಗತಿ ಪಥದಲ್ಲಿ ಮುನ್ನಡೆಯುತ್ತಿದ್ದಾರೆ.

ಶ್ರೀ ಎನ್. ರೋಹಿದಾಸ್ ಕಾಮತ್,
ಉಡುಪಿ.

ಅಪರಾಧಿ ಯಾರು....?

(೨ನೇ ಪುಟದಿಂದ)

"ಹಣವಿಲ್ಲದವನೊಬ್ಬ ಹೆಣನಿಗೆ ಸಮ ಕಂಡ್ಯಾ ಎಂಬ ಮಾತನ್ನಾತ ಮರೆತಿದ್ದರೆ ತಾನೆ? ಉಪವಾಸ.... ಅವಮಾನ.... ವ್ಯಥೆ.... ಯೋಚನೆ.... ಹೀಗೆಯೇ ಹದಿನೈದು ದಿನಗಳನ್ನು ದೂಡಿದ ಮೇಲೆ ಮಾಸ್ತರರ ಸಂಬಳದೊಂದಿಗೆ ಬೇರೊಂದು ಲಕೋಟೆಯೂ ರಾಮಯ್ಯನ ಕೈ ಸೇರಿತು.

ಕುತೂಹಲದಿಂದ ಲಕೋಟೆಯನ್ನೊಡೆದ ರಾಮಯ್ಯ ಬೆರಗಾಗಲಿಲ್ಲ. ಏಕೆಂದರೆ ಸಿಟ್ಟುಗೊಂಡು ಹೋಗಿದ್ದ ಅಧಿಕಾರಿಗಳು ಚೆನ್ನಾಗಿಯೇ ಕಾರ್ಯನಡೆಸಿದ್ದರು.

ಆದರ್ಶ ಅಧ್ಯಾಪಕನೆಂದು ಹೆಸರು ಪಡೆದ ರಾಮಯ್ಯ ಅಪರಾಧ(!)ವೆಸಗಿದಕ್ಕೆ ನಲುವತ್ತು ಮೈಲು ದೂರದ ಹಾಳು ಹಳ್ಳಿಗೆ ವರ್ಗಾಯಿಸಲ್ಪಟ್ಟಿದ್ದ.

—ಶ್ರೀಮತಿ ಪಿ. ಯಶೋದಾ ಎನ್. ಶೆಣ್ಣಿ.

ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ.

14 CT ಚಿನ್ನದ ಆಭರಣಗಳಲ್ಲಿ 58⅓% ಶುದ್ಧ ಪುತ್ತಳಿ ಚಿನ್ನ ಇರುತ್ತದೆ.

ಬೇಡದಿದ್ದಲ್ಲಿ 1 ರೂ. ಕಮ್ಮಿಯಲ್ಲಿ ಯಾವಾಗಲೂ ಬಜಾರು ಧಾರಣೆಗೆ ಪಡಕೊಳ್ಳುವ ಭರವಸೆ ಕೊಡುತ್ತೇವೆ.

ವಿ. ಸೂ: ಹಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡಕೊಳ್ಳುವರೆ ಸರಕಾರದ ಲೈಸನ್ಸ್ ಸಿಕ್ಕಿರುತ್ತದೆ.

ಮದುವೆ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡಕೊಂಡು ಖಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.

ಶ್ರೀ ಕೃಷ್ಣಾ ಜ್ಯುವೆಲರಿ ಮಾರ್ಟ್

ತೆಂಕಪೇಟೆ — ಉಡುಪಿ.

ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.

ಫೋನ್ ನಂಬ್ರ: 66

ನವಯುಗಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ

REGD. No. B. G. 176
LICENCE No. 31
Licensed to Post without Prepayment

ಹಾಸುಹೊಕ್ಕಾಗಿ ಬಂದಿದೆ

ಸಾಹಿತ್ಯ ಮತ್ತು ಜನಜೀವನ

ಸಾಹಿತ್ಯವೆಂದೊಡನೆ ಮಹಾಂಬುನಿಧಿಯ ತರಂಗ ಮಾಲೆಗಳಂತಿರುವ ಜಗತ್ತಿನ ಅನೇಕ ಭಾಷೆಗಳ ವಿವಿಧ ಸಾಹಿತ್ಯಗಳತ್ತ ನಾವು ದೃಷ್ಟಿಹಾಯಿಸಬೇಕಾಗುವುದು. ಆ ರೀತಿಯ ಅನಂತವಾದ ಸಾಹಿತ್ಯ ರಚನೆಗೆ ಯಾವುದು ಏಕಾಗಿ ಮತ್ತು ಯಾವ ಸಂದರ್ಭಗಳಲ್ಲಿ ಕಾರಣವಾಯಿತು ಎಂಬುದನ್ನು ವಿಚಾರಿಸ ಹತ್ತಿದರೆ ಜೀವನಕ್ಕೂ ಸಾಹಿತ್ಯಕ್ಕೂ ಇರುವ ನಿಕಟ ಬಾಂಧವ್ಯದ ಅರಿವು ನಮಗಾಗಬಹುದು.

ಬಲ್ಲಿದರ ನಿರ್ವಚನದಂತೆ ರಸಾನುಭವದ ಸುಂದರ ಹಾಗೂ ಆಕರ್ಷಕವಾದ ಅಭಿವ್ಯಕ್ತಿಯೇ ಸಾಹಿತ್ಯವೆನಿಸಲ್ಪಡುತ್ತದೆ. ‘ತನಗಾದ ರಸಾನುಭವದ ಸವಿಯನ್ನು ತನ್ನಂತೆಯೇ ಇನ್ನುಳಿದವರೂ ಸವಿಯಲಿ’ ಎಂಬ ಮಾನವನ ಆಕಾಂಕ್ಷೆಯೇ ಸಾಹಿತ್ಯ ಸೃಷ್ಟಿಗೆ ಕಾರಣವಾಯಿತು. ಇಂತಹ ಸಾಹಿತ್ಯದ ರಚನೆಯು ಕಾಲದಲ್ಲಿ ಉಂಟಾದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಮತ್ತು ನೈತಿಕ ಕ್ರಾಂತಿಗಳೂ ಆಗಿನ ಕೃತಿಗಳಲ್ಲಿ ಸಾಕಷ್ಟು ಪರಿಣಾಮವನ್ನು ಬೀರದೆ ಇರಲಿಲ್ಲ. ಇದರಿಂದ ಜನ ಜೀವನ ಹಾಗೂ ಸಾಹಿತ್ಯ ಇವುಗಳ ನಡುವೆ ಕಮ್ಮಾರನ ತಿದಿ ಮತ್ತು ಕುಲುಮೆಗಳ ನಡುವಿನ ಸಂಬಂಧವಿರುವುದನ್ನು ನಾವು ಕಾಣಬಹುದು.

“ಒಂದು ರಾಷ್ಟ್ರದ ಸಾಹಿತ್ಯಾವಲೋಕನದಿಂದಲೇ ಅಲ್ಲಿನ ಜನ ಜೀವನದ ಮಟ್ಟವನ್ನು, ಸಂಸ್ಕೃತಿಯ ಹಿರಿಮೆಯನ್ನೂ ಅರಿತುಕೊಳ್ಳಬಹುದು.” ಎಂಬ ಜವಾಹರಲಾಲರ ಮಾತು ಸತ್ಯಸ್ಯ ಸತ್ಯವಾಗಿದೆ. ಸಮಾಜದ ಅಥವಾ ಜನತೆಯ ಆಶೆ, ಆಕಾಂಕ್ಷೆ ಮತ್ತು ಹಾರೈಕೆಗಳು ಒಂದಾಗಿ ಸಾಹಿತಿಯು ಪ್ರತಿನಿಧಿತ್ವವನ್ನು ಪಡೆದು ಆತನ ಪ್ರತಿಭಾನ್ವಿತ ಲೇಖನಿಯ ಮೊನೆಯಿಂದ ಸಾಹಿತ್ಯ ರೂಪದಲ್ಲಿ ಜನಿಸಿ, ಅದೇ ಜನತೆಯ ಮಾರ್ಗದರ್ಶನದ ಸಾಧನವಾಗುವುದು. ಫ್ರಾನ್ಸಿನ ಮಹಾಕ್ರಾಂತಿ, ಭಾರತದ ಸ್ವಾತಂತ್ರ್ಯ ಸಂಗ್ರಾಮ ಮುಂತಾದ ವಿಪ್ಲವಗಳ ಕಾಲದಲ್ಲಿ ರುಸ್ಸೊ, ಠಾಗೋರ್, ಗಾಂಧೀಜೀಯೇ ಮೊದಲಾದ ಸಾಹಿತಿಗಳ ಕೃತಿಗಳು ಮೇಲಿನ ಈ ಮಾತನ್ನು ಸ್ಪಷ್ಟೀಕರಿಸಿದುದನ್ನು ನಾವು ಕಾಣಬಹುದು.

ಯೋಗ್ಯ ಸಾಹಿತ್ಯ ರಚನೆಗೆ ಪ್ರೇರಕ, ಪ್ರೇರಿತ ಮತ್ತು ಪ್ರೇರೇಪಣೆಗಳೆಂಬ ಮೂರು ಮುಖ್ಯಾಂಶಗಳು ಅತ್ಯಗತ್ಯವಾಗಿವೆ. ಇವುಗಳಲ್ಲಿ ಪ್ರೇರಿತನು ಸಾಹಿತಿಯಾಗಿರುತ್ತಾನೆ. ಹೆಚ್ಚಾಗಿ ಪ್ರೇರಕವು ಜನಜೀವನವಾಗಿರುತ್ತದೆ. ಪ್ರೇರಿತನ ಅಂದರೆ ಸಾಹಿತಿಯ ಜೀವನದಲ್ಲಿ ಉಂಟಾದ ಬದಲಾವಣೆಗಳ ಪ್ರತಿಕ್ರಿಯೆಯು ಜನಜೀವನದ ಬೆಂಬಲವನ್ನು ಪಡೆದು, ಅದನ್ನು ಪ್ರತಿನಿಧೀಕರಿಸುತ್ತಾ ಸಾಹಿತ್ಯರೂಪವಾಗಿ ಸಮಾಜದೆದುರು ನಿಲ್ಲುತ್ತದೆ. ಆಗ ಅದಕ್ಕೆ ಮನ್ನಣೆ ದೊರೆಯಲಿ ಇಲ್ಲದಿರಲಿ ತನ್ನ ಉದ್ದೇಶ ಸಾಧನೆಗಾಗಿ ಅದು ಹಗಲಿರುಳು ದುಡಿದೇ ದುಡಿಯುತ್ತದೆ. ಹಿಂದೀ ಕವಿ ಪ್ರೇಮಚಂದ್ರ, ಆಂಗ್ಲ ಕವಿ "ಗೋಲ್ಡ್ ಸ್ಮಿತ್" ಕನ್ನಡದ ಸಾಹಿತಿ ಕಾರಂತ ಮೊದಲಾದವರ ಕೃತಿಗಳೂ ಜೀವನವೂ ಈ ಮಾತನ್ನು ದೃಢೀಕರಿಸಬಲ್ಲವು. ಆದರೆ ಕೆಲವೊಮ್ಮೆ ಪ್ರಕೃತಿಯೂ ಪ್ರೇರೇಪಣೆಯನ್ನೀವುದುಂಟು. ಆದರಿಂದ ಸಾಹಿತಿಯು ಪ್ರೇರೇಪಿತನಾಗುವುದಿದ್ದರೂ ಅದಕ್ಕೆ ಜೀವನದ ಹಿನ್ನೆಲೆಯು ಅಗತ್ಯ. ಉದಾಹರಣೆಗಾಗಿ ಜೀವನದ ಬೇಗುದಿಯಿಂದ ಬೆಂದು ನೊಂದವನೊಬ್ಬನು ಪ್ರಕೃತಿಯ ಸೊಬಗು ವೈಚಿತ್ರ್ಯಗಳನ್ನು ಸವಿದು ಆನಂದಿಸುವನೆ? ಅಸಾಧ್ಯ. ಅಲ್ಲಿ ಆತನ ಭಾವನೆಗೆ ತನ್ನ ಹಣ್ಣೆಲೆಗಳನ್ನು ಉದುರಿಸಿ ಬತ್ತಲೆಯಾದ ಮರವೊ, ಉರಿಬಿಸಿಲಿಗೂ ಮರುಗದೆ ತಲೆಯೊಡ್ಡಿ ನಿಂತ ಬಂಡೆಯೋ ಪುಷ್ಟೀಕರಣವನ್ನು ಕೊಡಬಲ್ಲುದು. ತಾತ್ಪರ್ಯವೆಂದರೆ ಜೀವನವು ಸಾಹಿತಿಗಾದ ಪ್ರೇರೇಪಣೆಗೆ ಹೊಂದಿಕೊಂಡು ಒಪ್ಪಿದರೆ ಮಾತ್ರ ಅಲ್ಲಿ ಸಾಹಿತ್ಯ ರಚನೆ. ಆದುದರಿಂದ ಅಲ್ಲಿಯೂ ಜೀವನದ ಕೈವಾಡವನ್ನೇ ಕಾಣುತ್ತಿದ್ದೇವೆ. ಆಂಗ್ಲ ಕವಿ "ವರ್ಡ್ಸ್ ವರ್ತ್," ಹಿಂದೀ ಕವಿ ಪಂತ, ಕನ್ನಡದ ಕುವೆಂಪುರವರೇ ಇದಕ್ಕೆ ಸಾಕ್ಷಿಯಾಗಿದ್ದಾರೆ.

ಸಾಹಿತ್ಯ ರಚನೆಯ ಕಾಲದಲ್ಲಿ ಸಾಹಿತಿಯಲ್ಲಿ ಎರಡು ವಿಧದ ದೃಷ್ಟಿಯಿರಬೇಕಾದುದು ಅಗತ್ಯ. ಒಂದು ಭಾವದೃಷ್ಟಿ, ಮತ್ತೊಂದು ಕಲಾದೃಷ್ಟಿ. ಇದರಲ್ಲಿ ಭಾವನೆಯ ದೃಷ್ಟಿಯು ಬಲವಾಗಿಯೂ ಕಲಾದೃಷ್ಟಿಯು ಗೌಣವಾಗಿಯೂ ಇರಬೇಕು. ಭಾವನೆಗೂ ಜೀವನಕ್ಕೂ ನಿಕಟವಾದ ಸಂಬಂಧವಿದೆ. “ಭಾವನೆಯೇ ಜೀವನ; ಜೀವನವೇ ಭಾವನೆ” ಎಂದರೂ ತಪ್ಪಲ್ಲ ಎನ್ನುವಾಗ ಜೀವನದಲ್ಲಿ ಹಾಸು ಹೊಕ್ಕಾದ ಭಾವನೆಯೇ ಸಾಹಿತ್ಯ ರಚನೆಗೆ ಕಾರಣವಾದುದರಿಂದ ಅದಕ್ಕೆ ಆಧಾರ ಸ್ವರೂಪವೆನಿಸಿದ ಜೀವನವೇ ಕಾರಣವಾದಂತಾಯಿತು. ಮೇಲಿನ ಮಾತನ್ನು ಮತ್ತಷ್ಟು ಬಲಪಡಿಸುವುದಕ್ಕೆ ಇನ್ನಷ್ಟು ಉದಾಹರಣೆಗಳನ್ನು ಎತ್ತಿಕೊಳ್ಳುವ. ಸಾಮಾನ್ಯ ಮನುಷ್ಯನೊಬ್ಬನ ಜೀವನದಲ್ಲಿ ಬೆರೆತುಕೊಂಡಿರುವ ಸಾಹಿತ್ಯಶಕ್ತಿ ಆತನಿಗೆ ಭಾವನಾ ವಿಕಾರಗಳುಂಟಾದಾಗ ಆತನು ಭಾಷಾಜ್ಞಾನಿಯಾಗಿ ಲಿಪಿಯನ್ನು ಬಲ್ಲವನಾಗಿದ್ದರೆ ಮಾತ್ರವಲ್ಲ ಸಾಕಷ್ಟು ಪ್ರತಿಭೆಯಿಂದಲೂ ಕೂಡಿದ್ದರೆ ಅದು ಗ್ರಂಥಸ್ಥ ಸಾಹಿತ್ಯವಾಗುತ್ತದೆ. ಇಲ್ಲಿಯೂ ಜೀವನವೇ ಮೂಲವಾದುದನ್ನು ನಾವು ಗಮನಿಸ ಬಹುದು.

ಹೀಗೆ ನಾವು ಯಾವುದೇ ಸಾಹಿತ್ಯವನ್ನು ಎತ್ತಿಕೊಂಡರೂ ಅದು ಜನಜೀವನದೊಂದಿಗೆ ಕಡಿಯಲಾರದ ಬಂಧುತ್ವವನ್ನು ಇರಿಸಿಕೊಂಡುದುದನ್ನು ಕಾಣುತ್ತೇವೆ. ಹಿಂದೀ ಸಾಹಿತ್ಯದ ವೀರಥಗಾಕಾಲ, ಭಕ್ತಿಕಾಲ, ರೀತಿಕಾಲ, ಆಧುನಿಕ ಕಾಲಗಳೂ ಕನ್ನಡ ಸಾಹಿತ್ಯದಲ್ಲಿ ಜೈನ, ಬೌದ್ಧ, ವೀರಶೈವ ಮುಂತಾದ ಯುಗಗಳೂ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಅಲ್ಲಿ ಪ್ರಗತಿಗನುಗುಣವಾಗಿ ಬದಲಾದ ಸಾಹಿತ್ಯದ ಮಾದರಿಯೂ ವಿಶಾಲ ದೃಷ್ಟಿಯಿಂದ ವಿಮರ್ಶಿಸಲ್ಪಟ್ಟಲ್ಲಿ ನಾವು ಒಂದು ತತ್ವವನ್ನು ಕಾಣುತ್ತಿದ್ದೇವೆ. “ಜನಜೀವನವೆಂಬ ಭದ್ರವಾದ ತಳಪಾಯವೇ ಸಾಹಿತ್ಯ ಮಹಲಿನ ಪಂಚಾಂಗ” ಆದುದರಿಂದ ವಿಪುಲವಾದೀ ನಮ್ಮ ಕನ್ನಡ ಸಾಹಿತ್ಯದ ಬೆಳವಣಿಗೆ ವಿಕಸನಗಳಿಗಾಗಿ ನಾಡಿನ ಜನತೆಯ ಜೀವನವು ಸಂತೋಷಮಯವಾಗಿರಲಿ! ತನ್ಮೂಲಕ ಅಮರ ಸಾಹಿತ್ಯ ಸೃಷ್ಟಿಯಾಗಲಿ!

—ಶ್ರೀ ಎಂ. ಭಾಸ್ಕರ ಭಂಡಾರಿ
ಮಜಿಬೈಲು ಮಂಜೇಶ್ವರ.

ನಮ್ಮ ನಮ್ಮವರು

(೧ನೇ ಪುಟದಿಂದ)

ಸನದಿಂದಾಗಿ ಆಯುರ್ವೇದ ಔಷಧಿ ತಯಾರಿಕೆಗೆ ಗಂಡಾಂತರವೊದಗಿ ಬಂದ ಸಂದರ್ಭದಲ್ಲಿ ಎಡತಾಕಿದ ಲೋಪದೋಷಗಳನ್ನು ನಿವಾರಣೆ ಮಾಡಿ ಆಯುರ್ವೇದ ಬೆನ್ನೆಲುಬನ್ನು ರಕ್ಷಿಸುವ ಘನೋದ್ದೇಶಕ್ಕಾಗಿ ಹೋರಾಡಿದ ಕೆಚ್ಚೆದೆ ನಾಯಕರದು.

ರಾಜಕೀಯವಾಗಿ ಶ್ರೀ ನಾಯಕರು ಕಾಂಗ್ರೆಸಿಗರು; ಪಕ್ಷದಲ್ಲಿ ಇವರ ನಿಷ್ಠೆ ಅಚಲ; ದೃಢ. ಯಾವ ಹೆಚ್ಚಿನ ಬಾಹ್ಯಾಡಂಬರಗಳಿಗೂ ಮಾರುಹೋಗದ ಈ ಧೀಮಂತ ನಾಯಕರು ತನ್ನ ಕರ್ತವ್ಯವನ್ನು ಚ್ಯುತಿಯಿಲ್ಲದಂತೆ ನಿರ್ವಹಿಸುವುದರಲ್ಲಿ ಪರರಿಗೆ ಮಾರ್ಗದರ್ಶಿಗಳೆಂದು ಹೇಳಬಹುದು. ಉಜ್ವಲ ವ್ಯಕ್ತಿತ್ವವುಳ್ಳ, ಅಪೂರ್ವ ಜ್ಞಾನಸಂಪನ್ನರಾದ ಶ್ರೀ ನಾಯಕರು ಕಟಪಾಡಿ ಮಂಡಲ ಕಾಂಗ್ರೆಸಿನ ಅಧ್ಯಕ್ಷರಾಗಿ ವಿಧಾಯಕ ಕಾರ್ಯಕ್ರಮಗಳಿಗೆ ಮೇಲ್ಪಂಕ್ತಿ ಹಾಕಿಕೊಟ್ಟಿದ್ದಾರೆ; ಕಾಂಗ್ರೆಸಿ ನಾಯಕರೆನಿಸಿದ್ದಾರೆ.

ಶ್ರೀ ಪಾಂಗಾಳ ಜನಾರ್ದನ ನಾಯಕರದು ಉದಾರ ಪ್ರವೃತ್ತಿ; ಧಾರಾಳ ಹೃದಯ, ಮಾತು ಕುಸುಮ ಕೋಮಲ, ಮೃದು ಮನಸ್ಸಿನ ನಾಯಕರು ಇದರಿಂದಾಗಿಯೇ ಎಲ್ಲರನ್ನೂ ಆಕರ್ಷಿಸುತ್ತಾರೆ; ಉದ್ದೇಶವನ್ನು ನಿರ್ಧರಿಸಿ, ಅದರ ಸಾಧನೆಯಲ್ಲಿ ಮಾನವ ತೊಡಗಬೇಕು: ಉದ್ದೇಶರಹಿತವಾದ ಬಾಳು ಗೋಳು; ಅದಕ್ಕಾಗಿ ಸಾಧನಾಪಥದಲ್ಲಿ ಭ್ರಮಣ ಮಾಡಿದರೆ, ಗುರಿಮುಟ್ಟುವುದು ಸಾಧ್ಯವಾಗುತ್ತದೆ— ಎಂಬುದನ್ನು ಜನಜನಕ್ಕೆ ಎತ್ತಿತೋರಿಸು ನಾಯಕರು ತಮ್ಮ ಯೋಗ್ಯತೆಯನ್ನು ಹೆಚ್ಚಿಸಿಕೊಂಡಿದ್ದಾರೆ; ಜನಜನದ ಹೃದಯದಲ್ಲೂ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿದ್ದಾರೆ

ಜನತೆಯ ಸೌಕರ್ಯಕ್ಕಾಗಿ
ಹೊಸ ಬಗೆಯ
ಸೇವಿಂಗ್ಸ್ ಬ್ಯಾಂಕ್ ಸೌಲಭ್ಯಗಳು.

- ಪ್ರಾಯಕ್ಕೆ ಬಾರದ ಮಕ್ಕಳು ಕೂಡಾ 12 ವರ್ಷಕ್ಕೆ ಮೇಲ್ಪಟ್ಟಿದ್ದರೆ ತಮ್ಮ ಹೆಸರಿನಲ್ಲೇ **ಸೇವಿಂಗ್ಸ್ ಬ್ಯಾಂಕ್** ಖಾತೆಗಳನ್ನು ತೆರೆಯಬಹುದು.
- ನೀವು ನಿಮ್ಮ **ಸೇವಿಂಗ್ಸ್ ಬ್ಯಾಂಕ್** ಖಾತೆಯಿಂದ 1 ವರ್ಷದಲ್ಲಿ 150 ಬಾರಿ ಹಣವನ್ನು ತೆಗೆಯಬಹುದು.
- ನಿಮ್ಮ **ಸೇವಿಂಗ್ಸ್ ಬ್ಯಾಂಕ್** ಖಾತೆಯಿಂದ ಎಂದು ಬೇಕಾದರೂ ಎಷ್ಟು ಮೊತ್ತವನ್ನಾದರೂ ಯಾವುದೇ ಪೂರ್ವ ಸೂಚನೆಯಿಲ್ಲದೆ ಹಿಂದೆ ಪಡೆಯಬಹುದು.
- **ಸೇವಿಂಗ್ಸ್ ಬ್ಯಾಂಕ್** ಖಾತೆಯ ಮೇಲೆ ಅರ್ಧ ವಾರ್ಷಿಕ ಖರ್ಚು ವೆಚ್ಚಗಳನ್ನು ವಸೂಲು ಮಾಡಲಾಗುವುದಿಲ್ಲ.
- **ಸೇವಿಂಗ್ಸ್ ಖಾತೆಯ** ಮೂಲಕ ಧರ್ಮಾರ್ಥವಾಗಿ ಹಣವನ್ನು ರವಾನಿಸಬಹುದು.

ಸಿಂಡಿಕೇಟ್ ಬ್ಯಾಂಕಿನಲ್ಲಿ ನಿಮ್ಮ
ಸೇವಿಂಗ್ಸ್ ಖಾತೆ ತೆರೆಯಿರಿ.

ಸಿಂಡಿಕೇಟ್ ಬ್ಯಾಂಕ್

ಚಲಾವಣೆ ಬಂಡವಾಳ ರುಪ್ಯಾ 45 ಕೋಟಿಗೂ ಮಿಕ್ಕಿದೆ.

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ಉಡುಪಿ.

Edited, Printed & Published by K. H.Shetty. at the Navayuga Press, Udipi, S. India.